Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 5-0-0

ಸಂಪುಟ [illegible] | ತಾರೀಖು ೬-೧-೧೯೫೦ನೇ ಶುಕ್ರವಾರ | ಸಂಚಿಕೆ [illegible]

# ಮೊದಲನೇ ರಾಷ್ಟ್ರಾಧ್ಯಕ್ಷ ಯಾರು?

ಲೇ— "[illegible]"

[illegible] ರುತ್ತಿದೆ. ಆ ದಿನದಲ್ಲಿ [illegible] ಆ ದಿನ ದಲ್ಲಿ [illegible] ತಾರೀಖು [illegible] ಪ್ರೆಸಿಡೆಂಟ [illegible] ಕೊಳ್ಳುವ [illegible] ಅಧ್ಯಕ್ಷ [illegible] ಎಲ್ಲರ [illegible] ರಲಾಗಿದ್ದಾರೆ.

ಅಧ್ಯಕ್ಷ [illegible] ರಾಜೇಂದ್ರ ಪ್ರಸಾದರು, ರಾಜಗೋಪಾಲಾಚಾರಿಯವರು, [illegible] ನೆಹರೂರವರು [illegible] ಅಂಬೇಡ್ಕರ [illegible] ಇನ್ನು [illegible] ಆಗಬಹುದು.

## ರಾಜೇಂದ್ರಪ್ರಸಾದ

ಭಾರತದ [illegible] ಸಮಿತಿಯ ಅಧ್ಯಕ್ಷ [illegible] ಸ್ಥಾನವನ್ನು ನಿರ್ವಹಿಸಿ [illegible] ಭಾರತ [illegible] ಗಾಂಧೀಜಿಯವರ [illegible] ಮುಂದೆ [illegible] ಸಭೆಯ ಅಧ್ಯಕ್ಷತೆ [illegible] ಭಾರತದ [illegible] ಅದನ್ನು [illegible] ಬೇಕಿಲ್ಲ [illegible] ಬೇಕಿದ [illegible] ಈಗ ದೇಶದಲ್ಲಿ [illegible] ಗೌರವಿಸಿ [illegible] ಇಡೀ ದೇಶ [illegible]

[illegible] ದಿನ [illegible] ಅದೃಷ್ಟ [illegible] ಹುಟ್ಟಿದ.

## ರಾಜಗೋಪಾಲಾಚಾರಿ

[illegible] ಸಂಗಟ್ಟ [illegible] ಪಂಡಿತ [illegible] ಪ್ರೆಸಿಡೆಂಟ್ [illegible] ಕೇಂದ್ರ [illegible]

[illegible] ಜನ [illegible] ಹೇಳುವ [illegible] ರಾಷ್ಟ್ರಾಧ್ಯಕ್ಷ ಸ್ಥಾನದ ಗೌರವ ಕೂಡ [illegible] ಪ್ರೆಸಿಡೆಂಟರ [illegible] ಭಾರತದ [illegible] ಈಗಿನ ಪರಿಸ್ಥಿತಿಯಲ್ಲಿ [illegible] ಅವರು ಅತೀ ಅವಶ್ಯ [illegible] ಅವರಿಗೆ ಒಟ್ಟಿದರೆ ವಿಪರೀತ [illegible]

## ನೆಹರೂರವರು

ಭಾರತದ ಪ್ರಧಾನ ಮಂತ್ರಿ ನೆಹರೂರವರು [illegible]? ನೆಹರೂರವರು [illegible] ಕ್ರಿಯಾತ್ಮಕ [illegible] ಕಾರ್ಯಗಳಲ್ಲಿ ಆಸಕ್ತಿ ಇರುವವರು. [illegible] ಆದ್ದರಿಂದ [illegible] ರಾಷ್ಟ್ರಾಧ್ಯಕ್ಷ [illegible] ಭಾರತದ ಜವಾಬ್ದಾರಿ [illegible]

[illegible] ಆದ್ದರಿಂದ [illegible] ಅವರಿಗೆ [illegible]

## ಡಾ ಅಂಬೇಡ್ಕರ್

[illegible]

ಕಡೆಗೆ [illegible]

## [illegible]

ಭಾರತದ ಪ್ರೆಸಿಡೆಂಟರು [illegible] ಕೇಂದ್ರಗಳಲ್ಲಿ ಅಧಿಕಾರ [illegible] ಈ ವರೆಗೆ [illegible] ದೃಷ್ಟಿಯಿಂದ [illegible] ಆದ್ದರಿಂದ ಕೇಂದ್ರ ಮಂತ್ರಿ [illegible] ಅತೀ ಅಗತ್ಯ [illegible] ಮಂತ್ರಿಮಂಡಳದ [illegible] ಆ ಕಾಲಕ್ಕೆ ಮೊದಲೆ [illegible]

[illegible] ಗಳಲ್ಲಿ ಒಂದೆ [illegible] ಪ್ರಚಾರ [illegible] ಇದಲ್ಲದೆ [illegible] ಇವರಿಗೆ ಸೇರಿದ [illegible] ಜವಾಬ್ದಾರಿ [illegible] ಯೋಗ್ಯ [illegible] ರಾಷ್ಟ್ರ [illegible] ಜವಾಬ್ದಾರಿಯೇ [illegible] ಹಾಗಿರುವಾಗ [illegible] ಅವರ [illegible] ಮಂಡಳದಲ್ಲಿಯು [illegible] ಕ್ಷದ [illegible] ದಿಂದ [illegible]

---

ಹೆಲ್ತ್ ಆಫೀಸರ್ ಆಫೀಸು ಮಡಿಕೇರಿ [illegible]

## ನೋಟೀಸು.

[illegible] 1-4-50 [illegible] 31-3-51 [illegible] 20-1-1950 [illegible] 11 ಗಂಟೆ [illegible]

ಸಿ. ಬಿ. [illegible],
[illegible], ಕೊಡಗು

---

*Health Officer's Office*
*Mercara 28 12 1949*

## NOTICE.

Sealed tenders for the hiring out of calves to the Vaccine Depot at Mercara for one year commencing from 1-4-1950 to 31-3-1951 will be received at the Health Office, Mercara upto 11 A.M. on Friday the 20th January 1950.

For terms and other particulars, apply to the Health Officer, Coorg, Mercara, or the Sanitary Inspector, at Mercara.

C. B. Kariappa,
*Health Officer, Coorg.*

1950. JAN
To Dec

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಸಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೨೮ | ತಾರೀಕು ೬-೧-೧೯೫೦ನೇ ಶುಕ್ರವಾರ | ಸಂಚಿಕೆ ೩೨ |
|---|---|---|

# ಮೊದಲನೇ ರಾಷ್ಟ್ರಾಧ್ಯಕ್ಷ ಯಾರು?

ಲೇ:— "ಗುಪ್ತ"

ಜನವರಿ ತಾರೀಕು ೨೬ ಹತ್ತಿರ ಬರುತ್ತಿದೆ. ಆ ದಿನದಲ್ಲಿ ಭಾರತವನ್ನು ರಿಪಬ್ಲಿಕ್ ಎಂದು ಸಾರಲಾಗುವದು. ಆ ದಿನದಲ್ಲಿ ಇಂದಿರುವ ಗವರ್ನರ್ ಜನರಲರಿಂದ ತಾರೀಕು ೨೪ ರಲ್ಲಿ ಚುನಾಯಿತರಾಗುವ ಪ್ರೆಸಿಡೆಂಟರು ಜವಾಬ್ದಾರಿಯನ್ನು ವಹಿಸಿಕೊಳ್ಳುವರು. ತಾರೀಕು ೨೪ ರಲ್ಲಿ ಈ ಆಯ್ಕೆ ಆಗಲಿದೆ. ಭಾರತದ ಪ್ರಥಮ ಅಧ್ಯಕ್ಷತನದ ಹೂಮಾಲೆ ಯಾರ ಕೊರಳಿಗೆ ಬೀಳುವದೋ ಎಂದು ಎಲ್ಲರು ಕಾತುರರಾಗಿದ್ದಾರೆ.

ಅಧ್ಯಕ್ಷರ ಆಯ್ಕೆಯ ಈ ಓಟಿನಲ್ಲಿ ನಾಲ್ಕಾರು ಹೆಸರುಗಳು ಕೇಳಬರುತ್ತಿವೆ. ರಾಜೇಂದ್ರ ಪ್ರಸಾದರೇ, ರಾಜಗೋಪಾಲಾಚಾರಿಯವರೇ, ಸರ್ದಾರ್ ಪಟೇಲರೇಯೊ, ನೆಹರೂರವರೇ ಕಡೆಗೆ ಅಂಬೇಡ್ಕರರೇ ಯಾರು ಅಧ್ಯಕ್ಷರಾಗಬಹುದೆಂಬುದು ಇನ್ನು ನಿರ್ಧಾರ ಆಗಬೇಕು.

### ರಾಜೇಂದ್ರಪ್ರಸಾದ.

ಭಾರತ ರಾಜ್ಯಘಟನಾ ಸಮಿತಿಯ ಅಧ್ಯಕ್ಷಪದವನ್ನು ಕಳೆದ ಎರಡು ವರ್ಷಗಳಿಂದ ವಹಿಸಿ ಅತೀ ದಕ್ಷತೆಯಿಂದ ಅದನ್ನು ನಿರ್ವಹಿಸಿ ಸಕಲರ ಜನಾನುರಾಗಕ್ಕೆ ಪಾತ್ರರಾದ ರಾಜೇಂದ್ರರು ಭಾರತದಲ್ಲಿ ಅಜಾತಶತ್ರುಗಳೆನ್ನಬಹುದು. ಅವರಿಗೆ ವಿರೋಧಿಗಳೆನ್ನುವವರಿಲ್ಲ. ಮಹಾತ್ಮಾ ಗಾಂಧೀಜಿಯವರ ನಂತರ ಅವರ ತತ್ವಗಳ ಪ್ರಮುಖ ಪಾಲಕರಾಗಿ ಆ ಪಥದಲ್ಲಿ ಮುಂದೆ ಸಾಗುತ್ತಿರುವ ಧುರೀಣರಲ್ಲಿ ಅಗ್ರಗಣ್ಯರಿವರು. ಭಾರತ ರಾಜ್ಯಘಟನಾ ಸಭೆಯ ಅಧ್ಯಕ್ಷತೆ ವಹಿಸಿ ಭಾರತಕ್ಕೆ ಸಂಘಟನೆಯನ್ನು ರೂಪಿಸಿಕೊಟ್ಟ ಇವರು ಭಾರತದ ಪ್ರಥಮ ಅಧ್ಯಕ್ಷರಾಗುವದು ಸೂಕ್ತವೇ ಇದೆ. ಅದನ್ನು ಅವರು ಯೋಗ್ಯ ರೀತಿ ನಿರ್ವಹಿಸುವರೆಂದೂ ಬೇರೆ ಹೇಳಬೇಕಿಲ್ಲ. ಆದರೆ ಅವರು ಆ ಜವಾಬ್ದಾರಿಯನ್ನು ಹೊತ್ತುಕೊಳ್ಳುವರೋ ನೋಡಬೇಕಿದೆ. ಅಷ್ಟೂ ಕಾಯಿಲೆಯಿಂದ ನರಳುತ್ತಿರುವ ಅವರು ಬಹುಶಃ ಒಪ್ಪದಿರಲೂಬಹುದು. ಇಂದು ನಮ್ಮ ದೇಶದಲ್ಲಿ ಅವರಷ್ಟು ಅನಾಸಕ್ತ ವೈರಾಗಿಗಳು ಬೇರಿರರು. ಅವರು ಈ ವರೆಗೆ ಯಾವದೇ ಅಧಿಕಾರಕ್ಕಾಗಲೀ, ಹೆಸರಿಗಾಗಲೀ ಇಚ್ಛೆಪಟ್ಟವರಲ್ಲ. ದೇಶವೇ ಅವರನ್ನು ಕರೆದು ಗೌರವಿಸಿದೆ. ಈ ಸಾರಿಯೂ ಹಾಗೆ ಆಗಬಹುದು. ಇಡೀ ದೇಶ ಅವರ ಆಯ್ಕೆಯನ್ನು ಬಯಸಿದರೆ ಅವರು ಜವಾಬ್ದಾರಿಯನ್ನು ಹೊರಲು ತಯಾರಾದಾರು. ಇಂದಿನ ಪರಿಸ್ಥಿತಿಯಲ್ಲಿ ಅವರೇ ಅಧ್ಯಕ್ಷರಾಗುವ ಸಂಭವ ಹೆಚ್ಚಿದೆ.

### ರಾಜಗೋಪಾಲಾಚಾರಿ.

ಘಟನಾತ್ಮಕ ಗವರ್ನರ್ ಜನರಲ್ ಆಗಿರುವ ರಾಜಾಜಿಯವರು ಭಾರತ ಅಧ್ಯಕ್ಷ ಪದಕ್ಕೆ ಯೋಗ್ಯರೆಂದು ಬೇರೆ ಹೇಳಬೇಕಿಲ್ಲ. ರಾಜನೀತಿಯಲ್ಲಿ ಅವರನ್ನು ಸರಿಗಟ್ಟುವವರು ಭಾರತದಲ್ಲಿ ಬೇರಾರೂ ಇಲ್ಲ. ರಾಜಾಜಿಯನ್ನು ಭಾರತದ ಪ್ರಥಮ ಪ್ರೆಸಿಡೆಂಟರಾಗಿ ಆರಿಸಬಹುದೇ ಎಂಬ ಸಂಶಯ ಇದೆ. ಅವರು ಗವರ್ನರ್ ಜನರಲರಾಗಿ ಮಾಡಿದ ಕೆಲಸವನ್ನು ಪಂಡಿತ ನೆಹರೂರಂಥವರೇ ಹೊಗಳಿದ್ದಾರೆ ಸಹಜ. ಆದರೆ ಭಾರತದ ಪ್ರಥಮ ಪ್ರಸಿಡೆಂಟ್‌ತನವು ದಕ್ಷಿಣ ಭಾರತದವರಿಗೆ ದೊರಕುವದೇ ಎಂಬ ಶಂಕೆ ಇದೆ. ಏಕೆಂದರೆ ದಕ್ಷಿಣದವರ ವರ್ಚಸ್ಸನ್ನು ಅಸೂಯೆಯಿಂದ ಉತ್ತರದವರು ನೋಡುತ್ತಿರುವದನ್ನು ತಿಳಿದುಕೊಳ್ಳಲು ಹೆಚ್ಚು ಪ್ರಯಾಸಪಡಬೇಕಿಲ್ಲ.

ರಾಜಾಜಿಯವರು ತಾವು ರಾಜಕಾರಣದಿಂದ ನಿವೃತ್ತಿ ಹೊಂದುವದಾಗಿಯೂ ಅಧ್ಯಕ್ಷರ ಆಯ್ಕೆಯಲ್ಲಿ ತಾನು [illegible] ನಾಗಬಾರನೆಂದೂ ಹೇಳಿದ್ದಾರೆ. ಅವರ ಈ ವೈರಾಗ್ಯ ಅವರ ರಾಜನೀತಿಯಷ್ಟೇ ಸೂಕ್ಷ್ಮವಾದುದು!

### ಸರ್ದಾರ ಪಟೇಲರು.

ಕೆಲವರು ಸರ್ದಾರರ ಹೆಸರನ್ನು ಹೇಳುತ್ತಿದ್ದಾರೆ. ಈ ವರೆಗೆ ಗೃಹಶಾಖೆಯ ಜವಾಬ್ದಾರಿಯನ್ನು ಹೊತ್ತು ವಿಶ್ರಾಂತಿ ಇಲ್ಲದೆ ದುಡಿಯುತ್ತಿರುವ ಇವರು ಆಗಾಗ್ಗೆ ಕಾಯಿಲೆ ಬೀಳುತ್ತಿದ್ದಾರೆ. ಆದ್ದರಿಂದ ಅವರ ಹೆಗಲಿನ ಮೇಲಿರುವ ಮಹಾಭಾರವನ್ನು ತೆಗೆದು ಅವರಿಗೆ ರಾಷ್ಟ್ರಾಧ್ಯಕ್ಷ ಸ್ಥಾನದ ಗೌರವ ಕೊಡುವದು ಉಚಿತವೆಂದು ಹೇಳಲಾಗುತ್ತಿದೆ. ಆದರೆ ಸರ್ದಾರ್ ಪಟೇಲರಂಥಾ ಕ್ರಿಯಾತ್ಮಕ ವ್ಯಕ್ತಿಯನ್ನು ಪ್ರೆಸಿಡೆಂಟರಾಗಿ ಮಾಡುವದು ಭಾರತದ ದೃಷ್ಟಿಯಿಂದ ಹಾನಿಕಾರಕವಾದುದು. ಇಂದಿನ ಪರಿಸ್ಥಿತಿಯಲ್ಲಿ ಸರಕಾರದ ಕಡಿವಾಣ ಹಿಡಿದು ಮುನ್ನಡೆಸಲು ಅವರು ಅತೀ ಅವಶ್ಯ. ಆದ್ದರಿಂದ ರಾಷ್ಟ್ರಾಧ್ಯಕ್ಷ ಪಟ್ಟವನ್ನು ಅವರಿಗೆ ಕಟ್ಟಿದರೆ ವಿಪರೀತ ಹಾನಿ ಇದೆ.

### ನೆಹರೂರವರು.

ಭಾರತದ ಮುಖ್ಯ ಮಂತ್ರಿ ನೆಹರೂರವರು [illegible]? ನೆಹರೂರವರು ಹಿಂದಿನಿಂದಲೂ ಕ್ರಿಯಾತ್ಮಕ ಧೀರೋದ್ಧಾತ್ತ ಕಾರ್ಯಗಳಲ್ಲಿ ಆಸಕ್ತಿ ಇರುವವರು. ಅವರು ಗಿರಿಶಿಖರದಲ್ಲಿ ಗಂಡಾಂತರವನ್ನು ಎದುರಿಸಿ ಏರುವ ಜನವಲ್ಲದೆ ಪ್ರಶಾಂತದ ಜೀವನದ ಆಶೆಯುಳ್ಳವರಲ್ಲ. ಆದ್ದರಿಂದ ನವಚೇತನದ ಈ ವ್ಯಕ್ತಿ ರಾಷ್ಟ್ರಾಧ್ಯಕ್ಷ ಪದವಿಯನ್ನು ಪಡೆದು ಅಲಂಕಾರದ ಮೂರ್ತಿಯಾಗಲು ಖಂಡಿತಾ ಒಪ್ಪರು. ಒಂದು ವೇಳೆ ಇವರನ್ನು ಒಪ್ಪಿಸಿದರೂ ಭಾರತದ ಜವಾಬ್ದಾರಿಯನ್ನು ನಿರ್ವಹಿಸಲು ಸರ್ವ ಜನಾನುರಾಗವನ್ನು ಪಡೆದ ವ್ಯಕ್ತಿ ಬೇಕಿದ್ದಾರೆ! ಅವರು ಮಂತ್ರಿಮಂಡಲದಿಂದ ಹೊರಗೆ ನಿಂತರೆ ಮಂತ್ರಿಮಂಡಳದ ಪ್ರತಿಷ್ಠೆಯು ಕೆಳಗಿಳಿಯದೆ ಇರಲ್ಲದೆ ಕಾಳಗದ ಕಣವಾಗಲೂಬಹುದು. ಆದ್ದರಿಂದ ಪಂಡಿತ ಜವಾಹರರು ಈ ಗೌರವಕ್ಕೆ ಎಂದೂ ಒಪ್ಪಲಾರರು. ಹಾಗೆ ಒಪ್ಪಿದರೆ ರಾಷ್ಟ್ರಕ್ಕಾಗುವ ಹಾನಿಯು ಕಲ್ಪನೆ ಅವರಿಗಿದೆ!

### ಡಾ|| ಅಂಬೇಡ್ಕರ್.

ಈ ಅಧ್ಯಕ್ಷ ಆಯ್ಕೆಯ ಓಟಿನ ಪಟ್ಟಿಯಲ್ಲಿ ಇವರ ಹೆಸರು ಕಂಡು ಬರುತ್ತಿದೆಯಾದರೂ ಈ ಸೂಚನೆ ಅಂಗೀಕರಿಸಲ್ಪಟ್ಟೀತೆಂದು ಹೇಳಲಾಗುವದಿಲ್ಲ. ಒಂದು ವೇಳೆ ಇವರನ್ನು ಅಧ್ಯಕ್ಷರಾಗಿ ಆರಿಸಿದರೆ ಭಾರತದ ಹರಿಜನ ವರ್ಗದ ಬೆಂಬಲವು ಮುಂದಿನ ಚುನಾವಣೆಯಲ್ಲಿ ತಮಗೆ ದೊರೆಯಬೇಕೆಂಬ ಇರಾದೆಯಿಂದ ಕಾಂಗ್ರೆಸು ಹೀಗೆ ಮಾಡಿದೆ ಎಂದು ಎಡಪಕ್ಷದವರು ಹೇಳಿದರೆ ಅದನ್ನು ಸುಳ್ಳೆನ್ನಲಾಗುವದಿಲ್ಲ. ಮಹಾತ್ಮರು ಸ್ವತಂತ್ರ ಭಾರತದ ಪ್ರಥಮ ಅಧ್ಯಕ್ಷಸ್ಥಾನವು ಯೋಗ್ಯ ಹರಿಜನ ಬಾಲಕಿಯೊಬ್ಬಳಿಗೆ ಕೊಡಲ್ಪಟ್ಟರೆ ತಮಗೆ ಅಂದಿನ ಸನಗೆ ಅಮಿತಾನಂದವಾಗುತ್ತದೆಂದು ಕನಸು ಕಟ್ಟಿದ್ದರು. ಇಂದು ಅಂಬೇಡ್ಕರರ ವಿಚಾರವಾಗಿ ಅದೇ ಮಾತನ್ನು ಅನೇಕರು ಹೇಳುತ್ತಾರೆ. ಅವರನ್ನು ಅಧ್ಯಕ್ಷರಾಗಿ ಮಾಡಿದರೆ ಮಹಾತ್ಮರ ಆತ್ಮಕ್ಕೆ ಶಾಂತಿದೊರೆಯಬಹುದೆನ್ನುತ್ತಾರೆ. ಇವೆಲ್ಲ ತೋರಿಕೆಯ ಮಾತೆಂದು ಬೇರೆ ಹೇಳಬೇಕಿಲ್ಲ. ಗಾಂಧೀಜಿಯ ತತ್ವಗಳನ್ನು, ಕಡೆಗೆ ಗಾಂಧೀಜಿಯನ್ನೇ ಮರೆತಿರುವ ಕಾಂಗ್ರೆಸು ಈ ತೆರದ ಮಾತಾಡುವದು ಹಾಸ್ಯಕ್ಕೆಡೆಯೂ ದೀತು.

ಕಡೆಗೆ ಡಾಕ್ಟರ್ ರಾಜೇಂದ್ರ ಪ್ರಸಾದರೇ ಅಧ್ಯಕ್ಷರಾಗಬಹುದು.

### ಬದಲಾವಣೆಬೇಕು.

ಭಾರತದ ಪ್ರೆಸಿಡೆಂಟರ ಆಯ್ಕೆಯೊಂದಿಗೇ ಮಂತ್ರಿಮಂಡಳದಲ್ಲಿ ಬದಲಾವಣೆ ಬೇಕು. ಕೇಂದ್ರದಲ್ಲಿ ಅಧಿಕಾರ ವಹಿಸಿರುವವರೆಲ್ಲರೂ ಈ ವರೆಗೆ ಮಾಡಿದ ಕೆಲಸ ಕಾರ್ಯಗಳು ದೇಶದ ದೃಷ್ಟಿಯಿಂದ ಸಂಶಯಾತೀತವಾದುದೆಂದು ಹೇಳಲಾಗುವದಿಲ್ಲ. ಆದ್ದರಿಂದ ಕೇಂದ್ರ ಮಂತ್ರಿಮಂಡಳದಲ್ಲಿ ಬದಲಾವಣೆ ಅತೀ ಅಗತ್ಯ. ಭಾರತವನ್ನು ರಿಪಬ್ಲಿಕೆಂದು ಸಾರಿದನಂತರ ಮಂತ್ರಿಮಂಡಳದ ಪ್ರತಿಜ್ಞಾವಿಧಿ ನಡೆಯುವದು. ಆ ಕಾಲಕ್ಕೆ ಮೊದಲಿನ ಹೊಸ ಮಂತ್ರಿಮಂಡಳದ ರಚನೆ ಪ್ರಕಟವಾಗಿರುವದು! ಈಗಿನ ಮಂತ್ರಿಮಂಡಳದಲ್ಲಿ ಒಂದೆರಡು ಮಾತು ಹೇಳಬೇಕಾಗುತ್ತದೆ, ಸರ್ದಾರ್ ಪಟೇಲರು, ಗೃಹಮಂತ್ರಿ [illegible] ವನ್ನು, [illegible] ಪ್ರಚಾರ [illegible] ಮಂತ್ರಿಗಳಾಗಿದ್ದಾರೆ. ಇದಲ್ಲದೆ ಸಂಸ್ಥಾನಗಳ ಖಾತೆಯೂ ಇವರಿಗೆ ಸೇರಿದೆ. ಈ ರೀತಿ ಒಬ್ಬರಲ್ಲೇ ಅನೇಕ ಜವಾಬ್ದಾರಿಗಳನ್ನು ಹೇರುವದು ಅಯೋಗ್ಯ. ಸರ್ದಾರ್ ಪಟೇಲರಂಥವರು ಭಾರತಕ್ಕಾಗಿ ಇನ್ನೂ ಕೆಲವು ಕಾಲ ದುಡಿಯಬೇಕು. ಆದ್ದರಿಂದ ಅವರಲ್ಲಿ ಕೇಂದ್ರೀಕೃತವಾಗಿರುವ ಈ ಇಲಾಖೆಗಳಿಗೆ ಪ್ರತ್ಯೇಕ ಮಂತ್ರಿಗಳು ಬೇಕು. ಇದೇ ಮಾತನ್ನು ಪಂಡಿತ ನೆಹರೂರವರಿಗೂ ಹೇಳಬೇಕು. ಪ್ರಧಾನ ಮಂತ್ರಿತ್ವದ ಜವಾಬ್ದಾರಿಯೇ ಒಬ್ಬನನ್ನು ಹಣ್ಣುಮಾಡಲು ಸಾಕು. ಹಾಗಿರುವಾಗ ವಿದೇಶ ಇಲಾಖೆಯೂ ಅವರ ಪಾಲಿಗಿದೆ. ಅದಕ್ಕೆ ಬೇರೊಬ್ಬರನ್ನು ಮಾಡುವದು ಸೂಕ್ತ. ಈಗಿನ ಮಂತ್ರಿಮಂಡಳದಲ್ಲಿಯ ದಕ್ಷರಲ್ಲದವರನ್ನು ತೆಗೆದು ಹಾಕಬೇಕು. ಪಾರ್ಟಿ ಪಕ್ಷದ ದೃಷ್ಟಿ ಇರದೆ ಯೋಗ್ಯ ದೇಶಸೇವಕರನ್ನು ಆಹ್ವಾನಿಸಿ ಜವಾಬ್ದಾರಿ ಕೊಡಬೇಕು. ನೂತನ ರಾಜ್ಯಘಟನೆಯ [illegible] ಅಧ್ಯಕ್ಷರೊದನೆ ಜಾರಿಗೆ ಬರುವಾಗ ಹೊಸದಾಗಿ ಮಾಡಬೇಕಾದ [illegible] ಅಧಿಕಾರ ವಹಿಸಲಿ.

---

ಹೆಲ್ತ್ ಆಫೀಸರರ ಆಫೀಸು
ಮಡಿಕೇರಿ ತಾ|| ೨೮—೧೨—೪೯.

## ನೋಟೀಸು.

ತಾ. 1-4-1950 ರಿಂದ 31-3-51 ರ ವರೆಗೆ ಮಡಿಕೇರಿ [illegible] ವ್ಯಾಕ್ಸಿನ್ ಡಿಪೋಗೆ ಬೇಕಾಗುವ ಕರುಗಳ ಟೆಂಡರು ಮೊಹರಿನ [illegible] ಟೆಂಡರುಗಳನ್ನು ತಾ 20-1-1950 ರ ಬೆಳಿಗ್ಗೆ 11 ಗಂಟೆ ವರೆಗೆ ಮಡಿಕೇರಿ ಹೆಲ್ತ್ ಆಫೀಸಿನಲ್ಲಿ ಸ್ವೀಕರಿಸಲಾಗುವದು. ಹೆಚ್ಚಿನ ವಿವರಗಳಿಗೆ ಮಡಿಕೇರಿಯಲ್ಲಿರುವ ಹೆಲ್ತ್ ಆಫೀಸರರಲ್ಲಿ ಅಥವಾ ಸ್ಯಾನಿಟರಿ ಇನ್ಸ್‌ಪೆಕ್ಟರರಲ್ಲಿ ವಿಚಾರಿಸಬಹುದು.

ಸಿ. ಬಿ. ಕಾರ್ಯಪ್ಪ,
ಹೆಲ್ತ್ ಆಫೀಸರ್, ಕೊಡಗು.

---

*Health Officer's Office*
*Mercara. 28-12-1949.*

## NOTICE.

Sealed tenders for the hiring out of calves to the Vaccine Depot at Mercara, for one year commencing from 1-4-1950 to 31-3-1951 will be received at the Health Office Mercara upto 11 A. M. on Friday the 20th January 1950.

For terms and other particulars, apply to the Health Officer Coorg, Mercara, or the Sanitary Inspector, at Mercara.

**C. B. Kariappa,**
*Health Officer, Coorg.*

ವಿಡಂಬನ

# ಸೌಂದರ್ಯ ಮತ್ತು ಕುರೂಪತೆ.

ಲೇ:—ಶ್ರೀ ಬಿ. ಡಿ. ಗಣಪತಿ.

[illegible]

ಚಿನ್ನ ಬಿ[illegible] ಆತನಿಗೆ ಆ ನದಿಗೆ ಹರಿ ಸ್ಕೃತ [illegible] ವೇಗ [illegible]" ಎಂಬ [illegible] ಪ್ರೀನಿಯಸ ನೃಪ ಹೇಳಿದ್ದಾರೆ. [illegible] ಪಾನ ಸ್ನಾನ ಮಾಡಿದ [illegible]" ಎಂಬ ಅರಿಸ್ಟಾಟಲನ ಹೇಳಿಕ್ಕೆ [illegible] ಮುಂದೆ ಎಲ್ಲಾ ಸಂದೇಹ, ಧರ್ಮ ಧಾ ಪತ್ರಿಗಳು ಬುಟ್ಟವಾಗುತ್ತವೆ.

ಈ ಕಾರಣಕ್ಕಾಗಿಯೇ ಸೌಂದರ್ಯ ವನ್ನು ಬಯಸ್ವ ಕಸುಬುಗಳಲ್ಲಿ ಚಿನ್ನವು ಪಳವಾಗಿ ಉಪಯೋಗಿಸಿ ಎರಿತಾಧಿಗಳ ಗುಟ್ಟನ್ನು [illegible]. ಸೌಂದರ್ಯ ದ ಒಕ್ಕಳೆಯಿಂದ ಬಿಟ್ಟ [illegible] ಬರುವ ಸೌಭಾಗ್ಯ ಈ ನದಿಗೆ ಯಾರಿ ಗೂ ದೊರೆತಿಲ್ಲವೆನ್ನಬೇಕು. ಬ್ರಿಸ್ಟ್ ಇಂಗ್ಲೆಂಡು ದೇವತೆಗಳು ಪಾರ ಗಲಿಲ್ಲ. ನಾರದನಂಥಾ ಋಷಿಗೂ ಸಾಧ್ಯವಾಗಲಿಲ್ಲ. ಪುರಾಣ ಕಾಲದಲ್ಲಿ ಭೀಷ್ಮನೊಬ್ಬನೇ ಈ ಬಾಣದಿಂದ ಪಾರಾದನು. [illegible] ಚಂಕ್ರಿಯಲ್ಲಿ ಶಿವ ಜಗಿಯೊಬ್ಬನು! [illegible] ಇದು ಲೆಕ್ಕಕ್ಕಿಲ್ಲದ ಒಬ್ಬ ಸಕ್ಷ.

ಯಾರ ಸೌಂದರ್ಯದಿಂದ [illegible] ಗುವದಿಲ್ಲವೋ ಅವರೇ ಜಗ [illegible] ನ್ನು ಧರಿಸಬಲ್ಲರು. ಸೌಂದರ್ಯ [illegible] ರುಭೂಮಿಯು ಸರೋವರದಂತೆ [illegible] ಮುರುಳುವ [illegible] ಮರುಭೂಮಿಯ [illegible] ಎಂಬ [illegible]

ಮರುಭೂಮಿ [illegible] ಒಟ್ಟಿ [illegible] ಶೀಲ್ಡ್ [illegible] ಸೌಂದರ್ಯ [illegible] ನೋಡುವವರು ಅದು ಧರಿಸುವರೇ! ಈ ಯುಗಗಳಲ್ಲಿ [illegible]? ಒಬ್ಬ ಕವಿ ಹೇಳಿದಂತೆ "ಚಿನ್ನದ [illegible] ಚಿಯಿಂದ ಕಟ್ಟಿದರೂ ನಾಯಿ [illegible]".

[illegible] ಒಬ್ಬ [illegible] ಪ್ರಭಾವದ [illegible] ಹಾವು.

ಈ ರೂಪದರ್ಶನವು [illegible], ಸಂಯ ಮಿಗಳಿಗೆ ಸಹ [illegible] ವಿರುವವರು [illegible] ಧನವಂತರೂ [illegible] ಸ ಶಿಷ್ಯ [illegible] ಸೌಂದರ್ಯ ಇತ್ಯಾದಿಗಳನ್ನು ಬಳಸಿ [illegible] ಅವಿಷ್ಕರ [illegible] ಕಲೆಗಳ [illegible] ಸೌಂದರ್ಯ [illegible] ಕಲೆಯ [illegible] ಅಭಿನ [illegible] ಕಲ್ಪನ [illegible] ಎಲ್ಲರನ್ನು [illegible] ಎಂ [illegible]

[illegible]

(ಅಪೂರ್ಣ)

ಶಾಶ್ವತವಾಗಿ ಮಡಿಕೇರಿಯಲ್ಲಿ ತೆರೆಯ [illegible] ಶೀರ್ಮಾನಿಸಲಾಗಿದೆ. ಶೇರು ೧ರ ರೂ 10/- ಗಳಂತೆ ಪ್ರತಿ ಒಬ್ಬ ಮೆಂಬರನು [illegible] ಹೊಂದಿಕೊಳ್ಳಬಹುದು. ಆದರೆ ಒಬ್ಬನಿಗೆ ನೂರು ಶೇರುಗಳಿಗಿಂತ ಹೆಚ್ಚು ಶೇರುಗಳನ್ನು ಕೊಡಲಾಗುವುದಿಲ್ಲ. ಮೆಂ ಬರುಗಳು ಈ ಕೆಳಗೆ ರುಜು ಮಾಡಿದವನಿ ಗೆ ಮನಿಯಾರ್ಡರ್ ಮೂಲಕ ಹಣ ಕಳು ಹಿಸತಕ್ಕದು. ಸರಕಾರಿ ಉದ್ಯೋಗ [illegible] ರೂ [illegible] ಸೇರಬಹುದು [illegible] ಕೊಡಲಾಗುವುದು. ಸಂಘವು ರಿಜಿಸ್ಟರ್ ಆದನಂತರ ಮೆಂಬರರುಗಳ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುವುದು.

ಯನ್. ಬಿ ಉತ್ತಪ್ಪ
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.


# ಗಮನಿಸಿರಿ!

ದಿನವಹಿ ಬೆಳೆಯುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಆಕರ್ಷಕವಾದ ಸಿಲ್ಕ್, ಉಲನ್ ಮತ್ತು ಪಿಸ್ [illegible] ಸ್ಟಾಕ್ [illegible]
ಯಾವ ಸಮಯದಲ್ಲಿಯೂ [illegible]
ಆರ್ಡರ್ ಪ್ರಕಾರ ಅತೀ ಆಧುನಿಕ [illegible]
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು

[illegible]!

**ಪಟ್ಟೋ ಬ್ರದರ್ಸ್,**
[illegible]
[illegible], ಮೈಸೂರು



# ಬಟ್ಟೆ ಬೇಕೇ?

[illegible] ಬೆಂಗಾಲ್ [illegible], ಉತ್ತಮ [illegible] ೫೦% [illegible]
[illegible]
[illegible]
[illegible]
ಒಮ್ಮೆ ಬಂದು ಪರೀಕ್ಷಿಸಿರಿ

[illegible] & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,
[illegible] (ಕೊಡಗು)

12-1


# ಹರಾಜು.

ಮಿ. ಜಾರ್ಜ್ ಸ್ಕಾಟ್ ಲೇಂಡರಿಗೆ ಸೇರಿದ ಮರವ ಟ್ಟು ಮತ್ತಿತರ ಸಾಮಾನುಗ ಳು ತಾರೀಕು ೨೨-೧-೫೦ ನೇ ಆದಿತ್ಯವಾರ ಬೆಳಿಗ್ಗೆ ೧೦-೩೦ ಗಂಟೆಗೆ ಸಿದ್ದಾಪು ರದ ಎಲ್ಕ್‌ಹಿಲ್ ಬಂಗ್ಲೆಯ ಲ್ಲಿ ಸಾರ್ವಜನಿಕ ಹರಾಜಿನ ಲ್ಲಿ ಮಾರಲ್ಪಡುವವು.

# A PUBLIC AUCTION

Of the furniture and effects belonging to Mr. George scotland will be held at Elk Hill Bungalow Sidapur on sunday 22nd January 1950 at 10-30 a. m.

## ನೋಟೀಸು.

ಕೊಡಗು ಮಾಜಿ ಸಿಪಾಯಿಗಳ ಸಂ ಘವು ವೀರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿ ದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿ ಗಳು ರೂಪಾಯಿ ಒಂದನ್ನು ಈ ಕೆಳಗೆ ರುಜು ಹಾಕಿದವರಿಗೆ ಕಳುಹಿಸಿ ಮೆಂಬ ರಾಗಬೇಕಾಗಿ ಈ ಮೂಲಕ ಕೇಳಿಕೊಳ್ಳ ಲಾಗಿದೆ. ಕೊಡಗಿನ ಎಲ್ಲಾ ಮಾಜಿ ಸಿ ಪಾಯಿಗಳ ಆಧಿಕ, ನೈತಿಕ ಅಭಿವೃದ್ಧಿ [illegible] ಈ ಸಂಘವನ್ನು ಸ್ಥಾಪಿಸಿದ್ದಾಗಿದೆ. [illegible] ದ ಈ ಸಂಘವನ್ನು ಯಶ ಸ್ವಿಗೊಳಿಸಬೇಕು.

ಯನ್. ಬಿ ಉತ್ತಪ್ಪ,
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

5-1

## ಪ್ರಕಟಣೆ.

ಕೊಡಗು ಮಾಜಿ ಸಿಪಾಯಿಗಳ ಸಹ ಕಾರ ಟ್ರಾನ್ಸ್‌ಪೋರ್ಟ್ ಸಂಘವನ್ನು ಕೊಡಗು ಮಾಜಿ ಸಿಪಾಯಿಗಳ ಸಂಘದ


ಸ್ವಪ್ರಗತಿ! ೨೭ ವರ್ಷಗಳ ಪರಿಪಕ್ವ ಅನುಭವದಿಂದ!! ಅಸಂಭವನೀಯವೇ!!

# ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮಂಜೂರು ಬಂಡವಾಳ,
ಹೆಡ್ ಆಫೀಸ್, ಮಂಗಳೂರು.
ನಿಯಮಿತ ಠೇವಣಿಗಳ ಬಡ್ಡಿ ದರ:—

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4% |

ರೂ [illegible] 000 [illegible] ಮೇಲ್ಪಟ್ಟ ಮೊಬಲಗಿನ ಠೇವಣಿಗೆ ½% ಹೆಚ್ಚಿಗೆ.

ಶಾಖೆಗಳು:— ಸಿಟಿ ಮಂಗಳೂರು, [illegible], ಕುಂದಾಪುರ, ಬ್ರಹ್ಮಾವರ, ಉಡುಪಿ, [illegible], ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ಒಟ್ಟು ವಹಿವಾಟು ಬಂಡವಾಳ ರೂ ೪೦ ಲಕ್ಷಕ್ಕೂ ಮಿಕ್ಕಿದೆ
ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**

# ಕೊಡಗು

ತಾ. ೬-೧-೧೯೫೦ ನೇ ಶುಕ್ರವಾರ

## ಹೊಸ ವರ್ಷ.

೧೯೪೯ ಕಾಲವಾಹಿನಿಯಲ್ಲಿ ವಿಲೀನವಾಗಿ ೧೯೫೦ಕ್ಕೆ ಕಾಲಿಟ್ಟಿರುವೆವು. ಈ ಹೊಸ ವರ್ಷಕ್ಕೆ ಕಾಲಿಕ್ಕುವಾಗ ನಮ್ಮ ಭರತಖಂಡಕ್ಕೆ [illegible] ಹೊಸ ರಾಜ್ಯಘಟನೆಯನ್ನು ತಯಾರಿಸಿಕೊಂಡು ಸಿದ್ಧರಾಗಿರುವೆವು. ಈ ತಾರೀಕು ೨೬ರಂದು ನಮ್ಮ ದೇಶವು ಸರ್ವ ಸ್ವತಂತ್ರ ಜನತಾರಾಜ್ಯವಾಗಿ ನಾವು ರೂಪಿಸಿರುವ ನವರಾಜ್ಯ ಶಾಸನಗಳು ಅಂದಿನಿಂದ ಜಾರಿಗೆ ಬರುವವು. ಹೊಸ ರಾಜ್ಯ ಶಾಸನ ಜಾರಿಗೆ ಬಂದರೆ ಸರ್ವ ಕೆಲಸ ಆಗಲಿ [illegible] ಜನಸಾಮಾನ್ಯರಲ್ಲಿ ಸ್ವತಂತ್ರಿಕೆಯ ಜೊತೆಗಾರಿಕೆ, ಜ್ಞಾನ, ಜಾಗ್ರತಿ ಮತ್ತು ವಿಚಾರಬುದ್ಧಿ [illegible] ಈ ನವರಾಜ್ಯ ಶಾಸನಗಳು ಕಾಗದದಲ್ಲೇ ಉಳಿಯಬಹುದು. ಇಲ್ಲವೇ [illegible] ರಾಜ್ಯಘಟನೆ ಜಾರಿಯಲ್ಲಿ ಬಂದರೂ [illegible] ಅದರ ಸಿದ್ಧಾಂತಗಳನ್ನು [illegible] ದಿದ್ದರೆ ಜನತೆಯ ಪಾಲಿಗೆ [illegible] ಹಿತವಾಗುವುದು [illegible] ಜನತೆಯಲ್ಲಿ ಅಜ್ಞಾನಿಗಳಾಗಿ, ಸರ್ಕಾರವು ಮಾಡುವ [illegible] ಬಗೆಗೆ ತಿಳಿವಿಲ್ಲದವರಾಗಿ [illegible] ಸ್ವರಾಜ್ಯ ಸಂಸ್ಥಾಪನೆಗೂ ಅದ [illegible] ನವರಾಜ್ಯ [illegible] ಬೆಲೆ ಇಲ್ಲ. [illegible] ಲಕ್ಷ್ಯವಾಗಿ [illegible] ಮನೆಯ [illegible] ವೃಷ್ಟಾನ್ನಭೋಜನವಿಲ್ಲ[illegible] ನು ಫಲ? ಅದರಂತೆ ಜನತೆಯಲ್ಲಿ ಅಜ್ಞಾನ, ಅಂಧ ಕಾರ ತುಂಬಿದ [illegible] ಪಾಠಶಾಲೆ [illegible] ಸೆಟ್ಟಿನ ಪ್ರಯೋಜನವಿರಲಾರದು.

ಸವಾರರು ಅಪೇಕ್ಷಿಸಿದಂತೆ ಭಾರತಕ್ಕೆ ಸ್ವರಾಜ್ಯ ಬಂತು. [illegible] ದರಿಂದ ಏನೆಲ್ಲ ಆಗಬೇಕಿತ್ತು ಅದೆಲ್ಲ ಆಗಿದೆಯೆ? ಸ್ವರಾಜ್ಯವೆಂದರೆ ಬಿಳಿ ಜನರ ಕೈಯು ಅಧಿಕಾರವು ಭಾರತೀಯರಿಗೆ ಬರುವುದೇ ಏನ? [illegible] ಬಂದಿರುವ ಸ್ವರಾಜ್ಯವು ಜನ ಸಾಮಾನ್ಯರ ಕೈಗೆ ಬರಬೇಕು [illegible] ಬರಬೇಕಾದರೆ ಜನ ಜಾಗೃತಿಯಾಗಬೇಕು.

ಈಗ ಸ್ವತಂತ್ರ ಭಾರತದಲ್ಲಿ ನಡೆದಿರುವ ಆಡಳಿತವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ [illegible] ಗಳನ್ನು ಬಿಟ್ಟರೆ [illegible] ಗೂ ಸ್ವಾರ್ಥ, ಸಂಕುಚಿತ ಭಾವ, ಅಜ್ಞಾನ, [illegible] ಸ್ವಜನ [illegible] ತಾತ್ಕಾಲಿಕ [illegible] ಗಳಿಂದ ಕೂಡಿದ ಅಂಧಕಾರದಲ್ಲಿ [illegible] ಬೆಳಕು ಮೂಡ [illegible] ಹೀಗಾಗಲು [illegible] ನ? ಒಂದೇ [illegible] ಸಾಕಷ್ಟು ಜನಜಾಗೃತಿ ಇಲ್ಲದಿರುವುದು!

ಜನತೆ ಜಾಗೃತಗೊಂಡರೆ, ತಾವು ಮಾಡುವುದೆಲ್ಲವೂ ಅವರಿಗೆ ತಿಳಿಯುತ್ತದೆ. ಕ್ರಮವಾಗಿ ತಾವು ತಮ್ಮ ಕರ್ತವ್ಯಗಳನ್ನು ಅವರಿಗೆ ಉತ್ತರ ಕೊಡಬೇಕಾಗುತ್ತದೆ. ಎಂಬ ಸಂಗತಿ ಅಧಿಕಾರಿಗಳಿಗೆ ಮುಂದಟ್ಟಾಗುತ್ತಿದ್ದರೆ ಅಧಿಕಾರಿಗಳೂ, ಜನಮುಖಂಡರೂ ಸ್ವಾರ್ಥ, ವಂಚನೆಗಳನ್ನು ಮಾಡಲು ಹಿಂಜರಿಯುತ್ತಿದ್ದರು. ಆದರೆ ಇಂದು ಜನರ ಅಭಿಪ್ರಾಯವನ್ನು ಕೇಳುವವರಾರು? ತಮ್ಮ ಅಭಿಪ್ರಾಯವು ನಡೆಯುವಂತೆ [illegible] ಮಾಡುವ ಶಕ್ತಿ ಮತ್ತು ಜಾಗೃತಿ ಜನಸಾಮಾನ್ಯಕ್ಕೆ ಬಂದಿಲ್ಲ. ಈ ಜನಜಾಗೃತಿ ಆಗದಿದ್ದರೆ ಜನತಾ ರಾಜ್ಯ, ಪ್ರಜಾಪ್ರಭುತ್ವ ಕೆಲವರೊಡನೆ ಜನರ [illegible] ಗೊಂಬೆಯಾಗಿಯೇ ಉಳಿಯುವದು.

೧೯೪೭ನೇ ಆಗಸ್ಟ್ ೧೫ರಲ್ಲಿ ಸ್ವಾತಂತ್ರ್ಯ ಬಂತು. ಆ ಕಾಲದಿಂದಲೇ ಭರತಖಂಡದ ಜನ ಜೀವನಕ್ಕೆ [illegible] ಬರಲಿಲ್ಲ. ಹಿಂದಿನ [illegible] ಬಡತನ, ಅಜ್ಞಾನ, ಕಷ್ಟ ನಿಷ್ಠುರಗಳು ಇವೆ. [illegible] ನಾಳೆ ಭಾರತವು [illegible] ಅವನಂತೆ [illegible] ಸ್ಥಿತಿಯನ್ನು [illegible] ವೇಗದಿಂದ ಬದಲು [illegible] ಜನತೆಯ ಸ್ಥಿತಿಯು ಬದಲಾಗುವದು. ಜನತೆಯು [illegible] ತನ, ಅಜ್ಞಾನಗಳಿಂದ ನರಳುವದರಿಂದ ಭಾರತವು [illegible] ಆಗಿ ನೂರು ವರ್ಷವಾದರೂ ಪರಿಸ್ಥಿತಿ ಸುಧಾರಿಸದು. ಆದ್ದರಿಂದ [illegible] ಉನ್ನತಿ ಮತ್ತು [illegible] ಜನತೆ [illegible] ಯನ್ನು ಹೊಂದಿರೂ ಬೇಕು.

ಜನತೆಯು ಇಂದು ಅಜ್ಞಾನ, [illegible] ಅಭಾವಗಳಿಂದ ನರಳುತ್ತಿರಲು ಅವರ ಆರ್ಥಿಕ ಸ್ಥಿತಿ ಸುಧಾರಿಸ [illegible] ಪ್ರಬಲ ಕಾರಣ. ಅವರ ಆರ್ಥಿಕ ಸ್ಥಿತಿ [illegible] ಯೋಗ್ಯ [illegible] ಭಾರತದ ಇಂದಿನ ಸ್ವತಂತ್ರ್ಯ ಯುಗದಲ್ಲಿ ಭಾರತೀಯರಿಗೆ ಬಂದಿರುವ [illegible] ಸ್ವಾತಂತ್ರ್ಯ [illegible] ಸ್ವಾತಂತ್ರ್ಯ ಈ [illegible] ಅರ್ಥಿಕ ಸ್ವಾತಂತ್ರ್ಯ [illegible] ಬಂದಿದೆ [illegible] ಆ [illegible] ತಮ್ಮ ಹಕ್ಕೂ, ರಾಷ್ಟ್ರದ ಹಿತದೃಷ್ಟಿಯಿಂದ ಉಪಯೋಗಿಸುವ ಜ್ಞಾನ [illegible] ಬೆಳಕ [illegible] ವಾಗಿ ಬೆಳಗಿ ಅಂಧಕಾರ ಕವಿದಿರುವ ಬಡ ಗುಡಿಸಲನ್ನು ಬೆಳಗಿಸುವ ಕಾರ್ಯಕ್ಕೆ ತನ್ನ ಕೈಲಾದ ಪ್ರಯತ್ನವನ್ನು ಮಾಡಲು "ಕೊಡಗು" ಪತ್ರಿಕೆಯು ನಿರ್ಧಾರವಾಗಿ ಪ್ರತಿಜ್ಞೆಗೈಯುತ್ತದೆ.

## ಸತ್ಕಾರ ಸನ್ಮಾನ.

ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪಿ. ಎ. [illegible] ಕುಮಾರಿಯವರಿಗೆ ಕಾಲೇಜಿನ ೧೯೪೯-೫೦ರಲ್ಲಿ ನಡೆದ ಒಲಿಂಪಿಕ್ ಅಥ್ಲೆಟಿಕ್ಸ್‌ನಲ್ಲಿ ನಾಲ್ಕು ಬೆಳ್ಳಿಯ ಕಪ್ಪುಗಳು ದೊರಕಿರುವುದನ್ನು ತಿಳಿಯುತ್ತೇವೆ.

ಕೊಡಗು ನ್ಯಾಯ ವಿಧಾಯಕ ಸಭೆಯ ವಿಶೇಷ ಮೀಟಿಂಗೊಂದನ್ನು ತಾ. ೧೨-೧-೫೦ನೇ ಗುರುವಾರ ಬೆಳಿಗ್ಗೆ ೧೧-೩೦ಕ್ಕೆ ಕರೆಯಲಾಗಿದೆ.

ತಾರೀಕು ೨೩-೧೨-೪೯ ರಲ್ಲಿ ಪೊನ್ನಂಪೇಟೆ ಗ್ರಾಮ ಪಂಚಾಯತ ಸಭೆಗೆ ಶ್ರೀಗಳಾದ ಎಂ. ಎ. ಪೂವಯ್ಯ, ಎ. ಎಸ್. ತಮ್ಮಯ್ಯ, ಕೆ. ಎಸ್. ನಾಗರಾಜ, ಎಸ್. ಎಸ್. ಗಣಪತಿ, ಎಂ. ಡಿ. ಕುಶಾಲಪ್ಪ, ಪಿ. ಆರ್. ವೆಂಕಟರಮಣಯ್ಯ, ಪರಂಬತ್ ಮಮ್ಮು ಮತ್ತು ಮುಹಮ್ಮದ್ ಇಸಾಕ್ ಸಾಹೇಬ್ ಇವರುಗಳನ್ನು ಎರಡು ವರ್ಷಗಳ ವರೆಗೆ ಆರಿಸಲಾಗಿದೆ. ಶ್ರೀ ಎಂ. ಎ. ಪೂವಯ್ಯನವರನ್ನು ತಾ. ೩೦ರಲ್ಲಿ ನಡೆದ ಮೀಟಿಂಗಿನಲ್ಲಿ ಸಭೆಯ ಅಧ್ಯಕ್ಷರಾಗಿ ಆರಿಸಿರುವರು.

ರಾಯಲ್ ವಿಮಾನದಳದಲ್ಲಿ ತರಬೇತಾಗುತ್ತಿರುವವರಿಗೆ ವಿದ್ಯಾರ್ಥಿವೇತನ ಕೊಡುವ ಹೊಸ ಯೋಜನೆಯೊಂದು ಇಂಡಿಯಾ ಸರಕಾರದವರಿಂದ ವಿಚಾರದಾಗಿದೆಯೆಂದೂ ಸಂಬಂಧಿಸಿದವರು ಅರ್ಜಿ ಬರೆದುಕೊಳ್ಳಬಹುದೆಂದೂ ಪ್ರಕಟವಾಗಿದೆ.

ಕಳೆದ ಅಕ್ಟೋಬರಿನಲ್ಲಿ ಭಯಂಕರ ಬಿರುಗಾಳಿಯಿಂದ ನಿರಾಶ್ರಿತರಾದ ಆಂಧ್ರದ ಜನತೆಗೆ ಸಹಾಯ ಮಾಡುವ ಉದ್ದೇಶದಿಂದ ೧೨-೧೨-೪೯ರಲ್ಲಿ ಕೊಡಗು [illegible] ಸ್ಟಿಲ್ [illegible] ಒಂದು ಸಾರ್ವಜನಿಕ ಸಭೆಯನ್ನು [illegible] ಸಿದ್ದರು.

[illegible] ಸರಕಾರದ ಸಂಸ್ಥಾನದ [illegible] ಯ [illegible] ರಾದ ಶ್ರೀ ವಿ. ಸಿ. [illegible] ರವರ ತಾರೀಕು ೧೯-೧-೫೦ರಲ್ಲಿ [illegible] ನಡೆಯಲಿದೆ ಎಂದಿದೆ.

[illegible] ತಿಂಗಳು [illegible] ಶ್ರೀರಾಜರಾಜೇಶ್ವರಿ [illegible] ಹಿಂದೀ [illegible] ಗಳು [illegible] ಎಂಬುದಾಗಿ ತಿಳಿದು ಬಂದಿದೆ.

ಅಂತರ್ಮಾನಿನಲ್ಲಿರುವ ಸುಮಾರು ನಲವತ್ತು ಕೊಡಗರ [illegible] ೧೦-೧೨-೪೯ರಲ್ಲಿ ವಿಜಯ ಅರ್ಸನಾನಿ [illegible] ಗಮ್ಮತ್ತನ್ನು ಬಹು ವಿಜೃಂಭಣೆಯಿಂದ ನಡೆಸಿದರು. ಆದೇ ದಿವಸ ರಾತ್ರಿ [illegible] ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗೊಂದನ್ನು ನಡೆಸಿ "ಕೂರ್ಗ ಎಸೋಸಿಯೇಷನ್ ಆಫ್ ಅಂಡಮಾನ್ಸ್" ಎಂಬೊಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅಂಡಮಾನಿನ ಚೀಫ್ ಕಮಿಷನರಾದ ಶ್ರೀ ಎ. ಕೆ. ಘೋಷರವರು ಆ ದಿನ ಅತಿಥಿಗಳಾಗಿದ್ದರು. ಇವರ ಅಧ್ಯಕ್ಷತೆಯಲ್ಲಿ [illegible] ನಡೆದ ಆಟೋಟಗಳ [illegible] ಯಲ್ಲಿ ಗೆದ್ದವರಿಗೆ ಮಿಸೆಸ್ [illegible] ಚಂಗಪ್ಪನವರು ಬಹುಮಾನಗಳನ್ನು ಹಂಚಿದರು.

ಫ್ರೇಜರ್‌ಪೇಟೆ ಶಾಲಾ ಕಟ್ಟಡದ ನಿಧಿಯ ಸಹಾಯಾರ್ಥವಾಗಿ ಜ್ಯೂಬಿಲಿ [illegible] ರವರ [illegible] ೬-೧-೧೯೫೦ರಲ್ಲಿ ಕೊಟ್ಟ ಪ್ರದರ್ಶನದ ಮೂಲಕ ೫೦೦ ರೂಪಾಯಿ ಆಗಿ [illegible] ಗಳ [illegible] ನ್ನು ಕೊಟ್ಟು ಬಾಕಿ ರೂ ೩೫೦ ನಿಧಿಗಾಗಿ ದೊರೆತಿದೆ.

## ಐ. ಎಲ್. ಓ. ಪ್ರತಿನಿಧಿಗಳು.

ಅಂತರ್‌ರಾಷ್ಟ್ರೀಯ ಕಾರ್ಮಿಕರ ಸಂಸ್ಥೆಯ ಡೈರೆಕ್ಟರ್ ಜನರಲ್ ರಾದ ಮಿ. ಡೇವಿಡ್ ಮೋರ್ಸ್‌ರವರೊಡನೆ ಅಮೇರಿಕಾ, ಇಂಗ್ಲೆಂಡ್, ಫ್ರೆಂಚ್, ಬೆಲ್ಜಿಯಂ, ಕೆನಡಾ, ಚೈನಾ, ನಾರ್ವೆ ದೇಶಗಳ [illegible] ಸುಮಾರು ೨೦ ಡೆಲಿಗೇಟುಗಳು ಮೈಸೂರಿನಲ್ಲಿ ನಡೆಯುವ ಪರಿಷತ್ತಿಗೆ ಬಂದಿದ್ದವರು ಈ ತಾರೀಕು [illegible] ರಂದು ಕೊಡಗನ್ನು ಸಂದರ್ಶಿಸಿದರು. ಇವರು ಸದರಿ ದಿನ ಬೆಳಿಗ್ಗೆ ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಪಿ. ಮಾ [illegible] ಚಂಗಪ್ಪನವರ ಸಂಗಡ, ಈ ಮೊದಲೇ ಶ್ರೀ ಅಪ್ಪಾರಂಡ [illegible] ತಿಮ್ಮಯ್ಯನವರಿಂದ ಆಹ್ವಾನಿಸಲ್ಪಟ್ಟ ಮೇರೆ ಅವರ 'ಗ್ರೀನ್ ಹಿಲ್ಸ್' ಮನೆಗೆ ಬಂದು ಅಲ್ಲಿ ಮಧ್ಯಾಹ್ನದ ಊಟವನ್ನು ಮುಗಿಸಿದರು. ಔತಣಕ್ಕೆ ಸುಮಾರು ನೂರು ಜನರು ಹಾಜರಿದ್ದರು. ಅನಂತರ ಇವರು ಪಾರ್ಟಿಯು ಮಡಿಕೇರಿಗೆ ಬಂದು ಸಾಯಂಕಾಲ ೪ ಗಂಟೆಗೆ ಕೋಟೆಯ ಎದುರುಗಡೆ 'ದೇವಾಡಿ ಪಟ್ಟಿ'ಯಲ್ಲಿ ಸಾರ್ವಜನಿಕರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭಾಗವಹಿಸಿದರು. ಚೀಫ್ ಕಮಿಷನರಾದ ದಿವಾನ್ ಬಹದ್ದೂರ್ ಸಿ. ಟಿ. ಮೊದಲಿಯಾರ್‌ರವರು ಚಿಕ್ಕ ಭಾಷಣದಲ್ಲಿ ಅತಿಥಿಗಳಿಗೆ ಸ್ವಾಗತವಿತ್ತರು. [illegible] ಕೊಡಗಿನ ಸಾರ್ವಜನಿಕರ ಪರವಾಗಿ ದಿ. ಬ. ಕೆ. [illegible] ಚಂಗಪ್ಪನವರು ಒಂದು "ಪೀಚೆ ಕತ್ತಿ"ಯನ್ನು ಕೊಡಗಿನ ಜ್ಞಾಪಕಾರ್ಥವಾಗಿ ಮಿ. ಮೋರ್ಸ್‌ರವರಿಗೆ ಬಹುಮಾನವಾಗಿ ಕೊಟ್ಟರು. ಮಿ. ಮೋರ್ಸ್‌ರವರು ಸ್ವಾಗತಕ್ಕೆ ವಂದಿಸುತ್ತಾ "ಪೀಚೆ ಕತ್ತಿ"ಯನ್ನು ಕೊಡಗಿನ ಜ್ಞಾಪಕಾರ್ಥವಾಗಿ ಜಿನೀವಾದಲ್ಲಿರುವ ತಮ್ಮ ಹೆಡ್ ಆಫೀಸಿನಲ್ಲಿ ಇಡುವೆನೆಂದು ಹೇಳಿದರು. [illegible] ಅರ್ಥ [illegible] ಪ್ರತಿಯೊಬ್ಬ ಅತಿಥಿಯೂ [illegible] ಅಷ್ಟು [illegible] ಒಂದು ಕತ್ತಿ [illegible] ಕೊಡೆಯ [illegible] ಅನಂತರ ಕೆಲವು ದಿವಸಗಳ ಹಿಂದೆ ತಿಥಿ [illegible] ಹಿಡಿದ ಬಳಿ ಆನೆಯನ್ನು [illegible] ಗಳಿಗೆ ತೋರಿಸಲಾಯಿತು. [illegible] ದೊಡ್ಡ ಆನೆ ಮೇಲೆ ಅತಿಥಿಗಳ [illegible] ಚಿತ್ರ ತೆಗೆದರು. ಸುಮಾರು ೭ ಗಂಟೆಗೆ ಅತಿಥಿಗಳು ಮಡಿಕೇರಿಯ ಹೋಗಿ ಅಲ್ಲಿ 'ಪಾರ್ಕ್'ಯಲ್ಲಿ ಮಾಡಿದ [illegible] ನೃತ್ಯರು ಏರ್ಪಡಿಸಿದ್ದ [illegible] ಕೋಲಾಟವನ್ನು ನೋಡಿದರು. ಚೀಫ್ ಕಮಿಷನರರು ಕೋಲಾಟದ ಅರ್ಥವನ್ನು ವಿವರಿಸಿ ಹೇಳಿ ಅದನ್ನು ನೋಡಿದಕ್ಕಾಗಿ ಅತಿಥಿಗಳಿಗೆ ವಂದಿಸಿದರು. ಮಿ. ಮೋರ್ಸ್‌ರವರ ಗ್ರಾಮ [illegible] ಗಳನ್ನು ವಂದಿಸುತ್ತಾ ಇಂಥಾ ವಿಶೇಷತರದ [illegible] ವನ್ನು [illegible] ಹಲವು ದೇಶದಲ್ಲಿಯೂ ನೋಡಿರಲಿಲ್ಲವೆಂದೂ ಇದು ಇಲ್ಲಿಯ ಜನರ ಸ್ವಭಾವ ಮತ್ತು ಸಂಸ್ಕೃತಿಯನ್ನು ಸೂಚಿಸುತ್ತವೆಂದೂ, ಇದನ್ನು ತಾವೆಂದಿಗೂ ಮರೆಯಲಾರೆವೆಂದೂ ಪ್ರಸಂಶಿಸಿದರು. ನೆರೆದಿದ್ದ ದೊಡ್ಡ ಜನಸ್ತೋಮದ ಪರವಾಗಿ ಶ್ರೀ ಬಿದ್ದಂಡ [illegible] ಸುಬ್ಬಯ್ಯನವರು ಅಂತರರಾಷ್ಟ್ರೀಯ ಡೆಲಿಗೇಟುಗಳು ತಮ್ಮ ಚಿಕ್ಕ ಗ್ರಾಮಕ್ಕೆ ದಯಮಾಡಿಸಿ ಗ್ರಾಮಸ್ಥರ ಕುಣಿತ [illegible] ನೋಡಿದಕ್ಕಾಗಿ ಅತಿಥಿಗಳನ್ನು [illegible] ಬಾರ [illegible] ಸಿದರು. ನಂತರ ಅತಿಥಿಗಳು ಗ್ರೀನ್ ಹಿಲ್ಸ್‌ಗೆ ಹಿಂತಿರುಗಿ ಅಲ್ಲಿ ರಾತ್ರಿಯ ಊಟವನ್ನು ತೀರಿಸಿಕೊಂಡು ಮೈಸೂರಿಗೆ ಹೋದರು.

# ವಾರ್ತೆಗಳು.

## ಶಾಂತಿ ಸಮ್ಮೇಳನದವರಿಗೆ ಗಾಂಧಿಜೀಯವರ ತಾಯಿತ

ಸೇವಾಗ್ರಾಮದಲ್ಲಿ ಸೇರಿದ ಶಾಂತಿ ಪರಿಷತ್ತಿನ ಪ್ರತಿನಿಧಿಗಳು, ಪರಿಷತ್ತು ಮುಕ್ತಾಯಗೊಂಡ ನಂತರ [illegible] ಊರುಗಳಿಗೆ ಹೋಗುವಾಗ ತಮ್ಮ ತಮ್ಮ ದೇಶಗಳು ಹಲವು [illegible] ವಸ್ತುಗಳನ್ನು ಸಂಗ್ರಹಿಸಿದರು. ಆ ವಸ್ತುಗಳಲ್ಲಿ ಗಾಂಧಿಜೀಯವರು [illegible] ಬರೆದ ಕಾಗದವು ಸಹ ಒಂದಿರುವುದಾಗಿ ತಿಳಿದುಬಂದಿದೆ. ಆ ಪ್ರತಿಯನ್ನು [illegible] ಶ್ರೀ [illegible] ಕುಮಾರ [illegible] ಮುದ್ರಿಸಿ ಎಲ್ಲಾ [illegible] ಕೊಟ್ಟರು. '[illegible] ಊರುಗಳಿಗೆ [illegible] ಎಂದು ಆ ಸದಸ್ಯರು [illegible] ಎಂದು ತಿಳಿದುಬಂದಿದೆ.

## ಭಾರತ ಪ್ರಜಾಪ್ರಭುತ್ವದ ಉದ್ಘಾಟನೆ.

[illegible] ಶ್ರೀ. ಎಚ್. ವಿ. [illegible] ಪ್ರಕ್ರಿಗೆ [illegible] ಉದ್ಘಾಟನೆಗೆ [illegible] ೨೬ [illegible] ಗಳನ್ನು [illegible].

[illegible] ೨೬ [illegible] ೧೦ ಗಂಟೆಗೆ [illegible] ಬಂದರು [illegible]. [illegible] ಶಾಸಕರು [illegible] ಅಧ್ಯಕ್ಷರು [illegible] ಮೇಲೆ [illegible] ಅಧ್ಯಕ್ಷರು [illegible] ಪ್ರತಿನಿಧಿಗಳನ್ನು [illegible] ಭಾರತವನ್ನು [illegible] ಆನಂತರ [illegible].

[illegible] ಅಧ್ಯಕ್ಷರು [illegible] ರಕ್ಷಣೆ [illegible] ಗೆ ಹೋಗಿ [illegible] ಕಾರ್ಯಕ್ರಮ [illegible] ಪ್ರತಿನಿಧಿಗಳು [illegible] ನಡೆಸಿದರು. ರಾತ್ರಿ ಅಧ್ಯಕ್ಷರು ಸರಕಾರಿ ಭವನದಲ್ಲಿ ಒಂದು ಔತಣ ಕೂಟವನ್ನು ಕೊಡುವರು.

ಜನವರಿ ತಾ. ೨೭ ರಂದು [illegible] ಕಡೆಯಿಂದ [illegible] ನಡೆಸಲ್ಪಡುವ [illegible] ಕಾರ್ಯಕ್ರಮ [illegible] ಉತ್ಸವ ನಡೆಯುತ್ತದೆ.

ಜನವರಿ ತಾ. ೨೬ ಮತ್ತು ೨೭ ನ್ನು ಸಾರ್ವಜನಿಕ ರಜಾ ದಿನಗಳಾಗಿ ಸಾರಲ್ಪಡುವವು.

ಗೃಹ, ರಕ್ಷಣೆ, ವಿದೇಶಾಂಗ ಖಾತೆಯ ಕಛೇರಿಗಳ ಕಡೆಯ ಪ್ರತಿನಿಧಿಗಳಿಂದ ಮಾತ್ರ ಸರಕಾರಿ ಭವನದ ಕೆಲ [illegible] ದೊಡ್ಡ [illegible] ಬೇರೆ ಬೇರೆ ವಿಷಯಗಳ [illegible] ಅವರಿಗೆ ಬಿಟ್ಟುಕೊಡಲಾಗಿದೆ.

[illegible] ಮತ್ತು ಸಂಸ್ಥಾನೀ [illegible] ಸರಕಾರಗಳೂ ಇಂತಹದೇ ವ್ಯವಸ್ಥೆ ನಡೆಸುವಂತೆ ಹಾರೈಸಲಾಗಿದೆ.

'[illegible] ಗೌರವ [illegible] ದಿನ ಆಚರಿಸಬೇಕು' ಎಂಬುದಾಗಿ [illegible] ಸೂಚಿಸಿದ್ದಾರೆ.

[illegible] ಪ್ರಜಾ ಪ್ರಭುತ್ವದ ಉದ್ಘಾಟನೆ [illegible] ಶ್ರೀ. ನಾಗಪ್ಪನವರು [illegible] ಉತ್ತರ [illegible] ಸರಕಾರವು [illegible].

### ವಾರ್ತೆ.

[illegible] ಪಾಕಿಸ್ಥಾನ [illegible] ಬ್ರಿಟಿಷ್ ಸರಕಾರ [illegible] ಹೇಳಿದರು.

[illegible] ಭಾರತ ಸರಕಾರವು [illegible] ಬ್ರಿಟಿಷ್ [illegible] ಹೇಳಲಾಗಿದೆ.

ಈ ಕವಳ ಹೈದರಾಬಾದ್ ಸಂಸ್ಥಾನ [illegible] ಎದುರಾಳು ಇದೆ. ಹೈದರಾಬಾದು [illegible] ಗಳ [illegible] ಬಗ್ಗೆ, ಕೃಷ್ಣಮಾಚಾರಿ ಸಮಿತಿಯ [illegible] ಕಲಮುಗಳನ್ನು ಉಭಯ ಸರಕಾರಗಳ [illegible] ಒಪ್ಪಿದೆಯೆಂದು [illegible].

ಎಕರೆಗೆ ಅತ್ಯಂತ ಹೆಚ್ಚು ಬೆಳೆ ಬೆಳೆಯುವ ರೈತರಿಗೆ ಬಹುಮಾನ ಕೊಡುವ ಉದ್ದೇಶದಿಂದ ಪೂರ್ವಪಂಜಾಬ್ ಸರಕಾರ [illegible] ಲಕ್ಷ ರೂ. ಮಂಜೂರು ಮಾಡಿದೆ.

ದೆಹಲಿ [illegible] ಕಳುಹಿಸುವ ಪೋಸ್ಟಲ್ ಕವರುಗಳ ಬೆಲೆಯನ್ನು ತಲಾ ಒಂದಾಣೆ [illegible] ನಿರ್ಧರಿಸಲಾಗಿದೆ. ಇದಕ್ಕಾಗಿಯೇ ವಿಶೇಷ ಕವರ್‌ಗಳನ್ನು ತಯಾರು ಮಾಡಲಾಗುವುದು.

ಇಂಡಿಯಾ ಸರಕಾರದ ಕೆಲವು ಕಛೇರಿಗಳನ್ನು ದೆಹಲಿಯಿಂದ ಬೇರೆ ಕೇಂದ್ರಗಳಿಗೆ ವರ್ಗಾಯಿಸುವುದು. ಈ ಬದಲಾವಣೆ ಮುಂದಿನ ಮಾರ್ಚ್ [illegible] ರೊಳಗೆ ಆಗುವ ನಿರೀಕ್ಷೆ ಇದೆ.

[illegible], ಬ್ರಿಟನ್ ಮತ್ತು ಅಮೇರಿಕಾದ [illegible] ಸಂಸ್ಥೆಗಳ ಮೇಲೆ [illegible] ಅಪಾದನೆ [illegible] ಟ್ರಿಬ್ಯೂನಲ್ [illegible] ಎಂದು [illegible].

[illegible] ಶಾಂತಿಯ ಹಾಗೂ ಸಂಸ್ಥಾನೀ ಸರಕಾರಗಳು [illegible] ಎಂದು ಕೇಂದ್ರ ಆಹಾರ ಮಂತ್ರಿ [illegible] ತಿಳಿಸಿರುವುದು.

[illegible] ಭಾರತಕ್ಕೆ [illegible] ಶ್ರೀ. [illegible] ಪ್ರೊಫೆಸರ್ [illegible] ನೇಮಕ [illegible].

[illegible] ಪ್ರಾಜೆಕ್ಟ್ ನಿರ್ಮಾಣ [illegible].

[illegible] ಸಂಸ್ಥಾನಗಳಿಗೆ [illegible] ಜನವರಿ ಮಾರ್ಚ್ ತ್ರೈಮಾಸಿಕ ಅವಧಿಗೆ [illegible] ಭಾರತ ಸರಕಾರ ನಿರ್ಧರಿಸಿದೆ.

[illegible] ತಿಂಗಳ ಮೊದಲ [illegible] ೧೨,೦೦೦ ಹಿಂದೂಗಳು ಸಿಂಧ್ ಪ್ರಾಂತ್ಯ ತೊರೆದಿರುವರೆಂದು ತಿಳಿದುಬಂದಿದೆ.

[illegible] ಸ್ವಾತಂತ್ರ್ಯ [illegible] ಭಾರತ ಸರಕಾರವು [illegible].

ಅಂಚೆ [illegible] ಬಗ್ಗೆ ಭಾರತ ಸರಕಾರವು [illegible] ಕಮಿಟಿಯ ಅಧ್ಯಕ್ಷ ಶ್ರೀ. ಸಿ. ಎಂ. [illegible].

ಭಾರತ ಪಾಕಿಸ್ಥಾನ ಗಡಿಯಲ್ಲಿ ಮೇಲಿಂದ ಮೇಲೆ ಗಲಭೆಗಳು ನಡೆಯುತ್ತಲೇ ಇವೆ. ಇತ್ತೀಚೆಗೆ ಪಾಕಿಸ್ತಾನಿ ಯೋಧರು ಬೋರ್ ಎಂಬಲ್ಲಿ, [illegible] ಭಾರತ ಪ್ರದೇಶದೊಳಗೆ ದಾಳಿ ನಡೆಸಿದ ಸುದ್ದಿಯಿದೆ. ಅಲ್ಲಿಯ ಪೋಲಿಸ್ [illegible] ಮೇಲೆ ಹಲ್ಲೆ ಮಾಡಿ [illegible] ಪಾಕಿಸ್ತಾನಿಯರೆಂದೂ ಕೇಳಿಬರುತ್ತದೆ.

ಡಾ. ಪಿ. ಸುಬ್ಬರಾಯನ್‌ರು ನೂತನವಾಗಿ ರಚನೆಯಾದ ಇಂಡೋನೇಷ್ಯ ಸಂಯುಕ್ತ ಸಂಸ್ಥಾನಕ್ಕೆ ಭಾರತದ ಕಡೆಯ [illegible] ನೇಮಕಗೊಂಡಿರುವರು.

ಭಾರತದ [illegible] ಅತ್ಯಂತ [illegible] ಶ್ರೀ. ಬಿ. ದಾಸ್‌ರವರು ಆರ್ಥಿಕ ಸಮಿತಿಯ ವರದಿಯನ್ನು [illegible] ಕೇಂದ್ರದಲ್ಲಿ ಕೆಲವು ಮಂತ್ರಿಗಳ [illegible].

ಮುಂದಿನ [illegible] ತಿಂಗಳಲ್ಲಿ ತಾನು [illegible] ತಿಳಿಸಿರುವರು.

ಈ ವರ್ಷದ ಮೊದಲ ಹತ್ತು ತಿಂಗಳಲ್ಲಿ ೭,೬೦೦,೦೦೦ ಡಾಲರ್ ಬೆಲೆ [illegible] ೨೦೦,೦೦೦ [illegible] ಬಾಕಿ [illegible] ಭಾರತಕ್ಕೆ [illegible] ಇಲ್ಲ.

[illegible] ಪತ್ರಿಕೆಗಳನ್ನು [illegible].

[illegible] ಪ್ರಧಾನ [illegible] ಉದ್ಘಾಟಿಸಿದರು.

[illegible] ಹಿಂದೂಗಳ [illegible] ಭಾರತ ಸರಕಾರ [illegible] ಈ [illegible] ಭಾರತ ಸರಕಾರ [illegible] ಪಾಕಿಸ್ಥಾನ [illegible] ನಿಷೇಧ [illegible] ರಾತ್ರಿ [illegible] ನಿಷೇಧ [illegible] ಹಾಕಲಾಗಿದೆ.

# ಓದುಗರ ಓಲೆಗಳು.

### ಕಂದಾಯ

ರೀಸೆಟ್ಲ್‌ಮೆಂಟ್ ಕೊಡಗಿನಲ್ಲಿ ಶೀಘ್ರ ಪ್ರಾರಂಭವಾಗುವುದೆಂದೂ, ಅದಕ್ಕಾಗಿ ಒಬ್ಬ ಆಫೀಸರನ್ನು ತರಬೇತಿಗೆ ಕಳುಹಿಸಲಾಗಿದೆಯೆಂದೂ, ಅವರು ಬಂದೊಡನೆ ಅದನ್ನು ಕೈಕೊಳ್ಳಲಾಗುವುದೆಂದೂ, ಈ ರೀಸೆಟ್ಲ್‌ಮೆಂಟ್ ಕೆಲಸವು ಪೂರ್ತಿಯಾಗಲು ಸುಮಾರು ಐದು ವರ್ಷಗಳು ಹಿಡಿಯಬಹುದೆಂದೂ, ವರ್ತಮಾನಗಳಿವೆ. ಈ ಮಧ್ಯೆ ಭೂ ಕಂದಾಯಗಳನ್ನು ಏರಿಸುವ ಸೂಚನೆಗಳಿವೆ. ಈ ದೃಷ್ಟಿಯಿಂದಲೇ ಕೊಡಗು ಶಾಸನ ಸಭೆಯ ವಿಶೇಷ ಮೀಟಿಂಗೊಂದನ್ನು ತಾ. ೧೬-೧-೧೯೫೦ ಕ್ಕೆ ಕರೆಯುವರೆಂದೂ ವಾರ್ತೆ ಇದೆ. ಈ ಮೀಟಿಂಗಿನಲ್ಲಿ ಭೂಕಂದಾಯವನ್ನು ಈಗಿರುವುದರ ಎರಡು ಪಟ್ಟು, ಕಾಫಿ, ಕಿತ್ತಳೆ ಮೊದಲಾದವುಗಳ ಕಂದಾಯವನ್ನು ಮೂರು ಪಟ್ಟು ಏರಿಸುವ ಸೂಚನೆಯನ್ನು ಪ್ರತಿನಿಧಿಗಳ ಮುಂದೆ ಇಡಲಾಗುವುದೆಂಬ ವಾರ್ತೆ ಇದೆ.

ದಕ್ಷ ಆಡಳಿತ ನಡೆಯಬೇಕಾದರೆ ಹೆಚ್ಚಿನ ಕಂದಾಯ ಕೊಡಬೇಕೆಂಬ ತತ್ವವನ್ನು ಎಲ್ಲರೂ ಒಪ್ಪುವುದಾದರೂ ಕಂದಾಯವನ್ನು ಸಾರ್ವತ್ರಿಕವಾಗಿ ಏರಿಸುವುದು ಅಪಾಯಕರ. ಕಾಫಿ ಕಿತ್ತಳೆ ಇಂಥ ಲಾಭದಾಯಕ ವ್ಯವಸಾಯಗಳ ಕಂದಾಯವನ್ನು ಏರಿಸಿದರೆ ಹಾನಿಯಾಗದು. ಕಾಫಿಯಲ್ಲಿ ಎಕರೆಗೆ ರೂ ೨೦೦ ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಆದಾಯ ಸಿಗಿಲಾಗಿ ಉತ್ಪತ್ತಿ ದೊರೆಯುತ್ತಿರುವಾಗ ಈಗಿರುವ ಎಕ್ರೆಗೆ ಎರಡು ಕಂದಾಯವು ಮೂರು ಪಟ್ಟು ಹೆಚ್ಚಿದರೆ ಅವರಿಗೆ ಬಹುಶಃ ತಲೆ ಭಾರವಾಗಲಾರದು. ಅಲ್ಲದ ಭೂಮ್ಯವಾಯದ ಮಟ್ಟಿಗೂ ಕಂದಾಯವಿಲ್ಲದ ಬಾಣೆ, ಜಮ್ಮಾ, ಜಹಗೀರ, ಜೋಡಿ ಕಂದಾಯವಿದ್ದವುಗಳೂ ಕಂದಾಯವನ್ನು ಸಾಗು ಭೂಮಿಯ ಕಂದಾಯದಷ್ಟೇ ಪರಿಗಣಿಸಿ ಏಕರೂಪದ ಒಂದೇ ರೀತಿಯ ವ್ಯವಸಾಯ ಮಾಡಿ ಬೆಳೆ ಬೆಳೆಸುವ ಕ್ಷೇತ್ರದ ಭೂಮಿಯ ಮೇಲೆ ಸರಕಾರ ನ್ಯಾಯವಾದ ಕಂದಾಯ ನಿಶ್ಚಯಿಸುವುದು ಎಂದೂ ನ್ಯಾಯವಲ್ಲ. ಎಲ್ಲಾ ಭೂಮಿಯ ಕಂದಾಯ ದರವು ಸಾಗು ದರಕ್ಕೆ ಬಂದರೆ ಸರಿ. ಈಗಿರುವ ಸಾಗು ಕಂದಾಯ ದರವನ್ನು ಮಾತ್ರ ಹೆಚ್ಚಿಸುವ ಯೋಜನೆಗೆ ದಾರಿಯಾದಂತೆ ಬಂದರೆ ಈ ಮೂಲಕ ಎಷ್ಟೋ ಜನರು ನಷ್ಟಹೊಂದುವಂತಾಗಿದೆ.

ಈಗ ಸಾಗು ಭೂಮಿಗೆ ಇರುವ ಕಂದಾಯವನ್ನೇ ಪಾವತಿ ಮಾಡಲಾರದೆ ಅನೇಕ ಭೂಮಿ ಹರಾಜುಗಳಾಗುತ್ತಿವೆ. ಇದನ್ನು ದ್ವಿಗುಣ ಹೆಚ್ಚಿಸಿದರೆ ಬಡ ರೈತನ ಸ್ಥಿತಿಯು ಶೋಚನೀಯವಾಗುವುದರಲ್ಲಿ ಸಂಶಯವಿಲ್ಲ. ರೈತನ ಜೀವನವು ಇತ್ತೀಚೆಗೆ ಇನ್ನೂ ವಿಷಮಾವಸ್ಥೆಗಿಳಿದಿದೆ. ಅವನ ಜೀವನ ನಿರ್ವಾಹವೇ ಕಷ್ಟವಾಗುತ್ತಿದೆ. ಜೊತೆಗೆ ಈ ವರ್ಷ ಅವನ ಭತ್ತಕ್ಕೆ ಕಾಡಿಗೆ ಬಂದಿತು, ರೋಗದಿಂದ ಬೆಳೆ ಕಡಿಮೆಯೂ ಆಗಿದೆ. ಈ ವಿವಿಧ ತೊಂದರೆಯಿಂದ ಬಳಲುವ ರೈತನಿಗೆ ಸ್ವಲ್ಪವೂ ಕಂದಾಯ ಹೆಚ್ಚಿಸಬಾರದು. ಸರಕಾರಕ್ಕೆ ಉತ್ಪತ್ತಿ ಬರಬಹುದಾದ ಇತರ ಮಾರ್ಗಗಳನ್ನು ಹುಡುಕಬೇಕೇ ವಿನಹ ಬಗ್ಗಿದ ರೈತನ ಬೆನ್ನೇರಲೆತ್ನಿಸಬಾರದು. ತಾ. ೧೬ ರಲ್ಲಿ ನಡೆಯುವ ಕೌನ್ಸಿಲ್ ಸಭೆಯಲ್ಲಿ ಜನಪ್ರತಿನಿಧಿಗಳು ಇದನ್ನು ಗಮನದಲ್ಲಿಟ್ಟು ವರ್ತಿಸುವರಾಗಿ ನಂಬಲಾಗಿದೆ

ಬಿ. ಕೆ ಶಾಲಪ್ಪ.

---

### ಹಳೆ ರೋಗ

ಕೇಂದ್ರ ಸರಕಾರದ ಆದ್ಯ ಸಚಿವರೂ ಇತರ ಮುಂದಾಳುಗಳೂ ಉನ್ನತಾಧಿಕಾರಿಗಳೂ ಕೊಡಗಿಗೆ ಬರುವಾಗ ಅವರಿಗೆ ಸ್ವಾಗತ ಸತ್ಕಾರ ಕೂಟಗಳನ್ನು ಏರ್ಪಡಿಸಲಾಗುತ್ತದೆ. ಇಂಥಾ ಸತ್ಕಾರ ಕೂಟಗಳು ಈ ವರೆಗೆ ಮಡಿಕೇರಿಯಲ್ಲಿ ಹಲವು ನಡೆದವು. ಅವುಗಳಲ್ಲಿ ಕೆಲವೊಂದು "ಗಣ್ಯರು" ಸೇರಿ ಕೊಡಗಿನ ಜನರ ಪರ ಬಿನ್ನವತ್ತಳೆ ಅರ್ಪಿಸಿದ ನಿದರ್ಶನಗಳೂ ಇವೆ. ಕೊಡಗಿನ ಜನರ ಮಾತಿರಲಿ, ಪಟ್ಟಣದ ಜನರು ಕೂಡ ಸಹಾನುಭೂತಿ ಇಲ್ಲದ ಇಂತಹ ವರ್ತನೆ ಖಂಡನಾರ್ಹವಾಗಿದೆ.

ಹೊರಗಿನ ಯಾರೇ ಮುಂದಾಳು ಬಂದಾಗ ಅವರಿಗೆ ಔತಣ, ಚಹಾ ಪಾರ್ಟಿಗೆ ಚಂದಾ ಎತ್ತುವರು. ಅಂಥಾ ಚಂದಾದರನ್ನೇ ಬಹಳ ಜೇಬಿಗೆ ಸಿಲುಕದಂತೆ ನಿಶ್ಚಯಿಸಿ ಕೆಲವು ಸಿರಿವಂತರು ಮಾತ್ರ ಸೇರಿ ಇಂಥಾ ಔತಣ, ಚಹಕೂಟಗಳನ್ನು ನಡೆಸುವ ಆ ಹಳೆ ರೋಗ ಇಂದೂ ಇರುವುದು ವಿಷಾದಕರ. ಹೊರಗಿನ ಇಂಥಾ ಮುಂದಾಳುಗಳಾಗಲೀ, ಸರಕಾರಿ ಉದ್ಯೋಗಿಗಳಾಗಲೀ ಬಂದಾಗ ಸಾರ್ವಜನಿಕವಾಗಿ ಸಭೆ ನೆರೆಸಿ ಅವರಿಗೆ ಕೊಡಗಿನ ಜನಸಾಮಾನ್ಯರ ಪರಿಚಯ ಮಾಡುವ ಬದಲು ಮಡಿಕೇರಿಯ ಕೆಲವು ಮಹನೀಯರು ಮಾತ್ರ ಕೊಡಗಿನವರೆಂದು ವರ್ತಿಸುವುದು ಯೋಗ್ಯವಲ್ಲ. ಐ. ಎಲ್ ಓ. ಸಂಘದ ಅಧ್ಯಕ್ಷರು ಮತ್ತಿತರರು ಬಂದಾಗ ಕನಿಷ್ಠ ಚಂದಾ ರೂ. ೫ ಎಂದು ನಿಶ್ಚಯಿಸಿ ಮಡಿಕೇರಿ ಕೋಟೆಯ ಎದುರು ಕೇವಲ ನಲವತ್ತು ಜನರು ಅವರನ್ನು ಚಹಾ ಕೂಟ ಏರ್ಪಡಿಸಿ ಸ್ವಾಗತಿಸಿದರಂತೆ. ಜಗತ್ತಿನ ವಿವಿಧ ರಾಷ್ಟ್ರಗಳಿಂದ ಬಂದ ಇವರು ಕೇವಲ ಮಡಿಕೇರಿಯವರನ್ನೇ ಜನರನ್ನು ನೋಡಲು ಬಂದಿರುವರೆಂದು ತಿಳಿದರೇ? ಇನ್ನಾದರೂ ಇಂಥಾ ದಾರಿ ತಪ್ಪಿದ ನೀತಿಯನ್ನು ಬಿಡಬೇಕು. ಹಾಗೆ ಊಟ, ಬಹುಮಾನ ಪಾರ್ಟಿ ಮಾಡಲು ಇಷ್ಟವಿದ್ದರೆ ಸಾರ್ವಜನಿಕ ಕೂಟ ನಡೆಸಿದ ನಂತರ ಮಾಡಿಕೊಳ್ಳಲಿ. ದುಡ್ಡಿರುವವರು ಅವರಲ್ಲಿ ಸೇರಲಿ. ಆದರೆ ದುಡ್ಡಿನ ಬೇಲಿ ಹಾಕಿ ಬಡಜನರಿಗೆ ಅವರನ್ನು ನೋಡುವ ಮಾತು ಕೇಳುವ ಸೌಭಾಗ್ಯವನ್ನೆ ಇಲ್ಲದಂತೆ ಮಾಡುವುದು ದೇಶದ್ರೋಹವೆನ್ನಬೇಕಾಗುತ್ತದೆ, ಇನ್ನಾದರೂ ಈ ಮಹನೀಯರು ಎಚ್ಚೆತ್ತು ವರ್ತಿಸುವರೇ?

ಶಂಕರ. ಕೆ.

---

### ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್

ತಾರೀಖು ೨೮-೧೨-೪೯ ರಲ್ಲಿ ಇಂಡಿಯಾ ಸರಕಾರದ ರಿಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟ್ ಡೈರೆಕ್ಟರ್ ಜನರಲರಾದ ಡಾ. ಎಸ್. ದಾಸ್‌ರವರು ಮಡಿಕೇರಿಗೆ ಬಂದಿದ್ದರು. ಸಾರ್ವಜನಿಕ ಸಭೆಯೊಂದು ನಡೆಯಿತು. ಚೀಫ್ ಕಮಿಷನರೂ ಅನೇಕ ಪ್ಲಾಂಟರುಗಳೂ, ಇತರ ಉದ್ಯೋಗಸ್ಥರೂ ಹಾಜರಿದ್ದರಲ್ಲದೆ ಮದರಾಸ್ ರೀಜನಲ್ ರಿಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟ್ ಡೈರೆಕ್ಟರಾದ ಶ್ರೀ ಅಬ್ದುಲ್ ಕ್ವಾದಿರ್‌ರವರೂ, ಮತ್ತಿತರರೂ ಹಾಜರಿದ್ದರು.

ಡಾಕ್ಟರ್ ದಾಸ್ ಮತ್ತು ಕ್ವಾದಿರ್ ಇವರನ್ನು ಸ್ವಾಗತಿಸುತ್ತಾ ಚೀಫ್ ಕಮಿಷನರು ಹೀಗೆ ಹೇಳಿದರು. "ಕೊಡಗಿನಲ್ಲಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನ ಶಾಖೆಯು ಸ್ಥಾಪಿತವಾಗಿ ಒಂದೆರಡು ತಿಂಗಳುಗಳಾದರೂ ಈ ಅಲ್ಪ ಅವಧಿಯಲ್ಲಿ ಅದು ಅನುಪಮ ಸೇವೆ ಸಲ್ಲಿಸಿದೆ. ಇದು ದೇಶ ಅನುಕೂಲಕರವೂ ತೋರಿದ ಅವಶ್ಯಕತೆ ಇದು. ಹಿಂದುಗಡೆ ಈ ಇಲಾಖೆ ಪ್ರಾರಂಭವಾಗಿ ಈ ವರೆಗೆ ನಾಲ್ಕು ಲಕ್ಷ ಜನರಿಗೆ ಉದ್ಯೋಗ ದೊರಕಿಸಿ ಕೊಟ್ಟಿದೆ ಎಂದು ನಾನು ಕೇಳಿದ್ದೇನೆ. ನಾನು ಸ್ವತಃ ಸಾಧ್ಯವಾದಷ್ಟು ಬೇಕಾದ ಕೆಲಸಗಾರರನ್ನು ಒದಗಿಸುವ ಕೆಲಸದ ಈ ಶಾಖೆಯು ಸಾಧಿಸಿದೆ. ಕೊಡಗಿನಲ್ಲಿ ೬೦,೦೦೦ ತೋಟ ಕೆಲಸಗಾರರಿದ್ದಾರೆ. ಆಳುಗಳ ಕೊರತೆಯು ಕೊಡಗು ತೋಟಗಳಿಗೆ ತೊಂದರೆ ನೀಡಿದ ಕೊಡಗಿನ ಪ್ಲಾಂಟರು ಆಳುಗಳ ಬೇಡಿಕೆಯನ್ನು ಸಲ್ಲಿಸಿ ಈ ಶಾಖೆಯ ದ್ವಾರಾ ಇವರು ವಹಿಸಿ ಸಹಾಯ ಮಾಡುವರೆಂದು ನಂಬುತ್ತೇನೆ".

ಡಾ. ದಾಸ್‌ರವರು ಚೀಫ್ ಕಮಿಷನರನ್ನು ವಂದಿಸಿ ಹೀಗೆ ಹೇಳಿದರು. "ಈ ಸಂಸ್ಥೆಯು ಇನ್ನೂ ಶಿಶುವು, ಹಿಂದೂ ದೇಶದಲ್ಲಿ ಇದು ಹೊಸ ಯತ್ನವೇ ಅಲ್ಲ, ಇದೀ ವಿಷಯದಲ್ಲಿ ವ್ಯವಸ್ಥಿತ ನಿರ್ವಾಹವು ಹಿಂದೂ ದೇಶದಲ್ಲೇ ಆಗುತ್ತಿರುವುದಾಗಿದೆ. ಸಂಸ್ಥೆಯು, ತೋಟದ ಎಲ್ಲರಿಗೂ ಉದ್ಯೋಗ ಕೆಲಸ ಬೇಡುವವರಿಗೆ ಕೆಲಸವನ್ನೂ, ಕೆಲಸಗಾರರನ್ನು ಬೇಕೆಂಬುವವರಿಗೆ ಯೋಗ್ಯರನ್ನು ಒದಗಿಸುವ ಒಂದು ಪ್ಲಾರಿ ಸಂಸ್ಥೆ. ಆದರೂ ಈ ಉದ್ಯಮದಲ್ಲಿ ತಕ್ಕಷ್ಟು ಬಗ್ಗಿನ ಜಯ ಪಡೆದಾಗಿದೆ. ಈ ಸಂಸ್ಥೆಯು ಮಧ್ಯಸ್ಥಗಾರರನ್ನು ಇಲ್ಲದೆ ಮಾಡಿ ಕೆಲಸಗಾರರು ಮತ್ತು ಯಜಮಾನರಲ್ಲಿ ಹತ್ತಿರದ ಸಂಬಂಧವನ್ನು ಹೆಚ್ಚಿಸಿದೆ. ಕೊಡಗಿನ ಮಟ್ಟಿಗೆ ವ್ಯವಸಾಯ ಮತ್ತು ತೋಟಗಾರಿಗೆ ಆಳುಗಳನ್ನು ಒದಗಿಸುವುದೇ ಪ್ರಶ್ನೆಯಾಗಿದೆ. ಕೊಡಗಿನ ಹೊರಗಿನಿಂದ ಆಳುಗಳನ್ನು ತಂದರೂ ಕೂಲಿ ವಿಪರೀತವಾಗಿರುವುದಲ್ಲದೆ ಆಳುಗಳನ್ನು ಪಡೆಯುವದು ಕಷ್ಟವೂ ಅತೃಪ್ತಿಕರವೂ ಆಗಿದೆ. ಪ್ಲಾಂಟರುಗಳು ಮೇಸ್ತ್ರಿಗಳನ್ನು ನಂಬಬೇಕಾಗಿದೆ. ಇವರು ಅತ್ತ ಪ್ಲಾಂಟರುಗಳಿಂದ ಇತ್ತ ಕೆಲಸಗಾರರಿಂದ ಹೀಗೆ ಎರಡು ಕಡೆಯಿಂದಲೂ ಲಾಭ ಪಡೆಯುತ್ತಾರೆ. ನಮ್ಮ ಈ ಸಂಸ್ಥೆಯ ಶಾಖೆಗಳು ಇಲ್ಲಿ ಮತ್ತು ಸುತ್ತಮುತ್ತಲಿನ ಪ್ರಾಂತಗಳಲ್ಲಿರುವುದರಿಂದ ಯೋಗ್ಯ ಆಳುಗಳನ್ನು ಒದಗಿಸುವ ಕೆಲಸ ಸಾಧ್ಯವಾಗಬಹುದು. ಈ ಕೆಲಸ ಆಗಲು ಸ್ವಲ್ಪ ಸಮಯ ಬೇಕು. ಇದಕ್ಕೆ ಎಲ್ಲರ ಸಹಕಾರ ಬೇಕು."

ನಂತರ ಬಿನ್‌ರ್ ಬಟ್ಲರ್‌ರವರು ಈ ಸಂಸ್ಥೆಯ ಕೆಲಸವನ್ನು ಕೊಡಗಿನ ಸಂಘಧಾರರಿಂದ ಪ್ಲಾಂಟರುಗಳು ಪರಿಗಣಿಸಬೇಕೆಂದೂ, ಸಂಸ್ಥೆಗೆ ಸಹಕಾರವನ್ನೀಯಬೇಕೆಂದೂ ಹೇಳಿದರು.

ಸಹಕಾರ ಸಂಘಗಳ ರಿಜಿಸ್ಟ್ರಾರವರಾದ ಶ್ರೀ ಪಿ ಎಂ ಚಂಗಪ್ಪನವರು ವಂದನಾರ್ಪಣೆ ಮಾಡಿದ ನಂತರ ಚೀಫ್ ಕಮಿಷನರು ವಿರ್ಸಜಿಸಿದ ಅನುಮತಿಯಿಂದ ಸಭೆ ಮುಕ್ತಾಯಗೊಂಡಿತು

---

### ಕೊಡಗು ಉಪಾಧ್ಯಾಯರ ಸಮ್ಮೇಳನ.

ಅಖಿಲ ಕೊಡಗು ಉಪಾಧ್ಯಾಯರ ಪ್ರತಿನಿಧಿಗಳ ಸಮ್ಮೇಳನವು ಮಡಿಕೇರಿಯ ಇದೇ ಡಿಸೆಂಬರ್ ಮಾಹೆ ೨೫ ನೇ ಭಾನುವಾರ ದಿವಸ ಬೆಳಗ್ಗೆ ೧೦ ಗಂಟೆಗೆ ಸಪ್ರೋರ್ಟ್ ಗವರ್ನಮೆಂಟ್ ಹೈಸ್ಕೂಲಿನಲ್ಲಿ ಒಡು ಸಭಾಂಗಣದಲ್ಲಿ ನಡೆಯಿತು. ಶ್ರೀ ಕೆ ಆರ್. ಕೆ ಅಯ್ಯಂಗಾರ್ ಎಂ ಎ. (ಗ್ಲೇಸ್ಗೊ) ಎಂ ಇಡಿ (ಲಿಡ್ಸ್) ಪ್ರಿನ್ಸಿಪಾಲ್ ಗವರ್ನಮೆಂಟ್ ಟ್ರೈನಿಂಗ್ ಕಾಲೇಜ್ ಇವರ ಸಮ್ಮೇಳನದ ಉದ್ಘಾಟನೆ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ ಎಸ್ ರಾಮನ್ ಎಂ ಎ ಎಲ್ ಟಿ ... ಸಮ್ಮೇಳನಕ್ಕೆ ಬಂದ ಅತಿಥಿಗಳನ್ನು ... ದರು. ಶ್ರೀ ಅಯ್ಯಂಗಾರ್ ರವರು ಈ ಕಾಲದಲ್ಲಿ ಉಪಾಧ್ಯಾಯರು ವಿದ್ಯಾಭ್ಯಾಸದ ವಿಷಯದಲ್ಲಿ ಗಮನಿಸಬೇಕಾದ ಸಂಗತಿಗಳನ್ನು ಉಚಿತ ರೀತಿ ಸ್ವಾರಸ್ಯವಾಗಿ ಇಂಗ್ಲೀಷಿನಲ್ಲಿ ವಿವರಿಸಿದರು. ಶ್ರೀ ಬಿ. ಎಸ್. ಶಾಸ್ತ್ರಿ ಬಿ ಎ ಡಿ ಇ (ಲಂಡನ್) ಜಿಲ್ಲಾ ವಿದ್ಯಾಧಿಕಾರಿ ಪದವೃದ್ಧಿ ನಡೆದ ಯಜ್ಞದಲ್ಲಿ ನಡೆದ ವಿಷಯ ಸಂಕ್ಷೇಪವಾಗಿ ಬಹು ಸ್ವಾರಸ್ಯವಾಗಿ ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ಕೊಡಗು ಗವರ್ನಮೆಂಟ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ರಾಮಕೃಷ್ಣ ಉಡುಪರು ಭಾಷಣ ಸಾರಾಂಶವನ್ನು ಕನ್ನಡದಲ್ಲಿ ನಾಡಿನಾದರು. ಬೋನಸು ಇಂಗಿ ಸಭಾಧ್ಯಕ್ಷರ ಮುಕ್ತಾಯ ಭಾಷಣವು ಮುಗಿದನಂತರ ಶ್ರೀ ಬಿ ಎಸ್ ವಿ ಕೆ ವಿರಲ್, ಬಿ. ಎ. ಎಂ. ಎಸ್. ಸಿ. ಎ. ಐ ಐ. ಎಸ್. ಸಿ. ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನದ ಅಧ್ಯಕ್ಷರು ವಂದನಾರ್ಪಣೆಯನ್ನು ಮಾಡಿದರು. ಶ್ರೀ ಯತಿರಾಜುಗಳಿಂದ ಸಿ ಎಸ್ ರಾಮನ್ ಅವರೂ, ಕೆ. ಎಸ್. ನಂಜುಂಡನವರೂ ಸಮ್ಮೇಳನಕ್ಕೆ ಬಂದಿದ್ದ ಅತಿಥಿಗಳೆಲ್ಲರಿಗೂ ಉಪಾಹಾರಗಳನ್ನು ಏರ್ಪಡಿಸಿದ್ದರು.

---

# ಕಳೆದ ೧೯೪೭, ಬಂದ ೧೯೪೮

ಭಾರತ ಚರಿತ್ರೆಯ ಒಂದು ಅಮೂಲ್ಯ ಪುಟವಾಗಿ ರಾಜಕೀಯದಲ್ಲಿ ೧೯೪೭ನೇ ಇಸವಿ ಕಳೆಯಿತು. ವಿಶೇಷ ಮಹತ್ವದ ಒಂದು ವರುಷವೀಗ ಪೂರ್ಣಗೊಂಡಿತು.

ಅಪಾರ ಕಾಲದ ಪರಿಧಿಯಲ್ಲಿ ೧೯೪೭ನೇ ಇಸವಿಯೆಂಬುದು ಒಂದು ದೊಡ್ಡ ತೆರೆಯಾಗಿ ಎದ್ದು [illegible] ೧೯೪೭ ವರೆಗೆ ೧೯೪೭ನೇ ಇಸವಿಗಳು ವಿಷಕ್ಕೂ ಅತಿ ಘೃಣಿತ ತೆರೆಗಳಾಗಿದ್ದವು ಸ್ವತಂತ್ರ ಹಾಗೂ ಪ್ರಳಯ ತೆರೆಗಳೂ ಆಗಿದ್ದವು. ತಳ ಹಿಡಿದಿದ್ದ ಭಾರತೀಯರನ್ನು ಎತ್ತರಕ್ಕೇರಿಸಿಕೊಂಡ ತೆರೆಯೇ [illegible] ಅವುಗಳನ್ನು ನೆನೆಸಿ ಬಂದ ೧೯೪೭ರಲ್ಲಿ ಭೀಕರತೆಗಿಂತ ಹೆಚ್ಚು ಗಂಭೀರತೆಯೇ ಇತ್ತೆನ್ನಬಹುದು [illegible] ೧೯೪೭ ರವರೆ [illegible] ಕಡೆಗೆ [illegible] ೧೯೪೭ನ್ನು [illegible].

ತನ್ನ ಪೂರ್ವಿಕರಾದವರಂತೆ [illegible] ಅದ್ಭುತ ಅಪಾರ ಸತ್ಯ [illegible] ೧೯೪೭ ಗಳಲ್ಲಿ ಅವರ [illegible] ಸ್ವತಂತ್ರ ಸತ್ತ್ವ [illegible] ಸಾಧಿಸಿದೆ [illegible] ನೆಗೆತ ಮತ್ತು [illegible] ಇಂದಿನ [illegible] ಸ್ಪಷ್ಟವಾಗಿ [illegible] ಹಾದಿ ಸಾಗಿದ [illegible]. [illegible] ಗಳಿಗಿಂದ ಅಪೂರ್ವ ಕಸ್ಮಿಕ ವಿಜಯಗಳ [illegible] ಈ ವರ್ಷದ [illegible] ದು ಸಂಪಾದಿಸಿದ [illegible].

೧೯೪೭ನೇ ಆಗಸ್ಟ್ ೧೫ನೇ [illegible] 'ಯಿಂಡಿಪೆಂಡೆನ್ಸ್' [illegible] ಅವರ ಹಾಗೆ ಉದಯಿಸಿದ ಸ್ವರಾಜ್ಯವನ್ನು [illegible] ಉಳಿಸಿಕೊಳ್ಳಲು ಆಗ [illegible] ಈ ವರ್ಷ [illegible]. ೧೯೪೭ನೇ ಜನವರಿ ೩೦ [illegible] ಈ ಇಸವಿಯಲ್ಲಿ [illegible] ಅವರ [illegible] ಕಾರವನ್ನು [illegible] ಮಾಡಿಕೊಳ್ಳುವ [illegible] ಪ್ರಾಯಶ್ಚಿತ್ತ [illegible] ೧೯೪೭ರ [illegible] ಎಂಬ [illegible] ಈ ವರ್ಷ [illegible] ನಡೆಸಿಲ್ಲವಾದರೂ, ಹಾಗೆ [illegible] ಉಳಿಸಿಕೊಳ್ಳುವ [illegible] ವ್ಯವಸ್ಥೆ [illegible] ಈ ವರ್ಷವೇ.

ಒಟ್ಟಿನಲ್ಲಿ ೧೯೪೭ನೇ ಇಸವಿ [illegible] ನವರಂಗನ [illegible] ಅವಧಿ; ವಿಧಾಯಕ ಕಾರ್ಯಗಳ [illegible]. [illegible] ಕಾಲ, [illegible] ಗಳಲ್ಲವೂ [illegible]. ಸಮುಮಟ್ಟಕ್ಕೆ ಬಂದು ೧೯೪೭ರಲ್ಲಿ ಭವಿಷ್ಯತ್ತಿಗೆಂದು ಭದ್ರ ಅಸ್ತಿವಾರ ಬಿದ್ದಿದೆ. ಸ್ವತಂತ್ರ ಭಾರತದ ಶಾಂತಚಿತ್ತ ಮತ್ತು ಸಂಘಟನೆಗೆ [illegible] ಪ್ರಥಮೋಪಕಾರಕವೇ ೧೯೪೭.

ಸ್ವತಂತ್ರ ಭಾರತದ [illegible] ಪ್ರಕೃತಿ ಅತಿ ದೊಡ್ಡದಾಗಿದ್ದ ಆಶ್ರಿತ ರಾಜ್ಯಗಳ ಸಮಸ್ಯೆಯನ್ನು ಸಂಪೂರ್ಣವಾಗಿ [illegible] ಅಖಂಡ ಭಾರತದ [illegible] ಬಂದಂಗಳನ್ನು ಸಂಪೂರ್ಣವಾಗಿ ಕಡಿದುಬಿಟ್ಟದ್ದು ಈ ವರುಷವಲ್ಲೆ. ಆಶ್ರಿತರಾಜ್ಯಗಳನ್ನು ಕೇಂದ್ರದೊಂದಿಗೆ ವಿಲೀನಗೊಳಿಸುವ [illegible] ಸಂಸ್ಥಾನೀಯ [illegible] ಈ [illegible] ಸ್ಥಿತಿಯಲ್ಲಿ [illegible] ಗೊಂಡಿದೆ. [illegible] ನವರಾಜ್ಯ [illegible] ಪ್ರಾಂತಗಳ [illegible].

ಆರ್. ಎಸ್. ಎಸ್. ಕಮ್ಯೂನಿಸ್ಟ [illegible], ಅಕಾಲಿದಳ, [illegible] ಹಾಗೂ, [illegible] ಪ್ರಜಾಪ್ರಭುತ್ವವಾದೀ ರಾಷ್ಟ್ರವು [illegible] ಈ ವರ್ಷ [illegible].

[illegible] ಗಳಲ್ಲಿ [illegible] ಗಳಿಗೂ [illegible] ಪ್ರಾಂತ [illegible] ಈ ಕಾಲಕ್ಕೆ [illegible] ಸಾಧ್ಯವಾಗಿ ಮತ್ತು ಜನ [illegible] ಬೇರೆ [illegible] ಸರಕಾರದ [illegible] ಭಾರತದಂತಹ [illegible] ದೇಶಗಳಲ್ಲಿ ಕಮ್ಯೂನಿಸ್ಟರು [illegible] ಜನಸಾಮಾನ್ಯರ [illegible] ಸರಕಾರದ [illegible] ಪರಿಸ್ಥಿತಿಯು [illegible] ಕಮ್ಯೂನಿಸ್ಟ್ ಹಾವಳಿ [illegible] ವರುಷವಿದಾಗಲೂ ಅದಿಲ್ಲ [illegible] ಗಣಿಸೀಯ [illegible].

[illegible] ಭಾರತವು [illegible] ಲೋಕಸ್ವಾಮ್ಯ [illegible] ೧೯೪೭ ರಲ್ಲಿ ಗಳಿಸಿದೆ. ಜಾಗತಿಕ ರಂಗದಲ್ಲಿ [illegible], [illegible] ಸ್ವತಂತ್ರ ರಾಷ್ಟ್ರ [illegible] ಲಾಭ [illegible].

ಜಾಗತಿಕ ಸಂಘಟನ ಕಾರ್ಯರಂಗದಲ್ಲಿ ಈ ವರುಷ ಭಾರತವು ವಿಶೇಷ ಸ್ಥಾನಮಾನಗಳನ್ನು ಗಳಿಸಿದೆ. [illegible] ಅವಶ್ಯ [illegible], [illegible] ಗಳಲ್ಲಿ [illegible] ಸ್ಥಾನ [illegible] ಗೌರವಗಳು ಲಭಿಸಿದೆ. [illegible] ಗಳಲ್ಲಿರುವ ರಾಯಭಾರಿಗಳ ಮೂಲಕ ಸ್ವತಂತ್ರ ಭಾರತವು [illegible] ಸೌಹಾರ್ದ [illegible] ಕಾರ್ಯವನ್ನು ಲಾಭದಾಯಕವಾಗಿ ನಡೆಸಿದೆ.

೧೯೪೭ ರಲ್ಲಾಗಿರುವ ಸರ್ವಪ್ರಥಮ ಅತಿ ಮುಖ್ಯ ಹಾಗೂ [illegible] ಹತ್ತ್ವದ ಘಟನೆಯೆಂದರೆ ಜನತಾ ರಾಜ್ಯ ಭಾರತದ ನವರಾಜ್ಯ ಶಾಸನ ರಚನೆ. ಹಿಂದಿನ ಎರಡು ವರ್ಷಗಳಲ್ಲಿ ಮೊದಲಾದ [illegible] ಈ ಅಗಾಧ ಕಾರ್ಯವನ್ನು ಈ ವರುಷ [illegible] ನವಂಬರ್ [illegible] ರಲ್ಲಿ ಪೂರ್ಣಗೊಳಿಸಲಾಯಿತು. ೧೯೪೮ ನೇ ಜನವರಿ [illegible] ರಲ್ಲಿ ಅಸ್ತಿತ್ವಕ್ಕೆ ಬರುವುದರಿಂದ ಭಾರತ ಜನತಾ ರಾಜ್ಯ. ಶಾಸನದ ಅಂಗೋಪಾಂಗಗಳು ರೂಪುಗೊಂಡವು. ಈ ಶಾಸನವೆಂಬುದು ಸ್ವತಂತ್ರ ಭಾರತವು ಬಾಳುವೆಯ ಪ್ರಯಾಣಕ್ಕೆ [illegible] ಭೂಷಣ ಮತ್ತು ಉಪಕರಣಗಳು. ಈ ರೀತಿ ತಯಾರೀ ಕಾರ್ಯ ಎಲ್ಲಾ ವಿಧಾನಗಳಿಂದಲೂ ನಡೆದು ಒಂದು ಪೂರ್ಣತೆಗೆ ಬಂದ ವರ್ಷ ೧೯೪೭.

ಈ ರೀತಿ ಸ್ವತಂತ್ರ ಭಾರತದಲ್ಲಿ ಈ ವರುಷ ಪೂರ್ಣಗೊಳ್ಳುವದರೊಳಗೆ [illegible] ಆಗ [illegible] ಕಾರ್ಯಗಳೆಲ್ಲವೂ [illegible] ಗಳೇ ಹೊರತು [illegible]. ರಾಷ್ಟ್ರವು [illegible] ಅಂಗೋಪಾಂಗ [illegible] ಗಳಿಗೆ ಸಂಬಂಧಿಸಿದ್ದು [illegible] ಸಂಬಂಧಪಟ್ಟವುಗಳಲ್ಲ [illegible] ಸಂಬಂಧಗಳ [illegible] ರಾಷ್ಟ್ರ [illegible], ಸಾಮಾಜಿಕ ರಂಗದಲ್ಲಿ ಅದಗಿಲ್ಲ.

ಲೋಕವ್ಯಾಪಿ ಕೀರ್ತಿ ಗಳಿಸಿದಂಥ [illegible] ವಿರುದ್ಧ [illegible] ಈ ಆಕಾರದ [illegible] ಗಳಿಗಾಗಿ [illegible] ದಾರಿದ್ರ್ಯ [illegible] ಅಸ್ಪೃಶ್ಯತೆ ಹಾಗೂ [illegible] ಅಭ್ಯಂತರಗಳೆಂದರೆಗೂ [illegible] ಈ ವರುಷದೊಂದಿಗೆ [illegible] ಈ ವರೆಗಿನ [illegible] ನಿವಾರಿಸಿದೆಂದು [illegible] ಯಶಸ್ವಿ [illegible] ಬರುವ ವರುಷ [illegible] ಅವಧಿ [illegible] ಎಲ್ಲವೂ ಸಾರ್ಥಕ.

೧೯೪೮ ರಲ್ಲಿ ಏನೆಲ್ಲ ಆಗಬಹುದು? ಆಗಬೇಕು?

ಜನವರಿ ೨೬ರಲ್ಲಿ ಹೊಸ [illegible] ನೆರವು [illegible] ಬರುವ ನಂಬಿಕೆಯನ್ನು ಸಡಿಸುತ್ತಿದೆ. ೧೯೪೮ನೇ ಜನವರಿಯಿಂದಲೂ [illegible] ಕಾಲದ ಒಂದು [illegible] ಆರಂಭಿಸಲ್ಪಡುತ್ತದೆ. ಬಂದಿರುವ ೨೬ನೇ ಜನವರಿಗೆ ೧೯೪೮ರಿಂದ ಹೊಸ ಮಹತ್ವ ಬರಲಿದೆ. ಜನ ಸಾಮಾನ್ಯರ ನಿತ್ಯ ಜೀವನದಲ್ಲಿ ಅನುಭವಕ್ಕೆ ಬರುವಂತಹ ಅಸ್ಪಷ್ಟ ಮಾರ್ಪಾಟಿರಾದುದೂ ೧೯೪೮ನೇ ಜನವರಿ ೨೬ರಿಂದ ತೋರಿಬರಬಹುದಾದರೂ ಅದು ವರೆಗಿನ ಶಾಸನಗಳ ಸ್ಥಾನದಲ್ಲಿ ಅಂದು ಹೊಸ ಶಾಸನಗಳು ನಿಲ್ಲಲಿವೆ. ಬದಲಾವಣೆಯು ವಿಶೇಷ ಪರಿಚಯವು ಜನ ಸಾಮಾನ್ಯರಿಗಾಗಬೇಕಾದರೆ ಹೊಸ ಶಾಸನವನ್ನೂ ಹೊಸ ರೀತಿಯಿಂದ ಪ್ರೌಢ ಮತದಾರರೆಲ್ಲರಿಂದ [illegible] ಚುನಾವಣೆಗಳಾಗಬೇಕಾಗಲೇ!

ಆಗಿನ [illegible] ೧೯೪೮ನೇ [illegible] ಅಥವಾ ೧೯೪೮ನೇ ಅಧಿಕಾಗದಲ್ಲಿ ಹೊಸ ಮಹಾ ಚುನಾವಣೆಗಳು [illegible] ೧೯೪೯ [illegible] ನಡೆಯಬಹುದು. ಅದಿ ದೀಕ್ಷಿತ ವಿಶೇಷ ವಿಧಾನಗಳೊಡನೆ ಮತ್ತೂ ಹಿಂದೆ ಹೋಗಬಹುದು. ಅದರೆ ಸದ್ಯಸ್ಥಿತಿಯಲ್ಲಿ ಅಂತಹದೇನೂ [illegible] ಸಂಭವವಿಲ್ಲವೆಂದು ತೋರುವುದರಿಂದ ೧೯೪೮ನೇ [illegible] ಗೆ ಮಹಾ ಚುನಾವಣೆಗಳಾಗುವವೆಂದು ಕಟ್ಟಿಕೊಳ್ಳಬಹುದು.

ಹೀಗಿದ್ದರೂ ೧೯೪೮ರ ಉತ್ತರಾರ್ಧವು ಚುನಾವಣಾ ಪ್ರಚಾರ ಮತ್ತು ಆಂದೋಲನಗಳ ಅವಧಿಯಾಗಲಿದೆ. [illegible] ನಾನಾ [illegible] ಸ್ವರ [illegible]; [illegible] ನೋಟ [illegible].

೧೯೪೮ರ ಆದಿಯಿಂದ [illegible] ವರೆಗೆ [illegible] ಭಾರತ [illegible] ಗಳೊಳಗಿನ ವಿ [illegible] ರಾಷ್ಟ್ರ [illegible] ಆಕರ್ಷಣ [illegible], [illegible] ಸಂಧಾನದಾಶೆಯು ಬೆಳೆದು, [illegible] ಹೋರಾಟ ಪುನಃ ಆರಂಭಿಸುವದೂ ಸಾಧ್ಯವಿದೆ.

ಅಂತೂ ೧೯೪೮ರಲ್ಲೂ [illegible] ಮಾಡಿ [illegible] ಗಳ [illegible]. ಸ್ವತಂತ್ರ ಭಾರತದ [illegible] ವಿಧಾನದಿಂದ [illegible] ೧೯೪೮ [illegible] ೧೯೪೮ [illegible] ಆಗಲಿದೆ. ಅಂತಹ ಹೊಸ ಕರ್ಷಣೆಯಿಲ್ಲದೆ ಕಳೆದು ಹೋದುದೆಂದರೆ [illegible] ೧೯೪೭ [illegible].

ಒಳಗಿನ [illegible], ಜನಸ್ತೋಮ ಹಾಗೂ [illegible], [illegible] ೧೯೪೮ರಲ್ಲಿ [illegible] ನೆ. ಈ [illegible] ಆದಿಯಿಂದ [illegible] ಒಂದು [illegible] ಹುದು.

೧೯೪೮ರಲ್ಲಿ ಮುಖ್ಯವಾಗಿ ಆಗಬೇಕಾದುದು ಜನತಾ ತಯಾರೀ ಶಿಕ್ಷಣ. ಪ್ರೌಢರಲ್ಲಿಯೂ ಮತಾಧಿಕಾರ ಒಂದಿರುವುದರಿಂದ ಅವರಿಗೆ ಜ್ಞಾನದಾನ ಮಾಡು

(ಪುಟ [illegible] ನೋಡಿ)

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. — ಎಸ್. ಶ್ರೀನಿವಾಸ ಅಯ್ಯಂಗಾರ್.

ಹಕೀಮ್ ಅಜಮಲಖಾನ್. — ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಜರ್ | ಆರ್ಗನೈಜರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಎಂ. ಬಿ. ಅಚ್ಚಣ್ಣ, | ಎಂ. ಎ. ಬೆಳ್ಯಪ್ಪ, |
| ಏಜನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹೆಂಜನ್ ಟೌನ್, ಬೆಂಗಳೂರು. |



# ಮತ್ತೊಂದು ಉಜ್ವಲ ವರ್ಷ.

**1948**ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | ,, |

1,28,000 ಕ್ಕೂ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ. ಭದ್ರತೆ.

## ಎಂಪೈರ್ ಆಫ್ ಇಂಡಿಯಾ

## ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ | ಶಾಖಾ ಕಛೇರಿ. |
| ಎಂಪೈರ್ ಹೌಸ್, ಹಾರ್ನ್‌ಬಿ. | ಇಸ್ಲಾಂಪುರ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡನಗರ, ಬೆಂಗಳೂರು. |



# ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

## ಫ್ರೇಜರ್ ಪೇಟೆ.

## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ದಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, } ಕೆ. ಕೆ. ತಿಮ್ಮಯ್ಯ,
?-?-49 } ಮೇನೇಜಿಂಗ್ ಡೈರೆಕ್ಟರ್.


(೭ನೇ ಪುಟದಿಂದ ಸಾಗಿದ್ದು)

ವ ಹಾಗೂ ಸಂಘಟನೆಯ ಕೆಲಸ ನಡೆಯಬೇಕಾಗಿದೆ— ಜನತಾ ರಾಜ್ಯದ ಜಯಾಪಜಯ, ಸಾರ್ಥಕತೆ, ನಿರರ್ಥಕತೆಗಳು ಈ ತಯಾರಿಯನ್ನೇ ಆಧರಿಸಿಕೊಂಡಿವೆ.

ಹೊಸ ಯುಗವನ್ನು ನಿರ್ಮಿಸತಕ್ಕಂತವರ ಮನಸ್ಸು ಮಾತ್ರ ಹಳೆಯದೇ ಆಗಿದ್ದರೆ, ಬೇರಾವುದು ಹೊಸತಾದರೂ ಹೊಸ ಸ್ಥಿತಿ ಮೂಡುವಂತಿಲ್ಲ. ಆದ್ದರಿಂದ ಎಂತಹ ಮಾರ್ಪಾಟು ಬರಬೇಕೆಂದಿದ್ದರೂ ಎಲ್ಲರ ಲಕ್ಷ್ಯವೂ ಬೀಳಬೇಕಾದುದು ಈಗ ಜನತೆಯ ಕಡೆಗೇನೇ.

೧೯೫೦ ಜನತಾ ಶಿಕ್ಷಣ ಯುಗವಾಗಿ ಆರಂಭವಾಗಲಿ— ಅಂದರೇನೇ ೧೯೫೦ರಲ್ಲಿ ಅಸ್ತಿತ್ವಕ್ಕೆ ಬರುವ ಜನತಾ ರಾಜ್ಯವು ಸಾರ್ಥಕವಾಗುವುದು. ಭಾರತೀಯ ಜನಸಾಮಾನ್ಯರ ಬುದ್ಧಿಗೀಗಲೂ ಅಂಧಶ್ರದ್ಧೆ, ಅಜ್ಞಾನ, ಅಸಹ್ಯತೆಯ ಅಂಧಕಾರ ಕವಿದಿದೆ. ಇದುವರೆಗೆ ಅದರ ಮುಂಭಾಗಕ್ಕೆ ಮಾತ್ರ ಪ್ರಕಾಶ ಬಿದ್ದಿದೆ ಹೊರತು, ಒಳಗಡೆಗೆ ಬಿದ್ದಿಲ್ಲ. ಈಗ ಮುಂದಾಗಿ ಆ ಕತ್ತಲೇ ಭಾಗವನ್ನು ಬೆಳಗಿಸಿಕೊಳ್ಳಬೇಕು.

ಎಚ್ಚೆತ್ತ ಹಾಗೂ ತುಂಬಿದ ಬುದ್ಧಿ ಹೃದಯಗಳಿಂದ ಜನತೆಯು ೧೯೫೦ನ್ನು ಪ್ರವೇಶಿಸಿದರೆ ಜನತಾರಾಜ್ಯ ಸಫಲವಾಗಬಹುದು. ಜನತೆಪ್ಪಿ ಬೀಳದಿದ್ದರೆ ಕಾಲ ತಪ್ಪು ಮಾಡದು. ಸದ್ವಿನಿಯೋಗವಾಗುವಂತ


# ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1493/-
4. 12ನೇ ನಂಬರಿನ ಜೋಡು ಹೊಸವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hard loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅನಧಿಕೃತ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ತರಿಸ ಬೇಕಾದ "Special permit" ತರಿಸಿದರೆ ಮಾತ್ರ ಕೊಡುವುದು)

52-20 ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.



# CRESCENT

## FOR PROTECTION AND SERVICE.

It is best to represent and insure with The CRESCENT Insurance Co., Ltd.,

*H: O: BOMBAY.]* *[Established 1919.*

*For particulars write to:*

| | |
|---|---|
| Sri B. A. Poovaiah | or The Branch Manager. |
| *Organiser* | *22 E. Mahatma Gandhi Road,* |
| *Pollibetta, Coorg.* | *Bangalore 1.* |

ಸುರಕ್ಷಿತವಾದ ಜೀವವಿಮೆಗಾಗಿ ದಯವಿಟ್ಟು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



# ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್. ಮಡಿಕೇರಿ.

[illegible] (೧೯೩೧ರಲ್ಲಿ ಸ್ಥಾಪಿತವಾಯಿತು.)

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 1,00,000. |
| ವಸೂಲಾದ ಶೇರು ಮೂಲಧನ | ರೂ. | 1,65,000. |
| ಕ್ಷೇಮನಿಧಿ | ರೂ. | 50,000. |

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೂ [illegible] ಬೆಳ್ಳಿ ಬಂಗಾರಗಳ ಆಧಾರ ಮೇಲೆಯೂ ಸಾಲ ಕೊಡಲಾಗುವುದು. [illegible] ಗಳ ಡಿಪಾಜಿಟು ಸ್ವೀಕರಿಸುವುದು. [illegible] ಮತ್ತು [illegible] ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಸ್ವೀಕರಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ಕೇಳಿಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಪಿ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ. | ಪ್ರೆಸಿಡೆಂಟ್ ಮತ್ತು ಖಜಾಂಚಿ. |


ರ ೧೯೫೦ ಶುಭವರುಷ.

೧೯೫೦ ಜಯಪ್ರದವಾಗಲಿ. ೧೯೪೯ರಲ್ಲಿ ಬಿದ್ದ ಅಸ್ತಿವಾರದ ಮೇಲೆ ೧೯೫೦ ಭದ್ರ ಭವ್ಯ ಕಟ್ಟಡವನ್ನೇರಿಸಲಿ. ಈ ವರುಷವು ಮೂಡದೆ ಬಾಕಿಬಿಟ್ಟ ಸತ್ಕಾರ್ಯಗಳನ್ನು ಬರುವ ವರ್ಷವು ನೆರವೇರಿಸಿಕೊಡಲಿ.

"ನವಯುಗ"

---

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

Reg. No. M. 1880.
'KODAGU' MERCARA, (Coorg).

# ಕೊಡಗು

ಸಂಪಾದಕರು—ಸಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೧೩-೧-೧೯೫೦ನೇ ಶುಕ್ರವಾರ | ಸಂಚಿಕೆ ೩೩

# ವ್ಯಕ್ತಿ ಗೌರವ.

ಲೇ:—ಶ್ರೀ. 'ಗಣೇಶ' ಮಡಿಕೇರಿ.

ಮನುಷ್ಯನಿಗೆ ಜೀವನಕ್ಕೆ ಅತ್ಯಾವಶ್ಯವಾದ ಗಾಳಿ, ನೀರು, ಆಹಾರ, ಬಟ್ಟೆಯನ್ನು ಬಿಟ್ಟರೆ ಆತನು ಹೆಚ್ಚಾಗಿ ಆಶಿಸುವುದು ದುಡ್ಡು. ಆ ಹಣ ಸಂಪಾದನೆಗಾಗಿ-ಸರ್ವ ಸಂಗ ಪರಿತ್ಯಾಗ ಮಾಡಿದ ಯೋಗಿಗಳನ್ನು ಬಿಟ್ಟು-ಎಲ್ಲರೂ ಪ್ರಯತ್ನಿಸುತ್ತಾರೆ. ಇದನ್ನು ಸಾಧಿಸುವ ಮಾರ್ಗ ಒಂದೇ ಅಲ್ಲ. ಶಾರೀರಿಕ ಶ್ರಮದಿಂದ ಶ್ರಮಿಸಿ ಸಂಪಾದಿಸುವವರಿದ್ದಾರೆ. ಮೆದುಳಿನ ಉಪಯೋಗದಿಂದ ಸಂಪಾದಿಸುವವರಿದ್ದಾರೆ. ಇನ್ನೊಬ್ಬರಿಗೆ ಮೋಸ ಮಾಡುವವರಿದ್ದಾರೆ; ಕದಿಯುವವರಿದ್ದಾರೆ ಭಿಕ್ಷೆ ಎತ್ತಿ ದುಡ್ಡು ಸಂಪಾದಿಸುವವರೂ ಇದ್ದಾರೆ. ಇದರ ಸಂಪಾದನೆಗೆ ಪ್ರತಿಯೊಬ್ಬನೂ ಒಂದೊಂದು ಮಾರ್ಗವನ್ನು ಹುಡುಕಿ ತೆಗೆಯುತ್ತಾನೆ. ನನ್ನನ್ನು ಈ ಲೇಖನ ಬರೆಯಲು ಪ್ರೇರೇಪಿಸಿದ ಆ ಒಲವಿನ ಹಿನ್ನೆಲೆಯಲ್ಲಿ ಸಂಪಾದನೆಯು ಅಡಗಿದೆ. ಹಣ ಸಂಪಾದನೆಯ ನಂತರ ಮನುಷ್ಯನು ಆಶಿಸುವುದು ಗೌರವ. ಈ ಗೌರವವನ್ನು ಗಳಿಸಿಕೊಳ್ಳುವ ಬಗೆ ಹೇಗೆ ಎಂಬುದನ್ನು ವಿಚಾರಿಸುವುದು ಇದರ ಉದ್ದೇಶ.

ಮನುಷ್ಯನು ಅತೃಪ್ತ ಜೀವಿ. ಯಾವುದರಿಂದಲೂ ಆತನಿಗೆ ತೃಪ್ತಿ ಇಲ್ಲ. ಬಡವನಾಗಿ ಹುಟ್ಟಿದ ಆತನು ಪ್ರಥಮತಃ ಹೊಟ್ಟೆಗೆ ಅನ್ನವನ್ನೂ ಮೈಗೆ ಬಟ್ಟೆಯನ್ನೂ ಆಶಿಸುತ್ತಾನೆ. ಇವು ದೊರೆತ ಮೇಲೆ ಕೈಯಲ್ಲಿ ನಾಲ್ಕು ಕಾಸಾಗಬೇಕೆಂದು ಬಯಸುತ್ತಾನೆ. ಕೈಯಲ್ಲಿ ನಾಲ್ಕು ಕಾಸಾದನಂತರ ಸಮಾಜದಲ್ಲಿ ಒಂದು ಗೌರವ ಸ್ಥಾನ ಪಡೆಯಬೇಕೆಂದು ಯತ್ನಿಸುತ್ತಾನೆ ಅದಕ್ಕಾಗಿಯೇ ಜಿಲ್ಲಾ ಬೋರ್ಡಿಗೋ ಶಾಸನ ಸಭೆಗೋ ನಿಂತು ಮಂಡಳಿಸಲು ಪ್ರಯತ್ನಿಸುತ್ತಾನೆ. ಈ ರೀತಿ ಕ್ರಮಶಃ ಮುಂದುವರಿದು ದೇಶದ ನಾಯಕನೆನಿಸಿದ ಮನುಷ್ಯನಿಗೆ ಗೌರವ ಬಂದಂತಾಯಿತೇ? ಮನುಷ್ಯನ ವ್ಯಕ್ತಿಗತ ಗೌರವಕ್ಕೂ, ಆತನ ಹಣ, ಅಧಿಕಾರ, ಪರಂಪರೆಗೂ ಸಂಬಂಧವಿದೆಯೇ?

ಮನುಷ್ಯನಿಗೆ ವ್ಯಕ್ತಿಗತ ಗಾಂಭೀರ್ಯ ಬೇಕು. ಈ ವ್ಯಕ್ತಿಗೌರವವಿರುವ ಮನುಷ್ಯನು ಜಗತ್ತನ್ನೇ ಅಲ್ಲಾಡಿಸಬಲ್ಲ ಆತನ ಮುಂದೆ ಶತ್ರುಗಳೂ ಮಿತ್ರರಾಗುವರು. ಕಳ್ಳನೂ ಶಸ್ತ್ರ ಸುರಿಯುವನು, ಕೊಲೆಗಾರನೂ ಕೈಸಾಗದಾಗುವನು. ಹಾಗಾದರೆ ಈ ವ್ಯಕ್ತಿಗತ ಗಾಂಭೀರ್ಯವೆಂದರೇನು?

ಇದು ಇಂಥಾದ್ದೇ ಎಂದು ನಾಲ್ಕಕ್ಷರಗಳಲ್ಲಿ ಅದನ್ನು ವಿವರಿಸಿ ಬರೆಯಲಾಗುವುದಿಲ್ಲ. ಅದು ಭೌತಿಕವಾದುದೂ ಅಲ್ಲ; ಶಾರೀರಿಕವಾದುದೂ ಅಲ್ಲ. ಆತ್ಮದ ಅಂತರಾಳದಲ್ಲಿ ಹುಟ್ಟಿ ವಿಕಸಿತಗೊಂಡು ಶರೀರದ ಪ್ರತಿ ಕಾರ್ಯಗಳಲ್ಲೂ ಪ್ರತಿಬಿಂಬಿಸುವ ಚೇತನವದು. ಅದನ್ನು ಕಣ್ಣಿನಿಂದ ನೋಡಲಾಗದಿದ್ದರೂ ಕೃತಿಯಲ್ಲಿ ಗುರ್ತಿಸಬಹುದು. ಜಡವಾಗಿ ತೋರುವ ತಂತಿಯೊಳಗೆ ವಿದ್ಯುತ್ ಅಡಗಿದ್ದು ಬೆಳಕು ಕೊಡುವಂತೆ ಅಗೋಚರವಾಗಿ ಅಡಗಿದ್ದ ಕೃತಿಯಲ್ಲಿ, ನಡೆಯಲ್ಲಿ ಹೊಸ ವಾತಾವರಣವನ್ನು ಕಲ್ಪಿಸಿ ಜಗವನ್ನೇ ಈ ವ್ಯಕ್ತಿ ಗೌರವ ಗೆಲ್ಲುವದು!

ಈ ವ್ಯಕ್ತಿತ್ವವನ್ನು ಅನೇಕರು ಭೌತಿಕವಾಗಿ ವರ್ಣಿಸುತ್ತಾರೆ. ಬಾಹ್ಯವಾದ ಈ ವಿಶೇಷಣಗಳೇ ವ್ಯಕ್ತಿತ್ವವೆಂದು ಭಾವಿಸುವವರಿದ್ದಾರೆ. ದೃಢವಾದ, ಎತ್ತರವಾದ ಸುಂದರ ಶರೀರ, ಸುಂದರ ಮುಖ, ಉತ್ತಮವಾದ ಉಡಿಗೆ ತೊಡಿಗೆಗಳು, ಬೆಲೆ ಬಾಳುವ ಆಭರಣಗಳು, ಹೆಸರಿನ ಜೊತೆಗೆ ನಾಲ್ಕು ವಿದ್ಯಾಲಯಗಳ ಡಿಗ್ರಿಗಳು ಇವಿದ್ದರೆ ಮನುಷ್ಯನಿಗೆ ಎಂಥಾ ವ್ಯಕ್ತಿತ್ವವಿದೆ ಎಂದು ಹೇಳುವವರಿದ್ದಾರೆ ಅವರ ದೃಷ್ಟಿಯಲ್ಲಿ ಅಂಥಾ ಮನುಷ್ಯನು ನಾಗರೀಕ, ಮರ್ಯಾದಸ್ಥ, ಸರ್ವಸ್ವ. ಆದರೆ ಮನುಷ್ಯನ ಗೌರವ ವ್ಯಕ್ತಿತ್ವಗಳು ಆತನ ಶಾರೀರಕ ಬಲ ಯಾ ಸೌಂದರ್ಯ, ಉಡಿಗೆಗಳ ಮೌಲ್ಯ ಮತ್ತು ವೈಶಿಷ್ಟ್ಯಗಳಲ್ಲ. ಗಾಳಿ ತೆಗೆದ ಬೆಲೂನು ಯಾವ ರೀತಿ ಎತ್ತರಕ್ಕೆ ಹಾರಲಾರದೋ ಅದೇ ರೀತಿ ಆತ್ಮದ ಗೌರವ ಗಾಂಭೀರ್ಯವಿಲ್ಲದ ವ್ಯಕ್ತಿ ಕೇವಲ ಉಡಿಗೆ ತೊಡಿಗೆ, ಸೌಂದರ್ಯಗಳಿಂದ ಗೌರವದ ವ್ಯಕ್ತಿಯಾಗಲಾರ.

ಶಾರೀರಕ ಶಕ್ತಿ ಗೌರವದ ಚಿಹ್ನೆಯಾದರೆ ಮೈಯಲ್ಲಿ ಮಣಗಟ್ಟಲೆ ಮಾಂಸ ಬೆಳೆಸಿಕೊಂಡ ಜಟ್ಟಿಗಳು ಮಹಾ ಗೌರವದ ವ್ಯಕ್ತಿಗಳಾಗುತ್ತಿದ್ದರು. ಸೌಂದರ್ಯವು ವ್ಯಕ್ತಿಯ ಗೌರವ ಮತ್ತು ವ್ಯಕ್ತಿತ್ವವನ್ನು ಹೆಚ್ಚಿಸಬಲ್ಲುದಾಗಿದ್ದರೆ ಸುಂದರರೆಲ್ಲರೂ ಗೌರವಾನ್ವಿತರಾಗುತ್ತಿದ್ದರು ಬಹುಶಃ ಹೆಚ್ಚಿನ ಸಂಖ್ಯೆಯ ಹೆಂಗಸರು ಆದರ್ಶರೆನಿಸುತ್ತಿದ್ದರು. ಉಡುಪು, ಹೊರಗಿನ ಬಣ್ಣ, ಬೆಲೆಬಾಳುವ ಆಭರಣಗಳು ವ್ಯಕ್ತಿತ್ವವನ್ನು ಹೆಚ್ಚಿಸುತ್ತಿದ್ದರೆ ಸಿರಿವಂತರೆಲ್ಲಾ ಘನವಂತರೆನಿಸುತ್ತಿದ್ದರು. ಆದರೆ ಪರಿಸ್ಥಿತಿ ಹಾಗಿಲ್ಲ. ಅತ್ಯುತ್ತಮ ಉಡುಪಿನಿಂದ ಬೀದಿ ಬೀದಿ ಮೆರೆಯುವವರಲ್ಲಿ ಈ ಗೌರವ ಯಾ ವ್ಯಕ್ತಿತ್ವವಿಲ್ಲ. ಸಿರಿವಂತರು, ರಾಜ ಮಹಾರಾಜರೆನಿಸಿದವರಲ್ಲೂ ಈ ಗೌರವವಿಲ್ಲ!

ಬದಲು ಯೋಗ್ಯ ಉಡುಪಿಲ್ಲದ ಸರಳ ವ್ಯಕ್ತಿಯು ಕೆಲವರಲ್ಲಿ ಇದು ತೋರಿಬರುತ್ತದೆ. ಶಾರೀರಕ ಬಲದಲ್ಲಿಯೂ, ಸೌಂದರ್ಯದಲ್ಲಿಯೂ ಲೆಕ್ಕಕ್ಕಿಲ್ಲದವರಲ್ಲಿ ಇದು ಕಂಗೊಳಿಸುತ್ತದೆ. ಗ್ರೀಸ್ ದೇಶದ ಸಾಕ್ರೆಟೀಸನು ಆತನ ಕಾಲದ ಜನರಲ್ಲಿ ಅತ್ಯಂತ ವಿಕೃತ ರೂಪಿನವನು. ಆದರೆ ಆತನ ವ್ಯಕ್ತಿಗತ ಗಾಂಭೀರ್ಯಕ್ಕೆ ರಾಜ ಮಹಾರಾಜರೂ ತಲೆಬಾಗುತ್ತಿದ್ದರು! ಆತನ ವಾಕ್ಯಗಳು ಇಂದೂ ಕೂಡ ವೇದ ವಾಕ್ಯಗಳಂತೆ. ದೂರದ ಮಾತೇಕೆ? ನಮ್ಮ ದೇಶದ ಮಹಾ ನಾಯಕರಾದ ಮಹಾತ್ಮಾ ಗಾಂಧಿಯವರನ್ನೇ ತೆಗೆದುಕೊಂಡರೆ ಅವರ ಶರೀರದಲ್ಲಿ ಒಂದು ಹಿಡಿ ಮಾಂಸವಿರಲಿಲ್ಲ. ಅವರ ಶಾರೀರಕ ಸೌಂದರ್ಯವೂ ಹೇಳಿಕೊಳ್ಳುವಂತಿರಲಿಲ್ಲ ನಿರ್ಬಲರಾಗಿ ನಡೆಯುವುದೇ ಪ್ರಯಾಸವಾಗಿದ್ದರೂ ಅವರ ವ್ಯಕ್ತಿ ಗಾಂಭೀರ್ಯವೆಂತಹದು? ಅವರ ತಲೆಬಾಗದ ಕಡೆ ಸಹಸ್ರಾರು ತಲೆಗಳು ಬಾಗುತ್ತಿದ್ದವು. ಅವರು ಕೈ ಎತ್ತಿದ ಕಡೆ ಲಕ್ಷಾಂತರ ಕೈಗಳು ಧಾವಿಸುತ್ತಿದ್ದವು. ಅವರ ಕಾಲು ಮೆಟ್ಟಿದೆಡೆ ಪುಣ್ಯಕ್ಷೇತ್ರವಾಯಿತು. ಅವರ ಮಾತೇ ಭಾರತೀಯರ ಮಂಗಳ ಗಾನವಾಯಿತು. ಹಾಗಾದರೆ ಈ ವ್ಯಕ್ತಿತ್ವ ಎಲ್ಲಿಂದ ಮತ್ತು ಹೇಗೆ?

ಅತೀ ಉನ್ನತ ಮಟ್ಟಕ್ಕೆ ಅಭಿವೃದ್ಧಿಗೊಂಡ ಮಾನಸಿಕ ಮತ್ತು ಆತ್ಮಿಕ ಗುಣಗಳು ಈ ವ್ಯಕ್ತಿ ಗೌರವದ ಮಹಾ ಗೋಪುರಕ್ಕೆ ಸಹಾಯಕವಾದ ಆಸ್ತಿಭಾರ. ಮನುಷ್ಯನು ನಡೆಯುವ ನಡಿಗೆ, ಸಾಮಾನ್ಯವಾಗಿ ಅವನು ನೋಡುವ ದೃಷ್ಟಿ, ಆತನ ಮಾತಿನ ರೀತಿ, ಸಮಾಜದಲ್ಲಿಯ ಆತನ ನಡತೆ, ಇವೆಲ್ಲವೂ ಆಗ ಆತನ ಮನಸ್ಸಿನಲ್ಲಿ ಯಾ ಹೃದಯದಲ್ಲಿ ಯಾವ ರೀತಿಯ ಭಾವನೆ ಇದೆ ಎಂಬುದನ್ನು ಪ್ರತಿಬಿಂಬಿಸುತ್ತವೆ. ಈ ಭಾವನೆಗನುಗುಣವಾಗಿಯೇ ಆತನು ಜನರಿಂದ ಒಪ್ಪಲ್ಪಡುತ್ತಾನೆ ಇಲ್ಲವೇ ತಿರಸ್ಕರಿಸಲ್ಪಡುತ್ತಾನೆ. ಒಬ್ಬನು ಅತಿ ಶ್ರೇಷ್ಠವಿದ್ದು ಯಾವಾಗಲೂ ಉದಾತ್ತವಾದ ಭಾವನೆಗಳಲ್ಲಿ ಮಗ್ನನಾಗಿ ಅತೀ ಎತ್ತರದ ಮಟ್ಟದಲ್ಲಿದ್ದರೆ ಆತನು ತನ್ನ ಸುತ್ತು ಒಂದು ಪವಿತ್ರ ಹಾಗೂ ನಿಷ್ಕಲ್ಮಷ ವಾತಾವರಣವನ್ನು ಕಲ್ಪಿಸಿಕೊಳ್ಳುತ್ತಾನೆ. ಈ ವಾತಾವರಣವು ಪಕ್ಕಕ್ಕೆ ಬಂದವರನ್ನು ಆಕರ್ಷಿಸುವದು. ಆಕರ್ಷಿಸಲ್ಪಟ್ಟವರು ಒಳಗಿನ ಪವಿತ್ರತೆಯನ್ನು ಕಂಡು ಮೆಚ್ಚುವರು.

ಇಂಥಾ ಗೌರವವನ್ನು ವ್ಯಕ್ತಿಯು ಹೆಚ್ಚಿಸಿಕೊಳ್ಳುವದು ಸಾಧ್ಯವೇ? ವ್ಯಾಯಾಮದಿಂದ ಶರೀರದ ಸ್ನಾಯುಗಳನ್ನು ಹೆಚ್ಚಿಸಿಕೊಂಡಂತೆ ಇದನ್ನು ಬಹುಶಃ ಹೆಚ್ಚಿಸಿಕೊಳ್ಳಲು ಸಾಧ್ಯವಾಗದಿರಬಹುದು. ಈ ಗೌರವವನ್ನು ಬೆಳೆಸಿ ವ್ಯಕ್ತಿತ್ವವನ್ನು ರೂಪಿಸಲು ಯಾವದೇ ನಿಯಮವಿಲ್ಲದಿರದು. ಯಾವದೇ ನಿಯಮವಿದ್ದರೆ ಅದು ಯಾಂತ್ರಿಕವಾಗಿ ಕ್ರಮಶಃ ಶಿಥಿಲಗೊಳ್ಳುವದು. ಆದರೆ ಆ ಶಕ್ತಿಯನ್ನು ಹೆಚ್ಚಿಸಿಕೊಳ್ಳುವದು ಪ್ರತಿಯೊಬ್ಬನಿಗೆ ಸಾಧ್ಯವಿದೆ. ಮನಸ್ಸು, ಹೃದಯ, ಆತ್ಮಗಳ ಪಾವಿತ್ರ್ಯವೇ ಇದರ ತಳಹದಿ. ಆರೋಗ್ಯಕರ ಮತ್ತು ಅವಿರೋಧಕ ವ್ಯಕ್ತಿತ್ವವು ದೊರೆಯಬೇಕಾದರೆ ಈ ಆಂತರಿಕ ಪಾವಿತ್ರ್ಯವಿಲ್ಲದೆ ನಡೆಯದು. ನಮ್ಮ ಭಾವನೆಗಳು, ಕೃತಿಗಳು, ನಡೆನುಡಿಗಳು ನೀತಿರೀತಿಗಳಿಗನುಗುಣ ಮೇಲ್ಮಟ್ಟದವಾಗಿದ್ದರೆ ಅವುಗಳನ್ನೊಳಗೊಂಡಿರುವ ವ್ಯಕ್ತಿಯೂ ಮೇಲ್ಮಟ್ಟಕ್ಕೇರಲೇ ಬೇಕು. ನಮ್ಮ ಗುಣ, ನೀತಿಗಳಲ್ಲಿ, ಮಾತು ನಡೆಗಳಲ್ಲಿ ಕಳಂಕವಿಲ್ಲದೆ ಅವು ಬೆಳಗುತ್ತಿದ್ದರೆ ಅವುಗಳಿಂದ ಕೂಡಿದ ವ್ಯಕ್ತಿಯೂ ತೇಜಸ್ಸಿನಿಂದ ಬೆಳಗುವನು.

ನಾವು ಅನೇಕರನ್ನು ನೋಡಿದ್ದೇವೆ. ಯಾವ ಭೌತಿಕ ದೃಷ್ಟಿಯಿಂದಲೂ ಅವರಿಗೆ ನ್ಯೂನತೆ ಇಲ್ಲ. ಆರೋಗ್ಯವಿದೆ. ದುಡ್ಡಿದೆ. ಸುಖಸಂಸಾರವಿದೆ. ಆದರೂ ಅವರ ಮುಖದಲ್ಲಿ ಯಾವಾಗಲೂ ಉದ್ವೇಗ! ನಗುವಿನ ಹೊನಲು ಹರಿಯದು. ಕಣ್ಣಿನಲ್ಲಿ ಮಿಂಚು ಹೊಳೆಯದು. ಅನಾಸಕ್ತಿಯು ಕೂಡ ಎದ್ದು ತೋರುವದು. ಇದಕ್ಕೆ ಕಾರಣ ಅವರ ಶಾರೀರಕ ಸುಖ ಸೌಲಭ್ಯಗಳೊಡನೆ ಅವರ ಆತ್ಮಿಕ ಗುಣಗಳು ಬೆಳೆಯದುದೇ ಆಗಿದೆ. ಸದುಪಯೋಗ ಮಾಡಲು ತಿಳಿಯದವನ ಕೈಯ ಧನದಿಂದ ಗಂಡಾಂತರವೇ ಹೆಚ್ಚು. ಶರೀರ ಮತ್ತು ಆತ್ಮಗಳು ಒಂದಕ್ಕೊಂದು ಮಿಲನವಾಗಿರಬೇಕು, ಶರೀರಕ್ಕೆ ಯೋಗ್ಯ ಆಹಾರ ಕೊಟ್ಟು ಪೋಷಿಸುವಂತೆಯೇ ಆತ್ಮದ ಕನ್ನಡಿಯು ಶುಭ್ರವಾಗಿರುವಂತೆ ಎಚ್ಚರಿಕೆ ವಹಿಸಬೇಕು. ಶರೀರದೊಂದಿಗೆ ಹೃದಯ ನಿರ್ಮಲವಿರಬೇಕು. ಅಂಥಾ ಪವಿತ್ರ ಹೃದಯ ಕಲ್ಪಿಸಿದುದೇ ಭಾವಿಸಲ್ಪಡಬೇಕು, ಆ ಭಾವನೆಯನ್ನೇ ಶರೀರವು ಕಾರ್ಯರೂಪಕ್ಕೆ ತರಬೇಕು. ಈ ಕಾಯ ವಾಚಾ ಮನಸಾಗಳ ಸಮ್ಮಿಲನವೇ ವ್ಯಕ್ತಿಯ ಗೌರವದ ಮೂಲ.

ಆನಂದವು ಮುಖ ಕನ್ನಡಿಯನ್ನು ತೊಳೆದು ಶುಭ್ರವಾಗಿ ಬೆಳಗಿಸುವ ಅಮೂಲ್ಯವಸ್ತು. ಸುಂದರ ಭವನ ಮೋಹಕ ಅಲಂಕಾರದಿಂದಿದ್ದರೆ ಸಾಲದು. ಪವಿತ್ರವಾದ ಹೃದಯ ಬತ್ತಿಯ ಬೆಳಕು ಆ ಎದುರಿನ ಮುಖಮಂಟಪದಲ್ಲಿ ಪ್ರತಿಬಿಂಬಿತವಾಗಬೇಕು. ಅನೇಕರಲ್ಲಿ ಸುಂದರ ಆಕಾರವಿದೆ. ಸೌಂದರ್ಯವಿದೆ. ಆದರೆ ಈ ತೇಜಸ್ಸಿಲ್ಲ. ಕಾರಣ ಅವರು ಬತ್ತಿ ಇಲ್ಲದ ದೀಪಗಳು! ಯಾರೂ ಅದರ ಹತ್ತಿರ ಸುಳಿಯರು! ಪವಿತ್ರ ಆತ್ಮದ ಪ್ರೇಮದ ಜ್ಯೋತಿ ಮುಖದಲ್ಲಿ ಅಪೂರ್ವ ಬೆಳಕನ್ನು ಚೆಲ್ಲಿದ್ದರೆ ಆ ಮುಖವು ಕುರೂಪವಾಗಿದ್ದರೂ ಜನರನ್ನು ಸೆಳೆಯುವದು. ಜನತೆ ಅದರ ಗೌರವವನ್ನರಿತು ಮನ್ನಿಸುವರು. 'ಕಷ್ಟಗಳಲ್ಲಿ, ಸುಖದಲ್ಲಿ ವ್ಯತ್ಯಾಸವಿಲ್ಲದೆ, ಸ್ವಾರ್ಥದ ಕಳಂಕವಿಲ್ಲದ, ಮೋಹದ ಜಾಲದಿಂದ ನಿರ್ಲಿಪ್ತವಾದ ಪ್ರೇಮವು ಸೂಸುತ್ತಿರೆ ಅದಕ್ಕೆಣೆಯು ಜಗತ್ತಿನಲ್ಲಿಲ್ಲ' ವೆನ್ನುವ ಮಾತು ಸಹಜ.

ಎರಡು ವಿಧದ ಜನರು ಈ ಗೌರವದ ಮಾರ್ಗವನ್ನು ಅನುಸರಿಸಲಾರರು —

ತಿಯೊಂದು ಕೆಲಸ ಮತ್ತು ವಸ್ತುವಿನ ನ್ಯೂನತೆಯನ್ನು ಹುಡುಕುವವರು ಒಂದು ಹಂಗತು! ಇವರ ದೃಷ್ಟಿ ಆಕಾಶದ ಮೂಲೆಯಲ್ಲಿರುವ ಕಪ್ಪುಹರಿದ ಮೋಡದಲ್ಲಿ. ದಿವ್ಯ ಪ್ರಕಾಶದಿಂದ ಮೆರೆಯುವ ಸೂರ್ಯನನ್ನು ನೋಡಿ ಆನಂದಿಸುವ ಭಾಗ್ಯ ಇವರಿಗಿಲ್ಲ. ಅವರ ತತ್ವದಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬನೂ ತಮ್ಮ ವಿರೋಧಿ. ನೀತಿ ನಡತೆ ಎಲ್ಲಿಯೂ ಇಲ್ಲ. ಎಲ್ಲರೂ ತಮ್ಮ ಮೇಲೆ ಕತ್ತಿ ಕಟ್ಟಲಿರುವವರೇ! ಎರಡನೇಯ ಹಂಗಡದವರ ಜೀವನ ಮೇದ ಕಬ್ಬಿನ ಸಿಪ್ಪೆಯಂತೆ! ಜೀವನದಲ್ಲಿ ನೀರಸ, ಅನಾಸಕ್ತಿ. ಜಡತೆಯೇ ಶಾಂತಿಯೆಂದು ತೃಪ್ತಿಪಡುವವನೇ ಅನಾಸಕ್ತಿಯೆಂದೂ ಭಾವಿಸುವರು! ಇವರಿಗೆ ಲೋಕವೇ ಅರ್ಥರಹಿತವಾದುದು.

ಜೀವನವು ಒಂದು ಪ್ರಯೋಗ. ಈ ಪ್ರಯೋಗ ಶಾಲೆಯಲ್ಲಿ ಕಷ್ಟಸುಖಗಳ ಪುರಕಿಟ್ಟು ಸುಶುದ್ಧ ಆತ್ಮವನ್ನು ಬೆಳಗಬಲ್ಲವನೇ ಗೌರವಾನ್ವಿತನಾಗುವನಲ್ಲದೆ ಸುಖಸಂಪತ್ತುಗಳಿಂದ ತುಕ್ಕು ಹಿಡಿದು ಮೂಲೆಸೇರುವವನಲ್ಲ. ಆತ್ಮದ ಬೇಕಿನ ಕಲ್ಮಷಗಳ ಹೊರತಾಗಿ ತೇಜಸ್ಪುಂಜವಾದ ಅಂತರ್ಜ್ಯೋತಿಯ ಶರೀರವನ್ನು ಬೆಳಗಬೇಕು. ಹಾಗೆ ಬೆಳಗುತ್ತಿರುವ ಆತ್ಮದಿಂದ ನಡುಗುವವರೆಲ್ಲರೂ ತಳವಾಯಿಸಲು ಹತ್ತಿರ ಬರುತ್ತಾರೆ. ತಮ್ಮ ಶರೀರಕ್ಕೆ ತಾಗಿದ್ದು ಚೇತನ ಕೂಡಿಸಿದ ಬೆಳಕನ್ನು ಹೊಗಳಿ ಪ್ರಾರ್ಥಿಸುತ್ತಾರೆ.

ಈ ಗುರಿಗೆ ಸೇರಲು ಜೀವನ ಸರಳವಾಗಬೇಕು. ಹೊನ್ನು, ಘನತೆ, ಪ್ರತಿಷ್ಠೆಗಳ ಭಾರ ಹೊತ್ತವನು ಮುಂದೆ ನಡೆಯಲಾರ! ಪ್ರತಿ ದಿನವೂ ಜೀವನದ ಹೊಸ ದೇ ದಿನವೆಂಬಂತೆ ಜೀವಿಸಬೇಕು. ಸುತ್ತುಮುತ್ತಿರುವವರೆಲ್ಲರ ಆನಂದಕ್ಕೆ ಕಾರಣವಾದ ಜೀವನವಾಗಬೇಕು. ಈ ಮಾರ್ಗವೇ ವ್ಯಕ್ತಿಯು ಗೌರವದ ಮಾರ್ಗ. ಮನುಷ್ಯನ ಗುಣದ ಅಮೂಲ್ಯ ರತ್ನ ಕೃತಜ್ಞತೆ. ಕೃತಜ್ಞತೆ, ವಿನಯ ಗುಣಗಳು ಯಾರನ್ನೂ ಘನತೆಗೇರಿಸದೆ ಬಿಟ್ಟಿಲ್ಲ.

---

ಜನಜೀವನದಲ್ಲಿ

# ಅನೈತಿಕತೆ ಏಕೆ?

ಕಳೆದ ಎರಡು ಮೂರು ವರ್ಷಗಳಿಂದಲೂ, ಅನೈತಿಕತೆ, 'ಕರಪ್‌ಶನ್' ದೇಶದಲ್ಲಿ ಹೆಚ್ಚಿ ಹೋಗಿದೆ. ಇದು ಅಳಿಯಬೇಕು ಎಂಬ ಗೋಳು ಕೇಳಿಬರುತ್ತದೆ. ಯಾವ ಧುರೀಣರ ಮಾತುಗಳನ್ನೇ ಕೇಳಲಿ, ಯಾವ ವೃತ್ತಪತ್ರಿಕೆಗಳನ್ನೇ ಓದಲಿ, ಜನಜೀವನವನ್ನೇ [illegible] ನೋಡಲಿ, ಈ 'ಅನೈತಿಕತೆ, 'ಕರಪ್‌ಶನ್' ಮಾತುಗಳು ಇಲ್ಲದೆ ಇಲ್ಲ. ಜನ ಜೀವನದಲ್ಲಿ ಅದು (ಅಧಿಕಾರಿಗಳಿರಲಿ ಅಥವಾ ಅನಧಿಕಾರಿಗಳಿರಲಿ) ಯಾರೇ ಇರ್ಲಿ ಅನೈತಿಕತೆಯಿಂದ ಅಳಿದುಳಿದವರು ಇಲ್ಲವೇ ಇಲ್ಲವೇನೋ ಎಂಬ ಸಂಶಯ ಬರುವ ಸ್ತರ ಮಟ್ಟಿಗೆ ಅದರ ವ್ಯಾಪ್ತಿಯು ಹೆಚ್ಚಿ ಹೋಗಿದೆ. ಇದು ಹೀಗೇಕೆ? ಎಂದು ನಮಗೆ ನಾವೇ ಕೇಳಿಕೊಂಡರೆ ಅದಕ್ಕೆ ಏನು ಉತ್ತರ ಬರಬಹುದು?

### ಅದೆ ಕಡೆಗಳು.

ಸಾಮಾನ್ಯ ಜನತೆಯನ್ನು ಅದ್ದ ಮಾರ್ಗಕ್ಕೆ ಹಚ್ಚುವ ವೊಟ್ಟ ಮೊದಲನೆಯ ಮಾರ್ಗವೆಂದರೆ, ಅನ್ನ ಬಟ್ಟೆಗಳ ಸಂಪಾದನೆಯ ದೈನಂದಿನ ಕಾರ್ಯದಲ್ಲಿ ಬರುವ ಅಡಚಣೆಗಳೆಂದೇ ಹೇಳಬೇಕು. ಯಾವದೇ ಒಂದು ದೇಶದಲ್ಲಿ, ಅಲ್ಲಿಯ ನೈತಿಕ ಮಟ್ಟವನ್ನು ಅಲ್ಲಿಯ ಕಾಯದೆ ಕಾನೂನುಗಳಿಂದ ನಿರ್ಧರಿಸಬಹುದೆಂದೂ, ಎಷ್ಟು ಎಷ್ಟು ಹೆಚ್ಚು ಅವುಗಳಿರುವವೋ ಅಷ್ಟು ಅಷ್ಟು ನೈತಿಕ ಮಟ್ಟವು ಗಂಡಾಂತರದಲ್ಲಿರುವುದೆಂದೂ ಒಬ್ಬ ತಜ್ಞರು ತಮ್ಮ ಅಭಿಪ್ರಾಯಪಟ್ಟಿದ್ದಾರೆ.

ಇಂದು ಒಬ್ಬ ಸಾಮಾನ್ಯ ಮಾನವನ ಅಡಿಗೆ ಅಕ್ಕಿ ಇಟ್ಟಿರೆ ಅವನ ಜೀವನದಲ್ಲಿ ಅವನ ಕೈಗೆ ಸಿಗುವ [illegible], ಹೀಗೆ ಹತ್ತೆ ಹತ್ತಾರು ಅಡಚಣೆಗಳು ಬರುವವು. ಅವನ್ನು [illegible] [illegible] ದಾಗಿದೆ. ತನ್ನ ಮಾನ್ಯರಿಂದ, ಅನ್ಯರಿಂದ, ಅವನು ಅಪಾರ ಧೈರ್ಯದ ನೆರವನ್ನು ಪಡೆಯುವಂತಿಲ್ಲ. ಧನದ ನೆರವನ್ನೂ (ಸಾಲವಾಗಿ) ಪಡೆಯುವಂತಿಲ್ಲ. ಹೀಗೆ ಏಕಾಕಿಯಾಗಿ, ಒಂಟಿ ಜೀವನಂತೆ ಬಾಳಸಬೇಕಾದರೆ ಅವನ ದೇಹ ಊರಬೇಕಾಗುತ್ತದೆ. ಇಂಥ ಸನ್ನಿವೇಶದಲ್ಲಿ ಸಾಮಾನ್ಯ ಮಾನವನಿಗೆ ನೀತಿ ನಿಯಮಗಳ ಅರಿವು ಎಷ್ಟು ದಿವಸ ಉಳಿದೀತು? ಅವನು ಅವುಗಳ ಬಗೆಗೆ ನಿರ್ಲಕ್ಷ್ಯ ಮಾಡುವ ಸಾಧ್ಯತೆಯೇ ಹೆಚ್ಚು. ಮಾನವೀ ಸ್ವಭಾವ ಸಹಜವಾದ ಮಾತೇ ಆಗಿದೆಯೆಂದರೆ ತಪ್ಪಾಗದು. ಹೀಗೆ ಮೊದಲ ಎಂತಹ ಅಡಚಣೆಗಳಲ್ಲಿಯೂ, [illegible] ಗಳಲ್ಲಿಯೂ, ಮಾನವ ಮಾರ್ಗಕ್ಕೆ [illegible] ಇಲ್ಲದಿಲ್ಲ. ಆದರೆ ಅವರ ಸಂಖ್ಯೆ ಬಹಳ ಕಡಿಮೆ.

### ಕಳ್ಳಪೇಟೆ.

ಕಳ್ಳಪೇಟೆಗೆ ಮುಖ್ಯವಾಗಿ ಈ ಕೊರತೆಯೇ ಕಾರಣವಾಗಿರುವುದೆಂದರೆ ತಪ್ಪಾಗದು. ಮತ್ತು ಸಾಕಷ್ಟು ಗಳಿಸುವ ಮೋಹಕತೆಯೂ ಈ ಕಳ್ಳಪೇಟೆಯ ಆಕರ್ಷಣವಾಗಿರುತ್ತದೆ. ಸರಕಾರದಿಂದ ಸಂಗ್ರಹಿತವಾಗಿ ರೇಶನ್ ದ್ವಾರಾ ಸಾರ್ವಜನಿಕರಿಗೆ ಪೂರೈಸಲಾಗುತ್ತಿದ್ದ ಆಹಾರ ಧಾನ್ಯ, ಅರಿವೆಗಳಲ್ಲಿಯೂ, ಈ ಕಳ್ಳಪೇಟೆಯಲ್ಲಿ ದೊರಕುತ್ತಿದ್ದ ಆಹಾರ ಧಾನ್ಯ, ಅರಿವೆಗಳಲ್ಲಿಯೂ, ತುಂಬಾ ವ್ಯತ್ಯಾಸವುಂಟು. ರೇಶನ್‌ದಲ್ಲಿ ದೊರೆಯುತ್ತಿದ್ದ ಆಹಾರ ಧಾನ್ಯಗಳು, ಅರಿವೆ ಮೊದಲಾದವುಗಳು ಅಷ್ಟು ಒಳ್ಳೆಯವಾಗಿರುವದಿಲ್ಲ. 'ಅನಿವಾರ್ಯ ಸಂಧಿಗ್ಧತೆಯೇ ಅನ್ನಗಳನ್ನು [illegible] ರೇಶನ್‌ದಲ್ಲಿ ತುಂಬಾ ಅಲಕ್ಷತೆಯು ಜೀವಿದ್ಯ ಹೋಗಿ, ಆಕರ್ಷಕತೆಯು ಅಳಿದು ಹೋಗಿರುತ್ತದೆ. ಆದರೆ ಕಳ್ಳಪೇಟೆಯ ಆಹಾರಧಾನ್ಯ ಅರಿವೆಗಳು ವ್ಯಾಪಾರದ ಕಾರಣವಾಗಿ ಒಳ್ಳೆಯ ರೀತಿಯಿಂದ ಆರಿಸಿದ, ಕಾದಿಟ್ಟವುಗಳಾಗಿರುವುದರಿಂದ ಆಕರ್ಷಣೆಯು ಅವುಗಳಲ್ಲಿ ಹೆಚ್ಚು. ಹೀಗಾಗಿ ಸಾಮಾನ್ಯ ಜನತೆಯು ಕಳ್ಳಪೇಟೆಗೆ ಬಲಿ ಬೀಳುತ್ತಿದೆ.

### ಎರಡು ಮುಖಗಳು

ಸಾಮಾನ್ಯವಾಗಿ, ಆಹಾರ ಧಾನ್ಯ ಮತ್ತು ಅರಿವೆಗಳು, ಸರಕಾರದ ಸಾರ್ವಜನಿಕರಿಗೆ, ಎರಡು ಮುಖಗಳಿಂದ ದೊರೆಯುತ್ತವೆ. ಒಂದನೆಯದು [illegible] ಸಂಸ್ಥೆಗಳಿಂದ, ಎರಡನೆಯದು [illegible] [illegible] ವ್ಯಕ್ತಿಗಳಿಂದ. [illegible] ಅಸ್ತಿಯ ಅಭಾವದಿಂದ [illegible] ವ್ಯಕ್ತಿಗಳಲ್ಲಿ, [illegible] ಉಳಿದ ಕಡೆಗೆ ವ್ಯಾಪಾರ [illegible] [illegible]. ಆಹಾರ ಧಾನ್ಯ, ಹಾಗೂ ಅರಿವೆಗಳು, [illegible], [illegible] ಕೊರತೆಯು [illegible] ಅಲಕ್ಷತನವು ಬೆಳೆಸುವುದು ಸ್ವಾಭಾವಿಕವಾದ ಮಾತಾಗಿದೆ.

[illegible] [illegible] [illegible] [illegible]. ಹಾಗೂ [illegible] ಹೆಚ್ಚು ಇರುವುದರಿಂದ, [illegible] ಮುಖ್ಯವಾಗಿ [illegible] [illegible] [illegible] [illegible] [illegible], [illegible] [illegible] ಹೋಗುವುದು, [illegible] ಇದರಿಂದ [illegible]. ಒಂದು [illegible] ರೇಶನ್ [illegible] [illegible] [illegible] [illegible] ಬಾಗಿಲಲ್ಲಿ [illegible] [illegible] [illegible] ಅಗಾಗ [illegible] [illegible] [illegible] [illegible] ಬಗ್ಗೆಯೂ ನಾವು ಕೇಳಬಹುದಾಗಿದೆ.

### ಬೇಸರ.

ಇಷ್ಟು ನಿಯಮ ನಿರ್ಬಂಧಗಳಿಗೂ ಒಳಪಟ್ಟು ರೇಶನ್ ಅಂಗಡಿಗೆ ಬಂದು ಆಹಾರಧಾನ್ಯ ಅರಿವೆಗಳನ್ನು ಪಡೆಯುವ ಕೃಷಿಕರು [illegible] ಕಡಿಮೆಯೇನಿಲ್ಲ. ಮೊದಲೇ ಬೇಸರಪಟ್ಟುಕೊಂಡಿದ್ದ ಜನತೆ, 'ತೋಯಿಸಿಕೊಂಡಿದ್ದವನಿಗೆ ಮಳೆಯ ಹೆದರಿಕೆ ಏನು?' ಎಂಬ ನ್ಯಾಯದಂತೆ, ಬೆಲೆ ತುಸು ಹೆಚ್ಚಾದರೂ, [illegible] ದೊರಕುವ, ಹಾಗೂ ಒಳ್ಳೆಯದಿದ್ದ ಆಹಾರ ಧಾನ್ಯ, ಅರಿವೆಗಳ ಈ ಕಳ್ಳಪೇಟೆಗೆ ಬಲಿ ಬೀಳುತ್ತಾರೆ.

ಒಂದು ವೇಳೆ ಯಾರಾದರೊಬ್ಬರು ಈ ಕಳ್ಳಪೇಟೆಯ ಬಗ್ಗೆ ಅಧಿಕಾರಿಗಳಲ್ಲಿ ದೂರು ಒಯ್ಯುವ ಕಾರ್ಯ ಮಾಡಿದರೆ, ಕಾಯದೆಯಂತೆ ಅವರೇ ಎಲ್ಲವನ್ನೂ, ಅಧಿಕಾರಿಗಳವರು ಸಿದ್ಧಪಡಿಸುವ ದೂರಿಗೆ ಬೇಕು. ಹೀಗೆ ಮಾಡಿದರೂ ಕೂಡ ಎಷ್ಟೋ ವೇಳೆ ಅಪರಾಧಿಯು ಅಪರಾಧವು ಸಿದ್ಧವಾಗಲಿಲ್ಲವೆಂದೋ ಅಥವಾ ಇನ್ನಾವ ಕಾರಣದಿಂದಲೋ ಬಿಡುಗಡೆಯಾಗಿ ಅವರ ಮೇಲೆ ಏಕೆ ದೇಶದ ಮಂಗದ ಹೋಗುವ ಉದಾಹರಣೆಗಳೂ ಉಂಟೆಂದು ಹೇಳುತ್ತಾರೆ. ಮೇಲಾಗಿ ಇವೆಲ್ಲ ಪ್ರಯತ್ನ ಮಾಡುವ ಮಟ್ಟದೊಳಕ್ಕೆ ಸಾರ್ವಜನಿಕರು, ಏಕೆ ಹೋಗಬೇಕೆಂದು ಬೇಸರಪಟ್ಟುಕೊಳ್ಳುವುದೂ ಉಂಟು.

### ಪರಿಣಾಮ

ಹೀಗೆ ನಿಯಮ ನಿರ್ಬಂಧಗಳ ಜಟಿಲತೆ, ಅಭಾವದ ಹಾಗೂ ಕೊರತೆಯ ಪ್ರಾಬಲ್ಯ, ಬಿಸಾಸ್ತಿಗಳಿಂದ ಜನಜೀವನದಲ್ಲಿ ಅನೈತಿಕತೆಯು ಬೇರು ಬಿಡುತ್ತಲಿದೆ. ಈ ಬೇರನ್ನು ಕತ್ತರಿಸಲು ಸರಕಾರವೂ, ಧುರೀಣರೂ, ಪ್ರಯತ್ನಿಸುತ್ತಲೂ, ಇದ್ದಾರೆ. ಆದರೆ ಬರೀ ಒಮ್ಮುಖದಿಂದ ಈ ಕಾರ್ಯವು ಇದುವರೆಗೆ ಸಾಧ್ಯವಾಗಿಲ್ಲ. ಸರಕಾರವೂ ಜನತೆಯೂ ಕೂಡಿಯೇ ಪ್ರಯತ್ನಿಸುವಲ್ಲಿ, ಪ್ರಾಮಾಣಿಕತೆಯಿಂದ ಪ್ರಯತ್ನ ಮಾಡುವಲ್ಲಿ, ಈ ಅನೈತಿಕತೆಯು ಅಳಿಯುವುದೇನು [illegible] ಮಾತಾಗಿಲ್ಲ. ಆದರೆ [illegible] [illegible] [illegible] ರದಾಗಿದೆ.

[illegible] [illegible] [illegible] ಒಬ್ಬ ಕಳ್ಳಪೇಟೆಯು [illegible] ಸಾರ್ವಜನಿಕರ [illegible] ಘಾತಕ (ಹರಿಯಾಣಿಕ್ಯ) ತಿಳಿಯದ್ದು [illegible] ಗ್ರಹಿಸಬೇಕಾಗಿದೆ. ಇದೊಂದು ಸಾಧಿಸಿದ್ದವೆಂದೇ ಹೇಳಬೇಕು. ಎಲ್ಲ ಕಡೆಗಳಿಂದ, ನಿದಾನಕ್ಕೆ ಬ್ಯಾಗಿ, ಸಾರ್ವಜನಿಕರ ಜನ ಶಕ್ತಿಯಿಂದ, 'ಅನೈತಿಕತೆ'ಗೆ ಪಟ್ಟ ಬಿಡುತ್ತ, [illegible], ಜನರು ಧೈರ್ಯದಿಂದ [illegible] ಆ ಮಾರ್ಗಕ್ಕೆ ಏರಿದ ರೆಂದು ಅನ್ಯಬೇ [illegible]. [illegible]. ನ್ಯಾಯನಿಷ್ಠತೆಯಿಂದ ಹಾಗೂ [illegible] 'ಅನೈತಿಕತೆ'ಯನ್ನು ಕಠಿಣವಾಗಿ ಶಿಕ್ಷಿಸಬೇಕು. ಈ ಕಾರ್ಯದಲ್ಲಿ ಜನತೆಯೂ ತನ್ನ ಪ್ರಾಮಾಣಿಕ ಬೆಂಬಲವನ್ನು ಕೊಡಬೇಕು. ಹೀಗಾದರೆ 'ಅನೈತಿಕತೆ' ಯ ಭೂತದ ಉಚ್ಚಾಟನೆಯಾಗಿ, ದೇಶವು [illegible] [illegible] [illegible].

'ಜೈಹಿಂದ್.'

---


## ಮಾರಾಟಕ್ಕಿದೆ.

ಸಂಪ-ಜೆಯ ಹಳ್ಳಿಯ ರೋಡಿನಿಂದ ಗ್ರಾಮದಲ್ಲಿದ್ದ ಒಡಿಶೇರಿ [illegible] ರಸ್ತೆಯ 16ನೇ ಮೈಲು ಕಲ್ಲಿನ ಬಳಿ ಇರುವ ಅರು ಎಕರೆ ವ್ಯವಸಾಯದಲ್ಲಿರುವ ಸಾಗಿನ ನೀರಾವರಿ ಭೂಮಿ, ಸುಮಾರು ಎರಡು ಎಕರೆ ಭೂಮಿ ಮಾಡಲು ಅನುಕೂಲವಾದ ಹಡ್ಲು, ದೊಡ್ಡ ರಸ್ತೆಯ ಬಳಿಯಲ್ಲಿ ಎರಡು ಲಗಡಿ ಮನೆ ಬಿದ್ದ ಸೇರಿದ ಮೂರು ಎಕರೆ ತೆಂಗು, ಅಡಿಕೆ ಇದ್ದು ವರ್ಷಕ್ಕೆ ರೂ. 600/—ಉತ್ಪತ್ತಿ ಇರುವ ತೋಟ ಇತ್ತು ಮಾರುತ್ತೇವೆ. ಬೆಲೆ 7,500/— ಯಾ ಸಮೀಪ. ಖರೀದಿದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ವಿಚಾರಿಸಬಹುದು.

ಕೆ. ಎಂ. ಸೋಮಯ್ಯ,
ಹೊದವಾಡ,
ಮಡಿಕೇರಿ.

1-1

# ಕೊಡಗಿನ ಸಂಯೋಜನೆಯ ಮಾತಿಲ್ಲ.

## ಭಾಷಾನುವಾರು ಪ್ರಾಂತ ರಚನೆ ತತ್ಕಾಲಕ್ಕಿಲ್ಲ.

### ಕೊಡಗಿನ ಕಾಂಗ್ರೆಸಿಗರು ಒಗ್ಗಟ್ಟಾಗಬೇಕು.

#### ಸಂಸ್ಥಾನ ಇಲಾಖೆಯ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನರ ಭಾಷಣ

**ಕೆಲವು ವರ್ಷಗಳ ವರೆಗೆ ಭಾಷಾನುವಾರು ಪ್ರಾಂತಗಳ ರಚನೆಯ ಬಗ್ಗೆ ಇಂಡಿಯಾ ಸರಕಾರವು ಕೈಹಾಕುವಂತಿಲ್ಲ. ಹೀಗೆ ಹೊಸ ಪ್ರಾಂತಗಳನ್ನು ರಚಿಸುವದರಿಂದ ಹಿಂದೂ ಒಕ್ಕೂಟದ ಭದ್ರತೆಗೆ ಧಕ್ಕೆ ತಗಲಬಹುದು. ವಿಲೀನೀಕರಣವಾದ ಸಂಸ್ಥಾನಗಳ ಯೂನಿಯನ್ ಪ್ರಾಂತಗಳ ಆಡಳಿತ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಸರಿಗೊಳಿಸುವದೇ ಇಂಡಿಯಾ ಸರಕಾರದ ತತ್ಕಾಲಿಕ ಗುರಿಯಾಗಿದೆ. ಆದುದರಿಂದ ಹೊಸ ಪ್ರಾಂತಗಳನ್ನು ಮಾಡುವದಾಗಲೀ, ಬೇರೆ ಪ್ರಾಂತಗಳ ವಿಲೀನೀಕರಣವಾಗಲೀ ಸದ್ಯ ಕೇಂದ್ರ ಸರಕಾರದಿಂದ ಆಗದು. ಈ ದೆಸೆಯಿಂದ ಕೊಡಗಿನ ಸಂಯೋಜನೆಯ ಮಾತು ಮುಂದಿನ ವರ್ಷಗಳ ವರೆಗೆ ಬರುವಂತಿಲ್ಲ ಎಂಬುದೇ ಶ್ರೀ ಮೆನನರ ಮಡಿಕೇರಿ ಭಾಷಣದ ಸಾರಾಂಶವಾಗಿದೆ.**

---

ಇಂಡಿಯಾ ಸರಕಾರದ ಸಂಸ್ಥಾನ ಇಲಾಖೆಯ ಸೆಕ್ರೆಟರಿಯವರಾದ ಶ್ರೀ. ವಿ. ಪಿ. ಮೆನನ್‌ರವರು ಕೊಡಗಿಗೆ ಈ ತಾ. ೧೧ರಲ್ಲಿ ಬರುವರೆಂಬ ವಾರ್ತೆ ಈ ಮೊದಲು ಪ್ರಕಟವಾಗಿದ್ದರೂ, ಕಾರಣಾಂತರದಿಂದ ಅವರು ಎರಡು ದಿನ ಮುಂಚಿತವಾಗಿಯೇ ಅಂದರೆ ತಾ. ೯ ರ ಸಾಯಂಕಾಲ ಬೆಂಗಳೂರಿನಿಂದ ಮಡಿಕೇರಿಗೆ ಬಂದರು. ಅವರೊಂದಿಗೆ ಅವರ ಪತ್ನಿಯವರೂ ಅವರ ಖಾಸಗಿ ಕಾರ್ಯದರ್ಶಿ ಶ್ರೀ ಅನಂತಕೃಷ್ಣರವರೂ ಬಂದಿದ್ದರು. ಇವರು ಚೀಫ್ ಕಮಿಷನರ ಅತಿಥಿಯಾಗಿ ಮಡಿಕೇರಿ 'ಗೆಸ್ಟ್‌ಹೌಸ್'ನಲ್ಲಿ ಉಳಿದುಕೊಂಡಿದ್ದರು.

ಮರುದಿನ ಬೆಳಗ್ಗೆ ಅವರ ಪತ್ನಿಯವರೂ, ಖಾಸಗಿ ಕಾರ್ಯದರ್ಶಿಯವರೂ ಭಾಗಮಂಡಲ ಮತ್ತು ತಲಕಾವೇರಿಗೆ ಹೋಗಿದ್ದರು. ಶ್ರೀ ಮೆನನ್‌ರವರು ಗೆಸ್ಟ್ ಹೌಸಿನಲ್ಲೇ ಇದ್ದು ಬೆಳಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯ ವರೆಗೂ, ಮಧ್ಯಾಹ್ನ ೨-೩೦ ಗಂಟೆಯಿಂದ ೪ ಗಂಟೆಯ ವರೆಗೂ ಕೊಡಗಿನ ಹಲವು ಮಹನೀಯರಿಗೆ ಸಂದರ್ಶನೆಯ ಅವಕಾಶ ಇತ್ತು ಅವರೊಡನೆ ಮಾತುಕತೆ ನಡೆಸಿದರು. ಹೀಗೆ ಸುಮಾರು ೭೦ ಜನರು ಅವರನ್ನು ಕಂಡರು.

ಮಡಿಕೇರಿಯಲ್ಲಿ ಹಾಜರಿದ್ದ ಎರಡೂ ಪಕ್ಷದ ಎಲ್ಲಾ ಕೌನ್ಸಿಲು ಸದಸ್ಯರನ್ನು ಬೆಳಗ್ಗೆ ೧೧ ಗಂಟೆಗೆ ಕರೆಸಿಕೊಂಡು ಕೊಡಗಿನ ಭವಿಷ್ಯತ್ತು ಮತ್ತು ಆಡಳಿತ ವಿಚಾರಗಳ ಕುರಿತು ಸುಮಾರು ೧½ ಗಂಟೆಯ ಕಾಲ ಚರ್ಚಿಸಿದರು.

ಸಾಯಂಕಾಲ ೪ ಗಂಟೆಗೆ ಕೋಟೆಯಾ ಶೃಂಗರಿಸಲ್ಪಟ್ಟ ಮುಂದುಗಡೆಯ ಅಂಗಳದಲ್ಲಿ ಸಾರ್ವಜನಿಕ ಚಹಪಾನ ಕೂಟವೊಂದು ನಡೆಯಿತು. ಶ್ರೀ. ಮೆನನ್ ಮತ್ತವರ ಪತ್ನಿಯವರಲ್ಲದೆ ಮೇಜರ್ ಜನರಲ್ ಕೆ. ಎಸ್. ತಿಮ್ಮಯ್ಯನವರು ಮತ್ತವರ ಪತ್ನಿಯವರೂ, ಕೊಡಗಿನ ಹಲವು ಉದ್ಯೋಗಸ್ಥರು ಮತ್ತು ಉದ್ಯೋಗಸ್ಥರಲ್ಲದ ಪ್ರಮುಖರೂ ಸೇರಿ ಸುಮಾರು ೩೦೦ ಜನರು ಹಾಜರಿದ್ದರು.

ಸತ್ಕಾರ ಕೂಟದ ಪ್ರಾರಂಭದಲ್ಲಿ ಚೀಫ್ ಕಮಿಷನರಾದ ಮುದಲಿಯಾರವರು ಶ್ರೀ. ಮೆನನ್ ದಂಪತಿಗಳಿಗೆ ಸ್ವಾಗತ ಬಯಸಿ ಸ್ವಾತಂತ್ರ್ಯವು ದೊರೆತ ಮೇಲೆ ಕೊಡಗಿನಲ್ಲಿ ಸರಕಾರವು ಮಾಡಿರುವ ಕೆಲಸ ಕಾರ್ಯಗಳನ್ನು ಸೂಕ್ಷ್ಮವಾಗಿ ವಿವರಿಸಿ ಚಿಕ್ಕದೊಂದು ಭಾಷಣ ಮಾಡಿದರು.

ಶ್ರೀ. ಮೆನನ್‌ರವರು ಇದಕ್ಕೆ ಉತ್ತರವೀಯುತ್ತಾ "ಇಲ್ಲಿ ಭಾಷಣ ಮಾಡುವದು ಅನಿರೀಕ್ಷಿತವಾಗಿದೆ. ಕೊಡಗನ್ನು ನೋಡಬೇಕೆಂಬ ಕುತೂಹಲವು ಹಲವು ವರ್ಷಗಳಿಂದ ನನಗಿದ್ದರೂ ಅದು ಈಗ ಈಡೇರಿರುವದಕ್ಕೆ ನಾನು ಸಂತೋಷಪಡುತ್ತೇನೆ. ಮೈಸೂರಿನಿಂದ ಕಾರಿನಲ್ಲಿ ಬರುತ್ತಿರುವಾಗಲೇ ಕೊಡಗಿನ ಗತಿಯು ಸಮೀಪಿಸುತ್ತಾ ಒಂದು ಶಾಂತಿಯುತ ಶೀತಪ್ರದೇಶಕ್ಕೆ ಬರುತ್ತಿರುವ ಭಾವನೆ ನನ್ನ ಅನುಭವಕ್ಕೆ ಬಂದಿತು. ಹಾಗೆಯೇ ಮಡಿಕೇರಿಗೆ ತಲುಪಿದ ನಂತರ ನನ್ನ ಸ್ವಾನುಭಾವ ನಿಜವಾಯಿತು. ಪ್ರಕೃತಿಯ ವೈಭವದಿಂದ ತುಂಬಿ ತುಳುಕುತ್ತಿರುವ ನಿಮ್ಮ ಈ ದೇಶವು ಸ್ವರ್ಗಸಮಾನವಾಗಿದೆ. ನೀವೆಲ್ಲರೂ ಕೊಡಗಿನ ಭವಿಷ್ಯದ ವಿಚಾರ ತಿಳಿಯಲು ಬಹಳ ಕುತೂಹಲದಿಂದ ಇರುವಿರೆಂಬುದು ನನಗೆ ಗೊತ್ತಿದೆ. ಡಿಸೆಂಬರ್ ನವಂಬರ್ ತಿಂಗಳಲ್ಲಿ ನಿಮ್ಮ ಪ್ರತಿನಿಧಿಗಳೊಡನೆ ನಡೆದ ಸಮ್ಮೇಳನದ ನಂತರ ಇಂಡಿಯಾ ಸರಕಾರವು ಒಂದು ತೀರ್ಮಾನವನ್ನು ನಿಮಗೆ ತಿಳಿಸಿದೆ. ಇನ್ನು ಕೆಲವು ವರ್ಷಗಳ ವರೆಗೆ ನಿಮ್ಮ ಕೊಡಗಿನ ಆಡಳಿತ ಕ್ರಮವು ಈಗಿರುವಂತೆಯೇ ಮುಂದುವರಿಯುವದೇ ಆ ತೀರ್ಮಾನವಾದ ಕೇಂದ್ರ ಸರಕಾರಕ್ಕೆ ಕೊಡಲು ಬೇಕಾದ ಪರಿಹಾರ ಮತ್ತು ಮಹತ್ವದ ಕಾರ್ಯಗಳಿವೆ. ಆಂಧ್ರ ಪ್ರಾಂತ ನಿರ್ಮಾಣವನ್ನು ತೀರ್ಮಾನಿಸಿದ್ದರೂ ಕೆಲವು ವರ್ಷಗಳ ವರೆಗೆ ಭಾಷಾವಾರು ಪ್ರಾಂತರಚನೆಯ ಬಗ್ಗೆ ಇಂಡಿಯಾ ಸರಕಾರದವರು ಕೈಹಚ್ಚಲಾರರೆಂಬುದು ಖಂಡಿತ. ಅದರಲ್ಲೂ ಹೈದರಾಬಾದ್, ಮುಂಬಾಯಿ, ಮದ್ರಾಸ್ ಕರ್ನಾಟಕ ಭಾಗಗಳನ್ನೊಳಗೊಂಡ ಕರ್ನಾಟಕ ಪ್ರಾಂತ್ಯದ ನಿರ್ಮಾಣದ ಸಂಭವವು ಈಗಿನ ಇರುವ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಹೀಗೆ ಹೊಸ ಪ್ರಾಂತ ರಚನೆಗೆ ಪ್ರಯತ್ನಿಸುವದನ್ನು ಎಲ್ಲಿ ನಿಲ್ಲಿಸಬೇಕಾಗುವುದೆಂಬುದು ಕಷ್ಟದ ವಿಷಯವಾಗುವದು. ಅದಲ್ಲದೆ ಈಗಾಗಲೇ ವಿಲೀನಗೊಳಿಸಿರುವ ಸಂಸ್ಥಾನಗಳ ಆರ್ಥಿಕ ಹಾಗೂ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿ ಒಂದು ಸ್ಥಿರವಾದ ರೂಪಕ್ಕೆ ತರುವದೇ ಇಂಡಿಯಾ ಸರಕಾರದ ತತ್ಕಾಲದ ಗುರಿಯಾಗಿದೆ. ಕೂಡಲೇ ಭಾಷಾವಾರು ಪ್ರಾಂತಗಳನ್ನು ಮಾಡುವದರಿಂದ ಕೇಂದ್ರ ಸರಕಾರದ ಭದ್ರತೆಗೆ ಅಪಾಯ ತಟ್ಟಬಹುದೆಂಬ ಸಂಶಯವು ಕೂಡಾ ಇದೆ.

ಕೊಡಗನ್ನು ಬೇರೆ ಪ್ರಾಂತಕ್ಕೆ ಸಂಯೋಜಿಸುವ ಮಾತು ಕೆಲವು ವರ್ಷಗಳವರೆಗೆ ಇಲ್ಲವೆಂಬುದು ಇಂಡಿಯಾ ಸರಕಾರದ ತೀರ್ಮಾನದಿಂದ ಸ್ಪಷ್ಟವಾಗಿದೆ. ಅಂದ ಮೇಲೆ ಕೊಡಗಿನ ಭವಿಷ್ಯತ್ತಿನ ವಿಚಾರ ಕೊಡಗಿನಲ್ಲಿರುವ ಎರಡು ಪಂಗಡಗಳೊಳಗೆ ಇರುವ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲವೆಂದಾಯಿತು. ಇದರ ಕಾರಣ ಕೊಡಗಿನ ಕಾಂಗ್ರೆಸಿನ ಈ ಎರಡು ಪಂಗಡಗಳು ಒಗ್ಗಟ್ಟಾಗಿ ಕೊಡಗಿನ ಮುಂದಿನ ಹಿತದೃಷ್ಟಿಯಿಂದ ಆಡಳಿತಕ್ರಮವನ್ನು ಕುರಿತು ಸೂಚನೆಗಳನ್ನು ಮಾಡುವುದು ಯೋಗ್ಯವಾಗಿದೆ. ಈ ದಿನ ನನ್ನನ್ನು ಹಲವರು ಭೇಟಿಯಾದರು. ಅವರು ನನ್ನೊಂದಿಗೆ ಪುಕಾರುಗಳನ್ನೇ ಹೇಳಿದರೆ ವಿನಾ ರಚನಾತ್ಮಕ ಯೋಜನೆಯನ್ನು ಸೂಚಿಸಲಿಲ್ಲ. ಕೊಡಗಿನ ಅಭಿವೃದ್ಧಿಯನ್ನು ಸಾಧಿಸುವುದು ನಿಮ್ಮೆಲ್ಲರ ಕರ್ತವ್ಯ. ಇದಕ್ಕಾಗಿ ನೀವೆಲ್ಲರೂ ವೈಮನಸ್ಸನ್ನು ಬಿಟ್ಟು ಒಗ್ಗಟ್ಟಾಗುವುದು ಯೋಗ್ಯವಾಗಿದೆ. ಹಿಂದಿನಿಂದ ಬಂದಿರುವ ಕೊಡವ ಪ್ರಕೃತಿಯ ಐಶ್ವರ್ಯದಿಂದ ತುಂಬಿದ ಈ ದೇಶವನ್ನು ಇಲ್ಲಿನ ಪಂಗಡಗಳು ಒಗ್ಗಟ್ಟಾಗಿ ಅಭಿವೃದ್ಧಿಗೊಳಿಸಿದರೆ ಇದೊಂದು ಸ್ವರ್ಗವಾಗುವುದು.

ಸಂಯುಕ್ತ ಪ್ರಾಂತ್ಯದಷ್ಟು ದೊಡ್ಡದಾದ ಪ್ರಾಂತ್ಯವಾಗಲೀ ನಿಮ್ಮ ಕೊಡಗಿನಷ್ಟು ಚಿಕ್ಕದಾದ ಪ್ರಾಂತ್ಯವಾಗಲೀ ಇರುವುದರ ಬದಲು ಮಧ್ಯ ತರಗತಿಯ ಸಾಧಾರಣ ಚಿಕ್ಕ ಪರಿಮಾಣದ ಪ್ರಾಂತ್ಯವೇ ಯುಕ್ತವಾದದ್ದೆಂದು ನನ್ನ ಅಭಿಪ್ರಾಯ. ಹೇಗೂ ಕಡೆಗೆ ಕರ್ನಾಟಕ ಪ್ರಾಂತ್ಯವಾದಾಗಲೆ ಕೊಡಗು ಅದರ ಒಂದು ಭಾಗವಾಗುವುದೆಂದು ನನಗನಿಸುತ್ತದೆ. ಆದರೆ ಈ ಕಾರ್ಯವು ಶೀಘ್ರದಲ್ಲಿ ಜಾರಿಗೆ ಬರುವ ಹಾಗೆ ಘಟಿಸಬಹುದು. ಇಲ್ಲಿಯ ಜನರ ಅಭಿಪ್ರಾಯವಿಲ್ಲದೆ ಬೇರೆಯವರ ಮಾತಿನಂತೆ ನಿಮ್ಮ ಪ್ರಾಂತ್ಯದ ಜನರಿಗೆ ಹಿತಕರವಾದ ಸರಕಾರವನ್ನು ನೀವು ನಡೆಸಿದ್ದೇ ಆದರೆ ನಿಮ್ಮ ಗೋಂಜಿ[illegible] ಕೊಡಗಿನವರು ಇಲ್ಲಿಂದ ಹೊರಗೆ ಹೋದರೆ ಎಲ್ಲಾ ವಿಧಗಳಲ್ಲಿ ಜಯಶೀಲರಾಗುತ್ತಾರೆ. ಅವರ ಮೇಲೆಯೂ ಇದರ ಕೀರ್ತಿ ತಮ್ಮ ಪ್ರಾಂತ್ಯದೊಳಗೂ ಬೆಳಗಿಸಿಕೊಳ್ಳುತ್ತಾರೆ! ಇಲ್ಲಿಯವರು ಒಗ್ಗಟ್ಟಾಗಿ ಕೇಳಿದರೆ ಇಂಡಿಯಾ ಸರಕಾರದವರು ಯಾವ ನ್ಯಾಯವಾದ ಕೋರಿಕೆಗಳನ್ನಾಗಲೀ ತಳ್ಳಿಹಾಕರು.

ದೊಡ್ಡ ಉದ್ಯೋಗಸ್ಥರ ವರ್ಗಾವಣೆಯು ದಕ್ಷತೆಯ ಆಡಳಿತ ದೃಷ್ಟಿಯಿಂದ ಅಗತ್ಯವಾಗಿದೆ. ಇದಕ್ಕೆ ಬೇಕಾದ ಏರ್ಪಾಡುಗಳನ್ನು ನೆರೆಪ್ರಾಂತ್ಯದ ಸರಕಾರಗಳೊಂದಿಗೆ ಮಾಡಿಕೊಳ್ಳಬಹುದು. ಈ ದಿನ ನೀವೆಲ್ಲರೂ ಸೇರಿ ಈ ಉತ್ತಮವಾದ ಸತ್ಕಾರ ಕೂಟವನ್ನೇರ್ಪಡಿಸಿ ನನ್ನ ಪತ್ನಿ ಮತ್ತು ನನ್ನನ್ನು ಬರಮಾಡಿಸಿದ್ದಕ್ಕಾಗಿ ನಾವಿಬ್ಬರೂ ನಿಮಗೆ ವಂದಿಸುತ್ತೇವೆ."

ಹಿರಿಯ ಕೀರ್ತಿಗಳಾದ ಮೇಲೆ ಅಸಿಸ್ಟೆಂಟ್ ಕಮಿಷನರು ಶ್ರೀ ಮೆನನ್‌ರವರಿಗೆ ನೆರೆದಿದ್ದ ಮಾನ್ಯರ ಮತ್ತು ಮಹಿಳೆಯರ ಪರಿಚಯ ಮಾಡಿಕೊಟ್ಟರು.

ಸಾಯಂಕಾಲ ೬-೩೦ ವರೆ ಗಂಟೆಯಿಂದ ೭ ವರೆ ಗಂಟೆಯವರೆಗೆ ಬಲಮುರಿ ಗ್ರಾಮಸ್ಥರ ಕಲಾವಿದರ 'ಕೋಲಾಟ' ನಡೆಯಿತು. ಜನರು ನೋಡಲಿಕ್ಕೆ ಕಿಕ್ಕಿರಿದು ನೆರೆದಿದ್ದರು. ಅಂತ್ಯದಲ್ಲಿ ಶ್ರೀ ಮೆನನ್‌ರವರು ಹಿಂದಿಯಲ್ಲಿ ಭಾಷೆಯಲ್ಲಿ ಮಾತಾಡುತ್ತಾ "ಕೋಲಾಟದ ಮೇಳಕ್ಕೆ ಸೇರಿದ ಈ ಸ್ತ್ರೀಯರೂ ಪುರುಷರೂ ಆಡಿದ ನೃತ್ಯ ಈ ಕಲೆ ತನ್ನನ್ನು ಅನಿರೀಕ್ಷಿತವಾಗಿ ನೋಡುವ ಪ್ರಾಪ್ತಿ ಲಭಿಸಿದ್ದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ. ಯಾವ ದೇವಾಂಗಳ ಸ್ತೋತ್ರಕ್ಕಾಗಿ ಈ ಕುಣಿತವನ್ನು ಅಭಿನಯಿಸಿದರೋ ಆ ದೇವತೆಗಳು ನಿಮಗೆ ಆಶೀರ್ವದಿಸಲಿ" ಎಂದು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಮರುದಿನ ಬೆಳಗ್ಗೆ ಸುಮಾರು ೧೧ ಗಂಟೆಗೆ ಶ್ರೀ ಮೆನನ್ ಪಾರ್ಟಿಯವರು ಚೀಫ್ ಕಮಿಷನರು ಮೊದಲಾದ ಉದ್ಯೋಗಸ್ಥರೊಡನೆ ಮಡಿಕೇರಿಯಿಂದ ಹೊರಟು ಮೂರ್ನಾಡು ವೀರಾಜಪೇಟೆ ಗೋಣಿಕೊಪ್ಪಲು ದಾರಿಗಾಗಿ ಮೈಸೂರಿಗೆ ಹೋದರು. ದಾರಿಯಲ್ಲಿ ಕೆಲವು ಗ್ರಾಮ ಮನೆಗಳನ್ನು ನೋಡಿದರು. ಅಲ್ಲದೆ ಮೂರ್ನಾಡಿನಲ್ಲಿಯೂ, ವೀರಾಜಪೇಟೆಯಲ್ಲಿಯೂ ಜನರು ಸೇರಿ ಪರಿಗೆ ಮಾಲಿಕ ಹಾರಗಳನ್ನು, ಕಾಣಿಕೆ ಹಣ್ಣುಹಂಪಲುಗಳನ್ನು ಕೊಟ್ಟು ಪತ್ರಿಕೆಯಲ್ಲದ ಚಿಕ್ಕ ಬಿನ್ನಹ ಪತ್ರಗಳನ್ನು ಅರ್ಪಿಸಿದರು. ಮೂರ್ನಾಡಿನಲ್ಲಿ ಶ್ರೀ ಕೆ. ಎಂ. ಮೊಣ್ಣಪ್ಪನವರೂ ವೀರಾಜಪೇಟೆಯಲ್ಲಿ ಶ್ರೀ ಎಸ್. ಸಿ. ಚಿ. [illegible]ಪ್ಪನವರೂ ಬಿನ್ನಹ ಪತ್ರಗಳನ್ನೋದಿದರು. ಕೊಡಗನ್ನು ಇಲ್ಲಿಯ ಜನರ ಅಭಿಪ್ರಾಯದಂತೆ ಪ್ರತ್ಯೇಕವಾಗಿಟ್ಟು ಇರುವುದಕ್ಕಾಗಿ ಶ್ರೀ ಮೆನನ್‌ರವರನ್ನು ವಂದಿಸಿದ್ದಲ್ಲದೆ ಕೂಡಲೇ ಕೊಡಗಿನ ನ್ಯಾಯವಿಧಾಯಕ ಸಭೆಗೆ ಹೊಸ ಚುನಾವಣೆ ನಡೆಸುವಂತೆಯೂ ಇಂಡಿಯಾ ಪಾರ್ಲಿಮೆಂಟು ಸಭೆಗೆ ಇಲ್ಲಿಯ ಪ್ರತಿನಿಧಿಯನ್ನು ಚುನಾವಣೆಯಾಗಿ ಕಳುಹಿಸುವಂತೆಯೂ ಅವಕಾಶ ಮಾಡಿಕೊಡಬೇಕೆಂದು ಹೊಸ ಜನ ಸಹಕಾರಿಗಳು ಇಲ್ಲಿಯ ಕಾಡಿನ ಹೆಚ್ಚಿಗೆಯೂ ಮತ್ತು ಸೂರಿ[illegible]ಗಳನ್ನು ತರಿಸಿಕೊಂಡು ಮಾಡುವಂತೆ ಸಹಾಯ ಮಾಡಬೇಕಾಗಿ ಅವರು ಕೇಳಿಕೊಂಡರು. ಶ್ರೀ ಮೆನನ್‌ರವರು ಬಿನ್ನಹ ಪತ್ರಗಳಿಗೆ ಉತ್ತರ ಕೊಡುತ್ತಾ ಸ್ವಾಗತಕ್ಕೆ ಜನರನ್ನು ವಂದಿಸಿ, ಹೊಸ ಘಟನೆಯು ಬಂದಮೇಲೆ ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಿಮ್ಮದೇಶವನ್ನು ಎಂದಿಗೂ ಸಂಯೋಜನೆ ಮಾಡಲಾಗುವುದಿಲ್ಲ. ಎಲ್ಲಾ ಜನರ ಅಭಿಪ್ರಾಯದಂತೆಯೇ ನಡೆಯಲಾಗುವುದೆಂದು ಹೇಳಿ ನ್ಯಾಯವಾದ ಈ ನಿಮ್ಮ ಕೋರಿಕೆಗಳನ್ನು ಗೃಹ ಮಂತ್ರಿಯವರಾದ ಸರದಾರ್ ಪಟೇಲರವರು ಪರಿಶೀಲಿಸುವರೆಂದು ಭರವಸೆಯಿತ್ತರು.

# ಕೊಡಗು

ತಾ. ೧೩-೧-೧೯೫೦ನೇ ಶುಕ್ರವಾರ

## ಕೊಡಗಿನ ಭವಿಷ್ಯ.

ಕೊಡಗಿನ ಭವಿಷ್ಯತ್ತಿನ ವಿಚಾರ ದೇಶದಲ್ಲಿ ಹಲವು ವರ್ಷಗಳಿಂದಲೇ ಚಳವಳ ನಡೆಯುತ್ತಿದೆ. ಈ ವಿಚಾರದಲ್ಲಿ ಜನರಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳಿದ್ದರೂ ಮುಖ್ಯವಾಗಿ ಕೊಡಗನ್ನು ಮದರಾಸ್ ಅಥವಾ ಮೈಸೂರಿಗೆ ಸೇರಿಸದೆ ಸ್ವತಂತ್ರವಾಗಿಟ್ಟು ಕೇಂದ್ರ ಸರಕಾರ ಸರಕಾರ ನಡೆಯಬೇಕೆನ್ನುವ ಪಕ್ಷವೊಂದು, ಕೊಡಗನ್ನು ಕೂಡ್ಲೆ ಪ್ರಾಂತಕ್ಕೆ ಅಂದರೆ ಇತ್ತೀಚೆಗೆ ವ್ಯವಹಾರಿಕವಾಗಿ ಸೇರಿಸಬೇಕೆಂಬ ದೇಶದ ಕಲ್ಯಾಣವಾಗುವದೆನ್ನುವ ಇನ್ನೊಂದು ಪಕ್ಷ. ಹೀಗೆ ಎರಡು ಪಕ್ಷಗಳು ಒಡೆದು ಕಾಣುತ್ತಿದ್ದವು. ಈ ಎರಡು ಪಕ್ಷಗಳು ದೇಶದಲ್ಲಿ ಹಲವು ಸಭೆಗಳನ್ನು ನಡೆಸಿ ಅಲ್ಲಿಯ ತೀರ್ಮಾನಗಳನ್ನೂ, ವಿಜ್ಞಾಪನಾ ಪತ್ರಗಳನ್ನೂ ಇಂಡಿಯಾ ಸರಕಾರಕ್ಕೆ ಕಳುಹಿಸುತ್ತಾ ಬಂದವು. ಈ ವಿಚಾರವನ್ನು ಬಗೆಹರಿಸುವ ದೃಷ್ಟಿಯಿಂದ ಇಂಡಿಯಾ ಸರಕಾರದ ಗೃಹ ಮಂತ್ರಿಯವರು ಕೊಡಗಿನ ಹತ್ತು ಪ್ರತಿನಿಧಿಗಳನ್ನು ಕರೆಸಿಕೊಂಡು ಕಳೆದ ನವಂಬರ್ ತಿಂಗಳು ೧೭ರಲ್ಲಿ ದಿಲ್ಲಿಯಲ್ಲಿ ಒಂದು ಚಿಕ್ಕ ಸಮ್ಮೇಳನವನ್ನು ನಡೆಸಿದರು. ಈ ಸಮ್ಮೇಳನದ ಚರ್ಚೆಯ ವಿವರಗಳನ್ನು, ಈ ಮೊದಲು ದೇಶೀಯರು ಮಾಡಿದ್ದ ಕೋರಿಕೆಗಳನ್ನೂ ಕೂಲಂಕಷವಾಗಿ ಪರ್ಯಾಲೋಚಿಸಿ ಕೊಡಗಿನ ಆಡಳಿತವನ್ನು ಕೆಲವು ಕಾಲದವರೆಗೆ ಹೀಗೆಯೇ ಪ್ರತ್ಯೇಕವಾಗಿಟ್ಟು ನೋಡುವ [illegible] ಇಂಡಿಯಾ ಸರಕಾರದವರು ತೀರ್ಮಾನವನ್ನು ಕೊಟ್ಟರು. ಆದರೆ ಈ ತೀರ್ಮಾನದಿಂದ ಕೊಡಗಿನ ಭವಿಷ್ಯತ್ತು ಸ್ಪಷ್ಟವಾಗಿಲ್ಲ. ಕೆಲವು ದಿವಸಗಳಲ್ಲೇ ಇದನ್ನು ಮೈಸೂರಿನೊಂದಿಗೆ ಸಂಯೋಜನೆ ಮಾಡಿ ಬಿಡುವ ಸಂದರ್ಭ ಕಾಣ ಇದೆಯೆಂದು ಕೆಲವರು ಆಶ್ಚರ್ಯ ಪಡುತ್ತಿದ್ದಾರೆ.

ಇವರಲ್ಲಿನ ಈ ಸಂಶಯಗಳನ್ನು ಪರಿಹರಿಸಲೋಸುಗವೋ ಎಂಬಂತೆ ಸರ್ದಾರ್ ಪಟೇಲ್‌ರವರು ಕೇಂದ್ರ ಶಾಸನ ಸಭೆಯಲ್ಲಿ ಸೆಂಟ್ರಲ್ ಪ್ರೊವಿನ್ಸ್ ಮುಖಾಂತರ ನ್ನು ಚರ್ಚೆಗೆ ತಂದಾಗ್ಯೂ "ಕೇಂದ್ರ ಸರಕಾರದ ಸಂಸ್ಥಾನವಲ್ಲದ ಯಾವದೇ ಕೇಂದ್ರಾಡಳಿತ ಭಾಗವನ್ನು ನೆರೆಯ ಪ್ರಾಂತದ ಸಂಸ್ಥಾನದೊಡನೆ ಸಂಯೋಜನೆ ಮಾಡುವ ಸೂಚನೆಯನ್ನು ಆಲೋಚಿಸಲಾಗಿಲ್ಲ" ಎಂದು ತಾ. ೨೪-೧೨-೪೯ರಲ್ಲಿ ಸ್ಪಷ್ಟವಾಗಿ ಹೇಳಿದರು. ಇಂಥಾ ಸ್ಪಷ್ಟ ಹೇಳಿಕೆಯನ್ನು ಪತ್ರಿಕೆಗಳಲ್ಲಿ ಓದಿದರೂ ಇಂಥ ಸಂಶಯ ಹೊಂದಿರುವ ನನ್ನಲ್ಲಿ ಕೆಲವರನ್ನು ಒಪ್ಪಿಸಲಿಲ್ಲ. ಆದ್ದರಿಂದ ಎರಡು ಪಕ್ಷಗಳೂ ಸರಿಯಾಗಿ ಸಂಧಾನ ಮಾಡಿಕೊಳ್ಳಬೇಕೆನ್ನುವುದು ಸರ್ವಸಮ್ಮತ. ಇದೀಗ ಹಿಂದೆ ಪಕ್ಷಗಳಾಗಿ ದುಡಿದ ಹಿರಿಯರು, ಸಮಸ್ಯೆಗಳ ಬಗ್ಗೆ ಚರ್ಚಿಸಲು ಒಂದು ಸಭೆ ಸಮ್ಮೇಳನವನ್ನು ಅಧ್ಯಕ್ಷರಾಗಿ

ಶ್ರೀ ಬಿ. ಪಿ. ಮೇನನ್‌ರವರು ತಮ್ಮ ಮಧ್ಯಸ್ಥಿಕೆಯನ್ನು ನೀಡಲು ಬಂದರು. ಇವರು ತಾರೀಖು ೧೦ರಲ್ಲಿ ಮಡಿಕೇರಿಯಲ್ಲಿ ಕೊಟ್ಟ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತಾ ಕೊಡಗಿನ ಸಂಯೋಜನೆಯ ಮಾತು ಈಗ ಕೈ ಇಲ್ಲದಾಗಿರುವದರಿಂದ ಇನ್ನಾದರೂ ಇಲ್ಲಿಯವರು ಒಗ್ಗಟ್ಟಾಗಿ ಕೊಡಗಿನ ಆಡಳಿತ ರೀತಿಯನ್ನು ದೇಶದ ಹಿತದೃಷ್ಟಿಯಿಂದ ಹೇಗೆ ನಡೆಸಬೇಕೆಂಬುವದಕ್ಕೆ ರಚನಾತ್ಮಕ ಸೂಚನೆಗಳನ್ನು ಮಾಡುವದು ಯೋಗ್ಯವೂ ಅವಶ್ಯವೂ ಇದೆಯೆಂದು ವಿಶದವಾಗಿ ಅಪೀಲು ಮಾಡಿದರು. ಆದುದರಿಂದ ಕೆಲವರ ಮನಸ್ಸಿನಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಸಂಶಯಗಳು ಇನ್ನಾದರೂ ನಿವಾರಣೆಯಾಗಬೇಕು.

ಈ ತಾರೀಖು ೨೬ಕ್ಕೆ ಜಾರಿಯಲ್ಲಿ ಬರುವ ಭಾರತದ ಹೊಸ ಘಟನೆಯು ನಂತರ ಜನರ ಅಭಿಪ್ರಾಯವನ್ನು ಉಲ್ಲಂಘಿಸುವ ಸಾಧ್ಯತೆಯು ಯಾವ ಸರಕಾರಕ್ಕೂ ಇಲ್ಲವೆಂದಲೂ, ಸಂಯೋಜನಾ ಪ್ರಶ್ನೆಯು ಈಗ ಇಲ್ಲವೆಂದಲೂ ಮುಖ್ಯತಃ ಕೊಡಗಿನ ಕಾಂಗ್ರೆಸ್ ಕೆಲಸಗಾರರೂ ಸಾರ್ವತ್ರಿಕವಾಗಿ ದೇಶೀಯರೆಲ್ಲರೂ ಕೊಡಗಿನ ಭವಿಷ್ಯದ ವಿಚಾರವಾಗಿ ಈ ಮೊದಲು ತಮ್ಮೊಳಗಿದ್ದ ಭಿನ್ನಾಭಿಪ್ರಾಯ ವಾತ್ಸ್ಯ ವೈಷಮ್ಯಗಳನ್ನು ಮರೆತು ಒಗ್ಗಟ್ಟಾಗಿ ದೇಶದ ಹಿತದೃಷ್ಟಿಯಿಂದ ಇಲ್ಲಿಯ ಸರಕಾರವನ್ನು ಯಾವ ರೀತಿ ರೂಪಿಸಿಕೊಳ್ಳಬೇಕು ಎಂಬ ಬಗ್ಗೆ ಶ್ರೀ ಮೇನನ್‌ರವರು ಅಪೀಲು ಮಾಡಿಕೊಂಡಂತೆ ಕೈ ಹಚ್ಚುವದೇ ಪ್ರಧಾನ ಕರ್ತವ್ಯವಾಗಿದೆ. ನಾವು ಪ್ರಾರಂಭದಿಂದಲೇ ಹೇಳುತ್ತಾ ಬಂದಂತೆ ದೇಶದ ಭವಿಷ್ಯತ್ತು ದೇಶೀಯರ ಕೈಯಲ್ಲಿಯೇ ಇದೆಯೆಂಬುದು ಸ್ಪಷ್ಟವಾಗಿದೆ.

ಇನ್ನೇ ಅಧಿಕಾರಯುಕ್ತ ವಾಣಿಗಳೂ ಸಾರಿ ಹೇಳುತ್ತಿವೆ. ಜನರ ಅಭಿವೃದ್ಧಿ ದೃಷ್ಟಿಯಿಂದ ಯಾವ ರೀತಿಯ ಸರಕಾರ ಪದ್ಧತಿಯು ಬೇಕೆಂಬುದನ್ನು ನಿರ್ಧರಿಸಿಕೊಳ್ಳುವಂಥಾ ಹಕ್ಕು ಜನರಿಗೆ ದೊರೆತಿದೆ. ಜನರು ಒಗ್ಗಟ್ಟಾದರೆ ಇದು ಸುಲಭವಾಗುವದು. ಇದರಿಂದ ದೇಶವು ದಿನೇ ದಿನೇ ಮುಂದರಿಯುವದರಲ್ಲಿ ಸಂದೇಹವಿಲ್ಲ. ಬದಲು ಸಾರ್ವಜನಿಕ ಕೆಲಸಗಾರರು ತಮ್ಮ ಚಿಕ್ಕ ಚಿಕ್ಕ ಭಿನ್ನಾಭಿಪ್ರಾಯಗಳನ್ನು ಬಿಡಲಾರದೆ ಒಗ್ಗಟ್ಟಿಗೆ ಅಡ್ಡ ಬಂದರೆ ದೇಶದ ಮುಂದಿನ ಸ್ಥಿತಿಯು ಸುಖಶಾಂತಿದಾಯಕವಾಗದು. ದೇಶಕ್ಕೆ ಅತ್ಯಮೂಲ್ಯವಾದ ಸೇವೆಯನ್ನು ಸಲ್ಲಿಸಲು ಒದಗಿರುವ ಈ ಸುಸಂಧರ್ಭವನ್ನು ದೇಶದ ಮುಂದಾಳುಗಳು ಯಾರೂ ಅನ್ಯರು ಕಳಕೊಳ್ಳಲಿಕ್ಕಿಲ್ಲವೆಂದು ಆಶಿಸುತ್ತೇವೆ.

## ವರ್ತಮಾನ.

ಕಳೆದ ತಿಂಗಳಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಶ್ರೀ ನಾಯಕ ಚಂಗಪ್ಪನವರಿಗೆ ೯-೧ ೫೦ರಲ್ಲು ವೀರಾಜಪೇಟೆ ಹೈಸ್ಕೂಲ್ ವಿದ್ಯಾರ್ಥಿಗಳೂ ಅಧ್ಯಾಪಕರೂ ಸೇರಿ ಬೀಳ್ಕೊಡುವುದಕ್ಕಾಗಿ ಅಂದು ತಿಂಡಿಯೊಂದಿಗೆ ಮರ್ಯಾದೆ ಮಾಡಿದರು.

ನಿವೃತ್ತ ಉಪಾಧ್ಯಾಯರಾದ ಗವಾಳಿ ಗ್ರಾಮದ ಶ್ರೀ ಬಿದ್ದಂಡ ಕಾರ್ಯಪ್ಪನವರು ತಮ್ಮ ೮೫ನೇ ವಯಸ್ಸಿನಲ್ಲಿ ತಾ ೫-೧-೫೦ ರಲ್ಲು ನಿವೃತ್ತ ಪೊಲೀಸ್ ಹೆಡ್ ಕಾನ್‌ಸ್ಟೇಬಲರಾದ ಶ್ರೀ ಅಪ್ಪನೆರವಂಡ ಅಚ್ಚಪ್ಪನವರು ತಮ್ಮ ೭೩ನೇ ವಯಸ್ಸಿನಲ್ಲೂ ಶಿವಾಧೀನರಾದರು

ತಾ. ೯-೧-೫೦ರಿಂದ ಬ್ರಾಹ್ಮಣಕೇರಿಯಲ್ಲಿರುವ ಶ್ರೀ ರಾಮಾಂಜನೇಯ ದೇವಸ್ಥಾನದಲ್ಲಿ ಶ್ರೀ ಪಿ ಕೆ. ಗುರುರಾಯರು ಹತ್ತು ದಿನ ಸಾಯಂಕಾಲ ಹಿಂದೀ ಕೀರ್ತನೆಗಳನ್ನು ನಡೆಸುತ್ತಿರುವರು

ಮೇಜರ್ ಜನರಲ್ ತಿಮ್ಮಯ್ಯನವರು ರಜೆಯಲ್ಲಿ ಕೊಡಗಿಗೆ ಬಂದಿರುವರು

ಮದ್ರಾಸ್ ವಿಶ್ವವಿದ್ಯಾಲಯದ ಎಂ ಬಿ ಬಿ ಎಸ್ ಪರೀಕ್ಷೆಯಲ್ಲಿ ಶ್ರೀ ಕೊಡಂಡ ಎಂ. ದೇವಯ್ಯನವರೂ, ತೇರ್ಗಡೆಯಾಗಿರುವರು

ಇಂಡಿಯಾ ಸರಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ವಿ ಪಿ ಮೇನನ್‌ರವರು ತಾ. ೯ರಲ್ಲಿ ಮಡಿಕೇರಿಗೆ ಬಂದು ತಾ ೧೦ರಲ್ಲಿ ಸುಮಾರು ೬೦ ಜನರಿಗೆ ಭೇಟಿ ಇತ್ತರು. ಸಾಯಂಕಾಲ ಸಾರ್ವಜನಿಕ ಚಹಪಾನ ಕೂಟವೊಂದನ್ನು ಅವರ ಗೌರವಾರ್ಥ ಏರ್ಪಡಿಸಲಾಗಿತ್ತು. ಮರುದಿನ ಅವರು ಮೇಜರ್ ಜನರಲ್ ತಿಮ್ಮಯ್ಯನವರೊಡನೆ ಬೆಂಗಳೂರಿಗೆ ಹೋದರು

ಎಸ್. ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀಗಳಾದ ಕೆ ಸಿ ಭರಮಯ್ಯ, ಕೆ ಬಿ ಚಂಗಪ್ಪ, ಎಂ. ಟಿ ಕಂಗವ್ವ, ಎಂ. ಕೆ ದಿವಯ್ಯ, ಕೆ. ಬೋಪಯ್ಯ, ಇವರುಗಳು ತೇರ್ಗಡೆಯಾಗಿರುವರು.

ಉತ್ತಮ ತರದ ಕಿತ್ತಳೆಗಿಡ, ಕಾಫಿ ಬತ್ತ ಮತ್ತು ಕೊಯ್ಯಾ ಅಪ್ರ. ಕಾಫಿ ಬತ್ತದ ಬೀಜದ ಬತ್ತಗಳು ಬೇಕಾದವರು ಜನವರಿ ತಿಂಗಳು ಕಡೆಯ ಒಳಗೆ ವ್ಯವಸಾಯ ಇಲಾಖಾ ಆಫೀಸಿಗೆ ಬರೆಕೊಳ್ಳಬೇಕಾಗಿ ಸದರಿ ಆಫೀಸರು ತಿಳಿಸುತ್ತಾರೆ.

ಕೊಡಗಿನ ಭವಿಷ್ಯತ್ತಿನ ವಿಚಾರ ಕಳೆದ ನವಂಬರು ತಾರೀಖು ೧೭ರಲ್ಲಿ ದಿಲ್ಲಿಯಲ್ಲಿ ನಡೆದ ಸಮ್ಮೇಳನದ ನಡವಳಿಯನ್ನು ಪ್ರಕಟಿಸಲಾಗುವುದೋ ಎಂದು ಸಂಬಂಧಿಸಿದ ಅಧಿಕಾರಿಗಳನ್ನು ಬರೆದು ಕೇಳಿದುದಕ್ಕೆ ಅಂಥಾ ಸಮ್ಮೇಳನಗಳ ತೀರ್ಮಾನಗಳನ್ನು ಪ್ರಕಟಿಸುವದಲ್ಲದೆ ಪ್ರೊಸೀಡಿಂಗ್ಸನ್ನು ಸಾಮಾನ್ಯವಾಗಿ ಪ್ರಕಟಿಸಲಾರದೆಂದು ಜವಾಬು ಬಂದಿದೆಯೆಂದು ತಿಳಿದು ಬರುತ್ತದೆ.

## ವಿನಂತಿ.

ಭೂಕಂಪದಾಯ ಸಮ್ಮರಿ ಸೆಟ್ಲ್‌ಮೆಂಟ್ ಬಗ್ಗೆ ಇತರ ಹೊಸ ತೆರಿಗೆಯನ್ನು ವಿಧಿಸುವದರ ಸಂಬಂಧ ಜನಾಭಿಪ್ರಾಯವನ್ನು ಸಂಗ್ರಹಿಸಲು ಡಾ ಗೂ ಕೌನ್ಸಿಲ್ ನ ಸದಸ್ಯರಿಗಳ ತೀರ್ಮಾನದ ಬಗ್ಗೆ ಈ ತಾರೀಖು ೧೩ನೇ ಸೋಮವಾರ ಶನಿವಾರ

ಯಲ್ಲೂ ತಾ ೧೮ನೇ ಬುಧವಾರ ವೀರಾಜಪೇಟೆಯಲ್ಲೂ, ತಾ ೨೨ನೇ ಆದಿತ್ಯವಾರ ಗೋಣಿಕೊಪ್ಪಲಲ್ಲೂ ಸಾರ್ವಜನಿಕ ಸಭೆಗಳು ಮಧ್ಯಾಹ್ನ ನಡೆಯುವವು. ಸಾರ್ವಜನಿಕರೂ, ಕೌನ್ಸಿಲ್ ಸದಸ್ಯರೂ ಹಾಜರಾಗಬೇಕಾಗಿ ಕೋರಿಕೆ

ಕೆ. ಕೆ ಅಪ್ಪಯ್ಯ,
ಎಂ ಎಸ್. ಸೋಮಯ್ಯ,
ಕೆ ಎ. ಚಿಂಗಪ್ಪ.

೧೩-೧-೫೦

## ವಾರ್ತೆ.

ಇಂಗ್ಲೆಂಡಿನ ಸಾರ್ವಜನಿಕ ಚುನಾವಣೆಯು ಫೆಬ್ರವರಿ ತಾ ೨೩ ರಲ್ಲಿ ನಡೆಯುವುದು.

ಕಾಮನ್‌ವೆಲ್ತ್ ಸಮ್ಮೇಳನವು ಕೊಲಂಬೋದಲ್ಲಿ ತಾ ೯ ರಿಂದ ನಡೆಯುತ್ತಿದೆ. ಭಾರತದ ಪ್ರತಿನಿಧಿಯಾಗಿ ಪಂ. ನೆಹರೂರವರು ಹೋಗಿರುವರು.

ಕಲ್ಕತ್ತಾದಲ್ಲಿಯು ಕಮ್ಯೂನಿಸ್ಟರ ಗಲಭೆಯನ್ನು ಖುದ್ದು ಪರಿಶೀಲಿಸಲು ಸರ್ದಾರ್ ಪಟೇಲರು ತಾ ೧೨ ರಲ್ಲಿ ಕಲ್ಕತ್ತಕ್ಕೆ ಹೋಗಿರುವರು.

ಹೈದರಾಬಾದ್ ಮತ್ತು ಸಿಕಂದರಾಬಾದ ಮುನಿಸಿಪಾಲಿಟಿಗಳು ಮತ್ತು ಕೆಲವು ಸರಕಾರಿ ಉದ್ಯೋಗಿಗಳು ಒಟ್ಟು ೧೫,೦೦೦ ಜನರು ಮುಷ್ಕರ ಹೂಡಿದರೆ ಮಿಲಿಟರಿಯು ಇವರ ಕೆಲಸವನ್ನು ನೋಡುತ್ತಿದೆ

ಸಂಯುಕ್ತ ಪ್ರಾಂತದಲ್ಲಿ ಜಮೀನ್ದಾರ ಪದ್ಧತಿಯನ್ನು ನಿರ್ಮೂಲ ಮಾಡಲು ಪ್ರಾರಂಭಿಸಿರುವ ನಿಧಿಗೆ ೧೩ ಕೋಟಿ ರೂಪಾಯಿ ಸಂಗ್ರಹವಾಗಿದೆ

ವಿಮಾನ ಪಡಿವಾಟನ್ನು ರಾಷ್ಟ್ರೀಕರಿಸುವ ಆಲೋಚನೆ ಕೇಂದ್ರ ಸರಕಾರಕ್ಕೆ ಇಲ್ಲವೆಂದು ಬೋಂಬಾಯಿಯಲ್ಲಿ ಕಮ್ಯೂನಿಕೇಶನ್ ಮಂತ್ರಿ ಶ್ರೀ ರಫಿ ಅಹಮ್ಮದ್ ಕಿದ್ವಾಯಿಯವರು ಹೇಳಿದರು.

ಸರಕಾರದ ಆಹಾರ ಧಾನ್ಯ ನಿಯಂತ್ರಣದ ವಿರುದ್ಧ ಅಂಧ ಬಹಿರಂಗವಾಗಿ ಯುಕ್ತಿಯೆನ್ನೆಂಬ ಕಾರಣ ಅಬ್ದುಲ್ಲ ಬ ಎಂಬವರಿಗೆ ಸಾರ್ವಜನಿಕವಾಗಿ ೧೨ ಛಡಿ ಏಟುಗಳ ಕೊಡಲ್ಪಟ್ಟವು.

ಪೊಲೀಸ್ ಅಧಿಕಾರಿಗೆ ಅರು ಲಕ್ಷ ರೂಪಾಯಿಗಳ ಲಂಚ ಕೊಡಲು ಹೋದ ತಪ್ಪಿಗಾಗಿ ಮೇಲೆ ಬೊಂಬಾಯಿ ಗೋಕುಲದಾಸ್ ದ್ವಾರಕದಾಸ್ ಮೊರಾರ್ಜಿ ಎಂಬ ಮಿಲ್ಮಾಲೀಕರಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟಿದೆ

ದಿಲ್ಲಿ ಪ್ರಾಂತ್ಯದ ಆಡಳಿತ ರಚನೆ ಬಗ್ಗೆ ಪ್ರಾಂತೀಯ ಕಾಂಗ್ರೆಸ್ ಸಮಿತಿಯೊಂದಿಗೆ ಪಂಡಿತ ನೆಹರೂರವರು ಮಾತಾಡಬೇಕೆಂದು ನಿರ್ಧರಿಸಿದೆ.

"ಕೊಡಗು" ಪತ್ರಿಕೆ,

ಮಡಿಕೇರಿ

ಶ್ರೀ. ಜಿ. ಎಸ್. ಗೋವಿಂದ ರಾವ್

# ಓದುಗರ ಓಲೆಗಳು.

### ಎಚ್ಚರಿಕೆ

ತಿರುವಾಂಕೂರಿನಲ್ಲಿ ಸರ್ ಸಿ. ಪಿ. ರಾಮಸ್ವಾಮಿಯವರಿದ್ದಾಗ ಹಿಂದ ಒಕ್ಕೂಟಕ್ಕೆ ತಿರುವಾಂಕೂರು ಸೇರದೆ ಪ್ರತ್ಯೇಕ ಉಳಿಯಬೇಕೆಂದು ಮಾಡಿದ ಪ್ರಯತ್ನದಲ್ಲಿ ಅಲ್ಲಿಯ ಕಾಂಗ್ರೆಸ್ಸಿನ ವಿರುದ್ಧ ಕೈಕೊಂಡ ಆಂದೋಲನೆಗೆ ಸಿ. ಪಿ. ಯವರು ಕಮ್ಯೂನಿಸ್ಟರ ಸಹಾಯ ಪಡೆದಿದ್ದರಂತೆ! ಕಡೆಗೆ ಸಿ. ಪಿ. ಯವರು ದೇಶ ಬಿಟ್ಟರು. ಆದರೆ ಕಮ್ಯೂನಿಸ್ಟರು ತಮ್ಮ ತತ್ವವಾದ ಲೂಟಿ, ದರೋಡೆ, ಕೊಲೆಯೊಂದಿಗೆ ಅ[illegible] ಉಳಿದರು.

ಹೈದರಾಬಾದಿನ ರಜಾಕಾರರು ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಹೈದರಾಬಾದು ಒಕ್ಕೂಟಕ್ಕೆ ಸೇರಬಾರದೆಂದು ಪ್ರಯತ್ನಿಸಿದಾಗ ರಜಾಕಾರರೂ, ಕಮ್ಯೂನಿಸ್ಟರೂ ಜೊತೆಯಾಗಿ ಪ್ರಯತ್ನಿಸಿದರು. ಕಡೆಗೆ ರಜಾಕಾರರು ನಿರ್ನಾಮವಾಗಿ ಕಮ್ಯೂನಿಸ್ಟರು ಅಲ್ಲಿ ಉಳಿದರು. ಇಂದೂ ತೆಲಂಗಾಣ ನೆಲದಲ್ಲಿ ಇಲ್ಲಸಲ್ಲದ ಲೂಟಿ, ದರೋಡೆ, ಕೊಲೆ ಅವರಿಂದ ನಡೆಯುತ್ತಿದೆ.

ಏಕೀಕರಣದ ಕಾಲದಲ್ಲಿ ಸ್ಥಾಪಕಗೊಂಡ ಕೊಡಗಿನ ಕಾಂಗ್ರೆಸ್ ಎಡ್‌ಹಾಕ್—ಸಮಿತಿಯು ಜನತೆಯ ಅಭಿಪ್ರಾಯ ತೆಗೆಯದೆ ಕೊಡಗನ್ನು ಮೈಸೂರು ಸಮೇತಗೊಳಿಸಲು ಯತ್ನಿಸಿದರು. ಪ್ರತ್ಯಕ್ಷ ಸಾಧ್ಯವಾಗದಿರಲು ಕೆಲವು ಕಮ್ಯೂನಿಸ್ಟರನ್ನು ಉಪಯೋಗಿಸಿಕೊಂಡು ಕೆಂಬಟ್ಟೆ ಸಮಿತಿ ನಾಮಕ ಕರಪತ್ರಗಳನ್ನು ಹಂಚಿಕೆ ಮಾಡಿದ್ದಾರಂತೆ. ಇದು ನಿಜವಾದರೆ ಮೇಲೆ ಹೇಳಿದ ಸಂಗತಿಗಳನ್ನು ಗಮನಿಸಿ ಬುದ್ಧಿ ಕಲಿಯಬೇಕೆಂದು ಎಡ್ ಹಾಕ್—ಕಾಂಗ್ರೆಸ್ ಸಮಿತಿಗೆ ಎಚ್ಚರಿಕೆ ಕೊಡಬೇಕಾಗಿದೆ. ಇಲ್ಲದಿದ್ದರೆ ಎಡ್ ಹಾಕ್ ಸಮಿತಿಯು ನಿರ್ನಾಮಗೊಂಡು ಅದರಿಂದ ಪೋಷಿಸಲ್ಪಟ್ಟ ಕಮ್ಯೂನಿಸ್ಟ್ ಕೀಟಗಳು ನಾಡಿನಲ್ಲಿ ಉಳಿಯುವುವೆಂಬುದನ್ನು ತಿಳಿಯಬೇಕು. ಎಡ್ ಹಾಕ್ ಸಮಿತಿಯು ಸಕಾಲದಲ್ಲಿ ಎಚ್ಚರಗೊಳ್ಳುವದೇ?

ಎಂ. ಬಾಲಕೃಷ್ಣ.

---

### ಕಂದಾಯ

ಜನವರಿ ತಾರೀಕು ೫ ರಲ್ಲಿ ಕೊಡಗು ಗಜೆಟ್ಟಿನಲ್ಲಿ ಕೊಡಗಿನಲ್ಲಿ ಭೂಕಂದಾಯ ಏರಿಸುವ ಸೂಚನೆಯು ಪ್ರಕಟವಾಗಿದೆ. ಅದರಲ್ಲಿ ಪ್ಲಾಂಟೇಶನ್ ಕ್ರಾಪ್ ಅಂದರೆ ಕಾಫಿ, ಏಲಕ್ಕಿ, ಮೊದಲಾದುವಕ್ಕೆ ಈಗಿರುವ ಕಂದಾಯದ ಮೂರು ಪಾಲೂ ಉಳಿದದಕ್ಕೆ ಅಂದರೆ ಭೂಮಿಗೆ ಎರಡು ಪಾಲೂ ಕಂದಾಯ ಹೆಚ್ಚು ಮಾಡುವ ಸೂಚನೆ ಇದೆ. ಈ ಕಂದಾಯದ ದರದಿಂದ ಸುಮಾರು ೩½ ಲಕ್ಷ ರೂಪಾಯಿ ಹೆಚ್ಚಿಗೆ ವಸೂಲು ಬರುವುದೆಂದೂ ಅಂದಾಜು ಮಾಡಲಾಗಿದೆ.

ಈ ವಿಚಾರದಲ್ಲಿ ಕಳೆದವಾರದ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಬಾಕ್ಕಿಯು ಸಮಂಜಸವೂ, ಯೋಗ್ಯವೂ ಆಗಿದೆ. ಜನ್ಮ, ಜಹಗೀರು ಎಂಬ ತಾರತಮ್ಯವಿಲ್ಲದೆ ಭೂಕಂದಾಯವನ್ನು ಹಾಗು ಭೂಮಿಯ ಕಂದಾಯ ದರಕ್ಕೆ ಏರಲಿ. ಆದರೆ ಹಾಗು ಭೂಮಿಯ ಕಂದಾಯ ಮಾತ್ರ ಈಗಿರುವ ದರದಲ್ಲಿಯೇ ಇರಬೇಕು. ಹೆಚ್ಚು ಆದಾಯ ಬರುವ ಏಲಕ್ಕಿ, ಕಾಫಿಗಳಿಗೆ ಕಂದಾಯ ಮೂರಲ್ಲ ನಾಲ್ಕು ಪಟ್ಟು ಏರಿದರೂ ಹೆಚ್ಚಿನ ತೊಂದರೆ ಆಗದು. ಆದ್ದರಿಂದ ಸರಕಾರವಾಗಲೀ ಜನ ಪ್ರತಿನಿಧಿಗಳಾಗಲೀ ಹಾಗು ಭೂಮಿಗೆ ಈಗಿರುವ ಕಂದಾಯವನ್ನು ಏರಿಸುವ ಯತ್ನ ಮಾಡಬಾರದು. ಬಡ ರೈತನ ಸ್ಥಿತಿ ಒಂದು ಕಾಸೂ ಹೆಚ್ಚಿನ ಕಂದಾಯ ಕೊಡುವಂತಿಲ್ಲ.

ಬಡ ರೈತ.

---

### ಕೊಡಗು ಕಾಂಗ್ರೆಸ್ಸು

ಕಾಂಗ್ರೆಸ್ಸಿನ ಚುನಾವಣೆಯು ಜನವರಿ ಅಂತ್ಯದೊಳಗೆ ಆಗಬೇಕೆಂದು ಕಾಂಗ್ರೆಸ್ ಪರಿಷತ್ತಿನಿಂದ ಪ್ರಕಟವಾದ ಸರ್ಕ್ಯೂಲರೊಂದನ್ನು ಓದಿದ ಜ್ಞಾಪಕ ನನಗಿದೆ. ಆದರೆ ಕೊಡಗಿನಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಗಲಾಟೆ ನಡೆದರೂ ಚುನಾವಣೆಯ ಸುಳಿವೇ ಕಾಣುತ್ತಿಲ್ಲ. ಮೇಲಾಗಿ ಯಾವ ರೀತಿ ಚುನಾವಣೆ ನಡೆಯಬೇಕು, ಪಂಚಾಯಿತರ ಆಯ್ಕೆ ಹೇಗೆ? ಅವರ ಜವಾಬ್ದಾರಿಕೆ ಏನು? ನೇಮಿಸಿದ ನಗರದ ಸಮಿತಿಯ ಸದಸ್ಯರ ಯೋಗ್ಯತೆ ಏನು ಎಂಬುದನ್ನು, ಸ್ಥಳೀಯ ಕಾಂಗ್ರೆಸ್ಸು ಪ್ರಕಟಿಸಿಲ್ಲ. ಜನತೆಯನ್ನು ಅಂಧಕಾರದಲ್ಲಿಟ್ಟು ತಮ್ಮ ತಮ್ಮ ಕಾರ್ಯದ ನೀತಿಯಿಂದ ಹಾಗುವ ಪಾರ್ಟಿ ಬಂಡನೀಯವಾಗಿದೆ. ಕೊಡಗು ಎಡ್ ಹಾಕ್ ಸಮಿತಿಯ ಅಧ್ಯಕ್ಷರು ಈ ವರ್ಷ ಕೊಡಗಿನಲ್ಲಿ ಕಾಂಗ್ರೆಸ್ ಸದಸ್ಯರೆಷ್ಟಾಗಿದ್ದಾರೆ, ಎಷ್ಟು ಪಂಚಾಯಿತಗಳು, ಎಲ್ಲೆಲ್ಲಿಗೆ ಎಂಬುದನ್ನು ಪ್ರಕಟಿಸಿ, ಸಕ್ರಿಯ ಸದಸ್ಯರಿಗೂ, ಪಂಚಾಯಿತರಿಗೂ ಇರಬೇಕಾದ ಯೋಗ್ಯತೆ, ಕೊಡಗಿನಲ್ಲಿ ಚುನಾವಣೆ ನಡೆಯುವ ತಾರೀಕು ಮೊದಲಾದುವನ್ನು ಪ್ರಕಟಿಸಬೇಕು. ಮರುಆಕರ್ಷಣೆಯಲ್ಲಿ ಮಲಗಿರುವ ಕಾಂಗ್ರೆಸ್ಸಿನ ಕೊಲೆಯನ್ನು ಈ ರೀತಿ ಮಾಡದೆ ಕಾಂಗ್ರೆಸ್ಸಿನ ಹೊಸ ಘಟನೆಯನ್ನು ನಂಬಿಸಿ, ಕಾಂಗ್ರೆಸ್ಸಿಗೆ ಚೇತನ ಕೊಡಬೇಕು. ಜನ ಕೊಡಗರು ಹೆಚ್ಚಿನ ಜಾಗೃತರಾಗಿ ಇನ್ನು ನಿದ್ರೆ ಏಕೆ? ತಿಳಿಸದ ಸಮಯ ಬಂತು ಎಚ್ಚರವಾಗಿರಿ!

ಕಾಂಗ್ರೆಸ್ ಭಕ್ತ.

---

### ಕೇಂದ್ರಾಡಳಿತ ಮಾರಕ!

ಕೊಡಗಿನ ಭವಿಷ್ಯದ ಬಗ್ಗೆ ಕೊಡಗು ಕಾಂಗ್ರೆಸ್ಸಿನಲ್ಲಿ ಮಹಾ ಅಂತರವಾಗಿ ಇದ್ದ ರೂ ಆ ಅಂತರವೂ ಈಗ ದೂರವಾಗುತ್ತಾ ಬಂದು ಇದರಿಂದಾಗಿ ಆಳುವ ಅಂತರವೂ ಸ್ಥಾಪಿಸಬೇಕಾಗುತ್ತಿದೆ. ಆದರೆ ತಕ್ಷಣವಾಗಿ ಕೇಂದ್ರ ಸರಕಾರವು ಕೊಟ್ಟ ತಾತ್ಕಾಲಿಕ ತೀರ್ಮಾನದಿಂದಾಗಿ ಮುಂದಿನ ಐದಾರು ವರ್ಷಗಳ ವರೆಗೆ ಯಾವ ಸಂಯೋಜನೆಯೂ ಸಾಧ್ಯವಿಲ್ಲ. ಇದೇ ಮಾತು ಮೊನ್ನೆಯಾಗಿ ಕೊಡಗಿಗೆ ಬಂದಿದ್ದ ಶ್ರೀ ವಿ. ಪಿ. ಮೆನನ್‌ರವರಿಂದಲೂ ವ್ಯಕ್ತವಾಯಿತಂತೆ! ಆದ್ದರಿಂದ ಈ ಹಿಂದೆ ಇದ್ದ ಪರಿಸ್ಥಿತಿ ಇಂದಿಲ್ಲ. ಕೊಡಗಿನ ಸಂಯೋಜನ ಮತ್ತು ಪ್ರತ್ಯೇಕ ಮಾಟಗಳು ಮುಂದೆ ಸಂಯೋಜನೆಯು ಪ್ರಸಕ್ತಿ ಬರುವವರೆಗೆ ಒಂದಾಗಿ ದುಡಿಯುವುದು ದೇಶ ಹಿತದೃಷ್ಟಿಯಿಂದ ಅತ್ಯವಶ್ಯ. ಈ ಒಪ್ಪಂದ ಆಗಬೇಕೆಂದು ಹಿಂದಿನಿಂದಲೂ ಹಲವರು ಕೂಗಿಕೊಂಡಿದ್ದರೂ ಪಕ್ಷರಾಜಕೀಯದ ಕೆಸರಿನಲ್ಲಿ ಕಿವಿ ಮಚ್ಚಿತ ಮುಳುಗಿದವರಿಗೆ ಈ ಕೂಗು ಕೇಳುತ್ತಿಲ್ಲ. ಈ ಸಂದರ್ಭದಲ್ಲಾದರೂ ಮತ್ತೊಮ್ಮೆ ಯತ್ನಿಸುವರೇ!

ಎಸ್. ಬಿ. ಎಂ.

---

### ಏಕೆ?

ಕೊಡಗಿನ ಭೂಕಂದಾಯವನ್ನು ಏರಿಸುವರೆಂಬ ವಾರ್ತೆ ಕೇಳಿ ನನಗೆ ಆಶ್ಚರ್ಯವಾಯಿತು. ಕಂದಾಯವನ್ನು ಏಕೆ ಏರಿಸಬೇಕೆಂಬುದು ನನಗರ್ಥವಾಗದ ವಿಷಯ. ಕೊಡಗಿನ ಸರಕಾರದ ಬಳಿ ೫೦ ಲಕ್ಷಕ್ಕೂ ಮಿಗಿಲು ಇದೆ. ಯುದ್ಧೋತ್ತರ ಯೋಜನೆಗೆಂದು ಇಟ್ಟ ಸುಮಾರು ೩೦ ಲಕ್ಷ ರೂಪಾಯಿ ಖರ್ಚಾಗದೆ ಹಾಗೇ ಉಳಿಯುತ್ತಿದೆ. ಯಾವ ಹೊಸ ಯೋಜನೆಗೂ ಕೆಲಸಗಾರರಿಲ್ಲನೆಂಬ ಮುಂದೂಡಲಾಗುತ್ತಿದೆ. ಹಾಗಾದರೆ ಈ ಕಂದಾಯ ಯಾವುದಕ್ಕಾಗಿ? ಅಪರಿಮಿತ ಖರ್ಚು ಕಟ್ಟ ಏರಿದೆ. ಅದನ್ನು ಯೋಚಿಸಿ ಮಾಡದೆ, ರೈತನಿಗೆ ಆತನಿಕ ನಾಲು ಮಿಗಿಲಾದ ಲಕ್ಷ್ಮಿ ಇರುವ ಸಾಕರದ ವಿಚಾರ ಆಲೋಚಿಸದೆ ಬಡ ರೈತನ ಹೊಟ್ಟೆಗೆ ಹೊಡೆಯುವ ಈ ಯತ್ನವೇಕೆ? ಅದರಲ್ಲೂ ಸರಕಾರವು ಇಂಥಾ ನಿಶ್ಚಿತ ಯೋಜನೆಗಾಗಿ ಹೆಚ್ಚು ಖರ್ಚಿದೆ. ಈಗಿರುವ ಹಣ ಸಾಲದೆಂದು ಊಹಿಸುವದಾದರೆ ಅಂಥಾದ್ದನ್ನು ಸ್ಪಷ್ಟಪಡಿಸಿ ಅದರಿಂದ ಜನರಿಗಾಗುವ ಹಿತವನ್ನು ಜೋಡಿಸಿ ಕಂದಾಯ ಏರಿಸುವುದಾದರೆ ಅನುಕೂಲನು ಅರ್ಥವಿದೆ. ಸರಕಾರವು ಯಾವುದೇ ಪ್ರಗತಿಶೀಲ ಉದ್ಯಮವನ್ನು ಮಾಡದೆ ಇರುವ ಉಳಿತಾಯವನ್ನು ಇಟ್ಟುಕೊಂಡು ಹೊಸ ಕಂದಾಯ ಹಾಕುವದೆಂದರೆ ರೈತರಿಗೆ ತೀರಾ ಅಸಮಾಧಾನಕರ. ಇಂಥಾದ್ದಕ್ಕೆ ಜನ ಪ್ರತಿನಿಧಿಗಳು ಎಡೆಕೊಡಬಾರದು.

ಬಿ. ಕೆ. ಶಂಭಪ್ಪ.

---

### ಕಿಗ್ಗಟ್ಟುನಾಡು ಹೈಸ್ಕೂಲು ಮತ್ತು ಸರಕಾರ

ಪತ್ರಿಕೆಗಳಲ್ಲಿ ಬಂತನಗಳನ್ನು ಬರೆದು ನನ್ನ ಅತೃಪ್ತಿಯನ್ನು ಸೂಚಿಸಿದುದಲ್ಲದೆ ಚೀಫ್ ಕಮಿಷನರ ಬಳಿಯಲ್ಲೂ ಮತ್ತು ಡಿ. ಪಿ. ಐ. ರವರ ಬಳಿಯಲ್ಲೂ ಹೈಸ್ಕೂಲಿನ ವಿಷಯವಾಗಿ ಮಾತನಾಡಿದ್ದೇವೆ. ಆದರೆ ಸರಕಾರದವರ ಅಭಿಪ್ರಾಯ ಇನ್ನೂ ತಿಳಿದಿರುವದಿಲ್ಲ.

ಒಂದನೆಯದಾಗಿ ಸರಕಾರದವರು ಈ ವರ್ಷ ಹೈಸ್ಕೂಲು ಕಟ್ಟಡವನ್ನು ಕಟ್ಟುವ ಹಾಗೆ ಕಾಣುವುದಿಲ್ಲ. ಸರಕಾರದವರು ಪೂರ್ವಕಾಲದ ಈ ಮುಂದುವರಿಕೆಯನ್ನು ಬಿಡಬೇಕು. ಈ ಮೊದಲೇ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಹಾಗೆ ಜನರ ಅಭಿಪ್ರಾಯವನ್ನು ಸರಕಾರದವರು ಗಮನಿಸಬೇಕು. ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೋಸ್ಕರ ನಾಡಿನವರು ಒಂದು ಲಕ್ಷ ಬೆಲೆಯ ಗಳನ್ನು ನಕೂಲು ಮಾಡಿ ಶಾಲೆಗೆ ಬೇಕಾದ ಜಾಗವನ್ನು ಕಟ್ಟಡವನ್ನೂ ಕಟ್ಟಿಸಿದುದಲ್ಲದೆ ಸರಕಾರದವರಿಗೆ ನಲ್ವತ್ತು ಸಾವಿರ ರೂಪಾಯಿಗಳನ್ನು ಶಾಲಾ ಕಟ್ಟಡವನ್ನು ಕಟ್ಟಿಸಲಿಕ್ಕೆ ಕೊಟ್ಟಿದ್ದಾಗಿದೆ. ಆದರೂ ಶಾಲಾಕಟ್ಟಡ ಕಟ್ಟಿಸಲಿಕ್ಕೆ ವಿಧಾನ ಏನು? ಜೊತೆಗೆ ಈ ಶಾಲೆಯ ಕಟ್ಟಡವನ್ನು ಬೇರೆ ಸ್ಥಳದಲ್ಲಿ ಕಟ್ಟಲು ಏರ್ಪಡಿಸಿದ್ದಾರೆಂದು ಕೇಳಿಯುತ್ತೇವೆ. ಇದು ತಿಕ್ಕಾಟಕ್ಕೆ ಎಡೆಕೊಡದಿರಲು. ಹೀಗೆಲ್ಲಾ ಆಗಿ ಈ ವರ್ಷ ಕಟ್ಟಡ ಆಗದಿದ್ದರೆ ಮಕ್ಕಳ ಗತಿ ಏನು?

ಮಕ್ಕಳಿಗೆ ವಿದ್ಯೆ ಕಲಿಸುವ ಉತ್ತಮ ಕಾರ್ಯಕ್ಕಾಗಿ ಎಷ್ಟೋ ಜಾಗವನ್ನು ಜನರು ಮುಫತ್ತಾಗಿ ಕೊಟ್ಟಿದ್ದಾರೆ. ಇದರ ಕಾಡು ಕಡಿದು ಜಾಗ ವ್ಯರ್ಥವಾಗಿದೆ. ಇಂಥಾ ಜಾಗದಲ್ಲಿ ಶಾಲೆಯನ್ನು ಕಟ್ಟಿಸದೇ ಈಗ ಬೇರೆ ಜಾಗ ಹುಡುಕುವುದೆಂದರೆ ಅದು ಅನ್ಯಾಯವಲ್ಲವೇ?

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಕಟ್ಟಿಸದಿದ್ದರೆ ಮಕ್ಕಳಿಗೆ ಓದಲಿಕ್ಕೆ ಸ್ಥಳವೆಲ್ಲಿ? ಅಲ್ಲದೆ ಪಾಠಕ್ಕೆ ಬೇಕಾದ ಸಾಮಾನುಗಳನ್ನು ಇಟ್ಟುಕೊಳ್ಳುವುದಕ್ಕೂ ಸ್ಥಳವಿಲ್ಲ. ಅಧ್ಯಾಪಕರಿಗೆ ಕೂತುಕೊಳ್ಳಲಿಕ್ಕೂ ಸ್ಥಳವಿಲ್ಲ. ಆದುದರಿಂದ ಸರಕಾರದವರು ಒಡನೆ ಕಟ್ಟಡದ ಕೆಲಸವನ್ನು ಕೈಕೊಳ್ಳಬೇಕು.

C. K. T.

---

### ವಿಷಾದ.

ತಾರೀಕು ೨೩-೧೦-೪೯ರ 'ಕೊಡಗು' ಪತ್ರಿಕೆಯಲ್ಲಿ 'ಓದುಗ'ನೆಂಬ ಹೆಸರಿನಿಂದ ಬರೆದ ಕೊಡಗಿನ ಭವಿಷ್ಯವೆಂಬ ಲೇಖನದಲ್ಲಿ ಚೆಪ್ಪುಡೀರ ಕರುಂಬಯ್ಯನವರು ಜಹಗೀರು ಹಂಚಿದಾಗ ಅನ್ಯಾಯ ಮಾಡಿದರೆಂಬ ಅನಂದನೆ ಇದರಿಂದ ತಪ್ಪಿನಿಂದ ಪ್ರಕಟವಾಗಿದೆ. ಒಬ್ಬ ವ್ಯಕ್ತಿಯನ್ನು ಟೀಕಿಸಲು ಒಂದು ಕುಟುಂಬದ ಹೆಸರನ್ನು ಬಳಸಿ ಕಳಂಕಗೊಳಿಸುವ ಗುಂಪಿನವರೊಡನೆ ಪತ್ರಿಕೆಯವರಿಲ್ಲ. ತಪ್ಪಿನಿಂದಾದ ಇದಕ್ಕೆ ವಿಷಾದಿಸುತ್ತೇವೆ.

ಸಂಪಾದಕ.

---

### ಮದ್ಯಪಾನದ ಕುರಿತು ಪಂ. ನೆಹರುರವರ ಹಿತೋಕ್ತಿ

ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ೩ ರಂದು ನಾಗಪುರದಲ್ಲಿ ಕೂಡಿದ ಸಭೆಯಲ್ಲಿ ಮದ್ಯಪಾನದ ಕುರಿತ ಮಾತನಾಡಿ ನಾನು ಮದ್ಯಪಾನ ನಿಷೇಧದ ಪರವಾಗಿ ಇದ್ದೇನೆ. ಬಹಳ ತೊಂದರೆಯಾಗಿದೆ ಮದ್ಯಪಾನ ನಿಷೇಧ ಕಾರ್ಯ ಆದರೂ ನಷ್ಟವಾಗಿರ ಪುದೆಂಬುದನ್ನು ನಾನು ಅರಿತಿರುವೆನು. ಭಾರತದಲ್ಲಿ ಈಗ ಆರ್ಥಿಕ ಪರಿಸ್ಥಿತಿಯು ಕೆಟ್ಟುಹೋಗಿ ಹಣ ಕೊರತೆಯಾದ ಅಪತ್ತಿಗೆ ಒಳಗಾಗಿರುವುದು. ಇಂಥ ಪರಿಸ್ಥಿತಿಯು ನಿವಾರಣೆಯಾಗುವವರೆಗೆ ಮದ್ಯಪಾನದ ಕುರಿತಾಗಿ ಯಾವ ಕಾರ್ಯಕ್ರಮವನ್ನು ಕೈಕೊಳ್ಳಲಾಗುತ್ತಿಲ್ಲ ಎಂದು ತಿಳಿಸಿದರು.

# THE WARDEN INSURANCE CO., Ltd.
**Head Office: Bombay.**

**LIFE, FIRE, ACCIDENT, MOTOR & W. C. INSURANCES.**

*Managing Director;* - **S. H. THAKER.**

| | |
|---|---|
| Business in force | Rs. 5,00,00,000 |
| Assets | ,, 1,00,00,000 |
| Income | ,, 35,00,000 |

Also **LOCAL MANAGERS OF**

**THE LONDON GUARANTEE & ACCIDENT CO., Ltd.**
(Incorporated in England)

Assets Exceed Rs. 10,00,00,000

a Subsidiary Company of

**THE PHOENIX ASSURANCE CO., Ltd.**
(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.

*Apply to:*

**Chief Agency Office** *Virajpet (Coorg)* or A. S. Aiyappa, *Branch Secretary, Gandhinagar, BANGALORE CITY*


## ನೋಟೀಸು.

ಕೊಡಗು ಮಾಜಿ ಸಿಪಾಯಿಗಳ ಸಂಘವು ವೀರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳು ರೂಪಾಯಿ ಒಂದನ್ನು ಈ ಕೆಳಗೆ ರುಜು ಹಾಕಿದವರಿಗೆ ಕಳುಹಿಸಿ ಮೆಂಬರಾಗಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳ ಆರ್ಥಿಕ, ನೈತಿಕ ಅಭಿವೃದ್ಧಿಗಾಗಿ ಈ ಸಂಘವನ್ನು ಸ್ಥಾಪಿಸಿದ್ದಾಗಿದೆ. ಆದ್ದರಿಂದ ಈ ಸಂದರ್ಭವನ್ನು ಯಾರೂ ಕಳೆದುಕೊಳ್ಳಬಾರದು.

ಯಂ. ಬಿ. ಉತ್ತಪ್ಪ,
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

5-2

ಕೊಡಗು ಮಾಜಿ ಸಿಪಾಯಿಗಳ ಸಂಘದ ಶಾಖೆಯಾಗಿ ಮಡಿಕೇರಿಯಲ್ಲೂ ತೆರೆಯಲು ತೀರ್ಮಾನಿಸಲಾಗಿದೆ. ಶೇರು 1ರ ರೂ. 10/- ಗಳಂತೆ ಪ್ರತಿ ಒಬ್ಬ ಮೆಂಬರನು ಶೇರು ಹೊಂದಿಕೊಳ್ಳಬಹುದು. ಆದರೆ ಒಬ್ಬನಿಗೆ ನಾಲ್ಕು ಶೇರುಗಳಿಗಿಂತ ಹೆಚ್ಚು ಶೇರುಗಳನ್ನು ಕೊಡಲಾಗುವುದಿಲ್ಲ. ಮೆಂಬರುಗಳು ಈ ಕೆಳಗೆ ರುಜು ಮಾಡಿದವರಿಗೆ ಮನಿಯಾರ್ಡರ್ ಮೂಲಕ ಹಣ ಕಳುಹಿಸತಕ್ಕದ್ದು. ಸರ್ಕಾರಿ ಉದ್ಯೋಗಸ್ಥರೂ ಮೆಂಬರುಗಳಾಗಿ ಸೇರಬಹುದು. ಪಾವತಿಯಾದ ಮೊಬಲಗಿಗೆ ತಕ್ಕಂತ ರಶೀತಿ ಕೊಡಲಾಗುವುದು. ಸಂಘವು ರಿಜಿಸ್ಟರ್ ಆದನಂತರ ಮೆಂಬರುಗಳ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುವುದು.

ಯಂ. ಬಿ. ಉತ್ತಪ್ಪ
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ

## ಪ್ರಕಟಣೆ.

ಕೊಡಗು ಮಾಜಿ ಸಿಪಾಯಿಗಳ ಸಹಕಾರ ಟ್ರಾನ್ಸ್‌ಪೋರ್ಟ್ ಸಂಘವನ್ನು 5-2

## ಹರಾಜು ನೋಟೀಸು.

| ನಂ. | ಟೋಲ್‌ಗೇಟ್‌ಗಳ ಹೆಸರು. | ತಾರೀಕು | ಹರಾಜು ಸ್ಥಳ. |
|---|---|---|---|
| 1. | ಗೋಣಿಕೊಪ್ಪ ಮಾರ್ಕೆಟ್ | 22-1-1950 | ಗೋಣಿಕೊಪ್ಪ ನಾಡಾಫೀಸು |
| 2. | ಹುದಿಕೇರಿ ಮಾರ್ಕೆಟ್ | 23-1-1950 | ಹುದಿಕೇರಿ ನಾಡಾಫೀಸು |
| 3. | ಸಿದ್ದಾಪುರ ಮಾರ್ಕೆಟ್ | 29-1-1950 | ಸಿದ್ದಾಪುರ ನಾಡಾಫೀಸು |
| 4. | ಅಮ್ಮತ್ತಿ ಮಾರ್ಕೆಟ್ | 29-1-1950 | ಸಿದ್ದಾಪುರ ನಾಡಾಫೀಸು |
| 5. | ಆನೆ ಚೌಕೂರು, ಕುಟ್ಟ, ಸಿದ್ದೇಶ್ವರ ಗಡಿಗೆ ಮತ್ತು ಮಾಕುಟ ಟೋಲ್‌ಗೇಟುಗಳು | 1-2-1950 | ವೀರಾಜಪೇಟೆ ನಾಡಾಫೀಸು |
| 6. | ಮೂರ್ನಾಡು ಮಾರ್ಕೆಟು, ಕೋಲ ನಾಡು ,, ಚೆಟ್ಟಳ್ಳಿ ,, ಸಂಪಾಜೆ ಟೋಲ್‌ಗೇಟು, ಫ್ರೇಜರ್‌ಪೇಟೆ ,, ಶಿರಂಗಾಲ ,, | 3-2-1950 | ಮಡಿಕೇರಿ ನಾಡಾಫೀಸು |
| 7. | ಶನಿವಾರಸಂತೆ ಮಾರ್ಕೆಟ್, ಎಡೆಹಳ್ಳಿ ಟೋಲ್‌ಗೇಟ್, ಹೆಬ್ಬಾಲೆ ಟೋಲ್‌ಗೇಟ್, ಶಿಲುವಾಗಿಲು ,, | 4-2-1950 | ಶನಿವಾರಸಂತೆ ನಾಡಾಫೀಸು |
| 8 | ಸುಂಟಿಕೊಪ್ಪ ಮಾರ್ಕೆಟು, ಜಂಬೂರು ಮಾರ್ಕೆಟು | 5-2-1950 | ಸುಂಟಿಕೊಪ್ಪ ನಾಡಾಫೀಸು |

ಐ. ಪಿ. ಕಾರ್ಯಪ್ಪ,
ಪ್ರೆಸಿಡೆಂಟ್
ಕೊಡಗು ಜಿಲ್ಲಾ ಬೋರ್ಡ್.

2-1


ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !!
ಅನುಭವಶೀಲತೆ!!

# ದಿ ವಿಜಯ ಬೇಂಕ್ ಲಿಮಿಟೆಡ್
ಮುಖ್ಯ ಕಛೇರಿ,
**ಕದ್ರಿ ರೋಡ್, ಮಂಗಳೂರು.**

ನಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

**ಶಾಖೆಗಳು:-** ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

**ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.**

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**



# ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮಾದರಿಯ ಬನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟು ಬಟ್ಟೆ ತೆಗೆಯುವವರು ಈ ಪತ್ರಿಕೆ ತೋರಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

**ಪಕ್ಕಿ ಮೊಹಿದಿನ್ ಸಾಹೇಬ್ & ಬ್ರದರ್,**
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12-2



# ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಷ್ಟ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ವಾ ಬ್ರದರ್ಸ್ ಎತ್ತಿದ ಕೈ!

**ಪಟ್ವಾ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
ಪೋಸ್ಟಾಫೀಸ ಎದುರು, ಮೈಸೂರು

52-2

## ಕರ್ನಾಟಕದ ರಾಜನಾಮೆಗಳು

# ಹಿಂದೆಗೆದುಕೊಳ್ಳಲ್ಪಡುವುವೆ?

### ಕರ್ನಾಟಕ ಪ್ರಾಂತರಚನೆಯನ್ನು ತಡೆಯುತ್ತಿರುವವರಾರು?

[illegible]

## ಜನತೆಯ ತೃಪ್ತಿಯೇ

# ದೇಶದ ಭದ್ರತೆ.

[illegible]

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

**ಪಂಡಿತ ಮೋತಿಲಾಲ್ ನೆಹರು.** **ಎಸ್. ಶ್ರೀನಿವಾಸ ಅಯ್ಯಂಗಾರ್**

**ಹಕೀಮ್ ಅಜಮುಲಖಾನ್.** **ಡಾ|| ಎಂ. ಎ. ಅನ್ಸಾರಿ.**

**Transacts:—Life, Fire, Motor and Marine.**

ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| ಆರ್ಗನೈಜರ್ | ಆರ್ಗನೈಜರ್ |
|---|---|
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯಂ. ಅಚ್ಚಣ್ಣ, | ಎಂ. ಎ. ಬೆಳ್ಯಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟಾ, ಮಂಗಳೂರು. |



# ಮತ್ತೊಂದು ಉಜ್ವಲ ವರ್ಷ.

**1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.**

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | „ |

1,26,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

**ಶಕ್ತಿ. ಸೇವೆ ಭದ್ರತೆ.**

# ಎಂಪೈರ್ ಆಫ್ ಇಂಡಿಯಾ

## ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

| ಪ್ರಧಾನ ಕಛೇರಿ: | ಬ್ರಾಂಚ್ ಕಛೇರಿ: |
|---|---|
| ಎಂಪೈರ್ ಹೌಸ್, ಹಾರ್ನಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು. |



# ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

## ಪೇಜರ್ ಪೇಟೆ.

## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪೇಜರ್‌ಪೇಟೆ, ತಾ 22-9-1949. — ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.


## ರಿಪಬ್ಲಿಕ್ ಆರಂಭೋತ್ಸವದ ಕಾರ್ಯಕ್ರಮ.

ಗವರ್ನರ್ ಜನರಲ್ ಶ್ರೀ. ಸಿ. ರಾಜಗೋಪಾಲಾಚಾರಿಯವರು ಜನವರಿ ೨೬ ರ ಪ್ರಾತಃಕಾಲ ಗವರ್ನ್ಮೆಂಟ್ ಹೌಸಿನ ದರ್ಬಾರ್ ಹಾಲಿನಲ್ಲಿ ನಡೆಯುವ ಸಮಾರಂಭದಲ್ಲಿ ಘೋಷಣಾ ಪತ್ರವೊಂದ... ರಿಪಬ್ಲಿಕ್ ಆಗಿದೆ ... ಘೋಷಣೆಯನ್ನು ಓದಿದ ನಂತರ ಗವರ್ನರ್ ಜನರಲ್‌ರು ಸಿಂಹಾಸನತ್ಯಾಗಮಾಡಿ ರಿಪಬ್ಲಿಕಿನ ಅಧ್ಯಕ್ಷರಾಗಿ ಚುನಾಯಿತರಾಗಿರುವವರನ್ನು ಸಿಂಹಾಸನಕ್ಕೆ ಕರೆದೊಯ್ಯುವರು. ಭಾರತ ಸುಪ್ರೀಂ ಕೋರ್ಟಿನ ಚೀಫ್ ಜಸ್ಟಿಸರಾದ ಶ್ರೀ. ಹರಿಲಾಲ್ ಕಾನಿಯಾರವರು ಅಧ್ಯಕ್ಷರಿಂಗೆ ಪ್ರಮಾಣ ವಚನ ಓದಿ ಹೇಳುವರು.

ಜನವರಿ ೨೪ನೇ ತಾ. ಭಾರತ ರಾಜ್ಯಾಂಗ ಸಭೆಯು ಸೇರಿ ರಿಪಬ್ಲಿಕ್ ಅಧ್ಯಕ್ಷರನ್ನು ಚುನಾಯಿಸುವುದು. ಡಾ. ರಾಜೇಂದ್ರ ಪ್ರಸಾದರೇ ಈ ಪದವಿಗೆ ಸಲ್ಲುವರೆಂಬುದು ಸರ್ವವಿದಿತವಾದ ಸಂಗತಿ.

ಶ್ರೀ. ಸಿ. ರಾಜಗೋಪಾಲಾಚಾರಿಯವರು ... ಮಾಡುವರೆಂಬುದು ... ಅವರು ... ಕೆಲಸವಾವು... ನವ ... ಪ್ರ...ಪ್ಪುದು. ಏ ರಿ ನೌಕರಿಗೆ ಸೇರುವುದು ... ಎಂದರೆ ಒಂದು ರಾಷ್ಟ್ರದ ಅತ್ಯುನ್ನತಾಧಿಕಾರಿಯಾಗಿದ್ದವರು ಪುನಃ ಬೇರೆ ಸರ್ಕಾರ... ವಿರುದ್ಧವಾದುದು.


# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

**ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಚಕ್ಯಾರುಗಳು ದೊರೆಯುತ್ತವೆ.**

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಸೈನ್ಯದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರಬೇಕಾಗಿ ದಯವಿಟ್ಟು ದೊರೆಯುವದು)

62-21 — ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.



# CRESCENT

## FOR PROTECTION AND SERVICE.

It is best to represent and insure with

The **CRESCENT** Insurance Co., Ltd,

*H: O: BOMBAY.]* *[Established 1919.*

*For particulars write to:*

| | |
|---|---|
| **Sri B. A. Poovaiah** | **The Branch Manager,** |
| *Organiser* | *22 B. Mahatma Gandhi Road,* |
| *Pollibetta, Coorg.* | *Bangalore 1.* |

ಸುರಕ್ಷಿತವಾದ ಜೀವವಿಮೆ ಪಡೆಯಲು

# ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)

| | | |
|---|---|---|
| ಅಧಿಕೃತ ಷೇರು ಭಂಡವಾಳ | ರೂ. | 10,00,000. |
| ವಸೂಲಾದ ಷೇರು ಮೊಬಲಗು | ರೂ. | 1,65,000. |
| ಕ್ಷೇಮನಿಧಿ | ರೂ. | 50,000. |

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ಒಡವೆಗಳ ಆಧಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಮತ್ತು ಏಜೆಂಟ್. |


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1880.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೨೭-೧-೧೯೫೦ನೇ ಶುಕ್ರವಾರ | ಸಂಚಿಕೆ ೩೫

## ಭಾರತದ ಹೊಸ ಅಧ್ಯಕ್ಷ

# ರಾಜೇಂದ್ರ ಪ್ರಸಾದರು.

ಲೇ:—ಡಾ. ಪಟ್ಟಾಭಿ ಸೀತಾರಾಮಯ್ಯನವರು.

ಪ್ರಸಿದ್ಧಿ ಪಡೆದ ಪ್ರಾಮುಖ್ಯ ವ್ಯಕ್ತಿ ಸದ್ಗುಣಿಯಾಗಿರಬೇಕೆಂದಿಲ್ಲ. ಸದ್ಗುಣಿಯಾದವನು ಪ್ರಸಿದ್ಧನಾಗಿರಬೇಕೆಂದೂ ಇಲ್ಲ. ಪ್ರತಿಷ್ಠೆ ಮತ್ತು ಸದ್ಗುಣ ಎರಡು ಸಮರಸವಾಗಿ ಏಕವ್ಯಕ್ತಿಯಲ್ಲಿ ಕೂಡಿರುವುದು ಅಪರೂಪ. ಪ್ರತಿಷ್ಠೆ, ಪ್ರಸಿದ್ಧಿಯು ಸದ್ಗುಣಜನ್ಯವಾಗಿರಬಹುದು. ಸದ್ಗುಣವು ಪ್ರಸಿದ್ಧಿಯ ರೂಪವಾಗಿ ಕಾಣಬಹುದು. ಒಳ್ಳೆ ಸದ್ಗುಣಿಯು ಹಲವು ವೇಳೆ ನಿರ್ಬಲವ್ಯಕ್ತಿಯಾಗಿರುವುದೂ ಇದೆ. ಯಾರನ್ನೂ ನೋಯಿಸಬಾರದು, ಯಾರಿಗೂ ವಿರೋಧಿಸಬಾರದೆಂದೂ, ತನ್ನ ಕರ್ತವ್ಯದ ವಿಚಾರದಲ್ಲಿ ಕಠಿಣ ಭಾವವನ್ನು ತಾಳಬಾರದೆಂದೂ ತಿಳಿಯುವ ನಿರ್ಬಲರಾದ ಗುಣವಂತರೂ ಇದ್ದಾರೆ. ಇದನ್ನು ಸಂಪೂರ್ಣ ಸದ್ಗುಣವೆಂದು ಹೇಳಲಾಗುವುದಿಲ್ಲ. ನಿರ್ಬಲತೆಯು ಎಂದೂ ಒಳ್ಳೇತನದ ಸ್ಥಾನವನ್ನಲಂಕರಿಸದು. ಪ್ರತಿಹಿಂಸೆಯು ಎಂದೂ ಘನತೆಯ ಗದ್ದುಗೆ ಏರದು. ಸದ್ಗುಣವು ಹೃದಯದ ಮಾತು. ಘನತೆಯು ಹೃದಯದ ಒಲವಿನೊಂದಿಗೆ ಸೇರಿದ ಮೇಧಾಶಕ್ತಿ ಮತ್ತು ಶಕ್ತಿಗಳ ಕೃತಿ. ಹೃದಯ, ತಲೆ ಮತ್ತು ಕೈ ಇವು ಮೂರೂ ಸಹಕರಿಸಿ ಒಂದಕ್ಕೊಂದು ಹೊಂದಿಕೊಂಡು ದುಡಿದಾಗ ಘನತೆ ಮತ್ತು ಸದ್ಗುಣ ಎರಡೂ ಕಳೆಗಟ್ಟುವುವು. ಬುದ್ಧಿಯು ಇಚ್ಛಿಸಿದುದನ್ನು ಕೈಯು ತಿರಸ್ಕರಿಸದೆ, ಹೃದಯದ ಒಲವನ್ನು ಬುದ್ಧಿಯು ನಿರಾಕರಿಸದೆ ವರ್ತಿಸುವುದೇ ಈ ಸಮರಸ ಕರ್ಮ. ಈ ದೃಷ್ಟಿಯಿಂದ ಬಾಬು ರಾಜೇಂದ್ರ ಪ್ರಸಾದರು ಸದ್ಗುಣಿಯೂ ಹೌದು, ಘನವಂತರೂ ಹೌದು.

ಸರ್ದಾರರ ಕಟ್ಟುನಿಟ್ಟಿನ ಶಿಸ್ತು ಮತ್ತು ಸಂಘಟನೆ, ಶೀಘ್ರ ವರ್ತನೆ ಇವು ರಾಜೇಂದ್ರರಲ್ಲಿಲ್ಲವೆನ್ನುವುದಾದರೆ ಅದು ಅವರವರ ತರಬೇತು ಮತ್ತು ಶಾರೀರಿಕ ಶಕ್ತಿಗನುಗುಣವಾಗಿದೆ. ಈ ಎರಡು ಮಹಾ ಖ್ಯಾತಿಯ ವಕೀಲರಲ್ಲಿ ಒಬ್ಬರು ಕ್ರಿಮಿನಲ್ ಕಾನೂನಿನಲ್ಲಿ ಮತ್ತೊಬ್ಬರು ಸಿವಿಲ್ ಕಾನೂನಿನಲ್ಲಿ ಹೆಸರು ಪಡೆದವರು. ಈ ಎರಡು ಕ್ಷೇತ್ರಗಳಿಗನುಗುಣ ಅವರಲ್ಲಿ ವ್ಯತ್ಯಾಸವಿರಲೇಬೇಕು. ಕೆಲಸವೇ ಮನುಷ್ಯನಿಗೆ ರೂಪಿಸುವ ವಸ್ತು, ಆತನ ಭಾವನೆಯನ್ನು ಪ್ರತಿಬಿಂಬಿಸಿ, ಆತನ ಗುಣವಿಶೇಷಗಳನ್ನು ತಿದ್ದುವ ಶಕ್ತಿಯೂ ಇದೆ. ಕ್ರಿಮಿನಲ್ ಲಾಯರಿಗೆ ವಿಳಂಬ ಮಾಡಲು ಸಮಯವಿಲ್ಲ. ತನ್ನ ವಾದವನ್ನು ರಚಿಸಿ ಆತನು ಕ್ಷಣ ವರ್ತಿಸಬೇಕು. ಬೊಳೆಯ ಪಂದ್ಯದಲ್ಲಿ ಓಡಲು ಸಮಯ ಇರುವುದಿಲ್ಲ. ಸಿವಿಲ್ ಲಾಯರ್ ಹಾಗಲ್ಲ. ವಿಚಾರ ನಡೆ ನಡೆದಂತೆಯೇ ತನ್ನ ವಾದವನ್ನು ಒಲವ [illegible] ಹೊಸ ಕಾರಣಗಳನ್ನು ಸೇರಿಸುತ್ತ, ಸಾಕ್ಷಿಗಳ ಮಾತನ್ನು ಉಪಯೋಗಿಸುತ್ತ, ಹೊಸ ವಾದಗಳನ್ನು ಹೂಡುತ್ತ [illegible] ಕಡೆಯವರೆಗೆ ಅಲ್ಲಿ ಬದಲಾವಣೆಗೆ ಅವಕಾಶವಿದೆ. ಆದ್ದರಿಂದ ಸರ್ದಾರರ ಸ್ವಭಾವಕ್ಕಿಂತ ರಾಜೇಂದ್ರರ ಸ್ವಭಾವಗಳು ಬೇರೆಯಾಗಿ ಹೊಳೆಯುವವು. ರಾಜೇಂದ್ರರ ಸ್ವಭಾವದಲ್ಲಿ ನಯ, ವಿನಯಗಳು ತುಂಬಿವೆ. ಸರ್ದಾರರದ್ದು ಎದೆಯಲ್ಲಿ ದೀರ್ಘ [illegible] ಭಯವಿಲ್ಲದ ಕ್ರಿಯೆ.

ಗಾಂಧೀಜಿಯವರಿಂದ ರಾಜೇಂದ್ರ ಬಾಬುಗಳು ಭಿನ್ನರಾಗಿದ್ದರೆ ಅದಕ್ಕೆ ಸ್ವಾಭಾವಿಕವಾಗಿ ಅವರ ಶಾರೀರಿಕ ಅಡಚಣೆಯೇ ಕಾರಣ. ರಾಜಕೀಯದಲ್ಲಿ ಶಾರೀರಿಕ ಆರೋಗ್ಯವು ಮುಖ್ಯ. ಆದರೂ ಕೂಡ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಅಂದರೆ ೧೯೩೪-೩೫ರಲ್ಲಿ ಅವರು ದೇಶದ ನಾನಾ ಮೂಲೆಗಳನ್ನು ಬೇಗ ಸುತ್ತಿ ದುಡಿದರೆಂಬುದು ಎಲ್ಲರ ಜ್ಞಾಪಕದಲ್ಲಿರಬಹುದು. (ಆ ಸಮಯದಲ್ಲಿ ಅವರು ಕೊಡಗಿಗೂ ಬಂದಿದ್ದರು.) ದೇಶದಲ್ಲಿಯೂ ಕಾಂಗ್ರೆಸ್ ಸಂಸ್ಥೆಯಲ್ಲಿ ಬಿಕ್ಕಟ್ಟು ಬಂದಾಗ ಮಹಾತ್ಮಾ ಗಾಂಧಿಯವರಿಗೂ, ಅವರ ಜೊತೆಗಾರರಿಗೂ ರಾಜೇಂದ್ರಪ್ರಸಾದರ ಹೆಸರು ಥಟ್ಟನೆ ಬರುತ್ತಿತ್ತು. ೧೯೩೯ರಲ್ಲಿ ಕಾಂಗ್ರೆಸ್ ಅಧ್ಯಕ್ಷತನಕ್ಕೆ ನೇತಾಜಿ ಸುಭಾಶಚಂದ್ರರು ರಾಜಿನಾಮೆ ಕೊಟ್ಟಾಗ, ೧೯೪೭ರಲ್ಲಿ ಆಚಾರ್ಯ ಜೆ. ಬಿ. ಕೃಪಲಾನಿಯವರು ಅಧ್ಯಕ್ಷತನಕ್ಕೆ ರಾಜಿನಾಮೆ ಇತ್ತಾಗ ರಾಜೇಂದ್ರ ಪ್ರಸಾದರೇ ತೆರವಾದ ಸ್ಥಳವನ್ನು ತುಂಬಬೇಕಾಯಿತು. ಅವರ ಉತ್ತುಂಗ ಭಾವನೆ, ಸಾಧು ಮತ್ತು ವಿನಮ್ರ ಸ್ವಭಾವ ಇವು ಅನೇಕ ಶೀಘ್ರವರ್ತನೆಯ ರಾಜಕಾರಣಿಗಳ ಸ್ವಭಾವಕ್ಕೆ ವಿರುದ್ಧವಿದೆ. ಅವರು ತಾವು ಹಿಡಿದದ್ದೇ ಸಾಧಿಸಬೇಕೆಂದು ವಾದಿಸುವವರಲ್ಲ; ತಮ್ಮ ಅಭಿಪ್ರಾಯವನ್ನು ಮತ್ತೊಬ್ಬರ ಮೇಲೆ ಹೇರುವವರಲ್ಲ. ರಾಜಕೀಯ ಶಾಸ್ತ್ರದಲ್ಲಿ ನಿಸ್ಸೀಮರೂ, ಹೆಸರು ಪಡೆದವರೂ ಕೂಡ ರಾಜೇಂದ್ರಪ್ರಸಾದರ ಆ ಸರಳ ವರ್ತನೆ, ನಿಷ್ಕಳಂಕ ಸ್ವಭಾವ, ಅವರ ಮೆದುಳಿನ ಮತ್ತು ಅಂತರಂಗ ಸ್ವಚ್ಛತೆಗಳಿಗಾಗಿ ಆಶಿಸಬೇಕು!

ರಾಜೇಂದ್ರ ಬಾಬುಗಳು ಜನತೆಯ ಆದರಾಭಿಮಾನಕ್ಕೆ ಪಾತ್ರರಾದುದರಲ್ಲಿ ಆಶ್ಚರ್ಯವಿಲ್ಲ; ಅವರ ಜೊತೆಗಾರರು ಹಿರಿಯರೇ ಇರಲಿ ಯಾ ಕಿರಿಯರೇ ಇರಲಿ ಎಲ್ಲರ ಬಗ್ಗೆ ಅವರ [illegible] 'ಪ್ರೀತಿ ವಿಶ್ವಾಸ' [illegible]. ಹಿರಿಯರಿಗೆ ಅವರು ಕೊಡುವ ಗೌರವ, ಸಮಾನರಿಗೆ ಕೊಡುವ ಮರ್ಯಾದೆ ಮತ್ತು ಕಿರಿಯರಿಗೆ ತೋರುವ ಮಮತೆ ಇವು ಜೊತೆಯಾಗಿ ಯಾವುದೇ ಮಹಾ ಜವಾಬ್ದಾರಿಯನ್ನು ಘರ್ಷಣೆ ಇಲ್ಲದ ಹಾಗೆ ನಿರ್ವಹಿಸಲು ಅವರಿಗೆ ಸಹಾಯಕವಾಗಿವೆ. ಅವರು ಸುಲಭದಲ್ಲಿ ತನ್ನ ಸಹೋದ್ಯೋಗಿಗಳ ಅನುಮೋದನೆ ಪಡೆಯಬಲ್ಲರು. ತಮ್ಮ ಜೊತೆ ಕೆಲಸಗಾರರಿಗೆ ಅರ್ಥವಾಗದ ವ್ಯವಹಾರ [illegible]. ಯಾವುದೇ ವಿಷಯ [illegible] ಇಲ್ಲ. ಅವರು ತಮ್ಮ ನಿಲುವನ್ನು ನಿಷ್ಕಳಂಕವಾಗಿ ಹೇಳುತ್ತಾರೆ. [illegible] ತಮ್ಮ ಬಗ್ಗೆ ಇತರರ ಅಭಿಪ್ರಾಯ [illegible] ಅವರು ಸಂಕೋಚಪಡುವುದಿಲ್ಲ [illegible]. ತಮ್ಮ ಭವಿಷ್ಯದ ಬಗ್ಗೆ ಅವರೆಂದೂ ಚಿಂತಿಸಿದವರಲ್ಲ. ಎಲ್ಲರಿಗೂ ಸಹಕಾರ [illegible].

ನಮ್ಮಲ್ಲಿ ಎಲ್ಲೆಲ್ಲೂ ಇಕ್ಕಟ್ಟಿನ ಒಂದೊಂದು ವಿಶೇಷ ಸ್ವಭಾವ ಇದ್ದೇ ಇರುವುದನ್ನು ನಾವು ಕೇಳಿದ್ದೇವೆ. ಅವರು ನೂತನವಾಗಿ [illegible] ನಾನಾ ವಿಧದಿಂದ ತಿಳಿಸುತ್ತಾರೆ. ಕೆಲವರು ಹಬ್ಬಗಳನ್ನು [illegible]. ಕೆಲವರು [illegible] ಗೋಷ್ಠಿ [illegible]. ಕೆಲವರು ಮಾತು [illegible]. ರಾಜೇಂದ್ರ ಪ್ರಸಾದರಿಗೆ ಇಂಥಾ ಒಂದು ಸ್ವಭಾವ ಅವರಿಗೆ ತಿಳಿಯದು. ಕೆಲವರ [illegible] ಬಾಯಿ [illegible] ಅವಕ್ಕಾಗಿ [illegible]. ರಾಜೇಂದ್ರಪ್ರಸಾದರೂ ಆ ರೀತಿ!

ರಾಜೇಂದ್ರಪ್ರಸಾದರು ನ್ಯಾಯ ಶಾಸ್ತ್ರ, ಸಾಹಿತ್ಯ, ಇಂಗ್ಲಿಷ್, ಹಿಂದೀ ಮತ್ತು ಪರ್ಶಿಯನ್‌ಗಳಲ್ಲಿ ಮಹಾನಿಷ್ಣಾತ ಪಂಡಿತರು. ಅವರ ಭಾಷಣ ಶೈಲಿ, ಭಾವಗಳ ಪರಿಪಕ್ವ ಮಂಡನೆ, ಸ್ಪಷ್ಟ ಉಚ್ಚಾರಣೆ ಇವು ಅವರನ್ನು ಉತ್ತಮ ಭಾಷಣಕಾರರೆನಿಸಿವೆ. ಸಾಮಾನ್ಯ ಜ್ಞಾನದೊಂದಿಗೆ ಪರಿಷ್ಕೃತ ನ್ಯಾಯಶಾಸ್ತ್ರದ ವಿಚಾರ ಮಾಡಿ ಅವರು ಜನತೆಯ ಮುಂದಿಡುತ್ತಾರೆ. ಸಾರ್ವಜನಿಕರ ಮುಂದೆ ತಮ್ಮ ಅಭಿಪ್ರಾಯಗಳನ್ನು ಅವರು ಹೇರುವುದಿಲ್ಲ. ದೇಶದ ಅವಶ್ಯಕತೆಯನ್ನು ನೋಡಿ ಸಾರ್ವಜನಿಕ ಅಭಿಪ್ರಾಯವನ್ನು ತಿದ್ದಲು ಅವರು ಹೆದರುವುದೂ ಇಲ್ಲ. ಇಂಥಾ ಕಾಲಕ್ಕೆ ಅವರ ವರ್ತನೆ ಪಕ್ಷಾತೀತವೂ, ನ್ಯಾಯಸಮರ್ಪಕವೂ ಆಗಿದ್ದು ಯೋಗ್ಯತೆಯನ್ನೂ ಇವರು ಕಟ್ಟಿಕೊಳ್ಳಲು ಅಸಮರ್ಥರು!

೧೯೧೭ರಲ್ಲಿ ತನ್ನ ಲಾಯರ್ ವೃತ್ತಿಯಲ್ಲಿ ಘನತೆಯ ತುದಿಗೇರುತ್ತಿದ್ದ ಆ ಕಾಲದಲ್ಲಿ ಚಂಪಾರಣದ ಚಳವಳಿಯಲ್ಲಿ ಭಾಗವಹಿಸಲು ಗಾಂಧಿಜಿಯವರಿಂದ ರಾಜೇಂದ್ರ ಬಾಬುಗಳು ಆಹ್ವಾನಿತರಾದರೆಂಬುದು ಬಹುಶಃ ಬಹು ಜನರಿಗೆ ತಿಳಿದಿರಲಾರದು. ಚಂಪಾರಣದಲ್ಲಿ ನೀಲಿ ವ್ಯವಸಾಯಗಾರರು ತಮ್ಮ ಯೂರೋಪಿಯನ್ ಪ್ಲಾಂಟರುಗಳಿಗೆ ಬಲ ಅಸ್ವಾಭಾವಿಕ ಕಂದಾಯ ತೆರುತ್ತಿದ್ದರು. ಗಾಂಧೀಜಿಯವರು ಅನ್ಯಾಯವಾಗಿ ರೈತರಿಂದ ತರಬೇತು ಅವರಿಗೆ ಇಷ್ಟ ಮಾಡಿದರು.

ಚಂಪಾರಣದ ಹೋರಾಟದ ಆಹ್ವಾನ ದಾಬ [illegible] ತನ್ನೊಡನೆ ದುಡಿಯುವ ಮೇಲೆ, ನಂತರ ಸತ್ಯಾಗ್ರಹ ಹೋರಾಟಗಳಲ್ಲಿ ಪ್ರವೇಶಿಸಿದ ಮೇಲೆ, ಅನಂತರ ರಾಷ್ಟ್ರೀಯ ಸಂಗ್ರಾಮದಲ್ಲಿ ತನ್ನೊಡನೆ ದುಡಿದ ಮೇಲೆ, ಆದರ್ಶದ ತನ್ನ ನೀತಿ ತತ್ವಗಳನ್ನು ಎದುರಿಸುವವರ ಮೇಲೆ ಗಾಂಧೀಜಿಯವರಿಗೆ ಅಪಾರ ಕೃಪೆಯಾದ ಪ್ರೀತಿ ವಿಶ್ವಾಸಗಳಿದ್ದವು. ರಾಜೇಂದ್ರ ಪ್ರಸಾದರು ಪ್ರಥಮ ಗುಂಪಿಗೆ ಸೇರಿದವರು. ಗಾಂಧೀಜಿಯವರ ಕಡೇತನಕವೂ ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಪಂಚಾಯತ [illegible] ರಾಜೇಂದ್ರರು [illegible] ಗಳೂ ಬಂದ [illegible] ಆಗಿದ್ದ [illegible] ಈ [illegible] ಭಾಷಣ [illegible] ಇವರಲ್ಲಿ [illegible] ಧ್ಯೇಯ [illegible] [illegible] ಇರುವ [illegible] ಗಾಂಧೀಜಿಯವರ [illegible] ಗೆ ಬೇಕೇ? [illegible] ಅವರ [illegible] ಸಿಟ್ಟಿಗೆ [illegible] ದಮನಗಳನ್ನು [illegible] ಪ್ರೀತಿಸುವ [illegible] ರಾಜೇಂದ್ರ [illegible] ಸಿಟ್ಟಿಗೆಬಂದಿಲ್ಲ. ತನ್ನ ಸಿಟ್ಟನ್ನು ಹಿಡಿದಿಟ್ಟು [illegible] ಜೀವನವಾಗಿ [illegible]. ಬಿಹಾರ್ ಭೂಕಂಪ ಕಾಲಕ್ಕೆ ಅವರು ಮಾಡಿದ ಕೆಲಸವು ಭಾರತ [illegible] ಸೇವೆ. ಚರಿತ್ರೆಯು [illegible] ವಿಶಿಷ್ಟತೆಗೂ ಅತ್ಯುತ್ತಮ ಉದಾಹರಣೆಯಾಗಿದೆ.

ರಾಜೇಂದ್ರ ಪ್ರಸಾದರು ತಮ್ಮ ಭವಿಷ್ಯದ ಬಗ್ಗೆ ಆಲೋಚಿಸುವ ವ್ಯಕ್ತಿಯಲ್ಲ. [illegible] ಗೌರವಕ್ಕೆ [illegible] ತರು ಆಶಿಸಿದವರಲ್ಲ. ಆದರೆ ಎಲ್ಲಾ ಗೌರವಗಳೂ ಅವರ ಮೇಲೆ ಜನತೆಯಿಂದ ಹೇರಲ್ಪಟ್ಟವೆ. ಅವರು ಹಿಂದೀ ರಿಪಬ್ಲಿಕಿನ ಪ್ರಥಮ ಪ್ರೆಸಿಡೆಂಟ್‌ತನಕ್ಕೆ ಸ್ಪರ್ಧಿಸುವುದಿಲ್ಲವಾಗಿ ಸ್ಪಷ್ಟವಾಗಿ ಹೇಳಿದರು. ಆದರೆ ಭಾರತಖಂಡವು ಆ ಅಮೂಲ್ಯ ಕಿರೀಟವನ್ನು ಅವರ ತಲೆಗೇ ಏರಿಸಿತು. ರಾಜಕೀಯ ರಂಗದ

ಲ್ಲಿ ಹೇಗೋ ಹಾಗೆಯೇ ವಿಧಾಯಕ ಕಾರ್ಯಕ್ಷೇತ್ರದಲ್ಲಿ ಗಾಂಧೀಜಿಯವರ ತತ್ವಗಳನ್ನು ಅನುಷ್ಠಾನದಲ್ಲಿ ತರಲು ಸತತ ದುಡಿಯುತ್ತಿರುವ ಏಕ ಮುಂದಾಳೆಂದರೆ ರಾಜೇಂದ್ರಬಾಬುಗಳು. ಅಖಿಲ ಭಾರತ ಸರ್ವೋದಯ ಸಂಘದ ಪ್ರೆಸಿಡೆಂಟರಾಗಿ ಇವರು ಅಮೂಲ್ಯ ಸೇವೆ ಮಾಡುತ್ತಿದ್ದಾರೆ. ಹೇಳ ಹೆಸರಿಲ್ಲದಿದ್ದ ಬೀಹಾರ್ ಪ್ರಾಂತವನ್ನು ಬಹು ಪ್ರಾಂತವಾಗಿ ಮಾಡಿ ಈ ಕಳೆದ ಏಳು ವರ್ಷಗಳಲ್ಲಿ ಹಿಂದೂಸ್ಥಾನದ ಅತೀ ಮುಂದರಿದ ಪ್ರಾಂತವಾಗಿ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ರಾಜ್ಯಘಟನಾ ಸಮಿತಿಯ ಅಧ್ಯಕ್ಷರಾಗಿ ಅಜಾತ ಶತ್ರುವೆಂಬ ಕೀರ್ತಿಯನ್ನು ಇವರು ಸಂಪಾದಿಸಿದ್ದಾರೆ. ಈ ಮೂರು ವರ್ಷಗಳ ಅವಧಿಯಲ್ಲಿ ಯಾರಿಗೂ ಒಂದು ಕಠಿಣ ಶಬ್ದ ಹೇಳಿದವರಲ್ಲ. ಶಾಂತಿನಿಕೇತನದಲ್ಲಿ ನಡೆದ ಜಗತ್ತಿನ ಶಾಂತಿ ಸಾಧಕರ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾಗಿ ಜಗತ್ತಿಗೆ ಅಮೂಲ್ಯ ಸಂದೇಶವನ್ನು ಕೊಟ್ಟಿದ್ದಾರೆ. ಅವರು ಭಾರತ ರಿಪಬ್ಲಿಕಿನ ಪ್ರಥಮ ಪ್ರೆಸಿಡೆಂಟರಾಗಿರಲೀ ಯಾ ಯಾವುದೇ ಜವಾಬ್ದಾರಿ ಹೊತ್ತಿರಲೀ ಇಹ ಜೀವನದ ಈ ಯಾತ್ರೆಯಲ್ಲಿ ಅವರು ಸತ್ಯದ ಅನ್ವೇಷಕರು. ಜಗತ್ತಿನಲ್ಲಿ ಶಾಂತಿ ಸಹನೆಗಳಿಗಾಗಿ ಅವಿರತ ದುಡಿಯುವ ಸಾಧಕರು.

ಅನುವಾದ:- ಬಾ. ಬೆ. ಗ.

---

ರಿಪಬ್ಲಿಕ್ ಭಾರತದಲ್ಲಿ

# ನಮ್ಮ ಕರ್ತವ್ಯ.

ಲೇ:—ಶ್ರೀ ಎ. ಲಕ್ಷ್ಮೀನಾರಾಯಣ ಅಳ್ವ.

ಇದೇ ಜನವರಿ ಇಪ್ಪತ್ತಾರರಂದು ಭಾರತವು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗಿ ರೂಪುಗೊಳ್ಳಲಿದೆ. ಅಂದಿನಿಂದ ಪ್ರತಿಯೊಬ್ಬ ಭಾರತೀಯನೂ ಹೊಣೆಗಾರ ವ್ಯಕ್ತಿಯಾಗುವನು. ಆದ್ದರಿಂದ ನಾವೀಗ ಆತ್ಮನಿರೀಕ್ಷಣೆ ಮಾಡಿಕೊಂಡು ಮುಂದಿನ ಹಾದಿಯನ್ನು ನಿರ್ಣಯಿಸುವುದರಲ್ಲಿ ಔಚಿತ್ಯವಿದೆ.

ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವೆಂದು ಬಗೆಯುವ 'ರಾಜಕಾರಣಿ'ಗಳೇ ಇಂದು ನಮಗೆ ಹೆಚ್ಚು ಮಂದಿ ಕಂಡುಬರುತ್ತಿದ್ದಾರೆ. ಆದರೆ ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಳ್ಳುವುದೇ—ಇಂದ್ರಿಯಗಳನ್ನು ತನ್ನ ವಶವರ್ತಿಗಳನ್ನಾಗಿ ಮಾಡಿಕೊಳ್ಳುವುದೇ—ನಿಜವಾದ ಸ್ವರಾಜ್ಯ. ತನ್ನ ಕರ್ತವ್ಯದ ಪರಿಪಾಲನೆಗಾಗಿ ಸತತ ದುಡಿದು ದೇಶದ ಉನ್ನತಿಯನ್ನು ಮನಸಾ ಹಾರೈಸುತ್ತಿರುವವನೇ ನಿಜವಾದ ಸ್ವಾತಂತ್ರ್ಯ ಪಡೆದವ ಎಂದು ಜನಕೆ ಅರಿಯುವುದಾಗಿದೆ.

ನಾಡಿಗೆ ಸ್ವಾತಂತ್ರ್ಯ ಬಂದೊಡನೆ ಉಣ್ಣಲು ಆಹಾರ, ಉಟ್ಟುಕೊಳ್ಳಲು ವಸತಿ, ಬಟ್ಟೆ, ಮತ್ತು ಇತರ ಸೌಕರ್ಯಗಳು ತಮ್ಮ ಕಾಲಬಳಿಗೆ ತನ್ನಿಂದ ತಾನೇ ಬಂದು ಬೀಳುವವೆಂದು ಹಲವರು ಅಜ್ಞ ಮಂದಿ ಭಾವಿಸಿತ್ತು. ಕ್ರಾಂತಿಯ ಭಾವನೆ ಒಳಗಾಗಿತ್ತು. ಆದರೆ ಅದು ಹಾಗೆ ಸಿಗದೆ ಹೋದಾಗ ಆ ಜನ ಕಂಗಾಲಾದರು. ಈಗಿನ ವೇಳೆ ಆ ತಪ್ಪನ್ನು ತಿದ್ದಲು ಪ್ರಯತ್ನಿಸದೆ ಸೇವಕರ ಅಮೂಲ ಸಾಧನವನ್ನು ಜನತೆಯಲ್ಲಿ ಹರಡುತ್ತಿರುವ ಪಕ್ಷಗಳನ್ನು ಯಾರಾದರೂ ಎಚ್ಚರಿಸಲು ಅದು ಕಾರಣವಾಗಲು ವ್ಯರ್ಥವಿಷ್ಟು ಎಷ್ಟಾಗಿಸುವವನ್ನು ಗಮನಿಸಬಂತಾಯಿತು ಆ ಜನರ ರೀತಿ. ಅವರ ಈ ಕಿರಿಗೇಡಿತನ ಇನ್ನು ಕಳೆದಂತೆ ಕಾಣುವುದಿಲ್ಲ. "ನನ್ನ ದೇಶ ನನ್ನದು ಅದರ ಮೇಲೆ ಗೇಯುವ ಹಂಬಲವೇಕೆ? ನನಗೆ ಬೇಕಾದ ಸೌಕರ್ಯಗಳನ್ನು ಸರಕಾರವೇ ಒದಗಿಸಿ ಕೊಡಬೇಕು. ಹಾಗೆ ಒದಗಿಸಿ ಕೊಡದಿದ್ದರೆ ಅದು ಅಕ್ಷಮ್ಯ ಅಪರಾಧ" ಎಂಬ ಮನೋಭಾವನೆಗೆ ಅವರು ಇನ್ನೂ ಅಂಟಿಕೊಂಡಿದ್ದಾರೆ. ಇಂತಹ ಮನೋವೃತ್ತಿ ನಿರಕ್ಷರರಲ್ಲೇನೋ ಕ್ಷಮ್ಯ. ಆದರೆ ಹಲವಾರು ಮಂದಿ ಅಕ್ಷರಸ್ಥ 'ಜ್ಞಾನಿ'ಗಳು ಕೂಡಾ ಇದೇ ಮನೋಭಾವನೆಯನ್ನು ಕಟ್ಟಿಕೊಂಡು ಜನರಲ್ಲಿ ಹಬ್ಬಿಸಲು ಪ್ರಯತ್ನಿಸುತ್ತಿರುವುದು ಮಾತ್ರ ಅಕ್ಷಮ್ಯ. ಈ ಮನೋವೃತ್ತಿಯ ಹಿಂದೆ ಸ್ವಾರ್ಥವು ಪರಾರ್ಥದ ವೇಷ ಧರಿಸಿ ಕುಳಿತಿರುವುದನ್ನು ನಾವು ಕಾಣಬಹುದು. ಇಂದು ನಮ್ಮ ದೇಶದ ಮುಂದಿರುವ ನೂರಾರು ಜಟಿಲ ಸಮಸ್ಯೆಗಳನ್ನರಿತೂ, ಇಡೀ ವಿಶ್ವವನ್ನು ನುಂಗಿರುವ ಹಲವಾರು ಕಷ್ಟಗಳೇ ನಮ್ಮನ್ನೂ ಈ ಭೀಕರತೆ ಅಪ್ಪು ಭಾರತದವೇ ಮಾತ್ರವಲ್ಲ ಮಿಕ್ಕೆಲ್ಲರ ಮುನ್ನಡೆಗೂ ಅಡ್ಡಿಯಾಗಿಯೂ ಅವರು ಇಲ್ಲದ ಸಲ್ಲದ ಉದ್ರೇಕ ಮಾಡಿ ಜನರನ್ನು ಅಡ್ಡದಾರಿಗೆ ಎಳೆಯುತ್ತಿದ್ದಾರೆ. ಎಂದರೆ ಮೇಲೆ ಹೇಳಿದ ಲೋಕದ ಸತ್ಯದ ತತ್ವದ ಬಗ್ಗೆ ಮನವರಿಕೆಯಾಗಬಹುದು. ಇಂದು ದೇಶದಲ್ಲಿ ಒಂದು ವಿನಾಶಕಾರೀ ಪ್ರವೃತ್ತಿಯನ್ನು ತಯಾರಿಸುತ್ತಿದ್ದಾರೆ. ಈ ರೀತಿ ವಿನಾಶಕಾರೀ ವಸ್ತುವಿನ ಮೇಲೆ ಕುಳಿತು ಅದಕ್ಕೇ ಬೆಂಕಿ ಕೊಟ್ಟು ಅದರಿಂದ ಆಗುವ ನಾಶವನ್ನು ನೋಡುತ್ತಿರುವ ಈ ಮಂದಿಗೆ ಕಾಲವೇ ಬುದ್ಧಿ ಕಲಿಸೀತು! ಆದರೆ ಅದರಿಂದ ಹಲವಾರು ಮಂದಿಯನ್ನು ಈ ಜನರು ಮೃತ್ಯುವಿಗೆ ಬಲಿ ಹಚ್ಚಿ ಈ ವಿನಾಶಕಾರೀ ಕೇಂದ್ರದೆಡೆಗೆ ತಮ್ಮೊತ್ತನೆ ಎಳೆದೊಯ್ಯುತ್ತಿರುವುದು ಮಾತ್ರ ಬಹಳ ವ್ಯಸನಾಸ್ಪದವಾದ ವಿಚಾರ.

ಸ್ವಾತಂತ್ರ್ಯವೆಂಬುದು ಮನಸ್ಸಿಗೆ ಮಾತ್ರ ಅರಿವಾಗಬಲ್ಲ ಒಂದು ಸ್ಥಿತಿ ವಿಶೇಷ. ಅದರ ಇಂದ್ರಿಯಗಳಿಗೆ ಸುಖ ನೀಡಬಲ್ಲ ವಸ್ತು ವಿಶೇಷವಲ್ಲ. ಮುಂದೆ ಅದೇ ಬಾಹ್ಯ ಸುಖಗಳನ್ನೂ ಒದಗಿಸಿಕೊಡಬಲ್ಲ ಸಾಧನವೂ ಆದೀತು ಅಷ್ಟೆ. ಆದರೆ ಇದನ್ನು ಎಷ್ಟು ಮಂದಿ ಅರಿಯಬಲ್ಲರು? ಅರಿತಿದ್ದರೆ ಇಂದು ದೇಶದಲ್ಲಿ ಏಳುವ ತಿಳಿಯಲ್ಲದ 'ಕೂಗು' 'ವಾದ'ಗಳಿಗೆ ಎಡೆಯಿದ್ದೀತೇ? ಒಬ್ಬನು ಇನ್ನೊಬ್ಬನ ಅಡಿಯಾಳಾಗಿ ತಿಂಗಳಿಗೆ ನೂರು ರೂಪಾಯಿ ಪಡೆಯುತ್ತಾನೆ; ಮತ್ತೊಬ್ಬನು ಸ್ವತಂತ್ರನಾಗಿ ಬಾಳಿ ತಿಂಗಳಿಗೆ ಅರುವತ್ತು ರೂಪಾಯಿ ಸಂಪಾದಿಸುತ್ತಾನೆ ಎಂದು ಭಾವಿಸುವ. ಇವರಲ್ಲಿ ಮೊದಲನೆಯವನಿಗಿಂತಲೂ ಎರಡನೆಯವನೇ ಹೆಚ್ಚು ಸುಖಿಯಾಗುತ್ತಾನೆ. ಮೊದಲನೆಯವನಿಗೆ ರೂಪಾಯಿ ಹೆಚ್ಚು ದೊರಕುತ್ತಿದ್ದರೂ ಪರತಂತ್ರ್ಯವಲಿದ್ದುದರಿಂದ ಎರಡನೆಯವನಂತೆ ಶಾಂತಿಯಾಗಲೀ ಉತ್ಸಾಹವಾಗಲೀ ದೊರಕುವುದಿಲ್ಲ. ಇದನ್ನೇ ಸರ್ವಜ್ಞ "ಹಂಗಿನರಮನೆಗಿಂತ ವಿಂಗಡದ ಗುಡಿಲೇಸು" ಎಂದಿದ್ದಾನೆ. ಇದೇ ಸ್ಥಿತಿ ಒಂದು ದೇಶಕ್ಕೂ ಅನ್ವಯಿಸುತ್ತದೆ. ನಮಗೆ ಬ್ರಿಟಿಷರ ಗುಲಾಮರಾಗಿರುವ ಕಾಲಕ್ಕಿಂತ ಈಗ ಬಹಳ ಹೆಚ್ಚಿನ ಸೌಕರ್ಯಗಳೇನೂ ದೊರೆತಿಲ್ಲವಾದರೂ (ಇದು ಪರಿಸ್ಥಿತಿಯ ವಿಷಮತೆಯ ದೆಸೆಯಿಂದ ಎಂಬುದನ್ನು ಮರೆಯಲಾಗದು) ನಾವು ಸುಖಿಗಳಾಗಿದ್ದೇವೆ. ಅದು ನಾವು ಸ್ವತಂತ್ರರಾದುದರಿಂದಲೇ. ಒಂದು ವೇಳೆ ಹೆಚ್ಚಿನ ಮಂದಿಗೆ ಆ ಸುಖ ದೊರೆತಿಲ್ಲವಾದರೆ ಅದು ಅವರ ದಾಸ್ಯ ಮನೋವೃತ್ತಿಯ ದ್ಯೋತಕವಾಗಿದೆ ಅಷ್ಟೇ!

ಇಂದು ಹೆಚ್ಚಿನ ಮಂದಿಯ ಮನದ ಓಟ ಒಂದು ವಿಚಿತ್ರ ಗತಿಯನ್ನು ತಾಳಿರುತ್ತದೆ. ಹಿರಿಯರ ತಪ್ಪುಒಪ್ಪುಗಳನ್ನು ಹೆಕ್ಕಿ ವಿಮರ್ಶೆ ಮಾಡುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಆದರೆ ತನ್ನ ಬಾಳನ್ನೇ ವಿಮರ್ಶೆಗೆ ಗುರಿ ಮಾಡಿಕೊಳ್ಳುವ ಹವ್ಯಾಸ ಕಾಣೆಯಾಗಿದೆ. ಇಂದಿನ ಕೃತಕ ವಾತಾವರಣದಲ್ಲಿ ಬಾಳನ್ನು ಹಸನ ಮಾಡಿಕೊಳ್ಳುವ ಬುದ್ಧಿ ದಿವಾಳಿ ತೆಗೆದಿದೆ. ಪರರ ಟೀಕೆಯೇ ಇಂದಿನ ಪ್ರವಚನ. ಕರ್ತವ್ಯ ಪ್ರಜ್ಞೆಯು ಅಳಿದು ಹಕ್ಕುಬಾಧ್ಯತೆಯ ಸ್ಫೋಟನ ಯುಗವು ತಲೆ ಹಾಕಿದೆ. ಇಂತಹ ಕಾಲದಲ್ಲಿ ಸ್ವಾತಂತ್ರ್ಯವೆಂದರೆ ತನ್ನ ಹಕ್ಕಿಗಾಗಿ (ಮಾತ್ರ) ಇನ್ನೊಬ್ಬರ ಹೆಸರಿಗೆ ಹೋರಾಡುವ ಅರ್ಹತೆ ದೊರೆಯುವುದು ಎಂದು ತಿಳಿಯುತ್ತಿದ್ದಾರೆ ಜನ!

ಸ್ವಾತಂತ್ರ್ಯದ ನಿಜವಾದ ಜ್ಞಾನವುಳ್ಳ ವ್ಯಕ್ತಿಗಳ ಹೊಣೆ ಸ್ವತಂತ್ರರಾದ ಕೂಡಲೇ ಹೆಚ್ಚುತ್ತದೆ. ಅವರು ಇಂದು ದೇಶದ ಮುಂದಿರುವ ಜಟಿಲ ಸಮಸ್ಯೆಗಳಾದ ಆಹಾರದ ಅಭಾವ, ಆರ್ಥಿಕ ವಿಷಮತೆ, ಸಾಮಾಜಿಕ ಗೊಂದಲ, ಕಳ್ಳಸಂತೆ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಕೊರತೆ ಇವುಗಳನ್ನು ಹೋಗಲಾಡಿಸಲು ಹೋರಾಡಬೇಕಾಗಿದೆ. ಇಂದಿನ ವಿಷಮ ಪರಿಸ್ಥಿತಿಯ ನಿಜವಾದ ಕಾರಣವನ್ನು ಅರಿತುಕೊಂಡು ಜನತೆಗೆ ತಿಳುಹಿ ಅವನ್ನು ಕಳೆದೊಗೆಯಲು ದುಡಿಯಬೇಕಾಗಿದೆ. ನಾವು ಪ್ರತಿಯೊಂದಕ್ಕೂ ಸರಕಾರದ ಮೇಲೆ ಹೊಂದಿಕೊಂಡಿರುವುದೆಂದರೆ ಅದು ನಮ್ಮ ದೌರ್ಬಲ್ಯದ ದ್ಯೋತಕವಾಗಿದೆ. ಈ ದುರ್ಬಲ ಮನೋವೃತ್ತಿಯನ್ನು ಕಳೆದೊಗೆದು ಸ್ವಾವಲಂಬಿಗಳಾಗಿ ಬಾಳಲು ಕಲಿಯಬೇಕಾಗಿದೆ. ನಾವು ನಮ್ಮ ಜೀವನವನ್ನು ಮಹಾತ್ಮಾ ಗಾಂಧಿಯವರ ಈ ಕೆಳಗಿನ ಮಾತುಗಳಿಗೆ ಅನುಸಾರವಾಗಿ ರೂಪಿಸಿಕೊಂಡು ಭಾರತವನ್ನು ಅವರ ಕನಸಿನ ರಾಮರಾಜ್ಯವನ್ನಾಗಿ ಮಾಡಲು ಮನಸು ಮಾಡುವಾ. "ಭಾರತವಾಸಿಗಳು ಸ್ವರ್ಗ ರೂಪರಾದುದರಿಂದ ಒಂದು ಕಾಲದಲ್ಲಿ ಸ್ವರ್ಗ-ಭೂಮಿ ಎಂದು ಹೆಸರುಗೊಂಡಿತ್ತು ಈ ಭಾರತಭೂಮಿ. ಭೂಮಿ ಬೇರೆಯೇನೋ ಆಗಿಲ್ಲ ಅದೇ. ಆದರೆ ಜನ ಬದಲಾಯಿಸಿದ್ದಾರೆ. ಅದ್ದರಿಂದ ಇಂದು ಭಾರತ ಭೂಮಿ ಹಾಳು ಬಿದ್ದಂತಿದೆ. ಇದನ್ನು ಮತ್ತೆ ಸ್ವರ್ಗ ಭೂಮಿಯನ್ನಾಗಿ ಮಾಡಲು ಸದ್ಗುಣಗಳ ಮೂಲಕ ನಮ್ಮನ್ನು ಸ್ವರ್ಗವಾಸಿಗಳನ್ನಾಗಿ ಮಾಡಿಕೊಳ್ಳಬೇಕಾಗಿದೆ. ನಮ್ಮನ್ನು ಹೊನ್ನಾಗಿಸಬಲ್ಲ ಸ್ಪರ್ಶಮಣಿ ಅಷ್ಟು ಅಕ್ಷರದಲ್ಲೇ ಅಡಗಿದೆ. ಅದೇ 'ಸತ್ಯ'. ಅದ್ದರಿಂದ ಪ್ರತಿಯೊಬ್ಬ ಭಾರತೀಯನೂ ಸತ್ಯವನ್ನು ತನ್ನ ಜೀವನದ ಉಸಿರಾಗಿ ಮಾಡಿಕೊಂಡರೆ ಭಾರತವು ಸುರಾಜ್ಯವಾದೀತು." ಈ ಮಾತಿನಂತೆ ನಮ್ಮ ಜೀವನವನ್ನು ರೂಪಿಸುವುದಾಗಿ ನಾವು ಭಾರತವು ಪ್ರಜಾರಾಜ್ಯವಾಗಿ ರೂಪುಗೊಳ್ಳುವ ಶುಭ ದಿನದಂದು ಪ್ರತಿಜ್ಞೆ ಮಾಡಿಕೊಳ್ಳುವಾ!

"ನವಯುಗ"

---


## ಬಟ್ಟೆ ಬೇಕೆ?

ಮುಂದಿನ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೀರೆ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ಮಾರುವೆವು.

ಅತ್ಯುತ್ತಮ ಮಾದರಿಯ ಬನಾರಿಸ್ ಮತ್ತು ಕಾಶ್ಮೀರೀ ಪಟ್ಟೆಗಳು ಸದಾ ದೊರೆಯುವವು

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟು ಬಟ್ಟೆ ತೆಗೆಯುವವರು ಈ ಪತ್ರಿಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ಬಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ಪಳ್ಳಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕ್ಲಾತ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12-4

# ಓದುಗರ ಓಲೆಗಳು.

### 'ಸ್ವೇಟ್ ಬೇಂಕ್ವೆಟ್'

ತಾರೀಕು ೨೬-೧-೧೯೫೦ ರಂದು ಭಾರತವನ್ನು 'ರಿಪಬ್ಲಿಕ್' ಎಂದು ಸಾರಲಾಗಿದೆ. ಆ ದಿನವು ಭಾರತೀಯರೆಲ್ಲರಿಗೆ ಸಂತೋಷದ ದಿನವೇನೋ ಹೌದು. ಆದರೆ ಅಂಥಾ ದಿನದ ಸಂತೋಷದ ಸಮಯದಲ್ಲಿ ದೇಶದ ಪರಿಸ್ಥಿತಿಯನ್ನು ಮರೆತು ವರ್ತಿಸುವದು ಹಾನಿಕರ. ಆ ದಿನ ದೇಶದ ಉದ್ದಗಲಕ್ಕೂ ಔತಣ, ಉತ್ಸವಗಳ ಏರ್ಪಾಡಾಗಿದೆ. ಕೊಡಗಿನಂಥಾ ಚಿಕ್ಕ ಪ್ರಾಂತದಲ್ಲೂ ಸುಮಾರು ೫೦೦೦ ರೂಪಾಯಿಗಳಷ್ಟು ವೆಚ್ಚವಾಗಲಿದೆಯೆಂದು ವರ್ತಮಾನ. ಈ ರೀತಿಯ ದುಂದು ಗಾರಿಕೆ ಶೋಚನೀಯವಾದುದು. ದೇಶದ ಇಂದಿನ ಆಹಾರ ಕೊರತೆಯ ಕಾಲದಲ್ಲಿ ಈ ರೀತಿಯ ಔತಣಗಳು ದ್ರೋಹಾತ್ಮಕವಾಗುವವು. 'ಹೆಚ್ಚು ಬೆಳೆಸಿ, ಕಡಿಮೆ ಬಳಸಿ, ಹೆಚ್ಚು ಉಳಿಸಿ' ಎಂದು ಪ್ರಚಾರ ಮಾಡುವ ಸರಕಾರವು ಕೊಡಗಿನಂಥಾ ಚಿಕ್ಕ ದೇಶದಲ್ಲಿ ೭೦೦ "ಸಭ್ಯ"ರನ್ನು ಕರೆಸಿ ಊಟ ಏರ್ಪಡಿಸಿದರೆ ಸಾಮಾನ್ಯ ಜನರ ಮೇಲೆ ಇದರ ಪರಿಣಾಮ ಹೇಗಾಗುವದು? ಈ ಔತಣಕ್ಕೆ ಜನರನ್ನು ಆಹ್ವಾನಿಸುವದಾದರೂ ಯಾವ ತತ್ವದಿಂದ? ದುಡಿಯುವವರೆಂದೇ? ಇಲ್ಲವೇ ಯಾವ ಪ್ರತಿನಿಧಿಯೆಂದು? ಬಡಜನರ ಹಣವನ್ನು ಸರಕಾರ ಈ ರೀತಿ ದುರ್ವ್ಯಯ ಮಾಡುವದು ಜನತೆಯ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. 'ರಿಪಬ್ಲಿಕ್' ದಿನದಂಥಾ ಸಂತೋಷ ಸಂದರ್ಭದಲ್ಲಿ ಜನತೆ ಉತ್ಸವ ನಡೆಸಲಿ. ಆದರೆ ಈ ರೀತಿಯ 'ಮಂದಿಯ ಹಣ ನೋಡಿ ಮಣೆ ಹಾಕುವ' ಹಿಂದಿನ ಕಾಲದ ಪದ್ಧತಿ, ಹೊಟ್ಟೆಗಿಲ್ಲದವರ ಮಧ್ಯೆ ಈ ರೀತಿಯ ಅನೈತಿಕ ಔತಣಗಳು ಸ್ವತಂತ್ರ ದೇಶದಲ್ಲಿ ಜವಾಬ್ದಾರಿ ಸರಕಾರಗಳಿಂದ ಮಾಡಲ್ಪಡಬಾರದು. ಸರಕಾರವು ಜನತೆಗೆ ಜವಾಬ್ದಾರವಾಗಿಲ್ಲದುದೇ ಈ ರೀತಿಯ ಹಳೇ ಸಂಪ್ರದಾಯವನ್ನು ಹಿಡಿದು ವರ್ತಿಸುವ ಪರಂಪರೆಗೆ ಕಾರಣವಿರಬಹುದು. ಈ ನ್ಯೂನತೆಯನ್ನು ಸರಿಪಡಿಸಲು ಈ ಸರಕಾರಕ್ಕೆ ಹೇಳಿ ಪ್ರಯೋಜನವಿಲ್ಲವೆಂದು ನನಗೆ ಗೊತ್ತು. ಈ ಸರಕಾರದ ವರ್ತನೆಯನ್ನು ಜನತೆ ಗಮನಿಸಬೇಕೆಂಬುದೇ ನನ್ನ ಈ ಪತ್ರದ ಉದ್ದೇಶ.

'ನಿರೀಕ್ಷಕ'

---

### ವಿದ್ಯಾ ಇಲಾಖೆಯಲ್ಲಿ ಸೂಪರ್ ವೈಜರ ಆಯ್ಕೆ.

ಪ್ರೈಮರಿ ಶಾಲೆಗಳ ಮೇಲ್ವಿಚಾರಣೆಗಾಗಿ ವಿದ್ಯಾ ಇಲಾಖೆಯಲ್ಲಿ ಸೂಪರ್ ವೈಜರುಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಯ ಬಂತು. ಕೊಡಗು ಕೌನ್ಸಿಲಿನಲ್ಲಿ ಅಸಿಸ್ಟೆಂಟ್ ಎಜ್ಯುಕೇಶನಲ್ ಆಫೀಸರುಗಳನ್ನು ನಿಯಮಿಸಬೇಕೆಂದು ಸರ್ವಾನುಮತದಿಂದ ಪಾಸಾಗಿದ್ದರೂ ಕೂಡ, ಕೊಡಗು ಸರಕಾರವು ಹಣ ಖೋತ ಮಾಡಬೇಕೆಂಬ ಅಭಿಪ್ರಾಯದಿಂದ ಸೆಕೆಂಡರಿ ಗ್ರೇಡ್ ಸಂಬಳದ ಸೂಪರ್ ವೈಜರುಗಳನ್ನು ನೇಮಿಸಿದ್ದು ವಿದ್ಯಾ ಪ್ರಗತಿಯಲ್ಲಿ ಸಮಂಜಸವಾಗಿ ಕಂಡು ಬರುವದಿಲ್ಲ. ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರು ಎಲ್ಲಾ ಹೈಸ್ಕೂಲುಗಳ, ಅಸಿಸ್ಟೆಂಟ್ ಎಜ್ಯುಕೇಶನಲ್ ಆಫೀಸರು ಎಲ್ಲಾ ಹೈಯರ್ ಎಲಿಮೆಂಟರಿ ಶಾಲೆಗಳ ಸೂಪರ್ ವೈಜರ, ಕೊಡಗಿನ ಎಲ್ಲಾ ಓ. ಬಿ. ಪ್ರೈಮರಿ ಶಾಲೆಗಳ ಮೇಲ್ವಿಚಾರಣೆ ಮಾಡಬಹುದೆಂದು ನನ್ನ ಮತಿ. ಆದ್ದರಿಂದ ಸೂಪರ್ ವೈಜರ ಹುದ್ದೆಗೆ ಜಿಲ್ಲಾಬೋರ್ಡಿನ ಯೋಗ್ಯರೊಬ್ಬರನ್ನೇ ನೇಮಕ ಮಾಡಬೇಕಿತ್ತು. ಇದು ಬಿಟ್ಟು ಸರಕಾರಿ ಶಾಲೆಯ ಉಪಾಧ್ಯಾಯರೊಬ್ಬರನ್ನು ಆರಿಸಿದ ವರ್ತನೆಯು ಜನತೆಯಲ್ಲಿಯೂ, ಡಿ ಬಿ ಉಪಾಧ್ಯಾಯ ವೃಂದದಲ್ಲಿಯೂ ಅತೃಪ್ತಿಯನ್ನುಂಟು ಮಾಡಿದೆ. ಡಿ. ಬಿ. ಶಾಲೆಗಳಲ್ಲಿ ಈಗ ನೇಮಿಸಿದ ಸೂಪರ್ ವೈಜರಷ್ಟೇ ತರಬೇತು ಹೊಂದಿದವರೂ ಅವರಿಗಿಂತಲೂ ಹೆಚ್ಚಿನ ತರಬೇತನ್ನೂ ವಿದ್ಯೆಯನ್ನೂ ಗಳಿಸಿ ಸರ್ವಿಸ್ಸಾದ ಹಲವಾರು ಉಪಾಧ್ಯಾಯರಿದ್ದಲ್ಲಿ ಅವರ ಪೈಕಿ ಒಬ್ಬರನ್ನು ಸೂಪರ್ ವೈಜರಾಗಿ ಆರಿಸಿ ಡಿ.ಬಿ. ಶಾಲೆಗಳ ಉಪಾಧ್ಯಾಯರನ್ನು ಪ್ರೋತ್ಸಾಹಿಸುವುದು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರಿಗೆ ವಿಹಿತವಾಗಿತ್ತು. ಬಹುಶಃ ಪ್ರಾಥಮಿಕ ಶಿಕ್ಷಣದ ಕಿರುಳನ್ನರಿಯದವರೊಬ್ಬರನ್ನು ಚುನಾಯಿಸಿದ ಬಗೆಯನ್ನು ನೋಡಿದರೆ ವ್ಯಸನಪಡಬೇಕಾಗುತ್ತದೆ.

ಈ ಬಗೆಯ ಸೂಪರ್ ವೈಜರ ಚುನಾವಣೆಯನ್ನು ರದ್ದುಗೊಳಿಸಿ ಕೌನ್ಸಿಲಿನಲ್ಲಿ ಪಾಸಾದ ಮೇರೆ ಉತ್ತರ ಮತ್ತು ದಕ್ಷಿಣ ಕೊಡಗಿಗೆ ಒಬ್ಬೊಬ್ಬ ಅಸಿಸ್ಟೆಂಟ್ ಎಡ್ಯುಕೇಶನ್ ಆಫೀಸರನ್ನು ನೇಮಕ ಮಾಡಿ ವಿದ್ಯಾ ಇಲಾಖೆಯ ಗೌರವವನ್ನೂ ಶ್ರೇಯಸ್ಸನ್ನೂ ಕಾಪಾಡಬೇಕೆಂದು ಸರಕಾರದವರಲ್ಲಿ ನನ್ನ ವಿನಂತಿ. ಇದನ್ನು ಸದ್ಯಕ್ಕೆ ಜಾರಿಗೆ ತರಲು ಸಾಧ್ಯವಿಲ್ಲದಿದ್ದರೆ ಡಿ ಬಿ ಉಪಾಧ್ಯಾಯರ ಯೋಗ್ಯತೆಯನ್ನು ಅರಿಯಿಸಿ ಶಿಕ್ಷಣ ವೃತ್ತಿಯಲ್ಲಿ ನುರಿತ ಡಿ. ಬಿ ಉಪಾಧ್ಯಾಯರಲ್ಲೊಬ್ಬರನ್ನು ಸೂಪರ್ ವೈಜರಾಗಿ ನೇಮಿಸಬೇಕೆಂದು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರಲ್ಲಿ ನನ್ನ ಕೋರಿಕೆ.

ವಿದ್ಯಾಪ್ರೇಮಿ.

---

### ತಿಳಿದವರು ಹೇಳಬಲ್ಲಿರಾ?

ಸ್ವತಂತ್ರ ಹಿಂದೂದೇಶದ ಆರ್ಥಿಕ ಮತ್ತು ಆಹಾರ ಪರಿಸ್ಥಿತಿಗಳು ತೀರಾ ಕೆಡುಕಿನಲ್ಲಿರುವುದರಿಂದ, ಅವುಗಳನ್ನು ಸುಧಾರಿಸುವ ಸಲುವಾಗಿ ನಮ್ಮ ಸರಕಾರವು ಅನೇಕ ಉಪಾಯಗಳನ್ನು ಕೈಗೊಂಡಿದೆಯಷ್ಟೆ. ಅವುಗಳಲ್ಲಿ 'ಹೆಚ್ಚು ಬೆಳೆಯಿರಿ, ಖರ್ಚು ಕಡಿಮೆ ಮಾಡಿರಿ ಸಂಭ್ರಮದ ಔತಣಗಳನ್ನು ಕಡಿಮೆ ಮಾಡಿರಿ,'' 'ವಾರಕ್ಕೊಂದು ಹೊತ್ತು ಊಟವನ್ನು ಕೊಡಿಯಿರಿ' ಎಂಬ ಪ್ರಚಾರಗಳು ಬಹಳ ಜೋರಾಗಿ ನಡೆಯುತ್ತಿವೆಯೆನ್ನಬಹುದು. ಆದರೆ ಕೇಂದ್ರ ಸರಕಾರದ ಈ ಪ್ರಚಾರಗಳನ್ನು ಸ್ಥಳೀಯ ಅಥವಾ ಪ್ರಾಂತೀಕ ಸರಕಾರಗಳು ಆಚರಣೆಯಲ್ಲಿ ತಂದು ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿರುವವೋ? ಈ ಕಾರ್ಯದಲ್ಲಿ ಅವುಗಳು ಎಷ್ಟರ ಮಟ್ಟಿಗೆ ಜಯವನ್ನು ಹೊಂದಿವೆ? ತಿಳಿದವರು ಹೇಳಬಲ್ಲಿರಾ?

'ಖರ್ಚು ಕಡಿಮೆ ಮಾಡಿ', 'ಸಂಭ್ರಮದ ಔತಣಗಳನ್ನು ಮಾಡಿ'', ಎಂದು ಮೊರೆಯಿಡುವ ಕೊಡಗಿನಲ್ಲಿ, ಇತ್ತ ದೇಶದ ಪ್ರಜಾಸಂಭ್ರಮದ ಔತಣಗಳೂ, ಪ್ರಯಾಣವೂ ಹೆಚ್ಚುತ್ತಿರುವಂತೆಯೇ ಇರುತ್ತಿದೆ. ಉದಾಹರಣೆಗಾಗಿ ಈಗಾಗಲೇ ಬಂದು ಹೋಗಿರುವ ಕೆಲ ಮಹನೀಯರುಗಳಿಗೆ ಒಂದರ ಮೇಲೊಂದು ಚಹಕೂಟಗಳನ್ನಾಗಲೀ, ಇವನ್ನಾಗಲೀ ನ್ಯಾಯವಾಗಿ ಹೋಲಿಸಲಾಗದು. ಇಲ್ಲಿ 'ಸಂಭ್ರಮದ ಔತಣವನ್ನು ಕಡಿಮೆ ಮಾಡಿ' ಎಂದು ಸಾರುತ್ತಿರುವಾಗ, ಕೊಡಗಿನ ಕಾರಕ್ಕೆ ಈ ನಿಯಮ ಅನ್ವಯಿಸಲ್ಲವೇ? ಆದಕ್ಕಿಂತಲೂ ಮಿಗಿಲಾಗಿ ದೇಶ ಸೇವನೆಯನ್ನು ಸ್ವೀಕರಿಸಿದರು ಕಾಣಕೊಟ್ಟ, ಗಾಂಧೀ ಅನುಯಾಯಿಗಳಾದ ಕಾಂಗ್ರೆಸ್ ಸರಕಾರವೇ ಇಂಥ ಹವ್ಯಾಸವುಳ್ಳವರೆಂದರೆ ಕೊಡಗಿಗೆ ಬಂದ ಮಹನೀಯರೊಬ್ಬರಿಗೆ 'ಬೀರ್' ಮುಂತಾದ ಮದ್ಯಪಾನಗಳನ್ನು ಕೊಟ್ಟು ಉಪಚರಿಸಿದ ಉದಾಹರಣೆಗಳೂ ಇವೆಯಂತೆ! ಆದರೆ, ದೇಶದಲ್ಲಿ ನಿಶಾಸೇವನೆಯನ್ನು ನಿರ್ಮೂಲನ ಮಾಡಬೇಕೆಂದು ಸರಕಾರವು ಕೂಗುತ್ತಿರುವುದು ಬರಿಯ ತೋರಿಕೆಗಾಗಿಯಲ್ಲದೆ ಮತ್ತೇನು? ಇಂಥ ಮಾದಕ ಪೇಯಗಳನ್ನು ಬೇಕಾದಷ್ಟು ಪ್ರಮಾಣದಲ್ಲಿ ಪಡೆಯಬೇಕಾದರೆ, ಬಡವರಿಗೆ ಕಷ್ಟವಲ್ಲದೆ ಇತರರಿಗೆ ಕಷ್ಟವಿಲ್ಲ. ಸ್ಥಿತಿಯು ಹೀಗಿರುವಾಗ ನಿಶಾನಿಷೇಧಕಾರ್ಯವು ಸಾಧ್ಯವಿದೆಯೇ?

ಆಂಗ್ಲೇಯರ ಆಡಳಿತದ ಕಾಲದಲ್ಲಿ ಕಂಡು ಬರುತ್ತಿದ್ದ ಬಿಳಿಯ ಕರಿಯರೆಂಬ ಮೇಲು ಕೀಳೆಂಬ ಭೇದಭಾವಗಳು, ಸ್ವತಂತ್ರವಾದ ಈ ದೇಶದಲ್ಲಿ ಕಡಿಮೆಯಾಗುವುದರ ಬದಲು, ಹೆಚ್ಚುತ್ತಿರುವಂತೆ ತೋರಿಬರುತ್ತಿದೆ! ಪರಪ್ರಾಂತಗಳಿಂದ ಮತ್ತು ಪರದೇಶಗಳಿಂದ ಕೊಡಗಿಗೆ ಬರುವ ಮಹನೀಯರುಗಳನ್ನು ನೋಡಿಕೊಳ್ಳಲು ಇಲ್ಲಿಯ ಬಡ ಮತ್ತು ಮಧ್ಯ ತರಗತಿಯ ಪ್ರಜೆಗಳಿಗೆ ಸಾಧ್ಯವಿಲ್ಲ. ಹಲಕೆಲವರು ತಾವೇ ಚಂದಾ ವಸೂಲುಮಾಡಿ, ತಮಗೆ ಬೇಕಾದ ಅತಿಥಿಗಳನ್ನು ಸತ್ಕರಿಸಿ ತಾವೇ ಅವರ ಮುಡಿಗಳನ್ನು ತಾವೇ ಬೆಳೆಸಿಕೊಳ್ಳುತ್ತಿರುತ್ತಾರೆ! ಇದು ಎಲ್ಲಿಯ ನ್ಯಾಯ! ಇದ ಸ್ವತಂತ್ರ ದೇಶದ ನಾಗರಿಕ ಪ್ರಜೆಗಳ ರೀತಿಯೇ? ಸ್ವತಂತ್ರ ದೇಶದಲ್ಲಿಯೂ ಕೂಡ ಬಡ ಪ್ರಜೆಗಳಿಗೆ ಸ್ಥಾನವಿಲ್ಲದಾಯಿತೇ? ಹಿಂದೂ, ಮುಸಲ್ಮಾನರೆಂಬ ಜಾತಿ ಭೇದದ ಬದಲು ಆರ್ಥಿಕ ಪರಿಸ್ಥಿತಿಗನುಸಾರ 'ಆರ್ಥಿಕ ಜಾತಿ-ಭೇದ'ವೊಂದು ತಲೆಯೆತ್ತುತ್ತಿರುವಂತೆ ಕಂಡುಬರುತ್ತಿದೆ! ಇದು ನಿಲ್ಲಬೇಕು. ಇಂದಿನ ಅನೇಕ ಬಡವರು ಮತ್ತು ಮಧ್ಯ ತರಗತಿಯವರು ಆರ್ಥಿಕ ಸ್ಥಿತಿಯಲ್ಲಿ ಮಾತ್ರ ಬಡವರಲ್ಲದೆ, ನೈತಿಕ, ಧಾರ್ಮಿಕತೆಯ, ಹಾಗೂ ಸಾಮಾಜಿಕ ವಿಷಯಗಳಲ್ಲಿ ಬಡವರಲ್ಲ. ಆದುದರಿಂದ ಇನ್ನು ಮುಂದಾದರೂ, ಇಂತಹ ವರ್ತನೆಗಳು ಕೂಡದು.

ಭೀಮಯ್ಯ.

---

## ಸಾರ್ವಜನಿಕ ಸಭೆಗಳು.

### ಗೋಣಿಕೊಪ್ಪ.

ತಾರೀಕು ೨೨-೧-೧೯೫೦ ರಲ್ಲಿ ಇಲ್ಲಿಯ ಅಶ್ವತ್ಥರಾಯ ಮುಂದುಗಡೆ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯು ನಡೆಯಿತು. ಶ್ರೀ. ಎ. ಎಸ್. ಪೊನ್ನಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಓ. ಎ. ಚೆಂಗಪ್ಪ, ಕೆ. ಟಿ. ಉತ್ತಪ್ಪ ಮತ್ತು ಕೆ. ಪಿ. ಕರುಂಬಯ್ಯ ಇವರುಗಳು ಕಂದಾಯ ಏರಿಸುವ ಮಸೂದೆಗೂ ಕೊಡಗಿನ ಭವಿಷ್ಯಕ್ಕೂ ಇರುವ ಸಂಬಂಧವನ್ನು ವಿವರಿಸಿ ಕೌನ್ಸಿಲಿನ ಹೊಸ ಚುನಾವಣೆಯಾಗುವ ವರೆಗೆ ಸಮರಿ ಸೆಟ್ಲ್‌ಮೆಂಟ್ ಮಸೂದೆಯನ್ನು ಮುಂದರಿಸಬೇಕಾಗಿ ಇದು ಸಾಧ್ಯವಿಲ್ಲದಿದ್ದರೆ ಜನಾಭಿಪ್ರಾಯ ತಿಳಿಯುವ ಮಸೂದೆಯಲ್ಲಿಯ ಕಂದಾಯ ದರವನ್ನು ಇಳಿಸಲು ಇದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡುವುದು ಮುಖ್ಯವೆಂದು ವಿವರಿಸಿ ಭಾಷಣ ಮಾಡಿದರು. ಶ್ರೀಗಳಾದ ಎಸ್. ಸೋಮಣ್ಣ ಮತ್ತು ಬಿ. ಕೆ. ನಂಜುಂಡೇಶ್ವರ ಇವರುಗಳು ಸಮರಿ ಸೆಟ್ಲ್‌ಮೆಂಟ್ ಮಸೂದೆಯನ್ನು ಸಂಪೂರ್ಣ ವಿರೋಧಿಸಬೇಕೆಂದು ಮಾತಾಡಿದರು. ಭಾಷಣ ಮಾಡುತ್ತಿರುವಾಗಲೂ ಠರಾವುಗಳನ್ನು ಓಟಿಗೆ ಹಾಕುವಾಗಲೂ ಎರಡು ಪಕ್ಷದವರಲ್ಲಿ ಸ್ವಲ್ಪ ಗಲಿಬಿಲಿಯುಂಟಾಯಿತು. ಕಡೆಗೆ ಈ ಕೆಳಗಿನ ಠರಾವುಗಳು ಬಹುಮತದಿಂದ ಪಾಸಾದವು.

(೧) ಅವಧಿ ಮುಗಿದಿರುವ ಈಗಿನ ಕೌನ್ಸಿಲಿಗೆ ಹೊಸ ಚುನಾವಣೆಯನ್ನು ಶೀಘ್ರದಲ್ಲೇ ನಡೆಸಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.'

(೨) 'ಸಮರಿ ಸೆಟ್ಲ್‌ಮೆಂಟಿನ ಮಸೂದೆಯನ್ನು ಕೌನ್ಸಿಲಿನ ಹೊಸ ಚುನಾವಣೆಯಾಗುವ ವರೆಗೆ ಮುಂದರಿಸಬೇಕೆಂದೂ ಇದು ಸಾಧ್ಯವಿಲ್ಲದಿದ್ದರೆ ಸದರಿ ಮಸೂದೆಯನ್ನು ಜನಾಭಿಪ್ರಾಯ ತೆಗೆದು ಕಂದಾಯದ ದರವನ್ನು ಕಡಿಮೆ ಮಾಡುವ ಹಾಗೆ ತಿದ್ದುಪಡಿ ಮಾಡುವ ಬಗ್ಗೆ ಇದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂದೂ ಈ ಸಭೆಯು ಸರಕಾರವನ್ನು ಮತ್ತು ಕೌನ್ಸಿಲು ಸದಸ್ಯರನ್ನು ಕೇಳಿಕೊಳ್ಳುತ್ತದೆ.

### ಹುದಿಕೇರಿ

ತಾರೀಕು ೨೩ ರಲ್ಲಿ ಹುದಿಕೇರಿಯಲ್ಲಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ. ಮಂಡೆಪಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮೇಲಿನ ಅರ್ಥದ ಠರಾವುಗಳು ಸರ್ವಾನುಮತದಿಂದ ಪಾಸಾದವು.

### ಶಾಂತಳ್ಳಿ.

ತಾರೀಕು ೨೦ ರಲ್ಲಿ ಶಾಂತಳ್ಳಿಯಲ್ಲಿ ಒಂದು ಸಾರ್ವಜನಿಕ ಸಭೆಯು ಪಿ. ಮಾರಿಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮರಿ ಸೆಟ್ಲ್‌ಮೆಂಟಿನ ಮಸೂದೆಯನ್ನು ಕೌನ್ಸಿಲ್ ಚರ್ಚೆ ನಡೆದ ನಂತರ ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯನ್ನು ಮತ್ತು ಸಮರಿ ಸೆಟ್ಲ್‌ಮೆಂಟ್ ಮಸೂದೆಯನ್ನು ಪರ್ಯಾಲೋಚಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂಬ ಠರಾವು ಪಾಸಾಯಿತು.

---

# ಕೊಡಗು

ತಾ. ೨೬-೧-೧೯೫೦ನೇ ಶುಕ್ರವಾರ

## ರಿಪಬ್ಲಿಕ್ ಭಾರತ.

೧೯೩೦ ರಿಂದಲೇ ಜನವರಿ ತಾರೀಕು ೨೬ಕ್ಕೆ ಒಂದು ಘನತೆ ಬಂದಿದೆ. ಭರತ ಖಂಡವು ಪೂರ್ಣ ಸ್ವಾತಂತ್ರ್ಯವನ್ನು ಪಡೆಯುವದೇ ಗುರಿಯೆಂದು ೨೦ ವರ್ಷಗಳ ಹಿಂದೆ ಜನವರಿ ೨೬ ರಲ್ಲಿ ರಾವಿ ನದೀತೀರದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ ಪ್ರತಿಜ್ಞೆಯನ್ನು ಕೈಕೊಂಡದ್ದಾಯಿತು. ಅಂದಿನಿಂದ ಪ್ರತಿ ಜನವರಿ ತಾರೀಕು ೨೬ ಭಾರತದ ಸ್ವಾತಂತ್ರ್ಯ ದಿನ. ಭಾರತ ಸ್ವಾತಂತ್ರ್ಯ ದಿನಾಚರಣೆ ಎಂದರೆ ಅಂದು ಗಂಡಾಂತರದ ಪ್ರಸಂಗ. ತ್ರಿವರ್ಣ ಧ್ವಜಹಾರಿಸಿದರೆ ಅದು ಸರಕಾರಕ್ಕೆ ವಿರುದ್ಧ. ಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ ಎಂದಾಗ ಅದು ರಾಜದ್ರೋಹವೆಂದು ಪರಿಗಣಿಸಲ್ಪಡುತ್ತಿತ್ತು. ಆದ್ದರಿಂದ ಪ್ರತಿ ಜನವರಿ ೨೬ ರಂದು ಜನತೆಯು ದಸ್ತಗಿರಿ, ಲಾಠಿ ಏಟು ನಡೆದು ಬರುತಿತ್ತು. ಆದರೆ ಭಾರತೀಯರು ತಮ್ಮ ಧ್ಯೇಯ ಪಥದಿಂದ ಹಿಂಜರಿಯಲಿಲ್ಲ. ಪೂರ್ಣ ಸ್ವಾತಂತ್ರ್ಯದ ಸಾಧನೆಗಾಗಿ ತಮ್ಮ ಸುಖಭೋಗಗಳನ್ನು ತೊರೆದರು. ಸ್ವಾರ್ಥ ಸಂಕೀರ್ಣತೆಗಳನ್ನು ಬದಿಗೊತ್ತಿದರು. ತ್ಯಾಗ ಜೀವನವನ್ನು ಆರಾಧ್ಯ ಜೀವನವೆಂಬಂತೆ ಸ್ವಾಗತಿಸಿದರು. ತಮ್ಮ ಕಣ್ಣೀರ ಓಕುಳಿಯನ್ನು ಚೆಲ್ಲಿ ಪಡಬಾರದ ಕಷ್ಟ, ಸಹಿಸಲಾರದ ಅವಮಾನವನ್ನು ಸಹಿಸಿದರು. ಎಲ್ಲಕ್ಕೂ ಅಮೂಲ್ಯವಾದ ಪ್ರಾಣವನ್ನೇ ಪಣವಾಗಿ ಒಪ್ಪಿಸಿದರು. ದಾರಿಯಲ್ಲಿ ಒದಗಿದ ಈ ಅಡ್ಡಿ ಆತಂಕಗಳನ್ನು ಲೆಕ್ಕಿಸದೆ ಭಾರತೀಯರು ಪೂರ್ಣ ಸ್ವಾತಂತ್ರ್ಯದ ದಿವ್ಯ ಬೆಳಕಿನತ್ತ ತಪೋಕ ದೃಷ್ಟಿಯಿಂದ ಸಾಗಿದರು. ಯಾವ ಬಿರುಸು ಮಳೆಯೂ, ಗುಂಡಿನ ಗುಡುಗೂ ಅವರನ್ನು ಪಥಗೆಡಿಸಲಾರದಾಯಿತು. ಮುಂಗಾಪುರುಷ ಬಾಪು ತನ್ನ ಬಿಚ್ಚಿದೆಯನ್ನು ಮುಂದಿರಿಸಿ ಸಾಗಿದರು. ಭಾರತೀಯರು ಹಿಂಬಾಲಿಸಿದರು. ಈ ದೃಢ ಪ್ರತಿಜ್ಞೆಯು ಎರಡು ಸಾಮ್ರಾಜ್ಯ ಶಾಹಿಯ ಕಪಿಮುಷ್ಟಿ ಸಡಿಲಿ ಭಾರತೀಯರ ಈ ಮಹಾಪ್ರವಾಹಕ್ಕೆ ದಾರಿ ಮಾಡಬೇಕಾಯಿತು. ಭರತಖಂಡವು ೧೯೪೭ನೇ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಗುರಿಯನ್ನು ಮುಟ್ಟಿತು. ಭಾರತೀಯರ ತಪಃಶಕ್ತಿಗೆ ಜಯವಾಯಿತು!

ಸ್ವಾತಂತ್ರ್ಯ ದೊರೆತು ಇಂದಿಗೆ ಎರಡೂವರೆ ವರ್ಷವಾಯಿತು. ಸ್ವತಂತ್ರ ಭಾರತದ ಜವಾಬ್ದಾರಿಯನ್ನು ಭಾರತೀಯ ಮುಂದಾಳುಗಳು ವಹಿಸಿ ಹದಗೆಟ್ಟ ಭಾರತ ಭವನವನ್ನು ಸರಿಪಡಿಸುತ್ತಿದ್ದಾರೆ. ಲವ ಸಾಧ್ಯತೆಗಳಾಗಿ, ಘಟನೆಗಳ ತೃಪ್ತಿದಾಯಕವಾಗಿ, ಸಮಸ್ಯೆಗಳ ಪರಿಹಾರ ಮಾಡಲು ಅತಿ ಇಷ್ಟು ಅವಕಾಶ ಸಾಧನಗಳಿಲ್ಲ. ಅದಕ್ಕಾಗಿ ಇಂದಿನ ಸರಕಾರವನ್ನು ಕೆಲವರು ದೂರುತ್ತಾರೆ. ಸರಕಾರದಲ್ಲಿ ನ್ಯೂನತೆ ಇರಬಹುದು. ಆದರೆ ಯಾವ ಸರಕಾರವೂ ಇವತ್ತಿನ ಧಾ... ಸಕ್ತವಾಗಿ ಭಾರತದ ಬೃಹದ್ ಸಮಸ್ಯೆಗಳನ್ನು ಎದುರಿಸುತ್ತಿರಲಿಲ್ಲವೆಂದು ಸಂಕೋಚವಿಲ್ಲದೆ ಹೇಳಬಹುದು. ಭರತ ಖಂಡದ ಖ್ಯಾತಿ ಅಂತರಾಷ್ಟ್ರೀಯ ರಂಗದಲ್ಲಿ ಬಹು ಮೇಲೇರಿದೆ. ಇದಕ್ಕೆ ಪಂಡಿತ ಜವಾಹರರೇ ಕಾರಣ.

ಇಂದು ಭರತಖಂಡವು ಸರ್ವಸ್ವತಂತ್ರ ದೇಶ. ಯಾವನೇ ನೀತಿ, ರೀತಿಯನ್ನು ರೂಪಿಸಿಕೊಳ್ಳ ಯಾವ ಅಡ್ಡಿ ಆತಂಕವಿಲ್ಲ. ... ತನ್ನದೇ ಆದ ರಾಜ್ಯಘಟನೆಯೊಡಿಕೊಂಡಿದೆ. ತನ್ನ ಪುತ್ರನೋರ್ವ ಅಧ್ಯಕ್ಷನನ್ನಾಗಿ ಆರಿಸಿದೆ. ಇಂಥ ಘಟನೆ ಎಷ್ಟು ಸ್ವತಂತ್ರವೋ ಅಷ್ಟೇ ಶಾಂತತವೂ ಕೂಡ. ವಿವಿಧ ರಾಷ್ಟ್ರಗಳೋಲಿಯಲ್ಲಿ ಬಂಧಿತವಾಗಿದ್ದ ಆ ಸಂಕೋಲೆಗಳನ್ನು ಕಡಿದುಕೊಂಡಿರಬೇಕಾದ್ದು ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಪಂಗಿಯಲ್ಲಿ ತಲೆಎತ್ತಿನಿಂತ ಈ ಸ್ವತಂತ್ರ ರಾಷ್ಟ್ರಗಳ ಸಾಲಿನ ಯಾವ ರಾಷ್ಟ್ರವು ಇದರಷ್ಟು ಇತರರ ದೃಷ್ಟಿಯನ್ನು ಸೆಳೆದಿಲ್ಲ. ಪ್ರಪಂಚದ ಯಾವದೇ ರಾಷ್ಟ್ರದ ಮಕುಟವೂ ಹಿಸ್ಸದ ರತ್ನಸಿಂಚಿತವಾಗಿ ಒಂದಕ್ಕೊಂದು ಶಂಕರವೂ, ಭಯಾನಕವೂ ಆಗಿ ತೋರುತ್ತಿರಬೇಕು. ಆ ಕಾರಣವೇ ಜಗದ್ರಂಗದಲ್ಲಿ ಪರಸ್ಪರ ಕಚ್ಚಾಟ, ಸ್ಪರ್ಧೆಯ ತಾಂಡವವಾಡುತ್ತಿರಬೇಕು. ಆದರೆ ಭಾರತದ ಮುಖವು ಶಾಂತತೆಯ ಲತೆಯ ಕಿರೀಟದಲ್ಲಿ ಶಾಶ್ವತ ಶಾಂತಿಯ ಬೆಳಕನ್ನು ಚೆಲ್ಲುವ ಸತ್ಯ, ಅಹಿಂಸೆ, ಸಹನೆ, ದಯೆಗಳ ಮುತ್ತು ರತ್ನಗಳ ಈ ಆಕರ್ಷಣೀಯ ಕಿರೀಟ ಧರಿಸಿರುವುದರಿಂದ ಜಗತ್ತಿನ ರಾಷ್ಟ್ರದ ದೃಷ್ಟಿಯು ತನ್ನೆಡೆಗೆ ಸೆಳೆದಿದ್ದರೆ ಅಸು ಆಯಿತು.

ಜಗತ್ತಿನ ಶಾಂತಿಗೆ ಪ್ರಯತ್ನಿಸಬೇಕಾದ ಅಂತರಿಕ ಶಾಂತಿ ಇರಬೇಕು. ಸಾತ್ವಿಕ ಹಬ್ಬಿದವ ಬಲ ತನ್ನಾರಣೆಯಾಗಬೇಕು. ಲಂಚಕೋರತನ, ಪಕ್ಷಪಾತತನ, ಸ್ವಾರ್ಥ ಸಂಕೀರ್ಣತೆಗಳು ಮಾಯವಾಗಬೇಕು. ದುರ್ಗುಣ ಸಾತ್ವ ಮುಡಿಯುವ ಪ್ರತಿಜ್ಞೆ ಮಾಡಬೇಕು. ರಿಪಬ್ಲಿಕ್ ಭಾರತವೆಂದು ಇದಾಕ್ಷಣ ಏನೂ ಬದಲಾವಣೆಗಳಿಲ್ಲ. ಕಾಯೆಲ್ಲ ಪ್ರಜೆಯು ಹೆಗಲಿನ ಮೇಲಿರ ರಾಷ್ಟ್ರರಚನೆಯ ಜವಾಬ್ದಾರಿಯು ಯೋಗ್ಯ ರೀತಿ ನಿರ್ವಹಿಸಬೇಕು. ಧೈರ್ಯ, ಒಕ್ಕಟ್ಟು, ಕಾರ್ಯಶಕ್ತಿ, ನಿಷ್ಠೆ, ಬುದ್ಧಿಯನ್ನು ಭಗವಂತನು ಎಲ್ಲರಿಗೂ ಕೊಡಲಿ. ರಿಪಬ್ಲಿಕ್ ಭಾರತವು ಜಗತ್ತಿನ ಕಣ್ಮಣಿಯಾಗಲಿ.

## ಕಂದಾಯ ಏರಿಸುವಿಕೆ.

ಮೇಲಿನ ಲೇಖನದಲ್ಲಿ ವ್ಯಕ್ತಪಡಿಸಿದಂತೆ ಬಂದ ಮೊದಲಿನಿಂದಲೂ ಸ್ವಾತಂತ್ರ್ಯವು ದೊರೆತು ಸುಮಾರು 2½ ವರ್ಷಗಳಲ್ಲಿ ಈ ದೇಶದ ಹೆಚ್ಚಿನ ಭಾಗಗಳಲ್ಲೆಲ್ಲಾ ಪ್ರಜಾ ಸತ್ತಾತ್ಮಕ ಹೊಸ ರಾಜ್ಯಘಟನೆಯು ಜಾರಿಗೆ ಬಂದರೂ ಹಳೇ ಚೀಫ್ ಕಮೀಷನರ ಪ್ರಾಂತಗಳಿಗೆ ಇದು ಕೂಡಲೇ ಅನ್ವಯಿಸದಿರುವದು ವ್ಯಸನಕರ. ಆಗಲೂ ಆ ಪ್ರಾಂತಗಳಿಗೆ ಹೆಚ್ಚಿನ ತಡವಿಲ್ಲದೆ ಜವಾಬ್ದಾರಿ ಸರಕಾರವು ಸಿಕ್ಕಲೇಬೇಕಾಗಿದೆ. ನಮ್ಮ ಪ್ರಾಂತದ ಮಟ್ಟಿಗೆ ಹೇಳುವದಾದರೆ ಇಲ್ಲಿಯು ಭವಿಷ್ಯತ್ತಿನ ವಿಚಾರವಾಗಿ ಹಲವು ವರ್ಷಗಳಿಂದ ಜನರಲ್ಲಿ ಭಿನ್ನಾಭಿಪ್ರಾಯವಿದ್ದು ಪ್ರತ್ಯೇಕ ಮತ್ತು ಸಂಯೋಜನಾ ಪಕ್ಷಗಳು ದೇಶದಲ್ಲಿ ಪ್ರಚಾರ ನಡೆಸುತ್ತಾ ಕೇಂದ್ರ ಸರಕಾರಕ್ಕೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾ ಬಂದುದರ ಫಲವಾಗಿ ಇಂದಿನವರೆಗೂ ಸರಕಾರದವರು ಕೊಟ್ಟ ತೀರ್ಮಾನದಂತೆ ಕಡಿಮೆ ಪಕ್ಷ ಮುಂಬರುವ ಹತ್ತು ವರ್ಷಗಳ ವರೆಗಾದರೂ ಕೊಡಗನ್ನು ಬೇರೆ ಪ್ರದೇಶಗಳೊಂದಿಗೆ ಸಂಯೋಜನೆ ಮಾಡುವ ದಿಲ್ಲವೆಂಬುದು ಸ್ಪಷ್ಟವಾಗಿದೆ. ಇನ್ನು ದರೂ ಎರಡು ರಾಜಕೀಯ ಪಂಗಡಗಳು ಹಾಗೂ ದೇಶೀಯರು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ಕೊಡಗಿನ ಅಭಿವೃದ್ಧಿಯ ದೃಷ್ಟಿಯಿಂದ ಒಗ್ಗಟ್ಟಾಗಿ ಕೆಲಸ ಮಾಡಲು ಯತ್ನಿಸಬೇಕಾಗಿರುವ ಈ ಸಂದಿಗ್ಧ ಸಮಯದಲ್ಲಿ ಸರಕಾರದವರು ಕಂದಾಯ ಏರಿಸುವ ಮಸೂದೆಯನ್ನು ಕೌನ್ಸಿಲಿನ ಮುಂದೆ ಚರ್ಚೆಗೆ ತರುವಂಥಾದ್ದು ಅಕಾಲಿಕವಾಗಿದೆ.

ಕೊಡಗಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ದೊಡ್ಡ ಬದಲಾವಣೆ ಹೊಂದಿರುವ ಈಗಿನ ಕಾಲದಲ್ಲಿ ಜನತೆಯ ಅಭಿಪ್ರಾಯವನ್ನು ಕೌನ್ಸಿಲ್ ಸಭೆಯಲ್ಲಿ ಯೋಗ್ಯ ರೀತಿಯಲ್ಲಿ ಪ್ರತಿಬಿಂಬಿಸುವ ಪ್ರತಿನಿಧಿಗಳನ್ನು ಆರಿಸುವ ಪ್ರಮುಖ ಕೆಲಸವನ್ನು ಸರಕಾರದವರು ಕೂಡಲೇ ಕೈಕೊಳ್ಳುವುದು ಅಗತ್ಯವಾಗಿದೆ. ಹೀಗೆ ಆರಿಸಲ್ಪಟ್ಟ ನಿಜವಾದ ಪ್ರತಿನಿಧಿಗಳು ಕೊಡಗಿನ ಆದಾಯ ವೆಚ್ಚವನ್ನು ಪರಿಶೀಲಿಸಿ ಮುಂದಿನ ಆಡಳಿತ ಕ್ರಮವನ್ನು ರೂಪಿಸಲು ಸಮರ್ಥರಾಗುವರು. ಹಾಗೆ ರೂಪಿಸುವ ಕಾಲದಲ್ಲಿ ತಮ್ಮ ಆಡಳಿತವನ್ನು ಜನರ ಹಿತದೃಷ್ಟಿಯಿಂದ ನಡೆಸಲು ಅವಶ್ಯವಿರುವಲ್ಲಿ ಸಿಬ್ಬಂದಿ ಏರ್ಪಾಡು ಮಾಡಿ ಬೇಕಾದ ಹೆಚ್ಚಿನ ಖರ್ಚುಗಳಿಗಾಗಿ ಅವಶ್ಯಬೀಳುವ ತೆರಿಗೆಯನ್ನು ಎತ್ತಲೇ ಬೇಕಾಗುವುದು. ಜವಾಬ್ದಾರಿ ಸರಕಾರವನ್ನು ಅನುಭವಿಸುವ ಹಿಂದೂದೇಶದ ಇತರ ಪ್ರಾಂತಗಳು ತಮ್ಮ ಸರಕಾರದ ಖರ್ಚು ಹೆಚ್ಚಾಗುತ್ತಾ ಬಂದಂತೆಯೇ ಅದಕ್ಕೆ ಬೇಕಾದ ಆದಾಯವನ್ನು ಜನತೆಯಿಂದ ಒಂದಲ್ಲೊಂದು ರೀತಿಯಿಂದ ಪಡೆಯುತ್ತಿರುವರು ಮತ್ತು ಮುಂದೆಯೂ ಪಡೆಯಬೇಕಾಗುವುದು.

ಈ ದೃಷ್ಟಿಯಿಂದ ಕೊಡಗನ್ನು ಪ್ರತ್ಯೇಕ ಇಟ್ಟುಕೊಂಡು ಜವಾಬ್ದಾರಿ ಸರಕಾರ ಪಡೆಯಬೇಕೆನ್ನುವ ಕಾಂಕ್ಷಿ ಇರುವವರು ಅವಶ್ಯವಿದ್ದಲ್ಲಿ ಹೆಚ್ಚಿನ ತೆರಿಗೆ ಕೊಡಲು ಆಕ್ಷೇಪಿಸಲಾರರು. ಆದರೆ ಕೊಡಗಿನ ಇಂದಿನ ಸಂದಿಗ್ಧ ಸ್ಥಿತಿಯಲ್ಲಿ ಜನತೆಯ ಶಕ್ತಿಗೆ ಮೀರಿದ ಕಂದಾಯ ಏರುವನ್ನು ಈ ಮಸೂದೆಯು ಒಳಗೊಂಡಿರುವುದರಿಂದ ಅದನ್ನು ಒಪ್ಪಿಕೊಳ್ಳಲು ಜನರು ಹಿಂಜರಿಯಲು ಕಾರಣವಾಗಿದೆ. ಆದ್ದರಿಂದ ಈ ಮಸೂದೆಯನ್ನು ಮುಂದಕ್ಕೆ ತಳ್ಳುವುದು ಯೋಗ್ಯವೆನಿಸುತ್ತದೆ.

ದೇಶದ ಈಗಿನ ಪರಿಸ್ಥಿತಿಯನ್ನು ಅರಿತುಕೊಂಡು ಇಲ್ಲಿಯ ಸರಕಾರದವರು ನಡೆಸಲು ಈ ಮಸೂದೆಯು ಅವಶ್ಯವೆಂದು ಕೇಂದ್ರ ಸರ್ಕಾರವು ತಿಳಿದು ಅದನ್ನು ಚರ್ಚೆಗೆ ಕೌನ್ಸಿಲಿನ ಮುಂದೆ ತಂದದ್ದೇ ಆದರೆ ಅದನ್ನು ಸಂಪೂರ್ಣವಿರೋಧಿಸುವ ಬದಲು ಜನಾಭಿಪ್ರಾಯದಂತೆ ಅದರಲ್ಲಿರುವ ದರವನ್ನು ಇಳಿಸುವ ಮತ್ತು ಬದಲಾವಣೆ ಕಂದಾಯ ಏರಿಸದಂತೆ ಮಾಡುವ ತಿದ್ದುಪಡಿ ಮಾರ್ಪಾಡುಗಳ ಅವಶ್ಯ ಒಂದು ಸಿಲೆಕ್ಟ್ ಕಮಿಟಿಗೆ ಬಿಡುವುದೇ ಯುಕ್ತವೆಂದು ನಮಗನಿಸುತ್ತದೆ. ಬದಲು ಮಸೂದೆಯನ್ನು ಸಂಪೂರ್ಣ ವಿರೋಧಿಸಿದ್ದಾದರೆ ಕೇಂದ್ರ ಸರಕಾರವು ಅದನ್ನು ಸರ್ಟಿಫೈಮಾಡಿ ಜಾರಿಗೆ ತರುವ ಸಂದರ್ಭದಲ್ಲಿ ಮಸೂದೆಯಲ್ಲಿ ತೋರಿಸಿರುವ ಹೆಚ್ಚಿನ ದರದ ಕಂದಾಯವನ್ನೇ ಜನತೆಯ ಮೇಲೆ ಹೊರಿಸಲಾಗುವದು.

ಕೊಡಗಿನ ಭವಿಷ್ಯದ ನಿರ್ಣಯಕ್ಕೆ ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯು ಮುಖ್ಯ ಆಧಾರವಾಗಿದೆ. ಆದ್ದರಿಂದ ಸರಕಾರದ ಆದಾಯ ಏರಿಸುವದರೂ ಕೊಡಗಿನ ಭವಿಷ್ಯತ್ತಿಗೂ ಸಂಬಂಧವಿಲ್ಲವೆನ್ನುವದು ಸರಿಯಲ್ಲ. ಕೊಡಗಿನ ಕೃಷಿಕರವಾದ ವಾರ್ಷಿಕ ಉತ್ಪತ್ತಿಯೂ, ಅದರ ಹಿಂದಿನ ದೊಡ್ಡ ಉಳುವರಿಯೂ ಕೊಡಗನ್ನು ಕೆಲ ವರ್ಷಗಳ ವರೆಗಾದರೂ ಪ್ರತ್ಯೇಕವಾಗಿಡಲು ಮುಖ್ಯ ಕಾರಣವೆಂಬುದನ್ನು ಯಾರೂ ಮರೆಯ ಬಾರದು. ಸರಕಾರದ ಈ ತತ್ಕಾಲದ ತೀರ್ಮಾನವನ್ನು ಉಪಯೋಗಿಸಿ ಕೊಡಗನ್ನು ಖಾಯಂ ಆಗಿ ಪ್ರತ್ಯೇಕವಿಟ್ಟು ಜವಾಬ್ದಾರಿ ಸರ್ಕಾರ ಪಡೆಯುವದು ಕೂಡ ನಮ್ಮ ಸರಕಾರದ ಮುಂದಿನ ಆದಾಯ ವೆಚ್ಚವನ್ನು ಹೊಂದಿಕೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ.

ದೊಡ್ಡ ಪ್ರಾಂತವೊಡನೆ ಕೊಡಗಿನ ಸಂಯೋಜನೆಯಾದರೆ ಕೊಡಗಿನವರು ಈಗಿರುವ ಕಡಿಮೆ ದರದ ಕಂದಾಯ ಕಾಣಿಕೆಗಳನ್ನೇ ಕೊಡುತ್ತಿರುವೆನೆಂದು ಯಾರು ಭಾವಿಸಬಾರದು. ಇದಕ್ಕಿಂಥಾ ಹೆಚ್ಚಿನ ದರದ ಕಂದಾಯವನ್ನು ಕೊಡಬೇಕಾಗುವದಲ್ಲದೆ ಈ ಕಂದಾಯವು ನಮ್ಮ ಹಿತಕ್ಕಾಗಿ ಇಲ್ಲಿಯೇ ಖರ್ಚಾಗುವದೆಂದು ಹೇಳಲಾಗುವದಿಲ್ಲ. ಆದ್ದರಿಂದ ದೇಶೀಯರು ತಾತ್ಕಾಲಿಕ ಉಪಯೋಗ ಬರುವಾದ ಚಿಕ್ಕ ಲಾಭವನ್ನು ಆಶಿಸಿ ನಂತರ ಉಂಟಾಗುವ ದೊಡ್ಡ ಕಷ್ಟನಷ್ಟಗಳಿಗೆ ಗುರಿಯಾಗಬಾರದು. ಈ ಗುರಿಯ ದೃಷ್ಟಿಯಿಂದ ಸರಕಾರದ ಆದಾಯವನ್ನು ಹೆಚ್ಚಿಸುವ ಯಾ ಖರ್ಚನ್ನು ಕಡಿತ ಮಾಡುವ ಯೋಜನೆಗಳಿಗೆ ಜನರು ತಮ್ಮ ಅಭಿಪ್ರಾಯವನ್ನು ದೀರ್ಘಾಲೋಚನೆಯಿಂದ ಕೊಡಬೇಕಾಗಿದೆ.

---

## ವರ್ತಮಾನ.

ಈ ತಾರೀಕು ೧೯ರಲ್ಲಿ ವೀರಾಜಪೇಟೆಯಲ್ಲಿ ಭಾಗ್ಯಲಕ್ಷ್ಮಿ ಕೈಸ್ ಮಿಲ್ಲಿನ ಪ್ರಾರಂಭೋತ್ಸವವು ಕೊಡಗಿನ ಚೀಫ್ ಕಮೀಷನರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಮಿಲ್ಲುಗಳ ಪ್ರಯೋಜನವನ್ನು ವಿವರಿಸಿ, ದೇಶದಲ್ಲಿರುವ ಎರಡು ರಾಜಕೀಯ ಪಕ್ಷಗಳು ಒಂದಾಗಿ ದೇಶದ ಉದ್ಧಾರಕ್ಕಾಗಿ ಕೆಲಸ ಮಾಡಬೇಕೆಂದು ಜನತೆಯಲ್ಲಿ ಅಪೇಕ್ಷಿಸಿದರು. ಕೆಲವು ಭಾಷಣಗಳ ನಂತರ ಸಮಾರಂಭವು ಮುಕ್ತಾಯವಾಯಿತು.

ತಾರೀಕು ೨೦ರಲ್ಲಿ ಶಾಂತಿಕೊಪ್ಪದ ಶಾಲಾ ಕಟ್ಟಡದ ಅಸ್ತಿಭಾರ ಹಾಕುವ ಸಮಾರಂಭವು ಕೊಡಗಿನ ಚೀಫ್ ಕಮೀಷನರಿಂದ ನಡೆಸಲ್ಪಟ್ಟಿತು.

ವೀರಾಜಪೇಟೆ ಮತ್ತು ಮಡಿಕೇರಿ ಸಿವಿಲ್ ಆಸ್ಪತ್ರೆಗಳಲ್ಲಿ ಬುಧವಾರ ಮತ್ತು ಶುಕ್ರವಾರಗಳಲ್ಲಿ ಬೆಳಗ್ಗೆ ೧೧ ಗಂಟೆಗೆ ಗರ್ಭಿಣಿ ಹೆಂಗಸರನ್ನು ಮತ್ತು ಮಕ್ಕಳನ್ನು ಪರೀಕ್ಷಿಸಿ ಪ್ರತ್ಯೇಕ ಚಿಕಿತ್ಸೆಮಾಡುವ ಏರ್ಪಾಡು ಮಾಡಿರುವರೆಂದೂ, ಈ ಶಾಖೆಯು ಅಲ್ಲಿಯ ಲೇಡಿ ಅಸಿಸ್ಟೆಂಟ್ ಸರ್ಜನರ ಮೇಲ್ವಿಚಾರಣೆಯಲ್ಲಿರುವದೆಂದೂ ತಿಳಿದು ಬಂದಿದೆ.

ತಾರೀಕು ೪-೨-೫೦ನೇ ಶನಿವಾರ ಸಂಧ್ಯಾ ೩ ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ರಾ. ಬ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ಗುರುಮಾಧ್ವರ ಜಯಂತಿಯು ನಡೆಯುವದು.

ಇಂಡಿಯಾ ಪ್ರಜಾಪ್ರಭುತ್ವ ದಿನವು ಈ ತಾ. ೨೬ರಲ್ಲಿ ಕೊಡಗಿನ ಎಲ್ಲಾ ಭಾಗಗಳಲ್ಲಿ ಸಂಭ್ರಮದಿಂದ ಆಚರಿಸಲ್ಪಟ್ಟಿತು.

---

# ಹೊಸ ಕಂದಾಯ.

ಲೇ:— ಶ್ರೀ ಕೆ ಪೂವಯ್ಯ.

ಪ್ರತಿ ಮೂವತ್ತು ವರ್ಷಗಳಿಗೊಮ್ಮೆ 'ರೀ ಸೆಟ್ಲ್‌ಮೆಂಟ್' ಮಾಡುವದು ಸರಕಾರದ ನೀತಿ. ಕೊಡಗಿನಲ್ಲಿ ಈ ಸೆಟ್ಲ್‌ಮೆಂಟು ೧೯೧೦ರಲ್ಲಾಗಿ ಅದು ಪುನಹ ೧೯೪೦ರಲ್ಲಿ ನಡೆಯಬೇಕಿತ್ತು. ಆದರೆ ಯುದ್ಧದ ಗೊಂದಲ, ಆ ಕಾಲಕ್ಕೆ ದೇಶದಲ್ಲಿದ್ದ ಸಾರ್ವತ್ರಿಕ ಅಶಾಂತಿಯ ಕಾರಣದಿಂದ ಅದು ಆಗ ನಡೆಯಲಿಲ್ಲ. ಈಗ ಕೊಡಗಿನಲ್ಲಿ 'ರೀ ಸೆಟ್ಲ್‌ಮೆಂಟ್' ನಡೆಸುವ ದೃಷ್ಟಿಯಿಂದ ಅಧಿಕಾರಿಯೊಬ್ಬರನ್ನು ತರಬೇತಿಗೆ ಕಳುಹಿಸಿರುವದಲ್ಲದೆ ಇದು ಅವರು ಹಿಂತಿರುಗಿ ಬಂದೊಡನೇ ಪ್ರಾರಂಭವಾಗಿ ಸುಮಾರು ಐದು ವರ್ಷಗಳ ವರೆಗೆ ನಡೆಯುವದೆಂದೂ ಇದಕ್ಕೆ ಸುಮಾರು ೬ ಲಕ್ಷ ರೂಪಾಯಿಗಳು ವೆಚ್ಚವಾಗುವದೆಂದೂ ಅಂದಾಜು ಮಾಡಲಾಗಿದೆ.

ಮೂವತ್ತು ವರ್ಷಗಳ ನಂತರ ಹೊಸ ದರದ ಕಂದಾಯ ಜಾರಿಗೆ ಬರಬೇಕು. ಭೂಮಿಯ ಯೋಗ್ಯತೆ, ಅಂಥಾ ಹೆಚ್ಚು ಕಡಿಮೆ ಕೊಡುತ್ತಿರುವದನ್ನು ಪರಿಶೀಲಿಸಿ ಕಂದಾಯ ನಿಶ್ಚಯಿಸುತ್ತ ಬರುವದು ಸಂಪ್ರದಾಯ. ಆದರೆ ಈ ಕಾರ್ಯ ಸಾಧಿಸಲು ಸುಮಾರು ವರ್ಷ ಹಿಡಿಯುವದರಿಂದ ಸರಕಾರವು 'ಸವ್ಯರ್' ಕಂದಾಯ ವಿಧಿಸುವದಾಗಿದೆ. ಕಳೆದ ಸಾರಿ ಸೆಟ್ಲ್‌ಮೆಂಟ್ ಆದಾಗ ಹತ್ತು ವರ್ಷಗಳ ವರೆಗೆ ಈ 'ಸವ್ಯರ್' ಕಂದಾಯವಿತ್ತು. ಈ ಸಾರಿ ಐದು ವರ್ಷದ ಮಿತಿಗೆ ಒಳಪಟ್ಟು ಸೆಟ್ಲ್‌ಮೆಂಟ್ ಆಗುವ ವರೆಗೆ ಈ 'ಸವ್ಯರ್' ಕಂದಾಯ ವಿಧಿಸಬೇಕೆಂದು ಸರಕಾರದ ಮಸೂದೆಯಾಗಿದೆ.

ಸೆಟ್ಲ್‌ಮೆಂಟಿನ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಮೂವತ್ತು ವರ್ಷಗಳಿಗೊಮ್ಮೆ ಕಂದಾಯ ಸ್ಥಿತಿಯನ್ನು ಪರಿಶೀಲಿಸಿ ಹೊಸ ನಿರ್ಧಾರ ಮಾಡುವದು ಬಹುಕಾಲದಿಂದಲೂ ನಡೆದು ಬಂದಿದೆ. ಈ ಸಂದರ್ಭದಲ್ಲಿ 'ಸವ್ಯರ್' ಕಂದಾಯ ಪದ್ಧತಿಯ ಮೂಲಕ ನಡೆದು ಬಂದಿದೆ. ಇದರ ತತ್ವದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಯಾರೂ ಇದನ್ನು ವಿರೋಧಿಸಲಾರರು. ಆದರೆ ಈಗ ಸರಕಾರ ನಿಶ್ಚಯಿಸಿರುವ ಕಂದಾಯದ ದರವು ತೀಕ್ಷ್ಣವಾಗಿದೆ.

೧೯೧೦ರಲ್ಲಿ ನಿಶ್ಚಯಿಸಿದ ಕಂದಾಯದ ದರವನ್ನು ಇಂದು ನಾವು ಹಾಗೆ ನೋಡುತ್ತಿದ್ದೇವೆ. ೪೦ ವರ್ಷಗಳ ಹಿಂದೆ ನಿಶ್ಚಯಿಸಿದ ಈ ದರದ ಅಂದಿನ ಕಾಲಕ್ಕೂ ಇಂದಿನ ಕಾಲಕ್ಕೂ ವಿಪರೀತ ವ್ಯತ್ಯಾಸಗೊಂಡಿದೆ. ಸರಕಾರದ ಜವಾಬ್ದಾರಿಕೆಗಳೂ ಹೆಚ್ಚಾಗಿವೆ. ಆಸ್ಪತ್ರೆ, ರಸ್ತೆ, ಕಾಲೇಜು, ಶಾಲೆ, ಮುಂತಾದ ಜನಹಿತ ಕಾರ್ಯಗಳನ್ನು ಸರಕಾರ ಮಾಡಬೇಕಾಗಿದೆ. ಸರಕಾರವೆಂದರೆ ಅದಕ್ಕೆ ಸ್ವಂತ ಆದಾಯವೆಲ್ಲಿದೆ? ಜನರು ಕೊಟ್ಟ ಕಂದಾಯ, ಕರಗಳೇ ಅದರ ಸಂಪತ್ತು. ಅವನ್ನೇ ಜನರ ಉಪಯೋಗಕ್ಕಾಗಿ ವಿನಿಯೋಗಿಸುವದು ಅದರ ಕರ್ತವ್ಯ. ಇಂದು ಕೊಡಗಿನ ಸ್ವತಂತ್ರ ಆಡಳಿತ ಖರ್ಚೇ ಇಂದಿನ ನಿಶ್ಚಿತ ಖರ್ಚಿಗಿಂಥಾ ಹೆಚ್ಚಾಗಿದೆ. ಈ ರೀತಿ ಜವಾಬ್ದಾರಿ ಹೆಚ್ಚುತ್ತಿರುವಾಗ, ಜನತೆಗಾಗಿ ಮಾಡಬೇಕಾದ ಕಾರ್ಯ ಹಲವಿರುವಾಗ ಅವುಗಳನ್ನು ಸಾಧಿಸಲು ಜನತೆಯು ೧೯೧೦ರ ದರದ ಕಂದಾಯವನ್ನೇ ಕೊಡುತ್ತಿದ್ದರೆ ಸರಕಾರ ಏನು ಮಾಡೀತು? ಅದು ಹಣವೆಲ್ಲಿಂದ ತಂದೀತು?

ಕೊಡಗಿನ ಇಂದಿನ ಸರಕಾರ ಇನ್ನೂ ಜನರ ಸರಕಾರವಾಗಿಲ್ಲ ನಿಜ. ಆದರೆ ಅದು ಸ್ವಾತಂತ್ರ್ಯಕ್ಕೆ ಹಿಂದಿನ ನಿರಂಕುಶ ಸರಕಾರವೇ ಎಂದು ಹೇಳುವದು ಸರಿಯಲ್ಲ. ಏಕೆಂದರೆ ಇಂದು ಕೇಂದ್ರದಲ್ಲಿ ಜನಪ್ರತಿನಿಧಿಗಳಿಂದಲೇ ಸರಕಾರ ನಡೆಯುತ್ತಿದೆ. ಪ್ರಜಾಪ್ರಭುತ್ವದ ಪದ್ಧತಿಯ ಘೋಷಣೆಯೂ ಆಗಿ ಸಂವಿಧಾನ ರಚಿಸಲ್ಪಡುತ್ತಿದ್ದರೂ, ನೆಹರೂ, ಪಟೇಲರು ಜವಾಬ್ದಾರಿ ವಹಿಸಿದ ಸರಕಾರವು ಜನಪ್ರಿಯ ಸರಕಾರವಲ್ಲವೆಂದು ಹೇಳಲಾಗದು. ಅವರ ನಿರ್ದೇಶದಂತೆ ಕೊಡಗಿನ ಆಡಳಿತ ನಡೆಯುತ್ತಿರುವಾಗ ಕೊಡಗಿನ ಸರಕಾರ ಈ ಹಿಂದಿನ ನಿರಂಕುಶ ಚೀಫ್ ಕಮಿಷನರ ಸ್ವೇಚ್ಛೆಯ ಆಡಳಿತವಲ್ಲ. ಕೊಡಗು ಸರಕಾರದ ಶಾಸನ ಸಭೆಯ ಮುಂದೆ ಇಡಲಿರುವ ಮಸೂದೆಯು ಕೇಂದ್ರ ಸರಕಾರದ ಅರ್ಥ ಮಂತ್ರಿ ಸರದಾರ್ ಪಟೇಲರ ಒಪ್ಪಿಗೆ ಪಡೆದು ಮಂಡಿತವಾದುದು.

ಈ ಕಾರಣದಿಂದ ನಮ್ಮ ಇಂದಿನ ಕೌನ್ಸಿಲಿನ ಮುಂದೆ ಬರಲಿದೆ. ಹಾಗೆ ಬಂದಾಗ ನಮ್ಮ ಇಂದಿನ ಕೌನ್ಸಿಲು ಸರ್ವಸಾಧಾರಣ ಜನಾಭಿಪ್ರಾಯವನ್ನು ಕೊಡಲು ಅರ್ಹರಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏಕೆಂದರೆ ಈ ಕೌನ್ಸಿಲಿನ ಚುನಾವಣೆ ನಡೆದು ಐದು ವರ್ಷಗಳಾದವು. ಈ ಐದು ವರ್ಷಗಳಲ್ಲಿ ಮಹಾ ಬದಲಾವಣೆಯಾಗಿದೆ. ಅಂದು ಜನತೆಗೆ ಜವಾಬ್ದಾರವಲ್ಲದ ಬ್ರಿಟಿಷ್ ಸರಕಾರದ ಕಾಲದಲ್ಲಿ ಕೆಲವೇ ನಿಶ್ಚಿತ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿವರು! ಆದರೆ ದೇಶವು ಸ್ವತಂತ್ರವಾಗಿರುವ ಇಂದೂ ಅಂದಿನ ಆ ಜನರೇ ದೇಶದ ಅಭಿಪ್ರಾಯ ಕೊಡುವರೆಂದರೆ ಅಪ್ರಸ್ತುತವಾದುದು. ಆದ್ದರಿಂದ ಈ ಪ್ರತಿನಿಧಿಗಳು ನೀಡುವ ಅಭಿಪ್ರಾಯ ಜನರ ಅಭಿಪ್ರಾಯವಾಗದು. ಜನರ ಅಭಿಪ್ರಾಯ ಬೇಕಾದರೆ ಹೊಸ ಚುನಾವಣೆ ಬೇಕು.

ಈಗ ಕಳೆದ ಕೆಲವು ವರ್ಷಗಳಿಂದ ಕೊಡಗಿನ ರಾಜಕೀಯ ರಂಗದಲ್ಲಿ ಉತ್ಸಾಹ ಭರವೇ ಹೆಚ್ಚು. ವಿವಿಧ ಪಕ್ಷಗಳಾಗಿ ಹೋರಾಟ, ಚಳುವಳಿ ನಡೆದಿವೆ. ಈ ಪಕ್ಷ ಸಂಘರ್ಷವನ್ನು ನೋಡಿ, ಕೊಡಗಿನ ಭವಿಷ್ಯ ಸಮಸ್ಯೆಯನ್ನು ಬಗೆಹರಿಸಲು ಉಳಿದಿರುವುದೊಂದು ಮಾರ್ಗವೆಂದರೆ ಹೊಸ ಚುನಾವಣೆ. ಈ ಚುನಾವಣೆಯು ಕಾಲಕ್ಕೆ ಸರಿಯಾಗಿ, ಮುಂದಿರುವ ಸಮಸ್ಯೆಯು ಜನತೆಯ ಮುಂದಿದ್ದು ಆ ದೃಷ್ಟಿಯಿಂದ ನಡೆಯುವದರಿಂದ ಜನರಿಂದ ಆರಿಸಿ ಬಂದ ಪ್ರತಿನಿಧಿಗಳು ಮಹತ್ವದ ಸಮಸ್ಯೆಯ ವಿಚಾರವನ್ನು ನಿರ್ಣಯಿಸಲು ಶಕ್ತರಾಗುವರು. ಅಲ್ಲದೆ ದೇಶದ ಅಗಾಧ ಸಮಸ್ಯೆಗಳನ್ನು ಪರಿಶೀಲಿಸಿ, ಆದಾಯ ಖರ್ಚುಗಳನ್ನು ಪರಿಶೀಲಿಸಿ ಬಜೆಟ್ಟನ್ನು ತಯಾರಿಸಲು ಅವರೇ ಸಮರ್ಥರಾಗುವರು. ದೇಶದ ಜನರಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸುವ ದೃಷ್ಟಿಯಿಂದ ಕಂದಾಯ ವಿಧಿಸುವದು ಆವಶ್ಯವೆಂದು ತೋರಿದರೆ ಅದನ್ನು ಹೇಗೆ ಮತ್ತು ಯಾವ ದರದಲ್ಲಿ ಎಂಥಾ ಕಂದಾಯ ವಿಧಿಸಬೇಕೆಂಬುದನ್ನೂ ಜನಮತದಂತೆ ನಿಶ್ಚಯಿಸಲು ಅವರೇ ಯೋಗ್ಯರಾಗುವರು.

ಈಗ ಮುಂದೆ ಬಂದಿರುವ ಕಂದಾಯ ಹೆಚ್ಚಿಸುವ ಸಮಸ್ಯೆಯೊಂದಿಗೆ ಕೊಡಗಿನ ಭವಿಷ್ಯದ ಪ್ರಶ್ನೆಯೂ ಸಮೀಪವಾಗಿ ಬೆರೆತಿದೆ ಎಂಬುದನ್ನು ಎಲ್ಲರೂ ಸ್ಪಷ್ಟವಾಗಿ ಗಮನಿಸಬೇಕು. ಕೊಡಗಿನ ಆರ್ಥಿಕ ಭದ್ರತೆಯ ಮೇಲೆಯೇ ಅದರ ಪ್ರತ್ಯೇಕತೆಯ ಸಾಧ್ಯತೆಯೂ ಇರುವದರಿಂದ ಕಂದಾಯ ವಿಷಯದ ಪ್ರಶ್ನೆಯು ಭವಿಷ್ಯ ಪ್ರಶ್ನೆಯನ್ನೇ ವ್ಯಾಪಿಸುವುದು. ಅದೇ ಸಂಯೋಜನವಾದಿಗಳು ಕಂದಾಯದ ಪ್ರಶ್ನೆಯನ್ನು ವಿರೋಧಿಸಿ ಕೊಡಗಿನ ಆದಾಯವು ಹೆಚ್ಚದಂತೆ ಪ್ರಯತ್ನಿಸುವದರ ಗುಟ್ಟಾಗಿದೆ.

ಕೊಡಗಿನ ಜನರು ಒಗ್ಗಟ್ಟಾಗಿ ಪ್ರತಿನಿಧಿಸಿದರೆ ಅವರ ಯಾವುದೇ ಕೇಳಿಕೆಯನ್ನು ಕೇಂದ್ರ ಸರಕಾರವು ಸಲ್ಲಿಸುವದೆಂದು ಮೊನ್ನೆಯಷ್ಟೇ ಬಂದಿದ್ದ ಶ್ರೀ. ವಿ. ಪಿ. ಮೆನನರು ಹೇಳಿದರು. ಈ ದೃಷ್ಟಿಯಿಂದಲೇ ಕೊಡಗಿನ ಎರಡೂ ಪಕ್ಷದವರೂ ಒಂದಾಗಬೇಕೆಂದು ಅಪೀಲು ಮಾಡಿದರು. ಕೊಡಗಿನ ಸಂಯೋಜನಾ ಪ್ರಶ್ನೆಯು ಮುಂದಿನ ಹತ್ತು ವರ್ಷಗಳ ವರೆಗೆ ಬರುವದಿಲ್ಲವಾದ ಕಾರಣ ಒಗ್ಗಟ್ಟಾಗಿ ಯೋಗ್ಯ ಆಡಳಿತ ಕ್ರಮವನ್ನು ರೂಪಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದೂ ಸೂಚಿಸಿದರು. ಅಂಥಾ ಒಪ್ಪಂದಕ್ಕೆ ಸಂಯೋಜನ ಪಕ್ಷವು ತಯಾರಾಗಿಲ್ಲ. ತನ್ನ ಸಂಯೋಜನ ತತ್ವವನ್ನು ಮುಂಬರುವ ಹತ್ತು ವರ್ಷಗಳ ವರೆಗೆ ಬದಿಗಿಟ್ಟು ದೇಶದ ಹಿತದೃಷ್ಟಿಯಿಂದ ಸಹಕರಿಸಿ ಕೆಲಸ ಮಾಡಲು ಅವರು ತಯಾರಿಲ್ಲ. ಅದರಿಂದ ಯಾವ ಒಪ್ಪಂದಕ್ಕೂ ಎಡೆಯಿಲ್ಲದಾಗಿದೆ. ಕಡೆಯವರೆಗೆ ತಮ್ಮ ಸಂಯೋಜನವಾದವನ್ನು ಸಮರ್ಥಿಸುವ ನಿರ್ಧಾರ ಅವರು ಮಾಡಿರುವರು. ಈ ಭಿನ್ನಾಭಿಪ್ರಾಯದ ಕಾರಣವೇ ಕೊಡಗಿಗೆ ಸಂಘಟನೆ ದೊರೆಯುವದು ಸದ್ಯಕ್ಕೆ ಸಾಧ್ಯವಾಗಿಲ್ಲ.

ಮುಂಬರುವ ಹತ್ತು ವರ್ಷಗಳವರೆಗಾದರೂ ಕೊಡಗಿನ ಆಡಳಿತವನ್ನು ಜನಹಿತಕಾರಕವಾಗಿ ನಡೆಸುವ ಪ್ರಯತ್ನಕ್ಕೆ ಸಂಯೋಜನವಾದಿಗಳು ವಿರೋಧ ಮಾಡಲೇಬೇಕು. ಏಕೆಂದರೆ ಕೊಡಗಿನಲ್ಲಿ ಜನಹಿತ ಆಡಳಿತ ನಡೆದರೆ ಸಂಯೋಜನೆಯ ಸಂಭವ ಕಡಮೆಯಾಗುವದರಿಂದ ಯಾವ ರೀತಿಯಲ್ಲಾದರೂ ಕೊಡಗಿನ ಆಡಳಿತ ಅಯೋಗ್ಯವೆಂದೂ ಆರ್ಥಿಕ ಸ್ಥಿತಿ ಬಲವಿಲ್ಲದ್ದೆಂದೂ ಸಿದ್ಧ ಮಾಡುವದೇ ಅವರ ಪ್ರಯತ್ನವಾಗಿದೆ. ಈ ಕಾರಣದಿಂದಲೇ ಈ ಹಿಂದೆ ಅವರು ವ್ಯವಸಾಯ ಆದಾಯ ತೆರಿಗೆಯ ಮಸೂದೆಗೆ ವಿರೋಧ ಮಾಡಿದ್ದೂ ಈಗ ಕಂದಾಯ ಹೆಚ್ಚಿಸಲು ವಿರೋಧಿಸುವದೂ ಆಗಿದೆ. ಕೊಡಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯನ್ನು ಜಾರಿಯಲ್ಲಿ ತರದ ಕಾರಣ ಒಟ್ಟು ೫ ಲಕ್ಷ ರೂಪಾಯಿ ಸರಕಾರಕ್ಕೆ ನಷ್ಟವಾಗುತ್ತಿದೆ. ಇದನ್ನು ಭರ್ತಿ ಮಾಡಲಿಕ್ಕಾಗಿ ವ್ಯವಸಾಯ ಆದಾಯ ತೆರಿಗೆಯನ್ನು ಸರಕಾರ ತಂದಿತು. ಆದರೆ ಇದನ್ನು ವಿರೋಧಿಸಿ ಸರಕಾರದ ಬೊಕ್ಕಸಕ್ಕೆ ಈ ಸಂಯೋಜನವಾದಿಗಳು ೫ ಲಕ್ಷ ರೂಪಾಯಿಗಳ ನಷ್ಟ ಮಾಡಿದರೆನ್ನಬಹುದು. ಈ ರೀತಿ ಸರಕಾರದ ಆರ್ಥಿಕ ಅಡಿಗಲ್ಲನ್ನು ಅಲ್ಲಾಡಿಸಿ ಪ್ರತ್ಯೇಕ ಸರಕಾರ ನಡೆಸಲು ಸಾಧ್ಯವಿಲ್ಲವೆಂದು ಸಿದ್ಧಪಡಿಸುವದೇ ಅವರ ಗುರಿ.

ಕೊಡಗಿನ ಸರಕಾರದಲ್ಲಿ ೫೦ ಲಕ್ಷ ಉಳಿವರಿ ಇದೆ. ಅದನ್ನಿಟ್ಟುಕೊಂಡು ಈ ಹೆಚ್ಚಿನ ಕಂದಾಯ ಏಕೆ? ಎಂದು ಹಲವರು ಪ್ರಶ್ನಿಸುತ್ತಾರೆ. ಈ ೫೦ ಲಕ್ಷ ರೂಪಾಯಿಗಳು ಈಗಾಗಲೇ ಇಂತಿಂಥಾ ಯೋಜನೆಗಳಿಗೆ ಇಷ್ಟಿಷ್ಟೆಂದು ವಿಭಾಗಿಸಲ್ಪಟ್ಟಿದೆ. ಲಕ್ಷ್ಮಣತೀರ್ಥ ಅಣೆಕಟ್ಟು ಯೋಜನೆಗೆ ಎಂಟು ಲಕ್ಷ, ಹಾರಂಗಿ ಯೋಜನೆಗೆ ಇಪ್ಪತ್ತು ಲಕ್ಷ, ಕಾಲೇಜು ಕಟ್ಟಡ, ಬೇತರಿ, ಕೊಟ್ಟಮುಡಿ ಸೇತುವೆ ಮುಂತಾದ ವಿವಿಧ ಉದ್ಯಮಗಳಿಗಾಗಿ ಈ ಹಣ ಇಡಲ್ಪಟ್ಟಿದೆ. ಆದ್ದರಿಂದ ಸರಕಾರದ ಆದಾಯವನ್ನು ಹೆಚ್ಚಿಸಿ ಇನ್ನೂ ಜನಹಿತ ಕೆಲಸ ಮಾಡಿ ಪ್ರತಿದಿನದ ಆಡಳಿತ ಸುಗಮವಾಗಿ ನಡೆದು ಕೊಡಗು ಆದರ್ಶ ನಾಡಾಗುವಂತೆ ಮಾಡುವದೇ ಈ ಹೊಸ ಕಂದಾಯದ ಗುರಿ.

ಈ ಕಂದಾಯ ವಿಧಿಸುವ ಮಸೂದೆಯನ್ನು ಮುಂಬರುವ ಚುನಾವಣೆಯವರೆಗೆ ಮುಂದರಿಸದೆ ಸರಕಾರವು ಈಗಲೇ ಕೌನ್ಸಿಲ್ ಮೀಟಿಂಗಿನಲ್ಲಿ ಮಂಡಿಸುವದಾದರೆ ಜನಪ್ರತಿನಿಧಿಗಳು ಎರಡು ಕಾರಣಗಳಿಗಾಗಿ ಅದನ್ನು ತಿರಸ್ಕರಿಸದೆ ಜನರ ಅಭಿಪ್ರಾಯ ತಿಳಿಯಲು ಒಂದು ಸಿಲೆಕ್ಟ್ ಕಮಿಟಿಗೆ ಬಿಡಬೇಕು. ಒಂದನೆಯದಾಗಿ ಈ ಮಸೂದೆಯನ್ನು ತಿರಸ್ಕರಿಸಿದರೆ ಇಂಡಿಯಾ ಸರಕಾರದ ಅನುಮತಿ ಪಡೆದು ತನ್ನ ವಿಶೇಷ ಅಧಿಕಾರವನ್ನು ಉಪಯೋಗಿಸಿ ಕೊಡಗಿನ ಸರಕಾರವು ಅದನ್ನು ಜಾರಿಯಲ್ಲಿ ತರುವದು. ಆಗ ಈಗ ಸೂಚಿತವಾಗಿರುವ ದರದ ಕಂದಾಯವನ್ನು ಕೊಡಬೇಕಾಗುತ್ತೆ. ಒಂದು ವೇಳೆ ಕಂದಾಯ ಕೊಡದೆ ಇದಕ್ಕೆ ವಿರುದ್ಧ ಚಳುವಳಿ ನಡೆದರೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶಕ್ಕೆ ಅಹಿತವೇ ಆಗುವದು. ಸಿಲೆಕ್ಟ್ ಕಮಿಟಿಗೆ ಈ ಮಸೂದೆಯನ್ನು ಒಪ್ಪಿಸಿದರೆ ಸರಕಾರವು ಸೂಚಿಸಿದ ದರವನ್ನು ಕಡಿಮೆ ಮಾಡಿ ಜನರ ಅವಶ್ಯಕತೆ, ದೇಶದ ಪರಿಸ್ಥಿತಿ ಒಳಗೊಂಡು ಜನರಿಗೆ ತೊಂದರೆಯಾಗದ ರೀತಿ ಕಂದಾಯ ವಿಧಿಸುವ ಸಲಹೆಗಳನ್ನು ಸೂಚಿಸಲು ಸಾಧ್ಯವಾಗುವದು.

೧೯೧೦ರಲ್ಲಿ ನಿಶ್ಚಯಿಸಿದ ದರದ ಕಂದಾಯವನ್ನೇ ಇಂದೂ ಕೊಡುತ್ತಾ ಹೋಗಿ ತನಗೆ ಪ್ರಗತಿಶೀಲ ಸರಕಾರ ಬೇಕೆಂದು ಜನ ಅಪೇಕ್ಷಿಸುವದು ಯೋಗ್ಯವಾಗದು. ಆದ್ದರಿಂದ ಈ ಮಸೂದೆಯು ಸಿಲೆಕ್ಟ್ ಕಮಿಟಿಗೆ ಬಿಡಲ್ಪಟ್ಟು ಅವರು ಜನತೆಯ ಅಭಿಪ್ರಾಯ ಪಡೆಯುವ ಮಾಡಿ ನಂತರ

ಸೂಚಿಸುವ ದರದ ಕಂದಾಯವನ್ನು ಕೊಡಲೇ ಬೇಕು. ಇಲ್ಲದಿದ್ದರೆ ಸರಕಾರದ ಆರ್ಥಿಕ-ಸ್ಥಿತಿಯು ಹಾಳಾಗಿ ಸಂಯೋಜನಾವಾದಿಗಳ ರೊಟ್ಟಿಗೆ ತುಪ್ಪ ಬಿದ್ದಂತಾಗುವದು. ಸಂಯೋಜನೆಯಾದರೆ ಅಲ್ಲಿ ಇದಕ್ಕಿಂತಾ ಹೆಚ್ಚಿನ ಕಂದಾಯವನ್ನು ತೆರಬೇಕಾಗುವದೆಂಬುದನ್ನು ಯಾರೂ ಮರೆಯಬಾರದು. ಹಾಗೆ ನಾವು ಹೆಚ್ಚಿನ ಕಂದಾಯ ತೆತ್ತರೂ ಅದು ನಮ್ಮ ಹಿತಕ್ಕಾಗಿ ಖರ್ಚಾಗುವ ಸಂಭವ ಕಡಿಮೆ. ಅದು ಮೈಸೂರು ಸರಕಾರವಾಗಲೀ ಯಾ ಭಾವೀ ಕರ್ನಾಟಕ ಸರಕಾರವಾಗಲೀ ಕಾಡಿಯಲು, ವ್ಯವಸಾಯ ಮಾಡಲು ನೀರಿಲ್ಲದ ಬರಗಾಲಪೀಡಿತ ಭಾಗಗಳ ಸುಧಾರಣೆಗೆ ನೊಬಲು ಯತ್ನಿಸುವುದೇ ವಿನಹ ವರ್ಷಕ್ಕೆ ಸರಾಸರಿ ನೂರು ಇಂಚುಮಳೆ ಬೀಳುವ ಕೊಡಗಿನ ಹೊಳೆಗೆ ಆಣೆಕಟ್ಟು ಕಟ್ಟಲಾರದು. ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಇಲ್ಲದವರ ನೆರವಿಗೆ ಯತ್ನಿಸುವದೇ ವಿನಹ ಅಷ್ಟೇ ಅಸ್ಥೆಯಿಂದ ಹೊಟ್ಟೆ ತುಂಬಿದ ಕೊಡಗಿನ ವಿದ್ಯಾ ಪ್ರಗತಿಗಾಗಿ ದುಡಿಯಲಾರದು. ಕೊಡಗು ಮುಂದರಿದಿದೆ. ಸಂಪತ್ತಿದೆಯೆಂಬುದೇ ನೆರೆಯವರಿಗೆ ಅಕರ್ಷಕವಾಗಲು ಕಾರಣ. ಆದ್ದರಿಂದ ಪರಿಸ್ಥಿತಿಯನ್ನು ಅಲೋಚಿಸಿ ಕೊಡಗಿನ ಭವಿಷ್ಯದ ಪ್ರಶ್ನೆಯು ಈ ಕಂದಾಯ ಸಮಸ್ಯೆಯಲ್ಲೂ ಸಮಾವೇಶವಾಗಿದೆಯೆಂಬುದನ್ನು ಅರಿತು ದೇಶೀಯರು ಎಚ್ಚರದಿಂದ ವರ್ತಿಸಬೇಕು. ತನ್ನ ಮನೆಯಲ್ಲಿ ಬತ್ತ ಕುಟ್ಟುವದು ಗೌರವಕ್ಕೆ ಹಾನಿಯೆಂದೂ ಕಷ್ಟಪ್ರಾಯವೆಂದೂ ತಿಳಿದರೆ ಪರಕೀಯರ ಮನೆಯಲ್ಲಿ ಕಲ್ಲೊಡೆಯಬೇಕಾದೀತು!

---

## ನೋಟೀಸು.

ಕೊಡಗು ಮಾಜಿ ಸಿಪಾಯಿಗಳ ಸಂಘವು ವೀರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳು ರೂಪಾಯಿ ಒಂದನ್ನು ಈ ಕೆಳಗೆ ರುಜು ಹಾಕಿದವರಿಗೆ ಕಳುಹಿಸಿ ಮೆಂಬರಾಗಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ. ಕೊಡಗಿನ ಎಲ್ಲಾ ಮಾಜಿ ಸಿಪಾಯಿಗಳ ಅರ್ಥಿಕ, ನೈತಿಕ ಅಭಿವೃದ್ಧಿಗಾಗಿ ಈ ಸಂಘವನ್ನು ಸ್ಥಾಪಿಸಿದ್ದಾಗಿದೆ. ಆದ್ದರಿಂದ ಈ ಸುಸಮಯವನ್ನು ಯಾರು ಕಳೆದುಕೊಳ್ಳಬಾರದು.

ಯೆನ್. ಬಿ ಉತ್ತಪ್ಪ,
5–4 ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

---

## ಪ್ರಕಟಣೆ.

ಕೊಡಗು ಮಾಜಿ ಸಿಪಾಯಿಗಳ ಸಹಕಾರ ಟ್ರಾನ್ಸ್‌ಪೋರ್ಟ್ ಸಂಘವನ್ನು ಕೊಡಗು ಮಾಜಿ ಸಿಪಾಯಿಗಳ ಸಂಘದ ಶಾಖೆಯಾಗಿ ಮಡಿಕೇರಿಯಲ್ಲು ತೆರೆಯಲು ತೀರ್ಮಾನಿಸಲಾಗಿದೆ. ಶೇರು 1ರ ರೂ. 10/– ಗಳಂತೆ ಪ್ರತಿ ಒಬ್ಬ ಮೆಂಬರನು ಶೇರು ಹೊಂದಿಕೊಳ್ಳಬಹುದು. ಆದರೆ ಒಬ್ಬನಿಗೆ ನೂರು ಶೇರುಗಳಿಗಿಂತ ಹೆಚ್ಚು ಶೇರುಗಳನ್ನು ಕೊಡಲಾಗುವುದಿಲ್ಲ. ಮೆಂಬರುಗಳು ಈ ಕೆಳಗೆ ರುಜು ಮಾಡಿದವರಿಗೆ ಮನಿಯಾರ್ಡರ್ ಮೂಲಕ ಹಣ ಕಳುಹಿಸತಕ್ಕದು. ಸರ್ಕಾರಿ ಉದ್ಯೋಗಸ್ಥರೂ ಮೆಂಬರುಗಳಾಗಿ ಸೇರಬಹುದು. ಹಣಸಂದಾಯವಾದ ಮೊಬಲಗಿಗೆ ತತ್ಕಾಲದ ರಶೀತಿ ಕೊಡಲಾಗುವುದು. ಸಂಘವು ರಿಜಿಸ್ಟರ್ ಆದನಂತರ ಮೆಂಬರುಗಳ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುವುದು.

ಯೆನ್. ಬಿ ಉತ್ತಪ್ಪ
ಪ್ರೆಸಿಡೆಂಟ್,
ಕೊಡಗು ಮಾಜಿ ಸಿಪಾಯಿಗಳ ಸಂಘ.

5–4

---

## ಕಾರ್ಯನಿರ್ವಹಣೆಯ ರಚನಾತ್ಮಕ ಕಾರ್ಯಕ್ರಮವು

## ಅಭ್ಯುದಯ ಮತ್ತು ಅಭಿವೃದ್ಧಿಯ ಹೆಜ್ಜೆಯೊಡನೆ ಓಡಲು

**ಯಾವಾಗಲೂ ನಮಗೆ ಸಹಾಯಕವಾಗುತ್ತದೆ.**

ಈ ವಿಷಯವು ಕೆಳಗೆ ನಮೂದಿತವಾಗಿರುವ ಭಾರತದ ಪ್ರಖ್ಯಾತ ಮತ್ತು ಪ್ರಮುಖ ಇನ್‌ಷ್ಯೂರೆನ್ಸ್ ಗೆಜೆಟ್ಟುಗಳ ಪ್ರಶಂಸೆಯಿಂದ ನಿಖರವಾಗುತ್ತದೆ.

X X X X X

(ಎ) "ಇನ್‌ಷ್ಯೂರೆನ್ಸ್ ವರ್ಲ್ಡ್" ತನ್ನ ಅಕ್ಟೋಬರ್ ೧೯೫೪ರ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತದೆ:

"ವರ್ಷದೊಡನೆ ಆಗಮಿಸಿದ ಹಲವು ಕುಂದುಕೊರತೆಗಳಿದ್ದಾಗ್ಯೂ ೧೯೫೪ನೇ ವರ್ಷ" ಬೆಂಗಳೂರು ಪ್ರಾವಿಡೆಂಟಿಗೆ ವ್ಯಾಪಾರ ದೃಷ್ಟಿಯಲ್ಲಿ ಫಲಕಾರಿಯಾದ ಮತ್ತೊಂದು ವರ್ಷವಾಯಿತು.... ಈ ವಿಮಾಕ್ಷೇತ್ರದ ಸಾಲಿನ ಹಿನ್ನೆಲೆಯನ್ನು ಗಮನಿಸಿದರೆ ಇದು ತುಂಬ ತೃಪ್ತಿಕರವೆಂದೇ ಗಣಿಸಬೇಕು... ಈ ವರ್ಷದಲ್ಲಿ ಸಂಸ್ಥೆಯ ಬದ್ಧಿಯು ಶೇ. ೪.೫ಕ್ಕೆ ಹೆಚ್ಚಿದ್ದಕ್ಕಾಗಿ ಸಂತೋಷ ಸೂಚಿಸಬೇಕು. ಬೆಂಗಳೂರು ಪ್ರಾವಿಡೆಂಟಿನ ಏಕಮುಖದ ಅಭ್ಯುದಯಕ್ಕೆ, ಸಂಸ್ಥೆಯ ಅಧ್ಯಕ್ಷ ಹಾಗೂ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಹೆಚ್. ವೆಂಕಟರಾಮಯ್ಯನವರೂ, ಹಾಗೂ ಕಾರ್ಯದರ್ಶಿ ಮತ್ತು ವ್ಯವಸ್ಥಾಪಕರಾದ ಶ್ರೀ ಎಸ್. ವಿ. ನಾರಾಯಣಮೂರ್ತಿ, ಬಿ ಎ, ಬಿ.ಎಲ್. ರವರೂ ಮೂಲ ಕಾರಣರೆಂದು ಒತ್ತಿ ಹೇಳಬೇಕಾಗಿದೆ ........"

X X X X X

(ಬಿ) ಇಂಡಿಯನ್ ಇನ್‌ಷ್ಯೂರೆನ್ಸ್ ಜರ್ನಲ್ ತನ್ನ ಸೆಪ್ಟೆಂಬರ್ ೧೯೫೪ರ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತದೆ:

ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ರ.....ನ ಮುಂದುವರಿಯುತ್ತಿರುವ ಉನ್ನತಿಯು ಸಂಸ್ಥೆಯ ವ್ಯವಸ್ಥಾಪಕ ವರ್ಗದ ಹಿರಿಮೆಯ ಉತ್ಸಾಹವನ್ನು ಮತ್ತು ಕಾರ್ಯದಕ್ಷತೆ, ಬುದ್ಧಿಮಂತಿಕೆಗಳನ್ನು ವ್ಯಕ್ತಪಡಿಸುತ್ತವೆ... ಹೋಲಿಕೆಯಲ್ಲಿ ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಭಾರತದ ಹಲವು ಪ್ರಾವಿಡೆಂಟ್ ಸಂಸ್ಥೆಗಳಿಗಿಂತ ನೂತನವಾದರೂ, ಸದ್ಯದಲ್ಲಿ ಅದರ ಸ್ತು ಕಾಲದ ಎಲ್ಲಾ ಪ್ರಾವಿಡೆಂಟ್ ಸಂಸ್ಥೆಗಳಿಗಿಂತಲೂ ಇದು ಅತಿ ದೊಡ್ಡದು ಮತ್ತು ಜಯಪ್ರದವಾದುದು.

X X X X X

ಈ ಸನ್ನಿವೇಶಗಳಿರುವಾಗ

ಪ್ರಗತಿದಾಯಕ ಹಾಗೂ ಜನಪ್ರಿಯತೆಗಳಿಸಿಕೊಂಡಿರುವ ವಂಶಪಾರಂಪರ್ಯವಾಗಿ ಸಲ್ಲುವ ಕಮಿಷನ್ನಿನ ಸೌಕರ್ಯದ ಈ ಸಂಸ್ಥೆಯನ್ನು ಸೇರಿರಿ.

**ಬೇಕಾಗಿದ್ದಾರೆ.**

ಇಂಡಿಯನ್ ಡೊಮಿನಿಯನ್ ಅತ್ಯಂತ ಆರ್ಗನೈಜರುಗಳ, ಸ್ಪೆಷಲ್ ಏಜೆಂಟರುಗಳು ಮತ್ತು ಏಜಂಟರುಗಳು ಆಕರ್ಷಕ ರೀತಿಯ ಸಂಬಳ ಅಥವಾ ಕಮಿಷನ್ ಮೇಲೆ ಬೇಕಾಗಿದ್ದಾರೆ.

ವಿವರಗಳಿಗೆ ಕೆಳಕಂಡ ವಿಳಾಸಕ್ಕೆ ಬರೆಯಿರಿ:

ಮ್ಯಾನೇಜಿಂಗ್ ಡೈರೆಕ್ಟರ್

**ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿಮಿಟೆಡ್.**

ಹೆಡ್ ಆಫೀಸ್:— "ವಿಶ್ವಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ಸಿಟಿ.

---


ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !!
ಅನುಭವಶೀಲತೆ!!

**ದಿ ವಿಜಯ ಬ್ಯಾಂಕ್ ಲಿಮಿಟೆಡ್**
ಮುಖ್ಯ ಕಛೇರಿ,
**ಕದ್ರಿ ರೋಡ್, ಮಂಗಳೂರು.**

ನಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | [illegible] |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**

**ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**



# ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಷ್ಟ ಸ್ಟಾಕ್ ಇಡಲಾಗಿದೆ.
ಯಾವ ಸಮಾರಂಭಕ್ಕೂ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

**ಪಟ್ಟೊ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
52–4 ಟೌನ್‌ಹಾಲಿನ ಎದುರು, ಮೈಸೂರು

ಸ್ವತಂತ್ರ ಭಾರತದಲ್ಲಿ

# ಅಧಿಕಾರಿ ವರ್ಗದ ಈ ಶೈಥಿಲ್ಯವೇಕೆ ?

'ಈಸ್ಟರ್ನ್ ಟೈಮ್ಸ್' ಎಂಬ ಪತ್ರಿಕೆಯಲ್ಲಿ ಓರ್ವ ನಿರೀಕ್ಷಕರು ಒಂದು ವಿಚಾರಪೂರ್ಣ ಲೇಖನವನ್ನು ಬರೆದು ಬ್ರಿಟಿಷ್ ಆಡಳಿತಗಾರರ ನಿರ್ಗಮನಾನಂತರ ಭಾರತದ ಸರಕಾರ ಕಚೇರಿಗಳಲ್ಲಿ ಹೇಗೆ ಹಿಂದಿನಂತೇ ಪ್ರತಿಗಾಮಿತ್ವವು ಮುಂದುವರಿಯುತ್ತಿದೆ, ಹೇಗೆ ಲಂಚಗುಳಿತನದ ರಾಶಿಯು ವ್ಯಾಪಿಸುತ್ತಿದೆ, ಮತ್ತು ಇವರಿಂದ ಪ್ರಜಾಪ್ರಭುತ್ವದ ಮಂತ್ರಿಗಳು ಕೂಡ ಹೇಗೆ ನಿಸ್ಸಹಾಯರಾಗುತ್ತಿರುವರು ಎಂಬುದನ್ನು ಕಟುತರವಾಗಿ ಬಹಿರಂಗಪಡಿಸಿದ್ದಾರೆ. ಆ ಲೇಖನದ ಸಾರಾಂಶವನ್ನಿಲ್ಲಿ ಕೆಳಗೆ ಕೊಡಲಾಗಿದೆ.

ಬ್ರಿಟಿಷರು ಹೊರಟು ಹೋಗಿ ಭಾರತೀಯರಿಗೆ ಸ್ವಾತಂತ್ರ್ಯ ಲಭಿಸಿತು. ಈಗ ಸರಕಾರೀಯ ಯಂತ್ರ ವಿಭಾಗಗಳನ್ನು ತಡೆಯಿಲ್ಲದೆ ಶಕ್ತಿಯುತವಾದ ನೆಲೆಯ [illegible] ಆಡಳಿತವು [illegible]. ಇಷ್ಟಾದರೂ ನಮ್ಮ ಕಚೇರಿಗಳು ಬ್ರಿಟಿಷರ ಕಾಲದ ಹಾದಿಯಲ್ಲಿಯೇ ನಡೆಯುತ್ತಿರುವುದು ತುಂಬಾ ಶೋಚನೀಯವಾದ ವಿಚಾರ. ಇದನ್ನು ಸುಧಾರಿಸದಿದ್ದರೆ ನಮ್ಮ ದೇಶವು ಎಂದೂ ಮುಂದುವರಿಯಲಾರದು.

ಬ್ರಿಟಿಷ್ ಅಧಿಕಾರವು ತೆಗೆದು ಹಾಕಲ್ಪಟ್ಟ ನಂತರ ನಮ್ಮ ಸರಕಾರಿ ಕಚೇರಿಗಳ ಆ ದೇಶವಾತ್ಸಲ್ಯವನ್ನು ತಳೆದು ಎಲ್ಲ ಸ್ವಾರ್ಥ ಮತ್ತು ಅಧಿಕಾರ ಲಾಲಸೆಗಳನ್ನು ಬಿಟ್ಟು ತಮ್ಮ ದೇಶದ ಜನತೆಯ ಸೇವಕರಾಗಿ ಆ ಜನತೆಯ ಅಭ್ಯುದಯಕ್ಕಾಗಿ ಕಾರ್ಯನಿರತರಾಗುವರೆಂದು ಹಾರೈಸಲಾಗಿತ್ತು. ಆದರೆ ದುರ್ದೈವದಿಂದ ಆ ಆಶೋತ್ತರಗಳು ಕೇವಲ ನಿರಾಶೆಗಳಾಗಿಯೇ ಉಳಿದುವು. ಕಾರಣ ಅಧಿಕಾರಲಾಲಸೆ ಎಂಬ ರೋಗವು ಇಷ್ಟು ಮದಾಂಧರನ್ನಾಗಿ ಮಾಡಿದೆ. ಬಹಳ ಕಾಲ ದೊರೆತ ನಂತರ ಅತ್ಯಧಿಕ ದರ್ಪದಿಂದ ವಿಲಾಸಪ್ರಿಯರಾಗಿ ಗೃಹಾಧಿಕಾರಕ್ಕೆ ಬಂದ ನೂತನರು ತಮ್ಮ ಸ್ಥಾನಮಹತ್ವದಿಂದ ಅತ್ಯಂತ [illegible] ಸ್ವಾರ್ಥಿತನದ ಪ್ರದರ್ಶನಕ್ಕೆ ತೊಡಗಿದ್ದಾರೆ! ಬ್ರಿಟಿಷರು ಹೊರಟಂದಿನಿಂದ ಸ್ವತಂತ್ರರಾದ ನಮ್ಮ ಕಚೇರಿಗಳು [illegible] ಅಧಿಕಾರವನ್ನು [illegible] ಪರಿವರ್ತನೆ ಕಾಣಬೇಕಿತ್ತು.

ಬ್ರಿಟಿಷರು ಆಗಲೇ ನಿರ್ಗಮಿಸುತ್ತ [illegible] ಕಚೇರಿಗಳ ಮುಖ್ಯಾಧಿಕಾರಿಗಳಾಗಿ [illegible] ನಡೆಸಲು ಸಮರ್ಥರಾದವರನ್ನು ಹಿಂದೆ ನಿಸ್ವಾರ್ಥ [illegible] ಬ್ರಿಟಿಷರು ಹೊರಟು ಹೋದ ನಂತರ ಅನೇಕ ಮುಖ್ಯಾಧಿಕಾರಿಗಳ ಸ್ಥಾನಗಳು ತೆರವಾದುವು. ಅವುಗಳನ್ನು ತುಂಬಲು ಹಿಂದೆ ಅವರ ಕೈಕೆಳಗೆ ಕೆಲಸಮಾಡುತ್ತಿದ್ದ ಕಚೇರಿಗಳ ಅತೀ ಹೆಚ್ಚಿನ ನಿರೀಕ್ಷಿತರಾದವರನ್ನು ಆ ಸ್ಥಾನಗಳಿಗೆ ಆರಿಸಲಾಯಿತು. ಇವರಲ್ಲಿ ಹೆಚ್ಚಿನವರು 'ಸ್ವತಂತ್ರ ವಿಚಾರ ಸಾಮರ್ಥ್ಯ ರಹಿತರು' ಸಿ ತಲೆಬಾಗುವವರೂ ಆದವರೇ ಇರುವರೆಂದು ಹೇಳಲಾಗಿದೆ. ಪರಿಣಾಮವಾಗಿ ಸರಕಾರಿ ಕಚೇರಿ ಆಡಳಿತವು ಕಲ್ಪನಾಶೀತವಾದ ದುಃಸ್ಥಿತಿಯಲ್ಲಿದೆ. ಇಷ್ಟಾದರೂ ಈ ಹೊಸ ಮುಖ್ಯಾಧಿಕಾರಿಗಳು ಬ್ರಿಟಿಷರು ಹೇಗೆ ನಿರ್ವಹಿಸುತ್ತಿದ್ದರೋ ಆ ಪದ್ಧತಿಗೆ ಒಂದು ಬಣ್ಣ ಹಚ್ಚಿಗಿಲ್ಲ ಎಂಬಂತೆ ತಮ್ಮ ಅಧಿಕಾರ ಭಾರವನ್ನು ಹೊರುತ್ತಿರುವರು. ಆದುದರಿಂದ ಇಂದು ದೇಶದಲ್ಲಿ ಈ ಕಚೇರಿ ಆಡಳಿತಗಳಲ್ಲಿ ಹೆಚ್ಚುಹೆಚ್ಚು ಅವ್ಯವಸ್ಥೆ, ಲಂಚ ವಂಚನೆಗಳು ನಡೆಯುತ್ತಿವೆ. ದೇಶದಲ್ಲಿ ನಾನಾ ತರದ ದುರಾಚಾರ ದೂಷಣೆಗಳಿಗೆ ಕೌಟಿಲ್ಯತನದ ಸಂಗತಿಯಲ್ಲಿ ಇದರಿಂದಾಗಿ ಆಡಳಿತ ಕಾರ್ಯ ಹೆಚ್ಚಿನ ವಿಳಂಬಕ್ಕೊಳಗಾಗುತ್ತದೆ. ಆದ್ದರಿಂದ ಅಗತ್ಯವು ಸಹಜವೇ ಎನ್ನಬೇಕು. ಈ ಪರಿಸ್ಥಿತಿ ಎಷ್ಟಕ್ಕೆ ತಲುಪಿದೆ ಎಂದರೆ ಈಗಿನ ಕಾಂಗ್ರೆಸ್ ಆಡಳಿತದಲ್ಲಿ [illegible] ಆಡಳಿತದಲ್ಲೇ ಹೆಚ್ಚು ಸುಬದ್ಧವಾಗಿತ್ತೆಂದು ಕೆಲವರು ಹೇಳಲೂ ಹಿಂಜರಿಯುವುದಿಲ್ಲವಾಗಿದೆ.

ಬ್ರಿಟಿಷರ ಆಡಳಿತದಲ್ಲಿ ನಿಸ್ಸಂದೇಹವಾಗಿ ಬೇಜವಾಬ್ದಾರಿಯ ಕೆಲಸ ಕಾರ್ಯಗಳು [illegible] ಇತ್ತು. ಆದರೆ ತಮ್ಮ ಹಿತ ರಕ್ಷಣೆಗಾಗಿ ಕೆಲವನ್ನು ಕೆಳದರ್ಜೆಯ ಸಿಬ್ಬಂದಿಗಳಿಗೆ ಅಗತ್ಯ ಹೆಚ್ಚು ಅವಕಾಶವಿರಲಿಲ್ಲ. ಈಗ ಬೆಟ್ಟಿಗೆ ಬರುವಂತೆ ಮೇಲುತ್ತರದಲ್ಲಿ ಬಿಗಿ ಬಂಧ ಬಂಧನಗಳೆಲ್ಲವನ್ನು ಸಡಿಲಿಸಿದ ಪರಿಣಾಮವಾಗಿ ಅವ್ಯವಸ್ಥೆ ಹೆಚ್ಚಿದೆ. ಈಗಿನ ಹಿಂದಿನ ಬ್ರಿಟಿಷ್ ಅಧಿಕಾರಿಗಳ ಹೆಚ್ಚು ಸ್ವಚ್ಛವಾಗಿದ್ದರು ಎಂದು ಇದು ಅಭಿಪ್ರಾಯವೂ ಆಗಿದೆ. ಬ್ರಿಟಿಷ್ ಅಧಿಕಾರಿಗಳು ತಮ್ಮ ಬಂಧುಬಳಗದ ಬಗ್ಗೆ ಹೆಚ್ಚಿನ ಗಮನವೀಯುತ್ತಿರಲಿಲ್ಲ. ಆದರೆ ಹಿಂದಿ ಅಧಿಕಾರಿಗಳಾದರೂ ಸರಕಾರದ ಹುದ್ದೆಗಳನ್ನು ತಮ್ಮ ಬಂಧುಬಳಗವೇ ಪಡೆಯಬೇಕೆಂದು ಇದ್ದಾರೆ. ನಮ್ಮ ಅಧಿಕಾರದಲ್ಲಿರುವಾಗ ತಮಗೇ ಸರಿ ಎನ್ನುತ್ತಾರೆ. ದೂರದೃಷ್ಟಿಯಿಲ್ಲದೆ [illegible] ಪಕ್ಷ ಎಂಬ ಭಾವನೆಯು ಬೆಳೆದಿದೆ. ಭಾರತವು ೧೯೪೭-೪೮ರಲ್ಲಿ ಸ್ವತಂತ್ರವಾದ ಮೇಲೆ ಹೊಸ ಹೊಸ ಕಚೇರಿ ವಿಭಾಗಗಳು ಹುಟ್ಟಿದುವು. ಅವುಗಳನ್ನು ನಡೆಸಲು ಸ್ವಲ್ಪ ಹೊಸಬರು ಬಂದರು. ತಮ್ಮ ಮೇಲಿನ ಅಧಿಕಾರಿಗಳ ಬಗ್ಗೆ ಭಯವಿರುವ ಇವರು ತಮ್ಮ ನಿರೀಕ್ಷೆಯಂತೆ ಆಡಳಿತ ನಡೆಸಲು [illegible]. ಆದರೆ ಕಚೇರಿ ಕಾರ್ಯ ಹಿಂದಿನಂತೇ ನಡೆಯುತ್ತಿದೆ. ತಮ್ಮ ವಿಭಾಗದ ವ್ಯವಹಾರದಲ್ಲಿ ಕೈಹಾಕಲು ಮಂತ್ರಿಗಳಿಗೂ ಅಧಿಕಾರವಿಲ್ಲ. ನೇರವಾಗಿ ಸ್ಪಷ್ಟವಾದ ಕೂಡಲೇ ಇವರು ಧೈರ್ಯವನ್ನು ತಳೆದರು.

ಸರಕಾರೀ ಕಚೇರಿಗಳಲ್ಲಿನ ಮುಖ್ಯಾಧಿಕಾರಿಗಳು ಹಿಂದಿನಂತೆ ಈಗಲೂ ಎಲ್ಲಾ ಹೊಣೆಗಾರಿಕೆಗಳನ್ನು ತಮ್ಮ ಕೈಕೆಳಗಿನವರ ಮೇಲೆ ಹೇರಿಸಿ ಕಾರ್ಯ ನಡೆಸುತ್ತಿರುವರು. ಆದುದರಿಂದ ಸಹಜವಾಗಿ ಅವುಗಳಲ್ಲಿ ಆಗುವ ವಿಳಂಬಗಳಾದರೂ ಅವರು ಹೊಣೆಗಾರರಲ್ಲ. ಕೆಳಗಿನವರೂ ತಡೆಯುವವರೂ ಯಾರೂ ಇಲ್ಲದಿದ್ದರೆ, ಇರುವ ಮುಖ್ಯಾಧಿಕಾರಿಗಳಲ್ಲಿ ಯಾವ ಸ್ವತಂತ್ರ ವಿಚಾರದ ಹೊಸ ಯೋಜನೆಯನ್ನು ಪ್ರಾರಂಭಿಸುವ ಸ್ವಯಂಪ್ರತಿಭೆಯಿಲ್ಲದಿದ್ದರೆ ಹೇಗಾಗುವುದು? ಈಗ ಹಾಗೇ ಆಗಿದೆ; ದೂರುಗಳು ಹೆಚ್ಚುತ್ತಿವೆ.

ಸರಕಾರದ ಈ ಶಾಖೆಗಳಿಗೆ ಮುಖ್ಯ ಕಾರ್ಯದರ್ಶಿಗಳಿರುವರು. ಇವರ ಕಾರ್ಯಕಲಾಪಗಳನ್ನು ಪರಿಶೀಲನೆ ಮಾಡುವವರಾರು? ಅವರೇ ಕೊನೆಯ ಬದಿಯವರು. ಮಂತ್ರಿಗಳೂ ಅವರ ಮಾತನ್ನು ಮನ್ನಿಸಬೇಕು. ಅವರು ಶಿಫಾರಸ್ ಮಾಡಿದವರನ್ನು ಮಂತ್ರಿಗಳು ಒಂಟಿಯಾಗಿ ಮಾಡಿಸಿದ್ದರೆ ಆಡಳಿತದಲ್ಲಿ ಹೆಚ್ಚಿನ ವಿಳಂಬಗಳಿಗೆ ಆಸ್ಪದವಾಗುತ್ತದೆ. ಮತ್ತು ಅವರ ಹೊಣೆಗಾರಿಕೆ ಕೊನೆಗೆ ಮಂತ್ರಿಗಳ ತಲೆಯ ಮೇಲೆ ಬೀಳುವುದು. ಹೀಗೆ ಸಹಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ, ಜತೆಕಾರ್ಯದರ್ಶಿ ಉಪಕಾರ್ಯದರ್ಶಿಗಳ ಸ್ಥಾನಗಳನ್ನು ನಿರ್ಮಿಸಲಾಗಿದೆ. ಇವುಗಳನ್ನು ಭರ್ತಿಮಾಡುವ ಅಧಿಕಾರವೆಲ್ಲವೂ ಮುಖ್ಯ ಕಾರ್ಯದರ್ಶಿಗಳಿಗೆ. ಹೀಗೆ ಹೆಚ್ಚು ಸಂಬಳದ ಸ್ಥಾನಗಳು ನಿರ್ಮಿಸಲ್ಪಟ್ಟ ಕೂಡಲೇ ಅವು ಭರ್ತಿಯಾಗಲ್ಪಡುತ್ತವೆ. ಈ ಸ್ಥಾನಗಳಿಗೆ ನಿಯುಕ್ತರಾದವರಿಗೆ ಸಹಜವಾಗಿ ಉತ್ಸಾಹದ ಕೊರತೆಯಿದೆಯೋ, ಆಲಸ್ಯತನಕ್ಕೆ ಪಾತ್ರರು ಎಂಬುದು ಮಂತ್ರಿಗಳಿಗೆ ತಿಳಿದಿರುತ್ತದೆಯೋ ಹೇಳಬರುವುದಿಲ್ಲ. ಕೆಲವೊಮ್ಮೆ ತಾತ್ಕಾಲಿಕ ಅಧಿಕಾರಿಸ್ಥಾನಗಳನ್ನು ನಿರ್ಮಿಸಲಾಗುವುದು. ಮತ್ತೆ ಅವುಗಳ ಆವಶ್ಯಕತೆಯಿದೆಯೋ ಇಲ್ಲವೋ ಎಂಬುದನ್ನು ಯಾರೂ ನೋಡುವಂತಿಲ್ಲ. ಮಾತ್ರವಲ್ಲ, ಆ ತಾತ್ಕಾಲಿಕವಾದ ಸ್ಥಾನಗಳು ನಿರಂತರವಾಗಿ ಮುಂದರಿದರೂ ಅವುಗಳನ್ನು ಮುಕ್ತಾಯಗೊಳಿಸಬೇಕೆಂದು ಯಾರಿಗೂ ನೆನಪು ಉಳಿಯುವಂತಿಲ್ಲ.

ಕೆಲವೊಂದು ಸಲ ಲಂಚವಂಚನೆಗಳ ದೂರುಗಳು ಮಂತ್ರಿಗಳಿಗೆ ರಾಶಿಗಟ್ಟಲೆಯಲ್ಲಿ ಕಳುಹಿಸಲ್ಪಟ್ಟಾಗ ಒಂದು ತರದ ವಿಚಾರಣೆಯನ್ನು ನಡೆಸಲಾಗುವುದು. ಆದರೆ ವಿಚಾರಣೆ ನಡೆಸುವವರಾರು? ಮತ್ತೊಮ್ಮೆ ಅದೇ ಶಾಖೆಯ ಮುಖ್ಯಾಧಿಕಾರಿಗಳು ತಮ್ಮ ಕೈಕೆಳಗಿನವರ ಮೂಲಕ ಜರುಗಿಸುವುದು. ಕೆಲವೊಮ್ಮೆ ಮುಖ್ಯಾಧಿಕಾರಿಗಳೇ ಆ ಲಂಚವಂಚನೆಗಳಲ್ಲಿ ಶಾಮೀಲಾಗಿದ್ದರೆ ಅವರ ಕೈಕೆಳಗಿನವರಿಗೆ ಅದನ್ನು ಹೊರಗೆಡಹಲು ಧೈರ್ಯಸಾಲದೆ ಆರೋಪಿತರಾದ ಆ ಕನಿಷ್ಠ ಅಧಿಕಾರ ವರ್ಗದವರಿಗೆ ಅವರ ಆರೋಪಗಳನ್ನು ಪರಿಹರಿಸಲು ಸಂದರ್ಭವನ್ನು ಕಲ್ಪಿಸಲಾಗುವುದು. ಆ ಮೇಲೆ ಆ ಆರೋಪವನ್ನು ನಿರಾಧಾರವಾದುದೆಂದು ತೀರ್ಮಾನಿಸಲಾಗುವುದು. ಇಂತಹ ಅಸಂಖ್ಯವಾದ ನಿದರ್ಶನಗಳನ್ನು ನಿರೂಪಿಸಬಹುದು.

ಮುಖ್ಯವಾಗಿ ನಮ್ಮ ದೇಶವು ಆಧುನಿಕ ಪ್ರಪಂಚದಲ್ಲಿ ಅಭಿವೃದ್ಧಿ ಹೊಂದಿದ ಮುಂದುವರಿದ ಶಕ್ತಿರಾಷ್ಟ್ರಗಳಲ್ಲಿ ಗಣನೀಯವಾಗಬೇಕಾದರೆ, ನಮ್ಮ ದೇಶದಲ್ಲಿ ಕಾರ್ಯತತ್ಪರತೆ ಮತ್ತು ಪ್ರಗತಿಶೀಲತೆಗಳು ಅವಶ್ಯವಾಗಿ ಬೇಕೆಂಬುದು ನಿಜ. ಅಂತಹ ವಾತಾವರಣ ಕಲ್ಪಿತವಾಗಬೇಕಾದರೆ ನಮ್ಮ ಕಚೇರಿ ಆಡಳಿತವು ಸುವ್ಯವಸ್ಥಿತವಾಗಿಯೂ ಯಾವ ಜನರಿಗೂ ಅನ್ಯಾಯವಾಗದಂತೆಯೂ ನಡೆಯುವಂತೆ ನೋಡಿಕೊಳ್ಳಬೇಕು.

ಸ್ವ. ಸಾ.


**THE WARDEN INSURANCE CO., Ltd.**

Head Office, Bombay.

LIFE, FIRE, ACCIDENT, MOTOR & W. C. INSURANCES.

*Managing Director:* – S. H. THAKER.

| | |
|---|---|
| Business in force | Rs. 5,00,00,000 |
| Assets | ,, 1,00,00,000 |
| Income | ,, 35,00,000 |

Also LOCAL MANAGERS OF

THE LONDON GUARANTEE & ACCIDENT CO., Ltd.

(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO. Ltd.

(One of the Largest Assurance Companies in the World)

Assets Exceed Rs. 45,00,00,000

Transact FIRE INSURANCE

Enquiries for representation solicited.

*Apply to,*

**Chief Agency Office** *Virajpet (Coorg)* or **A. S. Aiyanpa.** *Branch Secretary, Gandhinagar, BANGALORE CITY*

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಜರ್ | ಆರ್ಗನೈಜರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯು. ಅಚ್ಚಂಣ, | ಎಂ. ಎ. ಬೆಳ್ಳಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟಾ, ಮಂಗಳೂರು. |



# ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರವಾನಿಗೆ "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52-23 ಗೌರವ ಕಾರ್ಯದರ್ಶಿ.



# ಮತ್ತೊಂದು ಉಜ್ವಲ ವರ್ಷ.

**1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಕಗಳು.**

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಕೋಟಿ |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | „ |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

## ಎಂಪೈರ್ ಆಫ್ ಇಂಡಿಯಾ

### ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897
ರೋಶನ್‌ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ | ಶಾಖಾ ಕಛೇರಿ |
| ಎಂಪೈರ್ ಹೌಸ್, ಹಾರ್ನಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು |



# ಕ್ರೆಸೆಂಟ್ CRESCENT

**FOR PROTECTION AND SERVICE.**

It is best to represent and insure with The CRESCENT Insurance Co., Ltd,

*H. O: BOMBAY.]* *[Established 1919.*

*For particulars write to:*

| | | |
|---|---|---|
| Sri B. A. Poovaiah | or | The Branch Manager, |
| *Organiser* | | *22 B. Mahatma Gandhi Road,* |
| *Pollibetta, Coorg.* | | *Bangalore 1* |

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



# ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್‌ಪೇಟೆ.

## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಹಣ್ಣಾಗಿ ಹೋಗುತ್ತಿರುವ ಹಣ್ಣುಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಹಣ್ಣುಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, ತಾ. 32-9-49 ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.



# ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921)ರಲ್ಲಿ ಸ್ಥಾಪನವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,65,000. |
| ಕ್ಷೇಮನಿಧಿ | ರೂ. | 50,000. |

ಈ ಬ್ಯಾಂಕಿನಿಂದ ಕಡಿಮೆ ಬಡ್ಡಿಗೆ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಹುಂಡಿಯೂ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟಿ ಮತ್ತು ಹಾರ್ಡರ್ನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.


### ಪ್ಲಾಂಟರುಗಳ ಅವಗಾಹನೆಗೆ.

ಈಗಾಗಲೇ ಹಲವಾರು ತೋಟದ ಮಾಲೀಕರಿಂದ ತಮ್ಮ ತೋಟಗಳಿಗೆ ಗೊಬ್ಬರ ಸಿಗುತ್ತದೋ, ಪರ್ಮಿಟ್ ಕೊಡಲಾಗುತ್ತದೋ ಎಂಬುದಾಗಿ ಅರ್ಜಿಗಳು ಬರುತ್ತಿವೆ. ಈ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರು ತೋಟದ ಉಪಯೋಗಕ್ಕಾಗಿ ಈ ವರೆಗೆ ಸೂಪರ್ ಫಾಸ್‌ಫೇಟ್ ಒಂದಲ್ಲದೆ ಬೇರೆ ಯಾವ ಗೊಬ್ಬರವನ್ನೂ ಕೊಟ್ಟಿರುವುದಿಲ್ಲವಾಗಿಯೂ ಈ ವಿಷಯ ಇಂಡಿಯಾ ಮತ್ತು ಮೈಸೂರು ಸರಕಾರಗಳೊಡನೆ ತಕ್ಕ ಪತ್ರವ್ಯವಹಾರ ನಡೆಯುತ್ತಿದೆಯೆಂದೂ ಮತ್ತು ಒಂದು ನಿಷ್ಕರ್ಷೆಗೆ ಬಂದೊಡನೆ ಸರ್ವರಿಗೂ ಪತ್ರಿಕೆಯ ಮೂಲಕ ತಿಳಿಸಲಾಗುವುದೆಂದೂ ಕೊಡಗು ವ್ಯವಸಾಯ ಇಲಾಖಾ ಆಫೀಸರು ಸರ್ವರಿಗೂ ಈ ಮೂಲಕ ತಿಳಿಯಪಡಿಸುತ್ತಾರೆ. ಸೂಪರ್ ಫಾಸ್‌ಫೇಟ್ ಬೇಕಾದವರು ಒಡನೆ ತಮ್ಮ ಅರ್ಜಿಗಳನ್ನು ಆಯಾಯ ಪ್ಲಾಂಟರ್ಸ್ ಅಸೋಸಿಯೇಶನ್‌ಗಳ ಮುಖಾಂತರ ಕೊಡಗು ವ್ಯವಸಾಯ ಇಲಾಖೆಗೆ ಕಳುಹಿಸಬಹುದು.

---

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

1950

Regd. No. M. 1800.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೩-೩-೧೯೫೦ನೇ ಶುಕ್ರವಾರ | ಸಂಚಿಕೆ ೩೭

ವದೇ ಉಚಿತವಲ್ಲ. ಒಮ್ಮೆ ಕಂದಾಯ ಹಾಕಿದ ನಂತರ ಅದು ಮುಂದಿನ ಹಲವು ಪೀಳಿಗೆಗಳ ವರೆಗೆ ಸಾಗುವುದು. ಆದ್ದರಿಂದ ಮಸೂದೆಯನ್ನು ವಿರೋಧಿಸುತ್ತೇನೆ.'

ಶ್ರೀ. ಕೆ. ಎಂ. ದೇವಯ್ಯನವರು.

[illegible]

ಶ್ರೀ ಹೆಚ್. ಬಿ. ಅಣಯ್ಯನವರು.

[illegible]

# ಕಂದಾಯ ಮಸೂದೆಯು ಸಿಲೆಕ್ಟ್ ಕಮಿಟಿಗೆ ಬಿಡಲ್ಪಟ್ಟಿತು.

## ಕೊಡಗು ನ್ಯಾಯವಿಧಾಯಕ ಸಭೆ.

ತಾರೀಖು ೨೮-೨-೧೯೫೦ ನೇ ಮಂಗಳವಾರ ಬೆಳಗ್ಗೆ ಹನ್ನೊಂದು ಗಂಟೆಗೆ ಕೊಡಗು ನ್ಯಾಯವಿಧಾಯಕ ಸಭೆಯು ವಿಶೇಷ ಮೀಟಿಂಗೊಂದು ಸೆಟ್ಲ್‌ಮೆಂಟ್ ಆಗುವ ವರೆಗೆ [illegible]

[illegible]

ಶ್ರೀ ಪಿ. ಐ. ಬೆಳ್ಯಪ್ಪನವರು.

[illegible]

ಕು. ಕಾಲೇಜಿನ ಸ್ಥಾಪನೆ, ಮೂರು ಹೈಸ್ಕೂಲುಗಳು, ಎರಡು ಹೈಸ್ಕೂಲು ಕಟ್ಟಡಗಳು, ಹೊಸದರದ ವೇತನ, ಜನೋದ್ಧಾರ ಕೆಲಸ, ವ್ಯಾಯಾಮ ಮತ್ತು ವಾಲಾಸ್ಪತ್ರೆಗಳು ಹೆಚ್ಚುವಿಕೆ ಜಿಲ್ಲಾ ಬೋರ್ಡಿಗೆ ವಂತಿಗೆ ಜಾನುವಾರು ಮತ್ತು ವ್ಯವಸಾಯ ಶಾಲಾ ಖರ್ಚು ಬಡಾವಣೆ ಇನ್ನೊಂದು ಲಕ್ಷದ ಹೊಸ ಖರ್ಚುಗಳು ಆಗುತ್ತವೆ. ಪಾನನಿಯಂತ್ರಣವನ್ನು ಜಾರಿಗೆ ತಂದ ಕಾರಣ ಐದು ಲಕ್ಷ ನಷ್ಟವಾಗಿದೆ. ಕಾಲೇಜು ಕಟ್ಟಡ, ಬರಪೊಳೆ ಯೋಜನೆ, ಹಾರಂಗಿ ಮತ್ತು ಲಕ್ಷ್ಮಣ ತೀರ್ಥ ಕಟ್ಟೆಗಳು, ಬೇತು, ಕೊಟ್ಟಮುಡಿ ಸೇತುವೆ, ಪೊನ್ನಂಪೇಟೆ ಹೈಸ್ಕೂಲು ಕಟ್ಟಡ ಇವು ತೀವ್ರ ಆಗಬೇಕಾದವು. ಹುದಿಕೇರಿ, ಹಾತೂರ್, ಶಾಂತಳ್ಳಿ, ಅಮ್ಮತ್ತಿ, ಫ್ರೇಜರ್‌ಪೇಟೆ ಕಾಕೋಟುಪರಂಬು ಮೊದಲಾದ ಕೇಂದ್ರಗಳಿಗೆ ಹೈಸ್ಕೂಲು ಬೇಕೆಂಬ ನ್ಯಾಯಬದ್ಧ ಬೇಡಿಕೆ ಮೊದಲಾದುವನ್ನು ಸಲ್ಲಿಸಲು ಹಣಬೇಕು. ಯಾವುದೇ ಸರಕಾರವಾದರೂ ಜನಹಿತ ಕೆಲಸ ಮಾಡಬೇಕಾದರೆ ಪ್ರಜೆಗಳಿಂದ ಕಂದಾಯ ಎತ್ತದೆ ಸಾಧ್ಯವಿಲ್ಲ. ಮುದ್ರಾಸು ಸರಕಾರಕ್ಕೆ ಪಾನನಿರೋಧದಿಂದಾದ ೧೭ ಕೋಟಿ ರೂಪಾಯಿಗಳ ನಷ್ಟವನ್ನು ಭರ್ತಿ ಮಾಡಲು ಮಾರಾಟ ತೆರಿಗೆ ಹಾಕಿದೆ. ಕೊಡಗಿನ ಹಿಂದಿನ ಉಳಿತಾಯವನ್ನು ಈ ನಿಶ್ಶೇಷವಾಗುವಂತೆ ಸರಕಾರದ ಭತ್ಯ ಮಾಡುವದು ಯಾವುದೇ ಒಳ್ಳೇ ಸರಕಾರದ ನೀತಿಯಾಗಿದೆ. ಉಳಿತಾಯವು ರೂ. ೬೦ ಲಕ್ಷ. ಹಣದ ಬಿಗ್ಗಡಿ ಸುಧಾರಣೆಯನ್ನು ಪಡೆಯಲು ಸುಲಭ. ಮೇಲಿನ ರೀತಿ ವಿವಿಧ ಕೆಲಸಗಳಿಗಾಗಿ ನಿಶ್ಚಿತವಾಗಿರುವದರಿಂದ ಅದನ್ನು ವಿನಾಕಾರಣ ಖರ್ಚಿಗಾಗಿ ವಿನಿಯೋಗಿಸಲಾಗುವದಿಲ್ಲ. ೧೯೫೦-೫೧ರಲ್ಲಿ ಸುಮಾರು ಏಳು ಲಕ್ಷ ಕೊರತೆ ಬೀಳುವದೆಂದು ಫೈನಾನ್ಸ್ ಮೆಂಬರರು ಹೇಳಿದರು. ನಮ್ಮ ದೇಶವನ್ನು ಪ್ರತ್ಯೇಕವಿಡಬೇಕಾದರೆ ಸರಕಾರದ ಆರ್ಥಿಕ ಸ್ಥಿತಿ ಉತ್ತಮವಿರಬೇಕು. ಆದರೆ ಸರಕಾರವು ಈಗ ಸೂಚಿಸಿರುವ ಕಂದಾಯ ದರಕ್ಕೆ ನಾನೊಪ್ಪುವದಿಲ್ಲ. ರೈತರ ಬಡತನವ ಗಮನಿಸಿಯೇ ಈ ದರವನ್ನು ಇಳಿಸಬೇಕು. ಕಂದಾಯ ಪಾವತಿ ಮಾಡಲಾರದ ೨೦೦ ಬಟ್ಟೆ ಭೂಮಿಯು ಮತ್ತು ಹತ್ತು ಎಕರೆ ತೋಟದ ರೈತರನ್ನು ವಿನಾಯಿಸಲೂ ಬಹುದು. ಇವನ್ನೆಲ್ಲಾ ಪರಿಶೀಲಿಸಿ ಮಸೂದೆಗೆ ಯೋಗ್ಯ ತಿದ್ದುಪಡಿ ಮಾಡಲು ಇದು ಬಾರಿ ಸಿಲೆಕ್ಟ್ ಕಮಿಟಿಗೆ ಬಿಡುವದು ಮೇಲು. ಅದರು ಪ್ಲಾಂಟರುಗಳ ಸಂಘದವರು ಮತ್ತು ಇತರರು ಸೂಚಿಸಿರುವಂತೆ ದೇಶದ ಅಭಿಪ್ರಾಯ ತಿಳಿಸಲು ಯೋಗ್ಯ ಅವಕಾಶ ದೊರಕುವಂತಾಗಲಿ. ಮುಂಬರುವ ಕೌನ್ಸಿಲ್ ಮೀಟಿಂಗಿನಲ್ಲಿ ವ್ಯವಸಾಯ ಆದಾಯ ತೆರಿಗೆ ಮಸೂದೆ ಪಾಸಾದರೆ ಈ ಕಂದಾಯ ಮಸೂದೆಯನ್ನು ಮಾರ್ಪಾಡು ಮಾಡಿಕೊಳ್ಳುವಂತೆ ಮಾಡಬಹುದು. ಶ್ರೀಗಳಾದ ಕೆ. ಪಿ. ಅಪ್ಪಯ್ಯ, ಎಚ್. ಟಿ. ಮುತ್ತಣ್ಣ, ಕೆ. ಪಿ. ಕರುಂಬಯ್ಯ, ಕೆ. ಎಂ. ಶಂಕಾಲಪ್ಪ, ಸಿ. ಎಂ. ಪೂಣಚ್ಚ,

# ಕೊಡಗು ನ್ಯಾಯವಿಧಾಯಕ ಸಭೆ.

ಎನ್. ಸೋಮಣ್ಣ, ಅಬ್ದುಲ್‌ರಹಿಮಾನ್ ಖಾನ್, ಪಿ. ಐ. ಬೆಳ್ಯಪ್ಪ ಮತ್ತು ಫೈನಾನ್ಸ್ ಮೆಂಬರು (ಅಧ್ಯಕ್ಷ) ಇವರುಗಳನ್ನು ಸಿಲೆಕ್ಟ್ ಕಮಿಟಿಗೆ ಸೂಚಿಸುತ್ತೇನೆ.

### ಶ್ರೀ ಕೆ. ಎಂ. ಶಂಕಾಲಪ್ಪನವರು

ಜನರ ಹಿತದೃಷ್ಟಿಯಿಂದ ಸರಕಾರ ನಡೆಸಲು ಹಣ ಬೇಕು. ಹಣವಿಲ್ಲದೆ ಯಾವುದೇ ಸರಕಾರವೂ ಜನರಿಗೆ ಬೇಕಾದ ಹಿತಕಾರ್ಯಗಳನ್ನು ಮಾಡಲಾರದು. ಸರಕಾರದ ಜವಾಬ್ದಾರಿ ನಮ್ಮ ಮೇಲೆ ಬಿದ್ದಿರುವಾಗ ಹಿಂದಿಗಿಂತಲೂ ಇಂದು ಹೆಚ್ಚಿನ ಭಾರ ಹೊರಲು ತಯಾರಾಗಬೇಕು. ಇನ್ನೂರು ಬಟ್ಟೆ ಭೂಮಿಗೆ ಮತ್ತು ಹತ್ತು ಎಕರೆ ತೋಟಕ್ಕೆ ಕಡಿಮೆಯಿರುವವರಿಗೆ ವಿನಾಯಿತಿ ಕೊಡಬಹುದು. ಈ ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಟ್ಟು ಜನರ ಅಭಿಪ್ರಾಯ ತಿಳಿಯಬೇಕು. ವ್ಯವಸಾಯ ಆದಾಯ ತೆರಿಗೆ ಜಾರಿಯಲ್ಲಿ ಬಂದರೆ ಈ ಮಸೂದೆಯನ್ನು ಹಿಂತೆಗೆದುಕೊಳ್ಳಬಹುದು. ಈ ಮಸೂದೆಗೆ ವಿರೋಧ ಮಾಡುವುದು ಸರಿಯಲ್ಲ. ಸರಕಾರವು ಸೂಚಿಸಿದ ಕಂದಾಯ ದರವು ರೈತರು ಕೊಡಲಾರದಷ್ಟು ಹೆಚ್ಚಾಗಿದೆ. ಇದನ್ನು ಕಡಿಮೆ ಮಾಡಲು ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಬೇಕು. ಈ ಮಸೂದೆಯೊಂದಿಗೆ ದೇಶದ ಭವಿಷ್ಯವೂ ಸಮಾವೇಶವಾಗಿದೆ. ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದಿದ್ದರೆ ಕೊಡಗು ವಿಲೀನವಾಗಬೇಕಾದೀತು. ಆದ್ದರಿಂದ ಆರ್ಥಿಕ ಸ್ಥಿತಿಯನ್ನು ಬಿಗಿಗೊಳಿಸುವ ಯಾವುದೇ ಪ್ರಯತ್ನವನ್ನು ವಿರೋಧಿಸುವುದು ನಮ್ಮ ಕರ್ತವ್ಯ. ಶ್ರೀ ಪಿ. ಐ. ಬೆಳ್ಯಪ್ಪನವರ ಸೂಚನೆಗೆ ಅನುಮೋದಿಸುತ್ತೇನೆ.

### ಉಪಸೂಚನೆ.

ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂಬ ಶ್ರೀ ಪಿ. ಐ. ಬೆಳ್ಯಪ್ಪನವರ ಉಪಸೂಚನೆಯು ಚರ್ಚೆಗೆ ಇಡಲ್ಪಟ್ಟಿತು. ಶ್ರೀ ಕೆ. ಮಲ್ಲಪ್ಪನವರು ಉಪಸೂಚನೆಯನ್ನು ವಿರೋಧಿಸುತ್ತಾ "ಕಂದಾಯ ಮಸೂದೆಯ ಬಗ್ಗೆ ಜನರ ಅಭಿಪ್ರಾಯ ಕೇಳುವ ಅವಶ್ಯವಿಲ್ಲ. ಈ ಬಗ್ಗೆ ನಡೆದ ಸಾರ್ವಜನಿಕ ವಿರೋಧ ಪ್ರದರ್ಶನದಿಂದಲೇ ಅದು ತಿಳಿಯುತ್ತದೆ. ಸಾರ್ವಜನಿಕ ಅಭಿಪ್ರಾಯವು ವಿರೋಧವಾಗಿದ್ದು ಮಸೂದೆಯನ್ನು ಪೂರ್ಣ ವಿರೋಧಿಸುತ್ತದೆ. ನಾವು ಮಸೂದೆಗೆ ವಿರೋಧವಿರುವಾಗ ಈ ಸಿಲೆಕ್ಟ್ ಕಮಿಟಿಗೆ ಬಿಡುವ ಸೂಚನೆಯನ್ನು ಒಪ್ಪಲಾರೆವು. ಸಿಲೆಕ್ಟ್ ಕಮಿಟಿಗೆ ಬಿಟ್ಟರೆ ಕಂದಾಯದ ತತ್ವವನ್ನು ಒಪ್ಪಿಕೊಂಡಂತಾಗುವದು" ಎಂದರು.

ಶ್ರೀ ಕೆ. ಕೆ. ಬೆಳ್ಯಪ್ಪನವರು ಮಾತಾಡುತ್ತಾ "ಬೆಳ್ಯಪ್ಪನವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಸಿಲೆಕ್ಟ್ ಕಮಿಟಿಗೆ ಬಿಡುವುದೆಂದರೆ ಮಸೂದೆಯನ್ನು ಒಪ್ಪಿದಂತೆ. ಈ ಮಸೂದೆಯು ನಮ್ಮ ಪ್ರತ್ಯೇಕವಾದ, ಸಂಯೋಜಕಾವಾದಗಳ ಮಾತು ಬಂದಿದೆ. ಈ ಸಮರಿ ಕಂದಾಯ ನೀತಿಯು ಯಾವುದಕ್ಕೂ ಸಹಕಾರಿಯಲ್ಲ. ಪಾನನಿರೋಧದಿಂದ ಕೊಡಗಿನ ಬೊಕ್ಕಸಕ್ಕೆ ಏಳು ಲಕ್ಷ ನಷ್ಟವಾಗಿದೆ. ಕೊಡಗಿನ ಬಹುಮತ ಜನರು ಪಾನನಿರೋಧಕ್ಕೆ ವಿರೋಧವಿದ್ದಾರೆ. ಸರಕಾರವೂ ಕಾಂಗ್ರೆಸ್ ಪಕ್ಷವೂ ಅದನ್ನು ಜಾರಿಗೆ ತರಲು ಕಂಕಣಬದ್ಧರಾಗಿದ್ದರೆ ಈ ಮಸೂದೆ ಕೇಂದ್ರ ಸರ್ಕಾರದ ಒಪ್ಪಿಗೆಯಿಂದ ತರಲ್ಪಟ್ಟಿದೆಯೆಂದು ಹೇಳುತ್ತಾರೆ. ಕೇಂದ್ರ ಸರಕಾರಕ್ಕೇನು ಗೊತ್ತು? ನೂರಾರು ಜನರು, ಹೆಂಗಸರೂ ಕೂಡ ಇದನ್ನು ವಿರೋಧಿಸಿದ್ದಾರೆ. ಈ ಬಗ್ಗೆ ಸಾವಿರಾರು ಅರ್ಜಿಗಳು ಚೀಫ್ ಕಮಿಷನರಿಗೆ ಕೊಡಲ್ಪಟ್ಟಿವೆ. ನಾನು ಉಪಠರಾವನ್ನು ವಿರೋಧಿಸುತ್ತೇನೆ" ಎಂದರು.

ಉಪಸೂಚನೆಯ ಮೇಲೆ ಮಾತಾಡಿದವರು ಮಸೂದೆಯ ಮೇಲೆ ಮಾತಾಡಬಹುದೇ ಎಂದು ಶ್ರೀ ಮಲ್ಲಪ್ಪನವರು ಕೇಳಿದರು. ಪ್ರೆಸಿಡೆಂಟರು ಮಾತಾಡಬಹುದೆಂದರು.

### ಶ್ರೀ ಕೆ. ಪಿ. ಅಪ್ಪಯ್ಯನವರು

ಸಿಲೆಕ್ಟ್ ಕಮಿಟಿಗೆ ಮಸೂದೆಯನ್ನು ಬಿಟ್ಟರೆ ಜನಾಭಿಪ್ರಾಯದಂತೆ ಮಸೂದೆಗೆ ತಿದ್ದುಪಡಿ ಮಾಡಬಹುದು. ಕೊಡಗಿನ ಪ್ಲಾಂಟರುಗಳ ಹಾಗೂ ರೈತರ ಸ್ಥಿತಿ ಚೆನ್ನಾಗಿಲ್ಲ. ಅವರ ಸ್ಥಿತಿಗನುಗುಣ ಕಂದಾಯದ ದರವನ್ನು ನಿಶ್ಚಯಿಸುವ ಸಾಧ್ಯತೆ ಸಿಲೆಕ್ಟ್ ಕಮಿಟಿಗಿದೆ. ಯಾವುದೇ ಜನಹಿತ ಸರಕಾರವು ಆರ್ಥಿಕ ಬಲವಿಲ್ಲದೆ ನಡೆಯಲಾರದು. ಕೊಡಗಿನ ಸರಕಾರವು ಇತ್ತೀಚೆಗೆ ಅನೇಕ ಉಪಯುಕ್ತ ಹಾಗೂ ಜನೋಪಯೋಗಿ ಕೆಲಸಗಳನ್ನು ಮಾಡಿದೆ. ಕೊಡಗಿನ ಭವಿಷ್ಯವು ಅದರ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿದೆ. ಕೇಂದ್ರವು ಆರ್ಥಿಕ ದೃಷ್ಟಿಯಿಂದಲೇ ನಮ್ಮ ಸಮಸ್ಯೆಗಳನ್ನು ನೋಡುವದು. ಆದ್ದರಿಂದ ದೇಶವನ್ನು ಪ್ರತ್ಯೇಕವಿಟ್ಟುಕೊಂಡು ಜವಾಬ್ದಾರಿ ಆಡಳಿತ ಪಡೆಯಬೇಕಿದ್ದರೆ ನಾವ್ಯಾರೂ ಈ ಮಸೂದೆಗೆ ತತ್ವಶಃ ವಿರೋಧಿಸಬಾರದು.

### ಶ್ರೀ ಕೆ. ಮಲ್ಲಪ್ಪನವರು

ಕೊಡಗಿನ ರೈತನಿಗೆ ಹೆಚ್ಚಿನ ಕಂದಾಯ ಕೊಡಲು ಶಕ್ತಿಯಿದೆಯೇ? ಈಗ ಅಧಿಕ ದಾಯದ ಆವಶ್ಯಕತೆಯಿದೆಯೇ? ಎಂಬ ಎರಡು ವಿಚಾರಗಳನ್ನು ಪರಿಶೀಲಿಸಬೇಕು. ಕೊಡಗಿನ ರೈತನು ಹೆಚ್ಚಿನ ಕಂದಾಯ ಕೊಡುವ ಸ್ಥಿತಿಯಲ್ಲಿ ಇಲ್ಲ. ಆತನ ಬೆಳಸಿಗೆ ಬೆಲೆ ಇರುವದಿಲ್ಲ. ಆದರೆ ಆತನ ಉತ್ಪತ್ತಿ ಕಡಿಮೆಯಾಗುತ್ತಿದೆ. ಅಕಾಲಿಕ ಮಳೆಯಿಂದ ನಷ್ಟವಾಗುತ್ತಿದೆ. ತೋಟಗಳು ದಿನಕಳೆದಂತೆ ಸಾರವನ್ನು ಕಳಕೊಂಡು ಫಲವತ್ತಾಗಿಲ್ಲ. ವ್ಯವಸಾಯ ಖರ್ಚು ಒಂದಕ್ಕೆ ಹತ್ತರಂತೆ ಏರಿದೆ. ಆದಾಯವು ತುಲನಾತ್ಮಕವಾಗಿ ಕಡಿಮೆಯಾಗಿದೆ. ನಿವ್ವಳ ಉಳಿತಾಯ ಕಡಿಮೆ. ರೈತನು ಹೆಚ್ಚಿನ ಕಂದಾಯ ಕೊಡಲಾರ. ದೇಶದ ರೈತನ ಮೇಲಿರುವ ಸಾಲವು ೨೦೦ ಕೋಟಿಗೆ ತಲುಪಿದೆಯೆಂಬುದೇ ರೈತನ ಸ್ಥಿತಿಯನ್ನು ಸಾರಿ ಹೇಳುತ್ತದೆ. ಇಂಥಾ ಪರಿಸ್ಥಿತಿಯಲ್ಲಿ ಹೆಚ್ಚಿನ ಕಂದಾಯವು ಅನ್ಯಾಯ. ಈ ಪರಿಸ್ಥಿತಿಯಲ್ಲಿ ಕಂದಾಯ ಏಕೆ ಹಾಕಬೇಕು? ಸರಕಾರವು ನಾನಾ ಯೋಜನೆಗಳನ್ನು ಮಾಡುತ್ತದೆ. ಯಾವ ದೇಶೋದ್ಧಾರ ಯೋಜನೆಗೆಂದು ೩೦ ಲಕ್ಷವಿಟ್ಟಿದೆ. ಆದರೆ ಮಾಡಿದುದೇನು? ಯೋಜನೆಗಳ ಪರಿಶೀಲನಾ ಅಧಿಕಾರಿಗಳ ಬಿಟ್ಟು ಏನೂ ಬೇರೇನೂ ಆಗಿಲ್ಲ. ವರ್ಷಾಂತ್ಯದಲ್ಲಿ ಉಳಿದ ಸಿಲ್ಕು ೬೦ ಲಕ್ಷವಾಗಬಹುದು. ಜನತೆಯ ಸ್ಥಿತಿಯನ್ನು ಉತ್ತಮಗೊಳಿಸಲು ಇದು ಖರ್ಚು ಮಾಡಲಿಟ್ಟ ನಂತರ ಕಂದಾಯದ ಮಾತು ಬಂದಿದ್ದರೆ ಯಾರೂ ವಿರೋಧಿಸುತ್ತಿರಲಿಲ್ಲ. ಬಜೆಟ್ಟಿನಲ್ಲಿ ಕೊರತೆ ಇದೆಯೆಂಬುದನ್ನು ಒಪ್ಪುವದಿಲ್ಲ. ಬಜೆಟ್ಟಿನಲ್ಲಿ ಅಂದಾಜು ಮಾಡುವದೊಂದು ವರ್ಷಾಂತ್ಯದಲ್ಲಿ ಆಗುವದು ಇನ್ನೊಂದು ಎಂಬುದು ಅನುಭವದ ಮಾತು. ಏಳು ಲಕ್ಷ ಕೊರತೆ ಇದೆ ಎಂಬುದು ಕೇವಲ ಕಾಗದದ ಕೊರತೆ! ಉಳಿತಾಯವನ್ನು ಖರ್ಚು ಮಾಡದೆ ಕಂದಾಯ ಹಾಕಲು ಕೂಡದು. ಸರಕಾರವು ಏನೂ ಮಾಡಿಲ್ಲ; ಮುಂದೆ ಮಾಡುವದೂ ಇಲ್ಲವೆಂಬುದು ನನಗೆ ಸ್ವಯಂಸಿದ್ಧವಾಗಿದೆ. ಇದಕ್ಕೆ ನಿದರ್ಶನ ಕೊಡಬೇಕಿದೆ. ಕೊಪ್ಪಿಪೇಟೆಯಲ್ಲಿ ಮಸೀದಿಯ ಮುಂದೆ ವಾದ್ಯದ ವಿಚಾರ ಗಲಭೆಯಾಯಿತು. ಅದ್ದರಿಂದ ಮಸೀದಿಯ ಮುಂದಿನ ರಸ್ತೆಯನ್ನು ಬೇರೆ ಮಾಡುವ ಒಪ್ಪಂದವಾಗಿ ರೂ. ೩,೦೦೦ ಅಂದಾಜಾಗಿ ಬಜೆಟ್ಟಿನಲ್ಲಿ ಹಣ ತೆಗೆದಿಡಲ್ಪಟ್ಟಿತು. ಈ ವರೆಗೂ ಏನೊಂದೂ ಆಗಲಿಲ್ಲ. ಮೊನ್ನೆ ರಿಪಬ್ಲಿಕ್ ದಿನದಂದೂ ಅಲ್ಲಿ ಗಲಾಟೆ ನಡೆದಿದೆ. ಹೆಬ್ಬಾಲೆ ಗ್ರಾಮದಲ್ಲಿ ನೀರಿನ ತೊಂದರೆ ಹೇಳಲಾಗುವುದಿಲ್ಲ. ಎರಡು ಮೈಲು ದೂರದಿಂದ ನೀರು ಬರಬೇಕು. ಅನೇಕ ಹೆಂಗಸರಿಗೆ ಬಸವಿಯ ಇದೇ ಕೆಲಸ. ಸರಕಾರಕ್ಕೆ ತನ್ನ ಬೊಕ್ಕಸದಲ್ಲಿ ೬೦ ಲಕ್ಷ ಉಳಿತಾಯ ಇದ್ದರೂ ಏನೂ ಮಾಡಿಲ್ಲ. ಮಳೆಯ ಅಭಾವದಿಂದ ಆ ಭಾಗದ ಜನರಿಗೆ ಏನೂ ಬೆಳೆಯಲು ಸಾಧ್ಯವಿಲ್ಲದಾಗಿದೆ. ೧೯೫೦ರಿಂದ ಕೂಗಿಕೊಂಡರೂ ಯಾವ ಪ್ರಯೋಜನವಾಗಿಲ್ಲ. ಸರಕಾರ ಹೆಚ್ಚು ಬೆಳೆಸಿ ಎಂದು ಕೂಗುತ್ತದೆ. ಆದರೆ ಹಾಗೆ ಬೆಳೆಯಲು ರೈತನಿಗೆ ಯಾವ ಸಹಾಯ ಮಾಡಿದೆ? ಸ್ವರ್ಗವನ್ನೇ ಕೊಡುವ ಭರವಸೆ ಕೊಡುವದು. ಕಡೆಗೆ ಕಂದಾಯದ ಉಡುಗೊರೆಯೇ? ಈ ಕಂದಾಯವು ನ್ಯಾಯಬದ್ಧವಾದ ದರೋಡೆ ಎನ್ನಬೇಕಿದೆ. ಕೊಡಗಿನ ಭೂಮಿಯ ಆದಾಯವನ್ನು ಪರಿಶೀಲಿಸಿ ಕಂದಾಯ ಹಾಕಲು ಸೆಟ್ಲ್‌ಮೆಂಟ್ ಆಫೀಸರ ನೇಮಕವಾಗಿ ಅವರು ಕೆಲಸ ಪ್ರಾರಂಭಿಸುವ ಈ ಸಮಯದಲ್ಲಿ ಈ ಸಮರಿ ಕಂದಾಯ ಹಾಕಿದರೆ ಅದರ ಕೈ ಕಟ್ಟಿದಂತಾಗಿ ರೈತರಿಗೆ ಅಹಿತವಾಗುವದು.

### ಶ್ರೀ. ಎಸ್. ಎಸ್. ನಾರಾಯಣ ಮೂರ್ತಿಯವರು.

ಮಸೂದೆಗೆ ನನ್ನ ತೀವ್ರ ವಿರೋಧವಿದೆ. ನನಗೆ ಮೊದಲು ಮಾತಾಡಿದವರು

(೭ನೇ ಪುಟಕ್ಕೆ ಸಾಗಿದೆ)

# ಪ್ರಜಾ ರಾಜ್ಯ ದಿನೋತ್ಸವ.

ಮಡಿಕೇರಿ

ತಾರೀಕು ೨೬-೧-೫೦ರಂದು ಹಿಂದೂ ದೇಶದ ಇತರ ಕಡೆಗಳಂತೆಯೇ ಇಲ್ಲಿಯೂ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಮಡಿಕೇರಿ ಪಟ್ಟಣವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಬೆಳಿಗ್ಗೆ ಕೋಟೆಯಲ್ಲಿ ಧ್ವಜಾರೋಹಣದ ನಂತರ ಮೆರವಣಿಗೆ ನಡೆಯಿತು. ಪೋಲೀಸರ [illegible], ಆಟ, ಶಾಲಾಬಾಲಕರ [illegible] ಮನೋರಂಜಕವಾಗಿತ್ತು. [illegible] ಕೌನ್ಸಿಲ್ ಹಾಲ್‌ನಲ್ಲಿ ಸಾರ್ವಜನಿಕ ಸಭೆನಡೆದು ಅನೇಕರು ಭಾಷಣ ಮಾಡಿದರು. ಸಾಯಂಕಾಲ ಚೀಫ್ ಕಮಿಷನರಿಂದ ಆಹ್ವಾನಿತರಾಗಿದ್ದ ಸುಮಾರು ೭೦೦ ಜನರಿಗೆ ಸರಕಾರಿ ಔತಣವು ನಡೆಯಿತು. ಈ ಔತಣಕ್ಕೆ ವಿರುದ್ಧವಾಗಿ ಸಾರ್ವಜನಿಕ ಔತಣ ಒಂದನ್ನು [illegible] ಕಟ್ಟಡದಲ್ಲಿ ಕೆಲವರು ಏರ್ಪಡಿಸಿದ್ದರು. ಜಾತಿ ಮತ, ಬಡವ ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರಿಗೂ ಊಟ ಏರ್ಪಡಿಸಲಾಗಿತ್ತು. ವಾದ್ಯ, ನೃತ್ಯಗಳಿಂದ [illegible] ಆಗಿತ್ತು. ಸರಕಾರದ ಔತಣಕ್ಕೆ ಭಾಗವಹಿಸಿ ಹಿಂತೆರಳುತ್ತಿದ್ದ ಜನರನ್ನು ಈ ಸಾರ್ವಜನಿಕ ಔತಣಕ್ಕೆ ಬಂದಿದ್ದ ಕೆಲವರು ತಡೆದು ಬೈದು ಉಗುಳಿ ಅವಮಾನ ಮಾಡಿದರೆಂದೂ ಈ ಬಗ್ಗೆ ಪೋಲೀಸರಿಗೆ ಫಿರ್ಯಾದು ಹೋಗಿ ತನಿಖೆಯಾಗುತ್ತಿದೆಯೆಂದೂ ತಿಳಿಯಬಂದಿದೆ. ತಾರೀಕು ೨೭ರಲ್ಲಿ ಸಾರ್ವಜನಿಕ ಆಟೋಟಗಳ ಸ್ಪರ್ಧೆ ನಡೆಯಿತು.

ಮೂರ್ನಾಡು.

ಇಲ್ಲಿ ಶ್ರೀ [illegible] ಪ್ರಾಧ್ಯಾಪಕರ ಅಧ್ಯಕ್ಷತೆಯಲ್ಲಿ ಪ್ರಜಾರಾಜ್ಯ ದಿನಾಚರಣೆ ನಡೆಯಿತು. ಬೆಳಿಗ್ಗೆ ಪ್ರಭಾತಫೇರಿ ನಡೆದನಂತರ ಶ್ರೀ [illegible] ಗಣಪತಿಯವರಿಂದ ಧ್ವಜಾರೋಹಣ ನಡೆಯಿತು. ಬಾಲಕ ಬಾಲಕಿಯರಿಗೂ ಸಾರ್ವಜನಿಕರಿಗೂ ಆಟೋಟ ಸ್ಪರ್ಧೆ ನಡೆಯಿತು. ನಂತರ ನಡೆದ ಸಭೆಯಲ್ಲಿ ಶ್ರೀಗಳಾದ ಬಿ. ಜಿ. ವೆಂಕಪ್ಪ, ಪಿ. ಮುದ್ದಪ್ಪ, ಬಿ. ದೇವಯ್ಯ, ಬಿ. ಬಿ. [illegible] ಮೊದಲಾದವರು ಭಾಷಣ ಮಾಡಿದರು. ಆಟೋಟಗಳಲ್ಲಿ ಗೆದ್ದವರಿಗೆ ಬಹುಮಾನವಿತರಣೆಯಾದನಂತರ ಜೆಂಗಸರಿಗೂ ಮಕ್ಕಳಿಗೂ ಸಿಹಿತಿಂಡಿ ಹಂಚಲಾಯಿತು. ಹರಿಜನರಿಗೂ, ಬಡವರಿಗೂ ಅಕ್ಕಿ ಹಂಚಲಾಯಿತು. ಪ್ರಜಾರಾಜ್ಯಕ್ಕೆ ಶುಭವಾಗಲಿ ಎಂದು ಶ್ರೀರಾಮ ಮಂದಿರದಲ್ಲೂ ಮಸೀದಿಯಲ್ಲೂ ಪೂಜೆನಡೆಯಿತು.

ಕುಂಬಳದಾಳು.

ಸಾರ್ವಜನಿಕರೂ ಶಾಲಾ ವಿದ್ಯಾರ್ಥಿಗಳೂ ವಾದ್ಯಘೋಷಗಳೊಂದಿಗೆ ಊರ ಮೆರವಣಿಗೆಯ ನಂತರ ಶ್ರೀ ಮುಕ್ಕಾಟಿರ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆನಡೆಯಿತು. ಆಟೋಟಗಳ ಸ್ಪರ್ಧೆ ನಡೆದು ಬಹುಮಾನವು ಹಂಚಲ್ಪಟ್ಟಿತು. ಶಾಲಾ ಮುಖ್ಯೋಪಾಧ್ಯಾಯರು ಸೂಕ್ತವಾಗಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ನಂತರ ಸಭೆ ಮುಕ್ತಾಯವಾಯಿತು. ಎಲ್ಲರಿಗೂ ಊಟ ಉಪಾಹಾರ ಏರ್ಪಡಿಸಲಾಗಿತ್ತು.

ಬಿಳಿಗೇರಿ.

ಇಲ್ಲಿಯ ಹರಿಜನ ಶಾಲೆಯ ಬಳಿ ಇಲ್ಲಿಯ ಗ್ರಾಮಸ್ಥರು ಆಟೋಟಗಳ ಸ್ಪರ್ಧೆ ನಡೆಸಿ ನಂತರ ಶಾಲೆಯಲ್ಲಿ ಶ್ರೀ ಬಿ. ಐ. ಅಚ್ಚಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿತು. ಮುಖ್ಯೋಪಾಧ್ಯಾಯರಾದ ಶ್ರೀ ಐ. ಎಸ್. [illegible] ಭಾಷಣ ಮಾಡಿ ಹರಿಜನರಿಗಾಗಿ ಸ್ಥಾಪಿತವಾಗಿರುವ ಶಾಲೆಯ ಪ್ರಯೋಜನದ ಬಗ್ಗೆ ತಿಳಿಸಿದರು. ಸಂತೋಷ ಪಾನೀಯ ಹಂಚಿಕೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ತಿತಿಮತಿ.

ಇಲ್ಲಿಯ ಶಾಲಾ ಉಪಾಧ್ಯಾಯರ ವಿದ್ಯಾರ್ಥಿಗಳ ಗ್ರಾಮಸ್ಥರೂ ಶಾಲಾ ಆವರಣದಲ್ಲಿ ಶ್ರೀ ಎ. ಎಸ್. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಶ್ರೀ ಪಿ. ಎಂ. [illegible]ರಿಂದ ಧ್ವಜಾರೋಹಣ ನಂತರ [illegible]. ಶ್ರೀ [illegible] ಮೈದಾನದಲ್ಲಿ ಆಟೋಟಗಳ ಸ್ಪರ್ಧೆ ನಡೆಯಿತು. ಬಹುಮಾನ ವಿತರಣವಾದ ನಂತರ ಶ್ರೀ ಪಿ. ಎಸ್. [illegible] ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದನಂತರ ಸಭೆ ಮುಕ್ತಾಯವಾಯಿತು. ನಂತರ ಎಲ್ಲರಿಗೂ ಸಿಹಿತಿಂಡಿ ಹಂಚಲಾಯಿತು.

ಭಾಗಮಂಡಲ.

ಬೆಳಿಗ್ಗೆ ಶ್ರೀ ಎಚ್. ಎಸ್. ಹೆಬ್ಬಾರ್ ರವರಿಂದ ಧ್ವಜಾರೋಹಣ ನಡೆಯಿತು. ಪ್ರಮುಖ ಮಂದಿಗಳ ಭಾಷಣದೊಂದಿಗೆ [illegible] ನಡೆಯಿತು. ನಂತರ ಶಾಲಾ ಮಕ್ಕಳಿಗೂ ಜನರಿಗೂ ಆಟೋಟಗಳ ಸ್ಪರ್ಧೆ ನಡೆಯಿತು. ಶ್ರೀ ಭಗಂಡೇಶ್ವರ ದೇವಸ್ಥಾನದಲ್ಲಿ ಪೂಜೆ ನಂತರ [illegible] ಭವನದಲ್ಲಿ ಶ್ರೀ ಕೆ. ಬಿ. ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಆಟೋಟಗಳಲ್ಲಿ ಜಯಶೀಲರಾದವರಿಗೆ ಬಹುಮಾನ ಹಂಚಲಾಯಿತು. ಶ್ರೀಗಳಾದ ಡಾ. ಎನ್. ವೆಂಕಟರಂಗ ಚಾರ್, ಬಿ. ಕೆ. ಮುತ್ತಪ್ಪ ಇವರುಗಳು ಭಾಷಣಮಾಡಿದರು. ನಂತರ ಶ್ರೀ ಎಚ್. ಎಸ್. ಹೆಬ್ಬಾರ್ ಮತ್ತು ಬಿ. ಡಬ್ಲ್ಯು. ಭೀಮಯ್ಯನವರು ಕೊಟ್ಟ ಅಕ್ಕಿಯನ್ನು ಬಡವರಿಗೂ ಹರಿಜನರಿಗೂ ಹಂಚಲಾಯಿತು. ಎಲ್ಲರಿಗೂ ಲಘು ಉಪಹಾರವಿತ್ತು. ಸಾಯಂಕಾಲ ದೀಪೋತ್ಸವ ಮತ್ತು ಶ್ರೀಯಕ್ಷಗಾನ [illegible] ನಡೆಯಿತು.

ಪೊನ್ನಂಪೇಟೆ.

ಸುತ್ತ ಮುತ್ತಲಿನ ಗ್ರಾಮದ ಜನರೂ, ಶಾಲಾ ವಿದ್ಯಾರ್ಥಿಗಳೂ ಸೇರಿ ಮೆರವಣಿಗೆ ಆಟೋಟಗಳ ಸ್ಪರ್ಧೆ ನಡೆಯಿತು. ಊಟೋಪಚಾರದ ನಂತರ ಮಧ್ಯಾಹ್ನದ ವೇಳೆ ಶ್ರೀ ಮುಕ್ಕಾಟಿರ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಬಹುಮಾನ ವಿತರಣೆಯನಂತರ ಶ್ರೀಗಳಾದ ಎಂ. ಪಿ. ತಿಮ್ಮಯ್ಯ, ಎಂ. ಎಂ. ಮಾಚಯ್ಯ, ಪುಗ್ಗೇರ ಜೋಯಪ್ಪ, ಪುಗ್ಗೇರ ಚಂಗಪ್ಪ, ಬಿದ್ದಂಡ ಮಾಚಯ್ಯ, ಎಂ. ಆರ್. ಕೃಷ್ಣಯ್ಯ, ಎ. ಎಂ. ರಾಮರತ್ನ ಮೊದಲಾದವರು ಭಾಷಣಮಾಡಿದರು. ನಂತರ ಅಧ್ಯಕ್ಷರ ಸಮಯೋಚಿತ ಸಮಾರೋಪ ಭಾಷಣದಿಂದ ಸಭೆ ಮುಕ್ತಾಯಗೊಂಡಿತು.

ಕಣ್ಣಂಗಾಲ.

ಅಮ್ಮತ್ತಿನಾಡಿನ ಕಣ್ಣಂಗಾಲ, [illegible], ಎಡೂರು, ಹಚ್ಚಿನಾಡು ಗ್ರಾಮದ ಜನರೂ ಶಾಲಾ ವಿದ್ಯಾರ್ಥಿಗಳೂ ಸೇರಿ ಗ್ರಾಮದ ದೇವಸ್ಥಾನದಲ್ಲಿ ಭಜನೆ ಪೂಜೆ ನಡೆಸಿ, ವಾದ್ಯಘೋಷದೊಂದಿಗೆ ಮೆರವಣಿಗೆ ಹೋಗಿ ಸಿಹಿತಿಂಡಿ ಹಂಚಿದ ನಂತರ ಬಹುಮಾನವಿತರಣೆ ನಡೆಯಿತು. ಹಿಂದೂ ಮುಸ್ಲಿಮರು ಒಂದಾಗಿ ಕಳಕಳಿ ಪ್ರಜಾ-ದಿನವನ್ನು ಆಚರಿಸಿದರು.


ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ!! ಅನುಭವಶೀಲತೆ!!

## ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಛೇರಿ,

ಲೈಟ್ ಹೌಸ್ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4% |

ರೂಪಾಯಿ ೧೫,೦೦೦ಕ್ಕೆ ಮೀರಿ ಒಂದೇ ಠೇವಣಿಯ ಮೇಲಿನ ದರಕ್ಕೆ ಅಧಿಕ 1% ಬಡ್ಡಿ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, [illegible], ಕಾರ್ಕಳ, ಬೆಳ್ತಂಗಡಿ, [illegible], ಪುತ್ತೂರು, ಮಡಿಕೇರಿ [illegible].

ಒಟ್ಟು ಠೇವಣಿಯು [illegible] ರೂ. ೪೦ ಲಕ್ಷವನ್ನು ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು [illegible] ನಡೆಸುವುದರಲ್ಲಿ ದಕ್ಷತೆಯಿಂದ ನಡೆಸುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್, ಮಡಿಕೇರಿ ಶಾಖೆ, ಮಡಿಕೇರಿ.



[illegible] ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಳ್ ಬನಾರಿಸ್ ಸಿಲ್ಕುಗಳು ಸೀರೆ, ಮೈಸೂರು ಕ್ರೇಪುಗಳು. ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವುವು.

ಅತ್ಯುತ್ತಮ ಕಾಟನ್ ಬನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವುವು.

[illegible]

ಒಮ್ಮೆ ಬಂದು ಪರೀಕ್ಷಿಸಿರಿ

ಪಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,

ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,

12-5 ವೀರಾಜಪೇಟೆ (ಕೊಡಗು)



## ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವುದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಷ್ಟ ಸ್ಟಾಕ್ ಇಡಲಾಗಿದೆ.

ಯಾವ ನಮೂನೆಯ ಬಟ್ಟೆಗೂ ಆರ್ಡರ್ ಕೊಡಿ

ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವುದು.

ಬಟ್ಟೆಯ ವಿಚಾರದಲ್ಲಿ ಏನು ಬೇಕೆ! ಪಟ್ಟೊ ಬ್ರದರ್ಸ್ ಎನ್ನಿರಿ!

ಪಟ್ಟೊ ಬ್ರದರ್ಸ್,

ಲಕ್ಷ್ಮೀ ಬಿಲ್ಡಿಂಗ್ಸ್,

52-5 ಟೌನ್‌ಹಾಲಿನ ಎದುರು, ಮೈಸೂರು.

# ಕೊಡಗು

**ತಾ. ೩-೨-೧೯೫೦ನೇ ಶುಕ್ರವಾರ**

## ಕಂದಾಯ ಮುಸೂದೆ.

ಈಗಿರುವ ಕಂದಾಯ ದರವನ್ನು ತಾತ್ಕಾಲಿಕವಾಗಿ, ಅಂದರೆ ಸೆಟ್ಲ್‌ಮೆಂಟ್ ಮುಗಿಯುವ ವರೆಗೆ, ಏರಿಸಬೇಕೆಂಬ ಮಸೂದೆಯು ತಾ. ೩೧-೧-೫೦ ರಲ್ಲಿ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಇದನ್ನು ಕುರಿತು ಕೌನ್ಸಿಲು ಮೆಂಬರುಗಳಲ್ಲಿ ಎರಡು ಭಿನ್ನಾಭಿಪ್ರಾಯಗಳು ಸ್ಪಷ್ಟವಾಗಿ ಕಾಣಬರುತ್ತವೆ. ಒಂದು ಪಕ್ಷದವರು ಕೈಗೆ ಕೊಡುವವರ ಸ್ಥಿತಿಯು ಈಗ ಬಹು ಹೀನವಾಗಿರುವ ಈ ಸಮಯದಲ್ಲಿ ಸರಕಾರದ ಬೊಕ್ಕಸದಲ್ಲಿ ಉಳಿಸಲು ಇಟ್ಟಿರುವ ಈ ತರದ ಅವಶ್ಯದ ಕಂದಾಯವನ್ನು ಜನರ ಮೇಲೆ ಹೇರುವುದು ಸರಿಯಲ್ಲವೆಂದು, ವಾದಿಸಿದರು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯದೊರಕಿತು ಕೊಡಗಿಗೆ ಅದರ ಫಲವು ಸಂಪೂರ್ಣ ದೊರೆಯದಿದ್ದರೂ ಈ ಪ್ರಾಂತವನ್ನು ಗೌರವವಾಗಿ ಆಳುತ್ತಿರುವ ಕೇಂದ್ರ ಸರಕಾರವು ಜನಪ್ರಿಯ ಕಾಂಗ್ರೆಸು ಮುಖಂಡರುಗಳಿಂದ ನಡೆಸಲ್ಪಡುತ್ತಿರುವುದರಿಂದಲೂ, ಈ ಮುಸೂದೆಯು ಅವರಿಂದ ಒಪ್ಪಲ್ಪಟ್ಟಿರುವುದರಿಂದಲೂ, ನಮ್ಮ ಪ್ರಾಂತದ ಸಂಸಾರವನ್ನು ನಡೆಸಲು ಬರುವ ವರ್ಷದ ಬಜೆಟ್ಟಿನಲ್ಲಿ ಸುಮಾರು ಏಳು ಲಕ್ಷ ರೂಪಾಯಿ ಕಡಿಮೆ ಬೀಳುವುದರಿಂದಲೂ, ಸ್ವಾತಂತ್ರ್ಯದೊರಕಿದ ನಂತರ ಸರಕಾರವು ಜನಹಿತದ ಹಲವು ಕಾರ್ಯಗಳನ್ನು ಕೈಕೊಂಡು ಅಧಿಕ ಖರ್ಚು ಹೆಚ್ಚುತ್ತಿರುವುದರಿಂದಲೂ ಅಲ್ಲದೆ, ಸಂಗಿನಿಂದ ಜನರು ತಮ್ಮ ಭಾಗದ ಜವಾಬ್ದಾರಿಯನ್ನರಿತು ಸ್ವಲ್ಪ ಹೊರೆಯನ್ನು ವಹಿಸಿಕೊಳ್ಳುವುದು ಯುಕ್ತವೆಂತಲೂ, ಉಳಿದ ಇರುವ ಹಣವನ್ನು ಸರಕಾರದ ಸ್ಥಿತಿಯ ಗ್ಯಾರಂಟಿ ಖರ್ಚು ಮಾಡುವದು ಸರಿಯಲ್ಲವೆಂತಲೂ, ಅಲ್ಲದೆ ಈ ಉಳಿತಾಯವು ಹೆಚ್ಚಿನ ಭಾಗವು ದೇಶದ ಅಭಿವೃದ್ಧಿಗಾಗಿ ಕೈಕೊಳ್ಳಬೇಕಾದ ಯುದ್ಧೋತ್ತರ ಯೋಜನೆಗಳಿಗೆ ವಿನಿಯೋಗಿಸಲ್ಪಟ್ಟಿರುವದರಿಂದಲೂ, ಇಂಡಿಯಾ ಸರಕಾರದವರು ಕೊಟ್ಟಿರುವ ತಾತ್ಕಾಲಿಕ ತೀರ್ಮಾನದಂತೆ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಯೇ ಇಟ್ಟುಕೊಂಡು ಜವಾಬ್ದಾರಿ ಸರಕಾರವನ್ನು ಪಡೆಯಲು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವದು ಅತ್ಯವಶ್ಯವೆಂತಲೂ ಸರಕಾರದ ಆದಾಯವನ್ನು ಹೆಚ್ಚಿಸುವ ಈ ಮಸೂದೆಯು ತತ್ವಕ್ಕೆ ವಿರೋಧಿಸಬಾರದೆಂತಲೂ ಆದರೆ ಮಸೂದೆಯಲ್ಲಿ ಸೂಚಿಸಿರುವ ಕಂದಾಯದ ದರವು ಹೆಚ್ಚಿನದು ಕೊಡುವವರ ಶಕ್ತಿಗೆ ಮೀರಿದ್ದೆಂದೂ ಅದನ್ನು ಜವಾಬ್ದಾರಿ ತಗ್ಗಿಸಿ ಯೋಗ್ಯ ರೀತಿ ಇಳಿಸಲು ಸಿಲೆಕ್ಟ್ ಕಮಿಟಿಗೆ ಬಿಡುವದು ಸೂಕ್ತವೆಂತಲೂ ಇನ್ನೊಂದು ಪಕ್ಷದವರು ಅಭಿಪ್ರಾಯಪಟ್ಟರು.

ಈ ಅಭಿಪ್ರಾಯದಂತೆಯೇ ಕೌನ್ಸಿಲಿನ ತೀರ್ಮಾನವೂ ಆಯಿತು. ದೇಶದ ಮುಂದಿನ ಹಿತದೃಷ್ಟಿಯಿಂದ ಈ ತೀರ್ಮಾನವು ಯುಕ್ತವಾದುದೆಂದರಲ್ಲಿ ಸಂಶಯವಿಲ್ಲ. ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಬಹುಮತದವರು ಈ ಮೊದಲೇ ಹೋರಾಡಿ ತಾತ್ಕಾಲಿಕ ತಮ್ಮ ಉದ್ದೇಶ್ಯವನ್ನು ಸಾಧಿಸಿರುವ ಈ ಸಮಯದಲ್ಲಿ ಇದನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವದು ಅವಶ್ಯವಾಗಿದೆ. ಅನುಕೂಲಸ್ಥರಿಗೆ ಮಾತ್ರ ಹೆಚ್ಚಿನ ತೆರಿಗೆ ಸಂಗ್ರಹಿಸುವ ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ಕೌನ್ಸಿಲಿನಲ್ಲಿರುವ ಪ್ರತಿನಿಧಿಗಳು ಈ ಮೊದಲೇ ಚರ್ಚೆಗೆ ಬಂದಿದ್ದಾಗ್ಗೆ ಪಾಸುಮಾಡಿದ್ದರೆ ಈ ಸಮಯ ಕಂದಾಯದ ಮಸೂದೆಯನ್ನು ಒಪ್ಪಿಕೊಳ್ಳುವ ಅವಶ್ಯಕತೆ ಬೀಳುತ್ತಿರಲಿಲ್ಲ. ಇನ್ನಾದರೂ ಕೂಡ ಬರುವ ಮಾರ್ಚ ಕೌನ್ಸಿಲ್ ಮೀಟಿಂಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯ ಮಸೂದೆಯನ್ನು ಪಾಸು ಮಾಡಿದ್ದಾದರೆ ಈ ಮಸೂದೆಯನ್ನು ವಜಮಾಡುವಂತೆ ಸರಕಾರವನ್ನು ಕೇಳಿಕೊಳ್ಳಬಹುದಾಗಿದೆ.

ಒಂದು ವೇಳೆ ಈ ಮಸೂದೆಯನ್ನು ಕೌನ್ಸಿಲಿನ ಬಹುಮತದವರು ತಿರಸ್ಕರಿಸಿದ್ದರೆ ಇಂಡಿಯಾ ಸರಕಾರದವರು ಇದನ್ನು ಸರ್ಟಿಫೈ ಮಾಡಿ ಜಾರಿಗೆ ತರುವಂಥಾ ಕಾಲವಿಲ್ಲ. ಅದರಲ್ಲಿ ಸೂಚಿಸಿರುವ ಹೆಚ್ಚಿನ ದರವೇ ಜನರ ಮೇಲೆ ಹೇರಲ್ಪಡುತ್ತಿತ್ತು. ಅದರ ಬದಲು ಈಗ ಅದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಟ್ಟಿರುವದರಿಂದ ಜನರ ಶಕ್ತಿಗನುಸಾರ ದರವನ್ನು ಕಡಿಮೆ ಮಾಡಿಕೊಳ್ಳುವಂಥಾ ಮಾತ್ರ ಬದಲಾವಣೆಗಳನ್ನು ಚರ್ಚಿಸಿ ತಿದ್ದುಪಡಿಯಿಂದ ವಿನಾ ಪ್ರತಿಬಂಧವಾಗುವಂಥಾ ಅವಕಾಶವು ಜನರ ಪ್ರತಿನಿಧಿಗಳಿಗೆ ದೊರೆತಿದೆ. ಸರಕಾರದ ಕಾರ್ಯಕಲಾಪಗಳು ವಿಸ್ತಾರವಾಗುತ್ತಾ ಬರುತ್ತಿರುವ ಈ ಸಮಯದಲ್ಲಿ ಸರಕಾರದ ಆದಾಯವನ್ನು ಹೆಚ್ಚಿಸುವ ವ್ಯವಸ್ಥೆಯಿಂದ ಮಾತ್ರ ದೇಶವು ಅಭಿವೃದ್ಧಿ ಹೊಂದಬಹುದೇ ಹೊರತು ಕೈಗೊಂಡಿರುವ ಈ ಪ್ರಾಂತವನ್ನು ಬೇರೆ ಪ್ರಾಂತದೊಡನೆ ಸಂಯೋಜನೆ ಮಾಡುವ ವಿಚಾರದಲ್ಲಿ ಸಂಶಯವಿಲ್ಲ. ಜವಾಬ್ದಾರಿ ಸರಕಾರವು ಬೇಕೆನ್ನುವ ಪ್ರತಿಯೊಬ್ಬ ವ್ಯಕ್ತಿಯೂ ಕಂದಾಯ ಕರ ಕಟ್ಟುವ ನಮ್ಮ ಕೈಗೂಡುತ್ತಿರುವಂಥಾ ಈ ಸಮಯದಲ್ಲಿ ತನ್ನ ಕರ್ತವ್ಯವನ್ನರಿತು ಕೊಂಡು ಸರಕಾರದ ಆದಾಯವನ್ನು ಹೆಚ್ಚಿಸಲು ಮಾಡುತ್ತಿರುವ ಜನರ ಪ್ರಾಮಾಣಿಕ ಶಕ್ತಿಗೆ ಮೀರದ ಈ ಪ್ರಯತ್ನದ ತನ್ನ ಗೆಂಟಲವನ್ನು ಕೊಡಬೇಕೆಂಬುದು ದೇಶದ ಉದ್ದಗಲಕ್ಕೂ ಈ ಮೊದಲು ನಡೆದ ಹಲವು ಸಾರ್ವಜನಿಕ ಸಭೆಗಳ ತೀರ್ಮಾನಗಳಿಂದ ಸ್ಪಷ್ಟವಾಗಿದೆ. ಅದರಂತೆ ದೇಶೀಯರು ಕೌನ್ಸಿಲಿನಲ್ಲಾದ ಈ ನಿರ್ಣಯಕ್ಕೆ ಬೆಂಬಲವಿತ್ತು ಜನಹಿತ ಸರಕಾರ ನಡೆಯಲು ಅನುವು ಮಾಡುವರಾಗಿ ನಂಬಲಾಗಿದೆ.

## ವರ್ತಮಾನ.

**ತಾ. ೨೮-೧-೫೦ ರಲ್ಲಿ ಕೊಡಗು ಜಿಲ್ಲಾ ಮೇಲು ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಕೊಡಗಿನ ಚೀಫ್ ಕಮಿಷನರ್ ಶ್ರೀ. ಸಿ. ಟಿ. ಮೊದಲಿಯಾರವರ ಅಧ್ಯಕ್ಷತೆಯಲ್ಲಿ ನಡೆಯಿತು.**

ತಾ. ೨೮-೧-೫೦ ರಲ್ಲಿ ಕೊಡಗಿನ ಚೀಫ್ ಕಮಿಷನರ್ ಶ್ರೀ. ಸಿ ಟಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಮೀರಾಜಪೇಟೆ ಪೈಸ್ಕೂಲ್ ಹಾಲ್‌ನಲ್ಲಿ ಕೊಡಗಿನ ಬಾಲಚಮೂ ದಳದ ಮಹಾಸಭೆಯು ನಡೆದು, ಡೆಲ್ಲಿಯಲ್ಲಿರುವ ಆ ದಳದ ಕೇಂದ್ರ ಸಮಿತಿಯು ಕೊಡಗಿನಲ್ಲಿ ಆ ಬಗ್ಗೆ ಶ್ರಮವಹಿಸಿ ದುಡಿಯುತ್ತಿರುವ ಶ್ರೀ. ಕಲ್ಯಾಟಂಡ ಬೆಳ್ಯಪ್ಪನವರಿಗೆ ಕಳಿಸಿದ 'ಮೆರಿಟ್ ಮೆಡಲ'ನ್ನು ಕೊಡಲಾಯಿತು.

ಮದ್ರಾಸ್ ಪ್ರಾಂತೀಯ ಒಲಂಪಿಕ್ ಆಟೋಟಗಳಲ್ಲಿ ಶ್ರೀ ಕೋದಂಡ ಎ. ಪೂವಯ್ಯನವರು ಭಾರದ ಕಲ್ಲೆಸೆಯುವಾಟದಲ್ಲಿ ಆ ವರೆಗಿನ ಮದ್ರಾಸ್ ರೆಕಾರ್ಡನ್ನು ಮೀರಿ ಪ್ರಥಮ ಬಹುಮಾನ ಪಡೆದರು. ಇವರನ್ನು ಮದ್ರಾಸಿನ ಪರ ಅಖಿಲ ಭಾರತ ಒಲಂಪಿಕ್ಸಿಗೆ ಕಳುಹಿಸುವರೆಂದು ತಿಳಿಯಬಂದಿದೆ.

ತಾ. ೧೫-೧-೫೦ ರಲ್ಲಿ ಪೊನ್ನಂಪೇಟೆಯಲ್ಲಿ ರುವ ಕೊಡವ ಸಂಘವು ಹತ್ತಿರ ಹುಟ್ಟಿದ ನಮ್ಮ ಶ್ರೀ. ಮಾಳೇಟಿರ ಮುತ್ತಣ್ಣನವರ ಭವನದಲ್ಲಿ ನಡೆಸಿತು. ಸಂಘದ ವಾರ್ಷಿಕ ಸಭೆಯಲ್ಲಿ ಶ್ರೀ ಪ ಮಾಚಂಡ ಬೋಪಯ್ಯ (ಅಮ್ಮತ್ತಿ) ಶ್ರೀ ಗಾಳಿ ಬೀರಂಟೀರ ವಿಶ್ವನಾಥ ಬಸಪ್ಪ (ಸ್ಪರ್ಧೆ) ಶ್ರೀ ಚೀಯಕಪೂವಂಡ ದೇವಯ್ಯ (ಬಾಳೆಲೆ) ಇವರುಗಳನ್ನು ಸಂಘದ ಕಾರ್ಯನಿರ್ವಾಹಕರಾಗಿ ಆರಿಸಲಾಯಿತು.

ತಾ. ೧೭-೧-೧೯೫೦ ರಲ್ಲಿ ಮಡಿಕೇರಿ ಡಾ। ಗ್ರಾಹಾಂ ಕಾಂಗಿರ ಗಣಪತಿಯವರು ೨೦೦ ಎಕ್ರೆ ಭೂಮಿಯು ಮಡಿಕೆ ಬೆಂಕಿಬಿದ್ದು ಮನೆಯು ಸುಟ್ಟು ಹೋದ ಪರಿಣಾಮ ಸುಮಾರು ೩,೦೦೦ ರೂಪಾಯಿಗಳ ನಷ್ಟವಾಗಿರುವದಂತೆ.

ಕಳೆದ ಎಸ್ ಎಸ್. ಎಲ್ ಸಿ ಪರೀಕ್ಷೆಯಲ್ಲಿ ಶ್ರೀ. ಐಚೆಟ್ಟೀರ ಮುತ್ತಣ್ಣನವರೂ, ಶ್ರೀ. ಎಸ್. ಡಿ ಅಪ್ಪಣ್ಣನವರೂ ತೇರ್ಗಡೆಯಾಗಿರುವರು.

ತಾ. ೨೫-೧-೫೦ರ ಸ್ವಾತಂತ್ರ್ಯ ಕಾಲದ ದಿನದಂದು ಜಾನಿಟ್ ವೈದ್ಯರಲ್ಲಿ ಕೊಡಗು ಸರಕಾರದ 'ಸ್ಟೇಟ್ ಗೆಜೆಟ್' ಏರ್ಪಾಡನ್ನು ವಿರೋಧಿಸಿ ಒಂದು ಸಾರ್ವಜನಿಕ ಸಭೆಯು ಶ್ರೀ. ಬಿ ಪದ್ಮನಾಭರವರ ಅಧ್ಯಕ್ಷತೆಯಲ್ಲಿ ನಡೆದು ನಮ್ಮ ವಿರೋಧ ರವಾನೆಯನ್ನು ಚೀಫ್ ಕಮಿಷನರಿಗೂ ಕೇಂದ್ರ ಸರಕಾರಕ್ಕೂ ಕಳಿಸಿದರು.

ಸುಂಟಿಕೊಪ್ಪ ಸರಕಾರಿ ಪ್ರೌಢ ಶಾಲೆಯ ವಾರ್ಷಿಕೋತ್ಸವವು ತಾ ೪-೨-೫೦ ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರೊಫೆಸರರಾದ ಶ್ರೀ. ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವದು.

**ತಾ ೩೧-೧-೫೦ ರ ಬೆಳಗ್ಗೆ ಕೌನ್ಸಿಲು ಸಭೆಯು ಜರಗುವ ಮುನ್ನ 'ಹೊಸ ಕಂದಾಯ ಮಸೂದೆಗೆ ಧಿಕ್ಕಾರ'ವೆಂಬ ಘೋಷಣೆಯಿಂದ ಕೊಡಗಿನ ಕೆಲವು ಭಾಗದ ಸುಮಾರು ೩೦೦ ಜನರು** ತಮ್ಮ ವಿರೋಧ ಪ್ರದರ್ಶನವನ್ನು ಕೋರ್ಟಿನ ಮುಂಭಾಗದಲ್ಲಿ ಮಾಡಿ ಚೀಫ್ ಕಮಿಷನರು ಬಂದಾಗ ಅವರಿಗೆ ಕಂದಾಯ ಹೆಚ್ಚು ಮಾಡಕೂಡದೆಂಬ ಅರ್ಜಿಗಳನ್ನು ಅರ್ಪಿಸಿದರು.

ಕೊಡಗಿನ ಚೀಫ್ ಕಮಿಷನರಾದ ಶ್ರೀ. ಸಿ. ಟಿ. ಮೊದಲಿಯಾರರು ಬರುವ ಮಾರ್ಚ ತಿಂಗಳಲ್ಲಿ ಕೆಲಸದಿಂದ ನಿವೃತ್ತರಾಗುವರೆಂದೂ ಅವರ ಬದಲು ಅಸ್ಸೆಂಬ್ಲಿಯೊಳಗೆ ಡೈಕಮಿಷನರಾಗಿದ್ದ ಕರ್ನಲ್ ದಯಾಸಿಂಗ್ ಬೇಡಿಯವರು ಬರುವರೆಂದೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ರಜೆಯಲ್ಲಿರುವ ದಕ್ಷಿಣ ಕೊಡಗು ಸುಬೇದಾರರಾದ ಶ್ರೀ. ನಾಣಮಂಡ ಉತ್ತಯ್ಯನವರ ಬದಲು ಅಬ್ಕಾರಿ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಎಂ ಶ್ರೀನಿವಾಸರಾಯರನ್ನೂ ಅವರ ಬದಲು ಟಿಂಬರ್ ಸುಬೇದಾರರಾಗಿದ್ದ ಶ್ರೀ. ಗುಡ್ಡಂಡ ಕಾರ್ಯಪ್ಪನವರನ್ನೂ ನೇಮಿಸಲಾಗಿದೆ.

ಕೊಡಗು ಪ್ರಾಂತಿಕ ವಸ್ತುಗಳ ಪ್ರದರ್ಶನವು ನೆಲ್ಲೂರಿನಲ್ಲಿ ತಾರೀಕು ೨೮ರ ತನಕ ನಡೆಯುವದಾಗಿಯೂ ಅದರಲ್ಲಿ ಕೊಡಗಿನಲ್ಲಿ ಉತ್ಪತ್ತಿಯಾಗುವ ಎಲ್ಲಾ ತರದ ಹಣ್ಣು ಹಂಪಲು, ಗೆಡ್ಡೆಗೆಣಸು ಮತ್ತು ಬೆಳೆಗಳ ಪ್ರದರ್ಶನವು ಕೂಡ ನಡೆಯುವದಾಗಿಯೂ ಪ್ರದರ್ಶಿಸಲ್ಪಡುವ ಉತ್ತಮ ವಸ್ತುಗಳಿಗೆ ಬಹುಮಾನಗಳನ್ನು ಕೊಡಲಾಗುವದೆಂದೂ ಕೊಡಗು ವ್ಯವಸಾಯ ಇಲಾಖಾ ಅಧಿಕಾರಿಗಳು ತಿಳಿಸುತ್ತಾರೆ.

೨೬-೧-೫೦ ರಲ್ಲಿ ಬಿಟ್ಟಂಗಾಲದ ಗ್ರಾಮ ಪಂಚಾಯತಿಯವರು ಸೇರಿ ರಿಪಬ್ಲಿಕ್ ದಿನದ ಉತ್ಸವವನ್ನು ಶ್ರೀ ಮಾದಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಸಿದರು.

ರಿಪಬ್ಲಿಕ್ ದಿನ ಆಚರಣೆಯು ಕೂಡ ನಾಪೋಕ್ಲಿನಲ್ಲಿ ಶ್ರೀ ಕಳ್ಳಿಚಂಡ ಕಾಳಯ್ಯನವರ, ಕಕ್ಕಬೆಯಲ್ಲಿ ಶ್ರೀ ಉದಿಯಂಡ ಮುತ್ತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸರ್ವೋದಯ ದಿನ ಆಚರಣೆಯನ್ನು ತಾರೀಕು ೩೦ ರಲ್ಲಿ ಪಾಡಿನಾಡಿನ ಮಹನೀಯರು ಶ್ರೀ ಎನ್. ಬಿ. ನಂಜುಂಡನವರ ಅಧ್ಯಕ್ಷತೆಯಲ್ಲಿ ಸೇರಿ ಬಾಪೂರವರ ಅಮರ ಜೀವನವನ್ನು ಸ್ಮರಿಸಿದರು.

ತಾ. ೧-೨-೫೦ ರಲ್ಲಿ ಗೋಣಿಕೊಪ್ಪಲಿನ ಪೂಮಾಲೆಯ ಕ್ರಾಸ್ ವಿಲ್ಲೇಜ್ ಪ್ರಾರಂಭೋತ್ಸವವು ಅ. ಕಮಿಷನರರಾದ ಶ್ರೀ ಎಸ್. ಸಿ. ಸುಬ್ಬಯ್ಯನವರಿಂದ ನಡೆಯಿತು.

**ಮೊನ್ನೆ ಕೌನ್ಸಿಲ್ ಮೀಟಿಂಗಿನಲ್ಲಿ ಚರ್ಚಿಸಿದ ಕಂದಾಯ ಏರಿಸುವ ಮಸೂದೆಯಲ್ಲಿ "ಭೂಕಂದಾಯವನ್ನು ಎರಡರಷ್ಟು ಏರಿಸಬೇಕು." ಎಂಬುದರ ಬದಲು "ಒಮ್ಮೆ ಕಂದಾಯವನ್ನು ಎರಡರಷ್ಟು ಏರಿಸಬೇಕು." ಎಂಬ ಉಪ ಸೂಚನೆಯನ್ನು ಶ್ರೀ ಸಿ ಎಂ. ಪೂಣಚ್ಚನವರು ಕಳುಹಿಸಿದ್ದರಿಂದಾ ಆದರೆ ಇದಕ್ಕೆ ಇಂಡಿಯಾ ಸರಕಾರದ ಅನುಮತಿ ದೊರೆಯಲಿಲ್ಲವೆಂದು ತಿಳಿದು ಬರುತ್ತದೆ.**

'ಸರ್ವೋದಯ' ದಿನಾಚರಣೆ (ಗಾಂಧೀಜಿಯವರ ಪುಣ್ಯ ದಿನ) ಜ. ತಾ. ೩೦ ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ವಿದ್ಯಾರ್ಥಿಗಳು ಬೆಳಿಗ್ಗೆ ರಾಮಭಜನೆಯಿಂದ ಮೆರವಣಿಗೆಯ ನಂತರ ಶ್ರೀ ಅಕ್ರಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿಯವರ ಗುಣಗಾನ ಮಾಡಿದರು. ಮಧ್ಯಾಹ್ನದ ವೇಳೆ ಸಾರ್ವಜನಿಕರು ಮೆರವಣಿಗೆಯ ನಂತರ ಶ್ರೀ ಬಿ. ಎಂ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿಯವರ ಶುಭ ಜೀವನವನ್ನು ಸ್ಮರಿಸಿದರು.

ಕೊಡಗು ಆಹಾರ ಸಲಹಾ ಸಮಿತಿಯ ಮೀಟಿಂಗು ತಾ. ೧೦ರಲ್ಲಿ ಕೊಡಗು ಕೌನ್ಸಿಲು ಹಾಲಿನಲ್ಲಿ ನಡೆಯುವವು.


## ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲಾ ಶಂಕರ್ ಲಾಲ್.

ಮುಖ್ಯ ಆಫೀಸು:— ಹೊಸ ದೆಹ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜ್ಮಲ್‌ಖಾನ್, ಡಾ|| ಎಂ. ಎ. ಅನ್ಸಾರಿ

Transacts:—Life, Fire, Motor and Marine.

[illegible] ಬರೆಯಿರಿ.

| ಆರ್ಗನೈಸರ್ | ಆರ್ಗನೈಸರ್ |
| --- | --- |
| [illegible], ಪುತ್ತೂರು. | ಉತ್ತರ [illegible], [illegible]. |
| ಅಥವಾ | ಅಥವಾ |
| [illegible], | ಎಂ. ಎ. [illegible], |
| ಡಿವಿಜನಲ್ ಸೂಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| [illegible], | [illegible], ಬೆಂಗಳೂರು. |



## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ [illegible] ಪ್ರಾಮುಖ್ಯಾಂಕಗಳು.

| | | |
| --- | --- | --- |
| [illegible] ರೂ. .... .... | 6,13.00.000 | ಮೀರಿದೆ. |
| [illegible] ರೂ. .... | 27,73 00.000 | ,, |
| [illegible] ರೂ. .... .... .... | 8,60,00,000 | ,, |
| [illegible] | 10,96,00,000 | ,, |

1,23,000 ಕ್ಕೆ [illegible]

ಶಕ್ತಿ. ಸೇವೆ ಭದ್ರತೆ.

[illegible]

[illegible] ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ,—1897

[illegible], ಜನರಲ್ ಮೇನೇಜರ್.

| ಪ್ರಧಾನ ಕಚೇರಿ | [illegible] |
| --- | --- |
| [illegible] ಹೌಸ್, [illegible]. | [illegible] ಬಿಲ್ಡಿಂಗ್, |
| [illegible] | [illegible], ಬೆಂಗಳೂರು. |



## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ರೇಜರ್ ಪೇಟೆ.

ಬೇಕಾಗಿದ್ದಾರೆ.

[illegible]

[illegible] ರೂ. 0-12-0 [illegible]

[illegible]

ಫ್ರೇಜರ್ ಪೇಟೆ, ತಾ. 32.9.49 — [illegible], ಮೇನೇಜಿಂಗ್ ಡೈರೆಕ್ಟರ್.



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಜ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರವಾನಿಗೆ "Special permit" ಪಡೆದವರಿಗೆ ಮಾತ್ರ ದೊರೆಯುವುದು)

52-24 — ಎಂ. ಎಸ್. [illegible], ಗೌರವ ಕಾರ್ಯದರ್ಶಿ.



# CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.

*H: O: BOMBAY.*] [*Established 1919.*

*For particulars write to:*

| | | |
| --- | --- | --- |
| Sri B. A. Poovaiah | or | The Branch Manager, |
| *Organiser* | | *22 B. Mahatma Gandhi Road,* |
| *Pollibetta, Coorg.* | | *Bangalore 1.* |

ಸುರಕ್ಷಿತವಾದ ಜೀವ ವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (1921ರಲ್ಲಿ ಸ್ಥಾಪಿಸಲಾಗಿದೆ.

| | | |
| --- | --- | --- |
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೂಲಧನ | ರೂ. | 1,79,000. |
| ರಿಸರ್ವ್ ಫಂಡ್ | ರೂ. | 53,000. |

ಈ ಬ್ಯಾಂಕಿನಲ್ಲಿ [illegible]

ಎಂ. ಎಸ್. [illegible], ಗೌ. ಕಾರ್ಯದರ್ಶಿ. — ಪಿ. ಬಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು [illegible].


ಶ್ರೀ ಟಿ. ಎಸ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

# ಓದುಗರ ಓಲೆಗಳು.

## ಸ್ಟೇಟ್ ಬ್ಯಾಂಕ್ವೆಟ್ ಪ್ರತಿಧ್ವನಿ.

ಕಾಂಗ್ರೆಸ್ ಪಕ್ಷದಲ್ಲಿ ಸರಕಾರಿ ಔತಣವನ್ನು ನಿಶೇಧಿಸಿ ಸಾರ್ವಜನಿಕರು ಬೇರೊಂದು ಔತಣವನ್ನು ಏರ್ಪಡಿಸಿದ್ದರಿಂದಲೂ ಆ ಸಮಾರಂಭದಲ್ಲಿ ಸರಕಾರಿ ಔತಣಕ್ಕೆ ಹೋದ ಕೆಲವರು ಹಿಂತಿರುಗುತ್ತಿದ್ದಾಗ ಅವರ ಮೇಲೆ ಉಗುಳಿದುದಾ, ಅವರನ್ನು ಬರೆದೂ ಅವಮಾನಿಸಿದರೆಂದೂ, ಕಿವಿಗೆ ಬಂದಿದೆ. ಇದು ಸಹಜವಾದರೆ ಇಂಥಾ ಪ್ರವೃತ್ತಿಯನ್ನು ಎಷ್ಟು ಖಂಡಿಸಿದರೂ ಸಾಲದು. ಈ ಔತಣವನ್ನು ಏರ್ಪಡಿಸಿದವರು ಶಿಸ್ತು ಮೀರದಂತೆ ನೋಡಿಕೊಳ್ಳಬೇಕಿತ್ತು. ಸೇರಿದವರೂ ಕೂಡ ಬೇಡವಾದ್ದರಿಂದ ವರ್ತಿಸದೆ ಜವಾಬ್ದಾರಿ ಪ್ರಜೆಗಳಂತೆ ವರ್ತಿಸಬೇಕಿತ್ತು. ಸರಕಾರಿ ಔತಣವಿಂದ ಬರುತ್ತಿದ್ದವರನ್ನು ತಡೆದಾಗ ಪೋಲೀಸರು ಎಚ್ಚರವಹಿಸಬೇಕಿತ್ತು. ಅದೂ ಪೋಲೀಸ್ ಕಚೇರಿಯ ಮುಂದೆಯೇ ಇದು ನಡೆಯಿತು. ಯಾರೇ ಆಗಲೀ ಸಾರ್ವಜನಿಕ ಸ್ಥಳದಲ್ಲಿ ಈ ರೀತಿಯ ಅವಮಾನ ಮಾಡಿದವರು ಶಿಕ್ಷಾರ್ಹರು. ಈ ರೀತಿಯ ಸಾರ್ವಜನಿಕ ಕೂಟಗಳನ್ನು ಏರ್ಪಡಿಸುವ ಮುಂದಾಳುಗಳು ಎಚ್ಚರದಿಂದ ಶಿಸ್ತುಗೆಡದಂತೆ ನೋಡಬೇಕು. ಅಂಥಾ ಸಂದರ್ಭಗಳಲ್ಲಿ ಪೋಲೀಸರೂ ಎಚ್ಚರದಿಂದಿರಬೇಕು. ಒಂದು ಕಡೆಯ ಬೇಜವಾಬ್ದಾರಿ, ಮತ್ತೊಂದು ಕಡೆಯ ಅನಾಸಕ್ತಿಯಿಂದಾಗಿ ಸಭ್ಯ ನಾಗರೀಕರಿಗೆ ಅವಮಾನವಾಯಿತು. ಇನ್ನು ಮುಂದಾದರೂ ಇಂಥಾದ್ದಕ್ಕೆ ಎಡೆಕೊಡದಂತೆ ಸಾರ್ವಜನಿಕರೂ, ಅಧಿಕಾರವರ್ಗವೂ ವರ್ತಿಸುವರೇ?

Time

---

## ಕುತ್ತುನಾಡು ಪಾಲ.

ನಮ್ಮ ಕುತ್ತುನಾಡು 'ಬೇಡರಕಡು' ಹೊಳೆಗೆ ಒಂದು ಪಾಲವನ್ನು ಹಾಕಲಿಕ್ಕೆ ಹತ್ತು ಹದಿನೈದು ವರ್ಷಗಳಿಂದ ನಮ್ಮ ನಾಡಿನವರು ಕೇಳಿಕೊಂಡದ್ದು ಸರಿಯಷ್ಟೆ. ಒಂದು ಪಾಲ ಹಾಕಲಿಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಕಿವುಡರು ಮೂಕರುಮವರಂತೆ. ಅದನ್ನು ಡಿ. ಪಿ. ಡಬ್ಲ್ಯು ಇಲಾಖೆಯವರಿಗೆ ಕಳುಹಿಸಿದರಂತೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ಮಳೆಗಾಲ ಹಿಡಿಯುವ ಸಂಭವ ಆಗುತ್ತೆ. ಆದುದರಿಂದ ನಾನು ಸೆಕ್ಷನ್ ಆಫೀಸರವರನ್ನು ಕೇಳಿದಾಗ ಅವರು ಇಲ್ಲದ ಸಲ್ಲದ ನೆಪವನ್ನು ಒಡ್ಡಿ ನಮಗಳಿಗೆ ಯಾವದೊಂದು ಸೌಕರ್ಯಗಳನ್ನು ಮಾಡಿಕೊಡುವುದಾಗಿ ತೋರುವುದಿಲ್ಲ. 1949ನೇ ಇಸವಿ ಆಗಸ್ಟ್ ತಿಂಗಳಲ್ಲಿ ಕೊಡಗಿನ ಚೀಫ್ ಕಮಿಷನರವರು ಮಳೆಗಾಲ ಜೋರಾಗಿ ನಮ್ಮ ನಾಡಿನವರು ಗದ್ದೆ ಕೆಲಸಗಳಿಲ್ಲ ಒಡೆದು ಹೋಗಿದ್ದಾಗ ಅದನ್ನು ಅವಲೋಕಿಸಲಿಕ್ಕೆ ಇದೇ ಹೊಳೆಗಾಗಿ ಆನೆ ಬೆನ್ನಿನ ಮೇಲೆ ಬಂದು ನಮಗೆ ಬೇಕಾದ ಸೌಕರ್ಯಗಳನ್ನು ಕೊಡುತ್ತೇನೆಂದು ಹೇಳಿದರು. ಈ ವರೆಗೂ ನಮಗೆ ಯಾವುದೊಂದು ಸೌಕರ್ಯಗಳು ಸಿಕ್ಕಿರುವುದಿಲ್ಲ. ಮಳೆಗಾಲದಲ್ಲಿ ನಮ್ಮ ನಾಡು ಅಂಡಮಾನ್ ದ್ವೀಪದ ಹಾಗಿದೆ. ನಾವುಗಳು ಸರಕಾರಕ್ಕೆ ಕಂದಾಯ ಕೊಡುವುದಿಲ್ಲವೆ? ಈ ಹೊಳೆಗೊಂದು ಪಾಲಮಾಡಿಕೊಡಲು ಸರಕಾರಕ್ಕೆ ಶಕ್ತಿ ಸಾಲದೇ? ಆ ಪಾಲಕ್ಕಾಗಿ ಸಾಧಾರಣ ಇನ್ನೂರು ಮುನ್ನೂರು ಜನರು ದಾಟುವರು. ಅಲ್ಲದೆ ನಮ್ಮ ನಾಡಿನ ಮಕ್ಕಳು ಪೊನ್ನಂಪೇಟೆ ಹೈಸ್ಕೂಲಿಗ ಹೋಗಲಿಕ್ಕೆ ಎರಡು ಮೂರು ತಿಂಗಳು ಕಷ್ಟಪಡಬೇಕಾಗುವುದು. ಆದ್ದರಿಂದ ಸರಕಾರವು ರೈತರ ಮೇಲೆ ದಯೆತೋರಿ ಆದಷ್ಟು ಬೇಗನೆ ಒಂದು ಪಾಲವನ್ನು ಮಾಡಿಕೊಡಬೇಕಾಗಿ ಅರಿಕೆ.

ಕೆ. ಎ. ಐಯ್ಯಪ್ಪ.

---

## ಗುಟ್ಟು ರಟ್ಟಾದುದು.

ಸಂಯೋಜನಾವಾದಿಗಳಲ್ಲಿ ಕೆಲವರು ಗುಟ್ಟಿನ ಮೀಟಿಂಗೊಂದನ್ನು ಬಿಟ್ಟಂಗಾಲದಲ್ಲಿ ತಾ ೨೭-೧-೫೦ನೇ ಶುಕ್ರವಾರ ನಡಿಸಲು ೨೬-೧-೫೦ರಲ್ಲಿ ನೋಟೀಸುಗಳನ್ನು ಅಚ್ಚು ಹಾಕಿಸಿ ಅದೇ ಸಾಯಂಕಾಲ ಕಲ್ಲೋಣಿ ಶಾಲೆಯಲ್ಲಿ ನಡೆದ ರಿಪಬ್ಲಿಕ್ ಉತ್ಸವದಲ್ಲಿ ತಮಗೆ ಬೇಕಾದವರಿಗೆ ಹಂಚಿದರು. ನೋಟೀಸುಗಳಲ್ಲಿ ಕನ್ವೀನರುಗಳ ಗಿದ್ದವರು, ಮೆ॥ ಗಳಾದ ಕುಪ್ಪಂಡ ಬೊಳ್ಳಪ್ಪನವರು, ಬೋಗಾರಂಡ ಕಾಳಪ್ಪನವರು, ಬಿಟ್ಟಂಗಾಲ ಪೋಸ್ಟಾಫೀಸಿನಲ್ಲಿ ಪೋಸ್ಟ್ ಮಾಸ್ಟರಾದ ಚೊಪ್ಪಂಡ ಕುಶಾಲಪ್ಪನವರು, ಬಾಳುಗೋಡು ಗ್ರಾಮದ ಪಟೇಲರಾದ ಮಾಚೆಟ್ಟಿರ ಕುಟ್ಟಪ್ಪನವರು ಮತ್ತು ಬಿಟ್ಟಂಗಾಲ ಗ್ರಾಮದ ಪಟೇಲರಾದ ಮೂಕಂಡ ಐಯಪ್ಪನವರು.

ಹೇಗೋ ಒಂದೆರಡು ನೋಟೀಸುಗಳು ಪ್ರತ್ಯೇಕವಾದಿಗಳ ಕೈಗೆ ದೊರಕಿದ್ದರಿಂದ ಬಿಟ್ಟಂಗಾಲದ ಸುತ್ತ ಮುತ್ತಲಿರುವ ಐದಾರು ಗ್ರಾಮಗಳಿಂದ ಜನರು ಮೀಟಿಂಗಿಗೆ ಹಾಜರಾದರು. ಸುಮಾರು ೧೫೦ ಜನರು ಸೇರಿದ್ದರು. ಈ ಗ್ರಾಮದ ಸರಿಗೇನೇ ಸರಿಯಾಗಿ ನೋಟೀಸು ಹಂಚದೆ ಇಪ್ಪತ್ತನಾಲ್ಕು ಗಂಟೆಯೊಳಗೆ ನಡೆಸಿದ ಈ ಮೀಟಿಂಗಿಗೆ ಸಂಯೋಜನಾವಾದಿಗಳ ಪರ ವಾದಿಸಲು ಗೋಣಿಕೊಪ್ಪಲಿಂದ ಐದಾರು ಮಹನೀಯರು ಬಂದಿದ್ದರು. ಸುತ್ತಮುತ್ತಲಿನ ಗ್ರಾಮಸ್ಥರಿಗೆ ನೋಟೀಸು ದೊರೆಯದಿರುವಲ್ಲಿ ಗೋಣಿಕೊಪ್ಪದವರಿಗೆ ದೊರೆತು ಹಾಜರಾದದ್ದು ಆಶ್ಚರ್ಯವೇ ಸರಿ.

೩ ಗಂಟೆಗೆ ಇಟ್ಟ ಮೀಟಿಂಗನ್ನು ಗೋಣಿಕೊಪ್ಪಲಿಂದ ಬರುವವರ ಆಸುಕೂಲಕ್ಕಾಗಿ ಕನ್ವೀನರ ಮುಖಂಡರಾದ ಪೋಸ್ಟ್ ಮಾಸ್ಟರೂ ನಮ್ಮ ನಾಡಿನ ಕೌನ್ಸಿಲ್ ಮೆಂಬರರೂ ಆದ ಶ್ರೀ ಕೆ. ಕೆ. ಬೆಳ್ಯಪ್ಪನವರೂ ಸಮಯವನ್ನು ನಾಲ್ಕು ಗಂಟೆಗೆ ಇಟ್ಟರು. ಸಭೆ ಸೇರಿ ಅಧ್ಯಕ್ಷರನ್ನು ಚುನಾಯಿಸುವ ಕಾಲಕ್ಕೆ ಕನ್ವೀನರಲ್ಲಿ ಒಬ್ಬರಾದ ಮೂಕಂಡ ಐಯಪ್ಪನವರು ತನ್ನನ್ನು ಕೇಳದೆ ಮಾಡದೆ ತನ್ನ ಅಭಿಪ್ರಾಯವನ್ನು ಅರಿಯದೆ ತನ್ನನ್ನು ಕನ್ವೀನರಾಗಿ ಸೇರಿಸಿಕೊಂಡದ್ದು ನ್ಯಾಯವಲ್ಲ. ಒಪ್ಪುವುದೂ ಇಲ್ಲ. ತನ್ನ ಹೆಸರನ್ನು ರದ್ದು ಮಾಡಬೇಕೆಂದು ವಾದಿಸಿದರು. ಅಂತೆಯೇ ಗೈರಾಜರಾಗಿದ್ದ ಬಾಳುಗೋಡಿನ ಪಟೇಲರಾದ ಮಾಚೆಟ್ಟಿರ ಕುಟ್ಟಪ್ಪನವರು ಹೇಳಿ ಕಳುಹಿಸಿದ ಮಾತನ್ನು ಹಾಜರಿದ್ದವರೊಬ್ಬರು ವಿವರಿಸಿದರು. ಈ ರೀತಿಯ ಕೃತ್ರಿಮ ನೋಟೀಸನ್ನು ಹಂಚಲು ಕಾರಣವೇನೆಂದು ಪ್ರಶ್ನೆಗಳು ಬಂದವು. ಕೌನ್ಸಿಲ್ ಮೆಂಬರಾದ ಮೇ. ಕರಿಬೀರಂಡ ಬೆಳ್ಯಪ್ಪನವರು ಅದನ್ನು ದೊಡ್ಡ ತಪ್ಪೆಂದು ಎಣಿಸಬಾರದು. ಮಹತ್ವ ಆಶ್ಚರ್ಯವಾಗಿರುವುದರಿಂದ ಗ್ರಾಮದವರ ಹೆಸರು ಹಾಕಿ ನೋಟೀಸು ಹಂಚಿದ್ದು ನ್ಯಾಯವಾಗಿದೆ. ಈ ವಿಷಯ (ತನ್ನ ಬರ್ಜಿಗೆ ಅನುಕೂಲವಾಗುವುದರಿಂದ) ತಪ್ಪೆಂದು ಎಣಿಸದೆ ಸಭೆಯನ್ನು ನಡಿಸುವ ಎಂದರು. ಶ್ರೀ ಚೇಂದಂಡ ಸೋಮಯ್ಯನವರು ಈ ರೀತಿ ಸಮರ್ಥನ ಕೊಟ್ಟರು. "ಕಳೆದ ಬುಧವಾರ ನಾನು ಮತ್ತು ಕರಿಬೀರಂಡ ಬೆಳ್ಯಪ್ಪನವರು ನನ್ನ [illegible] ಸಂಖ್ಯೆ ಜನರು ಸೇರಿ [illegible] ಮೀಟಿಂಗು ನಡಿಸಲು ಏರ್ಪಡಿಸಬಯಿತು. ನಾನೇ ಪ್ರಿಂಟು ಮಾಡಿಸಿ ಹಂಚಲು ಕೊಟ್ಟೆ. ಆ [illegible] ನಾನು ಕನ್ವೀನರ ಹೆಸರನ್ನು ಹಾಕಿದೆ. ಬಿಟ್ಟಂಗಾಲದಲ್ಲಿ ಈ ವಿಷಯ ಕೇವಲ [illegible] ಅವಶ್ಯವೆಂದು ನಾವು ತಿಳಿದುದರಿಂದ ನೋಟೀಸು ಹಂಚಲಾಯಿತು. ಈ ರೀತಿ ಮಾಡಿದ್ದು ತಪ್ಪಾದರೆ ಇಂದು ಬಾಕಿ ಮಾಡಿ ಇನ್ನೊಂದು ದಿನ ಸೇರುವ" ಎಂದರು. ಏನೂ ತಿಳಿಯದ ಇಬ್ಬರ ಹೆಸರನ್ನು ಕನ್ವೀನರಾಗಿ ಸೇರಿಸಿಕೊಂಡದ್ದು ತಪ್ಪು. ಅದಕ್ಕಾಗಿ ಕ್ಷಮಾಪಣೆ ಬೇಡಬೇಕೆಂದು ಹೇಳಿದರು. ಅಂತೆಯೇ ಪೋಸ್ಟ್ ಮಾಸ್ಟರಾದ ಕುಶಾಲಪ್ಪನವರು ಕ್ಷಮೆಯನ್ನು ಬೇಡಿದರು. ಹೇಗೂ ಸೇರಿದ್ದೇವೆ. ಕಂದಾಯ ವಿಷಯವನ್ನು ಚರ್ಚಿಸಿ ತೀರ್ಮಾನಕ್ಕೆ ಬರುವ ಎಂದರು.

ನಾವು ಸೇರಿದವರು ತೀರ್ಮಾನಿಸಿದುದಕ್ಕೆ ನಮ್ಮ ನಾಡಿನ ಕೌನ್ಸಿಲ್ ಮೆಂಬರು ಕೌನ್ಸಿಲಿನಲ್ಲಿ ಚರ್ಚಿಸುತ್ತೇವೆಂದು ಭರವಸೆ ಕೊಟ್ಟರೆ ಈ ವಿಷಯ ಚರ್ಚಿಸಬಹುದು. ಇಲ್ಲವಾದರೆ ಪ್ರಯೋಜನವಿಲ್ಲ. ಆದ್ದರಿಂದ ಶ್ರೀ ಬೆಳ್ಯಪ್ಪನವರ ಅಭಿಪ್ರಾಯ ಕೊಡಬೇಕೆಂದು ಸಭೆಯ ಪರ ಶ್ರೀ ಎನ್. ಚೆಣ್ಣಪ್ಪನವರು ಅವರನ್ನು ಕೇಳಿಕೊಂಡರು.

ಮೆ॥ ಬೆಳ್ಯಪ್ಪನವರು ಭರವಸೆ ಕೊಡಲಾರೆನು ಎಂದು ಹೇಳಿ ಸಭೆಯಿಂದ ಹೊರಟು ಹೋದರು. ಅವರೊಡನೆ ಅವರ ಗೋಣಿಕೊಪ್ಪಲಿಂದ ಬಂದ ಸ್ನೇಹಿತರೂ ವಿರೋಧಿಸಿದ ಮೂರು ಕನ್ವೀನರೂ ಅವರ ಪ್ರೋತ್ಸಾಹಕರಾದ ಮೂವರೂ ಅಂತು ೧೩ ಜನರು ಸಭೆಯನ್ನು ಬಿಟ್ಟು ಹೋದರು.

ನಂತರ ಸಭೆಯವರು ಮೆ॥ ನಾಯಡ ಪೊನ್ನಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು ಏರಿಸುವ ಕಂದಾಯದ ವಿಷಯ ದೀರ್ಘ ಚರ್ಚೆ ಮಾಡಿದರು. ಈ ಕೆಳಗಿನವರು ಚರ್ಚೆಯಲ್ಲಿ ಭಾಗ ವಹಿಸಿದರು. ಶ್ರೀಗಳಾದ ಕಾಳಿಂಗಡ ಚಿಣ್ಣಪ್ಪನವರು, ಐಲ್ಲಡಿಚಂಡ ಬೋಪಯ್ಯನವರು, ಕುಟ್ಟಿಡ ಉತ್ತಯ್ಯನವರು, ನಾಯಡ ತಿಮ್ಮಯ್ಯನವರು, ಚೇಂದಂಡ ಸೋಮಯ್ಯನವರ, ಮಾಚೆಟ್ಟಿರ ಮುತ್ತಣ್ಣನವರು, ಕೋದಂಡ ನಂಜಪ್ಪನವರು, ಕಂಜಿತಂಡ ಕುಶಾಲಪ್ಪನವರು, ನಾಯಡ ಬೆಳ್ಯಪ್ಪನವರು, ಸೋಮೆಯಂಡ ಅಚ್ಚಯ್ಯನವರು ಮತ್ತು ಎನ್. ಸಿ. ಚೆಂಣಪ್ಪನವರು.

ಅಂತ್ಯದಲ್ಲಿ ಮೆ॥ ಕಾಳಿಂಗಡ ಚಿಣ್ಣಪ್ಪನವರು ಮಂಡಿಸಿದ ಈ ಕೆಳಗಿನ ಠರಾವುಗಳನ್ನು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

(೧) ಅವಧಿ ಮುಗಿದಿರುವ ಈಗಿನ ಕೌನ್ಸಿಲಿಗೆ ಹೊಸ ಚುನಾವಣೆಯನ್ನು ಶೀಘ್ರದಲ್ಲೇ ನಡಿಸಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

(೨) ಸಪರಿ ಸೆಟ್ಲ್ ಮೆಂಟಿನ ಮಸೂದೆಯನ್ನು ಕೌನ್ಸಿಲಿನ ಹೊಸ ಚುನಾವಣೆಯ ವರೆಗೆ ಮುಂದರಿಸಬೇಕು. ಇಂದು ಸಾಧ್ಯವಿಲ್ಲದಿದ್ದರೆ ಸಭಾ ಮಸೂದೆಯನ್ನು ಸಿಲೆಕ್ಟ್ ಕಮಿಟಿಗೂ ಮುಖ್ಯ ದೇಶದ ಜನರ ಅಭಿಪ್ರಾಯ ತಿಳಿಯ ಬೇಕು ಕಳಿಸಿ ನೋಡಬೇಕೆಂದು ಈ ಸಭೆಯು ಸರಕಾರವನ್ನು, ಮತ್ತು ಕೌನ್ಸಿಲ್ ಸದಸ್ಯರನ್ನು ಕೇಳಿಕೊಳ್ಳುತ್ತದೆ.

(ಸಿಲೆಕ್ಟ್ ಕಮಿಟಿ ಮಾಡುವ [illegible] ಜನರ ಅಭಿಪ್ರಾಯ ತಿಳಿದು ಕಟಿಪ್ಪ ಮಾಡಬೇಕೆಂಬ ಸೂಚನೆಯು ಶ್ರೀ. ಚೇಂದಂಡ ಸೋಮಯ್ಯನವರದಾಗಿದೆ)

(೩) ಕೊಡಗಿನ ಪ ಕೌನ್ಸಿಲಿನಲ್ಲಿರುವ ಮಂಡಳಿ ಪ್ರತಿನಿಧಿಗಳ ಮೇಲೆ ಇಲ್ಲಿನ ಜನರಿಗೆ ವಿಶ್ವಾಸವಿಲ್ಲದಿರುವುದರಿಂದಲೂ ಪ್ರಾಂತೀಯ ಕೌನ್ಸಿಲಿನಿಂದ ಮೆಂಬರು ಕೇಂದ್ರ ಅಸೆಂಬ್ಲಿಗೆ ಆರಿಸಿ ಸದಸ್ಯರಾಗಿ ಕಳುಹಬೇಕೆಂದು [illegible] ಮರೆಯಾಗಿರುವುದರಿಂದಲೂ ಪಾರ್ಲಿಮೆಂಟಿಗೆ ಕೊಡಗಿನ ಪ್ರತಿನಿಧಿಯನ್ನು ಕೂಡಲೇ ಮತದಾರರಿಂದ ನೇರಾ ಆರಿಸಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

ಅಧ್ಯಕ್ಷರ ಭಾಷಣದ ನಂತರ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಹೀಗೆ ಗುಟ್ಟು ರಟ್ಟಾಗಿ ಮೂರ್ಕನಾಡಿನ ಹೊರ ಹೋಗುವವರನ್ನು ಸಾಧಾರಣ ಜನರ ಅಭಿಪ್ರಾಯವನ್ನು ಕೇಳದೆ ಕನ್ವೀನರನ್ನಾಗಿ ಮಾಡಿ ಸಭೆ ಸೇರಿಸಿ ಸಾರ್ವಜನಿಕರನ್ನು ಮೋಸಗೊಳಿಸುವ ಕಾರ್ಯವನ್ನು ಯಾರೂ ಮಾಡಬಾರದಾಗಿ ವಿನಂತಿ.

—ಚೆಂಣಪ್ಪ.

---

**Coorg Forest Department**
*Mercara the 11th January, 50.*

**NOTICE.**

A few elephants will be available for giving on hire from 1-2-1950.

*Apply*:- to the undersigned.

**C. M. Kushalappa,**
*Chief Forest Officer, Coorg*

# ಕೊಡಗು ನ್ಯಾಯವಿಧಾಯಕ ಸಭೆ.

(ಹಿಂದಿನ ಪುಟದಿಂದ ಸಾಗಿದ್ದು.)
ವಿವರವಾಗಿ ಎಲ್ಲವನ್ನೂ ವಿಷದಪಡಿಸಿರುವರು. ಸರಕಾರವು ಜನತೆಯನ್ನೂ ಜನಪ್ರತಿನಿಧಿಗಳನ್ನೂ ತನ್ನ ವಿಶ್ವಾಸಕ್ಕೆ ತೆಗೆದುಕೊಳ್ಳದೆ ವರ್ತಿಸಿದೆ. ಇದೇ ಹಿಂದೂ ದೇಶವು ಪ್ರಜಾಪ್ರಭುತ್ವವೆಂಬ ಸಾರಲ್ಪಟ್ಟು ಎಲ್ಲೆಲ್ಲೂ ಹರ್ಷವಿರುವ ಸಮಯದಲ್ಲಿ ಇಲ್ಲಿಯ ಸರಕಾರವು ಬಡ ರೈತನಿಗೆ ಹೆಚ್ಚಿನ ಕಂದಾಯ ಹೊರಿಸಲು ಸಿದ್ಧವಾಗಿದೆ. ಕೊಡಗಿನ ಆರ್ಥಿಕ ಸ್ಥಿತಿ ಚೆನ್ನಾಗಿದೆ. ಭಾರತದಲ್ಲಿ ಇಂತಿರುವ ಕೊಡಗಿನ ಆರ್ಥಿಕತೆಯು ಇತರ ಅನೇಕ ಪ್ರಾಂತಗಳಿಗಿಂತಾ ಉತ್ತಮವಾಗಿದೆಯೆನ್ನುತ್ತಿದ್ದ ಸರಕಾರವೂ, ಜನರೂ ವಿಚಾರಿಸಿ ಈ ಕಂದಾಯ ಮಸೂದೆಯನ್ನು ತಂದು ಬಡ ಜನರ ಮೇಲೆ ಹೇರಲೆತ್ನಿಸುವುದರ ಅರ್ಥವೇನು?

ಶ್ರೀ. ಸಿ. ಎಂ. ನಾಣಯ್ಯನವರು.
ಈ ಮಸೂದೆಯು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಈ ಮಸೂದೆಯ ಅವಶ್ಯಕತೆ ಇಲ್ಲ. ಇದು ಆರ್ಡಿನೆನ್ಸಿನಂತಿದೆ. ಬಡ ಜನರ ಕೊಲೆ ಇದರಿಂದಾಗುವದು. ಯಾವ ಭೂಮಾಲೀಕನೂ, ಪ್ಲಾಂಟರನೂ ಈ ಕಂದಾಯವನ್ನು ತೆರುವ ಸ್ಥಿತಿಯಲ್ಲಿಲ್ಲ. ಸರಕಾರದ ತಿಳಿಗೇಡಿತನ ವರ್ತನೆ ಇದು. (ಈ ನಡುವೆ ಪ್ರಸಿಡೆಂಟರು 'ತಿಳಿಗೇಡಿತನ' ಎಂಬುದು ಅಸಭ್ಯವಾಕ್ಯವೆಂದೂ ಅದನ್ನು ಹಿಂತೆಗೆದುಕೊಳ್ಳಬೇಕೆಂದೂ ಹೇಳಿದರು. ಭಾಷಣಕಾರರು ಹಿಂತೆಗೆದುಕೊಂಡರು) ಕೊಡಗಿನ ಬಜೆಟ್ ಸ್ಥಿತಿ ಚೆನ್ನಾಗಿದೆ ಉಳಿತಾಯ ಸಾಕಷ್ಟಿದೆ. ಉಳಿತಾಯವಿದ್ದೂ ಆ ಯೋಜನೆ ಈ ಯೋಜನೆಗೆಂದು ಕಂದಾಯ ಹೆಚ್ಚಿಸುತ್ತಿದೆ. ಇನ್ನೂ ಜನಸಾಮಾನ್ಯರ ಮೇಲೆ ತುಲ ಏರಿಸಿದಂತೆ! ಕೊಡಗಿನ ಸರಕಾರದ ಆರ್ಥಿಕ ಅಭಿವೃದ್ಧಿಗಾಗಿ ಮಹಾಶ ಯರು ಒಂದು ಸಭೆಯಲ್ಲಿ ಸೇರಿ ಸಲಹೆ ಕೊಡಲು ಕಳೆದ ಅಕ್ಟೋಬರ್ ತಿಂಗಳಲ್ಲಿ ಸಮಿತಿ ನೇಮಿಸಿತ್ತು. ಆದರೆ ಸರಕಾರವೂ ತನ್ನ ಇಷ್ಟದಂತೆ ವರ್ತಿಸುತ್ತಿದೆ. ಸಮಿತಿಯ ಸಲಹೆಗಳಿಗೆ ಕಿವಿಗೊಡದೆ ಸರಕಾರದ ಯೋಜನೆಗಳು ಆಕಾಶದಲ್ಲಿ ಅರಮನೆ ಕಟ್ಟಿದ ಹಾಗೆ. ಕೊಡಗಿನ ಸರಕಾರವು ಉಪಯುಕ್ತ ಕೆಲಸ ಮಾಡಿದೆಯೆಂದು ಶ್ರೀ ಸಿ. ಬಿ. ಬೆಳ್ಳಿಯಪ್ಪನವರು ಹೇಳಿದರು. ಒಂದೊಂದಾಗಿ ನೋಡುವ, ಮಾಡಿಕೊಂಡಿರುವ ಅಭಿವೃದ್ಧಿಯನ್ನೇ ತೆಗೆದುಕೊಂಡರೆ ಅಲ್ಲಿ ಕೂಡ ಸಂದೇಹವಿದೆ. ಈಗಿರುವ ಆಸ್ಪತ್ರೆಗಳ ಸ್ಥಿತಿ ಶೋಚನೀಯವಾಗಿದೆ. ಕುಡಿಯುವ ನೀರಿನ ಕೆರೆ ಬಾವಿಗಳು ದುಸ್ಥಿತಿಯಲ್ಲಿವೆ. ಈ ಆಸ್ಪತ್ರೆಗಳಲ್ಲಿ ಔಷಧಗಳಿಲ್ಲ. ಅಸ್ಪತ್ರೆಯ ಸ್ಥಿತಿಯೇ ಹೀಗಿರುವಾಗ ಉಳಿದವುಗಳ ಸ್ಥಿತಿಯನ್ನು ಹೇಳಬೇಕೇ? ವಿದ್ಯಾ ಇಲಾಖೆಯಲ್ಲೂ ಅಭಿವೃದ್ಧಿ ಇಲ್ಲ. ಹೈಸ್ಕೂಲುಗಳ ಮಟ್ಟವು ಬಹು ಕೆಳಗಿದೆ. ಈ ರೀತಿ ಇರುವಾಗ ಕಾಲೇಜಿನ ಆವಶ್ಯಕತೆ ಏನು? ಸರಿಯಾದ ಅಧ್ಯಾಪಕರಿಲ್ಲ. ವಿದ್ಯಾರ್ಥಿಗಳಿಗೆ ಹೋಗಲು ಚೀಫ್ ಕಮಿಷನರ ಮೇಲೆ, ಚೀಫ್ ಕಮಿಷನರರು ಅವರ ವಿದ್ಯಾರ್ಥಿಗಳ ಮೇಲೆ ಹೇಳುತ್ತಾರೆ. ಕಾಲೇಜುಗಳಲ್ಲಿ ಮಕ್ಕಳಿಗೆ ಕೂರಲು ಸರಿಯಾದ ಸ್ಥಳವಿಲ್ಲ. ಸೋಮವಾರಪೇಟೆ ಹೈ

ಜನರೂ ಹೀಗೆಯೇ ೧೯೩೪ರಿಂದ ಬೇಸಾಯಗಾರರು ಸಾಲದಿಂದ ಕೂಡಿಕೊಳ್ಳಬೇಕಾಗುತ್ತಿದೆ. ಅದನ್ನು ಪರಿಶೀಲಿಸಲು ಬಂದವರ ಬಿಕ್ಕಟ್ಟನ್ನು ಖರ್ಚು ಮಾಡಿದ್ದರೆ ಸಾಲ ಕಡಿಮೆಯಾಗುತ್ತಿತ್ತು. ಕೊಲ್ಲಿ ಕೊಡಿನ ಸ್ಥಿತಿಯೂ ಹೀಗೆಯೇ. ಬೆಂಗಳೂರಿನಲ್ಲಿ ಹೆಂಗಸರಿಗೆ ಒಂದು ಕಟ್ಟಡ ಕಟ್ಟಲು ರೈತರಿಂದ ಅರ್ಧ ಹಣ ಹಾಕಿಸಿ ನಿರರ್ಥಕ ಖರ್ಚಾಯಿತು. ಸರಕಾರ ಏನೂ ಮಾಡಿಲ್ಲ. ಬಡ ರೈತರ ಕೇರಿಗಳಲ್ಲಿ ಇಂದು ಏಲುಬು ಕೆಂಗಲೇ ಇವೆ. ಈ ಕಂದಾಯದಿಂದ ಅದೂ ಇಲ್ಲವಾಗಬಹುದು. ಕೊಡಗಿನ ರಸ್ತೆಗಳ ಗುಟ್ಟು ಕೇಳುವದೇನು? ಚೀಫ್ ಕಮಿಷನರು ಕೆಲವು ರಸ್ತೆಗಳಲ್ಲಿ ತಿರುಗಲು ಹೆದರುತ್ತಾರೆ. ಕೊಡಗು ಸರಕಾರವು ರೈತರ ಮೇಲೆ ಒಂದೇ ಪ್ರತಿ ಹೆಚ್ಚು ಕಂದಾಯವನ್ನು, ಜನತೆಗೆ ಅಸಹಿತದಲ್ಲಿ ಹಕ್ಕು ದೊರೆಯುವ ವರೆಗೆ ಮುಂದೂಡಬೇಕು.

ಶ್ರೀ ಎನ್. ಸೋಮಣ್ಣನವರು.
ಒಟ್ಟಿನಲ್ಲಿ ಕಂದಾಯ ಏರಿಸುವ ವಿಚಾರದಲ್ಲಿ ಸ್ವಷ್ಟ ಅಭಿಪ್ರಾಯ ಕೊಟ್ಟಿದೆ. ಈ ಏರಿಸುವಿಕೆ ಕರ್ತವ್ಯವೇನು? ಕಂದಾಯ ಪದ್ಧತಿಯು ಬ್ರಿಟಿಷ್ ಲೀಸ ಮತ್ತು ಕಂದಾಯದ ಪ್ರಮಾಣ ಎಲ್ಲಾ ಇಲ್ಲ. ಕೊಡಗಿನಲ್ಲಿ ಸೂಕ್ತ ಇದೆ. ಈಗಿರುವ ಕಂದಾಯ ಮೇಲೆ ಭಾರವಾಗಿರುವಾಗ ಹೆಚ್ಚಿನ ಹಿಂದಿ ತೃಸ್ಥಿಯನ್ನು ಕೊಡಲು ಸಾಧ್ಯವಾಗದು. ಬಡಜನರ ಮೇಲೆ, ತೆರಲಾಗದ ಕಂದಾಯ ಹೊರಿಸುವದು ನ್ಯಾಯ ಸಭ ಸದಸ್ಯರ ಕೆಲಸವೇ? ಸೆಟ್ಲ್‌ಮೆಂಟ್ ಆಫೀಸರು ಬಂದಿದ್ದಾರೆ. ಅವರು ಪರಿಶೀಲಿಸಿ ಯೋಗ್ಯ ಕಂದಾಯದ ನಿಷ್ಕರ್ಷೆ ಮಾಡಲಿ. ಆದರೆ ಆ ವರೆಗೆ ಸಮಾಧಾನ ಕಂದಾಯ ಹಾಕಬೇಕೆನ್ನುವುದು ಯಾವ ನಾಗರಿಕ ಸರಕಾರವೂ ಮಾಡಲಾರದು. ಕಾಫಿ ತೋಟದ ಮಾಲೀಕರೂ ಚೆನ್ನಾಗಿಲ್ಲ. ಕಂಬಾಸ್ಟ್ರೆ ಮಾಡಿಗೊಳ್ಳುವ ಹಾಗೂ ಇತರ ಸಣ್ಣ ತೋಟಗಾರರಲ್ಲಿ ಬೇರೆ ಸ್ಥಿತಿ ಚೆನ್ನಾಗಿಲ್ಲ. ಅದಕ್ಕಾಗಿಯೇ ಕಾಫಿ ಪ್ಲಾಂಟರುಗಳ ಸಂಘವು ಕಂದಾಯವನ್ನು ವಿರೋಧಿಸಿ ಠರಾವು ಮಾಡಿದೆ. ಇವರ ಜೊತೆಗೆ ಅವರಿಗೆ ಎಕ್ಸೈಜ್ ಮತ್ತು ಆದಾಯ ಕಂದಾಯಗಳಿವೆ. ಕಾಫಿ ಬೆಳೆಯಿಂದ ವಾಣಿಜ್ಯ ವ್ಯಷ್ಟಿಯಿಂದ ಬೆಲೆ ಇರುವ ಸ್ಥಿರವಾಗಿ ನೆಲವನ್ನು ಮಾರಿಯೂ ಲೆಕ್ಕವಿಲ್ಲ. ಆದರಿಂದ ದಂಡಕ್ಕೆ ಅ ಹಿತವಾಗುವುದು. ನ್ಯಾಯವು ಆದಾಯದ ಮೇಲೆ ಬಂದರೆ ಕಾನೂನು ನ್ಯಾಯವಾಗದು ಕರ್ತವ್ಯ ಬರುವುದು. ಆದರೆ ಈ ಮಸೂದೆಯ ಕಂದಾಯ ಸಲ್ಲದು. ಇಷ್ಟೆಲ್ಲ ಏಕಾಗಿ? ಪ್ರತಿ ವರ್ಷ ಬಜೆಟ್ಟಿನಲ್ಲಿ ಹಣ ಮಿಕ್ಕಿದರೂ ಖರ್ಚಾಗುತ್ತಿಲ್ಲ. ೧೯೪೮-೪೯ರಲ್ಲಿ ಯುದ್ಧೋತ್ತರ ಯೋಜನೆಗಳಿಗೆಂದು ಹತ್ತೊಂಬತ್ತು ಲಕ್ಷ ರೂಪಾಯಿ ಇಟ್ಟು ಅದಕ್ಕೆ ಖರ್ಚಾದುದು ೩೦,೦೦೦! ಕಾಲೇಜಿಗೆ ೪ ಲಕ್ಷ ಈ ವರ್ಷ ಇಟ್ಟಿರುವರು. ಆದರಲ್ಲಿ ಒಂದಾಣೆಯೂ ಖರ್ಚಾಗಲಾರದು. ಏಕೆಂದರೆ ಈ ವರೆಗೆ ಕಾಲೇಜಿಗಾಗಿ ಒಂದು ಇಟ್ಟಿಗೆ ಕೂಡ ತಯಾರಾಗಿಲ್ಲ. ಕೊಡಗಿನ ಹೈಸ್ಕೂಲುಗಳು ರೈತರ ಬೆವರಿನ ಹಣದಿಂದ ಕಟ್ಟಲ್ಪಟ್ಟವುಗಳು. ಜನರಿಗಾಗಿ ಏನೂ ಮಾಡದೆ ಕಂದಾಯ ವಿಧಿಸುವದೆಂದರೆ ಅರ್ಥವಿಲ್ಲ. ಕಾಲೇಜಿನ ಜವಾಬ್ದಾರಿಯನ್ನು ಮೈಸೂರಿನವರಿಗೆ ಕೊಡಬೇಕೆಂದು ನಾವು ವಾದಿಸಿದೆವು. ಈಗ ಆ ಬಾಬಿನಲ್ಲಿ ೩೫ ಲಕ್ಷ ರೂಪಾಯಿಗಳ ಭಾರವನ್ನು ಹೊರಬೇಕಾಗಿದೆ. ಕೊಡಗಿನ ಭವಿಷ್ಯ ಪ್ರಶ್ನೆಗೂ ಈ ಮಸೂದೆಗೂ ಸಂಬಂಧವಿದೆಯೆಂಬುದು ಸರಿಯಲ್ಲ. ಈ ಮಸೂದೆಯಿಂದ ಬರಬಹುದಾದ ೪ ಲಕ್ಷ ರೂಪಾಯಿಗಳ ಮೇಲೆ ಕೊಡಗಿನ ಭವಿಷ್ಯ ನಿಂತಿಲ್ಲ. ಡೆಪ್ಯುಟಿ ಕಮಿಷನರವರಲ್ಲಿ ಕೊಡಗಿನಲ್ಲಿ ಹೊಸದಾಗಿ ೧೬ ಲಕ್ಷ ಉತ್ಪತ್ತಿಗೆ ಮಾರ್ಗವಿದೆಯೆಂದಾಗ ಅದರಲ್ಲಿ ಸಮರ್ಥ ಕಂದಾಯವೂ ಕೊಡಿಕ್ಕು. ಶ್ರೀ. ಬೆಳ್ಳಿಯಪ್ಪನವರು ಉತ್ಪತ್ತಿ ಅದರ ಎರಡರಷ್ಟು ಏರಿದುದರ. ಆದರೆ ಹೊರಗೆ ಉತ್ತಮ ಉಡುಪು ಹಾಕಿದನೆಂದಾಕ್ಷಣ ಆತನಲ್ಲಿ ಸಂಪತ್ತಿದೆಯೆಂದು ಭಾವಿಸಬಾರದು. ರೈತನು ನಿಜವಾಗಿಯೂ ಹೆಚ್ಚಿನ ಕಂದಾಯ ಕೊಡಬಲ್ಲನೇ ಎಂಬುದನ್ನು ನನ್ನ ಸ್ನೇಹಿತರು ಎದೆ ಮೇಲೆ ಕೈಯಿಟ್ಟು ಹೇಳಲಿ. ಇದು ಕೇವಲ ಆರ್ಥಿಕ ಪ್ರಶ್ನೆ. ಇದರಲ್ಲಿ ರಾಜಕೀಯಕ್ಕೆಡೆಯಿಲ್ಲ. ಸ್ವತಂತ್ರ ಭಾರತದಲ್ಲಿ ಬಡ ಜನರಿಗೆ ಇದೇ ಉಡುಗೊರೆಯೇ? ನಾವು ಕುರುಡರಾಗಿ ವರ್ತಿಸಬಾರದು. ಮಸೂದೆಯನ್ನು ತಿರಸ್ಕರಿಸಬೇಕು.

### ವಿಧಿ ಬಿಂದು

ಈ ನಡುವೆ, ಶ್ರೀ ಸಿ. ಎಂ. ಪೂಣಚ್ಚನವರು ಒಂದು ವಿಧಿ ಬಿಂದು (point of order) ವನ್ನು ಎತ್ತಿ ಈ ಮಸೂದೆಗೆ ಗವರ್ನರ್ ಜನರಲ್ಲರ ಅನುಮತಿ ದೊರೆತಿದ್ದರೆ ಜನವರಿ ತಾರೀಕು ೨೬ರ ನಂತರ ದೇಶದಲ್ಲಿ ನವಯುಗ ಘಟಿಸಿ ಹೊರಿಯಲ್ಲಿ ಬಂದು ಅದರ ನಂತರ ಚರ್ಚಿಸಲ್ಪಡುವ ಈ ಮಸೂದೆಗೆ ಹಿಂದೀ ಒಕ್ಕೂಟದ ಪ್ರಸಿಡೆಂಟರ ಅನುಮತಿ ಅವಶ್ಯವೆಂದೂ ಅಂಥಾ ಅನುಮತಿಯನ್ನು ಸದಸ್ಯರಿಗೆ ಮೊದಲೇ ತಿಳಿಸಬೇಕೆಂದೂ ಈ ವರೆಗೆ ನಡೆಸಿದ ಚರ್ಚೆ ವ್ಯರ್ಥವಾಗುವ ಸಂಭವವಿದೆಯೆಂದೂ ಸೂಚಿಸಿದರು.

ಈ ಮಸೂದೆಯ ಸ್ವಾತಂತ್ರ್ಯ ಕೇಂದ್ರ ಸರಕಾರವು ಕಾ ಅದ ಗಳಿಸೆ ಅನುಮತಿ ಕೊಟ್ಟಿದೆಯೆಂದೂ ದಾಖಲೆಗಳನ್ನು ಮುಂದಿರಿಸಬಹುದೆಂದೂ ಪ್ರೆಸಿಡೆಂಟರು ಆಜ್ಞೆ ಇತ್ತರು.

ಶ್ರೀ ಎಚ್. ಟಿ. ಮುತ್ತಣ್ಣನವರು
ದೇಶದ ಏಳಿಗೆಯ ದೃಷ್ಟಿಯಿಂದ ಈ ಕಂದಾಯ ಅವಶ್ಯ. ಅಪ್ಪಣೆ, ಬೇಸಾಯಗಳು, ಕೆರೆ ಬಾವಿ ಗಳು, ರಸ್ತೆ, ಇವು, ಸರಕಾರ ಏನೂ ಮಾಡಿಲ್ಲ ಎಂದು ಹೇಳುವರು ಸತ್ಯಸಂಗತಿಯಾಗದು. ಎರಡು ಮೂರು ವರ್ಷಗಳಲ್ಲಿ ಕೆಟ್ಟಲೆಗಾಗಿ ಏನಷ್ಟು ಅದು ವಷ್ಟು ಸಾವಿರ ರೂ. ಗಳು ವೆಚ್ಚವಾಗಿವೆ. ಕಾಡು ಸೀಮೆಯಿಂದ ಹಣಕ್ಕೆ ೧೨,೦೦೦ ವೆಚ್ಚವೆಂದಲೂ, ಕೊಂಪಳ್ಳಿಗೆ ೨೫,೦೦೦ ವೆಚ್ಚದಿಂದಲೂ ರಕ್ಷಿಯಾಗುತ್ತಿದೆ. ಸ್ಕೂಲಿಗೆ ಜನತೆ ೪೦,೦೦೦ ಕೊಟ್ಟರೆ ಅನರಿಂದ ಹೈಸ್ಕೂಲಾಗಲಿಲ್ಲ. ಸೋಮವಾರಪೇಟೆ ಹೈಸ್ಕೂಲು ಕಟ್ಟಡದ ಕಂಟ್ರ್ಯಾಕ್ಟ್ ಒಂದೂವರೆ ಲಕ್ಷಕ್ಕೆ ಕೊಡಲ್ಪಟ್ಟಿದೆಯೆಂದು ತಿಳಿಯುತ್ತೇನೆ. ೫೦ ಲಕ್ಷ ಉಳಿತಾಯ ಇದ್ದು ಪುನಃ ಕಂದಾಯವೇಕೆ? ಎಂಬುದು ಪ್ರಶ್ನೆಯಲ್ಲ. ಯಾವದೇ ಸರಕಾರವೂ ವ್ಯಕ್ತಿಯಾಗಲೀ ಕೈಯಲ್ಲಿದ್ದುದನ್ನೆಲ್ಲಾ ವೆಚ್ಚ ಮಾಡಿ ನಂತರ ಆಕಾಶ ನೋಡುವದಲ್ಲ. ಪೆಟ್ಟಿಗೆಯಲ್ಲಿದ್ದ ನಿಕ್ಷೇಪವನ್ನು ವೆಚ್ಚ ಮಾಡಿ ಸಾಲ ತೆಗೆದು ನಂತರ ತನ್ನ ಆಸ್ತಿಯನ್ನೇ ಮಾರಾಟ ಮಾಡಿ ಸ್ವಂತ ಕೊಡಗಿನ ಸರಕಾರದ ಉಳಿತಾಯವನ್ನು ಖರ್ಚು ಮಾಡಿಸಿ ಸಾಲ ಮಾಡಿಸಿ ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸುವ ಅಭಿಪ್ರಾಯವು ಸಂಯೋಜನಾ ಸ್ನೇಹಿತರದ್ದಾಗಿದೆ. ವೀರರಾಜಪೇಟೆ, ಮಡಿಕೇರಿ ಮುನ್ಸಿಪಾಲಿಟಿಗಳಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಎಲ್ಲಿಯೂ ಆಳ್ವಿಯಿ ಕಂದಾಯ ಹಾಕಿ ಆದಾಯ ಮಾಡುತ್ತಿಲ್ಲವೇ? ಮಸೂದೆಯಲ್ಲಿ ಸೂಚಿತವಾದ ಕಂದಾಯ ಹೆಚ್ಚಾಯಿತು. ಇದನ್ನು ಕಡಿಮೆ ಮಾಡಬೇಕು. ಸರಕಾರಕ್ಕೆ ಕಂದಾಯ ಕೊಟ್ಟರೆ ಹಣ ಪರದೇಶಕ್ಕೆ ಓಡಿಹೋಗವುದಿಲ್ಲ. ಅನಾವಶ್ಯಕ ಖರ್ಚು ತಡೆಯುವ ಹಕ್ಕು ನಮಗಿದೆ. ಅದಕ್ಕೆ ನಮ್ಮಲ್ಲಿ ಒಗ್ಗಟ್ಟು ಬೇಕು. ಎರಡು ಪಕ್ಷದ ಸದಸ್ಯರೂ ಒಗ್ಗಟ್ಟಾಗಿ ಮಾಡುವ ತೀರ್ಮಾನವನ್ನು ತಿರಸ್ಕರಿಸುವ ಅಧಿಕಾರ ಈಗಿನ ಯಾವ ಚೀಫ್ ಕಮಿಷನರಿಗೂ ಇಲ್ಲ. ಹಾಗೆಯೇ ಒಗ್ಗಟ್ಟಾಗಿ ಕೇಳಿದರೆ ಬೇಕಾದ ರಾಜಕೀಯ ಸುಧಾರಣೆ ದೊರೆಯುವುದು. ಅದು ಬೇಕು, ಇದಾಗಬೇಕೆಂದು ಕೂಗಿ ಪ್ರಯೋಜನವಿಲ್ಲ. ಅವುಗಳನ್ನೆಲ್ಲಾ ಸಾಧಿಸಲು ಹಣ ಬೇಕು. ಹಣ ವ್ಯಯದ ಕೆಲಸವನ್ನು ಸರಕಾರದಿಂದ ಮಾಡಿಸುವುದು ಕಷ್ಟವಲ್ಲ. ೨೦೦ ಬಕ್ಕೆ ಭೂಮಿ ಇದ್ದು ಎಕ್ರೆ ತೋಟವುಳ್ಳವರಿಗೆ ವಿನಾಯಿತಿ ಕೊಡಬೇಕೆಂಬ ವಿಚಾರಕ್ಕೆ ನಾನೊಪ್ಪುವದಿಲ್ಲ. ಬಡವರಿಗೇ ಸರಕಾರದಿಂದ ಹೆಚ್ಚಿನ ಸಹಾಯ ಬೇಕಾದದ್ದು. ಆದ್ದರಿಂದ ಬಡವರು ಸ್ವಲ್ಪ ಹೆಚ್ಚು ಕಂದಾಯ ಕೊಟ್ಟರೆ ಐಶ್ವರ್ಯವಂತರು ದೊಡ್ಡ ಪ್ರಮಾಣದಲ್ಲಿ ಕೊಡಬೇಕಾಗುವುದು. ಹೀಗೆ ದೊರೆಯುವ ಹಣದಿಂದ ಬಡವರ ಹಿತ ಕೆಲಸ ಮಾಡಲು ಸಾಧ್ಯವಾಗುತ್ತೆ. ಎಲ್ಲವನ್ನೂ ಪರಿಶೀಲಿಸಿ ಯೋಗ್ಯ ರೀತಿ ಮಸೂದೆಯನ್ನು ತಿದ್ದುಪಡಿ ಮಾಡಲು ಇದನ್ನು ಸಿಲೆಕ್ಟ್ ಕಮಿಟಿಗೆ ಬಿಡಬಹುದು.

ಶ್ರೀ ಸಿ. ಎಂ. ಪೂಣಚ್ಚನವರು
ಅಧಿಕ ಕಂದಾಯ ಪದ್ಧತಿಗೆ ಈ ಮಸೂದೆಯು ವಿರೋಧ. ಸೀರವಾದ ಕೊಡವರ ಜನ್ಮಭೂಮಿಯನ್ನು ಅದನ್ನು ಕಡಿಮೆ ಮಾಡಬೇಕೆಂದು ಇಂಡಿಯಾ ಸರಕಾರದ ನೀತಿ ಇರುವಾಗ ಆತನು ಬಡವನಿರಲಿ ಬಲ್ಲಿದನಿರಲಿ ಎಲ್ಲರಿಗೂ ಒಂದೇ ರೀತಿಯ ಈ ಕಂದಾಯವು ಆಧುನಿಕ ಕಾಲದಲ್ಲಿ ಯೋಗ್ಯವಲ್ಲ. ಬೆಳೆಸುವವನ ಶಕ್ತಿ ಎಷ್ಟು? ಭೂಮಿ ಎಷ್ಟು ಎಂಬ ಬಗ್ಗೆ ಯಾವು

# ಕೊಡಗು ನ್ಯಾಯವಿಧಾಯಕ ಸಭೆ.

ಒನೇ ಘಟದಿಂದ ಸಾಗಿದದ್ದು.

ಈ ರೀತಿಯ ಪರಿಶೀಲನೆ ಮಾಡದೆ ಈ ಸಮಿತಿ ಕಂದಾಯದ ವಿಷಯವು ರಾಜ್ಯಭಾರ ನೀತಿಯ ತತ್ವಗಳಿಗೂ ವಿರುದ್ಧವಾಗಿದೆ.

ಕೊಡಗಿನ ಆರ್ಥಿಕ ಸ್ಥಿತಿಯ ಬಗ್ಗೆ ಮಾನ್ಯರುಗಳ ಕಥೆಗಳನ್ನು ಕೇಳುತ್ತೇವೆ. ಮುಂದಿರುವ ಐದಾರು ವರ್ಷಗಳ ವರೆಗೆ ಆಗುವ ಖರ್ಚುಗಳನ್ನು ಕೂಡಿಸಿ ಕೊಡಲು ಸಾಧ್ಯವಿದೆ. ಹೀಗಿರುವಾಗ ಈಗ ಹೊಸ ಕಂದಾಯವೇಕೆ? ಈ ಮಸೂದೆಯನ್ನು ನಮ್ಮ ಮುಂದಿಡಲು ಮಾಡಿದ ಪ್ರಯತ್ನ ಸರಿಯಲ್ಲ ಎಂದು ತೋರುತ್ತದೆ. ನಿಯಮದಂತೆ ಅರುವತ್ತು ದಿನಗಳಿಗೆ ಮುಂಚೆ ಸದಸ್ಯರಿಗೆ ಇದು ತಿಳಿಯಬೇಕು. ಇದರ ಮಸೂದೆ ಡಿಸೆಂಬರನಲ್ಲಿ ಪ್ರಕಟವಾದ ಈ ಮಸೂದೆ ೧೨ನೇ ತಾರೀಕಿನ ಮೀಟಿಂಗಿಗೆ ಇಡಲ್ಪಟ್ಟಿತು. ಈ ರೀತಿಯ ಆತುರವೇನೆಂದು ತಿಳಿಯದು. ಹೀಗಾಗಿ ಸಾರ್ವಜನಿಕರ ಅಭಿಪ್ರಾಯವನ್ನು ಚೆನ್ನಾಗಿ ತಿಳಿಯಲು ನಮಗೆ ಅನುವಾಗಲಿಲ್ಲ. ಆರ್ಥಿಕ ಸ್ಥಿತಿ ಚೆನ್ನಾಗಿದ್ದ ಕೊಡಗು ದುಡಿಮೆಯಾಗಿ ರೈತನು ಹೆಚ್ಚಿನ ಕಂದಾಯ ಕೊಡಬೇಕೆಂದಾಯಿತೇ? ಈ ಕಂದಾಯ ಏತಕ್ಕಾಗಿ? ನಾನಾ ಭಗವನ್ನೆಗಳ ಕೈಕಟ್ಟಿ ಕಡಿಗೆ ವಿಸರ್ಜಿಸಿದರೆ ಜನರಿಗೆ ಕೆಲಸ ಸಂಕಷ್ಟ ನಡೆಯಲಿಲ್ಲ. ತಪ್ಪು ರೀತಿಯ ಬಜೆಟ್ ಲೆಕ್ಕ, ಸರಿಯಿಲ್ಲದ ರೀತಿಯ ಆಡಳಿತ. ಕಡೆಗೆ ಕಂದಾಯ ಭಾರ ರೈತನ ಮೇಲೆಯೇ? ಇದು ನ್ಯಾಯವಲ್ಲ. ೧೯೪೭ರಿಂದ ಉಪಯುಕ್ತ ಕೆಲಸ ಮಾಡುತ್ತಿದೆಯೆಂದು ಹೇಳಿದರೂ ನನಗೆ ಒಪ್ಪಿಗೆ ಇಲ್ಲ. ಒಂದು ವೇಳೆ ಸರಕಾರಕ್ಕೆ ಹೆಚ್ಚಿನ ಹಣದ ಆವಶ್ಯಕತೆ ಇದ್ದರೂ ಒಂದು ಕ್ಷಣಕ್ಕೆ ಒಪ್ಪಿದರೂ ಸರಕಾರದ ಆದಾಯ ಹೆಚ್ಚಿಸಲು ಬೇರೆ ಮಾರ್ಗಗಳಿಲ್ಲವೇ? ಒಕ್ಕಲಿಗನಿಗೆ ಈ ಪೆಟ್ಟು ಹಾಕುವದೇ? ಈ ಮಸೂದೆಯು ಸಮೂಲವಾಗಿ ತಿರಸ್ಕರಿಸಲ್ಪಡಬೇಕು. ಈ ಪ್ರಶ್ನೆಯನ್ನು ಮುಂದಿಡಲು ಸಾಧನವಾಗಿ ಪ್ರತ್ಯೇಕ ಸಂಯೋಜನಾ ವಾದಗಳನ್ನು ಕೆಲವು ರಾಜಕೀಯ ಪಕ್ಷಗಳು ಹೂಡಿವೆ. ಕೊಡಗಿನ ಭವಿಷ್ಯಕ್ಕೂ ಇದಕ್ಕೂ ಸಂಬಂಧವಿಲ್ಲ ನೆಲಕ್ಕೆ ಅಪ್ಪಳಿಸಿದ ಚೆಂಡು ಪುಟಿದು ಹಿಂದಕ್ಕೆ ನೆಗೆಯುವಂತೆ ಕೊಡಗನ್ನು ಪ್ರತ್ಯೇಕ ವಿಡಲು ಮಾಡುವ ಈ ಪ್ರಯತ್ನವೇ ವಿಲೀನೀಕರಣಕ್ಕೆ ಕಾರಣವಾದೀತು. ದೇಶದ ಆರ್ಥಿಕ ಸ್ಥಿತಿಯು ಜನತೆಯ ಸಂಪತ್ತಿನ ಮೇಲೆ ನಿಂತಿದೆ. ಈ ಸಂಪತ್ತನ್ನು ಹೆಚ್ಚಿಸುವ ಯಾವುದೇ ಪ್ರಯತ್ನವು ... ಕೂಡಿದ್ದಾಗಿದೆ. ರೈತನ ಸ್ಥಿತಿ, ಕೃಷಿ ವ್ಯವಸಾಯಗಾರನ ಸ್ಥಿತಿ ಚೆನ್ನಾಗಿಲ್ಲ. ಜನತೆಯ ನಿಜಸ್ಥಿತಿಯನ್ನರಿಯದೆ ಮೇಲೆ ಹೊರಿಸಲ್ಪಡುವ ಈ ಹೊರೆಗೆ ನಾವು ಒಪ್ಪಲಾರೆವು. ನಮ್ಮಲ್ಲಿ ಕೆಲವರಿಗೆ ರಾಜಕೀಯ ಅತ್ಯಪ್ರೀತಿ ಬಂದು ಹೋಗಿದೆ. ಅವರು ನೋಡಿದ್ದೇ ಸರಿ, ಅವರದ್ದೇ ನ್ಯಾಯವೆಂಬ ನೀತಿ ಬಂದಿದೆ. ವಿಶಾಲ ದೃಷ್ಟಿಯಿಂದ ನೋಡುವ ಅಭ್ಯಾಸ ಅವರಿಗಿಲ್ಲ. ವಿಚಿತ್ರ ಕಥೆ ಕಟ್ಟಿಕೊಂಡು ಅವರು ವರ್ಣಿಸುತ್ತಾರೆ. ಈ ಕಥೆಗಳಿಂದ ದೇಶದ ಪ್ರಗತಿಯಾಗದು. ಪ್ರತಿಯೊಬ್ಬ ಚೀಫ್ ಕಮಿಷನರು ಬದಲಾದಾಗ ಹೊಸ ಆಶೆ ಭರವಸೆಗಳನ್ನು ತಾನು ಮುಟ್ಟಿದ್ದನ್ನೆಲ್ಲ ಚಿನ್ನವಾಗಿ ಮಾಡುವೆ ಎಂಬಂತೆ ಆಡುತ್ತಾರೆ. ಆದರೆ ನಾವು ಎಲ್ಲಿ ಇದ್ದೇವೊ ಅಲ್ಲಿಯೇ ಇದ್ದೇವೆ. ಜನರು ಹಿತಕ್ಕಾಗಿ ದುಡಿಯದ ಈ ವಿಷಯದ ಈ ಸರಕಾರಕ್ಕೆ ನ್ಯಾಯ ಸಮರ್ಪಕ ಹಕ್ಕಿಲ್ಲ.

೧೯೪೭ರಲ್ಲಾದ ಸೆಟ್ಲ್‌ಮೆಂಟನ್ನು ಪರಿಶೀಲಿಸಿದರೆ ಕೊಡಗಿನಲ್ಲಿ ಒಂದನೇ ದರದ ಭೂಮಿಯಿಲ್ಲವೆಂದು ಗೊತ್ತಾಗುವದು. ನೆರೆ ಪ್ರಾಂತಗಳ ಕಂದಾಯ ಪದ್ಧತಿಗೂ ಮತ್ತು ಇದಕ್ಕೂ ಇಲ್ಲಿಗೂ ವ್ಯತ್ಯಾಸವಿಲ್ಲ. ನೆರೆಪ್ರಾಂತದ ಎರಡನೇ ತರಂ ಕೊಡಗಿನ ಒಂದನೇ ತರಂ ಭೂಮಿಯಾಗಿದೆ. ನೆರೆಪ್ರಾಂತದಲ್ಲಿ ಆರು ವಿಧದ ತರಂಗಗಳಿವೆ. ಎಕ್ರೆಗೆ ಒಂದೂವರೆಯಿಂದ ೮ ರೂಪಾಯಿಗಳ ವರೆಗೆ ಕಂದಾಯವಿದೆ. ಮೈಸೂರಿನಲ್ಲಿ ಕಾಫಿಗೆ ಒಂದೂವರೆ ರೂಪಾಯಿ ಕಂದಾಯ. ನಮ್ಮಲ್ಲಿಯ ಕಂದಾಯ ನೆರೆಪ್ರಾಂತಕ್ಕಿಂತ ಎಂದೂ ಕಡಿಮೆಯಿಲ್ಲ. ಕೇಂದ್ರ ಸರಕಾರಕ್ಕೆ ಇಲ್ಲಿಯ ಸ್ಥಿತಿಯ ತಪ್ಪಭಿಪ್ರಾಯವನ್ನು ಕೊಟ್ಟಿರಬೇಕು. ಸರಿಯಾಗಿ ಎಲ್ಲಾ ವಿಚಾರಗಳಲ್ಲಿಯೂ ಅನುಸರಿಸುವ ಸಂಪ್ರದಾಯವಿರುವ ಈ ಸರಕಾರವು ನೆರೆಯ ವರೆಗೆ ಕಡಿಮೆ ಕಂದಾಯ ಕೊಡುತ್ತಿರುವಾಗ ಇಲ್ಲಿಯವರಿಗೆ ಹೆಚ್ಚು ಮಾಡಬಾರದು. ವ್ಯವಸಾಯ ಆದಾಯ ತೆರಿಗೆಯನ್ನು ತಂದರೆ ಈ ಬಡ್ಡಿಯು ಕಂದಾಯದ ಮಾರ್ಗವೇಕೆ? ಇದನ್ನು ಸಿಲೆಕ್ಟ್ ಕಮಿಟಿಗೆ ಬಿಟ್ಟು ಅವರು ಗ್ರಾಮ ಗ್ರಾಮ ಸುತ್ತಿ ಅಭಿಪ್ರಾಯ ತೆಗೆಯುವದು ಆಗದು ಸೂತು. ಇದರಿಂದ ದೇಶದಲ್ಲಿ ಅವ್ಯವಸ್ಥೆಯೇ ಆದೀತು. ಕೆಲವರಿಗೆ ಕಂದಾಯ ವಿನಾಯಿತಿ ಕೊಡುವ ಸೂಚನೆಯು ದೇಶದ ಶಾಂತಿಗೆ ಭಂಗ ತಂದೀತು ಅದು ಯಾವ ಕಂದಾಯವೇ ಆಗಲೀ, ಒಂದು ಕಾಸೇ ಆಗಲೀ ಈ ಬಡ್ಡಿಯ ರೀತಿಯ ತಾರತಮ್ಯವುಳ್ಳ ಕಂದಾಯವನ್ನು ವಿರೋಧಿಸಲೇಬೇಕು.

ಶ್ರೀ. ಕೆ. ಪಿ. ಕರುಂಬಯ್ಯನವರು.

ಈ ಮಸೂದೆಯಲ್ಲಿ ಕೊಡಗಿನ ಭವಿಷ್ಯದ ರಾಜಕೀಯ ಸಮಸ್ಯೆಯೂ ಸಮಾವೇಶವಾಗಿಲ್ಲವೆಂಬುದು ಸರಿಯಲ್ಲ. ಕಂದಾಯ ಹಾಕುವ ಯಾವುದೇ ಸೂಚನೆಯು ಈ ಸಭೆಯಲ್ಲಿ ಬಂದರೂ ಅದನ್ನು ವಿರೋಧಿಸುವದಿದ್ದರೆ ಎಂಬುದು ನನ್ನ ಅನುಭವದ ಮತ. ಕೊಡಗಿನ ಆದಾಯವನ್ನು ಕಡಿಮೆ ಮಾಡಿ ಆರ್ಥಿಕ ಸ್ಥಿತಿಯನ್ನು ಶಿಥಿಲಗೊಳಿಸಿ ವಿಲೀನೀಕರಣಕ್ಕೆ ಮಾರ್ಗ ಮಾಡುವದೇ ಇವರ ಧ್ಯೇಯವೆಂದು ಬೇರೆ ಹೇಳಬೇಕಿಲ್ಲ. ಸಾರ್ವಜನಿಕರ ಕಣ್ಣು ಕಟ್ಟಲು ಇಲ್ಲಸಲ್ಲದ ಪ್ರಚಾರ ಮಾಡಬಾರದು. ಡೆಲ್ಲಿಯಲ್ಲಿ ನಡೆದ ಸರ್ವೇಕ್ಷಣದ ಕಾಲಕ್ಕೆ ಉಳಿಯುವ ಇರುವ ವಿನಹ ಲಕ್ಷ ಹಮಾಲೆ ಬರಲಿಲ್ಲ. ಹೆಚ್ಚಿಗೆ ಕಂದಾಯ ಹಾಕಲಾಗುವದಿಲ್ಲ, ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ, ಪ್ರತ್ಯೇಕವಿರಲು ಸಾಧ್ಯವಿಲ್ಲ ಆದ್ದರಿಂದ ಹತ್ತೇ ದಿನಗಳಲ್ಲಿ ಜನಾಭಿಪ್ರಾಯ ತೆಗೆಯದೆ ಬೇರೆಪ್ರಾಂತದೊಡನೆ ಸಂಯೋಜನೆಯಾಗಬೇಕೆಂದು ಕೂಗಿಕೊಂಡವರು ಈಗ ಕಂದಾಯದ ಮಟ್ಟಿಗೆ ಜನರ ಅಭಿಪ್ರಾಯ ತೆಗೆಯುವಂತೆ ಮಾತಾಡುತ್ತಿದ್ದಾರೆ. ವ್ಯವಸಾಯ ಆದಾಯ ತೆರಿಗೆ ಮಸೂದೆಯು ಕಳೆದ ಕೌನ್ಸಿಲಿನಲ್ಲಿ ಬಂದಾಗ ಇವರೇ ಅದನ್ನು ವಿರೋಧಿಸಿದರು.

೧೯೧೭-೧೮ರ ಸ್ಥಿತಿ ಇಂದಿಲ್ಲ. ಆ ಸಾಧ್ಯ ಬದಲಾವಣೆಯಾಗಿದೆ. ದೇಶದ ಹಿತದೃಷ್ಟಿಯಿಂದ ಆದರಲ್ಲೂ ಸ್ವತಂತ್ರಗಳಾದ ನಾವು ಹೆಚ್ಚಿನ ಭಾರವನ್ನು ಹೊರಬೇಕು. ೧೯೧೭ರಲ್ಲಿ ಒಂದು ಒಟ್ಟಿ ಬತ್ತಕ್ಕೆ ೨ ರೂ. ಇತ್ತು. ಒಬ್ಬ ಸರಕಾರಿ ಜವಾನನ ಸಂಬಳ ಮಾಸಿಕ ೭ ರೂಪಾಯಿ ಇತ್ತು. ಅಂದಿನ ಸರಕಾರದ ಒಟ್ಟು ಖರ್ಚು ಸುಮಾರು ೧೨ ಲಕ್ಷವಿತ್ತು. ಆದರೆ ಇಂದು ಒಂದು ಒಟ್ಟಿ ಬತ್ತಕ್ಕೆ ರೂ. ೧೨ ಕ್ರಯವಿದೆ. ಜವಾನನ ಸಂಬಳ ೬೦ ಆಗಿದೆ. ಸರಕಾರದ ಖರ್ಚು ೮೦ ಲಕ್ಷಕ್ಕೆ ಏರಿದೆ. ಹಾಗಿರುವಾಗ ಅಂದಿನ ಮಟ್ಟದಲ್ಲಿಯೇ ಇರಲಿ; ಸ್ವಲ್ಪ ಹೆಚ್ಚಿನ ಜವಾಬ್ದಾರಿ ಸರ್ವರ ಮೇಲಿದೆ. ಮಸೂದೆಯನ್ನು ಸೂಚಿತವಾಗಿರುವ ಪರಕ್ಕೆ ನಾನು ವಿರೋಧಿಸುತ್ತೇನೆ. ಇದನ್ನು ಪರ್ಯಾಲೋಚಿಸಿ ಯೋಗ್ಯ ವರ ನಿಶ್ಚಯ ಮಾಡಲು ಸಿಲೆಕ್ಟ್ ಕಮಿಟಿಗೆ ಬಿಡುವದು ಸೂಕ್ತವಾಗಿದೆ. ನಮ್ಮ ಪ್ರತ್ಯೇಕ ಅಸ್ತಿತ್ವವನ್ನು ಇಲ್ಲದೆ ಮಾಡಲು ಪ್ರಯತ್ನ ನಡೆಯುವಾಗ ನಾವು ಸ್ವಲ್ಪ ಹೆಚ್ಚಿನ ಹೊರೆಯನ್ನು ಹೊತ್ತಾದರೂ ವ್ಯಕ್ತಿತ್ವವನ್ನು ಉಳಿಸಬೇಕು. ಕೊಡಗಿನ ಇಂಜಿನಿಯರಿಂಗ್ ಇಲಾಖೆಯೊಂದನ್ನು ಬಿಟ್ಟು ಉಳಿದ ಎಲ್ಲಾ ಇಲಾಖೆಗಳಲ್ಲೂ ಪ್ರಗತಿ ಇದೆ. ನಮ್ಮ ನೆರೆಯ ಪ್ರಾಂತದ ರೈತನಿಗಿಂತ ನಮ್ಮ ರೈತನು ಜೀವನ ನಡೆಸುತ್ತಿರುವ ಸ್ಥಿತಿ ಯಾರಿಗೂ ಸಾಧ್ಯವಿಲ್ಲ. ಆತನು ಆತನಿಗಿಂತ ಎಷ್ಟೋ ಉತ್ತಮ ಸ್ಥಿತಿಯಲ್ಲಿದ್ದಾನೆ. ಕೊಡಗಿನ ಭೂಮಿಯು ನೆರೆ ಪ್ರಾಂತಗಳಷ್ಟು ಫಲವತ್ತಾಗಿಲ್ಲವೆಂಬುದನ್ನು ಒಪ್ಪಲಾಗುವದಿಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಸರಾಸರಿಯಾಗಿ ಒಂದು ಎಕ್ರೆ ಕಾಫಿ ತೋಟದಲ್ಲಿ ಎರಡು ಹಂಡ್ರೆಡ್ ವೈಟ್ ಕಾಫಿಯಾದರೆ ಕೊಡಗಿನ ಒಂದು ಎಕ್ರೆಯಲ್ಲಿ ೩ ಹಂಡ್ರೆಡ್ ವೈಟ್ ಆಗುತ್ತದೆ. ಇದರಿಂದಲೇ ಕೊಡಗು ಫಲವತ್ತಾಗಿದೆಯೆಂದು ಹೇಳಬಹುದು. ಈ ಕಂದಾಯದ ಮಸೂದೆಯು ಒಕ್ಕಲಿಗರಲ್ಲಿ ಸ್ವಲ್ಪ ಪ್ರಚಾರದಿಂದ ಜನರಿಗೆ ಹೆದರಿಕೆ ಹುಟ್ಟಿಸದೇ ವಿನಹ ಬೇರಿಲ್ಲ. ಕಾಫಿ ತೋಟಗಳ ಎಕ್ರೆಗೆ ಕೇಂದ್ರ ಸರಕಾರಕ್ಕೆ ೬೩ ಸುಂಕ ಆದಾಯ ಅಪ್ರತ್ಯಕ್ಷ ಎಕ್ಸೈಸ್ ಕಂದಾಯ ತೆರುತ್ತಿರುವನ. ಈ ಸರಕಾರ ಸೂಚಿಸಿರುವ ೬ ರೂಪಾಯಿಗೆ ಬದಲು ಕಾರಣವಿಲ್ಲ. ಪ್ರತಿ ಎಕ್ರೆಗೆ ಕಾಫಿ ವ್ಯವಸಾಯಗಾರನು ೩೦೦ ರೂ. ಖರ್ಚು ಮಾಡುತ್ತಾನೆ. ಈ ರೂ. ೬ ಕಂದಾಯ ಹೆಚ್ಚಿನದಲ್ಲ. ಕೊಡಗಿನ ಕಾಫಿ ವ್ಯವಸಾಯಗಾರರ ಹಿತವನ್ನು ಕೊಡಗು ಸರಕಾರವು ಕಾಯಿದೆ. ೧೯೩೦ರಲ್ಲಿ ಆರ್ಥಿಕ ಬಿಕ್ಕಟ್ಟಿನಿಂದ ತೋಟಗಳು ಹರಾಜಾಗುವಂತಿದ್ದಾಗ ತೋಟಗಾರರಿಗೆ ಐದು ಲಕ್ಷ ರೂಪಾಯಿಗಳ ಸಾಲಕೊಟ್ಟು ಸಹಾಯಮಾಡಿದೆ. ವ್ಯವಸಾಯ ಆದಾಯ ತೆರಿಗೆ ಜಾರಿಯಲ್ಲಿ ಬಂದಿದ್ದರೆ ಈ ಕಂದಾಯ ಮಸೂದೆಯ ಅವಶ್ಯಕತೆ ಇರಲಿಲ್ಲ. ಕೊಡಗಿನ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಲು ಯಾವನೂ ಚಕ್ಕ ತ್ಯಾಗ ಮಾಡಲು ಹಿಂಜರಿಯನು. ಬೆಂಗ್ಳೂರಿನ ವಿರೋಧ ಪ್ರದರ್ಶನಕ್ಕೆ ಪ್ರದರ್ಶನಕ್ಕಿರುವ ಬೆಲೆಯೇ ವಿನಹ ಹೆಚ್ಚಿನದಿಲ್ಲ. ಅಲ್ಲಿದ್ದವರು ದೇಶದ ಎಲ್ಲಾ ಭಾಗದವರಾಗಲೀ ಯಾ ಪ್ರತಿನಿಧಿಗಳಾಗಲೀ ಅಲ್ಲ. ಮದ್ರಾಸಿನಲ್ಲಿ ಮಾರಾಟ ತೆರಿಗೆ ಹಾಕಿದಾಗ ನಮ್ಮ ಮುನ್ಸಿಪಾಲಿಟಿಗಳಲ್ಲಿ ಅರ್ಧ್ಯಾಂತ ಹಾಕಿದಾಗ ಗಲಭೆ ನಡೆಯಿತು. ಕ್ರಮಶಃ ಅವುಗಳ ಉಪಯುಕ್ತತೆಯು ಅರಿವಾಗಿ ಶಾಂತವಾತಾವರಣ ಏರ್ಪಟ್ಟಿದೆ. ಈಗ ಅವುಗಳನ್ನು ಸಹ ಧಿಕ್ಕರಿಸುವ ಪ್ರದರ್ಶನಗಳಿಗೆ ಕಡಿಮೆ ಇಲ್ಲ. ಸರಕಾರದ ಬೊಕ್ಕಸದಲ್ಲಿ ಹೆಚ್ಚು ಹಣವಿದ್ದರೆ ದೇಶಕ್ಕೇ ಹಿತ. ಕೇಂದ್ರ ಸರಕಾರವೇ ಆಗಲೀ ಪ್ರಾಂತೀಯ ಸರಕಾರವೇ ಆಗಲೀ ಜನತೆಯ ಕೂಗಿಗೆ ಕಿವಿಗೊಡಬೇಕು. ಆ ಯೋಗ್ಯ ಸೂಚನೆಗಳನ್ನು ಮಾಡುವವರನ್ನು ಗೌರವಿಸಬೇಕು. ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡುವ ಸೂಚನೆಗೆ ನನ್ನ ಸಮರ್ಥನೆ ಇದೆ.

ನಂತರ ಪ್ರೆಸಿಡೆಂಟರು ಉಪಸೂಚನೆಯನ್ನು ಓಟಿಗೆ ಹಾಕಿದರು. ಶ್ರೀಗಳಾದ ಕೆ. ಪಿ. ಕರುಂಬಯ್ಯ, ಕೆ. ಪಿ. ಅಪ್ಪಯ್ಯ, ಪಿ. ಐ. ಬೆಳ್ಯಪ್ಪ, ಕೆ. ಎಂ. ಕರುಂಬಯ್ಯ, ಎಚ್. ಟಿ. ಮುತ್ತಣ್ಣ ಮತ್ತು ಸರಕಾರಿ ಸದಸ್ಯರು ಪರವಾಗಿಯೂ, ಶ್ರೀಗಳಾದ ಎನ್. ಸೋಮಣ್ಣ, ಕೆ. ಮಲ್ಲಪ್ಪ, ಸಿ. ಎಂ. ಪೂಣಚ್ಚ, ಎಸ್. ಎಸ್. ನಾರಾಯಣಮೂರ್ತಿ, ಕೆ. ಎಂ. ದೇವಯ್ಯ, ಎಚ್. ಬಿ. ಅಣ್ಣಯ್ಯ, ಸಿ. ಎಂ. ನಾಣಯ್ಯ ಮತ್ತು ಕೆ. ಕೆ. ಬೆಳ್ಯಪ್ಪ ಇವರುಗಳು ವಿರೋಧವಾಗಿಯೂ ಓಟುಮಾಡಿದ್ದು ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂಬ ಸೂಚನೆಯು ಪಾಸಾಯಿತು.

ನಂತರ ಶ್ರೀಗಳಾದ ಕೆ. ಪಿ. ಕರುಂಬಯ್ಯ, ಕೆ. ಪಿ. ಅಪ್ಪಯ್ಯ, ಎಚ್. ಟಿ. ಮುತ್ತಣ್ಣ, ಕೆ. ಎಂ. ಬಿ. ಶಾಲಪ್ಪ, ಅಬ್ದುಲ್ ರಹಮಾನ್ ಖಾನ್, ಪಿ. ಐ. ಬೆಳ್ಯಪ್ಪ ಮತ್ತು ಫೈನಾನ್ಸ ಮೆಂಬರು (ಅಧ್ಯಕ್ಷರು) ಇವರುಗಳಿಂದ ಕೂಡಿದ ಸಿಲೆಕ್ಟ್ ಕಮಿಟಿಯನ್ನು ನೇಮಿಸಲಾಯಿತು.

ಕೌನ್ಸಿಲು ಸಭೆಯು ಮಧ್ಯಾಹ್ನ ೩-೩೦ಕ್ಕೆ ಮುಕ್ತಾಯಗೊಂಡಿತು.

---

"ಕೊಡಗು" ಪ್ರಿಂಟರು,
ವೀರಾಜಪೇಟೆ.
ಶ್ರೀ. ಟಿ. ಎಸ್. ಗೋವಿಂದ ರಾಯ.

Reg. No. M. 1880.
'KODAGU' MERCARA. (Coorg).

# ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೧೦-೨-೧೯೫೦ನೇ ಶುಕ್ರವಾರ | ಸಂಚಿಕೆ ೩೭

## ವಾರ್ತೆಗಳು.

ಭಾರತಕ್ಕೆ ಬೇಕಾದುದು ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿ ಮಾತ್ರವಲ್ಲ. ಜನತೆಗೆ ಕಲಾಭಿವೃದ್ಧಿಯೂ ಅಗತ್ಯ. ಸಂಗೀತ, ನರ್ತನ ಮೊದಲಾದ ಕಲೆಗಳು ಜೀವನದ ಸುಖ ಸಾಧನಕ್ಕೆ ಅವಶ್ಯಕ. ಕಲೆಗಳ ಅಭಿವೃದ್ಧಿ ಮಾಡಬೇಕೆಂಬುದಾಗಿ ಪಂ. ನೆಹರೂರವರು ಶ್ರೀ. ಶ್ರೀರಂಗರವರು ಒಪ್ಪಿಸಿದ ಮಾನಪತ್ರಕ್ಕೆ ಉತ್ತರವಾಗಿ ಭಾಷಣ ಮಾಡುತ್ತ ನುಡಿದರು. ಡೆಲ್ಲಿ ಕೋಟೆ ಪ್ರದೇಶದಲ್ಲಿ ನೆಹರೂರವರಿಗೆ ಈ ಗೌರವ ಸಲ್ಲಿಸಲಾಯಿತು.

ಪೂರ್ವ ಬಂಗಾಳದ ಬಾಗೇರ್‌ಹಾಟ್ ಡಿವಿಜನಿನಲ್ಲಿ ಹಿಂದುಗಳ ಮೇಲೆ ಬಲಾತ್ಕಾರಗಳು ನಡೆಯುತ್ತಿರುವುದರಿಂದ ಸುಮಾರು ೧೦,೦೦೦ ಮಂದಿ ಹಿಂದೂ ನಿರಾಶ್ರಿತರು ಪಶ್ಚಿಮ ಬಂಗಾಳದ ಗಡಿ ಪ್ರದೇಶಕ್ಕೆ ಬಂದಿರುವರೆಂದು ತಿಳಿದಿದೆ.

ಹೈದರಾಬಾದಿನ ನೈಜಾಮರ ಪ್ರಾಣಾಪಹಾರಕ್ಕೆ ಇತ್ತೀಚೆಗೆ ಯತ್ನ ನಡೆದು ವಿಫಲವಾಯಿತು. ಪ್ರಜಾಪ್ರಭುತ್ವ ದಿನದಂದು ರಾಜಪ್ರಮುಖ ಪ್ರತಿಜ್ಞೆ ತೀರಿಸಿ ನೈಜಾಮರು ಜುಬಿಲಿ ಹಾಲಿನಿಂದ ಅರಸುಕೋಠಿ ಅರಮನೆಗೆ ಮೋಟಾರ್‌ಕಾರಿನಲ್ಲಿ ಹಿಂತೆರಳುವಾಗ ಒಂದು ಕೈಬಾಂಬು ಅವರ ಕಾರಿನ ಕಡೆಗೆ ಎಸೆಯಲ್ಪಟ್ಟಿತು. ಆದರೆ ಅದರಿಂದ ಯಾವುದೇ ರೀತಿಯ ಹಾನಿ ಒದಗಿಸುದಿಲ್ಲ.

ನೈಜಾಮರ ಪ್ರಾಣಾಪಹಾರಕ್ಕೆ ಯತ್ನ ನಡೆಸಿದ ಆಪಾದಿತನನ್ನು ಪೋಲೀಸರು ಪತ್ತೆ ಹಚ್ಚಿದ್ದಾರೆ. ಅವನು ಹಿಂದೂ ಮಹಾಸಭೆಗೆ ಸೇರಿದವನೆನಲಾಗಿದೆ. ಬಿ. ಜ ಬೇಸ್ಕರ್ ಎಂದು ಹೆಸರು ಕೊಟ್ಟಿದ್ದಾನೆ.

ಇನ್ನು ಮುಂದೆ ಎಲ್ಲಾ ಸರಕಾರಿ ದಾಖಲೆಗಳಲ್ಲಿ 'ಕೂಲಿ' ಇಲ್ಲವೆ 'ಪೋರ್ಟರ್' ಶಬ್ದಗಳ ಪ್ರಯೋಗವನ್ನು ನಿಲ್ಲಿಸಿ 'ಮಜದೂರ್' ಎಂಬ ಶಬ್ದವನ್ನೇ ಉಪಯೋಗಿಸುವಂತೆ ಮುಂಬಯಿ ಸರಕಾರ ನಿರ್ಧರಿಸಿದೆ

ಕೆಲವು ಅಮೇರಿಕನ್ ಕಂಪೆನಿಗಳು ರಹಸ್ಯವಾಗಿ ಕಳ್ಳಪೇಟೆಯಲ್ಲಿ ರಷ್ಯಕ್ಕೆ ವಿಮಾನ ಇಂಜಿನುಗಳನ್ನು ಮತ್ತು ಇತರ ಸಾಮಾನುಗಳನ್ನು ಸರಬರಾಜು ಮಾಡುತ್ತಿರುವ ವಿಷಯದಲ್ಲಿ ಅಮೇರಿಕದ ಸರಕಾರಿ ಅಧಿಕಾರಿಗಳು ತನಿಖೆ ನಡೆಸುತ್ತಿರುವರು.

ಭಾರತದ ಇತಿಹಾಸದಲ್ಲಿ ಮೊದಲ ಬಾರಿ ಇಡೀ ದೇಶದ ಮೇಲೆ ನ್ಯಾಯ ಶಾಸನ ನಡೆಸಬಲ್ಲ ಸುಪ್ರೀಮ್ ಕೋರ್ಟ್ ಉದ್ಘಾಟಿಸಲ್ಪಟ್ಟಿತು.

ಬೆಂಗ್‌ಕಾಕ್ ಆಸ್ಪತ್ರೆಯೊಂದರಲ್ಲಿ ಸುಭಾಸಚಂದ್ರಬೋಸ್ ಸ್ಮಾರಕ ವಾರ್ಡೊಂದು ಇತ್ತೀಚೆಗೆ ಸಯಾಮ್‌ನಲ್ಲಿರುವ ಭಾರತ ಮಂತ್ರಿ ಶ್ರೀ. ಭನ್ಸಾಕ್ ದಯಾಳರಿಂದ ತೆರೆಯಲ್ಪಟ್ಟಿತು.

ಹೈಡ್ರೋಜನ್ ಬಾಂಬ್ ತಯಾರಿಸುವುದರಲ್ಲಿ ಸೋವಿಯಟ್ ರಷ್ಯವು ಸಂಯುಕ್ತ ಅಮೇರಿಕಕ್ಕಿಂತ ಮೇಲ್ಮೈ ಪಡೆಯುವಂತಿದೆ. ಈಗಾಗಲೇ ಆ ಕಡೆ ಅದು ತುಂಬಾ ಮುಂದರಿಯುತ್ತಿರುವುದೆಂದು ತಿಳಿಬರುತ್ತದೆ.

## ಸ್ವತಂತ್ರ ಭಾರತದ ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ ಭಾರತಭಾಗ್ಯವಿಧಾತಾ |
ಕಾಮರೂಪ ಪಂಜಾಬ ಮರಾಠಾ ಗುಜರಾತ ದ್ರಾವಿಡ ವಂಗ |
ಉತ್ಕಲ ವಿಂಧ್ಯ ಹಿಮಾಚಲ ಜಮುನಾ ಗಂಗಾ ಜಲಧಿತರಂಗ |
ತವ ಶುಭ ನಾಮೇ ಜಾಗೇ, ತವ ಶುಭ ಆಶಿಷ ಮಾಗೇ |
ಗಾಹೇ ತವ ಜಯ ಗಾಥಾ ||
ಜನಗಣಮಂಗಲದಾಯಕ ಜಯ ಹೇ ಭಾರತಭಾಗ್ಯವಿಧಾತಾ |
ಜಯ ಹೇ, ಜಯ ಹೇ, ಜಯ ಹೇ, ಜಯ ಜಯ ಜಯ ಜಯ ಹೇ !

ಅಹರಹ ತವ ಆಹ್ವಾನ ಪ್ರಚಾರಿತ ಸುನಿ ತವ ಉದಾರ ವಾಣೀ
ಹಿಂದೂ ಬೌದ್ಧ ಶಿಖ ಜೈನ ಪಾರಸೀಕ ಮುಸಲ್ಮಾನ ಕ್ರಿಸ್ತಾನೀ
ಪೂರಬ ಪಶ್ಚಿಮ ಆಸೇ, ತವ ಸಿಂಹಾಸನ ಪಾಸೇ |
ಪ್ರೇಮಹಾರ ಹೋಯ ಗಾಥಾ ||
ಜನಗಣಐಕ್ಯವಿಧಾಯಕ ಜಯ ಹೇ, ಭಾರತಭಾಗ್ಯವಿಧಾತಾ |
ಜಯ ಹೇ, ಜಯ ಹೇ, ಜಯ ಹೇ, ಜಯ ಜಯ ಜಯ ಜಯ ಹೇ !

ಪತನ ಅಭ್ಯುದಯ ಬಂಧುರ ಪಂಥಾ ಯುಗಯುಗ ಧಾವಿತ ಯಾತ್ರೀ |
ಹೇ ಚಿರ ಸಾರಥಿ, ತವ ರಥಚಕ್ರೇ, ಮುಖರಿತ ಪಥ ದಿನರಾತ್ರೀ ,
ದಾರುಣ ವಿಪ್ಲವ ಮಾಝೇ, ತವ ಶಂಖಧ್ವನಿ ಬಾಜೇ
ಸಂಕಟದುಃಖತ್ರಾತಾ ||
ಜನಗಣ ಪಥ ಪರಿಚಾಯಕ ಜಯ ಹೇ ಭಾರತ ಭಾಗ್ಯವಿಧಾತಾ
ಜಯ ಹೇ, ಜಯ ಹೇ, ಜಯ ಹೇ, ಜಯ ಜಯ ಜಯ ಜಯ ಹೇ !

ಘೋರತಿಮಿರ ಘನನಿಬಿಡ ನಿಶೀಥೇ ಪೀಡಿತ ಮೂರ್ಛಿತ ದೇಶೇ ,
ಜಾಗ್ರತ ಛಿಲ ತವ ಅವಿಚಲ ಮಂಗಲ ನತನಯನೇ ಅನಿಮೇಷೇ |
ದುಃಸ್ವಪ್ನೇ ಆತಂಕೇ ರಕ್ಷಾ ಕರಿಲೇ ಅಂಕೇ ,
ಸ್ನೇಹಮಯೀ ತುಮಿ ಮಾತಾ ||
ಜನಗಣ ದುಃಖತ್ರಾಯಕ ಜಯ ಹೇ ಭಾರತಭಾಗ್ಯವಿಧಾತಾ |
ಜಯ ಹೇ, ಜಯ ಹೇ, ಜಯ ಹೇ, ಜಯ ಜಯ ಜಯ ಜಯ ಹೇ

ರಾತ್ರಿ ಪ್ರಭಾತಿಲ ಉದಿಲ ರವಿಚ್ಛವಿ ಪೂರ್ವ ಉದಯಗಿರಿ ಭಾಲೇ |
ಗಾಹೇ ವಿಹಂಗಮ, ಪುಣ್ಯಸಮೀರಣ ನವಜೀವನರಸ ಢಾಲೇ |
ತವ ಕರುಣಾರುಣರಾಗೇ ನಿದ್ರಿತ ಭಾರತ ಜಾಗೇ |
ತವ ಚರಣೇ ನತಮಾಥಾ ||
ಜಯ ಜಯ ಜಯ ಹೇ ಜಯ ರಾಜೇಶ್ವರ, ಭಾರತಭಾಗ್ಯವಿಧಾತಾ |
ಜಯ ಹೇ, ಜಯ ಹೇ, ಜಯ ಹೇ, ಜಯ ಜಯ ಜಯ ಜಯ ಹೇ ! ||

ಭಾರತ ಸರಕಾರದ ವಾಣಿಜ್ಯ ಶಾಖೆಯ ಜತೆ ಕಾರ್ಯದರ್ಶಿಗಳಾದ ಶ್ರೀ. ಕೆ. ಕೆ. ಚಟ್ಟೋರವರನ್ನು ಟೋಕಿಯೊದಲ್ಲಿ ಭಾರತದ ರಾಯಭಾರಿಗಳಾಗಿ ನೇಮಕ ಮಾಡಿರುವರೆಂಬುದಾಗಿ ವಿದೇಶಾಂಗ ಶಾಖೆಯಿಂದ ಹೊರಟ ಪ್ರಕಟಣೆಯಿಂದ ತಿಳಿದುಬಂದಿದೆ.

ಪಂಡಿತ ಜವಾಹರಲಾಲನೆಹರುರವರು ಏಪ್ರಿಲ್ ಮೊದಲನೆ ವಾರದಲ್ಲಿ ಗುಜರಾತಿನ ಪ್ರವಾಸ ಮಾಡುವುದಾಗಿ ಗೊತ್ತಾಗಿದೆ. ಅಹಮದಾಬಾದಿನಲ್ಲಿ ಗುಜರಾತ್ ಕಾಂಗ್ರೆಸ್ ಸೇವಾದಳದ ಕೂಟವು ನೆಹರುರವರ ಭೇಟಿ ಸಮಯದಲ್ಲಿ ನಡೆಯುವುದೆಂದು ಹೇಳಲಾಗಿದೆ.

## ವಾರ್ತೆಗಳು.

ಬರ್ಮಿಂಗ್‌ಹ್ಯಾಮಿನಲ್ಲಿ ಐರ್ಲೆಂಡಿನ ಮಾಜಿ ಪ್ರಧಾನ ಮಿ. ಡಿವಲೆರಾರವರು ಭಾರತದ ಪ್ರಜಾಪ್ರಭುತ್ವ ಧ್ವಜಾರೋಹಣ ನಡೆಸಿದರು.

ಪಾಕಿಸ್ತಾನದಲ್ಲಿನ್ನೂ ೫೧,೦೦೦ ಹಿಂದುಗಳೂ ೩ ಲಕ್ಷ ಹರಿಜನರೂ ಇರುತ್ತಾರೆ. ಅವರುಗಳನ್ನು ಭಾರತಕ್ಕೆ ತರಲು ಭಾರತ ಸರಕಾರ ಪ್ರಯತ್ನಪಡದಿದ್ದಲ್ಲಿ ಅವರುಗಳನ್ನೆಲ್ಲ ಬಹಳ ಶೀಘ್ರವಾಗಿಯೇ ಇಸ್ಲಾಮ್ ಮತಕ್ಕೆ ಮತಾಂತರಗೊಳಿಸುವುದು ನಿಶ್ಚಯವೆಂಬುದಾಗಿ ಇತ್ತೀಚೆಗೆ ಸಿಂದ್‌ನಿಂದ ಮುಂಬಯಿಗೆ ಬಂದ ಪ್ರೊ|| ಭೋಜರಾಜ್ ಹಟ್ಟಿಂಡ ನಾಗರಾಣಿಯವರು ತಿಳಿಸಿರುತ್ತಾರೆ.

## ಅಂಗಡಿಮನೆ

## ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಬ್ಲಾಕು ನಂ. 4ರಲ್ಲಿ ಅಂಗಡಿ ವ್ಯಾಪಾರಕ್ಕೂ, ವಾಸಕ್ಕೂ ಉಪಯುಕ್ತವಾಗಿರುವ ತಿಂಗಳಿಗೆ 35 ರೂಪಾಯಿ ಬಾಡಿಗೆ ಬರುತ್ತಿರುವ ಮಹಡಿ ಮನೆ ಮಾರಾಟಕ್ಕಿದೆ. ಬೆಲೆ 12 ಸಾವಿರ ರೂಪಾಯಿಗಳು. ಅಥವಾ ಅದರ ಸಮೀಪ. [illegible] ಕೆಳಗಿನ ಅಡ್ರೆಸಿಗೆ ಪತ್ರವ್ಯವಹಾರ ಮಾಡಬಹುದು.

"M"
2-1 C/o. Kodagu,
Mercara.

## ಕೃತಜ್ಞತಾವಂದನೆ.

ಜನವರಿ ತಾರೀಕು 5ರಲ್ಲಿ ಶಿವಧೀನರಾದ ನನ್ನ ಪತಿಯ ಅಕಾಲ ಮರಣದಿಂದ ನನಗುಂಟಾದ ಅಪಾರ ದುಃಖದ ಕಾಲದಲ್ಲಿ ಖುದ್ದಾಗಿ ಬಂದು ಮತ್ತು ತಮ್ಮ ಸಂತಾಪ ಸೂಚಕ ಪತ್ರಗಳ ಮೂಲಕ ನನ್ನ ದುಃಖದಲ್ಲಿ ಭಾಗಿಗಳಾದ ನನ್ನ ಬಂಧು ಇಷ್ಟ ಮಿತ್ರರಿಗೆ ಪ್ರತ್ಯೇಕ ವಂದನಾ ಪತ್ರ ಬರೆಯಲು ಅಶಕ್ತಳಾಗಿರುವುದರಿಂದ ಅವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ಕೃತಜ್ಞತೆಯನ್ನು ಈ ಮೂಲಕ ಅರ್ಪಿಸುತ್ತೇನೆ.

ಬಲ್ಲಚಂಡ ಎಂ. ಬೆಳ್ಯಪ್ಪ,
ಮಾಳ್ಯದ [illegible] ಗ್ರಾಮ,
ವಿರಾಜಪೇಟೆ.

## SALE NOTICE;

The following Government Cattle will be sold in public auction on dates and places mentioned against each of them

**Two Scindhi Cows on 17—2—50 at 11 a. m. at** *Damonstration Dairy Farm.-Mercara*

**One Buffalo and Hollikar bull on 7—3—50 at 2 p. m.** *Fraserpet Shandy.*

*By order,*
**T. S. Ramanujam.**
*Dairy Officer.*

## ಕೊಡಗಿನ ರಾಜಕೀಯ

# ಸಮಸ್ಯೆಯ ಪರಿಹಾರ.

ಲೇ:—ಶ್ರೀ ಸಿ. ಎಂ. ಮೇದಯ್ಯ

ಕೊಡಗಿನ ರಾಜಕೀಯ ಚಳವಳದ ಬಿಕ್ಕಟ್ಟು ಪುನಃ ಬೇರೆ ರೂಪದಲ್ಲಿ ತಲೆ ಎತ್ತಿದಂತೆ ಕಾಣುತ್ತದೆ ಕೊಡಗು ಪದ್ಯಕ್ಕೆ ವಿಲೀನೀಕರಣವಾಗುವುದಿಲ್ಲವೆಂದು ಕೇಂದ್ರ ಸರಕಾರದವರು ತೀರ್ಮಾನಿಸಿದರೂ ಕೂಡ ಅದು ಬೇರೆ ರೂಪದಲ್ಲಿ ಬಿಕ್ಕಟ್ಟನ್ನು ಹೆಚ್ಚಿಸುವ ಕ್ರಮವನ್ನು ನೋಡಿದರೆ ವ್ಯಸನಪಡಬೇಕು.

ಕೊಡಗು ಪ್ರತ್ಯೇಕವಾಗಿ ಉಳಿಯುವುದೆಂದು ತಿಳಿದು ಸಂಯೋಜನಾವಾದಿಗಳು ಬೇರೆ ಕಾರಣಗಳನ್ನು ಎತ್ತಿಟ್ಟು ಸಮಸ್ಯೆಯನ್ನು ಹೆಚ್ಚಿಸುವ ದಾರಿಯು ಬಹಳ ವಿಷಾದಕರ. ಪ್ರತ್ಯೇಕವಾದಿಗಳ ಸಲಹೆಯಂತೆ ಹೆಚ್ಚಿನ ಭೂಕಂದಾಯ, ಮತ್ತಿತರ ಕಂದಾಯ ಹಾಕ ಬರಬಹುದೆಂಬ ಚಳವಳವನ್ನೆಬ್ಬಿಸಿ ಅನ್ಯಾಭಿಪ್ರಾಯಗಳನ್ನು ಹೆಚ್ಚಿಸುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇವರ ವಿಚಾರಸರಣಿಯನ್ನು ನೋಡಿದರೆ ಪ್ರಾಂತವು ಪ್ರತ್ಯೇಕವಾಗಿ ಉಳಿದು ಜವಾಬ್ದಾರಿ ಲಭಿಸಿ ಮಂತ್ರಿಗಳಿಂದ ಆಳಲ್ಪಡುವುದಾದರೆ ಪ್ರತ್ಯೇಕವಾದಿಗಳಲ್ಲಿ ಕೆಲವರು ಮಂತ್ರಿಗಳಾದಾರು ಎಂಬ ಭಯವೇ ಎಲ್ಲ ಕಾರಣವಂಥದ್ದಾಗಿದೆ. ವಿಲೀನೀಕರಣವಾದರೆ ಇಂಥಾ ಸಂದರ್ಭಕ್ಕೆ ಎಡೆಯಿಲ್ಲ ಎಂಬುದೇ ನೂತನ ಚಳವಳದ ಮುಖ್ಯ ಧ್ಯೇಯವಾಗಿ ಕಂಡು ಬರುತ್ತಿದೆ. ಹೆಚ್ಚಿನ ತೆರಿಗೆ ಇತ್ಯಾದಿಗಳನ್ನು ಹಾಕುವುದರಿಂದ ಪ್ರಾಂತ್ಯದ ಆರ್ಥಿಕ ಸ್ಥಿತಿ ಭದ್ರವಾಗುವುದೆಂಬುದರಲ್ಲಿ ಯಾವ ಸಂಶಯವಿಲ್ಲ. ಆದರೆ ಈಗಿನ ತೆರಿಗೆಯನ್ನು ಎಷ್ಟರ ಮಟ್ಟಿಗೆ ಹಾಕಬಹುದೆಂಬುದನ್ನು ಎಲ್ಲರೂ ವಿಚಾರಿಸಬೇಕು. ತತ್ಕಾಲಕ್ಕೆ ಹೊಸ ತೆರಿಗೆಗಳನ್ನು ರೈತರಿಂದ ತೆರಲು ಶಕ್ಯವಾಗಲಿಕ್ಕಿಲ್ಲ ಎಂಬುದೇ ಕೆಲವರ ವಾದ. ಈ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಯಾವನೊಬ್ಬ ವ್ಯಕ್ತಿಯು ತನ್ನ ಜೇಬಿನಿಂದ ಒಂದು ಪೈ ಹೆಚ್ಚಿಗೆ ಕೊಡಲು ಇಷ್ಟಪಡುವದಿಲ್ಲ. ಕೊಡುವುದರಲ್ಲಿ ಒಂದು ಪೈ ಕಮ್ಮಿಯಾಗಲೆಂಬುದೇ ಪ್ರತಿಯೊಬ್ಬನ ಕಾಂಕ್ಷೆ. ಅಷ್ಟಲ್ಲದೆ ನಾವು ನಮ್ಮ ನಿತ್ಯ ಜೀವನಕ್ಕೆ ಸಾಲದೆ ದಾಕೊಂಡದನ್ನು ಕೊಡಲಿಕ್ಕೆ ಕೂಡ ಹಿಂಜರಿಯುವ ಕಾಲದಲ್ಲಿ ಹೊಸ ತೆರಿಗೆಗೆ ಎಷ್ಟು ತಯಾರಾಗಿರಬಹುದು ಎಂಬುದನ್ನು ವಾಚಕರು ಅರಿತುಕೊಳ್ಳಬೇಕು. ಮನುಷ್ಯನ ಮನೋಭಾವವು ತನಗೆ ಬರುವುದು ಹೆಚ್ಚಾಗಬೇಕು ಕೊಡುವುದು ಕಮ್ಮಿಯಾಗಬೇಕೆಂಬುದೇ ಆಗಿದೆ.

ಹೀಗಿರುವಾಗ ಪ್ರಾಂತ್ಯದ ಮುಂದಿನ ಏಳಿಗೆಯನ್ನು ಬಯಸಿ ಬೇರೆ ಹೊಸ ತೆರಿಗೆಗೆ ತಯಾರಾಗಬೇಕೆಂಬುದನ್ನು ನಾನು ನನ್ನ ಹಿಂದಿನ ಸಂಚಿಕೆಯ ಲೇಖನದಲ್ಲಿ ಬರೆದಿದ್ದೆನು. ಆದರೆ ಸಂಯೋಜನವಾದಿಗಳು ಮಾಡುವ ಪ್ರಚಾರದ ಗುಟ್ಟನ್ನು ಪ್ರತಿಯೊಬ್ಬ ರೈತನು ತಿಳಿಯಬೇಕು. ತಿರುಳನ್ನು ಅರಿಯದೆ ಹೊಸ ತೆರಿಗೆಯ ಮಾತಿಗೆ ಕ್ಷುಬ್ಧವಾಗ ಕೂಡದು [illegible]. ಕೊಡಗಿನ ವಿಲೀನೀಕರಣವಾಗಿ ಬೇರೆ ಪ್ರಾಂತ್ಯದ ಒಂದು ಅಂಗವಾಗಿ ಒಂದು ತಾಲೋಕಿನ ಸ್ಥಾನಕ್ಕೆ ಇಳಿದರೆ ಈಗಿನ ಉತ್ಪತ್ತಿಯನ್ನು ಖರ್ಚು ಮಾಡುವ ಪೂರ್ಣ ಹಕ್ಕನ್ನು ಕಳೆದುಕೊಳ್ಳುವ ವಿಷಯವನ್ನು ಮರೆಯಬಾರದು. ಎರಡನೆಯದಾಗಿ ವಿಲೀನವಾದ ಪ್ರಾಂತ್ಯದಲ್ಲಿ ಜಾರಿಯಲ್ಲಿರುವ ಕಂದಾಯಗಳನ್ನು ಕೊಡಲು ಸಾಧ್ಯವೇ ಎಂಬ ವಿಷಯವನ್ನೂ ಸಹ ಅರಿತುಕೊಳ್ಳಬೇಕು. ಯಾವ ಪ್ರಾಂತ್ಯಗಳಲ್ಲೂ ಕೊಡಗಿಗಿಂತ ಕಮ್ಮಿ ಕಂದಾಯವಿಲ್ಲ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳುವುದು ಅಗತ್ಯ. ಹೊಸ ಕಂದಾಯವನ್ನು ಹಾಕುವುದರಲ್ಲಿ ಇನ್ನೊಂದು ಗೂಢ ಭಿನ್ನಾಯ ಕೇಂದ್ರ ಸರಕಾರಕ್ಕೆ ಇರಬಹುದು. ಅದೇನೆಂದರೆ ಕೇಂದ್ರದಿಂದ ಇನ್ನು ಮುಂದೆ ಯಾವ ಸವಲತ್ತು ಕೊಡಗಿಗೆ ದೊರಕುವುದಿಲ್ಲವೆಂಬುದನ್ನು ಚೆನ್ನಾಗಿ ದೇಶಾಭಿಮಾನಿಗಳು ತಿಳಿಯಬೇಕು. ಸ್ಥಳೀಕ ಸರಕಾರವು ಹೊಸ ತೆರಿಗೆಯನ್ನು ಹಾಕುವ ಅಭಿಪ್ರಾಯವಿಟ್ಟು ದೇಶದ ಮುಂದಿನ ಅಭಿವೃದ್ಧಿಗೆ ಉಳಿತಾಯವನ್ನು ಖರ್ಚು ಮಾಡಿದರೆ ಸರಕಾರದ ದಿನನಿತ್ಯದ ಖರ್ಚಿನ ಅನಿರೋಧದಿಂದಾಗುವ ನಷ್ಟಕ್ಕೂ ಬೇರೆ ಋಣ ಬೇಕು. ಇದಕ್ಕಾಗಿಯೇ ನೇರವಾಗಿ ಹೊಸ ತೆರಿಗೆಯನ್ನು ಹಾಕಲಿಕ್ಕೆ ಕಾರಣವಿಲ್ಲದ ಬೇರೇನಿಲ್ಲ. ಈ ಹೊಸ ತೆರಿಗೆಯನ್ನು ಕೊಡಲಾಗುವುದಿಲ್ಲವೆಂದು ನಾವು ಮುಷ್ಕರ ಹಿಡಿದರೆ ದೇಶದ ಭವಿಷ್ಯಕ್ಕೆ ಮುಂದಿನ ಹಾನಿ ಬರುತ್ತದೆ ಎಂಬುದನ್ನು ಮರೆಯಬಾರದು. ಆ ಹಿಂದಿನ ಕಂದಾಯಕ್ಕೆ ಒಪ್ಪಬೇಕು ಆದರೆ ಅದು ನ್ಯಾಯವಾದ ಮಿತಿಯಲ್ಲಿರಬೇಕೆಂದು ಮಾಡಿದ ಹಠವನ್ನು ಬಿಡಬಾರದು.

ಇಷ್ಟು ವಿಷಯಗಳನ್ನು ವಾಚಕರ ಮುಂದಿಟ್ಟು ಈ ಲೇಖನವನ್ನು ಅಂತ್ಯಗೊಳಿಸುವ ಮೊದಲು ಈ ಕೆಳಗಿನ ವಿಷಯವನ್ನು ದೇಶಾಭಿಮಾನಿಗಳ ಮುಂದಿಡಲು ಸಂತೋಷಪಡುತ್ತೇನೆ. ನಮ್ಮ ರಾಜಕೀಯ ಪಟುಗಳ ನಡುವೆ ಅಲ್ಪ ಆ[illegible] ಇಷ್ಟಪಡುವುದಾದರೆ ಕೊಡಗಿನ ಜನರ ಪ್ರತಿನಿಧಿಗಳ ಅಭಿಪ್ರಾಯ [illegible] ಆಸೆಯೇ [illegible] ಆದ್ದರಿಂದ ಕೊಡಗಿನಲ್ಲಿರುವುದು ಆಶ್ಚರ್ಯವಲ್ಲವೆ [illegible] ಸಹಕರಿಸಬಹುದು. ಆದರೆ ಆ ಆಸೆಯನ್ನು ನಿರ್ನಾಮ ಮಾಡುವ ಶಕ್ತಿ ನಮ್ಮಲ್ಲಿಗೆ ಆ[illegible] ಬಿಡಬೇಕಾಗಿಲ್ಲ!

ಕೊಡಗಿನ ವ್ಯಕ್ತಿತ್ವ ಮತ್ತು ಅಸ್ತಿತ್ವ ಉಳಿಯಬೇಕಾದರೆ ಪರಸ್ಪರ [illegible] ಇರಬಾರದು. ಜವಾಬ್ದಾರಿ ಸರಕಾರದ ಫಲವನ್ನು ಇತರ ಪ್ರಾಂತ್ಯಗಳಲ್ಲಿ ನೋಡುತ್ತಿದ್ದೇವೆ. ಮೈಸೂರಿನಲ್ಲಿ ಈ ಏರಿಗ [illegible] ಮಂತ್ರಿಮಂಡಲವನ್ನು ನೋಡಲು ಸಾಧ್ಯವಾಗಿಲ್ಲ. ಮುಂಬಯಿ, ಬಂಗಾಳ, ಮದ್ರಾಸು ಇತ್ಯಾದಿ ಜವಾಬ್ದಾರಿ ಹೊಂದಿರುವ ಪ್ರಾಂತ್ಯಗಳ ಮಂತ್ರಿಮಂಡಳದ ರಚನೆ, ರಾಜ್ಯಭಾರ ಕ್ರಮವನ್ನು ನೋಡಿದರೆ ಗಾಂಧೀಜಿಯವರ ತತ್ವಕ್ಕೆ ವಿರೋಧವಲ್ಲವೆ ಎಂದೆನಿಸದಿರದು. ಕಾಣುವುದಿಲ್ಲ ಇಂಥಾ ಪರಿಸ್ಥಿತಿಯಿಂದ ಕೊಡಗು ಉಳಿಯಬೇಕಾದರೆ, [illegible] ಇರಬೇಕು. ಮೊದಲು ಕೊಡಗಿನ ರಾಜ್ಯಭಾರ ಕ್ರಮವು ಕೇಂದ್ರ ಸರಕಾರದ ಅಧೀನದಲ್ಲಿದ್ದಂತೆ ಇದ್ದರೆ ಸಾಕೆಂದು ನನಗೆನಿಸುತ್ತಿದೆ. ಇದೀಗ ಹಿಂದೂಸ್ಥಾನವು ಸ್ವತಂತ್ರವಾಗಿರುವುದರಿಂದ ದೇಶದ ಮುಖಂಡರುಗಳನ್ನೊಳಗೊಂಡ ಕೇಂದ್ರ ಸರಕಾರದ ಅಂಕೆಯಲ್ಲಿದ್ದುಕೊಂಡು ೩ ಯಾ ೫ ಸಲಹೆಗಾರರ ಮಂಡಳಿಯನ್ನೊಳಗೊಂಡು, ೩ ವರ್ಷಕ್ಕೊಮ್ಮೆ ಬದಲಾವಣೆಯಾಗುವಂತೆ ಚೀಫ್ ಕಮೀಷನರರಿಂದ ಇತರ ಗಜೆಟೆಡ್ ಉದ್ಯೋಗಸ್ಥರ ಬದಲಾವಣೆಗೆ ಏರ್ಪಾಡು ಮಾಡಿಕೊಳ್ಳುವ ಕ್ರಮವೇ ಲೇಸೆಂದು ಕಾಣುತ್ತದೆ. ಈ ಏರ್ಪಾಡಿನಿಂದ ಒಂದು ಹೆಜ್ಜೆ ಹಿಂದೆ ಬಂದೆವೆನ್ನಬಹುದು. ಆದರೆ ನಾವು ಸ್ವತಂತ್ರರಾಗಿರುವುದರಿಂದ ಈ ಪುಕಾರಕ್ಕೆ ಎಡೆಯಿಲ್ಲ ಮತ್ತು ಪಕ್ಷ ರಾಜಕೀಯ ರಂಗತರಗಳಿಗೆ ಎಡೆಯಿಲ್ಲದಾಗುವುದೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಪ್ರತಿಯೊಬ್ಬ ದೇಶಾಭಿಮಾನಿಯೂ ಈ ವಿಷಯವನ್ನು ಚೆನ್ನಾಗಿ ಆಲೋಚಿಸಿ ಈ ತೆರದ ಅಭಿಪ್ರಾಯಕ್ಕೆ ಬರುವಂತೆ ಕಾವೇರಿಮಾತೆಯು ಮನಸ್ಸು ಕೊಡಲಿ.

---

# ರೈತನ ಸಮಸ್ಯೆಗಳು.

ಲೇ:—'ದಾದ' ವೀರಾಜಪೇಟೆ.

ಕೊಡಗು ರೈತನ ಜೀವನಕ್ಕೆ ಆಗರೆ [illegible] ವ್ಯವಸಾಯ. ಇತ್ತೀಚೆಗೆ ವ್ಯವಸಾಯ ಮಾಡುವವರು [illegible] ಗಿವೆ. ಮಳೆ ನೀರನ್ನು ನಂಬಿದ ಕಾರ್ಯ. ಆಳುಗಳ ಸ್ಥಿತಿ ರೈತನ ಹಿತಕ್ಕೆ ಹೇರಿಗವು. ಅಲ್ಪಸ್ವಲ್ಪ ಬೆಳೆಯಾದರೂ ಕಡಿಮೆ ಮಾಡಲ್ಪಟ್ಟ ನಿಗದಿ ಬೆಲೆ! ಅಂತೂ ರೈತ ಬದುಕಬೇಕು. ಎಲ್ಲಿ? ಶುಭ ಬದುಕುವ ಧ್ಯಾಸದಲ್ಲಿ! ಸುಲಿಗೆದಾರರ ಮಧ್ಯದಲ್ಲಿ! ಅಂಥ ಆಡಳಿತಗಾರರ ಹಿಡಿತದಲ್ಲಿ! ಅಂಗಡಿಗೆ ಹೋದರೆ ಅಷ್ಟು [illegible] ಬೆಲೆಗೆ ಅಧಿಕಾರಿಗಳು ಹತ್ತಿರ ಹೋದರೆ ಅಲ್ಲಿ [illegible] ರೈತನ ಈ ಹೀನ ಜೀವನ ಎಷ್ಟು ದಿನ? [illegible] ಕಂಟ್ರೋಲ್ ಇಲ್ಲವೇ? [illegible] ಬೆಲೆ [illegible] ರೈತನ [illegible] ಈ ರೀತಿ ಏಕೆ ಆಗುತ್ತದೆ?

ರೈತನು ಈ ಸ್ಥಿತಿಯಲ್ಲಿ ಹೊಟ್ಟೆಗೆ ಏನು ತಿಂದಾನು? ಆತನು ಬೆಳೆಯುವುದು ರಸ [illegible] ಕಾಯವನ್ನು [illegible] ಬೇಕಾಗಿದೆ [illegible] ದರ್ಜೆಯ ಜನರ ಜೀವನ ಸವಿಯೇ! ಮನೆಯಲ್ಲಿ ಅನ್ನ ಮಾಡಿಕೊಳ್ಳುವ ದಾರಿ? ಅನ್ನವನ್ನು ಊಟಮಾಡಲು ಎಲ್ಲಿದೆ? ಕೂಲಿಗಾರ [illegible] ಹೊಗಿ [illegible] ಹೇಗೆ? ಕೊಡಗಿನ ಆಹಾರ ಪದಾರ್ಥಗಳ ಉತ್ಪಾದನೆ ಸಾಲದಂತೆ! ಆದರೆ ಕೆಲವು ಅಂಗಡಿಗಳಲ್ಲಿ ಸಿಕ್ಕುವ ಅಕ್ಕಿ [illegible] ಊಟ [illegible] ಏಕೆ? [illegible] ಅಂಗಡಿಗಳಲ್ಲಿ ಒಳ್ಳೆ ಅಕ್ಕಿ [illegible] ಬೆಳೆಸಿದ [illegible] ಎಲ್ಲಿ [illegible] ತಿಳಿಯದು. ಸರಕಾರ ಕಣ್ಣು ಹೊಟ್ಟೆ ತುಂಬಿಸಬೇಕು ಇಲ್ಲದಿದ್ದರೆ ಈ ವಿಷಯವನ್ನು ನೋಡಿ [illegible] ಮಾಡಲಿಲ್ಲವೇ?

ರೈತನ ಹಿತಕ್ಕೆಂದು ಮಾನ ನಿರ್ಬಂಧಗಳ ಪ್ರಥಮ ಹೆಜ್ಜೆಯಾಗಿ ನಿಯಂತ್ರಣವನ್ನು ತರಲಾಯಿತು. [illegible] ಒಳ್ಳೆದೆ! ಆದರೆ ಇಂದು [illegible] ಕಪ್ಪು ಸಂತೆಗೆ ಆಸ್ಪದ [illegible] ಕಪ್ಪು [illegible] ಕೊಟ್ಟರು? [illegible] ರೈತರ, ಸಂಬಂಧಿಸಿದವರೆಲ್ಲರ [illegible] ಕೊಡಗಿನ ಅಳಿವು ಪ್ರಯತ್ನಗಳಲ್ಲವೂ ಹೀಗೆಯೇ!

ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹೊಸ ತೆರಿಗೆಯು ಅವಶ್ಯವೆಂಬುದನ್ನು ಯಾರೂ ವಿರೋಧಿಸುವದಿಲ್ಲ. ಆದರೆ [illegible] ತೆರಿಗೆಯು ಮುಸುಕಿ ಬಂದಾಗ ರೈತನ ಪೂರ್ಣ ಬೆಂಬಲವು ಅವಶ್ಯಕ. ಆದರೆ [illegible] ಸಭೆಯ ಸದಸ್ಯರು ಅಂದು ಅದನ್ನು ತಳ್ಳಿಹಾಕಿದರು. ಇತ್ತಲಾಗಿ ಕಾರಣವಿಲ್ಲದೆ ಬಹಳ, ಬಹುದರ ಮೇಲೆಲ್ಲಾ ಬರಲಿರುವ ಸಮರಿ ಕಂದಾಯ ಮಸೂದೆಯನ್ನು ಪಾಸುಮಾಡಿರುವರು. ಬಡಸ್ತರಿಗೆ ಇದು ಅರ್ಥವಾಗದ ಮಾತು. [illegible] ಕೊಡಗಿನ ಅನಿಷ್ಟ ಪಕ್ಷ ರಾಜಕೀಯವೇ ಇದಕ್ಕೆ ಕಾರಣವಿರಬಹುದು. [illegible] ಆದಾಯ ತೆರಿಗೆ [illegible] ಮಾಡಿ ಈ ಸಮರಿ ಕಂದಾಯ [illegible] ಬಾರದಂತೆ ಮಾಡಲು ಆಗುವದೇ?

ಸರಕಾರಿ ಉದ್ಯೋಗಿಗಳನ್ನು ರೈತನು ನಿರೀಕ್ಷಿಸುತ್ತಿರುವನಲ್ಲವೆ, ಸರಕಾರದ ಕಾನೂನು ಯಾವ ರೀತಿ ನಡೆಯುತ್ತಿದೆಯೆಂಬುವನ್ನು ರೈತನ ನಿರೀಕ್ಷಿಸುತ್ತಿರುವನು. [illegible] ನೋಡಿ [illegible] ನೀತಿ ನಡೆದು ಬಂದ [illegible] ಆತನು ವಿಷಾದದಿಂದ ನೋಡುತ್ತಿದ್ದಾನೆ. ಇದೇ ಪ್ರಜಾಪ್ರಭುತ್ವವೇ ಎಂದು ಪ್ರಶ್ನಿಸಿಕೊಳ್ಳುತ್ತಿದ್ದಾನೆ. [illegible] ಮೊದಲೇ ಬರಗಾಲದವರೂ [illegible] ಸ್ವಾರ್ಥ ಸಬಲರ [illegible]! ರೈತನು [illegible] ಅಧಿಕಾರಿಯಲ್ಲಿಗೆ ಸುತ್ತ [illegible] ತಿರುಗಾಡಿದರೂ [illegible] ಬೆಲೆ ಇಲ್ಲ! ಟಿಂಬರ್ [illegible] ಕಾಂಟ್ರಾಕ್ಟು ವಿಷಯವಿಲ್ಲದೆ ನಡೆಯುತ್ತಿದೆ! ಇದೇನು ಸರಕಾರ [illegible] ದಾರಿಯಲ್ಲಿ ನೀರವಾಗಿ [illegible] ಕಡೆ [illegible], ನಡೆಯುವದು? ಬಹಳ ಹಿಂದೆ ಸಿಂಧಲೂ ಉಪಯೋಗವಿಲ್ಲದಿರುವ ಈ ರೀತಿಯಿಂದಾಗಿ ಕಾನೂನಿನ ಆ ಕಡೆಯ ಮೊಕ್ಕಿಯು ಚಿಂತಿಸಬೇಕು!

ಕೊಡಗು ಮುಂದಿನ ಹತ್ತು ವರ್ಷಗಳ [illegible] ತರಗತಿಯಂತೆ ಇರಬಹುದೆಂದು ಎಲ್ಲರೂ [illegible] ದೇಶದ ಜನರ ಹಿತಕ್ಕಾಗಿ [illegible] ಎರಡು ರಾಜಕೀಯ ಪಕ್ಷದವರೂ ಆ ಅವಧಿಯಲ್ಲಿ ಒಂದಾಗಿ ಜನಹಿತ ಕಾರ್ಯ ಮಾಡಲೊಲ್ಲರೇಕೆ? ಒಂದು ಕಡೆ ಕಾಗೆ ಕ[illegible] ಮತ್ತೊಂದು ಕಡೆ ಬೆಳವು [illegible] ವಿರೋಧವನ್ನು ಬಿಟ್ಟು ಜನತೆಯ ಹಿತದ ಕಡೆಗೆ ಲಕ್ಷ್ಯವಿಡಲಾರರೇಕೆ? ಕೊಡಗಿನ ರೈತನ ಬಗೆಹರಿಯದ ಈ ಸಮಸ್ಯೆಗಳ ಮಧ್ಯೆ ಆತನು ಕಂಗಾಲಾಗಿದ್ದಾನೆ. ಹೊಟ್ಟೆಗೆ [illegible] ಇಲ್ಲ [illegible] ಇಲ್ಲ. ಮತ್ತೆ ಕಂಗಾಲಾಗದೆ ಮಾರ್ಗವೆಲ್ಲಿ?

# ಸ್ವತಂತ್ರ ಸಾರ್ವಭೌಮ ಭಾರತದ ರೂಪರೇಷೆ.

ಈ ೨೬ರಿಂದ ನಮ್ಮ ಭಾರತ ಪ್ರಜಾರಾಜ್ಯವೆಂದು ಕರೆಯಲ್ಪಡುವುದು. ಅಂದಿನಿಂದ ನಾವೇ ನಮ್ಮ ಹಾಗೂ ದೇಶದ ಭವಿಷ್ಯವನ್ನು ರೂಪಿಸುವವರಾಗಿರುತ್ತೇವೆ. ವಿಭಜನೆಯ ನಂತರದ ನಮ್ಮ ದೇಶದ ವ್ಯವಸ್ಥಿತ ರಾಜಕೀಯ ಸ್ವರೂಪದ ರೂಪರೇಷೆಯನ್ನು ಸಂಕ್ಷಿಪ್ತವಾಗಿ ನೋಡುವುದು ಉಚಿತವಾಗಿದೆ.

ಹಿಂದೂದೇಶ ಭಾರತ ಮತ್ತು ಪಾಕಿಸ್ಥಾನಗಳಾಗಿ ವಿಭಜಿಸಲ್ಪಟ್ಟಿದೆ, ಇಂದು ಭಾರತದ ವಿಸ್ತೀರ್ಣ ೧೨,೬೭,೬೪೧ ಚದರ ಮೈಲು ಮತ್ತು ಜನಸಂಖ್ಯೆ ೩೧,೯೧,೨೪,೯೦೭. ಇಷ್ಟು ವಿಶಾಲ ಜನನಿಬಿಡ ದೇಶವು ಆಡಳಿತೆಯ ಸೌಕರ್ಯ, ಚರಿತ್ರೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಅನುಲಕ್ಷಿಸಿ ಈ ಕೆಳಗಿನಂತೆ ಸಂಸ್ಥಾನಗಳಾಗಿ ವಿಂಗಡಿಸಲ್ಪಟ್ಟಿದೆ.

೧. ಮುಂಬಯಿ, ೨ ಮದ್ರಾಸ್, ೩ ಪಶ್ಚಿಮ ಬಂಗಾಲ, ೪ ಯುನೈಟೆಡ್ ಪ್ರಾಂತ, ೫, ಪಂಜಾಬ, ೬ ಬಿಹಾರ, ೭ ಮಧ್ಯ ಪ್ರದೇಶ, ೮ ಅಸ್ಸಾಮ್, ಮತ್ತು ೯ ಒರಿಸ್ಸಾ. ಈ ಸಂಸ್ಥಾನಗಳು ಅಥವಾ ಪ್ರಾಂತಗಳು ಗವರ್ನರರ ಪ್ರಾಂತಗಳೆಂದು ಕರೆಯಲ್ಪಡುವುವು.

೧ ಹೈದರಾಬಾದ, ೨ ಕಾಶ್ಮೀರ ಮತ್ತು ಜಮ್ಮು, ೩ ಮೈಸೂರು, ೪ ಮಧ್ಯಭಾರತ, ೫ ಪಟಿಯಾಲ ಮತ್ತು ಪೂರ್ವ ಪಂಜಾಬ ಸಂಸ್ಥಾನೀ ಒಕ್ಕೂಟ, ೬ ರಾಜಸ್ಥಾನ, ೭ ಸೌರಾಷ್ಟ್ರ, ೮ ತಿರುವಾಂಕೂರು ಮತ್ತು ಕೊಚ್ಚಿ, ೯ ವಿಂಧ್ಯ ಪ್ರದೇಶ, ಈ ಸಂಸ್ಥಾನಗಳು ರಾಜಪ್ರಮುಖರ ಸಂಸ್ಥಾನಗಳೆಂದು ಕರೆಯಲ್ಪಡುವುವು. ೧ ಅಜ್ಮೀರ, ೨ ಭೋಪಾಲ, ೩ ಬಿಲಾಸಪುರ, ೪ ಕೂಚ್-ಬಿಹಾರ, ೫ ಕೊಡಗು, ೬ ಡಿಲ್ಲಿ, ೭ ಹಿಮಾಚಲ ಪ್ರದೇಶ, ೮ ಕಚ್ಛ, ೯ ಮಣಿಪುರ, ೧೦ ತ್ರಿಪುರ ಮತ್ತು ಅಂದಮಾನ ಹಾಗೂ ನಿಕೋಬಾರ ದ್ವೀಪಗಳು, ಇವು ಚೀಫ ಕಮೀಶನರ ಸಂಸ್ಥಾನಗಳೆಂದು ಕರೆಯಲ್ಪಡುವುವು. ಭಾರತ ಹೀಗೆ ಒಟ್ಟಿಗೆ ಇಪ್ಪತ್ತೆಂಟು ಘಟಕಗಳಾಗಿ ವಿಭಾಗಿಸಲ್ಪಟ್ಟಿದೆ ಎಂದು ನಮಗೆ ತಿಳಿಯುವುದು. ಈಗ ಈ ಘಟಕಗಳ ವೈಶಿಷ್ಟ್ಯವನ್ನು ಒಂದೊಂದಾಗಿ ಸ್ಥೂಲ ನೋಟದಿಂದ ನೋಡೋಣ.

ಮುಂಬಯಿ:– ಇದರ ವಿಸ್ತೀರ್ಣ ೧,೧೫,೮೯೧ ಚದರ ಮೈಲು, ಜನಸಂಖ್ಯೆ ೨,೦೮,೪೯,೮೪೦. ಇದರ ಭೂವಿಭಾಗ [illegible] ಬಿಟ್ಟರೆ ಉಳಿದ ಕೆಲವು ಭಾಗ [illegible] ಇಲ್ಲ. ಹತ್ತಿ, ಭತ್ತ, ಗೋಧಿ ಮುಖ್ಯ ಉತ್ಪತ್ತಿ. ಜವಳಿಯ ಗಿರಣಿಗಳು ಮುಂಬಯಿ, ಅಹಮ್ಮದಾಬಾದು ಮತ್ತು ಬಹಳ ಊರುಗಳಲ್ಲಿ ಇವೆ. ಮುಂಬಯಿ ಪ್ರಕೃತಿದತ್ತ ಹಾಗೂ ಸುಂದರ ಬಂದರ ಸ್ಥಳವಾಗಿದೆ. ಇದು ರಾಷ್ಟ್ರದ ಪ್ರಾಮುಖ್ಯ ಸಂಸ್ಥಾನವಾಗಿರುತ್ತದೆ.

ಮದ್ರಾಸು:– ಇದರ ವಿಸ್ತೀರ್ಣ ೧,೨೬,೧೬೬ ಚದರ ಮೈಲು. ಜನಸಂಖ್ಯೆ ೪,೯೩,೪೧,೮೧೦. ಇದರ ಭೂಮಿಯು ವಿಷಮ ತಗ್ಗು, ಮಲೆನಾಡುಗಳಿಂದ ಕೂಡಿರುತ್ತದೆ. ಭತ್ತ, ಕಾಫಿ, ಹತ್ತಿ, ಕಬ್ಬು ಮತ್ತು ನೆಲಗಡಲೆ ಈ ಪ್ರದೇಶದಲ್ಲಿ ಬೆಳೆಯುತ್ತವೆ. ನೀರಾವರಿ ಯೋಜನೆಗಳಿಂದ ಇಲ್ಲಿ ಹೆಚ್ಚು ಸ್ಥಳ ಸಾಗುವಳಿಗೆ ಒಳಪಟ್ಟಿದೆ. ಮದ್ರಾಸು ಪ್ರಾಮುಖ್ಯ ಬಂದರಗಳಲ್ಲಿ ಒಂದಾದರೂ ಕೃತ್ರಿಮವಾಗಿದೆ. ಇದರ ಅಂತರ್ಗತದಲ್ಲಿ ಅನೇಕ ನದಿಗಳು ಹರಿಯುತ್ತವೆ. ಇವನ್ನಲ್ಲದೆ [illegible] ಗಮನಾರ್ಹ ಬಂದರಗಳಿವೆ. ಈ ರಾಷ್ಟ್ರದಲ್ಲಿ ಕೋಲಾರಿನ, ಆನೆಯ(?) ಗಣಿಗಳೂ ಇವೆ. ಬಂಗಾಲ ಕೊಲ್ಲಿಯ ಪಶ್ಚಿಮ ಭಾಗದ ದಂಡೆಯನ್ನು ಹೆಚ್ಚು ಕಡಿಮೆ ಪೂರ್ಣವಾಗಿ ಇದೇ ಆಕ್ರಮಿಸುತ್ತದೆ.

ಪಶ್ಚಿಮ ಬಂಗಾಲ:– ಇದರ ವಿಸ್ತೀರ್ಣ ೩೦,೭೭೫ ಚದರ ಮೈಲು. ಜನಸಂಖ್ಯೆ ೨,೧೪,೯೫,೨೧೭. ಇದರ ಮುಖ್ಯ ಉತ್ಪನ್ನ ಭತ್ತ ಮತ್ತು ಸೆಣಬು. ಕಲ್ಲಿದ್ದಲ್ಲಿನ ಗಣಿಗಳೂ ಇಲ್ಲಿವೆ. ಇದರ ಎಲ್ಲಾ ಭೂಮಿ ಫಲವತ್ತಾಗಿರುತ್ತದೆ. ಎತ್ತರ ಗುಡ್ಡಗಳು ಇಲ್ಲ. ಗಂಗಾ [illegible] ಬ್ರಹ್ಮಪುತ್ರ ನದಿಗಳ ಸಂಗಮವಾಗಿ ಬಂಗಾಲ ಕೊಲ್ಲಿಯನ್ನು ಕೂಡುವುದು [illegible] ಪ್ರದೇಶದಲ್ಲಿ [illegible] ನದಿಯ [illegible] ಇದರ [illegible] ಬಂದರು [illegible] ಜಗತ್ತಿನಲ್ಲೇ [illegible] ಬಂಗಾಲ [illegible], ಅಸ್ಸಾಮ, ಬಿಹಾರ, [illegible] ಪ್ರದೇಶ. [illegible] ಹಾಗೂ [illegible] ನಡೆಯುತ್ತವೆ, ಜವಳಿ ಮತ್ತು ಸೆಣಬಿನ ಗಿರಣಿಗಳು ಇವೆ. [illegible] ಉದ್ಯೋಗ [illegible] ಇವು. ಈ ಸಂಸ್ಥಾನವು ಭಾರತದ [illegible] ಪ್ರಧಾನ ಪಾತ್ರ ವಹಿಸುತ್ತದೆ.

ಅಸ್ಸಾಮು:– ಇದರ ವಿಸ್ತೀರ್ಣ ೬೩,೬೪೯ ಚದರ ಮೈಲು. ಜನಸಂಖ್ಯೆ ೮೧,೧೮,೩೪೭. ಭತ್ತ, ಚಹ ಇವೇ [illegible] ಮುಖ್ಯ ಉತ್ಪನ್ನ. [illegible] ಇಲ್ಲಿಯ ಪ್ರದೇಶ [illegible] ಕಾಡುಗಳು [illegible] ಹಿಡಿಯುತ್ತಲು(?) [illegible] ಕೂರ ಪ್ರಾಂತಗಳವರು ಇಲ್ಲಿಯ [illegible] ಹೊಂದಿರುವ [illegible] ಇದ ಭಾರತದ ಪೂರ್ವ ಗಡಿಯಾಗಿ ಇದೆ.

ಒರಿಸ್ಸಾ:– ಇದರ ವಿಸ್ತೀರ್ಣ ೫೦,೩೪೯ ಚದರ ಮೈಲು. ಜನಸಂಖ್ಯೆ ೧,೧೭,೪೩,೬೬೫. ಇಲ್ಲಿಯ ಮುಖ್ಯ ಉತ್ಪತ್ತಿ ಭತ್ತ. ಮೆಣಸು, [illegible] ಉತ್ಪತ್ತಿಯೂ ಧಾರಾಳ ಇದೆ. ಪ್ರದೇಶ ಬಹಳ ಪರ್ವತಗಳಿಂದ ಕೂಡಿದೆ. ಕಟಕ ಇಲ್ಲಿಯ ರಾಜಧಾನಿ.

ಬಿಹಾರ:–ಇದರ ವಿಸ್ತೀರ್ಣ ೬೯,೭೪೫ ಚದರ ಮೈಲು. ಜನ ಸಂಖ್ಯೆ ೩,೬೩,೪೦,೧೫೧. ಇಲ್ಲಿ ಕಲ್ಲಿದ್ದಲಿನ ಗಣಿಗಳಿವೆ; ಸಕ್ಕರೆಯ ಕಾರಖಾನೆಗಳಿವೆ. ಇಲ್ಲಿಯ ಮುಖ್ಯ ಬೆಳೆಗಳು; ಭತ್ತ, ಗೋಧಿ, ಸಕ್ಕರೆ ಮತ್ತು ಬಾರ್ಲಿ. ಇದೂ ಒಂದು ಮಹತ್ವದ ಸಂಸ್ಥಾನ.

ಮಧ್ಯ ಪ್ರದೇಶ: ಇದರ ವಿಸ್ತೀರ್ಣ: ೯೦,೫೭೫ ಚದರ ಮೈಲು. ಜನಸಂಖ್ಯೆ: ೧,೬೮,೧೩,೫೮೪ ಇದು ಕೆಲವು ಸಂಸ್ಥಾನಗಳನ್ನು [illegible] ಕೂಡಿಸಿಕೊಂಡಿರುವುದರಿಂದ ಪ್ರದೇಶವು ವಿಸ್ತೀರ್ಣಗಳಿಂದ ಕೂಡಿದೆ. ಹೆಸರೇ ಸಾರುತ್ತಿರುವಂತೆ ಇದು ಭಾರತದ ಮಧ್ಯ ಪ್ರದೇಶದಲ್ಲಿದೆ. ಇಲ್ಲಿಯ ಮುಖ್ಯ ಉತ್ಪತ್ತಿ: ಜೋಳ, ಹತ್ತಿ, ಭತ್ತ ಮತ್ತು ಗೋಧಿ, ಮ್ಯಾಂಗನೀಜ್(?) ಗಣಿಗಳೂ ಇಲ್ಲಿವೆ. ಹಲವು ಕಡೆಗಳಲ್ಲಿ ನೀರಾವರಿ ಯೋಜನೆಗಳಿವೆ.

ಯುನೈಟೆಡ್ ಪ್ರಾಂತ (ಯು ಪಿ.) ಇದರ ವಿಸ್ತೀರ್ಣ. ೧,೦೬,೨೪೭ ಚದರ ಮೈಲು. ಜನಸಂಖ್ಯೆ: ೫,೬೧,೬೫,೬೧೭, ಇದು ಕೃಷಿಪ್ರಧಾನ ಪ್ರದೇಶ. ಗೋಧಿ, ಭತ್ತ, ಜೋಳ ಮತ್ತು ಕಬ್ಬು ಇವೇ ಇಲ್ಲಿಯ ಮುಖ್ಯ ಉತ್ಪತ್ತಿ. ಇಲ್ಲಿ [illegible] ಮುಖ್ಯ ನೀರಾವರಿ ಯೋಜನೆಗಳಿವೆ ಹಿಮಾಲಯ ಪರ್ವತಗಳ ಪ್ರದೇಶವೂ ಇದರಲ್ಲಿ ಸಮಾವೇಶಗೊಂಡಿರುವುದರಿಂದ ಮರಮುಟ್ಟುಗಳೂ ಧಾರಾಳವಾಗಿವೆ. ಈ ಪ್ರಾಂತ [illegible] ಇನ್ನುಳಿದ ಪ್ರದೇಶ [illegible] ಇಲ್ಲಿ ಸಕ್ಕರೆಯ ಕಾರಖಾನೆ, ಉಣ್ಣೆ ಬಟ್ಟೆಗಳನ್ನು ತಯಾರಿಸುವ ಗಿರಣಿಗಳೂ ಇವೆ. ಇದು ಪ್ರಾಮುಖ್ಯ ಸಂಸ್ಥಾನಗಳಲ್ಲಿ ಒಂದಾಗಿದೆ.

ಪಂಜಾಬು: ಇದರ ವಿಸ್ತೀರ್ಣ ೩೭,೦೫೮ ಚದರ ಮೈಲು ಜನಸಂಖ್ಯೆ: ೧,೨೬,೯೭,೯೯೩ ಇಲ್ಲಿಯ ಮುಖ್ಯ ಬೆಳೆ [illegible] ಗೋಧಿ [illegible] ಭತ್ತ ಕೂಡಾ [illegible] ಕಡೆಗಳಲ್ಲಿ ಬೆಳೆಯುತ್ತದೆ. ಇಲ್ಲಿ ಪಂಚನದಿಗಳು [illegible] ನದಿಗಳಿಗೆ ಅನೇಕ ಕಟ್ಟೆ [illegible] ಅನೇಕವಿವೆ. ನದಿಗಳ ಹಲವು ಜಾಗಗಳ ಆಣೆಕಟ್ಟುಗಳುಳ್ಳ [illegible] ನಾಗರಿಕತೆಯು [illegible] ಈ ಭಾರತದ [illegible] ಸಂಬಂಧಿಸಲ್ಪಟ್ಟುದರಿಂದ ಇದಕ್ಕೆ ವಿಶೇಷ ಮಹತ್ವವಿದೆ.

ಕಾಶ್ಮೀರ ಮತ್ತು ಜಮ್ಮು: ಇದರ ವಿಸ್ತೀರ್ಣ: ೮೫,೨೮೫ ಚದರ ಮೈಲು. ಜನಸಂಖ್ಯೆ: ೪೦,೨೧,೬೧೬ ಭಾರತದ [illegible] ರಾಜಸ್ಥಾ [illegible] ಸ್ಥಳ [illegible] ಪ್ರದೇಶ. [illegible] ಮುಖ್ಯ ಬೆಳೆಯಾಗಿದೆ [illegible] ರತ್ನಗಂಬಳಿ ಮತ್ತು ಉಣ್ಣೆ ಬಟ್ಟೆಗಳನ್ನು ತಯಾರಿಸುವ ಜಗತ್ತಿನಲ್ಲೇ ಹೆಸರುವಾಸಿ [illegible] ಕೈಗಾರಿಕೆ ಕೇಂದ್ರಗಳಿವೆ, ಹಣ್ಣು ಹಂಪಲುಗಳೂ ಇಲ್ಲಿ ಧಾರಾಳವಾಗಿ [illegible] ದೇಶ ಪರದೇಶಗಳಿಗೆ ರಫ್ತು ಮಾಡಲ್ಪಡುತ್ತವೆ. ಇಲ್ಲಿಯ ಪ್ರಕೃತಿಸೌಂದರ್ಯವನ್ನು ನೋಡಲು ಜಗತ್ತಿನ ನಾನಾ ಮೂಲೆಗಳಿಂದ ಜನರು ಬರುತ್ತಾರೆ. ಇದರಿಂದ ಈ ಸಂಸ್ಥಾನಕ್ಕೆ ಹಿರಿಮಾನ(?) ಬರುತ್ತದೆ. ಇದೇ ವೃತ್ತಿಯಲ್ಲಿ ಇಲ್ಲಿಯ ಹಲವು ಜನರ ಜೀವನ ನಡೆಯುತ್ತದೆ.

ಹೈದರಾಬಾದು: ಇದರ ವಿಸ್ತೀರ್ಣ ೮೨,೩೧೩ ಚದರ ಮೈಲು. ಜನಸಂಖ್ಯೆ: ೧,೬೩,೩೮,೫೩೪. ಜೋಳ, ಹತ್ತಿ ಮತ್ತು ಭತ್ತ ಇಲ್ಲಿಯ ಮುಖ್ಯ ಉತ್ಪತ್ತಿ.

ಮೈಸೂರು: ಇದರ ವಿಸ್ತೀರ್ಣ ೨೯,೪೫೮ ಚದರ ಮೈಲು. ಜನಸಂಖ್ಯೆ ೭೩,೨೯,೧೪೦. ಜೋಳ, ಕಾಫಿ, ಸಜ್ಜೆ ಇಲ್ಲಿಯ ಮುಖ್ಯ ಉತ್ಪತ್ತಿ. ಇಲ್ಲಿ ಬಂಗಾರದ ಗಣಿಗಳು, ಜಲಪಾತಗಳೂ ಇವೆ. ಇದನ್ನು ಪಶ್ಚಿಮ ಭಾರತದ ಉದ್ಯಾನವೆಂದೂ ಕರೆಯುತ್ತಾರೆ.

ಡಿಲ್ಲಿ: [illegible] ವಿಸ್ತೀರ್ಣ ೫೭೪ ಚದರ ಮೈಲು. ಜನಸಂಖ್ಯೆ: ೯,೧೭,೯೩೯ ಇದು ಭಾರತದ ರಾಜಧಾನಿ.

ರಾಜಸ್ಥಾನ: ಇದರ ವಿಸ್ತೀರ್ಣ ೧,೨೮,೫೪೪ ಚದರ ಮೈಲು. ಜನಸಂಖ್ಯೆ ೧,೩೭,೬೫,೪೭೫

ಮಧ್ಯ ಭಾರತ: ಇದರ ವಿಸ್ತೀರ್ಣ ೪೬,೭೧೦ ಚದರ ಮೈಲು. ಜನಸಂಖ್ಯೆ ೭೧,೪೦,೦೬೯.

ವಿಂಧ್ಯಪ್ರದೇಶ: ವಿಸ್ತೀರ್ಣ ೨೪,೬೦೪ ಚದರ ಮೈಲು. ಜನಸಂಖ್ಯೆ ೪೦,೦೬,೧೫೯.

ತಿರುವಾಂಕೂರು–ಕೊಚ್ಚಿ: ವಿಸ್ತೀರ್ಣ ೯,೦೬೫೭ ಚದರ ಮೈಲು. ಜನಸಂಖ್ಯೆ ೭೯,೯೦,೬೪೭.

ಸೌರಾಷ್ಟ್ರ: ವಿಸ್ತೀರ್ಣ ೩೧,೭೯೪ ಚದರ ಮೈಲು. ಜನಸಂಖ್ಯೆ ೩೯,೦೪, ೧೫೬.

ಪಾಟಿಯಾಲಾ ಮತ್ತು ಪೂರ್ವ ಪಂಜಾಬಸಂಸ್ಥಾನೀ ಒಕ್ಕೂಟ: ವಿಸ್ತೀರ್ಣ ೩೩,೦೬೭ ಜನಸಂಖ್ಯೆ ೩೫,೩೫, ೯೮೯.

ಅಸ್ಸಾಮಿನ ೭,೧೬೭ ಚದರ ಮೈಲು ಮತ್ತು ೭,೯೦,೪೫೪ ಜನಸಂಖ್ಯೆ [illegible] ನಿರ್ದಿಷ್ಟ ಆಡಳಿತೆಯ ಕೆಳಗಿವೆ.

ಈಗ ಭಾರತದ ಚರಿತ್ರೆಯಲ್ಲಿ ಮೊತ್ತಮೊದಲಿಗೆ ಒಂದು ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರ [illegible] ಭಾರತ [illegible] ಉದಯಿಸಿದೆ.

ಇಂಥ ಭಾರತವನ್ನು ಉಳಿಸಿ, ಬೆಳಸಿ, ಬೆಳಗಿಸಿ [illegible] ಜಗತ್ತಿನ [illegible] ಒಂದಾಗಿ [illegible] ಸೇವೆ ಸಲ್ಲಿಸಬೇಕಾಗಿದೆ. (ಪ್ರ ಸಂ)

---

ನ ಪ ರಾ ಬ.

[illegible] ಜಂಬದ ರೋಗಗಳು
ರೂ 150 ರಿಂದ ರೂ. 200ರ ಒಳಗೆ.

**ಬಿ. ಕೆ. ಗಣಪತಿ.**

[illegible] ನಿಡಂಗಡೆ, ಮಾದಾಪುರ,
ತಾ [illegible]

---

# ಕೊಡಗು

ತಾ. ೧೦-೨-೧೯೫೦ನೇ ಶುಕ್ರವಾರ

## ಉಳುವರಿ ಬತ್ತ.

ಕಳೆದ ವರ್ಷ ಕೊಡಗಿನಲ್ಲಿ ಬೆಳೆಯು ತಕ್ಕಮಟ್ಟಿಗೆ ಚೆನ್ನಾಗಿದ್ದ ಕಾರಣ ಇಲ್ಲಿಯ ಉಳಿತಾಯು ೧೧,೮೦೦ ಟನ್ ಅಕ್ಕಿಯು ರೂಪದಲ್ಲಿ ಕೊರತೆ ಪ್ರಾಂತಗಳಿಗೆ ಕೊಡಲ್ಪಟ್ಟಿತು. ಆದರೆ ಈ ವರ್ಷದ ಬೆಳೆಯು ಕಡಿಮೆಯಾಗಿರುವುದನ್ನು ಸರಕಾರದವರು ಅಂದಾಜು ಮಾಡಿ ಬರಿ ೧೦,೦೦೦ ಟನ್ ಅಕ್ಕಿಯನ್ನು ಮಾತ್ರ ಈ ವರ್ಷದ ಉಳುವರಿಯೆಂದು ಇಂಡಿಯಾ ಸರಕಾರಕ್ಕೆ ತಿಳಿಸಿದ್ದರೆಂತಲೂ ಕೊಡಗಿನ ಅಸಿಸ್ಟೆಂಟ್ ಕಮಿಷನರು ಕೆಲ ದಿನಗಳ ಹಿಂದೆ ಪ್ರೆಸ್ ನಡೆಸಿದ ಆಹಾರ ಸಮ್ಮೇಳನದಲ್ಲಿ ತಿಳಿಸಿದ್ದು ೯,೦೦೦ ಟನ್ ಅಕ್ಕಿ ಮಾತ್ರ ಕೊಡಲು ಸಾಧ್ಯವೆಂತಲೂ, ಮಳೆಗಾಲ ಕಳೆದ ನಂತರ ಉಳಿದುದು ದೊರೆತರೆ ಅದನ್ನು ಕೊಡಬಹುದೆಂತಲೂ ಹೇಳಿದ್ದರೆಂದೂ ತಿಳಿದು ಬರುತ್ತದೆ. ಆದರೆ ಇಂಡಿಯಾ ಸರಕಾರದವರ ಹಿಂದೂದೇಶದ ಇತರ ಕೊರತೆ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಕಡಿಮೆ ಮಾಡಬೇಕೆಂದೂ ಹೊರದೇಶದಿಂದ ಆಮದಾಗುತ್ತಿರುವ ಆಹಾರ ಸಾಮಾನುಗಳ ಪರಿಮಾಣವನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದಲೂ ಹಿಂದೂದೇಶದೊಳಗೆಯೇ ಉಳುವರಿ ಪ್ರಾಂತಗಳಿಂದ ಆಗುವಷ್ಟು ಆಹಾರ ಪದಾರ್ಥ ಜಮಾಯಿಸಬೇಕೆಂದು ನಿಶ್ಚಯಿಸಿ ಕೊಡಗಿನಿಂದ ೧೧,೦೦೦ ಟನ್ ಅಕ್ಕಿಯನ್ನು ವಸೂಲಿಸಿ ಕಳುಹಿಸಬೇಕೆಂದು ಸೂಚಿಸಿರುವರು. ಈ ಸೂಚನೆಯಂತೆ ಹನ್ನೊಂದು ಸಾವಿರ ಟನ್ ಅಕ್ಕಿಯನ್ನು ಜಮಾಯಿಸುವುದು ಅಸಾಧ್ಯದ ಮಾತೆಂದು ತೋರುತ್ತದೆ. ಈ ಸಂಬಂಧ ಕ್ರಮವಾಗಿ ಕಳೆದ ನಾಲ್ಕು ವರ್ಷ ಎರಡು ವರೆ ತಿಂಗಳ ವರೆಗೆ ಮಳೆಯೇ ಬೀಳದ ಕಾರಣ ಕೊಡಗಿನ ಬತ್ತದ ಬೆಳೆಯು ಬಹುಮಟ್ಟಿಗೆ ಹಾಳಾಯಿತು. ಬೆಳೆ ಚೆನ್ನಾಗಿ ಆಗಿದ್ದ ಕೆಲವು ಹಳ್ಳಿ, ಜಿಲ್ಲೆ ಹೆಚ್ಚಾಗಿ ಒಕ್ಕಿ ಬತ್ತ ಕಡಿಮೆಯಾಗಿದೆ. ಕೆರೆ, ತೋಡು ಬದಿಗಳಲ್ಲೂ ಮತ್ತು ಸಾಗಿ ಭೂಮಿಗಳಲ್ಲೂ ಬೆಳೆ ಬಹುಮಟ್ಟಿಗೆ ಕೆಟ್ಟಿದೆ.

ಸ್ಥಿತಿ ಹೀಗಿರುವಾಗ್ಯೂ ೧೧,೦೦೦ ಟನ್ ಅಕ್ಕಿ ಉಳುವರಿಯಾಗುವವರ ಬದಲು ೯,೦೦೦ ಟನ್ನನ್ನೂ ಜಮಾಯಿಸುವುದು ಕಷ್ಟದ ಮಾತೇ ಆಗಿದೆ! ಒಂದು ವೇಳೆ ಬಲಾತ್ಕಾರದಿಂದ ೯,೦೦೦ ಕ್ಕಿಂತಾ ಹೆಚ್ಚು ಕೊಡಗಿನ ವಸಾಹತಿನಿಸಿದ್ದೇ ಆದರೆ ಮಳೆಗಾಲ ಕಳೆದ ನಂತರ ಕೊಡಗಿನಲ್ಲಿ ಬತ್ತ ಬೆಳೆಯುವವರಿಗೇ ಅನ್ನವಿಲ್ಲದ ಕಷ್ಟಪಡಬೇಕಾಗುವುದು.

ನೆರೆ ಪ್ರಾಂತಗಳ ಕಷ್ಟದ ಸಮಯದಲ್ಲಿ ನೆರವಾಗಬೇಕಾದುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಆದುದರಿಂದ ಬೆಳೆಯುವ ಪ್ರತಿಯೊಬ್ಬ ರೈತನೂ ತನಗೆ ಬೇಕಾದಷ್ಟು ಅಕ್ಕಿಯನ್ನು ಇಟ್ಟುಕೊಂಡು ಉಳಿದುದನ್ನು ಸರಕಾರಕ್ಕೆ ಕೊಡಲು ಮುಂದೆ ಬರಬೇಕಾಗಿದೆ. ಅಷ್ಟು ಸಂಕಟದ ಸರಕಾರದವರು ತಮ್ಮ ಈ ಹೀನ ಸ್ಥಿತಿಯನ್ನು ನಿಲ್ಲಿಸಿ ಆಕಾರಣವಾಗಿ ಬತ್ತ ಕೇಳಕೂಡದು ಎನ್ನುವುದನ್ನು ಬಿಡಬೇಕು. ಒಂದೇ ಮಾತಿನಲ್ಲಿ ಹೇಳುವದಾದರೆ ಬೆಳೆಸುವವನಾಗಲೀ, ಕೊಂಡುಕೊಳ್ಳುವವನಾಗಲೀ ನ್ಯಾಯಬದ್ಧವಾಗಿ ಇಟ್ಟುಕೊಳ್ಳಬಹುದಾದ ಬತ್ತವನ್ನಲ್ಲದೆ ಉಳಿದ ಸ್ವಕೀಯರಿಂದು ಕಾಳನ್ನು ಕೊಡಬೇಕು. ಇದರಿಂದ ಕೊಡಗಿನ ಕೊರತೆಯು ತೀರುವವರನ್ನು ಉಳಿಸಿ ಕೊಳ್ಳುವವಲ್ಲದೆ ನೆರೆಯವರ ನೋವಿಗೂ ಬಂದಂತಾಗುವುದು.

ಕೊಡಗಿನ ಉಳುವರಿಯನ್ನು ಇಂಡಿಯಾ ಸರಕಾರವು ಹಂಚುವ ರೀತಿಯು ತೃಪ್ತಿಕರವಲ್ಲ. ಕಳೆದ ವರ್ಷ ೬,೫೦೦ ಟನ್ ಅಕ್ಕಿಯನ್ನು ಮೈಸೂರಿಗೂ, ೫,೦೦೦ ಟನ್ ಮಲಬಾರಿಗೂ ಹಂಚಲಾಗಿತ್ತು. ಆದರೆ ಈ ವರ್ಷ ೮,೦೦೦ ಟನ್ ಮೈಸೂರಿಗೂ ಬರಿ ೩,೦೦೦ ಟನ್ ಮುಂಬಯಿಗೂ ಕೊಡುವಂತೆ ನಿಶ್ಚಯವಾಗಿದೆ. ಇದು ಎಂದೂ ಸರಿಯಲ್ಲ. ಆಹಾರ ಸಮರ್ಥನೆ ಕ್ರಮಕ್ಕೆ ಬೇಕಾಗಿ ಬರುವ ಬೇಳೆಯು ಕೊಡಗಿನ ಉಳುವರಿ ಬತ್ತದ ಬಹು ಪಟ್ಟಿನ ಭಾಗವು ಮಲಬಾರಿಗೇ ಹೋಗುತ್ತಿತ್ತು. ಹಾಗೆ ಬತ್ತ ಸಾಗಿಸುವ ವಾಹನಗಳಲ್ಲೇ ಹಿಂತಿರುಗಿ ಬರುವಾಗ್ಗೆ ಕೊಡಗಿಗೆ ಆವಶ್ಯಕವಾದ ತೆಂಗಿನಕಾಯಿ, ಕೊಬ್ಬರಿ, ವಿಳ್ಳೆದೆಲೆ, ಅಡಿಕೆ ಸಾಮಾನುಗಳು ಬರುತ್ತಿದ್ದುವು. ಆದರೆ ಮೊದಲ ನಂತರ ಇಂಡಿಯಾ ಸರಕಾರದವರು ಉಳುವರಿ ಬತ್ತವನ್ನೆಲ್ಲಾ ಮೈಸೂರಿಗೆ ಕಳುಹಿಸತೊಡಗಿದರು. ಇದನ್ನು ವಿರೋಧಿಸಿ ಜನತಾ ಅಭಿಪ್ರಾಯವನ್ನು ಇಲ್ಲಿಯ ಕೌನ್ಸಿಲ್ ಪಕ್ಷದವರು ತಿಳಿಸಿ ಕೇಂದ್ರ ಸರಕಾರಕ್ಕೆ ತಿಳಿಸಿದ ಮೇಲೆ ಒಂದು ಭಾಗವನ್ನು ಮಲಬಾರಿಗೆ ಕೊಡುವಂತಾಯಿತು. ಬತ್ತ ಸಾಗಿಸುವ ವಾಹನ ಮಟ್ಟಿಗೆ ಮಲಬಾರಿನವರಿಂದ ನಮಗೆ ವ್ಯಾಪಾರಕ್ಕೆ ಸಂಬಂಧಿಸಿದ ಸೌಕರ್ಯವು ನಮಗೆ ಬೇಕಾದ ವಸ್ತುಗಳನ್ನು ತರಿಸಬಹುದು. ಈ ಸೌಕರ್ಯದಿಂದಲೂ ಹಿಂದಿನ ವ್ಯಾಪಾರ ಪದ್ಧತಿಯಿಂದಲೂ ಕೊಡಗಿನ ಉಳುವರಿಯ ಪ್ರಧಾನ ಭಾಗವು ಮಲಬಾರಿಗೇ ಹೋಗಬೇಕಾಗಿತ್ತು. ಅಲ್ಲದಿದ್ದರೂ ಇತರೆಡೆ ಪ್ರಾಂತಗಳಿಗೆ ಸಮಪಾಲಾಗಿ ಹಂಚುವುದು ನ್ಯಾಯ. ಆದರೆ ಆ ಪದ್ಧತಿಯನ್ನು ಬಿಟ್ಟು ಇದ್ದಕ್ಕಿದ್ದಂತೆ ಮಲಬಾರಿಗೆ ಬದಲು ೮೦೦೦ ಟನ್ನನ್ನು ಮೈಸೂರಿಗೂ ಬರೀ ೩,೦೦೦ ಟನ್ನುಗಳನ್ನು ಮಲಬಾರಿಗೂ ಕೊಡುವಂತೆ ಮಾಡಿರುವ ತೀರ್ಮಾನವು ಸಮಂಜಸವಲ್ಲ.

ಈ ಸಂಬಂಧದಲ್ಲಿ ಈಚೆಗೆ ಮೈಸೂರು ಮತ್ತು ಮಲಬಾರಿನವರು ಕೋರಿಕೆ ನೀಡಿ ಅನುಕ್ರಮವಾಗಿ ೧೨,೦೦೦ ಮತ್ತು ೧,೦೦೦ ಟನ್ನು ಅಕ್ಕಿ ಇವೆರಡರ ವರೆಗೆ ಕೊಡಲ್ಪಟ್ಟಿದೆ. ಈ ಅಕ್ಕಿಯನ್ನು ಈ ವರ್ಷ ಕೊಡಬೇಕೆಂದು ನಿಶ್ಚಿತ ಪರಿಮಾಣದಿಂದ ವಜಾ ಮಾಡಲಾಗುವುದೋ ಎಂಬುದು ತಿಳಿಯಲಿಲ್ಲ. ಈ ಅಕ್ಕಿಯನ್ನು ಈ ವರ್ಷದ ಹೊಸ ಬೆಳೆಯಿಂದ ಮಾಡಿಕೊಟ್ಟಿರುವುದಾಗಿದೆ. ಅದ್ದರಿಂದ ಇದನ್ನು ಈ ವರ್ಷದ ಲೆಕ್ಕಕ್ಕೇ ಸೇರಿಸಬೇಕಾಗಿದೆ. ಹಾಗೆ ಈ ವರ್ಷದ ಲೆಕ್ಕಕ್ಕೆ ಸೇರಿಸಿದ್ದರೆ ಇನ್ನು ೯,೦೦೦ ಹೋಗಿ ೬,೦೦೦ ಟನ್ನು ಅಕ್ಕಿಯನ್ನು ಕೊಡ ಜಮಾಯಿಸುವುದು ಸಾಧ್ಯವಾಗಲಿಕ್ಕಿಲ್ಲವೆಂಬ ವಿಚಾರವನ್ನು ಸರಕಾರವು ಮರೆಯಬಾರದು. ಮೇಲಿನ ನಮೂದು ವಿಚಾರಗಳನ್ನು ಕಳೆಯದ ಸರಕಾರವು ಕೂಡಲೇ ಕೇಂದ್ರ ಸರ್ಕಾರಕ್ಕೆ ವಿವರವಾಗಿ ಬರೆದು ತಿಳಿಸಿ ಯುಕ್ತವಾದ ತೀರ್ಮಾನವನ್ನು ಪಡೆಯುವರೆಂದು ಆಶಿಸುತ್ತೇವೆ.

## ವರ್ತಮಾನ.

### ತಿದ್ದುಪಡಿ.

ಕಳೆದವಾರ ಪ್ರಕಟಿಸಿದ ಕೊಡಗು ಶಾಸನ ಸಭೆಯಲ್ಲಿ ಶ್ರೀ. ಎಚ್. ಟಿ. ಸೋಮಣ್ಣನವರು ಸಾಧಿಸಿದ ಸಂಪಾದ್ಯ ಅದು ೫೦೦ ಟನ್ನು ಭತ್ತ ಮತ್ತು ಏಕ್ರೆ ಒಂದಕ್ಕೆ ಇದ್ದವರಿಗೆ ಸೆಟ್ಲ್‌ಮೆಂಟ್ ಆಗುತ್ತಿದೆ. ಬೇಸಾಯಗಾರ ಕೊಡವರು ಜಾಮೀನು ಆದಿ ತರಬೇಕೆಂದು ಹೇಳಿದರೆಂದು ಪ್ರಕಟವಾಗಿದೆ. ಇವರಿಗೆ ಬಂದಿದ್ದ ವಿಷಯವೇ ಬೇರೆ ಎಂದು ಕಷ್ಟದವರು ಅವರು ಸಮರ್ಥಿಸಿ ಕೊಡುತ್ತಿದ್ದರು. ತಪ್ಪಾಗಿ ವರದಿಯಾದುದಕ್ಕೆ ವಿಷಾದಿಸುತ್ತೇವೆ.

ಸಂ.]

ಪ್ರಜಾರಾಜ್ಯ ಉದಯೋತ್ಸವವು ಶ್ರೀಮಂಗಲದಲ್ಲಿ ಶ್ರೀ ಪಟ್ಟೋಳೆ ಜನ್ನ ಅಧ್ಯಕ್ಷತೆಯಲ್ಲಿ, ಚೆಟ್ಟಳ್ಳಿಯಲ್ಲಿ ಶ್ರೀ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ, ಮಾದಾಪುರದಲ್ಲಿ ಶ್ರೀ. ಎಂ. ಎಸ್. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಮತ್ತು ಸುಂಟಿಕೊಪ್ಪದಲ್ಲಿ ಶ್ರೀ ಕ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಳೆದ ಸೆಪ್ಟೆಂಬರ್ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀ. ಪುಟ್ಟೀರ ನಾಣಯ್ಯನವರು ತೇರ್ಗಡೆಯಾಗಿರುತ್ತಾರೆ.

ಸೋಮವಾರಪೇಟೆ ಗ್ರಾಮದ ಶ್ರೀ. ಇಟ್ಟೀರ ಅಯ್ಯಪ್ಪನವರ ಮನೆಗಳ ಪಂಕ್ತಿಯಲ್ಲಿ ೬ ವರ್ಷದ ಬಾಲಿಕೆಯ ಒಂದು ಎತ್ತು ಕೆಲವು ದಿನಗಳಿಂದ ಸೋಂಕಿನಿಂದಿದೆಯೆಂದೂ ಮಾಲೀಕರು ತಕ್ಕ ಔಷಧೋಪಚಾರವಿಲ್ಲದೆ ಹೊಡೆದುಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ತಾರೀಖು ೩-೧-೫೦ ರಲ್ಲಿ ನಾಪೋಕ್ಲು ಠಾಣೆಯ ಸೈಟಾನಿನಲ್ಲಿ ಟ್ರೆಯಿನರ್ ಬೆಸ್ಟ್ ಡೀಲ್ ಪೊನ್ನಪ್ಪನವರ ಹಾಕಿ ಶೀಲ್ಡಿನ ಪಂದ್ಯವು ನಾಪೋಕ್ಲು ಟೈ. ಎರಡೂ ಟೀಮುಗಳು ಒಂದೊಂದು ಗೋಲು ಹೊಡೆದು ನಾಪೋಕ್ಲು ಶಾಲೆಯ ಹುಡುಗರು ಶೀಲ್ಡನ್ನು ಗೆದ್ದರು. ಗೆದ್ದವರಿಗೆ ಶ್ರೀ. ಪಿ. ಎ. ಉತ್ತಪ್ಪನವರು ಶೀಲ್ಡನ್ನು ಕೊಟ್ಟರು.

ಕೊಡಗು ಸರಕಾರಿ ಕಾಲೇಜಿನ ವಾರ್ಷಿಕ ಅಟಿಲೆಟಿಕ್ಸ್ ಸ್ಪರ್ಧೆಯು ತಾ. ೧೧ರಲ್ಲಿ ರಾ. ಬ. ಕೆ. ಬಿ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿಯೂ, ಕಾಲೇಜು ದಿನಾಚರಣೆ ತಾ. ೧೧ ರಲ್ಲಿ ಕೊಡಗಿನ ಚೀಫ್ ಕಮಿಷನರ್ ಶ್ರೀ. ಸಿ. ಟಿ. ಮುದಲಿಯಾರವರ ಅಧ್ಯಕ್ಷತೆಯಲ್ಲೂ ನಡೆಯುವದು.

ಕೊಡಗು, ಮೈಸೂರು ಮತ್ತು ಮಲಬಾರು ಸರ್ಕಾರಗಳ ಪ್ರತಿನಿಧಿಗಳೂ, ಸಹಕಾರ ಮಾರ್ಕೆಟಿಂಗ್ ಫೆಡರೇಶನ್, ಕಾಫಿ ಬೋರ್ಡ್ ಅಸೋಸಿಯೇಶನ್ ಮತ್ತು ಅಕ್ಕಿ ಮಿಲ್ಲುಗಳ ಪ್ರತಿನಿಧಿಗಳೂ ಈ ಕಾರಣಕ್ಕಾಗಿ ಲೆಜಿಸ್ಲೆಟಿವ್ ಕೌನ್ಸಿಲ್ ಹಾಲಿನಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಇಂಡಿಯಾ ಸರಕಾರವು ತೀರ್ಮಾನಿಸಿದ ಈ ವರ್ಷ ಕೊಡಗಿನಿಂದ ಮೈಸೂರಿಗೆ ೮,೦೦೦ ಟನ್ ಮತ್ತು ಮಲಬಾರಿಗೆ ೩,೦೦೦ ಟನ್ ಕೊಡಬೇಕಾದ ಅಕ್ಕಿಯ ರವಾನೆ ಬಗ್ಗೆ ವಿಚಾರಗಳನ್ನು ಕುರಿತು ಚರ್ಚಿಸಲಾಯಿತು. ಈ ವರ್ಷ ಭತ್ತದ ಖರೀದಿಯನ್ನು ಕೇಂದ್ರ ಸರಕಾರದ ಸೂಚನೆಯಂತೆ ಗಾಡಿ ರೂ. ೮-೮-೦ ಕಡಿಮೆ ಮಾಡಿರುವುದರಿಂದ ಅಕ್ಕಿಗಳ ಕ್ರಯವನ್ನು ಮೈಸೂರು ಪಲ್ಲಕ್ಕೆ ರೂ. ೪೬-೧-೦ ರಿಂದ ರೂ. ೪೦-೧೫-೦ ಗೂ ಮಲಬಾರಿಗೆ ಕೊಡಗಿನ ಪಲ್ಲಕ್ಕೆ ೪೩-೪-೦ ರಿಂದ ೩೬-೧೪-೦ ಕ್ಕೂ ಇಳಿಸಲಾಗಿ ಸ್ವತಾಟ ಕಮಿಷನ್ ವಸ್ತ್ರಕರೆದ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಜನರಲ್ ಕಾರ್ಯಪ್ಪ ಕಪ್ಪಿನ ಕಮಿಟಿಯು, ಫೈನಲ್ ಪಂದ್ಯವು ಜೋಡಿ ಮತ್ತು ಬಂಟ್ ಕಂಟ್ರೋಲ್ ಬೆಸ್ಟ್ ಸಿರೆಸ್ಟ್ ಕವಿಟಿಯ ವಿಷಯಗಳು ಈ ದಿನ ಕೌನ್ಸಿಲ್ ಹಾಲಿನಲ್ಲಿ ನಡೆಯುವುವು.

ಹಿಂದೂಸ್ಥಾನ ಪ್ರಜಾರಾಜ್ಯ ಘೋಷಣೆಯ ಮಡಿಕೇರಿಯ ಹಿರಿಯ ಹಿತೈಷಿಗಳಾಗಿದ್ದವರಿಂದ ಮಡಿಕೇರಿ, ಸೆಂಟ್ರಲ್ ಹೈಸ್ಕೂಲಿನಲ್ಲಿ ತಾ. ೨೬ ರಂದು ಬೆಳಿಗ್ಗೆ ಗಂಟೆ ೯-೩೦ಕ್ಕೆ ಸಭೆ ಸೇರಿಸಲಾಯಿತು. ಜಿಲ್ಲೆಯ ಕೊಡಗಿನ ಶಾಲೆಗಳ ಹುಡುಗರು ಮತ್ತು ಉಪಾಧ್ಯಾಯರುಗಳ ಪ್ರಭಾತಫೇರಿಗಳೂ, ಪ್ರಾರ್ಥನೆ ಮತ್ತು ಪ್ರಯಾಣವನ್ನೂ ಗಂಟೆ ೧೦-೩೦ಕ್ಕೆ ಹಿರಿಯರ ಮಕ್ಕಳಿಗೆ ರಿಯರ ಭಾಷಣ ಸ್ಪರ್ಧೆಗಳೂ, ಮತ್ತು ಆ ಸಂಜೆ ಗಂಟೆ ೩ರಿಂದ ಪ್ರಾಸ್ತಾವಿಕ ವಿವರ ಹಾಗೂ ಮನೋರಂಜನೆ ಮತ್ತು ಭಜನೆಗಳೂ ನಡೆಯುವುವು.

ಈ ಮೊದಲು ಪ್ರಕಟಿಸಿದಂತೆ ಕೊಡಗು ಪ್ರಾಂತೀಯ ಸಭೆಗಳ ಜಾತ್ರೆ ಮತ್ತು ಈ ಸಂಬಂಧ ಬೆಳೆ, ತರಕಾರಿ, ಹಣ್ಣು ಹಂಪಲು ಮತ್ತು ಗೃಹೋದ್ಯೋಗಗಳ ವಸ್ತುಗಳ ಪ್ರದರ್ಶನವು ಮಡಿಕೇರಿಯಲ್ಲಿ ಫೆಬ್ರವರಿ ೬ನೇ ತಾ. ರಲ್ಲಿ ನಡೆಯುವುದರ ಬದಲು ಮಾರ್ಚಿ ತಾ. ೩ನೇ ಶುಕ್ರವಾರ ನಡೆಯುವುದಾಗಿ ವ್ಯವಸಾಯ ಇಲಾಖಾ ಅಧಿಕಾರಿ ತಿಳಿಸುತ್ತಾರೆ.

ತಾ. ೩೦-೧-೫೦ ನೇ ಸೋಮವಾರ ಸಿದ್ದಾಪುರದಲ್ಲಿ ಮಹಾತ್ಮಾಗಾಂಧೀಜಿಯವರ ಸ್ಮಾರಕ ದಿನವನ್ನಾಚರಿಸಲಾಯಿತು. ಪ್ರಸಿದ್ಧ ಊರಿನಲ್ಲಿ ರಾಷ್ಟ್ರಧ್ವಜವನ್ನು ಅರ್ಧಕ್ಕಿಳಿಸಲಾಯಿತು. ನಂತರ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರವನ್ನು ಮೆರವಣಿಗೆ ಪೂಜೆ ಮಾಡಲ್ಪಟ್ಟಿತು. ನಂತರ ಗೀತಾ ಪಠನ, ಕುರಾನ್ ಪಠಣ ಮತ್ತು ಬೈಬಲ್ ಓದುವಿಕೆಯಿಂದ ಸಭೆಯು ಮುಕ್ತಾಯವಾಯಿತು.

# ಒದುಗರ ಓಲೆಗಳು.

## ಕೇಂದ್ರ ಸರಕಾರದ ಬೇಜವಾಬ್ದಾರಿಯೆ!

ಕಳೆದ ಜನವರಿ ತಾ ೨೨ರಲ್ಲಿ ಗೋಣಿಕೊಪ್ಪಲಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯ [illegible] ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರ [illegible] ಈಗಿರುವ ಕೇಂದ್ರ ಸರ್ಕಾರವು [illegible] ಸರ್ಕಾರವೆಂದು [illegible] ಕೌನ್ಸಿಲ್ [illegible] [illegible]

[illegible]

ಗ್ರೀಷ್ ಸರಕಾರದ ವೇಳೆ ಈ ರೀತಿಯ ಅರ್ಥವಿಲ್ಲದ ಆರೋಪಣೆಗಳನ್ನು ಹೊರಿಸುವುದರೂ [illegible]? ಅದರಲ್ಲಾ ಇಂಡಿಯಕ್ಕೆ ಸ್ವತಂತ್ರ್ಯ ದೊರೆತು ಒಂದೇ ಎರಡನೇ ವರ್ಷವಾಗಿ [illegible] ದೊಡ್ಡ [illegible] ಪ್ರಪಂಚದ [illegible] ಕಾಂಗ್ರೆಸ್ [illegible] [illegible]

[illegible]

ಕೇಳಿದರೆ ಈಗ ಸಮುದ್ರ ವಿಲ್ಲವೆಂದ ಉತ್ತರ [illegible]! [illegible] ಬಹುದು?

ಇನ್ನು ಮುಂದಕ್ಕೆ ಕಂಡ [illegible] [illegible]

[illegible]

ಮ ವಿಚಾರಗಳನ್ನು ಸಾರ್ವಜನಿಕರು ಪರ್ಯಾಲೋಚಿಸಬೇಕಾಗಿದೆ

ಪಿ ಪಿ ಮಾದಯ್ಯ

## ಜಮ್ಮಾದ ಕೆಂಪಾಯ ವಿರೋಧ [illegible]

ತಾ ೧೮-೧-೫೦ರಲ್ಲು [illegible] ನಲ್ಲಿ ನಡೆದ ಒಂದು ಮೀಟಿಂಗಿಗೆ ಶ್ರೀ [illegible] ಅಧ್ಯಕ್ಷರಾಗಬೇಕೆಂದು ಕೇಳಿಕೊಂಡರೂ ಅವರು [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible]

ಶ್ರೀ [illegible] [illegible]

[illegible]

ಎಂ ಎಸ್ ಎಂ

[illegible]

[illegible]

[illegible]

## ವಿದ್ಯಾ ಇಲಾಖೆಯಲ್ಲಿ [illegible] ಸೈಜರ ಅಮ್ಮ.

೧

ತಾ [illegible] ಪ್ರಿಕೆಯಲ್ಲಿ '[illegible]' [illegible]

ವಿದ್ಯಾರ್ಥಿಯರಿಗಳಲ್ಲಿ ಸೂಪರ್‌ವೈಜರ್ ಅಯ್ಯಯು ವಿಚಾರ ಬರೆದ ಕೋಲೆಕ ಓದಿದೆನು. ಕೊಡಗಿನ ಶಾಲೆಗಳನ್ನು ಪರೀಕ್ಷೆ ಮಾಡಲು ಈಗ ಹಾಲಿಯಿರುವ ಅಸಿಸ್ಟೆಂಟ್ ಎಜುಕೇಶನಲ್ ಆಫೀಸರವರ ಜೊತೆಗೆ ಮತ್ತೊಬ್ಬರನ್ನು ನೇಮಿಸಬೇಕೆಂದು ಕೌನ್ಸಿಲಿನಲ್ಲೂ ಚರ್ಚಿಸಿ ತೀರ್ಮಾನಿಸಿದರೂ ಸರಕಾರದವರು ಹಣದ ಅಭಾವದಿಂದ ಸೆಕೆಂಡು ಗ್ರೇಡ್ ಅಧ್ಯಾಪಕರೊಬ್ಬರನ್ನು ಸೂಪರ್‌ವೈಜರಾಗಿ ಅದೇ ಗ್ರೇಡಿನಲ್ಲಿ ನೇಮಿಸುವಂತೆ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಹುಕುಂ ಮಾಡಿದಂತೆ ಈ ನೇಮಕವಾಗಿದೆ. ಈ ನೇಮಕ ಮಾಡುವ ಮೊದಲು ಕೆಲವು ವರ್ಷಗಳ ವರೆಗೆ ಕೆಲಸ ಮಾಡಿರುವ ಮತ್ತು ಹೆಚ್ಚು ಅನುಭವಶಾಲಿಗಳಾಗಿರುವ ಸರಕಾರಿ, ಡಿ. ಬೋರ್ಡ್ ಮತ್ತು ಮುನಿಸಿಪಲ್ ಶಾಲೆಗಳಲ್ಲಿರುವ ಅವು ಉಪಾಧ್ಯಾಯರುಗಳನ್ನು ಅವರು ಬರಲು ಕೇಳದೇ ಇದ್ದುದಾಗಿ ತಿಳಿದು ಬರುತ್ತದೆ. ಆಗಲಿ ಅನೇಕರು ಈ ಉದ್ಯೋಗದಲ್ಲಿ ಏನೊಂದು ಪ್ರಯೋಜನವಿಲ್ಲವೆಂಬುದಾಗಿ, ಆ ಉದ್ಯೋಗಕ್ಕೆ ಒಪ್ಪಿಕೊಂಡಿರುವುದಿಲ್ಲ. ಕಡೆಗೆ ಸರಕಾರಿ ಶಾಲೆಗಳಲ್ಲಿದ್ದ ಒಬ್ಬರು ಮಾತ್ರ [illegible] ವ್ಯಕ್ತಿ ಒಬ್ಬರನ್ನು ಆರಿಸಿರುವರು. ಇವರು ಈ ವರೆಗೆ ಯೋಗ್ಯ ಕೆಲಸ ಮಾಡಿರುವರು. ಇಷ್ಟು ಸರಿಯಾದ ಕಾರಣಗಳಿದ್ದರೂ ಈ ಚ.ನಾವಣೆಗೆ ಆರೋಪ ಮಾಡುವುದು ಸರಿಯಲ್ಲ ಅದಲ್ಲ ಜಿಲ್ಲಾ ಬೋರ್ಡಿನ ಅಧ್ಯಾಪಕರನ್ನು ಕೇಳಲಿಲ್ಲವೆಂದು ಹೇಳುವುದು ಅಷ್ಟು ಸಮಂಜಸವಲ್ಲ. ಅಧ್ಯಾಪಕರ ಉದ್ಯೋಗವು ಸರಕಾರಿ [illegible] [illegible] ಅಧ್ಯಾಪಕರು [illegible] ಹೆಚ್ಚಾಗಿ [illegible] [illegible] [illegible] ಅಧ್ಯಾಪಕರನ್ನು ಈ ಉದ್ಯೋಗ [illegible] [illegible] ಉದ್ಯೋಗಸ್ಥನ ಗುಣ

ಲ್ಲದೆ ಈ ಬೋರ್ಡಿನ ಉದ್ಯೋಗಸ್ಥನಾಗಲಾರನೆಂಬುದು ವೇದ್ಯವಾಗುತ್ತದೆ. ಆದ್ದರಿಂದ ಈಗ ಮಾಡಿರುವ ಆಯ್ಕೆಯು ತೃಪ್ತಿಕರವೆಂದು ಬಯಸುತ್ತೇನೆ.

ಇನ್ನೊಬ್ಬ ವಿದ್ಯಾಪ್ರೇಮಿ.

---

೨

ಕೊಡಗಿನ ಪ್ರಾಥಮಿಕ ಶಾಲೆಗಳ ಮೇಲುಸ್ತುವಾರಿ ನೋಡಲು ಸುಪರ್‌ವೈಜರನ್ನು ನೇಮಿಸಿರುವ ತತ್ವವನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ವಿಶೇಷ ಯೋಗ್ಯತೆ ಇಲ್ಲದ ಶಾಲೆಯ ಅಧ್ಯಾಪಕರೊಬ್ಬರನ್ನು ಈ ಹುದ್ದೆಗೆ ನೇಮಿಸಿದರೆ ಆ ವರೆಗೆ ತಮ್ಮ ಸಹೋದ್ಯೋಗಿಗಳಾಗಿದ್ದ ಇತರರ ಮೇಲ್ವಿಚಾರಣೆ ಮಾಡುವುದು ಅಸಾಧ್ಯ. ಬೇರೊಬ್ಬ ಎ. ಈ. ಓರ ಅವಶ್ಯವಿತ್ತು. ಆ ವರೆ ಹೆಚ್ಚು ದರದ ವೇತನ ಕೊಡಬೇಕೆಂಬ ಭಯದಿಂದ ಸರಕಾರ ಈ ವಿಚಾರದ ಮಾಡಬೇಕು. ಆದರೆ ಈ ವಿಚಾರದಿಂದ ದೇಶದ ವಿದ್ಯಾರ್ಥಿಗಳಿಗೆ ಯಾವದೇ ಸಹಾಯವಾಗಲಾರದೆಂದು ಸ್ಪಷ್ಟವಾಗಿ ಹೇಳಬೇಕಾದ. ಅದೇ ವೇತನದಲ್ಲಿ ಗ್ರಾಜ್ಯುವೇಟರೊಬ್ಬರನ್ನು ನೇಮಿಸಬಹುದಿತ್ತು. ಸರಕಾರದವರು ಜಾಹೀರಾತು ಕೊಟ್ಟಿದ್ದರೆ ಉಮೇದುವಾರರು ದೊರೆಯುತ್ತಿದ್ದರು. ಇನ್ನೂ ಕಾಲ ಮೀರಿಲ್ಲ. ಕೊಡಗಿನ ಪ್ರಾಥಮಿಕ ವಿದ್ಯಾಪ್ರಗತಿಯ ದೃಷ್ಟಿಯಿಂದ ಯೋಗ್ಯ ಪದವೀಧರನೊಬ್ಬನನ್ನು ಈ ಹುದ್ದೆಗೆ ನೇಮಿಸಬೇಕೆಂದು ಸೂಚನೆ. ಪದವೀಧರರಲ್ಲದ ಯೋಗ್ಯರೆಂದರೆ ನೇಮಿಸಲಿ. ಆದರೆ ಅಧ್ಯಾಪಕರಾಗಿದ್ದ ಮಾತ್ರ [illegible] [illegible] ಹೆಚ್ಚು ಯೋಗ್ಯತೆ [illegible] [illegible] ಬೇಕು ಈ [illegible] [illegible] ಇಲ್ಲವೇ [illegible] [illegible] [illegible] ಯೋಗ್ಯ [illegible] [illegible] ಸಂಶಯವಿಲ್ಲ. [illegible]?

ಸಬ್ಬಯ್ಯ

# NOTICE.

It is notified to the Company that share certificate No 16 for 250 shares Nos 4501 ti 4750 standing in the name of Mr. Mundanda C. Mandanna is lost or misplaced. A duplicate of the said certificate will be issued by the Company and the said shares transferred in the books of the Company to the name of Mr. Mundanda S. Muthanna who claims to be the transfrree for consideration of the shares if no valid objection to the issue of the duplicate share certificate and the transfer is lodged with the Company within a fortnight from this date.

**B. B. Kalappa.**
*Managing Director,*
*The Coorg Transport Ltd.,*
*Mercara.*

---


## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
## ಫ್ರೇಜರ್ ಪೇಟೆ.
## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ [illegible] ಮಾಡುವ [illegible] ಹೋಗುತ್ತಿರುವ ಮಾಲೆಗಳನ್ನು [illegible] [illegible] ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ [illegible] ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ [illegible] [illegible] ಮಾಲೆಗಳನ್ನು ಸಾಗಿಸಿ ಕೊಟ್ಟಲ್ಲಿ [illegible] ರೂ. 0-12-0 [illegible] [illegible] [illegible].

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್ ಪೇಟೆ, ತಾ 32-9-49

[illegible]
ಮ್ಯಾನೇಜಿಂಗ್ ಡೈರೆಕ್ಟರ್.



## [illegible] ಬೇಕೆ?

ಮದುವೆ ಸಮಾರಂಭಗಳಿಗೆ [illegible] [illegible] [illegible] ಬೆಂಗಳೂರ್ ಬನಾರಿಸ್ ಸಿಲ್ಕುಗಳು, ಸೇಲಂ, ಮದರಾಸ ಜವುಳಿಗಳು. ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ 30% ಕಮ್ಮಿ [illegible] [illegible] ದೊರೆಯುವವು

ಅತ್ಯುತ್ತಮ [illegible] [illegible] ಮತ್ತು ಕಾಶ್ಮೀರ್ ಬಟ್ಟೆಗಳು ಸಹ ದೊರೆಯುವವು.

[illegible] [illegible] ಬಟ್ಟೆ [illegible] ಈ ಪತ್ರಿಕೆ [illegible] [illegible] [illegible] [illegible] ಬರೆಯಿರಿ [illegible] [illegible].

ಒಮ್ಮೆ ಬಂದು ಪರೀಕ್ಷಿಸಿರಿ

ಪಿ. ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ [illegible] [illegible] ವ್ಯಾಪಾರಿಗಳು,
ಎಂ. ಜಿ. ಪೇಟೆ (ಕೂಡಗು)

12-6



# THE WARDEN INSURANCE CO., Ltd.

Head Office: Bombay.

L[illegible], FIRE, ACCIDENT, MOTOR & W C INSURANCES.

*Managing Director;* - S. H. THAKER

| | |
|---|---|
| Business in force | Rs. 5,00,00,000 |
| [illegible]ets | ,, 1,00,00,000 |
| [illegible]ome | ,, 35,00,000 |

Also LOCAL MANAGERS OF
[illegible] LONDON GUARANTEE & ACCIDENT CO., Ltd.
(Incorporated in England)

[illegible]sets Exceed Rs. 10,00,00,000

a Subsidiary Company of
THE PHOENIX ASSURANCE CO. Ltd.
[illegible] Largest Assurance Companies in the World)
[illegible]ets Exceed . Rs. 45,00,00,000

Transact FIRE INSURANCE

[illegible]nquiries for representation solicited.

*Apply to;*

Agency Office, [illegible]jpet (Coorg) *or* A. S. Aiyappa, *Branch Secretary, Gandhinagar,* BANGALORE CITY



# ಗಮನಿಸಿರಿ!

ದಿನವೂ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯಲ್ಲಿ ವಿಸ್ತರಿಸಿರುವ [illegible] [illegible] ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ [illegible] [illegible] [illegible].

ಯಾವ [illegible] ಬಟ್ಟೆಗೂ [illegible]
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪು [illegible] ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ [illegible] [illegible] [illegible] [illegible]!

ಪಟ್ನಿ ಬ್ರದರ್ಸ್,
ಟೈಲರಿಂಗ್,
[illegible] [illegible], ಮೈಸೂರು.

52-6

# ಕೊಡಗಿನ ಹೊಸ ಭೂಕಂದಾಯ.

ಲೇ — ಶ್ರೀ ಕೆ. ಎಂ. ಪೂವಯ್ಯ.

### ಮುಂದಾಳುಗಳು.

ಕೊಡಗಿನಲ್ಲಿ ಈಗ ಕೆಲವು ಸಮಯದಿಂದ ಒಂದು ಬಿರುಗಾಳಿಯು ಬೀಸುತ್ತಲಿದೆ. ಇಂಡಿಯಾ ದೇಶದ ಉದ್ದಗಲಕ್ಕೂ, ಈಗ ಮೂವತ್ತು ನಲುವತ್ತು ವರ್ಷಗಳಿಂದ, ಸ್ವಾತಂತ್ರ್ಯವನ್ನು ಪಡೆಯಲು ಇಂಥಾ ಬಿರುಗಾಳಿಯು ಪದೆ ಪದೇ ಬೀಸುತ್ತಲಿತ್ತು. ಈಗ ನಮಗೆ ಸ್ವಾತಂತ್ರ್ಯವು ಸಿಕ್ಕಿದೆ. ಆದರೂ, ಇಂಥಾ ಮೊಂಡು ಬಿರುಗಾಳಿಯು ಥಟ್ಟನೆ ಬೀಸುವಾಗ ದೇಶದ ಪ್ರಜೆಗಳು, ಅವರಲ್ಲೂ ದೇಶದ ಯುವಕರು ಖಂಡಿತವಾಗಿಯೂ ಪ್ರಪಂಚದ ಅವಸ್ಥೆಯು ಯಾವಾಗಲೂ ಇಂಥಾ ಗೊಂದಲದಲ್ಲಿಯೇ ಇರುತ್ತದೋ ಎಂದು ಯೋಚಿಸಬೇಕಾಗಿದೆ.

ಪರದೇಶೀಯರ ಆಳಿಕೆಯಲ್ಲಿ ಇಂಥಾ ಗೊಂದಲಗಳನ್ನು ಪದೆ ಪದೇ ಎಬ್ಬಿಸುವ ಆವಶ್ಯಕತೆಯು ಇತ್ತು. ದೇಶದಲ್ಲಿಯ ಪ್ರಜೆಗಳನ್ನೂ, ದೇಶದಲ್ಲಿಯ ಯುವಕರನ್ನೂ, ದೇಶದಲ್ಲಿಯ ವಿದ್ಯಾರ್ಥಿಗಳನ್ನೂ ಹುರಿದುಂಬಿಸಿ ಪರ ಸರಕಾರವನ್ನು ತೊಲಗಿಸಲು ಯಾವ ಮಾರ್ಗವೂ ತಪ್ಪಲ್ಲವೆಂದು ತೋರಿಸಬೇಕಾಗಿತ್ತು. ಅಂದು ವಿರೋಧಕ ಮತ್ತು ವಿನಾಶಕ ಅಭಿಪ್ರಾಯ ಬೇಕಿತ್ತು, ಆದರೆ ಇಂದು ನಮಗೆ ಸ್ವಾತಂತ್ರ್ಯವು ಸಿಕ್ಕಿದೆ. ಇಂಥಾ ಸಮಯದಲ್ಲಿ ದೇಶಕ್ಕೆ ಬೇಕಾಗಿರುವುದು ಸಹಾಯಕ ಮತ್ತು ವಿಧಾಯಕ ಅಭಿಪ್ರಾಯಗಳು. ಹಳೆ ಸರಕಾರಕ್ಕೂ ಹೊಸ ಸರಕಾರಕ್ಕೂ ಇರುವ ವ್ಯತ್ಯಾಸ, ಸರಕಾರಕ್ಕೂ ಪ್ರಜೆಗಳಿಗೂ ಇರುವ ಸಂಬಂಧ, ಪರ ಸರಕಾರವನ್ನು ತೊಲಗಿಸಲು ಕೈಕೊಂಡಿದ್ದ ದಾರಿಗಳನ್ನು ತ್ಯಜಿಸಿ ಯಾವ ವಿಧದಲ್ಲಿ ನಮ್ಮ ಸರಕಾರವನ್ನು ಕಟ್ಟಲು ನಾವು ಹೇಗೆ ಎಣಿಸಬೇಕು, ಎಂಬ ಪ್ರಚಾರ ಮಾಡುವುದು ದೇಶದ ಮುಖಂಡರ ಮತ್ತು ಉಪಾಧ್ಯಾಯರ ಕರ್ತವ್ಯವಾಗಿದೆ. ಬದಲಾಗಿ ಜನರನ್ನು ವಿನಾಶಕಾರಕ ಅಭಿಪ್ರಾಯಗಳಿಂದಲೇ ಹುರಿದುಂಬಿಸುವುದು, ಇಂದಿನ ದೇಶದ ಉದ್ದಗಲಕ್ಕೂ ನಡೆದರೆ, ನಮ್ಮ ಈ ದೇಶವು ಇನ್ನೆಷ್ಟು ಕಾಲದಲ್ಲಿ ಪ್ರಜಾಪ್ರಭುತ್ವ ಸರಕಾರದ ಪೂರ್ಣ ಬೆಳಕನ್ನು ಕಾಣುವುದೋ ದೇವರೇ ಬಲ್ಲ! ಯಾವ ದೇಶವನ್ನೂ ಸ್ವರ್ಗ ಸದೃಶವನ್ನಾಗಿ ಮಾಡುವುದು ದೇಶದ ಮುಂದಾಳುಗಳ ಕೈಯಲ್ಲಿದೆ. ತನ್ನ ವ್ಯಕ್ತಿತ್ವವನ್ನು ದೇಶ ಸೇವೆಯ ಹಾದಿಯಲ್ಲಿ ಧಾರೆ ಎರೆಯಲು ತಯಾರಾದ ಮುಂದಾಳುಗಳಿಂದ ದೇಶಕ್ಕೆ ಎಲ್ಲಾ ವಿಧದಲ್ಲಿಯೂ ಸುಖವಿದೆ. ಕೂತ ಕಾಟಿಯಿಂದ ಎದ್ದರೆ, ಹಾವೋ, ಚೇಳೋ ಎಂಬ ಭಯ ಪಡುವವರಿಂದ ದೇಶವು ಯಾವ ಸ್ಥಿತಿಗೆ ಬಂದೀತು?

### ಕೊಡಗಿನ ಸಮಸ್ಯೆ.

ಈಗ ಕೆಲವು ವರ್ಷಗಳಿಂದ ಕೊಡಗಿನಲ್ಲಿಯ ಎಲ್ಲಾ ಮುಖ್ಯ ಪ್ರಶ್ನೆಗಳೂ ಕೊಡಗಿನ ಭವಿಷ್ಯದ ಪ್ರಶ್ನೆಯಲ್ಲಿಯೇ ಅಡಗಿವೆ. ಈಗ ಆ ಪ್ರಶ್ನೆಯು ಪ್ರಾಮುಖ್ಯತೆಗೆ ಬಂದಿದೆ. ಕೊಡಗಿನಲ್ಲಿ ಸಂಪ್ರದಾಯವಾಗಿ ಎರಡು ಪಕ್ಷಗಳು ಸಂಗಡಗಳು ಇವೆ. ಕೊಡಗಿನ ಸ್ವಾತಂತ್ರ್ಯವನ್ನು ಹೋಗಾಡಿಸಿ ಮೈಸೂರಿಗೆ ಕೊಡಗನ್ನು ಸೇರಿಸಬೇಕೆನ್ನುವ ಸಂಯೋಜನವಾದಿಗಳು, ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡು ಪ್ರಜಾಪ್ರಭುತ್ವ ಸರಕಾರವನ್ನು ಪಡೆಯಬೇಕೆನ್ನುವ ಪ್ರತ್ಯೇಕವಾದಿಗಳು. ಪ್ರತ್ಯೇಕವಾದಿಗಳು ಅವರ ಧ್ಯೇಯವೇನೆಂದು ಸ್ಪಷ್ಟವಾಗಿ ಈ ದೇಶದ ಜನರ ಮುಂದಿಟ್ಟಿರುವರು. ಮತ್ತು ಈ ವಿಚಾರದಲ್ಲಿ ದೇಶದ ಬಹುಮತ ಅಭಿಪ್ರಾಯ ಹೇಗಿದೆಯೋ ಅದನ್ನು ತಿಳಿಯಲು ಒಪ್ಪುವವರಾಗಿದ್ದಾರೆ, ಸಂಯೋಜನವಾದಿಗಳೋ ಅವರ ಧ್ಯೇಯವನ್ನು ಪ್ರತಿಪಾದಿಸಲು ಯಾವ ಕಾರಣವಾದರೂ ಹಿಂಜರಿಯುವರು. ಇವರು ದೇಶದ ಭವಿಷ್ಯವನ್ನು ಜನರ ಅಭಿಪ್ರಾಯ ತಿಳಿಯದೆ ಈಗ ಮಾತ್ರ ಇಲ್ಲಿ ತೀರ್ಮಾನಿಸಿಬಿಡಬೇಕೆಂದು ಮತ್ತೆ ಪ್ರಯತ್ನ ಮಾಡುತ್ತಿರುವರು, ಮತ್ತು ಹಾಗೆ ಮಾಡದಿದ್ದರೆ ಇವರಿಗೆ ದೇಶದ ಜನರ ಅಭಿಪ್ರಾಯವೇನೆಂಬುದು ಅತ್ಯಗತ್ಯವಾಗುವುದಿಲ್ಲವಾಗಿ! 'ಮ್ಯೂಸಿಕಲ್ ಛೇರ್' ಆಟದಲ್ಲಿ ಬಿಟ್ಟ ಕುರ್ಚಿ ನನಗೆ ಸಿಕ್ಕದೆ ಹೋದರೆ? [illegible] ಕೊಡಗು ಇವರಿಗೆ ಇಷ್ಟವಿಲ್ಲ, ಯಾತಕೋ? ಎಲ್ಲೆಲ್ಲಿಯೂ ಕೊಡಗು ಹಿಂದೆ ಬಿದ್ದಿದೆ ಎಂದು ಸಾರಲು ಆ ಪ್ರಜಾಪ್ರಭುತ್ವದ ಕೊಡಗೇ ಇವರ ಆಲ್ವಾಣದ ಕೂಗು! ಕೊಡಗು ಹಿಂದೆ ಬಿದ್ದಿದೆ; [illegible] ಇವರಿಗೆ ಬೇಡ!

ಇಂದು ಒಂದು ಸೇರನ್ನು ಎರಡು ವಿಧಗಳಿಂದ ಬಿಡಿಸಬಹುದು. ಒಂದನೆಯದಾಗಿ, ಹೊರಗಿನಿಂದ ಶಿರಂಗಿ ಹಾರಿಸಿ ಪರ ಆಳುವ ಸೇರು. ನೆಲಕಟ್ಟವಾಗುವುದು. ಅವಿಚಾರಕರವಾದ ಇನ್ನೊಂದು ವಿಧವಿದೆ—ಒಳಗೆ ಗುಡಿಸಿಡಿಯನ್ನು ಸಮಯಕ್ಕೆ ಸರಿಯಾಗಿ ಇಡದೆ ಮಾಡಿದರೆ ಯಾರೂ ಇಷ್ಟು ಪರವಾಸಿಯನ್ನು ಹಾಳಾಗಿ ಹೋದ. ಈ ತತ್ವವನ್ನು ಸಂಯೋಜನವಾದಿಗಳು ಚೆನ್ನಾಗಿ ಬಲ್ಲರಾದರೂ ಹೊರಗಿನಿಂದ ಶಿರಂಗಿ ಹಾರಿಸಿ ಬೀಳಿಸುವ ಪ್ರಯತ್ನವು ನಿಷ್ಫಲವಾಯಿತು. ಆದರೆ, ಏನೇ ಆದರೇನು! ಎರಡನೇ ಉಪಾಯದಿಂದ ಬೀಳಿಸಲು ಬಿರುಗಾಳಿ ಎಬ್ಬಿಸಿರುವರು. ಈ ಬಿರುಗಾಳಿಯ ಅಪಾಯವನ್ನು ಪರೀಕ್ಷಿಸುವ.

ಕೊಡಗಿಗೆ ಶಿರಂಗಿ ಹಾರಿಸುವಾಗ ತಡೆದಿದ್ದಂತಹ ಪ್ರತ್ಯೇಕವಾದಿಗಳಿಗೆ ದೇಶದ ಜನರು ಕೃತಜ್ಞತೆಯನ್ನು ತೋರಿಸಿದರು. ಇದು ಸಂಯೋಜನವಾದಿಗಳಿಗೆ ಹಿಡಿಸಲಿಲ್ಲ. ಒಂದು ಬಿರುಗಾಳಿ ಎಬ್ಬಿಸಿ ದೇಶದಲ್ಲಿಯ ಜನರ ಮನಸ್ಸನ್ನು ಅಲ್ಲೋಲಕಲ್ಲೋಲವಾಗಿ ಮಾಡಿದರೇ ಸರಿ [illegible] ಇವರ [illegible] ಆಗಿ ಸರಕಾರದವರು ಭೂಕಂದಾಯವನ್ನು ಏರಿಸುವ ಒಂದು ಯೋಜನೆಯನ್ನು ಜನರ ಮುಂದಿಟ್ಟಿರುವ ಸಮಯದಲ್ಲಿ ತರುಣದಲ್ಲಿ ಇದು ಸಂಯೋಜನವಾದಿಗಳಿಗೆ ಸುಸಮಯವೆಂದು ತೋರಿಬಂದಿತು.

### ಭೂಕಂದಾಯವು ಏರಲು ಕಾರಣ

ಕೊಡಗಿನ ಸರಕಾರದ ಆದಾಯವು ಮುಖ್ಯವಾಗಿ ಮೂರು ಇಲಾಖೆಗಳಿಂದ ಕೂಡಿದ್ದಾಗಿದೆ (೧) ಭೂಕಂದಾಯ (೨) ಫಾರೆಸ್ಟ್ ಉತ್ಪತ್ತಿ (೩) ಅಬ್ಕಾರಿ ಉತ್ಪತ್ತಿ.

ಕೊಡಗಿನವರು ವಿಶಾಲ ಹೃದಯದವರಾಗಿ ತಮ್ಮನ್ನು ಸರಿಯಾಗಿ ಆಳಿಕೊಳ್ಳುವ ಅರ್ಹತೆ ಇರುವವರು ಎಂದು ತೋರಿಸಿಕೊಡಲು ಅಬ್ಕಾರಿ ಉತ್ಪತ್ತಿಯನ್ನು [illegible] ಹೇಗಾದರೂ ನಿಲ್ಲಿಸಬೇಕೆಂದು ತೀರ್ಮಾನಿಸಿರುವರು. ಮತ್ತು ಆ ತತ್ವವನ್ನು ಜಾರಿಗೆ ತರುವುದರ ಪ್ರತಿಯಾಗಿ ವರ್ಷಕ್ಕೆ ೩, ೪ ಲಕ್ಷ ರೂಪಾಯಿಗಳನ್ನು ಬೇರೆ ಉತ್ಪತ್ತಿಯಿಂದ ಖರ್ಚು ಮಾಡಬೇಕಾಗುವುದು. ಈ ಹಿಂತು ಹೋದ ಉತ್ಪತ್ತಿಯನ್ನು ಭರ್ತಿ ಮಾಡುವುದಕ್ಕಾಗಿಯೇ ಭೂಕಂದಾಯವನ್ನು ಏರಿಸಲು ಸರಕಾರದವರು ತೀರ್ಮಾನಿಸಿರುವರು. ಎಷ್ಟರ ಮಟ್ಟಿಗೆ ಭೂಕಂದಾಯವನ್ನು ಏರಿಸಬಹುದೆಂಬುದಕ್ಕೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ, ದೇಶದ ಹಿತವನ್ನು ಬಯಸುವ ಯಾವನೇ ಆಗಲಿ, ನಲುವತ್ತು ವರ್ಷಗಳ ಹಿಂದೆ ಬಟ್ಟೆ ಭತ್ತ ಒಂದರ ಎರಡು ರೂ, ಕಾಫಿ ಖಂಡಿ ಒಂದರ ೩೦೦ ರೂಪಾಯಿ, ಕಿತ್ತಳೆ ಹಣ್ಣು ಪಕ್ಕಿ ೧೦ ಉತ್ಪತ್ತಿ ೫೦ ರೂಪಾಯಿ ಇದ್ದ ಸಮಯದ ಕಂದಾಯವನ್ನೇ ಇಂದೂ ಕೊಡಬೇಕೆನ್ನುವುದು ಯಾವ ನ್ಯಾಯ?

ಇದಕ್ಕೆ ಸರಿಯಾಗಿ ಆದಕ್ಕೆ ಖರ್ಚು ಇದೆ ಎಂಬುವುದು ನ್ಯಾಯವಾದ ಮಾತು. ಆದರಂತೆಯೇ ಸರಕಾರಕ್ಕೂ ಖರ್ಚು ಇಲ್ಲವೇ? ೫, ೬ ಲಕ್ಷ ಇದ್ದ ಸರಕಾರದ ಖರ್ಚು ೪೦ ಲಕ್ಷಕ್ಕೆ ಏರಿದೆ.

ಬಡವರ ಪರಾಕೆಯನ್ನು ಮೇಲೆತ್ತಿ, ಈಗಿನ ಗೊಂದಲವನ್ನು ಎಬ್ಬಿಸಿಯೂ ಎತ್ತಿದ್ದಾರೆ ಸಂತೋಷ! ಸೇವರನ್ನೂ ಬಡವರನ್ನೂ ಯಾರೂ ಮರೆಯಬಾರದು. ಹೊಸ ಕಂದಾಯವು ಬಡವನಿಗೆ ವ್ಯಾಪಿಸುತ್ತದೆ ಎಂಬುವಂತಹ ಮಹತ್ವದ ಪ್ರಶ್ನೆಯನ್ನು ದೇಶದಲ್ಲಿಯ ಬಡವರೊಡನಿರುವ ಎಲ್ಲಾ ವ್ಯಕ್ತಿಯೂ ದಯೆ ದಾಕ್ಷಿಣ್ಯವಿಲ್ಲದೆ ಕೂಲಂಕುಷವಾಗಿ ಪರೀಕ್ಷಿಸಬೇಕಾಗಿದೆ.

ಹೊಸ ಕಂದಾಯವು ಬಡವನಿಗೆ ಅನ್ಯಾಯ ಸಹಜ! ಬಡವರಲ್ಲದವರು ಕೊಡಬಹುದಲ್ಲವೆ? ಆದುದರಿಂದ ಬಡವರನ್ನು ನಿವಾಯಿಸಿ, ಹೊಸ ಕಂದಾಯವನ್ನು ಒಂದು ನ್ಯಾಯ ನಡತೆಯಲ್ಲಿ ಎಡವರಲ್ಲದವರಿಗೆ ವ್ಯಾಪಿಸುವಂತೆ ಮಾಡುವುದಕ್ಕೆ ಅಡ್ಡಿಯೇನು? ಧೀರ್ಘ ಆಲೋಚನೆ ಮಾಡಿದರೆ, ಬಡವರನ್ನು ಪರರೂ, ಬಡವರ ಪರವಾಗಿ ದುಡಿಯುವವರೂ, ಯಾವಾಗಲೂ ನ್ಯಾಯವಾದದ್ದನ್ನು ಸೇರಿಯೇ ಭಾರವನ್ನು ಒಪ್ಪಿ, ಯಾವಾಗಲೂ ದೇಶದಲ್ಲಿ ಹೆಚ್ಚಿನ ಕಂದಾಯಗಳಿಗೆ ಬೆಂಬಲವಾಗಿ ನಿಲ್ಲಬೇಕಾಗಿದೆ. ಯಾವ ಒಬ್ಬ ಬಡವನೂ ಕೊಡಬಹುದಾದ ಬಳೀ ರೂ. ಹಕ್ಕೆ ಒಡವರಲ್ಲದವನು ೧೦೦ ಯಾ ೧೦೦೦ ರೂ. ಗಳು ತೆರಬೇಕಾಗಿ, ಅದರ ಫಲಿತಾಂಶಗಳು ಹೆಚ್ಚಾಗಿ ಬಡವರ ಸಹಾಯಕ್ಕಾಗಿಯೇ ಬಳಸುವ.

ಅನೇಕ ಬಡವರು ತಮ್ಮ ಐದು ರೂ. ಕಂದಾಯ ಕೊಡಬೇಕಾಗಿ ತಮ್ಮ ಭೂಮಿಯನ್ನು ಕಳೆಕೊಂಡಿರುವರೆಂದು ವಾದ. ಇದೆಷ್ಟು ನಿಜವಲ್ಲದ ವಾದ! ನಿಜ ವಾದವೇನು? ಆ ಸೋಮಾರಿತನದ ಕಾರಣದಿಂದ ಕಷ್ಟ ಉತ್ಪತ್ತಿಗಿಂತಲೂ ಖರ್ಚು ಹೆಚ್ಚು ಮಾಡಿದಂತಹ ವ್ಯಕ್ತಿಗಳು, ಬಡವ ಬಲ್ಲಿದನೆಂಬ ಭೇದವಿಲ್ಲದೆ ಅನೇಕರು ತಮ್ಮ ಆಸ್ತಿಗಳನ್ನು ಕಳೆಕೊಂಡಿರುವರು, ಇನ್ನೂ ಕಳೆಕೊಳ್ಳುವರು. ದುಡಿಯುವ ಬಡವರು ಅಂತಹ ಆಸ್ತಿಗಳನ್ನು ಪಡೆಕೊಳ್ಳುವರು.

### ಬಡವನನ್ನು ಮೇಲೆತ್ತಲು ದಾರಿ ಏನು?

ಬಡವನನ್ನು ಅವರ ಬಡತನದಿಂದ ಪಾರು ಮಾಡಲು, ವರ್ಷಕ್ಕೆ ಒಂದು ಸಾವಿರ ರೂ.ಗಳ ಸಹಾಯವನ್ನು ಮಾಡಿದರೆ, ಅವರ ಸ್ಥಿತಿಯು ಉತ್ತಮಗೊಳ್ಳುವುದೆಂದು ವಾದ ಮಾಡುವವರು ಯಾವ ತತ್ವವನ್ನು ಅನುಸರಿಸಿ ಹೇಳುವರೋ ನನಗೆ ತಿಳಿಯದು.

ಯಾವ ವ್ಯಕ್ತಿಯನ್ನೇ ಆಗಲಿ ವರ್ಷಂಪ್ರತಿ ಕೆಲವು ರೂಪಾಯಿಗಳ ಸಹಾಯದಿಂದ ಅವನನ್ನು ಮೇಲೆತ್ತಲೆಳಸುವ ಮಾತು, ಅರ್ಥವಿಲ್ಲದ ಮಾತು. ಬದಲಾಗಿ ಬಡವನಿಗೋಸ್ಕರ ವಿದ್ಯಾ ಇಲಾಖೆಯಲ್ಲೂ, ವೈದ್ಯ ಇಲಾಖೆಯಲ್ಲೂ ಖರ್ಚು ಮಾಡಿ ಈ ದಾರಿಯಲ್ಲಿ ಬಡವರು ಖರ್ಚು ಮಾಡುವಂತಹ ಸಾಧ್ಯತೆಗಳನ್ನು ನಿಲ್ಲಿಸಿ, ಬೇರೆ ಅನೇಕ ವಿಧಗಳಿಂದ ಅವನ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುವಂತಹ ಅವಕಾಶಗಳನ್ನು ಕಲ್ಪಿಸಿ ಕೊಡುವುದು ಸರಿಯಾದ ಮತ್ತು ವಿಧಾಯಕವಾದ ದಾರಿ. [illegible] ಒಂದು ಸಲ [illegible] ರೂಪಾಯಿಯ ಕಂದಾಯ ರಿಯಾಯಿತಿ ಮಾಡುವುದು. ಲಂಚತೋಯ ಅವರ ಮಕ್ಕಳಿಗೆ ಕಲಿಕೆ [illegible] ಅನೇಕ ತರಗತಿಯ ವರೆಗೆ ಸುಫಲವಾಗಿ ವಿದ್ಯೆ; ಭತ್ಯಕ್ಕೆ [illegible] ಕಲ್ಪಿಸುವುದು ಲೇಸೋ? ಯಾವ ಬಡವನಾದರೂ ಇದಕ್ಕೆ ಉತ್ತರ ಕೊಡುವುದು [illegible] ಬಡವನೇ ಬಡವನಾಗಿಯೇ ವಿದ್ಯಾಭ್ಯಾಸ ಮಾಡಿದವನು.

"To seek to increase slowly the standard of the less well paid section of the people by stepping up production and productivity, and by some measure of redistribution of wealth through taxation and the welfare service"

ಈ ತತ್ವವೇ ಯಾವ ಕಂದಾಯದ ಮೂಲ ತಿರುಳು. ಈ ತತ್ವವನ್ನರಿತು ಕೊಂಡು ನಮ್ಮ ಮುಂದಾಳುಗಳು ನಮ್ಮ ದೇಶದಲ್ಲಿಯ ತಿಳುವಳಿಕೆಯಿಲ್ಲದ ಮಹಾಜನರಿಗೆ ಸ್ವತಂತ್ರ ದೇಶದಲ್ಲಿ ವ್ಯಕ್ತಿಯ ಸ್ಥಾನ, ಎಲ್ಲಾ ವ್ಯಕ್ತಿಯೂ ಕಾಯಕಾರ್ಥ ಹೊರಬೇಕಾದ ಹೊರೆಯ ಭಾರ ಮತ್ತು ಸರಕಾರಕ್ಕೂ ವ್ಯಕ್ತಿಗೂ ಇರುವ ಸಂಬಂಧ, ಮುಂತಾದ ಆವಶ್ಯವಿರುವ ತಿಳುವಳಿಕೆಗಳನ್ನು ಪ್ರಚುರಪಡಿಸಿ, ದೇಶವನ್ನು ಮೇಲೆತ್ತಬೇಕಲ್ಲದೆ, ಬಿರುಗಾಳಿ ಎಬ್ಬಿಸುವುದರಿಂದಲ್ಲ.

ಮೊದಲು ವಿವಾಹಿತರಿಗೆ ಅಬ್ಕಾರಿ ಇಲಾಖೆಯಿಂದ ಬರುತ್ತಿದ್ದಂತಹ ಉತ್ಪತ್ತಿಯನ್ನು [illegible] ಮಾಡುತ್ತಿರುವುದಾಗಿಯೇ ಈ ಹೊಸ ಕಂದಾಯವು ಏರಿಸುವ ಸಂದರ್ಭ ಬಂದಿದೆ. ನಮಗೆ ಸೇಂದಿ ಸಾರಾಯಿ ಕುಡಿಯಲು ಎಂಟು, ಹತ್ತು ಲಕ್ಷ ರೂಪಾಯಿ ಗಣನೆ. ಬದಲಾಗಿ ಅದನ್ನು ಬಾಕಿ ಇರಿಸಿ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನೂ, ನಮಗೂ ನಮ್ಮ ಕಟುಂಬದವರಿಗೂ ಆರೋಗ್ಯ ಸೌಕರ್ಯಗಳನ್ನೂ, ನಮ್ಮ ಗ್ರಾಮಗಳಿಗೆ ರಸ್ತೆಗಳನ್ನು ಒಳ್ಳೆ ಸ್ಥಿತಿಯಲ್ಲಿಡುವುದಕ್ಕೂ ಹಣವಿಲ್ಲವೆಂದು ಹೇಳುವುದು ಒಳ್ಳೆ ರೀತಿಯಲ್ಲ. ಬಡ ರೈತನಿಗಾಗಿ ಮರುಗುವವರು ಇಷ್ಟು ಎಂಬುದನ್ನು ಎಲ್ಲರೂ ಯೋಚಿಸಬೇಕಾಗಿದೆ.

(ಮುಂದುವರಿಯುವುದು)

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲಾ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಕಮ್ಮಿ ಹೂಡಿ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಜರ್ | ಆರ್ಗನೈಜರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯಂ. ಅಪ್ಪಣ್ಣ, | ಎಂ. ಎ. ಬೆಳ್ಯಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟಾ, ಮಂಗಳೂರು. |



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿ. |
| ಜಾರಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸ್ಥಾಪನೆಯಾದಂದಿನಿಂದ ಪಾವತಿಯಾದ ಕ್ಲೇಮುಗಳು | 10,96,00,000 | ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

## ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ. | ಶಾಖಾ ಕಛೇರಿ. |
| ಎಂಪೈರ್ ಹೌಸ್, ಹಾರ್ನಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು. |



ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

# ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,

ಕದ್ರಿ ರೋಡ್, ಮಂಗಳೂರು.

ಸಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3¼% |
| 12 | ,, | 3½% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೨ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.



ಶ್ರೀ ಟಿ. ಎಸ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.



# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಸಾಮಾನುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳ. (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದನಂತರ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,

52–25 ಗೌರವ ಕಾರ್ಯದರ್ಶಿ.



# CRESCENT

## FOR PROTECTION AND SERVICE.

It is best to represent and insure with

The CRESCENT Insurance Co., Lt.d,

*H: O: BOMBAY.]* *[Established 1919.*

*For particulars write to:*

| | |
|---|---|
| Sri B. A. Poovaiah | or The Branch Manager. |
| *Organiser* | *22 B. Mahatma Gandhi Road,* |
| *Pollibetta, Coorg.* | *Bangalore 1.* |

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

೧೯೧೨ನೇ ಕೋಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪನವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 55,000. |

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಬ್ರಿಟಿಷ್ ಮತ್ತು ಮಾರ್ಕೆಂಟೈಲ್ ಇನ್ಶೂರೆನ್ಸ್ ಕಂಪೆನಿಯ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಮತ್ತು ಮೆನೇಜರ್. |



Edited, Printed and Published by P. I. Belliappa at 'Kodagu' Press, Mercara. for 'Kodagu' Ltd.

Reg. No. M. 1800.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೨೮ | ತಾರೀಕು ೧೭-೨-೧೯೫೦ನೇ ಶುಕ್ರವಾರ | ಸಂಚಿಕೆ ೩೮ |
|---|---|---|

# ನಮ್ಮ ಶಾಸನ-ವ್ಯಕ್ತಿಯ ಸ್ವತಂತ್ರ ಹಕ್ಕು ಮತ್ತು ಕರ್ತವ್ಯ.

ಲೇಖಕ:—ಶ್ರೀ ಸಿ. ಹಿರಿಯಣ್ಣ ಶೆಟ್ಟಿ, ಬಿ. ಎ.

ಜನವರಿ ೨೬ ನೇ ತಾರೀಕಿನಿಂದ ಜಾರಿಗೆ ಬಂದ ನಮ್ಮ ರಾಜ್ಯ ಶಾಸನವು ಅತಿ ದೊಡ್ಡದು. ಲೋಕದ ಯಾವ ಕಡೆಯಲ್ಲೂ ಯಾವ ಕಾಲದಲ್ಲೂ ಇಂಥಾ ಘಟನೆಯು ನಡೆದದ್ದು ಚರಿತ್ರೆಯಲ್ಲಿ ಕಾಣಿಸದಿಲ್ಲ. ಈ ಶಾಸನವು ೨೨ ಅಧ್ಯಾಯಗಳಾಗಿ ಒಟ್ಟು ೩೯೫ ಆರ್ಟಿಕಲ್ಸ್‌ಗಳಿಂದ ಕೂಡಿದೆ. ಇವನ್ನು ತಯಾರಿಸಲು ಘಟನಾ ಸಮಿತಿಯವರಿಗೆ ಸುಮಾರು ೩ ವರ್ಷಗಳು ಬೇಕಾಗಿವೆ. ಸಮಿತಿಯವರು ಈ ಬಗ್ಗೆ ೧೧೬ ಸಲ ಸಭೆ ಸೇರಿರುವರು. ೧೬೫ ದಿವಸಗಳನ್ನು ಇದರ ಬಗ್ಗೆ ಉಪಯೋಗಿಸಿರುವರು. ಇದಕ್ಕೆ ಸುಮಾರು ೭೬೩೫ ತಿದ್ದುಪಡಿ ಠರಾವುಗಳು ಬಂದಿದ್ದುವು. ಅದರ ಪೈಕಿ ಸುಮಾರು ೨೪೭೩ ಠರಾವುಗಳು ಚರ್ಚಿಸಲ್ಪಟ್ಟವೆ. ಇದಕ್ಕೆ ಒಟ್ಟು ೬೪,೦೦,೦೦೦ ರೂಪಾಯಿ ಖರ್ಚಾಗಿದೆಯಂತೆ. ಈ ಶಾಸನವನ್ನು ಸಮಿತಿಯವರು ತಯಾರಿಸುವ ಸಮಯ ಆಗಾಗ ಪ್ರೇಕ್ಷಕರಾಗಿ ಬಂದ ಒಟ್ಟು ಜನಸಂಖ್ಯೆಯು ೫೩,೦೦೦ಕ್ಕೆ ಮೀರಿದೆಯಂತೆ. ಇದರ ಪೂರ್ಣ ವಿಚಾರವನ್ನು ಬರೆದಿಡಲು ೨೦-೩೪ ಇಂಚು ಫೂಲ್ಸ್‌ಕ್ಯಾಪ್ ಕಾಗದಗಳು ಸುಮಾರು ೨೦,೦೦,೦೦೦ ಶೀಟುಗಳು ಬೇಕಂತೆ. ಆ ಕಾಗದಗಳನ್ನು ಒಂದರ ಮೇಲೊಂದನ್ನು ಇಡಲು ಸುಮಾರು ೨೦೦ ಗಜ ಎತ್ತರವಾಗುವದಂತೆ. ಈ ಶಾಸನವು ಸುಮಾರು ೩೩೦ ಮಿಲಿಯ ಜನರಿಗೆ ಉಪಯೋಗವಾಗುವದು. ಇವರಲ್ಲಿ ಸುಮಾರು ೧೭೩ ಮಿಲಿಯ ಜನರು ಮತದಾರರಾಗುವರು. ಈ ಶಾಸನದ ಪ್ರಕಾರ ೪೦೦೦ ಚುನಾವಣಾ ಸ್ಥಾನಗಳಲ್ಲಿ ೪೫೦೦ ಮೆಂಬರರು ಚುನಾಯಿತರಾಗಬೇಕಾಗುತ್ತದೆ. ಅದರ ಪೈಕಿ ೩೮೦೦ ಮೆಂಬರರು ಪ್ರಾಂತಗಳ ಅಸೆಂಬ್ಲಿ ಕೌನ್ಸಿಲುಗಳ ಬಗ್ಗೆ, ಉಳಿದವರ ಪೈಕಿ ೫೦೦ ಮೆಂಬರರು ಕೇಂದ್ರ ಅಸೆಂಬ್ಲಿಯ ಬಗ್ಗೆ, ೨೦೦ ಜನರು ಕೇಂದ್ರ ಕೌನ್ಸಿಲಿನ ಬಗ್ಗೆ ಆಗಿರುವರು.

ಸಮಿತಿಯವರು ಈ ಶಾಸನವನ್ನು ತಯಾರಿಸುವಾಗ ಅನ್ಯ ದೇಶದ ಪ್ರಮುಖರ ಸಹಾಯವನ್ನು ಕೇಳದೆ ನಮ್ಮ ಪ್ರತಿನಿಧಿಗಳಿಂದಲೇ ನಮಗಾಗುವ ಶಾಸನವನ್ನು ತಯಾರಿಸಿದರು. ಇದರಲ್ಲಿ ನಮಗೆ ಬೇಕಾದ ರಾಜಕೀಯ ಅನುಕೂಲತೆಗಳಿರುವವು. ಪ್ರತಿಯೊಬ್ಬ ಪ್ರಾಯಸ್ಥ ಮೆಂಬರನಿಗೂ ರಾಜ್ಯದ ಕಾರಭಾರಿನಲ್ಲಿ ಕೈಹಾಕುವ ಅಧಿಕಾರ ಮಾತ್ರವಲ್ಲ, ಕಾರ್ಯಭಾರದ ಯಾವ ಕೆಲಸಕ್ಕೂ ಯೋಗ್ಯತೆ ಇರುವ ಪಕ್ಷದಲ್ಲಿ ಅರ್ಹನಾಗುತ್ತಾನೆ. ಪ್ರತಿಯೊಂದು ರಾಜ್ಯಾಂಗ ರಚನೆಯಲ್ಲಿ ಮೂರು ಅಂಗಗಳು ಅಥವಾ ಭಾಗಗಳಿರುವವು. ೧. ಆಡಳಿತ ಮಂಡಳಿ (Executive) ೨. ಶಾಸನಭಾಗ (Legislature) ೩. ನ್ಯಾಯ ಭಾಗ (Judiciary). ಇವುಗಳಲ್ಲಿ ಮೊದಲನೇ ಹಾಗೂ ಎರಡನೇ ಭಾಗಗಳು (ಎರಡನೇ ಭಾಗ ಶಾಸನಸಭೆ) ನೇರಾ ಅಥವಾ ಪರೋಕ್ಷವಾಗಿ ಚುನಾಯಿತರಾಗತಕ್ಕವರಾದ್ದರಿಂದ ಈ ಮೂರರ ಅಂಶ ನಮ್ಮಿಂದಲೇ ಚುನಾಯಿತರಾದ ನಮ್ಮ ಅಧಿಕಾರದೊಳಗಿರುವವರು ಅಥವ ನಮಗೆ ಜವಾಬ್ದಾರರಾಗಿರುವವರು. ೫ ವರ್ಷಕ್ಕೆ ಒಂದಾವರ್ತಿ ಪ್ರತಿಯೊಬ್ಬ ಮೆಂಬರನಿಗೂ ಓಟು. ಇದರಿಂದ ಆಡಳಿತ ಮಂಡಳಿ ಮತ್ತು ಶಾಸನ ಸಭೆಯು ಪ್ರಜಾಪ್ರಭುತ್ವಕ್ಕೆ ಒಳಪಟ್ಟಿರುವವು. ನ್ಯಾಯ ಭಾಗವು ಪ್ರಜಾಪ್ರಭುತ್ವಕ್ಕೆ ಒಳಪಟ್ಟ ಭಾಗವಲ್ಲ. ನಮ್ಮ ಹಿತವೃತ್ತಿಯಿಂದಲೇ ಅದನ್ನು ಯಾರ ಅಧಿಕಾರದೊಳಗೆ ಅಂದರೆ ಹಂಗಿನೊಳಗೆ ಇಡಲಿಲ್ಲ. ಅವರನ್ನು ಸ್ವತಂತ್ರ ಭಾಗವನ್ನಾಗಿ ಮಾಡಿದ್ದಾಗಿದೆ. ಎಲ್ಲರಿಗೂ ಒಂದೇ ತರದ ನ್ಯಾಯ ತೀರ್ಮಾನವಾಗಬೇಕೆಂದೇ ಹೀಗೆ ಮಾಡಲೇಬೇಕಾಗಿದೆ. ಆದರೆ ಈ ಮೂರನೇ ಭಾಗದ ಸ್ಥಾನಕ್ಕೆ ಬೇಕಾದ ಯೋಗ್ಯತೆಯೂ ಅನುಕೂಲತೆ ಇರುವ ಪ್ರತಿಯೊಬ್ಬನಿಗೂ ಆ ಸ್ಥಾನವನ್ನು ಹೊಂದಲು ಅರ್ಹತೆ ಉಂಟು. ಇನ್ನು ನಮ್ಮ ಸರಕಾರದ ನೌಕರಿಯ ಬಗ್ಗೆ ಸಹಾ ಯೋಗ್ಯತೆ ಇರುವದಾದರೆ ಯಾವ ವ್ಯಕ್ತಿಗೂ ಪ್ರತಿಬಂಧಕವಿಲ್ಲ. ಈ ಎಲ್ಲಾ ಕಾರಣಗಳಿಂದ ನಾವು ತಿಳಿಯಬೇಕಾದುದೇನೆಂದರೆ ನಮ್ಮ ಸರಕಾರ ನಡೆಸುವಿಕೆಯು ನಮ್ಮಲ್ಲಿರುವುದು. ಆಡಳಿತದ ಮಂಡಳಿಯು ಸ್ವೇಚ್ಛೆಯಿಂದ ನಡೆದರೆ, ದರ್ಪದಿಂದ ಮಾಡಿದರೆ ಎಸೆಂಬ್ಲಿಯವರು ಸರಿಯಾದ ವಿಚಾರ ಕೇಳುವ ಕ್ರಮದಲ್ಲಿ ತಪ್ಪಿದಲ್ಲಿ ಇವರೆಲ್ಲರನ್ನೂ ಕೇಳುವ ಅಧಿಕಾರವು ನಮಗಿರುವುದು. ಮತ್ತೆ ಮುಂದೆ ಬರುವ ಚುನಾವಣೆ ಕಾಲದಲ್ಲಿ ತಪ್ಪಿತಸ್ಥರಿಗೆ ಚೆನ್ನಾಗಿ ಬುದ್ಧಿ ಕಲಿಸಬಹುದು. ಚುನಾಯಿತರಾದ ಮೆಂಬರರ ತಪ್ಪು ನಮ್ಮದೇ ಆಗುವದು. ನಾವು ನಮ್ಮನ್ನೇ ದೂರಬೇಕೇ ಹೊರತು ಅನ್ಯರನ್ನು ಈ ಪರಿಗೆ ದೂರಿದಂತೆ ಇನ್ನು ಮುಂದೆ ಆಗದು. ಒಳ್ಳೇದು ಕೆಟ್ಟದ್ದು ನಮ್ಮ ಕೈಯಲ್ಲಿಯೇ ಇದೆ.

ನಮ್ಮ ಶಾಸನದ ಮೇರೆಗೆ ನಮಗೆ ಕೆಲವು ಹಕ್ಕುಗಳು ಬಂದಿವೆಯಾದರೂ ಅವುಗಳ ಒಟ್ಟಿಗೆ ಕೆಲವು ಜವಾಬ್ದಾರಿಗಳು ಸಹ ಬಂದಿರುತ್ತವೆ. ಇದೆ ಎಂಬುದನ್ನು ತಿಳಿಯಲೇಬೇಕು. ಜವಾಬ್ದಾರಿಯಿಲ್ಲದ ಹಕ್ಕಿಗೆ ಬೇಜವಾಬ್ದಾರಿ ಹಕ್ಕೆನ್ನುತ್ತಾರೆ. ಅಂಥಾ ಹಕ್ಕಿಗೆ ಗೌರವವಿಲ್ಲ. ಬೇಜವಾಬ್ದಾರಿ ಹಕ್ಕುಗಳು ಹಾಗೂ ನಮ್ಮ ಸಮಾಜಕ್ಕೂ ಹಿತಕರವಲ್ಲ. ಪ್ರತಿ ಒಂದು ಹಕ್ಕು ಕರ್ತವ್ಯದಿಂದ ಕೂಡಿರುವುದರಿಂದ ಹಕ್ಕುಗಳು ಬೇಕಾದರೆ ನಾವು ಕರ್ತವ್ಯಗಳನ್ನು ಅದರ ವ್ಯಕ್ತಿಗತವನ್ನು ತಿಳಿಯಬೇಕು. ಹಿಂದಿನ ವಿದ್ಯಾಭ್ಯಾಸ ಮಾಡಿಸುವ ಜವಾಬ್ದಾರಿಯು ನಮ್ಮನ್ನು ಹೊಂದಿದೆ. ಓಟಿನ ಹಕ್ಕು ನಮಗೆ ಕೊಟ್ಟಿದ್ದಾರೆ. ವಿದ್ಯಾವಂತರು ಪುಸ್ತಕಗಳನ್ನು ವರ್ತಮಾನ ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳುತ್ತಾರೆ. ಆದರೆ ನಮ್ಮಲ್ಲಿ ಹೆಚ್ಚಿನ ಜನರು ಅವಿದ್ಯಾವಂತರು. ಇವರು ಹೇಗೆ ಇದನ್ನು ತಿಳಿಯುವರು? ಈ ಬಗ್ಗೆ ವಿದ್ಯಾವಂತರು ಸಂಸ್ಥೆ ಸಂಘಗಳನ್ನು ಅಲ್ಲಲ್ಲಿ ಸ್ಥಾಪಿಸಿ, ಜನರಿಗೆ ಪ್ರಚಾರ ಮಾಡಬೇಕು. ನಮ್ಮ ಸ್ವಾತಂತ್ರ್ಯವು ಸ್ಥಿರವಾಗಿ ನಿಲ್ಲಬೇಕಾದರೆ ನಾವು ಯಾವಾಗಲೂ ಜಾಗರೂಕರಾಗಿರಬೇಕು. (The price of Liberty is eternal vigilance) ಸ್ವತಂತ್ರ ಸಿಕ್ಕಿರುವದೆಂದು ನಾವು ಮೈಮರೆತರೆ ಕ್ರಾಂತಿ ರೂಪದ ಸರ್ವಾಧಿಕಾರವು ಬಲೆಯೇ ಅದನ್ನು ಉಪಯೋಗಿಸುವ ಜವಾಬ್ದಾರಿಯು ನಮ್ಮ ಮೇಲಿದೆ. ಕೆಲವರು ಕೊಡಬೇಕೆಂಬ ಬೊಬ್ಬೆ ಕೇಳುತ್ತದೆ. ಹಾಗೆ ಮಾಡುವ ಮನೆ ಉಂಡು ತಿರುಗದೆ ಮಾಡಬೇಕು. ದುಡಿಯುವ ಜವಾಬ್ದಾರಿಯೂ ನಮ್ಮ ಮೇಲಿದೆ.

ಮತದಾನದ ಓಟಿನ ಹಕ್ಕನ್ನು ನಾವು ಸರಿಯಾಗಿ ಉಪಯೋಗಿಸದೆ ಇಂದಿನ ದಿನದಲ್ಲಿ ಹೊಣೆಯಿಲ್ಲದ ವ್ಯಕ್ತಿಗಳನ್ನು ಚುನಾಯಿಸಿ ಕೊಟ್ಟರೆ ಏನು? ಅಥವಾ ಓಟಿನ ಹಕ್ಕನ್ನು ನಾವು ಇತರರ ದಬ್ಬಾಳಿಕೆಯಿಂದ ಅಥವಾ ಒಳಸಂಚಿಗೆ ಸೇರಿದ ಇನ್ನೊಬ್ಬರಿಗೆ ಮಾರಿದರೆ ದುರುಪಯೋಗ ಮಾಡಿದರೆ ಭ್ರಷ್ಟಾಚಾರಿಗೆ ಅಧಿಕಾರ ಸಿಕ್ಕಿದಂತಾಗುವುದು. ನಮ್ಮ ಹಿಂದಿನ ಆಗುಹೋಗುಗಳಲ್ಲಿ ನಾವು ಓಟನ್ನು ಹೊಂದಿದ್ದುದರಿಂದ ಇಂಥ ಬಹಳ ಬೆಲೆಯ ಕೆಟ್ಟದ್ದು ಎಂಬುದನ್ನು ನಾವು ಮರೆಯಲೇಬಾರದು. ಪ್ರಜಾಪ್ರಭುತ್ವ ಸರಕಾರವಿರುವ ಯೂರೋಪು ಮತ್ತು ಅಮೇರಿಕ ದೇಶಗಳಲ್ಲಿ ಸ್ತ್ರೀಯರಿಗೂ ಓಟು ಇರುವದು; ಅಲ್ಲಿಯ ಜನರು ವಿದ್ಯಾವಂತರು; ಅವರ ಜವಾಬ್ದಾರಿಕೆಗಳೇನೆಂಬುದನ್ನು ಚೆನ್ನಾಗಿ ತಿಳಿದಿರುವರು. ಮಹಾಯುದ್ಧದ ಸಮಯ ಬಹಳ ಜಾಗರೂಕತೆಯಿಂದ ಓಟಿನ ಕರ್ತವ್ಯವನ್ನು ಪರಿಪಾಲಿಸಿದವರು. ಅಮೇರಿಕ ಮತ್ತು ಸ್ವಿಟ್ಜರ್ಲ್ಯಾಂಡ್ ಈ ಎರಡು ದೇಶಗಳಲ್ಲಿ ಚುನಾವಣೆಯ ಸಮಯ ಓಟು ಕೊಡದ ಮತದಾರರನ್ನು ಶಿಕ್ಷಿಸುವುದಲ್ಲದೆ ಶಿಕ್ಷೆ ವಿಧಿಸುವ ಕಾನೂನು ಜಾರಿಯಲ್ಲಿದೆ. ನಮ್ಮ ಜನರು ಅವಿದ್ಯಾವಂತರು. ಪ್ರಜಾಸತ್ತಾತ್ಮಕ ಸರಕಾರದ ಅರಿವಿಲ್ಲದವರು. ಇನ್ನು ಅನೇಕರು ಪರರ ಹಂಗಿನವರು ಆದ್ದರಿಂದ ಈ ಕುರಿತು ಹಲವು ರಾಜಕೀಯ ತಜ್ಞರು ಸಂದೇಹ ಸೂಚಿಸಿರುವರು. ಆದರೆ ಮತದಾರರು ಬಹುಸಂಖ್ಯಾತರಲ್ಲಿರುವುದರಿಂದ ಹಣ ಬಲದಿಂದ ಅಥವಾ ಇನ್ನಿತರ ದಬ್ಬಾಳಿಕೆಯಿಂದ ಮೆಂಬರರು ಚುನಾಯಿತರಾಗಲು ಇದರಿಂದ ಕಷ್ಟವಾದೀತು. ಪ್ರಜಾಸತ್ತಾತ್ಮಕ ಸರಕಾರಕ್ಕೆ ಬೆಂಬಲವೇ ಮತದಾರರು. ಅವರು ತಮ್ಮ ಕೆಲಸವನ್ನು ಸರಿಯಾಗಿ ಪೂರೈಸದೆ ಇದ್ದಲ್ಲಿ ಕಾವಲಗಾರರು ಕೋಟೆಯ ಬಾಗಿಲಲ್ಲಿ ನಿದ್ದೆ ಮಾಡಿದಂತೆಯೇ ಸರಿ. ಇವರಿಗೂ ಸೈನ್ಯ ಬಿಟ್ಟು ಪೈರಿ ಸೈನ್ಯ ಸೇರಿದವರಿಗೂ ಏನೂ ವ್ಯತ್ಯಾಸವಿಲ್ಲ. ಓಟರರು ತಮ್ಮ ಕರ್ತವ್ಯವನ್ನು ಪೂರೈಸುವರೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಗತಿಗಳನ್ನು ತಿಳಿದುಕೊಳ್ಳಬೇಕು. ಮತ್ತು ನಮ್ಮ ಹಿತ್ತಿಲ ಬಗ್ಗೆ ಬರೆದಿರುತ್ತೇನೆ. ನಾವು ನಮ್ಮ ಸ್ವಾರ್ಥವನ್ನು ಬಿಟ್ಟು ಸಾರ್ವಜನಿಕ ವಿಚಾರದಲ್ಲಿ ತಲೆಹಾಕಿ ಕೆಲಸ ಮಾಡಬೇಕು.

ನಮ್ಮ ದೇಶದಲ್ಲಿ ಈಗ ಒಂದೇ ರಾಜಕೀಯ ಪಕ್ಷ ಇರುವುದು. ಪ್ರಜಾಪ್ರಭುತ್ವದ ಬೆಳವಣಿಗೆಗೆ ಹೀಗಿರುವುದು ಒಳ್ಳೆಯದಲ್ಲ. ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಹೀಗೆ ಇದ್ದದ್ದು ಸರಿ. ಆಗ ಸ್ವಾತಂತ್ರ್ಯದ ಹೋರಾಟ ಒಂದೇ ಇದ್ದುದರಿಂದ ಒಂದೇ ಪಾರ್ಟಿ ಬೇಕಾಗಿತ್ತು. ಈಗ ಸರ್ವ ವಿಚಾರದಲ್ಲೂ ವಿಂಗಡಣೆಯಾಗಬೇಕು. ಒಂದೇ ಶಿಸ್ತಿಗೆ ಒಳಪಟ್ಟಿರುವ ಒಂದೇ ಪಾರ್ಟಿಯಿಂದ ಸರಿಯಾಗಿ ವಿಮರ್ಶೆಯ ತೀರ್ಮಾನವು ಅಸಾಧ್ಯ. ಆದ್ದರಿಂದ ಇನ್ನು ಬೇರೆ ಪಾರ್ಟಿಗಳು ಬೇಕು. ಈಗ ಎಷ್ಟೋ ಸಂಘಗಳ ಆಡಳಿತಗಳಿಂದ ದೇಶಕ್ಕೆ ಕೆಟ್ಟದ್ದೇ ಹೊರತು ಒಳ್ಳೆಯದಲ್ಲ. ನಿಜವಾದ ತತ್ವಗಳನ್ನು ಆಧಾರವಾಗಿಟ್ಟುಕೊಂಡ ರಾಜಕೀಯ ಪಾರ್ಟಿಗಳು ಬೇಕಾಗಿವೆ. ಆಗ ಸಭೆಗಳಲ್ಲಿ ಜನರಿಗೆ ವಿಶ್ವಾಸ ಹುಟ್ಟುತ್ತದೆ. ಬೇರೆ ಬೇರೆ ಪಾರ್ಟಿಗಳಿರುವುದರಿಂದ ಒಳ್ಳೆಯದು ಮತ್ತು ಕೆಟ್ಟದ್ದು ವಿಮರ್ಶಿಸುವ ಸಹಾಯ ದೊರಕುತ್ತದೆ. ಪಾರ್ಟಿಗಳು ಪ್ರಚಾರದ ಮೂಲಕ ತಮ್ಮ ಕಡೆಯವರಿಗೆ ಬೋಧಿಸುವ ಉಪನ್ಯಾಸಗಳನ್ನು ಕೇಳುತ್ತಾರೆ. ಚುನಾವಣೆಯ ಕಾಲದಲ್ಲಿ ಹಾಳೆ ಪತ್ರಿಕೆಗಳಲ್ಲಿರುವ ಓಟರರನ್ನು ಕರೆದು ತಂದು ಓಟು ಕೊಡಿಸುವರು. ಅನೇಕ ಕಡೆಗಳಲ್ಲಿ ಪ್ರಾಯಸ್ಥರಿಗೆ ಶಾಲೆಗಳನ್ನು ತೆರೆದು ವಿದ್ಯೆ ಕಲಿಸುವರು. ಮತದಾರರು ಓಟುಗಳನ್ನು ದುರುಪಯೋಗ ಮಾಡದಂತೆ ಎಚ್ಚರಿಕೆಯಾಗಿ ಸರಿದಾರಿಗೆ ತರುವರು. ತಪ್ಪುಗಳನ್ನು ಕಂಡುಹಿಡಿದು ಬುದ್ಧಿ ಹೇಳುವರು. ಇನ್ನೊಂದು ಪಾರ್ಟಿಯು ಇಲ್ಲದಿರುವಲ್ಲಿ ಪಾರ್ಟಿಯ ಮೆಂಬರರು ತಮ್ಮ ತಮ್ಮೊಳಗೆ ಜಗಳವಾಡುವದಲ್ಲದೆ ಪಾರ್ಟಿಯೊಳಗೆ ದ್ವಿಪಕ್ಷಗಳಾಗಿ ಪಾರ್ಟಿಯ ಐಕ್ಯತೆಯನ್ನೇ ಹಾಳುಮಾಡುತ್ತಾರೆ.

ಮೆನಯೂಗ,

---

# ಆಂಧ್ರ ಸೈಕ್ಲೋನ್ [ಬಿರುಗಾಳಿ] ಸಂರಕ್ಷಣಾ ನಿಧಿ.

## ಕೊಡಗಿನ ಚೀಫ್ ಕಮಿಷನರ ಪ್ರಕಟಣೆ.

೧೯೪೯ನೇ ಡಿಸೆಂಬರ್ ೩ ನೇ ತಾರೀಕಿನಲ್ಲಿ ಮದರಾಸಿನ ಪ್ರಧಾನ ಮಂತ್ರಿಯವರು ಪ್ರಕಟಿಸಿದ ಮೇಲ್ಕಂಡ ವಿಷಯದ ಈ ಕೆಳಗಿನ ವಿನಂತಿ ಪತ್ರವನ್ನು ಸಾರ್ವಜನಿಕರ ಅವಗಾಹನೆಗಾಗಿ ಪುನಃ ಪ್ರಕಟಿಸಲಾಗಿದೆ. ಕೊಡಗಿನ ಮಹಾಜನರ ಔದಾರ್ಯ ಪರೀಕ್ಷೆಯು ಈಚೆಗೆ ಬಹುಮಟ್ಟಿಗೆ ನಡೆದಿದೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಈ ಸಂದರ್ಭದಲ್ಲಿ ಅನೇಕ ಮುಖವಾಗಿ ವಿವಿಧ ಸಂಧರ್ಭಗಳಲ್ಲಿ ಉದಾರ ಹಸ್ತದಿಂದ ಸಹಾಯ ನೀಡಿದ ಸರ್ವರಿಗೂ ನನ್ನ ಅತ್ಯಂತ ಕೃತಜ್ಞತೆಯನ್ನು ಸೂಚಿಸುತ್ತೇನೆ. ಉತ್ತರ ಆಂಧ್ರ ಪ್ರಾಂತದಲ್ಲಿ ಬಿರುಗಾಳಿಯಿಂದುಂಟಾಗಿರುವ ಅನಾಹುತವು ಅನಿರೀಕ್ಷಿತವಾದುದಾಗಿದೆ. ಮತ್ತು ಅಪಾರ ಜೀವಹಾನಿಯನ್ನು ನಷ್ಟವನ್ನೂ ಉಂಟುಮಾಡಿದೆ. ಈ ಅನಾಹುತದ ಎಷ್ಟು ಅಪಾರವಾಗಿದೆಯೆಂಬುದನ್ನು ಮದರಾಸಿನ ಪ್ರಧಾನ ಮಂತ್ರಿಯವರ ವಿನಂತಿ ಪತ್ರದಿಂದ ಅರಿಯಬಹುದಾಗಿದೆ. ಇದೇ ಬಗೆಯ ಅನಾಹುತದಿಂದ ೧೯೩೫ರ ಕ್ವೆಟ್ಟಾ ಭೂಕಂಪದ ಕಾಲದಲ್ಲಿ ಕೊಡಗಿನವರು ಕ್ವೆಟ್ಟಾ ಭೂಕಂಪ ನಿವಾರಣಾ ಸಮಿತಿಯವರ ಪ್ರಾರ್ಥನೆಯನ್ನು ಮನ್ನಿಸಿ ಅತಿ ಔದಾರ್ಯದಿಂದ ಸಹಾಯ ನೀಡಿರುವರು. ಅದರಂತೆಯೇ ಪ್ರಧಾನ ಮಂತ್ರಿಗಳ ಆಂಧ್ರ ಜಿಲ್ಲೆಯವರ ಸಂರಕ್ಷಣಾ ನಿಧಿಗಾಗಿ ಸಹಾಯ ಕೇಳಿದ ವಿನಂತಿಗೆ ಶೀಘ್ರ ಸಹಾಯವು ಸರ್ವರಿಂದಲೂ ದೊರೆಯುವುದೆಂದು ನನಗೆ ಭರವಸೆಯಿದೆ. ಎಷ್ಟೇ ಅಲ್ಪಮೊತ್ತದ ಎಲ್ಲಾ ಮೊಬಲಗನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ಈ ಬಗೆಯ ಹಣವನ್ನು ತಾಲ್ಲೋಕು ಸುಭೇದಾರರುಗಳಿಗಾಗಲೀ ಅಥವಾ ಅವರಿಂದ ಅಧಿಕೃತರಾದ ಇತರ ಅಧಿಕಾರಿಗಳಿಗಾಗಲೀ ಕೊಡುವುದು. ಅವಶ್ಯವೆನಿಸುವಷ್ಟು ಕಮಿಟಿಗಳನ್ನು ಸ್ಥಾಪಿಸಿ ಆ ಕಮಿಟಿಗಳಿಂದ ವಸೂಲು ಮಾಡಲ್ಪಟ್ಟ ಮೊಬಲಗುಗಳನ್ನು ಸ್ವೀಕರಿಸಿ ಈ ಎಲ್ಲಾ ನಿಧಿಯನ್ನೂ ಮದರಾಸಿನ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಡಲು ನನಗೆ ಕಳುಹಿಸಿಕೊಡುವಂತೆ ಸುಭೇದಾರರುಗಳನ್ನು ಕೇಳಿಕೊಳ್ಳಲಾಗಿದೆ.

**ಮದರಾಸಿನ ಮಾನ್ಯ ಪ್ರಧಾನ ಮಂತ್ರಿಯವರ ಪ್ರಾರ್ಥನೆ.**

೧೯೪೯ನೇ ಇಸವಿಯ ನವೆಂಬರ್ ಕೊನೆಯ ಭಾಗದಲ್ಲಿ ಉಂಟಾದ ಅಪಾರ ನೆರೆ ಹಾವಳಿಯಿಂದಲೂ ಅದರ ಮರು ತಿಂಗಳಲ್ಲಿ ಒದಗಿದ ಭಯಂಕರವಾದ ಬಿರುಗಾಳಿಯ ಅನಾಹುತದಿಂದಲೂ ವಿಶಾಖಪಟ್ಟಣ, ಪೂರ್ವ ಮತ್ತು ಪಶ್ಚಿಮ ಗೋದಾವರಿ, ಕೃಷ್ಣ ಮತ್ತು ಗುಂಟೂರು ಜಿಲ್ಲೆಗಳಲ್ಲಿಯೂ, ನೆಲ್ಲೂರು, ಕಡಪಾ, ಕರ್ನೂಲು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯೂ ವಿಶೇಷ ವಿನಾಶಕರವು ಆದ ಅಪಾರ ನಷ್ಟ ಉಂಟಾಗಿರುವುದು. ಇದು ಸಾರ್ವಜನಿಕರಿಗೆ ತಿಳಿದ ವಿಷಯವಾಗಿದೆ. ಮೊದಲು ಹೇಳಿದ ಜಿಲ್ಲೆಗಳಲ್ಲಿ ನಷ್ಟವು ಮಿತಿಮೀರಿರುವುದು. ನೆರೆಯ ಹಾವಳಿಯೂ ಬಿರುಗಾಳಿಯೂ ಒಟ್ಟಾಗಿ ೮೦೦ ಮಾನವ ಜೀವವನ್ನು ಬಲಿಗೊಂಡವು. ೩೫,೦೦೦ ದನಕರುಗಳೂ, ನೂರಾರು ಕುರಿಗಳೂ, ಆಡುಗಳೂ ನಾಶವಾದವು. ೩,೦೦,೦೦೦ಕ್ಕೆ ಮೇಲ್ಪಟ್ಟ ವಾಸದ ಗುಡಿಸಲುಗಳೂ, ಮನೆಗಳೂ, ಸಂಪೂರ್ಣ ನಾಶವಾಗಿವೆ. ಒಕ್ಕಲು ಹರಿಕೆದ ಪೈರು ಬಹುಭಾಗವು ನೀರು ಪಾಲಾದ ಪ್ರ. ೧೬,೩೦,೦೦೦ ಎಕರೆಗಳ ವಿಸ್ತೀರ್ಣದಲ್ಲಿ ನಿಂತಿದ್ದ ಬೆಳೆಗಳೆಲ್ಲಾ ಅಪಾರ ನಷ್ಟವಾಗಿದೆಯೆಂಬುದಾಗಿ ವರದಿ ಬಂದಿದೆ. ಇದು ವರೆಗೆ ಆಗಿರುವ ನಷ್ಟವನ್ನು ದ್ರವ್ಯ ರೂಪದಲ್ಲಿ ಮೂರು ಕೋಟಿ ರೂಪಾಯಿಗಳಷ್ಟು ಆಗಬಹುದೆಂದು ಅಂದಾಜು ಮಾಡಲಾಗಿದೆ.

೨. ಜನರಿಗೆ ಆದರಲ್ಲಾ ನಷ್ಟವು ಹಾಗಿ ಬದಲಾಗೆ ಯಾವ ರೀತಿಯಲ್ಲೂ ಕಷ್ಟಗಳುಂಟಾಗಿವೆಯೆಂಬುದನ್ನು ಊಹಿಸುವುದು ಕಷ್ಟವಲ್ಲ. ಇವರಲ್ಲಿ ಅನೇಕರು ವಾಸಕ್ಕೆ ಮನೆ ಇಲ್ಲದೆ ನಿರಾಶ್ರಿತರಾಗಿ ತಮ್ಮ ಸಮಸ್ತವನ್ನೂ ಕಳೆದುಕೊಂಡಿರುವರು. ಅವರ ಮನೆಗಳನ್ನು ಕಟ್ಟಿಕೊಳ್ಳುವುದಲ್ಲದೆ ಅವರ ವ್ಯಾಪಾರದ ಕರ್ಮಗಳನ್ನು ಒದಗಿಸಿಕೊಂಡು ಅವುಗಳ ಸಹಾಯದಿಂದ ಪುನಃ ಅವರ ಜೀವನ ಮಾರ್ಗವನ್ನು ಕಲ್ಪಿಸಿಕೊಳ್ಳುವುದಕ್ಕೂ ಸಹಾಯ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಅನೇಕರಿಗೂ ಮತ್ತೆ ಅವರ ಜೀವನ ಮಾರ್ಗಕ್ಕೂ ಅವಕಾಶವನ್ನು ಕಲ್ಪಿಸಬೇಕಾಗಿದೆ. ಅತ್ಯಂತ ಹೀನರಾದ ಈ ಜನರನ್ನು ಉಳಿಸಬೇಕಾದರೆ ತಕ್ಷಣ ಸಹಾಯ ಕೊಡಲು ಕೈಕೊಳಬೇಕಾಗಿದೆ.

೩. ಇದಕ್ಕಾಗಿ ಸರಕಾರವು ಈ ವರೆಗೆ ರೂ ೧೯,೯೯,೦೦೦ ಗಳನ್ನು ಪ್ರಾಂತೀಯ ನಿಧಿಯಿಂದಲೂ ರೂ. ೩೫,೦೦೦ ಕೃಷ್ಣ ಮತ್ತು ಗೋದಾವರಿ ಸಂರಕ್ಷಣಾ ನಿಧಿಯಿಂದಲೂ ಈ ಕಷ್ಟ ನಷ್ಟಗಳ ನಿವಾರಣೆಗಾಗಿ ಮಂಜೂರು ಮಾಡಿದೆ. ಸರ್ಕಾರವು ಬಡ್ಡಿಯಿಲ್ಲದ ಸಾಲವನ್ನೂ ಈ ಕಷ್ಟಕ್ಕೀಡಾದ ರೈತರಿಗೆ ಎತ್ತುಗಳು, ವ್ಯವಸಾಯದ ಹತ್ಯಾರುಗಳು ಇತ್ಯಾದಿಗಳನ್ನು ಕೊಂಡುಕೊಳ್ಳಲು ಮಂಜೂರು ಮಾಡಿ ಆ ಬಗ್ಗೆ ಆಜ್ಞೆಗಳನ್ನು ಹೊರಡಿಸಿರುವರು. ಸಾಧ್ಯವಾದ ಕಡೆಗಳಲ್ಲೆಲ್ಲಾ ಎರಡನೆಯ ಬೆಳೆಯನ್ನು ಬೆಳೆಯಲು ಅನುಕೂಲಿಸುವಂತೆ ಬೀಜ, ಗೊಬ್ಬರ ಮತ್ತು ನೀರು ಸರಬರಾಜು ಮೊದಲಾದುವುಗಳ ಅನುಕೂಲತೆ ಒದಗಿಸಲಾಗಿದೆ. ಇನ್ನೂ ಹೆಚ್ಚಿಗೆ ಕಾಣಿಕೆಯ ರೂಪದಲ್ಲಿ ಸಹಾಯವು ದೊರಕಲೇ ಬೇಕಾಗಿದೆ.

(೧) ಮನೆಕಟ್ಟುವ ಸಾಮಗ್ರಿಗಳೂ, ಬಟ್ಟೆಗಳು ಮುಖ್ಯವಾಗಿ ಬೇಕಾಗಿವೆ. (೨) ದನಕರುಗಳಿಗೆ ಮೇವು. (೩) ನಷ್ಟಕ್ಕೀಡಾದ ಭೂಮಿಯ ದುರಸ್ತಿ. (೪) ನೆರೆ ಮೊದಲಾದುವುಗಳಿಗೆ ಗುರಿಯಾಗದಂತೆ ಇರುವ ಎತ್ತರ ಪ್ರದೇಶದಲ್ಲಿ ಬಡ ಕುಟುಂಬದವರಿಗೆ ಮನೆಗಳು ಬೇಕಾಗಿವೆ. (೫) ಮುಖ್ಯವಾಗಿ ಬೆಸ್ತರಿಗೆ ಬಲೆ ಮತ್ತು ದೋಣಿಗಳೂ, ಬಡ ಕಸುಬುಗಾರರಿಗೆ ಅವರ ಹತ್ಯಾರುಗಳು ಭೂ ವ್ಯವಸಾಯಗಾರರಿಗೆ ಅವರ ಹತ್ಯಾರುಗಳು ಬೇಕಾಗಿವೆ (೬) ಸಂಪಾದಿಸುವ ಯಜಮಾನನನ್ನು ಕಳೆದುಕೊಂಡಿರುವ ಕುಟುಂಬದವರಿಗೆ ಒಟ್ಟು ದ್ರವ್ಯ ಸಹಾಯ. (೭) ಮುಂದಿನ ಫಸಲು ಬರುವ ತನಕ ಜೀವನ ಮಾರ್ಗ ಕಲ್ಪನೆ (೮) ನಷ್ಟವಾಗಿರುವ ದನಕರುಗಳ ಬದಲು ಪುನಃ ಅವುಗಳನ್ನು ಒದಗಿಸುವುದು.

೪. ಜನರಿಗೆ ಒದಗಿದ ನಷ್ಟದ ಪ್ರಮಾಣಕ್ಕೆ ಸಮನಾಗಿ ಸಾರ್ವಜನಿಕ ಭಂಡಾರದಿಂದ ಸರಕಾರವು ಸಹಾಯವನ್ನು ಒದಗಿಸುವುದು ಸಾಧ್ಯವಾಗಲಾರದೆಂಬುದು ನಿರ್ವಿವಾದವಾಗಿದೆ. ಸಾವಿರಾರು ಸಂಸಾರಗಳು ಕಷ್ಟನಷ್ಟಗಳನ್ನನುಭವಿಸಿದ ಈ ಕುಟುಂಬಗಳವರಿಗೆ ಸರಿಯಾದ ರಕ್ಷಣೆಯನ್ನೊದಗಿಸುವುದು ಬೇಗನೆ ಜನರ ನೆರವಿಲ್ಲದೆ ಎಂದೂ ಸಾಧ್ಯವಾಗಲಾರದು. ಮದರಾಸಿನ ಮಾನ್ಯ ಗವರ್ನರ್‌ರವರು ನಿರಾಶ್ರಿತರ ಸಹಾಯದ ಬಗ್ಗೆ ಸಹಾಯವನ್ನು ಕೋರಿ ವಿನಂತಿ ಮಾಡಿರುವರು. ಗವರ್ನರ್‌ರವರ ಆಂಧ್ರ ಪ್ರಾಂತ ಸೈಕ್ಲೋನ್ ರಿಲೀಫ್ ನಿಧಿ ಎಂಬ ಹೆಸರಿನಿಂದ ಒಂದು ನಿಧಿ ಆರಂಭಿಸಲ್ಪಟ್ಟಿತು. ಇದು ಪ್ರಾಂತೀಯ ನಿಧಿಯ ಒಂದು ಭಾಗವಾಗಿದ್ದು ಒಂದು ಪ್ರತ್ಯೇಕ ಸಮಿತಿಯ ಆಡಳಿತಕ್ಕೊಳಪಟ್ಟಿರುವುದು. ಹಾಗೆ ಜನರಿಂದ ಹಣವನ್ನು ವಸೂಲು ಮಾಡುವುದಕ್ಕೂ ಮತ್ತು ಪರಿಹಾರವನ್ನು ಒದಗಿಸುವುದಕ್ಕೂ ಎಲ್ಲಾ ಜಿಲ್ಲೆಗಳಲ್ಲಿಯೂ ಕಮಿಟಿಗಳು ಸ್ಥಾಪನೆಯಾಗಿವೆ. ಸ್ಥಾಪನೆಯಾಗುತ್ತಲೂ ಇವೆ. ಈ ನಿಧಿಗೆ ಇತರ ಪ್ರಾಂತಗಳ ಆಧಿಪತ್ಯದ ಸಮಸ್ತ ಜನಾಂಗದವರು ಉದಾರ ಹಸ್ತದಿಂದ ಸಹಾಯ ಮಾಡಬೇಕೆಂದು ಮದರಾಸು ಸರಕಾರವು ಈ ಮೂಲಕ ಪ್ರಾರ್ಥಿಸುತ್ತದೆ. ಇದರಿಂದ ಕೂಡಲೇ ಉದಾರ ಸಹಾಯವು ದೊರೆಯಬಹುದೆಂದು ಭರವಸೆ ಪಟ್ಟಿದ್ದಾರೆ. ಉದಾರ ಹಸ್ತದಿಂದ ಕೊಟ್ಟ ಸಹಾಯವನ್ನು ಅದು ಎಷ್ಟೇ ಅಲ್ಪವಾಗಲಿ, ಕೃತಜ್ಞತೆಯಿಂದ ಸ್ವೀಕರಿಸಲಾಗುವುದು. ಈ ಧನ ಸಹಾಯದ ದ್ರವ್ಯವನ್ನು ಶ್ರೀ ಕೆ ಎಂ. ರಾಜರತ್ನಂ ಗೌರವ ಕೋಶಾಧಿಕಾರಿ ಗವರ್ನರ್‌ರವರ ಆಂಧ್ರ ಸೈಕ್ಲೋನ್ ರಿಲೀಫ್ ನಿಧಿ C/o ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಫಸ್ಟ್‌ಲೈನ್ ಬೀಚ್, ಮದರಾಸು ಇವರಿಗೆ ಕಳುಹಿಸಬೇಕು. ಸೈಕ್ಲೋನ್ ರಿಲೀಫ್ ನಿಧಿಗೆಂದೇ ವಸೂಲು ಮಾಡಿದ ಹಣವನ್ನು ಆಯಾಯ ಜಿಲ್ಲೆಗಳ ಕಲೆಕ್ಟರ ಸಹಾಯ ನಿಧಿಗಳ ಕೋಶಾಧಿಕಾರಿಗಳಿಗೆ ಕಳುಹಿಸಬಹುದು.

ಸಿ ಟಿ. ಮೊದಲಿಯಾರ್,
ಚೀಫ್ ಕಮಿಷನರವರು.

ಪಿ. ಎಸ್. ಕುಮಾರಸ್ವಾಮಿ ರಾಜಾ,
ಮದರಾಸಿನ ಮಾನ್ಯ ಮುಖ್ಯ ಮಂತ್ರಿಗಳು

## ಹೈಡ್ರೋಜನ್ ಬಾಂಬಿನ ಕುರಿತು

ಪಂಡಿತ್ ನೆಹರುರವರು ಈ ಕುರಿತು ಪಾರ್ಲಿಮೆಂಟಿನಲ್ಲಿ ಭಾವೋದ್ರೇಕದಿಂದ ಮಾತನಾಡಿದರು. "ಸಭ್ಯವಾದ ಜಗತ್ತಿನಲ್ಲಿ ವಾಸಿಸಬೇಕೆಂದಿದ್ದರೆ ಇಂತಹ ಬಾಂಬಿನ ಆವಶ್ಯಕತೆಯಿಲ್ಲ. ಸಭ್ಯ ಜಗತ್ತು ಬೇಡವೆಂದಾದರೆ ಈಗಲೇ ಇಂತಹ ವಿನಾಶಕಾರಿ ಅಸ್ತ್ರಗಳಿಂದ ಅದನ್ನು ಭಸ್ಮಗೊಳಿಸುವುದು ಒಳಿತು. ಸಭ್ಯತೆಯೂ ಬೇಕು, ಹೈಡ್ರೋಜನ್ ಬಾಂಬೂ ಬೇಕು ಎಂದರೆ ಆಗದು"

## ಪ್ರಾಂತಗಳ ಹೆಸರುಗಳ ಬದಲಾವಣೆ

ಪ್ರಜಾಪ್ರಭುತ್ವ ದಿನದಿಂದ ನಾಲ್ಕು ಪ್ರಾಂತ್ಯಗಳ ಹೆಸರುಗಳು ಬದಲಿಸಲ್ಪಟ್ಟಿವೆ. ಯುನೈಟೆಡ್ ಪ್ರಾವಿನ್ಸ್ (ಯು. ಪಿ) ಎಂಬುದು ಉತ್ತರ್ ಪ್ರದೇಶ- ಯು. ಪಿ. ಆಗಿಯೇ ಉಳಿಯುವುದು. ಪೂರ್ವ ಪಂಜಾಬು ಬರೇ ಪಂಜಾಬು ಎಂದು ಕರೆಯಲ್ಪಡುವುದು; ಸೆಂಟ್ರಲ್ ಪ್ರಾವಿನ್ಸ್ ಎಂಬುದು ಮಧ್ಯ ಪ್ರದೇಶ್ ಎಂದಾಗುವುದು. ಅಜ್ಮೀರ್ ಮಾರ್‍ವಾಡವನ್ನು ಅಜ್ಮೀರ ಎಂದೂ ಕರೆಯಲಾಗುವುದು.

## ಸ್ಟೈಲೀನರನ್ನೇ ವಿಚಾರಣೆಗೊಳಪಡಿಸಬೇಕು.

ಸಂಯುಕ್ತ ಅಮೇರಿಕದ ಯುದ್ಧಾಪರಾಧ ವಿಚಾರಣಾ ಮಂಡಳದ ವಕೀಲರಾದ ಜೋಸೆಫ್ ಕೀನನ್ ಅವರು 'ಇಂದು ಟೋಕ್ಯೋದಲ್ಲಿ ಯಾರನ್ನಾದರೂ ವಿಚಾರಣೆಗೊಳ ಮಾಡುವುದಿದ್ದರೆ ಸ್ಟೈಲೀನರನ್ನೇ ಗುರಿಪಡಿಸಬೇಕು' ಎಂದು ಹೇಳಿರುವರು. ಜಪಾನಿ ಚಕ್ರವರ್ತಿ ಹಿರೋ ಹಿಟೋರವರನ್ನು ಯುದ್ಧಾಪರಾಧಿಗಳಾಗಿ ವಿಚಾರಣೆಗೊಳಪಡಿಸಬೇಕೆಂದು ರಷ್ಯನರು ಪ್ರಸ್ತಾಪಿಸಿದ ಸಂದರ್ಭದಲ್ಲಿ ಅವರು ಹೀಗೆಂದರು. ಕಳೆದ ಯುದ್ಧದಲ್ಲಿ ಜಪಾನಿಗಳು ರೋಗಾಣು ಯುದ್ಧ ಪ್ರವಿಪನ್ನ ಅನುಸರಿಸಿದರೆಂದೂ, ಅದರ ಹೊಣೆ ಹಿರೋಹಿಟೋರವರದೆಂದೂ ರಷ್ಯನರು ಆಪಾದಿಸುತ್ತಿದ್ದಾರೆ. ಒರ್ವ ಜಪಾನಿ ಸೈನ್ಯಾಧಿಕಾರಿಗಳು ಈ ಅಪರಾಧ ಯಾರು ಮಾಡಿದರೂ ಚಕ್ರವರ್ತಿಗಳ ಕೈವಾಡ ಅದರಲ್ಲಿ ಏನೂ ಇಲ್ಲವೆಂದೂ ತಿಳಿಸಿದ್ದರು.

## ಇಂಗ್ಲೆಂಡಿನ ಚುನಾವಣೆಗಳು.

ಬ್ರಿಟನಿನ ಪ್ರಸ್ತುತ ಪ್ರಧಾನ ಮಂತ್ರಿ ಆಟ್ಲಿಯವರು ಈ ತಿಂಗಳು ನಡೆಯಲಿರುವ ಚುನಾವಣೆಗಳಲ್ಲಿ ಅವರ ಲೇಬರ್ ಪಕ್ಷವು ಬಹುಮತಗಳಿಂದ ವಿಜಯಿಯಾಗುವುದೆಂದು ಭರವಸೆಯನ್ನು ಒಂದು ಭಾಷಣದಲ್ಲಿ ನಿರೀಕ್ಷಿಸಿದರು. ಈ ಚುನಾವಣೆಗಳಲ್ಲಿ ಜನರಿಗೆ 'ಸಂಪೂರ್ಣ ಉದ್ಯೋಗ' ಭರವಸೆ ಕೊಡಲಾಗುವುದೆಂದು ಅವರು ತಿಳಿಸಿದರು. ಚರ್ಚಿಲ್ಲರ ಕುರಿತು ಹೇಳುತ್ತಾ ಆಟ್ಲಿಯವರು "ಅವರು ಐತಿಹಾಸಿಕ ಪುರುಷರಾದರೂ ಅವರ ರಾಜ್ಯಭಾರ ಭಾಷಣೆಯಲ್ಲಿ ಆರ್ಥಿಕ ವ್ಯವಸ್ಥೆಗೆ ಸ್ಥಾನವಿಲ್ಲ. ಸಾಮ್ರಾಜ್ಯಶಾಹಿ ಮನೋಭಾವನೆಯನ್ನು ಅವರು ಎಂದಿಗೂ ಬಿಡಲಾರರು. ಪ್ರಜಾಪ್ರಭುತ್ವ ಜಗತ್ತಿನಲ್ಲಿ ಅವರಿಗೆ ಸ್ಥಾನವಿಲ್ಲ" ಎಂದರು.

# ಕೊಡಗು ಸರಕಾರಿ ಕಾಲೇಜಿನ ಪ್ರಥಮ ವಾರ್ಷಿಕೋತ್ಸವ.

### ಆಟೋಟಗಳು.

ಸರಕಾರಿ ಕಾಲೇಜಿನ ಪ್ರಥಮ ವಾರ್ಷಿಕೋತ್ಸವವು ತಾರೀಕು ೧೧ರಲ್ಲಿ ಜರುಗಿತು. ಈ ಸಂಬಂಧ ಆಟೋಟಗಳ ಸ್ಪರ್ಧೆಯು ತಾ. ೧೦ರಲ್ಲಿ ಸ್ಟೀವನ್ಸ್ ಕ್ರಿಕೆಟ್ ಗ್ರೌಂಡಿನಲ್ಲಿ ನಡೆಯಿತು. ಪ್ರಥಮ ವರ್ಷದ ತರಗತಿ ಮಾತ್ರವಿದ್ದು ವಿದ್ಯಾರ್ಥಿಗಳ ಸಂಖ್ಯೆ ೧೧೦ ಇರುವದರಿಂದ ಬೇರೆ ಪೂರ್ಣತೆಯನ್ನು ಪಡೆದ ಕಾಲೇಜುಗಳ ಆಟೋಟಗಳ ಎಲ್ಲಾ ವಿಷಯಗಳು ಇಲ್ಲದಿದ್ದರೂ ಇದ್ದವುಗಳ ಬಗ್ಗೆ ಯೋಗ್ಯ ರೀತಿಯ ಏರ್ಪಾಡುಗಳಾಗಿದ್ದವು. ಆಟೋಟಗಳು ಮುಗಿದ ನಂತರ ಶ್ರೀ. ಕದೇರ್ಮಾಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಹುಡುಗರ ಪೈಕಿ ಶ್ರೀ. ಎನ್. ಪಿ. ರಾಮಕೃಷ್ಣರವರೂ, ಹುಡುಗಿಯರಲ್ಲಿ ಶ್ರೀಮತಿ ಸಿ. ಕೆ. ಬೋಜಮ್ಮನವರೂ ಛೇಂಪಿಯನ್ ಶಿಪ್ ಕಪ್ಪುಗಳನ್ನು ಪಡೆದರು.

### ಪ್ರದರ್ಶನ.

ತಾರೀಕು ೧೧-೨-೫೦ರಲ್ಲಿ ಕಾಲೇಜು ಆವರಣವು ತಳಿರುತೋರಣಗಳಿಂದ ಅಲಂಕೃತವಾಗಿತ್ತು. ಬೆಳಿಗ್ಗೆ ೯ ಗಂಟೆಯಿಂದ ೧೨ ಗಂಟೆಯ ವರೆಗೆ ಪ್ರಕೃತಿಶಾಸ್ತ್ರ, ಫಿಸಿಕ್ಸ್, ಕೆಮಿಸ್ಟ್ರಿ ಮೊದಲಾದ ವಿಭಾಗಗಳ ಪ್ರದರ್ಶನದ ಏರ್ಪಾಡಾಗಿತ್ತು. ಈ ಪ್ರದರ್ಶನಗಳನ್ನು ಸಜ್ಜುಗೊಳಿಸಿ ಪ್ರೇಕ್ಷಕರಿಗೆ ಸುಲಲಿತವಾಗಿ ವಿವರಿಸುವ ಏರ್ಪಾಡು ಮಾಡಿದವರನ್ನು ಹೊಗಳಲೇಬೇಕು. ಆ ಪ್ರದರ್ಶನಗಳು ಬೋಧಪ್ರದವೂ, ವಿಚಿತ್ರಕರವೂ ಮತ್ತು ಮನೋರಂಜಕವೂ ಆಗಿದ್ದವು. ಇವುಗಳನ್ನು ಆಸಕ್ತಿಯಿಂದ ಪರಿಶೀಲಿಸಿದ ಕೊಡಗಿನ ಚೀಫ್ ಕಮಿಷನರ ಮಾತಿನಲ್ಲೇ ಹೇಳುವದಾದರೆ "ಈ ಪ್ರದರ್ಶನವು ಅತೀ ಬೋಧಪ್ರದವಾಗಿದೆ. ಇನ್ನೂ ಶೈಶವಾವಸ್ಥೆಯಲ್ಲಿರುವ ನಮ್ಮ ಕಾಲೇಜು ಈ ರೀತಿಯ ಒಂದು ಪ್ರದರ್ಶನವನ್ನು ಏರ್ಪಡಿಸಿರುವುದು ಸ್ತುತ್ಯರ್ಹವಾಗಿದೆ. ಯಾವದೇ ಪ್ರಥಮ ದರ್ಜೆಯ ಕಾಲೇಜೂ ಈ ಪ್ರದರ್ಶನಗಳಿಗಾಗಿ ಹೆಮ್ಮೆಪಟ್ಟುಕೊಳ್ಳಬಹುದಿತ್ತು".

### ಕಾಲೇಜು ವರದಿ.

ಸಾಯಂಕಾಲ ನಾಲ್ಕು ಗಂಟೆಗೆ ಸಭೆಗೆಂದು ವಿಶಿಷ್ಟವಾಗಿ ಏರ್ಪಡಿಸಿದ್ದ ವೇದಿಕೆಯಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಸಭೆ ಕೂಡಿತ್ತು. 'ಜನಗಣಮನ' ಹಾಡಲ್ಪಟ್ಟ ನಂತರ ಕಾಲೇಜಿನ ಭಾಷಣ, ಲೇಖನ ಮುಂತಾದ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ಹಂಚಲ್ಪಟ್ಟಿತು. ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಹೋಲ್‌ಮನ್‌ರವರು ತಮ್ಮ ಸ್ಪಷ್ಟ ಹಾಗೂ ಸರಳ ಮಾತುಗಳಿಂದ ಕಾಲೇಜಿನ ಪರಿಸ್ಥಿತಿಯನ್ನು ಕನ್ನಡಿಯಂತೆ ಎತ್ತಿ ತೋರಿಸುವ ತಮ್ಮ ವರದಿಯನ್ನು ಮುಂದಿಟ್ಟರು :-

ಕಾಲೇಜಿನಲ್ಲಿ ನೂರಹತ್ತು ವಿದ್ಯಾರ್ಥಿಗಳಿದ್ದಾರೆ. ೯ ಶಿಕ್ಷಕರುಗಳೂ ೪ ಡೆಮಾನ್‌ಸ್ಟ್ರೇಟರುಗಳೂ ಇದ್ದಾರೆ. ವ್ಯಾಸಂಗವು ಯೋಗ್ಯ ರೀತಿ ನಡೆಯುವ ಸರ್ವ ಏರ್ಪಾಡುಗಳನ್ನೂ ಮಾಡಿಕೊಳ್ಳಲಾಗಿದೆ. ಕಾಲೇಜು ಬೋರ್ಡಿಂಗಿನಲ್ಲಿ ೩೯ ವಿದ್ಯಾರ್ಥಿಗಳಿರಬಹುದಾದರೂ ಈಗ ೩೦ ವಿದ್ಯಾರ್ಥಿಗಳಿದ್ದಾರೆ. ಇವರೇ ತಮ್ಮ ಊಟದ ಏರ್ಪಾಡುಗಳನ್ನು ವಾರ್ಡನರ ಮೇಲ್ವಿಚಾರಣೆಯಿಂದ ನಡೆಸುತ್ತಾರೆ. ತಿಂಗಳಿಗೆ ವಿದ್ಯಾರ್ಥಿಗೆ ಊಟಕ್ಕೆ ರೂ. ೩೦ ಖರ್ಚಾಗುತ್ತದೆ. ಕಾಲೇಜಿನ ವಾಚನಾಲಯಕ್ಕೆ ಪ್ರತ್ಯೇಕ ಕೋಣೆ ಇಲ್ಲ. ಈ ವರ್ಷ ಹತ್ತು ಸಾವಿರ ರೂಪಾಯಿಗಳ ಪುಸ್ತಕ ತರಿಸಲಾಗುವದು. ಆಟೋಟಗಳಿಗಾಗಿ ವಿದ್ಯಾರ್ಥಿಗಳಿಂದ ಬಂದುದಕ್ಕಿಂತ ಹೆಚ್ಚಾಗಿ ಖರ್ಚಾಗಿದೆ. ಇನ್ನೂ ಎಲ್ಲಾ ರೀತಿಯ ಆಟಗಳ ವ್ಯವಸ್ಥೆಯಾಗಿಲ್ಲ. ಕಾಲೇಜಿನ ಲೇಬರೇಟರಿಗಾಗಿ ೬೦,೦೦೦ ರೂ ಈ ವರ್ಷ ಖರ್ಚಾಗುವದು. ಅತ್ಯವಶ್ಯಕವಿರುವ 'ಗೇಸ್‌ಪ್ಲಾಂಟ್' ಇನ್ನೂ ದೊರೆತಿರುವದಿಲ್ಲ. ಈಗಿರುವ ಕಟ್ಟಡದಲ್ಲಿ ಸ್ಥಳದ ಅಭಾವವಿದೆ. ಒಂದೆರಡು ಕೋಣೆಗಳು ಕಟ್ಟಲ್ಪಡುತ್ತಿವೆ. ಮರದ [illegible] ಸಾಮಾನುಗಳೂ ಇನ್ನೂ ಪೂರ್ತಿಯಾಗಿಲ್ಲ. ಕಾಲೇಜು ಕಟ್ಟಡದ ಪ್ಲಾನನ್ನು [illegible] ಕಳುಹಿಸಲಾಗಿದೆ. ಹೊಸ ಕಟ್ಟಡದ ಆಗುವ ಭೂಮಿ ಇದೆ. ಸಾರ್ವಜನಿಕರ ಬೆಂಬಲವು ಅತ್ಯಗತ್ಯ. ಚೀಫ್ ಕಮಿಷನರು ಈ ಕಾಲೇಜಿಗಾಗಿ ಪ್ರಯತ್ನಪಟ್ಟಿದ್ದಾರೆ. ಅವರಿಂದಲೇ ಈ ಕಾಲೇಜಾಯಿತು ಎನ್ನಬಹುದು. ಕಾಲೇಜಿಗೆ ಉದಾರವಾಗಿ ದಾನಿಗಳು ೩೦,೦೦೦ ರೂಪಾಯಿ ಹಣ ಬಂದಿದೆ. ಇದನ್ನು ಕೊಟ್ಟವರ ಅಪೇಕ್ಷೆಯಂತೆ ಇದನ್ನು ನಿಕ್ಷೇಪವಾಗಿರಿಸಿ ಇದರ ಬಡ್ಡಿಯಿಂದ ಯೋಗ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಏರ್ಪಾಡು ಮಾಡಲಾಗುವದು. ಸಾರ್ವಜನಿಕ ಸಹಾಯ ಎಲ್ಲಾ ವಿಧದಿಂದಲೂ ಬೇಕು.

### ಟ್ರೋಫಿ.

ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳಾಗಿರುವ ಶ್ರೀ ಬಿದ್ದಂಡ ಕುಶಾಲಪ್ಪನವರು ಕಾಲೇಜಿನ ಪರ 'ಟ್ರೋಫಿ'ಯನ್ನು ಸೂಚಿಸಿ ಮಾತಾಡಿದರು. ಈ ಕಾಲೇಜು ಸ್ಥಾಪನೆಯಾಗಲು ಚೀಫ್ ಕಮಿಷನರಾದ ಶ್ರೀ ಸಿ. ಟಿ. ಮೊದಲಿಯಾರರ ಅವಿರತ ಪ್ರಯತ್ನವೇ ಕಾರಣ. ಇವರು ಈ ಕಾಲೇಜಿನ ಸಂಸ್ಥಾಪಕರೆನ್ನಬಹುದು. ವಾಸ್ತವವಾಗಿ ಇದು ಇವರ ಕಾಲೇಜು. ಈ ಕಾಲೇಜು ಯೋಗ್ಯ ದಾರಿಯಲ್ಲಿ ಮುಂದರಿಯುತ್ತಿದೆ. ಮಿ. ಹೋಲ್‌ಮನರಂಥಾ ದಕ್ಷರನ್ನು ಪ್ರಿನ್ಸಿಪಾಲರಾಗಿ ಈ ಕಾಲೇಜಿಗೆ ಒದಗಿಸಿದ ಕೀರ್ತಿಯೂ ಚೀಫ್ ಕಮಿಷನರಿಗೆ ಸಲ್ಲಬೇಕು. ಪ್ರಿನ್ಸಿಪಾಲರು ಕಾಲೇಜನ್ನು ದಿನ ದಿನಕ್ಕೆ ಮೇಲೆ ತರುತ್ತಿದ್ದಾರೆ. ಇವರ ಮೇಲ್ವಿಚಾರಣೆಯಲ್ಲಿ ಈ ಕಾಲೇಜು ಆದರ್ಶ ಕಾಲೇಜಾಗುವದರಲ್ಲಿ ಸಂಶಯವಿಲ್ಲ. ಕೊಡಗಿನಲ್ಲಿ ಕಾಲೇಜೇಕೆ? ಹೊರಪ್ರಾಂತಗಳ ಸಂಬಂಧವಿಲ್ಲದೆ ಕೊಡಗಿನ ಕಾಲೇಜು ಸಂಕೀರ್ಣತೆಯಲ್ಲಿ ಮುಳುಗಿ ಕೂಪಮಂಡೂಕ ಪ್ರವೃತ್ತಿಯು ಹೆಚ್ಚಿ ವಿದ್ಯಾರ್ಥಿಗಳ ವಿಕಾಸಕ್ಕೆ ಎಡೆಯಾಗಲಾರದೆಂದು ಕೆಲವರು ಹೇಳುವದಿದೆ. ಆದರೆ ಈಗಿನ ಸ್ಥಿತಿಯನ್ನು ಪರಿಶೀಲಿಸಿದರೆ ವಿದ್ಯಾಭ್ಯಾಸವು ಹೆಚ್ಚಾಗಿ ನಗರಗಳ ಗೊಂದಲದಲ್ಲಿ ಕೇಂದ್ರೀಕೃತವಾಗಿರುವದು, ನೈಸರ್ಗಿಕ ವಾತಾವರಣವಿಲ್ಲದುದು ತಿಳಿಯುವದು. ಹಿಂದಿನಕಾಲ ವಿದ್ಯಾಭ್ಯಾಸವು ಆ ರೀತಿ ಇತ್ತು. ಈ ತಳಹದಿಯಲ್ಲಿಯೇ ರವೀಂದ್ರನಾಥ ಠಾಗೋರರು ಶಾಂತಿನಿಕೇತನವನ್ನು, ವಿಶ್ವಭವನಗಳನ್ನು [illegible] ದೂರದ ಹಳ್ಳಿಗಳಲ್ಲಿ ಸ್ಥಾಪಿಸಿ ನಿದರ್ಶನ ಮಾಡಿರುವರು. ಆದ್ದರಿಂದ ಕೊಡಗು ಕಾಲೇಜಿಗೆ ಮಾದರಿ. ಪ್ರಕೃತ ಕಾಲೇಜು ಕಟ್ಟಡದ ಪ್ಲಾನು [illegible]ವಾಗಿ ಕಾಲೇಜು ಕಟ್ಟಲು ಅನ್ಯ ಕೇಂದ್ರದಿಂದ ದೊರೆತಿರುವದನ್ನು ಹೃದಯದಿಂದ ಮೇಲಿದ್ದ ಭಾರ ಪೂರವಾಯಿತು. ಇನ್ನು ಕಾಲೇಜು ಬೇಗ ಆಗಬಹುದು.

ಈ ಸಂದರ್ಭದಲ್ಲಿ ಕಾಲೇಜು ವಿದ್ಯಾರ್ಥಿಗಳ ಬಗ್ಗೆ ಒಂದೆರಡು ಮಾತು ಹೇಳದಿದ್ದರೆ ನನ್ನ ಕರ್ತವ್ಯ ಮಾಡಿದಂತಾಗದು. ಜೀವನಮಾರ್ಗದಲ್ಲಿ ಯೋಗ್ಯ ಸನ್ನಡತೆಯುಳ್ಳ ಶಿಸ್ತು ಬೇಕು. ಕಾಲೇಜಿನ ಜೀವನದಲ್ಲಿ ಶಿಸ್ತಿರಲಿ. ರಿಪಬ್ಲಿಕ್ ದಿನದಂದು ಕೆಲವು ಮೇಲೆ ಸಾರ್ವಜನಿಕ ಸ್ಥಳದಲ್ಲಿ [illegible] ಅವಮಾನ ಮಾಡಿದ ಪ್ರಸಂಗ ನನಗೆ ಬಹು ವ್ಯಸನವನ್ನುಂಟುಮಾಡಿದೆ. ಕಾಲೇಜು ವಿದ್ಯಾರ್ಥಿಗಳು ಅದನ್ನು ಮಾಡಿರಲಾರರು. ಆದರೆ ಆ ರೀತಿಯ ವರ್ತನೆ ಯಾರಿಗೂ ಭೂಷಣವಲ್ಲ. ಈ ಕಾಲೇಜು ವಿದ್ಯಾರ್ಥಿಗಳೇ ನಾಳಿನ ಆಡಳಿತಗಾರರು. [illegible] ಇರಬಹುದಾದ ಉತ್ತಮ ಬೆಳವಣಿಗೆಗೆ ಅನುಕೂಲಕರ ಶಿಸ್ತಿನಿಂದ ನಡೆದು ಕಾಲೇಜಿಗೆ ಕೀರ್ತಿ ತನ್ನಿರಿ.

### ಉತ್ತರ

'ಟ್ರೋಫಿ'ಗೆ ಉತ್ತರವೀಯುತ್ತಾ ಕಾಲೇಜ್ ಯೂನಿಯನ ಕಾರ್ಯದರ್ಶಿಗಳಾದ ಶ್ರೀ ಎಂ. ಎ. ಪೂಣಚ್ಚನವರು ಭಾಷಣಕಾರರ ಬೋಧಪ್ರದವೂ, ಸ್ನೇಹಯುಕ್ತವೂ ಆದ ಮಾತುಗಳಿಗೆ ವಂದಿಸಿದರು. ಕೊಡಗಿನ ಕಾಲೇಜಿಗಾಗಿ, ಹೋಲ್‌ಮನರಂಥ ದಕ್ಷ ಪ್ರಿನ್ಸಿಪಾಲರನ್ನೂ ಕರ್ತವ್ಯ ಧುರಂಧರರಾದ ಲೆಕ್ಚರರುಗಳನ್ನೂ ಪಡೆದ ತಮ್ಮ ಸೌಭಾಗ್ಯವನ್ನು ಹೇಳಿದರು. ವಿದ್ಯಾರ್ಥಿಗಳಾದ ತಾವು ಈ ಕಾಲೇಜಿನ ಕೀರ್ತಿಯನ್ನು ಎಂದೂ ಹಾಳುಮಾಡೆವೆಂದೂ, ಬದಲು ಮುಂಬರುವ ವಿದ್ಯಾರ್ಥಿಗಳಿಗೆ ಆದರ್ಶ ಪಥದ [illegible] ಮಾಡಿ ತೋರುವದಾಗಿಯೂ ಹೇಳಿದರು. ಅಂದು ನಡೆದ ಸಾರ್ವಜನಿಕ ಅವಮಾನದ ವಿಚಾರಕ್ಕೂ ಕಾಲೇಜು ವಿದ್ಯಾರ್ಥಿಗಳಿಗೂ ಯಾವುದೇ ಸಂಬಂಧವಿಲ್ಲವೆಂದೂ ತಿಳಿಸಿದರು. ಕಾಲೇಜಿನ ಪ್ರಗತಿಯಾಗಲು ಸಾರ್ವಜನಿಕರ ಸಹಾಯವು ಅಗತ್ಯವೆಂದರು. ಭಾಷಣಕಾರರನ್ನು ಕೃತಜ್ಞತಾಪೂರ್ವಕ ವಂದಿಸಿದರು.

### ಅಧ್ಯಕ್ಷ ಭಾಷಣ

ಚೀಫ್ ಕಮಿಷನರಾದ ಶ್ರೀ ಸಿ. ಟಿ. ಮೊದಲಿಯಾರ್‌ರವರು ತಮ್ಮ ಅಧ್ಯಕ್ಷ ಭಾಷಣ ಮಧ್ಯದಲ್ಲಿ ಹೀಗೆ ಹೇಳಿದರು: ನಾನು ಕೊಡಗಿಗೆ ಬರುವಾಗಲೇ ಕೊಡಗಿನ ಜನತೆಯು ಕಾಲೇಜಿಗಾಗಿ ಪಡುತ್ತಿದ್ದ ಪ್ರಯತ್ನದ ಅರಿವಿತ್ತು. ಜನತೆಯ ಈ ಬೆಂಬಲ ಮತ್ತು ಪ್ರಯತ್ನವೇ ಈ ಕಾಲೇಜಿನ ಅಸ್ತಿತ್ವಕ್ಕೆ ಮುಖ್ಯ ಕಾರಣ. ಆದ್ದರಿಂದ ಕಾಲೇಜಾದುದಕ್ಕೆ ಯಾರನ್ನಾದರೂ ಪ್ರಶಂಸಿಸಬೇಕಿದ್ದರೆ ಅದು ಕೊಡಗಿನ ಜನತೆಯನ್ನು! ಕಾಲೇಜು ಸ್ಥಾಪಿಸಲು ಮುಂಚೆ [illegible] ಸ್ಟೇಟ್ [illegible] ಮಿಷನರಿಗಳಿಗೆ ಸರ್ವ ಸಹಾಯವನ್ನೂ ಕೊಡುವ ಏರ್ಪಾಡನ್ನು ಸರಕಾರವು ಮಾಡಿತ್ತು. ಆದರೆ ಮಿಷನರಿಗಳು ಕಡೇ ಸಮಯದಲ್ಲಿ ತಾವು ಈ ಜವಾಬ್ದಾರಿಯನ್ನು ಕೈಕೊಳ್ಳಲಾರೆವೆಂದು ನಿರಾಕರಿಸಿದ್ದರಿಂದ ನನ್ನ ಮೇಲೆ ದೊಡ್ಡ ಭಾರ ಬಿತ್ತು. ಅದೃಷ್ಟದಿಂದ ಎನ್ನಬಹುದು ಕೊಡಗಿನ ಕಾಲೇಜು ಮಿಷನರಿಯ ಕಾಲೇಜು ಆಗುವ ಬದಲು ಸರಕಾರದ ಆಧಾರದ ಜನತೆಯ ಕಾಲೇಜಾಯಿತು.

ಕಾಲೇಜಿನ ಕಾರ್ಯಕಲಾಪಗಳು ತೃಪ್ತಿಕರವಾಗಿ ನಡೆಯುತ್ತಿವೆ. ಇದಕ್ಕಾಗಿ ಪ್ರಿನ್ಸಿಪಾಲರನ್ನೂ ಅವರ ಸಿಬ್ಬಂದಿಯನ್ನೂ ವಂದಿಸಬೇಕಾಗಿದೆ. ಅವರು ಈ ದಿನ ಏರ್ಪಡಿಸಿದ ಪ್ರದರ್ಶನವು ಹೊಗಳಲರ್ಹವಾಗಿದೆ. ಮಾಂಸ ಭಕ್ಷಕ ಸಸಿಗಳೂ ಇರುವವು ನನಗೆ ಆಶ್ಚರ್ಯವನ್ನುಂಟುಮಾಡಿತು. ಮರಿಯು ಬೆಳೆದು ದೊಡ್ಡದಾಗುವ ವರೆಗೆ ಬಾಯಿಯಲ್ಲಿಯೇ ಮರಿಯನ್ನಿಟ್ಟು ಊಡುವ ಮೀನನ್ನು ನೋಡಿ ಮಾತೃಪ್ರೇಮದ ಅಗಾಧ ತ್ಯಾಗದ ಪರಿಚಯವಾಯಿತು.

ಕಾಲೇಜು ಕಟ್ಟಡ ಕಟ್ಟುವ ಬಗ್ಗೆ ಅನೇಕ ಟೀಕೆ ಬಂದಿದೆ. ಮುಂದಿನ ತಿಂಗಳಿಂದ ಕಟ್ಟಡ ಕೆಲಸ ಪ್ರಾರಂಭವಾಗುವದೆಂದು ಹೇಳಲು ಸಂತೋಷವಾಗುತ್ತದೆ. ಇದನ್ನು ಅಂದಾಜು ಮಾಡುವ ಕೇಂದ್ರ ಪಿ. ಡಬ್ಲ್ಯು. ಡಿಯವರು ಬರುವ ವರ್ಷಕ್ಕೆ ಕಟ್ಟಡ ಕೆಲಸ ಮುಗಿಸಿಕೊಡುವ ಭರವಸೆ ಕೊಟ್ಟಿದ್ದಾರೆ. ಇತ್ತಲಾಗಿ ಕೇಂದ್ರ ಸರಕಾರದ ವಿದ್ಯಾ ಇಲಾಖಾ ಸೂಚನೆಯಂತೆ ಯೂನಿವರ್ಸಿಟಿಯವರು ಕೊಡಗಿನ ಪ್ರೈಸ್ಕೂಲುಗಳಲ್ಲಿ ಒಂದನ್ನು ಇಂಟರ್‌ಮೀಡಿಯೇಟ್ ಕಾಲೇಜಿನ ಅಂತಸ್ತಿಗೇರಿಸುವ ಸಾಧ್ಯತೆ ಇದೆ. ಆದ್ದರಿಂದ ಈ ಫಸ್ಟ್‌ಗ್ರೇಡ್ ಕಾಲೇಜಾಗಿ ಉಳಿದು ಕೊಡಗಿನಲ್ಲಿ ಒಂದಕ್ಕಿಂತ ಹೆಚ್ಚು ಕಾಲೇಜಾಗುವ ಸಂದರ್ಭವಿದೆ.

ಈ ಕಾಲೇಜಿನ ಹೊಸ ಕಟ್ಟಡವಾಗುವದನ್ನು ನಾನು ಕಾಣಲಾರೆ. ನಾನು ಎಲ್ಲಿಯೇ ಇರಲಿ, ಈ ಕಾಲೇಜಿಗಾಗಿ ಕೊಡಗಿನ ನಾಡಿಗಾಗಿ ನನ್ನ ಮನಸ್ಸು ಈ ಕಡೆ ಸದಾ ಹರಿಯುತ್ತಿರುವದು. ನಿಮ್ಮ ಈ ಕಾಲೇಜಿಗೂ, ಕಾಲೇಜಿನ ವಿದ್ಯಾರ್ಥಿಗಳಿಗೂ ಕೊಡಗಿನವರೆಲ್ಲರಿಗೂ ದೇವರು ಸುಖವನ್ನು ಕೊಡಲಿ.

(೬ನೇ ಪುಟಕ್ಕೆ ಸಾಗಿದೆ.)

# ಕೊಡಗು

ತಾ. ೧೭-೩-೧೯೫೦ನೇ ಶುಕ್ರವಾರ

## ಕಾಲೇಜ್ ಡೇ.

ಕೊಡಗು ಸರಕಾರಿ ಕಾಲೇಜಿನ ವಾರ್ಷಿಕೋತ್ಸವವು ಮೊನ್ನೆ ಯಶಸ್ವಿಯಾಗಿ ನಡೆಯಿತು. ಕಾಲೇಜಿನ ಕಾರ್ಯಕಲಾಪದ ಬಗ್ಗೆ ಜನತೆಗೆ ತೃಪ್ತಿಕರವಾಗುವ ರೀತಿಯ ಮಾಹಿತಿ ದೊರೆಯಿತು. ಸರಳ ಮತ್ತು ಕಾರ್ಯದಕ್ಷರಾದ ಪ್ರಿನ್ಸಿಪಾಲರೂ, ಯೋಗ್ಯ ಮತ್ತು ಕರ್ತವ್ಯನಿರತ ಲೆಕ್ಚರರುಗಳೂ ಕಾಲೇಜಿಗೆ ಗೌರವ ತಂದಿದ್ದಾರೆ. ಆದರೆ ಈ ಕೇವಲ ಹತ್ತು ತಿಂಗಳುಗಳ ಕಾರ್ಯಕಲಾಪಗಳಿಂದ ಕಾಲೇಜಿನ ಪ್ರಗತಿಯನ್ನು ಮತ್ತು ಮಾತೆ ಮಕ್ಕಳ ಯೋಗ್ಯತೆಯನ್ನು ಅಳೆಯುವುದು ಅಪ್ರಾಸಂಗಿಕವಾಗಬಹುದಾದರೂ ಈ ವರೆಗಿನ ಕಾರ್ಯಕಲಾಪಗಳು ಮುಂದಿನ ಯೋಗ್ಯ ಭವಿಷ್ಯತ್ತಿಗೆ ಸಾಂಕೇತಿಕವಾಗಿ ಇವೆ. ಈ ಅನುಭವದಿಂದ ಕಾಲೇಜು ಈ ದಕ್ಷ ಅಧಿಕಾರಿಗಳ ಕೈಯಲ್ಲಿ ಯೋಗ್ಯ ಪಥದಲ್ಲಿ, ಕೀರ್ತಿಗಳಿಸುತ್ತಾ ಮುಂದುವರಿಯಬಹುದೆಂದು ನಂಬಬಹುದಾಗಿದೆ.

ಕಾಲೇಜಿನ ಉನ್ನತಿಗೆ ಅಧ್ಯಾಪಕ ವರ್ಗದವರ ಸರ್ವಸ್ವಗಳಲ್ಲದೆ ಸಾರ್ವಜನಿಕರ ಹೃತ್ಪೂರ್ವಕ ಬೆಂಬಲ ಬೇಕು. ಅದರೊಂದಿಗೆ ವಿದ್ಯಾರ್ಥಿಗಳೂ ತಮ್ಮ ಜವಾಬ್ದಾರಿಯನ್ನರಿತು ಕಾಲೇಜಿಗೆ ಕಳಂಕ ಬಾರದಂತೆ ವರ್ತಿಸಬೇಕು. ಇಂತಹ ಸಂಘಟನೆ ಇದ್ದರೂ ಪದ್ಧತಿಯು ಬಿಗಡಾಯಿಸಿ ವಿದ್ಯಾರ್ಥಿಗಳ ವರ್ತನೆಯು ಈಗಿನ ಜೀವನವು ಭವ್ಯವಾಗುವ ಪದದಲ್ಲಿ ಕಾಲೇಜಿನ ಕೀರ್ತಿಯೂ ಹೆಚ್ಚುವುದು. ಅಧ್ಯಾಪಕರು, ವಿದ್ಯಾರ್ಥಿಗಳು, ಸಾರ್ವಜನಿಕರು ಕಾಲೇಜನ್ನು 'ನಮ್ಮದು' ಎಂದು ಭಾವಿಸಿ ನಡೆದರೆ ಈ ಕಾಲೇಜು ಅತ್ಯುತ್ತಮ ಕಾಲೇಜುಗಳಲ್ಲಿ ಒಂದಾದರೆ ಆಶ್ಚರ್ಯವಿಲ್ಲ.

ಕಾಲೇಜಿನ ಕಟ್ಟಡಕ್ಕೆ ಅನುಮತಿ ದೊರೆತ ಶೀಘ್ರ ಕೆಲಸ ಕೈಕೊಳ್ಳಲ್ಪಡುವದೆಂಬುದು ಸಂತೋಷದ ವಿಚಾರ. ವಿಶ್ವವಿದ್ಯಾಲಯದ ನಿಯಮದಲ್ಲಿ ೧೯೫೧ರೊಳಗೆ ಕಾಲೇಜು ಕಟ್ಟಡವಾಗದಿದ್ದರೆ ವಿಶ್ವವಿದ್ಯಾಲಯದ ಸಂಯೋಜನೆಯು ತಪ್ಪುವದೆಂದು ತಿಳಿದು ಬಂದಿದೆ. ಅದ್ದರಿಂದ ೧೯೫೧ನೇ ಕಾಲೇಜು ವರ್ಷ ಪ್ರಾರಂಭವಾಗುವದರೊಳಗೆ ಕಟ್ಟಡ ತಯಾರಾಗಬೇಕು. ಇದಕ್ಕೆ ಮಹಾ ಪ್ರಯತ್ನವೇ ನಡೆಯಬೇಕಾಗುವದು. ಪಿ. ಡಬ್ಲ್ಯೂ. ಡಿ. ಯವರು ಕಟ್ಟಡ ಕಟ್ಟಿಕೊಡುವ ಭರವಸೆ ಕೊಟ್ಟಿರುವರೆಂದು ಚೀಫ್ ಕಮಿಷನರು ಹೇಳಿದರು. ಇದನ್ನು ಸಾಧಿಸಲು ಅವರೇ ವಿಶೇಷ ಯತ್ನ ಮಾಡಬೇಕು. ಸರಕಾರವು ಶೀಘ್ರ ಈ ಕಾರ್ಯವನ್ನು ಕೈಕೊಂಡು ಕಾಲದಲ್ಲಿ ಕಟ್ಟಡ ಕಟ್ಟಿ ಕಾಲೇಜನ್ನು ಭದ್ರ ಹಾಗೂ ಶಾಶ್ವತ ತಳಹದಿಯಲ್ಲಿ ನಿಲ್ಲಿಸುವದೆಂದು ಆಶಿಸಲಾಗಿದೆ.

## ವರ್ತಮಾನ.

ಕೆ. ಬಿ. ಎಸ್. ಸರ್ವೀಸು ಬಸ್ಸು ನೆಂ ಗಂಟೆಗೆ ಮೈಸೂರಿನಿಂದ ಹೊರಟು ಕುಶಾಲನಗರ ಮಾರ್ಗವಾಗಿ ಮ. ೩-೩೦ ಗಂಟೆಗೆ ವಿರಾಜಪೇಟೆ ಮಧ್ಯಾಹ್ನ ೧೭-೩೦ ಗಂಟೆಗೆ ಪೇಟೆಯಿಂದ ಹೊರಟು ಸಾಯಂಕಾಲ ಗಂಟೆಗೆ ಮೈಸೂರಿಗೆ ತಲಪುವಂತೆ ಆಗಿದೆ.

ಕುಶಾಲನಗರ ಮೈಸೂರು ಲೈನಿನ ಕೆ. ಬಿ. ಎಸ್. ಸರ್ವೀಸು ತಾತ್ಕಾಲಿಕವಾಗಿ ಪರ್ಮಿಟ್ ಅಭಾವದಿಂದ ಏಪ್ರಿಲ್ ೧ರಿಂದ ನಿಲ್ಲುವದೆಂದು ತಿಳಿದುಬರುತ್ತದೆ.

ಕ್ರಿಶ್ಚಿಯನ್ ನ್ಯೂ ಕಮಿಟಿ ಮೀಟಿಂಗು ೧೮-೩-೫೦ ರಲ್ಲಿ ಕೊಡಗು ಕೌನ್ಸಿಲಿನಲ್ಲಿ ನಡೆಯುವುದು.

ಕೌನ್ಸಿಲು ಮೀಟಿಂಗಿನಲ್ಲಿ ಆಯವ್ಯಯ ಚರ್ಚೆ ಮುಗಿದಿದೆ. ಸಿಲೆಕ್ಟ್ ಕಮಿಟಿಯ ಮೀಟಿಂಗ ತಾರೀಕು ೨೫-೩ ರಲ್ಲಿ ಕೌನ್ಸಿಲು ಹಾಲಿನಲ್ಲಿ ನಡೆಯಲಿದೆ.

ಡೆಪ್ಯುಟಿ ಗವರ್ನ್‌ಮೆಂಟ್ ಹೈಸ್ಕೂಲ್ ಶತಮಾನೋತ್ಸವವು ಮೈಸೂರು ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಶ್ರೀ ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವದು.

೨೭-೩-೫೦ ರಲ್ಲಿ ಮಡಿಕೇರಿ ಟೌನ್ ಹಾಲ್‌ನಲ್ಲಿ ಅಖಿಲ ಕೊಡಗು ವ್ಯಾಪಾರಿಗಳ ಮಹಾಸಭೆಯು ಶ್ರೀ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಕೊಡಗಿನ ಮೋಟಾರು ಟ್ರಾನ್ಸ್‌ಪೋರ್ಟ್ ಸಂಘವನ್ನು ತೆರೆಯುವ ವಿಚಾರ ಅಲ್ಲಿ ಚರ್ಚಿಸಲ್ಪಡುವುದೆಂದು ತಿಳಿದುಬಂದಿದೆ.

ಪ್ರಥಮ ದರ್ಜೆಯಲ್ಲಿ ಎಸ್. ಎಲ್. ಸಿ. ಪಾಸಾದ ೩೦ ವರ್ಷದೊಳಗಿನ ಯೋಗ್ಯ ಯುವಕರಿಗೆ ದ್ಯಾವನಲ್ಲಿ ಫಿಸಿಕಲ್ ಟ್ರೈನಿಂಗ್ ಇನ್ಸ್ಟ್ರಕ್ಟರ್ ತರಬೇತು ಕೊಡುವ ಏರ್ಪಾಡು ಮಾಡಲಾಗಿದೆಯೆಂದೂ ಜಿಲ್ಲೆಯ ವಿವರಗಳಿಗೆ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿಗೆ ಬರೆದುಕೊಳ್ಳಬಹುದಾಗಿಯೂ ತಿಳಿಸುತ್ತಾರೆ.

ಶ್ರೀಮತಿ ಕಾವೇರಮ್ಮ ಕಿಟ್ಟಯ್ಯ ಮೆಮೋರಿಯಲ್ ಬ್ಯಾಡ್ಮಿಂಟನ್ ಪಂದ್ಯಾಟವು ತಾ. ೩-೩-೫೦ ರಿಂದ ಸಿದ್ದಾಪುರ ಕ್ಲಬ್ಬಿನ ಆಶ್ರಯದಲ್ಲಿ ಜರುಗುವುದು.

ಚಿಕ್ಕಮಗಳೂರಿನ ಇಂಟರ್‌ಮೀಡಿಯೇಟ್ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಶ್ರೀ ಪೃಥ್ವೀರಾಜ ಜಿ. ಸಿ. ರವರು ಒಂದು ಮೈಲು, ೧೦೦ ಮೀಟರ್ ಓಟ, ಉದ್ದ ಜಿಗಿತ, ಎತ್ತರ ಜಿಗಿತ ಇದರಲ್ಲಿ ಬಹುಮಾನಗಳನ್ನು ಪಡೆದು ಛಾಂಪಿಯನ್‌ಶಿಪ್ ಕಪ್ಪನ್ನು ಗೆದ್ದರು.

ಯು. ಪಿ. ಎಸ್ಟೇಟ್ ಇಂಡಿಪೆಂಡೆಂಟ್ ಸಿಗ್ನಲ್ ಕೋರ್‌ನಲ್ಲಿರುವ ಶ್ರೀ ಎಂ. ಎಂ. ಅಪ್ಪಯ್ಯನವರು ಅಲ್ಲಿ ನಡೆದ ಇಂಟರ್ ಸ್ಪೋರ್ಟ್ಸ್ ಆಟೋಟಗಳಲ್ಲಿ ಛಾಂಪಿಯನ್‌ಶಿಪ್ ಪಡೆದು ಆ ವರ್ಷದ ೧೯೫೦ರ ಉತ್ತಮ ಯುವಕ (Best athlete for 1950) ಎನಿಸಿರುವರು.

ಮೈಸೂರು ಸ್ಟೇಟ್ ಒಲಂಪಿಕ್ ಪಂದ್ಯಾಟದಲ್ಲಿ ಭಾರದ ಕಲ್ಲೆಸೆಯುವದರಲ್ಲಿ ಶ್ರೀ ಕೋದಂಡ ಎ. ಬೋಪಯ್ಯನವರು ಪ್ರಥಮ ಬಹುಮಾನ ಪಡೆದಿರುವರು.

ಕಳೆದ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀಮತಿ ಪುಟ್ಟಿಚಂಡ ಬೊಳ್ಳಮ್ಮನವರು ತೇರ್ಗಡೆಯಾಗಿರುವರು.

ಕೊಡಗಿನ ಚೀಫ್ ಕಮಿಷನರರಾಗಿ ನೇಮಕವಾಗಿರುವ ಆಸ್ಟ್ರೇಲಿಯಾದ ಹೈಕಮಿಷನರಾಗಿದ್ದ ಲೆ|| ಕರ್ನಲ್ ದಯಾಸಿಂಗ್ ಬೇಡಿಯವರು ಫೆಬ್ರವರಿ ತಾ. ೨೮ ರಲ್ಲಿ ಆಸ್ಟ್ರೇಲಿಯಾದಿಂದ ಬರಲಿರುವರು. ಮಾರ್ಚಿ ತಾರೀಕು ಪ್ರಥಮ ವಾರದಲ್ಲಿ ಅವರು ಕೊಡಗಿಗೆ ಬರಬಹುದೆಂದು ವಾರ್ತೆ ಇದೆ.

## ವಾರ್ತೆಗಳು.

ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಖತ್ ಆಲಿಖಾನರು ಮೇ ತಾರೀಕು ೩ ರಲ್ಲಿ ಅಮೇರಿಕಕ್ಕೆ ಹೋಗಿ ೩೪ ದಿನಗಳ ವರೆಗೆ ಅಮೇರಿಕಾದ ಅನ್ಯಾನ್ಯ ಕಡೆ ಪ್ರವಾಸ ಮಾಡುವರೆಂದು ತಿಳಿದು ಬಂದಿದೆ.

೧೯೫೨ ರಲ್ಲಿ ಬ್ರಿಟನಿನ ರಾಜರಾದ ಜಾರ್ಜರವರು ಪಶ್ಚಿಮ ಸಂಯುಕ್ತ ಸಂಸ್ಥಾನಗಳನ್ನು ಸಂದರ್ಶಿಸುವರೆಂದು ತಿಳಿಯಬಂದಿದೆ.

ಹಿಂದೂ ದೇಶದಲ್ಲಿ ಆಹಾರ ಪದಾರ್ಥಗಳ ಸಂಗ್ರಹ (ಪ್ರೊಕ್ಯೂರ್‌ಮೆಂಟ್) ಎಂಬುದಾಗಿ ಆಗುವಂತೆ ನೋಡಲು ಕೇಂದ್ರ ಸರಕಾರವು ಒಂದು ಸಮಿತಿಯನ್ನು ನೇಮಿಸಿದೆ.

೧೯೫೧ರ ನಂತರ ಹೊರಗಿನ ದೇಶಗಳಿಂದ ಆಹಾರ ಧಾನ್ಯ ತರಿಸಲಾಗದೆಂದು ಕೇಂದ್ರ ಸರಕಾರವು ಸ್ಪಷ್ಟ ನಿರ್ಣಯ ಮಾಡಿದ್ದು ಜನತೆಯು ಆಹಾರ ಪದಾರ್ಥವನ್ನು ಮಿತಿಗೊಳಿಸುವ ಸರಕಾರದ ಪ್ರಯತ್ನದಲ್ಲಿ ಸಹಕರಿಸಬೇಕೆಂದು ಕೇಂದ್ರ ಸರಕಾರವು ಅಪೀಲು ಮಾಡಿದೆ.

ತೆಲಗು ಆಸ್ಥಾನ ಕವಿಯಾದ ಶತವಧಾನಿ ಕಲ್ಲೂರು ಚೆಳ್ಳಪಿಳ್ಳ ವೆಂಕಟ ಶಾಸ್ತ್ರಿಯವರು ತಾ. ೧೫ ರಲ್ಲಿ ತಮ್ಮ ೮೦ನೇ ವಯಸ್ಸಿನಲ್ಲಿ ನಿಧನರಾದರು.

ಹೈಡ್ರೋಜನ್ ಬಾಂಬಿನ ಪ್ರಯೋಗದಿಂದ ವಾತಾವರಣವೆಲ್ಲವು ಹಾಳಾಗಿ ಆ ವಾಯುವನ್ನು ಸೇವಿಸುವ ಜೀವಜಂತುಗಳೆಲ್ಲ ನಾಶವಾಗುವ ಸಂಭವ ಇದೆಯೆಂದು ಜಗತ್ತಿನ ಶ್ರೇಷ್ಠ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನರು ಹೇಳಿದ್ದಾರೆ.

ತಮಿಳುನಾಡು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ನಡೆದ ರಾಜಕೀಯ ಸಮ್ಮೇಳನಕ್ಕೆ ಕಾಶ್ಮೀರದ ಪ್ರಧಾನಮಂತ್ರಿ ಶೇಖ್ ಅಬ್ದುಲ್ಲರವರನ್ನು ಆಮಂತ್ರಿಸಲಾಗಿದ್ದು ಅವರು ಮದ್ರಾಸಿನಲ್ಲಿ ಮೂರು ದಿನಗಳ ವರೆಗಿದ್ದು ವಿವಿಧ ಸಭೆಗಳಲ್ಲಿ ಭಾಷಣ ಮಾಡಿ ಕಾಶ್ಮೀರ ಸಮಸ್ಯೆಯನ್ನು ವಿವರಿಸಿದರು. ಕಾಶ್ಮೀರದ ಸಮಸ್ಯೆಯು ಭಾರತದ ಸಮಸ್ಯೆಯೆಂದೂ, ಡೆಲ್ಲಿಯಲ್ಲಿಯ ಕೇಂದ್ರ ಸರಕಾರಕ್ಕೆ ಸಹ ಬಲಪಡಿಸಿದರೆ ಕಾಶ್ಮೀರಕ್ಕೆ ಸಹಾಯವಾದಂತೆ ಎಂದೂ, ಕಾಶ್ಮೀರದಲ್ಲಿ ಜನಮತ ತೆಗೆದರೆ ಪಾಕಿಸ್ತಾನಕ್ಕೆ ಅದು ದೊರೆಯುವದಿಲ್ಲವೆಂಬ ಕಾರಣವೇ ಪಾಕಿಸ್ತಾನವು ಇಲ್ಲದ ತಂಟೆಯನ್ನು ಹೇಳುತ್ತಿದೆಯೆಂದೂ ಹೇಳಿದರು.

ಸೇಲಂ ಜೈಲಿನಲ್ಲಿದ್ದ ಸುಮಾರು ೨೦೦ ಕಮ್ಯೂನಿಸ್ಟ್ ಕೈದಿಗಳಿಗೂ ಅಲ್ಲಿಯ ವಾರ್ಡರರಿಗೂ ಜೈಲು ಶಿಸ್ತಿನ ವಿಚಾರ ಹೊಡೆದಾಟವಾಗಿ ಗುಂಡು ಹಾರಿಸಬೇಕಾಗಿ ಬಂದು ೨೨ ಕೈದಿಗಳು ಮೃತರಾಗಿ ಅನೇಕರಿಗೆ ಗಾಯವಾಗಿದೆ.

ಪಾಕೀಸ್ತಾನಕ್ಕೆ ತೃಪ್ತಿಯಾಗುವಂತೆ ಕಾಶ್ಮೀರದ ವಿವಾದವನ್ನು ಅವಶ್ಯ ಬೇಗ ಬಗೆಹರಿಸಬೇಕೆಂದು ಭಾರತದ ಮೇಲೆ ಎಂಗ್ಲೋ-ಅಮೇರಿಕನ್ ಕೂಟದ ಹಾಗೂ ಕೆಲವು ಕಾಮನ್‌ವೆಲ್ತ್ ರಾಷ್ಟ್ರಗಳ ಒತ್ತಾಯ ಬಲವಾಗಿದೆಯೆಂದು ತಿಳಿದುಬರುತ್ತದೆ.

ಮಾರ್ಚ್ ತಾ. ೧೫ ರಲ್ಲಿ ನಡೆಯುವ ಸುಪ್ರೀಂ ಸೋವಿಯಟ್ ಚುನಾವಣೆಗಳಿಗೆ ರಂಗವು ಸಿದ್ಧವಾಗುತ್ತಿದೆ. ಮುಖ್ಯ ಉಮೇದ್ವಾರರೆಂದು ಸ್ಟಾಲಿನರ ಹೆಸರು ಸೂಚಿತವಾಗಿದೆ. ಪ್ರತಿ ಉಮೇದ್ವಾರರೆಂದರೆ ರಷ್ಯದ ಪರರಾಷ್ಟ್ರ ವಿಭಾಗದ ಸಚಿವ ಮಿ. ವಿ. ಎಮ್. ಮೊಲೊಟೋವ್.

ಪಾಕಿಸ್ತಾನದಿಂದ 'ಭಾರತ ಯೂನಿಯನಿನ ಸಂಸ್ಥಾನದ ಬಂಧವಿಮೋಚನೆ', ಗೆಲುವು ಪೂರ್ವ ಬಂಗಾಲದಿಂದ ಭಾರತಕ್ಕೆ ಬಂದಿದ್ದ ಆರಾಮಬಾಗ್ ಶಿಬಿರದ ಎಂಬ ಪಾಕಿಸ್ತಾನಿಯನ್ನು ಕೂಚ್ ಬಿಹಾರ್‌ನಲ್ಲಿ ದಸ್ತಗಿರಿ ಮಾಡಿದರು.

ಜಮ್ಮು ಮತ್ತು ಕಾಶ್ಮೀರ ವಿಶ್ವವಿದ್ಯಾಲಯಗಳನ್ನು ತಾತ್ಕಾಲಿಕವಾಗಿ ೧೯೫೦ ಡಿಶೆಂಬರ್ ತಿಂಗಳ ವರೆಗೆ ಭಾರತ ಸರ್ಕಾರವು ಮಾನ್ಯ ಮಾಡಲು ನಿರ್ಧರಿಸಿದೆ. ಅಲ್ಲಿ ನಡೆಯುವ ಪರೀಕ್ಷೆಗಳನ್ನು, ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿದವರ ಡಿಗ್ರಿಗಳನ್ನು ಭಾರತ ಸರಕಾರವು ಮನ್ನಿಸುವುದು.

ಮೈಸೂರಿನಲ್ಲಿ ಜಾನುವಾರುಗಳ ರೋಗ ಬಹಳ ಹೆಚ್ಚಿದೆ. ಕಳೆದ ಡಿಸೆಂಬರ ತಿಂಗಳಲ್ಲಿ ಸುಮಾರು ೯೪೨ ಜಾನುವಾರುಗಳಿಗೆ ರೋಗವು ತಗಲಿ ಅವುಗಳಲ್ಲಿ ೬೩೭ ಜಾನುವಾರುಗಳು ಮೃತಪಟ್ಟಿರುವವು.

ಪಾಕೀಸ್ತಾನದ ಅತ್ಯಾಚಾರ ಪಶ್ಚಿಮ ಬಂಗಾಲದ ಹಿಂದೂ ಸಂಘಗಳು ವ್ಯಕ್ತಪಡಿಸಿರುವವು. ಮುಸ್ಲಿಮರ ಕಡೆಯಿಂದ ಪೂರ್ವ ಬಂಗಾಲದ ಮುಖ್ಯಮಂತ್ರಿಗಳನ್ನು ಕಂಡು, ಒಡನೆ ಈ ಅತ್ಯಾಚಾರಗಳನ್ನು ನಿಲ್ಲಿಸುವ ವ್ಯವಸ್ಥೆಯಾಗಬೇಕೆಂದು ನಿವೇದಿಸಿಕೊಂಡಿವೆ.

ಪ್ರತ್ಯೇಕ ಪ್ರಾಂತವಾಗಿರುವ ಡೆಲ್ಲಿಗೆ ಕೇಂದ್ರ ಜನತಾ ಸಭೆಯಲ್ಲಿ ೪ ಸ್ಥಳಗಳೂ ಸ್ಟೇಟ್ ಕೌನ್ಸಿಲಿನಲ್ಲಿ ಎರಡು ಸ್ಥಳಗಳೂ ಕೊಡಲ್ಪಡಬೇಕೆಂದು ಡೆಲ್ಲಿಯ ಸಲಹಾ ಸಮಿತಿಯು ತನ್ನ ಕೋರಿಕೆಯನ್ನು ಮುಂದಿಟ್ಟಿದೆ.

# ಓದುಗರ ಓಲೆಗಳು.

**ಚೇಂಬರ್ ಕಮಿಷನರಲ್ಲಿ ವಿನಂತಿ**

ರೇಶನ್ ಅಂಗಡಿಗಳಲ್ಲಿ ದೊರೆಯುವ ಅಕ್ಕಿಯ ವಿಚಾರ ಅನೇಕ ಬಾರಿ ಪತ್ರಿಕೆಗಳಲ್ಲಿ ಬರೆದುದಾಗಿದೆ. [illegible]

ರಾಮಯ್ಯ

ಮಗ್ಗಾಲು

[illegible]

ಜೂಗಾರಿ

ಕೊಡಗಿನಲ್ಲಿ ಜೂಗಾರಿ ಆಟ [illegible] ಬಹುದೇ?

ಕ ಶ ಲಪ್ಪ

ರಿಪಬ್ಲಿಕ್ ದಿನಾಚರಣೆ

ರಿಪಬ್ಲಿಕ್ ದಿನ [illegible]

ಹೆಡ್‌ಮಾಸ್ತರವರು ಆನೇಕ ಶಾಲೆಗಳು ಬುಧವಾರ ವೀರರಾಜಪೇಟೆಯಲ್ಲಿ ಇದ್ದರು. ಆದರೆ [illegible] ದಿನ ರಿಪಬ್ಲಿಕ್ ದಿನವನ್ನು ಹೇಗೆ ಶಾಲೆಯಲ್ಲಿ ಆಚರಿಸಬೇಕೆಂಬ ವಿಷಯ ತಿಳಿಸುದೆ ಇದ್ದದ್ದು ಬಹಳ ವಿಷಾದಕರ. [illegible] ೧೧ ಗಂಟೆ ಸಮಯಕ್ಕೆ ಶಾಲೆಗೆ ಹೋಗುವ [illegible] ಮಕ್ಕಳಿಗೆ ಸಿಹಿ ತಿಂಡಿ [illegible] ಕೊಟ್ಟರಂತೆ. ಶಾಲೆಯ ಪ್ಲ್ಯಾನ್ [illegible]

ಗ್ರಾಮದ ವ್ಯಕ್ತಿ

ಬತ್ತ ವಹಿವಾಟು

[illegible]

ಒಂದು ಸೂಚನೆ

[illegible]

ಯೋಗ್ಯ ರೀತಿ ನಡೆಸುತ್ತಿದ್ದಾರೆ. ಶಾಲೆಯ ಚಿಣ್ಣಗಳ ಬಯಸಿ ಸಾರ್ವಜನಿಕರಲ್ಲಿ ಒಂದು ಸೂಚನೆ ಏನೆಂದರೆ ಸಾರ್ವಜನಿಕರು ಒಂದು ನಿಧಿಯನ್ನು ಸಂಗ್ರಹಿಸಿ ಅದನ್ನು ನಿಕ್ಷೇಪವಾಗಿಟ್ಟು ಅದರ ಬಡ್ಡಿಯಿಂದ ಪ್ರತಿ ವರ್ಷ ಕಾಲೇಜಿನ ಪ್ರತಿ ತರಗತಿಯ ಮೊದಲ ಒಳ್ಳೆ ನಡತೆಯ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವ ಏರ್ಪಾಡು ಮಾಡಬೇಕು. ಇಂಥಾ ಒಂದು ನಿಧಿಗೆ ಕಡಿಮೆ ೨೫೦೦೦ ರೂ ಸಂಗ್ರಹಿಸುವ ಪ್ರಯತ್ನವನ್ನು ಸಾರ್ವಜನಿಕ ಮುಂದಾಳುಗಳೂ, ಕಾಲೇಜು ಹಿತಚಿಂತಕರೂ ಮುಂದುವರಿಸಿ ಆಶಿಸಲು ಇದೆ.

ಕೆ ದೇವಯ್ಯ

ಸತ್ಯಜೀವನ ಸಹಕಾರ ಸಂಘ

ಕೆಲ ಹಿಂದೆ ಬಿದ್ದಿರುವ [illegible] ನಾಡಿನ [illegible], ಮಟ್ಟು ಮತ್ತು [illegible] ಗ್ರಾಮಸ್ಥರು [illegible] ಶ್ರೀ [illegible] ಗಣಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಸಭೆಯಲ್ಲಿ ಈ ಗ್ರಾಮಗಳ ಪರಿಸ್ಥಿತಿಯನ್ನು ಜನತೆಗೆ ವಿದ್ಯೆಯು [illegible] ಇರುವ ಅಂಧಕಾರವನ್ನು ನಿವಾರಿಸಿ [illegible] ಈ [illegible] ಗ್ರಾಮಗಳಿಗೆ ಒಂದು ಸಹಕಾರ ಸಂಘವನ್ನು ಸ್ಥಾಪಿಸಿ [illegible] ಸಭೆಯಲ್ಲಿಯೇ ಕೆಲವು ಪಾಲು ಮೊಬಲಗು ಸಂಗ್ರಹವಾಯಿತು. ಶ್ರೀ [illegible] ಅಧ್ಯಕ್ಷರನ್ನಾಗಿ [illegible] ಅವರನ್ನು ಆರಿಸಲಾಯಿತು. ಈ [illegible] ಸತ್ಯಜೀವನ ಸಂಘವೆಂದು ಹೆಸರಿಟ್ಟು ಆ ಮೂಲಕ ಗ್ರಾಮದ ಹಿತಕ್ಕಾಗಿ [illegible] ಮಾಡಲಾಯಿತು.

[illegible]

## ವಾರ್ತೆಗಳು.

ಕಾಶ್ಮೀರ ಪ್ರಕರಣವು ಸೆಕ್ಯೂರಿಟಿ ಕೌನ್ಸಿಲಿನ ಮುಂದೆ [illegible]

ಹಿಂದಿನ [illegible] ಶ್ರೀ [illegible] ಎರಡು ರಾಷ್ಟ್ರಗಳು ಒಂದಾಗಿ [illegible]

# ಕೊಡಗು

ತಾ. ೧೭-೨-೧೯೫೦ನೇ ಶುಕ್ರವಾರ

## ಕಾಲೇಜ್ ಡೇ.

ಕೊಡಗು ಸರಕಾರಿ ಕಾಲೇಜಿನ ವಾರ್ಷಿಕೋತ್ಸವವು ಮೊನ್ನೆ ಯಶಸ್ವಿಯಾಗಿ ನಡೆಯಿತು. ಕಾಲೇಜಿನ ಕಾರ್ಯಕಲಾಪದ ಬಗ್ಗೆ ಜನತೆಗೆ ತೃಪ್ತಿಕರವಾಗುವ ರೀತಿಯ ಮಾಹಿತಿ ದೊರೆಯಿತು. ಸರಳ ಮತ್ತು ಕಾರ್ಯದಕ್ಷರಾದ ಪ್ರಿನ್ಸಿಪಾಲರೂ, ಯೋಗ್ಯ ಮತ್ತು ಕರ್ತವ್ಯನಿರತ ಲೆಕ್ಚರರುಗಳೂ ಕಾಲೇಜಿಗೆ ಗೌರವ ತಂದಿದ್ದಾರೆ. ಅವರ ಈ ಕೇವಲ ಹತ್ತು ತಿಂಗಳುಗಳ ಕಾರ್ಯಕಲಾಪಗಳಿಂದ ಕಾಲೇಜಿನ ಪ್ರಗತಿಯನ್ನು ಮತ್ತು ನಾನಾ ಸಾಧನೆಗಳ ಯೋಗ್ಯತೆಯನ್ನು ಅಳೆಯುವುದು ಅಪ್ರಕೃತವಾಗಬಹುದಾದರೂ ಈ ವರೆಗಿನ ಕಾರ್ಯಕಲಾಪಗಳು ಮುಂದಿನ ಯೋಗ್ಯ ಭವಿಷ್ಯಕ್ಕೆ ಸಾಂಕೇತಿಕವಾಗಿ ಇವೆ. ಈ ಅನುಭವದಿಂದ ಕಾಲೇಜು ಈ ವರ್ಷ ಅಧಿಕಾರಿಗಳ ಕೈಯಲ್ಲಿ ಯೋಗ್ಯ ಪಥದಲ್ಲಿ, ಕೀರ್ತಿಗಳಿಸುತ್ತಾ ಮುಂದುವರಿಯಬಹುದೆಂದು ನಂಬಬಹುದಾಗಿದೆ.

ಕಾಲೇಜಿನ ಉನ್ನತಿ ಮತ್ತು ಅವನತಿಗೆ ಅಧ್ಯಾಪಕ ವರ್ಗವೇ ಸರ್ವಸ್ವವಲ್ಲ. ಸಾರ್ವಜನಿಕರ ಹೃತ್ಪೂರ್ವಕ ಬೆಂಬಲ ಬೇಕು. ಅವರೊಂದಿಗೆ ವಿದ್ಯಾರ್ಥಿಗಳೂ ತಮ್ಮ ಜವಾಬ್ದಾರಿಯನ್ನರಿತು ಕಾಲೇಜಿಗೆ ಕಳಂಕ ಬಾರದಂತೆ ನಡೆಯಬೇಕು. ಶಿಸ್ತು, ಸಂಘಟನೆ ಇವುಗಳು ಪಥದಲ್ಲಿ ಬೆಳೆದ ವಿದ್ಯಾರ್ಥಿಗಳು ಹೊರಬರುವುದಾದರೆ ಅವರ ಜೀವನವೂ ಧನ್ಯವಾಗುವುದರಲ್ಲದೆ ಕಾಲೇಜಿನ ಕೀರ್ತಿಯೂ ಹೆಚ್ಚುವುದು. ಅಧ್ಯಾಪಕರು, ವಿದ್ಯಾರ್ಥಿಗಳು, ಸಾರ್ವಜನಿಕರು ಕಾಲೇಜನ್ನು ತಮ್ಮದೆಂದು ಭಾವಿಸಿ ವರ್ತಿಸಿದರೆ ಈ ಕಾಲೇಜು ಅವರ ಕಾಲೇಜಾಗುವುದರಲ್ಲಿ ಆಶ್ಚರ್ಯವಿಲ್ಲ.

ಕಾಲೇಜಿನ ಕಟ್ಟಡಕ್ಕೆ ಅನುಮತಿ ದೊರೆತು ಶೀಘ್ರ ಕೆಲಸ ಕೈಕೊಳ್ಳಲ್ಪಡುವ ದೆಂಬುದು ಸಂತೋಷದ ವಿಚಾರ. ವಿಶ್ವವಿದ್ಯಾಲಯದ ನಿಯಮದಲ್ಲಿ ೧೯೫೧ರೊಳಗೆ ಕಾಲೇಜು ಕಟ್ಟಡವಾಗದಿದ್ದರೆ ವಿಶ್ವವಿದ್ಯಾಲಯದ ಸಂಯೋಜನೆಯು ತಪ್ಪುವದೆಂದು ತಿಳಿದು ಬಂದಿದೆ. ಆದ್ದರಿಂದ ೧೯೫೧ನೇ ಕಾಲೇಜು ವರ್ಷ ಪ್ರಾರಂಭವಾಗುವುದರೊಳಗೆ ಕಟ್ಟಡ ತಯಾರಾಗಬೇಕು. ಇದಕ್ಕೆ ಮಹಾ ಪ್ರಯತ್ನವೇ ನಡೆಯಬೇಕಾಗುವದು. ... ಕಟ್ಟಡ ಕಟ್ಟಿಸಿಕೊಡುವ ಭಾರವನ್ನು ಹೊಟ್ಟಿರುವರೆಂದು ಚೀಫ್ ಕಮಿಷನರು ಹೇಳಿರುವ ಭರವಸೆ ಸಾಧಿಸಲು ಕಾಲೇ ನಿಶ್ಚಯತೆ ನಡೆಯಬೇಕು. ಸರಕಾರದವರು ಶೀಘ್ರ ಈ ಕಾರ್ಯವನ್ನು ಕೈಕೊಂಡು ಕಾಲಕ್ಕೆ ಸರಿಯಾಗಿ ಕಟ್ಟಡ ಕಟ್ಟಿ ಕಾಲೇಜನ್ನು ಭದ್ರ ಹಾಗೂ ಶಾಶ್ವತ ಸ್ಥಳದಲ್ಲಿ ನಿಲ್ಲಿಸುವರೆಂದು ಆಶಿಸಲಾಗಿದೆ.

## ಪಟ್ಟಣ.

ಕೆ ಬಿ ಆರ್ ಸರ್ವಿಸು ಲೈನೊಂದು ಬೆಳಿಗ್ಗೆ ಮೈಸೂರಿನಿಂದ ಹೊರಟುಕೊಳ್ಳಲು ಸಾಗರವಾಗಿ ನ ೬-೩೦ ಗಂಟೆಗೆ ವೀರಾಜಪೇಟೆ ಮಧ್ಯಾಹ್ನ ೧೨-೩೦ ಗಂಟೆಗೆ ಅಲ್ಲಿಂದ ಹೊರಟು ಸಾಯಂಕಾಲ ಗಂಟೆಗೆ ಮೈಸೂರಿಗೆ ತಲುಪುವದು ಆಗಿದೆ.

ಕುಶಾಲನಗರ ಮೈಸೂರು ಲೈನಿನ ಕೆ. ಬಿ ಮೋಟಾರ್ ಸರ್ವಿಸು ತಾತ್ಕಾಲಿಕವಾಗಿ ಪ್ರಾಂತಾವದಿಂದ ನಿಲ್ಲಿಸಲ್ಪಟ್ಟ ದ್ದೆಂದು ತಿಳಿದು ಬರುತ್ತೆ.

ಡಿಸ್ಟ್ರಿಕ್ಟ್ ಕೌನ್ಸಿಲ್ ಮೀಟಿಂಗು ೧-೩-೫೦ ರಲ್ಲಿ ಕೊಡಗು ಕೌನ್ಸಿಲಿನಲ್ಲಿ ನಡೆಯುವುದು.

ಕೌನ್ಸಿಲು ಮೀಟಿಂಗಿನಲ್ಲಿ ಅಂತಸ್ಯ ದ ಕಾಡಿನ ಮರ ಕಡಿಯುವ ವಿಷಯ ಮೀಟಿಂಗ ತಾ. ೨೫- ರಲ್ಲಿ ಕೌನ್ಸಿಲು ಹಾಲಿನಲ್ಲಿ ನಡೆಯು.

ಡಿಪ್ಯುಟಿ ಗವರ್ನ್ಮೆಂಟ್ ಹೈಸ್ಕೂಲು ವಾರ್ಷಿಕೋತ್ಸವವು ಮೈಸೂರು ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಶ್ರೀ ಎಸ್ ವಿ ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವದು.

೨೬-೨-೫೦ ರಲ್ಲಿ ಮಡಿಕೇರಿ ಕಾಫಿ ಹಾಲ್‌ನಲ್ಲಿ ಅಖಿಲ ಕೊಡಗು ವ್ಯವಸಾಯಗಾರರ ಮಹಾ ಸಭೆಯು ಕ. ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದು. ಕೊಡಗಿನ ಮೋಟಾರುಗಳ ಟ್ರಾನ್ಸ್‌ಪೋರ್ಟ್ ಸಂಘವನ್ನು ತೆರೆಯುವ ವಿಚಾರ ಅಲ್ಲಿ ಚರ್ಚಿಸಲ್ಪಡುವದೆಂದು ತಿಳಿದುಬಂದಿದೆ.

ಸ್ವಸ್ಥದಿಂದ ಬಿಡುಗಡೆ ಹೊಂದಿದ ಎಸ್. ಎಲ್ ಸಿ ಪಾಸಾದ ೩೦ ವರ್ಷ ದೊಳಗಿನ ಯೋಗ್ಯ ಯುವಕರಿಗೆ ... ನಲ್ಲಿ ಫಿಸಿಕಲ್ ಟ್ರೈನಿಂಗ್ ಇನ್ಸ್ಟ್ರಕ್ಟರ್ ಕಲಿಸಲು ಕೆಲಸದ ವಿವರಗಳಿಗಾಗಿ ಸದೆಂಬದೂ ಹೆಚ್ಚಿನ ವಿವರಗಳಿಗೆ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿಗೆ ಬರೆಕೊಳ್ಳಬಹುದಾಗಿ ಯೂ ತಿಳಿಸುತ್ತಾರೆ.

ಶ್ರೀಮತಿ ಕಾವೇರಮ್ಮ ತಿಮ್ಮಯ್ಯ ಮಿ.ನೋರಿಯ ಆಲ್ ಬ್ಯಾಡ್ಮಿಂಟನ್ ಪಂದ್ಯಾಟವು ತಾ. ೩ ೩-೫೦ ರಿಂದ ಸಿದ್ಧಾಪುರ ಕ್ಲಬ್ಬಿನ ಆಶ್ರಯದಲ್ಲಿ ಜರಗುವದು.

ಚಿಕ್ಕಮಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಶ್ರೀ ಕೃಪಯ್ಯ ಜಿ ಸಿ ಇವರಿಗೆ ಒಂದು ಮೈಲು, ೧೦೦ ಮೀಟರ್ ಓಟ, ಉದ್ದ ಎತ್ತರ ಹಾರುವ ಗರಲ್ಲಿ ಬಹುಮಾನಗಳನ್ನು ಪಡೆದು ಛಾಂಪಿಯನ್ ಶಿಪ್ ಕಪ್ಪನ್ನು ಗೆದ್ದರು.

ಯು. ಪಿ. ವಿಭಾಗದ ಇಂಡಿಪೆಂಡೆಂಟ್ ಸಿಗ್ನಲ್ ಕೋರ್‌ನಲ್ಲಿರುವ ಶ್ರೀ ಎಂ. ಎ. ಅಪ್ಪಯ್ಯನವರು ಅಲ್ಲಿ ನಡೆದ ಇಂಟರ್ ಡಿಪಾರ್ಟ್ಮೆಂಟ್ ಆಟೋಟಗಳಲ್ಲಿ ಛಾಂಪಿಯನ್‌ಶಿಪ್ಪನ್ನು ಪಡೆದು ಆ ವಿಭಾಗದ ೧೯೫೦ರ ಉತ್ತಮ ಯುವಕ (Best athlete for 1950) ಎನಿಸಿರುವರು.

ಮೈಸೂರು ಸ್ಟೇಟ್ ಒಲಿಂಪಿಕ್ ಪಂದ್ಯಾಟದಲ್ಲಿ ಭಾರದ ಕಲ್ಲೆಸೆಯುವಗರಲ್ಲಿ ಶ್ರೀ ಕೋದಂಡ ಎ ಬೋಪಯ್ಯನವರು ಪ್ರಥಮ ಬಹುಮಾನ ಪಡೆದಿರುವರು.

ಕಳೆದ ಎಸ್. ಎಸ್. ಎಲ್. ಸಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಶ್ರೀಮತಿ ಪುಟ್ಟಚಂಡ ಬೊಳ್ಳಮ್ಮನವರು ತೇರ್ಗಡೆಯಾಗಿರುವರು.

ಕೊಡಗಿನ ಚೀಫ್ ಕಮಿಷನರಾಗಿ ನೇಮಕವಾಗಿರುವ ಆಸ್ಟ್ರೇಲಿಯಾದ ಹೈಕಮಿಷನರಾಗಿದ್ದ ಲೆ|| ಕರ್ನಲ್ ದಯಾಸಿಂಗ್ ಬೇಡಿಯವರು ಫೆಬ್ರವರಿ ತಾ. ೨೪ ರಲ್ಲಿ ಆಸ್ಟ್ರೇಲಿಯಾದಿಂದ ಬರಲಿರುವರು. ಮಾರ್ಚಿ ತಾರೀಖು ಪ್ರಥಮ ವಾರದಲ್ಲಿ ಅವರು ಕೊಡಗಿಗೆ ಬರಬಹುದೆಂದು ವಾರ್ತೆ ಇದೆ.

## ವಾರ್ತೆಗಳು.

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರು ಮೇ ತಾರೀಕು ೩ ರಲ್ಲಿ ಅಮೇರಿಕಾಕ್ಕೆ ಹೋಗಿ ೨೪ ದಿನಗಳ ವರೆಗೆ ಅಧ್ಯಕ್ಷರ ಆಹ್ವಾನದ ಮೇರೆ ಪ್ರವಾಸ ಮಾಡುವರೆಂದು ತಿಳಿದು ಬಂದಿದೆ.

೧೯೫೦ ರಲ್ಲಿ ಬ್ರಿಟನಿನ ರಾಜರಾದ ಜಾರ್ಜರವರು ಪಶ್ಚಿಮ ಏಷ್ಯಾ ಪ್ರದೇಶವನ್ನು ಸಂದರ್ಶಿಸುವರೆಂದು ತಿಳಿಯಬಂದಿದೆ.

ಹಿಂದುಸ್ಥಾನದಲ್ಲಿ ಆಹಾರ ಪದಾರ್ಥಗಳ ಸಂಗ್ರಹ (ಪ್ರೊಕ್ಯೂರ್‌ಮೆಂಟ್) ಎಂಬ ಯೋಗಿ ... ನೋಡಲು ಕೇಂದ್ರ ಸರಕಾರವು ಒಂದು ಸಮಿತಿಯನ್ನು ನೇಮಿಸಿದೆ.

೧೯೫೧ರ ನಂತರ ಹೊರ ದೇಶಗಳಿಂದ ಆಹಾರ ಧಾನ್ಯ ತರಿಸಲಾಗದೆಂದು ಕೇಂದ್ರ ಸರಕಾರವು ನಿಶ್ಚಯಿಸಿರುವ ಕಾರಣದಿಂದ ಜನತೆಯು ಆಹಾರ ಪದಾರ್ಥಗಳನ್ನು ನಿಶ್ಚಿಂತವಾಗಿಸುವ ಸರಕಾರದ ಪ್ರಯತ್ನದಲ್ಲಿ ಸಹಕರಿಸಬೇಕೆಂದು ಕೇಂದ್ರ ಸರಕಾರವು ಕರೆಯಿತ್ತಿದೆ.

ಕೆಲಗಾಲ ಆಸ್ಥಾನ ಕವಿಯಾದ ಕರ್ನಾಟಕ ಸಾಹಿತ್ಯ ಕಲಾನಿಧಿ ಜಯಚಾಮರಾಜ ಪುರಸ್ಕೃತ ವೆಂಕಟಶಾಸ್ತ್ರಿಯವರು ತಾ. ೧೫ ರಲ್ಲಿ ತಮ್ಮ ಬೆಂಗಳೂರಿನಲ್ಲಿ ನಿಧನರಾದರು.

ಹೈಡ್ರೋಜನ್ ಬಾಂಬಿನ ಪ್ರಯೋಗದಿಂದ ವಾತಾವರಣದಲ್ಲಿ ಹಾಳಾಗಿ ಆ ವಾತಾವರಣವನ್ನು ಸೇವಿಸುವ ಜೀವಜಂತುಗಳೆಲ್ಲ ನಾಶವಾಗುವ ಸಾಧ್ಯತೆ ಇದೆಯೆಂದು ಜಗತ್ತಿನ ಶ್ರೇಷ್ಠ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನರು ಹೇಳಿದ್ದಾರೆ.

ತಮಿಳುನಾಡು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಡೆದ ರಾಜಕೀಯ ಸಮ್ಮೇಳನಕ್ಕೆ ಕಾಶ್ಮೀರದ ಪ್ರಧಾನಮಂತ್ರಿ ಶೇಕ್ ಅಬ್ದುಲ್ಲರವರನ್ನು ಆಹ್ವಾನಿಸಲಾಗಿದ್ದು ಅವರು ಮದ್ರಾಸಿನಲ್ಲಿ ಮೂರು ದಿನಗಳ ವರೆಗಿದ್ದು ವಿವಿಧ ಸಭೆಗಳಲ್ಲಿ ಭಾಷಣ ಮಾಡಿ ಕಾಶ್ಮೀರ ಸಮಸ್ಯೆಯನ್ನು ವಿವರಿಸಿದರು. ಕಾಶ್ಮೀರದ ಸಮಸ್ಯೆಯು ಭಾರತದ ಸಮಸ್ಯೆಯೆಂದೂ, ದೆಹಲಿಯಲ್ಲಿಯ ಕೇಂದ್ರ ಸರಕಾರಕ್ಕೆ ಸಹಾಯವಿತ್ತು ಬಲಪಡಿಸಿದರೆ ಕಾಶ್ಮೀರಕ್ಕೆ ಸಹಾಯ ಮಾಡಿದಂತೆ ಎಂದೂ, ಕಾಶ್ಮೀರದಲ್ಲಿ ಜನಮತ ತೆಗೆದರೆ ಪಾಕಿಸ್ತಾನಕ್ಕೆ ಅದು ದೊರೆಯುವುದಿಲ್ಲವೆಂಬ ಕಾರಣವೇ ಪಾಕಿಸ್ತಾನವು ಇಲ್ಲದ ತಂಟೆಯನ್ನೆಬ್ಬಿಸುತ್ತಿದೆಯೆಂದೂ ಹೇಳಿದರು.

ಸೇಲಂ ಜೈಲಿನಲ್ಲಿದ್ದ ಸುಮಾರು ೨೦೦ ಕಮ್ಯೂನಿಸ್ಟ್ ಕೈದಿಗಳಿಗೂ ಅಲ್ಲಿಯ ವಾರ್ಡರರಿಗೂ ಜೈಲು ಶಿಸ್ತಿನ ವಿಚಾರ ಹೊಡೆದಾಟವಾಗಿ ಗುಂಡು ಹಾರಿಸಬೇಕಾಗಿ ಬಂದು ೨೨ ಕೈದಿಗಳು ಮೃತರಾಗಿ ಅನೇಕರಿಗೆ ಗಾಯವಾಗಿದೆ.

ಪಾಕಿಸ್ತಾನಕ್ಕೆ ತೃಪ್ತಿಯಾಗುವಂತೆ ಕಾಶ್ಮೀರದ ವಿವಾದವನ್ನು ಅವಶ್ಯ ಬೇಗ ಬಗೆಹರಿಸಲೇಬೇಕೆಂದು ಭಾರತದ ಮೇಲೆ ಎಂಗ್ಲೋ-ಅಮೇರಿಕನ್ ಕೂಟದ ಹಾಗೂ ಕೆಲವು ಕಾಮನ್‌ವೆಲ್ತ್ ರಾಷ್ಟ್ರಗಳ ಒತ್ತಾಯ ಬಲವಾಗಿದೆಯೆಂದು ತಿಳಿದು ಬರುತ್ತದೆ.

ಮಾರ್ಚ್ ತಾ. ೧೨ ರಲ್ಲಿ ನಡೆಯುವ ಸ್ಟೈಲ್ ಸೆಟಲ್‌ಮೆಂಟ್ ಚುನಾವಣೆಗಳಿಗೆ ರಂಗವು ಸಿದ್ಧವಾಗುತ್ತಿದೆ. ಮುಖ್ಯ ಉಮೇದ್ವಾರರೆಂದು ಸ್ಟೈಲಿನವರ ಹೆಸರು ಸೂಚಿತವಾಗಿದೆ. ... ದ್ವಾರೆಂಬುವರ ನಮ್ಮದ ಮಾಜಿ ವಿದೇಶಾಂಗ ಸಚಿವ ಮಿ. ವಿ ಎಂ. ಮೊಲೊಟೋವ್.

ಪಾಕಿಸ್ತಾನದಿಂದ ‘ ಭಾರತ ಯೂನಿಯನಿನ ಮುಸ್ಲಿಮರ ಬಂಧವಿಮೋಚನೆ, ಗೆಂದು ಪೂರ್ವ ಬಂಗಾಲದಿಂದ ಭಾರತಕ್ಕೆ ಬಂದಿದ್ದ ಅಶಾಂತಿಯಲ್ಲಿ ತಿರುಗ ಎಂಟು ಪಾಕಿಸ್ತಾನಿಯರನ್ನು ಕೂಚ್‌ಬಿಹಾರ್‌ದಲ್ಲಿ ದಸ್ತಗಿರಿ ಮಾಡಿದರು.

ಜಮ್ಮು ಮತ್ತು ಕಾಶ್ಮೀರ ವಿಶ್ವವಿದ್ಯಾಲಯಗಳನ್ನು ತಾತ್ಕಾಲಿಕವಾಗಿ ೧೯೫೦ ಡಿಸೆಂಬರ್ ತಿಂಗಳ ವರೆಗೆ ಭಾರತ ಸರಕಾರವು ಮಾನ್ಯ ಮಾಡಲು ನಿರ್ಧರಿಸಿದೆ. ಅಲ್ಲಿ ನಡೆಯುವ ಪರೀಕ್ಷೆಗಳನ್ನು, ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿದವರ ಡಿಗ್ರಿಗಳನ್ನು ಭಾರತ ಸರಕಾರವು ಮನ್ನಿಸುವುದು.

ಮೈಸೂರಲ್ಲಿ ಜಾನುವಾರುಗಳ ರೋಗ ಗಳು ತುಂಬಾ ಹೆಚ್ಚಿವೆ. ಕಳೆದ ಡಿಸೆಂಬರ ತಿಂಗಳಲ್ಲಿ ಸುಮಾರು ೯೪೩ ಜಾನುವಾರುಗಳಿಗೆ ರೋಗ ತಗಲಿ ಅವುಗಳಲ್ಲಿ ೪೩೮ ಜಾನುವಾರುಗಳು ಮೃತಪಟ್ಟಿರುವವು.

ಪಾಕಿಸ್ತಾನದ ಅತ್ಯಾಚಾರ ... ದಿಗಳನ್ನು ... ಬಂಗಾಲದ ... ಮುಸ್ಲಿಮರ ಕಡೆಯಿಂದ ಹಿಂದೂಗಳ ಪೂರ್ವ ಬಂಗಾಲದ ಮುಖ್ಯ ಮಂತ್ರಿಗಳನ್ನು ಕಂಡು, ಒಡನೆ ಈ ಅತ್ಯಾಚಾರಗಳನ್ನು ನಿಲ್ಲಿಸುವ ವ್ಯವಸ್ಥೆಯಾಗಬೇಕೆಂದು ನಿವೇದಿಸಿಕೊಂಡಿವೆ.

ಪ್ರತ್ಯೇಕ ಪ್ರಾಂತವಾಗಿರುವ ದೆಹಲಿಗೆ ಕೇಂದ್ರ ಜನತಾ ಸಭೆಯಲ್ಲಿ ೪ ಸ್ಥಳಗಳೂ ಸ್ಟೇಟ್ ಕೌನ್ಸಿಲಿನಲ್ಲಿ ಎರಡು ಸ್ಥಳಗಳೂ ಕೊಡಲ್ಪಡಬೇಕೆಂದು ದೆಹಲಿ ಸಲಹಾ ಸಮಿತಿಯು ತನ್ನ ಶಿಫಾರಸುಗಳನ್ನು ಸಮರ್ಪಿಸಿದೆ.

# ಓದುಗರ ಓಲೆಗಳು.

**ಚೀಫ್ ಕಮಿಷನರಲ್ಲಿ ವಿನಂತಿ.**

ರೇಶನ್ ಅಂಗಡಿಗಳಲ್ಲಿ ದೊರೆಯುವ ಅಕ್ಕಿಯ ವಿಚಾರ ಅನೇಕ ಬಾರಿ ಪತ್ರಿಕೆಗಳಲ್ಲಿ ಬರೆಯಲಾಗಿದೆ. ರೇಶನಿಂಗ್ ಇಲಾಖೆಯ ಅಧಿಕಾರಿಗಳಾಗಲೀ, ಕಡೆಗೆ ಚೀಫ್ ಕಮಿಶನರವರಾಗಲೀ, ಈ ವಿಚಾರ ಸ್ವಲ್ಪವೂ ಗಮನಿಸಿದಂತೆ ತೋರುವುದಿಲ್ಲ. ಉಪ್ಪಿನಂಗಡಿ ಹೊರತು [illegible] ರೇಶನಿಂಗ್ ಅಂಗಡಿಗಳಲ್ಲಿ ಈ ಕಳೆದ ಒಂದು ತಿಂಗಳಿಂದ ಕೊಡಲ್ಪಡುವ ಅಕ್ಕಿಯು ಮನುಷ್ಯರು ಉಪಯೋಗಿಸುವಂತಿಲ್ಲ. ಈ ರೇಶನ್ ಅಂಗಡಿಯವರೇ [illegible] ಕೊಂಡಿದ್ದು ಎಷ್ಟೋ ಕಡಿಮೆ ಕ್ರಯಕ್ಕೆ [illegible] ಅಕ್ಕಿಯನ್ನು ಸರಬರಾಯಿ ಮಾಡುತ್ತಿದ್ದಾರೆ. ಅಕ್ಕಿಯ ಒಳಗಿನ ಕಲ್ಲುಗಳ [illegible] ನಮಗೆ ರೇಶನಾಗಿ ದೊರೆಯುವ [illegible] ಅಕ್ಕಿಯನ್ನು ಕಟ್ಟಿ ಕಲ್ಲು [illegible] ಗುವ [illegible] ನಮಗೆ ಸರಬರಾಯಿಗೆ ಎರಡು [illegible] ಕೊಂಡು [illegible]. ಈ ರೀತಿಯಾಗಿ ಬಡಜನರ ಹೊಟ್ಟೆಗೆ ಹೊಡೆಯುತ್ತಿದ್ದರೂ ರೇಶನಿಂಗ್ ಇಲಾಖೆಯ [illegible] ಗಲೀ, ಪೋಲೀಸ್ ಅಧಿಕಾರಿಗಳಾಗಲೀ ಗಮನಿಸದಿರುವುದು ಶೋಚನೀಯ. ಬೇರೆ ಬಂಗ ಈ ಕಾಲದಲ್ಲೇ ಈ [illegible] ಬಡವರ ಗೋಳು [illegible] ರು? ಆದ್ದರಿಂದ ಚೀಫ್ ಕಮಿಶನರ ರವರು ಒಮ್ಮೆ [illegible] ಈ ರೇಶನ ಅಂಗಡಿಗೆ [illegible] ಅಲ್ಲಿ ಕೊಡುವ ಅಕ್ಕಿಯನ್ನು ಪರೀಕ್ಷಿಸಬೇಕು. ಹಾಗೆ ಮಾಡುವರೇ?

ರಾಮಯ್ಯ.

---

**ಮಗ್ಗಾಲು**

೧೯೪೯ರಲ್ಲಿ ಹಳೆಯ ಚೀಫ್ ಕಮಿಷನರು ಮಡಿಕೇರಿಗೆ ಬಂದ ಅತಿಥಿಗಳ [illegible] ಹತ್ತು ಸಾವಿರ [illegible] ನಗರದ [illegible] ಕೊಟ್ಟು [illegible] ೧೯೪೯ನೇ ಡಿಸೆಂಬರ್ ತಿಂಗಳಲ್ಲಿ ಈಗಿನ ಚೀಫ್ ಕಮಿಷನರು ಮಡಿಕೇರಿಗೆ ಬರುವಾಗಲೂ [illegible] ಕಟ್ಟಲು [illegible] ಪತ್ರಿಕೆ ಮಾತ್ರ [illegible] ಗಡಿಯಲ್ಲಿ [illegible] ವಾದ [illegible]. ಆವರೆಗೆ ಹೊಸ ಚೀಫ್ ಕಮಿಷನರು ಬಂದು, ಬರುವ ಆಯ್ತಾಯಿಗೆ [illegible] ಅಧಿಕಾರ [illegible] ಈ [illegible] ಬಗ್ಗೆ [illegible] ಹೊರಡಿಸಿ [illegible] ಸ್ವಂತ ಪತ್ರಿಕೆಗಳು ದೃಷ್ಟಿ [illegible] ಈ ನಾಡಿನ [illegible] ಕ್ಕೆ ಬೇಕೆ? ನಾವಾ ವರ್ಷದ ಈ ನಾಡಿನವರು ಎಚ್ಚರಗೊಳ್ಳಬೇಕು. ಇಂದಿನ ಕಂಡಕರಲ್ಲಿ ಕೊಡಗಿನವರಿಗೆ ಸೇರುವುದಕ್ಕೆ ಪೂರ್ವ [illegible] ಅನುಭ-

ವ ಮಾತು. ಆದ್ದರಿಂದ ನಾಡಿನವರು ಒಂದಾಗಿ ನಮ್ಮ ಕೇಳಿಕೆಯನ್ನು ಸರಕಾರದ ಮುಂದಿಟ್ಟು ಅದು ಅನಿವಾರ್ಯವಾಗಿ ಕೆಲಸ ಕೈಕೊಳ್ಳುವಂತೆ ಬಲಾತ್ಕರಿಸಬೇಕಿದೆ.

ಮುದ್ದಯ್ಯ.

---

**ಜುಗಾರಿ**

ಕೊಡಗಿನಲ್ಲಿ ಜುಗಾರಿ ಆಟ ಹೆಚ್ಚುತ್ತಿದೆ. ಮಡಿಕೇರಿಯಲ್ಲೇ ಕೆಲವರು ಗುಟ್ಟಾಗಿ ಇದನ್ನು [illegible] ತಾಲ್ಲೂಕುಗಳಲ್ಲಿ [illegible] ಜೂಜು [illegible] ನಡೆದಿದೆ. [illegible] ಜೂಜು, ಜೂಜುಗಳಲ್ಲಿ ಭಾಗವಹಿಸುವುದರಿಂದ ಪ್ರತಿಯೊಬ್ಬನಿಗೆ [illegible] ವನ ಪಡೆ [illegible] ರೂಪಾಯಿ [illegible] ಈ ರೀತಿಯ ಜೂಜಾಟಗಳು ನಡೆಯುತ್ತಿದ್ದರೂ ಪೋಲೀಸರು ಎಚ್ಚರ [illegible] ಸಹಜ [illegible] ಕೊಡಗಿನ ಪೋಲೀಸರಿಗೆ ಈ ಸಂಗತಿ ಇಂಥಾ ಘಟನೆ [illegible]! ಈ [illegible] ಸಂದರ್ಭದಲ್ಲಿ [illegible] ಅನ್ನದವರೆಗೆ [illegible] ಸಾರಾಯಿ [illegible] ದೂರವಾಗಿ [illegible] ನಿಯಂತ್ರಣ ಅಧಿಕಾರಿಗಳೂ, ಪೋಲೀಸರೂ [illegible] ಜೂಜು [illegible] ನಮ್ಮ [illegible] ಜೂಜಿಗೆ [illegible] ಬರುವುದೇ?

ಕಾಳಪ್ಪ.

---

**ರಿಪಬ್ಲಿಕ್ ದಿನಾಚರಣೆ.**

ರಿಪಬ್ಲಿಕ್ ದಿನಾಚರಣೆಯ ಸಂಬಂಧ ಕೊಡಗಿನ ಎಲ್ಲಾ ಶಾಲೆಗಳಿಗೆ ರಜೆ [illegible] ಹಣ [illegible] ಆಗಿದೆಯೆಂದೂ, ಪ್ರೈಮರಿ ಎಲಿಮೆಂಟರಿ ಶಾಲೆಗಳಿಗೆ [illegible] ಗಳಿಂದ [illegible] ಕೆಲವು ಶಾಲೆಗಳಲ್ಲಿ ಉ [illegible] ವಿದ್ಯಾರ್ಥಿಯ [illegible] ದಿನವನ್ನು [illegible] ನಡೆಸಿದರೆಂದು ತಿಳಿದು ಬಂದಿದೆ.

ಸ್ಟುವರ್ಟ್ ಎಲಿಮೆಂಟರಿ ಶಾಲೆಗಳಲ್ಲಿ [illegible] ಮಧ್ಯದಲ್ಲಿ [illegible] ವೀರರಾಜಪೇಟೆಯ [illegible] ಶಾಲೆಯ ವಿದ್ಯಾರ್ಥಿಗಳಿಗೆ ಆ ದಿನ [illegible] ಎಂದೂ, ಹೇಳಿದ್ದಾರೆ ವಿನಹ ಆ ದಿನದ [illegible] ಹೆಡ್‌ಮಾಸ್ತರವರಿಗೆ ಗೊತ್ತು-

ಹೆಡ್‌ಮಾಸ್ಟರವರು ೫ನೇ ತಾರೀಕು ಬುಧವಾರ ವೀರರಾಜಪೇಟೆಯಲ್ಲಿ ಇದ್ದರು. ಅವರಿಗೆ ೨೬ನೇ ದಿನ ರಿಪಬ್ಲಿಕ್ ದಿನವನ್ನು ಹೇಗೆ ಶಾಲೆಯಲ್ಲಿ ಆಚರಿಸಬೇಕೆಂಬ ವಿಷಯ ತಿಳಿಯದೆ ಇದ್ದದ್ದು ಬಹಳ ವಿಷಾದಕರ. ಇನ್ನು ಗುರುವಾರ ದಿನ ಶುಕ್ರವಾರ ೧೧ ಗಂಟೆ ಸಮಯಕ್ಕೆ ಶಾಲೆಗೆ ಹೋಗುವಾಗ ದಾರಿಯಲ್ಲಿ ಕಂಡ ಮಕ್ಕಳಿಗೆ [illegible] ಕೊಟ್ಟರಂತೆ. ಶಾಲೆಯ ಪ್ರಾರ್ಥನೆ ಮುಗಿದಾಗ ಎಲ್ಲಾ ಉಪಾಧ್ಯಾಯರಿಗೆ ಹೇಳಿ ಅಲ್ಲಿ [illegible] ಸ್ವಲ್ಪ [illegible] ಇದೇನಾ [illegible] ದಿನ [illegible] ತಿಳಿಯ [illegible]. [illegible] ಶಾಲೆಯಲ್ಲಿ ಯ ಉಪಾಧ್ಯಾಯರು [illegible] ಗ್ರಾಮದವರೇ! [illegible] ವಿದ್ಯಾರ್ಥಿಗಳು [illegible] ಎಚ್ಚರ [illegible] ಬೇಕು! ಬದಲು ಇವರು ಆ ದಿನದ [illegible] ಆಡಳಿತದಲ್ಲಿ ನಡೆಸುವಲ್ಲಿ [illegible] ಇಂಥಾ [illegible] ಸ್ವಾತಂತ್ರ್ಯ [illegible] ಇವರ [illegible] ದಿನ [illegible] ಶಿಕ್ಷಣ [illegible] ಅಧಿಕಾರಿಗಳು ವಿಚಾರಿಸಬೇಕು.

ಗ್ರಾಮದ ವ್ಯಕ್ತಿ.

---

**ಬತ್ತ ಮಾರಾಟ.**

ಈ ವರ್ಷವೂ ಬತ್ತ [illegible] ೦ ಈ [illegible] ಬಡ ಜನರಿಗೆ [illegible] ಕೊಡಗಿನ [illegible] ಬತ್ತವನ್ನು ಅಕ್ಕಿಯ ರೂಪವಾಗಿ ಕೊಡುತ್ತಿರುವುದರಿಂದ ಕೊಡಗಿನ ಮಿಲ್ ಮಾಲೀಕರಿಗೆ [illegible] ಬಡ ಜನರಿಗೆ ಬಹಳ ತೊಂದರೆಯಾಗುತ್ತಿದೆ. [illegible] ಆ ಬಗ್ಗೆ [illegible] ವಸ್ತು [illegible] ಈ ಬತ್ತವನ್ನು [illegible] ಬರಬೇಕಿದೆ. [illegible] ಮಿಲ್ ಮಾಲೀಕರು ಅಕ್ಕಿ ಮಾಡಿ [illegible] ೧೨ [illegible] ಬತ್ತವು [illegible] ಬರುತ್ತಿದೆ [illegible] ಮಿಲ್ ಮಾಲೀಕರ ಅನುಕೂಲದಂತೆ ಬತ್ತ [illegible] ಸರಕಾರವು ಕೆಲವು ಮಿಲ್ ಮಾಲೀಕರಿಗೆ [illegible] ಜನ [illegible] ಗಮನಿಸಬೇಕು [illegible] ಕೆಲವರು [illegible] ದರಕ್ಕೆ ಮಾರಾಟ [illegible] ನಿರ್ಧರಿಸಿದೆ. [illegible] ಬಡವರ ಹಿತವೇ [illegible] ಬೇಕು.

[illegible]

---

**ಒಂದು ಸೂಚನೆ**

ಕಾಲೇಜಿನ ವಿದ್ಯಾರ್ಥಿಗಳು ಕಾಲೇಜು [illegible] ಸ್ವಲ್ಪ [illegible] ಇತ್ತೀಚೆಗೆ [illegible] ಜವಾಬ್ದಾರಿಯನ್ನರಿತು

ಯೋಗ್ಯ ರೀತಿ ವರ್ತಿಸುತ್ತಿದ್ದಾರೆ. ಕಾಲೇಜಿನ ಪ್ರಗತಿಯನ್ನು ಬಯಸಿ ಸಾರ್ವಜನಿಕರಲ್ಲಿ ಒಂದು ಸೂಚನೆ ಏನೆಂದರೆ ಸಾರ್ವಜನಿಕರು ಒಂದು ನಿಧಿಯನ್ನು ಸಂಗ್ರಹಿಸಿ ಅದನ್ನು ನಿಕ್ಷೇಪವಾಗಿಟ್ಟು ಅದರ ಬಡ್ಡಿಯಿಂದ ಪ್ರತಿ ವರ್ಷ ಕಾಲೇಜಿನ ಪ್ರತಿ ತರಗತಿಯ ಮೂರು ಒಳ್ಳೆ ನಡತೆಯ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವ ಏರ್ಪಾಡು ಮಾಡಬೇಕು. ಇಂಥಾ ಒಂದು ನಿಧಿಗೆ ಕಡಿಮೆ ೫೦೦೦ ರೂ ಸಂಗ್ರಹಿಸುವ ಪ್ರಯತ್ನವನ್ನು ಸಾರ್ವಜನಿಕ ಮುಂದಾಳುಗಳೂ, ಕಾಲೇಜು ಹಿತಚಿಂತಕರೂ ಮುಂದವರಾಗಿ ಆಶಿಸಲಾಗಿದೆ.

ಕೆ. ದೇವಯ್ಯ.

---

**ಸತ್ಯಜೀವನ ಸಹಕಾರ ಸಂಘ.**

ಕೆಲ ದಿಂದ ಬಿಟ್ಟಿರುವ ಮಡಿಕೇರಿ ನಾಡಿನ ಶಿವಿ ಮತ್ತು ಮತ್ತು [illegible] ಗ್ರಾಮಸ್ಥರು ತಾ. ೭ ರಲ್ಲಿ ಶ್ರೀ [illegible] ಗಣಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಸಭೆಯಲ್ಲಿ ಈ ಗ್ರಾಮಗಳ ದುಸ್ಥಿತಿಯನ್ನು ಜನತೆಗೆ ವಿದ್ಯೆಯ [illegible] ಇರುವ ಅಂಧಕಾರವನ್ನು ವಿವರಿಸಿ ಅಧ್ಯಕ್ಷರ ಸೂಚನೆಯಂತೆ ಈ ಗ್ರಾಮಗಳಿಗೆ ಒಂದು ಸಹಕಾರ ಸಂಘವನ್ನು ಸ್ಥಾಪಿಸಿಕೊಳ್ಳಲು ತೀರ್ಮಾನವಾಯಿತು. ಸಭೆಯಲ್ಲಿಯೇ ಕೆಲವು ಪಾಲು ಬಂಡವಾಳ ಸಂಗ್ರಹವಾಯಿತು. ಶ್ರೀ [illegible] ಅಧ್ಯಕ್ಷರವರು ಹಾಗೂ ಶ್ರೀ ಸಿ. ಎ. [illegible] ರವರು ಕಾರ್ಯದರ್ಶಿಗಳು. ಈ ಗ್ರಾಮದ ಬಗ್ಗೆ ಅಧ್ಯಕ್ಷರು ವಹಿಸಿದ ಉತ್ಸಾಹಕ್ಕಾಗಿ ಅವರನ್ನು ವಂದಿಸಲಾಯಿತು. ಈ ಗ್ರಾಮ ಸಂಘಕ್ಕೆ ಸತ್ಯಜೀವನ ಸಂಘವೆಂದು ಹೆಸರಿಟ್ಟು ಆ ಮೂಲಕ ಗ್ರಾಮದ ಹಿತಕ್ಕಾಗಿ ದುಡಿಯಬೇಕೆಂದು ಆಶೆಯು ಮಾಡಲಾಯಿತು.

ಜನಾರ್ದನ.

---

## ವಾರ್ತೆಗಳು.

ಕಾಶ್ಮೀರ ಪ್ರಕರಣವು ಸೆಕ್ಯೂರಿಟಿ ಕೌನ್ಸಿಲಿನ ಮುಂದೆ ಚರ್ಚೆಗೆ ಬಂದಿದೆ. ಆ ಬಗ್ಗೆ ಕಾಶ್ಮೀರ ಸಚಿವರು ಮೆಕ್‌ನಾಟನ್ ರವರ ಮಾಡಿದ ವರದಿ ಮತ್ತು ಭಾರತ ಪಾಕಿಸ್ತಾನದ ಪ್ರತಿನಿಧಿಗಳು ಮಾಡಿದ ಭಾಷಣಗಳು [illegible] ವಾಗಿದ್ದವು.

ಚೀನಾದ ಮಂದಿ [illegible] ಶ್ರೀ ಮಾವೋತ್ಸೆಟುಂಗ್ ಮಾಸ್ಕೋದಲ್ಲಿದ್ದಾರೆ. ಅಲ್ಲಿ ಸ್ಟಾಲಿನರ ಅತಿಥಿಯಾಗಿ ಅವರು [illegible] ಸ್ಥಾಪಿಸುತ್ತಿದ್ದಾರೆ. ರಷ್ಯದ ಸ್ನೇಹ [illegible] ಸಂಪಾದಿಸಲು [illegible] ಸಂಗ್ರಹಿಸುತ್ತಿದ್ದಾರೆ. ಚೀನಾ ರಷ್ಯಗಳೊಳಗೆ ೩೦ ವರ್ಷಗಳ ಒಪ್ಪಂದವಾಗಿ ಚೀನಾದ ಧನ ಸಹಾಯ ಮಾಡುವ ಶರತ್ತನ್ನು ರಷ್ಯ ಒಪ್ಪಿದೆ. ಯುದ್ಧದ ಕಾಲದಲ್ಲಿ ಎರಡು ರಾಷ್ಟ್ರಗಳು ಒಂದಾಗಿ ಹೋರಾಡುವ ಕರಾರನ್ನು ಒಪ್ಪಿರುವರು.

(೩ನೇ ಪುಟದಿಂದ ಸಾಗಿದ್ದು)

**ವಂದನೆಗಳು.**

ಕಾಲೇಜ್ ಯೂನಿಯನ್ನಿನ ಜೊತೆ ಕಾರ್ಯದರ್ಶಿಯಾದ ಮಿಸ್. ಬಿ. ಕೆ. ಮುತ್ತಮ್ಮನವರು ಅಧ್ಯಕ್ಷರಿಗೂ, ನೆರೆದವರಿಗೂ, ಬಹುಮಾನಕ್ಕೆ ಸಹಾಯ ಮಾಡಿದವರಿಗೂ, ಹೈಸ್ಕೂಲ್ ಮುಖ್ಯೋಪಾಧ್ಯಾಯರಿಗೂ, ಸಹಕರಿಸಿದ ಸರ್ವರಿಗೂ ಕಾಲೇಜಿನ ವಂದನೆಗಳನ್ನರ್ಪಿಸಿದರು.

**ಮನೋರಂಜನೆ.**

ನಂತರ ಮನೋರಂಜನೆಯ ಕಾರ್ಯಕ್ರಮವಾದ ನಾಟಕಗಳು ನಡೆದುವು. ಈ ನಾಟಕಗಳ ವಿಷಯ ಮತ್ತು ಪ್ರದರ್ಶನಗಳಲ್ಲಿ ಕಲಾತ್ಮಕ ದೃಷ್ಟಿಯಿಂದ ಅಲ್ಪಸ್ವಲ್ಪ ನ್ಯೂನತೆಗಳಿರಬಹುದಾದರೂ ಮಡಿಕೇರಿಯಲ್ಲಿ ಈವರೆಗೆ ನಡೆದ ನಾಟಕಗಳಿಗಿಂತಾ ಭಿನ್ನವಾದ ಹೊಸ ಹೆಜ್ಜೆಯೊಂದನ್ನು ಕಾಲೇಜು ಮುಂದಿಟ್ಟು ಇತರರಿಗೆ ಮಾರ್ಗದರ್ಶನ ಮಾಡಿದೆ. ನಾಟಕಗಳಿಗೆ ಆರಿಸಿದ ವಿಷಯಗಳು ಸಾಕಷ್ಟು ಸಮಯೋಚಿತವೂ ಆಗಿದ್ದುವು. ರವೀಂದ್ರನಾಥರ ಒಂದೆರಡು ಅಮರ ಕೃತಿಗಳನ್ನು ಹೃದಯಂಗಮವಾಗಿ ಜನತೆಯ ಮುಂದಿಟ್ಟರು. ಉದ್ದವಾದ ಒಂದೋ ಎರಡೋ ನಾಟಕದ ಬದಲು ಹಲವು ಚಿಕ್ಕ ಚಿಕ್ಕ ದೃಶ್ಯಗಳನ್ನು ಏರ್ಪಡಿಸಿದುದು ಯುಕ್ತವಾಯಿತು. ಆದರೆ ಬಹುಮಾನ ವಿತರಣೆಯ ವಿಚಾರ ಒಂದು ಮಾತು ಹೇಳಬೇಕಿದೆ. ಉತ್ತಮವಾಗಿ ಅಭಿನಯಿಸಿದವರನ್ನು ಹೆಕ್ಕಲು ನೇಮಕವಾಗಿದ್ದ ಜಡ್ಜರು ಯಾವ ದೃಷ್ಟಿಯಿಂದ ಅಭಿನಯ ಕಲೆಯನ್ನು ಪರಿಶೀಲಿಸಿ ತೀರ್ಪಿತ್ತರೋ ತಿಳಿಯದು. ಕಲೆಯನ್ನು ಪ್ರೋತ್ಸಾಹಿಸುವುದೇ ಬಹುಮಾನ ಕೊಡುವುದರ ಆಶಯವಾದರೆ ಹೃದಯಸ್ಪರ್ಶಿಯಾಗಿ ಅಭಿನಯಿಸಿದ 'ಬಿಕ್ಷು'ವಿನ ಪಾತ್ರ ವಹಿಸಿದವರಿಗೂ ಸರಳ ಹಾಗೂ ನೈಸರ್ಗಿಕ ರೀತಿ ಅಭಿನಯಿಸಿದ 'ಚಿತ್ರಗುಪ್ತ'ನ ಪಾತ್ರಧಾರಿಗೂ ಬಹುಮಾನ ಕೊಡಲ್ಪಡಬೇಕಿತ್ತು. ಹೇಗೂ ಕಾಲೇಜಿನ ಪ್ರಥಮ ವಾರ್ಷಿಕೋತ್ಸವವು ಕಾಲೇಜಿನ ಬಗ್ಗೆ ಜನತೆಯಲ್ಲಿ ಅಭಿಮಾನಬರುವ ರೀತಿ ಜಯಪ್ರದವಾಗಿ ನಡೆಯಿತು. "G"

## ಬ್ರಿಟನಿನ ಚುನಾವಣೆ.

೧೯೪೫ರಿಂದ ಬ್ರಿಟನನ್ನು ಆಳುತ್ತಿದ್ದ ಮಂತ್ರಿ ಮಂಡಲವನ್ನು ಬ್ರಿಟಿಷ್ ಸಾರ್ವಭೌಮರು ವಿಸರ್ಜಿಸಿದರು. ನೂತನ ಮಂತ್ರಿಮಂಡಲದ ಚುನಾವಣೆಗಾಗಿ ದೇಶದಾದ್ಯಂತ ಬಿರುಸಿನ ಸಿದ್ಧತೆಗಳು ನಡೆಯುತ್ತಿವೆ. ಇದೇ ತಿಂಗಳ ತೃತೀಯ ವಾರದಲ್ಲಿ ಮತದಾನವು ನಡೆಯಲಿದೆ. ಮಾರ್ಚ್ ತಿಂಗಳ ಮೊದಲ ವಾರದಲ್ಲಿ ನೂತನ ಮಂತ್ರಿಮಂಡಲವು, ಆರಿಸಿ ಬಂದ ಸದಸ್ಯರಿಂದ ಪ್ರತಿಜ್ಞಾ ವಿಧಿಗಳನ್ನು ಕೈಕೊಳ್ಳುವುದು. ಬ್ರಿಟನಿನಲ್ಲಿ ಸುಮಾರು ೩೪ ಮಿಲಿಯ ಮತದಾರರಿರುವರು. ಚುನಾವಣೆಗೆ ನಿಂತ ಹುರಿಯಾಳುಗಳ ಸಂಖ್ಯೆ ೧೭೦೦ರಷ್ಟಿರುವುದು. ಸೋಶಲಿಸ್ಟರು (ಲೇಬರ್) ಮತ್ತು ಕನ್ಸರ್ವೇಟಿವ್ ಪಕ್ಷದವರು ಚುನಾವಣೆಗೆ ಸ್ಪರ್ಧಿಸುವ ಪ್ರಮುಖ ಪಕ್ಷಗಳವರು. ಇನ್ನು ಮಂದಪಕ್ಷದವರು ಸುಮಾರು ೪೦೦ ಮಂದಿ ಉಮೇದ್ವಾರರನ್ನು ಮತ್ತು ಕಮ್ಯೂನಿಸ್ಟರು ೧೦೦ ಮಂದಿಯನ್ನು ನಿಲ್ಲಿಸಿದ್ದಾರೆ. ಸ್ವತಂತ್ರ ಪಕ್ಷವೆಂಬ ಚೀಟಿ ಕಟ್ಟಿಕೊಂಡಿರುವವರ ಸಂಖ್ಯೆಯೂ ಬೇರೆ ಇದೆ. ಮುಂಬರುವ ಮಂತ್ರಿಮಂಡಲದಲ್ಲಿ ಈ ಮೊದಲಿದ್ದಂತೆ ೬೪೦ ಸ್ಥಾನಗಳಿರದೆ ಬರೇ ೬೨೫ ಸ್ಥಾನಗಳು ಮಾತ್ರ ಇರುವುವು. ಚುನಾವಣೆಗೆ ಸ್ಪರ್ಧಿಸಿದ ಬೇರೆ ಬೇರೆ ಪ್ರಮುಖ ಪಕ್ಷಗಳು ತಂತಮ್ಮ ಕಡೆಯ ಪ್ರಸಿದ್ಧಿ ಪತ್ರಗಳನ್ನು ಈಗಾಗಲೇ ಹೊರಡಿಸಿಯಾಗಿದೆ. ಬ್ರಿಟನಿನ ಲೇಬರ್ ಮಂತ್ರಿ ಮಂಡಲದ ಪ್ರಧಾನ ಮಿ| ಅಟ್ಲೀಯವರಿಗೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಪಕ್ಷವೇ ಅಧಿಕ ಮತಗಳನ್ನು ಪಡೆದು ಗೆಲ್ಲುವುದೆಂಬ ಅಖಂಡ ವಿಶ್ವಾಸವಿದೆ. ಅದನ್ನು ಲೇಬರ್ ಪಕ್ಷದ ಪತ್ರಿಕೆ 'ಡೈಲಿ ಹೆರಾಲ್ಡ್' ಸಂಪಾದಕರಲ್ಲಿ ಅವರು ಇತ್ತೀಚೆಗೆ ವ್ಯಕ್ತಪಡಿಸಿಯೂ ಆಗಿದೆ. ಲೇಬರ್ ಸರಕಾರವು ೧೯೪೫ರಿಂದ ೧೯೫೦ ವರೆಗಿನ ತನ್ನ ಕಾರ್ಯದಲ್ಲಿ ಸಾಧಿಸಿದ ಎರಡು ಮಹತ್ವಪೂರ್ಣ ಕಾರ್ಯಗಳೆಂದರೆ ಭಾರತ ಪಾಕ್ ಸ್ಥಾನಗಳನ್ನು ಆ ರಾಷ್ಟ್ರಗಳ ಪ್ರಜೆಗಳಿಗೆ ಬಿಟ್ಟುಕೊಟ್ಟುದು ಮತ್ತು ಮಾರ್ಷಲ್ ಯೋಜನೆ ಎಂಬುದಾಗಿ ಮಿ ಎಟ್ಲಿಯವರು ಅಭಿಮಾನ ಪೂರ್ವಕ ಹೇಳುತ್ತಾರೆ. ಭಾರತಕ್ಕೆ ತನ್ನ ಹಕ್ಕಿನ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟ ಬ್ರಿಟನಿನ ಲೇಬರ್ ಸರಕಾರದ ಮೇಲೆ ಭಾರತೀಯರು ಅಭಿಮಾನ ಮತ್ತು ಸಹಾನುಭೂತಿ ವ್ಯಕ್ತಪಡಿಸುವುದು ಅಪ್ರಾಸಂಗಿಕವಾಗಲಾರದು. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಲೇಬರ್ ಪಕ್ಷಕ್ಕೆ ಯಶ ದೊರೆತರೆ ಅದು ಯಾವ ದೃಷ್ಟಿಯಲ್ಲಿಯೂ ತಪ್ಪಾಗಲಾರದು.


## ಜನತೆಯಲ್ಲಿ ಅರಿಕೆ.

ಪ್ರಯಾಣಿಕರ ಅನುಕೂಲತೆಯ ದೃಷ್ಟಿಯಿಂದ ಜನವರಿ ತಾರೀಕು ೧ರಿಂದ ನನ್ನ ಹೊಸ ಬಸ್ ಸರ್ವೀಸೊಂದು ಮೈಸೂರಿನಿಂದ ಗೋಣಿಕೊಪ್ಪಲು ಮಾರ್ಗವಾಗಿ ವೀರಾಜಪೇಟೆಗೆ ನಡೆಯುತ್ತಿದೆ. ಬೆಳಗ್ಗೆ ೮ ಗಂಟೆಗೆ ಮೈಸೂರಿನಿಂದ ಹೊರಟು ೧೨ ಗಂಟೆಗೆ ವೀರಾಜಪೇಟೆಗೆ ತಲಪುವುದು. ಮಧ್ಯಾಹ್ನ ೧೨-೩೦ ಗಂಟೆಗೆ ಹೊರಟು ಸಾಯಂಕಾಲ ೪ ಗಂಟೆಗೆ ಮೈಸೂರಿಗೆ ತಲಪುತ್ತದೆ. ಪ್ರಯಾಣಿಕರಿಗೆ ಈ ಲೈನಿನಲ್ಲಿ ಸಕಲ ಸೌಕರ್ಯಗಳನ್ನೂ ಒದಗಿಸಲಾಗುವುದಲ್ಲದೆ ಅತ್ಯಂತ ತ್ವರಿತದಿಂದ ಮೈಸೂರಿಗೆ ಹೋಗಿ ಬರಲು ಬಹು ಅನುಕೂಲವಿದೆ. ಪ್ರಯಾಣಿಕರು ಈ ಅನುಕೂಲತೆಯನ್ನು ಲಾಭದಾಯಕವಾಗಿ ಉಪಯೋಗಿಸಿಕೊಂಡು ನನ್ನನ್ನು ಪ್ರೋತ್ಸಾಹಿಸುವರಾಗಿ ನಂಬುತ್ತೇನೆ.

**ಕೆ. ಬಿ. ಬಿದ್ದಯ್ಯ,**
ಪ್ರೊಪ್ರೈಟರ್ ಕೆ. ಬಿ. ಮೋಟರ್ ಸರ್ವಿಸ್, ಮೈಸೂರು.

1-1

## ಮಾರಾಟಕ್ಕಿದೆ.

ವೀರಾಜಪೇಟೆ ದೇವಾಂಗ ಬೀದಿಯಲ್ಲಿರುವ ನನ್ನ ಸ್ವಂತ 8 ಕೋಣೆಗಳಿರುವ ಮನೆ, ಉತ್ತಮವಾದ ಕೊಟ್ಟಿಗೆ, ಅದರ ಹಿತ್ತಲು ಮತ್ತು ಮನೆ ಹಿಂಭಾಗದಲ್ಲಿ 50 ಭಟ್ಟಿ ಭೂಮಿ ಮತ್ತು ಸಾಗುಗಿಡಗಳಿರುವ ೪ ಎಕ್ರೆ ಜಾಗ ಸಹ ಮಾರಾಟಕ್ಕಿದೆ. ರೂ. 12,000 ಸಾವಿರಕ್ಕೆ ಕೊಡಲ್ಪಡುವುದು. ಖರೀದಿದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

**B. M MUDDAVVA,**
Do. No. 1663.
Bar line Road,
*Chickmagalore.*

## ಅಂಗಡಿಮನೆ ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಬ್ಲಾಕು ನಂ. 4ರಲ್ಲಿ ಅಂಗಡಿ ವ್ಯಾಪಾರಕ್ಕೂ, ವಾಸಕ್ಕೂ ಉಪಯುಕ್ತವಾಗಿರುವ ತಿಂಗಳಿಗೆ 35 ರೂಪಾಯಿ ಬಾಡಿಗೆ ಬರುತ್ತಿರುವ ಮಹಡಿಮನೆ ಮಾರಾಟಕ್ಕಿದೆ. ಬೆಲೆ 12 ಸಾವಿರ ರೂಪಾಯಿಗಳು ಅಥವಾ ಅದರ ಸಮೀಪ. ಖರೀದಿದಾರರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

"K"
2-2 C/o. *Kodagu,*
*Mercara.*

## ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವುವು.

ಅತ್ಯುತ್ತಮ ಮಾದರಿಯ ಬನಾರಿಸ್ ಮತ್ತು ಕಾಶ್ಮೀರ್ ಪಟ್ಟೆಗಳು ಸದಾ ದೊರೆಯುವುವು.

ನೂರಾರು ರೂಪಾಯಿಗಳಿಗೆ ಮೇಲ್ಪಟ್ಟು ಬಟ್ಟೆ ತೆಗೆಯುವವರು ಈ ಪತ್ರಿಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,
12-7 ವೀರಾಜಪೇಟೆ (ಕೊಡಗು)

## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ.

### ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್ ಪೇಟೆ,
ತಾ. 32-9-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

## ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಷ್ಟ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ವಾ ಬ್ರದರ್ಸ್ ಎತ್ತಿದ ಕೈ!

**ಪಟ್ವಾ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
52-7 ಪೋಸ್ಟಾಫೀಸ ಎದುರು, ಮೈಸೂರು

# ಪಾಕಿಸ್ಥಾನಕ್ಕೆ ಎಚ್ಚರಿಕೆ.

ಲೇ:-ಡಾ. ಹರ್ಡೀಕರ್.

'ಕಳೆದ ೩೦ ಅಥವಾ ೪೦ ವರ್ಷಗಳ ಸಾರ್ವಜನಿಕ ಜೀವನದಲ್ಲಿ ನಾನು ಗಳಿಸಿದ ಪುಣ್ಯವೆಲ್ಲವನ್ನೂ ಪಣಕ್ಕೆ ಹಚ್ಚಿ, ಪಾಕಿಸ್ತಾನದಲ್ಲಿ ಕಾಶ್ಮೀರ ಪ್ರಶ್ನೆಯ ಬಗ್ಗೆ ಹೇಳಲ್ಪಡುತ್ತಿರುವುದೆಲ್ಲವೂ ಸುಳ್ಳಿನ ಕಂತೆಯಾಗಿದೆ ಎಂದು ನಾನು ಸಾರುತ್ತೇನೆ'

ಈ ಮೇಲಿನ ಮಾತುಗಳನ್ನು ಆಡಿದ ಮತ್ತು ತಮ್ಮ ಪುಣ್ಯವನ್ನು ಪಣಕ್ಕೆ ಹಚ್ಚಿದ ಪಂ ಜವಾಹರಲಾಲರ ಮನಸ್ಸು ಎಷ್ಟರ ಮಟ್ಟಿಗೆ ನೊಂದಿರಬೇಕು! ತಾವು ಕೈಕೊಂಡಿರುವ ಕಾರ್ಯದ ಬಗ್ಗೆ ಸಂಪೂರ್ಣ ಮನವರಿಕೆಯಿಲ್ಲದೆ ಇಂತಹ ಮಾತುಗಳನ್ನು ಆಡುವವರು ಜವಾಹರಲಾಲರಲ್ಲ.

ಕಳೆದ ಎರಡು ವರ್ಷ ಮತ್ತು ಅದಕ್ಕೆ ಮೇಲ್ಪಟ್ಟ ಅವಧಿಯಿಂದ ಕಾಶ್ಮೀರದ ಪ್ರಶ್ನೆಯು ಭಾರತೀಯರ ಮತ್ತು ಜಗತ್ತಿನ ಮುಂದೆ ಇದೆ. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಈ ಪ್ರಶ್ನೆಯನ್ನು ಒಮ್ಮೆ ಶಾಶ್ವತವಾಗಿ ಬಗೆಹರಿಸುವ ಉದ್ದೇಶದಿಂದ, ಇದರ ರಾಜಕಾರಣವನ್ನೆ ಅಭ್ಯಾಸಿಸಿದವರೆಲ್ಲರೂ ಅದರ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಈ ಎರಡು ದೇಶಗಳ ಪ್ರತಿನಿಧಿಗಳು ಅನೇಕ ಸಲ ಪರಸ್ಪರ ಭೇಟಿಯಾಗಿದ್ದಾರೆ. ಅವರೆಲ್ಲರಿಗೂ ಅಲ್ಲಿಯ ನಿಜಪರಿಸ್ಥಿತಿಯ ಬಗ್ಗೆ ಜ್ಞಾನವು ಉಂಟಾಗಿರಲು ಸಾಕು. ಹೀಗಿದ್ದರೂ ಪಾಕಿಸ್ತಾನ ಸರಕಾರವು ಮತ್ತು ಅಲ್ಲಿಯ ಜನರು ಹಿಂದುಸ್ಥಾನದ ವಿರುದ್ಧವಾಗಿ ಅಸತ್ಯ ಪ್ರಚಾರವನ್ನು ಮಾಡುತ್ತ ಹೋದರೆ, ಅದರ ಪರಿಣಾಮವು, ಎಲ್ಲರಿಗಿಂತ ಸರಳ ರೀತಿಯಿಂದ [illegible] ಸಂಬಂಧದ ಮೇಲೆ ಆಗದಿರಲಾರದು. ಈ ಕಾರಣದಿಂದ 'ಪಂಡಿತಜಿಯವರು ತಮ್ಮ ಪುಣ್ಯವನ್ನು ಪಣಕ್ಕೆ ಹಚ್ಚಿ ಮೇಲಿನ ಉದ್ಗಾರವನ್ನು ತೆಗೆದುದರಲ್ಲಿ ಯಾರಿಗೂ ಆಶ್ಚರ್ಯವೆನಿಸಲಾರದು

### ಸುಳ್ಳು ಪ್ರಚಾರ

ಪಾಕಿಸ್ತಾನವು ನಡೆಸಿದ ಪ್ರಚಾರದ ಬಗ್ಗೆ ಪಂಡಿತಜೀಯವರು ಹೀಗೆಂದಿದ್ದಾರೆ. 'ಪಾಕಿಸ್ತಾನ ಸರಕಾರ, ಅಲ್ಲಿಯ ವ್ಯಕ್ತಿಗಳು ಮತ್ತು ವರ್ತಮಾನ ಪತ್ರಗಳು ನಡೆಸಿದ ಪ್ರಚಾರ ಅತ್ಯ ಸಂಗತಿಗಳನ್ನು ಕಂಡು ನನಗೆ ಆಶ್ಚರ್ಯವಾಗಿದೆ. ಸಲ ಕೆಲವು ಸಂಗತಿಗಳಲ್ಲಿ ಒಮ್ಮೊಮ್ಮೆಯಾದರೂ ಸ್ವಲ್ಪ ಸತ್ಯವಿರುವುದಿದೆ. ಆದರೆ ಪಾಕಿಸ್ತಾನದ ಜನರು ಮತ್ತು ವರ್ತಮಾನ ಪತ್ರಗಳು ಕಾಶ್ಮೀರದ ಬಗ್ಗೆ ನಡೆಸಿದ ಪ್ರಚಾರವು ಅತ್ಯಂತ ಗಾಬರಿಗೊಳಿಸುವಂಥದ್ದಾಗಿದೆ.'

ಪಾಕಿಸ್ತಾನವು ಹೀಗೇಕೆ ಮಾಡುತ್ತಿದೆ? ಈ ಪ್ರಶ್ನೆಗೆ ಒಂದೇ ಒಂದು ಉತ್ತರವಿದೆ. ಅದರ ಉದ್ದೇಶವು ಹಿಂದುಸ್ಥಾನವನ್ನು ಹಿಚುಕುವುದಾಗಿದೆ. ಈ ಕಾರ್ಯವನ್ನು ಅದು ಸರಳಮಾರ್ಗದಿಂದ ಸಾಧಿಸುವುದು ಸಾಧ್ಯವಿಲ್ಲದ್ದರಿಂದ, ಅಸತ್ಯಪೂರ್ಣವಾದ ಪ್ರಚಾರ ನಡೆಸಿ ಮತ್ತು ಹಿಂದುಸ್ಥಾನಕ್ಕೆ ಜಗತ್ತಿನ ದೃಷ್ಟಿಯಲ್ಲಿ ಅಪಯಶಸ್ಸನ್ನು ಉಂಟುಮಾಡಿ ಅದನ್ನು ಪೂರೈಸಲು ಯತ್ನಿಸುತ್ತಿದೆ. ಭಾರತವು ಪಾಕಿಸ್ತಾನಕ್ಕೆ ಯಾವುದೇ ರೀತಿಯ ಅಪಾಯವನ್ನು ಮಾಡಲು ಎಂದೂ ಮನಸ್ಸು ಮಾಡಿಲ್ಲ. ಅದರ ಬೇಡಿಕೆಗಳನ್ನು ಆದಷ್ಟು ಪೂರೈಸಲು ಹೆಣಗಿದೆ.

### ತಾಳ್ಮೆ ಮೀರುತ್ತಿದೆ

ಈ ಸಂಬಂಧದಲ್ಲಿ ಪಂಡಿತರು ಅನ್ನುವುದೇನೆಂದರೆ—

'ನಾವು ಪಾಕಿಸ್ತಾನ, ಗಡಿನಾಡು ಪ್ರಾಂತ, ಗುಡ್ಡಗಾಡು ಪ್ರದೇಶ, ಪೂರ್ವ ಪಾಕಿಸ್ತಾನ ಮೊದಲಾದವುಗಳಲ್ಲಿಯ ಪರಿಸ್ಥಿತಿಯ ಬಗ್ಗೆ ಹೆಚ್ಚಾಗಿ ಮಾತಾಡುತ್ತಿಲ್ಲ. ನಮ್ಮಲ್ಲಿ ಸೌಜನ್ಯವಿದ್ದುದರಿಂದ ನಾವು ಸುಮ್ಮನಿರುತ್ತೇವೆ. ನಮ್ಮವರೇ ಆದ ಮತ್ತು ನಮಗೆ ಬಹಳ ಹತ್ತಿರದ ಹಾಗೂ ಸ್ನೇಹದ ಸಹೋದ್ಯೋಗಿಗಳು ಗಡಿನಾಡು ಪ್ರಾಂತದಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಕಾರಾಗೃಹದಲ್ಲಿ ಕೊಳೆಯುತ್ತಿದ್ದಾರೆ. [illegible] ಒಂದು ದೊಡ್ಡ ಕಾರಾಗೃಹವೇ ಆಗಿ ಪರಿಣಮಿಸಿದ ಗುಡ್ಡಗಾಡು ಜನರ ಇಡೀ ಪ್ರದೇಶವು [illegible] ವಿಷಯದಲ್ಲಿಯೂ ನಾವು ಏನನ್ನೂ ಅಂದಿಲ್ಲ. ಗಡಿನಾಡು ಪ್ರಾಂತದಲ್ಲಿ ಹಲವು ಕೆಲವು ಸಂಸ್ಥೆಗಳಿವೆ. ನನಗೆ ಅವುಗಳ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದಿಲ್ಲ. ಆದರೆ ಅಂಥ ಮತ್ತು ಇತರ ಸಂಸ್ಥೆಗಳ ಬಗ್ಗೆ ಪಾಕಿಸ್ತಾನ ವರ್ತಮಾನ ಪತ್ರಗಳಲ್ಲಿಯೇ ಪ್ರಕಟವಾದ ಸುದ್ದಿಗಳನ್ನು ನೋಡಬಹುದಾಗಿದೆ. ಅವುಗಳ ಮೇರೆಗೆ ಅಲ್ಲಿಯ ವಾತಾವರಣವು ಹೇಯ ಪೂರ್ಣವಾಗಿದೆ. ಈ ತರಹ ಪ್ರಚಾರದಿಂದ [illegible] ಪಾಕಿಸ್ತಾನೀಯ ವರ್ತಮಾನ ಪತ್ರಗಳು [illegible] ಉತ್ತೇಜನದ ಮೂಲಕ ನನ್ನ ತಾಳ್ಮೆಯು ಸ್ವಲ್ಪ ಮೀರಿದೆ. ಗುಪ್ತ ಚಟುವಟಿಕೆ, ನಿಜ ಸಂಗತಿಗಳನ್ನು ಮರೆಮಾಡುವುದು, ಅನವಶ್ಯಕ ಮತ್ತು ಉತ್ತೇಜಕ ವಿಚಾರಗಳ ಮೇಲೆ ನಿರ್ಣಯ ಬರೆಯುವುದು ಇವು ಮೊದಲಾದವು [illegible] ಮಾಡುತ್ತಿವೆ.

ಈ ಉದ್ಗಾರಗಳನ್ನು ಪಂಡಿತಜೀಯವರು ಎಷ್ಟು [illegible] ತೆಗೆದಿದ್ದಾರೆ! ಮಾನವತೆ, ಅಹಿಂಸೆಗಳ ಪರಿಗಣನೆ … ಇಂತಹ ಉದ್ಗಾರಗಳನ್ನು ತೆಗೆಯುವ ಪ್ರಸಂಗ ಹೇಗೆ ಬಂತು? ಇದು ಪರಿಸ್ಥಿತಿಯ ಪರಿಣಾಮ. ಇಂತಹ ಅಭಿಪ್ರಾಯವನ್ನು ಗಾಂಧೀಜಿಯವರ ಶಿಷ್ಯನಾದ ಜವಾಹರರು ಪಡೆದುದು ಯೋಗ್ಯವೇ ಆಗಿದೆ ಮತ್ತು ಆವಶ್ಯಕ.

ಭಾರತವು ತನ್ನ ಜವಾಹರರೊಡನೆ ಸಮರಸವಾಗಿದೆ. ಯಾವುದೇ ಪ್ರಸಂಗದಲ್ಲಿ ಅದು ಜವಾಹರರ ಬೆನ್ನಿಗೆ ನಿಲ್ಲದೆ ಇರಲಾರದು. ತನ್ನ ಭವಿಷ್ಯವು ಜವಾಹರರ ಕೈಯಲ್ಲಿಯೇ ಇರುವದೆಂದೂ ಅವರು ಆಡುವ ಮತ್ತು ಮಾಡುವ ಸರ್ವವೂ ತನ್ನ ಕಲ್ಯಾಣಕ್ಕಾಗಿಯೇ ಇರುವದೆಂದೂ ಹಿಂದುಸ್ಥಾನವು ತಿಳಿಯುತ್ತಿದೆ. ಆದ್ದರಿಂದ ಜವಾಹರರು ಹೇಳಿದರೆ, ಭಾರತೀಯರು ಬೆಂಕಿಯಲ್ಲಿ ಹಾರಲಾದರೂ ಸಿದ್ಧರಿದ್ದಾರೆ. ಪಾಕಿಸ್ತಾನದ ವಿಚಾರವು, ಯುದ್ಧವನ್ನೇ ಬಯಸುತ್ತಿದ್ದರೆ ಅದನ್ನು ಪೂರೈಸುವ ಕಾರ್ಯದಲ್ಲಿ ಕೂಡ ಭಾರತವು ಹಿಂದೆ ಬೀಳಲಾರದು. ಆಗ ಬರಿ ಜವಾಹರರದೇ ಏಕೆ? ಇಡಿ ಭಾರತದ ಪುಣ್ಯವು ಪಣಕ್ಕೆ ಹಚ್ಚಲ್ಪಡದೆ ಇರಲಾರದು.

ಪಾಕಿಸ್ತಾನಕ್ಕೆ ಏನು ಬೇಕು? ಅದು ತನ್ನ ಈ ಹೇಯವಾದ ಪ್ರಚಾರವನ್ನು ನಿಲ್ಲಿಸುವುದೋ ಅಥವಾ ಭಾರತದ ಶಕ್ತಿಯನ್ನು ಪರೀಕ್ಷಿಸಲು ಇಚ್ಛಿಸುವದೋ?

ಎರಡನೆಯದಕ್ಕೆ ಅದು ಕೈಹಾಕಲಿಕ್ಕಿಲ್ಲವೆಂದು ನಾನು ಆಶಿಸುತ್ತೇನೆ

ಜೈ ಹಿಂದ್.

# ಭಾರತದಲ್ಲಿ ಅಣುಶಕ್ತಿ ತಯಾರಿ.

ಮುಖ್ಯಮಂತ್ರಿ ಪಂಡಿತ ನೆಹರುಗಳು ಪಾರ್ಲಿಮೆಂಟಿನಲ್ಲಿ ಭಾರತವು ಅಣುಶಕ್ತಿಯನ್ನು ಉತ್ಪಾದಿಸುವ ವಿಷಯವಾಗಿ ಹೇಳಿಕೆ ಕೊಡುತ್ತ, ಭಾರತದಲ್ಲಿ ಅಣುಶಕ್ತಿಯನ್ನು ಉತ್ಪಾದಿಸಲು ಬೇಕಾಗುವ ವಸ್ತುಗಳನ್ನು ಸಂಗ್ರಹಿಸುವ ಕಾರ್ಯ ನಡೆದಿದ್ದು ಕೆಲವು ವರ್ಷಗಳಲ್ಲೇ ಅಂಥಾ ಮಾಲುಗಳನ್ನು ಸಂಗ್ರಹಿಸಬಹುದಾಗಿದೆ. ಇನ್ನು ಅಣುಶಕ್ತಿಯ ಉತ್ಪಾದನೆಯ ಬಗ್ಗೆ ಒಂದು ಕಾರ್ಖಾನೆಯನ್ನು [illegible] 1 [illegible] ಇನ್ನೊಂದು ವರ್ಷದೊಳಗೇನೆ ಕಾರ್ಯ ನಡೆಸಲಿದೆ. ಈ ಕಾರ್ಯವನ್ನು ಕೈಕೊಳ್ಳುವ ಬಗ್ಗೆ ಉತ್ಪಾದನೆಯ ವಿವಿಧ ವಿಷಯಗಳನ್ನು ಅರಿತ ವಿಜ್ಞಾನಿಗಳನ್ನು ಈಗಾಗಲೇ ತರಬೇತಿ ಮಾಡಲಾಗಿದ್ದು, ಇನ್ನು ಈ ಬಗ್ಗೆ ಬೇಕಾಗುವ ಮತ್ತು ಅಣುಶಕ್ತಿಯ ಕಲಿಕೆಗೆ ಬೇಕಾಗುವವರ ತರಬೇತಿ ನಡೆದಿದೆ—ಎಂದು ಹೇಳಿದರು.

ಅಣುಶಕ್ತಿಯ ಉತ್ಪಾದನೆಯ ಬಗ್ಗೆ ಅಮೇರಿಕದಲ್ಲಿ ದೊರಕಿದಷ್ಟು ಅಧಿಕ ಹಣವು ಇಲ್ಲಿ ದೊರಕುವುದಿಲ್ಲವಾದರೂ ಸಾಧ್ಯವಾದಷ್ಟು ಹಣ ಒದಗಿಸಿಕೊಳ್ಳಲಾಗುವುದೆಂದೂ ಮುಖ್ಯಮಂತ್ರಿಗಳು ಸಭೆಯಲ್ಲಿ ಹೇಳಿದರು.

ಭಾರತದ ವಿಜ್ಞಾನಿಗಳಿಗೆ ಸಾಕಷ್ಟು ಅವಕಾಶ ಒದಗಿಸಿಕೊಟ್ಟರೆ ಅವರು ಒಂದು ವರ್ಷದ ಅವಧಿಯಲ್ಲೇ ಅಣುಶಕ್ತಿಯನ್ನು ಉತ್ಪಾದಿಸಲು ಸಮರ್ಥರಿರುವರೆಂಬುದಾಗಿ ಭಾರತದ ವೈಜ್ಞಾನಿಕ ಪ್ರಯೋಗದ ಡೈರೆಕ್ಟರರು ಕೊಟ್ಟ ಹೇಳಿಕೆಯ ಕಡೆಗೆ ಶ್ರೀ. ಆರ್. ಕೆ. ಸಿಧ್ವಾರವರು ಮುಖ್ಯಮಂತ್ರಿಗಳ ಲಕ್ಷ್ಯವನ್ನೆಳೆದಾಗ ಅವರು ಸರಕಾರದ ಈ ಕಾರ್ಯದಲ್ಲಿ ವಿಜ್ಞಾನಿಗಳಿಗೆ ಆತಂಕವನ್ನುಂಟುಮಾಡುವುದಿಲ್ಲ. ಈ ಬಗ್ಗೆ ಸ್ವಾತಂತ್ರ್ಯವಿಲ್ಲದಿರುವುದು ಸರಕಾರದ ಶಕ್ತಿ ಮೀರಿದ ಪರಿಸ್ಥಿತಿಗಳಿಂದ ಎಂಬುದಾಗಿ ಶ್ರೀಯುತ ಸಿಧ್ವಾರವರಿಗೆ ಆಶ್ವಾಸನೆ ಕೊಟ್ಟರು.

'ಅಣುಶಕ್ತಿಯ ಉತ್ಪಾದನೆಯ ಬಗ್ಗೆ ಸರಕಾರವು ವಿಜ್ಞಾನಿಗಳಿಗೆ ಮೀಸಲಾಗಿಟ್ಟಿರುವ ಹಣವು ಸಾಕೆ?' ಎಂದು ಸರ್ದಾರ್ ಭೂಪೇಂದ್ರ ಸಿಂಘ ಮಾನ್‌ರವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ 'ಹಣವು ಸಾಕೋ ಸಾಕಾಗದೋ ಎಂದು ಹೇಳುವುದು ಅಸಾಧ್ಯವಾದರೂ ನಾವು ನಮ್ಮ ಧ್ಯೇಯವನ್ನು ಸಾಧಿಸಬೇಕು. ಪ್ರಬಲ ಅಮೇರಿಕೆಯಂತೆ ನಾವು ಮಾಡುವುದು ಸಾಧ್ಯವಿಲ್ಲ. ಹಣದ ಅಭಾವವು ಮಾತ್ರವಲ್ಲ ಈ ಬಗ್ಗೆ ತರಬೇತಿ ಹೊಂದಿದವರಿಲ್ಲದಿರುವುದೇ ಆಗಿದೆ. ಸದ್ಯಕ್ಕೆ ಮೊನಜೈಟ್ ಕಾರ್ಖಾನೆಯನ್ನು ತೆರೆಯಲಾಗುವುದು. ಅನಂತರ ಸಂಶೋಧನಾ ಕೆಲಸವೂ, ನುರಿತ ಭಾರತೀಯರೂ ಬೇಕಾಗಿದ್ದಾರೆ' ಎಂದು ಮುಖ್ಯಮಂತ್ರಿಗಳು ಹೇಳಿದರು.

ಶ್ರೀ ಕೆ. ಹನುಮಂತಯ್ಯನವರ ಒಂದು ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ನಾವು ಇತರ ರಾಷ್ಟ್ರಗಳ ವೈಜ್ಞಾನಿಕರೊಡನೆ ಮತ್ತು ಅಣುಶಕ್ತಿ ಸಮಿತಿಗಳೊಡನೆ ಸಂಪರ್ಕದಿಂದಿದ್ದೇವೆ. ನಮ್ಮಲ್ಲಿಯ ಕೆಲವರನ್ನು ಅಲ್ಲಿಗೆ ತರಬೇತಿಗಾಗಿ ಕಳುಹಿಸಲಾಗಿದೆ. ಆದರೆ ಇಂತಹ ಕಾರ್ಯಕ್ಕೆ ಪರದೇಶಗಳಿಂದ ಜನರನ್ನು ಆಮಂತ್ರಿಸುವರೆ ನನಗೆ ಇಚ್ಛೆಯಿಲ್ಲ. ಪರದೇಶಗಳ ವಿಜ್ಞಾನಿಗಳೊಡನೆ ನಾವು ನಂಬಿಕೆ ಸಂಬಂಧವಿಟ್ಟುಕೊಂಡಿರುವುದಲ್ಲದೆ ಕಳೆದ ತಿಂಗಳಲ್ಲಿ ಇಲ್ಲಿ ನಡೆದ ವೈಜ್ಞಾನಿಕ ಕಾಂಗ್ರೆಸಿಗೆ ಬಂದ ಹಲವು ಪ್ರಸಿದ್ಧ ವಿಜ್ಞಾನಿಗಳೊಡನೆ ಈ ವಿಷಯದ ಕುರಿತು ಚರ್ಚಿಸಿರುವೆವು ಎಂದರು.

'ನಾವು ಕಾಮನ್‌ವೆಲ್ತಿನಲ್ಲಿ ಉಳಿಯುವುದನ್ನು ಒಪ್ಪಿರುವುದರಿಂದ ಬ್ರಿಟನ್ನಿನಿಂದ ನಮ್ಮ ಸರಕಾರವು ಎಲ್ಲಾ ಸಮಾಚಾರಗಳನ್ನು ತಿಳಿದಿದೆಯೇ?' ಎಂದು ಶ್ರೀ ಮೋಹನ್‌ಲಾಲ್ ಗೌತಮರು ಕೇಳಿದ ಪ್ರಶ್ನೆಗೆ ಪಂಡಿತ ನೆಹರೂರವರು ಉತ್ತರ ಕೊಡುತ್ತಾ 'ಕಾಮನ್‌ವೆಲ್ತಿನೊಳಗಾಗಲಿ ಹೊರಗಾಗಲಿ ಇಂಥಾ ಒಪ್ಪಂದವೇನೂ ಇಲ್ಲ. ಕಾಮನ್‌ವೆಲ್ತಿನಲ್ಲಿರುವ ಕೆಲವು ಸದಸ್ಯರಿಗೆ ಎಲ್ಲಾ ಸಮಾಚಾರ ತಿಳಿಯುವುದೇ ಇಲ್ಲ' ಎಂದು ಹೇಳಿದರು.

ಅಣುಶಕ್ತಿಯನ್ನು ವಿನಾಶಕಾರ್ಯದಲ್ಲಿ ಉಪಯೋಗಿಸದಂತೆ ಪ್ರತಿಬಂಧಿಸುವ ಸಲುವಾಗಿ ಅಣುಶಕ್ತಿ ನಿಯಂತ್ರಣ ಸಮಿತಿಯಲ್ಲಿ ಭಾರತವು ಮಾಡಿದ ಪ್ರಯತ್ನಗಳು ಎಷ್ಟರ ಮಟ್ಟಿಗೆ ಸಫಲವಾಗಿವೆ ಎಂದು ಶ್ರೀ. ಎಚ್. ವಿ. ಕಾಮತರು ಕೇಳಿದ ಪ್ರಶ್ನೆಗೆ ಪಂಡಿತ ನೆಹರೂರವರು ಉತ್ತರ ಕೊಡುತ್ತಾ, ಈ ಪ್ರಯತ್ನಗಳೇನೂ ಫಲಕಾರಿಯಾಗಿಲ್ಲ. ಈ ವಿಷಯವು ಬಿಕ್ಕಟ್ಟಿಗೊಳಗಾಗಿದೆ ಎಂದರು.

# ದಿ ಟ್ರಾಪಿಕಲ್

**ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.**

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಸರ್ | ಆರ್ಗನೈಸರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯು. ಅಚ್ಚಣ್ಣ, | ಎಂ. ಎ. ಚೆಕ್ಕಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟೆ, ಮಂಗಳೂರು. |



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

**ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.**

1. ·32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರವಾನಿಗೆ "Special permit" ಒದಗಿಸಿದ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52–26 ಗೌರವ ಕಾರ್ಯದರ್ಶಿ.



# ಮತ್ತೊಂದು ಉಜ್ವಲ ವರ್ಷ.

**1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.**

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | „ |

1,28,000 ಕ್ಕೆ ಮೀರಿದ ತೃಪ್ತಿ ಹೊಂದಿದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

## ಎಂಪೈರ್ ಆಫ್ ಇಂಡಿಯಾ

**ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ—1897

ರೋಪರ್ ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ | ಬ್ರಾಂಚ್ ಕಛೇರಿ |
| ಎಂಪೈರ್ ಹೌಸ್, ಹಾರ್ನಬಿ | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಮುಂಬೈ. | ಕೆಂಪೇಗೌಡರಸ್ತೆ, ಬೆಂಗಳೂರು. |



# CRESCENT

**FOR PROTECTION AND SERVICE.**

It is best to represent and insure with The CRESCENT Insurance Co., Ltd.

*H. O. BOMBAY.* [*Established 1919.*

*For particulars write to*

| | | |
|---|---|---|
| Sri B. A. Poovaiah | or | The Branch Manager, |
| *Organiser* | | *22 B. Mahatma Gandhi Road,* |
| *Pollibetta, Coorg.* | | *Bangalore 1* |

**ಸುರಕ್ಷಿತವಾದ ಜೀವವಿಮೆ ಪಡೆಯಲು**

## ಕ್ರೆಸೆಂಟ್

**ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.**



**ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !! ಅನುಭವಶೀಲತೆ!!**

# ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,

**ಕದ್ರಿ ರೋಡ್, ಮಂಗಳೂರು.**

ನಿರಖು ಠೇವಣಾತಿ ಬಡ್ಡಿದರ:

| | | |
|---|---|---|
| 3 | ತಿಂಗಳು | 3% |
| 6 | „ | 3¼% |
| 12 | „ | 3½% |
| 24 | „ | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ

ಶಾಖೆಗಳು:— ೩ಟಿ ಮಂಗಳೂರು, ಪ್ರಿಂಮೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, **ಮಡಿಕೇರಿ** ಮತ್ತು ಮುಂಬಾಯಿ.

**ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.**

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— **ಏಜಂಟ್,**

**ಮಡಿಕೇರಿ ಶಾಖೆ, ಮಡಿಕೇರಿ.**



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1931ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000 |
| ವಸೂಲಾದ ಶೇರು ಮೂಲಧನ | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರಿ ಸಂಘಗಳಿಗೇನೇ ಸಾಲ ಕೊಡುತ್ತಿದ್ದು ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಮತ್ತು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಮತ್ತು ಖಜಾಂಚಿ. |


**ಶ್ರೀ ಟಿ. ಎಸ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೫-0-0

ಸಂಪುಟ ೨೮ | ತಾರೀಖು [illegible] ಶುಕ್ರವಾರ | ಸಂಚಿಕೆ ೩೯

## ವ್ಯಕ್ತಿ ಪರಿಚಯ!

# ದಿ. ಬ. ಮೊದಲಿಯಾರ್‌ರವರು

ಲೇ:—'ವಿರಾಟ್'.

ಕೊಡಗಿನ ರಾಜರ ಸಂತತಿ ಈ ನೂರಹದಿನೈದು ವರ್ಷಗಳ ಅವಧಿಯಲ್ಲಿ ಅದೆಷ್ಟು ಚೀಫ್ ಕಮಿಷನರುಗಳು ಬಂದು ಆಳಿ ಹೋಗಲಿಲ್ಲ! ಕೆಲವರ ಹೆಸರೇ ಜನಕ್ಕೆ ತಿಳಿಯಲಿಲ್ಲ; ಕೆಲವರ ಮುಖವನ್ನೇ ಜನತೆ ಕಂಡಿರಲಿಲ್ಲ; ಮತ್ತು ಕೆಲವರು ಅಗೋಚರ ವ್ಯಕ್ತಿಗಳಾಗಿ ಇದ್ದೂ ಇಲ್ಲದಿದ್ದವರಂತೆ ಬಂದು ಹೋಗುತ್ತಿದ್ದರು. ಆದರೆ ಅದು ಸಾಮ್ರಾಜ್ಯಶಾಹಿ ದಿನ ಬ್ರಿಟಿಷರ ಆಳ್ವಿಕೆಯ ಕಾಲ. ಆಗ ಎಲ್ಲೆಲ್ಲೂ ನವ ಜಾಗೃತಿಯು ಅಂಕುರಿಸಿ [illegible] ಇಂದು ಇಲ್ಲ. ಪ್ರಜಾ ಪ್ರಭುತ್ವದ ಕಾಲ. ಆದರೆ ಕೊಡಗಿನಲ್ಲಿ ಹಳೆಯ ಸಂಪ್ರದಾಯವು ಇಂದಿಗೂ ಇದೆಯೆ? ಕೇಂದ್ರದಿಂದ ಪ್ರಜಾಪ್ರತಿನಿಧಿಗಳು ರಾಜ್ಯಭಾರವನ್ನು ಮಾಡುವದರಿಂದ ಇಂದು ಕೊಡಗಿನಲ್ಲೂ ಪ್ರಜಾ ಸರ್ಕಾರವೇ ಇದೆಯೆಂದು ಹೇಳದೆ ಸಾಧ್ಯವಿಲ್ಲ. ಚೀಫ್ ಕಮಿಷನರರು ಕೇವಲ ಕೇಂದ್ರ ಮಂತ್ರಿಮಂಡಲದ ಒಬ್ಬ ಪ್ರತಿನಿಧಿಯಂತೆ ಮಾತ್ರವಲ್ಲದೆ ಹಿಂದಿನ ಸರ್ವಾಧಿಕಾರ ಇಂದು ಅವರಿಗಿಲ್ಲ. ಮತ್ತು ಕೇವಲ ತಾಲ್ಲೂಕಿನಷ್ಟು ದೊಡ್ಡದಿಲ್ಲದ ಕೊಡಗಿಗೆ ಮಂತ್ರಿಮಂಡಲದ ಅವಶ್ಯಕತೆಯು ಹೇಗೂ ಇಲ್ಲ. ನಮ್ಮ ಕೆಲವು ಮುಂದಾಳುಗಳು ಅದೊಂದು ಆಶೆಯನ್ನಿಟ್ಟುಕೊಂಡಿದ್ದರೆ ಅದು ಕೊಡಗಿಗೆ ಕೇವಲ ಅಸಾಧ್ಯದ ಮಾತು. ಇಷ್ಟು ಚಿಕ್ಕ ಸ್ಥಳದಲ್ಲಿ ಕೆಲವು ಪ್ರಜಾಪ್ರತಿನಿಧಿಗಳನ್ನು ಆಳಲು ಬಿಟ್ಟರೆ ಇನ್ನಷ್ಟು [illegible]ಗಿ ಹೊಡೆದೀ ಕಲಹವಾದೀತಲ್ಲದೆ ಬೇರೆ ಫಲ ಇಲ್ಲ.

ಶ್ರೀ ಮೊದಲಿಯಾರ್‌ರವರನ್ನು ಸಾಧಾರಣವಾಗಿ ಮತ್ತು ಸ್ಥೂಲವಾಗಿ ತಿಳಿದ ನಾನು ಅವರನ್ನು ಆದರ್ಶ ಅಧಿಕಾರಿಗಳೆಂದು ಹೇಳಲು ಬಯಸುತ್ತೇನೆ. ಅವರಿಂದ ಪಕ್ಷ ಪುರಸ್ಕಾರವನ್ನು ಹೊಂದದೇ ಇದ್ದ ನಿರಾಶಾವಾದಿಗಳ ತಂಡವು ನನ್ನ ಈ ಮಾತಿಗೆ ಒಪ್ಪಲಾರದೆಂದು ನನಗೆ ಗೊತ್ತಿದೆ. ಆದರೆ ಜನಾಭಿಪ್ರಾಯವು ಬಿದ್ದಿದ್ದ ತರಗೆಲೆಯಂತೆ ಅತ್ತಿತ್ತ ಗಾಳಿ ಬೀಸಿದ ಕಡೆ ಓಡಾಡಬಹುದಾದ ಮಾತಿನ [illegible]ಲ್ಲದೆ ಬೇರೇನೂ ಅಲ್ಲ. ಜನಾಭಿಪ್ರಾಯದಲ್ಲಿ ಸತ್ಯದ ಅಂಶವು ಇರುವುದು ಕೇವಲ ಅಪರೂಪ. ಶ್ರೀ ಮೊದಲಿಯಾರ್‌ರವರು ಬರೇ ಎರಡು ವರ್ಷಕ್ಕೆ ಹಿಂದೆ ಕೊಡಗಿಗೆ ಬಂದರು. ಅವರು ಬಂದಾಗ ಕೊಡಗಿನ ಸ್ಥಿತಿ ಹೇಗಿತ್ತು ಎಂಬ ಬಗ್ಗೆ ಹೇಳಬೇಕಾಗಿಲ್ಲ. ಸರ್ವತ್ರ[illegible]ಲೇ ಅಶಾಂತಿಯೆಂಬುದು ಸಹಜ! ಅಸ್ವಸ್ಥತೆ, ಲಂಚ, ಅಧಿಕಾರಿಗಳ ಅಟಾಟೋಪ, ಅವರು ನಡೆಸುತ್ತಿದ್ದ ಅವ್ಯವಸ್ಥೆಯ ಕೆಲಸ ಮೊಗಲಾಯಿಯ [illegible] ರೀತಿಯಲ್ಲಿ ನಡೆಯುತ್ತಿತ್ತು. ಗ್ರಾಮಾಭಿವೃದ್ಧಿ, ವಿಶೇಷ ಜನಾಭಿವೃದ್ಧಿಗಳ ಸುದ್ದಿಯೇ ಆಗ ಇರಲಿಲ್ಲ. ದೇಶದಲ್ಲಿ ಇದ್ದ ಎರಡು ಸಂಘಗಳು ಕಾಂಗ್ರೆಸಿನ ವಿಷಯದಲ್ಲಿ ಹೊಡೆದಾಡುತ್ತಿದ್ದಂತೆ ಎಲ್ಲಾ ವಿಷಯಗಳಲ್ಲೂ ಕಾದಾಡುತ್ತಿದ್ದುದರಿಂದ ಆಗ ಇದ್ದ ಚೀಫ್ ಕಮಿಷನರು ಎರಡು ಕಡೆಯವರನ್ನೂ ತೃಪ್ತಿಗೊಳಿಸುವ ರೀತಿಯಲ್ಲಿ ತಮ್ಮ ಕೆಲಸವನ್ನು ಸುಧಾರಿಸಿಕೊಂಡು ಹೋಗುತ್ತಿದ್ದರು.

ಶ್ರೀ ಮೊದಲಿಯಾರ್‌ರವರು ಬ್ರಿಟಿಷರ ಕಾಲದ ಸರ್ಕಾರಿ ನೌಕರರಾಗಿದ್ದವರು. ಅವರು "ದಿವಾನ್ ಬಹದ್ದೂರ್" ಎಂಬ ಬಿರುದನ್ನು ಗಳಿಸಿದರು. ಮದ್ರಾಸಿನಲ್ಲಿ ಕಾಂ|| ಮಂತ್ರಿಮಂಡಲ ಬಂದಾಗ "ಹೋಂ" ಇಲಾಖೆಯಲ್ಲಿ ನೇಮಿಸಲ್ಪಟ್ಟರು. ಇದರಿಂದ ಅವರು ಉತ್ತಮ ಕೆಲಸಗಾರರೆಂದು ಹೇಳದೆ ಸಾಧ್ಯವಿಲ್ಲ. ಕೊಡಗಿಗೆ ಬಂದಾಗ ಇವರು ಹಳೆಯ ಬ್ರಿಟಿಷರ ಕಾಲದ ಬ್ಯೂರೋಕ್ರಸಿಯ ಮನಸ್ಥಿತಿಯಂತೆ ತೋರಲಿಲ್ಲ. ಬದಲಾಗಿ ನೆಹರೂ ಸರಕಾರದ ಯೋಗ್ಯ ಮತ್ತು ದಕ್ಷ ಕೆಲಸಗಾರರೊಬ್ಬರೆಂದು ತೋರಿತು. ತನ್ನ ಆಳ್ವಿಕೆಯ ಸೀಮೆಯನ್ನು ಕಾಲಕ್ಕನುಗುಣವಾಗಿ ಮಾರ್ಪಡಿಸುವ ಶಕ್ತಿ ಅವರಲ್ಲಿ ಅಂತೆಯೇ ತೋರಿತು. ಕೊಡಗಿಗೆ ಅವರವರಿಗೆ ಸ್ವತಂತ್ರ ರಾಜ್ಯಭಾರದ ಬದಲಾವಣೆಯ ಗೋಚರವಾಗಿರಲಿಲ್ಲ. ಇವರು ಬಂದ ಕೂಡಲೇ ಅನೇಕ [illegible] ಇದ್ದ ಮತ್ತು ಕರ್ತವ್ಯಶೀಲರಾಗಿದ್ದ ಸರಕಾರಿ ಉದ್ಯೋಗಸ್ಥರನ್ನೂ ಗುಮಾಸ್ತರನ್ನೂ ಹೊರ ಕಳುಹಿಸಿದರು. ಇನ್ನೂ ಕೆಲವರು ಅಂಥವರು ಉಳಿದಿದ್ದರೆ ಅವರ ದೃಷ್ಟಿಗೆ ಸಿಕ್ಕದ ಕಾರಣದಿಂದಾಗಿದೆ. ಸಿಕ್ಕಿದ್ದರೆ ದೇಶದ ಹಿತದೃಷ್ಟಿಯಿಂದ ಅವರನ್ನು ಹೊರತಳ್ಳಲು ಹಿಂಜರಿಯುವವರಲ್ಲ. ಇದಕ್ಕೆ ಸಾಮಾನ್ಯ ಧೈರ್ಯವೇನೂ ಸಾಲದು. ತಾನು ಪರಿಶುದ್ಧನಾಗಿದ್ದರೆ ಮಾತ್ರ ಇಂಥಾ ಕೆಲಸಗಳನ್ನು ಮಾಡಬಹುದಲ್ಲದೆ ಎಲ್ಲರಿಂದಲೂ ಸಾಧ್ಯವಾಗದು.

ಎಷ್ಟು ಜನ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಕೆಲಸವನ್ನು ಮಾಡಿದರೂ ಹೊಣೆ ಇದ್ದರೂ ಸ್ವಂತ ಅಭಿವೃದ್ಧಿಯನ್ನು ವರ್ಷಕ್ಕೆ ಸಾವಿರಾರು ರೂಪಾಯಿಗಟ್ಟಲೆಯಲ್ಲಿ [illegible]ರು? ಶ್ರೀ ಮೊದಲಿಯಾರ್‌ರವರ ಮೇಲೆ ಇಂಥಾ ಅಧಿಕಾರಿಗಳ [illegible] ಅವರಿಗೆ ಗೊತ್ತಿಲ್ಲದೇ ಇದ್ದೀತೇ? [illegible] ಕಾರಣ, [illegible] ಗಮನಕ್ಕೆ ಬಾರದಿಲ್ಲವೇ? ಮೊದಲಿಯಾರರವರು ಆಫೀಸುಗಳ ಕಡೆಗೆ [illegible] ತೀವ್ರ ಪರಿಶೀಲನೆ [illegible] ಸಮ್ಮುಖದ [illegible] ನಡೆಯುತ್ತಿತ್ತು ಇದೆ! [illegible] ಉದ್ಯೋಗಸ್ಥರು [illegible] ರಿಜಿಸ್ಟ್ರಾರರು, [illegible] ಸ್ಥಳಗಳೂ ಸರಿಯಾಗಿ [illegible] ದೊರಕಿಸಿಕೊಂಡು ಹೋದದ್ದುಂಟು! ಮೊದಲಿಯಾರರ ದೃಷ್ಟಿ ಆ ಕಡೆ [illegible] ಕಾರಣ ಈ ಲಂಚ ಕಡಿಮೆಯಾಯಿತು.

ಶ್ರೀ ಮೊದಲಿಯಾರ್‌ರವರು [illegible] ಆಡಂಬರವಿಲ್ಲದ ಸರಳ ವ್ಯಕ್ತಿ. ಎಲ್ಲರಿಗೂ ಅವರು [illegible] ಕಾಣಬಹುದಾಗಿತ್ತು. ಕೊಡಗಿನ ಅಭಿವೃದ್ಧಿ [illegible] ಜನಕ್ಕೆ [illegible] ಕೇ ಬೇಕ. ಆದರೆ ಶ್ರೀ ಮೊದಲಿಯಾರ್ ಎಲ್ಲರಿಗೂ ಸುಲಭವಾಗಿಯೂ ಇರಲಿ [illegible] ಅಧಿಕಾರಿಗಳು [illegible] ಹೆದರಿ [illegible] ಕೆಲವರು ತಪ್ಪು [illegible] ರಗೆ ಬಂದ ನಂತರ [illegible] ದೆ, ಹಾಗೆ ಹೇಳಿದೆ? ಎಂದು ಜನರೊಡನೆ ತಪ್ಪು [illegible] ಕಾಲೇಜು ಸ್ಥಾಪನೆ ಬಗ್ಗೆ [illegible] ದೇಶದಲ್ಲಿದ್ದ ಭಿನ್ನಾಭಿಪ್ರಾಯಕ್ಕೆ [illegible] ಕಟ್ಟಡದಿಂದ ತನ್ನ ಕಾರ್ಯವನ್ನು ಸಾಧಿಸಿದ್ದಾರೆ. [illegible] ಗ್ರಾಮಗಳನ್ನು ಇನ್ನೂ ಮುಂದುವರಿಸುತ್ತಿದ್ದರು. ಹೊಸ ಜನಾಂಗಗಳಿಗಾಗಿ ಹರಿಜನ ಉದ್ಧಾರ, ದೇವಸ್ಥಾನ ಪ್ರವೇಶ [illegible] ಶಿಕ್ಷಣ, ಗ್ರಾಮದ ಅಭಿವೃದ್ಧಿ ಇಂಥಾ ಕೆಲಸಗಳಲ್ಲಿ ಜನರು ಅವರೊಡನೆ ಸಹಕರಿಸುತ್ತಿಲ್ಲವೆಂದು ನಾನು ತಿಳಿಯುವೆನಲ್ಲದೆ ಸ್ವತಃ ಶ್ರೀ ಮೊದಲಿಯಾರ್‌ರವರು ಇಂಥಾ ಕೆಲಸಗಳಲ್ಲಿ ತುಂಬಾ ಉತ್ಸಾಹಿಯಾಗಿಯೇ ತೋರುತ್ತಿದ್ದರು. ನೀರಾವರಿ, ವಿದ್ಯುಚ್ಛಕ್ತಿ, ಯೋಜನೆಗಳು ಅವರ ನೆನಪಿನ ಕನಸಿನಲ್ಲಿ ಉಳಿದವು.

ಮೊದಲಿಯಾರರು ತನ್ನ ಕೆಲಸಕ್ಕೆ ತಾನೇ ಹೊಣೆಯನ್ನು ಸ್ವೀಕರಿಸಿಕೊಳ್ಳುತ್ತಿದ್ದರು. ಏನೂ ಕೆಲಸ ಮಾಡದೆ ಯಾವುದೋ ಅಧಿಕಾರಿಗಳ ಸಲಹೆಯಿಂದ ಕಾದಾಡುವ ನಮ್ಮ ಮುಂದಾಳುಗಳು ತೋರಿಸುವ ಆತ್ಮಪ್ರತಿಷ್ಠೆಯಂತೆ ಇಲ್ಲ. ತಾನು ಮಾಡಿದ ಕೆಲಸಕ್ಕೆ ತನ್ನ ಮೆಚ್ಚನ್ನು ಕೋರಿದರೆ [illegible] ಅವರಲ್ಲಿ ತಪ್ಪೇನೂ ಇಲ್ಲ. ಎಲ್ಲರಂತೆ ಅವರೂ [illegible] ಸ್ವಾಭಾವಿಕ [illegible] ಅಕಾರಣ ಅಥವಾ ಇತರ ಕೆಲಸಗಾರರಂತೆ ಅವರಿರಲಿಲ್ಲ. ಜನದ ಜತೆಗೂ ಒಂದು [illegible] ತಾನೇ ಇಟ್ಟಿದ್ದರು. ಇಂದು ದೇಶದಲ್ಲಿ ಅವರ ಮೇಲೆ ಸದಭಿಮಾನ ಜನಕ್ಕೆ ಇಲ್ಲದೇ [illegible]. ಪ್ರಾಮಾಣಿಕವಾಗಿ ಕೆಲಸವನ್ನು ಮಾಡುವವರು ಜನಪ್ರಿಯರಾಗಲಾರರು! ಜನಪ್ರಿಯರಾಗಬೇಕಾದರೆ ಕಾದಾಡುವ ಎರಡು ಪಕ್ಷಗಳ [illegible] ಅಧಿಕಾರಿ [illegible] ವೇದಿಕೆಯಲ್ಲಿ [illegible] ಬೇಕು. ಆಗ ಎಲ್ಲರಿಂದಲೂ [illegible] ಅವಮಾನದಿಂದ [illegible] ಬಿಡಲಾ[illegible].

ಶ್ರೀ ಮೊದಲಿಯಾರರು ಕೊಡಗಿಗೆ [illegible] ಅಧಿಕಾರಿಗಳಿಗೆ [illegible] ಕೆಲವು [illegible] ಜನರಿಗೆ [illegible] ಅವರ ಎರಡು ವರ್ಷದ ಆಳ್ವಿಕೆಯಲ್ಲಿ [illegible] ಎಲ್ಲಾ ಅಧಿಕಾರಿಗಳು [illegible] ಯುದ್ಧೋತ್ತರ [illegible] ಅವರ [illegible] ಅವರ ಮೇಲೆ ಅನೇಕ ತರಹದ ಮಾತುಗಳು [illegible] ಉದ್ಯೋಗಸ್ಥರೂ, ಜನರೂ, [illegible] ಎಲ್ಲರೂ ಹೇಳುವವರು, ತಿಳಿಯುವವರೂ [illegible]. ಆದರೆ ಈ ಲೇಖನ [illegible] ಕೆಲವರು [illegible] ಮಾತುಗಳನ್ನು ಹೊರತುಪಡಿಸಿ [illegible] ದೂರದಿಂದ ನೋಡಿದ ನಾನು. ಅವರನ್ನು ಆದರ್ಶವಾದ ಅಧಿಕಾರಿಯೆಂದು ಹೇಳದೆ ಇದ್ದರೆ ನಾನು ತೃಪ್ತಿ ಹೊಂದಲಾರೆನು.

---

# ವಿಜ್ಞಾನ ವಿನಾಶ ಮಾರ್ಗದಲ್ಲಿ ?

ಒಳ್ಳೆಯ ಎಣ್ಣೆ, ಔಷಧಿಗಳ್ಳೆ ದೀಪಗಳು ಮಾಯವಾಗಿ, ಕಲ್ಲೆಣ್ಣೆ ದೀಪ ಬಂದು ಅವು ನಿರುಪಯೋಗಿಯಾಗಿ ವಿದ್ಯುದ್ದೀಪಗಳು ಇಂದು ಪ್ರಕಾಶಿಸತೊಡಗಿವೆ. ಎತ್ತು, ಕತ್ತೆ, ಕುದುರೆಗಳಿಂದ ಎಳೆಯುವ ಗಾಡಿ ಹಾಗೂ ಕುದುರೆಯನ್ನು ಹತ್ತಿ ಪ್ರವಾಸ ಮಾಡುವುದು ಹೋಗಿ ಲಾರಿ, ಕಾರು, ಉಗಿಬಂಡಿ, ವಿದ್ಯುತ್ ವಾಹನಗಳು ಹಳೆಯದೆನಿಸಿ, ವಿಮಾನ ಆಕಾಶಯಾನಗಳು ದಿನಬಳಕೆಗೆ ಬರತೊಡಗಿವೆ. ವಿದ್ಯುದುಪಯೋಗದ ವೈವಿಧ್ಯತೆಯ ಸ್ವರೂಪದಿಂದ ಜಗತ್ತಿನ ಒಂದು ಮೂಲೆಯಲ್ಲಿ ಮಾತನಾಡುವುದು ಇನ್ನೊಂದು ಮೂಲೆಯಲ್ಲಿ ಕೂಡಲೇ ಕೇಳಬರುವಂತಾಗಿದೆ. ಇಷ್ಟೇ ಅಲ್ಲದೆ ಆ ಮಾತನಾಡುವವನ ಮುಖವು ಕಾಣಬರುವಂತೆ ವ್ಯವಸ್ಥೆಯಾಗಿದೆ.

"ಮಾನವ ಅಥವಾ ಇನ್ನಿತರ ಜೀವಶಕ್ತಿಗಳು ಹಿತ ಪಯೋಗವಾಗುತ್ತವೆ" ನಡೆದಿದ್ದನೆ? ನೆಲ, ನೀರು, ಬೆಂಕಿ, ಗಾಳಿ, ಆಕಾಶ ಈ ಪಂಚಮಹಾಭೂತಗಳ ವಿವಿಧ ಮಿಶ್ರಣದಿಂದ, ವೈಜ್ಞಾನಿಕ ಕ್ರಿಯೆಯಿಂದ ಪ್ರಚಂಡ ಮಾರ್ಪಾಡುಗಳು ಮಾನವ ಜೀವನದಲ್ಲಿ ಪ್ರತಿ ದಿನ ಆಗುತ್ತಿರುವುದನ್ನು ಕಾಣುತ್ತಿದ್ದೇವೆ, ಕೇಳುತ್ತಿದ್ದೇವೆ, ಓದುತ್ತಿದ್ದೇವೆ. ವಿಜ್ಞಾನವು ಇಂದು ಮುಗಿಲಿಗೇ ನಿಚ್ಚಣಿಕೆಯನ್ನು ಹಚ್ಚಲು ಪ್ರಾರಂಭಿಸಿದೆ; ಮತ್ತು ಅತಿ ಶೀಘ್ರಗತಿಯಿಂದ ಆ ದಾರಿಯಲ್ಲಿ ಕ್ರಮಿಸುತ್ತಲಿದ್ದು ಪ್ರಯಾಣ ಮಾಡುತ್ತಲಿದೆ.

ನವಭಾರತ ಘಟನಾ ಸಮಿತಿಯ ಸದಸ್ಯರಾದ ಶ್ರೀ ಎಚ್. ವಿ. ಕಾಮತರು "ಒಮ್ಮೆ ಭಾರತದ ಘಟನೆಯಲ್ಲಿ ಚಂದ್ರಲೋಕದ ರಹದಾರಿ ಚೀಟಿಗೆ ಅವಕಾಶವಿರುವಂತೆ ಮಾಡಿರಿ. ಏಕೆಂದರೆ ಇಂದಿನ ವಿಜ್ಞಾನದ ಪ್ರಗತಿಯನ್ನು ನೋಡಿದರೆ, ಆ ಪ್ರಯೋಗ ಫಲಿಸುವದು ಅತಿ ದೂರದಲ್ಲಿಲ್ಲ" ಎಂಬ ಮಾತನಾಡಿದ್ದರು. ಅವರಂತೆ ಮಂಗಳಲೋಕಕ್ಕೆ ಹೋಗಲು ವಿಜ್ಞಾನಿಗಳು ಅಲ್ಲಿಗೆ ಹೋಗಲು ಗಮನಾರ್ಹ ಪ್ರಯೋಗಗಳನ್ನು ನಡೆಸಿದ್ದಾರೆ.

### ಪಶ್ಚಿಮ ಗೋಳಾರ್ಧ

ಈ ಎಲ್ಲ ವೈಜ್ಞಾನಿಕ ಪ್ರಗತಿಗೆ ಪಶ್ಚಿಮ ಗೋಳಾರ್ಧದ ಪರಿಶ್ರಮವೇ ಕಾರಣವೆಂದು ಸಕಲರ ತಿಳುವಳಿಕೆಯಾಗಿ, ಮೂಲದಲ್ಲಿ ಅದು ಪೂರ್ವ ಗೋಳಾರ್ಧದವರದೆಂದು ಹೇಳಲು ಸಾಕಷ್ಟು ಸಾಕ್ಷ್ಯಾಧಾರಗಳನ್ನು ದೊರಕಿಸುವ ಪ್ರಯತ್ನವೂ ಶೋಧವೂ ಇನ್ನೂವರೆಗೆ ನಡೆದಿಲ್ಲವೆಂದು ಹೇಳಬಹುದು. ಅಥರ್ವಣವೇದದಲ್ಲಿ ಎಲ್ಲವೂ ಇದೆಯೆಂದು ಪೂರ್ವ ಗೋಳಾರ್ಧದ ಜನ ಕೆಲವರು ಹೇಳುತ್ತಿದ್ದಾರೆ. ಆದರೆ ಅವರದವರಿಗೇ ನಂಬಿಕೆಯಿಲ್ಲದೆ—ಏಕೆಂದರೆ ಆ ವೇದದ ಅಭ್ಯಾಸ, ಸಂಶೋಧನಾತ್ಮಕ ಬುದ್ಧಿಗಳು ಮತ್ತು ಹಾಗೂ ಪ್ರತಿಕೂಲ ವಾತಾವರಣದ ಪರಿಣಾಮವಾಗಿ, ಇನ್ನೂ ಇವರಲ್ಲಿ ಪ್ರಗತಿ ಹೊಂದಿಲ್ಲ—ಹೇಳಬಹುದು.

ಇಂದು ವೈಜ್ಞಾನಿಕ ಪ್ರಗತಿಯು ಪಶ್ಚಿಮ ಗೋಳಾರ್ಧಕ್ಕೇ ಆವಶ್ಯಕವಾಗಿ ಯೂರೋಪ್ ಮತ್ತು ಅಮೇರಿಕಾ ಖಂಡಗಳಿಗೇ ಮೀಸಲಾದರೆ ಬಹುಶಃ ತಪ್ಪಾಗಲಾರದು. ಅಮೇರಿಕಕ್ಕಿಂತಲೂ ಯೂರೋಪದಲ್ಲೂ ಜರ್ಮನಿಯ ವೈಜ್ಞಾನಿಕರು ಶಿಖರವನ್ನು ಮುಟ್ಟಿದೆ. ಪಶ್ಚಿಮಾರ್ಧದಲ್ಲಿಯೇ ಪ್ರಾರಂಭವಾದ ಜಾಗತಿಕ ಮಹಾಯುದ್ಧ" ಎನಿಸಿಕೊಂಡ ಎರಡು ಮಹಾಯುದ್ಧಕ್ಕೆ ಕಾರಣವು ಜರ್ಮನರೇ ಆಗಿದ್ದ ವಾಕ್ಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಸ್ತುತ ಶತಮಾನದ ಪ್ರಥಮ ಚತುರಂಶದಲ್ಲಿಯ ಪ್ರಥಮ ಜಾಗತಿಕ ಮಹಾಯುದ್ಧದಲ್ಲಿ "ಟ್ಯಾಂಕು" ಉಪಯೋಗಿಸಿದರೆ, ದ್ವಿತೀಯ ಚತುರ್ಥಾಂಶದ ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ಬಾಂಬಿನ ವಿಮಾನಗಳು, ಚಾಲಕನಿಲ್ಲದ ಬಾಂಬಿನ ವಿಮಾನಗಳು, ಅಣು ಬಾಂಬುಗಳು, ವಿಷವಾಯು ಮೊದಲಾದ ಪ್ರಚಂಡ ವಿನಾಶಕಾರಿಗಳನ್ನು ವಿಜ್ಞಾನವು ಒದಗಿಸಿಕೊಟ್ಟಿತು. ಈಗ ಆ ದ್ವಿತೀಯ ಜಾಗತಿಕ ಯುದ್ಧವು ಮುಗಿದು ಹೋಗಿ ಐದು ವರ್ಷಗಳು ಕಳೆದ ಮೇಲೂ, ಇಂದು ಅಮೇರಿಕೆಯಲ್ಲಿ ಅಣು ಬಾಂಬಿಗಿಂತಲೂ ಭಯಂಕರವಾದ ಮತ್ತು ಪ್ರಚಂಡ ವಿನಾಶಕಾರಿಯು "ಜಲಜನಕ ಬಾಂಬು" (ಹೈಡ್ರೋಜನ್ ಬಾಂಬು) ವಿಜ್ಞಾನಿಗಳಿಂದ ಸಿದ್ಧಗೊಳ್ಳುತ್ತಲಿದೆ.

### ತತ್ವಜ್ಞಾನಿಯ ಮತ

ಪಾಶ್ಚಿಮಾತ್ಯರಲ್ಲಿ ಹೀಗೆ ವಿಜ್ಞಾನವು ವಿನಾಶಕ್ಕೆಂದು ಜಾರುವದರಿಂದ ವಿನಾಶದ ನಿಚ್ಚಣಿಕೆಯನ್ನು ಏರುತ್ತಿರುವುದನ್ನು ಕಂಡು ಪಾಶ್ಚಿಮಾತ್ಯ ತತ್ವಜ್ಞಾನಿಗಳೇ ಬೇಸರಪಟ್ಟುಕೊಂಡಿದ್ದಾರೆ. ಡೈಲಿ ಹೆರಾಲ್ಡ್ ಎಂಬ ಪತ್ರಿಕೆಯಲ್ಲಿ "ಮುಂಬರುವ ಅರ್ಧ ಶತಮಾನ" ಎಂಬ ಬರಹದಲ್ಲಿ ಅದರ ಲೇಖಕರೂ ಪ್ರಸಿದ್ಧ ತತ್ವಜ್ಞಾನಿಗಳೂ ಆದ ಇಂಗ್ಲಂಡಿನ ಶ್ರೀ ಸಿ. ಇ. ಎಂ. ಜೋಡ್ ಎಂಬವರು "ವಿಜ್ಞಾನಿಗಳು ಇನ್ನೂ ಹೆಚ್ಚು ಹೆಚ್ಚು ವಿನಾಶಕಾರಕವಾದ ಅಸ್ತ್ರಗಳನ್ನು ಶೋಧಿಸುವ ಮೊದಲೇ ಯಾರಾದರೊಬ್ಬರು ಅವರೆಲ್ಲರನ್ನೂ ಕಟ್ಟಿ ಒಂದು ಜೈಲಿನಲ್ಲಿ ತುಂಬಿ ಶವಪೆಟ್ಟಿಯಲ್ಲಿ ಮುಚ್ಚಿಬಿಡಬಾರದೇಕೆ?" ಎಂಬ ಪ್ರಶ್ನೆ ಕೇಳಿದ್ದಾರೆ.

"ಇದೇ ಪ್ರಶ್ನೆಯನ್ನು ಬೇರೆಯ ಸೌಮ್ಯ ಭಾಷೆಯಲ್ಲಿ ಹೇಳಬೇಕಾದರೆ ವಿಜ್ಞಾನದ ಪರಿಣಾಮಗಳನ್ನು ನಮ್ಮ ವಿನಾಶಕ್ಕಾಗಿಯೇ ನಾವು ಉಪಯೋಗಿಸಿಕೊಳ್ಳತಕ್ಕದ್ದಾದರೆ ಹೀಗೆ ನಡೆಯುವವರಿಗೆ ವೈಜ್ಞಾನಿಕ ಸಂಶೋಧನೆಗಳ ಪರಿಣಾಮಗಳ ಪ್ರಕಟಣೆಗಳನ್ನು ಪ್ರತಿಬಂಧಿಸಬಾರದೇಕೆ? ಆದರೆ ಇದಾವುದೂ ಸಾಧ್ಯವಿಲ್ಲದ್ದರಿಂದ ಸದ್ಯದ ಜಗತ್ತಿನಲ್ಲಿ ಯುದ್ಧವನ್ನು ತಡೆಯುವ ಏಕಮೇವ ಮಾರ್ಗವೆಂದರೆ ರಾಷ್ಟ್ರಕೂಟಗಳನ್ನು ರಚಿಸಿಕೊಳ್ಳುವುದು. ಆದರೆ ಕೆಲವು ರಾಷ್ಟ್ರಗಳು ಒಟ್ಟುಗೂಡಿಕೊಂಡು ತಮ್ಮ ಸಾರ್ವಭೌಮಾಧಿಕಾರ, ಸೈನ್ಯಬಲ, ನೌಕಾಬಲ, ವಿಮಾನ ಬಲ ಮತ್ತು ವಿದೇಶ ಧೋರಣೆಗಳನ್ನು ಆ ರೀತಿಯಾಗಿ ರಚಿಸಿಕೊಂಡ ರಾಷ್ಟ್ರಕೂಟಕ್ಕೇ ಒಪ್ಪಿಸಿ ಕೊಡಬೇಕು" ಎಂದು ಆ ತತ್ವಜ್ಞಾನಿಗಳು ಆ ಲೇಖನದಲ್ಲಿ ಸ್ಪಷ್ಟವಾಗಿ ಸಾರಿದ್ದಾರೆ.

ಇವನ್ನೆಲ್ಲ ನೋಡಿದರೆ ನಮ್ಮ ಮಹಾ ಪ್ರಧಾನ ಪಂಡಿತ್‌ಜೀಯವರು ಹೇಳುವಂತೆ "ಜಗತ್ತಿಗೇ ಒಂದು ಆಡಳಿತ" ಎಂಬ ಸೂತ್ರವನ್ನೇ ಸ್ವೀಕರಿಸಬೇಕಾಗುತ್ತದೆ. ಪಂಡಿತಜೀಯವರಾದರೂ ವಿಜ್ಞಾನದ ಪುರಸ್ಕರ್ತರೇ ಆಗಿದ್ದಾರೆ. ಆದರೆ ಅವರು ವಿಜ್ಞಾನವು ವಿಧಾಯಕ ಕಾರ್ಯಕ್ಕೆ ಅನುಕೂಲವಾಗಬೇಕೇ ಹೊರತು ವಿನಾಶಕಾರ್ಯಕ್ಕಲ್ಲವೆಂಬ ಮಾತಿಗೂ ಅಂಟಿಕೊಂಡಿದ್ದಾರೆಂಬುದನ್ನು ಅವರು ಅಲ್ಲಲ್ಲಿ ಆಗಾಗ ಆಡಿದ ಮಾತುಗಳಿಂದ ಧ್ವನಿತವಾಗುತ್ತದೆ.

ದ್ವಿತೀಯ ಜಾಗತಿಕ ಮಹಾಯುದ್ಧ ಮುಗಿಸಿದ ಹಾಗೂ ವಿಜ್ಞಾನದ ವಿನಾಶಕ್ರಿಯೆ ಶಿಖರವಾಗಿ "ಅಣು ಬಾಂಬು" ಅಮೇರಿಕೆಗೆ ಗೆಲುವು ದೊರಕಿಸಿಕೊಟ್ಟದನ್ನು ನೋಡಿ ರಷ್ಯಾ ದೇಶವು ಈ ಅಣು ಬಾಂಬನ್ನು ತಾನೂ ಸಿದ್ಧಗೊಳಿಸುವ ಕಾರ್ಯದಲ್ಲಿ ಈಗ ಸಾಫಲ್ಯವನ್ನು ಪಡೆಯಿತು. ಅದನ್ನು ಕಂಡು ಅಮೇರಿಕೆಯು ಅಣುಬಾಂಬಿಗಿಂತಲೂ ಭೀಕರತರವಾದ ಇನ್ನೊಂದು ಅಸ್ತ್ರವನ್ನು ಶೋಧಿಸಲು ತನ್ನ ವಿಜ್ಞಾನಿಗಳಿಗೆ ಆಜ್ಞೆ ಪುರಸ್ಕಾರಗಳನ್ನು ಮಾಡಿತು. ಅದರ ಫಲವಾಗಿಯೇ ಇಂದು ಹೊಸದೊಂದು ಭೀಕರತಮ "ಜಲಜನಕ ಬಾಂಬು" ಅಮೇರಿಕೆಯಲ್ಲಿ ಸಿದ್ಧವಾಯಿತೆಂದು ಹೇಳಲಾಗುತ್ತದೆ. ಇದನ್ನು ಕಂಡು ರಷ್ಯಾ ದೇಶವು ಇನ್ನು ಮುಂದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗದೆ ಇರಲಾರದು.

ಹೀಗೆಯೇ ಈ ವಿಜ್ಞಾನದ ವಿನಾಶಕ ನಿಚ್ಚಣಿಕೆಯನ್ನು ಈ ರಾಷ್ಟ್ರಗಳು ಸ್ಪರ್ಧೆಯಿಂದ ಏರುತ್ತಲೇ ನಡೆದಿರುವುದು, ಜಾಗತಿಕ ಶಾಂತಿಗೆ ಭಂಗ ಬರಬಾರದೆಂಬ ಸದುದ್ದೇಶದಿಂದಲೇ ಎಂದು ಹೇಳಲಾಗುತ್ತದೆ! ಇದು ಎಂಥಹ ವಂಚನೆ? ಇದರ ಅಂತವೆಲ್ಲಿ? ವಿನಾಶಕ ಶಕ್ತಿ ಸಾಮರ್ಥ್ಯಗಳ ಸ್ವಾಧೀನತೆಯನ್ನು ವಿಜ್ಞಾನಿಗಳಿಂದ ಪ್ರಳಯಕಾರಕ ನಿಚ್ಚಣಿಕೆಯನ್ನು ಭರದಿಂದ ಏರುತಲಿದ್ದಾರೆ. ಇದಕ್ಕೆ ಕಾರಣ, ಒಂದಲ್ಲೊಂದು ರೀತಿಯಿಂದ ಜಗತ್ತಿನ ಮೇಲೆ ಪ್ರಭುತ್ವ ಸ್ಥಾಪಿಸಬೇಕೆಂಬ ಲಾಲಸೆ ಎಂದರೆ ತಪ್ಪೇನು?

—— ಜೈಹಿಂದ್


## ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮದುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೨೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಜರಿಯ ಬೆನಾರಿಸ್ ಶಾಲು, ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಬಟ್ಟೆ ಕೊಳ್ಳುವವರು ಈ ಪತ್ರಿಕೆಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ಬಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,
ವೀರಾಜಪೇಟೆ (ಕೊಡಗು)

12-8

## ಗಮನಿಸಿರಿ!

ದಿನದಿನ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕು, ಉಲನ್ ಮತ್ತು ಮಿಲ್ ಬಟ್ಟೆಗಳ ದೊಡ್ಡ ಸ್ಟಾಕ್ ಇಡಲಾಗಿದೆ.
ಹೊಸ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೋ ಬ್ರದರ್ಸ್ ಎತ್ತಿದ ಕೈ!

ಪಟ್ಟೋ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು

52-8

# ವಿಚಾರ ಸ್ವಾತಂತ್ರ್ಯ

ಲೇ:—ಶ್ರೀ ಬಿ. ಡಿ. ಗಣಪತಿ.

ಸ್ವಾಧೀನತೆಯೆಂದರೆ ಬರಿ ಬಿಡು [illegible] ತ್ತಲ ಕಳಚಿಗಿಂತ. ಪರಾಧೀನತೆಯಲ್ಲಿ [illegible] ವರ್ಣದಿಶೆಯಲ್ಲಿನ ಬಂಧನಗಳು ತುಂಬಿರುತ್ತವೆ. ಅಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲ. ರಾಜಕೀಯ ಸ್ವಾತಂತ್ರ್ಯವಿಲ್ಲ. ಪ್ರಚಾರ ಸ್ವಾತಂತ್ರ್ಯವಿಲ್ಲ ಕಡೆಗೆ ವಿಚಾರ ಸ್ವಾತಂತ್ರ್ಯವೂ ಇಲ್ಲದಾಗುತ್ತದೆ. ಭರತಖಂಡವು ಈ ಪರಾಧೀನತೆಯ ಶೃಂಖಲೆಯಲ್ಲಿ ಸಿಕ್ಕಿಬಿದ್ದಿತು. ಕಡೆಗೂ ಮಹಾವಿಭೂತಿಗಳ ಮಾರ್ಗದರ್ಶನದಿಂದ ಭಾರತವು ಸ್ವತಂತ್ರವಾಯಿತು. ಸ್ವತಂತ್ರ ಭಾರತವು ಪ್ರಜಾಪ್ರಭುತ್ವ ರಾಷ್ಟ್ರವೆಂದೂ ಸಾರಲ್ಪಟ್ಟಿತು.

ನಮಗೆ ಇನ್ನೂ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲವೆಂಬುದು ನಿಜ. ಶತಮಾನಗಳ ಬ್ರಿಟಿಷ್ ಆಳಿಕೆಯ ಭಾರದಲ್ಲಿ ಸಿಕ್ಕಲ್ಪಟ್ಟು ನಾವು ಸ್ವಜನಸ್ವಾತಂತ್ರ್ಯವನ್ನು [illegible] ಇನ್ನೂ [illegible] ಬೇಕು. [illegible] ದಲ್ಲಿ ಬಗ್ಗದ ಗಿಡವು ಮರವಾಗುವುದರಲ್ಲಿ [illegible] ದ ಸಂತಾನವೂ ನೇರವಾಗಿ ಬೆಳೆಯಲು ಸಮಯ ಬೇಕಾಗುವುದಿಲ್ಲವೇ? ಹಾಗೆಯೇ [illegible] ಹಿಡಿಯಲ್ಪಟ್ಟಿದ್ದ ಸ್ವಾತಂತ್ರ್ಯ [illegible] ಬೆಳೆಯಲು ಸಮಯಬೇಕು.

ಸ್ವಾತಂತ್ರ್ಯ ಬಂದುದಾದನಂತರವೇ ಸರ್ವ [illegible] ಬೀಳಬೇಕೆಂ [illegible] ಅತಿಶಯವರು ಇನ್ನೂ ಇದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ [illegible] ದಲ್ಲಿ [illegible] ಹೆಚ್ಚಾಗದು; ಇಲ್ಲವೇ [illegible] ತುಂಬದು. ಸೂರ್ಯನು ಪೂರ್ವದಿಕ್ಕಿನಲ್ಲಿ ಉದಯಿಸಿ ಇಡೀ ಜಗತ್ತಿಗೆ ಬೆಳಕಾದರೂ ಪ್ರತಿ ಮನೆಯ ಒಳಗೆ ಹೇಗೆ ಅದರಿಂದ ಬೆಳಕು [illegible] ಅದೇ ರೀತಿ ಸ್ವಾತಂತ್ರ್ಯ ಬಂದರೂ ಭಾರತೀಯನ ಜೀವನ ಅದರಿಂದ ಪವಿತ್ರವಾಗಿಲ್ಲವೆ ಉಜ್ವಲಗೊಳ್ಳಲಾರದು. ಮನೆಯ ಒಳಗೆ ಬೆಳಕು ಬೇಕಾದರೆ ಪ್ರತ್ಯೇಕ [illegible] ಹೇಗೆ ಪ್ರತಿ [illegible] ಅವಶ್ಯವೋ ಅದೇ ರೀತಿ ಸ್ವಾತಂತ್ರ್ಯವು ಅರ್ಥಪೂರ್ಣವಾಗಬೇಕಾದರೆ ಪ್ರತಿ ವ್ಯಕ್ತಿಯೂ ತನ್ನ ಪಾಲಿನ ಕರ್ತವ್ಯ ಮಾಡಬೇಕು.

ದೇಶವು ಸ್ವತಂತ್ರವಾಯಿತು ಎಂಬುದಕ್ಕೆ ಯೋಗ್ಯ ಅರ್ಥ ದೊರೆಯಬೇಕಾದರೆ ಪ್ರಜೆಗಳು ಸ್ವತಂತ್ರರಾಗಿರಬೇಕು. ಗುಲಾಮ ಬುದ್ಧಿ, ಪರಾನುಕರಣೆ, ಸ್ವಾರ್ಥ, ಸಂಕೀರ್ಣತೆಗಳು ಪ್ರಜೆಗಳಲ್ಲಿದ್ದರೆ ಆ ದೇಶ ಸ್ವತಂತ್ರವೆನ್ನುವುದು ಅಪಾರ್ಥವಾದೀತು. ಸ್ವತಂತ್ರ ಮನೋಭಾವದ ಪ್ರಜೆಗಳಿದ್ದರೆ ಇಂದಲ್ಲ; ನಾಳೆಯಾದರೂ ದೇಶವು ಉತ್ತುಂಗ ಶಿಖರಕ್ಕೇರಿ ಶೋಭಿಸದಿರದು. ಆದ್ದರಿಂದ ದೇಶದ ಘನತೆ ಹಿರಿಮೆಗಳು ಪ್ರಜೆಯ [illegible] ಯಲ್ಲೇ ಇವೆ.

ಸ್ವತಂತ್ರ ದೇಶದ ಪ್ರಜೆಗಳಾದ ನಾವು ಆವಾಬ್ದಾರಿಯನ್ನರಿತು ದುಡಿಯಬೇಕು. ನಮ್ಮ ಆರ್ಥಿಕ ಸ್ವಾತಂತ್ರ್ಯವು ಭದ್ರ ತಳಹದಿಯಲ್ಲಿ ನಿಲ್ಲಬೇಕಾದರೆ ದುಡಿಮೆ ಗತ್ಯಂತರವಿಲ್ಲ. ಆದರೆ ಇದು ಸಾಧ್ಯವಾದಿಂದ ಅವರೂ ದೇಶಕ್ಕೆ ಹೆಚ್ಚಿನ ಕೊಡುಗೆ [illegible] ಇಲ್ಲ. ಆದರೆ ನಮ್ಮ ವಿಚಾರ ಸ್ವಾತಂತ್ರ್ಯ, ಮುಕ್ತ [illegible] ಬೇಕು. ನಮ್ಮ ಹಿಂದಿನ ನಂಬಿಕೆ, ಮೂಢ ಭಕ್ತಿಗಳನ್ನು ಬಿಡಬೇಕು. ಪ್ರತಿಯೊಂದನ್ನು ವಿಚಾರದ ಬೆಳಕಿನಲ್ಲಿ ಪರೀಕ್ಷಿಸಿ ನಿಜವೆಂದು ತೋರಿದ್ದನ್ನು ಮಾಡಬೇಕು. ಈ ವಿಚಾರ ಸ್ವಾತಂತ್ರ್ಯವಿಲ್ಲದ ಜನರಿಗೆ ಯಾವ ಸ್ವಾತಂತ್ರ್ಯವಿದ್ದರೂ ಅವರ ಸ್ವತಂತ್ರರೆನಿಸರು. ಸ್ವತಂತ್ರ [illegible] ಜಟ್ಟ ಕಾಲ ಆ ಸ್ಥಿತಿ [illegible] ಉಳಿಸಿಕೊಳ್ಳಲಾರರು.

ಬೇರಾವ ಮಹಾತ್ಮರು [illegible] ಗಾಂಧೀಜಿ ಹೀಗೆ ಹೇಳಿದ್ದಾರೆ, ನೆಹರೂ ಹೀಗೆ ಹೇಳಿದ್ದಾರೆ ಎಂದ ಮಾತ್ರಕ್ಕೆ [illegible] ಒಪ್ಪುವ, ತಪ್ಪು ಭಾವನೆಗಳಲ್ಲಿ ಅವರ [illegible] ಉಪಯೋಗಿಸದೆ ಬುದ್ಧಿಯನ್ನು [illegible] ನಂಬಿಗೆ [illegible] ಧನ [illegible] ನಿಜ. ಅದಕ್ಕೆ ಉದಾಹರಣೆ [illegible] ದಿಂದ ನಿಜವಾಗಿ ದೇಶದ ಪ್ರಜೆಯು ತನ್ನ ಅಭಿಪ್ರಾಯವನ್ನು [illegible] ವ್ಯಕ್ತಿಗಳ ಅಭಿಪ್ರಾಯಕ್ಕೆ [illegible] ಪ್ರಜಾಪ್ರಭುತ್ವ [illegible] ಜಾಗೃತರಾಗಲೇ ಬೇಕು [illegible] ಎಂಬುದನ್ನು ತಿಳಿಯಬೇಕು. ಅದಕ್ಕೆ ಇಚ್ಛೆಯಾಕಿದೆ [illegible] ಗೋಟ್ಟೆ ಪಕ್ಷದ [illegible] ಪೂರ್ಣ ಸ್ವಾತಂತ್ರ್ಯವಿರದು. ಇದೇ ರೀತಿ ಯಾವ ದೇವರು [illegible] ಪೂಜೆಗೆ ಬಲಿಯಾಗುವ ವಿಚಾರಧಾರೆಯ [illegible] ಧರ್ಮ, ಸ್ವಾರ್ಥ, ಜಾತಿ, ಇವುಗಳು ಯಾವ ವ್ಯಕ್ತಿಗೂ [illegible] ಹಕ್ಕಿನ ವಸ್ತುಗಳಲ್ಲ [illegible] ಸತ್ಯದ [illegible] ಬೆಳೆಯುವನನ್ನು ನಿಜವಾದ ವಿಚಾರ ಸ್ವಾತಂತ್ರ್ಯವಿರುವವನು [illegible] ಅದ್ದರಿಂದ [illegible] ಗಳು ಹೇಳಿದ್ದಾರೆ ಎಂದು ತಮ್ಮ ವಿಚಾರ ಶಕ್ತಿಯನ್ನು ಹರಿಯಗೊಡದ ಮೂಢ ಭಕ್ತಿಯಿಂದ ಯಾರೂ [illegible] ಯಾರು ಏನೇ ಹೇಳಲಿ, ಇದಕ್ಕೆ ಬ್ರಹ್ಮನೇ ಬಂದು ಹೇಳಿದರೂ ಅವರು ಹೇಳಿದ ಮಾತನ್ನು ವಿವೇಚನೆಯ [illegible] ಯೋಗ್ಯವಾಗಿದ್ದರೆ ಮಾತ್ರ ಅಂಗೀಕರಿಸಬೇಕು.

ಜಗತ್ತಿನ ಯಾವ ಪ್ರಾಣಿಗಳಿಗೂ ವಿಚಾರ ಶಕ್ತಿ ಇಲ್ಲ. ಮನುಷ್ಯನೊಬ್ಬನಿಗೇ ಅದು ಕೊಡಲ್ಪಟ್ಟಿದೆ. ಈ ಬುದ್ಧಿಯನ್ನು ಮುಂದಾಳುಗಳಿಗೆ ಮಾತ್ರ ದೇವರು ಕೊಟ್ಟಿಲ್ಲ; ಪ್ರತಿಯೊಬ್ಬ ವ್ಯಕ್ತಿಗೂ ಪ್ರತ್ಯೇಕ [illegible] ತಲೆಯಲ್ಲಿ ಮಿದುಳಿದೆ. ವಿಚಾರ ಮಾಡುವ ಶಕ್ತಿಯಿದೆ. ಈ ಶಕ್ತಿಯ ಸದುಪಯೋಗ ಮಾಡುವುದರಲ್ಲಿಯೇ ಮಾನವನ ಘನತೆ ಇದೆ. ಇಂದು ಭಾರತಕ್ಕೆ ದೊರೆತಿರುವ ಪ್ರಜಾಪ್ರಭುತ್ವ ರಾಜ್ಯಪದ್ಧತಿಯ ಉತ್ಕರ್ಷವೂ ಅವನತಿಗಳೂ ಇದರ ಸದುಪಯೋಗದ ತಳಹದಿಯಲ್ಲೇ ನಿಂತಿವೆ.

ಪ್ರಸ್ತುತ ಭರತಖಂಡವನ್ನು ಪರಿಶೀಲಿಸಿದರೆ ಈ ವಿಚಾರಸ್ವಾತಂತ್ರ್ಯವನ್ನು ಪಡೆದವರು ಅತಿ ವಿರಳವೆಂದು ವಿಷಾದದಿಂದ ಹೇಳಬೇಕಾಗಿದೆ. ಒಂದೋ ಮುಂದಾಳುಗಳ ವಿಚಾರ ಪ್ರವಾಹದಲ್ಲಿ, ಇಲ್ಲವೇ ಪಕ್ಷಗಳ ಸ್ವಾರ್ಥ ಸಾಧನೆಯಲ್ಲಿ ತಮ್ಮ ವಿಚಾರ ಶಕ್ತಿಯನ್ನು ಕಳೆಗುಂದಿಸಿ ಕುರುಡು ಬುದ್ಧಿಯಿಂದ ಕೆಲಸಗಳಿಗೆ ಬಲಿಯಾಗುವ ಜನರನ್ನು ನೋಡಿದರೆ ಸ್ವಾತಂತ್ರ್ಯ ಎಲ್ಲಿ, ಯಾರಿಗೆ ಬಂದಿದೆಯೆಂಬುದು ಪರಿಶೀಲನಾರ್ಹವಾಗಿದೆ. ದೇಶದ ಅಧಿಕಾರ ನಡೆಸುವ ಕಾಂಗ್ರೆಸ್ ಪಕ್ಷದಲ್ಲಿ ಪ್ರತಿ ಪ್ರಾಂತದಲ್ಲೂ ಬಿರುಕು [illegible] ಈ ಬಿರುಕುಗಳು ಪ್ರಾಂತೀಯ ಭಾವನೆ, ಜಾತೀಯತೆ, ಸ್ವಾರ್ಥ [illegible] ಪ್ರತಿಷ್ಠೆ, ಸ್ಪರ್ಧೆ [illegible] ಯಾಗಿವೆ. [illegible] ಹೊಂದಿರುವುದರಿಂದ ಸಾರ್ವಜನಿಕ ಜೀವನದಲ್ಲಿ [illegible] ಸ್ವಾರ್ಥ [illegible] ಎಂದಿಗೂ [illegible] ಇಲ್ಲ. ಈ [illegible] ವಿಚಾರ ಸ್ವಾತಂತ್ರ್ಯವಿಲ್ಲದ ಮುಂದಾಳುಗಳ ಜಾಗೃತಿ [illegible] ಬುದ್ಧಿಯ [illegible]

ತಮ್ಮ ಪಕ್ಷ ಏನು ಮಾಡಿದರೂ ಅದನ್ನು ನ್ಯಾಯವೆಂದು [illegible] ವ್ಯಕ್ತಿ [illegible] ಅಂಧರಂತೆ ಅದನ್ನು ಅನುಸರಿಸುವುದು [illegible] ತಮ್ಮ [illegible] ಮುಂದಾಳುಗಳು [illegible] ಪಕ್ಷದವರು ನ್ಯಾಯವನ್ನು [illegible] ಬುದ್ಧಿ [illegible] ವ್ಯಕ್ತಿ [illegible] ಜನಜೀವನದಲ್ಲಿ [illegible] ವ್ಯಕ್ತಿಪ್ರಭಾವ—ಪಕ್ಷಪ್ರಚಾರ—ವಿಚಾರರಹಿತ ಅನುಯಾಯಿತ್ವ—ತಲೆದೋರಿದೆ. [illegible] ಇದೆಲ್ಲ [illegible] ಮನೋವೃತ್ತಿಯು. [illegible] ಬುದ್ಧಿ [illegible] ದ ಆರಾಧನೆ ಆಗಬಾರದೇ? ಬುದ್ಧಿ ವ್ಯಕ್ತಿಗೆ [illegible] ನಾಯಕತ್ವ" ಕಾಣಲಾಗಿ ಹಬ್ಬಿದೆ. ಹಳ್ಳಿಯಿಂದ ದಿಲ್ಲಿಯ ವರೆಗೂ ಇದೇ ಇದೆ.

ಪ್ರಜಾರಾಜ್ಯಕ್ಕೆ ಇದರ ವ್ಯಕ್ತಿಪ್ರಭಾವ [illegible] ಮಾರಕವಾಗಿದೆ. [illegible] ಪ್ರಜಾಪ್ರಭುತ್ವವು ಹಾಗೆಯೇ ಈ ಪ್ರಜಾರಾಜ್ಯ [illegible] ಗಾಂಧೀಜಿಯವರಂಥ ಅತಿ ಮಹಾತ್ಮರನ್ನು [illegible] ಅವರು [illegible] ಪ್ರಜಾರಾಜ್ಯದಲ್ಲಿ ಅಂಥವರು ಉದಯಿಸುವುದೂ ಇಲ್ಲ. ವ್ಯಕ್ತಿ ಗಾಂಭೀರ್ಯ, ಘನತೆಗಳು ಸರ್ವಾಧಿಕಾರ ರಾಜ್ಯದಲ್ಲಿ. ಹಿಟ್ಲರನಂಥಾ ನಿರಂಕುಶ ವ್ಯಕ್ತಿಗಳಿಗೆ ರಿಪಬ್ಲಿಕ್ ಭಾರತದಲ್ಲಿ ಸ್ಥಳವಿಲ್ಲ ಸಹಜ. ಆದರೆ ಇಂದಿನ ಭಾರತ ಇನ್ನೂ ಯಥಾರ್ಥ ರಿಪಬ್ಲಿಕ್ ಭಾರತ ಆಗಿಲ್ಲ. ಆ ಕಾರಣವೇ ಇಂದಿನ ಭಾರತದಲ್ಲಿ ಎಲ್ಲೆಲ್ಲೂ ಪುಢಾರಿಗಳು [illegible] ತುಂಬಿದ್ದಾರೆ. ಇಂಥಾ ಪುಢಾರಿಗಳು [illegible] ನ ಶಿಷ್ಯ [illegible] ದು ಭಾರತದಲ್ಲಿ. ಇದಕ್ಕೆ ಕಾರಣ ಜನತೆಯಲ್ಲಿ ವಿಚಾರ ಸ್ವಾತಂತ್ರ್ಯವಿಲ್ಲದಿರುವುದೇ ಆಗಿದೆ. ಎಲ್ಲಿಯವರೆಗೆ ಜನಸಮುದಾಯ ಇಂದು ಪ್ರತಿ ವ್ಯಕ್ತಿಯೂ ಸ್ವತಂತ್ರ ಮನೋಭಾವದ ತಳಹದಿಯ ಮೇಲೆ ನಿಂತಿರದೆ ಆ ಶಿಷ್ಯತ್ವದ ಕೆಲವು ವ್ಯಕ್ತಿಗಳ ಕಾಲ ಕೆಳಗೆ ಬಿಗಿದಿಟ್ಟಿದೆ. ಜನಮತದ ಹೆಸರಿನಿಂದ ನಡೆಯುವ ಈ ವ್ಯಕ್ತಿಗಳ ಆಟದಂತೆ ಜನತೆಯೂ ಕುಣಿಯುತ್ತಿದೆ!

ರಾಜಕೀಯ [illegible] ಆಳಿಯ [illegible] ನ [illegible] ಬಾರದು. ಈ [illegible] ಭಾರತದ [illegible] ಪ್ರಜಾರಾಜ್ಯ [illegible] ಪ್ರತಿಯೊಬ್ಬನ [illegible] ಸ್ವಾರ್ಥಪರತೆ [illegible] ಅದರಿಂದ ಜನರೆಲ್ಲರೂ ಜಾಗೃತರಾಗಿ ವಿಚಾರ ಮಾಡಿದರೆ [illegible] ಪ್ರಜಾರಾಜ್ಯ [illegible] ವ್ಯಕ್ತಿಪೂಜೆಯಲ್ಲಿ, ಪಕ್ಷಪಾತದಲ್ಲಿ [illegible] ಪ್ರಜಾ [illegible] ರಾಜ್ಯ ಬಂದೇ ತೀರುವುದು.

## ದೀನ ಜನಸೇವಾ ಸಂಘ.

ಪ್ರಸ್ತುತ [illegible] ದಿನ [illegible] ಗ್ರಾಮದಲ್ಲಿ ಆ ಊರ [illegible] ಒಂದು ಬೆಳ್ಳಿ [illegible] ಶ್ರೀ ಪಿ. ಜಿ. [illegible] ತೆರೆಯಲಾಗಿದೆ. ಶ್ರೀ ಪಿ. ಎ. [illegible] ಧರಮ್ಯನವರು [illegible] ಸಂಘದ [illegible] ಸಭೆ ನಡೆಯಿತು. [illegible] ೨೮-೩-೪೦ನೇ [illegible] ಈ ಸಂಘದ [illegible] ಮುಖ್ಯ [illegible] ಜನ ನೆರೆದಿದ್ದರು. [illegible] ಈ ಸಂಘದ ಆಶ್ರಯದ [illegible] ಬಾಲಕ-ಬಾಲಿಕೆಯರಿಗೆ ವಿದ್ಯಾಪ್ರಚಾರ ಮಾಡುವ [illegible] ಎಲ್ಲ [illegible] ಗ್ರಾಮೀಣ ಜನರ [illegible] ಅಭ್ಯಾಸ [illegible] ಎಲ್ಲರೂ [illegible] ಸಹಾಯ ಮಾಡಬೇಕೆಂದು [illegible] ವಿದ್ಯಾ [illegible] ಪ್ರಾರ್ಥನೆ [illegible] ಶ್ರೀ [illegible] ಸ್ವಾಗತ ಮಾಡಿದರು. ಕಡೆಗೆ ಶ್ರೀ ಪಿ. ಎ. [illegible] ರವರ [illegible] ವಂದನಾರ್ಪಣೆ [illegible] ಸಭೆ ಮುಕ್ತಾಯವಾಯಿತು. ಸಾ ಪರಿಷ್ವನ.

# ಕೊಡಗು

ತಾ. ೨೪-೨-೧೯೫೦ನೇ ಶುಕ್ರವಾರ

## ಔದ್ಯೋಗಿಕ ಶಿಕ್ಷಣ

### ಕಾಲೇಜು.

ಕೊಡಗಿನ ಯುವಕರಿಗೆ ಔದ್ಯೋಗಿಕ ಶಿಕ್ಷಣದ ಬಗ್ಗೆ ತಕ್ಕ ಏರ್ಪಾಡು ಈವರೆಗೆ ಇಲ್ಲದಿರುವುದು ದೊಡ್ಡದೊಂದು ಕೊರತೆಯಾಗಿತ್ತು. ಈ ಲೋಪವನ್ನು ನಿವಾರಿಸಲು ಇಲ್ಲಿ ಒಂದು ಔದ್ಯೋಗಿಕ ಶಿಕ್ಷಣ ಶಾಲೆಯನ್ನು ತೆರೆಯುವಂತೆ ಕೇಂದ್ರ ಸರಕಾರದವರು ನಿಶ್ಚಯಿಸಿದ್ದುದು ಸಂತೋಷದ ವಿಷಯ. ಬರುವ ಎರಡು ವರ್ಷಗಳಲ್ಲಿ ದಕ್ಷಿಣ ಪ್ರದೇಶದಲ್ಲಿ ಎರಡು ಸಾವಿರ ಉಮೇದುವಾರರನ್ನು ಹಲವು ವಿಧದ ಔದ್ಯೋಗಿಕ ಕಲೆಗಳಲ್ಲಿ ತರಬೇತು ಮಾಡಲು ಕೇಂದ್ರ ಸರಕಾರವು ನಿಶ್ಚಯಿಸಿದೆ. ಇವರಲ್ಲಿ ೧೫೦೦ ಜನರು ಮದ್ರಾಸು ಪ್ರಾಂತದಲ್ಲಿ, ೩೫೦ ಜನರು ಕೇರಳ ಪ್ರದೇಶದಲ್ಲಿಯೂ, ಮತ್ತು ೩೫೦ ಮೈಸೂರಿನಲ್ಲಿಯೂ ತರಬೇತು ಗೊಳ್ಳುವಂತೆ ಏರ್ಪಾಡು ಗೊಂಡಿರುತ್ತದೆ. ಕೊಡಗಿನ ಚೀಫ್ ಕಮಿಷನರವರು ಪ್ರಯತ್ನದಿಂದಲೂ, ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನ ಮದರಾಸು ರೀಜಿನಲ್ ಸರ್ಕಲಿನ ಡೈರೆಕ್ಟರವರಾದ ಶ್ರೀ. ... ಇವರ ಶಿಫಾರಸ್ಸಿನಿಂದಲೂ ಕೊಡಗಿನಲ್ಲಿಯೂ ೫೦ ಉಮೇದುವಾರರನ್ನು ತರಬೇತು ಮಾಡಲು ವೀರರಾಜಪೇಟೆಯಲ್ಲಿ ಬರುವ ಜುಲೈ ತಿಂಗಳಲ್ಲಿ ಒಂದು ಕಾಲೇಜನ್ನು ತೆರೆಯುವ ತೀರ್ಮಾನವಾಗಿರುವುದು ಕೊಡಗಿನ ಹಿತ ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಈ ಕಾಲೇಜಿನಲ್ಲಿ ಮರ ಕೆಲಸ, ಕಬ್ಬಿಣ ಕೆಲಸ ಮತ್ತು ಜನರಲ್ ಮೆಕಾನಿಕ್ ಎಂಬ ಮೂರ ಟೆಕ್ನಿಕಲ್ ತರಬೇತು ಶಾಖೆಗಳು, ದರ್ಜಿ ಕೆಲಸ, ಚಿತ್ರ ಬಿದಿರು ಕೆಲಸ ಮತ್ತು ಸ್ಟೆನೋ ಟೈಪಿಂಗ್ ಈ ಮೂರು ಟೆಕ್ನಿಕಲ್ ತರಬೇತು ಶಾಖೆಗಳೂ ಇರುವವು. ಒಂದೊಂದು ಶಾಖೆಯಲ್ಲಿ ಹದಿನಾರು ವಿದ್ಯಾರ್ಥಿಗಳಿರುವರು. ಟೆಕ್ನಿಕಲ್ ತರಬೇತಿನವರಿಗೆ ಒಂದೂವರೆ ವರ್ಷ ಶಿಕ್ಷಣವೂ ಮತ್ತು ಆರು ತಿಂಗಳು ಹೊರಗಿನ ಸಂಸ್ಥೆಗಳಲ್ಲಿ ಪ್ರತ್ಯಕ್ಷಾನುಭವದ ತರಬೇತೂ, ಟೆಕ್ನಿಕಲ್ ತರಬೇತಿನವರಿಗೆ ಒಂದು ವರ್ಷದ ಶಿಕ್ಷಣವೂ ಸಿಗಲಿರುವುದು. ಒಟ್ಟು ೯೬ ವಿದ್ಯಾರ್ಥಿಗಳಲ್ಲಿ ೪೮ ಜನರಿಗೆ ತಿಂಗಳಿಗೆ ೨೫ ರೂಪಾಯಿಗಳಂತೆ ವಿದ್ಯಾರ್ಥಿವೇತನ ದೊರೆಯುವದು. ಇವುಗಳಲ್ಲಿ ಜನಸಂಖ್ಯೆಯ ಪ್ರಮಾಣದಂತೆ ಹಿಂದುಳಿದ ಸಂಗಡದವರಿಗೆ ಕೊಡಲ್ಪಡುವವು. ಸ್ಟೆನೋ ಟೈಪಿಂಗಿಗೆ ಸ್ಕೂಲ್ ಫೈನಲ್ ಪಾಸಾದವರಾಗಬೇಕೆಂದೂ, ಉಳಿದುದಕ್ಕೆ ಸಾಲ್ಯನೇ ಫಾರಂ ಪಾಸಾದವರಾಗಬೇಕೆಂದೂ ವಿದ್ಯಾಯೋಗ್ಯತೆಯು ನಿಶ್ಚಿತವಾಗಿದೆ. ಇದಕ್ಕಿರುವ ಕಟ್ಟಡ ಏರ್ಪಡಿಸುವದು ಮಾತ್ರ ಸ್ಥಳೀಯ ಸರಕಾರದ ಜವಾಬ್ದಾರಿಯಾಗಿದ್ದು—ವೀರರಾಜಪೇಟೆ ಹುಡುಗರ ಬೋರ್ಡಿಂಗ್ ಕಟ್ಟಡವನ್ನು ಅದಕ್ಕಾಗಿ ನಿಶ್ಚಯಿಸಲಾಗಿದೆ—ಉಳಿದ ಎಲ್ಲಾ ಖರ್ಚನ್ನು ಕೇಂದ್ರ ಸರಕಾರವು ಕೊಡಬೇಕು ಖರ್ಚು ಮಾಡುವದಾಗಿದೆ.

ಔದ್ಯೋಗಿಕ ಶಿಕ್ಷಣದ ಅವಶ್ಯಕತೆ ಮತ್ತು ಪ್ರಯೋಜನದ ವಿಚಾರ ಜನರಿಗೆ ತಿಳಿಯದ್ದಲ್ಲ. ಇಂಥಾ ಸಂಸ್ಥೆಯ ಭಾಗ್ಯವು ಕೊಡಗಿನವರಿಗೆ ಲಭಿಸಿದ್ದು ವಿಶೇಷ ತೃಪ್ತಿಯ ವಿಷಯವಾಗಿದೆ. ಈ ಕಾಲೇಜಿಗೆ ಬೇಕಾದ ಎಲ್ಲಾ ಉಮೇದುವಾರರನ್ನು ಒದಗಿಸಲು ಸಾರ್ವಜನಿಕರು ಸಹಕರಿಸಿ ಈ ಸಂಸ್ಥೆಯ ಸಂಪೂರ್ಣ ಪ್ರಯೋಜನವನ್ನು ಹೊಂದುವರಾಗಿ ಆಶಿಸುತ್ತೇವೆ.

## ವರ್ತಮಾನ.

ಮಡಿಕೇರಿ ಮಹಿಳಾ ಸಹಕಾರ ಸಮಾಜದ ಹೊಸ ಕಟ್ಟಡದ ಶಂಕುಸ್ಥಾಪನಾ ಉತ್ಸವವು ಮಾರ್ಚ್ ತಾ. ೨ನೇ ಗುರುವಾರ ಕೊಡಗಿನ ಚೀಫ್ ಕಮಿಷನರಾದ ಸಿ. ಟಿ. ಮೊದಲಿಯಾರವರಿಂದ ನಡೆಯುವದು.

ಬರುವ ಮಾರ್ಚ್ ತಾರೀಕು ಒಂದರಿಂದ ವೆಲ್ಲೂರಿನಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ತರಬೇತಿಗೆ ಶ್ರೀಗಳು ... ಚಾಮೇರಪ್ಪ ಮತ್ತು ಎಮ್. ಎಸ್. ಬೋಜಪ್ಪ ಇವರುಗಳನ್ನು ಆರಿಸಲಾಗಿದೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಡಿಬೇಟಿಂಗ್ ಸೊಸೈಟಿಯು ಆಶ್ರಯದಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಚರ್ಚೆಯೊಂದು ತಾರೀಕು ೨೨-೨-೫೦ರಲ್ಲಿ ನಡೆಯಿತು. ೨೦೦ ವರ್ಷಗಳ ಬ್ರಿಟಿಷ ಆಳಿಕೆಯಿಂದ ಹಿಂದೂಸ್ಥಾನಕ್ಕೆ ಶ್ರೇಯಸ್ಸಾಗಿಲ್ಲವೆಂಬ ವಿಚಾರ ಚರ್ಚಿಸಲಾಯಿತು. ಹಿಂದೂ ಸಾನಕ್ಕೆ ಶ್ರೇಯಸ್ಸಾಗಿದೆ ಎಂಬ ನಿರ್ಣಯವಾಯಿತು. ಕೊಡಗಿನ ಅಸಿಸ್ಟೆಂಟ್ ಕಮಿಷನರಾದ ಶ್ರೀ ಎನ್. ಸಿ. ಸುಬ್ಬಯ್ಯನವರು ಸ್ಪೀಕರಾಗಿದ್ದರು.

ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ೧೧ನೇ ಒಲಂಪಿಕ್ ಅಟೋಟಗಳಲ್ಲಿ ಭಾರದ ಕಲ್ಲೆಸೆಯುವ ಸ್ಪರ್ಧೆಗೆ ಮದ್ರಾಸಿನಿಂದ ಆರಿಸಲ್ಪಟ್ಟಿದ್ದ ಶ್ರೀ. ಕೋದಂಡ ಪೂವಯ್ಯನವರು ಮಿಸನೆಯಿಂದಾಗಿ ಬಂದುದರಿಂದ ಬಹುಮಾನ ದೊರೆಯದಿದ್ದರೂ ಸಿಂಹಳದಲ್ಲಿ ನಡೆಯುವ ಒಲಂಪಿಕ್ ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸುವ ದೃಷ್ಟಿಯಿಂದ ಹೆಚ್ಚಿನ ತರಬೇತಿಗಾಗಿ ಆರಿಸಲ್ಪಟ್ಟಿರುವರು.

ಮಿಲಿಟರಿ ಇಂಟೆಲ್ ಸರ್ವಿಸ್ ಒಲಿಂಪಿಕ್ ಪರೀಕ್ಷೆ ಭಾಗವಹಿಸಲು ಶ್ರೀ ಪೂವಯ್ಯನವರು ಆರಿಸಲ್ಪಟ್ಟಿದ್ದು ತಾ. ೧೯ರಲ್ಲಿ ಮದ್ರಾಸಿನಲ್ಲಿ ಭಾಗವಹಿಸುವರೆ ಡೆಲ್ಲಿಗೆ ಹೋಗಿರುವರು.

ಸಾಮಾನ್ಯ ಮತ್ತು ವಿಶೇಷ ವಾಸೀ ಆಗದವರಿಗೆ ರೇಶನ್ ಕಾರ್ಡಿಗೆ ಅರ್ಜಿ ... ಅವಧಿಯನ್ನು ತಾರೀಕು ೧೫-೩-೫೦ರವರೆಗೆ ವಿಸ್ತರಿಸಲಾಗಿದೆ.

ತಾರೀಕು ೧೬-೨-೫೦ರ ರಾತ್ರಿ ಇಪ್ಪ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣ ಪೂಜಾರ್ ಎಂಬವರು ದೇವರ ಭಂಡಾರದಿಂದ ಸುಮಾರು ೧೭ ರೂಪಾಯಿಗಳನ್ನೂ, ಕೆಲವು ಬೆಳ್ಳಿಯ ಸಾಮಾನುಗಳನ್ನೂ ಕದ್ದು ... ಇದ್ದವನನ್ನು ಪೋಲೀಸರು ಪತ್ತೆಹಚ್ಚಿ ... ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ.

ಶ್ರೀ ಸಿ. ಎಂ. ಅಪ್ಪಚ್ಚು ದೇವಯ್ಯ ಮೆಮೋರಿಯಲ್ ಕ್ರಿಕೆಟ್ ಟೂರ್ನಮೆಂಟು ... ಸೆಂಟ್ರಲ್ ಕ್ರಿಕೆಟ್ ಮೈದಾನದಲ್ಲಿ ಪ್ರಾರಂಭವಾಗುವದು.

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನ ಮದರಾಸು ರೀಜನಲ್ ಡೈರೆಕ್ಟರಾದ ಶ್ರೀ ಅಬ್ದುಲ್ ಖಾದರ್‌ರವರು ಔದ್ಯೋಗಿಕ ಶಿಕ್ಷಣ ಶಾಲೆಯ ಪ್ರಯೋಜನವನ್ನು ವಿವರಿಸಿ, ಇಂಥಾ ಕಾಲೇಜಿನಲ್ಲಿ ... ತರಬೇತಿನಿಂದ ವೀರರಾಜಪೇಟೆಯಲ್ಲಿ ಬರುವ ಜುಲೈ ತಿಂಗಳಲ್ಲಿ ಸ್ಥಾಪಿತವಾಗುವದೆಂದು ತಾರೀಕು ೧೭ರಲ್ಲಿ ವೀರರಾಜಪೇಟೆ ಹೈಸ್ಕೂಲಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಮೈಸೂರು ಮಹಾರಾಜಾ ಕಾಲೇಜಿನ ಇಂಗ್ಲಿಷ್ ಪ್ರೊಫೆಸರಾದ ಶ್ರೀ ಎಚ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ವೀರರಾಜಪೇಟೆ ಹೈಸ್ಕೂಲಿನ ಶಾಲಾ ದಿನೋತ್ಸವವು ತಾರೀಕು ೧೭ರಲ್ಲಿ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ಎ. ಚಂಗಪ್ಪನವರು ಶಾಲಾ ವರದಿಯನ್ನು ಓದಿದನಂತರ ಪಾಠ ಪ್ರವಚನಗಳಲ್ಲೂ, ಆಟೋಟಗಳಲ್ಲೂ ಪ್ರಥಮ ಬಂದವರಿಗೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ವಿದ್ಯಾರ್ಥಿಗಳ ಶಿಸ್ತಿನ ವಿಚಾರ ಬೋಧಪ್ರದ ಭಾಷಣ ಮಾಡಿದರು. ರಾತ್ರಿ ಎಂಟೂವರೆ ಗಂಟೆಯ ನಂತರ ಶಾಲೆಯ ವಿನೋದ ಕೂಟಗಳೂ ನಡೆದವು.

ಮೈಸೂರು ಮಹಾರಾಣಿ, ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಟಿ. ... ಕಾವೇರಮ್ಮನವರು ... ಕಾಲೇಜು ದಿನ ಆಟೋಟದಲ್ಲಿ ಹಲವು ವೈಯುಕ್ತಿಕ ಬಹುಮಾನಗಳನ್ನು ಗದ್ದಿರುವದಲ್ಲದೆ ಚಾಂಪಿಯನ್ ಷಿಪ್ ಶೀಲ್ಡನ್ನೂ ಗೆದ್ದಿರುವರು.

ಕಳೆದ ಆದಿತ್ಯವಾರದಿಂದ ಜಿಲ್ಲೆಯ ಹಲವು ಭಾಗಗಳಿಗೆ ಮಳೆ ಬಿದ್ದಿದೆ. ಈ ಮೂರು ದಿನಗಳಲ್ಲಿ ವಿವಿಧ ಭಾಗಗಳಿಗೆ ೩ ಇಂಚಿನಿಂದ ೫ ಇಂಚುಗಳ ವರೆಗೆ ಮಳೆಯಾಗಿದೆ.

ಮದರಾಸಿನಲ್ಲಿ ನಡೆದ ರೀಜನಲ್ ಫುಡ್ ಕಾನ್ಫರೆನ್ಸಿಗೆ ತಾ. ೧೯ರಲ್ಲಿ ಹೋಗಿದ್ದ ಚೀಫ್ ಕಮಿಷನರು ತಾ. ೨೨ರಲ್ಲಿ ವಾಪಾಸು ಬಂದಿರುವರು.

## ಶಾಂತಿ ಎಲ್ಲಿ?

ಯುದ್ಧ ಕಳೆದು ಜಗತ್ತಿನಲ್ಲಿ ಶಾಂತಿ ಸಂಸ್ಥಾಪಿಸಲ್ಪಟ್ಟು, ಜಗದ ಜನಜೀವನ ಸುಖಮಯವಾಗುವದೆಂದು ಕನಸು ಕಟ್ಟಿದವರೆಲ್ಲರ ಆ ಕಲ್ಪನೆ ಕೇವಲ ಗಾಳಿಗೋಪುರವೆಂದು ದಿನದಿಂದ ದಿನಕ್ಕೆ ಜಗತ್ತಿನ ರಾಜಕೀಯರಂಗದಲ್ಲಿ ಆಗುವ ಘಟನೆಗಳಿಂದ ಸ್ಪಷ್ಟವಾಗುತ್ತಿದೆ.

ಯುದ್ಧ ಮುಗಿಯಲು ಪರಮಾಣು ಬಾಂಬೇ ಮುಖ್ಯ ಕಾರಣವಾಯಿತು. ಆ ಪರಮಾಣು ಬಾಂಬಿನ ಕಾರಣ ವಿಶ್ವತ ಯುದ್ಧ ಮುಗಿದರೂ ಜಗತ್ತಿನಲ್ಲಿ ಯುದ್ಧ ನಿಲ್ಲಲಿಲ್ಲ. ಇಂದೂ ಕೂಡ ವಿವಿಧ ಕ್ಷೇತ್ರಗಳಲ್ಲಿ ಚಿಕ್ಕ ಪ್ರಮಾಣದಲ್ಲಿ ನಡೆದಿದೆ. ಪರಮಾಣು ಬಾಂಬಿನ ಬೆದರಿಕೆಯನ್ನು ಅಮೇರಿಕವು ಜಗತ್ತಿಗೆ ಹಾಕಿ ಅದರ ಬಲದಿಂದ ಜಗತ್ತಿನ ಶಾಂತಿ ಸಂಸ್ಥಾಪನೆಯತ್ನ ಮಾಡಿತು. ಆದರೆ ಕೆಲವೇ ಸಮಯದಲ್ಲಿ ರಷ್ಯಾವು ಪರಮಾಣು ಬಾಂಬು ತಯಾರಿಸಿ ತನ್ನ ಸಿದ್ಧತೆಯನ್ನು ತೋರಿಸಿತು. ರಷ್ಯಾದ ಕೈಯಲ್ಲೂ ಪರಮಾಣು ಬಾಂಬು ಇರುವ ಸ್ಥಿತಿಯಲ್ಲಿ ಜಗತ್ತಿನ ಶಾಂತಿ ಸಾಧ್ಯವಾಗದು ಎಂದು ಅನೇಕ ಮುತ್ಸದ್ದಿಗಳು ನಂಬಿದ್ದರು. ಆದರೆ ಇತ್ತೀಚೆಗೆ ಅಮೇರಿಕವು 'ಹೈಡ್ರೊಜನ್ ಬಾಂಬು' 'ಜಲಜನಕ ಬಾಂಬು' ಎಂಬ ಹೊಸದೊಂದು ಬಾಂಬನ್ನು ತಯಾರಿಸಿ ಜಗತ್ತನ್ನು ಬೆರಗುಗೊಳಿಸಿದೆ. ಈ ಹೊಸ ಬಾಂಬು ಅಣುಬಾಂಬಿಗಿಂತ ಒಂದು ಸಾವಿರ ಪಾಲು ಹೆಚ್ಚು ವಿನಾಶಕಾರಿಯೊಂದೂ, ಒಂದು ಬಾಂಬಿನಿಂದ ನೂರು ಚದರ ಮೈಲಿನ ಸ್ಥಳವು ಧ್ವಂಸವಾಗುವದೆಂದೂ ಹೇಳಲಾಗಿದೆ. ಒಂದು ಬಾಂಬಿನ ತಯಾರಿಗೆ ೪೦೦ ಕೋಟಿಯ ವರೆಗೆ ರೂಪಾಯಿ ವೆಚ್ಚವಾಗಬಹುದೆಂದು ಹೇಳಲಾಗಿದೆ. ಅಮೇರಿಕದ ಅಧ್ಯಕ್ಷ ಟ್ರೂಮನರು ಇಂಥಾ ಬಾಂಬುಗಳ ತಯಾರಿಗೆ ಆಜ್ಞೆ ಇತ್ತಿದ್ದಾರೆ.

ಜಗತ್ತಿನ ಕಾರ್ಯಕಲಾಪಗಳನ್ನು ನೋಡಿದರೆ ಜಗತ್ತು ಎರಡು ಭಾಗವಾಗಿದೆಯೆಂದು ಹೇಳಬಹುದು. ಒಂದು ಪಕ್ಷವು ಅಮೇರಿಕೆಯ ಕಡೆಗೂ ಮತ್ತೊಂದು ರಷ್ಯಾದ ಕಡೆಗೂ ಇದೆ. ಇವೆರಡು ಶಕ್ತಿಗಳ ಕಿತ್ತಾಟ ಅಂತರಾಷ್ಟ್ರೀಯ ಪ್ರತಿಯೊಂದು ಕ್ಷೇತ್ರದಲ್ಲಿ ಕಂಡು ಬರುವದು ಇವೆರಡೂ ಕೂಡ ಸಾಧ್ಯವಾದ ಸಂಘಟನೆಗಳನ್ನು ಮಾಡಿಕೊಳ್ಳುತ್ತಿವೆ. ಇವೆರಡೂ ಮುಂದಿನ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿವೆ. ರಷ್ಯಾವು ಕ್ರಮಶಃ ವಿಸ್ತಾರಗೊಳ್ಳುತ್ತಾ ಯುರೋಪಿನಲ್ಲಿ ಜರ್ಮನಿಯವರೆಗೆ ... ಬಿದೆ. ಇತ್ತ ಪೂರ್ವದಲ್ಲಿ ಜಗತ್ತಿಗೇ ವಿಶಾಲವೂ ಜನಭರಿತವೂ ಆದ ಚೈನಾವನ್ನೂ ತನ್ನಾಶ್ರಯದಲ್ಲಿ ಪಡೆದು ಬ್ರಹ್ಮದೇಶದವರೆಗೆ ಬೆಳೆದಿದೆ. ಅಮೇರಿಕವು ತನ್ನ ದುಡ್ಡಿನ ಬಲದಿಂದ ಅನೇಕ ರಾಷ್ಟ್ರಗಳನ್ನು ತನ್ನ ಶಿಬಿರದಲ್ಲಿ ಸೇರಿಸಿಕೊಂಡಿತ್ತೆ. ಈ ರೀತಿ ಮತ್ತೊಂದು ಮಹಾ ಯುದ್ಧದ ಪೂರ್ವ ಸಿದ್ಧತೆಯಾಗುತ್ತಿದೆ.

ಅಮೇರಿಕೆಯು ಹೈಡ್ರೋಜನ್ ಬಾಂಬು ತಯಾರಿಸುತ್ತಿರುವದರಿಂದ ರಷ್ಯಾವು ಹೆಚ್ಚು ಗಾಬರಿಗೊಂಡಂತೆ ತೋರುವದಿಲ್ಲ. ಅದೂ ಕೂಡ ಇದರ ತಯಾರಿಗೆ ತೊಡಗಿರಬಹುದು. ಆದ್ದರಿಂದ ದಿನ ಕಳೆದಂತೆ ಅತಿ ಭೀಕರ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾಗಿ ರಾಷ್ಟ್ರಗಳು ರಣರಂಗಕ್ಕಿಳಿಯಲು ಸಿದ್ಧವಾಗುತ್ತಿವೆ.

ಇಂಥಾ ಪರಿಸ್ಥಿತಿಯಲ್ಲಿ ಜಗತ್ತಿನ ಶಾಂತಿಯು ಎಲ್ಲಿರಲಿ, ಜಗತ್ತಿಗೆ ಉಳಿಗಾಲವಿದೆಯೇ ಎಂಬುದು ಪ್ರಶ್ನೆಯಾಗಿದೆ. ಏಕೆಂದರೆ ಜಲಜನಕ ಬಾಂಬಿನ ಅನಿಷ್ಟ ಪರಿಣಾಮಗಳನ್ನು ವಿವರಿಸುತ್ತಾ ಜಗತ್ತಿನ ಕೀರ್ತಿವೆತ್ತ ವಿಜ್ಞಾನಿಗಳಾದ ಆಲ್ಬರ್ಟ್ ಐನ್‌ಸ್ಟೀನರು ಇದರಿಂದ ಜಗತ್ತಿನ ಜೀವಜಂತುಗಳೆಲ್ಲವೂ ನಾಶವಾಗುವ ಸಂಭವವಿದೆಯೆಂದು ಹೇಳಿರುವರು. ಈ ಜಲಜನಕ ಬಾಂಬಿನಿಂದ ವಾಯುಮಂಡಲವು ವಿಷಪೂರಿತವಾಗಬಹುದೆಂದೂ ಅವರು ಹೇಳಿದ್ದಾರೆ. ವಾಯುಮಂಡಲವು ವಿಷಪೂರಿತವಾದ ಮೇಲೆ ಜಗತ್ತು ಬದುಕುವ ಸಾಧ್ಯತೆ ಎಲ್ಲಿ? ವಿಜ್ಞಾನವು ಮನುಷ್ಯನನ್ನು ಎಲ್ಲಿಗೆ ತಲುಪಿಸುವದೋ ತಿಳಿಯದು. ವಸಹಸ್ರ ಕಾಲದ ಯೋಚನ ಕಲದಿಂದ ತಮ್ಮ ತಮ್ಮೊಳಗೆ ಬಡಿದಾಡಿ ಸರ್ವನಾಶ ಮಾಡುವ ದಿನ ಸನ್ನಿಹಿತವಾಗುತ್ತಿದೆಯೋ ಕಾಣಬೇಕು.

# ದೀರ್ಘಾಯುಷ್ಯದ ಗುಟ್ಟು

ಲೇ:- ಶ್ರೀ ಎನ್. ಎಸ್. ಗದಗಕರ, ಬಿ. ಎ.

ಬಹುದಿನ ಬಾಳಬೇಕೆಂಬ ಬಯಕೆ ಎಷ್ಟು ಹಿರಿದು! ಶತಮಾನದ್ವಿಕನ ಮುಂದೆ ಕೈಚಾಚಿದಾಗ ನೀವು ಮೊದಲು ಹಾಕುವ ಪ್ರಶ್ನೆ ಎಂದರೆ—ನಾನು ಎಷ್ಟು ವರ್ಷ ಬಾಳುವೆ?' ಇದೀಗ ಹುಟ್ಟಿದ ಮಗುವಿನ ಕುಂಡಲಿ ಹಾಕುವವನೂ ಈ ಪ್ರಶ್ನೆಗೇ ಉತ್ತರ ತೆಗೆಯುವನು. ಎಷ್ಟೋ ಜನರಂತೂ ಚಿರಯುವಕರಾಗಬೇಕೆಂದು ಒಂದಿಲ್ಲೊಂದು ರೀತಿಯಿಂದ ಯೋಚಿಸುತ್ತಿರುವರು.

ಚಿರಾಯುಷ್ಯದ ರಹಸ್ಯವು ಕಿರಿಸಾಮಾನ್ಯ ಸಂಗತಿಗಳಲ್ಲಿಯು ಹುದುಗಿದೆ. ಆದರೆ ಆ ಉಪಾಯಗಳಲ್ಲಿ ಎಂತಹ ವಿರೋಧ, ವೈವಿಧ್ಯ! ಇಂತಹ ಯೋಜನಾ ರೀತ್ಯಾ ವಿದ್ಯಾಂಸನು ವೈಜ್ಞಾನಿಕ ಶಾಸ್ತ್ರ ಕರೊ ಹಿಡಿದು ಅರ್ಥ ನಿರ್ಧರಿಸುವನು ಗುರು ಹೇಳಬೇಕು. ಏನೇ ಆಗಲಿ, ಇಂತಹ ಆಶ್ಚರ್ಯ ಉಪಾಯಗಳು ಪ್ರವಿಂಸನಸಿ ಶಾಸ್ತ್ರಕ್ಕೆ ತಕ್ಕ ಮಟ್ಟಿಗೆ ಪ್ರಸಂಗಕ್ಕೆ ಉಂಟು. ನೋಡ ಬಹುದು.

ಮೊನ್ನೆ ಮೊನ್ನೆ ಪತ್ರಿಕೆಯೊಂದರಲ್ಲಿ ಓದಿದ ಒಂದು ವಿಚಿತ್ರ ಸಂಗತಿ ನೆನಪಿಗೆ ಬರುವದು. ಬ್ರಹ್ಮದೇಶದಲ್ಲಿ ಒಬ್ಬನು ೧೦೯ ವರ್ಷ ಬಾಳಿ ಸತ್ತನಂತೆ. ಆ ನಸ ಏನನ್ನೋ ಹೇಳದೆ ಆಗ ೮೫ ವರ್ಷಗಳು. ಸುಮ್ಮನೆ ಮೊನ್ನೆ ಸತ್ತ ಬಟ್ಟು. ಹಾ! ಇಂತ ಸಾತ್ವಿಕ ಜೀವನವನ್ನು ತಪ್ಪಿಸಿ ಬಾಯಿಗೆ ಸೆರೆ ಹಚ್ಚಿದ ವಲ್ಲ ಇಷ್ಟರ ಮೇಲಿಂದಲೇ ಬ್ರಹ್ಮದೇಶದವರು ಹೆಚ್ಚು ಕಾಲ ಬಾಳುವ ದವರು ಹೆಚ್ಚು ವರ್ಷ ಬಾಳುವ ಗುಟ್ಟು ಎಂದು ಅನುಭವ ಆಧಾರವಾಗಿ ಹಾಕಲಾಗಿದೆ!

ಊಟದ ನಿಯತ್ರಣ, ಸಾಧ್ಯವಿದ್ದಷ್ಟು ಉಪವಾಸ ಮುಂತಾದವು—ಇವೇ ದೀರ್ಘಾಯುಷ್ಯದ ಬಾಳಿನ ರಹಸ್ಯಗಳೆಂಬುದು ಸ್ಪಷ್ಟ. ಜಗತ್ತಿನ ಪ್ರಸಿದ್ಧ ನಾಟಕಕಾರ ಬರ್ನಾರ್ಡ್ ಶಾ ಎಂಬ ಪ್ರಸಿದ್ಧ ಆಂಗ್ಲ ನಾಟಕಕಾರನದೂ ಇದೇ ವಿಚಾರ. ಮಾಂಸ ಮುಟ್ಟಬಾರದು, ಮದ್ಯಪಾನ ಮಾಡಬಾರದು, ವೈದ್ಯರೆಂದರೆ ದೂರವಿರಬೇಕು — ಇದೇ ಅವನ ಉಪದೇಶ. ಅವನಿಗೆ ೯೩ ವರ್ಷಗಳು. ತಾನು ೧೦೦ ವರ್ಷ ಬಾಳುವೆನೆಂದು ಅವನ ನಂಬಿಕೆ! ಸ್ವಾಮಿ ಶಿವಾನಂದರು ಸಹ ಉಪವಾಸದ ಮಹತ್ವವನ್ನು ಅರುಹುತ್ತಾರೆ. ಅಲ್ಲದೆ ಉತ್ತಮ ಆರೋಗ್ಯ ಪಡೆಯಲು ಮಹಾತ್ಮಾ ಗಾಂಧಿಯವರ ಉಪದೇಶವೂ ಬಹಳ ಪ್ರಾಮುಖ್ಯವಾಗಿ ಇದೇ ಮಾದರಿಯದಾಗಿದ್ದಿತು. ಅವರು ಜೀವನದಲ್ಲಿ ಉಪವಾಸವನ್ನು ಅನುಸರಿಸುತ್ತಿದ್ದರು. ಅವರಿಗೆ ೭೯ ವರ್ಷ ಬಾಳಿದ ಇತಿಹಾಸ ಗೊತ್ತು. ಅವರಿಗೆ ೧೨೫ ವರ್ಷ ಬಾಳುವ ಆಸೆ ಇತ್ತು. ತಾನು ತನ್ನ ತಪಸ್ಸಿನಿಂದ ಜೀವಿಸಿದ್ದ ಅವರ ಆಶಯ. ತನ್ನ ಮಹತ್ವ ಪ್ರಯೋಗಗಳಿಂದ ಅವರು ಸಂಪೂರ್ಣ ವಿಜಯವನ್ನೇ ಪಡೆದಿದ್ದರು. ನೈಸರ್ಗಿಕ ಚಿಕಿತ್ಸೆಯಲ್ಲಿ ಅವರಿಗೆ ಅತೀವ ಶ್ರದ್ಧೆ ಇತ್ತು. ಇದರಿಂದ ಆಹಾರ ವಿಷಯದಲ್ಲಿ ನಿಯಮ ರೀತಿ ಎಷ್ಟು ಸರಿ ಎನಿಸುತ್ತದೆ?

ಜಗತ್ತಿನಲ್ಲಿ, ಉಪವಾಸದಿಂದ ದೀರ್ಘಾಯುಷ್ಯ ಸಾಧನೆಗಳೆಂದು ಹಲವರ ಅಭಿಪ್ರಾಯ. ಮೆಕ್ಸಿಕೋದ ಒಬ್ಬ ಸ್ತ್ರೀ ತನ್ನ ಗಳಿಂದಲೇ ೧೫೦ ವರ್ಷ ಬಾಳಿದ್ದಾಳೆ! ಆದರೆ ಆಕೆ ಜನರಿಗೆ ಇಷ್ಟವಾದ ಹಣ್ಣುಗಳು ಬಾಳೆಹಣ್ಣು ದೊರೆಯದಿದ್ದಾಗ ತಿನ್ನುವಳು. ಆಕೆಯ ಉಪವಾಸ ಆಹಾರದಲ್ಲಿ ನೀರು, ಹಣ್ಣುಗಳು, ಹಾಲು ಮತ್ತು ಗಡ್ಡೆಗೆಣಸುಗಳ ದೊಡ್ಡ ಭಾಗವಿದೆಯೆಂದು ಹೇಳುವರು.

ಅಮೇರಿಕೆಯ ಕ್ಯಾಲಿಫೋರ್ನಿಯಾದ ರಾಕ್ ಫೆಲರ್ ೯೭ ವರ್ಷ ಬದುಕಿದನು. ಆತನಿಗೆ ಹಗಲೂ ಹಿಂದು ಸೇರುವ ಹಲ್ಲು ಇದ್ದಿಲ್ಲವಂತೆ. ಆದರೆ ಕಾಫಿ ಎಂದರೆ ಅವನಿಗೆ ಬಹಳ ಪ್ರೇಮ. ಆದರೆ ಎರಡು ಊಟದ ಮಧ್ಯಂತರದಲ್ಲಿ ಕಾಫಿ ಕುಡಿಯದೆ ಹಣ್ಣಿನ ರಸ ಸೇವಿಸುತ್ತಿದ್ದನು. ಬಹಳ ಆತಂಕ ಮನುಷ್ಯ. ತಿನ್ನುವದು ಸ್ವಲ್ಪ ಸಿದ್ಧ. ಎಂದರೆ ತಿನ್ನುತ್ತ ಸ್ವಭಾವತಃ ಎಲ್ಲೋ ನಿಲ್ಲುವದು ನಿಜವಾಗಿಯೂ ಆಶ್ಚರ್ಯಕಾರಕ. ಸಿಟ್ಟು ಸೇದು ಗಳಿಂದಲೇ ಆಯುಷ್ಯದ ವಿನಾಶ ಎಂದು ಗಾಂಧೀಜಿಯವರು ಸಾರುತ್ತಿದ್ದರು.

ಜಗತ್ತಿನ ಜೀವ ಜೀವನವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಒಳ್ಳೆಯ ಚಟಗಳು ಇರಬೇಕೋ ಇರಬಾರದೋ ಎನ್ನುವಲ್ಲಿ ಸಂಶಯ ಹುಟ್ಟುತ್ತದೆ. ಇವರ ಅಭಿಪ್ರಾಯಗಳಲ್ಲಿ ಹಲವು ಮೇಳಗಳಲ್ಲಿ ಒಮ್ಮೆ ವಿನ್‌ಸ್ಟನ್ ಚರ್ಚಿಲ್ ಫೀಲ್ಡ್ ಮಾರ್ಷಲ್ ಮಾಂಟ್ಗೋಮರಿಯೊಡನೆ ಮಾತನಾಡುವಾಗ "ನಿಮ್ಮ ಆರೋಗ್ಯದ ಗುಟ್ಟೇನು?" ಎಂದು ಕೇಳಿದನು. ಫೀಲ್ಡ್ ಮಾರ್ಷಲ್ ಉತ್ತರಿಸಿದನು ಹೀಗೆ—"ನಾನು ಸರಾಯಿ ಕುಡಿಯುವದಿಲ್ಲ ಸಿಗರೇಟು ಸೇದುವದಿಲ್ಲ, ವ್ಯಾಯಾಮ ಮಾಡುತ್ತೇನೆ. ಸೇದುವದು ಹಾಗೂ ಕುಡಿಯುವದು ಕೇಳಬಾರದು. ಅಂತೇ ನನ್ನ ಅವಸ್ಥೆ ಸಂಪೂರ್ಣ ನಿಯಂತ್ರಣದಲ್ಲಿ ಇದೆ"

ದೈಹಿಕ ತೊಂದರೆಗಳು ಕಡಿಮೆ. ಚರ್ಚಿಲನು ಮರುತ್ತರವಿತ್ತನು: "ನಾನು ಏಳುವದು ಬಹಳ ತಡ. ನನ್ನ ದ ಸಿಗರೇಟಿಲ್ಲದೆ ಕುಡಿಯುವುದು ವದು ಬೇಕಾದಷ್ಟಿದೆ. ಆದರೂ ಕೂಡ ನಾನು ನಿರೋಗಿಯಾಗಿ ಬಹಳ ವಾಗಿ ನೋಡಿದರೆ ಚರ್ಚಿಲನಿಗೆ ಹೇಳುವಾಗ ಸುಸ್ತಿಗೆ ಮೋರೆಯಿಲ್ಲ. ಸೇದುವದು ಕುಡಿಯುವದು ೧೦೦ ರಷ್ಟು ಇದ್ದವು. ಎಲ್ಲಕ್ಕಿಂತ ಹೆಚ್ಚಿನ ರೆ ಆತನಿಗೆ ಅಖಂಡವಾಗಿ ದಿವ್ಯ ಜೀವನ ಚಟವು ಒಂದು!

ಜರ್ಮನರ ದೃಷ್ಟಿಯಿಂದ ದೀರ್ಘಾಯುಷ್ಯದ ರಹಸ್ಯವು ವಿವಾಹ ಜೀವನಗಳಲ್ಲಿ ಹುದುಗಿದೆ. ಅವಿವಾಹಿತರು ಬಹು ದಿನ ಬಾಳಿದರೆ ಸೋಜಿಗವೆಂದು ಉದಾಹರಿಸಬಹುದು. ಬ್ರಿಟನ್ನಿನ ಹಳ್ಳಿಗಳಲ್ಲಿ ಕೆಲವರು ಶತಾಯುಷ್ಯರಾದವರೆನಿಸುವವನ್ನು ಕಂಡು ಹಿಡಿದದ್ದಾರೆ. ಆ ಜನರು ಸೋಮಾರಿಗಳು. ಅಲ್ಲಿ ಯಾವ ಗುಲ್ಲುವದಿಲ್ಲ. ಮಾರಕ್ಕಿನ್ನೆ ಬಸ್ಸಿನ ಮತ್ತ ಹೋಗುವದು.

ನೂರು ಕಾಲ ಬಾಳಿದ ಬೇರಿಗನ್ನದ ಶುಕ್ರ ಮನುಷ್ಯನೊಬ್ಬನು ತಣ್ಣೀರಿನ ಉಪಾಯ ಕಂಡುಹಿಡಿದದ್ದನು. ಪ್ರಾಯಃ ಸೇವನೆಗಾಗಿ ಹೊರಡುವ ಮೊದಲು ಒರತೆಯ ನೀರು ಕುಡಿಯುವದು ಅವನ ರೂಢಿ. ಅದರ ಮೂಲಕ ಅವನಿಗೆ ಎಂದೂ ಖಾಯಿಲೆ ಬರಲಿಲ್ಲ. ಎರಡು ಸಲ ತಲೆ ನೋವು ಮಾತ್ರ ಎದ್ದಿತ್ತಂತೆ. ಆದಾದರೂ ಕಡಿಮೆಯಾದುದು ಹೇಗೆ ಗೊತ್ತೆ? ಮತ್ತೆ ನಿರರ್ಗಳವಾಗಿ ತಣ್ಣೀರು ಕುಡಿದಾಗ!

ಇಲ್ಲಿಯ ವರೆಗೆ ಮುಖ್ಯವಾಗಿ ಎಲ್ಲಾ ಜನರಿಗೆ ಎಲ್ಲ ಕಾಲಗಳಲ್ಲಿ, ಎಲ್ಲ ದೇಶಗಳಲ್ಲಿ ದೀರ್ಘಾಯುಷ್ಯಕ್ಕೆ ಉಪಯುಕ್ತವೆನಿಸುವ ಕಲ ಸೂತ್ರಗಳು ಗೊತ್ತಾದುದು ಸರಿ. ಆದರೆ ಎಷ್ಟು ಜನರಿಗೆ ದೀರ್ಘಾಯುಷ್ಯದ ಮಹತ್ವ ಇರುವದೋ! ಒಟ್ಟು ಹಾಗೆ ಮಾಡಬಾರದು, ಹೀಗೆ ಮಾಡಬಾರದು ಎಂಬ ಕಟ್ಟಳೆ ಇರುವಲ್ಲಿ ಜೀವನ ವಿರಸವಾಗಿ ಪರಿಣಮಿಸುವದರಲ್ಲಿ ಸಂಶಯವಿಲ್ಲ.

(ಒಂದು ಆಂಗ್ಲ ಲೇಖನದ ಆಧಾರದಿಂದ)

'ಸಂಜೀವನ'

# ಶರತ್ ಚಂದ್ರಬೋಸರ ನಿಧನ

ಸುಪ್ರಸಿದ್ಧ ರಾಷ್ಟ್ರೀಯ ಮುಖಂಡರೂ, ನೇತಾಜಿ ಸುಭಾಷ ಚಂದ್ರಬೋಸರ ಸಹೋದರರೂ ಆದ ಶ್ರೀ ಶರತ್ ಚಂದ್ರಬೋಸರವರು ತಾ. ೨೦ ರಲ್ಲಿ ತಮ್ಮ ಕಲಕತ್ತಾ ಪಟ್ಟಣದಲ್ಲಿ ಸ್ವರ್ಗಸ್ಥರಾದರು. ಶರತ್ ಚಂದ್ರರು ಕಳೆದ ಕೆಲವು ದಿನಗಳಿಂದ ಅಸ್ವಸ್ಥರಾಗಿದ್ದರು. ತಾ. ೨೦ ರಂದು ಸಾಯಂಕಾಲ ಬಹಳ ತಡ ಹಿಂಗೂ ಸ್ವಾತಂತ್ರ್ಯದ ವಿಷಯದ ಮಾತನಾಡುತ್ತಿದ್ದರು. ವೈದ್ಯರ ಪ್ರಯತ್ನಕ್ಕೆ ಆ ವಿಚಾರ ಒಂದು ಲೇಖ ಬರೆದು ೧೧-೧೦ ಗಂಟೆಗೆ ಕೊನೆ ಉಸಿರೆಳೆದರು. ನಂತರ ಮಲಗಿದರು. ಅವರಿಗೆ ಅನೇಕ ಗಣ್ಯರು ಸಂತಾಪ ಸೂಚಿಸಿದರು.

ಈ ವಾರ್ತೆಯು ಕಾಡ್ಗಿಚ್ಚಿನಂತೆ ಕಲಕತ್ತೆಯ ಮೂಲೆ ಮೂಲೆಗೂ ಹರಡಿತು. ಜನಸ್ತೋಮವು ಧಾರಾಕಾರವಾಗಿ ಬೋಸರ ಮನೆಗೆ ಬರತೊಡಗಿತು. ಬಂಗಾಳದ ಗವರ್ನರ್, ಮುಖ್ಯ ಮಂತ್ರಿ ಎಲ್ಲರೂ ಬಂದು ತಮ್ಮ ಗೌರವವನ್ನು ಸಲ್ಲಿಸಿದರು. ಬೆಳಿಗ್ಗೆ ೧೧ ಗಂಟೆಗೆ ಮನೆಯಿಂದ ಹೊರಟ ಶರತ್ ಬೋಸರ ಶವ ಸಂಸ್ಕಾರ ನಡೆಯಿತು. ಆ ಸಂಸ್ಕಾರಕ್ಕೆ ಎರಡು ಲಕ್ಷಕ್ಕೂ ಮಿಕ್ಕಿ ಜನರು ನೆರೆದಿದ್ದರು.

ಪಂಡಿತ ನೆಹರೂರವರು ಕೇಂದ್ರ ಶಾಸನ ಸಭೆಯಲ್ಲಿ ಈ ವಿಚಾರ ತಮ್ಮ ದುಃಖ ವ್ಯಕ್ತಪಡಿಸುತ್ತಾ ಭಾರತದ ಒಬ್ಬ ಸ್ವಾತಂತ್ರ್ಯ ಯೋಧರು ಕಣ್ಮರೆಯಾದರೆಂದರು. ಸಭೆಯ ಮುಂದಾಳುಗಳೆಲ್ಲರೂ ತಮ್ಮ ದುಃಖ ಸಂತಾಪಗಳನ್ನು ವ್ಯಕ್ತಪಡಿಸುತ್ತಾ ಶರತ್ ರ ವ್ಯಕ್ತಿತ್ವವನ್ನು ಹೊಗಳಿ ಅವರ ಗುಣಗಾನ ಮಾಡಿದ್ದಾರೆ.

ಪರಿಚಯ.

ಆಸ್ತಿಕರ ಸ್ವಾತಂತ್ರ್ಯ ಹೋರಾಟದ ಮುಂದಾಳಾಗಿ ಬೋಸರು ಎಷ್ಟೋ ಪ್ರಸಿದ್ಧರು. ಇವರು ೧೮೮೯ ರಲ್ಲಿ ಹುಟ್ಟಿದರು. ಕಟಕ್, ಕಲ್ಕತ್ತಾ ಮತ್ತು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ೧೯೧೧ ರಲ್ಲಿ ಬ್ಯಾರಿಸ್ಟರ್ ವೃತ್ತಿಯನ್ನು ಕೈಕೊಂಡರು. ಬೋಸರು ತಮ್ಮ ರಾಜಕೀಯ ಕಾರ್ಯವನ್ನು ದೇಶಬಂಧು ಚಿತ್ತರಂಜನದಾಸರ ಆಶ್ರಯದಲ್ಲಿ ಪ್ರಾರಂಭಿಸಿದರು. ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿಗೆ ಇವರನ್ನು ಎರಡು ಸಾರಿ ಚುನಾಯಿಸಲಾಗಿತ್ತು. ಇವರು ಬಂಗಾಳ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರೆಸಿಡೆಂಟರಾಗಿದ್ದರು. ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾಗಿದ್ದರು. ೧೯೩೭ ರಿಂದ ೧೯೪೫ ರವರೆಗೆ ಬಂಗಾಳ ಶಾಸನ ಸಭೆಯಲ್ಲಿ ವಿರೋಧ ಪಕ್ಷದ ಮುಂದಾಳಾಗಿದ್ದರು. ಕೇಂದ್ರ ಶಾಸನ ಸಭೆಗೆ ೧೯೪೬ರಲ್ಲಿ ಚುನಾಯಿತರಾದ ಇವರು ಕಾಂಗ್ರೆಸ್ ಪಕ್ಷದ ಮುಂದಾಳಾಗಿ ಆರಿಸಲ್ಪಟ್ಟರು. ನಂತರ ರಚಿಸಲಾದ ತಾತ್ಕಾಲಿಕ ರಾಷ್ಟ್ರೀಯ ಸರಕಾರದಲ್ಲಿ ಮಂತ್ರಿಗಳಾದರು. ಆದರೆ ಕೆಲ ದಿನಗಳಲ್ಲಿ ಇವರು ಭಿನ್ನಾಭಿಪ್ರಾಯದಿಂದ ಅಧಿಕಾರಕ್ಕೆ ರಾಜೀನಾಮೆ ಕೊಟ್ಟು ಬಂಗಾಳದಲ್ಲಿ ತಮ್ಮದೇ ಆದ ಸಂಯುಕ್ತ ಸಮಾಜವಾದಿಗಳ ಪಕ್ಷವನ್ನು ಸ್ಥಾಪಿಸಿದರು. ಕಡೆಯವರೆಗೂ ಅವರು ಅದರ ಪ್ರೆಸಿಡೆಂಟರಾಗಿದ್ದರು. ಕಳೆದ ಮಹಾಯುದ್ಧದ ಸಮಯದಲ್ಲಿ ಅವರನ್ನು ರಾಜಬಂಧಿಯನ್ನಾಗಿ ಮಾಡಲಾಯಿತು. ಆ ಸಮಯದಲ್ಲಿ ಅವರನ್ನು ಬಹುಕಾಲ ದಕ್ಷಿಣದಲ್ಲಿ ಸೆರೆಯಲ್ಲಿಡಲಾಗಿತ್ತು. ೧೯೪೫ ರಲ್ಲಿ ಅವರನ್ನು ಬಂಧನದಿಂದ ಬಿಡುಗಡೆ ಮಾಡಲಾಯಿತು. ಅನೇಕ ವರ್ಷಗಳ ಜೈಲು ಜೀವನದಿಂದ ಅವರ ದೇಹ ಸ್ವಾಸ್ಥ್ಯವು ಕೆಟ್ಟು ಹೋಗಿ ಇಂಥಾ ಅಕಾಲ ಮರಣಕ್ಕೆ ತುತ್ತಾಗಬೇಕಾಯಿತು.

# ವಾರ್ತೆಗಳು.

"ಅಸ್ಸಾಮವು ಭಾರತದ ಗಡಿನಾಡಿನ ಸಂಸ್ಥಾನಗಳಲ್ಲಿ ಅತ್ಯಂತ ಆಯಕಟ್ಟಿನದಾಗಿದೆ. ಆದುದರಿಂದ ಅದರ ರಕ್ಷಣೆಯನ್ನು ಬಲಪಡಿಸುವುದು ಅತ್ಯವಶ್ಯವಿದೆ" ಎಂಬುದಾಗಿ ಅಸ್ಸಾಮಿನ ಗವರ್ನರ್ ಶ್ರೀ ಶ್ರೀಪ್ರಕಾಶರವರು ಬರೋಡಾ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು.

ಗ್ವಾಲಿಯರ್ ಮತ್ತು ಇಂದೋರ್ ವಿಮಾನ ನಿಲ್ದಾಣಗಳ ಅಧಿಕಾರವನ್ನು ಬರುವ ಏಪ್ರಿಲ್ ತಾ. ೧ ರಿಂದ ಭಾರತ ಕೇಂದ್ರ ಸರಕಾರವು ತೆಗೆದುಕೊಳ್ಳುವುದು. ಈ ವರೆಗೆ ಈ ವಿಮಾನ ನಿಲ್ದಾಣಗಳು ಮಧ್ಯ ಭಾರತದ ಸರಕಾರದ ಆಡಳಿತಕ್ಕೊಳಪಟ್ಟಿದ್ದುವು.

ಕಳೆದ ೨೨ ವರ್ಷಗಳಿಂದ ಚೀಫ್ ಕಮಿಷನರರ ಪ್ರಾಂತ್ಯಾಧಿಕಾರ ಅನುಭವಿಸಿಕೊಂಡಿದ್ದ ೨೫ ಚದರ ಮೈಲು ವಿಸ್ತೀರ್ಣವೂ, ೫೦೦೦ ಜನಸಂಖ್ಯೆಯುಳ್ಳದೂ ಆದ ಗೂಡಿವ ಸಂಥಪಿಪ್ಲೋಡಾ ಎಂಬ ಚಿಕ್ಕ ಸಂಸ್ಥಾನವು (ಗ್ವಾಲಿಯರ್, ಇಂದೋರ್, ರೇವಾ ಸ್ ಮತ್ತು ಉದೈಪುರಗಳಿಂದ ಆವರಿಸಲ್ಪಟ್ಟ ಚಿಕ್ಕ ದ್ವೀಪ) ಕಳೆದ ಜನವರಿ ತಾ. ೨೬ ರಂದು ಮಧ್ಯ ಭಾರತದೊಡನೆ ಸೇರಿತು.

ರೋಗಾಣುಗಳ ಯುದ್ಧ ಹೂಡಿ ಸೋವಿಯಟ್ ಮೇಲೆ ಘೋರ ವಿಪತ್ತನ್ನು ಹೂಡುವ ದುರಾಲೋಚನೆ ಕಟ್ಟಿಕೊಂಡ ಬಗ್ಗೆ ಜಪಾನಿನ ಚಕ್ರವರ್ತಿ ಹಿರೋಹಿಟೋ ಮತ್ತು ನಾಲ್ವರು ಇತರ ಮುಖಂಡರನ್ನು ಅಂತರ ಷ್ಟ್ರೀಯ ನ್ಯಾಯಸ್ಥಾನದ ಮುಂದೆ ವಿಚಾರಣೆಗೊಳಪಡಿಸಬೇಕೆಂಬ ಸೋವಿಯಟ್ ಸಲಹೆಗೆ ಚೀನದ ಕಮ್ಯೂನಿಸ್ಟ ಸರಕಾರ ಬೆಂಬಲ ಕೊಟ್ಟಿರುವುದು.

ಫೆಬ್ರವರಿ ತಾ. ೪ ಕ್ಕೆ ಅಂತ್ಯವಾಗ ವಾರದಲ್ಲಿ ಇಡೀ ಮದ್ರಾಸು ಪ್ರಾಂತ್ಯದಲ್ಲಿ ೧,೪೫೪ ಮಂದಿಗೆ ಕಾಲರಾ ತಗಲಿ ೫೯೬ ಮಂದಿ ಮೃತಪಟ್ಟರು; ೯೬೭ ಮಂದಿಗೆ ಸಿಡುಬು ತಗಲಿ ೧೬೪ ಮರಣಗಳು ಸಂಭವಿಸಿದುವು.

ಕಮ್ಯೂನಿಸ್ಟ ಆಕ್ರಮಿತ ಶಾಂಘಾಯಿದ ಪ್ಲವದ ಅಮೇರಿಕದ ಸೈನ್ಯಗಳ ಮೇಲೆ ಉದ್ದೇಶಪೂರ್ವಕವಾದ ವಿಮಾನ ಧಾಳಿ ನಡೆಸಿದ ಬಗ್ಗೆ ಸಂಯುಕ್ತ ಅಮೆರಿಕವು ಚೀನಾ ರಾಷ್ಟ್ರೀಯ ಸರಕಾರದೊಡನೆ ನಿಷೇಧ ವ್ಯಕ್ತಪಡಿಸಿದೆ.

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಮುಖ್ಯ ಸಭೆ ಇತ್ತೀಚೆಗೆ ಡೆಲ್ಲಿಯಲ್ಲಿ ಜರಗಿದಾಗ ಪ್ರಧಾನ ಮಂತ್ರಿ ಪಂಡಿತ್ ನೆಹರೂ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲರು ಮತ್ತು [illegible] ಗರವಾಗಿ ಸನ್ಮಾನಿಸಲ್ಪಟ್ಟು ಬಂದರು.

[illegible] ಸೇರಿ ಸ್ವತಂತ್ರ [illegible] ಸೇನಾ [illegible] ನೇಪಾಳದಲ್ಲಿ [illegible] ರಾಣಾವರ್ಗದ ಆ[illegible] ಜ್ಞ ಭಾರತದ ಮಂತ್ರಿಮಂಡಲದ ಕಡೆಗೆ ಹೊರಟಿದೆ.

ಜಪಾನದಲ್ಲಿ ಮಾರ್ಚ್ ತಾ. ೨೪ ರಿಂದ ೨೮ರ ವರೆಗೆ ಜರಗುವ ವಿಜ್ಞಾನಿಗಳ ಸಭೆಗೆ ಭಾರತಕ್ಕೆ ಆಮಂತ್ರಣ ಕೊಡುವುದಾಗಿ ತಿಳಿದುಬಂದಿದೆ. ಇತ್ತೀಚೆಗೆ ಭಾರತದಲ್ಲಿ ನಡೆದ ಶಾಸ್ತ್ರಜ್ಞರ ಸಭೆಗೆ ಜಪಾನಿನ ವಿಜ್ಞಾನಿಗಳಿಗೆ ಆಮಂತ್ರಣ ಕೊಟ್ಟಿದ್ದು, ಅವರು ಇಲ್ಲಿನ ಸಭೆಯಲ್ಲಿ ಭಾಗವಹಿಸಿದ್ದರು. ಇಂದಿನ ಗೌರವವೊಂದನ್ನು ಬಿಟ್ಟು ಉಳಿದ ಜಪಾನೀ ವಿಜ್ಞಾನಿಗಳಿಗೆ ಅವರು ಆಮಂತ್ರಣ ಕೊಟ್ಟಿರುವುದು.

[illegible] ಬೃಹತ್ ಪ್ರಮಾಣದ ಉತ್ಪಾದನೆ ಯುಕ್ತಿಗಳಲ್ಲಿಯೇ ಅತೀ ಕಡಿಮೆ ತರಗತಿಯಾಗಿದ್ದು ಈ ಕಾರಣದಿಂದ ಭಾರತವು ಹಿಂದುಳಿದ ಪಕ್ಷವನ್ನು ಎದುರಿಸುವ ಅನೇಕ ರಂಗಗಳ ವಿಷಯಗಳ ಮೇಲೆ ನಿಭಾಯಿಸಲು ಎಂದಿನವರೆಗೆ ಭಾರತ ವಿಜ್ಞಾನ ಮಂದಿನವರೆಗೆ ಅದರ ಸ್ವತಂತ್ರಕ್ಕೆ ಅರ್ಥವಿಲ್ಲ. ಎಂದು ಭಾರತದ ಉತ್ಪಾದನಾ ಸಚಿವರಾದ [illegible] ಡಾ. ಪಾಟೀಲರು ಹೇಳಿದರು.

ಬ್ರಿಟನಿನಲ್ಲಿ ನಡೆದ ಚುನಾವಣೆಯಲ್ಲಿ ಕನ್ಸರವೇಟಿವ್ ಪಕ್ಷದವರು [illegible] ಭಾಗದ ವಿಜಯವನ್ನು ಸಂಪಾದಿಸಲು ಹೆಣಗುತ್ತಿದ್ದರೂ ಕ್ರಮಪಡುತ್ತಿದ್ದಾರೆ. ಚರ್ಚಿಲ್ಲರು ಚುನಾವಣೆ ಪ್ರಚಾರದ ಭಾಷಣ ನಡೆಸುತ್ತ, ಆ ಚುನಾವಣೆಯಲ್ಲಿ ತಮ್ಮ ಪಕ್ಷವು ಜಯಗಳಿಸಿ ಅಧಿಕಾರಕ್ಕೆ ಬಂದರೆ, ರಷ್ಯಾ ಅಧಿಪತಿಯೊಡನೆ ಮಾರ್ಷಲ್ ಸ್ಟಾಲಿನರೊಡನೆ ತಾನೇ ಸ್ವತಃ ಸಂಧಾನ ನಡೆಸಿ ಜಗತ್ತಿಗೆ ವಿನಾಶಕಾರಿಯಾಗಿ ಯುದ್ಧದ ಭೀತಿಯನ್ನು ನಿವಾರಿಸಲು ಪ್ರಯತ್ನಪಡುವೆನು—ಎಂಬುದಾಗಿ ತಿಳಿಸಿದರು.

ನೇಪಾಳದ ನೂತನ ಮಂತ್ರಿಗಳಾದ ಮೇಜರ್ ಜನರಲ್ [illegible] ಲೆಫ್ಟಿನೆಂಟ್ ಜನರಲ್ ಶಂಷೇರ್ ಜಂಗ ಬಹದ್ದೂರರು ಡೆಲ್ಲಿಗೆ ಬಂದಾಗ ಇದೇ ೨೦ನೇ ದಿನಾಂಕ ಅವರ ಗೌರವಾರ್ಥ ಡಿನ್ನರ್ ಕೊಡಲಾಯಿತು. ಸೈನಿಕ ಕವಾಯತನ್ನು ವಿಶೇಷವಾಗಿ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಭಾರತದ ಪರವಾಗಿ ಸಂರಕ್ಷಣಾ ಮಂತ್ರಿ ಸರದಾರ ಬಲದೇವ ಸಿಂಘರು [illegible] ರವರ ಖಡ್ಗವನ್ನು ಅವರಿಗೆ ಕಾಣಿಕೆಯಾಗಿ ಅರ್ಪಿಸಿದರು.

ಸಾಗರದ ಮುಸ್ಲೀಮರ್ ಕಸಾಯಿಗಳು ಇನ್ನು ಮುಂದೆ ಗೋವಧೆ ಮಾಡುವುದಿಲ್ಲವೆಂದೂ ಗೋಮಾಂಸ ವಿಕ್ರಯಿಸುವುದಿಲ್ಲವೆಂದೂ ಸ್ವಯಂ ನಿರ್ಧಾರ ಕೈಕೊಂಡಿರುವರು. ಇಂದು ವಾರದ ಹಿಂದೆ ಗೋಹತ್ಯ ನಡೆಸಿದ ಬಗ್ಗೆ ದೊಂಬಿ ಎದ್ದು ಇಬ್ಬರು ಆ ದೊಂಬಿಗೆ ಬಲಿಯಾದ ನಂತರ ಈ ನಿರ್ಧಾರವನ್ನು ಅವರು ಕೈಕೊಂಡುದಾಗಿದೆ.

ಹಿಂದೂ ಧರ್ಮ ಮಾಸೂಚಿ ಮತ್ತು ಗೋವಧೆ ಇವೆರಡೂ ಹಿಂದೂ[illegible]ದ ತನಕ ಕಾವು ಶಾಂತಿಯುಕ್ತ ಸತ್ಯಾಗ್ರಹವನ್ನು ನಿರ್ವಹಿಸಲು ನಿರ್ಧರಿಸ[illegible]ವುದಾಗಿಯೂ ಇದಕ್ಕೆ ಯೋಗ್ಯ [illegible] ಬೆಂದರೂ ಕಾವುಹಿಂದು [illegible] ಗಿರಾಕಿ ಸ್ವಾಮಿ ಕರಪಾತ್ರಿಯೆಂಬ ಸನಾತನಿಗಳು ತಮ್ಮ ಹಿಂಬಾಲಕರ ಪರವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಪಾಕೀಸ್ಥಾನಕ್ಕೆ ಪಶ್ಚಿಮ ಕೂಡಾಯಿ ಮತ್ತೊಮ್ಮೆ ಇಳಿಸುವುದರ ಪ್ರಪಂಚ ಬ್ಯಾಂಕು ಸಹಾಯ ನೀಡುವ ಸಂಭವ ಕಡಿಮೆ ಎಂದು ಡಿಲ್ಲಿ ಅಧಿಕಾರಿ ವ್ಯಾಪ್ತಿಗಳಲ್ಲಿ ನಂಬಲಾಗಿದೆ.

ಕಾಂಗ್ರೆಸ್ಸಿನಲ್ಲಿ ಪ್ರಾಥಮಿಕ ಸದಸ್ಯರ ಸಂಖ್ಯೆ ೨,೯೪,೧೯೯ ಎಂದು ಅಧಿಕೃತ ಸಂಖ್ಯೆ ೧೫,೩೯,೬೬೪ ಕ್ರಿಯಾತ್ಮಕ ಸದಸ್ಯ ೫೦ ೯,೫೬,೮೫೪ ಎಂದು [illegible] ಕಾಂಗ್ರೆಸ್ [illegible]ಯಲ್ಲಿ ಕಾಂಗ್ರೆಸ್ ಕಾರ್ಯದರ್ಶಿ ರಾಜ್ಯಸ್ಥರು ತಿಳಿಸಿದ್ದಾರೆ.

## ಶ್ರೀ ರಾಮಕೃಷ್ಣ ಧರ್ಮದ ಔಷಧಾಲಯ.

ಬೆಂಗಳೂರಿನ ಕೃಷ್ಣರಾಜ ಮಾರ್ಕೆಟ್ಟಿನ ಹತ್ತಿರ ಮತ್ತು ಒಂದು ವ್ರಾಂತ್ಯಗಳ ಉದಾರಿಗಳ ಸಹಾಯದಿಂದ ಈ ಔಷಧಾಲಯವು ಅನೇಕ ವರ್ಷಗಳಿಂದ ಬಡಜನರ ಸೇವೆ ಸಲ್ಲಿಸುತ್ತಿದೆ. ಈ ವರ್ಷ 24,823 ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನಡೆದಿರುವುದು. ದಿನದಿನಕ್ಕೆ ಔಷಧಿಯ ಖರ್ಚು ಹೆಚ್ಚುತ್ತಿರುವುದರಿಂದ ವರ್ಷದ ಆದಾಯವು ಸಾಕಾಗುತ್ತಿಲ್ಲ. ಡಾ. ಎ. ಟಿ. ಬಿ[illegible] ವ್ಯವಸ್ಥಾಪಕರು, ಎಲ್. ಎಂ. ಪಿ. ಅವರು ಉಚಿತವಾಗಿ ರೋಗಿಗಳಿಗೆ ಅಗತ್ಯವಾದ ಚಿಕಿತ್ಸೆ ಮಾಡುತ್ತಿದ್ದಾರೆ. ಈ ವರ್ಷ ಸಾರ್ವಜನಿಕರಿಂದ ಬಂದ ಆದಾಯ ರೂ. 8421-11-0 ಖರ್ಚು ರೂ. 9215-1-6 ಮತ್ತು ಇರುತ್ತದೆ.

ಈಗ ಔಷಧಾಲಯದ ಔಷಧಾಲಯ ಉಪಯೋಗಕ್ಕಾಗಿ ಆಸ್ಪತ್ರೆಯ ಹತ್ತಿರ ಸ್ವಂತ ಸ್ಥಳವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಇನ್ನೂ ಸ್ವಲ್ಪ ಜಾಗ ಅವಶ್ಯಕವಾಗಿದೆ. ಆ ಸ್ಥಳದಲ್ಲಿ ರೋಗಿಗಳು ತಂಗುವುದಕ್ಕೆ ಮತ್ತು ಡಾಕ್ಟರ್ ಅವರ ವಾಸಕ್ಕೆ ಗೃಹಗಳನ್ನು ಕಟ್ಟಿಸುವ ಯೋಚನೆಯಿದೆ. ಈ ವರ್ಷ ಕೆಳಗಿನಂತೆ ಹೆಚ್ಚಿನ ಬಾಬುಗಳಿಗಾಗಿ ಹಣ ಸಂಗ್ರಹ ಮಾಡಬೇಕಾಗಿದೆ.

1. ಕಟ್ಟಡ ನಿರ್ಮಾಣಕ್ಕಾಗಿ ರೂ. 30,000
2. ಇತರ ಔಷಧಗಳನ್ನು ಕಲ್ಪಿಸಲು 3,000
3. ಈ ಸಾಲಿನ ವೈದ್ಯಕೀಯ ವೆಚ್ಚಕ್ಕಾಗಿ 10,000

ಸಾರ್ವಜನಿಕ ಸಹಾಯದಿಂದಲೇ ಈ ಧನ ಸಂಗ್ರಹವಾಗಿ ನಡೆದ ದೀನಜನರ ಸೇವೆ ನಡೆಯಬೇಕಾಗಿದೆ. ಆದ್ದರಿಂದ ಈ ಸತ್ಕಾರ್ಯಕ್ಕೆ ತಮ್ಮ ಶಕ್ತಿ ಮೀರಿ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಆಸ್ಪತ್ರೆಯ ಸಮೀಪವನ್ನು ಚಿರಸ್ಥಾಯಿಯಾಗಿ ಮಾಡಲು [illegible] ಒಂದು ನಾಮಕರಣದ ದಿನವನ್ನು ಸಹಾಯಕರು ತಿರುಗಿ ಅವರಿಂದ ಸ್ವೀಕರಿಸಿ, ಅವು ಔಷಧ ಅಂಗಡಿಯ ಔಷಧ ಅಲ್ಲದೆ [illegible] ಏರ್ಪಡಿಸಲು [illegible] ಎಂದಿನಂತೆ ಈ ವರ್ಷವೂ ಉತ್ಸವ ನಡೆಸಲು ಏರ್ಪಡಿಸಿದೆ. [illegible] ಸಹಾಯವನ್ನು ಆದರದಿಂದ ಸ್ವೀಕರಿಸಲಾಗುವುದು.

ಸ್ವಾಮಿ ನಿರ್ಮಲಾನಂದ
ಅಧ್ಯಕ್ಷರು

Coorg Forest Department
*Mercara the 20th February, 50.*

Timber Sale Notice.

About 100 000 cft of Teak, Rosewood, Honne (Vengai), Nandi (Venteak), Mathi (Karimaradu) and other jungle wood species lying at the Coorg Timber Depot. Hunsur, will be sold by public auction at the said Depot on Saturday the 4th March, 1950, commencing at 10-30 A. M. Timber will be sold in small lots to suit the convenience of private consumers. For further particulars apply to the Chief Forest Officer, Coorg, Mercara

C. M. Kushalappa,
*Chief Forest Officer, Coorg*


ದಿ ಕೂರ್ಗ್ ಜನರಲ್ ಇಂಷ್ಯೂರೆನ್ಸ್ ಲಿಮಿಟೆಡ್,
ಪ್ರೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ, ಮತ್ತು ಪಟ್ಟಣಗಳಲ್ಲಿ ಬಿದ್ದ ಮತ್ತು ಜಾಲಿ ಹೋಗುತ್ತಿರುವ ಮನೆಗಳನ್ನು ಇನ್ಶೂರ್ ಮಾಡಲು ಕ್ರಮ ಕೊಡಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ಸೇರ ಬಯಸುವ ಏಜೆಂಟರುಗಳು ಕಂಪೆನಿಯಿಂದ ಗೊತ್ತಾಗ ಸ್ಥಳಕ್ಕೆ ಅರ್ಜಿಯನ್ನು ಸಾಗಿಸಿ ಕೊಟ್ಟಲ್ಲಿ ಅವರು ಒಂದರ ರೂ 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್ ಪೇಟೆ, ತಾ 30-9-49

ಕೆ. ಟಿ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

# ಗಾಂಧೀಜಿಗೆ ದ್ರೋಹ.

ಲೇ:- ಶ್ರೀ ಕೆ. ಜಿ. ಮಶ್ರೂವಾಲಾ

ಈಗೀಗ ಪ್ರತಿಯೊಬ್ಬರ ಮೇಲೆ, 'ಗಾಂಧೀಜಿಗೆ ದ್ರೋಹ' ಬಗೆದ ಆರೋಪ ಹೊರಿಸುವುದನ್ನು ಕೇಳುತ್ತೇವೆ. ಈ ಆಪಾದ ಇಷ್ಟೊಂದು ಪ್ರಚುರವಾಗಿರುವುದೇ ನಿಜವಾಗಿದ್ದರೆ ಅಂಥ ಪಾಪಿಗಳ ಕಡೆ ಬೆಟ್ಟು ತೋರಿಸುವ ಅವಶ್ಯಕತೆಯೇ ಇಲ್ಲ. ರೋಗಿಗಳ ಊರಲ್ಲಿ ರೋಗಿಗಳನ್ನು ಎಣಿಸುವುದಕ್ಕಿಂತ ಆರೋಗ್ಯವಂತರನ್ನು ಎಣಿಸುವುದೇ ಹೆಚ್ಚು ಸುಲಭ. ಅದೇ ನ್ಯಾಯದಿಂದ, ದ್ರೋಹಿಗಳನ್ನು ಹುಡುಕಿ ತೆಗೆಯುವುದಕ್ಕಿಂತ ಗಾಂಧೀಜಿಗೆ ನಿಷ್ಠರಾಗಿ ನಡೆಯುತ್ತಿರುವವರನ್ನು ಅರಸುತ್ತ ಹೋಗುವುದು ಹೆಚ್ಚು ಹಿತಕರವಾದೀತು. ನಿಜವಾಗಿಯೂ ಸಾರಾಸಾರ ದ್ರೋಹಿಗಳ ನಡುವೆ ಗಾಂಧೀಜಿ ತೋರಿಸಿದ ದಾರಿಯಲ್ಲಿ ವಿನಯದಿಂದಲೂ ಭಕ್ತಿಯಿಂದಲೂ ನಡೆಯುತ್ತ, ಹೀಗೆ ನಡೆಯುತ್ತಿರುವ ತಾವು ಏಕಾಕಿಗಳಾಗಿರುವೆವೋ ತಮ್ಮೊಡನೆ ಬೇರೆ ಜನರೂ ಇರುವರೋ ಎಂಬ ಚಿಂತೆಯನ್ನು ಕೂಡ ಹಚ್ಚಿಕೊಳ್ಳದ ಕೆಲವರಾದರೂ ನಿಜಾನುಯಾಯಿಗಳು ಇದ್ದೇ ಇರಬೇಕು. ನಿಷ್ಠಾವಂತ ಗಸ್ತಿನ ಪ್ರೇಮಿಸನು ಇಡಿ ಜಗತ್ತೇ ನಿದ್ರಿಸುತ್ತಿರುವಾಗ ತಾನೊಬ್ಬನೇ ಏಕೆ ಎಚ್ಚತ್ತಿರಬೇಕೆಂದು ಚಿಂತಿಸುವನೆ? ಅಥವಾ ಹೂ ತನ್ನ ಸುಗಂಧವನ್ನು ಸವಿದು ಮೆಚ್ಚಲು ಯಾವ ದಾರಿಗನೂ ಇಲ್ಲದಿರುವಾಗ ತಾನೇಕೆ ಅರಳಿ ಗಾಳಿಯಲ್ಲಿ ವ್ಯರ್ಥವಾಗಿ ಕಂಪು ಹಬ್ಬಿಸಬೇಕೆಂದು ಬಗೆಯುವುದೆ? ಜಗತ್ತು ನಿದ್ರಿಸುತ್ತಿರುವ ಹೊತ್ತಿನಲ್ಲಿಯೂ ತಾನು ಎಚ್ಚತ್ತಿರುವುದಾಗಿ ಗಸ್ತಿಯವನು ಭಾವಿಸುತ್ತಾನೆ. ಅವನು ನಿದ್ರಿಸಲು ಅವನ ಧರ್ಮಾದರೆ ತನ್ನ ಗಸ್ತೀ ನಿಷ್ಫಲವಾಗುವುದು. ಹಾಗೆಯೇ ಹೂವಿಗೂ ವಿಚಾರಶಕ್ತಿಯಿದ್ದಿದ್ದರೆ, ಅದು ಸುಗಂಧ ಬೀರುವುದೇ ತನ್ನ ಪುಣ್ಯ, ಅದನ್ನು ಯಾರಾದರೂ ಅನುಭವಿಸಿ ಮೆಚ್ಚಲಿ ಬಿಡಲಿ ತಾನೇಕೆ ತನ್ನ ಪುಣ್ಯ ಕಾರ್ಯವನ್ನು ನಿಲ್ಲಿಸಲಿ? ಎಂದು ಬಗೆಯಬಹುದು. ಈ ಭಾವದಿಂದಲೇ ನಿಷ್ಠಾವಂತರು ಗಾಂಧೀಜಿಯ ಮಾರ್ಗದಲ್ಲಿ ನಡೆಯುತ್ತಿರಬಹುದು. ಯಾರಿಗಾದರೂ ಇಂಥ ಒಬ್ಬರಾದರೂ ಸಿಕ್ಕಿದರೂ ಸಾಕು. ಸಾವಿರಾರು ಪ್ರತಿಸ್ವಾಭಿಮಾನಿಗಳನ್ನು ಪರೀಕ್ಷಿಸಿ ಆ ಒಬ್ಬನನ್ನು ತೋರಿಸಿ ಕೊಡುವುದೇ ದೊಡ್ಡ ಸೌಭಾಗ್ಯವೆಂದು ಬಗೆಯತಕ್ಕದ್ದು ಮತ್ತು ಅಂಥ ಸತ್ಯಸಂಧರನ್ನು ಮನಸಾ ಆದರಿಸತಕ್ಕದ್ದು. ಶೋಧಕರು ಈ ದೃಷ್ಟಿಯಿಂದ ಕಾರ್ಯ ಪ್ರವೃತ್ತರಾದರೆ ಅವರಿಗೆ ಹಲವು ಆಶ್ಚರ್ಯಕರ ಅನುಭವಗಳಾಗುವ ಸಂಭವವುಂಟು. ಒಮ್ಮೊಮ್ಮೆ ಅವರಿಗೆ ಹಿಂದಿಗಿಂತ ಹೆಚ್ಚು ಸತ್ಯಸಂಧರು ದೊರಕಿದರೂ ದೊರಕಬಹುದು. ಅವರ ಶೋಧನಾ ದೃಷ್ಟಿಯಲ್ಲಿಯೂ ಆಕಸ್ಮಿಕವಾಗಿ ಬದಲಾವಣೆಯಾಗಲೂಬಹುದು. ಗಾಂಧೀ ಸಿದ್ಧಾಂತಗಳನ್ನು ಸರಿಯಾಗಿ ಅನುಸರಿಸದವರಲ್ಲಿರುವ ದೋಷಗಳನ್ನೇ ಹುಡುಕಿ ತೆಗೆಯುವ ಪ್ರವೃತ್ತಿ ಹಿಂಗಿ, ಈ ಮನುಷ್ಯ ನೂರಕ್ಕೆ ನೂರರಷ್ಟು ಗಾಂಧಿ ಮಾರ್ಗಿಯಾಗಿಲ್ಲದಿದ್ದರೂ ನೂರಕ್ಕೆ ತೊಂಭತ್ತು ಪಾಲು ಗಾಂಧೀ ಮಾರ್ಗಿಯಾಗಿದ್ದಾನೆ. ಈತ ನೂರಕ್ಕೆ ೬೦ ಗಾಂಧೀಮಾರ್ಗಿ, ಇವನು ನೂರಕ್ಕೆ ೫೦ ಗಾಂಧೀ ಮಾರ್ಗಿಯೆಂದು ಕಾಣುವ ಬುದ್ಧಿ ಹುಟ್ಟೀತು. ಆಗ ಅವನು ಅನೇಕರನ್ನು 'ಪಾಸ್' ಮಾಡಬಹುದು, ಅಲ್ಲದೆ, ಜನರ ದೌರ್ಬಲ್ಯಗಳಿಗಾಗಿ ಅವರನ್ನು ತಿರಸ್ಕರಿಸುವ ಬದಲು ಅವರ ಸುಯತ್ನಶೀಲತೆಗಾಗಿ ಸಂತೋಷಪಟ್ಟು ಅವರ ದೌರ್ಬಲ್ಯವನ್ನು ಸಮದೃಷ್ಟಿಯಿಂದ ನೋಡುವ ಪ್ರವೃತ್ತಿಯುಂಟಾಗಬಹುದು.

ಶುದ್ಧ ವಿವೇಕ ದೃಷ್ಟಿಯಿಂದ ನೋಡಿದರೆ ಅತಿ ದೋಷ ಮತ್ತು ಅತಿ ತೋಷ— ಎಂದರೆ ಬೇಗನೆ ಅಸಂತುಷ್ಟರಾಗುವ ಮತ್ತು ಬೇಗನೆ ಸಂತುಷ್ಟರಾಗುವ ಪ್ರವೃತ್ತಿಗಳೆರಡೂ ತಪ್ಪೇ ಸರಿ. ಆದರೂ ಅತಿ ದೋಷದೃಕ್ಕಿಂತ ಅತಿ ತೋಷ ಸ್ವಭಾವವೇ ಲೇಸೆನ್ನಬಹುದು. ಏಕೆಂದರೆ ಅತಿ ತೋಷ ಸ್ವಭಾವಿ ತನ್ನ ಸತ್ಕಾರ್ಯ ತೃಣ ಜಗತ್ತಿನ ಹೊಲಸುಗಳನ್ನು ತಪ್ಪತ್ತೆ ಸಳೆಯುವ ಬದಲು ಒಳಿತನ್ನೇ ಆರಿಸಿಕೊಳ್ಳುತ್ತಿರುತ್ತಾನೆ. ಗೊಬ್ಬರದ ರಾಶಿಯನ್ನು ಕೆದರುವ ಕೋಳಿ ಅದರಲ್ಲಿರುವ ಹುಳುಹುಪ್ಪಡಿಗಳನ್ನು ಆರಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತದೆ. ಆದರೆ ಮದವೇರಿದ ಗೂಳಿ ಗೊಬ್ಬರವನ್ನು ಸಿಕ್ಕಾಬಟ್ಟೆ ಕೆದರಿ ಚೆಲ್ಲಿ ತನ್ನ ತಲೆ ಕೋಡು, ಕಾಲುಗಳನ್ನೆಲ್ಲ ಹೊಲಸು ಮಾಡಿಕೊಳ್ಳುತ್ತದೆ. ಹೊಲಸನ್ನು ತೊಳೆಯುವವನು ಅದರಲ್ಲಿ ಬೆಲೆ ಬಾಳುವ ಒಡವೆಗಳನ್ನು ಕಂಡುಹಿಡಿಯುತ್ತಾನೆ. ಆದರೆ ಅವನನ್ನು ದೊಡ್ಡಹ ಜೀವನು ಎಷ್ಟು ಮಣ ಹೊಲಸನ್ನು ಸದಾ ಒಗೆಯಲಾಯಿತೆಂಬ ಲೆಕ್ಕವನ್ನೇ ಇಡುತ್ತಾನೆ.

ಈ ವಿಷಯದಲ್ಲಿ ನನಗೆಂಥದ ಪ್ಪನ್ನೇ ಹೇಳಬೇಕಾದರೆ, ಬಾರಿ ಕೆಲವರ ದೃಷ್ಟಿಯಲ್ಲಿ ಆಕ್ಷೇಪಾರ್ಹವೂ ಗಾಂಧೀದ್ರೋಹಾತ್ಮಕವೂ ಆಗಬಹುದಾದ ರೀತಿಯಲ್ಲಿ ನಾನು ನಡೆದದ್ದುಂಟು. ನಡೆದದ್ದುಂಟೆನ್ನಲು ಸಿದ್ಧನಾಗಿದ್ದೇನೆ. ಗಾಂಧೀಜಿಯ ಕಿರಿಯದ್ದಾಗಲೂ ಅವರ ಪೂರ್ಣ ಅನುಯಾಯಿಯೆನಿಸುವ ಸೌಭಾಗ್ಯ ನನಗೆ ದೊರಕಲಿಲ್ಲ. ಅನೇಕ ವಿಷಯಗಳಲ್ಲಿ ನನ್ನ ವಿಚಾರಗಳು ತಡವಿಲ್ಲದೆ ಒಪ್ಪಿಗೆಯಾಗುತ್ತಿದ್ದುವು; ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಾನು ಯಾವಾಗಲೂ ಹೆಣಗುತ್ತಲೂ ಇದ್ದೆ. ಆದರೆ ಕೆಲವು ವಿಷಯಗಳಲ್ಲಿ ನಾನು ಅವರನ್ನು ವಿರೋಧಿಸಿದ್ದು ಅಥವಾ ಬಹಳ ತಡಮಾಡಿದ್ದು ಮತ್ತು ಆ ವರೆಗೆ ತಟಸ್ಥನಾಗಿದ್ದುದುಂಟು. ಇನ್ನು ಕೆಲ ವಿಷಯಗಳಲ್ಲಿ ನನ್ನ ವರೆಗೂ ನಾನು 'ಅಜ್ಞಾತಶತ್ರು' ಅಂಗಿರೆ ಮನವರಿಕೆಯಾಗದೆ ಅಕಟವಾಗಿಯೇ ಉಳಿದಿದೆ. ಸ್ವತಃ ಗಾಂಧೀಜಿಗೆ ನನ್ನ ಈ ಸ್ಥಿತಿ ಚೆನ್ನಾಗಿ ಗೊತ್ತಿತ್ತು. ಅವರು ನನ್ನನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿದ್ದರು. ಈ ಕಾರಣದಿಂದಲೇ ನಾನು 'ಹರಿಜನ' ಪತ್ರಿಕೆಗಳ ಹೊಣೆಯನ್ನು ವಹಿಸಿದಾಗ, ಎಷ್ಟೋ ವಿಚಾರಗಳನ್ನು ನಾನು ಗಾಂಧೀಜಿಯಿಂದ ಪಡೆದಿದ್ದೇನೆ; ಕೆಲವನ್ನು ಇತರರಿಂದ ಪಡೆದಿದ್ದೇನೆ; ಬೇರೆ ಕೆಲವು ಸ್ವತಃ ನನ್ನಲ್ಲೇ ಉದ್ಭವಿಸಿದ್ದು ಇದೆಯೆಂಬ ಮಾತುಗಳನ್ನು ನಾನು ಬರೆದುಕೊಂಡಿದ್ದೆ. ಈ ಎಲ್ಲ ವಿಚಾರಗಳೂ ನನ್ನ ಜೀವನದಲ್ಲಿ ಎರಕಗೊಂಡುಬಿಟ್ಟಿವೆ. ಆದುದರಿಂದ ನಾನು ಯಾವುದಾದರೊಂದು ವಿಷಯವನ್ನು ಮಂಡಿಸುವಾಗ ಅದರ ಸಮರ್ಥನೆಗಾಗಿ ಪ್ರತಿಯೊಂದು ಸಂದರ್ಭದಲ್ಲಿಯೂ ಗಾಂಧೀಜಿಯ ಮಾತನ್ನೇ ಪ್ರಮಾಣತ್ವೇನ ಉದಾಹರಿಸಲು ಸಮರ್ಥನಾಗಲಿಕ್ಕಿಲ್ಲ. ಅವನ್ನು ಗಾಂಧೀ ವಚನದ ಒರೆಗಲ್ಲಮೇಲಲ್ಲ, ಸತ್ಯ ಮತ್ತು ಅಹಿಂಸೆಗಳ ಒರೆಗಲ್ಲ ಮೇಲೆಯೆ ಒರೆದು ನೋಡತಕ್ಕದ್ದು.

ಅರ್ಧಶತಕದಷ್ಟು ಕಾಲದ ಸಾರ್ವಜನಿಕ ಸೇವೆಯಲ್ಲಿ ಗಾಂಧೀಜಿಯ ಜೀವನ ವಿಕಾಸಗೊಂಡಿತ್ತು. ಬಲ್ಲರೆ ಅಂಶಗಳಲ್ಲಿ ಅವರ ಅಭಿಪ್ರಾಯಗಳು ಮೇಲಿಂದ ಮೇಲೆ ಬದಲಾದವು. ವಿಕಾಸಪರವಾದ ಜೀವನದಲ್ಲಿ ಇಂಥ ಅಭಿಪ್ರಾಯ ಪರಿವರ್ತನ ಅನಿವಾರ್ಯವಾಗಿದೆ. ಆದುದರಿಂದ ವಿವರಗಳ ಮೇಲೆ ಅವರ ವಚನಗಳನ್ನು ಪ್ರಮಾಣವೆಂದು ಪರಿಗ್ರಹಿಸಲು ಸಾಧ್ಯವಿಲ್ಲ. ಆಚಾರ ವಿಚಾರಗಳ ಮೂಲ ತಳಹದಿಯೇ ಮುಖ್ಯ ಅರ್ಥಾತ್ ಸತ್ಯ, ಅಹಿಂಸೆ, ಸರ್ವ ಕ್ಷೇತ್ರಗಳಲ್ಲಿಯೂ ಸಂಯಮ ಮತ್ತು ನೈತಿಕ ಮತ್ತು ಆರ್ಥಿಕ ಹಿತಗಳಲ್ಲಿ ಸಂಘರ್ಷ ತೋರಿ ಬಂದಲ್ಲಿ ನೈತಿಕಹಿತವನ್ನೇ ಸ್ವೀಕರಿಸುವುದು, ಇವೀಗ ಮೂಲಭೂತ ವಿಷಯಗಳು.

### ಈಗಿನ ಫ್ಯಾಷನ್.

ಗಾಂಧೀಜಿಗೆ ದ್ರೋಹಬಗೆಯುವ ಆರೋಪವನ್ನು ಹೊರಿಸುವುದೀಗ ಒಂದು ಫ್ಯಾಷನ್ನೇ ಆಗಿಬಿಟ್ಟಿದೆ. ಅದಕ್ಕೊಂದು ಕಾರಣವೂ ಇದೆ. ನಮ್ಮ ಅನೇಕ ಬಂಧುಗಳು 'ಗಾಂಧಿ,' 'ಸರ್ವೋದಯ,' 'ಸತ್ಯ ಮತ್ತು ಅಹಿಂಸೆ' ಮೊದಲಾದ ಶಬ್ದಗಳನ್ನು ಸಿಕ್ಕಾಬಟ್ಟೆ ಉಪಯೋಗಿಸುವ ಒಂದು ಚಾಳಿಯನ್ನೇ ಕಲಿತುಕೊಂಡಿದ್ದಾರೆ. ಆ ಶಬ್ದಗಳಿಗೆ ಏನೂ ಅರ್ಥವೇ ಇಲ್ಲ, ಅವು ಬರಿ 'ಪಾದಪೂರಕ' ಶಬ್ದಗಳಂತಾಗಿವೆ. ತನ್ನ ಪ್ರತಿಯೊಂದು ಭಾಷಣದಲ್ಲಿಯೂ 'ಇದೇ ನಮ್ಮ ಪಿತನ ಉಪದೇಶ' ಅಥವಾ 'ಅಷ್ಟೆ ಕಡೆಗ ಜಗತ್ತಿನ ಶ್ರೇಹಿತ ಗಾಂಧೀಜಿ ಹೇಳಿದ ಮಾರ್ಗವನ್ನನುಸರಿಸುವುದರಿಂದಲೇ ಆಗಬಲ್ಲದು' ಎಂದು ಹೇಳದಿದ್ದರೆ ತನ್ನ ಭಾಷಣದ ತಳಕಟ್ಟೇ ಕಲಗೊಳ್ಳದು. ಅದರಿಂದ ಜನರಿಗೆ ಏಕ ನಂಬಿಕೆಯಾಗದು ಎಂದು ಪ್ರತಿಯೊಬ್ಬ ಭಾಷಣಕಾರ, ಮಂತ್ರಿಯೂ ಭಾವಿಸಿದಂತಿದೆ.

ಅಡಿಗಡಿಗೆ ರಾಷ್ಟ್ರಪಿತನ ಹೆಸರಿನ ಆಧಾರವನ್ನು ಉಪಯೋಗಿಸುವುದರ ಬದಲು ನಾವು ನಮ್ಮ ಹೃದಯದಲ್ಲಿನ ಪ್ರೇರಣೆಯ ಧರ್ಮಜ್ಞಾನ ಆಧಾರವನ್ನೇ ಉಪಯೋಗಿಸಿಕೊಂಡರೆ ಎಷ್ಟೋ ಒಳ್ಳೆಯದಿತ್ತು. ಏಕೆಂದರೆ ಗಾಂಧೀಜಿ ಮಾತೆಲ್ಲ ಮಾಡಲಿ. ಅಲ್ಲವೂ ಅವರ ಹೃದಯದ ಸತ್ಯ ಅಹಿಂಸೆಯಿಂದಲೇ ಉದ್ಭೂತವಾಗುತ್ತಿತ್ತು. ಆ ಹಾಸ್ತ್ರ ನಮ್ಮ ಮಧ್ಯದಲ್ಲಿ ಇಂದು ಉಳಿದಿಲ್ಲವಾದರೂ ಅವರ ದಾರಿ ತೋರಿದ ಆ ಜ್ಯೋತಿ ಇಂದಿಗೂ ಇದ್ದೇ ಇದೆ, ಮತ್ತು ನಾವು ಅದರ ಬೆಳಕಿನಲ್ಲಿ ನಡೆಯಲಿಚ್ಛಿಸಿದರೆ ಅದು ಇಂದಿಗೂ ನಮಗೆ ದಾರಿ ತೋರಿಯೇ ತೋರುವುದು.

'ಹರಿಜನ'


THE WARDEN INSURANCE CO., Ltd.
Head Office: Bombay.
LIFE, FIRE, ACCIDENT, MOTOR & W. C. INSURANCES.
*Managing Director:* – S. H. THAKER.
Business in force Rs. 5,00,00,000
Assets ,, 1,00,00,000
Income ,, 35,00,000
A' LOCAL MANAGERS OF
THE LOND & GUARANTEE & ACCIDENT CO., Ltd.
(Incorporated in England)
Assets Exceed Rs. 10,00,00,000
a Subsidiary Company of
THE PHOENIX ASSURANCE CO. Ltd.
(One of the Largest Assurance Companies in the World)
Assets Exceed Rs. 45,00,00,000
Transact FIRE INSURANCE
Enquiries for representation solicited.
*Apply to:*
Chief Agency Office or A. S. Aiyappa,
*Virajpet (Coorg)* *Branch Secretary,*
*Gandhinagar,*
*BANGALORE CITY*

## ದಿ ಟ್ರಾಪಿಕಲ್

### ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮ್ಯಾನೇಜಿಂಗ್ ಡೈರೆಕ್ಟರ್:— ಲಾಹಿರ್ ಲಾಲ್.

ಮುಖ್ಯ ಕಚೇರಿ:— ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರ್

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜ್ಮಲ್ ಖಾನ್. ಡಾ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತರಿಸಿದ ಯೋಜನೆಯಲ್ಲಿ ಆಕರ್ಷಕ ಕಮೀಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಸರ್ | ಆರ್ಗನೈಸರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯು. ಅಚ್ಚಣ್ಣ, | ಎಂ. ಎ. ಬೆಳ್ಯಪ್ಪ, |
| ಏಜೆನ್ಸಿ ಸೂಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಚಿಕ್ಕಪೇಟೆ, ಬೆಂಗಳೂರು. |



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಉಪಕರಣಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳು ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಿಗುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರತಕ್ಕದ್ದು)

ಎಂ. ಎಸ್. ಸೋಮಯ್ಯ,

52–27 ಗೌರವ ಕಾರ್ಯದರ್ಶಿ.



## ಮತ್ತೊಂದು ಉಬ್ಬು ವರ್ಷ.

1948ನೇ ವರ್ಷದ ವಾರ್ಷಿಕ ವರದಿ ಪ್ರಾಮುಖ್ಯಾಂಶಗಳು.

| | |
|---|---|
| ಹೊಸ ಉದ್ಯಮ ರೂ. .... .... | 6,13,00.000 ಗಳಿಗೆ. |
| ಚಾಲ್ತಿಯಲ್ಲಿಂದ ಒಟ್ಟು ಉದ್ಯಮ ರೂ. | 27,73,00,000 „ |
| ಒಟ್ಟು ನಿಧಿ. ರೂ. .... .... | 8,30,00,000 „ |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 „ |

1,28,000 ಕ್ಕೆ ಮೀರಿದ ಜೀವಿತ ಪಾಲಿಸಿದಾರರು.

ಶಕ್ತಿ. ಸೇವೆ. ಭದ್ರತೆ.

## ಎಂಪೈರ್ ಆಫ್ ಇಂಡಿಯಾ

### ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ—1897

ರೋಶನ್ ಲಾಲ್, ಜನರಲ್ ಮ್ಯಾನೇಜರ್.

| | |
|---|---|
| ಪ್ರಧಾನ ಕಛೇರಿ: | ಬ್ರಾಂಚ್ ಕಛೇರಿ. |
| ಎಂಪೈರ್ ಹೌಸ್, ಹಾರ್ನ್‌ಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು. |



## CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd.,

*H. O: BOMBAY* ] [*Established 1919.*

*For particulars write to:*

| | | |
|---|---|---|
| Sri B. A. Poovaiah | or | The Branch Manager. |
| *Organiser* | | *22 B. Mahatma Gandhi Road.* |
| *Pollibetta, Coorg.* | | *Bangalore 1* |

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಸೂರೆನ್ಸ್ ಕಂಪೆನಿಗೆ ಬರೆಯಿರಿ.



ಭದ್ರತೆ! 17 ವರ್ಷಗಳ ಅನುಭವವಿದೆ ಅನುಕೂಲತೆ!!

## ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ,

### ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | „ | 3½% |
| 12 | „ | 3¾% |
| 24 | „ | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ

ಶಾಖೆಗಳು:— ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜೆಂಟ್,

ಮಡಿಕೇರಿ ಶಾಖೆ, ಮಡಿಕೇರಿ.



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79.000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ ಮತ್ತು ಮರ್ಕೆಂಟೈಲ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಡೈರೆಕ್ಟರ್ ಬೋರ್ಡ್. |



ಶ್ರೀ ಟಿ. ಎಸ್. ಗೋವಿಂದರಾಜು. "ಕೊಡಗು" ಏಜಂಟರು, ವೀರಾಜಪೇಟೆ.



Edited, Printed and Published by P. I. Belliappa at 'Kodagu Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೨೮ | ಕಾರ್ತೀಕ ೩-೩-೧೯೫೦ನೆಯ ಶುಕ್ರವಾರ | ಸಂಚಿಕೆ ೪೦ |
|---|---|---|

## ವಾರ್ತೆಗಳು.

'ಆಸಾಮುವನ್ನು ಗುಪ್ತ ಪಿತೂರಿಯಿಂದ ಪಾಕಿಸ್ಥಾನಕ್ಕೆ ಸೇರಿಸುವೆವು' ಎಂದು ಕೆಂಪು ಮಸಿಯಿಂದ ಬರೆದ ಭಿತ್ತಿ ಪತ್ರಗಳನ್ನು ಟಿನ್‌ಸುಕಿಯಾ ರೇಲ್ವೆ ಸಂಸ್ಥೆಯ ಗೋಡೆಗಳಿಗೂ ಗಾಡಿಗಳ ಮೇಲೆಯೂ ಅಂಟಿಸಲಾಗಿತ್ತು. ಈ ಎಲ್ಲ ಭಿತ್ತಿ ಪತ್ರಗಳನ್ನು ಸ್ಥಳೀಯ ಪೋಲೀಸರು ವಶಪಡಿಸಿಕೊಂಡಿದ್ದು ಸಂಬಂಧಿಸಿ ವಿಚಾರಣೆ ನಡೆಸಿರುತ್ತಾರೆ.

ಮದ್ರಾಸು ಪ್ರಾಂತದ ಪುತ್ತೂರ ಗ್ರಾಮದ ಬಳಿ ಅಡವಿಯಲ್ಲಿ ೩೫ ವರ್ಷದ ಓರ್ವನನ್ನು ಯಾರೋ ಕೊಲೆ ಮಾಡಿದ್ದರು. ಅವನ ನಾಯಿ ಅಲ್ಲಿಯೇ ಆತನನ್ನು ಕಾಯುತ್ತಲಿತ್ತು. ವಿಷಯ ತಿಳಿದ ಬಳಿಕ ಪೋಲೀಸರು ಬಂದಾಗ ಆ ನಾಯಿ ತನ್ನ ಯಜಮಾನನ ಹಣ, ಅವನು ಬೀಸಿ ಒಗೆಯಿಸಿಕೊಳ್ಳುತ್ತಿದ್ದ ಅಂಗಡಿ ಮೊದಲಾದವನ್ನು ತೋರಿಸಿತಂತೆ.

ಮದ್ರಾಸು ಮಂತ್ರಿಗಳ ವಿರುದ್ಧ ಬಂದ ಆರೋಪಗಳ ವಿಚಾರಣೆಗಾಗಿ ನಿಯಮಿತವಾಗಿದ್ದ ತ್ರಿಮೂರ್ತಿ ಸಮಿತಿ (ರಾಜೇಂದ್ರ ಬಾಬು, ನೆಹರು, ಪಟೇಲ) ಯು ತನ್ನ ನಿರ್ಣಯವನ್ನು ಕೊಟ್ಟಿದ್ದು ಅದರಲ್ಲಿಯು ಆರೋಪಗಳನ್ನು ಕಿತ್ತುಹಾಕಿ ಈ ವಿಷಯವನ್ನು ಇಲ್ಲಿಗೇ ಬಿಟ್ಟುಬಿಡಬೇಕು ಎಂದು ಹೇಳಿರುತ್ತದೆ.

ಅಮೇರಿಕೆಯ ಮಾಸ್ಸಾಚುಸೆಟ್ಸಿನ ಆಸ್ಪತ್ರೆಯೊಂದರಲ್ಲಿ ಅಚೇತನನಾದವನೊಬ್ಬನು ಕಳೆದ ಮೂರು ವರ್ಷಗಳಿಂದ ಪ್ರಜ್ಞಾಹೀನನಾಗಿಯೇ ಬದುಕಿದ್ದಾನೆ. ಮೋಟಾರ್ ಅಪಘಾತದಿಂದ ತಲೆಯೊಡೆದದ್ದೇ ಇದಕ್ಕೆ ಕಾರಣ. ಪ್ರತಿ ದಿನವೂ ಅವನಿಗೆ ಕ್ಷೌರಮಾಡಿಸಿ ಉಣಿಸಿ, ಬಟ್ಟೆ ತೊಡಿಸುತ್ತಾರಂತೆ!

ಭಾರತದ ಟಂಕಸಾಲೆಗಳಲ್ಲೀಗ ಮುದ್ರಾಂಕಿತ ಪ್ರಮಾಣದಲ್ಲಿ ತಯಾರಾಗುತ್ತಿರುವ ಹೊಸ ನಾಣ್ಯಗಳಲ್ಲಿ ಅರಸನ ಮತ್ತು ಕಿರೀಟದ ಚಿತ್ರಗಳ ಬದಲಿಗೆ ಅಶೋಕ ಸಿಂಹಗಳ ಚಿತ್ರಗಳು ಬರುವವು. ರೂಪಾಯಿ ನಾಣ್ಯದ ಮೇಲೆ ಧಾನ್ಯದ ಗುರುತು, ಎರಡಾಣೆ ಒಂದಾಣೆ ನಾಣ್ಯಗಳ ಮೇಲೆ ಹೋರಿಯ ಮತ್ತು ಕಾಲಾಣೆ ನಾಣ್ಯದ ಮೇಲೆ ಕುದುರೆಯ ಚಿತ್ರಗಳೂ ಇರುವುವು. ಇವು ೧೯೫೦ ಆಗಸ್ಟಿನಲ್ಲಿ ಚಲಾವಣೆಗೆ ಬರುವವು.

ಹಣಕಾಸಿನ ಕಾರಣದಿಂದ ಪಶ್ಚಿಮ ಕರಾವಳಿಯ ಮಲ್ಪೆ ಬಂದರನ್ನು (ದ. ಕನ್ನಡ) ದೊಡ್ಡ ಬಂದರಾಗಿ ಬೆಳೆಸುವ ವಿಚಾರವನ್ನು ಬಿಟ್ಟು ಬಿಡಲಾಗಿದೆ. ಮುಂದೂ ಅನುಕೂಲ ಕಾಲಬಂದಾಗ ಆರ್ಥಿಕ ಹಾಗು ಇಂಜಿನಿಯರಿಂಗ್ ದೃಷ್ಟಿಯಿಂದ ಈ ಬಂದರಿನ ಪ್ರಶ್ನೆಯನ್ನು ಪುನಃ ಪರಿಶೀಲಿಸಬೇಕಾಗಿದೆಯೆಂದೂ ಸಾರಿಗೆ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ತಿಳಿಸಿದರು.

ಭಾರತದೇಶದ ಜನಸಂಖ್ಯೆ ಅಲ್ಲದೆ ಇಲ್ಲಿಗೂ ಕೆಲ ಕೃತಕ ಚಿಂತನಗಳನ್ನು ಕಳಿಸುವ ಮತ್ತು ತರಿಸುವ ಸಹಕಾರ ವ್ಯವಸಾಯ ಇಲ್ಲಿಯ ಭಾರತ ಸದ್ಧರ್ಮ ಪ್ರತ್ಯಕ್ಷ ಶಿಕ್ಷಣವನ್ನು ರೈತರಿಗೆ ಕಲಿಸುವ ವಿಚಾರ ಕೇಂದ್ರ ಸರಕಾರಕ್ಕೆ ಇದೆಯೆಂದು ತಿಳಿಯುತ್ತದೆ.

೧ ಪ್ರಸಿದ್ಧ ಆಂಗ್ಲ ಸಾಹಿತಿಯಾಗಿದ್ದ ಡಾ|| ಸ್ಯಾಮುಯೆಲ್ ಜಾನ್‌ಸನ್, ಬೀದಿಯಲ್ಲಿ ಹೊರಟರೆ ಪ್ರತಿಯೊಂದು ಲಾಂದ್ರ ಕಂಭವನ್ನೂ ಮುಟ್ಟಿಕೊಂಡು ಹೋಗುತ್ತಿದ್ದನಂತೆ. ಮಧ್ಯೆ, ಅಕಸ್ಮಾತ್ ಯಾವುದಾದರೂ ಕಂಭವನ್ನು ಬಿಟ್ಟರೆ ಹಿಂತಿರುಗಿ ಮನೆಗೆ ಹೋಗಿ ಪುನಃ ಹೊರಡುತ್ತಿದ್ದನಂತೆ!

"ಭಾರತೀಯ ರೈತನ ಜೀವನಮಟ್ಟ ಏರಿದುದಿಲ್ಲ; ಅವನ ಆರ್ಥಿಕ ಪರಿಸ್ಥಿತಿಯೂ ಸುಧಾರಣೆ ಹೊಂದಿಲ್ಲ" ಎಂಬುದಾಗಿ ಭಾರತ ಸರಕಾರದ ಮಜೂರ ಮಂತ್ರಿಮಂಡಲವು ಕಳೆದ ಏಪ್ರಿಲ್ ತಿಂಗಳಲ್ಲಿ ರಚಿಸಿದ ಕೃಷಿ ಮಜೂರ ವಿಚಾರಣಾ ಸಮಿತಿಯು ಅಭಿಪ್ರಾಯ ಪಡುತ್ತದೆ.

"ಸಂಯುಕ್ತ ಅಮೇರಿಕವು ಸೋವಿಯಟ್ ರಷ್ಯದೊಡನೆ ಶಾಂತಿಯುತವಾದ ಒಡಂಬಡಿಕೆಯ ಮಾತುಕತೆಗಳಿಗೆ ಸದಾ ಸಿದ್ಧವಿದೆ, ಆದರೆ ಸಂಬಂಧಿಸಿದ ಮುಖಂಡರ ಭೇಟಿ ನಡೆಯುವುದಿದ್ದರೆ ಮಾರ್ಷಲ್ ಸ್ಟೆಲಿನರು ವಾಷಿಂಗ್‌ಟನ್ ನಗರಕ್ಕೆ ಬರಬೇಕು" ಎಂಬ ದಾಗಿ ಅಮೇರಿಕದ ಅಧ್ಯಕ್ಷ ಟ್ರೂಮನರು ವ್ಯಕ್ತಪಡಿಸಿರುವರು.

ಭಾರತ ವಿಮಾನ ದಳದ ನೂತನ ನಾಯಕರಾದ ಏರ್ ಮಾರ್ಷಲ್ ರೊನಾಲ್ಡ್ ಐವಲೋಚ್ ಚ್ಯಾಪ್‌ಮೆನ್‌ರವರು ತಾ. ೨೨ರಲ್ಲಿ ಏರ್ ಮಾರ್ಷಲ್ ಸರ್ ಥಾಮಸ್ ಎಲ್ಮ್‌ಹಸ್ಟ್‌ರಿಂದ ಅಧಿಕಾರ ವಹಿಸಿಕೊಂಡರು. ಭಾರತವು ಸ್ವಾತಂತ್ರ್ಯವಾದಂದಿನಿಂದ ಭಾರತದ ವಿಮಾನ ದಳಕ್ಕೆ ಏರ್ ಮಾರ್ಷಲ್ ಸರ್ ಥಾಮಸ್ ಎಲ್ಮ್‌ಹಸ್ಟ್‌ರವರು ನಾಯಕರಾಗಿದ್ದು ಅವರೀಗ ಬ್ರಿಟನಿಗೆ ಹಿಂದಿರುಗಲಿರುವರು. ಅವರಿಗೆ ಭಾರತ ಸೇನಾಪಡೆಯ ಸುಮಾರು ೨೦೦ ಅಧಿಕಾರಿಗಳು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಹಿಂದೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಜೂನ್ ತಿಂಗಳ ಅಂತ್ಯದಲ್ಲಿ ಇಲ್ಲವೆ ಜುಲೈ ತಿಂಗಳ ಆರಂಭದಲ್ಲಿ ನಾಸಿಕದಲ್ಲಿ ಜರಗುವದೆಂದು ನಿರ್ಣಯವಾಗಿದೆ.

ಭಾರತ ಸರಕಾರವು ನಾಲ್ಕು ಲಕ್ಷ ರೂಪಾಯಿ ವೆಚ್ಚಮಾಡಿ ಒಂದು ತಂಬಾಕು ಸಂಶೋಧನಾ ಸ್ಟೇಷನನ್ನು ಬರುವ ಏಪ್ರಿಲ್ ತಿಂಗಳಲ್ಲಿ ದಕ್ಷಿಣ ಭಾಗದಲ್ಲಿ ತೆರೆಯಲಿರುವುದು.

ಡಿಲ್ಲಿ, ಪಾಟ್ನಾ, ತ್ರಿವೇಂದ್ರಂ ಈ ಮೂರು ಕಡೆ ಕ್ಷಯ ರೋಗ ಪ್ರತಿಬಂಧಕ ಕೇಂದ್ರಗಳನ್ನು ತೆರೆಯಲು ಭಾರತ ಸರಕಾರ ನಿರ್ಧರಿಸಿದೆ.

ಪಾಕೀಸ್ಥಾನದ ಕಾಬೂಲ್ ರಾಯಭಾರಿ ಮಿ|| ಐ. ಐ. ಚುಂದ್ರಿಗರ್ ಅವರನ್ನು ವಾಯುವ್ಯ ಗಡಿನಾಡು ಪ್ರಾಂತ್ಯದ ಗವರ್ನರನ್ನಾಗಿ ನೇಮಿಸಲಾಯಿತು.

ಕಳೆದವಾರ ಒಂದು ದಿನ ರಾತ್ರಿ ಮಿ| ವಿನ್‌ಸ್ಟನ್ ಚರ್ಚಿಲ್ಲರು ನಿಧನ ಹೊಂದಿದರೆಂಬ ವರ್ತಮಾನ ಲಂಡನ್ ನಗರದಲ್ಲಿ ಹರಡಿತ್ತು. ಹೊಸ ಚುನಾವಣೆಯ ಪ್ರಚಾರ ಗದ್ದಲದಲ್ಲಿ ಇದೂ ಒಂದು.

ಸುತ್ತಲೂ ಪಾಕೀಸ್ಥಾನ ಪ್ರದೇಶದಿಂದ ಆವರಿಸಲ್ಪಟ್ಟು ಭಾರತದಿಂದ ಪೃಥಕ್ಕರಿಸಲ್ಪಟ್ಟಿರುವ ತ್ರಿಪುರಾ ಸಂಸ್ಥಾನವನ್ನು ರೈಲ್ವೇ ಸಂಬಂಧದ ಮೂಲಕ ಭಾರತಕ್ಕೆ ಕೂಡಿಸುವ ಯೋಜನೆಯಾಗಿದೆ.

[illegible] ೫೦೦,೦೦೦ ಮಣ ಸಾಲ ಕೊಡಲು ಪಾಕಿಸ್ಥಾನವು ಸಮ್ಮತಿಸಿದೆ ಎಂದು ಕರಾಚಿಯಿಂದ ಪ್ರಕಟಣೆ ಹೊರಬಿದ್ದಿದೆ.

ಬ್ರಿಟನ್ನಿನ ನೂತನ ಚುನಾವಣೆಯಲ್ಲಿ ರಚನೆಯಾಗಲಿರುವ ಪಾರ್ಲಿಮೆಂಟಿನಲ್ಲಿ ಅವಶ್ಯ ಹೆಚ್ಚಿಗೆ ಸ್ತ್ರೀ ಸದಸ್ಯರಿರಬೇಕೆಂಬ ಸಲಹೆಗೆ ಜಾರ್ಜ್ ಬರ್ನಾರ್ಡ್ ಷಾರವರು ಬೆಂಬಲ ಕೊಟ್ಟಿರುತ್ತಾರೆ.

ಜಪಾನ್ ಮತ್ತು ಪಾಕೀಸ್ತಾನಗಳೊಳಗೆ ವ್ಯಾಪಾರ ವಹಿವಾಟುಗಳನ್ನು ಯೋಚಿಸುವ ಯೋಜನೆಗಳನ್ನು ಹುಡುಕಲು ಬೇಕಾಗಿ ಎಂಟು ಮಂದಿ ಆರ್ಥಿಕ ತಜ್ಞರಿಂದೊಡಗೂಡಿದ ಶಿಷ್ಟಮಂಡಲವೊಂದು ಜಪಾನಿನಿಂದ ಇತ್ತೀಚೆಗೆ ಕರಾಚಿಗೆ ಬಂದಿರುವುದು.

ಜನತಾ ಅಧಿಕಾರಕ್ಕೆ ಸರಕಾರ ಬಂದಾಗಿನಿಂದ ಆಹಾರದ ಅಭಾವವನ್ನು ದೂರ ಬೇರೆ ಬೇರೆ ಉಪಾಯಗಳನ್ನು ಹುಡುಕುತ್ತಾ ಇರುವ ಸಮಯ ವಾರಕ್ಕೊಂದು ಉಪವಾಸದ ಉಪಾಯವನ್ನು ಆದಕ್ಕೆ ಸೂಚಿಸಿ ಅದನ್ನು ಕೈಕೊಳ್ಳಲು ಸಾರ್ವಜನಿಕರಿಗೆ ವಿನಂತಿಸಲಾಗಿದೆ. ಯೋಜನೆಯ ಪರವಾಗಿ ಸರಕಾರ ಮಾತ್ರವಲ್ಲ ನಮ್ಮ ಜನತಾ ಮುಂದಾಳುಗಳೂ ಸಹಾ ಬೆಂಬಲ ನೀಡಿದ್ದಾರೆ. ಈ ಮೂಲಕ ಆಹಾರವನ್ನು ಉಳಿಸುವುದು ಮಾತ್ರವಲ್ಲದೆ ಜನತೆಯ ಆರೋಗ್ಯಕ್ಕೂ ತುಂಬಾ ಪ್ರಯೋಜನ ಉಂಟಾಗಲಿದೆ.

ಜಗತ್ತಿನಲ್ಲಿ ಅತ್ಯಂತ ಕಡಿಮೆ ಕಾಲ ಬಾಳುವ ಜನರೆಂದರೆ ಇಂಡೋನೇಶ್ಯನರು. ಅವರಲ್ಲಿ ಸರಾಸರಿ ಬಾಳಿನ ಮಿತಿ ತಲಾ ಬಿನ ಬಾಳುವ ಒಂದು ವಯಸ್ಸಿಗಿಂತಲೂ ಕಡಿಮೆ. ಈ ವಿಷಯವು ಇತ್ತೀಚೆಗೆ ಲಕ್ನೋದಲ್ಲಿ ಜರುಗಿದ ಎಫ್. ಎ. ಓ. ಪರಿಷತ್ತಿನಲ್ಲಿ ವ್ಯಕ್ತವಾಯಿತು.

ಜಾಲಿಯನ್‌ವಾಲಾ ಬಾಗ್ ಸ್ಮಾರಕ ದಿನವು ಬರುವ ಏಪ್ರಿಲ್ ೧೩ರಲ್ಲಿ ಅಮೃತಸರದಲ್ಲಿ ಆಚರಿಸಲ್ಪಡುವುದು. ಜಾಲಿಯನ್‌ವಾಲಾ ಬಾಗ್‌ನಲ್ಲಿ ೧೯೧೯ರಲ್ಲಿ ಜೀವಾರ್ಪಣೆ ಮಾಡಿದ ಹುತಾತ್ಮರ ಸ್ಮರಣೆಯನ್ನು ಚಿರಸ್ಥಾಯಿಗೊಳಿಸುವ ಉಪಾಯಗಳನ್ನು ಕಲ್ಪಿಸುವುದಕ್ಕಾಗಿ ಆ ಸಮಯದಲ್ಲೇ ಒಂದು ಸಭೆ ಜರಗಲಿದೆ.

---

### ವ್ಯವಸಾಯಗಾರರಿಗೆ ಅರುಹಿಕೆ.

ಮಳೆಗಾಲದಲ್ಲಿ ಹಲವು ಕಡೆ ಗ್ರಾಮದಿಂದ ಗ್ರಾಮಕ್ಕೆ ವಹಿವಾಟುಗಳಿಗೆ ಸರಿಯಾದ ಹಾದಿ ಕೊರತೆ ಕಲ್ಪಿಸುವುದರಿಂದ ಕೃತಕಲ್ಲಿ ಬೆಳೆ ಜನರು ಹೆಚ್ಚು ಆಹಾರ ಬೆಳೆಸುವ ಯೋಜನೆ ಪ್ರಕಾರ ದೊರೆಯುವ ರಿಯಾಯಿತಿಗಳನ್ನು ಪಡೆದುಕೊಳ್ಳಲಿಲ್ಲವೆಂಬುದು ಸರಕಾರದ ಅವಗಾಹನೆಗೆ ಬಂದಿದೆ. ಆ ಕೃಷಿಕರಿಗೆ ಸಹಾಯ ಮಾಡುವ ಉದ್ದೇಶದಿಂದ ಸ್ವಲ್ಪ ಗೊಬ್ಬರವನ್ನು ಆಯಾ ಹೋಬಳಿ ಸಂಗ್ರಹಿಸಿ ಇಡಲ್ಪಟ್ಟಿದೆ. ದೇವನೂರು, ಸಿಟ್ಟೂರು, ಕಾನೂರ್, ಮದೆನಾಡು, ನಾಪೋಕ್ಲು, ಶಕ್ಕಬೆ, ನಾರಾಣೆ ಮತ್ತು ಸೋಮವಾರಪೇಟೆ ಅವುಗಳ ಸುತ್ತಮುತ್ತಲಿನ ಗ್ರಾಮದ ಜನರು ಅವರವರಿಗೆ ಬೇಕಾದ ಗೊಬ್ಬರಗಳಿಗೆ ತಾವು ಸಾಗುವಳಿ ಮಾಡುವ ಭೂಮಿಯ ವಿಸ್ತೀರ್ಣವನ್ನು ತೋರಿಸಿ ಅರ್ಜಿಗಳನ್ನು ಮಾರ್ಚ್ ೧೫ರ ಒಳಗೆ ವ್ಯವಸಾಯ ಇಲಾಖಾ ಆಫೀಸಿಗೆ ಕಳುಹಿಸಬೇಕು. ಹಾಗೆಯೇ ಶನಿವಾರಸಂತೆ ಹೋಬಳಿಯಲ್ಲಿ ಬಿತ್ತನೆ ಬೀಜಗಳಿಗೆ ಬೇಕಾದ ಗೊಬ್ಬರಕ್ಕೂ ಅರ್ಜಿಯನ್ನು ಕಳುಹಿಸಬಹುದಂತೆ. ವ್ಯವಸಾಯ ಇಲಾಖಾ ಮುಖ್ಯಾಧಿಕಾರಿಗಳು ಕರ್ಷಕರಿಗೂ ಈ ಮೂಲಕ ತಿಳಿಯಪಡಿಸುತ್ತಾರೆ.

---

### ಬೇಕಾಗಿವೆ.
### ಜಂಗಲ್ ಕಾಕ್ ನೆಕ್ಸ್

ದೊಡ್ಡ ನೆಕ್ಕುಗಳು—ಸೈಜು ಸುಮಾರು 6 ಇಂಚು . 4 ಇಂಚಿನವುಗಳಿಗೆ ಪ್ರತಿಯೊಂದರ ರೂ ೧/-ರಂತೆ ಕ್ರಯ ಕೊಡಲಾಗುವುದು. ಚಿಕ್ಕವಕ್ಕೆ ದಾಮು ೨-೦-೦ ಮೇರೆ ಬೆಲೆ ಕೊಡಲಾಗುವುದು. ಅವುಗಳನ್ನು ರಿಜಿಸ್ಟರ್ಡ್ ಪಾರ್ಸಲುಗಳ ಮೂಲಕ ಈ ಕೆಳಗಿನ ಅಡ್ರೆಸ್ಸಿಗೆ ಕಳುಹಿಸಿರಿ. ಅವುಗಳ ಬೆಲೆಯು ಮನಿಯಾರ್ಡರು ಮೂಲಕ ಮಾರು ಟಪಾಲಿನಲ್ಲಿ ನಿಮಗೆ ದೊರೆಯುವದು.

**D. H. Thangam & Co.,**
*82. Thambu Chetty Street,*
4-1 *G. T. Madras.*

# ವ್ಯಾಯಾಮದ ಅವಶ್ಯಕತೆ.

(ಶ್ರೀ ಎಂ. ಜಿ. ಪುಟ್ಟಣ್ಣ)

ದೇಹಾರೋಗ್ಯಕ್ಕೆ ವ್ಯಾಯಾಮವು ಅತ್ಯಾವಶ್ಯಕವಾಗಿರುತ್ತೆ. ಇದರ ಅವಶ್ಯಕತೆಯನ್ನು ವರ್ಣಿಸಲು ಅಸಾಧ್ಯ. ಇದು ದೇಶದ ಉನ್ನತಿಗೆ ಮೂಲಸ್ವರೂಪವೆಂದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಬ್ಬರಿಗೂ ವ್ಯಾಯಾಮವು ಬೇಕೇ ಬೇಕಾಗಿರತಕ್ಕದ್ದು. ನಮ್ಮ ದೇಶದ ದೇಹಾರೋಗ್ಯವು ಈ ದಿನ ನೋಡಿದರೆ ಪಾಶ್ಚಿಮಾತ್ಯ ದೇಶಗಳಿಗಿಂತ ಬಹಳ ಮಟ್ಟಿಗೆ ಕೆಳಗಿನ ಅಂತಸ್ತಿನಲ್ಲಿದೆ. ವ್ಯಾಯಾಮದ ಗುಟ್ಟನ್ನು ಅರಿತೇ ಪಾಶ್ಚಿಮಾತ್ಯರು ಕೆಲವು ವರ್ಷಗಳಿಂದೀಚೆಗೆ ಹೆಚ್ಚು ಗಮನವನ್ನು ಕೊಟ್ಟು ತಮ್ಮ ದೇಶಗಳಲ್ಲಿ ವ್ಯಾಯಾಮ ಶಾಲೆಗಳನ್ನು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸಿ ಪ್ರತಿಯೊಬ್ಬರೂ ವ್ಯಾಯಾಮವನ್ನು ಮಾಡಲು ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ. ಆದ್ದರಿಂದಲೇ ಅವರ ದೇಶಗಳಲ್ಲಿ ಹೆಚ್ಚಿನ ಆರೋಗ್ಯ ಸಂಪತ್ತು ಕಾಣಬರುತ್ತಿದೆ. ನಮ್ಮಲ್ಲಿ ಇನ್ನೂ ಆ ರೀತಿ ಗಮನಗಳು ಹುಟ್ಟಿಲ್ಲ. ಎಲ್ಲೋ ಅಲ್ಪ ಸ್ವಲ್ಪ ಮಟ್ಟಿಗೆ ಜನರ ವ್ಯಾಯಾಮದ ಅವಶ್ಯಕತೆ ತಿಳಿದು ಆಚರಿಸುತ್ತಿದ್ದಾರೆ. ಆದರೆ ಇದು ಸಾಲದು. ದೇಶವು ಬಲವಾಗಿರಬೇಕಾದರೆ ಜನಾಂಗವು ಸಹ ಬಲವಾಗಿರಬೇಕು. ಬಲಹೀನ ಜನಾಂಗವು ಬಲವುಳ್ಳ ದೇಶವನ್ನು ಹೇಗೆ ತಾನೇ ಕಟ್ಟೀತು? ಅಲ್ಲದೆ ತನ್ನ ಜೀವನೋಪಾಯವನ್ನು ಒದಗಿಸಿಕೊಳ್ಳಲಿಕ್ಕೆ ದೇಹಾರೋಗ್ಯವೂ ದೃಢಕಾಯತ್ವವೂ ಅತ್ಯಾವಶ್ಯಕವಾಗಿರುತ್ತವೆ. ಇದರಿಂದ ದೇಶದ ಆರ್ಥಿಕ, ಸಾಮಾಜಿಕ ಸಂಪತ್ತು ಕೂಡ ಹೆಚ್ಚುತ್ತೆ. ಉದಾಹರಣೆ ಎಂದರೆ—ಒಬ್ಬ ಕೆಲಸಗಾರನು ಕೆಲಸಕ್ಕೆ ಹೋಗದಿದ್ದರೆ ತನಗೆ ನಷ್ಟವಲ್ಲದೆ ತನ್ನ ಮಾಲೀಕನಿಗೂ, ಕೊನೆಯದಾಗಿ ದೇಶದ ಆರ್ಥಿಕ ಸ್ಥಿತಿಗೂ ನಷ್ಟವಾಗುತ್ತೆ. ಆದುದರಿಂದ ಪ್ರತಿಯೊಬ್ಬರೂ ಆರೋಗ್ಯಶಾಲಿಗಳಾಗಿಯೂ ದೃಢಕಾಯರಾಗಿಯೂ ಆಗಬೇಕು. ಇದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಇವನ್ನು ಪಡೆಯಬೇಕಾದರೆ ವ್ಯಾಯಾಮವೇ ಮಾರ್ಗ.

ಕೆಲವರು ಹೀಗೆ ಭಾವಿಸಬಹುದು—ವ್ಯಾಯಾಮದಿಂದ ದೇಹದಲ್ಲಿ ಆಲಸ್ಯ, ಬುದ್ಧಿಹೀನತೆಗಳು ಉಂಟಾಗಬಹುದೆಂಬ ಶಂಕೆ ಇರಬಹುದು—ಆದರೆ ಇದು ತಪ್ಪು ತಿಳುವಳಿಕೆ. ವ್ಯಾಯಾಮವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ದೇಹದ ಅಂಗಾಂಗಗಳು ಬಲಗೊಳ್ಳುವುದಲ್ಲದೆ, ಮಾನಸಿಕ ಧಾರಣಾಶಕ್ತಿ ಹೆಚ್ಚಾಗಿ ಹೆಚ್ಚುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಹೇಳಿದರೆ ಜೀವನದಲ್ಲಿ ಒಳ್ಳೆ ಹರುಷವನ್ನು ಹುಟ್ಟಿಸಿ, ಸುಖ ಶಾಂತಿ ಸಮಾಧಾನಗಳನ್ನು ಕೊಟ್ಟು ಜೀವನವನ್ನು ಸಂತೋಷದಾಯಕವಾಗಿ ಮಾಡುತ್ತದೆ. ಅಲ್ಲದೆ ನಮ್ಮ ಮುಂದಿನ ಜನಾಂಗದವರೂ ಕೂಡ ಬಲಶಾಲಿಗಳಾಗಿಯೂ, ದೃಢಕಾಯರಾಗಿಯೂ ಹೆಚ್ಚು ಸೇವೆಯನ್ನು ಮಾಡಲು ಶಕ್ತರಾಗುವರು.

ದೇಹವು ಒಂದು ದೇವಸ್ಥಾನ. ಆತ್ಮಸ್ವರೂಪನೆಂದಿರುವ ದೇವರು ವಾಸ ಮಾಡುವ ನೆಲೆ. ಇದನ್ನು ಎಷ್ಟು ಶುಭ್ರವಾಗಿಯೂ ಅಚ್ಚುಕಟ್ಟಾಗಿಯೂ ಇಡಬೇಕೆಂಬುದನ್ನು ತಾವೇ ಊಹಿಸಿ? ಸರಿಯಾದ ರೀತಿಯಿಂದ ಚಿಕ್ಕ ವಯಸ್ಸಿನಿಂದಲೂ ವ್ಯಾಯಾಮ ಮಾಡಿಕೊಂಡು ಬಂದರೆ ಯಾವ ರೋಗಕ್ಕೂ ಆಸ್ಪದ ಕೊಡುವುದಿಲ್ಲ. ಇದು ಸಿದ್ಧಾಂತದ ಮಾತು. ವ್ಯಾಯಾಮಕ್ಕೆ ದಿನವೆಲ್ಲಾ ದುಡಿಯಬೇಕಾಗಿಲ್ಲ. ಕೆಲವು ನಿಮಿಷಗಳನ್ನು ಮಾತ್ರ ಇದಕ್ಕಾಗಿ ಇಟ್ಟರೆ ಸಾಕು. ಇದಕ್ಕೇನೂ ಹಣ ಕಾಸು ಖರ್ಚಿಲ್ಲ. ಒಳ್ಳೆ ಗಾಳಿ ಸೇವಿಸಲು ಸೂರ್ಯರಶ್ಮಿ ಹೊಂದಲು ಮುಕ್ತ ಸ್ಥಳಗಳಿಗೆ ವ್ಯಾಯಾಮ ಕೊಡಲು ಏನು ಬರಬೇಕು ಖರ್ಚಾಗುವುದು? ಆದರೆ ಇದಕ್ಕೆ ಮುಖ್ಯವಾಗಿ ಉದ್ದಿಶ್ಯ ಮತ್ತು ಮನಸ್ಸು ಬೇಕಾಗುತ್ತೆ.

ವ್ಯಾಯಾಮವನ್ನು ಯಾರು ಬೇಕಾದರೂ ಮಾಡಬಹುದು. ೫—೬ನೇ ವಯಸ್ಸಿನ ಬಾಲಕನಿಂದ ೭೦ ವಯಸ್ಸಿನ ವೃದ್ಧರೂ ಮಾಡಬಹುದು. ಅವರವರ ವಯಸ್ಸಿಗೆ ತಕ್ಕಂತೆ ವ್ಯಾಯಾಮವನ್ನು ತೆಗೆದುಕೊಳ್ಳಬೇಕು. ವ್ಯಾಯಾಮವನ್ನು ಮಾಡುವುದರಲ್ಲಿ ಒಂದು ವಿಧ ನಿಯಮ.

ಪ್ರತಿಯೊಬ್ಬರೂ ವ್ಯಾಯಾಮವನ್ನು ಮಾಡಬೇಕೆಂಬ ಸಂಕಲ್ಪವನ್ನು ಇಂದೇ ಮಾಡಿ. ಇದಕ್ಕೇನೂ ವ್ಯಾಯಾಮ ಶಾಲೆಗೆ ಹೋಗಿಯೇ ಮಾಡಬೇಕಾಗಿಲ್ಲ. ಸ್ವಂತ ಮನೆಯಲ್ಲಿ ಅಥವಾ ತೋಟ ಪ್ರದೇಶಗಳಲ್ಲಿಯೇ ಮಾಡಬಹುದು. ಆದರೆ ವ್ಯಾಯಾಮ ಮಾಡುವ ಸ್ಥಳಗಳಲ್ಲಿ ಸ್ವಲ್ಪ ಗಾಳಿ ಬೆಳಕಿಗೆ ಅವಕಾಶವಿರಬೇಕು.

ಇವರ ಪ್ರಯೋಜನಗಳನ್ನು ಅನುಭವಿಸಿಯೇ ತಿಳಿಯಬೇಕಾಗಿದೆ. ಇದರ ಸತ್ಯಗಳನ್ನು ಆಗಲೇ ತಿಳಿಯಲು ಸಾಧ್ಯ. ದೇವರು ತನ್ನ ವಾಸಕ್ಕಾಗಿ ನಿರ್ಮಾಣಿಸಿದ ಈ ಪವಿತ್ರವಾದ ದೇಹವನ್ನು ಭವ್ಯವಾಗಿಯೂ, ಶುಚಿಯಾಗಿಯೂ ಇಟ್ಟು ದೇವರ ಆತ್ಮಕ್ಕನುಸಾರವಾಗಿ ನಡೆದುಕೊಂಡು ಈಶ್ವರನ ಸಾಧನೆ ಮಾಡಬೇಕೆಂಬ ಭಾವನೆಯಿಂದ ಈ ಲೇಖನವನ್ನು ಬರೆದಿರುತ್ತೇನೆ.

(ವ್ಯಾಯಾಮ ಆರೋಗ್ಯ ಪತ್ರಿಕೆಯಿಂದ)

## ಕಮ್ಯೂನಿಸ್ಟ್ ಉಪಟಳ

ಭಾರತದ ಪ್ರಜಾ ಪ್ರಭುತ್ವ ಸಂಸ್ಥೆಗಳನ್ನು ಕಮ್ಯೂನಿಸ್ಟ್ ಉಪಟಳದಿಂದ ರಕ್ಷಿಸಲಾಗುವುದೆಂದು ಸರ್ದಾರ್ ಪಟೇಲರು ಮಂಡಿಸಿದ್ದ ಪ್ರಿವೆಂಟಿವ್ ಡಿಟೆನ್ಷನ್ ಮಸೂದೆಯನ್ನು ಪಾರ್ಲಿಮೆಂಟು ತಾ. ೨೫ ರಲ್ಲಿ ಅಂಗೀಕರಿಸಿತು.

'ಈ ಮಸೂದೆಯು, ಈ ಬಗ್ಗೆ ಕೈಗೊಂಡಿರುವ ಕ್ರಮಗಳಿಂದ ಸಂದೇಹವುಂಟಾಗಿರುವುದರಿಂದ ಸ್ವಾತಂತ್ರ್ಯವು...' ಎಂದು ಸರ್ದಾರ್ ಪಟೇಲರು ಹೇಳಿದರು.

ಈ ಮಸೂದೆಯನ್ನು ತಯಾರಿಸಲು ತಾವು ಎರಡು ದಿನಗಳ ಕಾಲ ನಿದ್ರೆಗೆಟ್ಟಿದ್ದುದಾಗಿ ಸರ್ದಾರ್ ಪಟೇಲರು ಹೇಳಿದರು. 'ನಮ್ಮ ಲಕ್ಷಾಂತರ ಜನರ ತ್ಯಾಗ ಮತ್ತು ಕಷ್ಟಗಳ ಫಲವಾಗಿ ಕಾರ್ಯರೂಪಕ್ಕೆ ಬಂದ ಈ ರಾಷ್ಟ್ರದ ಉಳಿವಿಗೂ ಭದ್ರತೆಗೂ ನೆಮ್ಮದಿಗೂ ಭಾರತದ ಕಮ್ಯೂನಿಸ್ಟರು ಸವಾಲು ಹಾಕಿದ್ದಾರೆ. ಭಾರತದ ಸ್ವಾತಂತ್ರ್ಯವನ್ನು ನಾವು ಉಳಿಸದೆ ಹೋದರೆ ಅವಶ್ಯವಾಗಿ ಮಡಿದವರ ಮತ್ತು ದುಡಿದವರ ಸ್ಮೃತಿಗೆ ದ್ರೋಹ ಬಗೆದಂತಾಗುವುದು. ವಿದೇಶೀ ರಾಷ್ಟ್ರಗಳಿಗೆ ಮತ್ತು ಸಂಸ್ಥೆಗಳಿಗೆ ತಮ್ಮನ್ನು ಮಾರಿಕೊಂಡಿರುವ ಈ ಕಡಿತ ಕಾರ್ಯ ಜನರ ಸಲುವಾಗಿ ಈ ಸ್ವಾತಂತ್ರ್ಯವು ಕರಗಿ ಹೋಗುವುದೆಂದರೆ ಆತ್ಮವಂಚನೆ" ಎಂದು ಸರ್ದಾರರು ಹೇಳಿದರು.

ಈ ಮಸೂದೆಯು ಬಗ್ಗೆ ಐದು ಗಂಟೆಗಳ ಕಾಲ ತೀವ್ರ ಚರ್ಚೆ ನಡೆದ ನಂತರ ಮಸೂದೆಯು ಅಂಗೀಕೃತವಾಯಿತು. ಚರ್ಚೆಯ ಸಮಯದಲ್ಲಿ ಮಸೂದೆಯು ಬೆಂಬಲಿಗರಲ್ಲಿ ಒಬ್ಬರು ಮಸೂದೆಯನ್ನು ಟೀಕಿಸಿದ ಒಬ್ಬರನ್ನು 'ನಿಮಗೆ ನಾಚಿಕೆಯಾಗುವುದಿಲ್ಲವೆ?' ಎಂದು ಸಂಬೋಧಿಸಿದರು. ಆ ರೀತಿ ಹೇಳುವುದು 'ಅನ್ ಪಾರ್ಲಿಮೆಂಟರಿ' ಎಂದು ಅಧ್ಯಕ್ಷರು ನುಡಿದರು.

'ಈ ಮಸೂದೆಯು ರಾಜ್ಯಾಂಗದ ಆಶಯಕ್ಕೆ ವ್ಯತಿರಿಕ್ತವಾಗಿದೆ. ೧೯೫೧ರ ಏಪ್ರಿಲ್ ೧ನೇ ತಾರೀಖು ಈ ಕಾನೂನಿನ ನಿಬಂಧನೆಗಳೂ ಮುಕ್ತಾಯವಾಗುವುವು' ಎಂದು ಅಟಾರ್ನಿ ಜನರಲ್ ಶ್ರೀ ಎಂ. ಸಿ. ಸೆಟಲ್ವಾಡರು ಹೇಳಿದರು.

## ಬಸ್ ಕೆಲಸಗಾರರ ಮುಷ್ಕರ.

ಮೋಟಾರು ಕೆಲಸಗಾರರ ಸಂಬಳ ಮತ್ತು ಭತ್ತೆಬತ್ಯೆಯು ವಿಚಾರವಾಗಿ ಕೆಲಕಾಲದ ಹಿಂದೆ ಮದ್ರಾಸು ಸರಕಾರವು ಮಧ್ಯಸ್ಥಿಕೆ ವಹಿಸಿ ಒಂದು ಏರ್ಪಾಡನ್ನು ಕೊಟ್ಟಿತು. ಈ ಏರ್ಪಾಡಿನ ಪ್ರಕಾರ ಸಿ. ಪಿ. ಸಿ ಕಂಪೆನಿಯವರು ತಮ್ಮ ಕೆಲಸಗಾರರಿಗೆ ರೂ ೬೦೦೦೦, ಮನೋರ ಕೆನರಾ ಕಾರ್ಪೊರೇಷನವರು ರೂ ೫೦,೦೦೦ವನ್ನು, ಸಿ. ಪಿ. ಸಿ ಯ ಇತರ ಅಧೀನ ಸಂಸ್ಥೆಗಳು ಸುಮಾರು ೫೦೦೦೦ವನ್ನೂ ಕೊಡಬೇಕಿತ್ತು. ಈ ಸಂಸ್ಥೆಗಳು ಈ ಹಣವನ್ನು ಕೊಡಲು ತಯಾರಿರಲಿಲ್ಲ. ಆದರೆ ಈ ಹಿಂದಿನ ನಷ್ಟವನ್ನು ಭರ್ತಿಮಾಡಲು ಟಿಕೇಟು ದರಗಳನ್ನು ಹೆಚ್ಚಿಸಲು ಅನುಮತಿ ಕೊಡಬೇಕೆಂದೂ ಸರಕಾರವನ್ನು ಕೇಳಿದ್ದರು. ಸರಕಾರವು ಆ ಕೋರಿಕೆಯನ್ನು ನಿರಾಕರಿಸಿದೆ. ಈ ಕಾರಣದಿಂದ ಕೆಲಸಗಾರರ ಕೋರಿಕೆಯು ಇಲ್ಲಿಕಲ್ಪಿತಕ್ಕಿಂದ ಕೆಲಸಗಾರರು ಈ ತಿಂಗಳು ೨೩—೨—೫೦ ರಿಂದ ಮುಷ್ಕರ ಹೂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ಬಸ್ ವ್ಯವಹಾರ ಪೂರ್ಣವಾಗಿ ಟಪಾಲು ವ್ಯವಹಾರ ಕೂಡ ನಿಂತು ಹೋಗಿದೆ. ಪೋಲೀಸ್ ವಾಹನಗಳಲ್ಲಿ ಟಪಾಲನ್ನು ಕಳುಹಿಸಲಾಗುತ್ತಿದೆ.

ಅಲ್ಲಲ್ಲಿ ಮುಷ್ಕರಗಾರರು ಹಿಂಸಾಪ್ರವೃತ್ತಿಗಿಳಿದಿರುವ ವಾರ್ತೆಗಳೂ ಇವೆ. ಕೆಲವು ಸ್ವಾಮಿಭಕ್ತ ಕೆಲಸಗಾರರು ತಮ್ಮ ಯಜಮಾನರ ಆಜ್ಞೆಯಂತೆ ಕೆಲಸಕ್ಕೆ ಹೋಗಲು ಯತ್ನಿಸಿದ್ದು ಬಸ್ ಓಡಿಸಲು ತಯಾರಿದ್ದರೆಂದೂ ಆರ್ಭಾವವರನ್ನು ಹಿಡಿದು ಬಸ್ಸಿನಿಂದ ಕೆಳಗಿಳಿಸಿ ಬಸ್ಸಿಗೂ ಅನಾಹುತ ಮಾಡಿದ ನಿದರ್ಶನವಿದೆಯೆಂದೂ ವಾರ್ತೆಗಳಿವೆ. ಮುಷ್ಕರ ಪ್ರಾರಂಭವಾದ ಪ್ರಥಮ ದಿನವೇ ೧೧೦ ಜನರ ದಸ್ತಗಿರಿಯಾಗಿದೆ. ಮಂಗಳೂರಿನಲ್ಲಿ ೧೪೪ನೇ ಸೆಕ್ಷನ್ ಜಾರಿ ಮಾಡಲಾಗಿದೆ. ಆದರೂ ಈ ನಿಯಮವನ್ನು ಉಲ್ಲಂಘಿಸಿ ಸಭೆ ಮೆರವಣಿಗೆ ನಡೆದಿವೆ. ಪೋಲೀಸರು ಶಾಂತರಾಗಿದ್ದಾರೆಂದು ತಿಳಿದುಬಂದಿದೆ.

ಮುಷ್ಕರ ನಡೆಯುತ್ತಿದೆ. ಮುಷ್ಕರದಿಂದಾಗಿ ಮಂಗಳೂರು ಮತ್ತು ಕೊಡಗಿನ ಸಂಬಂಧವು ತಪ್ಪಿದಂತಾಗಿದೆ. ಇಲ್ಲಿಂದ ಯಾವ ಲೈನುಗಳೂ ಹೋಗುತ್ತಿಲ್ಲ. ಕೇರಳದಿಂದ ಸಂಪಾಜೆಯ ವರೆಗೆ ಹೋದ ಬಸ್ಸುಗಳು ಹಿಂದಕ್ಕೆ ಬಂದಿವೆ. ಈ ರೀತಿ ಸಂಬಂಧವು ತಪ್ಪಿ ವಿಪರೀತ ಪರಿಸ್ಥಿತಿಯುಂಟಾಗಿದೆ. ಕೆಲಸಗಾರರ ನ್ಯಾಯ್ಯಬದ್ಧ ಕೋರಿಕೆಯನ್ನು ಪಾಲಿಸಲು ಸರಕಾರವೂ, ಮಾಲೀಕರೂ ಸಹಕರಿಸಬೇಕು.

## ಲೇಬರ್ ಪಕ್ಷ ಜಯಶಾಲಿ

ಬ್ರಿಟನಿನ ಚುನಾವಣೆಯು ತಾ. ೨೩ ರಲ್ಲಿ ನಡೆದು ಫಲಿತಾಂಶವು ಹೊರಬಿದ್ದಿದೆ. ಪಾರ್ಲಿಮೆಂಟಿನ ಒಟ್ಟು ೬೨೫ ಸ್ಥಾನಗಳ ಪೈಕಿ ೩೧೫ ಸ್ಥಳಗಳು ಈ ವರೆಗೆ ಬ್ರಿಟನಿನ ಆಡಳಿತ ನಡೆಸುತ್ತಿದ್ದ ಲೇಬರ್ ಪಕ್ಷದವರಿಗೂ, ೨೯೮ ಸ್ಥಳಗಳ ಚರ್ಚಿಲ್ಲರನ್ನು ಕೂಡಿದ ಕನ್ಸರ್ವೇಟಿವ್ ಪಕ್ಷದವರಿಗೂ, ೯ ಸ್ಥಳಗಳು ಲಿಬರಲ್ ಪಕ್ಷಕ್ಕೂ, ಎರಡು ಐರಿಷ್ ರಾಷ್ಟ್ರೀಯ ಪಂಗಡಗಳಿಗೂ, ದೊರೆತಿವೆ. ಉಳಿದ ಒಂದು ಸ್ಥಳಕ್ಕೆ ಮಾರ್ಚ್ ೯ರಲ್ಲಿ ಚುನಾವಣೆಯಾಗುವುದು. ಇದರಿಂದ ಲೇಬರ್ ಪಕ್ಷವು ಅಲ್ಪ ಬಹುಮತವನ್ನು ಪಡೆದು ತನ್ನ ಸ್ಥಾನವನ್ನು ಉಳಿಸಿಕೊಂಡಿತು.

ಈ ಚುನಾವಣೆಯಲ್ಲಿ ಎಂದೂ ಇಲ್ಲದಷ್ಟು ಜನರು ಭಾಗವಹಿಸಿದ್ದರು. ಲೇಬರ್ ಪಕ್ಷವು ೧,೩೨,೬೯,೪೦೦ ಜನರ ಮತವನ್ನೂ, ಕನ್ಸರ್ವೇಟಿವ್ ಪಕ್ಷವು ೧,೨೪,೦೬,೮೭೧ ಜನರ ಮತವನ್ನೂ, ಲಿಬರಲ್ ಪಕ್ಷವು ೨೬,೧೧,೭೬೩ ಜನರ ಮತವನ್ನೂ, ಕಮ್ಯೂನಿಸ್ಟ್ ಪಕ್ಷವು ೯೧,೭೬೪ ಜನರ ಮತವನ್ನೂ ಪಡೆದುವು. ಕಮ್ಯೂನಿಸ್ಟ್ ಪಕ್ಷಕ್ಕೆ ಇಷ್ಟು ಮತಗಳು ದೊರೆತರೂ ಒಂದೇ ಒಂದು ಸ್ಥಳವಲ್ಲಿ ಅವರ ಪ್ರತಿನಿಧಿಗಳು ಆರಿಸಿ ಬಂದಿರುವುದಿಲ್ಲ. ಹಿಂದಿನ ಶಾಸನ ಸಭೆಯಲ್ಲಿ ಅವರಿಗಿದ್ದ ಸ್ಥಾನವನ್ನೂ ಕಳೆಕೊಂಡರು.

೧೯೪೫ ರಲ್ಲಾದ ಚುನಾವಣೆಯಲ್ಲಿ ಲೇಬರ್ ಪಕ್ಷಕ್ಕೆ ೩೯೩ ಸ್ಥಾನಗಳೂ, ಕನ್ಸರ್ವೇಟಿವ್ ಪಕ್ಷಕ್ಕೆ ೧೮೯ ಸ್ಥಾನಗಳೂ, ಲಿಬರಲ್ ಪಕ್ಷಕ್ಕೆ ೧೨ ಸ್ಥಳಗಳೂ ದೊರೆತು ಉಳಿದ ಪಕ್ಷಗಳಿಗೆ ೩೬ ಸ್ಥಾನ

(೭ ನೇ ಪುಟ ನೋಡಿ)

ಶ್ರೀ ಮುದಲಿಯಾರರ

# ಎರಡು ವರ್ಷ ಆಡಳಿತೆಯ "ಬ್ಯಾಲೆನ್ಸ್ ಶೀಟ್"

ಅಡಿಟರ್:- "ಶಂಭು"

### ಅಂದಿನ ಸ್ಥಿತಿ

೧೯೪೮ನೇ ಮಾರ್ಚಿ ತಿಂಗಳ ೨೦ ನೇ ತಾರೀಕಿನಲ್ಲಿ ಇಂದಿನ ಚೀಫ್ ಕಮಿಷನರಾಗಿರುವ ಶ್ರೀ ಸಿ. ಟಿ. ಮೊದಲಿಯಾರವರು ಜವಾಬ್ದಾರಿಯನ್ನು ವಹಿಸಿಕೊಂಡರು. ಈ ಎರಡು ವರ್ಷಗಳ ವರೆಗೆ ಕೊಡಗಿನ ಆಡಳಿತವನ್ನು ನಡೆಸಿದ ಇವರ ಕಾರ್ಯಕಲಾಪಗಳನ್ನು ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸುವದೇ ಈ ಲೇಖನದ ಉದ್ದೇಶ. ಇವರು ಇನ್ನು ಕೆಲವೇ ದಿನಗಳಲ್ಲಿ ನಿವೃತ್ತರಾಗುವ ಕಾರಣ ನಿಷ್ಪಕ್ಷ ದೃಷ್ಟಿಯಿಂದ ಇವರು ಕೊಡಗಿಗೆ ಮಾಡಿದ ಉಪಕಾರ ಹಾಗೂ ಅಪಕಾರಂಗಳನ್ನು ನೋಡುವದು ಅವಶ್ಯ.

ನಿವೃತ್ತ ಅಧಿಕಾರಿಯಾದ ಇವರು ಕೊಡಗಿಗೆ ಬಂದು ಜವಾಬ್ದಾರಿ ವಹಿಸುವ ಮೊದಲು ದೇಶದ ಆಡಳಿತ ಕ್ಷೇತ್ರದಲ್ಲಾಗಲೀ, ರಾಜಕೀಯ ರಂಗದಲ್ಲಾಗಲೀ ಹೆಚ್ಚು ಗಡಿಬಿಡಿ ಇರಲಿಲ್ಲ. ಸರಕಾರದ ದೃಷ್ಟಿಯು ಯಾವದೇ ಪ್ರಗತಿಶೀಲ ಯೋಜನೆಯಲ್ಲಿರದೆ ದಿನನಿತ್ಯದ ಆಡಳಿತವನ್ನು ಸರಾಗವಾಗಿ ನಡೆಸುವುದರಲ್ಲಿಯೇ ಇತ್ತು. ಆದ್ದರಿಂದ ಯಾವುದೇ ಅಶಾಂತಿ ಇಲ್ಲದೆ ಆಡಳಿತ ನಡೆದಿತ್ತು. ಕೊಡಗಿನ ವ್ಯಕ್ತಿನೊಬ್ಬನೇ ಆಡಳಿತ ಜವಾಬ್ದಾರಿಯನ್ನು ಹೊತ್ತಿದ್ದ ಕಾರಣ ಟೀಕೆಗಳೂ ಕಡಿಮೆ ಇದ್ದವು!

ಅಂದರೆ ದೇಶದ ಮುಂದೆ ಸಮಸ್ಯೆಗಳಿರಲಿಲ್ಲವೆಂದಲ್ಲ. ಕಾಲೇಜಿನ ಪ್ರಶ್ನೆ ದೇಶದ ಮುಂದಿದ್ದು ಅದಕ್ಕಾಗಿ ಚಳವಳಿ ನಡೆದಿತ್ತು. ಪಾನನಿರೋಧವನ್ನು ಜಾರಿಗೆ ತರಬೇಕೆಂಬ ಕೂಗು ಸ್ಪಷ್ಟವಾಗಿತ್ತು. ದೇಶದ ರಾಜಕೀಯ ಪಕ್ಷವು ಇಬ್ಭಾಗವಾಗಿ ಇಂದಿನಂತೇ ಅಂದೂ ರಾಜಕೀಯ ಕೊಲಸಿನ ಪಕ್ಷಿ ಗರಿಗೆದರಿ ನರ್ತನಕ್ಕಾರಂಭಿಸಿತ್ತು. ಆದರೆ ಇದಾವುದಕ್ಕೂ ಹೆಚ್ಚಿನ ಗಮನವಿಡದೆ ಸರಕಾರವು ತಣ್ಣೀರ ಅಭ್ಯಂಜನ ಮಾಡಿದವರಂತೆ ಶಾಂತವಾಗಿ ಒಂದು ರೀತಿಯ ಅನಾಸಕ್ತಿಯಿಂದಿದ್ದ ಪ್ರಯುಕ್ತ ದೇಶದ ವಾತಾವರಣದಲ್ಲಿ ಅತೃಪ್ತಿ ಇದ್ದರೂ ಉದ್ವೇಗವಿರಲಿಲ್ಲ.

### ಉತ್ಸಾಹದ ಉದ್ಗಾರ

ಇವರು ಚೀಫ್ ಕಮಿಷನರ ಜವಾಬ್ದಾರಿ ವಹಿಸಿದ ಕೆಲವೇ ದಿನಗಳಲ್ಲಿ ಮಡಿಕೇರಿ ಹೈಸ್ಕೂಲಿನಲ್ಲಿ ನಡೆದ ರೆಡ್‌ಕ್ರಾಸ್ ಶಿಶುಪ್ರದರ್ಶನದಲ್ಲಿ ಅಧ್ಯಕ್ಷ ಪೀಠದಿಂದ ತನ್ನ ಗುರಿಯನ್ನು ಈ ಮಾತುಗಳಿಂದ ಮುಂದಿಟ್ಟರು. "ನಾನು ನಿವೃತ್ತ ಉದ್ಯೋಗಿ. ಇಲ್ಲಿ ಬಂದು ದುಡಿಯುವ ಅಗತ್ಯವಿರಲಿಲ್ಲ. ಆದರೆ ಕೊಡಗಿನ ಪ್ರಶ್ನೆಗಳು ನನಗೆ ತಿಳಿದಿವೆ. ಕೊಡಗಿಗೊಂದು ಕಾಲೇಜನ್ನು ಸ್ಥಾಪಿಸಿ, ಪಾನನಿರೋಧವನ್ನು ಜಾರಿಗೆ ತಂದು, ದಳಿತ ವರ್ಗದ ಉದ್ಧಾರಕ್ಕಾಗಿ ಶ್ರಮಿಸಿ ನನ್ನ ಆಡಳಿತವು ಕೊಡಗಿನಲ್ಲಿ ಚಿರಸ್ಮರಣೀಯವಾಗುವಂತೆ ಮಾಡುವೆನು. ನನಗೆ ಯಾರ ಭಯವೂ ಇಲ್ಲ. ನಾನು ಹೆದರುವುದು ಕೇವಲ ಭಗವಂತನಿಗಾಗಿ. ಇಲ್ಲಿಯ ಜನರ ಸೇವೆಯನ್ನು ನನ್ನ ಇಷ್ಟದೈವ ಸುಬ್ರಹ್ಮಣ್ಯನ ಸೇವೆಯೆಂದೇ ನಾನು ಮಾಡುವೆನು. ಸಕಲರ ಸಹಕಾರ ಬೇಕು". ಕೊಡಗಿನ ಹಿತಕ್ಕಾಗಿ ದುಡಿಯುವ ಹಂಬಲ ಇವರಲ್ಲಿ ತುಂಬಾ ಇತ್ತು.

ಇಲ್ಲಿಯ ಅಧಿಕಾರ ವಹಿಸುವ ಮೊದಲು ಇವರು ಡೆಲ್ಲಿ ಯಾತ್ರೆ ಮಾಡಿ ಬಂದಿದ್ದರು. ಬ್ರಿಟಿಷ್ ಆಡಳಿತದಲ್ಲಿ ಗುಲಾಮನಂತೆ ಸೇವೆ ಸಲ್ಲಿಸಿ "ದಿವಾನ್ ಬಹದ್ದೂರ್" ಪಡೆದಿದ್ದರೂ ಸ್ವತಂತ್ರ ಭಾರತದಲ್ಲಿ ಕೊಡಗಿನ ಚೀಫ್ ಕಮಿಷನರಾಗಿ ಡೆಲ್ಲಿಯಲ್ಲಿ ಸರ್ದಾರರ ಉಪದೇಶವಾದ ನಂತರ ಇವರಲ್ಲಿ ಹೊಸ ಹುರುಪು ಉದಯವಾಗಿರಬೇಕು. ಹೇಗೂ ತುಂಬಾ ಉತ್ಸಾಹದಿಂದ, ತನ್ನ ಹಿಂದಿನ ಗುಲಾಮ ಭಾರತದ ಜವಾಬ್ದಾರಿಯೆಂದು ಇದನ್ನು ತಿಳಿಯದೆ ಸ್ವತಂತ್ರ ಭಾರತದ ರಚನಾತ್ಮಕ ಪ್ರವೃತ್ತಿಯೆಂದು ತಿಳಿದು ಇಲ್ಲಿಗೆ ಬಂದು ಕಾರ್ಯೋನ್ಮುಖರಾದರು.

### ಪ್ರಯತ್ನಗಳು

(೧) ಪ್ರಥಮವಾಗಿ ಇವರು ಕೈಗೊಂಡುದು ಕಾಲೇಜಿನ ಪ್ರಶ್ನೆ. ದೇಶದಲ್ಲಿ ಆ ಬಗ್ಗೆ ಎರಡು ಅಭಿಪ್ರಾಯವಿತ್ತು. ಕೊಡಗಿನ ಕಾಲೇಜು ಜನತೆಯ ಅರ್ಥಾತ್ ಸರಕಾರದ ಕಾಲೇಜಾಗಬೇಕೆಂದು ಒಂದು ಪಕ್ಷವೂ, ಮಿಷನರಿಗಳಿಗೆ ಬಿಟ್ಟುಕೊಡಬೇಕೆಂದು ಮತ್ತೊಂದು ಪಕ್ಷವೂ ತೀವ್ರ ಚಳವಳಿ ನಡೆಸಿದ್ದವು. ಈ ಚಳವಳಿದ ಕಾರಣ ಫಿಲೋಮಿನಾ ಮಿಶನರಿಯವರು ಇಲ್ಲಿ ಕಾಲೇಜು ಸ್ಥಾಪಿಸಲು ನಿರಾಕರಿಸಿದರು. ಸರಕಾರದ ಹೆಗಲಿಗೇ ಈ ಜವಾಬ್ದಾರಿ ಬಿತ್ತು. ಈ ಜವಾಬ್ದಾರಿಯನ್ನು ಆಡಳಿತದ ಜವಾಬ್ದಾರಿ ಹೊತ್ತ ಇವರು ಯಶಸ್ವಿಯಾಗಿ ನಿರ್ವಹಿಸಿ ತಮ್ಮ ಪ್ರಥಮ ಇಚ್ಛೆಯಾದ ಕಾಲೇಜಿನ ಯೋಜನೆಯನ್ನು ಸಾರ್ಥಕಗೊಳಿಸಿದರು.

(೨) ಎರಡನೆಯದಾದ ಕೊಡಗಿನಲ್ಲಿ ಪಾನನಿರೋಧವನ್ನು ಜಾರಿಗೆ ತರುವ ವಿಚಾರವನ್ನೂ ಇವರು ಆಸ್ಥೆಯಿಂದ ಕೈಕೊಂಡರು. ಆದರೆ ಕೊಡಗಿನ ಸರಕಾರದ ಬೊಕ್ಕಸಕ್ಕೆ ಸುಮಾರು ಹತ್ತು ಲಕ್ಷ ರೂಪಾಯಿ ಇದರಿಂದ ಪೆಟ್ಟು ಬೀಳುವ ಪ್ರಸಂಗವಿದ್ದ ಕಾರಣ ಸಾವಧಾನದಿಂದ ವರ್ತಿಸಬೇಕಾಯಿತು. ಆದ್ದರಿಂದ ನಿಯಂತ್ರಣವನ್ನು ಜಾರಿಗೆ ತಂದು ಕೂಪನ್ ಪದ್ಧತಿಯನ್ನು ಜಾರಿ ಮಾಡಲಾಯಿತು. ಇದನ್ನು ಸ್ವಾರ್ಥಿಗಳು ಕೆಲವರು ದುರುಪಯೋಗ ಮಾಡಿಕೊಂಡರು. ಕಪ್ಪು ಸಂತೆ, ಲಾಭಬಡಕತನಕ್ಕೆ ಇದು ಎಡೆಯಾಯಿತು. ಇದನ್ನು ತಡೆಯಲು ಏರ್ಪಟ್ಟವರ ಕೆಲಸವೂ ಸಂಶಯಾತೀತವಾಗಿಲ್ಲ! ಇದರಿಂದಾಗಿ ಟೀಕೆಯು ಸರಕಾರದ ಮೇಲೆ ಬಿತ್ತು. ಇದಕ್ಕಾಗಿ ನಿಯಂತ್ರಣದ ಯೋಜನೆಯನ್ನು ಜಾರಿಯಲ್ಲಿ ತಂದ ಚೀಫ್ ಕಮಿಷನರೂ ಟೀಕೆಗೆ ಗುರಿಯಾಗಿದ್ದಾರೆ. ಎಲ್ಲಾ ಅರ್ಧಮಾರ್ಗದ ಕೆಲಸಕ್ಕೆ ಸಿಕ್ಕುವ ಉಡುಗೊರೆಯೇ ಇದಲ್ಲವೇ?

(೩) ಮೂರನೆಯದಾದ ದಳಿತವರ್ಗದವರ ಉದ್ಧಾರದ ಬಗ್ಗೆಯೂ ಇವರು ಮನಸ್ಸಿಟ್ಟು ಪ್ರಯತ್ನಿಸಿದರು. ಇವರು ಹೋದ ಕಡೆಯಲ್ಲೆಲ್ಲಾ ದಳಿತ ವರ್ಗದವರ ಗುಂಪು ನೆರೆದು ತಮ್ಮ ಸಮಸ್ಯೆಗಳನ್ನು ಮುಂದಿಟ್ಟರು. ಚೀಫ್ ಕಮಿಷನರ ಆಫೀಸಿನಲ್ಲಿ ಈ ಅರ್ಜಿಗಳ ಮಳೆಯೇ ಸುರಿಯಿತು. ಸಾರ್ವಜನಿಕ ಸ್ಥಳಗಳ ಹಕ್ಕು ಮತ್ತು ಮಂದಿರ ಪ್ರವೇಶದ ಏರ್ಪಾಡುಗಳನ್ನು ಮಾಡಲಾಯಿತು. ಹರಿಜನರಿಗೆ ಭೂಮಿ ಕೊಟ್ಟು ಉರ್ಜಿತಗೊಳಿಸುವ ಪ್ರಯತ್ನ ನಡೆಯಿತು. ಈ ಪ್ರಗತಿಶೀಲ ಮನೋಭಾವ ಹಲವರಿಗೆ ವಿರೋಧವಾಗಿ ತೋರಿತು. ಇಷ್ಟರಲ್ಲಿ ಚೀಫ್ ಕಮಿಷನರ ಚೇತನ ಉಡುಗುತ್ತಿರುವಂತೆ ತೋರಿತು! ದಕ್ಷಿಣದಲ್ಲಿ ತಿರುಗಿಸಿ ಬಿಟ್ಟ ಚಕ್ರವು ಇಲ್ಲಿ ಸಂಪೂರ್ಣ ಕಾಲ ಸುತ್ತಿ ಮತ್ತೆ ನಿಲ್ಲುವ ಸೂಚನೆಯೇ ಇದು ಎಂದು ಕೆಲವರು ಕೇಳತೊಡಗಿದರು. ಏಕೆಂದರೆ ಹರಿಜನರಿಗೆ ಸಹಾಯದ ಭರವಸೆಯು ಸಾವಿರ ಸಂಖ್ಯೆಯಲ್ಲಿ ಮಾಡಲ್ಪಟ್ಟರೂ ಕೈಗೂಡಿದುದು ಕೆಲವು ಮಾತ್ರ. ಆದ್ದರಿಂದ ಹರಿಜನ ವೃಂದದಲ್ಲಿ ತೃಪ್ತಿಯ ಬದಲು ಅತೃಪ್ತಿಯೇ ಹೆಚ್ಚಾಗಿದೆ.

### ಪಕ್ಷರಾಜಕೀಯದ ಏಟು.

ಮೊದಲು ಅಷ್ಟು ಉತ್ಸಾಹ ಭರಿತವಾಗಿದ್ದ ಇವರ ಚೇತನವು ಕಡಿಮೆಯಾಗುತ್ತಾ ಬರಲು ಕಾರಣವೇನೆಂದು ಶೋಧಿಸಬೇಕಿಲ್ಲ. ಅವರೇ ಹಲವು ಕಡೆಗಳಲ್ಲಿ ಅದನ್ನು ಸ್ಪಷ್ಟಪಡಿಸಿದ್ದಾರೆ. 'ಕೊಡಗಿನ ರಾಜಕೀಯವು ಇಬ್ಭಾಗವಾಗಿ ಎರಡು ಪಕ್ಷಗಳಾಗಿರುವದರಿಂದ ಸರಕಾರವು ಪ್ರಗತಿ ಪಥದಲ್ಲಿ ಮುನ್ನಡೆಯುವದು ಕಷ್ಟವಾಗಿದೆ. ಯಾವುದೇ ಯೋಜನೆ ಇಲ್ಲವೇ ಕಾರ್ಯಕ್ರಮವನ್ನು ಕೈಕೊಂಡರೂ ಅದಕ್ಕೆ ಕೊಡಗಿನ ಭವಿಷ್ಯದ ಬಣ್ಣ ಬಳಿದು ಸರಕಾರವನ್ನು ಪಕ್ಷರಾಜಕೀಯದ ಕೇಂದ್ರಿಗೆಳೆಯುವ ಪ್ರಯತ್ನವಾಗುತ್ತದೆ. ಆದ್ದರಿಂದ ಈ ಎರಡು ರಾಜಕೀಯ ಪಕ್ಷಗಳು ಒಂದಾಗದ ವಿನಹ ಸರಕಾರಕ್ಕೆ ಹೆಚ್ಚಿನದೇನನ್ನೂ ಸಾಧಿಸಲಾಗದು' ಎಂದಿದ್ದಾರೆ.

ಇವರು ಕೈಕೊಂಡ ಕೆಲಸಗಳಿಗೂ ಪಕ್ಷರಾಜಕೀಯದ ರಂಗು ಹಾಕಲ್ಪಟ್ಟಿತು. ಇವರನ್ನು ತೆಗೆದುಹಾಕಬೇಕೆಂದು ಅರ್ಜಿಗಳು ಕೇಂದ್ರಕ್ಕೆ ಮೇಲಿಂದ ಮೇಲೆ ಹೋದವು. ಶ್ರೀ. ಐಯ್ಯಂಗಾರ್‌ರವರು ಮಡಿಕೇರಿಗೆ ಬಂದಿದ್ದಾಗ ಅವರಿಗೆ ಈ ವಿಚಾರವನ್ನು ಒತ್ತಿ ಮನದಟ್ಟು ಪಡಿಸಲಾಯಿತು. ಡೆಲ್ಲಿಯಲ್ಲಿ ಐಯ್ಯಂಗಾರರು ಚಕ್ರ ತಿರುಗಿಸಲು ಪ್ರಯತ್ನಿಸಿದರು! ಬೇರೊಬ್ಬರನ್ನು ಕೊಡಗಿಗೆ ಚೀಫ್ ಕಮಿಷನರಾಗಿ ಏರ್ಪಾಡು ಮಾಡಲಾಗಿದ್ದು ಅವರು ಶೀಘ್ರ ಬರುವರೆಂಬ ವಾರ್ತೆ ಬಂದಿತ್ತು. ಮೊದಲಿಯಾರರು ಮಾಡಿದ ಪ್ರಯತ್ನಗಳ ಕಥೆಯು ಸರ್ದಾರರ ಮುಂದೆ ಹೋಗಿ ಸರ್ದಾರರಿಗೆ ಮುದಲಿಯಾರರ ಕೆಲಸದಲ್ಲಿ ಅತೃಪ್ತಿ ತೋರಲಿಲ್ಲ. "He has done precious little" ಎಂದರು! ಮುದಲಿಯಾರರನ್ನು ಮೂರು ತಿಂಗಳ ಹಿಂದೆ ಉರುಳಿಸಲು ಯತ್ನಿಸಿದ ಪ್ರಯತ್ನವು ಫಲಕಾರಿಯಾಗಲಿಲ್ಲ; ಆದರೂ ಪ್ರಯತ್ನ ನಡೆದೇ ಇತ್ತು!

### ಕೊಡಗಿನ ವಿಚಿತ್ರ ಸ್ಥಿತಿ.

ಕೊಡಗು ಚಿಕ್ಕ ಆಡಳಿತ ಘಟಕ. ಇದರಲ್ಲಿ ಎಲ್ಲರಿಂದಲೂ ಹೊಗಳಿಸಿಕೊಳ್ಳುವಂತೆ, ಅದರಲ್ಲೂ ರಾಜಕೀಯ ಪಕ್ಷಗಳಲ್ಲಿ ಸ್ಪರ್ಧೆ ನಡೆದಿರುವಾಗ ಸೈ ಎನ್ನಿಸಿಕೊಳ್ಳುವಂತೆ ಆಡಳಿತ ನಿರ್ವಹಿಸುವದು ಯಾರಿಗೂ ಸಾಧ್ಯವಿಲ್ಲ. ಚಿಕ್ಕ ಘಟಕವಾದ ಕಾರಣ ಇಂದು ಇಲ್ಲಿ ನಡೆದ ವಿಚಾರ ನಾಳೆ ಎಲ್ಲ ತಿಳಿದಿರುತ್ತದೆ. ಸರಕಾರವು ಮಾಡುವ ಕೆಲಸಕ್ಕೂ ಬಣ್ಣ ಕಟ್ಟಲು ಸುಲಭವಾಗುತ್ತದೆ. ಕಳೆದ ವಾರದ ಪತ್ರಿಕೆಯಲ್ಲಿ 'ಕೊಡಗಿಗೆ ಜವಾಬ್ದಾರಿ ಸರಕಾರ ದೊರೆತರೆ ಜನಾನುರಾಗಿ ಭ್ರಷ್ಟ ಸರಕಾರವನ್ನು ಸ್ಥಾಪಿಸುವದು ಖಂಡಿತ' 'ವಿರಾಟ್' ಎಂಬವರು ಬರೆದಿದ್ದರು. ಈ ಮಾತಿನಲ್ಲಿ ಸತ್ಯತೆ ಇದೆ. ಕೊಡಗು ಪ್ರತ್ಯೇಕ ಆಡಳಿತಕ್ಕೆ ಯೋಗ್ಯವಿರಲಿ ಯಾ ಇಲ್ಲದಿರಲಿ ಆ ಬಗ್ಗೆ ಪರಿಶೀಲಿಸಿ ಅಭಿಪ್ರಾಯ ಕೊಡುವ ಹಕ್ಕು ಆದರ ರಾಜಕೀಯನೇತೃಗಳಿಗಿರಲಿ. ಆದರೆ ಕೊಡಗಿನಲ್ಲಿ ಇಂದು ಸಕಲರ ಅನುರಾಗವನ್ನು ಪಡೆದು ಆಡಳಿತ ನಡೆಸಲು ಯೋಗ್ಯತೆ ಇರುವ ಮುಂದಾಳುಗಳು ಇಲ್ಲವೆಂದೂ, ಹಾಗಿಲ್ಲದಿರಲು ಕೊಡಗು ಚಿಕ್ಕ ಘಟಕವಾಗಿರುವದೇ ಕಾರಣವೆಂದೂ ಹೇಳಬೇಕಾಗಿದೆ. ಮನುಷ್ಯನ ವ್ಯಕ್ತಿಗತ ಜೀವನವನ್ನೂ ರಾಜಕೀಯ ರಂಗದಲ್ಲಿ ಉಪಯೋಗಿಸಿ, ಹೇಗಾದರೂ ಮಾಡಿ ಕೆಳಗಿಳಿಸಿ ತಾವು ಬಲಗೊಳ್ಳಬೇಕೆಂಬ ವಾತಾವರಣದಲ್ಲಿ ಚಿಕ್ಕ ತಪ್ಪೇ ಮಹಾಪಾತಕವೆನಿಸುವದು; ಅನಾಸಕ್ತಿಯೇ ಅಸಮರ್ಥತೆಯೆಂದು ಕರೆಯಲ್ಪಡುವದು.

### ಉದ್ಯೋಗಸ್ಥರ ನೈತಿಕ ಮಟ್ಟ.

ಇವರು ಕೊಡಗಿಗೆ ಬರುವ ಮೊದಲು ಕೊಡಗಿನಲ್ಲಿ ಲಂಚ, ಅನ್ಯಾಯ, ಲಾಭಬಡಕತನ ಹೆಚ್ಚಿತ್ತೆಂದೂ ಇವರು ಬಂದ ನಂತರ ಅದು ಸುಧಾರಿಸಿತ್ತೆಂದೂ ಹೇಳುವ 'ವಿರಾಟ್'ರ ಅಭಿಪ್ರಾಯಕ್ಕೆ ನಾನೊಪ್ಪಲಾರೆ. ಅಂದಿದ್ದ ಲಾಭಬಡುಕತನ, ಲಂಚಗುಳಿತನ ಇಂದೂ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ವ್ಯಾಪಾರೀ ವೃಂದದಲ್ಲಿಯ ಪರಿಸ್ಥಿತಿ ಅಂದೂ ಇಂದೂ ಒಂದೇಯಾಗಿದೆ. ಆದರೆ ಸರಕಾರಿ ಉದ್ಯೋಗಿಗಳಲ್ಲಿ ಒಂದು ರೀತಿಯ ನೈತಿಕ ಪತನವೇ ಇವರ ಕಾಲದಲ್ಲಿ ಆಗಿದೆಯೆಂದು 'ವಿರಾಟ'ರಿಗೆ ವಿರೋಧವಾಗಿ ಹೇಳಬೇಕಾಗಿದೆ. ಇವರು ನಿವೃತ್ತರಾಗುವರೆಂದು ತಿಳಿದ ನಂತರ ನನಗೆ ಭೇಟಿಯಾದ ಪ್ರತಿಯೊಬ್ಬ ಸರಕಾರಿ ನೌಕರನನ್ನು ಇವರ ವಿಚಾರ ಕೇಳಿರುವೆನು. ಆಶ್ಚರ್ಯದ ಸಂಗತಿಯೆಂದರೆ ಇವರ ಪ್ರಶಂಸೆಮಾಡುವವರನ್ನು ಈ ವ

(೫ನೇ ಪುಟಕ್ಕೆ ನೋಡಿ)

# ಕೊಡಗು

ತಾ. ೩-೩-೧೯೫೦ನೇ ಶುಕ್ರವಾರ

## ಕಾಂಗ್ರೆಸ್ ಪಂಚಾಯಿತರ ಚುನಾವಣೆ.

ಸುಮಾರು ಹತ್ತು ವರ್ಷಗಳಿಂದ ಕೊಡಗಿನಲ್ಲಿ ಕಾಂಗ್ರೆಸಿನ ವಿವಿಧ ಕಮಿಟಿಗಳ ಚುನಾವಣೆಗಳು ನಡೆದಿಲ್ಲ. ೧೯೩೯ರಿಂದ ೧೯೪೫ರ ವರೆಗೆ ಕಾಂಗ್ರೆಸ್ ಸಂಸ್ಥೆಯು ಮೇಲೆ ಆಗಿನ ಸರಕಾರದ ನಿರ್ಬಂಧವಿದ್ದ ಕಾರಣ ಚುನಾವಣೆಗೆ ಅವಕಾಶವಿರಲಿಲ್ಲ. ಅನಂತರ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಲಾಪಗಳಲ್ಲಿ ಕೈಹಾಕಿ ಕೊಡಗಿನ ಚುನಾಯಿತ ಜಿಲ್ಲಾ ಸಮಿತಿಯನ್ನು ರದ್ದುಮಾಡಿ ತಾತ್ಕಾಲಿಕ ಜಿಲ್ಲಾ ಸಮಿತಿಯೊಂದನ್ನು ಒಂದು ವರ್ಷದ ಅವಧಿಗಾಗಿ ನೇಮಿಸಿತು. ಈ ಎಡ್‌ಹಾಕ್ ಸಮಿತಿಯ ಅವಧಿ ತೀರಿ ಮೂರು ವರ್ಷಗಳಾದರೂ, ಹೊಸ ಚುನಾವಣೆಗಳ ಸಹಾಯದಿಂದ ಜನರು ಕಾಣಿಕೊಂಡರೂ ಈ ವರೆಗೆ ಚುನಾವಣೆ ನಡೆಸದೆ ಈ ಎಡ್‌ಹಾಕ್ ಸಮಿತಿಯೇ ನಡೆಸಿಕೊಂಡು ಬರುತ್ತಿದೆ. ಈಗ ಹೊಸ ಮೆಂಬರುಗಳನ್ನು ಸೇರಿಸುವ ಕೆಲಸವು ಪೂರ್ತಿಯಾಗಿ ಪಂಚಾಯಿತರ ಚುನಾವಣೆ ನಡೆಸಲಾಗುತ್ತಿದೆ. ಈ ಚುನಾವಣೆಯು ನ್ಯಾಯ ನಿಯಮಗಳನ್ನು ಬಿಟ್ಟು, ವಿಚಿತ್ರ ರೀತಿಯಿಂದ ಬಹುಮಂದಿ ಕಾಂಗ್ರೆಸ್ ಸದಸ್ಯರಿಗೆ ವಿಶ್ವಾಸವಿಲ್ಲದ ಎಡ್‌ಹಾಕ್ ಸಮಿತಿಯಿಂದ ನಡೆಸಲ್ಪಡುತ್ತಿದೆ. ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ರಶೀತಿ ಪುಸ್ತಕಗಳನ್ನು ಆ ಎಡ್‌ಹಾಕ್ ಸಮಿತಿಯವರು ತಮ್ಮ ಹಿಂಬಾಲಕರಿಗೆ ಮಾತ್ರ ಕೊಟ್ಟು, ಇತರ ಹಳೇ ಕೆಲಸಗಾರರಿಗೆ ಕೊಡದ್ದರಿಂದ ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷರ ಬಳಿಗೆ ಹೋಗಿ ಬೇರೆ ರಶೀತಿ ಪುಸ್ತಕಗಳನ್ನು ಅಚ್ಚುಹಾಕಿಸಿ ಸದಸ್ಯರನ್ನು ಸೇರಿಸಬೇಕಾಯಿತು. ನಂತರ ಅದಿಸ್ವತ ಮತ್ತು ಸಕ್ರಿಯ ಸದಸ್ಯರನ್ನು ಸೇರುವ ಫಾರಂಗಳನ್ನು ಕೊಡಲು, ಸೇರಿಸಲು, ನಿಶ್ಚಿತವಾದ ತಾರೀಕಿನ ಅವಧಿಯನ್ನು ಪ್ರಕಟಿಸದೆ ಹಲವರಿಗೆ ಸದಸ್ಯರಾಗಲು ಅವಕಾಶವಾಗಲಿಲ್ಲ. ಸದಸ್ಯರಾದವರ ಪೈಕಿ ಕೆಲವರು ಅವರ ನಿಯಮವನ್ನು ಸರಿಯಾಗಿ ಇಲ್ಲದೆ, ಖಾದೀಧಾರಿ ಪತ್ರಧಾರಿಗಳೂ, ನಿತ್ಯ ಭಕ್ತರೂ ಆಗಿದ್ದಾರೆ. ಇದೂ ಅಲ್ಲದೆ ಪಂಚಾಯಿತರ ಚುನಾವಣೆ ಬಗ್ಗೆ ಇತ್ತೀಚೆಗೆ ಪ್ರಕಟಿಸಿದ ಕೆ. ಪಿ. ಸಿ. ಸಿ. ಸರ್ಕ್ಯುಲರಿನಂತೆ ಪ್ರಕಟಿಸಿದ ನಿಯಮಗಳನ್ನು ಅನುಸರಿಸಿ ಕೊಡಗಿನಲ್ಲಿ ಚುನಾವಣೆಗಳು ನಡೆಯುತ್ತಿವೆ. ಒಂದು ಪಂಚಾಯಿತ ಕೇಂದ್ರದಲ್ಲಿ ೫೦೦೦ ಜನಸಂಖ್ಯೆ ಮತ್ತು ೫೦ ಕಾಂಗ್ರೆಸ್ ಸದಸ್ಯರಿರಬೇಕೆಂದು ನಿಯಮವಿದ್ದರೂ ಇಲ್ಲಿಯ ಕೆಲವು ಕೇಂದ್ರಗಳಲ್ಲಿ ಹತ್ತು ಹದಿನೈದು ಸಾವಿರಕ್ಕಿಂತಾ ಹೆಚ್ಚಿನ ಜನಸಂಖ್ಯೆ ಇದೆ. ಪ್ರಾಥಮಿಕ ಅಧಿಕೃತ ಮತ್ತು ಸಕ್ರಿಯ ಸದಸ್ಯರ ಪಟ್ಟಿಗಳನ್ನು ಯಾವ ಕಾಂಗ್ರೆಸ್ ಆಫೀಸಿನಲ್ಲೂ ಪ್ರಕಟಿಸಿರುವುದಿಲ್ಲ. ಚುನಾವಣಾ ಕಾರ್ಯಕ್ರಮವನ್ನು ಬಹಿರಂಗಪಡಿಸಿರುವುದಿಲ್ಲ. ಉಮೇದುವಾರರಿಂದ ನೇಮಕ ಪತ್ರಗಳನ್ನು ತೆಗೆದಿರುವುದಿಲ್ಲ. ಪಂಚಾಯಿತ ಕೇಂದ್ರಗಳನ್ನು ತಾಲೋಕು ಯಾ ಹಟ್ಟಿ ಕಮಿಟಿಗಳನ್ನು ಕೇಳಿ ನಿಶ್ಚಯಿಸಿರುವದಿಲ್ಲ. ಯಾವುದನ್ನೂ ಪ್ರಕಟಿಸಿ ವಿಶಾಲ ನೋಟೀಸುಗಳನ್ನು ಒಂದೆರಡು ದಿನಗಳ ಮುಂಚಿತವಾಗಿ ಬಹು ಕಡಿಮೆ ಜನರಿಗೆ ಅಂದರೆ ಸುಮಾರು ಕೆಲವೇ ಜನರಿಗೆ ಮಾತ್ರ ಹಂಚಿ ಚುನಾವಣೆ ನಡೆಸಲಾಗುತ್ತಿದೆ. ಕಳೆದ ತಿಂಗಳು ೨೧ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಮೀಟಿಂಗು ನಡೆಸಿ ಈ ಚುನಾವಣೆಗಳನ್ನು ಮುಂದರಿಸಿ ಮಾರ್ಚ್ ಅಂತ್ಯದೊಳಗೆ ಮುಗಿಸಬೇಕೆಂದೂ ಇವುಗಳ ನಿಶ್ಚಿತ ತಾರೀಕುಗಳನ್ನು ಹಿಂದಳಿಂದ ಪ್ರಾಂತೀಕ ಕಾಂಗ್ರೆಸ್ ಸಮಿತಿಗಳಿಗೆ ತಿಳಿಸಲಾಗುವುದೆಂದೂ ಪ್ರಕಟವಾಗಿದ್ದರೂ ಅದಕ್ಕೆ ಮೊದಲೇ ಕೊಡಗಿನ ಎಡ್‌ಹಾಕ್ ಸಮಿತಿಯವರು ಚುನಾವಣೆಗಳನ್ನು ನಡೆಸುತ್ತಿರುವರು. ಅಕ್ರಮವಾಗಿ ನಡೆದಿರುವ ಮತ್ತು ನಡೆಯುತ್ತಿರುವ ಈ ಚುನಾವಣೆಗಳು ರದ್ದಾಗುವುದರಲ್ಲಿ ಸಂಶಯವಿಲ್ಲ. ಈ ರೀತಿಯ ಅಕ್ರಮ ಕಾರ್ಯಕಲಾಪಗಳಿಂದ ಕಾಂಗ್ರೆಸಿನ ಪ್ರತಿಷ್ಠೆಯು ಕುಂದಿ ಜನತೆಗೆ ಕಾಂಗ್ರೆಸ್ ಸಂಸ್ಥೆಯ ಮೇಲಿರುವ ವಿಶ್ವಾಸ ಪ್ರೀತಿಯೂ ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ. ಸಂಬಂಧಪಟ್ಟ ಮೇಲಧಿಕಾರಿಗಳು ಇಂಥಾ ನ್ಯೂನತೆಗಳನ್ನು ಸರಿಪಡಿಸಿ ಕಾಂಗ್ರೆಸ್ ಮಹಾ ಸಂಸ್ಥೆಯ ಘನತೆಗೆ ತಕ್ಕಂತೆ ಜನಾದರಣೀಯ ಸಂಸ್ಥೆಯಾಗುವಂತೆ ಮಾಡುವರಾಗಿ ಆಶಿಸುತ್ತೇವೆ.

## ವರ್ತಮಾನ.

ಕೊಡಗು ದಂಡಿಯ ಜಮಾಬಂದಿಯಲ್ಲಿ ಟೈನ್ಸ್ ದಕ್ಷಿಣ ಕೊಡಗು ಸಹಕಾರ ಸಂಘದ ಮಹಾಸಭೆಯು ತಾ ೧೧-೩-೫೦ರಲ್ಲಿ ಶ್ರೀ ಪಟ್ಟದ ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆ ಮುನಿಸಿಪಲ್ ಹಾಲ್‌ನಲ್ಲಿ ನಡೆಯುವದು.

ಕೊಡಗಿನ ಆಡ್ವೈಸರಿ ಕಮಿಟಿಯ ಸದಸ್ಯರಾಗಿ ತಾ. ೧-೨-೫೦ ರಿಂದ ಒಂದು ವರ್ಷದವರೆಗೆ ಕೊಡಗಿನ ವರ್ತಕರ ಪರ ಶ್ರೀ ಎನ್. ಸೀತಾರಾಮ ಮತ್ತು ಕೆ. ಪಿ. ಅಪ್ಪಯ್ಯನವರನ್ನೂ, ಕೊಡಗು ಪ್ಲಾಂಟರುಗಳ ಸಂಘದ ಪರ ವಿ. ಜೆ. ಎಚ್. ಸ್ಟುವರ್ಟ್ ಇವರನ್ನು, ಇಂಡಿಯನ್ ಪ್ಲಾಂಟರುಗಳ ಸಂಘದ ಪರ ಶ್ರೀ ಬಿ. ಎಚ್. ಬಸಪ್ಪನವರನ್ನೂ, ಜಮೀನ್ದಾರರ ಪರ ಶ್ರೀ ಎ. ಸಿ. ತಿಮ್ಮಯ್ಯ ಮತ್ತು ಕೆ. ಪಿ. ಕರುಂಬಯ್ಯ ಇವರುಗಳನ್ನು, ಅಲ್ಪಸಂಖ್ಯಾತರ ಪರ ಜನಾಬ್ ಅಬ್ದುಲ್ ರಹಮಾನ್ ಖಾನ್ ಮತ್ತು ಶ್ರೀ ಕೆ. ಸಿ. ಕರುಂಬಯ್ಯನವರನ್ನೂ ಆರಿಸಲಾಗಿದೆ.

ಇಂಡಿಯನ್ ಆರ್ಮಿ ಸರ್ವಿಸಿನಲ್ಲಿರುವ ಸುಬೇದಾರ್ ಶ್ರೀ ಮಡಿಕೇರಿಯಂಡ ಬೆಳ್ಳಿಯಪ್ಪನವರಿಗೆ ಕಾಶ್ಮೀರ ರಣರಂಗದಲ್ಲಿ ತೋರಿಸಿದ ಪರಾಕ್ರಮಕ್ಕಾಗಿ ಇಂಡಿಯನ್ ಸರಕಾರದವರು ವೀರಚಕ್ರ ಪ್ರಶಸ್ತಿಯನ್ನು ಕೊಟ್ಟಿರುವರು.

ಕೊಡಗು ಸರ್ವೆಯರು ಸೆಟಲ್‌ಮೆಂಟ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಮಾಳಂಡ ಕುಟ್ಟಪ್ಪನವರನ್ನು ಸೆಟಲ್‌ಮೆಂಟ್ ಇಲಾಖೆಗೆ ಪುನಃ ಹೆಡ್ ಸರ್ವೆಯರಾಗಿ ನೇಮಕ ಮಾಡಿರುವರು.

ಬೇಗನೆ ಚೀಫ್ ಕಮಿಷನರ್ ಹುದ್ದೆಯಿಂದ ನಿವೃತ್ತರಾಗಲಿರುವ ಶ್ರೀ ಸಿ. ಟಿ. ಮೊದಲಿಯಾರ್ ಮತ್ತವರ ಪತ್ನಿಯವರನ್ನು ಬೀಳ್ಕೊಡಲು ಫೆಬ್ರವರಿ ೨೫, ೨೬ರಲ್ಲಿ ಪಾರಣೆಯಲ್ಲೂ, ೨೬ರಲ್ಲಿ ಮೂರ್ನಾಡಿನಲ್ಲೂ, ೨೭ರಲ್ಲಿ ಫ್ರೇಜರ್‌ಪೇಟೆಯಲ್ಲೂ, ೨೮ರಲ್ಲಿ ಶಾಗಿರ್ಮಂಡ ಮತ್ತು ಸೋಮವಾರಪೇಟೆಯಲ್ಲೂ ೨೮ರಲ್ಲಿ ಅರ್ಕಾತ್ ಮತ್ತು ವೀರಾಜಪೇಟೆಯಲ್ಲೂ, ೨೭ರಲ್ಲಿ ಹಾತೂರು ಮತ್ತು ಪೊನ್ನಂಪೇಟೆಯಲ್ಲೂ ಈ ತಾರೀಕು ೧ರಲ್ಲಿ ಮಡಿಕೇರಿಯಲ್ಲೂ ಮತ್ತು ೨ರಲ್ಲಿ ಶನಿವಾರಸಂತೆ ಮತ್ತು ಸೋಮವಾರಪೇಟೆಯಲ್ಲಿಯೂ ಸತ್ಕಾರ ಕೂಟಗಳು ನಡೆಸಲ್ಪಟ್ಟವು.

## ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಹುಬ್ಬಳ್ಳಿ

### ಪ್ರಾಥಮಿಕ ಕಾಂಗ್ರೆಸ ಪಂಚಾಯಿತಿಗಳ ರಚನೆ ಹಾಗೂ ಅವುಗಳ ಚುನಾವಣೆ ನಿಯಮಗಳು.

(೧) ಸುಮಾರು ೫೦೦೦ ಜನಸಂಖ್ಯೆಯುಳ್ಳ ಕ್ಷೇತ್ರಕ್ಕೆ ಒಂದರಂತೆ ಪ್ರಾಥಮಿಕ ಕಾಂಗ್ರೆಸ ಪಂಚಾಯಿತಿಗಳನ್ನು ರಚಿಸಲಾಗಿದೆ. ಇವುಗಳ ರಚನೆಯ ಕಾಲಕ್ಕೆ ಶಹರಗಳನ್ನು ಹಾಗೂ ಪಟ್ಟಣಗಳನ್ನು ಮುನಿಸಿಪಲ್ ವಾರ್ಡವಾರು ಅಲ್ಲದೆ ಓಣಿಗಳವಾರು ವಿಭಾಗಿಸಲಾಗಿದೆ. ಇದರಂತೆಯೇ ದೊಡ್ಡ ದೊಡ್ಡ ಗ್ರಾಮಗಳನ್ನೂ ಸಹ ವಿಭಾಗಿಸಿದೆ. ಮತ್ತು ೫೦೦೦ಕ್ಕಿಂತ ಕಡಿಮೆ ಜನ ವಸತಿಯುಳ್ಳ ಗ್ರಾಮಗಳನ್ನು ಗುಂಪುಮಾಡಿ ಸುಮಾರು ೫೦೦೦ ಜನಸಂಖ್ಯೆಯುಳ್ಳ ಪಂಚಾಯಿತಿಗಳನ್ನು ರಚಿಸಿದೆ.

(೨) ೧ನೇ ನಿಯಮದಂತೆ ರಚಿಸಿದ ಕಾಂಗ್ರೆಸ ಪಂಚಾಯಿತಿಯಲ್ಲಿ ಕನಿಷ್ಟ ೫೦ ಪ್ರಾಥಮಿಕ ಕಾಂಗ್ರೆಸ ಸದಸ್ಯರು ಆಗಿದ್ದರೆ ಮಾತ್ರ ಪಂಚಾಯಿತಿಯು ಅಸ್ತಿತ್ವದಲ್ಲಿ ಬರುವದು; ಅಂದರೆ ಪಂಚಾಯಿತಿಯ ಸದಸ್ಯರನ್ನು ಆದರ ಪಂಚರನ್ನು ಚುನಾಯಿಸಲಾಗುವದು. ಪ್ರಾಥಮಿಕ ಕಾಂಗ್ರೆಸ ಸಂಖ್ಯೆಯ ಪ್ರಮಾಣಕ್ಕನುಸರಿಸಿ ಪಂಚರ ಸ್ಥಳಗಳು ದೊರೆಯುವವು. ಅವುಗಳ ವಿವರವು ಕೆಳಗಿನಂತೆ ಇರುವವು.

| ಪಂಚಾಯಿತಿಯಲ್ಲಿ ಪ್ರಾಥಮಿಕ ಸದಸ್ಯರ ಸಂಖ್ಯೆ | | ಚುನಾಯಿಸಲಾಗುವ ಪಂಚರ ಸ್ಥಳಗಳು |
|---|---|---|
| ೨೫೦ | ಇದ್ದಲ್ಲಿ | ೧ |
| ೫೦೦ | ,, | ೨ |
| ೭೫೦ | ,, | ೩ |
| ೧೦೦೦ | ,, | ೪ |
| ೧೨೫೦ | ,, | ೫ |
| ೧೫೦೦ | ,, | ೬ |
| ೧೭೫೦ | ,, | ೭ |
| ೨೦೦೦ | ,, | ೮ |
| ೨೨೫೦ | ,, | ೯ |
| ೨೫೦೦ | ,, | ೧೦ |

ಯಾವುದೇ ಪಂಚಾಯಿತಿಗೆ ಒಂದು ಪಂಚಾಯಿತಿಗೆ ೧೦ ಕ್ಕಿಂತ ಹೆಚ್ಚು ಪಂಚರ ಸ್ಥಳಗಳು ದೊರೆಯಲಾರವು.

೨೫೦ ಕ್ಕಿಂತ ಹೆಚ್ಚು ಪ್ರಾಥಮಿಕ ಸದಸ್ಯರುಳ್ಳ ಪಂಚಾಯಿತಿಯಲ್ಲಿ ೨೫೦ಕ್ಕೆ ೧ ರಂತೆ ಪಂಚರ ಸ್ಥಳ ಹೆಚ್ಚುವರು. ೧೨೫ ಹಾಗೂ ಅದಕ್ಕಿಂತ ಹೆಚ್ಚು ಸದಸ್ಯರು ಇದ್ದರೆ ಒಂದು ಸ್ಥಳ ದೊರೆಯುವದು. ಇದರಂತೆಯೇ ಕಡೆಗೆ ದೊರೆಯುವ ಪಂಚರ ಸ್ಥಳಗಳನ್ನು ಎಣಿಸಬೇಕು. ಉದಾ:- ೭೫೦ ಕ್ಕೆ ೩ ಸ್ಥಳಗಳನ್ನು ಕೊಟ್ಟು ಹೆಚ್ಚಿನ ಒಂದು ಸ್ಥಳ ದೊರೆಯಬೇಕಾದರೆ ಆದು ಸದಸ್ಯರಿರಬೇಕು. ಆದು ೧೨೫ ೧೦೦೦ ದ ವರೆಗೆ ಕನಿಷ್ಟರೂ ಒಂದೇ ಸ್ಥಳ ದೊರೆಯುವದು.

(೩) ಜನಸಂಖ್ಯೆಯ ದೃಷ್ಟಿಯಿಂದ ಪ್ರಾಥಮಿಕ ಕಾಂಗ್ರೆಸ ಪಂಚಾಯಿತಿಯಲ್ಲಿ ೫೦ ಕ್ಕಿಂತ ಕಡಿಮೆ ಪ್ರಾಥಮಿಕ ಸದಸ್ಯರು ಇದ್ದಲ್ಲಿ ಆ ಪಂಚಾಯಿತಿಯನ್ನು ಅದೇ ತಾಲೋಕು ಅಥವಾ ತಹಸೀಲಿನ ಸಮೀಪದ ಹಾಗೂ ಹೊಂದಿದ ಪಂಚಾಯಿತಿಯಲ್ಲಿ ಸಮಾವೇಶ ಮಾಡಬೇಕು.

(೪) ಪ್ರತಿಯೊಂದು ಪಂಚಾಯಿತಿಯಲ್ಲಿಯ ಪ್ರಾಥಮಿಕ ಸದಸ್ಯರ ಯಾದಿಯು ಜಿಲ್ಲಾ ಹಾಗೂ ತಾಲೋಕು ಕಾಂಗ್ರೆಸು ಸಮಿತಿಗಳಲ್ಲಿ ಮತ್ತು ಪ್ರಾಥಮಿಕ ಕಾಂಗ್ರೆಸು ಪಂಚಾಯಿತಿಯಲ್ಲಿ ಇರಬೇಕು. ಈ ಯಾದಿಯಲ್ಲಿ ನಮೂದಾದ ಸದಸ್ಯರೇ ಪಂಚಾಯಿತಿಯು ಚುನಾವಣೆಯ ಮತದಾರರಾಗುವರು.

(೫) ಪ್ರತಿಯೊಂದು ಪಂಚಾಯಿತಿಯಲ್ಲಿ ಸಮಾವೇಶವಾಗಿರುವ ಗ್ರಾಮಗಳ, ಪೇಠ ಹಾಗೂ ಬಡಾವಣೆಗಳ ಹೆಸರುಗಳನ್ನು ಜಿಲ್ಲಾ ಕಾಂಗ್ರೆಸು ಸಮಿತಿಯವರು ಪ್ರಾಂತೀಯ ಕಾಂಗ್ರೆಸು ಸಮಿತಿಗೆ ಕಳಿಸಿ ಪಂಚಾಯಿತಿ ಚುನಾವಣೆ ನಡೆಯುವ ಸ್ಥಳದಲ್ಲಿಯೇ ತಿಳಿಸಿ ಚುನಾವಣೆ ನಡೆಯಿಸಲು ಮುಂಜೂರಿಯನ್ನು ಪಡೆದುಕೊಳ್ಳತಕ್ಕದ್ದು. ಇಂಥ ಮುಂಜೂರಿಯನ್ನು ಪಡೆದುಕೊಳ್ಳದೇ ಚುನಾವಣೆಯನ್ನು ನಡೆಯಿಸಲಾಗದು.

(೬) ಪ್ರಾಂತೀಯ ಸಮಿತಿಯು ಕ್ಷೇತ್ರಗಳಲ್ಲಿ ನಿರ್ದಿಷ್ಟಗೊಳಿಸಿರುವ ಜಿಲ್ಲಾ ಕಾಂಗ್ರೆಸು ಸಮಿತಿಗೊಬ್ಬನಂತೆ ಜಿಲ್ಲಾ ರಿಟರ್ನಿಂಗ್ ಆಫೀಸರನನ್ನು ಪ್ರಾಂತೀಯ ಕಾಂಗ್ರೆಸು ಸಮಿತಿಯ ಕೌನ್ಸಿಲ್ ಇಲ್ಲವೇ ಅದರಿಂದ ಅಧಿಕಾರ ಪಡೆದುಕೊಂಡವರು ನೇಮಿಸುವರು. ಜಿಲ್ಲಾ ರಿಟರ್ನಿಂಗ್ ಆಫೀಸರರು ಆ ಜಿಲ್ಲೆಯಲ್ಲಿಯ ತಾಲೋಕ, ತಹಸೀಲ, ಮಹಾಲ ಅಥವಾ ಸರ್ಕಲ್‌ಗೊಬ್ಬನಂತೆ ತಾಲೋಕು ಚುನಾವಣೆ ಅಧಿಕಾರಿಯನ್ನು ನೇಮಿಸುವರು. ಇವನು ತನ್ನ ಹದ್ದಿನಲ್ಲಿಯ ಪಂಚಾಯತಿಗಳ ಚುನಾವಣೆಗಳನ್ನು ಸ್ವತಃ ಇಲ್ಲವೇ ಬೇರೆ ಚುನಾವಣೆ ಅಧಿಕಾರಿಗಳನ್ನು ನೇಮಿಸಿ ನಡೆಯಿಸುವನು.

ಜಿಲ್ಲಾ ರಿಟರ್ನಿಂಗ್ ಆಫೀಸರ ಹಾಗು ತಾಲೋಕು ಚುನಾವಣೆ ಅಧಿಕಾರಿಗಳ ಮತ್ತು ಪಂಚಾಯತಿ ಚುನಾವಣೆ ಅಧಿಕಾರಿಗಳ ನೇಮಣೂಕಿಗಳು ಲೇಖಿಯಲ್ಲಿಯೇ ಇರತಕ್ಕದ್ದು. ಈ ಅಧಿಕಾರಿಗಳಿಗೆ ಜಿಲ್ಲಾ ಹಾಗೂ ಅಧೀನ ಕಾಂಗ್ರೆಸು ಸಮಿತಿಗಳು ಸಹಾಯ ಹಾಗು ಸಹಕಾರ ಮಾಡಬೇಕು.

(೭) ಪ್ರಾಥಮಿಕ ಕಾಂಗ್ರೆಸು ಪಂಚಾಯಿತಿಯ ಚುನಾವಣೆಗೆ ಉಮೇದುವಾರನಾಗ ಬಯಸುವವನು ಅದೇ ಪಂಚಾಯತಿಯ ಹದ್ದಿನಲ್ಲಿ ವಾಸಿಸುವ ಅಧಿಕೃತ ಸದಸ್ಯನಿರಬೇಕು ಮತ್ತು ಮತದಾರರ ಯಾದಿಗಳು ಪ್ರಸಿದ್ಧವಾಗುವ ದಿನದ ಹಿಂದಿನ ಎರಡು ವರ್ಷಗಳಲ್ಲಿ ಕಲ್ಪಪೇಟೆ, ಆಸೇತಿ, ಲಂಚಗಳಿತನ ಮಾಡಿ ಇಲ್ಲವೆ ಮಾಗಣಿ ಗಿರೇಣ ಕಾಯಿದೆ ಮುರಿದು ಕೋರ್ಟಿನಿಂದ ಶಿಕ್ಷೆ ಹೊಂದಿರಬಾರದು.

(೮) ಯಾವದೇ ಪಂಚಾಯಿತಿಯ ಹದ್ದಿನಲ್ಲಿ ತಾನು ಬಯಸುವ ಪಂಚರ ಸ್ಥಳಗಳಷ್ಟು ಅಧಿಕೃತ ಸದಸ್ಯರು ಇಲ್ಲದೇ ಇದ್ದಲ್ಲಿ ಆ ಪಂಚಾಯತಿಗೆ ಹೊಂದಿದ ಅದೇ ತಾಲೋಕಿನ ಅಥವಾ ಶಹರದ ಬೇರೆ ಪಂಚಾಯತಿಯ ಹದ್ದಿನಲ್ಲಿಯ ಅಧಿಕೃತ ಸದಸ್ಯರು ಕಡಿಮೆ ಬಿದ್ದ ಉಮೇದುವಾರರ ಮಟ್ಟಿಗೆ ಅರ್ಜಿಗಳನ್ನು ಕೊಡಬಹುದು.

(೬ನೇ ಪುಟಕ್ಕೆ ಸಾಗಿದೆ)

(೩ನೇ ಪುಟದಿಂದ ಸಾಗಿದ್ದು)

ರಿಗೆ ನಾನು ಭೇಟಿಯಾಗಿಲ್ಲ. ಹಿಂದೆ ಮದ್ರಾಸ್ ಸೆಕ್ರೆಟೇರಿಯೇಟಿನಲ್ಲಿ ಕೆಲಸ ಮಾಡಿ ಒಳಗುಟ್ಟುಗೊತ್ತಿರುವ ಇವರು ಅಧೀನದ ಸ್ಟೇಶನರಿ ಲೆಕ್ಕ ಮೊದಲಾದುವನ್ನು ಗಣಿಸಿ ನೌಕರರಿಗೆ ಒಂದು ರೀತಿಯ ಭೀತಿಯನ್ನು ಉಂಟುಮಾಡಿದರೆಂಬುದು ಸಹಜ. ಆದರೆ ಆ ಮಾರ್ಗ ಗಣನಾತ್ಮಕವಾಗಿರದೆ ನಿನಾಶಾತ್ಮಕವಾದುದು! ನೌಕರರ ಇಂದು ಕೊರತೆ ಗೌರವ ಕೇವಲ ಭೀತಿಯ ವಿಧೇಯತೆಯಿಂದ. ಆದರೆ ಅವರಲ್ಲಿರುವ ಅಧಿಕಾರದ ಭಯದಿಂದ ಇದು ಯೋಗ್ಯ ಮಾರ್ಗವಲ್ಲ. ನೌಕರರು ಪ್ರೀತಿಯ ವಿಧೇಯತೆಯನ್ನು ಕಲ್ಪಿಸುವ ವಾತಾವರಣವಿದ್ದರೆ ಮಾತ್ರ ಅಧಿಕಾರಿ ಮತ್ತು ಕೆಳನೌಕರರಲ್ಲಿ ಐಕ್ಯತೆ, ಅನ್ಯೋನ್ಯತೆ ಇರಬಹುದು. ಈ ಗ್ರಹಿತಿಯಿಂದ ಸರಕಾರಿ ನೌಕರರಲ್ಲಿ ಒಮ್ಮೆ ಜನರ ನಿಯಮಗಳ ಕಾರಣಕ್ಕಾಗಿ ವರ್ಗಾವಣೆ [illegible] ವಿಷಯ [illegible] ಕಾರಣಕ್ಕಾಗಿ ಅಲ್ಲ. ಆದ್ದರಿಂದ ಸಿಬ್ಬಂದಿಗಳ ಬಗೆಗೆ ಇವರ ಪ್ರವೃತ್ತಿಯು ಅಧಿಕಾರದ ಮಾರ್ಗದಲ್ಲಿ ಸಾಗಿದೆ ವಿನಹ ಸೌಹಾರ್ದತೆಯ ಮಾರ್ಗದಲ್ಲಿ ಸಾಗಲಿಲ್ಲ. ಆದ್ದರಿಂದ ಎಲ್ಲ ಕಂಡ ಗಸ ನೌಕರರ ತಲೆಬಾಗಿಸಿದ [illegible] ಪ್ರಸಂಗ ಬಂದಿತು!

ಧರ್ಮ ಮತ್ತು ಆಚರಣೆ

ಇವರು ಪರಮ ದೈವಿಕವಾದಿಗಳು, ಸುಬ್ರಹ್ಮಣ್ಯನ ಭಕ್ತರು. ಆದರ್ಶ ಪುರುಷರು. ಇವರು ಕೊಡಗನ್ನು ಸುಬ್ರಹ್ಮಣ್ಯನ ನಾಡು ಎಂದು ಹೇಳುವರು. ದ್ವಾರೆ "Religion is the opium of the ignorant" ಎಂಬಂತೆ ಅಜ್ಞರ ಗ್ರಹಿಕೆಯಿಂದ ಸಾಧಕ ಬಾಧಕಗಳನ್ನು ತಿಳಿಯದವರ ಬಲ ಈ ಧರ್ಮ. ವೇದಾಂತದ ವಿಷಯವನ್ನು ಮೆಚ್ಚಿದ ಧರ್ಮವೂ ಆ ಧರ್ಮವನ್ನು ನೀತಿ ಖಂಡನೀಯ ಧರ್ಮ, ದೇವರು ಇದ್ದ ವ್ಯಕ್ತಿಯ ಆ ಜೀವನಕ್ಕೆ ಸಂಬಂಧ. ಅವರು ಗಾಳಿಗೇ ಹೋಗಲಿ, ಕಾವೇರಿಗೇ ತೆರಳಲಿ ಯಾರೂ ಅನ್ನೇ ಪೂಜಿಸಲಿ ದೇಶದ ಆಡಳಿತಕ್ಕೂ ಅದಕ್ಕೂ ಸಂಬಂಧವಿಲ್ಲ. ಮಾನವ ದನಜೀವ್ಮನ ಇಲ್ಲಿ ಇಂದಿನ ಯುಗದಲ್ಲಿ ಅಧಿಕಾರದ ಹೆಚ್ಚು ಆತುರವನ್ನು ಒತ್ತಿ ಹೇಳತಕ್ಕೋಲು ಒಮ್ಮೆ ಒಪ್ಪಿ ಆ ತನಗೆ ಸಲ್ಲಿಸಿದ ಸೇವೆ ವಿಷಯ ಬೇರೆ. ಆದ್ದರಿಂದ ಧಾರ್ಮಿಕ ಪ್ರವೃತ್ತಿ ಇವರ ಚೀಫ್ ಕಮಿಷನರು ನ್ಯಾಯನನ್ನೇ ಮನೋರಂಜನೆಗೆ ಬಳಸದು. ಮತ್ತು ನಾಗೆ ಸುಬ್ರಹ್ಮಣ್ಯನನ್ನು ನೆನೆದು ಹಿತ ಆವಳಿ ದರ್ಶನ ದರೆ ದು ನಂಬುವವರೂ ಒಪ್ಪುವ ರಾತ್ರಲ್ಲ. ವಿಶೇಷವಾಗಿ ಧರ್ಮಿಕರ ವ್ಯಕ್ತಿಯ ಮತ್ತು ಅಧಿಕಾರ ಚೀಫ್ ಕಮಿಷನರ ಕ್ಷೇತ್ರಗಳೇ ಬೇರೆ.

ಸ್ವಾನವೇಗಳು

ಜಗತ್ತಿನಲ್ಲಿ ಸ್ವಾನವೇಗಳಿಲ್ಲದ ವ್ಯಕ್ತಿ ಇಲ್ಲ. ಹಾಗಿರುವಾಗ ಇವರು ಗಸ್ವನ ತಿಗಳಿಂದ ಮುಕ್ತರಾಗಿರುವ ರು ಸಾಧ್ಯವಿಲ್ಲ. ಇವರಲ್ಲಿ ನಾನು ಕಂಡ ಪ್ರಧಾನ ನ್ಯೂನತೆಯೆಂದರೆ ಇಲ್ಲದ ಭಯ ಶಂಕೆಗಳನ್ನು ಕಂಡ ಪರು. ಅವರ ಹೆಚ್ಚು ಭಾಷಣಗಳನ್ನು ನಾನು ಕೇಳಿದ್ದೇನೆ. ಅವು ಹಾರಂಗಿ ಯೋಜನೆಯೇ ಆಗಲಿ, ಹರಿಜನ ಉದ್ಧಾರವೇ ಆಗಲಿ ಮೊದಲು ಅವನ್ನು ಮಾಡಿರುವೆವು, ಈ ಸೌಕರ್ಯ ಒದಗಿಸುವೆವು ಎಂಬ ಆಶ್ವಾಸನೆ ಕೊಡುವುದನ್ನು ಕೆಟ್ಟ ನಂತರ ಸಧ್ಯವುದು ಅಲ್ಲ ವಾದರೆ ಜನರು ಮಾಡಿದ ಅಲ್ಪಸ್ವಲ್ಪವನ್ನು ಮರೆಯುವುದು ಸ್ವಾಭಾವಿಕ. "ಈ ದೇಶ ಪಕ್ಷಿ; ಕಟ್ಟಿ ಇಡಿ" ಎಂಬ ಮಾರ್ಗವನ್ನು ಇವರು ಅನುಸರಿಸಿದ್ದರೆ ಇಂದಿಗಿಂತ ಹೆಚ್ಚು ಜನಪ್ರಿಯರಾಗುತ್ತಿದ್ದರು. ಗುಪ್ತಚರು ಬೀರಿಯುವರು ಪತ್ರಿಕೆಗಳ ಬಹಳ ಎಲ್ಲರಿಗೂ ಇದ್ದಂತೆ ಇವರಿಗೂ ಇದ್ದುದು ತಪ್ಪಲ್ಲ. ಆದರೆ ಇವರು ಎಲ್ಲ ವ್ಯಕ್ತಿಗಳಂತಲ್ಲ. ಚೀಫ್ ಕಮಿಷನರ ಅಧಿಕಾರ [illegible] ಈ ನಿರ್ಬಲತೆ ನ್ಯೂನತೆ ಎನಿಸಲ್ಪಟ್ಟಿದೆ. ಇವರು ಆಗಾಗ ಸಕಲ ಸಂಸ್ಥೆಗಳ ಕ್ರಿಯೆ ಪ್ರಕಟಿಸಿ ಅಲ್ಲಲ್ಲಿ ಮಾತುಕತೆ ಭಾಷಣಗಳು, ಇವರ ಸಹಿ [illegible] ಸರ್ವಜನಿಕ ಪ್ರಶಂಸೆ, ಕಂಠ ಮ ಪೂಜೆ, ಸ್ತುತಿ ಕೀರ್ತನೆಗಳ ಹಿನ್ನೆಲೆಯಲ್ಲಿ [illegible] ಅನ್ನೋನ್ಯ ಸರಲ ಇಲ್ಲವೆಂದು ಹೇಳಲಾಗುವದಿಲ್ಲ. ಈ ಗೌರವಗಳ ತನ್ನ ಅಧಿಕಾರದ ಕುರ್ಚಿಗೆ ಮಾತ್ರವಲ್ಲವೆ ತನ್ನ ಸೇವೆಯನ್ನು ಗುರುತಿಸಿ ಅಲ್ಲವೆಂದು ತಿಳಿದಿದ್ದರೆ ಹಿತವಾಗುತ್ತಿತ್ತು. [illegible] ಆಡಂಬರಗಳ ನಡುವೆ ದಂತ ಗೋಪುರದಿಂದ ಇನ್ನೂ ಜನರ ಹೃದಯವನ್ನು ಗೆಲ್ಲಬಹುದು.

ಲಾಭ ನಷ್ಟ

ವ್ಯಕ್ತಿಯ ದುರ್ಗುಣ, ಸದ್ಗುಣಗಳನ್ನು ತೂಗಿ ನೋಡಿ ಅಳೆಯುವ ಬದಲು ಬೇರೆ ಬಗೆಯ ವಿಷಯವನ್ನು ನಿರ್ಣಯಿಸುವ [illegible] ಅಧಿಕಾರದ ಎರಡು ವರ್ಷಗಳ ಕಾರ್ಯಕಾಲದ ಸಾಗಳ ಕುರಿತೆ [illegible] ಧಾಸಲ್ಪಡುವುದೂ ದೇಶದ ಹಿತಕ್ಕಾಗಿ. ಯುದ್ಧೋತ್ತರ ಪುನರ್ರಚನಾ [illegible] ಯೋಜನೆ, ಪಂಚಾಯತ, ಪಟ್ಟಣ ಪ್ರಗತಿಯ ಮನೆ ಭಾಗವಸತಿ, ಮೊದಲಾದ ಕ್ಷೇತ್ರಗಳ [illegible] ಇವರ ಮುಂದೆ ಮಾನವರೂ ನಮಗೆ ಬೇಕಿತ್ತು. [illegible] ನಿಜವಾಗಿ ಈ ದೇಶದ ನಿಸ್ಸ್ವಾರ್ಥ ಸೇವಕರು ಹೊಸ ಕ್ರಮದಿಂದ ಕೆಳಗಿಳಿಸಿತ! ಆದರೆ ಹಿಂದಿನವರು ನಿಸ್ಪೃಹ ಅಧಿಕಾರಿಯಾದರೂ ತನ್ನ ಎರಡು ವರ್ಷಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಕೊಡಗು ಅವರ ಆಳ್ವಿಕೆಯಲ್ಲಿ [illegible] ಇವರ ತಮ್ಮ ಸ್ವಂತ ಕರ್ತವ್ಯ ಶಕ್ತಿಯಿಂದ ಅವರ ಸರ್ಕಾರ ಒಂದಾಯಿತು ನಡೆಸಿಕೊಂಡು ಬಂದರು. ಈಗ ಕೆಲವು ಕಾಲದಿಂದ ಅಶಾಂತಿಯನ್ನುಂಟುಮಾಡಿರು. ಇದಕ್ಕೆ ಕಾರಣವು ಇಂದಿನ ಯಾವ ಪ್ರಾಂತದಲ್ಲಿಯೂ ಎಂದು ಸ್ವಸ್ಥವಾಗಿ ಆಳಿದಿಲ್ಲವಾದರೂ ಇಂದಿನ ಪ್ರಜಾಪ್ರಭುತ್ವದ ಅಧಿಕಾರದ ಇವರು ಮರೆಯಬಾರದಿತ್ತು. ಬೇಡವೆಂದು ತಿಳಿಸಿ, ವ್ಯವಸಾಯ ಆದಾಯ ತೆರಿಗೆ ಚಳುವಳಿಯ ಬಗ್ಗೆ ಒಮ್ಮತ ಮಾಡಬಹುದಿತ್ತು. ಏನು ಬುದ್ಧಿ ಇಲ್ಲವೇ? ಒಮ್ಮೊಮ್ಮೆ ತಪ್ಪುತಿದೆ [illegible] ಪರ್ಯಾಯವಾಗಿ ಪದಾಧಿಕಾರಿಗಳು ನಡೆಸಲು ಯಾರಿಗೂ ಸಾಧ್ಯವಾಗದು. ಅದು ಸಾಧ್ಯವಾಗಬೇಕಾದರೆ ಮಾಡಿದ್ದನ್ನೇ ಮಾಡಬೇಕಾಗುವದು. ಆದರೆ ಪ್ರಗತಿಶೀಲ ಪಥದಲ್ಲಿ ನಡೆಯುವದಾದರೆ ಇದೆಲ್ಲ ಸಾಧ್ಯ? ಹೇಗೂ ಮುಂದಿನ ಯಾರವರು ಕೊಡಗಿಗೆ ಹಿತವನ್ನು ಮಾಡಿದ್ದರೆ ಜನತೆಯ ಜಾಗೃತಿಗೊಳಿಸಿದ್ದರೆ. ಅವರು ನಿವೃತ್ತರಾಗಿ ಶಾಂತಿಯನ್ನು ಪಡೆಯಲು ತುಂಬಾ ಅರ್ಹರು.

## ಶಾಲಾ ಉತ್ಸವ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವದ ಸಂಬಂಧ ಆಟೋಟಗಳೂ, ಬಹುಮಾನ ವಿತರಣ ಸಮಾರಂಭವೂ ತಾ. [illegible] ಶ್ರೀ. ಸಿ. ಎಂ. ರಾಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಗಣೇಶರಾಯರು ಶಾಲಾ ವರದಿಯನ್ನು ಮಂಡಿಸಿ ಹೈಸ್ಕೂಲ್ ಆವರಣದಲ್ಲಿ ಕಾಲೇಜು ಸ್ಥಾಪಿಸಿ [illegible] ಹೈಸ್ಕೂಲಿಗಾದ ಸ್ಥಳದ ಕೊರತೆ ಮುಂತಾದ ಅಡಚಣೆಗಳನ್ನು ವಿವರಿಸಿದರು. ಬಳಿಕ ಬಹುಮಾನ ವಿತರಣೆ [illegible] ಐ. ಎ. ಎಸ್. [illegible] ಶ್ರೀ. ಐ. ಕೆ. [illegible] ಅವರು ಶಾಲಾ ಕ್ರೀಡೆ ನೃತ್ಯ ತರಗತಿಗಳಲ್ಲಿಯೂ, ಆಟೋಟಗಳಲ್ಲಿಯೂ ಬಹುಮಾನ ಪಡೆದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಎಷ್ಟೇ ಪ್ರಗತಿ [illegible] ಗಳಿಸಿದರೂ, [illegible] ಎಂದು ಯಾವಾಗಲೂ ತಿಳಿದಿರುವ ಪ್ರಸಂಗವಾಗಿದೆ. [illegible] ವಿದ್ಯಾರ್ಥಿಯ ಎಲ್ಲ ಹೆರುಗಳ ವಿಷಯ [illegible] ಅಧ್ಯಾಪಕರನ್ನು ಬಹುಮಾನಕ್ಕೆ [illegible] ದೇಶದ ಸೈನಿಕ ಶಿಕ್ಷಣ [illegible] ಎಂದು ಹೇಳಿದರು. ಅಲ್ಲದೆ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಜವಾಬ್ದಾರಿಯನ್ನು ವರ್ಣಿಸಿ, ಸ್ವಾತಂತ್ರ್ಯ ಚಿನ್ನ ಮಾಡಿದ [illegible] ವಂದನ ಸಮರ್ಪಣೆಯಿಂದ ಸಭೆ ಮುಕ್ತಾಯವಾಯಿತು.

## ಶಂಕುಸ್ಥಾಪನೆ.

ತಾರೀಕು ೨-೩-೫೦ನೇ ಗುರುವಾರ ಬೆಳಗ್ಗೆ [illegible] ಸಹಕಾರ ಸಮಾಜದ ಕಟ್ಟಡದ ಶಂಕುಸ್ಥಾಪನಾ ಕಾರ್ಯವು ಕೊಡಗಿನ ಚೀಫ್ ಕಮಿಷನರ್ ಶ್ರೀ ಕೆ. ಟಿ. ಪೂರ್ಣಲಿಂಗಂರಿಂದ ನಡೆಯಿತು. ಸಮಾಜದ ಕಾರ್ಯದರ್ಶಿಯವರಾದ ಮಂಗಳೂರಿನ ಮಿ. ಸಿಸ್ ಬೋಪಯ್ಯನವರು ಸರ್ವರಿಗೂ ಸ್ವಾಗತವನ್ನು ನೀಡಿ ಸಂಘದ ಕಾರ್ಯಕಲಾಪಗಳನ್ನು ವಿವರಿಸಿದರು. ಸಂಘವು ಏಳು ವರ್ಷ, ಮೊಳಗಿಗೆ ಕೆಲಸ, ಸಿಂಗಿ, ವಿತರ್ನಾಗದ ಮೊದಲಾದ ಕಾರ್ಯಗಳನ್ನು ನಡೆಸುತ್ತಾ ಬಂದಿರುವದಾಗಿ ಯೂ ಕಟ್ಟಡಕ್ಕಾಗಿ ೭೦೦೦/- ರೂಪಾಯಿಗಳನ್ನು ಸಂಗ್ರಹಿಸಿರುವದಾಗಿಯೂ, ಸುಮಾರು ೫೦೦೦/-ದ ವರೆಗೆ ವಾಗ್ದಾನ ಮಾಡಿದ ಹಣವಿರುವದಾಗಿಯೂ ಹೇಳಿದರು. ಸರಕಾರವು ನಿವೇಶನವನ್ನು ಒದಗಿಸಿದಲ್ಲದೆ ರೂ. ೫೦೦೦ ಧನ ಸಹಾಯ ಮಾಡಿದೆಯೆಂದೂ ಹೇಳಿದರು. ಕಟ್ಟಡಕ್ಕೆ ರೂ. ೧೫೦೦೦ ಖರ್ಚಾಗುವದೆಂದೂ ಇತರ ಸಾಹಿತ್ಯಗಳಿಗೆ ರೂ. ೩೦೦೦ ಬೇಕಾಗುವದೆಂದೂ ಹೇಳಿದ್ದಲ್ಲದೆ ಸರ್ವರೂ ಸಹಕರಿಸಿ ಪ್ರಯತ್ನವನ್ನು ಜಯಪ್ರದಗೊಳಿಸಬೇಕೆಂದು ಕೇಳಿಕೊಂಡರು. ಚೀಫ್ ಕಮಿಷನರು ತಮ್ಮ ಭಾಷಣದಲ್ಲಿ ಸಂಘದ ಕಾರ್ಯಕಲಾಪಗಳನ್ನು ಹೊಗಳಿದರು. ಕಟ್ಟಡದ ಅವಶ್ಯಕತೆಯನ್ನು ಒಪ್ಪಿದರು. ಮುತುವರ್ಜಿಯಿಂದ ಕೆಲಸ ಮಾಡುತ್ತಿರುವ ಪ್ರೆಸಿಡೆಂಟರಾದ ಪಾಂಡಂಡ ಮಿಸೆಸ್ ಚಂಗಪ್ಪನವರ ಮತ್ತು ಕಾರ್ಯನಿರ್ವಾಹಕರ ನೆರವಿನಿಂದ ಸಂಘವು ಅತ್ಯುತ್ಸಾಹದ ಕೆಲಸ ಮಾಡುವದೆಂದು ಆಶಿಸಿದರು. ನಂತರ ಶಂಕುಸ್ಥಾಪನೆ ನಡೆಯಿತು. ಸಹಕಾರಿ ಸಂಘಗಳ ರಿಜಿಸ್ಟ್ರಾರಾದ ಶ್ರೀ ಪಿ. ಎಂ. ಚಂಗಪ್ಪನವರು ಸಂಘದ ಧ್ಯೇಯವನ್ನು ವಿವರಿಸಿ ಸರ್ವರ ಸಹಕಾರ ಬೇಕೆಂದು ಕೇಳಿದರು. ಪುಂಡ್ಯಂಡ ಮಿಸೆಸ್ ಬೆಳ್ಯಪ್ಪನವರು ವಂದನಾರ್ಪಣೆಯನ್ನು ಅರ್ಪಿಸಿದರು. ನೆರೆದವರಿಗೆ ಹೂವು ಮತ್ತು ತಾಂಬೂಲ ಹಂಚಲಾಯಿತು.

## ಭಾವಚಿತ್ರ ಅನಾವರಣ.

ತಾ. ೨-೩-೫೦ರಲ್ಲಿ ಕೊಡಗು ಶಾಸನ ಸಭಾ ಮಂದಿರದಲ್ಲಿ ಕೊಡಗಿನ ಈ ಮೊದಲಿನ ಚೀಫ್ ಕಮಿಷನರಾಗಿದ್ದ ದಿ. ಬ. ಕೇಟೋಳಿರ ಚಂಗಪ್ಪನವರ ಭಾವಚಿತ್ರವನ್ನು ಅನಾವರಣ ಮಾಡುವ ಸಮಾರಂಭವು ಕೊಡಗಿನ ಈಗಿನ ಚೀಫ್ ಕಮಿಷನರಾದ ದಿ. ಬ. ಸಿ. ಟಿ. ಪೂರ್ಣಲಿಂಗಂರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆಯಾದನಂತರ ರಾ. ಬ. ಕೆ. ಜಿ. ಬೆಳ್ಯಪ್ಪನವರು ಈ ಭಾವಚಿತ್ರವನ್ನು ದಿ. ಬ. ಚಂಗಪ್ಪನವರಿಗೆ ಅವರು ನಿವೃತ್ತರಾಗುವಾಗ ಕೊಟ್ಟ ಸತ್ಕಾರಕ್ಕಾಗಿ ಸಂಗ್ರಹಿಸಿದ ಹಣದ ಉಳಿತಾಯದಿಂದ ಸಿದ್ಧಪಡಿಸಿದ್ದಾಗಿ ಹೇಳಿದರು. ನಂತರ ಶ್ರೀ ಚಂಗಪ್ಪನವರ ವ್ಯಕ್ತಿತ್ವ, ಕಾರ್ಯದಕ್ಷತೆ ಮೊದಲಾದುವನ್ನು ಹೊಗಳಿ ಶಾಸನಸಭಾ ಮಂದಿರದಲ್ಲಿ ಅವರ ಭಾವಚಿತ್ರವನ್ನಿಡುವ ಔಚಿತ್ಯವನ್ನು ವಿವರಿಸಿ ಶ್ರೀ ಪೂರ್ಣಲಿಂಗಂರವರು ಭಾವಚಿತ್ರವನ್ನು ಅನಾವರಣ ಮಾಡಬೇಕೆಂದು ಕೇಳಿಕೊಂಡರು. ಶ್ರೀ ಪೂರ್ಣಲಿಂಗಂರವರು ಶ್ರೀ ಚಂಗಪ್ಪನವರ ದೂರದರ್ಶಿತ್ವ, ಆಡಳಿತ ದಕ್ಷತೆ ಮೊದಲಾದವುಗಳನ್ನು ವಿವರಿಸಿ ರಾಜಕೀಯ ರಂಗಕ್ಕೆ ಕಾಲಿಡದೆ ದೂರದಲ್ಲಿ ಉಳಿದಿದ್ದರೂ ಅವರು ದೇಶಕ್ಕಾಗಿ ಮಾಡುತ್ತಿರುವ ಸೇವೆಯು ಸರ್ವರೂ ಅನುಕರಿಸಲು ಯೋಗ್ಯವಾದುದೆಂದರು. ನಂತರ [illegible] ರಾಷ್ಟ್ರಗೀತೆಯು [illegible] ಯಿಂದ ಕಾರ್ಯಕ್ರಮವು [illegible] ಗೊಂಡಿತು.

# ಓದುಗರ ಓಲೆಗಳು.

### ಮಡಿಕೇರಿ ಹುಡುಗಿಯರ ಹೈಸ್ಕೂಲು ಬೋರ್ಡಿಂಗು.

ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಕಾರ್ಯಕಲಾಪಗಳೂ ಮತ್ತು ಅದಕ್ಕೆ ಸೇರಿದ ವಿದ್ಯಾರ್ಥಿನಿ ನಿವಾಸಗೃಹದ ಏರ್ಪಾಡುಗಳೂ ಸಮರ್ಪಕವಾಗಿಲ್ಲವೆಂದು ಈ ಮೊದಲು ಅನೇಕಬಾರಿ ಅನೇಕರು ಪತ್ರಿಕೆಗಳಲ್ಲಿ ಬರೆದುದಿದೆ. ಆದರೆ ಸರಕಾರವಾಗಲಿ, ಬೇರೆಯಾಗಲೀ ಇದರ ವಿಚಾರ ಗಮನಕ್ಕೆ ತೆಗೆದುಕೊಂಡಂತೆ ಕಾಣುವದಿಲ್ಲ. ಈ ಹೈಸ್ಕೂಲಿಗಾಗಿ ಸರಕಾರದಿಂದ ವಂತಿಗೆ ಕೊಡಲ್ಪಡುತ್ತಿದೆ. ಹಾಗಿರುವಾಗ ಅದರ ಕಾರ್ಯಕಲಾಪಗಳನ್ನು ಪ್ರಶ್ನಿಸುವ ಹಕ್ಕು ಸರಕಾರಕ್ಕೂ, ಜನತೆಗೂ ಇದೆ. ಕಳೆದ ಕೌನ್ಸಿಲು ಸಭೆಯೊಂದರಲ್ಲಿ ಈ ಶಾಲೆಯ ಕಾರ್ಯಕಲಾಪಗಳನ್ನು ಪರಿಶೀಲಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕೆಂದು ಸೂಚನೆ ಬಂದಿದ್ದಾಗ ಅದು ಖಾಸಗಿ ಸಂಸ್ಥೆಯಾದ್ದರಿಂದ ಅದರಲ್ಲಿ ಕೈಹಾಕಲಾರೆವೆಂದು ಹೇಳಿ ಸರಕಾರವು ಅಪ್ರತ್ಯಕ್ಷವಾಗಿ ಕಾನ್ವೆಂಟ್ ಅಧಿಕಾರಿಗಳ ಬೆನ್ನುತಟ್ಟಿತು. ಕೊಡಗಿನ ಬಡ ರೈತನ ಕಾಸು ಈ ಶಾಲೆಗಾಗಿ ಖರ್ಚಾಗುತ್ತಿರುವಾಗ, ಕೊಡಗಿನ ಬಡ ರೈತನ ಮಕ್ಕಳು ಈ ಶಾಲೆಯಲ್ಲಿ ಓದುತ್ತಿರುವಾಗ ಈ ಶಾಲೆಯ ಕಾರ್ಯಕಲಾಪಗಳನ್ನು ಅರಿಯುವ ಮತ್ತು ಪ್ರಶ್ನಿಸುವ ಹಕ್ಕು ಸರಕಾರಕ್ಕೂ ಜನತೆಗೂ ಇದೆ.

ನನಗೆ ಕೇಳಿ ಬಂದಂತೆ ನಿವಾಸಗೃಹದಲ್ಲಿ ಮಕ್ಕಳಿಗೆ ನೀರಿನ ಏರ್ಪಾಡು ಸರಿಯಾಗಿಲ್ಲ. ಹೊಟ್ಟೆ ತುಂಬ ಅನ್ನ ಕೊಡಲ್ಪಡುತ್ತಿಲ್ಲ. ಹಿಂದೆ ವಾರಕ್ಕೆ ಎರಡು ಬಾರಿ ಮಾಂಸ ಕೊಡಲ್ಪಡುತ್ತಿದ್ದುದು ಈಗ ತಿಂಗಳಿಗೊಮ್ಮೆ! ಸೋರೆಕಾಯಿ, ಮೂಲಂಗಿ, ಬದನೆ ಮೊದಲಾದುವೇ ಪ್ರಧಾನ ತರಕಾರಿಗಳು! ಇವುಗಳನ್ನೂ ಕೂಡ ಸರಿಯಾಗಿ ಮಾಡದೆ ಹಾಳ ಮಾಡಿ ಬಡಿಸುವದು ಅಪರೂಪವಲ್ಲ. ಬೋರ್ಡಿಂಗಿನಲ್ಲಿ ಬೇರೆ ಸಮಯದಲ್ಲಿ ಮಕ್ಕಳಿಗೆ ಓದಲು ಉಪಯುಕ್ತವಾದ ಯಾವದೇ ಪತ್ರಿಕೆಗಳ ಏರ್ಪಾಡಿಲ್ಲ. ಈ ಯುಗದಲ್ಲೂ ಕೂಡ ಮಕ್ಕಳು ಹೊರಗಿನ ಜಗತ್ತಿನ ವಿಚಾರಗಳನ್ನು ತಿಳಿಯುವ ಅನುವಿಲ್ಲದೆ ಕೂಪ ಮಂಡೂಕಗಳಂತಿರಬೇಕಾಗಿದೆ. ಊಟದ ವ್ಯವಸ್ಥೆಯಲ್ಲೂ ಕ್ರಿಶ್ಚಿಯನ್ ಮಕ್ಕಳಿಗೂ ಇತರರಿಗೂ ತಾರತಮ್ಯವಿದೆಯೆಂದು ವರ್ತಮಾನವಿದೆ. ಇಲ್ಲಿ ಮಕ್ಕಳ ಮೇಲೆ ಖಡ್ಡಾಯ ನಿರ್ಬಂಧವಿರಿಸಿರುವದರಿಂದ ಮಕ್ಕಳು ಅಲ್ಲಿಯ ಯಾವ ವಿಚಾರಗಳನ್ನೂ ಹೊರಗೆ ಹೇಳಲಾರರು. ಇದೆಲ್ಲ ನಿಜವಾದರೆ ಮತ್ತು ಸರ್ವ ದಿಕ್ಕಿನಲ್ಲೂ ಕೊಡದೆ ಇದ್ದು ಮಕ್ಕಳು ಕಷ್ಟಪಡುತ್ತಿರುವದಾದರೆ ಸರಕಾರವು ಕುರುಡುಬುದ್ಧಿಯಿಂದ ವರ್ತಿಸುತ್ತಿರುವದೂ, ಮಕ್ಕಳ ಪೋಷಕರು ಜಾಗೃತರಾಗದಿರುವದೂ ಶೋಚನೀಯ. ಇನ್ನಾದರೂ ಎಚ್ಚರಗೊಳ್ಳುವರೇ?

ಮನನೊಂದ ತಾಯಿ.

---

### ಪಿ. ಡಬ್ಲ್ಯು. ಇಲಾಖೆ.

ಪೊನ್ನಂಪೇಟೆ ಟ್ರಾವಲರ್ಸ್ ಬಂಗ್ಲೆ ರಸ್ತೆಬಳಿ ವ್ಯವಸಾಯ ಇಲಾಖೆಯವರ ಉಪಯೋಗಕ್ಕೆ ಒಂದು ಕಟ್ಟಡ ಕಟ್ಟಲು ಕಳೆದ ವರುಷ ಕೆಲಸ ಪ್ರಾರಂಭಿಸಿ ಜೂನ್ ತಿಂಗಳ ಅಂತ್ಯಕ್ಕೂ ಕೆಲಸ ಪೂರೈಸದೆ, ಗೋಡೆ ಎದ್ದು, ಜಿಂಕ್‌ಶೀಟ್ ಹಾಕದೇ ಕೆನ್ನೆ ಮಳೆಯಲ್ಲಿ ಮಳೆ ಜೋರಾಗಿ ಗೋಡೆ ಮುರಿದು ಸಮೇತ ಬಿದ್ದು ನೆಲಸಮವಾಯಿತು! ಹಾಗಿ ಜನರ ಕಟ್ಟಡ ಕೆಲಸವಾದರೆ ೨ ತಿಂಗಳ ಕೆಲಸ. ಈ ಇಲಾಖೆಯವರಿಗೆ ೬ ತಿಂಗಳಾದರೂ ಪೂರೈಸದೆ ಎಂಟು ಒಂಭತ್ತು ಸಾವಿರ ರೂಪಾಯಿ ನಷ್ಟಪಡಿಸಿರುವುದಾಗಿ ತಿಳಿಯುತ್ತೆ. ಇದೆಲ್ಲಾ ಯಾರ ಹಣ? ನಷ್ಟಕ್ಕೆ ಜವಾಬ್ದಾರರು ಯಾರು? ಇಂಥಾ ಅನರ್ಥ ಮಾಡಲು ಕಾರಣವೇನು? ಕಟ್ಟಡ ಸಾಮಾನು ಪಿಕ್ಕಾಪಾಲಾಗಿ ಬಿದ್ದಿದೆ. ನಷ್ಟದ ಗೋಚರವೇ ಇಲ್ಲವೆ?

ಈ ವರ್ಷವೂ ಇಟ್ಟಿಗೆ ಸುಟ್ಟು ಕಾಣುತ್ತೆ. ಬಿದ್ದಗೋಡೆ ಮರವುಟ್ಟು ಜಿಂಕ್‌ಶೀಟ್ ಬಿದ್ದಲ್ಲೇ ಕಾಣುತ್ತೆ. ಈ ವರುಷ ಜೂನ್ ಅಂತ್ಯವಾದರೂ ಕೆಲಸ ಪೂರೈಸುತ್ತೊ ಇಲ್ಲವೋ? ವ್ಯವಸಾಯ ಇಲಾಖೆಯವರು ಆಫೀಸ್ ಬಾಡಿಗೆ ಗೊಬ್ಬರ ಸ್ಟಾಕ್ ರೂಮ್ ಬಾಡಿಗೆ ಕೊಟ್ಟು ಕಾಲ ಕಳೆಯುತ್ತಿದ್ದಾರೆ.

ಇಂಥಾ ನಷ್ಟ ಮತ್ತು ಮಂದ ವರ್ತನೆ ಸರಿಯಲ್ಲ. ಇನ್ನಾದರೂ ಸಮ್ಮಂಧಪಟ್ಟ ಇಲಾಖೆಯವರು ಆದಷ್ಟು ಜಾಗ್ರತೆಯಿಂದ ಕಟ್ಟಡ ಕೆಲಸ ಪೂರೈಸುವರೇ?

M. B. S.

---

### ಸಹಾಯ ಯೋಗ್ಯ.

ಮಹಾ ಶಿವರಾತ್ರಿಗೆ ದಕ್ಷಿಣ ಕಾಶಿ ಎನಿಸಿದ ಭಾಗಮಂಡಲ ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿ ಶ್ರೀರಾಮ ಭಕ್ತಾದಿಗಳೆಲ್ಲಾ ಸೇರಿ ಕಟ್ಟಿಸಿರುವ ಶ್ರೀರಾಮ ಮಂದಿರವನ್ನು ನನ್ನ ಸ್ನೇಹಿತರೊಡನೆ ನೋಡಿದೆ. ಯಾತ್ರಿಕರಿಗೆ ಉಳಕೊಳ್ಳಲು ಬಹಳ ಪ್ರಯೋಜನಕಾರಿಯಾಗಿರುವ ಈ ಕಟ್ಟಡವನ್ನು ಕಟ್ಟಿದವರಿಗೆ ವಂದಿಸದೆ ಸಾಧ್ಯವಿಲ್ಲ. ಇಲ್ಲಿ ಉಳಕೊಂಡವರಿಗೆ ಅಡಿಗೆಮಾಡಿ ಊಟ ಮಾಡುವ ಸೌಕರ್ಯವಿಲ್ಲ. ಈ ವಿಚಾರ ಕೇಳಲಾಗಿ ಈ ಶ್ರೀರಾಮ ಮಂದಿರದ ಅಧ್ಯಕ್ಷರು ಒಂದು ಭೋಜನ ಶಾಲೆಯನ್ನು ಕಟ್ಟುವ ಏರ್ಪಾಡು ಮಾಡಿಕೊಂಡಿದ್ದರೂ ಹಣದ ಅಭಾವದಿಂದ ಯೋಜನೆಯು ಹಾಗೆಯೇ ಉಳಿದಿದೆಯೆಂದೂ ಇದೂ ಅಲ್ಲದೆ ನೀರಿನ ಸೌಕರ್ಯಕ್ಕಾಗಿ ಬಾವಿಯನ್ನು ತೆಗೆಯುವ ಏರ್ಪಾಡಿದ್ದು ಅದೂ ಹಣದ ಅಡಚಣೆಯಿಂದ ಬಾಕಿಯಾಗಿರುತ್ತೆ ಎಂದೂ ಹೇಳಿದರು. ಆದುದರಿಂದ ಈ ಮೇಲಿನ ಸೌಕರ್ಯಗಳನ್ನು ಒದಗಿಸುವುದು ಅಶ್ಯಗತ್ಯ. ಇದರಿಂದ ಯಾತ್ರಿಕರಿಗೆ ತುಂಬಾ ಪ್ರಯೋಜನವಿದೆ. ನಮ್ಮ ದೇಶದ ಸರ್ವ ಭಕ್ತರೂ ಉದಾರ ಮನಸ್ಸುಮಾಡಿ ಧನಸಹಾಯಮಾಡಿ ಯೋಜನೆಯನ್ನು ನೆರವೇರಿಸಲು ಸಹಾಯ ಮಾಡಿದರೆ ಸರ್ವ ಜನೋಪಯೋಗಿ ಈ ಕೆಲಸದಿಂದ ಎಲ್ಲರ ಹಿತಸಾಧಿಸಿದಂತಾಗುವುದು.

[illegible]

---

*Coorg Civil Surgeon's Office,*
*Mercara, the 25th Feb. 1950*

## WANTED.

Six women candidates to undergo training, as Rural Midwives, at the Civil Hospital, Mercara, for 12 months, on a stipend of Rs. 25/- per mensem and Rs. 50/- towards equipment allowance after the completion of training.

The candidates must have completed III Form examination and must be between 25 and 35 years of age. Those living in villages will be given preference.

Relaxation of age limit and educational qualification, in special cases, will be considered, if candidate deserved selection on other considerations. Candidates with higher qualifications will be preferred.

Applications must reach the Civil Surgeon, Coorg, Mercara, on or before 25-3-50. The course will commence from 1-4-1950.

ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ ತಾ. ೨೫-೨-೫೦

## ಬೇಕಾಗಿದ್ದಾರೆ.

ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಗ್ರಾಮಾಂತರ ಸೂಲಗಿತ್ತಿಯರಾಗಿ ತರಬೇತು ಹೊಂದಲು ಆರು ಜನ ಉಮೇದುವಾರರು ಬೇಕಾಗಿದ್ದಾರೆ. ತರಬೇತಿನ ಅವಧಿಯು ೧೨ ತಿಂಗಳುಗಳ ಪರ್ಯಂತ ಮಾಸಿಕ ರೂ. ೨೫/- ರ ವಿದ್ಯಾರ್ಥಿ ವೇತನವೂ ತರಬೇತು ಪೂರೈಸಿದ ನಂತರ ಅವಶ್ಯವಿರುವ ಸಾಹಿತ್ಯಗಳಿಗಾಗಿ ರೂ. ೫೦/- ಧನಸಹಾಯವೂ ಕೊಡಲ್ಪಡುವದು.

ಉಮೇದುವಾರರು ಮೂರನೇ ಫಾರಂ ಪೂರೈಸಿದವರಾಗಿದ್ದು ೨೫ ರಿಂದ ೩೫ ವಯಸ್ಸಿನೊಳಗಿರುವವರಾಗಿರಬೇಕು. ಗ್ರಾಮಾಂತರದಲ್ಲಿರುವವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವದು.

ಇತರ ಕಾರಣಗಳಿಂದ ಆರಿಸಲ್ಪಡಲು ಯೋಗ್ಯರಾಗಿದ್ದರೆ ವಯಸ್ಸಿನ ಮತ್ತು ವಿದ್ಯಾ ಶರತುಗಳನ್ನು ವ್ಯತ್ಯಾಸ ಮಾಡುವದನ್ನು ಆಲೋಚಿಸಲಾಗುವದು. ಹೆಚ್ಚಿನ ಯೋಗ್ಯತೆ ಇರುವವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲ್ಪಡುವದು.

ಅರ್ಜಿಗಳು ತಾರೀಕು ೨೫-೩-೫೦ ರೊಳಗೆ ಸಿವಿಲ್ ಸರ್ಜನ್ ಕೊಡಗು ಮಡಿಕೇರಿ ಇವರಿಗೆ ಮುಟ್ಟಬೇಕು. ತರಬೇತು ತಾ. ೧-೪-೫೦ ರಿಂದ ಪ್ರಾರಂಭವಾಗುವದು.

ಟಿ. ಬಿ. ಮೇದಪ್ಪ,
ಸಿವಿಲ್ ಸರ್ಜನ್, ಕೊಡಗು.

---

(೪ ನೇ ಪುಟದಿಂದ ಸಾಗಿದ್ದು)

(೯) ಪ್ರಾಂತೀಯ ಕಾಂಗ್ರೆಸು ಸಮಿತಿಯವರು ಕಾಂಗ್ರೆಸು ಪಂಚಾಯಿತಿ ಚುನಾವಣೆಗಳ ಬಗ್ಗೆ ಒಂದು ವೇಳಾಪತ್ರಿಕೆಯನ್ನು ಮಾಡುವರು. ಆ ಅವಧಿಯಲ್ಲಿ ಚುನಾವಣೆಗಳು ನಡೆಯುವವು.

(೧೦) [ಅ]. ಪ್ರತಿಯೊಂದು ಪಂಚಾಯತಿಯ ಚುನಾವಣೆ ಕಾರ್ಯಕ್ರಮವು ತಾಲೂಕು, ಪಟ್ಟಶೀಲ, ಮಹಾಲ, ಸರ್ಕಲ್ [illegible] ಶಹರ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಪ್ರಸಿದ್ಧ ಮಾಡಲಾಗುವದು. ಈ ಕಾರ್ಯಕ್ರಮದಲ್ಲ [೧] ನಾಮಪತ್ರ ಕೊಡುವ ಹಾಗೂ ಪರಿಶೀಲನೆಯ ತಾರೀಕುಗಳು. (೨) ನಾಮಪತ್ರ ಪರಿಶೀಲನೆಯ ಪರಿಣಾಮವನ್ನು ಪ್ರಸಿದ್ಧ ಮಾಡುವ ತಾರೀಕು. (೩) ಅಪೀಲು ಮಾಡುವ ತಾರೀಕು ಹಾಗು (೪) ಚುನಾವಣೆ ತಾರೀಕುಗಳನ್ನು ಕಾಣಿಸಬೇಕು.

(೧೦) [ಬ] ಚುನಾವಣೆಯ ಕಾರ್ಯಕ್ರಮವನ್ನು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧ ಮಾಡಿ, ಡಂಗುರ ಸಾರಿಸಿ, ಇಲ್ಲವೆ ಹಸ್ತಪತ್ರಿಕೆಗಳನ್ನು ಹಂಚಿ-ಹಚ್ಚಿ ಜನರಿಗೆ ಗೊತ್ತಾಗುವಂತೆ ಜಾಹೀರು ಮಾಡಬೇಕು.

(೧೧) ಚುನಾವಣೆಗೆ ನಿಲ್ಲುವ ಉಮೇದುವಾರನು ಒಂದು ರೂಪಾಯಿ [೧-೦-೦] ಫೀ ಯನ್ನು ನಾಮಪತ್ರದೊಂದಿಗೆ ತುಂಬಬೇಕು. ಮತ್ತು ನಾಮಪತ್ರವನ್ನು ಆ ಏರಿಯದ ತಾಲೂಕು ಚುನಾವಣೆ ಅಧಿಕಾರಿಯ ಕಡೆಗೆ ಸಮಯದಲ್ಲಿ ಮುಟ್ಟಿಸಬೇಕು. ತಡವಾಗಿ ಬಂದ ನಾಮಪತ್ರಗಳು ನಿರಾಕರಿಸಲ್ಪಡುವವು. ತಾಲೂಕು ಚುನಾವಣೆಯ ಅಧಿಕಾರಿಯು ಗೊತ್ತು ಮಾಡಿದ ಅವಧಿಯೊಳಗಾಗಿ ಬಂದ ನಾಮಪತ್ರಗಳ ಪರಿಶೀಲನೆ ಮಾಡಿ ಹಾಗು ಪರಿಶೀಲನೆಯ ಪರಿಣಾಮವನ್ನು ಪ್ರಸಿದ್ಧ ಮಾಡಿ ಪಂಚಾಯತಿಯ ಚುನಾವಣೆಯ ಅಧಿಕಾರಿ ಕಡೆಗೆ ಸ್ವೀಕೃತವಾದ ನಾಮಪತ್ರಗಳನ್ನು ಕೊಡುವನು. ನಿರಾಕರಿಸಲಾದ ಉಮೇದುವಾರರು ಜಿಲ್ಲಾ ಚುನಾವಣೆ ಅಧಿಕಾರಿಯ ಕಡೆಗೆ ಅಪೀಲು ಮಾಡಿಕೊಳ್ಳಬಹುದು.

(೧೨) ಪಂಚಾಯತಿ ಚುನಾವಣೆ ಅಧಿಕಾರಿಯು ಗೊತ್ತು ಮಾಡಿದ ತಾರೀಕು, ಸ್ಥಳ, ವೇಳೆಗಳಲ್ಲಿ ಪಂಚಾಯತಿಯ ಮತದಾರರ ಸಭೆ ಕೂಡಿಸಿ ಸಾಧಾರಣವಾಗಿ ಕೈಯೆತ್ತಿಸಿ ಅವಶ್ಯವೆನಿಸಿದರೆ ಗುಪ್ತ ಮತದಾನ ಮಾಡಿಸಿ ಪಂಚರ ಚುನಾವಣೆ ನಡೆಸುವನು. ಚುನಾವಣೆಯ ತಾರೀಕ, ಸ್ಥಳ ಮತ್ತು ವೇಳೆಗಳನ್ನು ಪಂಚಾಯತಿಯ ಹದ್ದಿನಲ್ಲಿ ಪ್ರಸಿದ್ಧಿಸಬೇಕು. ಚುನಾವಣೆಯು ಪಂಚಾಯತಿಯ ಕಚೇರಿ ಇರುವ ಊರಲ್ಲಿಯೇ ನಡೆಯುವದು. ಚುನಾವಣೆಯ ಅಧಿಕಾರಿಯೇ ಸಭೆಯ ಅಧ್ಯಕ್ಷನಾಗುವನು.

(೧೩) ಪಂಚಾಯತಿಯ ಚುನಾವಣೆ ಅಧಿಕಾರಿಯು ಚುನಾವಣೆಯ ಪರಿಣಾಮದ ವರದಿಯನ್ನು ಕೂಡಲೇ ತಾಲೂಕು ಚುನಾವಣೆ ಅಧಿಕಾರಿಯ ಕಡೆಗೆ ಕೊಡುವನು. ಈ ವರದಿಯಲ್ಲಿ ಪ್ರತಿಯೊಬ್ಬ ಉಮೇದುವಾರನು ದೊರಕಿಸಿದ ಮತಗಳ ಹಾಗು ಜಯ ಹೊಂದಿದ ಉಮೇದುವಾರರ ಮಾಹಿತಿಕೊಡತಕ್ಕದ್ದು.

ವೆಂಕಟೇಶ ಮೊಗಡಿ.
ಪ್ರಧಾನ ಕಾರ್ಯದರ್ಶಿ.

(೩ನೇ ಪುಟದಿಂದ ಸಾಗಿದ್ದು)

ಗಳಿದ್ದವು. ಮತದಾರರಲ್ಲಿ ೧೧,೯೯೫, ೧೯೩ ಜನರು ಲೇಬರ್ ಪಕ್ಷಕ್ಕೂ, ೮,೬೬೬, ೫,೫೬೬ ಜನರು ಟೋರಿ ಪಕ್ಷಕ್ಕೂ, ೨,೨೩೯,೬೬೮ ಜನರು ಲಿಬರಲ್ ಪಕ್ಷಕ್ಕೂ ಆಗ ಮತ ಕೊಟ್ಟಿದ್ದರು. ಈ ಚುನಾವಣೆಯಲ್ಲಿ ಲೇಬರ್ ಪಕ್ಷವು ಸುಮಾರು ೭೫ ಸ್ಥಾನಗಳನ್ನು ಕಳೆಕೊಂಡರೂ ಕಳೆದ ಚುನಾವಣೆಗಿಂತಾ ಹತ್ತು ಲಕ್ಷಕ್ಕಿಂತಾ ಹೆಚ್ಚಿನ ಜನರ ಮತವನ್ನು ಪಡೆದಿದೆ. ಕನ್‌ಸರ್ವೇಟಿವ್ ಪಕ್ಷದವರು ಕಳೆದ ಸಾರಿಗಿಂತಾ ಸುಮಾರು ೪೦ ಲಕ್ಷ ಹೆಚ್ಚಿನ ಮತ ಪಡೆದಿದ್ದಾರೆ.

ಲೇಬರ್ ಪಕ್ಷಕ್ಕೆ ಬಂದ ಬಹುಮತವು ತುಂಬಾ ಕಡಿಮೆಯೆಂದೂ ಅದ್ದರಿಂದ ಸರಕಾರವನ್ನು ಸರೀಸಾಗಿ ನಡೆಸುವದು ಕಷ್ಟವೆಂದೂ ಹೇಳಲಾಗುತ್ತಿದೆ. ಇದಕ್ಕೆ ಪ್ರಧಾನ ಅಟ್ಲೀಯವರು ಉತ್ತರವೀಯುತ್ತಾ ಅದು ಹಾಗಾಗ ವದಿಲ್ಲವೆಂದೂ ಅಲ್ಪ ಸಂಖ್ಯಾತ ಪಕ್ಷಗಳೂ ಕೂಡ ಸರಕಾರ ನಿರ್ವಹಿಸಿರುವ ನಿರ್ವಸನವಿದೆಯೆಂದೂ ಬಹುಮತವಿರುವ ಲೇಬರ್ ಪಕ್ಷವು ನಿರಂತರವಾಗಿ ತನ್ನ ಆಡಳಿತವನ್ನು ಮುಂದುವರಿಸುವದೆಂದೂ ಹೇಳಿದ್ದಾರೆ.

ಮುಂದಿನ ವಾರ ಮಂತ್ರಿಮಂಡಳ ಏರ್ಪಡುವದು.

# ಚಹಾದ ಕಥೆ.

ಯಾವುದೊಂದು ವಸ್ತುವಿನ ಪ್ರಯೋಜನವು ತಿಳಿದು ಹಿಡಿಯಲ್ಪಡುವುದಕ್ಕೆ ಒಂದೊಂದು ಮನೋರಂಜಕ ಪ್ರಸಂಗವು ಕಾರಣವಾದದ್ದು ಕಂಡುಬರುತ್ತದೆ. ಚಹಾದ ಉಪಯೋಗವೂ ಇದೇ ಮೇರೆಗೆ ಕಂಡು ಹಿಡಿಯಲ್ಪಟ್ಟಿತೆಂದು ಹೇಳಲ್ಪಟ್ಟಿದೆ.

ಚಹಾ ಇದು ಮೊದಲು ಚೀನದಲ್ಲಿ ಪ್ರಾರಂಭವಾಯಿತು ಎಂದು ಗೊತ್ತಾಗಿದೆ. ಆದರೆ ಈ ಬಗ್ಗೆ ಅನೇಕ ಅನೇಕ ಮತಭೇದಗಳಿವೆ. ಈ ವಿಷಯದಲ್ಲಿನ ಅಭಿಪ್ರಾಯಗಳು ಕಳೆದ ಸಾಲ್ಯಾಸ ವಿಸ ವರ್ಷಗಳಿಂದ ನ್ಯಕ್ತವಾಗಲ್ಪಟ್ಟಂದವಾಗಿರುವದು ಗೊತ್ತಾಗಿದೆ. ಪೂರ್ವ ಶತಮಾನದಲ್ಲಿ, ಚೀನ ಪ್ರಸಿದ್ಧ ತತ್ವಜ್ಞಾನಿ ಚಹಾ ಕುಡಿದರೆ ಮನಸ್ಸಿಗೆ ವಿಚಾರ ಶಕ್ತಿ ಸ್ಥಿರ ಧಾರಣ ಶಕ್ತಿ ಬರುವದೆಂದು ಹೇಳಿದ ವಿಷಯವು ತಿಳಿದುಬಂದಿದೆ. ಜಪಾನಿ ಪುರಾಣಗಳಲ್ಲಿ ಬಂದ ಕಥೆ ಈ ರೀತಿಯಾಗಿದೆ:—

ಅಲ್ಲಿಯ ಒಬ್ಬ ಬೌದ್ಧ ಸನ್ಯಾಸಿಯು ಧ್ಯಾನದಲ್ಲಿ ನಿರತನಾಗಿದ್ದನು. ಆತನು ಧ್ಯಾನದಲ್ಲಿ ಆ ವಿಷಯಕ್ಕಾಗಿ ತನ್ಮಯನಾಗಿ ದೃಢ ಪ್ರತಿಜ್ಞೆಯಿಂದ ಧ್ಯಾನ ಮಾಡುತ್ತಿದ್ದನು. ಆದನ್ನು ಹಿಡಿದಿಟ್ಟುಕೊಳ್ಳಲಾಗುತ್ತಿತ್ತು. ಆತನು ಹಿಡಿದು ನಿದ್ರೆಯಿಂದ ಎಚ್ಚರವಾಗಿ ಒಂದು ಬೀಜ ಎಲೆಯನ್ನು ತಿನ್ನುತ್ತಿದ್ದನು. ಅದರಿಂದ ತನಗೆ ಉತ್ತೇಜನ ಬಂದಂತಾಗಿ ಹೆಚ್ಚಿನ ಜಾಗೃತ ಸ್ಥಿತಿಯು ಉಂಟಾಗುತ್ತದೆ ಎಂದು ಅವನಿಗೆ ತೋರುತ್ತಿತ್ತಂತೆ.

ಈ ಪ್ರಯೋಗಾಯ ಆವರ ಆ ಬಗೆಯನ್ನು ಕಂಡು, ಅಲ್ಲಿಯ ಜನರು ಆ ಎಲೆಯನ್ನು ಕಡಿದು ಕುಡಿಯಲು ಪ್ರಾರಂಭಿಸಿದರು. ಇದೇ ರೀತಿಯ ಅನೇಕ ಸಂಗತಿಗಳನ್ನು ಉಲ್ಲೇಖಗಳನ್ನೂ ನೋಡಿದರೆ ಚಹಾದ ಉಪಯೋಗವು ಬಹು ದಿನಗಳಿಂದ ನಡೆದು ಬಂದ ವಿಷಯವೆಂಬುದರಲ್ಲಿ ಸಂಶಯವೇನೂ ಇಲ್ಲ.

## ಇತಿಹಾಸ.

ಚಹಾ ಪಾನದ ವಿಷಯವು ಇಂದು ಹೆಚ್ಚಿನ ಗೌರವಸ್ಥಾನವನ್ನು ಪಡೆದಿದೆ. ಅದಿಲ್ಲವಾದರೆ ಯಾವ ಸಮಾರಂಭಗಳೂ ಪರಿಪೂರ್ಣವಾಗುತ್ತಿಲ್ಲ. ಯಾವುದೇ ಸಮಸ್ತ ವಿಷಯದಲ್ಲಿ ಗಣ್ಯ ಆಸನ ದೊರೆತರೂ ಇರುವಂತೆ ಚಹಾದಲ್ಲಿಯೂ ಇರುವದು. ಔಷಧವಂತೆ ಅದನ್ನು ಉಪಯೋಗಿಸಿದರೆ ಸಹಾಯ ಕಾರಿಯಾಗಿದೆ. ಅದನ್ನು ರೋಗಿಗೆ ಕುಡಿಸಿದರೆ ಉತ್ತೇಜನ, ಹಸಿರು ಹೊಟ್ಟೆ ಮತ್ತು ನಿಂಬೆಯನ್ನು ಕಡಿಮೆಮಾಡ ಪ್ರವ ಇದೇ ಮೊದಲಾದ ಸಹಾಯಗಳನ್ನು ಮಾಡುವುದು.

ಆದರೆ ಅದನ್ನು ಕುಡಿಯುವದನ್ನು ಒಂದು ಚಟವನ್ನಾಗಿ ಮಾಡಿಕೊಂಡರೆ ಅದರಿಂದ ಬಹಳ ಹಾನಿಯುಂಟು. ಅದರ ಪ್ರಯೋಜನದ ವಿಷಯವನ್ನು ತಿಳಿದುಕೊಂಡು ಅನೇಕರು ಹೊಗಳುತ್ತಿರುವಂತೆ ಅದೇ ಮೇರೆಗೆ ಅದರಿಂದಾಗುವ ಹಾನಿಯ ವಿಷಯದಲ್ಲಿಯೂ ಅನೇಕರು ಎಚ್ಚರಿಕೆ ಕೊಟ್ಟಿದ್ದಾರೆ. ಇಂಥ ಕಾವ್ಯವನ್ನು ದಿನಾದಿನ ಜೀವನದಲ್ಲಿ ಅದರ ಸ್ಥಾನಮಾನವ, ಸಾಕ್ಷಾತ್ತಾಗಿ ನೋಡಬಹುದಾಗಿದೆ.

ಓರ್ವ ಇಂಗ್ಲಿಷ್ ಜನರು 'ಚಹಾ ಕುಡಿಯುವವರು ಬೇರೆ ವಿಚಾರದ ಮೇಲೆ ಗಮನಕೊಡದೆ ಸರ್ವಸ್ವ ಕಳೆದುಕೊಳ್ಳುವರು' ಎಂದು ಹೇಳಿದ್ದಾನೆ.

ಮತ್ತೊಬ್ಬ ಪಾಶ್ಚಾತ್ಯ ಪ್ರವಾಸಿಯು ಇಂಗ್ಲೆಂಡಿನ ಜನರು ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಇಂಥ ಈ ಚಹಾದಿಂದ ತಮ್ಮ ಚೆಲುವಿಕೆಯನ್ನು ಕಳೆದುಕೊಂಡಿದ್ದಾರೆ' ಎಂದು ಬರೆದಿದ್ದಾನೆ.

ಬಂಗಾಲದ ಸರ್ ಪಿ. ಸಿ. ರಾಯರಿಂದಲೂ 'ಚಹಾ ವಿಷವೆಂದೂ' ಕರೆಯಲ್ಪಟ್ಟಿದೆ. ಬಹಳ ಹೊಟ್ಟೆಗೆ ಚಹಾ ಕುಡಿದರೆ ಅದು ಯಕೃತ್ತಿನ ಮೇಲೆ ಪರಿಣಾಮ ಮಾಡುತ್ತದೆ. ಅತಿಶಯಿಸಿ ಚಹಾ ಕುಡಿದರೆ ಸಾಮಾನ್ಯ ಆರೋಗ್ಯದ ಮೇಲೆ ಅದು ಪರಿಣಾಮ ಮಾಡುತ್ತದೆ' ಎಂದು ಹೇಳಿದ್ದಾರೆ.

ನಿಜವಾದ ಚಟಗಾರರು ಚಹಾವನ್ನು ಬರಿಹೊಟ್ಟೆಯಿಂದ ಕುಡಿಯುವುದೇ ಬಹಳ ಮತ್ತು ಲೆಕ್ಕವಿಲ್ಲದೆ ಅದನ್ನು ದಿವಸಕ್ಕೆ ಹತ್ತು ಹನ್ನೆರಡು ಸಲ ಕುಡಿಯುವವರೂ ಇದ್ದಾರೆ. ಅದರಿಂದ ಎಂತಹ ಪರಿಣಾಮವು ಆಗುವುದೆಂಬುದಕ್ಕೆ ಅನೇಕ ಸಾಕ್ಷಿಗಳಿವೆ.

## ಪೇಯ ಸಿದ್ಧತೆ.

ಚಹಾ ಮಾಡುವ ಪದ್ಧತಿಗಳಲ್ಲಿ ಅನೇಕ ಪ್ರಕಾರಗಳಿವೆ. ಯಾರಿಗೆ ಹೇಗೆ ಮಾಡಿದರೆ ರುಚಿಯೆನಿಸುವದೋ ಆ ರೀತಿಯಲ್ಲಿ ಅದನ್ನು ಸಿದ್ಧಮಾಡುತ್ತಾರೆ. ಪುಡಿಯನ್ನು ಸಿದ್ಧಗೊಳಿಸುವ ಅನೇಕ ಕಂಪನಿಗಳಿದ್ದು ಅವುಗಳ ಸಿದ್ಧತೆಯು ವಿವಿಧ ಸ್ವರೂಪದ್ದಾಗಿರುತ್ತದೆ. ದೇಶ ದೇಶಗಳ ಭಿನ್ನತ್ವದ ಮೂಲಕ ಈ ಪೇಯದ ಸ್ವರೂಪ ಮತ್ತು ಸಿದ್ಧತೆಗಳಲ್ಲಿ ವಿವಿಧತ್ವವು ಕಂಡುಬರುತ್ತದೆ.

ಉಷ್ಣಪಾನವು ಅಥವಾ ಬಿಸಿ ಆಹಾರದ ಸೇವನೆ ಅಪಾಯಕರವೆಂದು ವೈದ್ಯ ಪೂರ್ವಜರು ಮತ್ತು ಆರೋಗ್ಯ ಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ ಚಹಾಪಾನವು ಆ ಮಾತನ್ನು ಸಂಪೂರ್ಣವಾಗಿ ಅಲಕ್ಷಿಸುತ್ತದೆ. ಅಷ್ಟೇ ಏಕೆ? ಚಟಗಾರರು ಬಿಸಿಯಾದ ಮೂಲಕ ಚಹಾ ಎಷ್ಟೇ ಬಿಸಿಯಾಗಿದ್ದರೂ "ಅದಿದೆ" ಎಂಬ ಅಭಿಪ್ರಾಯಪಡುವ ಸಂಸ್ಕೃತಿಗೆ ಬಂದು ಮುಟ್ಟಿದರೆ.

ಹಾಗೆ ನೋಡಿದರೆ ಕೆಲವು ಕಡೆ ತಣ್ಣಗಾದ ಬಳಿಕ ಚಹಾ ಕುಡಿಯುವ ಸಂಪ್ರದಾಯವಿದೆ. ಚಹಾ ಕಷಾಯಕ್ಕೆ ಹಾಲು ಬೆರೆಸದೆ ಕುಡಿಯುವ ಪದ್ಧತಿಯು ಕೆಲವು ಕಡೆಗಳಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ತಾಪವನ್ನು ಕಾಣಬಹುದು. ಕಾಫಿಯಲ್ಲಿ ಕೂಡ ಹಾಲು ಹಾಕದೆ ಜನರು ಕುಡಿಯುತ್ತಾರೆ.

## ಅದರ ಪ್ರಸಾರ

ಚೀನದ ಕಡೆಗೆ ಬಂದ ಪ್ರವಾಸಿಗಳು ಚಹಾವನ್ನು ಪಾಶ್ಚಾತ್ಯ ದೇಶಗಳಿಗೆ ತಂದರು. ಡಚ್ಚರು ಆ ಕೆಲಸವನ್ನು ಮಾಡಿದರು. ಪೋರ್ಚುಗೀಸ್ ಪ್ರವಾಸಿಗಳಿಗೂ ಈ ವಿಷಯದ ಶ್ರೇಯಸ್ಸಿನ ಪಾಲು ಸಲ್ಲುತ್ತದೆ. ಅವರ ದ್ವಾರಾ ಯುರೋಪಕ್ಕೆ ೧೬೩೦ನೇ ಇಸ್ವಿಯಲ್ಲಿ ಹೋಯಿತು. ಇಂಗ್ಲೆಂಡವು ಅದರ ಸವಿಯನ್ನು ಮೊದಲಿಗೆ ೧೬೫೭ರಲ್ಲಿ ನೋಡಿತು. ಅಮೇರಿಕೆಯಲ್ಲಿ ಅದು ೧೬೭೦ರಲ್ಲಿ ಪ್ರವೇಶಿಸಿತು. ಮೊದಮೊದಲು, ಅದರ ಉಪಯೋಗವು ಶ್ರೀಮಂತರಲ್ಲಿ ನಡೆಯುತ್ತಿತ್ತು.

ನಿಜವಾಗಿ ನೋಡಿದರೆ ಹಿಂದೂಸ್ಥಾನಕ್ಕೆ ಈ ವಸ್ತುವು ಬಹಳ ತಡವಾಗಿ ಬಂದಿತು. ಇದರ ಉಪಯೋಗವು ನಮ್ಮಲ್ಲಿ ಸಾರ್ವತ್ರಿಕವಾಗಿ ಹಬ್ಬಿದುದೆಂದರೆ, ೨೦ನೇ ಶತಮಾನದ ಆರಂಭದಲ್ಲಿಯೇ ಎಂದು ಹೇಳಬೇಕು. ಆದರೆ ಅದನ್ನು ಬೆಳೆಯುವ ಕಾರ್ಯವು ಮಾತ್ರ ಹತ್ತೊಂಬತ್ತನೇ ಶತಮಾನದ ಮೊದಲನೆಯ ಅರ್ಧದಲ್ಲಿಯೇ ಪ್ರಾರಂಭವಾಯಿತು.

## ವ್ಯಾಪಾರೀ ವಿಸ್ತಾರ

ಚೀನಕ್ಕೆ ಹತ್ತಿರ ಹಿಂದುಸ್ಥಾನದಲ್ಲಿ ಮತ್ತು ಬರ್ಮಾದಲ್ಲಿಯೂ ಈ ವನಸ್ಪತಿಯು ಬೆಳೆಯುತ್ತಿರಬೇಕೆಂಬ ಮಾತು ಬ್ರಿಟಿಷರ ತಲೆಯಲ್ಲಿ ಬಂದಿತು. ಏಕೆಂದರೆ ಚೀನದ ಕಡೆಗೆ ಅದರ ಹುಟ್ಟುವಳಿಯು ಗುತ್ತಿಗೆಯು ಇರುವುದು ಅವರಿಗೆ ಲಾಭಕರವಾಗಿ ತೋರಲಿಲ್ಲ. ಅದ್ದರಿಂದ ಅವರು ತಮ್ಮಲ್ಲಿನ ವನಸ್ಪತಿ ಶಾಸ್ತ್ರಜ್ಞರನ್ನು ಕರೆಸಿ ಹಿಂದುಸ್ಥಾನದಲ್ಲಿ ಅದನ್ನು ಬೆಳೆಯುವ ಸಾಧ್ಯಾಸಾಧ್ಯತೆಯ ಬಗ್ಗೆ ಸಲಹೆ ಪಡೆದರು. ಕೆಲವು ಪಾದ್ರಿಗಳನ್ನು ಚೀನಕ್ಕೆ ಕಳುಹಿಸಿ ಅದರ ವಿವರಗಳನ್ನು ತಿಳಿದುಕೊಂಡು ಬರಲು ಹೇಳಿದರು. ಅದರಿಂದ ಹೆಚ್ಚಿನ ಲಾಭವೇನೂ ಆಗಲಿಲ್ಲ.

೧೮೩೩ರಲ್ಲಿ ರಾಬರ್ಟ ಬ್ರೂಸ ಎಂಬುವನು ಆಸಾಮದಲ್ಲಿ ಚಹಾ ಬೆಳೆಯುತ್ತದೆ ಎಂಬ ಸತ್ಯ ಕಂಡುಹಿಡಿದು ಹೇಳಿದನು. ೧೮೩೮ರಲ್ಲಿ ಹಿಂದುಸ್ಥಾನದಲ್ಲಿ ಬೆಳೆದ ಚಹಾದ ಪೆಂಡಿಗಳನ್ನು, ಪರೀಕ್ಷೆಗಾಗಿ ಇಂಗ್ಲಂಡಕ್ಕೆ ಕಳುಹಿಸಿದರು. ಹೀಗೆಯೇ ಮುಂದಿನ ವರ್ಷಗಳಲ್ಲಿ ಅದರ ಮಾರಾಟವಾಗಲು ಪ್ರಾರಂಭವಾಯಿತು. ಮೊದಮೊದಲು ಈ ಉದ್ಯೋಗವನ್ನು ಸರಕಾರದಲ್ಲಿ ಸರಕಾರವೇ ನಡೆಸುತ್ತಿತ್ತು. ಆದರೆ ಮುಂದೆ ಅದರ ವ್ಯಾಪಾರವು ೧೮೩೯ ನೇ ವರ್ಷದಿಂದ ನಡೆಯ ಹತ್ತಲು; ೧೮೬೦ನೇ ಇಸ್ವಿಯಲ್ಲಿ ಅದನ್ನು ವೈಯಕ್ತಿಕ ಪ್ರಯತ್ನಕ್ಕೆ ಬಿಟ್ಟುಕೊಟ್ಟರು. ಅದನ್ನು ಕೂಡ ಬ್ರಿಟಿಷ ಕಂಪನಿಗಳೇ ಬಹಳ ದಿವಸಗಳ ವರೆಗೆ ನಡೆಸಿಕೊಂಡು ಬಂದವು. ಇತ್ತ ಕಡೆಗೆ ಅವರೂ ಬಿಟ್ಟು ಹೋದದ್ದರಿಂದ ಮತ್ತು ಹೋರಾಗ ಸ್ವರಾಜ್ಯದಿಂದ ಆ ಉದ್ಯೋಗವು ದೇಶೀಯರ ಕೈಯಲ್ಲಿ ಬರುತ್ತಿದೆ.

ಇಂದು ಭಾರತ, ಚೀನ, ಜಾಕಿಸ್ತಾನ, ಸಿಂಹಳದ್ವೀಪ, ಇಂಡೋನೇಶಿಯಾ, ಜಪಾನ, ಫ್ರಾನ್ಸೋಸಾ, ಮಲಯಾ, ಬರ್ಮಾ, ಕಾಂಗೋ, ಟಾಂಗಾಯಿಕಾ, ಫಿಜಿ, ಬ್ರೆಜಿಲ್, ನಾಟಾಲ್, ಸೌತ್ ಕ್ಯಾರೋಲಿನ್ಸ್, ದೇಶಗಳಲ್ಲಿ ಚಹಾ ಬೆಳೆಯುತ್ತಿದೆ. ಇವುಗಳಲ್ಲಿ ಚೀನದ ಹುಟ್ಟುವಳಿಯು ಎಲ್ಲಕ್ಕೂ ಹೆಚ್ಚು ಇದೆ. ಅದರ ಆಚೆಯದು ಹಿಂದುಸ್ಥಾನದ್ದೇ ಬರುತ್ತದೆ. ವ್ಯಾಪಾರದ ದೃಷ್ಟಿಯಿಂದ ಹಿಂದುಸ್ಥಾನವು ಎಲ್ಲಕ್ಕೂ ಹೆಚ್ಚಿನ ಕೇಂದ್ರವಾಗಿದೆ.

ಜೈಹಿಂದ್.


ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ರೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮುಖ್ಯವಾಗಿ ಜೋಡಿ ತ್ತಿರುವ ಪಾಲುಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮಾಲನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, ತಾ: 30-9-4?

ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೆನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ॥ ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ನಮ್ಮ ಹೊಸ ವಿಸ್ತೃತದ ಯೋಜನೆಯಲ್ಲಿ ಅಧಿಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ. ಯು. ಅಚ್ಚಪ್ಪ,
ಏಜನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಕೆಂಪನಕಟ್ಟೆ, ಬೆಂಗಳೂರು.



# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಹೊಳೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದರೆ ಮಾತ್ರ ದೊರೆಯುವವು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–28



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸ್ಥಾಪನೆಯಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | „ |

1,28,000 ಕ್ಕೂ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

## ಎಂಪೈರ್ ಆಫ್ ಇಂಡಿಯಾ

## ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಷನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ
ಎಂಪೈರ್ ಹೌಸ್, ಫೋರ್ಟ,
ರೋಡ್, ಫೋರ್ಟ್, ಬೊಂಬಾಯಿ.

ಉಪ ಕಛೇರಿ
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.



# CRESCENT

FOR PROTECTION AND SERVICE.

It is best to represent and insure with
The CRESCENT Insurance Co., Ltd,
*H. O. BOMBAY.* [*Established 1919.*

*For particulars write to:*

Sri B. A. Poovaiah
*Organiser*
*Pollibetta, Coorg.*

or

The Branch Manager,
*22 B Mahatma Gandhi Road,*
*Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



**ಭದ್ರತೆ! 17 ವರ್ಷಗಳ ... ಅನುಕೂಲತೆ !!**
ಅನುಭವಶೀಲತೆ!

# ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | „ | 3½% |
| 12 | „ | 3¼% |
| 24 | „ | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ

ಶಾಖೆಗಳು:— ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

**ಒಟ್ಟು ದುಡಿಯುವ ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.**

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**



# ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 65,000. |
| ಇತರ ನಿಧಿಗಳು | ರೂ. | 28.000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲಾ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವೆಸ್ಟರ್ನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಡಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾನ್ಚಿ.



**ಶ್ರೀ ಟಿ. ಎಸ್. ಗೋವಿಂದರಾಜು, "ಕೊಡಗು" ಏಜಂಟರು, ವೀರರಾಜಪೇಟೆ.**



**Edited, Printed and Published by P. I. Belliappa at 'Kodagu Press, Mercara, for 'Kodagu' Ltd.**

Reg. No. M. 1500.
'KODAGU' MERCARA, (Coorg).

# ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೦-೩-೧೯೫೦ನೇ ಶುಕ್ರವಾರ | ಸಂಚಿಕೆ ೪೧

## ಗಾಂಧೀಜಿ ಮತ್ತು ವಿಶ್ವಶಕ್ತಿ

[ಜಯಹಿಂದ್ ಪತ್ರಿಕೆಯಿಂದ]

ತಾ. ೨೬-೨-೫೦ನೇ 'ಹರಿಜನ' ಸಂಚಿಕೆಯಲ್ಲಿ ಅದರ ಸಂಪಾದಕರಾದ ಶ್ರೀ ಕೆ. ಜಿ. ಮಶ್ರೂವಾಲಾ ಅವರು 'ಗಾಂಧಿ ಮತ್ತು ಮಾರ್ಕ್ಸ್' ಈ ತಲೆಬರಹದ ತಮ್ಮ ಲೇಖನದಲ್ಲಿ ಗಾಂಧೀಜೀಯವರು ಈ ವಿಶ್ವ ಮತ್ತು ಅದರ ಸ್ವರೂಪಗಳ ಬಗ್ಗೆ ಯಾವ ದೃಷ್ಟಿಯನ್ನು ಇಟ್ಟುಕೊಂಡಿದ್ದರೆಂಬುದನ್ನು ಈ ಕೆಳಗಿನ ಶಬ್ದಗಳಲ್ಲಿ ಹೇಳಿದ್ದಾರೆ. ಆ ಶಬ್ದಗಳು ತಮ್ಮವೆಂದೂ ಅವುಗಳು ವ್ಯಕ್ತಪಡಿಸುವ ಭಾವವು ಅವರದಾಗಿತ್ತೆಂದೂ ಅವರು ಬರೆದಿದ್ದಾರೆ.

### ಗಾಂಧೀಜೀಯವರ ದೃಷ್ಟಿ.

'ಇಡೀ ಜೀವನವು ಒಂದೇ ಆಗಿರುವಾಗ ಮತ್ತು ನನ್ನನ್ನು ಹಿಡಿದುಕೊಂಡು ಇಡೀ ವಿಶ್ವವು ಪರಮಾತ್ಮನ ವ್ಯಕ್ತಸ್ವರೂಪವೇ ಆಗಿರುವಾಗ, ಯಾರನ್ನು ನಾನು ನನ್ನ ವೈರಿಯೆಂದು ಕರೆಯಬಹುದು? ಯಾವ ದುಷ್ಟ ಪ್ರಾಣಿಯನ್ನು ನಾನು ದ್ವೇಷಿಸಬಹುದು? ಯಾರಿಗೆ ನಾನು ಬೆದರಬೇಕು ಅಥವಾ ಆ ವಿಷಯದಲ್ಲಿ ಬೆದರಿಕೆಗೆ ಅಸ್ಪದಕೊಡಬೇಕು? ಎರಡನೆಯವರಿಗಿಂತ ನನ್ನ ಹತ್ತಿರದವರು ಯಾರು ಎಂದು ತಿಳಿಯಬೇಕು? ನನ್ನ ಕಾರ್ಯಸಿದ್ಧಿಗಾಗಿ ಯಾರನ್ನು ಬಲಿಕೊಡಲು ನಾನು ವಿಚಾರಿಸಬೇಕು?

ನನ್ನ ಅಸ್ತಿತ್ವವು ಪರಮಾತ್ಮನಿಗೆ ಸೇರಿದ್ದಾಗಿದ್ದರೂ, ಅವನ ಅಗಾಧ ಕಟ್ಟಳೆಯು ನನ್ನನ್ನು ನನ್ನ ದೇಶಕ್ಕೆ ಕಟ್ಟಿ ಹಾಕಿವೆ. ಆ ಕಟ್ಟಳೆಯೇ ನನ್ನಲ್ಲಿ ನನ್ನ ದೇಹದ ಬಗ್ಗೆ ಹೆಚ್ಚಿನ ಆಸ್ಥೆಯನ್ನು ಉಂಟುಮಾಡಿದೆ, ದೇಹವನ್ನು ಸುಸ್ಥಿತಿಯಲ್ಲಿ ಮತ್ತು ಜೀವಂತವಾಗಿ ಇಟ್ಟುಕೊಳ್ಳಬೇಕೆಂದು ಅದು ನನಗೆ ಪ್ರೇರಿಸುತ್ತದೆ. ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಿಲ್ಲ ಮತ್ತು ಅದು ಸರಿಯಾದ ವಿಚಾರವೆಂದು ಭಾವಿಸುತ್ತಿಲ್ಲ. ನನ್ನಲ್ಲಿಯೇ ಅನೇಕ ನ್ಯೂನತೆಗಳಿದ್ದರೂ ಅವುಗಳು ನನ್ನನ್ನು ಹೀಗೆ ಅಲೆದಾಡಿಸಲು ಹಚ್ಚಲಾರವು. ಆದ್ದರಿಂದ ನ್ಯೂನತೆಗಳುಳ್ಳ ಯಾವುದೇ ಇತರ ಪ್ರಾಣಿಯನ್ನು ಕೊಲ್ಲಲು ನಾನು ಹೇಗೆ ಮನಸ್ಸು ಮಾಡಬಲ್ಲೆನು?

ವಿಶ್ವವು ದೇವರ ಒಂದು ವ್ಯಕ್ತಸ್ವರೂಪವೆಂದು ನಾನು ಗಾಢವಾಗಿ ನಂಬುತ್ತೇನೆ ಮತ್ತು ಅವನನ್ನು ಹೊರತುಪಡಿಸಿದರೆ ಅದಕ್ಕೆ ಅಸ್ತಿತ್ವವೇ ಇಲ್ಲವೆಂದೂ ನಾನು ತಿಳಿಯುತ್ತೇನೆ. ಆದರೆ ಆ ವಿಚಾರಕ್ಕೆ ಒಪ್ಪುವ ಮಟ್ಟಕ್ಕೆ ನಾನು ಮುಟ್ಟಿಲ್ಲ. ವಾಸನೆ, ಪೂರ್ವಗ್ರಹ, ಹಿಂಸೆ ಮತ್ತು ಪಕ್ಷಪಾತಗಳಿಂದ ನಾನು ಇನ್ನೂ ಮುಕ್ತನಾಗಿಲ್ಲ. ಗೊತ್ತಾಗಿ ಅಥವಾ ಗೊತ್ತಾಗದಲೆ ನನ್ನ ನಿಜಸ್ವರೂಪವು ಆಗಾಗ ಹೊರಬೀಳುತ್ತದೆ. ನಾನು ತಿಳಿದುಕೊಂಡಂತೆ ಸತ್ಯವಿದ್ದರೆ, ನನ್ನ ವಿದ್ಯೆಗೆ ತಕ್ಕುದಾದ ಮಟ್ಟವನ್ನು ಮುಟ್ಟಲು ನಾನು ಅಪ್ರಾಮಾಣಿಕವಾಗಿ ಯತ್ನಿಸುವುದು ಅವಶ್ಯವಿದೆ. 'ಅಹಿಂಸೆಯನ್ನು 'ಶ್ರೇಷ್ಠ ಧರ್ಮ'ವೆಂದು ನಾನು ತಿಳಿದುಕೊಂಡರೆ ಮಾತ್ರ ನನ್ನ ಪ್ರಯತ್ನದಲ್ಲಿ ನನಗೆ ಯಶಸ್ಸು ಸಿಗುವುದು ಸಾಧ್ಯವಿದೆ. ಅದಕ್ಕಾಗಿ ನಾನು ನನ್ನ ವಿಚಾರ, ಉಚ್ಚಾರ, ಆಚಾರಗಳನ್ನು ಬೆಸೆದುಕೊಳ್ಳಬೇಕು. ಅಹಿಂಸಾತ್ಮಕ ಕಟ್ಟಳೆಯನ್ನು ತೃಪ್ತಿಪಡಿಸಲೋಸುಗ, ಅವಶ್ಯವಿರುವ ಪ್ರತಿಜ್ಞೆ, ನಿರ್ಬಂಧ, ನಡತೆ ಮತ್ತು ಕರ್ತವ್ಯಗಳು ಪಾಲಿಸಲ್ಪಡಬೇಕು. ಎರಡನೆಯವರನ್ನು ಅವರು ದುಷ್ಟರಾಗಿದ್ದರೆಂದು ಅಥವಾ ನನ್ನ ಉದ್ದೇಶ, ಇಚ್ಛೆ ಮತ್ತು ಪ್ರಯತ್ನಗಳಿಗೆ ಅವರು ಅಡ್ಡಬರುತ್ತಾರೆಂದು, ಶಿಕ್ಷಿಸುವ ಇಲ್ಲವೆ ನಾಶಮಾಡುವ ಸ್ವಾತಂತ್ರ್ಯವನ್ನು ನಾನು ಇಟ್ಟುಕೊಂಡರೆ, 'ಎಲ್ಲ ಜೀವನವು ಒಂದೇ ಆಗಿವೆ' ಎಂಬ ನನ್ನ ಮಾತು ವ್ಯರ್ಥವಾದದ್ದೂ ಕೇವಲ ಶಾಬ್ದಿಕ ಪ್ರಪಂಚದಲ್ಲಿ ಶೇಲಂದ ಮಂಥವೂ ಆಗದೆ ಇರದು.'

### ಇತರ ತತ್ವಜ್ಞಾನ.

ಶ್ರೀ. ಮಶ್ರೂವಾಲಾರವರು ಇತರ ತತ್ವಜ್ಞಾನಿಗಳ ಮಾತನ್ನು ಅಲ್ಲಿ ಎತ್ತಿ 'ಅವರು ದುಷ್ಟಶಕ್ತಿಗಳನ್ನು ನಾಶಮಾಡುವ ಇಲ್ಲವೆ ಶಿಕ್ಷಿಸುವ ಸ್ವಾತಂತ್ರ್ಯವನ್ನು ಇಟ್ಟುಕೊಂಡಿದ್ದರು. ಸನ್ಮಾರ್ಗಗಳನ್ನು ತೊಂದರೆಪಡಿಸಿದ್ದನ್ನು ಇಲ್ಲವೆ ಸುಳ್ಳು ತತ್ವಗಳನ್ನು ಜನರಲ್ಲಿ ಹಬ್ಬಿಸಿದ್ದನ್ನು ಅವರು ಮಾಡಿದ್ದುಂಟು. ಈ ತರಹದ ಕೃತಿಯು, ಎಲ್ಲರನ್ನು ಪ್ರೀತಿಸುವ ಕಾರ್ಯದ ದೃಷ್ಟಿಯಿಂದಲೇ ಅವಶ್ಯವಾಗಿದೆಯೆಂದು ಅವರು ಹೇಳಿದ್ದಾರೆ' ಎಂದು ಹೇಳಿದ್ದಾರೆ. ಮತ್ತು 'ದೇವರೊಬ್ಬನೇ ಇದ್ದಾನೆ' ಎಂಬ ಮಾತನ್ನು ತಿಳಿದುಕೊಂಡುದರಲ್ಲಿ ಗಾಂಧಿಜೀಯವರ ಮತ್ತು ಇತರ ತತ್ವಜ್ಞಾನಿಗಳ ದೃಷ್ಟಿ ಭೇದವು ಇಲ್ಲಿ ಕಂಡುಬರುತ್ತದೆ. ಎಂದು ಪ್ರತಿಪಾದಿಸಿದ್ದಾರೆ.

ಆದರೆ ಶ್ರೀ ಮಶ್ರೂವಾಲಾರವರು ಎರಡನೆಯ ತತ್ವಜ್ಞಾನಿಗಳ ನಿಲುವೆಯ ತತ್ವವನ್ನು ಸರಿಯಾಗಿ ಸ್ಪಷ್ಟೀಕರಿಸಲು ಸಮರ್ಥರಾಗಿಲ್ಲವೆಂದು ಇಲ್ಲಿ ಹೇಳದೆ ಗತ್ಯಂತರವಿಲ್ಲದಾಗಿದೆ. 'ಮಾರ್ಕ್ಸ್'ನ ವಿಚಾರದೊಂದಿಗೆ ಗಾಂಧಿಜೀಯವರ ವಿಚಾರಗಳನ್ನು ಈ ರೀತಿ ಹೋಲಿಸಿ ಶ್ರೀ. ಮಶ್ರೂವಾಲರವರು ಈ ಅಭಿಪ್ರಾಯವನ್ನು ಓದುಗರ ಮುಂದೆ ಇಟ್ಟಿದ್ದಾರೆಂಬುದು ಸ್ಪಷ್ಟವಿದೆ.

ಮಾರ್ಕ್ಸ್‌ನ ಸದುದ್ದೇಶ ಮತ್ತು ಪ್ರಾಮಾಣಿಕತೆಗಳ ಬಗ್ಗೆ ಈ ತರಹದ ಅನುಮಾನಗಳನ್ನು ತೆಗೆಯಲು ಬರಲಾರದು. ಅವನು ಸನ್ಮಾರ್ಗಗಳನ್ನು ತೊಂದರೆಪಡಿಸಲು ಮತ್ತು ಸುಳ್ಳು ತತ್ವಗಳನ್ನು ಪ್ರಸಾರ ಮಾಡಲು ಹೇಳಿದನೆಂಬುದು ವಸ್ತುಸ್ಥಿತಿಗೆ ಹೊಂದದ ಮಾತು. ಹಾಗೆ ಹೇಳಿದ್ದರೆ ಅವನನ್ನು ತತ್ವಜ್ಞಾನಿಗಳಲ್ಲಿ ಎಣಿಸಲೂ ಬಾರದು. ಮತ್ತು ಅವರ ಮಾತುಗಳನ್ನು ಪ್ರಾಮಾಣ್ಯವಾಗಿ ಹಿಡಿಯುವ ಅವಶ್ಯಕತೆಯೂ ಉಳಿಯುವುದಿಲ್ಲ.

ಎಲ್ಲರಿಗೂ ಹೆಚ್ಚಿನ ಸುಖವು ದೊರೆಯಬೇಕೆಂಬುದೇ ಮಾರ್ಕ್ಸ್‌ನ ತತ್ವಜ್ಞಾನದ ತಿರುಳಾಗಿದೆ. ಆದರೆ ಎಂಥದೇ ತತ್ವಜ್ಞಾನವಿರಲಿ ಅದರ ದುರುಪಯೋಗವನ್ನು ಜನತೆಯು ಮಾಡಿದ್ದುಂಟು. ಅಂದ ಮಾತ್ರಕ್ಕೆ ಆ ತತ್ವಜ್ಞಾನಿಯ ವಿಚಾರವೇ ಅಗ್ರಾಹ್ಯವಾದುದೆಂದು ಹೇಳುವುದು ತಪ್ಪು.

ಸಾಮ್ಯವಾದದ ತತ್ವವು ಬಹು ಸ್ವಾರಸ್ಯಪೂರ್ಣವಾಗಿದೆ. ಅದರಂತೆ ಜಗತ್ತು ಸಿದ್ಧವಾದರೆ ಆಶಾಪೂರ್ಣ ಸ್ಥಿತಿಯು ಇನ್ನೊಂದಿರಲಾರದೆಂದು ಎನಿಸಲು ಕಾರಣವಿಲ್ಲ. ಆದರೆ ಅದನ್ನು ಕಾರ್ಯದಲ್ಲಿ ಇಳಿಸುವಾಗ ಅನೇಕ ತೊಂದರೆ ತೊಡಕುಗಳು ಎದುರಿಸುತ್ತಿವೆ. ಆ ಮಾರ್ಗದ ನಮಗೆ ಇಂದು ಅನೇಕ ಆತಂಕಗಳು ಅಡ್ಡಬರುತ್ತಿವೆ. ಇಷ್ಟೇ ಹೊರತಾಗಿ ಹೆಚ್ಚಿನದೇನನ್ನೂ ಮಾರ್ಕ್ಸ್‌ವಾದದ ಬಗ್ಗೆ ನಮಗೆ ಹೇಳಲು ಬರಲಾರದು.

ರಶಿಯಾದ ಕಡೆಗೆ ನೋಡಿ ನಾವು ಇಂದು ಮಾರ್ಕ್ಸ್‌ವಾದ ಅಥವಾ ಸಾಮ್ಯವಾದಗಳ ವಿಮರ್ಶೆಮಾಡುವಂತಿಲ್ಲ. ಆ ದೇಶವು ಅದನ್ನು ಸರಿಯಾಗಿ ಕಾರ್ಯದಲ್ಲಿ ಇಳಿಸುತ್ತಿಲ್ಲ. ಆದರೆ ತತ್ವ ಮತ್ತು ಸನ್ಮಾರ್ಗಗಳ ಬಗ್ಗೆ ಯಾರಿಗೂ ಗುಮಾನಿ ಇರುವುದಿಲ್ಲ. ಮಾರ್ಕ್ಸ್‌ನ ವಿಚಾರಗಳನ್ನು ಉಳಿದ ದೇಶಗಳು, ರಶಿಯಾವನ್ನು ಅದರ ದಾರಿಗೇ ಬಿಟ್ಟು ಬಿಟ್ಟು, ಯೋಗ್ಯ ಮಾರ್ಗದಲ್ಲಿ ಅಳವಡಿಸಿಕೊಳ್ಳುವುದು ಶ್ರೇಯಸ್ಕರವಾದುದೇ ಆಗಿದೆ.

### ಪೂರ್ವದ ತತ್ವಜ್ಞಾನ.

ಸರ್ವರ ಕಲ್ಯಾಣವನ್ನು ಸಾಧಿಸುವ ದೃಷ್ಟಿಯಿಂದಲೇ ಕೆಲವು ತತ್ವಜ್ಞಾನಿಗಳು ಹಿಂಸೆ ಅಥವಾ ದುಷ್ಟ ಶಾಸನಗಳನ್ನು ಕೈಕೊಂಡರು ಎಂಬ ಮಾತನ್ನು ಶ್ರೀ. ಮಶ್ರೂವಾಲಾರವರು ಹೇಳಿದ್ದಾರೆ. ಹೌದು. ಹಾಗೆ ಮಾಡಿದವರೇ ಬಹಳ. ಶ್ರೀಕೃಷ್ಣನ ತತ್ವಜ್ಞಾನವು ಮತ್ತು ಅವನು ಗೀತೆಯಲ್ಲಿ ಹೇಳಿದ ಮಾತುಗಳು ಈ ಮಾತಿಗೆ ಬಲವಾದ ಸಾಕ್ಷಿಗಳಾಗಿವೆ. 'ಸಾಧುಗಳನ್ನು ರಕ್ಷಿಸಲು, ದುಷ್ಟರ ನಾಶಮಾಡಲು ಮತ್ತು ಧರ್ಮಸಂಸ್ಥಾಪನೆಮಾಡಲು ನಾನು ಯುಗ ಯುಗದಲ್ಲಿ ಜನ್ಮತಳೆದುಕೊಳ್ಳುತ್ತೇನೆ' ಎಂದು ಅವನು ಹೇಳಿದ್ದಾನೆ.

ಜಗತ್ಕಲ್ಯಾಣಕ್ಕಾಗಿ ದುಷ್ಟನಾಶವು ಅವಶ್ಯವೇ ಆಗಿದೆಯೆಂಬ ಮಾತು ಸಿದ್ಧವಾದದ್ದಾಗಿದೆ. ಮತ್ತು ಅಹಿಂಸೆಯನ್ನು ಒಂದು ಮಟ್ಟದ ವರೆಗೆ ಅಥವಾ ವೈಯಕ್ತಿಕವಾಗಿ ಉಪಯೋಗಿಸಬಹುದೇ ಹೊರತು, ಸಾರ್ವತ್ರಿಕವಾಗಿ ಅದನ್ನು ಕಾರ್ಯದಲ್ಲಿ ಇಳಿಸುವುದು ಅಶಕ್ಯಕೋಟಿಯೊಳಗಿನ ವಿಷಯವಾಗಿದೆಯೆಂಬುದೂ ಮತ್ತು ವಿಶ್ವವು ಅಹಿಂಸೆ ಹಿಂಸೆಗಳ ಕಲಹದಿಯ ಮೇಲೆಯೇ ನಿಂತಿರುವುದೆಂಬುದೂ ಅನುಭವದಿಂದ ಕಂಡುಬಂದ ಸಂಗತಿಯಾಗಿದೆ.

ಮಹಾತ್ಮ ಗಾಂಧಿಯವರ ತತ್ವಜ್ಞಾನದ ಬಗ್ಗೆಯೂ ಇದೊಂದು ಆಕ್ಷೇಪವನ್ನೆತ್ತಲಾರರು. ಅದೊಂದು ಮಾರ್ಗ. ಗಾಂಧೀಜಿಯವರು ವೈಯಕ್ತಿಕವಾಗಿ ಅದನ್ನು ಅಗಾಧವಾಗಿ ಆಚರಿಸಿದರು. ಆದರೆ ಅವರ ರಾಜಕೀಯ, ಸಾರ್ವಜನಿಕರ ದೃಷ್ಟಿಯಿಂದ, ಕೆಲವು ಮಟ್ಟದ ವರೆಗೆ ಮಾತ್ರ ಉಪಯೋಗಬಿದ್ದವು. ಆ ಮೇಲೆ ಜನತೆಯು ತನ್ನ ದಾರಿಯಿಂದಲೇ ನಡೆಯಿತು ಎಂಬ ಮಾತು ಮಾತ್ರ ಸ್ಪಷ್ಟವಾಗಿದೆ.

ಅಷ್ಟೇ ಅಲ್ಲದೆ ಮಹಾತ್ಮಾಗಾಂಧಿಯವರಾದರೂ 'ದುಷ್ಟ ನಿಗ್ರಹ' ಶಿಷ್ಟಪರಿಪಾಲನೆಯ ಕಾರ್ಯವನ್ನೇ ಮಾಡಿರುವುದನ್ನು, ಅವರು ಸಾಧಿಸಿದ ಪರಿಣಾಮಗಳನ್ನು ನೋಡಿದವರು ಮನಗಂಡಿರಲಿಕ್ಕೆ ಸಾಕು. ಹೀಗೆ ಮಾಡುವಲ್ಲಿ ಗಾಂಧೀಜಿಯವರು ತಮ್ಮದೇ ಆದ ಮತ್ತು ಅಪೂರ್ವವಾದ ಮಾರ್ಗವನ್ನು ಉಪಯೋಗಿಸಿರಬಹುದು. ಆದರೆ ದುಷ್ಟರ ನಾಶವು ಅದರಿಂದ ಆಗಿಯೇ ಆಯಿತು ಎಂಬ ವಿಷಯವು ಮಾತ್ರ ಸೂರ್ಯ ಪ್ರಕಾಶದಷ್ಟು ಪ್ರಸಿದ್ಧವಿದೆ.

ಯಾರಿಗೂ ಅನ್ಯಾಯವಾಗಬಾರದು. ಎಲ್ಲರೂ ಸುಖದಿಂದಿರಬೇಕು. ಎಂಬ ಮಾತನ್ನು ಸಾಧಿಸುವದಕ್ಕಾಗಿಯೇ ಅವರು ಹೋರಾಡಿದರು. ಆದರೆ ಹಾಗೆ ಆಗಬೇಕಾದಾಗ ಅನ್ಯಾಯವು, ಯಾರದೇ ಇರಲಿ, ಅದು ನಿವಾರಣೆ ಅಥವಾ ನಾಶ ಹೊಂದಲೇ ಬೇಕಾಗಿತ್ತು. ಬ್ರಿಟಿಷರು ಮತ್ತು ಅವರ ಸಾಮ್ರಾಜ್ಯತೃಷ್ಣೆಯನ್ನು ಗಾಂಧೀಜಿಯವರು ಶಿಕ್ಷಿಸಿದರು, ಅಸ್ಪೃಶ್ಯೋದ್ಧಾರಕ್ಕೆ ವಿರುದ್ಧವಿದ್ದವರನ್ನು ಅವರು ನಿಗ್ರಹಿಸಿದರು ಎಂಬ ವಿಷಯಗಳು ಅವರ ವಿನಾಶಕ ಕಾರ್ಯಕ್ರಮಗಳೇ ಅಷ್ಟೆ?

ಹೀಗೆ ವಿವಿಧ ತತ್ವಜ್ಞಾನಗಳನ್ನು ನೋಡಿದರೆ ಅವುಗಳ ಮೂಲ ಉದ್ದೇಶಗಳು ಒಂದೇ ಆಗಿವೆ. ಅವೂ ಕೂಡ ಪರಮಾತ್ಮನ ವ್ಯಕ್ತ ಸ್ವರೂಪಗಳೇ ಆಗಿವೆ ಎಂಬ ಮಾತು ನಮಗೆ ಗೊತ್ತಾಗದೆ ಇರದು. ಅವುಗಳನ್ನು ಒಂದಕ್ಕೊಂದು ಹೋಲಿಸಿ, ಯಾವುದು ಯೋಗ್ಯ ಮತ್ತು ಯಾವುದು ಅಯೋಗ್ಯ ಎಂಬ ನಿರ್ಣಯವನ್ನು ಹೇಳುವುದು ಸರಿಯೂ ಆಗಿಲ್ಲ, ಸಾಧ್ಯವೂ ಆಗಿಲ್ಲ. ಈ ಮತಭೇದಗಳೊಡನೆಯೇ ಜಗತ್ತಿನ ವಿಶ್ವ ಒಂದೇ ಸಮನೆ ಎಂದಿನಂತೆ ಸಾಗುತ್ತಿದೆ.

---

# ಕರ್ಮವು ಮನೋನಿರ್ಮಲ್ಯದ ಸೂತ್ರ

[ಶ್ರೀ ಕಾವೇರಿ ಆಶ್ರಮ-ಇವರಿಂದ]

ಹಿಂದೆ ನಾವು ತ್ರಿಕರಣ ಶುದ್ಧಿಯ ವಿಷಯವನ್ನು ಅರಿತೆವು. ಮನಸ್ಸಿನಲ್ಲಿ ಸದ್ಭಾವನೆ ಇರಬೇಕು; ಮಾತಿನಲ್ಲಿಯೂ ಅದೇ ಇರಬೇಕು; ಮತ್ತು ನಮ್ಮ ಪ್ರತಿಯೊಂದು ಕರ್ಮದಲ್ಲಿಯೂ ಇದೇ ಎದ್ದು ಕಾಣಬೇಕು. ಇದಕ್ಕಾಗಿ ನಾವು ಸತತ ದುಡಿಯಬೇಕು. ಇದರಿಂದ ನಮ್ಮ ಜನ್ಮ ಸಾರ್ಥಕವಾಗುತ್ತದೆ.

ಸಾಧಕನು ಪ್ರತಿ ನಿಮಿಷದಲ್ಲಿಯೂ ಈ ಮನಸ್ಸು, ಮಾತು ಮತ್ತು ಕರ್ಮಗಳ ಕಡೆ ಎಚ್ಚರದಿಂದಿರಬೇಕು. ಮನಸ್ಸು ಕೆಟ್ಟ ವಿಷಯಗಳ ಕಡೆ ಹೋಗಬಹುದು. ಮನಸ್ಸೊ ಇಚ್ಛೆ ನಡೆಸುವ ಬಾಳು, ಬುದ್ಧಿ ಇರುವ ಮಾನವನಿಗೆ ತರವಲ್ಲ. ಜೀವನದಲ್ಲಿ ವಿಧಿ ನಿಯಮಗಳಿರಬೇಕು. ಬಾಳಿನಲ್ಲಿ ಶಿಸ್ತು ಸಂಘಟಿತವಾಗಿರಬೇಕು. ಮನಸ್ಸನ್ನು ಸಡಿಲ ಬಿಟ್ಟು ಮಾತಿನಲ್ಲಿ ಮತ್ತು ಕರ್ಮದಲ್ಲಿ ಸಂಯಮಿಗಳಾಗಿರುತ್ತೇವೆಂದು ಹೇಳಲಾಗುವುದಿಲ್ಲ. ಕೆಟ್ಟ ವಿಷಯಗಳ ಕಡೆ ಸ್ವಲ್ಪ ಮನಸ್ಸು ಹೋದರೂ, ಅದರ ಪರಿಣಾಮ ಕರ್ಮದಲ್ಲಿ ಸ್ವಲ್ಪವಾದರೂ ಆಗಿಯೇ ಆಗುತ್ತದೆ. ಹಾಗೆಯೇ ಒಳ್ಳೆಯ ವಿಷಯದಲ್ಲಿಯೂ ಸಹ. ಆದುದರಿಂದಲೇ ಸಾಧುಸಜ್ಜನರು 'ಅನನ್ಯ ಹೊತ್ತು ದೇವರ ಧ್ಯಾನ ಮಾಡು, ಹರಿಕಥೆ, ಪುರಾಣಗಳನ್ನು ಕೇಳು' ಎಂದು ಹೇಳುತ್ತಾರೆ. ಮನಸ್ಸು ಯಾವ ಕಡೆಗೆ ಹೊರಳಿದರೂ ಅದರ ಪರಿಣಾಮ ಇದ್ದೇ ಇದೆ. ಹರಿಕಥೆ, ಪುರಾಣ ಸಾಧುಸಜ್ಜನರ ಸಹವಾಸಗಳ ಕಡೆಗೆ ಎಷ್ಟು ಮನಸ್ಸು ಹೊರಳಿಸಿದರೆ, ಅಷ್ಟು ಫಲ ಅದರಲ್ಲಿ ಇದ್ದೇ ಇದೆ. 'ನಿನಗೆ ಬೇಡದಿದ್ದರೂ ಅದನ್ನು ಕೇಳು. ಒಂದಲ್ಲ ಒಂದು ದಿವಸ ಅದರ ಫಲ ತನ್ನಷ್ಟಕ್ಕೇ ಆಗುತ್ತದೆ'. ಇದು ಮನಶಾಸ್ತ್ರಜ್ಞರ ತೀರ್ಮಾನ.

ಒಬ್ಬ ಕಳ್ಳನು ಒಳ್ಳೆಯವನ ಸಹವಾಸ ಮಾಡಿದರೆ ಅವನು ಒಳ್ಳೆಯವನಾಗುತ್ತಾನೆ. ಹಾಗೆಯೇ ಒಳ್ಳೆಯವನು ಕಳ್ಳರೊಡನೆ ಸೇರಿದರೆ ಅವನು ಶೀಘ್ರ ಕಳ್ಳನಾಗುತ್ತಾನೆ. ಆದುದರಿಂದ ನಮ್ಮ ಮನಸ್ಸು ಎಲ್ಲಿ ಕೆಟ್ಟ ವಿಷಯಗಳ ಕಡೆಗೆ ಹೊರಳುತ್ತದೋ ಎಂದು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

ಕಾಮ ಕ್ರೋಧಾದಿಗಳನ್ನು ಜಯಿಸಬೇಕು. ಇವೇ ನಮ್ಮ ಶತ್ರುಗಳು. ಮನುಷ್ಯನನ್ನು ಹಾಳು ಮಾಡಲು ಇವೇ ಕಾರಣ. ಇವು ಮನುಷ್ಯನಲ್ಲಿ ತುಂಬಿಕೊಂಡಿವೆ. ಮನುಷ್ಯನ ಮನಸ್ಸು ಕೆಡುವುದು ಇವುಗಳ ಪ್ರಭಾವದಿಂದ. ಇವುಗಳ ಆಟವು ಯಾವುದೂ ನಮ್ಮಲ್ಲಿ ನಡೆಯದಿರುವಂತೆ ಮಾಡಿಕೊಳ್ಳಬೇಕು. ಆಗ ಅವುಗಳನ್ನು ಜಯಿಸಿದಂತೆ ಆಗುತ್ತದೆ. ಕಾಮ ಕ್ರೋಧಾದಿಗಳು ನಮ್ಮಲ್ಲಿ ತುಂಬಿಕೊಂಡಿದ್ದು ನಮ್ಮನ್ನು ಹಾಳುಮಾಡದಿರುವಂತೆ ನೋಡಿಕೊಳ್ಳಬೇಕೆಂದರೆ ತುಂಬಾ ಪ್ರಯತ್ನ ಬೇಕು. ಇದು ಬಹಳ ಕಷ್ಟದ ಕೆಲಸ. ಮಾಡುವುದೇನು? ಬೇರೆ ದಾರಿ ಇಲ್ಲ. ಇದು ಮನೋಮಯ ಪ್ರಯತ್ನ, ಸಾಧನೆ ಬೇಕು. ಮನಸ್ಸಿದ್ದರೆ ಯಾವುದು ತಾನೇ ಸಾಧ್ಯವಿಲ್ಲ.

ಈ ಕಾಮ ಕ್ರೋಧಾದಿ ಶತ್ರುಗಳು— ಮನಸ್ಸು, ಮಾತು ಮತ್ತು ಇಂದ್ರಿಯಗಳ ಮೂಲಕ ತಮ್ಮ ಕೆಲಸಗಳನ್ನು ಮಾಡುತ್ತವೆ. ಪಾಪ ಕರ್ಮಗಳನ್ನು ಮಾಡಿಸುವುದೇ ಇವುಗಳ ಸ್ವಭಾವ. ಒಬ್ಬ ಮನುಷ್ಯನ ಮಾತು ಮತ್ತು ಕರ್ಮಗಳಿಂದ ಅವನು ಎಷ್ಟರಮಟ್ಟಿಗೆ ಕಾಮಕ್ರೋಧಾದಿಗಳನ್ನು ಜಯಿಸಿದ್ದಾನೆ ಅಥವಾ ಅದಕ್ಕೆ ಎಷ್ಟು ಸೋತಿದ್ದಾನೆ ಎನ್ನುವುದು ತಿಳಿಯುತ್ತದೆ. ಆದರೆ ಮಾತನಾಡದೆಯೇ ಇದ್ದರೆ ಅಥವಾ ಏನೂ ಕೆಲಸ ಮಾಡದೆಯೇ ಇದ್ದರೆ ಅವನು ಯೋಗ್ಯನಾದವನೆಂದು ತಿಳಿಯಲೂ ಕೂಡದು. ಒಳಗಿರುವ ಕಶ್ಮಲವು ಹಾಗೆಯೇ ಇರುತ್ತದೆ.

ಇಂದ್ರಿಯಗಳು ಕರ್ಮ ಮಾಡಲು ಹೊರಟಾಗ ಕಾಮಕ್ರೋಧಾದಿಗಳು ತಮ್ಮ ಕೆಲಸ ಮಾಡಲು ಮೊದಲು ಮಾಡುತ್ತವೆ. ಆಗ ಅವು ಹೊರಗೆ ಕಾಣಿಸುತ್ತವೆ. ಕೊಳೆ ನೀರನ್ನು ಅಲುಗಾಡಿಸದೆ ಸ್ವಲ್ಪ ಹೊತ್ತು ಇಟ್ಟರೆ ಕೊಳೆಯು ತಳದಲ್ಲಿ ನಿಂತಿರುತ್ತದೆ. ನೀರನ್ನು ನೋಡಿದರೆ ಬಹಳ ಶುದ್ಧವಾಗಿರುವಂತೆ ಕಾಣುತ್ತದೆ. ತಳದಲ್ಲಿರುವ ಕೊಳೆ ಮರೆಯಾಗಿರುತ್ತದೆ. ಆದರೆ ನೀರನ್ನು ಸ್ವಲ್ಪ ಅಲುಗಾಡಿಸಿದರೆ ಆಗ ಆ ಕೊಳೆ ಮೇಲಕ್ಕೆ ಬರುತ್ತದೆ. ಇದೇ ರೀತಿಯಲ್ಲಿ ಕರ್ಮ ಮಾಡುತ್ತಿದ್ದರೆ ಕಾಮಕ್ರೋಧಾದಿಗಳು ಹೊರಗೆ ಕಾಣಿಸಿಕೊಳ್ಳುತ್ತವೆ. ಕರ್ಮ ಮಾಡುತ್ತ ಆ ಕೊಳೆಯನ್ನು ಹೊರಗೆ ತೆಗೆದು ನಮ್ಮ ಸ್ಥಿತಿಯನ್ನು ನಾವು ಅರಿತುಕೊಳ್ಳಬೇಕು.

ಕರ್ಮವು ನಮ್ಮ ಮನಸ್ಸಿನ ಕನ್ನಡಿ ಇದ್ದಂತೆ. ಈ ಕನ್ನಡಿಯ ಸಹಾಯದಿಂದ ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು. ಇದು ಬಿಟ್ಟು 'ಕರ್ಮ ಮಾಡಿದರೆ ತಾನೇ ಕಾಮಕ್ರೋಧಗಳು ಹೊರಗೆ ಬರುತ್ತವೆ' ಎಂದು ಕರ್ಮವನ್ನೇ ಬಿಟ್ಟರೆ ಕೊಳೆ ಒಳಗೇ ಬೆಳೆಯುತ್ತಿರುತ್ತದೆ. ಕರ್ಮವನ್ನು ಮಾಡದಿರುವುದರಿಂದ ಕಾಮಕ್ರೋಧಾದಿಗಳು ಹೆಚ್ಚುತ್ತವೇ ವಿನಹ ಕಡಿಮೆಯಾಗುವುದಿಲ್ಲ. ಒಂದಲ್ಲ ಒಂದು ದಿನ ಅವು ಇದ್ದಕ್ಕಿದ್ದಂತೆ ತನ್ನ ಬಲವನ್ನು ತೋರಿಸುತ್ತದೆ. ಆದುದರಿಂದ ನಮ್ಮ ಸ್ಥಿತಿಯನ್ನು ನಮಗೆ ತೋರಿಸಿಕೊಡುವ ಕರ್ಮವೆಂಬ ಕನ್ನಡಿಯನ್ನು ನಾವು ನೋಡಿಕೊಳ್ಳಬೇಕು. ಅದನ್ನು ಒಡೆದು ಹಾಕಬಾರದು. ಕರ್ಮ ಮಾಡದಿದ್ದರೆ ಆ ಕನ್ನಡಿಯನ್ನು ಒಡೆದಂತಾಗುತ್ತದೆ. ಕರ್ಮವು ಶುಭ್ರವಾದ ಬಿಳೀ ಬಟ್ಟೆಯನ್ನು ತೊಟ್ಟುಕೊಂಡಂತೆ. ಸ್ವಲ್ಪ ಕೊಳೆ ಆದರೆ 'ನಾನು ಕೊಳೆಯಾಗಿದ್ದೇನೆ, ನನ್ನನ್ನು ಒಗೆದು ಶುಭ್ರಮಾಡು' ಎನ್ನುತ್ತದೆ. ಬಣ್ಣದ ಬಟ್ಟೆಗೂ ಕೊಳೆಯಾಗುತ್ತದೆ. ಆದರೆ ಆ ಕೊಳೆ ಕಾಣಿಸುವುದಿಲ್ಲ. ಬಿಳೀ ಬಟ್ಟೆಗೆ ಆಗುವ ಕೊಳೆ ಬಣ್ಣದ ಬಟ್ಟೆಗೂ ಆಗಿಯೇ ಆಗುತ್ತದೆ. ಹಾಗೆಯೇ ಕರ್ಮ ಮಾಡಲಿ ಮಾಡದಿರಲಿ, ಕಾಮಕ್ರೋಧಗಳು ನಮ್ಮೊಳಗಿದ್ದೇ ಇರುತ್ತವೆ. ಇವು ಹೊರಗಿನಿಂದ ಬರುವುದೇನೂ ಅಲ್ಲ. ನಮ್ಮೊಳಗೇ ಇರುವ ಶತ್ರುಗಳು.

ಸಾಧಕನು ಕರ್ಮ ಮಾಡುತ್ತಿರಬೇಕು. ತನ್ನಲ್ಲಿ ತನಗೆ ಕಾಣುವ ಕಾಮ ಕ್ರೋಧ ಮೊದಲಾದ ಕಡೆ ಮನಸ್ಸು ಕೊಟ್ಟು ಗಮನಿಸಬೇಕು. ಮತ್ತು ಅವುಗಳನ್ನು ನಿಗ್ರಹಿಸಬೇಕು. ಮನಸ್ಸಿನಲ್ಲಿ ಬರುವ ನಾನಾ ಯೋಚನೆಗಳು, ತಾನು ಮಾಡುವ ಕರ್ಮ, ಆಡುವ ಮಾತು ಎಲ್ಲವೂ ಸರಿಯಾದುವೋ ಅಲ್ಲವೋ, ಕಾಮ ಕ್ರೋಧಾದಿಗಳಿಂದ ಪ್ರೇರಿತವಾದುವೋ ಏನೋ, ಎಂಬುದನ್ನು ಎಚ್ಚರದಿಂದ ತಿಳಿಯಬೇಕು. ತಿಳಿದು ಅದನ್ನು ಶುದ್ಧ ಮಾಡಬೇಕು. ಇದು ನಮ್ಮ ಕರ್ತವ್ಯ. ಇದಕ್ಕಾಗಿ ನಮ್ಮ ಸತತ ಯತ್ನ ಬೇಕು. ಕಾಮ ಕ್ರೋಧ ಜಯಿಸಲು ಇದೊಂದೇ ನಮಗೆ ತಿಳಿದಿರುವ ಉಪಾಯ. ಕೊಳೆ ಇರುವುದನ್ನು ತಿಳಿದರೆ ಮಾತ್ರ ಸಾಲದು, ಅದನ್ನು ಶುದ್ಧಪಡಿಸಲೂ ಬೇಕು. ಶುದ್ಧಪಡಿಸುವುದಕ್ಕಾಗಿ ಕೊಳೆ ಇರುವುದನ್ನು ತಿಳಿಯಬೇಕು. ಮುಖ್ಯವಾದುದು ಶುದ್ಧೀಕರಣ. ಅದಕ್ಕಾಗಿ ಕರ್ಮ. ಕಾಮಕ್ರೋಧಗಳನ್ನು ನಾಶಪಡಿಸುವುದು ಮುಖ್ಯ ಉದ್ದೇಶ. ಅದಕ್ಕಾಗಿ ಕರ್ಮವನ್ನು ಆಚರಿಸಬೇಕು. ಶತ್ರುಗಳನ್ನು ಒಂದೊಂದಾಗಿ ಜಯಿಸಬೇಕು.

ಒಬ್ಬ ಸನ್ಯಾಸಿಯು ಒಂದು ಗುಹೆಯೊಳಕ್ಕೆ ಹೋಗಿ ಅನೇಕ ವರ್ಷಗಳು ಕುಳಿತನಂತೆ. ಹೊರಗೆ ಸಂಸಾರದಲ್ಲಿ ಬೆರೆತರೆ ಜನರೊಡನೆ ಸೇರಿದರೆ ಕಾಮಕ್ರೋಧಗಳಿಗೆ ಎಡೆಕೊಟ್ಟಂತಾಗುವುದೆಂದು ಗುಹೆಗೆ ಹೋದನು. ತನ್ನ ಕಾಮಕ್ರೋಧಗಳು ಇವನೊಡನೆಯೇ ಗುಹೆ ಒಳಗೂ ಇದೆಯೆಂದು ತಿಳಿಯದೇ ಹೋದನು. ಅಲ್ಲಿ ಯಾರ ಸಹವಾಸವೂ ಇಲ್ಲ. ಯಾರ ಮೇಲೂ ಕೋಪಿಸಿಕೊಳ್ಳುವಂತಿಲ್ಲ. ಕಾಮೋದ್ರೇಕಗೊಳಿಸುವ ವಸ್ತುಗಳೇನೂ ಅಲ್ಲಿರಲಿಲ್ಲ. ಇತರ ಯಾವ ಕೆಟ್ಟ ಕೆಲಸಗಳಿಗೂ ಅಲ್ಲಿ ಸಂದರ್ಭವಿರಲಿಲ್ಲ. ಇವನ ಇಂದ್ರಿಯಗಳು ಯಾವ ಕೆಲಸಕ್ಕೆ ಹೋಗಲು ಹೆಚ್ಚು ಅವಕಾಶವಿರಲಿಲ್ಲ. ಅವು ಜಡವಾಗಿದ್ದವು. ಕಿವಿಗೆ ಹೆಚ್ಚು ಶಬ್ದ ಕೇಳುತ್ತಿರಲಿಲ್ಲ. ಕಣ್ಣಿಗೆ ಹೆಚ್ಚು ಬೆಳಕು ನೋಡುವ ಸಂದರ್ಭವಿರಲಿಲ್ಲ. ರುಚಿ ರುಚಿ ಊಟವಿರಲಿಲ್ಲ. ಹೀಗೆ ಕೆಲವು ವರ್ಷಗಳು ಕಳೆಯಲು ಸಾಧುವು ತಾನು ಇಂದ್ರಿಯಗಳನ್ನು ಜಯಿಸಿದನೆಂದು ತಿಳಿದನು. ಕಾಮಕ್ರೋಧಗಳು ಯಾವುವೂ ತನ್ನಲ್ಲಿಲ್ಲವೆಂದು ನಿಶ್ಚಯಿಸಿದನು. ಕೊನೆಗೆ ಗುಹೆಯಿಂದ ಹೊರಗೆ ಬಂದನು. ಹೊರಗೆ ತೇಜೋವಂತನಾದ ಸೂರ್ಯನ ಬೆಳಕನ್ನು ಕಂಡು ಇವನ ಕಣ್ಣುಗಳು ಮುಚ್ಚಿಹೋದವು. ಸಾಧುವು ಊರಿಗೆ ಹೊರಟನು. ಕಣ್ಣುಗಳಲ್ಲಿ ಉರಿ ಪ್ರಾರಂಭವಾಯಿತು. ನೀರು ಫಳಫಳನೆ ಸುರಿಯಲು ಪ್ರಾರಂಭವಾಯಿತು. ಸೂರ್ಯನ ಬಿಸಿಲಿಗೆ ಮೈಕಾಯಲು ಇವನು ಬೆಂಕಿಯಲ್ಲಿರುವಂತೆ ಕಷ್ಟ ಕಂಡಿತು. ಸೂರ್ಯನ ಬಿಸಿಲನ್ನೇ ಬಯ್ಯಲು ಪ್ರಾರಂಭಿಸಿದನು. ಊರು ಸಮೀಪಿಸಿತು. ಜನರ ಮಾತು ಕಿವಿಗೆ ಬೀಳಲು ಕಿವಿ ಸಿಡಿಲು ಹೊಡೆಯುವಂತಾಯಿತು. ಮಕ್ಕಳು ಆಟವಾಡುತಾ ಕೂಗಾಡುತ್ತಿರುವುದನ್ನು ಕೇಳಿ ಇವನಿಗೆ ಕಿವಿಗೆ ಶೂಲ ಹಾಕಿದಂತೆಯೇ ಆಯಿತು. ಅವರ ಮೇಲೆ ಇವನಿಗೆ ಕೋಪವು ಬಂದಿತು. ಬೀದಿಯಲ್ಲಿ ಹೋಗುತ್ತಿರುವ ಹೆಂಗಸನ್ನು ಕಂಡನು. ಏನೋ ದಿಗ್ಭ್ರಮೆಯಾಯಿತು. ಈ ಎಲ್ಲಾ ಗಲಾಟೆಯಿಂದ ಸನ್ಯಾಸಿಗೆ ಹುಚ್ಚು ಹಿಡಿಯುವಂತಾಯಿತು. ಊಟಕ್ಕೆಂದು ಸಾಧುವನ್ನು ಕರೆದರು. ಊಟಕ್ಕೆ ಕುಳಿತರೆ ಸಾಧುವಿಗೆ ಯಾವುದು ತಿಂದರೂ ತೃಪ್ತಿಯಿಲ್ಲ. ಅನೇಕ ವರ್ಷಗಳಿಂದ ಸಿಕ್ಕದ ರುಚಿ ಊಟವನ್ನು ತಿಂದು ಹೊಟ್ಟೆ ಒಡೆಯುವಂತಾಯಿತು. ಅಂತು ನಾಲಿಗೆಗೆ ತೃಪ್ತಿ ಇಲ್ಲ. ಸಾಧುವು ಕಷ್ಟದಿಂದ ಪುನಃ ಗುಹೆಗೆ ಬಂದು ಸೇರಿದನು.

ಸಾಧುವು ಗುಹೆಯೊಳಗೆ ಕೂತು, ಕೊನೆಗೆ ತನ್ನ ಅನೇಕ ವರ್ಷಗಳ ಗುಹೆಯ ವಾಸದ ಫಲವನ್ನು ಕುರಿತು ಯೋಚಿಸಿದನು. 'ಇಷ್ಟು ದಿನದ ತಪಸ್ಸಿನ ಫಲ ನಿಷ್ಪ್ರಯೋಜಕವಾಯಿತಲ್ಲಾ' ಎಂದು ಚಿಂತೆ. ಕಾಮಕ್ರೋಧಗಳನ್ನು ಜಯಿಸಲು ಗುಹೆಯ ವಾಸವು ಸ್ವಲ್ಪವೂ ಸಹಾಯಕವಾಗಲಿಲ್ಲ. ಅಲ್ಲದೆ ಕಾಮಕ್ರೋಧಗಳು ಜಾಸ್ತಿಯೇ ಆದಂತಾಯಿತು. ತನ್ನ ಸ್ಥಿತಿಯು ಮೊದಲಿಗಿಂತಲೂ ಶೋಚನೀಯವಾದುದನ್ನು ಸಾಧುವು ಕಂಡುಕೊಂಡನು. ಅವನ ತಪ್ಪು ಅವನಿಗರಿವಾಯಿತು. ಕರ್ಮ ಮಾಡದಿರುವುದರಿಂದ ಕಾಮಕ್ರೋಧಗಳು ಕಡಮೆಯಾಗದು. ಕರ್ಮ ಮಾಡುತ್ತಾ ಅವುಗಳನ್ನು ಜಯಿಸಬೇಕು, ಎಂದು ಅವನಿಗೆ ಆಗ ಅರಿವಾಯಿತು.

ಈ ರೀತಿ ಕಾಮ ಕ್ರೋಧಗಳನ್ನು ಜಯಿಸುವ ಕರ್ಮ ಮಾಡುತ್ತಾ ಬಂದರೆ ನಮ್ಮ ಕರ್ಮವು ನಿಷ್ಕಾಮದ ಕಡೆಗೆ ತಿರುಗುತ್ತದೆ. ಕಾಮಕ್ರೋಧ ಜಯಿಸದೆ ನಿಷ್ಕಾಮ ವೃತ್ತಿ ಬಂದರೇನೇ ಅದು ನಿಜವಾದ ನಿಷ್ಕಾಮ ಕರ್ಮವಾಗುತ್ತದೆ. ಮನಸ್ಸು ಮತ್ತು ಶರೀರ ಎರಡೂ ಬೇರೆ ಬೇರೆ ಏನೂ ಅಲ್ಲ. ಅವೆರಡೂ ಒಂದೇ ವಸ್ತುವಿನಿಂದ ಮಾಡಲ್ಪಟ್ಟವು. ಆದುದರಿಂದ ಇವೆರಡನ್ನೂ ಒಂದುಗೂಡಿಸಬೇಕು. ಮನೋ ಕರ್ಮ ಮೇಳವಿಸಬೇಕು. ಕರ್ಮದಿಂದ ಮನೋ ಶುದ್ಧಿಯಾದರೆ, ಕಾಮಕ್ರೋಧಾದಿಗಳೆಂಬ ಶತ್ರುಗಳು ನಾಶವಾಗುವವು. ಶಾಂತಿ ದೊರಕುವುದು.

# ಜೀವನದ ಮನೋವಿಜ್ಞಾನ.

ಲೇ:- "ಗುಪ್ತ" ಮಡಿಕೇರಿ.

ಈ ನಮ್ಮ ಜಗತ್ತು ಸೃಷ್ಟಿಯಾಗಿ ೨೦೦೦,೦೦೦,೦೦೦ ವರ್ಷಗಳಾದುವೆಂದೂ, ಈ ಜಗತ್ತಿನಲ್ಲಿ ಜೀವಕಳೆ ಉದಯವಾಗಿ ೩೦೦,೦೦೦,೦೦೦ ವರ್ಷಗಳಾದುವೆಂದೂ ಮನುಷ್ಯನು ರೂಪುಗೊಂಡು ೮೦೦,೦೦೦ ವರ್ಷಗಳಾದುವೆಂದೂ ಜಗದ್ವಿಖ್ಯಾತ ತತ್ವಜ್ಞಾನಿಯಾದ ಸರ್ ಜೇಮ್ಸ್ ಜೀನ್ಸ್ ಎಂಬುವವನು ಹೇಳುತ್ತಾನೆ. ಮನುಷ್ಯನು ಈ ಭೂವಲಯದಲ್ಲಿ ರೂಪುಗೊಂಡು ೮೦೦,೦೦೦ ವರ್ಷಗಳಾದಾಗ್ಯೂ ಮಾನವನ ಮಿದುಳಿನ ತಾರ್ಕಿಕ ಅಲ್ಲವೇ ವಿವೇಚನಾ ವಿಭಾಗವು ಇತ್ತಲಾಗಿ ವಿಕಾಸಗೊಂಡುದು. ಅದರ ವಿಕಾಸವು ಇನ್ನೂ ಸಾಗುತ್ತಿದೆ. ಆದರೆ ಮನುಷ್ಯನ ಭಾವನೆಯು ಅನಾದಿಕಾಲದಿಂದಲೂ ಇದೆ. ಈ ಭಾವನೆಯೇ ಮಿದುಳಿನ ಅಸ್ತಿತ್ವಕ್ಕೆ ಕಾರಣ. ಹೊಸ ಶೋಧೆ, ಉತ್ತಮ ವಿಚಾರಗಳು ವಿವೇಚನಾ ವಿಭಾಗದಿಂದ ಹುಟ್ಟುವಂಥಾವು. ನಾಗರೀಕತೆಯು ಮುಂದುವರಿದಂತೆ, ವಿಜ್ಞಾನ ಜ್ಞಾನ ಕ್ಷೇತ್ರವು ವಿಕಾಸಗೊಂಡಂತೆ ಮಾನವನು ತನ್ನ ಭಾವನೆಗಳನ್ನು ಹಿಡಿತದಲ್ಲಿಟ್ಟು, ನಯಗೊಳಿಸಿ ಮನೋರಂಜಕವಾಗಿ ಮಾಡಿರುವನು! ವಸ್ತುತಃ ಮಾನವ ವರ್ಗವೆಲ್ಲವೂ ಒಂದೆ. ಪ್ರತಿಯೊಬ್ಬನ ಶರೀರದ ರಚನೆ, ಮಿದುಳಿನ ರಚನೆ ಎಲ್ಲವೂ ಒಂದೇ ರೀತಿಯ ಧಾತುವಿನಿಂದ ಆಗಿದೆಯೆಂದು ವಿಜ್ಞಾನ ಹೇಳುತ್ತದೆ. ಮನುಷ್ಯರಾದ ನಮಗೆಲ್ಲರಿಗೂ, ಒಂದೇ ರೀತಿಯ ಆಶೆ, ಗುರಿಗಳಿವೆಯೆನ್ನಬಹುದು. ಹೀಗೆ ನಾವೆಲ್ಲರೂ ಒಂದೇ ವಸ್ತುವಿನಿಂದ ರೂಪುಗೊಂಡಿದ್ದರೂ ಪ್ರತಿಯೊಬ್ಬ ಮನುಷ್ಯನಲ್ಲಿ ಕಲ್ಪನೆ, ಜ್ಞಾನ, ವಿವೇಚನೆ ಶಕ್ತಿ, ಈ ಮೊದಲಾದ ಕ್ಷೇತ್ರಗಳಲ್ಲಿ ಅಗಾಧವಾದ ಶಕ್ತಿಯನ್ನು ಪಡೆದು ಭಿನ್ನಭಿನ್ನವಾಗಿ ವಿಕಾಸಗೊಳ್ಳುವ ಲೆಕ್ಕವಿಲ್ಲದ ಸಾಧ್ಯತೆಗಳು ಇವೆ. ಒಂದು ಹಿಡಿ ಮಣ್ಣನ್ನು ಪರಿಷ್ಕರಿಸಿ ಲೋಹವಾಗಿ ತಿರುಗಿಸಿ ನಾಲ್ಕಾಣೆ ಪಾವಲಿ ಮಾಡಬಹುದಾದಂತೆ, ಅದೇ ಒಂದು ಹಿಡಿ ಮಣ್ಣು ಅತ್ಯಂತ ಕೋಮಲ ಕುಸುಮವಾಗುವಂತೆ, ಅದೇ ಮಣ್ಣು ಕಲಾಪೂರ್ಣವಾದ ಬೇರೊಂದು ಕಣ್ಮನರಂಜಕ ಬಣ್ಣವಾಗುವಂತೆ ತಕ್ಕ ಎಚ್ಚರಿಕೆ ವಹಿಸಿ ಪ್ರಗತಿಗೆ ಅವಕಾಶ ಮಾಡಿಕೊಟ್ಟರೆ ಪ್ರತಿಯೊಬ್ಬನೂ ತನ್ನ ತನ್ನ ಮನಸಿನ ಅಮಿತ ಶಕ್ತಿಯನ್ನು ಗುರ್ತಿಸಿ ಮಾನಸಿಕ ವಿಕಾಸವನ್ನು ಅದ್ಭುತ ರೀತಿಯಲ್ಲಿ ಮಾಡುವದು ಸಾಧ್ಯವಿದೆ.

ನಮ್ಮ ದೇಶದಲ್ಲಿ ಇಲ್ಲವೇ ಜಗತ್ತಿನಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನಿರುದ್ಯೋಗಿಗಳಿರುವರು ಎಂದು ಹೇಳುವಾಗ ನಾವು ಕೇವಲ ಶಾರೀರಿಕ ಕೆಲಸವಷ್ಟಕ್ಕೆ ಸೀಮಿತವಾಗಿ ಹೇಳುವೆವು. ಆದರೆ ಜಗತ್ತಿನಲ್ಲಿ ಮಿಲಿಯಾಂತರ ಉದ್ಯೋಗವಿಲ್ಲದ ಮನಸ್ಸುಗಳಿವೆ. ಯೋಚನೆ ಮಾಡಿ ವರ್ತಿಸದ ತಲೆಗಳಿವೆ! ಮನಸಿನ ಒಲವನ್ನು ಅರಿತು ಅದರಲ್ಲಿ ಸುಪ್ತವಾಗಿರುವ ಅತುಳ ಶಕ್ತಿಯು ಉಪಯೋಗಿಸಲ್ಪಡದೆ ಅಪಾರ ಹಾನಿಯಾಗುತ್ತಿದೆ! ಈ ರೀತಿ ಮೆದುಳನ್ನು ಉಪಯೋಗಿಸದವರ ಮುಂದುಗಡೆಯ ಮಿದುಳಿನ ಅಭಿವೃದ್ಧಿಯಾಗಿರಲಾರದು. ಪ್ರಾಣಿ ವರ್ಗದಿಂದ ಮನುಷ್ಯನನ್ನು ಬೇರ್ಪಡಿಸಿ ಎತ್ತರದ ವೇದಿಕೆಯಲ್ಲಿ ಕುಳ್ಳಿರಿಸಿ ಅಗ್ರಪೂಜೆಗೆಲ್ಲ ಪಾತ್ರನನ್ನಾಗಿ ಮಾಡಿರುವದು ಈ ಮುಂಭಾಗದ ಮೆದುಳೇ! ಈ ಮೆದುಳಿನಿಂದಲೇ ಮನುಷ್ಯನಲ್ಲಿ ರಚನಾತ್ಮಕ ಭಾವನೆಗಳೂ, ವಿವೇಕ ಶಕ್ತಿಯೂ ಹುಟ್ಟುವವು. ಮನುಷ್ಯನ ಮಿದುಳನ್ನು ಹಿಂದುಗಡೆಯದು ಮತ್ತು ಮುಂದುಗಡೆಯದೆಂದು ಎರಡಾಗಿ ವಿಭಾಗಿಸಿ ಒಲ್ಲವಾದರೆ ಹಿಂದುಗಡೆಯ ಮೆದುಳು ಅಭಿವೃದ್ಧಿಗೊಂಡು ೨೦೦,೦೦೦ ವರ್ಷಗಳಾಗಿರಬಹುದೆಂದು ಹೇಳುತ್ತಾರೆ. ಮೆದುಳಿನ ಈ ಭಾಗವೇ ಪ್ರಾಣಿಗಳಿಗೂ ಮನುಷ್ಯನಿಗೂ ಸಾಮ್ಯವನ್ನು ಇರಿಸಿ, ಮನುಷ್ಯನಲ್ಲಿ ದ್ವೇಷ, ಅಸೂಯೆ, ಭಯ, ಆಶೆ, ಮೋಹ, ಕ್ರೋಧಗಳನ್ನು ಹುಟ್ಟಿಸುತ್ತದೆ! ಮನುಷ್ಯನ ಮುಂಭಾಗದ ಮೆದುಳು ಇನ್ನೂ ಸಂಪೂರ್ಣಗೊಂಡಿಲ್ಲ. ಅದು ರೂಪಾಂತರ ಹೊಂದುತ್ತಿದೆ. ಈ ಮೆದುಳಿನಿಂದಲೇ ಎಲ್ಲಾ ಕ್ರಿಯಾತ್ಮಕ ಬುದ್ಧಿ ಮನುಷ್ಯನಿಗೆ ಬರತಕ್ಕದ್ದು. ಇದರ ಪ್ರಚೋದನೆಯಿಂದಲೇ ಉತ್ತುಂಗ ಭಾವನೆಗಳೂ, ತ್ಯಾಗ, ಸಹನೆ, ದಯಾ, ಮಮತೆಗಳು ಹುಟ್ಟುವವು.

ನಾವು ಊರಿಂದೂರಿಗೆ ಪ್ರಯಾಣ ಮಾಡುವಾಗ ಅನೇಕ ರೀತಿಯ ಪ್ರದೇಶಗಳನ್ನು ನೋಡುತ್ತೇವೆ. ಕೆಲವು ಭಾಗಗಳು ಫಲದಾಯಕವಾಗಿ, ಗಿಡಮರಗಳಿಂದ ಶೋಭಿತವಾಗಿ ಮನಸ್ಸಿಗೆ ಶಾಂತಿ ಆನಂದಗಳನ್ನು ಕೊಡುತ್ತವೆ. ಕೆಲವು ಮರುಭೂಮಿಗಳಾಗಿ ಯಾವುದೇ ಜೀವಕಳೆಗಳಿಲ್ಲದೆ ಬೇಸರವನ್ನು ತರುವವು. ಅದೇ ರೀತಿ ಮಾನವನ ಮೆದುಳೂ ಕೂಡ! ಜಗತ್ತಿನಲ್ಲಿ ಇಂದು ಸಾಕಷ್ಟು ಅಭಿವೃದ್ಧಿಗೊಳ್ಳದ ಪ್ರಾಂತವೆಂದರೆ ಮನುಷ್ಯನ ಕಿವಿಗಳ ಮಧ್ಯದ್ದು! "The most under developed territory in the world to-day is between man's ears" ಎಂದು ಹೇಳುವ ಮಾತಿನಲ್ಲಿ ಸತ್ಯಾಂಶವಿದೆ. ಈ ಕ್ಷೇತ್ರದಲ್ಲಿ ಸಾಕಷ್ಟು ವ್ಯವಸಾಯವಾಗಬೇಕು. ಇಲ್ಲದಿದ್ದರೆ ಜೀವನಯಾತ್ರೆಯು ಮರುಭೂಮಿಯ ಪಯಣದಂತಾಗಿ ಬೇಸರವನ್ನು ತಾರದಿರದು.

ಸತತ ಉಪಯೋಗಿಸುವದರಿಂದ ಕತ್ತಿ ಹರಿತವಾಗಿರುತ್ತದಲ್ಲದೆ ಬಹು ಕಾಲ ಬಾಳಿಕೆ ಬರುತ್ತದೆ. ಸತತ ಉಪಯೋಗಿಸುವದರಿಂದಲೇ ನಾಲಗೆಯೂ ತೀವ್ರಗೊಳ್ಳುವುದು. ನಮ್ಮ ಕೈಯೊಂದನ್ನು ಬೆನ್ನಿನ ಹಿಂಬದಿಗೆ ಕಟ್ಟಿ ಅದನ್ನು ಅಲುಗಾಡಿಸದೆ ಕೆಲವು ತಿಂಗಳುಗಳ ವರೆಗೆ ಇಟ್ಟರೆ ಮತ್ತೆ ಆ ಕೈಯನ್ನು ಎತ್ತುವುದು ಪ್ರಯಾಸವಾಗುವದು! ಅದರಂತೆ ಮೆದುಳನ್ನು ಉಪಯೋಗಿಸದೆ ಸೋಮಾರಿ ಜೀವನ ಮಾಡುವವರ ಮನೋಮಂಡಲವು ಮರುಭೂಮಿಯಂತಾಗಿ ಯಾವ ಕೆಲಸಕ್ಕೂ ಬಾರದು. ಯಾವಾಗ ಮನುಷ್ಯನು ತನ್ನ ಕರ್ತವ್ಯದ ಬಗೆಗೆ ಯೋಚಿಸದೆ, ಉತ್ತಮ ಪುಸ್ತಕಗಳನ್ನು ಓದದೆ, ಆರಾಮು ಸುಖಜೀವನಕ್ಕೆ ತೊಡಗುವನೋ ಆತನ ಮೆದುಳು ಮುಚ್ಚುಗಾಡಿನಂತಾಗಿ ಕರ್ತವ್ಯಶೂನ್ಯವಾಗಿ ತನ್ನ ಚೇತನವನ್ನು ಕಳಕೊಳ್ಳುವದು. ಈ ರೀತಿ ಬಿಚ್ಚು ಕಾಲವಿದ್ದಷ್ಟು ಆಘಾತ ಹೆಚ್ಚು. ಇಂಥಾ ಜನರು ಯಂತ್ರಗಳಂತಾಗುವರು. ಇವರದು ಜೀವನ್ಮೃತರಾಸ್ತಿ. ಜೀವನ ಪಥದಲ್ಲಿ ಗರಿ ಇಲ್ಲದ ನೌಕೆಗಳಂತೆ ಗಾಳಿ ಬೀಸಿದತ್ತ ಓಡಾಡುವ ಇವರ ಜೀವನವು ನೀರಸವೂ, ಗಂಡಾಂತರಯುಕ್ತವೂ ಆಗುವುದು.

ಕೆಲವರ ಮಿದುಳುಗಳು ಜನ್ಮತಃ ವಿಕಾಸಗೊಂಡಿದ್ದು ಕೀರ್ತಿ ಪಡೆಯುವವು. ಕೆಲವರದು ಸತತ ಪ್ರಯತ್ನದಿಂದ ಕೀರ್ತಿ ಶಿಖರಕ್ಕೇರುವವು. ಕೆಲವರದರ ಮೇಲೆ ಅಯೋಗ್ಯವಾಗಿ ಕೀರ್ತಿಯು ಹೇರಲ್ಪಡುವದು! ಮಿದುಳಿನ ಘನತೆ ಯೋಗ್ಯತೆಗಳು ಅದರ ಆಕಾರ ಪರಿಮಾಣಗಳಲ್ಲಿಲ್ಲ. ವಂಶಪಾರಂಪರ್ಯವಾಗಿ ಉತ್ತಮ ಮಿದುಳಿನ ಸೌಭಾಗ್ಯವಿಲ್ಲದಿದ್ದರೂ ಸತತ ವ್ಯವಸಾಯದಿಂದ ಮಿದುಳನ್ನು ಅಭಿವೃದ್ಧಿಗೊಳಿಸಿ ಜಗತ್ತಿಗೆ ಜ್ಞಾನಜ್ಯೋತಿಯಾಗಿ ಬೆಳಗಿದವರ ನಿದರ್ಶನಗಳು ಹಲವಿವೆ.

ಮಿದುಳಿನಲ್ಲಿ ಎರಡು ಭಾಗವಿರುವದಕ್ಕೆ ಅನುಗುಣವಾಗಿ ಮಾನವನಲ್ಲಿ ಎರಡು ವ್ಯಕ್ತಿತ್ವವಿದೆಯೆನ್ನಬಹುದು. ಒಂದು ನೈಸರ್ಗಿಕ ಮತ್ತೊಂದು ಕೃತ್ರಿಮ. ಒಂದು ಕೆಲಸ ಮಾಡಲೆತ್ನಿಸುವಾಗ ಒಂದು ಮನಸ್ಸು ಅದನ್ನು ಮಾಡಲು ಪ್ರಚೋದಿಸಿದರೆ ಮತ್ತೊಂದು ಬೇಡವೆನ್ನುವದು. ಮುಂದುಗಡೆಯ ಮಿದುಳಿಗೂ ಹಿಂದುಗಡೆಯ ಮಿದುಳಿಗೂ ಸತತ ಹೋರಾಟ ನಡೆದಿರುತ್ತದೆ. ಜಗತ್ತಿನ ನಾಗರೀಕತೆ, ಧರ್ಮ, ನೀತಿ, ನಡತೆಗಳು ಮುಂದಿರುವ ಮಿದುಳಿನ ಕಾರ್ಯಗಳು. ನಾಗರೀಕತೆಯ ವಿನಾಶ, ಸಂಸ್ಕೃತಿಯ ಹತ್ಯೆ, ಜನಾಂಗದ ಅಧಃಪತನ ಮೊದಲಾದವು ಹಿನ್ನೆಲೆಯ ಮಿದುಳಿನ ಕೃತ್ಯಗಳ ಫಲ.

ಈ ಮಿದುಳುಗಳಿಗನುಗುಣವಾಗಿಯೇ ಜಗತ್ತಿನ ಜನರ ವರ್ಗೀಕರಣವಾಗಿದೆಯೆನ್ನಬಹುದು. ಮುಂಭಾಗದ ಮಿದುಳು ಅಭಿವೃದ್ಧಿಗೊಂಡವರಲ್ಲಿ ದೇವತಾ ವೃತ್ತಿ ಹೆಚ್ಚಿದ್ದು ಜಗತ್ತಿಗೆ ಶಾಂತಿ, ಅಭಿವೃದ್ಧಿ ಬೇಕೆನ್ನುವರು. ಯುದ್ಧವೆಂದರೆ ಬೇಡವೆನ್ನುವರು. ಹಿಂಭಾಗದ ಮಿದುಳಿನ ಅಭಿವೃದ್ಧಿ ಪಡೆದವರಲ್ಲಿ ರಾಕ್ಷಸೀವೃತ್ತಿ ಹೆಚ್ಚಾಗಿ ಕೊಲೆ, ಲೂಟಿ, ದರೋಡೆ ಯುದ್ಧಗಳಿಗಾಗಿ ಹಾತೊರೆಯುವರು! ನಮ್ಮ ನೆರೆಯವರ ವಸ್ತುವನ್ನು ಕದಿಯಬೇಕೆಂಬ ನಮ್ಮನ್ನು ಪ್ರೇರೇಪಿಸಿದಾಗ ಅದು ಹಿಂದುಗಡೆಯ ಮಿದುಳಿನ ಕೃತ್ಯ. ಆ ಕ್ಷಣದಲ್ಲೇ ಹಾಗೆ ಅನ್ಯಾಯ ಮಾಡಬಾರದೆಂಬ ಭಾವನೆ ಹೊಳೆಯುತ್ತದೆ. ಅದು ಮುಂಭಾಗದ ಮಿದುಳಿನ ಎಚ್ಚರಿಕೆ. ಮನುಷ್ಯನಿಗೆ ತನ್ನ ಮುಂಭಾಗದ ಮಿದುಳಿನ ಮೇಲಿನ ಹಿಡಿತ ತಪ್ಪಿದರೆ ಆತನು ಭಯಂಕರ ರೀತಿಯಾಗಿ ಸಮಾಜದ್ರೋಹಿಯಾಗುವನು.

ಮನುಷ್ಯನಲ್ಲಿ ಆಶೆ, ಕೆಲಸದ ಮೇಲೆ ಆಸಕ್ತಿ, ಹುಟ್ಟಿಸುವ ಶಕ್ತಿ ಹಿಂಭಾಗದ ಮಿದುಳಿನದಾದರೂ ಅದನ್ನು ನಿಯಂತ್ರಣದಲ್ಲಿಟ್ಟು ಸತ್ಪಥದಲ್ಲಿ ಸಾಗಿಸುವಷ್ಟು ಮುಂಭಾಗದ ಮಿದುಳಿನ ಶಕ್ತಿಯನ್ನು ಅಭಿವೃದ್ಧಿ ಮಾಡಿಕೊಳ್ಳುವದು ಪ್ರತಿಯೊಬ್ಬನ ಕರ್ತವ್ಯ. ಪ್ರತಿ ವ್ಯಕ್ತಿಯೂ ಕುದುರೆ ಮತ್ತದರ ಸವಾರನಂತೆ! ಹಿನ್ನೆಲೆಯ ಮಿದುಳು ಕುದುರೆಯಾದರೆ ಮುಂಭಾಗದ ಮಿದುಳು ಸವಾರನು. ಸವಾರನು ಕುದುರೆಯನ್ನು ಹಿಡಿತದಲ್ಲಿಟ್ಟು ತನಗೆ ಬೇಕಾದೆಡೆ ನಡೆಸದೆ ಕುದುರೆಯು ಇಚ್ಛೆಯಂತೆ ವರ್ತಿಸಿದರೆ ಕಾಡುಸೇರಿ ಗಂಡಾಂತರಕ್ಕೀಡಾಗಬೇಕಾಗುವದು.

ಜಗತ್ತಿನಲ್ಲಿ ಒಂದೇ ಮಾದರಿಯ ಎರಡು ವ್ಯಕ್ತಿಗಳಿಲ್ಲ. ಪ್ರತಿಯೊಬ್ಬನ ಹೆಬ್ಬೆಟ್ಟು ಪ್ರತ್ಯೇಕ ಪ್ರತ್ಯೇಕವಿರುವಂತೆ ಪ್ರತಿಯೊಬ್ಬನ ಮಿದುಳೂ ಕೂಡ ಪ್ರತ್ಯೇಕವೆ! ಆದರೆ ಪ್ರತಿಯೊಬ್ಬನ ಮಿದುಳಿನಲ್ಲಿ ವಿಕಾಸ ಯೋಗ್ಯವಾದ, ಚೇತನಕಾರಿಯಾದ, ಮೂಲಭೂತವಾದ, ವಿಶಿಷ್ಟ ಶಕ್ತಿ ಇದೆಯೆಂಬುದನ್ನು ಪ್ರತಿಯೊಬ್ಬನೂ ಗಮನಿಸಬೇಕು. ಆ ವಿಶಿಷ್ಟತೆಯನ್ನು ತಿಳಿದುಕೊಂಡು ಆಯಾಯ ಮಾರ್ಗದಲ್ಲಿ ಸಾಗುವದರಲ್ಲಿಯೇ ಮಾನವನ ಜಾಣ್ಮೆ ಇದೆ. ಇದೇ ವಿದ್ಯೆಯ ಮೂಲ. ಅದ್ದರಿಂದ ಪ್ರತಿಯೊಬ್ಬನೂ ತನ್ನ ಮನಸ್ಸಿನ ಒಲವನ್ನು ಗೂಢವಾಗಿರುವ ಚೇತನವನ್ನು ಗುರ್ತಿಸಿ ಕಾರ್ಯಪ್ರವೃತ್ತರಾಗಬೇಕು.

ಸ್ವಿಟ್ಝರ್ಲೆಂಡಿನ ಅಂತರಾಷ್ಟ್ರೀಯ ಸೆಟ್ಲ್‌ಮೆಂಟ್ ಸಂಸ್ಥೆಯ ಪ್ರಸಿಡೆಂಟರಾದ ಲಿಯೋನ್ ಫ್ರೇಸರರ ಕಥೆಯನ್ನು ಇಲ್ಲಿ ಹೇಳಬಹುದು. ಅವರು ಚಿಕ್ಕ ವಿದ್ಯಾರ್ಥಿಯಾಗಿದ್ದಾಗ ವಿವಿಧ ಭಾಷೆಗಳನ್ನು ಕಲಿಯುವ ತಮ್ಮ ಜಾಣ್ಮೆಯನ್ನು ಅವರು ಗುರ್ತಿಸಿಕೊಂಡರು. ಅದರಂತೆ ಆ ಮಾರ್ಗವನ್ನು ಹಿಡಿದು ಜಗತ್ತಿನ ವಿವಿಧ ಭಾಷೆಗಳ ಅಭ್ಯಾಸ ಮಾಡತೊಡಗಿದರು. ಹೀಗೆ ಜಗತ್ತಿನ ಹಲವು ಭಾಷೆಗಳನ್ನು ಕಲಿತವರೆಂಬ ಕಾರಣಕ್ಕಾಗಿ ಇನ್ನೂ ಚಿಕ್ಕವರಾಗಿರುವಾಗಲೇ ಅವರನ್ನು ಜಗತ್ತಿನ ಅಂತರಾಷ್ಟ್ರೀಯ ಬ್ಯಾಂಕಿನ ಅಧ್ಯಕ್ಷರಾಗಿ ಆರಿಸಿದರು! ಸೂಕ್ಷ್ಮವಾಗಿ ಹೇಳಬೇಕಾದರೆ ಜೀವನವು ಸೂತ್ರವಾಗಿ ಸಾಗಲು "Jack of all trades and master of none" ಎಂದಿದ್ದರೆ ಆಗದು. ಜೀವನ ಸಮರದಲ್ಲಿ ವ್ಯಕ್ತಿಯಲ್ಲಿರುವ ವಿಶೇಷ ಯೋಗ್ಯತೆ, ಶಕ್ತಿಯೇ ಆತನನ್ನು ಮುಂದಕ್ಕೊಯ್ಯುವದು. ಯಾವುದಾದರೊಂದು ವಿಚಾರದಲ್ಲಿ ವಿಶೇಷಜ್ಞನೆನಿಸಬೇಕು. ಇಂದು ವಿಶೇಷಜ್ಞರ (Specialists) ಕಾಲ. ಅದು ಕ್ರೀಡೆಯೇ ಇರಲಿ, ರಾಜಕೀಯವೇ ಇರಲಿ, ವಿಜ್ಞಾನ, ಕಲೆ, ಬೇರಾವುದೇ ಆಗಲೊಲ್ಲದೇಕೆ; ಮನುಷ್ಯನು ತನ್ನ ಮೇಲಿನ ಕರ್ತವ್ಯವನ್ನು ಜನಜೀವನದ ಬಗ್ಗೆ ಸಲ್ಲಿಸಬೇಕಾದರೆ ತನ್ನ ಮನಸ್ಸಿನ ಒಲವನ್ನು ಅರಿತು ಅದರಲ್ಲಿ ವಿಶೇಷಜ್ಞನೆನಿಸಿ ದುಡಿಯಬೇಕು. ತನ್ನ ಇಚ್ಛಿತ ಮಾರ್ಗದಲ್ಲಿ ಮೆದುಳಿನ ಉತ್ತಮ ವ್ಯವಸಾಯ ಮಾಡಬೇಕು.

# ಕೊಡಗು

ತಾ: ೧೦-೩-೧೯೫೦ನೇ ಶುಕ್ರವಾರ

## ಗೋಸಂಪತ್ತು.

ಪೂರ್ಣ ವ್ಯವಸಾಯಗಾರರ ನಾಡಾಗಿರುವ ಕೊಡಗಿನಲ್ಲಿ ಗೋಸಂಪತ್ತಿನ ಅಭಿವೃದ್ಧಿಯ ಮೇಲೆಯೇ ದೇಶದ ಅಭ್ಯುದಯವೂ ನಿಂತಿದೆಯೆನ್ನಬಹುದು. ಗೋಸಂಪತ್ತನ್ನು ಹೆಚ್ಚಿಸುವ ವಿಧಾನಗಳಲ್ಲಿ ಗೋಪ್ರದರ್ಶನಗಳ ಏರ್ಪಾಡೂ ಒಂದು. ಅಖಿಲ ಭಾರತ ಜಾನುವಾರು ಪ್ರದರ್ಶನದ ಅಂಗವಾಗಿ ಮಡಿಕೇರಿಯಲ್ಲಿ ನಡೆದ ಅಖಿಲ ಕೊಡಗು ಏಳನೇ ಜಾನುವಾರು ಪ್ರದರ್ಶನವು ಯಶಸ್ವಿಯಾಗಿ ನಡೆಯಿತು. ಕೊಡಗಿನಂಥಾ ಚಿಕ್ಕ ಪ್ರದೇಶದಲ್ಲಿ ಅನ್ನೊಂದು ಉತ್ತಮ ರಾಸುಗಳು ಪ್ರದರ್ಶಿಸಲ್ಪಟ್ಟದು ಶ್ರೇಯಸ್ಕರ. ಕೆಲವು ಪ್ಲಾಂಟರುಗಳೂ, ರೈತರೂ ದನ ಸಾಕುವಿಕೆಯಲ್ಲಿ ಇತ್ತೀಚೆಗೆ ತುಂಬಾ ಶ್ರದ್ಧೆ ವಹಿಸುತ್ತಿರುವದೇ ಇದಕ್ಕೆ ಕಾರಣ.

ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಶ್ರೀ. ಕೆ. ಸಿ. ಸೇನ್‌ರವರ ಭಾಷಣವು ಬೋಧಪ್ರದವೂ, ಸೂಕ್ತವೂ ಆಗಿದೆ. ಇವರು ವೆಟರ್ನರಿ ವಿಚಾರಗಳಲ್ಲಿ ತಜ್ಞರಿದ್ದು ಅವರ ಸೂಚನೆಗಳು ಗಮನಾರ್ಹವಾಗಿವೆ. ಇವರು ಹೇಳಿದಂತೆ ಕೊಡಗು ಜಾನುವಾರುಗಳ ಅಭಿವೃದ್ಧಿಗೆ ಆದರ್ಶನಾಡಾಗಿದೆ. ಇಲ್ಲಿಯ ಕೆಲವುಭಾಗಗಳ ಹವಾಗುಣವು ಸೂಕ್ತವಾದುದಾಗಿದ್ದು ದನಗಳಿಗೆ ಮೇಯಲು ವಿಶಾಲ ಹುಲ್ಲುಗಾವಲುಗಳ ಏರ್ಪಾಡು ಮಾಡುವದೂ ಸಾಧ್ಯವಿದೆ. ಕೊಡಗಿನ ವಿವಿಧ ಭಾಗಗಳಿಗೆ ಹೊಂದಿಕೆಯಾಗುವ ಜಾತಿಯ ದನಗಳನ್ನು ಆಯಾಯ ಭಾಗಗಳಲ್ಲಿ ಸಾಕುವ ಏರ್ಪಾಡು ಮಾಡುವದು ಶ್ರೇಯಸ್ಕರವೆಂದು ಅವರು ಹೇಳಿದ್ದಾರೆ. ನಿಜವಾಗಿಯೂ ಬಯಲು ಪ್ರದೇಶದ ಜಾತಿ ಬೆಟ್ಟ ಪ್ರದೇಶದಲ್ಲಿ ಚೆನ್ನಾಗಿ ಬಾಳಲಾರದು. ಕೊಡಗಿನಲ್ಲಿರುವ ನಾಡುಜಾತಿಯ ದನಗಳನ್ನು ಅಭಿವೃದ್ಧಿಗೊಳಿಸಬೇಕಾದ ಅವಶ್ಯಕತೆಯನ್ನು ಇವರು ಒತ್ತಿ ಹೇಳಿರುವರು. ಅಲ್ಲದೆ ಕೊಡಗಿನ ಹಾಲಿನ ಅಭಾವವನ್ನು ಉಲ್ಲೇಖಿಸುತ್ತಾ, ಹಿಂದೂದೇಶದಲ್ಲಿ ಸರಾಸರಿ ಒಬ್ಬನು ದಿನಕ್ಕೆ ಸುಮಾರು ೫½ ಔನ್ಸಿನಷ್ಟು ಹಾಲನ್ನು ಉಪಯೋಗಿಸಿದರೆ ಕೊಡಗಿನಲ್ಲಿ ಸರಾಸರಿ ೩ ಔನ್ಸು ಮಾತ್ರ ಉಪಯೋಗಿಸಲ್ಪಡುತ್ತಿದೆಯೆಂದೂ ಇದು ವಿಷಾದಕರವೆಂದೂ ಕೊಡಗಿನ ಹಾಲು ಸರಬರಾಯಿ ವ್ಯವಸ್ಥೆ ಇನ್ನೂ ಅಭಿವೃದ್ಧಿಗೊಳ್ಳಬೇಕೆಂದೂ ಮಡಿಕೇರಿಯ ಡೈರಿ ಫಾರಮಿನ ಕೆಲಸವು ಅಭಿವೃದ್ಧಿ ಪಥದಲ್ಲಿದೆಯೆಂದೂ ಹೇಳಿದರು. ಈ ಹಿಂದೆ ಮಡಿಕೇರಿ ಡೈರಿ ಫಾರಮಿನ ಉತ್ಪತ್ತಿಯು ಖರ್ಚಿನ ಶೇಕಡ ೫೦ಕ್ಕೆ ಆರು ಇದ್ದುದು ಈಗ ೭೭ಕ್ಕೆ ಏರುವದು ಪ್ರಗತಿಯ ಚಿಹ್ನೆಯಾಗಿದೆ. ಇತರ ಕಡೆಗಳಲ್ಲಿನ ಸರಕಾರಿ ಡೈರಿ ಫಾರಂಗಳಲ್ಲಿ ಉತ್ಪತ್ತಿಯು ಶೇಕಡ ೫೦ಕ್ಕೆ ಮಿಕ್ಕಿರುತ್ತಿಲ್ಲವಾದರೂ ಖಾಸಗಿ ಜನರಿಗೆ ಮಾದರಿ ಡೈರಿ ಫಾರಮನ್ನು ಅಭಿವೃದ್ಧಿಪಡಿಸುವ ಅನುಭವವನ್ನೂ, ಕಡಿಮೆ ಬೆಲೆಯ ಹಾಲನ್ನು ಸರಬರಾಯಿ ಮಾಡುವ ಏರ್ಪಾಡನ್ನೂ ಉತ್ತಮ ತಳಿಯ ಅಭಿವೃದ್ಧಿ ಮಾಡುವದನ್ನು ಸಾಧಿಸಲು ನಷ್ಟವಾದರೂ ಡೈರಿ ಫಾರಂಗಳನ್ನು ನಡೆಸುವದಾಗಿದೆ. ಕೊಡಗಿನಲ್ಲಿ ಹಾಲಿನ ಅಭಾವವು ಪ್ರತಿಯೊಬ್ಬನೂ ಅನುಭವಿಸುತ್ತಿರುವ ಸಂಗತಿ. ಇದನ್ನು ಸಾಧಿಸಲು ಕೊಡಗಿನ ವಿವಿಧ ಕೇಂದ್ರಗಳಲ್ಲಿ ಡೈರಿ ಫಾರಂಗಳು ಸ್ಥಾಪಿಸಲ್ಪಡುವ ಅವಶ್ಯಕತೆ ಇದೆ.

ಇತ್ತೀಚೆಗೆ ಕೊಡಗು ವೆಟರ್ನರಿ ಇಲಾಖೆಯು ಬಡಾವಣೆಯಾಗುತ್ತಾ ಈಗ ಆರು ಖಾಯಂ ಆಸ್ಪತ್ರೆಗಳೂ, ಐದು ಡಿಸ್ಪೆನ್ಸರಿಗಳೂ ಕೆಲಸ ಮಾಡುತ್ತಿರುವವು. ರೈತರ ನಾಡಾದ ಕೊಡಗಿನಲ್ಲಿ ಮನುಷ್ಯನ ಆಸ್ಪತ್ರೆಗಳಷ್ಟೇ ಜಾನುವಾರುಗಳ ಆಸ್ಪತ್ರೆಯು ಮುಖ್ಯವಾದುದಾಗಿದೆ. ಕೊಡಗಿನಂಥಾ ಚಿಕ್ಕ ಪ್ರಾಂತ್ಯದಲ್ಲಿ ಮೇಲಿನಂತೆ ೧೧ ಕೇಂದ್ರಗಳಲ್ಲಿ ಆಸ್ಪತ್ರೆ ನಡೆಯುತ್ತಿರುವುದು ತೃಪ್ತಿಕರವೆನ್ನಬಹುದಾದರೂ ಅದು ಇನ್ನೂ ಹೆಚ್ಚಾಗುವ ಅವಶ್ಯಕತೆ ಇದೆ. ಈ ಇಲಾಖೆಯು ವಿಸ್ತಾರಗೊಂಡು ಹೆಚ್ಚಿನ ಸೇವೆ ಸಲ್ಲಿಸಲು ಶಕ್ಯವಾಗುವಂತೆ ಮಾಡಿದ ಗೌರವವು ಇಲಾಖೆಯ ಮುಖ್ಯಸ್ಥರಿಗೂ, ಸಂಬಂಧಿಸಿದ ಸರಕಾರಿ ಅಧಿಕಾರಿಗಳಿಗೂ ಸಲ್ಲಬೇಕು.

## ವರ್ತಮಾನ.

ಎಸ್. ಎಸ್. ಎಲ್. ಸಿ. ಪಾಸಾಗಿ ವಯಸ್ಸು ೧೮ ರಿಂದ ೨೫ರ ಒಳಗೆ ಇರುವ ಯುವಕರು ವಿಮಾನ ದಳಕ್ಕೆ ಬೇಕಾಗಿದ್ದಾರೆ. ಸೇರಲು ಇಚ್ಛೆಯುಳ್ಳವರು ಹೆಚ್ಚಿನ ಮಾಹಿತಿಯನ್ನು ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಶ್ರೀ ಕೋದಂಡ ಅಪ್ಪಚ್ಚು ದೇವಯ್ಯ ಜ್ಞಾಪಕಾರ್ಥ ಇಟ್ಟಿರುವ ಕ್ರಿಕೆಟ್ ಶೀಲ್ಡಿನ ಪಂದ್ಯಾಟವು ಮಡಿಕೇರಿ ಸ್ಟೇಶನ್ ಕ್ರಿಕೆಟ್ ಮೈದಾನದಲ್ಲಿ ಕಾಲೇಜು ಮತ್ತು ಸ್ಕೂಲಿನ ಸಂಯುಕ್ತ ಟೀಮಿಗೂ ವಾಂಡರ್ಸ್ ಟೀಮಿಗೂ ನಡೆದು ಕಾಲೇಜು ಮತ್ತು ಸ್ಕೂಲು ಟೀಮು ಗೆದ್ದು ಶೀಲ್ಡನ್ನು ಪಡೆಯಿತು.

ಕಾಪಾಡಿ ಗ್ರಾಮದ ಶ್ರೀ. ಕೆ. ಬಿ. ಬೆಳ್ಳಪ್ಪನವರು ಹುಣಸೂರು ತಾಲೋಕು ಹಿರಿಕ್ಯಾತನಹಳ್ಳಿ ಗ್ರಾಮದಲ್ಲಿ ಅಧ್ಯಾಪಕರಾಗಿ ಬಹು ಉತ್ತಮ ಕೆಲಸ ಮಾಡಿರುವರೆಂದೂ, ಗ್ರಾಮಸ್ಥರ ಸಂಘಟನೆಯನ್ನು ಮಾಡಿ ಗ್ರಾಮದ ಪುರೋಭಿವೃದ್ಧಿಗಾಗಿ ಅನುಕೂಲ್ಯ ಸೇವೆಮಾಡುತ್ತಿರುವರೆಂದು ಆ ಗ್ರಾಮದ ಶ್ರೀ. ಎಚ್. ಎ. ಬಸಪ್ಪನವರು ಬರೆಯುತ್ತಾರೆ.

ತಾರೀಕು ೨೭-೩-೫೦ ನೇ ಸೋಮವಾರ ಭಾಗಮಂಡಲ ಶ್ರೀರಾಮಮಂದಿರದಲ್ಲಿ ಶ್ರೀರಾಮನವಮಿ ಉತ್ಸವವನ್ನು ಶ್ರೀ. ಸ್ವಾಮಿ ಶಾಂಭವಾನಂದಜಿಯವರ ಅಧ್ಯಕ್ಷತೆಯಲ್ಲಿ ನಡೆಸುವರಾಗಿ ತಿಳಿಯಬರುತ್ತದೆ.

ಶ್ರೀ ಕೊಕ್ಕೇರ ಬಿದ್ದಪ್ಪ, ಕುಟ್ಟಪ್ಪ ಮತ್ತು ಕಾರ್ಯಪ್ಪ ಇವರುಗಳ ಸಾಧಾರಣ ೮೦೦ ಬಟ್ಟೆ ಭೂಮಿಯ ಹುಲ್ಲುಮುಚ್ಚವು ತಾ. ೩ ರಲ್ಲಿ ಬೆಂಕಿ ಅನಾಹುತಕ್ಕೊಳಗಾಗಿ ಬೆಂದು ಹೋಗಿದೆ.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ಮೀಟಿಂಗು ಈ ಮೊದಲು ಗಜೆಟಿನಲ್ಲಿ ಪ್ರಕಟವಾದಂತೆ ತಾ. ೨೨ ರಲ್ಲಿ ನಡೆಯದೆ ಈ ತಾರೀಕು ೨೮ ರಲ್ಲಿ ನಡೆಯುವದೆಂದು ತಿಳಿದುಬಂದಿದೆ.

ಕೊಡಗಿನ ಅಕ್ಕಿ ಮಿಲ್ಲಿನವರು ಸೇರಿ ಭತ್ತವನ್ನು ಪೂಲಿಂಗ್ ಪದ್ಧತಿ ಮೇರೆ ಕೊಂಡುಕೊಳ್ಳುವಂತೆ ಮಾಡಿರುವ ತೀರ್ಮಾನವು ರೈತರಿಗೆ ಹಾನಿಕರವಾಗಿದೆಯೆಂದು ತಿಳಿಸಲು ದಕ್ಷಿಣ ಕೊಡಗಿನ ಕೆಲವು ಪ್ರಮುಖ ರೈತರು ಈ ದಿನ ರೇಶನಿಂಗ್ ಡೈರೆಕ್ಟರಾದ ಅಸಿಸ್ಟೆಂಟ್ ಕಮೀಷನರವರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದರೆಂದು ವರ್ತಮಾನ.

ನಿವೃತ್ತರಾಗಲಿರುವ ಚೀಫ್ ಕಮಿಷನರ್ ಶ್ರೀ ಸಿ. ಟಿ. ಮೊದಲಿಯಾರ್‌ರವರಿಗೆ ದಕ್ಷಿಣ ಕೊಡಗಿನ ಜನರು ತಾ. ೨೭ ರಲ್ಲಿ ವೀರಾಜಪೇಟೆಯಲ್ಲಿ ಕೊಟ್ಟ ಸತ್ಕಾರ ಕೂಟದಲ್ಲಿ ಅವರ ಉತ್ತಮ ಸೇವೆಯ ಜ್ಞಾಪಕಾರ್ಥವಾಗಿ ಒಂದು "ಪೀಚೆಕತ್ತಿ" ಯನ್ನು ಬಹುಮಾನವಾಗಿ ಕೊಟ್ಟರು.

ಬೆಂಗಳೂರಿನ ಡೈರಿ ರಿಸರ್ಚ್‌ನ ಡೈರೆಕ್ಟರಾದ ಡಾ. ಕೆ. ಸಿ. ಸೇನ್, ಡಿ. ಎಸ್. ಸಿ., ಎಫ್. ಎನ್. ಐ., ರವರ ಅಧ್ಯಕ್ಷತೆಯಲ್ಲಿ ೭ನೇ ಅಖಿಲ ಕೊಡಗಿನ ಕೇಂದ್ರ ದನಗಳ ಪ್ರದರ್ಶನವು ತಾ. ೩ ರಲ್ಲಿ ಮಡಿಕೇರಿಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಮತಿ ಯಶೋದರ ಮೊದಲಿಯಾರ್‌ರವರು ಬಹುಮಾನಗಳನ್ನು ಹಂಚಿದರು.

ಕೊಡಗಿನಲ್ಲಿ ಕಾಂಗ್ರೆಸ್ ಎಡ್‌ಹಾಕ್ ಕಮಿಟಿಯವರು ಪಂಚಾಯಿತರ ಚುನಾವಣೆಯನ್ನು ಕ್ರಮ ತಪ್ಪಿ ನಡಿಸುತ್ತಿದ್ದಾರೆಂದು ಬರೆದ ಪತ್ರಕ್ಕೆ ಕೊಡಗಿನಲ್ಲಿ ಚುನಾವಣೆ ಏರ್ಪಾಡೇನೂ ಇನ್ನೂ ಮಾಡಿಲ್ಲವೆಂದೂ ಚುನಾವಣೆಯು ಮಾರ್ಚಿ ಅಂತ್ಯದೊಳಗೆ ನಡೆಯುವದೆಂದೂ ಕರ್ನಾಟಕ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರು ಜವಾಬು ಕೊಟ್ಟಿರುವರೆಂದು ತಿಳಿದು ಬರುತ್ತದೆ.

## ಕೊಡಗಿನಲ್ಲಿ ಕಾಂಗ್ರೆಸ್ ಚುನಾವಣೆಯ ಮಾದರಿ

ತಾ. ೮-೩-೫೦ ರಲ್ಲಿ ಫ್ರೇಜರ್‌ಪೇಟೆಯಲ್ಲಿ ಕಾಂಗ್ರೆಸ್ ಪಂಚಾಯಿತರನ್ನು ಚುನಾಯಿಸಿದ ರೀತಿಯನ್ನು ದೇಶದವರ ಅವಗಾಹನೆಗೆ ತರುವುದು ಯುಕ್ತವೆಂದು ತೋರುತ್ತದೆ. ಇಲ್ಲಿ ೧೦೦೦ಕ್ಕೆ ಮೇಲ್ಪಟ್ಟು ಕಾಂಗ್ರೆಸ್ ಪ್ರಾಥಮಿಕ ಸದಸ್ಯರಿದ್ದಾರೆ. ಆದಾಗ್ಯೂ ಪಂಚಾಯಿತಿಯ ಚುನಾವಣೆಯ ತಾರೀಕನ್ನು ಯಾರಿಗೂ ತಿಳಿಸಿರಲಿಲ್ಲ. ನಂಜರಾಯಪಟ್ಟಣದಲ್ಲಿ ಮಾತ್ರ ಸ್ವಲ್ಪ ನೋಟೀಸುಗಳನ್ನು ಹಂಚಿದ್ದರು. ಆಕಸ್ಮಾತ್ ಆ ನೋಟೀಸು ನನ್ನ ಕೈ ಸೇರಿ, ಅದರಲ್ಲಿ ನಮೂದಿಸಿದ್ದ ಮೇರೆ ೩ ಗಂಟೆಗೆ ಸರಿಯಾಗಿ ಫ್ರೇಜರ್‌ಪೇಟೆಯ ಸಂತೆಮಾಳಕ್ಕೆ ಹೋದೆನು. ಅಲ್ಲಿ ಯಾರೂ ಇರಲಿಲ್ಲ. ಶ್ರೀ ಎಚ್. ಸೋಮಣ್ಣನವರು ಮತ್ತು ಶ್ರೀ ಬಿ. ಕೆ. ಚಾಮುಂಡೇಶ್ವರಪ್ಪನವರು ಆಂಜನೇಯ ದೇವಸ್ಥಾನದ ಬಳಿ ಕೆಲವೇ ನಿಮಿಷಗಳಿದ್ದು ಕೆಲವು ಜನರಲ್ಲಿ ಏನೋ ಮಾತನಾಡಿಕೊಂಡು ಹೆಬ್ಬಾಲೆಗೆ 'ಹೋದರೆಂದು' ತಿಳಿಯಿತು. ಅಲ್ಲಿಂದ ಸಾಧಾರಣ ಸಾಯಂಕಾಲ ೫ ಗಂಟೆಯಲ್ಲಿ ವಾಪಾಸು ಬರುವಾಗ್ಗೆ ಆಂಜನೇಯ ದೇವಸ್ಥಾನದಲ್ಲಿ ೧೦ ಜನರ ಮಧ್ಯದಲ್ಲಿ ಯಾರಿಗೋ ತಮಗೆ ಬೇಕಾದ ೩ ಜನರನ್ನು ಕಾಂಗ್ರೆಸ್ ಪಂಚಾಯಿತಿಗೆ ನೇಮಕ ಮಾಡಿ ಹೋದರಂತೆ! ೧೦೦೦ ಜನಕ್ಕೂ ಮೇಲ್ಪಟ್ಟಿರುವ ಪ್ರಾಥಮಿಕ ಸದಸ್ಯರ ಮುಖಕ್ಕೆ ಮಸಿ ಬಳೆದು, ಸ್ವೇಚ್ಛೆಯಾಗಿ ತಮಗೆ ಇಷ್ಟ ಬಂದವರನ್ನು ನೇಮಿಸುವುದೆಂದರೆ, ಇದಕ್ಕಿಂತಲೂ ಅನ್ಯಾಯ ಬೇರಿರಲಾರದು. ತಕ್ಕಷ್ಟು ಪ್ರಚಾರವೇ ಇಲ್ಲದೆ, ಊರಿಗೆ ಬಂದರೂ ಎಲ್ಲರಿಗೂ ತಿಳಿಯದಂತೆ ಗುಟ್ಟಿನಲ್ಲಿ ಚುನಾವಣೆಯನ್ನು ಮಾಡುತ್ತಿರುವ ಇವರು ಕಾಂಗ್ರೆಸ್ ಸಂಸ್ಥೆಯನ್ನು ಶಿಥಿಲಗೊಳಿಸಲು ಹೊರಟಿರುವ ನಾಯಕರೆಂದರೆ ಅತ್ಯುಕ್ತಿಯಾಗುವದೇ? ಇಂಥಾ ಧುರೀಣರು ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳಾದರೆ ಬಡ ರೈತರ ಗತಿಯೇನು? ಸರ್ವರೂ ಇವರ ವರ್ತನೆಯನ್ನು ಗುರುತಿಸಿಕೊಳ್ಳುವುದು ಉಚಿತ.

ಕೊಡಗಿನ ಕಾಂಗ್ರೆಸ್ ಮುಂದಾಳುಗಳು ಎಚ್ಚರಗೊಂಡು, ಇಂತಹ ಪ್ರಸಂಗಗಳನ್ನು ಕಾಂಗ್ರೆಸ್ ಮೇಲಧಿಕಾರಿಗಳ ಅವಗಾಹನೆಗೆ ತಂದು, ಕಾಂಗ್ರೆಸ್ ಸಂಸ್ಥೆಯ ಗೌರವವನ್ನು ಕಾಪಾಡಲು ಪ್ರಯತ್ನಪಡುವರೇ?

ಕಾಂಗ್ರೆಸ್ ಪ್ರಾಥಮಿಕ ಸದಸ್ಯ.

## ವಾರ್ತೆಗಳು.

ಹಿಂದೀ ರಾಜ್ಯಘಟನಾ ಸಭೆಯ ಪ್ರಥಮ ಮೀಟಿಂಗಿನಲ್ಲಿ ಅಧ್ಯಕ್ಷಸ್ಥಾನ ವಹಿಸಿದ ಡಾ. ಸಚ್ಚಿದಾನಂದ ಸಿನ್ಹಾರವರು ತಾರೀಕು ೬ ರಲ್ಲಿ ಸ್ವರ್ಗಸ್ಥರಾದರು.

ಹೈದರಾಬಾದಿನ ಹಿಂದಿನ ಮುಖ್ಯಮಂತ್ರಿಗಳಾಗಿದ್ದು ನಂತರ ದಸ್ತಗಿರಿಯಾಗಿ ಜೈಲಿನಲ್ಲಿದ್ದ ಮೀರ್ ಲಾಯಿಕ್ ಅಲಿಯವರು ತಮ್ಮ ಕುಟುಂಬದೊಡನೆ ಜೈಲಿನಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ. ಪೋಲೀಸರು ತನಿಖೆ ನಡೆಸುತ್ತಿರುವರು.

ಅಮೇರಿಕನ್ ಪ್ರತಿನಿಧಿಗಳ ಮತ್ತು ಪ್ರಜೆಗಳ ಮೇಲೆ ಆಗಾಗ ಅಭಿಯೋಗ ನಡೆಸುವ ಸೋವಿಯಟ್ ಮಿತ್ರರಾಷ್ಟ್ರಗಳಾದ ಬಲ್ಗೇರಿಯಾ, ಹಂಗೇರಿ ಮತ್ತು ರುಮೇನಿಯಾ ಪ್ರಜೆಗಳ ಸಂಯುಕ್ತ ಅಮೇರಿಕದಲ್ಲಿರುವ ಎಲ್ಲಾ ಸೊತ್ತುಗಳಿಗೆ ಅಮೇರಿಕನ್ ಸರಕಾರವು ಮುಟ್ಟುಗೋಲು ಹಾಕಿರುವುದು.

೧೯೪೮ನೇ ಜನವರಿ ತಾ. ೩೦ (ಗಾಂಧೀಜಿಯವರ ಕೊಲೆಯಾದ ದಿನ) ರಿಂದ ೧೯೪೯ನೇ ಜೂನ್ ವರೆಗೆ ಮುಂಬಯಿಯಲ್ಲಿ ಪೋಲೀಸರು ೬೭ ಸಂದರ್ಭಗಳಲ್ಲಿ ಗುಂಡು ಹಾರಿಸಬೇಕಾಗಿ ಬಂದ ಮಾಹಿತಿಯನ್ನು ಅಲ್ಲಿಯ ಗೃಹಸಚಿವರು ಪ್ರಕಟಿಸಿರುವರು.

# ಓದುಗರ ಓಲೆಗಳು.

### ತಕ್ಷಣ ನಿಲ್ಲಬೇಕು.

ಕೊಡಗಿನ ರೈತನಿಗೆ ಬೇಕಾದ ದನಕರುಗಳು ಹೊರಗಿನಿಂದ ಬರಬೇಕು. ರೈತನು ಹೆಚ್ಚಾಗಿ ದನಗಳನ್ನು ಕ್ರಯಕ್ಕೆ ಪಡೆಯುವ ಸಂತೆ ಎಂದರೆ ಗೋಣಿಕೊಪ್ಪಲು. ಈ ಸಂತೆಗೆ ಜನರ ಬೇಡಿಕೆಯನ್ನು ಸಲ್ಲಿಸುವಷ್ಟು ಪರಿಮಾಣದಲ್ಲಿ ದನಗಳು ಬರುತ್ತಿಲ್ಲ. ಇತ್ತೀಚೆಗಾಗಿ ಬಂದ ದನಗಳೂ ರೈತರಿಗೆ ದೊರೆಯುದಾಗಿದೆ ಮಾಂಸ ಮೋಡಿ ಮತ್ತಿತರ ಕಡೆಯ ಮಾರಿಕೆಗಾರರು ಈ ದನಗಳನ್ನು ಹೆಚ್ಚಿನ ಬೆಲೆ ಕೊಟ್ಟು ಪಡೆಯುತಿದ್ದಾರೆ. ಇದರಿಂದ ಒಂದು ಸಾಧಾರಣ ಎತ್ತಿನ ಬೆಲೆ೭೦೦, ೧೫೦ರೂ ಪಾಯಿಗೆ ತಲಪಿದ ಹೊರಗಿನಿಂದ ಬಂದು ಇಲ್ಲಿಂದ ದನಕರುಗಳನ್ನು ಕೇವಲ ಮಾಂಸಕ್ಕಾಗಿಯೋ ಯಾ ವ್ಯವಸಾಯಕ್ಕಾಗಿಯೋ ಕೊಂಡು ಹೋಗುವವನ್ನು ಶೀಘ್ರ ನಿಲ್ಲಿಸಬೇಕು. ಕೊಡಗಿನ ಸರಕಾರವು ಇನ್ನಾದರೂ ಈ ವಿಚಾರಕ್ಕೆ ಕಣ್ಣು ತೆರೆಯುವದೇ?

M A B

---

### ಕಾ ಮಾ ಲೆ ಕ ಣ್ಣು !

೧

ತಾರೀಖು ೨೪-೨-೫೦ ರಲ್ಲಿ ಕೊಡಗು ಪತ್ರಿಕೆಯಲ್ಲಿ ಪ್ರಕಟವಾದ ಲೇಖಕ 'ವಿರಾಟ್' ಇವರ ಲೇಖನದಲ್ಲಿ 'ಕೇವಲ ಕಾಲೋಚಿತವಷ್ಟು ದೊಡ್ಡದಿಲ್ಲದ ಕೊಡಗಿಗೆ ಮಂತ್ರಿಮಂಡಳದ ಅವಶ್ಯಕತೆ ಇಲ್ಲ. ಇನ್ನು ಚಿಕ್ಕ ಸ್ಥಳಗಳಲ್ಲಿ ಪ್ರಜಾಪ್ರತಿನಿಧಿ ಆಡಳಿತವು ಯಾವ ರೀತಿಯಲ್ಲಿ ಕಾರಣವಾಗುವದು' ಎಂದು ಬರೆದಿರುವನ್ನು ಉಲ್ಲೇಖಿಸುತ್ತಾ 'ಕೊಡಗು ಪ್ರತ್ಯೇಕವಿರಬೇಕೆನ್ನುವ ಕೆಲವರ ಮತ್ತು ಕೊಡಗು ಪತ್ರಿಕೆಯ ಸಂಪಾದಕರ ಸಮ್ಮತಿಯಿಂದ ಈ ಲೇಖನ ಪ್ರಕಟವಾಗಿರಬಹುದೆಂದು ಹೇಳಬಹುದು.... ಇವರ ಬೇಲಿಯಿಂದ ಬೆಕ್ಕು ಮೆಲ್ಲಗೆ ಮುಖವನ್ನು ಹೊರಗೆ ತೋರಿಸುತ್ತಿದೆ. ಸಾರ್ವಜನಿಕ ವಿಷಯಗಳಲ್ಲಿ ಪ್ರಜಾ ಸರಕಾರ ಬೇಕೆಂದು ರಂಪ ಮಾಡುವದು ಬರಿ ಜನರನ್ನು ಮೋಸಮಾಡಲಿಕ್ಕೆ' ಎಂದು 'ವಿಶ್ವಮಿತ್ರ' ಎಂಬುವವರು ಬರೆದಿದ್ದಾಗಿ. ಚಂಡಿಯು ಕಸವನ್ನು ಕೆದಕಿ ಹುಳಹುಪ್ಪಡಿಯಲ್ಲಿ ತೃಪ್ತಿಪಡುವ ಕೋಳಿ ಅದೇ ಬುದ್ಧಿಯಲ್ಲಿ ಸಾರ್ವಜನಿಕರನ್ನು ಆಣಕಿಸಲೋ ಎಂಬ ರೀತಿ ಕೂಗಿದಂತೆ ಪತ್ರಿಕಾಕರ್ತರ ಜವಾಬ್ದಾರಿಯನ್ನು, ಪತ್ರಿಕೆಯ ಧ್ಯೇಯವನ್ನು ಎಂಯದೆ ಪಕ್ಷ ರಾಜಕೀಯ ಬಿಟ್ಟು ಮಂಗನ ಮುಂದೆ ನೋಡಲಾರದವರು 'ವಿಶ್ವಮಿತ್ರ' ಎಂದುಕೊಳ್ಳುವ ಹೆಸರು ಪಟ್ಟಿದ್ದಾರೆ! ಇದು ನಮಸ್ಕರಿಸುವ ಮನುಷ್ಯನಿಗೆ ಸಾಯುವ ನಾರಾಯಣನೆಂದು ಹೇಳಿದ್ದಂತೆ! ಒಂದು ಲೇಖನ ಪತ್ರಿಕೆಯಲ್ಲಿ ಪ್ರಕಟವಾದರೆ ಆ ಲೇಖನದ ಅಭಿಪ್ರಾಯವೇ ಸಂಪಾದಕರ ಅಭಿಪ್ರಾಯವಾಗಲಾರದು. ಪತ್ರಿಕೆಯೆಂದರೆ ಸಂಪಾದಕರ ಅಭಿಪ್ರಾಯಕೆ ಓಳ ಹಾಕುವ ಸಾಲ್ಕಾರು ಚೆನ್ನೆಲುಬಿಲ್ಲದವರ ಕೂಡಿಕೆಯಲ್ಲ. ಸಂಪಾದಕರು ತಮ್ಮ ಅಭಿಪ್ರಾಯಗಳನ್ನು ಅಗ್ರಲೇಖನದಲ್ಲಿ ಬರೆಯುತ್ತಾರೆ. ಇತರ ಕಡೆ ತಮ್ಮ ನಿಸ್ಸಂಧಾನರು ಪತ್ರಿಕೆಯ ಯೋಗ್ಯತೆಗೆ, ಸಾರ್ವಜನಿಕ ಹಿತಕ್ಕೆ ಕುಂದಕವಾಗದ ರೀತಿ ಇಲ್ಲವೇ ಅಶ್ಲೀಲವೆನಿಸದ ರೀತಿ ನಮ್ಮ ನಿಮ್ಮ ಅಭಿಪ್ರಾಯಗಳನ್ನು ಕೂಡ ಬರೆದು . ಪಾರ್ಟಿ ಪಕ್ಷಗಳ ಕಿ ಮಾಲೆ ರೋಗದಿಂದ ನರಳುವ ನೀವು ಪತ್ರಿಕೆಯಲ್ಲಿ ಪ್ರಕಟವಾದುದೆಲ್ಲವೂ ಆ ಪತ್ರಿಕೆಯ ಸಂಪಾದಕರ ಅನುಯಾಯಿಗಳ ಅಭಿಪ್ರಾಯವೆಂದು ಭಾವಿಸುವದರ, ಅದಕ್ಕೆ ಸರಿಯಾಗಿ ಹಿತವಾದರೂ ಅಹಿತಮಾಡಿ ಬೆಳಕಿಗೆ ಬರಲೆತ್ನಿಸುವ ನಿಮ್ಮ ಸಂಪಾದಕರ ಕಾರ್ಯಾಲಿ ಪತ್ರಿಕೋದ್ಯಮವೂ ನಿಮಗಳ ಯೋಗ್ಯತೆಗೆ ಸರಿಯಾದುವುಗಳೆ! ಆನೆಯೊಂದು ರಸ್ತೆಯಲ್ಲಿ ಸಾಗುತ್ತಿರುವಾಗ ಶ್ವಾನವು ತನ್ನ ಹುಟ್ಟುಗುಣದಂತೆ ಬೊಗಳಲೇ ಬೇಕಲ್ಲವೇ?

'AUM'

೨

### ಅ ಬ್ಬಾ, ವಿಶ್ವಾಮಿತ್ರ ಋಷಿಗಳೆ!

ನನ್ನ ಲೇಖನದ ಒಂದು ವಾಕ್ಯವನ್ನು ತಾವು ತಮ್ಮ ವಾದಕ್ಕೆ ಅಳವಡಿಸಿ ಉದ್ಧ ಲೇಖನಗಳನು ಬರೆಯುತ್ತಿರುವದನ್ನು ನೋಡಿದೆನು. ಕೊಡಗನ್ನು ಪ್ರತ್ಯೇಕವಾಗಿಟ್ಟು ಪ್ರಜಾಸರಕಾರ ಪಡೆಯುವುದು ಅಸಾಧ್ಯ ಮಾತು ಎಂದು ನಾನು ಬರೆದಿದ್ದೇನೆ. 'ಆದರೆ ಕೊಡಗಿನಲ್ಲಿ ಇಂದು ಪ್ರಜಾಸರಕಾರವೇ ಇದೆ ಚೀಫ್ ಕಮಿಷನರು ಕೇಂದ್ರ ಮಂತ್ರಿಮಂಡಲದ ಪ್ರತಿನಿಧಿಯೆಂದು ನಾನು ಬರೆದಿರುವ ವಾಕ್ಯವನ್ನು ತಾವು ಓದಲಿಲ್ಲವೆ? ನಿಮಗೆ ಬೇಕಾದಷ್ಟನ್ನು ಮಾತ್ರ ತೆಗೆದುಕೊಂಡು ಲೇಖನ ಬರೆಯುತ್ತಾ, ಜನರನ್ನು ಮರುಳು ಮಾಡುವದನ್ನು ನೀವೂ ನಿಮ್ಮ ಸಂಪಾದಕರೂ ಬಹು ಕಾಲದಿಂದ ಅಭ್ಯಾಸ ಮಾಡಿದ್ದೀರೆಂದು ನನಗೆ ತಿಳಿದಿದೆ. ಮಂತ್ರಿಮಂಡಲವನ್ನು ಕಟ್ಟಿ ಆಳಲು ಸಾಧ್ಯವಿಲ್ಲದ್ದರಿಂದ ನೀವು ಹೇಳುವಂತೆ ಎಲ್ಲಾದರೂ ಒಂದು ಕಡೆ ಹೋಗಿ ಸೇರಬೇಕು ಎಂದು ಹೇಳುವ ಸಾಹಸಕ್ಕೆ ಸಂದರ್ಭ ಸಾಧಕನಲ್ಲ. ಇದೇ ರೀತಿ ಕೊಡಗ ಬಹುಕಾಲ ದಕ್ಷರಾದ ಆಡಳಿತಗಾರರಿಂದ ಉತ್ತಮವಾಗಿ ಬಾಳಲು ಸಾಧ್ಯವಿದೆಯೆಂಬುದೇ ನನ್ನ ಅಭಿಪ್ರಾಯ. ನಿಮ್ಮ ಸಂಪಾದಕರ ಪತ್ರಿಕೆಗೆ ಬೇರೇನೂ ಪ್ರಕಟಿಸಲು ಸಾಧ್ಯವಿಲ್ಲದಿದ್ದರೆ ಈ ರೀತಿ ಅಪಾರ್ಥವನ್ನು ಕಲ್ಪಿಸಿ ಲೇಖನಗಳನ್ನು ಪ್ರಕಟಿಸುವ ಗೋಜನ್ನಾದರೂ ಸ್ವಲ್ಪ ನಿಲ್ಲಿಸಲಿ. ಹಾಗೆ ನಿಲ್ಲಿಸಲು ಹೇಳುವದೂ ತಪ್ಪು. ಹಾಗೆ ನಿಲ್ಲಿಸಿದರೆ ನಿಮಗೂ ನಿಮ್ಮ ಸಂಪಾದಕರ ಪತ್ರಿಕೆಗೂ ಬೇರೆ ಕೆಲಸ ಬೇಕಲ್ಲ!

'ವಿರಾಟ್'

---

### ಕಾಂಗ್ರೆಸ್ ಪಂಚಾಯ್ತಿ ಚುನಾವಣೆ

ತಾ ೨೮-೨-೫೦ರಲ್ಲಿ ಮರ್ಕಾರಿನ ಸೆಂಟರಿನಲ್ಲಿ ಕಾಂಗ್ರೆಸ್ ಪಂಚಾಯ್ತಿ ಚುನಾವಣೆಯು ಶ್ರೀ ಅಮ್ಮಣಿರ ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಮಲ್ಲೇಂಗಡ ಐಯ್ಯಪ್ಪ, ಗೋಣಿಕೊಪ್ಪಲಲ್ಲಿರುವ ಮಲ್ಲೇಂಗಡ ತಮ್ಮಯ್ಯ ಮತ್ತು ಅಮ್ಮತ್ತಿರ ಗಂಗಾಧರಯ್ಯನವರನ್ನು ನೇಮಿಸಿರುವರು. ತಾರೀಕು ೩-೩-೫೦ ರ ಕೊಡಗು ಪತ್ರಿಕೆಯಲ್ಲಿ ಪ್ರಕಟವಾದ ಕೆ. ಪಿ ಸಿ. ಸಿ ಚುನಾವಣ ನಿಯಮದಂತೆ ಈ ಚುನಾವಣಾ ನಡೆದಿರುವದಿಲ್ಲ. ತಾ. ೨೭ರ ರಾತ್ರೆ ಈ ನಾಡಿನಲ್ಲಿ ನಡೆದ ಮೃತ್ಯುಂಜಯ ದೇವರ ಹಬ್ಬದ ಸಮಯಗಳಲ್ಲಿ ಶ್ರೀ ಕೆ. ಸಿ. ಕರುಂಬಯ್ಯನವರ ಹೆಸರಿನಲ್ಲಿ ಹಸ್ತ ಪತ್ರಿಕೆ ಹಂಚಿ ಮಾರನೆ ದಿನ ಮೀಟಿಂಗು ನಡೆಯಿತು. ಈ ನಾಡಿನಲ್ಲಿರುವ ಸುಮಾರು ೬೫೦ ಕಾಂಗ್ರೆಸ್ ಸದಸ್ಯರಲ್ಲಿ ಮೀಟಿಂಗಿಗೆ ಬರೀ ೧೩ ಜನರು ಹಾಜರಿದ್ದರು! ನೋಟೀಸು ಮಾಡಿದ ಕಾಂಗ್ರೆಸ್ ಪ್ರಸಿಡೆಂಟರೇ ಹಾಜರಿರಲಿಲ್ಲ. ಕಡಿಮೆ ಒಂದು ವಾರಕ್ಕೆ ಮುಂದೆ ತಿಳಿಸದೆ ಉಮೇದುವಾರರ ಅರ್ಜಿ ಸ್ವೀಕರಿಸದೆ, ಸದಸ್ಯರಾದವರ ಪಟ್ಟಿ ಪ್ರಕಟಿಸದೆ, ಅಧಿಕೃತ ಮೆಂಬರಾಗಲು ನಮ್ಮಂಥಾವರಿಗೆ ಅವಕಾಶ ಕೊಡದೆ ಒಂದು ಕ ಯುಕ್ತಿಯಿಂದ ಕಾಂಗ್ರೆಸ್ ಕೆಲಸ ನಡೆಸುತಿರುವದು ಖಂಡನೀಯ. ತಮ್ಮ ಸ್ವಾರ್ಥದ ಕಾರಣಕ್ಕಾಗಿ ಕಾಂಗ್ರೆಸ್ಸಿನ ಕೊಲೆಗೆಳದಿರುವವರಿಂದ ಕಾಂಗ್ರೆಸ್ಸನ್ನು ರಕ್ಷಿಸಬೇಕಾದುದು ಮೇಲಧಿಕಾರಿಗಳ ಕರ್ತವ್ಯ.

'M'

---

### ಜಾನುವಾರು ಪ್ರದರ್ಶನ.

ತಾರೀಕು ೩-೩-೫೦ ರಲ್ಲಿ ಮಡಿಕೇರಿಯಲ್ಲಿ ನಡೆದ ಒನೇ ಅಖಿಲ ಕೊಡಗು ಜಾನುವಾರು ಪ್ರದರ್ಶನವನ್ನು ನೋಡಿದಾಗ ಈ ಪ್ರದರ್ಶನ ಯಾರಿಗಾಗಿ ಎಂದು ನನಗೆ ಎನಿಸಿತು. ಅಲ್ಲಿ ಹಾಜರಿದ್ದವರು ಕೇವಲ ವಿದ್ಯಾರ್ಥಿಗಳು ಮತ್ತು ನಗರದ ನಾಗರೀಕರು. ಗ್ರಾಮದ ರೈತ ಪಿ ಜನರು ಇರಲಿಲ್ಲ. ಇಂಥಾ ಪ್ರದರ್ಶನಗಳಿಂದ ನಾಡಿನ ರೈತನಿಗೇ ಹೆಚ್ಚಿನ ಲಾಭವಾಗಬೇಕಾಗಿದೆ. ಆದ್ದರಿಂದ ಇಂಥಾ ಪ್ರದರ್ಶನಗಳನ್ನು ಯೋಗ್ಯ ಹಳ್ಳಿಗಳಲ್ಲಿ ಮಾಡಬೇಕು. ಕೊಡಗಿನ ಪಶುವಾರ ಇಲಾಖೆಯು ಪ್ರಾದೇಶಿಕ ಪ್ರದರ್ಶನಗಳನ್ನು ಏರ್ಪಡಿಸುವದು ಸಹಜ. ಆದರೆ ಅವೂ ಕೂಡ ಪೇಟೆಗಳಲ್ಲೇ ನಡೆಯುತ್ತವೆ. ಆದ್ದರಿಂದ ಮುಂದೆ ಇಂಥಾ ಪ್ರದರ್ಶನಗಳು ಹಳ್ಳಿಗಳಲ್ಲಿ ರೈತರ ಮಧ್ಯದಲ್ಲಿ ನಡೆಯುವಂತೆ ಪ್ರಯತ್ನಿಸಿದರೆ ಒಳಿತು. ಪೇಟೆಗಳಲ್ಲಿ ಇಂಥಾ ಪ್ರದರ್ಶನಗಳನ್ನು ಮಾಡಿ ಕೆಲವು ಪ್ಲಾಂಟರುಗಳಿಗೋ ಇಲ್ಲವೇ ಕೆಲವು ಶ್ರೀಮಂತರಿಗೋ ಬಹುಮಾನ ಕೊಡುವದರಿಂದ ಯಾವ ಪುರುಷಾರ್ಥವೂ ಸಾಧಿಸಲ್ಪಡಲಾರದು. ಕೊಂಡರೆ ತೆಗೆದುಕೊಂಡು ಉತ್ತಮ ರೀತಿ ಪ್ರದರ್ಶನ ಏರ್ಪಡಿಸಿದ ಇಲಾಖೆಯವರು ಪಟ್ಟಣಗಳನ್ನು ಬಿಟ್ಟು ಹಳ್ಳಿಗಳಲ್ಲಿ ಇಂಥಾ ಪ್ರದರ್ಶನಗಳ ಏರ್ಪಾಡು ಮಾಡುವರೇ?

P. N C.

---

### ಸ್ವೀಕಾರ ಪತ್ರ.

ನನ್ನ ಪತ್ನಿ ಸೀತವ್ವನ ಅಸ್ವಸ್ಥದಲ್ಲಿ ಸಂದರ್ಶಿಸಿ ನೋಡಿದ ಮಹಾಶಯ ಮಹಿಳೆಯರಿಗೂ ಅವಳ ಚಿಕಿತ್ಸೆ ಮತ್ತು ಉಪಚಾರದ ಬಗ್ಗೆ ಸಲಹೆ ಕೊಟ್ಟ ವೈದ್ಯರುಗಳಿಗೂ, ನಂತರ ಅವಳ ನಿಧನದಿಂದ ನಮಗುಂಟಾದ ಆಘಾತ ನಷ್ಟದಲ್ಲಿ ನನ್ನನ್ನು ಮತ್ತು ನನ್ನ ಮಗನನ್ನು ಸ್ವತಃ ಬಂದು, ತಂತಿ ಯಾ ಪತ್ರಗಳ ಮೂಲಕ ಸಂತೈಸಿ ಅವಳ ಉತ್ತರ ಕ್ರಿಯೆಗಳಿಗೆ ಬಂದು ಭಾಗವಹಿಸಿದ ಬಂಧು ಮಿತ್ರರುಗಳಿಗೂ ಪ್ರತ್ಯೇಕವಾಗಿ ವಂದಿಸಲು ಅಸಾಧ್ಯವಾದ್ದರಿಂದ ಈ ಸ್ವೀಕಾರ ಪತ್ರದ ಮೂಲಕ ನಮ್ಮಿಬ್ಬರ ಅನಂತ ವಂದನೆಗಳನ್ನು ಅರ್ಪಿಸುತ್ತೇವೆ.

ಚೇರಂಡ ಸೋಮಯ್ಯ,
ಸ್ಕೂಲ್‌ರೋಡ್, ಮಡಿಕೇರಿ.

---


## ಬೇ ಕಾ ಗಿ ವೆ.

### ಜಂಗಲ್ ಕಾಕ್ ನೆಕ್ಸ್

ದೊಡ್ಡ ನೆಕ್ಕುಗಳು—ಸೈಜು ಸುಮಾರು 6 ಇಂಚು x 4 ಇಂಚಿನವುಗಳಿಗೆ ಪ್ರತಿಯೊಂದರ ರೂ ೧/-ರಂತೆ ಕ್ರಯ ಕೊಡಲಾಗುವದು. ಚಿಕ್ಕವಕ್ಕೆ ದಾಮಾಶಾಯಿ ಮೇರೆ ಬೆಲೆ ಕೊಡಲಾಗುವದು. ಇವುಗಳನ್ನು ರಿಜಿಸ್ಟರ್ಡ್ ಪಾರ್ಸೆಲುಗಳ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ. ಅವುಗಳ ಬೆಲೆಯು ಮನಿಯಾರ್ಡರು ಮೂಲಕ ಮರು ಟಪಾಲಿನಲ್ಲಿ ನಿಮಗೆ ದೊರೆಯುವದು.

D. H. Thangam & Co.,
82. *Thambu Chetty Street,*
4-2 *G. T. Madras.*

---

## ಓ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

### ಫ್ರೇ ಜ ರ್ ಪೇ ಟೆ.

### ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣು ಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, } ತಾ. 30-9-47 }

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

---

## SALE NOTICE;

3 Scindi Cows with two Sucking Calves (one male & Female) will be sold in p u b l i c auction on 17-3-1950 at 11 a. m. at the *Dairy Farm Mercara*, subject to the approval of the Chief Commissioner of Coorg.

*By order,*
T. S. Ramanujam,
*Dairy Officer.*

## ೭ ನೇ ಅಖಿಲ ಕೊಡಗು

# ಜಾನುವಾರು ಪ್ರದರ್ಶನ.

ತಾರೀಖು ೩-೩-೫೪ ರಲ್ಲಿ ಮಡಿಕೇರಿಯಲ್ಲಿ ೭ ನೇ ಅಖಿಲ ಕೊಡಗು ಜಾನುವಾರು ಪ್ರದರ್ಶನವು ನಡೆಯಿತು. ಬೆಂಗಳೂರು ಇಂಡಿಯನ್ ಡೈರಿ ರಿಸರ್ಚ್ ಸಂಸ್ಥೆಯ ಡೈರೆಕ್ಟರಾದ ಡಾ. ಕೆ. ಸಿ. ಸೇನ್ ರವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ವ್ಯವಸಾಯ, ತರಕಾರಿ, ಜೇನು, ಕೋಳಿ ಮತ್ತಿತರ ಪ್ರದರ್ಶನಗಳೂ ಏರ್ಪಡಿಸಲ್ಪಟ್ಟಿದ್ದವು.

ಕೊಡಗಿನ ಚೀಫ್ ಕಮಿಷನರು ಡಾ. ಸೇನರಿಗೆ ಸ್ವಾಗತವಿತ್ತು ಸಭಿಕರಿಗೆ ಅವರ ಪರಿಚಯ ಮಾಡಿದರು. ಕೇಂದ್ರ ಜಾನುವಾರು ಪ್ರದರ್ಶನ ಸಮಿತಿಯ ಪ್ರೆಸಿಡೆಂಟರಾದ ಚೀಫ್ ಕಮಿಷನರು ಜಾನುವಾರು ಪ್ರದರ್ಶನಗಳಿಗೆ ದೊರೆಯುತ್ತಿರುವ ಸಾರ್ವಜನಿಕ ಸಹಾಯ, ಜನತೆಯು ಇಂಥಾ ಪ್ರದರ್ಶನಗಳಿಂದ ಪಡೆಯಬಹುದಾದ ಲಾಭವನ್ನು ವಿವರಿಸಿದರು. ಮಡಿಕೇರಿ ಡೈರಿಫಾರಂನವರ ಕೆಲಸವನ್ನು ಮೆಚ್ಚುತ್ತಾ ಪ್ರದರ್ಶನವನ್ನು ಯಶಸ್ವಿಯಾಗಿ ಏರ್ಪಡಿಸಿದ ಸರ್ವರನ್ನೂ ಪ್ರಶಂಸಿಸಿದರು.

ನಂತರ ಡಾ. ಸೇನರು ತಮ್ಮ ಅಧ್ಯಕ್ಷ ಭಾಷಣವನ್ನು ಓದಿದರು. "ಈ ಏಳನೇ ಅಖಿಲ ಕೊಡಗು ಜಾನುವಾರು ಪ್ರದರ್ಶನವನ್ನು ಇಷ್ಟು ಚೆನ್ನಾಗಿ ಏರ್ಪಡಿಸಿದವರನ್ನು ನಾನು ಶ್ಲಾಘಿಸುತ್ತೇನೆ. ಈ ಮೊದಲು ಇಂಥಾ ಪ್ರದರ್ಶನಗಳಿಗೆ ಕೇಂದ್ರ ಸರಕಾರದ ಜವಾಬ್ದಾರಿಯುತ ಅಧಿಕಾರಿಗಳು ಬರುತ್ತಿದ್ದರು. ಈ ಸಾರಿ ಅವರು ಅಖಿಲ ಭಾರತ ಜಾನುವಾರು ಪ್ರದರ್ಶನದ ಕಾರಣ ಬರಲಾಗದುದು ವ್ಯಸನಕರ. ಈ ಹಿಂದೆ ಕೇಂದ್ರ ಸರಕಾರದ ಖ್ಯಾತ ತಜ್ಞರು ಬಂದು ಕೊಡಗಿನ ಜಾನುವಾರು ಮತ್ತು ವ್ಯವಸಾಯ ಪ್ರಗತಿಯನ್ನು ಪ್ರಶಂಸಿಸಿರುವರು. ೧೯೩೭ ರಲ್ಲಿ ಸರ್ ಆರ್ಥರ್ ಓಲ್ವರ್‌ರವರು ೧೯೩೯ ರಲ್ಲಿ ಎ. ಕೆ. ಯಜ್ಞನಾರಾಯಣ ಐಯ್ಯರ್‌ರವರು, ನಂತರ ಸರ್ ಫ್ರಾಂಕ್-ವೇರ್, ಡಾ. ಕೊತವಾಲಾ, ಮೊದಲಾದವರು ತಮ್ಮ ಅನುಕೂಲ್ಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಕೊಡಗಿಗೆ ಎರಡು ಯಾ ಮೂರು ವಿಧದ ದನಗಳು ಬೇಕು. ಬರಡು ಪ್ರದೇಶಗಳು ಅಂದರೆ ಫ್ರೇಜರ್‌ಪೇಟೆ ಈ ಕಡೆಗಳಲ್ಲಿ ಹಳ್ಳಿಕಾರ್ ಜಾತಿಯು ಯೋಗ್ಯ ವ್ಯವಸಾಯ ಹೆಚ್ಚಾಗಿ ನಡೆಯುವ ಭಾಗಗಳಲ್ಲಿ ದೊಡ್ಡ ಜಾತಿಯ ದನಗಳು ಬೇಕು. ಇವಲ್ಲದೆ ಬೆಟ್ಟ ಪ್ರದೇಶದ ಮಳೆಗಾಲಗಳನ್ನು ಸಹಿಸಬಲ್ಲ ಚಿಕ್ಕ ದನಗಳನ್ನು ಹೆಚ್ಚಿಸಬೇಕು. ಯಾವ ವ್ಯವಸಾಯಗಾರನೂ ಒಂದು ವಿಧದ ದನಗಳನ್ನಲ್ಲದೆ ವಿವಿಧ ಮಾದರಿಯವುಗಳನ್ನು ಇಟ್ಟುಕೊಳ್ಳಲು ಸಾಧ್ಯವಾಗದು. ಇಂದಿರುವ ನಾಡು ದನಗಳ ತಳಿಯನ್ನು ಸುಧಾರಿಸಬೇಕು. ಇದಕ್ಕೆ ಹಳ್ಳಿಕಾರ ಜಾತಿ ಉಪಯುಕ್ತ. ಕೊಡಗಿನ ದನಗಳ ತಳಿಯನ್ನು ಅಭಿವೃದ್ಧಿ ಮಾಡಲು ಈ ಹಿಂದೆ ಉಪಯೋಗಿಸಿದ ಸಿಂಧಿ ಮತ್ತು ಗೀರ್ ಜಾತಿಯ ದನಗಳಲ್ಲಿ ಗೀರ್ ಜಾತಿಯಿಂದ ಹೆಚ್ಚಿನ ಪ್ರಯೋಜನವಿಲ್ಲವೆಂದೂ ಅದನ್ನು ನಿಲ್ಲಿಸುವುದು ಸೂಕ್ತವೆಂದೂ ಸರ್ ಫ್ರಾಂಕ್‌ವೇರ್ ಇವರ ವರದಿ ಸೂಚಿಸುತ್ತದೆ. ಈ ವಿಚಾರ ಪರಿಶೀಲಿಸಬೇಕು. ಕೊಡಗಿನಲ್ಲಿ ಸಿಂಧೀ ಜಾತಿಯ ದನಗಳು ಚೆನ್ನಾಗಿ ಬೆಳೆಯುವವು. ಈ ಕಡೆಗೆ ಗಮನ ಕೊಡುವುದು ಹಿತ. ಮಡಿಕೇರಿ ಹಾಲು ಸರಬರಾಯಿ ಕೇಂದ್ರವು ಇತ್ತಲಾಗಿ ಚೆನ್ನಾಗಿ ಕೆಲಸ ಮಾಡುತ್ತಿರುವದು ಯೋಗ್ಯ. ಈ ಹಿಂದಿನಂತೆ ಖರ್ಚಿನ ಕೇವಲ ಶೇಕಡ ಅರದಷ್ಟು ಉತ್ಪತ್ತಿಯಾಗಿ ರದೆ ಈಗ ಶೇಕಡ ೬೭ರಷ್ಟು ಉತ್ಪತ್ತಿ ಬರುತ್ತಿರುವದು ಶ್ಲಾಘನೀಯ. ಇಂಥಾ ಕೇಂದ್ರಗಳು ಇನ್ನೂ ಹಲವೆಡೆ ಆಗುವದು ಒಳಿತು. ಎಮ್ಮೆದನಗಳು ಹೆಚ್ಚು ಬೆಣ್ಣೆ ತುಪ್ಪ ಕೊಡುವುದರಿಂದ ಅವುಗಳ ಸಾಕುವಿಕೆಯು ಪ್ರಯೋಜನಕಾರಿ. ಕೊಡಗಿನಲ್ಲಿ ಮುರ್ರಾ ಜಾತಿಯ ಎಮ್ಮೆ ದನಗಳನ್ನು ಪ್ರಾರಂಭಿಸಲಾಗಿದೆ. ಇವುಗಳ ವಿಚಾರ ವಿಸ್ತೃತ ವರದಿ ದೊರೆತಿಲ್ಲ.

ಕೊಡಗಿನ ೩೨೧,೬೯೫ ಎಕ್ರೆ ಸ್ಥಳದಲ್ಲಿ ಕಾಫಿ, ಬತ್ತ, ರಾಗಿ ಮೊದಲಾದ ವ್ಯವಸಾಯಕ್ಕಾಗಿ ೧೫೦,೬೫೦ ಎಕ್ರೆ ಉಪಯೋಗಿಸಲ್ಪಟ್ಟು ಕೇವಲ ೧೨೦ ಎಕ್ರೆ ಮಾತ್ರ ದನಗಳ ಮೇವನ್ನು ಬೆಳೆಸಲು ಉಪಯೋಗಿಸಲ್ಪಟ್ಟಿದೆ. ವ್ಯವಸಾಯ ಮಾಡತಕ್ಕ ೧೭೦,೮೮೫ ಎಕರೆ ಸ್ಥಳವಿದೆ. ಇದಲ್ಲದೆ ಬೆಟ್ಟದ ಇಳಿಜಾರುಗಳಲ್ಲಿ ೨೦೦,೦೦೦ ಎಕ್ರೆ ಇದೆ. ಪ್ರಾಮುಖ್ಯವಾಗಿ ಬ್ರಹ್ಮಗಿರಿ ಹುಲ್ಲು ಗಾವಲುಗಳನ್ನು ಸುತ್ತಿ ನೋಡಿದ ಡಾ. ಕೊತ್‌ವಾಲರವರು ಕೊಡಗಿನ ಜಾನುವಾರುಗಳನ್ನು ಚೆನ್ನಾಗಿ ಸಾಕಬಲ್ಲ ಹುಲ್ಲುಗಾವಲುಗಳನ್ನು ನೋಡಿದ್ದಾರೆ.

೧೯೪೫ರ ಸೆನ್ಸಸ್ ಪ್ರಕಾರ ಕೊಡಗಿನಲ್ಲಿ ೩೯,೦೦೦ ಕರೆಯುವ ಹಸುಗಳೂ, ೭,೦೫೧ ಎಮ್ಮೆಗಳೂ ಇದ್ದವು. ಕೊಡಗಿನಲ್ಲಿ ಎಷ್ಟು ಹಾಲು ಉತ್ಪತ್ತಿಯಾಗುತ್ತದೆಂದು ಹೇಳಲು ತಕ್ಕ ಅಂಕೆ ಸಂಖ್ಯೆಗಳಿಲ್ಲ. ಅಂಥಾ ಕೊಡಗಿನವರು ಇಡೀ ಹಿಂದೂದೇಶದಲ್ಲಿ ಕಡಿಮೆ ಹಾಲು ಕುಡಿಯುವರು. ಹಿಂದೂ ದೇಶದ ಸರಾಸರಿ ಹಾಲಿನ ಉಪಯೋಗವು ಪ್ರತಿಯೊಬ್ಬನಿಗೆ ದಿನಕ್ಕೆ ೫.೮೫ ಔನ್ಸು ಆದರೆ ಕೊಡಗಿನವರು ಕೇವಲ ೩ ಔನ್ಸು! ಇದು ಸಾಲದು. ಕೊಡಗಿನಲ್ಲಿ ಕಡಿಮೆ ಪಕ್ಷ ದಿನಕ್ಕೆ ೧೮೮,೦೦೦ ಪೌಂಡು ಅಂದರೆ ೨,೨೫೦ ಮಣ ಹಾಲು ಉತ್ಪಾದನೆಯಾಗಬೇಕು.

ಕೊಡಗಿನಲ್ಲಿ ಪ್ಲಾಂಟೇಶನುಗಳಿದ್ದು ಪ್ಲಾಂಟರುಗಳು ದನಗಳ ಸಾಕುವಿಕೆಯಲ್ಲಿ ಆಸ್ಥೆವಹಿಸಿರುವುದು ಶುಭ ಚಿಹ್ನೆ. ಆದ್ದರಿಂದ ಇತರ ಭಾಗಗಳಿಗಿಂತಾ ಕೊಡಗಿನಲ್ಲಿ ಜಾನುವಾರು ಸ್ಥಿತಿಯನ್ನು ಅಭಿವೃದ್ಧಿ ಮಾಡುವದು ಸುಲಭ. ಅಲ್ಲದೆ ಕೊಡಗಿನಲ್ಲಿ ದಕ್ಷವಾದ ಜಾನುವಾರು ಇಲಾಖೆ ಇದೆ. ದನಗಳ ಖಾಯಿಲೆಯಾಗಲೀ, ಇತರ ಗಂಡಾಂತರವಾಗಲೀ ದನಗಳಿಗೆ ಇಲ್ಲ. ಈಗ ಒಟ್ಟು ಆರು ಜಾನುವಾರು ಆಸ್ಪತ್ರೆಗಳೂ, ಏಳು ಗ್ರಾಮಾಂತರ ಡಿಸ್ಪೆನ್ಸರಿಗಳೂ ಇವೆ. ಈ ಇಲಾಖೆಯು ಉತ್ತಮ ಕೆಲಸ ಮಾಡುತ್ತಿದೆ. ಇದನ್ನು ಇನ್ನೂ ಬಲಪಡಿಸಬೇಕು. ಈ ವರ್ಷ ಹೊಸದಾಗಿ ಏರ್ಪಡಿಸಿರುವ ಕೋಳಿಗಳ ಪ್ರದರ್ಶನ ಜೊತೆಗೆ ಆಡು, ಹಂದಿಗಳ ಪ್ರದರ್ಶನವೂ ಮುಂದೆ ಆಗಬೇಕು. ಎಂದರೆ ಜಾನುವಾರು ಉದ್ಯಮವು ಪೂರ್ಣವೆನಿಸುವದು."

ನಂತರ ಬಹುಮಾನ ವಿತರಣೆಯಾಯಿತು. ಸಮ್ಮೇಳನವು ಯಶಸ್ವಿಯಾಗಿ ಕೊನೆಗೊಂಡಿತು.

---



ಸ್ಥಾನ:- ಫ್ರೇಜರ್‌ಪೇಟೆಯ ಬಳಿ ಕಾವೇರಿಯ ಪೂರ್ವ ತೀರದ ಮೈಸೂರಿಗೆ ಸೇರಿದ ಕಾಡು.

ವ್ಯಾಗಿ:- ನಿಲ್ಲು ಗದ್ದಲ!

ಜಿಂಕೆ:- ನಿಲ್ಲು!

ಗಿಣಿ:- ಇಲ್ಲಿ, ಕಾಡಿನ ಆಚೆ ಕಡೆ ಕಾವೇರಿಯ ಫ್ರೇಜರ್ ಪೇಟೆಯ ಬಳಿ!

ಹರಿಣ:- ಅಹ! ಯಾರೋ ಉದ್ಯಮಶೀಲರು ಗಂಧದೆಣ್ಣೆ ಕಾರ್ಖಾನೆ, ಕಾಗದದ ಕಾರ್ಖಾನೆ, ಇನ್ನೂ ಇತರ ಕೈಗಾರಿಕೆಗಳನ್ನು ಆರಂಭಿಸಿರುವರು. ಅವರ ಕಾರ್ಯಕಲಾಪಗಳದೇ ಗದ್ದಲ!

ವ್ಯಾಗಿ:- ಅಂದರೆ ನಮ್ಮ ಗತಿಯ ವ್ಯವಹಾರವೆಲ್ಲ ನಷ್ಟವಾದೀತೋ?

ಹರಿಣ:- ಇಲ್ಲವಲ್ಲ ಹರಿಣ! ಅವರು ಅತ್ಯಲ್ಪ ಮಾತ್ರ ಬಿದಿರು ಮರವನ್ನು ಮತ್ತು ಬಿದಿರುಗಳನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಾರೆ. ಅದರಿಂದ ನಮ್ಮ ಆಹಾರಕ್ಕೆ ಕೊರತೆಯಿಲ್ಲ.

ವ್ಯಾಗಿ:- ಹೇಗೂ ನಾವೆಲ್ಲಾ ನಿರಾತಂಕವಾಗಿರಬಹುದೆ?

ಹರಿಣ:- ನಾವು ನಿರಾತಂಕವಾಗಿರಬಹುದು. ತಾಯಿ ಕಾವೇರಿಯ ದಯೆಯಿಂದ ತಲತಲಾಂತರಗಳಿಂದ ಬಾಳಿ ಬದುಕಿಬಂದಿದ್ದೇವೆ. ಅವರೂ ಕಾವೇರಿ ನೀರಿಯ ಹೆಸರು ಹೊತ್ತಿದ್ದಾರೆ, ಅವರು ಭೂಷಣಪ್ರಾಯರು. ನಮಗೇನೂ ಆಗುವುದಿಲ್ಲ.

"ಕಾವೇರಿ ಪೇಪರ್‌ಮಿಲ್ಸ್ ಮತ್ತು ಫಾರೆಸ್ಟ್ ಇಂಡಸ್ಟ್ರೀಸ್ ಲಿಮಿಟೆಡ್. ಹತ್ತು ರೂಪಾಯಿನ ಆರ್ಡಿನರಿ ಶೇರುಗಳೂ, ನೂರು ರೂಪಾಯಿನ (ಶೇಕಡ 6 ಬಡ್ಡಿಯ ಕ್ಯುಮುಲೆಟಿವ್) ಪ್ರಿಫರೆನ್ಸ್ ಶೇರುಗಳೂ ಮಾರಾಟಕ್ಕಿವೆ. ಹೆಚ್ಚಿನ ವಿವರಗಳಿಗೆ ನಮ್ಮ ಫ್ರೇಜರ್‌ಪೇಟೆ, ಬೆಂಗಳೂರು, ಮದರಾಸು ಮತ್ತು ಬೊಂಬಾಯಿ ಆಫೀಸುಗಳಿಗಾಗಲಿ ಅಥವಾ ದೇಶದಾದ್ಯಂತ ಇರುವ ನಮ್ಮ ಅಧಿಕೃತ ಏಜಂಟುಗಳಿಗಾಗಲಿ ದಯವಿಟ್ಟು ಬರೆಯಿರಿ.

| | |
|---|---|
| ಮ್ಯಾನೇಜಿಂಗ್ ಏಜೆಂಟ್ಸ್ | ಕಾವೇರಿ ಪೇಪರ್‌ಮಿಲ್ಸ್ ಮತ್ತು |
| ವಿಜಯವೇಲ್ ಮತ್ತು ಕಂಪನಿ | ಫಾರೆಸ್ಟ್ ಇಂಡಸ್ಟ್ರೀಸ್, ಲಿ., |
| ಫೋನ್ ನಂ ೨೯೯೯ (ಲಿಂಕ್) | (ಕೊಡಗು ಪ್ರಾಂತ್ಯದಲ್ಲಿ ಸ್ಥಾಪಿತವಾದದ್ದು) |
| ಪೋಸ್ಟ್ ಬಾಕ್ಸ್ ನಂ ೪೮ | ಬೆಂಗಳೂರು |
| 7 ಸಂಪಂಗಿ ಕೆರೆ ಬೀದಿ ಬೆಂಗಳೂರು | ಫೋನ್ ನಂ. ೨೯೯೭. |

---


# ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.

ಯಾವ ಸಮಾರಂಭಕ್ಕೂ ಬಟ್ಟೆಗೂ ಆದರ್ಶವೆನಿಸಿದೆ.

ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

ಪಟ್ಟೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು

52—9

# ನಾಗರಿಕನ ಕರ್ತವ್ಯಗಳು.

**ಲೇ:- ಶ್ರೀ ಆಚಾರ್ಯ ವಿನೋಬಾ ಭಾವೆ**

### ಪ್ರೇಮ

ಅನಾದಿಯಿಂದಲೂ ಇಡೀ ಭಾರತ ವರ್ಷವು ಒಂದೇ ದೇಶವೆಂಬ ಕಲ್ಪನೆಯನ್ನು ನಾವು ಬೆಳೆಸಿಕೊಂಡಿದ್ದೇವೆ. ಆದರೆ ಅಶೋಕನ ದಿನಗಳಿಂದ ಇಂದಿನವರೆಗೂ ನಮಗೆ ಏಕಾಧಿಪತ್ಯ ಪ್ರಾಪ್ತಿಯಾಗಿಲ್ಲ. ಹೀಗಿದ್ದರೂ ಭಾರತವು ಸಾಂಸ್ಕೃತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಅಖಂಡವಾಗಿಯೇ ಇದೆ. ಅಶೋಕನ ಕಾಲದಲ್ಲಿಯೂ ಭಾರತ ಒಂದಾಗಿದ್ದಿಲ್ಲ. ಏಕೆಂದರೆ, ನನ್ನ ನೆನಪು ಸರಿಯಾಗಿದ್ದರೆ, ದಕ್ಷಿಣದಲ್ಲಿ ಪಾಂಡ್ಯರು ಸ್ವತಂತ್ರರಾಗಿದ್ದರು. ಇಂದು ಭಾರತ ರಾಜಕೀಯ ದೃಷ್ಟಿಯಿಂದ ಮೊದಲನೆ ಸಲ ಒಂದಾಗಿದೆ. ಅಶೋಕನು ಈ ದೇಶದಲ್ಲಿ ವಿಸ್ತಾರವಾದ ಭಾಗಗಳ ಮೇಲೆ ಅಧಿಪತ್ಯ ನಡೆಸಿದನು. ಆದರೆ ಅದು ಕೇವಲ ಹೆಸರಿಗೆ ಮಾತ್ರ; ಏಕೆಂದರೆ ಅಂದಿನ ರಾಜ್ಯಾಡಳಿತ ಇಂದಿನದಕ್ಕಿಂತ ಭಿನ್ನವಾಗಿತ್ತು, ಮತ್ತು ಆ ಕಾರಣದಿಂದ ಇಂದಿನಂತೆ ವಿಶಾಲ ಪ್ರದೇಶಗಳ ಮೇಲೆ ಕೇಂದ್ರವಾಗಿ ಶಾಸನ ನಡೆಸುವುದು ಅಸಾಧ್ಯವಾಗಿತ್ತು. ಇಂದು ದಿಲ್ಲಿಯಿಂದ ಹೊರಟ ಆಜ್ಞೆ ಮರುದಿನದೊಳಗಾಗಿಯೇ ಇಡೀ ದೇಶದಲ್ಲಿ ಜಾರಿಗೆ ಬರುತ್ತದೆ. ಆದರೆ ಆ ಕಾಲದಲ್ಲಿ ಅದಕ್ಕೆ ಕೆಲ ದಿನಗಳಂತರದ [illegible], ಕೆಲ ವರ್ಷಗಳೇ ಬೇಕಾಗುತ್ತಿದ್ದುವು.

ಈಗ ನಮ್ಮ ದೇಶ ಐಕ್ಯವಾಗಿರುವುದರಿಂದ ನಮ್ಮ ಮೇಲೆ ದೊಡ್ಡ ಹೊಣೆ ಬಿದ್ದಿದೆ. ನಾವೇನೂ ಅದಕ್ಕೆ ಹೆದರಬೇಕಿಲ್ಲ; ಆದರೆ ಅವುಗಳ ಬಗ್ಗೆ ಜಾಗರೂಕರಾಗಿರಬೇಕು, ಅಷ್ಟೆ. ನಮ್ಮ ದೇಶ ಒಂದೇ ಸರಕಾರದ ಆಳಿಕೆಗೊಳಪಟ್ಟಿದ್ದು ಜಗತ್ತಿನ ಇತಿಹಾಸದಲ್ಲಿ ದೊಡ್ಡ ಘಟನೆಯೇ ಸರಿ. ನಮ್ಮ ದೇಶವನ್ನು ಒಂದು ಖಂಡವೆಂದರೂ ಸಲ್ಲಬಹುದು:- ಅನೇಕ ಘಟಕಗಳ ಒಕ್ಕೂಟವಾಗಿದೆ. ಚೀನವು ಹೀಗೇ ಬಲು ದೊಡ್ಡ ದೇಶ—ಅದರಲ್ಲಿ ನಡೆದಿರುವ ಸಂಗತಿಗಳು ಭಯಾನಕವಾಗಿವೆ. ನಾವು ಕಮ್ಯುನಿಜಮಿನ ಎಕ್ಕಣಕ್ಕೆ ಅಂಜಬೇಕಿಲ್ಲ; ನಾವು ಅಂಜುವುದು ಅಲ್ಲಿನ ಯಾದವೀ ಯುದ್ಧಕ್ಕೆ. ಆ ತರದ ಘಟನೆಗಳು ಬ್ರಹ್ಮದೇಶದಲ್ಲೂ ನಡೆದಿವೆ. ಭಾರತದಲ್ಲಿಯೂ ಸ್ವಾತಂತ್ರ್ಯದ ಆ ದಿನಗಳಲ್ಲಿ ಮಹಾ ಗಲಭೆಗಳು ಜರುಗಿದವು. ಇವು ನಿಜವಾಗಿ ಪ್ರಾರಂಭವಾದುದು ಸ್ವಾತಂತ್ರ್ಯಕ್ಕೆ ಮೊದಲೇ. ಇವುಗಳಿಂದಾದ ಹಾನಿಯೆಷ್ಟೆಂದು ನನಗೆ ಗೊತ್ತಾಗಿದೆ. ದೇವರ ದಯೆಯಿಂದ ಅವನ್ನು ಹತ್ತಿಕ್ಕಲು ನಮಗೆ ಸಾಧ್ಯವಾಯಿತು. ಆದರೆ ಅವುಗಳಿಂದ ನಾವು ಪಾಠ ಕಲಿಯಬೇಕು.

ನಮ್ಮದು ಹಲ ಪ್ರಾಂತಿಕ ಮತ್ತು ಉಪಪ್ರಾಂತಿಕ ವಿಭೇದಗಳುಳ್ಳ ರಾಷ್ಟ್ರ. ಆದುದರಿಂದ ನಾವು ಇದರಿಂದ ಕಲಿಯಬೇಕೆಂದರೆ, ನಮ್ಮಂತಹ ವಿಶಾಲ ದೇಶದಲ್ಲಿ ನಮ್ಮೊಳಗೆ ಪರಸ್ಪರ ಭೇದಗಳೇ ಇರಲಿ, ಅವೆಲ್ಲವನ್ನೂ ನಮ್ಮ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳಬೇಕು. ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳುವಂತೆ ಉಪದ್ರವಕ್ಕೂ ಉಪಯೋಗಿಸಿಕೊಳ್ಳಬಹುದು. ವಿವಿಧ ಪ್ರಾಂತ, ಭಾಷೆ, ಜಾತಿಗಳಂಥ ಭೇದಗಳಲ್ಲಿರುವ ಒಳಿತನ್ನು ಉಪಯೋಗಿಸಿಕೊಳ್ಳಬಹುದು; ಅಥವಾ ಆ ಭೇದಗಳನ್ನೇ ಉದ್ದೇಶವಾಗಿಟ್ಟುಕೊಂಡು ಜಗಳವಾಡಬಹುದು. ಪ್ರಯೋಜನ ಪಡೆಯಬೇಕಾದರೆ, ನಮ್ಮೊಳಗೆ ಪರಸ್ಪರ ಸೌಹಾರ್ದವನ್ನು ಹಬ್ಬಿಸಬೇಕು. ನಾವು ಒಬ್ಬರನ್ನೊಬ್ಬರು ಅಣ್ಣತಮ್ಮಂದಿರಂತೆ ಅಕ್ಕತಂಗಿಯರಂತೆ ಪ್ರೀತಿಸಬೇಕು. ಆಗ ಮಾತ್ರ ನಾವು 'ಜಗತ್ತಿನ ಪೌರರು' ಎಂದು ಗಟ್ಟಿಯಾಗಿ ಹಾಡಬಲ್ಲೆವು. ಇದಕ್ಕೆ, ನಾವು ದೇಹಕ್ಕೂ ಆತ್ಮಕ್ಕೂ ಇರುವ ಭೇದವನ್ನು ಮರೆಯಲು ಕಲಿಯಬೇಕು. ಆಗ ನಾವು ಬಾಹ್ಯಭೇದಗಳನ್ನು ಗೌಣವಾಗಿಸಿ ವಿಷಯಗಳ ಸಾರವನ್ನರಿಯಬಹುದು.

### ಉತ್ಪಾದಕ ಶ್ರಮ

ನಮ್ಮ ದೇಶದ ಸ್ವಾತಂತ್ರ್ಯವನ್ನುಳಿಸಿಕೊಳ್ಳಬೇಕಾದರೆ, ನಾವು ಪ್ರತಿಯೊಬ್ಬರೂ ಒಂದಲ್ಲೊಂದು ಬಗೆಯ ಉತ್ಪಾದಕ ಶ್ರಮ ನಡೆಸುವುದು ನಮ್ಮ ಇನ್ನೊಂದು ಕರ್ತವ್ಯ. ಇದಿಲ್ಲವೆ, ಆ ಭಾರ ಕೇವಲ ಕೆಲವರ ಮೇಲೆ ಬೀಳುವುದರಿಂದ ದೇಶದಲ್ಲಿ ಶಾಂತಿಯೇ ಉಳಿಯದು. ನಮ್ಮ ದೇಶ ಕಳೆದ ೧೫೦-೨೦೦ ವರ್ಷಗಳಿಂದ ಪರಾಧೀನವಾದ್ದರಿಂದ ತಾಣ [illegible] ಹತವಾಗಿದೆಯೆಂದು ನನಗೆ ಗೊತ್ತಿದೆ. ನಾವು ನಮ್ಮ ವೃತ್ತಿ ವ್ಯವಸಾಯಗಳನ್ನು ಕಳೆದುಕೊಂಡಿದ್ದೇವೆ. ನಮ್ಮ ಭೂಮಿ [illegible] ಆಗಿದೆ. [illegible] ಹಾಗಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ದುಡಿದು ಉತ್ಪಾದನೆ ಮಾಡಿದರೆ ದೇಶದಲ್ಲಿ ಶಾಂತಿ ಸೌಖ್ಯಗಳು ಉಳಿಯುವುವು.

### ಚರಿತ್ರ

ನಾಗರಿಕನ ಕರ್ತವ್ಯದಲ್ಲಿ ಮೂರನೆಯದು ಚಾರಿತ್ರ್ಯ ಸಾಧನೆ. ಎಲ್ಲೆಡೆಯಲ್ಲಿ ಕಾಣುತ್ತಿರುವ ಲಂಚಕೋರತನ, ಭ್ರಷ್ಟಾಚಾರ, ಕಳ್ಳಪೇಟೆಗಳಂಥಾ ಅವ್ಯವಹಾರಗಳು, 'ಖುಲ್ಲಾ' ಪೇಟೆಗಳಲ್ಲಿ ಕಾಣದ ವ್ಯವಹಾರಗಳು ಇಲ್ಲ. ಈ ಅವಸ್ಥೆಯನ್ನು ನಾವು ಸರಿಪಡಿಸಬೇಕು. ನಾವು ಲಂಚಗುಳಿತನ ಭ್ರಷ್ಟಾಚಾರಗಳಿಂದ ದೂರ ಉಳಿಯುವ ಪ್ರತಿಜ್ಞೆ ಮಾಡಬೇಕು. ಅನ್ಯರನ್ನು ನಿಂದಿಸುವ ಬದಲು ನಾವು ಆತ್ಮಶುದ್ಧಿ ಮಾಡಿಕೊಳ್ಳಬೇಕು. ನಮ್ಮ ಪ್ರತಿಯೊಂದು ನಡಾವಳಿಯೂ—ರೈಲುಗಾಡಿಗಳಲ್ಲೇ ಇರಲಿ, ಬಸ್ಸಿನಲ್ಲಿರಲಿ, ದೇವಸ್ಥಾನದಲ್ಲೇ ಇರಲಿ—ಯೋಗ್ಯವಾಗಿರುವಂತೆ ನೋಡಿಕೊಳ್ಳಬೇಕು. ಯೋಗ್ಯವಾಗಿ ಆಚರಿಸುವಲ್ಲಿ ನಮಗೆ ಹಲವು **ಎಡರು ತೊಡರುಗಳು ಬಂದರೂ ಅಸತ್ಯಪ**ಥವನ್ನು ಅವಲಂಬಿಸಕೂಡದು.

ನೀವೆಲ್ಲರೂ ಖಾದೀ ಕಾರ್ಯಕರ್ತರು. ಖಾದೀ ಧಾರಿಗಳು. ನೀವು ಖಾದಿಯ ಪಾವಿತ್ರ್ಯವನ್ನೇ ನಿಮ್ಮ ಜೀವನಗಳಲ್ಲಿಯೂ ಅಳವಡಿಸಿಕೊಳ್ಳಬೇಕು. ಹಂಸ ಬಕಪಕ್ಷಿ ಎರಡೂ ಬೆಳ್ಳಗೇನೇ ಇವೆ. ಖಾದೀಧಾರಿಗಳು ಹಂಸನಂತೆ ಹಾಲನ್ನು ನೀರಿಂದ ಬೇರ್ಪಡಿಸುವವರಾಗಿರಬೇಕೇ ಹೊರತು ಬಕಧ್ಯಾನಿಗಳಾಗಬಾರದು. ಖಾದೀಧಾರಿಗಳು ಸತ್ಯವ್ರತಗಳನ್ನು [illegible] ಮಾರ್ಗವನ್ನೇ ಅನುಸರಿಸಬೇಕೆಂದು ದೇಶ ನಿರೀಕ್ಷಿಸುತ್ತದೆ. ನೀವು ಹಾಗೆ ಮಾಡಿದರೆ, ನಿಮ್ಮ ಸಂಖ್ಯೆ ಅಲ್ಪವಾದರೂ ಜನರ ಮೇಲೆ ಪ್ರಭಾವ ಬೀರಬಲ್ಲಿರಾಗ [illegible] ಮತ್ತು ಇದರಿಂದ ವಾತಾವರಣ ಬದಲಾಗುವುದು. ಸತ್ಯವೇ ಬಲ, ಆತ್ಮಬಲ [illegible] ಬೇರೆ ಹೇಳುವ ಅಗತ್ಯವಿಲ್ಲ. ಒಂದು ಚಮಚ ಮೊಸರಿನಿಂದ ಇಡೀ ಬೋಗಣಿ ತುಂಬಾ ಹಾಲನ್ನು ಮೊಸರಾಗಿ ಮಾರ್ಪಡಿಸಬಹುದು. ಆದರೆ ಒಂದು ಬೋಗಣಿ ತುಂಬ ಹಾಲಿನಿಂದಲೂ ಒಂದು ಚಮಚ ಮೊಸರನ್ನು ಹಾಲಾಗಿ ಮಾಡಲು ಸಾಧ್ಯವಿಲ್ಲ. ಹಾಗೆಯೇ, ಕೆಲವರಾದರೂ ಚರಿತ್ರಬಲವನ್ನು ಸಾಧಿಸಿಕೊಂಡರೆ ಅವರಿಂದ ಉಳಿದವರ ಮೇಲೆ ಪ್ರಭಾವ ಬೀರಬಹುದು.

ಸಂಕ್ಷೇಪದಲ್ಲಿ ಅವಶ್ಯವಾದ ಕರ್ತವ್ಯತ್ರಯವೆಂದರೆ, ಪ್ರೇಮ, ಉತ್ಪಾದಕ ಶ್ರಮ ಮತ್ತು ಶುದ್ಧ ಚರಿತ್ರ. ಇವಿಷ್ಟನ್ನು ಬೆಳೆಸಿಕೊಂಡರೆ ನಾವು ಭಾರತವನ್ನು ಉದ್ಧರಿಸಬಲ್ಲೆವು. ಮತ್ತು ಭಾರತದ ಉದ್ಧಾರಕ್ಕೆ ಸಹಾಯವಾಗುವುದು.

(ಶ್ರೀ ವಿನೋಬಾ ಅವರು ತಿರುಪ್ಪೂರು ಖಾದೀ ವಿದ್ಯಾಲಯದಲ್ಲಿ ತಾರೀಕು ೨೩-೫-೪೯ನೇ ದಿನ ಮಾಡಿದ ಪ್ರಾರ್ಥನೋತ್ತರ ಭಾಷಣದಿಂದ.)

'ತಾ. ನಾ.'

# ವಾರ್ತೆಗಳು.

ಜನಜೀವನಕ್ಕೆ ಅವಶ್ಯವಾದ ಆಹಾರ ಬಟ್ಟೆ [illegible] ಬೆಳೆ ಇವುಗಳ ಉತ್ಪತ್ತಿಯನ್ನು ಹೆಚ್ಚಿಸುವ ಕೆಲಸವನ್ನು ಭಾರತ ಸರಕಾರವು ವಹಿಸಲಿದೆ ಎಂದು ಶ್ರೀ. ಗೋಪಾಲ [illegible] ಹೇಳಿದ್ದಾರಂತೆ.

[illegible] ಯೋಜನೆಯು [illegible] ಅಂಗೀಕರಿಸಿಕೊಂಡು [illegible] ವಹಿಸಲಾಗುತ್ತದೆ. ಈ ಯೋಜನೆಗೆ ಇಪ್ಪತ್ತು ಲಕ್ಷ [illegible] ಖರ್ಚು ಮಾಡಲು ಅನುಮತಿ ಕೊಡಲಾಗಿದೆ.

[illegible] ದಿನ [illegible] ಜನರ [illegible] ರಾಷ್ಟ್ರೀಯ [illegible] ಅವಶ್ಯ [illegible]. ಈ [illegible] ಮತ್ತು ಇತರ [illegible] ವರ್ಗದವರೂ ಬಂದಿದ್ದರು.

[illegible] ಅಣುಶಕ್ತಿ [illegible] ಬ್ರಿಟಿಷ್ ವಿಜ್ಞಾನಿಗೆ ಲಂಡನ್ನಿನ ನ್ಯಾಯಾಧೀಶರು ಹದಿನಾಲ್ಕು ವರ್ಷದ ಶಿಕ್ಷೆಯನ್ನು ವಿಧಿಸಿದ್ದಾರೆ.

ಪೂರ್ವ ಬಂಗಾಳದ ಮುಸ್ಲಿಮರ ಅತ್ಯಾಚಾರದಿಂದ ಸರ್ವಸ್ವವನ್ನೂ ಕಳೆದುಕೊಂಡು, ಪಶ್ಚಿಮ ಬಂಗಾಳಕ್ಕೆ ಬಂದ ಹಿಂದೂ ನಿರಾಶ್ರಿತರು (೩೦ ಕುಟುಂಬಗಳು) ಕಳೆದವಾರ, ಸರಕಾರದ ಸಹಾಯ ಪಡೆದು, ಅಂಡಮಾನಕ್ಕೆ ಹೊಸ ಜೀವನ ನಡೆಸಲು ತೆರಳಿದರು. ಪ್ರತಿಯೊಂದು ಕುಟುಂಬಕ್ಕೆ ಸರಕಾರದವರು ಕೃಷಿ ಉಪಕರಣಗಳನ್ನೂ, ಬಟ್ಟೆಗಳನ್ನೂ, ಒಂದು ತಿಂಗಳ ಖರ್ಚುಗಳಿಗೆ ನಗದು ಹಣವನ್ನೂ ಕೊಟ್ಟಿದೆ. ಅಂಡಮಾನದಲ್ಲಿ ಅವರಿಗೆ ಕುಟುಂಬವೊಂದರ ಪ್ರತಿ ಎಕ್ರೆ ಜಮೀನನ್ನೂ, ಎರಡು ಸಾವಿರ ರೂಪಾಯಿಗಳನ್ನೂ ಕೊಡಲಾಗುವುದು. ಅವರೆಲ್ಲರೂ ಕೃಷಿಕರು.

ಜಪಾನಿನ ಮಹಿಳಾ ಲೇಖಕಿ ಡಾ|| ಟೊಮಿಕೊರಾ ಕೊರಾರವರು, ಭಾರತಕ್ಕೆ ನೂರು ದಿನಗಳ ಸಂದರ್ಶನಕ್ಕಾಗಿ ಬಂದು, ಪ್ರವಾಸವನ್ನು ಮುಗಿಸಿ, ಜಪಾನಿಗೆ ಹೊರಟರು. ಟೊಮಿಕೊರಾ ಕೊರಾರವರು, ಪ್ರಧಾನ ಸಚಿವ ನೆಹರೂರವರನ್ನು ಜಪಾನಿಗೆ ಬಂದು ಹೋಗುವಂತೆ ವಿನಂತಿಸಿದ್ದಾರೆ; ಪಂಡಿತ ನೆಹರೂರವರು ಸ್ಪಷ್ಟ ಉತ್ತರ ಕೊಡಲಿಲ್ಲ. "ಜಪಾನು ಯುದ್ಧವನ್ನೇ [illegible] ತ್ಯಜಿಸುವರ [illegible] ಆಗಿದೆ" ಎಂದು, ಶ್ರೀ [illegible] ಕೊರಾರವರು ಹೇಳಿ, ಭಾರತಕ್ಕೆ ಪ್ರಜಾಪ್ರಭುತ್ವ ದೊರಕಿದುದಕ್ಕೆ ಸಂತೋಷ ಪ್ರಕಟಿಸಿದರು.

ಭಾರತದ ಆಹಾರವನ್ನು ಸರಕಾರವು [illegible] ಮಾಡಿದೆ. ಅದರಲ್ಲಿ ಕೆಲವು ತಿದ್ದುಪಡಿಗಳಾಗುವುವು. ಅಮೇರಿಕವು ಕಳೆದ ವರ್ಷ ಭಾರತದಿಂದ ಮೂವತ್ತು ಕೋಟಿ ರೂಪಾಯಿಯ ಚಹವನ್ನು ಖರೀದಿಸಿತ್ತು. ಈ ವರ್ಷ ಇನ್ನೂ ಹೆಚ್ಚಿನ ಚಹವನ್ನು ಕೊಂಡುಕೊಳ್ಳಲಿದೆ. ಈ ಬಗ್ಗೆ ಅಮೇರಿಕ ಸರಕಾರವು ಭಾರತ ಸರಕಾರದೊಡನೆ ಮಾತುಕತೆ ನಡೆಸಿದೆ. ಈ ವರ್ಷ ಹೆಚ್ಚಿನ ಧಾರಣೆ ಕೊಟ್ಟು ಅಮೇರಿಕವು ಕೊಂಡು ಕೊಳ್ಳಬೇಕಾಗ ಬಹುದು.

ಭದ್ರತಾ ಸಮಿತಿಯಲ್ಲಿ ಇತ್ತೀಚೆಗೆ ನಿರ್ಣಯಿಸಲ್ಪಟ್ಟಂತೆ ಕಾಶ್ಮೀರ ಸಮಸ್ಯೆಯ ಕುರಿತಾದ ನೂತನ ಪರಿಹಾರ ಯೋಜನೆಯನ್ನು ಭಾರತವು ಸ್ವೀಕರಿಸುವುದು **ಸಂದೇಹಾಸ್ಪದವೆಂದು ದಿಲ್ಲಿಯ ಅಧಿಕಾರ**ಯುತ ವಲಯ ವೃತ್ತದಿಂದ ಕೇಳಿಬರುತ್ತದೆ.

ಬಿಹಾರದ ಗಡಿಯಲ್ಲಿ ಪಾಕಿಸ್ತಾನಿ ಸೈನ್ಯಗಳು ಸಂಗ್ರಹವಾಗುವುದರ **ಕಡೆಗೆ ಭಾರತ ಸರಕಾರದ ಲಕ್ಷ್ಯವನ್ನು ಸೆಳೆಯಲಾಗಿದೆ. ಈ ಕಡೆ ತಕ್ಕ ಉಪಾಯಗಳ**ನ್ನು ಕೈಕೊಳ್ಳುವುದರ ಕಡೆಗೆ ಭಾರತ ಸರಕಾರ ನಿರತವಾಗಿದೆ ಎನ್ನಲಾಗಿದೆ.

# ದಿ ಟ್ರಾಪಿಕಲ್

## ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ದೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಜರ್ | ಆರ್ಗನೈಜರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯು. ಅಚ್ಚಂಡ, | ಎಂ. ಎ. ಬೆಳ್ಳಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟಾ, ಮಂಗಳೂರು. |



# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೊಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೊಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವವು)

ಎಂ. ಎಸ್. ಸೋಮಯ್ಯ,

52–29 ಗೌರವ ಕಾರ್ಯದರ್ಶಿ.



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸ್ಥಾಪಿತವಾದಂದಿನಿಂದ ಪಾಲಿಸಿಯೊಡನೆ ಕ್ಲೈಮುಗಳು | 10,96,00,000 | „ |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

### ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ಲೋಕೇಶ್‌ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ | ಶಾಖಾ ಕಛೇರಿ |
| ಎಂಪೈರ್ ಹೌಸ್, ಹಾರ್ನ್‌ಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು |



ಭದ್ರತೆ! 17 ವರ್ಷಗಳ ಪಕ್ವ ಅನುಕೂಲತೆ !! ಅನುಭವಶೀಲತೆ!!

# ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | „ | 3½% |
| 12 | „ | 3¾% |
| 24 | „ | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಪಾಲಿಬೆಟ್ಟ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜೆಂಟ್,

ಮಡಿಕೇರಿ ಶಾಖೆ, ಮಡಿಕೇರಿ.



# CRESCENT

## FOR PROTECTION AND SERVICE.

It is best to represent and insure with The CRESCENT Insurance Co., Lt.d,

*H: O: BOMBAY.* [*Established 1919.*

*For particulars write to:*

| | | |
|---|---|---|
| Sri B. A. Poovaiah | or | The Branch Manager, |
| *Organiser* | | *22 B. Mahatma Gandhi Road,* |
| *Pollibetta, Coorg.* | | *Bangalore 1.* |

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಸೂರೆನ್ಸ್ ಕಂಪೆನಿಗೆ ಬರೆಯಿರಿ.



# ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೈನಿಟಿ ಮತ್ತು ವಾರ್ಡನ್ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಮತ್ತು ಖಜಾಂಚಿ. |



ಶ್ರೀ ಕೆ. ಎಸ್. ಗೋವಿಂದರಾಜು, "ಕೊಡಗು" ಏಜೆಂಟರು, ವೀರಾಜಪೇಟೆ.



Edited, Printed and Published by P. I. Bellappa at 'Kodagu Press, Mercara, for 'Kodagu' Ltd.

Reg. No. M. 1650.
'KODAGU' MERCARA. (Coorg).

# ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೭-೩-೧೯೫೦ನೇ ಶುಕ್ರವಾರ | ಸಂಚಿಕೆ ೪೨

## ಸ್ವಪ್ನ - ಒಂದು ವಿವೇಚನೆ.

ಲೇ:- "ಗುಪ್ತ"

ಸ್ವಪ್ನ ಕಾಣುವ ಹಕ್ಕು ಯಾ ಸೌಭಾಗ್ಯ ನಮಗಿಲ್ಲದಿರುತ್ತಿದ್ದರೆ ನಮ್ಮ ಜೀವನ ಹೇಗಾಗುತ್ತಿತ್ತೋ ಕಲ್ಪನೆ ಮಾಡಲು ಸಾಧ್ಯವಿಲ್ಲ. ಮುಂದಿನ ಭವಿಷ್ಯವನ್ನು ನೆನೆದು ಹಾಗಾಗಬೇಕು, ಹೀಗಾಗಬೇಕೆಂದು ಕನಸು ಕ[illegible] ಎಷ್ಟು ರುಚಿಕರ! ಪ್ರತಿಯೊಬ್ಬನೂ ಸ್ವಪ್ನ ಕಾಣುತ್ತಾನೆ. ಕೆಲವರದು ಭವಿಷ್ಯದ ಕನಸುಗಳು. ಕೆಲವರದು ಗತಕಾಲದವು. ಕೆಲವರದು ಹಗಲು ಕನಸುಗಳು. ಕನಸು ಯಾವ ವರ್ಗಕ್ಕೆ ಸೇರಿದ್ದರೂ ಅದು ವಿಚಿತ್ರ ಸವಿಯಿಂದ ಕೂಡಿದುದು. ನಿದ್ರೆಯಲ್ಲಿ ಪ್ರತಿಯೊಬ್ಬನಿಗೂ ಸ್ವಪ್ನ ಬೀಳುತ್ತದೆ. ಎಚ್ಚರವಾದಾಗ ಕೆಲವರು ಅದನ್ನು ಜ್ಞಾಪಿಸಿಕೊಳ್ಳುವರು. ಕೆಲವರು ಪೂರ್ಣವನ್ನೂ ಮರೆತು ತಮಗೆ ಸ್ವಪ್ನವೇ ಬೀಳುವದಿಲ್ಲವೆನ್ನುವರು! ಈ ಸ್ವಪ್ನಗಳನ್ನು ಸದುಪಯೋಗಗೊಳಿಸಬಹುದೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಈ ರಾತ್ರಿ ಸ್ವಪ್ನದ ವಿಚಾರ ಸ್ವಲ್ಪ ವಿವೇಚಿಸುವ.

ಸ್ವಪ್ನದ ವಿಚಾರ ಅನೇಕರು ಅನೇಕ ಗ್ರಂಥಗಳನ್ನು ಬರೆದಿದ್ದರೂ ಅದರ ನಿಜವಾದ ವಿವೇಚನೆ ಶಾಸ್ತ್ರೀಯ ರೀತಿಯಿಂದ ಬಹು ಜನರಿಗೆ ತಿಳಿದಿರಲಾರದು. ಈಗಲೂ ಕೂಡ ಸ್ವಪ್ನದಲ್ಲಿ ಬೆಕ್ಕನ್ನು ಕಂಡರೆ ಜಗಳವಾಗುವದು, ಮುತ್ತುಗಳನ್ನು ಕಂಡರೆ ಅಳಬೇಕಾಗುವದು. ಹಲ್ಲು ಕಿತ್ತದ್ದು ಕಂಡರೆ ಮರಣ ಸಂಭವ ಎಂಬ ಮೂಢನಂಬಿಕೆ ಹಲವರಲ್ಲಿ ಇದೆ. ಈ ಸ್ವಪ್ನಗಳನ್ನು ಶಾಸ್ತ್ರೀಯ ರೀತಿಯಿಂದ ವಿಶ್ಲೇಷಣ ಮಾಡಿದರೆ ಅವು ಅನುಭವ ಶಿಕ್ಷಣಗಳಂತಾಗಿ ಮನುಷ್ಯನಿಗೆ ಬಹು ಹಿತವನ್ನು ಮಾಡುವವೆಂದು ಹೇಳಿದರೆ ಬಹು ಜನರು ನಂಬಲಿಕ್ಕಿಲ್ಲ.

ಇತ್ತಿತ್ತಲಾಗಿ ಅಂದರೆ ನಾಗರೀಕತೆ ಬೆಳೆಯುತ್ತಾ ಬಂದ ಹಾಗೆ ವಿವಿಧ ಕ್ಷೇತ್ರಗಳ ಪ್ರಗತಿಯಂತೆ ಸ್ವಪ್ನ ರಾಜ್ಯದಲ್ಲೂ ಅನ್ವೇಷಣೆ ನಡೆಯಿತು. ಅನೇಕ ಮನೋವಿಜ್ಞಾನಿಗಳು ಪರಿಶೀಲಿಸಿ ಸ್ವಪ್ನಗಳು ಯಾವದೇ ಭವಿಷ್ಯ ಘಟನೆಯ ಸಂಕೇತಗಳಲ್ಲವೆಂದೂ ಅವುಗಳಿಂದ ಸ್ವಪ್ನ ಕಾಣುವವನ ಮೇಲೆ ಯಾವದೇ ಕೆಡುಕು ಯಾ ಹಿತವಾಗುವ ಸಾಧ್ಯತೆ ಇಲ್ಲವೆಂದೂ ಕಂಡು ಹಿಡಿದಿರುವರು. ಆದರೂ ಕೂಡ ಹಳೆಯ ಸಂಪ್ರದಾಯ ಸಾಯುವದು ನಿಧಾನವೆಂಬಂತೆ ಹಿಂದಿನ ಮೂಢ ನಂಬಿಕೆ, ಕಲ್ಪನೆಗಳು ಇನ್ನೂ ಸಾಗಿ ಬರುತ್ತಿವೆ. ಫಾರೋವಾ ಎಂಬ ಅರಸರು ಧಾನ್ಯದ ಮತ್ತು ದನಗಳ ಸ್ವಪ್ನ ಕಂಡರಂತೆ. ಅದರ ಅರ್ಥವನ್ನು ವಿವರಿಸಿ ಪಂಡಿತರೊಬ್ಬರು ಏಳು ವರ್ಷಗಳ ಸಂಪತ್ ಸಮೃದ್ಧಿಯೂ, ನಂತರ ಏಳು ವರ್ಷಗಳ ಬರಗಾಲವು ದೇಶದಲ್ಲಾಗುವದೆಂದೂ ಸ್ವಪ್ನದ ಮೂಲಕ ಈ ಎಚ್ಚರಿಕೆಯನ್ನು ದೇವರು ಕೊಟ್ಟಿದೆಂದೂ ಹೇಳಿದರಂತೆ! ಅದೇ ರೀತಿಯ ಕಾಲ್ಪನಿಕ ಕಥೆ ಇಂದೂ ನಡೆಯುತ್ತದೆ.

ಸ್ವಪ್ನಗಳು ದೇವರ ಕೃತ್ಯವಾಗಲೀ, ಯಾವುದೇ ಮುಂಬರುವ ಘಟನೆಯ ಪೂರ್ವ ಸೂಚನೆಯಾಗಲೀ ಅಲ್ಲ. ಅವು ಸ್ವಪ್ನ ಕಾಣುವ ಮನುಷ್ಯನ ಅಭಿಲಾಷೆಯಂತೆ ತೋರುವವು. ಶರೀರಕ್ಕೆ ನೀರಿನ ಆವಶ್ಯಕತೆ ಇದ್ದಾಗ ನೀರು ಕುಡಿದಂತೆ ಸ್ವಪ್ನ ಕಾಣಬಹುದು. ಪರೀಕ್ಷೆ ಯಾ ಇನ್ನಾವುದಾದರೂ ಭಯದ ಕಾರಣವಿದ್ದಾಗ ಅವುಗಳಿಗೆ ಸಂಬಂಧಿಸಿ ಸ್ವಪ್ನ ಕಾಣಬಹುದು. ಸ್ವಪ್ನಗಳು ಮನುಷ್ಯನ ಮನಸ್ಸಿನ ಕಲ್ಪನೆಯ ತಳಹದಿಯ ಮೇಲೆ ನಿಂತವುಗಳು. ಸ್ವಪ್ನಗಳ ಸಹಾಯದಿಂದ ಮನುಷ್ಯನ ಮನಸ್ಸಿನಲ್ಲಿರುವ ತಳಮಳವನ್ನು ಗುರ್ತಿಸುವ ಸಾಧ್ಯತೆ ತೋರಿ ಬರುತ್ತದೆ. ನಮ್ಮ ನೈಸರ್ಗಿಕ ಜೀವನದಲ್ಲಿ ತೃಪ್ತಿಯನ್ನು ಪಡೆಯದ ವಿಚಾರಗಳು ಸ್ವಪ್ನದಲ್ಲಿ ಕಾಣಿಸಿಕೊಳ್ಳುವವು.

ಪ್ರೇಮ ಯಾ ಕಾಮ ಇವುಗಳು ಪೂರ್ಣ ತೃಪ್ತವಾಗದ ವಸ್ತುಗಳು. ಆದ ಕಾರಣವೇ ಹೆಚ್ಚು ಜನರು ಇವುಗಳ ವಿಚಾರವೇ ಸ್ವಪ್ನ ಕಾಣುವರು! ಇದರಿಂದ ಯಾರೂ ಗಾಬರಿಗೊಳ್ಳಬೇಕಾಗಿಲ್ಲ. ಅತೃಪ್ತ ಅಭಿಲಾಷೆಯೇ ಸ್ವಪ್ನದಲ್ಲಿ ಮೂಡುವದೆಂದು ಯಾರೂ ಭಾವಿಸಲಾಗದು. ಅಭಿಲಾಷೆ ಇರುವುದೊಂದಾದರೆ ಅದಕ್ಕೆ ವಿರುದ್ಧವಾಗಿಯೂ ಸ್ವಪ್ನ ಕಾಣಬಹುದು. ಈ ಸ್ವಪ್ನಗಳಲ್ಲಿ ಒಂದು ವ್ಯವಸ್ಥೆಯಿಲ್ಲ. ಒಂದೇ ವಯಸ್ಸಿನ ಜನರು ಒಂದೇ ರೀತಿಯ ಸ್ವಪ್ನ ಕಾಣುವರೆಂದೂ ಹೇಳಲಾಗುವದಿಲ್ಲ. ಪ್ರೇಮ, ವ್ಯಾಪಾರ, ಪ್ರಯಾಣ, ಉದ್ಯೋಗ, ಕಾಯಿಲೆ ಮೊದಲಾದ ವ್ಯಕ್ತಿಗೆ ಆ ಸಮಯಕ್ಕೆ ಪ್ರಮುಖ್ಯವಾದ ವಿಚಾರಗಳಲ್ಲಿ ಆತನಿಗೆ ಸ್ವಪ್ನ ಬೀಳಬಹುದು. ಇವುಗಳನ್ನು ಕಾಣುವ ವಿಧಾನವಾದರೂ ವಿಚಿತ್ರವಾಗಿರಬಹುದು. ಆದರೆ ಈ ಸ್ವಪ್ನಗಳಲ್ಲಿ ಅಭಿಲಾಷೆಯ ರೂಪ ರೇಖೆ ಇದ್ದೇ ಇರುವದು. ಆಕಾಶದಲ್ಲಿ ಹಾರಿದಂತೆ, ನೀರಿನಲ್ಲಿ ಮುಳುಗಿದಂತೆ, ಭೂಮಿಯೊಳಗೆ ಪ್ರವೇಶಿಸಿದಂತೆ ಸ್ವಪ್ನಗಳಾಗಬಹುದು! ಹಿಂದೆ ತೀರಿದ್ದ ಯಾ ಕಂಡ ವ್ಯಕ್ತಿಗಳ ಬಗ್ಗೆ ಮಾತ್ರ ಸ್ವಪ್ನವನ್ನುಂಟಾಗುವದಿಲ್ಲ. ಎಂದೂ ಕಾಣದ ಕಲ್ಪನೆಗೆ ಮೀರಿದ ವ್ಯಕ್ತಿಗಳನ್ನೂ ಸ್ವಪ್ನದಲ್ಲಿ ಕಾಣಬಹುದು. ನಾವು ಮಾತಾಡಿದಂತೆ, ನಮಗೆ ತಿಳಿಯದ ಭಾಷೆಯಲ್ಲಿ ನಾವು ಮಾತಾಡುತ್ತಿರುವಂತೆ ತೋರಬಹುದು. ಈ ರೀತಿಯ ವಿವಿಧ ಸ್ವಪ್ನಗಳನ್ನು ಪ್ರತಿಯೊಬ್ಬನೂ ಕಾಣುವನು. ಇವನ್ನು ವಿಸ್ತೃತ ಸಾಧನಗಳಿಂದ ವಿಜ್ಞಾನಿಗಳು ಪರಿಶೋಧಿಸಿದ್ದಾರೆ. ಪ್ರತಿ ಸ್ವಪ್ನಕ್ಕೂ ಭಾವೋತ್ತೇಜಕ ಹಿನ್ನೆಲೆಬೇಕು. ಈ ಭಾವೋತ್ತೇಜವು ಪ್ರಖರವಾಗಿದ್ದಷ್ಟೂ ಆಗಾಗ್ಯೆ ಸ್ವಪ್ನ ಬೀಳಬಹುದು.

ಪ್ರತಿ ಸ್ವಪ್ನವೂ ಮಾನವನ ಸುಪ್ತ ಚೇತನದಲ್ಲಿ ಪರಿಪೂರ್ಣಗೊಳ್ಳದೆ ಹುದುಗಿರುವ ಅತೃಪ್ತ ಭಾವನೆಯ ಫಲವೆನ್ನಬಹುದು. ಚಿಕ್ಕ ಮಗುವಾಗಿದ್ದಾಗ ಅದುಗಿದ ಭಾವನೆಯು ವಯಸ್ಸಾದಾಗ ಸ್ವಪ್ನದಲ್ಲಿ ತೋರಬಹುದು. ಮನೋವಿಶ್ಲೇಷಣಾಚಾರ್ಯರಾದ ಸಿಗ್ಮಂಡ್ ಫ್ರಾಯ್ಡ್ ಎಂಬವರ ಅತೃಪ್ತ ಭಾವನೆಯು ಪಣನಾಟವೇ ಸ್ವಪ್ನದ ಕಾರಣವೆಂದರು. ಆದರೆ ಇದೇ ಸ್ವಪ್ನದ ಪೂರ್ಣ ವಿವರಣೆಯಲ್ಲ. ಹಾಗಾದರೆ ಸ್ವಪ್ನದ ಉಗಮವೆಲ್ಲಿ?

ಮಾನವನ ಮಿದುಳು ರಾತ್ರಿ ಮತ್ತು ಹಗಲು ಎಡೆಯಿಲ್ಲದೆ ಶರೀರದ ಇತರ ಕೆಲವು ಅವಯವಗಳಂತೆ ಕೆಲಸಮಾಡುತ್ತದೆ. ಮನುಷ್ಯನು ಪ್ರಮುಖ್ಯವಾಗಿ ಬಯಕೆಯ ಪ್ರಾಣಿ. ಚಿಕ್ಕಂದಿನಿಂದಲೇ ಮಿಲಿಯಾಂತರ ವಿಧದ ಆಶೆಗಳು ನಮ್ಮಲ್ಲಿರುತ್ತವೆ. ಇವುಗಳಲ್ಲಿ ಕೆಲವು ಕರಗತವಾಗಬಹುದಾದರೂ ಹಲವು ಸಾಮಾಜಿಕ, ನೈತಿಕ ಯಾ ಧಾರ್ಮಿಕ ಭಯದ ಕಾರಣ ಕರಗತವಾಗದ ಉಳಿಯುವವು. ಆ ಕಾರಣ ನಮ್ಮ ಮನಸ್ಸಿನ ಅನೇಕ ಬೇಡಿಕೆಗಳನ್ನು ಪ್ರಕಟಪಡಿಸದೆ ಒತ್ತಿ ಕೆಳಗೆ ತಳ್ಳಬೇಕಾಗುವದು. ತೃಪ್ತಿಗೊಳ್ಳದ ಈ ಬಯಕೆಗಳೇ ಸ್ವಪ್ನಗಳಿಗೆ ಕಾರಣವಾಗುವವು. ಈ ಬಯಕೆಗಳ ಪೂರ್ಣ ರೂಪವೇ ಸ್ವಪ್ನವಲ್ಲ. ನಮ್ಮ ಬಯಕೆಯಲ್ಲಿಲ್ಲದ ಅನೇಕ ವಿಚಿತ್ರ ಸಂಗತಿಗಳೂ ಸ್ವಪ್ನದಲ್ಲಿ ಪ್ರಕಟವಾಗುವವು!

ಶರೀರಕ್ಕೆ ಅತ್ಯಾವಶ್ಯವಾದ ನಿದ್ರಾಭಂಗವಾಗದಂತೆ ಅದನ್ನು ಸಂರಕ್ಷಿಸಲು ಪ್ರಕೃತಿಯು ಮಾಡಿದ ವಿಚಿತ್ರ ಏರ್ಪಾಡಿನಂತೆ ನಮ್ಮ ಸ್ವಪ್ನಗಳಲ್ಲಿ ಸಂಕೇತಗಳಿಂದ ಸಾಗುವವೂ ಇವೆ. ಆದ್ದರಿಂದ ಸ್ವಪ್ನ ಕಾಣುವವನು ಅದನ್ನು ತಕ್ಷಣ ಆಲೋಚಿಸಿ ಅರ್ಥಮಾಡಿಕೊಳ್ಳಲಾರನು. ಆದರೂ ನಮ್ಮ ಸ್ಮೃತಿಗೆ ಬರುವ ಸ್ವಪ್ನಗಳನ್ನು ಆಲೋಚಿಸಿ ಅವುಗಳ ವಿವೇಚನೆ ಮಾಡಿ ನಮ್ಮ ನೈಸರ್ಗಿಕ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬಹುದೆಂದು ಹೇಳಬಹುದು. ಸ್ವಪ್ನಗಳನ್ನು ವಿವೇಚಿಸಿದಾಗ ಸ್ವಪ್ನ ಕಂಡವನ ಪ್ರಾಮುಖ್ಯಭಾವನೆಯು ರೂಪರೇಖೆಯು ಸಾಲವಾಗಿ ಅದರಲ್ಲಿ ತೋರುವದು. ಆದ್ದರಿಂದ ಸ್ವಪ್ನಗಳ ಸೂಕ್ಷ್ಮ ಪರಿಶೀಲನೆಯಿಂದ ಕ್ರಿಯಾತ್ಮಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ಸ್ವಪ್ನಗಳು ಉತ್ತಮ ಕಥೆಗೆ, ಉತ್ತುಂಗ ಭಾವನೆಗೆ ಆಸ್ಪದ ಕೊಡುವವು. ಅವುಗಳನ್ನು ಗುರ್ತಿಸಿ ಬೆಳೆಸುವದರಿಂದ ಲಾಭವಾಗುವದು.

ನಿಜವಾಗಿ ಹೇಳುವದಾದರೆ ನಮ್ಮ ಜಾಗ್ರತ್ ಮನಸ್ಸಿಗಿಂತ ನಮ್ಮ ಸುಪ್ತ ಚೇತನವೇ ಪ್ರಾಮುಖ್ಯ. ಜಾಗ್ರತ್ ಚೇತನ ಕ್ರಿಯಾತ್ಮಕವಾದುದು. ಸದಾ ಕೆಲಸ ಮಾಡುತ್ತಿದ್ದು ನಮ್ಮ ಬಾಹ್ಯ ಜೀವನದ ಟಿಪ್ಪಣಿಯಾಗಿದೆ. ಆದ್ದರಿಂದ ಅದರಲ್ಲಿ ನಮ್ಮ ಜೀವನಕ್ಕೆ ಸಂಬಂಧಿಸಿದ ಸಂಕೋಚ ಮತ್ತು ತೋರಿಕೆಯ ಪ್ರವೃತ್ತಿಗಳೆಲ್ಲ ಇರುವವು. ನಮ್ಮ ನಿಜವಾದ ವ್ಯಕ್ತಿತ್ವವು ಸುಪ್ತ ಚೇತನದಲ್ಲಿದೆ. ನಮಗೆ ಮನಸಿದ್ದರೂ ಸಮಾಜದ ಭೀತಿಯಿಂದ ಹತ್ತಿಕ್ಕಿದ ಅಭಿಪ್ರಾಯಗಳ ಸಮಾಧಿ ಇದು. ಇದೇ ನಮ್ಮ ಅಂತರಿಕ ಇಲ್ಲವೇ ನಿಜಜೀವನದ ಕೇಂದ್ರ! ಆದ್ದರಿಂದ ಈ ಭಾಗದಲ್ಲಿ ಗುಪ್ತವಾಗಿ ಅಡಗಿರುವ ವಿಚಾರಗಳನ್ನು ತಿಳಿಯಬೇಕು. ನಿಜವಾಗಿಯೂ ನಮ್ಮ ಸ್ವಭಾವ, ಗುಣಗಳ ಆ ಮೂಲಕ ಅರಿವನ್ನು ಮಾಡಿಕೊಳ್ಳಬೇಕು. ಆದ್ದರಿಂದ ನಮ್ಮ ಸ್ವಪ್ನಗಳ ಅಭ್ಯಾಸವನ್ನು ಮಾಡುವದು ನಮ್ಮನ್ನು ತಿದ್ದಿಕೊಳ್ಳಲು ಸಹಾಯಕವಾಗುವದು. ಇದರಲ್ಲಿ ಭವಿಷ್ಯದ ಸಂಕೇತವಾಗಲೀ, ಗತಕಾಲದ ವಿಚಾರವಾಗಲೀ ಇಲ್ಲ. ಆದರೆ ನಮ್ಮ ಸ್ವಜ ವ್ಯಕ್ತಿತ್ವದ ಅಸ್ಪಷ್ಟ ಛಾಯೆ ಸ್ವಪ್ನದಲ್ಲಿ, ಸ್ವಪ್ನಕ್ಕೆ ಮೂಲ ಕಾರಣವಾದ ಮಿದುಳಿನ ಸುಪ್ತ ಚೇತನ ವಿಭಾಗದಲ್ಲಿ ಇದೆ. ಅದನ್ನು ಗುರ್ತಿಸಿ ಸ್ವಪ್ನದಿಂದ ಅಮೂಲ್ಯ ಲಾಭಗಳಿಸುವ ಸಾಧ್ಯತೆ ಇದೆ!

---

## ಹುಡುಗರಿಗೆ ತಲೆನೋವು.

ಸುಮಾರು ೩,೦೦೦ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆ ಮಾಡಿದ ಯುನಿವರ್ಸಿಟಿ ಡಾಕ್ಟರರೊಬ್ಬರು ಅಂಡರ್‌ಗ್ರ್ಯಾಜ್ಯುವೇಟ್ ವಿದ್ಯಾರ್ಥಿಗಳಲ್ಲಿ (ವಿದ್ಯಾರ್ಥಿನಿಯರಲ್ಲಿ) ಹಲವರು ಪರೀಕ್ಷೆಗಳ ಕುರಿತಾದ ಯೋಚನೆಯಿಂದಲೇ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆ ಎಂಬ ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹೆಚ್ಚಿನವರು ತಲೆಯ ಮುಂಭಾಗದಲ್ಲಿ ನೋವು, ನಿದ್ರಾನಾಶಕ ಮುಂತಾದ ಪೀಡೆಗಳ ವಿಷಯ ತಿಳಿಸುತ್ತಿದ್ದಾರೆ. ಈ ಪೀಡೆಗಳು ತಲೆದೋರುವುದು ಪರೀಕ್ಷೆಗಳ ಯೋಚನೆಯಿಂದಲ್ಲದೆ ಬೇರಲ್ಲ. ಆದರೆ ವಿದ್ಯಾರ್ಥಿನಿಯರಿಗೆ ಈ ಪೀಡೆ ತಲೆದೋರುವುದು ಕಡಿಮೆ. ಸ್ವಭಾವಿಕವಾಗಿ ಗಂಡಸು ಹೆಂಗಸಿಗಿಂತ ಅನ್ಯ ಆಕಾಂಕ್ಷೆಯುಳ್ಳವನಿರುತ್ತಾನೆ. ಪರೀಕ್ಷೆಯಲ್ಲಿ ಹೇಗಾದರು ಮಾಡಿ ಉತ್ತೀರ್ಣನಾಗಬೇಕೆಂಬ ಹಿರಿದಾದ ಹಂಬಲ ಅವನಿಗಿರುತ್ತದೆ. ಹುಡುಗಿಯರಿಗೆ ಹಾಗಿಲ್ಲ. ಒಂದು ವೇಳೆ ಪರೀಕ್ಷೆಯಲ್ಲಿ ಫೈಲಾದರೆ ಮುಂದೆ ವಿವಾಹದಲ್ಲಿ ಜಯಪಡೆಯಬಹುದೆಂಬ ಧೈರ್ಯ ಇರುತ್ತದೆ.

# ಪಾಕಿಸ್ತಾನದ ನೀತಿ

'ಜೈ ಹಿಂದ್ ಪತ್ರಿಕೆಯಿಂದ'

ಕಳೆದ ಎರಡು ಮೂರು ವರುಷಗಳಿಂದ ಪಾಕಿಸ್ತಾನವು ನಡೆಸಿದ ಚಟುವಟಿಕೆ, ಆಡುವ ಆಟ, ನುಡಿವ ನುಡಿ, ಮಾಡುವ ಕೃತಿಗಳನ್ನು ನೋಡಿದರೆ, ಮಹಾಭಾರತದ ಕೌರವ ಕಾಲದ ನೆನಪು ಬರದೆ ಇರಲಾರದು. ಬಾ ದುಷ್ಟ ಆಚಾರಗಳಿಂದ ಕೂಡಿ "ತಾನು ಸುಖಪಡಲೊಲ್ಲೆ, ಯಾವನಿಗೂ ಸುಖಪಡಲು ಬಿಡಲೊಲ್ಲೆ" ಎಂಬ ಹಟವಾದಿ ತುಂಟ ಹುಡುಗನಂತೆ ಪಾಕಿಸ್ತಾನವು ನಡೆದುಕೊಳ್ಳುತ್ತಿದೆ. ದುರ್ಯೋಧನನಿಗೆ ಒಬ್ಬ ಶಕುನಿ ದೊರೆತಂತೆ ಪಾಕಿಸ್ತಾನಕ್ಕೆ ಕೌರವ ಕಾಲದ ಹಿಂದೆ "ಆಂಗ್ಲ ಶಕುನಿ" ಇದ್ದನೆಂದು ಅನೇಕ ತಜ್ಞರು ಅಭಿಪ್ರಾಯ ಪಟ್ಟುದು, ದಿನ ದಿನಕ್ಕೂ ಹಾವಣಿಸುವಂತೆಯೇ ಪಾಕಿಸ್ತಾನವು ತನ್ನ ಚಟುವಟಿಕೆಗಳನ್ನು ಸಾಗಿಸಿದೆ.

## ಯಾವ ರೀತಿ?

ಅಖಂಡ ಭಾರತದಿಂದ ಭಾಗವಾಗಿ ರೂಪುಗೊಂಡಂದಿನಿಂದ ಪಾಕಿಸ್ತಾನವು ತನ್ನ ಭಾಗದ ಜನರ, ಭೂಮಿಯ ವ್ಯಾಪಾರೋದ್ಯಮದ, ಯಂತ್ರ ಕೈಗಾರಿಕೆಯ ಸಂರಕ್ಷಣದ, ಆರೋಗ್ಯ ಮೊದಲಾದ ಯಾವ ಮಹತ್ವದ ವಿಷಯಗಳಿಗೂ ಗಮನ ಕೊಡದೆ ಕೇವಲ ಪರಪೀಡಕ ವೃತ್ತಿಯಿಂದಲೇ ಅದು ತೃಪ್ತಿಪಡುವಂತೆ ತೋರುತ್ತದೆ. ಈ ಮಾತಿಗೆ ಜುನಾಗಡದಿಂದ ಪ್ರಾರಂಭವಾಗಿ ಪಂಜಾಬ, ಬಂಗಾಲ ಹೈದರಾಬಾದಗಳೇ ಸುಸ್ಪಷ್ಟ ಉದಾಹರಣೆಗಳಾಗುತ್ತವೆ. ಕೇವಲ ಜಾತೀಯತೆಯ ತಳಹದಿಯ ಮೇಲೆಯೇ ರಾಷ್ಟ್ರ ಕಟ್ಟುವ ಹೊಂಚಿಟ್ಟಿರುವಂತೆ ಅದರ ಕಾರ್ಯಕ್ರಮಗಳು ಕೈಯೆತ್ತಿ ಹೇಳುತ್ತವೆ.

ಯಾವ ಜಾತೀಯತೆಯ ತಳಹದಿಯ ಮೇಲೆ ಆ ರಾಷ್ಟ್ರ-ಸರಕಾರ ಕಟ್ಟಿಹೊರಟಿದೆಯೋ ಆ ಜಾತೀಯರ ಹಿತಸಂಬಂಧಗಳಿಗಾಗಿ, ಸುಖಶಾಂತಿಗಾಗಿ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಯತ್ನ ನಡೆಸುತ್ತ ಬೇಕಾದ ತ್ಯಾಗವನ್ನಾದರೂ ಮಾಡಲು ಸಿದ್ಧವಿದೆಯೆನ್ನಲು ಸಾಧ್ಯವೆ? ಅದೂ ಇಲ್ಲ. ತನ್ನೊಳಗಿನ ತನ್ನವರೇ ಆದ ಜನರನ್ನು ಸಮರ್ಥರೂ ತಜ್ಞರೂ ಆದವರನ್ನು ಬಂಧನದಲ್ಲಿರಿಸಿದೆ. ಜತೆಯ ಅಫಗಾನಿಸ್ತಾನದೊಡನೆ ಮನಸ್ಸು ಕೆಡಿಸಿಕೊಂಡಿದೆ. ಅದೂ ಹೋಗಲಿ ತಾನು ಹುಟ್ಟಿ ಮೂರು ವರುಷಗಳ ಕಾಲ ಮುಗಿಯುತ್ತ ಬಂದರೂ, ತನ್ನ ರಾಜ್ಯಘಟನೆಯನ್ನು ತನಗೇ ಮಾಡಿಕೊಳ್ಳಲು ಅದಕ್ಕೆ ಬಿಡುವೇ ಇಲ್ಲದಾಗಿದೆ. ಇದೆಂತಹ ಪಾಕಿಸ್ತಾನೀ ರೀತಿ?

## ಪಾಕ-ಅಫಗಾನಿಸ್ತಾನ

ಮೊನ್ನೆ ಮೊನ್ನೆ ಒಂದು ಸಂಗತಿ ಪಾಕಿಸ್ತಾನದಲ್ಲಿ ಘಟಿಸಿರುತ್ತದೆ. ಅದು ಅಫಗಾನಿಸ್ತಾನದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಶ್ರೀ. ಐ. ಐ. ಚುಂದ್ರಿಗಾರ ಇವರನ್ನು ಅದು ವಾಯುವ್ಯ ಸರಹದ್ದು ಪ್ರಾಂತದ ಗವರ್ನರರನ್ನಾಗಿ ನಿಯಮಿಸಿಕೊಂಡಿದ್ದು ಇನ್ನೂವರೆಗೂ ಅಫಗಾನಿಸ್ತಾನದಲ್ಲಿ ತನ್ನ ರಾಯಭಾರಿ ಸ್ಥಳಕ್ಕೆ ಯಾರನ್ನೂ ನಿಯಮಿಸಿಯೇ ಇಲ್ಲ! ಪಾಕ-ಅಫಗಾನ ನಡುವಿನ ಸಂಬಂಧವು ದಿನೇ ದಿನೆ ಕೆಡುತ್ತಿದ್ದು, ಎರಡೂ ರಾಷ್ಟ್ರಗಳ ರಾಯಭಾರಿ ಸಂಬಂಧವು ಸಂಪೂರ್ಣವಾಗಿ ಕಡಿದು ಹೋಗುವ ದಿನವೂ ದೂರವಿಲ್ಲವೆಂಬ ದಟ್ಟವಾರ್ತೆ ಇದೆ. ಒಂದು ವೇಳೆ ಯುದ್ಧದ ಪ್ರಸಂಗವೇ ಬಂದಲ್ಲಿ, ಅಫಗಾನಿಸ್ತಾನದ ಒಳಹೊರಗನ್ನೆಲ್ಲಾ ಸಂಪೂರ್ಣ ಬಲ್ಲವರಾದ ಶ್ರೀ ಚುಂದ್ರಿಗಾರರು ಗಡಿನಾಡ ಗವರ್ನರರಾಗಿರುವುದು ಅವಶ್ಯವೆಂದು ತಿಳಿದೇ ಹೀಗೆ ಪಾಕಿಸ್ತಾನ ಸರಕಾರವು ಮಾಡಿರುವದೆಂದೂ ಅಲ್ಲಿಯ ಕೆಲವು ರಾಜಕಾರಣಿಗಳು ಅಭಿಪ್ರಾಯ ಪಡುತ್ತಿದ್ದಾರೆ.

## ಪಾಕ-ಭಾರತ

ಭಾರತದ ಬಗ್ಗೆ ಮಾತ್ರ ಪಾಕಿಸ್ತಾನದ ಧ್ಯೇಯ ಧೋರಣಗಳು ಏನಿರುವವೆಂಬುದನ್ನು ಹೇಳುವುದೇ ಬೇಡ. ಭಾರತಕ್ಕೆ ಎರಡು ಪಕ್ಕಗಳಲ್ಲಿಯ ಮೊನೆಯಾದ ಮುಳ್ಳಿನಂತೆ ಪಾಕಿಸ್ತಾನವು ಚುಚ್ಚುತ್ತಲಿದೆ. ಪಂಜಾಬ ಬಂಗಾಲಗಳೆರಡೂ ಅಶಾಂತಿಯಿಂದ ಧಗಧಗಿಸುತ್ತವೆ. ಸುಳ್ಳಿನ ಡೊಂಬರಲಾಗದಲ್ಲಿಯೂ ಪಾಕಿಸ್ತಾನವು ಎಲ್ಲರನ್ನೂ ಮೀರಿಸುವಂತಿದೆ. ಕಳೆದ ಫೆಬ್ರುವರಿ ೧೭ರ ವರೆಗೆ ಬಂಗಾಲದಲ್ಲಾದ ಹಾನಿಯನ್ನು ಕುರಿತು ಭಾರತ ಪ್ರಧಾನಮಂತ್ರಿ ಪಂಡಿತಜೀಯವರು ಕಲಕತ್ತೆಯಲ್ಲಿ 'ಅಲ್ಲಿ ಮೃತಪಟ್ಟ ಜನರ ಸಂಖ್ಯೆ ಒಟ್ಟು ಮೂವತ್ತೊಂದು. ಅದರಲ್ಲಿ ಇಪ್ಪತ್ತು ಮುಸ್ಲಿಮರು, ಹನ್ನೊಂದು ಹಿಂದೂಗಳು' ಎಂದು ಘಂಟಾಘೋಷವಾಗಿ ಸಾರಿದ್ದರೂ ಪಾಕಿಸ್ತಾನ ಪತ್ರಿಕೆಗಳು ಮೃತಪಟ್ಟವರ ಸಂಖ್ಯೆ ಹತ್ತುಸಾವಿರವೆಂದು ಪ್ರಸಿದ್ಧಿಸಿದವು! ಆ ಬಳಿಕ ಮೊನ್ನೆ ಪಾಕಿಸ್ತಾನ ಪ್ರಧಾನಮಂತ್ರಿಯವರು ಹೀಗೆ ಸುಳ್ಳು ಸಂಖ್ಯೆ ಪ್ರಕಟವಾದುದು ನಿಜವೆಂದೂ ಅದು ಪ್ರಮಾದದ ಮೂಲಕ ಆಗಿರುವುದೆಂದೂ ಅದನ್ನು ಸುಧಾರಿಸಿಕೊಳ್ಳಲು ಪಾಕಿಸ್ತಾನ ಸುದ್ದಿ ಸಂಸ್ಥೆಗೆ ತಾವು ತಿಳಿಸಿದ್ದಾಗಿಯೂ ಪಂಡಿತಜಿಯವರ ಪತ್ರಕ್ಕೆ ಉತ್ತರ ಬರೆದಿದ್ದಾರೆ.

## ಪಾಕಿಸ್ತಾನದ ಕೌರವತೆ

ಹೀಗೆ ಒಂದಿಲ್ಲೊಂದು ಬಗೆಯಿಂದ ಅನೇಕ ವಾದವಿವಾದಗಳನ್ನು ಎದೆಗೆಳೆದುಕೊಂಡು ಪಾಕಿಸ್ತಾನವು ತನ್ನ ಕೌರವತೆಯನ್ನು ಜಗತ್ತಿನೆದುರು ತೋರಿಸುತ್ತಲಿದೆ. "ತನ್ನ ಹಿತವನ್ನೇ ತನಗೆ ಗೊತ್ತಿರದವನು ಉಳಿದವರ ಹಿತದ ಬಗ್ಗೆ ಏನು ಗಣಿಸಿಯಾನು?" ಎಂಬಂತೆ ಪಾಕಿಸ್ತಾನದ ನೀತಿ ರೀತಿಗಳಿವೆಯೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಮೇಲೆ ಹೇಳಿದಂತೆ 'ಶಕುನಿ'ಯ ಪ್ರಚೋದನೆಯಿಂದ ಕೌರವನು ತನ್ನ ಕುಲಘಾತವನ್ನೂ ಮಾಡಿಕೊಂಡುದಲ್ಲದೆ ಬಂಧುಗಳಿಂದ ಪಾಂಡವರಿಗೂ ಹೇಳಬಾರದ ಕಷ್ಟಗಳನ್ನು ಕೊಡುವಂತೆ ಮಾಡಿದಂತೆ ಪಾಕಿಸ್ತಾನವು ಇನ್ನೂ ತನ್ನ 'ಶಕುನಿ' ಪ್ರಚೋದನೆಯಿಂದ ತನ್ನ ಆತ್ಮಘಾತದ ದಾರಿಯನ್ನೇ ಹಿಡಿಯುತ್ತಿರುವುದು ಶೋಚನೀಯವೆಂದೇ ಹೇಳಬೇಕಾಗುತ್ತದೆ. ಹುಟ್ಟಿ ಮೂರು ವರುಷಗಳು ಮುಗಿಯುತ್ತ ಬಂದರೂ, ಇನ್ನೂ ತನ್ನ ಉತ್ಸಾಹವೆಲ್ಲವನ್ನೂ ವೆಚ್ಚಮಾಡುವುದು ಆತ್ಮಘಾತದ ನೀತಿಯಲ್ಲದೆ ಇನ್ನೇನು? ಇನ್ನಾದರೂ ಪಾಕಿಸ್ತಾನವು ಕಣ್ಣು ತೆರೆದು ತಾನು ಹೇಗೆ ಒಳಿತಾಗಿ ಬಾಳಿಯೇನು? ಎಂಬುದರ ಕಡೆಗೆ ಗಮನಕೊಟ್ಟು "ತಾನು ಒಳಿತಾಗಿ ಬಾಳಬೇಕು; ಇತರರನ್ನೂ ಒಳಿತಾಗಿ ಬಾಳಗೊಡಬೇಕು" ಎಂಬ ಧೋರಣದಿಂದ ನಡೆಯುವುದೋ?

---

# ಜೈಲಿನಿಂದ ಪರಾರಿ

**ಹೈದರಾಬಾದಿನ ಹಿಂದಿನ ಮುಖ್ಯ ಮಂತ್ರಿ ಲಾಯಕ್ ಅಲಿಯವರ ಕಣ್ಮರೆ.**

ಹೈದರಾಬಾದದಲ್ಲಿ ತನ್ನ ಬಂಗಲೆಯಲ್ಲಿ ಬಂಧಿಯಾಗಿರಿಸಲ್ಪಟ್ಟಿದ್ದ, ಹೈದರಾಬಾದದ ಮಾಜಿ ಪ್ರಧಾನ ಸಚಿವ ಮೀರ್ ಲಾಯಕ್ ಅಲಿಯವರು ಕಾಣೆಯಾದುದು ಮಾತ್ರವಲ್ಲ, ಅವರ ಹೆಂಡತಿ ಮತ್ತು ಮಕ್ಕಳೂ ಕಾಣೆಯಾಗಿರುವರೆಂದು ಪ್ರಕಟವಾಯಿತು. ಲಾಯಕ್ ಅಲಿಯವರು 'ಬುರಖಾ' ('ಘೋಷಾ') ದಲ್ಲಿ ತಪ್ಪಿಸಿಕೊಂಡಿರಬೇಕೆಂದೂ, ಪಾಕಿಸ್ತಾನ ಸೇರಿರಬೇಕೆಂದೂ ಊಹಿಸಲಾಗಿದೆ.

ಪಾಕಿಸ್ತಾನದಿಂದ ಬಂದ ಕೆಲವು ದೂತರ ಸಹಾಯದಿಂದ ಈ ಪ್ರಕರಣ ನಡೆದಿರಬೇಕೆಂದೂ ಒಂದು ಊಹೆ. ಇತ್ತೀಚೆಗೆ, ಹೈದರಾಬಾದಿಗೆ, ಪಾಕಿಸ್ತಾನದಿಂದ ಅನೇಕರು ಬಂದರೆನ್ನಲಾಗಿದೆ.

ಅಲಿಯವರ ಪತ್ನಿಯನ್ನು ಕಾಣಲೆಂದು ಕೆಲವು ಘೋಷಾ ಸ್ತ್ರೀಯರು ಆಗಾಗ್ಗೆ ಹೋಗುತ್ತಿದ್ದರಂತೆ; ಅವರಿಗೆ ಸರಾಗವಾಗಿ ಪ್ರವೇಶ ದೊರೆಯುತ್ತಿತ್ತು. ಲಾಯಕ್ ಅಲಿಯವರೂ ಒಂದು ಪರದೆಯಲ್ಲಿದ್ದಾಗ, ಪರಾರಿಯಾಗಿದ್ದಿರಬೇಕು—ಎನ್ನುವರು.

ಇತ್ತೀಚೆಗೆ ಲಾಯಕ್ ಅಲಿಯವರ ಬಂಗಲೆಯಲ್ಲಿ ಕೆಲಸದಲ್ಲಿದ್ದ ನೌಕರರು, ಒಂದಲ್ಲ ಒಂದು ನೆಪದಿಂದ ಕೆಲಸದಿಂದ ತೆಗೆದುಹಾಕಲ್ಪಟ್ಟಿದ್ದರಂತೆ. ಹೀಗಾಗಿ, ಲಾಯಕ್ ಅಲಿಯವರು ತಲೆತಪ್ಪಿಸಿಕೊಂಡು ಹೋಗುವಾಗ ನೌಕರರು ಕೂಡ ಉಳಿದಿರಲಿಲ್ಲ. ಇದು ಕೂಡ ಮೊದಲಿಂದಲೇ ಯೋಚಿಸಿಟ್ಟ ಕಾರ್ಯಕ್ರಮಗಳ ಲಕ್ಷಣ ಎಂದೂ ತರ್ಕಿಸಲಾಗುತ್ತಿದೆ.

ಲಾಯಕ್ ಅಲಿಯವರು ಕೆಲ ಕಾಲದಿಂದ ಗಡ್ಡ ಬೆಳೆಸಿದ್ದರಂತೆ. ಯಾವಾಗಲೂ, ತೋಟದಲ್ಲಿ ಅಡ್ಡಾಡುತ್ತಿದ್ದವರು ಇತ್ತೀಚೆಗೆ ಕೆಲ ದಿನಗಳಿಂದ ಕಾಣುತ್ತಿರಲಿಲ್ಲ. (ಲಾಯಕ್ ಅಲಿಯವರ ಬಂಗಲೆಯ ಪಕ್ಕಕ್ಕೆ ಚೀಫ್ ಸೆಕ್ರೆಟರಿ ಶ್ರೀ ಎಮ್. ಕೆ. ಜೈನ್‌ರವರ ಬಂಗಲೆಯೂ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆದ ಬಿ. ಬಿ. ಎಸ್. ಜೆಟ್ಲಿಯವರ ಬಂಗಲೆಯೂ ಇವೆ. ಈ ಎರಡು ಬಂಗಲೆಗಳೂ ಲಾಯಕ್ ಅಲಿಯವರ ಕಟ್ಟಡಕ್ಕೆ ಸೇರಿದ್ದು, ಅವುಗಳನ್ನು ರಿಕ್ವಿಜಿಶನ್ ಮಾಡಿಕೊಳ್ಳಲಾಗಿತ್ತು. ಲಾಯಕ್ ಅಲಿಯವರು ತಮ್ಮ ಬಂಗಲೆಯ ತೋಟದಲ್ಲಿ ವಾಯುಸೇವನೆಗೆ ಬಂದಾಗ, ಆ ಎರಡೂ ಬಂಗಲೆಗಳವರಿಗೆ ಕಾಣುತ್ತಿತ್ತು.)

ಲಾಯಕ್ ಅಲಿಯವರಿಗೆ ಒಂದು ಹೆಂಡತಿ, ಐವರು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗು. ಹಿರೀ ಮಗಳ ವಯಸ್ಸು ೨೪; ಚಿಕ್ಕವಳದು ಎರಡು; ಮಗನ ಪ್ರಾಯ ಒಂಭತ್ತು.

ಲಾಯಕ್ ಅಲಿಯವರು ಆರೇಳು ದಿನಗಳ ಹಿಂದೇ ಹೈದರಾಬಾದನ್ನು ಬಿಟ್ಟು, ಪಾಕಿಸ್ತಾನ ಸೇರಿರಬೇಕೆಂದು ಕೆಲವರು ತರ್ಕಿಸುವಾಗ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಬಿ. ಜೆಟ್ಲಿಯವರು, ಅವರು ಹೈದರಾಬಾದ ನಗರದೊಳಗೇ ಅಡಗಿರಬೇಕೆಂದು ಅಭಿಪ್ರಾಯಪಡುತ್ತಾರೆ.

ಅಲಿಯ ಬೇಟೆಯಾಗುತ್ತಿದೆ. ಅಲಿಗೆ ಸಂಬಂಧಿಸಿದವರನೇಕರಲ್ಲಿ ಪೊಲೀಸರು ನುಗ್ಗಿ ಹುಡುಕಾಡಿದ್ದಾರೆ. ಹೈದರಾಬಾದ ನಗರದೊಳಗಿನ ಓಣಿ ಕೇರಿಗಳಲ್ಲೆಲ್ಲ ಬಿ. ಜೆಟ್ಲಿಯವರು ಸ್ವತಃ ಮೇಲ್ವಿಚಾರ ನಡೆಸಿ ಮನೆಮನೆಗಳನ್ನೂ ಜಾಲಿಸಿಕೊಂಡು ನೋಡುತ್ತಿದ್ದಾರೆ.

ಭಾರತ ಪಾರ್ಲಮೆಂಟಿನಲ್ಲಿ, ಲಾಯಕ್ ಅಲಿ ಪ್ರಕರಣವನ್ನು ಚರ್ಚಿಸಬೇಕೆಂದು, ಶ್ರೀ ಎಚ್. ವಿ. ಕಾಮತರು ಸೂಚಿಸಿದಾಗ, 'ಅದು ಹೈದರಾಬಾದ ಆಡಳಿತಕ್ಕೆ ಸಂಬಂಧಪಟ್ಟ ವಿಚಾರ' ಎಂದು, ಚರ್ಚೆ ನಂತರ ತೆಗೆದುಹಾಕಲಾಯಿತು.

ಲಾಯಕ್ ಅಲಿಯವರ ಬಂಗಲೆಯ ಪಹರೆ ಮಾಡುತ್ತಿದ್ದ ಹದಿನೈದು ಮಂದಿ ಪಹರೆಯವರನ್ನು ಬಂಧನದಲ್ಲಿಟ್ಟಿರುವರು.

ಲಾಯಕ್ ಅಲಿಯವರು ಹೈದರಾಬಾದದ ಪ್ರಧಾನ ಸಚಿವರಾಗಿದ್ದಾಗ, ಪ್ರಜಾಪೀಡನ ಕಾರ್ಯದಲ್ಲಿ ಅವರ ಹಸ್ತಕರಾಗಿದ್ದ (ಲಾಯಕ್ ಅಲಿ ಮಂತ್ರಿಮಂಡಲದಲ್ಲಿದ್ದ) ಇತರ ಎಂಟು ಮಂದಿಯನ್ನು, ಈಗ ಹೈದರಾಬಾದ ಸೆಂಟ್ರಲ್ ಜೈಲಿನಲ್ಲಿಟ್ಟಿರುವರು: ೧. ಪಿಂಗಳೆ ವೆಂಕಟರಾಮ ರೆಡ್ಡಿ. ೨. ಅಬ್ದುಲ್ ರಾಫ್. ೩. ಯೂಮಿನ್ ಬೇಗ್. ೪. ಬಿ. ಎಸ್. ವೆಂಕಟರಾವ್. ೫. ರಾಜಾ ಮನೋಹರ ಲಾಲ್. ೬. ಅಬ್ದುಲ್ ಹಮೀದ್ ಖಾನ್. ೭. ಅಬ್ದುರ್ ರಹೀಮ್. ೮. ನವಾಬ್ ಫತೇ ನವಾಜ್ ಜಂಗ್. ನವಾಬ್ ಮೊಯಿನ್ ನವಾಜ್ ಜಂಗ್ (ಲಾಯಕ್ ಅಲಿಯ ಭಾವ; ಮಾಜಿ ಅರ್ಥ ಸಚಿವ; ಇತ್ರಮುಲ್ಲಾ—ಇವರಿಬ್ಬರು, ಭಾರತ ಸರಕಾರವು ಹೈದರಾಬಾದದ ಮೇಲೆ ಪೊಲೀಸ್ ಕಾರ್ಯ ತೆಗೆದುಕೊಳ್ಳುವ ಮೊದಲೇ ಯುನೈಟೆಡ್ ನೇಶನ್ಸಿಗೆ ಶಿಷ್ಟಮಂಡಲ ಒಯ್ದರು, ತಿರುಗಿ ಬಂದಿಲ್ಲ.) ಇತ್ತಲಾಗಿ ಲಾಯಕ್ ಅಲಿಯು ಭಾರತದಿಂದ ತಪ್ಪಿಸಿಕೊಂಡು ಪಾಕಿಸ್ತಾನಕ್ಕೆ ಹೋಗಿ ಈಗ ಕರಾಚಿಯಲ್ಲಿದ್ದಾನೆಂದೂ ಮುಂದೆ ಆ ಮೂಲಕ ಅಮೇರಿಕಾಕ್ಕೆ ಹೋಗಬಹುದೆಂದೂ ಊಹಿಸಲಾಗಿದೆ.

ಸಮಾಜಶಾಸ್ತ್ರದ

# ವಿಖ್ಯಾತ ಸಂಶೋಧಕರು.

ಡಾ. ಇರಾವತಿಬಾಯಿ ಕರ್ವೆ

ಡಾ. ಇರಾವತಿಬಾಯಿಯವರು ಏಪ್ರೀಲ್ ತಿಂಗಳ ಮಧ್ಯದಲ್ಲಿ ಕೊಡಗಿನಲ್ಲಿ ಅಲ್ಲಿಯ ಸಮಾಜ ಸಂಸ್ಕೃತಿಗಳ ವಿಶೇಷ ಅಭ್ಯಾಸಕ್ಕಾಗಿ ಬರಲಿರುವರು. ಈ ಕಾರಣದಿಂದ ಅವರ ಪರಿಚಯವು ಕೊಡಗಿನವರಿಗೆ ಮೊದಲೆ ಸ್ವಲ್ಪ ತಿಳಿದಿದ್ದರೆ ಲೇಸೆಂದು ಈ ಅಲ್ಪ ಪರಿಚಯವನ್ನು ಇಲ್ಲಿ ಕೊಡುತ್ತಿದ್ದೇನೆ.

ಡಾ. ಇರಾವತಿಬಾಯಿಯವರ ಜನ್ಮ ಬ್ರಹ್ಮದೇಶದಲ್ಲಿ ಆಯಿತು. ಇರಾವತಿ ನದೀತೀರದಲ್ಲಿ ಹುಟ್ಟಿದ ಶಿಶುವೆಂದು ಇವರ ತಾಯಿ ತಂದೆಯವರು ಆ ಶಿಶುವಿನ ನೆನಪಿಗಾಗಿ ಅದೇ ಹೆಸರನ್ನಿಟ್ಟರು. ಒಳ್ಳೆಯ ರೂಪ–ಗುಣ–ಸೌಂದರ್ಯಗಳ ವ್ಯಕ್ತಿತ್ವವುಳ್ಳ ಈ [illegible]ಯು ಬುದ್ಧಿವಂತಿಕೆಯಲ್ಲೂ ಒಳ್ಳೆ ಮಿಗಿಲಾದವಳೆಂದು ಕಂಡು ಬಂದುದರಿಂದ ಅವರ ತಂದೆಯವರು ಕಾಲೇಜಿನ ಉಚ್ಚ ಶಿಕ್ಷಣವನ್ನೂ ಕೊಡಿಸಿದರು. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಪರೀಕ್ಷೆಯಲ್ಲಿ ಯಶಸ್ವಿಯಾದರು.

ಈಗ ಪೂನಾದ ಫರ್ಗ್ಯುಸನ್ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಡಾ. ದಿನಕರರಾವ ಕರ್ವೆ ಅವರೊಡನೆ ಅವರ ವಿವಾಹವು ಆಯಿತು. ಫರ್ಗ್ಯುಸನ್ ಕಾಲೇಜು ಖಾಸಗಿ ಸಂಸ್ಥೆ, ಅಲ್ಲಿ ಅಜನ್ಮ ಸೇವಕರಾಗಿ ಕೆಲಸಕ್ಕೆ ಸೇರುವುದೆಂದರೆ ಬಡತನವನ್ನು ಸ್ವಾಗತಿಸಿದಂತೆಯೇ. ಏಕೆಂದರೆ ಅಲ್ಲಿ ೧೦೦ ರೂ. ಮಾತ್ರ ಸಂಬಳ ಕೊನೆಯುವರೆಗೂ ಪ್ರತಿ ತಿಂಗಳು! ಇಂತಹ ಗಂಡನನ್ನು ವರಿಸಿದ್ದಕ್ಕಾಗಿ ತಂದೆ ಸಿಟ್ಟಾದರು. ಇಬ್ಬರೂ ಒಳ್ಳೆ ವಿದ್ವಾಂಸರು. ಸರಕಾರಿ ಕೆಲಸಕ್ಕೆ ಸೇರಿದ್ದರೆ ಸಾವಿರದ ಸಂಬಳ ನಿಶ್ಚಿತವಿರುತಿತ್ತು. [illegible] ಎಂದರೆ ಡಾ. ಇರಾವತಿಬಾಯಿ ಅವರ ತಂದೆಯವರು ದೊಡ್ಡ ಹುದ್ದೆಯಲ್ಲಿ ಇದ್ದವರು. ಅವರ ಮೂಲಕ ಡಾ. ದಿನಕರರಾಯರಿಗೆ ಕೈತುಂಬ ಸಂಬಳದ ಕೆಲಸ ಎಲ್ಲಿಯೂ ದೊರೆಯುವಂತಿತ್ತು. ಒಂದೆರಡು ಬಾರಿ ಇಂತಹ ಕರೆ ಬಂದರೂ ಅವರು ಸ್ವಾರ್ಥತ್ಯಾಗ ಮಾಡಿದರೆ ವಿನಹ ಅವಕ್ಕೆ ಮೋಹಿಸಲಿಲ್ಲ.

ಮದುವೆಯಾದ ಬಳಿಕ ಇಬ್ಬರೂ ದಂಪತಿಗಳು ಹೆಚ್ಚಿನ ಅಭ್ಯಾಸಕ್ಕಾಗಿ ಜರ್ಮನಿಗೆ ಹೋದರು. ಡಾ. ದಿನಕರರಾಯರು ರಸಾಯನ ಶಾಸ್ತ್ರದಲ್ಲಿ ಹೆಚ್ಚಿನ ಪದವಿಯನ್ನು ಸಂಪಾದಿಸಿ ಕೀರ್ತಿಪಡೆದಿರುವರು. ಡಾ. ಇರಾವತಿಬಾಯಿಯವರು ಸಮಾಜ ಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಇಟ್ಟುಕೊಂಡು ಅದರಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ಸಂಸ್ಕೃತದಲ್ಲಿ ಜಗದ್ವಿಖ್ಯಾತ ಕೀರ್ತಿಯನ್ನು ಪಡೆದ ಡಾ. ಎಡಿಸನ್ ಇವರ ಕೈಕೆಳಗಿನ ಅಧ್ಯಯನ ಮಾಡುವ ಸುಯೋಗವು ಅವರಿಗೆ ದೊರಕಿತು. ಸಮಾಜ ಶಾಸ್ತ್ರದ ಜೊತೆಗೆ ಸಂಸ್ಕೃತ ಕಾವ್ಯಗಳಲ್ಲೂ ಇವರಿಗೆ ಬಹಳ ಪ್ರೀತಿ.

ಪೂನಾ ವಿಶ್ವವಿದ್ಯಾನಿಲಯದ ಡೆಕ್ಕನ್ ಕಾಲೇಜು [illegible] ವಿಖ್ಯಾತ ಸಂಶೋಧನ ಮಂದಿರದಲ್ಲಿ ಡಾ. ಇರಾವತಿಬಾಯಿಯವರು ಸಮಾಜ ಶಾಸ್ತ್ರದ ಪ್ರಮುಖ ಪ್ರೊಫೆಸರರಾಗಿದ್ದಾರೆ.

ಇವರು ಮುಂಬೈ ವಿಶ್ವವಿದ್ಯಾನಿಲಯದ ಮುಖಾಂತರವಾಗಿ ಸಮಾಜ ಶಾಸ್ತ್ರದ ಹಲವು ಶಾಖೆಗಳಲ್ಲಿ ಸಂಶೋಧನ ಮಾಡಿದ್ದಾರೆ. ಮಹಾರಾಷ್ಟ್ರದ ಜನಗಳ ಕಲೆ ಸಮಾಜಗಳ ಅಳತೆ ಮೊದಲಾದವುಗಳ ಮೂಲಕ ಮಾಡಿದ ಅವರ ಶೋಧವು ಅವರಿಗೆ ಅಖಿಲ ಭಾರತೀಯ ಅದೇಕೆ ಅಂತರ್‌ರಾಷ್ಟ್ರೀಯ ಕೀರ್ತಿಯನ್ನು ತಂದಿದೆ.

ಈಗ ಅವರು ಕರ್ನಾಟಕದ ಜನಾಂಗ, ಜಾತಿಗಳ ಸಂಶೋಧನೆಗೆ ಹೊರಟಿರುವರು. ಕೊಲ್ಹಾಪುರ, ವಿಜಾಪುರ, ಧಾರವಾಡ, ಬೆಳಗಾಂವಿಗಳಲ್ಲಿ ಕೆಲಸವನ್ನು ಆರಂಭಿಸಿದ್ದಾರೆ. ಕೊಡಗು, ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳ ಸಂಚಾರವನ್ನೂ ಕೈಕೊಳ್ಳಲಿರುವರು. ಕೊಡಗಿನ ಜನ್ಮ ಜಿಜ್ಞಾಸುಗಳು ಸಂಸ್ಕೃತಿ ಅಭ್ಯಾಸಿಗಳೂ ಅವರನ್ನು ಸ್ವಾಗತಿಸದೆ ಇರಲಾರರೆಂದು ಹಾರೈಸೆ. —ಶಂ. ಬಾ. ಜೋಶಿ

## ಕೊಡಗಿನ ರೈತರ ಅವಗಾಹನೆಗೆ.

ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಸಿ ಇಂದು ಕಲೆದೋರಿರುವ ಆಹಾರ ಅಭಾವ ನಿವಾರಿಸುವ [illegible] ಸ್ವಚ್ಛ ದೃಷ್ಟಿ ನಮ್ಮ ದೇಶದ ಉದ್ದಗಲಕ್ಕೂ ಹರಡಿರುವುದು ಹೊಸ ಸಂಗತಿಯಲ್ಲ. ಈ ಯೋಜನೆಗೆ ಉಪಯುಕ್ತವಾಗಿ ಕೊಡಗಿನ ಕಾಫಿ ಕಿತ್ತಳೆ ತೋಟಗಳ [illegible] ಹುಳು ತರದ ರೋಗಗಳನ್ನು ಸ್ಪ್ರೇ ಮಾಡಿ, ನಾಶಮಾಡುವ ಸ್ಪ್ರೇಯರ್ ಯಂತ್ರಗಳು ಕೊಡಗಿನ ವ್ಯವಸಾಯ ಇಲಾಖೆಯಿಂದ ಬಾಡಿಗೆಗೆ ಕೊಡಲಾಗುವುದು. ಇಚ್ಛಿಸುವ ರೈತರು ಈ ಕೆಳಗಿನ ನಿಯಮಗಳಿಗೆ ಒಳಪಟ್ಟು ಈ ಯಂತ್ರಗಳಿಗೆ ನಿಶ್ಚಯಿಸಿದ ಬಾಡಿಗೆ ಕೊಟ್ಟು ತಮ್ಮ ತೋಟದಲ್ಲಿ ಉಪಯೋಗಿಸಿಕೊಳ್ಳಬಹುದು.

೧. ಹತ್ತು ಎಕ್ರೆಗಳಿಗೆ ಒಳಪಟ್ಟ ಕಿತ್ತಳೆ ವ್ಯವಸಾಯಗಾರರಲ್ಲದ ಬೇರೆ ಎಲ್ಲಾ ವ್ಯವಸಾಯಗಾರರು ಓ. ಎಸ್. ಪಿ. ಯು ಪೀಲ್‌ಬ್ಯಾರೊ ಸ್ಪ್ರೇಯರುಗಳನ್ನು ದಿನ ಒಂದರ ೮ ಗಂಟೆಯ ಕೆಲಸಕ್ಕೆ ದರ ಯಂತ್ರ ೧ ರ ೧-೮-೦ ರಂತೆಯೂ ಮತ್ತು ಒಡೇ ರೀತಿ ಪವರ್ ಸ್ಪ್ರೇಯರುಗಳಿಗೆ ಮಿಶನ್ ೧ ಕ್ಕೆ ರೂ ೪-೦-೦ ರಂತೆಯೂ ಕೊಡಗು ವ್ಯವಸಾಯ ಇಲಾಖೆಯಿಂದ ಪಡಕೊಳ್ಳಬಹುದು.

೨. ಓ. ಎಸ್. ಪಿ. ಸ್ಪ್ರೇ, ಪೀಲ್‌ಬ್ಯಾರೊ, ಪವರ್ ಸ್ಪ್ರೇಯರುಗಳಿಗೆ ಸಮುಚಿತವಾಗಿ ಸರ್ಕಲ್ ಆಫೀಸರುಗಳಿಗೆ ಅರ್ಜಿ ಬರೆದುಕೊಂಡಲ್ಲಿ ಸಮಯೋಚಿತವಾಗಿ ಕೊಡಲಾಗುವುದು.

೩. ಅಂತಹ ಅರ್ಜಿಗಳನ್ನು ಎರಡು ವಿಧಾನಗಳಲ್ಲಿ ವಿಂಗಡಿಸಲಾಗಿದೆ:—

(a) ಮುಂಗಾರು ಮಳೆಯ, ಕಾಫಿ, ಕಿತ್ತಳೆ ಮತ್ತು ಅಡಿಕೆಯ ಸ್ಪ್ರೇಯಿಂಗ್‌ಗಿರುವ ಅರ್ಜಿ,

(a) ಹಿಂಗಾರು ಮಳೆಯ ಸ್ಪ್ರೇಯಿಂಗ್‌ಗಿರುವ ಅರ್ಜಿ.

ಮುಂಗಾರು ಮಳೆಯ ಸ್ಪ್ರೇಯಿಂಗ್‌ಗಿರುವ ಅರ್ಜಿಯನ್ನು ಮಾರ್ಚಿ ೧೦ ರೊಳಗೆ ಕಳುಹಿಸತಕ್ಕದ್ದು.

೫ ಹಿಂಗಾರು ಮಳೆಯ ಸ್ಪ್ರೇಯಿಂಗ್‌ಗಿರುವ ಅರ್ಜಿಯನ್ನು ಆಗೋಸ್ತು ೧ರ ಒಳಗೆ ಕಳುಹಿಸತಕ್ಕದ್ದು.

೬. ವೃಥಾ ವಿಳಂಬ ಮಾಡಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ವ್ಯವಸಾಯ ಇಲಾಖಾ ಆಫೀಸರಿಗೆಯೂ ಅಸಿಸ್ಟೆಂಟ್ ವ್ಯವಸಾಯ ಅಧಿಕಾರ ಮನ್ನಣೆಗೆ ತೃಪ್ತಿಯಾಗುವಂತೆ, ವಿಳಂಬ ಮಾಡಿದಕ್ಕೆ ಸರಿಯಾದ ಕಾರಣಗಳನ್ನು ಕೊಟ್ಟರೆ ಅಂತಹ ಅರ್ಜಿಗಳಿಗೆ ಮನ್ನಣೆ ಕೊಡಲಾಗುವುದು.

೭. ಅನುಕ್ರಮವಾಗಿ ಏಳು ದಿನಗಳ ಬಾಡಿಗೆ ಮೊಬಲಗನ್ನು ಒಂದು ವಾರಕ್ಕೆ ಮೊದಲಾಗಿ ರೈತನಿಂದ ವಸೂಲು ಮಾಡಲಾಗುವುದು.

೮ ಸ್ಪ್ರೇಯರ್‌ಗಳನ್ನು ವ್ಯವಸಾಯ ಡಿಪೋದಿಂದ ರೈತರ ಜಮೀನಿಗೆ ಸಾಗಿಸುವ ಮತ್ತು ಅಲ್ಲಿಂದ ಹಿಂದಕ್ಕೆ ತರಲಿಕ್ಕೆ ತಗಲುವ ಖರ್ಚನ್ನು ಆಯಾ ರೈತನಿಂದಲೇ ಕೊಡಬೇಕಾಗುವುದು.

೯ ಫೀಲ್ಡ್‌ಮೇನ್ ಯಾ ಡೆಮಾನ್‌ಸ್ಟ್ರೇಶನ್ ಮೇಸ್ತ್ರಿಯರ ಅನುಮತಿ ಇಲ್ಲದೆ ಯಂತ್ರವನ್ನು ಉಪಯೋಗಿಸುವ ಯಾವ ಹಕ್ಕು ರೈತನಿಗೆ ಇರುವುದಿಲ್ಲ.

೧೦ ಯಂತ್ರವನ್ನು ಸುರಕ್ಷಿತವಾಗಿ ತಲುಪಿಸುವ ಭಾರವು ರೈತನದೇ ಆಗಿರುತ್ತದೆ. ಮತ್ತು ಅಜಾಗರೂಕತನದಿಂದ ಯಂತ್ರಕ್ಕೆ ಏನಾದರೊಂದು ನಷ್ಟವಾದರೆ ಆ ನಷ್ಟಗಳೆಲ್ಲಾ ರೈತನೇ ಜವಾಬ್ದಾರಿಯಾಗತಕ್ಕದ್ದು. —ವ್ಯವಸಾಯ ಇಲಾಖೆ

# ಪ್ರಾಚೀನ ವಸ್ತು ಸಂಶೋಧನೆ.

ಲೇ:—ಶ್ರೀ 'ಗಣೇಶ' ಮಡಿಕೇರಿ.

ಬ್ರಿಟಿಷರ ಆಳ್ವಿಕೆ ಪ್ರಾರಂಭವಾದ ನಂತರ ನಮ್ಮ ದೇಶದ ಇತರ ಕುಶಲ ಕಲೆಗಳೊಡನೆ ನಮ್ಮ ಹಿರಿಯ ಸಂಸ್ಕೃತಿ ಮತ್ತು ಒಲವಿನ ಗರತಿಗಳ ಪಟ್ಟದ ಸ್ಥಾನಗಳೂ ಮೂಲೆಗೊತ್ತಲ್ಪಟ್ಟವು. ಬ್ರಿಟಿಷ್ ಪದ್ಧತಿಯೇ ನಾಗರಿಕತೆ ಎನಿಸಿ ಹಿಂದಿನ ಗೌರವ [illegible] ದಿರುಗೊಳ್ಳವು. ಆಧುನಿಕವಾಗಿ ನಮ್ಮ ಆರ್ಯರ ಹಿರಿಮೆ ಘನತೆಗಳನ್ನು ಹೇಳಿಕೊಳ್ಳುವದನ್ನು ಕಡಿಮೆಯೆಂದು ಭಾವಿಸಿದೆವು. ನಮ್ಮ ನಾಡಿನ ಚಾರಿತ್ರಿಕ ಸ್ಥಳಗಳನ್ನು ಕಡೆಗಣಿಸಿದೆವು. ಪ್ರಸಿದ್ಧವಾಗಿ ನಮ್ಮ ಹಿಂದಿನ ಸಂಸ್ಕೃತಿ, ನಿರ್ಮಿತಿಗಳೂ ಅವುಗಳಿಗೆ ಬಂದ ಹಾನಿ ಹರಣೆಯಾದ ಮಂದಿರ ಸ್ತೂಪಗಳೂ ಕಂಡು ನೋಡಬೇಕಾಯಿತು. ಹರಪ್ಪಾ, ಮೊಹೆಂಜದಾರೋ, ಅಜಂತಾ ಮೊದಲಾದ ಗುಹಾ ಚಿತ್ರ ಸ್ಥಾನಗಳೂ ಶಿಲ್ಪ ಕಲಾ ಸ್ಮಾರಕಗಳೂ, ಇಂದು ಜಗತ್ತಿನ ಗಮನವನ್ನು ಎತ್ತ ಸೆಳೆದರೂ ಹಿಂದೂ ದೇಶದ ಉದ್ದಗಲಕ್ಕೂ ಇರುವ ಅನೇಕ ಚಾರಿತ್ರಿಕ ದೇವಾಲಯ, ಸ್ತೂಪ, ಮತ್ತಿತರ ಸ್ಥಳಗಳು ಹಾಳಾಗಿ ಹೋದವು. ಆಗ ಸ್ವಾತಂತ್ರ್ಯ ದೊರಕಿದನಂತರ ಪ್ರಾಚೀನ ವಸ್ತು ಸಂಶೋಧನಾ (Archaelogical Survey Dept) ಇಲಾಖೆಯವರು ಚುರುಕಿನಿಂದ ಕೆಲಸ ಪ್ರಾರಂಭಿಸಿರುವರು. ದಕ್ಷಿಣ ಹಿಂದುಸ್ಥಾನದ ಕೇಂದ್ರವು ಮದರಾಸಿನ ಫೋರ್ಟ್ ಸೆಂಟ್ ಜಾರ್ಜ್ ಕಟ್ಟಡದಲ್ಲಿದೆ. ಇದರ ಸುಪರಿಂಟೆಂಡೆಂಟ್ ತಾರೀಕು ೧೩ ರಲ್ಲಿ ಮಡಿಕೇರಿಗೆ ಬಂದಿದ್ದು ಅವರನ್ನು ಭೆಟ್ಟಿಯಾದಾಗ ಇವರು ಕೊಡಗಿನ ವಿಚಾರದಲ್ಲಿ ತಮ್ಮ ಇಲಾಖೆಯ ಕರ್ತವ್ಯವನ್ನು ವಿವರಿಸಿದರು. ಕೊಡಗಿನಲ್ಲಿಯ ಪ್ರಾಚೀನ ಚಾರಿತ್ರಿಕ ಪ್ರಾಮುಖ್ಯ ಸ್ಥಳಗಳ ವಿಚಾರ ಯಾರಿಗೂ ಏನೂ ತಿಳಿದಿಲ್ಲ, ಸುಮಾರು ೧೮೮೦ ರಲ್ಲಿ ಮಿ. ರೈಸ್ ಒಬ್ಬ ಪರದೇಶೀಯರು ಮಾಡಿದ ಪಟ್ಟಿಯ ವಿನಹ ಆ ಮಾರ್ಗದಲ್ಲಿ ಯಾವುದೇ ಸಂಶೋಧನೆಯಾಗಲಿಲ್ಲ. ಕೊಡಗಿನಂಥಾ ಚಾರಿತ್ರಿಕ ನಾಡಿನಲ್ಲಿ ಅಂಥಾ ಚರಿತ್ರಾರ್ಹ ಸ್ಥಳಗಳಿಲ್ಲವೆಂದಲ್ಲ. ರಾಮಾಯಣ ಮಹಾಭಾರತದ ಕಾಲದಿಂದಲೇ ಇದರ ಕೀರ್ತಿ ಇದೆ. ಕಟ್ಟದ ಇಪ್ಪೆ ಮತ್ತು ಹೇಮಾರ್ಥರುಗಳು ಶ್ರೀರಾಮಚಂದ್ರನಿಂದ ಪ್ರತಿಷ್ಠಿತವಾದ ಬಗ್ಗೆ ಉಲ್ಲೇಖನಗಳಿವೆಯಂತೆ. ಪಾಂಡವರು ಕೊಡಗನ್ನು ಸಂಚರಿಸಿದ ಚಿಹ್ನೆಗಳು ಇನ್ನೂ ಇವೆಯಂತೆ! ಅಲ್ಲದೆ ಚಾರಿತ್ರಿಕವಾದ ಅನೇಕ ಪ್ರದೇಶಗಳಿವೆ. ಪ್ರಾಚೀನ ವಸ್ತು ಸಂಶೋಧನೆ ಮತ್ತು ರಕ್ಷಣಾ ಇಲಾಖೆಯ ಸುಪರಿಂಟೆಂಡೆಂಟರು ಹೇಳುವಂತೆ ಎಣೆಯಿಲ್ಲದ ಸೌಂದರ್ಯದಿಂದ ಒಪ್ಪುತ್ತಿರುವ ಕೊಡಗು ನಾಡಿನಲ್ಲಿ, ಜನರ ಕಾರ್ಯತತ್ಪರತೆಯಿಂದ ಸಾಕಷ್ಟು [illegible] ಹೆತ್ತ ಕೊಡಗಿನ [illegible] ತಾಯಿಯ ಗರ್ಭದಲ್ಲಿ ಬೆಳಕಿಗೆ ಬಾರದ ಅನೇಕ ಚಾರಿತ್ರಿಕ ವಸ್ತುಗಳಿರಬಹುದು. ಇವುಗಳನ್ನೆಲ್ಲಾ ಸಂಶೋಧಿಸಲು ಕೊಡಗಿನಲ್ಲಿ ಒಂದು ಪ್ರಾಚೀನ ವಸ್ತು ಸಂಶೋಧನಾ ಕೆಲಸ ನಡೆಯಬೇಕಾಗಿದೆ. ನಮ್ಮ ಊರಿನ ಚರಿತ್ರೆ ಸಂಸ್ಕೃತಿಗಳ ಭಾಗಗಳಾಗಿ ಕಾಲವಾಹಿನಿಯಲ್ಲಿ ಸಿಕ್ಕಿ ಹೋಗದೆ ಮುಂದಿನ ಪೀಳಿಗೆಗೆ ಬೋಧಪ್ರದವಾಗಿ ಉಳಿಯುವಂತೆ ರಕ್ಷಿಸುವುದು ಕರ್ತವ್ಯವಾಗಿದೆ.

ಶನಿವಾರಸಂತೆಯ ಬಳಿಯ ಜೈನ ದೇವಾಲಯಗಳು, ಸೋಮವಾರಪೇಟೆಯ ಹತ್ತಿರದ 'ಡಾಲ್‌ಮನ್ ಸರ್ಕಲ್', ಮಡಿಕೇರಿಯ ರಾಜ ಸೀಟ್ ಕೋಟೆ, ದಕ್ಷಿಣ ಕೊಡಗಿನ ಅನೇಕ ಪ್ರಾಮುಖ್ಯ ಸ್ಥಳಗಳ ವಿಚಾರ ಅವರು ಹೇಳಿದರು. ರಾಜ ಸೀಟಿನ ರೂಪುಗೆಡಿಸುವಂತೆ ಮನೆ ಕಟ್ಟಿರುವ ವಿಚಾರಕ್ಕೆ ಅವರು ವ್ಯಸನಪಟ್ಟುದಲ್ಲದೆ ಹಳೆಯ ಕೀರ್ತಿ ಪಡೆದ ಸ್ಥಳಗಳಲ್ಲಿ ಹೊಸ ಕಟ್ಟಡ ಕಟ್ಟಲು ಅನುಮತಿ ಕೊಡುವಾಗ ಆಲೋಚಿಸಿ ಕೊಡಬೇಕೆಂದರು. ಆದ್ದರಿಂದ ಈ ವಿಚಾರ ಜನತೆಯಲ್ಲಿ ಸಾಕಷ್ಟು ಪ್ರಚಾರ ಮಾಡಿ ಮತ್ತು ಇಲ್ಲಿಯ ಪ್ರಾಮುಖ್ಯ ಚಾರಿತ್ರಿಕ ಸ್ಥಳಗಳನ್ನು ಗುರುತಿಸಿ ಅವುಗಳನ್ನು ರಕ್ಷಿಸುವ ಬಗ್ಗೆ ಯೋಗ್ಯ ರೀತಿಯ ಒಂದು ಪರಿಶೀಲನೆ ಆಗಬೇಕು. ಇಂಡಿಯಾ ಸರಕಾರದ ಪ್ರಾಚೀನ ವಸ್ತು ಶೋಧನಾ ಮತ್ತು ಸಂರಕ್ಷಣಾ ಇಲಾಖೆಯವರು ಈ ಬಗ್ಗೆ ಪರಿಶೋಧನೆ ನಡೆಸುವರೆಂದೂ, ಇಂಥಾ ಪ್ರಾಮುಖ್ಯ ಸ್ಥಳಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುವರೆಂದೂ ಆಶಿಸಲಾಗಿದೆ.

# ಕೊಡಗು

**ತಾ. ೧೭-೩-೧೯೫೦ನೇ ಶುಕ್ರವಾರ**

## ಪೂರ್ವ ಬಂಗಾಳ.

ಇಲ್ಲಿ ಪಾಕಿಸ್ಥಾನವು ಅನುಸರಿಸುತ್ತಿರುವ ನೀತಿಯು ಭಾರತೀಯರಿಗೆ ದುಃಖದಾಯಕವಾಗಿದೆ. ಪೂರ್ವ ಬಂಗಾಳವು ಅಲ್ಪ ಸಂಖ್ಯಾಕರ ನಿತ್ಯ ನರಕವಾಗಿ ಪರಿಣಮಿಸಿದೆ. ಮತದ ತಳಹದಿಯಲ್ಲಿ ರಚಿಸಲ್ಪಟ್ಟ ಪಾಕಿಸ್ಥಾನವು ಪಶ್ಚಿಮ ದಲ್ಲಿ ಹಿಂದೂಗಳಿಗೆ ವಿಪರೀತ ಕಿರುಕುಳಕೊಟ್ಟು ಲಕ್ಷಾಂತರ ಸಂಖ್ಯೆಯಿಂದ ಹಿಂದೂಗಳು ನಿರಾಶ್ರಿತರಾಗಿ ಭಾರತಕ್ಕೆ ಬರಬೇಕಾಯಿತು. ಅವರಿಗೆ ಯೋಗ್ಯ ವಸತಿ, ಜೀವನ ಮಾರ್ಗ ಏರ್ಪಡಿಸುವ ಕಾರ್ಯ ಇನ್ನೂ ಪೂರ್ತಿಯಾಗಿಲ್ಲ. ಅಷ್ಟರಲ್ಲಿ ಪೂರ್ವ ಬಂಗಾಳದಲ್ಲಿ ಅದೇ ರೀತಿಯ ಪಿಡುಗು ಪ್ರಾರಂಭವಾಗಿದೆ. ಹಿಂದೂಗಳು ಸಾವಿರ ಸಂಖ್ಯೆಯಿಂದ ಭಾರತಕ್ಕೆ ಬರತೊಡಗಿದ್ದಾರೆ. ಪಶ್ಚಿಮ ಪಾಕಿಸ್ಥಾನದಿಂದ ಒಟ್ಟು ಎಲ್ಲ ಹಿಂದೂಗಳನ್ನು ಓಡಿಸಿದಂತೆ ಪೂರ್ವ ಬಂಗಾಳದಿಂದಲೂ ಅವರನ್ನು ಹೊರ ಅಟ್ಟುವ ಪ್ರಯತ್ನ ನಡೆಯುತ್ತಿದೆ. ಆ ಪ್ರಯತ್ನದಲ್ಲಿ ಲೂಟಿ, ದರೋಡೆ, ಮಾನಭಂಗ, ಕಗ್ಗೊಲೆಗಳು ಹಿಂದಿನಂತೆಯೇ ನಡೆದಿವೆ.

ಈ ದುಃಖದಾಯಕ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಯೋಗ್ಯ ಸಹಾಯ ಮಾಡಲು ಪಂಡಿತ ಜವಾಹರರು ಕಲ್ಕತ್ತಕ್ಕೆ ಪ್ರಯಾಣ ಹೋಗಿದ್ದಾರೆ. ನಿರಾಶ್ರಿತರಾಗಿ ಬರುವವರ ದುಃಖ ನಿವಾರಣೆಗಾಗಿ ಸಕಲ ಪ್ರಯತ್ನವನ್ನು ಸರಕಾರ ಮಾಡುತ್ತಿದೆ. ಇಂಥ ಒಬ್ಬೊಬ್ಬ ವ್ಯಕ್ತಿಗಳಿಂದ ನಡೆಯುವ ಕೆಲಸವಲ್ಲ. ಸರಕಾರಕ್ಕೆ ಸರ್ವರ ಬೆಂಬಲ ದೊರೆಯಬೇಕು. ಈ ದೃಷ್ಟಿಯಿಂದ ಪಂಡಿತ ನೆಹರೂರವರು ಜಯಪ್ರಕಾಶ ನಾರಾಯಣರನ್ನು ಆಹ್ವಾನಿಸಿ ಸದ್ಯದ ಬಿಕ್ಕಟ್ಟನ್ನು ಒಗ್ಗಟ್ಟಾಗಿ ಎದುರಿಸುವ ಮಾತುಕತೆ ನಡೆಸಿರುವುದು ಯುಕ್ತವಾಗಿದೆ.

ಪಾಕಿಸ್ಥಾನದ ಈ ವರೆಗಿನ ಕಾರ್ಯಕಲಾಪಗಳನ್ನು ನೋಡಿದರೆ ಅಂತರಾಷ್ಟ್ರೀಯ ದೃಷ್ಟಿಯಿಂದ ಮತ್ತು ತನ್ನ ಜಗತ್ ಶಾಂತಿಯ ಉದಾತ್ತ ಧ್ಯೇಯದ ಕಾರಣದಿಂದ ಗಳಿಸಿದ್ದ ನಾಯಕತ್ವದ ಭಾರತದ ಪರಿಸ್ಥಿತಿಯನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲು ಅದು ಪ್ರಯತ್ನಿಸುತ್ತಿದೆಯೆಂದು ತಿಳಿಯಬಹುದು. ಭಾರತವನ್ನು ರೊಚ್ಚಿಗೆಬ್ಬಿಸಲು ಪಾಕಿಸ್ಥಾನದ ಕೃತ್ಯಗಳು ಪ್ರೋತ್ಸಾಹಿಸುತ್ತಿವೆಯೆಂದಾಗ ಕೆಲವರು ಹೇಳುತ್ತಿರುವಂತೆ ಪಾಕಿಸ್ಥಾನದ ಮೇಲೆ ಯುದ್ಧ ಸಾರಿ ತಕ್ಕ ಪಾಠ ಕಲಿಸಬೇಕೆನ್ನುವದರಲ್ಲಿ ಅರ್ಥವಿಲ್ಲ. ಭಾರತವು ತನ್ನ ಆತ್ಮರಕ್ಷಣೆಯ ಬಗ್ಗೆ ಸದಾ ಸಿದ್ಧವಿರಬೇಕು. ಆದರೆ ಇನ್ನೊಬ್ಬರ ಮೇಲೆ ಕೈಯೆತ್ತಲು ಅವಸರಪಡಬಾರದು.

ಭಾರತದ ಆಂತರಿಕ ಸ್ವಾಸ್ಥ್ಯದೃಷ್ಟಿಯಿಂದಲೂ ಯುದ್ಧ ಕೂಡದು. ಭಾರತದೊಳಗಿರುವ ಅರಾಜಕ ಶಕ್ತಿಗಳು ಇನ್ನೂ ಪೂರ್ಣ ಅಡಗಿಲ್ಲ. ಇಂದು ಕಾಂಗ್ರೆಸ್ ಸರಕಾರದ ಮೇಲೆ ನಡೆಯುತ್ತಿರುವ ಅಪಪ್ರಚಾರಕ್ಕೆ ಯುದ್ಧ ಪರಿಸ್ಥಿತಿಯು ಹೆಚ್ಚಿನ ಪ್ರಚೋದನೆ ಕೊಟ್ಟು ಭಾರತದ ಸ್ಥಿತಿಯು ಚೈನಾ, ಬರ್ಮಾಗಳಂತಾಗಬಹುದು. ಆದ್ದರಿಂದ ಪಾಕಿಸ್ಥಾನದ ವಿರುದ್ಧ ಯುದ್ಧ ಒಂದನ್ನುಳಿದು ಉಳಿದ ಎಲ್ಲಾ ಉಗ್ರ ಕಾರ್ಯಕಲಾಪಗಳನ್ನು ಕೇಂದ್ರ ಸರಕಾರವು ಕೈಗೊಳ್ಳಬೇಕು. ನಮ್ಮ ಸಹೋದರರ ಕೊಲೆ, ಅಪಮಾನವಾಗಿ ಜೀವಿಸುವದೇ ಕಷ್ಟವಾಗಿರುವಾಗ ಯಾವ ಸರಕಾರವೂ ಕೈಕಟ್ಟಿ ಕೂರಲು ಸಾಧ್ಯವಿಲ್ಲ.

ನಿರಾಶ್ರಿತರಾಗಿ ಬರುವವರಿಗೆ ಭಾರತದ ಬಾಗಿಲು ತೆರೆದಿರುವದು. ದೇಶದೊಳಗಿನ ಜಾತೀಯ ಶಾಂತಿ ಕದಡದಂತೆ ಭಾರತವು ಎಚ್ಚರದಿಂದಿರುವುದು.

ಪೂರ್ವ ಬಂಗಾಳದಲ್ಲಿರುವ ಹಿಂದೂಗಳನ್ನೆಲ್ಲಾ ಕಾಪಾಡಿಕೊಳ್ಳುವ ಸೂಚನೆಯು ಹಲವೆಡೆಗಳಲ್ಲಿ ಮಾಡಲ್ಪಟ್ಟಿದೆ. ಅವರನ್ನು ಕರೆಸಿಕೊಂಡು ಇಲ್ಲಿನ ಮುಸ್ಲಿಮರನ್ನು ಇಲ್ಲಿಂದ ಅಲ್ಲಿಗೆ ಕಳುಹಿಸುವದೂ ಅದು ಸಾಧ್ಯವಿಲ್ಲವಾದರೆ ಅವರಿಗೆ ಬೇಕಾಗುವಷ್ಟು ಭೂಪ್ರದೇಶವನ್ನು ಪಾಕಿಸ್ಥಾನದಿಂದ ಪಡೆಯಬೇಕೆಂದೂ ಸೂಚನೆಗಳಿವೆ. ಈ ಸೂಚನೆಗಳಿಗೆ ಪಾಕಿಸ್ಥಾನ ಒಪ್ಪುವುದೋ ಎಂಬುದು ಸಂಶಯದ ಮಾತು. ಈ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ತರಬೇಕೆಂದು ಕೆಲವರ ಸೂಚನೆ ಇದೆ. ಇದರಿಂದ ತಕ್ಕ ನಿರ್ಣಯ ದೊರೆಯುತ್ತದೆ ಎಂಬುದು ಕಾಶ್ಮೀರದ ಪ್ರಶ್ನೆಯಿಂದ ಸ್ಪಷ್ಟವಾಗಿದೆ. ಭಾರತವು ಈ ರೀತಿ ಕಷ್ಟ ಪರಿಸ್ಥಿತಿಯಲ್ಲಿದೆ. ಆಗ ತಾಳ್ಮೆಯನ್ನು ಮೀರಿ ಅತಿರೇಕ ಪಾಕಿಸ್ಥಾನವು ಎಸಗುತ್ತಿದೆ. ಆದರೂ ಭಾರತವು ಹಿಂಸಾತ್ಮಕ ಮಾರ್ಗ ಹಿಡಿಯದೆ ತನ್ನ ಆದರ್ಶ ಮಾರ್ಗದಿಂದ ಸಾಗುವದು. ಅದು ಬಳಸಿದ ದಾರಿ ಅದು ಶಾಂತಿ ಅದೇ ಚಿರಶಾಂತಿಯನ್ನು ತರಬಲ್ಲ ಮಾರ್ಗವೆಂಬುದನ್ನು ಜಗತ್ತು ಮರೆಯಲಾಗದು. ಇಂದಿನಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಕೇಂದ್ರ ಸರಕಾರಕ್ಕೆ ಪೂರ್ಣ ಬೆಂಬಲವನ್ನಿತ್ತು ಅದರ ಕೈಯನ್ನು ಬಲಪಡಿಸುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ.

## ವರ್ತಮಾನ.

ಡಾಕ್ಟರ್ ಮಂಡ್ಯಾಟಿರ ಎಂ. ಚಂಗಪ್ಪನವರು ವೀರರಾಜಪೇಟೆಯಲ್ಲಿ ಸ್ವಂತ ಆಸ್ಪತ್ರೆಯನ್ನು ತೆರೆದಿರುವರು.

ನಿವೃತ್ತರಾಗಲಿರುವ ಕೊಡಗಿನ ಚೀಫ್ ಕಮಿಷನರ್ ಶ್ರೀ ಸಿ. ಟಿ. ಮುದಲಿಯಾರ್ ಇವರಿಗೆ ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ತಾ. ೧೫ ರಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದಾರೆ.

ತಾ. ೨೭-೩-೫೦ ನೇ ಸೋಮವಾರ ಭಗವಂತ್ಸದ ಶ್ರೀರಾಮಮಂದಿರದಲ್ಲಿ ರಾಮನವಮಿ ಉತ್ಸವವನ್ನು ಶ್ರೀ. ಸ್ವಾಮಿ ಸೋಮನಾಥಾನಂದಜೀಯವರ ಅಧ್ಯಕ್ಷತೆಯಲ್ಲಿ ನಡೆಸುವರಾಗಿ ತಿಳಿಯಬರುತ್ತದೆ.

ಸ್ಮಾಲ್ ಫೈವಲ್ ಪರೀಕ್ಷೆಯು ತಾ. ೧೫-೩-೫೦ ರಿಂದ ಪ್ರಾರಂಭವಾಗಿದೆ.

ನಾಗರೀಕರ ಆರೋಗ್ಯಕ್ಕೆ ಹಾನಿಕರವಾದಂಥಾ ಅಂದರೆ ಶೇಕಡ ೬೬ ರಷ್ಟು ನೀರು ಮಿಶ್ರಿತ ಹಾಲು ಮಾರಾಟ ಮಾಡುತ್ತಿದ್ದರಿಂದ ಮಡಿಕೇರಿಯಲ್ಲಿ ಹಾಲು ವ್ಯಾಪಾರ ಮಾಡುವ ಶ್ರೀಗಳಾದ ನಾಂಡೀರ ಬೋಪಯ್ಯ, ಕೃಷ್ಣ, ಜನಾಬ್ ಅಬ್ದುಲ್ ಕರ್ ಇವರು ಮೂರು ಜನರ ಹಾಲನ್ನು ಮಡಿಕೇರಿ ಮುನ್ಸಿಪಾಲಿಟಿ ಸ್ಯಾನಿಟರಿ ಇನ್ಸ್‌ಪೆಕ್ಟರವರು ತಾ. ೧೪ ರಲ್ಲಿ ಹಿಡಿದು ಕೋರ್ಟಿಗೆ ಹಾಜರ್ಪಡಿಸಿ ಇಂಥಾ ಹಾಲು ಮಾರಕೂಡದೆಂದು ಎಚ್ಚರಿಸಿ ಆ ಹಾಲನ್ನು ನಾಶಮಾಡಲಾಯಿತೆಂದು ತಿಳಿಯುತ್ತೇವೆ.

ಕಳೆದ ಫೆಬ್ರವರಿ ತಾರೀಕು ೨೪ ನೇ ಶುಕ್ರವಾರ ದಿನ ಪೊನ್ನಂಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ಸ್ಕೌಟ್ ದಳದವರು ಇರ್ಪಿಗೆ (ಬ್ರಹ್ಮಗಿರಿ ಬೆಟ್ಟಕ್ಕೆ) ವಿಹಾರಾರ್ಥ ಹೋಗಿದ್ದರೆಂದೂ, ಆಗ ಅವರನ್ನು ಶ್ರೀಗಳಾದ ತಿತ್ತಿರಮಡ ಕೆ. ನಂಜಪ್ಪ, ಚಿಜ್ಜಮಾಡ ಎಸ್. ಚಂಗಪ್ಪ ಮತ್ತು ತಿ. ಎ. ರಂಜಪ್ಪ ಇವರುಗಳು ಸತ್ಕರಿಸಿದರೆಂದು ಅಲ್ಲಿನ ಸ್ಕೌಟ್ ಅಧ್ಯಾಪಕರು ತಿಳಿಸುತ್ತಾರೆ.

ತಾ. ೮-೩-೫೦ ರಲ್ಲಿ ಹಾಸನ ಡಿಟೆಕ್ಟಿವ್ ಶಾಖೆ ಇನ್ಸ್‌ಪೆಕ್ಟರ್ ಆದ ಶ್ರೀ ಪುಟ್ಟಯ್ಯನವರು, ಅಲ್ಲಿಂದ ೨೦ ಮೈಲಿ ದೂರದ ಒಂದು ಹಳ್ಳಿಯಲ್ಲಿ ಕಾಳಸಂತೆಯು ಸಿದ್ಧಪಡಿಸಿ ದಾಸ್ತಾನು ಮಾಡಿದ್ದ ಸುಮಾರು ೨೨೦೦ ರೂ. ಬೆಲೆ ಬಾಳುವ ೩೩ ಚೀಲ (೯೯ ಬಂಡಲ್) ಕಾಫಿಯನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಿದರು.

ಕೊಡಗಿನ ಚೀಫ್ ಕಮಿಷನರಾಗಿ ನೇಮಕವಾಗಿರುವ ಲೆ. ಕರ್ನಲ್ ದಯಾಸಿಂಗ್ ಬೇಡಿಯವರು ತಾ. ೨೪ ರಂದು ೨೦ ರಲ್ಲಿ ಬೆಂಗಳೂರಿನಿಂದ ಕಾರಿನಲ್ಲಿ ಬರುವರೆಂದೂ ಸಾಧ್ಯವಾದರೆ ಅದೇ ದಿನ ಇಲ್ಲವೇ ಮಾರಣೆ ದಿನ ಚಾರ್ಜ ವಹಿಸಿಕೊಳ್ಳುವರೆಂದು ತಿಳಿದು ಬಂದಿದೆ.

ದಕ್ಷಿಣ ಹಿಂದೂಸ್ಥಾನದ ರೀಜನಲ್ ಫುಡ್ ಕಮಿಷನರಾದ ಶ್ರೀ ಎಸ್. ಮಹಬೂಬ್ ವಿ ಮೇನನ್‌ರವರು ಮದ್ರಾಸಿನಿಂದ ಈ ತಾ. ೧೧ ರಲ್ಲಿ ಕೊಡಗಿಗೆ ಬಂದು, ಇಲ್ಲಿ ಭತ್ತ ಸಂಗ್ರಹಿಸುವ ಏರ್ಪಾಡನ್ನೂ ಮತ್ತು ಮಿಲ್ಲುಗಳಿಂದ ಅಕ್ಕಿ ತಯಾರಿಸುವ ಏರ್ಪಾಡನ್ನೂ ನೋಡಿಕೊಂಡು ತಾ. ೧೩ ರಲ್ಲಿ ವಾಪಸು ಹೋದರು.

ಪೊನ್ನಂಪೇಟೆ ನಾಡು ಮಕ್ಕೂರು ದೇವಸ್ಥಾನವು ಪಬ್ಲಿಕ್ ದೇವಸ್ಥಾನವಲ್ಲವೆಂದು ಚೀಫ್ ಕಮಿಷನರವರು ಹುಕುಂ ಮಾಡಿರುವರೆಂದು ತಿಳಿಯಬರುತ್ತದೆ.

ಆ. ಕಮಿಷನರವರು ತಾ. ೧೫ ರಲ್ಲಿ ವೀರರಾಜಪೇಟೆಯಲ್ಲಿ ಕೊಡಗಿನ ಅಕ್ಕಿ ಗಿರಣಿ ಮಾಲೀಕರ ಪ್ರತಿನಿಧಿಗಳನ್ನೂ, ಬೆಳೆಸುವವರ ಕೆಲವು ಪ್ರಮುಖರನ್ನೂ ಸೇರಿಸಿ ಅಭಿಪ್ರಾಯ ತೆಗೆದು ಗಿರಣಿ ಮಾಲೀಕರು ಆ ಮೊದಲಿನಂತೆ ಬೆಳೆಸುವವರಿಂದ ಯಾ ಏಜೆಂಟರಿಂದ ಭತ್ತವನ್ನು ನೇರವಾಗಿ ಕೊಂಡುಕೊಳ್ಳಬಹುದೆಂದೂ ಪೊಲೀಸ್ ಕ್ರಮವನ್ನು ಜಾರಿಗೆ ತರಬಾರದೆಂದೂ ತೀರ್ಮಾನಿಸಿರುವರಾಗಿ ತಿಳಿಯಬರುತ್ತದೆ.

### ವಿಚಿತ್ರ

ತಾ. ೯-೩-೫೦ ರಲ್ಲಿ ಮೂಡುಮಂಡಿ ಗ್ರಾಮದ ಕವಟಿ ಮಹದೇವರ ಭಂಡಾರ ಪೆಟ್ಟಿಗೆಯನ್ನು ದೇವರ ಕೊಡಿಮರನಿಲ್ಲುವ ದಿನ ದೇವಸ್ಥಾನಕ್ಕೆ ತಂದು ತೆರೆದು ನೋಡುವಾಗ್ಗೆ, ದೇವರ ಅಂದಾಜು ಮುನ್ನೂರು ರೂಪಾಯಿಯ ನಗಗಳು ಅಪಹರಿಸಲ್ಪಟ್ಟಿದ್ದವೆಂದೂ ಅಲ್ಲಿ ಎರಡು ವ್ಯಕ್ತಿಗಳ ಮೇಲೆ ಎರಡು ದೇವರು ಬರುತಿದ್ದು ಗ್ರಾಮಸ್ಥರು ಆ ದೇವರನ್ನು ಕೇಳುವಾಗ್ಗೆ ಕದ್ದ ಸಾಮಾನು ಕೆಲವು ಕರಗಿಸಲ್ಪಟ್ಟಿದೆಯೆಂದೂ ಮತ್ತೆ ಕೆಲವನ್ನು ಬಟ್ಟೆಯಲ್ಲಿ ಗಂಟುಕಟ್ಟಿ ಒಂದು ಮಾಗದ ಬುಡದಲ್ಲಿ ಬಿಲದೊಳಗೆ ಇಟ್ಟಿದ್ದಾರೆಯೆಂದೂ ಹೇಳಿತಂತೆ! ದೇವರೇ ಅದನ್ನು ತೋರಿಸಿಕೊಡಬೇಕೆಂದು ಗ್ರಾಮಸ್ಥರು ಕೇಳಿದರೆಂದೂ ದೇವರು ಸನ್ನೆಮಾಡಿ ಬರುವಾಗ ದೇವರ ವಿಗ್ರಹ ತೆಗೆದುಕೊಂಡಿದ್ದ ಬ್ರಾಹ್ಮಣನ ಮೈಮೇಲೆ ಬಂದು ಕಾಡಿನೊಳಗೆ ನುಗ್ಗಿ ಸುಮಾರು ಒಂದು ಮೈಲು ದೂರದಲ್ಲಿ ಒಂದು ಮರದ ಬಡದಲ್ಲಿ ಒಂದು ಹುತ್ತವನ್ನು ತೋರಿಸಿ ಅದಕ್ಕೆ ಕೈಹಾಕಿರಿ ಎಂದು ಹೇಳಿತೆಂದೂ ಕೈಹಾಕಿ ನೋಡುವಾಗ್ಗೆ ಬಟ್ಟೆಯಲ್ಲಿ ಗಂಟುಮಾಡಿ ಇಟ್ಟಿದ್ದ ಕೆಲವು ಸಾಮಾನುಗಳು ಸಿಕ್ಕಿದವೆಂದೂ ಗ್ರಾಮಸ್ಥರೊಬ್ಬರು ತಿಳಿಸುತ್ತಾರೆ.

### ಗಮಕ ತರಗತಿ

ಈ ವರ್ಷ ಗಮಕ (ಭಾರತವಾಚನ) ತರಗತಿಯು ಮಡಿಕೇರಿಯಲ್ಲಿ ಏಪ್ರಿಲ್ ೧ನೇ ತಾರೀಖಿನಿಂದ ಆರಂಭವಾಗಿ ೬ ತಿಂಗಳ ಕಾಲ ನಡೆಯುವುದು. ಗಮಕ ಶಿಕ್ಷಣ ಪಡೆಯಲು ಇಚ್ಛಿಸುವವರು ಶ್ರೀ ಎಂ. ಎಸ್. ಅನಂತಸ್ವಾಮಿಯವರಿಗೆ ಬರೆಯುವುದು. ಪ್ರವೇಶ ಉಚಿತ

ನಿಯಮಗಳು:— ೨ ನೇ ಭಾಷೆ ಕನ್ನಡ ... ಕರಾಗಿದ್ದು ಸ್ವಲ್ಪಮಟ್ಟಿಗೆ ಸಂಗೀತ ಮತ್ತು ಕನ್ನಡ ಸಾಹಿತ್ಯ ಜ್ಞಾನವುಳ್ಳವರಾಗಿರಬೇಕು. IV ಫಾರಂ ತರಗತಿಗೆ ಕೆಳಗಿನವರನ್ನು ತೆಗೆದುಕೊಳ್ಳಲಾಗುವುದಿಲ್ಲ.

## ವಾರ್ತೆಗಳು.

ಪೂರ್ವ ಪಾಕಿಸ್ಥಾನದ ಮಿಲಿಟರಿ ಸಂಸ್ಥೆಗೆ ಸೇರಿದವರೆಂದು ಬರ್ದ್ವಾನದಲ್ಲಿ ಕಳೆದ ವಾರ ೬ ಜನ ಮುಸಲ್ಮಾನರನ್ನು ಸೆರೆಹಿಡಿಯಲಾಯಿತು. ೧೧ ಜನರ ಒಂದು ಗುಂಪು ಸಂಶಯಿತ ರೀತಿಯಲ್ಲಿ ಅಡ್ಡಾಡುತ್ತಿದ್ದುದನ್ನು ಹಳ್ಳಿಗರು ಮತ್ತು ಪೋಲೀಸರು ಅವರನ್ನು ಬೆನ್ನಟ್ಟಿ ಅವರಲ್ಲಿ ೬ ಜನರನ್ನು ಹಿಡಿದರು. ಬಂಧಿತರಲ್ಲಿ ಆಕ್ಷೇಪಾರ್ಹವಾಗಿದ್ದ ಪತ್ರಗಳು ದೊರೆತಿವೆ.

ಕೇಂದ್ರ ಶಾಸನ ಸಭೆಯಲ್ಲಿ ಒರಿಸ್ಸಾದ ಹೊಸ ರಾಜಧಾನಿಯನ್ನು ಕಟ್ಟಿಸಲು ೫೪೦ ಲಕ್ಷ ರೂಪಾಯಿ ವೆಚ್ಚವಾಗಲಿದ್ದು ಭಾರತ ಸರಕಾರವು ಅದಕ್ಕಾಗಿ ೧೩೨ ಲಕ್ಷ ರೂಪಾಯಿ ಕೊಡುತ್ತದೆ ಎಂದು ಅರ್ಥಸಚಿವರು ಸಂಸತ್ತಿನಲ್ಲಿ ಹೇಳಿದರು.

# ಓದುಗರ ಓಲೆಗಳು.

### ಶಾಲೆಗಳು ಮತ್ತು ಮತಪ್ರಚಾರ

ಶಾಲೆಗಳು ಮತ ಪ್ರಚಾರದ ಕೇಂದ್ರ ಗಳಾಗಬಾರದು. ವಿದ್ಯೆಯು ಜಾತಿ ಮತಗಳ ಕೆಸರಿನಲ್ಲಿ ಹೂತಿರ ಬಾರದು ಎ [illegible] ಕೇಂದ್ರ ಸರಕಾರವು ಈ ತತ್ವವನ್ನು ಅನುಸರಿಸಿ ಹಿಂದೂದೇಶವನ್ನು ಜಾತ್ಯತೀತ ರಾಷ್ಟ್ರವೆಂದು ಸಾರಿರುವಾಗ ಕೊಡಗಿನ ಕೆಲವು ಶಾಲೆಗಳಲ್ಲಿ ಮತ ಭ್ರಾಂತಿ, ಸಂಕೀರ್ಣ ಮನೋಭಾವಗಳು ತಲೆದೋರುವುದು ವಿಷಾದಕರ. ನಾನು ಕ್ರಿಶ್ಚಿಯನ್ ಮಿಶನರಿ ಶಾಲೆಯೊಂದರಲ್ಲಿ ಓದುತ್ತಿರುವೆನು. ಈ ಶಾಲೆಯಲ್ಲಿ ಕ್ರಿಸ್ತ ಧರ್ಮ ಪ್ರಚಾರ ನಿರಂತರವಾಗಿ ನಡೆಯುತ್ತಿದೆ. ಅದಕ್ಕೆ ನನ್ನ ವಿರೋಧವಿಲ್ಲ. ಆದರೆ [illegible] ದೇವರೇ? [illegible] ಹತ್ತಿರ ಬಂದ [illegible] ಈ ಶಾಲೆಯ ವಿದ್ಯಾರ್ಥಿನಿಯರು [illegible] ಪೂಜೆಯನ್ನು [illegible] (Nuns) [illegible] ಪೂಜೆ ನಡೆಯುತ್ತಿದೆ. ಈ [illegible] ಶಾಲಾ [illegible] ಗಳಿಗೇಕೆ? [illegible] ಪಾತ್ರವೇ [illegible] ಇದರ [illegible] ಆಗಲು [illegible] ವನ್ನು ಕಡ್ಡಾಯ [illegible] ನಡೆಸಿಕೊಳ್ಳಬೇಡವೇ?

'ನೊಂದ ವಿದ್ಯಾರ್ಥಿ'

### ಟ್ಯೂಟೋರಿಯಲ್ ಪರೀಕ್ಷೆ.

ವಿದ್ಯಾರ್ಥಿಯ ವಿದ್ಯಾಯೋಗ್ಯತೆಯನ್ನು ಅಳೆಯಲು ಪರೀಕ್ಷೆಗಳು ಸಾಧನ ಎಂಬ [illegible] ಪರೀಕ್ಷೆಗಳಲ್ಲೇ [illegible] ಶಾಲೆಯಲ್ಲಿ ವಿದ್ಯಾರ್ಥಿಯು ಒಂದು [illegible] ತೇರ್ಗಡೆಯಾಗಬೇಕು. ನಾನೂ ವಿದ್ಯಾರ್ಥಿಯಾಗಿರುವೆನು. ಈಗ ಪರೀಕ್ಷೆ ಹತ್ತಿರ ಬಂದಿರುವುದರಿಂದ ವಿದ್ಯಾರ್ಥಿಗಳಲ್ಲಿ ಕೆಲವರು [illegible] ಚಿಕ್ಕ ಚಿಕ್ಕ ನೋಟ್ ಪುಸ್ತಕಗಳನ್ನು [illegible] ಅವರಲ್ಲಿ ಬರೆಯುತ್ತಿರುವರು! [illegible] ಈ ರೀತಿ ನಕಲು ತೆಗೆಯುವ ಪ್ರವೃತ್ತಿ ಈಗೀಗ ಬಹು ಹೆಚ್ಚು. ಕೆಲವರು ವಿದ್ಯಾರ್ಥಿಗಳಾದರೂ ಈ ರೀತಿ ತೇರ್ಗಡೆಯಾಗುವವರೆಂದು ಕೇಳಬಹುದು. ಪರೀಕ್ಷೆ ಹತ್ತಿರ ಬಂದಾಗ ಇಂಥವರ ಉಪಟಳ ಬಲವಾಗುತ್ತದೆ. ಪರೀಕ್ಷೆ [illegible] ಬಗೆಗಳನ್ನು [illegible] ಬರೆಯುತ್ತಾರೆ! [illegible] ನಕಲು ಹೊಡೆಯಲು ಸಹಾಯ ಕರುಣೆ! [illegible] ನಕಲು ಹೊಡೆಯುವುದರಲ್ಲಿ [illegible] ಈ ರೀತಿ ಪರೀಕ್ಷೆಯಲ್ಲಿ [illegible] ನಕಲು ಹೊಡೆಯುವ [illegible] ಪರೀಕ್ಷೆಯು [illegible] ಒಂದು [illegible] ವಿನಹ ಬೇರಿಲ್ಲ.

'ಗಿರಿಗಿಟ್ಟಿ'

### ಪ್ರಯಾಣಿಕರ ಕೇಳಿಕೆ

ಕೊಡಗಿನ ಹಲವು ರಸ್ತೆಗಳಲ್ಲಿ [illegible] ಬಸ್ ಪ್ರಯಾಣದಲ್ಲಿ [illegible] ಪೆಟ್ರೋಲ್ [illegible] ಬೀಡಿ ಸಿಗರೇಟು [illegible] (Smoking Prohibited) ಎಂಬ [illegible] ಪೆಟ್ರೋಲ್ [illegible] ಹೊಗೆ [illegible] ಇದಲ್ಲದೆ [illegible] ಬಸ್ಸಿನಲ್ಲಿ [illegible] ಹಿಂದಿನ ಸೀಟು [illegible] ಮುಂದುಗಡೆ [illegible] ಪ್ರಯಾಣಿಕರ [illegible] ಸಂಚಾರದ [illegible] ದಲ್ಲಿ [illegible] ಪ್ರಯಾಣಿಕರ ಆರೋಗ್ಯ [illegible] ನೇರವಾಗಿ [illegible]!

ಮುಖ್ಯವಾಗಿ [illegible] ಪ್ರಯಾಣಿಕರ [illegible] ಬಸ್ ಮಾಲೀಕರು ಮತ್ತು ಸರಕಾರದವರೊಡನೆ ಪ್ರಯಾಣಿಕರ ಕೇಳಿಕೆಗಳಿವು. (೧) ಹಿಂದಿನ ಸೀಟು [illegible] (೨) ಹೊಗೆಬತ್ತಿ [illegible] (೩) ಬಸ್ ಮೋಟು [illegible] ಪಾಲಿಸಿ. ಈ ಕೇಳಿಕೆಗಳಿಗಾಗಿ ಮಾಲಿಕರು ಹಾಗೂ ಸರಕಾರ [illegible] ಅವಶ್ಯವಿಲ್ಲ [illegible] ಪೋಲೀಸ್ [illegible] ಕೆಲವು [illegible] ಸುಧಾರಣೆಗೆ ಸರಕಾರಕ್ಕೆ [illegible] ಆದರೆ ಈ ಮೇಲಿನ ಕೇಳಿಕೆಗಳಿಗಾಗಿ ಹಣ ಬೇಡ. ಖರ್ಚಿಲ್ಲದೆ [illegible] ಸಹಾನುಭೂತಿಯನ್ನು ಬಸ್ ಮಾಲಿಕರೂ ಹಾಗೂ ಸರಕಾರವೂ ವಹಿಸುತ್ತೇವೆ ಅತಿಬಹುದೆ?

'ಗೋರಂ'

### ರಿಪಬ್ಲಿಕ್ ದಿನಾಚರಣೆ

ತಾ. ೧೭-೩-೫೦ ರ 'ಕೊಡಗು' ಪತ್ರಿಕೆಯಲ್ಲಿ [illegible] ಉಪಾಧ್ಯಾಯರುಗಳ ವಿಷಯವಾಗಿ ಒಬ್ಬರ ಅಭಿಪ್ರಾಯವನ್ನು [illegible] ಓದುಗರ ಓಲೆಗಳು [illegible] ತಾ. ೨೬-೧-೫೦ರ [illegible] ಈ ಶಾಲೆಯ [illegible] ಎಂಬುದು ನಿಜವಲ್ಲ. ರಿಪಬ್ಲಿಕ್ ದಿನ [illegible] ಶಾಲೆಗೆ [illegible] ಅಕ್ಕಪಕ್ಕದ ಶಾಲೆಗಳಿಗೂ ಬಟವಾಡೆ ಮಾಡಿದರು. ಈ ಶಾಲೆ [illegible] ಬಟವಾಡೆ [illegible] ಸಾಯಂಕಾಲ [illegible] ಹಂಚಲು [illegible] ಪಡೆದ ೫೦ ರೂಪಾಯಿಗಳನ್ನು [illegible] ತಾ. ೭೬-೧-೫೦ ರಲ್ಲಿ [illegible] ಈ ವಿಷಯ [illegible] ೧೨೨ ಆಗಿತ್ತು. [illegible] ಸಾರ್ವಜನಿಕರಿಗೆ [illegible] ಈ ದಿವಸ ಆದಷ್ಟು ಪ್ರಯತ್ನಪಟ್ಟು ದಿನಾಚರಣೆಯನ್ನು ವಿಜೃಂಭಣೆಯಿಂದ [illegible] ನಮ್ಮ ಆದರ್ಶವಾಗಿದೆ [illegible] ಎಂಬುದನ್ನು ಎಲ್ಲರೂ [illegible] ಮಾಡಬೇಕು. ಮತ್ತು ಜವಾಬ್ದಾರಿಕೆ [illegible] ಕೆಲಸ ಮಾಡುವುದು ಕುಲಧರ್ಮ, [illegible] ಕೆಲಸ ಮಾಡುವುದಕ್ಕೆ [illegible] ಕುಲಧರ್ಮ ಎಂದು ನೋಡಬೇಕು.

ಹಾಜರಿದ್ದವ.

## ವಾಲಾ ಉತ್ಸವ.

ತಾರೀಕು ೧೧-೩-೫೦ ರ [illegible] ಗಂಟೆಗೆ [illegible] ಶಾಲೆಯಲ್ಲಿ [illegible] ವಾರ್ಷಿಕ ಮಹಾಸಭೆಯು ನಡೆಯಿತು. ಜಿಲ್ಲಾ ವಿದ್ಯಾಧಿಕಾರಿಗಳವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. [illegible] ಮತ್ತು ಇತರ ನೆರೆಯ [illegible] ಗ್ರಾಮಗಳ ಜನರು ಅಂದಾಜು ೫೦೦ ಕ್ಕೆ [illegible] ಹಾಜರಿದ್ದರು. ಅಲ್ಲಿ ಚರ್ಚಿಸಿದ [illegible] ವಿಷಯಗಳು [illegible] ಶಾಲೆಯನ್ನು [illegible] ಶಾಲೆಯನ್ನಾಗಿ [illegible] ಶಾಲೆಯ [illegible] ೩,೦೦೦ [illegible] ಅಧ್ಯಕ್ಷರು [illegible] ಸ್ಥಳೀಯ [illegible] ಸಂಬಂಧಿಸಿದ [illegible] ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ [illegible] ಗೊಂಡಿತು.

## ಮೈ. ಕಾಂಗ್ರೆಸ್ ಅಧ್ಯಕ್ಷತೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ [illegible] ರನ್ನು [illegible] ಕಾಂಗ್ರೆಸ್ [illegible] ಚುನಾಯಿಸಿದರು.

ಶ್ರೀ [illegible] ಅವರನ್ನು [illegible] ಶ್ರೀ ಎಸ್. [illegible] ೫೫ [illegible] ಬಂದವು.

### ORANGE TREES FOR SALE.

10.000 good healthy orange trees up to 3 years age are available in the nurseries of Pollibetta Estate. These can be inspected at any time by prior arrangement. Price Rs. 15 a hundred.

## ಕೃತಜ್ಞತಾವಂದನೆ.

ಫೆಬ್ರವರಿ ತಾರೀಕು ೭ರಲ್ಲಿ ಶಿವಾಧೀನರಾದ ನನ್ನ ಪತಿಯ ಅಕಾಲ ಮರಣದಿಂದ ನನಗುಂಟಾದ ಅಪಾರ ದುಃಖದ ಕಾಲಕ್ಕೆ ಖುದ್ದಾಗಿ ಬಂದು ಮತ್ತು ತಮ್ಮ ಸಂತಾಪಸೂಚಕ ಪತ್ರಗಳ ಮೂಲಕ ನನ್ನ ದುಃಖದಲ್ಲಿ ಭಾಗಿಗಳಾದ ಬಂಧು, ಇಷ್ಟ ಮಿತ್ರರಿಗೆ ಪ್ರತ್ಯೇಕ ವಂದನಾರ್ಪಣೆಯನ್ನರ್ಪಿಸಲು ಅಶಕ್ತಳಾಗಿರುವದರಿಂದ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಈ ಮೂಲಕ ಅರ್ಪಿಸುತ್ತೇನೆ.

ಮಿಸೆಸ್ ಎಂ. ಬಿ. ಗಣಪತಿ.
ನೀಲಂಬೂರು.

## ಬಹುಮಾನ.

ನನ್ನ ಬಾಪ್ತು ಒಂದು ಒಳ್ಳೆ ಹಸು ಮಾರ್ಚಿ ತಾರೀಕು 7ನೇ ಮಂಗಳವಾರ ದಿನ ಕಾಣೆಯಾಗಿದೆ. ಕೆಂದ ವರ್ಣ, ಸುಮಾರು 3 ಅಡಿ ಎತ್ತರ, ಬಲದ ಕೊಂಬು ಮುರಿದು ಹೋಗಿದೆ. ಎಡದ ಕೊಂಬು ಸುಮಾರು ಮುಕ್ಕಾಲು ಅಡಿ ಉದ್ದವಾಗಿ ಸ್ವಲ್ಪ ಎಡಕ್ಕೆ ಬಾಗಿದೆ. ಅದನ್ನು ಪತ್ತೆ ಹಚ್ಚಿ ಈ ಕೆಳಗಿನ ವಿಳಾಸಕ್ಕೆ ತಿಳಿಸಿದಲ್ಲಿ ರೂ. 5/- ಬಹುಮಾನ ಕೊಡಲಾಗುವುದು.

ಪುಟ್ಟಿಚಂಡ ಬಿ ಮೇದಪ್ಪ,
ಬೆಳ್ಳಿಯಮಾಡು, ವೀರಾಜಪೇಟೆ.


## ಡಾ. ಎಂ. ಎಂ. ಚಂಗಪ್ಪ

ಎಂ. ಬಿ., ಬಿ. ಎಸ್.

ಇವರು ತಮ್ಮ ವೈದ್ಯಕೀಯ
ಸಲಹಾ ಕೇಂದ್ರ ಮತ್ತು
ಔಷಧಾಲಯವನ್ನು
ವೀರಾಜಪೇಟೆಯಲ್ಲಿ
3-1 ತೆರೆದಿರುವರು

## ಬೇಕಾಗಿದೆ.

### ಜಂಗಲ್ ಕಾಕ್ ನೆಕ್ಸ್

ದೊಡ್ಡ ನೆಕ್ಸುಗಳು—ಸೈಜು ಸುಮಾರು 6 ಇಂಚು × 4 ಇಂಚಿನವುಗಳಿಗೆ ಪ್ರತಿಯೊಂದರ ರೂ 1/-ರಂತೆ ಕ್ರಯ ಕೊಡಲಾಗುವುದು. ಚಿಕ್ಕವಕ್ಕೆ ದರ್ಜೆಯ ಮೇರೆ ಬೆಲೆ ಕೊಡಲಾಗುವುದು. ಇವುಗಳನ್ನು ರಿಜಿಸ್ಟರ್ಡ್ ಪಾರ್ಸಲುಗಳ ಮೂಲಕ ಈ ಕೆಳಗಿನ ಅಡ್ರೆಸ್ಸಿಗೆ ಕಳುಹಿಸಿರಿ. ಅವುಗಳ ಬೆಲೆಯು ಮನಿಯಾರ್ಡರು ಮೂಲಕ ಮರು ಟಪಾಲಿನಲ್ಲಿ ನಿಮಗೆ ದೊರೆಯುವದು.

D. H. Thangam & Co.,
*82. Thambu Chetty Street,*
4-3 *G. T Madras.*


## ಪ್ರಕಟಣೆ.

ಕೊಡಗು ಪಂಚಾಯಿತಿ ಇಲಾಖೆಗೆ ಸೇರಿದ ಮಡಿಕೇರಿಯ ನಾಡಿನಾಲ್ಕುನಾಡು ತಾಲೋಕುಗಳ ಪರ ಮೆಂಬರುಗಳಾಗಿದ್ದ ರಾವುಬಹದ್ದೂರ್ ಪಿ. ಎ. ಚಂಗಪ್ಪನವರ ಮತ್ತು ಶ್ರೀ ಎಂ. ರಘುನಾಥಯ್ಯನವರ ಮತ್ತು ಎಡೆನಾಲ್ಕುನಾಡು ಕಿಗ್ಗಟ್ಟುನಾಡು ತಾಲೋಕುಗಳ ಪರ ಮೆಂಬರಾಗಿದ್ದ ಶ್ರೀ ಬಿ ಐ. ಕರುಂಬಯ್ಯನವರ ಮೆಂಬರುತನದ ಅವಧಿಯು ಪೂರೈಸಿದರಿಂದ ಸದರಿ ತಾಲೋಕುಗಳ ಪರ ಮೆಂಬರಾಗಲು ಇಚ್ಛೆಯುಳ್ಳ ಉಮೇದುವಾರರು ಆ ಬಗ್ಗೆ ಇಲಾಖಾ ಪ್ರೆಸಿಡೆಂಟರವರ ಹೆಸರಿಗೆ ತಾರೀಕು 1-4-50ರ ಒಳಗೆ ಅರ್ಜಿ ಬರೆದುಕೊಳ್ಳತಕ್ಕದ್ದು. ಅವಧಿ ದಾಟಿ ಬಂದ ಅರ್ಜಿಯನ್ನು ಅಂಗೀಕರಿಸುವದಿಲ್ಲ.

ಮಡಿಕೇರಿ ನಾಡಿನಾಲ್ಕುನಾಡು ತಾಲೋಕುಗಳ ಪರ ಅರ್ಜಿ ಮೇರೆ ತಾರೀಕು 7-4-50ರಲ್ಲು ಮಡಿಕೇರಿ ದೇವಸ್ಥಾನದ ಹಾಲಿನಲ್ಲು ಮಧ್ಯಾಹ್ನ 12 ಗಂಟೆಯಿಂದ 5 ಗಂಟೆ ವರೆಗೆ ಮತ್ತು ವೀರಾಜಪೇಟೆ ಗಣಪತಿ ದೇವಸ್ಥಾನದ ಬಳಿ ಎಡೆನಾಲ್ಕುನಾಡು ಕಿಗ್ಗಟ್ಟುನಾಡುಗಳ ಪರ ಅರ್ಜಿ ಮೇರೆ ತಾ 12-4-50ರಲ್ಲು ಮಧ್ಯಾಹ್ನ 12 ಗಂಟೆಯಿಂದ 5 ಗಂಟೆಯ ವರೆಗೆ ಚುನಾವಣೆ ಬಗ್ಗೆ ಓಟ್ಸ್ ರಿಕಾರ್ಡ್ ಮಾಡಲಾಗುತ್ತೆ. ಓಟರುಗಳ ಪಟ್ಟಿಯಲ್ಲಿ ಹೆಸರು ದಾಖಲು ಮಾಡಿಸಿಕೊಂಡವರೆಲ್ಲರೂ ಓಟ್ ಕೊಡಬಹುದು.

ಮಡಿಕೇರಿ, ಸಿ. ಬಿ. ಮುದ್ದಪ್ಪ.
16-3-50 ಪ್ರೆಸಿಡೆಂಟ್.


## ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು
ಅತ್ಯುತ್ತಮ ಮಾದರಿಯ ಬನರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು
ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಬಟ್ಟೆ ತೆಗೆಯುವವರು ಈ ಪತ್ರಿಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ಉಚಿತ ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ಪಕ್ಕಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
12-9 ವೀರಾಜಪೇಟೆ (ಕೊಡಗ)

## ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಆರ್ಡರ್ ವಹಿಸಿದ
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ವಾ ಬ್ರದರ್ಸ್ ಎತ್ತಿದ ಕೈ!

ಪಟ್ವಾ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
52-10 ಟೌನ್‌ಹಾಲಿನ ಎದುರು, ಮೈಸೂರು.

## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

### ಫ್ರೇಜರ್ ಪೇಟೆ.

### ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಹಾಳಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, ತಾ. 30-9-49 } ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

## THE WARDEN INSURANCE CO., Ltd.

**Head Office: Bombay.**

**LIFE, FIRE, ACCIDENT, MOTOR & W C. INSURANCES.**

*Managing Director:* – **S. H. THAKER.**

| | |
|---|---|
| Business in force | Rs. 5,00,00,000 |
| Assets | ,, 1,00,00,000 |
| Income | ,, 35,00,000 |

Also **LOCAL MANAGERS OF**
**THE LONDON GUARANTEE & ACCIDENT CO., Ltd.**
(Incorporated in England)
Assets Exceed Rs. 10,00,00,000
a Subsidiary Company of
**THE PHOENIX ASSURANCE CO. Ltd.**
(One of the Largest Assurance Companies in the World)
Assets Exceed Rs. 45,00 00,000
Transact **FIRE INSURANCE**
Enquiries for representation solicited.
***Apply to:***

**Chief Agency Office** *or* A. S. Aiyappa,
*Virajpet (Coorg)* *Branch Secretary,*
*Gandhinagar,*
*BANGALORE CITY*

## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG Apply today:

**K. M Bopaiah, Esq.,**
*Branch Secretary for Mysore & Coorg,*
*85 Sultanpet, BANGALORE 2.*

*Head Office:* **BANGALORE.**
26-1

## ಸಾರಾಯಿ ಕೂಪನುಗಳನ್ನು ಪಡೆದ

# ಮುಸ್ಲಿಂ ಬಾಂಧವರಲ್ಲಿ ವಿನಂತಿ

ಇಸ್ಲಾಂ ಧರ್ಮದ ಪ್ರಕಾರ ನಿಶಾ ಸೇವನೆ ಮಾಡಬಹುದೇ? ನಿಶಾ ಸೇವನೆಯು ತನ್ನ ಧರ್ಮಕ್ಕೆ ವಿರೋಧವಾಗಿದ್ದು, ಧರ್ಮವನ್ನುಲ್ಲಂಘಿಸಿ ನಿಶಾ ಸೇವನೆ ಮಾಡುವ ಇಸ್ಲಾಂ ಅನುಯಾಯಿಗಳು ಜಾತಿಭ್ರಷ್ಟರಾಗುವುದಿಲ್ಲವೇ? ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಸಾಮೂಹಿಕ ಸ್ವಾತಂತ್ರ್ಯವನ್ನು ಪ್ರೀತಿಸುವ ತಮ್ಮ ಜನಾಂಗವು ಯಾವ ಪ್ರತೀಕಾರವೂ ಇಲ್ಲದೆ ಇಂಥಾ ನಿಶಾಸೇವನೆಯನ್ನು ಸಮೂಹದಲ್ಲಿರಿಸಿಕೊಂಡಿರುವುದು ಸಾಧ್ಯವೇ? ಸ್ವಭಾವತಃ ಕುಡುಕರಾಗಿರುವವರನ್ನು ಕುಡುಕತನದಿಂದ ತಪ್ಪಿಸಲು ಯಾವ ಜನಾಂಗಕ್ಕೂ ಸಾಧ್ಯವಾಗದ ಪಕ್ಷ, ಅಂಥವರಿಗೆ ಪೂರ್ತಿ ಪಾನನಿರೋಧ ಶಾಸನವು ಜಾರಿಗೆ ಬರುವ ವರೆಗೆ ಒಂದು ರೀತಿಯ ರಿಯಾಯಿತಿಯನ್ನು ತೋರಿಸಬಹುದೆಂಬುದು ಅನ್ಯೋನ್ಯ. ಆದರೆ ಆ ದ ಕುಡುಕರಿಗಿಂತ ಕುಡುಕರ ಪ್ರೇರಣೆಯಿಂದ ಕುಡಿತವನ್ನು ಕಲಿಸಿ ಮಾಡಲು ಹೊರಟರೆ ಅವರಾ ಕುಡುಕರ ಇಚ್ಛೆಯಂತೆ ಅವರಿಗೆ ಸಾರಾಯಿ ಕೂಪನುಗಳು ಇಳಿವರೆ ಉಂಟಾಗುವದನ್ನು ಅಡ್ಡಿ ದ ಇಳಿಯದ ರೀತಿಯಲ್ಲಿ ತಡೆಯಲು ಸಾಧ್ಯವಿಲ್ಲವೇ? ಜನಾಂಗದ ಹಾಗೂ ದೇಶದ ಏಳಿಗೆಗಾಗಿ ಸ್ವಲ್ಪವೂ ವಿಳಂಬ ಮಾಡದೆ ಜಾಗ್ರತೆಯಾಗಿ ಪರಿಸ್ಥಿತಿಯನ್ನು ನಿಮ್ಮ ಧರ್ಮದ ಹೆಸರಿನಲ್ಲಿ ಕೈಗೊಳ್ಳಿರೆಂದು ನನ್ನ ಪ್ರಾರ್ಥನೆ. ನಮ್ಮ ನಿಮ್ಮ ಪ್ರಯತ್ನಕ್ಕೆ ಸರ್ವರ ಬೆಂಬಲವೂ ದೊರೆತಲ್ಲದೆ ಸರ್ವರ ಸಹಾನುಭೂತಿಯೂ ಇರುವುದೆಂಬುದರಲ್ಲಿ ಅನುಮಾನವಿಲ್ಲ.

ಕಳೆದ ವರ್ಷದಿಂದ ಕೊಡಗಿನಲ್ಲಿ ಸಾರಾಯಿ ನಿಯಂತ್ರಣ ಪದ್ಧತಿಯು ಜಾರಿಗೆ ಬಂದಿರುವ ವಿಷಯ ಎಲ್ಲರಿಗೂ ತಿಳಿದೇ ಇರುತ್ತದೆ. ಈ ಪದ್ಧತಿಯಿಂದ ಬಡವರು ಧನಿಕರೆನ್ನದೆ ಎಲ್ಲರಿಗೂ ಆರೋಗ್ಯಕರವಾದ ಅದೆಷ್ಟೋ ಪ್ರಯೋಜನಗಳ ಗಿರುತ್ತವೆಂಬುದರಲ್ಲಿ ಸಂಶಯವಿಲ್ಲ. ಬಡವರ ಆರ್ಥಿಕ ಸ್ಥಿತಿಯು ಸ್ವಲ್ಪಮಟ್ಟಿಗಾದರೂ ಸುಧಾರಿತವಾಗಿದೆ ಎಂಬುದರಲ್ಲಿ ಯಾವ ಚರ್ಚೆಗೂ ಅವಕಾಶವಿಲ್ಲ. ಅಪರಾಧ ಸಂಗತಿಗಳೂ ಇರಲಾರವು. ವಿಶೇಷವಾಗಿ ಪೋಲೀಸು ಇಲಾಖೆಗೆ ಎಷ್ಟೋ ವ್ಯಾಜ್ಯಗಳು ಕಡಿಮೆಯಾಗಿವೆ. ಕೇವಲ ಹಿಂದುಳಿದ ಹರಿಜನರು ಇದರ ಫಲವನ್ನು ಯಶಸ್ವಿಯಾಗಿ ಅನುಭವಿಸುತ್ತಲಿರುವರು. ಅಂಕೆ ಸಂಖ್ಯೆಗಳಿಂದ ಉದಾಹರಿಸುವುದಾದರೆ, ನಾಡಿಕೇರಿಯ ಒಂದು ಸಾರಾಯಿ ಡಿಪ್ಪೋವನ್ನು ಗಣನೆಗೆ ತೆಗೆದುಕೊಳ್ಳೋಣ. ಈ ಡಿಪ್ಪೋವಿನಲ್ಲಿ ಕಳೆದ ವರ್ಷದಲ್ಲಿ ಇದ್ದ ಅಂದಾಜು ೨೨೦೦ ಸಾರಾಯಿ ಪರ್ಮಿಟ್ಟುದಾರರ ಪೈಕಿ ಹೆಚ್ಚೆಂದರೆ ೩೦ ಹರಿಜನ ಪರ್ಮಿಟ್ಟುದಾರರಿದ್ದಿರಬಹುದು. ಮತ್ತು ೨೦ ಕ್ಕಿಂತ ಹೆಚ್ಚಾಗಿ ಮುಸ್ಲಿಂ ಪರ್ಮಿಟ್ಟುದಾರರಾಗಲಿರಲಿಲ್ಲ. ಈ ವರ್ಷದ ಮುಸ್ಲಿಂ ಪರ್ಮಿಟ್ಟುದಾರರ ಸಂಖ್ಯೆಯೇ ಈ ಲೇಖನದ ಮೂಲವಾಗಿದೆ.

ಈ ವರ್ಷ ಮಡಿಕೇರಿ ಸಾರಾಯಿ ಡಿಪ್ಪೋವಿನಿಂದ ಸಾರಾಯಿಯನ್ನು ರೇಶನ್ ಮೂಲಕ ಹೊಂದಲು ಈ ವರೆಗೆ ಬಂದಿರುವ ಅಂದಾಜು ೬೦೦ ಅರ್ಜಿಗಳಲ್ಲಿ ಸಾಧಾರಣವಾಗಿ ೩೨೦ ಅರ್ಜಿಗಳು ಮುಸ್ಲಿಂ ಬಾಂಧವರಿಂದಲೇ ಬಂದಿದೆಯಾಗಿ ಪದಂತಿಯಿದೆ. ಇದೆಂತಹ ನಾಚಿಕೆಗೇಡು! ಆ ಪಾಕ ಜನಾಂಗವು ಕುಡಿಯುವುದನ್ನು ಬಿಡುತ್ತಿರುವಲ್ಲ, ಕುಡುಕರಲ್ಲದವರು ಕುಡಿಯಲು ಪ್ರಾರಂಭಿಸಿರುವರಲ್ಲವೇ? ಇಡೀ ಮುಸ್ಲಿಂ ಜನಾಂಗಕ್ಕೇ ಇದರಿಂದ ಒಂದು ಅಪಕೀರ್ತಿಯಲ್ಲವೇ? ಈ ಅರ್ಜಿ ಬರೆಕೊಂಡಿರುವವರೆಲ್ಲರೂ ಸಾರಾಯಿಯನ್ನು ಕುಡಿಯುವವರೇ? ಹಾಗಿದ್ದಲ್ಲಿ ಇಷ್ಟೊಂದು ಜನರು ಗತಿಸಿದ ವರ್ಷದಲ್ಲಿ ಎಲ್ಲಿದ್ದರು? ಇಲ್ಲಿಯೇ ಇದ್ದಲ್ಲಿ ಏಕೆ ಆಗ ಪರ್ಮಿಟ್ಟುಗಳನ್ನು ಹೊಂದಿಕೊಂಡಿರಲಿಲ್ಲ? ಈಗ ಏತಕ್ಕಾಗಿ ಪರ್ಮಿಟ್ಟುಗಳನ್ನು ಪಡೆಯಲು ಅಪೇಕ್ಷಿಸಿರುವರು? ಎಂಬಿವೇ ಮೊದಲಾದ ಪ್ರಶ್ನೆಗಳು ಪ್ರತಿಯೊಬ್ಬನಲ್ಲೂ ಉದ್ಭವಿಸ ಬೇಕಾದುದು ಸ್ವಾಭಾವಿಕ. ಈ ರೀತಿಯಿಂದ ಬಿಡದಾಗಿ ಇನ್ನೂ ಬರುತ್ತಿರುವ ಮುಸ್ಲಿಮರ ಸಾರಾಯಿ ಅರ್ಜಿಗಳಿಗೆ ಕಾರಣವೇನಿರಬಹುದು? ಇದಕ್ಕೆ ಕಾರಣವಿಲ್ಲದಿಲ್ಲ. ಬೇಕಷ್ಟು ಕಾರಣಗಳಿರಬಹುದು. ಅವುಗಳಲ್ಲಿ ಒಂದೇ ಒಂದು ಮುಖ್ಯ ಕಾರಣವೆಂದರೆ ಕಳ್ಳಸಂತೆಯೆಂದು ಹೇಳಬಹುದು.

ಸಾಧಾರಣವಾಗಿ ಈಗಿರುವ ಪದ್ಧತಿ ಮೇರೆಗೆ, ಎರಡು ಮೂರು ಜನ ಈ ವ್ಯಾಪಾರದಲ್ಲಿ ನುರಿತ ಮುಸ್ಲಿಮರ ಮೂಲಕ ಎಲ್ಲಾ ಅರ್ಜಿಗಳಿಗೂ ಕಾರಣರು ಎಂದು ತಿಳಿದು ಬರುತ್ತದೆ. ಈ ವ್ಯಾಪಾರಕ್ಕಾಗಿ ಯಾವ ಗೋಷ್ಠಿಯೂ ಇಲ್ಲದೆ ಏನನ್ನೂ ಅರಿಯದ ಅನೇಕರಿಂದ ಅರ್ಜಿಗಳನ್ನು ಬರೆಸಿ, ಪ್ರತಿ ಅರ್ಜಿಗೂ ಕೊಡಬೇಕಾದ ರುಸುಮನ್ನೂ ಸಹ ಇವರೇ ಕಟ್ಟುವುದಾಗಿದೆಯಂತೆ! ಈ ವಿಚಾರವು ಈಗಾಗಲೇ ಪೂರ್ತಿಯಾಗಿ ತಿಳಿದಿಲ್ಲವಾದರೂ ನಾಲ್ಕೈದು ಜನರ ಸರಕಾರದವರ ತಿಳುವಳಿಕೆಗೆ ಬಾರದಿರುವುದಿಲ್ಲ. ಸ್ವಪ್ರಯೋಜನಕ್ಕಾಗಿ ಏನೂ ತಿಳಿಯದವರನ್ನು ಬಲಿಕೊಡುವ ಇಂಥಾ ಧೂರ್ತತನವು ಖಂಡನೀಯವಾಗಿದೆ. ಅಂಥವರನ್ನು ಹಿಡಿಯಲು ಮತಾಭಿಮಾನಿಗಳೂ, ದೇಶಾಭಿಮಾನಿಗಳೂ ಆದ ಹಿರಿಯ ಮಂದಿ ಬರಬೇಕಾಗಿದೆ. ಪಾನನಿರೋಧವನ್ನು ಜಾರಿಗೆ ತರಲಿರುವ ನಮ್ಮ ಸರಕಾರವು ಈ ಚಳುವಳಿಯನ್ನು ಬಿಡಿಸಲು ಮತ್ತು ನಿಮ್ಮ ಧರ್ಮವನ್ನು ರಕ್ಷಿಸಲು ನೆರವಾಗದಿರದು.

ತನ್ನ ಬಾಜಿ ಮುಂಬರುಗಳ ಗಲೀ, ಸುಖಿಗಳಾಗಲೀ ಆ ಇತರ ನಂಬಿಗಳಾಗಲೀ ನಿಮ್ಮವರ ಸಾರಾಯಿ ಅರ್ಜಿಗಳ ಗೂಢಾರ್ಥವನ್ನರಿತು ಶೀಘ್ರವಾಗಿ ಪರಿಶೀಲನೆಯನ್ನು ನಡೆಸುವರಾಗಿ ನಂಬಿಕೆ ಇದೆ. ಅನಾವಶ್ಯವಾಗಿ ಬೇರೆ ಬೇರೆ ಸ್ವಾರ್ಥಪರರ ಉಪಯೋಗಕ್ಕಾಗಿ ಅಥವಾ ಕಳ್ಳಸಂತೆಯಲ್ಲಿ ಮಾರಾಟಮಾಡಲು ಸಾರಾಯಿಗೆ ಅರ್ಜಿಗಳನ್ನು ಬರೆಕೊಂಡವರು ಈಗಲಾದರೂ ಪಶ್ಚಾತ್ತಾಪಪಟ್ಟು ಮುಂದೆ ಬಂದು ತಮ್ಮ ತಮ್ಮ ಅರ್ಜಿಗಳ ಮೇರೆ ದೊರೆಯುತ್ತಿರುವ ಪರ್ಮಿಟುಗಳನ್ನು ವಜಾ ಮಾಡಿಸಿಕೊಂಡಲ್ಲಿ ಅವರ ಸದ್ವರ್ತನೆಗಾಗಿ ಜನತೆಯು ಅವರನ್ನು ಕೊಂಡಾಡುವುದು, ಸರಕಾರವು ಕ್ಷಮಿಸುವುದು.

ಮಡಿಕೇರಿಯಲ್ಲಿ ಸಾಧಾರಣವಾಗಿ ಎಷ್ಟು ಜನ ಪ್ರಾಯ-ಪ್ರಬುದ್ಧ ಮುಸ್ಲಿಮರಿರಬಹುದು? ಇವರೆಲ್ಲರೂ ಸಾರಾಯಿಯನ್ನು ಕುಡಿಯುವವರೇ ಆಗಿರುವರೇ? ಖಂಡಿತವಾಗಿಯೂ ಇಲ್ಲ. ಹಾಗೆಂದ ಮೇಲೆ ಅನ್ಯಾಯ ಜನಗಳವರಿಗೆ ಸಾರಾಯಿ ಪರ್ಮಿಟ್ಟುಗಳಿಗೆ ಅರ್ಜಿಗಳನ್ನು ಬರೆಕೊಂಡವರು ಮುಸ್ಲಿಮರಿರಬಹುದೆಂಬುದನ್ನು ತಾವು ತಮ್ಮ ಸ್ಥಾನಗಳಲ್ಲೋ ಯಾ ಬೇರೆಲ್ಲಿಯಾದರೋ ಜನಾಂಗದವರೆಲ್ಲರೂ ಸಭೆ ಸೇರಿಸಿ ವಿಚಾರಿಸಿ ತಕ್ಕ ಕ್ರಮವನ್ನು ಕೈಗೊಂಡ ಈ ನಿಶಾಸೇವನೆಯಿಂದ ಪ್ರಿಯವಾದ ಅನಾಹುತ ಮತ್ತು ಅಕ್ರಿಯೆಗಳನ್ನು ಅವರಿಗೆ ಬೋಧಿಸಿ ತಿಳಿಸಿ, ಧರ್ಮದ ಹಾಗೂ ದೇಶದ ಅಭಿವೃದ್ಧಿಗಾಗಿ ಈ ದುರ್ವ್ಯಾಪಾರವನ್ನು ತಡೆಯಬೇಕಾಗಿದೆ. ಕೆಲವು ಜನ ಸ್ವಾರ್ಥಪರ ದ್ರೋಹಿಗಳಿಂದ ಇಡೀ ಜನಾಂಗಕ್ಕೇ ಅಪಕೀರ್ತಿ ಬರುವಂತಾಗಿದೆ. ಇದು ಮುಸ್ಲಿಂ ಬಾಂಧವರ ಪ್ರಾಮಾಣಿಕತೆಯ ಪರಿಶೋಧನಾ ಕಾರ್ಯವೆಂದು ಭಾವಿಸಿ ಒಡನೆ ತಕ್ಕ ಕ್ರಮ ಕೈಗೊಳ್ಳಿರೆಂದು ವಿನಂತಿ

ಮುಸ್ಲಿಂ ಒಂದು.

## ಪಾಕಿಸ್ಥಾನ ಸೇನೆಗಳು ಅಸ್ಸಾಮ್ ಗಡಿಯಲ್ಲಿ.

ಶಿಲ್ಲಾಂಗಿಗೆ ತಲುಪಿದ ವಾರ್ತೆಯಂತೆ, ಪಾಕಿಸ್ಥಾನದ ಸೇನೆಗಳು, ಕಛಾರ್ ತ್ರಿಪುರಾ ಮತ್ತು ಗಾರೋ ಕೂಚ್ ಬಿಹಾರ ಗಡಿಗಳಲ್ಲಿ ಕೇಂದ್ರೀಕರಿಸಲ್ಪಟ್ಟು ತ್ರಿಪುರ-ಹಿಂಗಿಬಂದಿ ಗಡಿಯಲ್ಲಿ 'ಹಿಂದೂಸ್ಥಾನ ಸ್ಟಾಂಡರ್ಡ್' ಪತ್ರಿಕಾ ಬಾತ್ಮೀದಾರರು ವರದಿ ಮಾಡಿರುವರು. ಅನೇಕ ನಗರ ಅಭ್ಯಾಸವೂ ನಡೆದಿದೆ. ಹಿಂದೂಗಳಿಂದ ಸುಮಾರು ೩೦೦ ಮನೆಗಳು, ಬಸ್ಸುಗಳು, ಲಾರಿಗಳು ಮತ್ತು ದೋಣಿಗಳು ಕಾರಣಗಳಿಂದ ಪೂರ್ವ ಪಾಕಿಸ್ಥಾನ ಸರಕಾರದವರು ವಶಪಡಿಸಿಕೊಂಡಿರುವರು. ಪಾಕಿಸ್ಥಾನ ಸೈನ್ಯಾಧಿಕಾರಿಗಳಿಗೂ ಪ್ಲಟೂನಗಳಿಗೂ ಹಿಂದೂಗಳ ಸೈಕಲುಗಳು ಮತ್ತು ದೋಣಿಗಳು ವಿನಿಯೋಗವಾಗಿರುವವು, ಹಿಂದೂಗಳ ಸುಮಾರು ೬೦೦೦ ಮನೆಗಳನ್ನು 'ರಿಕ್ವಿಜಿಶನ್' ಮಾಡಲಾಗಿದೆ.

## ಜಯಪ್ರಕಾಶರನ್ನು ಪಂಡಿತ ನೆಹರುರವರು ಕರೆಸಿರುವರು.

ನಾಗಪುರದಲ್ಲಿದ್ದ, ಸೋಶಲಿಸ್ಟ್ ನಾಯಕ ಶ್ರೀ ಜಯಪ್ರಕಾಶ ನಾರಾಯಣರನ್ನು, ಪ್ರಧಾನ ಸಚಿವರು, ಕಲ್ಕತ್ತಕ್ಕೆ, ಪೂರ್ವ ಬಂಗಾಲಕ್ಕೆ ಸಂಬಂಧಿಸಿದ ಮಹತ್ವದ ಸಮಾಲೋಚನೆಗೆ, ಅವಸರದಲ್ಲಿ, ಕರೆಸಿರುವರು (ನಾಗಪುರ ಪತ್ರಿಕಾ ವ್ಯವಸಾಯಿಗಳ ಸಂಘದಲ್ಲಿ ಭಾಷಣ ಮಾಡುವಾಗ ಶ್ರೀ. ಜಯಪ್ರಕಾಶರು, 'ಯಾವ ಯತ್ನವೂ ಫಲಕಾರಿಯಾಗದಿದ್ದರೆ ಭಾರತ ಸೇನೆಗಳನ್ನು ಪಾಕಿಸ್ಥಾನದೊಳಗೆ ಕಳಿಸಿಯಾದರೂ ರಕ್ಷಣೆಮಾಡಬೇಕು. ದೇಶಕ್ಕೆ ಸಂಬಂಧಿಸಿದ ಮಹತ್ವದ ಪ್ರಶ್ನೆಗಳಲ್ಲಿ ನಾವೆಲ್ಲ ಒಂದಾಗಬೇಕು'-ಎಂದರು)

## ತಿರುಪತಿ ವೆಂಕಟೇಶನ ಪರವಾಗಿ.

ತಿರುಪತಿ ತಿರುಮಲ ದೇವಸ್ಥಾನದ ಪರವಾಗಿ ಶ್ರೀ ವಿ ಶೇಷಾದ್ರಿಗಳು, ದೇವರ ಸೊತ್ತುಗಳ ಮೇಲೆ ತೆರಿಗೆ ವಿಧಿಸುವುದರ ವಿರುದ್ಧ ವಾದಿಸುತ್ತ, 'ದೇವರಿಗೆ ಮೊಕದ್ದಮೆ ಹೂಡಲು ಬರುವುದಿಲ್ಲ. ಆದುದರಿಂದ ತೆರಿಗೆ ಹೆಚ್ಚಿಸುವುದರ ಕುರಿತು ಆತ ನಿಷೇಧ ವ್ಯಕ್ತಪಡಿಸಲಾರ. ಅವನ ಪರವಾಗಿ ನಾನು ವಾದಿಸುತ್ತೇನೆ' ಎಂದು ಮುನ್ಸಿಪಲ್ ಕೌನ್ಸಿಲಿನ ಮುಂದೆ ವಿರೋಧ ಸೂಚನೆ ತಂದಿದ್ದರು. ಇದರ ಕುರಿತು ಕೌನ್ಸಿಲಿನಲ್ಲಿ ಚರ್ಚೆ ನಡೆದಾಗ ಕೌನ್ಸಿಲರರಲ್ಲಿ ಒಬ್ಬರಾದ ಶ್ರೀ ಸಿ ಭುಜಂಗರಾಯರು, 'ವೆಂಕಟೇಶ್ವರ ಸ್ವಾಮಿಗೆ ತುಂಬಾ ಸಂಪಾದನೆಯಿದೆ. ಆದುದರಿಂದ ಹೆಚ್ಚಿಗೆ ತೆರಲು ಆತ ಗೊಣಗುಟ್ಟಲಾರ' ಎಂದರು. ಚರ್ಚೆಯ ಕೊನೆಯಲ್ಲಿ ಹೆಚ್ಚಿಸಿದ ತೆರಿಗೆ ಕಾಯಂ ಮಾಡುವ ನಿರ್ಣಯವಾಯಿತು

## 'ಭಾರತ'ಕ್ಕೆ ಪಾಕಿಸ್ಥಾನದ ಮಾನ್ಯತೆ.

ಪಾಕಿಸ್ಥಾನ ಪತ್ರಿಕೆಗಳು ಹಿಂದೂಸ್ಥಾನಕ್ಕೆ 'ಇಂಡಿಯ' ಎಂಬ ಹೆಸರನ್ನು ಉಪೇಕ್ಷಿಸಿ ಅದರ ಬದಲು 'ಭಾರತ' ಎಂಬ ಹೆಸರನ್ನು ಅಂಗೀಕರಿಸಿವೆ. 'ಇಂಡಿಯ' ಎಂಬ ಹೆಸರಲ್ಲಿ ವಿಭಜನಾ ಪೂರ್ವ ಪಾಕಿಸ್ಥಾನವೂ ಸೇರಿತ್ತು, ಈಗ ವಿಭಜನೆಯಾಗಿ ಪಾಕಿಸ್ಥಾನವು ಬೇರ್ಪಟ್ಟುದರಿಂದ ಉಳಿದ ಪ್ರದೇಶಕ್ಕೆ 'ಭಾರತ'ವೇ ಅನ್ವರ್ಥನಾಮ, ತಾವು ಅದನ್ನು ಅದೇ ರೀತಿ ಸಂಬೋಧಿಸುವೆವು, ಹಿಂದೀಯರನ್ನು ಭಾರತೀಯರೆನ್ನುವೆವು ಎಂದು ಪಾಕಿಸ್ಥಾನದ ಪ್ರಮುಖ ಪತ್ರಿಕೆಗಳಾದ 'ಡಾನ್' ಮತ್ತು 'ಸಿವಿಲ್ ಎಂಡ್ ಮಿಲಿಟರಿ ಗಜೆಟ್' ಇವು ಅಗ್ರಲೇಖನಗಳನ್ನು ಪ್ರಕಟಿಸಿವೆ. ಪಾಕಿಸ್ಥಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲಿಖಾನರು ಇತ್ತೀಚೆಗೆ ಒಂದು ಪತ್ರಿಕಾ ಸಮ್ಮೇಳನದಲ್ಲಿ ಇಂಡಿಯವನ್ನು 'ಭಾರತ'ವೆಂದೇ ಸಂಬೋಧಿಸಿದ್ದಾರೆ.

## ಕೂಚ್ ಬಿಹಾರದೊಳಗೆ ನುಗ್ಗುವ ಯತ್ನ.

ಸುಮಾರು ೩೦೦೦ ಮಂದಿ ಮುಸ್ಲಿಮರು ನೆರೆಹೊರೆಯ ಪಾಕಿಸ್ಥಾನಿ ಪ್ರದೇಶಗಳಿಂದ ಶಸ್ತ್ರ ಸಮೇತರಾಗಿ ಕೂಚ್ ಬಿಹಾರ್‌ಗೆ ಪ್ರವೇಶಿಸಲು ಇತ್ತೀಚೆಗೆ ಯತ್ನಿಸಿದ್ದರು. ಆದರೆ ಸಕಾಲದಲ್ಲಿ ಪೋಲೀಸ್ ಫೌಜು ಶಸ್ತ್ರಾಸ್ತ್ರಗಳ ಸಹಿತ ಆ ಕಡೆ ಧಾವಿಸಿದುದರಿಂದ ಆ ಮಂದಿ ಶಸ್ತ್ರ ಮುಸ್ಲಿಮರನ್ನು ಹಿಮ್ಮೆಟ್ಟಿಸಲಾಯಿತು. ಸಮೀಪದಲ್ಲೇ ಹರಿಯುವ ನದೀ ದಡದಲ್ಲಿರುವ ಒಂದು ಹಳ್ಳಿಯಲ್ಲಿ ಹಲವು ಪುಲೀಸು ಆಯುಧಗಳ ಪತ್ತೆ ಹಚ್ಚಿ ವಶಪಡಿಸಲಾಗಿದೆ.

---

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಧನಸ್ಸು ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಜರ್ | ಆರ್ಗನೈಜರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ |
| ಅಥವಾ | ಅಥವಾ |
| ಯಂ. ಯು. ಅಚ್ಚಣ್ಣ, | ಎಂ. ಎ. ಬೆಳ್ಯಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟಾ, ಮಂಗಳೂರು. |



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

52–30

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

## ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ | ಶಾಖಾ ಕಛೇರಿ |
| ಎಂಪೈರ್ ಹೌಸ್, ಹಾರ್ನ್‌ಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು. |



# CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

*H: O: BOMBAY.]* *[Established 1919.*

*For particulars write to:*

| | | |
|---|---|---|
| **Sri B. A. Poovaiah** | or | **The Branch Manager,** |
| *Organiser* | | *22 B. Mahatma Gandhi Road,* |
| *Pollibetta, Coorg.* | | *Bangalore 1.* |

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



ಭದ್ರತೆ! 17 ವರ್ಷಗಳಿಂದ ಅನುಭವಿಸಿ ನೋಡಿ! ಅನುಕೂಲತೆ !!

# ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,

ಕದ್ರಿ ರೋಡ್, ಮಂಗಳೂರು.

ಠೇವಣಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3¼% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಮತ್ತು ಖಜಾನ್ಚಿ. |



ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.



Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೨೪-೩-೧೯೫೦ನೇ ಶುಕ್ರವಾರ | ಸಂಚಿಕೆ ೪೩

## ಸೂಕ್ತಿ ಸುಧೆ.

ಲೇ:—ಶ್ರೀ. 'ಗಣೇಶ' ಮಡಿಕೇರಿ.

---

ಮನುಷ್ಯನು ಜಗತ್ತಿನ ಪ್ರಾಣಿಗಳಲ್ಲಿ ಜ್ಞಾನಶಕ್ತಿಯನ್ನು ಪಡೆದು ಶ್ರೇಷ್ಠನೆನಿಸಿದ್ದಾನೆ. ಹಿತಾಹಿತ, ಸಾಧಕ ಬಾಧಕಗಳ ವಿವೇಚನೆ ಮಾಡಿ ಸರಿ ದಾರಿಯನ್ನು ಆರಿಸಿಕೊಳ್ಳುವ ಶಕ್ತಿ ಆತನಿಗಿರುವದರಿಂದಲೇ ಆತನ ಅಭಿವೃದ್ಧಿಗೋಸ್ಕರ ಭೂಮಿಗೆ ಸ್ವರ್ಗವನ್ನಿಳಿಸುವ ಕನಸು ಕಟ್ಟಲು ಸಾಧ್ಯವಾಗಿದೆ. ಮನುಷ್ಯನ ಜೀವನವೆಂದರೆ ಪ್ರಥಮ ಆಲೋಚನೆ, ನಂತರ ಕನ್ನಯ ಆ ನಂತರ ಕರ್ಮ. ಆಲೋಚಿಸಿದುದನ್ನೆ ಭಾವಿಸಿ ತದಾತ್ಮ್ಯ ಭಾವದಿಂದ ಕಾರ್ಯರೂಪಕ್ಕಿಳಿಸುವವನ ಜೀವನ ಫಲದಾಯಕವಾಗಿ ಮುಂದೆ ಸಾಗುವದು. ಈ ಮಾನಸಿಕ ಯೋಚನೆ, ಮತ್ತು ಶಾರೀರಿಕ ಕರ್ಮಗಳು ಸಮರಸವಾಗಿ ಒಂದನ್ನೊಂದು ಹೊಂದಿಕೊಂಡಿದ್ದರೆ ಜೀವನವು ಸಪ್ಪದ ಗಟ್ಟಿ ನೆಲದ ಮೇಲೆ ನಿಂತಂತೆ! ಜೀವನದಲ್ಲಿ ಆಲಿಸಿ ಇಡಬೇಕಾದ ವಿಚಾರಗಳು ಉಳಿಯಲಾರವು. ಜೀವನವೆಂಬುವುದು ತೆರೆದ ಪುಸ್ತಕದಂತಾಗುವುದು. ಮನಸಿನ ಭಾವನೆಗೂ ಶಾರೀರಿಕ ಕರ್ಮಕ್ಕೂ ಸಂಬಂಧವಿದ್ದು ಮನಸಿನ ಭಾವನೆಯು ಕರ್ಮರೂಪದಲ್ಲಿ ತೋರಬೇಕಾದದು. ಇದು ನಿಜವಾದ ಜೀವನವೆನಿಸುವದು.

ಆದರೆ ವಸ್ತುತಃ ಹಾಗೆ ಆಗುತ್ತಿಲ್ಲ. ಭಾವನೆ ಮತ್ತು ಕರ್ಮಗಳಿಗೆ ಸಂಬಂಧವೇ ಇಲ್ಲದಂತಾಗಿದೆ. ಕೆಲವು ವೇಳೆ ನಾವು ಆಲೋಚನೆ ಮಾಡದೆ ಕೆಲಸ ಮಾಡುತ್ತೇವೆ. ಕೆಲವು ವೇಳೆ ಕೆಲಸ ಮಾಡಿ, ಮಾಡಿದ ಕೆಲಸವು ಸರಿಯೇ ಎಂದು ನಂತರ ಆಲೋಚಿಸುತ್ತೇವೆ! ಈ ರೀತಿ ಆಲೋಚನೆಗೂ ಕೆಲಸಕ್ಕೂ ಸಂಬಂಧವಿಲ್ಲದ ನಮಗೆ ವಿಪರೀತ ಕಷ್ಟ ನಷ್ಟಗಳು ಸಂಭವಿಸುತ್ತವೆ. ಜೀವನವು ಮುಳ್ಳಿನ ಹಾಸಿಗೆಯಂತಾಗುತ್ತದೆ. ಮನುಷ್ಯನಿಗೆ ದೊರೆತಿರುವ ಅಮೂಲ್ಯವಾದ ಯೋಚನಾಶಕ್ತಿಯಿಂದ ಮಾನವನು ಇತರ ಪ್ರಾಣಿಸಮೂಹದಿಂದ ಬಹು ಮುಂದೆ ಸಾಗಿದ್ದಾನೆ. ಈ ಯೋಚನಾ ಶಕ್ತಿಯೇ ಆತನನ್ನು ದೇವರ ಮಟ್ಟಕ್ಕೂ ಏರಿಸಬಲ್ಲ ಸುಮಾರ್ಗವಾಗಿದೆ. ಆದರೆ ಮಾನವನ ಜೀವನವು ಸರಾಗವಾದ ರಾಜರಸ್ತೆಯಲ್ಲ. ಯೋಚಿಸಿದಂತೆ ಕೆಲಸ ಮಾಡುತ್ತಾ ಮುಂದೆ ಸಾಗುವ ಸಾಧ್ಯತೆ ಇಲ್ಲ. ಜೀವನದಲ್ಲಿ ಅಪೇಕ್ಷಿತ ಏರು ತಗ್ಗುಗಳಿಂದ ಕೂಡಿದ್ದು ನಮ್ಮ ಭಾವನೆ ಮತ್ತು ಕೃತ್ಯಗಳನ್ನು ಹಿಡಿತದಲ್ಲಿಟ್ಟು ಮುಂದೆ ಸಾಗುವದು ಬಹು ಪ್ರಯಾಸದ ವಿಚಾರವಾಗಿದೆ. ನಮ್ಮ ದೈನಂದಿನ ಜೀವನದಲ್ಲಿ ಉದ್ವೇಗ, ಸ್ವಾರ್ಥ, ಸಿಟ್ಟು, ವೈರ ಮೊದಲಾದ ವಿಕಾರಗಳು ನಮ್ಮ ನಿಶ್ಚಿತ ಯೋಜನಾಧಾರೆಗೆ ಅಡ್ಡ ಬಂದು ಹಠ ವಿರುದ್ಧ ಕೃತಿ ನಡೆಯುವಂತೆ ಮಾಡುತ್ತವೆ. ಈ ವಿಚಾರವನ್ನು ಸ್ವಲ್ಪ ಸೂಕ್ಷ್ಮವಾಗಿ ವಿವೇಚಿಸಬೇಕು.

### ಭಯ

ಪ್ರಥಮವಾಗಿ ಭಯವನ್ನು ತೆಗೆದುಕೊಳ್ಳುವಾ. ನಾವು ಆಲೋಚಿಸುವ ಮೊದಲೇ ಸನ್ನಿವೇಶವನ್ನು ಕಲ್ಪಿಸಿ ಭಯಗೊಳ್ಳುತ್ತೇವೆ. ಕೆಲಸವನ್ನು ಪರಿಶೀಲಿಸದೆ ಅದರಲ್ಲಿ ಗಂಡಾಂತರವಿದೆಯೆಂದು ಮೂಢ ಭಕ್ತಿಯ ನಂಬಿಕೆಯನ್ನಿಟ್ಟು ಹರಾಣ್ಣ ಬರಾಗುತ್ತೇವೆ. ಭಯವನ್ನು ಗೆಲ್ಲುವ ಬಗೆ ಹೇಗೆ? ಆಲೋಚನೆಯಿಂದಲೇ ಗೆಲ್ಲಬೇಕು. ಹಗ್ಗವನ್ನು ರಾತ್ರಿ ಕಂಡು ಹಾವೆಂದು ಭಯದಿಂದ ಹತ್ತಿರ ಸುಳಿಯಲಾರೆವು. ಮರದ ತುಂಡನ್ನು ಕಳ್ಳನೆಂದು ಭಾವಿಸಿ ಭಯಗೊಳ್ಳುವೆವು. ಆಲೋಚನೆ ಮಾಡಿ ಪರಿಶೀಲಿಸಿದಾಗ ಯಾವ ರೀತಿ ನಮ್ಮ ನಿರಾಧಾರ ಭಯಕ್ಕೆ ನಾವು ನಗಬೇಕಾಗುವದೋ ಅದೇ ರೀತಿ ಸನ್ನಿವೇಶದ ಪರಿಶೀಲನೆ ಮಾಡದೆ ಭಯಗೊಳ್ಳುವದೂ ಆಗಿದೆ. ಒಬ್ಬರನ್ನು ಕಾಣಲು ಹೋಗುವಾಗ ಭಯಗೊಳ್ಳುವವರು ಅನೇಕರಿದ್ದಾರೆ. ವಾಸ್ತವವಾಗಿ ಭಯಗೊಳ್ಳಬೇಕಾದ ಅವಶ್ಯಕತೆ ಇಲ್ಲ. ಮನುಷ್ಯನಿಗಾಗಿ ಮನುಷ್ಯ ಬೆದರಬೇಕಾದ ಪ್ರಮೇಯವಿಲ್ಲ. ಅನೇಕ ವಿಚಾರಗಳನ್ನು ನೆನೆದು ನಾವು ಭಯಗೊಂಡರೂ ಸೂಕ್ಷ್ಮ ಪರಿಶೀಲನೆಯಿಂದ ಆ ಭಯ ನಿರಾಧಾರವೆಂಬುದು ಗೋಚರವಾಗುವದು. ಆದ್ದರಿಂದ ಭಯಕ್ಕೆ ಕಾರಣವು ಶರೀರದ ಹೊರಗಿಲ್ಲ. ಭಯಕ್ಕೆ ನಾವೇ ಕಾರಣರು. ಆಲೋಚಿಸದ ನಮ್ಮ ಕುರುಡು ಪ್ರವೃತ್ತಿಯೇ ಕಾರಣ. ಒಂದು ಕೆಲಸ ಪ್ರಾರಂಭಿಸುವ ಮೊದಲೇ ಇಲ್ಲದ ಗಂಡಾಂತರಗಳ ಕಲ್ಪನೆ ಮಾಡಿ ಕೈಸಾಗದವರಂತೆ ಕರ್ತವ್ಯಭ್ರಷ್ಟರಾಗಿ ವರ್ತಿಸುವೆವು. ಪರಂಪರಾಗತವಾಗಿ ಬಂದಿರುವ ಈ ಭಯದ ಪರದೆ ತೊಲಗಬೇಕಾದರೆ ಸತತ ಸಮಾಧಾನ ಮತ್ತು ಚಿಂತನೆಯು ಅವಶ್ಯಕ. ಕತ್ತಲಲ್ಲಿ ನಾವು ವಾಸ್ತವವಾಗಿ ಹೆದರುವದಿದೆ. ಆದರೆ ಬೆಳಕು ಬಂದಾಗ ಹೆದರಲಾರೆವು. ಅದೇ ರೀತಿ ಮನಸ್ಸಿನಲ್ಲಿ ಚಿಂತನೆ, ಪೂರ್ಣ ಆಲೋಚನೆ ಇಲ್ಲದಿದ್ದಾಗ ಭಯಕ್ಕೆ ಆಸ್ಪದ ದೊರೆಯುವದು. ವಿವೇಚನೆಯ ದೀಪ ಹಚ್ಚಿದಾಗ ಭಯವು ನಿರ್ನಾಮಗೊಳ್ಳುವದು.

### ಸಿಟ್ಟು

ಸಿಟ್ಟು ಕೂಡ ಭಯದಂತೆಯೇ ಆಧಾರರಹಿತವಾದುದು. ನಮಗೆ ಆಲೋಚನೆ ಮಾಡಲು ಅನುವಿಲ್ಲದಂತೆ ಒಮ್ಮೆಂದೊಮ್ಮೆ ಅದು ಮೇಲೇರುತ್ತದೆ. ಆ ಸಂದರ್ಭದಲ್ಲಿ ನಾವು ವಿವೇಕ ಶೂನ್ಯರಾಗಿ ಸಿಟ್ಟಿನ ಪರಿವರ್ತಿಗಳಾಗಿ ಅದು ನಿರ್ದೇಶಿಸಿದಂತೆ ಕುಣಿಯುವೆವು. ಇದರಿಂದ ನಮ್ಮ ಮನಸಿನ ಶಾಂತಿಯು ಕದಡಿ ಶರೀರದ ಹಿಡಿತವು ತಪ್ಪಿ ವಿವೇಚನೆ ಇಲ್ಲದ ಪ್ರಾಣಿಗಳ ಮಟ್ಟಕ್ಕಿಳಿದು ವರ್ತಿಸುವೆವು. ನಾವು ಸಿಟ್ಟಿನಿಂದ ಕಣ್ಣು ಕಾಣದವರಾಗುವ ಮೊದಲು ನಮ್ಮ ಆಲೋಚನಾಶಕ್ತಿಯನ್ನು ಮುಂದೆಗೊತ್ತಬೇಕು. ಇದಕ್ಕೆ ಕಾರಣ ಒಂದಿಷ್ಟು ಸಮಾಧಾನ ತೆಗೆದುಕೊಂಡು ಆಗ ಬರುವ ಸಿಟ್ಟು ಎಷ್ಟು ಅಯೋಗ್ಯ ಹಾಗೂ ನಿರಾಧಾರವೆಂಬುದು ವ್ಯಕ್ತವಾಗುವದು. ಉದಾಹರಣೆಗೆ ನಮ್ಮ ಸೇವಕರಿಗೆ ನಾವೊಬ್ಬರಿಗೆ ಒಂದು ಕೆಲಸ ಮಾಡಲು ಹೇಳಿದ್ದೇವೆಂದು ಭಾವಿಸುವ. ಅದು ಸಕಾಲದಲ್ಲಿ ಮಾಡಲ್ಪಡಲಿಲ್ಲವೆಂದರೆ ಸಿಟ್ಟು ತಲೆಗೇರುವದು. ಇದರ ಬದಲು ಕೋಪ ಕೊಡುವಾಗಲೇ ಆಲೋಚನೆ ಮಾಡಿ ಎಷ್ಟು ಸಮಯದಲ್ಲಿ ಅದನ್ನು ಮಾಡಲಿಕ್ಕೆ ಸಾಧ್ಯವೆಂಬುದನ್ನು ಅಂತು ಆ ರೀತಿ ಆಜ್ಞಾಪಿಸಿದರೆ ಸಿಟ್ಟಿಗೆ ಕಾರಣವಿರಲಾರದು. ಆತನು ಮಾಡದಿರಲು ಕಾರಣವೇನೆಂಬುದನ್ನು ಪರ್ಯಾಲೋಚಿಸಿ ತಿಳಿಯಬೇಕು. ಆತನಿಗೆ ಶಾರೀರಿಕ ಅಡಚಣೆಯೂ ಬೇರೆ ತೊಂದರೆಗಳಿದ್ದಿರಬಹುದು. ಆಲೋಚಿಸಿದರೆ ಇಲ್ಲಿ ತೋರುವ ಸಿಟ್ಟಿನ ಅನೌಚಿತ್ಯವು ತೋರುವದು. ಆವನವನ ಅಂತಸ್ತಿನಿಂದ ಪರಿಸ್ಥಿತಿಯೂ ಉದ್ದೇಶಗಳನ್ನು ಅಳೆಯದೆ ಮಾಡಬೇಕಾಗುವದು ತಪ್ಪು. ಯೋಗ್ಯತೆಗಳನ್ನು ಅಳೆಯಬೇಕು. ಒಬ್ಬನು ಗಂಟೆಗೆ ಐದು ಮೈಲು ನಡೆಯಬಲ್ಲನೆಂದು ಮತ್ತೊಬ್ಬನು ಅಷ್ಟೇ ನಡೆದಿಲ್ಲವೇಕೆಂದು ಸಿಟ್ಟಾಗುವದು ಅನುಚಿತವಾದೀತು. ಆದ್ದರಿಂದ ಸ್ವಲ್ಪ ತಾಳ್ಮೆ ತೆಗೆದುಕೊಂಡು ಆಲೋಚಿಸಿದರೆ ಸಿಟ್ಟಿಗೆ ಅವಕಾಶವಿರಲಾರದು. ಜೀವನದಲ್ಲಿ ಸಿಟ್ಟಿನ ಆವಶ್ಯಕತೆ ಇರಬಹುದು. ಆದರೆ ಅದರಿಂದ ಇಂದು ಉಪಯೋಗದ ಬದಲು ಉಪದ್ರವೇ ಹೆಚ್ಚು. ಆದ್ದರಿಂದ ಪೂರ್ವಾಪರ ವಿವೇಚನೆಯಿಂದ ಅದನ್ನು ನಿಗ್ರಹಿಸಬಹುದಾಗಿದೆ.

### ವ್ಯಸನ

ಭಯದ ನಂತರ ಅತೀ ಹಾನಿಕರವಾದ ವಿಚಾರವೆಂದರೆ ವ್ಯಸನ. ವ್ಯಸನದಿಂದಾಗಿ ಹುಚ್ಚರಾದವರಿದ್ದಾರೆ. ಆತ್ಮಹತ್ಯೆ ಮಾಡಿಕೊಂಡವರಿದ್ದಾರೆ. ಕೊಲೆಮಾಡಿದವರಿದ್ದಾರೆ. ಇದೂ ಕೂಡ ಭಯ ಕ್ರೋಧಗಳಂತೆ ನಮ್ಮನ್ನು ಆವರಿಸಿ ವಿಚಾರಶೂನ್ಯರನ್ನಾಗಿ ಮಾಡುವದಲ್ಲದೆ ಶರೀರದ ಹಿಡಿತವನ್ನೇ ತಪ್ಪಿಸುತ್ತದೆ. ಆಶಿಸಿದ ವಸ್ತು ದೊರೆಯದಿದ್ದರೆ, ಪ್ರಿಯ ಜನರ ವಿರಹವಾದರೆ, ಆರ್ಥಿಕ ನಷ್ಟವಾದರೆ ಆಗುವ ವ್ಯಸನದ ಸಂದರ್ಭದಲ್ಲಿ ನಾವು ಶಾಂತರಾಗಿರಲು ಸಾಧ್ಯವಿಲ್ಲ. ಕಳೆದು ಹೋದ ಇಲ್ಲವೆ ಕರಗತವಾಗದ ವಸ್ತುವಿಗೆ ಅಮೂಲ್ಯ ಬೆಲೆ ಹಚ್ಚಿ ದ್ವಿಗುಣ ದುಃಖ ಪಡುತ್ತೇವೆ. ಆ ಸನ್ನಿವೇಶದಲ್ಲೂ ಕೂಡ ದುಃಖಕ್ಕೆ ಕಾರಣ ನಾವೇ ಎಂಬುದನ್ನು ತಿಳಿಯಬೇಕು. ಸ್ವಲ್ಪ ವಿಚಾರಿಸಿ ಆತ್ಮ ನಿರೀಕ್ಷಣೆ ಮಾಡಿಕೊಂಡರೆ ಇದು ವೇದ್ಯವಾಗುವುದು. ಇದು ನನ್ನದು, ನನ್ನದು ಎಂಬ ಸಂಕೀರ್ಣತೆಯನ್ನು ಹೆಚ್ಚಿಸಿಕೊಂಡು ಅವುಗಳಲ್ಲಿ ಪೂರ್ಣ ಆಸಕ್ತರಾಗಿ ಜೀವನದ ಗುರಿಯೇ ಅದೆಂಬಂತೆ ವರ್ತಿಸುವದರಿಂದ ಈ ದುಃಖದ ಭಾರ ಹೆಗಲೇರುವದಾಗಿದೆ. ಆದ್ದರಿಂದ ನೈಜ ದೃಷ್ಟಿಯಿಂದ ಅನಾಸಕ್ತ ಮನಸ್ಸಿನಿಂದ ವಿವೇಚಿಸುವವನಿಗೆ ವ್ಯಸನವಾಗದು. ಮೋಹವೇ ದುಃಖಕ್ಕೆ ಕಾರಣವೆಂದು ಹೇಳುತ್ತಿಲ್ಲವೇ? ಮೋಹದ ಪರದೆ ನೀಗಬೇಕಾದರೆ ವಿವೇಚನೆಯ ಬೆಳಕಿನ ಉದಯವಾಗಬೇಕು.

### ದ್ವೇಷ

ಅಸಾಯಕರವಾದ ಮತ್ತು ಅನಾವಶ್ಯಕವಾದ ಈ ಗುಣವೂ ಕೂಡ ವಿವೇಚನೆ ಇಲ್ಲದ ಕಾರಣವೇ ಉಪಸ್ಥಿತವಾಗುವದು. ನಮ್ಮ ಹಾಗೆಯೇ ಉಪ್ಪುಮಕ್ಕಳಾಗಿದ್ದವರನ್ನು, ದಿನ ದಿನಕ್ಕೆ ಅಭಿವೃದ್ಧಿಗೊಳ್ಳುತ್ತಿರುವವರನ್ನು ಕಂಡು ನಾವು ಅಸೂಯೆಪಡುತ್ತೇವೆ. ಇದಕ್ಕೆ ನಿಜವಾಗಿಯೂ ಕಾರಣವಿಲ್ಲ. ಅಸೂಯೆಯು ನಮ್ಮ ನಿರ್ಬಲತೆಯನ್ನು ವ್ಯಕ್ತ ಮಾಡುತ್ತದೆ. ಕೈಸಾಗದವನೇ ಅಸೂಯೆಯ ಮರೆ ಹೋಗುವನು. ಈ ರೀತಿ ಅಸೂಯೆಯಿಂದಾಗ ಮಾನವನ ಉತ್ಕರ್ಷವೂ ಅವನತಿ ಅವನವನ ಕೈಯಲ್ಲಿ ಅವನವನ ಕ್ರಿಯೆಯಲ್ಲಿದೆಯೆಂಬುದನ್ನು ತಿಳಿಯಬೇಕಾಗಿದೆ. ಇನ್ನೊಬ್ಬನಿಗಾಗಿ ಕಿಚ್ಚು ಪಡಲೇಕೆ? ಈ ಜಗತ್ತು ನಮಗೊಬ್ಬರಿಗಾಗಿ ನಿರ್ಮಿತವಾದುದೇನು? ಪ್ರತಿಯೊಬ್ಬನಿಗೂ ಸಮಾನತೆಯಿಂದ ಬದುಕಿ ಬಾಳಲು ಹಕ್ಕಿರುವ ಈ ವಿಶಾಲ ಪ್ರಪಂಚದಲ್ಲಿ ಇನ್ನೊಬ್ಬರ ಬಗ್ಗೆ ನಾವು ಅಸೂಯೆಪಡುವದಾದರೆ ಅದು ನಮ್ಮ ಪ್ರಾಣಿ ಪ್ರವೃತ್ತಿಯ ಸಂಕೇತವಲ್ಲದೆ ಮಾನವತೆಗೆ ಭೂಷಣವಲ್ಲ. ಆದ್ದರಿಂದ ಅಸೂಯೆಯ ಮುಚ್ಚಿನಲ್ಲಿ ಬೀಳುವ ಮುನ್ನ ಆಲೋಚಿಸಬೇಕು.

ಮೇಲಿನ ನಿದರ್ಶನಗಳಿಂದ ಆಲೋಚನೆ, ವಿವೇಚನೆಯೂ ಆತ್ಮಾನುಸಂಧಾನವೇ ಮಾನವನ ಯೋಗ್ಯಮಾರ್ಗವೆಂಬುದ, ಅದರ ಸಹಾಯದಿಂದಲೆ, ಹರ್ಷ, ಭಯ, ಕ್ರೋಧ, ಲೋಭ ಮೊದಲಾದ ಪ್ರಾಣಿ ಗುಣಗಳನ್ನು ಹಿಡಿತದಲ್ಲಿಟ್ಟು ಮಾನವನು ನಿಜಮಾನವನಾಗಿ ಬಾಳಲು ಸಾಧ್ಯವೆಂಬುದೂ ತಿಳಿಯುವದು. ಆದ್ದರಿಂದ ನಮ್ಮ ಪ್ರತಿಯೊಂದು ಕೆಲಸದಲ್ಲಿ ನಿರ್ಲಿಪ್ತತೆ ಬೇಕು. ಭಗವದ್ಗೀತೆಯಲ್ಲಿ ಇದನ್ನೇ ಶ್ರೀಕೃಷ್ಣನು ಈ ರೀತಿ ಹೇಳಿರುವನಲ್ಲವೇ?

"ಯಾವುದು ನಿನ್ನ ಕರ್ತವ್ಯವೋ ಅದಕ್ಕಾಗಿ ಬಂಧನರಹಿತನಾಗಿ ಕರ್ಮಮಾಡು ಅಂಥಾ ಅನಾಸಕ್ತಿಯ ಕರ್ಮ ಮಾಡುವದರಿಂದ ಮನುಷ್ಯನು ಸರ್ವಶಕ್ತನನ್ನು ಮುಟ್ಟುವನು."

---

# ನಾರಾಯಣ ಬಾಂಬು

ಲೇ:- ಶ್ರೀ ಕೆ. ಟಿ. ಮುತ್ತಣ್ಣನವರು.

ಒಂದು ಭಕ್ತಿಪರವಾದ ಸುಂದರ ಪದ್ಯವಿದೆ. "ನಾನು ನಿನಗೆ ಶರಣಾದೆ ಎಂದೆಂದರೆ ನೀನು ಪಾಪಿಗಳನ್ನು ಪವಿತ್ರಗೊಳಿಸುವೆಯೆಂದು ನಾನು ಕೇಳಿದ್ದೇನೆ. ಆದರೆ ಈಗ ನನಗೆ ಹೇಳುತ್ತಾರೆ, ನಿನ್ನನ್ನು ನೋಡುವ ಮೊದಲು ನಾನು ಪಾಪಮುಕ್ತನಾಗಬೇಕು ಎಂದು. ಆದುದರಿಂದ ನಾನು ಹಿಂದಿರುಗುವೆ."

ಪೂಜೆ ಮಾಡಲೆಂದು ಒಬ್ಬ ಭಕ್ತ ಒಮ್ಮೆ ಒಂದು ಪ್ರಸಿದ್ಧ ದೇವಾಲಯಕ್ಕೆ ಹೋದನಂತೆ. ಅವನಲ್ಲೇನೋ ಪಾಪವಿತ್ತೆಂಬ ಕಾರಣದಿಂದ ಅವನನ್ನು ದೇವಾಲಯದೊಳಗೆ ಹೋಗಬಿಡಲಿಲ್ಲ. ಅವನು ಒಳ ಹೊಕ್ಕರೆ ದೇವಸ್ಥಾನ ಅಪವಿತ್ರವಾಗುವುದು ಎಂದರಂತೆ. ಆಗ ಪಶ್ಚಾತ್ತಾಪಗೊಂಡು ಅವನು ಮೇಲಿನ ಪದ್ಯವನ್ನು ಹಾಡಿದನಂತೆ. ದೇವರೇ ಅಪವಿತ್ರನಾಗುವುದಾದರೆ ಪಾಪಿಯೊಬ್ಬನು ಹೇಗೆ ಪಾಪಮುಕ್ತನಾಗುವ ಭರವಸೆಯನ್ನು ತಳೆದಾನು?

ಚಿಕ್ಕ ಮತ್ತು ದುರ್ಬಲ ರಾಷ್ಟ್ರಗಳು, ಇಂದು ಅಮೇರಿಕ ಮತ್ತು ರಷ್ಯಗಳು ಜಗತ್ತಿನ ಅತ್ಯಂತ ಬಲಿಷ್ಠವಾದ ಇಂದಿನ ಪ್ರಭುತ್ವಗಳೆಂದು ಭಾವಿಸುತ್ತವೆ. ಕಷ್ಟಸಂಕಟಿಗರಾದ ತಮ್ಮನ್ನೆತ್ತಿ ಅವು ಎಲ್ಲರಿಗೂ ಶಾಂತಿ ಸುಖಗಳ ಭರವಸೆಯನ್ನು ಕೊಡಬಲ್ಲವು. ಅವು ಎಚ್ಚೆತ್ತ, ಸುಲಕ್ಷಣ ಮತ್ತು ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ನಂಬಲಾಗಿದೆ. ಮಾನವ ಕುಲದ ಸೇವೆಯನ್ನು ಮಾಡುವುದರಲ್ಲೇನೋ ಅವುಗಳ ಶಕ್ತಿ ಭಿನ್ನರೂಪದ್ದಾಗಿದೆ. ಕಳೆದ ಸಮರದಲ್ಲಿ ಗೆಲುವನ್ನು ಸಂಪಾದಿಸಲು ಒಟ್ಟಾಗಿ ಹೆಣಗಿದಂತೆ ಅವು ಈಗ ಒಂದುಗೂಡಿ ಕೆಲಸ ಮಾಡಿದರೆ ಈ ಜಗತ್ತನ್ನು ಅವು ಸ್ವರ್ಗತುಲ್ಯವನ್ನಾಗಿ ಮಾಡಬಲ್ಲವು. ಆದುದರಿಂದ ಚಿಕ್ಕ ರಾಷ್ಟ್ರಗಳೂ ವ್ಯಕ್ತಿಗಳೂ ಅವುಗಳಲ್ಲಿ ಒಂದಲ್ಲ ಒಂದರತ್ತ ಶ್ರದ್ಧೆ ವಿಶ್ವಾಸಗಳಿಂದ ಉಪಕಾರ ಮತ್ತು ಸಹಾನುಭೂತಿಗಳನ್ನು ಪಡೆಯಲೆಂದು ನಿರೀಕ್ಷೆಯನ್ನೂ ನೋಟವನ್ನೂ ಬೀರುತ್ತಿವೆ.

ಆದರೆ ಅಯ್ಯೋ, ಅವುಗಳ ಸ್ವಂತ ಮನಸ್ಥಿತಿ ಎಷ್ಟು ಕರುಣಾಜನಕವಾಗಿದೆ! ಎರಡರಲ್ಲಿ ಪ್ರತಿಯೊಂದೂ ಮತ್ತೊಂದರ ಉಗ್ರ ಭಯದಿಂದ ಬೆದರುತ್ತ ಬಾಳುತ್ತಿವೆ. ಮತ್ತು ಒಂದರಿಂದ ಒಂದು ಅಷ್ಟೇ ಉಗ್ರವೂ ಭಯಂಕರವೂ ಆದ ಸಾಧನಗಳಿಂದ ತಮ್ಮನ್ನು ಸಂರಕ್ಷಿಸಿಕೊಳ್ಳಲು ಹವಣಿಸುತ್ತಿವೆ. ಅವುಗಳ ಬಾಂಬಿನ ಭಯಂಕರತೆ ಹೇಳುವುದು ಕಷ್ಟ. ಧೈರ್ಯ ಮತ್ತು ಸುರಕ್ಷತೆಯ ಭಾವನೆಗಳಿಗೆ ಭಯವು ಹೇಗೆ ಸ್ಫೂರ್ತಿದಾಯಕವಾಗುವುದೆಂಬುದು ಸ್ಪಷ್ಟವಾಗುವುದಿಲ್ಲ. ಅವುಗಳಂತೆಯೇ ಅವುಗಳ ರಕ್ಷಣಾ ಸಂರಕ್ಷಣೆಗಳನ್ನು ಬಯಸುವ ರಾಷ್ಟ್ರಗಳಿಗಾದರೂ ಭಯದಿಂದ ಮುಕ್ತ ಭಾವನೆಗಳು ಹೇಗೆ ಹುಟ್ಟುವುವೋ ತಿಳಿಯದು. ಒಂದು ಹಳೆಯ ಪದ್ಯದಲ್ಲಿ ಹೀಗಿದೆ.

"ಒಬ್ಬ ಭಿಕ್ಷು ಒಬ್ಬ ರಾಜನ ಹತ್ತಿರ ಭಿಕ್ಷೆ ಬೇಡಹೋದ. ರಾಜ ಪ್ರಾರ್ಥನಾಮಗ್ನನಾಗಿದ್ದ. 'ಸ್ವಾಮಿ, ನನ್ನ ರಾಜ್ಯವನ್ನೂ ಕೋಶವನ್ನೂ ಹೆಚ್ಚಿಸು; ನನ್ನ ವೈರಿಗಳ ದೊರೆಗಿಂತಲೂ ನನ್ನನ್ನು ಹೆಚ್ಚು ಶಕ್ತನನ್ನಾಗಿ ಮಾಡು' ಎಂದು ಅವನು ಬೇಡಿಕೊಳ್ಳುತ್ತಿದ್ದುದು ಭಿಕ್ಷುವಿಗೆ ಕೇಳಿಸಿತು. ಆಗ ಭಿಕ್ಷು ಭಿಕ್ಷೆ ಕೇಳದೆ ಹಿಂದಿರುಗಿ ಹೊರಟ. ಇದನ್ನು ಕಂಡ ಅರಸನು ಅವನನ್ನು ಹಿಂದಕ್ಕೆ ಕರೆಯಲು ದೂತನಿಗೆ ಆಜ್ಞಾಪಿಸಿದನು. ಭಿಕ್ಷೆಗಾಗಿ ಕಾಯದೆ ಹಿಂದಿರುಗಿದ ಕಾರಣವೇನೆಂದು ಅರಸ ಭಿಕ್ಷುವನ್ನು ಕೇಳಿದನು. ಅದಕ್ಕೆ ಭಿಕ್ಷುವು "ತಪ್ಪು ತಿಳುವಳಿಕೆಯಿಂದ ನಿನ್ನ ಆಸನದ ಹತ್ತಿರ ಯಾಚಿಸಲು ಬಂದಿದ್ದೆ. ತಿಳಿದದ್ದರಿಂದ ಹಾಗೆ ಹಿಂದಿರುಗಿದೆ. ತನ್ನಂತೆಯೇ ಯಾಚಕನಾದವನೊಬ್ಬನನ್ನು ತಾನು ಯಾಚಿಸಹೊರಟಿದ್ದುದು ನನಗೆ ಗೊತ್ತಾಗಲಿಲ್ಲ. ತಪ್ಪು ತಿಳಿದೊಡನೆಯೇ ತಾನು ನಿವೃತ್ತನಾಗಬಯಸಿದೆ" ಎಂದು ಹೇಳಿದ.

ಇದು ಅತಿ ಪಾಂಡಿತ್ಯವೆಂದು ತೋರಬಹುದು; ಸಾಹಿತ್ಯ ಚತುರರ ಕೂಟದಲ್ಲಿ ಹೇಳುವಂಥ ಗಂಭೀರವಾದ ರಾಜಕಾರಣದಲ್ಲಿ ಇದಕ್ಕೆ ಅರ್ಥವೆಲ್ಲಿಂದ ಬಂತು? ಎಂದು ನೀವು ಕೇಳಬಹುದು. ಆದರೆ ಸತ್ಯ ಸಂಗತಿಗಳನ್ನು ತಿರುಚದೆ ಸಹಜ ಸರಳತೆಯಿಂದ ಅವಲೋಕಿಸಿರಿ,—ಚಾಣಕ್ಯ ರಾಜತಂತ್ರ ಪ್ರವೀಣರ ದೃಷ್ಟಿಯಿಂದಲ್ಲ— ಎಂದು ಜಗತ್ತಿನ ಚಾಣಾಕ್ಷ ರಾಜನೀತಿಜ್ಞರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಅಣುಬಾಂಬು, ಜಲಜನಕ ಅಥವಾ ಕ್ರಿಮಿಯ ಬಾಂಬು ಇತರ ತತ್ಸದೃಶ ವಿನಾಶಕ ಆಯುಧಗಳು ಮನುಷ್ಯ ಕುಲವನ್ನು ಕಾಯಬಲ್ಲವೇ, ಉಳಿಸಬಲ್ಲವೇ?

ಹಳೆಯ ಸಾಹಿತ್ಯದಿಂದ ಮತ್ತೊಂದು ಕತೆಯನ್ನು ಎತ್ತಿ ಹೇಳುತ್ತೇನೆ. ಮಹಾಭಾರತ ಯುದ್ಧದಲ್ಲಿ ಭಯಂಕರ ಆಯುಧಗಳ ವರ್ಣನೆಗಳು ತುಂಬಿವೆ. ಅವುಗಳಲ್ಲಿ ನಾರಾಯಣಾಸ್ತ್ರವೆಂಬುದೊಂದು. ಅದಕ್ಕೆ ಪ್ರತ್ಯಸ್ತ್ರ ಇಲ್ಲವೇ ಇಲ್ಲವೆಂದು ವರ್ಣಿಸಲಾಗಿದೆ. ಅದರಿಂದ ಬದುಕಿ ಉಳಿಯುವ ಒಂದೇ ಒಂದು ಉಪಾಯವೆಂದರೆ ಇದ್ದ ಎಲ್ಲಾ ಆಯುಧಗಳನ್ನೂ ತೆಗೆದೊಗೆದು ಎಲ್ಲಿದ್ದರೂ ಸರಿಯೇ, ಅಲ್ಲಿಂದಲ್ಲಿ ಆಗಿಂದಾಗ ನಿಶ್ಚಲನಾಗಿ ಅಶಕ್ತನಾದ ವ್ಯಕ್ತಿ ಕುಳ್ಳಿರಬೇಕು. ಆ ಕಾಲದಲ್ಲಿ ಒಂದೇ ಒಂದು ನಾರಾಯಣಾಸ್ತ್ರವಿತ್ತು. ಅದು ಕೌರವರ ಕೈಯಲ್ಲಿತ್ತು. ಅವರು ಅದನ್ನು ಪಾಂಡವರ ಮೇಲೆ ಬಿಟ್ಟರು. ಆ ಕೂಡಲೇ ಕೃಷ್ಣನು ಅಸ್ತ್ರ ಆಯುಧಗಳನ್ನು ಬಿಸುಟು ನಿಶ್ಚಲರಾಗಿ ನಿಲ್ಲುವಂತೆ ಸೈನಿಕರಿಗೆ ಆಜ್ಞಾಪಿಸಿದನು. ದರ್ಪವಂತನಾದ ಭೀಮನೊಬ್ಬನನ್ನು ಬಿಟ್ಟು ಮಿಕ್ಕವರೆಲ್ಲರೂ ಆ ಆಜ್ಞೆಯನ್ನು ಪಾಲಿಸಿದರು. ಅವನು ತನ್ನ ಆಯುಧಗಳನ್ನು ಜೀವ ಉಳಿಸಿಕೊಳ್ಳುವ ಗಾಬರಿಯಿಂದ ಅತ್ತಿಂದಿತ್ತ ಬೀಸತೊಡಗಿದ್ದರಿಂದ ಅವು ಅವನ ಮೇಲೆಯೇ ತಿರುಗಿ ಬಿದ್ದವು. ಕೊನೆಗೆ ಶ್ರೀಕೃಷ್ಣನ ಬಲಾತ್ಕಾರದ ಆಜ್ಞೆಗೆ ಬಗ್ಗಿ ಭೀಮನು ವಿಧೇಯನಾದನು. ಅದರಿಂದ ನಾರಾಯಣ ಬಾಂಬು ನಿಷ್ಫಲವಾಯಿತು.

ಕಥೆ ತೀರ ಕಾಲ್ಪನಿಕವಾಗಿರಬಹುದು. ಆದರೆ ಅದರ ನೀತಿಯೇನೋ ಸ್ಪಷ್ಟವಾಗಿಯೇ ಇದೆ. ಯುದ್ಧದ ಭಯಂಕರ ಆಯುಧಗಳಿಂದ ಜೀವ ಉಳಿಸಿಕೊಳ್ಳಲಿರುವ ಏಕಮಾತ್ರ ಉಪಾಯವೆಂದರೆ ಧೈರ್ಯದಿಂದ ಹಿಡಿದ ಆಯುಧಗಳನ್ನು ತೆಗೆದು ಬಿಸಾಡುವುದು. ರಾಷ್ಟ್ರ [illegible] ಸ್ಪರ್ಧೆ ಮತ್ತು ಹೆಚ್ಚು ಹೆಚ್ಚು ಬಲಿಷ್ಠ ಆಯುಧಗಳನ್ನು ಹುಡುಕಿಕೊಂಡು ಹೊರಡುವುದು ಯುದ್ಧವನ್ನು ಬರದಂತೆ ಮಾಡಲಾರದು, ಶಾಂತಿಯನ್ನು ಸಾಧಿಸಿಕೊಡಲಾರದು, ಯಾವ ನಾಡಿಗೂ ಅಭಿವೃದ್ಧಿಯನ್ನುಂಟು ಮಾಡಲಾರದು. ಅಂಥ ಪ್ರಯತ್ನದಿಂದ ಕುಬೇರ ರಾಷ್ಟ್ರವಾದ ಅಮೇರಿಕ ಕೂಡ ದಿವಾಳಿಯಾಗಿ ಹೋದೀತು.

ಅಮೇರಿಕಕ್ಕೆ ಅನ್ವಯಿಸುವ ಮಾತು ಭಾರತ ಪಾಕಿಸ್ತಾನಗಳಿಗೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಉಭಯ ದೇಶಗಳೂ ಬುದ್ಧಿವಂತಿಕೆಯಿಂದ ನಡೆದುಕೊಳ್ಳಬೇಕು. ಪರಸ್ಪರ ಭಯ ಮತ್ತು ಪರಸ್ಪರರ ವಿರುದ್ಧವಾಗಿ ಸೈನ್ಯ ಬಲ ಹೆಚ್ಚಿಸಿಕೊಳ್ಳುವುದು ಯಾವನಿಗೂ ಲಾಭಕರವಲ್ಲ. ಈಸ್ಟ್ ಇಂಡಿಯಾ ಕಂಪೆನಿಯ ಕಾಲದಲ್ಲಿ ನಮ್ಮ ಹಿರಿಯರು ಮಾಡಿದ ತಪ್ಪನ್ನು ನಾವೀಗ ಪುನಃ ಮಾಡುವುದು ಬೇಡ. ವಿದೇಶೀಯ ಬಂಡವಾಳ ಮತ್ತು ತಜ್ಞರು ಹಳೆಯ ಮಾದರಿಯ ಹೊಸ ಆವೃತ್ತಿಗಳಷ್ಟೆ. ಎಷ್ಟೇ ದುರ್ಬುದ್ಧಿಯಿದ್ದರೂ ಭಾರತ ಪಾಕಿಸ್ತಾನಗಳು ಒಂದನ್ನೊಂದು ನಾಮಶೇಷ ಮಾಡಲಾರವು ಎಂಬುದು ನೆನಪಿರಲಿ. ಆದರೆ ಪರಸ್ಪರ ಸಹಿಷ್ಣುತೆಯಿಂದ ಅವು ಒಟ್ಟುಗೂಡಿದರೆ ಎರಡು ಪ್ರದೇಶಗಳನ್ನೂ ಸುಖ ಸಮೃದ್ಧವನ್ನಾಗಿ ಮಾಡಬಲ್ಲವು.

ಒಂದೇ ಒಂದು ಪ್ರಬಲವಾದ ಆಯುಧವೆಂದರೆ ನಿಶ್ಶಸ್ತ್ರರಾಗಿ ನಿಲ್ಲಲು ಧೈರ್ಯಪಡುವುದು. ಆದರೆ ಆ ಕೊನೆಯ ಹೆಜ್ಜೆಯನ್ನು ಇಡುವುದು ಬಹಳ ಕಠಿಣವಾದುದು. ಇದನ್ನು ಸಾಧಿಸುವ ಇತರ ಸುಲಭ ಮಾರ್ಗಗಳಿವೆ. ಒಂದು ಮಟ್ಟಕ್ಕಿಂತ ಹೆಚ್ಚಿನ ಆಕ್ರಮಕ ಆಯುಧಗಳನ್ನು ಬಳಸುವುದಿಲ್ಲವೆಂದು ಯಾವುದಾದರೂ ಒಂದು ದೇಶವು ಗೊತ್ತುಮಾಡಿಕೊಳ್ಳಬಹುದು. ಆ ಪ್ರಕಾರ ಒಂದು ದೇಶವು ಏನೇ ಬರಲಿ, ಯುದ್ಧವೇ ಒಂದು ವೇಳೆ ಆದರೂ ವಾಯುಮಾರ್ಗದಿಂದ ಬಾಂಬೆಸೆಯುವುದಿಲ್ಲ. ವಿಮಾನಗಳ ಮೂಲಕ ತಾನು ಯುದ್ಧ ಮಾಡುವುದಿಲ್ಲ—ಎಂದು ನಿರ್ಧರಿಸಬಹುದು. ಅನಂತರ ಮುಂದಿನ ಅವಸ್ಥೆಯಲ್ಲಿ ಹಡಗುಗಳನ್ನು ಬಳಸುವುದಿಲ್ಲವೆಂದು, ಬಾಂಬು, ಬಂದೂಕು ಮುಂತಾದವನ್ನು ಹಿಡಿದಿರದ ಜನರಿಗೆ ಗುಂಡು ಹೊಡೆಯುವುದಿಲ್ಲವೆಂದೂ—ಹೀಗೇ ಕ್ರಮಕ್ರಮವಾಗಿ ಸರಕಾರಗಳ ವಿರುದ್ಧ ಸರಕಾರಗಳು ಮತ್ತು ಪರಸ್ಪರವಾಗಿ ಯುದ್ಧ ಮಾಡುವುದನ್ನೇ ಬಿಡುವವರೆಗೆ ಶಸ್ತ್ರತ್ಯಾಗ ನೀತಿಯನ್ನು ಒಯ್ದು ಮುಟ್ಟಿಸಬಹುದು. (ಪ್ರಜಾಜನ,

---


## ಗಮನಿಸಿರಿ!

ದಿನದಿನಕ್ಕೆ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವುದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಷ್ಟ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯು ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

**ಪಟ್ಟೊ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
52-11 ಟೌನ್‌ಹಾಲಿನ ಎದುರು, ಮೈಸೂರು.


---


## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ.

### ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್ ಪೇಟೆ, ತಾ. 30-9-4[illegible].

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

# ಜಪಾನದ ಸಾಹಸ.

ಜಪಾನ ದೇಶವು ಯೂರೋಪಿಗಿಂತಲೂ ಸಾಹಸಿಯಾದ ಭಾಗವಾಗಿದೆ. ಅದರ ಗಾತ್ರ, ಜನಸಂಖ್ಯೆಯನ್ನು ನೋಡಿದರೆ ಮಹತ್ವಾದುದೇನೂ ಅಲ್ಲ. ಆದರೆ ಅದು ಕಾಲ ಕಾಲಕ್ಕೆ ತೋರಿಸುವ ಧೈರ್ಯ, ಸಾಹಸ, ಉದ್ಯೋಗ ಪ್ರಿಯತೆ, ಶೌರ್ಯ, ದೇಶಾಭಿಮಾನ, ಕಷ್ಟ ಸಹಿಷ್ಣುತೆಗಳು ಬೆರಳು ಕಚ್ಚಿಸದೇ ಇರಲಾರವು.

ಭಾರತವು ಯುದ್ಧ ಕಾಲದಲ್ಲಿ ಅಷ್ಟೇನೂ ಗಾಸಿಯಾಗಲಿಲ್ಲ. ಸಮೃದ್ಧ ದೇಶ, ಈಗಂತೂ ಸ್ವಾತಂತ್ರ್ಯ ಸಿಕ್ಕಿದೆ. ಹೀಗಿದ್ದರೂ ನಮ್ಮಲ್ಲಿಯ ಜನರು ಕಣ್ಣು ಗುತ್ತಿರುವುದನ್ನು, ದೂರುತ್ತಿರುವುದನ್ನು ಮತ್ತು ಅನ್ನ ಹೊಡೆಯುತ್ತಿರುವುದನ್ನು ನೋಡಿದರೆ ದಿಗ್ಭ್ರಮೆ ತಪ್ಪದಾಗುತ್ತದೆ. ಈ ಮೂಲಕ ನಮ್ಮ ಜೀವನವನ್ನು ಈಗ ಮೇಲಕ್ಕೆತ್ತಬೇಕಾದ ತಾಯ್ನಾಡನ್ನು ಮಾಡುತ್ತಿದ್ದವರು ಗಂಡು ಹಚ್ಚಬೇಕಾಗಿದೆ

ಈ ವಿಷಯದಲ್ಲಿ ಜಪಾನದಲ್ಲಿಯ ಸದ್ಯದ ರೀತಿ ನೀತಿಗಳನ್ನು ನೋಡಿ ನಾವು ಅನೇಕ ವಿಚಾರಗಳನ್ನು ಕಲಿತುಕೊಳ್ಳಬೇಕಾಗಿದೆ.

ಅದು ಸಣ್ಣ ದೇಶ, ೭೮,೯೧೯ ಚದರ ಮೈಲು ಅದರ ಕ್ಷೇತ್ರ. ಜನಸಂಖ್ಯೆ ೭ ಕೋಟಿ ೯೦ ಲಕ್ಷ. ಅದರ ಭೂಮಿಯು ನಿಸ್ಸಾರವಾದದ್ದು, ಗದ್ದೆ ಗಾಡು ಪ್ರದೇಶ. ಭೂಕಂಪನ ಹಾವಳಿಯು ಸದಾ ಇದ್ದದ್ದೇ. ಸಾಲದ್ದಕ್ಕೆ ಕಳೆದ ಹತ್ತೆಂಟು ವರ್ಷಗಳಿಂದ ಅದು ಯುದ್ಧದ ಹಾವಳಿಯ ಬಹಳ ಪೆಟ್ಟು ತಿನ್ನುತ್ತ ಬಂದಿದೆ. ಹೋದ ಜಾಗತಿಕ ಮಹಾಯುದ್ಧದಲ್ಲಿಯಂತೂ ಅದು ಅಣುಬಾಂಬಿನ ಸವಿಯನ್ನು ನೋಡಬೇಕಾಯಿತು. ಅದರ ಮಹತ್ವದ ಪಟ್ಟಣಗಳಾದ ನಾಗಾಸಾಕಿ, ಹಿರೋಶಿಮಾ ಪಟ್ಟಣಗಳು ಉರುಳಿದವು.

ಇಷ್ಟಾದರೂ ಜಪಾನವು ಹತಾಶನಾಗಲಿಲ್ಲ. ಎದೆಗೆಡಲೂ ಇಲ್ಲ. ತನ್ನ ಸಾಹಸೀ ವೃತ್ತಿಯಿಂದ ಅದು ಮುಂದೆ ಸಾಗುತ್ತಿದೆ. ಆನೆಯಂತೆ ಇಷ್ಟು ರಷ್ಯವನ್ನು ನೋಡಿ ಅದು ಸಿಂಹದಂತೆ ಹಿಂದಕ್ಕೆ ಒಮ್ಮೆ ಸೋಲಿಸಿಬಿಟ್ಟಿತ್ತು. ಕೇವಲ ಔದ್ಯೋಗಿಕ ಯಶಸ್ಸಿನ ಮೇಲೆ ಅದು ಉತ್ಕರ್ಷ ಹೊಂದುತ್ತ ಬಂದಿದೆ. ಎರಡನೆಯ ದೇಶಗಳಿಂದ ಮೂಲ ವಸ್ತುಗಳನ್ನು ತರಿಸಿಕೊಂಡು ಅವುಗಳಿಂದ ಸಿದ್ಧ ವಸ್ತುಗಳನ್ನು ಹುಟ್ಟಿಸಿ ಕಳುಹಿಸುತ್ತದೆ.

ವಿಮಾನ ಗಾರಿಕೆಯು ಅದರ ಮುಖ್ಯ ಉದ್ಯೋಗಗಳಲ್ಲಿ ಒಂದಾಗಿದೆ. ಹಡಗು ಕಟ್ಟುವುದು ಅದರ ವಿಶೇಷ ವ್ಯವಸಾಯವಾಗಿದೆ. ಸಮುದ್ರ ಮತ್ತು ಹಡಗುಗಳ ಸಹಾಯದಿಂದ ಅದು ತನ್ನ ವಸ್ತುಗಳನ್ನು ಹೊರಗಿನ ದೇಶಗಳಿಗೆ ಕಡಿಮೆ ಬೆಲೆಗೆ ನೂರಲು ಶಕ್ತವಾಗುತ್ತ ಬಂದಿದೆ.

**ಸುಧಾರಿಸಿಕೊಳ್ಳುವಿಕೆ**

ಕಳೆದ ಯುದ್ಧದ ನಂತರ ಜಪಾನದ ಸ್ಥಿತಿಯೇ ಅದಂತಾಗಿತ್ತು. ಅದು ಇನ್ನು ಮುಂದೆ ಮೇಲಕ್ಕೇಳುವುದು ಎಂತಹ ಮಾತೋ ಏನೋ ಎಂದು ಎನಿಸುತಿತ್ತು. ಆದರೆ ಅದು ಇತ್ತೀಚೆಗೆ ಪುನಃ ಮಾಡಿಕೊಂಡ ಪ್ರಗತಿಯು ಅದರ ಸಾಹಸೀ ವೃತ್ತಿಗೆ ಶೋಭಿಸುವಂತಿದೆ.

ನಮ್ಮಲ್ಲಿ ಇರುವಂತೆ ಅಲ್ಲಿಯೂ ನಿಯಂತ್ರಣಗಳಿವೆ. ಯುದ್ಧದ ನಂತರ ಆಂದೋಲನಗಳಿಂದಲೇ ಇಷ್ಟು ಇಲ್ಲಿ ಬರಿಪೆಯು ತೆಟ ಗೃತೆಯು ಜಪಾನದಲ್ಲಿ ಬಹಳ ನಾಯಿತು. ಇಡೀ ದೇಶಕ್ಕೆ ೧೫ ಕೋಟಿ ೮೦ ಲಕ್ಷ ೮೦ ಸಾವಿರ ಗಜ ಅರಿವೆಯು ಆಗ ವರ್ಷಕ್ಕೆ ಕೊಡಲ್ಪಡುತ್ತಿತ್ತು. ಆ ವರೆ ಪ್ರತಿಯೊಬ್ಬನಿಗೆ ೧½ ಗಜದಷ್ಟು ಬಂದಿತು. ನಕ್ತ ಅದನ್ನು ಬಟ್ಟೆ ಜನರ ಸ್ವಂತಕ್ಕಾಗಿ ಉಪಯೋಗಿಸದೆ ಕಳ್ಳಸಂತೆಯಲ್ಲಿ ಮಾರಿಕೊಳ್ಳುತ್ತಿದ್ದರು. ಸೈನ್ಯಕ್ಕೆ ಕೊಡುವ ಅರಿವೆ ಮೂಲದ ವಸ್ತುಗಳ ಕಳ್ಳಪೇಟೆಯ ಆವ್ಯಾಹತವಾಗಿ ನಡೆಯುತ್ತಿತ್ತು.

ಆದರೆ ಈ ವರ್ಷಗಳಲ್ಲಿ ಈ ಪರಿಸ್ಥಿತಿಯು ಬದಲಾಯಿಸಲಿಕ್ಕೆ ಸಂದಾಯಿಸಿದೆ. ಉರುಟೆ ಅರಿವೆ ಈಗ ಅಲ್ಲಿಯವರಿಗೆ ಬೇಕಾದಷ್ಟು ಸಿಕ್ಕಿ ಉಳಿದದ್ದು ಪರದೇಶಕ್ಕೆ ಹೋಗುತ್ತಿದೆ. ಕೇವಲ ಉಪ್ಪು, ಸಕ್ಕರೆ ಇವು ಅಲ್ಲದೆ ಮತ್ತು ಉಳಿದ ವಸ್ತುಗಳ ಮೇಲೆ ಇಂದು ಅಲ್ಲಿ ನಿಯಂತ್ರಣವಿದೆ. ಮುಂದಿನ ವರ್ಷ ಅದೂ ಹೋಗಲಿದೆಯೆಂದು ತೋರುತ್ತಿದೆ.

ಮನೆಗಳ ಕೊರತೆಯು ಜಪಾನದಲ್ಲಿ ಇರುವುದು. ಯುದ್ಧದ ಮೂಲಕ ೮ ಲಕ್ಷ ೬೦ ಲಕ್ಷ ಮನೆಗಳು ನಾಶವಾದವು. ೧೯೪೫ರ ಕೊನೆಯ ವೇಳೆಗೆ ೧೨ ಲಕ್ಷ ಮನೆಗಳನ್ನು ಕಟ್ಟಿದ್ದಾರೆ. ಮತ್ತು ಈಗ ೬ ಲಕ್ಷ ಮನೆ ಕಟ್ಟುವಿಕೆಗೆ ಸಹಾಯಮಾಡುವ ಒಂದು ಯೋಜನೆಯನ್ನು ಅಲ್ಲಿಯ ಸರಕಾರವು ಸಿದ್ಧಮಾಡಿದೆ.

ಔದ್ಯೋಗಿಕ ಹುಟ್ಟುವಳಿಯ ಸಂಬಂಧವಾಗಿ ಕೂಡ ಜಪಾನವು ಪುನಃ ಬಹಳ ಪ್ರಗತಿಯನ್ನು ಮಾಡಿದೆ. ೧೯೪೬ರಿಂದ ೩೩ರ ವರೆಗೆ ಅಂದು ಹುಟ್ಟಿಸುತ್ತಿದ್ದ ವಸ್ತುಗಳ ನೂರಕ್ಕೆ ೭೫ರಷ್ಟನ್ನು ಈಗ ಉತ್ಪನ್ನ ಮಾಡುತ್ತಿದೆ.

ಹಡಗು ಪಡೆಯಲು ಹಾಗೂ ಜಪಾನದ ವೈಶಿಷ್ಟ್ಯವಾಗಿದೆ. ಯುದ್ಧದ ನಂತರ ಅದು ಈ ವಿಷಯದಲ್ಲಿ ಕೂಡ ಮುಂದುವರಿದಿದೆ. ೧೯೫೦-೫೧ರ ಕೊನೆಯ ವರ್ಷಕ್ಕೆ ೫೧ ಲಕ್ಷ ಟನ್ ಭಾರದ ಹಡಗುಗಳನ್ನು ಕಟ್ಟುವ ನಿಶ್ಚಯಮಾಡಿದೆ.

ಆಯಾತ ನಿರ್ಯಾತಗಳ ವಿಷಯದಲ್ಲಿಯೂ ಜಪಾನದ ಪ್ರಗತಿಯು ನೋಡುವಂತಹದಿದೆ. ೧೯೪೯-೫೦ನೇ ವರ್ಷದಲ್ಲಿ ಅದು ಪರದೇಶಗಳಿಂದ ೮೧ ಕೋಟಿ ರೂಪಾಯಿಗಳ ವಸ್ತುಗಳನ್ನು ತರಿಸಿತು. ಮತ್ತು ೬೫ ಕೋಟಿ ರೂಪಾಯಿಗಳ ಸಾಮಾನನ್ನು ಪರದೇಶಗಳಿಗೆ ಕಳಿಸಿತು. ಎಲ್ಲ ದೇಶಗಳು ಇಚ್ಛಿಸುತ್ತಿರುವಂತೆ, ಅದು ಆಯಾತವನ್ನು ಕಡಿಮೆ ಮಾಡಿ ನಿರ್ಯಾತವನ್ನು ಹೆಚ್ಚಿಸುವ ಆಕಾಂಕ್ಷೆಯನ್ನು ಇಟ್ಟುಕೊಂಡಿದೆ ಮತ್ತು ಅದನ್ನು ಸಾಧಿಸುವ ಆತ್ಮ ವಿಶ್ವಾಸವನ್ನು ಪಡೆಯುತ್ತಿದೆ. ಅಂದರೆ ಈಗ ಅದು ಅಮೇರಿಕೆಯಿಂದ ಪಡೆಯುತ್ತಿದ್ದ ಆರ್ಥಿಕ ಸಹಾಯವನ್ನು ಅಪೇಕ್ಷಿಸುವ ಅವಶ್ಯಕತೆಯು ಉಳಿಯುವ ದಿಕ್ಕಿಂದ ಆಗು ಹೋಗುತ್ತಿದೆ.

ಪಾರತಂತ್ರ್ಯ, ಪರಾವಲಂಬನೆಗಳನ್ನು ಜಪಾನವು ಎಂದೂ ಸಹಿಸುತ್ತಿಲ್ಲ. ನಿರ್ವಾಹವಿಲ್ಲದೆ ಇದು ಇಂದಿನ ಶೋಚನೀಯ ಸ್ಥಿತಿಯನ್ನು ನುಂಗಿಕೊಂಡಿದ್ದು ಅದನ್ನು ಸಾಧ್ಯವಾಗುತ್ತಲೇ ಮತ್ತು ಅದನ್ನು ಬೇಗನೆ ನೀಗಬೇಕೆಂದು ಯತ್ನಿಸುತ್ತಿದೆ.

**ಮನಸ್ಸು ಬೇಕು.**

ಇಂತಹ ಕಠಿಣ ಸ್ಥಿತಿಯಲ್ಲಿ ಜಪಾನದ ಸ್ವಾತಂತ್ರ್ಯಲಿಪ್ಸು ಯಾವುದೇ ಇತರ ದೇಶವು ಹೆತಾಶನಾಗಬಹುದಾಗಿತ್ತು. ಆದರೆ ಜಪಾನವು ಗತಕಾಲಕ್ಕಾಗಿ ಚಿಂತಾಕ್ರಾಂತವಾಗಿ ಕುಳಿತುಕೊಳ್ಳದೆ, ಭವಿಷ್ಯದ ಕಡೆಗೆ ಲಕ್ಷ್ಯವಿಟ್ಟು ಒಂದೇ ಸವನೆ ಸಾಗುತ್ತಿದೆ. ಎಲ್ಲ ಜಪಾನೀಯರು ಒಂದೇ ಮನಸಿನವರಂತೆ ಕೆಲಸ ಮಾಡುತ್ತಿದ್ದಾರೆ.

ಅಮೇರಿಕೆಯ ಪಾಶ್ಚಾತ್ಯತೆಯನ್ನು ನೀಗುವುದಕ್ಕಾಗಿ ಜಪಾನವು ಮಾಡಿದ ಪ್ರಯತ್ನವನ್ನು ನೋಡಿದರೆ ಅದರ ಸ್ವಾಭಿಮಾನ ದೃಷ್ಟಿಯು ಕಲ್ಪನೆಯಾಗುವಂತಿದೆ. ಗಿರಣಿಯ ಒಡೆಯರು, ಕೂಲಿಕಾರರು ಎಲ್ಲರೂ ಮತಭೇದವಿಲ್ಲದೆ, ಪರಸ್ಪರರ ಹಿತಸಂರಕ್ಷಣೆ ಮಾಡುತ್ತ ಕೆಲಸಮಾಡುತ್ತಿದರೆಂದು ಹೇಳಲಾಗುತ್ತದೆ. ಅತಿ ರಹಿತ ವ್ಯಕ್ತಿಯಿಂದ ಆ ಮುರ್ನೂರಕ್ಕೂ ಸ್ವ ವ್ಯಕ್ತಿಗೆ ಆ ಭಾವನೆ ಏನಿದ್ದರೆ ಇಂದಿನ ಭಾರತೀಯ ಪರಿಸ್ಥಿತಿಯಲ್ಲಿ ವರ್ಷನ್ನಗ್ಗಿ ಹಾರಾಡಬಲ್ಲರು.

ಜೀವನ ಪರಿಸ್ಥಿತಿಗಳು ಮಂಗಳ ಆಯುಧ್ಯದ ಪರಿಸ್ಥಿತಿಯನ್ನು ನೋಡಿದರೂ ಈ ಏಳೆಂಟು ವರ್ಷಗಳಲ್ಲಿ ಮಾಡಿಕೊಂಡ ಪ್ರಗತಿಯು ಎದ್ದು ಕಾಣುತ್ತಿದೆ. ಇದೆಲ್ಲ ನೋಡಿದರೆ ಯುದ್ಧಾನಂತರದ ಆ ಸಿಪ್ಪ ಪರಿಣಾಮದಿಂದ ಜಪಾನವು ಇತರ ದೇಶಗಳಿಗಿಂತ ಬೇಗನೆ ಪಾರಾಗುವುದೆಂಬ ಲಕ್ಷಣಗಳು ನಿಚ್ಚಳವಾಗಿ ತೋರುತ್ತಿವೆ. (ಪ್ರಹೇಲಿ)

---

## ಕೊಡಗು ಮಾಜಿ ಸಿಪಾಯಿಗಳ ಸಹಕಾರ ಸಂಘ.

ತಾರೀಖು ೨೪-೩-೧೯೫೩ರಲ್ಲಿ ಕೊಡಗು ಕೌನ್ಸಿಲ್ ಹಾಲಿನಲ್ಲಿ ಪೂರ್ವಾಹ್ನ ೧೧ ಗಂಟೆಗೆ ಕೊಡಗು ಚೀಫ್ ಕಮಿಷನರ ಅಂದಿನ ದಿವಾನ್ ಬಹದೂರ್ ಸಿ. ಬಿ. ಮೊಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಕೊಡಗು ಮಾಜಿ ಸಿಪಾಯಿಗಳ ಮಹಾ ಸಭೆಯ ಮೀಟಿಂಗು ಜರುಗಿ ಮಾಜಿ ಸಿಪಾಯಿಗಳ ವಿವಿಧ ಉದ್ದೇಶದ ಒಂದು ಸಹಕಾರ ಸಂಘವನ್ನು ಸ್ಥಾಪಿಸುವಂತೆ ತೀರ್ಮಾನವಾಯಿತು. ಕಾರ್ಯ ನಿರ್ವಹಿಸಲು ತಾತ್ಕಾಲಿಕ ಬೋರ್ಡನ್ನು ಸ್ಥಾಪಿಸಿ ಈ ಕೆಳಗಿನ ಮಹನೀಯರುಗಳನ್ನು ಡೈರೆಕ್ಟರುಗಳಾಗಿ ಚುನಾಯಿಸಲಾಯಿತು.

ಅಧ್ಯಕ್ಷರು.

ಮೇಜರ್ ಸಿ. ಬಿ. ಕಾರ್ಯಪ್ಪ ಇವರು.

ಸೆಕ್ರೆಟರಿ.

ಶ್ರೀ ಕೆ. ಎಸ್. ಅಪ್ಪಚ್ಚು ಇವರು.

ಮಡಿಕೇರಿ

ಶ್ರೀ ಎಂ. ಎ. ಕೆ. ಮೂರ್ತಿ, ಬಿ. ಎ. ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸರು.

ಶ್ರೀಗಳಾದ ಬಾಚಿಟ್ಟಿರ ಗಣಪತಿ, ಬಿ. ಟಿ. ಗೋವಿಂದಯ್ಯ, ಎನ್. ಟಿ. ಪೂನ್ನಪ್ಪ, ಎ. ಜೆ. ಅಪ್ಪಣ್ಣ, ಕೆ. ಅಪ್ಪಯ್ಯ, ಕೋದಂಡ ನಾಣಯ್ಯ, ಇವರುಗಳು.

ಪೊನ್ನಂಪೇಟೆ

ಸರ್ದಾರ್ ಬಹದೂರ್ ಪಟ್ಟಮಾಡ ಚಿಟ್ಟಿಯಪ್ಪ ಇವರು

ವೀರಾಜಪೇಟೆ

ಶ್ರೀಗಳಾದ ಎನ್. ಬಿ. ಉತ್ತಪ್ಪ, ಎ. ಬಿ. ಅಪ್ಪಯ್ಯ, ಎ. ಎಂ. ಪೊನ್ನಪ್ಪ, ಬಿ. ಎ. ಕೆ. ದಿಸ್ಟೆ, ಕೆ. ಎಂ. ಮಾದಯ್ಯ ಇವರುಗಳು.

ನಾಪೋಕ್ಲು

ಶ್ರೀಗಳಾದ ಚಿಮೊಡಿರ ಪೂವಣ್ಣ, ಕ. ಎ. ಕ ಅಪ್ಪ, ಕಲಿಯಂಡ ಪೂವಣ್ಣ ಇವರುಗಳು.

ಸೋಮವಾರಪೇಟೆ

ಶ್ರೀಗಳಾದ ಡಿ. ಎಸ್. ರಾಮಪ್ಪ, ಬಿ. ಎಂ. ಬೆಳ್ಯಪ್ಪ ಇವರುಗಳು.

ಶ್ರೀಮಂಗಲ

ಶ್ರೀ ಕೆ. ಎಸ್. ಉತ್ತಪ್ಪ ಇವರು.

ಪೊನ್ನಂಪೇಟೆ

ಶ್ರೀ ಸಿ. ಜೆ. ಬೆಳ್ಯಪ್ಪ ಇವರು.

ಸಿದ್ದಾಪುರ

ಮೇಜರ್ ಎ. ಎಂ. ನಬ್ ಇವರು.

ಅಮ್ಮತ್ತಿ

ಕ್ಯಾಪ್ಟನ್ ಪೊನ್ನಣ್ಣ ಇವರು.

ಗೋಣಿಕೊಪ್ಪ

ಶ್ರೀ ಕೆ. ಪಿ. ಬಿದ್ದಪ್ಪ ಇವರು.

ಆಯಾಯ ಕೇಂದ್ರಗಳಲ್ಲಿ ಬೋರ್ಡಿನ ಡೈರೆಕ್ಟರುಗಳಿಗೆ ಪ್ರತಿಯೊಬ್ಬ ಮಾಜಿ ಸಿಪಾಯಿಯನ್ನು ಸಂದರ್ಶಿಸಿ, ಸಂಘದ ಉದ್ದೇಶವನ್ನು ವಿವರಿಸಿ ಶೇರು ಹಣವನ್ನು ಮತ್ತು ಸಂಘದ ಸದಸ್ಯತ್ವದ ಪ್ರವೇಶ ಧನವನ್ನು ವಸೂಲು ಮಾಡುವ ಹಕ್ಕನ್ನು ಕೊಡಲಾಗಿದೆ. ಆ ಬಗ್ಗೆ ಕಾರ್ಯದರ್ಶಿಯವರಿಂದ ಬೇಕಾದ ರಶೀತಿ ಪುಸ್ತಕ ಮತ್ತು ಪ್ರಚಾರ ಪತ್ರಗಳನ್ನು ಪಡೆದುಕೊಂಡು ವಸೂಲಾದ ಹಣವನ್ನು ಆಗಿಂದಾಗ್ಗೆ ಕೊಡಗು ಸಹಕಾರ ಸಂಘದ ಮತ್ತು ಇದರ ವ್ಯಾಂಕೀಕ ಬ್ಯಾಂಕುಗಳಲ್ಲಿ ಪಾವತಿಮಾಡಿ ರಶೀದಿಯನ್ನು ಹೊಂದಿಕೊಳ್ಳಬೇಕೆಂದು ನಿರ್ಣಯಿಸಲಾಗಿದೆ.

ವಿವಿಧ ಉದ್ದೇಶಗಳಲ್ಲಿ ಮೊದಲಿನದಾಗಿ ಮೋಟಾರ್ ಟ್ರಾನ್ಸ್‌ಪೋರ್ಟ್ ಶಾಖೆಯನ್ನು ತೆರೆಯುವುದಾಗಿಯೂ ಆ ಪ್ರಯುಕ್ತ ೫೦,೦೦೦ ರೂಪಾಯಿಗಳ ಪಾಲು ಹಣವನ್ನು ಶೇಖರಿಸುವಂತೆಯೂ ತೀರ್ಮಾನವಾಯಿತು.

ಪ್ರತಿಯೊಬ್ಬ ಮಾಜಿ ಸಿಪಾಯಿಯೂ ತಮ್ಮ ತಮ್ಮ ಕೇಂದ್ರದ ಸಂಘದ ಬೋರ್ಡ್ ಡೈರೆಕ್ಟರನ್ನು ಸಂದರ್ಶಿಸಿ ತಮ್ಮ ಹೆಸರು ಮತ್ತು ವಿಳಾಸವನ್ನು ದಯವಿಟ್ಟು ಕೊಟ್ಟಲ್ಲಿ ಜಾಗ್ರತೆಯಾಗಿ ಪ್ರತಿಯೊಬ್ಬ ಮಾಜಿ ಸಿಪಾಯಿಯು ಹೆಸರು ದಾಖಲು ಮಾಡಲು ಅನುಕೂಲವಾಗುತ್ತದೆ.

ಕೆ. ಎಸ್. ಅಪ್ಪಚ್ಚು,
ಸೆಕ್ರೆಟರಿ,
ಮಾಜಿ ಸಿಪಾಯಿಗಳ ವಿವಿಧ ಉದ್ದೇಶ ಸಂಘ, ಮಡಿಕೇರಿ, (ಕೊಡಗು)

# ದಿ ಟ್ರಾಪಿಕಲ್

**ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.**

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

| | |
|---|---|
| ಆರ್ಗನೈಸರ್ | ಆರ್ಗನೈಸರ್ |
| ದಕ್ಷಿಣ ಕೊಡಗು, ಪೊನ್ನಂಪೇಟೆ. | ಉತ್ತರ ಕೊಡಗು, ಮಡಿಕೇರಿ. |
| ಅಥವಾ | ಅಥವಾ |
| ಯಂ. ಯು. ಅಚ್ಚಣ್ಣ, | ಎಂ. ಎ. ಬೆಳ್ಯಪ್ಪ, |
| ಏಜನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗು. | ಹಂಪನಕಟ್ಟಾ, ಮಂಗಳೂರು. |



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

**ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.**

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 246 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–31



## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | „ |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

# ಎಂಪೈರ್ ಆಫ್ ಇಂಡಿಯಾ

**ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

ಶೋಭನ್‌ಲಾಲ್, ಜನರಲ್ ಮೇನೇಜರ್.

| | |
|---|---|
| ಪ್ರಧಾನ ಕಛೇರಿ: | ಶಾಖಾ ಕಛೇರಿ: |
| ಎಂಪೈರ್ ಹೌಸ್, ಹಾರ್ನಬಿ. | ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, |
| ರೋಡ್, ಫೋರ್ಟ್, ಬೊಂಬಾಯಿ. | ಕೆಂಪೇಗೌಡರಸ್ತೆ, ಬೆಂಗಳೂರು. |



# CRESCENT

**FOR PROTECTION AND SERVICE.**

**It is best to represent and insure with**

**The CRESCENT Insurance Co., Ltd.,**

*H. O: BOMBAY.* [*Established 1919.*

*For particulars write to:*

| | | |
|---|---|---|
| **Sri B. A. Poovaiah** | **or** | **The Branch Manager,** |
| *Organiser* | | *22 B. Mahatma Gandhi Road,* |
| *Pollibetta, Coorg.* | | *Bangalore 1.* |

**ಸುರಕ್ಷಿತವಾದ ಜೀವವಿಮೆ ಪಡೆಯಲು**

# ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



ಭದ್ರತೆ! 17 ವರ್ಷಗಳ ಪ್ರಾಯ ಅನುಕೂಲತೆ !!
ಅನುಭವಶೀಲನೆ!!

# ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,

**ಕದ್ರಿ ರೋಡ್, ಮಂಗಳೂರು.**

**ನಿರಖು ಠೇವಣಾತಿ ಬಡ್ಡಿ ದರ:-**

| | | |
|---|---|---|
| 3 | ತಿಂಗಳು | 3% |
| 6 | „ | 3½% |
| 12 | „ | 3¾% |
| 24 | „ | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

**ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.**

**ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.**

**ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,**

**ಮಡಿಕೇರಿ ಶಾಖೆ, ಮಡಿಕೇರಿ.**



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸಿದರೆ ತಿಳಿದುಕೊಳ್ಳಬಹುದು.

| | |
|---|---|
| ಎಂ. ಎಸ್. ಸೋಮಯ್ಯ, | ಕೆ. ಪಿ. ಅಪ್ಪಯ್ಯ, M. L. C. |
| ಗೌ. ಕಾರ್ಯದರ್ಶಿ, | ಪ್ರೆಸಿಡೆಂಟ್ ಮತ್ತು ಮೆನೇಜರ್. |



**ಶ್ರೀ ಟಿ. ಎಸ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**



**Edited, Printed and Published by P. I. Belliappa at 'Kodagu' Press, Mercara, for 'Kodagu' Ltd.**

Reg. No. M. 1880.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 5-0-0.

ಸಂಪುಟ ೨೮ | ತಾರೀಕು ೩೧-೩-೧೯೫೦ನೇ ಶುಕ್ರವಾರ | ಸಂಚಿಕೆ ೪೪

## ವಾರ್ತೆಗಳು.

ಬ್ರಿಟಿಷ್ ರಾಜಕುಮಾರಿ ಎಲಿಜಬೆತ್‌ಗೆ ತಿರಿಗಿ ಬಸುರಿಯೆಂದು ಕೇಳಿಬರುತ್ತದೆ. ಆವಳ ಪ್ರಥಮ ಮಗ ಚಾರ್ಲ್ಸನಿಗೆ ಈಗ ವಯಃ ೧ ವರ್ಷ ೪ ತಿಂಗಳು.

ಬ್ರಿಟನಿನ ೧೯೫೦-೫೧ ರ ರಕ್ಷಣಾ ಬಜೆಟ್ಟಿನಲ್ಲಿ ೭೮೦,೮೫೦,೦೦೦ ಪವನು ಪರಮಾಣು ಸಂಶೋಧನೆಯ ಕಾರ್ಯಭಾಗ ಗೋಪ್ಯ ಪ್ರಾರ್ಥಕ ಮಂತ್ರಿಮಂಡಲಕ್ಕೆ ಹೋಗುವುದು

ಮುಂಬಯಿ ಸರಕಾರ ಪ್ರಚುರ ಪಡಿಸಿದಂತೆ ಮುಂಬಯಿ ಪ್ರಾಂತ್ಯದಲ್ಲಿರುವ ಒಟ್ಟು ಭಿಕ್ಷುಕರ ಸಂಖ್ಯೆ ೪೩,೦೦೦.

ಮಕ್ಕಳ ಪಾಲನೆ ಪೋಷಣೆಯ ಕುರಿತು ತರಬೇತಿ ಕೊಡುವ ಕೇಂದ್ರವೊಂದು ಕಲ್ಕತ್ತದಲ್ಲಿ ಸದ್ಯದಲ್ಲೇ ತೆರೆಯಲ್ಪಡುವುದು.

ಆಲ್ ಇಂಡಿಯಾ ಸ್ಪಿನ್ನರ್ಸ್ ಅಸೋಸಿಯೇಶನ್ ಆಶ್ರಯದಲ್ಲಿ ಅಖಿಲಭಾರತ ನೂಲುವ ಸ್ಪರ್ಧೆಗಳು ಏಪ್ರಿಲ್ ೬ ರಿಂದ ೧೩ ರ ತನಕ ಅಂಗುಲ್ (ಒರಿಸ್ಸಾ)ದಲ್ಲಿ ಜರಗುವ ಸರ್ವೋದಯ ಪಂಕ್ತಿಯ ಕಾಲದಲ್ಲಿ ಜರಗುವವು

ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್ ಕಾರ್ಪೋರೇಶನ್‌ದವರು ಪರಮಾಣು ಶಕ್ತಿಯಿಂದ ನಡೆಯುವ ಒಂದು ಜಲಾಂತರ್ಗಾಮಿಯನ್ನು ತಯಾರಿಸುತ್ತಿದ್ದಾರೆ. ಯಾವದೇ ರೀತಿಯ ಪೆಟ್ರೋಲ್ ಇಲ್ಲವೇ ಎಣ್ಣೆ ತುಂಬಿಸದೆ ದೀರ್ಘ ಕಾಲ ಇದು ಚಲಿಸಬಲ್ಲದಂತೆ.

ತಗಲಿದ ಮಾತ್ರಕ್ಕೆ ಮರಣವನ್ನೇ ತರುವ ಅತ್ಯಂತ ಪ್ರಳಯಕಾರೀ 'ಮೃತ್ಯುಕಿರಣ' ಎಂಬ ಅಸ್ತ್ರವನ್ನು ರಷ್ಯವು ತಯಾರಿಸತೊಡಗಿದೆಯೆಂದು, ರಷ್ಯದ ಒಂದು ಪರಮಾಣು ಶಾಖೆಯಿಂದ ತಪ್ಪಿಸಿಕೊಂಡು ಬಂದ ಅರ್ಮೇನಿಯನೊಬ್ಬನು ಲಂಡನಿನಲ್ಲಿ ವ್ಯಕ್ತಪಡಿಸಿದ್ದಾನೆ

ವಾಷಿಂಗ್ಟನ್ ಮೃಗಾಲಯಕ್ಕೆ ಭಾರತದ ಪ್ರಧಾನ ಪಂಡಿತ ಜವಾಹರಲಾಲ ನೆಹರೂರವರು ಉಡುಗೊರೆಯಾಗಿ ಕಳಿಸಲಿರುವ ಎರಡು ಮರಿಯಾನೆಗಳನ್ನು ಪ್ರತ್ಯೇಕವಾಗಿ ಮುಂಬಾಯಿಯಿಂದ ನ್ಯೂಯಾರ್ಕಿಗೆ ಸಾಗಿಸಲು ಅಮೇರಿಕನ್ ಹಡಗ ಕಂಪೆನಿಯೊಂದು ಸಮ್ಮತಿಸಿರುವುದು. ಈ ಎರಡು ಆನೆಗಳು ಮೈಸೂರಿನಿಂದ ಮುಂಬಾಯಿಗೆ ರೈಲಿನಲ್ಲಿ ಸಾಗಿಸಲ್ಪಟ್ಟದ್ದವು. ಅವುಗಳ ಹೆಸರು ಅಶೋಕ ಮತ್ತು ಶಾಂತಿ ಎಂದು!

ಖೂನಿ, ಕೊಲೆಗಳ ಕುರಿತಾದ ಪತ್ತೆ ಹಚ್ಚುವ ಪೋಲೀಸ್ ಅಧಿಕಾರಿಗಳನ್ನು ತರಬೇತಗೊಳಿಸುವ ಬಗ್ಗೆ ಒಂದು ಕಾಲೇಜು ಮುಂಬಯಿಯಲ್ಲಿ ಸದ್ಯದಲ್ಲೇ ತೆರೆಯಲ್ಪಡುವುದೆಂದು ಕೇಳಬರುತ್ತದೆ.

ಇಂಗ್ಲಂಡದಲ್ಲಿಯ ಅತ್ಯುತ್ತಮ ನಾಟಕ ಕಂಪೆನಿಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಷೇಕ್ಸ್‌ಪಿಯರಿನ್ ಕಂಪನಿಯು ಈ ವರ್ಷಾಂತ್ಯದಲ್ಲಿ ಭಾರತಕ್ಕೆ ಬರಲಿರುವದು

ಪ್ರೊ. ಹೆರಾಲ್ಡ್ ಲಾಸ್ಕಿಯವರ ನಿಧನದಿಂದ ನಮ್ಮ ಕಾಲಮಾನದ ಅತ್ಯಂತ ಪ್ರಭಾವಶಾಲಿ, ಮೇಧಾವಿಯೊಬ್ಬರನ್ನು ಕಳೆದುಕೊಂಡಂತಾಗಿದೆಯೆಂದು ಪಂಡಿತ ನೆಹರೂ ಸಂತಾಪ ಸೂಚಿಸಿದ್ದಾರೆ

ಒಳಸಂತೆ ನಡೆಸುವವರಿಗೂ, ತೆರಿಗೆಯನ್ನು ಕೊಡಲು ತಪ್ಪಿದವರಿಗೂ ಮರಣ ದಂಡನ ಅಥವಾ ಜೀವಾವಧಿ ಶಿಕ್ಷೆ ವಿಧಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಪ್ರೊ. ಕೆ. ಟಿ. ಷಾ ರವರು ತಂದಿದ್ದ ಮಸೂದೆಯನ್ನು ವಿಸ್ತಾರ ಚರ್ಚೆಯಾದ ಬಳಿಕ ಅವರು ಹಿಂದಕ್ಕೆ ತೆಗೆದುಕೊಂಡರು.

ಇನ್ನು ಮುಂದೆ ಭಾರತದಲ್ಲಿಯ ಅಂಚೆ ತಂತಿ ರವಿವಾರ ಸಂಪೂರ್ಣ ಮುಚ್ಚಲ್ಪಡುವವು. ದೇಶದ ಒಳಗಡೆಯಲ್ಲಿ ಮಾತ್ರ ವಿಮಾನದ ಅಂಚೆ ಪದ್ಧತಿಯನ್ನು ಪ್ರಾರಂಭಿಸಲಾಗುವುದು. ಇದರ ಬೆಲೆಯನ್ನು ಎರಡಾಣೆಯಿಂದ ೬ ಪೈಸೆಗೆ ಇಳಿಸಲಾಗುವುದು ಎಂದು ಪ್ರಮುಖವಾಗಿ ಸಂಪರ್ಕ ಶಾಖಾ ಮಂತ್ರಿಗಳು ಹೇಳಿದರು.

ರೂಪಾಯಿ ಭಾರತೀಯ ಹೆಸರಾಗಿರುವುದರಿಂದ ತಮ್ಮ ನಾಣ್ಯಕ್ಕೆ ಬೇರೆ ಹೆಸರಿಡಲು ಪಾಕಿಸ್ತಾನಿಗಳು ಯೋಚಿಸಿದ್ದಾರೆ. ಹಿಲಾಲ, ಸರ್ಬಿಯಾ, ಚಾಂದ ಮೊದಲಾದ ಹೆಸರುಗಳು ಮುಂದೆ ಬಂದಿವೆ. ಬಹುಶಃ ಪಾಕಿಸ್ತಾನಿಗಳ ಹೆಚ್ಚಿನ ಪ್ರೀತಿಯ 'ಹಿಲಾಲ' ಎಂಬ ಹೆಸರನ್ನೇ ರೂಪಾಯಿ ನಾಣ್ಯಕ್ಕೆ ಇಡಬಹುದೆಂದು ಸುದ್ದಿಯಿದೆ

ಆವಶ್ಯಕ ವಸ್ತುಗಳ ಬೆಲೆಗಳನ್ನಿಳಿಸುವ ಘೋಷಣಾಕ್ಕನುಸಾರವಾಗಿ ಇದೇ ಮಾರ್ಚ ೧೬ ರಿಂದ ಮುಂಬಯಿ ಸರಕಾರವು ಎತ್ತುವಳಿ ಮಾಡುವ ಗೋದಿ ಮತ್ತು ಬಾರ್ಲಿ ಮೊದಲಾದ ಹಿಂಗಾರಿ ಧಾನ್ಯಗಳ ಬೆಲೆಯನ್ನು ೧೦೦ಕ್ಕೆ ೧೦ರಷ್ಟು ಕಡಮೆ ಮಾಡಿದೆ. ಕಡಲೆಯ ಬೆಲೆಯನ್ನು ಮಣಕ್ಕೆ ೧೪ ರೂ. ಗಳಿಂದ ೧೩ ರೂ. ಗಳಿಗೆ ಇಳಿಸಿದೆ.

"ಅಮೇರಿಕನ್ ಸರಕಾರವು, ಚಿಯಾಂಗ ಕೈಷೇಕರಿಗೆ ಯುದ್ಧೋಪಕರಣಗಳ ನೆರವು ನೀಡುತ್ತಲಿದೆಯಲ್ಲದೆ, 'ಗಿಳಿ ಸರಕಾರ'ಗಳಾದ ಬಾವೋದಾಯಿ, ಸಿಂಗಮನ್ ರ್ಹೀ ಮತ್ತು ಕ್ವಿರಿನೋ ಅವರಿಗೂ ಅದೇ ಬಗೆಯ ನೆರವು ನೀಡುತ್ತಲಿದೆ ಏಷ್ಯಾಖಂಡ ಹಾಗೂ ಏಷ್ಯನರ ಬಗ್ಗೆ ಈ ಬಗೆಯ ಕೈ ಹಾಕುವ ಕಾರಭಾರವನ್ನು ಅದು ಇನ್ನು ನಿಲ್ಲಿಸಬೇಕು ಇಲ್ಲದಿದ್ದರೆ ಒಳಿತಾಗದು" ಎಂದು ಚೀನದ ಪರರಾಷ್ಟ್ರ ಮಂತ್ರಿ ಚೌಎನ್‌ಲಾಯಿಯವರು ಅಮೇರಿಕಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ.

ಕರಾಚಿಯಲ್ಲಿ ಘಟನಾ ಸಮಿತಿ ಮತ್ತು ಹೈಕೋರ್ಟಿನ ಮಧ್ಯದಲ್ಲಿ ಇರುವ ಚೌಕಿನಲ್ಲಿ ೧೯೪೫ ರಲ್ಲಿ ಸ್ಥಾಪಿತವಾಗಿರುವ ಮಹಾತ್ಮಾ ಗಾಂಧಿಯವರ ಪೂರ್ಣಾಕಾರದ ಪುತ್ಥಳಿಯನ್ನು ಅಲ್ಲಿಂದ ತೆಗೆದು ವಸ್ತು ಸಂಗ್ರಹಾಲಯಕ್ಕೆ ಸಾಗಿಸಲಾಗಿದೆ. ಹಿಂದೀ ಪಣಿಕ್ ಸಂಘದವರ ಬಿನ್ನಹದ ಮೇರೆಗೆ ಡಾ. ಸರ್ವಪಲ್ಲಿ ರಾಧಾಕೃಷ್ಣನರವರು ಈ ಪುತ್ಥಳಿಯನ್ನು ೧೯೪೫ ರಲ್ಲಿ ಉದ್ಘಾಟನ ಮಾಡಿದ್ದರು. ಅದು ಕೆಳಗೆ ಬಿದ್ದದ್ದರಿಂದ ಅದನ್ನು ವಸ್ತು ಸಂಗ್ರಹಾಲಯಕ್ಕೆ ಸಾಗಿಸಲಾಗಿದೆಯೆಂದೂ ಮತ್ತೆ ಅದನ್ನು ಅದೇ ಸ್ಥಳದಲ್ಲಿ ಇರಿಸಲಾಗುವದೆಂದೂ ಪಾಕಿಸ್ತಾನ ಸರಕಾರವು ಅಧಿಕೃತವಾಗಿ ಪ್ರಕಟಿಸಿದೆ

ವಾಶಿಂಗ್ಟನ್ನದ ಖಾಸಗಿ ವ್ಯಕ್ತಿಯೊಬ್ಬರ ವಿಳಾಸವಿದ್ದ ಒಂದು ಪೆಟ್ಟಿಗೆಯು ಮುಂಬಯಿಯ ಹಾಫಕಿನ್ಸ್ ಇನ್‌ಸ್ಟಿಟ್ಯೂಟದಲ್ಲಿ ಬಂದಿದ್ದು, ಅದರಲ್ಲಿ ಸೈಮರಿನ ಹನ್ನೊಂದು ನಾಗರ ಹಾವುಗಳೂ ಒಂದು ಹಸಿರು ಹಾವೂ ಇದ್ದವಂತೆ!

ಭಾರತ ಪಾರ್ಲಿಮೆಂಟ ಸದಸ್ಯರೂ, ಅದ್ವಿತೀಯ ಕಾಯಿದೆ ಪಂಡಿತರೂ, ಅನುಭವಿ ಸಾಹಿತಿಗಳೂ ಆದ ಶ್ರೀ ಕನ್ಹೈಯಾಲಾಲ ಮುನ್ಷಿ ಅವರು ತಮ್ಮ ಆರೋಗ್ಯಕ್ಕಾಗಿ ಪಶ್ಚಿಮ ಪ್ರವಾಸ ಕೈಕೊಂಡಿದ್ದು ಮಾರ್ಚ ೨೦ ಕ್ಕೆ ಲಂಡನಕ್ಕೆ ತಲುಪಿದ್ದಾರೆ. ಅವರೊಡನೆ ಅವರ ಪತ್ನಿ ಶ್ರೀಮತಿ ಲೀಲಾವತಿ ಮುನ್ಷಿ ಅವರೂ ಇರುವರು

ಭಾರತದ ಕೊನೆಯ ಗವರ್ನರ್ ಜನರಲ್ ಶ್ರೀ ರಾಜಾಜಿಯವರಿಗೆ ಅವರ ಜೀವಮಾನ ಪರ್ಯಂತ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿ ವಿರಾಮ ವೇತನವನ್ನು ಕೊಡುವುದನ್ನು ಕೇಂದ್ರ ಸರಕಾರ ಮಂಜೂರು ಮಾಡಿರುವುದೆಂದು ಅರ್ಥ ಮಂತ್ರಿಗಳು ಹೇಳಿದ್ದಾರೆ

ಜಿ. ಆಯ್. ಪಿ. ರೇಲ್ವೆಯ ಮುಂಬಯಿ ಟಿಕೆಟ್ ಕಲೆಕ್ಟರನ ಕೋಣೆಯನ್ನು ಸಂಶಯದಿಂದ ಮುಂಬಯಿ ಪೋಲೀಸರು ಝಡತಿಮಾಡಲಾಗಿ 'ಕಮ್ಯೂನಿಸ್ಟ ಕಚೇರಿಯು' ಅಲ್ಲಿತ್ತು. ಅಲ್ಲಿಯ ನೆಲಮನೆಯಲ್ಲಿ ಆರು ಕೈಬಾಂಬುಗಳು ೩೦ ಕಡತೂಸುಗಳು ಮುದ್ರಣ ಸಾಮಗ್ರಿ, ಕಮ್ಯೂನಿಸ್ಟ ಕಾರ್ಯಕರ್ತರಿಗೆ ಕಳಿಸುವ ಪತ್ರಗಳು, ಅವರಿಂದ ಬಂದ ಗುಪ್ತ ವಾರ್ತೆಗಳು, ಮೊದಲಾದ ಸಾಮಗ್ರಿಗಳು ದೊರೆತಿದ್ದು ವಿಚಾರಣೆ ನಡೆದಿದೆ

"ಪೂರ್ವ ಬಂಗಾಳ, ಪಶ್ಚಿಮ ಬಂಗಾಳ ಹಾಗೂ ಆಸಾಮುಗಳಲ್ಲಿ ಕಳೆದ ಕೆಲ ವಾರಗಳಿಂದಲೂ ನಡೆದ ಹಿಂಸಾ ಘಟನೆಗಳ ಬಗ್ಗೆ ನನಗೆ ಅತೀವ ದುಃಖವಾಗಿದೆ." ಎಂದು ಪಾಕಿಸ್ತಾನ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರು, ಢಾಕಾ ಆಕಾಶವಾಣಿ ಮುಖಾಂತರ ಸಾರಿದ್ದಾರೆ.

---

## ಸರ್. ಸಿ. ವಿ. ರಾಮನ್‌ರ ನೂತನ ಸಂಶೋಧನೆ.

ಗಾಜು ಮುಂತಾದ ಆಪ್ಟಿಕಲ್ ಪದಾರ್ಥಗಳ ಗುಣದಲ್ಲಿ ಇದು ವರೆಗೂ ಕಂಡುಹಿಡಿಯದಿದ್ದಂತಹ ಹೊಸ ವಿಚಾರವನ್ನು ಸರ್ ಸಿ. ವಿ. ರಾಮನ್‌ರವರು ಈಗ ಕಂಡುಹಿಡಿದಿದ್ದಾರೆ. ಕೆಲವು ಬಗೆಯ ಸಿಲಿಕಾ ಗಾಜುಗಳಲ್ಲಿ ಎರಡುಬಾರಿ ಬೆಳಕಿನ ವಕ್ರೀಕರಣ [ಡಬಲ್ ರಿಫ್ರಾಕ್ಷನ್] ಆಗುವುದೆಂಬುದನ್ನು ಅವರು ಕಂಡುಹಿಡಿದಿದ್ದಾರೆ. ಇದಕ್ಕೆ ಇವರು 'ಸ್ಟ್ರಕ್ಚರಲ್-ಬೈ-ರಿಫ್ರಿಜನ್ಸ್' ಎಂದು ಹೆಸರಿಟ್ಟಿದ್ದಾರೆ. ಈಗಾಗಲೇ ವಿಜ್ಞಾನಿಗಳಿಗೆ ತಿಳಿದಿರುವ 'ಸ್ಟ್ರೆಸ್-ಬೈ-ರಿಫ್ರಿಜೆನ್ಸ್' ಎಂಬುದರಿಂದ ಇದು ಬೇರೆಯಾದುದು

ಲಿಬಿಯಾದ ಮರಳುಗಾಡಿನಿಂದ ತರಿಸಿದ ಕೆಲವು ಅಪರೂಪ ಸಿಲಿಕಾ ಗಾಜುಗಳ ಮಾದರಿಗಳ ಮೇಲೆ ನಡೆಸಿದ ಅಭ್ಯಾಸ ಸಂಶೋಧನೆಯಿಂದ ಸರ್ ಸಿ ವಿ ರಾಮನ್ ಇದನ್ನು ಕಂಡುಹಿಡಿದಿದ್ದಾರೆ

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಹುಬ್ಬಳ್ಳಿ

### ಪ್ರಕಟಣೆ.

ಕಾಂಗ್ರೆಸ್ ಪ್ರಾಥಮಿಕ ಪಂಚಾಯತಿಗಳ ಚುನಾವಣೆಗಳು ಇದೇ ತಿಂಗಳ ಕೊನೆಯೊಳಗಾಗಿ ಮುಗಿಯಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ತಿಳಿಸಲಾಗಿತ್ತು. ಆದರೆ ಚುನಾವಣೆಯ ತಾರೀಕುಗಳನ್ನು ಈ ವರೆಗೆ ಗೊತ್ತುಮಾಡಿ ತಿಳಿಸದೇ ಇದ್ದುದರಿಂದ ಪಂಚಾಯತಿಗಳ ಚುನಾವಣೆಗಳು ಇಷ್ಟರಲ್ಲಿಯೇ ನಡೆಯದೆ ಕೆಲವು ದಿವಸ ಮುಂದೆ ಬೀಳಬಹುದು. ಅಖಿಲ ಭಾರತ ಕಾಂಗ್ರೆಸ ಸಮಿತಿಯವರು ಚುನಾವಣೆ ದಿನಾಂಕಗಳನ್ನು ಗೊತ್ತುಮಾಡಿ ತಿಳಿಸಿದ ಕೂಡಲೇ ವಾರ್ತಾಪತ್ರಿಕೆಯನ್ನು ತಯಾರಿಸಿ ಪ್ರಸಿದ್ಧಿಸಲಾಗುವದು. ಈ ಪ್ರಕಾರ ತಿಳಿಸುವ ವರೆಗೆ ಚುನಾವಣೆಗಳನ್ನು ನಡೆಯಿಸಕೂಡದು. ಇಷ್ಟರಲ್ಲಿ ಯಾವುದೇ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಚುನಾವಣೆ ನಡೆಯಿಸಿದ್ದರೆ ಅವುಗಳನ್ನು ರದ್ದುಮಾಡಬೇಕು

ಎ. ಟಿ. ಮೂಗಡಿ.
ಕಾರ್ಯದರ್ಶಿ.

---

**ಡಾ. ಎಂ. ಎಂ. ಚೆಂಗಪ್ಪ**
ಎಂ. ಬಿ., ಬಿ. ಎಸ್.

ಇವರು ತಮ್ಮ ವೈದ್ಯಕೀಯ
ಸಲಹಾ ಕೇಂದ್ರ ಮತ್ತು
ಔಷಧಾಲಯವನ್ನು
ಮೀರ-ಪೇಟೆಯಲ್ಲಿ
ತೆರೆದಿರುವರು

3-3

# ಸರ್ವಸಮತೆಯ ಸೋಗಿನಲ್ಲಿ

ಸ್ವಾರ್ಥವು ಬೆಳೆ ಬೆಳೆದಂತೆ ಕುಟುಕ್ಕೆ ಸಂಚಕಾರವು ಬರುವುದು ಕಟ್ಟಿಟ್ಟ ಮಾತು. ಜಗತ್ತಿನಲ್ಲಿ ಇಂದು ನಡೆದಿರುವ ಅಶಾಂತಿಯ ಕೋಲಾಹಲಕ್ಕೆ ಕಮ್ಯೂನಿಜಂ ಮತ್ತು ಬಂಡವಳವಾದಗಳೆರಡೂ, ಸರ್ವ ಸಮತೆಯ ಸೋಗಿನಲ್ಲಿ, ತಮ್ಮ ತಮ್ಮ ಕುರುಡಿಗ ಳನ್ನು ಮುಂದೊಡ್ಡುತ್ತ "ಸ್ವಾರ್ಥ" ಸಾಧಿಸಲು ಹೆಣಗುತ್ತಿರುವುದೇ, ಏಕಮೇವ ಕಾರಣವಾಗಿದೆ.

ಬಂಡವಳವಾದ ಪ್ರಣಾಲಿಯು ದೇಶಗಳು ಡೆಮೊಕ್ರಸಿ, ಕಾಮನ್‌ವೆಲ್ತ್, ರಿಪಬ್ಲಿಕ್ ಮೊದಲಾದ ಹೆಸರಿನಲ್ಲಿ ಆಧ್ಯಕ್ಷಿಸಿ ರುವಂತಿಕೆಗಳನ್ನು ದೊರಕಿಸುವ ಹವ್ಯಾಸದಲ್ಲಿದ್ದಂತೆ, ಸೋವಿಯೆಟ್ ರಶಿಯಾ ಕಮ್ಯೂನಿಜಂನ ಹೆಸರಿನಲ್ಲಿ "ಅಧಿಕಾರ"ದ ಹವ್ಯಾಸದಲ್ಲಿದೆಯೆಂಬುದು ಯಾವಾಗಲೂ ತಿಳಿದವರು ಹೇಳುತ್ತಿರುವ ಮಾತಾಗಿದೆ.

ನಿಜವಾಗಿ ಹೇಳಬೇಕೆಂದರೆ ಇಂದಿನ ಕಮ್ಯೂನಿಜಂವು ಯಾವುದೇ ಸಾಮಾಜಿಕ ಅಥವಾ ರಾಜಕೀಯ ತತ್ವವಾಗಿಲ್ಲ. ಅದರ ಜಗತ್ತಿನ ರಾಷ್ಟ್ರಗಳ ಮೇಲೆ ಮತ್ತು ಜನರ ಮೇಲೆ ಅಧಿಕಾರ ಹಿಡಿತಗಳನ್ನಿಟ್ಟುಕೊಳ್ಳಲು ಇದೊಂದು ಸಾಧನವಾಗಿದೆಯೆಂದು ಹೇಳಬಹುದು.

ಕಮ್ಯೂನಿಜಂ ಕರ್ಮಭೂಮಿಯಾದ ರಶಿಯಾದಲ್ಲಿಯೇ, ಉಚ್ಚಾಧಿಕಾರಿಗಳ ಹಾಗೂ ಜನಸಾಮಾನ್ಯರ ಜೀವನದ ರೀತಿನೀತಿಗಳನ್ನು ಪರಿಶೀಲಿಸಿದರೆ, ನಡುಬೀದಿಯಲ್ಲಿ ಪ್ರಚಾರ ಮಾಡುವುದರ ಕೊಲೆಯನ್ನು ನಡುವ ನೆಲದಲ್ಲಿ ಮಾಡುತ್ತಿರುವುದನ್ನು ಕಾಣಬಹುದು.

ದಲಿತೋದ್ಧಾರ ಕ್ಕೆಂದೇ ಮುಡಿಪಿಟ್ಟ ಸೋವಿಯೆಟ್‌ನಲ್ಲಿಯೇ ಉಳಿದ ಜಗತ್ತಿನ ದಲಿತರಿಗಿಂತಲೂ ದಲಿತರಾದ ಗೋಳಿಡುವ ಜನ ಜಂಗುಳಿಯಿದೆ. ಬಂಡವಾಳಗಾರರಿಗಿಂತಲೂ ಹೆಚ್ಚು ಗತ್ತಿನಿಂದ ಮೆರೆದಾಡುವ ಸೋವಿಯೆಟ್ ಅಧಿಕಾರಿಗಳಿದ್ದಾರೆ.

ಜಗತ್ತಿನ ತುಂಬಾ ಕಂಬನಿ ಸುರಿಸಿ ಸರ್ವಸಮತೆಯ ಸೋಗಿನಲ್ಲಿ ಸೋವಿಯೆಟ್ ಸ್ವರ್ಗ ತೋರಿಸಿ ಬಡಬಗ್ಗರನ್ನು ಬಲಿಹಾಕುತ್ತಿರುವ ಕಮ್ಯೂನಿಸ್ಟರೂ, ಅವರ ತತ್ವ ಕಮ್ಯೂನಿಜಂವೂ ಹೇಗಿದೆ ಎಂಬುದನ್ನು ಕೆಳಗಿನ ಎರಡು ಚಿಕ್ಕ ಉದಾಹರಣೆಗಳು ಹೇಳುತ್ತವೆ.

ರಶಿಯಾದಲ್ಲಿ ಜನ ಕೂಲಿಪುಳ್ಳ, ಪುಣ್ಯವಂತ ವರ್ಗ ಪ್ರಾಂದಿಸೆ. ಅವರ ಅಧಿಕಾರ ಸಂಪತ್ತು, ಉತ್ಪಾದನಾ ವರ್ಗಗಳು ಬಂಡವಳಗಾರರಿಗೂ ಹೊಟ್ಟೆಕಿಚ್ಚು ಹುಟ್ಟಿಸುವಂತಿವೆ. ಇವರೂ ಕಮ್ಯೂನಿಸ್ಟರೇ! ಕಮ್ಯೂನಿಜಂದ ಉಚ್ಚ ವರ್ಗದ ಸದಸ್ಯರೇ!

ಕಮ್ಯೂನಿಜಂ ಜೀವಾಳವೆಂದರೇ ಗುಪ್ತದಳ. ಜರ್ಮನಿಯ ಹಿಟ್ಲರನ ಗೆಸ್ಟಪೋ ದಳವಿದ್ದಂತೆ. ಯಾವುದೇ ಕಮ್ಯೂನಿಸ್ಟ ದೇಶದ ಯಾವುದೇ ಉಚ್ಚ—ಕನಿಷ್ಟ ಅಧಿಕಾರಿಗೂ ಈ ಗುಪ್ತದಳದ ಭಯವಿದೆ. ಯಾವ ಹೊತ್ತಿಗೆ ತನ್ನ, ತನ್ನ ಸ್ವಾತಂತ್ರ್ಯದ ಗತಿ ಏನಾದೀತೆಂಬುದೂ ಹೇಳಲು ಆಗುವಂತಿಲ್ಲ.

ಈ ಹೆದರಿಕೆಯಿಂದಲೇ, ಕಮ್ಯೂನಿಸ್ಟ ದೇಶದ ಒಡೆದು ತೋರುವ ನಾಗರಿಕರು, ಉಚ್ಚ ಅಧಿಕಾರಿಗಳು, ಸೋವಿಯೆಟ್ ಸ್ವರ್ಗದ ಜಿಟಿಜಿಟಿ ಜೀವನಕ್ಕೆ ಬೇಸತ್ತು, ಬೇಜಾರು ಹೊತ್ತು, ಡೆಮೊಕ್ರೆಟಿಕ್ ದೇಶಗಳಿಗೆ ಓಡಿಹೋದ, ಹಾಗೂ ಕಮ್ಯೂನಿಜಂದಿಂದ ತಿರುಗಿದ ಅನೇಕ ಉದಾಹರಣೆಗಳುಂಟು.

## ಎರಡು ದೃಷ್ಟಾಂತಗಳು.

ಕ್ರಾವಚೆಂಕೊ ಸೋವಿಯೆಟ್ ಸ್ವರ್ಗದ ಉಚ್ಚಾಧಿಕಾರಿ. ಅವನಿಗೆ ಆ ರಾಜ್ಯದಲ್ಲಿ ಸಾಕಷ್ಟು ಅನುಕೂಲತೆಗಳು. ಆದರೆ ಗುಪ್ತದಳದ ಭಯ ಹಾಗೂ ಸ್ವಾತಂತ್ರ್ಯ ಪಿಪಾಸೆಗಳಿಂದ ಅವನ ಜೀವನವು ಸೋವಿಯೆಟ್‌ದಿಂದ ಪಾರಾಗಲು ಹವಣಿಸುತ್ತಿತ್ತು. ಗುಪ್ತದಳದ ಹೊಳಿಕೆ ಸರ್ವಮಾನ್ಯತೆಯಿದ್ದ ಸೋವಿಯೆಟ್‌ನಲ್ಲಿ ಉಚ್ಚ ಅಧಿಕಾರಿಗಳ ಕರುಣಾಜನಕ ಅಧಃಪಾತವನ್ನು ಅವನು ಕಂಡಿದ್ದ. ಆದ್ದರಿಂದಲೇ ಭಯಪಟ್ಟು, ಸ್ವಾತಂತ್ರ್ಯವನ್ನು ಬಯಸಿ, ಏನೇನೋ ಯುಕ್ತಿಪ್ರಯುಕ್ತಿಗಳನ್ನು ಹೆಣೆದು, ಅಮೆರಿಕೆಯಲ್ಲಿದ್ದ ಸೋವಿಯೆಟ್ ವ್ಯಾಪಾರೀ ಕಮಿಶನ್‌ನಲ್ಲಿ ಸ್ಥಾನ ದೊರಕಿಸಿ ಅದೇ ನೆವದಿಂದ ಸೋವಿಯೆಟ್‌ದಿಂದ ಪಾರಾಗಿ ಅಮೇರಿಕೆಗೆ ಬಂದು ಸೋವಿಯೆಟ್ಟಿಗೆ ಶರಣು ಹೊಡೆದ. ಅವನು ಬರೆದ "ನಾನು ಸ್ವಾತಂತ್ರ್ಯವನ್ನು ಆರಿಸಿದೆ" ಎಂಬ ಪುಸ್ತಕದಲ್ಲಿ ಈ ಸಂಗತಿಗಳ ಮೇಲೆಲ್ಲ ಬೆಳಕು ಕೆಡವಿದ್ದಾನೆ. ಹೀಗೆ ಅವನು ತಪ್ಪಿಸಿಕೊಂಡು ಹೋದ ಬಳಿಕ, ಸ್ವತಂತ್ರ ಪ್ರಜಾಪ್ರಭುತ್ವ ರಾಜ್ಯದಲ್ಲಿದ್ದರೂ ಸೋವಿಯೆಟ್ ಗುಪ್ತದಳದ ಹೆದರಿಕೆ ಅವನಿಗೆ ತಪ್ಪಿಲ್ಲ. ಯಾವ ಹೊತ್ತಿಗೆ ಅದರಿಂದ ತನ್ನ ತಲೆಗೆ ಸಂಚಕಾರವು ಬರುವುದೋ ಎಂದು ಅವನು ಯಾವಾಗಲೂ ಭಯಪಟ್ಟುಕೊಂಡಿರುತ್ತಾನೆ.

ಎರಡನೆಯ ಉದಾಹರಣೆ ಓರ್ವ ಇಂಗ್ಲಿಷ್ ಹುಡುಗಿಯದು. ಬಿಳಿಮೊಗದ ಈ ಹುಡುಗಿಯ ಹೆಸರು ಫ್ರೆಡ್ಡಾ ಅಟ್ಲೆ. ಅವಳು ಕಲಿತವಳು, ಚೆಲುವೆ, ಅಲ್ಲದೆ ಜನತೆಯ ಸಮಾನಾಧಿಕಾರದಲ್ಲಿಯೂ ಸೋಶಿಯಾಲಿಜಂನಲ್ಲಿಯೂ ತುಂಬಾ ಒಲವಿದ್ದಳು. ಆಕೆ ಕಮ್ಯೂನಿಜಂವನ್ನು ಅಭ್ಯಸಿಸಿದಳು. ವಿಶ್ವದ ಏಕತೆಗೆ ಕಮ್ಯೂನಿಜಂವೇ ಅವಶ್ಯ ಸಿದ್ಧಾಂತವೆಂದು ಸಾರಿದಳು. ಕಮ್ಯೂನಿಸ್ಟ ಪ್ರಣಾಲಿಯ ಲಕ್ಷಣಗಳು ಈ ಬ್ರಿಟಿಶ ಹುಡುಗಿಯ ರೋಮರೋಮ ರಕ್ತದಲ್ಲಿಯೂ ತುಂಬಿಕೊಂಡವು. ನರಗಳ ಚಿಗುರೂ ಕೂಡ ಕಮ್ಯೂನಿಜಂಕ್ಕೆ ತನ್ನ ತಾಳ ಹಾಕತೊಡಗಿತು.

ಈ ತರುಣಿ ಫ್ರೆಡ್ಡಾ, ಆ ಒಲವಿನಲ್ಲಿಯೇ ಓರ್ವ ರಶಿಯನನ್ನು ಮದುವೆಯಾದಳು. ಅತ್ಯುನ್ನತ ಸೋವಿಯೆಟ್ ರಶಿಯಾಕ್ಕೆ ಹೋದಳು. ಅಲ್ಲಿ ಆರು ವರ್ಷ ಸಂಸಾರ ಮಾಡಿದಳು. ಕಮ್ಯೂನಿಜಂದ ವರಪ್ರದಾನದ ಗಳಿಗೆ ಬಂದಿತು.

ಸೋವಿಯೆಟ್‌ದ ಉಚ್ಚ ಅಧಿಕಾರಿಯಾದ ಆಕೆಯ ಗಂಡ ಒಂದು ದಿನ ಇದ್ದಕ್ಕಿದ್ದಂತೆ ಕಾಣೆಯಾದ. ಸೋವಿಯೆಟ್ ಗುಪ್ತ ದಳದವರು ಆ ಉಚ್ಚ ಅಧಿಕಾರಿಯನ್ನು ಸೆರೆಹಿಡಿದಿದ್ದರು. ತನ್ನ ಗಂಡನ ಅಪರಾಧವೇನೆಂಬ ಬಗ್ಗೆ ಆಕೆಗೂ ಹೇಳಲಾಗಲಿಲ್ಲ. ಗಂಡನಿಗೂ ಹೇಳಲಾಗಲಿಲ್ಲ. ಅವನ ಅವಸ್ಥೆ ಏನಾಯಿತೆಂಬುದು ಆಕೆಗೆ ತಿಳಿಯಲಿಲ್ಲ. ಮುಂದೆ ಎಂದೆಂದೂ ಆವಳು ಅವನನ್ನು ಕಾಣಲಿಲ್ಲ.

ಆವಳ ಸೋವಿಯೆಟ್ ಸ್ವರ್ಗದ ಮದವಿಳಿಯಿತು. ಫ್ರೆಡ್ಡಾ ಇಂಗ್ಲೆಂಡಿಗೆ ಬಂದಳು. ಕಮ್ಯೂನಿಜಂದ ನಿಜ ಅರ್ಥವನ್ನು ಕುರಿತು ಆಕೆ ಬೇಕಾದಷ್ಟು ಹೇಳಿದಳು, ಬರೆದಳು. 'ಕಮ್ಯೂನಿಜಂ ಎಂದರೆ ಅದೊಂದು ಮಹಾರೋಗ. ಸಮತೆಯ ಮುಸುಕಿನ ಕ್ರೂರ ಸರ್ವಾಧಿಕಾರಿತ್ವ' ಎಂದು ಅವಳು ಸಾರಿದ್ದಾಳೆ.

## ನಿಜಸ್ವರೂಪ.

ಈ ರೀತಿಯಾದ ಪ್ರತ್ಯಕ್ಷ ಉದಾಹರಣೆಗಳೇ ಈ ಕಮ್ಯೂನಿಜಂದ ಬಗ್ಗೆ ತಮ್ಮ ಅನುಭವವನ್ನು ಹೇಳುತ್ತಿರುವಾಗ ಅದರ ಸರ್ವ ಸಮತೆಯ ಬಗ್ಗೆ ಯಾರಿಗಾದರೂ ಸಂಶಯವು ಬರದೆ ಇರದು. ಸರ್ವಸಮತೆಯ ಸೋಗಿನ ಸೋವಿಯೆಟ್ ಸ್ವರ್ಗ ಜೀವನದ ನಿಜ ಸ್ವರೂಪವನ್ನು ಕಂಡವರಿಗೆಲ್ಲ ಹೀಗೆಯೇ ಭ್ರಮನಿರಸನವಾಗದೆ ಇರಲಾರದು.

ಕಮ್ಯೂನಿಸ್ಟ ಕ್ಷೇತ್ರವಾದ ಹಾಗೂ ಜಾಗತಿಕ ಕಮ್ಯೂನಿಸ್ಟರ ಕೇಂದ್ರವಾದ ರಶಿಯಾದಲ್ಲಿಯೇ, ಸಮತೆಯ ಸೋಗಿನ ಸೋವಿಯೆಟ್ ರಶಿಯಾದಲ್ಲಿಯೇ, ಹಿಟ್ಲರನ ಸರ್ವಾಧಿಕಾರವನ್ನು ಮೀರಿಸುವ ತೀಕ್ಷ್ಣತೆಯಿದೆ. ಮುಸೋಲಿನಿಯನ್ನೂ ಮೀರಿಸುವ ಕ್ರೌರ್ಯವಿದೆ. ಮೇಲಾಗಿ, ಕಮ್ಯೂನಿಸ್ಟ 'ಗುಪ್ತದಳ'ದ ಯಮದೂತರ ಭಯವಂತೂ ಸರ್ವಕಾಲ ಇದ್ದೇ ಇದೆ. ಇಂಥಲ್ಲಿ, ಸಾಮಾನ್ಯ ಜನ ಜೀವನವು ಸುಖ ಸಮಾಧಾನದಿಂದಿರಲು ಸಾಧ್ಯವೇ?

'ಜೈಹಿಂದ್.'

---


## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
### ಫ್ರೇಜರ್ ಪೇಟೆ.
### ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 30-9-41

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

## ದಿ ಟ್ರಾಪಿಕಲ್
### ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:— ಹೊಸ ದಿಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. — ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. — ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಚ್ಚಣ್ಣ,
ಏಜನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಚಂಪಕಪೇಟ್ಟೆ, ಬೆಂಗಳೂರು.

## The Popular Insurance Company Ltd.

Established over 20 years ago, the Company sinoted for its sound progress, careful management and efficient service to its constituents.

Agents on permanent and remunerative contracts are wanted in COORG. Apply today:

*Head Office*:
**BANGALORE**
26-2

**K. M. Bopaiah, Esq.,**
*Branch Secretary for Mysore & Coorg,*
*85 Sultanpet, BANGALORE 2.*

# ನಾವೇಕೆ ನಗಾಡುವೆವು?

ಲೇ:—ಶ್ರೀ. 'ಗಣೇಶ' ಮಡಿಕೇರಿ.

ಇದೆಂಥಾ ವಿಚಿತ್ರ ಪಕ್ಷಿ ಎಂದು ಎಲ್ಲಿಯೂ ಕೇಳದವರು. ಆದರೂ ಇದರಲ್ಲಿಯೇ ನಮಗೂ ಜಗತ್ತಿನ ಇತರ ಜೀವಜಂತುಗಳಿಗೂ ಇರುವ ಅಂತರವು ಕಂಡು ಬರುತ್ತದೆ. ಮನುಷ್ಯನು ಭೂಮಿಯಲ್ಲಿ ತನಗಿಂಥಾ ಬುದ್ಧಿವಂತನಿಲ್ಲವೆಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದ ಕಾಲವಿತ್ತು. ಆದರೆ ಕಾಲಡಿಯಲ್ಲಿ ಹರಿದಾಡುವ ಇರುವೆಗಳು; ಆಕಾಶದಲ್ಲಿ ಸಂಗೀತ ಹಾಡುತ್ತಾ ಸಂಚರಿಸುವ ಜೇನ್ನೊಣಗಳು ತಮ್ಮ ಬುದ್ಧಿವಂತಿಕೆ, ಶಿಸ್ತು, ಸಂಘಟನೆ, ಸಾಮೂಹಿಕ ಜೀವನಕ್ರಮಗಳಿಂದ ಮನುಷ್ಯನು ತಲೆತಗ್ಗಿಸುವಂತೆ ಮಾಡಿವೆ. ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೇನೆಂದರೆ ಮನುಷ್ಯನಿಗೆ ವಿಚಾರ ಶಕ್ತಿ ಇದೆ; ಪ್ರಾಣಿಗಳಿಗೆ ಇಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಪ್ರಾಣಿಗಳಿಗೂ ವಿಚಾರಶಕ್ತಿ ಇದೆ; ಅದರಲ್ಲೂ ಕೆಲವಕ್ಕೆ ಮನುಷ್ಯನನ್ನು ಮೀರಿಸುವ ವಿಚಾರ ಶಕ್ತಿ ಇದೆ ಎಂದು ಹೇಳಬೇಕಾಗುತ್ತದೆ. ಕೆಲವು ಪಕ್ಷಿಗಳು ಕಟ್ಟುವ ಗೂಡುಗಳು, ಮುಂದಿನ ಗಂಡಾಂತರಕ್ಕೆಂದು ಇಂದು ಅವು ಏರ್ಪಡಿಸಿಕೊಳ್ಳುವ ಅನುಕೂಲತೆಗಳು, ಶತ್ರುವನ್ನು ಗುರ್ತಿಸಿ ವಿರೋಧಿಸುವ, ಪ್ರೀತಿಸುವವನ್ನು ಮೆಚ್ಚಿ ನಲಿದಾಡುವ ಅವುಗಳ ವಿಚಾರ ಶಕ್ತಿ ಕಡಿಮೆಯಲ್ಲ. ಹಿಂದಿನವರನ್ನು ಕಂಡು ಹರಿಹಾಯುವ ದನವು ಮುದ್ದುಮಕ್ಕಳೊಡನೆ ಸರಸವಾಡುವದು. ಆಧುನಿಕ ನಾಗರೀಕ ಸರಕಾರಗಳನ್ನು ಮೀರಿಸುವ ರಾಜ್ಯಭಾರ ಕ್ರಮವನ್ನು ಜಾರಿಗೆ ತಂದು ಸುಖದಲ್ಲಿ ಜೀವಿಸಿ ಜೇನ್ನೊಣಗಳು ಮನುಷ್ಯನ ಬಾಯಿ ಮುಚ್ಚಿಸಿವೆ. ಆದ್ದರಿಂದ ಮನುಷ್ಯನು ಪ್ರಾಣಿಗಳನ್ನು ಮೀರಿಸಿದವನೆಂದು ಹೇಳಲು ಸಾಧ್ಯವಿಲ್ಲ! ಮನುಷ್ಯನು ಶಕ್ತಿಶಾಲಿ ಎನಿಸಿದರೆ ಅವನಿಗಿಂಥಾ ಶಕ್ತಿಯುತ ಪ್ರಾಣಿಗಳಿವೆ. ಹುಲಿಯು ಕ್ರೂರ ಪ್ರಾಣಿ ಎಂದರೆ ಮನುಷ್ಯನ ಕ್ರೌರ್ಯವೇನೂ ಕಡಿಮೆಯಲ್ಲ! ಮನುಷ್ಯನು ಪ್ರಾಣಿವರ್ಗದವನೆನ್ನಲು ಆತನಲ್ಲಿರುವ ಪ್ರಾಣಿಬುದ್ಧಿ ಒಂದೇ ಅಲ್ಲ. ಆತನಲ್ಲಿ ನರಿಯ ಕುತಂತ್ರವೂ, ಇರುವೆಯ ಬುದ್ಧಿಯೂ, ಬಕನ ವೇಷವೂ ಸಮಾವೇಶಗೊಂಡಿದೆ. ಒಂದು ದೃಷ್ಟಿಯಿಂದ ಮನುಷ್ಯನೂ ಪ್ರಾಣಿಯೆ! ಆತನು ಒಂದು ವಿಧದಲ್ಲಿ ಮಾತಾಡಿದರೆ ಪ್ರಾಣಿಗಳು ಬೇರೆ ವಿಧದಲ್ಲಿ! ನಮಗರ್ಥವಾಗದ ಚೈನಿಯೂ ಇತರ ಭಾಷೆಗಳು ಪ್ರಾಣಿಗಳ ಕೂಗಿಗಿಂಥಾ ಹೆಚ್ಚಿನ ಅರ್ಥವನ್ನು ನಮಗೆ ಕೊಡಲಾವುವೇ?

ಇಷ್ಟೆಲ್ಲಾ ಪ್ರಾಣಿವರ್ಗಕ್ಕೂ ಮನುಷ್ಯ ಕುಲಕ್ಕೂ ಸಂಬಂಧವಿದ್ದರೂ ಒಂದು ವಿಚಾರದಲ್ಲಿ ಭಿನ್ನತೆ ಇದೆ. ಮನುಷ್ಯನು ನಗಾಡುತ್ತಾನೆ. ಇತರ ಯಾವ ಪ್ರಾಣಿಗಳೂ ನಗಾಡಲಾರವು! ತನ್ನ ಹೃದಯದ ಭಾವನೆಯನ್ನು ಬಿಚ್ಚಿ ಮನದ ಅಳಲನ್ನು ಬಿಚ್ಚಿ ನಗುವಿನ ಮೂಲಕ ವ್ಯಕ್ತಪಡಿಸುವ ಭಾಗ್ಯ ಮನುಷ್ಯನಿಗೆ ಮಾತ್ರ ಇದೆ. ನಗುವು ಸುಖದ ಚಿಹ್ನೆ ಮಾತ್ರವಲ್ಲ; ಅದು ದುಃಖದ ಪ್ರತೀಕವೂ ಆಗಬಹುದು. ಸುಖದಲ್ಲಿಯೂ ದುಃಖದಲ್ಲಿಯೂ ಕಂಬನಿ ಸುರಿಸುವಂತೆ ನಗುವೂ ಕೂಡ ಒಂದು ಮನೋಹರವಾದರೆ ಮತ್ತೊಂದು ವಿಕೃತ ಮತ್ತು ಭೀಕರ!

ಮನೋ ವಿಜ್ಞಾನಿಗಳು ನಗುವಿನ ಆವಿರ್ಭಾವ ತತ್ವವನ್ನು ಕಂಡು ಹಿಡಿಯಲು ನಾನಾ ರೀತಿಯ ವಿಶ್ಲೇಷಣ ಮಾಡಿದ್ದಾರೆ. ಅದರ ಅಂತರ್ಗತ ಮತ್ತು ಬಹಿರ್ಗತ ರಚನೆ, ನಿರ್ಮಾಣಗಳ ವಿಚಾರ ಆಲೋಚಿಸಿದ್ದಾರೆ. ನಗುವು ನಗುವಾತನಿಗೆ ಆಹ್ಲಾದಕರವಾಗಿರಬಹುದು. ಅದೇ ನಗು ಮತ್ತೊಬ್ಬನಿಗೆ ದುಃಖದಾಯಕವಾಗಲೂ ಬಹುದು. ಇಲ್ಲವೇ ಇನ್ನೊಬ್ಬನಲ್ಲೂ ನಗುವಿನ ಹೊನಲನ್ನು ಹರಿಸಬಹುದು. ಕಾಲೇಜಿಗೆ ಹೊಸದಾಗಿ ಒಬ್ಬ ವಿದ್ಯಾರ್ಥಿ ಸೇರಿದನೆನ್ನೋಣ. ಆತನನ್ನು ಕಂಡು ಕಿಸಿ ನಗುವದು ಕೆಲವರ ಹವ್ಯಾಸವಾದರೆ ಆತನಿಗೆ ಧೈರ್ಯ ಹೇಳಿ ಸಹಾನುಭೂತಿ ತೋರಿಸುವವರು ಕೆಲವರಿರುತ್ತಾರೆ. ರಸ್ತೆಯಲ್ಲಿ ಒಂದೇ ಕಣ್ಣಿರುವವನೊಬ್ಬನನ್ನು ಕಂಡಾಗ ಕೆಲವರು ನಗುತ್ತಾರೆ; ಮತ್ತೆ ಕೆಲವರು 'ಪಾಪ' ಎಂದು ಸಹಾನುಭೂತಿ ಪ್ರದರ್ಶಿಸುತ್ತಾರೆ. ಒಮ್ಮೆ ನಗುವನ್ನು ತಂದ ಪರಿಸ್ಥಿತಿಯೇ ಮತ್ತೊಮ್ಮೆ ಸಹಾನುಭೂತಿಯನ್ನು ಅದೇ ವ್ಯಕ್ತಿಯಲ್ಲಿ ತರಬಹುದು.

ನಗೆಯ ವಿಮರ್ಶೆ ಮಾಡಿ ವೈಜ್ಞಾನಿಕವಾಗಿ ಶೋಧಿಸಿದ ಹಲವರು ಅದರ ಕಾರಣವನ್ನು ಹಲವು ವಿಧವಾಗಿ ಕೊಟ್ಟಿದ್ದಾರೆ. "ಇನ್ನೊಬ್ಬರ ದುರ್ದೈವವನ್ನು ಕಂಡು ನಾವು ನಗುತ್ತೇವೆ, ನಮ್ಮ ನಗೆಯು ನಾವು ಹೆಚ್ಚಿನವರು ಎಂಬ ಕ್ಷಿಪ್ರ ಭಾವನೆಯ ಹಿಗ್ಗಳಿಕೆಯ ಕಾರಣ ಹೊರಹೊಮ್ಮುವ ಅನಿರೀಕ್ಷಿತ ಘನತೆ" ಎಂದು ಹೋಬ್ಸ್ ಎಂಬವರು ಹೇಳಿದ್ದಾರೆ. ಇವರೆನ್ನುವಂತೆ ಕೆಲವು ನಗೆಗಳಲ್ಲಿ ಈ ಅರ್ಥ ಇಲ್ಲವೇ ತಾನು ಹೆಚ್ಚು ಎಂಬ ಹುಳಿವು ಇರಬಹುದಾದರೂ ಎಲ್ಲಾ ನಗುವಿನಲ್ಲಿ ಇದಿರಲಾರದು. ಆದ್ದರಿಂದಲೇ ಸಲ್ಲಿ ಎಂಬವರು "ಅದೊಂದು ಆಟ" ಎಂದಿದ್ದಾರೆ. ಆದರೆ ಆಟವೆಂದರೇನು? ಎಲ್ಲಾ ನಗುಗಳು ಆಟವಾಗಲಾರವು. ಪ್ರಸಿದ್ಧ ವಿಜ್ಞಾನಿ ಬರ್ಗ್‌ಸನ್ ಎಂಬವರು 'ನಗುವೆಂಬುದು ಮಾನವನ ಜೀವನದಲ್ಲಿ ಯಾಂತ್ರಿಕ ರೀತಿಯಲ್ಲಿ ಹೆಪ್ಪುಗಟ್ಟಿದ ಅನಿಷ್ಟ ಪರದೆಯನ್ನು ಒಡೆಯುವ ಸಾಧನ. ಈ ರೀತಿ ಆ ಹೆಪ್ಪನ್ನು ಒಡೆದು ಮನುಷ್ಯನಿಗೆ ತುಕ್ಕು ಹಿಡಿಯದಂತೆ ಮಾಡಿ ಆತನಿಗೆ ಹೊಸ ಚೇತನವನ್ನು ಕೊಡುವ ವಸ್ತು" ಎಂದು ಹೇಳಿದ್ದಾರೆ.

ಮಾನವನಲ್ಲಿ ನೈಸರ್ಗಿಕವಾಗಿರುವ ಆದರೆ ನಾಗರೀಕ ಸಮಾಜದ ಕಟ್ಟುನಿಟ್ಟುಗಳಿಂದ ಒತ್ತಿ ಹಿಡಿಯಲ್ಪಟ್ಟ ಭಾವನೆಗಳು ಹಾಸ್ಯಕ್ಕೆ ಎಡೆಕೊಡುವವು. ಹಾಸ್ಯವು ನಗುವನ್ನು ಪ್ರಚೋದಿಸುವದು. ಆದ್ದರಿಂದ ಲೈಂಗಿಕ ವಿಚಾರಗಳಲ್ಲಿ ಹೆಚ್ಚಿನ ಹಾಸ್ಯಕ್ಕೆಡೆಯಾಗುವದಾಗಿದೆ! ಏಕೆಂದರೆ ಲೈಂಗಿಕ ವಿಚಾರಗಳಷ್ಟು ಹೆಚ್ಚಾಗಿ ಸಮಾಜದಲ್ಲಿ ಒತ್ತಿ ಹಿಡಿಯಲ್ಪಟ್ಟ ವಿಷಯಗಳು ಬೇರಿಲ್ಲ. ಆದ್ದರಿಂದ ಫ್ರಾಯ್ಡ್ ಎಂಬ ಮಹನೀಯರು ಹೀಗೆ ಹೇಳಿರುವರು. "ಭಾವನೆಯ ಮಿತವ್ಯಯದ ಕಾರಣವಾಗಿ ಹಾಸ್ಯದ ಸಂತೋಷವೂ ಯೋಚನೆಯ ಮಿತವ್ಯಯದ ಕಾರಣ ಜಾಣ್ಮೆಯ ಆನಂದವೂ ಹುಟ್ಟುತ್ತವೆ" ಈ ಎರಡು ಪ್ರಸಂಗಗಳಲ್ಲೂ ನಗುವು ಹೆಚ್ಚಾದ ಚೇತನವನ್ನು ಹೊರಚೆಲ್ಲುವ ಸಾಧನವಾಗಿದೆ.

ಮಾನವನಲ್ಲಿ ನೈಸರ್ಗಿಕ ಸಹಾನುಭೂತಿಯನ್ನು ಅಭ್ಯಾಸದ ಹವದಂತ ವಿರಸವು ನಗುವನ್ನು ಪ್ರಚೋದಿಸುತ್ತದೆ. ಮನುಷ್ಯನ ಜೀವನದಲ್ಲಿ ಅನೇಕ ಚಿಕ್ಕ ಕಿರಿಕಿರಿಗಳಿರುತ್ತವೆ. ಅವುಗಳಿಗೆ ಪರಿಹಾರ ಬೇಗನೆ ದೊರೆಯುವದು ಕಷ್ಟ. ಅಂಥವುಗಳಿಗೆ ನಗುವಿನ ಮಾರ್ಗವೇ ಪರಿಹಾರ ಮಾರ್ಗ. ಮೆಕ್‌ಡುಗಲ್ ಎಂಬವರು ಹೇಳುವ ಈ ತರ್ಕವು ಎಲ್ಲಾ ಸಮಯದಲ್ಲಿ ಸರಿಹೋಗದು. ಯಾವ ಬಹಿರ್ವಿಚಾರಗಳನ್ನೂ ತಿಳಿಯದ ಮಗುವಿನ ನಗುವಿಗೆ ಅರ್ಥವನ್ನು ಈ ವಿವರಣೆ ಕೊಡಲಾರದು. ಆದ ಕಾರಣ ನಗುವಿನ ವಿಶಿಷ್ಟ ವೈಶಿಷ್ಟ್ಯಗಳನ್ನು ನಾವು ಪರಿಶೀಲಿಸಬೇಕಾಗುವದು.

ನಗಲು ಕಾರಣಗಳಿರುತ್ತವೆ. ಯಾವದೇ ಪ್ರಚೋದನೆ ಇದ್ದರೂ ಒಬ್ಬನು ಇನ್ನೊಬ್ಬನ ಸೂಚನೆಯಿಂದಾಗಿ, ವಿನಯ ಪ್ರದರ್ಶನಕ್ಕಾಗಿ, ಇನ್ನೊಬ್ಬನನ್ನು ಕಡೆಗಣಿಸಲಿಕ್ಕಾಗಿ, ತನ್ನ ಮೌಢ್ಯತೆಯನ್ನೇ ನೆನೆದವನಾಗಿ ನಗಾಡುತ್ತಾನೆ. ಆಟದ ಆನಂದದ ಕಾಲದಲ್ಲಿ ನಗುವಿನ ಆಗತ್ಯತೆ ಇರದಿದ್ದರೂ ನಗುವಿಲ್ಲದಿದ್ದರೆ ಆಟ ರುಚಿಸಲಾರದು. ಮುಗುಳು ನಗೆಗೂ ನಗುವಿಗೂ ವ್ಯತ್ಯಾಸವಿದೆ. ಮುಗುಳು ನಗೆ ಆತ್ಮೀಯವಾದುದು. ಅದು ನಗುವವನಿಗೆ ಮಾತ್ರ ಪರಿಮಿತವಾದುದು. ಆದರೆ ನಗೆಯು ಬಹಿರಂಗವಾದುದು. ಶಿಶುವು ನಗೆಯನ್ನು ಕಲಿಯುವ ಎರಡು ತಿಂಗಳಿಗೆ ಮೊದಲೇ ಮುಗುಳು ನಗೆಯನ್ನು ಕಲಿಯುತ್ತೆ. ನಗೆಯು ಇನ್ನೊಬ್ಬನನ್ನು ನಗಿಸಬಹುದು. ಇನ್ನೊಬ್ಬನಿಗೆ ದುಃಖಕ್ಕೆ ಕಾರಣವಾಗಬಹುದು. ಇಲ್ಲವೇ ಸಿಟ್ಟಿಗೇರಿಸಬಹುದು. ಆದರೆ ಮುಗುಳುನಗೆಯು ಹಾಗಲ್ಲ. ಯಾರಿಗೂ ಅದರಿಂದ ಹಾನಿಯಾಗದು. ಅದು ಅಂತರಿಕವಾದುದು, ಬಹಿರಂಗವಾದುದಲ್ಲ.

ಎಲ್ಲಾ ನಗೆಗಳಿಗೂ ಅರ್ಥವಿರಲಾರದು. 'ಲಾಫಿಂಗ್ ಗೇಸ್' ಎಂಬದನ್ನು ಮೂಸಿದರೆ ನಗುವು ಬರುತ್ತದೆ. ಹಿಡಿತವಿಲ್ಲದ ಈ ನಗುವಿನಲ್ಲಿ ಅರ್ಥವಿರಲಾಗದು. ನಗುವು ಸಾಮಾಜಿಕವಾದುದು. ಒಬ್ಬನೇ ಏಕಾಂಗಿಯಾಗಿರುವಲ್ಲಿ ನಗುವಿರಲಾರದು. ಮಹಾಕವಿ ಬೈರನ್ ಹೇಳಿದಂತೆ "ನಾನು ಯಾವದೇ ಮನುಜನನ್ನು ನೋಡಿ ನಗುವದಾದರೆ ಆತನನ್ನು ನೋಡಿ ಅಳಬಾರದೆಂಬ ಕಾರಣದಿಂದ." ನಗು ಮತ್ತು ಅಳು ಇವೆರಡು ಒಂದೇ ನಾಣ್ಯದ ಎರಡು ಬದಿಗಳಂತೆ! ಆದ್ದರಿಂದಲೇ "ಏ ರೋನೇವಾಲೆ ಹಸನೆ ಕಿ ದಿನ್ ದೂರ್ ನಹೀ ಹೈ" ಎಂದು ಹಾಡಿರಬೇಕು.

ಈ ಮೇಲಿನ ವಿವರಣೆಗಳಿಂದ ನಗುವೆಂಬುದು ಶರೀರದ ಯಾ ಮನಸ್ಸಿನ ಯಾವುದೋ ಒಂದು ಬಿಗುವಿನ ಸ್ಫೋಟನ. ಈ ಸ್ಫೋಟನ ಯಾವಾಗ, ಎಂಥಾ ಸನ್ನಿವೇಶದಲ್ಲಾಗುವದೆಂದು ನಿರ್ದಿಷ್ಟವಾಗಿ ಹೇಳಲಾಗದು. ಆದರೆ ಜನಜೀವನದಲ್ಲಿ ನಗೆಯು ಅತೀ ಅವಶ್ಯ. ಗಾಳಿ ನೀರುಗಳಂತೆಯೇ ಮಾನವನ ಜೀವನದಲ್ಲಿ ಇದಕ್ಕೆ ಪ್ರಾಮುಖ್ಯ ಸ್ಥಾನವಿದೆ. ಜೀವನವು ಹಗುರವಾಗಬೇಕಾದರೆ ಬಾಳು ಗೋಳಾಗದೆ ಉಳಿಯಬೇಕಾದರೆ ನಗುವಿನ ಸಂಜೀವಿನಿ ಬೇಕು. ನಗುವು ಮನುಷ್ಯನಿಗೆ ದೇವರು ಕೊಟ್ಟಿರುವ ಅತ್ಯಮೂಲ್ಯ ವರಪ್ರಸಾದ. ಮಾನವ ಸಮಾಜಕ್ಕೆ [illegible]. ನಕ್ಕು ನಲಿಯಬೇಕು. ನೆರೆಯವರನ್ನೂ ನಗಿಸಬೇಕು. ಇದಕ್ಕೇ ವಿವೇಕಾನಂದರು "When we are the Children of immortal bliss, why should we be morose?" ಅಮರ ಆನಂದದ ಮಕ್ಕಳಾಗಿರುವಾಗ ನಾವೇಕೆ ಬಾಡಿದ ಮುಖವುಳ್ಳವರಾಗಿರಬೇಕು ಎಂದು ಕೇಳಿದ್ದಾರೆ. ಅಮೇರಿಕಾದಲ್ಲಿ "Laugh and grow fat" ಎಂಬ ಚಳುವಳಿ ಇದೆಯಂತೆ. ಅಂದರೆ 'ನಕ್ಕು ಆರೋಗ್ಯವಂತರಾಗಿರಿ' ಎಂಬುದೇ ಅವರ ಸಿದ್ಧಾಂತ. ನಗುವು ಶಾರೀರಿಕ ಆರೋಗ್ಯಕ್ಕೆ ಮಾತ್ರ ಸಹಕಾರಿಯಲ್ಲ, ಸಮಾಜದ ರೋಗಗಳಿಗೂ, ವ್ಯಕ್ತಿ ವ್ಯಕ್ತಿಗಳೊಳಗಿನ ವೈರತ್ವಕ್ಕೂ ರಾಮಬಾಣದಂತೆ. ಈ ಅಮೂಲ್ಯ ವಸ್ತುವನ್ನು ಪ್ರತಿಯೊಬ್ಬನೂ ಕರಗತ ಮಾಡಿಕೊಳ್ಳಬೇಕು. ನಗುವಿನ ಸ್ಪರ್ಶದಿಂದ ವಿರಸ ಸರಸವಾಗುವದು. ಆದ್ದರಿಂದಲೇ ಸರ್ವಜ್ಞನು ಹೀಗೆ ಹೇಳಿರಬೇಕು.

ಸ್ವಾತಿಯ ಹನಿಬಿದ್ದು  
ಜಾತಿ ಮುತ್ತಾದಂತೆ  
ಸಾತ್ವಿಕನ ಜೀವ ಹಗುರಾಗಿ ನಗುವಿಂದ  
ಜ್ಯೋತಿಯಂತಕ್ಕು—ಸರ್ವಜ್ಞ.

---

## ತಿದ್ದುಪಡಿ.

ಕಳೆದ ವಾರ 'ಕೊಡಗು ವಿದ್ಯಾರ್ಥಿ ಕಾಂಗ್ರೆಸ್ ಉತ್ತರಿಸಲಿ' ಎಂಬ ಪತ್ರದಲ್ಲಿ ಲಾರಿ ನಂಬರು ೫೧೯ ಎಂಬುದು ೬೧೯ ಎಂದು ತಪ್ಪಾಗಿ ಪ್ರಿಂಟಾಗಿದೆ. ವಾಚಕರು ತಿದ್ದಿ ಓದಿಕೊಳ್ಳಬೇಕು.

ಸಂ.]

## ಓದುಗರ ಓಲೆಗಳು.

### ವಿವರಣೆ ಬೇಕು.

ತಾರೀಕು ೨೯-೩-೫೦ಕ್ಕೆ ಇಟ್ಟಿದ್ದ ಕೌನ್ಸಿಲ್ ಬಜೆಟ್ ಮೀಟಿಂಗನ್ನು ಏಪ್ರಿಲ್ ತಾರೀಕು ೧೭ಕ್ಕೆ ಮುಂದರಿಸಿರುವರೆಂದು ತಿಳಿಯಬಂದಿದೆ. ಕೊಡಗಿನ ಶಾಸನ ಸಭೆಯ ಚರಿತ್ರೆಯಲ್ಲಿ ಆಗದ ಒಂದು ಘಟನೆ ಇದು. ನನಗೆ ತಿಳಿದಿರುವಂತೆ ಸರಕಾರದ ಆಡಳಿತ ವರ್ಷ ಅಂತ್ಯವಾಗುವದರೊಳಗೆ ಮುಂದಿನ ವರ್ಷದ ಬಜೆಟ್ ಶಾಸನ ಸಭೆಯಿಂದ ಮಂಜೂರಾಗಬೇಕು. ಆದ್ದರಿಂದಲೇ ಯಾವದೇ ತೊಂದರೆ ಇದ್ದರೂ ಮಾರ್ಚ ಅಂತ್ಯದೊಳಗೆ ಬಜೆಟ್ ಮೀಟಿಂಗನ್ನು ಮುಗಿಸುವದಾಗಿದೆ. ಬಜೆಟ್ ಮಂಜೂರಾಗದೆ ಆಡಳಿತ ನಡೆಸುವವರು ಒಂದು ಪೈಯನ್ನೂ ಕೂಡ ಖರ್ಚು ಮಾಡಲು ಬಾಧ್ಯರಲ್ಲ. ಹಾಗಿರುವಾಗ ಈ ಏಪ್ರಿಲ್ ತಾರೀಕು ೧ ರಿಂದ ಬಜೆಟ್ ಮಂಜೂರಾಗುವ ವರೆಗಿನ ಅವಧಿಯಲ್ಲಿ ಸರಕಾರವು ಖರ್ಚು ಮಾಡುವ ಹಣವು ಆಡಳಿತ ಸೂತ್ರಗಳ, ಪ್ರಜಾ ಜವಾಬ್ದಾರಿ ತತ್ವಕ್ಕೂ ವಿರುದ್ಧವೆನ್ನಬಹುದು. ಚೀಫ್ ಕಮೀಷನರಿಗೆ ಈ ಬಗ್ಗೆ ವಿಶೇಷ ಅಧಿಕಾರಗಳಿವೆಯೋ ನನಗೆ ತಿಳಿಯದು. ಆದರೆ ಅಂಥಾ ಅಧಿಕಾರಗಳಿದ್ದರೂ ಅದನ್ನು ಉಪಯೋಗಿಸುವ ಆವಶ್ಯಕತೆ ಇರಲಿಲ್ಲ. ಬಜೆಟ್ ಪ್ರಿಂಟಾಗಿ ದೊರೆಯಲಿಲ್ಲವೆಂಬುದು ಇಂಥಾ ನಿಯಮವಿರುದ್ಧ ವರ್ತನೆಗೆ ಸಮಂಜಸ ಕಾರಣವಾಗದು. ಸಂಪೂರ್ಣ ಸ್ವಾತಂತ್ರ್ಯ ಪಡೆದ ಹಿಂದೂದೇಶದಲ್ಲಿ ಹಿಂದಿನ ನಿರಂಕುಶ ಆಡಳಿತೆಯ ಈ ಮಾದರಿಗಳು ತೊಲಗಬೇಕು. ಈ ಪರಿಸ್ಥಿತಿಗೆ ತಕ್ಕ ಸಮಜಾಯಿಸಿಕೆಯನ್ನು ಪತ್ರಿಕೆ ಮೂಲಕ ಸಂಬಂಧಿಸಿದವರು ಕೊಡಬೇಕು.

'ನಾಗರಿಕ'

---

### ಪತ್ತೆಯಾಗಬೇಕು.

ಕೊಡಗಿನಲ್ಲಿ ದನಗಳ ಸಮಸ್ಯೆ ಬಹು ಜಟಿಲವಾದುದು. ಇದರ ಜೊತೆಗೆ ಅನೇಕ ಪುಂಡಾಟಿಕೆಯ ಕೊಲೆಯೂ ನಡೆಯುತ್ತಿದೆ. ತಾರೀಕು ಹತ್ತರಲ್ಲಿ ಕ್ರಿಸ್ತ ಮತದವರಾದ ಕೈತಾನೆಗೊನ್ ಎಂಬವರ ಸುಮಾರು ನೂರು ರೂಪಾಯಿ ಬೆಲೆ ಬಾಳುವ ಕೋಣವನ್ನು ಅರಮೇರಿ ಗ್ರಾಮದಲ್ಲಿ ಹೊಳೆಯ ಹತ್ತಿರದ ಬಿದಿರು ಕಾಡಿನ ಮಧ್ಯದಲ್ಲಿ ಯಾರೋ ಕತ್ತಿಗೆ ಕಡಿದು ಚರ್ಮ ಸುಲಿದು ತೆಗೆದುಕೊಂಡಿರುವರು. ಮಾಂಸವನ್ನು ಅಲ್ಲೇ ಬಿಟ್ಟಿಂತಿದೆ. ಇದೇ ರೀತಿ ತಾ. ೨೩ರಲ್ಲಿ ಅಳಮಂಡ ಚಂಗಪ್ಪನವರ ಒಂದು ಎತ್ತನ್ನು ಹೀಗೆ ಕಡಿದು ಚರ್ಮ ಸುಲಿದಿರುವರು. ಅದರ ಮಾಂಸವನ್ನು ಉಪಯೋಗಿಸಿದಂತೆ ತೋರಲಿಲ್ಲ. ಇದನ್ನು ಮಾಡಿದ ಕಟ್ಟಿದ ಪತ್ತೆ ಆಗಲೂ ಇಲ್ಲದೆ. ಈ ರೀತಿ ಗ್ರಾಮದ ರೈತನ ದನಗಳ ಕೊಲೆಯಾದರೆ ರೈತನಿಗೆ ಉಳಿಗಾಲವೆಲ್ಲಿ? ಇದ್ದರಿಂದ ಸಂಬಂಧಿಸಿದವರು ಈ ವಿಚಾರ ಗಮನಿಸಿ ಪತ್ತೆ ಮಾಡಿ ಎಚ್ಚರಿಸಬೇಕು.

ಕೆ. ಎಂ.

---

## ಹಾಲು ಸರಬರಾಯಿ

ಮಡಿಕೇರಿಯಲ್ಲಿ ಕೆಲವರು ಹಾಲು ವ್ಯಾಪಾರ ನಡೆಸುತ್ತಾರೆ. ಫ್ರೇಜರ್ ಪೇಟೆ ಕಡೆಯಿಂದಲೋ, ಇಲ್ಲವೇ ಬೇರೆ ಕಡೆಯಿಂದಲೋ ಹಾಲು ಒದಗಿಸಿ ಮಡಿಕೇರಿಯ ಪುರಜನರಿಗೆ ಸರಬರಾಯಿ ಮಾಡುತ್ತಾರೆ. ಮಡಿಕೇರಿಯಲ್ಲಿ ಹಾಲಿನ ದರ ಸೇರಿಗೆ ಎಂಟಾಣೆ ಇದೆ. ಎಂಟಾಣೆಗೆ ಒಂದು ಸೇರು ಉತ್ತಮ ಹಾಲು ದೊರೆತರೆ ಚಿಂತೆಯಿಲ್ಲ. ಆದರೆ ಮಡಿಕೇರಿಯಲ್ಲಿ ದೊರೆಯುವ ಬಹುತೇಕ ಹಾಲೆಲ್ಲವೂ ಹಾಳು. ಮೊನ್ನೆಯಾಗಿ ಮಡಿಕೇರಿ ಮುನ್ಸಿಪಲ್ ಸೇನಿಟರಿ ಇನ್ಸ್‌ಪೆಕ್ಟರರು ಮೂರು ಜನ ಹಾಲು ಮಾರಾಟಗಾರರ ಹಾಲನ್ನು ಹಿಡಿದು ಅವರ ಮೇಲೆ ಕ್ರಮ ಜರುಗಿಸಿದರು. ಇವರ ಹಾಲನ್ನು ಪರಿಶೀಲಿಸಿ ಅದರ ಯೋಗ್ಯತೆಯನ್ನು ತಿಳಿಯಲು ಬೆಂಗಳೂರಿಗೆ ಕಳುಹಿಸಲಾಗಿತ್ತು. ಇವುಗಳಲ್ಲಿ ಒಬ್ಬನ ಹಾಲು ಶೇಕಡ ಅರವತ್ತು ನೀರೆಂದೂ, ಮತ್ತೆ ಇಬ್ಬರದರಲ್ಲಿ ಶೇಕಡ ಇಪ್ಪತ್ತು ನೀರೆಂದೂ ತಿಳಿಯಬಂದಿದೆ. ಈ ಲೆಕ್ಕದ ಪ್ರಕಾರ ಮಡಿಕೇರಿಯಲ್ಲಿ ಒಂದು ಪಾವು ಹಾಲಿನ ಎಂಟಾಣೆ ಕೊಟ್ಟಂತಾಯಿತು! ಸಂಬಂಧಿಸಿದವರು ಆಗಾಗ್ಗೆ ಪರಿಶೋಧನೆ ನಡೆಸಿ ಈ ರೀತಿ ನೀರನ್ನು ಹಾಲೆಂದು ಮಾರುವ ಪರಿಪಾಠವನ್ನು ತಪ್ಪಿಸುವರಾಗಿ ಆಶಿಸಲಾಗಿದೆ.

'ಪುರನಿವಾಸಿ'

---

## ಲಿಯಾಖತ್ ನೆಹರೂ ಭೇಟಿ.

ಪೂರ್ವ ಬಂಗಾಳದಲ್ಲಾದ ಹತ್ಯಾಕಾಂಡದ ಪ್ರತೀಕಾರವಾಗಿ ಪಶ್ಚಿಮಬಂಗಾಳ ಪ್ರಾಮುಖ್ಯವಾಗಿ ಕಲ್ಕತ್ತಾದಲ್ಲಿ ಕೆಲ ಮಟ್ಟಿಗೆ ಗಲಭೆಗಳಾಗಿವೆ. ಈ ಗಲಭೆಗಳು ಈಗ ಶಮನಗೊಂಡಿದ್ದರೂ ಇನ್ನು ಇಂಥಾ ಘಟನೆಗಳಾಗದಂತೆ ಎಚ್ಚರಿಕೆ ವಹಿಸುವರೆ ಪಾಕಿಸ್ಥಾನದ ಮುಖ್ಯಮಂತ್ರಿ ಲಿಯಾಖತ್ ಅಲಿಖಾನರ ಮತ್ತು ಭಾರತದ ಮುಖ್ಯ ಮಂತ್ರಿ ಪಂಡಿತ ನೆಹರೂರವರ ಭೇಟಿ ಡೆಲ್ಲಿಯಲ್ಲಿ ಏಪ್ರಿಲ್ ೨ನೇ ತಾರೀಕಿನಲ್ಲಿ ನಡೆಯುವದು. ಪಶ್ಚಿಮ ಬಂಗಾಳದ ಪರಿಸ್ಥಿತಿಯನ್ನು ಪಂಡಿತ ನೆಹರೂರವರು ಎರಡು ಬಾರಿ ಹೋಗಿ ಸ್ವತಃ ನೋಡಿ, ತಕ್ಕ ವ್ಯವಸ್ಥೆ ಮಾಡಿ ಬಂದಿರುವರು. ಲಿಯಾಖತ್ ಅಲಿಖಾನರು ಮೊನ್ನೆಯಾಗಿ ಪೂರ್ವ ಬಂಗಾಳಕ್ಕೆ ಸಂದರ್ಶನವಿತ್ತು ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದಾರೆ. ಅದರ ನಂತರ ಈ ವಿಚಾರದಲ್ಲಿ ಅವರು ಕೊಟ್ಟ ಹೇಳಿಕೆಯು ಆಶಾದಾಯಕವಾಗಿದ್ದು ಈ ಗಲಭೆಗಳ ವಿಚಾರ ನೆಹರೂ ಮತ್ತು ಲಿಯಾಖತರು ಜೊತೆಯಾಗಿ ಒಂದು ಹೇಳಿಕೆಯನ್ನು ಹೊರಡಿಸಲಿದ್ದಾರೆ. ಇದಲ್ಲದೆ ಡೆಲ್ಲಿ ಮಾತುಕತೆಯಲ್ಲಿ ಕಾಶ್ಮೀರ ಸಮಸ್ಯೆ ಇತರ ವ್ಯಾಪಾರ ಸಂಬಂಧದ ವಿಚಾರಗಳೂ ಇ ನಿರೀಕ್ಷಿಸಲ್ಪಡುವವೆಂದು ತಿಳಿದುಬಂದಿದೆ.

---

## ಲೆಫ್ಟಿನೆಂಟ್ ಕರ್ನಲ್

# ದಯಾಸಿಂಗ್ ಬೇಡಿಯವರು

ಕೊಡಗಿನ ಚೀಫ್ ಕಮೀಷನರಾಗಿ ಇವರು ತಾರೀಕು ೨೦-೩-೫೦ ರಿಂದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಸಿಖ್ಖಿನ ಶರೀರದ ಸುಮಾರು ಐದೂವರೆ ಅಡಿ ಎತ್ತರದ ಸಿಖ್ ಗಡ್ಡದ ಬೆಡಗಿನವರು. ತಮ್ಮ ವಯಸ್ಸಿಗೆ ಸ್ವಲ್ಪ ಎಳೆಯದಾಗಿಯೇ ತೋರುತ್ತಾರೆ. ಬೇಡಿಯವರು ೧೮೯೮ನೇ ಜನವರಿ ೨೭ರಲ್ಲಿ ಹುಟ್ಟಿದರು. ಇವರ ವಿದ್ಯಾಭ್ಯಾಸವು ಲಾಹೋರಿನಲ್ಲಾಯಿತು. ನಂತರ ಇವರು ಇಂಗ್ಲೆಂಡಿನ ಸಂಡರ್ಸ್ಟ್ ಮಿಲಿಟರಿ ಎಕಾಡೆಮಿಯನ್ನು ಸೇರಿ ೧೯೨೧ರಲ್ಲಿ ಹಿಂದೂದೇಶದ ಸೈನ್ಯದಲ್ಲಿ ಕಮಿಷನ್ ಪಡೆದ ಅಧಿಕಾರಿಯಾಗಿ ಸೇರಿದರು. ೧೯೨೮ರ ವರೆಗೆ ಸೈನ್ಯದಲ್ಲಿದ್ದ ಇವರನ್ನು ಇಂಡಿಯಾ ಸರಕಾರದ ವಿದೇಶ ಮತ್ತು ರಾಜಕೀಯ ಇಲಾಖೆಗೆ ತೆಗೆದುಕೊಳ್ಳಲಾಯಿತು. ಇವರ ಈ ಅಧಿಕಾರದ ಪ್ರಥಮ ವರ್ಷಗಳು ಮದ್ರಾಸು ಮತ್ತು ಮಧ್ಯ ಪ್ರಾಂತದ ಸಂಸ್ಥಾನಗಳಲ್ಲಿ ಕಳೆಯಿತು. ಅಲ್ಲಿ ಇವರು ಅಸಿಸ್ಟೆಂಟ್ ಪೊಲಿಟಿಕಲ್ ಏಜಂಟರಾಗಿದ್ದರು. ನಂತರ ಇವರು ಪಶ್ಚಿಮ ಭಾರತ ಮತ್ತು ರಜಪುತ ಸಂಸ್ಥಾನಗಳಲ್ಲಿ ಅಲ್ಲಿಯ ರೆಸಿಡೆಂಟರಿಗೆ ಸೆಕ್ರೆಟರಿಯಾಗಿ ಕೆಲಸ ಮಾಡಿದರು. ೧೯೩೧-೪೭ರ ವರೆಗೆ ಅವರು ಗಲ್ಫ್ ನಾಡು ಮತ್ತು ಬಲೂಚಿಸ್ಥಾನಗಳಲ್ಲಿ ಇದ್ದರು. ಈ ಹನ್ನೆರಡು ವರ್ಷಗಳ ಅವಧಿಯಲ್ಲಿ ಇವರು ಧಾಲ್ ಮತ್ತು ಕೋಹಟ್ ಪ್ರದೇಶಗಳ ಅ. ಕಮಿಷನರಾಗಿಯೂ ಬಲೂಚಿಸ್ಥಾನದಲ್ಲಿ, ಗವರ್ನರ್ ಜನರಲರ ಏಜಂಟಿನ ಸೆಕ್ರೆಟರಿಯಾಗಿಯೂ ನಂತರ ರೆಸಿಡೆಂಟ್ ಮತ್ತು ಚೀಫ್ ಕಮಿಷನರಾಗಿಯೂ ಇದ್ದರು. ೧೯೩೬ನೇ ನವಂಬರಿನಲ್ಲಿ ಕ್ವೆಟ್ಟದ ರಾಜಕೀಯ ಏಜಂಟರಾಗಿ ಇವರು ನೇಮಿಸಲ್ಪಟ್ಟರು. ೧೯೩೯ನೇ ಇವರು ಬಲೂಚಿಸ್ಥಾನದ ಲೋರಲಾಯ್ ಎಂಬುದರ ರಾಜಕೀಯ ಏಜಂಟರಾಗಿ ನೇಮಕವಾಗಿ ೧೯೪೩ರ ವರೆಗೆ ಅಧಿಕಾರದಲ್ಲಿದ್ದರು. ೧೯೪೩ ಜನವರಿಯಿಂದ ೧೯೪೪ನೇ ಸೆಪ್ಟೆಂಬರ್ ವರೆಗೆ ಅವರು ಹಜಾರ ಜಿಲ್ಲೆಯ ಡೆಪ್ಯುಟಿ ಕಮಿಷನರಾಗಿದ್ದರು. ನಂತರ ಅವರು ಅಫಘಾನಿಸ್ಥಾನದ ಗಡಿಯಲ್ಲಿರುವ ಕುರ್ರಾಮ್ ಎಂಬಲ್ಲಿ ರಾಜಕೀಯ ಏಜೆಂಟರಾಗಿ ನೇಮಕ ಹೊಂದಿದರು. ೧೯೪೭ರಲ್ಲಿ ಇವರು ಒರಿಸ್ಸಾ ಸಂಸ್ಥಾನಗಳ ರಾಜಕೀಯ ಏಜೆಂಟರಾಗಿ ನೇಮಕ ಹೊಂದಿದರು. ೧೯೪೭ರಲ್ಲಿ ರಜಪುತಾನ ಸಂಸ್ಥಾನಗಳ ರೀಜನಲ್ ಕಮೀಷನರಾದರು. ೧೯೪೮ನೇ ಆಗಸ್ಟ್ ತಿಂಗಳಲ್ಲಿ ಇವರು ಆಸ್ಟ್ರೇಲಿಯಾದಲ್ಲಿ ಹಿಂದೂದೇಶದ ಹೈಕಮಿಷನರಾಗಿ ನೇಮಿಸಲ್ಪಟ್ಟರು. ಅಲ್ಲಿ ಸುಮಾರು ಒಂದೂವರೆ ವರ್ಷಗಳ ವರೆಗಿದ್ದು ಈಗ ಕೊಡಗಿನ ಚೀಫ್ ಕಮಿಷನರಾಗಿರುವರು.

ಮೇಲ್ಕಂಡಂತೆ ವಿವಿಧ ಜವಾಬ್ದಾರಿಯನ್ನು ಹೊತ್ತು ಅನುಭವಿಸಿರುವ ಇವರು ಕೊಡಗಿನ ಆಡಳಿತ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಬಲ್ಲರೆನ್ನುವುದು ಮುಂದೆ ನೋಡಬೇಕಾಗಿದೆ. ಕೊಡಗಿಗೆ ಬಂದು ಆದ ಹತ್ತು ದಿನಗಳ ಅಲ್ಪ ಪರಿಚಯದಿಂದ ಹೇಳುವದಾದರೆ ಅವರು ಪ್ರಥಮ ದರ್ಜೆಯ ಕ್ರೀಡಾಸಕ್ತರು (Sports-man) ಆಟೋಟಗಳಲ್ಲಿ, ಕೋವಿ ತುಪಾಕಿಗಳಲ್ಲಿ ತುಂಬಾ ಮಮತೆ ಇರುವವರೆಂದು ಹೇಳಬಹುದು. ಅದೇ ರೀತಿ ಆಡಳಿತ ವಿಚಾರಗಳಲ್ಲೂ ಕುಶಲರಿರಬಹುದೆಂದು ಊಹಿಸಬಹುದೇ?

-ಬೇಡಿಯವರು ಸಿಖ್ ಮತ ಸಂಸ್ಥಾಪಕರಾದ ಗುರು ನಾನಕರ ವಂಶದವರು. ಇವರ ಕುಟುಂಬವು ಪಂಜಾಬಿನಲ್ಲೂ ಹಿಂದೂದೇಶದ ಉತ್ತರಭಾಗದಲ್ಲೂ ಇರುವ ಸಿಖ್ ಮತಸ್ಥರಿಂದ ಗೌರವಿಸಲ್ಪಡುತ್ತದೆ. ಬೇಡಿಯವರದು ಪತ್ನಿ, ಒಬ್ಬನೇ ಪುತ್ರ ಮತ್ತು ಇಬ್ಬರು ಪುತ್ರಿಯರಿಂದ ಕೂಡಿದ ಸಂಸಾರ. ಆಸ್ಟ್ರೇಲಿಯಾದಲ್ಲಿ ಇವರ ಮಗನೇ ಇವರಿಗೆ ಖಾಸಗಿ ಕಾರ್ಯದರ್ಶಿಯಾಗಿದ್ದರಂತೆ! ಉತ್ತಮ ಹಿನ್ನೆಲೆಯಿಂದ ಕೂಡಿದ ಬೇಡಿ ಕುಟುಂಬವು ಕೊಡಗಿನ ಸೇವೆಯನ್ನು ಪ್ರಶಂಸನೀಯವಾಗಿ ಮಾಡುವದೆಂದು ಎಲ್ಲರೂ ಆಶಿಸುವದರಲ್ಲಿ ಆಶ್ಚರ್ಯವಿಲ್ಲ.

---

**THE WARDEN INSURANCE CO., Ltd.**
**Head Office: Bombay.**
**LIFE, FIRE, ACCIDENT, MOTOR & W. C. INSURANCES.**

*Managing Director:* – **S. H. THAKER.**

| | |
|---|---|
| Business in force | Rs. 5,00,00,000 |
| Assets | „ 1,00,00,000 |
| Income | „ 35,00,000 |

Also **LOCAL MANAGERS OF**
**THE LONDON GUARANTEE & ACCIDENT CO., Ltd.**
(Incorporated in England)
Assets Exceed Rs. 10,00,00,000
a Subsidiary Company of
**THE PHOENIX ASSURANCE CO. Ltd.**
(One of the Largest Assurance Companies in the World)
Assets Exceed Rs. 45,00,00,000
Transact **FIRE INSURANCE**
Enquiries for representation solicited.
*Apply to:*
**Chief Agency Office** *Virajpet (Coorg)* or **A. S. Aiyappa,** *Branch Secretary, Gandhinagar,* **BANGALORE CITY**

# ಅನೈತಿಕತೆಗೆ ಕಾರಣರಾರು?

ಲೇ:- ಶ್ರೀ ಎಂ. ಎಸ್. ಪೊನ್ನಪ್ಪ, ಕಾನೂರು.

ಈಗ ಕೆಲವು ವರ್ಷಗಳಿಂದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಲ್ಲಿ ಬೆಳೆದು ಬರುತ್ತಿರುವ ಅನೈತಿಕ ವರ್ತನೆ ಅನೇಕರನ್ನು ಯೋಚನಾಪರರನ್ನಾಗಿ ಮಾಡಿದೆ. ಅವರ ಈ ಅನೀತಿಗೆಯೂ ಅಧಃಪತನಕ್ಕೂ ಅವರನ್ನು ಸಾಕಿ ಸಲಹಿದ ತಂದೆ ತಾಯಿಗಳೂ ವಿದ್ಯೆಯನ್ನು ಕಲಿಸುವ ಉಪಾಧ್ಯಾಯರುಗಳೂ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕರೂ ಕಾರಣರಾಗಿರುತ್ತಾರೆ. ಇದಕ್ಕಾಗಿ ಮಕ್ಕಳನ್ನೇ ದೂರುವುದು ಸಮಂಜಸವಲ್ಲ. ಈಗಿನ ಜನರು ಸಂತಾನೋತ್ಪತ್ತಿಯ ದೃಷ್ಟಿಯಿಂದ ಸಂಸಾರವನ್ನು ಹೂಡುವುದಿಲ್ಲವಾಗಿಯೂ ಬರೀ ಕಾಮತೃಪ್ತಿಯ ದೃಷ್ಟಿಯಿಂದಲೇ ಸಂಸಾರ ಸ್ಥಾಪಿಸುವರೆಂದೂ ಹೇಳಿದರೆ ತಪ್ಪಲ್ಲ. ಯಾವನೊಬ್ಬ ಸಂಸಾರಿಯನ್ನು ಕೇಳಿದರೂ ಅತನ ಜೀವಿತದಲ್ಲಿ ಒಂಟಿಯಾಗಿದ್ದಾಗಲೇ ಹೆಚ್ಚು ಆನಂದವಿದ್ದುದೆಂದೂ ಲಗ್ನದನಂತರ ಹಲವಾರು ವಿಘ್ನಗಳು ತಲೆದೋರಿ ತೊಂದರೆಗೀಡಾದನೆಂದೂ ಹೇಳದಿರಲಾರ. ಇದಕ್ಕೆ ಕಾರಣವೇನು? ತಾನು ಮದುವೆಯಾಗಿ ಸಂಸಾರಸ್ಥನಾಗಲು ಅರ್ಹನೆ, ಎಂದು ಆತನು ಮೊದಲು ಯೋಚಿಸುವುದಿಲ್ಲ. ಜೀವಿತದ ಅವಶ್ಯಕತೆಗಳನ್ನು ಪೂರೈಸಲು ತಕ್ಕಷ್ಟು ಉತ್ಪತ್ತಿಯನ್ನು ತಾನು ಮಾಡಬೇಕೆಂಬ ಯೋಚನೆಯು ಆತನಿಗೆ ಯೌವನದಲ್ಲಿ ತಲೆದೋರುವುದಿಲ್ಲ. ಬಾಹ್ಯಾಡಂಬರಕ್ಕೆ ಮರುಳಾಗಿ ಆಗ ತಾನೆ ಪದ್ಧತಿಗೆ ಕಟ್ಟುಬಿದ್ದು ಮದುವೆಯಾಗುವವರಿಲ್ಲ; ಈ ತರಹ ಮಾತನ್ನಾಡದಿರರು.

ಇಂತಹ ಕಷ್ಟ ಜೀವನದಲ್ಲಿ ಕಾಲಿಟ್ಟವರ ತಮಗೆ ಬೇಡವಿದ್ದರೂ ದಂಪತಿಗಳ ಕಾಮಕೂಟದಿಂದಾಗುವ ಮಕ್ಕಳನ್ನು ತಡೆಹಿಡಿಯಲಾರರು. ತಮ್ಮ ಮಕ್ಕಳ ವಿಷಯದಲ್ಲಿ ಹೆಚ್ಚು ಲಕ್ಷ್ಯವನ್ನಿಡಲಾರದೆ ಅವು ಶಿಸ್ತುಶೀಲಗಳಿಲ್ಲದೆ ಬೆಳೆದು ಶಾಲೆಯನ್ನು ಸೇರುವವು. ಹುಟ್ಟಿದ ಮಗುವಿಗೆ ತಾಯಿಯು ಮೊಲೆಯೂಡಿಸುವಾಗ ಕೂಡ ಕ್ರಮವಿರಬೇಕು. ಅಲ್ಲಿಂದಲೇ ಮಗುವಿನಲ್ಲಿ ತಕ್ಕ ಶಿಸ್ತುಶೀಲಗಳಿರಬೇಕೆಂದು ತಂದೆತಾಯಿಗಳು ಗಮನಿಸಿದ್ದೇ ಆದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಪೋಷಕರು ತಮ್ಮ ಜವಾಬ್ದಾರಿಯನ್ನು ಮರೆತು ತಮ್ಮ ಮಕ್ಕಳ ವಿಷಯವಾಗಿ ಮತ್ತೊಬ್ಬರ ಮೇಲೆ ತಪ್ಪು ಹೊರಿಸುವುದು ನ್ಯಾಯವಾಗದು. ನಿಶ್ಚಿತ ಶಿಕ್ಷಣವ ಕಾಲಾಣಿಕದ ಮಗವು ಶಿಸ್ತು ತಪ್ಪಿದವನಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ! ಚಿಕ್ಕ ಮಕ್ಕಳೊಂದಿಗೆ ತಂದೆತಾಯಿಗಳು ಪ್ರೇಮಕ್ಕೆಂದು ಬಯ್ಯುವುದಕ್ಕೂ ಹೊಡೆಯುವುದಕ್ಕೂ ಒದೆಯುವುದಕ್ಕೂ ಬಾಗಿಯುವುದಕ್ಕೂ ಕಲಿಸುವುದನ್ನು ನಾನು ನೋಡಿದ್ದೇನೆ. ಈ ರೀತಿಯ ಮಕ್ಕಳು ಬೆಳೆದಾಗಲೂ ಬಿಡರು. ಇಂತಹ ಮಕ್ಕಳು ಶಾಲೆಯಲ್ಲಿ ಉಪಾಧ್ಯಾಯರ ಹತೋಟಿಯಲ್ಲಿರುವುದೂ ಕಷ್ಟಸಾಧ್ಯ. ನೂರಾರು ಮಕ್ಕಳಲ್ಲಿ ಪ್ರತಿಯೊಬ್ಬನ ವಿಷಯದಲ್ಲೂ ಸೂಕ್ಷ್ಮ ದೃಷ್ಟಿಯನ್ನಿಟ್ಟು ಕ್ರಮಬದ್ಧ ವಿದ್ಯಾರ್ಥಿಯನ್ನಾಗಿ ಮಾಡುವುದು ಯಾವ ಉಪಾಧ್ಯಾಯನಿಗೂ ಸಾಧ್ಯವಾಗದು. ಪಾಠದ ವೇಳೆಯಲ್ಲಿ ಶಿಷ್ಟಾಚಾರವನ್ನು ಅನುಸರಿಸಿದರೂ ಬಿಡುವಿನ ವೇಳೆಯಲ್ಲಿ ಅತನ ಭ್ರಷ್ಟಾಚಾರಕ್ಕೆ ಆತಂಕವಿರಲಾರದು. 'ಸಂಘದಂತೆ ಬುದ್ಧಿ ತಿಂಡಿಯಂತೆ ಲದ್ದಿ' ಎಂಬ ಗಾದೆಯಂತೆ ಕೆಲವು ತಂದೆ ತಾಯಿಗಳು ತಮ್ಮ ಮಕ್ಕಳನ್ನು ಎಚ್ಚರದಿಂದ ಸಾಕಿದ್ದರೂ ಅವು ಶಾಲೆಗೆ ಹೋಗಲು ಪ್ರಾರಂಭಿಸಿದ ನಂತರ ಅವರ ಮಾತು ಕತೆಗಳಲ್ಲಿ ವ್ಯತ್ಯಾಸ ಕಂಡುಬರುವದು. ಇದನ್ನು ಕಂಡಾಗ ಮನೆಯಲ್ಲಿ ತಂದೆ ತಾಯಿಗಳೂ ಎಚ್ಚರಿಸಿ ಅದನ್ನು ಉಪಾಧ್ಯಾಯರಿಗೂ ತಿಳಿಸಿದ್ದೇ ಆದರೆ ಮಕ್ಕಳು ಎಡವುದಕ್ಕೆ ಕಾರಣವಿರಲಾರದು. ಆದರೆ ಹಲವು ತಂದೆ ತಾಯಿಗಳ ಬಳಿಯಲ್ಲಿ ಉಪಾಧ್ಯಾಯರು ವಿದ್ಯಾರ್ಥಿಯ ಚಿಲ್ಲರೆ ಸ್ವಭಾವವನ್ನು ಖಂಡಿಸಿ ಶಿಕ್ಷಿಸಿದ್ದೇ ಆದರೆ ಮಾರನೆಯ ದಿನವೇ ಉಪಾಧ್ಯಾಯರ ಮೇಲೆ ಪುಕಾರು ಮಾಡುವರು. ಮಕ್ಕಳ ಮೇಲೆ ತಮಗಿರುವ ಅತಿಯಾದ ಪ್ರೇಮದಿಂದ ಈ ರೀತಿಯಾಗುವುದಿದೆ. ಆದರೆ ಆ ಮಮತೆಯು ಅವರನ್ನೇ ಹಾಳುಮಾಡುವುದೆಂಬುದನ್ನು ತಂದೆ ತಾಯಿಗಳು ತಿಳಿಯಬೇಕು. ತಮ್ಮ ಮಕ್ಕಳ ಅಭಿವೃದ್ಧಿಗಾಗಿ ಉಪಾಧ್ಯಾಯರೊಡನೆ ಸಹಕರಿಸಬೇಕು. ಅದಲ್ಲದೆ ತಂದೆ ತಾಯಿಗಳೇ ಅವರ ಕೆಟ್ಟ ನಡತೆಗಳಿಗೆ ಪ್ರೋತ್ಸಾಹ ಕೊಡುವರೆ 'ಬೇಲಿ ಹೊಲ ಮೇಯ್ದಂತೆ' ಆಗುವುದು.

ಹಲವು ತಂದೆ ತಾಯಿಗಳ ಏಕಾಂತ ಸಮಯದಲ್ಲಿ ತಮ್ಮ ಬಳಿ ತಮ್ಮ ಮಕ್ಕಳಿರುವುದನ್ನು ಗಣನೆಗೆ ತಂದುಕೊಳ್ಳದೆ ವರ್ತಿಸುವುದರಿಂದ ಏನೂ ತಿಳಿಯದ ಎಳೆಯ ಮೆದುಳಿನಲ್ಲಿ ಹಲವಾರು ತರಂಗಗಳು ಏಳುವುದಕ್ಕೆ ಎಡೆಯಾಗುವುದು. ಮೂರು ವರ್ಷ ಪ್ರಾಯವಾದ ನಂತರ ಮಗುವಿನ ಮೆದುಳಿನಲ್ಲಿ ಪ್ರತಿಯೊಂದು ವಿಷಯದಲ್ಲೂ ವಿಚಾರಣೆಗೆ ಪ್ರಾರಂಭವಾಗುವುದು. ಅಂತಹ ಸಂದರ್ಭಗಳಲ್ಲಿ ತನ್ನ ತಂದೆ ತಾಯಿಗಳ ಪರ್ವತನೆಯನ್ನು ಮಗವು ತಿಳಿದರೆ ವಿಷಯಗಳ ಅಲೆಗಳೆ ಎಳೆಮೆದುಳು ಸಿಕ್ಕಿ ಮುಂದೆ ಅದು ಬೆಳೆದು ಯವ್ವನಕ್ಕೆ ಬರಲೇ ವಿಷಯಾಸಕ್ತಿಗೆ ಬಲಿಬಿದ್ದು ಜೀವನದಲ್ಲಿ ಅಸ್ವಾದನೆಯನ್ನು ಹಿಡಿಯುವುದು. ಸುಪ್ತಾವಸ್ಥೆಯಲ್ಲೇ ಇದ್ದ ವಿಷಯಾಸಕ್ತಿಯು ಒಮ್ಮೆ ಹೊರಬಿದ್ದರೆ ಅದನ್ನು ಎಷ್ಟು ಮಾತ್ರಕ್ಕೂ ತಡೆಹಿಡಿಯಲಾಗದು. ಇದಕ್ಕೆ ಕಾರಣ ತಂದೆ ತಾಯಿಗಳಲ್ಲಿಯ ಶಿಕ್ಷಣದ ಕೊರತೆ.

ನವನಾಗರಿಕತೆಗೆ ಬಲಿಬಿದ್ದ ತಂದೆ ತಾಯಿಗಳು ಪ್ರಾಯಕ್ಕೆ ಬಂದ ತಮ್ಮ ಹೆಣ್ಣುಮಕ್ಕಳನ್ನು ಅಪರಿಚಿತರಾದ ತಮ್ಮ ಸ್ನೇಹಿತರಿಗೂ ಸ್ನೇಹಿತರ ಗಂಡುಮಕ್ಕಳಿಗೂ ಪರಿಚಯಮಾಡಿಕೊಡುವ ರೂಢಿ ಈಗ ಸಾಮಾನ್ಯ ಅಭ್ಯಾಸವಾಗಿಬಿಟ್ಟಿದೆ. ಬಾಹ್ಯಾಡಂಬರಕ್ಕೆ ಅದೇನೊ ಯೋಗ್ಯವೆಂದೆನ್ನಬಹುದು. ಈ ನಾಗರೀಕತೆ ಪ್ರಾಯಪ್ರಬುದ್ಧರಾದ ಗಂಡು ಹೆಣ್ಣುಗಳ ಮನವನ್ನು ಅದೆಷ್ಟು ದೂರಕ್ಕೆ ಎಳೆದುಕೊಂಡು ಹೋಗಬಹುದೆಂಬುದನ್ನು ಅದೇ ತರದ ಯೌವನವನ್ನು ದಾಟಿ ಬಂದ ತಂದೆ ತಾಯಿಗಳು ತಿಳಿದಿರಬೇಕಾದುದು ಅವಶ್ಯವಾಗಿದೆ. ಇಂತಹ ಸಂದರ್ಭಗಳನ್ನು ತಂದೆ ತಾಯಿಗಳೇ ಒದಗಿಸಿಕೊಟ್ಟರೆ ಶರೀರದ ಆಸೆ ಆಕಾಂಕ್ಷೆಗಳಿಗೆ ಹಿಂದು ಮುಂದು ನೋಡದೆ ಧಾವಿಸುವ ಹರೆಯದ ಯುವಕ ಯುವತಿಯರಿಗೆ ಸಂಯಮವೆಂತು ಬರಬೇಕು? ಅಗ್ರಗಣ್ಯ ಸನ್ಯಾಸಿಗಳಿಗೂ ಕೂಡ ಇಂದ್ರಿಯಾಭಿಲಾಷೆಯನ್ನು ತಡೆಹಿಡಿಯುವುದು ಕಷ್ಟಸಾಧ್ಯವೆಂದ ಮೇಲೆ ಹರೆಯದ ಯುವಕ ಯುವತಿಯರು ಒಂದೆಡೆ ಸೇರಿದರೆ ಅದೆಷ್ಟು ಸಾಧ್ಯ? ನಾಗರೀಕತೆಯು ಈ ರೀತಿ ದುರುಪಯೋಗವಾಗದಂತೆ ತಂದೆ ತಾಯಿಗಳು ಗಮನಿಸಬೇಕು!

ಈಗಿನ ಚಲಚಿತ್ರಗಳಲ್ಲಿ ಹಲವು ಕಥೆಗಳೂ ತಾರೆಗಳ ಹಾವಭಾವಗಳೂ ಸ್ವಚ್ಛರ ಮನಸಿನಲ್ಲೂ ಕಾಮಾಪೇಕ್ಷೆಯನ್ನು ಹುಟ್ಟಿಸಬಲ್ಲವು. ಇಂತಹ ಚಿತ್ರಗಳಿಗೆ ತಂದೆ ತಾಯಿಗಳು ತಮ್ಮ ಮಕ್ಕಳೊಂದಿಗೆ ಹೋಗಿ, ಚಿತ್ರದಲ್ಲಿ ಪ್ರಣಯಿಗಳ ನಟನೆಯನ್ನು ನೋಡಿದಾಗ ಗಂಡ ಹೆಂಡತಿಯರು ಒಬ್ಬರೊಬ್ಬರ ಮುಖನೋಡಿ ನಗುವರು. ಪ್ರಾಯದ ಮಗಳು ಉದ್ದವಾದ ನಿಟ್ಟುಸಿರನ್ನು ಬಿಟ್ಟು ಮುಖತಿರುಗಿಸುವಳು. ಚಿಕ್ಕ ಮಕ್ಕಳು ಮನೆಯಲ್ಲಿ ಅದರಂತೆಯೇ ನಟಿಸತೊಡಗುವರು. ಈಗೀಗ ಯುವತಿಯರು ಸ್ತ್ರೀಸಹಜವಾದ ಕುಲೀನತ್ವವನ್ನು ಬಿಟ್ಟು ಹಾವಭಾವಗಳಿಂದಲೂ ಉಡುಪು ಒಯ್ಯಾರಗಳಿಂದಲೂ ಯುವಕರ ದೃಷ್ಟಿಯನ್ನು ತಮ್ಮ ಕಡೆಗೆ ಎಳೆಯಲೆಂದೇ ಹವಣಿಸುವರೆಂದರೆ ಯಾರೂ ಸಿಟ್ಟಾಗಬಾರದು. ಪ್ರೌಢೆಯಾದ ಮಗಳು ರಂಗಮಂಟಪದ ಮೇಲೆ ಹತ್ತಿ ನಾಟ್ಯವಾಡಿದರೆ ತಂದೆ ತಾಯಿಗಳು 'ಕಲಾಭ್ಯಾಸ'ವೆಂದು ಹರ್ಷೋದ್ಗಾರದಿಂದ ಹೇಳುವರು. ಅವರಿಗೆ ಅವರ ಮಿತ್ರರು ಅಭಿನಂದನೆಗಳನ್ನು ಅರ್ಪಿಸುವರು. ಹಿಡಿತವಿಲ್ಲದ ಈ ಕಲಾಭ್ಯಾಸವು ಕಾಮಸ್ಫೂರ್ತಿಜನಕವಾಗುವುದೆಂಬುದನ್ನು ಗಮನಿಸಬೇಕು.

ಈಗೀಗ ಯುವತಿಯರು ಅರ್ಧಮರ್ಧ ವಿದ್ಯೆ ಕಲಿತು ಚಾಕರಿ ಹುಡುಕುವುದರಿಂದ ಅವರಲ್ಲುಂಟಾಗುವ ಮುಂದಿನ ಪೀಳಿಗೆಯು ಈಗಿನದಕ್ಕಿಂತಲೂ ಹಾಳಾಗುವುದೆಂದೇ ಹೇಳಬೇಕು. ತಮ್ಮಲ್ಲೇ ಶಿಸ್ತು ಶೀಲಗಳಿಲ್ಲ; ತಮ್ಮ ಮಕ್ಕಳಲ್ಲಿ ಶಿಸ್ತುಶೀಲಗಳಿಗೆ ಗಮನವೀಯಲು ಸಮಯವಿಲ್ಲದಂತಾಗುವುದು. ಸಾಮಾನ್ಯವಾಗಿ ಯುವತಿಯರಿಗೆ ಗಂಡಸಿನ ಸಂಪರ್ಕ ಬೇಕಿದ್ದರೂ ಅದನ್ನು ತಂದೆ ತಾಯಿಗಳೊಡನೆ ಹೇಳದೆ ಬಚ್ಚಿಡುವುದು ಅನೈತಿಕ ವರ್ತನೆಗೆ ಮೊದಲ ಕಾರಣ. ಅದನ್ನು ತಂದೆ ತಾಯಿಗಳು ಮನಗಾಣಬೇಕು.

ಸುಖಜೀವನ ನಡೆಸಲೆಂದು ಈಗಿನ ಜನರು ಸಾಕಷ್ಟು ವಿದ್ಯೆಯಿಲ್ಲವಿದ್ದರೂ ಚಾಕರಿ ಹುಡುಕುವರು. ಕಡಮೆ ವಿದ್ಯೆ ಕಲಿತವರೆಲ್ಲಾ ಕಡೆಯ ಶಾಲೆಗಳಿಗೆ ಅಂದರೆ ಪ್ರಾಥಮಿಕ ಶಾಲೆಗಳಿಗೆ ಉಪಾಧ್ಯಾಯರಾಗಿ ನೇಮಿಸಲ್ಪಡುವರು. ಎಳೆಮಕ್ಕಳಿಗೆ ವಿದ್ಯೆ ಕಲಿಸುವ ಉಪಾಧ್ಯಾಯರಲ್ಲಿ ನಿಜವಾದ ವಿದ್ಯೆ, ಶಿಸ್ತು ಶೀಲಗಳಿಲ್ಲದಿದ್ದರೆ ಪ್ರಾಥಮಿಕ ಶಾಲೆಗಳಿಂದ ಹೊರಟು ಪ್ರೌಢಶಾಲೆಗಳನ್ನು ಸೇರುವ ಆ ವಿದ್ಯಾರ್ಥಿಗಳ ವಿದ್ಯಾಭ್ಯಾಸವು ಅದೆಷ್ಟು ಯೋಗ್ಯರೀತಿಯಿಂದಿರಬಹುದು. ಕಡಮೆ ಸಂಬಳಕ್ಕೆ ಕೆಲಸಮಾಡಿ ಸಂಸಾರ ಸಾಗಿಸುವ ಉಪಾಧ್ಯಾಯರು ತಿಂಗಳಂತ್ಯವನ್ನು ನಿರೀಕ್ಷಿಸುವರಲ್ಲದೆ ಪರರ ಮಕ್ಕಳ ಅಭಿವೃದ್ಧಿಗೆ ಗಮನವಿಡಬಹುದೆ? ಅವರಲ್ಲೂ ಅಲ್ಪಬದ್ಧರೆ ಮತ್ತೆ ಕೇಳಿರಿ, ವಿದ್ಯಾರ್ಥಿಗಳೊಡನೆ ಸಮಾನತೆಯಿಂದಿರಬೇಕೆಂಬ ತತ್ವಕ್ಕನುಸಾರವಾಗಿ ಧೂಮಪಾನ ಮದ್ಯಪಾನಗಳಿಂದಲೂ, ಸಮಾನತ್ವವನ್ನು ತೋರಿಸುವ ಉಪಾಧ್ಯಾಯರೂ ಇದ್ದಾರೆ! ಈ ರೀತಿಯ ವಾತಾವರಣದಲ್ಲಿ ಇಂದಿನ ವಿದ್ಯಾರ್ಥಿಯು ಹದ್ದುಮೀರಿ ವರ್ತಿಸುತ್ತಿದ್ದರೆ ಅದು ಅತನ ತಪ್ಪೇ?


## ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ಶೇಕಡ ೩೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ನಮೂನೆಯ ಬನಾರಿಸ್ ಮತ್ತು ಕಾಶ್ಮೀರ್ ಪಟ್ಟೆಗಳು ಸದಾ ದೊರೆಯುವವು

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟು ಬಟ್ಟೆ ಕೊಳ್ಳುವವರು ಈ ಪತ್ರಿಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12-11

## ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ಸಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ದೊಡ್ಡ ಸ್ಟಾಕ್ ಇಡಲಾಗಿದೆ.
ಯಾವ ಸಮಯಕ್ಕೂ ಬಟ್ಟೆಗೂ ಪ್ರದರ್ಶಿಸಲಿದೆ
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

ಪಟ್ಟೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್ ಹಾಲಿನ ಎದುರು, ಮೈಸೂರು.

52-12



ಭದ್ರತೆ! 17 ವರ್ಷಗಳ ಅನುಭವಶೀಲತೆ!! ಅನುಕೂಲತೆ !!

## ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ಖಾಯಂ ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.
ಎಲ್ಲಾ ವಿಧದ ಆಧುನಿಕ ಬೇಂಕ್ಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.



## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

| | |
|---|---|
| ಹೊಸ ಉದ್ಯಮ ರೂ. .... .... | 6,13,00,000 ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 ,, |
| ಒಟ್ಟು ನಿಧಿ. ರೂ. .... .... .... | 8,30,00,000 ,, |
| ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪಿತ,—1897
ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನಬಿ.
ರೋಡ್, ಫೋರ್ಟ್, ಬೊಂಬಾಯಿ.

ಬ್ರಾಂಚ್ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.


ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.


## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೂಲಧನ | ರೂ. | 1,79,000 |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.
ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ಲು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶ್ಯೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.



# CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

*H: O: BOMBAY.*] [*Established 1919.*

*For particulars write to:*

Sri B. A. Poovaiah
*Organiser*
*Pollibetta, Coorg.*

or

The Branch Manager,
*22 B. Mahatma Gandhi Road,*
*Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತಂದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-32


Edited, Printed and Published by P. I. Bellappa, at 'Kodag Press, Mercara, for 'Kodagu' Ltd.

Reg. No. M 1880.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.
ಸಂಪುಟ ೨೮ | ತಾರೀಕು ೭-೪-೧೯೫೦ನೇ ಶುಕ್ರವಾರ | ಸಂಚಿಕೆ ೪೫

ಪೂನಾದ

## ಫರ್ಗ್ಯುಸನ್ ಕಾಲೇಜು.

ಲೇ:—ಶ್ರೀ ಶಂ. ಭಾ. ಜೋಶಿ ಇವರು.

ಸ್ವಾರ್ಥತ್ಯಾಗದ ಮತ್ತು ಅನಾಸಕ್ತಿಯ ಸೇವೆ ಯಾವ ರೀತಿ ಒಂದು ಸಂಸ್ಥೆಯ ಅಭಿವೃದ್ಧಿಗೆ ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ಕೊಡಗಿನಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಕಾಲೇಜಿಗೆ ಮಾರ್ಗದರ್ಶಕವಾಗಲೀ ಎಂದು ಈ ಲೇಖನವನ್ನು ಪ್ರಕಟಿಸಲಾಗಿದೆ. [illegible]

ಮಹಾರಾಷ್ಟ್ರದಲ್ಲಿಯೇ ಏಕೆ, ಭಾರತದಲ್ಲಿಯೇ ಫರ್ಗ್ಯುಸನ್ ಕಾಲೇಜಿನ ಕೀರ್ತಿಯನ್ನು ತಿಳಿಯದ ಸುಸಂಸ್ಕೃತ ವಿದ್ಯಾವಂತರು ವಿರಳ. ಮಹಾರಾಷ್ಟ್ರವು ಭಾರತದ ಮುಂದುವರಿದ ಪ್ರಾಂತಗಳಲ್ಲಿ ಅಗ್ರಣಿಯೆಂದು ಖ್ಯಾತಿಯನ್ನು ಪಡೆಯಲು ಕಾರಣವಾದ ಕೆಲವೇ ಸಂಸ್ಥೆಗಳಲ್ಲಿ ಫರ್ಗ್ಯುಸನ್ ಕಾಲೇಜವು ಒಂದು ಮುಖ್ಯವಾದುದು.

ದೇಶದ ಏಳ್ಗೆಗಾಗಿಯೆ ತಮ್ಮ ಜೀವನವನ್ನು ಮುಡಿಪಾಗಿ ಇರಿಸುವ ಸಂಕಲ್ಪದಿಂದ ಜೀವನವನ್ನಾರಭಿಸಿದ ಲೋಕಮಾನ್ಯ ತಿಲಕ, ಆಗರಕರ, ಆಪ್ಟೆ ಮುಂತಾದ ಪ್ರಭೃತಿಗಳಿಂದ ಈ ಕಾಲೇಜಿನ ಪುಣ್ಯಾಹವಾಚನವಾಗಿದೆ. ನಾಮದಾರ ಗೋಖಲೆಯಂತಹ ತ್ಯಾಗಿಗಳಾದ ಕರ್ತವ್ಯಶಾಲಿ ಮಹಾಪುರುಷರಿಂದ ಇದರ ಮುಂದಿನ ಕಾರ್ಯವು ರೂಪುಗೊಂಡಿದೆ. ಫರ್ಗ್ಯುಸನ್ ಕಾಲೇಜು ಎಂದರೆ ಸ್ವಾರ್ಥತ್ಯಾಗಿಗಳಾದ ಕರ್ತವ್ಯಶಾಲಿ ಧೀಮಂತರ ತಪಸ್ಸೇ ಮೈವೆತ್ತು ಇಂದು ದೇಶಕ್ಕೆಲ್ಲಾ ಆದರ್ಶವಾದ ಭವ್ಯ ಸಂಸ್ಥೆಯಾಗಿ ಮೆರೆಯುತ್ತಲಿದೆ.

೬೦-೭೫ ವರುಷಗಳ ಹಿಂದೆ ನಮ್ಮ ದೇಶದಲ್ಲಿ ಇಂಗ್ಲಿಷ್ ವಿದ್ಯಾವಂತರ ಸಂಖ್ಯೆ ತೀರ ಸ್ವಲ್ಪವಿತ್ತು. ಬಿ. ಎ., ಎಂ. ಎ., ಆದೊಡನೆ ಸರಕಾರದಲ್ಲಿ ೨೦೦-೩೦೦ ರೂಪಾಯಿಗಳ ಸಂಬಳದ ಸ್ಥಳಗಳು ಒಮ್ಮೆಲೆ ವಿಶೇಷ ಪ್ರಯತ್ನವಿಲ್ಲದೆ ದೊರೆಯುತಿದ್ದವು. ಕಾಲೇಜಿನ ಪದವೀಧರರಾಗುತ್ತಲೆ ಬ್ರಿಟಿಷ್ ಸರಕಾರದ ಊಳಿಗದಲ್ಲಿ ಸೇರಿ ಪರಕೀಯ ಆಡಳಿತವನ್ನು ಭದ್ರಪಡಿಸಿ ದೇಶದ ದಾಸ್ಯವನ್ನು ದೃಢಪಡಿಸುವಲ್ಲಿ ನಮ್ಮ ನಾಡಿನ ಸುಶಿಕ್ಷಿತರೆಂಬವರು ಹೆಮ್ಮೆಪಟ್ಟುಕೊಳ್ಳುತಿದ್ದ ಕಾಲವದು!

ಆ ಕಾಲದಲ್ಲಿ ಲೋಕಮಾನ್ಯ ತಿಲಕ, ಮಹಾ ತಪಸ್ವಿ ಆಗರಕರ ಪ್ರಭೃತಿಗಳಿಗೆ ಮಾತ್ರ 'ಈ ಬಗೆಯ ಪಾಪವು ಭವಿಸಲಾಗದೆಂಬ ದಿವ್ಯ ಜ್ಞಾನೋದಯವಾಯ್ತು! ಇಂತಹ ಜ್ಞಾನೋದಯವಾದ ಮಹಾಮಹಿಮರು ಯಾವ ಪ್ರಾಂತದಲ್ಲಿ ಮೊದಲು ಜನ್ಮತಾಳಿದರೋ ಆ ಪ್ರಾಂತಗಳೇ ಇಂದು ಭಾರತದಲ್ಲಿ ಅಗ್ರೇಸರವೆನಿಸಿಕೊಳ್ಳುತ್ತಿವೆ. ವಿವೇಕಾನಂದರ ಬಂಗಾಳ, ಲಜಪತರಾಯರ [illegible] ರದ ಮಹಾರಾಷ್ಟ್ರ, [illegible] ದೇಶಗಳು [illegible] ಕ, ಆಗರಕ[illegible] ಇನ್ನುಳಿದ ಜ[illegible] ನಿವಾರಣಾ [illegible] ಲೇಜುಗಳನ್ನು [illegible] ಶನೆ ಪತ್ರಿಕೆ [illegible] ಕ್ಕಿದರು. ಅವರುಗಳ ಇಂತಹ ಮಹೋದ್ಯಮಗಳಲ್ಲಿ ಒಂದು ಈ ಫರ್ಗ್ಯುಸನ್ ಕಾಲೇಜು!

ರಾಷ್ಟ್ರಾಭಿಮಾನದಿಂದ ಉತ್ಸಾಹಿತರಾದ ಈ ತರುಣರು ಆರಂಭಿಸಿದ ಕಾಲೇಜಿಗೆ 'ಫರ್ಗ್ಯುಸನ್' ಎಂದು ನಾಮಕರಣ ಮಾಡಿದ್ದು—ಆಂಗ್ಲ ಹೆಸರನ್ನಿತ್ತುದು ವಿಚಿತ್ರವೆನಿಸುವಂತಿಲ್ಲವೆ? ಆದರೆ ರಾಷ್ಟ್ರಾಭಿಮಾನವೆಂದರೆ ಆಂಗ್ಲರ ದ್ವೇಷವಲ್ಲವೆಂಬುದನ್ನು ಅವರು ತಮ್ಮ ಕೃತಿಯಿಂದ ತೋರಿಸಿಕೊಟ್ಟರು. ಫರ್ಗ್ಯುಸನ್ ಕಾಲೇಜಿನಲ್ಲಿ ಪಡೆದ ಶಿಕ್ಷಣದಿಂದ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ಬೇರೆ ಪ್ರಾಂತಗಳಲ್ಲಿ ಕೂಡ ಫರ್ಗ್ಯುಸನ್ ಕಾಲೇಜಿನ ಮಾದರಿಯಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ದೇಶಸೇವೆ ಮಾಡುವ ಒಂದು ಹೊಸ ಪರಂಪರೆಯೇ ಆರಂಭವಾಯ್ತು.

ಸರಕಾರದಲ್ಲಿ ದೊಡ್ಡ ಸಂಬಳವು ಸಿಕ್ಕಬಹುದಾದರೂ ದೇಶಕ್ಕಾಗಿ ಸ್ವಾರ್ಥತ್ಯಾಗಪೂರ್ವಕ ತಮ್ಮ ಜೀವನವನ್ನು ಮೀಸಲಾಗಿರಿಸಿ ವಿದ್ಯಾದಾನದ ವ್ರತವನ್ನು ಕೈಕೊಂಡು ಅನೇಕ ತರುಣರು ಈ ಸಂಸ್ಥೆಯ ಆಜೀವ ಸದಸ್ಯರಾದರು. ಸರ್ ಆರ್. ಪಿ. ಪರಾಂಜಪೆಯವರು ಕೇಂಬ್ರಿಜ್ ವಿದ್ಯಾಲಯದ ಸೀನಿಯರ್ ರ್‍ಯಾಂಗಲ್‍ರೆಂದು ಖ್ಯಾತಿ ಪಡೆದು ಮರಳಿ ಬಂದ ಬಳಿಕ ಫರ್ಗ್ಯುಸನ್ ಕಾಲೇಜಿನಲ್ಲೇ ಕೆಲಸಕ್ಕೆ ನಿಂತರು. ಹೊರಗೆ ಸರಕಾರಿ ಕೆಲಸದಲ್ಲಿ ಈ ಪರೀಕ್ಷೆ ಸೇರಿದ್ದರೆ ೫೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಸಂಬಳವು ಆರಂಭಕ್ಕೇ ಅವರಿಗೆ ದೊರೆಯುತಿತ್ತು! ಅದನ್ನು ಕಡೆಗಣಿಸಿ ೨೦೦ ರೂ. ಗಳ ಮೇಲೆಯೇ ಸಂತುಷ್ಟರಾಗಿ ಕೆಲಸಕ್ಕೆ ಆರಂಭಿಸಿದರು. ಇವರ ನಂತರ ಪ್ರಿನ್ಸಿಪಾಲರಾಗಿ ಬಂದ ಪ್ರೊ. ಮಹಾಜನಿಯವರು ರ್‍ಯಾಂಗ್ಲರ ಪರೀಕ್ಷೆಯಲ್ಲಿ ಮೇಲ್ಮೆ ಪಡೆದುದಲ್ಲದೆ ಸ್ಮಿತ್ ಬಹುಮಾನ ಸಂಪಾದಿಸಿ ನಾಡಿನ ಕೀರ್ತಿಯನ್ನು ಪರದೇಶದಲ್ಲಿ ಹಬ್ಬಿಸಿದರು.

ಫರ್ಗ್ಯುಸನ್ ಕಾಲೇಜಿನ ಸಂಸ್ಥೆಯು ಹಲವು ಹೈಸ್ಕೂಲುಗಳನ್ನು ನಡೆಸಿದೆ. ಪ್ರಾಥಮಿಕ ಶಾಲೆಗಳು, ಶಿಶುವಿಹಾರಗಳೂ ಇವೆ. ಅಲ್ಲದೆ ಸಾಂಗ್ಲಿ ವಲಿಂಗ್‍ಡನ್ ಕಾಲೇಜು ಮಹಾರಾಷ್ಟ್ರ ಕಾಮರ್ಸ್ ಕಾಲೇಜು ಮೊದಲಾದ ಬೇರೆ ವಿದ್ಯಾಲಯಗಳಿವೆ. ೪-೫ ಸಾವಿರಕ್ಕೆ ಮೀಕ್ಕಿ ವಿದ್ಯಾರ್ಥಿಗಳು ಜ್ಞಾನ ಸಂಪಾದಿಸುತ್ತಿದ್ದಾರೆ. ಒಂದು ಕೋಟಿಗೆ [illegible] ಆಸ್ತಿಯಿದೆ. ಪೂನಾದ ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಲು ಈ ಸಂಸ್ಥೆಯ ಪ್ರಯತ್ನಗಳೇ ವಿಶೇಷ ಕಾರಣವಾದುವು. ಈ ರೀತಿಯಲ್ಲಿ ಪೂನಾ ಯೂನಿವರ್ಸಿಟಿ ಇನ್ನೂ ಬೇರೆ [illegible] ಹೊರಟಿವೆ. ಆದರೆ ಫರ್ಗ್ಯುಸನದ [illegible] ಕೀರ್ತಿ ಫರ್ಗ್ಯುಸನಕ್ಕಲ್ಲದೆ ಬೇರೆ ಯಾವುದಕ್ಕೂ ಬರದು. ಇದಕ್ಕೆ ಲಕ್ಷಾಂತರ ರೂಪಾಯಿಗಳ ದತ್ತಿಗಳು ದೊರೆತಿವೆ. ಸರ್ ನೆಸ್‍ವಾಡಿಯಾ ಅವರು [illegible] ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಸುಂದರವಾದ ಗ್ರಂಥಾಲಯವನ್ನು ಸ್ಥಾಪಿಸಿಕೊಟ್ಟಿದ್ದಾರೆ! ಗ್ರಂಥಾಲಯವು ಮಹಾರಾಷ್ಟ್ರಕ್ಕೆಲ್ಲ ಆದರ್ಶವಾಗಿದೆ.

ಈಗ ಈ ಮಹಾ ವಿದ್ಯಾನಿಲಯವನ್ನು ಮುಂದುವರಿಸಿಕೊಂಡು ಹೋಗುವ ಹೊಣೆಯು ಡಾ. ದಿನಕರರಾವ್ ಕರ್ವೇ ಅವರ ಮೇಲೆ ಪ್ರಾಪ್ತವಾಗಿದೆ. ಇವರು ರಸಾಯನ ಶಾಸ್ತ್ರದ ಸಂಶೋಧನೆಗಾಗಿ ಹೆಸರುಗಳಿಸಿದ್ದಾರೆ. ಅಲ್ಲದೆ ಜರ್ಮನಿಯಲ್ಲಿ ಅಧ್ಯಯನ ಮಾಡಿದ ಫಲವಾಗಿ ಇವರಿಗೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಶೀಲಗಳನ್ನು ತರುವ ಹದವು ಚೆನ್ನಾಗಿ ಸಾಧಿಸಿದೆ. ಇವರ ತಂದೆಯವರಾದ ಧೋಂಡೊಕೇಶವ ಕರ್ವೇ ಅವರು ಈ ವಿದ್ಯಾಲಯದಲ್ಲಿಯೇ ಹಿಂದೆ ಗಣಿತ ಶಾಸ್ತ್ರದ ಪ್ರೊಫೆಸರರಾಗಿದ್ದರು. ಅನಾಥ ಹೆಣ್ಣು ಮಕ್ಕಳಿಗಾಗಿ ಅನಾಥ ಬಾಲಿಕಾಶ್ರಮ, ವಿಧವಾಶ್ರಮಗಳನ್ನು ಸ್ಥಾಪಿಸಿ ಸ್ತ್ರೀ ಸಮಾಜದ ಉದ್ಧಾರಕ್ಕಾಗಿ ಜೀವನವನ್ನು ಸಲ್ಲಿಸಿದ ಕೀರ್ತಿ ಇವರದೇ. ಮಹಿಳೆಯರಿಗಾಗಿ ಸ್ವತಂತ್ರ ಯುನಿವರ್ಸಿಟಿ ಸ್ಥಾಪಿಸಿ ಹೆಣ್ಣು ಮಕ್ಕಳಿಗೆ ಜೀವನದಲ್ಲಿ ಬೇಕಾಗುವ ವಿಶೇಷ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಇಂತಹ ಮಹಾಪುರುಷರ ಮಕ್ಕಳೆಂದೂ ಡಾ. ದಿನಕರರಾಯರಿಗೆ ಮಹಾರಾಷ್ಟ್ರದಲ್ಲಿ ವಿಶೇಷ ಗೌರವವಿದೆ. ಅಲ್ಲದೆ ಇವರು ಸ್ವ[illegible]ತ ಕರ್ತೃತ್ವಶಕ್ತಿಯಿಂದ ಅದನ್ನು ಅಭಿವೃದ್ಧಿಸಿಕೊಂಡಿರುವರು. ಡಾ. ಇರಾವತಿ ಬಾಯಿಯಂತಹ ಪ್ರತಿಭಾಶಾಲಿಯು ಪತ್ನಿಯಾಗಿರುವ ಇವರ ಜೀವನದ ವೈಶಿಷ್ಟ್ಯವೇ ಒಂದು ಅಪೂರ್ವ. ಈ ದಂಪತಿಗಳು ಮೂರು ಮಕ್ಕಳ ಆದರ್ಶ ಸಂಸಾರ ಸಾಗಿಸಿಯೂ ಸಮಾಜಸೇವೆ, ರಾಷ್ಟ್ರಸೇವೆಯಲ್ಲಿ ಅವಿರತವಾಗಿ ತೊಡಗಿರುವುದು ನಾಡಿನ ಜನರೆಲ್ಲರಿಗೂ ಅನುಕರಣೀಯವಾಗಿದೆ.

ಇಂತಹ ಕಾರ್ಯಕರ್ತರು ದೊರೆಯದಿಲ್ಲದೆ ಫರ್ಗ್ಯುಸನ್ ಕಾಲೇಜು ಇಂದು ಇನ್ನು ಅಖಿಲ ಭಾರತೀಯ ಖ್ಯಾತಿಗೆ [illegible]ಣವಾಗುವುದು ಸಾಧ್ಯವಿದ್ದಿತೆ?

---

## ವಾರ್ತೆಗಳು.

ಸುಮಾರು ೮,೦೦೦ ರೂಪಾಯಿ ಬೆಲೆ ಬಾಳುವ ೬೩ ತೊಲೆ ಭಾರದ ಪಾಕೀಸ್ತಾನ ಸರಕಾರದ ಮೊಹರು ಇರುವ ಚಿನ್ನದ ಗಟ್ಟಿಗಳು ಕಳ್ಳಾಪಟ್ಟೆಯಲ್ಲಿ ರಹಸ್ಯವಾಗಿ ಸಾಗಿಸಲ್ಪಡುವಾಗ ಮದ್ರಾಸಿನಲ್ಲಿ ಪೋಲೀಸರು ಪತ್ತೆಹಚ್ಚಿದರು. ಸಂಬಂಧಪಟ್ಟವರನ್ನು ದಸ್ತಗಿರಿ ಮಾಡಲಾಗಿದೆ.

ಸಿಂಧ್ ಪ್ರಾಂತ್ಯಕ್ಕೆ ಅನುಕೂಲ ರಾಜಧಾನಿಯನ್ನು ಎಲ್ಲಿ ಏರ್ಪಡಿಸಬಹುದೆಂಬುದರ ಕುರಿತಾಗಿ ನಿರ್ಣಯಿಸಲು ನೇಮಕವಾದ ಸಮಿತಿಯು ಖೈರ್‍ಪುರ ಮತ್ತು ಜಂಗ್‍ಶಾಹಿಗಳ ನಡುವೆ ಇರುವ ಒಂದು ಸ್ಥಳವನ್ನು ರಾಜಧಾನಿಯ ಬಗ್ಗೆ ಶಿಫಾರಸು ಮಾಡಿರುವುದು.

೧೯೫೦ ನೇ ಜನವರಿ ತಾ. ೧ಕ್ಕೆ ದಿಲ್ಲಿ ಪ್ರಾಂತ್ಯದಲ್ಲಿರುವ ಮದ್ಯದಂಗಡಿಗಳ ಮತ್ತು ದ್ರಾಕ್ಷಾರಸದ ಅಂಗಡಿಗಳ ಸಂಖ್ಯೆ ೮೬ ಎಂಬುದಾಗಿ ಕಳೆದ ಮಾರ್ಚ್ ತಾ. ೨೩ರಂದು ಆರ್ಥಿಕ ಮಂತ್ರಿಗಳು ಪಾರ್ಲಿಮೆಂಟ್ ಮುಂದೆ ಹೇಳಿದರು. ಲೈಸೆನ್ಸ್ ಫೀ ರೂಪದಲ್ಲಿ ಅವುಗಳಿಂದ ಒದಗುವ ಆದಾಯ ರೂ. ೫,೧೫,೦೬೩. ಆದಷ್ಟು ಬೇಗ ದಿಲ್ಲಿ ಪ್ರಾಂತ್ಯದಲ್ಲಿ ಸಂಪೂರ್ಣ ಮದ್ಯನಿಷೇಧವನ್ನು ಜಾರಿಗೆ ತರುವ ಆಶಯ ಸರಕಾರದ್ದಾಗಿದೆಯೆಂದೂ ಆರ್ಥಿಕ ಮಂತ್ರಿಗಳು ತಿಳಿಸಿದರು.

ಪರಮಾಣು ಶಕ್ತಿಯಿಂದಲೇ ನಡೆಯುವ ವಿಮಾನವೊಂದು ಕ್ಲೀವ್ ಲೆಂಡ್‍ದಲ್ಲಿ ತಯಾರಾಗುತ್ತಿದೆ. ಈ ವಿಮಾನ ಮಿಂಚಿನ ವೇಗದಲ್ಲಿ ಒಂದೇ ಒಂದು ಕಡೆ ನಿಲ್ಲದೆ ಭೂಪ್ರದಕ್ಷಿಣೆ ತೆಗೆಯಬಲ್ಲುದು. ಅದರ ಮೊದಲ ಪರೀಕ್ಷಾರ್ಥ ಹಾರಾಟದ ಬಗ್ಗೆ ದಿನವನ್ನು ನಿಶ್ಚೈಸಿರುವರೆನ್ನಲಾಗಿದೆ.

ಉಜ್ಜಯಿನಿಯ ಜನರು ಇತ್ತೀಚೆಗೆ ಕಾಳಸಂತೆಯ ಭೂತದ ಉಚ್ಚಾಟನೆ ಮಾಡುವ ಸ್ವಾರಸ್ಯಪೂರ್ಣ ಪ್ರದರ್ಶನವೊಂದನ್ನು ನಡೆಸಿದರು. ಕಳ್ಳಸಂತೆಯ ಲಾಭಬಡಕರನ್ನು ಪ್ರತಿಬಿಂಬಿಸುವ ಒಂದು ದೊಡ್ಡ ಬೊಂಬೆ ಮಾಡಿ ಅದರ ವಜ್ರಾಭರಣಗಳ ಕೈಗೆ ಕೋಳ ತೊಡಿಸಿ ಊರ ಸುತ್ತಲೂ ಮೆರವಣಿಗೆ ಮಾಡಿದರು. ಸರ್ವಸಾಮಾನ್ಯ ಉಜ್ಜಯಿನಿ ಪಟ್ಟಣದ ನಾಗರಿಕರೆಲ್ಲರೂ ಈ ಮೆರವಣಿಗೆಯಲ್ಲಿ ಉತ್ಸಾಹಪೂರ್ಣ ಭಾಗವಹಿಸಿದ್ದರು.

ಮುಂಬಯಿ ಪ್ರಾಂತದಲ್ಲಿ ಮದ್ಯನಿಷೇಧಾಜ್ಞೆಯು ಇದೇ ಏಪ್ರಿಲ್ ತಿಂಗಳ ೫ನೇ ದಿನಾಂಕದಂದು ಜಾರಿಗೆ ಬರಲಿದ್ದು ಭಾರತದ ಅಧ್ಯಕ್ಷರು ಇದನ್ನು ಉದ್ಘಾಟಿಸಲಿರುವರು. ಮದ್ಯನಿಷೇಧವನ್ನು ಜಾರಿಗೆ ತರುವ ದಿನದಲ್ಲಿ ಅನೇಕ ಕಾರ್ಯಕ್ರಮಗಳು ನಡೆಯಲಿದ್ದು ಕಾರ್ಯಕ್ರಮದ ವಿವರಗಳನ್ನು ಪ್ರಾಂತದಾದ್ಯಂತ ಪ್ರಕಟಣಾ ಪತ್ರಗಳ ಮೂಲಕ ಪ್ರಚುರ ಪಡಿಸಲಾಗಿದೆ.

# ಪಾನ ಪ್ರತಿಬಂಧದಿಂದ ಜನಸಾಮಾನ್ಯರ ಉದ್ಧಾರ.

ಲೇ:- ಶ್ರೀ ಪಿ ಎಸ್. ಕುಮಾರಸ್ವಾಮಿ ರಾಜಾ [ಮದರಾಸು ಪ್ರಾಂತದ ಮುಖ್ಯ ಮಂತ್ರಿ]

ಪಾನಪ್ರತಿಬಂಧವೆಂದರೆ ರಾಷ್ಟ್ರೀಯ ಮಹತ್ವದ ಸಾಮಾಜಿಕ, ಆರ್ಥಿಕ ಸುಧಾರಣೆಯು. ೧೯೪೭ರ ಆಗಸ್ಟ ೧೫ಕ್ಕೆ ದೊರೆತ ಸ್ವಾತಂತ್ರ್ಯವು ಸಾಮಾನ್ಯ ನಾಗರಿಕನ ಹಿತಕ್ಕಾಗಿ, ಸ್ವಾತಂತ್ರ್ಯ ವಿಕಾಸವಾಗುವ ಸಾಮಾಜಿಕ ಸುಧಾರಣೆಯನ್ನು ಮೊದಲು ಮಾಡುವ ಯುಗವನ್ನು ಪ್ರಾರಂಭಿಸಿದೆ. ಮತ್ತು ಪಾನಪ್ರತಿಬಂಧನವು ಗುಣ ಸಾಧಿಸುವ ಮಹತ್ವದ ದೊಡ್ಡ ಸುಧಾರಣೆಯೂ ಆಗಿದೆ. ರಾಷ್ಟ್ರೀಯ ದೃಷ್ಟಿಯಿಂದ, ಉತ್ಪಾದನೆಯನ್ನು ಹೆಚ್ಚು ಮಾಡುವ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವದು ಮತ್ತು ದೇಶದ ಸಂಪತ್ತನ್ನು ಬೆಳೆಸುವುದು, ಇವುಗಳಷ್ಟೇ ಮಹತ್ವವಲ್ಲದೆ, ದೇಶದ ಜನತೆಯನ್ನು ಆರ್ಥಿಕ ಹಾನಿಯಿಂದ ಕಾಯುವುದು ಮತ್ತು ನೈತಿಕ ಅಧಃಪಾತದಿಂದ ಪಾರುಮಾಡುವುದೂ ಆಗಿದೆ. ಇದನ್ನೇ ಪಾನಪ್ರತಿಬಂಧವು ಸಾಧಿಸಬೇಕೆನ್ನುತ್ತದೆ. ಬಹು ಕಾಲದಿಂದಲೂ ಕಾಂಗ್ರೆಸು ಈ ಸಾಮಾಜಿಕ ಸುಧಾರಣೆಗಾಗಿ ಹಾತೊರೆಯುತ್ತಿದೆ. ರಾಷ್ಟ್ರಪಿತನಾದ ಮಹಾತ್ಮಾಗಾಂಧಿ ಅವರ ಆದರ್ಶವೂ ಅದೇ ಆಗಿತ್ತು. ಈ ಸುಧಾರಣೆಯು ಇಂದು ಮದ್ರಾಸು ರಾಜ್ಯಘಟಕದಲ್ಲಿ ಕೈಗೂಡಿದ ಸಂಗತಿಯಾಗಿದೆ. ೧೯೪೮ರ ಅಕ್ಟೋಬರ ೨ನೆಯ ದಿನಾಂಕಕ್ಕೆ ಇಡೀ ರಾಜ್ಯಘಟಕವು 'ಒಣ' ಗಿತು ಮತ್ತು ಇಂತಹ ಕೀರ್ತಿದಾಯಕ ನಿಃಶಬ್ದ ಕ್ರಾಂತಿಯನ್ನು ಮಾಡಿದ ಮೊದಲ ಶ್ರೇಯಸ್ಸು ಮದ್ರಾಸು ರಾಜ್ಯಘಟಕಕ್ಕೆ ಸಲ್ಲುತ್ತದೆ. ಮಹಾತ್ಮಾ ಗಾಂಧಿಯವರ ಅಂತಃಕರಣಕ್ಕೆ ಅತಿ ಸಮೀಪವಾದ ಪಾನ ಪ್ರತಿಬಂಧವನ್ನು ಯಶಸ್ವಿಯಾಗಿ ಮಾಡಿದುದರಿಂದ ಅವರ ಹೆಸರಿನಲ್ಲಿ ಒಂದು ಮಹತ್ವದ ಸ್ಮಾರಕವನ್ನು ನಿಲ್ಲಿಸಿದಂತಾಗಿದೆ.

### ಪ್ರಾರಂಭಿಕ ಸ್ಥಿತಿ.

ಪಾನ ಪ್ರತಿಬಂಧವು ಇಡೀ ಮದ್ರಾಸು ರಾಜ್ಯಘಟಕದಲ್ಲಿ ಕಾಯದೆ ರೂಪಕ್ಕೆ ಬಂದಿದೆ. ರಾಜ್ಯಘಟಕದ ಕೆಲವು ಜಿಲ್ಲೆಗಳಲ್ಲಿ ಅಬಕಾರಿ ಖಾತೆಯಲ್ಲಿ ಮೊದಲು ಕಾರ್ಯ ಮಾಡುತ್ತಲಿದ್ದ ಅಧಿಕಾರಿಗಳ ಮುಖಾಂತರ ಪಾನ ಪ್ರತಿಬಂಧನನ್ನು ಜಾರಿಯಲ್ಲಿ ತರಲಾಗಿದೆ. ಇನ್ನುಳಿದ ಜಿಲ್ಲೆಗಳಲ್ಲಿ ಪಾನ ಪ್ರತಿಬಂಧವನ್ನು ಪ್ರತ್ಯೇಕ ಪೋಲೀಸ್ ವಿಭಾಗದ ಕಾರ್ಯರೂಪದಲ್ಲಿ ತರಲಾಗಿದೆ. ಪಾನಪ್ರತಿಬಂಧನನ್ನು ಕಾರ್ಯರೂಪದಲ್ಲಿ ತರುವ, ಕೆಲಸವನ್ನು ಪೋಲೀಸ್ ಖಾತೆಯ ದೈನಂದಿನ ಕರ್ತವ್ಯದ ಕಕ್ಷೆಗೆ ತರುವ ಯೋಜನೆಯನ್ನು ಪರಿಶೀಲಿಲಾಗಿದೆ ಮತ್ತು ಉಳಿದ ಅಪರಾಧಿಕ ಕಾನೂನುಗಳಂತೆ ಪಾನ ಪ್ರತಿಬಂಧ ಕಾನೂನನ್ನು ಕೂಡ ಪೋಲೀಸರ ದೈನಂದಿನ ಕರ್ತವ್ಯಗಳಲ್ಲೊಂದಾಗಿ ಮಾಡಬೇಕೆಂದು ಸರಕಾರವು ಗೊತ್ತು ಮಾಡಿದೆ. ಕಿರಕೊಟ್ಟ ಮದ್ಯವನ್ನು ಇಟ್ಟುಕೊಳ್ಳಲು, ಬಳಸಲು ಅನುಮತಿ ಕೊಡುವ ಅಪ್ಪಣೆ ಚೀಟಿಗಳನ್ನು ವ್ಯಕ್ತಿಗಳಿಗೆ ಕೊಡುವ ಸೌಕರ್ಯವು ಮದ್ರಾಸು ಪಾನ ಪ್ರತಿಬಂಧ ಕಾನೂನಿನಲ್ಲಿದೆ. ಇಂತಹ ಅಪ್ಪಣೆ ಚೀಟಿಗಳನ್ನು ಯುರೋಪಿಯನರಿಗೆ, ೨೧ವರ್ಷಗಳಿಗೆ ಕಡಿಮೆ ವಯಸ್ಸಿರದ, ಭಾರತದಲ್ಲಿ ವಾಸ್ತವ್ಯವಿಲ್ಲದ ಏಷಿಯದವರಿಗೆ, ಯಾವ ತಡೆಯಿಲ್ಲದೆ ಕೊಡುವ ಪದ್ಧತಿಯಿದೆ. ೪೫ ವರ್ಷದ ವಯಸ್ಸು ಮೀರಿದ ಭಾರತೀಯರಿಗೆ, ಸಿವಿಲ್ ಅಸಿಸ್ಟಂಟ್ ಸರ್ಜನರಿಗಿಂತ ಕಡಿಮೆಯ ಸ್ಥಾನದಲ್ಲಿಲ್ಲದ ಡಾಕ್ಟರರಿಂದ ಪ್ರಮಾಣಪತ್ರದ ಮೇರೆ ಆ ವ್ಯಕ್ತಿಗೆ ಮದ್ಯವು ಅಗತ್ಯವೆಂದು ಹೇಳಿದರೆ ಸರ್ಕಾರವು ಅಪ್ಪಣೆ ಕೊಡುವುದು. ಅಲ್ಲಲ್ಲಿ ಪಾನ ಪ್ರತಿಬಂಧ ಕಾನೂನಿನನ್ವಯ ಅಪರಾಧಗಳು ಆಗುತ್ತವೆ. ಜನಸಾಮಾನ್ಯರ ಹಿತಕ್ಕಾಗಿ ಕಾರ್ಯರೂಪದಲ್ಲಿ ತರಲಾದ ಪಾನ ಪ್ರತಿಬಂಧ ಕಾನೂನಿಗೆ ಆ ಸಂಗತಿಯು ವಿರೋಧ ಪ್ರಮಾಣವಲ್ಲ. ಆಗುತ್ತಿರುವ ಅಪರಾಧಗಳಿಗೆ ತೀವ್ರ ತರದ ಉಪಾಯ ಕೈಕೊಳ್ಳುವದು ಅಗತ್ಯವಾಗಿದೆ. ಆಗ ಪಾನ ಪ್ರತಿಬಂಧವು ಪೂರ್ಣ ಕಾರ್ಯರೂಪದಲ್ಲಿ ಬಂದ ಹಾಗೂ ಆಗುವದು. ಪಾನ ಪ್ರತಿಬಂಧ ಕಾನೂನಿನನ್ವಯವಾಗಿ ಆದ ಅಪರಾಧಗಳ ನಿರ್ಣಯವು ಕಾಲವಿಳಂಬವಿಲ್ಲದೆ ಆಗುವ ಹಾಗೆ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕೆಂದು ಸರಕಾರವು ನಿರ್ಣಯಿಸಿದೆ. ಕಾನೂನಿನನ್ವಯವಾದ ಘೋರ ಅಪರಾಧಗಳಿಗೆ ಪ್ರತಿಬಂಧಕ ಶಿಕ್ಷೆಯನ್ನು ವಿಧಿಸುವಂತೆ ಅನುಕೂಲತೆ ಮಾಡಬೇಕೆಂದು ಮಾಡಿದೆ.

ಪಾನ ಪ್ರತಿಬಂಧದ ಮುಖ್ಯ ಉದ್ದೇಶವು ಜನತೆಯ ಆರ್ಥಿಕ ಸಾಮಾಜಿಕ ಮಟ್ಟವನ್ನು ಹೆಚ್ಚು ಮಾಡುವುದಾಗಿದೆ. ಯಶಸ್ವಿಯಾಗಿ ಪಾನ ಪ್ರತಿಬಂಧವನ್ನು ಕಾರ್ಯರೂಪದಲ್ಲಿ ತರುವುದೆಂದರೆ, ಕುಡಿಯುವವರಲ್ಲಿ ಪ್ರಚಾರ, ಉದ್ಧಾರ ಕಾರ್ಯಗಳು, ಕಾನೂನಿನನ್ವಯ ಮಾಡಿದ ಅಪರಾಧಗಳ ದಂಡನೆಯನ್ನು, ಆಸ್ಥೆಯಿಂದ ಮಾಡಬೇಕು. ಪಾನ ಪ್ರತಿಬಂಧದಿಂದ ಉದ್ಯೋಗಹೀನರಾದ ಮರಕಟ್ಟುವವರ ಉದ್ಯೋಗ ಸಮಸ್ಯೆಯೂ ವಿಚಾರಾರ್ಹವಾಗಿದೆ. ಪಾನ ಪ್ರತಿಬಂಧದಿಂದ ಪ್ರಾರಂಭಿಸಲಾದ ಸಾಮಾಜಿಕ ಗ್ರಾಮೋದ್ಧಾರ ಕಾರ್ಯವನ್ನು ಅಮ್ಮಡಿಸಿದರೆ ಹೊಸ ಪ್ರಕಂಗದಿಂದ ಉಂಟಾದ ಹೊಸ ಹುರುಪನ್ನು ಬಳಸಿದಂತಾಗುವುದಲ್ಲದೆ, ಜನತೆಗೆ ಪ್ರತ್ಯಕ್ಷ ಅನುಭವ ಕಲ್ಪನೆಯನ್ನು ತಂದುಕೊಟ್ಟಂತಾಗುವುದು. ಮದ್ರಾಸು ಸರಕಾರದವರು ಪಾನ ಪ್ರತಿಬಂಧದ ಜತೆಗೆ ಅನೇಕ ಉದ್ಧಾರ ಕಾರ್ಯಗಳನ್ನು ಪ್ರಾರಂಭಿಸಿದರು. ಅದರಿಂದ ಉದ್ಯೋಗ ತಪ್ಪಿದ ಕಟ್ಟುಗರಿಗೂ ಕುಡಿತ ತಪ್ಪಿದವರಿಗೂ ಬೇರೆ ಉದ್ಯೋಗ ಆಕರ್ಷಣೆಯಾಯಿತಲ್ಲದೆ, ಸಾಮಾನ್ಯ ಗ್ರಾಮ ಸುಧಾರಣೆಯ ಕಾರ್ಯವೂ ಆಗತೊಡಗಿತು. ಆ ಉದ್ಧಾರ ಕಾರ್ಯ, ಗ್ರಾಮೋದ್ಧಾರ ಕಾರ್ಯವೆಂದೇ ಕಂಡು ಬಂತು. ಮತ್ತು ಈ ಕಾರ್ಯವು ರಾಜ್ಯಘಟಕದ ಸಹಕಾರಿ ಖಾತೆಗೆ ಒಪ್ಪಿಸಲ್ಪಟ್ಟಿರುತ್ತದೆ.

### ಉದ್ಧಾರ ಕಾರ್ಯ

ಮೊಟ್ಟ ಮೊದಲಿನ ಉದ್ಧಾರ ಕಾರ್ಯವೆಂದರೆ ಪಾನಪ್ರತಿಬಂಧದಿಂದ ಪ್ರತ್ಯಕ್ಷ ನಿರುದ್ಯೋಗಿಗಳಾದ ಮರಕಟ್ಟುಗರ ಪುನರ್ನಿವೇಶನ ಕಾರ್ಯ. ಪ್ರತಿ ಉದ್ಯೋಗ ಕಲ್ಪಿಸಿಕೊಡುವ ಉದ್ದೇಶದಿಂದ ಈಚಲ ಬೆಲ್ಲ ತಯಾರಿಕೆಗಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳು ಜನಪ್ರಿಯವಾಗಿವೆ. ಏಕೆಂದರೆ ಮರಕಟ್ಟುಗರಿಗೆ ಗೊತ್ತಿದ್ದ ರೀತಿಯು ಇದರಲ್ಲಿಯೂ ಇದೆ. ಸಹಕಾರಿ ಪದ್ಧತಿಯ ಮೇಲೆ ಬೆಲ್ಲ ತಯಾರು ಮಾಡುವುದಕ್ಕೆ ಅನುಕೂಲವಾಗಲೆಂದು ನೀರಾದ ರಸವನ್ನು ಕಟ್ಟಲು ಸರಕಾರವು ಅನುಮತಿಕೊಟ್ಟಿದೆ. ತೆಂಗು, ಖರ್ಜೂರ ಮುಂತಾದ ಗಿಡಗಳಿಂದಲೂ ಸಿಹಿ ರಸ ತೆಗೆಯಲು ಅನುಮತಿಕೊಟ್ಟಿದ್ದಾರೆ. ಇವರ ಮೂಲಕ ಪಾನಪ್ರತಿಬಂಧದಿಂದ ನಿರುದ್ಯೋಗಿಗಳಾದವರಲ್ಲಿಯ ನೂರಕ್ಕೆ ೭೫ರಷ್ಟು ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟಂತಾಗಿದೆ.

ಈ ಬೆಲ್ಲ ತಯಾರಿಕೆಯ ಸಂಘಗಳಲ್ಲದೆ ನಿರುದ್ಯೋಗಿಗಳಾದ ಕಟ್ಟುಗರಿಗೆ ಉದ್ಯೋಗ ಕಲ್ಪಿಸಿಕೊಡಲು ಬೇರೆ ಮಾದರಿಯ ಸಂಘಗಳನ್ನು ಸಂಘಟಿಸಲಾಗಿದೆ. ಹಾಲು ಪೂರೈಕೆಯ ಸಂಘವನ್ನು ಉದ್ಧಾರಕ ಕಾರ್ಯ ಯೋಜನೆಯ ಅಂಗವಾಗಿ ಏರ್ಪಡಿಸಲಾಗಿದೆ. ಈ ಸಂಘಗಳ ಕಾರ್ಯವನ್ನು ನಿರೀಕ್ಷಿಸಲು ಸರಕಾರವು ಮೇಲ್ನೋಟಕರ ಸಹಾಯವನ್ನು ಕೊಟ್ಟಿದೆ. ಹಿಂಡುವ ದನಗಳನ್ನು ಕೊಳ್ಳಲು ಬಡ್ಡಿರಹಿತ ಸಾಲವನ್ನು ಕೊಡುವ ಅನುಕೂಲತೆ ಮಾಡಿಕೊಟ್ಟಿದೆ. ಇದಲ್ಲದೆ, ಗ್ರಾಮೋದ್ಯೋಗ ಸಂಘಗಳು, ಭೂಮಿ ಸಾಗುವಳಿ ಸಂಘಗಳು ಕಾರ್ಮಿಕ ಪೂರೈಕೆ ಸಂಘಗಳು ಮುಂತಾದವುಗಳನ್ನು ರೂಪಿಸಿದೆ. ಈ ಸಂಘಗಳಿಗೆ, ಅವಶ್ಯವೆನಿಸಿದಲ್ಲಿ ಸಹಾಯ ಧನ, ಸಹಾಯಕ ಕಾರ್ಯಕರ್ತರನ್ನು ಒದಗಿಸಿದೆ. ಇಂತಹ ಸಹಕಾರಿ ಸಂಘಗಳ ಸ್ಥಾಪನೆಯಿಂದ ನಿರುದ್ಯೋಗಿಗಳಾದ ಕಟ್ಟುಗರ, ಪುನರ್ನಿವೇಶನ ಸಮಸ್ಯೆಯು ಬಹುಮಟ್ಟಿಗೆ ಪರಿಹಾರವಾಗಿದೆ.

ಈ ಸಹಕಾರಿ ಸಂಘಗಳ ಮುಖಾಂತರ ನಡೆಸಲಾದ ಉದ್ಧಾರ ಕಾರ್ಯದ ಜತೆಗೆ ಗ್ರಾಮೋದ್ಧಾರ ಕಾರ್ಯವನ್ನೂ ಕೈಕೊಳ್ಳಲಾಗಿದೆ. ಇಂದಿಗೂ ಭಾರತದ ಹಳ್ಳಿಗಳು ಯಾವ ಜೀವನ ಸೌಕರ್ಯಗಳಿಗೂ ಅನಾಕರ್ಷಕ ಸ್ಥಳಗಳಾಗಿವೆ. ಯಾವ ಉತ್ಸಾಹಜನಕ ಉತ್ತೇಜಕ ವಿಹಾರಗಳಿಲ್ಲದ್ದರಿಂದ ಕುಡಿತಕ್ಕೆ ಜನತೆಯನ್ನು ಎಳೆಯುತ್ತದೆ. ಗಡಂಗಗಳನ್ನು ಬಂದು ಮಾಡುವುದರ ಜತೆಗೆ ಹಳ್ಳಿಗಳಲ್ಲಿ ಬಡಜನರ ಕುತೂಹಲದ ವಾತಾವರಣವನ್ನು ಬದಲಿಸುವುದು ಹಸಿದಿದೆ. ಹಳ್ಳಿಗಳಲ್ಲಿ ಸ್ವಾವಲಂಬನ ಪರಸ್ಪರ ವಿಶ್ವಾಸಗಳನ್ನು ಬೆಳೆಸಬೇಕಾಗಿದೆ. ಈ ಉದ್ಯೋಗಗಳಿಗಾಗಿ ಗ್ರಾಮಸುಧಾರಣಾ ಸಮಿತಿಗಳನ್ನು ಏರ್ಪಡಿಸಲಾಗಿದೆ. ಈ ಸಮಿತಿಗಳು ಹಳ್ಳಿಯ ಸ್ವಚ್ಛತೆ, ದಾರಿ ಮಾಡುವುದು, ಕುಡಿಯುವ ನೀರಿನ ಬಾವಿ ತೋಡುವುದು, ಶಾಲೆಗಳನ್ನು ಪ್ರಾರಂಭಿಸುವುದು, ವಾಚನಾಲಯಗಳನ್ನು ಸ್ಥಾಪಿಸುವುದು, ಸಂಪರ್ಕ ಸುಧಾರಿಸುವುದು, ಸುಧಾರಿಸಿದ ಬೀಜಗಳನ್ನು ದೊರಕಿಸುವುದು, ಗೊಬ್ಬರ ಉಪಕರಣಗಳನ್ನು ಪಡೆಯುವುದು, ಮುಂತಾದ ವಿಷಯಗಳ ಬಗ್ಗೆ ಲಕ್ಷ್ಯ ಹಾಕುತ್ತಿವೆ. ಗ್ರಾಮ ಸಂಘಗಳು ವಿಹಾರ ಕೇಂದ್ರಗಳನ್ನು ಏರ್ಪಡಿಸಿ ಹಳ್ಳಿಗರಿಗೆ ವಿನೋದ, ವಿಹಾರ, ವಿಚಾರ ವಿನಿಮಯಕ್ಕೆ ದಾರಿಮಾಡಿ ಕೊಡುವುದು, ಮಿತವ್ಯಯ ಕಲಿಸುವುದು ಮುಂತಾದ ಕಾರ್ಯಗಳನ್ನು ಮಾಡುತ್ತಿವೆ.

ಉತ್ಪನ್ನದಲ್ಲಿ ಕೆಲಭಾಗವನ್ನು ಕೂಡಿಡುವುದನ್ನು ಉತ್ತೇಜಿಸಲಾಗಿದೆ. ಪಾನ ಪ್ರತಿಬಂಧದ ಮೂಲಕ ಉಳಿಸಲಾದ ಹಣವನ್ನು ಬೇರೆ ರೀತಿಯಲ್ಲಿ ಹಾಳು ಮಾಡದಂತೆ ಎಚ್ಚರಪಡಲಾಗಿದೆ. ಸಂಘದ ಸದಸ್ಯರಿಗೆ ಹುಂಡಿ ಪೆಟ್ಟಿಗೆಗಳನ್ನು ಕೊಡಲಾಗಿದೆ, ಮಿತವ್ಯಯ ದಿನಗಳ ಆಚರಣೆಯನ್ನು ಆಗಾಗ ಮಾಡಲಾಗುತ್ತಿದೆ. ಹಂಜನ ಉದ್ಧಾರವು ಈ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಆಟ-ವಿಹಾರ ನಾಟಕಗಳ ಮುಖಾಂತರ ಮನರಂಜನೆಯ ವ್ಯವಸ್ಥೆಯನ್ನೂ ಮಾಡಲಾಗಿದೆ. ಹಳ್ಳಿಗಳಲ್ಲಿರುವದು ಕೀಳಲ್ಲವೆಂಬ ಭಾವನೆಯು ಅವರಲ್ಲಿ ಮೂಡುವಂತೆ ಮಾಡಲಾಗಿದೆ.

### ನಿರುತ್ಸಾಹಜನಕವಿಲ್ಲ

ಈ ಉದ್ಧಾರ ಕಾರ್ಯಕ್ರಮವು ಪಾನ ಪ್ರತಿಬಂಧದ ಪ್ರಸರ್ಜನೆಯ ಕಾರ್ಯಕ್ರಮದ ಅಂಗವಾಗಿದೆ. ಇದುವರೆಗೆ ಮಾಡಿದ ಕಾರ್ಯವು ನಿರುತ್ಸಾಹಜನಕವಾಗಿಲ್ಲ. ಕಾರ್ಯದ ವ್ಯಾಪ್ತಿಯ ದೃಷ್ಟಿಯಿಂದ ಕಡಿಮೆ ಎನ್ನಿಸಬಹುದು. ಮತ್ತು ಸಾರ್ವಜನಿಕರ ಸಹಕಾರವಿಲ್ಲದೆ ಯಾವ ದೊಡ್ಡ ಕಾರ್ಯವೂ ಪೂರ್ಣವಾಗಲಾರದು. ಈ ಉದ್ಧಾರ ಕಾರ್ಯದ ಯಶಸ್ಸಂತೂ ಸಾರ್ವಜನಿಕರ ಸಹಕಾರವನ್ನೇ ಅವಲಂಬಿಸಿದೆ. ಸರಕಾರದವರು ಧನ ಸಹಾಯ ಮಾಡಬಹುದು. ಪಾನ ಪ್ರತಿಬಂಧವು ಸಾಮಾಜಿಕ ಕಾರ್ಯಕರ್ತರಿಗೆ ಹೊಸ ಕ್ಷೇತ್ರ ಒದಗಿಸಿದೆ. ದೇಶಬಾಂಧವರಿಗಾಗಿ ಅವರು ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಬಹುದು. ಸರಕಾರದ ಈ ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತರ ನೆರವು ಬಹು ಬೆಲೆಯುಳ್ಳದ್ದಾಗುವದು. ಅವರು ಸ್ವಯಂಸೇವಕರ ಸಂಘಟನೆ ಮಾಡಿ ಕುಡಿತ ತಪ್ಪಿದವರಿಗೆ ವಿಹಾರ-ವಿನೋದ-ಮನರಂಜನೆ ಒದಗಿಸಿ ಗ್ರಾಮೋದ್ಧಾರ ಕಾರ್ಯದಲ್ಲಿ ನೆರವಾಗಬಹುದು. ಆದುದರಿಂದ ನಾವೆಲ್ಲರೂ ನಮ್ಮ ಕೈಯಿಂದಾದ ನೆರವಿತ್ತು ಪಾನ ಪ್ರತಿಬಂಧವನ್ನು ಯಶಸ್ವಿಯಾಗಿ ಮಾಡುವುದು ನಮ್ಮನ್ನೇ ಕಾದಿದೆ.

# ಜಗತ್ತಿನ ಆರೋಗ್ಯ ಸಂರಕ್ಷಣಾ ಸಂಸ್ಥೆಯ ದಿನಾಚರಣೆ.

[ಕೊಡಗು ವೈದ್ಯ ಇಲಾಖೆ]

ಏಪ್ರಿಲ್ ಏಳನೇ ತಾರೀಕು ಅತಿ ಪ್ರಸಿದ್ಧವಾದ ದಿನ. ಇದನ್ನು ಜಗತ್ತಿನ ಆರೋಗ್ಯ ಸಂರಕ್ಷಣಾದಿನವೆಂದು ಲೋಕದ ಎಲ್ಲಾ ದೇಶಗಳೂ ಆಚರಿಸುತ್ತವೆ. ರೋಗವು ಯಾರಿಗೂ ಬರಬಹುದು. ಅದಕ್ಕೆ ಧನಿಕ ಬಡವರೆಂಬ ಭೇದವಿಲ್ಲ. ಆದ್ದರಿಂದ ರೋಗ ನಿವಾರಣಾ ಪ್ರಯತ್ನವು ಪ್ರತಿಯೊಬ್ಬನ ಜವಾಬ್ದಾರಿ. ಜಗತ್ತಿನಲ್ಲಿ ವಿವಿಧ ರೋಗಗಳಿಂದಾಗಿ ಲಕ್ಷಾಂತರ ಜನರು ಪ್ರತಿ ದಿನ ಸಾಯುತ್ತಿದ್ದಾರೆ. ವ್ಯಾಧಿಯ ಲೀಲೆ ಹೀಗೆ ನಡೆದದ್ದರೂ ಜಗತ್ತಿನ ಜನಾಂಗಗಳು ಒಂದಾಗಿ ಅದನ್ನು ಪ್ರತಿಭಟಿಸುವ ಕಾರ್ಯ ಇನ್ನು ಆಗಬೇಕು. ಸಂಯುಕ್ತ ರಾಷ್ಟ್ರ ಸಂಘದ ಶಾಖೆಯಾದ ಜಗತ್ತಿನ ಆರೋಗ್ಯ ಸಂರಕ್ಷಣಾ ಸಂಸ್ಥೆ ಇದಕ್ಕಾಗಿ ರೂಪುಗೊಂಡಿದೆ. ಇದು ಬೃಹದೃಶವಾದ ಸಂಸ್ಥೆ. ಜಗತ್ತಿನ ಎಪ್ಪತ್ತು ಪ್ರಬಲ ರಾಜ್ಯಗಳ ಪ್ರತಿನಿಧಿಗಳಿಂದ ಕೂಡಿರುವ ಇದು ಲೋಕದ ಪ್ರಸಿದ್ಧ ಡಾಕ್ಟರುಗಳ ಮತ್ತು ಆಧುನಿಕ ವೈಜ್ಞಾನಿಕ ಸಂಶೋಧನಾ ಸಹಾಯದಿಂದ ಜಗತ್ತಿನ ಆರೋಗ್ಯ ರಕ್ಷಣೆಗಾಗಿ ಕಂಕಣಬದ್ಧವಾಗಿದೆ. ಇದಕ್ಕೆ ಪ್ರತೀ ಸರಕಾರದ ಮತ್ತು ಪ್ರತಿಯೊಬ್ಬ ನಾಗರೀಕನ ಸಹಕಾರ ಬೇಕು. ಆರೋಗ್ಯಕರವಾದ ಜೀವನದ ಬಗ್ಗೆ ಪ್ರತಿಯೊಬ್ಬನೂ ತನ್ನ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ತಿಳಿದು ವರ್ತಿಸಬೇಕು. ಕೊಡಗಿನ ಆರೋಗ್ಯ ಇಲಾಖೆಯವರು ಇತ್ತೀಚೆಗೆ ಎಲ್ಲಾ ಆಸ್ಪತ್ರೆಗಳಲ್ಲಿ ವಾರಕ್ಕೊಂದಾವರ್ತಿ ಶಿಶುಗಳ ಮತ್ತು ಗರ್ಭಿಣಿಯರ ಆರೋಗ್ಯ ಪರೀಕ್ಷೆಯನ್ನು ಮಾಡುವ ಏರ್ಪಾಡು ಮಾಡಿದ್ದಾರೆ. ಇದರಿಂದ ಎಲ್ಲರೂ ಲಾಭ ಪಡೆಯಬೇಕು. ದೇಶದ ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಅಧಿಕಾರಿಗಳು ಆಗಾಗ್ಗೆ ಮಾಡುವ ಯೋಜನೆ ಮತ್ತು ಹೇಳುವ ಬೋಧನೆಗಳನ್ನು ಅನುಸರಿಸಿ ಆರೋಗ್ಯದ ರಕ್ಷಣೆ ಬಗ್ಗೆ ನಿಗವಿಡಬೇಕು. ಈ ಕೆಳಗಿನ ವಿಚಾರ ಸಾಮಾನ್ಯವಾಗಿ ಪ್ರತಿಯೊಬ್ಬನೂ ತಿಳಿದಿರಬೇಕು.

### ಕ್ಷಯರೋಗ.

ಇದೊಂದು ಅಂಟುರೋಗ. ಕ್ಷಯ ರೋಗಿಯೂ ಕೆಮ್ಮುವಾಗ ಶ್ವಾಸಕೋಶದಿಂದ ಹೊರ ಬೀಳುವ ಕ್ರಿಮಿಗಳು ಸಮೀಪದಲ್ಲಿರುವವರನ್ನು ಆವರಿಸುತ್ತದೆ. ರೋಗಿಯ ಉಗುಳು ಬಹಳ ಅಪಾಯಕರ. ಕ್ಷಯರೋಗಿಯು ಮಲಗುವ ಕೊಠಡಿಯಲ್ಲಿ ಅಪಾಯವು ಹೆಚ್ಚು. ಹಿಂದೂಸ್ಥಾನದಲ್ಲಿ ಈ ವ್ಯಾಧಿಯು ಪ್ರಬಲವಾಗಿ ಹಬ್ಬಿಕೊಂಡಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಇದು ಹರಡುವುದು ಹೆಚ್ಚು. ಸುಮಾರು ಮೂರು ಮಿಲಿಯ ಜನರು ಹಿಂದೂಸ್ಥಾನದಲ್ಲಿ ಕ್ಷಯರೋಗದಿಂದ ನರಳುತ್ತಿದ್ದಾರೆ. ಪ್ರತಿ ವರುಷ ಅರ್ಧಲಕ್ಷ ಜನರು ಮರಣ ಹೊಂದುತ್ತಿರುವುದಾಗಿ ಕಂಡು ಹಿಡಿದಿದ್ದಾರೆ. ಕ್ಷಯ ರೋಗಿಯ ಕೊಠಡಿಯಲ್ಲಿ ಮಲಗಬಾರದು. ರೋಗಿಯನ್ನು ಕ್ಷಯರೋಗದ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಬೇಕು. ದೇಹದಲ್ಲಿ ನಿಶ್ಶಕ್ತಿ, ಜ್ವರ, ಕೆಮ್ಮು ಮತ್ತು ದೇಹದ ತೂಕ ಕಡಿಮೆಯಾಗುವ ಲಕ್ಷಣಗಳು ಕಂಡ ಕೂಡಲೇ ವೈದ್ಯ ಇಲಾಖೆಯವರನ್ನು ಸಂದರ್ಶಿಸಿ, ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕು.

### ಮೇಹರೋಗ

ಪರಂಗಿಯೆಂದೂ ಗೊನೋರಿಯವೆಂದೂ ಕರೆಯಲ್ಪಡುವ ಈ ವ್ಯಾಧಿಯು ಬಹಳ ಕಠಿಣವಾದದ್ದು. ಮೇಹ ರೋಗದಿಂದ ಕುರುಡು, ಹುಚ್ಚು, ಅಂಗಭಂಗವೊದಲಾದ ಕಠಿಣ ಅವಸ್ಥೆಗಳೂ ಮತ್ತು ಮರಣವೂ ಸಂಭವಿಸುವುದುಂಟು. ರೋಗಿಯ ಸಂಪರ್ಕವು ಹೆಚ್ಚಾದಲ್ಲಿ ಮೇಹ ರೋಗವು ಅಂಟುತ್ತದೆ. ತಂದೆ ತಾಯಿಗಳು ಮೇಹ ರೋಗದಿಂದ ನರಳುತ್ತಿದ್ದರೆ ಹುಟ್ಟುವ ಮಕ್ಕಳು ಅನ್ಯಾಯವಾಗಿ ಕಷ್ಟವನ್ನು ಅನುಭವಿಸ ಬೇಕಾಗುತ್ತದೆ. ಜನಿಸುವ ಶಿಶು ಹುಟ್ಟು ಕುರುಡಾಗ ಬಹುದು ಅಥವಾ ಗರ್ಭದಲ್ಲೇ ಸಾಯಬಹುದು. ಮೇಹ ರೋಗವನ್ನು ತಡೆಗಟ್ಟಬೇಕಾದರೆ ರೋಗಿಯು ತನ್ನ ವ್ಯಾಧಿಯನ್ನು ಗೋಪ್ಯವಾಗಿಡದೆ ವೈದ್ಯರಲ್ಲಿ ಬಹಿರಂಗ ಪಡಿಸಬೇಕು. ರೋಗವು ತಲೆದೋರಿದೊಡನೆ ಚಿಕಿತ್ಸೆಪಡಕೊಂಡರೆ ಮೇಹವು ಸಂಪೂರ್ಣ ಗುಣವಾಗುತ್ತದೆ.

### ತಾಯಿ ಮತ್ತು ಮಗು ಸಂರಕ್ಷಣೆ.

ಆರೋಗ್ಯ ವಿಚಾರದಲ್ಲಿ ಇದು ಅತಿ ಮುಖ್ಯವಾದ ವಿಷಯ. ತಾಯಿ ಮತ್ತು ಮಗುವೆಂದರೆ ದೇಶದ ಪೀಳಿಗೆ ನಿರ್ಮಾಣ. ಪ್ರತಿಯೊಂದು ಜನಾಂಗವೂ ತಾಯಿ ಮಕ್ಕಳ ಸಂರಕ್ಷಣೆಯಲ್ಲಿ ತುಂಬಾ ಎಚ್ಚರ ವಹಿಸಿಕೊಳ್ಳಬೇಕು. ಲಕ್ಷಾಂತರ ಸ್ತ್ರೀಯರು ಮತ್ತು ಶಿಶುಗಳು ಅಜಾಗರೂಕತೆಯಿಂದ ಅನ್ಯಾಯವಾಗಿ ಸಾಯುತ್ತಾರೆ. ಸರ್ವ ಸಾಮಾನ್ಯವಾಗಿ ಬರುವ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಮಾತಿರಲಿ. ಮೂಢ ನಂಬಿಕೆಗಳಿಂದ ಸಾವಿಗೆ ಬಲಿ ಬೀಳುವುದು ದೊಡ್ಡ ಅನ್ಯಾಯ. ಇದಕ್ಕೆ ಮೂರು ಕಾರಣಗಳಿವೆ. (1) ಅವಿದ್ಯೆ (೨) ಪುಷ್ಟಿಕರವಾದ ಆಹಾರವಿಲ್ಲದಿರುವಿಕೆ (೩) ಅನಾರೋಗ್ಯ ವಾತಾವರಣ. ಸ್ತ್ರೀಯರಿಗೂ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸದಿದ್ದರೆ ಮೂಢ ನಂಬಿಕೆಗಳು ಅವರನ್ನು ಹಾಳುಗೆಡಹುತ್ತವೆ. ಭೂತ ಪ್ರೇತಗಳ ಹೆದರಿಕೆ, ಶಕುನಗಳ ಭಯ, ವಿಚಾರವಿಲ್ಲದ ನಂಬಿಕೆ (ಹಣ್ಣು ತಿಂದರೆ ಹಾಲು ಹುಳಿ ತಿಂದರೆ ಸೀತ ಇತ್ಯಾದಿ) ಅಜ್ಞಾನದ ಪರಿಣಾಮಗಳು. ಹಾಗೆಯೇ ಅನಾರೋಗ್ಯವಾದ ಆಹಾರಗಳನ್ನು ಕೊಡುವುದು. ಜೀರ್ಣವಾಗದ ಗಟ್ಟಿ ಪದಾರ್ಥಗಳ ಸೇವನೆ—ದೋಸೆ ನಾಣ ಮುಂತಾದ ತಿಂಡಿ ಪದಾರ್ಥಗಳನ್ನು ಕೊಡುವುದು ಬಹಳ ಅಪಾಯಕರ. ಇವುಗಳ ಬದಲು ಉತ್ತಮವಾದ ಹಾಲು, ಮೊಟ್ಟೆ ಮುಂತಾದ ಸತ್ವ ಪದಾರ್ಥಗಳನ್ನು ಹೆಚ್ಚಾಗಿ ಉಪಯೋಗಿಸಬೇಕು. ಅನಾರೋಗ್ಯವಾದ ವಾತಾವರಣ ಎಂದರೆ ಮನೆಯನ್ನು ಚೊಕ್ಕಟವಾಗಿಡದಿರುವಿಕೆ. ಅಶುದ್ಧವಾದ ನೀರನ್ನು ಕುಡಿಯುವುದು, ಮಲಮೂತ್ರ ಎಂಜಲು ಮೊದಲಾದುವುಗಳನ್ನು ಕ್ರಮಪ್ರಕಾರ ದೂರ ಒಯ್ಯದಿರುವುದು, ಕಿಟಕಿಗಳನ್ನು ತೆರೆಯದೆ ಕಜ್ಜಿ ಮೊದಲಾದ ಹಲವು ರೋಗಗಳಿಗೆ ಎಡೆ ಕೊಡುವುದು ಇವೇ ಮೊದಲಾದವುಗಳಾಗಿವೆ.

ತಾಯಿ ಮತ್ತು ಶಿಶು ಸಂರಕ್ಷಣೆಯ ಕಾರ್ಯವು ಸರಿಯಾಗಿ ನೆರವೇರ ಬೇಕಾದರೆ ನಮಗೆ ಅನೇಕ ವೈದ್ಯರ ಉಪಾಧ್ಯಾಯರ ಮತ್ತು ನರ್ಸುಗಳ ಸಹಾಯವು ಅವಶ್ಯವಾಗಿದೆ. ಈ ವಿಚಾರವಾಗಿ ತುಂಬಾ ಪ್ರಚಾರ ಕಾರ್ಯವನ್ನು ಮಾಡಬೇಕಾಗಿದೆ. ಪ್ರತಿಯೊಬ್ಬ ವಿದ್ಯಾವಂತನೂ ಆರೋಗ್ಯ ವಿಜ್ಞಾನವನ್ನು ಚೆನ್ನಾಗಿ ತಿಳಿದುಕೊಂಡು ತನ್ನ ಹೆಣ್ಣು ಮಕ್ಕಳನ್ನು ಆರೋಗ್ಯ ಸಂರಕ್ಷಣಾ ಇಲಾಖೆಯ ದಾದಿ ತರಬೇತಿಗೂ ನರ್ಸುಗಳ ತರಬೇತಿಗೂ ಹಿಂಜರಿಯದೆ ಕಳುಹಿಸಬೇಕು.

### ಪ್ಲೇಗು

ಇದು ಭೀಕರವಾದ ಸಾಂಕ್ರಾಮಿಕ ವ್ಯಾಧಿ. ದಕ್ಷಿಣ ಅಮೇರಿಕ, ಆಫ್ರಿಕಾ, ಚೈನಾ ಮತ್ತು ದಕ್ಷಿಣ ಏಸ್ಯಾ ಖಂಡದಲ್ಲಿ ವಿಶೇಷ ಹೆಚ್ಚು. ಪ್ಲೇಗಿನ ವಿಚಾರದಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿ ಪ್ಲೇಗು ತಗಲಿದ ಇಲಿಯ ಮೇಲಿನ ಚಿಗಟಗಳು ಇಲಿಯು ಸತ್ತ ನಂತರ ಸಮೀಪದಲ್ಲಿರುವವರನ್ನು ಆಕ್ರಮಿಸಿ ರೋಗವನ್ನು ಸಾಂಕ್ರಾಮಿಕವಾಗಿ ಹರಡುತ್ತದೆಂಬುದನ್ನು ಸಿದ್ಧಾಂತಗೊಳಿಸಲಾಗಿದೆ. ಬೊಂಬಾಯಿ ನಗರದ ಹಾಫ್‌ಕಿನ್ ವೈದ್ಯ ಶಾಲೆಯವರು ಕಂಡು ಹಿಡಿದಿರುವ ಇನಾಕ್ಯುಲೇಶನ್ನಿನ ಪರಿಣಾಮವಾಗಿ ಪ್ಲೇಗನ್ನು ತಡೆಗಟ್ಟಲು ತುಂಬಾ ಅನುಕೂಲವಾಗಿದೆ. ಪ್ಲೇಗನ್ನು ಹೇಗೆ ನಿವಾರಿಸಬಹುದು

ಇಲಿಗಳೇ ಪ್ಲೇಗಿನ ಕಾರಣ—ಇಲಿಗಳು ಹೆಚ್ಚುವಂತೆ ಎಡೆಕೊಡ ಬಾರದು. ಆದ್ದರಿಂದ ಮನೆಯಲ್ಲಿ ಕಸಕಡ್ಡಿ ತುಂಬದಂತೆ ನೋಡಿಕೊಂಡು, ಅನ್ನ ರೊಟ್ಟಿ ಚೂರುಗಳು ಅಲ್ಲಲ್ಲಿ ಹರಡದಂತೆ ಮಾಡಿ ಆಹಾರದ ಪಾತ್ರೆಗಳನ್ನು ನಿತ್ಯವೂ ಚೊಕ್ಕಟವಾಗಿ ತೊಳೆದಿಟ್ಟು ಆಹಾರ ಸಾಮಗ್ರಿಗಳನ್ನು ತಕ್ಕ ಸ್ಥಳಗಳಲ್ಲಿ ಭದ್ರಪಡಿಸಬೇಕು. ಪ್ಲೇಗು ತಲೆದೋರಿದಾಗ ಪ್ರತಿಯೊಬ್ಬನೂ ಇನಾಕ್ಯುಲೇಶನ್ ಮಾಡಿಸಿಕೊಳ್ಳತಕ್ಕದ್ದು. ಮತ್ತು ಪ್ಲೇಗು ತಗಲಿದವನು ತಕ್ಷಣ ಚಿಕಿತ್ಸೆ ಪಡೆಯತಕ್ಕದ್ದು. ಮನೆಯಲ್ಲಾಗಲೀ ನೆರೆಕರೆಯಲ್ಲಾಗಲೀ ಇಲಿಯು ಸತ್ತ ವರ್ತಮಾನವನ್ನು ಆರೋಗ್ಯ ಇಲಾಖೆಯವರಿಗೆ ತಕ್ಷಣವೇ ತಿಳಿಸತಕ್ಕದ್ದು.

### ಮಲೇರಿಯ

ಕೊಡಗಿನಲ್ಲಿ ಈ ರೋಗವನ್ನು ತಿಳಿಯದಿರುವವರು ಇರಲಾರರು. ಇದು ಪುರಾತನ ವ್ಯಾಧಿ—ವಿಶೇಷವಾಗಿ ವ್ಯಾಪಿಸಿರುವ ವ್ಯಾಧಿ—ಮಲೆನಾಡುಗಳೇ ಇದರ ತವರ್ಮನೆ—ಮಲೇರಿಯ ರೋಗವು ಗೋಚರಕ್ಕೆ ಬೀಳದಿದ್ದರೂ ಇದರ ಹಾವಳಿಯು ಇತರ ಎಲ್ಲಾ ರೋಗಗಳನ್ನು [illegible] ಕಷ್ಟನಷ್ಟಗಳಿಗೆ [illegible]. ಇದನ್ನು ನಿವಾರಣೆ [illegible] ಕೋಟ್ಯಂತರ ಜೀವನಕ್ಕೆ ಕಾರಣವಾಗಿದೆ. ಮಲೇರಿಯ [illegible] ಆರೋಗ್ಯ [illegible] ಜನರು ಭೂಮಿಗಳಾಗಿರುವುದನ್ನು ನಾವು ನೋಡುತ್ತಿದ್ದೇವೆ. ಅಕಾಲ ಮರಣಗಳು, ಅಸ್ಥಿಪಂಜರಗಳು, ರಕ್ತವಿಲ್ಲದ ಬಿಳಿ ಮೋರೆಗಳೇ ಮಲೇರಿಯಾದ ಕರಾಳ ರೂಪಗಳು. ಡಿ. ಡಿ. ಟಿ. ಎಂಬ ಮಹಾ ಔಷಧಿ ಪ್ರಯೋಗದಿಂದ ಮಲೇರಿಯಾ ನಿವಾರಣೆಯನ್ನು ಸಂಶೋಧನೆಗಳಿಂದ ಕಂಡು ಹಿಡಿದಿರುವ ಪರಿಣಾಮವಾಗಿ ಇಟಲಿ, ಗ್ರೀಸ್, ದಕ್ಷಿಣ ಆಫ್ರಿಕಾ, ಬ್ರೆಜಿಲ್, ಸಿಲೋನ್ ಮೊದಲಾದ ಮಲೇರಿಯಾ ಪ್ರದೇಶಗಳಲ್ಲಿ ಮಲೇರಿಯಾ ಸಂಪೂರ್ಣ ನಿರ್ನಾಮವಾಗಿದೆ. ಹಿಂದೂಸ್ಥಾನದ ಅನೇಕ ಭಾಗಗಳಲ್ಲಿ ಕೂಡ ಈ ರೋಗದ ಮೂಲವನ್ನು ಕಿತ್ತು ತೆಗೆಯಲಾಗಿದೆ. ಕೊಡಗಿನಲ್ಲಿ ಈಗ ಮೂರು ವರ್ಷಗಳಿಂದ ಕೈಗೊಂಡ ನಿವಾರಣಾ ಕಾರ್ಯದ ಪರಿಣಾಮವನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಪ್ರಪಂಚದ ರೋಗನಿವಾರಣಾ ಕಾರ್ಯದಲ್ಲಿ ಇದು ಪ್ರಮುಖ ಸ್ಥಾನವನ್ನು ಪಡೆದಿದೆ. ಮಲೇರಿಯಾ ರೋಗವೆಂಬುದು ಸಂಪೂರ್ಣ ಇಲ್ಲದಂತೆ ಮಾಡುವ ಪ್ರಯತ್ನ ಮತ್ತು ಭರವಸೆಯು ಜಗತ್ತಿನ ಆರೋಗ್ಯ ಸಂರಕ್ಷಣಾ ಸಂಸ್ಥೆಗೆ ಉಂಟಾಗಿದೆ.

ಮೇಲೆ ವಿವರಿಸಿದ ಎಲ್ಲಾ ವ್ಯಾಧಿಗಳನ್ನು ತಡೆಗಟ್ಟಲು ಜಗತ್ತಿನ ಆರೋಗ್ಯ ಸಂರಕ್ಷಣಾ ಸಂಸ್ಥೆಯು ಕೈಗೊಂಡ ಕಾರ್ಯವು ದೊಡ್ಡದು. ಈ ಸಂಸ್ಥೆಯು ಇನ್ನೂ ಶೈಶವಾವಸ್ಥೆಯಲ್ಲಿದೆ. ಸಂಸ್ಥೆಯ ಡೈರೆಕ್ಟರ್ ಜನರಲ್‌ರಾದ ಡಾಕ್ಟರ್ ಬ್ರಾಕ್‌ಚಿಫ್‌ಹೋಂ ಎಂ. ಡಿ. ಎಂಬ ಪ್ರಖ್ಯಾತ ವೈದ್ಯರು ಈ ವರ್ಷದ ಆರೋಗ್ಯ ಸಂರಕ್ಷಣಾ ಸಂಸ್ಥೆಯ ದಿನಾಚರಣೆಯ ಬಗ್ಗೆ ಸರ್ವರೂ ಅನುಸರಿಸಬೇಕಾದ ಸಂದೇಶವ ಈ ರೀತಿ ಪ್ರಕಟಿಸಿದ್ದಾರೆ.

'ನಿಮ್ಮ ಸ್ಥಳೀಯ ಆರೋಗ್ಯ ಸಂಸ್ಥೆಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳಿ. ಆರೋಗ್ಯ ಇಲಾಖೆಗೂ ಮತ್ತು ದೇಶದ ನಿವಾಸಿಗೂ ನಿಕಟ ಸಂಬಂಧವಿದೆ. ತನ್ನ ದೇಹದ, ತನ್ನ ದೇಶದ ಹಾಗೂ ಲೋಕದ ಆರೋಗ್ಯವನ್ನು ಕಾಪಾಡುವ ಭಾರವು ಸರಕಾರಕ್ಕೂ ಪ್ರಜೆಗಳಿಗೂ ಹಾಸು ಹೊಕ್ಕಾದ್ದಾಗಿದೆ. ಜಗತ್ತಿನ ಆರೋಗ್ಯ ಸಂರಕ್ಷಣಾ ಸಂಸ್ಥೆಯು ಅಂತರಾಷ್ಟ್ರೀಯ ಆರೋಗ್ಯ ಪರಿಸ್ಥಿತಿಯನ್ನೂ ಹೊಸ ಸಂಶೋಧನೆಗಳನ್ನೂ ಆಗಿಂದಾಗ್ಗೆ ಆರೋಗ್ಯದ ವಿಚಾರವಾಗಿ ಉತ್ತಮ ಸಲಹೆಗಳನ್ನೂ ಆಯಾಯ ರಾಷ್ಟ್ರಗಳ ಸರಕಾರಗಳಿಗೆ ತಿಳಿಸಬಲ್ಲುದು. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ದೇಶದ ಸ್ಥಳೀಯ ಆರೋಗ್ಯ ಸಂಸ್ಥೆಗಳೊಡನೆ ಸಂಪೂರ್ಣ ಸಹಕರಿಸಬೇಕು. ಹಾಗೆ ಮಾಡಿದಲ್ಲಿ ಪ್ರತಿಯೊಬ್ಬನು ತನ್ನ ಮಕ್ಕಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಹೆಚ್ಚಿಸಿ ಆ ಮೂಲಕ ಲೋಕದ ಕಲ್ಯಾಣವನ್ನು ಬಯಸಿದಂತೆ ಆಗುತ್ತದೆ. ಈ ಮಹಾಧ್ಯೇಯವೇ ಈ ದಿನದಲ್ಲಿ ನಮಗೆ ಹುರುಪನ್ನು ಕೊಡಬೇಕಾಗಿದೆ.'

---

# ಕೊಡಗು

ತಾ. ೭-೪-೧೯೫೦ನೇ ಶುಕ್ರವಾರ

## ಕೆಲವು ನ್ಯೂನತೆಗಳು.

ಕೊಡಗು ವಿದ್ಯಾ ಇಲಾಖೆಯ ಪರೀಕ್ಷಾ ಕ್ರಮದಲ್ಲಿ ಅನೇಕ ನ್ಯೂನತೆಗಳಿರುವವೆಂದೂ ಪರೀಕ್ಷೆಯಲ್ಲಿ ವಿದ್ಯಾರ್ಥಿಯ ಯೋಗ್ಯತೆಯನ್ನರಿಯುವ ಯಾವದೇ ಸಾಧ್ಯತೆ ಇಲ್ಲದೆ ಅದು ಕೇವಲ ತೋರಿಕೆಯ ಸಂಪ್ರದಾಯವಾಗಿದೆಯೆಂದೂ ಕೂಗು ಎದ್ದಿದೆ. ವಿದ್ಯಾರ್ಥಿಗಳು ನಕಲು ಹೊಡೆಯುವ ಪರಿಪಾಠ ಹೆಚ್ಚಾಗುತ್ತಾ ಹೋಗಿದೆಯೆಂದೂ ಹೇಳಲಾಗುತ್ತಿದೆ. ಈ ಮಾತುಗಳಲ್ಲಿ ಸತ್ಯಾಂಶವಿದೆಯೆಂದು ನಂಬಲು ಕಾರಣಗಳಿವೆ. ಪ್ರತಿ ಶಾಲೆಯಲ್ಲಿ ನಕಲು ಹೊಡೆದು ಅಧ್ಯಾಪಕರ ಕಣ್ಣಿಗೆ ಬಿದ್ದ ಹಲವಾರು ವಿದ್ಯಾರ್ಥಿಗಳ ಕಥೆ ಇದೆ. ಈಗ ಜಾರಿಯಲ್ಲಿರುವ ಕೇವಲ ಬರವಣಿಗೆಯ ಪರೀಕ್ಷಾ ಪದ್ಧತಿಯು ವಿದ್ಯಾರ್ಥಿಯ ಅರ್ಹತೆಯನ್ನು ಅಳೆಯಲಾರದೆಂದೂ ಆದ್ದರಿಂದ ಈ ಪರೀಕ್ಷಾ ಕ್ರಮವನ್ನು ಬದಲು ಮಾಡಬೇಕೆಂದೂ ಹಲವೆಡೆ ಚಳವಳ ನಡೆದಿದೆ. ಆದರೆ ಅಂಥಾ ಸುಧಾರಿತ ಪರೀಕ್ಷಾ ಕ್ರಮ ಜಾರಿಯಲ್ಲಿ ಬರುವ ವರೆಗೆ ಈಗಿನ ಈ ಬರವಣಿಗೆಯ ಪರೀಕ್ಷೆಯೇ ಜಾರಿಯಲ್ಲಿರಬೇಕಾಗುತ್ತದೆ. ಅದು ಜಾರಿಯಲ್ಲಿರುವ ವರೆಗೆ ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕಾದ್ದು ಪರೀಕ್ಷಕರ ಕರ್ತವ್ಯ.

ಈ ವರ್ಷದ 'ಕಾಮನ್ ಎಂಟ್ರೆನ್ಸ್' ಪರೀಕ್ಷೆಯಲ್ಲಿ ಸಾಕಷ್ಟು ಪ್ರಶ್ನಾ ಪತ್ರಗಳು ಇಲ್ಲದೆ ವಿದ್ಯಾರ್ಥಿಗಳು ತೊಂದರೆ ಪಟ್ಟಿದ್ದಾರಂತೆ. ನಲುವತ್ತು ವಿದ್ಯಾರ್ಥಿಗಳಿರುವ ಶಾಲೆಗೆ ೩೫ ಪ್ರಶ್ನಾ ಪತ್ರಗಳನ್ನು ಕಳುಹಿಸಿ—ರೆ ಹೇಗೆ? ಕೊಟ್ಟವರು ಬಲೆಗೆ ಅಚ್ಚು ಹಾಕಿದ ಪ್ರಶ್ನಾ ಪತ್ರಗಳೇ ಇಲ್ಲವೆಂದು ವಾರ್ತೆ. 'ಸೈಕ್ಲೊಸ್ಟೈಲ್' ಮಾಡಿ ಕಳುಹಿಸಿರುವರಂತೆ! ಆ 'ಸೈಕ್ಲೊಸ್ಟೈಲ್' ಸರಿಯಾಗಿರದೆ ಮಕ್ಕಳಿಗೆ ಓದುವದೇ ಪ್ರಯಾಸವಾಗಿತ್ತಂತೆ. ಪ್ರಾಥಮಿಕ ಪರೀಕ್ಷೆಯಲ್ಲೂ ಇದೇ ರೀತಿಯ ಅವಿಜ್ಞತೆಗಳಾಗಿವೆಯೆಂದು ವರದಿ ಇದೆ. ಬೈಯ್ಯಂಡಾಣೆ ಶಾಲೆಯಲ್ಲಿ ಮಕ್ಕಳಿಗೆ ಸಾಕಷ್ಟು ಪ್ರಶ್ನಾ ಪತ್ರಗಳಿಲ್ಲದೆ ಮಕ್ಕಳನ್ನು ಗುಂಪು ಗುಂಪಾಗಿ ವಿಂಗಡಿಸಿ ಒಂದೊಂದು ಪರೀಕ್ಷಾ ಪತ್ರ ಕೊಟ್ಟಿರ ಪರಂತೆ! ಈ ದೂರ ಗಳೆಲ್ಲ ನಿಜವಾಗಿದ್ದರೆ ಮೇಲಧಿಕಾರಿಗಳ, ಈ ವಿಚಾರದಲ್ಲಿ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲವೆಂದು ಹೇಳಬೇಕಾಗುತ್ತದೆ.

ವಿದ್ಯಾ ಇಲಾಖೆಯ ಮೇಲೆ ಬರುತ್ತಿರುವ ಟೀಕೆ ಮತ್ತು ಇಲಾಖೆಯವರು ಪರೀಕ್ಷೆಯ ಬಗ್ಗೆ ಅನುಸರಿಸುತ್ತಿರುವ ಮಾರ್ಗ ಇವುಗಳಿಂದ ಶಿಕ್ಷಣ ಇಲಾಖೆಯಲ್ಲಿ ಗಡಿಬಿಡಿಯಾಗುತ್ತಿದೆಯೋ ಎಂಬಂತೆ ತೋರುತ್ತಿದೆ. ಇಂಥಾದ್ದಕ್ಕೆ ಎಡೆಕೊಡದೆ ಅಧಿಕಾರಿಗಳು ಕ್ರಮಪ್ರಕಾರ ತಿಳುವಳಿಕೆಯಿಂದ ನಡೆಯುವಂತೆ ಯೂ, ತಪ್ಪು ಎತ್ತುವ ಪ್ರಸಂಗಗಳಿಗೆಡೆ ಇಲ್ಲದಂತೆಯೂ ಮಾಡಬೇಕಾಗಿದೆ.

ತಮಗಿಷ್ಟವಿರುವ ವಿದ್ಯಾರ್ಥಿಗಳಿಂದ ಪರೀಕ್ಷಾಕರ್ತರು ಕೆಲವು ತರಗತಿಗಳಲ್ಲಿ ಹೆಚ್ಚಿನ ಮಾರ್ಕು ಕೊಡುವ ರೋಗವೂ, ಪರೀಕ್ಷೆಗೆ ಮೊದಲು ಅವರಿಗೆ ಪ್ರಶ್ನೆಗಳನ್ನು ಹೇಳಿಕೊಡುವ ಚಾಡ್ಯವೂ ಕೆಲವು ಅಧ್ಯಾಪಕರಿಗಿದೆ. ಇಂಥಾವರು ಮಹಾ ಅಪಕಾರ ಮಾಡುತ್ತಿರುವರೆಂದು ಬೇರೆ ಹೇಳ ಬೇಕೆ. ತಮ್ಮ ಮತೀಯ ಸೋಗಿನಲ್ಲಿ ಆ ವಿದ್ಯಾರ್ಥಿಗಳನ್ನು ಇವರು ಹಾಳುಮಾಡುತ್ತಾರೆ. ಇಂಥಾ ಪ್ರಸಂಗಗಳನ್ನು ಗುರ್ತಿಸಿ ತಕ್ಕ ಶಿಕ್ಷೆ ವಿಧಿಸುವದು ಅಧಿಕಾರಿಗಳ ಕರ್ತವ್ಯವಾಗಿರಬೇಕು.

ವಿದ್ಯಾ ಪ್ರಗತಿಯಾಗಬೇಕಾದರೆ ಶಾಲೆಯಲ್ಲಿ ಶಿಸ್ತೇ ಮುಖ್ಯ. ಈ ಶಿಸ್ತು ಚೆನ್ನಾಗಿರಬೇಕಾದರೆ ಅಧ್ಯಾಪಕರೂ ಶಿಸ್ತಿನವರಾಗಿರಬೇಕು. ಅಧ್ಯಾಪಕರಲ್ಲಿ ಶಿಸ್ತನ್ನೂ, ಕರ್ತವ್ಯದಕ್ಷತೆಯನ್ನೂ ಹೆಚ್ಚಿಸಬೇಕಾದರೆ ಅಧಿಕಾರಿಗಳ ದೃಷ್ಟಿ ಹದ್ದಿನ ಕಣ್ಣಿನಂತೆ ಚುರುಕಿರಬೇಕು. ಕಂಡು ಹಿಡಿದ ನ್ಯೂನತೆಯನ್ನು ತಿದ್ದುವ ಕಾರ್ಯ ಮಾಡಬೇಕು. ಇನ್ನಾದರೂ ಅಧಿಕಾರಿಗಳು ಎಚ್ಚರಗೊಂಡು ಶಿಥಿಲವಾಗುತ್ತಿರುವ ಈ ವಿದ್ಯಾ ಮಂದಿರವನ್ನು ಭದ್ರಗೊಳಿಸಬೇಕಾಗಿ ನಮ್ಮ ಕೋರಿಕೆ.

## ವರ್ತಮಾನ.

ತಿತಿಮತಿಯ ಶ್ರೀ ಮಾಕೆಯಂಡ ನಾಚಯ್ಯ ಸ್ಮಾರಕ ರಾಮ ಮಂದಿರದಲ್ಲಿ ತಾ. ೨೮ ರಲ್ಲಿ ರಾಮನವಮಿಯನ್ನೂ, ಹರಿಜನ ದಿನಾಚರಣೆಯನ್ನೂ ನಡೆಸಿ ಸಾರ್ವಜನಿಕ ಉಪಯೋಗಕ್ಕಾಗಿ ಸುಮಾರು ೨೦೦೦ ವೆಚ್ಚದಿಂದ ಮಂದಿರದ ಮುಂದೆ ತೋಡಿಸಿರುವ ಬಾವಿಯ ಗಂಗಾಪೂಜೆಯನ್ನು ಮಾಡಿ ಶ್ರೀ ಚೆಕ್ಕೆರ ಅಪ್ಪಯ್ಯನವರ ಸಂಗೀತ ಖಚೇರಿಯನ್ನೂ ನಂತರ ಹರಿಕಥೆಯನ್ನೂ ನಡೆಸಲಾಯಿತು.

ಮಡಿಕೇರಿ ಬೇಡ್‌ಮೆಂಟನ್ ಕ್ಲಬ್ಬಿನ ಆಶ್ರಯದಲ್ಲಿ ಏಪ್ರಿಲ್ ಮೂರನೇ ವಾರದಲ್ಲಿ ಗದ್ದಿಗೆ ಕೋರ್ಟಿನಲ್ಲಿ ಐದು ಜನರ (fives) ಇಬ್ಬರ (doubles) ಒಬ್ಬರ (singles) ಆಟಗಳ ಸ್ಪರ್ಧೆ ನಡೆಯುವುದೆಂದೂ ಭಾಗವಹಿಸಲಿಚ್ಛಿಸುವವರು ಅನುಕ್ರಮವಾಗಿ ರೂ ೫ ೩ ಮತ್ತು ೧-೮-೦ ಗ್ರಾಂಡ್ ಸ್ಟಾಜನೆಗಾಡಿ ಕ್ಲಬ್ಬಿನ ಗೌರವ ಕಾರ್ಯದರ್ಶಿಯವರಿಗೆ ಬರೆದುಕೊಳ್ಳಬೇಕೆಂದೂ ತಿಳಿಸುತ್ತಾರೆ.

ಸರಕಾರಿ ಆಫೀಸುಗಳ ಕೆಲಸದ ಸಮಯವನ್ನು ಕೇಂದ್ರ ಸರಕಾರದ ಆಜ್ಞೆಯಂತೆ ಅರ್ಧ ಗಂಟೆ ಹೆಚ್ಚಿಸಿದೆ. ಶನಿವಾರವಲ್ಲದೆ ಇತರ ಎಲ್ಲಾ ದಿನಗಳಲ್ಲಿ ಬೆಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫-೩೦ ರ ವರೆಗೂ, ಶನಿವಾರಗಳಲ್ಲಿ ಬೆಳಿಗ್ಗೆ ೮ ರಿಂದ ೧-೩೦ರ ವರೆಗೂ ಕೆಲಸ ಮಾಡಬೇಕೆಂದು ವಿಧಿಸಿದೆ. ಮಧ್ಯಾಹ್ನ ೧ ಗಂಟೆಯಿಂದ ೨ ರ ವರೆಗೆ ಊಟಕ್ಕೆ ಬಿಡುವೆಂದೂ ಸೂಚಿಸಲಾಗಿದೆ. ಮೀರಾಜಪೇಟೆ ಮತ್ತು ಮಡಿಕೇರಿಯಲ್ಲಿ ಸಂತೆ ದಿನಗಳು ಬೆಳಿಗ್ಗೆ ಒಂದು ಗಂಟೆ ತಡವಾಗಿ ಬರಬಹುದೆಂದು ನಿರ್ಧರಿಸಲಾಗಿದೆ.

ತೆಂಗಿನ ಸಸಿಗಳು ಕಾಸರಗೋಡಿನಲ್ಲಿರುವ ಕೇಂದ್ರಸರಕಾರದ ತೆಂಗು ಪರಿಶೋಧನಾ ಕೇಂದ್ರದಲ್ಲಿ ಮಾರಾಟಕ್ಕೆ ದೊರೆಯುವವೆಂದೂ ಬಾಯಸ್‌ದಾರರು ಅಲ್ಲಿಂದ ಪಡೆಯಬಹುದೆಂದೂ ತಿಳಿಸುತ್ತಾರೆ.

ಬೇರಳಿನಾಡಿನ ರುದ್ರಗಪ್ಪೆ ಭಗವತಿ ದೇವರ ಹಬ್ಬವು ತಾ ೮ ಮತ್ತು ೯ ರಲ್ಲಿ ನಡೆಯುವುದು.

ಕಳೆದ ಡಿಸೆಂಬರಿನಲ್ಲಿ ನಡೆದ ಮದ್ರಾಸ್ ಗವರ್ನಮೆಂಟ್ ಸಂಗೀತ ಪರೀಕ್ಷೆಗೆ ಕೊಡಗಿನಿಂದ ಕೂತ ೧೦ ಮಂದಿಯಲ್ಲಿ ಎಲ್ಲರೂ ತೇರ್ಗಡೆ ಹೊಂದಿರುವರು. ಶ್ರೀಮತಿ ಕೋಟೆರ ಅಕ್ಕಮ್ಮನವರು ಹೈಯರ್ ಗ್ರೇಡಿನಲ್ಲಿ ಪ್ರಥಮ ಶ್ರೇಣಿಯಲ್ಲಿಯೂ ಮತ್ತು ಶ್ರೀ ರಾಮಕೃಷ್ಣನಾಯಡುರವರು ಲೋವರ್ ಗ್ರೇಡಿನಲ್ಲಿ ಪ್ರಥಮ ಶ್ರೇಣಿಯಲ್ಲೂ ಪಾಸಾಗಿರುವರು.

ಕೊಡಗಿನಲ್ಲಿ ಜನವರಿ ತಿಂಗಳಲ್ಲಿ ೩೨೨ ಜನನಗಳೂ, ೩೩೮ ಮರಣಗಳೂ ಸಂಭವಿಸಿರುವುದಾಗಿ ಪ್ರಕಟವಾಗಿದೆ.

ಕೊಡಗು ಸರಕಾರಿ ಕಾಲೇಜಿನ ಜೂನಿಯರ್ ಇಂಟರಿನಲ್ಲಿದ್ದ ೧೧೦ ವಿದ್ಯಾರ್ಥಿಗಳ ಪೈಕಿ ೨೯ ವಿದ್ಯಾರ್ಥಿಗಳನ್ನು ಬಿಟ್ಟು ಉಳಿದೆಲ್ಲರನ್ನೂ ಮೇಲಿನ ತರಗತಿಗೆ ಪಾಸು ಮಾಡಿರುವದಾಗಿ ತಿಳಿಯಬರುತ್ತದೆ.

### ಹಿಂದೀ ವಿಶಾರದ ವಿದ್ಯಾಲಯ ಮಂಗಳೂರು.

ಮಂಗಳೂರಿನಲ್ಲಿ ತಾ ೨೫-೪-೫೦ಕ್ಕೆ ಒಂದು ವಿಶಾರದ ವಿದ್ಯಾಲಯವು ಮಂಗಳೂರು ಪ್ರಾದೇಶಿಕ ಹಿಂದುಸ್ತಾನೀ ಪ್ರಚಾರ ಸಮಿತಿಯ ಕಡೆಯಿಂದ ತೆರೆಯಲ್ಪಡುವುದು. ಈ ವಿದ್ಯಾಲಯದಲ್ಲಿ III ಫಾರ್ಮ್ ಯಾ VIII ದರ್ಜೆ ಮತ್ತು ಪ್ರವೇಶಿಕಾ ಪಾಸಾದ ವಿದ್ಯಾರ್ಥಿಗಳಿಗೆ ಪ್ರವೇಶವಿರುವುದು. ಪ್ರವೇಶಿಕಾಕ್ಕೆ ಈ ಮೊದಲು ಅರ್ಜಿ ಕಳುಹಿಸಿ ಪರೀಕ್ಷೆಗೆ ಕೂತುಕೊಳ್ಳಲಾರದ ಕಳೆದ ಫೆಬ್ರುವರಿ ತಿಂಗಳಲ್ಲಿ ಪ್ರವೇಶಿಕಾ ಪರೀಕ್ಷೆಗೆ ಕುಳಿತ, ಈ ಮೊದಲು ಪ್ರವೇಶಿಕಾ ಪರೀಕ್ಷೆಗೆ ಕುಳಿತು ಪಾಸಾದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಮತ್ತು III ಫಾರ್ಮ್ ಯಾ VII ನೇ ದರ್ಜೆ ಪಾಸಾಗಿರಬೇಕೆಂಬ ನಿಯಮವನ್ನು ಸಡಲಿಸುವ ಕುರಿತು ಪ್ರಾದೇಶಿಕ ಹಿಂದುಸ್ತಾನಿ ಪ್ರಚಾರ ಸಮಿತಿಯು ದಕ್ಷಿಣ ಭಾರತ ಹಿಂದುಸ್ತಾನಿ ಪ್ರಚಾರ ಸಭೆಯೊಂದಿಗೆ ಪತ್ರವ್ಯವಹಾರ ನಡೆಯುತ್ತಿದೆಯಾಗಿಯೂ ವಿದ್ಯಾಲಯಕ್ಕೆ ಸೇರಲು ಅಪೇಕ್ಷಿಸುವವರು ತಾರೀಕು ೨೦-೪-೫೦ರ ಒಳಗೆ ತಲಪುವಂತೆ ತಮ್ಮ ಅರ್ಜಿಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿಯೂ ಸಂಚಾಲಕರು ತಿಳಿಸುತ್ತಾರೆ. ಅರ್ಜಿ ಫಾರ್ಮುಗಳು ಕೆಳಗಿನ ವಿಳಾಸಕ್ಕೆ ಬರೆದರೆ ದೊರಕುವವು.

ಕಾರ್ಯದರ್ಶಿ,
ಮಂಗಳೂರು ಪ್ರಾದೇಶಿಕ ಹಿಂದುಸ್ತಾನಿ ಪ್ರಚಾರ ಸಮಿತಿ,
ಕೊಡಿಯಾಲ ಬೈಲು, ಮಂಗಳೂರು.

### ಬೇಕಾಗಿದ್ದಾರೆ.

ವಿದ್ಯಾರ್ಥಿನಿ ಭವನ
(ವೀರರಾಜಪೇಟೆ)

ಈ ಭವನದ ಮೇಲ್ವಿಚಾರದ ಬಗ್ಗೆ ಒಬ್ಬ ವಾರ್ಡನ್ ಬೇಕಾಗಿದ್ದಾರೆ. ಅಪೇಕ್ಷಿಸುವವರು ಏಪ್ರಿಲ್ ತಾ. ೨೨ ರ ಒಳಗೆ ಕಾರ್ಯನಿರ್ವಾಹಕ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಕೋದಂಡ ದೇಚಮ್ಮ ನಂಜಪ್ಪ ಇವರಿಗೆ ತಲಪುವಂತೆ ಅರ್ಜಿ ಬರೆಕೊಳ್ಳತಕ್ಕದ್ದು. ಎಸ್. ಎಸ್. ಎಲ್. ಸಿ ಓದಿದವರೂ, ಸಂಗೀತಜ್ಞಾನವುಳ್ಳವರೂ, ಹೊಲಿಗೆ ಬಲ್ಲವರೂ ಆಗಬೇಕೆಂದು ಬಯಸಲಾಗಿದೆ. ಖಾಯಂ ಉದ್ಯೋಗದಲ್ಲಿರಲಿಚ್ಛಿಸುವವರು ಮಾತ್ರ ಅರ್ಜಿ ಬರೆಕೊಳ್ಳತಕ್ಕದ್ದು.

ಟಿ. ಯಂ ಕಾರ್ಯಪ್ಪ,
ಗೌ. ಕಾರ್ಯದರ್ಶಿ.

### ವಾರ್ತೆಗಳು.

ಪಾಕಿಸ್ಥಾನದ ಮುಖ್ಯಮಂತ್ರಿಯಾದ ಲಿಯಾಖತ್ ಅಲಿಖಾನರು ತಾ. ೨೦ ರಲ್ಲಿ ಡೆಲ್ಲಿಗೆ ಬಂದಿದ್ದು ಬಂಗಾಳ ಸಮಸ್ಯೆ ಮತ್ತು ಹಿಂದೂಸ್ಥಾನಕ್ಕೂ ಪಾಕಿಸ್ಥಾನಕ್ಕೂ ಸಂಬಂಧಿಸಿದ ಇತರ ವಿಚಾರಗಳ ಬಗ್ಗೆ ಚರ್ಚೆ ನಡೆಯುತ್ತಿದೆ.

ಅಖಿಲಭಾರತ ಕಾಂಗ್ರೆಸಿನ ಅಧಿವೇಶನವು ಈ ಬರುವ ಜುಲೈ ಅಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆಯಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ತೀರ್ಮಾನಿಸಿದೆ.

ಮುಂದಿನ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗುವ ಸಮಯದಲ್ಲಿ—

ದಿ ಜನರಲ್

ಅಶ್ಶೂರನ್ಸ್ ಸೊಸೈಟಿ ಲಿಮಿಟೆಡ್

ಹೆಡ್ ಆಫೀಸ್ : ಅಜ್ಮೀರ್. ಸ್ಥಾಪನೆ 1907.

ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.

# ಓದುಗರ ಓಲೆಗಳು.

## ವಿದ್ಯಾಧಿಕಾರಿಗಳಿಗೆ

ತಾ ೨೪ ರಂದು ನಿಮಗೆ ಕೆಲವು ಸಂಗತಿ ತಿಳಿಸಿದೆ ಗೋರ ' ಎಂದು ತಪ್ಪಚ್ಚಾಚಿದ ನನ್ನ ಬರವಣಿಗೆ ಗಲಭೆಯೆಬ್ಬಿಸಿದೆ ಈ ವಿಷಯ ಇನ್ನೂ ವಿಷದ ಪಡಿಸುವುದೇ ಬೇಕು

ನಕಲು ಹೊಡೆಯುವುದು ತಪ್ಪು ಎಂದ ಮೇಲೆ ಉಪಾಧ್ಯಾಯರೂ, ಶಾಲಾ ಹೆಡ್ ಮಾಸ್ಟರು ಹಾಗೂ ಉನ್ನತ ಅಧಿಕಾರಿಗಳು ತಕ್ಕ ಶಿಕ್ಷೆಯ ಕಾರ್ಯಕ್ರಮ ಕೈಗೊಳ್ಳಬೇಕ ಪರೀಕ್ಷೆಗಳಲ್ಲಿ ಕಾಪಿ ಮಾಡಿದರೂ ಶಿಕ್ಷೆಯಿಲ್ಲ, ಒಂದೆರಡು ಬೈಗಳು ಮಾತ್ರವಲ್ಲದೆ ಕಾಪಿ ಮಾಡಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾರ್ಕುಗಳೂ ಇವೆ ಪ್ರಮೋಶನೂ ಇದೆ ಆದರೆ ಕಾಪಿ ಮಾಡದಿದ್ದ ವಿದ್ಯಾರ್ಥಿಗಳ ಮಾರ್ಕಿಲ್ಲದೆ ಪಾಸಾಗದಿದ್ದರೆ, ಆಗ ಕರ ಜಾಜನಕವಲ್ಲವೇ? ಕಾಪಿ ಮಾಡಲಿಕ್ಕಾಗದೆ ಯಾ ಉಪಾಧ್ಯಾಯರುಗಳ ಸಹಾಯ ಸಿಕ್ಕದೆ ಚತುರ ವಿದ್ಯಾರ್ಥಿಗಳೂ ಪಾಸಾಗದೆ ಎಸ್ ಎಸ್ ಎಲ್ ಸಿ ಯಲ್ಲಿ ಹಲವು ವರ್ಷ ಕುಳಿತಿರುವುದೂ ಇವೆಯೊಂದ ಮೇಲೆ ಅವರ ಗತಿ ಏನು ?

ಉಪಾಧ್ಯಾಯರ, ಹಣವಂತರ, ದನಿಕರ, ಜಮೀನ್ದಾರರ ಮಕ್ಕಳಿಗೆ ಬೇಕಾದ ರಿಜಲ್ಟು ಮಾರ್ಕುಗಳು ಸರಿಮಾಡಬಹುದು ಆದರೆ ಬಡ ರೈತನ ಮಕ್ಕಳ ಗತಿ ಏನು? ಉಪಾಧ್ಯಾಯರೇ ಎಷ್ಟೋ ಸಲ 'ಇನ್ನು ಪರೀಕ್ಷೆಯೇ ಇಲ್ಲ' ಎಂದರು ಕೇಳಿದ್ದೇನೆ ಮಕ್ಕಳಿಗೆ ಎಲ್ಲಾ ಫಾರಂಗಳಲ್ಲಿ ಮಾರ್ಕುಗಳನ್ನು ಅತಿ ದಿತ್ತವಾ ಡುವುದು ಪ್ರತಿಯೊಬ್ಬ ಉಪಾಧ್ಯಾಯನೂ ಇದರ ಸವಿ ಅರಿತಿರಬಹುದು. ಕಾಮನ್ ಎಂಟ್ರನ್ಸ್‌ನಲ್ಲಿಲ್ಲ, ಅತ್ಯಂದಿತ್ತದ ಒಡ ಟವಿನ್ದೇ ಇದೆ ಹಾಗಂದ ಮೇಲೆ ವಿದ್ಯಾ ಖಾತೆಯಲ್ಲಿ ಪಾಸಾಗಬೇಕಾದರೆ, ಖಾತೆಯಲ್ಲಿ ಕೆಲವರು ಹಿತಚಿಂತಕರಿದ್ದರೆ ಸಾಕೆಂದಂತಾಯಿತ ಈ ಅನುಕೂಲತೆಗಳಿಲ್ಲದೆ ಏಕಿಂಟಿ ವೈಲುಗಳಿಂದ ನಡೆದು ಬಂದು, ಹಣ್ಣಿಗಿನ ತಾಗಳು ತಿಂದು, ಶಕ್ತ್ಯಾನುಸಾರವಾಗಿ ಪಾಸಾಗದ ಆ ಬಡ ರೈತ ವಿದ್ಯಾರ್ಥಿಯ ಗತಿಯೇನಾಗಬೇಕೆಂದು, ನಾಗರೀಕರೂ ಹಾಗೂ ವಿದ್ಯಾಖಾತೆಯವರೂ ಆಲೋಚಿಸಿರಿ

ಕೇಪ್ರೊಂದು ಕಡೆಗಳಲ್ಲಿ, ಬಸ್ಸಿನಲ್ಲಿ ಉಪಾಧ್ಯಾಯರೇ ಹಾಗೆ ಹಲವಲ್ಲಿ ನಿಲ್ಲುತ್ತಾರಂತೆ 'ನನ್ನ ತಂದೆ ಹೇಳಿದರೆ ಮಾರ್ಕು ಹೆಚ್ಚುತ್ತೆ' ಎಂದು ನಾಗರೀಕರೂ ಹಾಗೂ ವಿದ್ಯಾರ್ಥಿಗಳೂ ಹೇಳುವುದನ್ನು ಕಿವಿಯಾರೆ ಕೇಳಿದ್ದೇನೆ 'ಗಾರ ಪಿನಾಕಿ ತಿನ್ನು, ಅವರೂ ಹಾಗೇ ಪಾಸಾಗಿದ್ದು, ಇವರೂ ಹಾಗೇ ಪಾಸಾಗಿದ್ದರೆ' ಎಂದು ಹೇಳುವುದು ಪರಿಪಾಠವಾಗಿದೆ 'ಉಪಾಧ್ಯಾಯ ವೃತ್ತಿಯು ಉನ್ನತ ಸ್ಥಾನ ಆ ಶಿಷ್ಯನ ಹಿತಕ್ಕೋಸ್ಕರ ನೀವೇ ಕಾವುದು ನಿತ್ಯವನ್ನು ಬಿಡುವುದು ಕೆಲವು ವಿಷಯಗಳನ್ನು ಬರೆಯಲಿಚ್ಛಿಸಿರಿ.

ದಯವಿಟ್ಟು (೧) ಈ ಕಾಪಿ ಮಾಡುವ ವಿದ್ಯಾರ್ಥಿಗಳನ್ನು ಆ ವರ್ಷವಾದರೂ ಅದೇ ತರಗತಿಯಲ್ಲಿ ನಿಲ್ಲಿಸಿ (೨) ಪರೀಕ್ಷಾ ಪತ್ರಿಕೆ ತಿದ್ದುವಿಕೆಯಲ್ಲಿ ಉನ್ನತ ಮಟ್ಟವನ್ನು ಪಾಲಿಸಿ, (೩) ಕಾಪಿ ಮಾಡಿದವರ ಸರ್ಟಿಫಿಕೇಟಿನಲ್ಲಿ ಈ ಅಂಶ ಬರೆಯಿಸಿ (೪) ಈ ಕಾಪಿ ಮಾಡುವುದಕ್ಕೆ ಮುಂಚೆಯೇ ಅವರನ್ನೂ, ಅವರ ಸಮಾನಗಗಳನ್ನೂ ಪರೀಕ್ಷಿಸಿ ಪರೀಕ್ಷಾ ಹಾಲಿಗೆ ಬಿಡಿರಿ (೫) ನಿಷ್ಪಕ್ಷಪಾತವಾಗಿರುವಂತೆ ಉಪಾಧ್ಯಾಯರನ್ನು ಎಚ್ಚರಿಸಿ (೬) ಹೆಸರೂ ಹಾಗೂ ಈ ಉಪಾಧ್ಯಾಯರುಗಳು 'ಸ್ಪೋರ್ಟ್ಸ್‌ಮೇನ' 'ಸ್ಪೀಕರ್' 'ಏಕ್ಟರ್' ಸಿಂಗರ್' ಎಂದು ಹೆಚಿನ ಪಕ್ಷಪಾತವುಳ್ಳ ಯಾವುದೇ ಕೃಪಾಕಟಾಕ್ಷಗಳನ್ನು ವಿದ್ಯಾರ್ಥಿಗಳ ಮೇಲೆ ಬೀರದಂತೆ ಎಚ್ಚರಿಸಿ

ವಿದ್ಯಾರ್ಥಿಗಳಲ್ಲಿ ಇಂದು ಶಿಸ್ತು ಹಾಳಾಗಿ ನಶಿಸಿಹೋಗಿದ್ದರೆ ಅದು ಉಪಾಧ್ಯಾಯರುಗಳ ಈ ವೇಳೆಯ ನಿಷ್ಕ್ರಾಣಗಳಿಂದ ಉಪಾಧ್ಯಾಯರಲ್ಲಿ ನಿಷ್ಪಕ್ಷಪಾತವೂ, ಕರ್ತವ್ಯದಕ್ಷತೆಯಿದ್ದರೆ ವಿದ್ಯಾರ್ಥಿಗಳಲ್ಲಿ ಶಿಸ್ತು ತಾನಾಗಿಯೇ ಬರುತ್ತೆ ಆ ಶಿಸ್ತಿನ ಹಂತವನ್ನು ಬರಿಸಲಿಕ್ಕೆ ನೀವೇ ಸಮರ್ಥರು ನೀವು ಎಂಟೊಂಬತ್ತು ವರ್ಷ ಹಿಂದೆ ವೀರರಾಜಪೇಟೆಯಲ್ಲಿಯೇ ಮಾಡಿಸಿದ 'ಶಾಲಾ ಪಾರ್ಲಿಮೆಂಟರಿ ಸಿಸ್ಟಂ' ಈಗ 'ಪ್ರೌಢಶಿಕ್ಷಣ' ಸಾರುತ್ತಿದೆ ಆ ಮಹಾಂದ ಯೋಚನೆ ಕರ್ತವ್ಯದಕ್ಷತೆಗಳಿಂದ, ಶಿಸ್ತಿನ ಮಟ್ಟಕ್ಕೆ ವಿದ್ಯಾಖಾತೆಯನ್ನು ಏರಿಸಿ ನಾಗರೀಕರನ್ನೇ ವಿದ್ಯಾಲಯಗಳು ಹೊರಗೆಡಹುವಂತೆ ಮಾಡಿ ಧನ್ಯವಾದಗಳನ್ನು ಪಡೆಯುತ್ತಾ ನಿವೃತ್ತರಾಗಿರೆಂಬ ನನ್ನ ನಂಬಿಕೆ

'ವಿರಾಜ'

---

## ನಾಗರೀಕ ಜನತೆಗೆ

ಕೊಡಗಿನ ನಾಗರೀಕರೇ, ನೀವು ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದ 'ಸತ್ಯ ವಿದ್ಯಾರ್ಜನೆಗೆ' ವಿದ್ಯಾ ವಿದ್ಯಾರ್ಜನೆಗಲ್ಲ ಹೇಗಾದರೂ ಎಸ್ ಎಸ್ ಎಲ್ ಸಿ ಯಾಗಲೆಂದಲ್ಲ ನಿಜವಾದ ತಿಳಿವು ಮಕ್ಕಳಿಗೆ ಸಿಕ್ಕಿ ಮುಂದಿನ ಜೀವನದಲ್ಲಿ ತಿಳಿದ ತಿಳಿವು ಸಹಕರಿಸಲೆಂದು

ಈ ನಿಮ್ಮ ಮಕ್ಕಳು ವಿದ್ಯಾರ್ಥಿಯಾದಾಗ ಅವರ ಜೀವನವು ಹೇಗಿರಬೇಕ ತಿಳಿಯಿತೇ? ಎಸ್ ಎಸ್ ಎಲ್ ಸಿ ಕನ್ನಡ ಪುಸ್ತಕದಲ್ಲಿ ಸೀತಾ ರಾಮಾಚಾರ್ಯರ 'ಹಿಂದಿನ ಶಿಕ್ಷಣ ಪದ್ಧತಿ' ಪಾಠ ಓವರಿ ಪ್ರತಿಯೊಬ್ಬ ವಿದ್ಯಾರ್ಥಿಯ ತಂದೆ ತಾಯಿಯರು ಹಿರಿಯರು ಪೋಷಕರು ಈ ಪಾಠವನ್ನು ಓದಿ ತಿಳಿದು ತಮ್ಮ ಮಕ್ಕಳನ್ನು ವಿದ್ಯಾರ್ಥಿ ಜೀವನದಲ್ಲಿ ಅದರಂತೆ ಇಡಬೇಕು. ನಿಮ್ಮ ಮಕ್ಕಳ ನಡೆ, ನಡಿ, ರೀತಿ, ನೀತಿ ಓದು, ಬರಹ, ಆಹಾರ, ವಿಹಾರಗಳೇನೆಂದು ಸ್ವಲ್ಪ ತಿಳಿಯಿರಿ ನೀವೂ ಕಡ ಇಂದು ನಿಮ್ಮ ವಿದ್ಯಾರ್ಥಿಗಳ ಶಿಸ್ತಿನ ಅವನತಿಗೆ ಕಾರಣರು.

ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗಾದರು ಧನ ಸಹಾಯಬೇಕು. 'ಹೆಕ್ಕ ಕೊಟ್ಟಿಗೆ ಹೆಗ್ಗಣ ಮುದ್ದು' ಎಂಬಂತೆ ನಿಮಗೆ ನಿಮ್ಮ ಮಕ್ಕಳು ಬಹಳ ಪ್ರೀತಿ ಅವರು ಕೇಳಿದ ಹಾಗೆ ಹಣ ಕೊಟ್ಟು ಸಹಕರಿಸಿ ಅವರನ್ನು ನೀವೇ ಹಾಳು ಮಾಡುತ್ತೀರಿ, ಜೊತೆಗೆ ನಿಮಗಿಂತಲೂ ಮಿಗಿಲಾದ ವಿದ್ಯಾದಾನವನ್ನು ಮಾಡುವ ಆ ಗುರುವನ್ನು ಬಯ್ದು ಹಳಿದು ಗುರುವಿನ ಉಚ್ಚ ಸ್ಥಾನವನ್ನು ನಿಮ್ಮ ಮಕ್ಕಳಾದ ಅವರ ವಿದ್ಯಾರ್ಥಿಗಳ ಕಣ್ಣಿನಲ್ಲಿ ಇಳಿಸುತ್ತೀರಿ ಹಾಗಾಗಿ ನಿಮ್ಮ ಮಗ ಭಾರತದ ಭಾವಿ ನಾಗರೀಕನಾಗಿದೆ ದುಂದುಗಾರನಾಗಿರುತ್ತಾನೆ

ಕೆಲವು ವಿದ್ಯಾರ್ಥಿಗಳು ಪೇಟೆಗಳಲ್ಲಿ 'ರೂಂ' ಮಾಡಿ ಜೀವಿಸುತ್ತಾ, ಮಧ್ಯ ಸೇವಾಸಕ್ತರೂ ಜೂಜುಗಾರರೂ, ಸಿನಿಮಾ ಪ್ರೇಮಿಗಳೂ ಆಗಿ ಆನಂದವಾಸಿಗಳಾಗುತ್ತಿರುವರು ಚಲಚಿತ್ರ ಮಾಸಿಕಗಳೇ ಕೈಯಲ್ಲಿ ಸಿಗರೇಟಂತೂ ಸಾಮಾನ್ಯವಾಗಿ ಬಿಟ್ಟಿದೆ ಉಪಾಧ್ಯಾಯರುಗಳನ್ನು ಟೀಗೆ ಕರೆದು ವಿದ್ಯಾರ್ಥಿಗಳ ಸಿಗರೇಟು ಸಹ ಹಂಚುತ್ತಾರೆ ಉಪಾಧ್ಯಾಯರಿಗಿಲ್ಲದ 'ಸರ್ಜ್‌ಸೂಟ್' ಮಕ್ಕಳಿಗೆ! ಅದರ ಮೇಲೆ 'ಸ್ಟ್ರಾಪ್' 'ಕ್ರೇಪ್ ಶೂ' ಹೇಟೊಂದು ಬರಲಿಲ್ಲ ಮೀಸೆಯ ಟ್ರಿಮ್ ಉಪಾಧ್ಯಾಯರಿಗಿಂತಲೂ ಎ ಇ ಒ, ಡಿ ಇ ಓ ಗಿಂತಲೂ ಒಪ್ಪಾಗಿ ತೋರಿಸುವ ವಿದ್ಯಾರ್ಥಿಗಳಿಲ್ಲವೆ? ಹಲವೊಮ್ಮೆ ಸಹಾಯಗಳಿಂದ ಕದರ ಡು ರಾಜಕೀಯವಂತೂ ಅವರಿಗ ಸಾಮಾನ್ಯವಾಗಿ ಬಿಟ್ಟಿದೆ ಈ ಜೀವನ ವಿದ್ಯಾರ್ಥಿಗಳಿಗೆ ತಕ್ಕುದೇ? ಇದಕ್ಕೆಲ್ಲಾ ಕಾರಣಭೂತರು ಮಕ್ಕಳನ್ನು ಹಿಡಿತದಲ್ಲಿಡದ ಧನಿಕ, ಹುದ್ದೆದಾರ, ಜಮೀನ್ದಾರರ ಈ ನಿಮ್ಮ ಪಂಗಡ

ಇವರಿಂದ ಪ್ರಾಮಾಣಿಕರಿಗೆ ಹಳ್ಳಿಯ ರೈತರ ಮಕ್ಕಳು ತಮ್ಮ ನೀಚಗತಿಯನ್ನು ತಾವೇ ಕಂಡು ಶಾಲೆಗ ಹೋಗುವುದು ಬಿಡುತ್ತಿದ್ದಾರಂತೆ! ಹಲವು ದರಿದ್ರ ವಿದ್ಯಾರ್ಥಿಗಳಿಂದಾಗಿ ದಳಿತ ರೈತ ವಿದ್ಯಾರ್ಥಿಗಳ ಆತ್ಮವೇ ಅಧವಾನವಾಗಿಯ ಬೇಗ ಸಿಕ್ಕಿ ಬೆಂದು ಬೆಂಬೂದಿಯಾಗಿದೆ ಸರಕಾರದವರೇ ಬೇರಿಲ್ಲ ಇಲ್ಲದಿದ್ದರೂ, ಈ ವಿದ್ಯಾರ್ಥಿ ಜೀವನದಲ್ಲಾದರೂ ಸಮಾನತೆಯನ್ನು ಮಿಂಚಿಸಿ

ನಾಗರೀಕ ತಂದೆ ತಾಯಿ ಹಾಗೂ ಪೋಷಕರೇ ನಿಮ್ಮ ಮಕ್ಕಳನ್ನು (೧) 'ರೂಂ'ಗಳಲ್ಲಿಡಲು ಬಿಡದಿರಿ (೨) ವಿನಾ ಬೇರೆ ಉಪಾಧ್ಯಾಯರನ್ನು ಹೆದರಿಸಲು ಬಿಡದಿರಿ (೩) ನಿಮ್ಮ ಮಕ್ಕಳಾದರೂ, ಅವರು ವಿದ್ಯಾರ್ಥಿಗಳೆಂದು ತಿಳಿದು ಅವರ ಗುರುಗಳನ್ನು ಬಯ್ಯದಿ (೪) ನೀವು ಧನಿಕರಾದರೂ ಸರಿ ನಿಮ್ಮ ದೊಡ್ಡಸ್ತಿಕೆಯನ್ನು ಮಕ್ಕಳಿಗೆ ಸಜ-ಗೂರ್ ಹೊಲಿಸಿ ಶಾಲೆಗೆ ಕಳುಹಿಸುವುದರಲ್ಲಿಲ್ಲವೆಂದು ತಿಳಿಯಿರಿ (೫) ಹುಡುಗರು ಕೇಳಿದಷ್ಟು ಹಣ ಸುಮ್ಮನೆ ಕೊಟ್ಟು ಬಿಡದಿರಿ (೬) ರಾಜಕೀಯಕ್ಕೆ ಕೈಹಾಕಲು ಬಿಡದಿರಿ.

ಇವಿಷ್ಟನ್ನು ಕಾರ್ಯರೂಪಕ್ಕೆ ತಂದರೆ ಕೊಡಗಿನ ವಿದ್ಯಾರ್ಥಿಗಳ ಶಿಸ್ತು ಉತ್ತಮವಾಗಿ, ಭಾರತದ ಭವಿಷ್ಯ ನಿರ್ಮಾಪಕರೂ ಭಾವೀ ಪ್ರಜೆಗಳೂ ಆದ ಅವರು ನಾಗರೀಕರಾಗಿ ಸತ್ಯ ವಿದ್ಯಾವಂತರಾಗುವುದರಲ್ಲಿ ಸಂಶಯವಿಲ್ಲ

ವಿರಾಜ

---

## ಬೇಲಿ ಹೊಲ ಮೇಯಿತೇ ?

ಕಪ್ಪು ಸಂತೆ ಮಾಡಕೂಡದಾಗಿಯೂ ಮಾಡುವುದನ್ನು ತಿಳಿದಲ್ಲು ಆ ಸಂಗತಿಯನ್ನು ಸರಕಾರದ ಅವಗಾಹನೆಗೆ ಕೊಡ್ಡೆ ತರುತ್ತೇವೆ ಎಂಬರ್ಥದ ಇಂಡಿಯಾ ಸರಕಾರದಿಂದ ಬಂದ ಒಂದು ಪತ್ರದ ನೆಕಲಿಗೆ ಗ್ರಾಮದ ಪಟೇಲರುಗಳ ಮೊದಲುಗೊಂಡು, ಸೇರಿದ ಎಲ್ಲಾ ಜನರಿಂದ ಪ್ರಮಾಣ ತೆಗೆದುಕೊಂಡಿರುವುದು ಯಾರೂ ಮರೆತಿರಲಾರರು. ಆದರೂ ಮೊನ್ನೆ ತಾ. ೨೭-೩-೫೦ ರ ರಾತ್ರಿ ಪೈಯ್ಯಂಡಾಣೆಯಿಂದ ಕಬ್ಬೆಮೊಟ್ಟೆಗಾಗಿ ಮಲಬಾರಿಗೆ ನರಿಯಂದಡ ಗ್ರಾಮದ ಎಡಪಾಲದ ಸುಮಾರು ಹತ್ತು ಹನ್ನೊಂದು ಮಾಪಿಳ್ಳೆಗಳು ಅಂದಾಜು ೫೦೦ ಸೇರು ಅಕ್ಕಿ ಮತ್ತು ಸುಮಾರು ೧೦೦ ಸೇರು ಅವಲಕ್ಕಿಯನ್ನು ಪರ್ಮಿಟ್ ಇಲ್ಲದೆ ಕಳ್ಳತನದಲ್ಲಿ ಸಾಗಿಸುತಿದ್ದರಂತೆ! ಆ ದಿನ ಪುಣ್ಯವಶಾತ್ ಗ್ರಾಮ ಬೀಟ್ ಹೋಗಿದ್ದ ನಾಪೋಕ್ಲು ಸರ್ಕಲಿನ ಕಾನ್ಸ್‌ಟೇಬಲನೊಬ್ಬನು ಕಬ್ಬೆಮೊಟ್ಟೆಯಲ್ಲಿ ಉಳಿದಿದ್ದನಂತೆ! ಈ ಸಂಗ್ತಿಯನ್ನು ರಾತ್ರಿ ಯಾರೋ ಪೋಲೀಸಿನವನಿಗೆ ತಿಳಿಸಿ ಸದ್ರಿ ಮಾಪಿಳ್ಳೆಗಳನ್ನು ಹಿಡಿದು ಅಕ್ಕಿಯನ್ನು ಪತ್ತೆಹಚ್ಚಿದರಂತೆ! ಈ ಬಗ್ಗೆ ಒಂದು ಮಹಜರ್ ಸಹ ಬರೆಯಿಸಿರುವುದಾಗಿ ಅಲ್ಲಿ ಆಗ ಹಾಜರಿದ್ದವರೊಬ್ಬರು ಹೇಳುತ್ತಾರೆ ಆದರೆ ಸ್ವಲ್ಪವೇ ಸಮಯದಲ್ಲಿ ಕೆಲವು ಜನರು ಸೇರಿದನಂತರ ಏನೋ ಕಾರಣದಿಂದ ಸದ್ರಿ ಮಹಜರು ಹರಿದು ಚೂರು ಮಾಡಲ್ಪಟ್ಟಿತಂತೆ! ಒಂದು ವೇಳೆ ತುಂಬಾ ಸಂಖ್ಯೆಯಲ್ಲಿದ್ದ ಮಾಪಿಳ್ಳೆಗಳ ಹೆದರಿಕೆಯಿಂದ ಹೀಗೆ ಆಯಿತೋ ಯಾ ಯಾರದಾದರೂ ಕೈ ಬೆಚ್ಚಗೆ ಆಯಿತೋ ತಿಳಿಯದು. ಹೇಗೂ ಮಾಪಿಳ್ಳೆಗಳ ವ್ಯಾಪಾರಕ್ಕೆ ಕಂಟಕ ಬರಲಿಲ್ಲವೆಂದು ತೋರುತ್ತೆ ಕೆಲವು ಸುಳ್ಳಿನ ಕಂಟು ನೆಪದಿಂದ ಪತ್ತೆ ಹಚ್ಚಿದ ಅಕ್ಕಿಯು ಮಾಯವಾಯಿತಂತೆ! ಈ ರೀತಿಯ ವರ್ತನೆ ಅದಾರ ಚಕ್ರದ ತಂತಿತವಿಟ್ಟುಕೊಂಡ ಸರಕಾರದ ಅಧಿಕಾರಿಗಳಿಗೆ ಸಂಪದ್ದಲ್ಲ ಗ್ರಾಮದಿಂದ ಗ್ರಾಮಕ್ಕೆ ಭತ್ತ ಯಾ ಅಕ್ಕಿ ಸಾಗಿಸಲು ಹುಕುಂ ಪಡದ ಕೊಳ್ಳಬೇಕೆಂಬುದಾಗಿ ಖಾನೂನು ಇರುವಾಗ ತಿಳಿದ ಎಷ್ಟೋ ಮೆ ಹೀಗಿರುವಲ್ಲಿ ಇಂಥಾ ಅಂಗತಿಯು ತಣ್ಣಗಾಗಲು ಕಾರಣವೇನು? ಇದು ನಿಜವೆಂದರೆ ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ನ್ಯಾಯವಾದ ವಿಚಾರಣೆ ಮಾಡಿ ಇವನ್ನು ಬಂದೋಬಸ್ತು ಮಾಡಲು ಯತ್ನಿಸುವರೇ ?

ಬಡರೈತ.

---

## 'ಕಾಮನ್ ಎಂಟ್ರೆನ್ಸ್' ಪರೀಕ್ಷೆ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಎರಡು ವರ್ಷಗಳ ಮೇಲಾಯಿತ್ತು ಬಂತ ಅಂದಿನಿಂದ ಇಂಗ್ಲಿಷ್ ಭಾಷೆಗೆ ಹಿಂದೂಸ್ಥಾನದಲ್ಲಿ ಒಂದು ಧಕ್ಕೆಯೇ ಸರಿ ಸರಕಾರವು ಇಂಗ್ಲಿಷನ್ನು ತೆಗೆದು, ಹಿಂದಿಯಲ್ಲಿ ಕಾರುಬಾರು ನಡೆಸಲು ಪ್ರಯತ್ನಿಸುತ್ತಿ

(೬ನೇ ಪುಟಕ್ಕೆ ಸಾಗಿದೆ)

(೫ನೇ ಪುಟದಿಂದ ಸಾಗಿದ್ದು)

ದೆ ಮತ್ತು ಈ ಪ್ರಯತ್ನವು ಕೆಲವು ಶಾಲಾ ಕಾಲೇಜುಗಳಲ್ಲಿ ಜಾರಿಗೆ ಬಂದಿದೆ. ಇಂಗ್ಲಿಷನ್ನು ಎರಡನೆಯ ಭಾಷೆಯಾಗಿ ಮಾಡಿದ್ದಾರೆ. ಪೂರ್ವಕಾಲದ ಏಳನೇ ತರಗತಿಯ ಇಂಗ್ಲಿಷ್ ಪಠ್ಯ ಪುಸ್ತಕವನ್ನು ಈಗ ಹತ್ತನೆಯ ತರಗತಿಗೆ ಮಾಡುತಿದ್ದಾರೆ. ಸ್ವಲ್ಪ ಕಾಲಗಳ ಹಿಂದೆ, ಮೂರನೆ ತರಗತಿಯಿಂದ ಇಂಗ್ಲಿಷ್ ಕಲಿಸುತಿದ್ದರು ಈಗ ಆರನೆ ತರಗತಿಗೆ ಮಾಡಿದ್ದಾರೆ. ಹಾಗಿರುವಾಗ ಎಂಟನೆ ತರಗತಿಯ ಮಕ್ಕಳಿಗೆ ಎಷ್ಟು ಇಂಗ್ಲಿಷ್ ಗೊತ್ತಿರಬಹುದು. ಅವರಿಗೆ ಒಂದು ವಾಕ್ಯ ಇಂಗ್ಲಿಷಿನಲ್ಲಿ ಬರೆಯಲಾಗುವುದಿಲ್ಲ. ಅಂತಹ ಮಕ್ಕಳಿಗೆ ಈ ವರ್ಷದ ಮೇಲಿನ ಪರೀಕ್ಷೆಗೆ 'ಬೇಡ್‌ಮೆಂಟನ್' ಆಟದ ವಿಷಯ ಬರೆಯಲು ಕೊಟ್ಟಿದ್ದಾರೆ. ಈ ಆಟವನ್ನು ಕಾಣದ ಎಷ್ಟು ಮಕ್ಕಳಿಲ್ಲ? ಅವರಿಗೆ ಅದರಲ್ಲಿ ಉಪಯೋಗವಾಗುವ ಆಟದ ಸಾಮಾನುಗಳ ಹೆಸರು ಹೇಗೆ ಗೊತ್ತಿರಬಹುದು? ಪುಸ್ತಕದಿಂದ ಆರಿಸುವುದನ್ನು ಬಿಟ್ಟು, ಮಕ್ಕಳ ಇಂಗ್ಲಿಷಿನ ಮಟ್ಟವನ್ನರಿಯದೆ ಈ ತರದ ಪ್ರಶ್ನೆ ಹಾಕಿದ್ದು ನಿಜವಾಗಿಯೂ ತಪ್ಪು. ಪ್ರಬಂಧದ ಪ್ರಶ್ನೆಗೆ ನಲವತ್ತರಷ್ಟು ಮಾರ್ಕು ಕೊಟ್ಟಿದ್ದು, ಮಕ್ಕಳಿಗೆ ದೊಡ್ಡ ಧಕ್ಕೆಯನ್ನು ಮಾಡಿದಂತಿದೆ. ಇಂತಹ ಪ್ರಶ್ನೆಯ ಜತೆಯಲ್ಲಿ (Choice)ನ್ನು ಕೊಟ್ಟಿದ್ದರೆ ಸರಿ ಎನ್ನಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ಯಾವೊಬ್ಬ ಎಂಟನೆ ತರಗತಿಯ ಮಕ್ಕಳನ್ನು ಕೇಳಿದರೂ, ಅವರ ಬಾಯಲ್ಲಿ ಇಂಗ್ಲಿಷ್ ಕಷ್ಟವೆನ್ನುವ ಉತ್ತರ ವಾಚಕರು ಕೇಳಬಹುದು. ಆದುದರಿಂದ, ಈ ಮೇಲಿನ ಇಂಗ್ಲಿಷ್ ಪೇಪರನ್ನು ಮಾಡಿದ ಉಪಾಧ್ಯಾಯರು ಒಂದು ವಿಧದಲ್ಲಿ ಮಕ್ಕಳಿಗೆ ದೊಡ್ಡ ಹಾನಿ ಮಾಡಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಈ ಪೇಪರನ್ನು ತಿದ್ದುವಾಗ, ದಯವಿಟ್ಟು ಮಕ್ಕಳ ಭವಿಷ್ಯ ಹಾಳಾಗುವ ಹದಂತೆ ನೋಡಿಕೊಳ್ಳಬೇಕೆಂಬುದೇ ಈ ಓಲೆಯ ಉದ್ದೇಶ. ವಿದ್ಯಾಧಿಕಾರಿಗಳು ಈ ವಿಷಯನ್ನು ಸ್ವಲ್ಪ ಅವಲೋಕಿಸಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿಯಾರೆ?

ಮಕ್ಕಳ ತಂದೆ.

---

## ಚೈಯ್ಯಂಡಾಣೆ ಆಸ್ಪತ್ರೆ ಕಟ್ಟಡ

ಚೈಯ್ಯಂಡಾಣೆ ಎಂಬುದು ಎರಡು ಮೂರು ಬಡ ಗ್ರಾಮದ ಮಧ್ಯದಲ್ಲಿ, ವೀರರಾಜಪೇಟೆ, ನಾಲ್ಕುನಾಡು ಅರಮನೆ ರಸ್ತೆಯ ಮಧ್ಯ ಸ್ಥಳದಲ್ಲಿರುವ ಸಣ್ಣ ಊರಾಗಿದೆ. ಈ ಬಡ ಗ್ರಾಮಸ್ಥರು ತಮ್ಮ ಕೀಚಿತ ಭೂಸೊತ್ತಿನ ಉತ್ಪತ್ತಿಯಿಂದ ಶ್ರಮ ವಹಿಸಿ ಚಂದಾ ಎತ್ತಿ ತಮ್ಮ ಮಕ್ಕಳ ವಿದ್ಯಾರ್ಜನೆಗಾಗಿ ಒಂದು ಶಾಲಾ ಕಟ್ಟಡವನ್ನು ಸ್ವತಃ ಕಟ್ಟಿಸಿ III ಫಾರಂ ವರೆಗೆ ತರಗತಿಯನ್ನು ಏರಿಸಿ ಹಯರ್ ಎಲಿಮೆಂಟರಿ ಶಾಲೆಯಾಗಿ ಏರ್ಪಡಿಸಿದ್ದಾಯಿತು. ಸರಕಾರದವರು ಅವರ ಶ್ರಮವನ್ನು ಗಮನಕ್ಕೆ ತಂದು ಈ ಶಾಲೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸಿಕೊಂಡು ನಡೆಸುತ್ತ ಬರುತಿದ್ದಾರೆ.

ನಂತರ ಇಲ್ಲಿಯ ಜನರಿಗೆ ಆಸ್ಪತ್ರೆಯ ಹತ್ತಿರದಲ್ಲಿಲ್ಲದ ಕಾರಣ ಸರಕಾರದವರಲ್ಲಿ ಮೊರೆಯಿಟ್ಟು ವಾರಕ್ಕೊಮ್ಮೆ ನಾಪೋಕ್ಲಿನಿಂದ ಡಾಕ್ಟರವರು ಬಂದು ಔಷಧಿಯನ್ನು ಇಲ್ಲಿ ಕೊಡುವ ವೀಕ್ಲಿ ಡಿಸ್ಪೆನ್ಸರಿಯನ್ನು ಮಂಜೂರು ಮಾಡಿಕೊಟ್ಟಿರುತ್ತಾರೆ. ಆದರೆ ಔಷಧಿಯನ್ನು ಇಟ್ಟುಕೊಂಡು ಜನರ ಅನುಕೂಲತೆಗೆ ಸರಿಯಾಗಿ ಕೊಡಲ ನ್ಯಾಯವಾದ ಒಂದು ಕಟ್ಟಡವು ಇಲ್ಲದೆ ತೊಂದರೆಪಡುತಿದ್ದೇವೆ. ತತ್ಕಾಲಕ್ಕೆ ಮ|| ಎಸ್. ಎಸ್. ನಾರಾಯಣ ಪ್ರಭುರವರು ಉದಾರತೆಯಿಂದ ಅವರ ಅಂಗಡಿ ಮನೆಯ ಒಂದು ರೂಮನ್ನು ವಾರಕ್ಕೊಂದು ದಿವಸ ಬಾಡಿಗೆ ಇಲ್ಲದೆ ಕೊಡುತ್ತಾ ಬರುವುದಕ್ಕೆ ನಾವುಗಳು ಅವರಿಗೆ ಕೃತಜ್ಞರಾಗಿದ್ದೇವೆ. ಈ ರೀತಿ ಅವರು ಇನ್ನೂ ಬಹಳ ಸಮಯದ ವರೆಗೆ ರೂಂ ಬಿಟ್ಟುಕೊಡುತ್ತಾರೆಂದು ನಂಬಿ ಸುಮ್ಮನೆ ಕೂತರೆ ಆಗದು. ಇದನ್ನರಿತು ಈ ಬಗ್ಗೆ ಒಂದು ಪ್ರತ್ಯೇಕ ಕಟ್ಟಡವನ್ನು ಕಟ್ಟಿಸುವ ಉದ್ದಿಶ್ಯ ೧೯೪೯ನೇ ಇಸವಿಯಿಂದಲೇ ಬಡಜನರಾದ ನಮ್ಮೊಳಗೇ ಚಂದಾ ಎತ್ತಿ ಸುಮಾರು ೮೦೦ ರೂಪಾಯಿಗಳ ವರೆಗೆ ಶೇಕರಿಸಿಕೊಂಡೆವು. ಆದರೆ ಈ ಹಣವು ಒಂದು ಕಟ್ಟಡಕ್ಕೆ ಎಷ್ಟರ ಮಟ್ಟಿಗೂ ಸಾಲದೆ ಕೆಲಸವನ್ನು ಶುರು ಮಾಡಲು ಅಧೈರ್ಯದಿಂದ ಸುಮ್ಮನಿರಬೇಕಾಯಿತು.

ಮೊನ್ನೆ ತಾ. ೨೬-೩-೫೦ ನೇ ಆದಿತ್ಯವಾರ ಈ ಉದ್ದಿಶ್ಯ ನಡೆದ ಒಂದು ಮಹಾ ಸಭೆಯ ಮೀಟಿಂಗಿನಲ್ಲಿ ಶ್ರೀ ನಡಿಕೇರಿಯಂಡ ಕರುಂಬಯ್ಯನವರು ತಮ್ಮ ದಿವಂಗತ ಮಾ ತೋ ಶ್ರೀ ಯವರ ಸ್ಮರಣೆಗಾಗಿ ೧೫೦೦ ರೂ. ಗಳನ್ನು ಈ ಕಟ್ಟಡಕ್ಕೆ ಕೊಡುವುದಾಗಿ ವಾಗ್ದಾನ ಮಾಡಿದ್ದಲ್ಲದೆ ೫೦೦ ರೂ. ಗಳನ್ನು ಅಲ್ಲಿಯೇ ಕೊಟ್ಟರು. ಇದನ್ನು ಕಂಡ ಇತರ ಕೆಲವು ಮಹನೀಯರೂ ಸಹ ಅದೇ ದಿನವೇ ೧೦೦ ರೂ. ಇದಕ್ಕೆ ಮೇಲ್ಪಟ್ಟು ಸಹ ಕೊಡುವುದಾಗಿ ಅಂದಾಜು ೫೦೦ ರೂ. ಗಳ ಸಹಾಯದ ಭರವಸೆಯನ್ನು ಕೊಟ್ಟರು. ಅಲ್ಲದೆ ಘನ ಸರಕಾರದವರೂ ಸಹ ನಾವು ಈ ಮೊದಲೇ ಕೇಳಿಕೊಂಡ ನಮ್ಮ ಹವಾಲನ್ನು ಮನ್ನಿಸಿ ೧೦೦೦ ರೂಪಾಯಿಗಳನ್ನು ಈ ಬಗ್ಗೆ ಕೊಡುವುದಾಗಿ ಒಪ್ಪಿದ್ದಾರೆ. ಈ ರೀತಿ ಒಟ್ಟಾಗಿ ಸುಮಾರು ೩೮೦೦ ರೂಪಾಯಿಗಳು ಒದಗುವುದೆಂಬ ಭರವಸೆ ಮೇರೆ ಕಟ್ಟಡದ ಕೆಲಸಕ್ಕೆ ಈಗಾಗಲೇ ಶುರು ಮಾಡಿರುತ್ತೇವೆ. ಈ ಕಟ್ಟಡವನ್ನು ಕಟ್ಟಲು ಅನುಕೂಲವಾಗಿರುವ ೪೦ ಸೇಟು ಜಾಗವನ್ನು ಚೈಯ್ಯಂಡ್ರ ಮನೆಯವರು ಬಿಟ್ಟು ಕೊಟ್ಟಿದ್ದಾರೆ.

ಆದರೆ ಈ ಮೇಲೆ ಕಾಣಿಸಿದ ಹಣವು ಸಾಲದೆ ಬರುವ ಕಾರಣ ಅದಷ್ಟು ತ್ವರೆಯಿಂದ ಹಣ ಶೇಕರಿಸಿ ಕಾರ್ಯವನ್ನು ಕೊನೆಗಾಣಿಸಬೇಕಾಗಿದೆ. ಕಟ್ಟಡವಷ್ಟೇ ಅಲ್ಲ, ಇದಕ್ಕೆ ಬೇಕಾಗುವ ಫರ್ನೀಚರುಗಳೂ ಸಹ ಇದರ ಜೊತೆಯಲ್ಲೇ ಆಗಬೇಕಾಗಿದೆ. ಈ ಸ್ಥಳಕ್ಕೆ ಸಮ್ಮಂಧಪಟ್ಟ ಅನೇಕ ಮಹನೀಯರು, ಉದ್ಯೋಗದಲ್ಲೂ ಮತ್ತು ವ್ಯಾಪಾರದಲ್ಲೂ ಊರ ಹೊರಗೂ ವಾಸಿಸುತಿದ್ದಾರೆ. ಇವರಲ್ಲಿ ಕೆಲವು ಜನರು ಅಲ್ಪ ಸ್ವಲ್ಪ ಧನ ಸಹಾಯ ಮಾಡಿರುತ್ತಾರೆ. ಇನ್ನೂ ಅನೇಕರು ಕಟ್ಟಡದ ಕೆಲಸ ಶುರು ಮಾಡುವಾಗ ಕೊಡುತ್ತೇವೆಂದು ವಾಗ್ದಾನ ಮಾಡಿರುತ್ತಾರೆ. ಅಂಥವರೆಲ್ಲರೂ ಮೇಲಿನ ಉದಾರಿಗಳ ಮಾರ್ಗವನ್ನು ಅನುಸರಿಸಿ ಈ ಧರ್ಮದ ಕೆಲಸಕ್ಕೆ ತಮ್ಮ ಶಕ್ತ್ಯಾನುಸಾರ ಧನ ಸಹಾಯ ಮಾಡಬೇಕಾಗಿ ಗ್ರಾಮಸ್ಥರ ಪರ ಬೇಡಿಕೆ.

M. N. S

---


# ಬಟ್ಟೆ ಬೇಕೆ?

**ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲ್ಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.**

**ಅತ್ಯುತ್ತಮ ಮಾದರಿಯ ಬೆನಾರಿಸ್ ಮತ್ತು ಕಾಶ್ಮೀರ್ ಪಟ್ಟೆಗಳು ಸದಾ ದೊರೆಯುವವು**

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟು ಬಟ್ಟೆ ತೆಗೆಯುವವರು ಈ ಪಕ್ಕಿಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ಪಳ್ಳಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,
ವೀರರಾಜಪೇಟೆ (ಕೊಡಗು)

12-12



# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಛೇರಿ:— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

| | |
|---|---|
| ಪಂಡಿತ ಮೋತಿಲಾಲ್ ನೆಹರು. | ಎಸ್. ಶ್ರೀನಿವಾಸ ಅಯ್ಯಂಗಾರ್ |
| ಹಕೀಮ್ ಅಜಮಲಖಾನ್. | ಡಾ|| ಎಂ. ಎ. ಅನ್ಸಾರಿ. |

**Transacts:—Life, Fire, Motor and Marine.**

ಏಂ. ಯು. ಅಚ್ಚಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಎಂ. ಎ. ಬೆಳ್ಳಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.



# ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

## ಫ್ರೇಜರ್ ಪೇಟೆ.

## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 30-9-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.



ಬರುತ್ತಾರೆ! ಬೇಗನೆ ಬರುತ್ತಾರೆ!!

# ಜಿ. ಎ. ಸರ್ಕಸ್ ಆಫ್ ಬಾಂಬೆ.



ಇವರು ತಾ. 12-4-50 ರಲ್ಲಿ ವೀರರಾಜಪೇಟೆಗೆ ಬರುತ್ತಾರೆ. ಭಾರತದ ಸರ್ಕಸುಗಳ ಪೈಕಿ ಅಗ್ರಸ್ಥಾನ ಪಡೆದಿರುವ ಹಂಗೇರಿಯಾ, ಫ್ರೆಂಚ್ ಮಲಯ, ಚೈನಾ ಮತ್ತು ಇಂಡಿಯಾ ದೇಶದ 106 ಆಟಗಾರರ ಸಾಹಸಕೃತ್ಯಗಳೂ, ನೃತ್ಯ ಮತ್ತು ಕಲೆಗಳಿಂದ ಕೂಡಿವೆ.

# ಸತ್ಕರ್ಮವೇ ಸಹಜವಾದ ಕರ್ಮ.

[ಶ್ರೀ ಕಾವೇರಿ ಆಶ್ರಮ ಇವರಿಂದ]

ನಮ್ಮೊಳಗೇ ಇರುವ ಕಾಮಕ್ರೋಧಾದಿ ಶತ್ರುಗಳನ್ನು ನಾವು ಹೇಗೆ ಜಯಿಸಬೇಕು ಎನ್ನುವ ಕ್ರಮವನ್ನು ಹಿಂದೆ ತಿಳಿದೆವು. ಇದಕ್ಕಾಗಿ ಮನಸ್ಸೋಮಯ ಪ್ರಯತ್ನಬೇಕು. ಕರ್ಮಮಾಡುತ್ತಿರಲೂ ಬೇಕು, ಆ ಕರ್ಮದ ಕಡೆ ಗಮನಕೊಟ್ಟು ನಮ್ಮಲ್ಲಿ ನಾವೇ ವಿಚಾರಮಾಡಿಕೊಳ್ಳಬೇಕು. ಮನಸ್ಸಿನಲ್ಲಿ ಕೆಟ್ಟ ಯೋಚನೆ ಬರಲಿಲ್ಲವಷ್ಟೆ, ಯಾರಲ್ಲೂ ದುಡುಕಿ ಕೆಟ್ಟ ಮಾತನ್ನು ಆಡಲಿಲ್ಲವಷ್ಟೆ, ಪರರಿಗೆ ಅಹಿತವಾದ ಕರ್ಮ ಮಾಡಲಿಲ್ಲವಷ್ಟೆ ಎನ್ನುವ ವಿಚಾರವಿರಬೇಕು.

ಈ ರೀತಿ ಮಾಡುತ್ತಾ ಮಾಡುತ್ತಾ ಬಂದರೆ ನಾವು ತಪ್ಪುಗಳನ್ನು ತಿದ್ದಿಕೊಂಡು ಶುದ್ಧ ಕರ್ಮ ಮಾಡುತ್ತಾ ಬರುತ್ತೇವೆ.

ಶುದ್ಧ ಕರ್ಮ, ಸ್ವಧರ್ಮ, ನಿಷ್ಕಾಮ ಕರ್ಮ—ಮಾಡುತ್ತಾ ಬಂದರೆ, ಆ ನಿಷ್ಕಾಮ ಕರ್ಮವೇ ನಮ್ಮ ಸ್ವಭಾವವಾಗುತ್ತದೆ. ಮನಸ್ಸಿನಲ್ಲಿ ಕೆಟ್ಟ ಯೋಚನೆಗಳು ಬರುವುದೇ ಇಲ್ಲ. ಕೆಟ್ಟ ಮಾತುಗಳನ್ನು ಆಡುವುದೇ ಇಲ್ಲ. ದುಷ್ಕಾರ್ಯಗಳು ನಮ್ಮಿಂದ ನಡೆಯುವುದೇ ಇಲ್ಲ. ಸತ್ಕರ್ಮವೇ ಸಹಜ ಕರ್ಮವಾಗಿ ಬಿಡುತ್ತದೆ. ಈ ಸಹಜ ಕರ್ಮವೇ ನಮಗೆ ಒಗ್ಗಿಹೋಗುತ್ತದೆ. ಹಾಗಾದರೆ ನಮ್ಮ ಬಾಳು ಶುದ್ಧವಾಗುತ್ತದೆ. ಶುದ್ಧವಾದ ಬಾಳು, ಜೀವನದಲ್ಲಿ ಸಫಲೋದಯ ಮಾರ್ಗ. ತ್ರಿಕರಣ ಶುದ್ಧವಾದ ಕರ್ಮವು ಅಭ್ಯಾಸಕ್ಕೆ ಬಂದು ಅದು ನಮ್ಮ ಸ್ವಭಾವವಾಗುವುದು. ಕರ್ಮ ನಮ್ಮಿಂದ ಹೇಗೆ ನಡೆಯುತ್ತಿದೆ ಎಂಬುದೇ ನಮಗರಿವಿಲ್ಲ. ನಾವು ಊಟ ಮಾಡುವಂತೆ, ನಡೆಯುವಂತೆ, ನಿದ್ರೆ ಮಾಡುವಂತೆ ನಮ್ಮ ಎಲ್ಲಾ ಕರ್ಮಗಳೂ ಸ್ವಾಭಾವಿಕವಾಗುತ್ತದೆ. ಈ ರೀತಿ ಆದವನೇ ಕರ್ಮಯೋಗಿ. ಇವನೇ ಕರ್ಮಸನ್ಯಾಸಿ. ಈ ಸ್ಥಿತಿಯಲ್ಲಿ ಕರ್ಮದ ಶ್ರಮವೇ ಇವನಿಗೆ ತಿಳಿಯದು. ಸ್ವಭಾವಕ್ಕೆ ಒಗ್ಗಿಹೋದ ಈ ಸ್ವಧರ್ಮವೇ ಅಕರ್ಮವೆನ್ನುವುದು. ಈ ಅಕರ್ಮ ದೆಸೆ ಬರುವುದು ಸಾಮಾನ್ಯದ ಕೆಲಸವಲ್ಲ. ಇದಕ್ಕೆ ಬಹಳ ಶ್ರಮಬೇಕು. ಈ ಜನ್ಮದಲ್ಲಾಗದಿದ್ದರೆ ಇನ್ನೂ ಜನ್ಮಗಳು ಬೇಕಾದೀತು. ಎಲ್ಲಾ ನಮ್ಮ ಪ್ರಯತ್ನದ ಮೇಲೆ ಇದೆ.

ಕಾಮಕ್ರೋಧಗಳನ್ನು ಎಷ್ಟರ ಮಟ್ಟಿಗೆ ಜಯಿಸಿದ್ದೇವೋ, ಇಂದ್ರಿಯಗಳನ್ನು ಎಷ್ಟರ ಮಟ್ಟಿಗೆ ನಮ್ಮ ವಶದಲ್ಲಿಟ್ಟಿದ್ದೇವೋ, ಮನಸ್ಸನ್ನು ಯಾವ ರೀತಿ ಪಳಗಿಸಿದ್ದೇವೋ ಅದರ ಮೇಲೆ ನಮ್ಮ ಪ್ರಯತ್ನದ ಕ್ರಮ ಹೊಂದಿಕೊಂಡಿದೆ. ಕೆಲವರಿಗೆ ಹುಟ್ಟಿನಿಂದಲೇ ಈ ಸ್ವಭಾವ ಬಂದಿರುತ್ತದೆ. ಇದು ಇವರ ಪೂರ್ವಜನ್ಮದ ಸತತ ಪ್ರಯತ್ನದ ಫಲ. ಕೆಲವರಿಗೆ ಈ ಜನ್ಮದಲ್ಲಿಯೇ ಕೆಲವು ದಿನದ ಸ್ವಲ್ಪ ಪ್ರಯತ್ನದಿಂದಲೇ ಬರುತ್ತದೆ. ಇದು ಅವರ ಸಂಸ್ಕಾರ ವಿಶೇಷದ ಫಲ. ಅಂತು ನಮ್ಮ ಪ್ರಯತ್ನವಿಲ್ಲದೆ ಯಾವುದು ಸಾಧ್ಯವಾಗುವುದಿಲ್ಲ. ಒಂದಲ್ಲ ಒಂದು ದಿನ ಈ ಜನ್ಮದಲ್ಲಲ್ಲ ಮುಂದಿನ ಜನ್ಮದಲ್ಲಿ ನಮ್ಮಿಂದ ಸಾಧ್ಯವಾಗುವ ಕೆಲಸವಾಗಿದೆ. ಒಬ್ಬನಿಂದ ಸಾಧ್ಯವಾದ ಕೆಲಸ ಇನ್ನೊಬ್ಬನಿಂದಲೂ ಸಾಧ್ಯವಾಗುತ್ತದೆ. ಈ ಅಕರ್ಮದ ದೆಸೆಯು ನಮಗೆ ಹೇಗೆ ಬರುತ್ತದೆನ್ನುವುದಕ್ಕೆ ಒಂದು ಅನುಭವದ ಉದಾಹರಣೆ ಕೊಡಬಹುದು.

ಸಣ್ಣ ಮಕ್ಕಳು ನಡೆಯಲು ಪ್ರಾರಂಭಿಸುತ್ತವೆ. ಆಗ ನಮಗೆ ಎಷ್ಟು ಕೌತುಕ. ಮಗು ಏಳುತ್ತದೆ, ಬೀಳುತ್ತದೆ, ತಿರುಗಿ ಎದ್ದು ನಡೆಯುತ್ತದೆ. ಇದನ್ನು ನೋಡುವಾಗ ನಾವು ತುಂಬಾ ಆಶ್ಚರ್ಯಪಡುತ್ತೇವೆ. ಸಣ್ಣ ಮಗುವು ನಡೆಯುವುದನ್ನು ಕಲಿಯುವಾಗ ನಮಗೆ ಅದರ ಕಡೆಗೇ ಗಮನ. ಸ್ವಲ್ಪ ದೊಡ್ಡವನಾಗಿ ನಡೆಯುವ ಕೆಲಸ ಸರಾಗವಾದ ಮೇಲೆ ನಮಗೆ ಆತನ ನಡಿಗೆಯ ಮೇಲೆ ಗಮನವೇ ಇಲ್ಲ. ನಾಲ್ಕು ವರ್ಷದ ಹುಡುಗನು ನಡೆಯುತ್ತಾ ಬಂದರೆ ನಮಗೆ ಆಶ್ಚರ್ಯವಾಗುವುದಿಲ್ಲ. ಅದೇ ಒಂದುವರೆ ವರ್ಷದ ಮಗುವು ಏಳುತ್ತಾ ಬೀಳುತ್ತಾ ಇರುವಾಗ ನಾವು ನೋಡುತ್ತೇವೆ. ದೊಡ್ಡವನಾಗುತ್ತಾ, ಮಗನಿಗೆ ನಡಿಯುವುದು ಸ್ವಭಾವವಾಗಿ ಬಿಡುತ್ತದೆ. ಅವನಿಗೆ ಶ್ರಮವಾಗುವುದಿಲ್ಲ. ನಡೆಯುವುದು ಅವನಿಗೆ ಗೊತ್ತೇ ಆಗುವುದಿಲ್ಲ. ನಮಗಾದರೂ ಅವನ ನಡಿಗೆಯು ವಿಷಯವಾಗಿ ಆಶ್ಚರ್ಯವು ಉಂಟಾಗುವುದಿಲ್ಲ. ನಡೆಯುವುದು ಅವನಿಗೆ ಸಹಜವಾಗುತ್ತದೆ. ಅದು ಅಕರ್ಮವಾಗಿ ಹೋಯಿತು. ಅದರಲ್ಲಿ ಶ್ರಮವಿಲ್ಲ, ಆಶ್ಚರ್ಯವಿಲ್ಲ. ಹೀಗೆಯೇ ಸಣ್ಣವರು ಊಟಮಾಡುವುದು ಸಹ. ಮಕ್ಕಳಿಗೆ ಊಟ ಮಾಡಿಸುವುದು ಒಂದು ದೊಡ್ಡ ಕೆಲಸ. ಶ್ರಮದ ಕೆಲಸವೇ ಸರಿ. ಕೆಲವು ದಿನಗಳ ಮೇಲೆ ಮಗುವು ಎಲ್ಲರಂತೆ ಊಟಮಾಡುತ್ತದೆ. ಊಟವೂ ಅಕರ್ಮವಾಗಿ ಬಿಡುತ್ತದೆ. ನಾವು ನೀರಿನಲ್ಲಿ ಈಜುವುದನ್ನು ಕಲಿಯುತ್ತೇವೆ. ಮೊದಲು ಎಷ್ಟು ಶ್ರಮವಾಗುತ್ತದೆ? ನೀರು ಕುಡಿಯುತ್ತೇವೆ, ಹೆದರುತ್ತೇವೆ, ಕೈ ಕಾಲು ಸೋತು ಹೋಗುತ್ತದೆ. ಈಜುವ ಕೆಲಸ ಬೇಡವೇ ಬೇಡ ಎನಿಸುತ್ತದೆ. ಕಡೆಗೆ ಈಜು ಕಲಿತ ಮೇಲೆ ನಮ್ಮ ಪ್ರಯತ್ನವಿಲ್ಲದೆಯೇ ನೀರಿನಲ್ಲಿ ಇರುತ್ತೇವೆ. ಆಗ ಶ್ರಮವೇ ಇಲ್ಲ. ಇದು ಅಕರ್ಮದ ಸ್ಥಿತಿಗೆ ಬಂದಂತಾಯಿತು.

ಹೀಗೆಯೇ ನಮ್ಮ ಎಲ್ಲಾ ಕರ್ಮಗಳೂ ಸಹ. ಸಾಧು ಶರಣರಲ್ಲಿ ನಾವು ಈ ಸ್ಥಿತಿಯ ಜೀವನವನ್ನು ಕಾಣುತ್ತೇವೆ. ಅವರು ಯಾವಾಗಲೂ ಲೋಕ ಹಿತದ ಚಿಂತೆಯನ್ನೇ ಮಾಡುತ್ತಾರೆ. ಅವರ ಬಾಯಿಂದ ಹೊರಡುವ ಮಾತುಗಳೆಲ್ಲಾ ಹಿತೋಪದೇಶವಾಗಿರುತ್ತದೆ. ಅವರ ಪ್ರತಿ ಒಂದು ಕರ್ಮವೂ ವಿಶ್ವಕಲ್ಯಾಣಕ್ಕಾಗಿ ಆಗುತ್ತದೆ. ಅವರ ಜೀವನದ ಪ್ರತಿ ಅಂಶವೂ ಪವಿತ್ರವಾದುದು, ವಿಶ್ವಕಲ್ಯಾಣಕರವಾದುದು. ಸಾವಿರ ಕೆಲಸ ಮಾಡುತ್ತಿದ್ದರೂ ಇವರಿಗೆ ಶ್ರಮವೆನಿಸದು. ಸರ್ವ ಕರ್ಮವೂ ಮಂಗಳವಾದುದು. ಅವರು ಬೇಡವೆಂದರೂ ಅವರಿಂದ ಇದನ್ನು ಮಾಡದೆ ಇರಲಾಗುವುದಿಲ್ಲ. ಈ ಸ್ಥಿತಿಯು ಮನುಷ್ಯನಿಗೆ ಬಂದರೆ ಅವನು ಕರ್ಮ ಯೋಗಿ. ಅವನು ಕರ್ಮ ಸನ್ಯಾಸಿ. ಈ ಸ್ಥಿತಿಗೆ 'ಸನ್ಯಾಸಿಗೆ ಕರ್ಮದ ಪರಿವೆಯೇ ಇಲ್ಲ. ಇವನ ಮನಸ್ಸೆಲ್ಲಾ ದೇವ ಚಿಂತನೆಯಲ್ಲಿರುತ್ತದೆ. ಆತ್ಮದ ಕಡೆಗೆ ತಿರುಗಿರುತ್ತದೆ. ಇವನು ಎಲ್ಲಾ ಕೆಲಸಗಳನ್ನು ಮಾಡುತ್ತಾನೆ. ಆದರೆ ಅದರ ಅರಿವು ಇವನಿಗಿಲ್ಲ. ಆದುದರಿಂದ ಇವನು ಆ ಕರ್ಮವನ್ನು ಮಾಡಲಿಲ್ಲ. ಅದಕ್ಕಾಗಿ ಶ್ರಮ ತೆಗೆದುಕೊಳ್ಳಲಿಲ್ಲ. ಇವನು ಎಲ್ಲಾ ಕರ್ಮವನ್ನೂ ಬಿಟ್ಟಿದ್ದಾನೆ. ಎಲ್ಲವನ್ನು ಮಾಡಿಯೂ ಸಹ ಒಂದನ್ನೂ ಮಾಡಲಿಲ್ಲ. ಎಲ್ಲಾ ಕರ್ಮವನ್ನೂ ಈ ರೀತಿ ಬಿಟ್ಟವನೇ "ಸನ್ಯಾಸಿ" ಸನ್ಯಾಸವೆಂದರೆ ಎಲ್ಲಾ ಕರ್ಮವನ್ನು ಬಿಡುವುದೆಂದರ್ಥ. ಎಲ್ಲವನ್ನು ಮಾಡಿದರೂ ಎಲ್ಲವನ್ನೂ ಬಿಟ್ಟಿದ್ದಾನೆ. ಇದೇ "ಸನ್ಯಾಸದ" ಅರ್ಥ.

ಸನ್ಯಾಸವೆಂದರೆ ಏನೂ ಕರ್ಮ ಮಾಡದಿರುವುದೆಂದು ಅರ್ಥವಲ್ಲ. ಇಪ್ಪತ್ತನಾಲ್ಕು ಗಂಟೆಯೂ ಕೆಲಸ ಮಾಡಿಯೂ ಯಾವ ಕರ್ಮವನ್ನು ಮಾಡದ ತಿರುವ ಸ್ಥಿತಿಗೆ ಸನ್ಯಾಸವೆಂದರು. ಈ ಮಟ್ಟವನ್ನು ತಲುಪಿದ ಮಹಾತ್ಮರು ಅನೇಕರಾಗಿ ಹೋದರು. ಅನೇಕರೀಗಲೂ ಇದ್ದಾರೆ. ಮನುಷ್ಯನು ಈ ಮಟ್ಟಕ್ಕೇರಿ ಆ ಸ್ಥಿತಿಯಲ್ಲಿ ಅವನು ಅನುಭವಿಸುವ ಆನಂದವನ್ನು ವರ್ಣಿಸಲು ಅವರಿಗೆ ಸಾಧ್ಯವಿಲ್ಲ. ಅದಕ್ಕಾಗಿಯೇ ಇದು ಅವರ್ಣನೀಯ, ವರ್ಣನಾತೀತ ಎಂದು ಹೇಳಿದ್ದಾರೆ. ಇದು ವರ್ಣನೆ ಮಾಡುವ ಮಟ್ಟವನ್ನು ಮೀರಿದ್ದು. ಸಕ್ಕರೆ ರುಚಿ ಇದೆ ಎಂದು ಹೇಳಬಹುದು. ಅದರ ರುಚಿ ಹೇಗೆ? ಎಂದರೆ ಏನು ತಾನೆ ಹೇಳಬಹುದು. ಅದರಂತೆ ಆನಂದದ ಸ್ಥಿತಿ. ಇಲ್ಲಿ ಶಬ್ದಕ್ಕೆ ಎಡೆಯೇ ಇಲ್ಲ. ಕೇವಲ ಅನುಭವದಿಂದ ಈ ಆನಂದದ ರುಚಿಯೇ ವಿನಹ ಬರವಣಿಗೆಯಿಂದಾಗಲೀ, ಮಾತಿನಿಂದಾಗಲೀ ಯಾರೂ ಹೇಳಲ್ಲ.

ಸೂರ್ಯನು ಹಗಲು ಗಂಟೆಗಳ ಕಾಲವೂ ಬೆಳಕನ್ನು ಕೊಡುತ್ತಿರುತ್ತಾನೆ. ರಾತ್ರಿಯಲ್ಲಿ ಒಂದು ಅರ್ಧ ಗೋಳದಲ್ಲಿ ಬೆಳಕು ಇದ್ದೇ ಇರುತ್ತದೆ. ಇವನಿಗೆ ವಿರಾಮವೇ ಇಲ್ಲ. ಇವನಿಗೆ ಬೆಳಕು ಕೊಡುವ ಕೆಲಸ. ಸ್ವಲ್ಪವೂ ಶ್ರಮವೇ ಇಲ್ಲ. ಅವನಿಗೆ ಇದು ಅಕರ್ಮವಾಗಿ ಬಿಟ್ಟಿದೆ. ಬೆಳಕನ್ನು ಬಿಟ್ಟು ಸೂರ್ಯನಿರಲಾರ. ಅವನಿದ್ದಲ್ಲಿ ಕತ್ತಲೆ ಇಲ್ಲವೇ ಇಲ್ಲ. ಕತ್ತಲೆ ನಿವಾರಿಸುವ ಕೆಲಸವನ್ನು ಬಿಟ್ಟು ಸೂರ್ಯನಿರಲಾರ. ಆದರೆ ಅವನು ಆ ಕರ್ಮವನ್ನು ಮಾಡುತ್ತಲೇ ಇಲ್ಲ. ಅವನು ಅಕರ್ಮಿ. ಅದಕ್ಕಾಗಿಯೇ ಗೀತೆಯಲ್ಲಿ ಭಗವಂತನು 'ಈ ಶಾಸ್ತ್ರವನ್ನು ಮೊದಲು ನಾನು ಸೂರ್ಯನಿಗೆ ಉಪದೇಶಮಾಡಿದ್ದೇನೆ. ಅವನಿಂದ ಮನುವು ಕಲಿತನು' ಎಂದು ಹೇಳಿದ್ದಾನೆ.

ಅಕರ್ಮದಲ್ಲಿ ಬಹು ಮಹತ್ತರವಾದ ಶಕ್ತಿ ಇದೆ. ತಾನು ಎಲ್ಲಾ ಕೆಲಸವನ್ನು ಮಾಡಿಯೂ ಏನನ್ನೂ ಮಾಡದಿದ್ದರೂ, ಈ ಕರ್ಮ ಸನ್ಯಾಸಿಯು ಒಂದು ಕೆಲಸವನ್ನೂ ಮಾಡುವುದಿಲ್ಲ. ಇವನು ಇದ್ದಲ್ಲಿ ಬೇರೆಯವರಿಗೆ ಕೆಲಸ ಮಾಡುವ ಶಕ್ತಿ ಬರುತ್ತದೆ. ಸೂರ್ಯನು ಬೆಳಕು ಕೊಡುತ್ತಿರುತ್ತಾನೆ. ಆದರೆ ಅವನ ಬೆಳಕು ಕಂಡೊಡನೆಯೇ ಹಕ್ಕಿಗಳು ಹಾಡುತ್ತವೆ. ದನಕರುಗಳೂ, ಜನರೂ ಅವರವರ ಕೆಲಸಕ್ಕೆ ತೊಡಗುತ್ತಾರೆ. ಕೆಲವರು ಇವನ ಬೆಳಕಿನಲ್ಲಿ ಜನೋಪಕಾರ ಮಾಡಿದರೆ ಕೆಲವರು ಬೇರೆಯವರ ಮನೆಗೆ ಬೆಂಕಿ ಕೊಟ್ಟರು. ಇದಾವುದನ್ನೂ ಸೂರ್ಯನು ಮಾಡುವುದಿಲ್ಲ. ಇದು ಸೂರ್ಯನ ಅಕರ್ಮದ ಪ್ರಭಾವ.

ಅಕರ್ಮದಲ್ಲಿ ಬೇರೆಯವರನ್ನು ಕೆಲಸ ಮಾಡಿಸುವ ಶಕ್ತಿ ಇದೆ. ಅಕರ್ಮವೆಂದರೆ ಪರಿಪೂರ್ಣತೆಯ ಕರ್ಮ. ನೀರಿನ ಆವಿ ಇದ್ದಂತೆ ಅಕರ್ಮದ ಶಕ್ತಿ. ನೀರನ್ನು ಕಾಯಿಸಿ ಅದು ಆವಿಯಾಗಿ ಆ ಆವಿಯು ಇನ್ನು ಕಾದು ಕಾದು ಅದರಲ್ಲಿ ಶಕ್ತಿ ತುಂಬುತ್ತದೆ. ಸಾಧಾರಣವಾದ ನೀರಿನಿಂದ ಬಂದ ಆವಿಯು ಶಕ್ತಿಯುತವಾಯಿತು, ಅದು ಸಾವಿರಾರು ಟನ್ ಭಾರವನ್ನು ಎಳೆಯುವ ಶಕ್ತಿಯನ್ನು ಹೊಂದುತ್ತದೆ. ಹಾಗೆಯೇ ಅಕರ್ಮವೂ ಸಹ. ಅಕರ್ಮದಲ್ಲಿ ಶಕ್ತಿಯು ತುಂಬಿ ತುಳುಕುತ್ತದೆ. ಮಹಾತ್ಮರು ಇರುವ ಕಡೆ ಅಸತ್ಯದ ಸುಳಿವೇ ಇಲ್ಲ. ಇವರು ಹೇಳದೆಯೇ ಎಲ್ಲರೂ ಅವರವರ ಕರ್ಮದಲ್ಲಿ ಪ್ರವರ್ತರಾಗುತ್ತಾರೆ. ಇವರ ಸಹವಾಸ ಸ್ವಲ್ಪವಿದ್ದರೆ ಸಾಕು, ಕೆಟ್ಟವರೂ ಒಳ್ಳೆಯವರಾಗುತ್ತಾರೆ. ಇವರಿಗೆ ಏನೂ ಹೇಳಿ ಮಾಡಿಸಬೇಕಾಗಿಲ್ಲ. ಇವರು ಇರುವುದೇ ಸಾಕು. ಇವರ ಇರುವಿಕೆಯ ಪ್ರಭಾವವೇ ಜನರನ್ನು ಕೆಲಸ ಮಾಡಿಸುತ್ತದೆ. ಇದು ಅಕರ್ಮದ ಪ್ರಭಾವ. ಅಕರ್ಮದಲ್ಲಿ ಬೇರೆಯವರನ್ನು ಕೆಲಸಕ್ಕೆ ತೊಡಗಿಸುವ ಶಕ್ತಿ ಇದೆ. ಕರ್ಮ ಮಾಡುತ್ತೇವೆ ಎಂದರೆ ಸಾಲದು. ಗೀತೆಯಲ್ಲಿ ಕರ್ಮವನ್ನು ಮೂರು ವಿಭಾಗವಾಗಿ ಮಾಡಿ ಅದರ ಗುಟ್ಟನ್ನು ವಿವರಿಸಿದೆ. ನಿತ್ಯಕರ್ಮ ಮಾಡುವ ನಾವು ಅದರ ಮರ್ಮವನ್ನು ಮನಗಾಣಬೇಕಾಗಿದೆ.

# ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ವಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

**ಪಟ್ಟೊ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
52–13 ಟೌನ್ ಹಾಲಿನ ಎದುರು, ಮೈಸೂರು.



ಭದ್ರತೆ! 17 ವರ್ಷಗಳ ಉತ್ಕೃಷ್ಟ ಅನುಭವಶೀಲತೆ!! ಅನುಕೂಲತೆ!!

# ದಿ ವಿಜಯ ಬ್ಯೇಂಕ್ ಲಿಮಿಟೆಡ್

ಮುಖ್ಯ ಕಛೇರಿ,
**ಕದ್ರಿ ರೋಡ್, ಮಂಗಳೂರು.**

ನಿರಖು ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**
ಸ್ಥಾಪನೆ,—1897
ಕಿಶೋರಿಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಬೊಂಬಾಯಿ.
ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

**ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**



# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ.-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.
ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ ಮತ್ತು ವಾರ್ಡನ್ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಚೇರ್ಮನ್.



# CRESCENT

## FOR PROTECTION AND SERVICE.

It is best to represent and insure with The CRESCENT Insurance Co., Lt.d,
*H: O: BOMBAY.* [*Established 1919.*
*For particulars write to:*

Sri B. A. Poovaiah or The Branch Manager,
*Organiser* *22 B. Mahatma Gandhi Road,*
*Pollibetta, Coorg.* *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಸೂರೆನ್ಸ್ ಕಂಪೆನಿಗೆ ಬರೆಯಿರಿ.



# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರಿನ ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
   (ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರಬೇಕು ಮಾತ್ರ ದೊರೆಯುವದು)

ಎಂ ಎಸ್. ಸೋಮಯ್ಯ,
52–33 ಗೌರವ ಕಾರ್ಯದರ್ಶಿ.


**Edited, Printed and [illegible] by P. I. [illegible] Kodagu Press, Mercara, for 'Kodagu'**

Reg. No. M. 1850.
'KODAGU' MERCARA. (Coorg).

# ಕೊಡಗು

ಸಂಪಾದಕರು—ಬಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೧೪-೪-೧೯೫೦ನೇ ಶುಕ್ರವಾರ | ಸಂಚಿಕೆ ೪೬

## ಹೆರಾಲ್ಡ್ ಲಾಸ್ಕಿ

### ವಿವೇಚನಾತ್ಮಕ ನಿರೂಪಣೆ

ಲೇ.— ಶ್ರೀ ಮಧು ಲಿಮಯೇ (ಅ. ಭಾ. ಸಮಾಜವಾದಿ ಪಕ್ಷದ ಜೊತೆ ಕಾರ್ಯದರ್ಶಿಗಳು)

---

ಹೆರಾಲ್ಡ್ ಜೆ. ಲಾಸ್ಕಿಯವರ ಮರಣವು ಇಡೀ ಜಗತ್ತಿನಲ್ಲೇ ಮುಖ್ಯವಾಗಿ ಭಾರತದಲ್ಲಿ ವಿಷಾದಿಸಲ್ಪಡುವುದು. ಏಕೆಂದರೆ ನಾವು ತೊತ್ತುಗಳ ಜೀವನದಲ್ಲಿ ನರಳುತ್ತಿದ್ದಾಗ ಭಾರತದ ಧ್ಯೇಯೋದ್ದೇಶಗಳನ್ನು ನಿರ್ಭೀತಿಯಿಂದ ಪ್ರತಿಪಾದಿಸಿದವರಲ್ಲಿ ಅವರೊಬ್ಬರು. ಬ್ರಿಟಿಷರ ಪೈಕಿ ಬರ್ನಾರ್ಡ್ ಶಾ ಮತ್ತು ಬರ್ಟ್ರಾಂಡ್ ರಸ್ಸೆಲ್ ಇವರಿಬ್ಬರನ್ನು ಬಿಟ್ಟರೆ ದಿವಂಗತ ಹೆರಾಲ್ಡ್ ಜೆ. ಲಾಸ್ಕಿಯವರು ಈ ಶತಮಾನದ ಈ ಜಗತ್ತಿನ ರಾಜಕೀಯ ಮನೋಭಾವದ ಸ್ತ್ರೀ ಪುರುಷರ ರಾಜಕೀಯ ಜಾಗೃತಿಯ ಮೇಲೆ ವರ್ಚಸ್ಸು ಬೀರಿದವರಲ್ಲಿ ಅಗ್ರಗಣ್ಯರು. ೫೬ನೇ ವಯಸ್ಸಿನಲ್ಲಾದ ಇವರ ಅಕಾಲ ಮರಣದಿಂದಾಗಿ ದಲಿತ ಮತ್ತು ಹಿಂದುಳಿದ ಜನರು ತಮ್ಮ ಓರ್ವ ಪ್ರಾಮಾಣಿಕ, ನಚ್ಚಿನ ಗೆಳೆಯನನ್ನು ಕಳೆದುಕೊಂಡಿರುತ್ತಾರೆ. ೧೯೪೭ರ ಶರತ್ಕಾಲಕ್ಕೆ ಜರಗಿದ ಎಂಟ್‌ವರ್ಪ್ ಅಂತರ್‌ರಾಷ್ಟ್ರೀಯ ಸಮಾಜವಾದಿ ಪರಿಷತ್ತಿಗೆ ಬ್ರಿಟಿಷರ ಪ್ರತಿನಿಧಿಯಾಗಿ ಬಂದಿದ್ದ ಇವರನ್ನು ನಾನು ಭೇಟಿಯಾಗಿದ್ದೆ. ಲೇಬರ್ ಪಾರ್ಟಿಯ ವಿದೇಶಾಂಗ ಶಾಖೆಯ ಕಾರ್ಯದರ್ಶಿಯಾದ ಶ್ರೀ. ಡೆನಿಸ್ ಹೀಲೇ ಅವರು ನನ್ನ ಪರಿಚಯವನ್ನು ಮಾಡಿಕೊಟ್ಟರು. ಲಾಸ್ಕಿಯವರು ಸೌಮ್ಯಸ್ವಭಾವದವರಾಗಿದ್ದರು. ಭಾರತ ಸ್ವಾತಂತ್ರ್ಯ ಪಡೆದುದಕ್ಕೂ ಲೇಬರ್ ಸರಕಾರ ಈ ಚರಿತ್ರಾರ್ಹ ಕಾರ್ಯದಲ್ಲಿ ಸಹಾಯ ಮಾಡಿದುದಕ್ಕೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದರು. ಆದರೆ ಈ ಸ್ವಾತಂತ್ರ್ಯೋತ್ಸವದೊಡನೆ ಬೆನ್ನು ಹತ್ತಿ ಬಂದ ಪಂಜಾಬದ ಹತ್ಯಾಕಾಂಡವನ್ನು ಕೇಳಿದ್ದ ಅವರು ತನ್ನ ದುಃಖವನ್ನೂ ವ್ಯಕ್ತಪಡಿಸಿದರು. ಸಹಾನುಭೂತಿಪರ ವಿಚಾರಶೀಲ ಪ್ರವೃತ್ತಿಯವರಾದ ಇವರು ದಬ್ಬಾಳಿಕೆ ದಂಡನೆಗಳಿಗೆ ತುತ್ತಾದ ಜನರೊಡನೆ ಸಹಾನುಭೂತಿ ತೋರಿಸಿದ್ದರು. ಯಹೂದಿಯರ ದುಃಖ ದುಮ್ಮಾನ ಮತ್ತು ಅವರ ಮೇಲಿರುವ ಪ್ರೀತಿಗಳೇ ಇವರನ್ನು ಬೆವಿನ್‌ನವರ ಪಾಲೆಸ್ಟೈನ್ ನೀತಿಯ ಉಗ್ರವಿರೋಧಿಯನ್ನಾಗಿ ಮಾಡಿದ್ದವು.

ಪ್ರಾಧ್ಯಾಪಕ ಲಾಸ್ಕಿಯವರು ನಾಯಕರಲ್ಲ; ವ್ಯಾವಹಾರಿಕ ರಾಜಕಾರಣಿಯೂ ಅಲ್ಲ. ಆದಾಗ್ಯೂ ಇವರು ೧೯೪೫-೪೬ ಕೂಲಿಕಾರರ ಪಕ್ಷದ ಅಧ್ಯಕ್ಷರಾಗಿದ್ದರು. ಮಾತ್ರವಲ್ಲದೆ ಆ ಪಕ್ಷದ ನ್ಯಾಶನಲ್ ಎಕ್ಸಿಕ್ಯುಟಿವ್‌ನ ಸದಸ್ಯರಾಗಿಯೂ ಈಚೆ ತನಕ ಇದ್ದರು. ಆದರೆ ಭಾರತದ ರಾಷ್ಟ್ರಸಭೆಯ ಅಧ್ಯಕ್ಷ ಪದವಿಗೂ ಈ ಅಧ್ಯಕ್ಷ ಪದವಿಗೂ ಬಹಳ ಅಂತರವಿದೆ. ಕಾರಣ ಕೂಲಿಕಾರರ ಪಕ್ಷದ ಅಧ್ಯಕ್ಷ ಬರೇ ಹೆಸರಿಗೆ ಮಾತ್ರ. ಇಷ್ಟಲ್ಲದೆ ಪಕ್ಷದ ನಾಯಕನೆಂದಾಗಲೀ ಸಂಘಟನಾಕಾರನೆಂದಾಗಲೀ ರಾಜಕೀಯ ಆಯಕಟ್ಟಿನವನೆಂದಾಗಲೀ ಅವರಿಗೆ ಈ ಪದವಿ ಸಿಕ್ಕಿಲ್ಲ. ಬದಲಾಗಿ ಕೂಲಿಕಾರರ ಪಕ್ಷದ ಪ್ರತಿಯೊಬ್ಬನಿಗಿರುವ ಪ್ರೀತಿಯ ದ್ಯೋತಕವಾಗಿ ಈ ಪದವಿ ಸಿಕ್ಕಿತ್ತು. ಅವರೂ ತನ್ನ ಪಕ್ಷದ ಮಾತ್ರವಲ್ಲದೆ ಬ್ರಿಟಿಷ ಸಮಾಜವಾದಿಗಳ ಎರಡು ತಲೆ ಮಾರುಗಳನ್ನು ತನ್ನ ವಿಚಾರಶಕ್ತಿಯಿಂದ ಪ್ರತಿಭೆಯಿಂದ ಪ್ರಭಾವಿತರಾಗುವಂತೆ ಅವರು ಮಾಡಿದರೆಂದು ಒಪ್ಪದಿರಲಾಗುವುದಿಲ್ಲ. ಲಾಸ್ಕಿ, ವಾಗ್ಮಿ, ಸಂಘಟನಾಕಾರ, ವ್ಯಾವಹಾರಿಕ ಪರಿಜ್ಞಾನಿ ಎಂದು ಲೋಕದಲ್ಲಿ ಪ್ರಸಿದ್ಧಿ ಪಡೆದಿಲ್ಲ. ಬದಲಾಗಿ ರಾಜಕೀಯ ಸಿದ್ಧಾಂತಕಾರನೆಂದು ಲೋಕವೇ ಮನಗಂಡಿದೆ. ಅದರಿಂದಲೇ ಹೆಸರುವಾಸಿಯಾಗಿದ್ದಾರೆ. ಇದಕ್ಕಾಗಿ ಜನ ಅವರಿಗೆ ಆಭಾರಿಯಾಗಿದೆ. ಪ್ರೊ. ಲಾಸ್ಕಿಯು ಅದ್ವಿತೀಯ ಶಿಕ್ಷಕ, ಅದೂ ರಾಜನೀತಿ ಶಿಕ್ಷಕನೆಂಬುದು ನಿರ್ವಿವಾದ. ಲಂಡನ್ ಸ್ಕೂಲ್ ಆಫ್ ಇಕಾನಮಿಕ್ಸ್‌ನಲ್ಲಿ ಪ್ರಾಧ್ಯಾಪಕರಾಗಿ ಅನೇಕ ವಿದ್ಯಾರ್ಥಿಗಳು ರಾಜಕೀಯ ಜ್ಞಾನವನ್ನು ಇವರ ಶಿಕ್ಷಣದಿಂದ, ಸಂಪಾದಿಸಿದ್ದರು. ಬರೇ ಪದವಿಗಳನ್ನು ಪಡೆಯುವುದಕ್ಕೆ ಇವರ ಶಿಕ್ಷಣವಲ್ಲ! ಪರೀಕ್ಷೆ ಪಾಸಾದ ಬಳಿಕ ತಮ್ಮ ನಿತ್ಯ ಜೀವನದಲ್ಲಿ ಎದುರಿಸಬೇಕಾಗುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಾಮುಖ್ಯವಾದ ವಿಶಾಲ ದೃಷ್ಟಿಕೋನ, ನಿಷ್ಪಕ್ಷಪಾತ ಬುದ್ಧಿ ಮುಂತಾದವು ಅವರ ಶಿಕ್ಷಣದ ಕಂಠಸ್ಥಾನಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕಾರ್ಮಿಕ ಕ್ರಾಂತಿಕಾರರೂ ಲಾಸ್ಕಿಯವರಿಗೆ ಚಿರಋಣಿಯಾಗಿದ್ದಾರೆ.

ಮಂದವಾದಿ ಪರಂಪರೆಯಲ್ಲಿ ಮೇಲೆ ಬಂದ ಲಾಸ್ಕಿ ಅಮೇರಿಕೆಯ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕತೆಯನ್ನು ಸ್ವೀಕರಿಸಿದ ಅತ್ಯಲ್ಪ ಕಾಲದಲ್ಲಿಯೇ ಸಮಾಜವಾದಿಯಾದರು. ಬ್ರಿಟಿಷ್ ಸಮಾಜವಾದಿಗಳ ಪೈಕಿ ಇವರೇ ಮಾರ್ಕ್ಸ್‌ವಾದದ ಅತಿ ಹತ್ತಿರ ಬಂದವರೆಂದರೆ ತಪ್ಪಾಗಲಿಕ್ಕಿಲ್ಲ. ಸಮತಾವಾದೀ ನೀತಿ, ಧೋರಣೆಗಳ ಟೀಕಾಕಾರರಾದರೂ ತನ್ನ ಕೊನೆಯ ವರ್ಷಗಳಲ್ಲಿ ಬ್ರಿಟಿಷ್ ಕಾರ್ಮಿಕ ಚಳುವಳಿಯ ಆಧಾರಸ್ತಂಭವಾಗಿದ್ದರು. ಮಾತ್ರವಲ್ಲದೆ ಆಂಗ್ಲೋ-ಸೋವಿಯೆಟ್ ಮೈತ್ರಿಯನ್ನೂ ಬಲವಾಗಿ ಪ್ರತಿಪಾದಿಸುತ್ತಿದ್ದರು.

ದಿ. ಮಂಗತ ಲಾಸ್ಕಿಗೆ ಸ್ಥಿರವಾದ ನಿಲುವೆಯಿದ್ದಿಲ್ಲವೆಂದು ಒಂದು ಅಪಾದನೆಯುಂಟು. ಇದರಲ್ಲಿ ಹುರುಳಿಲ್ಲ. ಆದರೆ ಇದಕ್ಕೆ ಕಾರಣವೂ ಇದೆ. ೧೯೧೪ರ ಮುನ್ನ ವಿಕ್ಟೋರಿಯಾ ಯುಗದ ಶಾಂತಿ ಸಮೃದ್ಧಿಗಳಿಂದಾಗಿ ಜನರು ಪೂರ್ಣ ಮಂದಗಾಮಿತ್ವದ ಭಕ್ತರಾಗಿದ್ದರೆಂದರೆ ಸಲ್ಲುವುದು. ಆದರೆ ಒಂದನೇ ಜಾಗತಿಕ ಯುದ್ಧ, ರಸ್ಕಿನ್, ವಿಲಿಯಮ್, ಮೋರಿಸ್ ಮೊದಲಾದವರ ಟೀಕೆ, ಫೇಬಿಯನ್‌ರಿಂದ ಅವ್ಯಾಹತ ಸಂಘಟನಾ ಕೆಲಸ, ಸಂಘಟಿತ ಶ್ರಮಜೀವಿಗಳ ಚಳವಳಿ ಇವೆಲ್ಲಾ ಅವರಲ್ಲಿ ಪರಿವರ್ತನೆಯನ್ನುಂಟುಮಾಡಿದುವು. ಇತರ ಶ್ರೇಷ್ಠ ಮತಿಗಳಂತೆಯೇ ಇವರಲ್ಲಿಯೂ ಒಂದು ಹೊಸ ಬೆಳಕು ಕಂಡಿತು. ಇದೇ ಕಾಲಕ್ಕೆ ಮಧ್ಯ ಯುರೋಪಿನಲ್ಲಿ ನಡೆದ ಅವಾಂತರಗಳೂ ಆ ವಿಚಾರವನ್ನು ದೃಢಪಡಿಸಿತು. ಅದೆಂದರೆ ಮಂದಗಾಮಿತ್ವವು ಪ್ರಯೋಜನಕ್ಕೆ ಬಾರದು ಎಂದು. ಆದುದರಿಂದ 'ಎಡಪಂಗಡ' ಚಳುವಳಿಯೇ ಬೇಕಾಗಿದೆ ಎಂಬ ವಿಚಾರ ಬೆಳಕಿಗೆ ಬಂತು. ತತ್ಪರೀಕ್ಷೆ, ಅನುಭವಗಳ, ಪರಿಣಾಮವೋ ಎಂಬಂತೆ ೧೯೨೫ರಲ್ಲಿ ಅವರು 'ಗ್ರಾಮರ್ ಆಫ್ ಪೊಲಿಟಿಕ್ಸ್' ಎಂಬ ಪುಸ್ತಕವನ್ನು ಪ್ರಸಿದ್ಧಿಸಿದರು. ಇದರಲ್ಲಿ ಅವರ ಪಕ್ವವಾದ ವಿಚಾರಗಳನ್ನು ಕಾಣಬಹುದು.

ಲಾಸ್ಕಿಯವರ ಮಾತಿನಲ್ಲೇ ಹೇಳುವುದಾದರೆ ಈ ಗ್ರಂಥವು 'ಮುಂದಿನ ಸಮಾಜದಲ್ಲಿ ಸಂಸ್ಥಾನದ (State) ಯೋಗ್ಯಸ್ಥಳವು ಎಲ್ಲಿದೆಂದು ಸಿದ್ಧಾಂತ ಪಡಿಸಲು ಮಾಡಿದ ಯತ್ನವಾಗಿದೆ.' ಇದರಲ್ಲಿ ನಮ್ಮ ಸಭ್ಯದ ಸಂಸ್ಥೆಗಳೆಲ್ಲವನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ ಮತ್ತು ಯಾವ ರೀತಿಯಲ್ಲಿ ಈ ಸಿದ್ಧಾಂತದಂತೆ ಸುಧಾರಣೆಗಳನ್ನು ತರಬಹುದು ಎಂದು ವಿವರಿಸಲಾಗಿದೆ. ಅಲ್ಲದೆ ಆಸ್ತಿ ಸೊತ್ತುಗಳ ಖಾಸಗೀ ಒಡೆತನ, ಖಾಸಗೀ ವ್ಯಾಪಾರ ವ್ಯವಹಾರ ಒಟ್ಟಿನಲ್ಲಿ ಬಂಡವಲು ಪದ್ಧತಿ ಇದನ್ನು ತೀವ್ರವಾಗಿ ಅವರು ಖಂಡಿಸುತ್ತಾರೆ ಮಾತ್ರವಲ್ಲದೇ ಇವು ಇರುವಾಗ ಪ್ರಜಾಪ್ರಭುತ್ವ, ಇರಲಿಕ್ಕೆ ಸಾಧ್ಯವಿಲ್ಲವೆಂದು ಅವರು ವಿಷದವಾಗಿ ಬರೆದಿದ್ದಾರೆ.

'ಗ್ರಾಮರ್ ಆಫ್ ಪೊಲಿಟಿಕ್ಸ್'ನ ಮುಖ್ಯ ಮಹತ್ವ, ರಾಷ್ಟ್ರಗಳ ಸಾರ್ವಭೌಮತ್ವದ ವಿವೇಚನಾತ್ಮಕ ನಿರೂಪಣೆಯಲ್ಲಿ ಇದೆ. ಆರ್ಥಿಕ ಪರಿಸ್ಥಿತಿಯಲ್ಲಿ ರಾಷ್ಟ್ರದ, ಸಾರ್ವಭೌಮತ್ವವನ್ನು ಪ್ರತಿಪಾದಿಸುವುದು ತಪ್ಪು ಎಂದು ಲಾಸ್ಕಿಯವರು ಇದರಲ್ಲಿ ಹೇಳುತ್ತಾರೆ. ಬಂಡವಲು ಪದ್ಧತಿಯು ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಯೋಗ್ಯರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅಡ್ಡ ಬರುತ್ತದೆ, ಆದುದರಿಂದ ಎಂದಿನ ವರೆಗೆ ನಮ್ಮ ಇಂದಿನ ಸಾಮಾಜಿಕ, ರಾಜಕೀಯ ಆರ್ಥಿಕ ಕಟ್ಟಡಗಳಲ್ಲಿ ಮೂಲಭೂತ ಬದಲಾವಣೆಯಾಗುವುದಿಲ್ಲವೋ ಅಂದಿನ ತನಕ ಶಾಂತಿಯೆಂಬುದು ಹಗಲುಗನಸು ಎಂದೂ ಅವರು ಬರೆದಿದ್ದಾರೆ.

The State in Theory and Practice ಎಂಬ ಇನ್ನೊಂದು ಕೃತಿಯಲ್ಲಿ ಲಾಸ್ಕಿಯವರು ತನ್ನ ಈ ಮೊದಲಿನ ವಿಚಾರ, ದೃಷ್ಟಿಕೋನಗಳನ್ನು ಅಭಿವೃದ್ಧಿಗೊಳಿಸಿದ್ದಾರೆ. ಇದರಲ್ಲಿ ಅವರು ಒಂದು ರಾಷ್ಟ್ರದ ಆದರ್ಶಪರ ಸಿದ್ಧಾಂತಗಳನ್ನು ತಿರಸ್ಕರಿಸಿದ್ದಾರೆ. ಅವರ ಅಭಿಪ್ರಾಯದಂತೆ ಇವರ ಸೋಗಿನಲ್ಲಿ ಫ್ಯಾಸಿಸ್ಟ್ ಪಂಗಡಗಳು ತಲೆ ಎತ್ತುತ್ತವೆ ಮತ್ತು ಕಾಯಿದೆಗೆ ವಿಧೇಯರಾಗಿ ಜನ ನಡೆಯಬೇಕೆಂಬುದನ್ನೂ ಇವರು ನಿರಾಕರಿಸಿದ್ದಾರೆ. ಯಾಕೆಂದರೆ ಬರೇ ಅಧಿಕಾರಸ್ಥರಿಂದ ಈ ಕಾಯಿದೆಗಳು ಬಂದ ಕೂಡಲೇ ಅದು ಯೋಗ್ಯವೆಂದು ಆಗುವುದಿಲ್ಲ. ಅವರ ಭಾವನೆಯು ವ್ಯಕ್ತಿ ಸ್ವಾತಂತ್ರ್ಯವು ಕಮ್ಯೂನಿಸ್ಟರಿಗಾಗಲೀ ಫ್ಯಾಸಿಸ್ಟರಿಗಾಗಲೀ ಒಗ್ಗಲಿಕ್ಕಿಲ್ಲ. ಇದರಲ್ಲಿ ಅವರು ಗಾಂಧೀಜಿಯವರ ವಿಚಾರ ಸರಣಿಗೆ ಹೆಚ್ಚುಕಡಿಮೆ ಒಪ್ಪುತ್ತಾರೆ. ವ್ಯಕ್ತಿ ಸ್ವಾತಂತ್ರ್ಯವು ಸರ್ವಸಾಮಾನ್ಯ ಮನುಷ್ಯನ ಮನಸ್ಸನ್ನು ಉತ್ತೇಜನಗೊಳಿಸುವುದರಲ್ಲಿ ಅಡಕವಾಗಿದೆ. ಈ ಪ್ರಕಾರ ನೀತಿ ಧೋರಣೆಗಳನ್ನು ನಿರ್ಧರಿಸುವವರು ವ್ಯಕ್ತಿಯ ಮನವರಿಕೆಯಲ್ಲದೆ 'ರಾಷ್ಟ್ರ'ವಲ್ಲ.

ಪ್ರಜಾಪ್ರಭುತ್ವ ಕ್ರಮ (Democracy process) ಕಟ್ಟಕಡೆಗೆ ಸಮಾಜವಾದೀ ಪ್ರಜಾಸತ್ತೆ (Socialist democracy) ಗೆ ಅನುವು ಮಾಡಿ ಕೊಡುತ್ತದೆಂದು ಇವರು ಹೇಳಿದ್ದಾರೆ. 'Communism' ಎಂಬ ತನ್ನ ಪುಸ್ತಕದಲ್ಲಿ ಅವರು ಹಿಂಸಾತ್ಮಕ ಕ್ರಾಂತಿಯನ್ನು ಉಗ್ರವಾಗಿ ಟೀಕಿಸಿದ್ದಾರೆ. "Faith, Reason and Civilisation" ನಾಮಾಂಕಿತ ಪುಸ್ತಕದಲ್ಲಿ ಚಾತುರ್ಯದಿಂದ ರೂಪಗೊಂಡ ವಿಚಾರಗಳನ್ನು ಸ್ವೀಕರಿಸುವಂತೆ ಭಿನ್ನವಿಸಿದ್ದಾರೆ. ನಾಗರೀಕ ಧರ್ಮಗಳ ಪುನರುಜ್ಜೀವನ ಒಂದು ಹೊಸ ತತ್ವದ ಕೊರತೆಯಲ್ಲಿದೆ ಎಂದು ಬರೆದಿದ್ದಾರೆ. ಈ ತತ್ವ ಚೈತನ್ಯದಿಂದ ಕೂಡಿರಬೇಕು. ಆದರೆ ಶಕ್ತಿ ಚೈತನ್ಯಗಳು ಸತ್ಯ, ಸ್ವಾತಂತ್ರ್ಯ, ನ್ಯಾಯ ಸ್ಥಳಗಳನ್ನು ಆಕ್ರಮಿಸಬಾರದು. ಲಾಸ್ಕಿಯವರು ರಶಿಯಾವು, ಸತ್ಯ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಬಿಡಲಿಲ್ಲವೆಂದು ತೋರಿಸಿಕೊಡುವುದಕ್ಕೆ ಅಸಮರ್ಥರಾಗಿದ್ದಾರೆ. ಕಳೆದ ಐದು ವರುಷಗಳಿಂದ ರಶಿಯಾವು ಅನುಸರಿಸಿದ ಹಟಮಾರಿ ಧೋರಣೆ, ಪೂರ್ವ ಯುರೋಪಿನಲ್ಲಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ನೀತಿ ಮತ್ತು ಕಮ್ಯೂನಿಸ್ಟ ಪಾರ್ಟಿಗಳ ವ್ಯೂಹವಿದ್ಯೆ, ಇವೆಲ್ಲ ಲಾಸ್ಕಿಯವರಿಗೆ "ರಶಿಯಾದ ವಿಚಾರ" ದಲ್ಲಿ ಹೊಸ ಹುರುಪು ಹುಟ್ಟಿಸಿರಬೇಕು. ಹೇಗೂ ಜಗತ್ತಿನ ರಾಜಕೀಯ ಜಾಗೃತಿಗೆ ಅಪೂರ್ವ ರೀತಿಯಲ್ಲಿ ದುಡಿದ ಇವರ ನೆನಹು ಚಿರವಾಗಿ ಉಳಿಯುವುದು.

"ನುಡಿ"

---

ಚೀಫ್ ಕಮಿಷನರ್‌ರವರ

# ಅವಗಾಹನೆಗೆ

[ಕೊಡಗಿನ ಹರಿಜನರ ಮನವಿ]

ಕೊಡಗಿನಲ್ಲಿ ಸುಮಾರು ೨೨ ಸಾವಿರ ಹರಿಜನರಿದ್ದಾರೆ. ಈ ಜನಸಂಖ್ಯೆಯು ಹೊಟ್ಟೆಗೆ ಅನ್ನವಿಲ್ಲದೆ ಮೈಗೆ ಬಟ್ಟೆಯಿಲ್ಲದೆ ಮಹಾ ಸಂಕಟದಲ್ಲಿ ಬಿದ್ದು ನರಳುತ್ತಾ ಇದೆ. ಈ ಜನಾಂಗಕ್ಕೆ ಘನ ಸರಕಾರದಿಂದಾಗಲಿ ಸಾರ್ವಜನಿಕರಿಂದಾಗಲಿ ಯಾವದೊಂದು ಸಹಾಯವೂ ಸಿಕ್ಕಿರುವುದು ಕಂಡುಬರುವುದಿಲ್ಲ. ಈ ಹೊತ್ತಿನ ಸ್ವತಂತ್ರ ಪ್ರಜಾರಾಜ್ಯದಲ್ಲಿ ಹೊರಗಿನ ಮೈಸೂರು, ಮದ್ರಾಸು, ತಿರುವಾಂಕೂರು ಮತ್ತು ಇಂಗ್ಲೂರ್ ಮುಂತಾದ ದೇಶಗಳಲ್ಲಿ ಹರಿಜನರು ಯಾವ ಮಟ್ಟದಲ್ಲಿದ್ದಾರೆ, ಅವರಿಗೆ ಆಯಾಯ ಪ್ರಾಂತೀಕ ಸರಕಾರಗಳು ಯಾವ್ಯಾವ ಅನುಕೂಲತೆ ಒದಗಿಸಿಕೊಟ್ಟಿವೆ ಎಂಬುದನ್ನು ತಿಳಿಯಬೇಕಾದರೆ ಅಲ್ಲಿ ಹರಿಜನರಿಗಾಗಿ ಸರಕಾರ ಕೈಕೊಂಡ ಸ್ಕೀಮುಗಳನ್ನು ತೆರೆದು ನೋಡಿದರೆ ವೇದ್ಯವಾಗ ವುದು. ಕೊಡಗಿನ ೨೨ ಸಾವಿರ ಹರಿಜನ ಸಂಖ್ಯೆಯಲ್ಲಿ ೨೨ ವಿದ್ಯಾವಂತರಿಲ್ಲ. ಸಾವಿರಕ್ಕೆ ಒಬ್ಬರಂತೆ ಯಾದರೂ ಸರಕಾರದ ನೌಕರಿಯಲ್ಲಿಲ್ಲ.

ಹೊರಗಿನ ದೇಶಗಳಲ್ಲಿ ಹರಿಜನರಿಗೋಸ್ಕರ ಇಲಾಖೆಗಳನ್ನೇ ಏರ್ಪಡಿಸಿದ್ದಾರೆ. ಕೊಡಗಿನಲ್ಲಿ ಇದು ಇಲ್ಲ. ಅಲ್ಲದೆ ಹರಿಜನರ ವಿದ್ಯೆಗೆ ಸಿಕ್ಕಿರತಕ್ಕಂಥಾ ಜಾತಿ ಕಾಲರ್ ಶಿಪ್‌ಗಳು ಇಲ್ಲಿ ಸಿಕ್ಕಿರುವುದಿಲ್ಲ. ಕೊಡಗಿನಲ್ಲಿ ಒಬ್ಬ ಯಾವ ವ್ಯಕ್ತಿಯಿಂದ ಹರಿಜನರ ಉದ್ಧಾರವಾಗುತ್ತಿದೆಯೋ ಹೊರತು ಕಾರ್ಯಶೀಲವಾದ ಕೆಲಸವೂ ನಡೆಯುತ್ತ ಇಲ್ಲ. ಅನೇಕ ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಅನುಕೂಲವಾದ ಜಾಗವಿಲ್ಲ. ಅನೇಕ ಹರಿಜನರು ಧಣಿಗಳ ಸ್ವಂತ ಜಾಗದಲ್ಲಿ ವಾಸಮಾಡುತ್ತಿದ್ದಾರೆ. ವಾಸದ ಜಾಗವನ್ನಾದರೂ ತಮ್ಮ ಸ್ವಂತವಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ವ್ಯವಸಾಯಕ್ಕೆ ಜಾಗವಿಲ್ಲ. ಜೀವನಕ್ಕೆ ಕೈಗಾರಿಕೆ ಕಸಬುಗಳಿಲ್ಲ. ಕೂಲಿಯೊಂದೇ ಬಹು ಪ್ರತಿಫಲವಾಗಿದೆ. ಯಾವ ಬಾಬಿನಲ್ಲಿಯೂ ಕೊಡಗಿನ ಹರಿಜನರು ಮುಂದರಿವ ಮಾರ್ಗವಿಲ್ಲ.

೧೯೩೪ರಿಂದಲೇ ಕೊಡಗಿನಲ್ಲಿ ನ್ಯಾಯವಿಧಾಯಕ ಸಭೆಯು ಸ್ಥಾಪನೆಯಾಗಿದೆ. ಆ ಸಭೆಯಲ್ಲಿ ಹರಿಜನರಿಗೂ ಒಂದು ಸ್ಥಾನವಿದೆ. ಆ ಸ್ಥಾನವನ್ನು ಸರಕಾರವು ಹರಿಜನರಿಗೆ ಕೊಡದೆ ಬೇರೆಯವರಿಗೆ ಕೊಟ್ಟುಕೊಂಡೇ ಬಂದಿದೆ. ಆ ಸ್ಥಾನದಲ್ಲಿ ಇರುವರೇನೋ ಯಾರ್ಯಾರು ಇದ್ದರೂ, ಹರಿಜನರಿಗಾಗಿ ಏನೇನು ಕೆಲಸ ಮಾಡಿದ್ದಾರೆಂಬುದು ಯಾವ ಹರಿಜನನಿಗೂ ತಿಳಿದು ಬಂದಿಲ್ಲ.

**ಈಗ ಸುಮಾರು ಮೂರು ವರ್ಷಗಳಿಂದಲೂ ಕೊಡಗಿನ ಹರಿಜನರು ತಮ್ಮ ಉದ್ಧಾರ ಸಂಘಗಳನ್ನು ಏರ್ಪಡಿಸಿಕೊಂಡು ಎಷ್ಟೋ ಕಮಿಟಿ ಮೀಟಿಂಗುಗಳನ್ನು ಒಂದೆರಡು ಮಹಾ ಸಭೆಗಳನ್ನು ನಡೆಸಿ** ತಮ್ಮ ಅನುಕೂಲಕ್ಕೆ ಬೇಕಾದ ಎಷ್ಟೋ ಬೇಡಿಕೆಗಳನ್ನು ಸರಕಾರದ ಮುಂದಿಟ್ಟರೂ, ಅವುಗಳಿಗೆ ಸಮರ್ಪಕವಾದ ಉತ್ತರಗಳಾಗಲೀ, ಸಹಾಯವಾಗಲೀ ಸಿಕ್ಕಿರುವುದಿಲ್ಲ.

ದೇಶದ ಉನ್ನತಿಗೆ ಬೆಳಕು ಹರಿಜನರ ಉದ್ಧಾರಕರೆನಿಸಿಕೊಳ್ಳುವ ಎಷ್ಟೋ ಮಹನೀಯರು ಸಭೆಗಳಲ್ಲಿ ನಿಂತು ತಮ್ಮ ಮೇಧಾಶಕ್ತಿಯಿಂದಲೂ, ಸವಿ ಮಾತುಗಳಿಂದಲೂ ಹರಿಜನರಿಗೆ ಹಿತಬೋಧೆಗಳನ್ನು ಮಾಡಿ ಹೊಟ್ಟೆ ತುಂಬಿಸುತ್ತಿದ್ದಾರೆ.

ಕೊಡಗಿನಲ್ಲಿ ಹಿಂದುಳಿದವರ ಉದ್ಧಾರಕ್ಕಾಗಿ ಸರಕಾರವು ಒಂದು ಕಮಿಟಿಯನ್ನು ಸ್ಥಾಪಿಸಿ ಒಂದು ವರ್ಷದ ಮೇಲಾಯಿತು. ಆ ಕಮಿಟಿಯಲ್ಲಿ ಒಬ್ಬ ಹರಿಜನ ಮೆಂಬರೂ ಇದ್ದಾರಂತೆ. ಒಂದು ವರ್ಷದಿಂದಲೂ ಕಮಿಟಿಯವರು ಜಾತಕ ಬರೆದುಕೊಂಡೇ ಇದ್ದಾರಂತೆ. ಆ ಜಾತಕದಲ್ಲಿ ಕಷ್ಟಸುಖ ದಿಗಳೆಷ್ಟಿವೆ ಎಂಬುದು ಯಾವ ಹರಿಜನನಿಗೂ ತಿಳಿದುಬಂದಿಲ್ಲ. ಕಮಿಟಿಯವರ ಪೈಕಿ ಹಿಂದುಳಿದವರ ಸ್ಥಾನ ವಹಿಸಿಕೊಂಡಿರುವ ಒಬ್ಬ ಮೆಂಬರು ೪-೫ ಕಮಿಟಿ ಮೀಟಿಂಗುಗಳಿಗೆ ಹೋಗಲೇ ಇಲ್ಲವಂತೆ. ಇದಾವರನ್ನು ಸರಕಾರದವರು ಏತಕ್ಕಾಗಿ ಕಮಿಟಿಯಲ್ಲಿಟ್ಟುಕೊಂಡಿದ್ದಾರೋ ತಿಳಿಯದು.

ಕೊಡಗಿನ ಹರಿಜನರ ವಿದ್ಯಾರ್ಥಿಗಾಗಿ ಕಳೆದ ವರ್ಷ ೧ ಲಕ್ಷ ರೂಪಾಯಿ ಮಂಜೂರಾಗಿದ್ದು ಈಗಾಗಲೇ ೫೦ ಸಾವಿರ ರೂಪಾಯಿ ಖರ್ಚಾಗಿ ೫೦ ಸಾವಿರ ರೂಪಾಯಿ ಉಳಿದಿದೆಯಂತೆ. ಈ ಹಣವನ್ನು ಖರ್ಚು ಮಾಡುವ ಬಗ್ಗೆ ಒಂದು ಸಲಹಾ ಸಮಿತಿ ನೇಮಿಸಿದ್ದು ಕಂಡುಬರಲಿಲ್ಲ. ಇದು ಯಾವ ರೀತಿ ವಿನಿಯೋಗವಾಗಬೇಕೆಂಬುದಾಗಿ ಹರಿಜನರ ಅಭಿಪ್ರಾಯ ಕೇಳಲಿಲ್ಲ. ಹಾಗಾಗಿ ಬಂದು ನಿಂತು ಹೋಯಿತು. ಹರಿಜನರ ಮಕ್ಕಳಿಗೆ ಕೊಡುತ್ತಿರುವ ಮಧ್ಯಾಹ್ನದ ಊಟದ ಏರ್ಪಾಡೂ ಕೂಡ ಕೆಲವು ಕಡೆ ತೃಪ್ತಿಕರವಾಗಿಲ್ಲವಂತೆ. ಅನ್ನದಲ್ಲಿ ಕಲ್ಲು, ಬತ್ತ ಮಿಶ್ರವಾಗಿರುವುದು. ರುಚಿ ಇಲ್ಲದ ಊಟ. ಅಧಿಕಾರಿಗಳ ಸಂದರ್ಶನ ಕಾಲಗಳಲ್ಲಿ ಮಾತ್ರ ರುಚಿ ಕಟುವಾದ ಊಟವಂತೆ! ಮಕ್ಕಳಿಗೆ ಕೊಡುವ ಊಟವೂ ಕೊಂಚ ದೇವರು ಕೊಟ್ಟರೂ ಪೂಜಾರಿ ಕೊಡ ಎಂಬಂತಾಗಿದೆ. ಒಂದು ತಿಂಗಳಲ್ಲಿ ಶಾಲಾ ದಿನಗಳು ೨೦ ಇದ್ದರೂ ಅಡಿಗೆಯವರಿಗೆ ಪೂರ್ತಿ ಸಂಬಳ ಮತ್ತು ಮಕ್ಕಳ ಊಟದ ಹಣವೂ ಪೂರ್ತಿಯಾಗಿ ಸಿಕ್ಕುವುದು. ಜವಾಬ್ದಾರಿಕೆ ವಹಿಸಿಕೊಂಡವರ ಪುಣ್ಯವೇ ಸರಿ. ಎಲ್ಲಾ ಸರಕಾರಿ ಹಾಸ್ಟೆಲುಗಳಲ್ಲಿ ಹರಿಜನ ಮಕ್ಕಳಿಗೆ ಪ್ರವೇಶ ಕೊಟ್ಟು ಮುಫ್ತಾಗಿ ಊಟ ಮತ್ತು ಪುಸ್ತಕ ಬಟ್ಟೆಗಳ ವ್ಯವಸ್ಥೆ ಮಾಡಬಹುದು. ಇಲ್ಲವೇ ಹೈಯರ್ ಎಲಿಮೆಂಟರಿ ಮತ್ತು ಹೈಸ್ಕೂಲುಗಳಲ್ಲಿ ಓದುವ ಎಲ್ಲಾ ಹರಿಜನ ಮಕ್ಕಳಿಗೆ ಒಂದು ಕಡೆ ಏಕ ಫ್ರೀ ಹಾಸ್ಟೆಲು ತೆರೆಯಬಾರದು ಎಂಬುದೊಂದು ಪ್ರಶ್ನೆ. ಹೊರಗಿನ ದೇಶಗಳಲ್ಲಿ ಹರಿಜನ ಮಕ್ಕಳಿಗೆ ಈ ಏರ್ಪಾಡು ಮಾಡಿಲ್ಲವೇ?

ಹರಿಜನರಿಗೆ ಕೋರ್ಟು ಕಚೇರಿಗಳಲ್ಲೂ ಸಾರ್ವಜನಿಕ ಸಭೆಗಳಲ್ಲೂ ಸ್ಥಾನಮಾನಗಳಿಲ್ಲ. ಹರಿಜನರಿಗೆ ಮಂದಿರ ಮತ್ತು ಹೋಟೆಲು ಪ್ರವೇಶ ಕೊಡಬೇಕೆಂಬ ಕಾನೂನು ಜಾರಿಗೆ ಬಂದು ಒಂದು ವರ್ಷದ ಮೇಲಾಯಿತು. ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ ಮತ್ತು ಫ್ರೇಜರ್‌ಪೇಟೆ ಮುಂತಾದೆಡೆಗಳಲ್ಲಿ ಹರಿಜನರಿಗೆ ಹೋಟೆಲು ಪ್ರವೇಶವಾಗಲಿ ಜವಳಿ ಮತ್ತು ಚಿಲ್ಲರೆ ಅಂಗಡಿಗಳ ಹಾಗೂ ಕ್ಷೌರದ ಅಂಗಡಿಗಳ ಪ್ರವೇಶವಾಗಲಿ ದೊರಯುವುದಿಲ್ಲ. ಹರಿಜನರು ಹೋಟೆಲು ಹೊರಗೆ ನಿಂತುಕೊಂಡು, ತಂಗಿನ ಗೆರಟೆಯಲ್ಲಿ ಕಾಫಿ ಕುಡಿಯುತ್ತಿದ್ದರೂ ಯಾವ ಸರಕಾರಿ ಅಧಿಕಾರಿಗಳೂ ಏನೊಂದು ಮಾತಾಡದೆ ಸುಮ್ಮನೆ ಹೋಗುತ್ತಿದ್ದಾರೆ. ಹರಿಜನರ ಎಷ್ಟೋ ಮೈಲು ದೂರದಿಂದ ಹೋಟೆಲುಗಳಿಗೆ ಹೋಗಲು ಪ್ರಯತ್ನಿಸಿದರೂ ಹೋಟೆಲಿನವರು ಸಾರ್ವಜನಿಕರು ಕಣ್ಣು ಕೆರಳಿಸಿ ಹಲ್ಲು ಕಿರಿದು ಕತ್ತಿಗೆ ಹಾಕಿ ಒಳಗೆ ಹೋಗದಂತೆ ತಡೆಯುತ್ತಾರೆ. ಕೆಲವೆಡೆ ಹರಿಜನರು ಕಾಫಿ ಕೊಡಿ ಎಂದು ಕೇಳಿದರೆ ಕಾಫಿಯೇ ಇಲ್ಲ, ಕಾಫಿಗೆ ಹಾಲೇ ಇಲ್ಲ ಎಂಬುದಾಗಿ ಹೇಳಿ ಹಾಗೆಯೇ ಕಳುಹಿಸುವ ಪದ್ಧತಿಯೂ ಇದೆ. ಈಗ ಒಂದೆರಡು ವಾರಗಳ ಹಿಂದೆ ಶನಿವಾರಸಂತೆಯಲ್ಲಿ ಒಂದು ಸರಕಾರದ ಕೂಟದ ಮೀಟಿಂಗಿನಲ್ಲಿ ಒಬ್ಬ ಹೋಟೆಲು ಮಾಲಿಕರು ಎಲ್ಲಾ ಹಿಂದುಗಳಿಗೆ ಕಾಫಿ ತಿಂಡಿ ಕೊಟ್ಟು ಇಬ್ಬರು ಹರಿಜನ ಮೆಂಬರುಗಳಿಗೆ ಮಾತ್ರ ಕಾಫಿ ಇಲ್ಲವೆಂದು ಹೇಳಿದ ನಿದರ್ಶನವೂ ಇದೆ. ಹರಿಜನರಿಗಿರುವ ಈ ಎರಡು ತೊಡರುಗಳನ್ನೆಲ್ಲಾ ಬಗೆಹರಿಸಲು ತಾವು ಗಮನಕೊಡಬೇಕು. ಇಂದಿನ ಪ್ರಜಾರಾಜ್ಯದ ಕಾಲದಲ್ಲಿ ಈ ರೀತಿಯ ತಾರತಮ್ಯ ಸಲ್ಲದು. ಆದ್ದರಿಂದ ಕೊಡಗಿನ ಹರಿಜನರ ದಾರುಣ ಸ್ಥಿತಿಯನ್ನು ಗಮನಿಸಿ ಅವರ ಉದ್ಧಾರದ ಬಗ್ಗೆ ನೀವು ಯತ್ನಿಸುವಿರೆಂದು ಆಶಿಸಬಹುದೇ?

## ವಾರ್ತೆಗಳು.

ಸೆಕೆಂಡರಿ ಶಾಲೆಗಳಲ್ಲಿ ಒಂದನೇ ಫಾರಂನಿಂದ ಹಿಡಿದು ಆರನೇ ಫಾರಂ ವರೆಗೆ ಆರು ಕ್ಲಾಸುಗಳಲ್ಲಿಯೂ ಹಿಂದಿಯನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವ ನಿರ್ಣಯವನ್ನು ಮದ್ರಾಸು ಸರಕಾರ ಕೈಗೊಂಡಿದೆ. ಒಂದು ವಾರದಲ್ಲಿ ಎರಡು ಪಿರೀಡ್‌ಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಹಿಂದಿ ಕಲಿಸುವ ಬಗ್ಗೆ ಪ್ರತ್ಯೇಕಿಸಲಾಗುವುದು. ಪ್ರಾಯಶಃ ಮುಂದಿನ ಶಾಲಾ ವರ್ಷದಿಂದ ಈ ಕ್ರಮ ಜಾರಿಗೆ ಬರಬಹುದು.

ಪಾಟ್ನಾದಿಂದ ಸುಮಾರು ೨೦ ಮೈಲಿ ದೂರದಲ್ಲಿರುವ ಸಿಲಾವೋ ಎಂಬ ಪಟ್ಟಣದಿಂದ ಕೇಳಬಂದ ಸಮಾಚಾರವಿದು. ಅಲ್ಲಿಯ ಕೆಲವಂದಿ ದನ ಕಾಯುವ ಹುಡುಗರು ಗಾಂಧೀಜಿ ಕೊಲೆ ಮತ್ತು ಗೋಡ್ಸೆಯ ವಿಚಾರಣೆಯ ಕಥಾವಸ್ತುವನ್ನೊಳಗೊಂಡ ಒಂದು ಚಿಕ್ಕ ಪ್ರಹಸನ ಅಭಿನಯಿಸಿದರು. ಗಾಂಧೀಜಿ ಪಾತ್ರ ವಹಿಸಿದವನಿಗೆ ತಲೆಯ ಮೇಲೆ ಒಂದು ಕೋಲಿನಿಂದ ಹೊಡೆದು ಪ್ರಜ್ಞೆ ತಪ್ಪುವಂತೆ ಮಾಡಲಾಯಿತು! ಗೋಡ್ಸೆ ಪಾತ್ರ ಮಾಡಿದ ಬಡ ಹುಡುಗನೊಬ್ಬನನ್ನು ಇತರ ಹುಡುಗರು ಒಟ್ಟಾಗಿ ಸೇರಿ, ಸಮೀಪದ ಒಂದು ಮರದ ಗಲ್ಲಿಗೆ ನಿಜವಾಗಿಯೂ ತೂಗಿಸಿಬಿಟ್ಟರು. ಪೋಲೀಸರಿಗೆ ಈ ಸುದ್ದಿ ಮುಟ್ಟಿ, ತನಿಖೆ ನಡೆದಿದೆ.

ಕೆನ್ನೆಲ್ ನಾಯಿಗಳ ಬಗ್ಗೆ ಒಂದು ಶಾಲೆಯು ಇತ್ತೀಚೆಗೆ ತೆರೆಯಲ್ಪಟ್ಟಿದೆ. ಇಲ್ಲಿ ನಾಯಿಗಳಿಗೆ 'Road sense' ಎಂದರೆ ರಸ್ತೆಗಳಲ್ಲಿ ಹೇಗೆ ಸಂಚರಿಸಬೇಕು ಎಂಬ ವಿಷಯದಲ್ಲಿ ತರಬೇತಿ ಕೊಡಲಾಗುವುದು!

ವಾರ್ಧಾದ ಇಂಜನಿಯರ್ ಆದ ನಿಮಾರ್ ಖಾನ್ ಎಂಬವರನ್ನು ಯಾವುದೋ ಯಂತ್ರದ ಖರೀದಿಯಲ್ಲಿ ಲಂಚ ಗಳಿತನ ನಡೆಸಿದರೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಕೊನೆಗೆ ಒಂದು ಸಾವಿರ ರೂಪಾಯಿ ಜಾಮೀನಿನ ಮೇಲೆ ಅವರ ಬಿಡುಗಡೆ ಮಾಡಿದ್ದರು. ನಿಮಾರ್ ಖಾನ್ ಈಗ ತನ್ನ ಕುಟುಂಬ ಸಮೇತ ಪಾಕೀಸ್ಥಾನಕ್ಕೆ ಪರಾರಿಯಾಗಿರುವರು.


**ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,**

**ಫ್ರೇಜರ್ ಪೇಟೆ.**

**ಬೇಕಾಗಿದ್ದಾರೆ.**

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಸಗಣಿಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಟೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ 30-9-49

ಕೆ ಕೆ ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

**ಈ ವಾರದ ಕಥೆ.**

# ದಾರಿ ತಪ್ಪಿದ ಮಗು.

ಲೇ:—ಶ್ರೀ ಬಿ. ಡಿ. ಗಣಪತಿ, ಮಡಿಕೇರಿ.

ಈಶ್ವರನು ಬಹು ಪ್ರಖ್ಯಾತನಾಗಿದ್ದನು. ಆತನಿಗೆ ಯಾವುದರ ಕೊರತೆಯೂ ಇರಲಿಲ್ಲ. ಕುಬೇರನನ್ನು ಮೀರಿಸುವ ಧನ, ಬೃಹಸ್ಪತಿಗೆ ಮೀರಿದ ಬುದ್ಧಿ, ಸನ್ಯಾಸಿಗೆ ಮೀರಿದ ತ್ಯಾಗ ಆತನಲ್ಲಿತ್ತು. ಆ ನಾಡಿನಲ್ಲಿ ಆತನಿಲ್ಲದೆ ಯಾವ ಕೆಲಸವೂ ನಡೆಯುತ್ತಿರಲಿಲ್ಲ. ಆತನಿಗೆ ಅಭಿಮಾನ ಬೇಧ ಭಾವವಿರಲಿಲ್ಲ. ಆತನ ದೃಷ್ಟಿಯಲ್ಲಿ ಇಡೀ ಜಗತ್ತೇ ಒಂದು. ಅದ್ದರಿಂದ ಎಲ್ಲರೂ ಆತನನ್ನು 'ತಂದೆ' ಎಂದು ಕರೆಯುತ್ತಿದ್ದರು. ಈಶ್ವರನದು ವಿಲಕ್ಷಣ ಸ್ವಭಾವ. ಇದು ತನ್ನದು, ಇದು ನನ್ನದು ಎಂಬ ಮೋಹ ಆತನಲ್ಲಿರಲಿಲ್ಲ. ಎಲ್ಲ ವಸ್ತುಗಳೂ ಎಲ್ಲರಿಗಾಗಿ ಎಂಬುದೇ ಆತನ ತತ್ವ. ಆತನಿಗೆ ತನ್ನದೆಂಬ ವಸ್ತುವೂ ಇರಲಿಲ್ಲ. ತನ್ನವರೆಲ್ಲವೂ ಇರಲಿಲ್ಲ! ಆತನಿಗೆ ತುಂಬಾ ವಯಸ್ಸಾಗಿತ್ತು. ವಯಸ್ಸಾದರೂ ತನ್ನ ನಿತ್ಯ ಜೀವನದ ಕಾರಣ ತರುಣರ ಹುರುಪಿತ್ತು. ಎಲ್ಲರೂ ಆತನಿಗೆ ಮಕ್ಕಳಂತೆ! ಜಗತ್ತಿನ ಸರ್ವ ವಸ್ತುಗಳ ಮೇಲೆ ಸೂರ್ಯ ಪ್ರಕಾಶ ಭಿನ್ನ ಭಾವವಿಲ್ಲದೆ ಬೀಳುವಂತೆ ಈಶ್ವರನ ದೃಷ್ಟಿಯು ತನ್ನ ಈ ಮಕ್ಕಳ ಮೇಲೆ ಒಂದೇ ರೀತಿಯಾಗಿದ್ದರೂ ಮಕ್ಕಳಲ್ಲಿ ಹಲವು ವಿಧವಿತ್ತು. ಸೂರ್ಯ ಪ್ರಕಾಶವು ಕಲ್ಲು, ಮಣ್ಣು, ಕನ್ನಡಿ, ನೀರು ಮೊದಲಾದುವುಗಳ ಮೇಲೆ ಏಕ ಪ್ರಕಾರವಾಗಿ ಬಿದ್ದರೂ ವಿವಿಧ ವಸ್ತುಗಳು ಯಾವ ರೀತಿ ತಮ್ಮ ತಮ್ಮ ಶಕ್ತಿಗನುಸಾರ ಅದನ್ನು ವಿವಿಧರೀತಿ ಪ್ರತಿಬಿಂಬಿಸುವವೋ ಅದೇ ರೀತಿ ಈಶ್ವರನ ಈ ಮಕ್ಕಳೂ ಕೂಡ! ಕೆಲವರು ಈಶ್ವರನ ಸಾರ್ವತ್ರಿಕ ಪ್ರೀತಿಯನ್ನೇ ಅರಿಯದವರಾದರೆ "ತಂದೆಯಂತೆ ಮಗ" ಎಂಬ ನಾಣ್ಣುಡಿಯಂತೆ ಕೆಲವರು ಈಶ್ವರನಂತೆಯೇ ಸಭ್ಯರೂ, ಯೋಗ್ಯರೂ ಆಗಿದ್ದರು.

ನಾಗರೀಕತೆಯ ಕಾಲ. ಜನರ ದೃಷ್ಟಿಯೂ ಅದರಂತೆ ಬದಲಾಗುತ್ತದೆ. ದಿನದಿನಕ್ಕೆ ಒಂದೊಂದು "ಫೇಶನ್" ಹೇಗೋ ಹಾಗೆಯೇ ದಿನದಿನಕ್ಕೆ ಒಂದೊಂದು ರುಚಿ. ಆದರೆ ಈ ಬದಲಾವಣೆ ಕೇವಲ ಮನುಷ್ಯನಲ್ಲಿ ಮಾತ್ರ! ಹಿಂದಿನಂತೆಯೇ ಇಂದೂ ಮರಗಿಡಗಳ ಬಣ್ಣ ಹಸುರಾಗಿದೆ. ಗುಲಾಬಿ ಹಿಂದಿನಂತೆಯೇ ವಿವಿಧ ಬಣ್ಣ ಸುಗಂಧಗಳಿಂದ ಕೂಡಿ ವಿಕಸಿತವಾಗುತ್ತದೆ. ಹಣ್ಣು ಹಂಪಲುಗಳು ಅಂದಿನಂತೆಯೇ ಇಂದೂ ರುಚಿಕರವಾಗಿವೆ. ಸರೋವರ, ನದಿಗಳು, ಗಿರಿ ಪರ್ವತಗಳು ಅಂದಿನಂತೆಯೇ ಇಂದೂ ಇವೆ. ರಾಮನ ಕಾಲದಲ್ಲಿ ಆತನಿಗೆ ಆಶ್ರಯವಿತ್ತ ಕಾಡಿನ ಮರ ಇಂದೂ ಆಶ್ರಯ ಕೊಡಲು ತಯಾರಿದೆ. ಬುದ್ಧನ ಕಾಲದಲ್ಲಿ ಜ್ಞಾನಾರ್ಜನೆಗೆ ಸಹಾಯಕವಾದ ಬೋಧಿ ವೃಕ್ಷ ಇಂದೂ ಇದೆ. ಹಿಂದಿನಂತೆಯೇ ಸೂರ್ಯನು ಪೂರ್ವ ದಿಗಂತದಲ್ಲಿ ವರ್ಣನಾತೀತ ಕಾಂತಿಯಿಂದ ಮೂಡಿ ಪಶ್ಚಿಮದಲ್ಲಿ ಕಂತುತ್ತಾನೆ. ಅಂದಿನ ಕಾಮನಬಿಲ್ಲು ತನ್ನ ಯಾವುದೇ ಬಣ್ಣವನ್ನು ಕಳಕೊಳ್ಳದೆ ಇಂದೂ ಶೋಭಿಸುತ್ತದೆ. ಆದರೆ ಈಶ್ವರನ 'ಮಕ್ಕಳು' ಮಾತ್ರ ಬದಲಾಯಿಸಿದ್ದಾರೆ! ಅಂದಿನ ಸರಳ ಜೀವನ ಕ್ರಮಕ್ಕಿಂತಲೂ ಇಂದು 'ಸ್ಟೇಂಡರ್ಡ್ ಆಫ್ ಲೈಫ್' ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಪರ್ಯವಸಾನವಾಗಿದೆ. ಈ ನಾಗರೀಕ ಮಕ್ಕಳು ಮುಖ ಕಪ್ಪಗಿದ್ದರೆ ಬಿಳಿ ಪುಡಿ ಹಚ್ಚಿ ಬೆಳ್ಳಗೆ ಮಾಡಲಿಚ್ಛಿಸುತ್ತಾರೆ! ಕೂದಲು ಬಿಳಿದಾಗಿದ್ದರೆ ಅದನ್ನು ಕಪ್ಪಗೆ ಮಾಡಲು ಬಣ್ಣ ಬಳಿಯುತ್ತಾರೆ! ಶರೀರದಲ್ಲಿ ರಕ್ತವಿಲ್ಲದೆ ಬಿಳುಪಾಗಿದ್ದರೆ ಮುಖಕ್ಕೆ ಕೆಂಪು ಬಣ್ಣ ಹಚ್ಚುತ್ತಾರೆ! ನಡೆಯಲು ಎರಡು ಕಾಲಿದ್ದರೂ ಕಾಲಿನ ಉಪಯೋಗ ಮಾಡರು. ಬಸ್, ಕಾರ್, ಸೈಕಲ್ ಬೇಕು. ರೆಕ್ಕೆ ಇಲ್ಲದಿದ್ದರೂ ಆಕಾಶದಲ್ಲಿ ಹಾರಲೆಳಸುತ್ತಾರೆ. ಊಟ ಮಾಡಲು ಕೈ ಇದ್ದರೂ 'ಚಮಚ ಮುಳ್ಳು' ಉಪಯೋಗಿಸುತ್ತಾರೆ. ಈಶ್ವರನ ಆಶಯಕ್ಕೆ ಸಂಪೂರ್ಣ ವಿರೋಧವಾಗಿ ಒಂದು ಕ್ರಾಂತಿಯನ್ನೇ ಈ ನಾಗರೀಕ ಮಕ್ಕಳು ಎಬ್ಬಿಸಿದ್ದಾರೆ! ಅವರಿಗೆ ಬೀಸುವ ಗಾಳಿಯಲ್ಲಿ ತೃಪ್ತಿ ಇಲ್ಲ; 'ಫ್ಯಾನ್' ಬೇಕು. ನೋಡುವ ಕಣ್ಣಿನಲ್ಲಿ ನಂಬಿಕೆ ಇಲ್ಲ; ಕನ್ನಡಕ ಬೇಕು. ಮಾತಾಡುವ ಹಾಡುವ ನಾಲಗೆಯಲ್ಲಿ ಅಭಿರುಚಿ ಇಲ್ಲ. ಹೀಗೆ ಈಶ್ವರನ ಸೃಷ್ಟಿಗೆ ವಿರುದ್ಧವಾಗಿ ತಮ್ಮದೇ ಸೃಷ್ಟಿಗೆ ತೊಡಗಿದ್ದಾರೆ—ವಿಶ್ವಾಮಿತ್ರನ ಪೀಳಿಗೆಯಂತೆ!

ಒಂದು ದಿನ ಈಶ್ವರನ ಹಿರಿಯ ಮಗನೊಬ್ಬನು (ಆತನ ಹೆಸರನ್ನು ನಂತರ ಹೇಳುವುದು ಉಚಿತ) ಈಶ್ವರನಲ್ಲಿಗೆ ಬಂದು ಹೇಳತೊಡಗಿದನು "ಈ ಭೂಮಿಯು ನಾನು ಜೀವಿಸಲು ಯೋಗ್ಯವಾದುದಲ್ಲ. ಇಲ್ಲಿಯ ಜೀವನದಲ್ಲಿ ನನ್ನಂಥ ನಾಗರೀಕರ ಮನಸ್ಸನ್ನು ತಣಿಸುವಂಥಾ ವಿಚಾರಗಳಿಲ್ಲ. ಆದ್ದರಿಂದ ನನಗೆ ಒಂದು ಸ್ವರ್ಗ ಬೇಕು. ಆ ಸ್ವರ್ಗದ ಬಾಗಿಲುಗಳು ಮುತ್ತು ರತ್ನಗಳಿಂದ ತಯಾರಾಗಿರಬೇಕು. ಒಳಗಿನ ವೈಭವವು ಕುಬೇರನನ್ನು ಮೀರಿಸುವಂತಿರಬೇಕು."

ಈಶ್ವರನಿಗೆ ಆಶ್ಚರ್ಯವಾಯಿತು. ಪ್ರಪಂಚದ ವಿಚಾರಗಳನ್ನು ಈ ಮಗನು ಅರಿಯನು. ಸೃಷ್ಟಿಯ ಸೊಬಗನ್ನು ಬಹುಶಃ ನೋಡಿರಲಾರನು. ಆದ್ದರಿಂದ ಈತನಿಗೆ ಸ್ವಲ್ಪ ಅವುಗಳ ಪರಿಚಯ ಮಾಡಿಕೊಡಬೇಕೆಂದು ಇಚ್ಛಿಸಿದನು. ಅದ್ದರಿಂದ ಆತನನ್ನು ಕರೆದುಕೊಂಡು ಹೋಗಿ [illegible] ಆಕಾಶದಲ್ಲಿ ಹೊಳೆಯುತ್ತಿದ್ದ ಚಂದ್ರನನ್ನು ತೋರಿಸಿದನು. ಪ್ರಶಾಂತವಾದ ನೀಲಿಮ ಆಕಾಶದ ಕಡೆ ನೋಡಲು ಹೇಳಿದನು. "ಎಂಥಾ ಸುಂದರವಾದ ಬಟ್ಟ ಗೋಳ ಚಂದ್ರನ! ಎಂಥಾ ವಿಶಾಲ ನಿರ್ಮಲ ಪ್ರದೇಶ ಆಕಾಶವು! ಇವನ್ನು ನೋಡಿ ಆನಂದಿಸಲು ಸಾಧ್ಯವಿಲ್ಲವೇ?" ಈಶ್ವರನು ಪ್ರಶ್ನಿಸಿದನು. ಮನುಷ್ಯನು ಮೂಕನಂತೆ ತಲೆಯಲ್ಲಾಡಿಸಿ "ಅವುಗಳಲ್ಲೇನಿದೆ? ಎಲ್ಲಾ ನಿಸ್ಸಾರ. ಅವುಗಳನ್ನು ನೋಡಲು ಮನಸು ಬಾರದು, ಅವುಗಳಿಂದ ಏನು ಲಾಭ?" ಎಂದನು. ಈಶ್ವರನು ದೂರದಲ್ಲಿ ನೀಲಬಣ್ಣದಿಂದ ತೋರುವ ಪರ್ವತಗಳನ್ನೂ, ದಿಗಂತದ ಮಾಯಾದೇವಿಯನ್ನೂ ಮೋಡಗಳ ವರ್ಣ ವಿನ್ಯಾಸವನ್ನೂ ತೋರಿಸಿದನು. ಮನುಷ್ಯನ 'ಇವಲ್ಲವೂ ಯಾವಾಗಲೂ ತೋರುವ ಸಾಧಾರಣ ವಿಚಾರಗಳು. ಇದರಲ್ಲೇನು ಮಹಾ ವಿಚಾರ ಅಡಗಿದೆ?" ಎಂದನು. ಈಶ್ವರನು ಮತ್ತೆ ಬಗೆ ಬಗೆಯ ಹೂಗಳನ್ನು ತೋರಿಸಿ ಅವುಗಳ ಎಸಳುಗಳನ್ನು ಮುಟ್ಟಿ ಆ ಸೌಂದರ್ಯದ ಆನಂದವನ್ನೂ ಅವುಗಳ ಸುಗಂಧಯುಕ್ತ ಕಂಪನ್ನೂ ವಿವರಿಸುತ್ತ "ಈ ಹೂವುಗಳಲ್ಲಿ ತೋರಿಬರುವ ಬಣ್ಣ ವೈಚಿತ್ರ್ಯವು ಆಶ್ಚರ್ಯಕರವಲ್ಲವೇ?" ಎಂದನು. ಮನುಷ್ಯನು "ಇಲ್ಲ, ಅವೂ ಕೇವಲ ಸಾಮಾನ್ಯ. ಅವುಗಳಿಂದ ಹೊಟ್ಟೆ ತುಂಬುವದೇ? ಇದು ಯಾವ ಸಂಪತ್ತು?" ಎಂದನು. ಸಹನಾಮೂರ್ತಿಯಾದ ಈಶ್ವರನು ಆತನನ್ನು ಕರೆದುಕೊಂಡು ಬಣ್ಣ ಬಣ್ಣದ ಪಕ್ಷಿಸಂಕುಲ, ವಿವಿಧರಾಗದ ಅವುಗಳ ಗಾನ, ಕಾಡಿನ ಜಿಂಕೆ, ನವಿಲು ಮೊದಲಾದುವುಗಳನ್ನು ತೋರಿಸಿದನು. "ಅವುಗಳಲ್ಲಿ ನನಗೆ ಆಸಕ್ತಿ ಇಲ್ಲ" ಎಂದು ಮನುಷ್ಯನು ತನ್ನ ರಾಗವನ್ನೇ ಹಾಡಿದನು. ನಂತರ ಈಶ್ವರನು ಆತನನ್ನು ಕರೆದುಕೊಂಡು ಹುಲುಸಾಗಿ ಬೆಳೆದ ಮರದಡಿಗೆ ಹೋದನು. ತಣ್ಣನೆ ತಂಪು ಗಾಳಿ ಬೀಸುತ್ತಿತ್ತು. ನೆಳಲಿನ ಶೀತಲತೆಯು ಮನಸ್ಸಿಗೆ ಆಹ್ಲಾದಕರವಾಗಿತ್ತು. 'ಮನಸ್ಸಿಗೆ ಆನಂದವಾಗದೇ?' ಈಶ್ವರನು ಪ್ರಶ್ನಿಸಿದನು. ಪುನಃ ಮನುಷ್ಯನದ್ದು ನಕಾರವೇ! ಈಶ್ವರನು ಆತನನ್ನು ಪರ್ವತ ಶಿಖರವೊಂದಕ್ಕೆ ಕರೆದುಕೊಂಡು ಹೋಗಿ ಸುತ್ತಲೂ ಹಬ್ಬಿರುವ ಭೀಕರ ಗಹ್ವರಗಳ, ಮೌನಗಾಂಭೀರ್ಯದಿಂದ ಶೋಭಿಸುವ ಬೃಹದಾಕಾರದ ಬಂಡೆ, ಕೆಳಗೆ ದೂರದ ಕಣಿವೆಯಲ್ಲಿ ಹೊಳೆಯುವ ತೊರೆಗಳು, ಮಂಜಿನ ದಪ್ಪ ತೆರೆ, ಹರಿಯುವ ನದಿಗಳು ಮೊದಲಾದುವನ್ನು ತೋರಿಸಿದನು. 'ಇವೇನು ಪ್ರಾಕೃತಿಕವಾದುವು ಅಂದೂ ಇದ್ದವು; ಇಂದೂ ಇವೆ. ನಿಜವಾಗಿ ಈ ವಸ್ತುಗಳಲ್ಲಿ ಶೋಭೆ ಎಲ್ಲಿದೆ; ಅಭಿರುಚಿ ಎಲ್ಲಿದೆ? ಅವುಗಳನ್ನು ತೆಗೆದು ಉಪಯೋಗಿಸಿಕೊಳ್ಳಲಾಗುವದೇ? ಎಲ್ಲವೂ ಜಡತೆ' ಎಂದು ಮನುಷ್ಯನು ಹೇಳಿದನು.

ಈ ಮನುಷ್ಯನು ಶಾಂತ ಸ್ವಭಾವದವನಲ್ಲವೆಂದು ತಿಳಿದು ಈತನಿಗೆ ಭೀಕರ ವಸ್ತುಗಳನ್ನು ತೋರಿಸಬೇಕೆಂದು ಈಶ್ವರನು ಗರ್ಜಿಸುವ ಹುಲಿ, ಗೊಂಡಾರಣ್ಯ, ಭೀಕರ ಎತ್ತರದ ಮೇರು, ಘೋರ್ಗರೆಯುವ ಸಮುದ್ರ, ಜಲಪಾತ, ಮೊದಲಾದುವನ್ನು ತೋರಿಸಿದನು. ಮನುಷ್ಯನು ತೃಪ್ತನಾಗಲಿಲ್ಲ! 'ಹಾಗಾದರೆ ಭಗವಂತನು ನಿನಗೆ ಸಂತೋಷ, ಸುಖ ಹಾಗೂ ಶಾಂತಿದಾಯಕವಾದ ಒಂದೇ ಒಂದಾದರೂ ವಸ್ತುವನ್ನು ಈ ಜಗತ್ತಿನಲ್ಲಿ ಸೃಷ್ಟಿಸಿಲ್ಲವೇ?' ಈಶ್ವರನು ಸ್ವಲ್ಪ ಬಿಗುವಿನಿಂದ ಕೇಳಿದನು. 'ಇಲ್ಲ, ನನಗೆ ಸ್ವರ್ಗ ಬೇಕು. ಚಿನ್ನದ ಅರಮನೆ, ಬೆಳ್ಳಿಯ ರಸ್ತೆ, ರತ್ನದ ಬಾಗಿಲುಗಳಿಂದ ಕೂಡಿದ ಸ್ವರ್ಗ. ನೋಡಿದಾಕಡೆ ಐಶ್ವರ್ಯ ರಾಶಿ ಇರಬೇಕು. ಈ ಜಗತ್ತು ನನಗೆ ಯೋಗ್ಯವಾಗಿಲ್ಲ.' ಎಂದು ಮನುಷ್ಯನು ಉತ್ತರಿಸಿದನು.

ಈಶ್ವರನ ಸಹನೆ ಮೀರಿತ್ತು. ದುಡ್ಡಿನ ಮೋಹದಲ್ಲಿ ಕುರುಡನಾಗಿರುವ ತನ್ನ ಮಗನ ಮೇಲೆ ಸ್ವಲ್ಪ ಕ್ರುದ್ಧನಾಗಿ ಹೇಳಿದನು. "ಅಯೋಗ್ಯ. ನೀನು ಈ ಭಗವಂತನ ಸೌಂದರ್ಯ ಪೂರಿತ ಪವಿತ್ರ ಸೃಷ್ಟಿಯಲ್ಲಿರಲು ಯೋಗ್ಯನಲ್ಲ. ನಿನ್ನ ಜೀವನವೇ ಕೃತ್ರಿಮ ಜೀವನ. ನಿನಗೆ ಬೇಕಾದುದೂ ಕೃತಕ ಸ್ವರ್ಗವೇ! ನಿನಗೆ ಯೋಗ್ಯವಾದ ಸ್ಥಳವನ್ನು ಕೊಡುವೆನು. ಅಲ್ಲಿ ವಿವಿಧ ಬಣ್ಣದಿಂದ ಶೋಭಿಸುವ ಮೋಡಗಳನ್ನೂ, ಶೀತಲ ಗಾಳಿಯನ್ನೂ, ವಸಂತದ ಸಂಪತ್ತಿನಿಂದ ಮೆರೆಯುವ ಬನಸಿರಿಯನ್ನೂ, ಅನವರತ ಹಾಡುವ ಹಕ್ಕಿ, ವಿಕಸಿತ ಪುಷ್ಪಭಾರದಿಂದ ಬಳುಕುವ ವೃಕ್ಷ, ಇವುಗಳಾವುವನ್ನೂ ನೀನು ನೋಡಲಾರೆ. ದುಡ್ಡಿನ ಬ್ಯಾಂಕುಗಳು, ದಯಾರಹಿತ ವ್ಯಾಪಾರದಂಗಡಿಗಳು, ನಿನ್ನ ಆನಂದದ ವಸ್ತುಗಳಾಗಲಿ. ಭಯಾನಕ ಕಟ್ಟಡಗಳು, ನಿನ್ನ ವಸತಿಯಾಗಲಿ. ಕಾಗದ ಹೂವುಗಳು, ಕುಪ್ಪಿಯಲ್ಲಿ ತುಂಬಿದ ವಸ್ತುಗಳು ನಿನ್ನ ಸುಗಂಧ ದ್ರವ್ಯಗಳಾಗಲಿ. ದಯೆ, ಸತ್ಯ, ದಾನ, ಮಮತೆಗಳಿಗೆ ಬರಗಾಲವಿರಲಿ. ನೀನು ಆ ನರಕದಲ್ಲೇ ಜೀವನದ ಅಂತ್ಯದ ವರೆಗೆ ಬದುಕು. ನರಕವೇ ನಿನ್ನ ಸ್ವರ್ಗವಾಗಲಿ.' ಈಶ್ವರನು ಈ ಹಿರಿಯ ಮಗನನ್ನು ನಗರದಲ್ಲಿ ಬದುಕಲು ಕಳುಹಿಸಿದನು. ಈ ಹಿರಿಯ ಮಗನೇ ಆಧುನಿಕ ನಗರದ ನಾಗರೀಕದ ಪಿತಾಮಹನು!

## ಹೊಟ್ಟೆಯೊಳಗೆ ಮರ

ಫ್ರಾನ್ಸಿನ ಮೊನ್ಸೆಲ್ಸ್ ವೈನ್ಸ್ ಎಂಬಲ್ಲಿಯ ಎಮ್. ಬಯ್ಸನ್ ಎಂಬಾತನ ಹೊಟ್ಟೆಯನ್ನು ಸೀಳಿ ಇತ್ತೀಚೆಗೆ ಶಸ್ತ್ರಕ್ರಿಯೆ ನಡೆಸಿದಾಗ ಹೊಟ್ಟೆಯೊಳಗೆ ಒಂದು ಖರ್ಜೂರದ ಗಿಡವು ಕಂಡುಬಂತು. ಕೆಲ ಸಮಯದ ಹಿಂದೆ ಖರ್ಜೂರದ ಬೀಜವೊಂದನ್ನು ಇವನು ನುಂಗಿದ್ದ. ಅದನ್ನು ನುಂಗಿದ ಕೆಲವು ದಿನಗಳಲ್ಲಿ ಹೊಟ್ಟೆಯೊಳಗೆ ಸಹಿಸಲಸದಳವಾದ ವೇದನೆ ಕಂಡುಬಂತು. ಇದು ಖರ್ಜೂರದ ಬೀಜದ ಪ್ರತಾಪವೆಂದು ಅವನ ಹೊಟ್ಟೆಯ ಪರೀಕ್ಷೆ ನಡೆಸಿದ ಸರ್ಜನರಿಗೆ ತಿಳಿದುಬಂದು ಶಸ್ತ್ರಚಿಕಿತ್ಸೆಯನ್ನು ಅವರು ಶಿಫಾರಸು ಮಾಡಿದರು. ಹೊಟ್ಟೆ ಸೀಳಿದಾಗ ನಿಜಕ್ಕೂ ೬ ಇಂಚ್ ಉದ್ದದ ಖರ್ಜೂರದ ಮರ ಅವನ ಹೊಟ್ಟೆಯೊಳಗೆ ಬೆಳೆದಿತ್ತು.

# ಕೊಡಗು

ತಾ. ೧೪-೪-೧೯೫೦ನೇ ಶುಕ್ರವಾರ

## ನೆಹರೂ-ಲಿಯಾಖತ್ ಒಪ್ಪಂದ.

ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರೆತು ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳು ವಿಭಾಗಿಸಲ್ಪಟ್ಟ ಕಾಲದಲ್ಲಿ ಮುಖ್ಯವಾಗಿ ಪಂಜಾಬಿನಲ್ಲಿ ಉಂಟಾದಂಥಾ ಅನಾಹುತವು ಜನರನ್ನು ಭಯಂಕ್ರತರಾಗಿ ಮಾಡಿ ಸ್ವಾತಂತ್ರ್ಯದ ಸವಿಯನ್ನೂ ಕೂಡ ಮರೆಯುವಂತೆ ಮಾಡಿತ್ತು. ಆದರೆ ಕಾಲವು ಕಳೆದಂತೆ ಶಾಂತಿಯು ಸ್ಥಾಪನೆಗೊಳ್ಳುತ್ತಾ ಬರುತ್ತಿತ್ತು. ಇದು ಸಂಪೂರ್ಣವಾಗುವ ಮುಂಚಿತವಾಗಿಯೇ ಬಂಗಾಳದಲ್ಲಿ ಕೆಲವು ದಿನಗಳ ಹಿಂದೆ ಭಯಂಕರ ಅನಾಹುತಗಳು ಸಂಭವಿಸಿದವು. ಇವು ಹಿಂದೆ ಪಂಜಾಬಿನಲ್ಲಿ ನಡೆದ ಕೊಲ್ಲೆಕೊಲೆಯಷ್ಟೇ ಭೀಕರವಾಗಿದ್ದವು. ಈ ಕಾರಣ ಸಂಬಂಧಿಸಿದ ಜನರು ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳಲ್ಲಿ ಶಾಂತಿಯು ಶಾಶ್ವತವಾಗಿರಲು ಸಾಧ್ಯವೇ ಎಂಬ ಸಂಶಯ ಪಡತೊಡಗಿದರು. ಪಾಕಿಸ್ಥಾನದ ಮುಸ್ಲಿಮರ ಹಿಂಸಾರೀತಿಗಳನ್ನೇ ಹಿಂದೂದೇಶವು ಕೈಗೊಳ್ಳದಿದ್ದರೆ ಅಲ್ಲಿಯ ಅಲ್ಪ ಪಕ್ಷದ ಹಿಂದೂಗಳು ಉಳಿಯಲಾರರೆಂಬ ಗಾಬರಿಯೂ ಹುಟ್ಟಿತ್ತು. ಈ ಅಶಾಂತಿಯನ್ನು ನೀಗಿ ಬಂಗಾಳದಲ್ಲಿ ಶಾಂತಿಸ್ಥಾಪನೆ ಮಾಡುವ ದೊಡ್ಡ ಜವಾಬ್ದಾರಿಯು ಪಂಡಿತ ಜವಾಹರ ಮೇಲೆ ಬಿತ್ತು. ಇವರು ಇದಕ್ಕಾಗಿ ಎರಡುಬಾರಿ ಆ ಭಾಗಗಳಿಗೆ ಸಂದರ್ಶನವಿತ್ತರು. ತನ್ನ ಮೇಲಿನ ಈ ಜವಾಬ್ದಾರಿಯನ್ನು ಇವರು ಎರಡು ಮಾರ್ಗದಲ್ಲಿ ನಿರ್ವಹಿಸಬಹುದಿತ್ತು. ಒಂದು ಮಹಾತ್ಮರ ಪ್ರೀತಿಯ ಅಹಿಂಸಾ ಪಥದಂತೆ ಪಾಕಿಸ್ಥಾನದೊಡನೆ ಒಪ್ಪಂದಮಾಡಿ ತೀರ್ಮಾನಕ್ಕೆ ಬರುವದು; ಮತ್ತೊಂದು ಹಿಂಸಾಮಾರ್ಗದಿಂದ ಪುಂಡುಗಾರರನ್ನು ನಿಲಿಸಿ ಮತ್ತು ಪೋಲೀಸರ ಸಹಾಯದಿಂದ ಅಡಗಿಸುವದು ಅಂದರೆ ಯುದ್ಧದ ಮಾರ್ಗ. ಪಂಡಿತರು ಇವೆರಡರಲ್ಲಿ ಉತ್ಕೃಷ್ಟವಾದ ಒಂದನೆ ಮಾರ್ಗವನ್ನು ಕೈಕೊಂಡು ಪಾಕಿಸ್ಥಾನದ ಪ್ರಧಾನ ಮಂತ್ರಿ ಲಿಯಾಖತ್ ಅಲಿಯವರನ್ನು ಡೆಲ್ಲಿಗೆ ಕರೆಸಿ ಒಂದುವಾರದ ವರೆಗೆ ವಿಚಾರ ವಿನಿಮಯ ಮಾಡಿ ಒಂದು ಸಮರ್ಪಕ ಒಪ್ಪಂದಕ್ಕೆ ಬಂದಿರುವದು ಶ್ರೇಯಸ್ಕರವಾಗಿದೆ. ಈ ಚರ್ಚೆಯು ನಡೆಯುತ್ತಿರುವ ಕಾಲದಲ್ಲಿ ಪ್ರಮುಖ್ಯ ಮುಂದಾಳುಗಳಲ್ಲಿ ಹಲವು ತರದ ಸಂಶಯಗಳು ತಲೆದೋರಿದ್ದವು. ಕೇಂದ್ರ ಸರಕಾರದಲ್ಲಿರುವ ಇಬ್ಬರು ಬಂಗಾಳದ ಮಂತ್ರಿಗಳು ತಮ್ಮ ಮಂತ್ರಿಪದವಿಗೆ ಕೂಡ ರಾಜಿನಾಮೆಯನ್ನಿತ್ತಿದ್ದರು. ಆದರೆ ಪ್ರಧಾನ ಮಂತ್ರಿಯವರು ಉಪಪ್ರಧಾನರಾದ ಸರ್ದಾರ ಪಟೇಲರ ಸಲಹೆಗಳನ್ನು ಅಗಿಂದಾಗ್ಗೆ ಪಡೆದು ಪಾಕಿಸ್ಥಾನದ ಪ್ರಧಾನ ಮಂತ್ರಿಯೊಡನೆ ಎಲ್ಲಾ ವಿಚಾರಗಳಲ್ಲಿ ಒಂದು ಒಪ್ಪಂದಕ್ಕೆ ಬಂದರು. ಹೀಗೆ ಒಪ್ಪಂದಕ್ಕೆ ಬರುವ ಕಾಲದಲ್ಲಿ ದೇಶದ ಮುಂದಿನ ಹಿತಕ್ಕೆ ಕಂಟಕ ತರಬಹುದಾಗಿದ್ದ ಕೆಲವು ಶರತುಗಳನ್ನು ಪಂಡಿತ ಜವಾಹರರು ತಮ್ಮ ಸಹೋದ್ಯೋಗಿಗಳ ಸಲಹೆಯಂತೆ ಬಿಟ್ಟರು. ಇದರಿಂದ ಈ ಒಪ್ಪಂದಕ್ಕೆ ಮಂತ್ರಿಮಂಡಳದ ಸಂಪೂರ್ಣ ಬೆಂಬಲವು ದೊರೆತಿದೆ. ಹಾಗೆಯೇ ಕೇಂದ್ರ ಶಾಸನ ಸಭೆಯ ಬೆಂಬಲವೂ ದೊರೆಯುವದೆಂಬುದರಲ್ಲಿ ಸಂದೇಹವಿಲ್ಲ.

ಈ ಒಪ್ಪಂದವು ಪ್ರಯೋಜನಕಾರಿಯಾಗಬೇಕಾದರೆ ಇದನ್ನು ಅಕ್ಷರಶಃ ಜಾರಿಗೆ ತರುವ ಯೋಗ್ಯ ಏರ್ಪಾಡುಗಳಾಗಬೇಕಿದೆ. ಸಂಬಂಧಪಟ್ಟ ಸರಕಾರಗಳು ಕೇವಲ ಏರ್ಪಾಡುಗಳನ್ನು ಮಾಡಿದರೆ ಸಾಲದು ಆ ಏರ್ಪಾಡುಗಳಂತೆ ವರ್ತಿಸಿ ಅದನ್ನು ಜಾರಿಯಲ್ಲಿ ತರುವ ಅಂತ್ಯದ ಜವಾಬ್ದಾರಿಯೂ ಜನತೆಯನ್ನು ಕೂಡಿದೆ. ಅವರಲ್ಲಾ ಮುಖ್ಯವಾಗಿ ಈ ಪ್ರಾಂತ್ಯಗಳಿಗೆ ತೀರಾ ಹತ್ತಿರದ ಸಂಬಂಧವಿರುವವರು ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕಾಗಿದೆ. ಆದ್ದರಿಂದಲೇ ಪಂಡಿತ ಜವಾಹರರು ಹಿಂದೀಯರಿಗೂ ಲಿಯಾಖತ್ ಅಲಿಯವರಿಗೂ, ಪಾಕಿಸ್ಥಾನದವರಿಗೂ ವಿನಂತಿ ಮಾಡಿ ಹೃತ್ಪೂರ್ವಕವಾದ ಸಹಕಾರವನ್ನಾಶಿಸಿರುವರು. ಅದರಂತೆಯೇ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ತೀರ್ಮಾನವೂ ಕೂಡ ಇನ್ನು ಶಾಂತಿ ಸ್ಥಾಪಿಸಲು ಜನತೆಗೆ ಅಪೀಲು ಮಾಡಿದೆ.

ಈ ಮೂರು ವರ್ಷಗಳ ಪಾಕಿಸ್ಥಾನದ ಸಂಬಂಧದ ಅನುಭವದಿಂದ ಪಾಕಿಸ್ಥಾನದ ವರ್ತನೆಯಲ್ಲಿ ಹಿಂದೀಯರಿಗೆ ಸಂಪೂರ್ಣ ವಿಶ್ವಾಸವು ಹುಟ್ಟಿರುವದಿಲ್ಲವಾದ ಕಾರಣ ಈ ಒಪ್ಪಂದವನ್ನು ಕಾರ್ಯತಃ ಜಾರಿಗೆ ತರುವುದರಲ್ಲಿಯೂ ಕೂಡ ಸಂಶಯಗಳಿರಬಹುದು. ಆದರೆ ಇಂಥಾ ಸಂಶಯಗಳನ್ನಿಟ್ಟುಕೊಂಡು ತಮ್ಮ ಭಾಗದ ಕರ್ತವ್ಯವನ್ನು ಮಾಡಲು ಹಿಂದೀಯರು ಹಿಂಜರಿಯಬಾರದು. ಏತಕ್ಕೆಂದರೆ ಇಷ್ಟರವರೆಗೆ ಹಿಂದೀಯರು ನ್ಯಾಯ ಮತ್ತು ಶಾಂತಿಯ ದಾರಿಯನ್ನು ಹಿಡಿದ ಕಾರಣ ಅಲ್ಲಲ್ಲಿ ಕಷ್ಟಗಳನ್ನು ಅನುಭವಿಸಿದ್ದರೂ ಅಂತ್ಯದಲ್ಲಿ ಜಯವನ್ನೇ ಪಡೆದಿರುವರು. ಅದೇ ರೀತಿಯಿಂದ ಈ ಒಪ್ಪಂದಕ್ಕೂ ಕೂಡ ತಮ್ಮ ಮನಃಪೂರ್ತಿಯಾದ ಸಹಕಾರವನ್ನು ಇತ್ತು ಅದನ್ನು ಜಯಪ್ರದವಾಗಿ ಕಾರ್ಯರೂಪಕ್ಕೆ ತರಲು ಯತ್ನಿಸಿದ್ದೇ ಆದರೆ ಸಂಶಯಗ್ರಸ್ತರಾದ ಪಾಕಿಸ್ಥಾನಿಗಳೂ ಕೂಡ ತಮ್ಮ ಅಡ್ಡ ಮಾರ್ಗವನ್ನು ಬಿಡಲೇ ಬೇಕಾಗುವುದು. ಹೊರಗಿನ ಪ್ರಪಂಚವು ಹಿಂದೂಸ್ಥಾನ ಮತ್ತು ಪಾಕಿಸ್ಥಾನದ ಬಿಕ್ಕಟ್ಟಿನ ಸಂಬಂಧವನ್ನು ಆಸಕ್ತ ದೃಷ್ಟಿಯಿಂದ ಎದುರು ನೋಡುತ್ತಿದೆ. ಆದುದರಿಂದ ಈ ಎರಡು ಸಹೋದರ ರಾಷ್ಟ್ರಗಳು ತಮ್ಮೊಳಗಿನ ವಾದಗಳನ್ನು ಅಹಿಂಸಾ ರೀತಿಯಿಂದ ನಿವಾರಿಸಿಕೊಂಡದ್ದಾದರೆ ಹಿಂದೂದೇಶಕ್ಕೆ ಸಾಕಷ್ಟು ಶಕ್ತಿ ದೊರೆತು ಯುದ್ಧಪಥದಲ್ಲಿ ಸಾಗುತ್ತಿರುವ ಪ್ರಪಂಚದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ತನ್ನ ಅಪೇಕ್ಷಿತ ಸೇವೆಯನ್ನು ಸಲ್ಲಿಸುವ ಅನುವಾಗುವುದು.

---

## ವರ್ತಮಾನ.

ಕಡಗದಾಳು ಗ್ರಾಮದ ಶ್ರೀ. ಬಡ್ಡನ ಸುಬ್ಬಯ್ಯನವರ ಮನೆಗೆ ಕಳೆದವಾರ ಆಕಸ್ಮಿಕ ಬೆಂಕಿ ಹಿಡಿದು ಅಂದಾಜು ಒಂದುಸಾವಿರ ರೂಪಾಯಿ ನಷ್ಟವಾಗಿದೆ.

ಪೂನಾದಲ್ಲಿ ತಾ. ೧-೪-೫೦ ರಲ್ಲಿ ೧೭ನೇ ವಿವಿಧ ದಳದ ವಾರ್ಷಿಕೋತ್ಸವದ ಸಂಬಂಧ ನಡೆದ ಆಟೋಟಗಳಲ್ಲಿ ಶ್ರೀ. ಮುಕ್ಕಾಟಿರ ಪಿ. ಮುತ್ತಣ್ಣನವರು ೪೦೦ ಮತ್ತು ೮೦೦ ಮೀಟರು ಓಟಗಳಲ್ಲಿ ಪ್ರಥಮ ಬಂದು ಬಹುಮಾನ ಪಡೆದರು.

ತಾ. ೨-೪-೫೦ ರಲ್ಲಿ ಬೊಂಬಾಯಿ ಕೊಡಗು ಎಸೋಸಿಯೇಶನಿನ ಮಹಾಸಭೆ ನಡೆದು ಶ್ರೀ. ಸೋಮೇಟಿರ ನಾಣಯ್ಯನವರನ್ನು ಪ್ರೆಸಿಡೆಂಟರಾಗಿ, ಶ್ರೀ ಕಂಡ್ರತಂಡ ಚಂಗಪ್ಪನವರನ್ನು ವೈಸ್ ಪ್ರೆಸಿಡೆಂಟರಾಗಿ, ಶ್ರೀ ಪುಲಿಯಂಡ ಪೊನ್ನಪ್ಪನವರನ್ನು ಗೌರವ ಕಾರ್ಯದರ್ಶಿಯಾಗಿ, ಶ್ರೀ ಮೂಕಚಂಡ ವಿಯ್ಯಪ್ಪನವರನ್ನು ಖಜಾನ್ಜಿಯಾಗಿ ಮತ್ತು ಶ್ರೀಗಳಾದ ಬೇರೆರ ಅಚ್ಚಯ್ಯ, ಮುಕ್ಕಾಟಿರ ಸೋಮಯ್ಯ, ಚೇನಂಡ ಮಾದಯ್ಯ ಇವರುಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಿರುವರು.

ಅಂತರಾಷ್ಟ್ರೀಯ ಲೇಬರ್ ಸಂಸ್ಥೆಯ ಪ್ರತಿನಿಧಿಗಳು ಮತ್ತು ಶ್ರೀ. ವಿ. ಸಿ. ಮೆನನ್‌ರವರು ಕೊಡಗಿಗೆ ಬಂದಿದ್ದಾಗ ಅವರ ಸತ್ಕಾರಕ್ಕಾಗಿ ವಸೂಲಾದ ಒಟ್ಟು ೩೬೩೭ ರೂಪಾಯಿಗಳಲ್ಲಿ ರೂ. ೨೯೭೭-೩-೩ ಖರ್ಚಾಗಿ ಉಳಿದ ೬೫೯-೧೩-[illegible] ನ್ನು ಸ್ವಾಗತ ಸಮಿತಿಯ ನಿರ್ಣಯದಂತೆ ರೆಡ್‌ಕ್ರಾಸ್ ಫಂಡಿಗೆ ಕೊಡಲಾಯಿತೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕೊಡಗಿನ ಕಾಂಗ್ರೆಸ್ ಪಂಚಾಯಿತರ ಚುನಾವಣೆಯ ಏರ್ಪಾಡು ಮಾಡುವ ಬಗ್ಗೆ ಶ್ರೀ. ಎಂ. ಕೆ. ನರಸಿಂಹಯ್ಯನವರನ್ನು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ರಿಟರ್ನಿಂಗ್ ಆಫೀಸರಾಗಿ ನೇಮಿಸಿದೆ.

ಮಡಿಕೇರಿ ಎಕ್ಸಯಿಜ್ ಇನ್ಸ್‌ಪೆಕ್ಟರ ಆಫೀಸಿನಿಂದ ಕೆಲವು ಸಾರಾಯಿ ಪರ್ಮಿಟಗಳನ್ನು ಅಪಹರಿಸಿದನೆಂಬ ತಕ್ಸೀರಿನ ಮೇಲೆ ಉತ್ತರ ಕೊಡಗು ಟಿಂಬರ್ ಸಂಬಂಧಾರರ ಆಫೀಸಿನ ಜವಾನನೊಬ್ಬನ ದಸ್ತಗಿರಿಯಾಗಿದೆ.

ಭಾರತದ ಹೊಸ ರಾಜ್ಯ ಘಟನೆಯು ಜಾರಿಯಲ್ಲಿ ಬರುವದರೊಳಗೆ ಕರ್ನಾಟಕ ಪ್ರಾಂತದ ರಚನೆಯಾಗದಿದ್ದರೆ ವಿನಾಶಕಾರಕ ಮತ್ತು ವಿಯದಿಭಾಗ ಮಾರ್ಗಗಳನ್ನು ಕೈಕೊಂಡು ಕನ್ನಡಿಗರ ಬೇಡಿಕೆಗೆ ಕೇಂದ್ರವು ಒಪ್ಪುವಂತೆ ಮಾಡಬೇಕೆಂದು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಮುಖ್ಯ ಕಾರ್ಯಕರ್ತರ ಹೆಸರಿನಲ್ಲಿ ಹೊರಡಿಸಲ್ಪಟ್ಟದ್ದ ಹೇಳಿಕೆ ಪತ್ರಿಕೆಯು ತಮ್ಮಿಂದಲ್ಲವೆಂದು ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಇತ್ತೀಚೆಗೆ ವಿಶದ ಪಡಿಸಿರುವರೆಂದು ತಿಳಿದು ಬರುತ್ತದೆ.

ಅಖಿಲ ಭಾರತ ಸಮಾಜವಾದಿ ಪಕ್ಷದ ಮುಂದಾಳುಗಳಾದ ಶ್ರೀ. ಅಚ್ಯುತ ಪಟ್‌ವರ್ಧನರವರು ವಿಶ್ರಾಂತಿಗಾಗಿ ಮಡಿಕೇರಿಗೆ ಬಂದಿರುವರು. ಎರಡು ತಿಂಗಳುಗಳ ವರೆಗೆ ಅವರು ಇಲ್ಲಿ ಇರುವರೆಂದು ಗೊತ್ತಾಗಿದೆ.

ತಾರೀಕು ೧೨ರ ಬೆಳಗ್ಗೆ ಮಡಿಕೇರಿಗೆ ಸುಮಾರು ೫೦ ಸೆಂಟು ಮಳೆ ಬಿತ್ತು.

ಕೊಡಗು ಶಾಸನ ಸಭೆಯ ಬಜೆಟ್ ಮೀಟಿಂಗು ತಾರೀಕು ೧೭ರಿಂದ ಪ್ರಾರಂಭವಾಗುವದು.

ಪುತ್ತೂರು ತಾಲೂಕಿನ ಸವಣೂರು ಗ್ರಾಮದ ಶೀನಪ್ಪ ಪೂಜಾರಿ ಎಂಬವನು ಅದೇ ಗ್ರಾಮದ ಸುಮಾರು ೧೫ ವರ್ಷದ ಪೂವಕ್ಕ ಎಂಬ ಹುಡುಗಿಗೆ ದುರ್ಬೋಧನೆಕೊಟ್ಟು ಮದುವೆಯಾಗುವ ಆಶೆ ತೋರಿಸಿ ತಾ. ೧೨-೧-೫೦ ರಲ್ಲಿ ಮಡಿಕೇರಿಗೆ ಕರೆದುಕೊಂಡು ಬಂದ ಅಪಾದನೆ ಮೇರೆ ಆತನ ವಿಚಾರಣೆ ಪುತ್ತೂರಿನಲ್ಲಿ ನಡೆದು ಆತನಿಗೆ ೯ ತಿಂಗಳ ಕಠಿಣ ಸಜ ವಿಧಿಸಲ್ಪಟ್ಟಿದೆ

ಸುಂಟಿಕೊಪ್ಪನಾಡು ಬೆಟ್ಟಗೇರಿ ಗ್ರಾಮದ ಶ್ರೀ ಕಾಳೆಟ್ಟಿರ ಸೋಮಯ್ಯನವರ ದನಗಳ ಜೊತೆಯಲ್ಲಿ ಯಾರದೋ ಹಸುವು ಕೆಲವು ದಿವಸಗಳಿಂದ ಸೇರಿಕೊಂಡಿದೆಯೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಹೊಡೆಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

---

## ಮೀರ್‌ಲಾಯಕ್ ಅಲಿಯ ಆಸ್ತಿ ಸ್ವಾಧೀನ

ಹೈದರಾಬಾದಿನ ಮಾಜಿ ಮುಖ್ಯ ಮಂತ್ರಿಯಾದ ಮೀರ್‌ಲಾಯಕ್ ಅಲಿಯವರು ಗೃಹಬಂಧನದಿಂದ ತಪ್ಪಿಸಿಕೊಂಡು ಪಾಕಿಸ್ತಾನಕ್ಕೆ ಹೋದ ಮೇಲೆ ಭಾರತ ಸರಕಾರವು ಅವರ ಆಸ್ತಿಪಾಸ್ತಿಗಳ ಮೇಲೆ ಮೇಲ್ವಿಚಾರ ಕೈಕೊಂಡಿರುವರು.

೮೪೦ ಎಕ್ರೆ ಕಬ್ಬು ಬೆಳೆಯುವ ಜಮೀನನ್ನೂ ಅನೇಕ ಬಂಗಲೆಗಳನ್ನೂ ಮತ್ತು ಮೋಟಾರುಕಾರುಗಳನ್ನೂ ಸರಕಾರವು ವಶಪಡಿಸಿಕೊಂಡಿರುತ್ತದೆ. ಇದರ ಒಟ್ಟು ಬೆಲೆಯು ಸಾಧಾರಣ ೩೦ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟಿರಬಹುದೆಂದು ಊಹಿಸಲಾಗಿದೆ.

---


## IN MEMORIUM

In ever loving and chrished Memory of our beloved son "*SONNY*" who suddenly left us to his Heavenly Home this sad day—14th April 1949.

"May His Soul Rest in Peace" Inserted by his grief stricken Parents **Dr. & Mrs. C. B. ACHIAH** and their family *Mercara*

# ಓದುಗರ ಓಲೆಗಳು.

## ಶಿಸ್ತಿರಲಿ.

ಭಾರತೀಯರು ಶಿಸ್ತಿಗೆ ಹೆಸರಾದವರೇನಲ್ಲ. ಒಂದು ಮೀಟಿಂಗು ಇಲ್ಲವೇ ಬೇರಾವುದೇ ಭೇಟಿ ನಿಶ್ಚಯವಾಗಿರಲಿ ಸಮಯಕ್ಕೆ ಸರಿಯಾಗಿ ತಲಪುವವರು ನಮ್ಮಲ್ಲಿ ವಿರಳ. ಆದಕ್ಕಾಗಿ 'ಇಂಡಿಯನ್ ಪಂಕ್ಚುವಲಿಟಿ' ಎಂಬ ಹೆಸರು ಬಂದು ಹೋಗಿದೆ. ನಮ್ಮಂಥಾ ಬಡಜನರು ಸಮಯ ತಪ್ಪಿ ಬಂದರೆ ಯಾ ಹೋದರೆ ಯಾರಿಗೂ ನಷ್ಟವಿಲ್ಲ. ಆದರೆ ಸರಕಾರಿ ಅಧಿಕಾರಿಗಳು ಈ ಶಿಸ್ತನ್ನು ಪಾಲಿಸಬೇಕು. ಗ್ರಾಮಕ್ಕೆ ಹತ್ತುಗಂಟೆಗೆ ಬರುತ್ತೇನೆಂದು ಹೇಳಿ ನಾಲ್ಕು ಗಂಟೆಗೆ ಬರುವದು, ಕೆಲವು ಸಮಯ ಬಾರದೇ ಇರುವದು ಇವೆಲ್ಲ ನಿಲ್ಲಬೇಕು. ಹಳ್ಳಿಯ ಜನರು ದಿನವಿಡೀ ಎದುರುನೋಡುವ ಪ್ರಸಂಗ ಬರಬಾರದು. ಸರಕಾರಿ ಅಧಿಕಾರಿಗಳು, ಇತರ ಜವಾಬ್ದಾರಿಯುತ ಸಾರ್ವಜನಿಕರು ಈ ಶಿಸ್ತನ್ನು ಪಾಲಿಸಿದರೆ ಅದು ಸ್ವಾಭಾವಿಕವಾಗಿ ಜನರಲ್ಲಿಯೂ ಕ್ರಮೇಣ ಒಡಮೂಡುವದು. ಮೊನ್ನೆಯಾಗಿ ನಮ್ಮ ಗ್ರಾಮಕ್ಕೆ ಒಬ್ಬ ರೆವಿನ್ಯೂ ಅಧಿಕಾರಿಗಳು ಬೆಳಿಗ್ಗೆ ಹತ್ತುಗಂಟೆಗೆ ಬರುತ್ತೇನೆಂದು ಹೇಳಿ ಸಾಯಂಕಾಲ ಮೂರು ಗಂಟೆಗೆ ಬಂದರು. ಗ್ರಾಮದ ಹಲವು ಜನರು ತಮ್ಮ ಕೆಲಸಬಿಟ್ಟು ಅವರನ್ನು ಕಾಯುತ್ತಿದ್ದರು. ಹೀಗೆ ಮುಂದೆ ಆಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸುವರೇ?

ಸುಬ್ಬಯ್ಯ.

## ತಪ್ಪು ಮಾರ್ಗ.

ಕೊಡಗಿಗೆ ಹೊಸದಾಗಿ ಬಂದಿರುವ ಚೀಫ್ ಕಮಿಷನರಾದ ಲೆ. ಕ. ದಯಾಸಿಂಗ್ ಬೇಡಿಯವರು, ಆಸ್ಟ್ರೇಲಿಯಾದಲ್ಲಿ ಹೈಕಮಿಷನರಾಗಿದ್ದವರು. ಹೈಕಮಿಷನರ ಹುದ್ದೆಯೂ ಒಂದು ಪ್ರಾಂತದ ಚೀಫ್ ಕಮಿಷನರ ಹುದ್ದೆಯೂ ಒಂದಲ್ಲ. ಒಂದು ದೇಶದ ಹೈಕಮಿಷನರಾಗಿದ್ದವರು ಆ ದೇಶದ ಸ್ನೇಹ ಸೌಹಾರ್ದತೆಯನ್ನು ತಮ್ಮ ದೇಶಕ್ಕೆ ಗಳಿಸುವದನ್ನೇ ತಮ್ಮ ಪ್ರಮುಖ ಕರ್ತವ್ಯವೆಂದು ತಿಳಿಯುವದು ವಾಸ್ತವ. ಆದಕ್ಕಾಗಿ ಅಲ್ಲಿ ಸಾರ್ವಜನಿಕ ಊಟ, ಚಹಪಾನ, ನೃತ್ಯ ಮತ್ತಿತರ ಕೂಟಗಳಲ್ಲಿ ಭಾಗವಹಿಸಿ ಅಲ್ಲಿಯ ಸಾಂಸ್ಕೃತಿಕ ವೈಶಿಷ್ಟ್ಯವನ್ನೂ ಸಂಪಾದಿಸಬೇಕಾದುದು ಕರ್ತವ್ಯ. ಆದರೆ ಒಂದು ಪ್ರಾಂತದ ಚೀಫ್ ಕಮಿಷನರೆಂದರೆ ಆಡಳಿತ (ಎಕ್ಸಿಕ್ಯೂಟಿವ್ ಹೆಡ್) ಮುಖ್ಯಸ್ಥ. ಅವರ ಕೈಯಲ್ಲಿಯೇ ಸರ್ವ ಅಧಿಕಾರ ಕೇಂದ್ರೀಕೃತವಾಗಿದೆ. ಇಂಥಾವರು ಖಾಸಗಿಯಾಗಿ ಕೊಡಲ್ಪಡುವ ಊಟ, ಚಹಪಾನ, ಮೊದಲಾದುವುಗಳಲ್ಲಿ ಭಾಗವಹಿಸುವದು ತಪ್ಪು. ಅಧಿಕಾರಿಯು ಎಷ್ಟೇ ನ್ಯಾಯಶೀಲನಾಗಿದ್ದರೂ ಈ ಊಟ, ಕೂಟಗಳ ಪ್ರಭಾವವು ನ್ಯಾಯಶೀಲತೆಗೆ ಬಾಧಕವಾಗಿ ಪರಿಣಮಿಸಬಹುದು. ಕೊಡಗಿನಲ್ಲಿ ಹೊಸ ಚೀಫ್ ಕಮಿಷನರು ಅನೇಕ ಕಡೆ ಡಿನ್ನರ್, ಚಹಪಾನಗಳಿಗೆ ಹೋಗಿದ್ದಾರೆಂದೂ, ಹೋಗುತ್ತಿರುವರೆಂದೂ ವರ್ತಮಾನವಿದೆ. ಇದು ನಿಸ್ಪಕ್ಷಪಾತ ಆಡಳಿತ ದೃಷ್ಟಿಯಿಂದ ನ್ಯಾಯವೇ ಎಂಬುದನ್ನು ಗಮನಿಸಿ ವರ್ತಿಸಬೇಕಾಗಿ ನನ್ನ ಮನವಿ. ಜನರೊಡನೆ ಧಾರಾಳವಾಗಿ ಮಿಳಿತವಾಗಿ ವರ್ತಿಸಲಿ. ಆದರೆ ಊಟ, ಚಹಪಾನ ಮೊದಲಾದುವನ್ನು ಸ್ವೀಕರಿಸದಿರಲಿ.

ನಾಗರಿಕ.

## ಬಾಡಿಗೆ ನಿಯಂತ್ರಣ.

ಕೊಡಗಿನಲ್ಲಿ ಮನೆಗಳ ಬಾಡಿಗೆ ನಿಯಂತ್ರಿಸುವ ಬಗ್ಗೆ ಸಾರ್ವಜನಿಕರು ಕೆಲವು ವರ್ಷಗಳಿಂದ ಕೂಗಿಕೊಳ್ಳುತ್ತಿದ್ದರೂ ಶಾಸನ ಸಭೆಯಲ್ಲಿರುವ ಕೆಲವೊಂದು ಆಸಕ್ತ ಸದಸ್ಯರ ಪ್ರತಿಭಟನೆಯ ಕಾರಣ ಈವರೆಗೆ ಅದು ಜಾರಿಯಲ್ಲಿ ಬಂದಿಲ್ಲ. ಆದರೆ [illegible] ಕಳೆದ ಸಾರೆ ಅದನ್ನು ಒಂದು ಸೆಲೆಕ್ಟ್ ಕಮಿಟಿಗೆ ಬಿಟ್ಟದ್ದು ಆ ಸಮಿತಿಯು ತನ್ನ ವರದಿಯನ್ನು ಮಾಡಿದೆ. ಮುಂಬರುವ ಕೌನ್ಸಿಲ್ ಸಭೆಯಲ್ಲಿ ಅದನ್ನು ಅಂಗೀಕರಿಸಿ ಆದಷ್ಟು ಬೇಗನೆ ಜಾರಿಯಲ್ಲಿ ತರಬೇಕು. ಮಡಿಕೇರಿಯ ಮಾತಿರಲಿ, ಪೊನ್ನಂಪೇಟೆಯಂಥಾ ಪ್ರದೇಶದಲ್ಲೂ ಮನೆಬಾಡಿಗೆ ಒಂದಕ್ಕೆ ಎಂಟು ಹತ್ತು ಪಾಲು ಹೆಚ್ಚಿದೆ. ಐದು ರೂಪಾಯಿಯ ಮನೆಗೆ ರೂ. 30 ಆಗಿದೆ. ಇದು ಇನ್ನೂ ಹೆಚ್ಚುವ ಚಿಹ್ನೆಯೇ ಇದೆ. ಆದ್ದರಿಂದ ಈ ಮಸೂದೆಯನ್ನು ಶೀಘ್ರ ಜಾರಿಗೆ ತಂದು ಬಡ ಜನರಿಗೆ ಹಿತಮಾಡಬೇಕಾಗಿ ವಿನಂತಿ.

ಕೆ. ಚಂಗಪ್ಪ.

## ಕೊಡಗು ಟ್ರಾನ್ಸ್‌ಪೋರ್ಟ್ ಸಮಿತಿಯವರಲ್ಲಿ

ಕೊಡಗಿನಲ್ಲಿ ಬಸ್ಸು ವಹಿವಾಟಲ್ಲದೆ ಬೇರೆ ವಾಹನಗಳ ಸೌಕರ್ಯಗಳಿಲ್ಲವೆಂಬುದನ್ನು ಸಕಲರೂ ಒಪ್ಪಬೇಕಾದ ವಿಷಯ. ಹೀಗಿರುವಾಗ ಈ ಮಧ್ಯೆ ಗಣೇಶ ಬಸ್ ಕಂಪೆನಿಯ ಮಾಲೀಕರು ಅವರ ಅನೇಕ ಬಸ್ ಲೈನುಗಳನ್ನು ನಿಲ್ಲಿಸಿರುವುದು ಈ ಇಲಾಖೆಯವರ ಅವಗಾಹನೆಗೆ ಬಂದಿಲ್ಲವೆ? ಕೊಡಗಿನಲ್ಲಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮದುವೆ, ಹಬ್ಬಗಳ ಕಾರಣಗಳಿಂದ ಜನರ ವಹಿವಾಟು ಹೆಚ್ಚಿರುವಾಗ ನಿಲ್ಲಿಸಿದ ಲೈನುಗಳಿಗೆ ಬೇರೆ ಕಂಪೆನಿಗಳಿಗಾಗಲೀ, ಇತರ ಜನರಿಗಾಗಲೀ, ಲೈಸನ್ಸ್ ಕೊಟ್ಟು ನಿಂತು ಹೋದ ಲೈನುಗಳಲ್ಲಿ ಬೇರೆ ಬಸ್ಸುಗಳನ್ನು ಓಡಿಸಿ, ಪ್ರಯಾಣಿಕರ ಸಹಾಯಕ್ಕೆ ಸರಕಾರದ ಈ ಇಲಾಖೆಯವರು ಬರಬೇಕಾಗಿ ವಿನಂತಿ.

'ಪ್ರಯಾಣಿಕ'

## ಪಟ್ಟಣಗಳಲ್ಲಿ ಹಾಲಿನ ಅಭಾವ

ಇತ್ತೀಚೆಗೆ ಪಟ್ಟಣಗಳ ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಹಾಲಿಗೆ ಬಹಳ ಅಭಾವವನ್ನು ನಗರವಾಸಿಗಳು ಅನುಭವಿಸುವದನ್ನು ನೋಡುತ್ತಾ ಇದ್ದೇವೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ ಉಪಹಾರಗೃಹ (ಹೋಟೆಲ್) ಗಳ ಸಂಖ್ಯೆ ಹೆಚ್ಚಾಗುತ್ತಿರುವುದೇ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರತಿ ನಗರಗಳಲ್ಲಿ ಆ ನಗರಗಳ ಜನಸಂಖ್ಯೆಗಿಂತ ಉಪಹಾರ ಗೃಹಗಳು ಹೆಚ್ಚಾಗುತ್ತಿವೆ! ಈ ರೀತಿಯಲ್ಲಿ ಉಪಹಾರ ಗೃಹಗಳನ್ನು ಹೆಚ್ಚಿಸುವುದು ಸರಿಯಲ್ಲ. ಇವುಗಳಲ್ಲಿ ಅನೇಕವು ಆರೋಗ್ಯ ನಿಯಮಕ್ಕೆ ಸರಿಯಾಗಿರದೆ ರೋಗಗಳ ಬೀಜಗಳೆಂದರೆ ಯಾರೂ ವಿರೋಧಿಸಲಿಕ್ಕಿಲ್ಲ. ಆದುದರಿಂದ ಇವುಗಳ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ ಬಿಡಬಾರದು. ಮತ್ತು ಈ ಉಪಹಾರ ಗೃಹಗಳಲ್ಲಿ ಹುಡಿ ಹಾಲನ್ನು ಉಪಯೋಗಿಸಬೇಕಲ್ಲದೆ ಆಕಳುಗಳ ಹಾಲನ್ನು ಉಪಯೋಗಿಸದಂತೆ ಖಾನೂನು ಮಾಡುವುದು ಆರೋಗ್ಯ ಇಲಾಖೆಯವರ ಕರ್ತವ್ಯವೆಂದು ಕಂಡು ಬರುತ್ತದೆ. ಇತ್ತೀಚೆಗೆ ಮದ್ರಾಸಿನಲ್ಲಿ ಈ ತರದ ನಿರ್ಬಂಧ ಮಾಡಬೇಕೆಂದು ಆ ಸರಕಾರದವರು ಅಭಿಪ್ರಾಯಪಟ್ಟಿದ್ದಾರೆ! ಆಕಳುಗಳ ಹಾಲಿನ ಅಭಾವವನ್ನು ಸರಿಗಟ್ಟಬೇಕಾದರೆ ಇದೊಂದೇ ಮುಖ್ಯ ದಾರಿಯಾಗಿ ಕಂಡು ಬರುತ್ತದೆ. ಆದುದರಿಂದ ಕೊಡಗಿನ ಆರೋಗ್ಯ ಇಲಾಖೆಯವರು ಈ ವಿಷಯಕ್ಕೆ ನಿಗಾ ಕೊಡುವರೇ?

'ಪಟ್ಟಣಿಗ'

## "ಕ್ರಿಶ್ಚಿಯನರ ಸಂಸ್ಥೆ"ಗೆ ಬೇಡಿಕೆ

ಇಂದು ದಕ್ಷಿಣಭಾರತದಲ್ಲಿ ವಿದ್ಯಾದಾನವು ಉತ್ತಮವಾಗಿದ್ದರೆ ಆ ಹೆಗ್ಗಳಿಕೆಯು ಕ್ರಿಶ್ಚಿಯನರ ಮಿಶನರಿಗಳಿಗೆ ಸೇರುತ್ತದೆ. ಅವರ ಸದಾ ಸಹಾನುಭೂತಿ ಮತ್ತು ನಿಷ್ಕಾಮ ಕರ್ಮಗಳು ಹೊಗಳುವಂಥವು. ಆದರೆ ಕೊಡಗಿನಲ್ಲಿರುವ ಸಂಸ್ಥೆಗಳೂ ಸಹ ವಿದ್ಯಾದಾನವನ್ನು ಮಾಡಿದರೂ, ನಿಷ್ಕಾಮ ಕರ್ಮಗಳಾದರೂ ಸಹ ಧಾರ್ಮಿಕ ಮತ್ತು ಆರ್ಥಿಕ ಶೋಷಣೆಗಳು ಇಂದು ಆ ಸಂಸ್ಥೆಗಳಿಗೆ ಕಳಂಕಪ್ರಾಯವಾಗಿವೆ.

ಮತಪರಿವರ್ತನೆಯು ಈ ಸಂಸ್ಥೆಗಳ ಮೂಲ ತತ್ವವಾದರೂ, ಇಂದಿನ ಭಾರತದ ಪರಿಸ್ಥಿತಿಯಲ್ಲಿ, ಈ ಧಾರ್ಮಿಕ ಮತ್ತು ಆರ್ಥಿಕ ಶೋಷಣೆಗಳು ಶೋಭಾಯವಲ್ಲ. ಕ್ರಿಶ್ಚಿಯನ್ ಸಂಸ್ಥೆಗಳೇ, ಶಿಸ್ತು, ಆಡಳಿತ ಕ್ರಮ, ವಿದ್ಯಾಪ್ರಗತಿಗಳು, ಇವುಗಳಿಂದಲೇ ಆದುದು. ಇದಕ್ಕಾಗಿ ತಲೆತಗ್ಗಿಸಿ, ನಮಿಸಿ ಹೊಗಳುತ್ತೇವೆ. ಆದರೆ ಧಾರ್ಮಿಕ ಮತ್ತು ಆರ್ಥಿಕ ಶೋಷಣೆಗಳನ್ನು ಮಾಡುತ್ತಾ ಇಪ್ಪತ್ತನೇ ಶತಮಾನದ ಮತಪ್ರವರ್ತಕ ಹಾಗೂ ಪ್ರಚಾರಕರಾಗಬೇಡಿ.

'ವಿರಾಜ'

## ಮಾರಾಟದ ಆಸ್ತಿ.

ದಕ್ಷಿಣ ಕೊಡಗು ಪೊನ್ನಂಪೇಟೆನಾಡಿನ ಕುಂದಗ್ರಾಮದ ಬಾಳೆಕಾಡಿನಲ್ಲಿರುವ 11 ಎಕ್ರೆ ನೀರಾವರಿ ಭೂಮಿ ಮತ್ತು ಮೂರು ನಾಲ್ಕು ವರ್ಷದ 6 ಎಕ್ರೆ ಕಿತ್ತಳೆ ತೋಟ ವಾಸಕ್ಕೆ ತಕ್ಕದಾದ ಒಂದು ಹಂಚು ಹಾಕಿದ ಮನೆ, ದನದ ಕೊಟ್ಟಿಗೆ, ಹತ್ತುರಾಸು ದನ ಇವುಗಳು ಮಾರಾಟಕ್ಕಿವೆ. ಹತ್ತಿರದ ಕ್ರಯ 20,000 ರೂಪಾಯಿಗಳು. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳುವುದು.

**C. A. P.**
*C/o. Sj. C. S. Mandana,*
*School Road, Mercara.*

## ತಿಳಿಯಿರಿ!

ಸ್ಥಳ—ಮುನ್ಸಿಪಲ್ ಹಾಲ್. ಸಂದರ್ಭ—ಚರ್ಚೆ.

ಸದಸ್ಯ. ಎ:—ನನ್ನ ಶಾಲೆಗೆ ಈ ವರ್ಷಕ್ಕೆ ೫೦೦೦ ರೂ ಸಹಾಯ ಬೇಕು.

,, ಬಿ:—ಈಗಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದರೆ ನಿಮ್ಮ ಶಾಲೆಯ ವಿಚಾರ ಪತ್ರಿಕೆಯಲ್ಲಿ ಏನೇನೋ ಇದೆಯಲ್ಲ!

,, ಎ:—ತುಚ್ಛ ಪತ್ರಿಕೆಗಳ ಬೆಲೆಯಿಲ್ಲದ ಮಾತಿಗೆ ನಾನು ಬೆಲೆ ಕೊಡಲಿಕ್ಕಿಲ್ಲ. ಆ ಪತ್ರಿಕೆಯ ಸುದ್ದಿ ಸುಳ್ಳು.

,, ರ:—ಪತ್ರಿಕೆಯ ಸುದ್ದಿ ಸುಳ್ಳಾದರೆ ಪತ್ರಿಕೆಯಲ್ಲಿ ಸುಳ್ಳೆಂದು ಘೋಷಿಸಬೇಕು. ಜನತೆಗೆ ತಿಳಿಸಬೇಕು. ಇಲ್ಲದಿದ್ದರೆ ನನ್ನಂತವರು ನಂಬಿಯಾರು!

,, ಬಿ:—ನಿಮ್ಮ ಶಾಲಾ ಆವರಣದಲ್ಲಿ ಶಾರದಾಪೂಜೆ ಮಾಡಲು ತಡೆದುದು ನಿಜವೆ? ನಿಜವಾದರೆ ಏಕೆ?

,, ಎ:—ನಿಜ. ಹಿಂದೂ ವಿದ್ಯಾರ್ಥಿಗಳು ಶಾರದಾಪೂಜೆಯೆಂದರೆ ಮಹಮ್ಮದೀಯರು 'ಖುರಾನ್' ಎಂದಾರು. ಇವನ್ನೆಲ್ಲಾ ತಡೆದು ನಿರ್ಜಾತೀಯತೆಯನ್ನು ಉಂಟುಮಾಡಲು!

,, ಬಿ:—೧೦ ಗಂಟೆ ಹೊಡೆಯುವಾಗ ಕ್ರಿಶ್ಚಿಯನೇತರ ವಿದ್ಯಾರ್ಥಿಗಳು ಎದ್ದು ನಿಂತಾಗ ಕ್ರಿಶ್ಚಿಯನರು ಪ್ರಾರ್ಥಿಸುವರೋ?

,, ಎ:—ಹೌದು. ದೇವರನ್ನು ಪ್ರಾರ್ಥಿಸುವರು. ಅದು ಅವರ ಪ್ರಾರ್ಥನೆ. ಧರ್ಮ ಸಾರುತ್ತದೆ.

,, ರ:—ಕ್ರಿಶ್ಚಿಯನೇತರ ವಿದ್ಯಾರ್ಥಿಗಳು ೧೧ ಗಂಟೆಗೆ ರಾಮಧುನ್ ತರಗತಿಯಲ್ಲಿ ಮಾಡಲು ಬಿಡುವಿರೋ?

,, ಎ:—ಸಾಧ್ಯವಿಲ್ಲ. ಧರ್ಮಕ್ಕೆ ವಿರುದ್ಧ. ಮತ ಒಪ್ಪುವದಲ್ಲ.

,, ರ:—ಮತಸಹಿಷ್ಣುತೆಯಿದೆಯೆ? ಪ್ರಾರ್ಥನೆಗಳೆಲ್ಲ ಒಂದೇ ಯಲ್ಲವೇ?

,, ಎ:—ಅದು ನನಗೆ ಗೊತ್ತಿಲ್ಲ. ನನ್ನ ಒಪ್ಪಿಗೆಯಿಲ್ಲ.

,, ಮ:—ಪ್ರಾರ್ಥನೆ ತರಗತಿಯ ಘಂಟೆಗಳಲ್ಲಿ ಲ್ಲದಿದ್ದರೂ ತರಗತಿಯಿಲ್ಲದ ಸಮಯದಲ್ಲಾದರೂ ನೀವು ಪ್ರಾರ್ಥನೆಗೆ, ಶಾಲಾವರಣದಲ್ಲಿ ಶಾರದಾಪೂಜೆಗೆ ಅನುಮತಿ ಕೊಡಬಹುದಿತ್ತು.

,, ಎ:—ನನಗಿಷ್ಟವಿಲ್ಲ. ನನ್ನ ತತ್ವಕ್ಕೆ, ನನ್ನ ಧರ್ಮಕ್ಕೆ ಈ ಅಭಿಪ್ರಾಯಗಳು ತೀರ ವಿರುದ್ಧ.

,, ಬಿ:—ಇಂಥಹ ವಿಚಾರಗಳು ಅನಾಗರಿಕ. ಈ ಶಾಲೆಗೆ ಹಣ ಕೊಡಲೇ ಕೂಡದು.

(ಅರ್ಧದಲ್ಲೇ ಮುಕ್ತಾಯ)

'ವಿರಾಜ'

# ನೆಹರೂ ಲಿಯಾಖತ್

## ಒಪ್ಪಂದ

ಪೂರ್ವ ಬಂಗಾಳದಲ್ಲಿ ನಡೆದ ಹಿಂದೂಗಳ ಕೊಲೆ, ಅಲ್ಲಿ ಹಿಂದೂಗಳ ಜೀವನಕ್ಕೆ ಬರುವ ತೊಂದರೆ ಮೊದಲಾದವುಗಳಿಂದ ದೇಶದಲ್ಲೆಲ್ಲಾ ಅಶಾಂತಿಗೆ ಕಾರಣವಾಗಿದ್ದು ಯುದ್ಧ ಪ್ರಾರಂಭವಾದೀತೇ ಎಂದು ಶಂಕಿಸುವ ಸಂದರ್ಭ ಬಂದಿತ್ತು. ದೂರದರ್ಶಿಗಳೂ, ಅಹಿಂಸಾಮಾರ್ಗದ ಅನುಯಾಯಿಗಳೂ ಆದ ಭಾರತದ ಪ್ರಧಾನ ಪಂಡಿತ ಜವಾಹರ್‌ಲಾಲ್ ನೆಹರೂರವರು ಪಾಕಿಸ್ಥಾನದ ಮುಖ್ಯಮಂತ್ರಿ ಲಿಯಾಖತ್ ಅಲಿ ಖಾನರನ್ನು ಡೆಲ್ಲಿಗೆ ಕರೆಸಿಕೊಂಡು ಬಹಳ ದಿವಸದ ವರೆಗೆ ಈ ಅಶಾಂತಿಯ ವಿಚಾರ ಮಾತುಕತೆ ನಡೆಸಿದರು. ಪಾಕಿಸ್ಥಾನ ಮತ್ತು ಹಿಂದೂಸ್ಥಾನಗಳೊಳಗೆ ಉದ್ಭವಿಸಿದ ವಿಚಾರ ಮತ್ತು ಪೂರ್ವ ಬಂಗಾಳದ ಅಶಾಂತಿ ಮೊದಲಾದ ಕೆಲವು ವಿಚಾರಗಳಲ್ಲಿ ಒಂದು ಒಪ್ಪಂದಕ್ಕೆ ಬಂದಿರುವರು.

ಈ ಒಪ್ಪಂದದ ಪ್ರಕಾರ ಭಾರತ ಮತ್ತು ಪಾಕಿಸ್ಥಾನ ಸರಕಾರಗಳು ಅದೂ ಅಲ್ಪಸಂಖ್ಯಾತರೆಲ್ಲರಿಗೆ ಪೌರತ್ವವನ್ನೂ, ಸರ್ವ ಸಮಾನ ಹಕ್ಕುಗಳನ್ನೂ ಕೊಡುವ ಪ್ರತಿಜ್ಞೆ ಮಾಡಿರುವವು. ಈ ಅಲ್ಪ ಸಂಖ್ಯಾತರು ಇರುವ ದೇಶಗಳಿಗೆ ಪೂರ್ಣ ನಿಷ್ಠೆಯುಳ್ಳವರಾಗಿರಬೇಕು. ತಮಗಾದ ತೊಂದರೆಗಳನ್ನು ಆಯಾಯ ಸರಕಾರಗಳೇ ನಿವಾರಿಸಿಕೊಳ್ಳಬೇಕು.

ಬಂಗಾಳ, ಅಸ್ಸಾಮುಗಳಲ್ಲಿ ನಡೆದ ಹತ್ಯಾಕಾಂಡದ ಬಗ್ಗೆ ನಡೆದ ಸಿರಾ ಪ್ರಿಪರೇಷನ್ ವಿಚಾರದಲ್ಲಿ ಅವರ ನಿರ್ಣಯ ಬಂದ ಬಳಿಕ ಪಡಿಸಿದ ಆಯಾ ಸರಕಾರಗಳು ಯೋಗ್ಯ ಸಹಾಯ ಮಾಡಬೇಕು. ಸ್ಥಳಾಂತರ ಮಾಡಲು ಇಚ್ಛಿಸುವವರು ತಮ್ಮ ನಗನಾಣ್ಯಗಳನ್ನು ಸಾಗಿಸಿಕೊಳ್ಳಬಹುದು. ದೊಡ್ಡವರು ತಲಾ ೧೫೦ ರೂಪಾಯಿಯ, ಚಿಕ್ಕವರು ೭೫ ರೂಪಾಯಿಯ ಮಿತಿಗೊಳಪಟ್ಟ ನಗದು ಹಣ ತರಬಹುದು. ತಮ್ಮ ಆಸ್ತಿಗಳನ್ನು ಬ್ಯಾಂಕಿನಲ್ಲಿಟ್ಟು ಅವಶ್ಯವಿದ್ದಾಗ ವರ್ಗಾಯಿಸಿಕೊಳ್ಳಬಹುದು. ಸುಂಕದ ಅಧಿಕಾರಿಗಳಿಂದ ಯಾವದೇ ತೊಂದರೆ ಇವರಿಗೆ ಆಗಬಾರದು. ಸ್ಥಳಾಂತರ ಹೊಂದಿದವರ ಸ್ಥಿರ ಆಸ್ತಿಗಳ ಬಗ್ಗೆ ಗಣನೆ. ಡಿಸೆಂಬರ ೩೧ರೊಳಗೆ ಅವರೇ ಹಿಂದಕ್ಕೆ ಹೋಗಿ ಕೇಳಿದರೆ ಆ ಆಸ್ತಿಗಳನ್ನು ಬಿಟ್ಟುಕೊಡತಕ್ಕದ್ದು. ಹಾಗೆ ಹೋಗಲಿಚ್ಛಿಸಲ್ಲದವರು ತಮ್ಮ ಆಸ್ತಿಗಳನ್ನು ಮಾರಾಟ ಮಾಡಬಹುದು.

ಎರಡು ಸರಕಾರಗಳೂ ಈ ಗಲಭೆ ನಡೆದ ಸ್ಥಳಗಳ್ಗೆ ತಮ್ಮ ಒಬ್ಬೊಬ್ಬ ಮಂತ್ರಿಗಳನ್ನು ನೇಮಿಸುವ ಒಪ್ಪಂದ ಮಾಡಿವೆ. ಪಶ್ಚಿಮ ಬಂಗಾಳ ಮತ್ತು ಅಸಾಂ ಪ್ರಾಂತಗಳ ಅಲ್ಪ ಸಂಖ್ಯಾತರಿಂದ ಆಯಾಯ ಸರಕಾರದ ಮಂತ್ರಿಮಂಡಲಕ್ಕೆ ಒಬ್ಬೊಬ್ಬರನ್ನು ಮಂತ್ರಿಗಳಾಗಿ ತೆಗೆದುಕೊಳ್ಳಬೇಕು.

ಈ ಒಪ್ಪಂದಗಳನ್ನು ಎರಡೂ ಸರಕಾರಗಳೂ ಜಾಗರೂಕತೆಯಿಂದ ಪರಿಪಾಲಿಸುವಂತೆ ಪ್ರತಿಜ್ಞಾಬದ್ಧವಾಗಿವೆ.

ಇವುಗಳ ಚರ್ಚೆಯ ಕಾಲಕ್ಕೆ ಪಾಕಿಸ್ಥಾನದ ಮುಖ್ಯಮಂತ್ರಿಯವರು ಪ್ರಜಾಪ್ರಭುತ್ವತತ್ವವನ್ನು ಪಾಕಿಸ್ಥಾನವು ಅಂಗೀಕರಿಸಿದೆಯೆಂದೂ ಆ ತತ್ವದಿಂದಲ್ಲದೆ ಇಂದಿನ ಆಧುನಿಕ ವಾತಾವರಣದಲ್ಲಿ ಬೇರೆ ಮಾರ್ಗ ಸಾಧ್ಯವಿಲ್ಲವೆಂದೂ ಕೇವಲ ಧರ್ಮದ ತಳಹದಿಯ ಮೇಲೆ ಒಂದು ರಾಷ್ಟ್ರನಿರ್ಮಾಣ ಅಸಂಗತವೆಂದೂ ಭಾರತದಂತೆಯೇ ಪಾಕಿಸ್ಥಾನವೂ ಜಾತ್ಯಾತೀತ ರಾಷ್ಟ್ರವಾಗುವದೆಂದೂ ಹೇಳಿರುವರು.

ಈ ಒಪ್ಪಂದವನ್ನು ಹಿಂದೂದೇಶವಿಡೀ ಸ್ವಾಗತಿಸಿದೆ. ಪಾಕಿಸ್ಥಾನದಲ್ಲೂ ಈ ಒಪ್ಪಂದಕ್ಕೆ ಬೆಂಬಲದೊರೆತಿದೆ. ಬಂಗಾಳದ ಜನರಲ್ಲಿ ಮಾತ್ರ ಪೂರ್ಣ ತೃಪ್ತಿ ಕಂಡುಬರುತ್ತಿಲ್ಲ. ಆದಾಗ್ಯೂ ಸರಕಾರವು ಈ ಒಪ್ಪಂದವನ್ನು ಅಕ್ಷರಶಃ ಪಾಲಿಸುವ ಹೇಳಿಕೆ ಇತ್ತಿದೆ. ಹೇಗೂ ಎರಡು ರಾಷ್ಟ್ರಗಳೊಳಗೆ ಬೆಳೆದು ಬರುತ್ತಿದ್ದ ಘರ್ಷಣೆಗೆ ಈ ಅಹಿಂಸಾ ಮಾರ್ಗದ ಒಪ್ಪಂದವು ಎಷ್ಟೋ ಮಟ್ಟಿಗೆ, ಘರ್ಷಣೆಯ ಭೀಕರತೆ ಕಡಿಮೆಯಾಗಿದೆ.

---

ಮುಂದಿನ ಪರಿಸ್ಥಿತಿಯನ್ನು ಎದುರಿಸೊಳ್ಳಲು ಸಿದ್ಧವಾಗುವ ಸಮಯದಲ್ಲಿ—

ನೀವು ವಿಶ್ರಾಂತಿ ಪಡೆಯುವ ಪೂರ್ವದಲ್ಲೇ ನೀವು ನಿಮ್ಮ ಭವಿಷ್ಯದ ಸಲುವಾಗಿ ಸಕಲ ವ್ಯವಸ್ಥೆಯನ್ನು ಪೂರೈಸಿಕೊಳಿಸಿದ್ದೀರೆಂಬ ಅರಿವು ಆಗಿರುವಾಗ, ಭವಿಷ್ಯವು ಸುಖದಾಯಕವಾಗಿರುವದು.

## ದಿ ಜನರಲ್

### ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಜೀವ-ಅಗ್ನಿ-ಮೋಟಾರು-ಮೆರೀನ್-ಅಪಘಾತ.

ಹೆಡ್ ಆಫೀಸ್: ಅಜ್ಮೀರ್ ಸ್ಥಾಪನೆ 1907.

ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.

---

# ಜಿ. ಎ. ಸರ್ಕಸ್ ಆಫ್ ಬಾಂಬೆ.

ಇವರು ವೀರಾಜಪೇಟೆಯಲ್ಲಿ ತಾ. 12-4-50 ರಿಂದ

## ಪ್ರತಿ ದಿನ ಎರಡು ಆಟಗಳನ್ನು

ಪ್ರದರ್ಶಿಸುವರು.

ಭಾರತದ ಸರ್ಕಸುಗಳ ಪೈಕಿ ಅಗ್ರಸ್ಥಾನ ಪಡೆದಿರುವ ಹಂಗೇರಿಯಾ, ಫ್ರೆಂಚ್ ಮಲಯಾ, ಚೈನಾ ಮತ್ತು ಇಂಡಿಯಾ ದೇಶದ 100 ಆಟಗಾರರ ಸಾಹಸಕೃತ್ಯಗಳೂ, ನೃತ್ಯ ಮತ್ತು ಕಲೆಗಳಿಂದ ಕೂಡಿದೆ

---

# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೆನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಡೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

| | |
|---|---|
| ಪಂಡಿತ ಮೋತಿಲಾಲ್ ನೆಹರು | ಎಸ್ ಶ್ರೀನಿವಾಸ ಅಯ್ಯಂಗಾರ್ |
| ಹಕೀಮ್ ಅಜಮಲಖಾನ್. | ಡಾ|| ಎಂ. ಎ. ಅನ್ಸಾರಿ |

Transacts:—Life, Fire, Motor and Marine.

| | |
|---|---|
| ಬಿ.ಂ ರಾಯ. ಅಪ್ಪಯ್ಯ, | ಎಂ. ಎ ಬೆಳ್ಯಪ್ಪ, |
| ಏಜೆನ್ಸಿ ಸುಪರಿಂಟೆಂಡೆಂಟ್, | ಬ್ರಾಂಚ್ ಸೆಕ್ರೆಟರಿ, |
| ಮಡಿಕೇರಿ, ಕೊಡಗ | ಗಾಂಧಿನಗರ, ಬೆಂಗಳೂರು |

---

## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG Apply today:

| | |
|---|---|
| *Head Office:* | K. M Bopaiah, Esq, |
| MANGALORE | *Branch Secretary for* |
| 26-3 | *Mysore & Coorg,* |
| | *85 Sultanpet BANGALORE 2* |

---

## THE WARDEN INSURANCE CO., Ltd.

**Head Office: Bombay.**

**LIFE, FIRE, ACCIDENT, MOTOR & W C. INSURANCES.**

*Managing Director:* – **S. H. THAKER**

| | |
|---|---|
| Business in force | Rs. 5,00,00,000 |
| Assets | ,, 1,00,00,000 |
| Income | ,, 35,00,000 |

Also **LOCAL MANAGERS OF**

**THE LONDON GUARANTEE & ACCIDENT CO., Ltd.**
(Incorporated in England)

Assets Exceed Rs. 10,00,00,000

a Subsidiary Company of

**THE PHOENIX ASSURANCE CO. Ltd.**
(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.

***Apply to:***

| | | |
|---|---|---|
| **Chief Agency Office** *Virajpet (Coorg)* | **or** | **A. S. Aiyappa,** *Branch Secretary, Gandhinagar,* ***BANGALORE CITY*** |

# ಯುದ್ಧ ಅನಿವಾರ್ಯವೇ?

## ಬಟ್ರ್ಯಾಂಡ್ ರಸ್ಸೆಲರ ಅಭಿಪ್ರಾಯ

ಸಂಯುಕ್ತ ಸಂಸ್ಥಾನಗಳ ಜಗತಿಕ ಪತ್ರಿಕೆಯಲ್ಲಿ 'ತೃತೀಯ ಜಾಗತಿಕ ಮಹಾಯುದ್ಧ ಅನಿವಾರ್ಯವೇ?' ಎಂಬ ಶಿರೋನಾಮೆಯಡಿಯಲ್ಲಿ ಬರ್ಟ್ರಾಂಡ್ ರಸ್ಸೆಲರವರು ಮಾರ್ಚ್ ಸಂಚಿಕೆಯಲ್ಲಿ ಬರೆದ ಲೇಖನ ವಿಚಾರ ಪರಿಪ್ಲುತವಾಗಿದೆ. ಅದರ ಸಾರಾಂಶವನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ.

ಕ್ರಿ. ಶ. ೧೦೦೦ ದಲ್ಲಿ ಜಗತ್ತಿನ ಅಂತ್ಯವಾಗುವುದೆಂಬ ಸುದ್ದಿ ಹರಡಿತ್ತು. ಆ ಕಾಲದಲ್ಲಿ ಜನರಲ್ಲಿ ಹರಡಿಕೊಂಡಿದ್ದ ಆತಂಕಕ್ಕಿಂತಲೂ ತೀವ್ರವಾದ ಆತಂಕ ಈಗ ಹರಡಿಕೊಂಡಿದೆ ಎಂದರೆ ತಪ್ಪಾಗದು. ತೃತೀಯ ಜಾಗತಿಕ ಮಹಾಯುದ್ಧವನ್ನು ಇನ್ನು ಒಂದು ದಶಮಾನದ ವರೆಗೆ ಸಂಭವಿಸದಂತೆ ತಡೆಯಲು ಸಾಧ್ಯವಾದರೆ ಮುಂದೆ ಅದು ಎಂದೂ ಸಂಭವಿಸದೆ ಇರುವುದು ಖಂಡಿತ.

ಜಾಗತಿಕ ಪರಿಸ್ಥಿತಿಯ ಇಂದಿನ ರೂಪರೇಷೆಗಳು ಈ ರೀತಿಯಾಗಿವೆ. ಸಂಪತ್ತಿನಿಂದ ಕೊಬ್ಬಿ ಕೂಡಿದ ಜನಾಂಗಗಳ ವಿರುದ್ಧ ವ್ಯಕ್ತಿಗಳು ಅಸಂತೋಷದ ಧ್ವನಿ ಎತ್ತಿದ್ದಾರೆ, ಬಡ ಜನಾಂಗಗಳ ವ್ಯಕ್ತಿಗಳು ರಷ್ಯದ ಕಡೆ ಸಾಗುತ್ತಿರುವರು. ಆದುದರಿಂದ ಇಂದಿನ ರಾಜಕೀಯದಲ್ಲಿ ವೈಲಕ್ಷಣ್ಯ ತೋರುವ ಹಿತಗಳ ಕಾದಾಟ ಜಗತ್ತನ್ನು ಬಹತೇಕವಾಗಿ ಎರಡು ಪಂಗಡ ರಷ್ಯದ ಪಕ್ಷ, ಅಮೇರಿಕಾ ಪಕ್ಷಗಳಲ್ಲಿ ಹಂಚಿಹಾಕಿದೆ.

### ಜಯವೂ ನಿಶ್ಶ್ರೇಯ

ಮುಂದೆ ಮಹಾಯುದ್ಧ ನಡೆಯುವ ಹಿನ್ನೆಲೆಯನ್ನು ನೋಡಿದರೆ ಅತಿದೊಡ್ಡ ವಿಧ್ವಂಸವನ್ನು ಕಾಣುವಂತಾಗುವುದರಲ್ಲಿ ಏನೂ ಸಂಶಯವಿಲ್ಲ. ಅದಕ್ಕಿಂತಲೂ ವಿಕೋಪದ ಒಂದು ವಿಧ್ವಂಸವನ್ನು ಮಾತ್ರ ನಾವು ಊಹಿಸಬಹುದು ಎನ್ನುತ್ತಾರೆ ಬರ್ಟ್ರಾಂಡ್ ರಸ್ಸೆಲ್. ಆ ವಿಧ್ವಂಸವೆಂದರೆ ರಷ್ಯದ ಅಧಿಕಾರ ಇಡೀ ಜಗತ್ತಿನಲ್ಲಿ ಹರಡುವುದು.

ಸದ್ಯ ನಾವು ಪ್ರೋತ್ಸಾಹಿಸುವ ಪಾಶ್ಚಿಮಾತ್ಯ ಮಾದರಿಯ ಜಗತ್ತಿನ ಸಾರ್ವತ್ರಿಕ ಪ್ರಭುತ್ವ ಕೈಗೂಡದ ಕನಸೆಂದು ಕಮ್ಯುನಿಸ್ಟರು ಎಷ್ಟೇ ಬಿರುಸಿನ ಪ್ರಚಾರ ನಡೆಸಲಿ, ಅಭಿವೃದ್ಧಿ ಆದರೆ ಎಷ್ಟು ಮಾತ್ರಕ್ಕೆ ಗುರಿ. ಈ ಅಭಿವೃದ್ಧಿಯು ಶಕ್ತಿಗಳೆಂಬುದು ಎಲ್ಲರಿಗೂ ತಪ್ಪಾಗದು.

ಕಮ್ಯುನಿಸ್ಟರ ಮೇಲ್ಪಂಕ್ತಿ ಹಿಂದೆ ಆಳಿಹೋದ ಎಷ್ಟೋ ಸಾಮ್ರಾಜ್ಯಶಾಹಿಗಳ ಪರಂಪರೆಗಿಂತ ಎಷ್ಟೋ ಪಾಲು ಅಂತಕರವಾಗಿದೆ. ಅವು ಹಿಂದೆ ಇದ್ದವುಗಳೆಲ್ಲಾ ತಾನು ಸ್ವೀಕರಿಸಿ ಮತ್ತು ಬೇರೆಗಳನ್ನು ಶಿಕ್ಷಿಸುವ ಅಧಿಕಾರ ನೀಡುತ್ತದೆ. ಅನ್ಯಾಯೋಕ್ತ ತತ್ವಾದವರಿಗೆ ಅನುನಯಮಾಡುವ ಆಶ್ವಾಸನೆಯನ್ನು ಬಾಯ್ಮಾತಿನಿಂದ ಒದಗಿಸುತ್ತಿಯದರೂ ಕಾರ್ಯರಂಗದಲ್ಲಿ ಅವರ ಭರವಸೆಯಿಲ್ಲ. ಮಹತ್ವದ ಬದಲಾವಣೆ ನೋಡುವಾಗ ಎಲ್ಲಾ ಅನ್ಯಾಯದ ಬೇರನ್ನೇ ನಾಶ ಕಂಡುಹಿಡಿದಂತೆ ತೋರಿಸಿಕೊಳ್ಳುತ್ತಿವೆ.

### ಬಲ ಹೆಚ್ಚಿಸಿಕೊಳ್ಳಬೇಕು

ತಮ್ಮಲ್ಲಿ ಐಕ್ಯತೆ ಬಲವಾಗಿದೆಯೆಂದು ಕಮ್ಯುನಿಸ್ಟರು ತಿಳಿದುಕೊಂಡಿದ್ದಾರೆ. ಇಲ್ಲ, ಅವರಲ್ಲೂ ಒಡಕಿದೆ ಎಂಬುದಕ್ಕೆ ಸಾಕಷ್ಟು ನಿದರ್ಶನಗಳು ನಮ್ಮ ಕಣ್ಣ ಮುಂದೆ ಈಗಾಗಲೇ ನಡೆದು ಹೋದವು. ಮುಂದೆ ಇನ್ನೂ ಹಲವು ಭೀಕರ ಕ್ರಾಂತಿಗಳನ್ನು ನಾವು ನೋಡಲಿದ್ದೇವೆ. ಮಾರ್ಷಲ್ ಟಿಟೋರವರಂತೆ ಇನ್ನೆಷ್ಟು ಮಂದಿ ವಿರೋಧಿಗಳು ಉದಯಿಸುವರೋ. ಚೀನದ ಎಲ್ಲಾ ನಗರ ಮಾಸ್ಕೋ ಅಧಿಕಾರಿಗಳಿಗೆ ಮಣಿಯುವುದೆಂಬುದನ್ನು ಪರೀಕ್ಷಿಸಲಿದೆ. ಪ್ರಸ್ತುತ ಉಕ್ರೇನಿನಲ್ಲಿಯೂ ಆ ದೊಂದು ರೀತಿಯ ಆಂತರಿಕ ಅತೃಪ್ತಿಯ ವಾತಾವರಣ ಕಂಡುಬಂದಿದೆ. ಸದ್ಯದಲ್ಲಿ ಅದು ಇತರ ಕಡೆಗಳಿಗೆ ಹಬ್ಬದೆ ಇರಲಾರದು.

ರಷ್ಯದ ಬೋಧನೆ ಯಾವುದೇ ರೀತಿಯಾಗಿ ನಮ್ಮ ಸ್ವಾತಂತ್ರ್ಯದ ಬಗ್ಗೆ ಸಾಕಷ್ಟು ಒಡಂಬಡಿಕೆ ಅಸಾಧ್ಯವಿಲ್ಲವೆಂಬುದು ನಿರ್ವಿವಾದ. ಯುದ್ಧದಲ್ಲಿ ಪರಿಣಾಮ ಲಾಭವಿಲ್ಲವೆಂದು ಕಡೆ ಪಕ್ಷ ರಷ್ಯವು ಕಲಿಯಿತೆಂದರೆ ಒಪ್ಪಂದಕ್ಕೆ ಅಗತ್ಯವಾದ ನಿಶ್ಚಯ ಕೈಗೊಳ್ಳಬಹುದು. ಆದುದರಿಂದ ಸದ್ಯ ಯುದ್ಧ ತಪ್ಪಿಸಲು ಮಾರ್ಗ ಅದು ಒಂದೇ. ಯುದ್ಧ ಕಾಲದಲ್ಲಿ ಶತ್ರು ಹಂಚಿಕೆಯೆಂದರೆ ರಷ್ಯಕ್ಕೆ ತಿಳಿಯುವ ಪ್ರಮಾಣದಲ್ಲಿ ಬಲವಾದ ಹೊಸ ವಿಮಾನಗಳು ಮತ್ತು ಅಸ್ತ್ರಶಸ್ತ್ರಗಳನ್ನು ಕ್ರೋಢೀಕರಿಸಬೇಕು. ಬಲ ಹೆಚ್ಚಿಸುವ ತನಕ ಬಲಗುಂದಬಾರದು.

### ಸಮಾಜ ಧ್ಯೇಯಗಳು

ಬರ್ಟ್ರಾಂಡ್ ರಸ್ಸೆಲರು ನಿರೀಕ್ಷಿಸುವ ಪಂಕ್ತಿಯ ಸ್ಥಿತಿಯನ್ನು ಬದಲಾಯಿಸಬಹುದಾದ ವಿಧ್ವಂಸನಗಳೆಂದರೆ ಸ್ವೀಡನ್, ಡೆನ್ಮಾರ್ಕ್ ಮುಂತಾದ ಜನಾಂಗಗಳೊಳಗೆ ಒಡಕು, ಒಪ್ಪಂದ ಅರಿತುಕೊಂಡಲ್ಲಿ ಕಮ್ಯುನಿಸ್ಟರ ಪ್ರಚಾರ ಕಳೆದುಕೊಂಡು ನಿಲ್ಲುವಂತೆ ಮಾಡುವುದು, ರಷ್ಯದ ಪಿಡುಗಿನ ಹಿಂದಿರುವ ಸ್ವಾತಂತ್ರ್ಯವಿಲ್ಲದ ಸ್ಥಿತಿಯನ್ನು ಬಯಲಿಗೆಳೆಯುವುದು, ಸದಾ ಪ್ರಯೋಜನಕಾರಿಯಾದ ಮಾನವೀಯ ದೃಷ್ಟಿಯನ್ನು ಹೆಚ್ಚಿಸುವುದು ಇತ್ಯಾದಿ.

ಪಶ್ಚಿಮ ರಾಷ್ಟ್ರಗಳು ಯುದ್ಧಭಯದಿಂದ ಮುಕ್ತವಾಗುವಂತೆ ರಸ್ಸೆಲರು ಸೂಚಿಸುವ ಉಪಾಯಗಳೆಂದರೆ ಈಗಲೇ ಯುದ್ಧದ ಸಿದ್ಧತೆಗಳನ್ನು ಹೊಂದುವುದು (ಇದರಲ್ಲಿ ಶ್ರೀ ಸ್ಯಾಂಜಿನ್ ಅವರ ಯೋಜನೆ ತಯಾರಿಯೂ ಸೇರಿ) ಏಷ್ಯ ಜನಾಂಗಗಳಿಗೆ ಅಭಿವೃದ್ಧಿಕರವಾದ ಸಹಾಯ ಒದಗಿಸಿಕೊಡುವುದು, ಪಶ್ಚಿಮ ರಾಷ್ಟ್ರಗಳ ಆರ್ಥಿಕತೆ ಮತ್ತು ಸಮಾಜ ವ್ಯವಸ್ಥೆಗಳ ಕುರಿತ ಬಿರುಸಿನ ಪ್ರಚಾರ, ಪ್ರತ್ಯೇಕ ಜನರಲ್ಲಿ ಚಿಕ್ಕ ಪುಟ್ಟ ಭೇದಗಳನ್ನು ಒತ್ತಟ್ಟಿಗಿಟ್ಟು ಹಿಡಿದಾಗಬೇಕೆಂದು ರಸ್ಸೆಲ್ ಕೇಳಿಕೊಳ್ಳುತ್ತಾರೆ. "ಎಂತಹ ಕಾರ್ಯ ನಡೆಯಬೇಕಾಗಿದೆ ಎಂಬುದನ್ನು ನಾವು ಸುಸಂಘಟಿತರಾಗಿ ನಡೆಸಿದ್ದರೆ ಸಾವಿರಾರು ಮರಣಕ್ಕಾಗಿ ಸಂಘಟಿತ ಹೋರಾಟ ನಡೆಸುವದಕ್ಕಿಂತ ಸಾಮಾನ್ಯ ಏಳಿಗಾಗಿ ಒಟ್ಟಿಗಿದ್ದು ಹೋರಾಡುವುದು ಲೇಸು" ಎಂದಿರುತ್ತಾರೆ.

'ಪ್ರಭಾತ'

# ವಾರ್ತೆಗಳು.

ಭಾರತ ಸರಕಾರದ ಕೈಗಾರಿಕಾ ಮಂತ್ರಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ರಕ್ಷಣಾ ಮಂ[illegible] ಗಿಯೂ ರಾಜೀನಾಮೆಯಿತ್ತಿದ್ದಾರೆ. [illegible] ಮುಖರ್ಜಿಯವರು ಯಾವ ಕಾರಣಗಳಿಗಾಗಿ ರಾಜೀನಾಮೆ ಕೊಟ್ಟಿರುವರೋ ಅದೇ ಕಾರಣಗಳಿಗಾಗಿ ವಾಣಿಜ್ಯ ಮಂತ್ರಿ ಶ್ರೀ ಕೆ. ಸಿ. ನಿಯೋಗಿಯವರೂ ರಾಜೀನಾಮೆ ಕೊಟ್ಟಿರುವುದಾಗಿ ಹೇಳಲಾಗಿದೆ. ನೆಹರೂ ಲಿಯಾಕತ್ ಒಪ್ಪಂದದಲ್ಲಿ ಅಲ್ಪಸಂಖ್ಯಾಕರ ಬಗೆ ಕೈಕೊಂಡ ನೀರ್ಮಾನವೇ ಈ ರಾಜೀನಾಮೆಗಳಿಗೆ ಕಾರಣವೆಂದು ಹೇಳಲಾಗಿದೆ.

ಭಾರತದ ಜನರು ಸುಮ್ಮನೆ ಸರಕಾರವನ್ನು ಟೀಕಿಸುತ್ತಾ ಕುಳಿತುಕೊಳ್ಳಬಾರದು. ಕಷ್ಟಪಟ್ಟು ಕೆಲಸ ಮಾಡಬೇಕು, ಹೆಚ್ಚು ಉತ್ಪಾದಿಸಬೇಕು ಎಂಬುದಾಗಿ ಆಚಾರ್ಯ ಕೃಪಲಾನಿಯವರು ಆಗ್ರಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಸ್ವಾತಂತ್ರ್ಯದ ಧನಿಕರೂ ಬ್ಲಾಕ್ ಮಾರ್ಕೆಟ್ ವರ್ತನೆಗಳೂ ಖಂಡನಾರ್ಹವೆಂದವರು ಹೇಳಿ ಅನ್ಯ ವರ್ತನೆಯಿಂದ ಸ್ವಾತಂತ್ರ್ಯಕ್ಕೆ ಕೆಡುಕುಂಟಾದುದು ಹೇಳಿದರು.

ಭಾರತದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರ್‌ರವರು ಏಪ್ರಿಲ್ ೧೦ನೇ ತಾರೀಕು ಜಾಮ್‌ನಗರಕ್ಕೆ ಆಗಮಿಸುವರು. ಪೋರಬಂದರಿನಲ್ಲಿ ಮಹಾತ್ಮಾಗಾಂಧಿಯವರು ಜನ್ಮ ತಳೆದ ಸ್ಥಳದಲ್ಲಿ ಕೀರ್ತಿಮಂದಿರವೆಂಬ ಸ್ಮಾರಕ ಭವನ ನಿರ್ಮಾಣವಾಗುವ ಸ್ಥಳಕ್ಕೆ ರಾಜಕುಮಾರಿ ಅಮೃತಕೌರ್‌ರವರು ೧೭ನೇ ತಾರೀಕು ಭೇಟಿಯೀಯುವರು.

ಪಾರ್ಲಿಮೆಂಟಿನಲ್ಲಿ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಸರಕಾರವು ಉತ್ತರವನ್ನು ಕೊಡಬೇಕಾದರೆ ಸಾಮಾನ್ಯವಾಗಿ ಒಂದು ಪ್ರಶ್ನೆಗೆ ೬೦ ರೂ. ನಂತೆ ಖರ್ಚಾಗುವುದು. ಮಂತ್ರಿಯು ಆ ಪ್ರಶ್ನೆಗೆ ಸಂಬಂಧಪಟ್ಟಂತೆ ಸಾಧಾರಣ ಕಡತಗಳನ್ನು ಪರಿಶೀಲಿಸಿ ಉತ್ತರವನ್ನು ಸಿದ್ಧಪಡಿಸಲು ತೆಗೆದುಕೊಳ್ಳುವ ಕಾಲದ ವ್ಯಯವನ್ನು ಈ ಹಣದಲ್ಲಿ ಸೇರಿಸಿಲ್ಲ. ಪ್ರಶ್ನೆಗೆ ಕೊಡಬೇಕಾದ ಉತ್ತರಕ್ಕಾಗಿ ಸಂಗತಿಗಳನ್ನು ಸಂಗ್ರಹಿಸಲು ಇಷ್ಟು ಖರ್ಚಾಗುವುದು. ಇಷ್ಟು ಖರ್ಚಾದರೂ ಅದಕ್ಕಾಗಿ ಚಿಂತಿಸಬೇಕಾಗಿಲ್ಲ. ಏಕೆಂದರೆ ವಿವಿಧ ವಿಷಯಗಳ ಬಗ್ಗೆ ಸಾರ್ವಜನಿಕರಿಗೆ ಸಮಾಚಾರಗಳು ಸರಿಯಾಗಿ ದೊರೆಯಲು ಈ ಪ್ರಶ್ನೋತ್ತರಗಳಿಂದ ಸಾಧ್ಯವಾಗುವುದು — ಎಂಬುದಾಗಿ ಭಾರತ ಹಣಕಾಸಿನ ಮಂತ್ರಿ ಡಾ. ಜಾನ್ ಮತಾಯಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಜಬ್ಬಲ್‌ಪುರದಿಂದ ೫-೬ ಮೈಲು ಅಂತರದ ಮದನಮಹಲ ಬೆಟ್ಟದ ಬಳಿ ನಿಲ್ದಾಣದ ಬಳಿ, ಗೃಹರಕ್ಷಕ ದಳದವರು ಒಂದು ಭೂಗತ ಜಲಾಶಯವನ್ನು ಕಂಡು ಹಿಡಿದಿದ್ದಾರೆ. ಈ ಜಲಾಶಯದ ಕಟ್ಟಡವು ವಿನ್ಯಾಸದಿಂದ ಗಿರಿ ಟೋಂಗೆಗಳಿಂದ ನಿರ್ಮಿಸಲ್ಪಟ್ಟಿದ್ದು, ಅದರ ಗಟ್ಟಿತನದ ಕೆಲಸ ನೋಡಿದರೆ ಮೊಗಲ್ ಕಾಲದಲ್ಲಿ ಕಟ್ಟಿದ್ದೆಂದು ಊಹಿಸಲಾಗಿದೆ.

ಪೇಶಾವರದಲ್ಲಿ, ಪಾಕಿಸ್ತಾನದ ನಾಲ್ಕನೆಯ ಯುನಿವರ್ಸಿಟಿಯು, ಪೇಶಾವರ ಯುನಿವರ್ಸಿಟಿ ಎಂಬ ಹೆಸರಿನಲ್ಲಿ ಏಪ್ರಿಲ ಕೊನೆಗೆ, ಬಹಳವಾದರೆ ಮೇ ಮಧ್ಯದಲ್ಲಿ ಪ್ರಾರಂಭವಾಗಲಿದೆ. ಆ ಬಗ್ಗೆ ಅದಕ್ಕೆ ಕೇಂದ್ರದಿಂದ ಹಣದ ನೆರವೂ ದೊರೆಯುವುದಂತೆ.

ಫಿರೋಜ್ ಲಾಯಕ್ ಅಲಿಯವರು ಹೈದರಾಬಾದ್ ಸರಕಾರಕ್ಕೆ ಒಪ್ಪಿಸಬೇಕಾದ ಹಣದ ವಿಷಯದಲ್ಲಿ ಭಾರತ ಸರಕಾರವು ಪಾಕಿಸ್ತಾನ ಸರಕಾರಕ್ಕೆ ಪ್ರಾತಿನಿಧ್ಯ ಕಳುಹಿಸುವುದನ್ನು ಯೋಚಿಸುತ್ತಿರುವುದೆಂದು ಭಾರತ ಉಪಪ್ರಧಾನ ಸರದಾರ ವಲ್ಲಭಭಾಯಿ ಪಟೇಲರು ಪಾರ್ಲಿಮೆಂಟಿನ ಮುಂದೆ ಹೇಳಿದರು.

ಅವಶ್ಯವೆಂದು ಕಂಡಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಅನರ್ಹರೆಂದು ವಿದ್ಯಾರ್ಥಿಗಳನ್ನು ವಿನಾಯತಿಪಡಿಸುವ ಅಧಿಕಾರವನ್ನು ಪ್ರಾಥಮಿಕ ಪ್ರಧಾನ ಅಧ್ಯಾಪಕರಿಗೆ ತೆಗೆದು ಕೊಡಿಸುವಂತೆ ತಿದ್ದುಪಡಿ ಮಾಡಲು ಪ್ರಾಂತೀಯ ಶಿಕ್ಷಣ ಮಂತ್ರಾಲೋಚಕ ಸಮಿತಿಯು ತನ್ನ ಸಭೆಯಲ್ಲಿ ನಿರ್ಣಯಿಸಿದೆ.

ಕಳೆದ ೩೦ರ ಸೋಮವಾರದಂದು ಮುಂಬಯಿ ಪ್ರಾಂತ್ಯದ ಅತ್ಯಂತ ಸಂಪೂರ್ಣ ಮಧ್ಯನಿಷೇಧವನ್ನು ಜಾರಿಗೆ ತರಲಾಗಿದೆ. ಮದ್ಯನಿಷೇಧವನ್ನು ಜಾರಿಗೆ ತರುವುದರಿಂದ ಸರಕಾರಕ್ಕೆ ಆದಾಯ ರೂಪವಾಗಿ ದೊರೆಯುತ್ತಿದ್ದ ೧೧ ಕೋಟಿ ರೂಪಾಯಿ ಆದಾಯವು ನಷ್ಟವಾದಂತಾಯಿತು.

ಮಲಯದ ೩,೦೦,೦೦೦ ಮಂದಿ ರಬ್ಬರು ತೋಟಗಳಲ್ಲಿ ದುಡಿಯುವ ಕೆಲಸಗಾರರಿಗೆ ಏಪ್ರಿಲ ೧ರ ಮೊದಲ್ಗೊಂಡು ಸಂಬಳದಲ್ಲಿ ೩೩ಕಡಾ ೧೨ ರಷ್ಟು ಜಾಸ್ತಿ ದೊರೆಯುವುದು. ಈ ಬಳಲ್ಲಿ ಈ ಬಗೆಯ ದಿನ ಕೂಲಿಯಲ್ಲಿ ಕೆಲಸ ಮಾಡುವ ೧೬೦ ಸಾವಿರ ಮಂದಿ ಹಿಂದೀಯ ಕೂಲಿಗಾರರಿಗೂ ಅನ್ವಯಿಸುವುದು.

ಜಗತ್ತಿನ ಅತ್ಯುನ್ನತ ಪರ್ವತಗಳಲ್ಲಿ ಐದನೇ ಸ್ಥಾನವನ್ನು ಗಳಿಸಿರುವ ಧವಳಗಿರಿ ಪರ್ವತಾರೋಹಣ ಮಾಡಲೆಂದು (ಎತ್ತರ ೨೬,೮೧೦ ಅಡಿ) ಎಂಟು ಮಂದಿ ಫ್ರೆಂಚ್ ಪರ್ವತಾರೋಹಿಗಳು ಪ್ಯಾರಿಸ್ಸಿನಿಂದ ವಿಮಾನ ಮೂಲಕ ನೇಪಾಳಕ್ಕೆ ಹೋಗಿರುವರು.

ಹಿಂದೂ ಮಹಾಸಭೆಯ ಅಧ್ಯಕ್ಷ ಡಾ. ಎನ್. ಬಿ. ಖಾರೆ ಮತ್ತು ನಾಲ್ಕು ಮಂದಿ ಇತರ ಹಿಂದೂ ಮಹಾಸಭಾ ಮುಖಂಡರನ್ನು ದಿಲ್ಲಿಯಿಂದ ಗಡೀಪಾರು ಮಾಡಿರುವರು. ಡಾ. ಖಾರೆಯವರನ್ನು ನಾಗಪುರಕ್ಕೆ ಒಯ್ದರು. ಇತರ ಪ್ರಮುಖ ಹಿಂದೂಮಹಾಸಭಾ ಮುಖಂಡರ ಚಲನವಲನಗಳನ್ನೂ ನಿರ್ಬಂಧಿಸುವ ಹಂಚಿಕೆಗಳು ನಡೆಯುತ್ತಿವೆ.

## ಗ ಮ ನಿ ಸಿ ರಿ!

ದಿನದಿನ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಉತ್ಕೃಷ್ಟವು ಸಿಲ್ಕ್, [illegible] ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ. ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿವೆ. ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

ಪಟ್ಟೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು.

52–14

## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ಥನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಭದ್ರತೆ! 17 ವರ್ಷಗಳ ಅನುಭವಶೀಲತೆ!! ಅನುಕೂಲತೆ !!

## ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ. ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

# CRESCENT

**FOR PROTECTION AND SERVICE.**

It is best to represent and insure with The CRESCENT Insurance Co., Ltd,

*H: O: BOMBAY.*] [*Established 1919.*

*For particulars write to:*

Sri B. A. Poovaiah *Organiser* *Pollibetta, Coorg.* or The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

## ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ಕೋಠಾರಿಲಾಲ್, ಜನರಲ್ ಮ್ಯಾನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.

## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–6–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–34

Edited, Printed and Published by P. I. Belliappa at 'Kodagu Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೨೧-೪-೧೯೫೦ನೇ ಶುಕ್ರವಾರ | ಸಂಚಿಕೆ ೪೭

ದು ದೊಡ್ಡ ವಿರೋಧ ಪ್ರದರ್ಶನವೇ ನಡೆಯಿತು. ಈ ಪ್ರದರ್ಶನವು ಕಮ್ಯೂನಿಸ್ಟ್ ಪ್ರೇರಿತವೆಂದು ಹೇಳುವದು ಅನ್ಯಾಯ. ಕೊಡಗಿನ ಎಲ್ಲಾ ವರ್ಗದ ಜನರೂ ಇದರಲ್ಲಿ ಭಾಗವಹಿಸಿರುವರು. ಫೈನಾನ್ಸ್ ಕಮಿಟಿಗೆ ಯೋಗ್ಯ ಅಧಿಕಾರವಿಲ್ಲ. ಸರಕಾರಕ್ಕೆ ಹಿತವಾದಾಗ ಮಾತ್ರ ಇದರ ಅಭಿಪ್ರಾಯ ತೆಗೆಯುವರು! ಮುನ್ಸಿಪಾಲಿಟಿಗಳಿಗೆ ಹೆಚ್ಚಿನ ಸಹಾಯಬೇಕು.

ಶ್ರೀ ಕೆ. ಎಂ. ಕುಶಾಲಪ್ಪನವರು.

ಮೋಶಾ ಬಡ್ಜೆಟ್ಟುಗಳು ಎರಡು ಪ್ರಾಮುಖ್ಯ ಕಾರಣಗಳಿವೆ. ಒಂದು ಪಾರ್ಶ್ವಪಾನನಿರೋಧವನ್ನು ಜಾರಿಗೆ ತಂದರಿ ಪ್ರಾಂತವಾಗಿ ಮಾಡಬಹುದು. ಗ್ರಾಮದ ಪಟೇಲರೇ ಸರಕಾರ ಮತ್ತು ಜನತೆಯ ಮಧ್ಯದ ಸಂಬಂಧಿಗಳು. ಅವರ ಜವಾಬ್ದಾರಿ ಹೆಚ್ಚುತ್ತಿದೆ. ಆದರೆ ಅವರಿಗೆ ಕೊಡುತ್ತಿರುವ ವೇತನವು ಏನೂ ಸಾಲದು. ಇದನ್ನು ಹೆಚ್ಚಿಸುವದು ಅವಶ್ಯ.

ಶ್ರೀ. ಎಸ್. ಎಸ್. ನಾರಾಯಣ ಮೂರ್ತಿಯವರು.

ಬಡ್ಜೆಟ್ಟಿನಲ್ಲಿ ವಿವಿಧ ಬಾಬುಗಳಿಗಾಗಿ ಇಟ್ಟ ಹಣವು ಖರ್ಚಾಗದೆ ಉಳಿಯುವದು ಸಲ್ಲದು. ಇದಕ್ಕಾಗಿ ಕೊಡುವ ಕಾರಣವೂ ಸಮಂಜಸವಾದುದಲ್ಲ. ವೈ

# ಕೊಡಗು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಮೀಟಿಂಗು.

ಕೊಡಗು ಶಾಸನ ಸಭೆಯ ಬಡ್ಜೆಟ್ ಮೀಟಿಂಗು ತಾ. ೧೭-೪-೫೦ ರಿಂದ ಪ್ರೆಸಿಡೆಂಟರಾದ ಕರ್ನಲ್ ದಯಾಸಿಂಗ್ ಬೇಡಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರಥಮವಾಗಿ ಪ್ರಶ್ನೋತ್ತರಗಳು ನಡೆದವು. ನಂತರ ಕೌನ್ಸಿಲು ಸೆಕ್ರೆಟರಿಯವರು ಈ ಹಿಂದ ಶಾಸನ ಸಭೆಯಲ್ಲಿ ಪಾಸಾದ ಠರಾವುಗಳ ಬಗ್ಗೆ ಸರಕಾರದ ನಿರ್ಣಯವನ್ನು ಸಭೆಯ ಮುಂದಿಟ್ಟರು. ಫೈನಾನ್ಸ್ ಮೆಂಬರರು ೧೯೫೦-೫೧ ರ ಕೊಡಗು ಸರಕಾರದ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟು ತಮ್ಮ ಭಾಷಣವನ್ನು ಮಾಡಿದರು. (ಇದರ ಸಾರಾಂಶವನ್ನು ಬೇರೆಡೆ ಕೊಡಲಾಗಿದೆ) ನಂತರ ಬಡ್ಜೆಟ್ಟಿನ ಮೇಲೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದರು.

ಶ್ರೀ. ಕೆ. ಮಲ್ಲಪ್ಪನವರು.

ಬಡ್ಜೆಟ್ ಮೋಶಾ ಬಡ್ಜೆಟ್ಟು. ಹೀಗೆ ಮೋಶೆ ತೋರಲು ಅನಾವಶ್ಯದ ಅನೇಕ ಖರ್ಚಿನ ಬಾಬುಗಳನ್ನು ತೋರಿಸಲಾಗಿದೆ. ಅನೇಕ ಪ್ರಾಮುಖ್ಯ ರಾಷ್ಟ್ರರಚನಾ ಕೆಲಸಗಳಿಗೆ ಹಣವಿಡದೆ, ರೈತರ ಹಿತಕ್ಕಾಗಿ ಹೆಚ್ಚಿನ ಗಮನವಿಡದೆ ಬೇರೆ ವಿಚಾರಗಳಿಗೆ ಗಮನಕೊಡಲಾಗಿದೆ. ರೈತನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಮಾರ್ಗಗಳಿಲ್ಲ. ರೈತನ ಬೆಳಸಿಗೆ ಸ್ವಲ್ಪ ಏರಿದ ಬೆಲೆ ಇದ್ದರೂ ಆದರ ಸದುಪಯೋಗವನ್ನು ಆತನು ಮಾಡಿಕೊಳ್ಳಲಾರ. ನೀರಾವರಿ ಯೋಜನೆ ಸರಿಯಾಗಿರದೆ ಮಳೆಯನ್ನೇ ನಂಬಿರುವ ರೈತನ ಭೂಉತ್ಪಾದನೆಯು ಹೆಚ್ಚಾಗಿರುವದಿಲ್ಲ. ಈ ಕೌನ್ಸಿಲು ಪ್ರಾರಂಭವಾದಂದಿನಿಂದಲೂ ಚಿಕ್ಕ ನೀರಾವರಿಯೋಜನೆಯ ಬಗ್ಗೆ ಗಮನವಿಡಬೇಕೆಂದು ಕೂಗುತ್ತಿದ್ದರೂ ಪ್ರಯೋಜನವಾಗಿಲ್ಲ. ಆರ್ಥಿಕ ಸದಸ್ಯರು ತಮ್ಮ ಭಾಷಣದಲ್ಲಿ ಒಕಟ್ಟೆಕಟ್ಟಿಸಿದ್ದೇವೆ ೭೭ ಕೆರೆ ರಿಪೇರಿ ಮಾಡಿರುವೆವು. ವೈಲು ವೈಲುಗಳ ಉದ್ದದ ಕಾಲುವೆ ತೋಡಿರುವೆವು. ಎಂದು ತೃಪ್ತಿಯಿಂದ ಹೇಳಿದರು. ಇದೆಲ್ಲ ಎಲ್ಲಿ ಮಾಡಿಸಿರುವರೋ ನನಗೆ ತಿಳಿಯದು. ನನ್ನ ನಾಡಿನಲ್ಲಿ ಒಂದೇ ಒಂದು ಕೆರೆ ರಿಪೇರಿಯಾಗಲೀ, ಬೇರೆ ನೀರಾವರಿ ಏರ್ಪಾಡಾಗಲೀ ಮಾಡಿದ್ದು ನನಗೆ ಕಂಡು ಬಂದಿಲ್ಲ. ವ್ಯವಸಾಯ ಪ್ರದರ್ಶನಾ ಕ್ಷೇತ್ರಗಳಿಂದ ಯಾವ ರೈತನಿಗೂ ಪ್ರಯೋಜನವಾಗಿಲ್ಲ. ಬೆಲ್ಲ ಮಾಡುವ ಉದ್ಯಮವು ಲಾಭದಾಯಕವಾಗಲು ಕಾರಣವಿಲ್ಲ. ಬೆಲ್ಲ ಮಾಡಬಹುದಾದರೂ ಇದಕ್ಕೆ ಬೇಕಾದ ಸಿಹಿ ಸೋದಿಯನ್ನು ವಿವಿಧ ಭಾಗಗಳಿಂದ ಸಂಗ್ರಹಿಸಬೇಕಾಗುವದರಿಂದ ಖರ್ಚು ಹೆಚ್ಚಾಗಿ ಉದ್ಯಮವು ಲಾಭದಾಯಕವಾಗದು. ಮಲೇರಿಯಾ ನಿವಾರಣಾ ಕೆಲಸಕ್ಕೆ ಬಡ್ಜೆಟ್ಟಿನಲ್ಲಿ ಏನೂ ಇಡದಿರುವದು ವಿಷಾದಕರ. ಈ ಇಲಾಖೆಯು ಚೆನ್ನಾಗಿ ಕೆಲಸ ಮಾಡಿದೆ. ಕೊಡಗಿನಲ್ಲಿ ಮಲೇರಿಯಾವು ಬಹು ಕಡಿಮೆಯಾಗಿದೆ. ಇನ್ನೂ ವಿಸ್ತೃತ ರೀತಿಯಿಂದ ಇವರ ಕೆಲಸ ನಡೆಯಬೇಕಿತ್ತು. ಬದಲು ಸರಕಾರವು ಕೇವಲ ಹತ್ತು ಹದಿನೈದು ರೋಗಿಗಳಿಗೆ ಪ್ರಯೋಜನವಾಗಬಹುದಾದ ಕ್ಷಯರೋಗಾಸ್ಪತ್ರೆಗೆ ಹಣವಿರಿಸಿದೆ. ಸಾವಿರಾರು ಜನರ ಉಪಯೋಗಕ್ಕಿರುವ ಮಲೇರಿಯಾ ಇಲಾಖೆಗೆ ಹಣವಿಡದಿರುವದು ಶೋಚನೀಯ. ದೇಶದ ಪ್ರಾಥಮಿಕ ವಿದ್ಯಾಭ್ಯಾಸವು ಕೊಳೆಯುತ್ತಿದೆ. ಕಾಲೇಜಿನ ಸ್ಥಾಪನೆಗೆ ನಾನು ವಿರೋಧವಲ್ಲದಿದ್ದರೂ, ವಿಸನಂಗಳು ಹೊರಬಹುದಾಗಿದ್ದ ಈ ಜವಾಬ್ದಾರಿಯನ್ನು ಪಕ್ಷರಾಜಕೀಯದ ಕಾರಣ ಸರಕಾರ ಹೊರಬೇಕಾಗಿ ಬಂದು ಲಕ್ಷಗಟ್ಟಲೆ ರೂಪಾಯಿ ಅನಾವಶ್ಯ ವೆಚ್ಚವಾಗಲಿದೆ. ನಮ್ಮ ರಾಜ್ಯಘಟನೆಯಲ್ಲಿ ಮುಂಬರುವ ಹತ್ತು ವರ್ಷಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರಬೇಕೆಂದಿದ್ದರೂ, ಬೆಳೆಯುತ್ತಿರುವ ಖರ್ಚಿನ ದೆಸೆಯಿಂದ ಕೊಡಗು ಸರಕಾರವು ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುವದೋ ನಾನರಿಯೆ. ನಮ್ಮ ರಾಜಘಟನೆಯು ಪ್ರಾಪ್ತ ಮತದಾನಪದ್ಧತಿಯನ್ನು ಅಂಗೀಕರಿಸಿರುವದರಿಂದ ಈ ಕಡ್ಡಾಯ ಶಿಕ್ಷಣ ಕ್ರಮವು ಅತ್ಯವಶ್ಯ. ಸರಕಾರವು ಅರಣ್ಯ ಇಲಾಖೆಯ ಬಗ್ಗೆ ಅನುಸರಿಸುತ್ತಿರುವ ನೀತಿಯು ಉತ್ತರ ಕೊಡಗಿನಲ್ಲಿ ಹಿತಕರವಾಗಿಲ್ಲ. ಜನರು ಎಲ್ಲಿ ಜಾಗ ಕೇಳಿದರೂ ಗಂಧದ ಮರಗಳಿವೆಯೆಂದು ಆ ಜಾಗವೇ ಕೊಡಲ್ಪಡುವದಿಲ್ಲ. ಗಂಧದ ಮರಗಳಿಗೆ ಕೊಡುವ ಬೋನಸ್ಸು ಸಾಲದು. ಮರದ ಬೆಲೆಯ ಶೇಕಡ ೪೦ ರ ವರೆಗೆ ದೊರೆತರೆ ರೈತರು ಗಂಧದ ಮರಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳದಿರರು. ಸರಕಾರದ ಕಡ್ಡಾಯ ಕಂದಾಯ ನೀತಿಯು ಖಂಡನಾರ್ಹ. ಈ ಮಸೂದೆಯನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡಲಾಗಿದೆ. ಈ ಕಂದಾಯ ಕೂಡದೆಂದು. ಮತ್ತೊಂದು ಕಟ್ಟಡ, ನೌಕರವರ್ಗಗಳಿಗೆಂದು ಇಟ್ಟ ದೊಡ್ಡ ಹಣದಿಂದಾದುದು. ಇವನ್ನು ಸರಿಗಟ್ಟಲು ವ್ಯವಸಾಯ ಆದಾಯ ತೆರಿಗೆಯನ್ನು ಜಾರಿಗೆ ತರಬೇಕಿತ್ತು. ಇದನ್ನು ಜಾರಿಗೆ ತಂದರೆ ಕಡ್ಡಾಯ ಕಂದಾಯ ಮಸೂದೆಯನ್ನು ಜಾರಿಗೆ ತಾರದೆ ಹಿಂತೆಗದುಕೊಳ್ಳಬಹುದು. ಯುದ್ಧೋತ್ತರ ಪುನರ್ರಚನೆಗೆಂದು ದೊಡ್ಡ ಹಣವಿಟ್ಟಿರುವದು ಯೋಗ್ಯ. ಆದರೆ ಪಿ. ಡಬ್ಲ್ಯು. ಡಿ. ಯವರು ಪ್ರಧಾನ ಪಾತ್ರವಹಿಸಿ ಶ್ರಮಿಸಬೇಕು. ಈ ಇಲಾಖೆಯನ್ನು ತಾತ್ಕಾಲಿಕವಾಗಿ ಕೇಂದ್ರ ಸರಕಾರದ ಹಿಡಿತಕ್ಕೆ ವರ್ಗಾಯಿಸಿದ್ದರಿಂದ ಕೆಲಸ ವಿಳಂಬವಾಗಿ ಅಪಾರ ಹಾನಿಯಾಗುತ್ತಿದೆ. ಈ ಇಲಾಖೆಯು ಸ್ಥಳೀಯ ಸರಕಾರದ ಹಿಡಿತಕ್ಕೆ ಶೀಘ್ರ ಬರಬೇಕು. ವೆಟರ್ನರಿ ಇಲಾಖೆಯು ಒಳ್ಳೆ ಕೆಲಸವಾಗುತ್ತಿದೆ. ಹಿಂದೆ ಆಗಾಗ್ಗೆ ಬರುತ್ತಿದ್ದ ದನಗಳ ರೋಗವು ಹಿಡಿತದಲ್ಲಿಡಲ್ಪಟ್ಟಿದೆ. ಈ ಇಲಾಖೆಯು ವಿಸ್ತಾರಗೊಳ್ಳುತ್ತಿದೆ. ವೈದ್ಯ ಇಲಾಖೆಯೂ ಕೂಡ ವಿಸ್ತಾರಗೊಳ್ಳುತ್ತಿದೆ. ಕೊಡಗಿನಲ್ಲಿರುವಂತೆ ಪ್ರತಿ ಐದು ಮೈಲುಗಳಲ್ಲಿ ಆಸ್ಪತ್ರೆಯ ಸೌಕರ್ಯ ಬೇರೆಲ್ಲೂ ಇರಲಾರದು. ಹೊಸ ವಾರ್ಡುಗಳಿಗಾಗಿ, ಕ್ಷಯರೋಗಾಸ್ಪತ್ರೆಗಾಗಿ ಇಟ್ಟ ಹಣ ಈ ವರ್ಷವೇ ಖರ್ಚಾಗಬೇಕು. ವಿದ್ಯಾ ಇಲಾಖೆಯೂ ವಿಸ್ತಾರಗೊಳ್ಳುತ್ತಿದೆ. ಪ್ರತಿ ಶಾಲೆಗಳೂ ಮುಂದುವರಿಯಲೆಳಸುತ್ತಿವೆ. ಪ್ರಾಥಮಿಕ ಶಾಲೆ ಮಾಧ್ಯಮಿಕವಾಗಲು, ಮಾಧ್ಯಮಿಕ ಶಾಲೆ ಹೈಸ್ಕೂಲಾಗಲು ತವಕಪಡುತ್ತಿವೆ. ಇದಕ್ಕೆ ಪ್ರೋತ್ಸಾಹ ದೊರೆಯಬೇಕು. ಕಾಲೇಜನ್ನು ಸ್ಥಾಪಿಸಿ ಅದಕ್ಕೆ ಯೋಗ್ಯ ಸಿಬ್ಬಂದಿಗಳನ್ನು ಒದಗಿಸಿ ಹಿಂದಿನ ಚೀಫ್ ಕಮಿಷನರು ಸ್ತುತ್ಯಾರ್ಹ ಕೆಲಸವಾಡಿದರು. ೧೯೫೧ ರೊಳಗೆ ಕಟ್ಟಡವಾಗದಿದ್ದರೆ ವಿಶ್ವವಿದ್ಯಾಲಯದ ಸಂಯೋಜನೆ ತಪ್ಪುವ ಗಂಡಾಂತರವಿರುವದರಿಂದ ಅದರೊಳಗೆ ಕಟ್ಟಡ ಕಟ್ಟುವಂತೆ ಏರ್ಪಡಿಸಿ ಈಗಿನ ಚೀಫ್ ಕಮಿಷನರು ಜನಾನುರಾಗವನ್ನು ಪಡೆಯಬೇಕೆಂದು ಅಭಿಪ್ರಾಯವಾಗಿದೆ. ಗ್ರಾಮಗಳು ದೇಶದ ಬೆನ್ನೆಲುಬು. ಗ್ರಾಮ ಸುಧಾರಣೆಯನ್ನು ಪರಿಕ್ಷಾರ್ಥವಾಗಿ ನಡೆಸಿದರೆ ಸಾಲದು. ವಿಸ್ತೃತರೀತಿಯಿಂದ ಈ ಕೆಲಸ ನಡೆಯಬೇಕು. ಗ್ರಾಮ ಪಂಚಾಯಿತ ಯೋಜನೆಯನ್ನು ಜಾರಿಗೆ ತಂದು ಕೊಡಗನ್ನು ಮಾದರಿಯ ಇಲಾಖೆಗಾಗಿ ಮೂರು ಲಕ್ಷ ರೂಪಾಯಿ ಇಡಲ್ಪಟ್ಟಿದೆ. ಇದು ಸಾಲದು. ನಮ್ಮ ಪ್ರಾಂತದ ಕೇಂದ್ರ ಆಸ್ಪತ್ರೆಯಾದ ಮಡಿಕೇರಿ ಆಸ್ಪತ್ರೆಯು ಬೇಕಾದ ಸಲಕರಣೆಗಳಿಂದ ಕೂಡಿಲ್ಲ. ಕಷ್ಟ ಸಂದರ್ಭದಲ್ಲಿ ಜನರು ಹೊರಗಿನ ಆಸ್ಪತ್ರೆಗಳಿಗೆ ಹೋಗಬೇಕಾಗುತ್ತದೆ. ಈ ಆಸ್ಪತ್ರೆಯಲ್ಲಿ ವಿವಿಧ ವಿಚಾರಗಳಲ್ಲಿ ವಿಶೇಷ ಯೋಗ್ಯತೆ ಪಡೆದವರಿಲ್ಲ. ಆಸ್ಪತ್ರೆಯಲ್ಲಿ ಸ್ಥಳವಿಲ್ಲ. ವರಾಂಡದಲ್ಲಿ ಕಾಯಿಲಸ್ಥರು ಮಲಗಬೇಕಿದೆ. ಈ ವಿಚಾರಗಳನ್ನು ಆಗಿಂದಾಗ್ಗೆ ಹೇಳುತ್ತಿದ್ದರೂ ಸರಕಾರವು ಗಮನವಿತ್ತಿರುವದಿಲ್ಲ. ಕೊಡಗಿನ ಎಲ್ಲಾ ಆಸ್ಪತ್ರೆಗಳ ಸ್ಥಿತಿ ಇದೇ ಆಗಿದೆ. ವ್ಯವಸಾಯ ಇಲಾಖೆಗೆ ಇಟ್ಟ ಆರು ಲಕ್ಷ ರೂಪಾಯಿ ಸಾಲದು. ಕೊಡಗು ವ್ಯವಸಾಯಗಾರರ ನಾಡಾಗಿದ್ದು ವ್ಯವಸಾಯ ಆಧುನಿಕ ರೀತಿಯಲ್ಲಿ ಅಭಿವೃದ್ಧಿಯಾಗಬೇಕಾದರೆ ಹೆಚ್ಚಿನ ಖರ್ಚು ಆಗಬೇಕು. ಗ್ರಾಮಾಂತರಗಳಲ್ಲಿ ಯೋಗ್ಯ ರೀತಿಯ ಪ್ರಚಾರ ನಡೆಯಬೇಕು. ರೈತರಿಗೆ ಸಕಾಲದಲ್ಲಿ ಗೊಬ್ಬರ ಒದಗಿಸಬೇಕು. ಪ್ರೌಢ ಶಾಲೆಗಳ ವಿದ್ಯೆಗೆಂದು ಒಂದೂವರೆ ಲಕ್ಷ ರೂಪಾಯಿಗಳನ್ನಿಟ್ಟು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ರೂ ೭೫,೦೦೦ ಇಟ್ಟದ್ದು ಖಂಡಿತ ಸಾಲದು. ಇದರ ಎರಡು ಪಾಲಾದರೂ ಬೇಕಿತ್ತು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿ ಬರಬೇಕಿರುವಾಗ ಈ ಪ್ರಯತ್ನ ಸಾಲದು. ಜಿಲ್ಲಾ ಬೋರ್ಡಿನ ಕೈಕೆಳಗಿನ ವಿದ್ಯಾಸಂಸ್ಥೆಗಳು ಅತೃಪ್ತಿಯಲ್ಲಿವೆ. ಸರಕಾರಿ ನೌಕರರನ್ನೇ ಶ್ರಮವಹಿಸಿ ದುಡಿಯುವ ಇವರಿಗೆ ಆ ರೀತಿಯ ವೇತನ ಕೊಡದಿರುವದು ಅತೃಪ್ತಿಗೆ ಕಾರಣವಾಗಿದೆ. ಸರಕಾರವು ಜಿಲ್ಲಾ ಬೋರ್ಡಿನಿಂದ ವಿದ್ಯಾ ಇಲಾಖೆಯನ್ನು ವಹಿಸಿಕೊಂಡು ಈ ಅತೃಪ್ತಿಯನ್ನು ನಿವಾರಿಸಬೇಕು. ಇತ್ತಲಾಗ ನೇಮಿಸಿದ ಸುಪರ್‌ವೈಜರ ನೇಮಕವು ಅತೃಪ್ತಿಕರ. ಅಧ್ಯಾಪಕರಾಗಿ ಅಯೋಗ್ಯರೆಂದು ಗಣಿಸಲ್ಪಟ್ಟವರಿಗೆ ಈ ರೀತಿ ಪ್ರಮೋಶನ್ ಕೊಟ್ಟದು ಸಲ್ಲದು. ಕೈಗಾರಿಕೆಗಳಿಗೆಂದು ಯಾವ ಹಣವೂ ಇಡಲ್ಪಟ್ಟಿರುವದಿಲ್ಲ. ಗುಡಿಕೈಗಾರಿಕೆಗಳನ್ನಾದರೂ ಸರಕಾರ ಕೈಗೊಳ್ಳಬಹುದಿತ್ತು.

ಶ್ರೀ ಪಿ. ಎಂ. ನಾಣಮ್ಮಯ್ಯನವರು

ಮೋಶಾ ಬಡ್ಜೆಟ್ಟಾಗಲು ಕಾರಣ ಪಾನ ನಿರೋಧವಲ್ಲ. ಬದಲು ಕೇಂದ್ರ

# ಬಜೆಟ್ಟಿನ ಮೇಲೆ ಜನ ಪ್ರತಿನಿಧಿಗಳ ಅಭಿಪ್ರಾಯ.

ಸರಕಾರದಿಂದ ವಂತಿಗೆ ದೊರೆಯುದಕ್ಕೂ; ಉದ್ಯೋಗಿಗಳಿಗೆ ಏರಿಸಿದ ವೇತನ ಮೊತ್ತ ತಟ್ಟಿ ಬಕ್ಕ ಕೊಡಬೇಕಾದುದು ಪ್ರತಿ ವರ್ಷದಂತೆ ಸಂಪ್ರದಾಯಕ್ಕನುಸಾರ ಈ ಬಜೆಟ್ಟು ತಯಾರಾಗಿದೆ. ರಾಷ್ಟ್ರೀಯ ನಾ ನಿಜ ರಂಗಗಳಿಗೆ ಹಣವಿಟ್ಟಿರುವದಿಲ್ಲ. ಅಲ್ಪಸ್ವಲ್ಪ ಇಟ್ಟದ್ದೂ ಕೂಡ ಖರ್ಚಾಗದೆ ಉಳಿಯುವದು. ಕಳೆದ ಸಾರಿ ಯು ಗ್ರೋತ್ರ ಯೋಜನೆಗೆಂದಿಟ್ಟ ೩೦ ಲಕ್ಷ ರೂಪಾಯಿಯಲ್ಲಿ ಅರ್ಧ ಕಾಸು ಖರ್ಚಾಗಿಲ್ಲ. ಬಜೆಟ್ಟಿನಲ್ಲಿ ಆಕರ್ಷಕವಾಗಿ ತೋರಿಸಿ ನಂತರ ಖರ್ಚುಮಾಡದೆ ಇರುವ ನೀತಿ ಯೋಗ್ಯವಲ್ಲ. ಶಾಸನ ಸಭೆಯೆಂದು ಕರೆಯಲ್ಪಡುವ ಈ ಸಭೆಯ ಸದಸ್ಯರಿಗೆ ಆಡಳಿತದಲ್ಲಿ ಕೈ ಇಲ್ಲ. ಹಿಂದೂ ದೇಶಕ್ಕೆ ಸ್ವಾತಂತ್ರ್ಯ ದೊರೆತಿದ್ದರೂ ಇಲ್ಲಿ ಹಿಂದಿನ ಅನಾಯಕ ಆಡಳಿತವೇ ನಡೆದಿದೆ. ಇಲ್ಲಿಯ ಸ್ಥಿತಿಯು ಕಳೆದ ೨೫ ವರ್ಷಗಳ ಹಿಂದಿನಂತೆಯೇ ಇದೆ. ಇಲ್ಲಿಯ ಜನರು ತೃಪ್ತರಾಗಿದ್ದಾರೆ ಶಾಂತರಾಗಿದ್ದಾರೆ ಎಂದು ಸರ್ದಾರ ಪಟೇಲರು ಹೇಳಿದ್ದು ಇಲ್ಲಿಯ ಜನರ ಸ್ಥಿತಿಯನ್ನು ಅರಿಯದೆ ಆಗಿದೆ. ಈ ಕೌನ್ಸಿಲನ್ನು ಪ್ರಜಾಪ್ರಭುತ್ವ ತತ್ವಗಳ ತಳಹದಿಯಲ್ಲಿ ಪುನರ್ಘಟಿಸಿ ಹೊಸ ಚುನಾವಣೆ ಮಾಡಲು ಕೇಂದ್ರ ಸರಕಾರವನ್ನು ಕೇಳಬೇಕೆಂದು ಚೀಫ್ ಕಮಿಷನರಿಗೆ ಸೂಚಿಸುತ್ತೇನೆ. ರೆಪಿನ್ಯೂ ಇಲಾಖೆಯ ಕೆಲಸ ಹೆಚ್ಚುತ್ತಿದ್ದರೂ ನಾಡು ಖಜಾನೆಗಳ ಸಂಖ್ಯೆಯನ್ನು ಕಡಿಮೆ ಮಾಡಿರುವದರಿಂದ ಅನೇಕ ವರ್ಷಗಳು ನಂತ್ರಿತ್ರಕ ಕೆಲಸಗಳು ಆಗದೆ ಉಳಿದಿವೆ. ಕೆಲವು ಕಡೆಗಳಲ್ಲಿ ಕಾಗದ ಪತ್ರಗಳೇ ಕಾಣೆಯಾಗಿವೆ. ಚೀಫ್ ಕಮಿಷನರು ಈ ನಾಡ ಖಜಾನೆಗಳನ್ನು ಸಂಬಂಧಿಸಿದ ಪರಿಸ್ಥಿತಿ ತಿಳಿದಂತ ಪಾರುಪತ್ತೆಗಾರರ ಕೆಲಸ ಹೆಚ್ಚಾದರೂ ವೇತನ ಕಡಿಮೆಯಾಗಿದೆ. ವೈದ್ಯಕೀಯ ಇಲಾಖೆಯ ಪರಿಸ್ಥಿತಿ ತೃಪ್ತಿಕರವಾದರೂ ಪರಿಪೂರ್ಣವಿಲ್ಲ. ಆಸ್ಪತ್ರೆಗಳಲ್ಲಿ ಸಾಕಷ್ಟು ಸಲಕರಣೆಗಳಿಲ್ಲ. ಕೊಡಗಿನ ಬಹು ಸಂಖ್ಯೆಯ ಆಸ್ಪತ್ರೆಗಳೆಲ್ಲ ಜನರಿಂದಲೇ ಕಟ್ಟಲ್ಪಟ್ಟವು. ಸರಕಾರವು ಈ ಆಸ್ಪತ್ರೆಗಳಿಗೆ ಡಾಕ್ಟರರನ್ನು ಒದಗಿಸಲೂ ಅಸಮರ್ಥವಾಗಿದೆ. ವಿದ್ಯಾ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿಯೂ ಗಲೀ ಸ್ಥಳ ವಕಾಶವಾಗಲೀ ಇಲ್ಲ. ಮೇಲ್ವಿಚಾರಣೆಯೂ ತೃಪ್ತಿಕರವಲ್ಲ. ತಕ್ಕ ಬೇಕಾಗಿರುವ ಅಧ್ಯಾಪಕರು, ಆಸ್ಪೃಶ್ಯ ಜಿಲ್ಲಾ ಬೋರ್ಡು ಮತ್ತು ಸರಕಾರದ ಧ್ಯೇಯದ ಹಿಡಿತವು ಪ್ರಶಂಸನೀಯವಾಗಿದೆ. ೩೦, ೩೫ ವಿದ್ಯಾರ್ಥಿಗಳಿರಬೇಕಾದ ತರಗತಿಗಳಲ್ಲಿ ೬೦, ೬೫ ಕ್ಕೂ ವಿದ್ಯಾರ್ಥಿಗಳಿದ್ದಾರೆ. ಶಾಲೆಗಳು ಹೆಚ್ಚುತ್ತಿದ್ದರೂ ಮೇಲ್ವಿಚಾರಕರ ಸಂಖ್ಯೆ ಕಡಿಮೆಯಾಗುತ್ತಿದೆ. ಉಪಾಧ್ಯಾಯ ರಲ್ಲಿ ಮೂರು ವರ್ಗವಿದೆ. ಶ್ರಮವಹಿಸಿ ದುಡಿಯುವವರು, ಮೇಲ್ವಿಚಾರಕರನ್ನು ತೃಪ್ತಿಪಡಿಸಲು ಯತ್ನಿಸುವವರು ಮತ್ತು ಊಳಿಗದನ್ನು ಗಮನಿಸದ ಸೋಮಾರಿಗಳು. ಹೀಗಿರುವದರಿಂದ ಮೇಲ್ವಿಚಾರಣೆ ಚೆನ್ನಾಗಿ ನಡೆಯಬೇಕು. ನೀರಾವರಿ ಯೋಜನೆ ಏನೂ ಇಲ್ಲ. ಕೊಲ್ಲಿ ತೋಡಿನ ಪ್ರಶ್ನೆ ಕೌನ್ಸಿಲಿನಷ್ಟೇ ಹಳೇದು. ದೇವನೂರು ಮತ್ತು ಬಾಳೆಲೆ ನಾಲೆಗಳ ಸ್ಥಿತಿ ಚೆನ್ನಾಗಿಲ್ಲ. ನಾಲೆಗಳನ್ನು ಜನರೇ ರಿಪೇರಿ ಮಾಡಿಕೊಳ್ಳಬೇಕೆಂಬ ಕೆಲವು ಅಧಿಕಾರಿಗಳ ಮನೋವೃತ್ತಿ ಸಲ್ಲದು.

### ಶ್ರೀ ಕೆ. ಪಿ. ಅಪ್ಪಯ್ಯನವರು

ಉಳುವರಿ ಕ್ರಮಶಃ ಕಡಿಮೆಯಾಗುತ್ತಿದೆ. ಆಧಿಕ್ಯೋತ್ಪತ್ತಿ ಅಭಿವೃದ್ಧಿ ಹೊಂದಬೇಕು. ಆಸ್ತರಿಂದ ಹೊಸ ಕಂದಾಯದ ಮೂಲಕ ಉತ್ಪತ್ತಿಯನ್ನು ಹೆಚ್ಚಿಸಬೇಕು, ಇದಕ್ಕಾಗಿ ವ್ಯವಸಾಯ ಆದಾಯ ತೆರಿಗೆಯನ್ನು ಹಾಕಬೇಕು. ಅನಾವಶ್ಯಕ ಖರ್ಚನ್ನು ಕಡಿಮೆ ಮಾಡಬೇಕು. ಅಭಿವೃದ್ಧಿಕಾರಕ ಯೋಜನೆಗಳನ್ನು ಕೈಕೊಂಡು ವರ್ಷಾಂತ್ಯದೊಳಗೆ ಪೂರೈಸಬೇಕು. ಈಗ ಶಟಸ್ಥವಾಗಿದ್ದು ವರ್ಷದ ಅಂತ್ಯದಲ್ಲಿ ಎಲ್ಲವನ್ನೂ ಮಾಡಬೇಕೆಂದು ಪ್ರಯತ್ನಿಸುವದರಿಂದ ಹಾನಿಯಲ್ಲದೆ ಲಾಭವಿಲ್ಲ. ರಾಷ್ಟ್ರ ಪಾನನಿರೋಧವನ್ನು ತಂದುದರಿಂದ ಸರಕಾರಕ್ಕೆ ಐದು ಲಕ್ಷ ರೂಪಾಯಿಗಳ ನಷ್ಟವಾಗಿದ್ದರೂ ಜನತೆಗೆ ಅಷ್ಟೇ ಲಾಭವಾಗಿದೆ. ಬಡಜನರ ಸ್ಥಿತಿ ಸುಧಾರಿಸುವ ಚಿಹ್ನೆಗಳು ಕಂಡು ಬರುತ್ತಿವೆ. ಸರಕಾರವು ಕ್ರಮಶಃ ಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕು. ಬೊಂಬಾಯಿ ಮತ್ತು ಮದ್ರಾಸು ಪ್ರಾಂತಗಳು ತಮಗೆ ೨೦ ಕೋಟಿಯಷ್ಟು ಆರ್ಥಿಕ ಹಾನಿ ಇದ್ದರೂ ಪಾನ ನಿರೋಧವನ್ನು ಜಾರಿಗೆ ತಂದು, ನಷ್ಟವನ್ನು ಬೇರೆ ರೂಪದಿಂದ ಪಡೆಯ ಮಾಡಲೆತ್ನಿಸುತ್ತಿವೆ. ಈ ಬಾಬಿನಲ್ಲಿ ದೊಡ್ಡ ಉದ್ಯೋಗಸ್ಥರು ಇತರರಿಗೆ ಆದರ್ಶವನ್ನು ಹಾಕಿಕೊಡಬೇಕು. ಈ ವಿಚಾರದಲ್ಲಿ ಹಿಂದಿನ ಚೀಫ್ ಕಮಿಷನರಾದ ಸಿ. ಟಿ. ಮೊದಲಿಯಾರರು ಸ್ತುತ್ಯಾರ್ಹರು. ಕೊಡಗಿನಲ್ಲಿ ಎಂಟು ಹತ್ತು ಹೈಸ್ಕೂಲುಗಳಿರುವ ಕಾರಣ ಕಾಲೇಜಿಗೆ ವಿದ್ಯಾರ್ಥಿಗಳ ತೊಂದರೆ ಇಲ್ಲ. ಕೊಡಗಿಗೆ ವರಪ್ರಸಾದದಂತೆ ಈ ಕಾಲೇಜಿದೆ. ಕೊಡಗಿನ ರೈತನು ತನ್ನ ಮಕ್ಕಳ ವಿದ್ಯೆಗಾಗಿ ಯಾವ ತ್ಯಾಗವನ್ನು ಮಾಡಲೂ ಸಿದ್ಧನು. ಆತನ ಪ್ರಯತ್ನಕ್ಕೆ ತಕ್ಕ ನೆರವು ಬೇಕು. ಕೊಡಗಿನ ಸಹಕಾರ ಚಳವಳಿವು ಪ್ರಶಂಸನೀಯ. ಗ್ರಾಮವನ್ನು ಮುಟ್ಟಿದೆ. ಗ್ರಾಮಗಳಲ್ಲಿ ಸಹಕಾರ ಸಂಘನೇ ಚೇತನ ಕಾರಿಯಾದ ಸಂಸ್ಥೆಯಾಗಬೇಕಿದೆ. ವಿವಿಧ ಉದ್ದೇಶಗಳನ್ನು ಕೈಕೊಂಡ ಈ ಚಳವಳಿಯು ಕೊಡಗಿನ ವಿದ್ಯಾಪ್ರಗತಿಗೆ ಸ ಕಷ್ಟು ಸಿಬ್ಬಂದಿಗಳಿಲ್ಲ. ಸರಕಾರವು ತಕ್ಕ ಸಹಾಯ ಮಾಡಬೇಕು. ವ್ಯವಸಾಯ ಇಲಾಖೆಯು ಸಕಾಲದಲ್ಲಿ ರೈತನಿಗೆ ಗೊಬ್ಬರ ಒದಗಿಸಬೇಕು. ಯೋಗ್ಯ ಬೀಜ ವಿತರಣೆ ಮಾಡಬೇಕು. ಫ್ರೆಂಚಿಂಗ್ ಮೊದಲಾದ ಕಾಯಿಲೆಗಳನ್ನು ನಿವಾರಿಸಿದ್ದರೆ ಕಿತ್ತಳೆ ವ್ಯವಸಾಯವು ನಿರ್ನಾಮವಾಗುವದು. ಪಶುವೈದ್ಯ ಇಲಾಖೆಯು ಉತ್ತಮ ಕೆಲಸ ಮಾಡುತ್ತಿದೆ. ಕೊಡಗಿನಲ್ಲಿ ಹಾಲು ಪ್ರೋತ್ಸಾಹಕ ಕೇಂದ್ರಗಳು ಅಲ್ಲಲ್ಲಿ ತೆರೆಯಲ್ಪಟ್ಟು ಹಾಲು ಮತ್ತು ಉಳುವ ಎತ್ತುಗಳ ಸರಬರಾಯಿ ಏರ್ಪಾಡಾಗಬೇಕು. ಈಗ ಎತ್ತುಗಳ ಕ್ರಯ ವಿಪರೀತ ಏರಿ ರೈತನಿಗೆ ಮಹಾಕಷ್ಟವಾಗಿದೆ. ವೈದ್ಯಕೀಯ ಇಲಾಖೆಯು ಚೆನ್ನಾಗಿ ಕೆಲಸ ಮಾಡಿದೆ. ಮಲೇರಿಯಾ ಇಲಾಖೆಯು ಇನ್ನೂ ಚೆನ್ನಾಗಿ ಕೆಲಸ ಮಾಡಬಹುದಾಗಿದೆ. ಅನೇಕ ಗ್ರಾಮಗಳಿಗೆ ಇವರು ಹೋಗಿರುವದಿಲ್ಲ. ಮೂರು ತಿಂಗಳಿಗೊಮ್ಮೆಯಾದರೂ ಪ್ರತಿ ಗ್ರಾಮವನ್ನು ಸಂದರ್ಶಿಸಬೇಕು. ಫಾರೆಸ್ಟ ಇಲಾಖೆಯ ಖರ್ಚು ಏರುತ್ತಿದೆ. ಈ ಅನಾವಶ್ಯಕ ಖರ್ಚನ್ನು ಕಡಿಮೆ ಮಾಡಬೇಕು. ಪಿ. ಡಬ್ಲ್ಯು. ಡಿ. ಇಲಾಖೆಯ ಹಿಡಿತವು ಸ್ಥಳೀಯ ಸರಕಾರಕ್ಕಿರಬೇಕು. ನ್ಯಾಯಾಂಗ ಇಲಾಖೆಯಲ್ಲಿ ಸಮದೃಷ್ಟಿ ಇರಬೇಕು. ಯಾವದೇ ಭಯಯಾ ಪಕ್ಷಪಾತವಿಲ್ಲದೆ ನ್ಯಾಯವು ಕೂಡಲ್ಪಡಬೇಕು. ಜನರು ಶಾರೀರಿಕ ಪ್ರಹಾರ ಅಲ್ಲದ ಗಲಾಟೆಯೂ, ನಂತರ ಕಳೆದ ಕೌನ್ಸಿಲು ಸಭೆಯ ಕಾಲಕ್ಕೆ ನಡೆದ ಪ್ರದರ್ಶನವೂ ಕಮ್ಯೂನಿಸ್ಟ ಪ್ರೇರಿತವಾದದ್ದು. ಇಂಥಾದ್ದಕ್ಕೆಡೆ ಇಯಬಾರದು.

### ಶ್ರೀ ಎಚ್. ಬಿ. ಅಂಣಯ್ಯನವರು

ಪ್ರತಿ ವರ್ಷದಂತೆಯೇ ಈ ವರ್ಷದ ಬಜೆಟ್ಟಿನ ಕಥೆಯೂ ಕೂಡ. ಇಟ್ಟ ಹಣವನ್ನು ಖರ್ಚುಮಾಡದೆ ಹಾಗೆಯೇ ಇಡ ಮರು ಒಳ್ಳೆಯದಲ್ಲ. ವೈದ್ಯಕೀಯ ಇಲಾಖೆಗಿಟ್ಟ ಹಣವು ತೀರಾ ಕಡಿಮೆ. ಕೊಡಗಿನಲ್ಲಿ ಎರಡು ಲಕ್ಷ ಜನಸಂಖ್ಯೆ ಇದೆ. ಆದರೆ ಔಷಧಿಗೆಂದು ಒಂದು ಲಕ್ಷ ರೂಪಾಯಿ ಇಟ್ಟಿರುವದು ಒಳಿಗೆ ಎಂಟಣೆಯಂತಾಗಿ ಎಲ್ಲಿಗೂ ಸಾಲದು. ಆಹಾರ ಹೆಚ್ಚು ಬೆಳೆಸಬೇಕೆಂದು ಕೂಗಿದರೆ ಸಾಲದು. ನೀರಾವರಿ ಏರ್ಪಾಡಂಗಳ ವನ್ನೂ ಮಾಡದೆ ಹೋದರೆ ರೈತನು ಏನು ಮಾಡಬೇಕು? ಕೆರೆ, ಕಾಲುವೆಗಳು ಮೂಲೆಗುಂಪಾಗಿವೆ. ಹಾತೂರು ಹೊಳೆಗೆ ಕಟ್ಟೆ ಕಟ್ಟಿ ೪ ವರ್ಷಗಳಾದರೂ ಇನ್ನೂ ಕಾಲುವೆಗಳಾಗಿಲ್ಲವೆಂದರೆ ಏನನ್ನಬೇಕು? ರೈತರು ಕೂಗಿ ಕೂಗಿ ಸಾಕಾಗಿ ದೇವರು ಕಂಡಂತಾಗಲೀ ಎಂದು ಸುಮ್ಮನಿದ್ದಾರೆ. ದೇಶದಲ್ಲಿ ಜನರೇ ನಾಲೆಗಳನ್ನು ಕಟ್ಟಿ ಸರಕಾರಕ್ಕೆ ಕೊಟ್ಟರೂ ಸರಕಾರವು ಅವುಗಳನ್ನು ನಡೆಸಿಕೊಡುತ್ತಿಲ್ಲ. ಗ್ರಾಮಾಂತರ ರಸ್ತೆಗಳ ಚೆನ್ನಾಗಿಲ್ಲ. ಇವುಗಳಿಗಾಗಿ ಹಣವಿಟ್ಟರೂ ಖರ್ಚು ಮಾಡದೆ ಗಣಪತಿಯ ಮದುವೆಯಂತೆ ಮುಂದೂಡಲ್ಪಡುತ್ತಿದೆ. ಟಾಕೆಲ್, ಮರೆನಾಡು ರಸ್ತೆಗಳ ರಸ್ತೆಗಳ ಸ್ಥಿತಿ ಶೋಚನೀಯ. ಈ ಕೆಲಸಗಳಾವುವನ್ನೂ ಮಾಡದೆ ಹೊಸ ಕಂದಾಯದ ಬಾಬಿಗೆ ಮಾತ್ರ ಎಚ್ಚರಿಕೆಯಿಂದಿದ್ದರೆ ಸಾಲದು. ಕೇಳಿದ ಹತ್ತರಷ್ಟಾದರೂ ಶ್ರದ್ಧೆವಹಿಸಿ ಕೆಲಸ ಮಾಡಬೇಕು. ಹಾಗೆ ಕೆಲಸ ಮಾಡಲು ದೇವರು ಸರಕಾರಕ್ಕೆ ಇನ್ನಾದರೂ ಬುದ್ಧಿಕೊಡಲಿ.

### ಶ್ರೀ ಎಚ್. ಟಿ. ಮುತ್ತಣ್ಣನವರು

ಉತ್ಪತ್ತಿಗಿಂಥಾ ಖರ್ಚು ಹೆಚ್ಚಿರುವದು ಏಳಿಗೆಯ ಚಿಹ್ನೆಯಲ್ಲ. ವ್ಯವಸಾಯಗಾರರ ದೇಶವಾಗಿರುವಾಗ ಇದಕ್ಕಾಗಿ ಹೆಚ್ಚು ಖರ್ಚಾಗಬೇಕು. ವ್ಯವಸಾಯ ಇಲಾಖೆಯ ಕೆಲಸ ತೃಪ್ತಿಕರವೆಂದು ಹೇಳಲಾಗುವದಿಲ್ಲ. ಅವರ ಕಾರ್ಯಕಲಾಪಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರೆ ಸಾಲದು, ಎಲ್ಲರೂ ಪತ್ರಿಕೆ ಓದುವವರಲ್ಲ. ಗ್ರಾಮ ಗ್ರಾಮ ಸುತ್ತಿ ದುಡಿಯಬೇಕು. ನೀರಾವರಿ ಯೋಜನೆ ಇಲ್ಲದೆ ವ್ಯವಸಾಯಕ್ಕೆ ಅಡಚಣೆ ಇದೆ. ಹಾರಂಗಿ, ಲಕ್ಷ್ಮಣತೀರ್ಥ ಯೋಜನೆಗಳು ಯಾವಾಗ ಕೈಕೊಳ್ಳಲ್ಪಡುವವೆಂದು ಸರಕಾರ ತಿಳಿಸಬೇಕು. ರೆವಿನ್ಯೂ ಇಲಾಖೆಯಲ್ಲಿ ಕಾಗದ ಪತ್ರಗಳೇ ಕಾಣೆಯಾಗಿವೆ. ಸರಕಾರದ ಅಜಾಗರೂಕತೆಯನ್ನು ಎಷ್ಟು ಹೇಳಿದರೂ ತೀರದು. ಪಾರುಪತ್ತೆಗಾರರ ವೇತನವನ್ನು ಏರಿಸಬೇಕೆಂದು ರಂಗಾವಾದರೂ ಸರಕಾರ ಏನೂ ಮಾಡಿಲ್ಲ. ಸರಾಯಿ ರೇಶನ್ ಕ್ರಮ ಜಾರಿಗೆ ಬಂದು ಸರಾಯಿ ಖರ್ಚು ಕಡಿಮೆಯಾದರೂ ದುಡ್ಡು ಖರ್ಚು ಕಡಿಮೆ ಇಲ್ಲ. ಕಳ್ಳಸಾರಾಯಿ, ಕಪ್ಪುಸಂತೆ ನಡೆಯುತ್ತಿದೆ. ಇವನ್ನು ನಿವಾರಿಸಲಿರುವ ಸಿಬ್ಬಂದಿಯು ಸಂಬಳಕ್ಕೆ ತಕ್ಕಷ್ಟು ಕೆಲಸ ಮಾಡಿಲ್ಲ. ಯುವಕರನ್ನು ಈ ಕೆಲಸಕ್ಕೆ ನೇಮಿಸಬೇಕು. ಬರುವ ವರ್ಷದಿಂದ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕು. ಅಲ್ಲೊಂದು ಇಲ್ಲೊಂದು ಗ್ರಾಮದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ತಂದರೆ ಸಾಲದು. ಕೊಡಗಿನಲ್ಲಿ ಪೂರ್ತಿ ಇದನ್ನು ಜಾರಿಗೆ ತರಲು ಅಸಾಧ್ಯವಾದರೆ ವಿದ್ಯೆಯಲ್ಲಿ ಹಿಂದುಳಿದಿರುವ ಭಾಗದಲ್ಲಾದರೂ ತರಬೇಕು. ಶಾಲೆಗಳಲ್ಲಿ ಅಧ್ಯಾಪಕರ ಸಂಖ್ಯೆ ಸಾಲದು. ಹೈಸ್ಕೂಲು ಕಟ್ಟಡಗಳು ಮಳೆಹಿಡಿಯುವದರೊಳಗೆ ಆಗಬೇಕು. ಆಸ್ಪತ್ರೆಗಳು ತೃಪ್ತಿಕರವಾಗಿಲ್ಲ. ಸ್ಥಳವಿಲ್ಲ, ಔಷಧಿ ಇಲ್ಲ. ಸೋಮವಾರಪೇಟೆ ಆಸ್ಪತ್ರೆಗೆ ಬಜೆಟ್ಟಿನಲ್ಲಿ ಹಣವಿಟ್ಟದು ಸ್ತುತ್ಯಾರ್ಹ. ಆದರೆ ಈ ವರ್ಷವೇ ಈ ಕೆಲಸ ಕೈಕೊಳ್ಳಲ್ಪಡಬೇಕು. ಮಲೇರಿಯಾ ಇಲಾಖೆಯು ಕ್ಷೇತ್ರ ಅನೇಕ ಗ್ರಾಮಗಳಿಗೆ ಇನ್ನೂ ಮುಟ್ಟಿಲ್ಲ. ಡಿ. ಡಿ. ಟಿ. ಹೊಡೆಯುವ ಕೆಲಸ ಇವರು 'ಸ್ಪ್ರೇ' ಮಾಡಬೇಕು. ಇದರ ಖರ್ಚನ್ನು ಮಾಲೀಕರಿಂದ ವಸೂಲಾಗಬಹುದು. ವ್ಯವಸಾಯಗಾರರ ದೇಶದಲ್ಲಿ ದನಗಳಿಗೆ ಅಭಾವವಿರಬಾರದು. ಬತ್ತದ ಬೆಲೆ ಕಡಿಮೆ ಮಾಡಿ ಇತರ ವಸ್ತುಗಳ ಬೆಲೆ ಏರುವಂತೆ ಮಾಡಿದ್ದರೆ ರೈತನ ಪಾಡು ಅಸಹನೀಯ. ಇತರ ವಸ್ತುಗಳ ಬೆಲೆಯನ್ನೂ ನಿಯಂತ್ರಿಸಬೇಕು. ಪಿ. ಡಬ್ಲ್ಯು. ಡಿ. ಯ ಕೆಲಸ ತೃಪ್ತಿಕರವೆಂದು ಒಬ್ಬನೇ ವ್ಯಕ್ತಿಯಾದರೂ ಹೇಳುವದಿಲ್ಲ. ಲೆಕ್ಕವಿಲ್ಲದ ಸಿಬ್ಬಂದಿಗಳಿದ್ದಾರೆ. ಎಲ್ಲರೂ ಹೊಂಗಿಸುವರಾಗಿಟ್ಟು ದೇಶದ ಹಿತದೃಷ್ಟಿ ಅವರಿಗಿಲ್ಲ.

# ಬಜೆಟ್ ಚರ್ಚೆ.

ಇಲಾಖೆಯು ನಿದ್ರಾವಸ್ಥೆಯಿಂದ ಏಳಬೇಕು. ಕಂಟ್ರಾಕ್ಟರುಗಳನ್ನು ಸಹಾಯಿಸಬಾರದು. 'ಫ್ಲವರ್ ಡೇ' ಹೆಸರಿನಿಂದ ವರ್ಷವಿಡೀ ಹೂವಾರಾಟ ಮಾಡುವದು, ಅದೂ ಬಲಾತ್ಕಾರದಿಂದ ರೈತನಿಗೆ ಕೊಡುವದು ಒಂದು ರೀತಿಯ ಸುಲಿಗೆಯೆಂದೇ ಹೇಳಬೇಕು. ಇದನ್ನು ನಿಲ್ಲಿಸಬೇಕು. ಸ್ವಾತಂತ್ರ್ಯ ಬಂದಿದ್ದಾದರೂ ಇಲ್ಲಿ ಬ್ರಿಟಿಷರ ಕಾಲದ ಕಳೆಭಾರ ಆಡಳಿತವೇ ನಡೆದಿದೆ. ಉದ್ಯೋಗಸ್ಥರ ಸಂಖ್ಯೆ ಹೆಚ್ಚಿದಂತೆ ಆಡಳಿತ ಕಡಿಲಾಗುತ್ತಿದೆ! ಇದಕ್ಕೆ ಒಂದು ಸಮಿತಿಯನ್ನು ನೇಮಿಸಿ ಅನಾವಶ್ಯದ ಸಿಬ್ಬಂದಿಖೋತ ಮಾಡಬೇಕು. ಹೀಗೆ ಖರ್ಚ ಕಡಿಮೆಮಾಡದೆ ಬಡ ರೈತನ ಮೇಲೆ ಕಂದಾಯ ಏರುವದು ಯೋಗ್ಯವಲ್ಲ. ನನ್ನ ತಾಲೂಕಿನಲ್ಲಿ ಜನರೇ ವಿದ್ಯೆಗಾಗಿ ಪ್ರಯತ್ನಿಸುತಿದ್ದಾರೆ. ಹತ್ತು ಖಾಸಗಿ ಶಾಲೆಗಳನ್ನು ಅವರೇ ನಡೆಸುತ್ತಿದ್ದಾರೆ. ಕಡ್ಡಾಯ ಶಿಕ್ಷಣ ಪದ್ಧತಿ ಬೇಕಿರುವಾಗ ಸರಕಾರ ನಿರ್ಲಕ್ಷ್ಯತೆಯಿಂದ ವರ್ತಿಸಬಾರದು. ಅನೇಕ ಕೆರೆಗಳು ಮುಚ್ಚಿಹೋಗಿವೆ. ರಸ್ತೆಗಳು ಚೆನ್ನಾಗಿಲ್ಲ. ಗ್ರಾಮಗಳಲ್ಲಿ ಕುಡಿಯುವ ನೀರಿಗೇ ತೊಂದರೆ ಇದೆ. ಸೋಮವಾರಪೇಟೆ ಆಸ್ಪತ್ರೆಗೆ ಡಾಕ್ಟರನ್ನು ಕೊಟ್ಟರೂ ಅವರಿಗೆ ಉಳಕೊಳ್ಳಲು ಮನೆಯಿಲ್ಲದೆ ವಾಪಸು ಹೋದರು. ಆಸ್ಪತ್ರೆಯು ಬಡಾವಣೆಮಾಡಬೇಕು. ಹಿಂದಿನ ಚೀಫ್ ಕಮಿಷನರು ಬಡಾವಣೆಮಾಡಿಸುವ ಭರವಸೆ ಇತ್ತಿದ್ದರು. ಅವರ ಭರವಸೆ ಅವರೊಡನೆಯೇ ಹೋಗಬಾರದು.

ಶ್ರೀ. ಕೆ. ಕೆ. ಬೆಳ್ಯಪ್ಪನವರು.

ಬಜೆಟ್ಟಿನ ಮೇಲೆ ನನ್ನ ಅಭಿಪ್ರಾಯ ಹೇಳುವ ಮೊದಲು ಹೊಸ ಚೀಫ್ ಕಮಿಷನರನ್ನು ಸ್ವಾಗತಿಸುತ್ತೇನೆ. ಅವರು ತಮ್ಮ ವಿಶಾಲ ಅನುಭವ ಮತ್ತು ಕಾರ್ಯದಕ್ಷತೆಯಿಂದ ಕೊಡಗನ್ನು ಆನಂದದ ನಾಡಾಗಿ ಮಾಡುವರೆಂದು ಆಶಿಸಲಾಗಿದೆ. ಬದ್ದಾಯ ಕಂದಾಯದ ಏರ್ಪಾಡು ಅನ್ಯಾಯಕರ. ಶ್ರೀಮಂತರಿಗೆ ಕಂದಾಯ ಹಾಕಿದರೆ ತೊಂದರೆ ಇಲ್ಲ. ಪಕ್ಷರಾಜಕೀಯದ ಕಾರಣ ಈ ಸಮರಿ ಕಂದಾಯ ಬರುವಂತಾಗಿದೆ. ಶೇಕಡ ೯೫ ರಷ್ಟು ವ್ಯವಸಾಯಗಾರರ ನಾಡಾದ ಕೊಡಗಿನಲ್ಲಿ ರೈತರ ಹಿತವೇ ದೇಶದ ಹಿತ. ರೈತನ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಗ್ರಾಮಾಂತರ ರಸ್ತೆಗಳು ಚೆನ್ನಾಗಿಲ್ಲ. ರೈತನ ಸಾಲದ ಹೊರೆಯು ಹೆಚ್ಚುತ್ತಿದೆ. ಹೀಗಿದ್ದೂ ಕಂದಾಯ ಹಾಕಬೇಕೆಂಬುದು ತಪ್ಪು. ಒಮ್ಮೆ ಹಾಕಿದ ಕಂದಾಯವನ್ನು ಮತ್ತೆ ತೆಗೆಯುವದು ಪ್ರಯಾಸ. ಕೊಡಗಿನಲ್ಲಿ ಬಹು ಸಂಖ್ಯೆಯಲ್ಲಿ ದನಗಳು ಸಾಯುವದರಿಂದ ಮೂಳೆಗೊಬ್ಬರದ ಕಾರ್ಖಾನೆ ನಿರ್ಮಿಸುವದು ಉತ್ತಮ. ಸರಕಾರದ ಎಲ್ಲಾ ಇಲಾಖೆಗಳಲ್ಲೂ ಸ್ವಾತಂತ್ರ್ಯದ ನಂತರ ಒಂದು ರೀತಿಯ ಶಿಥಿಲತೆ ಬಂದಿದೆ. ಹಿಂದಿನ ಕಾಲದಲ್ಲಿ ಬ್ರಿಟಿಷರಿಗೆ ಬಲವಾದ ಪೋಲೀಸ್ ಪಡೆಯ ಅವಶ್ಯಕತೆ ಇತ್ತು. ಶಾಂತಿಪ್ರಿಯರೂ, ಸಹನಾಶೀಲರೂ ಎಂದು ಸರ್ದಾರ ಪಟೇಲರಿಂದ ಹೇಳಿಸಿಕೊಂಡ ಇಲ್ಲಿ ಇಷ್ಟೊಂದು ದೊಡ್ಡ ಪೋಲೀಸ್ ಪಡೆ ಬೇಕಿಲ್ಲ. ಟ್ರಾನ್ಸ್‌ಪೋರ್ಟ್ ಇಲಾಖೆಯ ಉತ್ಪತ್ತಿ ಎರಡು ಲಕ್ಷಕ್ಕೇರಿರುವದು ಶುಭವಾದುದು. ದೇಶದ ಉದ್ದಗಲಕ್ಕೂ ಬಸ್ ಲೈನುಗಳು ಬೇಕು. ಈಗಿರುವವು ಸಾಲದು. ಪ್ರಯಾಣಿಕರಿಗೆ ವಿಪರೀತ ತೊಂದರೆ ಇದೆ. ಹೆಚ್ಚು ಜನರು ತಿರುಗಾಡುವ ಬೇಸಿಗೆಯಲ್ಲಿ ವಿಶೇಷ ಬಸ್ ಲೈಸೆನ್ಸ್ ಕೊಡಬೇಕು. ರಾಷ್ಟ್ರೀಯ ಉಳಿತಾಯ ಯೋಜನೆಯು ಅತ್ಯಗತ್ಯ. ಕೊಡಗಿನಲ್ಲಿ ಆಡು, ದನ ಸಾಕುವ ಕೇಂದ್ರಗಳನ್ನು ತೆರೆಯಬೇಕು. ಹಾಲು, ಬೆಣ್ಣೆ ವಿಪುಲವಾಗಿ ದೊರೆಯುವಂತೆ ಮಾಡಬೇಕು. ಫಾರೆಸ್ಟ್ ಇಲಾಖೆಯೇ ಕೊಡಗಿನ ಪ್ರಮುಖ ಆದಾಯವನ್ನು ತರುತ್ತಿದೆ. ಅನುಭವಶಾಲಿ ಅಧಿಕಾರಿಗಳು ಈ ಇಲಾಖೆಗೆ ದೊರೆತಿದ್ದಾರೆ. ಫಾರೆಸ್ಟ್ ನೀತಿ ರಚನಾತ್ಮಕವಾಗಿರಬೇಕಲ್ಲದೆ ವಿನಾಶಾತ್ಮಕವಾಗಿರಬಾರದು. ಸಹಕಾರ ಚಳುವಳಿ ಚೆನ್ನಾಗಿ ಕೆಲಸ ಮಾಡುತ್ತಿದೆಯೆನ್ನಬಹುದಾದರೂ ಸ್ಟೋರು ಚಳವಳವು ಪೂರ್ಣ ಅಪಜಯವಾಗಿದೆ. ಉತ್ಪಾದಕರು ಯಾವ ಲಾಭವನ್ನೂ ಹೊಂದುತ್ತಿಲ್ಲ. ಕೊಡಗಿನ ಹಲಸಿನ ಹಣ್ಣು ಮತ್ತಿತರ ಹಣ್ಣುಗಳನ್ನು ಜಾಮ್ ಮಾಡುವ ಹೊಸ ಉದ್ಯಮ ಕೈಕೊಳ್ಳಬಹುದು. ಸಹಕಾರ ರಂಗದಲ್ಲಿ ರಾಜಕೀಯಕ್ಕೆಡೆ ಇರಬಾರದು. ಜಿಲ್ಲಾ ಬೋರ್ಡ್ ಉದ್ಯೋಗಿಗಳಿಗೆ ಸರಕಾರಿ ಉದ್ಯೋಗಿಗಳಂತೆ ಸವಲತ್ತು ಕೊಡಬೇಕು. ಒಂದು ಸಮಿತಿ ನೇಮಿಸಿ ಆರೋಗ್ಯ ಅಧ್ಯಾಪಕರನ್ನು ತೆಗೆದುಹಾಕಬೇಕು. ಶಾಲಾ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶಿಸ್ತು ಸಂಸ್ಥಾಪಿಸಲ್ಪಡಬೇಕು. ಕೊಡಗಿನ ಆರೋಗ್ಯ ಇಲಾಖೆಯು ಈಗಿನ ದಕ್ಷ ಸಿವಿಲ್ ಸರ್ಜನರ ನೇತೃತ್ವದಲ್ಲಿ ಚೆನ್ನಾಗಿ ಕೆಲಸಮಾಡುತ್ತಿದೆ. ಈ ಇಲಾಖೆಯಲ್ಲಿ ಇನ್ನೂ ಬದಲಾವಣೆ ಅವಶ್ಯವಿದೆ. ಅದಕ್ಕಾಗಿ ಆರೋಗ್ಯ ಸೆಸ್ಸ್ ಹಾಕಿದರೂ ಆಗಬಹುದು. ಒಂದು ಆಸ್ಪತ್ರೆ ಕಟ್ಟಿಸಿ ಸುಮಾರು ೨೫೦೦೦ ದಷ್ಟು ದಾನ ಮಾಡಿದ ಶ್ರೀ ಎಂ ಎನ್. ಚಿಟ್ಯಪ್ಪನವರನ್ನು ವಂದಿಸಬೇಕಿದೆ.

ಶ್ರೀ. ಕೆ. ಸಿ ಕರುಂಬಯ್ಯನವರು.

೧೯೪೭ ನೇ ಆಗಸ್ಟಿನ ನಂತರ ಜನರಲ್ಲಿ ಒಂದು ವಿಧದ ಜಿಗುಪ್ಸೆ ಬಂದಿದೆ. ಹೊರ ಪ್ರಾಂತಗಳು ಸ್ವತಂತ್ರವಾಗಿ ಪ್ರಜಾಫಲಿತವನ್ನು ಅನುಭವಿಸುತ್ತಿದ್ದರೂ ಇಲ್ಲಿ ನಮಗೆ ನಮ್ಮ ಆಡಳಿತದಲ್ಲಿ ಕೈಯಿಲ್ಲದಿರುವದು ಈ ಜಿಗುಪ್ಸೆಗೆ ಕಾರಣವಾಗಿದೆ. ಕೊಡಗು ಸ್ವತಂತ್ರವಾದ ಆಡಳಿತ ಘಟಕವಾಗಬೇಕೆಂದಲ್ಲ. ಚಿಕ್ಕದಾದ ಈ ಕೊಡಗಿಗೆ ಯುಕ್ತವಾದ ಆಡಳಿತ ಘಟನೆಯನ್ನು ರೂಪಿಸುವದು ಕೇಂದ್ರದ ರಾಜಕಾರಣಿಗಳಿಗೆ ಕೂಡಿದೆ. ಈ ಮೊದಲು ರಾಜ್ಯಘಟನಾ ಸಭೆಯ ಎಡ್‌ಹಾಕ್ ಸಮಿತಿಯು ಸೂಚಿಸಿದ್ದ ಮಾದರಿಯ ಸುಧಾರಣೆಯು ಕೊಡಗಿಗೆ ದೊರೆಯಬೇಕು. ಡೆಲ್ಲಿ ಸಮ್ಮೇಳನವಾಗಿ ಕೇಂದ್ರ ಸರಕಾರವು ಒಂದು ನಿರ್ಣಯಕ್ಕೆ ಬಂದಿದ್ದರೂ ಕೊಡಗಿನ ಪ್ರಶ್ನೆ ಬಗೆಹರಿದಿರುವದಿಲ್ಲ. ಆ ಕಾರಣವಾಗಿ ಈ ಪ್ರಾಂತದ ಆಡಳಿತವು ಒಂದು ವಿಚಿತ್ರ ಸ್ಥಿತಿಯಲ್ಲಿದೆ. ನಮಗೆ ಆಡಳಿತದಲ್ಲಿ ಕೈ ಇಲ್ಲದ ಕಾರಣ ಹೊಸ ಕಂದಾಯ ಹಾಕಲೂ ಸಾಧ್ಯವಿಲ್ಲ. ಸೇ. ಕಮಿಷನ್ ಜಾರಿಗೆ ಬಂದು ಸರಕಾರದ ಆಡಳಿತ ಖರ್ಚ ಹೆಚ್ಚಾಗಿದೆ. ಸೇ. ಕಮಿಷನ್ ವರದಿಯ ಒಂದು ಭಾಗವನ್ನು ಮಾತ್ರ ಜಾರಿಗೆ ತಂದು ದಕ್ಷತೆಯು ಕೆಡುವದಂತೆ ಹೆಚ್ಚಿರುವ ಸ್ಥಳಗಳನ್ನು ತೆಗೆದುಹಾಕಿ ಸಿಬ್ಬಂದಿಖೋತ ಮಾಡಬೇಕೆಂಬುದನ್ನು ಜಾರಿಗೆ ತಂದಿರುವದಿಲ್ಲ. ಸಾರಾಯಿ ಮಾರಲು ಈಗ ಏರ್ಪಡಿಸಿದ ಕೂಪನ್ ಪದ್ಧತಿಯಿಂದ ಪ್ರಯೋಜನವಿಲ್ಲ. ಇದರಿಂದ ಕಳ್ಳಸಂತೆಗೆ ಎಡೆಯಾಗಿದೆ. ಬದಲು ಸಂಪೂರ್ಣ ಪಾನನಿರೋಧ ಜಾರಿಗೆ ತರುವವರೆಗೆ ಸಾರಾಯಿಯ ಕ್ರಯವನ್ನು ಇನ್ನೂ ಅಂದರೆ ರೂ. ೫ಕ್ಕೆ ಏರಿಸಿದ್ದರೆ ಹಿತವಾಗುತಿತ್ತು. ಬೆಲೆ ಹೆಚ್ಚಾದ ಕಾರಣ ಇತರ ವಿದೇಶೀ ಪಾನೀಯಗಳ ಹತ್ತಿರ ಬಡ ಜನರು ಹೋಗದಂತೆ ಸಾರಾಯಿಯನ್ನು ತ್ಯಜಿಸುತ್ತಿದ್ದರು. ಕಳೆದ ಕೆಲವು ವರ್ಷಗಳಲ್ಲಿ ವಿದ್ಯಾ ಇಲಾಖೆಯಲ್ಲಾದ ಮಹಾ ಕಾರ್ಯವೆಂದರೆ ಕಾಲೇಜು ಮತ್ತು ಕೆಲವು ಹೈಸ್ಕೂಲುಗಳ ಸ್ಥಾಪನೆ. ಸರಕಾರವು ಈ ಕಾಲೇಜನ್ನು ದಕ್ಷಿಣ ಹಿಂದೂಸ್ಥಾನದ ಉತ್ತಮ ಕಾಲೇಜುಗಳಲ್ಲಿ ಒಂದಾಗುವಂತೆ ಮಾಡಬೇಕು. ಕೊಡಗಿನ ವಿದ್ಯಾರ್ಥಿಗಳು ಹೊರ ಪ್ರಾಂತಕ್ಕೆ ವಿದ್ಯೆಗಾಗಿ ಹೋಗಬೇಕಾಗಿ ವರ್ಷಕ್ಕೆ ಸುಮಾರು ಎರಡು ಲಕ್ಷ ರೂಪಾಯಿ ವೆಚ್ಚವಾಗುತಿತ್ತು. ಈ ಕಾಲೇಜಿಗಾಗಿ ವರ್ಷಕ್ಕೆ ಲಕ್ಷ ವೆಚ್ಚವಾದರೆ ಅದು ಕೊಡಗಿಗೆ ಎಂದೂ ನಷ್ಟವಲ್ಲ. ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಸಂಸ್ಥಾಪಿಸುವದು ಅತ್ಯವಶ್ಯ. ವಿದ್ಯಾರ್ಥಿಗಳಲ್ಲಿ ಶಿಸ್ತಿಲ್ಲದಿರಲು ಶಾಲೆಯ ಹೊರಗೆ ಅವರ ಮೇಲೆ ಹಿಡಿತವಿಲ್ಲದಿರುವದೇ ಆಗಿದೆ. ಶಾಲಾ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶದ ಬಗ್ಗೆ ಶೇಕಡ ೩೦ಕ್ಕೆ ಹೆಚ್ಚು ಪಾಸುಮಾಡಬಾರದೆಂಬ ಸೂಚನೆಯನ್ನು ಪ್ರತಿ ಹೆಡ್‌ಮಾಸ್ಟರಿಗೆ ಕೊಟ್ಟಿರುವ ವರ್ತಮಾನವಿದೆ. ಹಾಗಿದ್ದರೆ ಅದು ತಪ್ಪು. ಶೇಕಡ ೫೦ ರಷ್ಟಾದರೂ ಉತ್ತೀರ್ಣರಾಗದಿದ್ದರೆ ತಂದೆ ತಾಯಿಗಳಿಗೆ ದೊಡ್ಡ ಧಕ್ಕೆಯಾಗುವದು. ಜಿಲ್ಲಾ ಬೋರ್ಡಿನ ಅಧೀನವಿರುವ ವಿದ್ಯಾ ಇಲಾಖೆಯನ್ನು ತೆಗೆದುಕೊಳ್ಳಲು ಬೋರ್ಡಿನ ಅನುಮತಿ ಬೇಕು. ಅದಕ್ಕಾಗಿ ಹೊಸ ಚುನಾವಣೆ ನಡೆಯಬೇಕು. ಪ್ರೌಢ ಮತದಾನ ಪದ್ಧತಿಯಂತೆ ಕೌನ್ಸಿಲಿಗೂ, ಜಿಲ್ಲಾ ಬೋರ್ಡಿಗೂ ಹೊಸ ಚುನಾವಣೆ ನಡೆಯುವದು ಅವಶ್ಯ. ಆ ವರೆಗೆ ಜಿಲ್ಲಾ ಬೋರ್ಡಿಗೆ ಸಾಕಷ್ಟು ವಂತಿಗೆ ಕೊಟ್ಟು ಸರಕಾರ ಉದ್ಯೋಗಿಗಳಿಗೆ ಕೊಡುವ ದರದ ವೇತನ ಕೊಡಲು ಅನುಮಾಡಬೇಕು. ಫಾರೆಸ್ಟ್ ಇಲಾಖೆಯು ಉತ್ತಮ ಕೆಲಸ ಮಾಡಿದೆ. ಬೆಲೆ ಇದ್ದರೂ ಗಂಧದ ಮರಗಳನ್ನು ಬೇಕಾಬಿಟ್ಟಿ ಕೀಳದಿರುವದು, ರೀಜನರೇಶನ್ ಯೋಜನೆ, ಟಿಂಬರ್ ಮಾರಾಟದ ವ್ಯವಸ್ಥೆ, ಆನೆಗಳನ್ನು ಹಿಡಿದು ಉತ್ಪತ್ತಿ ಹೆಚ್ಚಿಸುವ ಮಾದರಿ ಇವೆಲ್ಲ ತೃಪ್ತಿಕರವಾಗಿದೆ. ಫಾರೆಸ್ಟ್ ಏರಿಯಾಗಳಲ್ಲಿ ಮೇಯಿಸುವ ದರವನ್ನು ಒಂದು ರೂಪಾಯಿಗೆ ಏರಿಸಿರುವದು ಹೆಚ್ಚಾಯಿತು. ರೈತನಿಗೆ ಹೆಚ್ಚಿನ ಸಹಾಯಬೇಕು. ಇಲಾಖಾಧಿಕಾರಿಗಳು ಈ ಸಭೆಯ ಪ್ರತಿನಿಧಿಗಳಿಗೆ ತಮ್ಮ ಕೆಲಸದ ಮಾಹಿತಿ ಮಾಡಿಕೊಡಲು ಆಗಾಗ್ಗೆ ವಿವಿಧ ಕೇಂದ್ರಗಳ ಸಂದರ್ಶನೆಯ ಅವಕಾಶ ಮಾಡಬೇಕು. ಪಿ. ಡಬ್ಲ್ಯು. ಡಿ ಯು ಪುನಹ ಮೂರು ವರ್ಷಗಳವರೆಗೆ ಕೇಂದ್ರದ ಹಿಡಿತದಲ್ಲಿರುವದೆಂದು ತಿಳಿದು ವಿಷಾದವಾಗುತ್ತಿದೆ. ಈ ವಿಚಾರ ಸ್ಪಷ್ಟ ರೂಪವನ್ನು ಕೌನ್ಸಿಲು ಮಾಡಿದ್ದರೂ ಸರಕಾರವು ಜನಪ್ರತಿನಿಧಿಗಳ ಅಭಿಪ್ರಾಯಕ್ಕೆ ಎಷ್ಟು ಬೆಲೆ ಕೊಡುತ್ತಿರುವದೆಂಬುದು ಇದರಿಂದ ತಿಳಿಯುವದು. ಕಾಲೇಜೂ, ಹೈಸ್ಕೂಲು ಕಟ್ಟಡಗಳೂ, ಸೂಚಿತವಾದ ಸೇತುವೆಗಳೂ ಈ ವರ್ಷವೇ ಆಗಬೇಕು. ಸಹಕಾರ ಇಲಾಖೆಯು ರೈತರಿಗೆ ದೀರ್ಘ ಅವಧಿಯ ಸಾಲ ಕೊಡುವ ಏರ್ಪಾಡು ಮಾಡದಿರುವದು ಒಂದು ನ್ಯೂನತೆ. ಇನ್ನಾದರೂ ಬ್ಯಾಂಕಿನ ಶಾಖೆಯಾಗಿ ಈ ದೀರ್ಘಾವಧಿಯ ಸಾಲದ ಏರ್ಪಾಡು ಮಾಡಬೇಕು. ಈ ಇಲಾಖೆಗೆ ಅ. ರಿಜಿಸ್ಟ್ರಾರರೊಬ್ಬರನ್ನು ನೇಮಿಸಬೇಕು. ಸರಕಾರವು ಜನಪ್ರತಿನಿಧಿಗಳಿಗಿತ್ತ ಭರವಸೆಯಂತೆ ಕಾರ್ಯಮಾಡಬೇಕು.

ಶ್ರೀ ಕೆ. ಎಂ. ದೇವಯ್ಯನವರು

ಬಡವರ ಸಹಾಯಕ್ಕೆ ಈ ವ ಬಜೆಟ್ ಇದಲ್ಲ. ಅತೃಪ್ತಿಕರವಾಗಿದೆ. ರಸ್ತೆ ರಚನಾ ಭಾಗಕ್ಕೆ ಹಣವಿಡಲ್ಪಟ್ಟಿಲ್ಲ. ರೈತನ ಸ್ಥಿತಿಯನ್ನು ಸುಧಾರಿಸುವ ಬಾಬಿಗೆ ಗಮನವಿಟ್ಟಂತಿಲ್ಲ. ರೈತನ ಖರ್ಚು ವಿಪರೀತವಾಗಿ ಆತನ ಸ್ಥಿತಿಯು ೧೫ ವರ್ಷದ ಹಿಂದಿನಂತೆ ಇಂದೂ ಇದೆ. ಕೊಡಗಿನಲ್ಲಿ ನೈಸರ್ಗಿಕ ಸಂಪತ್ತಿದೆ. ಸರಕಾರವು ಇವುಗಳ ಸದುಪಯೋಗ ಮಾಡಲು ಪ್ರಯತ್ನಿಸಿಲ್ಲ. ಹೊಳೆಗಳಿದ್ದರೂ ನೀರಾವರಿಯೋಜನೆ ಇಲ್ಲ. ರೈತನು ಮಳೆಯ ನೀರನ್ನೇ ನಂಬಿ ಇರಬೇಕಾಗಿದೆ. ಅಜ್ಜಂದಿರ ಕಾಲದಲ್ಲಿ ಮಾಡಿದ ಕೆರೆಕಾಲುವೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವದು ಸಾಧ್ಯವಾಗಿಲ್ಲ. ಮಡಿಕೇರಿಯಲ್ಲಿ ಡೈರಿ ಫಾರಂ ತೆರೆದರೆ ರೈತನಿಗೆ ಯಾವ ಉಪಯೋಗವಾದಂತಾಯಿತು? ದನಗಳು ಪ್ರತಿ ವರ್ಷ ಸಾಯುವುದೇ ರೈತನ ಸಾಲಕ್ಕೆ ಕಾರಣ. ಇದನ್ನು ಗಮನಿಸಿ ಯೋಗ್ಯ ಏರ್ಪಾಡು ಮಾಡಬೇಕು. ಆತನಿಗೆ ದನಗಳಿಲ್ಲ; ಕುಡಿಯಲು ಹಾಲಿಲ್ಲ. ಮಕ್ಕಳು ಮರಿಗಳನ್ನು ಯೋಗ್ಯರೀತಿ ಪೋಷಿಸುವ ಅನುವಿಲ್ಲ. ಸರಕಾರವು ಈ ರೀತಿ ಹಣವ್ಯಯ ಮಾಡುವದರ ಬದಲು ಗ್ರಾಮಕ್ಕೊಂದರಂತೆ ಗೂಳಿಗಳನ್ನಾದರೂ ಕೊಟ್ಟಿದ್ದರೆ ಉಪಕಾರವಾಗುತ್ತಿತ್ತು. ಗ್ರಾಮಗಳಲ್ಲಿ ದನಗಳಿಗೆ ಬೇಸಿಗೆಯಲ್ಲಿ

(೬ನೇ ಪುಟಕ್ಕೆ ಸಾಗಿದೆ)

# ಕೊಡಗು

ತಾ. ೨೧-೪-೧೯೫೦ನೇ ಶುಕ್ರವಾರ

## ಕೊಡಗು ಕೌನ್ಸಿಲ್ ಬಡ್ಜೆಟ್ ಮೀಟಿಂಗು.

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ತಾ. ೧೭ ರಲ್ಲಿ ಪ್ರಾರಂಭವಾಗಿ ತಾ. ೨೦ರ ವರೆಗೆ ನಡೆಯಿತು. ಪ್ರಥಮ ದಿನ ಬಡ್ಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆ ನಡೆಯಿತು. ನಂತರ ಎರಡು ದಿನಗಳಲ್ಲಿ ಕೆಲವು ಠರಾವುಗಳು ಮಾತ್ರ ಚರ್ಚಿಸಲ್ಪಟ್ಟು ಉಳಿದವುಗಳನ್ನು ಮುಗಿಸಲು ಇನ್ನೂ ಮೂರು ನಾಲ್ಕು ದಿನಗಳು ಬೇಕೆಂದು ಕೋರಿದರೂ ಅಧ್ಯಕ್ಷರು ತಮ್ಮ ಕಲಶೆಯಿಂದ ಜಿಲ್ಲಾ ಬೋರ್ಡಿಗೆ ಸಂಬಂಧಿಸುವ ಠರಾವುಗಳನ್ನೆಲ್ಲಾ ಕೌನ್ಸಿಲು ಮತ್ತು ಜಿಲ್ಲಾ ಬೋರ್ಡಿನ ಮೆಂಬರುಗಳ ಜಂಟಿ ಕೂಟದಲ್ಲಿ ಚರ್ಚಿಸುವದು ದೇಶದ ಹಿತದೃಷ್ಟಿಯಿಂದ ಉತ್ತಮವಾಗುವದೆಂಬ ಸೂಚನೆಯ ನಿಮಿತ್ತ ಸದರಿ ಠರಾವುಗಳನ್ನೆಲ್ಲಾ ವಾಪಾಸು ತೆಗೆಸಿ ಉಳಿದ ಕೆಲವು ಠರಾವುಗಳನ್ನು ಬಡ್ಜೆಟ್ಟು ಮೀಟಿಂಗಿನ ನಾಲ್ಕು ದಿನಗಳ ಅವಧಿಯೊಳಗೆ ಮುಗಿಸುವಂತೆ ಅನುಕೂಲ ಪಡಿಸಿದ್ದು ತೃಪ್ತಿಕರವಾಗಿದೆ. ಕೌನ್ಸಿಲು ಜಿಲ್ಲಾ ಬೋರ್ಡಿನ ಮೇಲೆ, ಜಿಲ್ಲಾ ಬೋರ್ಡು ಕೌನ್ಸಿಲಿನ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತಾ, ಅನಾವಶ್ಯಕವಾದ ವಿವಾದ ಮಾಡುವದರ ಬದಲು ಚೀಫ್ ಕಮಿಷನರ ಮೇಲಿನ ಸೂಚನೆಯಂತೆ ಉಭಯತ್ರರೂ ಕಲೆತು ಚರ್ಚೆ ಮಾಡುವದು ದೇಶದ ಕಲ್ಯಾಣಕ್ಕೆ ಬಹು ಯೋಗ್ಯವಾದ ಸಲಹೆ ಎಂಬುದರಲ್ಲಿ ಸಂಶಯವಿಲ್ಲ.

ಪಾಸಾದ ಠರಾವುಗಳಲ್ಲಿ ವ್ಯವಸಾಯ ಆದಾಯ ತೆರಿಗೆಯ ಮಸೂದೆಯು ಪ್ರಾಮುಖ್ಯವಾದದಾಗಿದೆ. ಈ ಮಸೂದೆಯಂತೆ ಕಂದಾಯವನ್ನು ಹಾಕಬೇಕೆಂಬ ತತ್ವವನ್ನು ಒಪ್ಪಿ ಅದರಲ್ಲಿ ಯೋಗ್ಯ ಬದಲಾವಣೆಗಳನ್ನು ಮಾಡಲೋಸುಗ ಒಂದು ಸೆಲೆಕ್ಟ್ ಕಮಿಟಿಗೆ ಬಿಟ್ಟದ್ದು ಉಚಿತವಾಗಿದೆ. ನಾವು ಈ ಮೊದಲೇ ಸೂಚಿಸಿದ್ದಂತೆ ಬಹುಬೇಗನೆ ಅನ್ವಯಿಸದ ಈ ಕಂದಾಯದ ಆದಾಯದಿಂದ ಕೊಡಗು ಬಡ್ಜೆಟ್ಟಿನ ಕೊರತೆಯನ್ನು ಭರ್ತಿ ಮಾಡುವದಲ್ಲದೆ ಉಪಯುಕ್ತ ಕಾರ್ಯಗಳಿಗೆ ಬೇಕಾದ ಹಣವೂ ಕೂಡ ದೊರೆಯುವದೆಂಬುದು ನಮ್ಮ ನಂಬಿಕೆಯಾಗಿದೆ. ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ, ಕ್ಷಯರೋಗ ಆಸ್ಪತ್ರೆ ಸ್ಥಾಪನೆ, ಮೊದಲಾದ ಅಭಿಪ್ರಾಯ ಭೇದವಿದ್ದ ಠರಾವುಗಳನ್ನು ಕೂಡ ಅಧ್ಯಕ್ಷರು ತಮ್ಮ ಚತುರತೆಯಿಂದ ದೀರ್ಘ ಚರ್ಚೆಗೆ ಬಿಡದೆ ಹಿಂತೆಗೆಸುವ ಯಾ ದೀರ್ಘ ಆಲೋಚಿಸಿ ತೀರ್ಮಾನಿಸುವ ಅವಕಾಶ ಮಾಡಿ ಕೌನ್ಸಿಲು ಮೀಟಿಂಗನ್ನು ಸುಸೂತ್ರವಾಗಿ ವಿಳಂಬವಿಲ್ಲದೆ ಮುಗಿಸಲು ಸಹಾಯ ಮಾಡಿದರು.

ಈ ಮೀಟಿಂಗಿನ ತೀರ್ಮಾನಗಳಲ್ಲಿ ಅತೀ ಪ್ರಾಮುಖ್ಯವಾದ ವಿಷಯವು ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡಬೇಕೆಂದು ಇಂಡಿಯಾ ಸರಕಾರವನ್ನು ಕೇಳುವದಾಗಿದೆ. ಚೀಫ್ ಕಮಿಷನರ ಪ್ರಾಂತಗಳ ಪೈಕಿ ಕೌನ್ಸಿಲಿನ ಅನುಭವವಿದ್ದು ಉಳಿವರಿ ಬಡ್ಜೆಟ್ಟಿರುವ ಕೊಡಗು [illegible] ಜವಾಬ್ದಾರಿ ಸರ್ಕಾರಕ್ಕೆ ಅರ್ಹತೆಯುಳ್ಳದ್ದಾಗಿದೆ. ಆದರೆ ದುರ್ದೈವದಿಂದ ಈ ವರೆಗೆ ಇಲ್ಲಿ ಪ್ರತ್ಯೇಕ ಮತ್ತು ಸಂಯೋಜನಾ ಎರಡು ಪಕ್ಷಗಳಿದ್ದು ಒಗ್ಗಟ್ಟಾಗಿ ಸುಧಾರಣೆ ಕೇಳುವ ಎಡೆ ಇರಲಿಲ್ಲ. ಆದರೆ ಇಂದು ಎರಡು ಪಕ್ಷಗಳೂ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಒಗ್ಗಟ್ಟಾಗಿ ಠರಾವು ಪಾಸು ಮಾಡಿರುವದು ಶ್ರೇಯಸ್ಕರವಾಗಿದೆ. ಉತ್ಸಾಹಭರಿತರಾದ ಹೊಸ ಚೀಫ್ ಕಮಿಷನರ ನೇತೃತ್ವದಲ್ಲಿ ಕೊಡಗಿನ ರಾಜಕೀಯ ಪಕ್ಷಗಳು ಒಂದಾಗಿ ಕೊಡಗು ಬೇಗನೆ ಜವಾಬ್ದಾರಿ ಸರಕಾರವನ್ನು ಅನುಭವಿಸುವಂತಾಗಲೆಂದು ನಮ್ಮ ಆಶಯವಾಗಿದೆ.

## ವರ್ತಮಾನ.

ವೀರಾಜಪೇಟೆ ನೀರು ಸರಬರಾಯಿ (ಪಂಪು) ಕೆಲಸಕ್ಕೆ ರೂ. ೨,೧೩,೨೦೦ ಅಂದಾಜು ಮಾಡಲಾಗಿದೆಯೆಂದೂ ಕೇಂದ್ರ ಸರಕಾರದ ಅನುಮತಿ ದೊರೆತೊಡನೆ ಕೆಲಸ ಪ್ರಾರಂಭಿಸಲಾಗುವದೆಂದೂ ತಿಳಿಯಬಂದಿದೆ.

ಲಕ್ಷ್ಮಣತೀರ್ಥ ನೀರಾವರಿ ಯೋಜನೆಯಿಂದ ೩೦೦೦ ಎಕ್ರೆ ಭೂಮಿಗೆ ನೀರು ದೊರೆಯುವುದೆಂದು ಈ ಯೋಜನೆಗೆ ೪,೩೭,೦೦೦ ಖರ್ಚಾಗುವದೆಂದೂ ಅಂದಾಜು ಮಾಡಲಾಗಿದೆ.

ಪೊನ್ನಂಪೇಟೆ ಹೈಸ್ಕೂಲು ಕಟ್ಟಡವನ್ನು ಪೊನ್ನಂಪೇಟೆ ಇನ್ಸ್‌ಪೆಕ್ಷನ್ ಬಂಗ್ಲೆಯ ಹತ್ತಿರ ಕಟ್ಟಲಾಗುವದೆಂದೂ ಕಟ್ಟಡದ ಅಂದಾಜು ಖರ್ಚಿನ ಪಟ್ಟಿಯನ್ನು ಮಂಜೂರಾತಿ ಬಗ್ಗೆ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದು ಮಂಜೂರಾತಿ ದೊರೆತೊಡನೆ ಕೆಲಸ ಕೈಕೊಳ್ಳಲಾಗುವದೆಂದು ತಿಳಿದು ಬಂದಿದೆ.

೧೯೪೮-೪೯ರಲ್ಲಿ ಕೊಡಗಿನ ಎಕ್ಸೈಜ್ ಉತ್ಪತ್ತಿಯು ೧೧ ಲಕ್ಷವಾಗಿದ್ದು ೧೯೪೯-೫೦ರಲ್ಲಿ ೬½ ಲಕ್ಷವಾಗಿದೆಯೆಂದೂ ಪಾರ್ಶ್ವ ಪಾನನಿರೋಧದಿಂದ ಸರಕಾರಕ್ಕೆ ಸುಮಾರು 4½ ಲಕ್ಷ ರೂ ನಷ್ಟವಾಗಿದೆಯೆಂದೂ ತಿಳಿಯಬಂದಿದೆ.

೧೯೪೯ನೇ ಏಪ್ರಿಲ್ ತಿಂಗಳಿಂದ ಈ ವರೆಗೆ ಕದ್ದು ಸಾರಾಯಿ ಇಳಿಸುವ ೫೧ ಕೇಸುಗಳೂ, ಸಾರಾಯಿ ಕಳ್ಳಮಾರಾಟದ ೫ ಕೇಸುಗಳೂ ಹಿಡಿಯಲ್ಪಟ್ಟವೆಯಂತೆ.

ಬೇತ್ರಿ ಸೇತುವೆಯ ಖರ್ಚಿನಲ್ಲಿ ಎರಡು ಲಕ್ಷ ರೂಪಾಯಿಗೆ ಮೀರದೆಯೂ, ಕೊಟ್ಟಮುಡಿ ಸೇತುವೆಯ ಖರ್ಚಿನಲ್ಲಿ ೮೮,೦೦೦ಕ್ಕೆ ಮೀರದೆಯೂ ಕೇಂದ್ರ ಸರಕಾರವು ಕೊಡುವದೆಂದೂ ಈ ಸೇತುವೆಗಳ ಕೆಲಸವನ್ನು ಬರುವ ವರ್ಷ ಕೈಕೊಳ್ಳಲಾಗುವದೆಂದೂ ತಿಳಿಯಬಂದಿದೆ.

ತಾ. ೨೧-೧-೪೭ರಿಂದ ಈ ವರೆಗೆ ವೀರಾಜಪೇಟೆ ಮುನ್ಸಿಪಾಲಿಟಿಗೆ ಆಸ್ತಿಯ ಬಾಬಿನಿಂದ ೧,೩೫,೦೭೭ ರೂ. ಉತ್ಪತ್ತಿ ಬಂದಿದೆಯೆಂದು ತಿಳಿಯಬರುತ್ತದೆ.

೧೯೪೯ರಲ್ಲಿ ಸಾರಾಯಿ ಕೂಪನುಗಳಿಗಾಗಿ ೧೫೩೩೭ ಅರ್ಜಿಗಳೂ, ವಿದೇಶೀ ಪಾನೀಯಗಳಿಗಾಗಿ ೬೨೧ ಅರ್ಜಿಗಳೂ ಬಂದಿದ್ದವೆಂದೂ ಈ ವರ್ಷ ಈ ವರೆಗೆ ಸಾರಾಯಿ ಕೂಪನುಗಳಿಗಾಗಿ ೪,೭೭೩ ಅರ್ಜಿಗಳೂ, ವಿದೇಶೀ ಪಾನೀಯಗಳಿಗಾಗಿ ೩೨೦ ಅರ್ಜಿಗಳೂ ಬಂದಿರುವವೆಂದೂ ಗೊತ್ತಾಗಿದೆ.

# ಚೀಫ್ ಕಮಿಷನರ ಭಾಷಣ.

ಈ ತಾ. ೨೦ರ ಸಾಯಂಕಾಲ ಕೌನ್ಸಿಲು ಬಡ್ಜೆಟ್ ಮೀಟಿಂಗು ಅಂತ್ಯವಾದ ಕಾಲಕ್ಕೆ ಅಧ್ಯಕ್ಷರಾದ ಚೀಫ್ ಕಮಿಷನರು ಮಾಡಿದ ಭಾಷಣದ ಸಾರಾಂಶ:—

ಕಳೆದ ನಾಲ್ಕು ದಿವಸಗಳಿಂದ ಕೌನ್ಸಿಲಿನಲ್ಲಿ ನಿಮ್ಮ ಚರ್ಚೆಯನ್ನು ಕೇಳುತ್ತಾ ಇದ್ದೆನು. ನಿಮ್ಮ ಚರ್ಚೆ ಮತ್ತು ಭಾಷಣಗಳು ಉತ್ತಮವಾಗಿದ್ದವು ಮತ್ತು ನೀವು ಕೌನ್ಸಿಲಿನ ಗೌರವವನ್ನು ಕಾಪಾಡಿದ್ದೀರೆಂದು ಹೇಳಲು ಸಂತೋಷಪಡುತ್ತೇನೆ. ನಿಮ್ಮ ಚರ್ಚೆಯನ್ನು ಒಟ್ಟಾರೆ ನೋಡಿದರೆ ನಿಮ್ಮ ಇಲ್ಲಿಯ ತೀರ್ಮಾನಗಳನ್ನೆಲ್ಲಾ ಸರ್ಕಾರದವರು ತಿರಸ್ಕರಿಸಿಬಿಡುತ್ತಾರೆಂಬ ಒಂದು ಸಂಶಯವು ನಿಮ್ಮಲ್ಲಿರುವಂತೆ ಕಾಣುತ್ತದೆ. ಆದರೆ ನೀವು ನಿಮ್ಮ ಓಟರುಗಳ ಸೇವೆಯ ದೃಷ್ಟಿಯಿಂದ ಹಲವು ಠರಾವುಗಳನ್ನು ತಂದು ಪಾಸುಮಾಡುತ್ತೀರಿ. ಆದರೆ ಉದ್ಯೋಗಸ್ಥರು ಆಡಳಿತದಲ್ಲಿ ತಮ್ಮ ದೀರ್ಘ ಕಾಲದ ಅನುಭವವನ್ನು ಉಪಯೋಗಿಸಿ ನಿಮ್ಮ ಠರಾವುಗಳಲ್ಲಿ ಕೆಲವನ್ನು ಜಾರಿಗೆ ತರಲಿಕ್ಕೆ ಸಾಧ್ಯವಿಲ್ಲವೆಂದು ತೀರ್ಮಾನಿಸಬಹುದು. ನನಗೆ ಹೊರದೇಶದ ಮತ್ತು ಇಂಡಿಯಾದ ಹಲವು ಜಿಲ್ಲೆಗಳಲ್ಲಿ ಉದ್ಯೋಗ ಮಾಡಿದ ಅನುಭವವಿದೆ. ಉದ್ಯೋಗಸ್ಥರ ದೀರ್ಘ ಅನುಭವದನ್ನು ನೀವು ಉಪಯೋಗಿಸಿಕೊಳ್ಳಬೇಕು. ಉದ್ಯೋಗಸ್ಥರೂ, ನೀವೂ ಬೇರೆ ಬೇರೆಯೆಂದು ನೀವು ತಿಳಿದುಕೊಳ್ಳಬಾರದು. ಈಗ ಎಲ್ಲರೂ ಜನರ ಹಿತದ ದೃಷ್ಟಿಯಿಂದಲೇ ಕೆಲಸ ಮಾಡುವವರಾಗಿದ್ದಾರೆಂದು ನೀವು ತಿಳಿದುಕೊಳ್ಳಬೇಕು. ನೀವು ಪಾಸು ಮಾಡಿದ ಒಂದು ಠರಾವನ್ನು ಎತ್ತಿ ಹೇಳುವದಾದರೆ ಫಾರೆಸ್ಟಿನಲ್ಲಿ ಎಲ್ಲಾ ದನಗಳನ್ನು ತಡೆಯಿಲ್ಲದೆ ಮಾಫಿಯಾಗಿ ಮೇಯಿಸಲು ಬಿಡಬೇಕೆಂಬುದು ಅರಣ್ಯರಕ್ಷಣೆಯ ಪ್ರಾಮುಖ್ಯ ತತ್ವಗಳಿಗೇ ವಿರುದ್ಧವಾದದು. ಇದನ್ನು ಜಾರಿಗೆ ತಂದರೆ ಅರಣ್ಯರಕ್ಷಣೆ ಸಾಧ್ಯವಿಲ್ಲ. ವ್ಯವಸಾಯಗಾರರಿಗೆ ಎಲ್ಲಾ ವಿಧದ ಸಹಾಯವನ್ನು ಮಾಡಬೇಕೆಂಬುದೇ ನನ್ನ ಉದ್ದೇಶ. ಇಲ್ಲಿಯವರು ಹೊರಗೆ ಮಾರಾಟಕ್ಕವನ್ನು ಕೊಡುತ್ತಿದ್ದಾರೆ. ನೀವೂ ಕೂಡ ಇಲ್ಲಿ ಮಾರಾಟ ತೆರಿಗೆ, ಕಾಗಾಮಿಯಾಗಿ ಬಂದು ಇನ್ನೂಹಲವು ಅನುಕೂಲತೆಗಳನ್ನು ಅನುಭವಿಸುವ ಇಳಗಳ ಮೇಲೆ ತೆರಿಗೆ, ಮೊದಲಾದುವುಗಳನ್ನು ಹಾಕುವ ಆಲೋಚನೆ ಮಾಡಬೇಕಾಗಿದೆ. ನೀವೇ ದೇಶದ ಹಣ ಕಾಸಿನ ಹಿತಾಹಿತಗಳನ್ನು ರಕ್ಷಿಸುವ ಜವಾಬ್ದಾರಿ ಹೊಂದಿದವರು. ನಾವು ನಿಮ್ಮ ಸೂಚನೆಗಳನ್ನು ಜಾರಿಯಲ್ಲಿ ತರುವವರು. ಕೊಡಗು ಹೀಗೆಯೇ ಪ್ರತ್ಯೇಕವಿರುವ ವರೆಗೆ ಇಲ್ಲಿಯ ಜನತೆಗೆ ಬೇಕಾದ ಸೌಕರ್ಯ ಸೌಲಭ್ಯಗಳನ್ನು ಮಾಡಿಕೊಡಬೇಕಾಗಿದೆ. ಅದಕ್ಕೆ ಬೇಕಾದ ಹಣವನ್ನು ಪಡೆಗಿಸಿಕೊಳ್ಳಲೂ ಬೇಕಿದೆ. ಆದ್ದರಿಂದ ಕರಕಂದಾಯಗಳಿಗೆ ವಿರೋಧಿಸುವದು ಯೋಗ್ಯವಲ್ಲ. ನಿಮ್ಮ ಟೀಕೆಗಳಲ್ಲಿ ಒಂದು ಮಾತ್ರ ನನಗೆ ರುಚಿಸಲಿಲ್ಲ. ಇಲ್ಲಿಯ ಉದ್ಯೋಗಸ್ಥರು ರಾಜಕೀಯದಲ್ಲಿ ಭಾಗವಹಿಸುತ್ತಾರೆಂದು ಒಬ್ಬರು ಹೇಳಿದರು. ಇದು ಬರೇ ಹೇಳಿಕೆಯ ಮಾತಾಗಿರಬೇಕೆಂದು ನಾನು ನಂಬುತ್ತೇನೆ. ಉದ್ಯೋಗಸ್ಥರು ರಾಜಕೀಯದಲ್ಲಿ ಭಾಗವಹಿಸಬಾರದು. ಅವರು ಎಲ್ಲಾ ಪಂಗಡದ ಜನರಲ್ಲಿ ಮಿಳಿತವಾಗಿ ಅವರ ಹಾಲುಹವಾಲುಗಳನ್ನು ತಿಳಿದುಕೊಳ್ಳಬೇಕಾಗಿದೆ. ನಂತರ ದೇಶಕ್ಕೆ ಹಿತವಾಗುವಂಥಾ ಕಾರ್ಯವನ್ನು ಮಾಡಬೇಕು. ಜನರ ಸೇವೆಯೇ ನನ್ನ ಮುಖ್ಯ ಉದ್ದೇಶ.

---

ಪೈಸಾರಿಯಿಂದ ಜಾಗಕ್ಕಾಗಿ ಮಾಜಿ ಸಿಪಾಯಿಗಳಿಂದ ೧೦೧೦ ಅರ್ಜಿಗಳು ಬಂದಿದ್ದು ಇವುಗಳಲ್ಲಿ ೪೨೭ ಜನರಿಗೆ ಈ ವರೆಗೆ ಜಾಗ ಕೊಡಲಾಗಿದೆಯೆಂದೂ, ದರಕುಗಳನ್ನು ಸಲ್ಲಿಸದ ೨೬೫ ಅರ್ಜಿಗಳನ್ನು ತಿರಸ್ಕರಿಸಲಾಗಿದೆಯೆಂದು ತಿಳಿಯಬಂದಿದೆ.

ಹೆಬ್ಬಾಲೆ ನೀರಾವರಿ ಯೋಜನೆಗೆ ಕೇಂದ್ರ ಸರಕಾರದ ಅನುಮತಿಯು ತಾ. ೨೫-೩-೫೦ ರಲ್ಲಿ ದೊರೆತಿದ್ದು ಇದಕ್ಕೆ ರೂ. ೧,೧೫,೨೦೦ ಖರ್ಚಾಗುವದೆಂದೂ ಈ ಕೆಲಸವನ್ನು ಕೈಕೊಳ್ಳಲಾಗಿದೆಯೆಂದೂ ತಿಳಿದುಬಂದಿದೆ.

ಸಾರಾಯಿ ಮತ್ತು ವಿದೇಶೀ ಪಾನೀಯಗಳ ಪರ್ಮಿಟ್ಟಿಗೆ ಅರ್ಜಿ ಬರಕೊಳ್ಳುವ ತಾರೀಕನ್ನು ಏಪ್ರಿಲ್ ೩೦ ರ ವರೆಗೆ ಮುಂದರಿಸಲಾಗಿದೆಯೆಂದೂ, ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದೆಂದೂ ಪ್ರಕಟಿಸಲಾಗಿದೆ.

ಹಿಂದೂದೇಶದ ಮುಖ್ಯ ಸೇನಾಪತಿಯಾದ ಜನರಲ್ ಕಾರ್ಯಪ್ಪನವರು ಇದೇ ತಿಂಗಳು ೨೮ ರಲ್ಲಿ ಕೊಡಗಿಗೆ ಬಂದು ಎರಡು ದಿನ ಕೊಡಗಿನಲ್ಲಿರುವರು. ಅವರು ಕೊಡಗಿನ ಮಾಜಿ ಸಿಪಾಯಿಗಳನ್ನು ನೋಡಲು ಇಚ್ಛಿಸಿರುವದರಿಂದ ಮಡಿಕೇರಿ ರಾಜಾಸೀಟಿನಲ್ಲಿ ತಾ. ೨೯ಕ್ಕೆ ಪ್ರಾತಃಕಾಲ ೧೧ ಗಂಟೆಗೆ ಹಾಜರಾಗಬೇಕಾಗಿ ತಿಳಿಸಲಾಗಿದೆ.

ಕೊಡಗು ವ್ಯವಸಾಯ ಇಲಾಖೆಯ ಆಶ್ರಯದಲ್ಲಿ ಮೇ ತಿಂಗಳ ೧೫ರಿಂದ ಒಂದೂವರೆ ತಿಂಗಳ ವರೆಗೆ ಮಡಿಕೇರಿಯಲ್ಲಿ ಜೇನು ವ್ಯವಸಾಯದ ತರಬೇತು ಕೊಡಲಾಗುವುದೆಂದೂ ಕನ್ನಡ ಓದುಬರಹ ತಿಳಿದಿರುವ ವ್ಯವಸಾಯಗಾರರನ್ನು ಈ ತರಬೇತಿಗೆ ಆರಿಸಿಕೊಳ್ಳಲಾಗುವುದೆಂದೂ, ಊಟ ಮತ್ತು ವಸತಿಯ ನಿರ್ವಾಹವನ್ನು ಉಮೇದುವಾರರೇ ಮಾಡಿಕೊಳ್ಳಬೇಕೆಂದೂ ಖಾಯಿಷ್‌ದಾರರು ಏಪ್ರಿಲ್ ೩೦ರ ಒಳಗೆ ವ್ಯವಸಾಯ ಅಧಿಕಾರಿಗೆ ಅರ್ಜಿ ಬರಕೊಳ್ಳಬಹುದೆಂದೂ ತಿಳಿಸುತ್ತಾರೆ.

ಮೈಸೂರಿನ ಹರಿದಾಸರಾದ ಶ್ರೀಮತಿ ಪಂಕಜಮ್ಮಾಳ್ ಅವರು ೨೨ನೇ ಶನಿವಾರ ಸಾಯಂಕಾಲ ೬½ ಗಂಟೆಗೆ ಮಡಿಕೇರಿ ವೇದಾಂತ ಸಂಘದಲ್ಲೂ ಭಾನುವಾರ ಸಾಯಂಕಾಲ ೭ ಗಂಟೆಗೆ ಆಂಜನೇಯ ದೇವಾಲಯದಲ್ಲೂ ಹರಿಕಥೆಗಳನ್ನು ಮಾಡುವರು.

ಕೊಡಗಿನ ಖನಿಜ ಸಂಪತ್ತನ್ನು ಕಂಡುಹಿಡಿಯುವ ಪರಿಶೋಧನೆ ಬಗ್ಗೆ ಇಂಡಿಯಾ ಸರಕಾರದ ಪ್ರಾಣಿ ಮತ್ತು ವನಸ್ಪತಿ ಶಾಸ್ತ್ರ ಇಲಾಖೆಯ ಡಾ. ಡೇ ಎಂಬುವರು ಮಡಿಕೇರಿಗೆ ಬಂದು ಈ ಕಾರ್ಯವನ್ನು ಪ್ರಾರಂಭಿಸಿರುವರು. ಈ ಕೆಲಸವು ಸುಮಾರು ೩ ವರ್ಷಗಳ ವರೆಗೆ ನಡೆಯುವದೆಂದೂ ತಿಳಿದು ಬಂದಿದೆ.

# ಭಗವಾನ್ ರಮಣ ಮಹರ್ಷಿ

ಲೇ.—ಶ್ರೀ. ವಿ ಎಸ್. ರಾಮಕೃಷ್ಣ ಬಿ. ಎಸ್. ಸಿ, (ಆನರ್ಸ್) ಬಿ ಟಿ.

ವಿಶ್ವದ ಆಧ್ಯಾತ್ಮಿಕ ಬಾಂದಳದಲ್ಲಿ ಮಿನುಗಿ ಪ್ರಜ್ವಲಿಸಿದ ದಿವ್ಯಜ್ಯೋತಿಯೊಂದು ಅದೃಶ್ಯವಾಯಿತು. ಭಗವಾನ್ ರಮಣಮಹರ್ಷಿ ಅಸ್ತಂಗತರಾದುದರಿಂದ ವಿಶಾಲವಿಶ್ವವೇ ಅಂಧಕಾರಮಯವಾಗಿದೆ. ಚೈತನ್ಯಸ್ವರೂಪರಾದ ಮಹರ್ಷಿ ಮಾನವ ದೇಹಧಾರಣೆಮಾಡಿದ ಭಗವದಂಶರಾಗಿ ದೇದೀಪ್ಯಕಾಂತಿಯಿಂದ ಬೆಳಗುತ್ತಾ ೫೦ ವರ್ಷಗಳ ದೀರ್ಘ ಕಾಲ ತಮ್ಮ ಅಮರ ಸಂದೇಶವನ್ನು ಜಗತ್ತಿಗೆ ಸಾರಿದರು. ಆದರೆ ಜಗತ್ತು ಕೇವಲ ಐಹಿಕ ಸುಖ ಲಾಲಸೆಗಳಲ್ಲಿ ಮಗ್ನವಾಗಿದ್ದು ಭಗವಾನ್ ರಮಣರ ಪರಮಪಾವನ ಸಂದೇಶ ಸುಧೆಯನ್ನು ಪಾನಿಸಲು ತವಕಗೊಳ್ಳಲಿಲ್ಲ. ಭಗವಾನ್ ರಮಣರು ತಮ್ಮ ಆಧ್ಯಾತ್ಮಿಕ ಸಂದೇಶವನ್ನು ಸಾರುತ್ತಾ ಪಾರಮಾರ್ಥಿಕ ಜೀವನದ ಹೆಚ್ಚುಗೆಯನ್ನು ಪ್ರಕಾಶಪಡಿಸುತ್ತಿದ್ದ ಕಾಲದಲ್ಲೇ ಎರಡು ಸಂಗ್ರಾಮಗಳು ಕಳೆದು ಹೋಗಿ ಪಾಶವೀ ಲಾಲಸೆಯಿಂದ ಬೇಗುದಿಗೊಂಡ ಪ್ರಪಂಚವು ಮೂರನೇ ಮಹಾ ಯುದ್ಧಕ್ಕೆ ಅಣಿ ಮಾಡುತ್ತಿರುವುದು. ಆದರೆ ರಮಣರು ಜಗತ್ತಿನ ಕ್ಷುದ್ರ ವ್ಯಾಪಾರಗಳಿಂದ ತೀರಾ ದೂರವಾಗಿದ್ದು ಜೀವನ್ಮುಕ್ತರಾಗಿ ತಿರುವಣ್ಣಾಮಲೆಯಲ್ಲಿ ಬಾಳಿ ಬದುಕಿ ಮೊನ್ನೆ ತಾನೇ (ಏಪ್ರಿಲ್ ೧೪ ರಂದು) ಮಹಾ ಸಮಾಧಿಸ್ಥರಾದರು.

ರಮಣ ಮಹರ್ಷಿಗಳು ಆಧುನಿಕ ಯುಗದ ಮಹಾ ಜ್ಞಾನ ಯೋಗಿಗಳು. ಪೂಜ್ಯ ಗಾಂಧೀಜೀ ಇಪ್ಪತ್ತನೆಯ ಶತಮಾನದ ಕರ್ಮಯೋಗಿಗಳಾದರೆ ರಮಣರು ಈ ಶತಮಾನದ ಜ್ಞಾನಯೋಗಿಗಳಾಗಿರುವರು. ಅವರು ಮಧುರೆ ಜಿಲ್ಲೆಯ ಹಳ್ಳಿಯೊಂದರಲ್ಲಿ ೭೧ ವರ್ಷಗಳ ಕೆಳಗೆ ಬ್ರಾಹ್ಮಣ ಕುಟುಂಬದಲ್ಲಿ ಜನ್ಮ ತಾಳಿದರು, ಅವರ ತಂದೆಯವರು ಒಬ್ಬ ವಿಖ್ಯಾತ ವಕೀಲರಾಗಿದ್ದರು. ರಮಣ ಮಹರ್ಷಿಗಳ ನಿಜವಾದ ಹೆಸರು ವೆಂಕಟರಮಣ ಎಂಬುದಾಗಿತ್ತು. ಅವರು ವಿದ್ಯಾಭ್ಯಾಸಕ್ಕೋಸುಗ ಶಾಲೆಗೆ ಹೋಗುತ್ತಿದ್ದರಾದರೂ ಅವರಿಗೆ ಹೊಟ್ಟೆಪಾಡಿನ ಪ್ರಾಪಂಚಿಕ ವಿದ್ಯೆಯಲ್ಲಿ ಏನೇನೂ ಅಭಿಲಾಷೆ ಇರಲಿಲ್ಲ. ಆಧ್ಯಾತ್ಮಿಕ ವಿದ್ಯೆಗಾಗಿ ಅವರ ಮನವು ನಿರಂತರವೂ ತವಕಪಡುತಲಿತ್ತು. ವೆಂಕಟರಮಣರಿಗೆ ೧೭ ವರ್ಷ ತುಂಬುವುದರೊಳಗಾಗಿ ಅವರ ಅಲೌಕಿಕ ತೇಜಸ್ಸನ್ನು ಪ್ರಕಾಶಪಡಿಸುವ ಸಂದರ್ಭವು ಪ್ರಾಪ್ತವಾಯಿತು. ಅವರೊಮ್ಮೆ ತಮ್ಮ ಏಕಾಂತ ಕೊಠಡಿಯಲ್ಲಿ ಮಲಗಿರುವಾಗ ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಲು ಉಪಕ್ರಮಿಸಿದರು. 'ತಾನು ಯಾರು? ಎಲ್ಲಿಂದ ಬಂದೆನು? ಎಲ್ಲಿಗೆ ಹೋಗತಕ್ಕವನು? ಪ್ರಾಯ ತೋರಿದಂತೆ ಬದಲಾವಣೆ ಹೊಂದಿ ಕಡೆಗೊಮ್ಮೆ ನಶಿಸುವ ನಶ್ವರವಾದ ನನ್ನ ದೇಹಕ್ಕೂ ನಿಜವಾದ ನನಗೂ ಏನಾದರೂ ಸಂಬಂಧವಿದೆಯೇ?' ಎಂಬಿತ್ಯಾದಿ ಪ್ರಶ್ನೆ ಮಾಲಿಕೆಗಳನ್ನು ನೆನೆಸಂತೆ ಅವರಿಗೆ ವಿಚಿತ್ರ ಅನುಭವಗಳಾಗತೊಡಗಿದವು. ಅವರಿಗೆ ಸಾವಿನ ಅನುಭವವಾದಂತಾಗಿ ದೇಹಾದ್ಯಂತವೂ ಕಂಪಿಸತೊಡಗಿತು. ತಾನು ನಿಜವಾಗಿಯೂ ಸಾಯುತ್ತಿರುವೆನೆಂದೇ ಅವರಿಗೆ ಭಾಸವಾಯಿತು. ಅವರ ಕಣ್ಣುಗಳು ಮುಚ್ಚಿಕೊಂಡವು. ತುಟಿಗಳೆರಡೂ ಪರಸ್ಪರ ಜೋಡಿಸಿಹೋಗಿದ್ದುವು. ಅವರು ಬಾಹ್ಯ ಜ್ಞಾನ ಶೂನ್ಯರಾಗಿದ್ದರು.

ರಮಣರಿಗೆ ಎಚ್ಚರವಾದಾಗ ತಮ್ಮ ದೇಹವು ಇನ್ನೂ ಹಾಗೆಯೇ ಇದ್ದುದನ್ನು ಕಂಡು ಬೆರಗುಗೊಂಡರು. ದೇಹದಲ್ಲಿ 'ನಾನು' ಇದ್ದಿತಾದರೂ 'ನಾಮತ್ವ'ವು ಸಂಪೂರ್ಣ ಮಾಯವಾಗಿದ್ದಿತು. ಅಹಂಕಾರ ಮಮಕಾರಗಳು ಅಳಿದುಹೋಗಿದ್ದುವು. ಮಾಯೆಯ ಮುಸುಕು ಛಿದ್ರವಿಚ್ಛಿದ್ರವಾಗಿ ಒಡೆದುಹೋಗಿದ್ದಿತು. ರಮಣರು ನಿತ್ಯಾನಂದರಾಗಿ ವಿರಾಜಿಸುತ್ತಿದ್ದರು.

ಈ ಅಪೂರ್ವ ಅನುಭವವಾದ ತರುವಾಯ ರಮಣರಿಗೆ ತಮ್ಮ ಆಧ್ಯಾತ್ಮಿಕ ಸಾಧನೆಗೆ ತಮ್ಮ ಜನ್ಮ ಸ್ಥಳದ ಸನ್ನಿವೇಶವು ಅನುಕೂಲವಲ್ಲವೆಂದು ತೋರಿತು. ಅವರು ಯಾರಿಗೂ ಅರಿಯದಂತೆ ರೈಲು ಹತ್ತಿ ಹಲಕಾಲ ಅಲೆದು ತಿರುವಣ್ಣಾಮಲೆಯ ಪವಿತ್ರತಮ ಕ್ಷೇತ್ರಕ್ಕೆ ಬಂದರು. ತಾವು ಮನೆಬಿಟ್ಟು ಹೊರಡುವ ಮೊದಲು ತಮ್ಮ ಈ ಕಾರ್ಯಕ್ರಮವನ್ನು ಹಿರಿಯರಿಗೆ ತಿಳಿಸಲು ಪತ್ರವೊಂದನ್ನು ಬರೆದಿಟ್ಟರು. ಆ ಪತ್ರಕ್ಕೆ ಸಹಿಯೇ ಇರಲಿಲ್ಲ. 'ನಾಮತ್ವ'ವು ಇದ್ದರಲ್ಲವೇ ಸಹಿ ಹಾಕಬೇಕು. ಅಹಂಕಾರವು ಅಳಿದ ತರುವಾಯ ಸಹಿ ಹಾಕುವುದರಲ್ಲಾವ ಅರ್ಥವಿದೆ?

ರಮಣರು ತಿರುವಣ್ಣಾಮಲೆಗೆ ಆಗಮಿಸಿದ ತರುವಾಯ ಅಲ್ಲಿಯ ಚಿಕ್ಕ ದೇವಾಲಯ ಒಂದರಲ್ಲಿ ಆಧ್ಯಾತ್ಮಿಕ ಸಾಧನೆಗಾಗಿ ಮಂಡಿಸಿದರು. ಕುಮಾರನನ್ನು ಕಾಣಲು ಹಂಬಲಿಸಿದ ಅವರ ಜನನಿ ಅವರ ತೇಜಃಪುಂಜ ಮೂರ್ತಿಯನ್ನು ಬಹು ಪ್ರಯತ್ನದ ಫಲವಾಗಿ ಅಲ್ಲಿ ಕಂಡು ಹಿಡಿದರು. ಎಷ್ಟು ನಯ ವಿನಯಗಳಿಂದ ಕೇಳಿಕೊಂಡರೂ, ಬಲಾತ್ಕರಿಸಿದರೂ ರಮಣರು ತಮ್ಮ ಕಠಿಣ ನಿರ್ಧಾರವನ್ನು ಕದಲಿಸಲಿಲ್ಲ. ತಾಯಿಯೊಡನೆ ಮನೆಗೆ ಮರಳಲು ಒಡಂಬಡಲಿಲ್ಲ. ಕಡೆಗೂ ಆ ಮಾತೆ ನಿರಾಶಳಾಗಿ ಸನ್ಯಾಸ ಸ್ವೀಕರಿಸಿ ರಮಣಾಶ್ರಮದಲ್ಲೇ ವಾಸಿಸುತ್ತಿದ್ದು ಕೆಲವು ವರ್ಷಗಳ ಹಿಂದೆ ಸಮಾಧಿಸ್ಥೆಯಾದರು.

ದೇವಾಲಯದಲ್ಲಿ ಮೌನಮುದ್ರಿತ ಏಕಾಂತ ಆಧ್ಯಾತ್ಮಿಕ ಸಾಧನೆಯಲ್ಲಿ ಕೆಲ ದಿನ ಕಳೆದ ತರುವಾಯ ರಮಣರು ಸಮೀಪದ ಗುಹೆಯೊಂದರಲ್ಲಿ ಯಾರಿಗೂ ಅರಿಯದಂತೆ ಕುಳಿತರು. ಅನ್ನಾಹಾರಗಳನ್ನು ಸೇವಿಸುತ್ತಿರಲಿಲ್ಲ. ಅವರಿದ್ದ ಸ್ಥಳವೂ ಯಾರಿಗೂ ತಿಳಿದಿರಲಿಲ್ಲ. ಅವರ ಸ್ಥಿತಿಯು ವಿಚಿತ್ರವಾಗಿದ್ದಿತು. ಅವರು ಸತ್ತಿದ್ದರೇ? ಇಲ್ಲ. ಜೀವಂತವಾಗಿದ್ದರೇ? ಇಲ್ಲ. ಹಾಗಾದರೆ ಈ ಮಹಾಸ್ಥಿತಿಯನ್ನು ಏನೆಂದು ಕರೆಯೋಣ? ಅವರ ಮುಖಮಂಡಲದಲ್ಲಿ ದೇದೀಪ್ಯಕಾಂತಿಯಿತ್ತು, ದೇಹವು ನಿಷ್ಪಂದವಾಗಿ ಜಡವಾಗಿದ್ದಿತು. ಒಂದು ಕಡೆಯಿಂದ ಹುಳು ಹುಪ್ಪಟೆಗಳು ಅವರ ದೇಹವನ್ನು ಕೊರೆಯುತ್ತಿದ್ದುವು. ಅವರಿಗೆ ಅದರ ಪರಿವೆಯೇ ಇರಲಿಲ್ಲ. ಇಂತಹ ತುರೀಯಾವಸ್ಥೆಯನ್ನು ಏನೆಂದು ಕರೆಯೋಣ? ಇದನ್ನು ಶಾಸ್ತ್ರಸಿದ್ಧಾಂಗಳು ನಿರ್ವಿಕಲ್ಪ ಸಮಾಧಿ ಎಂದು ಕರೆವವು. ಈ ಅವಸ್ಥೆಯಲ್ಲಿ ಆತ್ಮ ಪರಮಾತ್ಮರಲ್ಲಿ ಭಿನ್ನಾಭಿನ್ನತೆಗಳಿಲ್ಲದೆ ಜೀವಾತ್ಮವು ಏಕಮೇವಾದ್ವಿತೀಯವಾಗಿ ವಿಶ್ವದ ವಿರಾಟ ಆತ್ಮದಲ್ಲಿ ತಲ್ಲೀನವಾಗುವುದು. ಸಾಮಾನ್ಯರಿಗೆ ಊಹಿಸಲು ಕೂಡಾ ಅಳವಲ್ಲದ ಅವಸ್ಥೆಯದು.

ಕವಿಶ್ರೇಷ್ಠರಾದ ಗಣಪತಿಶಾಸ್ತ್ರಿ ಎಂಬವರು ರಮಣರನ್ನು ಆ ಸ್ಥಿತಿಯಲ್ಲಿ ಪ್ರಥಮ ದರ್ಶನ ಮಾಡಿ ಆ ದರ್ಶನದಿಂದ ಪುಳಕಿತಾಂಗರಾದರು. ಅದೇ ಸಮಾಧಿಸ್ಥಿತಿಯಲ್ಲಿ ಅವರನ್ನು ಎತ್ತಿ ತಂದು ಯೋಗ್ಯ ಸ್ಥಳದಲ್ಲಿ ಇಡಲಾಯಿತು. ಕೆಲಕಾಲದಲ್ಲೇ ರಮಣರು ನಿರ್ವಿಕಲ್ಪ ಸಮಾಧಿಯಿಂದ ಎಚ್ಚರಗೊಂಡು ತಮ್ಮ ಸುತ್ತುಮುತ್ತಿನ ಸನ್ನಿವೇಶ ಸಂದರ್ಭಗಳನ್ನು ನೋಡಿ ಚಕಿತರಾದರು. ಗಣಪತಿ ಶಾಸ್ತ್ರಿಗಳು ಅವರ ಆಧ್ಯಾತ್ಮಿಕ ಸಾಧನೆಯನ್ನು ಅರಿತು 'ಭಗವಾನ್ ರಮಣ ಮಹರ್ಷಿ'ಯೆಂದು ಅವರನ್ನು ಸಂಬೋಧಿಸಿ ಜಗತ್ತಿಗೆ ಸಾರಿದರು. ಅಂದಿನಿಂದ ರಮಣಾಶ್ರಮವು ಬೆಳೆಯುತ್ತಾಗಿ ಭರತಖಂಡದ ಹಾಗೂ ವಿಶ್ವದ ಅನೇಕ ಕಡೆಗಳಿಂದ ಆಧ್ಯಾತ್ಮಿಕ ಸಾಧಕರನ್ನೂ, ಭಕ್ತರನ್ನೂ ಆಕರ್ಷಿಸಿತು. ೫೦ ವರ್ಷಗಳಿಂದ ರಮಣರು ತಮ್ಮ ಚಿರಶಾಂತ ಮೌನ ಮುದ್ರಿತ ಉಪದೇಶದಿಂದಲೇ ಅಶಾಂತಮಯ ಮನಸಿಗೆ ಶಾಂತಿಯ ವಿದ್ಯುತ್ತನ್ನು ಸಂಚಾರ ಮಾಡಿಸಿದ್ದಾರೆ.

ಭಗವಾನ್ ರಮಣರು ಭಾಷಣಗಳ ಮೂಲಕವಾಗಲೀ ಪುಸ್ತಕಗಳನ್ನು ಪ್ರಚಾರ ಪಡಿಸುವುದರಿಂದಾಗಲೀ ತಮ್ಮ ಹೊಸ ಸಂದೇಶವನ್ನು ಜಗತ್ತಿಗೆ ಸಾರಲಿಲ್ಲ. ಅವರ ಸಂದೇಶದಲ್ಲಿ ಹೊಸತೇನೂ ಇರಲಿಲ್ಲ. ಆ ಸಂದೇಶವು ಭರತಖಂಡದಷ್ಟೇ ಪ್ರಾಚೀನವಾಗಿದ್ದಿತು. ಅದರವರ ವೈಶಿಷ್ಟ್ಯವೇನು? ಪ್ರಾಚೀನತಮ ಸಂದೇಶವನ್ನು ಸಾಧಿಸಿ ಅನುಷ್ಟಿಸಿ ಸಾರ್ಥಕತೆ ಪಡೆದುದು ಅವರ ವೈಶಿಷ್ಟ್ಯ. ಅವರಲ್ಲಿಗೆ ಹೋದವರೊಡನೆ ಅವರು ಮಾತಾಡುತ್ತಲಿದ್ದಿಲ್ಲವೆಂದಲ್ಲ. ಎಲ್ಲ ಪ್ರಾಪಂಚಿಕ ವ್ಯವಹಾರಗಳ ಕುರಿತೂ ಶಿಶು ಸಹಜ ಲಾಲಿತ್ಯದಿಂದ ಮಾತನಾಡುತ್ತಲಿದ್ದರು. ಆದರೆ ಐಹಿಕ ಪಾರಮಾರ್ಥಿಕ ವಿಷಯಗಳ ಸಂದೇಹನಿವಾರಣೆಗೋಸುಗ ಯಾರ ಯಾವ ಪ್ರಶ್ನೆಗಳಿಗೂ ಅವರು ನೇರವಾಗಿ ಉತ್ತರಿಸಲಿಲ್ಲ. ಅವರ ಸಾನ್ನಿಧ್ಯದ ದಿವ್ಯ ಮಹಿಮೆಯೇ ಮೌನಪಾಠದಲ್ಲಿ ಉತ್ಪನ್ನವಾಗುವ ಸಂದೇಹ ಸಂಶಯ, ಕಲ್ಮಶಗಳಿಗೆ ವಜ್ರಾಯುಧವಾಗಿದ್ದಿತು. ಸಂದೇಹವಾದಿಗಳ ಸಂದೇಹವು ಅವರ ಸನ್ನಿಧಿಯಲ್ಲಿ ಬೇಸಿಗೆ ಕಾಲದಲ್ಲಿ ಆಗಸದಲ್ಲಿ ತಲೆದೋರಿದ ಮೋಡವು ಲೀನವಾಗಿ ಹೋಗುವಂತೆ ಲೀಲಾಜಾಲವಾಗಿ ಲುಪ್ತವಾಗಿ ಹೋಗಿ ಚಿರಶಾಂತಿಯೂ ಚಿರ ಪ್ರಸನ್ನತೆಯೂ ಅನ್ವೇಷಕರ ಮನಸಿಗೆ ತಾವಾಗಿ ಬಂದು ಭಕ್ತರೂ ಸಾಧಕರೂ ಪಾವನರಾಗುತಲಿದ್ದರು. ರಮಣರು ತಮ್ಮ ಮೌನ ಸಂದೇಶದಿಂದ ಜಗತ್ತನ್ನು ಬೆರಗುಗೊಳಿಸಿದರು.

ಕಳೆದ ಏಳು ತಿಂಗಳಿಂದ ಅವರ ಬಲಗೈಯಲ್ಲೊಂದು ಬೇನೆ ತಲೆದೋರಿತು. ಬೇನೆ ಪ್ರಬಲವಾಗಿದ್ದರೂ ರಮಣರು ಅದು ತಮ್ಮ ದೇಹದ ಬೇನೆಯಲ್ಲವೆಂಬಷ್ಟು ಅದರ ಮಟ್ಟಿಗೆ ಉದಾಸೀನರಾಗಿದ್ದರು. ಅವರ ಭಕ್ತರೂ, ಪ್ರಾಜ್ಞ ವೈದ್ಯರೂ ಎಷ್ಟು ಆರೈಕೆ ಮಾಡಿದರೂ ಬೇನೆ ಮಾಯವಾಗಲಿಲ್ಲ. ಮೊನ್ನೆ ಶುಕ್ರವಾರ ಉಲ್ಬಣಾವಸ್ಥೆಗೆ ಬಂದು ಭಗವಾನ್ ರಮಣರು ತಮ್ಮ ಪಂಚ ಭೌತಿಕ ಕಳೇಬರವನ್ನು ತ್ಯಜಿಸಿ ಸಚ್ಚಿದಾನಂದ ಸ್ವರೂಪರಾದರು

ಅಧಿಕಾರಲಾಲಸೆ, ಐಶ್ವರ್ಯ, ಪ್ರೇಮ, ಅಹಂಕಾರ ಮಮಕಾರ, ದ್ವೇಷಾಸೂಯೆ, ರೋಗರುಜನೆ ಮುಂತಾದುವುಗಳಿಂದ ತುಂಬಿ ವಸ್ತು ಸಂಗ್ರಹಗಳಿಗೂ ಆರ್ಥಿಕ ಸಂಚಯಕ್ಕೂ ಬಲಿಬಿದ್ದು ನರಳುವ ಜಗತ್ತಿನಲ್ಲಿ ಭಗವಾನ್ ರಮಣ ಮಹರ್ಷಿಯೇ ಮುಂತಾದ ಮಹಾವ್ಯಕ್ತಿ ಪುಂಗವರು ಪ್ರಾಪಂಚಿಕ ಜೀವನದ ನಶ್ವರತೆಯನ್ನು ಬೋಧಿಸಿ, ಶಾಶ್ವತವಾದ ಪಾರಮಾರ್ಥಿಕ ಜೀವನದ ಮಹಾಮಾರ್ಗವನ್ನು ತೋರಿಸುವ ದಿವ್ಯವ್ಯಕ್ತಿಗಳಾಗಿ ರಂಜಿಸುತ್ತಲಿದ್ದಾರೆ. ಅಖಂಡ ಭಾರತವೇ ಏಕೆ? ಅಖಂಡ ವಿಶ್ವವೇ ಈ ಜ್ಞಾನಯೋಗಿಗಳ ಉಪದೇಶ ಪೀಯೂಷಪಾನದಿಂದ ಇಹಪರ ಸಾರ್ಥಕ್ಯವನ್ನು ಗಳಿಸಲಿ!!!

"ಓಂ"

---

## ಮಾರಾಟದ ಆಸ್ತಿ.

45 ಎಕ್ರೆ ಕಾಫಿ ತೋಟ, 22 ಎಕ್ರೆ ಸಾಗು ಭೂಮಿ, 1 200 ಫಲಿನ ಕಿತ್ತಳೆ ಮರಗಳು, 60 ಎಕ್ರೆ ಕಾಡು, ಎಲ್ಲವೂ ಒಟ್ಟಾಗಿ ಒಂದೇ ಗುಂಪಿನಲ್ಲಿ ಸರಕಾರಿ ರಸ್ತೆಗೆ ಒತ್ತಾಗಿರುತ್ತವೆ. ಆಳುಗಳಿಗೆ ಲೈನುಗಳು, ವಾಸಕ್ಕೆ ಮನೆಗಳು, ಪತ್ತಾಯಗಳು, ಕೊಟ್ಟಿಗೆ ಮುಂತಾದ ಎಲ್ಲಾ ಕಟ್ಟಡಗಳೂ ಇವೆ. ಹಾಲಿ ವರ್ಷದ ಕಾಫಿ ಫಸಲಿನ ಅಂದಾಜು 35 ಖಂಡಿ (ಅರೇಬಿಕಾ) ಖರೀದಾರರು ಇವರೊಡನೆ ಪತ್ರವ್ಯವಹಾರ ನಡೆಸಬಹುದು.

"ಶ್ರೀ"

C/o The Manager,
"Kodagu" MERCARA.

(೩ನೇ ಪುಟದಿಂದ ಸಾಗಿದ್ದು)

ನೀರೇ ದೊರೆಯುವದಿಲ್ಲ. ಲಂಕಾನವು ಅಭಿವೃದ್ಧಿಗೊಂಡು ಮೇಯಲು ಆಸ್ಪದವಿಲ್ಲ. ಗ್ರಾಮ ರಸ್ತೆಗಳು ಹೀನಾವಸ್ಥೆಯಲ್ಲಿವೆ. ಇವುಗಳ ರಿಪೇರಿಗೆ ಜಿಲ್ಲಾ ಬೋರ್ಡಿಗೆ ಹಣವಿಲ್ಲ. ಅದು ಸರಕಾರದ ಜವಾಬ್ದಾರಿಯೂ ಹೌದು. ವಿದ್ಯೆಗಾಗಿ ಜನರು ಸಹಾಯ ಮಾಡುತ್ತಿಲ್ಲ. ಕೊಡಗಿನ ಬಹುತೇಕ ಶಾಲೆಗಳೆಲ್ಲವೂ ಜನರಿಂದಲೇ ಕಟ್ಟಲ್ಪಟ್ಟವು. ಜಿಲ್ಲಾ ಬೋರ್ಡು ಅಧ್ಯಾಪಕರಿಗೆ ಯೋಗ್ಯ ವೇತನಕೊಟ್ಟು ಬಡ ರೈತನ ಮಕ್ಕಳಿಗೆ ಸೂಕ್ತ ರೀತಿಯಲ್ಲಿ ವಿದ್ಯೆ ದೊರೆಯುವಂತೆ ಮಾಡಬೇಕು. ಬಡ ರೈತನ ಸ್ಥಿತಿ ಹೀಗಿದ್ದೂ ಆತನ ಮೇಲೆ ಹೆಚ್ಚಿನ ಕಂದಾಯವೆಂದರೆ ಅಸಹನೀಯ. ಅದೆ ಕಾರಣವೇ ಕಳೆದ ಸಾರೆ ಖಡ್ಡಾಯ ಕಂದಾಯ ವಸೂಲಿಗೆ ಜನರು ವಿರೋಧ ಪ್ರದರ್ಶಿಸಿದುದು. ಇದನ್ನು ಕಮ್ಯೂನಿಸ್ಟ್ ಪ್ರೇರಿತವೆನ್ನುವದು ಅನ್ಯಾಯ. ಎಲ್ಲಾ ವರ್ಗದ ಜನರು ಇದರಲ್ಲಿ ಭಾಗವಹಿಸಿದ್ದಾರೆ.

ಶ್ರೀ ಪಿ. ಐ. ಬೆಳ್ಯಪ್ಪನವರು

ಕಳೆದ ವರ್ಷ ಸರಕಾರದ ಖರ್ಚು ೮೮ ಲಕ್ಷವಾಗುವದೆಂದು ಅಂದಾಜು ಮಾಡಿದ್ದರೂ ರೂ. ೭೫ ಲಕ್ಷ ಮಾತ್ರ ಖರ್ಚಾಗಿದೆ. ಅದೇ ರೀತಿ ಈ ವರ್ಷವೂ ಆಗಿ ವರ್ಷಾಂತ್ಯದಲ್ಲಿ ಹೆಚ್ಚಿನ ಶಿಲ್ಕು ತೋರಬಹುದು. ಕಾಲೇಜು, ಹೈಸ್ಕೂಲು, ಆಸ್ಪತ್ರೆ ಮೊದಲಾದುವಕ್ಕೆ ಕೇಂದ್ರ ಸರಕಾರದ ವಂತಿಗೆ ದೊರೆಯದಿದ್ದರೂ ಹಣವಿಟ್ಟಿರುವದು ತೃಪ್ತಿಕರ. ಸೆಂಟ್ರಲ್ ಪೇ ಕಮೀಷನಿನ ಶಿಫಾರಸ್ಸಿನಂತೆ ವೇತನ ನಿಶ್ಚಯಿಸಿದ್ದರಲ್ಲಿ ಅವ್ಯವಸ್ಥೆ ಇದೆ. ಪಾರುಪತ್ಯೆಗಾರರು, ಸಹಕಾರ ಇನ್ಸ್‌ಪೆಕ್ಟರು, ವ್ಯವಸಾಯ ಫೀಲ್ಡ್ ಮೆನರು, ಫಾರೆಸ್ಟ್ ಗಾರ್ಡುಗಳ ವೇತನವು ಅವರು ಹೊತ್ತಿರುವ ಜವಾಬ್ದಾರಿಗನುಗುಣವಾಗಿಲ್ಲ. ರೇಶನಿಂಗ್ ಸಿಬ್ಬಂದಿ, ಹೆಚ್ಚು ಬೆಳೆಯ ಯೋಜನೆಯವರು, ಟಿಂಬರು ಸುಬೆದಾರರು ಮತ್ತು ಫ್ಯಾಕ್ಟರಿ ಇನ್ಸ್‌ಪೆಕ್ಟರುಗಳಿಗೆ ಈ ಶಿಫಾರಸ್ಸು ಇನ್ನೂ ಅನ್ವಯಿಸಿರುವದಿಲ್ಲ. ಪಾನನಿರೋಧ ಮತ್ತಿತರ ಖರ್ಚುಗಳಿಂದಾಗಿ ಸರಕಾರದ ಶಿಲ್ಕು ಕಡಿಮೆಯಾಗಿದೆ. ಈ ಖರ್ಚನ್ನು ಭರ್ತಿ ಮಾಡಲು ವ್ಯವಸಾಯ ಆದಾಯ ತೆರಿಗೆ ಹಾಕುವದುಚಿತ. ಕೊಡಗು ತನ್ನ ಕಾಲಿನ ಮೇಲೆ ತಾನು ನಿಲ್ಲಬಲ್ಲದು. ಆದ್ದರಿಂದ ವಿಳಂಬವಿಲ್ಲದೆ ಸುಧಾರಣೆಗಳನ್ನು ಕೊಡಗಿಗೆ ಕೊಡಬೇಕು. ಸ್ವಾತಂತ್ರ್ಯ ದೊರೆತು ಈ ಸ್ಥಿತಿಯಲ್ಲಿ ಕೊಡಗಿರುವದು ವಿಷಾದಕರ. ಇಲ್ಲಿ ಜವಾಬ್ದಾರಿ ಸರಕಾರ ಬರಬೇಕು. ಹೊಸ ಚೀಫ್ ಕಮಿಷನರು ವಿಳಂಬವಿಲ್ಲದೆ ಈ ಬಗ್ಗೆ ಪ್ರಯತ್ನಿಸುವರೆಂದು ಆಶಿಸಲಾಗಿದೆ. ಕೊಡಗಿನ ಜನರ ಶಾಂತತೆ, ಸಹನೆಗಳನ್ನು ಗೃಹಮಂತ್ರಿಗಳು ಕೇಂದ್ರ ಶಾಸನ ಸಭೆಯಲ್ಲಿ ಅನೇಕ ಬಾರಿ ಹೊಗಳಿದ್ದಾರೆ. ಆದರೆ ಇತ್ತಲಾಗಿ ನೆರೆಯೊರೆಯಲ್ಲಿರುವ ಕಮ್ಯೂನಿಸ್ಟ್ ಪ್ರಭಾವವು ಕ್ರಮಶಃ ಕೊಡಗಿಗೂ ಪ್ರವೇಶಿಸುತ್ತಿದೆ. ಅಲ್ಲಲ್ಲಿ ಇದು ತಲೆದೋರುತ್ತಿದ್ದರೂ ಇಂಥಾ ಸಂದರ್ಭಗಳನ್ನು ಸರಕಾರದ ಅವಗಾಹನೆಗೆ ತಂದರೂ ಅದನ್ನು ಹತ್ತಿಕ್ಕಲು ಸರಕಾರವು ಆ ಬಗ್ಗೆ ಸಾಕಷ್ಟು ನಿಗವಹಿಸಿದಂತೆ ತೋರುವದಿಲ್ಲ. ಇಂಡಿಯಾ ಸರಕಾರವು ಕಮ್ಯೂನಿಸ್ಟ್ ಉಪಟಳವನ್ನು ನಿಲ್ಲಿಸಲು ಮಾಡುತ್ತಿರುವ ಪ್ರಯತ್ನವು ಎಲ್ಲರಿಗೂ ತಿಳಿದದ್ದು. ಸ್ಥಳೀಯ ಸರಕಾರವು ಅದನ್ನು ಮೊಳಕೆಯಲ್ಲಿ ಮುರಿಯದಿದ್ದರೆ ಹಿಂದೆ ವ್ಯಸನ ಪಡಬೇಕಾಗುವದು. ಫಾರೆಸ್ಟ್ ಇಲಾಖೆಯ ಉತ್ಪತ್ತಿ ಹೆಚ್ಚಾಗುತ್ತಿದೆ. ಅದಕ್ಕನುಗುಣ ಖರ್ಚನ್ನು ಹೆಚ್ಚಿಸುತ್ತಿರುವದು ಯೋಗ್ಯವಲ್ಲ. ಪಿ. ಡಬ್ಲ್ಯು. ಡಿ. ಯ ಹಿಡಿತ ಸ್ಥಳೀಯ ಸರಕಾರಕ್ಕೆ ಇರಬೇಕು. ವೈದ್ಯಕೀಯ ಇಲಾಖೆಯು ದಕ್ಷತೆಯಿಂದ ಕೆಲಸ ಮಾಡುತ್ತಿರುವದರಿಂದ ಹೊರಗೆ ಹೋಗುವ ಕಾಯಿಲಸ್ಥರ ಸಂಖ್ಯೆ ಕಡಿಮೆಯಾಗುತ್ತದೆ. ಈಗಿನ ಚೀಫ್ ಮೆಡಿಕಲ್ ಆಫೀಸರು ಬಂದನಂತರ ಈ ಇಲಾಖೆಯಲ್ಲಿ ಹೊಸ ಜೀವಕಳೆ ಬಂದಿದೆ. ದನಗಳ ಕಾಯಿಲೆಯನ್ನು ನಿರ್ನಾಮ ಮಾಡಿರುವದಲ್ಲದೆ ರೈತನಿಗೆ ದನಗಳನ್ನು ಒದಗಿಸುವ ಏರ್ಪಾಡು ಮಾಡಿದೆ. ಸಹಕಾರ ಚಳವಳವು ಅನೇಕ ತಜ್ಞರ ಪ್ರಶಂಸೆಯನ್ನು ಪಡೆದಿದೆ. ಈ ಉಪಯುಕ್ತ ಇಲಾಖೆಗೆ ಬೇಕಾದ ಸಿಬ್ಬಂದಿ ಮತ್ತು ಸಹಾಯವನ್ನೂ, ದೀರ್ಘ ಕಂತಿನ ಸಾಲ ಕೊಡಲು ಬ್ಯಾಂಕಿಗೆ ಸಹಾಯವನ್ನೂ ಸರಕಾರ ಮಾಡಬೇಕು. ವ್ಯವಸಾಯ ಇಲಾಖೆಯಲ್ಲಿ ಖರ್ಚಿಗೆ ಅನುಗುಣವಾದ ಕೆಲಸವಾಗುತ್ತಿಲ್ಲ. ಪೋಲೀಸ್ ಇಲಾಖೆಯು ಕಮ್ಯೂನಿಸ್ಟ್ ಚಳವಳದ ಹುಟ್ಟಡಗಿಸಬೇಕು. ಕೋರ್ಟಿನ ಆವರಣದಲ್ಲಿ ನಡೆದ ಪ್ರದರ್ಶನದ ಕಾಲಕ್ಕೆ ಕಮ್ಯೂನಿಸ್ಟ್ ಒಲವಿದೆಯೆಂಬ ಕಾರಣ ಕೆಲಸದಿಂದ ತೆಗೆದು ಹಾಕಲ್ಪಟ್ಟ ಸರಕಾರಿ ಉದ್ಯೋಗಿಯನ್ನು ಆ ಪ್ರದರ್ಶನದಲ್ಲಿ ಭಾಗವಹಿಸಲು ಪೋಲೀಸರು ಬಿಡಬಾರದಿತ್ತು. ಮದ್ರಾಸು ಹೈಕೋರ್ಟಿನ ಜಡ್ಜರಿಂದ ಕೊಡಗಿನ ನ್ಯಾಯ ಇಲಾಖೆಯ ಮೇಲ್ವಿಚಾರಣೆಯು ವರ್ಷಕ್ಕೊಮ್ಮೆ ನಡೆಯುವಂತೆ ಮಾಡಬೇಕು. ಮತ್ತೊಬ್ಬ ಎಜ್ಯುಕೇಶನಲ್ ಆಫೀಸರ ಅವಶ್ಯಕತೆ ಇದೆ. ಕಾಲೇಜು ಕಟ್ಟಡ ಈ ವರ್ಷವೇ ಆಗಬೇಕು. ಹರಿಜನರ ಉದ್ಧಾರದ ಬಗ್ಗೆ ಹೆಚ್ಚಿನ ನಿಗಬೇಕು. ಪೂರ್ಣ ಪಾನನಿರೋಧವನ್ನು ಕ್ರಮಶಃ ಜಾರಿಗೆ ತರಬೇಕು. ಮೈಸೂರು ಸರಕಾರದಿಂದ ವಿದ್ಯುಚ್ಛಕ್ತಿ ಸರಬರಾಯಿ ಬಗ್ಗೆ ನಡೆಸಿದ ಮಾತುಕತೆ ಜಾರಿಯಲ್ಲಿ ಬರುವಂತೆ ಮಾಡಬೇಕು. ಈ ಕೌನ್ಸಿಲಿಗೆ ಹೊಸ ಚುನಾವಣೆಯಾಗಬೇಕು. ೧೯೫೭ರಲ್ಲೇ ಚುನಾವಣೆ ಆಗಬೇಕಿತ್ತು. ಈ ವರೆಗೆ ಆಗದಿರುವದು ವಿಷಾದಕರ. ಜನರ ನಿಜ ಪ್ರತಿನಿಧಿಗಳು ಬಂದು ಜವಾಬ್ದಾರಿ ಸರಕಾರಕ್ಕಾಗಿ ಹೋರಾಡುವ ಏರ್ಪಾಡು ಶೀಘ್ರ ಆಗಲಿ.

ಶ್ರೀ ಯನ್. ಸೋಮಣ್ಣನವರು

ಬಜೆಟ್ಟಿನ ವಿಚಾರ ಮಾತಾಡಬೇಕೆಂದು ನಾನು ಇಚ್ಛಿಸಿರಲಿಲ್ಲ. ಆದರೆ ಈ ಮೊದಲು ಮಾತಾಡಿದ ಮಹನೀಯರಿಗೆ ಒಂದೆರಡು ಜವಾಬು ಕೊಡಬೇಕಾಗಿದೆ. ಡೆಲ್ಲಿಯಲ್ಲಿ ನಡೆದ ಕಾನ್ಫರೆನ್ಸಿನಲ್ಲಿ ಇಲ್ಲಿರುವ ಎರಡು ರಾಜಕೀಯ ಪಾರ್ಟಿಯವರು ಒಪ್ಪಿಗೆಗೆ ಬಂದು ಪರ್ಮಿಸಿದ್ದರೆ ದೇಶಕ್ಕೆ ಒಳ್ಳೇದಾಗುತ್ತಿತ್ತು. ಇವರೊಳಗೆ ಭಿನ್ನಾಭಿಪ್ರಾಯವು ಹೆಚ್ಚುತ್ತಿರುವುದರಿಂದ ದೇಶದ ಆಡಳಿತಕ್ಕೂ ಇತರ ಚಳವಳಕ್ಕೂ ತೊಂದರೆಗಳುಂಟಾಗುತ್ತಿವೆ. ಕೆಲವು ದಿವಸಗಳ ಹಿಂದೆ ಮಡಿಕೇರಿ ಕಂದಾಯದ ವಸೂಲಿಯ ವಿರುದ್ಧ ನಡೆದ ಚಳವಳಕ್ಕೆ ಪ್ರಾಮುಖ್ಯ ಮಹನೀಯರ ಬೆಂಬಲವಿತ್ತು. ಆದರೆ ಬೇರೆ ಪಕ್ಷದವರು ಆ ಚಳವಳಕ್ಕೆ ಕಮ್ಯೂನಿಸ್ಟ್ ಬಣ್ಣವನ್ನು ಹಚ್ಚಿ ಅದನ್ನು ಆಕ್ಷೇಪಿಸುತ್ತಿರುವದು ಸರಿಯಲ್ಲ. ಬಜೆಟ್ ಚರ್ಚೆಯಲ್ಲಿ ಕೆಲವು ಇಲಾಖಾ ಮುಖ್ಯಾಧಿಕಾರಿಗಳನ್ನು ಹೊಗಳಿ ಮಾತಾಡಿದ್ದು ನ್ಯಾಯವಲ್ಲ. ಹೇಳುವದಾದರೆ ಸಹಕಾರಿ ಇಲಾಖೆಯ ಕೆಲಸವು ತೃಪ್ತಿಕರವಲ್ಲ. ಅಲ್ಲಲ್ಲಿ ಸಂಘಗಳಲ್ಲಿ ಹಣದ ದುರುಪಯೋಗವು ನಡೆಯುತ್ತಿದೆ. ಆದುದರಿಂದಲೇ ಈ ಇಲಾಖೆಯ ಕೆಲಸ ಕಾರ್ಯಗಳನ್ನು ವಿಮರ್ಶಿಸಬೇಕೆಂದು ನಾವು ಹೇಳುತ್ತಿರುವುದಾಗಿದೆ.

ಚರ್ಚಿಸಲ್ಪಟ್ಟ ಠರಾವುಗಳ ವಿವರ ಬರುವ ವಾರ ಕೊಡಲಾಗುವದು.

---

# ಓದುಗರ ಓಲೆಗಳು.

**ಇವರು ಅಧ್ಯಾಪಕರೆ?**

ನಮ್ಮ ಗ್ರಾಮದ ಶಾಲೆ. ಅಲ್ಲಿ ಪುರಾತನ ಕಾಲದ ಪದ್ಧತಿ ಇನ್ನೂ ಇದೆ. ತಪ್ಪು ಮಾಡಿದ ಮಕ್ಕಳನ್ನು ಕೋಡಂಡೆ ಹಾಕಿ ಕಳಗೆ ಚೂರಿ ಇಡುವ ಪದ್ಧತಿ ಈಗಲೂ ಇದೆ. ಮಕ್ಕಳ ಕೈಯಲ್ಲಿ ಕಾಗದ ಕೊಟ್ಟು ಶಾಲೆಗೆ ಸಾಂದಿ ತರಿಸಿ ಅಧ್ಯಾಪಕರು ಕುಡಿಯುವ ಪರಿಪಾಠವಿದೆ. ಶಾಲೆ ಹತ್ತಿರದ ಹಲಸಿನ ಮರದಡಿಯ ಬೆಂಚಿನಲ್ಲಿ ಹಲವು ಸಾರೆ ಅಧ್ಯಾಪಕರು ನಿದ್ರೆ ಹೋಗುವದಿದೆ! ಈ ರೀತಿಯ ಬೋಧನೆ ಬಹುಶಃ ನಮ್ಮ ಹಳ್ಳಿ ಶಾಲೆಯೊಂದರಲ್ಲೇ ಅಲ್ಲ, ಇತರ ಶಾಲೆಗಳಲ್ಲೂ ಇರಬಹುದು. ಇಲಾಖಾ ಅಧಿಕಾರಿಗಳು ಎಚ್ಚರಿಕೆ ವಹಿಸಿ ಇಂಥಾ ಅಧ್ಯಾಪಕರನ್ನು ಶಿಕ್ಷಿಸಬೇಕು.

ಮಕ್ಕಳ ತಂದೆ

---

**ಮಡಿಕೇರಿ ಪುರಸಭೆಯ ಪ್ರೆಸಿಡೆಂಟರಲ್ಲಿ**

ಮಡಿಕೇರಿಯ ಅಭಿವೃದ್ಧಿ ಬಗ್ಗೆ ನೀವು ದುಡಿಯುತ್ತಿರಬಹುದು. ಆದರೆ ನಿಮ್ಮ ದೃಷ್ಟಿ ನಾನು ವಾಸವಿರುವ ದೇಚೂರಿನ ಕಡೆ ಬಿದ್ದಂತೆ ತೋರುವದಿಲ್ಲ. ಬಹುಶಃ ಮುಂದಿನ ಚುನಾವಣೆಯ ಸಮಯದಲ್ಲಿ ಓಟಿಗಾಗಿ ಈ ಕಡೆ ಬರುವಿರೇನೋ! ಈ ಕಡೆ ಸರಬರಾಯಿ ಇಲ್ಲ. ದೀಪದ ಏರ್ಪಾಡಿಲ್ಲ. ಕೆಲವು ಸ್ಥಳಗಳಲ್ಲಿ ರಸ್ತೆಗೂ ಚರಂಡಿಗೂ ವ್ಯತ್ಯಾಸವೇ ಇಲ್ಲ. ನೀರಿಲ್ಲದ ದೂರದ ಬ್ರಾಹ್ಮಣಕಾರಿಯಿಂದ ನೀರು ತರಬೇಕಾಗಿದೆ. ಈ ಕಡೆಗೆ ಪಂಪು ನೀರು ಒದಗಿಸಲು ಸಾಧ್ಯವಿಲ್ಲದಿದ್ದರೆ ಹೆಚ್ಚು ಜನರ ಉಪಯೋಗಕ್ಕೆ ಬರುವ ಕಡೆಗಳಲ್ಲಿ ಬಾವಿಯನ್ನಾದರೂ ತೋಡಿಸಬೇಕು. ರಸ್ತೆಯ ದೊಡ್ಡ ತಿರುವುಗಳಲ್ಲಿ ದೀಪವಿಡಿಸಬೇಕು. ಮಡಿಕೇರಿ ಚೌಕಿಯನ್ನು ಸುಂದರಗೊಳಿಸಲು ರೂ ೧೦,೦೦೦ ಇಟ್ಟ ವರ್ತಮಾನವಿದೆ. ಇತ್ತ ಪಟ್ಟಣದ ಜನರು ನೀರಿಲ್ಲದೆ ಕಷ್ಟಪಡುತ್ತಿರುವಾಗ ಪಟ್ಟಣವನ್ನು ಸುಂದರಗೊಳಿಸುವ ಕೆಲಸವು ಪ್ರಾಮುಖ್ಯವಲ್ಲ. ಜನರ ಕಷ್ಟದ ಈ ಕೂಗಿಗೆ ಕಿವಿಗೊಡುವಿರೇ?

'ಪುರವಾಸಿ'

---

**ಕೊಡಗಿನ ಆರೋಗ್ಯ ಅಧಿಕಾರಿಗಳಲ್ಲಿ**

ಇತ್ತೀಚೆಗೆ ಕೊಡಗಿನಲ್ಲಿ ಸಕ್ಕರೆಯ ಅಭಾವದಿಂದ ಪ್ರತಿ ಹೋಟೇಲುಗಳಲ್ಲಿ 'ಸ್ಯಾಕರಿನ್' ಎಂಬ ಪುಡಿಯನ್ನು ಚಾ, ಕಾಫಿ ಮೊದಲಾದ ಪಾನೀಯಗಳಿಗೆ ಉಪಯೋಗಿಸುತ್ತಾರಂತೆ. ಈ 'ಸ್ಯಾಕರಿನ್' ಪುಡಿಯು ದೇಹಕ್ಕೆ ಬಹಳ ಕೆಟ್ಟದು ಎಂಬುದಾಗಿ ನಾನು ಮದ್ರಾಸಿನ ಪತ್ರಿಕೆಗಳಲ್ಲಿ ಓದಿರುವೆನು. ಅಲ್ಲದೆ ಈ ಪುಡಿಯು ಪಾನೀಯಗಳು ರುಚಿಯಾಗಿರುವುದಿಲ್ಲ. ಸೋಡಾ ಶಾಪಿನವರೂ ಸಹ ಇದನ್ನು ಉಪಯೋಗಿಸುತ್ತಿರುವರು. ಆದುದರಿಂದ ತಾವುಗಳು ಈ ವಿಚಾರ ಸ್ವಲ್ಪ ಪರೀಕ್ಷಿಸಿ ಈ ಪುಡಿಯು ಹಾನಿಕರವಾಗಿರುವುದಾದರೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿ ವಿನಂತಿ. ಇದನ್ನು ತಡೆಗಟ್ಟಲು ಸಾಧ್ಯವಿಲ್ಲವಾದರೆ, ಒಂದೊ ಆಹಾರ ಮಾರುವವರ ಹೋಟೇಲಿನವರಿಗೆ ಸರಿಯಾಗಿ ಸಕ್ಕರೆ ಸಪ್ಲೈ ಮಾಡಬೇಕು, ಇಲ್ಲವಾದರೆ ಹೋಟೇಲಿನಲ್ಲಿ ಚಾ, ಕಾಫಿ ಮಾರುವದನ್ನೇ ನಿಲ್ಲಿಸಬೇಕು.

'ನಾಗರಿಕ'

---

**ಮರೆನಾಡು ಹೊಳೆಯ ಪಾಲ ರಿಪೇರಿ**

ಈ ಪಾಲ ರಿಪೇರಿ ಆಗಬೇಕೆಂದು ೨-೩ ವರ್ಷಗಳಿಂದ ನಾಡಿನವರು ಸರಕಾರವನ್ನು ಕೇಳಿಕೊಂಡದಕ್ಕೆ ಕಳೆದ ವರ್ಷ ಪಾಲದ ಹಲಗೆಗಳಿಗೆ ಹೊಡೆದಿದ್ದ ಮೊಳೆಗಳನ್ನು ಕಿತ್ತು ಈ ವರ್ಷ ರಿಪೇರಿ ಮಾಡಿಕೊಡಗಿದ್ದಾರೆ! ಆದರೆ ಈ ರಿಪೇರಿಯ ವಿಷಯ ಬರೆದರೆ ಸರಕಾರದವರು ಕೂಡ ನಂಬಲಿಕ್ಕಿಲ್ಲ. ಆದರೆ ಇರುವುದನ್ನು ಸತ್ಯವಾಗಿ ಬರೆಯುವೆನು. ರಿಪೇರಿ ಆಗುತ್ತಿರುವ ಸಮಯದಲ್ಲಿ ಈ ಪಾಲದ ಬಳಿಗೆ ಹೋಗಿ ನೋಡಿದೆನು. ಆ ಹಳೆ ಹಲಗೆಗಳಿಗೆ [illegible] ಹಲಗೆ ಈ ರೀತಿ ರಿಪೇರಿ ಮಾಡಿಕೊಡಗಿದ್ದಾರೆ. ಹಳೆ ಹಲಗೆಗಳಿಗೆ ಗೊತ್ತಾಗದ ರೀತಿ ಹಲಗೆಗಳಿಗೆ ತಾರು ಬಳಿದು ಹೊಸದು ಹಳೆದು, ಒಂದೇ ರೀತಿ ತೋರುವಂತೆ ಕೆಲಸ ಮಾಡುತ್ತಿದ್ದಾರೆ. ಕೆಲಸ ಮಾಡುತ್ತಿದ್ದಂತೆ ಇವರ ಒಬ್ಬ ಆಳು ಬರುತ್ತಿದ್ದ ಹಲಗೆ ಸಾಗಿಸುತ್ತಿರುವಾಗ ತಾರು ಬಳಿದ ಹಳೆ ಹಲಗೆಯೊಂದು ಮುರಿದು ಆಳು ಹೊಳೆಗೆ ಬೀಳದೆ ದೈವವಶಾತ್ ಪಾಲದೊಳಗೆ ಸಿಕ್ಕಿ ಬದುಕಿರುತ್ತಾನೆ! ಈ ರೀತಿ ರಿಪೇರಿಯ ಕಾಲದಲ್ಲೇ ಮುರಿಯುವ ಹಲಗೆ ಮುಂಬರುವ ಮಳೆಗಾಲದಲ್ಲಿ ಆಳುಗಳು ಹೊರೆಹೊತ್ತು ದಾಟುವಾಗ್ಯ ಮುರಿಯದೆ ಉಳಿದೀತೆ? ಈ ರೀತಿ ಕಣ್ಣು ಕಟ್ಟುವ ಕೆಲಸವು ಪಿ. ಡಬ್ಲ್ಯು. ಡಿ. ಇಲಾಖೆಯ ಹೆಸರಿನಿಂದ ನಡೆಯಬಾರದು. ಇದಕ್ಕೆ ಗಮನವಿತ್ತು ಸರಕಾರವು ಎಚ್ಚರಿಕೆ ವಹಿಸುವರೇ?

ಮುತ್ತು ಎಂ.

# ೧೯೫೧ ನೇ ಮಾರ್ಚ್ ಅಂತ್ಯಕ್ಕೆ ರೂ. ೪೪ ಲಕ್ಷ ಉಳಿತಾಯ.

## ಫೈನಾನ್ಸ್ ಮೆಂಬರರ ಭಾಷಣದ ಸಾರಾಂಶ.

ಕೊಡಗು ಸರಕಾರದ ೧೯೪೯-೫೦ರ ಪರಿಷ್ಕೃತ ಬಡ್ಜೆಟ್ಟನ್ನೂ ೧೯೫೦-೫೧ರ ಅಂದಾಜು ಬಡ್ಜೆಟ್ಟನ್ನು ಸಭೆಯ ಮುಂದಿಡುತ್ತೇನೆ. ಇಂಡಿಯಾ ಸರಕಾರದವರು ಕೈಕೊಂಡ ಉಳಿತಾಯ ಯೋಜನೆಯಂತೆ ಈ ವರ್ಷ ಕೊಡಗಿನ ಯುದ್ಧೋತ್ತರ ಯೋಜನೆಗಳಿಗೆ ಕೇಂದ್ರದ ವಂತಿಗೆ ದೊರೆಯುವಂತಿಲ್ಲ. ಆದ್ದರಿಂದ ಅನೇಕ ಯೋಜನೆಗಳನ್ನು ಈ ವರ್ಷ ಕೈಕೊಳ್ಳದೆ ಬಿಡಬೇಕಾಗುವದು. ೧೯೫೦-೫೧ಕ್ಕೆ ಕೇಂದ್ರದಿಂದ ಯಾವ ವಂತಿಗೆಯೂ ದೊರೆಯದಿದ್ದರೂ ಹೆಚ್ಚು ಬೆಳೆಯುವ ಯೋಜನೆಯ ೩,೨೨,೪೦೦ ರೂಪಾಯಿಗಳು ದೊರೆಯುವದಲ್ಲದೆ, ಮಲೇರಿಯಾ ಇಲಾಖೆಯ ಖರ್ಚನ್ನು ಅವರೇ ನಿರ್ವಹಿಸುವರು.

ಕಂದಾಯ ವಸೂಲಾತಿ ಕಳೆದ ವರ್ಷಕ್ಕಿಂತಾ ಜಾಸ್ತಿಯಾಗಿದೆ. ಟಕಾವಿ ಸಾಲ ಕೊಡುವದನ್ನು ಬೇಕಾದಷ್ಟು ಕಡಿಮೆ ಮಾಡಲಾಗಿದೆ. ಕಳೆದ ವರ್ಷ ಕೊಡಗಿನಲ್ಲಿ ವ್ಯವಸಾಯವಾದ ೮೮,೧೦೦ ಎಕ್ರೆ ಭೂಮಿಯ ಬದಲು ಈ ವರ್ಷ ೮೮,೬೫೫ ಎಕ್ರೆಯಾಗಿದೆ. ಬತ್ತದ ಕ್ರಯವು ಗಂಡಿಗೆ ೧೭೯ ನಿಶ್ಚಯಿಸಲ್ಪಟ್ಟಿದೆ. ಕಳೆದ ವರ್ಷ ಕೊಡಗಿನಲ್ಲಿ ೬೫,೫೩೮ ಟನ್ ಬತ್ತ ಬೆಳೆಯಾಗಿತ್ತು. ಮಳೆಯ ಅಭಾವದಿಂದ ಈ ವರ್ಷ ೫೩,೨೦೦ ಟನ್ ಆಗಿದೆ. ಪಾರ್ಶ್ವ ಪಾನ ನಿರೋಧದ ಕಾರಣ ೧೯೫೦-೫೧ರಲ್ಲಿ ಕೊಡಗು ಸರಕಾರಕ್ಕೆ ೩,೬೬,೦೦೦ ರೂಪಾಯಿ ನಷ್ಟವಾಗುವದೆಂದು ಅಂದಾಜು ಮಾಡಲಾಗಿದೆ. ಕೇಂದ್ರದಿಂದ ಹಣ ಸಹಾಯವಿಲ್ಲದಿದ್ದರೂ ಅವಶ್ಯವಾದ ಅನೇಕ ಯುದ್ಧೋತ್ತರ ಯೋಜನೆಗಳಿಗೆ ಹಣ ವಿಟ್ಟಿರುವದರಿಂದ ತಾ. ೧-೪-೪೯ ರಲ್ಲಿದ್ದ ಕೊಡಗು ಸರಕಾರದ ಶಿಲ್ಕು ರೂಪಾಯಿ ೨೨,೬೨,೭೫೦ ತಾರೀಕು ೩೧-೩-೫೧ ರಲ್ಲಿ ೪೪,೧೨,೭೫೦ಕ್ಕೆ ಇಳಿಯುವದೆಂದು ಅಂದಾಜು ಮಾಡಲಾಗಿದೆ.

### ರೆವಿನ್ಯೂ ಇಲಾಖೆ

ಈ ವರ್ಷ ಹರಿಜನರಿಗೂ, ಮಾಜಿ ಸಿಪಾಯಿಗಳಿಗೂ ಭೂಮಿ ಇಲ್ಲದ ಇತರರಿಗೂ ಸೈಸಾರಿಯಿಂದ ಭೂಮಿ ಒದಗಿಸಿ ಕೊಡಬೇಕೆಂದು ಎರಡು ಸರ್ವೆ ತಂಗಡಗಳನ್ನು ನೇಮಿಸಲಾಯಿತು. ಈ ವರೆಗೆ ೪೨೬ ಮಾಜಿ ಸಿಪಾಯಿಗಳಿಗೆ ಭೂಮಿ ಕೊಡಲಾಗಿದೆ. ಅವರುಗಳಿಗೆ ಕೊಟ್ಟ ಭೂಮಿ ಗೃಹಪಿತಕ್ಕಾಗಿ ರೂ ೩೦೧ಕ್ಕೆ ಕಡಿಮೆ ಇಲ್ಲದೆ ಖರ್ಚು ಮಾಡುವ ಪ್ರತಿಯೊಬ್ಬ ಮಾಜಿ ಸಿಪಾಯಿಗಳಿಗೆ ರೂ ೫೦೦ ರಂತೆ ಹಣ ಸಹಾಯ ಮಾಡಲಾಗಿದೆ. ಇದಕ್ಕಾಗಿ ಕೇಂದ್ರದಿಂದ ರೂ. ೧,೦೯,೫೦೦ ಮಂಜೂರಾಗಿತ್ತು. ಕೊಡಗಿನ ರೀ ಸೆಟ್ಲ್‌ಮೆಂಟನ್ನು ಜಾರಿಗೆ ತರಲು ಹೊಸ ಸಿಬ್ಬಂದಿಗಳನ್ನು ನೇಮಿಸಲಾಗಿದೆ.

### ಫಾರೆಸ್ಟ್ ಇಲಾಖೆ.

ಜನವರಿ ಅಂತ್ಯದ ವರೆಗಿನ ಟಿಂಬರ್ ಮಾರಾಟದಿಂದ ೧೦,೪೬,೩೨೮ ರೂಪಾಯಿ ಜಮೆ ಬಂದಿದೆ. ಈ ವರ್ಷಾಂತ್ಯದೊಳಗೆ ಅಂದರೆ ಮಾರ್ಚ್ ಅಂತ್ಯಕ್ಕೆ ೧೨ ಲಕ್ಷ ಹೆಚ್ಚಿಗೆ ಬರಬಹುದೆಂದೂ ಅಂತು ಈ ವರ್ಷ ೨೨ ಲಕ್ಷ ಈ ಬಾಬಿನಿಂದ ಉತ್ಪತ್ತಿ ಬಂದಂತಾಗುವದು. ಕಳೆದ ಬಡ್ಜೆಟ್ಟನಲ್ಲಿ ೧೭ ಲಕ್ಷ ಬಂದೀತೆಂದು ಅಂದಾಜು ಮಾಡಲಾಗಿತ್ತು. ಖರ್ಚು ರೂ ೭,೨೮,೫೦೦ ಆಗುವದೆಂದು ಅಂದಾಜು ಮಾಡಿದ್ದರೂ ಆ ವರ್ಷ ರೂ. ೯,೧೬,೩೦೦ ಖರ್ಚಾಗಿದೆ ೧೯೫೦-೫೧ರಲ್ಲಿ ಆದಾಯವು ೨೧ ಲಕ್ಷ ಬರುವದೆಂದೂ ಖರ್ಚು ೮ ಲಕ್ಷವಾಗಬಹುದೆಂದೂ ಅಂದಾಜು ಮಾಡಲಾಗಿದೆ. ೧೯೪೯-೫೦ರಲ್ಲಿ ೭೬ ಟನ್ ಗಂಧದ ಮರ ಮಾರಲಾಯಿತು. ಸರಾಸರಿ ಟನ್ನಿಗೆ ರೂ ೩,೫೪೫ ದೊರೆತು ಈ ಬಾಬಿನಿಂದ ೩ ಲಕ್ಷ ಆದಾಯ ಬಂದಿದೆ. ೧೯೫೦-೫೧ ರಲ್ಲಿ ೭೫ ಟನ್ ಗಂಧ ಮಾರಾಟಕ್ಕೆ ನಿಶ್ಚಯಿಸಲಾಗಿದೆ. ಈ ವರ್ಷ ೪೭೩ ಎಕ್ರೆ ಜಾಗದಲ್ಲಿ ಮರಕಸಿಯ ತೇಗ ಹಾಕಲಾಗಿದೆ. ಹೊಸದಾಗಿ ಹಿಡಿದ ಆನೆಗಳನ್ನೂ ಹಳೆಯವನ್ನೂ ಒಟ್ಟಿಗೆ ೩೭ ಆನೆಗಳನ್ನು ಮಾರಾಟ ಮಾಡಿದ್ದರಿಂದ ರೂ ೧,೧೦,೬೦೦ ಆದಾಯ ಬಂದಿದೆ. ೧೯೫೦-೫೧ ರಲ್ಲಿ ೩,೭೬,೦೦೦ ಘನ ಅಡಿ ಮರ ಮಾರಾಟ ಮಾಡಲು ಮತ್ತು ೪೩೦ ಎಕ್ರೆ ರೀಜನರೇಷನ್ ಮಾಡಲು ನಿಶ್ಚಯಿಸಿದೆ.

### ವಿದ್ಯಾ ಇಲಾಖೆ

ಕಾಲೇಜು ಕಟ್ಟಡಕ್ಕೆ ಸಾಕಷ್ಟು ಹಣವಿಟ್ಟಿದೆ. ಉಪಾಧ್ಯಾಯರ ತರಬೇತು ಶಾಲೆಯನ್ನು ಮಡಿಕೇರಿಯಿಂದ ಪೊನ್ನಂಪೇಟೆಗೆ ವರ್ಗಾಯಿಸಲು ಆಲೋಚಿಸಲಾಗಿದೆ. ಈಗ ತರಬೇತಿನಲ್ಲಿರುವ ೬೦ ಉಪಾಧ್ಯಾಯರ ಶಿಕ್ಷಣ ಮಾರ್ಚ್ ತಿಂಗಳಲ್ಲಿ ಮುಗಿಯುತ್ತದೆ. ಕೊಡಗಿನ ಸಾರ್ವಜನಿಕರು ವಿದ್ಯೆಯ ಬಗೆ ಬಹು ಆಸಕ್ತಿಯುಳ್ಳವರಾಗಿದ್ದಾರೆ. ಹೈಸ್ಕೂಲು ಮತ್ತು ಹೈಯರ್ ಎಲಿಮೆಂಟರಿ ಶಾಲೆಗಳು ಹೆಚ್ಚುತ್ತಿವೆ. ದಳಿತ ವರ್ಗದವರ ವಿದ್ಯಾರ್ಥಿಗಳಿಗಾಗಿ ರೂ. ೫೧,೩೪೨ ಖರ್ಚು ಮಾಡಲಾಯಿತು. ಮೂಲ ಶಿಕ್ಷಣ ಕ್ರಮವನ್ನು ಜಾರಿಗೆ ತರುವ ಸೆಕೆಂಡರಿ ವಿದ್ಯಾಕ್ರಮವನ್ನು ಬದಲು ಮಾಡುವ ಬಗ್ಗೆ, ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿವೇತನವನ್ನು ಹೆಚ್ಚಿಸುವ ಬಗ್ಗೆ ೧೯೫೦-೫೧ರ ಬಡ್ಜೆಟ್ಟಿನಲ್ಲಿ ಹಣವಿಡಲಾಗಿದೆ. ಪ್ರೌಢ ಶಿಕ್ಷಣಾ ಯೋಜನೆಗೂ ಯೋಗ್ಯ ಹಣವಿಡಲಾಗಿದೆ.

### ವೈದ್ಯಕೀಯ ಇಲಾಖೆ

ಹೊಲಗಿತ್ತಿ, ನರ್ಸುಗಳ ತರಬೇತನ್ನು ಮುಂದರಿಸಲಾಗುವದು. ದಂತ ಚಿಕಿತ್ಸೆ, ಸ್ಥಳದಿಂದ ಸ್ಥಳಕ್ಕೆ ತಿರುಗುತ್ತಿರುವ ಆಸ್ಪತ್ರೆ ಯೋಜನೆ, ಮೊದಲಾದುವನ್ನು ಜಾರಿಯಲ್ಲಿ ತರಲಾಗುತ್ತಿದೆ. ಆಸ್ಪತ್ರೆಗಳಿಗಾಗಿ ಒಗೆದು ಇಸ್ತ್ರಿ ಮಾಡುವ ಯಂತ್ರ, ವಿದ್ಯುಚ್ಛಕ್ತಿ ಉತ್ಪಾದಕ ಯಂತ್ರ ಮತ್ತು ಸ್ಪ್ರಿಂಗ್ ಮಂಚಗಳನ್ನು ಈ ವರ್ಷ ಕೊಂಡುಕೊಳ್ಳುವ ಏರ್ಪಾಡಿದೆ. ಮಡಿಕೇರಿಗೆ ಹೊಸ ಮತ್ತು ಉತ್ತಮವಾದ ಎಕ್ಸ್‌ರೇ ಯಂತ್ರ ಇಡಲಾಗಿದೆ. ಮಡಿಕೇರಿಯಲ್ಲಿ ಒಂದು ಹೆರಿಗೆ ವಾರ್ಡು ಮತ್ತು ಕ್ಷಯರೋಗಾಸ್ಪತ್ರೆಯನ್ನೂ, ವೀರಾಜಪೇಟೆಯಲ್ಲಿ ನರ್ಸುಗಳಿಗೆ ಮನೆಯನ್ನು ಕಟ್ಟಲು ಹಣವಿಡಲಾಗಿದೆ. ಬಾಳೆಲೆ ಮತ್ತು ಸುಂಟಿಕೊಪ್ಪ ಆಸ್ಪತ್ರೆಗಳಿಗೆ ವಾರ್ಡು ಕಟ್ಟಲಾಗುತ್ತಿದೆ. ಕೊಡ್ಲಿಪೇಟೆಯಲ್ಲಿ ಆಯುರ್ವೇದ ಆಸ್ಪತ್ರೆಯನ್ನು, ತಿತಿಮತಿಯಲ್ಲಿ ಒಂದು ಹೊಸ ಆಸ್ಪತ್ರೆಯನ್ನೂ ತೆರೆಯಲಾಗಿದೆ.

### ಆರೋಗ್ಯ ಇಲಾಖೆ.

ಕೇಂದ್ರ ಸರಕಾರದ ಸಹಾಯದಿಂದ ಸ್ಥಾಪಿತವಾದ ಮಲೇರಿಯಾ ನಿವಾರಣಾ ಇಲಾಖೆಯು ತೃಪ್ತಿಕರ ಕೆಲಸ ಮಾಡಿದೆ. ೩೩೦ ಗ್ರಾಮಗಳಲ್ಲಿ ಮನೆಗಳಿಗೆ ಡಿ. ಡಿ. ಟಿ. ಸಿ. ಮಾಡಲಾಯಿತು. ೧,೩೭,೭೪೦ ಜನರಿಗೆ ಈ ವಿಚಾರದಲ್ಲಿ ರಕ್ಷಣೆ ಕೊಟ್ಟಂತಾಯಿತು. ೨೩,೭೬೪ ಮನೆಗಳಿಗೂ, ೧೧,೬೬೫ ಪಾಡಿ ಹೌಸ್‌ಗಳಿಗೂ ಸ್ಪ್ರೇ ಮಾಡಲಾಗಿದೆ. ಸಿಡುಬುರೋಗ ೧೯೪೯ ರಲ್ಲಿ ತಲೆದೋರಿದರೂ ಹಿಡಿತದಲ್ಲಿಡಲಾಯಿತು.

### ವ್ಯವಸಾಯ ಇಲಾಖೆ,

ವ್ಯವಸಾಯ ಲೇಬರೇಟರಿಯೊಂದಲ್ಲದೆ ಉಳಿದ ಎಲ್ಲಾ ಯುದ್ಧೋತ್ತರ ಯೋಜನೆಗಳನ್ನು ಜಾರಿಯಲ್ಲಿ ತರಲಾಗಿದೆ. ಜಾನುವಾರು ಸಾಕುವ ಯೋಜನೆ, ಹಣ್ಣುಹಂಪಲು ಬೆಳೆಸುವ, ದನಗಳ ಆಹಾರ ಬೆಳೆಸುವ ಯೋಜನೆಗಳನ್ನು ಮಾರ್ಚ್ ತಿಂಗಳಿಂದ ನಿಲ್ಲಿಸಲಾಯಿತು. ಈ ಇಲಾಖೆಯು ಸುಮಾರು ೧೦,೦೦೦ ಕ್ಕೂ ಮಿಕ್ಕಿದ ಬತ್ತ, ಕಿತ್ತಳೆ, ಕಾಫಿ, ಏಲಕ್ಕಿ ಬೆಳೆಯುವ ಪ್ರದೇಶದಲ್ಲಿ ಬೆಳೆ ಮತ್ತು ಇತರ ಕಾಯಿಲೆಗಳ ಚಿಕಿತ್ಸೆ ನಡೆಸಿದೆ. ವೀರಾಜಪೇಟೆ ಪರಿಶೋಧನಾ ಕೇಂದ್ರಕ್ಕೆ ಜಾಗಕ್ಕಾಗಿ ೨೫೦೦೦ ರೂ. ಇಡಲಾಗಿದೆ. ಕಂಪೋಸ್ಟ್ ಯೋಜನೆಯಲ್ಲಿ ೭೨೦೦೦ ಟನ್ ಗೊಬ್ಬರ ಮಾಡಲಾಯಿತು. ಹೆಚ್ಚು ಬೆಳೆಯುವ ಯೋಜನೆಯಲ್ಲಿ ೧೩೬೭ ಎಕ್ರೆ ಹೊಸ ಭೂಮಿ ಮಾಡಲಾಯಿತು. ೩೯ ಕಟ್ಟೆ ಕಟ್ಟಲಾಯಿತು. ೬೬ ಕೆರೆ ರಿಪೇರಿ ಮಾಡಲಾಯಿತು. ಇದಕ್ಕಾಗಿ ರೂ. ೧,೩೩,೬೫೦ ವೆಚ್ಚ ಮಾಡಲಾಯಿತು. ರೈತರಿಗೆ ೪೯೭ ಟನ್ ನೆಲಗಡಲೆ ಗೊಬ್ಬರವೂ, ೨೧ ಟನ್ ಮೂಳೆಗೊಬ್ಬರವೂ ಅರ್ಧ ಬೆಲೆಯಲ್ಲಿ ಸರಬರಾಯಿ ಆಗಿದೆ. ಸಿಹಿಕೆಂಡದಿಂದ ಬೆಳ್ಳಮಾಡುವ ಕೇಂದ್ರಗಳನ್ನು ಮಡಿಕೇರಿ ಮತ್ತು ಹೆಬ್ಬಾಲೆಯಲ್ಲಿ ತೆರೆಯಲಾಗಿದೆ.

### ವೆಟರ್ನರಿ ಇಲಾಖೆ.

ಭಾಗಮಂಡಲದ ಹೊಸ ಆಸ್ಪತ್ರೆ ಸೇರಿ ಐದು ಗ್ರಾಮಾಂತರ ಆಸ್ಪತ್ರೆಗಳಿವೆ. ದನಗಳ ದೊಡ್ಡ ರೋಗದ ಬಗ್ಗೆ ಎಚ್ಚರಿಕೆ ವಹಿಸಲಾಗಿದೆ. ಸೋಮವಾರಪೇಟೆ ಮತ್ತು ನಾಪೋಕ್ಲುಗಳಲ್ಲಿ ಒಂದೊಂದು ವಾರ್ಡು ಕಟ್ಟಲಾಗುತ್ತಿದೆ. ಹಾಲುಮಾರಾಟದಿಂದ ರೂ. ೯೫೦೦ ಈ ವರ್ಷ ಬರಬಹುದೆಂದು ಅಂದಾಜು ಮಾಡಲಾಗಿದೆ.

### ಸಹಕಾರ ಇಲಾಖೆ.

ಈ ಇಲಾಖೆಯು ವಿವಿಧ ಉದ್ದೇಶಗಳ ಜವಾಬ್ದಾರಿಯನ್ನು ಕೈಕೊಂಡಿದ್ದರೂ ಕೆಲಸವು ಸುಸೂತ್ರವಾಗಿ ಸಾಗಿದೆ. ಪ್ರಾಂತೀಕ ಬ್ಯಾಂಕಿನ ಕೆಲಸ ತೃಪ್ತಿಕರವಾಗಿದೆ. ವೀರಾಜಪೇಟೆಯ ಔದ್ಯೋಗಿಕ ತರಬೇತು ಶಾಲೆ, ಮತ್ತು ಭೂಮಿ ಅಡಮಾನ ಸಂಘಗಳ ಬಗ್ಗೆ ಆಗತ್ಯದ ಖರ್ಚಿನ ಹಣವನ್ನು ಬಡ್ಜೆಟ್ಟಿನಲ್ಲಿಡಲಾಗಿದೆ. ಸ್ಟೋರ್ ಕಟ್ಟಡ, ನರ್ಸರಿ ಶಾಲೆ ಇವುಗಳಿಗಾಗಿ ಪ್ರತ್ಯೇಕ ಹಣವಿಡಲಾಗಿದೆ. ಸುಮಾರು ೩೦ ಸಹಕಾರ ಸಂಘಗಳು ಮುಖ್ಯತಃ ಸುಮಾರು ೨೫೦೦೦ ರೂಪಾಯಿ ಖರ್ಚಾಗಬಹುದಾಗಿದ್ದಷ್ಟು ಗ್ರಾಮರಸ್ತೆಗಳ ಕೆಲಸವನ್ನು ಮಾಡಿರುವದು ತೃಪ್ತಿಕರ. ಇದು ನಿಜವಾದ ಸಹಕಾರ.

### ಸಿವಿಲ್ ವರ್ಕ್ಸ್.

೧೫ ಹೊಸ ಕಟ್ಟಡ ಕಟ್ಟಲಾಗಿದೆ. ಸುಮಾರು ಏಳು ಕಟ್ಟಡ ಕೆಲಸ ನಡೆಯುತ್ತಿದೆ. ೧೯೫೦-೫೧ರಲ್ಲಿ ಈ ಕೆಳಗಿನ ಕೆಲಸ ಕೈಕೊಳ್ಳಲಾಗುವದು (೧) ಮಡಿಕೇರಿ ಪ್ರೇಜರ್‌ಪೇಟೆ ರಸ್ತೆಗೆ ಎಸ್ಪಾಲ್ಟ್ ಹಾಕುವದು (೨) ಪೊನ್ನಂಪೇಟೆ ಹೈಸ್ಕೂಲು ಕಟ್ಟಡ, (೩) ನಾಪೋಕ್ಲು, ಸೋಮವಾರಪೇಟೆ, ಹೈಸ್ಕೂಲು ಕಟ್ಟಡ ಪೂರ್ತಿ ಮಾಡುವದು (೪) ಕಾಲೇಜು ಕಟ್ಟಡ. (೫) ಮಡಿಕೇರಿಯಲ್ಲಿ ಕ್ಷಯರೋಗಾಸ್ಪತ್ರೆ (೬) ಮಡಿಕೇರಿಯಲ್ಲಿ ಹೆರಿಗೆ ಆಸ್ಪತ್ರೆಯು (೭) ಮಡಿಕೇರಿಯಲ್ಲಿ ಪ್ರಯೋಗಿಕರ ಬಂಗ್ಲೆ, (೮) ವೀರಾಜಪೇಟೆ ಆಸ್ಪತ್ರೆ, ನರ್ಸ್ ವಸತಿಗೃಹ (೯) ಬೋಡರಿ ಮತ್ತು ಕೊಟ್ಟಮುಡಿ ಸೇತುವೆ ೧೯೫೦-೫೧ರಲ್ಲಿ ರಸ್ತೆ ರಿಪೇರಿಗಾಗಿ ೪ ಲಕ್ಷ ರೂಪಾಯಿಗಳನ್ನಿಡಲಾಗಿದೆ

### ಆದಾಯ ಖರ್ಚು

ತಾರೀಕು ೧-೪-೪೯ರ ಶಿಲ್ಕು ಬಾಕಿ ೭೩ ಲಕ್ಷವಿದ್ದು ೧೯೪೯-೫೦ರಲ್ಲಿ ೫೬ ಲಕ್ಷ ಉತ್ಪತ್ತಿ ಬಂದು ೭೫ ಲಕ್ಷ ಖರ್ಚಾದ ಕಾರಣ ತಾ ೩೧-೩-೫೦ರಲ್ಲಿ ಸುಮಾರು ೬೪ ಲಕ್ಷ ಉಳಿತಾಯವಿದೆ. ಈ ವರ್ಷ ಅಂದರೆ ೧೯೫೦-೫೧ರಲ್ಲಿ ಆದಾಯವು ೪೫ ಲಕ್ಷ ಎಂದೂ ಖರ್ಚು ೬೫ ಲಕ್ಷ ಎಂದಿದ್ದು ಅಂದಾಜು ಮಾಡಿ ತಾ. ೩೧-೩-೫೧ ರಲ್ಲಿ ಶಿಲ್ಕು ರೂ ೪೪ ಲಕ್ಷ ಉಳಿಯ ಬಹುದೆಂದು ಅಂದಾಜು ಮಾಡಲಾಗಿದೆ.

ನಮ್ಮ ಬಡ್ಜೆಟ್ಟಿನ ಸ್ಥಿತಿ ತೃಪ್ತಿಕರವಾಗಿ. ಕ್ರಮಶಃ ಖರ್ಚು ಹೆಚ್ಚಾಗಿ ಆದಾಯ ಕಡಿಮೆಯಾಗುವ ಚಿಹ್ನೆಗಳು ತೋರುತ್ತಿವೆ. ಆದಾಯವನ್ನು ಹೆಚ್ಚಿಸಲು ಹೊಸ ಮಾರ್ಗಗಳನ್ನು ಕಂಡು ಹಿಡಿಯಬೇಕಾಗಿದೆ.

---

# ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಸೂಟ್ ಬಟ್ಟೆಗಳ ಉತ್ತಮ ಸ್ಟಾಕ್ ಇಡಲಾಗಿದೆ.
ಉತ್ತಮ ನಮೂನೆಯ ಬಟ್ಟೆಗೂ ಟೈಲರ್ ನೇಮಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

**ಪಟ್ಟೊ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು.

52-15



ಭದ್ರತೆ! 17 ವರ್ಷಗಳ ಒಟ್ಟು ಅನುಭವಶೀಲತೆ!! ಅನುಕೂಲತೆ !!

# ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.
ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ್ಧ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

| | |
|---|---|
| ಹೊಸ ಉದ್ಯಮ ರೂ. .... .... | 6,13,00,000 ಮೀರಿದೆ. |
| ಚಾಲ್ತಿಯಲ್ಲಿರುದ ಒಟ್ಟು ಉದ್ಯಮ ರೂ. .... | 27,73,00,000 ,, |
| ಒಟ್ಟು ನಿಧಿ. ರೂ. .... .... .... | 8,30,00,000 ,, |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

# ಎಂಪೈರ್ ಆಫ್ ಇಂಡಿಯಾ

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897
ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

**ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**



# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರೆಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.
ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್‌ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ಸ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M L C. ಪ್ರೆಸಿಡೆಂಟ್ ಮತ್ತು ಖಜಾಂಚಿ.



# CRESCENT

**FOR PROTECTION AND SERVICE.**

It is best to represent and insure with The CRESCENT Insurance Co., Ltd,
*H: O: BOMBAY.* [*Established 1919.*

*For particulars write to:*

Sri B. A. Poovaiah
*Organiser.*
*Pollibetta, Coorg.*

or

The Branch Manager,
*22 B. Mahatma Gandhi Road,*
*Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು
# ಕ್ರೆಸೆಂಟ್
**ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.**



# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವವು)

ಎಂ. ಎಸ್. ಸೋಮಯ್ಯ,
52-35 ಗೌರವ ಕಾರ್ಯದರ್ಶಿ.


Edited, Printed and Published by P. I. Bellioppa at 'Kodagu' Press, Mercara, for 'Kodagu' Ltd.

Reg. No. M. 1800.
'KODAGU' MERCARA, (Coorg).

# ಕೊಡಗು

ಸಂಪಾದಕರು–ಟಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೮ | ತಾರೀಕು ೫–೬–೧೯೫೦ನೇ ಶುಕ್ರವಾರ | ಸಂಚಿಕೆ ೪೯

## ಚಿನ್ನದ ಮೊಟ್ಟೆಯಿಡುವ ಕೋಳಿ.

ಲೇ:–ಶ್ರೀ ಜಿ. ಟಿ. ನಾರಾಯಣರಾವ್.

---

ದೇಶದಲ್ಲಿ ಮಳೆಯು ಇಲ್ಲವೆಂದು ಕೂಗು ಎದ್ದಿರುವುದು. ಈಗ ಅನೇಕ ವರ್ಷಗಳಿಂದ ಅಕಾಲ ವೃಷ್ಟಿ ಅತಿವೃಷ್ಟಿಗಳು ಹೆಚ್ಚಾಗುತ್ತಿವೆ. ಇವುಗಳ ಕಾರಣವೇನು ಎಂದು ಶಾಸ್ತ್ರೀಯವಾಗಿ ವಿಚಾರ ಮಾಡಿ ತಿಳಿದುಕೊಳ್ಳುವ ಜ್ಞಾನವಾಗಲೀ, ಸಹನೆಯಾಗಲೀ ಸಾಮಾನ್ಯ ಜನರಿಗೆ ಇರುವುದಿಲ್ಲ. ಸರಕಾರದವರು ಈ ವಿಷಯದಲ್ಲಿ ಗೊತ್ತಿಲ್ಲದವರಂತೆ ವಿನಾಶಮಾರ್ಗದಲ್ಲಿಯೇ ಮುಂದುವರಿಯುತ್ತಿರುವುದು ಖೇದದ ಸಂಗತಿ. ಒಂದು ವಿಷಯ ಖಂಡಿತ:– ಈ ರೀತಿಯ ಭೌಗೋಲಿಕ ದುರ್ಘಟನೆಗಳು ದೇವನಿರ್ಮಿತವಲ್ಲ; ನಮ್ಮ ದುಷ್ಕಾರ್ಯಗಳ ಪ್ರತಿಫಲವಾದ ಭೂತಪ್ರೇರಿತ.

ಮೋಡಗಳು ಆಕಾಶದಲ್ಲಿ ಒಂದು ನಿಶ್ಚಿತ ನಿಯಮವನ್ನು ಅನುಸರಿಸಿ ಬರುವುವು. ಅವುಗಳನ್ನು ತಡೆದು ನೀರಾಗಿಸಿ ಮಳೆಯಾಗಿ ಸುರಿಸಲು ತಂಪಾದ ಹವೆಯು ಬೇಕು. ಅಂದರೆ ಬೆಟ್ಟ ಕಾಡುಗಳಿರುವಲ್ಲಿ ತಣ್ಣನೆಯ ಗಾಳಿ ಸ್ವಾಭಾವಿಕವಾಗಿ ಬೀಸುವುದರಿಂದ ಅಲ್ಲಿ ಮೋಡಗಳು ಕರಗಿ ಮಳೆಯು ಸುರಿಯುವುದು. ಈ ಕಾಡುಗಳಿಲ್ಲದಿರುವಲ್ಲಿ, ಮೋಡಗಳು ಬಂದಾಗ, ಮಳೆಯನ್ನು ಸುರಿಸಲು ಕೃತ್ರಿಮೋಪಾಯಗಳನ್ನು ಅಮೇರಿಕದವರು ಹುಡುಕುತ್ತಿರುವರು. ನೀರಿನ ಹಸಿಯಿರದ ಮಂಜುಗಡ್ಡೆಗಳನ್ನು ಮೋಡಗಳ ಮೇಲೆ ಸುರಿದರೆ ಆಗ ಮಳೆ ಬೀಳುವುದಂತೆ. ಆದರೆ ಇದರ ಪ್ರಯೋಗ ಬರೆದಷ್ಟು ಸುಲಭವಲ್ಲ; ಕಾರ್ಯತಃ ಇದು ತುಂಬ ಖರ್ಚಿನದು. ಆದ್ದರಿಂದ ನೈಸರ್ಗಿಕವಾದ (ಅಂದರೆ ಮರಗಿಡುಗಳ ಸಹಾಯದಿಂದ) ನಮಗೆ ದೊರೆಯುವ ಮಳೆಯೇ ಸುಲಭವಾದುದು.

ಎರಡು ವಿಷಯಗಳು ಸ್ಪಷ್ಟ–(೧) ಮಳೆ ಸುರಿಯಲು ಮೋಡಗಳು ಆಕಾಶದಲ್ಲಿ ಚಲಿಸುತ್ತ ಬರಬೇಕು. (೨) ಕಾಡುಗಳು ಆ ಪ್ರದೇಶದಲ್ಲಿ ಹೇರಳವಾಗಿರಬೇಕು. ಇವುಗಳಲ್ಲಿ ಯಾವುದಾದರೊಂದರಲ್ಲಿ ನ್ಯೂನತೆಯು ಬಂದಲ್ಲಿ ಮಳೆಯು ಕಾಲಕಾಲಕ್ಕೆ ಸರಿಯಾಗಿ ಸುರಿಯಲಾರದು. ಅತಿವೃಷ್ಟಿಯೂ, ಅನಾವೃಷ್ಟಿಯೂ ಸಂಭವಿಸುವುವು. ಮೋಡಗಳು ಸೂರ್ಯನ ಪ್ರಖರ ಕಿರಣಗಳು ಸಮುದ್ರ ಮುಂತಾದ ನೀರ್ದಾಣಗಳ ಮೇಲೆ ಕಾದು ಉಂಟಾಗುವುದರಿಂದ –ಸ್ಪೈಪಸ ಶಾತ್–ಅಲ್ಲಿ ಮನುಷ್ಯನ ಸೂರೆಯು ಏನೂ ದುಷ್ಪರಿಣಾಮವನ್ನು ತಂದಿರುವುದಿಲ್ಲ. ಆದರೆ ಈ ದಶಕದಲ್ಲಿ ವಿಶೇಷ : ಕಾಡುಗಳ ಸೂರೆ, ಕೊಳ್ಳೆ, ದರೋಡೆ ಹಿಂದೆ ಎಂದೂ ನಡೆಯದಿದ್ದಷ್ಟು ರಭಸದಿಂದ, ನಿಷ್ಕರುಣೆಯಿಂದ ನಡೆದಿವೆ. ಎಂತಹ ನಿಬಿಡವಾದ ವನಗಳೂ, ಪುರಾಣವರ್ಣಿತ ಭೀಕರ ಕಾಂತಾರಗಳೂ ಪ್ರಾಚೀನ ವೈಭವಕ್ಕಾಗಿ ಮರುಗುತ್ತಿರುವ ಕುರುಚಲು ಗಿಡಗಳಿಂದ ತುಂಬಿರುವುವು; ಕೆಲವಂತೂ ಧೂಳೆಬ್ಬಿಸುವ ಬೋಳು ಗುಡ್ಡಗಳಾಗಿರುವುವು. ವನಗಳಲ್ಲಿನ ರುದ್ರ ಸೌಂದರ್ಯವು ಆಧುನಿಕ ಮಾನವನ ಕಾರ್ಪಣ್ಯದ, ಅತ್ಯಾಸೆಯ ತಾಂಡವ ನೃತ್ಯದ ಫಲಿತಾಂಶವಾಗಿ ಸ್ಮಶಾನ ರುದ್ರತೆಯಾಗಿ ಮಾರ್ಪಟ್ಟಿದೆ. ಇದನ್ನು ಪ್ರತ್ಯಕ್ಷ (ವನಾಂತರಗಳಲ್ಲಿ ಸಂಚರಿಸಿ) ನೋಡಲಾಗದವರು ನಮ್ಮ ದೇಶದಲ್ಲಿಯೇ ಸಾವಿರ ಗಟ್ಟಲೆ ಲಾರಿಗಳಲ್ಲಿ ಪರದೇಶಕ್ಕೆ ಹೋಗುತ್ತಿರುವ ಮರದ ತೊಲೆಗಳನ್ನೂ, ಕೋಟಿಗಟ್ಟಲೆ ರೂಪಾಯಿ ಮಾಡುತ್ತಿರುವ ಮರದ ವ್ಯಾಪಾರಿಗಳನ್ನೂ ನೋಡಿ ಯಾವ ರೀತಿ ನಿಸರ್ಗದ ದರೋಡೆಯಾಗಿವೆಯೆಂದು ಊಹಿಸಿಕೊಳ್ಳಬಹುದು.

ದೊಡ್ಡ ದೊಡ್ಡ ಕಾಡುಗಳನ್ನು ಹರಾಜು ಮಾಡಿದರೋ ಅಥವಾ ಹಾಗೆಯೇ ಮಾರಿದರೋ ಸರಕಾರಕ್ಕೆ ವಿಶೇಷ ಖರ್ಚಿಲ್ಲದೇ ವಿಪುಲ ಧನಲಾಭವಾಗುವುದು. ಕೊಂಡುಕೊಂಡವರು ಅಲ್ಲಿನ ಎಲ್ಲಾ ಮರಗಳನ್ನೂ ಸಂಪೂರ್ಣ ನಿರ್ಮೂಲಮಾಡಿ (ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ) ಅವನ್ನು ಕೊಯ್ಯುವ ಮರವಾಗಿಯೂ ಸೌದೆಯಾಗಿಯೂ ಪರದೇಶಗಳಲ್ಲಿ ವಿಕ್ರಯಿಸಿ ಹಣವನ್ನು ಮೊಹರು ಮಾಡುವರು. ಹೀಗೆ ಸರಕಾರಕ್ಕೆ ಅನಾಯಾಸವಾಗಿ ಹಣವು ದೊರೆಯುವುದು; ಕೆಲವರು ಕ್ಷಿಪ್ರದಲ್ಲಿಯೇ ಕುಬೇರರಾಗುವರು. ಇದರಿಂದ ಯಾರಿಗೆ ಹಾನಿಯಿದೆ? ದೀರ್ಘಾವಧಿಯಲ್ಲಿ ದೇಶಕ್ಕೆ ಇದರಿಂದ ಘೋರತಮ ವಿಪತ್ತಿದೆ. ಒಂದು ಕಂಟಕವೆಂದರೆ, ವಿಶೇಷವಾಗಿ ತಲೆದೋರುತ್ತಿರುವ ಮಳೆಯ ಅಭಾವ. ಇದರಿಂದಾಗುವ ಕಷ್ಟಗಳನ್ನು ಜನರು ಈಗ ಅನುಭವಿಸುತ್ತಲೇ ಇದ್ದಾರೆ. ದೇಶವು ಆಹಾರ ಸ್ವಾವಲಂಬಿಯಾಗಲು ವಿಶ್ವಪ್ರಯತ್ನ ಮಾಡುತ್ತಿರುವಾಗ ಮಳೆಯ ದೌರ್ಬಲ್ಯವು ಇದಕ್ಕೆ ಕಂಠಾರಗ್ಗರೂಪಿಯಾಗುವುದು.

ಮಳೆಯು ಸುರಿದು ನೆಲದ ಮೇಲೆ ನೀರು ಹರಿಯುವಾಗ ಅದು ಮಣ್ಣನ್ನು ಕೊಚ್ಚಿಕೊಂಡು ಹೋಗುವುದು ಸರಿಯಷ್ಟೆ. ಏರು ತಗ್ಗಾದ ಭೂಮಿಯಲ್ಲಿ ತುಂಬ ಮಣ್ಣನ್ನು ಈ ನೀರು ತೊಳೆದುಕೊಂಡು ಹರಿಯುವುದು. ಹೀಗೆ ಅನೇಕ ವರ್ಷ ಒಂದು ಪ್ರದೇಶದಲ್ಲಿ ನಡೆಯಿತೆಂದರೆ ಸಸ್ಯಾದಿಗಳ ಬೆಳವಣಿಗೆಗೆ ಅವಶ್ಯಕವಾದ ಮಣ್ಣಿನ ಮೇಲಿನ ಪದರವು ಶೀಘ್ರವಾಗಿ ಮಾಯವಾಗುವುದು. ಕೊನೆಯಲ್ಲಿ ಆ ಸ್ಥಳವು ಬಂಜರಾಗುವುದು. ಈ ರೀತಿಯಲ್ಲಿ ನೀರು ಹರಿಯುವ ಬೋಳು ಸ್ಥಳಗಳಲ್ಲಿ ಗಿಡ ಮರಗಳಿದ್ದರೆ ಅವು ನೀರನ್ನು ಸರಾಗವಾಗಿ ಹರಿಯಲು ಬಿಡಲಾರವು. ಮಳೆಯ ನೀರಿನ ಬಹುಭಾಗ ಅಲ್ಲಿ ನೆಲದಲ್ಲಿ ನಿಂತು ಭೂಮಿಯೊಳಗೆ ಇಸರುವುದು. ಉಳಿದ ನೀರು ಅಂಕುಡೊಂಕಾಗಿ ಮರಗಳ ಬಿದ್ದ ಎಲೆಗಳ, ಬೇರುಗಳ ಮುಖಾಂತರ ಹರಿಯುವಾಗ ಸಾರವತ್ತಾದ ಮಣ್ಣು ರವೆಯಷ್ಟೂ ನಾಶವಾಗುವುದಿಲ್ಲ. ಹರಿಯುವ ನೀರಿನ ದಾರಿಯಲ್ಲಿ ಒಂದು ಒಂದ್ರಿಯನ್ನು ಇಟ್ಟಂತೆ ಮರಗಿಡಗಳು ವರ್ತಿಸುವುವು. ನೀರು ನೆಲದೊಳಗೆ ಇಳಿಯುವುದರಿಂದ ಬಾವಿಗಳಲ್ಲಿ, ಹೊಳೆಗಳಲ್ಲಿ ಅನವರತವೂ ಒರತೆಯು ಬಲವಾಗಿದ್ದು ನೀರಿನ ಅಭಾವ ಎಂತಹ ಬೇಸಿಗೆಯಲ್ಲಿಯೂ ತಟ್ಟಲಾರದು.

ಹೊಳೆಗಳು ತುಂಬಾ ಮಣ್ಣನ್ನು ಕೊಚ್ಚಿಕೊಂಡು ಹೋಗುವುವು. ಹೊಳೆಗಳ ಮಾರ್ಗ ವಕ್ರ. ಅವು ಹರಿದಲ್ಲಿ ವರ್ಷ ವರ್ಷ ಹೆಚ್ಚು ಹೆಚ್ಚು ಭೂಮಿಯನ್ನು ನುಂಗುತ್ತಿರುವುದು ತೋರಿಬರುವುದು. ಇದು ಏಕೆಂದರೆ ನೀರಿನ ಹರಿತದ ಮೇಲೆ ನಮಗೆ ಹಿಡಿತವಿಲ್ಲ—ಇದು ಹೋದದ್ದೇ ದಾರಿಯಾಗುವುದು. ಹೊಳೆಗಳು ಕಾಡುಗಳ ಮಧ್ಯದಲ್ಲಿಯೇ ಬೆಟ್ಟ ದೇಶಗಳಲ್ಲಿ ಹರಿಯುವುವು. ಅಲ್ಲಿ ಮರಗಳು ಅವುಗಳ ಬೇರುಗಳು ನೀರಿನ ಹೊಡೆತಕ್ಕೆ ಸಿಕ್ಕಿದ ಮಣ್ಣನ್ನು ಬಿಗಿ ಹಿಡಿದಿರುತ್ತವೆ. ಆದ್ದರಿಂದ ನೀರಿನ ಉತ್ಪಾತದಿಂದ ಮಣ್ಣು ಕರಗುವುದಿಲ್ಲ. ಅಲ್ಲದೇ ಘಟ್ಟದಲ್ಲಿ ಬೀಳುವ ನೀರನ್ನು ಒಂದೇ ಸಲ ಕೆಳಗೆ ಹರಿಯಲು ಈ ಸ್ವಾಭಾವಿಕವಾದ ಅಣೆಕಟ್ಟುಗಳು (ಮರಗಳು) ಬಿಡುವುದಿಲ್ಲ. ಇದರಿಂದ ಕೆಳಗಿನ ತಗ್ಗು ಪ್ರದೇಶಗಳಲ್ಲಿ ನೀರಿನ ಪ್ರವಾಹದ ರಭಸ ಹಾಗು ತತ್ಪರಿಣಾಮವಾಗಿ ಉತ್ಪಾತ ಕಡಿಮೆಯಾಗುವುವು. ಈಗ ಪ್ರತಿ ವರ್ಷವೂ ನಾವು ಗಂಗಾ ಮುಂತಾದ ನದಿಗಳ ಪ್ರವಾಹದಿಂದಾಗುವ ಹಾನಿಯನ್ನು ಓದುತ್ತೇವೆ. ಇದರ ಕಾರಣ ಗಿರಿಯ ತಪ್ಪಲಿಗಾಗಿ ಹರಿಯುವ ನದಿಯ ನೀರಿನ ಮೇಲೆ ನಿಸರ್ಗದ ಅಧಿಕಾರ ತಪ್ಪಿರುವುದರಿಂದ; ಇದರ ಕಾರಣ ಅಲ್ಲಿರುವ ಸ್ವಾಭಾವಿಕವಾದ ಅಣೆಕಟ್ಟುಗಳು ನಾಶವಾಗಿರುವುದರಿಂದ; ಮತ್ತು ಇದರ ಕಾರಣ ಮರಗಿಡುಗಳು ನಿರ್ನಾಮವಾಗಿರುವುದರಿಂದ, ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕಾಡುಗಳನ್ನು ನಾಶಮಾಡಿ ದುಡ್ಡುಗಳಿಸುವುದು ಸುಲಭ. ಇದು ತಾತ್ಕಾಲಿಕ 'ಸಂಪತ್ತ'ನ್ನು ನೀಡಬಹುದು. ಆದರೆ ಮುಂದಿನ ಜನಾಂಗದವರು ಬದುಕಬೇಡವೇ? ನೆಮ್ಮದಿಯಿಂದ ಬಾಳಬೇಡವೇ? ವಿಜ್ಞಾನವು ಆಗ ಸಾಕಷ್ಟು ಮುಂದುವರಿದು ನಿಸರ್ಗದ ಮೇಲಿರುವ ನಮ್ಮ ಅವಲಂಬನವು ಅನಗತ್ಯವಾಗಬಹುದೆಂದು ಕೆಲವರು ಹೇಳಬಹುದು. ಈ ಶತಮಾನದ ವರೆಗೆ ನಿಸರ್ಗದ ಒಂದು ಭಿನ್ನರಾಶಿಯಷ್ಟು ರಹಸ್ಯವೂ ನಮ್ಮ ವಶವಾಗಿರುವುದಿಲ್ಲ (ಇಷ್ಟು ಸ್ವಲ್ಪ ಜ್ಞಾನವೂ ಇಷ್ಟು ಅದ್ಭುತ ಮತ್ತು ಭಯಂಕರ ವ್ಯಾಪಾರಗಳನ್ನು ನಡೆಸುತ್ತಿದೆಯಲ್ಲ!) ಎಂದು ಪ್ರಸಿದ್ಧ ವಿಜ್ಞಾನಿಗಳು ಘೋಷಿಸಿರುವರು. ನಿಸರ್ಗದ ಅಡಿಯಾಳಾಗಿ, ಅದರೊಂದಿಗೆ ಸಹಕರಿಸಿ ಮನುಷ್ಯನು ಬದುಕಬೇಕೇ ಹೊರತು ಅದರ ವಿರುದ್ಧ ಕತ್ತಿ ಝಳಪಿಸಿ ಅಲ್ಲ. ನಮ್ಮ ಪೂರ್ವಜರು ಕಾಡುಗಳಿಗೆ ದೇವತ್ವವನ್ನಾರೋಪಿಸಿ ಅದನ್ನು ಗೌರವದಿಂದ ಕಾದುಕೊಂಡು ಬಂದಿದ್ದರು. "ಫಲವೃಕ್ಷಗಳನ್ನು ನಾಶಮಾಡಬೇಡ; ಒಣಗಿದ ಮತ್ತು ಸತ್ತ ಮರಗಳನ್ನೇ ಸ್ವಂತೋಪಯೋಗಕ್ಕಾಗಿ ಕಡಿ; ಮರಗಳನ್ನು ನೆಡು" ಎಂದ ಮುಂತಾದ ನೀತಿಗಳ ಬದಲು ಅವುಗಳ ಅಸಹ್ಯ ಅಸ್ಥಿಪಂಜರಗಳು ಇಲ್ಲಿ ಕಾಣುವವು. ನಾವು ಮರಗಳನ್ನು [illegible] ಪ್ರದುಕೂ ಇರಲಿ, ಇರುವ ಎಲ್ಲ [illegible]ಗಳನ್ನೂ ನಿರ್ದಾಕ್ಷಿಣ್ಯವಾಗಿ ಕಡಿಯುವುದರಲ್ಲಿ ಉತ್ಸುಕರಾಗಿದ್ದೇವೆ. ಫಾರೆಸ್ಟ್ ಇಲಾಖೆಯವರು ಈ ವರ್ಷ ಮರಗಳ ಮಾರಾಟದಿಂದ ತುಂಬಾ ಲಾಭ ಬಂದಿದೆಯೆಂದು ಕೊಡಗಿನ ನ್ಯಾಯವಿಧಾಯಕ ಸಭೆಯಲ್ಲಿ ಸಂತೋಷ(?)ದಿಂದ ಹೇಳಿದ್ದಾರೆ! ಈ ಇಲಾಖೆಯವರು ಮರಗಳನ್ನು ನೆಡಿಸುತ್ತಿರುವುದೇನೋ ನಿಜ. ಆದರೆ ಅವು ಜಾತಿ ಮರಗಳು. ಹಾಗಾದರೆ ನಮ್ಮ ಉತ್ತರಕಾಲೀನರು ತೇಗದ ಮರಗಳಿಂದ ಕಟ್ಟಿದ ಸೌಧಗಳಲ್ಲಿ ವಾಸಿಸಲಿ, ಸ್ನಾನವಾಡದಿರಲಿ, ಊಟ ಮಾಡದಿರಲಿ ಎಂದು ಅರ್ಥವೇ?

ಕೋಳಿಯು ದಿನಕ್ಕೊಂದು ಚಿನ್ನದ ಮೊಟ್ಟೆಯನ್ನು ಇಡುತಿತ್ತಂತೆ! ಅದರ ಗರ್ಭವನ್ನು ಸೀಳಿದರೆ ಒಂದೇ ಸಲ ಎಲ್ಲ ಚಿನ್ನವನ್ನೂ ಪಡೆಯಬಹುದಲ್ಲ ಎಂದು ಇದ್ದ ಅದರ ಮಾಲಿಕನ ದುರಾಶೆಯ ಪರಿಣಾಮ ಏನಾಯಿತೆಂದು ಎಲ್ಲರಿಗೂ ತಿಳಿದಿದೆ. ಸ್ವರ್ಗಕ್ಕೆ ಒಳದಾರಿಯಿಲ್ಲ (There is no short-cut to Utopia) ಎಂಬ ಒಂದು ಉಕ್ತಿಯಿದೆ. ಈ ವಿಷಯಗಳನ್ನು ಅರಿತು ಸರಕಾರದವರು ತಮ್ಮ ಲಾಭ ಕಡಿಮೆಯಾದರೂ ದೇಶದ ದೀರ್ಘ ಹಿತದೃಷ್ಟಿಯಿಂದ ಅರಣ್ಯ ಸಂಪತ್ತಿನ ಸೂರೆಯನ್ನು ಹಿಡಿತದಲ್ಲಿಡಬೇಕು. ಅವರೂ, ವಿದ್ಯಾವಂತರೂ ಜನರಲ್ಲಿ ಈ ವಿಷಯ ಪ್ರಚಾರ ಮಾಡಿ, ಚಿನ್ನದ ಮೊಟ್ಟೆಯಿಡುವ ಕೋಳಿಯು ಅನಂತಕಾಲ ಬದುಕುವಂತೆ ಮಾಡಬೇಕು. ಹಾಗಲ್ಲದಿದ್ದರೆ ಜನಸಂಖ್ಯೆಯು ವಿಪರೀತವಾಗಿ, ಹಿಡಿತವಿಲ್ಲದೆ ಏರುತ್ತಿರುವ ನಮ್ಮ ದೇಶದ ಮುಂದಿನ ಪೀಳಿಗೆಯವರಿಗೆ ಆಹಾರವೂ ದೊರೆಯಲಾರದು, ನೀರೂ ಸಿಗಲಾರದು.

---

# ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಲಾಗಿದ್ದು ಉತ್ಕೃಷ್ಟವಾದ ಸಿಲ್ಕ್, ಉಲನ್ ಮತ್ತು ಕಾಟನ್ ಬಟ್ಟೆಗಳ ದೊಡ್ಡ ಸ್ಟಾಕ್ ಇಡಲಾಗಿದೆ.
ಯಾವ ಸಮಾರಂಭಕ್ಕೂ ಬಟ್ಟೆಗಳೂ ದೊರಕಿಸಿಕೊಡಲಾಗುವುದು
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ನಮ್ಮ ಬೇಕು! ಪಟ್ವಾ ಬ್ರದರ್ಸ್ ಎಡೆಗೆ ಬನ್ನಿ!

**ಪಟ್ವಾ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
62-15 ಟೌನ್‌ಹಾಲಿನ ಎದುರು, ಮೈಸೂರು.



ಭದ್ರತೆ! 17 ವರ್ಷಗಳ ಅನುಭವ ಅನುಕೂಲತೆ !!
ಅನುಭವಶೀಲತೆ!!

# ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.
ನಿರಖು ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮಿಕ್ಕಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿಕ್ಕಿದೆ.
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ .... .... | 6,13,00,000 | ಮೀರಿದೆ |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

# ಎಂಪೈರ್ ಆಫ್ ಇಂಡಿಯಾ

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**
ಸ್ಥಾಪನೆ,—1897
ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ
ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಬೊಂಬಾಯಿ.

ಶಾಖಾ ಕಛೇರಿ
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.


**ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**


# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921)ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000 |
| ವಸೂಲಾದ ಶೇರು ಮೊಬಲಗು | ರೂ. | 1,79,000 |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು
ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು.
ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ಕೇಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಚಿ



# CRESCENT

**FOR PROTECTION AND SERVICE.**

It is best to represent and insure with
The CRESCENT Insurance Co., Ltd,
*H: O: BOMBAY.* [*Established 1919*

*For particulars write to:*

Sri B. A Poovaiah or The Branch Manager,
*Organiser* *22 B Mahatma Gandhi Road,*
*Pollibetta, Coorg.* *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು
# ಕ್ರೆಸೆಂಟ್
ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರುವವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52-35 ಗೌರವ ಕಾರ್ಯದರ್ಶಿ.


Edited, Printed and Published by P. I. Bellappa at 'Kodagu Press Mercara, for 'Kodagu' Ltd.

Reg. No. DM. 1886.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೫-೫-೧೯೫೦ನೇ ಶುಕ್ರವಾರ | ಸಂಚಿಕೆ ೪೯

## ಚಿನ್ನದ
# ಮೊಟ್ಟೆಯಿಡುವ ಕೋಳಿ.

ಲೇ:—ಶ್ರೀ ಜಿ. ಟಿ. ನಾರಾಯಣರಾವ್.

ದೇಶದಲ್ಲಿ ಮಳೆಯು ಇಲ್ಲವೆಂದು ಕೂಗು ಎದ್ದಿರುವುದು. ಈಗ ಅನೇಕ ವರ್ಷಗಳಿಂದ ಅಕಾಲ ವೃಷ್ಟಿ ಅತಿವೃಷ್ಟಿಗಳು ಹೆಚ್ಚಾಗುತ್ತಿವೆ. ಇವುಗಳ ಕಾರಣವೇನು ಎಂದು ಶಾಸ್ತ್ರೀಯವಾಗಿ ವಿಚಾರ ಮಾಡಿ ತಿಳಿದುಕೊಳ್ಳುವ ಜ್ಞಾನವಾಗಲೀ, ಸಹನೆಯಾಗಲೀ ಸಾಮಾನ್ಯ ಜನರಿಗೆ ಇರುವುದಿಲ್ಲ. ಸರಕಾರದವರು ಈ ವಿಷಯದಲ್ಲಿ ಗೊತ್ತಿಲ್ಲದವರಂತೆ ವಿನಾಶಮಾರ್ಗದಲ್ಲಿಯೇ ಮುಂದುವರಿಯುತ್ತಿರುವುದು ಖೇದದ ಸಂಗತಿ. ಒಂದು ವಿಷಯ ಖಂಡಿತ:—ಈ ರೀತಿಯ ಭೌಗೋಲಿಕ ದುರ್ಘಟನೆಗಳು ದೇವನಿರ್ಮಿತವಲ್ಲ; ನಮ್ಮ ದುಷ್ಕಾರ್ಯಗಳ ಪ್ರತಿಫಲವಾದ ಭೂತಪ್ರೇರಿತ.

ಮೋಡಗಳು ಆಕಾಶದಲ್ಲಿ ಒಂದು ನಿಶ್ಚಿತ ನಿಯಮವನ್ನು ಅನುಸರಿಸಿ ಬರುವುವು. ಅವುಗಳನ್ನು ತಡೆದು ನೀರಾಗಿಸಿ ಮಳೆಯಾಗಿ ಸುರಿಸಲು ತಂಪಾದ ಹವೆಯು ಬೇಕು. ಅಂದರೆ ಬೆಟ್ಟ ಕಾಡುಗಳಿರುವಲ್ಲಿ ತಣ್ಣನೆಯ ಗಾಳಿ ಸ್ವಾಭಾವಿಕವಾಗಿ ಬೀಸುವುದರಿಂದ ಅಲ್ಲಿ ಮೋಡಗಳು ಕರಗಿ ಮಳೆಯು ಸುರಿಯುವುದು. ಈ ಕಾಡುಗಳಿಲ್ಲದಿರುವಲ್ಲಿ, ಮೋಡಗಳು ಬಂದಾಗ, ಮಳೆಯನ್ನು ಸುರಿಸಲು ಕೃತಕೋಪಾಯಗಳನ್ನು ಅಮೇರಿಕದವರು ಹುಡುಕುತ್ತಿರುವರು. ನೀರಿನ ಹಸೆಯಿರದ ಮಂಜುಗಡ್ಡೆಗಳನ್ನು ಮೋಡಗಳ ಮೇಲೆ ಸುರಿದರೆ ಆಗ ಮಳೆ ಬೀಳುವುದಂತೆ. ಆದರೆ ಇದರ ಪ್ರಯೋಗ ಬರೆದಷ್ಟು ಸುಲಭವಲ್ಲ; ಕಾರ್ಯತಃ ಇದು ತುಂಬ ಖರ್ಚಿನದು. ಆದ್ದರಿಂದ ನೈಸರ್ಗಿಕವಾದ (ಅಂದರೆ ಮರಗಿಡುಗಳ ಸಹಾಯದಿಂದ) ನಮಗೆ ದೊರೆಯುವ ಮಳೆಯೇ ಸುಲಭವಾದುದು.

ಎರಡು ವಿಷಯಗಳು ಸ್ಪಷ್ಟ—(೧) ಮಳೆ ಸುರಿಯಲು ಮೋಡಗಳು ಆಕಾಶದಲ್ಲಿ ಚಲಿಸುತ್ತ ಬರಬೇಕು. (೨) ಕಾಡುಗಳು ಆ ಪ್ರದೇಶದಲ್ಲಿ ಹೇರಳವಾಗಿರಬೇಕು. ಇವುಗಳಲ್ಲಿ ಯಾವುದಾದರೊಂದರಲ್ಲಿ ನ್ಯೂನತೆಯು ಬಂದಲ್ಲಿ ಮಳೆಯು ಕಾಲಕಾಲಕ್ಕೆ ಸರಿಯಾಗಿ ಸುರಿಯಲಾರದು. ಅತಿವೃಷ್ಟಿಯೂ, ಅನಾವೃಷ್ಟಿಯೂ ಸಂಭವಿಸುವುವು. ಮೋಡಗಳು ಸೂರ್ಯನ ಪ್ರಖರ ಕಿರಣಗಳು ಸಮುದ್ರ ಮುಂತಾದ ನೀರ್ದಾಣಗಳ ಮೇಲೆ ಕಾದು ಉಂಟಾಗುವುದರಿಂದ—ಸ್ವೈವಪಕಾತ್—ಅಲ್ಲಿ ಮನುಷ್ಯನ ಸೂರೆಯು ಏನೂ ದುಷ್ಪರಿಣಾಮವನ್ನು ತಂದಿರುವುದಿಲ್ಲ. ಆದರೆ ಈ ದಶಕದಲ್ಲಿ ವಿಶೇಷತಃ ಕಾಡುಗಳ ಸೂರೆ, ಕೊಳ್ಳೆ, ದರೋಡೆ ಹಿಂದೆ ಎಂದೂ ನಡೆಯದಿದ್ದಷ್ಟು ರಭಸದಿಂದ, ನಿಷ್ಕರುಣೆಯಿಂದ ನಡೆದಿವೆ. ಎಂತಹ ನಿಬಿಡವಾದ ವನಗಳೂ, ಪುರಾಣವರ್ಣಿತ ಭೀಕರ ಕಾಂತಾರಗಳೂ ಪ್ರಾಚೀನ ವೈಭವಕ್ಕಾಗಿ ಮರುಗುತ್ತಿರುವ ಕುರುಚಲು ಗಿಡಗಳಿಂದ ತುಂಬಿರುವುವು; ಕೆಲವಂತೂ ಧೂಳೆಬ್ಬಿಸುವ ಬೋಳು ಗುಡ್ಡಗಳಾಗಿರುವುವು. ವನಗಳಲ್ಲಿನ ರುದ್ರ ಸೌಂದರ್ಯವು ಆಧುನಿಕ ಮಾನವನ ಕಾರ್ಪಣ್ಯದ, ಅತ್ಯಾಶೆಯ ತಾಂಡವ ನೃತ್ಯದ ಫಲಿತಾಂಶವಾಗಿ ಶ್ಮಶಾನ ರುದ್ರತೆಯಾಗಿ ಮಾರ್ಪಟ್ಟಿದೆ. ಇದನ್ನು ಪ್ರತ್ಯಕ್ಷ (ವನಾಂತರಗಳಲ್ಲಿ ಸಂಚರಿಸಿ) ನೋಡಲಾಗದವರು ನಮ್ಮ ದೇಶದಲ್ಲಿಯೇ ಸಾವಿರ ಗಟ್ಟಲೆ ಲಾರಿಗಳಲ್ಲಿ ಪರದೇಶಕ್ಕೆ ಹೋಗುತ್ತಿರುವ ಮರದ ತೊಲೆಗಳನ್ನೂ, ಕೋಟಿಗಟ್ಟಲೆ ರೂಪಾಯಿ ಮಾಡುತ್ತಿರುವ ಮರದ ವ್ಯಾಪಾರಿಗಳನ್ನೂ ನೋಡಿ ಯಾವ ರೀತಿ ನಿಸರ್ಗದ ದರೋಡೆಯಾಗಿವೆಯೆಂದು ಊಹಿಸಿಕೊಳ್ಳಬಹುದು.

ದೊಡ್ಡ ದೊಡ್ಡ ಕಾಡುಗಳನ್ನು ಹರಾಜು ಮಾಡಿದರೋ ಅಥವಾ ಹಾಗೆಯೇ ಮಾರಿದರೋ ಸರಕಾರಕ್ಕೆ ವಿಶೇಷ ಖರ್ಚಿಲ್ಲದೇ ವಿಪುಲ ಧನಲಾಭವಾಗುವುದು. ಕೊಂಡುಕೊಂಡವರು ಅಲ್ಲಿನ ಎಲ್ಲಾ ಮರಗಳನ್ನೂ ಸಂಪೂರ್ಣ ನಿರ್ಮೂಲಮಾಡಿ (ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ) ಅವನ್ನು ಕೊಯ್ಯುವ ಮರವಾಗಿಯೂ ಸೌದೆಯಾಗಿಯೂ ಪರದೇಶಗಳಲ್ಲಿ ವಿಕ್ರಯಿಸಿ ಹಣವನ್ನು ಮೊಹರು ಮಾಡುವರು. ಹೀಗೆ ಸರಕಾರಕ್ಕೆ ಅನಾಯಾಸವಾಗಿ ಹಣವು ದೊರೆಯುವುದು; ಕೆಲವರು ಕ್ಷಿಪ್ರದಲ್ಲಿಯೇ ಕುಬೇರರಾಗುವರು. ಇವರಿಂದ ಯಾರಿಗೆ ಹಾನಿಯಿದೆ? ದೀರ್ಘಾವಧಿಯಲ್ಲಿ ದೇಶಕ್ಕೆ ಇದರಿಂದ ಘೋರತರವು ವಿಪತ್ತಿದೆ. ಒಂದು ಕಂಟಕವೆಂದರೆ, ವಿಶೇಷವಾಗಿ ತಲೆದೋರುತ್ತಿರುವ ಮಳೆಯ ಅಭಾವ. ಇದರಿಂದಾಗುವ ಕಷ್ಟಗಳನ್ನು ಜನರು ಈಗ ಅನುಭವಿಸುತ್ತಲೇ ಇದ್ದಾರೆ. ದೇಶವು ಆಹಾರ ಸ್ವಾವಲಂಬಿಯಾಗಲು ವಿಶ್ವಪ್ರಯತ್ನ ಮಾಡುತ್ತಿರುವಾಗ ಮಳೆಯ ದೌರ್ಬಲ್ಯವು ಇದಕ್ಕೆ ಕಂಟಕಸ್ವರೂಪಿಯಾಗುವುದು.

ಮಳೆಯು ಸುರಿದು ನೆಲದ ಮೇಲೆ ನೀರು ಹರಿಯುವಾಗ ಅದು ಮಣ್ಣನ್ನು ಕೊಚ್ಚಿಕೊಂಡು ಹೋಗುವುದು ಸರಿಯಷ್ಟೆ. ಏರು ತಗ್ಗಾದ ಭೂಮಿಯಲ್ಲಿ ತಂಬ ಮಣ್ಣನ್ನು ಈ ನೀರು ತೊಳೆದುಕೊಂಡು ಹರಿಯುವುದು. ಹೀಗೆ ಅನೇಕ ವರ್ಷ ಒಂದು ಪ್ರದೇಶದಲ್ಲಿ ನಡೆಯಿತೆಂದರೆ ಸಸ್ಯಾದಿಗಳ ಬೆಳವಣಿಗೆಗೆ ಅವಶ್ಯಕವಾದ ಮಣ್ಣಿನ ಮೇಲಿನ ಪದರವು ಶೀಘ್ರವಾಗಿ ಮಾಯವಾಗುವುದು. ಕೊನೆಯಲ್ಲಿ ಆ ಸ್ಥಳವು ಬಂಜರಾಗುವುದು. ಈ ರೀತಿಯಲ್ಲಿ ನೀರು ಹರಿಯುವ ಬೋಳು ಸ್ಥಳಗಳಲ್ಲಿ ಗಿಡ ಮರಗಳಿದ್ದರೆ ಅವು ನೀರನ್ನು ಸರಾಗವಾಗಿ ಹರಿಯಲು ಬಿಡಲಾರವು. ಮಳೆಯ ನೀರಿನ ಬಹುಭಾಗ ಅಲ್ಲಿ ನೆಲದಲ್ಲಿ ನಿಂತು ಭೂಮಿಯೊಳಗೆ ಇಸರುವುದು. ಉಳಿದ ನೀರು ಅಂಕುಡೊಂಕಾಗಿ ಮರಗಳ ಬಿದ್ದ ಎಲೆಗಳ, ಬೇರುಗಳ ಮುಖಾಂತರ ಹರಿಯುವಾಗ ಧುವಕ್ಕಾದ ಮಣ್ಣು ರವೆಯಷ್ಟೂ ನಾಶವಾಗುವುದಿಲ್ಲ. ಹರಿಯುವ ನೀರಿನ ದಾರಿಯಲ್ಲಿ ಒಂದು ಒಂದ್ರಿಯನ್ನು ಇಟ್ಟಂತೆ ಮರಗಿಡಗಳು ವರ್ತಿಸುವುವು. ನೀರು ನೆಲದೊಳಗೆ ಇಳಿಯುವುದರಿಂದ ಬಾವಿಗಳಲ್ಲಿ, ಹೊಳೆಗಳಲ್ಲಿ ಅನವರತವೂ ಒರತೆಯು ಬಲವಾಗಿದ್ದು ನೀರಿನ ಅಭಾವ ಎಂತಹ ಬೇಸಿಗೆಯಲ್ಲಿಯೂ ತಟ್ಟಲಾರದು.

ಹೊಳೆಗಳು ತುಂಬಾ ಮಣ್ಣನ್ನು ಕೊಚ್ಚಿಕೊಂಡು ಹೋಗುವುವು. ಹೊಳೆಗಳ ಮಾರ್ಗ ವಕ್ರ. ಅವು ಹರಿದಲ್ಲಿ ವರ್ಷ ವರ್ಷ ಹೆಚ್ಚು ಹೆಚ್ಚು ಭೂಮಿಯನ್ನು ನುಂಗುತ್ತಿರುವುದು ತೋರಿಬರುವುದು. ಇದು ಏಕೆಂದರೆ ನೀರಿನ ಹರಿತದ ಮೇಲೆ ನಮಗೆ ಹಿಡಿತವಿಲ್ಲ—ಅದು ಹೋದದ್ದೇ ದಾರಿಯಾಗುವುದು. ಹೊಳೆಗಳು ಕಾಡುಗಳ ಮಧ್ಯದಲ್ಲಿಯೇ ಬೆಟ್ಟ ದೇಶಗಳಲ್ಲಿ ಹರಿಯುವುವು, ಅಲ್ಲಿ ಮರಗಳು ಅವುಗಳ ಬೇರುಗಳು ನೀರಿನ ಹೊಡೆತಕ್ಕೆ ಸಿಕ್ಕಿದ ಮಣ್ಣನ್ನು ಬಿಗಿ ಹಿಡಿದಿರುತ್ತವೆ. ಆದ್ದರಿಂದ ನೀರಿನ ಉತ್ಪಾತದಿಂದ ಮಣ್ಣು ಕರಗುವುದಿಲ್ಲ. ಅಲ್ಲದೇ ಘಟ್ಟದಲ್ಲಿ ಬೀಳುವ ನೀರನ್ನು ಒಂದೇ ಸಲ ಕೆಳಗೆ ಹರಿಯಬಿಡು ಈ ಸ್ವಾಭಾವಿಕವಾದ ಅಣೆಕಟ್ಟುಗಳು (ಮರಗಳು) ಬಿಡುವುದಿಲ್ಲ. ಇದರಿಂದ ಕೆಳಗಿನ ತಗ್ಗು ಪ್ರದೇಶಗಳಲ್ಲಿ ನೀರಿನ ಪ್ರವಾಹದ ರಭಸ ಹಾಗು ತತ್ಪರಿಣಾಮವಾಗಿ ಉತ್ಪಾತ ಕಡಿಮೆಯಾಗುವುವು. ಈಗ ಪ್ರತಿ ವರ್ಷವೂ ನಾವು ಗಂಗಾ ಮುಂತಾದ ನದಿಗಳ ಪ್ರವಾಹದಿಂದಾಗುವ ಹಾನಿಯನ್ನು ಓದುತ್ತೇವೆ. ಇದರ ಕಾರಣ ಗಿರಿಯ ತಪ್ಪಲಿನಾಗಿ ಹರಿಯುವ ನದಿಯ ನೀರಿನ ಮೇಲೆ ನಿಸರ್ಗದ ಅಧಿಕಾರ ತಪ್ಪಿರುವುದರಿಂದ; ಇದರ ಕಾರಣ ಅಲ್ಲಿರುವ ಸ್ವಾಭಾವಿಕವಾದ ಅಣೆಕಟ್ಟುಗಳು ನಾಶವಾಗಿರುವುದರಿಂದ; ಮತ್ತು ಇದರ ಕಾರಣ ಮರಗಿಡುಗಳು ನಿರ್ನಾಮವಾಗಿರುವುದರಿಂದ, ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕಾಡುಗಳನ್ನು ನಾಶಮಾಡಿ ದುಡ್ಡುಗಳಿಸುವುದು ಸುಲಭ. ಇದು ತಾತ್ಕಾಲಿಕ 'ಸಂಪತ್ತ'ನ್ನು ನೀಡಬಹುದು. ಆದರೆ ಮುಂದಿನ ಜನಾಂಗದವರು ಬದುಕಬೇಡವೇ? ನೆಮ್ಮದಿಯಿಂದ ಬಾಳಬೇಡವೇ? ವಿಜ್ಞಾನವು ಈಗ ಸಾಕಷ್ಟು ಮುಂದುವರಿದು ನಿಸರ್ಗದ ಮೇಲಿರುವ ನಮ್ಮ ಅವಲಂಬನವು ಅನಗತ್ಯವಾಗಬಹುದೆಂದು ಕೆಲವರು ಹೇಳಬಹುದು. ಈ ಶತಮಾನದ ವರೆಗೆ ನಿಸರ್ಗದ ಒಂದು ಭಿನ್ನಾಂಶದಷ್ಟು ರಹಸ್ಯವೂ ನಮ್ಮ ವಶವಾಗಿರುವುದಿಲ್ಲ (ಇಷ್ಟು ಸ್ವಲ್ಪ ಜ್ಞಾನವೂ ಇಷ್ಟು ಅದ್ಭುತ ಮತ್ತು ಭಯಂಕರ ವ್ಯಾಪಾರಗಳನ್ನು ನಡೆಸುತ್ತಿದೆಯಲ್ಲ!) ಎಂದು ಪ್ರಸಿದ್ಧ ವಿಜ್ಞಾನಿಗಳು ಘೋಷಿಸಿರುವರು. ನಿಸರ್ಗದ ಅಡಿಯಾಳಾಗಿ, ಅದರೊಂದಿಗೆ ಸಹಕರಿಸಿ ಮನುಷ್ಯನು ಬದುಕಬೇಕೇ ಹೊರತು ಅದರ ವಿರುದ್ಧ ಕತ್ತಿ ಝಳಪಿಸಿ ಅಲ್ಲ. ನಮ್ಮ ಪೂರ್ವಜರು ಕಾಡುಗಳಿಗೆ ದೇವತ್ವವನ್ನಾರೋಪಿಸಿ ಅದನ್ನು ಗೌರವದಿಂದ ಕಾಪಾಡಿಕೊಂಡು ಬಂದಿದ್ದರು. "ಫಲವೃಕ್ಷಗಳನ್ನು ನಾಶಮಾಡಬೇಡ; ಒಣಗಿದ ಮತ್ತು ಸತ್ತ ಮರಗಳನ್ನೇ ಸ್ವಂತೋಪಯೋಗಕ್ಕಾಗಿ ಕಡಿ; ಮರಗಳನ್ನು ನೆಡು" ಎಂದ ಮಹತ್ತಾದ ನೀತಿಗಳ ಬದಲು ಇವುಗಳ ಅಸಹ್ಯ ಅಸ್ಥಿಪಂಜರಗಳು ಇಂದು ಕಾಣುವವು. ನಾವು ಮರಗಳನ್ನು ನೆಡುವುದಕ್ಕೂ ಇರಲಿ, ಇರುವ ಎಲ್ಲಾ ಮರಗಳನ್ನೂ ನಿರ್ದಾಕ್ಷಿಣ್ಯವಾಗಿ ಕಡಿಯುವುದರಲ್ಲಿ ಉದ್ಯುಕ್ತರಾಗಿದ್ದೇವೆ. ಫಾರೆಸ್ಟ್ ಇಲಾಖೆಯವರು ಈ ವರ್ಷ ಮರಗಳ ಮಾರಾಟದಿಂದ ತುಂಬಾ ಲಾಭ ಬಂದಿದೆಯೆಂದು ಕೊಡಗಿನ ನ್ಯಾಯನಿಧಾಯಕ ಸಭೆಯಲ್ಲಿ ಸಂತೋಷ(?)ದಿಂದ ಹೇಳಿದ್ದಾರೆ! ಈ ಇಲಾಖೆಯವರು ಮರಗಳನ್ನು ನೆಡಿಸುತ್ತಿರುವುದೇನೋ ನಿಜ. ಆದರೆ ಅವು ಜಾತಿ ಮರಗಳು. ಹಾಗಾದರೆ ನಮ್ಮ ಉತ್ತರಕಾಲೀನರು ತೇಗದ ಮರಗಳಿಂದ ಕಟ್ಟಿದ ಸೌಧಗಳಲ್ಲಿ ವಾಸಿಸಲಿ, ಸ್ನಾನವೂ ಮಾಡಲಿ, ಊಟ ಮಾಡದಿರಲಿ ಎಂದು ಅರ್ಥವೇ?

ಕೋಳಿಯು ದಿನಕ್ಕೊಂದು ಚಿನ್ನದ ಮೊಟ್ಟೆಯನ್ನು ಇಡುತಿತ್ತಂತೆ! ಅದರ ಗರ್ಭವನ್ನು ಸೀಳಿದರೆ ಒಂದೇ ಸಲ ಎಲ್ಲ ಚಿನ್ನವನ್ನೂ ಪಡೆಯಬಹುದಲ್ಲ ಎಂದು ಇದ್ದ ಅದರ ಮಾಲಿಕನ ದುರಾಶೆಯ ಪರಿಣಾಮ ಏನಾಯಿತೆಂದು ಎಲ್ಲರಿಗೂ ತಿಳಿದಿದೆ. ಸ್ವರ್ಗಕ್ಕೆ ಒಳದಾರಿಯಿಲ್ಲ (There is no short-cut to Utopia) ಎಂಬ ಒಂದು ಉಕ್ತಿಯಿದೆ. ಈ ವಿಷಯಗಳನ್ನು ಅರಿತು ಸರಕಾರದವರು ತಮ್ಮ ಲಾಭ ಕಡಿಮೆಯಾದರೂ ದೇಶದ ದೀರ್ಘ ಹಿತದೃಷ್ಟಿಯಿಂದ ಅರಣ್ಯ ಸಂಪತ್ತಿನ ಸೂರೆಯನ್ನು ಹಿಡಿತದಲ್ಲಿಡಬೇಕು. ಅವರೂ, ವಿದ್ಯಾವಂತರೂ ಜನರಲ್ಲಿ ಈ ವಿಷಯ ಪ್ರಚಾರ ಮಾಡಿ, ಚಿನ್ನದ ಮೊಟ್ಟೆಯಿಡುವ ಕೋಳಿಯು ಅನಂತಕಾಲ ಬದುಕುವಂತೆ ಮಾಡಬೇಕು. ಹಾಗಲ್ಲವಿದ್ದರೆ ಜನಸಂಖ್ಯೆಯು ವಿಪರೀತವಾಗಿ, ಹಿಡಿತವಿಲ್ಲದೆ ಏರುತ್ತಿರುವ ನಮ್ಮ ದೇಶದ ಮುಂದಿನ ಪೀಳಿಗೆಯವರಿಗೆ ಆಹಾರವೂ ದೊರೆಯಲಾರದು, ನೀರೂ ಸಿಗಲಾರದು.

---

**ಕರಾಚಿಯಲ್ಲಿ**

# ನೆಹರೂ-ಲಿಯಾಖತ್ ಭೇಟಿ

ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು, ಪಾಕಿಸ್ತಾನದ ಮುಖ್ಯ ಮಂತ್ರಿ ಮಿ. ಲಿಯಾಖತ್ ಆಲಿ ಖಾನರೂ ತಾ. ೨೬, ೨೭ರಲ್ಲಿ ಕರಾಚಿಯಲ್ಲಿ ಕೂಡಿ ಕಾಶ್ಮೀರ, ನಿರಾಶ್ರಿತರ ಆಸ್ತಿ, ಕಾಲುವೆಗಳ ನೀರು ಮೊದಲಾದ ಸಮಸ್ಯೆಗಳ ವಿಚಾರದಲ್ಲಿ ಸುದೀರ್ಘ ಚರ್ಚೆ ನಡೆಸಿದ್ದರಲ್ಲದೆ ಡಿಲ್ಲಿ ಒಪ್ಪಂದವನ್ನು ಕಾರ್ಯಕಾರಿಮಾಡುವುದರಲ್ಲಿ ಆದ ಪ್ರಗತಿ ಬಗ್ಗೆ ಸಂತೋಷ ವ್ಯಕ್ತಮಾಡಿದರಂತೆ. ಈ ಮಾತುಗಳಲ್ಲಿ ಯಾವುದೇ ನಿರ್ಣಯಗಳಾಗಿರುವುದಿಲ್ಲವಾದರೂ ಉಭಯ ಮುಖ್ಯ ಮಂತ್ರಿಗಳು ಆಗಾಗ ಭೇಟಿಯಾಗಲು ನಿರ್ಣಯಿಸಿರುವರೆಂದು ಸಂಯುಕ್ತ ಪ್ರಕಟಣೆಯಿಂದ ತಿಳಿಯುತ್ತದೆ. ಮುಖ್ಯ ಮಂತ್ರಿ ಪಂಡಿತ ನೆಹರುಗಳು ತಾ. ೨೮ರಲ್ಲಿ ಡೆಲ್ಲಿಗೆ ವಾಪಾಸು ಬಂದರು.

ತಾ. ೨೭ರಲ್ಲಿ ಭಾರತ ಮತ್ತು ಪಾಕಿಸ್ಥಾನಗಳ ಮುಖ್ಯ ಮಂತ್ರಿಗಳು ಬೆಳಿಗ್ಗೆ ೧೦-೩೦ ಗಂಟೆಗೆ, ಗವರ್ನರ್ ಜನರಲ್ಲರ ನಿವಾಸದಲ್ಲಿ ಮಾತುಕತೆ ನಡೆಸಿದರು. ಈ ಮಾತುಕತೆಗಳು ಮಧ್ಯಾಹ್ನ ಒಂದು ಗಂಟೆಗೆ ಕೆಲವು ನಿಮಿಷಗಳಿರುವತನಕ ನಡೆಯಿತು. ಅಲ್ಪ ಸಂಖ್ಯಾತರ ರಕ್ಷಣೆಯ ವಿಷಯದಲ್ಲಿ ಡಿಲ್ಲಿಯಲ್ಲಿ ನಡೆದ ಒಪ್ಪಂದದ ಶರ್ತಗಳನ್ನು ಕಾರ್ಯಕಾರಿ ಮಾಡುವ ವಿಷಯದಲ್ಲಿ ಮುಖ್ಯ ಮಂತ್ರಿಗಳು ಚರ್ಚೆ ನಡೆಸಿದರೆಂದೂ, ಒಪ್ಪಂದದಿಂದ ಉಂಟಾದ ಪರಿಣಾಮ ಪ್ರತಿಕ್ರಿಯೆಗಳ ವಿಷಯದಲ್ಲೂ ಅವರು ಮಾತುಕತೆ ನಡೆಸಿದರೆಂದೂ ಹೇಳಲಾಗಿದೆ. ಒಪ್ಪಂದದಿಂದ ಬಂಗಾಳದಲ್ಲಿ ಉಂಟಾಗಿರುವ ಪರಿಸ್ಥಿತಿಯ ಕುರಿತೂ ಅವರು ಮಾತನಾಡಿದರು.

ಬೆಳಗ್ಗಿನ ಸಮಯದಲ್ಲಿ ಮುಖ್ಯಮಂತ್ರಿ ಪಂಡಿತ ನೆಹರುಗಳು ಶ್ರೀಮತಿ ಇಂದಿರಾ ಗಾಂಧಿ, ಮತ್ತು ಶ್ರೀಯುತ ಫಿರೋಜ್ ಗಾಂಧಿಯವರೊಡಗೂಡಿ ಕುಮಾರಿ ಫಾತಿಮಾ ಜಿನ್ನಾರವರಿಗೆ ಸೌಹಾರ್ದದ ಭೇಟಿಕೊಟ್ಟು ಅವರೊಡನೆ ೩೫ ನಿಮಿಷಗಳ ವರೆಗಿದ್ದರು.

ಅನಂತರ ಶ್ರೀ ಮತ್ತು ಶ್ರೀಮತಿ ಗಾಂಧಿಯವರು [illegible] ಮುಸ್ಲಿಂ ಲೀಗಿನ ಅಧ್ಯಕ್ಷರಾದ ಚೌಧುರಿ ಖಾಲಿಕುಸ್ಸಮಾನರನ್ನು ಭೇಟಿಯಾದರು. ಪಾಕಿಸ್ಥಾನದ ಸರಕಾರದ ಪರವಾಗಿ ಪಂಡಿತ ನೆಹರುಗಳಿಗೆ ಒಂದು ಸ್ವಾಗತ ಸಮಾರಂಭವನ್ನೇರ್ಪಡಿಸಿದ್ದು ರಾತ್ರಿ ಸಮಯದಲ್ಲಿ ಪಾಕಿಸ್ತಾನದ ಮುಖ್ಯ ಮಂತ್ರಿಗಳು ಪಂಡಿತ ನೆಹರುಗಳಿಗೆ ಗೌರವಾರ್ಥವಾಗಿ ಒಂದು ಭೋಜನ ಸತ್ಕಾರವನ್ನು ಏರ್ಪಡಿಸಿದರು. ಈ ಸಮಾರಂಭದಲ್ಲಿ ಇಬ್ಬರೂ ಮುಖ್ಯ ಮಂತ್ರಿಗಳ ಪರಸ್ಪರ ಭಾಷಣಗಳನ್ನು ಮಾಡಿದರು.

ತಾ. ೨೮ರಲ್ಲಿ ಮುಖ್ಯ ಮಂತ್ರಿಗಳಿಬ್ಬರೂ ಎರಡು ಗಂಟೆಗಳ ತನಕ ಮಾತುಕತೆ ನಡೆಸಿದ್ದು ನೆಹರುಗಳು ಗವರ್ನರ್ ಜನರಲ್ಲರನ್ನು ಭೇಟಿಯಾಗಿದ್ದರು.

ತಾ. ೨೮ರಲ್ಲಿ ರಾತ್ರಿ ಸಮಯದಲ್ಲಿ ಪಾಕಿಸ್ತಾನದ ಗವರ್ನರ್ ಜನರಲ್ಲರಾದ ಖ್ವಾಜಾ ನಾಜೀಮುದ್ದೀನರು ಪಂಡಿತ ನೆಹರುಗಳ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಕೊಟ್ಟಾಗ ಸುಮಾರು ನೂರಕ್ಕಿಂತಲೂ ಹೆಚ್ಚಿನ ಆಮಂತ್ರಿತರು ಹಾಜರಿದ್ದರು. ಅನಂತರ ಮುಖ್ಯ ಮಂತ್ರಿಗಳಿಬ್ಬರೂ ಸರಕಾರಿ ಭವನದಲ್ಲಿ ಒಂದು ಚಲಚಿತ್ರವನ್ನು ನೋಡಿದರು. ಈ ಚಿತ್ರದಲ್ಲಿ ಪರ್ಶಿಯಾದ ಶಹಾರವರು ಪಾಕಿಸ್ತಾನಕ್ಕೆ ಸಂದರ್ಶನವಿತ್ತ ಮತ್ತು ಪಾಕಿಸ್ತಾನದ ಹಲವು ವಿಷಯಗಳು ಚಿತ್ರಿತವಾಗಿದ್ದುವು.

## ಸಂಯುಕ್ತ ಪ್ರಕಟನೆ

ಪಂಡಿತ ಜವಾಹರಲಾಲ ನೆಹರು ಮತ್ತು ಲಿಯಾಖತ್ ಆಲಿಖಾನರುಗಳ ನಡುವೆ ಕರಾಚಿಯಲ್ಲಿ ಕಳೆದ ಎರಡು ದಿನ ನಡೆದ ಮಾತುಕತೆಗಳಲ್ಲಿ ಭಾರತ-ಪಾಕಿಸ್ತಾನಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳು ಚರ್ಚಿಸಲ್ಪಟ್ಟವೆಯೆಂದು ಎರಡೂ ರಾಜಧಾನಿಗಳಿಂದ ಹೊರಟ ಸಂಯುಕ್ತ ಅಧಿಕೃತ ಪ್ರಕಟನೆಯಿಂದ ತಿಳಿಯುತ್ತದೆ.

ಮುಖ್ಯ ಮಂತ್ರಿ ದ್ವಯರು ಯಾವುದೇ ನಿರ್ಣಯಕ್ಕೆ ಬಾರದಿದ್ದರೂ ಚರ್ಚೆಗಳು ಬಿಚ್ಚುಮನಸ್ಸು ಮತ್ತು ಸೌಹಾರ್ದದಿಂದ ನಡೆಯಿತು.

ಉಭಯ ಮುಖ್ಯ ಮಂತ್ರಿಗಳು ಡೆಲ್ಲಿಯಲ್ಲಿ ಆದ ಅಲ್ಪ ಸಂಖ್ಯಾತರ ರಕ್ಷಣೆಯ ಒಪ್ಪಂದದ ವಿಷಯಗಳನ್ನು ವಿಮರ್ಶಿಸಿ ಒಪ್ಪಂದವನ್ನು ಕಾರ್ಯಕಾರಿ ಮಾಡುವುದಲ್ಲಿ ನಡೆದ ಪ್ರಗತಿಯ ಬಗ್ಗೆ ಸಂತೋಷ ವ್ಯಕ್ತ ಮಾಡಿದರು. ಈಗಾಗಲೇ ಎರಡು ರಾಷ್ಟ್ರಗಳಿಂದ ಹೊರಹೋಗುವ ನಿರಾಶ್ರಿತರ ಸಂಖ್ಯೆ ಕಡಿಮೆಯಾಗಿದ್ದು ಈಗಾಗಲೇ ಹೊರಟು ಹೋಗಿರುವವರೂ ಮರಂದೆ ಹಿಂತಿರುಗಲೆಂದು ಹಾರೈಸಲಾಗಿದೆ.

ಮುಖ್ಯ ಮಂತ್ರಿಗಳು ಈ ಮಾತುಕತೆಗಳಲ್ಲಿ ಕಾಶ್ಮೀರ, ನಿರಾಶ್ರಿತರ ಆಸ್ತಿಪಾಸ್ತಿ, ಕಾಲುವೆಗಳ ನೀರಿನ ಸಮಸ್ಯೆ ಮೊದಲಾದವುಗಳು ಚರ್ಚಿಸಲ್ಪಟ್ಟು ಯಾವುದೇ ನಿರ್ಣಯಕ್ಕೆ ಬಾರದಿದ್ದರೂ ಚರ್ಚೆಯು ಬಿಚ್ಚು ಮನಸ್ಸಿನಿಂದ ನಡೆಯಿತು.

ಹೀಗೆ ಮುಖ್ಯ ಮಂತ್ರಿಗಳು ಪರಸ್ಪರ ಭೇಟಿಯಾಗುವುದರಿಂದ ಉಭಯ ರಾಷ್ಟ್ರಗಳ ನಡುವೆ ತಿಳುವಳಿಕೆ ಉಂಟಾಗಿ ಎರಡೂ ರಾಷ್ಟ್ರಗಳಲ್ಲಿ ಸ್ನೇಹ ವೃದ್ಧಿಯಾಗಲಿವೆ. ಮುಂದಾದರೂ ಇದೇ ರೀತಿ ಇಬ್ಬರೂ ಭೇಟಿಯಾಗುವ ನಿರ್ಣಯವಾಗಲಿದೆ.

ಮುಖ್ಯ ಮಂತ್ರಿ ಪಂಡಿತ ನೆಹರುಗಳು ತಾ. ೨೮ರ ಬೆಳಿಗ್ಗೆ ೧೧-೩೦ ಗಂಟೆಗೆ ಕರಾಚಿಯಿಂದ ಡಿಲ್ಲಿಗೆ ಹಿಂತಿರುಗಿದರು.

ವಿಮಾನ ನಿಲ್ದಾಣದಲ್ಲಿ ಅವರನ್ನು ಎದುರುಗೊಳ್ಳಲು ಉಪ ಮುಖ್ಯ ಸರದಾರ ಪಟೇಲ, ಸಾರಿಗೆ ಮಂತ್ರಿ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್, ಬ್ರಿಟಿಷ್ ಹೈಕಮಿಷನರರ ಪತ್ನಿ ಲೇಡಿ ನೈ ಮೊದಲಾದವರಿದ್ದರು.

---

# ಚಂದ್ರಲೋಕಕ್ಕೆ ಪ್ರಯಾಣ

**—ಅಮೇರಿಕನರು ಸಿದ್ಧತೆಯಲ್ಲಿದ್ದಾರೆ—**

ಭೂಲೋಕದ ಜನರು ಆಕಾಶದಲ್ಲಿಹಾರಾಡುವ ವಿಮಾನಗಳನ್ನು ಕಂಡುಹಿಡಿದ ತರುವಾಯ ಭೂಮಿಯನ್ನು ಬಿಟ್ಟು ಮೇಲೆ ಹಾರುವ ಹಾಗೂ ಹೆಚ್ಚೆಚ್ಚು ವೇಗದಿಂದ ಓಡುವ ವಿಮಾನಗಳನ್ನು ನಿರ್ಮಿಸುವ ಪ್ರಯತ್ನದಲ್ಲಿ ತೊಡಗಿದರು. ವಿಜ್ಞಾನದ ಸಹಾಯದಿಂದ ಈ ಪ್ರಯತ್ನಗಳೆಲ್ಲಾ ಯಶಸ್ವಿಯಾಗುತ್ತಾ ಬಂದಿವೆ. ಎಲ್ಲಿಯೂ ನಿಲ್ಲದೆ ಜಗತ್ತಿನ ಸುತ್ತ ಒಂದು ಸುತ್ತು ಹಾರಾಡಿದ ದೊಡ್ಡ ವಿಮಾನಗಳೂ, ಶಬ್ದಕ್ಕಿಂತ ವೇಗವಾಗಿ ಹಾರುವ ಪ್ರಚಂಡ ವಾಯು ವಿಮಾನಗಳೂ ನಿರ್ಮಿಸಲ್ಪಟ್ಟಿವೆ. ಈ ಸುಧಾರಣೆಗಳ ನಂತರ ಭೂಲೋಕವನ್ನು ಬಿಟ್ಟು ಇತರ ಲೋಕಗಳಿಗೂ, ನಕ್ಷತ್ರಗಳಿಗೂ ಹಾರುವ ಮಹಾ ಸಾಹಸಗಳ ಸಿದ್ಧತೆ ನಡೆಯುತ್ತಿದೆ.

ಮೊಟ್ಟ ಮೊದಲಾಗಿ ಅಂದರೆ ಸುಮಾರು ೧೬ ವರ್ಷಗಳ ಹಿಂದೆ ಪ್ರೊಫೆಸರ್ ಆಗಸ್ಟ ಪಿಕಾರ್ಡ್ ಎಂಬವನು ಒಂದು ದೊಡ್ಡ ಯಾನದಲ್ಲಿ ಕುಳಿತು ಹತ್ತು ಮೈಲುಗಳಷ್ಟು ಎತ್ತರದ ವರೆಗೆ ಆಕಾಶಕ್ಕೆ ಏರಿದನು. ಅಂದಿನಿಂದ ಚಂದ್ರಲೋಕಕ್ಕೆ ಹಾರಬಹುದು, ಇನ್ನೂ ಪ್ರಬಲವಾದ ಯಂತ್ರಗಳ ಮೂಲಕ ಅದು ಸಾಧ್ಯವೆಂಬ ಭಾವನೆ ಎಲ್ಲೆಲ್ಲೂ ಮೂಡಿದೆ.

ಕಳೆದ ಮಹಾಯುದ್ಧಾಂತ್ಯದಲ್ಲಿ ಜರ್ಮನರು ಬ್ರಿಟನಿನ ಮೇಲೆ ಹಾರುವ ಬಾಂಬು ಅಥವಾ "ರಾಕೆಟ್"ಗಳನ್ನು ಪ್ರಯೋಗಿಸಿದರು. ಈಗ ರಷ್ಯ, ಅಮೇರಿಕ ಮೊದಲಾದ ಪ್ರಬಲ ರಾಷ್ಟ್ರಗಳು ಈ "ರಾಕೆಟ್"ಗಳ ತಯಾರಿಕೆಯಲ್ಲಿ ಬಹಳ [illegible] ಮುಸ್ತ್ರ[illegible]ವುಗಳ ಮೂಲಕ ಚಂದ್ರಲೋಕಕ್ಕೆ ಪ್ರಯಾಣ ಮಾಡುವುದು ಸಾಧ್ಯವಿದೆಯೆಂಬುದನ್ನು ತಿಳಿದಿರುವವು. ಪ್ರೊಫೆಸರ್ ಪಿಕಾರ್ಡರವರು ಈ ಮಹಾ ಸಾಹಸದ ವಿಚಾರವಾಗಿ ಅನೇಕ ಶೋಧಗಳನ್ನು ನಡೆಸಿ ಸುಮಾರು ೪೪೦ ರಾತ್ತಲ ಭಾರದಷ್ಟು ಪ್ರಾಣವಾಯುವನ್ನು ದ್ರವರೂಪದಲ್ಲಿ ತುಂಬಿಸಿದ ಎಲ್ಯುಮಿನಿಯಂ ಲೋಹದ ವಿಮಾನ ಚಂದ್ರಲೋಕದ ವರೆಗೆ ಪ್ರಯಾಣ ಮಾಡಿ ಹಿಂತಿರುಗಬಹುದೆಂದು ಹೇಳಿದ್ದಾರೆ.

ಬ್ರಿಟಿಷ್ ಖಗೋಲ ಶಾಸ್ತ್ರಜ್ಞರ ಸಂಘದ ಅಧ್ಯಕ್ಷರಾದ ಡಾ|| ಜ. ಜೆ ಪೋರ್ಟರ್‌ರವರು ಚಂದ್ರಲೋಕದ ಪ್ರಯಾಣದ ವಿಷಯವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಈಗಿನ 'ರಾಕೆಟ್'ಗಳ ಮೂಲಕ ಚಂದ್ರಲೋಕಕ್ಕೆ ಹೋಗುವುದು ಸಾಧ್ಯವಿದೆ ಎಂದಿರುವರು. ಆಕಾಶದಲ್ಲಿ ಉಲ್ಕಾಪಾತಗಳಾಗುವಂತೆಯೇ ಈ "ರಾಕೆಟ್"ಗಳ ಚಲನೆಯಿರಬೇಕೆಂಬುದನ್ನು ಅವರು ಸೂಚಿಸಿದ್ದಾರೆ.

ಹೀಗೆ ಚಂದ್ರಲೋಕಕ್ಕೆ ಪ್ರಯಾಣ ಮಾಡುವ ಸಾಹಸದಲ್ಲಿ ಅನೇಕ ಪ್ರಯತ್ನಗಳೂ ಚರ್ಚೆಗಳೂ ಬ್ರಿಟನ್ನಿನಲ್ಲಿ ನಡೆಯುತ್ತಿರುವಾಗ ಅಮೇರಿಕದ ಜನರು ಚಂದ್ರ ಹಾಗೂ ಇತರ ಗ್ರಹಗಳಿಗೆ ಹೋಗುವರೆ ಬಹಳ ಉತ್ಸಾಹದಿಂದಿರುವರು. ಅಮೇರಿಕನರ ಅಂದಾಜಿನಲ್ಲಿ ಕೇವಲ ೧೬ ಗಂಟೆಗಳಲ್ಲೇ ಚಂದ್ರಲೋಕಕ್ಕೆ ತಲಪಬಹುದಂತೆ. ಇನ್ನು ಶನಿ, ಮಂಗಳ ಮುಂತಾದ ಗ್ರಹಗಳಿಗೂ ೨೫,೦೦೦ ಮೈಲುಗಳಷ್ಟು ವೇಗದಿಂದ ಹಾರಾಡಬಹುದೆಂದೂ ಅವರ ಅಭಿಪ್ರಾಯವಿದೆ. ಈ ಸಾಹಸಮಯ ಪ್ರಯಾಣ ಸಾಧ್ಯವಾದಲ್ಲಿ ದಿವಸಕ್ಕೆ ೨೦೦ ಮಂದಿಯಂತೆ ಅಮೇರಿಕನರು ಅಲ್ಲಿಗೆ ಹೋಗಬಹುದಂತೆ!

"ನ. ಭಾ."

---


**ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,**

**ಫ್ರೇಜರ್ ಪೇಟೆ.**

**ಬೇಕಾಗಿದ್ದಾರೆ.**

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 30-9-1?

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

# ಹಿಂದೂಸ್ಥಾನದ ಮುಖ್ಯ ಸೇನಾಧಿಪತಿಗಳಾದ ಜನರಲ್ ಕಾರ್ಯಪ್ಪನವರು ಕೊಡಗಿನ ಮಾಜಿ ಸಿಪಾಯಿಗಳನ್ನು ಕುರಿತು ತಾರೀಕು ೨೯—೪—೫೦ರಲ್ಲಿ ಮಡಿಕೇರಿಯಲ್ಲಿ ಮಾಡಿದ ಭಾಷಣದ ಸಾರಾಂಶ.

ನಿಮ್ಮ ಸಂಘದ ಅಧ್ಯಕ್ಷರು ಓದಿದ ಮಾನಪತ್ರಿಕೆಯನ್ನು ಕೇಳಿ ನಾನು ತುಂಬಾ ಕೃತಜ್ಞನಾಗಿದ್ದೇನೆ. ಹಿಂದೊಮ್ಮೆ ನಾನು ಬಂದು ಹೋದ ಮೇಲೆ ನೀವು ವಿವಿಧ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರೆಂಬುದಾಗಿ ಅವರು ಓದಿದುದನ್ನು ತಿಳಿದು ತುಂಬಾ ಆನಂದವಾಯಿತು. ಒಮ್ಮೆಗೇ ಹಲವಾರು ಕಾರ್ಯಗಳನ್ನು ತೊಡಗಿ ಅರ್ಧಮಾಡಿ ಬಿಡುವುದಕ್ಕಿಂತ ಒಂದನ್ನೇ ಪೂರ್ತಿಗೊಳಿಸುವುದು ಮೇಲು. ನಾನು ನಿಮ್ಮ ಮಾಜಿ ಸಿಪಾಯಿಗಳನ್ನು ಸಂದರ್ಶಿಸಿ ಬೋಧನೆಗಳನ್ನು ಕೊಡುತ್ತಿದ್ದೇನೆ. ಇತರ ಪ್ರಾಂತ್ಯಗಳಲ್ಲಿ ಮಾಜಿ ಸಿಪಾಯಿಗಳು ತೋರಿಸುವ ಉತ್ಸಾಹ ಮತ್ತು ಒಗ್ಗಟ್ಟು ತುಂಬಾ ಪ್ರಶಂಸನೀಯವಾಗಿದೆ. ನೀವೂ ಕೂಡ ಸೈನ್ಯದಲ್ಲಿ ಉತ್ತಮವಾದ ಪಾಠಗಳನ್ನು ಕಲಿತಿದ್ದೀರಿ. ಯುವಕರಾಗಿದ್ದೀರಿ. ಇಂಥ ಶುಭ್ರವಾದ ಗುಣಗಳಿಂದ ತೇಜಸ್ವಿಗಳಾಗಿ ತೋರುವ ಮಾಜಿ ಸಿಪಾಯಿಗಳ ಗುಂಪು ಅಪರೂಪ. ಇದು ಕೊಡಗಿನ ಸ್ವಾಭಾವಿಕ ಗುಣ. ಆದುದರಿಂದಲೇ ಸರ್ದಾರ್ ವಲ್ಲಭಾಯಿ ಪಟೇಲರು ಪಾರ್ಲಿಮೆಂಟಿನಲ್ಲಿ ಕೊಡಗು 'ರಾಮರಾಜ್ಯ'ವೆಂಬುದಾಗಿ ಹೇಳಿದರು. ಇದನ್ನು ಕೆಲವರು ಅಪಹಾಸ್ಯದ ಮಾತೆಂದು ತಿಳಿದುಕೊಂಡಿದ್ದರು. ಆದರೆ ಈ ಬಗ್ಗೆ ನಾನು ಸರ್ದಾರ್ ಪಟೇಲರ ಅಭಿಪ್ರಾಯವನ್ನು ಕೇಳಿದಾಗ ತಾನು ಹೇಳಿದ ಮಾತು ಅಕ್ಷರಶಃ ನಿಜವೆಂಬುದಾಗಿ ಹೇಳಿದರು. ಕೆಲವರು ಕೊಡಗಿನವರಿಗೆ ಕತ್ತಿ, ಕೋವಿಗಳನ್ನು ನಿರ್ಬಂಧವಿಲ್ಲದೆ ಧರಿಸುವ ರಿಯಾಯಿತಿಯನ್ನು ಕೊಟ್ಟಿದ್ದೀರಿ, ಇತರ ಪ್ರಾಂತ್ಯಗಳಿಗೆ ಏಕೆ ಆ ರಿಯಾಯಿತಿ ಇಲ್ಲವೆಂದು ಸರ್ದಾರರನ್ನು ಕೇಳಿದಾಗ ಅದಕ್ಕೆ ಉತ್ತರವಾಗಿ ಕೊಡಗಿನಲ್ಲಿ ಕತ್ತಿ ಕೋವಿಗಳನ್ನು ಉಪಯೋಗಿಸುವ ರೀತಿ ನೀತಿಗಳು ವಿಶೇಷವಾಗಿವೆ. ಕೋವಿಯನ್ನು [illegible] ರು ದುರುಪಯೋಗಪಡಿಸುವುದಿಲ್ಲ. ಇತರ ಪ್ರಾಂತ್ಯಗಳು ಆ ರೀತಿ ನಡೆಯುವುದಾದರೆ ಇಡೀ ಹಿಂದೂಸ್ಥಾನವೇ ಉಂಗುಷ್ಠದಿಂದ ಶಿಸ್ಸಿನ ವರೆಗೂ ಆಯುಧ ಧರಿಸಲು ನನ್ನ ಆಕ್ಷೇಪವಿಲ್ಲವೆಂದು ಹೇಳಿದರು.

ನಿಮಗೆ ನಾನು ಕೆಲವು ಬೋಧನೆಗಳನ್ನು ಹೇಳಬೇಕೆಂದು ನಿಮ್ಮ ಅಧ್ಯಕ್ಷರು ಕೋರಿರುತ್ತಾರೆ.

ಮೊದಲನೆಯದಾಗಿ ನೀವು ಹೆಚ್ಚಿಗೆ ಕೆಲಸ ಮಾಡುವುದನ್ನು ಕಲಿಯಿರಿ. ಮಾತನ್ನು ಅಥವ ಬರವಣಿಗೆಯನ್ನು ಕಡಿಮೆ ಮಾಡಿ. ಭಾಷಣಗಳೂ, ಮೀಟಿಂಗುಗಳೂ ಅನಾವಶ್ಯಕವಾಗಿ ಸಮಯವನ್ನೂ ಹಣವನ್ನೂ ಹಾಳುಮಾಡುತ್ತವೆ.

ಎರಡನೆಯದಾಗಿ, ನೀವು ಯಾವುದೇ ಸಂಸ್ಥೆ ಅಥವ ಸಂಘವನ್ನು ಮಾಡಿಕೊಂಡರೆ ಅದನ್ನು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ನಡೆಸಿರಿ. ಉದಾಹರಣೆಗೆ ನಿಮ್ಮ ಮೋಟಾರು ಕಂಪೆನಿಯೊಂದು ಪ್ರಾರಂಭವಾದಲ್ಲಿ ಮಡಿಕೇರಿಯಿಂದ ಬೆಂಗಳೂರು ತನಕ ಬಸ್ಸು ಸರ್ವಿಸ್ ನಡೆಸುವುದಾದರೆ, ಅದಕ್ಕೆ ತಕ್ಕ ವ್ಯವಸ್ಥೆ, ಸರಿಯಾದ ನೌಕರರು, ಪ್ರಯಾಣಿಕರ ಸೌಕರ್ಯ, ಕೆಲಸಗಾರರಲ್ಲಿ ಪ್ರಾಮಾಣಿಕತೆಯನ್ನು ಸಾಧಿಸಿ ಪೆಟ್ರೋಲ್ ದುರುಪಯೋಗ ಮೊದಲಾದ ದೋಷಗಳು ಬಾರದಂತೆ ಎಲ್ಲರಿಗೂ ಮಾದರಿಯಾಗಿರುವಂತೆ ಕಾರ್ಯ ನಡೆಸಬೇಕು.

ಮೂರನೆಯದಾಗಿ, ನೀವು ನಿಮ್ಮ ಸರಕಾರವನ್ನು ಪ್ರತಿಭಟಿಸುವುದಾಗಲೀ ಅಥವಾ ಅವಿಧೇಯತೆ, ಅಸಂತುಷ್ಟಿಗಳನ್ನು ತೋರಿಸುತ್ತಾ ಸರಕಾರದವರಿಗೆ ಅನೇಕ ಸಂಕಷ್ಟಗಳನ್ನು ಒದಗಿಸುವುದಾಗಲೀ ಮಾಡಬೇಡಿ. ಸರಕಾರದೊಡನೆ ಸಹಕರಿಸಿ ನಡೆದರೆ ನಿಮಗೆ ಅದರಿಂದ ತುಂಬಾ ಪ್ರಯೋಜನವಿದೆ. ಅವರು ನಿಮಗೆ ಕೊಡುವ ರಿಯಾಯಿತಿಗಳನ್ನು ತೆಗೆದುಕೊಳ್ಳಿ. 'ಇದು ನನಗೆ ಸಾಲದು. ಇದೇ ಜಾಗ ನನಗೆ ದೊರಕಬೇಕು' ಎಂದು ಹಟಹಿಡಿಯಬೇಡಿ. ಅನೇಕ ಕಾರಣಗಳಿಂದ ಕೆಲವು ಜಾಗಗಳನ್ನು ಸರಕಾರದವರು ಮಂಜೂರುಮಾಡದೆ ಸಾರ್ವಜನಿಕ ಪ್ರಯೋಜನಕ್ಕಾಗಿ ಇಟ್ಟಿರಬಹುದು. ನೀವು ತರ್ಕಮಾಡುತ್ತ ಕುಳಿತರೆ ಕೆಲಸ ಕೆಡಬಹುದು. ನಿಮ್ಮ ವರ್ತನೆಯು ಅವಿಧೇಯತೆಯೆಂದು ತೋರುವ ಸಂಭವವಿದೆ. ಆ ವಿಷಯದಲ್ಲಿ ನಾನೂ ಕೂಡ ತುಂಬಾ ಕಠಿಣನಾಗಿರುತ್ತೇನೆ. ಅವಿಧೇಯನಾದ ಮಾಜಿ ಸಿಪಾಯಿಯು ನನ್ನ ಸಹಾಯವನ್ನು ಎಂದೂ ಹೊಂದಲಾರ. ಕೆಲಸದ ವಿಚಾರದಲ್ಲೂ ಕೂಡ ಎಲ್ಲರಿಗೂ ಒಮ್ಮೆಗೇ ಖಾಯಂ ಕೆಲಸ ಅಥವಾ ದೊಡ್ಡ ಹುದ್ದೆ ಸಿಕ್ಕುತ್ತದೆಂಬ ಭರವಸೆ ಇಲ್ಲ. ಎರಡು ತಿಂಗಳೋ ನಾಲ್ಕು ತಿಂಗಳೊ, ಖಾಲಿ ಇದ್ದ ಜಾಗದಲ್ಲಿ ನಿಮ್ಮನ್ನು ನೇಮಿಸಿದಾಗ ಅದನ್ನು ಸ್ವೀಕರಿಸಿ ದಕ್ಷತೆಯಿಂದ ಕೆಲಸ ಮಾಡಿ ಮೆಚ್ಚುಗೆಯನ್ನು ಪಡೆದು ಖಾಯಂ ಕೆಲಸ ಸಿಕ್ಕುವಂತೆ ಮಾಡಿಕೊಳ್ಳುವ ರೀತಿ ನಿಮ್ಮದು. ನಿಮ್ಮನ್ನು ನೀವೇ ಎತ್ತಿ ಹಿಡಿಯ ಬೇಕು. ಆಗ ಎಲ್ಲರ ಸಹಾಯವೂ ದೊರಕುತ್ತದೆ. ಸೈನ್ಯದ ಶಿಕ್ಷಣವೇ ಇದೆ. ಕೊಡಗಿನಲ್ಲಿರುವ ಮಾಜಿ ಸಿಪಾಯಿಗಳು ಪುಣ್ಯಶಾಲಿಗಳು. ಈ ದಿನ ನಿಮ್ಮ ಎಂಪ್ಲಾಯಿಮೆಂಟ್ ಆಫೀಸರನ್ನು ನಾನು ಕೇಳಿದಾಗ ಅವರು ಈ ವರೆಗೆ ಶೇಕಡ ೫೦ ರಷ್ಟು ಮಾಜಿ ಸಿಪಾಯಿಗಳು ಉದ್ಯೋಗ ಭೂಮಿ ಇತ್ಯಾದಿ ರಿಯಾಯಿತಿಗಳನ್ನು ಪಡೆದಿದ್ದಾರೆ. ಸಂದರ್ಭಾನುಸಾರವಾಗಿ ಎಲ್ಲರಿಗೂ ಅವರವರಿಗೆ ತಕ್ಕಂತೆ ರಿಯಾಯಿತಿಗಳು ದೊರಕುವಂತೆ ಮುತುವರ್ಜಿ ವಹಿಸಲಾಗಿದೆಯೆಂದು ಹೇಳಿದರು. ಇದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಅವರು ಮಾಡಿರುವ ಕೆಲಸ ಶ್ಲಾಘನೀಯವಾಗಿದೆ. ಪ್ರತಿಯೊಬ್ಬನೂ ತನ್ನ ಯೋಗ್ಯತೆಗೆ ಸರಿಯಾದ ರಿಯಾಯಿತಿಗಳನ್ನು ಪಡೆಕೊಳ್ಳಬೇಕೇ ಹೊರತು ಚಟ್ಟಾಕಾರದ ಪದಾರ್ಥವು ಉರುಟಾದ ತೂತಿನಲ್ಲಿ ನುಗ್ಗಲಾರದೆಂಬ ಅಂಶವನ್ನು ಗ್ರಹಿಸಬೇಕು.

ಮಾಜಿ ಸಿಪಾಯಿಗಳಿಗಾಗಿ ಮಡಿಕೇರಿಯಲ್ಲಿ ಕಟ್ಟಿರುವ ವಿಹಾರ ಮಂದಿರವನ್ನು ಈಗ ನಿಮ್ಮ ವಶಕ್ಕೆ ಕೊಡಲಾಗಿದೆಯೆಂದು ತಿಳಿದು ತುಂಬಾ ಸಂತೋಷವಾಯಿತು. ಅದಕ್ಕೆ ಬೇಕಾಗುವ ಕುರ್ಚಿ ಮೇಜುಗಳಿಗಾಗಿ ಚೀಫ್ ಕಮಿಷನರ್ ಸಾಹೇಬರು ತಕ್ಕ ಹಣವನ್ನು ಮಂಜೂರುಮಾಡುವ ಭರವಸೆ ನನಗಿದೆ. ನೀವು ಮಾತ್ರ ಅದನ್ನು ಉತ್ತಮವಾಗಿ ನಡೆಸಬೇಕಾಗಿದೆ. ಒಂದು ಕ್ಯಾಂಟೀನ್, ಆಟದ ಸಾಹಿತ್ಯಗಳು, ಕೆಲವು ವೃತ್ತಪತ್ರಿಕೆಗಳು, ಒಂದು ಕೊಠಡಿಯನ್ನು ಯಾರಾದರೂ ಮಾಜಿ ಸಿಪಾಯಿಯು ಬಂದರೆ ತಂಗುವುದಕ್ಕಾಗಿ ಅನುಕೂಲತೆ, ಮೊದಲಾದ ಉಚಿತ ರೀತಿಯಲ್ಲಿ ಈ ಕಟ್ಟಡವನ್ನು ಇಟ್ಟುಕೊಳ್ಳುವ ಜವಾಬ್ದಾರಿ ನಿಮ್ಮದಾಗಿದೆ. ವೀರರಾಜಪೇಟೆಯಲ್ಲಿ ಕೂಡ ಇಂಥಾ ಒಂದು ಕಟ್ಟಡವನ್ನು ನೀವು ಹಾರೈಸಿದ್ದೀರಿ. ಆದರೆ ಒಮ್ಮೆಗೇ ಎಲ್ಲವನ್ನೂ ಬಯಸಬೇಡಿ. ಈಗ ಕೊಟ್ಟಿರುವ ಕಟ್ಟಡವನ್ನು ಸೂಕ್ತವಾಗಿ ಉಪಯೋಗಿಸಿದ ನಂತರ ಇನ್ನೊಂದು ಕಟ್ಟಡದ ಯೋಚನೆ ಮಾಡಿ.

ಅನಾವಶ್ಯಕವಾಗಿ ಹಣವನ್ನು ವ್ಯಯಮಾಡುವ ರೀತಿ ತಪ್ಪು. ಮದುವೆಗಳಿಗಾಗಿ ಅನೇಕ ರೀತಿಯ ದುರ್ವ್ಯಯವಾಗುತ್ತಿದೆ. ಸಾಲಮಾಡಿ ಮಾಡುವ ಮದುವೆಯಿಂದ ಸುಖವಿಲ್ಲ. ಆದಷ್ಟು ಕಮ್ಮಿ ಖರ್ಚಿನಲ್ಲಿ ಸಂತೋಷದಿಂದ ಮದುವೆಯ ಭಾರವನ್ನು ನೀಗಿಸಿಕೊಳ್ಳಿ. ಸಾಲದಿಂದ ಮದುವೆಯಾಗಿ, ಸಾಲಗಾರರ ಕಾಟಕ್ಕೆ ತುತ್ತಾಗಿ ಮನೆತುಂಬಾ ಮಕ್ಕಳಾಗಿ ಅವರಿಗೆ ತಕ್ಕ ಪೋಷಣೆ ಇಲ್ಲದೆ ನರಳುವ ನರಕ ಜೀವನಕ್ಕಿಂತ ಮಿತಜೀವನ, ಮಿತವ್ಯಯ, ಶ್ರಮಪಟ್ಟು ಕೆಲಸ, ಆರೋಗ್ಯವಂತರಾದ ಮಕ್ಕಳನ್ನು ಪಡೆದು, ಒಂದು ಉತ್ತಮವಾದ ಹಸು ಒಂದು ಚಿಕ್ಕ ತರಕಾರಿ ತೋಟ, ಕೋಳಿ ಸಾಕಣಿಕೆ ಮೊದಲಾದ ಗ್ರಾಮ್ಯ ಕೈಗಾರಿಕೆಗಳಿಂದ ಆದರ್ಶ ಜೀವನವನ್ನು ನಡೆಸುವ ದಾರಿಯ ಕಡೆ ಮನಸ್ಸಿಡಿರಿ. ಹಿಂದೂಸ್ಥಾನದ ಆರೋಗ್ಯದ ಸ್ಥಾನ ಈಗ ಮೂರನೇ ತರಗತಿಯಲ್ಲಿದೆ. ಅದನ್ನು ಒಂದನೇ ತರಗತಿಗೆ ಏರಿಸುವ ಭಾರ ಮತ್ತು ಮುಂದಿನ ಜನಾಂಗವಾದ ಮಕ್ಕಳನ್ನು ಪೋಷಿಸುವ ಕರ್ತವ್ಯ ನಿಮ್ಮದಾಗಿದೆ. ಸಾಕುವ ಶಕ್ತಿ ಇಲ್ಲದೆ ಹೆಚ್ಚು ಮಕ್ಕಳನ್ನು ಪಡೆಯಬೇಡಿ. ನಾನು ವೈದ್ಯ ವಿಚಾರದ ಭಾಷಣವನ್ನು ಕೊಡುತ್ತೇನೆಂದು ಗ್ರಹಿಸಬೇಡಿ.

ಇನ್ನೊಂದು ವಿಚಾರ, ನೀವು ಒಂದೊ, ಎರಡೋ ಅಥವಾ ನಾಲ್ಕೋ ವರ್ಷಗಳ ವರೆಗೆ ಮಿಲಿಟರಿಯಲ್ಲಿ ಪೋಷಾಕು ಹಾಕಿ [illegible] ಯುದ್ಧಕಾಲದಲ್ಲಿ ಭಾಗವಹಿಸಿದಿರಿ. ಆದರೆ ನಿಮ್ಮಂತೆ ದೇಶದವರೆಲ್ಲರೂ ಕಾರ್ಖಾನೆಯಲ್ಲೋ, ಬಂದರುಗಳಲ್ಲೊ, ರೈಲುಗಳಲ್ಲೊ, ಆಹಾರ ಸರಬರಾಯಿ ಮಾಡುವ ಶಾಖೆಯಲ್ಲೋ, ತುಂಬಾ ಶ್ರಮಪಟ್ಟು ಕಾರ್ಯ ಸಾಧಿಸಿರುವ ವಿಷಯ ಮರೆಯಬಾರದು. ನೀವು ತೋರಿಸಿರುವ ಧೈರ್ಯ ಸಾಹಸಗಳಿಗಾಗಿ ನಿಮಗೆ ಸರಕಾರದವರು ಪ್ರತ್ಯೇಕ ರಿಯಾಯಿತಿಗಳನ್ನು ಕೊಟ್ಟಿರುವುದು ನಿಮ್ಮ ಭಾಗ್ಯ. ಆ ರಿಯಾಯಿತಿಗಳನ್ನು ನೀವು ಸರಿಯಾಗಿ ಉಪಯೋಗಿಸಿಕೊಂಡು ಸರಕಾರದವರೊಡನೆಯೂ ಮತ್ತು ನಿಮ್ಮ ಗ್ರಾಮದವರೊಡನೆಯೂ ಸಹಕರಿಸಿ ಸೈನ್ಯದಲ್ಲಿ ಕಲಿತ ಶಿಸ್ತು ಮತ್ತು ಕಷ್ಟ ಜೀವನವನ್ನು ಕಾರ್ಯರಂಗದಲ್ಲಿ ಉಪಯೋಗಿಸಿರಿ. ನಿಮ್ಮ ಭಾಗ್ಯದಿಂದ ನಿಮಗೆ ತಕ್ಕವರಾದ ಚೀಫ್ ಕಮಿಷನರು ದೊರಕಿರುವರು. ಇವರು ತುಂಬಾ ಅನುಭವಸ್ಥರು ಅಲ್ಲದೆ ಸೈನ್ಯದ ಅಧಿಕಾರಿಗಳಾಗಿದ್ದವರು. ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿ ನುರಿತವರು. ಪಂಜಾಬಿನಲ್ಲಿ ಕೊಡಗಿನಷ್ಟೇ ದೊಡ್ಡದಾದ ಆಸ್ತಿಯನ್ನು ಹೊಂದಿಕೊಂಡಿದ್ದ ಶ್ರೀಮಂತರು. ನಿಮ್ಮ ಹಿತವನ್ನು ಬಯಸಿ ಸದಾಕಾಲ ನಿಮಗೆ ಒಳ್ಳೆಯದನ್ನೆ ಮಾಡುವ ಪ್ರಯತ್ನದಲ್ಲಿದ್ದಾರೆಂದು ನನಗೆ ವಿಶ್ವಾಸವಿದೆ.

## ಚೀಫ್ ಕಮಿಷನರ ಭಾಷಣ

[ಜನರಲ್ ಕಾರ್ಯಪ್ಪನವರ ಭಾಷಣವಾದನಂತರ ಕೊಡಗಿನ ಚೀಫ್ ಕಮಿಷನರು ಈ ರೀತಿ ಭಾಷಣಮಾಡಿದರು]

ನಾನು ಬಂದಂದಿನಿಂದ ಈ ಸ್ವಲ್ಪ ಅವಧಿಯಲ್ಲಿ ಮಾಜಿ ಸಿಪಾಯಿಗಳ ಕೆಲವು ಹವಾಲುಗಳನ್ನು ನೋಡಿ ಬೇಸರವಾಯಿತು. ಹೆಚ್ಚಾಗಿ ಎಲ್ಲರೂ ಕಾಫಿ ಅಥವ ಯಾಲಕ್ಕಿ ವ್ಯವಸಾಯಕ್ಕಾಗಿ ಜಾಗವನ್ನು ಕೇಳುತ್ತಾರಲ್ಲದೆ ಭೂಮಿ ವ್ಯವಸಾಯಕ್ಕೆ ಜಾಗವನ್ನು ಕೇಳುವವರೇ ಇಲ್ಲ. ಇಂಡಿಯಾ ಸರಕಾರದವರ ಮುಖ್ಯ ಉದ್ದೇಶ ಹೆಚ್ಚಿನ ಆಹಾರ ಪದಾರ್ಥವನ್ನು ಬೆಳೆಸುವ ಯೋಜನೆಯಾಗಿದೆ. ಯಾಲಕ್ಕಿಯ ಉತ್ಪತ್ತಿ ಸಿಗಬೇಕಾದರೆ ಕಮ್ಮಿ ಪಕ್ಷ ಮೂರು ವರ್ಷ ಮತ್ತು ಕಾಫಿಯ ಉತ್ಪತ್ತಿಗೆ ಆರು ವರ್ಷ ಬೇಕು. ಅವರೆಗೆ ಅವರಿಗೆ ಆಹಾರವನ್ನು ಒದಗಿಸಲು ಈ ಕಷ್ಟ ಸಮಯದಲ್ಲಿ ಹೆಚ್ಚಿನ [illegible] ಕೊಡುವ ಭಾರ ಸರಕಾರಕ್ಕೆ ಉಂಟಾಗದೆ. ಮಿತ ಜೀವನ ಮತ್ತು ಮುಖ್ಯ ಉತ್ಪತ್ತಿಯ ಕಡೆಗೆ ನಿಮಗೆ ಮನಸ್ಸಿಲ್ಲ. ಒಮ್ಮೆಗೇ ದೊಡ್ಡದಾದ ಸುಲಭ ಹಣ ದೊರಕಿಸುವ ಯತ್ನ ನನಗೆ ಸರಿ ಕಾಣುವುದಿಲ್ಲ. ಆಹಾರ ಸಾಮಗ್ರಿಯನ್ನು ಬೆಳೆಸುವ ಭೂಮಿಗಾಗಿ ಅರ್ಜಿಗಳು ಬಂದರೆ ನಿರಾತಂಕವಾಗಿ ನಾನು ಮಂಜೂರು ಮಾಡಲು ಸಂತೋಷಪೂರ್ವಕನಾಗಿದ್ದೇನೆ.

ಎರಡನೆಯ ವಿಚಾರ. ಮದುವೆ ಖರ್ಚಿಗಾಗಿ ೫೦೦ ಅಥವಾ ೭೫೦ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಅರ್ಜಿಗಳು ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಇದು ವಿಚಿತ್ರ. ಇಂಥಾ ಹಣ ಮಂಜೂರು ಮಾಡಲು ಕಾನೂನೂ ಇಲ್ಲ; ಮತ್ತು ರೀತಿಯೂ ಸರಿಯಲ್ಲ. ಮದುವೆಗಾಗಿ ಹಣವನ್ನೇಕೆ ಸಾಲ ಮಾಡಬೇಕು? ತನ್ನ ಸಂಸಾರವನ್ನು ಸಾಂಗವಾಗಿ ನಡೆಸಿಕೊಂಡು ಹೋಗುವವರೆಗೆ ಮದುವೆಯ ಯೋಚನೆ ಮಾಡದಿರುವುದು ಒಳ್ಳೆಯದು. ಭೂಮಿಯನ್ನು ರೂಪಿತಗೊಳಿಸಿ ಸಂಸಾರವನ್ನು ಸಾಕುವ ದಾರಿಯನ್ನು ಮೊದಲು ಸಿದ್ಧಪಡಿಸಿಕೊಂಡು ಅನಂತರ ಮದುವೆಯಾದರೆ ಎಲ್ಲವೂ ಸುಖವಾಗುತ್ತದೆ. ಇಲ್ಲವಾದರೆ ಹಣವೂ, ಆಸ್ತಿಯೂ ನಷ್ಟವಾಗಿ ಆ ಸಂಸಾರವೇ ಹಾಳಾಗಬಹುದು. ಈ ಎರಡು ವಿಷಯಗಳನ್ನು ನೀವು ಗಮನದಲ್ಲಿಟ್ಟು ವರ್ತಿಸಬೇಕು.

# ಕೊಡಗು

ತಾ. ೫-೫-೧೯೫೦ನೇ ಶುಕ್ರವಾರ

## ಕೊಡಗು "ರಾಮರಾಜ್ಯ."

ಕೆಲವು ತಿಂಗಳುಗಳ ಹಿಂದೆ ಇಂಡಿಯಾ ಸರಕಾರದ ಗೃಹಮಂತ್ರಿಗಳಾದ ಸರ್ದಾರ್ ವಲ್ಲಭಭಾಯಿ ಪಟೇಲರವರು ರಾಜ್ಯಘಟನಾ ಸಭೆಯಲ್ಲಿ ಚೀಫ್ ಕಮಿಷನರ್ ಪ್ರಾಂತಗಳ ವಿಚಾರ ಮಾತಾಡುತ್ತಾ 'ರಾಮರಾಜ್ಯವಿರುವ ಒಂದೇ ಸ್ಥಳವೆಂದರೆ ಕೊಡಗು' ಎಂದು ಹೇಳಿದ್ದರು. ಇದನ್ನು ಓದಿದ ಕೆಲವರು ಚಿಕ್ಕದಾದ ಕೊಡಗು ಪ್ರಾಂತಕ್ಕೆ ಇಷ್ಟೊಂದು ಉತ್ತಮ ಪ್ರಶಂಸೆದೊರೆತದ್ದರಿಂದ ಅಸೂಯೆಗೊಂಡರೋ ಮತ್ತೆ ಕೆಲವರು ಇದರಿಂದ ಸಂತೃಪ್ತರಾದರೂ ಇದು ನಿಜವಿರಬಹುದೇ ಎಂಬ ಸಂಶಯದಿಂದಲೋ ಈ ಮಾತುಗಳನ್ನು ಸರ್ದಾರರು ಅಸಹಾಯ್ಯ ಯಾ ಹಗುರ ಮನಸ್ಸಿನಿಂದ ಹೇಳಿರಬಹುದೆಂದು ಅನ್ನುತ್ತಿದ್ದರು. ಆದರೆ ಈ ಸಂಶಯಗಳನ್ನು ಮೊನ್ನೆ ದಿನ ಮಡಿಕೇರಿಯಲ್ಲಿ ಭಾಷಣ ಮಾಡಿದ ಕೊಡಗಿನ ವೀರ ಪುತ್ರರಾದ ಭಾರತ ಸೇನಾನಾಯಕ ಜನರಲ್ ಕೆ. ಎಂ. ಕಾರ್ಯಪ್ಪನವರು ಸಂಪೂರ್ಣವಾಗಿ ನಿವಾರಿಸಿರುವರು. ಅವರು ಭಾಷಣ ಮಾಡುತ್ತಾ "ಸರ್ದಾರ್ ವಲ್ಲಭಭಾಯಿ ಪಟೇಲರು ಪಾರ್ಲಿಮೆಂಟಿನಲ್ಲಿ ಕೊಡಗು 'ರಾಮರಾಜ್ಯ'ವೆಂಬುದಾಗಿ ಹೇಳಿದ್ದರು. ಇದನ್ನು ಕೆಲವರು ಪರಿಹಾಸ್ಯದ ಮಾತೆಂದು ತಿಳಿದುಕೊಂಡಿದ್ದರು. ಆದರೆ ಈ ಬಗ್ಗೆ ನಾನು ಸರ್ದಾರ್ ಪಟೇಲರ ಅಭಿಪ್ರಾಯವನ್ನು ಕೇಳಿದಾಗ ತಾನು ಹೇಳಿದ ಮಾತು ಅಕ್ಷರಶಃ ನಿಜವೆಂದು ಹೇಳಿದರು. ಇದೇ ಅಲ್ಲ; ಕೊಡಗಿನವರಿಗಿರುವ ಕತ್ತಿ ಕೋವಿಗಳ ರಿಯಾಯಿತಿಯ ವಿಚಾರ ಸರ್ದಾರ ಪಟೇಲರು "ಕೊಡಗಿನಲ್ಲಿ ಕತ್ತಿ ಕೋವಿಗಳನ್ನು ಉಪಯೋಗಿಸುವ ರೀತಿ ನೀತಿಗಳು ವಿಶೇಷವಾಗಿವೆ. ಕೋವಿಗಳನ್ನು ಯಾವ ರೀತಿಯಲ್ಲೂ ಅವರು ದುರುಪಯೋಗ ಪಡಿಸುವದಿಲ್ಲ. ಇತರ ಪ್ರಾಂತಗಳು ಈ ರೀತಿ ನಡೆಯುವದಾದರೆ ಇಡೀ ಹಿಂದೂಸ್ಥಾನವೇ ಉಂಗುಷ್ಟದಿಂದ ಶಿರಸ್ಸಿನ ವರೆಗೂ ಆಯುಧ ಧರಿಸಲು ನನ್ನ ಆಕ್ಷೇಪವಿಲ್ಲ" ಎಂದು ಹೇಳಿದುದಾಗಿ ಅವರು ತಿಳಿಸಿದರು.

ಕೊಡಗಿನವರು ನಿಜವಾದ ಕ್ಷತ್ರಿಯರಂತೆ ಕೋವಿಕತ್ತಿಗಳ ಸದುಪಯೋಗವನ್ನು ಸ್ವಭಾವಿಕವಾಗಿ ಅರಿತವರಾಗಿರುವರು. ಅವುಗಳನ್ನು ಅವಶ್ಯಬಿದ್ದಾಗ, ಯೋಗ್ಯ ಸಂದರ್ಭದಲ್ಲಿ ಮಾತ್ರ ಉಪಯೋಗಿಸಲು ತಿಳಿದಿದ್ದಾರೆ. ಆದ್ದರಿಂದಲೇ ಯುದ್ಧ ಮತ್ತು ಬೇಟೆಯ ಸಂದರ್ಭಗಳಲ್ಲಿ ಮಾತ್ರ ಈ ಆಯುಧಗಳನ್ನು ಉಪಯೋಗಿಸಿ ಬೇರೆ ಸಮಯಗಳಲ್ಲಿ ಅವುಗಳನ್ನು ಯೋಗ್ಯ ಸ್ಥಳದಲ್ಲಿಟ್ಟಿರುವರು. ಈ ಆಯುಧಗಳಿಂದ ಕ್ರಿಮಿನಲ್ ಕಕ್ಷೀದಾರುಗಳಾದುದು ಬಹು ಅಪರೂಪ. ಮಹಾತ್ಮಾ ಗಾಂಧಿಯವರು ಸತ್ಯಾಗ್ರಹ ಚಳವಳದಲ್ಲಿ ಇಲ್ಲಿಯವರು ಹಲವರು ಭಾಗವಹಿಸಿದ್ದರೂ, ಹಿಂಸಾಕೃತ್ಯಗಳಿಗೆ ರವಷ್ಟು ಎಡೆಕೊಡದೆ ಅಹಿಂಸಾಯುದ್ಧವನ್ನು ಯಶಸ್ವಿಯಾಗಿ ನಡೆಸಿದ್ದು ಇದಕ್ಕೆ ನಿದರ್ಶನವಾಗಿದೆ.

ಕೊಡಗಿನ ಜನತೆಯು ತಮ್ಮತಮ್ಮೊಳಗೆ ಕಲಹಮಾಡಿ ಕ್ರಿಮಿನಲ್ ಕಕ್ಷೀರುಗಳಿಗೆ ಎಡೆಕೊಡದೆ ಶಾಂತ ರೀತಿಯಲ್ಲಿ ಜೀವಿಸುತ್ತಿರುವದರಿಂದಲೇ ಕೊಡಗಿನ ಆಡಳಿತದ ನೇರವಾದ ಹಿಡಿತವಿರುವ ಗೃಹಮಂತ್ರಿಯಾದ ಸರ್ದಾರ್ ಪಟೇಲರು ಕೊಡಗಿನಲ್ಲಿ 'ರಾಮರಾಜ್ಯ'ವಿದೆಯೆಂದು ಹೇಳಲು ಕಾರಣ. ಇದು ಸಾಧಾರಣದ ಪ್ರಶಂಸೆಯಲ್ಲ. ಚಿಕ್ಕದಾದ ಕೊಡಗು ದಕ್ಷಿಣ ಹಿಂದೂಸ್ಥಾನದ ಒಂದು ಮೂಲೆಯ ಬೆಟ್ಟ ಪ್ರದೇಶವಲ್ಲದ್ದರೂ ಇಲ್ಲಿಯ ಜನತೆಯ ಉತ್ತಮ ಗುಣವು ಬೆಳಗಿ ಇಡೀ ಹಿಂದೂಸ್ಥಾನದ ದೃಷ್ಟಿಯನ್ನು ತನ್ನೆಡೆಗೆ ಆಕರ್ಷಿಸಿದೆ. ಇದರ ಮಹತ್ವವನ್ನು ನಮ್ಮ ದೇಶೀಯರು ಚೆನ್ನಾಗಿ ಮನನಮಾಡಿಕೊಳ್ಳಬೇಕಾಗಿದೆ. ಇದು ಚಿರಕಾಲದಿಂದ ನಮ್ಮ ಪೂರ್ವಿಕರು ಗಳಿಸಿದ ಉತ್ತಮ ನಡತೆಯ ಫಲಿತಾಂಶವಾಗಿದೆ. ಇದನ್ನು ಮುಂದಕ್ಕೂ ಉಳಿಸಿಕೊಂಡು ಅಭಿವೃದ್ಧಿ ಪಡಿಸುವ ದೊಡ್ಡ ಜವಾಬ್ದಾರಿಯು ಈಗಿನ ಮತ್ತು ಮುಂದಿನ ಪೀಳಿಗೆಯನ್ನು ಹೊಂದಿಕೊಂಡಿದೆ. ಭಾರತವು ಸ್ವಾತಂತ್ರ್ಯವನ್ನು ಪಡೆದಿರುವ ಈ ಕಾಲದಲ್ಲಿ ಅಂತರಿಕ ಅನಾಯಕತ್ವದ ಚಿಹ್ನೆಗಳು ಅಲ್ಲಲ್ಲಿ ತಲೆದೋರುತ್ತಿವೆ. ಕೊಡಗಿನವರು ತಮ್ಮ ಸ್ವಾಭಾವಿಕ ಶಾಂತಶೀಲತೆಯಿಂದ ಈ ಚಿಹ್ನೆಗಳಿಗೆ ಅವಕಾಶ ಕೊಡದೆ ಮುಂದೆಯೂ ಭಾರತಕ್ಕೆ ಆದರ್ಶಪ್ರಾಯರಾಗಿರಬೇಕೆಂದೆ ಆಶಿಸುತ್ತೇವೆ.

## ವರ್ತಮಾನ.

ನಿವೃತ್ತ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಮುಂಡೇಕಂಡ ಗಣಪತಿಯವರು ತಾ. ೩೦-೪-೫೦ ರಲ್ಲಿ ಶಿವಾಧೀನರಾದರು.

ಸಮರಿ ಕಂದಾಯದ ಸಿಲೆಕ್ಟ್ ಕಮಿಟಿ ಮೀಟಿಂಗು ತಾ ೮-೫-೫೦ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವದು.

ಹರಿಜನ ಪುರೋಭಿವೃದ್ಧಿ ಸಭೆಯ ಮೀಟಿಂಗೊಂದು ತಾ. ೧೩-೫-೫೦ ರಲ್ಲಿ ಮಡಿಕೇರಿಯಲ್ಲಿ ನಡೆಯುವದು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕಿನ ಬೆಳ್ಳಿ ಮಹೋತ್ಸವ, ಹೊಸ ಕಟ್ಟಡ ಪ್ರವೇಶೋತ್ಸವಗಳು ತಾ. ೧೬ನೇ ಮಂಗಳವಾರ ಪೂರ್ವಾಹ್ನವೂ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಅಪರಾಹ್ನವೂ ಮತ್ತು ಸಹಕಾರಿ ಪರಿಷತ್ತು ತಾ. ೧೭ರಲ್ಲೂ ಮಡಿಕೇರಿಯಲ್ಲಿ ನಡೆಯುವದು. ಕಟ್ಟಡವನ್ನು ಚೀಫ್ ಕಮಿಷನರಾದ ಶ್ರೀ ಡಿ ಎಸ್. ಡೇಮಿಯವರು ತೆರೆಯುವರು. ಪರಿಷತ್ತಿನ ಅಧ್ಯಕ್ಷತೆಯನ್ನು ಮದ್ರಾಸಿನ ಸಹಕಾರ ಮಂತ್ರಿ ಶ್ರೀ ಚಂದ್ರಮೌಳಿಯವರು ವಹಿಸುವರು.

ನಾಪೋಕ್ಲುನಾಡು ಬೇತು ಗ್ರಾಮದ ಶ್ರೀ ಕೊಂಡಿರ ಚಂಗಪ್ಪನವರಲ್ಲಿ ಒಂದು ಕೆಂಪುವರ್ಣದ ಎತ್ತು ಪರಾರಿಯಾಗಿಬಂದು ಕಳೆದ ಐದು ತಿಂಗಳಿಂದ ಇದೆ. ವಾರೀಸುದಾರರು ತಕ್ಕ ರುಜುವಾತುಪಡಿಸಿ ಹೊಡೆದುಕೊಂಡು ಹೋಗಬಹುದು.

ಕೊಚಿನ್ ಸಂಸ್ಥಾನಕ್ಕೆ ಬರಲಿರುವ ಭಾರತದ ಉಪಪ್ರಧಾನ ಮಂತ್ರಿ ಸರ್ದಾರ್ ಪಟೇಲರವರನ್ನು ಕೊಡಗಿಗೆ ಕರೆಸುವ ಪ್ರಯತ್ನಗಳಾಗುತ್ತಿವೆ.

ತಾ. ೨೮-೪-೫೦ ರಲ್ಲಿ ಭಾರತದ ಮುಖ್ಯ ಸೇನಾಧಿಪತಿ ಜನರಲ್ ಕಾರ್ಯಪ್ಪನವರು ಬಂದಾಗ ಸಾರ್ವಜನಿಕರು ಮಡಿಕೇರಿ ಟೋಲ್‌ಗೇಟಿನ ಬಳಿ ಅವರಿಗೆ ಸ್ವಾಗತವಿತ್ತು ಆಹ್ವಾನಿಸಿದರು. ತಾ. ೩೦ರ ಬೆಳಗ್ಗೆ ಅವರು ತಿರುಚಿನಾಪಳ್ಳಿಗೆ ಮೈಸೂರಿಗಾಗಿ ಹೋದರು.

## ಸಿಗರೇಟ್ ಸೇದುವುದು ಕಾನೂನಿಗೆ ವಿರೋಧ.

ಪಾಲಿಕಾನಾ ಎಂಬಲ್ಲಿ ಚೆರೋಡಿಯಾ ಗ್ರಾಮದ ಪಂಚಾಯತದಾರರು, ಸಿಗರೇಟ್ ಸೇದುವುದು ಕಾನೂನಿಗೆ ವಿರೋಧವೆಂದು ಪೈಸಲ್ ಮಾಡಿದ್ದಾರೆ. ಆ ಗ್ರಾಮದಲ್ಲಿ ಯಾರಾದರೂ ಸಿಗರೇಟ್ ಸೇದುವುದು ಕಂಡುಬಂದರೆ ಅಂತವರಿಗೆ ತಲಾ ರೂ. ೧-೪-೦ ರ ದಂಡ ವಿಧಿಸುವ ನಿರ್ಧಾರವಾಗಿದೆ. ಸಿಗರೇಟಿನ ಅಭ್ಯಾಸ ಬಿಡಲು ಕಷ್ಟವಾಗುವವರಿಗೆ ಬೀಡಿ ಸೇದಬಹುದೆಂಬ ರಿಯಾಯಿತಿ ಕೊಡಲಾಗಿದೆ. ಈ ಬೀಡಿಯ ರಿಯಾಯಿತಿಯೂ ಶೀಘ್ರದಲ್ಲೇ ಹೋಗಬಹುದೆನ್ನಲಾಗಿದೆ.

## ಬ್ರಿಟಿಷ್ ಜನರ ವಾಚನಾಭಿರುಚಿ.

ಬ್ರಿಟನಿನ ಜನರು ಈಗ ಯುದ್ಧದ ಮೊದಲು ಓದುತಿದ್ದುದಕ್ಕಿಂತ ಎರಡು ಪಾಲು ಹೆಚ್ಚಿಗೆ ಪುಸ್ತಕಗಳನ್ನು ಓದುತ್ತಿದ್ದಾರೆ. ಬ್ರಿಟಿಷ್ ಜನರಲ್ಲಿ ಈ ರೀತಿ ವಾಚನಾಭಿರುಚಿ ಹೆಚ್ಚಲು ಯುದ್ಧಕಾಲೀನ ವರ್ಷಗಳೇ ಕಾರಣವೆನ್ನಲಾಗಿದೆ. ಯುದ್ಧ ಕಾಲದಲ್ಲಿ ಇತರ ಎಲ್ಲಾ ರೀತಿಯ ವಿನೋದಗಳು ದೂರವಾದುದರಿಂದ ಜನರು ಪುಸ್ತಕಗಳನ್ನು ಓದುವುದರ ಕಡೆಗೆ ಸ್ವಾಭಾವಿಕವಾಗಿ ಹೆಚ್ಚಿನ ಗಮನ ಕೊಡುವಂತಾಯಿತು. ವಿಜ್ಞಾನ ಸಂಬಂಧವಾದ ವಿಷಯಗಳಿಂದೊಡಗೂಡಿದ ಪುಸ್ತಕಗಳಿಗೆ ಬ್ರಿಟನಿನಲ್ಲಿ ಈಗ ತುಂಬಾ ಖಾಯಿಷಿ ಇದೆ.

## 'ಏಪ್ರಿಲ್‌ಫೂಲ್' ಪ್ರಕರಣ

ಏಪ್ರಿಲ್ ತಿಂಗಳು ಬಂತೆಂದೊಡನೆ 'ಏಪ್ರಿಲ್‌ಫೂಲ್' ತಂಟೆಗಳಿಗೆ ಆರಂಭವಾಗುವುದು ಈಗಲೂ ಇದೆ. ಜಬ್ಬಲ್‌ಪುರದ ಸುಮಾರು ೫೦೦ ಮಂದಿ ಸಭ್ಯಗೃಹಸ್ಥರು ಇತ್ತೀಚೆಗೆ ಈ 'ಏಪ್ರಿಲ್‌ಫೂಲ್' ತಂಟೆಯ ಜಾಲಕ್ಕೆ ಸಿಲುಕಿ ಬಹಳ ಪಜೀತಿಗೀಡಾದರು. ನೂತನವಾಗಿ ತೆರೆಯಲಿರುವ ಸಿನೇಮಾ ಮಂದಿರದ ಪ್ರವೇಶೋತ್ಸವಕ್ಕೆ ಬಂದು, ಅಂದು ನಡೆಯಲಿರುವ ಉಚಿತ ಪ್ರದರ್ಶನಕ್ಕೆ ಹಾಜರಾಗಬೇಕೆಂದು ಏಪ್ರಿಲ್ ತಾ. ೧ರಂದು ಆಮಂತ್ರಣ ಪತ್ರಿಕೆಗಳು ಬಂದಿದ್ದವು. ಆಮಂತ್ರಣ ಪತ್ರಿಕೆಯಲ್ಲಿ ಸೂಚಿಸಿದ್ದ ದಿನ ನಿಯಮಿತ ಕಾಲದಲ್ಲಿ ಅವರು ಆ ಸ್ಥಳಕ್ಕೆ ಹೋದಾಗ, ಸಿನೇಮಾ ಮಂದಿರದ ಕಟ್ಟಡ ಇನ್ನೂ ಪೂರ್ಣಗೊಂಡಿರಲಿಲ್ಲ. ವಿಷಯವೇನೆಂದು ಸಂಬಂಧಪಟ್ಟವರೊಡನೆ ವಿಚಾರಿಸಿದಾಗ ತಮಗೆ ಆಮಂತ್ರಣ ಪತ್ರಿಕೆಯ ಕುರಿತು ವಿಷಯ ಒಂದೂ ತಿಳಿಯದೆಂದು ಉತ್ತರ ಬಂತು. 'ಏಪ್ರಿಲ್‌ಫೂಲ್' ತಂಟೆಗಾರರ ಕಾರುಬಾರು ಆಗಿರಬೇಕೆಂಬುದು ಸ್ಪಷ್ಟವಾಯಿತು. ಬಂದವರೆಲ್ಲಾ ಅರ್ಧ ಮುಗಿದ ಸಿನೇಮಾ ಕಟ್ಟಡವನ್ನು ನೋಡಿ ತಂತಮ್ಮ ಮನೆಗೆ ಹಿಂತಿರುಗಿದರು.

## ನೋಟೀಸು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಈ ತಾ. 16ನೇ ಮಂಗಳವಾರ ಮಧ್ಯಾಹ್ನದ ಮೇಲೆ 1-30 ಗಂಟೆಗೆ ಮಡಿಕೇರಿಯಲ್ಲಿ ಬ್ಯಾಂಕು ಹೊಸ ಕಟ್ಟಡದ ಆವರಣದಲ್ಲಿ ನಡೆಯುವುದು. ಸದಸ್ಯರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರಿಕೆ.

ಮಡಿಕೇರಿ, 5-5-50 — ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್.

**ARE YOU A ROBUSTA GROWER?**

If so, are you content with the Point Valuations, allowed by The Indian Coffee Board, for Robusta Coffee?

The Robusta Growers Association is not satisfied.

Join the Association and help us to help you to get your share of Sale prices realised

Meetings will be held, which the Chairman Secretary and Committee will attend at the following places.

**GONIKOPAL**- Sunday-May 14th at 2. P. M.
Convener **Sri K. C. Nanjappa,**

**TITTIMATTI**- Monday-May 15th at 11. A. M.
Conveners **Sri M N Chittiappa & Mr. M. P. Davis.**

**KUTTA**- Tuesday-May 16th at 11 A. M.
Convener **Lt. Col. Maurice.**

**MURNAD.** Thursday-May 18th at 11. A. M.
Convener **Sri B. Ganapathy.**

**SUBSCRIPTIONS**:- 3 annas per acre or Rs. 1/- for small estates.

**M. D. Machaiya,** *Secretary.* — **A. M. Webb,** *Chairman.*

**Robusta Growers Association of S. India.**

# ಸ್ತ್ರೀಯ ಕರ್ತವ್ಯ

ಲೇಖಿಕೆಯರು:- ಶ್ರೀಮತಿ ವಾರಿಜಾದೇವಿ, ಎಸ್. ಬಸ್ರೂರ್ ಇವರು.

ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನನ್ನ ಭಗಿನಿಯರು ಇತರ ಯಾವ ದೇಶದಲ್ಲಿಯೂ, ಸ್ತ್ರೀಗೆ 'ಮಾತೃ' ಸ್ಥಾನವಾದ ಗೌರವದ, ಪ್ರೀತಿಯ, ಭಕ್ತಿಯ ಸರ್ವ ಶ್ರೇಷ್ಠ ಸ್ಥಾನವು ಸಿಕ್ಕಿಲ್ಲವೆಂಬುದನ್ನು ಮರೆಯಬಾರದು! ಅದು ಸ್ತ್ರೀ ಶೀಲಕ್ಕೆ ಹೆಸರುವಾಸಿಯಾದ ಈ ನಮ್ಮ ಭಾರತ ದೇಶದಲ್ಲಿ ಮಾತ್ರ ರೂಢಿಯಲ್ಲಿದೆ. ಸ್ತ್ರೀಯು ಯಾವ ರೀತಿಯಲ್ಲಿ ಇರಬೇಕು ಎಂಬುದೇ ನನ್ನ ಈ ಲೇಖನದ ಉದ್ದೇಶವಾಗಿದೆ.

'ಗೃಹಿಣೀ ಗೃಹಮುಚ್ಯತೇ' ಎಂದು ಹಿರಿಯರ ವಚನವಿದೆ. ಅದು ಅಕ್ಷರಶಃ ಸತ್ಯ. ಆ ಒಂದು ಉಚ್ಚ ತತ್ವದ ಬಲದಿಂದಾಗಿಯೇ ಲೋಕದಲ್ಲಿ ಎಲ್ಲೂ ಕಂಡು ಬಾರದಂತಹ ಶ್ರೇಷ್ಠ ತರದ ಕುಟುಂಬ ಜೀವನ ಸುಗಮವಾಗಿ ನಮ್ಮಲ್ಲಿ ಸುಸೂತ್ರವಾಗಿ ನಡೆಯುತ್ತಿದೆ. ಕಾರಣ— ಮನೆಯನ್ನು ನಡೆಸುವ, ಮನೆಯ ಬಗ್ಗೆ ಶ್ರಮ ವಹಿಸುವ, ಮನೆಯ ಯಜಮಾನಿತಿಯೆಂದು ಮನೆಯ ಎಲ್ಲಾ ಜವಾಬ್ದಾರಿಯನ್ನೂ ವಹಿಸುವವಳು ಸ್ತ್ರೀ! ಪುರುಷನ ಸಹ ಧರ್ಮಿಣಿಯಾದ ಪತ್ನಿ! ಆದುದರಿಂದ ಪುರುಷನ ಒಲವೂ ಮನೆಯತ್ತ ಹೊರಳಿರುವುದು. ಎಷ್ಟೋ ಕುಟುಂಬಗಳ ಹಿರಿಮೆಯೂ ಹಿರಿಮೆಗೆ ಜವಾಬ್ದಾರಳೂ ಸ್ತ್ರೀಯಾಗಿರುತ್ತಾಳೆ. ಜವಾಬ್ದಾರಿಯ ಕೆಲಸ, ನೋಡಲು ಸುಲಭವೆಂದು ಕಂಡು ಬಂದರೂ ಕಾರ್ಯತಃ ಆಚರಿಸಲು ಕಷ್ಟಸಾಧ್ಯವೇ ಸರಿ. ಆದರೆ ಅದನ್ನು ಗೃಹಿಣಿಯೊಂದ ಶಿಸ್ತಿನಿಂದ ನಡೆಯುವುದಾದರೆ ಅದೇ ಸುಲಭವಾಗುವುದು. ಹೀಗೆ ಸ್ತ್ರೀಯ ಕರ್ತವ್ಯ ತನ್ನ ಮನೆಯಲ್ಲಿಯೇ ಅಡಕವಾಗಿದೆಯೆಂಬುದು ಸ್ಪಷ್ಟವಾದಂತಾಯಿತು. ಸ್ತ್ರೀಯು ಅಡಿಗೆ ಮನೆಗೇ ಭೂಷಣವಾಗಿ ಇರತಕ್ಕವಳೆಂಬುದನ್ನು ಒಪ್ಪಿದಂತಹ ಸಂಕುಚಿತ ಭಾವನೆಯು ಅದಲ್ಲ. ಬದಲಾಗಿ ಅದು ಮನೆಯ ಯಜಮಾನಿಗಿತ್ತಿಯಂತಿರುವ ವಿಶಾಲ ಭಾವನೆ.

ಒಂದು ಮನೆಯನ್ನು ನಡೆಸುವ ಸಂದರ್ಭದಲ್ಲಿ ಸ್ತ್ರೀಗೆ ಯಾವ್ಯಾವ ಕೆಲಸದಲ್ಲಿ ಭಾಗಿಯಾಗಲು ಎಡೆಯಿದೆ ಮತ್ತು ಅದನ್ನು ಹೇಗೆ ಮಾಡುತ್ತಿರಬೇಕು; ಅದರಿಂದಲೇ ಹೇಗೆ ಲೋಕಾನುಭವವನ್ನು ಪಡೆಯಬಹುದು ಎಂಬುದು ವಿಚಾರಿಸತಕ್ಕದ್ದಾಗಿದೆ. ಮನುಷ್ಯನ ಜೀವಮಾನದಲ್ಲಿ ಬರುವಂತಹ ದೈವಿಕ, ನೈತಿಕ, ಸಾಮಾಜಿಕ, ಆರ್ಥಿಕ ವಿಷಯಗಳ ಅನುಭವವು ಚೆನ್ನಾಗಿಯಾಗುತ್ತದೆ. ಮಾತ್ರವಲ್ಲದೆ, ಅಲ್ಲಿಯೇ ತನ್ನ ರಾಜಕೀಯ ಅನುಭವವನ್ನು ಪಡೆಯಬಹುದಾಗಿದೆ.

ಪ್ರಾತಃಕಾಲದಲ್ಲಿ ಎದ್ದು, ಮನೆಯನ್ನು ಶೋಧಿಸಿ, ಸ್ವಚ್ಛವಾಗಿರಿಸಿ, ಸುಂದರವಾಗುವಂತೆ ಇರಿಸಲು ದೈಹಿಕ ಜ್ಞಾನವೂ ಕಲೆಯ ಜ್ಞಾನವೂ ಬೇಕು. ಅಂತೆಯೇ, ಮನೆಯ ಮುಂದೆ ರಂಗವಲ್ಲಿ ಇಡುವ ಪ್ರಮೇಯವು ವಾಡಿಕೆಯಲ್ಲಿದೆ. ಪ್ರಾತಃಕಾಲದ ಪ್ರಾರ್ಥನೆ ಅಥವಾ ತುಲಸೀ ಪೂಜೆಯಿಂದ ದೈವಿಕ ಜ್ಞಾನವೂ ಆರಬೇಕೆಂದರ್ಥವಾಗುತ್ತದೆ. ತದನಂತರ ತನ್ನ ಮನೆಯಲ್ಲಿರುವ ಬಂಧುಬಳಗದವರ ಬಗ್ಗೆ ಪಕ್ವಾನ್ನಗಳನ್ನು ತಯಾರಿಸುವುದರಿಂದ ದೇಹದ ಬೆಳವಣಿಗೆಗೆ ಬೇಕಾದ ಪಕ್ವಪದಾರ್ಥಗಳ ರುಚಿಕರವಾದ ವಸ್ತುಗಳನ್ನು ತಯಾರಿಸುವುದಕ್ಕೆ ಪಾಕಶಾಸ್ತ್ರದ ಅನುಭವವೂ ಬೇಕಾಗಿದೆ. ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುವುದರಿಂದ ವಸ್ತುಗಳ ಮಿತಿ, ಅದಕ್ಕೆ ಬೇಕಾದ ದುಡ್ಡಿನ ಮಾಹಿತಿ—ಹೀಗೆ ಆರ್ಥಿಕಾನುಭವವೂ ಇರಬೇಕಾಗುತ್ತದೆ. ಮನೆಯ ಯಜಮಾನನ ಆರ್ಥಿಕ ಸ್ಥಿತಿಯನ್ನು ಅರಿತು ಸಲಹೆಯನ್ನು ಕೊಡುವ ಸ್ವಂತಾನುಭವವು ಬರುತ್ತದೆ. ಮನೆಯ ಹೆಂಗಸು ಹೊರಗಾಗಿದ್ದಾಗ, ಮನೆಯ ಗಂಡಸರ ಅಡಿಗೆಯ ಕಾಲದಲ್ಲಿ ಖರ್ಚಾಗುವ ಸಾಮಗ್ರಿಗಳ ಅನುಭವವು ನನ್ನ ಭಗಿನಿಯರಲ್ಲಿ ಕೆಲವರಿಗಾದರೂ ಇದ್ದೀತು. ಇದರಿಂದ ವ್ಯಕ್ತವಾಗುತ್ತದೇನೆಂದರೆ Economy begins at home. ಅದರ ಅನುಭವವು ಮನೆಯ ಹೆಂಗಳೆಯರಿಗೆ ಬೇಕು.

ಮನೆಗೆ ಬರುವ ಸಂಬಂಧಿಕರನ್ನು, ಸ್ನೇಹಿತರನ್ನು ಅಥವಾ ಅತಿಥಿಗಳನ್ನು ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂಬ ಲೌಕಿಕ ಅನುಭವವೂ ಬೇಕಾಗುತ್ತದೆ. ಇಲ್ಲಿ ಬೇರೆ ಬೇರೆ ರೀತಿಯ ಜನರನ್ನು ಹೇಗೆ ನೋಡಬೇಕು, ಯಾವ ರೀತಿಯಲ್ಲಿ ಆದರಿಸಬೇಕು ಎಂಬ ಜಾಣ್ಮೆಯೂ ಬೇಕು. ಅವರ ಸತ್ಕಾರದಲ್ಲಿ ಬೇಧವಿಲ್ಲದೆ ಎಲ್ಲರನ್ನೂ ಸಮಾನ ದೃಷ್ಟಿಯಿಂದ ಕಾಣುವ ಆ ವಿಶಾಲ ಹೃದಯ ಬೇಕು.

ಲೋಕದ ಎಲ್ಲಾ ಜಗಳಗಳಿಗೂ ಸ್ತ್ರೀಯೇ ಕಾರಣಳೆಂದು ನಾತು ನಮಗೆ ತಟ್ಟನೆತ್ತಾದರೂ, ಅಂತಹ ಜಗಳಗಳಾಗದಂತೆ ಮೈತ್ರಿಯಿಂದ ಇರುವಂತ ವಾತಾವರಣವನ್ನೂ ಸ್ತ್ರೀಯೇ ತರುತ್ತಾಳೆ. ಹೀಗೆ ಮೈತ್ರಿಯಿಂದ ಇರಲು ಹೆಚ್ಚಿನ ನೈತಿಕ, ತಾತ್ವಿಕ ಜ್ಞಾನವೂ ಬೇಕಾಗುತ್ತದೆ. ಮಾತ್ರವಲ್ಲ, ತಾಳ್ಮೆಯೂ ಬೇಕು. ನೆರೆಮನೆಯಲ್ಲಿ ಮೈತ್ರಿಯಿಂದಲೂ ಸೌಹಾರ್ದದಿಂದಲೂ ಇರುವಂತ ಸ್ತ್ರೀಯೇ ಇದಕ್ಕೂ ಕಾರಣಳೆಂಬುದನ್ನು ಎಲರೂ ಒಪ್ಪಬೇಕಾದ ಮಾತು. ಇಲ್ಲಿಯೇ ಸ್ತ್ರೀಗೆ ರಾಜಕೀಯ ನೈಪುಣ್ಯತೆಯ ಅನುಭವ ಬೇಕಾಗುತ್ತದೆ.

ಮನೆಯಲ್ಲಿಯ ಜನರವರು ಅಥವಾ ಯಾರೇ ಆದರೂ ತಪ್ಪಾದ ಹಿಡಿಯುವ ಸಂದರ್ಭದಲ್ಲಿ ತಾಳ್ಮೆಯಿಂದಲೂ ವಿನಯದಿಂದಲೂ ಸಮಯೋಚಿತ ರೀತಿಯಿಂದ ಆ ತಪ್ಪನ್ನು ತೋರಿಸಿ ಆ ಕಳ ಕವನ್ನು ಹೋಗಲಾಡಿಸುವ ಜವಾಬ್ದಾರಿ ಸ್ತ್ರೀಯದ್ದಾಗಿರುತ್ತದೆ. ಕಾಲ, ದೇಶ, ಪರಿಸ್ಥಿತಿಗಳಿಗನುಗುಣವಾಗಿ ಮನೆಯ ಗಂಡಸರನ್ನು ಹುರಿದುಂಬಿಸಿ ಕಾರ್ಯತತ್ಪರರನ್ನಾಗಿ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇಂತಹ ಘನ ಕಾರ್ಯಗಳಲ್ಲಿ ಸ್ತ್ರೀಯು ಹೆಚ್ಚಿನ ಅನುಕೂಲಳೆಂಬುದು ಹಿಂದಿನ ಚಾರಿತ್ರಿಕ, ಪೌರಾಣಿಕ ಮತ್ತು ಇಂದಿನ ಅನೇಕ ದೃಷ್ಟಾಂತಗಳಿಂದ ವ್ಯಕ್ತವಾಗುತ್ತದೆ.

ಮನೆಯಲ್ಲಿ ಯಾರಾದರೂ ಖಾಯಿಲೆ ಬಿದ್ದಾಗ ಅವರ ಆರೈಕೆಯು ಅವಕ್ಕೆ ತಕ್ಕುದಾದ ಪ್ರಥಮ ಚಿಕಿತ್ಸಾಭಾರವು ಸ್ತ್ರೀಯದ್ದಾಗಿರುತ್ತದೆ. ಇದರಿಂದಾಗಿ ಚಿಕಿತ್ಸಾನುಭವವೂ ಬೇಕೆಂಬುದು ಸ್ಪಷ್ಟವಾಗುತ್ತವೆ. ಇಂತಹ ಆರೈಕೆ, ಸಹಕಾರಗಳಲ್ಲಿ ಸ್ತ್ರೀಗಿರುವಷ್ಟರ ತಾಳ್ಮೆಯು ಮತ್ತಾರಿಗಿಲ್ಲ.

ಮಕ್ಕಳ ಪಾಲನೆಯು ಸ್ತ್ರೀಯ ಮುಖ್ಯ ಕರ್ತವ್ಯ. ಕಾರಣ—ಮಕ್ಕಳ ಪ್ರಥಮ ಪಾಠವು ಮನೆಯಲ್ಲಿ, ತಾಯಿಯಲ್ಲಿ. ತಾಯಿಯೇ ಪ್ರಥಮ ಗುರು. ಮಕ್ಕಳ ಶೀಲ ಸುಧಾರಣೆಗೆ ತಂದೆತಾಯಿಗಳು ಜೊತೆಯಾಗಿಯೇ ಕಾರಣರಾದರೂ ತಾಯಿಯ ಪಾಲುಗಾರಿಕೆಯು ಹೆಚ್ಚಿನದು. ಕ್ರಮವಾದ ಆರೈಕೆಯಿಂದ ಪೌಷ್ಟಿಕ ಆಹಾರಗಳನ್ನು ಕೊಡುತ್ತಾ ಮಕ್ಕಳ ಬೆಳವಣಿಗೆಗೆ ಸಹಾಯಕಳಾಗಿ, ಮಕ್ಕಳು ಬೆಳೆಯುತ್ತ ಬಂದಂತೆ ಸದ್ಬೋಧಯುಕ್ತವಾದ ಮಾತುಗಳಿಂದಲೂ, ಧಾರ್ಮಿಕ, ದೈವಿಕ, ದೇಶಾಭಿಮಾನಯುಕ್ತ, ಸಮಾಜಾಭಿಮಾನಯುಕ್ತ ಕಥೆಗಳನ್ನು ಹೇಳುತ್ತ, ಅಂತಹ ದೃಷ್ಟಾಂತಗಳನ್ನು ನಿತ್ಯಜೀವನದಿಂದ ಎತ್ತಿ ತೋರಿಸುತ್ತ ವಿಶಾಲ ಹೃದಯದವರನ್ನಾಗಿಸುವ ಮಾಡಿ ಪರರಿಗಾಗಿ ತಾನೆಂಬ ನಿಸ್ವಾರ್ಥ ಭಾವನೆಯು ಬೆಳೆಯುವಂತೆ, ಸದ್ಧರ್ಮ ಶೀಲರನ್ನಾಗಿ, ಸತ್ಕರ್ಮಯುಕ್ತರನ್ನಾಗಿ ನಿಜವಾಗಿ ವಿಶ್ವಕರ್ಮರನ್ನಾಗಿ ಮಾಡುವಂತೆ ಮಮತೆಯಿಂದ ನೋಡುತ್ತಿರುವುದು ಸ್ತ್ರೀಯ ಮಾತೃಸ್ಥಾನದ ಹಿರಿಮೆಯ ಮೊತ್ತಮೊದಲಿನ ಪಾತ್ರವಾಗಿದೆ. ಮಕ್ಕಳಲ್ಲಿ ಸ್ವಾಭಾವಿಕವಾಗಿ ನೆಲಸಿರುವ ಸತ್ಯ ಶೀಲತೆ, ಸಮತಾಭಾವನೆಯನ್ನು ಜಾಗೃತಗೊಳಿಸಿ ಅಶ್ಲೀಲ ಚಾಳಿಗಳಿದ್ದರೆ ಅದರ ಕೆಡುಕನ್ನು ತೋರಿಸಿ, ಅವನ್ನು ಹೋಗಲಾಡಿಸಿ, ತನ್ನ ಮುಂದಿನ ಜೀವನದಲ್ಲಿ ತೃಪ್ತಿಯನ್ನು ಬೀರುವಂತಹ ಸದ್ಬೋಧೆಯನ್ನು ಕೊಡುತ್ತಿರಬೇಕು. ಬಾಲ್ಯಾರಭ್ಯ ಮಕ್ಕಳಲ್ಲಿ ಗಂಡ ಹೆಂಡಿರ ಭಾವನೆಯನ್ನುಂಟು ಮಾಡುವಂತಹ ಬಲಚೇಷ್ಟೆಗಳನ್ನು ಹೆಚ್ಚಿಸುವ ಮತ್ತು ಹಾಗೆ ಆಡುವ ಆ ನಟನೆಯಿಂದಾಗಿ ಸಂತಸಪಡುವ ಹವ್ಯಾಸವನ್ನು ಬಿಟ್ಟು ಬಿಡಬೇಕು. ಕಾರಣ—ಇದರಿಂದ ಮುಂದಿನ ಜೀವನದಲ್ಲಿ ಕೆಡುಕು ಬರಬಹುದು. ಶೀಲಕ್ಕೆ ಧಕ್ಕೆ ತಗಲಬಹುದು. ಮಕ್ಕಳ ಆಗುಹೋಗುಗಳಿಗೆ ತಾಯಿಯೇ ಕಾರಣಳು. ತಾಯ್ತನದ ಜವಾಬ್ದಾರಿಯನ್ನು ನಾವು ಚೆನ್ನಾಗಿ ಅರಿತುಕೊಳ್ಳತಕ್ಕದ್ದು.

ಹೀಗೆ ವಿಚಾರಿಸುತ್ತ ಹೋದರೆ, ಭಗಿನಿಯರೆ, ನಮ್ಮಲ್ಲಿ ಎಷ್ಟು ಜವಾಬ್ದಾರಿಯಿದೆ? ಇಂದು ನಾವು ಎಷ್ಟು ಮಹತ್ವದ ಕಾರ್ಯತತ್ಪರರಾಗಬೇಕಾಗಿದೆ? ಎಂಬುದು ಖಚಿತವಾಗುತ್ತದೆ. ಹೀಗೆ ಈ ಕುಟುಂಬ ಜೀವನವನ್ನು ವಿಚಾರಯುಕ್ತವಾಗಿ ನಡೆಸುತ್ತಿರುವುದು ನಮ್ಮ ಹಿರಿಮೆಗೆ ಕುಂದೇ? ಕಿಚ್ಚೇ? ಇದರಿಂದಾಗಿ ನಮ್ಮ ಸ್ವಾತಂತ್ರ್ಯವು ಕಳೆದು ಹೋಗಿದೆಯೆ? ಇಲ್ಲವೇ ನಿಜವಾದ ಲೋಕಾನುಭವ! ಇದು ನಮ್ಮ ಆದ್ಯ ಕರ್ತವ್ಯವೆಂದು ಒಪ್ಪಲಾರಿರೇನು? ಇದು ನಮ್ಮ ಸ್ವಾತಂತ್ರ್ಯವನ್ನು ಕಿತ್ತಿಲ್ಲ, ಬದಲಾಗಿ ನಮ್ಮ ಪ್ರತಿಭೆಯನ್ನು ಹೆಚ್ಚಿಸಿದೆ. ಆದ್ದರಿಂದಲೇ ಹಿಂದಿನ ಮುನಿಗಳು 'ಪುತ್ರಾತ್ ಶತಗುಣಂ ಪುತ್ರೀ' ಎಂದೂ, ಸ್ತ್ರೀ 'ಉಭಯ ಕುಲೋದ್ಧಾರಿಣೀ' ಎಂದೂ ಮನ್ನಣೆಯನ್ನು ಕೊಟ್ಟಿದ್ದಾರೆ. ಇದನ್ನು ಪಾಲಿಸುವುದೇ ನಮ್ಮ ಆದ್ಯ ಕರ್ತವ್ಯವೆಂದು ಮುಂದಾಗೋಣ!

ಇದೇ ರೀತಿ ಪ್ರತಿಯೊಂದು ಮನೆಯೂ ಲೌಕಿಕ ಸ್ವರ್ಗವಾಗಿ ಪರಿಣಮಿಸಿದರೆ, ನಮ್ಮ ಸಮಾಜದ, ಜನಾಂಗದ, ದೇಶದ ಮಾತ್ರವಲ್ಲ, ಲೋಕದ ಕಲ್ಯಾಣವಾಗಿ ಸುಖಶಾಂತಿ ಸಾಮ್ರಾಜ್ಯವು ನೆಲಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ನವನಾಗರಿಕತೆಯ ಲೌಕಿಕ ಆಡಂಬರದ ಸ್ತ್ರೀ ಸ್ವಾತಂತ್ರ್ಯದ ಹುಚ್ಚನ್ನು ಬಿಟ್ಟು ನಮ್ಮ ಹಿರಿಯರು ಈ ಮೇಲೆ ಕಾಣಿಸಿದಂತೆ ಹಾಕಿಕೊಟ್ಟ ಮಾರ್ಗಗಾಮಿಗಳಾಗಿ, ಉಚ್ಚ ಕಾರ್ಯತತ್ಪರರಾಗಿ ಕರ್ತವ್ಯಪಾಲನೆ ಮಾಡುವಂತಹ ಸುವಿದ್ಯೆಯನ್ನು ಪಡೆದು ಮನೆಯ ರಾಣಿಯಾಗಿ ಲೋಕ ಕಲ್ಯಾಣದ, ಲೋಕ ಶಾಂತಿಯ ಸಾಮ್ರಾಜ್ಯೋತ್ಪಾದಕರಾಗಿ ಮೆರೆಯೋಣ. ಇದು ನಮ್ಮ ಆದ್ಯ ಕರ್ತವ್ಯ.

'ನವಯುಗ.'

---

## ಸರ್ವಾಧಿಕಾರವೇ?

ಆಚಾರ್ಯ ಜೆ. ಬಿ. ಕೃಪಲಾನಿಯವರು ತಮ್ಮ "ವಿಜಿಲ್" ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತ, ಕೇಂದ್ರ ಸರಕಾರದಲ್ಲಿ ನೆಹರು ಪಟೇಲರ ಪ್ರಾಧಾನ್ಯವೇ ಅಧಿಕವಾಗಿದೆಯೆಂದೂ ಪ್ರಜಾಪ್ರಭುತ್ವ ಸೃಷ್ಟಿಯಲ್ಲಿ ಕೆಲವರೇ ಹಲವು ಮಂದಿಯ ಮೇಲೆ ಅಧಿಕಾರ ಚಲಾಯಿಸುವ ಸರಕಾರವನ್ನು ರಾಷ್ಟ್ರೀಯ ಸರಕಾರವೆನ್ನಬಹುದುವುದಿಲ್ಲವೆಂದೂ ಟೀಕಿಸಿದ್ದಾರೆ.

"ಇಂದು ಇಡೀ ಜಗತ್ತಿಗೆ ತಿಳಿದಿರುವಂತೆ ನಿಜವಾಗಿ ಸರಕಾರದಲ್ಲಿ ಪ್ರಧಾನರು ಮತ್ತು ಉಪಪ್ರಧಾನರು ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಎಲ್ಲಾ ಗಹನ ವಿಚಾರಗಳು ಅವರಿಂದಲೇ ನಿರ್ಧರಿಸಲ್ಪಡುತ್ತಿವೆ. ಕೇಂದ್ರ ಸರಕಾರದ ಹೆಚ್ಚಿನ ಸದಸ್ಯರು ಕೇವಲ ಹೆಸರಿಗೆ ಮಾತ್ರ ಅಧಿಕಾರ ನಡೆಸಿಕೊಂಡಿರುವವರಾಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳು ಎಷ್ಟೆಲ್ಲಾ ಜವಾಬುದಾರಿಕೆ ಮತ್ತು ಹೊಣೆಗಾರಿಕೆ ವಹಿಸಬೇಕೊ ಅಷ್ಟನ್ನು ಅವರು ವಹಿಸಿದಂತೆ ತೋರುವುದಿಲ್ಲ.

"ಕೆಲವರೇ ಸರ್ವಾಧಿಕಾರ ನೋಡಿಕೊಂಡಿರುವ ಇಂತಹ ವ್ಯವಸ್ಥೆಯಿಂದ ಮತ್ತೊಂದು ದೋಷವೂ ಇದೆ. ಪ್ರಧಾನರು ಮತ್ತು ಉಪಪ್ರಧಾನರನ್ನು ಬಿಟ್ಟರೆ ಎಮರ್ಜೆನ್ಸಿ ಕಾಲದಲ್ಲಿ ಜವಾಬುದಾರಿಕೆ ವಹಿಸಲು ಇತರ ಸಮರ್ಥ ಮುಖಂಡರು ಸರಕಾರದೊಳಗೆ ಯಾರೂ ಇಲ್ಲ ಎಂಬ ಭಾವನೆ ದೇಶವು ಕಟ್ಟಿಕೊಳ್ಳುವಂತಾಗಿದೆ. ಈ ರೀತಿ ಕೇವಲ ಎರಡು ವ್ಯಕ್ತಿಗಳ ಮೇಲೆ ಎಷ್ಟೇ ಪ್ರಮುಖರಿರಲಿ, ಅವಲಂಬಿಸಿಕೊಂಡಿರುವುದು ಸರ್ವಾಧಿಕಾರ ಎನಿಸಲಾರದೇ?" ಎಂಬುದಾಗಿ ಆಚಾರ್ಯ ಕೃಪಲಾನಿಯವರು ತಮ್ಮ ಲೇಖನದಲ್ಲಿ ಪ್ರಶ್ನಿಸಿದ್ದಾರೆ.

# ಪನೆ ಬೆಲ್ಲ.

“ನೀರಾವನ್ನು ಜೇನಿನಂತೆ ಸಿಹಿಕರವಾದ ಬೆಲ್ಲವನ್ನಾಗಿ ಮಾರ್ಪಡಿಸಬಹುದು ಈ ಬೆಲ್ಲವು ಕಬ್ಬಿನ ಬೆಲ್ಲಕ್ಕಿಂತ ಉತ್ತಮವಾಗಿದೆ. ಕಬ್ಬಿನ ಬೆಲ್ಲವು ಸಿಹಿಯಾಗಿದೆ ಆದರೆ ಪನೆ ಬೆಲ್ಲವು ಸಿಹಿ ಮತ್ತು ರುಚಿಕರವಾಗಿದೆ. ಕೋಟ್ಯಂತರ ರೂಪಾಯಿ ಬೆಲೆ ಬಾಳುವನ್ನು ಪನೆ ಬೆಲ್ಲವನ್ನು ತಯಾರಿಸಬಹುದು. ಪನೆ ಬೆಲ್ಲವು ಖನಿಜ ಸತ್ವಗಳಿಂದ ಕೂಡಿದ ಉಪ್ಪನ್ನು ಸಹ ಕೊಡುತ್ತದೆ. ವೈದ್ಯರ ಹೇಳಿಕೆ ಮೇರೆ ನಾನು ಯಾವಾಗಲೂ ಪನೆ ಬೆಲ್ಲವನ್ನು ತಿನ್ನುತ್ತೇನೆ. ಪ್ರಕೃತಿಯು ಈ ವಸ್ತುವನ್ನು ಹೇಗೆ ಮಾಡಿಟ್ಟಿದೆಯೆಂದರೆ ಇದನ್ನು ದೊಡ್ಡ ದೊಡ್ಡ ಗಿರಣಿಗಳಲ್ಲಿ ತಯಾರಿಸಲಾಗುವುದಿಲ್ಲ. ಇದನ್ನು ಗ್ರಾಮಗಳಲ್ಲಿ ತಯಾರಿಸುತ್ತಾರೆ. ಎಲ್ಲಿ ಪನೆಮರಗಳಿವೆಯೋ ಅಲ್ಲಿ ಈ ಬೆಲ್ಲವನ್ನು ಸುಲಭದಲ್ಲಿ ತಯಾರಿಸಬಹುದು. ಆಂಧ್ರ ದೇಶದಲ್ಲಿ ಸಾವಿರಗಟ್ಲೆ ಪನೆ ಮರಗಳಿವೆ ಅಲ್ಲಿ ಬೆಲ್ಲವು ಎಲ್ಲಾ ಹಳ್ಳಿಗಳಲ್ಲಿಯೂ ತಯಾರಿಸಲ್ಪಡುವುದು. ಈ ಪ್ರಕಾರವಾಗಿ ದೇಶದ ಬಡತನವನ್ನು ಗಡಿಪಾರು ಮಾಡಬಹುದು. ಇದು ಬಡತನಕ್ಕೆ ತಕ್ಕದಾದ ಔಷಧಿಯಾಗಿದೆ.”

—ಎಂ. ಕೆ. ಗಾಂಧಿ.

### ನೀರಾ ಎಂದರೇನು ?

ಪನೆ ಮರಗಳ ಜಾತಿಗೆ ಸೇರಿದವುಗಳಿಂದ ತೆಗೆಯುವ ಸಿಹಿಯಾದ ರಸಕ್ಕೆ ನೀರಾ ಎಂದು ಹೆಸರು. ನೀರಾವು ಮರದಿಂದ ಬೀಳುವಾಗ ಸೇಂದಿಯಾಗಿರುವುದಿಲ್ಲ. ವಾತಾವರಣದಲ್ಲಿರತಕ್ಕಂತ ಬೇಕ್ಟೀರಿಯಾ ಎಂಬ ಅಣುಗಳು ಸೂರ್ಯನ ರಶ್ಮಿಯು ಬಿದ್ದಾಕ್ಷಣವೆ ನೀರಾದಲ್ಲಿ ಬೆರೆತು ಅದರಲ್ಲಿರುವ ಸಕ್ಕರೆಯ ಅಂಶವನ್ನು ತಿನ್ನಲು ಪ್ರಾರಂಭಿಸುತ್ತದೆ. ಯಾವಾಗ ಸಕ್ಕರೆಯ ಅಂಶವು ತೀರುವುದೋ ಆಗ ನೀರಾವು ಹುಳಿಯಾಗಿ ಸೇಂದಿ ಎನಿಸುತ್ತದೆ ಸೇಂದಿಯಲ್ಲಿ ಬೆಲ್ಲವನ್ನು ತಯಾರಿಸಲು ಸಾಧ್ಯವಿಲ್ಲ ಆದರೆ ಶುದ್ಧವಾದ ನೀರಾದಿಂದ ಬೆಲ್ಲಮಾಡಿ ಉಪಯೋಗಿಸಿದರೆ ನಾವು ದೃಢಕಾಯರಾಗುತ್ತೇವೆ. ನೀರಾವು ರಕ್ತವನ್ನು ಶುದ್ಧೀಕರಿಸುತ್ತದೆ. ಎಲುಬುಗಳಿಗೆ ಶಕ್ತಿಯನ್ನು ಕೊಡುತ್ತದೆ. ಆದುದರಿಂದ ಪ್ರತಿಯೊಬ್ಬನು ಅದರಿಂದಾದ ಬೆಲ್ಲವನ್ನು ಉಪಯೋಗಿಸಿ, ಹೆಚ್ಚಿನ ಆಹಾರ ಬೆಳೆಯಿಸಲು ಸಹಾಯವನ್ನು ಕೊಡಬೇಕು.

### ಪನೆ ಬೆಲ್ಲದಲ್ಲಿರುವ ಆಹಾರ ಶಕ್ತಿಗಳು.

| | |
|---|---|
| ನೀರು | 84.42% |
| ಸಕ್ಕರೆ ಅಂಶ | 14 6% |
| ಮೇಣ | 00 56% |
| ಖನಿಜ ಸತ್ವ | 00 26% |
| ಸೇಂದಿಯ ವಸ್ತು | 00.12% |
| ಕೊಬ್ಬು | 00 04% |

ಶರೀರದಲ್ಲಿ ಕೊಬ್ಬು ಪದಾರ್ಥವು ಶ್ವಾಸಕೋಶವನ್ನು ಕಾಪಾಡುತ್ತದೆ. ಶಾರೀರ ಹೈಡ್ರೇಟಿನ ಕೆಲಸವನ್ನು ಮಾಡುತ್ತದೆ. ಒಬ್ಬನಿಗೆ ದಿನಕ್ಕೆ ಕಡಿಮೆ ಪಕ್ಷ 5 ತೊಲೆಯಾದರೂ ಈ ಸತ್ವಬೇಕು.

ಪ್ರೋಟೀನ್ ಶರೀರದಲ್ಲಿ ಮಾಂಸ ಬೆಳೆಯಲು ಸಹಾಯವನ್ನು ಮಾಡುತ್ತದೆ. ಮನುಷ್ಯರಿಗೆ ದಿವಸಕ್ಕೆ ಸಾಧಾರಣವಾಗಿ ಹತ್ತು ತೊಲೆಯಾದರೂ ಬೇಕು. ಖನಿಜ ಸತ್ವಗಳಿಂದ ಕೂಡಿದ ಉಪ್ಪು, ಮತ್ತು ಧಾತುಗಳು ನಮ್ಮ ಶರೀರದಲ್ಲಿ ಸರಿಯಾದ ಪ್ರಮಾಣದಲ್ಲಿ ಇಲ್ಲದಿದ್ದರೆ ಸ್ನಾಯುಗಳು ಹಿಡಿಯುತ್ತದೆ. ಮತ್ತು ಶಕ್ತಿಹೀನರಾಗುತ್ತೇವೆ. ಆದ್ದರಿಂದ ಈ ಬೆಲ್ಲ ತಯಾರಿಸುವ ಉದ್ಯಮಕ್ಕೆ ಎಲ್ಲರೂ ಸಹಾಯಕರಾಗಬೇಕು.

ಪನೆ ಮರವು ಪ್ರಕೃತಿಯು ಮುಫತ್ತಾಗಿ ಕೊಟ್ಟ ಐಶ್ವರ್ಯವಾಗಿದೆ. ಪನೆ ಬೆಲ್ಲ ಕೈಗಾರಿಕೆಯೂ ಪೂರ್ಣವಾಗಿ ಗ್ರಾಮೋದ್ಯೋಗದ ಕೈಗಾರಿಕೆಯಾಗಿದೆ. ಪನೆ ಬೆಲ್ಲವು ಪಾನನಿರೋಧಕ್ಕೆ ಸಹಾಯವನ್ನೀಯುತ್ತದೆ. ಪನೆ ಬೆಲ್ಲವು ಧಾತು ಬಲವರ್ಧಕ ಆಹಾರ ಪದಾರ್ಥವಾಗಿದೆ. ಪನೆ ಬೆಲ್ಲದಲ್ಲಿ ಔಷಧಿಯ ಸತ್ವಗಳಿವೆ. ಆದ್ದರಿಂದ ಈ ಉದ್ಯಮದಿಂದ ನಾಡಿನ ಸರ್ವಾಂಗೀಣ ಹಿತವಾಗುವದು.

---

## ಮಲೇರಿಯಾ ಇಲಾಖೆ.

ನೊಣಗಳು ಸಾಯದೇ ಇರುವ ಕಾರಣದಿಂದ ಸಾವೀಗ ಸ್ಪ್ರೇ ಮಾಡುತ್ತಿರುವ ಡಿ. ಡಿ ಟಿ. ಯು ಪ್ರಯೋಜನವಿಲ್ಲವೆಂದು ಜನರಲ್ಲಿ ಉಂಟಾಗಿರುವ ತಪ್ಪು ಭಾವನೆಯನ್ನು ತಿಳಿಯಲು ವಿಷಾದಿಸುತ್ತೇವೆ. ಮಳೆಯ ಅಭಾವದಿಂದ ಮನೆ ಮತ್ತು ಸುತ್ತುಮುತ್ತಲಿನ ಎಲ್ಲಾ ಕಡೆಗಳಲ್ಲೂ ನೊಣಗಳು ದಿನವಹಿ ಹೆಚ್ಚುತ್ತಿರುವುದನ್ನು ಕಾಣಬಹುದು. ಇನ್ನೂ ಸೂಕ್ಷ್ಮವಾಗಿ ನೋಡಿದರೆ ನೊಣಗಳು ಮನೆಯ ಹೊಸ್ತಿಲುಗಳ ಮೇಲೂ, ನೆಲದ ಮೇಲೂ ಮೇಜು ಮತ್ತು ಹಾಸಿಗೆಗಳ ಮೇಲೂ ಕೂರುವುದನ್ನು ಕಾಣಬಹುದು. ಇಂಥಾ ಸ್ಥಳಗಳಲ್ಲಿ ಡಿ ಡಿ. ಟಿ. ಇರುವುದಿಲ್ಲ. ಡಿ. ಡಿ. ಟಿ ಯನ್ನು ಸೊಳ್ಳೆಗಳ ನಾಶಕ್ಕಾಗಿ ಅವುಗಳು ಸಾಧಾರಣವಾಗಿ ವಿಶ್ರಮಿಸುವ ಸ್ಥಳಗಳಲ್ಲಿ ಸ್ಪ್ರೇ ಮಾಡುವುದಾಗಿದೆ. ಹೀಗೆ ಸ್ಪ್ರೇ ಮಾಡಿದ ಗೋಡೆಗಳ ಮೇಲೆ ನೊಣಗಳು ಕೂತರೆ ಅವುಗಳು ನಿಶ್ಚಯವಾಗಿಯೂ ಸಾಯುತ್ತವೆ

ಈಗ ಸ್ಪ್ರೇ ಮಾಡುವ ಡಿ. ಡಿ ಟಿ ಯ ಶಕ್ತಿಯನ್ನು ಸ್ವಲ್ಪವೂ ಕಡಿಮೆ ಮಾಡಿರುವುದಿಲ್ಲವೆಂದು ದೃಢವಾಗಿ ಹೇಳುತ್ತೇವೆ.

ಸಿ. ಬಿ. ಕಾರ್ಯಪ್ಪ,
ಮಲೇರಿಯಾ ಆಫೀಸರ್.

---

## ೧೫ ಲಕ್ಷ ರೂ. ವರದಕ್ಷಿಣೆ

ಜೋಧಪುರ ಮಹಾರಾಜರ ತಂಗಿ ರಾಜಕುಮಾರಿ ರಾಜೇಂದ್ರ ಕುನವರಬಾಯಿ ಇವಳ ವಿವಾಹವು ಬರೋಡೆಯ ಯುವರಾಜನೊಂದಿಗೆ ಮೊನ್ನೆ ಶನಿವಾರ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಮಾರವಾಡಿ ಪದ್ಧತಿಯಂತೆ ವಧುವಿನ ಜೊತೆಗೆ ಹೋರಲಿರುವ ೧೭ ಪರಿಚಾರಿಕೆಯರನ್ನೊಳಗೊಂಡ ೧೫ ಲಕ್ಷ ರೂ. ವಸ್ತ್ರ ಒಡವೆ ಮೊದಲಾದವು ವರದಕ್ಷಿಣೆ ರೂಪದಲ್ಲಿ ಕೊಡಲ್ಪಟ್ಟ ಮುಖ್ಯ ವಸ್ತುಗಳು ಇಂತಿರುತ್ತವೆ.

ಒಂದು ಆನೆ, ಹದಿನೇಳು ಕುದುರೆಗಳು, ಐದು ಮೋಟಾರು ಕಾರುಗಳು, ಒಂದು ಭರ್ಜರಿ ಫಾಕ್ಟರಿ, ಒಂದು ಶಸ್ತ್ರಾಗಾರ, ಬೆಳ್ಳಿಯ ಸ್ನಾನದ ತೊಟ್ಟಿಗಳು ವಜ್ರ ವೈಢೂರ್ಯ ಹಾಗೂ ಮುತ್ತುಗಳು. ವರನು ನಗರದಲ್ಲಿ ಪ್ರವೇಶಿಸಿದಾಗ ಮಹಾರಾಜರ ತಾಯಿ ರೂ ೧೦,೦೦೦ ನಾಣ್ಯಗಳನ್ನು ನಿವಾಳಿಸಿ ಚೆಲ್ಲಿದಳು।

## ವರ್ಷಂಪ್ರತಿ ರೋಗಗಳಿಗೆ ಬಲಿ ೬೦ ಲಕ್ಷ ಜನರು

ಭಾರತದಲ್ಲಿ ಪ್ರತಿ ವರ್ಷ ಸುಮಾರು ೬೦ ಲಕ್ಷ ಜನರು ಬೇರೆ ಬೇರೆ ರೋಗಗಳಿಂದ ಮರಣ ಹೊಂದುವರು ಇದರಲ್ಲಿ ಮಲೇರಿಯಾದಿಂದಲೇ ೨೪ ಲಕ್ಷ ಜನರೂ ಮರಣ ಹೊಂದುವರು.

ಸರಕಾರದವರು ರೋಗ ನಿವಾರಣೋಪಾಯಗಳನ್ನು ಕಂಡು ಹಿಡಿದು ಅವುಗಳಿಂದ ಜನರ ಪ್ರಾಣ ರಕ್ಷಣೆ ಮಾಡಲು ದೃಢ ನಿಶ್ಚಯ ಮಾಡಿರುವರೆಂದೂ ಈ ಕಾರ್ಯದಲ್ಲಿ ಯು. ರಾ. ಸಂಘದ ಆರೋಗ್ಯ ಸಂಸ್ಥೆಯ ಸಹಕಾರ ದೊರೆಯುವದೆಂದೂ ಆರೋಗ್ಯ ಶಾಖೆಯ ವಕ್ತಾರರನು ಹೇಳಿದನು.

ವಿದೇಶಿಯ ತಜ್ಞರ ೬ ಪಥಕಗಳು ಮುಂಬಯಿ, ಮದ್ರಾಸು, ಮೈಸೂರು, ಓಡಿಸಾ, ಪಂಜಾಬ, ದಿಲ್ಲಿ ಪ್ರಾಂತಗಳಲ್ಲಿ ಸಂಚರಿಸಿ ಅಲ್ಲಿ ಸ್ಥಳೀಯ ಡಾಕ್ಟರರಿಗೆ ರೋಗ ಪ್ರತಿಬಂಧಕ ಯೋಜನೆಯಲ್ಲಿ ಪಾತ್ರವಹಿಸಲು ತಕ್ಕ ಜ್ಞಾನ ಮಾಡಿಕೊಡಲಿರುವರು.

## ‘ವಯಸ್ಕ ಹುಡುಗಿಯರು ಸಿನಿಮಾ ನೋಡುವದು ತಪ್ಪು’

ವಿವಾಹವಯಸ್ಕರಾದ ಹುಡುಗಿಯರು ಸಿನಿಮಾಗಳನ್ನು ಹೆಚ್ಚಾಗಿ ನೋಡುವುದು ಹಾನಿಕರ. ಅವರು ಚಂಚಲ ಚಿತ್ತರಾಗಿ ಸಿನಿಮಾ ತಾರೆಯರಾಗಬಹುದು ಅಥವಾ ಶೃಂಗಾರ ರಾಭಾತ ಕಥೆಗಳ ನಾಯಿಕೆಯರಾಗಬಹುದು ಎಂಬುದಾಗಿ ಗೋರಖ್‌ಪುರದ ಅಸಿಸ್ಟೆಂಟ್ ಸೆಷನ್ಸ್ ಜಡ್ಜರು ಇಬ್ಬರು ಹುಡುಗಿಯರ ಅಪಹಾರದ ಒಂದು ಕೇಸಿನಲ್ಲಿ ತೀರ್ಪು ಕೊಡುತ್ತಾ ನುಡಿದರು.

---

## For Sale

No. 6 Rice Mill, 24 H P Oil Engine for sale. Good working condition Cost can be settled, after personal inspection.

**C K. Thamaiah,**
*Ponnampet, S Coorg*

---



ಮುಂದಿನ ... ಯನ್ನು ... ಗೊತ್ತು ಸಿದ್ಧವಾಗುವ ಸಮಯದಲ್ಲಿ—

ದಿ ಓರಿಯಂಟಲ್
ಅಶ್ಯೂರನ್ಸ್ ಸೊಸೈಟಿ ಲಿಮಿಟೆಡ್
ಜೀವ-ಅಗ್ನಿ-ಮೋಟಾರು-ಮರೀನ್-ಅಪಘಾತ.
ಹೆಡ್ ಆಫೀಸ್ ಬೊಂಬಾಯಿ. ಸ್ಥಾಪನೆ 1907.
ಶಾಖೆಗಳು—ಹಿಂದೂಸ್ತಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ

GFK3

## ದಿ ಟ್ರಾಪಿಕಲ್

**ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.**

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಛೇರಿ:— ಹೊಸ ದಿಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ಬಿ. ಯು. ಅಚ್ಚಣ, ಏಜೆನ್ಸಿ ಸೂಪರಿಂಟೆಂಡೆಂಟ್, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

# ವಾರ್ತೆಗಳು.

ತೀರ ತಡವೆಂದರೆ ೧೯೫೧ರ ಏಪ್ರಿಲ್ ತಿಂಗಳೊಳಗಾಗಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆಯನ್ನು ನಡೆಸಲು ಸರ್ಕಾರ ನಿರ್ಧರಿಸಿದೆ ಎಂದು ಪ್ರಧಾನಮಂತ್ರಿ ಪಂಡಿತಜೀಯವರು ಪಾರ್ಲಿಮೆಂಟಿನಲ್ಲಿ ನುಡಿದರು.

ಒಂದು ಸಾವಿರದ ಮತ್ತು ಐನೂರರ ನೋಟುಗಳನ್ನು ಪುನಃ ಬಳಕೆಯಲ್ಲಿ ತರಬೇಕೆನ್ನುವ ಸೂಚನೆಯನ್ನು ಭಾರತ ಅರ್ಥ ಮಂತ್ರಿಗಳಾದ ಶ್ರೀ ಜಾನ್ ಮಥಾಯಿಯವರು ನೇರವಾಗಿ ನಿರಾಕರಿಸಿದ್ದಾರೆಂದು ಮುಂಬಯಿಯ ವರ್ತಮಾನ ಹೇಳುತ್ತದೆ.

೧೯೫೦ರ ಮಾರ್ಚಿ ತಿಂಗಳ ಒಂದನೆಯ ದಿನಾಂಕಕ್ಕೆ ಭಾರತದ ಜನಸಂಖ್ಯೆಯು ೩೪,೭೩,೪೦,೦೦೦ ಇದೆಯೆಂದು ಜನಗಣತಿ ಕಮಿಶನರು ಅಂದಾಜು ಮಾಡಿದ್ದಾರೆ.

ಮತ್ತೊಂದು ಜಾಗತಿಕ ಸಂಗ್ರಾಮವು ನಡೆಯುವ ಸಂಭವವಿಲ್ಲವೆಂದು ಸಂಯುಕ್ತ ಅಮೇರಿಕದ ಅಧ್ಯಕ್ಷ ಟ್ರೂಮನರು ಇತ್ತೀಚಿಗೆ ಮಿಲಿಟರಿ ಮುಖಂಡರೊಡನೆ ಅಭಿಪ್ರಾಯ ವ್ಯಕ್ತಪಡಿಸಿದರು.

ಡೆಲ್ಲಿಯಲ್ಲಿ ಭಾರತ-ಪಾಕಿಸ್ತಾನಗಳೊಳಗೆ ನಡೆದ ಮೈನಾರಿಟಿ ಒಪ್ಪಂದಕ್ಕೆ ಯೋಗ್ಯ ಸಹಕಾರ ನೀಡಬೇಕೆಂದು ಭಾರತದ ಉಪಪ್ರಧಾನ ಸರ್ದಾರ್ ವಲ್ಲಭಾಯಿ ಪಟೇಲರು ಕಲ್ಕತ್ತದಲ್ಲಿ ಭಾಷಣ ಮಾಡುತ್ತ ಜನರೊಡನೆ ವಿನಂತಿ ಮಾಡಿಕೊಂಡರು.

೧೯೫೦ರ ಜನರ ಪ್ರಾತಿನಿಧ್ಯದ ಕುರಿತಾದ ಮಸೂದೆಯನ್ನು ಇತ್ತೀಚಿಗೆ ಭಾರತ ಸರಕಾರ ಮಂಜೂರು ಮಾಡಿದಾಗ ಕೆಲವು ಎಸೆಂಬ್ಲಿಗಳ ಸದಸ್ಯರ ಸಂಖ್ಯೆ ಹೆಚ್ಚಿಸಲ್ಪಟ್ಟಿತು. ಮದ್ರಾಸು ಎಸೆಂಬ್ಲಿಯ ಸದಸ್ಯರ ಸಂಖ್ಯೆ ೩೦೦ರಿಂದ ೩೭೫ಕ್ಕೆ ಏರಿಸಲ್ಪಟ್ಟಿದೆ. ಹೈದರಾಬಾದು—೧೫೦ರಿಂದ ೧೭೫ಕ್ಕೆ; ಮೈಸೂರು—೭೭ರಿಂದ ೯೯ಕ್ಕೆ; ಕೊಚ್ಚಿನ್—ತಿರುವಾಂಕೂರ್ ಯೂನಿಯನ್—೮೭ರಿಂದ ೧೦೮ಕ್ಕೆ.

ಹೈದರಾಬಾದಿನ ಮಧಿರ ತಾಲೂಕಿನಲ್ಲಿ ಅಬ್ಬಾಗುಡಮ್ ಎಂಬ ಗ್ರಾಮವನ್ನು ಕಮ್ಯೂನಿಸ್ಟರು ಸುಟ್ಟುಹಾಕಿದರು. ಈ ಪ್ರಸಂಗದಲ್ಲಾದ ನಷ್ಟ ಸುಮಾರು ೧ ಲಕ್ಷ ರೂಪಾಯಿಗೆ ಏರಿರಬಹುದೆಂದು ಅಂದಾಜು ಮಾಡಲಾಗಿದೆ.

೧೯೫೦ನೇ ಜನವರಿ ತಾ. ೧ರ ಮೊದಲ್ಗೊಂಡು ಏಪ್ರಿಲ್ ತಾ. ೧೩ರ ವರೆಗೆ ಮದ್ರಾಸು ಪ್ರಾಂತ್ಯದಲ್ಲಿ ೭೭ ಮಂದಿ ಕಮ್ಯೂನಿಸ್ಟರನ್ನು ಗುಂಡಿಟ್ಟು ಕೊಲ್ಲಲಾಯಿತು.

ಮಣಿಪುರ, ತ್ರಿಪುರಾ ಮತ್ತು ಆಸ್ಸಾಮ್‌ಗಳಲ್ಲಿ ಯುದ್ಧ ಕಾಲದ, ಸುಮಾರು ೭ ವಿಮಾನ ನಿಲ್ದಾಣಗಳ ಅಭಿವೃದ್ಧಿಯನ್ನು ಭಾರತ ಸರಕಾರವು ಆರಂಭಿಸಿರುವುದು.

ಅನ್ಯಾಯ ರೀತಿ ವಿಶೇಷವಾಗಿ ಆಸ್ತಿಪಾಸ್ತಿ ಸಂಪಾದಿಸಿದ ಸಂಬಂಧದಲ್ಲಿ ಪಶ್ಚಿಮ ಬಂಗಾಳ ಸರಕಾರದ ವರ್ಕ್ಸ್ ಮತ್ತು ಬಿಲ್ಡಿಂಗ್ಸ್ ಇಲಾಖೆಯ ಚೀಫ್ ಎಂಜನೀಯರಾಗಿದ್ದ ಶ್ರೀ ಶರತ್‌ಚಂದ್ರಧಾಮ್‌ರವರನ್ನು ಕೆಲಸದಿಂದ ತೆಗೆದು ಹಾಕಿ ಪೆನ್‌ಷನ್ ಅಥವಾ ಇತರ ಬೇರೆ ಅಲೋಯನ್ಸ್ ಕೊಡಕೂಡದೆಂದು ಸರ್ಕಾರ ಆಜ್ಞೆ ಮಾಡಿದೆ

ಮೇ ೭ನೇ ತಾರೀಖಿನಿಂದ ಭಾನುವಾರಗಳಲ್ಲಿ ಎಕ್ಸ್‌ಪ್ರೆಸ್ ಡೆಲಿವರಿ ಹೊರತು ಮತ್ತಾವ ಕಾಗದಪತ್ರಗಳನ್ನೂ ಡೆಲಿವರಿ ಮಾಡುವುದಿಲ್ಲ. ಇದೇ ರೀತಿ ಸಾಧಾರಣ ಕಾಗದ ಪತ್ರಗಳ ಕ್ಲಿಯರೆನ್ಸ್ ಕೂಡಾ ಆ ದಿನಗಳಲ್ಲಿ ನಡೆಯುವುದಿಲ್ಲ. ಲೇಟ್ ಫೀ ಹಚ್ಚಿದ ಕಾಗದ ಪತ್ರಗಳನ್ನು ಮಾತ್ರ ಅದಕ್ಕಾಗಿ ನಿರ್ದಿಷ್ಟಪಡಿಸಿದ ಆಫೀಸುಗಳಲ್ಲಿಟ್ಟಿರುವ ಲೇಟ್ ಫೀ ಕಾಗದಗಳ ಪೆಟ್ಟಿಗೆಗಳಿಂದ ಮತ್ತು ಆರ್ ಎಂ ಎಸ್ ಆಫೀಸುಗಳು ಮತ್ತು ಟ್ರೈನ್ ಮೈಲ್ ವ್ಯಾನುಗಳಿಂದ ಕ್ಲಿಯರ್ ಮಾಡಲಾಗುವುದು. ತಂತಿ ಆಫೀಸುಗಳನ್ನು ಸಹ ಭಾನುವಾರಗಳಲ್ಲಿ ಮುಚ್ಚಲಾಗುವುದು. ಎಲ್ಲೋ ಕೆಲವು ಗಂಟೆಗಳ ಕಾಲ ಎಕ್ಸ್‌ಪ್ರೆಸ್ ಟೆಲಿಗ್ರಾಂಗಳಿಗಾಗಿ ತೆರೆದಿಡಲಾಗುವುದು.

ಪಂಡಿತ ನೆಹರೂರವರು ತಮ್ಮ ೧೩ ವರ್ಷ ಕಾರಾಗೃಹವಾಸದಲ್ಲಿ ಬರೆದಿರುವ ಪುಸ್ತಕಗಳನ್ನು ಯುಗೋಸ್ಲೋವಿಯಾದಲ್ಲಿನ ಭಾರತದ ಪ್ರಥಮ ರಾಯಭಾರಿ ಶ್ರೀ ಬಿ ಆರ್ ಸೆನ್‌ರವರು ಮಾರ್ಷಲ್ ಟಿಟೋರಿಗೆ ಕಳಿಸಿದರು. ಬೆಲ್‌ಗ್ರೇಡಿನ ಹೊರಗಿರುವ ಪ್ರೈವೇಟ್ ಪ್ಯಾಲೆಸಿನಲ್ಲಿ ಈ ಪ್ರಥಮ ಭೇಟಿ ನಡೆಯಿತು.

ಮುಂಬಯಿ ಅಬಕಾರಿ ಮಂತ್ರಿ ಶ್ರೀ ಎಲ್. ಎಂ. ಪಾಟೀಲರು ನೂರಕ್ಕೆ ಎರಡರಷ್ಟು ಮಾದಕ ದ್ರವ್ಯವಿರುವ ಬೀರನ್ನು ಮಾರಾಟಮಾಡಲು ಅಪ್ಪಣೆಕೊಡುವುದು ಪಾನಪ್ರತಿಬಂಧ ಧೋರಣಕ್ಕೆ ವಿಸಂಗತವಲ್ಲವೆಂದು ಹೇಳಿರುವರು.

ಸಂಯುಕ್ತ ಅಮೇರಿಕದ ಮಕ್ಕಳಿಗೆ ಭಾರತ ಪ್ರಧಾನ ಪಂಡಿತ ನೆಹರೂರವರು ಉಡುಗೊರೆಯಾಗಿ ಕಳಿಸಿದ 'ಅಶೋಕ' ಮತ್ತು 'ಶಾಂತಿ' ಎಂಬ ಮರಿಯಾನೆಗಳನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಹಸ್ತದಿಂದ ವಾಶಿಂಗ್ಟನ್ ಮೃಗಾಲಯಕ್ಕೆ ಒಪ್ಪಿಸಲಾಯಿತು.

---

### ಸಾಧುಗಳ ಸಂಚಾರ.

ಜನರಲ್ಲಿ ನೈತಿಕ ಸುಧಾರಣೆಯ ಮಟ್ಟವನ್ನು ಏರಿಸುವ ಉದ್ದೇಶವನ್ನಿಟ್ಟುಕೊಂಡು ತತ್ಸಂಬಂಧ ಪ್ರಚಾರಕ್ಕಾಗಿ ೭೦೦ ಮಂದಿ ಸಾಧುಗಳು ಕಾಲ್ನಡಿಗೆಯ ಸಂಚಾರದಿಂದ ಭಾರತದ ಬೇರೆ ಬೇರೆ ಹಳ್ಳಿಗಳನ್ನು ಶೀಘ್ರದಲ್ಲೇ ಸಂದರ್ಶಿಸುವರಿದ್ದಾರೆ. ಈ ವಿಷಯವನ್ನು ಇತ್ತೀಚಿಗೆ ಡಿಲ್ಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಒಂದು ಸಮ್ಮೇಳನದಲ್ಲಿ ವ್ಯಕ್ತಪಡಿಸುತ್ತ ಸಾಧುಗಳ ಮುಖಂಡ ಆಚಾರ್ಯ ತುಲಸೀಜಿಯವರು, ಹದಿಮೂರು ಶರ್ತಗಳ ಒಂದು ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆಯೆಂದು ತಿಳಿಸಿದರು. ಸಾಧುಗಳು ತಮ್ಮ ಪ್ರಚಾರ ಕಾರ್ಯದಲ್ಲಿ ತಮ್ಮ ಮುಖಂಡನ ಸಂದೇಶವನ್ನು ಪ್ರಚಾರ ಮಾಡುವುದರ ಜೊತೆಗೆ ಈ ಕೆಳಗಿನ ತತ್ವಜ್ಞಾನಗಳನ್ನೂ ಪ್ರಚಾರ ಮಾಡುವರು.

ಇತರ ಜನಾಂಗಗಳ ಇಲ್ಲವೆ ಸಂಸ್ಥಾನಗಳ ಮೇಲೆ ಆಕ್ರಮಣ ನಡೆಸಬಾರದು.

ಜೀವನದ ಅವಶ್ಯಕತೆಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಸಂಗ್ರಹಿಸಬೇಡಿ.

ವಂಚನೆ ನಡೆಸಬೇಡಿ.

ಈಗಿನ ಶಿಕ್ಷಣ ಪದ್ಧತಿಯನ್ನು ಸುಧಾರಿಸಿರಿ

ಆತ್ಮ ಸಂಯಮಕ್ಕೆ ಗೌರವ ಕೊಡುವುದನ್ನು ಅಭ್ಯಸಿಸಿ.

ಜೀವನದ ಆಧ್ಯಾತ್ಮಿಕ ಮಹತ್ವಕ್ಕೂ ಗಮನ ಕೊಡಲು ಮರೆಯಬೇಡಿ.

---

# ಕುಂಭಮೇಳ

ಹನ್ನೆರಡು ವರ್ಷಗಳಿಗೊಮ್ಮೆ ಹರಿದ್ವಾರದಲ್ಲಿ ನಡೆಯುವ ಕುಂಭಮೇಳ ಸಮಾರಂಭವು ಈ ವರ್ಷ ಅತ್ಯಂತ ಸಡಗರದಿಂದ ಜರಗಿತು. ಕೊನೆಯ ದಿನ ಎರಡು ಲಕ್ಷ ಮಂದಿ ಯಾತ್ರಾರ್ಥಿಗಳು ಪವಿತ್ರ ಗಂಗಾನದಿಯಲ್ಲಿ ಸ್ನಾನಮಾಡಿ ಪಾವನರಾದರು.

ಈ ಬಾರಿ ಮೇಳಕ್ಕೆ ಕೂಡಿದಷ್ಟು ಯಾತ್ರಾರ್ಥಿಗಳ ಸಂಖ್ಯೆ ಈ ಮೊದಲು ಎಂದೂ ಕೂಡಿದ್ದಿಲ್ಲ. ಭಾರತದ ಬೇರೆ ಬೇರೆ ಭಾಗಗಳಿಂದ ಸುಮಾರು ಹನ್ನೆರಡು ಲಕ್ಷ ಮಂದಿ ಯಾತ್ರಾರ್ಥಿಗಳು ಈ ಪುಣ್ಯೋತ್ಸವದಲ್ಲಿ ಭಾಗವಹಿಸಿದ್ದರು.

೧೯೩೮ರಲ್ಲಿ ನಡೆದ ಕುಂಭ ಮೇಳಕ್ಕೆ ಹಾಜರಾದವರ ಸಂಖ್ಯೆ ೪,೫೦,೦೦೦. ಹಿಂದಿನ ಮೇಳಗಳಲ್ಲಿ ಬೆಂಕಿ ಮತ್ತು ವಾಂತಿಬೇಧಿ ರೋಗಗಳ ಉಪಟಳದಿಂದ ಹಲ ಮಂದಿ ಅಕಾಲ ಮೃತ್ಯುವಿಗೀಡಾಗಿದ್ದರೆ ಈ ಸಲ ಅಂತಹ ವಿಪತ್ತುಗಳೇನೂ ಸಂಭವಿಸದೆ ಮೇಳವು ಅತ್ಯಂತ ಜಯಪ್ರದವಾಗಿ ನಡೆಯಿತು. ಏಪ್ರಿಲ್ ತಾ. ೧೩ರಂದು ಮುಖ್ಯ ಸ್ನಾನ ಘಟ್ಟದ ಬಳಿ ನಡೆದ ಜನರ ನೂಕಾಟದಲ್ಲಿ ೫೦ ಮಂದಿ ಮಡಿದುದಲ್ಲದೆ ಇತರ ವಿಷಾದಕರ ಘಟನೆಯೊಂದೂ ನಡೆದುದಿಲ್ಲ. ಕಾಲರಾ ಮತ್ತು ಸಿಡುಬು ರೋಗಗಳಿಗೆ ತುತ್ತಾದವರು ೫ ಮಂದಿ ಮಾತ್ರ. ಈ ರೋಗಿಗಳೂ ಹೊರಗಿಂದ ರೋಗದ ಸೋಂಕು ಹಿಡಿದು ಇಲ್ಲಿಗೆ ಬಂದವರಲ್ಲದೆ ಇಲ್ಲಿ ರೋಗ ತಗಲಿದವರಲ್ಲ. ಮೇಳವು ನಡೆದ ಒಂದು ತಿಂಗಳಲ್ಲಿ ಅಲ್ಲಲ್ಲಿ ಚಿಕ್ಕ ಪುಟ್ಟ ಬೆಂಕಿಯ ಅನಾಹುತಗಳು ನಡೆದಿದ್ದರೂ ಜನರಲ್ಲಿ ಯಾರೂ ಅದಕ್ಕೆ ಬಲಿಯಾದುದಿಲ್ಲ. ಆದರೆ ಈ ಬೆಂಕಿಯ ಪ್ರಕರಣಗಳ ದೆಸೆಯಿಂದ ಸುಮಾರು ೧೧,೦೦೦ ರೂಪಾಯಿಯಷ್ಟು ನಷ್ಟವಾಗಿದೆ. ಕಳೆದ ಮೇಳದಲ್ಲಿ ಬೆಂಕಿಯ ಅನಾಹುತದಿಂದ ಸುಮಾರು ೧ ಲಕ್ಷ ರೂಪಾಯಿ ನಷ್ಟವಾಗಿತ್ತು.

ಮೇಳಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿ ಈ ವರ್ಷ ಮೇಳವು ಸರಕಾರದಿಂದ ನಡೆಸಲ್ಪಟ್ಟಿತು. ಜನರ ನೂಕಾಟವನ್ನು ಹತೋಟಿಯಲ್ಲಿಡುವ ವ್ಯವಹಾರ ವ್ಯವಸ್ಥೆ, ಕಡ್ಡಾಯ ಇನಾಕ್ಯುಲೇಶನ್, ನುಸಿ ನೊಣಗಳ ಹಾವಳಿ ತಡೆಯಲು ಡಿ. ಡಿ. ಟಿ. ಪ್ರಸಾರ ಮುಂತಾದ ವ್ಯವಸ್ಥೆಗಳನ್ನು ನಡೆಸಿದುದರಿಂದ ಮೇಳವು ಅತ್ಯಂತ ಯಶಸ್ವಿಯಾಗಿ ನಡೆಯಿತೆಂದರೆ ಹೆಚ್ಚಾಗಲಾರದು. ಸುಮಾರು ೨೦ ಚದರ ಮೈಲು ವಿಸ್ತಾರ ಪ್ರದೇಶದಲ್ಲಿ ೧೭ ಕಂಟ್ರೋಲ್ ಟವರ್ಸ್ (ಗೋಪುರ)ಗಳನ್ನು ನಿರ್ಮಿಸಿ ಅವುಗಳಿಗೆ ೨೦ ವಾಯರ್‌ಲೆಸ್ ಸೆಟ್ಟುಗಳನ್ನು ಜೋಡಿಸಿ ಜನರ ನೂಕಾಟ ತಡೆವ ವ್ಯವಹಾರ ವ್ಯವಸ್ಥೆ ಹೂಡಲ್ಪಟ್ಟಿತ್ತು.

ಕುಂಭ ಮೇಳ ಕಾಲದಲ್ಲಿ ಏರ್ಪಡಿಸಿದ ಕೈಗಾರಿಕಾ ಪ್ರದರ್ಶನವು ಯಾತ್ರಾರ್ಥಿಗಳಲ್ಲಿ ಪ್ರತಿಯೊಬ್ಬರ ಆಕರ್ಷಣೆಗೆ ಹಾಗು ಮೆಚ್ಚಿಕೆಗೆ ಪಾತ್ರವಾಗಿತ್ತು. ಧಾರ್ಮಿಕ ಚರ್ಚೆಯ ಮತ್ತು ಭಾಷಣಗಳ ಕೇಂದ್ರಗಳು ಪ್ರತ್ಯೇಕ ಸಜ್ಜುಗೊಳಿಸಲ್ಪಟ್ಟಿದ್ದವು. ಮೇಳ ಕ್ಷೇತ್ರದಲ್ಲಿಯ ಬೇರೆ ಬೇರೆ ದೇವಾಲಯಗಳಲ್ಲಿ ಭಜನೆ ಮತ್ತು ಪ್ರಾರ್ಥನೆಗಳು ಅವ್ಯಾಹತವಾಗಿ ನಡೆಯುತ್ತಿದ್ದವು. ಹಿಮಾಲಯದಿಂದ ಸುಮಾರು ಒಂದು ಸಾವಿರ ಮಂದಿ ತ್ಯಾಗಿಗಳು ಸಮ್ಮೇಳನಕ್ಕೆ ಹಾಜರಾಗಿದ್ದರು. ಯಾತ್ರಾರ್ಥಿಗಳಿಗೆ ಮೇಳ ಮುಗಿದು ತಮ್ಮ ಊರುಗಳಿಗೆ ಹೋಗಲು ತಕ್ಕ ವ್ಯವಸ್ಥೆ ರೈಲ್ವೇ ಅಧಿಕಾರಿಗಳ ಕಡೆಯಿಂದ ಮಾಡಲ್ಪಟ್ಟಿತ್ತು. ಪ್ರತೀ ಅರ್ಧ ತಾಸಿಗೆ ಒಂದು ರೈಲು ಬಂಡಿಯನ್ನು ಬೇರೆ ಬೇರೆ ಊರುಗಳಿಗೆ ಬಿಡುತ್ತಿದ್ದರು. ನೂರಾರು ಬುಕ್ಕಿಂಗ್ ಆಫೀಸುಗಳನ್ನು ಮೇಳ ಕ್ಷೇತ್ರದಲ್ಲೇ ತೆರೆದು ಯಾತ್ರಾರ್ಥಿಗಳಿಗೆ ಸೌಕರ್ಯ ಮಾಡಿ ಕೊಡಲಾಗಿತ್ತು.

ಸರಕಾರವು ಮೇಳಕ್ಕಾಗಿ ಸುಮಾರು ೩೭ ಲಕ್ಷ ರೂಪಾಯಿ ಖರ್ಚು ಮಾಡಿರುವುದು. ಇದರಲ್ಲಿ ಸುಮಾರು ೧೩ ಲಕ್ಷ ರೂಪಾಯಿಯಷ್ಟು ಯಾತ್ರಾರ್ಥಿಗಳ ಮೇಲೆ ಹೊರಿಸಿದ ಬೇರೆ ಬೇರೆ ತೆರಿಗೆಗಳಿಂದ ವಸೂಲಾಗಬಹುದೆನ್ನಲಾಗಿದೆ.

ಪ್ರಭಾತ.

## ಗ ಮ ನಿ ಸಿ ರಿ!

ದಿನದಿಂದ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ಸಮಾರಂಭಕ್ಕೂ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ವೊ ಬ್ರದರ್ಸ್ ಎತ್ತಿದ ಕೈ!

**ಪಟ್ವೊ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
52-17 ಟೌನ್‌ಹಾಲಿನ ಎದುರು, ಮೈಸೂರು.



**ಭ ದ್ರ ತೆ!** 17 ವರ್ಷಗಳ ಸುದೀರ್ಘ ಅನುಭವಶೀಲತೆ!! **ಅನುಕೂಲತೆ !!**

## ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,
**ಕದ್ರಿ ರೋಡ್, ಮಂಗಳೂರು.**

ಠೇವಣಿ ಠೇವಣಾತಿ ಬಡ್ಡಿದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, **ಮಡಿಕೇರಿ** ಮತ್ತು ಮಂಜೇಶ್ವರ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**



## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | |
|---|---|
| ಹೊಸ ಉದ್ಯಮ ರೂ. .... .... | 6,13,00,000 ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 ,, |
| ಒಟ್ಟು ನಿಧಿ. ರೂ. .... .... .... | 8,30,00,000 ,, |
| ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 ,, |

1,28,000 ಕ್ಕೆ ಮೀರಿದ ತೃಪ್ತಿ ಹಿಡಿದ ಪಾಲಿಸಿದಾರರು.

**ಶಕ್ತಿ. ಸೇವೆ ಭದ್ರತೆ.**

## ಎಂ ಪೈ ರ್ ಆ ಫ್ ಇಂ ಡಿ ಯಾ

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬೈ.

ಅಂಗ ಕಛೇರಿ:
ಮೈಸೂರ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

**ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 63,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ಮಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.



# CRESCENT

**FOR PROTECTION AND SERVICE.**

It is best to represent and insure with,
The CRESCENT Insurance Co., Ltd,
*H: O: BOMBAY.* [*Established 1919.*

*For particulars write to:*

**Sri B. A. Poovaiah** *Organiser.* *Pollibetta, Coorg.*
or
**The Branch Manager,** *22 B. Mahatma Gandhi Road, Bangalore 1.*

**ಸು ರ ಕ್ಷಿ ತ ವಾ ದ ಜೀ ವ ವಿ ಮೆ ಪ ಡೆ ಯ ಲು**

## ಕ್ರೆ ಸೆ ೦ ಟ್

**ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.**



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

52-37 ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.


Edited, Printed and Published by P. I. Belliappa at 'Kodagu Press, Mercara. for 'Kodagu' Ltd.

Reg. No. M. 1050
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.
ಸಂಪುಟ ೨೮ | ತಾರೀಕು ೧೨-೫-೧೯೫೦ನೇ ಶುಕ್ರವಾರ | ಸಂಚಿಕೆ ೫೦

### ಸಮಾಜವಾದದಲ್ಲಿ

## 'ಸಮತ್ವ' ಶಬ್ದದ ಅರ್ಥ.

ಲೇ:—ಶ್ರೀ ಎಲ್. ಶ್ರೀಕಂಠಯ್ಯ.

ಸಮಾಜವಾದವೆಂದರೆ ಅನೇಕರು ಅನೇಕ ವಿಧಗಳಲ್ಲಿ ಅರ್ಥಕಲ್ಪಿಸಿ ಅದರ ಸ್ವರೂಪವನ್ನು ತಿಳಿಸಲೆತ್ನಿಸಿದ್ದಾರೆ. ಈಗ ನಾವು ಈ ವಿವಿಧ ಅರ್ಥಗಳನ್ನು ಪರೀಕ್ಷಿಸಿ ಇವುಗಳಲ್ಲಿ ಸರಿಯಾದದ್ದು ಯಾವುದು ಎಂಬುದನ್ನು ವಿಂಗಡಿಸಿ ಸಮಾಜವಾದದ ನಿಜ ಸ್ವರೂಪವನ್ನು ತಿಳಿಯೋಣ. ಇದರ ಆವಶ್ಯಕತೆಯನ್ನು ಇನ್ನೊಂದು ಬಾರಿ ಒತ್ತಿ ಹೇಳಬೇಕಾಗಿಲ್ಲ.

### ಸಮತ್ವ ಶಬ್ದದ ಅರ್ಥ.

ಮೊದಲು ಸಮಾಜವಾದದಲ್ಲಿ 'ಸಮತ್ವ' ಶಬ್ದಕ್ಕೆ ಇರುವ ಅರ್ಥವನ್ನು ತಿಳಿಯೋಣ. ಶಬ್ದವು ಎಷ್ಟು ಸುಲಭವಾಗಿದೆಯೋ ಅಷ್ಟೇ ಕಠಿಣವಾಗಿದೆ. ಲೋಕಾಭಿರಾಮವಾಗಿ ಈ ಶಬ್ದಕ್ಕೆ ನಾನಾ ವಿಧವಾದ ಅರ್ಥವನ್ನು ಕೊಟ್ಟಿದ್ದಾರೆ. ಹೀಗೆ ರೂಢಿಯಲ್ಲಿರುವ ಅರ್ಥಗಳನ್ನು ವಿಂಗಡಿಸಿ ತರುವಾಯ 'ಸಮತ್ವ' ಶಬ್ದಕ್ಕೆ ವೈಜ್ಞಾನಿಕ ಸಮಾಜವಾದವನ್ನು ಸ್ಥಾಪಿಸಿದ ಮಾರ್ಕ್ಸ ಮತ್ತು ಎಂಗಲ್ಸರ ಪ್ರಕಾರ ಏನು ಅರ್ಥವಿದೆ ಎಂಬುದನ್ನು ತಿಳಿಯಬೇಕಾಗಿದೆ.

ಕೆಲವರು ಸಮತ್ವಕ್ಕೆ ವಿರೋಧಿಗಳು. ಇವರ ಪ್ರಕಾರ ಪ್ರಕೃತಿಯಲ್ಲೇ ಸಮತ್ವವಿಲ್ಲದಿರುವಾಗ ಸಮಾಜದಲ್ಲಿ ಸಮತ್ವ ಬರುವದು ಬಹಳ ಕಷ್ಟ. ಪ್ರಕೃತಿಯಲ್ಲಿ ಸೌಮ್ಯ, ಶಾಂತಿ, ಭೀತಿ, ರೌದ್ರತೆ ಎಲ್ಲವೂ ಇವೆ. ಒಂದು ಪ್ರಾಣಿಯು ಇನ್ನೊಂದರ ಮೇಲೆ ಬಲ ಪ್ರಯೋಗ ಮಾಡಿ ಜೀವಿಸುತ್ತದೆ. ಈ ಹೋರಾಟದಲ್ಲಿ ಕಷ್ಟನಷ್ಟಗಳು ಬಂದರೂ ಕ್ರೌರ್ಯವಿದ್ದರೂ, ಒಟ್ಟಿನಲ್ಲಿ ಒಂದು ರೀತಿಯ ಶಾಂತತೆ ಇದೆ. ಎಲ್ಲ ಪ್ರಾಣಿ ವರ್ಗಗಳು, ಸಸ್ಯ ವರ್ಗಗಳು ಒಂದು ಇನ್ನೊಂದರ ಶತ್ರುವಾಗಿದ್ದರೂ ಅವು ಅವುಗಳ ಕ್ಷೇತ್ರದಲ್ಲಿ ಬಾಳಿ ಬದುಕುತ್ತ ಕಾಲ ನೂಕುತ್ತಿವೆ.

ಇದರ ಪ್ರಕಾರ ಪ್ರಕೃತಿಯಲ್ಲಿ ಈ ತೆರನಾದ ನಾಟಕ ಭಗವಂತನ ಲೀಲೆ. ಈ ನಿಯಮವನ್ನು ಯಾರೂ ಬದಲು ಮಾಡಲು ಶಕ್ಯವಿಲ್ಲ. ಪ್ರಕೃತಿಯು ಹೇಗೆ ಭಗವಂತನ ಲೀಲೆಯೋ ಸಮಾಜವೂ ಆತನ ಲೀಲೆ. ಇಲ್ಲಿ ಮನುಷ್ಯನ ಕೈವಾಡವೇ ಇಲ್ಲ. ಆದುದರಿಂದ ಬಣ್ಣದ ಜನಾಂಗಗಳಿದ್ದರೆ, ಕುಳ್ಳರಿದ್ದರೆ, ಜಾತಿಮತಗಳಿದ್ದರೆ, ಬಡವರು ಶ್ರೀಮಂತರಿದ್ದರೆ ಆ ಎಲ್ಲವೂ ಭಗವಂತನ [illegible] ಅಥವ ಆತನ [illegible]. ಎಲ್ಲರೂ ಶ್ರೀಮಂತರಾಗಿರಲು ಸಾಧ್ಯವಿಲ್ಲ. ಎಲ್ಲರೂ ಉನ್ನತ ಪದವಿಗೇರಲು ಸಾಧ್ಯವಿಲ್ಲ; ವ್ಯಕ್ತಿತ್ವ, [illegible] ಜೀವನದಲ್ಲಿ ಸ್ಪರ್ಧೆ [illegible] ಗಳನ್ನು ಪೈಪೋಟಿಗೆ ನಿಲ್ಲಿಸಿ ಅವರಲ್ಲಿರುವ ಉತ್ತಮ ಗುಣ ಪ್ರತಿಭೆಗಳನ್ನು ಪ್ರಕಾಶಕ್ಕೆ ತರುತ್ತವೆ.

ಉದಾಹರಣೆಯನ್ನು ಸಹ ಕೊಟ್ಟು ಪ್ರಕೃತಿಯಲ್ಲಿ ಹೇಗೆ ಅಸಮತ್ವವಿದೆಯೋ ಹಾಗೆಯೇ ಸಮಾಜದಲ್ಲೂ ಸಹ ಅಸಮತ್ವ ಸಹಜವೆಂದು ವಾದಿಸಿದ್ದಾರೆ. ನಿಮ್ಮ ಕೈ ಬೆರಳನ್ನು ನೋಡಿಕೊಳ್ಳಿ ಅವು ಸಮವಾಗಿಯೇ ಇಲ್ಲ. ಆದುದರಿಂದ ಎಲ್ಲರೂ ಸಮನಾಗಿರಬೇಕೆಂದು ವಾದಿಸುವುದು ಮೂರ್ಖತನ.

ಈ ವಾದ ಸಮಂಜಸವಾಗಿ ಕಾಣುವುದಕ್ಕೆ [illegible]ಯೇ ಅನೇಕ ಸಂದೇಹಾತ್ಮಕ ಪ್ರಶ್ನೆಗಳು ಮೂಡುತ್ತವೆ. ಪ್ರಕೃತಿಗೂ ಸಮಾಜಕ್ಕೂ ಯಾವ ಸಂಬಂಧವಿದೆ, ಒಂದು ಪಕ್ಷ ಇರುವದೆಂದರೆ ಮನುಷ್ಯರು ಬರೀ ಮೃಗಗಳೇ? ಸಮಾಜಕ್ಕೂ ಪ್ರಕೃತಿಗೂ ನಿಕಟ ಸಂಬಂಧವಿರುವುದೇನೋ ನಿಜ. ಏಕೆಂದರೆ ಸಮಾಜದ ಪ್ರತಿ ವ್ಯಕ್ತಿಯೂ ತನ್ನ ಜೀವನಾಧಾರಕ್ಕೆ ಪ್ರಕೃತಿಯನ್ನು ಅವಲಂಬಿಸಬೇಕಾಗಿದೆ. ಪ್ರಕೃತಿಯು ಆಹಾರ ಕೊಡುತ್ತದೆ; ವಾಸಿಸುವುದಕ್ಕೆ ಮನೆಯನ್ನು ಕಟ್ಟಲು ಮಣ್ಣು ಮರ ಮುಂತಾದ ವಸ್ತುಗಳನ್ನು ಕೊಡುತ್ತದೆ. ಉಡಲು ಹತ್ತಿ ಮತ್ತು ಉಣ್ಣೆಯನ್ನು ಕೊಡುತ್ತದೆ. ಸಂಚಾರ ಸೌಕರ್ಯಕ್ಕೆ ವಾಹನಗಳನ್ನು ಕಟ್ಟಲು ಮತ್ತು ನಡಸಲು ಕಬ್ಬಿಣ, ಕಲ್ಲಿದ್ದಲು, ಪೆಟ್ರೋಲ್ ವಿದ್ಯುಚ್ಛಕ್ತಿಗಳನ್ನು ಕೊಡುತ್ತದೆ. ಇಷ್ಟು ಮಾತ್ರಕ್ಕೆ ಪ್ರಕೃತಿಯಲ್ಲಿ ಸರಳ ಜೀವನವನ್ನು ನಡೆಸುತ್ತಿರುವ ಮೃಗಗಳೊಡನೆ ಮನುಷ್ಯನನ್ನು ಹೋಲಿಸುವುದಕ್ಕಾಗುತ್ತದೆಯೇ? ಹೋಲಿಕೆ ತಾನೆ ಎಲ್ಲಿದೆ? ಇವರ ವಾದ ಬಹು ಪ್ರಾಚೀನ ಕಾಲದಲ್ಲಿ ಮೃಗಗಳಂತೆ ಬೇಟೆಯಾಡಿ ಜೀವಿಸುತ್ತಿದ್ದ ಮನುಷ್ಯ ಜಂತುಗಳಿಗೆ ಹೋಲುತ್ತದೆಯೇ ಹೊರತು ಈಗಿನ ಕಾಲದ ಮನುಷ್ಯನೊಡನೆ ಹೋಲಿಕೆ ಇಲ್ಲ.

ಸಮಾಜ ವ್ಯಕ್ತಿಗಳು ಪ್ರಕೃತಿಯ ಮೇಲೆ ಜೀವಿಸಿದರೂ ಪ್ರಕೃತಿಯೂ ಸಮಾಜವೂ ಒಂದೇ ಅಲ್ಲ. ಸಮಾಜದಲ್ಲಿರುವ ವ್ಯಕ್ತಿಗಳ ಬೆಳವಣಿಗೆ ಎಂದರೆ ಸದಾ ಪ್ರಕೃತಿಯೊಡನೆ ಗುದ್ದಾಡಿ, ಅದರ ಗುಟ್ಟುಗಳನ್ನು ತಿಳಿದು ಅದನ್ನು ತನ್ನ ಸ್ವಾಧೀನಕ್ಕೆ ತಂದುಕೊಳ್ಳುವದು. ಇದೇ ಮನುಷ್ಯನಿಗೂ ಮೃಗಗಳಿಗೂ ಇರುವ ಮೂಲ ವ್ಯತ್ಯಾಸ. ಮೃಗಗಳಲ್ಲಿರುವ ಹಾಗೆ ಮಾತ್ರ ಚೇತನ ಇವುಗಳಿಗಿದ್ದರೂ ಮನುಷ್ಯನಿಗೆ ತನ್ನ ವಾತಾವರಣವನ್ನು ಬದಲುಗೊಳಿಸಿ ಅದು ತನ್ನ ಉಪಯೋಗಕ್ಕೆ ಅಥವ ತನ್ನ ಅಪೇಕ್ಷೆಯನ್ನು ತಾನು ಅಪೇಕ್ಷಿಪಟ್ಟ ವೇಳೆಯಲ್ಲಿ ಹೊಂದಲು ಪೂರೈಸುವ ಶಕ್ತಿ ಇದೆ. ಇಂಥ ಶಕ್ತಿ ಮಾನವನಿಗೆ ಇಲ್ಲದೆ ಇದ್ದದ್ದರೆ ಅನೇಕ ಮೃಗಗಳು ಪ್ರಕೃತಿಯ ಮುಷ್ಟಿಗೆ ಸಿಕ್ಕಿ ನಶಿಸಿ ಹೋಗುವ ಹಾಗೆ ಮಾನವ ಕುಲವೇ ಅಳಿಯುತ್ತಿತ್ತು. ಉದಾಹರಣೆಗೆ ಮನುಷ್ಯ ಮಳೆಯನ್ನು ನಂಬಿ ವ್ಯವಸಾಯ ಮುಂದುವರಿಸುತ್ತಾನೆ. ಮೃಗವಾದರೆ ಹಸಿವು ಕಂಡ ಕೂಡಲೆ ಬೇಟೆಗೆ ಹೊರಟು ಕೈಗೆ ಸಿಕ್ಕಿದ ಪ್ರಾಣಿಯನ್ನು ಕೊಂದು ಹಸಿವನ್ನು ನೀಗಿಸಿಕೊಂಡು ಮಲಗುತ್ತದೆ. ಅದಕ್ಕೆ ಮುಂದಿನ ಯೋಜನೆ ಇಲ್ಲ. ಒಂದು ಪಕ್ಷ ಬೇಟೆಗೆ ಯಾವುದೂ ಸಿಗದಿದ್ದರೆ ಹಸಿವಿಗೆ ಈಡಾಗಿ ಸಾಯುತ್ತದೆ. ಮೃಗವು ಪ್ರಕೃತಿಯ ವಜ್ರಮುಷ್ಟಿಗೆ ಸದಾ ಸಿಕ್ಕಿರುತ್ತದೆ. ಆದರೆ ಮನುಷ್ಯನು ಪ್ರಕೃತಿಯನ್ನು ವಿಜ್ಞಾನದ ಮೂಲಕ ಜಯಿಸಿ, ತನ್ನ ಅಂಕೆಯಲ್ಲಿ ತರುವುದಕ್ಕೆ ಶಕ್ತಿಯನ್ನು ಸಂಪಾದಿಸುವುದರಿಂದ ಪ್ರಕೃತಿಯ ಕ್ರೂರ ಮುಷ್ಟಿಯಿಂದ ತಪ್ಪಿಸಿಕೊಳ್ಳಬಲ್ಲ. 1000 ವರ್ಷಗಳ ಹಿಂದೆ ಇದ್ದ ಹುಲಿ, ಅದರ ಚಲನವಲನ ಈಗ ಇರುವ ಹುಲಿಯ ರೀತಿಯಲ್ಲೇ ಇದೆ. ಆದರೆ 1500 ವರ್ಷಗಳ ಹಿಂದೆ ಇದ್ದ ಮನುಷ್ಯನಿಗೂ ಈಗಿನ ಮನುಷ್ಯನಿಗೂ ಹೋಲಿಕೆಯೇ ಇಲ್ಲ.

### ಸಮಾಜದ ದೃಷ್ಟಿಯಲ್ಲಿ ವ್ಯಕ್ತಿಗಳು ಸಮಾನರು.

ಕೈಬೆರಳುಗಳ ವಾದದ ಮೂಲಕ ಅಸಮತ್ವವನ್ನು ಸಮರ್ಥಿಸುವುದಕ್ಕೆ ಹೋಗುವುದು ವಿತಂಡವಾದ. ಇದು ವಾದವೇ ಅಲ್ಲ. ಹೋಲಿಕೆಗಳ ಮೂಲಕವಾದ ಸಮರ್ಥನೆಯನ್ನು ಮಾಡುವುದಾದರೆ ನಾವು ನಮಗೆ ಬೇಕಾದ ಹೋಲಿಕೆಯ ಮೂಲಕ ನಮ್ಮ ವಾದವನ್ನು ಸಮರ್ಥಿಸಿಕೊಳ್ಳಬಹುದು. ಉದಾಹರಣೆಗೆ ಒಬ್ಬ ತಂದೆಗೆ ನಾಲ್ಕು ಜನ ಮಕ್ಕಳಿದ್ದಾರೆಂದು ಭಾವಿಸೋಣ. ಇವರಲ್ಲಿ ಒಬ್ಬನು ದಡ್ಡ, ಇನ್ನೊಬ್ಬ ಜಾಣ, ಒಂದು ಹೆಣ್ಣು ಮಗು, ಒಂದು ಹುಟ್ಟುಕುರುಡು. ಈ ನಾಲ್ವರಲ್ಲಿ ಅಸಮತ್ವವಿದ್ದರೂ ಮಕ್ಕಳು ತಂದೆಯ ವಿಶ್ವಾಸ ಪ್ರೀತಿಯ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಹಾಗೆಯೇ ಸಮಾಜವು ಒಬ್ಬ ದೊಡ್ಡ ತಂದೆ. ಆದುದರಿಂದ ಸಮಾಜದಲ್ಲಿ ಜೀವಿಸುವ ಎಲ್ಲ ವ್ಯಕ್ತಿಗಳು ಸಮಾಜದ ದೃಷ್ಟಿಯಲ್ಲಿ ಸಮಾನರು!

ಇನ್ನು ಕೆಲವರು ಸಮತ್ವ ತತ್ವಕ್ಕೆ ವಿರೋಧಿಗಳಲ್ಲ. ಆದರೆ ಇವರು ಸಮತ್ವಕ್ಕೆ ತಿಳಿದುಕೊಂಡಿರುವ ಅರ್ಥ ಅಪಾರ್ಥವಾಗಿದೆ. ಇವರ ಪ್ರಕಾರ ಸಮತ್ವವೆಂದರೆ ಹೀಗಿದೆ. ಉದಾಹರಣೆಗೆ ಮೂರು ಜನರ ಹತ್ತಿರ ಕ್ರಮ ೩೦೦-೫೦೦-೧೦೦೦ ರೂಪಾಯಿಗಳಿವೆಯೆಂದು ಭಾವಿಸೋಣ. ಇಲ್ಲಿ ಪ್ರತಿಯೊಬ್ಬನ ಹತ್ತಿರ ಅಸಮಾನತ್ವ ಪ್ರಮಾಣದಲ್ಲಿ ಹಣವಿದೆ. ಹೀಗೆ ಅಸಮತ್ವ ಪ್ರಮಾಣದಲ್ಲಿ ಹಣವಿರುವುದು ತಪ್ಪು. ಆದುದರಿಂದ ಸಮತ್ವ ಮಾಡುವುದಾದರೆ 1800/3=600 ರೂಪಾಯಿಗಳು ಪ್ರತಿಯೊಬ್ಬನಲ್ಲಿ ಸದಾ ಇರಬೇಕು. ಅಥವಾ ಕೆಲವರು ಕೂಲಿಗಾರರಾಗಿ ದಿನಕ್ಕೆ ೧ ರೂ. ಸಂಪಾದಿಸುತ್ತಿರುವರೆಂದು ಭಾವಿಸೋಣ ಮತ್ತು ಇನ್ನೊಬ್ಬನಿಗೆ ಮಾಹೆ ೩೦೦ ರೂ. ಗಳು ವೇತನ ಬರುತಿದೆ ಎಂದು ಭಾವಿಸೋಣ. ಈ ತೆರನಾಗಿ ಒಬ್ಬನಿಗೆ ಮಾಹೆ ೩೦೦, ಇನ್ನೊಬ್ಬನಿಗೆ ೩೦ ರೂ. ಗಳು ಬರುವುದು ತಪ್ಪು. ಆದುದರಿಂದ ಇಬ್ಬರು ಎಷ್ಟೇ ಕೆಲಸ ಮಾಡಲಿ ಮತ್ತು ಕೆಲಸದಲ್ಲಿ ವ್ಯತ್ಯಾಸವಿರಲಿ, ಸಮನಾಗಿ ವೇತನ ಬರುವ ಹಾಗೆ ಇರಬೇಕು.

ಈ ಅರ್ಥ ಅಸಂಬದ್ಧ ಪ್ರಲಾಪವಾಗಿರುವುದಲ್ಲದೆ, ಈ ರೀತಿಯಲ್ಲಿ ಸಮತ್ವ ಬರುವುದೇ ಇಲ್ಲ. ಕಾರಣ ಪ್ರತಿಯೊಬ್ಬನ ಹತ್ತಿರ [illegible] ಕಾಲದವರೆಗೆ ಇದ್ದ[illegible] ಕೆಲವು ಕಾಲದ ಮೇಲೆ ಒಬ್ಬನು [illegible] ಮನೆಯಲ್ಲ[illegible] ಜೀವಿಸುತ್ತ[illegible] ಕಳೆದುಕೊಳ್ಳಬಹುದು. ಇನ್ನೊಬ್ಬನು ಇರುವ ಹಣವಲ್ಲದೆ ಹೆಚ್ಚಿಗೆ ಕೆಲಸ ಮಾಡುತ್ತಾ ಹೆಚ್ಚು ಸಂಪಾದನೆ ಮಾಡಿ ರೂಢಿಸಬಹುದು. ಹೀಗಾಗಿ ಬಲಾತ್ಕಾರದ ಅಪಾರ್ಥದ ಸಮತ್ವ, ಸೋಮಾರಿಗಳಿಗೆ ತವರುಮನೆಯನ್ನು ಮಾಡಿಕೊಟ್ಟಂತಾಗುತ್ತದೆ. ಹೀಗೆ ಮಾಡುವುದನ್ನು ಯಾವ ಸಮಾಜವಾದಿಯೂ ಎತ್ತಿ ಹಿಡಿದಿಲ್ಲ.

ಇನ್ನೂ ಕೆಲವರು ಸಮತ್ವದ ಆವಶ್ಯಕತೆಯನ್ನು ಬಯಸಿದರೂ ಇದರಿಂದ ಉಂಟಾಗುವ ಪರಿಣಾಮಗಳನ್ನು ಊಹಿಸಿ ಸಮತ್ವ ಬೇಕೆಂದು ಘೋಷಿಸುವ ಸಮಾಜವಾದವನ್ನು ನಿರಾಕರಿಸಿದ್ದಾರೆ. ಇವರ ಪ್ರಕಾರ ಸಮತ್ವ ಬಂದರೆ ವ್ಯಕ್ತಿತ್ವವು ನಶಿಸಿ ಎಲ್ಲರೂ ಇರುವೆಯ ಸಾಲಿನಂತೆ ಗುರುತು ಸಿಗದ ಜೈಲಿನಲ್ಲಿರುವ ಕೈದಿಗಳನ್ನು ನಂಬರು ಮೂಲಕ ಕೂಗುವ ಹಾಗೆ ಆಗುತ್ತದೆ ಎಂದು ಹೆದರಿದ್ದಾರೆ. ಏಕೆಂದರೆ ಸಮತ್ವವೆಂದರೆ ಎಲ್ಲರೂ ಒಂದೇ ವಿಧವಾದ ಬಟ್ಟೆಯನ್ನು ಧರಿಸಬೇಕು, ಎಲ್ಲರ ಮನೆಯಲ್ಲಿ ಒಂದೇ ವಿಧವಾದ ಅಡಿಗೆಯನ್ನು ಮಾಡಬೇಕು, ಎಲ್ಲರೂ ನಗುತ್ತಿರಬೇಕು ಇಲ್ಲವೇ ಅಳುತ್ತಿರಬೇಕು. ಅಥವಾ ಕೆಮ್ಮುತ್ತಿರಬೇಕು. ಇತ್ಯಾದಿ, ಅಲ್ಲದೆ ಸಮತ್ವ ಬಂದರೆ ಹಿರಿಯರು, ಮಾತಾಪಿತೃಗಳು ಎಂಬ ಭಾವನೆ ಹೋಗಿ ಚಿಕ್ಕವರು ಮದಾಂಧರಾಗಿ ಸ್ವೇಚ್ಛೆಯಾಗಿ ವರ್ತಿಸಲು ಅವಕಾಶ ಸಿಗುತ್ತದೆ. ಜನರಲ್ಲಿ ಭಯಭಕ್ತಿ ಕಟ್ಟುಗಳು ನಾಶವಾಗಿ ಸಮತ್ವದ ಹುಚ್ಚಾಟವಾಗುತ್ತದೆ.

ಇದೂ ಸಹ ತಪ್ಪು ಭಾವನೆ. ಈ ಭಾವನೆ ಬರುವುದಕ್ಕೆ ವಿಷಯಗಳನ್ನು ಮತ್ತು ವೈಜ್ಞಾನಿಕ ಸಮಾಜವಾದಿಗಳ ಬರಹಗಳನ್ನು ಕೂಲಂಕುಷವಾಗಿ ಓದದೆ ಇರುವುದೇ ಕಾರಣವಾಗಿದೆ. (ಸಮಾಜವಾದದ ಬೆಳವಣಿಗೆಯಲ್ಲಿ ಈ ತಂದ ವಾದ

ಮಾಡಿದವರೂ ಇದ್ದಾರೆ. ಉದಾಹರಣೆಗೆ, ಕೆಲವು ಕಲ್ಪನಾತ್ಮಕ ಸಮತಾವಾದಿಗಳು.) ಪ್ರಕೃತ ಪರಿಸ್ಥಿತಿಯಲ್ಲಿ ಈ ರೀತಿ ವಾದ ಮಾಡುತ್ತಿರುವವರು ಸಮಾಜವಾದವನ್ನು ಅವಹೇಳನ ಮಾಡಲು ಹೊರಟು ಅದರ ವಿಷಯವಾಗಿ ಸುಳ್ಳು ಪ್ರಚಾರ ಮಾಡಲು ಯತ್ನಿಸಿರುವರು.

ಸಮಾಜವಾದದಲ್ಲಿ ಸಮತ್ವ ಶಬ್ದಕ್ಕೆ ಇರುವ ಅರ್ಥ ಮೇಲೆ ಚರ್ಚಿಸಿದ ಅರ್ಥ ಆಗಿದ್ದರೆ ಅಂತಹ ಸಮಾಜವಾದ ಯಾರಿಗೂ ಬೇಡ. ಅಲ್ಲದೆ ಇಂತಹ ಸಮತ್ವ ನಾವು ಎಷ್ಟೇ ಬಯಸಿದರೂ ಸಾಧ್ಯವಿಲ್ಲ. ಹುಟ್ಟಿದ ಅವಳಿ ಜವಳಿ ಮಕ್ಕಳಲ್ಲಿ ವ್ಯತ್ಯಾಸವಿರುವಾಗ ಮನುಷ್ಯ ಸ್ವಭಾವದಲ್ಲಿ ಬುದ್ಧಿಶಕ್ತಿಯಲ್ಲಿ ವ್ಯತ್ಯಾಸಗಳು ಇದ್ದೇ ಇರುತ್ತವೆ. ಎಲ್ಲಾ ಮನುಷ್ಯರನ್ನು ಆರು ಅಡಿ ಎತ್ತರ ಇರುವ ಹಾಗೆ ಮಾಡಲು ಸಾಧ್ಯವಿಲ್ಲ. ಅಥವಾ ಒಬ್ಬನು ಕೆಮ್ಮಿದರೆ ಎಲ್ಲರೂ ಕೆಮ್ಮಲು, ಒಬ್ಬನು ಕಾಲ ಮುರಿದುಕೊಂಡರೆ ಎಲ್ಲರೂ ಕಾಲು ಮುರಿದುಕೊಳ್ಳಲು ಸಾಧ್ಯವಿಲ್ಲ. ಅಥವಾ ಸಮಾಜವಾದದ ಧ್ಯೇಯವು ಎಲ್ಲರೂ ಒಂದೇ ತರನಾಗಿ ಉಡುಪನ್ನು ಧರಿಸುವುದಕ್ಕಾಗಲಿ ಅಥವಾ ಒಬ್ಬನು ಕೆಮ್ಮಿದರೆ ಎಲ್ಲರೂ ಕೆಮ್ಮುವ ಹಾಗೆ ಶಾಸನ ಮಾಡುವುದಕ್ಕಾಗಲೀ ಜನಿಸಿಲ್ಲ. ಹೀಗೆ ಯಾರಾದರೂ ಹೇಳಿದ್ದರೆ ಅಥವಾ ಹೇಳುತ್ತಿದ್ದರೆ ಇವರು ಸಮಾಜವಾದಿಗಳೆಂದು ಕರೆದುಕೊಂಡರೂ ನಿಜವಾಗಿಯೂ ಅವರು ಸಮಾಜವಾದದ ಶತ್ರುಗಳು.

## ಸಮತ್ವದ ಬಗ್ಗೆ ಸ್ಟಾಲಿನ್ನರ ವಿವರಣೆ.

ಸಮಾಜವಾದದಲ್ಲಿ ಸಮತ್ವ ಶಬ್ದಕ್ಕೆ ಇರುವ ಅರ್ಥವೇ ಬೇರೆ. ಅದು ಇನ್ನೊಂದು ರೀತಿಯಲ್ಲಿದೆ. ವೈಜ್ಞಾನಿಕ ಸಮಾಜವಾದವನ್ನು ಸ್ಥಾಪಿಸಿದ ಮಾರ್ಕ್ಸ್ ಮತ್ತು ಎಂಗಲ್ಸ್ ಸಮತ್ವಕ್ಕೆ ಕೊಟ್ಟಿರುವ ಅರ್ಥವನ್ನು ಸ್ಟಾಲಿನ್ನರು ವಿವರಿಸುತ್ತಾ ಹೀಗೆ ಹೇಳಿದ್ದಾರೆ. ಸಮಾಜವಾದವೆಂದರೆ ಪ್ರತಿಯೊಬ್ಬ ವ್ಯಕ್ತಿಯ ಅವಶ್ಯಕತೆಗಳನ್ನು ಮತ್ತು ಜೀವನವನ್ನು ಸಮಗೊಳಿಸಲಾಗಿದೆ ಎಂದು ಕೆಲವು ವಿರೋಧಿಗಳು ಯೋಚಿಸಿರುವ ಹಾಗೆ ಕಾಣುತ್ತದೆ. ಇಂತಹ ಯೋಜನೆಗೂ ಮಾರ್ಕ್ಸ್ ಮತ್ತು ಲೆನಿನ್ನರ ಹೇಳಿಕೆಗೂ ಯಾವ ಸಂಬಂಧವೂ ಇಲ್ಲ. ಮಾರ್ಕ್ಸನ ಪ್ರಕಾರ ಸಮತ್ವವೆಂದರೆ ವ್ಯಕ್ತಿಗಳ ಅವಶ್ಯಕತೆಗಳನ್ನು ಮತ್ತು ಜೀವನವನ್ನು ಸಮಗೊಳಿಸುವುದೆಂದಲ್ಲ. ಅದು ವರ್ಗಗಳನ್ನು ನಾಶಪಡಿಸುವುದಾಗಿದೆ. ಅಂದರೆ (ಅ) ಕಾರ್ಮಿಕರನ್ನು ಬಂಡವಾಳಗಾರರ ಹಿಡಿತದಿಂದ ತಪ್ಪಿಸುವುದು ಮತ್ತು ಕಾರ್ಮಿಕರ ದುಡಿತದ ಫಲದಿಂದ ಅವರು ಜೀವಿಸುವುದನ್ನು ತಪ್ಪಿಸುವುದಾಗಿದೆ. (ಆ) ಉತ್ಪತ್ತಿ ಸಾಧನಗಳಲ್ಲಿ ಖಾಸಗೀ ಹಕ್ಕುಗಳನ್ನು ಹೊಂದಿರುವುದನ್ನು ತಪ್ಪಿಸಿ ಆ ಸಾಧನೆಗಳನ್ನು ಸಮಾಜದ ಸ್ವತ್ತುಗಳನ್ನಾಗಿ ಮಾರ್ಪಡಿಸುವುದು. (ಇ) ಪ್ರತಿಯೊಬ್ಬನೂ (ತನ್ನ ಶಕ್ತ್ಯಾನುಸಾರ ಇರುವ ಹಾಗೆ) ಕೆಲಸ ಮಾಡುವುದು, ಮತ್ತು ತಾನು ಮಾಡಿದ ಕೆಲಸಕ್ಕೆ ತಕ್ಕ ವೇತನವನ್ನು ಪಡೆಯುವುದು (ಸಮಾಜವಾದದ ಕಾಲದಲ್ಲಿ) (ಈ) ಪ್ರತಿಯೊಬ್ಬನೂ ತನ್ನ ಶಕ್ತಿ ಮೇರೆಗೆ ಕೆಲಸ ಮಾಡುವುದು ಮತ್ತು ತನ್ನ ತನ್ನ ಅವಶ್ಯಕತೆಯನ್ನು ಅನುಸರಿಸಿ ತಕ್ಕ ವೇತನವನ್ನು ಹೊಂದುವುದು.

ಜನರ ಅಭಿರುಚಿ ಮತ್ತು ಅವಶ್ಯಕತೆಗಳು ಒಂದಾಗಿಲ್ಲ. ಅಥವಾ ಸಮವಾಗಿರಲಾರವು. ಮತ್ತು ಎಂದಿಗೂ ಆಗಿರಲಾರವು. ಸಮಾಜವಾದದ ವ್ಯವಸ್ಥೆಯಲ್ಲೇ ಆಗಲಿ ಅಥವಾ ಕಮ್ಯೂನಿಸಂ ವ್ಯವಸ್ಥೆಯಲ್ಲೇ ಆಗಲಿ ಮಾರ್ಕ್ಸಿಸಮಿನಲ್ಲಿ ಸಮತ್ವಕ್ಕೆ ಕೊಟ್ಟಿರುವ ಅರ್ಥ ಇದೇ ಆಗಿದೆ. ಇನ್ನಾವ ವಿಧವಾದ ಅರ್ಥವನ್ನೂ ಯಾವಾಗಲೂ ಮಾರ್ಕ್ಸಿಸಮ್ ಒಪ್ಪಿಲ್ಲ. ಆದುದರಿಂದ ಸಮತಾವಾದವೆಂದರೆ ಎಲ್ಲವನ್ನೂ ಸಮಗೊಳಿಸುವುದು, ವ್ಯಕ್ತಿಗಳ ಅವಶ್ಯಕತೆಗಳನ್ನು ಒಂದೇ ತೆರನಾಗಿ ಮಾಡುವುದು ಮತ್ತು ಅವರವರ ಅಭಿರುಚಿ ಮತ್ತು ಜೀವನವನ್ನು ಒಂದೇ ಮಟ್ಟ ಅಥವಾ ಒಂದೇ ರೀತಿ ಇರುವ ಹಾಗೆ ಯತ್ನಿಸುವುದು—ಅಂದರೆ ಎಲ್ಲರೂ ಒಂದೇ ವಿಧವಾದ ಆಹಾರವನ್ನು ಸ್ವೀಕರಿಸುವುದು, ಎಲ್ಲರೂ ಒಂದೇ ವಿಧವಾದ ಬಟ್ಟೆಯನ್ನು ಧರಿಸುವುದು—ಇದು ಎಂದು ಭಾವಿಸಿದ್ದರೆ ಅಥವಾ ಹೇಳುತ್ತಿದ್ದರೆ ಈ ಭಾವನೆ ಮತ್ತು ಹೇಳಿಕೆ ಮಾರ್ಕ್ಸಿಸಂ ಅನ್ನು ತುಚ್ಛ ರೂಪಕ್ಕೆ ಇಳಿಸಿ ಅಪಪ್ರಚಾರ ಮಾಡುವುದಾಗಿದೆ. ಮಾರ್ಕ್ಸಿಸಂ ಅರ್ಥವಿಲ್ಲದ ಸಮತ್ವ ಮಾಡಲೆಳಸುವುದಕ್ಕೆ ಶತ್ರು ಎಂಬುದನ್ನು ತಿಳಿಯುವುದು ಇಲ್ಲಿ ಅತ್ಯಗತ್ಯ.

## ಸಮತ್ವ ಸ್ಥಾಪನೆಯ ಉದ್ದೇಶ ವರ್ಗಗಳ ನಾಶ.

ಸಮತ್ವ ಸ್ಥಾಪನೆ ಎಂದರೆ ವರ್ಗಗಳನ್ನು ನಾಶ ಮಾಡುವುದಾಗಿದೆ. (abolition of classes). ವರ್ಗ ವಿನಾಶವೆಂದರೆ ಅಲ್ಪಸಂಖ್ಯಾತರಾದ ಶ್ರೀಮಂತರು ಸಮಾಜ ಸ್ವತ್ತುಗಳಾದ ಭೂಮಿ, ಕೈಗಾರಿಕೆ ಮುಂತಾದುವುಗಳ ಮೇಲೆ ಒಡೆತನ ಹೊಂದಿದ್ದರೆ ಮಿಕ್ಕವರ ಹತ್ತಿರ ಯಾವ ಸ್ವತ್ತೂ ಇಲ್ಲದೆ ಶ್ರೀಮಂತರ ಹತ್ತಿರ ಕೂಲಿ ಅಥವಾ ವೇತನ ಪಡೆದು ಜೀವಿಸುವ ಬಹುಸಂಖ್ಯಾತ ಕಾರ್ಮಿಕರ ವರ್ಗದ ಅಸಮತ್ವವನ್ನು ತಪ್ಪಿಸುವುದು. ಆದುದರಿಂದ ಸಮಾಜದಲ್ಲಿ ಸಮತ್ವ ಬರುತ್ತದೆ ಎಂದರೆ ಸಮಾಜ ಸಂಪತ್ತುಗಳು ಈ ಅಲ್ಪಸಂಖ್ಯಾತರ ಒಡೆತನದಲ್ಲಿದ್ದು ಅವರ ಸೋಚಿಗೆ ಸಿಕ್ಕದ ಹಾಗೆ ಎಲ್ಲ ಸ್ವತ್ತುಗಳನ್ನು ಸಮಾಜೀಕರಣ ಅಥವಾ ರಾಷ್ಟ್ರೀಕರಣ ಮಾಡಿ ಎಲ್ಲರೂ ಅವರವರ ಯೋಗ್ಯತಾನುಸಾರ ಕೆಲಸ ಮಾಡುವುದಾಗಿದೆ. ಬಂಡವಾಳಗಾರರ ಸಮಾಜದಲ್ಲಿ ಪ್ರತ್ಯೇಕ ಹಕ್ಕುಳ್ಳವರು ಇತರರನ್ನು ಕೂಲಿಗಳಾಗಿಯೋ ಅಥವಾ ವೇತನಗಾರರಾಗಿಯೋ ಸೇರಿಸಿಕೊಂಡು ತಾವು ಕೆಲಸ ಮಾಡದೆಯೇ ನ್ಯಾಯವಾಗಿ ಸಲ್ಲಬೇಕಾದ ಕೂಲಿ ಅಥವಾ ವೇತನದಲ್ಲಿ ಕಡಿಮೆ ಮಾಡಿ ಮಿಗಿಸಿಕೊಂಡು ಜೀವಿಸುತ್ತಾರೆ. ಇದು ಸಮಾಜವಾದದ ಸಮಾಜವ್ಯವಸ್ಥೆಯಲ್ಲಿ ಸಾಧ್ಯವಿಲ್ಲ. ಇಲ್ಲಿ ಎಲ್ಲಾ ಸ್ವತ್ತುಗಳೂ ಸಮಾಜಕ್ಕೆ ಸೇರಿವೆ. ಸಮಾಜದ ಸ್ವತ್ತುಗಳ ಒಡೆತನದ ವಿಷಯದಲ್ಲಿ ಎಲ್ಲರೂ ಸಮಾನರು, ಸಮಭಾಗಿಗಳು, ಸಮತ್ವ ಹೊಂದಿದ್ದಾರೆ.

ಆದುದರಿಂದ ಸಮಾಜ, ವಿರೋಧಿಗಳು ವಾದಿಸುವ ಹಾಗೆ ಇಲ್ಲಿ ಅಸಮತ್ವದ ವಿಷಯ ಬರುವುದೇ ಇಲ್ಲ. ಮನುಷ್ಯ ವ್ಯಕ್ತಿಗಳಲ್ಲಿ ಅಸಮತ್ವವಿಲ್ಲವೆಂದು ಸಮಾಜವಾದವು ಹೇಳುವುದಿಲ್ಲ. ಸಮಾಜವಾದದಲ್ಲಿ ಸಮತ್ವವಿರಬೇಕು ಎಂದು ವಾದಿಸಿದರೆ ಸಮತ್ವದ ಅರ್ಥವಾಗದು. ಹಾಗೆ ನೋಡಿದರೆ ಒಬ್ಬರ ಬುದ್ಧಿಶಕ್ತಿ, ಚಾಕಚಕ್ಯತೆ, ಇನ್ನೊಬ್ಬರಲ್ಲಿ ಇಲ್ಲ.

## ಸಮಾಜವಾದ ವ್ಯವಸ್ಥೆಯಲ್ಲಿ ವ್ಯಕ್ತಿಯ ಬೆಳವಣಿಗೆಗೆ ಅವಕಾಶ

ಅಥವಾ ಸಮತ್ವ ಬೇಕೆಂದು ಆಸೆಪಟ್ಟು ಅದರಿಂದುಂಟಾಗುವ ಪರಿಣಾಮಗಳನ್ನು ಕಂಡು ಬೆದರುವವರ ವಾದದಲ್ಲಿ ಏನೂ ಹುರುಳಿಲ್ಲ. ಇದು ತಪ್ಪು ತಿಳುವಳಿಕೆಯ ಫಲ. ವ್ಯಕ್ತಿತ್ವವನ್ನು ಪ್ರಕಾಶಮಾನಕ್ಕೆ ತರುವುದರಲ್ಲಿ ತೊಡಗಿದೆ. ಹಾಗೆ ನೋಡಿದರೆ ವ್ಯಕ್ತಿತ್ವವನ್ನು ಪ್ರಕಾಶಕ್ಕೆ ತರುವುದಕ್ಕೆ ಅವಕಾಶ ಕಲ್ಪಿಸದಿರುವ ಸಮಾಜವೆಂದರೆ ಬಂಡವಾಳಗಾರರ ಸಮಾಜ. ಶ್ರೀಮಂತರು ತಮ್ಮ ಸ್ವೇಚ್ಛೆ ಸ್ವೈರ ಮಾಡುವುದನ್ನು ಬಿಟ್ಟರೆ ಉಳಿದವರೆಲ್ಲರೂ ನಿರುದ್ಯೋಗ, ಹಣಕಾಸಿನ ಮುಗ್ಗಟ್ಟು, ಇವುಗಳಿಂದ ನರಳುತ್ತಿದ್ದಾರೆ. ವಿದ್ಯಾರ್ಜನೆ ಮತ್ತು ಸುಸಂಸ್ಕೃತ ಜೀವನ ನಡೆಸುವುದಕ್ಕೆ ಅವಕಾಶವೂ ಹಣ ಬಲವೂ ಇಲ್ಲದೆ ತಮ್ಮ ಬಾಳನ್ನೆಲ್ಲಾ ದುಡಿಮೆಯಲ್ಲೇ ಮುಕ್ತಾಯಗೊಳಿಸಿ ಗಾಣದ ಎತ್ತುಗಳಂತೆ ಜೀವಿಸುತ್ತಿದ್ದಾರೆ.

ಸಮಾಜವಾದ ಸಮಾಜದಲ್ಲಿ ವ್ಯಕ್ತಿಯನ್ನು ಆರ್ಥಿಕ ಮುಗ್ಗಟ್ಟಿನಿಂದ ತಪ್ಪಿಸುವ ಹಾಗೆ ಮೊದಲು ನಿರುದ್ಯೋಗವನ್ನು ತೊಡೆದು ಹಾಕುತ್ತದೆ. ಆರ್ಥಿಕ ಭದ್ರತೆಯನ್ನು ಕಲ್ಪಿಸಿ ವಿರಾಮವನ್ನು ದೊರಕಿಸಿಕೊಡುತ್ತದೆ. ಆತನ ಯೋಗ್ಯತಾನುಸಾರ ಅಂದರೆ ವ್ಯಕ್ತಿಯು ಸಮಾಜದ ಸಂಪತ್ತಿನ ಬೆಳವಣಿಗೆಗೆ ಎಷ್ಟು ತನ್ನ ಶ್ರಮದಿಂದ ಯತ್ನಿಸುತ್ತಾನೋ, ಆ ಪ್ರಮಾಣದಲ್ಲಿ ಆತನಿಗೆ ಶ್ರಮ ಫಲವಾಗಿ ಸಂಪತ್ತಿನ ಒಂದು ಭಾಗವನ್ನು ಕೊಟ್ಟು ಇನ್ನುಳಿದುದನ್ನು ಸಮಾಜ ಸಂಪತ್ತುಗಳ ವೃದ್ಧೀಕರಣಕ್ಕೆ ವಿನಿಯೋಗಿಸಲಾಗುತ್ತದೆ. ಹೀಗೆ ಬಂದ ವೇತನವನ್ನು ಆತನು ತನ್ನ ಇಷ್ಟಾನುಸಾರ ವ್ಯಯ ಮಾಡಿ ತನಗೆ ಬೇಕಾದ ಬಟ್ಟೆ ಧರಿಸಬಹುದು. ಅಭಿರುಚಿಯಂತೆ ಜೀವನ ಸೌಕರ್ಯಗಳನ್ನು ಕೊಂಡು ಜೀವಿಸಬಹುದು. ಇಷ್ಟಪಟ್ಟವರೊಡನೆ ಸ್ನೇಹ ಬೆಳೆಸಬಹುದು ಪ್ರೀತಿ ಮಾಡಿದವರನ್ನು (ಅವರಿಗೆ ಪ್ರತಿ ಪ್ರೀತಿ ಅವರಲ್ಲಿದ್ದರೆ) ವಿವಾಹವಾಗಬಹುದು. ಚಿತ್ರಗುಪ್ತ.

---

## ವಾ ರ್ತೆ ಗ ಳು.

ಫ್ರಾನ್ಸಿನ ಪ್ರಸಿದ್ಧ ವಿಜ್ಞಾನಿ ಕಮ್ಯೂನಿಸ್ಟ್ ಪ್ರೊಫೆಸರ್ ಫ್ರೆಡ್ರಿಕ್ ಜೋಲಿಯಟ್ ಕ್ಯೂರಿಯವರನ್ನು ಎಟಾಮಿಕ್ ಶಕ್ತಿಯ ಫ್ರೆಂಚ್ ಹೈ ಕಮೀಶನರ್ ಹುದ್ದೆಯಿಂದ ಡಿಸ್‌ಮಿಸ್ ಮಾಡಲು ಫ್ರೆಂಚ್ ಮಂತ್ರಿಮಂಡಲ ನಿರ್ಣಯಿಸಿತು.

ಮೇ ೧೫ ರಿಂದ ಮೊದಲ್ಗೊಂಡು ಎರಡು ವಾರಗಳ ವರೆಗೆ ಫ್ರಾನ್ಸಿನಲ್ಲಿ 'ದಯಾ ಪಕ್ಷ' (Kindness Fortnight) ಆಚರಿಸಬೇಕೆಂಬ ಹುಡುಗಿಯರ ಶಾಲೆಯ ಪ್ರೊಫೆಸರ್ ಮಾರ್ಸೆಲ್ ರೆನ್‌ವಿಲ್ಲೆಂಬವರ ಸಲಹೆಯನ್ನು ಫ್ರಾನ್ಸಿನ ವಿದ್ಯಾಮಂತ್ರಿಮಂಡಲವು ಸ್ವೀಕರಿಸಿರುವರು. ಈ ಎರಡು ವಾರಗಳಲ್ಲಿ ಶಾಲಾಮಕ್ಕಳು 'ದಯೆ' ಎಂಬ ವಿಷಯದ ಮೇಲೆ ಪ್ರಬಂಧಗಳನ್ನು ಬರೆಯುವರು; ಟಪ್ಪಾಲು ಟಿಕ್ಕೇಟಿಯ ಮೇಲೆ 'ದಯೆಯಿಂದಿರಬೇಕು' ಎಂಬ ಪಂಕ್ತಿ ಮುದ್ರಿಸಲ್ಪಡುವುದು; ೬೦,೦೦೦ 'ಪೋಸ್ಟರು'ಗಳು ಮತ್ತು ಕರಪತ್ರಗಳು ಹೊರಡುವವು. ಜಗತ್ತಿನ ಆರೋಗ್ಯ ಸಂಸ್ಥೆಯ ಅಧ್ಯಕ್ಷರಾಗಿ ಇವರ ಆರಿಸಲಾಗಿದೆ

ಭಾರತ ಸರ್ಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರ್‌ರವರು ಬೊಂಬಾಯಿಯಿಂದ ವಿಮಾನದಲ್ಲಿ ತಾ. ೬ ರಲ್ಲಿ ಜನೀವಾಕ್ಕೆ ಹೋಗಿರುವರು. ಸೋಮವಾರ ಆರಂಭವಾಗುವ ಪ್ರಪಂಚ ಆರೋಗ್ಯ ಸಂಸ್ಥೆಯ ಅಧಿವೇಶನದಲ್ಲಿ ಇವರು ಭಾರತ ಪ್ರತಿನಿಧಿ ಮಂಡಳದ ಮುಖಂಡರಾಗಿರುವರು.

೧೩ ಜಿಲ್ಲೆಗಳನ್ನೊಳಗೊಂಡ ಪಂಜಾಬಿನ ೮ ಜಿಲ್ಲೆಗಳಲ್ಲಿ ಫೆಬ್ರವರಿ ವರೆಗೆ ಒಟ್ಟು ೩೬ ಸಾವಿರ ಕೋತಿಗಳನ್ನು ನಾಶಪಡಿಸಲಾಗಿದೆ. ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮದ ಸಂಬಂಧದಲ್ಲಿ ಸರಕಾರದ ಆಜ್ಞಾನುಸಾರವಾಗಿ 'ಷೂಟಿಂಗ್ ಸ್ಕ್ವಾಡ್'ನವರು ಇವನ್ನು ಕೊಂದಿದ್ದಾರೆ. ಹೀಗೆ ಕೊಂದ ಕೋತಿಯ ಬಾಲವನ್ನು ಆ ಸ್ಕ್ವಾಡ್‌ನವರು ಒಬ್ಬ ಮ್ಯಾಜಿಸ್ಟ್ರೇಟರ ಮುಂದೆ ಪ್ರದರ್ಶಿಸಿ ಬಹುಮಾನ ಪಡೆದರು. ಅದನ್ನೇ ಪುನಃ ಅವರು ತಂದು ತೋರಿಸುವುದನ್ನು ತಪ್ಪಿಸಲು ಆ ಮ್ಯಾಜಿಸ್ಟ್ರೇಟರು ಆ ಬಾಲವನ್ನು ತಮ್ಮ ಕಣ್ಣೆದುರಿಗೇ ಸುಡಿಸುವರು

ಕಾಶ್ಮೀರದ ಬನ್ನಬವಣೆಗಳು ಕೊನೆಗಾಣುವ ದಿನವು ಅನತಿ ದೂರದಲ್ಲಿದೆ ಎಂಬ ಆಶಾವಾದವನ್ನು ಕಾಶ್ಮೀರದ ಸಿಂಹ ಶೇಕ್ ಅಬ್ದುಲ್ಲಾರವರು ಶ್ರೀನಗರದ ಹೊರಗೆ ಹಜ್ರತ್‌ಬಾಗ್‌ದಲ್ಲಿ ಸೇರಿದ ಬೃಹತ್ಸಭೆಯೊಂದನ್ನು ಉದ್ದೇಶಿಸಿ ಭಾಷಣ ಮಾಡುತ್ತ ವ್ಯಕ್ತಪಡಿಸಿದರು.

ಕಾಶ್ಮೀರದ ಮಧ್ಯಸ್ಥಿಕೆಯ ಬಗ್ಗೆ ಸಂಯುಕ್ತ ಜನಾಂಗ ಸಂಘದ ಕಡೆಯಿಂದ ಆರಿಸಲ್ಪಟ್ಟ ಸರ್ ಓವೆನ್ ಡಿಕ್ಸನರು ಎಡ್ಮಿರಲ್ ನಿಮಿಟ್ಜ್‌ರವರೊಡನೆ ತಮ್ಮ ಮುಂದಿನ ಯೋಜನೆಯ ಕುರಿತು ಸಮಾಲೋಚನೆ ನಡೆಸಲು ನ್ಯೂಯಾರ್ಕಿಗೆ ಹೋಗಿರುವರು.

ದಂತವೈದ್ಯರಿಗೆ ತಮ್ಮ ಶಸ್ತ್ರಕ್ರಿಯೆಯಲ್ಲಿ ಅತ್ಯಂತ ಕೂಲವಾಗಿ ಉಪಯೋಗಿಸಲು ಬರುವ 'ಸ್ಟೈಲೋಕೇನ್' ಎಂಬ ನೂತನ ಔಷಧವು ಇಬ್ಬರು ಸ್ವೀಡಿಷ್ ವೈದ್ಯರಿಂದ ಕಂಡುಹಿಡಿಯಲ್ಪಟ್ಟು, ಈಗ ಹಲವು ಯಶಸ್ವೀ ಪ್ರಯೋಗಗಳ ನಂತರ ಮಂಜೂರಾತಿ ಹೊಂದಿರುವುದು. ಈ ಔಷಧವನ್ನು 'ಕೊಕೇನ್' ಇಲ್ಲವೆ ಪ್ರೋಕೇನ್‌ಗಳಿಗಿಂತ ಯಶಸ್ವಿಯಾಗಿ ಉಪಯೋಗಿಸಬಹುದೆಂದು ಪ್ರಯೋಗಗಳಿಂದ ಕಂಡು ಬಂದಿದೆ.

---

# 'ಮನೋ ಮುಂಡಿಗೆ'

ಲೇ:- "ಗುಪ್ತ" ಮಡಿಕೇರಿ.

ಮನುಷ್ಯನ ಜೀವನದಲ್ಲಿ ಅತ್ಯವಶ್ಯವಾದ ವಸ್ತು ಗಾಳಿ ಎಂದೆನ್ನಬಹುದು, ಅದರ ನಂತರ ನೀರು ಅನಂತರ ಆಹಾರ ಪದಾರ್ಥಗಳು ಆದರೆ ಇವೆಲ್ಲವುಗಳಿಗಿಂತಲೂ ಪ್ರಾಮುಖ್ಯವಾದ ಮತ್ತು ಅತ್ಯಾವಶ್ಯಕವಾದ ವಸ್ತುವೊಂದಿದೆ. ನಮ್ಮ ಮನಸ್ಸಿನ ಭಾವನೆ! ಯಾವ ರೀತಿಯ ಭಾವನೆಯನ್ನು ನಾವು ಸತತ ಮಾಡುವೆವೋ ಅದರಂತೆಯೇ ನಮ್ಮ ಜೀವನವೂ, ಶರೀರವೂ, ನಮ್ಮ ಜಗತ್ತೂ ಕೂಡ ಮಾರ್ಪಾಡು ಹೊಂದುವದು. ನಮ್ಮ ಮೆದುಳಿಗೆ ಕೊಡಲ್ಪಡುವ ಆಹಾರವೆಂತಹದೋ ಅದರಂತೆಯೇ ಸರ್ವವೂ ಆಗುವದು. ಯಾವ ವಿಚಾರದಲ್ಲಿ ನಾವು ಆಲೋಚನೆಯನ್ನು ಸತತಮಾಡುವೆವೋ, ಯಾವ ವಿಚಾರಗಳಲ್ಲಿ ನಮ್ಮ ಭಾವನೆಯನ್ನು ಆಗಾಗ ಹರಿಯಬಿಡುವೆವೋ ಅದರಂತೆ ನಮ್ಮ ವಾತಾವರಣವೂ ಮಾರ್ಪಡುಗೊಳ್ಳುತ್ತದೆ. ನಮ್ಮ ಜೀವನದ ಪ್ರತಿಯೊಂದು ವಸ್ತು—ನಮ್ಮ ಶಾರೀರಿಕ ಸ್ಥಿತಿಗತಿಗಳು ನಾವು ಆರೋಗ್ಯವಂತರಾಗಿರುವದು, ಇಲ್ಲವೆ ಖಾಯಿಲೆ ಪೀಡಿತರಾಗಿರುವದು, ನಮ್ಮ ಕುಟುಂಬದ ಆನಂದ, ಸಂತೋಷಗಳು, ಪ್ರತಿಯೊಂದೂ ಕೂಡ ನಮ್ಮ ಮಾನಸಿಕ ಕ್ರಿಯೆಯನ್ನು ಹೊಂದಿಕೊಂಡಿವೆ. ನಾವು ಮಾಡುವ ಆಲೋಚನೆ, ನಾವು ವಿಹರಿಸುವ ಭಾವನೆ, ನಾವು ಮಾಡುವ ವಿವೇಚನೆ ಇವುಗಳೇ ನಮ್ಮನ್ನು ರೂಪಿಸುವ ವಸ್ತುಗಳು. ಹೊಟ್ಟೆಗೆ ಉತ್ತಮ ಆಹಾರ ತೆಗೆದುಕೊಂಡರೂ ಮಾನಸಿಕ ಭಾವನೆಯು ದುಃಖ ಪೀಡಿತವಾಗಿದ್ದು, ಯಾ ದುರ್ವ್ಯಸನಗಳಿಗೆ ತುತ್ತಾಗಿದ್ದರೆ ತಿಂದ ಉತ್ತಮ ಆಹಾರವೂ ಕೂಡ ಶರೀರಕ್ಕೆ ಹಿಡಿಸದು. ಹಿಂದಿನ ನಮ್ಮ ಭಾವನೆ, ನಮ್ಮ ಕ್ರಿಯೆಗಳ ಮೇಲೆ ನಮ್ಮ ಇಂದಿನ ಸ್ಥಿತಿಯಾಗಿರುತ್ತದೆ. ಇಂದಿನ ನಮ್ಮ ಭಾವನೆ ವಿಚಾರಗಳ ಮೇಲೆ ನಾಳೆಯ ನಮ್ಮ ಜೀವನವು ಆಧರಿಸಿ ನಿಂತಿದೆ. ಇಂದು ನಮ್ಮ ಭಾವನೆಯನ್ನು ಮಾರ್ಪಡಿಸಿಕೊಂಡರೆ ಅದರಂತೆಯೇ ನಮ್ಮ ಜೀವನವೂ ಮಾರ್ಪಾಡನ್ನು ಹೊಂದುವದು.

ನಮ್ಮ ಜೀವನದ ಪ್ರಾಮುಖ್ಯ ಹಾಗೂ ನೈಜವಾದ ಗುಟ್ಟೆಂದರೆ ನಮ್ಮ ಮಾನಸಿಕ ಭಾವನೆ. ನಮ್ಮ ಭಾವನೆ ಬದಲಾದಂತೆ ಶರೀರ ಬದಲಾಗುವದು ದೈನಿಕ ಕ್ರಿಯೆಯು ಬದಲಾಗುವದು. ನಮ್ಮ ಜೀವನವು ವ್ಯತ್ಯಾಸಗೊಳ್ಳುವುದು. ಇಡೀ ಜೀವನವೇ ಮಾರ್ಪಾಡನ್ನು ಹೊಂದುವದು. ನಾವು ಸತತ ಸುಖಿಗಳಾಗಿರುವುದೂ ದುಃಖಿತರಾಗಿರುವದೂ ಉತ್ಸಾಹಿಗಳಾಗಿರುವದೂ ಯಾ ಚೇತನಹೀನರಾಗಿರುವದೂ ನಮ್ಮ ಮಾನಸಿಕ ವಿಚಾರಧಾರೆಯನ್ನನುಸರಿಸಿದೆ. ಅದ್ದರಿಂದ ನಮ್ಮ ಮನಸ್ಸಿಗೆ ಅರ್ಥಾತ್ ಮೆದುಳಿಗೆ ಯಾವ ರೀತಿಯ ವ್ಯವಸ್ಥೆಯನ್ನು ಹಾಕಿ ಯಾವ ರೀತಿಯಲ್ಲಿ ಅದರ ಭಾವನೆಯನ್ನು ಹದಗೊಳಿಸುವೆವೋ ಅದೇ ರೀತಿ ಸರ್ವ ವಾತಾವರಣವೂ ಬದಲಾಗುವದು. ಮನಸ್ಸಿನಲ್ಲಿ ಸದಾ ಸಿಟ್ಟು, ಕಿಚ್ಚು, ಸ್ವಾರ್ಥತೆಗಳನ್ನು ತುಂಬಿ ಸದಾ ಅವುಗಳ ಪೂಜೆಯಲ್ಲಿ ತೊಡಗಿರುವವನ ಜೀವನವು ಸುಖವೆನಿಸದು. ಕಡೆಗೆ ಅತನ ಶರೀರವೂ ಕೂಡ ಆರೋಗ್ಯಕರವಾಗಿರದು.

ಕೆಟ್ಟ ಭಾವನೆ, ಕೆಟ್ಟ ಯೋಚನೆ ಇರುವವರು ಸುಖಿಗಳಾಗಿರಲಾರರು. ಅವರು ಪ್ರಗತಿಯನ್ನೂ ಪಡೆಯರು. ನಾವು ಇನ್ನೊಬ್ಬರನ್ನು ಸಹಿಸದವರಾಗಿದ್ದರೆ, ಇನ್ನೊಬ್ಬರ ಉತ್ಕರ್ಷಕ್ಕಾಗಿ ಕಿಚ್ಚು ಪಡುವವರಾಗಿದ್ದರೆ, ಇನ್ನೊಬ್ಬರನ್ನು ಕೆಳಗೆ ತಳ್ಳಿ ಮೇಲೇರುವ ಭಾವನೆಯುಳ್ಳವರಾಗಿದ್ದರೆ ನಮಗೆ ಎಂದೂ ಹಿತವಾಗದು. ಈ ರೋಗ ಪೀಡಿತ ಮನವನ್ನು ತಿಳಿದು ಆದಷ್ಟು ಬೇಗ ಚಿಕಿತ್ಸೆ ಮಾಡಿಕೊಳ್ಳುವೆವೋ ಅಷ್ಟು ಹಿತ. ಸ್ಪಷ್ಟ ಹಾಗೂ ಪವಿತ್ರವಾದ ಭಾವನೆ ಇಲ್ಲದ, ಮನವು ಪರಿಶುದ್ಧವಾಗಿರದ ಯಾವ ಐಶ್ವರ್ಯ ಜೀವನವೂ ಆರೋಗ್ಯ ಜೀವನವಾಗದು. ಜೀವನವು ಸಾರ್ಥಕವಾಗಬೇಕಾದರೆ ಈ ಮನೋನೈರ್ಮಲ್ಯವನ್ನು ಇಂದಿನಿಂದಲೇ ಅಭ್ಯಾಸ ಮಾಡಬೇಕು.

ಈ ದೃಷ್ಟಿಯಿಂದಲೇ ಪ್ರಾರ್ಥನೆ, ಪೂಜೆಗಳ ಸಂಪ್ರದಾಯ ರೂಢಿಯಲ್ಲಿದೆಯೆಂದು ನನ್ನಭಿಪ್ರಾಯ. ನಮ್ಮ ಭಾವನೆಯನ್ನು ಸರಿಗೊಳಿಸಲಿಕ್ಕಾಗಿ ಹಿಂದಿನ ಕಾಲದಂತೆ ಮಹಾಯಜ್ಞ ಪೂಜೆಗಳನ್ನು ಮಾಡಬೇಕಿಲ್ಲ ಕಾಸು ಖರ್ಚಿಲ್ಲದ ರೀತಿಯಲ್ಲಿ ಸರ್ವವನ್ನೂ ಸಂಪಾದಿಸಬಹುದು ಇದಕ್ಕಾಗಿ ಪ್ರತಿಯೊಬ್ಬನೂ ವರ್ಷದಲ್ಲಿ ಒಂದು ವಾರ ಇಲ್ಲವೆ ತಿಂಗಳಿಗೊಂದು ದಿನ, ಇಲ್ಲವೇ ದಿನನಿತ್ಯ ಒಂದು ಗಂಟೆ ಮನವನ್ನು ಪರಿಶುದ್ಧಿಗೊಳಿಸಲು ಯತ್ನಿಸಬೇಕು. ಸಂಸಾರದ ಜಂಜಡಗಳನ್ನು, ಜೀವನದ [illegible]ಗಳನ್ನು ಮರೆತು ಆ ಸಮಯದಲ್ಲಿ ಮನವನ್ನು ಉತ್ತಮ ಹಾಗೂ ಉತ್ತುಂಗ ಭಾವನೆಗಳಲ್ಲಿ ಹರಿಯಬಿಡಬೇಕು. ಹೀಗೆ ಪ್ರತಿಯೊಬ್ಬನೂ ಪ್ರಯತ್ನಿಸುವದಾದರೆ ಅದಕ್ಕಾಗಿ ವಿನಿಯೋಗಿಸಿದ ಸಮಯವು ಬಾಳಿನ ಗ್ರಂಥದಲ್ಲಿ ಸುವರ್ಣಾಕ್ಷರವಾಗುವುದು

ಈ ದೃಷ್ಟಿಯಿಂದ ನಮ್ಮ ಪ್ರಾರ್ಥನೆ, ಮೌನ ಮತ್ತು ಪೂಜೆಗಳು ಶಾಸ್ತ್ರೀಯವಾದುವುಗಳೆಂದು ಹೇಳಬಹುದು. ನಮ್ಮ ಬಾಹ್ಯವಾದ ಯಾವದೇ ಪ್ರಯತ್ನದಿಂದ ನಮ್ಮ ಸುಧಾರಣೆಯಾಗದು. ಎಲ್ಲದಕ್ಕೂ ಮೂಲವಾದ ಮನಸ್ಸು ಶುದ್ಧವಾದರೆ ಮಾನವನು ಸರ್ವಾಂಗ ಪರಿಶುದ್ಧನಾದಂತೆ! ಅದ್ದರಿಂದ ಪ್ರತಿಯೊಬ್ಬನೂ ಮನಸ್ಸಿಗೆ ವ್ಯಾಯಾಮವನ್ನೀಯುವ ಈ ಸಮಯದಲ್ಲಿ ಯಾವದೇ ಬೇರೆ ಭಾವನೆ ತಂದುಕೊಳ್ಳದಿರಲಿ. ಸ್ವಾರ್ಥ ಸಂಕೀರ್ಣತೆಗಳೂ ಮೋಹ ಪ್ರೇಮಗಳೂ ಅಲ್ಲಿ ಸುಳಿಯದಿರಲಿ ಇಲಿಯನ್ನು ಕಾಯುತ್ತಿರುವ ಬೆಕ್ಕಿನಂತೆ ಮನಸ್ಸಿನ ಕಡಿವಾಣರಹಿತ ಕುದುರೆಯನ್ನು ಪ್ರತಿಕ್ಷಣ ಪರಿಶೀಲಿಸುತ್ತಿದ್ದು ಅದು ದಾರಿ ತಪ್ಪದಂತೆ ಎಚ್ಚರಿಕೆ ವಹಿಸಬೇಕು. ಹೀಗೆ ಎಚ್ಚರಿಕೆ ವಹಿಸುತ್ತ ಬಂದರೆ ಕ್ರಮಶಃ ಅದೇ ಒಂದು ಅಭ್ಯಾಸವಾಗಿ ಕೆಟ್ಟ ಭಾವನೆಗಳನ್ನೂ, ದುಶ್ಚಟಗಳನ್ನೂ ತಂದುಕೊಳ್ಳಲು ಅಸಮರ್ಥರಾಗುವೆವು.

ಮನದಲ್ಲಿ ಯಾವ ಭಾವನೆಯೇ ಬರಲಿ; ಬಂದ ಭಾವನೆಗಳಲ್ಲಿ ಯಾವುದನ್ನು ಪುರಸ್ಕರಿಸಿ ಒಪ್ಪಿಸುವೆವೋ, ಯಾವದರ ವಿಚಾರದಲ್ಲಿ ಮಗ್ನರಾಗಿ ಭಾವ ಸಮಾಧಿಯನ್ನೈದುವೆವೋ ಅದೇ ನಮ್ಮನ್ನು ಅದರ ಗುಣಾಗುಣಗಳಂತೆ ಮಾರ್ಪಡಿಸುವ ಭಾವನೆಯಾಗುವದು.

ಅದ್ದರಿಂದ ಸಾರ್ವಜನಿಕ ಟೀಕೆಗಳಿಗಾಗಿ ಮನದಲ್ಲಿ ಉದ್ವೇಗ ತಂದುಕೊಂಡು ಮರುಕಳಿಸುವ ಯತ್ನ ಬೇಡ. ಮನಸ್ಸಿಗೆ ದುಃಖದಾಯಕ ಪತ್ರಗಳಿಂದ ನೊಂದುಕೊಂಡು ಮನವನ್ನು ಅಪವಿತ್ರಗೊಳಿಸುವದು ಬೇಡ. ಯಾವದೇ ದೂಷಣೆ, ಪೋಷಣೆಗಳಿಂದ ವಿಕಾರವಶನಾಗುವದು ಬೇಡ. ಮನೆಯೂಟಕ್ಕೆ ಅಡಿಗೆ ಚೆನ್ನಾಗಿಲ್ಲವೆಂದು ಮನಸ್ಸಿಗೆ ಧಕ್ಕೆ ತಂದುಕೊಂಡರೆ ಅಯೋಗ್ಯ ಆಹಾರದಿಂದ ಆಗುವ ಹಾನಿಗಿಂತ ಸಿಟ್ಟಿನ ಕಾರಣ ಮನಸಿನ ಮೇಲಾಗುವ ಕೇಡಿನಿಂದ ಅಪಾರ ಹಾನಿಯಾಗುವದು. ಅದ್ದರಿಂದ ಮಾನವ ಸರ್ವಸ್ವ ಪವಿತ್ರ ಮನಸ್ಸಿಗೆ ಎಣೆಯಾದುದಿಲ್ಲ. ಈ ತತ್ವವನ್ನರಿತೇ 'ಮನಸಿನ ತೆ ಮಾಡೇರ' ಎಂಬ ನಾಣ್ಣುಡಿಯು ಆಗಿರಬಹುದು. ಅದ್ದರಿಂದ ಯಾರ ಮನೋಮಂದಿರ ಶುಭ್ರವಾಗಿದ್ದು ಅದರಲ್ಲಿ ಪವಿತ್ರ ವಿಚಾರಗಳು ಸತತ ಸುಳಿದಾಡುತ್ತಿರುವವೋ ಅವರ ಜೀವನ ಸಾರ್ಥಕವೆನಿಸುವದು ಆ ಮನಸ್ಸಿನಿಂದಲೇ ಪ್ರೇಮ ಕರುಣೆಯು ಹೆಚ್ಚಲ್ಪಟ್ಟು ಸರ್ವಗ್ರಾಸಿಯಾಗಿ ಜಗವನ್ನು ತುಂಬುವದು. ಅಂಥಾ ಮನವಿರುವವರೇ ಗಾಂಧಿ, ರಾಮಕೃಷ್ಣ, ಬುದ್ಧ, ಕ್ರಿಸ್ತರಾಗುವರು. ಅದ್ದರಿಂದಲೇ ಜಗತ್ತು ಭಾವನೆಯ ಮೇಲೆ ನಿಂತಿದೆಯೆಂದು ಹೇಳಲಾಗುತ್ತಿದೆ. ಮನಸ್ಸಿನ, ಮೆದುಳಿನ ಈ ಆಹಾರದ ಬಗ್ಗೆ ಎಚ್ಚರಿಕೆಯಿಡುವವನ ಜೀವನ ಸುಖಮಯವಾಗುವದು. ಅದ್ದರಿಂದ ಮನಸ್ಸಿಗೆ ಕೊಡುವ ಮುಂಡಿಗೆಯು ಪವಿತ್ರವೂ ಉತ್ತುಂಗವೂ ಆಗಿರಲಿ.

---

## ಡ್ಯೂಕ್ ಆಫ್ ವಿಂಡರ್ಸರಿಗೆ ಹೊಸ ರಾಜ್ಯವೇ?

ಬವೇರಿಯವನ್ನು ಜರ್ಮನಿಯಿಂದ ಬೇರ್ಪಡಿಸುವ ಕಾಲ ಅನತಿ ದೂರದಲ್ಲಿದೆಯೆಂಬ ಅಭಿಪ್ರಾಯ ಮ್ಯೂನಿಚ್ ನಗರದಲ್ಲಿ ಹರಡಿರುವುದು. ಬವೇರಿಯವನ್ನು ಪ್ರತ್ಯೇಕ ರಾಜ್ಯವನ್ನಾಗಿ ಸಾರಲು ಅವಶ್ಯವಿರುವ ವಸ್ತುವೆಂದರೆ ಒಬ್ಬ ಅರಸು.

ಅರಸೊಬ್ಬನನ್ನು ಹುಡುಕಲು 'ರೋಯಲ್ ಬಾಂಡ್' ಎಂಬ ಹೆಸರಿನ ರಾಜಕಾರಣಿಗಳ ಕೂಟವೊಂದು ಕಳಿಸಲ್ಪಟ್ಟದ್ದು ಅದು ಅರಸ ಪದವಿಗೆ ಡ್ಯೂಕ್ ಆಫ್ ವಿಂಡ್ಸರರ ಹೆಸರನ್ನು (ಬ್ರಿಟಿಷ್ ಚಕ್ರವರ್ತಿ ಎಂಟನೇ ಎಡ್ವರ್ಡರು) ಸೂಚಿಸಿರುವುದೆಂದು ಹೇಳಲಾಗಿದೆ.

ಡ್ಯೂಕ್ ಆಫ್ ವಿಂಡ್ಸರರಿಗೆ ಬವೇರಿಯವು ರಾಜಪದವಿ ಕೊಡುವ ಸುದ್ದಿಗಳು ಕೆಲ ವಾರಗಳಿಂದೀಚೆಗೆ ಲಂಡನಿನ ಬಕ್ಕಿಂಗ್ಹಾಂ ಅರಮನೆಯ ವಾತಾವರಣದಲ್ಲೂ ಕೇಳಿಬಂದಿವೆ: ಜರ್ಮನಿಯ ಅತ್ಯಂತ ಪ್ರಸಿದ್ಧ ಸಚಿತ್ರ ಮಾಸಪತ್ರಿಕೆಯೊಂದು ಡ್ಯೂಕ್ ಅಫ್ ವಿಂಡ್ಸರರ ಜೀವನ ಚರಿತ್ರೆಯನ್ನು ಪ್ರಾಮುಖ್ಯವಾಗಿ ಇತ್ತೀಚೆಗೆ ಪ್ರಕಟಿಸಿತು.

ಬ್ರಿಟಿಷ್ ಮನೆತನದಲ್ಲಿ 'ಪ್ರೇಯಸಿಗಾಗಿ ಸಿಂಹಾಸನ ತ್ಯಾಗ ಮಾಡಿದ' ಡ್ಯೂಕ್ ಅಫ್ ವಿಂಡ್ಸರರಿಗೆ ಆ ಪದವಿ ದೊರೆವ ಸಂಭವಗಳು ಅತ್ಯಧಿಕ. ಮೊದಲನೇ ಆಯ್ಕೆಯೇ ಅವರಿಗೆ ಬರಬಹುದು.

ಬವೇರಿಯದ ನೂತನ ಅರಸನಿಗಾಗಿ ನೀಲ ಮತ್ತು ಬಿಳಿ ಬಣ್ಣಗಳ ಚಂದದ ಸಾರೋಟು ತಯಾರಾಗಿದೆ. ಆದರೆ ರಾರಾಜಿಸುವ ಭಾಗ್ಯ ಹೆಚ್ಚಿನ ಮಟ್ಟಿಗೆ ಡ್ಯೂಕ್ ಆಫ್ ವಿಂಡ್ಸರರಿಗೇನೆ ಲಭ್ಯವಾಗಬಹುದೆಂದು ಹೆಚ್ಚಿನವರ ಊಹೆ. ಆದರೆ ಬವೇರಿಯನ್ ರೋಯಲ್ ಬಾಂಡಿನ ಮುಖಂಡ ಪ್ರೊ. ಎಟಿನ್ ಬರ್ಗರವರು ಹೊಸ ಅರಸು ವಿಟ್ಟಲ್ಸಬೆಚ್ ಮನೆತನಕ್ಕೆ ಸೇರಿದವನೇ ಆಗಬೇಕೆಂದು ಅಭಿಪ್ರಾಯಪಡುತ್ತಿರುವರಂತೆ. ಆದರೆ ಅವರ ಅನುಯಾಯಿಗಳಲ್ಲಿ ಹೆಚ್ಚಿನವರು ಈ ಕುರಿತು ನಿರ್ದಿಷ್ಟರಾಗಿಲ್ಲ.

---

ಮುಂದಿನ ಪರಿಸ್ಥಿತಿಯನ್ನು ಎದುರುಗೊಳ್ಳಲು ಸಿದ್ಧವಾಗುವ ಸಮಯವಲ್ಲ—

ದಿ ಜನರಲ್
ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್
ಜೀವ-ಅಗ್ನಿ-ಮೋಟಾರು-ಮೆರೀನ್-ಅಪಘಾತ,
ಹೆಡ್ ಆಫೀಸ್ ಅಜ್ಮೀರ್. ಸ್ಥಾಪನೆ 1907.
ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.
GFKS

# ಕೊಡಗು

ತಾ. ೧೨-೫-೧೯೫೦ನೇ ಶುಕ್ರವಾರ

## ಎಚ್ಚರಿಕೆ.

ಪರದಾಸ್ಯತೆಯಲ್ಲಿದ್ದ ಭರತಖಂಡವು ಸ್ವಾತಂತ್ರ್ಯಕ್ಕಾಗಿ ಮಹಾತ್ಮಾ ಗಾಂಧೀಯವರ ಮುಂದಾಳ್ತನದಲ್ಲಿ ಅಹಿಂಸಾತತ್ವದ ಚಳವಳವನ್ನು ಕೈಗೊಂಡು ಆಗಿನ ಬ್ರಿಟಿಷ್ ಸರಕಾರದ ವಿರುದ್ಧ ಜನತೆಗೆ ವಿಶ್ವಾಸವಿಲ್ಲವೆಂಬುದನ್ನು ದೇಶದ ಉದ್ದಗಲಕ್ಕೂ ಪ್ರಚುರಪಡಿಸಿತು ಇದರಿಂದ ಸ್ವಾತಂತ್ರ್ಯ ಚಳವಳಕ್ಕೆ ದೊಡ್ಡ ಶಕ್ತಿಯು ಲಭಿಸಿತು ಆದರೆ ೧೯೪೨ ರಲ್ಲಿ ನಡೆದ ಮಹಾ ಕ್ರಾಂತಿಯ ಕಾಲಕ್ಕೆ ಮಹಾತ್ಮರೇ ಮೊದಲಾದ ಮುಂದಾಳುಗಳನ್ನು ಕೂಡಲೇ ದಸ್ತಗಿರಿ ಮಾಡಿ ಅವರ ಮುಂದಾಳ್ತನವು ದೇಶಕ್ಕೆ ಲಭಿಸದ ಕಾರಣ, ಉದ್ರಿಕ್ತರಾದ ಜನರು ನಂತರ ನಡೆಸಿದ ವಿಶೇಷ ಆಂದೋಲನದಲ್ಲಿ ಅಲ್ಲಲ್ಲಿ ಹಿಂಸಾಕೃತ್ಯಗಳೂ ತಲೆದೋರಿದ್ದವು. ಹೇಗೂ ಸ್ವಾತಂತ್ರ್ಯವು ದೊರೆಯಿತು ಜನಾನುರಾಗಿಗಳಾದ ಕಾಂಗ್ರೆಸ್ ಮುಂದಾಳುಗಳು ಸರಕಾರದ ಜವಾಬ್ದಾರಿಯನ್ನು ವಹಿಸಿದರು. ಆದರೂ ಜನತೆಗೆ ಸರಕಾರದ ಮೇಲಿದ್ದ ವಿರುದ್ಧ ಭಾವವು ಪೂರ್ತಿ ಹೋಗಿರುವದಿಲ್ಲ ಇದಕ್ಕಾದರೂ ಕಾರಣಗಳು ಹಲವು ಇರಬಹುದು. ಸ್ವಾತಂತ್ರ್ಯ ಹೋರಾಟದ ವಿಶೇಷ ಪರಿಸ್ಥಿತಿಯಲ್ಲಿ ಸ್ಫೂರ್ತಿಗೊಂಡ ಯುವಕರ ಮತ್ತು ವಿದ್ಯಾರ್ಥಿಗಳ ಉತ್ಸಾಹವನ್ನು ಅನಾಯಕತ್ವದ ಶಕ್ತಿಗಳು ಈಗ ಉಪಯೋಗಿಸತೊಡಗಿರುವವು. ಸರಕಾರದ ತತ್ವವನ್ನು ರೂಪಿಸುವ ಮಂತ್ರಿಮಂಡಳಗಳು ಬದಲಾಗಿದ್ದರೂ ಆಡಳಿತ ನಡೆಸುವ ಪದ್ಧತಿಯು ಹಿಂದಿನಂತೆಯೇ ಇದ್ದು ಆಗಿನ ಉದ್ಯೋಗಸ್ಥರೇ ಈಗಲೂ ಕಾರ್ಯನಡೆಸುತ್ತಿರುವದರಿಂದ ಜನತೆಗೆ ಅವರ ಮೇಲಿದ್ದ ವಿರುದ್ಧ ಭಾವವು ಇನ್ನೂ ಬದಲಾಗಿರುವದಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಹಿಂದೂಸ್ಥಾನ ಮತ್ತು ಪಾಕಿಸ್ಥಾನ ವಿಭಜನೆಯಿಂದ ಉಂಟಾದ ಅನಾಹುತಗಳು ಮತ್ತು ನಿರಾಶ್ರಿತರು ಪಡುತ್ತಿರುವ ಕಷ್ಟಪರಂಪರೆಗಳಿಂದ ಈಗಿನ ಸರಕಾರದ ಮೇಲೆ ಜನತೆಗೆ ಸಂಪೂರ್ಣ ವಿಶ್ವಾಸವು ಇನ್ನೂ ಬಂದಿರುವುದಿಲ್ಲ. ಸ್ವಾತಂತ್ರ್ಯವು ದೊರೆತ ಕೂಡಲೇ ಹೆಚ್ಚಿನ ತೆರಿಗೆ ಕೊಡದೆ ಎಲ್ಲವೂ ತಮ್ಮಿಚ್ಛೆಯಂತೆ ನಡೆಯುವುದೆಂದು ಆಶಿಸಿದ್ದ ಜನತೆಗೆ ಈಗಿನ ಪರಿಸ್ಥಿತಿಯು ತೃಪ್ತಿಯನ್ನುಂಟುಮಾಡದಿರಬಹುದು. ಆದರೆ ಸ್ವಾತಂತ್ರ್ಯ ದೊರೆತ ತಕ್ಷಣ ಎಲ್ಲವೂ ಸರಿಯಾಗವದೆಂದು ತಿಳಿದುಕೊಂಡಿರುವುದು ಯೋಗ್ಯವಲ್ಲ ಪಂಡಿತ ನೆಹರೂರವರ ಮುಂದಾಳ್ತನದಲ್ಲಿ ಕೇಂದ್ರ ಸರಕಾರವು ಅಮೋಘ ಕಾರ್ಯವನ್ನು ಮಾಡುತ್ತಿದೆ. ಜಗತ್ತೇ ಎಂದೂ ಕಂಡರಿಯದ ಮಹಾ ಸಮಸ್ಯೆಗಳನ್ನು ಅಂದರೆ ನಿರಾಶ್ರಿತರ ರಕ್ಷಣೆ ಮತ್ತು ಪೋಷಣೆಯಂಥಾ ದೊಡ್ಡ ಜವಾಬ್ದಾರಿಯನ್ನು ಕೇಂದ್ರ ಸರಕಾರವು ಬಹು ದಕ್ಷತೆಯಿಂದ ನಡೆಸುತ್ತಿದೆ. ಈ ಕಾರಣ ಇತರ ರಾಷ್ಟ್ರ ಯೋಜನಾ ಕಾರ್ಯಗಳನ್ನು ಜನರು ನಿರೀಕ್ಷಿದಷ್ಟು ಶೀಘ್ರದಲ್ಲಿ ಕೈಕೊಳ್ಳಲು ಆಗಿರುವುದಿಲ್ಲ. ಕೇಂದ್ರದಲ್ಲಿರುವ ನಮ್ಮ ಸರಕಾರವು ಜಯಪ್ರದವಾಗಿ ನಡೆಯಬೇಕಾದರೆ ಅದಕ್ಕೆ ಜನತೆಯ ಮನಃಪೂರ್ತಿಯಾದ ಬೆಂಬಲವು ದೊರೆಯಬೇಕು

ಆದರೆ ದುರ್ದೈವವಶಾತ್ ಜನತೆಯ ಬೆಂಬಲದ ಬದಲು ಅಲ್ಲಲ್ಲಿ ಅನಾಯಕತ್ವದ ಕಾರ್ಯಗಳು ನಡೆಯುತ್ತಿವೆ ಪ್ರಾಮುಖ್ಯವಾಗಿ ರೈಲ್ವೆ ಗಾಡಿಗಳನ್ನು ಉರುಳಿಸುವ ಮತ್ತು ಗ್ರಾಮಸ್ಥರ ಆಸ್ತಿಪಾಸ್ತಿಗಳ ದರೋಡೆಯ ಪ್ರಯತ್ನಗಳು ದಿನೇ ದಿನೆ ಹೆಚ್ಚುತ್ತಿವೆ. ಇದಕ್ಕೆ ಉಗ್ರ ಸಮತಾವಾದಿಗಳು ಕಾರಣರಾಗಿದ್ದರೂ ಜನತೆಯು ಬೆಂಬಲ ಕೊಡದಿದ್ದರೆ ಅವು ಪ್ರಬಲವಾಗಲಾರವು ಮಾತ್ರವಲ್ಲ; ಅವುಗಳನ್ನು ಎದುರಿಸಿ ಮುರಿಯುವ ಪ್ರಯತ್ನಕ್ಕೆ ಜನತೆ ಸಹಾಯವನ್ನು ಮಾಡಬೇಕು. ಕೊಡಗಿನಲ್ಲೂ ಕೂಡ ಒಂದು ಪೋಸ್ಟಾಫಿಸಿನ ಮೇಲೆ ಡೈನಾಮೆಂಟ್ ಪ್ರಯೋಗಿಸುವ ಪ್ರಯತ್ನ ನಡೆದುದೆಯಂತೆ ಇದನ್ನು ಚಿಗುರಿನಲ್ಲೇ ಮುರಿಯದಿದ್ದರೆ ನಂತರ ಹೆಚ್ಚಿನ ತೊಂದರೆ ಉಂಟಾಗುವದು. ಈ ಕಾರ್ಯಕ್ಕೆ ಸಂಬಂಧಪಟ್ಟ ಸರಕಾರಿ ಅಧಿಕಾರಿಗಳು ಎಷ್ಟು ಶ್ರದ್ಧೆ ವಹಿಸಿದರೂ ಸಾಲದು. ಅವರಿಗೆ ಬೆಂಬಲವಾಗಿ ಜನತೆಯೂ ಕೂಡ ಎಲ್ಲಾ ತರದ ಸಹಾಯ ಸಲಹೆಗಳನ್ನು ನೀಡಬೇಕಾಗಿದೆ ಉಭಯತ್ರರೂ ಪರಸ್ಪರ ಸಹಕಾರ ಬುದ್ಧಿ ಮತ್ತು ವಿಶ್ವಾಸದಿಂದ ವರ್ತಿಸದಿದ್ದರೆ ಅನಾಯಕತ್ವವನ್ನು ತಡೆಯುವದು ಕಷ್ಟವಾದೀತು

## ವರ್ತಮಾನ.

ವೀರಾಜಪೇಟೆ ನಾಡು ಕುಕ್ಲೂರು ಗ್ರಾಮದ ಮಾಳೇಟ್ಟಿರ ಅಪ್ಪಚ್ಚನವರ ಪತ್ನಿ ಅನ್ನಮ್ಮನವರು ಕೊಡಗು ಕಾಲೇಜಿನ ಸೀನಿಯರ್ ಇಂಟರ್‌ಮೀಡಿಯೆಟ್ ಕ್ಲಾಸಿನಿಂದ ತೇರ್ಗಡೆಯಾಗಿ ಹೋಗುವ ಆಯಾಯ ವರ್ಷದ ಉತ್ತಮ ನಡತೆಯ ಕೊಡವ ವಿದ್ಯಾರ್ಥಿಗೆ ವರ್ಷಗಟ್ಟಲೆ ಐವತ್ತು ರೂಪಾಯಿಗಳ ಬಹುಮಾನ ವೇತನವನ್ನು ಪ್ರಿನ್ಸಿಪಾಲರವರು ಕೊಡುವ ಏರ್ಪಾಡು ಮಾಡಿ ಒಂದು ಸಾವಿರ ರೂಪಾಯಿಗಳನ್ನು ಅವಿತ ವಾಯಿದೆಯಲ್ಲಿ ಕೊಡಗು ಸಹಕಾರಿ ಬ್ಯಾಂಕಿನಲ್ಲಿ ಧರ್ಮಾರ್ಥವಾಗಿ ಇಟ್ಟಿರುವರು.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ ಮಾಟೀರ ಮಂಜುನಾಥರವರು ತಮ್ಮ ಎರಡನೇ ವರ್ಷದ ಬಿ ಎಸ್‌ಸಿ (ಆನರ್ಸ್) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರೆಂದು ತಿಳಿಯುತ್ತೇವೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ರಜತೋತ್ಸವ, ಹೊಸ ಕಟ್ಟಡ ಪ್ರವೇಶೋತ್ಸವ ಮತ್ತು ಮಹಾಸಭೆಯು ತಾ. ೧೬-೫-೫೦ರಲ್ಲೂ ಪ್ರಾಂತೀಕ ಸಹಕಾರಿ ಪರಿಷತ್ತು ತಾ ೧೭-೫-೫೦ರಲ್ಲೂ ನಡೆಯುವುದು. ಹೊಸ ಕಟ್ಟಡವನ್ನು ತೆರೆದ ನಂತರ ಕಟ್ಟಡದಿಂದ ಮಡಿಕೇರಿ ಹೈಸ್ಕೂಲು ವರೆಗೆ ಮೆರವಣಿಗೆಯನಂತರ ಎಲ್ಲಾ ಕಾರ್ಯಕಲಾಪಗಳನ್ನು ಹೈಸ್ಕೂಲಿನ ಆವರಣದಲ್ಲಿ ನಡೆಯಿಸಲಾಗುವುದು. ಮಳೆಯ ದೆಸೆಯಿಂದ ಹೀಗೆ ಬದಲಾವಣೆ ಮಾಡಿದ್ದಾಗಿದೆ. ಪ್ರತಿನಿಧಿಗಳಿಗೂ ಮತ್ತಿತರ ಸದಸ್ಯರು ಹಾಗೂ ಪ್ರೇಕ್ಷಕರಾಗಲೂ ಪ್ರಯಾಣಕ್ಕೆ ಅನುಕೂಲವಾಗುವುದಕ್ಕೆ ಸ್ಪೆಷಲ್ ಬಸ್ಸುಗಳ ಏರ್ಪಾಡು ಮಾಡಲಾಗಿದೆಯೆಂದು ತಿಳಿಯಬರುತ್ತೆ.

ತಾ. ೭-೫-೫೦ರ ರಾತ್ರಿ ಯಾರೋ ಮಡಿಕೇರಿ ಪೋಸ್ಟಾಫೀಸಿನ ಕಾಗದಗಳ ಪೆಟ್ಟಿಗೆಯೊಳಗೆ ಡೈನಾಮೆಂಟೊಂದನ್ನು ಹಚ್ಚಿ ಹಾಕಿದ್ದರೆಂದೂ ಅದೃಷ್ಟವಶಾತ್ ಡೈನಾಮೆಂಟಿನ ಬತ್ತಿಯು ಬೇಕಿ ಆರಿಹೋದ ಕಾರಣ ಅದು ಸಿಡಿಯದೆ ಯಾವ ನಷ್ಟವೂ ಆಗಲ್ಲವೆಂದೂ ತಿಳಿಯಬರುತ್ತದೆ. ಪೋಸ್ಟಾಫೀಸಿನಲ್ಲಿ ರಾತ್ರಿ ಈಗ ಪೋಲೀಸರ ಪಹರೆ ಏರ್ಪಾಡು ಮಾಡಲಾಗಿದೆ.

ಕೈಕೇರಿ ಗ್ರಾಮದ ಶ್ರೀ ಮಾಚಿಮಾಡ ಮಂದಣ್ಣನವರು ತಾ ೯-೫-೫೦ ರಲ್ಲಿ ಶಿವಾಧೀನರಾದರು.

ಕಳೆದ ಮೈಸೂರು ವಿಶ್ವವಿದ್ಯಾಲಯದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಕೆ ಜೆ ಅಪ್ಪಯ್ಯ, ಜಿ ಎನ್. ರಾಮಯ್ಯ, ಬಿ ಜಿ ವಸಂತ, ಸಿ ಪಿ ನಂಜಪ್ಪ, ಬಿ. ಎಂ. ಕಾಳಪ್ಪ, ಬಿ ಎಸ್. ಮುದ್ದಪ್ಪ, ಕೆ ಎಂ. ಗಣಪತಿ, ಎಂ ಪಿ. ದೇವಯ್ಯ, ಎಂ ಬಿ ತಿಮ್ಮಯ್ಯ, ಎಚ್ ಈ. ಚಂಗಪ್ಪ ಇವರುಗಳು ತೇರ್ಗಡೆಯಾಗಿರುವರು

ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಗೆ ಮಡಿಕೇರಿ ಹೈಸ್ಕೂಲಿನಿಂದ ಕೂತ ೮೩ ವಿದ್ಯಾರ್ಥಿಗಳಲ್ಲಿ ೫೨, ಹುಡುಗಿಯರ ಹೈಸ್ಕೂಲಿನ ೪೯ ವಿದ್ಯಾರ್ಥಿನಿಯರಲ್ಲಿ ೩೯, ವೈರಾಜಪೇಟೆ ಹೈಸ್ಕೂಲಿನ ೫೮ ರಲ್ಲಿ ೩೦, ಸೋಮವಾರಪೇಟೆ ಹೈಸ್ಕೂಲಿನ ೫೪ ರಲ್ಲಿ ೩೯, ವೀರಜಪೇಟೆ ಹೈಸ್ಕೂಲಿನ ೧೦೮ ರಲ್ಲಿ ೪೬, ಸೆಂಟ್ ಏನ್ಸ್ ಹೈಸ್ಕೂಲಿನ ೬೦ ರಲ್ಲಿ ೩೬, ನಾಪೋಕ್ಲು ಹೈಸ್ಕೂಲಿನ ೪೪ ರಲ್ಲಿ ೩೩, ಕೊಡ್ಲಿಪೇಟೆ ಶಾಲೆಯ ೨೪ ರಲ್ಲಿ ೧೪, ಶನಿವಾರಸಂತೆಯ ೧೧ ರಲ್ಲಿ ೬, ಹೆಬ್ಬಾಲೆ ಶಾಲೆಯ ೧೪ ರಲ್ಲಿ ೭, ಫ್ರೇಜರ್‌ಪೇಟೆ ಶಾಲೆಯ ೯ ರಲ್ಲಿ ೬, ಸುಂಟಿಕೊಪ್ಪ ೨೬ ರಲ್ಲಿ ೧೫, ಭಾಗಮಂಡಲ ೧೬ ರಲ್ಲಿ ೧೧, ಕೊಟ್ಟೂರು ೩೭ ರಲ್ಲಿ ೧೬, ಮೂರ್ನಾಡು ೪೩ ರಲ್ಲಿ ೩೦, ಅಮ್ಮತ್ತಿ ೫೪ ರಲ್ಲಿ ೨೬, ಪೊನ್ನಂಪೇಟೆ ೭೩ ರಲ್ಲಿ ೩೯, ಚೆಯ್ಯಂಡಾಣೆ ೪೧ ರಲ್ಲಿ ೧೮, ಕಡಗದಾಳು ೩೧ ರಲ್ಲಿ ೭, ಟಿ. ಶೆಟ್ಟಿಗೇರಿ ೨೩ ರಲ್ಲಿ ೧೫, ಬಿರುನಾಣಿ ೧೧ ರಲ್ಲಿ ೪, ಬೇಗೂರು ೩೨ ರಲ್ಲಿ ೨೨, ಶಾತೂರು ೩೫ ರಲ್ಲಿ ೧೧, ಕಕ್ಕಬೆ ೨೫ ರಲ್ಲಿ ೧೩, ಕ-ಕೋಟೆ.ಪರಂಬು ೪೮ ರಲ್ಲಿ ೧೮, ಪಾರಾಣೆ ೪೬ ರಲ್ಲಿ ೧೪, ಹುದಿಕೇರಿ ೪೭ ರಲ್ಲಿ ೧೪, ಬಿ ಶೆಟ್ಟಿಗೇರಿ ೧೧ ರಲ್ಲಿ ೧೧ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು. ಪರೀಕ್ಷೆಗೆ ಕೊಡಗಿನಿಂದ ಒಟ್ಟಾಗಿ ಕೂತ ೧೧೧೮ ವಿದ್ಯಾರ್ಥಿಗಳಲ್ಲಿ ೫೭೧ ಜನರು ತೇರ್ಗಡೆಯಾಗಿರುವರು


**BUILDING FOR SALE**

Dr. Kongettira Mandanna's dispensary building in Hill-road, Mercara will be sold for Rs 20,000 Interested buyers can contact.

**K. D Ponnapa,**
Swadeshi Stores,
MERCARA.


## ರಾಜಾಜಿ ಪರದೇಶ ಸಂಚಾರ ಕೈಕೊಳ್ಳುವರೇ ?

ಭಾರತದ ಪರವಾಗಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಪರರಾಷ್ಟ್ರಗಳಿಗೆ ಸೌಹಾರ್ದ ಸಂಚಾರ ಕೈಕೊಳ್ಳಲಿರುವರೆಂಬ ಸುದ್ದಿಯು ಅಧಿಕೃತ ವ್ಯಕ್ತಿಗಳಲ್ಲಿ ಹರಡಿದೆ. ಕಳೆದ ಜನವರಿಯಲ್ಲಿ ರಾಜಾಜಿಯವರು ಭಾರತದ ಗವರ್ನರ್ ಜನರಲ್ ಪದವಿ ತೊರೆದು ಹೋಗುವಾಗಲೇ ಬ್ರಿಟಿಷ್ ಸರಕಾರದಿಂದ ಬ್ರಿಟನ್ ಸಂದರ್ಶಿಸುವಂತೆ ಅವರಿಗೆ ಒಂದು ಆಮಂತ್ರಣ ಬಂದಿತ್ತು. ರಾಜಗೋಪಾಲಾಚಾರಿಯವರು ಈ ಆಮಂತ್ರಣ ಸ್ವೀಕಾರ ಮಾಡಿದರೆಂದರೆ ಭಾರತದ ಪರವಾಗಿ ಇತರ ಪರರಾಷ್ಟ್ರಗಳಿಗೂ (ಸಂಯುಕ್ತ ಅಮೇರಿಕಕ್ಕೆ ಕೂಡ) ಸೌಹಾರ್ದ ಸಂಚಾರ ಕೈಕೊಳ್ಳುವಂತೆ ಅವರನ್ನು ಭಾರತ ಸರಕಾರವು ಕೇಳಿಕೊಳ್ಳುವ ಸಂಭವವಿದೆ. ಈ ಮಧ್ಯೆ ಕೇಂದ್ರ ಸರಕಾರದಲ್ಲಿ ಅವರು ಮಂತ್ರಿ ಪದವಿಯನ್ನು ಸ್ವೀಕರಿಸುವ ವಾರ್ತೆಗಳೂ ಹಬ್ಬಿವೆ.

## ಅರುವಿಕೆ.

ತಾರೀಕು 9-5-50ನೇ ಮಂಗಳವಾರ ಮೂರ್ನಾಡಿನಿಂದ ಮಡಿಕೇರಿಗೆ ಹೋಗುವ ಮಧ್ಯಾಹ್ನ 1-30 ಗಂಟೆಯ ಆದಿ ಕಾವೇರಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ್ಗೆ ನನ್ನ ಒಂದು ಗನ್ನಿ ಬೇಗ್ ಅದರೊಳಗಿದ್ದ ಒಂದು ಸರ್ಜ್ ಕೋಟ್, ಒಂದು ಬೂದಿ ಬಣ್ಣದ ಕಪ್ಪು ಹೂವಿರುವ ಸಿಲ್ಕ್ ಪೀಸು, ಎರಡು ಸಿಲ್ಕ್ ಫ್ರಾಕ್‌ಗಳು ಮತ್ತು ಇತರ ಚಿಲ್ಲರೆ ಸಾಮಾನುಗಳಿದ್ದ ಮತ್ತೊಂದು ಬೇಗು ಇವುಗಳನ್ನು ಯಾರೋ ತಪ್ಪಿನಿಂದ ತೆಗೆದುಕೊಂಡು ಹೋಗಿದ್ದಾರೆ. ಹಾಗೆ ದೊರೆತವರು ಈ ವಸ್ತುಗಳನ್ನು ದಯವಿಟ್ಟು ಈ ಕೆಳಗಿನ ಅಡ್ರೆಸಿಗೆ ಮುಟ್ಟಿಸಬೇಕೆಂದು ಅರಿಸುತ್ತೇನೆ.

'ಕೊಡಗು ಆಫೀಸು'
ಮಡಿಕೇರಿ.

## NOTICE.

*In the matter of the Indian Companies Act, 1913 and of The Coorg FilmExchange Co. in Voluntary liquidation*

The Creditors of the above named Company are required on or before the 29th day of May 1950 to send their names, address and particulars of their debts or claims, in an affidavit in form given below to the undersigned and if so required in writing from the undersigned shall attend the investigation of such debt or claim at such time as shall be specified in such notice. In default thereof, the creditors will be excluded from the benifits of any distribution made before such debts are proved.

**K. V. Giri,**
*V Liquidator.*

ಹಿಂದೂಸ್ಥಾನದ

# ರೆಡ್ ಕ್ರಾಸ್ ಸಂಸ್ಥೆ

**ಕೊಡಗು ವೈದ್ಯ ಇಲಾಖೆ**

ಮೇ ೮ನೇ ತಾರೀಕು ಪ್ರಪಂಚದ ಎಲ್ಲಾ ಜನಾಂಗಗಳಿಗೂ ಅನ್ವಯಿಸುವ ಮಹಾ ದಿನ. ದುಃಖಿಗಳ, ರೋಗಿಗಳ ಯುದ್ಧರಂಗದಲ್ಲಿ ಗಾಯ ಹೊಂದಿ ನರಳುವವರ, ಸಾಂಕ್ರಾಮಿಕ ರೋಗಗಳಿಂದ ತತ್ತಳಿಸುತ್ತಿರುವವರ, ಗರ್ಭಿಣಿಯರ, ಶಿಶುಗಳ ಸಂರಕ್ಷಣೆಗಾಗಿ ಜಾತಿ ಬೇಧಗಳನ್ನು ಲೆಕ್ಕಿಸದೆ ಯುದ್ಧಕಾಲದಲ್ಲೂ, ಶಾಂತಿಕಾಲದಲ್ಲೂ ಒಂದೇ ರೀತಿಯಲ್ಲಿ "ಜನಸೇವೆಯೇ ಜನಾರ್ಧನ ಸೇವೆಯೆಂದು" ಲೋಕ ಸೇವೆ ಮಾಡುತ್ತಿರುವ ರೆಡ್‌ಕ್ರಾಸ್ ಸಂಸ್ಥೆಯ ಸ್ಥಾಪಕರೂ, ಪೋಷಕರೂ ಆದ ಹೆನ್ರಿಡ್ಯೂನಂಟ್ ಎಂಬ ಪ್ರಖ್ಯಾತ ವ್ಯಕ್ತಿಯ ೧೧೧ನೇ ಜನ್ಮದಿನಾಚರಣೆಯೋಪಾದಿವಾಗಿದೆ. ಗಾತ್ರದಲ್ಲಿ ಮಾತ್ರ ಚಿಕ್ಕದಾದರೂ ಈ ಮಹಾ ವ್ಯಕ್ತಿಯು ರೆಡ್‌ಕ್ರಾಸ್ ಸಂಸ್ಥೆಯನ್ನು ಸ್ಥಾಪಿಸುವ ಒಂದು ಮಹಾ ಧ್ಯೇಯದಿಂದ ಹಗಲಿರುಳೆನ್ನದೆ ದುಡಿದು ಅದರ ಪರಿಣಾಮವಾಗಿ ೧೮೬೪ನೇ ಇಸವಿಯಲ್ಲಿ ಜನೀವಾ ಕನ್ವೆಂಶನ್ ಎಂಬ ಪ್ರತಿಸಿದ್ಧ ಸಭೆಯಲ್ಲಿ ಹದಿನಾರು ಪ್ರಮುಖ ರಾಷ್ಟ್ರಗಳು ಸೇರಿ ಯುದ್ಧಕಾಲದಲ್ಲಿ ರಣಕ್ಷೇತ್ರದಲ್ಲಿ ಕೆಲಸ ಮಾಡುವ ವೈದ್ಯ ಇಲಾಖೆಯವರು ಪಕ್ಷಬೇಧವಿಲ್ಲದವರೆಂದೂ ಅವರ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ಯುದ್ಧನಿರತ ಎರಡು ಪಕ್ಷದವರೂ ನಡೆದುಕೊಳ್ಳತಕ್ಕದ್ದೆಂದೂ ಒಪ್ಪಿ ಪ್ರತಿಜ್ಞೆಯನ್ನು ಮಾಡಿಸಿ ರೆಡ್‌ಕ್ರಾಸ್ ಸಂಸ್ಥೆಯನ್ನು ಅಂತರಾಷ್ಟ್ರೀಯ ಸಂಸ್ಥೆಯನ್ನಾಗಿ ನಿರ್ಮಾಣ ಮಾಡಿದ ಮಹಾ ಪುರುಷನೇ ಹೆನ್ರಿಡ್ಯೂನಂಟ್. ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ

(1) ರೋಗಿಗಳ ಮತ್ತು ಗಾಯ ಹೊಂದಿದವರ ಚಿಕಿತ್ಸೆ, ಸಂರಕ್ಷಣೆ ಮತ್ತು ಪೋಷಣೆ.

(2) ಶಿಶು ಸಂರಕ್ಷಣೆ

(3) ಆಸ್ಪತ್ರೆಗಳಲ್ಲಿಯೂ ಮತ್ತು ಆರೋಗ್ಯ ಇಲಾಖೆಯ ಮುಖ್ಯ ಕೇಂದ್ರಗಳಲ್ಲಿಯೂ ಇರುವ ರೋಗಿಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವುದು.

(4) ಆರೋಗ್ಯ ಸಂರಕ್ಷಣೆ, ರೋಗಿಗಳ ಶುಶ್ರೂಷೆ, ಶಿಶು ಬಾಣಂತಿಗಳ ಸಂರಕ್ಷಣೆ ಮುಂತಾದ ಕಾರ್ಯಗಳಿಗೆ ಸಹಾಯವನ್ನು ಒದಗಿಸುವುದು.

(5) ಮುಂದಿನ ಜನಾಂಗವಾದ ಬಾಲಕ ಬಾಲಕಿಯರಲ್ಲಿ ಈ ಮಹಾ ಸಂಸ್ಥೆಯ ಸದುದ್ದೇಶಗಳನ್ನು ಪ್ರಚಾರ ಮಾಡುವಂತೆ ಮಕ್ಕಳ ರೆಡ್‌ಕ್ರಾಸ್ ಸಂಘವೆಂಬ ಒಂದು ಶಾಖೆಯನ್ನು ನಿರ್ಮಾಣ ಮಾಡಿ ಪ್ರೋತ್ಸಾಹವನ್ನು ನೀಡುವುದು.

"ರೆಡ್‌ಕ್ರಾಸ್ ಸಂಘ"ವೆಂಬುದು ಒಂದು ಅಂತರ್‌ರಾಷ್ಟ್ರ ಸಂಸ್ಥೆ. ಜಾತಿ, ಮತ ಭೇದವಿಲ್ಲದೆ ಮಾನವ ಕುಟುಂಬದ ಶ್ರೇಯಸ್ಸಿಗಾಗಿ ದುಡಿಯುವುದೇ ಇದರ ಧ್ಯೇಯ.

ಶಾಂತಿ ಕಾಲದಲ್ಲೂ ಯುದ್ಧಕಾಲದಲ್ಲೂ ಏಕರೀತಿ ಸೇವೆ ಮಾಡುವುದೇ ಇದರ ಮುಖ್ಯ ಕರ್ತವ್ಯ. ಲೋಕದ ಆರೋಗ್ಯದ ಮಟ್ಟವನ್ನು ಅಭಿವೃದ್ಧಿಗೊಳಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಿ, ಪ್ರಪಂಚದ ಕಷ್ಟ ಸಂಕಷ್ಟಗಳನ್ನು ನಿವಾರಿಸುವುದೇ ಇದರ ಪ್ರತಿಜ್ಞೆ. 'ಶಾಂತಿ, ಶಾಂತಿ, ಶಾಂತಿ' ಎಂಬ ಮಾತನ್ನು ಪ್ರಪಂಚದ ಎಲ್ಲಾ ಮೂಲೆಗಳಲ್ಲೂ ಪ್ರತಿಧ್ವನಿಗೈಯುವಂತೆ ಮಾಡಿ, ಆಸ್ತ್ರಗಳನ್ನು ಕಟ್ಟಿ, ಸರ್ವರಿಗೂ ಸಮಬೇಕು ಕೊಟ್ಟು, ಕರುಣೆ ಮತ್ತು ಕನಿಕರವೇ ಮನುಷ್ಯನ ದೈವಿಕ ಸಂಪತ್ತೆಂಬ ತತ್ವವನ್ನು ಲೋಕಕ್ಕೆ ಸಾರುವುದೇ ರೆಡ್‌ಕ್ರಾಸ್ ಸಂಸ್ಥೆಯ ಗುರಿ. ಈ ರೀತಿ ರೆಡ್‌ಕ್ರಾಸ್ ಸಂಸ್ಥೆಯು ಮೂಲದ ಕಲ್ಪಿತವಾಯಿದೆ. ಹೆನ್ರಿಡ್ಯೂನಂಟರು ಈ ಉದ್ದೇಶಗಳನ್ನು ಅಕ್ಷರಶಃ ಪಾಲಿಸಿ ತಮ್ಮ ಜೀವನಮಾನವನ್ನೆ ರೆಡ್‌ಕ್ರಾಸ್ ಸಂಘಕ್ಕಾಗಿ ಧಾರೆ ಎರೆದು ಅಮರವಾದ ಕೀರ್ತಿಯನ್ನು ಗಳಿಸಿದ್ದಾರೆ.

ಪ್ರಪಂಚದ ಶಾಂತಿ ಸುಖಗಳನ್ನು ಹಾರೈಸುವ ಈ ಮಹಾ ಸಂಘವು ಹಿಂದೂಸ್ಥಾನದಲ್ಲಿ ೧೯೨೦ನೇ ಇಸವಿಯಲ್ಲಿ ಶಾಸನಬದ್ಧವಾಗಿ ಸ್ಥಾಪಿತವಾಯಿತು. ಮಹಾತ್ಮ ಗಾಂಧೀಜಿ ಮೊದಲಾಗಿ ಅನೇಕ ಪ್ರಮುಖ ಪುರುಷರು ಈ ಸಂಘದ ಅಭಿವೃದ್ಧಿಗಾಗಿ ದುಡಿದಿದ್ದಾರೆ. ಈಗ ಭಾರತ ರಿಪಬ್ಲಿಕ್ಕಿನ ಅಧ್ಯಕ್ಷರೇ ಈ ಸಂಸ್ಥೆಯ ಅಧ್ಯಕ್ಷರಾಗಿಯೂ, ಇಂಡಿಯಾ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರವರು ಉಪಾಧ್ಯಕ್ಷರಾಗಿಯೂ, ಸರ್ದಾರ್ ಬಹದ್ದೂರ್ ಬಲವಂತಸಿಂಗ್ ಪುರಿಯವರು ಕಾರ್ಯದರ್ಶಿಗಳಾಗಿಯೂ ಈ ಸಂಸ್ಥೆಯನ್ನು ಪೋಷಿಸುತ್ತಿದ್ದಾರೆ. ಹಿಂದೂಸ್ಥಾನದ ಪ್ರತಿ ಪ್ರಾಂತ್ಯದಲ್ಲಿಯೂ ರೆಡ್‌ಕ್ರಾಸ್ ಸಂಸ್ಥೆಯ ಶಾಖೆಗಳಿವೆ. ಕೊಡಗಿನಲ್ಲಿ ೧೯೨೨ನೇ ಇಸವಿಯಲ್ಲಿ ರೆಡ್‌ಕ್ರಾಸ್ ಸಂಘವು ಸ್ಥಾಪನೆಯಾಗಿ ಪ್ರಪಂಚದ ಮಹಾಯುದ್ಧದ ಪರಿಣಾಮವಾಗಿ ದೇಶದಲ್ಲಿ ಉಂಟಾಗಿದ್ದ ಅನೇಕ ಕಷ್ಟಗಳನ್ನು ನಿವಾರಿಸುವ ಕೆಲಸವನ್ನು ಸಾಧಿಸಿತು. ಈ ಸಂಘವು ೧೯೪೮ನೇ ಇಸವಿಯಲ್ಲಿ ಕೈಕೊಂಡ ಕಾರ್ಯಕ್ರಮಗಳನ್ನು ಸಂಕ್ಷೇಪವಾಗಿ ಕೊಡಲಾಗಿದೆ.

೧. ಪಾಲಿಬೆಟ್ಟ, ಹೆಬ್ಬಾಲೆ, ಬಿಟ್ಟಂಗಾಲ ಮತ್ತು ಅಮ್ಮತ್ತಿಯಲ್ಲಿ ನಾಲ್ಕು ಸೂಲಗಿತ್ತಿಯರನ್ನು ನೇಮಕ ಮಾಡಿ ಅವರು ಕ್ರಮವಾಗಿ ೬೬, ೯೫, ೨೦, ೩೮ ಹೆರಿಗೆ ಕೆಲಸಗಳನ್ನು ಸುರಕ್ಷಿತವಾಗಿ ನೆರವೇರಿಸಿರುವರು.

೨. ಕೈಕಾಲು ಕತ್ತರಿಸಿ ಅಂಗಹೀನರಾದವರಿಗೆ ಕೃತಕ ಅಂಗಗಳನ್ನು ಉಚಿತವಾಗಿ ಕೊಡುವ ಏರ್ಪಾಡು.

3. ರೆಡ್‌ಕ್ರಾಸ್ ಸಂಘದ ವಾರ್ಷಿಕ ಸಪ್ತಾಹ ಆಚರಣೆ.

(a) ಆರೋಗ್ಯ ದಿನಾಚರಣೆ ಮತ್ತು ಪ್ರದರ್ಶನ.

(b) ಮಲೇರಿಯಾ ಪ್ರದರ್ಶನ.

(c) ೧ ವರ್ಷದಿಂದ ೫ ವರ್ಷ ಪ್ರಾಯದ ಶಿಶುಗಳನ್ನು ಪರೀಕ್ಷಿಸಿ, ಯೋಗ್ಯ ಬಹುಮಾನ ಹಂಚುವಿಕೆ.

(d) ಬಡಬಗ್ಗರಿಗೆ ಊಟ.

(e) ಹಾಲು ಮತ್ತು ಹಣ್ಣುಹಂಪಲುಗಳ ಪ್ರದರ್ಶನ ಉತ್ತಮವಾದ ಆಹಾರ ಪದಾರ್ಥಗಳನ್ನು ಸೇವಿಸುವ ವಿಧಾನದಲ್ಲಿ ಭಾಷಣ

(f) ಮೆರವಣಿಗೆ

(g) ರೆಡ್‌ಕ್ರಾಸ್ ಸಂಘಕ್ಕೆ ಹಣ ಸಂಗ್ರಹ ಮಾಡಲು ಪ್ರವೇಶ ಧನ, ಚಾಪು ಟಿ ವಿಕ್ರಯ, ಆನೆಸವಾರಿ, ಲಾಟ್ರಿ, ತೆಂಗಿನಕಾಯಿ ಗುರಿ, ಚಾ ತಿಂಡಿ ವಿತರಣೆ ಮೊದಲಾದ ಏರ್ಪಾಡುಗಳು.

(h) ಆರೋಗ್ಯ ವಿಚಾರ, ಶಿಶುಸಂರಕ್ಷಣೆ, ಗರ್ಭಿಣಿ ಸ್ತ್ರೀಯರ ಪೋಷಣೆ ಮೊದಲಾದ ವಿಷಯ ಬೋಧಪ್ರದವಾದ ಭಾಷಣ.

ಇದೂ ಅಲ್ಲದೆ ಪ್ರಚಾರ ಕಾರ್ಯದ ಸಲುವಾಗಿ ಶಾಲೆಯ ಹುಡುಗರ ಸಮ್ಮೇಳನವನ್ನು ಮಾಡಿ ಮಕ್ಕಳ ರೆಡ್‌ಕ್ರಾಸ್ ಶಾಖೆಯನ್ನು ಪ್ರೋತ್ಸಾಹಗೊಳಿಸಲಾಗಿದೆ. ಈ ವಿಷಯದಲ್ಲಿ ಮಡಿಕೇರಿ ಹೈಸ್ಕೂಲುಗಳ ವಿದ್ಯಾರ್ಥಿಗಳೂ, ಕಾನ್ವೆಂಟಿನ ವಿದ್ಯಾರ್ಥಿನಿಯರೂ ಮತ್ತು ಇತರ ಶಾಲೆಗಳ ಚಿಕ್ಕ ಮಕ್ಕಳೂ ಉಪಾಧ್ಯಾಯರೂ ಭಾಗವಹಿಸಿ ರೆಡ್‌ಕ್ರಾಸ್ ದಿನಾಚರಣೆಯನ್ನು ಯಶಸ್ವಿಯಾಗಿ ವರ್ಷಂಪ್ರತಿ ನೆರವೇರಿಸುತ್ತಿರುವುದು ತುಂಬಾ ಸಂತೋಷವಾಗಿದೆ. ಕೊಡಗಿನ ಚೀಫ್ ಕಮಿಷನರ್ ಸಾಹೇಬರು ರೆಡ್‌ಕ್ರಾಸ್ ಸಂಘದ ಅಧ್ಯಕ್ಷರಾಗಿಯೂ ಸಿವಿಲ್ ಸರ್ಜನರು ಉಪಾಧ್ಯಕ್ಷರಾಗಿಯೂ, ಡಾಕ್ಟರ್ ಎಂ. ಎಸ್. ಬೋಪಯ್ಯನವರು ಕಾರ್ಯದರ್ಶಿಗಳಾಗಿಯೂ ಮತ್ತು ಇತರ ಅನೇಕ ಪ್ರಮುಖರು ಕಮಿಟಿಯ ಸದಸ್ಯರುಗಳಾಗಿಯೂ ಆಗಾಗ ಸಭೆ ಸೇರಿ ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಲು ಪ್ರಯತ್ನಪಡುತ್ತಿದ್ದಾರೆ.

ಲೋಕದ ಶಾಂತಿ ಸುಖಗಳನ್ನು ಹಾರೈಸಿ ಜಾತಿ, ಮತ, ಬೇಧವಿಲ್ಲದೆ ಸೇವೆ ಮಾಡುವ ಈ ಸಂಘವು ಯಶಸ್ವಿಯಾಗಿ ಬಾಳುವಂತೆ ಸರ್ವರೂ ಪ್ರಯತ್ನ ಮಾಡಬೇಕು, ರೆಡ್‌ಕ್ರಾಸ್ ಸಂಸ್ಥೆಯ ಮೂಲ ಪುರುಷನಾದ ಹೆನ್ರಿಡ್ಯೂನಂಟ್ ಎಂಬ ಮಹಾ ಪುರುಷನ ಜನ್ಮ ದಿನಾಚರಣೆಯ ಈ ದಿನದಲ್ಲಿ ನಾವು ಅವರು ತೋರಿಸಿದ ದಾರಿಯಲ್ಲಿ ನಡೆಯುವಂತೆ ಬುದ್ಧಿ ಶಕ್ತಿಗಳನ್ನು ಭಗವಂತನು ದಯಪಾಲಿಸಬೇಕೆಂದು ಪ್ರಾರ್ಥಿಸಿ ಲೋಕದಲ್ಲಿ ಶಾಂತಿ ಸುಖ ಸಾಮ್ರಾಜ್ಯವನ್ನು ಕಟ್ಟಲು ಪ್ರಯತ್ನಿಸೋಣ.


## THE WARDEN INSURANCE CO., Ltd.

**Head Office: Bombay.**

**LIFE, FIRE, ACCIDENT, MOTOR & W. C. INSURANCES.**

*Managing Director:* – **S. H. THAKER.**

| | |
|---|---|
| Business in force | Rs. 5,00,00,000 |
| Assets | ,, 1,00,00,000 |
| Income | ,, 35,00,000 |

Also **LOCAL MANAGERS OF**

**THE LONDON GUARANTEE & ACCIDENT CO., Ltd.**
(Incorporated in England)

Assets Exceed Rs. 10,00,00,000

a Subsidiary Company of

**THE PHOENIX ASSURANCE CO. Ltd.**
(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.

*Apply to:*

**Chief Agency Office** *or* **A. S. Aiyappa,**
*Virajpet (Coorg)* *Branch Secretary,*
*Gandhinagar,*
*BANGALORE CITY*

## ARE YOU A ROBUSTA GROWER?

DON'T FORGET YOUR LOCAL MEETING.

**GONIKOPAL**- Sunday-May 14th at 2. P. M.
**TITTIMATTI**- Monday-May 15th at 11. A. M.
**KUTTA**- Tuesday-May 16th at 11 A. M.
**MURNAD**- Thursday-May 18th at 11. A. M.

NOTE THE CHANGE OF THE DATE.

**M. D. Machaiya,** *Secretary.* **A. M. Webb,** *Chairman.*

Robusta Growers Association of S. India.

# ಮೂತಾಡದ ಕೆಲಸಗಾರ.

ಲೇ:— ಶ್ರೀ ಸಂಪದ್ಗಿರಿರಾವ್.

(ಅಖಿಲಭಾರತ ಸೇವಾ ದಳದ ಸಂಸ್ಥಾಪಕರಾದ ಡಾ. ಹರ್ಡೀಕರ್ ಇವರ ವಜ್ರ ಮಹೋತ್ಸವ ಕಾಲಕ್ಕೆ ಅವರಿಗೆ ಅಭಿನಂದನ ಗ್ರಂಥದ ಕಾಣಿಕೆಯೊಂದನ್ನು ಕೊಡಲಾಯಿತು. ಕೊಡಗಿನಲ್ಲಿ ಹಲವಾರು ಬಾರಿ ಸುತ್ತಿ ಜನಜಾಗೃತಿಗೆ ಸಹಾಯವಿತ್ತ ಶ್ರೀಯುತರ ಆದರ್ಶ ತ್ಯಾಗ, ಕಾರ್ಯಶೀಲತೆಯ ಬಗ್ಗೆ ನೆಹರೂರವರಿಂದ ಹಿಡಿದು ವಿವಿಧ ಮುಂದಾಳುಗಳು ತಮ್ಮ ಪ್ರಶಂಸೆಯನ್ನು ಸೂಚಿಸಿದರು. ಆ ವಜ್ರ ಮಹೋತ್ಸವ ಗ್ರಂಥದಿಂದ ಈ ಲೇಖನವನ್ನು ಕೊಡಲಾಗಿದೆ.)

ನಾನು ಡಾ. ಹರ್ಡೀಕರರವರನ್ನು ಮೊದಲು ಸಂದರ್ಶಿಸಿದ್ದು ೧೯೨೨ ರಲ್ಲಿ ಬೆಂಗಳೂರಿನಲ್ಲಿ. ಕರ್ನಾಟಕ ಕೇಸರಿಯೆಂದು ಕರೆಯಲ್ಪಡುತ್ತಿದ್ದ ಕೌಜಲಗಿ ಶ್ರೀನಿವಾಸ ರಾಯರ ಜೊತೆಯಲ್ಲಿ ಮೌನವಾಗಿ ಬಂಕೆ ಮರಿಯಂತೆ ಕುಳಿತಿದ್ದ ಡಾಕ್ಟರರ ಮುಖ ಚರ್ಯೆಯೂ ಲವಲವಿಕೆಯಿಂದ ಕೂಡಿದ ಅವರ ಕಣ್ಣುಗಳೂ ಎಲ್ಲರನ್ನೂ ಆಕರ್ಷಿಸುವಂತಹವು. ಅವರ ವಿಚಾರವನ್ನು ತಿಳಿದುಕೊಳ್ಳಬೇಕೆಂದು ಕುತೂಹಲವುಳ್ಳ ಸ್ನೇಹಿತರ ಪ್ರಶ್ನೆಗಳಿಗೆ ಬಹು ಸಂಕ್ಷೇಪವಾದ ಉತ್ತರದೊರೆಯುತ್ತಿತ್ತು.

'ಎಷ್ಟು ವರ್ಷಗಳನ್ನು ನೀವು ಅಮೇರಿಕದಲ್ಲಿ ಕಳೆದಿರಿ?'

'೮ ವರ್ಷಗಳು'

'ಎಲ್ಲಿ ವ್ಯಾಸಂಗ ಮಾಡಿದಿರಿ?'

'ಮಿಚಿಗನ್'

'ಯಾವ ವಿಷಯವಾಗಿ?'

'ಪಬ್ಲಿಕ್ ಹೆಲ್ತ್'

'ಲಾಲಾ ಲಜಪತರಾಯರೊಂದಿಗೆ ಏನು ಕೆಲಸ ಮಾಡುತ್ತಿದ್ದಿರಿ?'

'ಪತ್ರಿಕಾ ಸಂಪಾದನೆ–ಪ್ರಚಾರ–ಇಲ ಸ್ಟೇಟುಗಳಲ್ಲಿ ಓಡಾಟ'

'ಹೇಗೆ ಹಿಂತಿರುಗಿದಿರಿ?'

'ಇಂಗ್ಲೆಂಡ್ ಮಾರ್ಗವಾಗಿ ಗುಪ್ತಚಾರರು ಬೆನ್ನಟ್ಟಿದರು. ಸ್ಕಾಟ್ಲೆಂಡಿಗೆ ಹೋಗಿ ಅಲ್ಲಿಂದ ಯುರೋಪ ಮಾರ್ಗವಾಗಿ ಅವರಿಗೆ ಸುಳಿವು ತಿಳಿಯದಂತೆ ಬಂದುದಾಯಿತು.'

ಇದನ್ನು ಎಷ್ಟು ರೋಮಾಂಚವಾಗಿಯೂ ರಸವತ್ತಾಗಿಯೂ ವರ್ಣಿಸಬಹುದಾಗಿತ್ತು. ಆದರೆ ಅದು ಡಾಕ್ಟರರ ಸ್ವಭಾವವಲ್ಲ. ನೀರಸವಾಗಿ ಯಾವ ಅತ್ಯುತ್ಸಾಹವೂ ಇಲ್ಲದೆ ಇದನ್ನು ಹೇಳಿದರು. ಸಾಮಾನ್ಯರಾದರೆ ಎಷ್ಟು ಜಂಭಕೊಚ್ಚಿಕೊಳ್ಳಬಹುದಾಗಿತ್ತು!

ಡಾಕ್ಟರರು ಎಂದಿಗೂ ಮಿತಭಾಷಿಗಳು. ಕರ್ತವ್ಯನಿಷ್ಠೆಯುವರ ಲಕ್ಷಣವೇ ಇದು.

ಬಳ್ಳಾರಿಯಲ್ಲಿ ಒಂದು ಸೇವಾದಲದ ಸಮ್ಮೇಲನ ೧೯೨೬ ರ ಸುಮಾರಿಗೆ ನಡೆಯಿತು. ಶ್ರೀ. ಹೊಸಕೊಪ್ಪ ಕೃಷ್ಣರಾಯರು ಅಧ್ಯಕ್ಷರು. ಪ್ರಾಯಶಃ ಡಾಕ್ಟರರಿಗೆ ಬಗ್ಗದಷ್ಟು, ಕೃಷ್ಣರಾಯರು ಮತ್ತಾರಿಗೂ ಬಗ್ಗಲಿಲ್ಲವೆನ್ನಬಹುದು. ಆ ಸಂದರ್ಭದಲ್ಲಿ ಒಂದು ರೋಮಾಂಚಕಾರಿಯಾದ ನಾಟಕವನ್ನೇ ಡಾಕ್ಟರರು ನಡೆಸಿಬಿಟ್ಟರು. ಆರಂಭ ಭಾಷಣಗಳಾದವು. ಶ್ರೀ. ಕೃಷ್ಣರಾಯರು ಅಧ್ಯಕ್ಷರಾಗಬೇಕೆಂಬ ಸೂಚನೆ ಅನುಮೋದನೆ ಆದವು. ಧೋತರ, ಷರಟು ತೊಟ್ಟಿದ್ದ ಅಧ್ಯಕ್ಷರು ವೇದಿಕೆಗೆ ಬರಲು ಒಪ್ಪಲಿಲ್ಲ. ಅವರಿಗೆ ಖಾಕಿ ಚಡ್ಡಿ, ಷರಟು, ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಅನಂತರ ಪೂರ್ಣ ಖಾಕಿಸಮವಸ್ತ್ರವನ್ನೂ–ಒಂದು ಜೋಳಿಗೆಯನ್ನೂ ಹಾಕಿಕೊಂಡವರಾಗಿ ಹಾಗೂ ಕೈಯಲ್ಲಿ ಲಾಠಿಯನ್ನು ಹಿಡಿದು ಅಧ್ಯಕ್ಷರು ವೇದಿಕೆಗೆ ಪ್ರವೇಶಿಸಿದರು. ಈ ರೂಪಾಂತರ ಬಹಳ ಪರಿಣಾಮಕಾರಿಯಾಗಿತ್ತು. ಅಂದಿನಿಂದ ಶ್ರೀ. ಕೃಷ್ಣರಾಯರು ಕೊನೆಯವರೆಗೆ ಸೇವಾದಲದ ಸೈನಿಕರಾಗಿ ಉಳಿದರು.

ಡಾಕ್ಟರರನ್ನು ಮರುಳಿಗೆ ಹೋಲಿಸಿರುವವರುಂಟು. ನಮ್ಮ ಪ್ರಸಿದ್ಧ ವಾಗ್ಮಿಗಳಾದ ದಿವಂಗತ ಮುತವೀಡು ಕೃಷ್ಣರಾಯರು ಡಾಕ್ಟರರ ಪ್ರಶಂಸೆಯನ್ನು ಮಾಡುವುದನ್ನು ಕೇಳಬೇಕಾಗಿತ್ತು! ಮರುಳಿಗೆ ಶ್ರೀರಾಮನಲ್ಲಿದ್ದ ಭಕ್ತಿ ನಿಷ್ಠೆಗಳೇ ಹರ್ಡೀಕರರಿಗೂ ಗಾಂಧಿಯವರಲ್ಲಿದ್ದವು. ಆದರೆ ಇವರ ಸೇವಾದಲದ ಸ್ವಯಂಸೇವಕರ ವ್ಯಾಯಾಮ, ಲಾಠೀ ಕವಾಯತ್ತನ್ನು ನೋಡಿ ಕೆಲವು ಹಿರಿಯರೂ, ಗಾಂಧೀಯವರ ನಿಕಟ ವರ್ತಿಗಳೂ ಇವರ ಚಟುವಟಿಕೆಗಳ ಬಗ್ಗೆ ಸಂಶಯಗ್ರಸ್ಥರಾಗಿಯೇ ಇದ್ದರು. ಮಾಡುವುದೇನು?...ಡಾಕ್ಟರರ ಕಪಿಮುಷ್ಟಿ–ಶಿಸ್ತಿನ ಆರಾಧನೆ–ಕಾಂಗ್ರೆಸ್ ಅಧಿವೇಶನಗಳಲ್ಲಿ ನಾಯಕರ ಮೆರವಣಿಗೆ ಹೊರಡಬೇಕಾಗಿದ್ದಾಗ ನಾಯಕರನ್ನು ಸಾಲುಸಾಲಾಗಿ ನಿಲ್ಲಿಸಿ ಡ್ರಿಲ್ ಮಾಡಿಸಿಬಿಡುತ್ತಿದ್ದರು.

ಒಮ್ಮೆ ಗಾಂಧೀಯವರ ಪ್ರಾರ್ಥನಾ ಸಭೆಯಲ್ಲಿ ಸ್ವಯಂಸೇವಕರು ಮಹಾತ್ಮರು ಹೋಗಿಬರಲು ತಕ್ಕ ವ್ಯವಸ್ಥೆಯನ್ನು ಮಾಡಿಕೊಟ್ಟರು. ಜನಸಂದಣಿಯು ಅವರ ಮೇಲೆ ಬೀಳದಂತೆ ನೋಡಿಕೊಂಡಿದ್ದರು. ಆದರೆ ಪ್ರಾರ್ಥನೆಯಾದ ನಂತರ ಗಾಂಧೀಯವರು ಬೇರೆ ಯಾವುದೋ ದಾರಿಯಲ್ಲಿ ನಡೆದೇ ಬಿಟ್ಟರು. ಜನರ ನುಗ್ಗಾಟಕ್ಕೆ ಸಿಕ್ಕಿಕೊಂಡರು. ಅಂದು ಡಾಕ್ಟರರೇ ಅಲ್ಲಿದ್ದು ಈ ಅವ್ಯವಸ್ಥೆಗೆ ಸ್ವಯಂಸೇವಕರು ಎಡೆಕೊಟ್ಟಿರಲ್ಲ! ಎಂದು ದಲದವರಿಗೆ ವ್ಯಥೆ ಆಯಿತು. ಡಾಕ್ಟರರು ಹೇಳಿದರು. 'ಏನೂ ಚಿಂತೆಯಿಲ್ಲ–ನೀವು ಮಾಡಬೇಕಾದದ್ದು ಮಾಡಿದಿರಿ. ಮುದುಕನಿಗೆ ಜನರಿಂದ ತುಳಿಸಿಕೊಳ್ಳಬೇಕೆಂಬುದೇ ಇಷ್ಟ'–ಎಂದು ನಕ್ಕುಬಿಟ್ಟು ಸ್ವಯಂಸೇವಕರ ಚಿಂತೆಯನ್ನು ಪರಿಹರಿಸಿಬಿಟ್ಟರು.

ಡಾಕ್ಟರರು ಸ್ವಯಂಸೇವಕರನ್ನು ನಿರೀಕ್ಷಿಸುವ ಸಂದರ್ಭಗಳಲ್ಲಿ ದೊಡ್ಡ ಅಧಿಕಾರಿಯಂತೆ ಸರಸರನೆ ನಡೆದುಕೊಂಡು ಹೋಗಿಬಿಡುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ. ಸಾಧ್ಯವಾದ ಮಟ್ಟಿಗೆ ಪ್ರತಿಯೊಬ್ಬನ ಬಳಿಯೂ ನಿಂತು–ಅವನನ್ನು ಸವರಿ ಅವನ ಗುಂಡಿಗಳನ್ನು ಸರಿಮಾಡಿ, ಅವನ ಟೊಪ್ಪಿಗೆಯನ್ನು ನೆಟ್ಟಗಿರಿಸಿ, ಗಲ್ಲವನ್ನು ತಡವಿ ಆಶೀರ್ವಾದ ಮಾಡುವುದು ಅವರ ರೂಢಿ. ಈ ಕಾರಣದಿಂದ ಭಯಭಕ್ತಿಗಳ ಜೊತೆಗೆ ಅವರ ವಿಚಾರದಲ್ಲಿ ಪ್ರೇಮವೂ ಅಂಕುರಿಸುವಂತಾಗಿದೆ.

ಒಮ್ಮೆ ಕೆಲವು ಸ್ವಯಂಸೇವಕರನ್ನು ಕೇಳಿದ ಪ್ರಶ್ನೆಗಳಿಗೆ ಅವರು 'ಹೌದು ಸಾರ್' 'ಇಲ್ಲ ಸಾರ್' ಇತ್ಯಾದಿಯಾಗಿ 'ಸಾರ್' ಎನ್ನುವ ಪ್ರಯೋಗವನ್ನು ಮಾಡುತ್ತಿದ್ದರು. ಇದು ಡಾಕ್ಟರರಿಗೆ ಸರಿ ಬೀಳಲಿಲ್ಲ.

'ಸಾರ್, ಏತಕ್ಕೆ? ಅನ್ಯದೇಶಗಳಲ್ಲಿ ಈ ಪದವನ್ನು ನೌಕರರು ಅಥವಾ ಸೇವಕರು ತಮ್ಮ ಯಜಮಾನರನ್ನು ಸಂಬೋಧಿಸುವ ಪದವಿದು. ನೀವು ಹೀಗೆ ಮಾಡಬೇಡಿ. ವಿಧೇಯರಾಗಿರಬೇಕಾದುದು ಸರಿಯೆ. ಆದರೆ ದೈನ್ಯ ಮನೋವೃತ್ತಿ ಬೇಡ. ನಿಮ್ಮ ಆತ್ಮಗೌರವವನ್ನು ಸದಾ ಕಾಪಾಡಿಕೊಳ್ಳಿ' ಎಂದು ನುಡಿದರು.

1930 ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಡಾಕ್ಟರರ ವಿಭೂತಿ ಸ್ವರೂಪವನ್ನು ಕಾಣ ಬಹುದಾಗಿತ್ತು. ಅಂಕೋಲೆಯ ಸಮುದ್ರದ ದಡದಲ್ಲಿ ನಡೆಸಿದ ಉಪ್ಪಿನ ಸತ್ಯಾಗ್ರಹ – ಅದಕ್ಕೆ ಸತ್ಯಾಗ್ರಹಿಗಳನ್ನು ಅಣಿಮಾಡುವ ಕಲಸ ಜನರನ್ನು ಹುರಿದುಂಬಿಸಿ ಗಾಂಧೀಯವರ ಶಾಂತಿ ಸಮರದಲ್ಲಿ ಕರ್ನಾಟಕದ ತರುಣರು ಮುಂದೆ ಬಂದು ಗಳಿಸಿದ ಯಶಸ್ಸು ಬಹು ಮಟ್ಟಿಗೆ ಡಾಕ್ಟರರಿಗೆ ಸೇರಿದ್ದು.

---

ಕಳೆದ ೧೯೪೯ನೇ ನವಂಬರ್ ೩೦. ೧ರ ಮೊದಲ್ಗೊಂಡು ೧೯೫೦ನೇ ಮಾರ್ಚಿ ೩೧ ರ ತನಕ ಭಾರತದಲ್ಲಿ ಉತ್ಪತ್ತಿಯಾದ ಒಟ್ಟು ಸಕ್ಕರೆ ೨,೪೭,೪೧,೦೦೦ ಮಣಗಳು. ಕಳೆದ ವರ್ಷ ಇದೇ ಅವಧಿಯಲ್ಲಿ ಉತ್ಪತ್ತಿಯಾದುದು ೨,೨೮,೨೫,೦೦೦ ಮಣ.

---


# ದಿ ಟ್ರಾಪಿಕಲ್

## ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಹೊಸ ದಿಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಚ್ಚಯ್ಯ, ಎಂ. ಎ. ಬೆಳ್ಯಪ್ಪ,

ಏಜೆನ್ಸಿ ಸುಪರಿಂಟೆಂಡೆಂಟ್, ಬ್ರಾಂಚ್ ಸೆಕ್ರೆಟರಿ,

ಮಡಿಕೇರಿ, ಕೊಡಗು. ಹಂಪನಕಟ್ಟೆ, ಮಂಗಳೂರು.

---

# ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

## ಫ್ರೇಜರ್ ಪೇಟೆ.

## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿಷ್ಣು ಮಣ್ಣು ಪಾಲಾಗಿ ಹೋಗುತ್ತಿರುವ ಹಾಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಹಾಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, ತಾ. 30-9-49 — ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

---

# The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today:

*Head Office:* MANGALORE 26-5

K. M. Bopaiah, Esq., *Branch Secretary for Mysore & Coorg, 85 Sultanpet, BANGALORE 2.*

# ಹೆಣ್ಣು ಗಂಡಿನ ಸಮಸ್ಯೆಗಳು.

**ಅನುವಾದಕರ :—ಶ್ರೀಮಂತಿ ವಸಂತೀಬಾಯಿ.**

(ಹೆಣ್ಣುಮಕ್ಕಳ ಸಮಸ್ಯೆ ಕುರಿತು ಒಬ್ಬ ವಿದ್ಯಾವತಿಯಾದ ವನಿತೆಯು ಮಹಾತ್ಮಗಾಂಧಿಯವರಿಗೆ ಒಮ್ಮೆ ಒಂದು ಪತ್ರ ಬರೆದರು. ಅದಕ್ಕೆ ಮಹಾತ್ಮರ ಉತ್ತರವೂ ದೊರಕಿತು. ಅವನ್ನು ಇಲ್ಲಿ ಕೊಡಲಾಗಿದೆ)

ಆತ್ಮದ ಘನತೆಯನ್ನು, ಹಿರಿಮೆಯನ್ನು, ಜಗತ್ತಿಗೆ ತಾವು ತಮ್ಮ ಅಹಿಂಸೆ, ಸತ್ಯಾಗ್ರಹಗಳ ಮೂಲಕ ತೋರಿಸಿದ್ದೀರಲ್ಲದೆ ಮಾನವನ ಕೀಳು ಪ್ರಕೃತಿಯನ್ನೆದುರಿಸಿ, ಅದರ ಪರಿಣಾಮವಾದ ಎಲ್ಲಾ ಸಮಸ್ಯೆಗಳಿಗೂ ಈ ಮಾರ್ಗವು ಸಿದ್ಧೌಷಧವೆಂದು ಸಾರಿದ್ದೀರಿ.

ನನ್ನ ಬೇಡಿಕೆ ತಮ್ಮಲ್ಲಿ ಇಷ್ಟೆ. ಹೆಣ್ಣು ಮಕ್ಕಳ ಸಮಸ್ಯೆಗಳು ನಿರ್ನಾಮವಾಗಲು ಮಾರ್ಗ ಮಾಡಿರೆಂಬುದು. ರಾಜಾಜಿಯವರು ಒಂದೇ ಮಾತಿನಲ್ಲಿ ಹೆಂಗಸರ ಸಮಸ್ಯೆ ಎಂಬುದೇ ಇಲ್ಲವೆಂದು ಬಯಲು ಮುಚ್ಚಿಬಿಟ್ಟಿದ್ದಾರೆ. ಇದು ರಾಜಕೀಯ ಸಮಸ್ಯೆಯಾಗಿಲ್ಲದಿರಬಹುದು. ನಿಯಮ, ನಿಬಂಧನೆಗಳನ್ನು ರಚಿಸಿ ಎಲ್ಲಾ ಉದ್ಯೋಗಗಳಲ್ಲೂ ಹೆಂಗಸರು ಪ್ರವೇಶಿಸಲು ನೆರವಾಗಿ ಔದ್ಯೋಗಿಕ ಸಮಸ್ಯೆಗಳಿಲ್ಲದಂತೆ ಮಾಡಬಹುದಲ್ಲವೆ? ಯಾವ ಉದ್ಯೋಗ ದಂಧೆಗಳೂ ಹೆಂಗಸರ ಸ್ವಾಭಾವಿಕ ಗುಣಗಳನ್ನು ಮಾರ್ಪಡಿಸಲಾರವು! ಹೆಂಗಸರು ಗಂಡಸರಿಗಿಂತ ಭಿನ್ನವೆಂಬುದನ್ನು ಬದಲಿಸಲಾಗುವುದಿಲ್ಲ. ಅಹಿಂಸೆ ಮತ್ತು ಸತ್ಯಾಗ್ರಹಗಳು ನಮ್ಮ ದೌರ್ಬಲ್ಯವನ್ನು ಮೆಟ್ಟಿ ಮುಂದಡಿಯಿಡಲು ತಕ್ಕ ಮುಖ್ಯ ಸಾಧನೆಯನ್ನೀಯಲಾರವು? ಪುರುಷನಂತೆ ಸ್ತ್ರೀಯ ಆತ್ಮವೂ ಉತ್ತಮವಾದ ವಸ್ತುಗಳನ್ನು ಅಪೇಕ್ಷಿಸಿಯೇ ಅಪೇಕ್ಷಿಸುತ್ತದೆ. ಗಂಡಸು ತನ್ನ ಕಡು ಪ್ರಕೃತಿಯನ್ನು ಜಯಿಸಿಕೊಳ್ಳಲು ಅಹಿಂಸೆ, ಸತ್ಯಾಗ್ರಹಗಳ ಬೆಂಬಲ ಹೇಗೆ ಅಗತ್ಯವೆಂದು ಭಾವಿಸುತ್ತಿರುವಿರೋ ಹಾಗೆಯೇ ಹೆಂಗಸು ಕೂಡ. ಗಂಡಸಿಂದ ಭಿನ್ನವಾದ ತನ್ನ ಹೀನ ಪ್ರಕೃತಿಯನ್ನು ಗೆಲ್ಲಲು ಕೆಲವು ಕಟ್ಟು ಕಾಯಿದೆಗಳನ್ನು ಆಶಿಸುತ್ತಾಳೆ.

ಸ್ತ್ರೀಯೊಡವಳಿಗೆ ಪ್ರಕೃತಿದತ್ತ ಗುಣಗಳೂ, ಅವಳ ಬದುಕು ಸಾಗುವ ಸನ್ನಿವೇಶ ಸೌಲಭ್ಯಗಳಿಂದ, ಅನುಭವಗಳಿಂದ ಉಂಟಾದ ಪರಿಣಾಮಗಳೂ, ಅವಳನ್ನು ಬಹುಮಟ್ಟಿಗೆ ಬದಲಾಯಿಸುವುದಲ್ಲದೆ, ಕೆಲವೊಮ್ಮೆ ಇವು ಅವಳಿಗೆ ಎದುರು ನಿಲ್ಲುವುದೂ ಉಂಟು. ಎಷ್ಟೋ ಕಾಲದಿಂದ ಸ್ವಾರ್ಥಿಯಾದ ಪುರುಷನು 'ಎಷ್ಟಾಗಲಿ ಹೆಂಗಸು ಹೆಂಗಸೆ' ಎಂದ ಕೀಳು ಮಟ್ಟದಲ್ಲಿ ಕಾಣುತ್ತ ಬಂದಿರಲು ಇವೂ ಕಾರಣಗಳೇ. ಅಂದರೆ ಲೈಂಗಿಕ ಮಹತ್ವ ಎನ್ನುವ ಸ್ಥೂಲ ಭಾವನೆಯನ್ನುಂಟುಮಾಡಿದೆ ಎಂಬುದು ನಾವು ಪ್ರಯತ್ನಿಸಿದ್ದೇ. ಆದರೆ ಈ ಪ್ರಕೃತಿದತ್ತ ಕೋಮಲತೆ, ಒನತಾಪ, ದೌರ್ಬಲ್ಯಗಳನ್ನು ಮೆಟ್ಟಿ ಪ್ರಗತಿ ಪಥದಲ್ಲಿ ನಡೆಯಬಹುದು. ಗಂಡಸರಂತೆ ಹೆಂಗಸರಲ್ಲೂ ಈ ಮಾರ್ಪಾಟು ಅಂತರಂಗದಿಂದ ಬರಬೇಕು.

ಒಂದು ಉದಾಹರಣೆ: ಶಿಶು ಸಂರಕ್ಷಣಾರ್ಥವಾಗಿ, ಮೃದು ಹೃದಯ, ಕೋಮಲವಾದ ಮನಸ್ಸು; ಇನ್ನೂ ಇವುಗಳೇ ಮೊದಲಾದ ಗುಣಗಳು ಹೆಂಗಸರಲ್ಲಿ ನೈಸರ್ಗಿಕ. ಈ ಗುಣಗಳು ಅವಳನ್ನು ಅಂಧಳನ್ನಾಗಿ ಮಾಡಿ, ಅವಳ ಅರಿವಿಲ್ಲದಂತೆಯೇ ಪ್ರೇರಿಸಿ ಅವಳನ್ನು ಎಲ್ಲಿಗೋ ಎಳೆಯುತ್ತವೆ. ಇದರ ಪರಿಣಾಮವಾಗಿ ಬೇರೆ ಯಾವುದಾದರೂ ಕಾರ್ಯಕ್ಕೆ ಆಕೆ ತೊಡಗಬೇಕಾದಾಗ ಬಸವಳಿಯಬೇಕಾಗುತ್ತದೆ. ಗಂಡಸರೊಡನೆ ವ್ಯವಹರಿಸುವಲ್ಲಿ ಎಷ್ಟೋ ಅವಿವೇಕಗಳಿಗೆ ಬಲಿಬೀಳಬೇಕಾಗುತ್ತದೆ. ಅವಳು ಕ್ರಾಂತಿ ಕಾಳಿಯಾಗಬೇಕಾದೆಡೆಯಲ್ಲಿ ಕರುಣಾಸಮುದ್ರಳಾಗಿ ಬಿಡುತ್ತಾಳೆ! ಬೆಡಗು ಬಿನ್ನಾಣ, ಭೂಷಣಗಳಿಗೆ ಬೆರಗಾಗಿ ಅರಿವುಗೆಟ್ಟವಳಾಗುತ್ತಾಳೆ, ಬೆಲೆ ಬಾಳದಾಗುತ್ತಾಳೆ.

ಎಷ್ಟೋ ದಿನದಿಂದ ನಿಮ್ಮ ದರ್ಶನಕ್ಕಾಗಿ ಅರ್ಜಿ ಕಳುಹಿದ್ದೆ. ಈ ಯೋಜನೆ ಬಂದ ಮೊದಲ ರಾತ್ರಿಯೆಲ್ಲಾ ಅದೇ ಯೋಜನೆಯಲ್ಲಿ ಕಣ್ಣು ಮೇಲೆ ರೆಪ್ಪೆ ಹಾಕಲಿಲ್ಲ. ತಮ್ಮ ಭೇಟಿ ಸಿಕ್ಕಿ ನನ್ನನ್ನು 'ಕುಳಿತುಕೊಳ್ಳಿರಿ' ಅಂದಾಗ ದೇಸಾಯಿಯವರ ಪರಿಯಲ್ಲಿ ಕುಳಿತೆ. ನಿಮ್ಮ ಮಾತು ಕೇಳುವುದರಲಿ! ಅಲ್ಲಿಂದ ತಮ್ಮನ್ನು ಕಾಣಲೂ ಸಹ ಆಗುತ್ತಿರಲಿಲ್ಲ. ಕಾರಣ ಇಷ್ಟೆ: ಹೆಂಗಸರದು ಚಂಚಲ ಸ್ವಭಾವ. ಅದು ಬಹು ಬೇಗ ಪ್ರಕಟಗೊಂಡು ಎಲ್ಲಿಗೋ ಹೋಗುವುದೂ ಉಂಟು. ತಕ್ಕ ಶಿಕ್ಷಣ ದೊರೆತಲ್ಲಿ ಈ ಸ್ವಭಾವವನ್ನು ಬದಲುಗೊಳಿಸಬಹುದು.

ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕವಾದೊಂದು ಮೂಲಾಧಾರ ಹೊಂದಿದ ಶಿಕ್ಷಣ ಕ್ರಮವು ಇನ್ನೂ ಜನ್ಮವೆತ್ತಿಲ್ಲವೆಂಬುದು ತಮಗೆ ತಿಳಿಯದೇ ಇಲ್ಲ. ಸಲಹೆ ಕೇಳಿದಾಗಲೆಲ್ಲಾ 'ಹರಿಜನ ಪತ್ರಿಕೆ ಓದುವಂತೆ ಹೇಳುತ್ತೀರಿ'. ಎಷ್ಟೋ ಉತ್ಸಾಹದಿಂದ ಎಷ್ಟೋ ಮನಸಿಟ್ಟು ಓದುತ್ತಿದ್ದೇನೆ. ಆದರೆ ಹೆಂಗಸಿನ ಆತ್ಮವಿಕಾಸಕ್ಕೆ ಮಾರ್ಗವಾಗುವ ಬುದ್ಧಿವಾದವನ್ನು ಬೇರೆ ಕಾಣಲಿಲ್ಲ. ದೇಶಕ್ಕಾಗಿ ಹೋರಾಡುವುದೂ, ನೂಲುವುದೂ, ಶ್ರೇಷ್ಠವಾದ ಗುಣಗಳೆ. ಆದರೆ ಇವರಿಂದ ಲಭ್ಯವಾಗುವುದು ರಾಷ್ಟ್ರೀಯ ಶಿಕ್ಷಣವಷ್ಟೇ. ಹೊರತು ಸ್ತ್ರೀಯರ ಆತ್ಮವಿಕಾಸಕ್ಕೆ ಸಾಧಕವಾಗುವಂಥದೇನೂ ಇಲ್ಲ. ಉಚ್ಚ ರಾಷ್ಟ್ರೀಯ ಭಾವನೆ, ಧ್ಯೇಯಗಳನ್ನು ಆಚರಿಸುತ್ತಲಿರುವ ಸ್ತ್ರೀಯರ ಪರಿಚಯವಿದೆ ನನಗೆ. 'ಏನಾದರೂ ಹೆಂಗಸು ಹೆಂಗಸೇ' ಎಂಬ ಭಾವನೆಯಿಂದ ಮಾಡುವ ತಪ್ಪುಗಳು ಅವರಲ್ಲೂ ಅನೇಕ ಇದ್ದೇ ಇವೆ.

ಗಂಡಸಿನಂತೆ ಹೆಂಗಸು ಆಗಿಬಿಡಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಗಂಡಸರಿಗೆ ಅವರ ಹೀನ ಗುಣಗಳಿಂದ ಮುಕ್ತರಾಗಲು ಅಹಿಂಸಾ ತತ್ವ ಬೋಧೆಯನ್ನು ಮಾಡಿ ಮಾರ್ಗ ಹಾಕಿ ಕೊಟ್ಟಿರುವಂತೆ ನಮಗೂ ಒಂದು ದಾರಿ ತೋರಿರಿ. 'ಎಷ್ಟೇ ಆಗಲಿ, ಬಿಡಿ ಹೆಂಗಸು' ಎಂದು ಯಾರಾದರೂ ಅಂದಾಗಲೆಲ್ಲಾ ನನ್ನ ಅಂತರಾತ್ಮವು ಅಳುತ್ತದೆ.

## ಗಾಂಧಿಯವರ ಉತ್ತರ.

'ಹೆಣ್ಣು ಮಕ್ಕಳ ಸಮಸ್ಯಾ ಪರಿಹಾರ ಮಾರ್ಗವನ್ನು, ನಾನು ಸತ್ಯಾಗ್ರಹ ತತ್ವ ಕಂಡು ಹಿಡಿದ ದಿನವೇ ಕಂಡು ಹಿಡಿದೆನೆಂದು ತಿಳಿದು ಹಿಗ್ಗಿದ್ದೆ. ಈ ವನಿತೆಯಾದರೋ ಹೆಣ್ಣು ಮಕ್ಕಳ ಸಮಸ್ಯಾ ಪರಿಹಾರಕ್ಕೆ ಗಂಡಸರಿಂದ ಭಿನ್ನವಾದ ತತ್ವಗಳಿರಬೇಕೆನ್ನುತ್ತಾಳೆ. ಹೀಗಾದರೆ ಅದಕ್ಕೆ ಪರಿಹಾರ ಮಾರ್ಗವನ್ನು ಕಂಡು ಹಿಡಿಯಲು ಯಾವ ಪುರುಷನಿಗೂ ಸಾಧ್ಯವಾಗದೆಂದು ಹೇಳಬೇಕಾಗುತ್ತದೆ. ಕಾರಣ ಪುರುಷನ ಸ್ವಭಾವ ಸ್ತ್ರೀಯಿಂದ ಭಿನ್ನವಾಗಿರುವುದು. ನೀರಿನ ಸುಳಿಗೆ ಸಿಕ್ಕಿದ ಕಷ್ಟಗಳು ದಡದವನಿಗೆ ಹೇಗೆ ತಿಳಿದೀತು, ಅದಕ್ಕೆ ಎಲ್ಲಿ ಪೆಟ್ಟು ತಗಲುತ್ತದೆ ಎನ್ನುವುದು? ಹೆಂಗಸರು ತಮ್ಮ ಸಮಸ್ಯೆಗೆ ಪರಿಹಾರ ಮಾರ್ಗವನ್ನು ತಾವೇ ಕಂಡು ಹಿಡಿಯಬೇಕು.

ನನ್ನ ಅಭಿಪ್ರಾಯವಿದು: ಮೂಲತಃ ಹೆಣ್ಣು ಗಂಡುಗಳೆರಡೂ ಹೇಗೆ ಒಂದೇಯೋ ಹಾಗೆಯೇ ಅವರ ಸಮಸ್ಯೆಗಳೂ ತತ್ವತಃ ಒಂದಲ್ಲದೆ ಬೇರಿಲ್ಲ. ಅವರ ಆತ್ಮಗಳಿಗೆ ಭೇದವಿಲ್ಲ. ಇಬ್ಬರ ಜೀವನ ಕ್ರಮಗಳೂ ಒಂದೇ. ಹೆಣ್ಣು ಗಂಡಿನ, ಗಂಡು ಹೆಣ್ಣಿನ ಪ್ರತಿಬಿಂಬ, ಒಬ್ಬರೊಬ್ಬರು ಪರಸ್ಪರಾವಲಂಬಿಗಳು.

ಹೇಗೋ ಏನೋ ಅನಾದಿ ಕಾಲದಿಂದ ಪುರುಷನು ಸ್ತ್ರೀಯ ಮೇಲೆ ಅಧಿಕಾರವನ್ನು ಚಲಾಯಿಸುತ್ತ ಬಂದಿರುತ್ತಾನೆ. ಇದರಿಂದ ಹೆಣ್ಣಿನ ಮನಸ್ಸಿನಲ್ಲಿ ಅಧೀನಭಾವ, ಕೀಳುಭಾವಗಳು ಮೂಡಿ ಮೊಳೆತು ಬಿಟ್ಟಿವೆ. ಗಂಡಸಿಗಿಂತ ತಾನು ಕೀಳೆಂಬ ಏಕಪಕ್ಷವಾದವನ್ನು ನಂಬಿ ಅಂಗೀಕರಿಸಿಬಿಟ್ಟಿದ್ದಾಳೆ. ಮಹನೀಯರನೇಕರು ಹೆಂಗಸಿನ ಸಮಾನಾಧಿಕಾರವನ್ನು ಒಪ್ಪಿರುವ ನಿದರ್ಶನಗಳನೇಕವಿವೆ.

ಹೆಣ್ಣು ಗಂಡುಗಳು ಒಂದಲ್ಲ ಒಂದು ಕಾರಣದಿಂದ ಬೇರೆಯಾಗಲೇಬೇಕಾಗುವುದು. ಮೂಲದಲ್ಲಿ ಒಂದೇ ಆದರೂ ರೂಪಿನಲ್ಲಿ ಭೇದವಿದೆ; ವ್ಯಕ್ತಿ ಪ್ರವೃತ್ತಿಗಳಲ್ಲಿ ಭೇದವಿದೆ. ಗಂಡಸಿನಲ್ಲಿಲ್ಲದ ತಾಯ್ತನಕ್ಕೆ ಬೇಕಾದ ಗುಣ ವಿಶೇಷಗಳು ಹೆಂಗಸಿನಲ್ಲಿವೆ. ಆಕೆಯು ತಾಳ್ಮೆಯ ತವರು. ಆತ ಎಷ್ಟಾದರೂ ಸ್ವಲ್ಪ ಕಠಿನ ಪ್ರಕೃತಿಯವನೇ. ಗೃಹಜೀವನದ ಯಜಮಾನಿಕೆ ಆಕೆಯ ಅಜನ್ಮ ಹಕ್ಕು. ಆತ ಹೊರಗೆ ದುಡಿದು ಸಂಸಾರಕ್ಕೆ ಬೇಕಾದ್ದನ್ನು ಆರ್ಜಿಸಿ ತರುವ ಹೊರೆ ಹೊತ್ತವ. ಈ ದುಡಿಮೆಯ ಗಳಿಕೆಯನ್ನು ಸದ್ವ್ಯವಸ್ಥೆಯಂತೆ ವಿನಿಯೋಗಿಸುವವಳು ಆಕೆ. ಕುಟುಂಬ ಸಂರಕ್ಷಣೆ, ಮಕ್ಕಳ ಪಾಲನೆ, ಪೋಷಣೆ, ಇವುಗಳು ಆಕೆಯ ವಿಶೇಷ ಹಕ್ಕುಗಳು. ಆಕೆ ಪಾಲಿಸದಿದ್ದರೆ ಜನಾಂಗವೇ ನಿರ್ನಾಮವಾದೀತು.

ಮನೆತನಗಳಲ್ಲಿಯ ಸಮತೋಲನ ಸ್ಥಿತಿಯನ್ನು ಕಾಪಾಡಲು ಹೆಂಗಸನ್ನು ತಪ್ಪಿಸಿ, ಅವಳ ಸ್ಥಾನದಲ್ಲಿ ಸಾಹಸಿಕೆ ಹೊತ್ತ ಸಿಪಾಯಿಯನ್ನು ನೇಮಿಸುವುದು ಅವಮಾನಕರ, ಅನಾಗರಿಕ ಲಕ್ಷಣ. ಹೀಗೆಯೇ ಪುರುಷನ ಸವಾರಿಯ ಕುದುರೆಯನ್ನು ಹತ್ತಹೋದ ಸ್ತ್ರೀ ತಾನು ಕೆಳಗುರುಳುವುದಲ್ಲದೆ ಆ ಕುದುರೆಯನ್ನೂ ಕೆಡುವುತ್ತಾಳೆ. ಹೆಂಗಸು ಗೃಹಲಕ್ಷ್ಮಿಯಾಗಿರುವುದನ್ನು ತಪ್ಪಿಸಿ, ಅವಳನ್ನು ಪುಸಲಾಯಿಸಿಯಾಗಲೀ, ಬಲಾತ್ಕಾರದಿಂದಾಗಲೀ ಆಗಲಿ ಬೇರೆ ಮಾರ್ಗಕ್ಕೆ ಒಯ್ದರೆ ಆ ಪಾಪವು ಗಂಡಸಿನ ಮಡಿಲಿಗೆ ಬೀಳುತ್ತದೆ. ಮನೆಮಾತೆಗಳ ಸಂರಕ್ಷಣೆ ಮಾಡುವುದರಲ್ಲಿ ಎಷ್ಟು ಪರಾಕ್ರಮ, ಗೌರವಗಳುಂಟೋ ಅಷ್ಟೇ ಗೌರವವು ಮನೆವಾರ್ತೆಯನ್ನು ಸರಿಯಾಗಿ ನಡೆಸಿಕೊಂಡು ಬರುವ ಹೆಂಗಸಿಗೂ ಸಲ್ಲಬೇಕಾಗುವುದು.

'ಅಹಿಂಸೆಯ ಅವತಾರ ಹೆಂಗಸು' ಎಂದು ಎಷ್ಟೋ ಸಾರಿ ನಾನು ಸಾರಿ ಹೇಳಿದ್ದೇನೆ. ಅಹಿಂಸೆಯೆಂದರೆ ಅಸೀಮ ಪ್ರೀತಿ, ಕಷ್ಟಸಹಿಷ್ಣುತೆ ಇವರಿಂದ. ಪ್ರಸವವೇದನೆಯಂತಹ ಪ್ರಬಲ ಬಾಧೆಯನ್ನು ಸಹ ಜೀವ ನಿರ್ಮಾಣದ ಸಂತೋಷದಲ್ಲಿ ಲೆಕ್ಕಿಸದೆ ಸಹಿಸುವ ತಾಳ್ಮೆ ಹೆಂಗಸಿಗಲ್ಲದೆ ಇನ್ನಾರಿಗಿದೆ? ಮಕ್ಕಳ ಪೋಷಣೆಯಲ್ಲಿ ಅವಳು ಪಡುವ ಕಷ್ಟಗಳನ್ನು ಇನ್ನಾರು ತಾನೇ ಪಟ್ಟಾರು!

ಇಂತಹ ಹೆಣ್ಣು ಕಾಮದ ವಸ್ತುವೆ? ಆಕೆ ಈ ಭಾವನೆ ಬಿಟ್ಟು ತನ್ನ ಪ್ರೀತಿಯ ಸಂದೇಶವನ್ನು ಲೋಕಕ್ಕೆ ಹರಡಲಿ. ಆಗ ಹೆಂಗಸು ಗಂಡಸಿನ ತಾಯಿಯಾಗಿ, ಗುರುವಾಗಿ, ಮೌನದಿಂದಲೇ ಅವನ ಗೌರವ, ಪ್ರತಿಷ್ಠೆಗಳಿಗೆ ಮಾರ್ಗದರ್ಶಿನಿಯಾಗುತ್ತಾಳೆ.

ಶಾಂತಿಗಾಗಿ ಹೋರಾಡುವ ಜನಾಂಗಕ್ಕೆ ಶಾಂತಿಯ ಪಾಠ ಕಲಿಸಬಲ್ಲವಳು ಹೆಂಗಸು.

ಸತ್ಯಾಗ್ರಹಕ್ಕೆ ಬೇಕಾದ್ದು ಪುಸ್ತಕ ವಿದ್ಯೆಯಲ್ಲ, ಕಷ್ಟ ಸಹಿಷ್ಣುತೆ, ನಂಬಿಕೆಯ ಫಲವಾಗಿ ಬರುವ ದೃಢ, ಅಚಲವಾದ ಮನಸ್ಸು, ಹೃದಯ.

ಹಿಂದೆ ಸಸೂನ್ ಆಸ್ಪತ್ರೆಯಲ್ಲಿ ನಡೆದ ಸಂಗತಿ ಇದು. ಒಬ್ಬ ಹೆಣ್ಣು ಮಗಳಿಗೆ ಕಠಿನವಾದ ಶಸ್ತ್ರ ಚಿಕಿತ್ಸೆಯಾಗಬೇಕಾಯಿತು. ಆಕೆ ಗರ್ಭವತಿಯಾಗಿದ್ದುದರಿಂದ ಮಗುವಿಗೆ ಅಪಾಯವಾದೀತೆಂದು ಕ್ಲೋರೋಫಾರಂ ತೆಗೆದುಕೊಳ್ಳಲು ನಿರಾಕರಿಸಿ ಆ ಶಸ್ತ್ರ ಚಿಕಿತ್ಸೆಯ ಮಹಾವೇದನೆಯನ್ನು ಸಹಿಸಿಕೊಂಡಳು. ಇದಕ್ಕೆ ಕಾರಣ ಆ ಗರ್ಭದ ಮೇಲಿನ ಅಸೀಮ ಪ್ರೀತಿ, ದೃಢ ಮನಸ್ಸು. ಇದರ ನೆನಪಾದಾಗಲೆಲ್ಲ ಹೆಂಗಸಿನ ವಿಷಯದಲ್ಲಿ ನನಗೆ ಅಸೂಯೆ ಪಡುವಂತಾಗುತ್ತದೆ. ಹೆಣ್ಣು, ತಾನು ಗಂಡಾಗಿ ಹುಟ್ಟಲಿಲ್ಲವಲ್ಲಾ ಎಂದು ಚಿಂತಿಸುವುದು ಹುಚ್ಚುತನ. ಗಂಡಸು ಹೆಣ್ಣಾಗಿ ಹುಟ್ಟಲಿಲ್ಲವಲ್ಲಾ ಎಂದು ಚಿಂತಿಸಬೇಕಾದ್ದು ಸಹಜ.

ಏನಾದರಾಗಲಿ, ಹೆಣ್ಣಾಗಲೀ, ಗಂಡಾಗಲೀ, ಪ್ರಕೃತಿದತ್ತವಾದ ನಮ್ಮ ಜನ್ಮಗಳಿಗನುಗುಣವಾಗಿ ಸಹಜಪ್ರವೃತ್ತಿಗಳಿಗೆ ಯೋಗ್ಯವಾಗಿ ನಿಯಮಿತವಾಗಿರುವ ಕರ್ತವ್ಯಪಾಲನಾ ಕಾರ್ಯದಲ್ಲಿ ನಿರತರಾಗುವುದು ಯೋಗ್ಯವಾದುದು.

(ನವಯುಗ)

# ಗಮನಿಸಿರಿ!

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಗಿರಾಕಿಗಳ ಬೇಡಿಕೆಯನ್ನು ಸಲ್ಲಿಸಲು ನಾವು ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಸಿಲ್ಕ್ ಬಟ್ಟೆಗಳ ಯಥೇಷ್ಟ ಸ್ಟಾಕ್ ಇಡಲಾಗಿದೆ.
ಯಾವ ಸಮಾರಂಭಕ್ಕೂ ಬಟ್ಟೆಗಳು ಆದರ್ಶವೆನಿಸಿವೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೊ ಬ್ರದರ್ಸ್ ಎತ್ತಿದ ಕೈ!

**ಪಟ್ಟೊ ಬ್ರದರ್ಸ್,**
ಲಕ್ಷ್ಮೀ ಬಿಲ್ಡಿಂಗ್ಸ್,
52–18 ಟೌನ್ ಹಾಲಿನ ಎದುರು, ಮೈಸೂರು.

**ಭದ್ರತೆ! 17 ವರ್ಷಗಳ ಅನುಭವ ಅನುಕೂಲತೆ !!**
ಅನುಭವಶೀಲತೆ!!

# ದಿ ವಿಜಯ ಬ್ಯಾಂಕ್ ಲಿಮಿಟೆಡ್
ಮುಖ್ಯ ಕಚೇರಿ,
**ಕದ್ರಿ ರೋಡ್, ಮಂಗಳೂರು.**
ನಿರಖು ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3½% |
| 12 | ,, | 3¾% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.
ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.
ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.
ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,
**ಮಡಿಕೇರಿ ಶಾಖೆ, ಮಡಿಕೇರಿ.**

# ಮತ್ತೊಂದು ಉಜ್ವಲ ವರ್ಷ.
**1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.**

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಮೀರಿದೆ |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | ,, |
| ಒಟ್ಟು ನಿಧಿ. ರೂ. .... .... .... | 8,30,00,000 | ,, |
| ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು | 10,96,00,000 | ,, |

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.
**ಶಕ್ತಿ. ಸೇವೆ ಭದ್ರತೆ.**

# ಎಂಪೈರ್ ಆಫ್ ಇಂಡಿಯಾ
**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**
ಸ್ಥಾಪನೆ,—1897
ಲೋಕನಾಥ್ ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಬೊಂಬಾಯಿ.
ಬ್ರಾಂಚ್ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.


**ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.**


# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000 |
| ಕ್ಷೇಮನಿಧಿ | ರೂ. | 55,000. |
| ಇತರ ನಿಧಿಗಳು | ರೂ. | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ದರ್ನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M L C. ಪ್ರೆಸಿಡೆಂಟ್ ಮತ್ತು ಖಜಾಂಚಿ

# CRESCENT
**FOR PROTECTION AND SERVICE.**

It is best to represent and insure with
The CRESCENT Insurance Co., Lt.d,
*H: O: BOMBAY.* [*Established 1919.*
*For particulars write to:*

**Sri B. A. Poovaiah** *Organiser* *Pollibetta, Coorg.*
or
**The Branch Manager,** *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು
## ಕ್ರೆಸೆಂಟ್
ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

# ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.
ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವುವು)

ಎಂ. ಎಸ್. ಸೋಮಯ್ಯ,
52–37 ಗೌರವ ಕಾರ್ಯದರ್ಶಿ.


Edited, Printed and Published by P. I. Belliappa at 'Kodagu Press, Mercara, for 'Kodagu' Ltd.

KODAGU MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೮ | ತಾರೀಕು ೧೯-೫-೧೯೫೦ನೇ ಶುಕ್ರವಾರ | ಸಂಚಿಕೆ ೫೧

## ಮುಂಬರುವ ಮಹಾ ಚುನಾವಣೆ.

ಸ್ವತಂತ್ರ ಭಾರತದ ಜನತಾರಾಜ್ಯ ಭಾರಿ ಶಾಸನಸಭೆಗಳ ಸ್ಥಾನಗಳನ್ನು ಮತ್ತು ಚುನಾವಣಾ ಕ್ರಮ ವಿಧಾನಗಳ ಒಳಗೊಂಡ 'ಜನತಾ ಪ್ರಾತಿನಿಧ್ಯ ಮಸೂದೆ'ಯು ಭಾರತ ಪಾರ್ಲಿಮೆಂಟಿನಲ್ಲಿ ಕಾನೂನು ಮಂತ್ರಿ ಡಾ. ಅಂಬೇಡ್ಕರರಿಂದ ಏಪ್ರಿಲ್ ತಾ 12ರಲ್ಲಿ ಮುಂದೆ ಬಂದಿದ್ದಿತು. ಆ ಕುರಿತು ವಿಶೇಷ ರೀತಿಯ ಚರ್ಚೆ ಮತ್ತು ಪರ್ಯಾಲೋಚನೆ, ಪರಿಶೀಲನೆಗಳು ನಡೆದು ಕೆಲವು ಗಣ್ಯ ಬದಲಾವಣೆಗಳಾಗಿ ಏಪ್ರಿಲ್ ತಾ 20ರ ಪಾರ್ಲಿಮೆಂಟ್ ಸಭೆಯಲ್ಲಿ ಮಸೂದೆ ಮಂಜೂರಾಗಿದೆ. ಈ ಮಸೂದೆಯ ಚರ್ಚೆಯ ವೇಳೆ ಪ್ರಧಾನಿ ಪಂಡಿತ ನೆಹರುಗಳು ಅಂದಂತೆ ಮಹಾ ಚುನಾವಣೆಯು 1951 ನೇ ಏಪ್ರಿಲಿನಲ್ಲಿ ಜರುಗಲಿದೆ, ಭಾರತಾಧ್ಯಕ್ಷರು ನೇಮಿಸಿರುವ 'ಚುನಾವಣಾ ಕಮಿಶನರ್'ಗೆ ಸಹಾಯಾರ್ಥ ಸಮಿತಿಯೊಂದು ಸಭಾಧ್ಯಕ್ಷರಿಂದ ನೇಮಿಸಲ್ಪಡಲಿದೆ. ಮತದಾರ ಕ್ಷೇತ್ರಗಳ ಪುನರ್ರಚನ ಮತ್ತು ಚುನಾವಣಾ ಸಂಬಂಧದ ಇತರ ಎಲ್ಲಾ ವಿಷಯಗಳ ಸವಿವರ ರೂಪರೇಷೆ ನಮೂದಿಸುವ ಬೇರೊಂದು ಹೊಸ ಮಸೂದೆಯು ಪಾರ್ಲಿಮೆಂಟಿನ ಮುಂದಿನ ಅಧಿವೇಶನಗಳಲ್ಲಿ ಬರಲಿದೆ. ಜನರಾಜ್ಯದ ಉದ್ಘಾಟನೆಯೊಂದಿಗೆ ಆರಂಭಿಸಿ, ನಡೆಯುತ್ತಾ ಬಂದಿದ್ದ ಜನತಾರಾಜ್ಯ ಭಾರತದ ಪ್ರಥಮ ಪಾರ್ಲಿಮೆಂಟು ಅಧಿವೇಶನವು ಈ ವಿಷಯಗಳತ್ತ ಆವರ್ತನ ಪ್ರಕಾಶ ಬೀರಿ ಸ್ವಲ್ಪ ಕಾಲದ ವಿರಾಮಕ್ಕಾಗಿ ಇದೇ ತಾ 20ರಲ್ಲಿ ಮುಕ್ತಾಯಗೊಂಡಿತು.

### ಮೂಲ ಮಸೂದೆಯಲ್ಲಿ.

ತಾ. 12ರಲ್ಲಿ ಡಾ. ಅಂಬೇಡ್ಕರರು ಪಾರ್ಲಿಮೆಂಟಿನ ಮುಂದಿಟ್ಟ ಮಹಾ ಚುನಾವಣಾ ಸಂಬಂಧದ ಈ ಮಸೂದೆಯ ಮುಖ್ಯ ಭಾಗಗಳು ಹೀಗಿದ್ದುವು:—

'ಜನತಾ ಸಭೆ' (ಭಾರತ ಪಾರ್ಲಿಮೆಂಟ್)ನಲ್ಲಿ ಎಲ್ಲಾ ಸಂಸ್ಥಾನಗಳಿಂದ ಆರಿಸಲ್ಪಟ್ಟ 480 ಸದಸ್ಯರಿರತಕ್ಕದ್ದು. ಅಂದಾಜು ಜನಸಂಖ್ಯೆಯ ಪ್ರತಿ 7 2 ಲಕ್ಷಗಳಿಗೊಂದು ಸ್ಥಾನದಂತೆ ಈ ಸ್ಥಾನಗಳನ್ನು ವಿತರಣೆ ಮಾಡಲಾಗಿದೆ. ಈ ಪೈಕಿ ಉತ್ತರ ಪ್ರದೇಶ (ಸಂಯುಕ್ತ ಪ್ರಾಂತ್ಯ) 86, ಮದ್ರಾಸ್ 75, ಅಸ್ಸಾಮ್ 12, ಬಿಹಾರ್ 55, ಬೊಂಬಾಯಿ 45, ಮಧ್ಯ ಪ್ರದೇಶ 29, ಒರಿಸ್ಸಾ 20, ಪಂಜಾಬು 18, ಪಶ್ಚಿಮ ಬಂಗಾಳ 34, ಹೈದರಾಬಾದ್ 25, ಜಮ್ಮು ಕಾಶ್ಮೀರ 6, ಮಧ್ಯ ಭಾರತ 11, ಮೈಸೂರು 11, ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳ ಕೇಂದ್ರ 5, ರಾಜಸ್ಥಾನ್ 20, ಸೌರಾಷ್ಟ್ರ 6, ತಿರುವಾಂಕೂರು ಕೊಚ್ಚಿ 12, ವಿಂಧ್ಯ ಪ್ರದೇಶ 5, ಡೆಲ್ಲಿ 3, ಹಿಮಾಚಲ ಪ್ರದೇಶ 2, ಅಜಮೀರ್ 1, ಭೋಪಾಲ್ 1, ಕೊಡಗು 1, ಬಿಲಾಸಪುರ 1, ಕಚ್ 1, ಮಣಿಪುರ 1, ತ್ರಿಪುರ 1, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು 1, ಈ ರೀತಿ ಸ್ಥಾನಗಳು ಹಂಚಲ್ಪಟ್ಟಿದ್ದುವು.

ಸಂಸ್ಥಾನಿಕ ಲೆಜಿಸ್ಲೇಟಿವ್ ಎಸೆಂಬ್ಲಿಗಳಲ್ಲಿರಬೇಕಾದ ಸ್ಥಾನಗಳ ಸಂಖ್ಯೆಯು ಈ ಕೆಳಗಿನಂತೆ ನಿರ್ಧರಿಸಲ್ಪಟ್ಟಿದ್ದಿತು.—ಅಸ್ಸಾಮ್ 108, ಬಿಹಾರ್ 276, ಬೊಂಬಾಯಿ 225, ಮಧ್ಯ ಪ್ರದೇಶ 174, ಮದ್ರಾಸ್ 300, ಒರಿಸ್ಸಾ 140, ಪಂಜಾಬು 126, ಉತ್ತರ ಪ್ರದೇಶ 344, ಪಶ್ಚಿಮ ಬಂಗಾಳ 204, ಹೈದರಾಬಾದ್ 150 ಮಧ್ಯ ಭಾರತ 77, ಮೈಸೂರು 77, ಪಾಟಿಯಾಲಾ ಪೂರ್ವ ಪಂಜಾಬು ಸಂಸ್ಥಾನ ಕೇಂದ್ರ 60, ರಾಜಸ್ಥಾನ್ 140, ಸೌರಾಷ್ಟ್ರ 60, ತಿರುವಾಂಕೂರು ಕೊಚ್ಚಿ, 84.

ಲೆಜಿಸ್ಲೇಟಿವ್ ಕೌನ್ಸಿಲುಗಳಿರುವ ಸಂಸ್ಥಾನಗಳಲ್ಲಿ ನಿರ್ಣಯವಾಗಿದ್ದ ಆಯಾಯ ಕೌನ್ಸಿಲಿನ ಹಿಂದಿನ ಸದಸ್ಯಸಂಖ್ಯೆ: ಬಿಹಾರ್ 68, ಬೊಂಬಾಯಿ 56, ಮದ್ರಾಸ್ 75, ಪಂಜಾಬ 40, ಉತ್ತರ ಪ್ರದೇಶ 86, ಪಶ್ಚಿಮ ಬಂಗಾಳ 51, ಮೈಸೂರು 40

ಚುನಾವಣಾ ಕಮಿಷನರಿನ ಆಲೋಚನೆಗಳನ್ನು ಕೇಳಿಕೊಂಡು, ಎಲ್ಲಾ ಶಾಸನ ಸಭಾ ಸ್ಥಾನಗಳ ಮತದಾರ ಕ್ಷೇತ್ರದ ಗಡಿ ಪ್ರತ್ಯೇಕಿಸ ಮಾಡುವ ಅಧಿಕಾರವು ಭಾರತಾಧ್ಯಕ್ಷರದು

1949 ನೇ ಜುಲೈ 25 ರೊಳಗೆ ಪಾಕಿಸ್ಥಾನದಿಂದ ಭಾರತಕ್ಕೆ ಬಂದಿದ್ದ ನಿರಾಶ್ರಿತರಿಗೆ ಮತಾಧಿಕಾರ ದೊರೆಯುವಂತೆ ನಿವಾಸ ಸಂಬಂಧದ ನಿಯಮ ನಿರ್ಬಂಧಗಳನ್ನು ಸಡಲಿಸಲಾಗಿದೆ. ಈ ಅವಧಿಯ ನಂತರ ಬಂದವರು ಮತದಾರರಾಗಿ ಹೆಸರು ದಾಖಲಾಗುವ ಅರ್ಹತೆ ಕಳೆದುಕೊಳ್ಳುತ್ತಾರೆ

ಮತದಾರರ ಪಟ್ಟಿಗಳಲ್ಲಿ ಕಾಲೋಚಿತ ತಿದ್ದುಪಡಿ, ಕಳೆಯುವಿಕೆ ಮತ್ತು ಸೇರ್ಪಡೆಗಳು ಹೊಂದಿಕೊಳ್ಳುವಂತೆ, ಅವುಗಳನ್ನು ಪ್ರತಿ ವರ್ಷವೂ ತಯಾರಿಸುವ ನಿಬಂಧನೆಯಿದೆ

ಪ್ರಥಮ ಮತದಾರರ ಪಟ್ಟಿಗೆ 1949 ನೇ ಜನವರಿ 1 ನೇ ತಾರೀಕು ಅರ್ಹತೆ ನಿಶ್ಚಯದ ದಿನ ಮತ್ತು 1949 ನೇ ದಶಂಬರ್ 31ಕ್ಕೆ ಅಂತ್ಯವಾಗುವ ವರ್ಷವು ಅರ್ಹತೆ ನಿಶ್ಚಯದ ಅವಧಿಯಾಗಿ ಗಣಿಸಲ್ಪಟ್ಟಿವೆ. ಆ ನಂತರದ ಪಟ್ಟಿಗಳ ಪಟ್ಟಿಗೆ, ಮತದಾರರ ಪಟ್ಟಿಗಳು ತಯಾರಿಸಲ್ಪಡುವ ವರ್ಷದ ಮಾರ್ಚ್ 1ನೇ ತಾರೀಕನ್ನೇ ಅರ್ಹತೆ ನಿಶ್ಚಯದ ದಿನವಾಗಿಯೂ, ಅದರೊತ್ತು ಹಿಂದಿನ ವರ್ಷವನ್ನೇ ಅರ್ಹತೆಯ ಅವಧಿಯಾಗಿಯೂ ಗಣಿಸತಕ್ಕದ್ದು. ಅರ್ಹತೆ ನಿಶ್ಚಯಾತ್ಮಕ ದಿನದಲ್ಲಿ 21 ವರ್ಷ ಪ್ರಾಯ ತುಂಬಿದ್ದು ಅರ್ಹತೆ ನಿರ್ಣಯದ ಅವಧಿಯಲ್ಲಿ ಯಾವುದೇ ಕ್ಷೇತ್ರದಲ್ಲಿ 180 ದಿನಗಳಿಗೆ ಕಡಿಮೆಯಿಲ್ಲದೆ ವಾಸ ಮಾಡಿದ್ದ ಯಾರೇ ಆದರೂ, ಆ ಕ್ಷೇತ್ರದ ಮತದಾರ ಅರ್ಹತೆ ಪಡೆಯುತ್ತಾರೆ.

ಯಾವುದೇ ಸ್ಥಳದ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಥವಾ ಬುದ್ಧಿ ಅಸ್ವಸ್ಥತೆ, ಯಾ, ಮಾದಕ ದೋಷಗಳಿಗೊಳಗಾಗಿದ್ದರೆ, ಇಲ್ಲವೇ ಜೈಲು ಅಥವಾ ಇತರ ಕಾನೂನು ಬದ್ಧ ನಿರ್ಬಂಧಗಳಿಗೊಳಗಾಗಿದ್ದರೆ, ಅಂಥವರು ತಂತಮ್ಮ ವಾಸ ಯೋಗ್ಯತೆಯು ಮೀರಿದ ಆ ಕ್ಷೇತ್ರದ ಮತದಾರರಾಗಿ ಅರ್ಹರಾಗುವುದಿಲ್ಲ

ಯಾವುದೇ ಸೇನಾ ದಾಖಲೆಯಲ್ಲಿ, ಅಥವಾ ಸೇನಾ ಸಂಬಂಧ ಕಾರ್ಯಗಳಿಗಾಗಿ ಇತರ ಕಡೆ, ಸ್ಥಳ ಮೊದಲಾದೆಡೆಗಳಲ್ಲಿ ಮತದಾರ ಅರ್ಹತೆಯ ಅವಧಿ ವರೆಗೆ ಇಲ್ಲದಿರುವ ಕಾರಣದಿಂದ ಸಶಸ್ತ್ರ ಸೇನೆಗಳ ಯಾರಿಗೂ ಅಂತಹ ಮತದಾರ ಕ್ಷೇತ್ರದ ಮತದಾರನಾಗುವ ಹಕ್ಕಿಲ್ಲ; ಅಂಥವರು ತಮ್ಮ ಮೂಲ ನಿವಾಸವಿರುವ ಕ್ಷೇತ್ರದ ಮತದಾರರೇ ಆಗತಕ್ಕದ್ದು

ಒಂದೇ ಮತದಾರ ಕ್ಷೇತ್ರದ ಮತದಾರನಾಗಿರಬೇಕಲ್ಲದೆ, ಒಬ್ಬ ಮತದಾರ ಕ್ಷೇತ್ರದಲ್ಲಾದರೂ ಒಂದು ಬಾರಿ ಮಾತ್ರವೇ ಹೆಸರು ದಾಖಲು ಮಾಡಿಸತಕ್ಕದ್ದು.

ಪ್ರಚಲಿತ ಮತದಾರ ಪಟ್ಟಿಯ ಯಾವುದೇ ದುರಸ್ತಿಗಾಗಿ ಯಾರಿಂದಾದರೂ ಸಕಾರಣವಾದ ಅರ್ಜಿ ಬಂದಲ್ಲಿ ಆ ಕ್ಷೇತ್ರದ ಮತದಾರ ದಾಖಲಾತಿ ಅಧಿಕಾರರು ವಿಚಾರಣೆ ನಡೆಸಿ ಸರಿ ಕಂಡರೆ ದುರಸ್ತಿ ಮಾಡಿಸಬಹುದು

ಕಾನೂನಿನ ಉದ್ದೇಶಕ್ಕನುಸಾರವಾಗಿ ಚುನಾವಣಾ ಕಮಿಷನರಿನ ಅಭಿಪ್ರಾಯ ಪಡೆದುಕೊಂಡು ಅಗತ್ಯವುಳ್ಳ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವು ಕೇಂದ್ರ ಸರಕಾರದ್ದಿದೆ

## For Sale

Jai Hind Touring Talkies Ltd., for sale Interested persons can apply to the—

**JAI HIND TALKIES LTD.**
SOMWARPET, Coorg

## WANTED.

1 Lorry & Car Drivers Cum Estate Machanic—with working knowledge of English or Canarese Pay Rs. 50-- p m plus usual batta and free quarters.

2 **Stenographer Cum Accountant**-Knowledge of correspondence in English, Book keeping, short hand and Type writing essential. Free quarters Salary according to qualifications and experience and ability or inability to furnish a cash security of Rs 2,000/-

3 **Estate Superintendent**-Man of experience and responsibility and able to Land large labour force and supervise the office and estate problems Pay Rs 55-5-115-10-150/-plus D A Rs 40/-plus kitchen allowance Rs 22-8-0

4 **Feild Writer**-For Karadikopal Section Pay Rs. 40,-plus Rs 22-8-0 Must have the knowledge of paddy cultivation and cattle up-keep A working knowledge of English and Kanarese will do.

The above candidates except the first and last should have passed at the least their S S L C and bear true certificates of their proficiency, character and medical fitness

*Please Apply to.*-**M. N. CHITTIAPPA Esq. B A.,**
B. & C. Estates
P O THITHIMATTI,
S COORG

# ॥ ಅಖಿಲ ಕೊಡಗು ಪ್ರಾಂತೀಕ ಸಹಕಾರ ಪರಿಷತ್ತು ॥

## ಮಾನ್ಯ ಮಂತ್ರಿ ಕೆ. ಚಂದ್ರಮೌಳಿಯವರ ಉದ್ಘಾಟನಾ ಭಾಷಣ.

ಹದಿನಾಲ್ಕನೇ ಕೊಡಗು ಸಹಕಾರ ಸಮ್ಮೇಳನದ ಸಂದರ್ಭದಲ್ಲಿ ಅದರಲ್ಲಿ ನಾನೂ ಭಾಗಿಯಾಗಲು ಅವಕಾಶ ಕೊಟ್ಟ ಮಹನೀಯರಿಗೆ ನನ್ನ ವಂದನೆಗಳು. ನಾನು ಕೊಡಗಿಗೆ ಹೊಸಬನಲ್ಲ. ಇಲ್ಲಿಗೆ ಬಂದು ಇಲ್ಲಿಯ ಸ್ಥಿತಿಗತಿಗಳನ್ನೂ, ಸಹಕಾರ ಚಳವಳಿಯನ್ನೂ ಮೆಚ್ಚಿದ ಕಾರಣವೇ ಪ್ರಸಹ ಮುಖ್ಯವಾಗಿ ನಿಮ್ಮ ಆಮಂತ್ರಣವನ್ನು ಸ್ವೀಕರಿಸಿದೆನಲ್ಲದೆ ನನ್ನಿಂದ ನಿಮಗೆ ಹೆಚ್ಚು ಸಹಾಯವಾಗುವುದೆಂದಲ್ಲ. ಸಹಕಾರ ಚಳವಳಿಗೆ ಈ ದೇಶದಲ್ಲಿ ೪೫ ವರ್ಷ ಪ್ರಾಯವಾದರೂ ರಾಜಕೀಯ ಸ್ವಾತಂತ್ರ್ಯ ದೊರೆತನಂತರ ಈ ಚಳವಳಿವು ಚೇತನಗೊಂಡು ಸರ್ವತೋಮುಖ ಮುಂದರಿಯುತ್ತಿದೆ. ಈ ಚಳವಳಿಯನ್ನು ನಮ್ಮ ಹಳ್ಳಿಗಳ ವ್ಯವಸಾಯ ಮತ್ತು ಆರ್ಥಿಕ ಸಮಸ್ಯೆಗಳ ಪರಿಹಾರಕ್ಕಾಗಿ ಅಲ್ಲ; ನಗರದ ಸಾಮಾಜಿಕ ಆರ್ಥಿಕ ಹಿತಚಿಂತನೆಗೂ ಉಪಯೋಗಿಸಬೇಕಾಗಿದೆ. ಸ್ವಾತಂತ್ರ್ಯ ದೊರೆತಾಕ್ಷಣ ಪರಿಸ್ಥಿತಿ ಜನರ ಅನುಕೂಲವಾಗಿ ಪರಿವರ್ತಿತವಾಗುವದೆಂಬ ಮಹಾ ಬಯಕೆಯಲ್ಲಿದ್ದ ಜನತೆಯ ಬಯಕೆ ಸಹಕನಸ್ತು ತ್ವರಿತವಾಗಿ ಈಡೇರಲಿಲ್ಲ. ಇದು ಈಡೇರಬೇಕಾದರೆ ಸಹಕಾರ ತತ್ವವು ಪ್ರಾಮುಖ್ಯ ಪಾತ್ರ ವಹಿಸಬೇಕು.

೧೯೦೪ ರಲ್ಲಿ ಪ್ರಾರಂಭವಾದ ಚಳವಳಿವು ಮದ್ರಾಸಿನಲ್ಲಿ ೧೯೧೨-೧೩ ರ ವರೆಗೆ ಸಾಕಷ್ಟು ಮುಂದರಿಯಲಿಲ್ಲ. ಕ್ರಮಶಃ ಬೆಳೆದು ಬಂದ ಈ ಚಳವಳಿವು ಈಗ ಮದ್ರಾಸಿನಲ್ಲಿ ೩೧,೦೦೦ ವಿವಿಧ ರೀತಿಯ ಸಂಘಗಳಿಂದಲೂ ೨೯ ಲಕ್ಷ ಸದಸ್ಯರಿಂದಲೂ ೯½ ಕೋಟಿ ಪಾಲು ಬಂಡವಾಳ ಮತ್ತು ೭೦ ಕೋಟಿ ವ್ಯವಹಾರ ಬಂಡವಾಳದಿಂದಲೂ ಕೂಡಿದ ಚಳವಳಿಯಾಗಿದೆ. ಯುದ್ಧದ ಕಾಲದಲ್ಲೂ ನಂತರ ಯುದ್ಧೋತ್ತರ ಸಮಸ್ಯೆಗಳನ್ನು ಬಗೆಹರಿಸುವದರಲ್ಲೂ ಸಹಕಾರ ಚಳವಳಿವು ದುಡಿದಿದೆ. ಸಹಕಾರ ಭೂಮಿ ವಸಾಹತು ಸಂಘಗಳ ಮೇಲ್ವಿಚಾರಣೆಯಲ್ಲಿ ಕಳೆದ ವರ್ಷ ೨,೮೦೦ ಪಾಳು ಭೂಮಿಯನ್ನು ವ್ಯವಸಾಯಕ್ಕೆ ತರಲಾಗಿದೆ. ಕಾವೇರಿ ಮೆಟ್ಟೂರು ಯೋಜನಾ ಕ್ಷೇತ್ರದಲ್ಲಿ ೩,೩೬೦ ಎಕ್ರೆ ಆಹಾರ ಪದಾರ್ಥಗಳ ವ್ಯವಸಾಯವನ್ನು ಮಾಡಲಾಗಿದೆ. ಅಲ್ಲದೆ ಧಾನ್ಯ ಸಂಗ್ರಹಿಸುವ ಮತ್ತು ವಿತರಣ ಮಾಡುವ ಜವಾಬ್ದಾರಿಯನ್ನು ವಹಿಸಿ ೨೧೨೬ ರೇಶನ್ ಅಂಗಡಿಗಳ ಮೂಲಕ ೧೩ ಲಕ್ಷ ರೇಶನ್‌ದಾರರಿಗೆ ಆಹಾರ ಸರಬರಾಯಿ ಮಾಡಲಾಗಿದೆ. ಇದಲ್ಲದೆ ಅನೇಕ ಸ್ಟೋರು ಸಂಘಗಳು ವಿಸ್ತೃತ ರೀತಿಯಲ್ಲಿ ಸೇವೆ ಮಾಡಿವೆ. ಯುದ್ಧಕ್ಕೆ ಮೊದಲು ಅಂದರೆ ೧೯೩೮-೩೯ ರಲ್ಲಿ ೨೩ ಲಕ್ಷ ರೂಪಾಯಿಗಳ ವ್ಯಾಪಾರ ವಹಿವಾಟು ಮಾಡುತ್ತಿದ್ದ ಸಂಘಗಳು ಈಗ ೩೩ ಕೋಟಿ ರೂಪಾಯಿಗಳ ವ್ಯಾಪಾರ ಮಾಡುತ್ತಿವೆ. ಯುದ್ಧ ಸಮಯದಲ್ಲಿ ವಿಸ್ತಾರಗೊಂಡ ಸಹಕಾರ ಚಳವಳಿವು ಹಾಗೆಯೇ ಮುಂದರಿದು ಜನಸೇವೆ ಮಾಡಲೆಂದು ನನ್ನ ಆಸೆ. ಇದಲ್ಲದೆ ಜನತೆಗೆ ಬೇಕಾದ ಬಟ್ಟೆ ಒದಗಿಸುವ, ಮನೆ ಕಟ್ಟಿಕೊಡುವ, ಮಾಜಿ ಸಿಪಾಯಿಗಳನ್ನು ಉದ್ಯಮಗಳಲ್ಲಿ ತೊಡಗಿಸುವ ಹಲವು ಉಪಯುಕ್ತ ಕಾರ್ಯಗಳು ಸಹಕಾರ ಚಳವಳಿಯಿಂದ ನಡೆದಿವೆ. ಇದಲ್ಲದೆ ಪಾನನಿರೋಧ ಕಾರ್ಯಕ್ರಮಗಳಲ್ಲೂ, ನಿರುದ್ಯೋಗಿಗಳಾದವರಿಗೆ ಸಹಕಾರ ತತ್ವದ ತಳಹದಿಯಲ್ಲಿ ಉದ್ಯೋಗ ಒದಗಿಸಿ ವಿವಿಧ ಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ. ಗ್ರಾಮ ಸಂಘಗಳನ್ನು ಮಾಡಿ ಗ್ರಾಮಾಭಿವೃದ್ಧಿಗೆ ಪ್ರಯತ್ನಿಸಲಾಗಿದೆ. ಗ್ರಾಮದ ಲೇವಾದೇವಿ ಸಂಘಗಳನ್ನು ವಿವಿಧೋದ್ದೇಶ ಸಂಘಗಳಾಗಿ ಮಾರ್ಪಡಿಸಲಾಗುತ್ತಿದೆ. ಗ್ರಾಮೀಣ ಆರ್ಥಿಕ ಉದ್ಧಾರದಲ್ಲಿ ಇದು ಅತ್ಯವಶ್ಯವಾದ ಬದಲಾವಣೆಯಾಗಿದೆ. ಎಲ್ಲಿ ಗ್ರಾಮ ಸಂಘವು ಗ್ರಾಮಸ್ಥರನ್ನು ತನ್ನಾಶ್ರಯದಲ್ಲಿ ಸೇರಿಸಿಕೊಂಡು ತನ್ನ ಸೇವೆ ಮತ್ತು ಸಹಾಯಗಳಿಂದ ಅವರನ್ನು ಆಕರ್ಷಿಸಿರುವದೋ, ಎಲ್ಲಿ ಗ್ರಾಮಸಂಘವು ಚಿಕ್ಕ ಪ್ರಾಯಿಮೆಯ ಸಾಲಗಳನ್ನು ಅವರ ನ್ಯಾಯಬದ್ಧ ಮತ್ತು ಲಾಭದಾಯಕ ವಿಚಾರಗಳಿಗಾಗಿ ಕೊಡಲು ಸಮರ್ಥವಾಗಿ ಸಾಲಕೊಡುವವರ ಹಿಡಿತದಿಂದ ರೈತರನ್ನು ತಪ್ಪಿಸಿಸಿಯೋ, ಎಲ್ಲಿ ಮೆಂಬರನ ಅವಶ್ಯಕತೆಯನ್ನು ತಿಳಿದು ಸಕಾಲದಲ್ಲಿ ಸಾಲ ಒದಗಿಸಿ ಕೊಡುವದೋ, ಸಾಲ ಕೊಡುವ ಒಂದು ಕೆಲಸವೇ ಅಲ್ಲದೆ ಬೀಜ, ವ್ಯವಸಾಯ ಹತ್ಯಾರು, ಗೊಬ್ಬರ ಮತ್ತು ಇತರ ಜೀವನಾವಶ್ಯಕ ವಸ್ತುಗಳನ್ನೂ, ಕೈಗಾರಿಕೆಗೆ ಬೇಕಾದ ಕಚ್ಚಾ ಮಾಲುಗಳನ್ನೂ ಒದಗಿಸಿ ಉತ್ತಮ ವ್ಯಾಪಾರ, ಉತ್ತಮ ವ್ಯವಸಾಯ ಮತ್ತು ಉತ್ತಮ ಜೀವನ ತತ್ವವನ್ನು ಸದಸ್ಯರಲ್ಲಿ ತುಂಬುವದೋ ಎಲ್ಲಿ, ಸಂಘವು ಸದಸ್ಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ, ಆಗಾಗ ಸಾಲ ಕೊಡದೆ ಮಿತವ್ಯಯದ ಅಭ್ಯಾಸವನ್ನು ಹೆಚ್ಚಿಸಿ ಆತನ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸುವದೋ, ಎಲ್ಲಿ ಸಂಘವು ಸದಸ್ಯರಲ್ಲಿ ಶಿಸ್ತು ಬೆಳೆಸಿ ಮೋಸ, ಅಪನಂಬಿಕೆಗಳಿಗೆ ಎಡೆ ಕೊಡದೆ ತಮ್ಮ ವ್ಯವಹಾರದಲ್ಲಿ ನಂಬಿಕೆ ಮತ್ತು ಪ್ರಾಮಾಣಿಕತೆಗಳನ್ನು ಹೆಚ್ಚಿಸುವಂತೆ ಮಾಡುವದೋ, ಎಲ್ಲಿ ಸಹಕಾರ ಸಂಘವು ಆಗಾಗ್ಗೆ ಭಾಷಣ, ಪ್ರದರ್ಶನ, ಚಲನ ಚಿತ್ರಗಳ ಮೂಲಕ ಸಹಕಾರ ತತ್ವ ಪ್ರಚಾರ ಮಾಡಿ, ವಾಚನಾಲಯ, ಚಿಕ್ಕ ಮಕ್ಕಳ ಕೂಟ ಮೊದಲಾದ ಸಾಂಸ್ಕೃತಿಕ ಏರ್ಪಾಡುಗಳನ್ನು ಮಾಡುವದೋ, ಎಲ್ಲಿ ಸಂಘವು ತನ್ನ ರೈತಾಪಿ ಸದಸ್ಯರ ಜೀವನ ಧೋರಣೆಯನ್ನು ಪರಿವರ್ತಿಸಿ ಪ್ರಗತಿಶೀಲ ಮಾರ್ಗದಲ್ಲಿ ಹಚ್ಚಿ, ಪರಸ್ಪರ ಸೌಹಾರ್ದತೆಯನ್ನು ಹುಟ್ಟಿಸುವದೋ ಅಲ್ಲಿ ಸಹಕಾರ ಸಂಘವು ಯೋಗ್ಯ ರೀತಿ ಕೆಲಸ ಮಾಡುತ್ತಿದೆಯೆಂದು ನಾನು ಹೇಳುವೆನು.

ಗ್ರಾಮ ಕೈಗಾರಿಕೆಗಳಲ್ಲಿ ಸಹಕಾರ ಸಂಘಗಳು ಪ್ರಧಾನ ಪಾತ್ರ ವಹಿಸಬಹುದಾಗಿದೆ. ಮದ್ರಾಸಿನಲ್ಲಿ ೨೩೫ ಗುಡಿಕೈಗಾರಿಕೆಯ ಸಂಘಗಳಿದ್ದು ೨೩,೭೨೦ ಸದಸ್ಯರಿದ್ದಾರೆ. ಕಳೆದ ವರ್ಷ ಇವರು ೨೨.೧೮ ಲಕ್ಷ ಬೆಲೆಯ ಕಚ್ಚಾ ನೂಲುಗಳನ್ನು ಪಡೆದು ಅವುಗಳನ್ನು ತಯಾರಿಸಿ ೩೭ ಲಕ್ಷಕ್ಕೆ ಮಾರಿದ್ದಾರೆ. ಬಟ್ಟೆ ಹೊಲಿ[illegible], ಹೆಣಿಗೆ, ಉಪ್ಪಿನಕಾಯಿ ಮತ್ತಿತರ ಕೆಲಸ ಮಾಡುವ ೩೪ ಹೆಂಗಸರ ಸಹಕಾರ ಸಂಘಗಳಿದ್ದು ಅವುಗಳಲ್ಲಿ ೪೮೦ ಸದಸ್ಯೆಯರಿದ್ದಾರೆ. ಕಳೆದ ವರ್ಷ ಅವರು ೧.೭೨ ಲಕ್ಷ ಬೆಲೆಯ ವಹಿವಾಟು ನಡೆಸಿದ್ದಾರೆ.

ಆಹಾರ ಹೆಚ್ಚು ಬೆಳೆಸುವ ಈಗಿನ ಅವಶ್ಯಕತೆಗನುಗುಣ ಸಾಂಘಿಕ ವ್ಯವಸಾಯ ಉದ್ಯಮ ಕೈಕೊಳ್ಳುವದು ಹಿತಕರವಾಗಿದೆ. ಚಿಕ್ಕ ಚಿಕ್ಕ ಭೂಮಾಲೀಕರು ಒಗ್ಗಟ್ಟಾಗಿ ಎಲ್ಲರೂ ಸಹಕರಿಸಿ ಸಾಂಘಿಕ ವ್ಯವಸಾಯ ಮಾಡುವದರಿಂದ ತುಂಬಾ ಲಾಭವಿದೆ. ಮದ್ರಾಸಿನಲ್ಲಿ ಸಹಕಾರ ಚಳವಳಿವು ಪ್ರಗತಿ ಪಥದಲ್ಲಿ ನಡೆಯುತ್ತಿದೆಯಾದರೂ ಮಾಡಬೇಕಾದ್ದನ್ನೆಲ್ಲಾ ಮಾಡಿದೆಯೆಂದು ಹೇಳಲಾಗುವದಿಲ್ಲ. ಭವಿಷ್ಯದಲ್ಲಿ ಸಹಕಾರ ಚಳವಳಿವು ರಾಷ್ಟ್ರರಚನೆಯಲ್ಲಿ ಬಹು ಪ್ರಾಮುಖ್ಯ ಪಾತ್ರವಹಿಸಲಿದೆ. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಈ ಚಳವಳಿಗೆ ಕೊಡುತ್ತಿರುವ ಸಹಾಯದಿಂದ ಇದು ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಬೇಕೆಂದು [illegible]. ಸಹಕಾರ ಚಳವಳಿವು ಜನತೆಯ ಚಳವಳಿ. ಪರಸ್ಪರ ಸಹಾಯ ತತ್ವವು ಇದರ ತಳಹದಿ. ಇದು ಪ್ರಜಾ ಪ್ರಭುತ್ವದ ಮೇಲೆ ನಿಂತಿದೆ. ಉದ್ಯೋಗಸ್ಥರಲ್ಲದ ಸಹಕಾರಿಗಳ ಮುಂದಾಳ್ತನವು ನಮ್ಮ ಪ್ರಾಂತದಲ್ಲಿ ಆವಶ್ಯಕವಾಗಿದೆ. ಅನೇಕ ಗೌರವ ಕೆಲಸಗಾರರು ಈ ಚಳವಳಿಗೆ ಸೇವೆ ಸಲ್ಲಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇಂಥಾ ಚಳವಳಿಗಳ ಜಯಾಪಜಯವು ನಿಸ್ವಾರ್ಥ ಸೇವೆ, ಸಹಕಾರಿಗಳ ಗುಣ, ನಡತೆಗಳನ್ನೇ ಹೊಂದಿಕೊಂಡಿದೆ. ಮೋಸ, ಪಕ್ಷಪಾತ, ಇವು ಚಳವಳಿಯನ್ನು ಕೊಂದಿಕ್ಕುವವು. ಇಂಥಾ ಕೇಡುಗಳನ್ನು ಸಹಕಾರಿಗಳು ಯಾವದೇ ಭಯವಿಲ್ಲದೆ ಕಿತ್ತೊಗೆಯಬೇಕು.

ನಮ್ಮ ಕೊಡಗಿನಲ್ಲಿ ೩೬೧ ಸಹಕಾರ ಸಂಘಗಳಿದ್ದು ೫೦೦೦೦ ಸದಸ್ಯರಿಂದ ಕೂಡಿ ೫೦ ಲಕ್ಷ ರೂಪಾಯಿಗಳ ಪಾಲು ಬಂಡವಾಳವಿದೆ. ವಸೂಲಾತಿಯು ಶೇಕಡ ೮೬.೫ ರಂತೆ ನಡೆದಿದೆ. ಪ್ರತಿ ಗ್ರಾಮಕ್ಕೂ ಸಹಕಾರ ಸಂಘವಿದ್ದು ಸುಮಾರು ೨೦೦ ಸಂಘಗಳು ವಿವಿಧೋದ್ದೇಶ ಸಂಘಗಳಾಗಿರುವದು ಯೋಗ್ಯ. ಇಲ್ಲಿಯ ಸಹಕಾರ ಸಂಘಗಳು ವಿದ್ಯಾಪ್ರಗತಿ, ವೈದ್ಯಕೀಯ ಕಾರಣವೇ ಮೊದಲಾದ ವಿಚಾರಗಳಿಗೆ ಧಾರಾಳ ಧನ ಸಹಾಯ ಕೊಡುವುದು ಅನುಕರಣೀಯವಾಗಿದೆ. ಕೊಡಗು ಪ್ರಾಂತೀಕ ಬ್ಯಾಂಕು ಮತ್ತು ಫೆಡರೇಶನುಗಳ, ಇಲ್ಲಿಯ ಮಹಿಳಾ ಸಹಕಾರ ಸಮಾಜಗಳು ಆದರ್ಶನೀಯವಾಗಿವೆ. ಇಲ್ಲಿಯ ಮಹಿಳೆಯರು ಹಿಂದೀ ಕಲಿಯುವುದನ್ನು ತಮ್ಮ ಉದ್ಯಮವಾಗಿ ಕೈಕೊಂಡಿರುವುದು ಶ್ಲಾಘನೀಯ. ಇಲ್ಲಿ ಅಧಿಕಾರಿಗಳಿಗೂ, ಇತರ ಗೌರವ ಕೆಲಸಗಾರರಿಗೂ ಇರುವ ಅನ್ಯೋನ್ಯತೆಯನ್ನು ಹೊಗಳಬೇಕಾಗಿದೆ. ೧೯೪೯ರಲ್ಲಿ ನಾನು ನಿಮ್ಮ ಪ್ರಾಂತವನ್ನು ಸುತ್ತುವಾಗ ದೀರ್ಘ ಮಾಯಿದೆಯ ಸಾಲ ಕೊಡಲು ಭೂಮಿ ಅಡಮಾನ ಬ್ಯಾಂಕಿನ ವ್ಯವಸ್ಥೆಯ ಮಾತು ಇತ್ತು. ಈ ಸೂಚನೆಯ ಬಗ್ಗೆ ವಿಚಾರ ವಿನಿಮಯವಾಗಿ ನಿಮ್ಮ ಬ್ಯಾಂಕು ಹಾಕಿದ ನಿಯಮಗಳನ್ನು ಮದ್ರಾಸ್ ಅಡಮಾನ ಸಂಘವು ಒಪ್ಪಲಾರದೆ ಪ್ರಯತ್ನವು ಯಶಸ್ವಿಯಾಗಲಿಲ್ಲ. ಮಲಬಾರು ಜಿಲ್ಲಾ ಮೋಟಾರು ಸಹವಾಹನ ಸಹಕಾರ ಸಂಘವು ಕೊಡಗಿನ ಕಿತ್ತಳೆ, ಕಾಫಿ ಮತ್ತು ಮಾಲನ್ನು ತಮ್ಮ ಲಾರಿಗಳಲ್ಲಿ ಸಾಗಿಸಲು ಒಪ್ಪಿದೆ. ಮದ್ರಾಸು ಕೈಮಗ್ಗ ಸಹಕಾರ ಸಂಘದವರು ಕೊಡಗಿನ ಸಹಕಾರಿ ಸಂಘಗಳಿಗೆ ಬಟ್ಟೆ ಸರಬರಾಯಿ ಮಾಡುತ್ತಿವೆ. ಈ ರೀತಿಯ ಪರಸ್ಪರ ಸಂಬಂಧವು ಬೆಳೆಯಲೆಂದು ನನ್ನ ಆಶೆ. ಇಂಥಾ ಸಂದರ್ಭಗಳಲ್ಲಿ ತನ್ನ ಕೈಲಾದ ಸೌಹಾರ್ದತೆಯನ್ನು ತೋರಿಸಲು ಮದ್ರಾಸ್ ಎಂದೂ ಹಿಂಜರಿಯದು.

ಕೊಡಗು ಚಿಕ್ಕದಾದರೂ ಸೌಂದರ್ಯಪೂರಿತ ದೇಶ. ಇದನ್ನು ದಕ್ಷಿಣ ಹಿಂದೂಸ್ತಾನದ ಕಾಶ್ಮೀರವೆನ್ನಲೂಬಹುದು. ಪ್ರಾಕೃತಿಕವಾದ ಅಪಾರ ಸಂಪತ್ತು ಇದಕ್ಕಿದೆ. ಇದರ ಕಾಡುಗಳಲ್ಲಿ ಅಮೂಲ್ಯ ಬೆಲೆಯ ಗಂಧ, ತೊಲೆಗಳು, ಬಿದಿರು, ಜೇನು ಮತ್ತು ಕಾಫಿ, ಏಲಕ್ಕಿ ಮೊದಲಾದುವೂ ತುಂಬಿವೆ. ಕೊಡಗಿನಲ್ಲಿ ಖನಿಜ ಸಂಪತ್ತು ಇರಬಹುದು. ಚಿನ್ನ ಕಬ್ಬಿಣ ಮೊದಲಾದುವು ದೊರೆಯಬಹುದು. ಕೊಡಗಿನ ಜನರು ದೃಢಕಾಯರಾಗಿದ್ದು ಕಷ್ಟ ಸಹಿಷ್ಣುಗಳು, ಕರ್ಮಕುಶಲರಾಗಿದ್ದಾರೆ. ಅವರು ಸಂಸ್ಕೃತರಾಗಿದ್ದು ವಿದ್ಯಾಪರಿಮಾಣವು ಹಿಂದೂದೇಶದ ಬೇರೆ ಯಾವದೇ ದೊಡ್ಡ ಪ್ರಾಂತಗಳಿಗಿಂತಲೂ ಇಲ್ಲಿ ಹೆಚ್ಚಿದೆ. ಈ ನೈಸರ್ಗಿಕ ಸಂಪತ್ತುಗಳ ಸದುಪಯೋಗಮಾಡುವದಾದರೆ ವ್ಯವಸಾಯಿಕ ಮತ್ತು ಕೈಗಾರಿಕಾ ಪ್ರಗತಿಪಥದಲ್ಲಿ ಕೊಡಗು ಬಹು ದೂರ ಸಾಗಲು ಶಕ್ಯವಿರುವದೆಂದು ಹೇಳಬಯಸುತ್ತೇನೆ.

ನಿಮ್ಮ ಅಭಿವೃದ್ಧಿಯ ಹಾಗೂ ಪ್ರಗತಿಯ ಯೋಜನೆಗಳನ್ನು ಸಹಕಾರ ತಳಹ

# "ಕೊಡಗು ಸಹಕಾರಿಗಳ ಪ್ರಾಂತವೆನಿಸಲಿ"

(ಹದಿನಾಲ್ಕನೇ ಕೊಡಗು ಪ್ರಾಂತೀಯ ಸಹಕಾರ ಸಮ್ಮೇಳನದ ಅಧ್ಯಕ್ಷರಾದ ಮದ್ರಾಸು ಕೇಂದ್ರ ಭೂಮಿ ಅಡಮಾನ ಬ್ಯಾಂಕಿನ ಪ್ರೆಸಿಡೆಂಟ್ ಶ್ರೀ ವೆಂಕಟಕೃಷ್ಣರವರ ಭಾಷಣದ ಸಾರಾಂಶ)

ಈ ಸಮ್ಮೇಳನದ ಅಧ್ಯಕ್ಷತೆ ವಹಿಸಲು ನನ್ನನ್ನು ಆಹ್ವಾನಿಸಿದ ಬ್ಯಾಂಕಿನವರಿಗೆ ನನ್ನ ವಂದನೆಗಳು. ಕೊಡಗು ಸಂಸ್ಥಾನದ ಸಹಕಾರ ಚಳವಳದ ಪೂರ್ಣ ಪರಿಚಯವಿಲ್ಲದ ನನ್ನಂಥಾವನಿಗೆ ಇದು ದೊಡ್ಡ ಜವಾಬ್ದಾರಿಯಾಗಿದೆ. ಕೊಡಗಿನ ನನ್ನ ಸ್ನೇಹಿತರೊಡನೆ ಒಡನಾಡುವ ಆಸೆಯಿಂದ ಈ ಆಹ್ವಾನವನ್ನು ಸ್ವೀಕರಿಸಿದೆನು.

ಸಹಕಾರ ಚಳವಳದ ನನ್ನ ಸಂಬಂಧವು ಸುಮಾರು ೩೦ ವರ್ಷಗಳಿಂದ ಇಂಥಾ ಸಮ್ಮೇಳನಗಳು ಸಹಕಾರ ತತ್ವ ಪ್ರಚಾರಕ್ಕೆ ಸಹಾಯಕವಾದವುಗಳು. ಇಂದು ಚಳವಳವು ಬೆಳೆದು ವಿಸ್ತೃತವಾಗಿರುವುದರಿಂದ ಮುಂದಿರುವ ವಿವಿಧ ಪ್ರಶ್ನೆಗಳ ಬಗ್ಗೆ ವಿವಿಧ ಸಮಿತಿಗಳನ್ನು ನೇಮಿಸಿ ಅವರ ಬೋಧಪ್ರದ ಅಭಿಪ್ರಾಯಗಳನ್ನು ಇಂಥಾ ಸಮ್ಮೇಳನಗಳಲ್ಲಿ ಒದಗಿಸುವುದು ಹಿತವೆಂದು ನನ್ನ ಭಾವನೆ. ಸಹಕಾರಿಗಳು ಸಹಕಾರದ ವಿವಿಧ ಅಂಗಗಳಲ್ಲಿ ಪರಿಶೋಧನೆ ನಡೆಸಿ ಜನತೆಯ ಮುಂದೆ ತಮ್ಮ ಅನುಭವವನ್ನಿಟ್ಟರೆ ಸರ್ವರಿಗೂ ಲಾಭವಾಗುವುದು.

ಕೊಡಗು, ಸಹಕಾರದಲ್ಲಿ ಮುಂದುವರಿದ ಪ್ರಾಂತವೆಂದು ನನ್ನ ಅಭಿಮತ. ಕೊಡಗಿನ ಸಹಕಾರ ಚಳವಳದ ಬಗ್ಗೆ ಕೊಡಗು ಹೆಮ್ಮೆಪಟ್ಟುಕೊಳ್ಳುವಂಥಾ ಸ್ಥಿತಿಯಲ್ಲಿದೆ. ಫಿನ್‌ಲೆಂಡು ಸಹಕಾರಿಗಳ ಜನಾಂಗದ ದೇಶವೆಂದು ಹೇಳುತ್ತಾರೆ. ಕೊಡಗೂ ಕೂಡ ಸಹಕಾರಿಗಳ ಪ್ರಾಂತವೆಂದು ಪರಿಗಣಿಸಲ್ಪಟ್ಟೀತೆಂದು ನನ್ನ ಆಶೆ. ನಿಮ್ಮ ಪ್ರಾಂತೀಯ ಬ್ಯಾಂಕು ಮತ್ತಿತರ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿವೆ. ವ್ಯವಸಾಯ ಪತ್ತಿನ ಸಂಘಗಳು ಆದರ್ಶನೀಯವಾಗಿವೆ. ಸಹಕಾರ ಸಂಘದ ಗುರಿಯೆಂದರೆ ಸದಸ್ಯರ ಸ್ವಂತ ಆರ್ಥಿಕ ಅಭಿವೃದ್ಧಿಯನ್ನು ಮಾಡಿ ಅವರಲ್ಲಿ ಮಿತವ್ಯಯ ಸ್ವಾವಲಂಬನ ವೃತ್ತಿಗಳನ್ನು ಹೆಚ್ಚಿಸುವುದಾಗಿದೆ. ಸಂಘದ ಸದಸ್ಯರು ತಮ್ಮ ಉಳಿತಾಯವನ್ನು ಸಂಘಗಳಲ್ಲೇ ಠೇವಣಾತಿ ಇಟ್ಟು ಅವಶ್ಯವಿರುವ ಸದಸ್ಯರಿಗೆ ಸಹಾಯ ಮಾಡುವುದಾದರೆ ಹೊರಗಿನ ಹಣವಿಲ್ಲದೆ ಕೆಲಸ ಸಾಗಿಸಬಹುದಾಗಿದೆ. ಈ ಸಂಘದ ಮೂಲಕವೇ ಸದಸ್ಯರಿಗೆ ಬೇಕಾದುದನ್ನು ಕೊಂಡು ವಿತರಣೆ ಮಾಡಬೇಕು. ಇದು ಜಯಪ್ರದವಾದರೆ ಅದೇ ನಿಜವಾದ ಸಹಕಾರವೆನಿಸುವುದು. ನಿಮ್ಮ ವಸೂಲಾತಿಯು ತೃಪ್ತಿಕರವಿದೆ. ಆದರೆ ಸಹಕಾರದಲ್ಲಿ ಇಷ್ಟು ಮುಂದುವರಿದ ನೀವು ಬಡ್ಡಿಯ ದರವನ್ನು ಇನ್ನೂ ಏಕೆ ಇಳಿಸಿಲ್ಲವೆಂಬುದು ಆಶ್ಚರ್ಯ. ಆದರೆ ಪರಿಶೀಲನೆಯಿಂದ ತಿಳಿದು ಬರುವುದೇನೆಂದರೆ ಕೊಡಗು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದಿಲ್ಲ. ಆದ್ದರಿಂದ ಠೇವಣಾತಿದಾರರಿಗೆ ಆಕರ್ಷಣೀಯ ಬಡ್ಡಿಯ ದರ ಕೊಡಬೇಕಾಗುತ್ತದೆ. ಪ್ರತಿ ಸಂಘವು ತನ್ನ ಸ್ವಂತ ಠೇವಣಾತಿಯಿಂದಲೇ ಕೆಲಸ ಮಾಡುವಂತಾಗಬೇಕು.

ಕೊಡಗಿಗೆ ಭೂಮಿ ಅಡಮಾನ ಸಂಘದ ಆವಶ್ಯಕತೆ ಇದ್ದು ಆ ಬಗ್ಗೆ ಈ ಮೊದಲೇ ವಿಚಾರವಿನಿಮಯವಾಗಿ ಅದಕ್ಕಾಗಿ ನೇಮಕವಾಗಿದ್ದ ಸಮಿತಿಯೊಂದು ಕೊಡಗಿಗೆ ಮೂರು ಭೂಮಿ ಅಡಮಾನ ಬ್ಯಾಂಕುಗಳು ಬೇಕೆಂದು ವರದಿ ಮಾಡಿತ್ತು. ಆದರೆ ಚಿಕ್ಕದಾದ ಕೊಡಗಿಗೆ ಒಂದೇ ಭೂ ಅಡಮಾನ ಬ್ಯಾಂಕು ಸಾಕೆಂದು ನನ್ನ ಅಭಿಪ್ರಾಯ. ಹಳೆ ಸಾಲ ನಿವಾರಣೆಯ [illegible] ಲಕ್ಷ ರೂಪಾಯಿಗಳು ಇದಕ್ಕೆ ಸಾಕಾಗಬಹುದು. ಏಕೆಂದರೆ ಸದಸ್ಯರ ಮೇಲಿರುವ ೧೧½ ಲಕ್ಷ ಸಾಲದಲ್ಲಿ ಕೇವಲ ೧½ ಲಕ್ಷ ಮಾತ್ರ ಸಾಲ ನಿವಾರಣೆಗಾಗಿ ಕೊಟ್ಟಿದ್ದೆಂದು ೧೯೪೭ರ ರಿಜಿಸ್ಟ್ರಾರ ಆಡಳಿತ ವರದಿಯಲ್ಲಿದೆ. ಆದ್ದರಿಂದ ಮುಂಬರುವ ಮೂರು ನಾಲ್ಕು ವರ್ಷಗಳಿಗಾಗಿ ಈ ಬ್ಯಾಂಕಿಗೆ ೧೦ ಲಕ್ಷ ರೂಪಾಯಿ ಸಾಕೆನಿಸಬಹುದು. ನೀವು ಆಸಕ್ತರಾಗಿದ್ದರೆ ನಿಮ್ಮ ಬ್ಯಾಂಕಿನ ಆಶ್ರಯದಲ್ಲಿ ಡಿಬೆಂಚರುಗಳ ಮೂಲಕ ಹಣ ಎತ್ತಬಹುದು. ಮಧ್ಯಪ್ರದೇಶದಲ್ಲಿ ಈ ರೀತಿಯ ಏರ್ಪಾಡು ನಡೆದಿದೆ. ಹೇಗೂ ಹೆಚ್ಚು ಬೆಳೆಯುವ ದೃಷ್ಟಿಯಿಂದ ನಿಮ್ಮ ಪ್ರಾಂತಕ್ಕೆ, ಬರುವ ಎರಡು ಮೂರು ವರ್ಷಗಳ ವರೆಗೆ ಅವಶ್ಯವಾದ ೧೦, ೧೨ ಲಕ್ಷ ರೂಪಾಯಿಗಳನ್ನು ಒದಗಿಸುವುದು ಕೇಂದ್ರ ಸರಕಾರಕ್ಕೆ ಕಷ್ಟವೆನಿಸಲಾರದು. ಕೊಡಗಿನ ಸಹಕಾರಿಗಳು ಇದಕ್ಕಾಗಿ ಪ್ರಯತ್ನಿಸಬೇಕು. ಮದ್ರಾಸು ಭೂಮಿ ಅಡಮಾನ ಸಂಘಕ್ಕೆ ಸಂಯೋಜಿತವಾಗಿ ಇಲ್ಲಿ ಭೂಮಿ ಅಡಮಾನ ಸಂಘವೊಂದನ್ನು ಸ್ಥಾಪಿಸುವ ಏರ್ಪಾಡು ಫಲಕಾರಿಯಾಗಲಿಲ್ಲ. ಬ್ಯಾಂಕಿನ ಮೂಲಕವೇ ದೀರ್ಘ ಅವಧಿಯ ಸಾಲ ಕೊಡಬೇಕೆಂಬ ನಿಮ್ಮ ಬ್ಯಾಂಕಿನ ಕೇಳಿಕೆಯಂತೆ ನಡೆಯುವುದು ಸಾಧ್ಯವಾಗದ್ದರಿಂದ ಮಾತುಕತೆ ಫಲಕಾರಿಯಾಗಲಿಲ್ಲ. ಚಿಕ್ಕ ವಾಯಿದೆಯ ಮತ್ತು ದೀರ್ಘವಾಯಿದೆಯ ಸಾಲಗಳನ್ನು ಮಿಶ್ರಮಾಡುವ ಪದ್ಧತಿ ಯುಕ್ತವಲ್ಲ. ಹೇಗೂ ಮಧ್ಯಪ್ರದೇಶ, ನಾಗಪುರಗಳಲ್ಲಿ ಇವೆರಡನ್ನೂ ಬೇರೆಯಾಗಿ ಕೊಡುವ ವಿಧಾನಗಳಿವೆ.

ನ್ಯಾಯವಾದ ಬಡ್ಡಿಯ ದರದಲ್ಲಿ ಹೊರಗಿನಿಂದ ದೀರ್ಘವಾಯಿದೆಯ ಹಣವನ್ನು ಪಡೆದು ಅದನ್ನು ಕಡಿಮೆ ದರದಲ್ಲಿ ರೈತರಿಗೆ ಸಾಲವಾಗಿ ಕೊಡುವುದಾದರೆ ಸ್ಥಳೀಯ ಠೇವಣಾತಿಯ ಹಾಗೂ ಸಾಲದ ಬಡ್ಡಿಯ ದರವನ್ನು ಇಳಿಸಲು ಯತ್ನಿಸಬಹುದು. ಈಗ ನಿಮ್ಮಲ್ಲಿ ಚಾಲ್ತಿಯಲ್ಲಿದ್ದ ಹೆಚ್ಚಿನ ದರದ ಬಡ್ಡಿಯನ್ನು ಇಳಿಸಲು ಇದು ಯುಕ್ತ ಮಾರ್ಗವಾಗಿದೆ. ಬಡ್ಡಿಯನ್ನು ಇಳಿಸಿದರೆ ಲಾಭ ಕಡಿಮೆಯಾಗಿ ಈಗ ನೀವು ವಿದ್ಯೆಗಾಗಿ, ಕಟ್ಟಡಗಳಿಗಾಗಿ ಉದಾರವಾಗಿ ವಿನಿಯೋಗಿಸುತ್ತಿರುವ ಹಣ ಕಡಿಮೆ ಬೀಳುವುದು. ಆದ್ದರಿಂದ ಈ ವಿಚಾರದಲ್ಲಿ ನೀವು ಎಚ್ಚರಿಕೆಯಿಂದ ವರ್ತಿಸಬೇಕು.

ಕೊಡಗಿನಲ್ಲಿ ವ್ಯವಸಾಯ ಅಭಿವೃದ್ಧಿಯನ್ನು ಮಾಡಲು ದೊಡ್ಡ ಅವಕಾಶವಿದೆ. ದೇವರು ವಿಪುಲ ಮಳೆಯನ್ನೂ, ಬಿಸಿಲನ್ನೂ ಕೊಟ್ಟಿರುವನು. ಚಿಕ್ಕ ನೀರಾವರಿ ಯೋಜನೆಗಳನ್ನು ಕೈಕೊಂಡು ವ್ಯವಸಾಯ ಅಭಿವೃದ್ಧಿಗೆ ಯತ್ನಿಸಬಹುದು. ಸಹಕಾರ ಸಂಘಗಳ ಮೂಲಕ ಈ ಕೆಲಸ ಸಾಧಿಸಬಹುದು. ವ್ಯವಸಾಯಗಾರರು ಎಚ್ಚರಿಕೆಯಿಂದ ಭೂಮಿಯ [illegible] ಹೋಗದಂತೆ ನೋಡಬೇಕಾಗಿದೆ. ಬೆಟ್ಟ ಪ್ರದೇಶಗಳಲ್ಲಿ ಮಳೆಯಿಂದಾಗಿ ಮೇಲಿನ ಗೊಬ್ಬರವು ಕೊಚ್ಚಿ ಭೂಮಿಯು ಬಂಜರು ಬೀಳುತ್ತದೆ. ಇದನ್ನು ನಿಲ್ಲಿಸಲು ಯತ್ನ ನಡೆಯಬೇಕು. ಹೊಸ ಭೂಮಿ ಮಾಡುವ ದೃಷ್ಟಿಯಿಂದ ಕಾಡುಗಳನ್ನು ಕಡಿದು ಬಯಲುಮಾಡುವ ಪದ್ಧತಿ ನಿಲ್ಲಬೇಕು. ಉದಕ ಮಂಡಲದ ಕಾಡು ಕಡಿದುದೇ ಸುತ್ತಮುತ್ತಲಿನ ಮಳೆಯ ಅಭಾವಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಆದ್ದರಿಂದ ಕಾಡುಗಳ ವಿಚಾರ ಎಚ್ಚರಿಕೆಬೇಕು.

ವ್ಯವಸಾಯವು ಲಾಭದಾಯಕವಾಗಬೇಕಾದರೆ ಅದು ಮಿಶ್ರ ವ್ಯವಸಾಯವಾಗಬೇಕು. ಕಳೆದ ಸಾರಿ ನಾನು ಕೊಡಗಿಗೆ ಬಂದಾಗ ಇಲ್ಲಿ ಕರೆಯುವ ಹಸುಗಳ [illegible]ವಾಗಿ ಹಾಲಿನ ಅಭಾವವನ್ನು ಕಂಡು ಆಶ್ಚರ್ಯಚಕಿತನಾದೆನು. ಜನತೆಯ ಆರೋಗ್ಯ ವರ್ಧನೆಗೆ ಹಾಲು ಅತ್ಯಾವಶ್ಯಕ. ಮದ್ರಾಸಿನಲ್ಲಿ ಸಹಕಾರ ತಳಹದಿಯಲ್ಲಿ ಈ ಹಾಲು ಉತ್ಪಾದನೆಯ ಮತ್ತು ವಿತರಣೆಯ ಕೆಲಸವನ್ನು ಕೈಕೊಳ್ಳಲಾಗಿದೆ. ಸರಕಾರದ ಸಹಾಯವಿಲ್ಲದೆ ಇದನ್ನು ಕೈಕೊಳ್ಳುವುದು ಸಾಧ್ಯವಾಗದು.

ವ್ಯವಸಾಯ ಕ್ಷೇತ್ರಗಳು ಭಿನ್ನಭಿನ್ನವಾಗಿದ್ದರೆ ವ್ಯವಸಾಯವು ಲಾಭದಾಯಕವಾಗದು. ಈಗ ನೇಮಕವಾಗಿರುವ ವ್ಯವಸಾಯ ಸುಧಾರಣಾ ಸಮಿತಿಯ ಸೂಚನೆ ಮತ್ತು ಹಿಂದೂಕೋಡ್ ಮಸೂದೆಯಂತೆ ಭೂಮಿಯು ಹರಿದು ಹಂಚಲ್ಪಡುವ ಸಂಭವತೆಯೇ ಹೆಚ್ಚು ತೋರುತ್ತದೆ. ವ್ಯವಸಾಯ ಖರ್ಚು ಕಡಿಮೆಯಾಗಿ ಲಾಭ ಬರಬೇಕಾದರೆ ವಿಸ್ತೃತ ವ್ಯವಸಾಯ ಕ್ಷೇತ್ರಗಳು ಬೇಕು. ಆದ್ದರಿಂದ ಕೊಡಗಿನ ಸಹಕಾರಿಗಳು ಸಹಕಾರ ಸಾಂಘಿಕ ವ್ಯವಸಾಯ ಕ್ರಮವನ್ನು ಜಾರಿಗೆ ತರಲು ಯತ್ನಿಸಬೇಕು. ಪ್ರಥಮ ಪರಿಶೀಲನೆ ಹಾಗೂ ಆದರ್ಶಕ್ಕಾಗಿ ೧೦೦ ಎಕರೆಗಳ ಒಂದು ಪ್ರಯತ್ನವನ್ನು ಪ್ರಾರಂಭಿಸುವುದು ಯೋಗ್ಯ.

ಇಡೀ ಹಿಂದೂಸ್ಥಾನಕ್ಕೆ ಅನ್ವಯಿಸುವ ವ್ಯವಸಾಯ ಆರ್ಥಿಕ ಸಂಸ್ಥೆಯೊಂದನ್ನು ರಚಿಸುವ ಸೂಚನೆಯನ್ನು ಕೇಂದ್ರ ಸರಕಾರವು ತಾತ್ಕಾಲಿಕ ಬಿಟ್ಟಂತಿದೆ. ಇಂಥ ಒಂದು ಸಂಸ್ಥೆ ಇದ್ದಿದ್ದರೆ ದೀರ್ಘವಾಯಿದೆಯ ಸಾಲದ ಏರ್ಪಾಡಿಗೆ ಹಣಕ್ಕಾಗಿ ಕೊಡಗು ಕಷ್ಟಪಡಬೇಕಿರಲಿಲ್ಲ. ಆದ್ದರಿಂದ ಸಹಕಾರಿಗಳಿಂದ ನಾವು ವಿಶಾಲ ದೃಷ್ಟಿಯುಳ್ಳವರಾಗಿ ಹಿಂದೂದೇಶದ ವ್ಯವಸಾಯಗಾರರ ಹಿತದೃಷ್ಟಿಯನ್ನು ಪ್ರಾಂತೀಯ ಸಹಕಾರ ಸಂಸ್ಥೆಗಳ ಮೂಲಕ ಯಶಸ್ವಿಯಾಗಿ ಸಾಧಿಸಲು ಕೇಂದ್ರ ವ್ಯವಸಾಯ ಆರ್ಥಿಕ ಸಂಘದ ಏರ್ಪಾಡಿಗೆ ಬೆಂಬಲನೀಯಬೇಕು. ಸುಲಭ ದರದ ಬಡ್ಡಿಯ ಸಾಲಕ್ಕೆ ಇದೊಂದೇ ಯೋಗ್ಯ ಮಾರ್ಗ.

ಮುಗಿಸುವ ಮೊದಲು ಸಹಕಾರಿ ಸಂಘಗಳ ಉತ್ತಮ ಕೆಲಸವನ್ನು ಇನ್ನೂ ಮುಂದರಿಸಬೇಕೆಂದು ಹೇಳುತ್ತೇನೆ. ಎಲ್ಲರೂ ಸಾಮೂಹಿಕವಾಗಿ ಸಮಸ್ಯೆಗಳನ್ನು ಐಕ್ಯತೆಯಿಂದ ಎದುರಿಸಿದಾಗಲೇ ಸ್ವಾರ್ಥ ಸಂಕೀರ್ಣತೆಯಿಂದ ನಿರ್ಲಿಪ್ತರಾಗಿರುವುದು ಸಾಧ್ಯ. ಯಾವುದು ಸರಿ ಎಂಬುದನ್ನು ಗಮನದಲ್ಲಿಡಬೇಕಲ್ಲದೆ ಯಾರದು ಸರಿ ಎಂದು ಪ್ರತಿಪಾದಿಸದೆ ಈ ತತ್ವವನ್ನು ಮರೆಯದೆ ಪಾಲಿಸಬೇಕು. ಪುನಃ ನಿಮಗೆಲ್ಲರಿಗೂ ಹೃತ್ಪೂರ್ವಕ ವಂದಿಸುವದಲ್ಲದೆ ಇಂದಿನ ಕಾರ್ಯಕಲಾಪಗಳನ್ನು ಜಯಪ್ರದವಾಗಿ ನಡೆಸಲು ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ದಿಯಲ್ಲಿ ಏಕೆ ಮಾಡಬಾರದೆಂಬುದಕ್ಕೆ ಕಾರಣಗಳಿಲ್ಲ. ನಿಮಗೆ ಪ್ರಾಂತೀಯ ಬ್ಯಾಂಕಿನಾಶ್ರಯದಲ್ಲಿ ಕ್ರೆಡಿಟ್ ಸಂಘಗಳ ಪರಂಪರೆಯೇ ಇದೆ. ಮಾರ್ಕೆಟಿಂಗ್ ಸಂಘಗಳೂ ಇವೆ. ನಿಮಗೆ ಬೇಕಾದ ಉದ್ಯಮಶೀಲ ಜನರೂ ಇದ್ದಾರೆ. ನಿಮಗೆ ಬೇಕಾದುದೆಂದರೆ ಯೋಜನೆ–ಯೋಗ್ಯ ಯೋಜನೆಗಳನ್ನು ತಯಾರಿಸಿ ಸಹಕಾರ ವ್ಯವಸಾಯ, ಭೂಮಿ ಅಭಿವೃದ್ಧಿಗಳನ್ನು ಕೈಕೊಳ್ಳುವುದಲ್ಲದೆ ಮಾರಾಟ ಸಂಘಗಳನ್ನು ಬಲಪಡಿಸಿ, ಔದ್ಯೋಗಿಕ ಸಹಕಾರ ಸಂಘಗಳನ್ನೂ ಮೋಟಾರು ವಹಿವಾಟು ಸಂಘಗಳನ್ನೂ ರಚಿಸಿ ನಿಜವಾದ ಸಹಕಾರ ಪ್ರಜಾಪ್ರಭುತ್ವಕ್ಕೆ ತಳಹದಿಯನ್ನು ಹಾಕಬೇಕಾಗಿ ಇಚ್ಛಿಸುತ್ತೇನೆ. ನನ್ನ ಈ ಕನಸು ನನಸಾಗಿ ನಿಮ್ಮ ಈ ಪ್ರಾಂತವು ಪ್ರಥಮ ಸಹಕಾರ ಪ್ರಜಾಪ್ರಭುತ್ವವಾಗಿ, ಇಡೀ ಭರತಖಂಡದ ಸಹಕಾರಿಗಳಿಗೆ ಸಹಕಾರ ಯಾತ್ರಾಸ್ಥಳವಾಗಿಯೂ, ಚೇತನದಾಯಕ ಕೇಂದ್ರವಾಗಿಯೂ ಪರಿಣಮಿಸಲೆಂದು ನನ್ನ ಪ್ರಾರ್ಥನೆ. ಕೊಡಗಿನ ದೇವತೆ ಮಾತೆ ಕಾವೇರಿಯು ಕೊಡಗಿನ ಜನತೆಯನ್ನು ತನ್ನ ಅಮರ ಆಶೀರ್ವಾದಗಳಿಂದ ಹರಸಲಿ.

# ಕೊಡಗು

**ತಾ ೧೯-೫-೧೯೫೦ನೇ ಶುಕ್ರವಾರ**

## ಸಹಕಾರಿಗಳ ಕೂಟ.

೧೯೫೦ನೇ ಇಸವಿಯು ಕೊಡಗಿನ ಸಹಕಾರಿಗಳಿಗೆ ಒಂದು ಮಹತ್ವದ ವರ್ಷವಾಗಿದೆ. ಈ ವರ್ಷ ಕೊಡಗಿನ ಪ್ರಮುಖ್ಯ ಕೇಂದ್ರ ಸಂಸ್ಥೆಯಾಗಿದ್ದು ಎಲ್ಲಾ ಸಹಕಾರಿ ಸಂಸ್ಥೆಗಳಿಗೆ ಜೀವಕಳೆಯನ್ನು ಕೊಡುತ್ತಿರುವ ಪ್ರಾಂತೀಕ ಸಹಕಾರಿ ಬ್ಯಾಂಕಿನ ಮಹಾ ಸಭೆಯು ಕಾಲಕ್ಕೆ ಅದರ ರಜತೋತ್ಸವ, ಹೊಸ ಕಟ್ಟಡದ ಉದ್ಘಾಟನೆ ಮತ್ತು ಅಖಿಲ ಕೊಡಗು ಸಹಕಾರಿ ಪರಿಷತ್ತು ಸಮಾವೇಶಗೊಂಡು ವಿಜೃಂಭಣೆಯಿಂದ ನಡೆದವು. ೧೯೨೧ರಲ್ಲಿ ಪ್ರಾರಂಭವಾದ ಬ್ಯಾಂಕಿನ ರಜತೋತ್ಸವವು ನಾಲ್ಕು ವರ್ಷಗಳ ಹಿಂದೆಯೇ ನಡೆಯಬೇಕಿತ್ತು. ಆದರೆ ಅದರ ಕಟ್ಟಡವು ಸಂಪೂರ್ಣವಾಗದ್ದರಿಂದಲೂ, ಇತರ ಕಾರಣಗಳಿಗಾಗಿಯೂ ತಡವಾಗಿ ನಡೆಸಬೇಕಾಯಿತು. ಕಳೆದ ೨೯ ವರ್ಷಗಳಿಂದ ಎಷ್ಟೋ ಎಡರು ತೊಡರುಗಳು ಬಂದರೂ ಅದರಲ್ಲೂ ಪ್ರಪಂಚದ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಉಂಟಾದ ಕಷ್ಟಗಳನ್ನೂ, ತಿರುವಾಂಕೂರು ನೇಶನಲ್ ಬ್ಯಾಂಕಿನ ಮುಳುಗುವಿಕೆಯಿಂದುಂಟಾದ ಧಕ್ಕೆಯನ್ನೂ ಸಹಿಸಿಕೊಂಡು ಜಯಪ್ರದವಾಗಿ ಕಾರ್ಯಕಲಾಪಗಳನ್ನು ನಡೆಸುತ್ತ ಕೊಡಗಿನ ಸಹಕಾರಿಗಳಿಗೆ ಸಹಾಯವನ್ನೀಯುತ್ತಿರುವ ಬ್ಯಾಂಕಿನ ರಜತೋತ್ಸವ ಕಾಲದಲ್ಲಿ ಅದನ್ನು ಅಭಿನಂದಿಸುತ್ತೇವೆ. ಈ ಬ್ಯಾಂಕಿನ ಅಭಿವೃದ್ಧಿಯೆಂದರೆ ಕೊಡಗಿನ ಸಹಕಾರ ಚಳವಳದ ಅಭಿವೃದ್ಧಿಯೆಂದೇ ಹೇಳಬೇಕು. ಆದ್ದರಿಂದ ಈ ಉತ್ಸವವು ಕೊಡಗಿನ ಎಲ್ಲಾ ಸಹಕಾರಿಗಳಿಗೆ ಹರ್ಷವನ್ನುಂಟುಮಾಡುವದಾಗಿತ್ತು.

ಇದರೊಂದಿಗೆ ಈ ಬ್ಯಾಂಕು ಒಂದು ಭವ್ಯವಾದ ಭವನವನ್ನು ಕಟ್ಟಿ ಅದನ್ನು ತೆರೆಯುವ ಸಮಾರಂಭವನ್ನೂ ಕೂಡ ನಡೆಸಿದ್ದು ಆನಂದದ ವಿಷಯ. ಸುಮಾರು ಒಂದು ಲಕ್ಷದ ಎಪ್ಪತ್ತು ಸಾವಿರ ರೂಪಾಯಿ ಖರ್ಚು ತಗಲಬಹುದಾದ ಈ ಕಟ್ಟಡವು ಮಡಿಕೇರಿಯಲ್ಲಿರುವ ಕೋಟೆಯ ಕಟ್ಟಡವನ್ನು ಬಿಟ್ಟರೆ ಕೊಡಗಿನಲ್ಲಿ ಒಂದನೆಯ ಕಟ್ಟಡವೆಂದು ಹೇಳಬಹುದು. ಈ ಕಟ್ಟಡದಿಂದ ಬ್ಯಾಂಕಿನ ಭದ್ರತೆಯು ಬಹು ಮಟ್ಟಿಗೆ ವೃದ್ಧಿಗೊಂಡಿರುವದಲ್ಲದೆ ಮಡಿಕೇರಿಯ ಸೌಂದರ್ಯವನ್ನು ಹೆಚ್ಚಿಸಿದೆ. ಇದಕ್ಕೆ ಕೊಡಗು ಸಹಕಾರ ಮಾರ್ಕೆಟಿಂಗ್ ಫೆಡರೇಶನ್, ಎಲಕ್ಕಿ ಸಹಕಾರ ಸಂಘಗಳಂಥಾ ಕೆಲವು ಪ್ರಾಂತೀಕ ಸಂಸ್ಥೆಗಳು ಮಾತ್ರ ಕೊಟ್ಟಿಲ್ಲವೆ ಕೊಡಗಿನ ಎಲ್ಲಾ ಸಹಕಾರಿ ಗ್ರಾಮ ಸಂಸ್ಥೆಗಳು ತಮ್ಮ ಸಹಾಯವನ್ನು ನೀಡಿವೆ. ಇದು ಕೊಡಗಿನ ಎಲ್ಲಾ ಸಹಕಾರಿಗಳ ಸಹಕಾರದ ಪ್ರತಿರೂಪವಾಗಿದೆ. ಈ ಕಟ್ಟಡವು ಪ್ರತಿಯೊಬ್ಬ ಸಹಕಾರಿಗೂ ಹೆಮ್ಮೆಯ ವಿಚಾರವಾಗಿದೆ. ಕೇಂದ್ರ ಪಟ್ಟಣವಾದ ಮಡಿಕೇರಿಗೆ ಬರುವ ಕೊಡಗಿನ ಗ್ರಾಮಾಂತರ ಸಹಕಾರಿಗಳಿಗೆ ಇದೊಂದು ವಿಶ್ರಾಂತಿಯ ನೆಲೆಮನೆಯಾಗುವುದು.

ಬ್ಯಾಂಕಿನ ಮಹಾಸಭೆಯು ತಿಳಿಸಿದಂತೆ ಕ್ಲುಪ್ತ ಸಮಯಕ್ಕೆ ಸರಿಯಾಗಿ ಮುಗಿದದ್ದು ಇದೇ ಮೊದಲು. ವರ್ಷ ವರ್ಷ ಬಹು ಸಮಯವನ್ನು ಕಳೆಯುತ್ತಿದ್ದ ಡೈರೆಕ್ಟರುಗಳ ಚುನಾವಣೆಯಾದರೂ ಈ ಸಾರೆ ಪೈಪೋಟಿಯೂ ವಿರೋಧವಿಲ್ಲದೆ ಸರ್ವಸಮ್ಮತದಿಂದ ಮುಗಿದದ್ದೇ ಇದಕ್ಕೆ ಕಾರಣವಾಗಿದೆ. ಚರ್ಚಾಸ್ಪದದ ಠರಾವುಗಳಿದ್ದುದೂ ಕೂಡ ಕಡಿಮೆ. ಇದು ಬ್ಯಾಂಕಿನ ಕಾರ್ಯಕರ್ತರ ಕಾರ್ಯದಕ್ಷತೆಯ ನಿದರ್ಶನವಾಗಿದೆ.

ಮರ ದಿನ ಅಖಿಲ ಕೊಡಗು ಸಹಕಾರಿ ಪರಿಷತ್ತು ಜಯಪ್ರದವಾಗಿ ನಡೆಯಿತು. ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮದ್ರಾಸಿನ ನಿರತ ಸಹಕಾರಿಗಳೂ, ಅಲ್ಲಿಯ ಕೇಂದ್ರ ಭೂಮಿ ಅಡಮಾನ ಬ್ಯಾಂಕಿನ ಪ್ರೆಸಿಡೆಂಟರೂ ಆದ ಬಿ. ವೆಂಕಟರತ್ನಂರವರ ಅಮೋಘ ಭಾಷಣದಲ್ಲಿ ಹಲವು ಉದಯೋಕ್ತ ಸಲಹೆಗಳಿವೆ. "ಕೊಡಗಿನ ಪ್ರತಿಯೊಂದು ಕುಟುಂಬದಲ್ಲೂ ಒಬ್ಬನು ಸಹಕಾರಿ ಮೆಂಬರನಾಗಿರುವಂಥಾದ್ದು ಕೊಡಗಿಗೆ ಹೆಮ್ಮೆಯ ಮಾತು. ಹಿಂದೂದೇಶದ ಯಾವ ಭಾಗವೂ ಈ ಸ್ಥಿತಿಗೆ ತಲಪಿಲ್ಲ. ಯೂರೋಪಿನಲ್ಲಿರುವ ಫಿನ್‌ಲೆಂಡಿನಂತೆ ಇಂಡಿಯಾದಲ್ಲಿ ಕೊಡಗು ಸಹಕಾರಿಗಳ ರಾಜ್ಯವಾಗಲೀ ಆರ್ಥಿಕ ದೃಷ್ಟಿಯಿಂದಲೂ ಬೇರೆ ಯಾವದೇ ಪ್ರಾಂತವು ಕೊಡಗಿನ ಸಮಾನತೆಗೆ ಬಂದಿಲ್ಲ" ಕೊಡಗು ಸಹಕಾರದ ಮಾರ್ಗದಲ್ಲಿ ಬಹು ದೂರ ಸಾಗಿದೆಯೆಂಬುದನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ.

ಸಮಾರಂಭವನ್ನು ತೆರೆದಂಥಾ ಮದ್ರಾಸಿನ ಸಹಕಾರಿ ಇಲಾಖೆಯ ಮಾನ್ಯ ಮಂತ್ರಿಯವರು ಇಲ್ಲಿಯ ಸಹಕಾರಿ ಚಳವಳವನ್ನು ಕುರಿತು ಹೇಳಿದ ಮಾತುಗಳಂದರೂ ಚಿನ್ನದ ಅಕ್ಷರಗಳಲ್ಲಿ ಕೆತ್ತಿ ಇಡಲು ಯೋಗ್ಯವಾದವುಗಳು. ಆದರೆ ಈ ಮಾತುಗಳನ್ನು ಬರೀ ಇಲಾಖೆಯ ವರದಿಗಳನ್ನು ಓದಿ ಹೇಳಿದ್ದಲ್ಲ. ಹಿಂದಿನ ವರ್ಷ ಕೊಡಗಿಗೆ ಬಂದು ಕೊಡಗಿನ ಹಲವು ಭಾಗಗಳಲ್ಲಿ ಪ್ರವಾಸ ಮಾಡಿ ಗ್ರಾಮಾಂತರ ಸಂಘಗಳನ್ನು ಸಂದರ್ಶಿಸಿ ಅವುಗಳ ಕಾರ್ಯ ಕಲಾಪಗಳನ್ನು ಅರಿತುಕೊಂಡು ಹೇಳಿದ ಮಾತುಗಳಿವು. ಅವರು ಮಾಡಿದ ಭಾಷಣವಾದರೂ ಸಹಕಾರಿ ಚಳವಳವನ್ನು ಕುರಿತ ಬೋಧಪ್ರದ ಸಾಹಿತ್ಯದಾಗಿದೆ. ಪ್ರಾಕೃತಿಕವಾದ ಅಪಾರ ಸಂಪತ್ತಿದ್ದು ವಿದ್ಯಾವಂತರೂ, ಕರ್ಮಕುಶಲರೂ, ಆದ ಜನರಿರುವ ಈ ಚಿಕ್ಕ ಸುಂದರ ಪ್ರಾಂತದಲ್ಲಿ ಯೋಗ್ಯ ಯೋಜನೆಯಿಂದ ಸಹಕಾರವನ್ನು ಮುಂದೊತ್ತಿದರೆ ನಿಜವಾದ ಸಹಕಾರ ಪ್ರಜಾಪ್ರಭುತ್ವಕ್ಕೆ ತಳಹದಿಯನ್ನು ಹಾಕಬಹುದು. ಮಾನ್ಯ ಮಂತ್ರಿಗಳು ಹೇಳಿದ "ನಿಮ್ಮ ಪ್ರಾಂತವು ಪ್ರಥಮ ಸಹಕಾರ ಪ್ರಜಾಪ್ರಭುತ್ವವಾಗಿ ಇಡೀ ಭರತಖಂಡದ ಸಹಕಾರಿಗಳಿಗೆ ಸಹಕಾರ ಯಾತ್ರಾಸ್ಥಳವಾಗಿಯೂ, ಶಿಕ್ಷಣದಾಯಕ ಕೇಂದ್ರವಾಗಿಯೂ ಪರಿಣಮಿಸಲಿ" ಎಂಬ ಮಾತುಗಳು ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರಲೆಂದು ನಮ್ಮ ಆಶಯ. ಈ ಗುರಿಯನ್ನು ತಲಪಲು ಪ್ರತಿಯೊಬ್ಬ ದೇಶೀಯನೂ ಯೋಗ್ಯತೆಯನ್ನೂ ಚೈತನ್ಯವನ್ನೂ ಪಡೆಯುವಂತೆ ಮಾಡುವ ದೊಡ್ಡ ಭಾರವು ಕೊಡಗಿನ ಸಹಕಾರಿಗಳ ಮೇಲಿದೆ. ಈ ಜವಾಬ್ದಾರಿಯನ್ನು ಅರಿತುಕೊಂಡು ಕೊಡಗಿನ ಸಹಕಾರಿಗಳು ಮುಂದರಿದು ಕೊಡಗನ್ನು ಆದರ್ಶ ಸಹಕಾರ ರಾಜ್ಯವನ್ನಾಗಿ ಮಾಡುವದು ಪ್ರತಿಯೊಬ್ಬನ ಕರ್ತವ್ಯವಿದೆ.

## ವರ್ತಮಾನ.

ಇಂಡಿಯಾ ವ್ಯವಸಾಯ ಪಾರ್ಲಿಮೆಂಟರಿ ಕಮಿಟಿಯ ಅಧ್ಯಕ್ಷರಾದ ಸರ್ ದಾತಾರ್ ಸಿಂಗ್‌ರವರು ತಾ ೧೭ರಲ್ಲಿ ಮಡಿಕೇರಿಗೆ ಬಂದಿದ್ದರು.

ಸಹಕಾರಿ ಪ್ರಾಂತೀಕ ಬ್ಯಾಂಕಿನ ಬೆಳ್ಳಿ ಮಹೋತ್ಸವ, ಮಹಾ ಸಭೆ ಮತ್ತು ೧೯ನೇ ಕೊಡಗು ಸಹಕಾರ ಸಮ್ಮೇಳನಕ್ಕೆ ಬಂದಿದ್ದ ಮದ್ರಾಸಿನ ಮಾನ್ಯ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರನ್ನು, ಮದ್ರಾಸಿನ ಕೇಂದ್ರ ಅಡಮಾನ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವೆಂಕಟರತ್ನಂರವರನ್ನೂ ಸತ್ಕರಿಸಲು ತಾರೀಕು ೧೭ನೇ ಸಾಯಂಕಾಲ ಒಂದು ಚಹಪಾನ ಕೂಟವನ್ನು ಬ್ಯಾಂಕಿನ ಡೈರೆಕ್ಟರುಗಳು ಏರ್ಪಡಿಸಿದ್ದರು.

ದೀರ್ಘ ಮಾಯಿದೆಯ ಸಾಲ ಕೊಡುವ ಏರ್ಪಾಡು ಮಾಡಲು ಬ್ಯಾಂಕಿಗೆ ಧನ ಸಹಾಯವನ್ನು ಮದ್ರಾಸಿನಿಂದ ಪಡೆಯುವ ವಿಚಾರದಲ್ಲಿ ಬ್ಯಾಂಕಿನ ಡೈರೆಕ್ಟರುಗಳೂ, ರಿಜಿಸ್ಟ್ರಾರವರೂ ಮದ್ರಾಸಿನಿಂದ ಬಂದ ಅತಿಥಿಗಳೊಡನೆ ತಾ ೧೮ರ ಬೆಳಿಗ್ಗೆ ವಿಚಾರ ವಿನಿಮಯ ಮಾಡಿದರು.

ಮಡಿಕೇರಿ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಟೇಬಲ್ ಟೆನ್ನಿಸ್ ಸಿಂಗಲ್ಸ್ ಸ್ಪರ್ಧೆಯು ನೇ ತಾರೀಕು ಅಂತ್ಯದೊಳಗೆ ನಡೆಯಬೇಕಾಗಿದೆ. ಸ್ಪರ್ಧಿಗಳಿಚ್ಛಿಸುವವರು ತಾ ೨೫-೫-೫೦ರೊಳಗೆ ಸ್ಪರ್ಧಿಸುವ ಪ್ರತಿಯೊಬ್ಬನಿಗೆ ೯ ಆಣೆ ಫೀಜಿನೊಡನೆ ತಮ್ಮ ಹೆಸರನ್ನು ಕ್ಲಬ್ಬಿನ ಕಾರ್ಯದರ್ಶಿಯವರಿಗೆ ಕಳುಹಿಸಬಹುದೆಂದು ತಿಳಿಸುತ್ತಾರೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಸಂಸ್ಕೃತ ಪಂಡಿತರಾಗಿದ್ದ ವಿದ್ಯಾವಾಚಸ್ಪತಿ ಪಂಡಿತ ಶ್ರೀ ಓಕ್ಲಮನೆ ಅಪ್ಪಣ್ಣಾಚಾರ್ಯರು ತಾರೀಕು ೧೭ ಮತ್ತು ೧೮ರಲ್ಲಿ ಮಡಿಕೇರಿ ವೇದಾಂತ ಮಂದಿರದಲ್ಲಿ ವೇದಾಂತ ಶಾಸ್ತ್ರಗಳ ವಿಚಾರ ಭಾಷಣ ಮಾಡಿದರು.

ಕೊಡಗು ಜಿಲ್ಲೆಗೆ ಶಾರೀರಿಕ ಶಿಕ್ಷಣದ ಡೈರೆಕ್ಟರ್, (ಡೈರೆಕ್ಟರ್, ಫಿಸಿಕಲ್ ಇನ್‌ಸ್ಟ್ರಕ್ಷನ್)ರಾಗಿ ನೇಮಕವಾಗಿರುವ ಶ್ರೀ. ಕೋಟೆರಂಡ ಪೂವಯ್ಯನವರು ತಾ ೬-೫-೫೦ರಲ್ಲಿ ತಮ್ಮ ಕೆಲಸದ ಜವಾಬ್ದಾರಿ ವಹಿಸಿಕೊಂಡಿರುವರು.

ಮೈಸೂರು ವಿಶ್ವವಿದ್ಯಾಲಯದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಕಂಜಿತಂಡ ಸೋಮಯ್ಯ, ಕಾಳಿಮಾಡ ಅಪ್ಪಯ್ಯ ಇವರುಗಳು ತೇರ್ಗಡೆಯಾಗಿರುವರು.

ವೀರಾಜಪೇಟೆ ಕುಕ್ಲೂರು ಗ್ರಾಮದ ಶ್ರೀಮೂಲ ಭದ್ರಕಾಳಿ ದೇವರ ವಾರ್ಷಿಕ ಹಬ್ಬವು ತಾ. ೨೨ ರಿಂದ ೨೪ರ ವರೆಗೆ ನಡೆಯುವದು.

ನಾಪೋಕ್ಲು ಬಲ್ಲಮಾವಟಿ ಗ್ರಾಮದ ರಾಟೆ ದೇವಸ್ಥಾನದಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ ಭದ್ರಕಾಳಿ ದೇವರ ಹಬ್ಬವು ತಾ ೨೫ ಮತ್ತು ೨೬ರಲ್ಲಿ ನಡೆಯುವದು.

ಸ್ಯೆಂಟ್ ಮೈಕೆಲ್ಸ್ ಹೈಸ್ಕೂಲಿಗೆ ಸಂಬಂಧಪಟ್ಟ ಒಂದು ವಿದ್ಯಾರ್ಥಿ ಭವನವು ಸದ್ಯದಲ್ಲೇ ತೆರೆಯಲ್ಪಡುವುದೆಂದೂ, ಅಲ್ಲಿ ಊಟಕ್ಕೂ, ವಸತಿಗೂ, ಇಚ್ಛಿಸುವವರಿಗೆ ಬರೀ ಊಟಕ್ಕೂ ಅಥವಾ ಬರೀ ವಸತಿಗೂ ತಕ್ಕ ಏರ್ಪಾಡು ಮಾಡಲ್ಪಡುವುದೆಂದೂ ಹುಡುಗರ ಮೇಲ್ವಿಚಾರಣೆ ಬಗೆ ಭವನದಲ್ಲೇ ವಾಸಿಸುವ ಒಬ್ಬ ಪಾದ್ರಿ ಚಾಲಕನ ಏರ್ಪಾಡು ಮಾಡಿದೆಯೆಂದೂ ತಿಳಿದುಬಂದಿದೆ.

## ವಾರ್ತೆಗಳು.

ಜಗತ್ತಿನಲ್ಲಿ ಪ್ರತಿ ಏಳು ಸೆಕೆಂಡುಗಳಿಗೊಬ್ಬನಿಗೆ ಕ್ಷಯ ರೋಗ ಹಿಡಿಯುತ್ತಿದೆ; ಭಾರತ ದೇಶದಲ್ಲಿ ಪ್ರತಿ ನಿಮಿಷಕ್ಕೊಬ್ಬನಿಗೆ ಕ್ಷಯ ತಗಲುವುದು. ಸಂಯುಕ್ತ ಜನಾಂಗಗಳ ಅಂತರಾಷ್ಟ್ರೀಯ ಚಳವಳದ ಮುಖಂಡ ಎ. ವಿ. ಆರ್. ಎಂಡರ್ಸನರು ಈ ಅಂಕೆಗಳನ್ನು ವ್ಯಕ್ತಪಡಿಸಿದ್ದಾಗಿದೆ.

ಭಾರತದಲ್ಲಿ ಈ ಮೊದಲು ವೈಸ್ರಾಯ ಪದವಿ ನೋಡಿಕೊಂಡಿದ್ದ ಲಾರ್ಡ್ ಹೆಲಿಫೆಕ್ಸರಿಗೆ ಯಾರ್ಕ್ ಶಯರ್ ಪೋಲೀಸ್ ಕೋರ್ಟಿನಲ್ಲಿ ನಿರ್ಲಕ್ಷ್ಯತನದಿಂದ ಮೋಟರ್ ಕಾರ್ ನಡೆಸಿದ ಬಗ್ಗೆ ಹತ್ತು ಪವನು ದಂಡ ವಿಧಿಸಲ್ಪಟ್ಟಿತು.

ರಾಷ್ಟ್ರಪತಿ ಡಾ. ಪಟ್ಟಾಭಿ ಸೀತಾರಾಮಯ್ಯನವರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಪಂಜಾಬದ ಮಿ. ಅಬ್ದುಲ್ ಗನಿದಾರ್ ಎಂಬವರನ್ನು ಮೂರು ವರ್ಷಕ್ಕೆ ಬಹಿಷ್ಕರಿಸಿರುವರು. ಕೆಲಸಮಯದ ಹಿಂದೆ ಮಿ. ಅಬ್ದುಲ್ ಗನಿದಾರ್‌ರವರು ಕಾಂಗ್ರೆಸ್ಸಿನ ವಿರುದ್ಧ ಕೆಲವು ಆಕ್ಷೇಪಕರವಾದ ಟೀಕೆಗಳನ್ನು ಹೊರಡಿಸಿ ಒಂದು ಪತ್ರಿಕೆ ಹೊರಡಿಸಿದ ಬಗ್ಗೆ ಈ ನಿಷೇಧ ಶಿಕ್ಷೆಯಾಗಿರುತ್ತದೆ.

ಯೂರೋಪದಲ್ಲಿ ಮೊದಲ ಗಾಂಧೀ ಸ್ಮಾರಕದ ಶಂಕು ಸ್ಥಾಪನೆಯನ್ನು ಭಾರತದ ಹೈಕಮಿಶನರ್ ಶ್ರೀ ವಿ. ಕೆ. ಕೆ. ಮೆನನ್‌ರವರು ಮಾಡಿದರು. ಲಂಡನಿನ ಫಿಟ್ಸ್‌ರಾಯ್ ಸ್ಟ್ರೀಟ್‌ದಲ್ಲಿ ಹಿಂದೀಯ ವಿದ್ಯಾರ್ಥಿಗಳ ಯೂನಿಯನ್ ಮತ್ತು ನಿವಾಸ ಕಟ್ಟಡವೊಂದು ರಚಿತವಾಗುತ್ತಿದೆ. ಆ ಕಟ್ಟಡದಲ್ಲಿ ಸುಮಾರು ೪೦೦ ಮಂದಿಗೆ ಕೂತುಕೊಳ್ಳುವರೆ ಅವಕಾಶವಿರುವ ದೊಡ್ಡ ಕೋಣೆಯನ್ನು ಮಹಾತ್ಮ ಗಾಂಧೀಜಿಯವರ ಸ್ಮಾರಕವಾಗಿ ರಚಿಸುವ ನಿರ್ಣಯವಾಗಿದೆ.

# ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ರಜತೋತ್ಸವ ಮತ್ತು ವಾರ್ಷಿಕ ಮಹಾಸಭೆ.

## ರಜತೋತ್ಸವ.

೧೯೨೫ ರಲ್ಲಿ ಸ್ಥಾಪನೆಯಾದ ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ರಜತೋತ್ಸವ ಮತ್ತು ವಾರ್ಷಿಕ ಮಹಾಸಭೆಗಳು ತಾ ೧೬ರಲ್ಲಿ ನಡೆದವು. ಪ್ರತಿವರ್ಷವೂ ಪ್ರಗತಿಪಥದಲ್ಲಿ ಮುನ್ನಡೆಯುತ್ತಾ ಬರುತ್ತಿರುವ ಸಹಕಾರ ಬ್ಯಾಂಕು ಮಡಿಕೇರಿಯಲ್ಲಿ ಭವ್ಯ ಕಟ್ಟಡವನ್ನು ಸುಮಾರ ೧೪ ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿದ್ದು ಈ ಕಟ್ಟಡದ ಉದ್ಘಾಟನಾ ಮಹೋತ್ಸವವೂ ಇದೇ ದಿನ ನಡೆಯಿತು. ತಾ. ೧೬ರ ಬೆಳಗ್ಗೆ ದೇಶದ ವಿವಿಧ ಕಡೆಗಳಿಂದ ಬಂದ ಸಹಕಾರಿ ಪ್ರತಿನಿಧಿಗಳೂ ಇತರರೂ ಸಾವಿರ ಸಂಖ್ಯೆಯಲ್ಲಿ ನೆರೆದಿದ್ದರು. ಮದರಾಸು ಸರಕಾರದ ಸಹಕಾರ ಇಲಾಖೆಯ ಮಾನ್ಯ ಮಂತ್ರಿ, ಕೆ. ಚಂದ್ರಮೌಳಿಯವರೂ, ಮದ್ರಾಸು ಕೇಂದ್ರ ಭೂಮಿ ಅಡಮಾನ ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ ಬಿ ವೆಂಕಟರತ್ನಂರವರೂ ಬಂದಿದ್ದರು

ಬೆಳಗ್ಗೆ ಹತ್ತುವರೆ ಗಂಟೆಗೆ ರಾಷ್ಟ್ರಧ್ವಜ ಮತ್ತು ಸಹಕಾರ ಧ್ವಜಗಳ ಆರೋಹಣ ಉತ್ಸವವನ್ನು ಕೊಡಗಿನ ನಿವೃತ್ತ ಚೀಫ್ ಕಮಿಷನರಾದ ಶ್ರೀ ಕೆ. ಚಂಗಪ್ಪನವರು ನಡೆಸಿದರು. ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಮಾನ್ಯ ಮಂತ್ರಿ, ಚಂದ್ರಮೌಳಿಯವರು ನಡೆಸಿದರು. ಅದೇ ಸಂದರ್ಭದಲ್ಲಿ ಸಹಕಾರ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ದುಡಿದ ಮಹನಿ[illegible] ಅನಾವರಣವನ್ನೂ ಮಾಡಲಾಯಿತು. ನಂತರ ಕಿಕ್ಕಿರಿದು ನೆರೆದಿದ್ದ ಜನಸಮೂಹವು ವಾದ್ಯಘೋಷಗಳೊಂದಿಗೆ ಜನಗೂಡಿ ಮೆರವಣಿಗೆ ಹೊರಟಿತು. ಈ ಮೆರವಣಿಗೆಯು ಮೀಟಿಂಗಿಗಾಗಿ ಏರ್ಪಡಿಸಿದ್ದ ಮಡಿಕೇರಿ ಹೈಸ್ಕೂಲು ವಿದ್ಯಾರ್ಥಿ ನಿವಾಸಗೃಹಕ್ಕೆ ಬಂದಿತು. ಎಲ್ಲರೂ ಆಸೀನರಾದ ಮೇಲೆ ಕಾರ್ಯಕ್ರಮವು ಪ್ರಾರ್ಥನೆಯಿಂದ ಪ್ರಾರಂಭವಾಯಿತ. ಬ್ಯಾಂಕಿನ ಬೆಳ್ಳಿಯ ಮಹೋತ್ಸವದ ಈ ಸಮಾರಂಭಕ್ಕೆ ಕೊಡಗಿನ ಚೀಫ್ ಕಮಿಷನರಾದ ಲೆ. ಕ. ದಯಾಸಿಂಗ್ ಬೇಡಿಯವರು ಅಧ್ಯಕ್ಷರಾಗಿದ್ದರು. ಸ್ವಾಗತ ಗೀತೆಯ ನಂತರ ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ. ಕೆ. ಪಿ ಅಪ್ಪಯ್ಯನವರು ಬ್ಯಾಂಕು ಈ ಕಳೆದ ಕಾಲುಶತಮಾನದಲ್ಲಿ ಯಾವ ರೀತಿ ಮುಂದುವರಿಯುತ್ತಾ ಬಂದಿದೆ, ಯಾವ ಯಾವ ಕೆಲಸ ಕಾರ್ಯಗಳನ್ನು ಸಾಧಿಸಿದೆ, ಎಷ್ಟರ ಮಟ್ಟಿಗೆ ಕೊಡಗಿನ ಸಹಕಾರ ಚಳವಳವು ಬೆಳೆದು ಹಬ್ಬಲು ದುಡಿದಿದೆಯೆಂಬುದನ್ನು ವಿವರಿಸಿ ಬ್ಯಾಂಕಿನ ಹೊಸ ಕಟ್ಟಡದ ವಿಚಾರ ಮಾಹಿತಿಯನ್ನು ಕೊಟ್ಟರು. ಮಾನ್ಯ ಮಂತ್ರಿ ಕೆ ಚಂದ್ರಮೌಳಿಯವರು ಬ್ಯಾಂಕಿನ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಈ ೨೫ ವರ್ಷಗಳ ಅಧಿಕ ಎಡರು ತೊಡರುಗಳಲ್ಲಿಯೂ ತನ್ನ ಪ್ರಗತಿಯನ್ನು ಸಾಧಿಸಿಕೊಂಡು ತನ್ನ ರಜತೋತ್ಸವವನ್ನು ಜರುಗಿಸಿದ ಮಹಾ ಕಾರ್ಯಕ್ಕೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿ ಬ್ಯಾಂಕಿನ ಸರ್ವಾಂಗೀಣ ಉನ್ನತಿಯನ್ನು ಬಯಸಿದರು. ಅಧ್ಯಕ್ಷರಿಂದ ಲೆ. ಕ. ದಯಾಸಿಂಗ್ ಬೇಡಿಯವರು ತಮ್ಮ ಅಧ್ಯಕ್ಷ ಭಾಷಣವನ್ನು ಮಾಡುತ್ತಾ ಪ್ರಾಂತೀಕ ಸಹಕಾರಿ ಬ್ಯಾಂಕು ಯಾವ ರೀತಿ ಕೊಡಗಿನ ಸಹಕಾರ ಚಳವಳವನ್ನು ಪೋಷಿಸಿ, ಯೋಗ್ಯ ಮಾರ್ಗದಲ್ಲಿ ನಡೆಸುತ್ತಿದೆಯೆಂಬುದನ್ನು ವಿವರಿಸಿದರು. ನೂತನ ಕಟ್ಟಡವನ್ನು ಕಟ್ಟಿ ಭದ್ರ ತಳಹದಿಯಲ್ಲಿ ನಿಂತಿರುವ ಬ್ಯಾಂಕು ಇನ್ನೂ ಸಾರೋದ್ಧಾರವಾಗಿ ಕೊಡಗಿನ ಸಹಕಾರಿಗಳ ಸೇವೆಯನ್ನು ಮಾಡುವುದೆಂದು ಆಶಿಸಿದರು. ಮಾನ್ಯ ಮಂತ್ರಿಗಳ ಮತ್ತು ಅಧ್ಯಕ್ಷರ ಇಂಗ್ಲಿಷ್ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಯಿತು. ನಂತರ ನೆರೆದವರಿಗೆ ಶ್ರೀ ಪಿ ಐ ಬೆಳ್ಯಪ್ಪನವರು ವಂದನೆಗಳನ್ನರ್ಪಿಸಿದರು. ಪುಷ್ಪ ತಾಂಬೂಲ ವಿತರಣೆಯಾದನಂತರ ಸಮಾರಂಭವು ಸಮಾಪ್ತಿಗೊಂಡಿತು.

## ಮಹಾ ಸಭೆ.

ಮಧ್ಯಾಹ್ನದ ವೇಳೆ ೩ ಗಂಟೆಗೆ ಬ್ಯಾಂಕಿನ ಮಹಾ ಸಭೆಯು ಪ್ರೆಸಿಡೆಂಟರಾದ ಶ್ರೀ ಕೆ. ಪಿ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆಯ ನಂತರ ಮೃತಪಟ್ಟ ಬ್ಯಾಂಕಿನ ಮೆಂಬರುಗಳ ಬಗ್ಗೆ ಸಂತಾಪ ವ್ಯಕ್ತ ಮಾಡಲಾಯಿತ. ಅಧ್ಯಕ್ಷರು ಸಂಕ್ಷೇಪವಾದ ನಾಲ್ಕು ಮಾತುಗಳನ್ನಾಡಿದರು. ಕಳೆದ ಮಹಾ ಸಭೆಯ ನಡವಳಿಕೆಯನ್ನು ಓದಿ ಅಂಗೀಕರಿಸಲಾಯಿತು.

ಆಡಿಟ್ ವರದಿಯನ್ನೂ ಡೈರೆಕ್ಟರುಗಳ ವರದಿಯನ್ನೂ ಓದಿ ಒಪ್ಪಲಾಯಿತು. ನಂತರ ಡೈರೆಕ್ಟರ ಚುನಾವಣೆಯು ನಡೆಯಿತು. ಬಿ ಮೆಂಬರುಗಳ ಪರ ಶ್ರೀಗಳಾದ ಕೆ ಪಿ. ಅಪ್ಪಯ್ಯ, ಐ ಸಿ ಕಾರ್ಯಪ್ಪ, ಸಿ ಎಸ್. ನಂಜಪ್ಪ, ಎಸ್. ಎನ್ ರಾಮಶೆಟ್ಟಿ ಮತ್ತು ಪಿ. ಎಂ. ಪೊನ್ನಪ್ಪ ಇವರುಗಳೂ ಸಂಘಗಳ ಪರ ಶ್ರೀಗಳಾದ ಎ ಎಸ್. ಪೊನ್ನಪ್ಪ, ಎಚ್. ಎಂ ಸುಬ್ಬಣ್ಣ, ಎಚ್ ಟಿ. ಮುತ್ತಣ್ಣ, ಪಿ ಐ ಬೆಳ್ಯಪ್ಪ, ಎಂ ಎಸ್. ಸೋಮಯ್ಯ, ಬಿ ಪಿ ಬೆ[illegible], ಪಿ ಎ. ಐಯ್ಯಪ್ಪ, ಕೆ. ಎಂ ಪೊನ್ನಪ್ಪ, ಪಿ. ಜಿ. ಮುದ್ದಪ್ಪಯ್ಯ ಮತ್ತು ಬಿ ಪಿ ಮಾಚಯ್ಯ ಇವರುಗಳೂ ಅವಿರೋಧವಾಗಿ ಆರಿಸಲ್ಪಟ್ಟರು.

1950-51ರ ಬಜೆಟ್ಟು ಮಂಜೂರು ಮಾಡಲಾಯಿತು. ಊಟ ಉಪಚಾರದ ಖರ್ಚು ರೂ. 800ನ್ನು ಒಪ್ಪಲಾಯಿತು. ಬ್ಯಾಂಕಿನಿಂದ ಯೂನಿಯನ್‌ಗಳಿಗೆ ಕೊಡುವ ವಂತಿಗೆಯನ್ನು ಪ್ರತಿ ಸಂಘ ಒಂದರ ರೂ. 4|-ರ ಬದಲು ರೂ. 5|-ಕ್ಕೆ ಏರಿಸಬೇಕೆಂಬ ಶ್ರೀ. ಕೆ. ಎಂ. ಪೊನ್ನಪ್ಪನವರ ಠರಾವು ಪಾಸಾಯಿತು. ನಂತರ ವಂದನಾರ್ಪಣೆಯಿಂದ ಸಾಯಂಕಾಲ ಐದು ಗಂಟೆಗೆ ಸಭೆಯು ಮುಕ್ತಾಯವಾಯಿತು. ರಾತ್ರಿ ಎಂಟು ಗಂಟೆಗೆ ಬಲಮುರಿ ಸಹಕಾರ ಸಂಘದ ಸದಸ್ಯರು ಬಳಕಾಟ ಪ್ರದರ್ಶನ ಮಾಡಿದರು.

## ಪರಿಷತ್ತು.

ತಾರೀಕು ೧೭ನೇ ಬುಧವಾರ ೧೧ನೇ ಅಖಿಲ ಕೊಡಗು ಸಹಕಾರಿ ಪರಿಷತ್ತು ಹೈಸ್ಕೂಲು ಆವರಣದಲ್ಲಿ ಸೇರಿತ್ತು. ಸುಮಾರು ಸಾವಿರ ಪ್ರತಿನಿಧಿಗಳು ಹಾಜರಿದ್ದರು 'ಜನಗಣಮನ' ಪ್ರಾರ್ಥನೆಯಿಂದ ಕಾರ್ಯಕ್ರಮವು ಪ್ರಾರಂಭವಾಯಿತ. ಸ್ವಾಗತಗೀತೆಯು ಹಾಡಲ್ಪಟ್ಟ ನಂತರ ಶ್ರೀ. ಪಿ ಐ ಬೆಳ್ಯಪ್ಪನವರು ಸ್ವಾಗತ ಭಾಷಣವನ್ನು ಮಾಡಿದರು. ಮದ್ರಾಸಿನ ಸಹಕಾರ ಮಂತ್ರಿ ಶ್ರೀ ಚಂದ್ರಮೌಳಿಯವರು ಸಮ್ಮೇಳನದ ಉದ್ಘಾಟನೆಯನ್ನು ಮಾಡಿದರು. (ಅವರ ಭಾಷಣದ ಸಾರವನ್ನು ಬೇರೆಡೆ ಕೊಡಲಾಗಿದೆ) ಉದ್ಘಾಟನೆಯ ನಂತರ ಶ್ರೀ. ಬಿ. ವೆಂಕಟರತ್ನಂರವರು ತಮ್ಮ ಅಧ್ಯಕ್ಷ ಭಾಷಣವನ್ನು ಮಾಡಿದರು. (ಇದರ ಸಾರಾಂಶವನ್ನು ಬೇರೆಡೆ ಕೊಡಲಾಗಿದೆ.)

ಹಿಂದಿನ ಸಮ್ಮೇಳನದ ನಡವಳಿಕೆಯನ್ನೂ ಪಾಸಾದ ಠರಾವುಗಳ ಮೇಲೆ ಸರಕಾರದ ಉತ್ತರವನ್ನೂ ಸಭೆಯ ಮುಂದಿಡಲಾಯಿತು ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ ಕೆ ಪಿ ಅಪ್ಪಯ್ಯನವರು ಪರಿಷತ್ತಿನ ಸಂಬಂಧ ಏರ್ಪಡಿಸಿದ ಪ್ರದರ್ಶನಗಳ ಉಪಯೋಗವನ್ನು ಪಡೆಕೊಳ್ಳಬೇಕೆಂದು ನೆರೆದವರಿಗೆ ಅಪೀಲು ಮಾಡಿದರು. ಉತ್ತಮ ಕೆಲಸ ಮಾಡಿದ ಸಂಘಗಳಿಗೂ ಗ[illegible]ಗೂ ಬಹುಮಾನವನ್ನು ಕೊಡಗಿನ ಚೀಫ್ ಕಮಿಷನರ ಪತ್ನಿಯವರಾದ ಶ್ರೀಮತಿ ಬೇಡಿಯವರು ಕೊಟ್ಟರು. ನಂತರ ಠರಾವುಗಳ ಚರ್ಚೆಯಾಯಿತು. ೧೫ ಠರಾವುಗಳು ಚರ್ಚಿಸಲ್ಪಟ್ಟವು. ಕೊನೆಯಲ್ಲಿ ಅಧ್ಯಕ್ಷರ ಸೂಚನೆಯಂತೆ ದೀರ್ಘ ಮಿಯಾದಿಯ ಸಾಲ ಕೊಡಲು ಅನುವಾಗಿ ಹೆಚ್ಚು ಬೆಳೆಯುವ ಯೋಜನೆಗೆ ಸಹಾಯಕವಾಗುವಂತೆ ಸುಲಭ ಬಡ್ಡಿಯ ಹಣ ಒದಗಿಸಲು ಕೇಂದ್ರ ವ್ಯವಸಾಯ ಆರ್ಥಿಕ ಸಂಸ್ಥೆಯೊಂದನ್ನು ಕೇಂದ್ರ ಸರಕಾರವು ಪ್ರಾರಂಭಿಸಬೇಕೆಂಬ ಠರಾವನ್ನು ಶ್ರೀ. ಸಿ. ಐ ಬೆಳ್ಯಪ್ಪನವರು ಸೂಚಿಸಿ ಠರಾವು ಪಾಸಾಯಿತು. ಪ್ರದರ್ಶನದಲ್ಲಿಯ ಉತ್ತಮ ವಸ್ತುಗಳಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು. ಕೊಡಗು ವ್ಯವಸಾಯ ಇಲಾಖಾಧಿಕಾರಿಗಳು ಹೆಚ್ಚು ಬೆಳೆ ಬೆಳೆಯುವ ಅವಶ್ಯಕತೆ, ಅದಕ್ಕೆ ವ್ಯವಸಾಯ ಇಲಾಖೆಯು ಕೊಡಬಹುದಾದ ಸಹಾಯಗಳನ್ನು ಕುರಿತು ಭಾಷಣ ಮಾಡಿದರು. ಅಧ್ಯಕ್ಷರ ಅಂತಿಮ ಭಾಷಣದ ನಂತರ ವಂದನಾರ್ಪಣೆಯಿಂದ ಸಮ್ಮೇಳನವು ಅಂತ್ಯಗೊಂಡಿತು.

---

## ಕೃತಜ್ಞತಾ ವಂದನೆಗಳು.

ನಮ್ಮ ಸೋದರಳಿಯ ಕುಟ್ಟೇಟಿರ ದೇವಯ್ಯನ ಅಕಾಲ ಮರಣದ ದುಃಖದಲ್ಲಿ ಭಾಗಿಗಳಾಗಿ ನಮಗೂ ಅವನ ಅಕ್ಕತಂಗಿಯರಿಗೂ ಅನೇಕ ಬಂಧುಮಿತ್ರರು ಖುದ್ದಾಗಿ ಬಂದೂ, ಕಾಗದ ಮೂಲಕ ಬರೆದೂ ತಮ್ಮ ಸಂತಾಪವನ್ನು ವ್ಯಕ್ತಮಾಡಿದ್ದಾರೆ. ಅವರೆಲ್ಲರಿಗೂ ಪ್ರತ್ಯೇಕ ಬರೆಯಲು ಅಸಾಧ್ಯವಾದ್ದರಿಂದ ಈ ಮೂಲಕ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಪಾಂಡಂಡ ಚೆಂಗಪ್ಪ,
ಪಾಂಡಂಡ ಸಂಜಪ್ಪ
ಮತ್ತು
ಕುಟ್ಟೇಟಿರ ಸಹೋದರಿಯರು.

---




ಭಾರತದ ಉಪ ಮುಖ್ಯ ಮಂತ್ರಿ ಸರದಾರ್ ವಲ್ಲಭಭಾಯಿ ಪಟೇಲರು ಇದೇ ೧೩ನೇ ತಾರೀಕಿನ ದಿನ ತಿರುವಾಂಕೂರು ಕೊಚ್ಚಿನ್ ಒಕ್ಕೂಟಕ್ಕೆ ಭೇಟಿ ಇತ್ತು ಅಲ್ಲಿ ಐದು ದಿನ ಇದ್ದರು. ಸರದಾರ್ ಪಟೇಲರು ೧೩ನೆಯ ದಿನಾಂಕ ಎರ್ನಾಕ್ಯುಲಂನಲ್ಲೂ ೧೪ನೆಯ ದಿನಾಂಕ ತ್ರಿವೇಂದ್ರಂನಲ್ಲಿಯೂ ಭಾಷಣ ಮಾಡಿದರು.

ಮಸೀದಿಯೊಂದರ ಬಳಿ ರಾಮಾಯಣ ಕಥೆಯ ವಾಚನಕ್ಕಾಗಿ ಹಿಂದೂಗಳು ಮತ್ತು ಮುಸ್ಲಿಮರು ಹೊರಡಿಸಿದ ಜಂಟಿ ಕೋರಿಕೆಯೊಂದನ್ನು ಅಯೋಧ್ಯೆಯ ಜಿಲ್ಲಾ ಮ್ಯಾಜಿಸ್ಟ್ರೇಟರು ತಿರಸ್ಕರಿಸಿದರು.

# ಇಂಡಿಯಾ ಸರಕಾರದ ಲೇಬರ್ ಇಲಾಖೆ.

### ರಿಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟಿನ ರೀಜನಲ್ ಡೈರೆಕ್ಟರೇಟ್ ಮದ್ರಾಸು.

ಇಂಡಿಯಾ ಸರಕಾರದ ಲೇಬರ್ ಇಲಾಖೆಯು (ರೀ ಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯ್‌ಮೆಂಟ್ ಡೈರೆಕ್ಟರ್ ಜನರಲ್) ಮಾಜಿಯೋಧರಲ್ಲದ ಬೇರೆ ಪ್ರೌಢ ನಾಗರೀಕರಿಗೆ ಕಲಾತ್ಮಕ ಮತ್ತು ಔದ್ಯೋಗಿಕ ತರಬೇತು ಕೊಡುವ ಯೋಜನೆಯಂತೆ ಅಂಥಾ ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಯೋಜನೆಯಂತೆ ಎರಡು ವಿಧದ ತರಬೇತು ದೊರೆಯುವ ಅನುವಿದೆ. (1) ಇಂಜನೀಯರಿಂಗ್ ಮತ್ತು ಕಟ್ಟೋಣ ಉದ್ಯಮಗಳ ಕಲಾ ತರಬೇತು. (2) ಕೈ ಕಸಬುಗಳಲ್ಲಿ ಔದ್ಯೋಗಿಕ ತರಬೇತು. ಕಲಾ ತರಬೇತಿನ ಅವಧಿಯು ಎರಡು ವರ್ಷಗಳ ವರೆಗಿದ್ದು ಅವುಗಳಲ್ಲಿ ಹದಿನೆಂಟು ತಿಂಗಳು ತರಬೇತು ಕೇಂದ್ರದಲ್ಲೂ, ಉಳಿಯುವ ಆರು ತಿಂಗಳು ಔದ್ಯೋಗಿಕ ಸಂಸ್ಥೆಗಳಲ್ಲಿ ಯಾ ಕೇಂದ್ರದಲ್ಲಿ ಇವೆರಡರಲ್ಲಿ ಯಾವುದು ಅನುಕೂಲವೋ ಅಲ್ಲಿ ಪ್ರತ್ಯಕ್ಷ ಕೆಲಸದ ತರಬೇತು ಕೊಡಲಾಗುವುದು. ಕೈ ಕಸಬುಗಳ ತರಬೇತಿನ ಅವಧಿಯು ಪರಿಮಿತಿಯು ಹನ್ನೆರಡು ತಿಂಗಳುಗಳು. ಈ ಕೆಳಗಿನ ಔದ್ಯೋಗಿಕ ಮತ್ತು ಕಲಾತ್ಮಕ ವಿಷಯಗಳಲ್ಲಿ ವೀರರಾಜಪೇಟೆ ಸರಕಾರಿ ತರಬೇತು ಕೇಂದ್ರದಲ್ಲಿ ತರಬೇತು ಕೊಡಲ್ಪಡುವುದು. ಬಡಗಿ ಕೆಲಸ, ಮರಗೆಲಸ ಮೆಕಾನಿಕ್ (ಜನರಲ್) ದರ್ಜಿ ಕೆಲಸ, ಚಿತ್ರದ ಮತ್ತು ಹೆಣಿಗೆ ಕೆಲಸ ಮತ್ತು ಶೀಘ್ರಲಿಪಿ.

2. ಪ್ರವೇಶಕ್ಕೆ ಯೋಗ್ಯತೆಗಳು:—ಉಮೇದ್ವಾರರು 18ರಿಂದ 25 ವಯಸ್ಸಿನೊಳಗಿದ್ದು ಮೆಟ್ರಿಕ್ಯುಲೇಶನ್ ಕೆಳಗಿನ ಎರಡು ತರಗತಿಗಳ ವರೆಗೆ ಓದಿದವರಾಗಿರಬೇಕು. ಸರ್ವೆಯರ್, ಡ್ರಾಫ್ಟ್ ಮೆನ್, ಇನ್‌ಸ್ಟ್ರುಮೆಂಟ್ ಮೆಕಾನಿಕ್, ರೇಡಿಯೋ ಸರ್ವಿಸರು ಮತ್ತು ಶೀಘ್ರಲಿಪಿ ತರಬೇತು ಇವುಗಳಿಗೆ ಮೆಟ್ರಿಕ್ಯುಲೇಶನ್—ಯಾ—ಅದಕ್ಕೆ ಸಮಾನದ ಕನಿಷ್ಠದ ವಿದ್ಯಾಭ್ಯಾಸದ ಯೋಗ್ಯತೆ ಇರಬೇಕು.

3. ಶರತುಗಳು:—ತರಬೇತು ಕೇಂದ್ರವನ್ನು ಸೇರಿದನಂತರ ಆರಿಸಲ್ಪಟ್ಟ ಉಮೇದ್ವಾರರು ಈ ಕೇಂದ್ರದ ಶಿಸ್ತಿಗೆ ಒಳಗಾಗುವ ಶರತಿಗೆ ಒಪ್ಪತಕ್ಕದ್ದು. ಅವರ ಜವಾಬ್ದಾರಿಯಲ್ಲಿ ಕೊಡಲ್ಪಡುವ ಸಾಮಾನು ಸಾಹಿತ್ಯಗಳನ್ನು ಎಚ್ಚರಿಕೆಯಲ್ಲಿಟ್ಟು ಮುಖ್ಯವಿದಲ್ಲದ ತರಬೇತು ಅವಧಿಯು ಮುಗಿಯುವ ವರೆಗೆ ಬಿಟ್ಟು ಹೋಗಕೂಡದು. ಈ ಒಪ್ಪಂದದ ಶರತುಗಳನ್ನು ಪಾಲಿಸಲು ಅವರು ತಪ್ಪಿದರೆ ಅವರ ತರಬೇತಿಗೆ ತಗಲಿದ ಪೂರ್ತಿ ಖರ್ಚನ್ನು—ಯಾ—ಸರಕಾರಕ್ಕೆ ಉಚಿತ ತೋರತಕ್ಕದ್ದನ್ನು ವಸೂಲು ಮಾಡಲು ಸರಕಾರಕ್ಕೆ ಹಕ್ಕಿರುವುದು.

4. ತರಬೇತಿನ ಸಮಯದಲ್ಲಿ ಸವಲತ್ತುಗಳು:—ತರಬೇತು ಮುಕ್ತವಾಗಿ ಕೊಡಲ್ಪಡುವುದು. ತರಬೇತು ಪಡೆಯುವವರಲ್ಲಿ ಶೇಕಡ 50ರಷ್ಟು ತರಬೇತುದಾರರಿಗೆ ತಿಂಗಳಿಗೆ ಪ್ರತಿಯೊಬ್ಬರಿಗೆ ರೂ. 25/—ರ ವೇತನ ಕೊಡಲ್ಪಡುವುದು. ಇತರ ಜೊತೆಗೆ ಮುಪ್ಪತ್ತು ವಸತಿಯು ಅನುಕೂಲ, ಎಲ್ಲಿ ಸಾಧ್ಯವೋ ಅಲ್ಲಿ ಆಟ ವಿಹಾರ ಮತ್ತು ವೈದ್ಯಕೀಯ ಉಪಚಾರದ ಅನುಕೂಲತೆ ಒದಗಿಸಲಾಗುವುದು. ಕೆಲಸದ ಸಮಯಕ್ಕೆ ಹಾಕುವ ಬಟ್ಟೆಯನ್ನು ಯಂತ್ರದ ಹತ್ತಿರ ಕೆಲಸ ಮಾಡಬೇಕಾದವರಿಗೆ ಒದಗಿಸಲಾಗುವುದು. ಯಾವುದೇ ಕೈಗಾರಿಕ ಸಂಸ್ಥೆಯಲ್ಲಿ ತರಬೇತಾಗುವ ಸಮಯದಲ್ಲಿ ಸಾಧಾರಣವಾಗಿ ವಿದ್ಯಾರ್ಥಿ ವೇತನವು ಕೊಡಲ್ಪಡದಿದ್ದರೂ ಸರಕಾರವು ವಿಶೇಷ ಸಂದರ್ಭಗಳಲ್ಲಿ ತರಬೇತಿಗೆ ಚಿಕ್ಕ ಭತ್ಯವನ್ನು ಕೊಡುವ ಏರ್ಪಾಡು ಮಾಡಲಾಗುವುದು.

5. ನಿಶ್ಚಿತ ಅರ್ಜಿ ಫಾರಂಗಳು ಮತ್ತು ವಿವರಗಳು ಮಡಿಕೇರಿ ಜಿಲ್ಲಾ ಎಂಪ್ಲಾಯಿಮೆಂಟ್ ಆಫೀಸರಲ್ಲಿ ತಾ. 29-5-50ರಲ್ಲಿಯೂ ಅದಕ್ಕೆ ಮೊದಲೂ ದೊರೆಯುವವು. ಇವುಗಳಿಗಾಗಿ ಬರೆಯುವವರು ಸ್ಟಾಂಪು ಹಚ್ಚಿದ ತಮ್ಮ ಅಡ್ರಸ್ ಬರೆದ ಲಕೋಟೆಗಳನ್ನು ಜೊತೆಯಲ್ಲಿ ಕಳುಹಿಸಬೇಕು. ಪೂರ್ತಿ ತುಂಬಿಸಿದ ಅರ್ಜಿ ಫಾರಂಗಳನ್ನು ಜಿಲ್ಲಾ ಎಂಪ್ಲಾಯ್‌ಮೆಂಟ್ ಆಫೀಸರ್, ಮಡಿಕೇರಿ ಇವರಿಗೆ ತಾರೀಕು 4-6-50ರೊಳಗಾಗಿ ತಲಪುವಂತೆ ಕಳುಹಿಸಬೇಕು. ಪ್ರತ್ಯಕ್ಷ ಸಂದರ್ಶನಕ್ಕೆ ಕರೆಯಲ್ಪಟ್ಟ ಉಮೇದ್ವಾರರು ತಮ್ಮ ಖರ್ಚಿನಿಂದಲೇ ಬರಬೇಕು.

ತಡವಾಗಿ ಅರ್ಜಿ ಕೊಟ್ಟ ಏಪ್ರಿಲ್ ಸಂದರ್ಶನೆಗೆ ಕರೆಯಲ್ಪಡದವರು ಪುನಃ ಅರ್ಜಿ ಮಾಡಬೇಕಾಗಿಲ್ಲ. ಅವರ ಅರ್ಜಿಗಳನ್ನು ಈಗ ಪರ್ಯಾಲೋಚಿಸಲಾಗುವುದು.

**ರೀ ಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟಿನ ರೀಜನಲ್ ಡೈರೆಕ್ಟರು, ಮದರಾಸು.**

## ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ.

### ಪ್ರಕಟಣೆ.

### ಪ್ರಾಥಮಿಕ ಕಾಂಗ್ರೆಸ್ ಪಂಚಾಯಿತಿ ಚುನಾವಣೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ತಾ. 6-5-50ರ ನಂ. 42ನೇ ಸರ್ಕ್ಯುಲಾರ್ ಪ್ರಕಾರ, ಕರ್ನಾಟಕ ಪ್ರಾಂ. ಕಾಂ. ಕಮಿಟಿಯು ಹೊರಡಿಸಿದ ತಾ. 11-5-50ರ ಸರ್ಕ್ಯುಲಾರ್ ಮೇರೆ ಕೊಡಗಿನಲ್ಲಿ ಪ್ರಾಥಮಿಕ ಕಾಂಗ್ರೆಸ್ ಪಂಚಾಯಿತಿ ಚುನಾವಣೆಗಳ ಕಾರ್ಯಕ್ರಮ ಪಟ್ಟಿಯನ್ನು ಮತ್ತು ಇತರ ಮಾಹಿತಿಗಳನ್ನು ಸಕಲರ ತಿಳುವಳಿಕೆ ಬಗ್ಗೆ ಈ ಕೆಳಗೆ ಕೊಡಲಾಗಿದೆ.

ಉತ್ತರ ಕೊಡಗು ತಾಲೋಕಿಗೆ ಒಳಪಟ್ಟ ಸೆಂಟರುಗಳ ಚುನಾವಣೆಯ ಸಂಬಂಧ ರಿಟರ್ನಿಂಗ್ ಆಫೀಸರು—ಶ್ರೀ. ಎ. ಎಸ್. ಚಿಣ್ಣಪ್ಪನವರು [illegible] ಪ್ರೆಸ್ ಮಡಿಕೇರಿ.

ದಕ್ಷಿಣ ಕೊಡಗು ತಾಲೋಕಿಗೆ ಒಳಪಟ್ಟ ಸೆಂಟರುಗಳ ಚುನಾವಣೆಯ ಸಂಬಂಧ ರಿಟರ್ನಿಂಗ್ ಆಫೀಸರು ಶ್ರೀ ಎನ್. ಸೋಮಣ್ಣನವರು ಹಳೇ ಸಾರ್ವಜನಿಕ ವಾಚನಾಲಯ, ಪೊನ್ನಂಪೇಟೆ

ಈ ಆಫೀಸರುಗಳ ಸಮಕ್ಷಮದಲ್ಲಿ ಚುನಾವಣೆಗೆ ನಿಲ್ಲಬಯಸುವ ಉಮೇದುವಾರರುಗಳು ನಾಮಪತ್ರಗಳನ್ನು ಖುದ್ದಾಗಿಯಾಗಲೀ ಅಥವಾ ಅವರ ಸೂಚಕ ಯಾ ಅನುಮೋದಕರ ಮೂಲಕವಾಗಲೀ ತಾ. 19-5-50ನೇ ದಿವಸ ಬೆಳಗ್ಗೆ ಗಂಟೆ 9ರಿಂದ 12ರ ವರೆಗೂ ಮತ್ತು ಅಪರಾಹ್ನ ಗಂಟೆ 3ರಿಂದ 6ರ ವರೆಗೂ ರೂ. 2-0-0 ಚುನಾವಣೆ ಫೀಯೊಂದಿಗೆ ಹಾಜರು ಪಡಿಸತಕ್ಕದ್ದು.

**ಕಾರ್ಯಕ್ರಮ ಪಟ್ಟಿ.**

19-5-50 ರಿಟರ್ನಿಂಗ್ ಆಫೀಸರರು ಬೆಳಗ್ಗೆ 9ರಿಂದ 12 ಗಂಟೆ ಮತ್ತು ಅಪರಾಹ್ನ 3ರಿಂದ 6 ಗಂಟೆವರೆಗೆ ನಾಮಪತ್ರಗಳನ್ನು ಸ್ವೀಕರಿಸುವುದು

(**ಸೂಚನೆ:**—ನಾಮಪತ್ರಗಳನ್ನು ದಾಖಲೆ ಮಾಡಿದ 3 ದಿನಗಳೊಳಗೆ ಉಮೇದುವಾರರು ಅಪೇಕ್ಷಿಸಿದಲ್ಲಿ ಅವರ ನಾಮಪತ್ರಗಳನ್ನು ವಾಪಾಸು ತೆಗೆದು ಕೊಳ್ಳಬಹುದು.)

ತಾ. 20-5-50 ರಿಟರ್ನಿಂಗ್ ಆಫೀಸರರು ಹಗಲು 12ರಿಂದ 3 ಗಂಟೆವರೆಗೆ ನಾಮಪತ್ರಗಳನ್ನು ಪರಿಶೀಲಿಸಿ ನ್ಯಾಯಬದ್ಧ ನಾಮಪತ್ರಗಳನ್ನು ಗೊತ್ತುಮಾಡಿ ಪ್ರಸಿದ್ಧಿಸುವುದು ಮತ್ತು ರಿಟರ್ನಿಂಗ್ ಆಫೀಸರರು ಪೋಲಿಂಗ್ ಆಫೀಸರುಗಳ ಪಟ್ಟಿಯನ್ನು ನಿಶ್ಚಯಿಸುವುದು ಮತ್ತು ಆಯಾಯ ಸೆಂಟರುಗಳ ಚುನಾವಣೆಯ ದಿನ ಮತ್ತು ವೇಳೆಯನ್ನು ನಿರ್ಧರಿಸುವುದು.

ತಾ. 27-5-50ರಿಂದ 31-5-50ರ ವರೆಗೆ ಪ್ರಾಥಮಿಕ ಕಾಂಗ್ರೆಸ್ ಪಂಚಾಯಿತಿ ಚುನಾವಣೆಗಳು.

(ವಿ. ಸೂ. ಈ ಸಂಬಂಧ ಬೇಕಾದ ಹೆಚ್ಚಿನ ಮಾಹಿತಿಗಳನ್ನು, ನಾಮಪತ್ರಗಳ ಫಾರಂಗಳನ್ನು ಮೇಲ್ಕಂಡ ರಿಟರ್ನಿಂಗ್ ಆಫೀಸರುಗಳಿಂದ ಪಡಕೊಳ್ಳಬಹುದು. ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸರ್ಕ್ಯುಲಾರ್ ತಾ. 15-5-50ರಲ್ಲಿ ಹಸ್ತಗತವಾದ ಕಾರಣ ಈ ಮೊದಲೇ ಪ್ರಕಟಣೆ ಹೊರಡಿಸಲು ಸಾಧ್ಯವಾಗಲಿಲ್ಲ)

ಪೊನ್ನಂಪೇಟೆ ಕೆ. ಸಿ. ಕರುಂಬಯ್ಯ,
15-5-50 ಅಧ್ಯಕ್ಷರು ಕೊ. ಜಿ. ಕಾ. ಕಮಿಟಿ.

## ವಾರ್ತೆಗಳು.

ಇಡೀ ದೇಶದಲ್ಲೆಲ್ಲ ಒಂದೇ ವಿಧವಾದ ಮಾಧ್ಯಮಿಕ ಶಿಕ್ಷಣವನ್ನೀಯುವ ಯೋಜನೆಯೊಂದನ್ನು ಸೂಚಿಸಲು ಭಾರತ ಸರಕಾರ ಸದ್ಯದಲ್ಲೇ ಒಂದು ಸಮಿತಿಯನ್ನು ನೇಮಿಸಲಿದೆಯೆಂದು ತಿಳಿದಿದೆ. ಸಮಿತಿಯ ಸದಸ್ಯರ ಹೆಸರುಗಳನ್ನು ನಿಶ್ಚಿತವಾಗಿರದ್ದರೂ ದೇಶದ ಪ್ರಮುಖ ಶಿಕ್ಷಣ ತಜ್ಞರು ಹಾಗೂ ಶಿಕ್ಷಣದಲ್ಲಿ ಆಸ್ಥೆಯುಳ್ಳ ಸಾಮಾಜಿಕ ಧುರೀಣರು ಸಮಿತಿಯಲ್ಲಿರಬಹುದೆಂದು ಗೊತ್ತಾಗಿದೆ

ಕೇಂದ್ರ ಮಂತ್ರಿಮಂಡಳಕ್ಕೆ ಶ್ರೀ. ಜಯರಾಮದಾಸ್ ದೌಲತ್‌ರಾಮರ ಬದಲು ಅಸ್ಸಾಮಿನ ಗವರ್ನರರಾಗಿದ್ದ ಶ್ರೀ. ಪ್ರಕಾಶಂರವರನ್ನು ನೇಮಿಸಿ ಶ್ರೀ. ದೌಲತ್‌ರಾಮ್‌ರವರನ್ನು ಅಸ್ಸಾಮಿನ ಗವರ್ನರರಾಗಿ ಮಾಡಲಾಗಿದೆ. ಶ್ರೀ ಸಿ. ರಾಜಗೋಪಾಲಾಚಾರಿಯರನ್ನು ಕೇಂದ್ರದಲ್ಲಿ ಮತ್ತೊಮ್ಮೆ ಮಂತ್ರಿಯಾಗಿ ಆರಿಸಲಾಗಿದೆ

ಗಯಾದಲ್ಲಿ ಜಾತೀಯ ಬೇಧವಿಲ್ಲದೆ ಎಲ್ಲರಿಗೂ ತಮ್ಮ ಇಚ್ಛೆಯಂತೆ ಪ್ರಾರ್ಥನೆ ಮಾಡಲು ಅನುಕೂಲವಾಗುವ ಒಂದು ದೊಡ್ಡ ಮಂದಿರ ರಚಿಸುವ ಬಗ್ಗೆ ಬಿಹಾರ್ ಸರಕಾರವು ೭೫೦೦೦ ರೂಪಾಯಿ ಮಂಜೂರು ಮಾಡಿರುವುದು. ಮಹಾತ್ಮಾ ಗಾಂಧಿಯವರ ಸ್ಮಾರಕವಾಗಿ ಈ ಮಂದಿರವನ್ನು ರಚಿಸಿ ಅದಕ್ಕೆ 'ಗಾಂಧಿ ಮಂಟಪ'ವೆಂದು ನಾಮಕರಣ ಮಾಡುವ ನಿರ್ಣಯವಾಗಿದೆ.

ಈಜಿಪ್ಟಿನ ವಿದ್ಯಾಮಂತ್ರಿಯಾದ ಡಾ. ತಾಹ ಹುಸೇನ್‌ರವರು ಪ್ಯಾರಿಸ್ಸಿನಲ್ಲಿ ನಡೆಯಲಿರುವ ಪ್ರಪಂಚ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಮುಂದಿನ ಅಧಿವೇಶನದಲ್ಲಿ ಭಾಗವಹಿಸುವರು. ಇವರು ಕುರುಡರು.

ಹಿಂದೂದೇಶದಲ್ಲಿ ಪ್ರಸ್ತುತ ಸಿಂಹಗಳು ವಾಸಿಸುವ ನೆಲೆಯೆಂದರೆ ಗಿರ್ ಅರಣ್ಯಗಳು. ಅಲ್ಲಿಯ ಸಿಂಹಗಳ [illegible]ಮಾರಿಯೊಂದನ್ನು ತೆಗೆಯಲು ರಾಜಕೋಟೆಯ ರಾಜಕುಮಾರ ಕಾಲೇಜಿನ ಪ್ರಿನ್ಸಿಪಾಲರು ನಿರ್ಣಯಿಸಿರುವರು.

ಮುಂಬರುವ ಕಾಂಗ್ರೆಸ್ ಅಧಿವೇಶನಕ್ಕಾಗಿ ಅಧ್ಯಕ್ಷರನ್ನಾರಿಸುವ ಕಾರ್ಯವು ಜುಲೈ ತಿಂಗಳ ಮೊದಲನೆಯ ವಾರದಲ್ಲಿ ನಡೆಯುವದು. ಕಾಂಗ್ರೆಸ್ ಅಧಿವೇಶನವು ನಾಶಿಕದಲ್ಲಿ ಜುಲೈ ತಿಂಗಳ ಕೊನೆಯ ವಾರದಲ್ಲಿ ಸೇರುವದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಕಾಲಾ ವೆಂಕಟರಾಯರು ತಿಳಿಸಿದ್ದಾರೆ.

ಕಳೆದ ವಾರ ಬಳ್ಳಾರಿಯಲ್ಲಿ ಬಿಸಿಲಿನ ತಾಪ ಬಡಿದು ಆರು ಮಂದಿ ಮಡಿದರು. ಅಲ್ಲಿ ಉಷ್ಣ ವೈಪರೀತ್ಯಕ್ಕೇರಿದೆ.

# ಸ್ತ್ರೀಯರ ಅಪರತ್ವ

## ಅಥವಾ

## "ಇನ್‌ಫೀರಿಯೂರಿಟಿ ಕಾಂಪ್ಲೆಕ್ಸ್"

ಲೇಖಕಿ:-ಶ್ರೀಮತಿ ಕಿಶೋರಿದೇವಿ,

ತಾಯಿಯ ಗರ್ಭಕೋಶದ ಬೆಚ್ಚಗಿನ ಕೋಣೆಯನ್ನು ಬಿಟ್ಟು ಬಟ್ಟ ಬಯಲಾದ ಭೂಮಿಗೆ ಬಿದ್ದೊಡನೆ ಶಿಶುವಿನ ಕಿವಿಗೆ ತಾಗಿ ಕೇಳಿಸಿದ ಆಗನ್ನು ಅಸ್ವಸ್ಥಗೊಳಿಸಿದ ಟಿಕ್ಕೆ ಪ್ರೇರಿಸಿದಂತೆ ಆಧುನಿಕ ಸ್ತ್ರೀ ಸ್ವಾತಂತ್ರ್ಯವು ಹೆಂಗಳೆಯರ ಮನೋರಾಜ್ಯವನ್ನು ಅಸ್ತವ್ಯಸ್ತಗೊಳಿಸಿದೆ. ಸ್ವಾತಂತ್ರ್ಯವೆಂದರೆ ಸಮಾನಾಧಿಕಾರ ಎಂಬುದು ಅರ್ಥ ಮಾಡಿ ಎಲ್ಲದರಲ್ಲೂ ಗಂಡಸರೊಡನೆ ಸೆಣಸಾಡಲು ನಿರ್ಧರಿಸಿದ ಸ್ತ್ರೀಯರು ಪ್ರವೃತ್ತರಾಗುತ್ತಿದ್ದಾರೆ. 'ಕುರಿಜನ್ಮದ ಸ್ವರಾಜ್ಯವೇ ಮೇಲು' ಎಂದು ದಿವಂಗತ ಮಹಾತ್ಮಾಜಿಯವರು ಹೇಳುತ್ತಿದ್ದಂತೆ ತಪ್ಪು ಮಾಡುವ ಸ್ವಾತಂತ್ರ್ಯವು ಕೂಡ ಎಲ್ಲ ಸ್ತ್ರೀ ಪುರುಷರಿಗೂ ಸಮಾನವಾಗಬೇಕೆಂಬುದು ವಿವೇಕಕ್ಕೆ ಸ್ಪಷ್ಟವಾಗಿದ್ದೇ ಸರಿ. ಆದರೆ ಒಂದು ವ್ಯಕ್ತಿಯ ತಪ್ಪಿನಿಂದ ಇತರ ವ್ಯಕ್ತಿ, ಸಮಾಜಗಳ ಹಿತಕ್ಕೆ ಬಾಧೆಯಾಗಬಾರದೆಂಬುದೂ ಅಷ್ಟೇ ಮಹತ್ವದ ತತ್ವವಾಗಿದೆ.

ಹೆಂಗಸು ಗಂಡಸಿನಂತೆ ವರ್ತಿಸಿದರೆ ಸಮಾಜಕ್ಕೆ ಹಿತವುಂಟೆ? ಆ ಹೆಂಗಸಿಗಾದರೂ ಆನಂದ ಸಿಗಬಲ್ಲುದೆ? ಪ್ರಕೃತಿಯಲ್ಲಿ ಪ್ರತಿಯೊಂದು ವಸ್ತುವಿಗೂ ವೈಶಿಷ್ಟ್ಯವುಂಟು. ಮತ್ತೆ ಆ ವೈಶಿಷ್ಟ್ಯದ ಪೂರ್ಣತೆಗೆ ಏರುವುದೇ ಆ ವಸ್ತುವಿನ ಜೀವನದ ಗುರಿಯಾಗಿದೆ. ಹೆಂಗಸಿನಲ್ಲಿರುವ ಹೆಣ್ತನದ ವಿಕಾಸದಿಂದಲೇ ಅವಳ ಜೀವನವು ಪೂರ್ಣತೆಯನ್ನು ಹೊಂದುವುದು. ಹೆಂಗಸು ಗಂಡಸಿನಂತೆ ವರ್ತಿಸಿದರೆ ತನ್ನ ವೈಶಿಷ್ಟ್ಯಕ್ಕೆ ಅಪಮಾನ, ಪ್ರಕೃತಿಗೆ ದ್ರೋಹ ಬಗೆದಂತಾಯಿತು. ಮತ್ತು ವೈಶಿಷ್ಟ್ಯವನ್ನು ಕಳೆದುಕೊಂಡ ವಸ್ತು ವ್ಯಕ್ತಿಗಳ ಜೀವನ್ಮೃತರಾದಂತೆಯೇ ಸರಿ. ರಾಗದಲ್ಲಿಯ ಒಂದು ಸ್ವರವು ತನ್ನ ವೈಶಿಷ್ಟ್ಯವಾದ ತೀವ್ರತೆ, ಕೋಮಲತೆಗಳನ್ನು ಕಳೆದುಕೊಂಡರೆ ಅದು ಕೀಸರಾಟವಾಗುವದು.

ಗಂಡನು ಎರಡು ಸಲ ಚಹ ಕುಡಿದರೆ ನಾನು ನಾಲ್ಕು ಸಲ ಕುಡಿಯುವೆನು! ಅವನು ವಾರಕ್ಕೊಂದು ಸಲ ಸಿನಿಮಾಕ್ಕೆ ಹೋದರೆ ನಾನು ದಿನಾಲು ಹೋಗುವೆನು! ಅವನು ಪರಿಷತ್ತುಗಳನ್ನು ಜರುಗಿಸಿ ಹತ್ತು ಗೊತ್ತುವಳಿಗಳನ್ನು ಸೂಚಿಸಿದರೆ ನಾನು ಇಪ್ಪತ್ತು ಗೊತ್ತುವಳಿಗಳನ್ನು ಮಾಡುವೆನು. ಇದೆಲ್ಲವನ್ನು ಮಾಡುವ ಅಧಿಕಾರವು ಗಂಡಸಿನಷ್ಟೇ ಹೆಂಗಸಿಗೂ ಇರಬೇಕೆಂದು ನಾನು ಒಪ್ಪುತ್ತೇನೆ. ಆದರೆ ಗಂಡಸಿನ ಅನುಕರಣದಿಂದ ಹೆಂಗಸಿಗೆ ಹಿತವಿದೆಯೇ?

ಬೇರೊಂದು ರೀತಿಯಲ್ಲಿ ಯೋಚಿಸಿದರೆ ಈ ಪುರುಷಾನುಕರಣದ ಒಲವು ಹೆಂಗಸಿಗಾಗಲು ಅವಳಲ್ಲಿರುವ ಅಪರತ್ವ ಭಾವವೇ (ತಾನು ಅಬಲೆಯೆಂಬ ಭಾವವೇ) ಕಾರಣವೆಂದು ವ್ಯಕ್ತವಾಗುವದು. ಮಾನವನ ಇತಿಹಾಸದ ತೀರ ಪ್ರಾರಂಭದ ಕಾಲವನ್ನು ಬಿಟ್ಟರೆ ಮುಕ್ಕ ಸಮಯದಲ್ಲೆಲ್ಲ ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರಗಳಲ್ಲಿ ಪುರುಷನೇ ಒಡೆಯನಾಗಿದ್ದಾನೆ. ಇದರ ಪರಿಣಾಮವಾಗಿ ಹೆಂಗಸಿನಲ್ಲಿ ತಾನು ಕೀಳು, ಅಬಲೆ ಬುದ್ಧಿಹೀನೆಯೆಂದು ಅಚಲವಾಗಿ ಮನದಂಬಿದೆ. ಗಂಡಸನ್ನು ಮೆಚ್ಚಿಸುವುದೇ ಬಾಳಿನ ಗುರಿಯಾಗಿದ್ದುದರಿಂದ ಅದಕ್ಕೆ ಕರ್ತವ್ಯಗಳನ್ನೆಲ್ಲ ಧಾರ್ಮಿಕ ಬಣ್ಣ ಬಳಿದು ಆಕರ್ಷಕವಾಗಿ ಮಾಡಲಾಗಿತ್ತು; ಕಬ್ಬಿಣದ ಬೇಡಿಗಳಿಗೆ ಬಂಗಾರದ ಲೇಪ ಕೊಟ್ಟಿತ್ತು. ಈ ಇಪ್ಪತ್ತನೇ ಶತಮಾನದಲ್ಲಿ ಬೇಡಿಗಳೆಲ್ಲ ಕಳಚಿದರೂ ರೂಢಿಗಳ ಪಾಶವು ಬಿಗಿದಿವೆ. ಅಡಿಗೆತನದ ನಿತ್ಯ ನೈಮಿತ್ತಿಕಗಳ ಹೊರತು ಬೇರೇನನ್ನೂ ಅರಿಯದವಳು ಇಂದು ಸ್ವತಂತ್ರಳಾಗಿದ್ದರೆ ಗಂಡಸಿನ ನೀತಿ, ರೀತಿ ನಡತೆಗಳನ್ನೇ ಗುರಿಯಾಗಿಟ್ಟುಕೊಂಡುದು ಸಹಜ. ತಾನು ಮೇಲು, ಬುದ್ಧಿವಂತೆ, ಸಮರ್ಥಳೆನಿಸಬೇಕಾದರೆ ಗಂಡಸಿನಂತೆ ನಡೆಯಬೇಕೆಂದು ಅಜ್ಞಾತವಾಗಿ ಆಕೆ ಬಯಸುತಿದ್ದಾಳೆ.

ಹೆಂಗಸು ಎಲ್ಲಕ್ಕಿಂತ ಮುಂಚೆ ಈ ಅಪರತ್ವ (ಅ-ಪ- ಎಂದರೆ ಕೀಳುತನದ ಎಂಬ ಭಾವ)ದ ಜಾಳಿಗೆಯೊಳಗಿಂದ ಬಿಡುಗಡೆ ಹೊಂದಬೇಕು. ವೈಶಿಷ್ಟ್ಯಹೀನಳಾಗಿ ಮಾಡಬಾರದನ್ನು ಮಾಡುವುದಕ್ಕಿಂತ ಏನೂ ಮಾಡದಿರುವುದೇ ಲೇಸು. ಏನಾದರೂ ಮಾಡಿ ತೋರಿಸುವ ಗಡಿಬಿಡಿಗಿಂತ ತಾನು ಮಾಡಬೇಕಾದುದೇನು ಎಂಬುದನ್ನು ನಿಚ್ಚಳವಾಗಿ ತಿಳಿಯಲು ಚಡಪಡಿಸುವುದು ಒಳಿತು. ತಂಗೀ, ನೀನು ಹೆಂಗಸೆಂಬುದನ್ನು ಮರೆಯಬಾರದೆಂಬುದನ್ನು ಪುನಃ ಪುನಃ ನಿನಗೆ ನೆನಪಿಸಿಕೊಟ್ಟರೆ ಬೇಸರಪಡಬೇಡ. ಎಲ್ಲರೂ ತನ್ನ ಸ್ವಂತ ಮೆಚ್ಚು ಸ್ವಾತಂತ್ರವೆನ್ನುವರು. ಎಲ್ಲರಿಗೂ ತಮ್ಮ ಎಕ್ಕದ ಮೇಲೆ ಹೆಚ್ಚು ಅಕ್ಕರೆ. ಹಾಗಾದರೆ ಹೆಂಗಸಿಗೆ ತಾನು ಹೆಂಗಸು ಎಂದು ಹೇಳಿಕೊಳ್ಳುವದರಲ್ಲಿ ಹೇಸಿಗೆಯೇಕೆ? ಶಾಂತವಾದ ಏಕಾಂತದಲ್ಲಿ ಕುಳಿತು, ನಿನ್ನ ಹೆಣ್ತನದ ಬಗ್ಗೆ ಹೆಮ್ಮೆ ಪಡು. ಹೆಣ್ತನದ ವೈಶಿಷ್ಟ್ಯವೇನೆಂಬುದನ್ನು ಆಳವಾಗಿ ಯೋಚಿಸಿ ಅದರಂತೆ ಆಚರಿಸಲೆತ್ನಿಸು.

ದೀಪದ ವೈಶಿಷ್ಟ್ಯವೆಂದರೆ ಕತ್ತಲನ್ನು ಕಳೆಯುವದು, ಬೆಂಕಿಯ ವೈಶಿಷ್ಟ್ಯವು ಸುಡುವುದು, ಬೆಲ್ಲದ ವೈಶಿಷ್ಟ್ಯ ಬಾಯಿ ಸಿಹಿ ಮಾಡುವದು. ಹೀಗೆ ಹೆಂಗಸಿನ ವೈಶಿಷ್ಟ್ಯವೇನು? ಈ ತಾತ್ವಿಕ ಪ್ರಶ್ನೆಗೆ ಉತ್ತರವನ್ನು ಕೊಡುವದು ಕಠಿಣವಾಗಿದೆ. ಆದ್ದರಿಂದ ಅದಕ್ಕಿಂತ ಹೆಚ್ಚು ಸುಲಭವಾದ ಶಬ್ದಗಳಲ್ಲಿ ಅದೇ ಪ್ರಶ್ನೆಯನ್ನು ಹೀಗೆ ಕೇಳಿಕೋ. ಗಂಡಸಿನಲ್ಲಿ ಇಲ್ಲದುದು ಹೆಂಗಸಿನಲ್ಲಿ ಏನದುಂಟು? ದೇಹದ ವಿಷಯದಲ್ಲಿ ಹೇಳುವದಾದರೆ ಹೆಂಗಸಿಗೆ ಗರ್ಭಕೋಶವಿದೆ, ಡಿಂಭಾಶಯವಿದೆ, ಸ್ತನಗಳಿವೆ. ಮನಸ್ಸಿನಲ್ಲಿ ಹೇಳುವದಾದರೆ ಗಂಡಸಿಗಿಂತ ಹೆಂಗಸಿಗೆ ಮಕ್ಕಳಲ್ಲಿ ಪ್ರೀತಿ ಹೆಚ್ಚು. ಗಂಡಸಿಗೆ ಮಕ್ಕಳಲ್ಲಿ ಪ್ರೀತಿಯೇ ಇರುವುದಿಲ್ಲ. ತನ್ನ ಪ್ರಿಯೆಯು ಮಕ್ಕಳೆಂದು ಅವರನ್ನು ಪ್ರೀತಿಸಲು ಅವನು ಕಲಿಯುವನೆಂದು ಜೀವಶಾಸ್ತ್ರಜ್ಞರು ಹೇಳುತ್ತಾರೆ.

ತಂಗೀ, ನಿನ್ನ ತನುಮನಗಳಲ್ಲಿರುವ ಮೇಲ್ಕಂಡ ವೈಶಿಷ್ಟ್ಯಗಳನ್ನು ನೀನು ಪುರುಷಾನುಕರಣದಿಂದ ನಿರ್ನಾಮಗೊಳಿಸಬಲ್ಲೆಯಾ? ಪ್ರಕೃತಿಯನ್ನು ನಿರ್ಮೂಲಗೊಳಿಸುವದು ಯಾರಿಂದಲೂ ಸಾಧ್ಯವಿಲ್ಲ. ಪುರುಷಾನುಕರಣದಿಂದ ನಿನ್ನ ತನುಮನಗಳಲ್ಲಿ ಪುರುಷರ ಅಂಗಾಂಗ ಸ್ವಭಾವಗಳೇನೂ ಬರಲಾರವು. ಆದರೆ ನಿನ್ನ ಅಂಗಾಂಗ ಸ್ವಭಾವಗಳು ಮಾತ್ರ ಹದಗೆಟ್ಟು ಮುಸಳಿಸುವವು. ಗಂಡಾಗಿ ಬೆಳೆಯಲಿಲ್ಲ; ಹೆಣ್ಣಾಗಿ ಉಳಿಯಲಿಲ್ಲ, ಎಂಬಂತೆ ನಿನ್ನ ದೆಸೆಗೇಡಾಗುವುದು. ಆದ್ದರಿಂದ ನೀನು ಬೇರೆ ಏನನ್ನೂ ಮಾಡದಿದ್ದರೂ ಚಿಂತೆಯಿಲ್ಲ; ಪುರುಷಾನುಕರಣವನ್ನು ಮಾತ್ರ ಮಾಡಬೇಡ.

ಬರಬರುತ್ತ ಜಗತ್ತಿಗೆ ಪುರುಷನ ಅಗತ್ಯವೇ ಉಳಿಯುವುದಿಲ್ಲ. ಎಂದು ಬರ್ಟ್ರಂಡ್ ರಸೆಲ್ಲರೂ ತಮ್ಮ 'ವಿವಾಹ ಮತ್ತು ನೀತಿ' ಎಂಬ ಪುಸ್ತಕದಲ್ಲಿ ತರ್ಕಿಸಿದ್ದಾರೆ. ವೈಜ್ಞಾನಿಕ ಪ್ರಯೋಗ ಶಾಲೆಗಳಲ್ಲಿ ಗಂಡಸಿನ ಅಂಶವಿಲ್ಲದೆಯೇ ಗರ್ಭಾದಾನ ಮಾಡಿಸುವ ಪ್ರಯತ್ನಗಳು ನಡೆದಿವೆ. ಹೀಗೆ ಜಗತ್ತು ಸ್ತ್ರೀತ್ವದತ್ತ ವಿಕಾಸ ಹೊಂದುತ್ತ ನಡೆದಿರುವಾಗ ಹೆಂಗಸು ತನ್ನ ಸ್ತ್ರೀತ್ವವನ್ನೇ ಅಳಿಸಿಕೊಳ್ಳಲು ಸಿದ್ಧಳಾಗುತ್ತಿರುವದು ಒಳಿತೆ?

'ಬರಿ ಮಕ್ಕಳನ್ನು ಹಡೆಯುತ್ತ ಮನೆಯ ಮೂಲೆಯಲ್ಲಿ ಬಿದ್ದಿರು' ಎಂದು ನಿನ್ನ ಉಪದೇಶವಷ್ಟೆ? ಎಂದು ನನ್ನನ್ನು ಸಿಟ್ಟಿನಿಂದ ಕೇಳುವಿಯಾ? ಸದ್ಯಕ್ಕೆ ಹೆಂಗಸು ಕೀಳಲ್ಲ, ಅಬಲೆಯಲ್ಲ ಎಂಬ ಮಂತ್ರವನ್ನೇ ಮನನ ಮಾಡು.

(ಆದರ್ಶ)

---

**ಕೊಡಗು ಚೀಫ್ ಫಾರೆಸ್ಟ್ ಆಫೀಸು ಮಡಿಕೇರಿ.**

## ನೋಟೀಸು

ಗೇಣಿ ಅವಧಿ ಮುಗಿದ ಏಲಕ್ಕಿ ಮಲೆಗಳಲ್ಲಿರುವ ಹಾಲಿ ವರ್ಷದ ಏಲಕ್ಕಿ ಫಸಲನ್ನು ಎತ್ತುವಳಿ ಮಾಡುವ ಹಕ್ಕನ್ನು 1950ನೇ ಇಸವಿ ಜೂನ್ ತಾರೀಕು 2ನೇ ಶುಕ್ರವಾರ ಮಡಿಕೇರಿ, ಮತ್ತು 5ನೇ ಸೋಮವಾರ ನಾಪೋಕ್ಲು ಮತ್ತು 5ನೇ ಬುಧವಾರ ವೀರಾಜಪೇಟೆ ನಾಡು ಖಚೇರಿ ಬಳಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಕೊಡಗು ಚೀಫ್ ಫಾರೆಸ್ಟ್ ಆಫೀಸರವರ ಪರ್ಸನಲ್ ಅಸಿಸ್ಟೆಂಟರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುವ ಸಂಗತಿ ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸಲಾಗಿದೆ. ಖಾಯಸ್‌ದಾರರು ಸಮಯಕ್ಕೆ ಸರಿಯಾಗಿ ಹಾಜರಾಗಿ ಬಿಡದ ರಕಾಸ್ತು ಮೂಲಕ ಪಡೆಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ನಾಡು ಖಚೇರಿಯಿಂದಾಗಲೀ, ಯಾ ರೇಂಜ್ ಆಫೀಸರವರಿಂದಾಗಲೀ, ಹರಾಜು ಇಸಿಹಾರ್ ಮೂಲಕ ತಿಳಿದುಕೊಳ್ಳತಕ್ಕದ್ದು.

ಸಿ. ಯಂ. ಕುಂಞ ಅಪ್ಪ,
ಚೀಫ್ ಫಾರೆಸ್ಟ್ ಆಫೀಸರು.

---

## ಮಾರಾಟಕ್ಕಿದೆ.

ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದು ತಾಲೋಕು ಎಸಳೂರು ಹೋಬಳಿ ಕಬಟ್ಟಿ ಗ್ರಾಮದ ಪ. ಬಸವರಾಜಪ್ಪನವರ ದತ್ತು ಮಗ ಅಣ್ಣಯ್ಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಬಾಬ್ತು ಮೇಲ್ಕಂಡ ಗ್ರಾಮದಲ್ಲಿ, ಒಂದು ಹೆಂಚಿನ ಮನೆ, 575 ಈ ಜಾಗದಲ್ಲಿ 250 ಕಿತ್ತಳೆ ಸಸಿಗಳು ಇವೆ. ಹಸಿ ಫಸಲು ಬಿಡುತ್ತವೆ. ದನ ಮೇಯುವುದಕ್ಕೆ ಒಳ್ಳೆ ಮಧ್ಯದಲ್ಲಿ 25 ಏಕರು ಹುಲ್ಲುಗಾವಲು ಜಾಗವಿದೆ. ತರಿ ಭೂಮಿ 6.50 ಏಕ್ರೆ ಖಾರಾಮರಿ ಭೂಮಿ ಇದೆ. ಈ ಸೊತ್ತುಗಳ ಕ್ರಯ ರೂ 16,000. ಈ ಗ್ರಾಮಕ್ಕೆ ಸೋಮವಾರಪೇಟೆಯಿಂದ ಶಾಕೆನೋಡಿ ಕೊಂಟಿಗ ರೋಡಿನಲ್ಲಿ ಹೋಗಲು ಅನುಕೂಲವಿದೆ. ಖಾಯಸ್‌ದಾರರು ಸೊತ್ತುಗಳನ್ನು ಹೋಗಿ ನೋಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ

ಪಿ ಅಣ್ಣಯ್ಯ,
ಗಣಗೂರು ಗ್ರಾಮ, ಶನಿವಾರ ಸಂತೆ ಪೋಸ್ಟು, ಉತ್ತರ ಕೊಡಗು.

---

## ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ.

## ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, ತಾ. 30-9-49, — ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

**ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.**

ನಮ್ಮಲ್ಲಿ ಕೋವಿಗಳು, ಕೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 246 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ಕೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ಕೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ಕೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರತಕ್ಕದ್ದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-37



# CRESCENT

**FOR PROTECTION AND SERVICE.**

**It is best to represent and insure with The CRESCENT Insurance Co., Ltd,**

*H. O: BOMBAY.* [*Established 1919.*

*For particulars write to:*

**Sri B. A. Poovaiah** *Organiser:* *Pollibetta, Coorg.* [or **The Branch Manager,** *22 B. Mahatma Gandhi Road, Bangalore 1.*

**ಸುರಕ್ಷಿತವಾದ ಜೀವವಿಮೆ ಪಡೆಯಲು**

## ಕ್ರೆಸೆಂಟ್

**ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.**



**ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 53,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು ಈ ಬ್ಯಾಂಕಿನಿಂದ ಜಿಲ್ಲಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆರ್ಯೂ ಡ್ರಾಫ್ಟುಗಳು ಡಿಸ್ಕೌಂಟ್ ಮಾಡಲ್ಪಡುವುದು. ಟ್ರಿಪಲ್ ಮತ್ತು ನಾಷನಲ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, | ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜರ್



ಶ್ರೀ ಪಿ. ಎಸ್. ಗೋವಿಂದರಾಜು, 'ಕೊಡಗು' ಲಿಮಿಟೆಡ್, ವೀರಾಜಪೇಟೆ.

Edited, Printed and Published by P. I. Belliappa at 'Kodagu Press, Mercara, for 'Kodagu' Ltd.



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ | ರೂ. .... .... | 6,13,00,000 ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ | ರೂ. .... | 27,73,00,000 „ |
| ಒಟ್ಟು ನಿಧಿ. | ರೂ. .... .... .... | 8,30,00,000 „ |
| ಸರಕಾರದ ಸಿಕ್ಯೂರಿಟಿಗಳಲ್ಲಿ ಹೂಡಿದ್ದು | | 10,96,00,000 „ |

1,28,000 ಕ್ಕೂ ಮೀರಿದ ಪಾಲಿಸಿ ಹೊಂದಿದವರಿದ್ದಾರೆ.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

**ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

ರೋಟರ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಪೋರ್ಟ್, ಮುಂಬಯಿ.

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.



**ಭದ್ರತೆ!** 17 ವರ್ಷಗಳ ಅನುಭವ **ಅನುಕೂಲತೆ !!**

ಅನುಭವಶೀಲತೆ!!

## ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಛೇರಿ,

**ಕದ್ರಿ ರೋಡ್, ಮಂಗಳೂರು.**

ಠೇವಣಿಗಳ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | „ | 3½% |
| 12 | „ | 3¾% |
| 24 | „ | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಹೊಸಂಗಾಡಿ, ಪುತ್ತೂರು, ಮಡಿಕೇರಿ ಮತ್ತು ಮೂಡಬಿದ್ರೆ.

ಒಟ್ಟು ವಹಿವಾಟಿನ ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್,

**ಮಡಿಕೇರಿ ಶಾಖೆ, ಮಡಿಕೇರಿ.**



## ದಿ ಟ್ರಾಪಿಕಲ್

**ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.**

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. | ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. | ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ಯಂ. ಯು. ಅಚ್ಚಣ್ಣ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು. | ಎಂ. ಎ. ಬೆಳ್ಳಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.



# The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

*Head Office:* **MANGALORE**

**K. M. Bopaiah, Esq.,** *Branch Secretary for Mysore & Coorg, 85 Sultanpet, BANGALORE 2.*

26-6

Reg. No. M. 1000.
'KODAGU' MERCARA, (Coorg).

# ಕೊಡಗು

ಸಂಪಾದಕರು — ಶ್ರೀ. ನ. ಬೆಳ್ಳಿಯಪ್ಪನವರು ] [ವಾರ್ಷಿಕ ಚಂದಾ ರೂ. 5

ಸಂಪುಟ ೨೮ | ತಾರೀಖು ೭೬-೬-೧೯೫೦ನೇ ಬುಧವಾರ | ಸಂಚಿಕೆ ೫೧

# ಬಾಲಕರ ಸಂಘಟನೆ ನಡೆಯಬೇಕು.

ಲೇ:- ಡಾ॥ ನಾ. ಸು. ಹರ್ಡೀಕರ.

ದೇಶದ ಇಂದಿನ ಸ್ಥಿತಿಯನ್ನು ನೋಡಿದರೆ, ನಾವು ಎತ್ತ ಕಡೆಗೆ ಹೊರಟಿದ್ದೇವೆ ಎಂಬುದರ ಕಲ್ಪನೆ ಕೂಡ ಆಗುವಂತಿಲ್ಲ. ಅನಿರೀಕ್ಷಿತವಾದ ಘಟನೆಗಳ ಗತ್ಯಂತರವಿಲ್ಲದಾಗಿದೆ, ಅದರಿಂದ ಹೇಗೆ ಸಾಧ್ಯ?

ಒಂದು ಅದೃಶ್ಯ ಶಕ್ತಿ ಇಲ್ಲವೆ ಒಬ್ಬ ಅಸಾಮಾನ್ಯ ವ್ಯಕ್ತಿ ಇವರ ಮೂಲಕ ಈ ಸ್ಥಿತಿಯಲ್ಲಿ ಸ್ಥಿತ್ಯಂತರವಾಗಬೇಕು. ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಜ್ವಾಲಾಮುಖಿ ಇವೇ ಮೊದಲಾದವುಗಳ ಮೂಲಕ ಸುತ್ತುಮುತ್ತಲಿನ ಪರಿಸ್ಥಿತಿಯು ರೂಪಾಂತರಗೊಳ್ಳುತ್ತದೆ. ಓರ್ವ ಮಹತ್ವಶಾಲಿಯಾದ ವ್ಯಕ್ತಿಯ ಮೂಲಕ ದೇಶದ ಇಲ್ಲವೆ ಜಗತ್ತಿನ ಸ್ಥಿತಿಯು ಬೇರೆ ಸ್ವರೂಪವನ್ನು ಹೊಂದಬಲ್ಲದು. ಅಂಥವರಲ್ಲಿ ಹಿಟ್ಲರ್, ಲೆನಿನ್, ಕಮಾಲ, ಗಾಂಧಿ ಇವರು ಬರುತ್ತಾರೆ. ಇಂಥ ಮಹಾ ವ್ಯಕ್ತಿಗಳು ಸದಾಕಾಲ ದೊರೆಯುವುದಿಲ್ಲ. ಆದ್ದರಿಂದ ಕೆಟ್ಟ ಪರಿಸ್ಥಿತಿಯನ್ನು ಸುಧಾರಿಸುವ ಕಾರ್ಯವನ್ನು ನಮ್ಮಂತಹ ಸಾಮಾನ್ಯ ಜನರೇ ಅಂಶಿಕವಾಗಿ ಸುಧಾರಿಸಿಕೊಳ್ಳಬೇಕಾಗುತ್ತದೆ. ಮಹಾತ್ಮಾಗಾಂಧಿಯಂತಹ ವಿಭೂತಿಗಳು ನಮಗೆ ಮೇಲಿಂದ ಮೇಲೆ ಮಾರ್ಗತೋರಿಸುವರು ಮತ್ತು ಹೀನಸ್ಥಿತಿಯೊಳಗಿಂದ ನಮ್ಮನ್ನು ಹೊರಗೆ ತೆಗೆಯುವವರು ಎಂದು ಆಲೋಚಿಸುವುದು ಮೂರ್ಖತನ. ಇವತ್ತಿನ ಸ್ಥಿತಿಯು ಬಹಳ ಶೋಚನೀಯವಾಗಿದೆ. ನಾವು ಸತ್ಯದ ಬಗ್ಗೆ ಮಾತಾಡುತ್ತೇವೆ, 'ಸತ್ಯಮೇವ ಜಯತೆ' ಎನ್ನುತ್ತೇವೆ, ಆದರೆ ಆ ಸತ್ಯವು ಎಲ್ಲಿದೆ? ಸತ್ಯಕ್ಕೆ ಅರ್ಧಚಂದ್ರವು ದೊರೆತಾಗ ಜಯವೆಲ್ಲಿಂದ ಬಂತು? ಈ ಜಗತ್ತನ್ನು ವಿಮರ್ಶಿಸಿದಾಗ, ಅದರಲ್ಲಿ ಅಂತಃಕರಣ ಶೂನ್ಯ ಜನರೇ ತುಂಬಿದ್ದಾರೆಯೇ? ಅದರಲ್ಲಿ ಸತ್ಯವಂತರಿಗೆ ಸ್ಥಳವೇ ಇಲ್ಲವೇ? ಎನ್ನುವಂತಾಗುತ್ತದೆ. ಮನಸ್ಸು ವ್ಯಗ್ರವಾಗುತ್ತದೆ. ಕಣ್ಣು ಕತ್ತಲೆಗೂಡುತ್ತದೆ. ಸುತ್ತಲೂ ಕತ್ತಲೆಯೇ ಕಾಣುತ್ತದೆ ಮತ್ತು ಇವತ್ತಿನ ವರೆಗಿನ ನಮ್ಮ ತ್ಯಾಗವು ವ್ಯರ್ಥವಾಯಿತೇ ಎಂಬಂತಾಗುತ್ತದೆ.

## ಆಶೆ—ನಿರಾಶೆ.

ಆದರೆ ಇವು ನಿರಾಶೆಯ ಉದ್ಗಾರಗಳಲ್ಲ. ಅಶಾಂತಿಯ ಸ್ಥಿತಿಯಲ್ಲಿಯೇ ಜೀವನ ಕಳೆದ ಕಾರ್ಯಕರ್ತರಿಗೆ ನಿರಾಶೆಯು ಸೋಂಕಲಾರದು. ಆದರೆ ಅತ್ಯಂತ ಹೀನ ಪರಿಸ್ಥಿತಿಯಲ್ಲಿ ಮನುಷ್ಯನು ಸಿಕ್ಕಾಗ್ಗೆ ಮತ್ತು ಅವನಿಗೆ ಕತ್ತಲೆಯೇ ಸರ್ವಕಡೆಗೆ ಕಾಣುತ್ತಿದ್ದಾಗ್ಗೆ ಅವನ ಬಾಯಿಯಿಂದ ಹೊರಡುವ ಉದ್ಗಾರಗಳು ಆ ಪರಿಸ್ಥಿತಿಯ ಪರಿಣಾಮವನ್ನೇ ತೋರಿಸುತ್ತವೆ. ಆ ಉದ್ಗಾರಗಳು ವಸ್ತುಸ್ಥಿತಿ ನಿದರ್ಶಕಗಳಾಗಿರುತ್ತವೆ. ಆಶಾವಾದಿ ಮನುಷ್ಯನು ಇಂತಹ ಪರಿಸ್ಥಿತಿಯೊಳಗಿಂದಲೂ ಮಾರ್ಗವನ್ನು ಹುಡುಕುತ್ತಿರುತ್ತಾನೆ. ಅದರಲ್ಲಿ ಯಶಸ್ಸು ಸಿಗದಿದ್ದರೂ ಅವನು ಅಲುಗಾಡುವದಿಲ್ಲ. ಅವನ ಮಾರ್ಗಶೋಧನೆ ಸತತ ನಡೆದೇ ಇರುತ್ತದೆ. ಅವನಿಗೆ ನಿರಾಶೆಯು ಆಗಾಗ್ಗೆ ಭೆಟ್ಟಿಯಾಗುವುದುಂಟು. ಆದರೆ ಅದು ಅವನಿಗೆ ಅಂಟಿಕೊಳ್ಳಲಾರದು. ಅದು [illegible]ತ್ತಲೇ ಅದೃಶ್ಯವಾಗುತ್ತದೆ. ಇಂತಹ ಮಾರ್ಗವು ಸಿಗಲು ಕೆಲವು ವೇಳೆ ಹಿಡಿಯಬಹುದು ನಿಜ. ಆದರೆ ಮಾರ್ಗಶೋಧವನ್ನು ಬಿಟ್ಟು [illegible] ಮಾತ್ರ [illegible] ಬೇಕು.

ಇದೇ ಶತಮಾನದ ಪ್ರಾರಂಭದಲ್ಲಿಯ ನಮ್ಮ ದೇಶದ ಇತಿಹಾಸವನ್ನು ನೋಡಿದರೆ, ೧೯೪೭ನೇ ಇಸ್ವಿಯಲ್ಲಿ ನಮಗೆ ಸ್ವಾತಂತ್ರ್ಯವು ಸಿಗುವುದೆಂದು ಯಾರಿಗೂ ಎನಿಸುವುದು ಸಾಧ್ಯವಿರಲಿಲ್ಲ. ಆದರೆ ೩೦–೪೦ ವರ್ಷಗಳಲ್ಲಿಯೇ ನಮಗೆ ಸ್ವಾತಂತ್ರ್ಯವು ಸಿಗಲಿಲ್ಲವೇ? ಲೋಕಮಾನ್ಯ ತಿಲಕ ಮತ್ತು ಮಹಾತ್ಮಗಾಂಧಿಯವರಂತಹ ಕರ್ತೃತ್ವಶಾಲಿ ಮುಖಂಡರು ಪರಿಸ್ಥಿತಿಗೆ ತಕ್ಕಂತೆ ಹೊಸ ಸಂಸ್ಥೆಗಳನ್ನು ಕಟ್ಟಿ ಮತ್ತು ಆಗಲೇ ಇದ್ದ ಸಂಸ್ಥೆಗಳಲ್ಲಿ ನವಚೈತನ್ಯ ತುಂಬಿ ಅವುಗಳ ಮೂಲಕ ಕಾರ್ಯಸಿದ್ಧಿಯನ್ನು ಪಡೆಯಲಿಲ್ಲವೇ? ದಾಸ್ಯದಲ್ಲಿ ಕೊಳೆಯುತ್ತಿದ್ದ ರಾಷ್ಟ್ರಗಳ ಸ್ವಾತಂತ್ರ್ಯಾಂದೋಲನವು ಶತಮಾನಗಳ ವರೆಗೆ ನಡೆದ ವಿಷಯವು ಈ ಮುಖಂಡರಿಗೆ ಗೊತ್ತಿತ್ತು. ತಮ್ಮ ಸ್ವಾತಂತ್ರ್ಯಕ್ಕಾಗಿ ಅನೇಕ ವರ್ಷಗಳ ವರೆಗೆ ಹೋರಾಡಬೇಕಾದರೂ ಅಡ್ಡಿಯಿಲ್ಲ, ಆದರೆ ತಮ್ಮ ಹೋರಾಟವು ಸತತ ನಡೆಸಲೇಬೇಕು ಎಂದು ಅವರು ನಿರ್ಧರಿಸಿ ಅದನ್ನು ಸಾಗಿಸಿದರು ಮತ್ತು ಅದರಲ್ಲಿ ಯಶಸ್ಸು ಪಡೆದರು. ಇದಕ್ಕಾಗಿ ಅವರು ತಮ್ಮ ಅಜ್ಞಬಂಧುಗಳನ್ನು ಮುಂದೆ ಕರೆದು ಶಿಕ್ಷಣ ಕೊಟ್ಟರು. ಅವರಲ್ಲಿ ಧೈರ್ಯ ಹುಟ್ಟಿಸಿದರು. ಅವರಲ್ಲಿ ಸತತೋದ್ಯೋಗ, ಸಹಿಷ್ಣುತೆಗಳನ್ನು ಹುಟ್ಟಿಸಿ ಅವರಿಂದ ಸಂಘಟಿತ ಕಾರ್ಯವನ್ನು ಮಾಡಿಸಿಕೊಂಡರು. ಅಂತೆಯೇ ಇಂದು ನಾವು ಉಪಭೋಗಿಸುತ್ತಿರುವ ಸ್ವಾತಂತ್ರ್ಯವು ಲಭಿಸಿತು. ಆದರೆ ಸ್ವಾತಂತ್ರ್ಯಪ್ರಾಪ್ತಿಯ ನಂತರ ಕೆಟ್ಟ ನಮ್ಮ ಸಮಾಜದ ಮಡಿಕೆಯನ್ನು ಸರಿಪಡಿಸುವ ಯತ್ನವು ಈಗ ನಡೆಯಬೇಕಾಗಿದೆ. ಅಂದರೆನೇ ಈ ಸ್ವಾತಂತ್ರ್ಯವು ಪಡೆದು ನಮಗೆ ಸುಖಶಾಂತಿಯು ಲಭಿಸುವುದು.

## ಇಂದಿನ ಪರಿಸ್ಥಿತಿ.

ನಾವು ಹಿಂದ[illegible] ಇಟ್ಟುಕೊಂಡಿದ್ದ ಧ್ಯೇಯವು ಸ್ಪಷ್ಟವಾಗಿದ್ದುದರಿಂದ ಆಗಿನ ಪರಿಸ್ಥಿತಿ ಮತ್ತು ಅದರಿಂದ ಪಾರಾಗಲು ನಾವು ಅವಲಂಬಿಸಿದ ಮಾರ್ಗಗಳ ಬಗ್ಗೆ ಈಗ [illegible] ಮಾಡುವ ಕಾರಣವಿಲ್ಲ. ಏಕೆಂದ[illegible]ದಿನ ನಮ್ಮ ಧ್ಯೇಯ, ಪರಿಸ್ಥಿತಿಗಳು ಬೇರೆಯಾಗಿವೆ. ಇಂದಿನ ಪರಿಸ್ಥಿತಿಗೆ ತಕ್ಕಂತೆ ನಮ್ಮ ಮಾರ್ಗಗಳು ನಿರ್ಮಾಣವಾಗಬೇಕು. ಸ್ವಾರ್ಥಿಗಳಾದ ಮತ್ತು [illegible] ಬೆನ್ನುಹತ್ತಿದ ಜನರಿಗೆ ಇಂದು ಮಾರ್ಗತೋರಿಸಬೇಕಾಗಿದೆ. ಮತ್ತು ಅವರಲ್ಲಿ ಸಂಘಟನೆಯನ್ನುಂಟು ಮಾಡಿ ಅವರನ್ನು ಕಾರ್ಯಕ್ಕೆ ಹಚ್ಚಬೇಕಾಗಿದೆ. ಇದ್ದ ಪರಿಸ್ಥಿತಿಯಲ್ಲಿ ಇಷ್ಟು ಕಷ್ಟ ಕೆಡಿಸದ ಸಿಕ್ಕ ಸ್ವಾತಂತ್ರ್ಯವನ್ನು ರಕ್ಷಿಸುವದಕ್ಕಾಗಿ ತನ್ನ ಸಂಘಟನೆಯನ್ನು ಕ್ರಿಯಾಶೀಲನೆ ಭದ್ರಪಡಿಸಿಕೊಳ್ಳಬೇಕಾಗಿದೆ.

ಇಂದು ದೇಶದಲ್ಲಿರುವ ಸಂಘಟನೆಗಳಿಂದ ಯಾವುದೇ ಹೇಳಿಕೊಳ್ಳುವಂತಹ ಕಾರ್ಯವಾಗುವಂತಿಲ್ಲ. ಮುಸ್ಲಿಮರ ಹಲ್ಲು ಮತ್ತು ಇತರ ಅವಯವಗಳು ಶಿಥಿಲವಾಗುತ್ತಿವೆ, ಕಾಂಗ್ರೆಸ್ ಸಂಸ್ಥೆಯ ಸ್ಥಿತಿಯು ಆಗಿದೆ. ಕಾಂಗ್ರೆಸ್ ಸಂಸ್ಥೆಯು ಪರಿಸ್ಥಿತಿಗೆ ತಕ್ಕಂತೆ ತನ್ನ ಸ್ವರೂಪವನ್ನು ತಿದ್ದಿಕೊಳ್ಳದಿದ್ದರೆ ಅದು ಇದ್ದರೂ ಇಲ್ಲದಿದ್ದರೂ ಏನೂ ವ್ಯತ್ಯಾಸವಾಗುವಂತಿಲ್ಲ. ಅಂತಹ ಕಾಂಗ್ರೆಸ್ಸಿನಿಂದ ಪೂರ್ವದಲ್ಲಿ ಆದಂತೆ ಕಾರ್ಯವಾಗಲಾರದು. ಆದ ಮೇಲೆ ನಮ್ಮ ದೇಶದ [illegible] ಶಾಂತಿಗಳನ್ನು ದೊರಕಿಸಲು ಯಾರು ಕಾರ್ಯ ಮಾಡಬೇಕು?

ಬಿಸಿರಕ್ತದ ತರುಣರು ಜಗತ್ತಿನ ರಾಜಕಾರಣವನ್ನು ಅಭ್ಯಾಸಮಾಡಬೇಕು ಮತ್ತು ಅದು ನಮ್ಮ ದೇಶಕ್ಕೆ ಹೇಗೆ ಪರಿಣಾಮಮಾಡುತ್ತದೆ ಎಂಬುದನ್ನು ತೂಗಿ ನೋಡಬೇಕು. ಅದಕ್ಕೆ ತಕ್ಕಂತಹ ಮಾರ್ಗವನ್ನು ಅವರು ಕಂಡುಹಿಡಿದು ಟೊಂಕಕಟ್ಟಬೇಕು. ಹಳೇ ವಿಚಾರದವರ ಬೆನ್ನನ್ನು ಅವರು ಹತ್ತುವುದೆಂದರೆ ಮೊಲವು ಆಮೆಯ ಬೆನ್ನು ಹತ್ತಿದಂತೆಯೇ ಸರಿ. ಹೊಸ ಪದ್ಧತಿ, ಮಾರ್ಗಗಳನ್ನು ಶೋಧಿಸುವವರು, ಜಗತ್ತಿನ ಓಟದ ಹವ್ಯಾಸವನ್ನಿಡುವವರು, ಮಹತ್ವಾಕಾಂಕ್ಷಿಗಳು, ಸರ್ವಸ್ವ ತ್ಯಾಗಮಾಡಿ ಬಂದ ಸಂಕಟಗಳನ್ನು ಎದುರಿಸುವವರು, ಹೊಸ ಹುರುಪಿನ ತರುಣರೇ ಸರಿ. ಅವರು ಮುಂದೆ ಬಂದರೆ ಮಾತ್ರ ನಮ್ಮ ಉದ್ಧಾರದ ಆಶೆಯಿದೆ. ನಮ್ಮ ದೇಶದ ವಿಚಾರವಂತರಿಗೆ ಈಗ ಹೀಗೆ ಅನಿಸುತ್ತಿದೆ.

## ತರುಣ ಸಂತಾನ.

ಇಂತಹ ತರುಣರು ಎಲ್ಲಿದ್ದಾರೆ? ಅವರು ಕಾಣುತ್ತಿಲ್ಲ. ಇದ್ದವರಲ್ಲಿ ಪ್ರೇಮ, ತ್ಯಾಗ, ಸಹಿಷ್ಣುತೆ, ಉದ್ಯೋಗಪ್ರಿಯತೆ, ದೂರದೃಷ್ಟಿ ಇವಾವೂ ಇಲ್ಲ. ಅಂತೆಯೇ ಈ ಸ್ಥಿತಿ ಉಂಟಾಗಿದೆ. ಆದರೆ ಇದರಿಂದ ಹತಾಶರಾಗುವ ಕಾರಣವಿಲ್ಲ. ಪ್ರಯತ್ನ [illegible] ಹಿಂದೆ ಕಳೆದುದನ್ನು ನಾವು ಹೇಗೆ ಮರಳಿ ದೊರಕಿಸಿದೆವೋ ಹಾಗೆಯೇ ಇಂದು ಸಿಕ್ಕಿದುದನ್ನು ರಕ್ಷಿಸೋಣ. ಅದಕ್ಕಾಗಿ ಆ ಬಗೆಯ ಆತ್ಮವಿಶ್ವಾಸಬೇಕು. ಪ್ರಯತ್ನದಿಂದ [illegible] ಬೇಕು, ಪ್ರಸಂಗ ಬಂದರೆ ಎಲ್ಲವನ್ನು ಸಮರ್ಪಣ ಮಾಡುವ ಸಿದ್ಧತೆ ಬೇಕು.

ಚಿಕ್ಕಂದಿನಲ್ಲಿ [illegible] ತೆಗೆದುಕೊಳ್ಳಬೇಕಾದೀತು. ಅವರನ್ನು ಸಿದ್ಧಮಾಡಬೇಕು. ಅವರಿಗೆ ರಾಷ್ಟ್ರಪ್ರೇಮದ [illegible] ಕೊಡಬೇಕು. ಅದಕ್ಕೆ [illegible] ಬೇಕು. ಗಾಂಧಿಯವರಂತಹ ವ್ಯಕ್ತಿ ಅಥವಾ ಶಕ್ತಿಯ ಮೂಲಕ ಪರಿಸ್ಥಿತಿಯು ಸ್ಥಿತ್ಯಂತರ ಹೊಂದುವ ಸಂಭವವು ಈಗ ಇಲ್ಲದ್ದರಿಂದ ಈ ಮಾರ್ಗವನ್ನು ಅವಲಂಬಿಸಬೇಕಾಗಿದೆ. ಇಂದಿನ ಪರಿಸ್ಥಿತಿಯ [illegible]ದಿಂದ ತರುಣರು ತೇಲಿಹೋಗುತ್ತಿದ್ದಾರೆ. ಅವರಿಗೆ ಉತ್ತಮ ಗೃಹ ಮತ್ತು ಶಾಲೆಯ ಶಿಕ್ಷಣಗಳು ಸಿಗುತ್ತಿರುವುದರಿಂದ ಅವರಿಗೆ ತಮ್ಮ ಶಕ್ತಿಯಿಂದಲೇ ಈ ಪರಿಸ್ಥಿತಿಯೊಳಗಿಂದ ಪಾರಾಗಲು ಸಾಧ್ಯವಿಲ್ಲದಾಗಿದೆ. ಆದ್ದರಿಂದ ಅವರಿಂದ ರಾಷ್ಟ್ರಕಾರ್ಯವು ಆಗಬೇಕಾದಷ್ಟು ಆಗುತ್ತಿಲ್ಲ. ಇವು ಸಂಘಟನೆಗಳ ದಿವಸಗಳಾಗಿವೆ. ಪ್ರಜಾತಂತ್ರದ ಈಗಿನ ದಿವಸಗಳಲ್ಲಿ, ಸಂಘಟನೆಯ ಹೊರತು ಜನತೆಯ ಇಚ್ಛೆಗಳು ಪೂರ್ಣವಾಗಲಾರವು. ಉಚ್ಚ ಧ್ಯೇಯವಿಲ್ಲದಿದ್ದರೆ ಸಂಘಟನೆಯು ಯಶಸ್ವಿಯಾಗಲಾರದು.

ಧ್ಯೇಯ ರಹಿತ ಸಂಘಟನೆಯು ಸಂಘಟನೆಯೇ ಅಲ್ಲ. ಸಂಘಟನೆಗೆ ಉಚ್ಚ ಧ್ಯೇಯವಿರಬೇಕೆಂಬಂತೆ [illegible] ಆವಶ್ಯಕತೆಯೂ ಇದೆ. ಸಂಘಟನೆಗೆ ಒಳಪಟ್ಟ ಪ್ರತಿ ವ್ಯಕ್ತಿಯಲ್ಲಿ, ಶ್ರದ್ಧೆ, ಆಜ್ಞಾಧಾರಕತೆ, ಶಿಸ್ತು ಮತ್ತು ಕಾರ್ಯಕ್ಷಮತೆಗಳು ಬೇಕು. ಅಂದರೇನೇ ಸಂಘಟನೆಯು ಜೀವಂತ ಉಳಿಯುವುದು. ಅದಕ್ಕೆ ಚಾರಿತ್ರ್ಯದ ಜೋಡು ಸಿಕ್ಕರೆ ಅದು ಸಾಮರ್ಥ್ಯಶಾಲಿಯಾಗುತ್ತದೆ. ಆಗ ಅದರಿಂದ ಅಸಾಮಾನ್ಯ ಕಾರ್ಯಗಳಾಗುತ್ತವೆ. ಅದರಲ್ಲಿ 'ಕರ್ತುಂ ಅಕರ್ತುಂ' ಶಕ್ತಿಗಳು ಹುಟ್ಟುತ್ತವೆ.

## ಸಂಘಟನೆ

ಇಂದು ದೇಶದಲ್ಲಿ ಇರುವ ಸಂಘಟನೆ ಮತ್ತು ಅದರ ಕಾರ್ಯಪದ್ಧತಿಗಳನ್ನು ನೋಡಿದರೆ ಅದರ ಮೇಲೆ ಇಂದಿನ ಪರಿಸ್ಥಿತಿಯ ಪರಿಣಾಮವಾದದ್ದು ಕಂಡುಬರುತ್ತದೆ. ಮೇಲೆ ಬಿದ್ದ ತೆರೆಯಲ್ಲಿ ಸಿಕ್ಕು ಅದು ಗುಟುಕರಿಸುತ್ತದೆ. ಆ ತೆರೆಯಿಂದ ಪಾರಾಗುವ ಶಕ್ತಿಯು ಅದರಲ್ಲಿ ಕಾಣುತ್ತಿಲ್ಲ. ನಾವು ಪರಿಸ್ಥಿತಿಯಲ್ಲಿ ಸಿಗಬೇಕೋ, ಪರಿಸ್ಥಿತಿಯನ್ನು ನಮ್ಮ ಹಿಡಿತದಲ್ಲಿ ತೆಗೆದುಕೊಳ್ಳಬೇಕೋ ಎಂಬುದನ್ನು 'ಕರ್ತುಂ ಅಕರ್ತುಂ' ಶಕ್ತಿಯುಳ್ಳ ಸಂಘಟನೆಯೇ ಹೇಳಬಲ್ಲದು. ಮತ್ತು ಅದೇ ದೇಶವನ್ನು ಗುರಿಗೆ ಮುಟ್ಟಿಸಬಲ್ಲದು.

## ಬಾಲಕರ ಸಂಘಟನೆ ನಡೆಯಬೇಕು.

ಹಿಂದಿನ ಮಾರ್ಗದಿಂದ ಹೊರಟ ಈ ಸಂಘಟನೆಗಳು ಎಂದೂ ಯಶಸ್ವಿಯಾಗಲಾರವು. ಸಂಘಟನೆಯಲ್ಲಿರುವ ವ್ಯಕ್ತಿಗಳಲ್ಲಿ ಇರಬೇಕಾದ ಗುಣಗಳೇ ಅಭಾವವಿದ್ದಾಗ್ಗೆ ಅದರ ಧ್ಯೇಯವು ಸಾಧಿಸುವುದೆಂತು?

ಚಿಕ್ಕವರನ್ನು ಕೈಯಲ್ಲಿ ತೆಗೆದುಕೊಂಡು ಅವರಿಗೆ ಶಾಲೆಯ ಶಿಕ್ಷಣವನ್ನಷ್ಟೇ ಅಲ್ಲದೆ, ನೈತಿಕ ಶಿಕ್ಷಣವನ್ನು ಕೊಟ್ಟು ಅವರನ್ನು ಶೀಲವಂತರನ್ನಾಗಿ ಮಾಡಬೇಕು. ರಾಷ್ಟ್ರಕ್ಕೆ ಚಾರಿತ್ರ್ಯದ ಆವಶ್ಯಕತೆಯಿದೆ. ಯುಗ ಯುಗಗಳಿಂದ ಸ್ವತಂತ್ರವಿದ್ದು ಜಗತ್ತಿಗೆ ಮಾರ್ಗ ದರ್ಶನ ಮಾಡುತ್ತಿದ್ದ ರಾಷ್ಟ್ರಗಳ ತಮ್ಮ ಚಾರಿತ್ರ್ಯವನ್ನು ಎಂದೂ ಅಲಕ್ಷಿಸಿಲ್ಲ. ಅದರ ಬಲದಿಂದಲೇ ಅವು ಬದುಕಿವೆ. ಸ್ವಾತಂತ್ರ್ಯವನ್ನು ಉಳಿಸಿಕೊಂಡು ಪ್ರಸಿದ್ಧವಾಗಿವೆ. ಶೀಲಭ್ರಷ್ಟ ಮನುಷ್ಯನು ಬಹುಕಾಲ ಬದುಕಿದರೂ ಅವನಿಂದ ಲೋಕೋಪಯೋಗಿ ಕೆಲಸವಾಗುವದು ದೂರ; ಉಳಿದು ಅವರ ಸ್ವಂತದ ಕೆಲಸವೂ ಯಶಸ್ವಿಯಾಗುವುದಿಲ್ಲ. ಶೀಲ ಭ್ರಷ್ಟನು ಪರಾವಲಂಬಿಯೂ ಪರದಾಸನೂ ಆಗುತ್ತಾನೆ. ಅದರಂತೆಯೇ ಶೀಲಭ್ರಷ್ಟ ದೇಶದ ಗತಿಯೂ ಆಗುತ್ತದೆ. ಭರತ ಖಂಡದ ಸ್ವತಂತ್ರವಾದದ್ದು ಗಾಂಧೀಜಿಯವರ ಕೃಪೆಯಿಂದ. ಈಗ ನಾವು ನಮ್ಮ ಶಕ್ತಿಯಿಂದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕು. ಅದರೆ ನೀತಿಭ್ರಷ್ಟರೂ ಚಾರಿತ್ರ್ಯವಿಹೀನರೂ ಆದವರಿಗೆ ಈ ಕಾರ್ಯವು ಹೇಗೆ ಸಾಧ್ಯ?

### ರಾಷ್ಟ್ರೀಯ ಶೀಲ

ಸ್ವಾತಂತ್ರ್ಯ ಪ್ರಾಪ್ತಿಗಾಗಿ ನಾವು ಸುದೃಢ ತರುಣರನ್ನು ಹಿಡಿದು ಹೋರಾಟಕ್ಕೆ ಸಿದ್ಧಗೊಳಿಸಿದೆವು. ಆಗ ಬಾಲಕರ ಕಾರ್ಯವು ವಿಶೇಷ ಇದ್ದಿಲ್ಲ. ಅವರನ್ನು ಬಿಟ್ಟು ಹೋರಾಟವನ್ನು ನಡೆಸಬೇಕಾಯಿತು. ಆದರೆ ಇಂದಿನ ಕಾಲವು ಬೇರೆಯಾಗಿದೆ. ಧ್ಯೇಯವೂ ಬೇರೆ. ಅದ್ದರಿಂದ ಕಾರ್ಯ ಪದ್ಧತಿಯೂ ಬೇರೆಯಾಗಲೇಬೇಕು. ಆಗ ತರುಣರನ್ನು ಹಿಡಿದದ್ದರೆ ಇಂದು ಬಾಲಕರನ್ನು ಕರೆಯಬೇಕಾಗಿದೆ. ಬಾಲಕರಿಗೆ ಶಿಕ್ಷಣ ಕೊಟ್ಟು, ಅವರನ್ನು ಶೀಲವಂತರನ್ನಾಗಿ ಮಾಡಬೇಕಾಗಿದೆ. ಒಮ್ಮೆ ನಾವು ಸಂಘಟಿತರಾದರೆ ಮತ್ತು ಅದನ್ನು ಶಿಸ್ತಿನ ತಳಹದಿಯ ಮೇಲೆ ಕಟ್ಟಿದರೆ ದೊರೆತ ಸ್ವಾತಂತ್ರ್ಯವನ್ನು ರಕ್ಷಿಸುವದು ಮತ್ತು ದೇಶದಲ್ಲಿ ಸುಖ ಶಾಂತಿಗಳನ್ನು ಹುಟ್ಟಿಸುವದು ಕಠಿಣವಾಗಲಾರದು. ಧ್ಯೇಯ ಪ್ರಾಪ್ತಿಯು ಕೇವಲ ಉತ್ಸಾಹದಿಂದ ಆಗುವುದಿಲ್ಲ. ಏಕೆಂದರೆ ಉತ್ಸಾಹವು ಬಹಳ ಹೊತ್ತು ತಡೆಯುವುದಿಲ್ಲ. ಉತ್ಸಾಹದ ಜೊತೆಗೆ ನಿಷ್ಠೆಯು ಅವಶ್ಯ. ಅದರಂತೆಯೇ ಆಜ್ಞಾಪಾಲನ, ಶಿಸ್ತಿನ ವರ್ತನೆ, ಸಹಿಷ್ಣುತೆ ಸಮತೋಲ ಬುದ್ಧಿ, ಆತ್ಮ ವಿಶ್ವಾಸ ಮತ್ತು ಪ್ರಾಮಾಣಿಕತೆಗಳು ಅದಕ್ಕೆ ಕೂಡಿದರೆ ಗುರಿಯನ್ನು ಮುಟ್ಟಲು ವಿಲಂಬವಾಗುವುದಿಲ್ಲ. ಇವುಗಳ ಹೊರತು ಯಾರೂ ಗುರಿ ಮುಟ್ಟಲಾರರು. ಅದ್ದರಿಂದ ನಮ್ಮ ಬಾಲ, ಬಾಲಿಕೆಯರಲ್ಲಿ ಈ ಗುಣಗಳು ಹುಟ್ಟುವಂತೆ ನಾವು ಪ್ರಯತ್ನಿಸಬೇಕಾಗಿದೆ. ಮನೆ, ಶಾಲೆ, ಸಭೆ, ವಾಙ್ಮಯಗಳ ದ್ವಾರಾ ಅವರಿಗೆ ಶಿಕ್ಷಣ ಕೊಡಬೇಕು. ಶಿಕ್ಷಣದ ಪ್ರಸಂಗದಲ್ಲೆಲ್ಲ ಈ ಗುಣಗಳು ನಮ್ಮ ಬಾಲ–ಬಾಲಿಕೆಯಲ್ಲಿ ಹುಟ್ಟಿ, ಅವರು ಚಾರಿತ್ರ್ಯವಂತರು ಆಗುವಂತೆ ನೋಡುವ ಕಾರ್ಯವನ್ನು ಪ್ರತಿಯೊಬ್ಬ ಕಾರ್ಯಕರ್ತನು ಮಾಡಬೇಕು. ಅಂದರೇನೇ ರಾಷ್ಟ್ರವು ಚಾರಿತ್ರ್ಯವಂತವಾಗಿ ಜಗತ್ತಿನಲ್ಲಿ ಪ್ರಕಾಶಿಸುವುದು. ನಾವು ನಿರ್ಮಾಣ ಮಾಡಿದ ಪೀಳಿಗೆಯೇ ನಮ್ಮ ಚಾರಿತ್ರ್ಯಭಾವವನ್ನು ತುಂಬಿ ಕೊಡುವದು.

ಈಗ ಎಲ್ಲೆಲ್ಲಿಯೂ ಶಿಸ್ತು, ಕಾರ್ಯಕ್ಷಮತೆಗಳ ಅಭಾವವು ಕಂಡು ಬರುತ್ತದೆ. ಅತ್ಯಂತ ಲೋಕ ಪ್ರಿಯ ನೇತ್ರಾ ಅನುಭವಿಕ ಮುಖಂಡರ ಮಾತುಗಳನ್ನು ಕೂಡ ಸುಶಿಕ್ಷಿತ ತರುಣ ವರ್ಗವು ಧಿಕ್ಕರಿಸುತ್ತಿದೆ. ಇದರ ಮೂಲಕ ಆಗುತ್ತಿರುವ ದೇಶದ ಹಾನಿಯು ಯಾರ ಲಕ್ಷ್ಯಕ್ಕೂ ಬರುತ್ತಿಲ್ಲ. ಈ ಸ್ಥಿತಿಯನ್ನು ಸುಧಾರಿಸಲು ನಾವು ವಿಶ್ವ ಪ್ರಯತ್ನ ಮಾಡಬೇಕಾಗಿದೆ. ಆ ಪ್ರಯತ್ನವೆಂದರೇ ಬಾಲ–ಬಾಲಿಕೆಯರನ್ನು ಹಿಡಿದು ಅವರಿಗೆ ಶಿಕ್ಷಣ ಕೊಡುವದು.

### ಮತ ತತ್ವಗಳು

ಇಂದು ಮತ ಮತಾಂತರಗಳ ಹಾವಳಿಯು ಬಹಳವಾಗಿದೆ. ತತ್ವಗಳನ್ನು ಎಳೆದಾಡಿ, ರಾಜಕಾರಣದ ಆಟವನ್ನು ಆಡುವ ಬೇರೆ ಬೇರೆ ಗುಂಪುಗಳನ್ನು ನಿರ್ಮಾಣ ಮಾಡುವದರಲ್ಲಿ ನಾವು ಮಗ್ನರಾಗಿದ್ದೇವೆ. ಒಂದೇ ಮನೆಯವರಲ್ಲಿ ಬೇರೆ ಬೇರೆಗಳ ತತ್ವಗಳಂತೆ ಕೆಲಸ ಮಾಡುವ ಜನರನ್ನು ಇಂದು ಬೇಕಾದಷ್ಟು ನೋಡಬಹುದು. ಪ್ರತಿಯೊಬ್ಬನು ತನಗೆ ಸರಿ ಕಂಡಂತೆ ಚಾರಿತ್ರ್ಯ, ಶೀಲ, ಸತ್ಯ, ಶಿಸ್ತು ಮತ್ತು ಈ ಶಬ್ದಗಳ ವ್ಯಾಖ್ಯೆಯನ್ನು ಮಾಡುತ್ತಿದ್ದಾನೆ ಮತ್ತು ಅದರ ಮೂಲಕ ತನ್ನ ಗುಂಪನ್ನು ಮುಂದೆ ದೂಡಲು ಯತ್ನಿಸುತ್ತಿದ್ದಾನೆ. ಹೀಗಿರುವಾಗ ಬಾಲ ಬಾಲಿಕೆಯರ ವಿಕಾಸದ ಕಡೆಗೆ ಲಕ್ಷ್ಯಗೊಡುವವರಾರು?

ಶಾಲೆ ಕಾಲೇಜುಗಳಲ್ಲಿ, ಸರಕಾರೀ ಕಚೇರಿಗಳಲ್ಲಿ ಕೂಡ ಸೇವಾದಲದ ಸರ್ವಸ್ವಿಗೆ ಒಳಗಾದ ಜನರು ಕಂಡು ಬರುತ್ತಾರೆ. ಉಳಿದ ಅನೇಕರ ಮೇಲೆ ಆರ್. ಎಸ್. ಎಸ್ ದ ಪ್ರಭಾವವು ಉಂಟಾಗಿದೆ. ಶಾಲೆಯಲ್ಲಿಯ ಓರ್ವ ಶಿಕ್ಷಕನು ವಿದ್ಯಾರ್ಥಿಗಳನ್ನು ಸೇವಾದಳದ ಕಡೆಗೆ ಎಳೆಯುತ್ತಿದ್ದರೆ ಇನ್ನೊಬ್ಬನು ಆರ್. ಎಸ್. ಎಸ್.ದ ಕಡೆಗೆ ಜಗ್ಗುವುದನ್ನು ನೋಡಬಹುದು. ಹಳೇ ಪದ್ಧತಿಯ ತಂದೆಯು ತನ್ನ ಮಗನನ್ನು ಕಾಂಗ್ರೆಸಿನಂತೆ ಹೋಗಲು ಹೇಳಿದರೆ, ಅವನ ತರುಣ ಮಗನು ಕಮ್ಯೂನಿಜಂದ ಕಡೆಗೆ ಹೋಗುತ್ತಿರುದನ್ನು ನೋಡಬಹುದು. ಈ ಪರಿಸ್ಥಿತಿಯಲ್ಲಿ ಚಿಕ್ಕ ಬಾಲ ಬಾಲಿಕೆಯರನ್ನು ಕೂಡಿಸಿ ಅವರಿಗೆ ಶಿಕ್ಷಣ ಕೊಡುವದು ಎಷ್ಟು ಕಠಿಣವಿದೆ ಎಂಬುದನ್ನು ಕಲ್ಪಿಸಬಹುದು. ಆದರೆ ಅಶಾವಾದಿಯೂ ಸುಖಮಯ ಜೀವನದ ಮತ್ತು ಸ್ವಾತಂತ್ರ್ಯ ಭವ್ಯದಿಂದ ಸುಂದರ ಮತ್ತು ದಿವ್ಯ ಸ್ವಪ್ನಗಳನ್ನು ಕಾಣುವವನೂ ಆದ ಕಾರ್ಯಕರ್ತನು ಎಂದೂ ನಿರಾಶನಾಗುವದಿಲ್ಲ. ಯಾವದೇ ಮಾತಿನ ಪರಿವೆಯಿಲ್ಲದೆ ಅವನು ತನ್ನ ಮಾರ್ಗದಲ್ಲಿ ಮುನ್ನುಗ್ಗುವನು.

ಸಂಸ್ಕೃತಿ, ಆಚಾರ ವಿಚಾರ, ಆಹಾರ ವಿಹಾರಗಳೆಲ್ಲವೂ ಹವಾಮಾನದಂತೆ ಮಾರ್ಪಡುತ್ತವೆ. ಹೊಸ ಹೊಸ ಶಾಸ್ತ್ರೀಯ ಶೋಧದ ಮೂಲಕ ಸೃಷ್ಟಿಯ ಮೇಲಿನ ಜನರು ಎಷ್ಟೇ ಹತ್ತಿರ ಹತ್ತಿರಕ್ಕೆ ಬಂದಿದ್ದರೂ ಸುತ್ತು ಮುತ್ತಲಿನ ವಾತಾವರಣದ ಪ್ರಭಾವವು ಹೆಚ್ಚು ಆಗುತ್ತದೆ. ಆ ಪ್ರಭಾವವು ಮನುಷ್ಯನ ಮನಃ ಪ್ರವೃತ್ತಿಯಲ್ಲಿ ಒಮ್ಮೆಲೇ ಸಿತ್ಯಂತರ ಮಾಡುವದೆಂದು ಹೇಳಲು ಬರಲಾರದು. ಇಂದಿನವರೆಗೆ ಆದ ನಮ್ಮ ವರ್ತನೆಯನ್ನು ಆ ಮೂಲಾಗ್ರವಾಗಿ ಅವು ಒಮ್ಮೆಲೇ ಹೇಗೆ ತಿದ್ದಬಲ್ಲವು? ಶಕ್ಯವಿದ್ದಷ್ಟು ಸ್ವಾತ್ಯಂತರವನ್ನು ಉಂಟು ಮಾಡಿ ಎಲ್ಲರೂ ಒಬ್ಬನೇ ದೇವರ ಮಕ್ಕಳೆಂದು ತಿಳಿದು ಸುಖ ಸಮಾಧಾನದಿಂದ ಈ ಜಗತ್ತಿನಲ್ಲಿ ವರ್ತಿಸಿದರಾಯಿತು. ಇದಕ್ಕೆ ಅವಶ್ಯವಿದ್ದ ಶಿಕ್ಷಣವನ್ನೇ ಇಂದಿನ ಹೊಸ ಪೀಳಿಗೆಗೆ ಕೂಡ ಕಲಿಸ ಬೇಕಾಗಿದೆ

### ಮೂಲ ಮಾತು.

ಯಾವಾಗಲೂ ಸತ್ಯ ಹೇಳುವುದು, ಹಿರಿಯರ ಮಾತನ್ನು ಕೇಳುವುದು, ಎರಡನೆಯವರ ಮೇಲೆ ಅವಲಂಬಿಸದೆ ತಮ್ಮ ಕೆಲಸವನ್ನು ತಾವೇ ತತ್ಪರತೆಯಿಂದ ಮಾಡಿಕೊಳ್ಳುವದು, ಪರಸ್ಪರ ಸಹಾಯ ಮಾಡುವದು, ಎಲ್ಲರೊಡನೆ ಪ್ರೇಮದಿಂದ ನಡೆದುಕೊಳ್ಳುವುದು, ಸ್ವಚ್ಛತೆ ಮತ್ತು ಅಚ್ಚುಕಟ್ಟುತನದಿಂದ ಕಾರ್ಯ ಮಾಡುವುದು, ದೇಶದ ಮಹಾಮುಖಂಡರ ಚರಿತ್ರೆಗಳ ಪರಿಚಯ ಮಾಡಿಕೊಳ್ಳುವುದು ಇವೇ ಮೊದಲಾದ ಪಾಠಗಳನ್ನು ದೇಶದ ಹೊಸ ಪೀಳಿಗೆಗೆ ಕಲಿಸುವುದು ಮತ್ತು ಅವರಲ್ಲಿ ಸ್ವಲ್ಪವೂ ದ್ವೇಷವು ಉಳಿಯದಂತೆ ನೋಡಿಕೊಳ್ಳುವುದ ಅವಶ್ಯವಿದೆ. ನೋಡಲಿಕ್ಕೆ ಈ ಕಾರ್ಯವು ಸಣ್ಣದಾಗಿ ತೋರುತ್ತಿದ್ದರೂ ಅದರಲ್ಲಿಯೇ ನಮ್ಮ ನಿಜವಾದ ಕಲ್ಯಾಣವಿದೆ. ಈ ತರಹದ ಶಿಕ್ಷಣದ ಅಭಾವದ ಮೂಲಕವೇ ಇಂದು ನಾವು ಚಾರಿತ್ರ್ಯಕ್ಕೆ ಎರವಾಗಿದ್ದೇವೆ. ನಮ್ಮಲ್ಲಿ ಕಾಣುತ್ತಿರುವ ಶೀಲಭ್ರಷ್ಟತೆಯು ಇದೇ ಕಾರಣದಿಂದ. ಇಂದಿನ ಪರಿಸ್ಥಿತಿಯು ಕೆಟ್ಟದ್ದಾದರೂ ಅದಕ್ಕೇನೇ. ಮೇಲೆ ಹೇಳಿದ ಶಿಕ್ಷಣದಿಂದಲೇ ಮನುಷ್ಯನಲ್ಲಿ ಶಿಸ್ತು ಹುಟ್ಟುತದೆ. ಅವನು ಕಾರ್ಯಕ್ಷಮನಾಗುತ್ತಾನೆ ಮತ್ತು ಅವನ ದೃಷ್ಟಿಯು ವಿಶಾಲಗೊಂಡು ತನ್ನ ದೇಶಬಾಂಧವರಿಗಾಗಿ ಬೇಕಾದ ತ್ಯಾಗವನ್ನು ಮಾಡಲು ಅವನು ಸಿದ್ಧನಾಗುತ್ತಾನೆ. ಈ ಶಿಕ್ಷಣದಲ್ಲಿಯೇ ಚಾರಿತ್ರ್ಯವಿದೆ ಮತ್ತು ಅದು ಬೇಕಾದ ಪರಿಸ್ಥಿತಿಯಿಂದ ಪಾರಾಗುವ ಶಕ್ತಿಯನ್ನು ಒದಗಿಸುತ್ತದೆ.

ಜೈಹಿಂದ್.

---

ನಾರ್ಥ್ ಈಸ್ಟ್‌ದ ಮಾಸಿಕವೊಂದರಲ್ಲಿ ನಾಜೀ ಪಕ್ಷದ ಭಾವೀ ಧುರೀಣನೆಂದು ಗಣಿಸಲಾಗಿರುವ ಮಾರ್ಟಿನ್ ಬೋರಮ್ಯಾನ್ ಅವರ ಸಂದರ್ಶನವೊಂದು ಪ್ರಕಟವಾಗಿದ್ದು ಅದರಲ್ಲಿ ಅವರು ಹಿಟ್ಲರನು ತಿಬೇಟದಲ್ಲಿಯ ಒಂದು ಬೌದ್ಧ ವಿಹಾರದಲ್ಲಿ ಜೀವಂತವಿರುವನಾಗಿ ಉಲ್ಲೇಖಿಸಿದ್ದಾರೆ.

ಭಾರತ ಸೈನ್ಯ ಪಡೆಯ ಮಹಾದಂಡನಾಯಕರಾದ ಜ. ಕೆ. ಎಂ. ಕಾರ್ಯಪ್ಪನವರು ಮೇಜರ್ ಕೆ. ಎಸ್. ತಿಮ್ಮಯ್ಯನವರೊಡನೆ ಕಾಮನ್‌ವೆಲ್ತ್ ಸೇನಾಧಿಕಾರಿಗಳ ಸಮ್ಮೇಳನಕ್ಕಾಗಿ ಲಂಡನ್ನಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

ಹಿಂದೀಯಲ್ಲಿ ಉಚ್ಚ ಶಿಕ್ಷಣ ಕೊಡುವ ಬಗ್ಗೆ 'ಹಿಂದೀ ವಿಶಾರದ ವಿದ್ಯಾಲಯ' ಎಂಬ ಹೆಸರಿನ ಒಂದು ಹಿಂದೀ ಕಾಲೇಜನ್ನು ಇದೇ ಮೇ ತಿಂಗಳ ತಾ. ೧೬ರಿಂದ ಧಾರವಾಡದಲ್ಲಿ ತೆರೆಯಲಾಗಿದೆ.

---


**THE WARDEN INSURANCE CO., Ltd.**
Head Office: Bombay.

**LIFE, FIRE, ACCIDENT, MOTOR & W. C. INSURANCES.**

*Managing Director;* – **S. H. THAKER.**

| | |
|---|---|
| Business in force | Rs. 5,00,00,000 |
| Assets | ,, 1,00,00,000 |
| Income | ,, 35,00,000 |

Also **LOCAL MANAGERS OF**
**THE LONDON GUARANTEE & ACCIDENT CO., Ltd.**
(Incorporated in England)
Assets Exceed Rs. 10,00,00,000

a Subsidiary Company of
**THE PHOENIX ASSURANCE CO. Ltd.**
(One of the Largest Assurance Companies in the World)
Assets Exceed Rs. 45,00.00,000

Transact **FIRE INSURANCE**

**Enquiries for representation solicited.**

***Apply to:***

**Chief Agency Office** *or* **A. S. Aiyappa,**
*Virajpet (Coorg)* ***Branch Secretary,***
***Gandhinagar,***
***BANGALORE CITY***

# ಓದುಗರ ಓಲೆಗಳು.

### ಈ ಸುಲಿಗೆ ನಿಲ್ಲಬೇಕು.

ಕೆಲವು ದಿನಗಳ ಹಿಂದೆ ಡೆಂಟನ್ ಫಾರೆಸ್ಟ್ ಕಾಲೇಜಿನ ಸಮಾರಂಭವೊಂದರಲ್ಲಿ ಭಾರತದ ಗೃಹ ಮಂತ್ರಿ ಸರ್ದಾರ್ ಪಟೇಲರು ಭಾಷಣ ಮಾಡುತ್ತಾ ಕಾಡನ್ನು ನಾಶ ಮಾಡುವವನ್ನು ನಿಲ್ಲಿಸಬೇಕು. ನಮಗೆ ಮಳೆ ತರುವ, ಬೇಕಿ ಕೊಡುವ ಇತರ ಅತ್ಯಾವಶ್ಯಕ ವಸ್ತುಗಳನ್ನು ಒದಗಿಸುವ ಮರಗಳನ್ನು ಪೂಜೆ ಮಾಡಬೇಕು ಎಂದರು. ಕೆಲವು ದಿನಗಳ ನಂತರ ಮದ್ರಾಸಿನ ಮಂತ್ರಿಗಳೊಬ್ಬರು ಈ ವಿಚಾರವಾಗಿ ಮಾತಾಡುತ್ತಾ ಕಾಡುಗಳನ್ನು ಹಿತಮಿತವಿಲ್ಲದೆ ನಾಶ ಮಾಡುವುದೇ ಬರಗಾಲಕ್ಕೆ ಒಂದು ಕಾರಣವೆಂದರು. ಮೊನ್ನೆಯಾಗಿ ಭಾರತದ ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಇದೇ ಮಾತನ್ನು ಹೇಳಿದ್ದಾರೆ ಪ್ರತಿ ವರ್ಷ ದೇಶವಿಡೀ ಒಂದು ವಾರದವರೆಗೆ ಮರ ನೆಡುವ ಯೋಜನೆಯನ್ನು ಜಾರಿಗೆ ತರುವ ಸೂಚನೆಯನ್ನೂ ಅವರು ಮಾಡಿದ್ದಾರೆ.

ಕೊಡಗಿನಲ್ಲಿ ಕೆಲವು ವರ್ಷಗಳಿಂದ ಅರಣ್ಯ ಸಂಪತ್ತಿನ ಸುಲಿಗೆಯು ತಡೆಯಿಲ್ಲದೆ ನಡೆಯುತ್ತಿದೆ. ರಸ್ತೆಯ ಎರಡು ಬದಿಗಳಲ್ಲೂ ಎಲ್ಲಿ ಹೋದರೂ ತೊಲೆಗಳ ರಾಶಿ ಕಾಣಬಹುದು, ಈ ರೀತಿಯ ಮರ ಮಾರಾಟದಿಂದ ಕೊಡಗಿನ ಕಾಡುಗಳು ಬಯಲುಗಳಾಗುತ್ತಿವೆ. ಕ್ರಮೇಣವಾಗಿ ಕೊಡಗಿನಲ್ಲಿ ಬರಗಾಲದ ಚಿಹ್ನೆ ಕಂಡುಬರುತ್ತಿದೆ ಕೊಡಗಿನ ವ್ಯಾಪಾರಿಗಳಲ್ಲಿ ಮರ ವ್ಯಾಪಾರಿಗಳ ಸಂಖ್ಯೆ ವಿಪರೀತವಾಗಿದೆ ಎಲ್ಲರೂ ಮರ ವ್ಯಾಪಾರಿಗಳೇ! ಎಲ್ಲರೂ ಮರ ಮಾರುವವರೆ. ಕೊಡಗಿನ ಸರಕಾರವು ಈ ವಿಚಾರದಲ್ಲಿ ಸಂಬಂಧವಿಲ್ಲದಂತೆ ತಟಸ್ಥ ನೀತಿಯನ್ನನುಸರಿಸಿದೆ ಇನ್ನಾದರೂ ಎಚ್ಚೆತ್ತು ಮರಗಳ ಮಾರಾಟ ಹಿಡಿತವಿಲ್ಲದೆ ನಡೆಯುವದನ್ನು ನಿಲ್ಲಿಸಬೇಕು ಮರ ಕಡಿಯುವದಾದರೆ ದಟ್ಟವಾಗಿ ಬೆಳೆದಿರುವ ಕಡೆ ನಿಶ್ಚಿತ ಪರಿಮಾಣದ ಮರಗಳನ್ನು ಕಡಿಯುವ ಏರ್ಪಾಡು ಮಾಡಬೇಕಲ್ಲದೆ ಸಿಕ್ಕಿ ಸಿಕ್ಕಿದಂತೆ ಮರ ಕಡಿಯುವವನ್ನು ಮನ್ನ ಮಾಡಬೇಕು. ಇದೇ ಅಲ್ಲ; ಪ್ರತಿ ವರ್ಷ ಪ್ರತಿ ಗ್ರಾಮದಲ್ಲಿ ಮರ ನೆಡುವ ಕಾರ್ಯಕ್ರಮವನ್ನೂ ಜಾರಿಗೆ ತರಬೇಕು. ಸರಕಾರ ಗಮನಿಸುವದೇ?

ಕೆ. ಕಾಳಪ್ಪ.

---

### ಮಳೆಯ ಅಭಾವ.

ತಾ ೫-೫-೫೦ರ ಕೊಡಗು ಪತ್ರಿಕೆಯಲ್ಲಿ "ಚಿನ್ನದ ಮೊಟ್ಟೆಯಿಡುವ ಕೋಳಿ" ಎಂಬ ಶ್ರೀ ಜಿ ಟಿ. ನಾರಾಯಣ ರಾಯರು ಬರೆದ ಲೇಖನವನ್ನು ಸರಕಾರದವರು ಇನ್ನೂ ಪರಾಂಬರಿಸಲಿಲ್ಲವೆಂದು ತೋರುತ್ತದೆ ಲೇಖಕರು ಓದುಗನ ಮನಮುಟ್ಟುವಂತೆ ಇಂದಿನ ಕೊಡಗಿನ ಪರಿಸ್ಥಿತಿಯನ್ನು ಚಿತ್ರಿಸಿದ್ದಾರೆ

ನೀರಿನ ಅಭಾವದಿಂದಾಗಿ ಇಂದು ಜನತೆ ಪಡುತ್ತಿರುವ ಪಾಡು ಸರಕಾರಕ್ಕೆ ತಿಳಿಯದೇನು? ಯಾರಾದರೂ ತನ್ನ ಕಾಲಿಗೆ ತಾನೇ ಕಲ್ಲು ಹಾಕಿಕೊಳ್ಳುವುದಿದೆಯೇ? ಅಂತಾಗಿದೆ ಇಂದು ನಮ್ಮ ದೇಶದ ಗತಿ. ದೊಡ್ಡ ದೊಡ್ಡ ಕಾಡುಗಳು ನಾಶವಾದವು. ಆ ಕಾಡುಗಳಲ್ಲಿರುವ ಮರಗಳು ತನ್ನೊಡನೆಯೇ ಮಳೆಯನ್ನೂ ಕೊಂಡೊಯ್ದವೆಂದರೆ ಅತಿಶಯೋಕ್ತಿಯಾಗಲಾರದು. ಮರ ವ್ಯಾಪಾರದಿಂದಾಗಿ ಎಷ್ಟೋ ಮಂದಿ ಧನಿಕರಾದರು. ಸರಕಾರಕ್ಕೆ ವಿಶೇಷ ಖರ್ಚಿಲ್ಲದೆ ಅಪಾರ ಧನಲಾಭವಾಗಿಯೂ ಆಯಿತು ಆದರೆ ಇದರಿಂದೆಲ್ಲಾ ಏನು ಪ್ರಯೋಜನವಾಯಿತು? ನಮ್ಮ ಕಾಲಿಗೆ ನಾವು ಕಲ್ಲೆಳೆದುಕೊಂಡೆವು. ನಮ್ಮ ಜನನಿ ಕಾವೇರಿ ಮಾತೆ ಮುನಿದಳು. ಮಳೆಯ ಅಭಾವ ತಲೆದೋರಿದೆ! ಆದ್ದರಿಂದ ಸರಕಾರವು ನಿರ್ಲಕ್ಷತೆಯಿಂದ ಕೊಡಗನ್ನು ಬರಗಾಲಕ್ಕೆ ಗುರಿಪಡಿಸಬಾರದು.

ದಯವಿಟ್ಟು ಕೊಡಗಿನಿಂದ ಹೋಗತಕ್ಕ ಮರಗಳ ಪರಿಮಾಣವನ್ನು ನಿಲ್ಲಿಸಿ. ನಮ್ಮ ಮೂರ್ಖತೆಗೆ ಶ್ರೀ ಕಾವೇರಿ ಮಾತೆಯ ಕ್ಷಮೆಯಾಚಿಸೋಣ.

M. L S

---

### ಉಪಾಧ್ಯಾಯರ ತರಬೇತು ಶಾಲೆ.

ಪುಸ್ತಕಗಳನ್ನು ಓದಿ ಬಾಯಿಪಾಠ ಮಾಡುವುದು ವಿದ್ಯೆಯಲ್ಲವಷ್ಟೆ! ಒಂದು ಶಾಲೆಯು ಮತ್ತು ವಿದ್ಯಾರ್ಥಿಗಳ ಬೆಳವಣಿಗೆಯು ಅದು ಇರುವ ಸ್ಥಳ, ಅಲ್ಲಿಯ ಚಟುವಟಿಕೆಗಳ ಮೂಲಕವೂ ಹೊಂದಿಕೊಂಡಿದೆ. ಉಪಾಧ್ಯಾಯರ ತರಬೇತು ಶಾಲೆಯಂಥಾ ಸಂಸ್ಥೆಯು ಮಡಿಕೇರಿಯಿಂದ ವೀರಾಜಪೇಟೆಗೆ ವರ್ಗಾಯಿಸಲ್ಪಟ್ಟರೆ ಮಕ್ಕಳ ಕಲಿಯುವಿಕೆಯಲ್ಲಿ ಏನೂ ವ್ಯತ್ಯಾಸವಾಗಲಾರದು. ಹೀಗಿದ್ದರೂ ತರಬೇತು ಹೊಂದುವವರು ಮಂಗಳೂರು, ಬೆಂಗಳೂರಿನಂಥಾ ಸ್ಥಳಗಳಲ್ಲಿ ಹಿಂದೆ ತರಬೇತು ಹೊಂದುತಿದ್ದದನ್ನು ಬಿಟ್ಟು ಈಗ ಮಡಿಕೇರಿಯಲ್ಲಿ ಅವಕಾಶವಿಟ್ಟದ್ದು ಎಷ್ಟೋ ವಿಷಯಗಳಲ್ಲಿ ಅಸಮಾಧಾನಕರವಾಗಿದೆಯೆಂದೂ ಅವರಿಗೆ ಕಂಡುಬರದೆ ಇಲ್ಲ. ಅದನ್ನೂ ಈಗ ವೀರಾಜಪೇಟೆಯಲ್ಲಿ ಇಡುವದೆಂದರೆ ಖೇದದ ಸಂಗತಿ. ಪ್ರಾರಂಭದಲ್ಲಿ ಹೇಳಿದಂತೆ ಕೇವಲ ಓದು ವಿಷಯವೆಂದಾದರೆ ಯಾವ ಗ್ರಾಮದಲ್ಲೂ ಅಂಥಾ ಶಾಲೆಯನ್ನಿಟ್ಟರೂ ಓದುವಿಕೆಯೇನೋ ಸಾಗದೆ ಇಲ್ಲ.

ಸಂಬಂಧಪಟ್ಟ ಅಧಿಕಾರಿಗಳು ಕೇವಲ ಯೋಚಿಸದೆ ಮಾಡಿದ ಕೆಲಸವೂ ಅಲ್ಲ. ಮಡಿಕೇರಿಯಲ್ಲಿ ಕಾಲೇಜಿನ ನಿಮಿತ್ತ ಸ್ವಲ್ಪವೂ ಜಾಗವಿಲ್ಲವಂತೆ. ವೀರಾಜಪೇಟೆಯಲ್ಲಿ ಅದಕ್ಕಾಗಿ ಹೊಸ ಕಟ್ಟಡ ಕಟ್ಟಿಸಿದರಂತೆ ಆದರೆ ಅದೇ ಕಟ್ಟಡ ಮಡಿಕೇರಿಯಲ್ಲಿಯೇ ಕಟ್ಟಿಸಬಹುದಿತ್ತು. ಅದಿಲ್ಲದಿದ್ದರೂ ಮಡಿಕೇರಿಯಲ್ಲಿಯೇ ಈ ತರಬೇತಿನ ಎರಡು ತರಗತಿಗಳಿಗೆ ಎರಡು ಕೋಣೆ ಕಂಡುಹಿಡಿಯುವುದು ಪ್ರಯಾಸಕರವಾಗಿರಲಿಲ್ಲ. ಯಾರೋ ಒಬ್ಬರು ಈ ವಿಷಯದಲ್ಲಿ ಹುಡುಗರ ಮಾನಸಿಕ ಬೆಳವಣಿಗೆಯ ಮತ್ತಿತರ ದೃಷ್ಟಿಗಳಿಂದ ಇದು ಮಡಿಕೇರಿಯಲ್ಲಿಯೇ ನಿಲ್ಲಬೇಕೆಂದು ಭಾವಿಸಿದ್ದರೆ ಹೀಗಾಗುತ್ತಿರಲಿಲ್ಲ ನನ್ನ ವಾದವನ್ನು ಕೇಳಿ ಮಡಿಕೇರಿಯಲ್ಲಿ ಇಂಥಾ ಶಾಲೆಯನ್ನಿಡಲು ಹೆಚ್ಚಿಗೆ ಏನುಂಟು ಎಂದು ಪ್ರಶ್ನಿಸಬಹುದು ಹೆಚ್ಚೇನೂ ಅಲ್ಲಿ ಇರಲಿಕ್ಕಿಲ್ಲ ಆದರೂ ಮಡಿಕೇರಿಯಲ್ಲಿಯೇ ಇಟ್ಟಿದ್ದರೆ ಶಾಲೆಯ ಘನತೆ ಯೋಗ್ಯತೆ ಮತ್ತು ಪ್ರಯೋಜನಕತೆಯು ಇಂದಿಷ್ಟು ಪ್ರಮಾಣದಲ್ಲಿ ಹೆಚ್ಚುತಿತ್ತು!

"ನಿರೀಕ್ಷಕ"

ನಿಮ್ಮ ಸೌಭಾಗ್ಯಾಭಿವೃದ್ಧಿಗೆ



ಗ್ರಹಣಾದಿ ಪುಣ್ಯ ಕಾಲಗಳಲ್ಲಿ ಶಾಂತಿನಿಯಮಾದಿಗಳಿಂದ ತಯಾರಿಸಿದ **ನವಗ್ರಹ ವಿಜಯ** ಮಹಾ ಯಂತ್ರವನ್ನೂ ಲಕ್ಷ್ಮೀ ವಶೀಕರಣ ಎಂಬ ಮಹಾ ಅಂಜನವನ್ನೂ ನಿತ್ಯ ಧರಿಸಿರಿ.

ತಮ್ಮ ಮನೋಭಿಷ್ಟಾದಿ ಸಕಲ ಕಾರ್ಯಾನುಕೂಲತೆಗೂ ಸೌಭಾಗ್ಯಾದಿ ಸಂಪತ್ತುಗಳ ಅಭಿವೃದ್ಧಿಗೂ, ನವಗ್ರಹ ವಿಜಯ ಮಹಾ ಯಂತ್ರವನ್ನು ದೇಹದಲ್ಲಿ ಧರಿಸಿ ಲಕ್ಷ್ಮೀ ವಶೀಕರಣವೆಂಬ ಮಹಾ ಅಂಜನವನ್ನು ಹುಬ್ಬುಗಳ ನಡುವೆ ಅಕ್ಷತೆಯಂತೆಯೂ ಸ್ತ್ರೀಯರು ಕುಂಕುಮದಂತೆಯೂ ನಿತ್ಯ ಧರಿಸುವದರಿಂದಲೇ ಸೌಭಾಗ್ಯಾಭಿವೃದ್ಧಿಯುಂಟಾಗುವದು.

| | | | |
|---|---|---|---|
| ಲಕ್ಷ್ಮೀ ವಶೀಕರಣ ಮಹಾ ಅಂಜನ 1 ತೊಲ | 15 | 0 | 0 |
| ಅರ್ಧ ತೊಲ | 8 | 0 | 0 |
| ನವಗ್ರಹ ವಿಜಯ ಮಹಾ ಯಂತ್ರ, ಬಂಗಾರದ ತಾಯಿತ | 120 | 0 | 0 |
| ಬೆಳ್ಳಿಯ ತಾಯಿತ ,, ,, | 15 | 0 | 0 |
| ಧನಕನಕಾಭಿವೃದ್ಧಿಗೆ ಶ್ರೀಮಹಾಲಕ್ಷ್ಮೀ ಯಂತ್ರ ಬೆಳ್ಳಿ ತಾಯಿತ | 5 | 0 | 0 |
| ಭೂತಪ್ರೇತ ನಿವಾರಣೆಗೆ ಮಹಾಕಾಳೀ ಯಂತ್ರ | 8 | 0 | 0 |
| ಸಂತಾನಾಭಿವೃದ್ಧಿಗೆ ಕುಮಾರಸ್ವಾಮಿ ಯಂತ್ರ | 15 | 0 | 0 |
| ಮಕ್ಕಳ ಸಕಲ ರೋಗ ನಿವಾರಣೆಗೆ ಬಾಲಗ್ರಹ ಯಂತ್ರ | 5 | 0 | 0 |
| ವಿದ್ಯಾ ಬುದ್ಧಿಗಳ ಅಭಿವೃದ್ಧಿಗೆ ಸರಸ್ವತಿ ಮಹಾ ಯಂತ್ರ | 5 | 0 | 0 |
| ಸರ್ವಜನ ಪ್ರೀತಿಗೂ ಮನೋಭಿಷ್ಟಾದಿ ಪ್ರಾಪ್ತಿಗೂ ಆನಂದಭೈರವಿ | 5 | 0 | 0 |
| ರಾಜಕೀಯ ವ್ಯವಹಾರಾದಿಗಳ ಜಯಪ್ರದಕ್ಕೆ ಮಹಾರಾಜವಶ್ಯ | 4 | 0 | 0 |
| ವ್ಯಾಪಾರ ಧನಾಭಿವೃದ್ಧಿಗೆ ವ್ಯಾಪಾರ ಸಂಜೀವಿನಿ ಯಂತ್ರ | 4 | 0 | 0 |
| ಗೃಹ, ಭೂಮಿ, ಪಶು, ತೋಟಗಳ ಅಭಿವೃದ್ಧಿಗೆ ಭೂಗರ್ಭ ಯಂತ್ರ ತಾಮ್ರದ ತಾಯಿತ | 16 | 0 | 0 |

ಇದರಲ್ಲಿ ತಮಗೆ ಬೇಕಾದುದನ್ನು ತಿಳಿಸಿ ಅದರ ಬೆಲೆಯೊಂದಿಗೆ ಪೋಸ್ಟೇಜ್ 12 ಅಣೆಯನ್ನು ಸೇರಿಸಿ ಮನಿಯಾರ್ಡರ್ ಮಾಡಿರಿ. ನಿಮ್ಮ ಜನ್ಮ ನಕ್ಷತ್ರದ ರಾಶಿಗೆ ಈ ವರ್ಷದಿಂದ 12 ವರ್ಷಗಳವರೆಗಿನ ಕಷ್ಟಸುಖಾದಿಗಳನ್ನು ತಿಳಿಸುವ ಭವಿಷ್ಯ ಪುಸ್ತಕ ತಯಾರಾಗಿದೆ ಬೆಲೆ ರೂ. 4 ನಮ್ಮಲ್ಲಿ ಜಾತಕ ಮುಹೂರ್ತ ಪ್ರಶ್ನಾದಿಗಳ ಫಲವನ್ನು ಸಮರ್ಪಕವಾಗಿ ತಿಳಿಯಬಹುದು 9—1

**ಎನ್.ವೆಂಕಟಸುಬ್ಬಪುತ್ರಾಪ್**
**ಶ್ರೀದೇವಿಪ್ರಸಾದ ಜ್ಯೋತಿಷ್ಯಾಲಯ ಬಳ್ಳಾರಿ**

ಮುಂದಿನ ಪರಿಸ್ಥಿತಿಯನ್ನು ಎದುರುಗೊಳ್ಳಲು ಸಿದ್ಧವಾಗುವ ಸಮಯದಲ್ಲಿ—

ನೀವು ವಿಶ್ರಾಂತಿ ಪಡೆಯುವ ಪೂರ್ವದಲ್ಲೇ ನೀವು ಇಷ್ಟು ಪುಷ್ಟವಾಗಿ ಸಕಲ ವ್ಯವಸ್ಥೆಯನ್ನು ಪೂರೈಸಿಕೊಳ್ಳದಿದ್ದರೆ ಅರಿವು ಆವಳಿಗುಂಟಾದಲ್ಲ, ದುಃಖವು ಕಷ್ಟವು ಬಾರದಾದು.

ದಿ **ಜನರಲ್**
**ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್**
ಜೀವ-ಅಗ್ನಿ-ಮೋಟಾರು-ಮರೀನ್-ಅಪಘಾತ
ಹೆಡ್ ಆಫೀಸ್-ಅಜ್ಮೀರ್. ಸ್ಥಾಪನೆ 1907
ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.

# ಕೊಡಗು

ತಾ. ೨೬–೫–೧೯೫೦ನೇ ಶುಕ್ರವಾರ

## ಕೊಡಗಿಗೆ ಗೌರವ.

ಕೊಡಗಿನ ಚರಿತ್ರೆಯನ್ನು ನೋಡಿದರೆ ಇಲ್ಲಿಯ ಮೂಲ ನಿವಾಸಿಗಳು ಪೂರ್ವದಿಂದಲೇ ಕೋವಿಕತ್ತಿಗಳನ್ನು ನಿರ್ಬಾಧಕವಾಗಿ ಉಪಯೋಗಿಸುತ್ತಾ ಬಂದಿರುವರೆಂಬುದು ಕಂಡುಬರುತ್ತದೆ. ಕೊಡಗಿನಂಥಾ ಬೆಟ್ಟ ಗುಡ್ಡಗಳಿಂದ ಕೂಡಿದ ಕಾಡು ಪ್ರದೇಶದಲ್ಲಿ ಕಾಡುಪ್ರಾಣಿಗಳು ಯಥೇಚ್ಛವಾಗಿದ್ದು ವ್ಯವಸಾಯಮಾಡಿ ಆಹಾರ ಪದಾರ್ಥ ಬೆಳೆಸುವದೆಂದರೆ ಬಹು ಪ್ರಯಾಸದ ಕೆಲಸ. ಇಂಥಾ ಪ್ರದೇಶದಲ್ಲಿ ಭಯಂಕರ ವನ್ಯಜಂತುಗಳಿಂದ ಜನರ ಪ್ರಾಣರಕ್ಷಣೆಗೂ, ಕಾಡುಪ್ರಾಣಿಗಳ ಹಾವಳಿಯಿಂದ ದವಸಧಾನ್ಯದ ರಕ್ಷಣೆಗೂ ಕೋವಿಕತ್ತಿಗಳನ್ನು ಉಪಯೋಗಿಸುವದು ಅತ್ಯಗತ್ಯವಾಗಿತ್ತು. ಬ್ರಿಟಿಷರ ಆಡಳಿತೆಯ ಕಾಲದಲ್ಲಿ ಕೊಡಗಿನ ನಿವಾಸಿಗಳು ಬ್ರಿಟಿಷರಿಗೆ ಸಹಾಯಕರಾಗಿ ನಡೆಸಿದ ಯುದ್ಧಗಳಲ್ಲಿ ತಮ್ಮ ಕುಶಲತೆಯನ್ನು ತೋರಿಸಿದ್ದರಿಂದಲೂ ಮುಂದಕ್ಕೂ ಅವರಿಂದ ಅಂಥಾ ಸಹಾಯ ನಿರೀಕ್ಷಣೆಯಿಂದಲೂ ಕೊಡಗಿನ ಜನರಿಗೆ ಆ ಹಿಂದೆ ಇದ್ದ ಕೋವಿಕತ್ತಿಯ ಉಪಯೋಗದ ಹಕ್ಕನ್ನು ಬ್ರಿಟಿಷ್ ಆಡಳಿತ ಕಾಲದಲ್ಲೂ ಕೊಟ್ಟಿರಬಹುದೆಂದು ಊಹಿಸಬಹುದು. ಕಾರಣವೇನೇ ಇರಲಿ, ಕೊಡಗಿನ ಜನರು ಬಹು ಕಾಲದಿಂದಲೇ ಯಾವದೊಂದೂ ಆತಂಕವಿಲ್ಲದೆ ಕೋವಿಕತ್ತಿಗಳನ್ನು ಉಪಯೋಗಿಸುತ್ತಾ ಬಂದಿರುವರು.

ಹಿಂದೂದೇಶಕ್ಕೆ ಸ್ವರಾಜ್ಯವು ದೊರೆತ ಮೇಲೆ ಕೋವಿ ಕತ್ತಿ ಹಿಡಿಯುವಂಥಾ ಹಕ್ಕು ಎಲ್ಲರಿಗೂ ದೊರೆಯಬಹುದೆಂದು ಹಲವರು ನಿರೀಕ್ಷಿಸಿದ್ದರು. ಆದರೆ ದೇಶದ ಈಗಿನ ವಾತಾವರಣವು ಅಂದರೆ ಅಲ್ಲಲ್ಲಿ ತೋರಿಬರುತ್ತಿರುವ ಅನಾಯಕತ್ವದ ಚಿಹ್ನೆಗಳು ಈ ಹಕ್ಕನ್ನು ಎಲ್ಲರಿಗೂ ವ್ಯಾಪಿಸುವಂತೆ ಮಾಡಲು ಸರಕಾರದ ಕೈಯನ್ನು ತಡೆದಿವೆ. ಕೋವಿ ಕತ್ತಿಯ ಉಪಯೋಗಕ್ಕೆ ನಿರ್ಬಂಧವಿದ್ದರೂ ನಮ್ಮ ದೇಶದಲ್ಲಿ ಅಲ್ಲಲ್ಲಿ ಈ ಆಯುಧಗಳಿಂದ ಹಿಂಸಾಕಾರ್ಯಗಳು ಆಗುತ್ತಿರುವದರಿಂದ ಈ ನಿರ್ಬಂಧನವನ್ನು ತೆಗೆದು ಹಾಕಿದ್ದಾದರೆ ಅನಾಯಕತ್ವವು ಪರಮಾವಧಿಯನ್ನು ತಲುಪುವದೆಂಬ ಭೀತಿಯು ಕೇಂದ್ರ ಸರಕಾರಕ್ಕೆ ಇರಬಹುದು. ಆದರೆ ಮೊನ್ನೆ ತಾನೇ ಹೊರಟಿರುವ ಕೇಂದ್ರ ಸರಕಾರದ ಗೃಹ ಮಂತ್ರಿಗಳ ಪ್ರಕಟಣೆ ಮೇರೆಗೆ ಲೈಸೆನ್ಸ್ ಇಲ್ಲದೆ ಕೋವಿ ಧರಿಸುವ ಹಕ್ಕು ಸಂಸ್ಥಾನ ಸರಕಾರಗಳ ಅತ್ಯುಚ್ಛ ಅಧಿಕಾರಿಗಳಿಗೂ, ಹಿಂದಿನ ಸಂಸ್ಥಾನಗಳ ಮಾಜಿ ಅರಸರುಗಳಿಗೂ, ಅವರ ಕೆಲವು ಕುಟುಂಬಸ್ಥರಿಗೂ, ಅವರ ಅಂಗರಕ್ಷಕರಿಗೂ, ಮತ್ತು ಕೊಡಗು ಪ್ರಾಂತದ ನಿವಾಸಿಗಳ ಒಂದು ವರ್ಗದವರಿಗೂ ಮಾತ್ರ ಕೊಡಲ್ಪಟ್ಟಿದೆ.

“ಈ ಪ್ರಕಟಣೆಯಿಂದ ಒಂದು ವಿಶೇಷತೆಯು ಒಡೆದು ಕಾಣುತ್ತದೆ. ಸಾಮುದಾಯಿಕವಾಗಿ ಕೊಡಗಿನವರಿಗೆ ಮಾತ್ರ ಈ ಹಕ್ಕು ಕೊಡಲ್ಪಟ್ಟಿದೆಯಲ್ಲದೆ ಬೇರೆ ಯಾರಿಗೂ ಇಲ್ಲ. ಹಿಂದೂಸ್ಥಾನದ ೩೩೦ ಮಿಲಿಯ ಜನಸಂಖ್ಯೆಯಲ್ಲಿ ಚಿಕ್ಕ ಪ್ರದೇಶವಾದ ಕೊಡಗಿನ ಕೆಲವು ಸಾವಿರ ನಿವಾಸಿಗಳಿಗೆ ಮಾತ್ರ ಈ ಹಕ್ಕು ದೊರೆತದ್ದು ಕೊಡಗಿಗೆ ದೊಡ್ಡ ಹೆಮ್ಮೆಯ ವಿಚಾರವಾಗಿದೆ. ಇಂಥಾ ಗೌರವಕ್ಕೆ ಕಾರಣವನ್ನಾದರೂ ಕೆಲವು ದಿನಗಳ ಹಿಂದೆ ಮಡಿಕೇರಿಯಲ್ಲಿ ಭಾಷಣ ಮಾಡುತ್ತಾ ಭಾರತ ದಂಡನಾಯಕರಾದ ಜನರಲ್ ಕಾರ್ಯಪ್ಪನವರು ಸೂಚಿಸಿದ್ದರು. ಕೋವಿ ಕತ್ತಿಗಳ ಸರಿಯಾದ ಉಪಯೋಗವನ್ನು ಕೊಡಗಿನ ಜನರು ಚೆನ್ನಾಗಿ ಅರಿತಿರುವರೆಂಬುದು ಗೃಹಮಂತ್ರಿಯವರಿಗೆ ಹಾಗೂ ಇಂಡಿಯಾ ಸರಕಾರದವರಿಗೆ ಮನವರಿಕೆಯಾಗಿದೆ. ಕೊಡಗಿನ ಜನರು ತಮ್ಮ ಈ ಯೋಗ್ಯತೆಯನ್ನು ಪುರಾತನ ಕಾಲದಿಂದಲೇ ಉಳಿಸಿ ಬೆಳೆಸಿಕೊಂಡು ಬಂದಿರುವದರಿಂದ ಇಂದು ಸ್ವತಂತ್ರ ಹಿಂದೂಸ್ಥಾನದಲ್ಲಿಯೂ ಕೂಡ ಈ ಹಕ್ಕನ್ನು ಪಡೆಯಲು ಅರ್ಹರಾದರು. ಈ ಆಯುಧಗಳನ್ನು ದುರುಪಯೋಗಪಡಿಸದೆ ಮುಂದಕ್ಕೂ ಇವರ ಸದುಪಯೋಗ ಮಾಡುತ್ತಾ ಇಷ್ಟರ ವರೆಗಿನಂತೆಯೇ ಮುಂದೆಯೂ ಹಿಂದೂದೇಶಕ್ಕೆ ಈ ಉತ್ತಮ ಸಾಂಸ್ಕೃತಿಕ ವಿಚಾರದಲ್ಲಿ ಆದರ್ಶಪ್ರಾಯರಾಗಿ ವರ್ತಿಸುವಂಥಾ ಜವಾಬ್ದಾರಿಯು ಈಗಿನ ಮತ್ತು ಮುಂದಿನ ಪೀಳಿಗೆಯನ್ನು ಹೊಂದಿಕೊಂಡಿದೆ. ಈ ಜವಾಬ್ದಾರಿಯನ್ನು ಅರಿತು ಕೊಡಗಿನವರು ಯೋಗ್ಯ ರೀತಿ ವರ್ತಿಸುವರೆಂದು ನಂಬಲಾಗಿದೆ.

## “ವನಮಹೋತ್ಸವ”

“ಮರಕಾಡುಗಳು ಎಂದರೆ ಮಳೆ, ಮಳೆ ಎಂದರೆ ಅನ್ನ, ಅನ್ನವೆಂದರೆ ಜೀವನ ಎಂಬುದನ್ನು ಪ್ರತಿಯೊಬ್ಬನೂ ಜ್ಞಾಪಕವಲ್ಲಿಡಬೇಕು” ಎಂದು ಕೇಂದ್ರ ಸರಕಾರದ ಆಹಾರ ಮಂತ್ರಿಗಳಾದ ಶ್ರೀ ಕೆ. ಎಂ. ಮುನ್ಶಿಯವರು ತಾ. ೨೩ರಲ್ಲಿ ಬೊಂಬಾಯಿಯಲ್ಲಿ ಭಾಷಣ ಮಾಡುತ್ತಾ ಹೇಳಿದರು. ಪ್ರತಿ ವರ್ಷ ಜುಲೈ ತಾ. ೧ರಿಂದ ೭ರ ವರೆಗೆ ‘ವನಮಹೋತ್ಸವ’ವನ್ನಾಚರಿಸಬೇಕೆಂದೂ ಆ ಸಮಯದಲ್ಲಿ ಮಕ್ಕಳು ಮರಿಗಳು, ಗಂಡಸರು ಹೆಂಗಸರು ಆದಿಯಾಗಿ ಗಿಡಗಳನ್ನು ನೆಡಬೇಕೆಂದೂ ನೆಟ್ಟ ಗಿಡಗಳು ಒಣಗದಂತೆ ಎಚ್ಚರಿಕೆಯಿಂದ ಸಾಕಬೇಕೆಂದೂ ಸೂಚಿಸುತ್ತಾ ೧೯೫೧ರ ಅಂತ್ಯದೊಳಗೆ ಕಡಿಮೆ ಒಂದು ಕೋಟಿ ಮರಗಳು ನೆಡಲ್ಪಡಬೇಕೆಂದು ಅವರು ಸೂಚಿಸಿದ್ದಾರೆ. ಭಾರತೀಯರಾದ ನಮಗೆ ರಾಜಕೀಯ ಸ್ವಾತಂತ್ರ್ಯ ಬಂದಿದ್ದರೂ ಆಹಾರದ ಮಟ್ಟಿಗೆ ನಮಗೆ ಇನ್ನೂ ದಾಸ್ಯತೆಯೇ ಉಳಿದಿದೆಯೆಂದೂ ಅನ್ನಕ್ಕಾಗಿ ಇತರ ರಾಷ್ಟ್ರಗಳ ಮುಖ ನೋಡುವ ಪ್ರಸಂಗ ತಪ್ಪಬೇಕೆಂದೂ ಆದ್ದರಿಂದ ಈ ಆಹಾರ ಸ್ವಾತಂತ್ರ್ಯವನ್ನು ಗಳಿಸಲು ದೇಶದ ಅರಣ್ಯ ಸಂಪತ್ತನ್ನು ಬೆಳೆಸಬೇಕೆಂದು ಅಪೀಲು ಮಾಡಿರುವರು.

ಆಹಾರ ಮಂತ್ರಿಗಳ ಈ ಅಪೀಲನ್ನು ಕೊಡಗಿನವರಾದ ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಕೊಡಗಿನಲ್ಲಿ ಮರಗಿಡಗಳ ಅಭಾವವಿಲ್ಲದಿದ್ದರೂ, ಕೊಡಗಿನ ಕಾಡುಗಳು ದಿನಕಳೆದಂತೆ ಬರಿದಾಗುತ್ತಿವೆ. ಹಾಲಿನ ಆಸೆಯಿಂದ ದನದ ಕೆಚ್ಚಲನ್ನು ಕತ್ತರಿಸಿದ ಗೊಲ್ಲನಂತೆ ನಮ್ಮ ಪರಿಸ್ಥಿತಿಯಾಗುತ್ತಿದೆ. ಮರಕ್ಕೆ ಬೆಲೆ ಇದೆಯೆಂಬ ಕಾರಣ ಹಿತಮಿತವಿಲ್ಲದ ರೀತಿ ಮರ ಕಡಿದು ಮಾರಾಟ ಪ್ರಾರಂಭವಾಗಿದೆ. ಕೊಡಗಿನಲ್ಲಿ ಮಳೆಗಾಲವು ಕಡಿಮೆ ಹಾಗೂ ಅನಿಶ್ಚಿತವಾಗಲು ಈ ಕಾಡುಗಳ ಲೂಟಿಯೇ ಕಾರಣವೆಂದು ಮಾನ್ಯ ಆಹಾರ ಮಂತ್ರಿಗಳ ಮಾತುಗಳಿಂದ ನಾವು ಅರಿಯಬಹುದು.

ಕೊಡಗು ಅರಣ್ಯ ಸಂಪತ್ತಿಗೆ ಹೆಸರಾಗಿದ್ದರೂ ನಮ್ಮ ಹಿಂದಿನ ಪೂರ್ವಜರು ಮರಕಾಡುಗಳ ಆವಶ್ಯಕತೆಗಳನ್ನು ಅರಿತು ಪ್ರತಿ ಗ್ರಾಮಗಳಲ್ಲೂ ‘ದೇವರಕಾಡು’ ಗಳನ್ನು ಪ್ರತ್ಯೇಕಿಸಿ ಅವುಗಳಿಂದ ಯಾರೂ ಮರ ಕಡಿಯಬಾರದೆಂದು ನಿರ್ಬಂಧಿಸಿದ್ದರು. ಆದರೆ ದುಡ್ಡಿನ ವ್ಯಾಮೋಹದಲ್ಲಿ ಬಿದ್ದು ಹಿತಾಹಿತಗಳನ್ನು ಲೆಕ್ಕಿಸದ ನಾವು ಹಿಡಿತವಿಲ್ಲದೆ ವರ್ತಿಸಿ ನಮ್ಮ ವಿನಾಶವನ್ನು ನಾವೇ ತಂದುಕೊಳ್ಳುತ್ತಿರುವೆವು. ಸರಕಾರವು ಇಷ್ಟೇ ದಪ್ಪದ ಮರಗಳನ್ನು ಕಡಿಯಬೇಕೆಂದು ವಿಧಿಸಬಹುದು. ಆದರೆ ಅಂಥಾ ಒಂದು ಮರ ಕಡಿಯುವಲ್ಲಿ ನೂರಾರು ಗಿಡಗಳ ನಾಶವಾಗಿ ಕಾಡು ಬಟ್ಟ ಬಯಲಿನ ನಾಡಾಗುತ್ತಿದೆ. ಇಂದು ಕಡಿಯಲ್ಪಡುತ್ತಿರುವ ಮರಗಳಿಗೆ ಸರಿ ಪ್ರಮಾಣದಲ್ಲಿ ಮರಗಳು ನೆಡಲ್ಪಡದಿದ್ದರೆ ಕ್ರಮಶಃ ಕೊಡಗು ಬಂಜರು ಪ್ರದೇಶವಾಗುವದು.

ಆದ್ದರಿಂದ ಆಹಾರ ಮಂತ್ರಿಗಳ ಹೇಳಿಕೆಯನ್ನು ಸ್ಥಳೀಯ ಸರಕಾರವೂ ಕೊಡಗಿನ ಜನತೆಯೂ ಗಮನಿಸಬೇಕು. ಒಂದು ಮರ ನೆಡದೆ ಒಂದು ಮರ ಕಡಿಯುವುದು ಅಪರಾಧವೆಂದು ಪರಿಗಣಿಸಲ್ಪಡಬೇಕು. ಆಹಾರ ಮಂತ್ರಿಗಳು ಆಶಿಸಿದಂತೆ ‘ವನಮಹೋತ್ಸವ’ ಗಳು ಕೊಡಗಿನ ಪ್ರತಿ ಗ್ರಾಮಗಳಲ್ಲೂ ನಡೆಯಬೇಕು. ನಾವು ದೇವರನ್ನು ಕುಂಜವಿಹಾರಿ, ಬೃಂದಾವನ ವಿಹಾರಿ ಎಂದು ಕರೆಯುವೆವು. ಇದರ ಅರ್ಥವಾದರೂ ಭಗವಂತನು ಕಾಡಿನಲ್ಲಿ ವಿಹರಿಸುವವನೆಂದು! ಆದರೆ ಭಗವಂತನಿಗೆ ಇಷ್ಟವಾದ ಈ ಮರಗಿಡಗಳನ್ನು ನೆಡುವ ಭಕ್ತಿ ನಮ್ಮಲ್ಲಿಲ್ಲ! ಭಗವಂತನಿಗೆ ಇಷ್ಟವಾದ ಮರಗಳ ನಾಶವು ದೇವರು ಮೆಚ್ಚುವಂಥಾದ್ದಲ್ಲ. ಆದ್ದರಿಂದಲೇ ಮರಗಿಡಗಳನ್ನು ಪೂಜಿಸಬೇಕೆಂದು ಸರ್ದಾರ್ ಪಟೇಲರು ಹೇಳಿರುವದಾಗಿದೆ. ಅಶ್ವತ್ಥ, ನೆಲ್ಲಿ ವೃಕ್ಷಗಳನ್ನು ಪೂಜಿಸುವ ಭಕ್ತಿ ನಮ್ಮಲ್ಲಿ ಹಿಂದೆ ಇತ್ತು. ಇದರ ಮಥಿತಾರ್ಥವಾದರೂ ಮರಗಿಡಗಳನ್ನು ಹಿಡಿತವಿಲ್ಲದೆ ಕಡಿಯಬಾರದೆಂಬುದೇ ಆಗಿದೆ. ಆದ್ದರಿಂದ ಮರಗಿಡಗಳ ಬಗ್ಗೆ ಪೂಜ್ಯ ಭಾವನೆ ತಂದುಕೊಂಡು ಅವುಗಳ ರಕ್ಷಣೆಯಲ್ಲಿಯೇ ನಮ್ಮ ಹಿತವೂ ಇದೆಯೆಂದು ತಿಳಿದು ವರ್ತಿಸಬೇಕಾಗಿದೆ. “ಮರಗಿಡಗಳೆಂದರೆ ಮಳೆ. ಮಳೆ ಎಂದರೆ ಅನ್ನ, ಅನ್ನವೆಂದರೆ ಜೀವನ” ಅಲ್ಲವೇ?

## ವರ್ತಮಾನ.

ಕೊಡಗು ಶಾಸನ ಸಭೆಯ ಮತ್ತು ಜಿಲ್ಲಾ ಬೋರ್ಡು ಸದಸ್ಯರ ಜಂಟಿ ಮೀಟಿಂಗೊಂದು ತಾ. ೨೪ರಲ್ಲಿ ಕೊಡಗು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆದು ಕೊಡಗು ಜಿಲ್ಲಾ ಬೋರ್ಡಿನ ಆರ್ಥಿಕ ವಿಚಾರ ಮತ್ತು ಅದಕ್ಕೆ ಸಂಬಂಧಿಸಿದ ಕೌನ್ಸಿಲು ಠರಾವುಗಳನ್ನು ಪರ್ಯಾಲೋಚಿಸಿದರು.

ವ್ಯವಸಾಯ ಆದಾಯ ತೆರಿಗೆಯ ಸಿಲೆಕ್ಟ್ ಕಮಿಟಿ ಮೀಟಿಂಗು ತಾ. ೨೫ರಲ್ಲಿ ನಡೆದು ಬರುವ ತಾರೀಕು ೨೪ಕ್ಕೆ ಮುಂದರಿಸಲಾಗಿದೆ.

ತಾರೀಕು ೨೩–೫–೫೦ರಲ್ಲಿ ಹಾತೂರು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಅಲ್ಲಿಯ ಹೈಸ್ಕೂಲು ಸಮಿತಿಯವರು ನಾಲ್ಕನೇ ಫಾರಮನ್ನು ತೆರೆದಿರುವರು. ಕೊಡಗಿನ ಚೀಫ್ ಕಮಿಷನರು ಅಧ್ಯಕ್ಷತೆ ವಹಿಸಿದ್ದರು.

ಕೊಡಗು ಐರಿಯರ ವಿದ್ಯಾಭಿವೃದ್ಧಿ ಸಂಘದ ಸಭೆಯು ತಾ. ೩೦–೪–೫೦ರಲ್ಲಿ ಹೊದ್ದೂರಿನಲ್ಲಿ ಶ್ರೀ. ಕೋರನ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೋವಿ ಕತ್ತಿ ಹಿಡಿಯುವ ಹಕ್ಕಿನ ಬಗ್ಗೆ ಇಂಡಿಯಾ ಸರಕಾರವು ಪರಿಶೀಲನೆ ನಡೆಸಿ ಇತ್ತೀಚೆಗೆ ಹೊರಡಿಸಿರುವ ಪ್ರಕಟಣೆಯ ಮೇರೆ ಸಂಸ್ಥಾನಗಳ ಎಲ್ಲಕ್ಕೂ ಉಚ್ಛ ಅಧಿಕಾರಿಗಳು, ಹಿಂದಿನ ಆಶ್ರಿತ ಸಂಸ್ಥಾನಗಳ ಅರಸರು, ಅವರ ಕುಟುಂಬದ ನಿಶ್ಚಿತ ಸದಸ್ಯರು ಅವರ ಅಂಗರಕ್ಷಕ ದಳದವರು ಮತ್ತು ಕೊಡಗಿನ ನಿವಾಸಿಗಳಲ್ಲಿ ಒಂದು ವರ್ಗದವರು ಮಾತ್ರ ಲೈಸನ್ಸ್ ಇಲ್ಲದೆ ಈ ಆಯುಧಗಳನ್ನು ಇಟ್ಟುಕೊಳ್ಳಬಹುದೆಂದು ಸೂಚಿತವಾಗಿದೆ.

ಹಿಂದೂದೇಶದಲ್ಲಿ ಆಹಾರಕ್ಕಾಗಿ ಉಂಟಾಗಿರುವ ತೊಂದರೆಯನ್ನು ನಿವಾರಿಸಲು ಪ್ರತಿ ವಾರ ಒಂದು ಊಟ ಬಿಡುವ ಚಳವಳವೊಂದು ಪ್ರಾರಂಭವಾಗಿದೆ ೧೯೫೧ರ ವರೆಗೆ ಪ್ರತಿ ವಾರ ಸಾಮಾನ್ಯವಾಗಿ ಶುಕ್ರವಾರ ಒಂದೂಟ ಮಾಡದೆ ಇರುವೆನೆಂದೂ ಆ ಬಗ್ಗೆ ತನ್ನ ರೇಶನ್ ಕಾರ್ಡಿನಲ್ಲಿ ರೇಶನ್ ಕಡಿಮೆ ಮಾಡಬಹುದೆಂದೂ ಹೇಳುವ ಪ್ರತಿಜ್ಞೆ ಮಾಡಿ ಕೊಡಗಿನವರು ಈ ಚಳವಳದಲ್ಲಿ ಸಹಕರಿಸಬೇಕೆಂದು ಸರಕಾರವು ಅಪೀಲು ಮಾಡಿದೆ.

“ಕೊಡಗು” ಏಜಂಟರು,
ಪೊನ್ನಂಪೇಟೆ,
ಶ್ರೀ. ಪಿ. ಜಿ. ಸುಬ್ರಮಣ್ಯನವರು.

# ಕಾಂಗ್ರೆಸ್ ಪಂಚಾಯಿತಿಗಳಿಗೆ ದಾಖಲಾದ ನಾಮ ಪತ್ರಗಳ ಪರಿಶೀಲನೆ ಮಾಡಿದ್ದರ ಫಲಿತಾಂಶ.

ಈ ಕೆಳಗೆ ಕಂಡವರ ನಾಮಪತ್ರಗಳು ಸ್ವೀಕೃತವಾಗಿವೆ

ಕೊಡ್ಲಿಪೇಟೆ- ಶ್ರೀ ಪೂಜಾರಿ ಎನ್ ಮಾಚಯ್ಯ, ಯು ಬಿ ಮಲ್ಲಪ್ಪ, ಕೆ ಎಸ್ ಗುರುಸಿಂಗಪ್ಪ ಪರ –ಮೂರು ಸ್ಥಳಗಳಿಗೆ ಮೂರು ಜನರು ಮಾತ್ರ ಉಮೇದ್ವಾರರು ಇದ್ದದರಿಂದ ಅವರು ವಿರೋಧವಿಲ್ಲದೆ ಚುನಾಯಿತರಾಗಿದ್ದಾರೆ

ಶನಿವಾರಸಂತೆ–ಎಚ್ ಕೃಷ್ಣಮೂರ್ತಿ, ಜಿ ಕೆ ಚಂದ್ರಶೇಖರ, ಎಸ್. ಎಂ. ಚನ್ನಬಸಪ್ಪ ಮೇಲೆ ಬರೆದಂತೆ

ಸೋಮವಾರಪೇಟೆ–ಎ ಎಲ್ ಶಂಕರಯ್ಯ, ಕೆ ಚಂದ್ರಶೇಕರಯ್ಯ, ಬಿ ಎಸ್ ಮರಿಬಸವಯ್ಯ ಇಲ್ಲಿ ಇವರು ಮೂರು ಜನರು ಆರಿಸಿ ಬಂದಿದ್ದಾರೆ ಇನ್ನು ಎರಡು ಸ್ಥಳ ಖಾಲಿಯಾಗಿ ನಿಂತಿದೆ ಉಪ ಚುನಾವಣೆಯ ವಿಷಯ ಕೆ ಪಿ ಸಿ ಸಿ ಗೆ ಬರೆಯಲಾಗಿದೆ

ಹೆಬ್ಬಾಲೆ–ಕೆಚ್ ಸೋಮಪ್ಪ, ಎಚ್ ಎಲ್ ಪುಟ್ಟಪ್ಪ, ಕೆ. ಈರತಯ್ಯ. ಮೂರು ಸ್ಥಳಗಳಿಗೆ ಮೂರು ಜನರು ಮಾತ್ರ ಉಮೇದ್ವಾರರು ಇದ್ದದರಿಂದ ಅವರು ವಿರೋಧವಿಲ್ಲದೆ ಚುನಾಯಿತರಾಗಿದ್ದಾರೆ.

ಕಣಿವೆ–ಕೆ. ಟಿ ನಂಬೀಶನ್, ಕೆ. ಅನಂತರಾಮಯ್ಯ, ಕೆ ಆರ್ ಸತ್ಯಮೂರ್ತಿ ಮೇಲೆ ಬರೆದಂತೆ

ಫ್ರೇಜರ್‌ಪೇಟೆ–ಪೂಜಾರಿ ರಾಮಪ್ಪ, ಆರ್ ಕೆ ಸುಭಾನದಾನಿ, ಎಂ ಪುಟ್ಟಸ್ವಾಮಯ್ಯ ಮೇಲೆ ಬರೆದಂತೆ

ಸಂಟಿಕೊಪ್ಪ–ಎನ್ ಕೆ ಗಣಪಯ್ಯ, ಎನ್ ಜಿ ಸರೋಜ, ಎ ಎಸ್ ಮಾಚಯ್ಯ ಮೇಲೆ ಬರೆದಂತೆ.

ಮಡಿಕೇರಿ–ಬಿ. ಕೆ. ನಂಜುಂಡೇಶ್ವರ, ಬಿ ಎ ಬೆಳ್ಯಪ್ಪ ಎಂ. ಉಗ್ಗಪ್ಪ ಚ್ಚಣ್ಣ ಮೇಲೆ ಬರೆದಂತೆ

ಸಂಪಾಜೆ–ಜಿ ಕೃಷ್ಣಪ್ಪಗೌಡ, ಕೆ ರಾಮಪ್ಪ, ಎಚ್ ಬೆಳ್ಯಪ್ಪಗೌಡ ಮೇಲೆ ಬರೆದಂತೆ

ಭಾಗಮಂಡಲ–ಎಸ್. ಶ್ರೀನಿವಾಸಯ್ಯ, ಸುಬ್ಬಣ್ಣ ವೈದ್ಯನಾಥಭಟ್ಟ ಬೇಂಗೋಡಿ ಬೋಜಪ್ಪ. ಮೇಲೆ ಬರೆದಂತೆ.

ಮೂರ್ನಾಡು–ಕೋರನ ದೇವಯ್ಯ, ಬಿ ಆರ್ ರಾಮಚಂದ್ರ, ಪಂದ್ಯಂಡ ಸೀತಾ ಬೆಳ್ಯಪ್ಪ, ಸಿ ಎ ಮಂದಣ್ಣ, ಕೇಂಬಡತಂಡ ಮೋಣ್ಣಪ್ಪ ಮೂರು ಸ್ಥಳಗಳಿಗೆ ಐದು ಉಮೇದವಾರರು ಇರವುದರಿಂದ ಇಲ್ಲಿ ಚುನಾವಣೆ ನಡೆಯುವುದು

ನೋಟೀಸ:–೧ ಮೂರ್ನಾಡು ಸೆಂಟರಿನಲ್ಲಿ ಮಾತ್ರ ಚುನಾವಣೆ ನಡೆಯುವದು. ಚುನಾವಣೆ ತಾರೀಕ 31-5-50 ರಲ್ಲಿ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆ ತನಕ ಚುನಾವಣೆ ಸ್ಥಳ–ಯೂನಿಯನ್ ಕಟ್ಟಡದಲ್ಲಿ ಶ್ರೀ ಶಿಕ್ಷಕ ಅನಂದಯ್ಯನವರನ್ನು ಪೋಲಿಂಗ್ ಆಫೀಸರನ್ನಾಗಿ ನೇಮಕ ಮಾಡಲಾಗಿದೆ ಮತ ಪತ್ರಗಳನ್ನು ಪೋಲಿಂಗ್ ಆಫೀಸರಿಂದ ಪಡಕೊಳ್ಳಬಹುದು. ಮೂರ್ನಾಡು ಸೆಂಟರಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ರಿಜಿಸ್ಟ್ರಾದ ಪ್ರಾಥಮಿಕ ಸದಸ್ಯರು ಮಾತ್ರ ಮತ ಕೊಡಬಹುದು. ಪಂಚಾಯಿತದಾರರ ಪಟ್ಟಿಗೆ ಸ್ವೀಕರಿಸಲ್ಪಟ್ಟ ಸದಸ್ಯರುಗಳ ಪೈಕಿ ಯಾರೇ ಮೆಂಬರುಗಳು ತಮ್ಮ ಉಮೇದುವಾರಿಕೆಯನ್ನು ವಾಪಾಸು ತೆಗದುಕೊಳ್ಳುತ್ತಿದ್ದರೆ ತಾ. 27-5-50ರ ವಳಗೆ ತೆಗೆದುಕೊಳ್ಳುವುದು ಚುನಾವಣೆಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಈ ಕೆಳಗಿನವರಿಂದ ತಿಳಿದುಕೊಳ್ಳಬಹುದು

ಮಡಿಕೇರಿ, ಎ ಎಸ್. ಚಿಣ್ಣಪ್ಪ,

ಉತ್ತರ ಕೊಡಗು ತಾಲೋಕು ಚುನಾವಣೆ ಅಧಿಕಾರಿ,

ತಾ|| 24-5-50

## ದಕ್ಷಿಣ ಕೊಡಗು

ಪೊನ್ನಂಪೇಟೆ–ಮಲ್ಲಂಗಡ ತಮ್ಮಯ್ಯ, ಅಮ್ಮತ್ತಿರ ಗಂಗಾಧರಯ್ಯ ಮಲ್ಲಂಗಡ ಪಿ ತಿಮ್ಮಯ್ಯ ಪರ:–ಮೂರು ಸ್ಥಳಗಳಿಗೆ ಮೂರು ಜನರ ಮಾತ್ರ ಉಮೇದುವಾರು ಇದ್ದದರಿಂದ ಅವರು ವಿರೋಧವಿಲ್ಲದೆ ಆರಿಸಿ ಬಂದಿದ್ದಾರೆ

ಶ್ರೀಮಂಗಲ–ಕುಪ್ಪುಡಿರ ಮಾಚಯ್ಯ, ಕಡಿಯಂಗಡ ಚಿಮ್ಮಯ್ಯ, ಕಡಿಯಂಗಡ ಸುಬ್ಬಯ್ಯ ಮೇಲೆ ಬರೆದಂತೆ

ಹುದಿಕೇರಿ–ಅಜ್ಜಿಕುಟ್ಟಿರ ನಂಜಪ್ಪ, ಕ ಕೇಮಾಡ ಗಣಪತಿ, ಚೆಟ್ಟಂಗಡ ಸಿ. ನಂಜಪ್ಪ ಮೇಲೆ ಬರೆದಂತೆ

ಪೊನ್ನಂಪೇಟೆ–ಅಜ್ಜಿಕುಟ್ಟಿರ ಎಸ್ ಪೊನ್ನಪ್ಪ, ಮಲಚೀರ ಎ ಪೂವಯ್ಯ, ಮಾಕಳೇರ ಕ ಶಾಲಪ್ಪ, ಮಚ್ಚಿಯಂಡ ಐಯ್ಯಪ್ಪ, ಅಜ್ಜಿಕುಟ್ಟಿರ ಎಸ್ ತಮ್ಮಯ್ಯ, ಕೋಳೆರ ಪಿ ಕರುಂಬಯ್ಯ, ಬಲ್ಲಡಿಚಂಡ ಪಿ ಬೋಪಯ್ಯ, ಕಾಳಿಂಗಡ ಚಿಣ್ಣಪ್ಪ, ಚಿರಿಯಪಂಡ ಸಿ ಕ ಶಾಲಪ್ಪ ನಾಲ್ಕು ಸ್ಥಳಗಳಿಗೆ ಒಂಬತ್ತು ಉಮೇದುವಾರರು ಇರುವುದರಿಂದ ಇಲ್ಲಿ ಚುನಾವಣೆ ನಡೆಯುವುದು.

ಗೋಣಿಕೊಪ್ಪ–ಶ್ರೀ ಮನಿಯಪಂಡ ಎ ತಿಮ್ಮಯ್ಯ, ಅಚ್ಚಿಯಂಡ ನಂಜಮ್ಮ, ಕುಪ್ಪಂಡ ಮುದ್ದಪ್ಪ ಮೂರು ಸ್ಥಳಗಳಿಗೆ ಮೂರು ಜನರು ಮಾತ್ರ ಉಮೇದುವಾರರು ಇದ್ದದರಿಂದ ಅವರು ವಿರೋಧವಿಲ್ಲದೆ ಆರಿಸಿ ಬಂದಿದ್ದಾರೆ

ಅಮ್ಮತಿ–ಪಂದ್ಯಂಡ ಚಂಗಪ್ಪ, ಪುಲಿಯಂಡ ಸುಬ್ಬಯ್ಯ, ಕಂಜಿತಂಡ ಕುಶಾಲಪ್ಪ, ಪಟ್ಟಡ ಸಿ ಉತ್ತಯ್ಯ, ಪಂದ್ಯಂಡ ಬೆಳ್ಯಪ್ಪ, ಮುರುವಂಡ ಮಾಚಯ್ಯ. ಐದು ಸ್ಥಳಗಳಿಗೆ ಆರು ಉಮೇದುವಾರರುಗಳು ಇರುವುದರಿಂದ ಇಲ್ಲಿ ಚುನಾವಣೆ ನಡೆಯುವುದು

ವಿರಾಜಪೇಟೆ–ಎ ಆರ್ ಅಣ್ಣಣ್ಣ, ಎಸ್ ವಿ ದೇಶಿಕಾಚಾರ್, ಪಾಂಡಂಡ ಸೋಮಪ್ಪ, ಮಂಡೇಪಂಡ ಸೋಮಪ್ಪ, ಸೋಮಯಂಡ ಅಚ್ಚಯ್ಯ, ವಿ ಆರ್ ತಮ್ಮಯ್ಯ, ಪುಟ್ಟಿಚಂಡ ಎಂ. ಚಿಣ್ಣಪ್ಪ, ಪುಗ್ಗೇರ ಕರುಂಬಯ್ಯ, ಮಾಚಿಮ್ಮರ ಮುತ್ತಣ್ಣ ಒಂಭತ್ತು ಸ್ಥಳಗಳಿಗೆ ಒಂಬತ್ತು ಜನರು ಮಾತ್ರ ಉಮೇದುವಾರರು ಇದ್ದದರಿಂದ ಅವರು ವಿರೋಧವಿಲ್ಲದೆ ಆರಿಸಿ ಬಂದಿದ್ದಾರೆ

ಕಡಂಗ ಬಾಚೆಟ್ಟಿರ ಚಿಣ್ಣಪ್ಪ, ಪಳಂಗಂಡ ನಂಜಪ್ಪ, ಮುಕ್ಕಾಟಿರ ಬೆಳ್ಯಪ್ಪ ಮೇಲೆ ಬರೆದಂತೆ ಇವರು ವಿರೋಧವಿಲ್ಲದೆ ಆರಿಸಿ ಬಂದಿದ್ದಾರೆ.

ನಾಪೋಕ್ಲು–ಬಿದ್ದಂಡ ಸುಬ್ಬಯ್ಯ, ಬಿದ್ದಂಡ ಮಂದಣ್ಣ ಇಲ್ಲಿ ಇವರಿಬ್ಬರು ಆರಿಸಿ ಬಂದಿದ್ದಾರೆ ಇಲ್ಲಿ ಮೂರು ಸ್ಥಳ ಇರುವುದರಿಂದ ಒಂದು ಸ್ಥಳ ಖಾಲಿಯಾಗಿ ನಿಂತಿದೆ ಉಪಚುನಾವಣೆಯ ವಿಷಯ ಕೆ ಪಿ ಸಿ ಸಿಗೆ ಬರೆಯಲಾಗಿದೆ

ನೋಟೀಸ – ಪೊನ್ನಂಪೇಟೆ 2 [illegible] ಚುನಾವಣೆ ನಡೆಯುವುದು [illegible] ತಾ 31-5-50 ರಲ್ಲಿ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆಯತನಕ ಚುನಾವಣೆ ಸ್ಥಳ–ಪೊನ್ನಂಪೇಟೆ ಹಳೇ ವಾಚನಾಲಯದ ಕಟ್ಟಡದಲ್ಲಿ ಪೊನ್ನಂಪೇಟೆಗೆ ಡಾ. ಪಿ. ಎಂ ನಂಜಯ್ಯನವರನ್ನು, ಅಮ್ಮತ್ತಿಗೆ ಶ್ರೀ ಬಿ ಡಿ ಅಪ್ಪಯ್ಯನವರನ್ನು ಪೋಲಿಂಗ್ ಆಫೀಸರಾಗಿ ನೇಮಕ ಮಾಡಲಾಗಿದೆ ಮತ ಪತ್ರಿಕೆಗಳನ್ನು ಅವರಿಂದ ಹೊಂದಿಕೊಳ್ಳಬಹುದು. ಆಯಾಯ ಪಂಚಾಯಿತ ಸೆಂಟರಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ರಿಜಿಸ್ಟ್ರಾದ ಪ್ರಾಥಮಿಕ ಸದಸ್ಯರು ಮಾತ್ರ ಮತ ಕೊಡಬಹುದು ಪಂಚಾಯಿತದಾರರ ಪಟ್ಟಿಗೆ ಸ್ವೀಕರಿಸಲ್ಪಟ್ಟ ಸದಸ್ಯರುಗಳ ಪೈಕಿ ಯಾರೇ ಮೆಂಬರುಗಳ ತಮ್ಮ ಉಮೇದುವಾರಿಕೆಯನ್ನು ವಾಪಾಸು ತೆಗದುಕೊಳ್ಳುತ್ತಿದ್ದರೆ ತಾ. 27-5-50ರ ವಳಗೆ ತೆಗೆದುಕೊಳ್ಳುವುದು ಚುನಾವಣೆಗೆ ಸಂಬಂಧಪಟ್ಟ ಯಾವತ್ತೂ ವಿಷಯಗಳನ್ನು ಈ ಕೆಳಗಿನವರಿಂದ ತಿಳಿದುಕೊಳ್ಳಬಹುದು ಅಮ್ಮತ್ತಿ ಚುನಾವಣೆ ಸ್ಥಳ ಯೂನಿಯನ್ ಕಟ್ಟಡ

ತಾ 21-5-50 ಎನ್ ಸೋಮಣ್ಣ,

ದಕ್ಷಿಣ ಕೊಡಗು ತಾಲೋಕು ಚುನಾವಣೆ ಅಧಿಕಾರಿ



## WANTED.

A Mathematics graduate or a Kannada pandit with graduate qualifications to work as Head-master on a salary of Rs 125 as starting pay and Rs 45 as D.A.

A Mathematics under graduate or a History graduate to work as an assistant teacher on a salary of Rs 100 as starting pay and Rs 35 as D A

Residence available on minimum rent

Apply to:—

**The President,**
*Hathur High School*
*Samithy, Hathur.*



## ನ್ಯೂಜೀಲೆಂಡಿನಲ್ಲಿ ಮೊಲಗಳ ಹಾವಳಿ.

ನ್ಯೂಜಿಲೇಂಡಿನ ಇತಿಹಾಸದಲ್ಲಿ ಈ ಮೊದಲು ಕಾಣದ ಕೇಳದ ಮೊಲಗಳ ಹಾವಳಿ ಇದೀಗ ತಲೆದೋರಿದೆ ಈ ಮೊಲಗಳು ಕುರಿಮಂದೆಗಳು ಮೇಯುವ ಹೊಲಗಳಲ್ಲಿದ್ದ ಮೇವನ್ನು ತಿಂದು ಕುರಿಮಂದೆಯ ಸಾಕಣೆಗೆ ವರ್ಷಕ್ಕೆ ಸುಮಾರು ೪೦,೦೦೦,೦೦೦ ರೂಪಾಯಿಗಳಷ್ಟು ನಷ್ಟವನ್ನುಂಟುಮಾಡುತ್ತವೆ ಪ್ರಸ್ತುತ ಮೊಲಗಳ ಸಂಖ್ಯೆ ೪೦,೦೦೦,೦೦೦ ದಿಂದ ೫೦,೦೦೦,೦೦೦ ರ ವರೆಗೆ ಇದೆ ದಿನೇ ದಿನೇ ಅದು ಹೆಚ್ಚುತ್ತಿದೆ ಹೊರತು ಕ್ಷೀಣವಾಗುವ ಲಕ್ಷಣಗಳಿಲ್ಲ ಪ್ರತಿ ವರ್ಷ ಸುಮಾರು ಮೂರನೇ ಒಂದಂಶದಷ್ಟು ನಾಶವಾಗುತ್ತಿದೆಯಾದರೂ ಅವುಗಳ ಹಾವಳಿ ಕಡಿಮೆಯಾಗುವುದಿಲ್ಲ ಮೊಲಗಳನ್ನು ವಿಷಹಾಕಿ ಕೊಲ್ಲುವುದು ಗೂಡಿನಲ್ಲಿ ಹಿಡಿಯುವುದು ಮುಂತಾದ ಪ್ರಯೋಗಗಳು ನಡೆಯುತ್ತಿವೆ ಮೊಲಗಳ ಹಾವಳಿಯನ್ನು ಸರಿಯಾದ ರೀತಿಯಲ್ಲಿ ತಡೆಯುವ ಹೊಸ ಯೋಜನೆಗಳು ಹುಡುಕಲ್ಪಡುತ್ತಿವೆ

## ಮಹಿಳೆಯರಿಗೆ ಹಿಂದೀ ಕಾಲೇಜ್.

ಬರುವ ಜೂನ್ ತಿಂಗಳಿಂದ ಎಲ್ಲಾ ಕಾಲೇಜುಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸಬೇಕೆಂಬ ನಿಯಮವು ಜಾರಿಗೆ ಬರುವುದರಿಂದ ಆಗ ಒಳ್ಳೇ ಯೋಗ್ಯತೆಯುಳ್ಳ ಮಹಿಳಾ ಹಿಂದೀ ಪಂಡಿತರ ಆವಶ್ಯಕತೆ ಬೀಳಬಹುದಾದ ಸಂಭವವಿರುವುದರಿಂದ ಇದೇ ಮೇ ತಾ ೧೫ರಿಂದ ಒಂದು ವರ್ಷದ ವರೆಗೆ ಸ್ತ್ರೀಯರಿಗೆ ಹಿಂದೀ ಭಾಷೆಯಲ್ಲಿ ಉಚ್ಚ ಶಿಕ್ಷಣ ಕೊಡುವ 'ಮಹಿಳಾ ವಿಶಾರದ ವಿದ್ಯಾಲಯ' ಎಂಬ ಹಿಂದೀ ಕಾಲೇಜನ್ನು ಮಹಿಳೆಯರ ಬಗ್ಗೆ ಮದ್ರಾಸಿನಲ್ಲಿ ತೆರೆಯುವ ನಿರ್ಣಯವಾಗಿದೆ ಹಿಂದೀಯಲ್ಲಿ ಪ್ರವೇಶಿಕಾ ಪರೀಕ್ಷೆ ಇಲ್ಲವೆ ಸ್ಕೂಲ್ ಫೈನಲಿನಲ್ಲಿ ರಾಷ್ಟ್ರಭಾಷೆ ಮಾಡಿದರೂ ಪಾಸಾದವರನ್ನು ಈ ಕಾಲೇಜಿಗೆ ಸೇರಿಸಿಕೊಳ್ಳಲಾಗುವುದು ಕಾಲೇಜಿಗೆ ತಾಗಿ ನಿವಾಸಗೃಹದ ಏರ್ಪಾಡು ಇದೆ ಬೋರ್ಡಿಂಗ್ ಮತ್ತು ಲಾಡಿಂಗ್ ಖರ್ಚು ತಿಂಗಳಿಗೆ ಸುಮಾರು ೪೫ ರೂಪಾಯಿಗಳಷ್ಟಾಗಬಹುದೆನ್ನಲಾಗಿದೆ

## ೩೨ ವರ್ಷ ನಿದ್ದೆಯಲ್ಲಿ ಕಳೆದವಳು.

ಮಿಸ್ ಕೆರೋಲಿನ್ ಕಾಲ್ಸ್‌ನ್ ಎಂಬಾಕೆ ಸ್ವೀಡನಿನ ಒಕ್ಕಾಲ್ಲಿಯ ಬಿಷಪ್ ೩೨ ವರ್ಷಗಳ ಕಾಲ ನಿದ್ರೆಯಲ್ಲೇ ಕಳೆದು ಇದೀಗ ೭೧ನೇ ವರ್ಷ ಪ್ರಾಯದಲ್ಲಿ ತೀರಿಕೊಂಡಳು ೧೮೭೬ ರಲ್ಲಿ ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಆಕೆ ನಿದ್ರೆ ಹೋದಳು ಆಗಳ ತಾಯಿ, ನಗೆಗೆ ನಿದ್ದೆ ಬಂದಿದೆಯೆಂದು ಸಾಮಾನ್ಯವಾಯೆಂದಿರು ತಮ್ಮ ಮಕ್ಕಳನ್ನು ಮಲಗಿಸುವ ರೀತಿಯಲ್ಲೇ ಹಾಸಿಗೆಯ ಮೇಲೆ ಅವಳನ್ನು ಮಲಗಿಸಿದ್ದಳು ಆದರೆ ಕೆರೋಲಿನ್ ೧೯೦೮ರ ವರೆಗೆ ಎಂದರೆ ತನ್ನ ೪೬ನೇ ವಯಸ್ಸಿನ ವರೆಗೆ ನಿದ್ದೆಯಿಂದ ಏಳಲಿ. ಆ ಕಾಲದಲ್ಲಿ ಅವಳ ಆರೋಗ್ಯ ಚನ್ನಾಗಿತ್ತಂತೆ.

# ಇಂಡಿಯಾ ಸರಕಾರದ ಲೇಬರ್ ಇಲಾಖೆ.

## ರಿಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟಿನ ರೀಜನಲ್ ಡೈರೆಕ್ಟರೇಟ್ ಮದ್ರಾಸು.

ಇಂಡಿಯಾ ಸರಕಾರದ ಲೇಬರ್ ಇಲಾಖೆಯ (ರೀ ಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟ್ ಡೈರೆಕ್ಟರ್ ಜನರಲ್) ಮುಖಾಂತರವು ಮಾಜಿ ಪ್ರೌಢ ಸಾಗರೀಕರಿಗೆ ಕಲಾತ್ಮಕ ಮತ್ತು ಔದ್ಯೋಗಿಕ ತರಬೇತು ಕೊಡುವ ಯೋಜನೆಯಂತೆ ಅಂಥಾ ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಯೋಜನೆಯಂತೆ ಎರಡು ವಿಧದ ತರಬೇತು ದೊರೆಯುವ ಅನುವಿದೆ. (1) ಇಂಜಿನೀಯರಿಂಗ್ ಮತ್ತು ಕಟ್ಟೋಣ ಉದ್ಯಮಗಳ ಕಲಾ ತರಬೇತು. (2) ಕೈ ಕಸಬುಗಳಲ್ಲಿ ಔದ್ಯೋಗಿಕ ತರಬೇತು. ಕಲಾ ತರಬೇತಿನ ಅವಧಿಯು ಎರಡು ವರ್ಷಗಳ ವರೆಗಿದ್ದು ಅವುಗಳಲ್ಲಿ ಹದಿನೆಂಟು ತಿಂಗಳು ತರಬೇತು ಕೇಂದ್ರದಲ್ಲೂ, ಉಳಿಯುವ ಆರು ತಿಂಗಳು ಔದ್ಯೋಗಿಕ ಸಂಸ್ಥೆಗಳಲ್ಲಿ ಯಾ ಕೇಂದ್ರದಲ್ಲಿ ಇವೆರಡರಲ್ಲಿ ಯಾವುದು ಅನುಕೂಲವೋ ಅಲ್ಲಿಯೂ ಪ್ರತ್ಯಕ್ಷ ಕೆಲಸದ ತರಬೇತು ಕೊಡಲಾಗುವುದು. ಕೈ ಕಸಬುಗಳ ತರಬೇತಿನ ಅವಧಿಯು ಪರಿಮಿತಿಯು ಹನ್ನೆರಡು ತಿಂಗಳುಗಳು. ಈ ಕೆಳಗಿನ ಔದ್ಯೋಗಿಕ ಮತ್ತು ಕಲಾತ್ಮಕ ವಿಷಯಗಳಲ್ಲಿ ವೀರರಾಜಪೇಟೆ ಸರಕಾರ ತರಬೇತು ಕೇಂದ್ರದಲ್ಲಿ ತರಬೇತು ಕೊಡಲ್ಪಡುವುದು. ಬಡಗಿ ಕೆಲಸ, ಮರಗೆಲಸ ಮೆಕಾನಿಕ್ (ಜನರಲ್) ದರ್ಜಿ ಕೆಲಸ, ಚಿತ್ರದ ಮತ್ತು ಹೆಣಿಗೆ ಕೆಲಸ ಮತ್ತು ಶೀಘ್ರ ಲಿಪಿ.

2. ಪ್ರವೇಶಕ್ಕೆ ಯೋಗ್ಯತೆಗಳು:-ಉಮೇದ್ವಾರರು 18ರಿಂದ 25 ವಯಸ್ಸಿನ ಒಳಗಿದ್ದು ಮೆಟ್ರಿಕ್ಯುಲೇಶನ್ ಕೆಳಗಿನ ಎರಡು ತರಗತಿಗಳ ವರೆಗೆ ಓದಿದವರಾಗಿರಬೇಕು. ಸರ್ವೆಯರ್, ಡ್ರಾಫ್ಟ್ ಮೇನ್, ಇನ್‌ಸ್ಟ್ರುಮೆಂಟ್ ಮೆಕಾನಿಕ್, ರೇಡಿಯೋ ಸರ್ವೀಸು ಮತ್ತು ಶೀಘ್ರಲಿಪಿ ತರಬೇತು ಇವುಗಳಿಗೆ ಮೆಟ್ರಿಕ್ಯುಲೇಶನ್-ಯಾ-ಅದಕ್ಕೆ ಸಮಾನದ ಶಿಕ್ಷಣದ [illegible] ಇರಬೇಕು.

3. ಶರತುಗಳು:-ತರಬೇತು ಕೇಂದ್ರವನ್ನು ಸೇರಿದನಂತರ ಆರಿಸಲ್ಪಟ್ಟ ಉಮೇದ್ವಾರರು ಈ ಕೇಂದ್ರದ ಶಿಸ್ತಿಗೆ ಒಳಗಾಗುವ ಶರತಿಗೆ ಒಪ್ಪತಕ್ಕದ್ದು. ಅವರ ಜವಾಬ್ದಾರಿಯಲ್ಲಿ ಕೊಡಲ್ಪಡುವ ಸಾಮಾನು ಸಾಹಿತ್ಯಗಳನ್ನು ಎಚ್ಚರಿಕೆಯಿಂದಿಟ್ಟುಕೊಳ್ಳುವದಲ್ಲದೆ ತರಬೇತು ಅವಧಿಯು ಮುಗಿಯುವ ವರೆಗೆ ಬಿಟ್ಟು ಹೋಗಕೂಡದು. ಈ ಒಪ್ಪಂದದ ಶರತುಗಳನ್ನು ಪಾಲಿಸಲು ಅವರು ತಪ್ಪಿದರೆ ಅವರ ತರಬೇತಿಗೆ ತಗಲಿದ ಪೂರ್ತಿ ಖರ್ಚನ್ನು-ಯಾ-ಸರಕಾರಕ್ಕೆ ಉಚಿತ ತೋರುತಕ್ಕದ್ದನ್ನು ವಸೂಲು ಮಾಡಲು ಸರಕಾರಕ್ಕೆ ಹಕ್ಕಿರುವುದು.

4. ತರಬೇತಿನ ಸಮಯದಲ್ಲಿ ಸವಲತ್ತುಗಳು:-ತರಬೇತು ಮುಫ್ತಾಗಿ ಕೊಡಲ್ಪಡುವುದು. ತರಬೇತು ಪಡೆಯುವವರಲ್ಲಿ ಶೇಕಡ 50ರಷ್ಟು ತರಬೇತಿಗಳಿಗೆ ತಿಂಗಳಿಗೆ ಪ್ರತಿಯೊಬ್ಬರಿಗೆ ರೂ. 25/-ರ ವೇತನ ಕೊಡಲ್ಪಡುವುದು. ಇತರ ಜೊತೆಗೆ ಮುಫ್ತತ್ತು ವಸತಿಯ ಅನುಕೂಲ, ಎಲ್ಲಿ ಸಾಧ್ಯವೋ ಅಲ್ಲಿ ಆಟ ವಿಹಾರ ಮತ್ತು ವೈದ್ಯಕೀಯ ಉಚಿತವಾದ ಅನುಕೂಲತೆ ಒದಗಿಸಲಾಗುವುದು. ಕೆಲಸದ ಸಮಯಕ್ಕೆ ಹಾಕುವ ಬಟ್ಟೆಯನ್ನು ಯಂತ್ರದ ಹತರ ಕೆಲಸ ಮಾಡಬೇಕಾದವರಿಗೆ ಒದಗಿಸಲಾಗುವುದು. ಯಾವುದೇ ಕೈಗಾರಿಕೆ ಸಂಸ್ಥೆಯಲ್ಲಿ ತರಬೇತಾಗುವ ಸಮಯದಲ್ಲಿ ಸಾಧಾರಣವಾಗಿ ವಿದ್ಯಾರ್ಥಿ ವೇತನವು ಕೊಡಲ್ಪಡದಿದ್ದರೂ ಸರಕಾರವು ವಿಶೇಷ ಸಂದರ್ಭಗಳಲ್ಲಿ ತರಬೇತಿಗೆ ಚಿಕ್ಕ ಭತ್ಯವನ್ನು ಕೊಡುವ ಏರ್ಪಾಡು ಮಾಡಲಾಗುವುದು.

5. ನಿಶ್ಚಿತ ಅರ್ಜಿ ಫಾರಂಗಳು ಮತ್ತು ವಿವರಗಳು ಮಡಿಕೇರಿ ಜಿಲ್ಲಾ ಎಂಪ್ಲಾಯಿಮೆಂಟ್ ಆಫೀಸರಲ್ಲಿ ತಾ. 29-5-50ರಲ್ಲಿಯೂ ಅದಕ್ಕೆ ಮೊದಲೂ ದೊರೆಯುವದು. ಇವುಗಳಿಗಾಗಿ ಬರೆಯುವವರು ಸ್ಟ್ಯಾಂಪು ಹಚ್ಚಿದ ತಮ್ಮ ಅಡ್ರೆಸ್ ಬರೆದ ಲಕ್ಕೋಟೆಗಳನ್ನು ಜೊತೆಯಲ್ಲಿ ಕಳುಹಿಸಬೇಕು. ಪೂರ್ತಿ ಒರಾಯಿಸಿದ ಅರ್ಜಿ ಫಾರಂಗಳನ್ನು ಜಿಲ್ಲಾ ಎಂಪ್ಲಾಯಿಮೆಂಟ್ ಆಫೀಸರ್, ಮಡಿಕೇರಿ ಇವರಿಗೆ ತಾರೀಕು 4-6-50ರಲ್ಲಿ-ಯಾ-ಅದರೊಳಗೆ ತಲಪಿಸಬೇಕು. ಪ್ರತ್ಯಕ್ಷ ಸಂದರ್ಶನಕ್ಕೆ ಕರೆಯಲ್ಪಟ್ಟ ಉಮೇದ್ವಾರರು ತಮ್ಮ ಖರ್ಚಿನಿಂದಲೇ ಬರಬೇಕು.

ತಡವಾಗಿ ಅರ್ಜಿ ಮಾಡಿ ಏಪ್ರಿಲ್ ಸಂದರ್ಶನೆಗೆ ಕರೆಯಲ್ಪಡದವರು ಪುನಃ ಅರ್ಜಿ ಮಾಡಬೇಕಾದ್ದಿಲ್ಲ. ಅವರ ಅರ್ಜಿಗಳನ್ನು ಈಗ ಪರ್ಯಾಲೋಚಿಸಲಾಗುವುದು.

**ರೀ ಸೆಟ್ಲ್‌ಮೆಂಟ್ ಮತ್ತು ಎಂಪ್ಲಾಯಿಮೆಂಟಿನ ರೀಜನಲ್ ಡೈರೆಕ್ಟರು, ಮದರಾಸು.**

# ವಾರ್ತೆಗಳು.

ರಷ್ಯಾ ಮತ್ತು ಇತರ ಕಮ್ಯೂನಿಸ್ಟ ರಾಷ್ಟ್ರಗಳನ್ನು ಸಂಯುಕ್ತ ಜನಾಂಗ ಸಭೆಯಿಂದ ಹೊರಗಿರಿಸಬೇಕೆಂಬ, ಅಮೇರಿಕದ ಮಾಜಿ ಅಧ್ಯಕ್ಷ ಹರ್ಬರ್ಟ್ ಹೂವರರ ಸಲಹೆಯನ್ನು, ತೀವ್ರ ಪ್ರತಿಭಟಿಸಿ ಭಾರತ ಪ್ರಧಾನರು ಕೊಟ್ಟ ಬ್ರಾಡ್‌ಕಾಸ್ಟ ಪ್ರಕಟಣೆಗಾಗಿ, ಸಂಯುಕ್ತ ಜನಾಂಗ ಸಭೆಯ ಸೆಕ್ರಟರಿ ಜನರಲ್ ಮಿ|| ಲೈಯವರು ನೆಹರೂರವರಿಗೆ ಅಭಿವಂದನೆಗಳನ್ನು ಕಳುಹಿರುವರು.

ನ್ಯೂಯಾರ್ಕ ನಗರದಿಂದ ೬೦ ಮೈಲಿ ಉತ್ತರದಲ್ಲಿರುವ ಹೈಡ್‌ಪಾರ್ಕದಲ್ಲಿರುವ ಅಧ್ಯಕ್ಷ ರೂಸ್ವೆಲ್ಟ್‌ರ ಸಮಾಧಿಗೆ ಪಾಕೀಸ್ಥಾನದ ಪ್ರಧಾನ ಮಿ|| ಲಿಯಾಖತ್ ಆಲಿಖಾನರು ಸಂದರ್ಶನವಿತ್ತು ಸಮಾಧಿಯ ಮೇಲೆ ಪುಷ್ಪಾಹಾರವಿಟ್ಟು ಶ್ರದ್ಧಾಂಜಲಿ ಅರ್ಪಿಸಿದರು. ಹೈಡ್ ಪಾರ್ಕದಲ್ಲಿ ಶ್ರೀಮತಿ ಇಲೇನರ್ ರೂಸ್‌ವೆಲ್ಟರು ಅವರನ್ನು ಸ್ವಾಗತಿಸಿದರು:

“ರಷ್ಯದ ಹೊಟ್ಟೆ ಬೆಳೆಸಲು ಬೇಕಾಗಿ ಚೀನಾ ಕಮ್ಯೂನಿಸ್ಟರು ಚೀನದ ಪ್ರಜಾಕೋಟಿಯನ್ನು ಹಸಿವಿಗೆ ಬಲಿಕೊಡುತಿದ್ದಾರೆ. ಚೀನ- ಜನತೆಯ ಪಾಡು ಅತ್ಯಂತ ಶೋಚನೀಯವೂ ದುರಂತಮಯವೂ ಆಗಿದೆ” ಎಂಬುದಾಗಿ ವಾಯೊಮಿಂಗ್ ವಿಶ್ವವಿದ್ಯಾಲಯದಲ್ಲಿ ಮಾಡಿದ ಒಂದು ಭಾಷಣದಲ್ಲಿ ಚೀನಾ ಕಮ್ಯೂನಿಸ್ಟ ಸರಕಾರವನ್ನು ಸಂಯುಕ್ತ ಅಮೇರಿಕದ ಅಧ್ಯಕ್ಷ ಟ್ರೂಮನರು ತೀವ್ರ ಟೀಕಿಸಿರುವರು.

ಮಳೆ ಬಾರದೆ ಹಲವು ಕಡೆಗಳಲ್ಲಿ ನೀರಿನ ತುಟ್ಟಿ ಬಿದ್ದುದರಿಂದ ಸೌತ್ ಇಂಡಿಯನ್ ರೈಲ್ವೇಯ ಮರಿಗೆ ತುಂಬಾ ತ್ರಾಸವಾಗಿದೆ. ನೀರಿನ ಅಭಾವ ತಲೆದೋರಿದ ಸ್ಟೇಷನುಗಳಲ್ಲಿ (ಇಂಜಿನು ನೀರು ತುಂಬಿಸಿಕೊಳ್ಳುವ ಸ್ಟೇಷನ್‌ಗಳಲ್ಲಿ) ಹೊಸ ಬಾವಿಗಳನ್ನು ತೋಡಿ, ಇದ್ದ ಬಾವಿಗಳನ್ನು ಇನ್ನಷ್ಟು ಆಳವಾಗಿ ಅಗೆದು, ಹೆಚ್ಚಿಗೆ ಪಂಪು ಸೆಟ್ಟುಗಳನ್ನು ಜೋಡಿಸಿ ತನ್ಮೂಲಕ ಇಂಜಿನುಗಳಿಗೆ ಸರಾಗವಾಗಿ ನೀರು ಒದಗಿಸುವ ವ್ಯವಸ್ಥೆಯನ್ನು ರೈಲ್ವೆಯವರು ನೀರು ಪಡೆಯುವ ಸ್ಟೇಷನ್‌ಗಳಲ್ಲಿ ಮಾಡಿದ್ದಾರೆ.

ಭಾರತದಲ್ಲಿ ಸಕ್ಕರೆಯು ಕುರಿತಾದ ಅಭಾವ ಇನ್ನು ಮೂರು ತಿಂಗಳೊಳಗೆ ಸುಧಾರಿಸದಿದ್ದರೆ ಹೊರಗಿನಿಂದ ಇಲ್ಲಿಗೆ ಸಕ್ಕರೆ ತರಿಸುವ ಯೋಜನೆಯನ್ನು ಭಾರತ ಸರಕಾರವು ಮಾಡಿರುವದು.

ಇನ್ನು ಐದೇ ವರ್ಷಗಳಲ್ಲಿ ಪಂಚಾಯತ ರಾಜ್ಯವನ್ನು ಸ್ಥಾಪಿಸುವುದು ಒರಿಸ್ಸಾ ಸರಕಾರದ ಯೋಜನೆಗಳಲ್ಲಿ ಒಂದು.

ಭಾರತದ ಮುಖ್ಯ ಚುನಾವಣಾ ಕಮಿಷನರ್ ಶ್ರೀ ಸುಕುಮಾರ ಸೇನ್‌ರವರು ಅಭಿಪ್ರಾಯಪಡುವಂತೆ, ಅನಿರೀಕ್ಷಿತವಾಗಿ ಅಘಟಿತ ಘಟನೆಯೇನೂ ನಡೆಯದ ಪಕ್ಷಕ್ಕೆ ಭಾರತ ಪಾರ್ಲಿಮೆಂಟಿಗೆ ಮತ್ತು ಸಂಸ್ಥಾನೀ ಸ್ವಾಯತ್ತವಿಧಾಯಕ ಸಭೆಗಳಿಗೆ ಎಲ್ಲಾ ಸಂಸ್ಥಾನಗಳಿಂದ ಚುನಾವಣೆಯು ೧೯೫೧ನೇ ಮೇ ತಿಂಗಳ ಅಂತ್ಯದೊಳಗೆ ಮುಗಿಯುವುದು.

ಮುಖ್ಯ ಮಂತ್ರಿ ಪಂಡಿತ ನೆಹರೂರವರು ಇಂಡೋನೇಷ್ಯಾ ಪ್ರವಾಸದಿಂದ ಹಿಂತಿರುಗಿದ ಕೂಡಲೇ ಅವರು ಆಸ್ಸಾಮಿನಲ್ಲಿ ಪ್ರವಾಸ ಕೈಗೊಳ್ಳುವರೆಂದು ತಿಳಿದು ಬಂದಿದೆ. ಪಂಡಿತ ನೆಹರೂಗಳ ಪ್ರವಾಸದ ದಿನ ನಿಶ್ಚಿತವಾಗಿಲ್ಲವಾದರೂ ಅವರು ಜೂನ್ ತಿಂಗಳಲ್ಲಿ ಅಲ್ಲಿಗೆ ಭೇಟಿ ಕೊಡಬಹುದಂತೆ.

ಬಾಮೋಂಗ್‌ವಾಟೋ ಪಂಗಡದ ನಿಯೋಜಿತ ನಾಯಕನ ಬ್ರಿಟಿಷ್ ಪತ್ನಿ ಶ್ರೀಮತಿ ಖಾಮಾ ಅವರಿಗೆ ಒಂದು ಹೆಣ್ಣು ಮಗು ಜನಿಸಿದೆ. ಬ್ರಿಟಿಷ್ ಸರಕಾರದ ಆಜ್ಞೆಯ ಮೇರೆಗೆ ಅಜ್ಞಾತವಾಸದಲ್ಲಿರುವ ಸೆರೆಟ್ಸೆಖಾಮಾನು ಅಪ್ಪಣೆ ಪಡೆದು ತನ್ನ ಮಗಳನ್ನು ಕಾಣಲಿಕ್ಕೆ ಲೊಬಾಟ್ಸಿಯಿಂದ ಹೊರಟಿರುವನಂತೆ.

ಜಪಾನಿನ ಮುಖ್ಯಮಂತ್ರಿ ಮಿ|| ಯೋಷಿಡಾರವರ ಕಾರಿಗೆ ಈ ದಿನ ಟೋಕಿಯೋ ರೈಲ್ವೆ ನಿಲ್ದಾಣದ ಬಳಿ ೨ ಸಾವಿರ ಕಮ್ಯೂನಿಸ್ಟ ಪ್ರದರ್ಶನಕಾರರು ಮುತ್ತಿಗೆ ಹಾಕಿ ಸುತ್ತಿಸಿದ್ದರು. ಇದರಿಂದ ಕೋಪಗೊಂಡ ಮುಖ್ಯ ಮಂತ್ರಿ ಕಮ್ಯೂನಿಸ್ಟ ಪಕ್ಷಕ್ಕೆ ಬಹಿಷ್ಕಾರ ಹಾಕುವುದಾಗಿ ತಿಳಿಸಿದ್ದಾರೆ.

ಹೊಸ ದೆಹಲಿಯಲ್ಲಿ ೧೯೫೧ನೇ ಜನವರಿ ೧ರಿಂದ ನಡೆಯಲಿರುವ ಅಂತರಾಷ್ಟ್ರೀಯ ಇಂಜಿನಿಯರಿಂಗ್ ಪ್ರದರ್ಶನದ ಭಾಗವಹಿಸಲು ಭಾರತವು ಜರ್ಮನಿಗೆ ಆಹ್ವಾನ ಕಳಿಸಲಿದೆ.

ಜಪಾನಿ ಸಾಮ್ರಾಟ ಹಿರೊಹಿಟೋರವರ ೨೦ ವರ್ಷ ವಯಸ್ಸಿನ ಮಗಳು, ರಾಜಕುಮಾರಿ ಟಾಕಾ ತಾ. ೨೦ರಲ್ಲಿ ವಾರಕ್ಕೆ ಕೇವಲ ೩೦ ಷಿಲಿಂಗ್ ಸಂಬಳದ ಸರ್ಕಾರಿ ಗುಮಾಸ್ತೆಯೊಬ್ಬನನ್ನು ಮದುವೆಯಾದಳು. ಕಳೆದ ಎರಡು ಸಾವಿರ ವರ್ಷಗಳಲ್ಲಿ ಜಪಾನಿ ರಾಜಕುಮಾರಿಯೊಬ್ಬಳು ಸಾಮಾನ್ಯ ಪ್ರಜೆಯೊಬ್ಬನನ್ನು ಮದುವೆಯಾಗುತ್ತಿರುವುದು ಇದೇ ಮೊದಲು.

ಮೈಸೂರು, ಮೆಟ್ಟೂರು ಮತ್ತು ಪಾಪನಾಶಂ ಜಲಾಶಯಗಳಲ್ಲಿ ನೀರಿನ ಮಟ್ಟ ಬಹಳ ಕೆಳಗಿಳಿದು ಹೋಗಿರುವದರಿಂದ, ಈಗ ಕೈಗಾರಿಕೆಗಳಿಗೊದಗಿಸುತ್ತಿರುವ ವಿದ್ಯುಚ್ಛಕ್ತಿಯಲ್ಲಿ ಇನ್ನೂ ಶೇಕಡ ೨೫ರಷ್ಟು ಖೋತಾ ಮಾಡಲಾಗಿದೆ. ಸಿನಿಮಾಗಳಲ್ಲೆಲ್ಲಾ ದಿನಕ್ಕೆ ಒಂದು ಪ್ರದರ್ಶನ ಮಾತ್ರ ನಡೆಯಬೇಕೆಂದು ಆಜ್ಞೆ ಮಾಡಲಾಗಿದೆ.

ಸಿಲೋನಿನ ಹಳ್ಳಿಗಾಡಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸದ ಹುಚ್ಚು ಹೆಚ್ಚಿ ೬೦ ವರ್ಷದ ಮುದುಕನೊಬ್ಬನು ೨೦ ವರ್ಷದ ತನ್ನ ಮಗನ ಜೊತೆಯಲ್ಲಿ ಒಂದೇ ತರಗತಿಯಲ್ಲಿ ಓದುತ್ತಲಿದ್ದಾನೆ. ತಂದೆಯು ಸ್ಕೂಲಿನ ವಿದ್ಯಾರ್ಥಿಗಳಲ್ಲೆಲ್ಲಾ ಬಹಳ ಮುಂದಾಗಿದ್ದಾನೆ.

ಮಧ್ಯಪ್ರದೇಶದ ಹಣಕಾಸಿನ ಮಂತ್ರಿಯಾದ ಶ್ರೀ ಎಸ್. ವಿ. ಗೋಖಲೆಯವರು ತಮ್ಮ ೩೫-ವರ್ಷದ ಜೀವನದಲ್ಲಿ ಹಣವನ್ನು ಮುಟ್ಟದೆಯೇ ಜೀವನ ನಡೆಸಿರುವುದಾಗಿಯೂ ತಾವು ಹಣವನ್ನು ಮುಟ್ಟದೆ ಕಾಗದದಲ್ಲಿ ಮಾತ್ರ ಹಣ ವಿನಿಮಯ ಮಾಡುತ್ತಿರುವುದಾಗಿಯೂ ತಿಳಿಸಿದ್ದಾರೆ.

# ಸ್ತ್ರೀಯರಿಗೆ ವ್ಯಕ್ತಿತ್ವವಿಲ್ಲವೆ?

**ಲೇ:-ಗಿರಿಬಾಲಿ**

---

ವ್ಯಕ್ತಿತ್ವವೆಂದರೇನು? ವ್ಯಕ್ತಿ ಎಂದಿರುವ ಎಲ್ಲರಲ್ಲಿಯೂ ಅದಿದೆ ಎಂದ ಬಳಿಕ ಸ್ತ್ರೀಯರಲ್ಲಿಲ್ಲವೆನ್ನುವದು ಹೇಗೆ? ಅದು ಹೇಗಿದೆ? ಪುರುಷರಿಗಿಂತಲೂ ಉಜ್ವಲವಾಗಿದೆ. ... ವರಿ, ಶುಕುಂತಲೆಯರೂ ಇರುತ್ತಾರೆ! ವ್ಯಕ್ತಿಯಿದ್ದಲ್ಲಿ ಕೇವಲ ವ್ಯಕ್ತಿತ್ವ ಮಾತ್ರ ಪ್ರಕಾಶಿಸುತ್ತದೆ. ವ್ಯಕ್ತಿತ್ವವೊಂದು ಶಕ್ತಿ! ಅದಿಲ್ಲದ ಜೀವ ನಿರ್ಜೀವ. ಮನುಷ್ಯರಿಗೂ ಅನ್ಯಜೀವಿಗಳಿಗೂ ಇರುವ ಭೇದವು ವ್ಯಕ್ತಿತ್ವದಿಂದಲೇ ಕಂಡುಬರುತ್ತದೆ. ಎಲ್ಲಾ ಜಂತುಗಳಿಗಿಂತಲೂ ವ್ಯಕ್ತಿತ್ವದಿಂದಲೇ ಮನುಷ್ಯನು ಶ್ರೇಷ್ಠನೆನಿಸಿಕೊಳ್ಳುತ್ತಾನೆ. ... ಹೃದಯವು ಅಕ್ಕರತೆಯನ್ನು ... ಮನುಷ್ಯನು ಎಂಥಹ ಆಘಾತವನ್ನು ಸಹಿಸಲು ಸಮರ್ಥನಾಗುತ್ತಾನೆ. ಆದರೆ ವ್ಯಕ್ತಿತ್ವದ ಅರ್ಥ ತಿಳಿಯದೆ ಸನ್ನಿವೇಶವೇರ್ಪಡುತ್ತದೆ. ಕಳೆಯಲಾಗದ ಅಮೂಲ್ಯ ರತ್ನ ವ್ಯಕ್ತಿತ್ವ, ಅದನ್ನು ಳಿಸಲು ಮನುಷ್ಯನ ಧರ್ಮಗಳನ್ನು ತೀಡಿಸುವವರು ... ಅದನ್ನು ಗಳಿಸಲು ಎಷ್ಟು ಮಂದಿ ಎಷ್ಟು ಹಣವನ್ನು ವ್ಯಯಿಸುವದಿಲ್ಲ! ಬಿರುದುಗಳನ್ನೇರ್ಪಡಿಸುವದಿಲ್ಲ! ಆದರೆ, ಅದರಿಂದೆಲ್ಲಾ ವ್ಯಕ್ತಿತ್ವವಿರುವದೇ? ಅದನ್ನು ಕರೆಸಿಕೊಳ್ಳುತ್ತಾರೆಯೇ? ಗಂಭೀರ ಮುದ್ರೆಯನ್ನು ಧರಿಸಿ ವಿವಿಧ ಪೋಷಾಕು ತೊಟ್ಟರೆ, ಅವರಿಗೆ ವ್ಯಕ್ತಿತ್ವವೆನ್ನುತ್ತಾರೆಯೆ? ಸಾಮಾನ್ಯರಲ್ಲಿ ಬೆರೆಯದೆ ಅಸಂತ ... ದ್ದರೆ ತಾನೆ ವ್ಯಕ್ತಿತ್ವವನ್ನು ಗಳಿಸಲಾಗುತ್ತದೆಯೆ? ಇಲ್ಲ. ವ್ಯಕ್ತಿತ್ವವು ಆ ಥಾಟಮಾಟಗಳಿಂದಲಾಗಲಿ, ಹಣದಿಂದಾಗಲಿ ಇರುವದಿಲ್ಲ. ಅತ್ಯಂತ ಹೀನ ಗುಣಗಳೂ ಕೂಡ ಲಕ್ಷಾಧೀಶರಾಗಿರುತ್ತಾರೆ. ಮೆದುಳಿಲ್ಲದ ತಲೆಗಳು, ಸಂಕುಚಿತ ಹೃದಯಿಗಳು ಎಷ್ಟು ಮಂದಿ ಲಕ್ಷಾಧೀಶರಾಗಿಲ್ಲ! ದೇಶದ ದೊಡ್ಡ ಪದವಿಯು ಲಭ್ಯವಾದರೆ ಆದಿದೆಯೆ? ಇಲ್ಲ. ಹಾಗಿರುತ್ತಿದ್ದರೆ ವೈಸ್‌ರಾಯ್, ಗವರ್ನರ್, ಇವರನ್ನು ಬಿಟ್ಟರೆ ವ್ಯಕ್ತಿತ್ವವುಳ್ಳ ಅನ್ಯ ಜೀವಿಗಳೇ ಇರುತ್ತಿದ್ದಿಲ್ಲ. ನಮ್ಮಲ್ಲಿ ದೊಡ್ಡ ದೊಡ್ಡ ಆಫೀಸರರಿಗಿಂತಲೂ ಘನ ವ್ಯಕ್ತಿತ್ವವುಳ್ಳ ವ್ಯಕ್ತಿಗಳು ಎಷ್ಟೋ ಮಂದಿ ಇರುತ್ತಾರೆ.

ಹಾಗಾದರೆ ವ್ಯಕ್ತಿತ್ವವೇನು ದೈವಿಕವದವೆ? ಅಲ್ಲ. ಅದು ಪ್ರತಿಯೊಬ್ಬರಲ್ಲೂ ಸಮಾವೇಶವಾಗಿರುತ್ತದೆ. ಅದರನ್ನು ಕೆಟ್ಟದಿಸಿಕೊಳ್ಳಲು ಪ್ರಯತ್ನಿಸದಿದ್ದರೆ ಕಂಡುಹೋಗುತ್ತದೆ. ಅದನ್ನು ತಿಳಿಯಲು ವಿಶೇಷ ದೃಷ್ಟಿ ಬೇಕಾಗುತ್ತದೆ. ಅದನ್ನು ಇತರರಿಂದಲೂ ಅಡಗಿಸಲಾಗುವದಿಲ್ಲ. ಸುಳ್ಳು ಪ್ರಚಾರದಿಂದ ಪ್ರಕಾಶಪಡಿಸಲೂ ಸಾಧ್ಯವಾಗದು. ಆಚರಣೆಯೇ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿರುತ್ತದೆ. ವಿಚಿತ್ರ್ಯವೆಂದರೆ ವ್ಯಕ್ತಿಯು ವ್ಯಕ್ತಿತ್ವವು ಅವರನ್ನು ಅಹಿತಗೊಳಿಸುತ್ತದೆ. ಹೀನವ್ಯಕ್ತಿಯು ವ್ಯಕ್ತಿತ್ವಶೂನ್ಯನಾಗಿರುತ್ತಾನೆ. ನಡತೆಯು ಮನುಷ್ಯನ ಘನತೆಯ ಸ್ತ್ರೋತಸ್ಸಾಗಿದೆ. ಇದೇ ವ್ಯಕ್ತಿತ್ವ ಎಂದರೆ, ನಡತೆಯು ವ್ಯಕ್ತಿತ್ವದ ಬುನಾದಿ. ಬೆಲ್ಲದಿಂದ ಸಕ್ಕರೆಯನ್ನು, ಸಕ್ಕರೆಯಿಂದ ಕಲ್ಲುಸಕ್ಕರೆಯನ್ನು ಮಾಡಲಾಗುತ್ತದೆ. ಎ... ಸಕ್ಕರೆಯು ಬೆಲ್ಲದ ಅಂಶದ ಶುದ್ಧ ಫಲವಾಗಿರುತ್ತದೆ. ಹಾಗೆಯೇ ಮನುಷ್ಯನ ಶುದ್ಧ ಜೀವನದ ಅಂತಿಮ ಪರಿಣಾಮವೇ ವ್ಯಕ್ತಿತ್ವ. ಜೀವನದ ಎಲ್ಲಾ ಶಕ್ತಿಗಳ ಆಗ್ರವೇ ವ್ಯಕ್ತಿತ್ವ. ಅದನ್ನು ಬೆಳೆಗೊಡದವರಲ್ಲಿ ... ವ ... ಮನುಷ್ಯನ ... ವನ್ನು ವೆಡಹಲ್ಲವೆ. ಉದಾಹರಣೆಗೆ ... ವನ್ನು ಹಬೇಕೇದು. ಎಲ್ಲರೂ ಅನ್ನುತ್ತಾರೆ. ಅನುಭವಿಸುವವರಿನ್ನು ಮಂದಿ? ಆದರೆ ಮಹಾಪುರುಷರೂ ಬ್ಬರು ಆ ವಿಷಯವಾಗಿ ಉಪನ್ಯಾಸಕೊಟ್ಟರೆ ಎಷ್ಟೋ ಮಂದಿ ಪ್ರಮಾಣಮಾಡಿ ಸತ್ಯವನ್ನು ಸಂಪೂರ್ಣವಾಗಿ ಸ್ವೀಕರಿಸಿಗೊಳ್ಳುತ್ತಾರೆ. ಏಕೆ? ಮೂಲ ಕಾರಣವೆಂದರೆ ಆ ಮಹಾಪುರುಷನ ವ್ಯಕ್ತಿತ್ವ ಅವನ್ನು ಆ ರೀತಿ ಪ್ರಮಾಣಬದ್ಧರನ್ನಾಗಿ ಮಾಡಿಸುತ್ತದೆ.

ವ್ಯಕ್ತಿತ್ವಕ್ಕೆ ಸ್ತ್ರೀಪುರುಷ ಭೇದವಿದೆಯೇ? ಇಲ್ಲ. ನಡತೆಯು ಉಚ್ಚ-ನೀಚತೆಯಿಂದ ವ್ಯಕ್ತಿತ್ವವನ್ನು ಗುರುತಿಸಲಾಗುವದರಿಂದ ಸ್ತ್ರೀಯರಲ್ಲಿ ವ್ಯಕ್ತಿತ್ವವಿರಲೇಬೇಕಲ್ಲವೆ? ಆದರೆ ಶಾಸ್ತ್ರಕಾರರು ಅವರ ವ್ಯಕ್ತಿತ್ವವನ್ನು ಒಪ್ಪಿಕೊಳ್ಳದಿರುತ್ತಾರೆ. ಅವರಲ್ಲಿ ದೋಷಗಳ ಹೊರೆಯನ್ನೇ ಹೊರಿಸಿರುತ್ತಾರೆ. ಪುರುಷರಿಲ್ಲದೆ ಅವರ ನಿರ್ವಾಹವೆ ಸಾಧ್ಯವಿಲ್ಲವೆಂದಿರುತ್ತಾರೆ. "ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ-" ಎಂದು ಮುಂತಾಗಿ ಸ್ತ್ರೀಯರನ್ನು ಪರಾವಲಂಬಿ ವ್ಯಕ್ತಿಗಳನ್ನಾಗಿ ಹೇಳಿರುತ್ತಾರೆ. ಹಾಗಾದರೆ ಪುರುಷರಿಲ್ಲದೆ ಸ್ತ್ರೀಯರಿಗೆ ಸ್ಥಾನವೇ ಇಲ್ಲವೆಂದಾಯಿತು. ಎಂದ ಮೇಲೆ ಅವರಿಗೆ ವ್ಯಕ್ತಿತ್ವವೆಲ್ಲಿ! ಆತ್ಮನಿರ್ಭರತೆಯಿಲ್ಲದ ವ್ಯಕ್ತಿ, ಸಚ್ಚಾರಿತ್ರರಾಗಲಾರರು. ಆದುದರಿಂದ ಪರಾವಲಂಬಿ ವ್ಯಕ್ತಿಗಳು ಸಚ್ಚಾರಿತ್ರರಾಗಿರುವುದೆಂತು? ಇಂತು ಶಾಸ್ತ್ರಕಾರರು ನಿರ್ದಾಕ್ಷಿಣ್ಯವಾಗಿ ಸ್ತ್ರೀಯರ ವ್ಯಕ್ತಿತ್ವವನ್ನು ಅಲ್ಲಗಳೆದಿರುತ್ತಾರೆ. ಅಷ್ಟಕ್ಕೇ ನಿಲ್ಲದೆ ಸ್ತ್ರೀಯರು ಅಹಂಭಾವಿಗಳೆಂದು, ಮೋಹಗಳೆಂದು, ಸ್ವಾರ್ಥಿಗಳೆಂದು ಟೀಕೆಯೂ ಇದೆ. ದಯೂ, ಕೋಮಲತೆಗಳ ಮೂರ್ತಿಗಳೆಂದಿದ್ದರೂ ಮೇಲಿನೆರಡು ದೋಷಗಳು!

ಜರ್ಮನಿಯ ದ ಶ್ರೇಷ್ಠನಾದ ಶೋಪೆನ್‌ಹಾರನು ಸ್ತ್ರೀಯರನ್ನು ಹಿಂದಿಕ್ಕಿದುದನ್ನು ಕೇಳಿದರಂತೂ ರೋಮಾಂಚವುಂಟಾಗುತ್ತದೆ. ಸ್ತ್ರೀಯರಲ್ಲಿ ವಿಲಾಸತೆ, ಶೃಂಗಾರ ಪ್ರಿಯತೆ, ಶರೀರಪೋಷಣೆ, ಅನಾವಶ್ಯಕ ವಸ್ತ್ರಾಭರಣಗಳ ಲಾಲಸೆ ಇನ್ನಿತರ ಇಂತಹ ಅನೇಕ ದೋಷಗಳನ್ನು ಹೊರಿಸಿರುತ್ತಾರೆ. ಅನ್ಯಕಾಲದ ಬಡವೆಯೂ ದಗೂ ಒಡವೆಯಾಸೆ ಬಿಟ್ಟವಳಲ್ಲ ಎಂಬ ಉದ್ಗಾರಕ್ಕೆ ಕೊರತೆಯಿಲ್ಲ. ಕಲಾಕಾರರಾದರೋ ಸ್ತ್ರೀಯರನ್ನು ಪತಂಗವೆಂದಿದ್ದಾರೆ. ಮಾಯೆ ಮಂದಿರ, ಸಂಸಾರ ಬಂಧನಗಳ ಮೂಲವೆಂದಿದ್ದಾರೆ. ಇವನ್ನೆಲ್ಲಾ ಒಪ್ಪಿದರೆ ಸ್ತ್ರೀಯರಿಗೆ ವ್ಯಕ್ತಿತ್ವವೇ ಇಲ್ಲವೆಂದಾಯಿತು. ವ್ಯಕ್ತಿತ್ವಕ್ಕಿರಬೇಕಾದ ಗುಣಗಳು ಮೂರು. ಸರಳತೆ, ಸಭ್ಯತೆ ಮತ್ತು ಆತ್ಮನಿರ್ಭರತೆ. ಈ ಮೂರು ಗುಣಗಳಿಲ್ಲದ ವ್ಯಕ್ತಿ ಶರೀರಧಾರಿಯಲ್ಲ; ಕೇವಲ ಮುಳ್ಳು ಬೂರುಗದ ಮರವೇ ಸರಿ! ಇದರ ಕಾರಣವೇನು? ಸ್ತ್ರೀಯರು ಪ್ರಚಲಿತ ಸಮಾಜದಲ್ಲಿಯೂ ತ್ತದೇ ಅವರೂ ಸಾಧನ ಪಡದಿದ್ದರೆ ಆದಕ್ಕೆ ಸಮಾಜವೇ ಹೊಣೆ. ವ್ಯಕ್ತಿಯು ಯಾರೇ ಇರಲಿ ... ಗಿ ನಡೆದ ... ಸ್ತ್ರೀಯರು ಸ್ವಲ್ಪ ಅನ್ಯಾಯಗಳಿಗಾದರೆ ಅದು ಅವರ ತಪ್ಪಲ್ಲ. ಅವರು ಸ್ವಾವಲಂಬಿಗಳಾಗಿ, ಪ್ರಗತಿ ಶೀಲರಾಗಲು ಸಮಾಜ ಪರಿಯಾದ ಎಡೆಗೊಟ್ಟಿಲ್ಲ. ಈ ಪರಾಧೀನತೆ ಮತ್ತು ವಿಲಾಸಪ್ರಿಯತೆಗೆ ಪುರುಷರೇ ಕಾರಣರು. ತಮ್ಮ ಸ್ತ್ರೀಯರನ್ನು ಗೊಂಬೆಯಂತೆ ಶೃಂಗರಿಸಿ ತೃಪ್ತಿಪಡುವ ಪತಿಯರು ಎಷ್ಟು ಮಂದಿ ಭಾರತದಲ್ಲಿಲ್ಲ? ಮದುವೆಯ ಮಂಟಪದಲ್ಲಿ ವಧುವಿನ ... ಯನ್ನಿಳಿಸಿದ ಗಂಡನನ್ನು ನಾನು ಬಲ್ಲೆ. ಕುಂಕುಮವು ಉಜ್ಜಿದ ಗಂಡನ ವಿಷಾದವಾಗಿಯೂ ಕೇಳಲಿಲ್ಲ. ಪುರುಷರ ಬಯಕೆಯಿಂದಲೇ ಸ್ತ್ರೀಯರ ಶೃಂಗಾರ ಹೆಚ್ಚುತ್ತಿದೆ. ತಮ್ಮ ವಿಲಾಸವೃತ್ತಿಯನ್ನು ಸ್ತ್ರೀಯರ ಮೇಲೆ ತೆಗೆಯುತ್ತಾರೆ. ... ಮಗ್ಧಯರು ಅವರ ಬಹುಮಂಕರ ಪರಿಣಾಮವನ್ನರಿಯದೆ ಶೃಂಗಾರಕ್ಕೆ ಬಲಿ ಬೀಳುವರು. ಈ ಶೃಂಗಾರ ಪ್ರಿಯತೆಯಿಂದ ಮಡದಿ ಗಂಡನಿಗೆ ಕೈಗೊಂಬೆಯಾಗಿ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾಳೆ.

ಶಿಕ್ಷಣದ ಕೊರತೆ, ಪರದೆ ಪದ್ಧತಿಯಿಂದ ಮೂಲಕ್ಕೆ ಶಿಕ್ಷಿತೆಯರೆನ್ನಲಾಗುವುದಿಲ್ಲ-ಶಿಥಿಲತೆ, ಸ್ವಾವಲಂಬನಯಿಲ್ಲದಿರುವಿಕೆ ಇಂತಹ ದೌರ್ಬಲ್ಯಗಳು ಸಮಾಜ ದೋಷದಿಂದುಂಟಾಗಿವೆ. ಮುಂದೆ ಅದನ್ನೇ ಬಾಳಿನಲ್ಲಿ ಬೆಳೆಸಿಕೊಂಡರೆ ಅದಕ್ಕೆ ಅವರೇ ಹೊಣೆಯಾಗಬೇಕಾಗುವುದು. ಆದ್ದರಿಂದ ಅಂತಹ ಪ್ರವೃತ್ತಿಯು ಸ್ತ್ರೀಯರು ಇಲ್ಲದಿಲ್ಲ. ಅದಕ್ಕೆ ಅವರ ಅಜ್ಞಾನವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಇಂಥಹ ಪರಿಸ್ಥಿತಿಯಲ್ಲಿ ಸ್ತ್ರೀಯರು ವ್ಯಕ್ತಿತ್ವವನ್ನಿಟ್ಟುಕೊಳ್ಳಬಲ್ಲರೆ? ಹೇಗೆ? ತಮ್ಮ ಅತ್ಯಮೂಲ್ಯ ವಸ್ತು ತಮ್ಮ ಅಸ್ತಿತ್ವವನ್ನೇ ಅರಿಯದವರು ವ್ಯಕ್ತಿತ್ವವನ್ನು ಹೇಗೆ ಉಳಿಸಿಕೊಳ್ಳಬಲ್ಲರು?

ಉತ್ತರ ಹಿಂದೂಸ್ಥಾನದಲ್ಲಂತೂ ಸ್ತ್ರೀಯರು ಹಣ ಕಾಸ ಗಳಂತೆ ಆಪಹರಿಸಲ್ಪಡುತ್ತಾರೆ. ಅಂಥವರಿಗೆಲ್ಲಿದೆ ವ್ಯಕ್ತಿತ್ವ? ತನ್ನ ಉನ್ನತಿ, ಅಧಿಕಾರಗಳ ಚಿಂತೆಯಿಲ್ಲದ ಗಂಡಸರನ್ನೇ ದೇವರೆನ್ನುವ ಸ್ತ್ರೀಯರಿಗೆಲ್ಲಿಂದ ವ್ಯಕ್ತಿತ್ವವಿರಬೇಕು? ಚಿತ್ತೂರಿಯ ಚಾಂದ ಬೀಬಿ, ರುಹನ್ಸಿ ರಾಣಿ. ರಜಿಯಾ, ವಿಕ್ಟೋರಿಯಾ ಮುಂತಾದವರು ಗಂಡಸರನ್ನೇ ಬೆರಳು ಕಚ್ಚಿಸುವಂತೆ ಮಾಡಿದುದರಿಂದಲೇ ಅವರ ವ್ಯಕ್ತಿತ್ವ ಎಂದಿಗೂ ಉಳಿದಿದೆ.

ವಿವಾಹವಿಲ್ಲದ ಜೀವನವು ಅಪೂರ್ಣವೆಂಬುದು ವಿಲಾಸಿಗಳ ವಾದ. ಮದುವೆಯ ಹೆಸರಿನಲ್ಲಿ ಇಷ್ಟೆಲ್ಲಾ ಹಾಳು ಗಳಲ್ಲಾ ಸಮಾಜವನ್ನು ದೂಷಿತ ಮಾಡುವ ವ್ಯಕ್ತಿಗಳ ಜೀವನವು ಗುರಿಮುಟ್ಟಿದುದೆಂದು ಯಾರು ತಾನೆ ಹೇಳಬಲ್ಲರು? ಅರುವತ್ತರ ಮುದುಕನು ಚಿಕ್ಕ ಹುಡುಗಿಯನ್ನು ಮದುವೆಯಾದರೆ ಆ ಜೀವನದ ಸಾಫಲ್ಯವೇನು? ಹಿಟ್ಲರನು ಮದುವೆಯಾಗಿದ್ದಿಲ್ಲ. ಆತನು ಪ್ರಪಂಚಾನುಭವಶೂನ್ಯನಾಗಿದ್ದನೆ? ಆತನ ಜಗತ್ಪ್ರಸಿದ್ಧತೆಗೆ ಮದುವೆ ಕಾರಣವಾಯಿತೆ? ಜೀವನ ಸಾಫಲ್ಯಕ್ಕೂ, ಸ್ತ್ರೀ ಪುರುಷರ ಸಹಯೋಗಕ್ಕೂ ಸಂಬಂಧವಿಲ್ಲ. ಹಾಗಿರುತ್ತಿದ್ದರೆ ಬುದ್ಧನು ತನ್ನ ಸ್ತ್ರೀಯನ್ನು ಬಿಟ್ಟು ಕಾಡಿಗೋಡುತ್ತಿರಲಿಲ್ಲ.

ವ್ಯಕ್ತಿತ್ವ ಯಾರ ಸಹಾಯದಿಂದಲೂ ಉಂಟಾಗದು. ಸ್ತ್ರೀಯರ ವ್ಯಕ್ತಿತ್ವದಲ್ಲಿ ಕೊರತೆಯಿದ್ದರೆ ಅದು ಪುರುಷರ ಅವಲಂಬನೆಯಿಂದಾಗಿ, ಅವರಿಗೆ ರಕ್ಷಣೆ, ಭರಣ, ಪೋಷಣ ಮತ್ತು ವಸ್ತ್ರಾಭರಣ ಬೇಕು. ಆದುದರಿಂದ ಪುರುಷರು ಬೇಕು. ಪುರುಷನಿಲ್ಲದೆ ಜೀವನ ಶೂನ್ಯವೆಂದೇ ತಿಳಿದರೆ ಸ್ತ್ರೀಯರ ಉನ್ನತಿ ಎಂದೆಂದಿಗೂ ಆಗದು, ವ್ಯಕ್ತಿತ್ವವೂ ಇರದು. ನಮ್ಮ ಹುಟ್ಟು ಒಂಟಿಯಾಗಿಯೆ ಆಗುತ್ತದೆ. ನಾವು ಒಂಟಿಯಾಗಿಯೇ ಹೋಗುವೆವು ... ವ್ಯಕ್ತಿಯು ತನ್ನ ಉನ್ನತಿ-ಅವನತಿಯ ಯೋಜನೆಯನ್ನು ತಾನೇ ಮಾಡಬೇಕು. ಪುರುಷರ ಮೇಲಿನ ಭರವಸೆಯಿಂದಲೇ ಸ್ತ್ರೀಯರ ವ್ಯಕ್ತಿತ್ವವು ಅಳಿದಿದೆ. ಅದರಿಂದ ಶೋಪೆನ್‌ಹಾರನು, "ಸ್ತ್ರೀಯರು ಯಾವ ವಸ್ತುವಿನಲ್ಲೂ ತಮ್ಮ ಸ್ವತಂತ್ರವಾದ ನಿಸ್ತೆ ಇಟ್ಟವರಲ್ಲ. ಕಲಾರೂಪದಲ್ಲಿ ಸ್ತ್ರೀಯರು ಸಂಸಾರಕ್ಕೆ ಒಂದು ವಸ್ತುವನ್ನಾದರೂ ಕೊಟ್ಟಿಲ್ಲವೆಂಬುದು ಇಂದಿನವರೆಗಿನ ಇತಿಹಾಸದಿಂದ ತಿಳಿಯುತ್ತದೆ. ಸ್ತ್ರೀಜಾತಿ ಒಂದಾದರೂ ಅಮರ ಕೀರ್ತಿಯ ವಿಶ್ವದ ಯಾವ ಮೂಲೆಯಲ್ಲೂ ಕಾಣುವುದಿಲ್ಲ" ಎನ್ನುವನು. ಆ ಅಪಮಾನಕರವಾದ ಉದ್ಗಾರಕ್ಕಾಗಿ ಶೋಪೆನ್‌ಹಾರನನ್ನೇಕೆ ದೂಷಿಸಬೇಕು?

(ಕದಾವಳಿ)

---

ಜೈಪುರ, ಬೊಂಬಾಯಿ ಮತ್ತು ಪೂನಾ ಪೌರಸಭೆಗಳು ಗುಡಿಸುವ ಯಂತ್ರಗಳ ಸರಬರಾಯಿ ಬಗ್ಗೆ ಬ್ರಿಟಿಷ್ ಕಾರ್ಖಾನೆಯೊಂದರೊಡನೆ ಒಪ್ಪಂದ ಮಾಡಿಕೊಂಡಿವೆ. ರಸ್ತೆಗಳಿಗೆ ನೀರನ್ನು ಚಿಮುಕಿಸುವ ಮತ್ತು ಕಸವನ್ನು ಗುಡಿಸುವ ಮತ್ತು ಅದನ್ನೆಲ್ಲಾ ಗುಡ್ಡೆಮಾಡುವ ಈ ಯಂತ್ರಕ್ಕೆ ಆರ್ಡರ್ ಕೊಡುವುದರಲ್ಲಿ ಜೈಪುರ ಪೌರಸಭೆಯೇ ಭಾರತದಲ್ಲೆಲ್ಲಾ ಮೊದಲನೆಯದು.

---

## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಉಪಕರಣಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಿಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರಬೇಕಾಗಿ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,

52-38 ಗೌರವ ಕಾರ್ಯದರ್ಶಿ.



# CRESCENT

## FOR PROTECTION AND SERVICE.

**It is best to represent and insure with**

**The CRESCENT Insurance Co, Ltd,**

*H: O: BOMBAY.* *[Established 1919.*

***For particulars write to:***

**Sri B. A. Poovaiah** or **The Branch Manager,**
*Organiser* *22 B. Mahatma Gandhi Road,*
*Pollibetta, Coorg.* *Bangalore 1.*

**ಸುರಕ್ಷಿತವಾದ ಜೀವವಿಮೆ ಪಡೆಯಲು**

# ಕ್ರೆಸೆಂಟ್

**ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.**



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ)

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 55,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು. ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟ್ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ತುಂಬಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.



## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. ... ... | 6,13,00,000 | ಮೀರಿದೆ |
| ಈ ಪ್ರಯತ್ನದಿಂದ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| [illegible] | 10,00,00,000 | „ |

1,28,000ಕ್ಕೂ ಮೇಲ್ಪಟ್ಟು ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ

# ದಿ ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರಿಜಿಸ್ಟರ್ಡ್ ಆಫೀಸ್, ಜನರಲ್ ಮ್ಯಾನೇಜರ್.

ಪ್ರಧಾನ ಕಛೇರಿ ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಬೊಂಬಾಯಿ.

ಬ್ರಾಂಚ್ ಆಫೀಸ್ ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರೋಡ್, ಬೆಂಗಳೂರು.



**ಭದ್ರತೆ! 17 ವರ್ಷಗಳ ಅನುಭವ ಅನುಕೂಲತೆ !!**

**ಅನುಭವಶೀಲತೆ!!**

# ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಛೇರಿ,

**ಕದ್ರಿ ರೋಡ್, ಮಂಗಳೂರು.**

ಖಾಯಂ ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | „ | 3¼% |
| 12 | „ | 3½% |
| 24 | „ | 4 % |

ರೂಪಾಯಿ 5,000ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಕೈಕಂಬ, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಸಂಪಾಜೆ.

**ಒಟ್ಟು ವಹಿವಾಟಿನ ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.**

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,

**ಮಡಿಕೇರಿ ಶಾಖೆ, ಮಡಿಕೇರಿ.**



# ದಿ ಟ್ರಾಪಿಕಲ್

**ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.**

ಮ್ಯಾನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

**Transacts:—Life, Fire, Motor and Marine.**

ಯಂ. ಯು. ಅಚ್ಚಣ್ಣ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.



# The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG Apply today

*Head Office:* **MANGALORE** 26-7

**K. M. Bopaiah, Esq.,** *Branch Secretary for Mysore & Coorg,* *85 Sultanpet, BANGALORE 2.*



ಶ್ರೀ ಬಿ. ಎಸ್. ಗೋವಿಂದರಾಜು, 'ಕೊಡಗು' ಏಜೆಂಟರು, ವೀರಾಜಪೇಟೆ

Edited, Printed and Published by P. I. Belliappa at 'Kodagu Press, Mercara, for 'Kodagu' Ltd.

Licence No. 60.
Licenced to Post without Prepayment

Reg. No. M. 1550. 'KODAGU' M..CARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೦ | ತಾರೀಕು ೧-೬-೧೯೫೧ನೇ ಶುಕ್ರವಾರ | ಸಂಚಿಕೆ ೧

## ॥ ಶಾಂತಿನಿಕೇತನ ॥

ಗೊಂದಲಗಳಿಂದ ಕೂಡಿ ಜನರ ಜೀವ ಕಳೆಯನ್ನೇ ಹಿಂಡುತ್ತಿರುವ ನಾಗರಿಕತೆಯಿಂದ ಬಹು ದೂರದಲ್ಲಿದ್ದು ಶಾಂತಿಯ ನೆಲೆವೀಡಾಗಿ ಶಾಂತಿನಿಕೇತನವು ರಾರಾಜಿಸುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯು ನಮ್ಮ ದೇಶವನ್ನು ಆವರಿಸಿ ಅದರ ಪುರಾತನ ಅವನತಿಗೆ ಕಾರಣವಾಗಿರುವಾಗ ಶಾಂತಿನಿಕೇತನವು ಮಂಜು ಮುಸುಕಿದ ಆಕಾಶವನ್ನು ಸೂರ್ಯ ಪ್ರಭೆಯು ಶುಭ್ರಗೊಳಿಸುವಂತೆ ತನ್ನ ಮಹತ್ಸಾಧನೆಗಳಲ್ಲಿ ತೊಡಗಿತು.

ಭಾರತವು ಜಗತ್ತಿನಲ್ಲಿ ತನ್ನ ಸ್ಥಾನಮಾನಗಳನ್ನು ರಕ್ಷಿಸಿಕೊಂಡು ಪರಕೀಯರ ಪರ್ಯಾಸಿದ ಸಂಕಲೆಗಳಿಂದ ಸ್ವತಂತ್ರ ಹೊಂದಿ ಮೆರೆಯಬೇಕೆಂದೇ ಶಾಂತಿನಿಕೇತನದ ಸ್ಥಾಪನೆಯಾಗಿದೆ. ಭಾರತದ ಅಸ್ತಿತ್ವವನ್ನು ರಕ್ಷಿಸುವರೆ, ಜಗತ್ತಿನ ರಾಷ್ಟ್ರಗಳ ಸಮೂಹದಲ್ಲಿ ಭಾರತವು ತನ್ನ ತಲೆಯೆತ್ತಿ ಮೆರೆಯುವಕೆ ಭಾರತದ ಜನತೆಗೆ ಆವಶ್ಯಕವೆನಿಸುವ ವಿದ್ಯೆಯನ್ನು ಪಸರಿಸುವರೆ ಶಾಂತಿನಿಕೇತನವು ಉಗಮವಾಯಿತು. ಈ ಘನ ಧ್ಯೇಯಗಳನ್ನು ಸಾಧಿಸುವುದರಲ್ಲಿ ತೊಡಗಿದ ಶಾಂತಿನಿಕೇತನವು ಎದುರು ಬಂದ ಎಡರು ತೊಡರುಗಳನ್ನು ಉರುಳಿಸಿ ಮುಂದೆ ಸಾಗುತ್ತಿದೆ. ಭಾರತದ ಜ್ಯೋತಿಯು ನಂದಿ ಹೋಗದಂತೆ ರಕ್ಷಣೆಯನ್ನು ನೀಡುತ್ತಲಿದೆ.

ಶಾಂತಿನಿಕೇತನದ ಸ್ಥಾಪನೆಗೆ ಕಾರಣರಾದ ವಿಶ್ವಕವಿ ರವೀಂದ್ರನಾಥ ಠಾಗೋರರು ಪಾಶ್ಚಿಮಾತ್ಯ ವಿದ್ಯಾಕ್ರಮವನ್ನು ತೆಗಳಿದವರಲ್ಲ, ಅದನ್ನು ತಿರಸ್ಕರಿಸಿ ದೂರ ಮಾಡಿದವರಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅವರು ದ್ವೇಷಿಸಿದವರೂ ಅಲ್ಲ. ಸುಧಾರಣೆಯೇ ಧ್ಯೇಯ ಆಗಿತ್ತು. ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳೆರಡನ್ನೂ ಒಂದುಗೂಡಿಸಿ ಈ ಪುರಾತನ ನಾಡಿನ ಸಂಸ್ಕೃತಿ ಸಂಪತ್ತನ್ನು ಅಭಿವೃದ್ಧಿಗೊಳಿಸಬೇಕೆಂಬುದೇ ಅವರ ಸಾಧನೆ. ಶಾಂತಿನಿಕೇತನದಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿದ್ಯಾಕ್ರಮಗಳೆರಡೂ ಸಮ್ಮಿಳಿತವಾಗಿವೆ. ಯಾವುದೇ ಭೇದಭಾವ, ಅಂತರಗಳಾವವೂ ಇಲ್ಲದೆ ಪ್ರೇಮದ ತಳಹದಿಯಿಂದ ಕಟ್ಟಲ್ಪಟ್ಟ ಆ ತಪೋವನದಲ್ಲಿ ವಿವಿಧ ವಿದ್ಯಾಕ್ರಮಗಳು ಹಾಲು ನೀರಿನಂತೆ ಬೆರಸಿಕೊಂಡಿವೆ. ನಿಜ ವಿದ್ಯಾಭ್ಯಾಸವು ಜಾತಿಮತ ಭೇದಗಳಿಲ್ಲದೆ ಎಲ್ಲರಿಗೂ ಸಮಾನವಾದ ರೀತಿಯಲ್ಲಿ ಕೊಡಲ್ಪಡುತ್ತಿದೆ. ಮನುಷ್ಯನು ಪರಮಾತ್ಮನಿಗೆ ಹತ್ತಿರ ಸರಿಯುತ್ತಿರುವಂತೆ ಭಾಸವಾಗುತ್ತಿದೆ. ಠಾಗೋರರು ಈ ಕನಸನ್ನೇ ಕಟ್ಟಿದ್ದರು. ನಿಜ ವಿದ್ಯಾಭ್ಯಾಸವೇನು, ಅದು ಯಾವ ರೀತಿಯಲ್ಲಿ ಪ್ರಸಾರವಾಗಬೇಕು ಎಂಬುದನ್ನು ಅವರು ತಿಳಿದಿದ್ದರು. ಶಾಂತಿನಿಕೇತನವು ಆ ಕನಸನ್ನು ಕಾರ್ಯದಲ್ಲಿ ತೋರಿಸುತ್ತಿದೆ.

ಶಾಂತಿ ನಿಕೇತನವು ರಮಣೀಯ ವಾತಾವರಣದಲ್ಲಿ, ವೃಕ್ಷಗಳೆಡೆಯಲ್ಲಿ ಚಳಿಯ ಸೌಂದರ್ಯದಿಂದ ಕೂಡಿದ್ದು ಬೋಲಪುರದಿಂದ ಎರಡು ಮೈಲುಗಳಷ್ಟು ದೂರದಲ್ಲಿದೆ. ಆಶ್ರಮದ ಸುತ್ತ ಮುತ್ತಲೂ ಒಂದು ಸಣ್ಣ ಪಟ್ಟಣವು ನಿಧಾನವಾಗಿ ತಲೆಯೆತ್ತುತ್ತಿದೆ. ರೈಲು ಸ್ಟೇಶನ್ನಿಂದ ಪ್ರವಾಸಿಕರು ರಿಕ್ಷಾಗಳ ಮೂಲಕವಾಗಲೀ, ಇತರ ವಾಹನಗಳ ಮೂಲಕವಾಗಲಿ ಅಲ್ಲಿಗೆ ನಿರಾಯಾಸವಾಗಿ ಹೋಗಬಹುದು. ವಾಹನ ಸಿಗದಿದ್ದರೆ ಕಾಲ್ನಡೆಯಲ್ಲೇ ಅಲ್ಲಿಗೆ ತಲುಪಲು ಹೆಚ್ಚಿನ ಪ್ರಯಾಸವಾಗುವುದಿಲ್ಲ. ಸುಂದರ ವಸತಿಗೃಹವೊಂದು ಪ್ರವಾಸಿಕರನ್ನು ಆಮಂತ್ರಿಸುತ್ತದೆ.

ಕೇವಲ ಒಂದೂವರೆ ರೂಪಾಯಿಗಳನ್ನು ಕೊಟ್ಟಲ್ಲಿ ಸಂದರ್ಶಕರು ಎರಡು ಊಟಗಳನ್ನು ಪಡೆಯಬಹುದು. ಊಟ ರುಚಿಯಿರಲೇಬೇಕೆಂದು ಅಪೇಕ್ಷಿಸುವುದು ಸಾಧ್ಯವಿಲ್ಲವಾದರೂ ನಿರ್ಮಲವಾದುದು. ಸುಂದರ ವಾತಾವರಣದ ಮಧ್ಯದಲ್ಲಿ ಆ ಊಟ ಸರಿಯಾಗಿ ಮೆಚ್ಚುತ್ತದೆ. ಆಶ್ರಮವಾಸಿಗಳೊಡನೆ ಸಾಲಾಗಿ ಕುಳಿತು ಬಾಲಕಿಯರ ಅವರ ಕೈಗಳಿಂದ ಬಡಿಸಲಾಗುತ್ತದೆ. ಸಸ್ಯಾಹಾರಿ ಊಟ. ಆದರೆ ಪರದೇಶಿಯರು ಬಂದಲ್ಲಿ ಅವರಿಗೆ ವಸತಿಗೃಹದಲ್ಲಿ ಪ್ರತ್ಯೇಕ ಏರ್ಪಾಡು ಇದೆ. ಎಲೆಗಳಲ್ಲಿ ಊಟ ಬಡಿಸಲಾಗುತ್ತಿದೆ. ಮಣ್ಣಿನ ಪಾತ್ರೆಗಳಲ್ಲಿ ನೀರು ಕುಡಿಯಬೇಕು.

..? ವಿವಿಧ ಕಲೆಗಳಲ್ಲಿ ಶಾಸ್ತ್ರೀಯ ಶಿಕ್ಷಣದ ಏರ್ಪಾಡು ಶಾಂತಿನಿಕೇತನದ ಒಂದು ವೈಶಿಷ್ಟ್ಯ. ಐಚ್ಛಿಕವಾಗಿಯೂ ಗಾಯನವನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ಕಲ್ಕತ್ತಾ ವಿಶ್ವ ವಿದ್ಯಾಲಯದ ನಿಯಮಗಳನ್ವಯ ಪ್ರೌಢ ವಿದ್ಯಾಭ್ಯಾಸ ಹೊಂದುವ ಏರ್ಪಾಡೂ ಇದೆ.

ಪೂರ್ವ ಮತ್ತು ಪಶ್ಚಿಮಗಳೆರಡರ ಜ್ಞಾನವನ್ನೂ ಒಂದುಗೂಡಿಸಲು ಕವಿ ರವೀಂದ್ರರು ಮಾಡಿದ ಪ್ರಯತ್ನಗಳೆಲ್ಲಾ ಶಾಂತಿನಿಕೇತನದಲ್ಲಿ ಫಲ ಬಿಟ್ಟಿವೆ. ಅವೆರಡರ ಸಂಯೋಗದ ಪ್ರತಿ ಫಲ ಒಡೆದು ಕಾಣುತ್ತಿದೆ. ಸಂಶೋಧನೆಯಲ್ಲಿ ನಿರತರಾದ ವಿದ್ಯಾರ್ಥಿಗಳಿಗೆ ಅತ್ಯಂತ ಯೋಗ್ಯವಾಗಿರುತ್ತದೆ ಪೌರ್ವಾತ್ಯ ಶಿಕ್ಷಣ ಹೊಂದುವವರಿಗೆ ಅದೇ ದೊಡ್ಡ ಕೇಂದ್ರ.

ಭಾರತದ ವಿವಿಧ ಭಾಗಗಳ ವಿವಿಧ ಜಾತಿ ಮತಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶಾಂತಿನಿಕೇತನದಲ್ಲಿ ಕಾಣಬಹುದು. ಹೊರದೇಶಗಳ ವಿದ್ಯಾರ್ಥಿಗಳೂ ಅನೇಕರಿದ್ದಾರೆ ಯಾವ ಭೇದಗಳೂ ಇಲ್ಲದೆ ಅವರು ಒಂದೇ ತಾಯ ಮಕ್ಕಳಂತೆ ಜೀವಿಸುತ್ತಿದ್ದಾರೆ. ಹಾಡಿ ಕುಣಿದು ಶಿಕ್ಷಣ ಪಡೆಯುತ್ತಿದ್ದಾರೆ; ಬೆಳೆಯುತ್ತಿದ್ದಾರೆ.

ಪ್ರಾರ್ಥನಾ ಮಂದಿರದಲ್ಲಿ ಎಲ್ಲರೂ ಒಟ್ಟೊಟ್ಟಿಗೆ ಕುಳಿತುಕೊಂಡು ಪರಮಾತ್ಮನ ಧ್ಯಾನದಲ್ಲಿ ತಲ್ಲೀನರಾಗುತ್ತಾರೆ. ಪುಸ್ತಕ ಭಂಡಾರ, ವಸ್ತು ಸಂಗ್ರಹಾಲಯ ಮತ್ತಿತರ ವಿವಿಧ ಖಾತೆಗಳು, ವಸತಿಗೃಹಗಳೇ ಮೊದಲಾದವುಗಳಿದ್ದು ಶಾಂತಿನಿಕೇತನವು ಪ್ರತಿಯೊಂದು ವಿಷಯದಲ್ಲೂ ಸ್ವಾವಲಂಬನ ಹೊಂದಿರುತ್ತದೆ.

ಅಲ್ಲಿಂದ ಒಂದೂವರೆ ಮೈಲು ದೂರದಲ್ಲಿ ಶ್ರೀನಿಕೇತನವಿದೆ. ಅಲ್ಲಿ ಸಣ್ಣ ಸಣ್ಣ ಗುಡಿ ಕೈಗಾರಿಕೆಗಳಲ್ಲಿ ತರಬೇತಿ ಕೊಡಲಾಗುತ್ತಿದೆ. ನೂಲುವುದು ನೇಯುವದು, ಕಾಗದ ತಯಾರಿಸುವುದು, ಮಣ್ಣಿನ ಕೆಲಸ ಮರದ, ಚರ್ಮದ ಕೈಗಾರಿಕೆಗಳು—ಎಲ್ಲವೂ ಶ್ರೀನಿಕೇತನದಲ್ಲಿ ಕಲಿಸಲ್ಪಡುತ್ತಿದೆ.

ಮಕ್ಕಳನ್ನು ಎಳೆ ಪ್ರಾಯದಿಂದಲೇ ಮುಂದಿನ ಜೀವನಕ್ಕೆ ಬೇಕಾದಂತೆ ತಿದ್ದುವದು ಶಾಂತಿನಿಕೇತನದ ಶಿಶುಭವನದ ಮಹತ್ವದ ಹೊಣೆ. ಶಿಶುಭವನದಲ್ಲಿ ಮಕ್ಕಳಿಗೆ ಮಾನಸಿಕ, ಶಾರೀರಕ, ನೈತಿಕ, ವಿದ್ಯಾಭ್ಯಾಸ ಮಾತ್ರವಲ್ಲ ಅವರ ಬೆಳವಣಿಗೆಯಲ್ಲಿ ಅವಶ್ಯಕವೆನಿಸುವ ಪ್ರತಿಯೊಂದು ಅಸ್ಪದವೂ ಇಲ್ಲಿದೆ

ವರ್ಷದಲ್ಲಿ ಅನೇಕ ಹಬ್ಬಗಳ ಹಾಗೂ ಮುಖ್ಯದಿನಗಳ ಆಚರಣೆಗಳು ಶಾಂತಿನಿಕೇತನದಲ್ಲಿ ಜರಗುತ್ತಲಿದೆ. ಬಂಗಾಳಿ ಹೊಸ ವರ್ಷದ ಆಚರಣೆ, ಠಾಗೋರರ ಜನ್ಮ ದಿನಾಚರಣೆ, ವಸಂತೋತ್ಸವ, ಹೊಲಿಯ? ಮೊದಲಾದ ಉತ್ಸವಗಳು ಪ್ರಾಮುಖ್ಯವೆನಿಸಿವೆ. ಮಳೆಗಾಲ ಪ್ರಾರಂಭವಾಗುವಾಗಲೂ ಆನಂದೋತ್ಸವ ಜರಗುತ್ತದೆ. ಪ್ರಕೃತಿಯ ನಿಯಮಗಳನ್ನು ವಿಶೇಷಗಳನ್ನು ಶಾಂತಿನಿಕೇತನದವರು ಚೆನ್ನಾಗಿ ತಿಳಿದಿರುವರು. ಅವರು ನಿಸರ್ಗದ ಸೌಂದರ್ಯವನ್ನು ಹೀರಿದವರು. ಜಗತ್ತಿನ ನಿಯಮಗಳನ್ನು ಪಾಲಿಸುವವರು.

ಈ ಶಾಂತಿನಿಕೇತನದ ಜನ್ಮದಾತರಾದ ಠಾಗೂರರು ಇಂದಿಲ್ಲ. ಆದರೆ ಅವರು ಹಾಕಿ ಕೊಟ್ಟಿರುವ ದಾರಿಯಲ್ಲಿ ಅದು ಸಾಗುತ್ತಿದೆ. ಠಾಗೋರರಂತಹ ವ್ಯಕ್ತಿ ಶ್ರೇಷ್ಠರು ಅಲ್ಲಿಲ್ಲ. ಆದರೆ ಮುನ್ನಡೆಸಲು ಮಹಾಂಗಳುಗಳಿದ್ದಾರೆ. ಕಾಲಗತಿಯಿಂದ ಕೆಲವು ಅನಾನುಕೂಲಗಳು ಬರಬಹುದು ಆದರೆ ಭಾರತಕ್ಕೆ ಶಾಂತಿನಿಕೇತನವು ಅತ್ಯಾವಶ್ಯಕ. ಭಾರತದ ಪುರಾತನ ಸಂಸ್ಕೃತಿಯನ್ನು ಹಿಂದಿನ ಹಿರಿಮೆಗೆ? ಏರಿಸಲು ಹೊಯ್ಯಲು? ಪಾಶ್ಚಿಮಾತ್ಯ ಪೌರ್ವಾತ್ಯ ಸಂಸ್ಕೃತಿಗಳೆರಡನ್ನು ಹೀರಿ ಒಂದಾಗಿ ಬೆರಸಿ ಮಾನವ ಜನಾಂಗದ ಅಭಿವೃದ್ಧಿ ಸಾಧನೆಗೆ ಇಂಥ ಎಷ್ಟೋ ಶಾಂತಿನಿಕೇತನಗಳು ಇನ್ನೂ ಬೇಕಾಗಿವೆ.

"ಪುರಾತನ ಕಾಲದಲ್ಲಿ ನಮ್ಮ ದೇಶದಲ್ಲಿದ್ದ ಅರಣ್ಯಾಶ್ರಮಗಳಲ್ಲಿ ವಿದ್ಯಾರ್ಥಿಗಳು ಹೊಂದುತಿದ್ದ ಆತ್ಮಜ್ಞಾನವನ್ನು ಈಗಲೂ ನಮ್ಮ ಎಳೆಯರು ಪಡೆಯಬೇಕೆಂದು ಈ ಮಾದರಿ ಶಾಲೆಯನ್ನು ನಾನಿಂದು ಏರ್ಪಡಿಸಿದ್ದೇನೆ ಪರಮಾತ್ಮನು ಅವರ ಹೃದಯಗಳಲ್ಲಿ ನೆಲಸಬೇಕು. ಅದಕ್ಕೆ ತಕ್ಕ ಸ್ಫೂರ್ತಿಯೂ ಬೇಕು"—ಎಂದು ಕವಿ ರವೀಂದ್ರನಾಥ ಠಾಗೋರರು ಒಮ್ಮೆ ಹೇಳಿದ್ದರು.

(ಇಂಗ್ಲಿಷ್ ಲೇಖನದಿಂದ)

—ರಾ (ನವಭಾರತ)

---

## ಶಬ್ದಮಾಡುವ ಫೌಂಟನ್ ಪೆನ್

ಪ್ಯಾರಿಸ್ ನಗರದಲ್ಲಿ ಈ ಸಲ ಏರ್ಪಟ್ಟಿರುವ ವಿಶೇಷ ಪ್ರದರ್ಶನದಲ್ಲಿ ಸುಮಾರು ೬೦೦ ವಿಚಿತ್ರ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದು ಅವುಗಳಲ್ಲಿ ಒಂದು ಅಲಾರಂ ಹೊಡೆಯುವ ಫೌಂಟನ್ ಪೆನ್.

ಈ ವಿಚಿತ್ರ ಪೆನ್ ಕಿಸೆಯಲ್ಲಿದ್ದಾಗ ಯಾರಾದರೂ ಅದನ್ನು ಅಪಹರಿಸುವ ಸಲುವಾಗಿ ಮುಟ್ಟಿದರೆ ಸಾಕು ಅದು ಕಿರಿಚಿ ಬಿಡುತ್ತದೆ.

---

## ಹೆಂಡತಿ ಸುಂದರಿಯೆಂದು ಅವಳನ್ನು ಕೊಂದೇಬಿಟ್ಟ

ಈರೋಡಿನ ಬಳಿ ಒಂದು ವಿಚಿತ್ರ ಖೂನಿ ನಡೆದಿದೆ. ಒಬ್ಬ ಯುವಕನು ತನ್ನ ಹೆಂಡತಿಯು ಬಹು ಸುಂದರಿಯ... ದೂ ಅವಳ ಸೌಂದರ್ಯದಿಂದ ... ತ್ತ ಕೆಡುತ್ತಿದೆಯೆಂದೂ ತಿಳಿದು ... ಕ್ಕೆ ಕೊಂದಿಕ್ಕಿದ ಕಥೆಯೊಂದು ಬ...

ಪಳನಿ ಸ್ವಾಮಿ ಗೌಂಡರ್ ... ಯುವಕ ದೇವನ್ ಅಂಗಡಿಯಲ್ಲಿ ... ನು. ಆತನು ಕಪ್ಪು ಬಣ್ಣದವ ಹಾ... ಕುರೂಪಿ. ಮೂರು ತಿಂಗಳ ಹಿಂದೆ ಅವನಿಗೆ ವಿವಾಹವಾಯಿತು. ಹೆಂಡತಿ ತುಂಬಾ ಚೆಲುವೆ. ಅವಳ ಸೌಂದರ್ಯವನ್ನು ನೋಡಿ ಅವನಿಗೆ ಸಹಿಸಲಾಯಿತು. ಮಾತ್ರವಲ್ಲ ಅವಳ ಪಾತಿವ್ರತ್ಯದ ಮೇಲೂ ಸಂಶಯ ಉಂಟಾಯಿತು.

ಒಂದು ದಿನ ಗಂಡನೂ ಆತನ ತಮ್ಮನೂ ಅವಳನ್ನು ಕೊಡುಮುಡಿ ಎಂಬಲ್ಲಿಗೆ ಕಾವೇರಿ ತೀರ್ಥ ಸ್ನಾನಕ್ಕಾಗಿ ಕರೆದ್ಯೊಯ್ದರು. ಅಲ್ಲಿ ಹೆಂಡತಿ ಸ್ನಾನ ಮಾಡುತ್ತಿದ್ದಾಗ ಗಂಡನೂ ಆತನ ತಮ್ಮನೂ ಅವಳನ್ನು ಹೊಳೆಯಿಂದ ಇಂದು ನದಿಗೆ ದೂಡಿದರು.

ಈ ಕೊಲೆ ಮಾಡಿ ಅವರು ಅಲ್ಲಿಂದ ಹಿಂದಿರುಗುತ್ತಿದ್ದಾಗ ಕೆಲವರು ಸಂಶಯ ಪಟ್ಟು ಅವರೊಡನೆ ಪ್ರಶ್ನೆ ಕೇಳಿದಾಗ ಅವರು ತಬ್ಬಿಬ್ಬಾಗಿ ಪಲಾಯನಗೈದರು. ಇಬ್ಬರನ್ನೂ ಬಂಧಿಸಲಾಗಿದೆ.

ಹರಿಜನ ಅಗ್ರಲೇಖ

# ಜಾತ್ಯಾತೀತ ಸರಕಾರವೆಂದರೇನು?

ಶ್ರೀ ಹರಿಪ್ರಸಾದ ವ್ಯಾಸರು ಹೀಗೆ ಬರೆಯುತ್ತಾರೆ:—

"ನಾವು ನಮ್ಮ ರಾಷ್ಟ್ರವನ್ನು ಜಾತ್ಯತೀತ ರಾಜ್ಯವೆಂದು ಸಾರಿದಂದಿನಿಂದ ನಾನಾ ಶಂಕೆಗಳು ಎತ್ತಲ್ಪಡುತ್ತಿವೆ. ಸರಕಾರ ಧಾರ್ಮಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡಬಹುದೇ? ಹಾಗೆ ಕೊಡುವ ಸಂಸ್ಥೆಗಳಿಗೆ ಧನಸಹಾಯ ನೀಡಬಹುದೇ? ಧರ್ಮಕ್ಕೆ ಏನಾದರೂ ಸಂಬಂಧವಿದ್ದ ಆ ಕಾರ್ಯಗಳನ್ನು ಮಾಡಬಹುದೇ, ಬಾರದೇ? ಇತ್ಯಾದಿ. ಪ್ರಸ್ತುತ ಲೇಖನದಲ್ಲಿ ಭಾರತದ ಜಾತ್ಯತೀತ ಸ್ವರೂಪದ ತಾತ್ಪರ್ಯವನ್ನು ವಿಚಾರಿಸುವ ಸವಿನಯ ಪ್ರಯತ್ನವನ್ನು ಮಾಡುವೆ.

ಜಾತ್ಯತೀತ ರಾಜ್ಯವೆಂದರೆ ಭಾರತಕ್ಕೆ ಯಾವುದಾದರೊಂದು ವಿಶಿಷ್ಟ ಸರಕಾರಿ ಧರ್ಮ ಇಲ್ಲೆಂದಿಷ್ಟೇ ತಾತ್ಪರ್ಯವೆಂದು ನನ್ನ ಗ್ರಹಿಕೆ. ಧರ್ಮದ ತಳಹದಿಯ ಮೇಲೆ ಅದು ನಾಗರಿಕ ನಾಗರಿಕರಲ್ಲಿ ಭೇದವೆಣಿಸುವುದಿಲ್ಲ. ಅನೇಕ ಸುಶಿಕ್ಷಿತರು ಭಾವಿಸುವಂತೆ ಜಾತ್ಯತೀತ ರಾಜ್ಯವಾಗುವುದರಿಂದ ಸರಕಾರವು ಧರ್ಮದ ಗೊಡವೆಯನ್ನೇ ಹಚ್ಚಿಕೊಳ್ಳಬಾರದು, ಅದು ಆಯಾ ವ್ಯಕ್ತಿಯ ವಿಷಯ; ಆಯಾ ವ್ಯಕ್ತಿಯೂ ಅವನ ಸಹಧರ್ಮಿಗಳೂ ಸರಕಾರದ ಸಹಾಯ ಅಡಚಣೆಗಳಿರದೆ ತಮ್ಮ ಪಾಡಿಗೆ ತಾವು ನಡೆಸಿಕೊಂಡು ಹೋಗಬೇಕಾದ ವಿಷಯ; ಎಂದು ಅದರ ತಾತ್ಪರ್ಯವಲ್ಲ; ತಾತ್ಪರ್ಯವಾಗಿರಲೂ ಕೂಡದು ಇದು ನನ್ನ ಅಭಿಪ್ರಾಯ.

ಏಕೆಂದರೆ ರಾಜ್ಯವು ಧರ್ಮದ ಗೊಡವೆಯಿಟ್ಟುಕೊಳ್ಳಬಾರದೆಂಬ ವಾದವು ಧರ್ಮತ್ಯಾಗವೇ ಸರಿ. ಜಾತ್ಯತೀತತೆಗೆ ಇದೇ ತಾತ್ಪರ್ಯವಾದರೆ ಭಾರತದಲ್ಲಿ ಅದು ಎಂದೂ ಯಶಸ್ವಿಯಾಗಲಾರದು. ಅದು ಆಧ್ಯಾತ್ಮಿಕ ದಿವಾಳಿಗೆ ಎಡೆಮಾಡಿಸೀತು. ಧರ್ಮದ ವಿಷಯದಲ್ಲಿ ಗಾಢಶ್ರದ್ಧೆಯುಳ್ಳ ಜನರಿಂದ ತುಂಬಿದ ದೇಶದಲ್ಲಿ ಸರಕಾರವು ಧರ್ಮವನ್ನು ಕಡೆಗಣಿಸಿದರೆ ಅದರಿಂದ ರಾಜ್ಯದ ಜೀವನದ ಮೇಲೆ ಗಂಭೀರ ಪರಿಣಾಮವಾಗದೆ ಬಿಡದು.

ರಾಷ್ಟ್ರದ ಪ್ರಜೆಗಳ ಜೀವನದ ಮಟ್ಟವನ್ನು ಎತ್ತರಿಸುವುದೂ ಯೋಗಕ್ಷೇಮದ ಸರಕಾರವನ್ನು ಸ್ಥಾಪಿಸುವುದೂ ರಾಜ್ಯದ ಕರ್ತವ್ಯವಾಗಿದ್ದರೆ ರಾಷ್ಟ್ರಕರಿಗೆ ಧಾರ್ಮಿಕ ಶಿಕ್ಷಣವನ್ನು ಕೊಡಿಸುವುದೂ ಅಷ್ಟೇ ಅದರ ಕರ್ತವ್ಯವಾಗಿದೆ. ಮಾನವನು ಅನ್ನವೊಂದರಿಂದಲೇ ಬಾಳುವುದಿಲ್ಲ.

ಗಾಂಧೀಜಿ ಒಂದೆಡೆ ಹೀಗೆ ಹೇಳಿದ್ದಾರೆ:—

'ಮೈಸೂರಿನಲ್ಲಿ ಕೂಡ ವಿದ್ಯಾರ್ಥಿಗಳಿಗೆ ಸರಕಾರಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವಿಲ್ಲದ್ದು ನೋಡಿ ನಾನು ನೊಂದುಕೊಂಡಿದ್ದೇನೆ.... ಆದರೆ ಭಾರತವು ಆಧ್ಯಾತ್ಮಿಕ ಅಧಃಪಾತಕ್ಕೆ ಹೋಗಬಾರದೆಂದಿದ್ದರೆ ಅದರ ಯುವಕರಿಗೆ ಧಾರ್ಮಿಕ ಶಿಕ್ಷಣ ಕೊಡುವುದು ಲೌಕಿಕ ಶಿಕ್ಷಣದಷ್ಟೇ ಅವಶ್ಯವೆಂದು ಪರಿಗಣಿಸಬೇಕು..' (ಹಿಂದೂ ಧರ್ಮ, ಪು. ೨೮೮)

ಧರ್ಮವನ್ನು ಕುರಿತ ಈ ಉದಾಸೀನ ಭಾವ ಸಲ್ಲದೆಂದು ನನಗೆನಿಸುತ್ತದೆ. ಭಾರತದ ಜಾತ್ಯತೀತ ರಾಜ್ಯವು ಧರ್ಮದತ್ತ ರಚನಾತ್ಮಕ ಭಾವವನ್ನು ತಳೆಯಬೇಕು. ಭಾರತದ ಜಾತ್ಯತೀತತೆಯು ಧರ್ಮದ ಬಗ್ಗೆ ಅಸಡ್ಡೆಯಲ್ಲಿ ಅಡಕವಾಗಿರದೆ ಸರ್ವಧರ್ಮ ಸಮಭಾವದಲ್ಲಿ ಅಡಕವಾಗಿದೆಯೆಂದೂ ಸರಕಾರವು ಧರ್ಮದ ವಿಶಿಷ್ಟ ಸಂಘಗಳಿಗೆ ಮಹತ್ವ ಕೊಡದೆ ಇತರ ವಿಶಾಲ ಕಲ್ಪನೆಗೆ ಮಹತ್ವ ಕೊಟ್ಟು ಬೋಧನೆಯ ಸಂಸ್ಥೆಗಳಿಗೆ ಸಹಾಯ ಮಾಡುವುದೆಂದೂ ಸಾರಬೇಕು. ವಿಶಿಷ್ಟ ಧರ್ಮಾನುಯಾಯಿಗಳಿಗೆ ಮಾತ್ರ ಶಿಕ್ಷಣ ಕೊಡುವ ಸಂಸ್ಥೆಗಳಲ್ಲಿಯೂ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಧಾರ್ಮಿಕ ಶಿಕ್ಷಣವನ್ನೂ ಇತರ ಸೌಕರ್ಯಗಳನ್ನೂ ಒದಗಿಸುವ ಮತ್ತು ಪರಸ್ಪರರ ಬಗ್ಗೆ ಆದರವನ್ನು ಹುಟ್ಟಿಸಲು ಯತ್ನಿಸುವ ಸಂಸ್ಥೆಗಳಿಗಷ್ಟೇ ಸರಕಾರವು ಸಹಾಯವನ್ನೂ ಮಾರ್ಗದರ್ಶನವನ್ನೂ ನೀಡಬೇಕು. ಉದಾಹರಣೆಗಾಗಿ ರಾಮಕೃಷ್ಣಾಶ್ರಮವು ಇದು ಎಲ್ಲ ಧರ್ಮದವರಿಗೂ ಮುಕ್ತವಾಗಿದೆ. ಸರಕಾರವು ಅಂಥ ಸಂಸ್ಥೆಗಳಿಗೆ ನೆರವು ನೀಡಲು ಏನೂ ಆಕ್ಷೇಪವಿರಬಾರದು. ಅದೇ ಪ್ರಕಾರ ಒಂದು ಮಸೀದಿಯಲ್ಲಿ ಅಥವಾ ಅಂಜುಮನದಲ್ಲಿ ಎಲ್ಲರಿಗೂ ಮುಕ್ತದ್ವಾರವಿದ್ದರೆ, ಮತ್ತು ಅಲ್ಲಿ ಬಂದವರಿಗೆ ಮುಸ್ಲಿಮರಾಗಿರೆಂದು ಒತ್ತಾಯ ಮಾಡದೆ ಕುರಾನನ್ನು ಇತರ ಧರ್ಮದ ಮುಖ್ಯ ತತ್ವಗಳ ಸಂಗಡ ಬೋಧಿಸುತ್ತಿದ್ದರೆ ಅದಕ್ಕೂ ಸಹಾಯ ಕೊಡತಕ್ಕದ್ದು. ಅದೇ ಪ್ರಕಾರ ತಮ್ಮ ತಮ್ಮ ಧಾರ್ಮಿಕ ಗ್ರಂಥಗಳನ್ನು ಇತರ ಧರ್ಮಗಳ ಸಾರದ ಸಂಗಡ ಸಮರಸವಾಗಿ ಕಲಿಸುವ ಹಿಂದೂ ಮಂದಿರ, ಕ್ರಿಶ್ಚನ್ ಮಿಶನುಗಳಿಗೂ ಸಹಾಯ ಸಲ್ಲತಕ್ಕದ್ದು. ಸರಕಾರಿ ಸಹಾಯವು ದೊರೆಯಲು ಮುಖ್ಯ ಉಪಾಧಿಗಳೆಂದರೆ, ಆ ಸಂಸ್ಥೆ ಎಲ್ಲರಿಗೂ ತೆರವಾಗಿರಬೇಕು, ಅದು ಇತರ ಧರ್ಮಗಳನ್ನು ತೀರ ಕಡೆಗಣಿಸಬಾರದು. ಅವುಗಳ ಬಗ್ಗೆಯೂ ಆದರವನ್ನು ಬೋಧಿಸುತ್ತ ತನ್ನ ಸ್ವಂತ ಧರ್ಮದ ಬಗ್ಗೆ ವಿಶೇಷ ಲಕ್ಷ್ಯ ಪೋಷಿಸಲಡ್ಡಿಯಿಲ್ಲ. ಇಂಥ ಚಟುವಟಿಕೆಗಳನ್ನು ಪ್ರಾರಂಭಿಸುವ ಮೂಲಕ ಸರಕಾರವು ಮೇಲ್ಪಂಕ್ತಿ ಹಾಕಿ ಕೊಟ್ಟರೆ ಜಾತೀಯ ದ್ವೇಷವು ಕಡಿಮೆಯಾಗಿ ವಿವಿಧ ಜಾತಿಗಳಲ್ಲಿ ಪರಸ್ಪರ ಬಾಂಧವ್ಯ ಬೆಳೆಯುವುದು.

ನಯೀತಾಲೀಮಿನವರು ಒಂದು ಶಿಕ್ಷಣ ಕ್ರಮವನ್ನು ಸಿದ್ಧಗೊಳಿಸಿ ಎಲ್ಲರಿಗೂ ಸಮಾನವಾದ ಧಾರ್ಮಿಕ ಶಿಕ್ಷಣ ಕೊಡಲು ಮಾರ್ಗದರ್ಶನ ಮಾಡಬೇಕು. ವಿಶಿಷ್ಟ ಧರ್ಮಪಂಥದ ಸಂಸ್ಥೆಯು ಬೇಕಾದರೆ ತನ್ನ ಸ್ವಂತ ಪಂಥದ ವಿಶೇಷ ಶಿಕ್ಷಣವನ್ನೂ ಕೊಡಬಹುದು. ಆದರೆ ಹಾಗೆ ಶಿಕ್ಷಣ ಕೊಡುವಾಗ ಇತರ ಧರ್ಮಗಳ ಬಗ್ಗೆ ದ್ವೇಷಭಾವವನ್ನುಂಟು ಮಾಡದಿದ್ದರೆ ಸಾಕು. ಸ್ವಾಭಾವಿಕವಾಗಿ, ಪ್ರತಿಯೊಂದು ಸಾಂಘಿಕ ಶಿಕ್ಷಣವು ಸರಕಾರದಿಂದ ಮನ್ನಣೆ ಪಡೆದ ಕ್ರಮದಲ್ಲೇ ನಡೆಯಬೇಕು.

ಎರಡನೆಯದಾಗಿ, ಜಾತ್ಯತೀತ ಸರಕಾರವು ಹಿಂದೂ ಕಾಯಿದೆ, ಮುಸ್ಲಿಂ ಕಾಯಿದೆಗಳಂಥ ವೈಯಕ್ತಿಕ ಕಾಯಿದೆಗಳನ್ನು ರದ್ದುಗೊಳಿಸಿದಾಕ್ಷಣ ಅದು ತನ್ನ ಜಾತ್ಯತೀತತ್ವವನ್ನು ಕಳೆದುಕೊಳ್ಳುವುದಿಲ್ಲ. ಧರ್ಮಮೂಲಕವಾಗಿಯೇ ಜನರನ್ನು ಗುರುತಿಸುವ ಇಂಥ ಕಾಯಿದೆಗಳನ್ನು ರದ್ದುಗೊಳಿಸುವುದು ಅದರ ಜಾತ್ಯತೀತತ್ವಕ್ಕೆ ಅನುಸಾರವಾಗಿಯೇ ಇದೆ. ವಿವಾಹ, ವಾರಸಾ ಮೊದಲಾದ ವಿಷಯಗಳಲ್ಲಿ ಎಲ್ಲ ನಾಗರಿಕರಿಗೂ ಸಾಮಾನ್ಯವಾದ ಕಾಯಿದೆಯು ಇರಬೇಕಾದ್ದು ಅವಶ್ಯ.

ಜನರನ್ನು ಅನೈತಿಕ ಆಚರಣೆಗೆ ಪ್ರೇರಿಸಿದರೆ, ಜನರನ್ನು ಕೋಮುಗಲಭೆಗೆ ಹಚ್ಚಿದರೆ, ಅಥವಾ ಧಾರ್ಮಿಕ ದ್ವೇಷವನ್ನು ಹಬ್ಬಿಸಿದರೆ ಅಂಥ ಧಾರ್ಮಿಕ ಸಂಘಗಳಲ್ಲಿ ಸರಕಾರ ಹಸ್ತಕ್ಷೇಪಿಸಬೇಕು.

ಸಂಕ್ಷೇಪದಲ್ಲಿ, ಭಾರತದ ಜಾತ್ಯತೀತ ಸರಕಾರವು ಸರ್ವಧರ್ಮ ಸಮಭಾವನೆಯನ್ನು ತನ್ನ ಧ್ಯೇಯವಾಗಿ ಮಾಡಿಕೊಂಡು ಯೋಗ್ಯ ಧಾರ್ಮಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವುದು ತನ್ನ ಮುಖ್ಯ ಕರ್ತವ್ಯಗಳಲ್ಲೊಂದೆಂದು ಭಾವಿಸಬೇಕು."

ಶ್ರೀ ಹರಿಪ್ರಸಾದ ವ್ಯಾಸರ ಅಭಿಪ್ರಾಯಗಳೂ ಕಾಂಗ್ರೆಸ್ಸಿನವರು ವಹಿಸಿದ ನೀತಿಗೂ ನನ್ನ ಪೂರ್ಣ ಸಮ್ಮತಿಯಿದೆ. ಹತ್ತಾರು ಧರ್ಮಗಳ ಒಳಪಂಥಗಳೂ ಇರುವ ಭಾರತದಂಥ ಪ್ರಜಾತಂತ್ರ ದೇಶದಲ್ಲಿ ಇದೊಂದೇ ವ್ಯಾವಹಾರಿಕ ಉಪಾಯ ಎಂದು ನನ್ನ ಮತ. ಸ್ವತಃ ನನ್ನ ಮಟ್ಟಿಗೆ ಹೇಳುವುದಾದರೆ ನಾನು ಎಲ್ಲ ಧಾರ್ಮಿಕ ಹಣೆಪಟ್ಟಿಗಳನ್ನೂ ರಾಜಕೀಯ ಅಥವಾ ಸಾಮಾಜಿಕ ಹಣೆಪಟ್ಟಿಗಳಂತೆ ಕಳಚಿ ಒಗೆದೇನು. ಆದರೆ ಧಾರ್ಮಿಕ ಪ್ರಪಂಚದಲ್ಲಿ ಹಣೆಪಟ್ಟಿಯಿಲ್ಲದ ಧರ್ಮವೂ ಒಂದು ವಿಶಿಷ್ಟ ಹಣೆಪಟ್ಟಿಯಾಗಬಹುದು. ಅದರ ಅನೇಕಾನೇಕ ರೋಗಗಳೂ ತಲೆಯೆತ್ತಬಹುದು. ಆದ್ದರಿಂದ ಅವನ್ನೂ ಸಮಾನ ಗೌರವದಿಂದ ಮನ್ನಿಸುವ ಆವಶ್ಯಕತೆ ಉಂಟಾದೀತು.

ಸರ್ವಧರ್ಮಸಮಭಾವವು ಯಾವ ಧರ್ಮದಲ್ಲಿಯಾದರೂ ಸುಧಾರಣೆಗಳನ್ನು ನಡೆಸುವುದಕ್ಕಾಗಲಿ ಅದರಲ್ಲಿರುವ ಅಸತ್ಯ ಮತ್ತು ಕೊಳೆಯನ್ನು ನಿವಾರಿಸಲಿಕ್ಕಾಗಲಿ ಅಡ್ಡಿಯಾಗಲಾರದು. ಮಿಥ್ಯಾ ಧರ್ಮವೂ ಒಂದು ಧರ್ಮವೇ. ಅದಕ್ಕೂ ಸಮಾನ ಗೌರವ ದೊರೆಯತಕ್ಕದ್ದು. ಕೆಲ ಸುಧಾರಣೆಗಳು ತೀರ ಉಗ್ರವಾಗಿದ್ದು ಅವು ಸರ್ವತ್ರ ಸ್ವೀಕೃತವಾಗಿ ಆ ಧರ್ಮದ ಸ್ವರೂಪವನ್ನೇ ಅಥವಾ ಎಲ್ಲ ಧರ್ಮಗಳ ಸ್ವರೂಪವನ್ನೇ ಕಾಲಾಂತರದಲ್ಲಿ ಪೂರ್ಣವಾಗಿ ಬದಲಾಯಿಸಿಬಿಡಬಹುದು. ಅದರ ಪರಿಣಾಮವಾಗಿ ಕೆಲ ಪ್ರಾಚೀನ ಸಂಸ್ಥೆಗಳು ಅನಾವಶ್ಯವಾಗಿಯೋ ಕಾಲಧರ್ಮವಿರುದ್ಧವಾಗಿಯೂ ಮಾಯವಾಗಿಬಿಡಬಹುದು. ಅನಂತರ ಅವು ಗತಕಾಲದ ಐತಿಹಾಸಿಕ ಅವಶೇಷಗಳಾಗಿ ಮಾರ್ಪಡಬಹುದು. ರೋಮನ್, ಗ್ರೀಕ್ ಮತ್ತು ವೈದಿಕದೇವತೆಗಳ ಕಥೆಗಳ ಹಾಗೆಯೇ ಆದವು. ಧಾರ್ಮಿಕ ಉಪಾಸನೆಗಳು ಈ ರೀತಿಯಾಗಿ ಒಡೆದುಹೋಗಿರುವುದು ಹಿಂಸಾತ್ಮಕ ಧಾರ್ಮಿಕ ಶಕ್ತಿಗಳಿಂದ ಅಥವಾ ಮೂರ್ತಿ ಭಂಜಕ ಚಳವಳಿಗಳಿಂದ ಉಂಟಾಗಿದೆ. ಬಲಾತ್ಕಾರಗಳಿಂದ ಮೇಲೆ ಹೇರಲಾದ ಸುಧಾರಣೆಗಳು ಎಷ್ಟೇ ಒಳ್ಳೆಯವೂ ವಿವೇಕಯುತವೂ ಆಗಿದ್ದರೂ ಅವುಗಳನ್ನು ಹಿಂಸಾತ್ಮಕ ರೀತಿಯಿಂದ ಹೇರಿದಾಗ ಪ್ರಾಚೀನ ಆಚಾರಗಳ ಪುನರುಜ್ಜೀವನ ಮತ್ತು ಪ್ರತಿಗಾಮಿ ಚಳವಳಿಯಲ್ಲಿ ಪರಿಣಮಿಸುವುದುಂಟು. ಅರಬಸ್ತಾನದ ಪ್ರಜೆಯೊಬ್ಬ ಇಸ್ಲಾಮ ಧರ್ಮವನ್ನು ಅಂಗೀಕರಿಸಿದ ನಂತರ ಮಹಮ್ಮದರು ಕಾಬಾ ಮಸೀದೆಯಲ್ಲಿದ್ದ ಎಲ್ಲ ಮೂರ್ತಿಗಳನ್ನು ಧ್ವಂಸಗೊಳಿಸಿದರು. ಅವುಗಳನ್ನು ಪುನಃ ಸ್ಥಾಪಿಸಲು ಯಾರಿಗೂ ಸಾಧ್ಯವಿಲ್ಲ ನಿಜ. ಆದರೆ ಮಹಮ್ಮದರು ಕಾಬಾವನ್ನು ಮಾತ್ರ ಕೆಡವಲಿಲ್ಲವೆಂಬ ಸಂಗತಿ ನಾವು ಮರೆಯಕೂಡದು. ಅರಬ್ಬೀ ಜನಾಂಗದ ಶ್ರದ್ಧೆ ವಿಶ್ವಾಸಗಳನ್ನು ಅವರು ಕಡೆಗಣಿಸಿರಲಿಲ್ಲ. ಅವರು ತಮ್ಮ ಸ್ವಂತ ಅಧಿಕಾರದಿಂದ ಕಾಬಾವನ್ನು ಮನ್ನಿಸಿ ಪ್ರಜಾಭಿಪ್ರಾಯಕ್ಕೆ ತಲೆವಾಗಿದಂತಾಯಿತು. ಆದರೆ ಅವರ ಧರ್ಮಾಂಧ ಅನುಯಾಯಿಗಳು ಇಸ್ಲಾಮಕ್ಕೆ ಮತಾಂತರ ಹೊಂದದ ಜನರ ಗುಡಿಗುಂಡಾರಗಳನ್ನು ಖಡ್ಗಬಲದಿಂದ ನಿರ್ನಾಮ ಮಾಡಹೋದರು. ಆದ್ದರಿಂದಲೇ ಅನುಕೂಲ ಕಾಲ ಒದಗಿದಾಗ ಹಳೆಯ ಮೂರ್ತಿಗಳನ್ನು ಪುನಃ ಸ್ಥಾಪಿಸುವ ಬಯಕೆಯು ಪರಾಜಿತ ಜನಾಂಗದ ಹೃದಯದಲ್ಲಿ ಒಳಗೊಳಗೇ ಜಾಗೃತವಾಗಿದ್ದು ಪೀಳಿಗೆಯಿಂದ ಪೀಳಿಗೆಗೆ ಇಳಿದು ಬಂತು. ಬೇಸಿಗೆಯಲ್ಲಿ ಅವ್ಯಕ್ತವಾಗಿ ಹುದುಗಿದ್ದು ಮಳೆಗಾಲ ಬಂದೊಡನೆ ಎಲ್ಲೆಲ್ಲಿಯೂ ಮೊಳಕೆಯೊಡೆದು ತಲೆಯೆತ್ತುವ ಬೀಜಗಳಂತೆ, ಈ ಹಂಬಲ ರಾಜಕೀಯ ದಾಸ್ಯ ವಿಮೋಚನೆಯೊಡನೆ ಒಮ್ಮೆಲೇ ರಭಸದಿಂದ ತಲೆಯೆತ್ತಿತು. ಈಗ ನಾವು ಇಂಥದೊಂದು ಅವಸ್ಥೆಯಲ್ಲಿದ್ದೇವೆ. ನಮ್ಮ ಮನಸ್ಸು ಅದರ ಪರಿಣಾಮವಾಗಿ ತುಸು ತೂಕ ತಪ್ಪಿದೆ. ನಮ್ಮಲ್ಲಿ ಆ ಸಂಸ್ಥೆಗಳ ಬಗ್ಗೆ ವಿಶೇಷ ಶ್ರದ್ಧೆ ಉಳಿದಿಲ್ಲವಾದರೂ ಅವುಗಳನ್ನು ಪುನರುಜ್ಜೀವಿಸುವ ಹಟ ನಮ್ಮಲ್ಲಿ ಉಂಟಾಗಿದೆ. ಸ್ವಲ್ಪ ಕಾಲ ಕಳೆದರೆ ನಮಗೆ ಅವುಗಳ ಮೇಲೆ ಬೇಸರ ಬಂದು ಅವನ್ನು ನಾವು ಉಪೇಕ್ಷೆಯಿಂದ ದೂರ ಸರಿಸಿಬಿಡಬಹುದು. ಹಾಗಾಗುವುದೇ ಕ್ಷೇಮ. ಅದರಿಂದ ಎಷ್ಟೋ ಧನಹಾನಿ, ಶ್ರಮಹಾನಿಯಾಗುವುದೇನೋ ನಿಜ. ಆದರೆ ಅದಕ್ಕೆ ಉಪಾಯವಿಲ್ಲ. ಸುಧಾರಕನು ಇದರಿಂದ ನಿರಾಶನಾಗಬೇಕಾಗಿಲ್ಲ. ಅವನು ಪ್ರಚುರಪಡಿಸಬೇಕೆಂದಿರುವ ಸುಧಾರಣೆಗಳಲ್ಲಿ ನಿಜವಾಗಿ ತಿರುಳಿದ್ದರೆ ಪುನರುಜ್ಜೀವನದ ಹುರುಪು ಸ್ವಲ್ಪ ಕಾಲದಲ್ಲೇ ತಣಿದು ಅವನಿಗೆ ಮೇಲ್ಗೈಯಾಗುವುದು ಖಂಡಿತ.

—ಕಿ. ಘ. ಮಶ್ರೂವಾಲಾ

# ಭವಿಷ್ಯತ್ತಿನ ನಿರ್ಣಯ ಜನರ ಕೈಯಲ್ಲಿದೆ

## "ಪ್ರಾಂತ ಚಿಕ್ಕದಾದಷ್ಟೂ ಆಡಳಿತ ದಕ್ಷತೆ ಹೆಚ್ಚು"

—ರಾಜಗೋಪಾಲಾಚಾರಿ

## "ಭವಿಷ್ಯ ನಿರ್ಣಯಿಸುವಾಗ ಸಂಬಂಧಿಸಿದ ಜನರ ಅಭಿಪ್ರಾಯ ಕೇಳಬೇಕೆಂಬ ಸೂಚನೆಯನ್ನು ಒಪ್ಪುತ್ತೇನೆ"

—ಗೋಪಾಲಸ್ವಾಮಿ ಐಯ್ಯಂಗಾರ್.

ಈ ೧೯೪೯ನೇ ಇಸವಿಯಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಚೀಫ್ ಕಮಿಷನರ್ ಪ್ರಾಂತಗಳ ಸಂಘ ರಚನಾ ಮಸೂದೆಯು ಬಂದಾಗ ಅದನ್ನು ಒಂದು ಸೆಲೆಕ್ಟ್ ಕಮಿಟಿಗೆ ಬಿಡಬೇಕೆಂದು ಠಾಕೂರ್ ಅವದೇಶ ಸಿಂಗರು ಒಂದು ಸೂಚನೆಯನ್ನು ತಂದರು. ಆ ಕಾಲಕ್ಕೆ ಮಸೂದೆಯ ಮೇಲೆ ನಡೆದ ಚರ್ಚೆಯ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ

### ಪ್ರೊ|| ಕೆ. ಟಿ. ಶಾ.

ಈ ಮಸೂದೆಯ ವಿಚಾರ ಶಾ ಅವರು ಮಾತನಾಡುತ್ತಾ, 'ಈ ಮಸೂದೆಯು ಚೀಫ್ ಕಮಿಷನರ್ ಪ್ರಾಂತಗಳಲ್ಲಿ ಪ್ರಜಾ ಜವಾಬ್ದಾರಿಯುತ ಸರಕಾರಗಳನ್ನು ಸ್ಥಾಪಿಸುವದನ್ನು ಬದಿಗೊತ್ತುವದರಿಂದ ಖಂಡನಾರ್ಹವಾಗಿದೆ. ತಪ್ಪು ಮಾತಗೆ ಯಾರೂ ಸ್ವ ಆಡಳಿತದ ಅನುಭವವನ್ನು ಪಡೆದಿಲ್ಲ. ಈ ಪ್ರಾಂತಗಳ ಆಡಳಿತ ಸರಿಯಿಲ್ಲವೆನ್ನುವದು ನಿಜವಿರಬಹುದಾದರೂ ಅದಕ್ಕಾಗಿ ಅವರಿಗೆ ಜವಾಬ್ದಾರಿ ಸರಕಾರ ಕೊಡದಿರುವದು ಯೋಗ್ಯವಲ್ಲ. ಈ ಸೃಷ್ಟಿಯಿಂದ ಕೇಂದ್ರದಲ್ಲಿ ಜವಾಬ್ದಾರಿ ಹೊತ್ತವರೂ ಕೂಡ ತಾವು ಕರ್ತವ್ಯದಲ್ಲಿ ಚ್ಯುತಿ ಮಾಡಿಲ್ಲ, ಮಾಡಲಾರೆವೆಂದು ಹೇಳಲಾಗುವದಿಲ್ಲ. ರಾಷ್ಟ್ರದ ಐಕ್ಯತೆ ಮತ್ತು ಅಖಂಡತೆಯ ದೃಷ್ಟಿಯನ್ನಿಟ್ಟು ಈ ಭಾಗಗಳಲ್ಲಿ ಪ್ರಜಾಸತ್ತಾತ್ಮಕ ಸರಕಾರಕ್ಕಿರುವ ಅಡಚಣೆಗಳನ್ನೆಲ್ಲಾ ನಿವಾರಿಸಬೇಕು. ಈ 'ಸಿ' ಭಾಗದ ಯಾವುದೇ ಸಂಸ್ಥಾನವನ್ನು ಹತ್ತಿರದ ಬೇರೆ ಪ್ರಾಂತದೊಡನೆ ವಿಲೀನೀಕರಿಸುವ ಅವಶ್ಯಕತೆ ತೋರಿದಾಗ ಅಂಥಾ ವಿಲೀನೀಕರಣಕ್ಕೆ ಮೊದಲು ಆ ಭಾಗದ ಜನರ ಅಭಿಪ್ರಾಯವನ್ನು ತೆಗೆದು ಅದರಂತೆ ವರ್ತಿಸಬೇಕು

### ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ

ಈ ಮಸೂದೆಯು ಪ್ರತಿಗಾಮಿಯಾಗಿದೆ. ಇದರಿಂದ ಹಳೇ ಆಡಳಿತ ಪದ್ಧತಿಯೇ ಈ ಭಾಗಗಳಲ್ಲುಳಿದು ಜವಾಬ್ದಾರಿ ಸರಕಾರದ ಹಕ್ಕು ದೂರ ಉಳಿಯುತ್ತಾಗುವದ. ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ಕೇಂದ್ರ ಸರಕಾರದ ಮತ್ತು ಗೃಹಸ್ಥಾನ ವಿಭಾಗದ ಮಂತ್ರಿಗಳ ಧೋರಣೆಯು ಪ್ರಜಾ ಸತ್ತಾತ್ಮಕವಾಗಿರದೆ ಅಧಿಕಾರಶಾಹಿಯದಾಗಿದೆಯೆಂದು ಸ್ಪಷ್ಟ ಹೇಳಬಯಸುತ್ತೇನೆ. ಈ ಮಸೂದೆಯು ಈ ಭಾಗದ ಜನರಿಗೆ ಯಾವುದೇ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸಮಾನತೆಯನ್ನು ನಮ್ಮ ರಾಜ್ಯಘಟನೆಯಲ್ಲಿ ಸ್ಪಷ್ಟಪಡಿಸಿರುವಂತೆ, ಕೊಡ ಮಾಡಿಲ್ಲ. ಅಜಮೀರಿನಂಥಾ ಪ್ರಾಂತವು ಶತಮಾನಗಳ ನಿರಂಕುಶ ಆಡಳಿತದಲ್ಲಿ ಕೊಳೆಯುತ್ತಿದೆ. ಅಜಮೀರವು ಮುಸ್ಲಿಂ ಆಡಳಿತ ಮತ್ತು ನಂತರ ಬ್ರಿಟಿಷರ ಆಡಳಿತದಲ್ಲೂ ಪ್ರತ್ಯೇಕವಿದ್ದುದು ಸಾಮ್ರಾಜ್ಯಶಾಹೀ ಆಡಳಿತದ ದೃಷ್ಟಿಯಿಂದ ಎಂದು ಹೇಳಬೇಕಾಗುತ್ತಿತ್ತು. ಅದೇ ಮಾತನ್ನು ಇಂದಿನ ಆಡಳಿತಗಾರರೂ ಹೇಳುತ್ತಾ ಅಜಮೀರಕ್ಕೆ ಜವಾಬ್ದಾರಿ ಸರಕಾರವನ್ನು ನಿರಾಕರಿಸುತ್ತಿದ್ದಾರೆ.

ಚೀಫ್ ಕಮಿಷನರ ಕೈಕೆಳಗೆ ಕೌನ್ಸಿಲುಗಳ ಕೆಲಸವು ಕೇವಲ ಕಣ್ಣು ಕಟ್ಟಿನ ವ್ಯಾಪಾರ. ನಮ್ಮ ರಾಜ್ಯಘಟನೆಯ ಪ್ರಕಾರ ಈ ಚೀಫ್ ಕಮಿಷನರ ಕೌನ್ಸಿಲು ನ್ಯಾಯ ಸಮ್ಮತ ಸಭೆಯಾಗಲಾರದು. ಮೇಲಾಗಿ ಈ ಕೌನ್ಸಿಲುಗಳು ಯಾವ ರೀತಿ ಕೆಲಸ ಮಾಡುವವೆಂಬುದೂ ಮಸೂದೆಯಲ್ಲಿ ಸ್ಪಷ್ಟವಾಗಿಲ್ಲ. ಈ ಕೌನ್ಸಿಲುಗಳನ್ನು ವಿಸ್ತರಿಸಿ ಎರಡು ಮೂರರ ಬದಲು ಹತ್ತು ಹದಿನೈದು ಸದಸ್ಯರುಗಳನ್ನು ಮಾಡಬಹುದು. ಚೀಫ್ ಕಮಿಷನರು ಆ ಸದಸ್ಯರಿಗೆ ಜವಾಬ್ದಾರನಾಗಿರುವಂತೆ ಮಾಡಬೇಕು. ಕೌನ್ಸಿಲ್ ಆಫ್ ಸ್ಟೇಟಿಗೆ ಸದಸ್ಯರನ್ನು ಆರಿಸಲು ಮಾತ್ರ ಜನರಿಂದ ಕೂಡಿದ ಒಂದು ಇಲೆಕ್ಟರಲ್ ಕಾಲೇಜನ್ನು ಆರಿಸುವದು ಮೂರ್ಖತನವಾಗಿದೆ

### ಠಾಕೂರ್‌ಲಾಲ್ ಸಿಂಗ್

ಈ ಮಸೂದೆಯು ವನಸ್ಪತಿ ತುಪ್ಪದಂತಿದೆ. ಭೋಪಾಲಿನ ಜನರು ಜವಾಬ್ದಾರಿ ಸರಕಾರಕ್ಕಾಗಿ ಅನೇಕ ವರ್ಷಗಳಿಂದ ಹೋರಾಡುತ್ತಿದ್ದರು. ಈಗ ಜವಾಬ್ದಾರಿ ಸರಕಾರಕ್ಕಾಗಿ ಹೋರಾಡುತ್ತಿರುವ ಜನತೆಗೆ ಈ ಮಸೂದೆಯು ಕೇವಲ ತೋರಿಕೆಯದು. ಈ ಸಂಸ್ಥಾನಕ್ಕೆ ಪ್ರಜಾಜವಾಬ್ದಾರಿ ಸರಕಾರ ಕೊಡಲಾರದಿದ್ದರೆ ಇದನ್ನು ಬೇರೆ ಪ್ರಾಂತದೊಡನೆ ವಿಲೀನಗೊಳಿಸುವದು ಹಿತವಾಗಿದೆ. ನಾನು ಕಾಂಗ್ರೆಸ್ಸಿನವನಾದ್ದರಿಂದ ಕಾಂಗ್ರೆಸ್ಸಿನ ಶಿಸ್ತನ್ನು ಪಾಲಿಸಬೇಕಾಗಿದೆ. ಇಲ್ಲದಿದ್ದರೆ ಭೋಪಾಲಕ್ಕೆ ಪ್ರಜಾ ಜವಾಬ್ದಾರಿ ಸರಕಾರಬೇಕೆಂದು ಸತ್ಯಾಗ್ರಹ ಮಾಡುತ್ತಿದ್ದೆ. ಪ್ರಜಾಜವಾಬ್ದಾರಿ ಸರಕಾರ ದೊರೆಯುವ ವರೆಗೆ ಅಲ್ಲಿರುವ ಚೀಫ್ ಕಮಿಷನರ ಆಡಳಿತವೇ ಸಾಕಾಗಿದೆ.'

### ಗೃಹಮಂತ್ರಿ ರಾಜಗೋಪಾಲಾಚಾರಿ

ಚರ್ಚೆಯ ಮಧ್ಯದಲ್ಲಿ ಮಾತಾಡುತ್ತಾ ರಾಜಗೋಪಾಲಾಚಾರಿಯವರು ಹೀಗೆಂದರು :—

'ಪ್ರಜಾಪ್ರಭುತ್ವದಲ್ಲೂ ಅಧಿಕಾರಿಯೊಬ್ಬನು ಚಲಾಯಿಸಬಹುದಾದ ಅಧಿಕಾರವು ಸರ್ವಾಧಿಕಾರ ಸರಕಾರಕ್ಕಿಂಥಾ ಕಡಿಮೆಯಲ್ಲ. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ ನಾನು ಪಾಂಡಿಚೇರಿಗೆ ಹೋಗಿದ್ದಾಗ ಅಲ್ಲಿಯ ಒಬ್ಬ ಪೋಲೀಸಿನವನಿಗೆ ಬೇರೆ ಕಡೆಗಳಲ್ಲಿರುವವನಿಗಿಂಥಾ ಅಧಿಕಾರವಿರುವದು ಕಂಡು ಬಂತು. ಚೀಫ್ ಕಮಿಷನರ್ ಪ್ರಾಂತಗಳನ್ನು ದಳಿತ ವರ್ಗದವರಂತೆ ಕಾಣಲಾಗುತ್ತದೆಯೆಂಬ ಠಾಕೂರ್‌ಲಾಲ್ ಸಿಂಗರ ಮಾತನ್ನು ಖಂಡಿಸಬೇಕಾಗಿದೆ. 'ಸಿ' ಭಾಗದ ಪ್ರಾಂತಗಳಿಗೆ ಅವುಗಳದೇ ಆದ ಪ್ರತ್ಯೇಕ ಚರಿತ್ರೆ ಇದ್ದು ಅವು ಎ ಮತ್ತು ಬಿ ಭಾಗದ ಪ್ರಾಂತಗಳಿಗೆ ಭಿನ್ನವಾಗಿರುವದಲ್ಲದೆ ಅವುಗಳೊಳಗೂ ಭಿನ್ನತೆ ಇದೆ. ವಿಲೀನಗೊಳಿಸಲ್ಪಡಬೇಕೆಂದು ಎಲ್ಲರೂ ಹೇಳುವ ಕೆಲವು ಸಂಸ್ಥಾನಗಳೂ ಇವೆ. ಆದರೆ ಕೆಲವು ಸಂಸ್ಥಾನಗಳ ಕಷ್ಟಕರ ಸ್ಥಿತಿಯು ಅವುಗಳನ್ನು ಪ್ರತ್ಯೇಕವಿಟ್ಟು ಕೇಂದ್ರದ ಹಿಡಿತದಲ್ಲಿಟ್ಟುಕೊಳ್ಳುವಂತೆ ಪ್ರೇರಿಪಿಸುತ್ತವೆ. ಬಹುಮಾತದ 'ಸಿ' ಸಂಸ್ಥಾನಗಳು ಅರಸರ ಆಡಳಿತದಿಂದ ಈಗ ಬಿಡುಗಡೆ ಹೊಂದಿದವು. 'ಎ' ಭಾಗದ ಸಂಸ್ಥಾನಗಳಿಗೆ ಶಾಸನ ಸಭೆ, ಬಜೆಟ್ ಮೊದಲಾದವು ಬಹು ಕಾಲದಿಂದಲೇ ಇವೆ. 'ಸಿ' ಭಾಗದ ಸಂಸ್ಥಾನಗಳಲ್ಲಿ ಅಂಥಾ ಅನುಭವವಿಲ್ಲ. ಕೆಲವಕ್ಕೆ ರಾಜಪ್ರಮುಖ ನೇಮಿಸಲಾದವಿಲ್ಲ. ಇಂದಿನ ಸ್ಥಿತಿಯೇ ಅಲ್ಲಿ ಮುಂದರಿಯಬೇಕೆಂಬ ಇಚ್ಛೆಯಾಗಲೀ ಇಲ್ಲದಿದ್ದರೂ ಬೇರೆ ಉಪಾಯವಿಲ್ಲ. ಈ ಮಸೂದೆಯ ಪ್ರಕಾರ ಈ ಸಂಸ್ಥಾನಗಳು ಎ ಬಿ ಭಾಗಗಳಂಥಾ ಉತ್ತಮವಾಗಿ ಆಳಲ್ಪಡುವವೆಂದು ನನಗೆ ನಿಶ್ಚಯವಿದೆ. ಸಂಸ್ಥಾನವು ಚಿಕ್ಕದಾದಷ್ಟು ಆಡಳಿತವು ದಕ್ಷವಾಗುತ್ತದೆ. ನನ್ನ ವ್ಯಕ್ತಿಗತ ಅಭಿಪ್ರಾಯವನ್ನು ಹೇಳುವದಾದರೆ ದೊಡ್ಡದಾಗಿರುವ ಎ ಮತ್ತು ಬಿ. ಸಂಸ್ಥಾನಗಳನ್ನೂ ಕೂಡ 'ಸಿ' ಸಂಸ್ಥಾನಗಳಂತೆ ಚಿಕ್ಕ ಆಡಳಿತ ಘಟಕಗಳಾಗಿ ಮಾಡುವದು ಸೂಕ್ತ. ನಾವು ಅದಕ್ಕೆ ಯಾವುದೇ ಹೆಸರನ್ನು ಕೊಟ್ಟರೂ ಜನತೆಯ ಸಂಪರ್ಕವು ಆಡಳಿತಗಾರರಿಗೆ ಇದರಿಂದ ಹೆಚ್ಚು ದೊರೆಯುವದು.

ಪಾರ್ಲಿಮೆಂಟಿನ ಸದಸ್ಯರ ದೃಷ್ಟಿಯು ಬೇರೆ ವಿಚಾರಗಳಿಗಾಗಿ ಅತ್ತ ಕೇಂದ್ರೀಕರಿಸಲ್ಪಟ್ಟು 'ಸಿ' ಸಂಸ್ಥಾನಗಳ ಬಗ್ಗೆ ಗಮನ ಕಡಿಮೆಯಾಗಿರುವಾಗ ಈ ವಿಚಾರ ಪಾರ್ಲಿಮೆಂಟಿನಲ್ಲಿ ವಿವೇಚಿಸಿ ಪ್ರಯೋಜನವಿಲ್ಲವೆಂಬ ಲಾಲ್ ಸಿಂಗರ ಅಭಿಪ್ರಾಯ ಸರಿಯಲ್ಲ. ಈಗಿನ ಏರ್ಪಾಡು ಪರಿಶೋಧನಾತ್ಮಕವಾದುದು. ಈ ಮಸೂದೆಯನ್ನು ಮಂಡಿಸಿದ ಶ್ರೀ. ಎನ್. ಗೋಪಾಲಸ್ವಾಮಿ ಐಯ್ಯಂಗಾರರು ಎಲೆಕ್ಟರಲ್ ಕಾಲೇಜ್ ಏರ್ಪಡಿಸುವ ಶ್ರೀ ಭಾರ್ಗವರ ಸೂಚನೆಯನ್ನು ಚಿತ್ತಕ್ಕೆ ತೆಗೆದುಕೊಳ್ಳುವರೆಂದು ನಂಬುತ್ತೇನೆ. ಇದಾದರೆ ಸಿ ಭಾಗದ ಸಂಸ್ಥಾನಗಳಲ್ಲಿ ಒಂದು ಪೂರ್ಣ ಯೋಜನೆಯು ತಯಾರಾದಂತಾಗುವದು. ಚೀಫ್ ಕಮಿಷನರಿಗೆ ಯಾವುದೇ ಹೆಸರು ಕೊಟ್ಟರೂ ಅವರು ಆಡಳಿತದ ಮುಖ್ಯಸ್ಥರಾಗಿದ್ದು ಪ್ರಜಾಪ್ರಭುತ್ವದಲ್ಲೂ ಕೂಡ ಅವರ ಗೌರವವನ್ನು ಕಾಪಾಡುವದರಿಂದ ಆಡಳಿತಕ್ಕೆ ಉಪಯೋಗವೇ ಆಗುವದು. ಸದಸ್ಯರಾಗಲೀ, ಮಂತ್ರಿಗಳಾಗಲೀ ಆಡಳಿತ ಮುಖ್ಯಸ್ಥರ ಕೆಲಸದಲ್ಲಿ ಕೈಹಾಕಬಾರದು. ಅವರು ಚೀಫ್ ಕಮಿಷನರಲ್ಲಿಗೆ ಹೋಗಿ ಆ ಅಧಿಕಾರಿಯು ಇಲ್ಲವೇ, ಆ ಉದ್ಯೋಗಸ್ಥ ವರ್ಗದವರಿಗೆ ಆಜ್ಞಾಪಿಸಬಾರದು. ಮಂತ್ರಿಗಳು ಧೋರಣೆಗೆ ಜವಾಬ್ದಾರರೇ ವಿನಾ ಅಂತರ್ಯ ಆಡಳಿತಕ್ಕಲ್ಲ. ಭಾರ್ಗವರವರ ಅಭಿಪ್ರಾಯವನ್ನು ತೆಗೆದುಕೊಂಡರೆ ಆ ಭಾಗಗಳಲ್ಲಿ ಒಂದು ವಿಧದ ಶಾಸನ ಸಭೆಯೂ ದೊರಕಿದಂತಾಗುವದು. ಅಲ್ಲಿ ಸದಸ್ಯರು ಚರ್ಚಿಸಿ ಯೋಗ್ಯ ಕೆಲಸ ಮಾಡಬಹುದು. ಈ ಮಸೂದೆಯು ಪರಿಪೂರ್ಣವಲ್ಲ. ಬೇಕಾದ ತಿದ್ದುಪಡಿಯನ್ನು ಕ್ರಮಶಃ ಮಾಡಿಕೊಳ್ಳಬಹುದು. 'ಸಿ' ಸಂಸ್ಥಾನಗಳಿಗೆ ಎ, ಬಿ ಸಂಸ್ಥಾನಗಳಂತೆ ಕಟ್ಟುನಿಟ್ಟಾದ ನಿಶ್ಚಿತ ನಿಯಮಾವಳಿ ಇಲ್ಲದಿದ್ದರೆ ಅವುಗಳ ಹಿಂದೆ ಈ ಭಾಗಗಳ ಆಡಳಿತದಲ್ಲಿ ಯೋಗ್ಯ ತೋರಿದ ಬದಲಾವಣೆ ಮಾಡಲು ಪ್ರೆಸಿಡೆಂಟರನ್ನು ತಡೆಯುವ ಯಾವುದೇ ಕಾರಣವಿಲ್ಲ. ಈ ಸಂಸ್ಥಾನಗಳ ಆರ್ಥಿಕ ಸ್ಥಿತಿಯು ಚೆನ್ನಾಗಿದೆ. ೫೦೦ ಲಕ್ಷ ರೂಪಾಯಿಯ ಖೋತಾ ಇದೆ. ಇವುಗಳಿಂದ ಕೇಂದ್ರಕ್ಕೆ ಆದಾಯ ತೆರಿಗೆಯಿಂದ ಬರುವ ಉತ್ಪನ್ನ ೪೦ ಲಕ್ಷವಾಗಿದೆ. ಈ ವರೆಗೆ ಕೆಲವು ಸಂಸ್ಥಾನಗಳಿಗೆ ಬಜೆಟ್ಟು ಇರಲಿಲ್ಲ, ಆಡಳಿತದ ಬೇರೆ ಯಾವ ಅನುಭವವೂ ಇಲ್ಲ.

ಅಜಮೀರದ ವಿಚಾರ ಮಾತಾಡುತ್ತಾ, ಅದರ ಭವಿಷ್ಯವೇನೆಂದು ಜೋತಿಷ್ಯನೂ ಕೂಡ ಹೇಳಲಾರನು. ಅದು ಚಿಕ್ಕದೆಂದು ಪ್ರತ್ಯೇಕವಿಡದಂತಿದ್ದು ಅದು ಗವರ್ನರು, ಮಂತ್ರಿಗಳನ್ನಿಟ್ಟುಕೊಂಡು ಆಡಳಿತ ನಡೆಸಲಾರದು ಎಂಬರು.

ಮಧ್ಯೆ ಬಾಯಿ ಹಾಕಿ ಶ್ರೀ ಗುಪ್ತರವರು ಅಜಮೀರದ ಜನರು ಅದನ್ನು ರಾಜಸ್ಥಾನದೊಡನೆ ವಿಲೀನಗೊಳಿಸಬೇಕೆಂದರೂ ಸರಕಾರ ಹಾಗೆ ಮಾಡದಿರಲು ಕಾರಣವೇನೆಂದು ಕೇಳಲು ಅಜಮೀರದ ಬಹು ಜನರು ವಿಲೀನೀಕರಣಕ್ಕೆ ವಿರೋಧವಿರುವರೆಂದು ರಾಜಗೋಪಾಲಾಚಾರ್ಯರೆಂದರು. ಶ್ರೀ. ಭಾರ್ಗವರವರು ಅಜಮೀರದ ಭವಿಷ್ಯ ನಿರ್ಣಯ ಮಾಡುವದಕ್ಕನ್ನು ಅಲ್ಲಿ ರಚಿತವಾಗುವ ಇಲೆಕ್ಟರಲ್ ಕಾಲೇಜಿಗೆ ಬಿಡಬೇಕೆಂದರು.

### ಶ್ರೀ ಗೋಪಾಲಸ್ವಾಮಿ ಐಯ್ಯಂಗಾರ್

ಸಂಸ್ಥಾನಗಳ ಮಂತ್ರಿಗಳಾದ ಶ್ರೀ. ಗೋಪಾಲಸ್ವಾಮಿಯವರು ಉತ್ತರವಾಗಿ ಈ ರೀತಿ ಹೇಳಿದರು

'ಎ ಬಿ ಮತ್ತು ಸಿ ಸಂಸ್ಥಾನಗಳಿಗಿರುವ ಭಿನ್ನ ಭೇದವನ್ನು ಶೀಘ್ರ ತೆಗೆದು ಹಾಕಿದಷ್ಟೂ ಉತ್ತಮವೆಂದು ಅನೇಕರು ಹೇಳಿದರು. ಈ ಸಂಸ್ಥಾನಗಳಲ್ಲಿ ಹಲವಾರು ಭೇದವಿದೆ. ಹಿಂದೆ ಕೇಂದ್ರದಿಂದ ಆಳಲ್ಪಡುವ ಮೂರೇ ಚೀಫ್ ಕಮಿಷನರ ಪ್ರಾಂತಗಳಿದ್ದವು. ಈಗ ಹತ್ತು ಇವೆ. ಹೀಗೆ ಅವುಗಳ ಸಂಖ್ಯೆ ಹೆಚ್ಚಿಸಲು ದೃಢ ಕಾರಣಗಳಿವೆ.

ಮಣಿಪುರ, ತ್ರಿಪುರ ಮತ್ತು ಕಚ್ ಈ ಸಂಸ್ಥಾನಗಳ ಬಗ್ಗೆ ಅವು ಗಡಿಗಳಲ್ಲಿ

(೪ನೇ ಪುಟಕ್ಕೆ ಸಾಗಿದೆ)

# ಕೊಡಗು

ತಾ. ೧-೬-೧೯೫೧ನೇ ಶುಕ್ರವಾರ

## ಕೊಡಗಿನ ಭವಿಷ್ಯತ್ತಿನ ನಿರ್ಣಯ.

ಕೊಡಗಿನ ಭವಿಷ್ಯ ನಿರ್ಣಯವು ಇಲ್ಲಿಯ ಜನರಿಗೆ ತಮ್ಮ ಪ್ರಾಣವಷ್ಟೇ ಪ್ರಾಮುಖ್ಯವಾಗುವದರಿಂದ, ಆ ಕುರಿತು ಆಗಾಗ್ಗೆ ಬರೆಯಬೇಕಾಗುತ್ತದೆ. ಮಾರ್ಚ್ ತಾರೀಕು ೧೬ರಲ್ಲಿ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯಲ್ಲಿ ಕೊಡಗನ್ನು ಇಂದೋ ನಾಳೆಯೋ ಬೇರೆ ಪ್ರಾಂತದೊಂದಿಗೆ ಸಂಯೋಜಿಸಬೇಕಾಗುವದೆಂದು ಸಂಬಂಧಪಟ್ಟ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ಖಂಡಿಸಿ ಭವಿಷ್ಯದ ನಿರ್ಣಯದ ಹಕ್ಕು ಜನತೆಯದಾಗಿದೆಯೆಂದು ತಾ ೨೩-೩-೫೧ರಲ್ಲಿ ನಾವು ಟೀಕಿಸಿದ್ದೆವು. ನಂತರ ಡೆಲ್ಲಿಯಿಂದ ಖಾಸಗಿಯಾಗಿ ತಿಳಿದ ವಿಚಾರಗಳ ಆಧಾರದ ಮೇಲೆ ಇಂಡಿಯಾ ಸರಕಾರವು ಕೊಡಗಿನ ಭವಿಷ್ಯದ ವಿಚಾರ ಏನೊಂದೂ ತೀರ್ಮಾನ ಮಾಡಿಲ್ಲವೆಂದೂ ಈ ತೀರ್ಮಾನವು ಬರುವ ಚುನಾವಣೆ ವರೆಗೆ ಆಗುವದಿಲ್ಲವೆಂದೂ ಆದುದರಿಂದ ಬರುವ ಚುನಾವಣೆಯಲ್ಲಿ ಜನರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಬೇಕೆಂದೂ ಅದರ ಫಲಿತಾಂಶದಂತೆಯೇ ಭವಿಷ್ಯದ ನಿರ್ಣಯವಾಗುವದೆಂದೂ ತಾ ೧೩-೪-೫೧ರಲ್ಲಿ ಪುನಹ ಬರೆದಿದ್ದೆವು. ಆದರೂ ಕಳೆದ ಕೊಡಗು ಕೌನ್ಸಿಲು ಮೀಟಿಂಗಿನಲ್ಲಿ ಇಂಡಿಯಾ ಸರಕಾರದವರು ಕೊಡಗನ್ನು ಸಂಯೋಜಿಸಲು ತೀರ್ಮಾನಿಸಿ ಬಿಟ್ಟಿರುವರೆಂದೂ ಈ ವಿಚಾರವು ಜನತೆಯ ಓಟಿನ ಮೇಲೆ ನಿಂತಿರುವದಿಲ್ಲವೆಂದೂ ಸಂಯೋಜನವಾದಿಗಳು ಬಲವತ್ತರವಾಗಿ ವಾದಿಸಿದರು.

'ಸಿ' ಭಾಗದ ಸಂಸ್ಥಾನಗಳಿಗೆ ಸುಧಾರಣೆ ಕೊಡುವ ಮಸೂದೆಯೊಂದನ್ನು ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಮಾರ್ಚ್ ತಾರೀಕು ೩೦ರಲ್ಲಿ ಮುಂದಿಟ್ಟು ಇದರ ಚರ್ಚೆಯನ್ನು ಏಪ್ರಿಲ್ ತಾರೀಕು ೨೫ರಲ್ಲಿ ಪ್ರಾರಂಭಿಸಿದಾಗ್ಗೆ ಕೊಡಗಿನ ಭವಿಷ್ಯತ್ತಿನ ನಿರ್ಣಯವನ್ನು ಕುರಿತು ಜನತೆಯ ಮನಸ್ಸಿನಲ್ಲಿದ್ದ ಸಂಶಯವನ್ನು ಸಂಪೂರ್ಣ ಪರಿಹಾರ ಮಾಡಿರುವರು. ಈ ಚರ್ಚೆಯ ವಿವರವನ್ನು ಬೇರೆಡೆ ಕೊಡಲಾಗಿದೆ. ಈ ಮಸೂದೆಯನ್ನು ಮಂಡಿಸಿದ ಸಂಸ್ಥಾನ ಶಾಖೆಯ ಮಂತ್ರಿಯವರಾದ ಗೋಪಾಲಸ್ವಾಮಿ ಅಯ್ಯಂಗಾರರು "ಇಷ್ಟರವರೆಗೆ ಸರಕಾರದವರು ತಿಳಿದಿರುವ ಮಟ್ಟಿಗೆ ಕೊಡಗಿನ ಜನತೆಯ ಅಭಿಪ್ರಾಯವು ಸಂಪೂರ್ಣವಾಗಿ ಪ್ರತ್ಯೇಕವಾಗಿರಬೇಕೆಂಬುದರ ಕಡೆಗೂ ಇಲ್ಲ; ಅಥವಾ ಬೇರೆ ಪ್ರಾಂತದೊಡನೆ ಸಂಯೋಜಿಸಬೇಕೆಂಬುದರ ಕಡೆಗೂ ಇಲ್ಲ. ಇಲ್ಲಿಯ ಕೂಡ ಜನರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಲು ಇನ್ನು ಹೆಚ್ಚಿನ ಸಮಯ ಬೇಕಾಗುವದು. ಚೀಫ್ ಕಮಿಷನರ ಪ್ರಾಂತಗಳ ಭವಿಷ್ಯತ್ತಿನ ನಿರ್ಣಯವನ್ನು ಸಾಕಷ್ಟು ಅಜಮಾಯಿಸಬೇಕಾಗಿದೆ. ಇನ್ನು ಪ್ರೊ. ಶಾರವರು ಹೇಳಿದಂತೆ ಸಂಬಂಧಪಟ್ಟ ಜನರ ಅಭಿಪ್ರಾಯವನ್ನು ತೃಪ್ತಿಕರ ರೀತಿಯಿಂದ ತಿಳಿದೇ ಮಾಡಬೇಕಾಗುವದು" ಎಂದರು. ಈ ಮಸೂದೆಗೆ ಜವಾಬ್ದಾರರಾದ ಮಂತ್ರಿಯವರ ಈ ಮೇಲಿನ ಮಾತುಗಳಿಂದ ಯಾರ ಮನಸ್ಸಿನಲ್ಲಿಯೂ ಯಾವ ತರದ ಸಂಶಯವಿರಲು ಕಾರಣವಿಲ್ಲ. ತಮ್ಮ ಪ್ರಾಂತದ ಭವಿಷ್ಯದ ನಿರ್ಣಯವು ತಮ್ಮ ಹಕ್ಕಾಗಿದೆ ಎಂಬುವನ್ನು ಇನ್ನಾದರೂ ಜನತೆಯು ಚೆನ್ನಾಗಿ ತಿಳಿಕೊಳ್ಳಲಿ. ತಮ್ಮ ಉದ್ದೇಶವಾದ ಕೊಡಗಿನ ಸಂಯೋಜನೆಯನ್ನು ಸಾಧಿಸಲು ಮಂತ್ರಿಗಳ ಮಾತುಗಳಿಗೆ ಅಪಾರ್ಥವನ್ನು ಕೊಟ್ಟು ಜನತೆಯ ಅಮೂಲ್ಯವಾದ ಹಕ್ಕನ್ನು ಅಲ್ಲಗಳೆಯುವ ಕೆಲವರ ಪ್ರಯತ್ನಕ್ಕೆ ಜನರು ಬಲಿಬೀಳಲಿಕ್ಕಿಲ್ಲವಾಗಿ ನಂಬುತ್ತೇವೆ.

ಗೃಹಮಂತ್ರಿಯವರಾದ ಶ್ರೀ ರಾಜಗೋಪಾಲಾಚಾರಿಯವರು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಜವಾಬು ಕೊಡುತ್ತಾ "ಸಂಸ್ಥಾನವು ಚಿಕ್ಕದಾದಷ್ಟೂ ಮತ್ತು ಜವಾಬ್ದಾರಿಯು ಕಡಿಮೆಯಾದಷ್ಟೂ ಅದರ ಆಡಳಿತ ಮಟ್ಟವು ಉತ್ತಮವೂ ಶುದ್ಧವೂ ಆಗುವದು. ನನಗೆ ಬಿಟ್ಟರೆ ನಾನೇ ಆದರೆ ಎ ಮತ್ತು ಬಿ ಭಾಗದ ಸಂಸ್ಥಾನಗಳನ್ನು 'ಸಿ' ಭಾಗಗಳ ಸಂಸ್ಥಾನಗಳ ಗಾತ್ರಕ್ಕೂ ಮಟ್ಟಕ್ಕೂ ಇಳಿಸುವೆನು. ಆಗ್ಗೆ ಅವುಗಳನ್ನು ಸದಾ ಜನತೆಯ ಸಂಪರ್ಕವಿಟ್ಟುಕೊಂಡು ಆಳಲು ಸಾಧ್ಯವಾಗುವದು. ಯಾವ ಹೆಸರೇ ಇರಲಿ ಗವರ್ನರುಗಳು ಮತ್ತು ಮಂತ್ರಿಗಳು ಜನರ ನೇರವಾದ ಸಂಪರ್ಕವನ್ನು ಇಟ್ಟುಕೊಳ್ಳಲಾಗುವದು" ಎಂದು ಹೇಳಿದರು. ಕೊಡಗು ಚಿಕ್ಕ ಪ್ರಾಂತವಾಗಿರುವದರಿಂದ ಇಲ್ಲಿಯ ಆಡಳಿತವು ಇತರ ದೊಡ್ಡ ಪ್ರಾಂತಗಳಿಗಿಂಥಾ ಹೆಚ್ಚಿನ ದಕ್ಷತೆಯಿಂದ ನಡೆಸಲ್ಪಡುತ್ತಿದೆಯೆಂಬುದು ಇಲ್ಲಿಯ ಜನತೆಯ ಅನುಭವದ ಮಾತು. ಇನ್ನು ಕೊಡಗಿನ ಜನರು ಅಪರಲ್ಲೂ ಜವಾಬ್ದಾರಿ ಮನುಷ್ಯರು ಒಪ್ಪುವದು ದುರ್ಲಭವಾಗಿತ್ತು. ಬದಲು ಜವಾಬ್ದಾರಿ ಸರಕಾರ ನಡೆಸಲು ಚಿಕ್ಕ ಪ್ರಾಂತದಲ್ಲಿ ಸಾಧ್ಯವಿಲ್ಲವೆಂದೇ ಅಭಿಪ್ರಾಯಪಡುತ್ತಿದ್ದರು. ಆದರೆ ಸ್ವತಂತ್ರ್ಯ ದೊರೆತು ಪ್ರಜಾ ಜವಾಬ್ದಾರಿ ಸರಕಾರವು ಪ್ರಾರಂಭವಾಗಿ ಸುಮಾರು ನಾಲ್ಕು ವರ್ಷಗಳ ಅನುಭವದಿಂದ ಗೃಹಮಂತ್ರಿ ರಾಜಗೋಪಾಲಾಚಾರಿಯವರಂಥಾ ನಿಷ್ಣಾತ ರಾಜಕೀಯ ಧುರೀಣರೂ, ದಕ್ಷ ಆಡಳಿತಗಾರರೂ ನಾವು ಈ ವರೆಗೆ ಸಾರುತ್ತಿದ್ದಂಥಾ ಈ ತತ್ವವನ್ನು ಇಂದು ಪಾರ್ಲಿಮೆಂಟ್ ಸಭೆಯಲ್ಲಿ ಬಹಿರಂಗವಾಗಿ ಒಪ್ಪಿಕೊಂಡದ್ದು ಕೊಡಗಿನ ಮುಂದಿನ ಆಡಳಿತಕ್ಕೂ ಹಾಗೂ ಹಿಂದೂದೇಶದ ಭವಿಷ್ಯತ್ತಿನ ರಾಜ್ಯಭಾರಕ್ಕೂ, ಗಾಂಧೀಜಿಯವರ ಚಿಕ್ಕ ಆಡಳಿತ ಭಾಗಗಳ ಯೋಜನೆಯಾದ ವಿಕೇಂದ್ರೀಕರಣ ತತ್ವಕ್ಕೂ ಬಹು ಪ್ರೋತ್ಸಾಹದಾಯಕವೆಂಬುದರಲ್ಲಿ ಸಂದೇಹವಿಲ್ಲ. ಇದನ್ನು ಆಡಳಿತ ನಿಪುಣರು ಕಾರ್ಯರೂಪಕ್ಕಿಳಿಸಿ ಭಾರತೀಯರ ಕಲ್ಯಾಣವನ್ನು ಸಾಧಿಸುವರಾಗಿ ಆಶಿಸುತ್ತೇವೆ.

## ವರ್ತಮಾನ.

ಮೈಸೂರು ವಿಶ್ವವಿದ್ಯಾಲಯದ ಇಂಟರ್ ಮಿಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಬಾಚಮಂಡ ಎಂ. ಸುಬ್ಬಮ್ಮಯ್ಯನವರು ತೇರ್ಗಡೆಯಾಗಿರುವರು.

ಭಾರತದ ಸೇನಾನಾಯಕರಾದ ಜನರಲ್ ಕಾರ್ಯಪ್ಪನವರು ತಾ ೨೮ರಲ್ಲಿ ಮಡಿಕೇರಿಗೆ ಬಂದಿರುವರು. ಅವರಿಗೆ ಸಾರ್ವಜನಿಕ ಸ್ವಾಗತವಿತ್ತು ಬರಮಾಡಿಕೊಳ್ಳಲಾಯಿತು. ತಾ. ೪-೬-೫೧ರಲ್ಲಿ ಅವರು ವಾಪಾಸು ಹೋಗುವರು.

ತಾ. ೨೬-೫-೫೧ರಲ್ಲಿ ಸಿ. ಪಿ. ಸಿ ಬಸ್ ಗೇರೇಜಿನಲ್ಲಿ ಬಸ್ ರಿಪೇರಿ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಬಸ್ ಚಲಿಸಿ ಅದರಿಂದ ಡ್ರೈವರು ಈಶ್ವರ ಭಟ್ಟ ಎಂಬವರು ಗೋಡೆಗೆ ಒತ್ತರಿಸಲ್ಪಟ್ಟು ಅದರಿಂದಾಗಿ ಅವರ ಎರಡು ತೊಡೆಗಳೂ ಮುರಿದು ಹೋಗಿ ಅವರು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ತಾರೀಕು ೨೯ರಲ್ಲಿ ಕೋಳನಾಡು ಕೊಡಗೇರಿಯ ದವಸ ಭಂಡಾರದ ಹೊಸ ಕಟ್ಟಡವನ್ನು ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು.

ಕತ್ತನಾಡು, ಬಿ ಶೆಟ್ಟಿಗೇರಿ, ಮೊದಲಾದ ಸುತ್ತುಮುತ್ತಲಿನ ಸಹಕಾರಿ ಸಂಘಗಳ ಸದಸ್ಯರ ಪರಿಷತ್ತೊಂದು ತಾ. ೨೯ರಲ್ಲಿ ಕುಟ್ಟನಾಡ ಭಗವತಿ ದೇವಸ್ಥಾನದಲ್ಲಿ ಶ್ರೀ ಕೆ ಎ. ಬೆಳ್ಳಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾತತ್ತೂರು ಗ್ರಾಮದ ಮಾಜಿ ಪಟೇಲರಾಗಿದ್ದ ಅಮ್ಮಟಂಡ ಗಣಪತಿಯವರು ತಮ್ಮ ೬೮ನೇ ಪ್ರಾಯದಲ್ಲಿ ತಾ ೮-೫-೫೧ರಲ್ಲಿ ಶಿವಾಧೀನ ಹೊಂದಿದರು.

## ಕೊಡಗು ಕಂಪೆನಿಯ ವಾರ್ಷಿಕ ಮಹಾಸಭೆ.

ಈ ತಾರೀಕು ೧೦ರಲ್ಲಿ ಕೊಡಗು ಲಿಮಿಟೆಡ್ ಕಂಪೆನಿಯ ಶೇರುದಾರರ ವಾರ್ಷಿಕ ಮಹಾಸಭೆಯು ವೀರಾಜಪೇಟೆ ಸಹಕಾರ ಮಾರ್ಕೆಟಿಂಗ್ ಫೆಡರೇಶನ್ ಹಾಲ್‌ನಲ್ಲಿ ಬೆಳಿಗ್ಗೆ ೧೦.೩೦ ಗಂಟೆಗೆ ನಡೆಯುವದು.

ಮೇನೇಜರ್.

## ಭವಿಷ್ಯ ನಿರ್ಣಯ ಜನರ ಕೈಯಲ್ಲಿದೆ.

(೩ನೇ ಪುಟದಿಂದ ಸಾಗಿದ್ದು)

ರುವವರಿಂದ ಸಂರಕ್ಷಣೆಯ ದೃಷ್ಟಿಯಿಂದ ಅವು ಪ್ರತ್ಯೇಕವಿದ್ದು ಕೇಂದ್ರದ ಅಂಕಿತದಲ್ಲಿರಬೇಕಾದುದು ಸೂಕ್ತ. ಮತ್ತೆ ಅಜಮೀರ್, ಬೋಪಾಲ್ ಅಥವಾ ಚಿಕ್ಕ ಸಂಸ್ಥಾನವಾದ ಬಿಲಾಸಪುರ ಇವುಗಳಿವೆ. ಇವು ಪ್ರತ್ಯೇಕ ಇರಬೇಕೋ ಬೇರೆ ಪ್ರಾಂತಗಳೊಡನೆ ವಿಲೀನವಾಗಬೇಕೋ ಎಂಬುದರ ಪರಿಶೀಲನೆಯನ್ನು ಮಾಡಬೇಕಿದೆ. ಈ ಪರಿಶೀಲನೆ ಮಾಡುವಾಗ ಪ್ರೊ. ಶಾರವರು ಹೇಳಿದಂತೆ ಜನತೆಯ ಅಭಿಪ್ರಾಯವನ್ನು ತೃಪ್ತಿಕರವಾದ ಮಾರ್ಗದಿಂದ ತಿಳಿದು ಸರಕಾರವು ಮಾಡಬೇಕಾಗಿದೆ.

ಕೊಡಗಿನ ವಿಷಯದಲ್ಲಿ ಸರಕಾರಕ್ಕೆ ತಿಳಿದು ಬಂದ ಮಟ್ಟಿಗೆ ಪ್ರತ್ಯೇಕವಿಡಲೂ ವಿಲೀನಗೊಳಿಸಲೂ ಒಮ್ಮತವಾದ ಅಭಿಪ್ರಾಯವಿಲ್ಲ. ಅವರ ಅಭಿಪ್ರಾಯವು ಒಂದು ನಿರ್ದಿಷ್ಟ ರೂಪಕ್ಕೆ ಬರಲು ಹೆಚ್ಚಿನ ಸಮಯ ಬೇಕು. ಈಗ ಬೋಪಾಲಿನ ಬಹುಮತ ಜನರು ವಿಲೀನೀಕರಣವಾಗಬೇಕೆಂಬರೂ ಇದ್ದರೂ ನವಾಬರಿಗೆ ಕೊಟ್ಟ ಮಾತಿನ ಮೇರೆ ಅವರನ್ನು ಒಪ್ಪಿಸಿಯೇ ವಿಲೀನೀಕರಣವಾಗಬೇಕಿದೆ.

ಡೆಲ್ಲಿಯ ಸ್ಥಿತಿಯು ಭಿನ್ನವಾಗಿದೆ. ಅಲ್ಲಿಯ ಜನರ ಇತರ ಭಾಗಗಳಂತೆಯೇ ಮುಂದರಿದವರು. ಅದು ಕೇಂದ್ರ ಸರಕಾರದ ಸ್ಥಾನವಾಗಿರುವದರಿಂದ ಅದರ ಸಮಸ್ಯೆಗಳು ಕಠಿಣವಾದವು. ಆದ್ದರಿಂದ ಅದರ ಆಡಳಿತದಲ್ಲಿ ಜನರಿಗೆ ಪರಿಣಾಮಕಾರಿಯಾದ ಅಧಿಕಾರವನ್ನು ಕೊಡಬೇಕಾಗಿದೆ. 'ಸಿ' ಭಾಗದ ಸಂಸ್ಥಾನಗಳಿಗೆಲ್ಲ ಈ ಸಭೆಯು ಒಂದೇ ನೀತಿಯನ್ನು ಅನುಸರಿಸಲಾಗುವುದಿಲ್ಲ. ಕೆಲವು ಸಂಸ್ಥಾನಗಳಿಗೆ ಪ್ರಜಾ ಜವಾಬ್ದಾರಿ ಸರಕಾರ ಕೊಡುವ ಮಾರ್ಗವನ್ನು ಅನುಸರಿಸಿದರೆ ಇನ್ನು ಕೆಲವು ಒಂದಿರೆ ಅರ್ಧಾಂಶವಷ್ಟು ವಿಲೀನಗೊಳ್ಳಬೇಕಾಗುವದು. ಆದ್ದರಿಂದ ವಿಲೀನಗೊಳ್ಳಬೇಕಾದ ಇತರ ಭಾಗಗಳಿಗೆ 'ಎ' ಭಾಗಗಳಂಥ ಆಡಳಿತ ಯೋಜನೆ ರಚಿಸುವದರಲ್ಲಿ ಅರ್ಥವಿಲ್ಲ. ಅದರಿಂದಲೇ ವಿಂಧ್ಯಾ ಮತ್ತು ಹಿಮಾಚಲ ಪ್ರದೇಶಗಳಿಗೂ ಮತ್ತುಳಿದವುಗಳಿಗೂ ಭಿನ್ನವಾದ ನೀತಿ ಅನುಸರಿಸಲಾಗಿದೆ.

ಈಗ ಸೂಚಿತವಾಗಿರುವ ಕೌನ್ಸಿಲರುಗಳ ಯೋಜನೆಯನ್ನು ಟೀಕಿಸಿ ಅದನ್ನು ವೈಸರಾಯರ ಸಲಹಾ ಸಮಿತಿಗೆ ಹೋಲಿಸಲಾಗಿದೆ. ಆದರೆ ಇವೆರಡು ತುಂಬಾ ಭಿನ್ನವಾದವು. ಇವರು ಚೀಫ್ ಕಮಿಶನರೊಂದಿಗೆ ಆಡಳಿತದಲ್ಲಿ ಪಾಲುಗೊಳ್ಳುವವರು. ಅವರಿಗೆ ನಿರ್ದಿಷ್ಟ ಖಾತೆಗಳ ಜವಾಬ್ದಾರಿ ಇರುವದು. ಹೀಗೆ ಮಾಡುವದರ ಗುರಿಯು ಕೇವಲ ಚೀಫ್ ಕಮಿಷನರೇ ನಿಯಮ, ಅಪ್ಪಣೆ ಹುಕುಂಗಳನ್ನು ಮಾಡುವವರಲ್ಲ; ಬದಲು ಅಲ್ಲಿಯ ಜನರ ಪ್ರತಿನಿಧಿಗಳಿಗೂ ಚೀಫ್ ಕಮಿಷನರಂತೆ ಅವರವರ ವ್ಯವಹಾರ ಕ್ಷೇತ್ರದಲ್ಲಿ ಅಧಿಕಾರವಿದೆಯೆಂಬುದು ಆ ಭಾಗಗಳ ಜನತೆಗೆ ಮನದಟ್ಟು ಪಡಿಸಲಿಕ್ಕೆ ಆಗಿದೆ. ಚೀಫ್ ಕಮಿಷನರು ಈ ಕೌನ್ಸಿಲರುಗಳ ಮುಖ್ಯಸ್ಥನಾದರೂ ಅವರೊಳಗೆ ಬರುವ ಭಿನ್ನಾಭಿಪ್ರಾಯವನ್ನು ನಿವಾರಿಸಲು ಬೇರೆ ಏರ್ಪಾಡು ಇದೆ.

ಈ ಮಸೂದೆಯಲ್ಲಿ ಒಂದು ನ್ಯೂನತೆ ಇದೆ. ಈ ಕೌನ್ಸಿಲರುಗಳು ಮತ್ತು ಚೀಫ್ ಕಮಿಷನರು ಶಾಸನ ಮತ್ತು ಆಡಳಿತ ಸಂಬಂಧ ವಿಚಾರಗಳಲ್ಲಿ ಆಲೋಚನೆ ತೆಗೆದುಕೊಳ್ಳಲು ಒಂದು ಸಭೆ ಇಲ್ಲ. ಸರಕಾರವು ಭಾರ್ಗವರವರ ಸೂಚನೆಯನ್ನು ಒಪ್ಪಲು ತಯಾರಿದೆ. ಪ್ರತಿಯೊಂದು ಸಂಸ್ಥಾನದಲ್ಲೂ ಇಲೆಕ್ಟರಲ್ ಕಾಲೇಜನ್ನು ರಚಿಸಲಾಗುವದು. ಪ್ರೌಢ ಮತದಾನ ಪದ್ಧತಿಯಿಂದ ಆರಿಸಲ್ಪಡುವ ಈ ಕಾಲೇಜು ಪ್ರತಿ ಭಾಗದಿಂದ ಕೇಂದ್ರ ಶಾಸನ ಸಭೆಗೆ ಪ್ರತಿನಿಧಿಯನ್ನು ಚುನಾಯಿಸುವ ಕೆಲಸವನ್ನೂ ಮಾಡುವದು. ಪ್ರಾಮುಖ್ಯ ವಿಚಾರಗಳಲ್ಲಿ ಚೀಫ್ ಕಮಿಷನರು ಮತ್ತು ಕೌನ್ಸಿಲರುಗಳು ಪ್ರೆಸಿಡೆಂಟರು ನಿರ್ದೇಶಿಸುವ ರೀತಿಯಲ್ಲಿ ಈ ಸಭೆಯ ಅಭಿಪ್ರಾಯ ಕೇಳಬೇಕಾಗುವದು.

ಇಷ್ಟು ಚರ್ಚೆಯಾದನಂತರ ಶ್ರೀ ಅವದೇಶ ಪ್ರತಾಪರು ತಮ್ಮ ಠರಾವನ್ನು ವಾಪಾಸು ತೆಗೆದುಕೊಂಡರು. ಮಸೂದೆಯು ಚರ್ಚೆಗಾಗಿ ಸಭೆಯ ಮುಂದಿಡಲ್ಪಟ್ಟಿತು.

# ಓದುಗರ ಓಲೆಗಳು

## ಬದಲಾವಣೆಬೇಕು.

ಕೊಡಗಿನ ಕೆಲವು ಶಾಲೆಗಳಲ್ಲಿ ವಿಶೇಷವಾಗಿ ಆಗಬೇಕಾದ ಪ್ರಾಮುಖ್ಯವಾದ ಬದಲಾವಣೆಯೊಂದಿದೆ. ಬಹುಮಟ್ಟಿಗಾಗಿ ಒಂದೇ ಜಾತಿಯ ಉಪಾಧ್ಯಾಯರು ಅದೇ ಶಾಲೆಯಲ್ಲಿರುವುದರಿಂದ ಪರೀಕ್ಷಾ ಫಲಿತಾಂಶದಲ್ಲಿ ಬೇರೆ ಜಾತಿಯವರಿಗೆ ಭಿನ್ನಾಭಿಪ್ರಾಯವನ್ನು ತೋರಿಸುವುದಕ್ಕೆ ಅಸ್ಪದವಾಗುವುದೆಂದು ಧಾರಾಳವಾಗಿ ಹೇಳಬಹುದು. ಈ ರೀತಿಯಾಗಿ ಶಾಲೆಗಳಲ್ಲಿ ಉಪಾಧ್ಯಾಯರನ್ನು ನೇಮಿಸುವುದು ಹಿಂದುಳಿದ ಪಂಗಡಗಳಿಗೆ ಅಸಾಧ್ಯವಾದ ಧಕ್ಕೆಯಾಗಿದೆ. ಇದು ಶಾಲೆಯ ವಾತಾವರಣ ಮತ್ತು ದೃಷ್ಟಿಗೆ ಬದ್ಧವಿರೋಧವಾಗಿದೆ. ಯಾವಾಗಲೂ ಶಾಲೆಗಳಲ್ಲಿ ಆದಷ್ಟು ಮಟ್ಟಿಗೆ ಮಿಶ್ರ ಜಾತಿ ಉಪಾಧ್ಯಾಯರನ್ನು ನೇಮಿಸುವುದು ಯೋಗ್ಯವಾಗಿದೆ. ಜಿಲ್ಲಾ ವಿದ್ಯಾಧಿಕಾರಿಗಳು ಈ ವಿಷಯವನ್ನು ಅವಗಾಹನೆಗೆ ತೆಗೆದುಕೊಂಡು ಶೀಘ್ರವಾಗಿ ಬದಲಾವಣೆಯನ್ನು ಮಾಡಿ, ಹಿಂದುಳಿದ ಪಂಗಡಗಳ ವಿದ್ಯಾರ್ಥಿಗಳಿಗೆ ವಿದ್ಯಾಭಿವೃದ್ಧಿ ದೊರಕಿಸುವುದಕ್ಕೆ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಜವಾಬ್ದಾರಿಯನ್ನು ವಹಿಸುವರೆ?

ಕೆ. ಕೆ. ತಿಮ್ಮಪ್ಪ.

---

## ಕೊಡ್ಲಿಪೇಟೆ ಶಾಲೆಯ

### ಪರೀಕ್ಷಾ ಫಲಿತಾಂಶ.

ಕೊಡ್ಲಿಪೇಟೆ ಶಾಲೆಯಲ್ಲಿ ಈ ವರ್ಷ ೨೫ ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿದ್ದರು. ಕಳೆದ ವಾರ ಫಲಿತಾಂಶಗಳು ಹೊರಬಿದ್ದಿವೆ. ಈ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯೂ ಪಾಸಾಗಿಲ್ಲ ಎಂದು ಹೇಳಲು ತುಂಬಾ ವಿಷಾದಿಸುತ್ತೇನೆ. ಕೊಡ್ಲಿಪೇಟೆ ಶಾಲೆ ಹಿಂದೆ ಒಂದು ಕಾಲದಲ್ಲಿ ಕೊಡಗಿಗೆ ಮೊದಲನೆ ಶಾಲೆಯಾಗಿತ್ತು. ಈಗ ಈ ಪರಿಸ್ಥಿತಿಗೆ ಬರಲು ಕಾರಣವೇನು? ಜವಾಬ್ದಾರರು ಯಾರು? ಪೋಷಕ ವರ್ಗದವರೇ ಅಥವಾ ಅಧಿಕಾರ ವರ್ಗದವರೇ?

ಮೊದಲು ಈಗಿರುವ ಪೋಷಕರ ಕೈಕೆಳಗೆ ಕಲಿತ ಹುಡುಗರಿದ್ದಾಗಲೇ ಶಾಲೆಯಲ್ಲಿ ಒಳ್ಳೆಯ ಫಲಿತಾಂಶ ಬರುತ್ತಿತ್ತು. ಈಗ ಈ ದುರವಸ್ಥೆಗಿಳಿಯಲು ಪೋಷಕ ವರ್ಗದವರಲ್ಲಿ ಅಂತಹ ಬದಲಾವಣೆಯೇನೂ ಆಗಿಲ್ಲ. ಆದ್ದರಿಂದ ಪೋಷಕರ ಜವಾಬ್ದಾರಿ ಈ ವಿಷಯದಲ್ಲಿ ಕಡಿಮೆ. ವಿದ್ಯಾಇಲಾಖಾ ಅಧಿಕಾರ ವರ್ಗದವರ ಜವಾಬ್ದಾರಿ ಹೆಚ್ಚಿನದು ಎಂಬುದು ನಿರ್ವಿವಾದ ಸಂಗತಿ.

ಕೊಡ್ಲಿಪೇಟೆ ಶಾಲೆಯ ಹಾಜಿ ಹೆಡ್ಮಾಸ್ಟರು ಆಗಾಗ ಹೇಳಿಕೊಳ್ಳುತ್ತಿದ್ದರು: "ಶಾಲೆಯೇ ಮನೆ, ಮನೆಯೇ ಶಾಲೆ" ಎಂದು. ದುಡಿಯುತ್ತಿದ್ದವರು. ಹೆಡ್ಮಾಸ್ಟರ ಮನೆಯೇ ಇಂತಹ ದುರವಸ್ಥೆಗೀಡಾಯಿತೆಂದು ಭಾವಿಸೋಣವೇ? ಅಥವಾ ಅವರು ಮನಸ್ಸಿಲ್ಲದೇ ಕೆಲಸ ಮಾಡುತ್ತಿದ್ದರೆಂದು ತಿಳಿಯೋಣವೇ? ಕಳೆದ ವರ್ಷವೇ ಅವರು ತಮ್ಮ ಕೆಲಸದಿಂದ ನಿವೃತ್ತರಾಗಬೇಕಾಗಿತ್ತು. ಆದರೆ ಅಧಿಕಾರದವರು ಅವರಿಗೆ (ಅವರ ಪ್ರಾರ್ಥನೆಯ ಮೇರೆ ಇರಬಹುದು) ಒಂದು ವರ್ಷ ಜೀವದಾನ ಮಾಡಿ, ೩೦ ರೂಪಾಯಿ ಸಂಬಳದ ಮೇಲೆ ಕೆಲಸ ಕೊಟ್ಟರು. ಬಳಿಕ ಶಿಕ್ಷಣಾಧಿಕಾರಿಯಾದ ಅಸಮಾಧಾನದಿಂದ ಹೆಡ್ಮಾಸ್ಟರರವರು ಶಿಕ್ಷೆಯನ್ನು ಕೊಟ್ಟ ವಿದ್ಯಾಧಿಕಾರಿಯ ಬೆಂಬಲಕ್ಕೆ ಶಿಕ್ಷಣ ಬೆಂಬಲದಿಂದ ಅಧ್ಯಕ್ಷ ಕ್ಯಾಂಪಿನಿಂದ ಕೆಲಸಕ್ಕೆ ತೆಗೆದುಕೊಂಡರು. ಆದರೆ ಫಲ ಕಾಣುವಲ್ಲಿ ಅವರು ಏನು ಮಾಡಿದರು? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಉತ್ತರ ಕೊಡಬೇಕು. ಹೆಡ್ಮಾಸ್ಟರರು ಶಿಕ್ಷ್ಯಾಬಿಟ್ಟಿಯಾಗಿ ಕೆಲಸಮಾಡಲಾರಂಭಿಸಿದರು. ಅದರ ಫಲವಾಗಿ ಶಾಲೆ ಈ ಸ್ಥಿತಿಗಿಳಿಯಿತು. ಸರಕಾರವು ನಿವೃತ್ತರಾದವರಿಗೆ ಪುನಃ ಕೆಲಸ ಕೊಡಬೇಕಾದ ಅವಶ್ಯಕತೆಯಾದರೂ ಏನಿತ್ತು? ಈಗಾದ ಅನ್ಯಾಯಕ್ಕೆ ಕಾರಣ ರಾರು?

ಹಿಂದಿನ ವರ್ಷದಲ್ಲಿ ಎರಡು ಮೂರು ಸಲ ಡಿ. ಇ. ಒ. ಮತ್ತು ಎ. ಇ. ಒ. ಇವರುಗಳು ಪ್ರತಿ ಶಾಲೆಗೆ ಇನ್ಸ್‌ಪೆಕ್ಷನ್ನಿಗೆಂದು ಬರುತ್ತಾರೆ. ಹಾಗೆಯೇ ಕಳೆದ ವರ್ಷ ಕೊಡ್ಲಿಪೇಟೆ ಶಾಲೆಗೂ ಡಿ. ಇ. ಒ. ಮತ್ತು ಎ. ಇ. ಒ. ಬಂದಿದ್ದರು. ಆದರೆ ಅವರು ಇನ್ಸ್‌ಪೆಕ್ಷನ್ ಸಮಯದಲ್ಲಿ ಮಾಡಿದ್ದಾದರೂ ಏನು? ಶಾಲೆಯಲ್ಲಿ ಉಪಾಧ್ಯಾಯರುಗಳು ಮಾಡುತ್ತಿರುವ ಕೆಲಸ ಸಮರ್ಪಕವಾಗಿಲ್ಲವೆಂದು ತಿಳಿದ ಕೂಡಲೇ ತಕ್ಕ ಸಲಹೆಗಳನ್ನು ಕೊಡುವುದರಿಂದ ಮತ್ತು ವರ್ಗಾವಣೆಗಳ ಮೂಲಕ ಸ್ಥಿತಿಯನ್ನು ಸುಧಾರಿಸಬಹುದಾಗಿತ್ತು. ಹಾಗೇಕೆ ಮಾಡಲಿಲ್ಲ? ಡಿ. ಇ. ಒ. ಮತ್ತು ಎ. ಇ. ಒ. ಇದಕ್ಕೆ ಉತ್ತರ ಕೊಡಲಿ.

ಕೊಡ್ಲಿಪೇಟೆ ಶಾಲೆಯಲ್ಲಿರುವ ೮ ಜನ ಉಪಾಧ್ಯಾಯರುಗಳ ಪೈಕಿ ೬ ಜನ ಊರಿನವರೇ! ತಮ್ಮ ಊರಿನಲ್ಲೇ ಉಪಾಧ್ಯಾಯರಾಗಿರುವವರನೇಕರಿಗೆ ಶಾಲೆಯ ಪುರೋಭಿವೃದ್ಧಿ ಚಿಂತೆಗಿಂತ ತಮ್ಮ ಸ್ವಂತ ಮನೆಯ ಚಿಂತೆಯೇ ಹೆಚ್ಚು. ಅವರ ಸಮಯವೆಲ್ಲವೂ ತಮ್ಮ ಗದ್ದೆ ಹೊಲಗಳ ಚಿಂತೆಯಲ್ಲಿಯೇ ಕಳೆಯುತ್ತದೆ. ಇದರಿಂದ ಶಾಲೆಯ ಅಭಿವೃದ್ಧಿಗೆ ಧಕ್ಕೆ ಬಂದಿದೆ ಎಂದು ಸಾರ್ವಜನಿಕರ ಅಭಿಪ್ರಾಯ. ಹಾಗಿದ್ದಲ್ಲಿ ಊರಿನವರನ್ನು ಕೆಲವರನ್ನು ಬೇರೆ ಕಡೆ ವರ್ಗಮಾಡಿ ತರಬೇಕಾದ ದಕ್ಷರಾದ ತರಬೇತಿಯನ್ನು ಹೊರಗಿನಿಂದ ಇಲ್ಲಿಗೇಕೆ ಕಳುಹಿಸಬಾರದು? ಹಾಲಿದ್ದಕ್ಕೆ ಹೊಸದಾಗಿ ಖಾಲಿಬಿದ್ದ ಸ್ಥಳಕ್ಕೂ ಪುನಹ ಊರಿನವರನ್ನೇ ನೇಮಿಸಿದ್ದಾರೆ. ಅಧಿಕಾರಿಗಳ ಸ್ವೇಚ್ಛಾವರ್ತಿಯಾದ ಈ ನಡತೆಯ ಕಾರಣವೇನು? ದಾಕ್ಷಿಣ್ಯಪರತೆಯೋ, ಕರ್ತವ್ಯ ಬಾಹಿರತೆಯೋ ಅಥವಾ ಬೇಜವಾಬ್ದಾರಿತನವೋ!

ಸಂಬಂಧಪಟ್ಟ ಅಧಿಕಾರಿಗಳು ಈಗಲಾದರೂ ಕಣ್ಣು ತೆರೆದು ಶಾಲೆಯ ಅಭಿವೃದ್ಧಿಗೆ ಅವಶ್ಯವಾದ ಬದಲಾವಣೆಗಳನ್ನು ಮಾಡುವರೆಂದು ಬಯಸುತ್ತೇನೆ.

"ಅಭಿಮಾನಿ"

---

## ಈ ಸರ್ವಾಧಿಕಾರ ಅವರಿಗಿದೆಯೇ?

ದೇಶದ ಸವರ್ಣ ಹಿಂದು ಮಹನಿಯರಲ್ಲಿ ನನ್ನ ವಿನಂತಿಗಳು:—

ಸ್ವತಂತ್ರ ಪ್ರಜಾರಾಜ್ಯದಲ್ಲಿ ಪ್ರತಿಯೊಬ್ಬರಿಗೂ ವ್ಯಕ್ತಿ ಸ್ವಾತಂತ್ರ್ಯ ಇಲ್ಲವೇ? ಇದ್ದರೆ ನಮ್ಮ ಏಳಿಗೆಗೂ ಅಭಿವೃದ್ಧಿಗೂ ಪ್ರವರ್ತಿಸಿಕೊಳ್ಳುವ ಹಾದಿಗಳು ಧಕ್ಕೆ ತರುವುದೇತಕ್ಕೆ? ನಮ್ಮ ಮತ ಧರ್ಮದ ಪ್ರಕಾರ ನಮ್ಮ ಹಕ್ಕು ಬಾಧ್ಯತೆಗಳಿಗೆ ಹೋರಾಡಬೇಡವೆ? ಯಾಗದಿಂದ ಯುಗಾಂತರದಿಂದಲೂ ನಾವು ಸುಖವನ್ನನುಭವಿಸಿರುವಾಗ ನಾವು ಅನುಭವಿಸಬೇಡವೆ? ಯಾವ ಕಾಲಕ್ಕೂ ನಾವು ಗುಲಾಮರಾಗಿಯೇ ಇರಬೇಕೆ? ನಾವು ವ್ಯವಸಾಯ ಮಾಡುವುದು, ವಿದ್ಯಾಭ್ಯಾಸ ಮಾಡುವುದು, ವಾಸಕ್ಕೆ ಯೋಗ್ಯ ಮನೆ ಮಾಡುವುದು, ಸರಕಾರಿ ನೌಕರಿ ಮಾಡುವುದು, ಶುಚಿಯಾದ ಉಡಿಗೆ ತೊಡಿಗೆ ಮತ್ತು ಆಭರಣ ತೊಡುವುದು ಬೇಡವೆ? ನಾವು ಮನುಷ್ಯ ವರ್ಗದವರಲ್ಲವೆ? ನಮ್ಮ ಧರ್ಮ, ಆಚಾರ ವಿಚಾರಗಳು ಹಿಂದೂ ಧರ್ಮಕ್ಕೆ ಸಂಬಂಧಪಟ್ಟಿಲ್ಲವೇ? ನಾವು ಲಂಗಾಯಿತರಿಂದಲೂ ಮಾಡಿಕೊಂಡು ಬಂದಿರುವ ನಿಮ್ಮ ಸೇವಾ ವೃತ್ತಿಗಳನ್ನು ಈ ಹೊತ್ತಿನವರಿಗೂ ಮಾಡುತ್ತಿಲ್ಲವೆ? ನಿಮಗೆ ನಮ್ಮಿಂದ ಆಗುವ ಕೆಲಸಗಳಿಗೆ ಅಡ್ಡಿ ಬಂದಿದೆಯೇ?

ಹೀಗಿದ್ದೂ ಕೂಡ ನಮಗೇಕೆ ಅನೇಕ ಬಾಬುಗಳಲ್ಲಿ ಕಿರುಕುಳ ಕೊಡುತ್ತಿದ್ದೀರಿ? ಇದು ನಿಮಗೆ ಧರ್ಮವೇ? ನ್ಯಾಯವೇ? ಎಂಬುದನ್ನು ತಾವೇ ವಿವೇಚಿಸಬೇಕಾಗಿದೆ. ಬಿದರೂರು ಬಸವಯ್ಯನ ಮಗನ ಲಗ್ನದ ಕಥೆ ೮-೫-೫೫ರ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ತಾರೀಕು ೧೦-೫-೫೫ ರಲ್ಲಿ ಶ್ರೀ ಪಿ. ಕೆ. ಚೆನ್ನಯ್ಯನವರ ಮಗನ ಲಗ್ನವು ಶನಿವಾರಸಂತೆ ಹೋಬಳಿ ಗ್ರಾಮದಲ್ಲಿ ಹೆಣ್ಣಿನ ಮನೆಯಲ್ಲಿ ನಡೆಯಬೇಕಾಗಿತ್ತು. ಮೈಸೂರು ಸೀಮೆಗೆ ಕುದುರೆ ಛತ್ರಿಗಳು ಬೇಕೇ ಬೇಕಿದ್ದವು. ಸದರಿ ಚೆನ್ನಯ್ಯನವರು ಕುದುರೆ ಛತ್ರಿಗಳನ್ನು ಕೊಡಗಿನಲ್ಲಿ ಹಿಡಿದುಕೊಂಡು ಮೈಸೂರು ಸೀಮೆಗೆ ಹೋಗುವ ಬಗ್ಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸಾಹೇಬರಿಂದ ಹುಕುಂ ಪಡೆದಿದ್ದರು. ತಾರೀಕು ೯-೫-೫೫ರ ರಾತ್ರಿ ಮದುವೆ ಅರ್ಕಲಗೋಡು ಮಾರ್ಗದಲ್ಲಿ ಹೋಗಬೇಕಾಗಿತ್ತು. ಆ ದಿವಸವೂ ಕೂಡ ಕುದುರೆ ಛತ್ರಿಗಳನ್ನು ತರುತ್ತಾರೆಂದು ತಿಳಿದು ಪಟೇಲ್ ಮಲ್ಲಿಕಾರ್ಜುನಗೌಡರೆಂಬುವರು ನಿಲುವಾಗಿಲು ಗೇಟು ಬಳಿ ೩೦೦ ಜನರ ಮೇಲೆ ಕೂಟ ಕಟ್ಟಿಕೊಂಡು ಇಡೀ ರಾತ್ರಿ ಕಾದಿದ್ದರು. ಇದನ್ನು ತಿಳಿದ ಹೇಜನರು ಭಯಸ್ಥರಾಗಿ ಮದುವೆಯನ್ನೇ ಕರೆದುಕೊಂಡು ಹೋಗಲಿಲ್ಲ.

ತಾರೀಕು ೧೦-೫-೫೫ರ ಬೆಳಿಗ್ಗೆ ಸಬ್ ಇನ್ಸ್‌ಪೆಕ್ಟರ ಮತ್ತು ಪೋಲೀಸಿನವರ ಸಹಾಯದಿಂದ ಮದುವೆಯನ್ನು ಕರೆದುಕೊಂಡು ಹೋದದ್ದಾಗಿದೆ. ಜನಗಳೆಲ್ಲಾ ಗುಂಪು ಕೂಡಿ ಹುಲ್ಲಿಗೆ ಹಾಸಿಕೊಂಡು ಕುಳಿತದ್ದು, ಅಲ್ಲಲ್ಲಿ ಬೆಂಕಿ ಹಾಕಿದ್ದನ್ನು ಸಬ್ ಇನ್ಸ್‌ಪೆಕ್ಟರವರೇ ಅಜಮಾಯಿಸಿಗೆ ಮಾಡಿದ್ದಾರೆ. ಸವರ್ಣ ಮಹನಿಯರು ಇದನ್ನು ವಿಮರ್ಶಿಸಬೇಕು. ಅಲ್ಲದೆ ಸರಕಾರವು ಸಹ ಇದನ್ನು ವಿಚಾರ ಮಾಡತಕ್ಕ ಸಂಗತಿಯಾಗಿದೆ.

ನಮಗೆ ಇಷ್ಟೊಂದು ಕಿರುಕುಳ ಕೊಡುತ್ತಿರುವಾಗ ಲಿಂಗಾಯಿತ ಮತ್ತು ಹೆಗ್ಗಡೆ ಮಹನೀಯರ ಕಷ್ಟ ಸುಖ ದಿನಗಳಿಗೆ ನಾವೇಕೆ ಹೋಗಬೇಕು? ಅವರ ಮನೆಗಳಲ್ಲಿ ಸತ್ತ ದನಕರುಗಳನ್ನು ಏಕೆ ತೆಗೆಯಬೇಕು? ಅವರ ಮನೆಗಳಲ್ಲಿ ವಾದ್ಯ ಸಹ ಏಕೆ ಮಾಡಬೇಕು? ಹರಿಜನರು ಬಿಟ್ಟಿ ಚಾಕರಿಗಳನ್ನು ಮಾಡಲೇಬೇಕು, ಸತ್ತ ದನಕರುಗಳನ್ನು ತೆಗೆಯಲೇಬೇಕು ಎಂಬ ಕಾನೂನಿದೆಯೇ? ಸವರ್ಣ ಹಿಂದುಗಳ ಸಹಾಯ ಸಹಕಾರಗಳಿಗೂ, ಪ್ರೀತಿ ವಿಶ್ವಾಸಗಳಿಗೂ ನಾವು ಅವರ ಬಿಟ್ಟಿ ಬಿಟ್ಟಿ ಮಾಡುತ್ತೇವಲ್ಲದೆ ಹೆಸರಿಕೆ ಬೆದರಿಕೆಗಳಿಗೆ ಹೊಡೆತ ಬಡಿತಗಳಿಗೆ ಮತ್ತು ಪಾಳೆಯಗಾರಿಕೆ ಪದ್ಧತಿಗಳಿಗಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸಿದ್ದೇನೆ.

ಒಬ್ಬ ಹರಿಜನ ದಂಪತಿ

---


## Wanted

10,000 c. ft. of Rose-wood shipment logs and 10,000 c. ft. of matchwood, 10,000 c. ft. of Honne sq logs, 10,000 c. ft. of Teak, 10,000 c. ft. of Nandi, Mathi immediately.

Hundred or above acres of redeemed land with standing timber of all kinds located near road side. For further perticulars please apply to-

C. G. Monnappa,
*Timber merchant,*
*Ponnampet post,*
*South Coorg.*


---

ಸ್ವಾಮಿ ಶ್ರೀ. ದೇವಿಕಾನಂದಾಜಿ ಯವರ ಸನ್ಮಾನಕ್ಕಾಗಿ ಬಂದ ಹಣ ವಸೂಲಿ ಮತ್ತು ಖರ್ಚಿನ ವಿವರ.

| | |
|---|---|
| ಒಟ್ಟು ವಸೂಲಾದ ಹಣ— | ೪೭೦೦ |
| ಮಂಗಳೂರು ಪಟ್ಟಿಯಲ್ಲಿ ಸಿಕ್ಕಿದ ಹಣ | ೨೫೬ |
| | ೪೯೫೬ |
| ಸತ್ಕಾರ ಸಮಾರಂಭಕ್ಕೆ ಆದ ಒಟ್ಟು | |
| ಖರ್ಚು | ೩೨೦೦ |
| ಉಳಿಕೆ ಹಣ | ೧೭೫೬ |

ಪ್ರೆಸಿಡೆಂಟ್,
ಮಡಿಕೇರಿ ವೇದಾಂತ ಮಂದಿರ.

---


## Remington 'Personal' Portable Typewrite[r]

*Look for it at*
*Local Authorised* [illegible] & Bros,
*K. General Stores,*
MERCARA & VIRAJPET.

I-I

---

## EAST & WEST INSURANCE CO., Ltd.
(ESTD: 1913)

H. O.- East & West Building', Apollo. street Fort, Bombay No. 1.

STANDS FOR

SAFETY, SECURITY & SERVICE.

It is a progressive concern offering attractive schemes for Insurance suitable to all needs.

*For Particulars apply to:-*

K. P. JAMBULINGAM,
*Branch Secretary,*
*329, Thambu Chetty St.*
*Madras-1.*

OR

C. C. NANJAPPA,
*Inspector of Agencies,*
*Gonikopal.*
*S. Coorg.*

4-3

# ಹಿಂದೂಸ್ಥಾನದಲ್ಲಿ ರೇಡಿಯೋದ ಬಗ್ಗೆ ಆದ ಸುಧಾರಣೆಗಳು.

**ರೇಡಿಯೋ ಜಗತ್ತು.**

ನವೀನ ವಿಜ್ಞಾನ ಜಗತ್ತಿನಲ್ಲಿ ರೇಡಿಯೋವು ಮನುಷ್ಯರ ಜೀವನದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆಯುತ್ತಿದೆ. ಪಾಶ್ಚಾತ್ಯ ದೇಶಗಳಲ್ಲಂತೂ ಈ ಕ್ಷೇತ್ರದಲ್ಲಿ ಅದ್ಭುತ ಸುಧಾರಣೆಗಳು ಈಗಾಗಲೇ ಆಗಿವೆ. ಭಾರತದ ಜನರಿಗೆ ರೇಡಿಯೋದಿಂದ ಎಷ್ಟರ ಮಟ್ಟಿಗೆ ಸೌಕರ್ಯಗಳಾಗಿವೆ ಮತ್ತು ಇನ್ನೂ ಹೆಚ್ಚಿನ ಸುಧಾರಣೆಗಳಿಗೆ ಎಷ್ಟರ ಮಟ್ಟಿಗೆ ಅವಕಾಶವಿದೆ ಎಂಬುದನ್ನು ಅವಲೋಕಿಸುವುದೇ ಈ ಲೇಖನದ ಉದ್ದೇಶವಾಗಿದೆ.

**ಭಾರತದ ಎ. ಐ. ಆರ್. ಕೇಂದ್ರಗಳು**

ಭಾರತದಲ್ಲಿ ರೇಡಿಯೋ ಕಾರ್ಯಕ್ರಮವನ್ನು ಕೇಂದ್ರ ಸರಕಾರದ "ಸುದ್ದಿ ಮತ್ತು ಆಕಾಶವಾಣಿ" ಇಲಾಖೆಯ ಕೈಕೆಳಗಿರುವ ಎ. ಐ. ಆರ್ ತನ್ನ ವಿವಿಧ ಕೇಂದ್ರಗಳಿಂದ ಬಿತ್ತರಿಸುತ್ತದೆ. ಈ ಕೇಂದ್ರಗಳಲ್ಲಿ ಡೆಲ್ಲಿ, ಮುಂಬೈ, ಕಲಕತ್ತಾ, ಮದ್ರಾಸು ಇವು ಬಹಳ ಪ್ರಬಲವಾದುವುಗಳಾಗಿವೆ. ಧಾರವಾಡ, ವಿಜಯವಾಡ, ಕಲ್ಲಿಕೋಟೆ, ಔರಂಗಾಬಾದ, ಅಹಮದಾಬಾದ, ತಿರುಚಿನಪಳ್ಳಿ ಮೊದಲಾದ ಕೇಂದ್ರಗಳನ್ನು "ಪೈಲಟ್ ಸ್ಟೇಶನ್" ಎಂದು ಕರೆಯುತ್ತಾರೆ. ಈ ಕೇಂದ್ರಗಳಿಂದ ಮಧ್ಯಮ ಅಲೆಗಳು ಪ್ರಸರಿಸಲ್ಪಡುತ್ತವೆ. ಈ "ಪೈಲಟ್ ಸ್ಟೇಶನ್"ಗಳಿಂದ ಬಿತ್ತರಿಸಲ್ಪಟ್ಟ ಕಾರ್ಯಕ್ರಮಗಳನ್ನು ಹಗಲು ಸಮಯದಲ್ಲಿ ೮೦-೧೦೦ ಮೈಲುಗಳ ತನಕ ತೃಪ್ತಿಕರವಾಗಿ ಕೇಳಬಹುದು. ರಾತ್ರಿ ಸಮಯದಲ್ಲಿ ಇವನ್ನು ಬಹು ಹೆಚ್ಚಿನ ದೂರದ ವರೆಗೆ ಕೇಳಬಹುದು. ಒಮ್ಮೊಮ್ಮೆ ಕೆಲವು ಸ್ಟೇಶನ್‌ಗಳ ಕಾರ್ಯಕ್ರಮಗಳು ರೇಡಿಯೋಗಳಿಂದ ಕೇಳಬರದೇ ಇರಲು ಸಾಧಾರಣವಾಗಿ ಆ ಕೇಂದ್ರಗಳು "ಪೈಲಟ್ ಸ್ಟೇಶನ್" ಗಳಾಗಿದ್ದು ಹೆಚ್ಚು ಪ್ರಬಲವಾಗದಿರುವುದೇ ಕಾರಣ. ಹವಾಮಾನವೂ ಕೂಡ ಕೇಳುವಿಕೆಯ ಮೇಲೆ ಪರಿಣಾಮವನ್ನುಂಟುಮಾಡುತ್ತದೆ.

**ರೇಡಿಯೋ ಕಾರ್ಯಕ್ರಮ**

ರೇಡಿಯೋ ಕಾರ್ಯಕ್ರಮಗಳಲ್ಲಿ ಮುಖ್ಯ ವಿಷಯವಾದ 'ವಾರ್ತೆ'ಯು ಎ. ಐ. ಆರ್. ಡೆಲ್ಲಿ ಕೇಂದ್ರದಿಂದ ಬಿತ್ತರಿಸಲ್ಪಟ್ಟು ಎಲ್ಲಾ ಕೇಂದ್ರಗಳಿಂದ ಪ್ರತಿಧ್ವನಿಸಲ್ಪಡುವುದು. ಉಳಿದ ಕಾರ್ಯಕ್ರಮಗಳು ಆಯಾ ಕೇಂದ್ರಗಳಲ್ಲಿ ತಯಾರಾಗಿ ಅಲ್ಲಿಂದಲೇ ಪ್ರಸರಿಸಲ್ಪಡುತ್ತವೆ. ಮುಖ್ಯ ವಿಷಯಗಳಾದ ವಾರ್ತೆ, ಸಂಗೀತ, ಭಾಷಣ ಇವುಗಳಲ್ಲದೆ ಇನ್ನೂ ಕೆಲವು ವಿಶೇಷ ಕಾರ್ಯಕ್ರಮಗಳು ಈ ಕೇಂದ್ರಗಳಿಂದ ಪ್ರಸರಿಸಲ್ಪಡುತ್ತವೆ. ಈ ಕಾರ್ಯಕ್ರಮಗಳನ್ನು ಕೇಳಲು ಅನುಕೂಲವಾಗುವಂತೆ ಪ್ರಾಂತೀಕ ಸರಕಾರದವರು ಅನೇಕ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ.

**ಬೊಂಬಾಯಿ ಕೇಂದ್ರದ ವಿಶೇಷ ಕಾರ್ಯಕ್ರಮಗಳನ್ನು ಕೆಳಗೆ ಉದಾಹರಣೆಗಾಗಿ ಕೊಟ್ಟಿರುತ್ತೇನೆ.**

ಬೊಂಬಾಯಿ ಕೇಂದ್ರದಿಂದ ಮಹಿಳೆಯರಿಗಾಗಿ 'ವನಿತಾ ಮಂಡಳ', ಶಾಲೆ ವಿದ್ಯಾರ್ಥಿಗಳಿಗಾಗಿ 'ಸ್ಕೂಲ್ ಬ್ರಾಡ್‌ಕಾಸ್ಟ್', ಕೂಲಿಗಾರರಿಗಾಗಿ 'ಲೇಬರ್ ಬ್ರಾಡ್‌ಕಾಸ್ಟ್' ಮತ್ತು ಹಳ್ಳಿಗರಿಗಾಗಿ 'ರೂರಲ್ ಬ್ರಾಡ್ ಕಾಸ್ಟ್' ಮೊದಲಾದ ಕಾರ್ಯಕ್ರಮಗಳು ಪ್ರಸರಿಸಲ್ಪಡುತ್ತವೆ.

**ಮಹಿಳಾ ಮಂಡಳ.**

ಈ ಕಾರ್ಯಕ್ರಮವು ಮಹಿಳೆಯರ ಪ್ರಯೋಜನಕ್ಕಾಗಿಯೇ ಬಿತ್ತರಿಸಲ್ಪಡುತ್ತದೆ. ಗೃಹಕೃತ್ಯ, ಶಿಶುಪಾಲನೆ, ಅಡಿಗೆ, ಕಸೂತಿ, ಹೊಲಿಗೆ ಮೊದಲಾದ ವಿಷಯಗಳ ಜ್ಞಾನವನ್ನು ಈ ಕಾರ್ಯಕ್ರಮದ ಮೂಲಕ ತಿಳಿಸುತ್ತಾರೆ. ಈ ಕಾರ್ಯಕ್ರಮವನ್ನು ಮಹಿಳೆಯರಿಗೆ ಬಿಡುವು ಇರುವ ಸಮಯದಲ್ಲಿ ಇಟ್ಟಿರುತ್ತಾರೆ. ಉದಾಹರಣೆಗಾಗಿ ಬೊಂಬಾಯಿ ಪ್ರಾಂತದಲ್ಲಿ ಬೆಳಗಿನ ಊಟವು ಸಾಧಾರಣ ೧೦ ಗಂಟೆಗೆ ಮುಗಿಯುತ್ತದೆ. ಅಲ್ಲಿನ ಮಹಿಳೆಯರು ಬೆಳಗಿನ ಗೃಹ ಕೃತ್ಯವನ್ನು ಸಾಧಾರಣವಾಗಿ ೧೧ ಗಂಟೆಯ ಒಳಗೆ ಮುಗಿಸುತ್ತಾರೆ. 'ಮಹಿಳಾ ಮಂಡಳ'ವು ಮಧ್ಯಾಹ್ನ ವೇಳೆಯಲ್ಲಿ ಇರುವುದರಿಂದ ಮಹಿಳೆಯರಿಗೆ ಈ ಕಾರ್ಯವನ್ನು ಆಲಿಸಲು ಬಹಳ ಅನುಕೂಲವಿದೆ. ಸ್ವಂತ ರೇಡಿಯೋವಿನ ಮೂಲಕವಾಗಲೀ ಅಥವಾ ಮಹಿಳಾ ಸಮಾಜಗಳಲ್ಲಿರುವ ರೇಡಿಯೋವಿನ ಮೂಲಕವಾಗಲೀ ಅವರು ಈ ಕಾರ್ಯಕ್ರಮವನ್ನು ಕೇಳುತ್ತಾರೆ.

**'ಸ್ಕೂಲ್ ಬ್ರಾಡ್‌ಕಾಸ್ಟ್'**

ಈ ಕಾರ್ಯಕ್ರಮವು ಶಾಲಾ ಮಕ್ಕಳ ಪ್ರಯೋಜನಕ್ಕಾಗಿ ಇದೆ. ಶಾಲಾ ಮಕ್ಕಳಿಗೆ ಪ್ರತಿಯೊಂದು ಪಾಠ ಶಾಲೆಗಳಲ್ಲಿ ಶಿಕ್ಷಣ ಕೊಡಲು ಸರಿಯಾದ ತಜ್ಞ ಶಿಕ್ಷಕರು ದೊರಕುವುದು ದುರ್ಲಭ. ಗಣಿತ, ವಿಜ್ಞಾನ, ಚರಿತ್ರೆ ಮೊದಲಾದ ವಿಷಯಗಳಲ್ಲಿ ಪ್ರವೀಣರಾದ ಶಿಕ್ಷಕರ ಸ್ವಂತ ಭಾಷಣಗಳನ್ನಾಗಲೀ, ಅಥವಾ ಗ್ರಾಮಫೋನು ಪ್ಲೇಟುಗಳಲ್ಲಿ ದಾಖಲೆಯಾದ ಅವರ ಭಾಷಣಗಳನ್ನಾಗಲಿ, (ರೆಕಾರ್ಡೆಡ್ ಸ್ಪೀಚಸ್) ಬಿತ್ತರಿಸುವರು. ತನ್ಮೂಲಕ ಎಲ್ಲಾ ಶಾಲೆಗಳ ಪ್ರತಿ ವಿದ್ಯಾರ್ಥಿಗೂ ಅಮೂಲ್ಯ ಶಿಕ್ಷಣವು ಒಂದೇ ಸಮಯದಲ್ಲಿ ದೊರಕುವುದು. ಬೊಂಬಾಯಿ ಪ್ರಾಂತದಲ್ಲಿ ಈ ಕಾರ್ಯಕ್ರಮವನ್ನು ೪ ಗಂಟೆಯಿಂದ ೫ ಗಂಟೆಯ ತನಕ ಇಡುತ್ತಾರೆ. ಸಾಧಾರಣವಾಗಿ ಸಾಯಂಕಾಲದ ಈ ಸಮಯವು ಮಕ್ಕಳು ಪಾಠದ ಕಾಲ ಕ್ರಮವು ಬಿಟ್ಟು ಕಡೆಯ ವೇಳೆಯಾದ ಪರಿಂದ [illegible] ಅದನ್ನು ಹೆಚ್ಚಾಗಿ ಎಲ್ಲೆಲ್ಲಿಯೂ ಮನೋರಂಜನೆಯ ಕಾರ್ಯಕ್ಕಾಗಿ ವಿನಿಯೋಗಿಸುತ್ತಾರೆ. ಈ ಕಾಲವನ್ನು ರೇಡಿಯೋ ಭಾಷಣ [illegible]ವುದರಿಂದಲೂ, ವಿದ್ಯಾಭ್ಯಾಸಕವಾದ ಸಿನೇಮಾ ಚಿತ್ರಗಳನ್ನು (ಎಡ್ಯುಕೇಟಿವ್ ಫಿಲ್ಮ್ಸ್) ಪ್ರದರ್ಶಿಸುವುದರಿಂದಲೂ ಹೈಸ್ಕೂಲಿನ ಮಕ್ಕಳು ಸದುಪಯೋಗಿಸುತ್ತಾರೆ. ಎಲ್ಲಾ ಸರಕಾರಿ ಶಾಲೆಗಳಿಗೆ ಸರಕಾರದವರೇ ರೇಡಿಯೋ ಮತ್ತು ಸಣ್ಣ ಸಿನೇಮಾ ಯಂತ್ರಗಳನ್ನು ಕೊಟ್ಟಿರುತ್ತಾರೆ. ಮತ್ತು ಅಲ್ಲಿನ ಖಾಸಗೀ ಶಾಲೆಗಳಿಗೂ ಸಹ ಇವುಗಳನ್ನು ಕೊಳ್ಳಲು ಬೊಂಬಾಯಿ ಸರಕಾರದವರು ಧನ ಸಹಾಯ ಮಾಡಿದ್ದಾರೆ. ಈ ರೇಡಿಯೋಗಳನ್ನು ಆಯಾ ಶಾಲೆಯ ವಿಜ್ಞಾನ ಅಧ್ಯಾಪಕನು ನೋಡಿಕೊಳ್ಳುತ್ತಾನೆ.

**'ಲೇಬರ್ ಬ್ರಾಡ್‌ಕಾಸ್ಟ್'**

ಈ ಕಾರ್ಯಕ್ರಮವನ್ನು ೫ ಗಂಟೆಯಿಂದ ೬ ಗಂಟೆಯ ವರೆಗೆ ಪ್ರಸರಿಸುತ್ತಾರೆ. ಕಾಮಗಾರರ ಪ್ರಯೋಜನಕ್ಕಾಗಿ ಪ್ರಾಂತದ ಹಲವು ಕಡೆಗಳಲ್ಲಿ ಕಾಮಗಾರ ಸಂಸ್ಕೃತಿ ಕೇಂದ್ರಗಳನ್ನು ತೆರೆದಿದ್ದಾರೆ. ಇಂಥಹ ಕೇಂದ್ರಗಳಲ್ಲಿ ಅವರ ಮನೋರಂಜನೆಗಾಗಿ ಆಟೋಟಗಳ ಸೌಕರ್ಯವನ್ನೂ, ವಾಚನಾಲಯಗಳನ್ನೂ, ವೈದ್ಯಕೀಯ ಸೌಕರ್ಯಗಳನ್ನೂ, ಪ್ರಕಟ ವಿದ್ಯಾದಾಯಕವಾದ ಸಿನಿಮಾ ಚಿತ್ರಗಳನ್ನೂ ರೇಡಿಯೋ ಸೌಕರ್ಯವನ್ನೂ ಸರಕಾರದವರೇ ಕಲ್ಪಿಸಿ ಕೊಟ್ಟಿದ್ದಾರೆ. ಈ ಸಂಸ್ಥೆಗಳಲ್ಲಿರುವ ರೇಡಿಯೋಗಳನ್ನು ಆಯಾ ಕೇಂದ್ರದ ಕಾರ್ಯದರ್ಶಿಯು ನೋಡಿಕೊಳ್ಳುತ್ತಾನೆ. ಈ ರೇಡಿಯೋಗಳ ಮೂಲಕ ಕಾಮಗಾರರಿಗಾಗಿಯೇ ಮುಂಬೈಯಿಂದ ಬಿತ್ತರಿಸಲ್ಪಟ್ಟ ಕಾರ್ಯಕ್ರಮಗಳನ್ನು ಕೇಳಲು ಅನುಕೂಲವಿದೆ.

**'ರೂರಲ್ ಬ್ರಾಡ್‌ಕಾಸ್ಟ್'**

ಗ್ರಾಮಸ್ಥರಿಗೋಸ್ಕರ ಇರುವ ಈ ಕಾರ್ಯಕ್ರಮವನ್ನು ಸಾಧಾರಣ ೬-೩೦ರಿಂದ ೭-೩೦ರ ವರೆಗೆ ಪ್ರಾದೇಶಿಕ ಭಾಷೆಗಳಾದ ಗುಜರಾಥಿ, ಮರಾಠಿ, ಕನ್ನಡಗಳಲ್ಲಿ ಪ್ರಸರಿಸುತ್ತಾರೆ. ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯಲು ಸರಕಾರದವರು ಹಲಕೆಲವು ಹಳ್ಳಿಗಳಲ್ಲಿ ಸರಕಾರೀ ರೇಡಿಯೋ ಕೇಂದ್ರಗಳನ್ನು ತೆರೆದಿರುತ್ತಾರೆ. ಇಂಥಹ ಕೇಂದ್ರಗಳನ್ನು ಸಾಧಾರಣವಾಗಿ ಗ್ರಾಮದ ಪಂಚಾಯಿತಿ ಆಫೀಸು, ಗ್ರಾಮದ ಚಾವಡಿ, ಪೊಲೀಸ್ ಪಾಟೀಲನ ಮನೆ, ಯಾ ಗ್ರಾಮ ಪ್ರಮುಖರೊಬ್ಬರ ಮನೆಗಳಲ್ಲಿ ತೆರೆದಿರುತ್ತಾರೆ. ಈ ರೇಡಿಯೋಗಳನ್ನು ಮೇಲ್ಕಂಡ ಸಂಸ್ಥೆಗಳ ಮುಖ್ಯಸ್ಥರ ಯಾ ಗ್ರಾಮ ಪ್ರಮುಖರ ಆಧೀನದಲ್ಲಿಯೇ ಇಡುತ್ತಾರೆ. ಈ ರೇಡಿಯೋಗಳನ್ನು ಪ್ರತಿದಿನವೂ ಸರಿಯಾಗಿ ನಡೆಸಲು ಚತುರರಾದ ಜನರು ಸಿಕ್ಕದ ಹಳ್ಳಿಗಳಲ್ಲಿ 'ಟೈಮ್ ಸ್ವಿಚ್' ಎಂಬ ಯಾಂತ್ರಿಕ ಉಪಾಯವನ್ನು ಬಳಸಿದ್ದಾರೆ. ಈ ಯಂತ್ರವು ತನ್ನಷ್ಟಕ್ಕೇನೇ ರೇಡಿಯೋವನ್ನು ಬೇಕಾದ ಸಮಯದಲ್ಲಿ ನಡೆಸುತ್ತದೆ ಮತ್ತು ನಿಲ್ಲಿಸುತ್ತದೆ. ಅದು ಸರಿಯಾಗಿ ನಡೆಯಲು ತಿಂಗಳಿಗೊಮ್ಮೆ 'ಕೀ' ಕೊಟ್ಟರೆ ಸಾಕು. ರೇಡಿಯೋ ಕೇಂದ್ರಗಳಲ್ಲಿ ತಾವೇ ಅಂಟಿಸಿ ಕೊಟ್ಟ ಎಕ್ಸ್‌ಗಳಿಂದ ಪೂರ್ವಕವಾದ ರಿಪೋರ್ಟ್ ಕಾರ್ಡ್‌ಗಳನ್ನು ಸರಕಾರದವರು ಇಟ್ಟಿರುತ್ತಾರೆ. ರೇಡಿಯೋಗಳು ಕೆಟ್ಟು ಹೋದರೆ ಗ್ರಾಮಸ್ಥರಲ್ಲೊಬ್ಬನು ಅಂಥಾ ಕಾರ್ಡ್‌ಗಳ ಮೂಲಕ ತಮ್ಮ ಭಾಷೆಯಲ್ಲೇ ಆ ತೊಂದರೆಯ ಕೊರತೆಗಳನ್ನು ತಿಳಿಸಿದರೆ, ಸರಕಾರದವರು ಅದನ್ನು ಸರಿಪಡಿಸಲು ತಜ್ಞರನ್ನು ಕಳುಹಿಸುತ್ತಾರೆ. ಹಳ್ಳಿಗರಿಗಾಗಿ ಪ್ರಸರಿಸ್ಪಡುವ ಈ ಕಾರ್ಯಕ್ರಮದಲ್ಲಿ ಕೃಷಿ, ದನಕರುಗಳ ಸಾಕುವಿಕೆ, ಜೇನು ನೊಣಗಳ ಸಾಕುವಿಕೆ, ಗೊಬ್ಬರ ಹಾಕುವಿಕೆ, ಹಳ್ಳಿಗರ ಗಾನ, ಹಳ್ಳಿಯ ರೀತಿ ನೀತಿ ನಡತೆಗಳು ಮೊದಲಾದ ವಿಷಯಗಳು ಅಡಕವಾಗಿರುತ್ತವೆ. ಇಲ್ಲದೆ ಹಲಕೆಲವು ಹಳ್ಳಿಗಳಲ್ಲಿ 'ಫಾರಂ ಫೋರಂ' ಎಂಬ ವಿಶೇಷ ಕೇಂದ್ರಗಳನ್ನು ತೆರೆದಿರುತ್ತಾರೆ. ಈ ಕೇಂದ್ರಗಳಲ್ಲಿ ಹಳ್ಳಿಗರದೇ ಆದ ಸಮಿತಿಗಳನ್ನು ಸರಕಾರದವರು ನೇಮಿಸುತ್ತಾರೆ. ಈ ಸಮಿತಿಯು ವಾರಕ್ಕೆ ಒಂದು ಅಥವಾ ಎರಡು ಬಾರಿ ಹಳ್ಳಿಗರೊಡನೆ ಸಭೆಗೂಡಿ ಆಗತಾನೆ ಕೇಳಿದ ವಿಶೇಷ ಕಾರ್ಯಕ್ರಮಗಳನ್ನು ಚರ್ಚಿಸಿ ತಮ್ಮ ವಿಮರ್ಶಾತ್ಮಕ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುತ್ತಾರೆ. ಇದಕ್ಕೆ ಸಂಬಂಧಪಟ್ಟ ಅಂಚೆವೆಚ್ಚವನ್ನು ಸಹ ಸರಕಾರದವರೇ ನೋಡಿಕೊಳ್ಳುತ್ತಾರೆ.

**ರೇಡಿಯೋ ಮತ್ತು ಅದನ್ನು ನಡೆಸಲು ಬೇಕಾದ ಸಲಕರಣೆಗಳು**

ರೇಡಿಯೋಗಳಲ್ಲಿ ಎರಡು ವಿಧ:– ಒಂದು ವಿದ್ಯುತ್ ಶಕ್ತಿಯ ಪೂರೈಕೆಯಿಂದ ನಡೆಯುವಂಥಾದ್ದು, ಮತ್ತೊಂದು ಬ್ಯಾಟರಿಗಳಿಂದ ನಡೆಯುವಂಥಾದ್ದು. ಭಾರತದ ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಪ್ರಸರಣೆಯ ಅಭಾವದಿಂದ ಅಲ್ಲಿನ ರೇಡಿಯೋಗಳ ಬ್ಯಾಟರಿಗಳ ಸಹಾಯದಿಂದ ನಡೆಯ ಬೇಕಾಗಿದೆ.

ಬ್ಯಾಟರಿಗಳಲ್ಲಿ ಡ್ರೈ ಬ್ಯಾಟರಿ ಮತ್ತು ವೆಟ್ ಬ್ಯಾಟರಿ ಎಂಬ ಎರಡು ವಿಧ. ವೆಟ್ ಬ್ಯಾಟರಿಗಳು ಬರಿದಾದರೆ ಪುನಃ ತುಂಬಿಸಬಹುದು, ತುಂಬಿಸಿದ ಬ್ಯಾಟರಿಯು ೩೦ ತಾಸಿನ ತನಕ ಒಂದು ರೇಡಿಯೋವನ್ನು ನಡೆಸಬಲ್ಲದು. ವೆಟ್ ಬ್ಯಾಟರಿಗಳನ್ನು ಎಚ್ಚರವಾಗಿ ಉಪಯೋಗಿಸಿದರೆ ೨ ವರ್ಷಗಳ ತನಕ ತೃಪ್ತಿಕರವಾದ ಕೆಲಸವನ್ನು ಪಡೆಯಬಹುದು. ಮೋಟರು ಕಾರುಗಳಲ್ಲಾಗಲೀ, ಗಿರಣಿಗಳಲ್ಲಾಗಲೀ ಬ್ಯಾಟರಿಗಳನ್ನು ತುಂಬಿಸಿದಲ್ಲಿ ಅವುಗಳ ಆಯುಷ್ಯವು ಅರ್ಧಕ್ಕಿಂಥ ಕಡಿಮೆ ಆಗುವುದು. ವಾಯು ಯಂತ್ರಗಳ ಮೂಲಕ ಬ್ಯಾಟರಿಗಳನ್ನು ತುಂಬಿಸಬಹುದು. ಆದರೆ ನಮ್ಮ ಭಾರತದಲ್ಲಿಯ ಗುಡ್ಡಗಾಡು ಪ್ರದೇಶಗಳಲ್ಲಿ ವಾಯುವಿನ ವೇಗವು ಕಡಿಮೆ ಯಾದ್ದರಿಂದ ಬ್ಯಾಟರಿಗಳನ್ನು ತುಂಬಿಸಲು ಸಾಧ್ಯವಿಲ್ಲೆಂದು ಕಂಡು ಬಂದಿದೆ. ವೆಟ್ ಬ್ಯಾಟರಿಗಳನ್ನು ತುಂಬಿಸಲು ಒಂದು ೩೫೦-೫೦೦ ರೂಪಾಯಿಗಳ ಕ್ರಯವಿರುವ ಪೆಟ್ರೋಲ್ ಎಂಜಿನ್ ದ್ಯಾನಮೋವನ್ನು ಕೊಳ್ಳುವುದು ಲೇಸು. ಇವುಗಳಿಂದ ೧೫-೩೦ ಲೈಟುಗಳನ್ನೂ ಸಹ ಉರಿಸಬಹುದು. ಒಂದು ಗ್ಯಾಲನ್ ಪೆಟ್ರೋಲ್‌ನಿಂದ ಈ ಎಂಜಿನ್ ೮ ತಾಸುಗಳ ವರೆಗೆ ನಡೆಯುತ್ತದೆ. ಡ್ರೈ ಬ್ಯಾಟರಿಯು ಒಮ್ಮೆ ಬರಿದಾದರೆ ಪುನಃ ತುಂಬಿಸ ಬರುವುದಿಲ್ಲ. ಒಂದು ಡ್ರೈ ಬ್ಯಾಟರಿಯ ಕ್ರಯವು ಸಾಧಾರಣ ೩೫-೩೦ [illegible] ಒಂದು ವೆಟ್ ಬ್ಯಾಟರಿಯ ಕ್ರಯವು ಸಾಧಾರಣ ೯೦-೧೦೦ ರೂ. ವೆಟ್ ಬ್ಯಾಟರಿಯ ಮೂಲಕ ರೇಡಿಯೋವನ್ನು ನಡೆಸುವುದಾದರೆ ಎರಡು ವೆಟ್ ಬ್ಯಾಟರಿ[illegible]

# ವಾರ್ತೆಗಳು.

## ಒಬ್ಬ ವಧುವಿಗಾಗಿ ಇಬ್ಬರ ಹೊಯ್ ಕೈ ಪೋಟಿ.

ನಾಗಪುರದಲ್ಲಿ ಇಬ್ಬರು ತರುಣರು ಒಬ್ಬ ವಧುವಿಗಾಗಿ ತಮ್ಮ ಹಕ್ಕನ್ನು ಸಾಧಿಸಲು ಪ್ರಯತ್ನಿಸುತ್ತ ಜಗಳವಾಡುತ್ತಿದ್ದಾಗ ಜಬರ್ದಸ್ತಿನಿಂದ ವಧುವನ್ನು ವಶಪಡಿಸಿಕೊಳ್ಳಲು ಬಂದ ತರುಣನನ್ನು ದಸ್ತಗಿರಿ ಮಾಡಲಾಯಿತು. ಈ ದೃಶ್ಯವನ್ನು ಹಲವು ಮಂದಿ ನೋಡಿದರು.

ಗಣೇಶಪೇಟೆಯ ಜಾಗಿರ್ದಾರ ಎಂಬುವರ ತಮ್ಮ ಮಗಳಾದ ವತ್ಸಲಾ ಎಂಬುವಳಿಗೆ ಹಾಗೂ ವಿರೋಧಿಯೆಂಬ ತರುಣನನ್ನು ಗೊತ್ತುಮಾಡಿದರು. ಅವರಿ ಮಗಳ ತಂದೆ ಹೊಂದಲು ದೊರೆಯದರಿಂದ ಆಕೆಯನ್ನು ಪಾಣಿಗ್ರಹಣ ಮಾಡಗೊಡಲು ಎಂಬುವವರ ತಂದೆಯು ನಿಶ್ಚಯಿಸಿ ಲಗ್ನ ಏರ್ಪಡಿಸಿದರು.

ಜೋಡಿಯೊಡನೆ ತನ್ನ ಪರಿವಾರದೊಡನೆ ಲಗ್ನಕ್ಕಾಗಿ ನಾಗಪುರಕ್ಕೆ ಬಂದರು. ಕಿಸು ಆಗಮನ ಅರಿತ ವಿರೋಧಿಯು ಕರೆದುಕೊಂಡು ಬೇಕ ಧಾವಿಸಿ ಬಂದರು.

ವಧುವಿನ ತಂದೆಗೆ ಇದು ಗೊತ್ತಾಗದೆ ಪೋಲೀಸರ ಮೊರೆಹೊಕ್ಕನು. ಜೋಡಿಯನ್ನು ಅವನ ಬಂದಿವಾರದವರೂ ಕರೆತ್ತಾಲೀಸ್ ಹೋದರು. ವಿರೋಧಿಯ ತನ್ನ ಆಕೆಯ ಪರಿವಾರದವರೂ ಆವರನ್ನು ಹಿಂಬಾಲಿಸಿದರು.

ಪೋಲೀಸ್ ಸೂಪರಿಂಟೆಂಡೆಂಟ್‌ರವರನ್ನು ಮಧ್ಯವರ್ತಿಯಾಗಲು ಸಿದ್ಧವಾದರು. ಎಂಬುದಾಗಿ ವಧುವಿನ ತಂದೆಯನ್ನು ಕೇಳಿದಾಗ ಆತ ಜೋಡಿಯನ್ನು ತೋರಿಸಿದನು.

ವಿರೋಧಿಯನ್ನು ಮತ್ತು ಆತನ ಇಬ್ಬರು ಸಂಗಾತಿಗಳನ್ನೂ ದಸ್ತಗಿರಿ ಮಾಡಲಾಯಿತು. ವಧುವನ್ನು ಜೋಡಿಯವರಿಗೇ ಕೊಟ್ಟು ವಿವಾಹ ಮಾಡಲಾಯಿತು.

---

ಬೀಡಿ, ಯಾಕೆಂದರೆ ಒಂದು ಬರುವಾಗ ಇನ್ನೊಂದನ್ನು ಉಪಯೋಗಿಸಬಹುದು. ಒಂದು ಬ್ಯಾಟರಿಯು ಸಾಧಾರಣ ೨೫೦–೩೦೦ ತಾಸುಗಳ ರೇಡಿಯೊ ಕೆಲಸಕ್ಕೆ ಬರುತ್ತದೆ. ವೆಟ್ ಬ್ಯಾಟರಿಯನ್ನು ಸರಿಯಾಗಿ ಕಾಪಾಡಿಸಲು, ಬೇಕಾದ ಉಪಕರಣಗಳು ಸುಲಭವಾಗಿ ದೊರಕದ್ದರಿಂದಲೂ, ಇತ್ತೀಚಿಗೆ ಡ್ರೈ ಬ್ಯಾಟರಿಗಳು ಬಹಳ ಪ್ರಚಾರದಲ್ಲಿವೆ. ಒಂದು ಡ್ರೈ ಬ್ಯಾಟರಿ ರೇಡಿಯೋ ಸೆಟ್ಟಿನ ಕ್ರಯವು ರೂ ೫೫೦ ರಿಂದ ಮೇಲ್ಪಟ್ಟು ಇದೆ, ಮತ್ತು ವೆಟ್ ಬ್ಯಾಟರಿ ರೇಡಿಯೋ ಸೆಟ್ಟಿನ ಕ್ರಯವು ರೂ ೪೦೦ ರಿಂದ ಮೇಲ್ಪಟ್ಟು ಇದೆ.

ಭಾರತದ ಎಲ್ಲಾ ಕಡೆಗಳಲ್ಲೂ ರೇಡಿಯೋ ಸ್ಟೇಶನ್‌ಗಳ ಸಹಾಯದಿಂದ ಅವಶ್ಯ ಕೊಡಗಿನಲ್ಲಿಯೂ ಸಹ ಶಾಲೆಗಳಲ್ಲೂ, ಮಹಿಳಾ ಸಮಾಜಗಳಲ್ಲೂ ಕ್ಲಬ್ಬುಗಳಲ್ಲೂ ಜನನಿಬಿಡವಾದ ಹಳ್ಳಿಗಳಲ್ಲೂ, ರೇಡಿಯೊಗಳನ್ನು ಸ್ಥಾಪಿಸುವಂಥ ಆವಶ್ಯಕತೆಯು ಗಮನಾರ್ಹವಾಗಿದೆ.

---

## ಇಬ್ಬರ ಹೋಟೆಲಿನಲ್ಲಿ ನರಮಾಂಸ ವಿತರಣೆ

ಒಬ್ಬೇ ಮಕ್ಕಳ ಮಾಂಸವನ್ನು ಬೇಯಿಸಿ ಕಾಶ್ಮೀರದ ಕೆಲವು ಹೋಟೆಲುಗಳಲ್ಲಿ ಪದಾರ್ಥಗಳನ್ನು ಹಂಚುತ್ತಿದ್ದರೆಂಬ ವಿಚಿತ್ರ ಸಂಗತಿಯು ಕಳೆದ ಎಪ್ರಿಲ್ ತಿಂಗಳ ತಾ. ೩೦ರಲ್ಲಿ ಹಬ್ಬಿತ್ತು. ಇದೊಂದು ಮನೆಯ ಮುಂದೆ ದೊಡ್ಡ ಜನಸ್ತೋಮ ಕೂಡಿತ್ತು. ಗಳಿಗೆ ಮೊದಲು ಮಕ್ಕಳನ್ನು ಆ ಮನೆಯಲ್ಲಿ ಬಂಧನದಲ್ಲಿರಿಸಿದ್ದರೆಂಬ ಗುಲ್ಲು ಹರಡಿದುದರಿಂದ ಅಲ್ಲಿ ಜನರು ಸೇರಿದ್ದರು. ಪೋಲೀಸರ ಆಗಮನವೂ ಆಯಿತು. ಆ ಮನೆಯಲ್ಲಿದ್ದ ನಾಲ್ಕು ಮಂದಿ ಮಕ್ಕಳನ್ನು ಮತ್ತು ಮನೆಯವರನ್ನು ಸೆರೆ ಹಿಡಿದ ಪೋಲೀಸರು ಮುಂದುವರಿದರು. 'ಇದ್ದಿಸಲ್ಲಿ ಕೇಳಿದಂತಹ ಅವಮಾನಕ ಕೃತ್ಯವೇನೂ ನಡೆದುದಿಲ್ಲ' ಎಂದು ಪೋಲೀಸರು ಎಷ್ಟು ಸಮಾಧಾನ ಹೇಳಿದರೂ ನೆರೆದ ಜನರು ಕೇಳದೆ ಗಲಾಟೆ ಎಬ್ಬಿಸಿದರು. ಜನ ಸಮೂಹವನ್ನು ಚದರಿಸಲು ಪೋಲೀಸರು ಲಾಠಿ ಚಾರ್ಜ್ ನಡೆಸಬೇಕಾಯಿತು.

---

## ಅವಿವಾಹಿತ ಉದ್ಯೋಗಿಗಳಿಗೆ ಕಡಿಮೆ ಸಂಬಳ

೧೯೪೮–೪೯ರ ನಂತರ ಉದ್ಯೋಗಕ್ಕೆ ಸೇರಿದ ಎಲ್ಲಾ ಕೆಲಸಗಾರರಿಗೆ ತುಟ್ಟಿ ಭತ್ಯೆಯಲ್ಲಿ ಇಳಿತ ಮಾಡಬೇಕೆಂದು ಕಲ್ಕತ್ತಾ ವಿಶ್ವವಿದ್ಯಾಲಯದವರು ನಿರ್ಣಯಿಸಿದಾರೆ. ಇನ್ನು ಮುಂದೆ ಅವಿವಾಹಿತ ಉದ್ಯೋಗಿಗಳಿಗೆ ಅವರ ಸಂಬಳದ ಶೇಕಡಾ ೭½ರಷ್ಟು ಮಾತ್ರ ತುಟ್ಟಿ ಭತ್ಯೆ ಸಿಗುವುದು; ವಿವಾಹಿತ ಉದ್ಯೋಗಿಗಳಿಗೆ ಸಂಬಳದ ಶೇಕಡಾ ೧೭½ರಷ್ಟರ ವರೆಗೆ ತುಟ್ಟಿ ಭತ್ಯೆ ಸಿಗಬಹುದು. ೧೯೪೮–೪೯ರಿಂದ ಹಿಡಿದ ಸಂಬಳದಲ್ಲಿ ಶೇಕಡಾ ೧½ರಷ್ಟು ಜೆಟ್ಟಿಗೆ ಪಡೆದ ತುಟ್ಟಿ ಭತ್ಯೆಯನ್ನು ಹಿಂದೆ ಕೊಡಬೇಕೆಂಬ ಚೀಲತೆಯೂ ಹೊರಡಬಹುದೆಂದು ಅನುಮಾನಿಸಲಾಗಿದೆ. ವಿವಾಹಿತ ಉದ್ಯೋಗಿಗಳಿಗೆ ಸಂಕೀರ್ಣ ಸಂಖ್ಯೆ ಮನದ ಕಾರಣ ಉತ್ತೇಜಿಸಲಾಗುವುದಂತೆ. ವಿಶ್ವವಿದ್ಯಾಲಯದವರ ಈ ಹೊಸ ಯೋಜನೆಯಿಂದ ಸಾವಿರಾರು ಮಂದಿ ಅವಿವಾಹಿತ ಕನ್ಯೆಯರ ಬಾಳು ಬೇಗನೇ ಬೆಳಗಬಹುದೆಂದು ನಿರೀಕ್ಷಿಸಲಾಗಿದೆ.

---

## ಸಂತತಿ ಸಂಯಮನ ಕೇಂದ್ರ

ಡಿಪ್ಲೆಸ್ಸಿಸ್ನಲ್ಲಿ ಸ್ಥಾಪಿಸಲ್ಪಟ್ಟ ಸಂತತಿ ಸಂಯಮನ ಕೇಂದ್ರದವರು, ಸಂತಾನ ನಿರೋಧ ವಸ್ತುಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಬೇಕೆಂದು ಸರಕಾರದೊಡನೆ ಕೇಳಿಕೊಂಡಿರುವರು. ಈ ತನಕ ಸುಮಾರು ೫೦೦೦ ಜನರ (ಇವರಲ್ಲಿ ಸಾಕಷ್ಟು ದಕ್ಷಿಣಕ್ಕಿಂತಲೂ ಹೆಚ್ಚು ಸ್ತ್ರೀಯರು) ಈ ಕೇಂದ್ರವನ್ನು ಸಂದರ್ಶಿಸಿರುವರು. ಸಂತಾನ ನಿರೋಧ ಸಹಾಯಕ ಶಸ್ತ್ರ ಕ್ರಿಯೆಯು

(ಬಂಜೆತನಕ್ಕೆ) ೧೫ ಮಂದಿಯ ಮೇಲೆ ನಡೆದಿದೆ. ಈ ಕೇಂದ್ರವು ಇದೇ ಕಳೆದ ಫೆಬ್ರವರಿ ತಾ. ೯ ರಲ್ಲಿ ತೆರೆಯಲ್ಪಟ್ಟಿತು.

---

## ಜರ್ಮನಿಯಲ್ಲಿ ನಾಜಿ ತತ್ವ

ಪಶ್ಚಿಮ ಜರ್ಮನಿಯಲ್ಲಿ ಪುನಃ ನಾಜಿಗಳು ಕಳೆದು ಹೋದ ತಮ್ಮ ಅಧಿಕಾರವನ್ನು ಸ್ಥಾಪಿಸುವ ಹವ್ಯಾಸಕ್ಕೆ ಬಿದ್ದಿರುವರೆಂದು ತಿಳಿದುಬಂದಿದೆ. ಪಶ್ಚಿಮ ಜರ್ಮನಿ ಸರಕಾರವು ಈ ಗಂಡಾಂತರವನ್ನು ತಿಳಿದುಕೊಂಡು ಹೊಸ ನಾಜಿ ಸೋಶಿಯಲಿಸ್ಟ್ ಪಕ್ಷದ ಮುಂದಾಳಾದ ಡಾ. ಫ್ರಿಟ್ಜ್ ಡೊರ್ಲ್ಸ್ ಮೊದಲಾದ ಮುಂದಾಳುಗಳು ಸಾರ್ವಜನಿಕ ಭಾಷಣ ಮಾಡದಂತೆ ನಿರ್ಬಂಧ ಹಾಕಿದೆ.

ಮಹಾ ಯುದ್ಧದ ಅಂತ್ಯದಲ್ಲಿ ಜರ್ಮನಿಯು ಸೋತು ಮಿತ್ರಪಕ್ಷದವರಿಗೆ ಶರಣು ಬಂದಾಗ ಹಿಂದೆ ಅಧಿಕಾರದಲ್ಲಿದ್ದ ನಾಜಿಗಳ ಗತಿಯೇನಾಗಬಹುದೆಂಬ ಸಮಸ್ಯೆ ತಲೆದೋರಿತ್ತು. ನಾಜಿ ಮುಂದಾಳುಗಳ ನಿರ್ನಾಮವಾದರೂ ಅನೇಕಾನೇಕ ಕಾರ್ಯಕರ್ತರೂ, ಮುಂದಾಳುಗಳನ್ನು ಅನುಸರಿಸಿ ಸ ವಿಚಾರ ನಾಜಿಗಳೂ ಮುಂದೇನು ಮಾಡುವರು ಎಂಬ ಪ್ರಶ್ನೆಯು ಅನೇಕರನ್ನು ಕಾಡುತಿತ್ತು. ಜರ್ಮನರು ನಾಜಿ ತತ್ವವನ್ನು ಮರೆತು ಬಿಟ್ಟರೆಂದು ಬಾಹ್ಯ ಜಗತ್ತು ತಿಳಿದುಕೊಂಡಿತು. ನಾಜಿಗಳು ಆ ರೀತಿ ವರ್ತಿಸಿದುದೇ ಇದಕ್ಕೆ ಕಾರಣ. ಆದರೆ ಇದೀಗ ನಾಜಿ ಶಕ್ತಿಯು ಸಂಘಟಿಸಿಕೊಳ್ಳುತ್ತಿರುವ ಲಕ್ಷಣಗಳು ಕಾಣುತ್ತಿವೆ. ನಾಜಿ ಶಕ್ತಿಯು ಒಂದು ಪ್ರಬಲ ಶಕ್ತಿಯಾಗಿಯೇ ಪರಿಣಮಿಸಿದೆಯೆಂಬುದು ಈಗ ಗೋಚರವಾಗುತ್ತಿದೆ.

ಮಿತ್ರರ ಕೈಕೆಳಗಿರುವ ಪಶ್ಚಿಮ ಜರ್ಮನ್ ಸರಕಾರವು ನಿಜಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿದೆ. ಆದುದರಿಂದ ನಾಜಿ ಸೋಶಿಯಲಿಸ್ಟ್ ಪಕ್ಷದ ಮುಂದಾಳುಗಳು ಸಾರ್ವಜನಿಕ ಭಾಷಣ ಮಾಡದಂತೆ ನಿರ್ಬಂಧಗಳನ್ನು ಹಾಕಲಾಗಿದೆ. ಅವರಲ್ಲಿ ಓಟ್ಟೊ ರೆಮರ್ ಎಂಬ ಸೇನಾಪತಿಯನ್ನು ಇಂತಹ ನಿರ್ಬಂಧಕ್ಕೊಳಪಡಿಸಲಾಗಿದೆ.

ನಾಜಿಗಳು ನಿಧಾನವಾಗಿ ತಮ್ಮ ಹಿಂದಿನ ಶಕ್ತಿಗಳನ್ನು ಪುನಃ ಗಳಿಸುತ್ತಿರುವರೆಂಬುದಕ್ಕೆ ಸಾಕ್ಷಿಯಾಗಿ ಇತ್ತೀಚಿಗೆ ಕೆಲ ಸೀಕ್ಸನಿ ಪ್ರಾಂತದಲ್ಲಿ ನಡೆದ ಚುನಾವಣೆಗಳಲ್ಲಿ ಈ ನೂತನ ನಾಜಿಗಳಿಗೆ ಮಹತ್ವದ ಬೆಂಬಲ ದೊರಕಿದೆ 'ನವಭಾರತ'

---

## ನಾಯಿಕೊಡೆಗಳಂತೆ ಪಕ್ಷಗಳು ಹುಟ್ಟಿಕೊಂಡರೆ ಆಗಲಿಲ್ಲ

ನಾಯಿಕೊಡೆಗಳಂತೆ ಬರೀ ಪಕ್ಷಗಳು ಹುಟ್ಟಿಕೊಳ್ಳುವದರಿಂದ ಕಾಂಗ್ರೆಸ್ ಸರಕಾರವಿಂದ ಸಾರಾಂಗಲು ಸಾಧ್ಯವಿಲ್ಲವೆಂದು ಸಮಾಜವಾದೀ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಹೇಳಿದರು. ಒಕ್ಕೇ ರೀತಿಯಿಂದ ಸಂಘಟಿಸಲ್ಪಟ್ಟ ಒಂದೇ ಒಂದು ಪಕ್ಷವು ಮಾತ್ರ ಕಾಂಗ್ರೆಸ್ಸಿನ ವಿರುದ್ಧ ನಿಲ್ಲಲು ಶಕ್ತವಾಗುವದು ಎಂದೂ ಅವರು ಹೇಳಿದರು. ಮುಂದುವರಿಯುತ್ತಾ ಅವರು "ಸಮಾಜವಾದ ಮತ್ತು ಕಾಂಗ್ರೆಸ್ಸು ಇವೆರಡರಲ್ಲಿ ಒಂದನ್ನು ಜನತೆಯು ಆರಿಸಿಕೊಳ್ಳಬೇಕಾಗಿದೆ. ಕಾಂಗ್ರೆಸ್ಸು ಅಧಿಕಾರಕ್ಕೆ ಬರುವಂತೆ ನೀವು ಮತ ಕೊಟ್ಟಿರಿ. ಅದನ್ನು ಈಗ ಅಧಿಕಾರಚ್ಯುತ ಮಾಡುವ ಕೆಲಸವೂ ನಿಮ್ಮದೇ ಆಗಿದೆ" ಎಂದು ಹೇಳಿದರು.

---

## ಬೇಕಾಗಿದ್ದಾರೆ

ನೆಲಜಿ ಹೈಯರ್ ಎಲಿಮೆಂಟರಿ ಶಾಲೆಗೆ ಮೂವರು ಉಪಾಧ್ಯಾಯರು ಬೇಕಾಗಿದ್ದಾರೆ. ಸ್ಕೂಲ್ ಫೈನಲ್ ಪಾಸಾದವರು ಯಾ ಈ ವರ್ಷ ಪರೀಕ್ಷೆಗೆ ಕೂತವರು ಆಗಿರತಕ್ಕದ್ದು. ಈ ತಾ. ೨೫ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳತಕ್ಕದು.

ಪ್ರೆಸಿಡೆಂಟರು.
ನೆಲಜಿ ಶಾಲಾ ಕಮಿಟಿ
ಬಲ್ಲಮಾವಟಿ ಗ್ರಾಮ
ನಾಪೋಕ್ಲು ಪೋಸ್ಟ್.

2–2

---

## ಮಾರಾಟಕ್ಕಿದೆ.

ಸೋಮವಾರಪೇಟೆ ನಾಡು ಗರಗಂದೂರು ಗ್ರಾಮದಲ್ಲಿ, ಸರಕಾರ ಅಸ್ಸೆ 17 ನೇ ಮೈಲು ಕಲ್ಲಿನಿಂದ 3 ಫರ್ಲಾಂಗು ದೂರದಲ್ಲಿರುವ ನೀರಾವರಿ 1150 ಬಟ್ಟಿ ಭೂಮಿ, ಕಾಕೋಲು ಚಾಂಟಿ ಹಾಕಿ, ಹೆಂಚು ಹಾಕಿದ ಮನೆ, ಫಸಲಿಗೆ ಬರಲಿಕ್ಕಾದ 6 ಎಕ್ರೆ ಕಿತ್ತಳೆ ತೋಟ, 3 ಎಕ್ರೆ ಜಾಗ ವಸ್ತಿರೆ ಮಾರಾಟಕ್ಕಿದೆ. ಸದರಿ ಆಸ್ತಿಯ ತೀಜಾ ವಿಸ್ತೀರ್ಣವಿರುವ ಪೈಸಾರಿ ಜಾಗಕ್ಕೆ ಹರಿಗೆರೆಯಿಂದಿವೆ. ಅಲ್ಲದೆ ಮಾಬಾಸ್ವರ ಟವುನಿನ್ನಲ್ಲಿನ ತಿಂಗಳಿಗೆ ರೂ. 50/- ಬಾಡಿಗೆ ಬರುವ ದೊಡ್ಡ ಅಂಗಡಿಯೂ ಮಾರಾಟಕ್ಕಿದೆ. ಕ್ರಯ 45 ಸಾವಿರ ಅಥವಾ ಅದಕ್ಕಿಂತ ಹೆಚ್ಚು ಕೊಡುವವರು, ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

N. K. GANAPAYA,
Madapur post,
N. Coorg.

4-4

---

## ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರೂ ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ದೇಶಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚಿತ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
S. Coorg.

26-17

## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,99,400. |
| ಕ್ಷೇಮನಿಧಿ | ರೂ. | 59,000. |
| ಇತರ ನಿಧಿಗಳು | ರೂ. | 36,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.



## ದಿ ಟ್ರಾಪಿಕಲ್

### ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:—ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

52-6 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor, and Marine.

ಯಂ. ಯು. ಅಚ್ಚಪ್ಪ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.

ಎಂ. ಎ ಬೆಳ್ಳಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. ⅛" ⅜" ⅝" ¾" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52-36


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

# ಮುಖಂಡನಾಗಬೇಕಾದರೆ?

ಬರೆದವರು:—ಶ್ರೀ ಎ. ರಾಮಣ್ಣ ಶೆಟ್ಟಿ, ಧರ್ಮಸ್ಥಳ.

ಪ್ರಜಾ ಸರಕಾರ, ಸ್ವತಂತ್ರ ಭಾರತ, ಸ್ವರಾಜ್ಯವೆಂದು ಹೇಳುವ ಈ ಕಾಲದಲ್ಲಿ ಜನತಾ ಮುಖಂಡನಾಗುವದು ಬಹಳ ಕಷ್ಟವೆಂದು ಕೆಲವರ ಭಾವನೆ. ಬಹಳ ಸುಲಭವೆಂದು ಕೆಲವರ ಅನುಭವ. ಕಷ್ಟವೆಂದು ಹೇಳುತ್ತಾ ಭಾಷಣ ಲೇಖನ ಮಾಡುವ ಜನರೆಷ್ಟು ಮಂದಿ. ಸುಲಭ ಎಂದು ಹೇಳುವ ಜನರು ಇಲ್ಲವೆಂದೇ ಕಾಣುತ್ತದೆ. ಇದರ ನಿಜಸ್ಥಿತಿ ತಿಳಿದೋ ತಿಳಿಯದೆಯೋ ದಿನ ದಿನವೂ ಕಾಣುವ ಚಲನವಲನಗಳಿಂದ ಮುಖಂಡನಾಗುವ ಗುಟ್ಟು ತಿಳಿಯಬಹುದಾಗಿದೆ.

ಮಾತಿನಂತೆ ಮನಸು, ಮನಸಿನಂತೆ ಕಾರ್ಯವೆಂಬ ಒಂದು ಕಾಲವಿತ್ತು. ಆಗ ಮುಖಂಡನಾದವನು ಎಲ್ಲರಿಗಿಂತ ಒಳ್ಳೆಯ ನಡತೆ, ಗುಣ, ಸ್ವಭಾವ ಇರುವವನಾಗಿದ್ದನು. ಕಾಲ ಚಕ್ರದ ತಿರುಗಾಟದಲ್ಲಿ ಅವನ ಕಾಲಹೋಗಿ ಈಗ ಒಳ್ಳೆಯ ಕಾಲ ಬಂದಿದೆ. ಗಾಂಧೀಜಿಯ ಮರಣವೇ ಈ ಎರಡು ಕಾಲಗಳ ಸಂಧಿಕಾಲ, ಸಂಕ್ರಾಂತಿಯ ಸೂಚನೆ.

ಧಾರ್ಮಿಕ, ರಾಜಕೀಯ, ಸಾಹಿತ್ಯ, ಕಲೆ ವಿಜ್ಞಾನ, ಮುಂತಾದ ವಿವಿಧ ರಂಗಗಳಲ್ಲಿ ಬಹಳ ಮಂದಿ ಮಹನೀಯರು ಕೀರ್ತಿಶಾಲಿಗಳಾಗಿ ಮೆರೆದಿರುವ ದೇಶ ನಮ್ಮದು. ಆಗಿ ಹೋದವರ ಕುರಿತ ನಾವು ಕೊರತೆ ಹೇಳುವಾಗ ಅವರ ಜೀವನದ ಸರ್ವಕಾರ್ಯಗಳಲ್ಲಿ ನೂರರಲ್ಲಿ ನಾಲ್ಕಾರು ಭಾಗಗಳು ಅಪೂರ್ಣವಾಗಿರಬಹುದು. ಚಂದ್ರನಲ್ಲಿ ಕಲೆಗಳಿದ್ದರೂ ಭೂಮಿಗೆ ಬೆಳಕನ್ನು ಕೊಡುವಂತೆ ಅವರ ಮಹಾಗುಣಗಳ ಇದಿರಲ್ಲಿ ಕೊರತೆಗಳು ಕಾಣದೆ ಹೋಗಿರಬಹುದು. ಆದರೆ ಇಂದಿನ ಸ್ಥಿತಿ ಬೇರೆ. ಅದಕ್ಕೆ ತೀರಾ ವಿರುದ್ಧ. ಮುಖಂಡನೆನಿಸಬೇಕಾದರೆ ಮೊದಲು ಅವನು ಅಖಂಡನಾಗಬೇಕು. ಊರು ಕತ್ತಿ, ಕೋವಿ ಲಾಠಿಗಳಿಗೂ ತುಂಡಾಗದ ಅಖಂಡನಾಗಿರಬೇಕು. ಅಂದರೆ ಅಷ್ಟು ಗಟ್ಟಿ ಎಂತಲೇ ಅರ್ಥವಲ್ಲ. ಸ್ವಂಜಿನಂತೆ ಮುದುಡುವಾಗಿ, ನಾರಾಗಿದ್ದರೂ ಆಗಬಹುದು. ಹಸವಾಗಿ ಎರಕ ಹೊಯ್ದ ಸಾಮಾನಿನಂತಿದ್ದರೂ ಆಗಬಹುದು. ಅಂತೂ ಅಖಂಡನಾಗಬೇಕು. ಆ ಮೇಲೆ ಉಳಿದ ಪರಿಕರಗಳನ್ನು ಹೊಂದಿಸಿಕೊಳ್ಳಬೇಕು. ಊರಿನಲ್ಲಿ ಬಹುಮಂದಿ ಸೇರಿರುವ ಕಾಂಗ್ರೆಸ್‌ನಂಥಾ ಸಂಸ್ಥೆಯ ಮೆಂಬರನಾಗಬೇಕು. ಅದಕ್ಕೆ ಒಪ್ಪುವ ವೇಷಭೂಷಣಗಳು ಅಚ್ಚುಕಟ್ಟಾಗಿರಬೇಕು. ಪ್ರತಿದಿನವೂ ಮಡಿ ಮಾಡಿದ ಬಟ್ಟೆಗಳನ್ನೇ ಹಾಕಿಕೊಂಡು, ಪ್ರತಿದಿನವೂ ಮುಖಕ್ಷೌರ, ಮುಖಾಲಂಕಾರ ಮಾಡಿಕೊಂಡು, ಸುಖವಾಹನಾರೂಢನಾಗಿ, ಸುಖ ಜೀವಿಯಾಗಿ, ಗಟ್ಟಿಯಾದ ಧ್ವನಿಯುಳ್ಳವನಾಗಿರಬೇಕು. ಕೈಯ್ಯಲ್ಲಿ ನಾಲ್ಕಾರು ಇಂಗ್ಲಿಷ್ ಪತ್ರಿಕೆಗಳು, ಜತೆಯಲ್ಲಿ ನಾಲ್ಕಾರು ಮಂದಿ 'ಪಹಬ್ಬಾಸ್' ಅನ್ನುವ ಮಂದಿ ಮಾಗಧರು ಇರಬೇಕು. ಅಲ್ಲಲ್ಲಿ ಸಭೆಗಳಿಗೆ ಹೋಗಿ, ಉದ್ಬುದ್ಧ ಭಾಷಣಮಾಡಿ, ದೇಶ-ಭಾಷೆ-ಸಮಾಜದ ಸೇವೆಯ ಕುರಿತು ನಾವು ಮಾಡತಕ್ಕ ಕಾರ್ಯ ಕಲಾಪಗಳನ್ನು ವಿವರಿಸಿ, ಇತರರು ಮಾಡತಕ್ಕ ತಪ್ಪುಗಳನ್ನು ಹೊಸ್ತಾಗಿ ಮಾಡಿ ವರ್ಣಿಸಿ, ಜನರನ್ನು ಮೆಚ್ಚಿಸಬೇಕು. ನಾಲ್ಕಾರು ಪತ್ರಿಕೆಗಳನ್ನು ಹೊರಡಿಸಿ, ಅಥವಾ ಊರಿನ ನಾಲ್ಕಾರು ಪತ್ರಿಕೆ ಸಂಪಾದಕರನ್ನು ಒಲಿಸಿ ಹೊಗಳಿಸಿಕೊಳ್ಳಬೇಕು. ದೂರ ದೂರದ ಪಂಡಿತರಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಧಾರಾಳ ಉಪಚಾರ ಮಾಡಿ, ಅವರು ಹೋದಲ್ಲೆಲ್ಲಾ ತನ್ನನ್ನು ಹೊಗಳುವಂತೆ ಮಾಡಿ ಬಿಡಬೇಕು. ತನ್ನ ಊರಿನಲ್ಲಿ ಇರುವವರನ್ನೆಲ್ಲ ಒಂದಲ್ಲ ಒಂದು ವಿಧವಾಗಿ ತಲೆಯೆತ್ತದಂತೆ ಒತ್ತಿ ಹಿಡಿಯಬೇಕು. ತನ್ನ ಹಿರಿಯರು ಮಾಡಿಟ್ಟ ಸಂಪತ್ತು ಧಾರಾಳವಾಗಿದ್ದರೂ, ಇಲ್ಲದಿದ್ದರೂ ಖರ್ಚಿಗೆ ಸಾಕಾಗುವಷ್ಟು ಹಣವು ಹಿಂದಿನ ಬಾಗಿಲಿನಿಂದ ಸದಾ ಬರುವಂತೆ ಮಾಡಿಕೊಳ್ಳಬೇಕು; ಅದನ್ನು ಬಿ. ಎಂ ಅಥವಾ ಲಂಚ, ಇಲ್ಲವೇ ಕಾಣಿಕೆ, ಯಾ ಲಾಭ ಏನೇ ಹೇಳಲಿ, ಅದನ್ನೆಲ್ಲಾ ಲಕ್ಷಿಸಬಾರದು. ತನ್ನನ್ನು ಟೀಕಿಸುವವರನ್ನು ಅವರವರ ಸ್ಥಿತಿಗೆ ತಕ್ಕ ಕಪ್ಪಕೊಟ್ಟು ಬಾಯಿ ಮುಚ್ಚಿಸಬೇಕು. ಅಥವಾ ದಂಡವನ್ನು ಪ್ರಯೋಗಿಸಬೇಕು. ಊರಿನ ಬೇರೆ ಬೇರೆ ಸಂಘ-ಸಂಸ್ಥೆಗಳಿಗೆ ಭೇಟಿ ಕೊಟ್ಟು ತಾನೇ ಅದರ ಹಿತ ಚಿಂತಕನೆಂದು ತೋರಿಸಿಕೊಳ್ಳಬೇಕು. ಒಮ್ಮೊಮ್ಮೆ ಇದಕ್ಕಾಗಿ ಸ್ವಲ್ಪ ಹಣವನ್ನು ಕೈಬಿಡಬೇಕು ತನ್ನ ಒಳವನ್ನು ಪರೀಕ್ಷಿಸುವ ಸಮಾಜದ ತೀಕ್ಷ್ಣ ದೃಷ್ಟಿಯವರ ನೋಟಕ್ಕೆ ಸಿಗದಂತೆ ತನ್ನ ವ್ಯವಹಾರಗಳ ಸುತ್ತು ಸರ್ಪಗಾವಲು ಇಡಬೇಕು. ಬಹು ಮಂದಿಗಳಾದ ಬಡವರ, ರೈತರ ಕೂಲಿಗಳ, ನೌಕರರ ಹಿತವನ್ನೇ ಲೇಖನ-ಭಾಷಣಗಳಿಂದ ಪ್ರಕಟಿಸಬೇಕು ಶ್ರೀಮಂತರಿಗೆ ವ್ಯಾಪಾರಿಗಳಿಗೆ ಸರಕಾರದ ಹಿರಿಯ ಅಧಿಕಾರಿಗಳಿಗೆ, ಬೇರೆ ಮುಖಂಡರಿಗೆ, ಒಳಗಿಂದೊಳಗೆ ಧಾರಾಳವಾಗಿ ಲಂಚ-ಕಪ್ಪ-ಕಾಣಿಕೆ ಸಂಭಾವನೆ ಕೊಡುತ್ತಿರಬೇಕು. ತನ್ನ ಕುಟುಂಬ, ಜಾತಿಯ, ಊರಿನ, ಸ್ನೇಹಿತರ ಬಗ್ಗೆ ಸರ್ವ ವಿಧದ ಸಹಾಯ ಸಲ್ಲಿಸುತ್ತಿರಬೇಕು. ಕಡೆಗೆ ಎಲ್ಲರಿಗೂ ಏನೂ ಮಾಡುವ ದಕ್ಕಾಗದಿದ್ದರೂ ತನ್ನ ಹೆಂಡತಿ ಮಕ್ಕಳಿಗೆ ತಾನು ಸತ್ತು ನೂರು ವರ್ಷಗಳ ವರೆಗೆ ಬೇಕಾಗುವಷ್ಟು ಸೊತ್ತನ್ನು ಯಾರೂ ತಿಳಿಯದಂತೆ ಸಂಗ್ರಹಿಸಿಡಬೇಕು. ಧರ್ಮ, ದೇವರು, ಭಕ್ತಿ, ಜ್ಞಾನ, ಸತ್ಯಗಳ ಕುರಿತು ಉದ್ದವಾಗಿ ಮಾತಾಡಲೂ ಬಾಯಿಪಾಠ ಕಲಿತುಕೊಂಡು, ಎಲ್ಲಾ ಮತ ಧರ್ಮದಲ್ಲಿಯೂ ಸಮಾನ ದೃಷ್ಟಿಯೆಂದು ತೋರಿಸಿಕೊಂಡು, ತನ್ನ ಮತವನ್ನು ಮಾತ್ರ ಚೆನ್ನಾಗಿ ಬದುಕಿಸುವುದಕ್ಕಾಗಿ, ಇತರ ಮತಗಳನ್ನೆಲ್ಲಾ ಗುಪ್ತವಾಗಿ ಶಿಕ್ಷಿಸಿ, ಸುಲಿದು, ಹಿಂಸಿಸಿ ಒದೆಯುತ್ತಿರಬೇಕು. ಸಮಾಜದಿಂದ ಹಲವು ದಾರಿಗಳಿಂದ ಗುಪ್ತವಾಗಿ ಧಾರಾಳ ಸಂಪಾದನೆ ಮಾಡಿ, ಸರ್ವಹಿತಕಾರಿಯಾದ ಒಂದೆರಡು ಕೆಲಸಗಳನ್ನು ಮಾಡುವಾಗ ಅದು ದೇಶದಾದ್ಯಂತವೂ ತಿಳಿಯುವಂತೆ ಬಲವಾಗಿ ಪ್ರಕಟಿಸುತ್ತಿರಬೇಕು. ಇದರಿಂದ ಪ್ರತಿಯೊಬ್ಬನೂ ಮುಖಂಡನಾಗಿ, ಓಟಿನಲ್ಲಿ ಜೈಸಿ, ಎಲ್ಲರ ಮೇಲೂ ಅಧಿಕಾರಮಾಡಬಹುದು.

'ನವಯುಗ'

Reg. No. [illegible] 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೨-೬-೧೯೫೦ನೇ ಶುಕ್ರವಾರ | ಸಂಚಿಕೆ ೨೩

ಮತ್ತು ಇತರ ಎಲ್ಲಾ ವರ್ಗದ ಜನರ ಸಹಕಾರವು ಅತ್ಯಾವಶ್ಯಕ. ವ್ಯವಸಾಯಗಾರರೂ, ವ್ಯಾಪಾರಸ್ಥರೂ ಮಾತ್ರವಲ್ಲದೆ ಆಹಾರ ಪದಾರ್ಥಗಳನ್ನು ಉಪಯೋಗಿಸತಕ್ಕವರೆಲ್ಲರೂ ಒಂದುಗೂಡಿ ಪ್ರಯತ್ನಿಸಿದರೆ ಮಾತ್ರ ಸರಕಾರದ ಯೋಜನೆಗಳು ಪ್ರಯೋಜನಕ್ಕೆ ಬರುವುದಲ್ಲದೆ ಬರೀ ಸರಕಾರದ ಪ್ರಯತ್ನದಿಂದ ಏನೂ ಪ್ರಯೋಜನವಾಗಲಾರದು.

ನಮ್ಮ ಇಂಡಿಯಾದೇಶದಲ್ಲಿ ಸಾಧಾರಣ ೩೦ ಮಿಲಿಯ ರೈತರಿದ್ದಾರೆ. ಇವರೆಲ್ಲರೂ ಪೂರ್ತಿಯಾದ ಸಹಕಾರವನ್ನು ಕೊಡದಿದ್ದಲ್ಲಿ ಸರಕಾರದ ಹೆಚ್ಚಿಗೆ ೧೯೪೭ನೇ ಇಸವಿ ಅಪ್ರಿಲ್‌ನಲ್ಲಿ ನಮಗೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ನಾವೇ ಉತ್ಪತ್ತಿ ಮಾಡಿಕೊಳ್ಳುವಂತೆ ಏರ್ಪಾಡು ಮಾಡಲಾಯಿತು.

ಇಷ್ಟರಲ್ಲಿ ದೇಶವು ಇಂಡಿಯಾ ಮತ್ತು ಪಾಕಿಸ್ಥಾನ ಎಂಬುದಾಗಿ ವಿಭಾಗಿಸಲ್ಪಟ್ಟು ನಮ್ಮ ಆಹಾರದ ಪರಿಸ್ಥಿತಿಯು ಇನ್ನಷ್ಟು ಕೆಟ್ಟಿತು. ಇದನ್ನು ಸರಿಪಡಿಸಲು ಕೋಟ್ಯಾಂತರ ರೂಪಾಯಿ ಬೆಲೆಯ ಆಹಾರ ಪದಾರ್ಥಗಳನ್ನು ವರ್ಷ ವರ್ಷವೂ ತರಿಸಬೇಕಾಯಿತು. ಇದರಿಂದ ನಮ್ಮ ಕೈಗಾರಿಕೆಗಳನ್ನು ಹೆಚ್ಚಿಸಿ ಹಿಂದುಳಿದ ನಮ್ಮ ದೇಶವನ್ನು ಅಭಿವೃದ್ಧಿ ಮಾಡ

# ಆಹಾರ ಸಂತೃಪ್ತಿಯನ್ನು ಹ್ಯಾಗೆ ಪಡೆಯುವುದು ?

(ಕೊಡಗು ವ್ಯವಸಾಯ ಇಲಾಖೆಯಿಂದ)

ಇಂಡಿಯಾದೇಶದ ಈಗಿನ ಜನಸಂಖ್ಯೆಗೆ ಜಾರಿಯಲ್ಲಿರುವ ರೇಶನ್ನಿಂಗ್ ಪದ್ಧತಿಯ ಪ್ರಕಾರ ೪೪ ಮಿಲಿಯ ಟನ್ನುಗಳಷ್ಟು ಆಹಾರ ಪದಾರ್ಥಗಳು ಬೇಕಾಗಿವೆ. ಈ ಪೈಕಿ ದೇಶದ ಉತ್ಪತ್ತಿಯು ಬರೀ ೪೦ ಮಿಲಿಯ ಟನ್ನುಗಳಷ್ಟಾಗಿದ್ದು ನಾವು ಈಗ ವರ್ಷಕ್ಕೆ ೪ ಮಿಲಿಯ ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ಹೊರದೇಶಗಳಿಂದ ಒಂದಕ್ಕೆ ಎರಡರಷ್ಟು ಬೆಲೆ ಕೊಟ್ಟು ತರಿಸಿಕೊಳ್ಳುತ್ತಿದ್ದೇವೆ. ನಮ್ಮ ದೇಶವು ಕೈಗಾರಿಕೆಯಲ್ಲಿ ಬಹಳ ಮಟ್ಟಿಗೆ ಹಿಂದಕ್ಕೆ ಬಿದ್ದಿದೆ. ಅದೇ ರೀತಿಯಲ್ಲಿ ನಮ್ಮ ವ್ಯವಸಾಯದ ಉತ್ಪತ್ತಿಯು ಕೂಡ ಇತರ ಎಲ್ಲಾ ದೇಶಗಳ ಉತ್ಪತ್ತಿಗಿಂತಲೂ ಬಹಳ ಹಿಂದಿರುತ್ತದೆ. ನಮ್ಮ ದೇಶವು ಮುಂದುವರಿಯಬೇಕಾದರೆ ನಮ್ಮ ವ್ಯವಸಾಯ ಮತ್ತು ಕೈಗಾರಿಕೆಗಳ ಉತ್ಪತ್ತಿಯು ಹೆಚ್ಚಬೇಕಾಗಿದೆ. ಇದಕ್ಕಾಗಿ ನಮಗೆ ಸಣ್ಣ ದೊಡ್ಡ ಯಂತ್ರಗಳು ಅತ್ಯಾವಶ್ಯಕ. ಇವುಗಳ ತಯಾರಿಕೆಯು ನಮ್ಮ ದೇಶದಲ್ಲಿ ಸದ್ಯಕ್ಕೆ ಆಗುತ್ತಿಲ್ಲವಾದುದರಿಂದ ಇವುಗಳನ್ನು ಕೂಡ ನಾವು ಪರದೇಶಗಳಿಂದಲೇ ತರಿಸಬೇಕಾಗಿದೆ. ಇಂಡಿಯಾದೇಶದ ಕೈಗಾರಿಕೆ ಮತ್ತು ವ್ಯವಸಾಯ ಅಭಿವೃದ್ಧಿಗಾಗಿ ಅನೇಕ ಕೋಟಿ ರೂಪಾಯಿ ಬೆಲೆ ಬಾಳುವ ಯಂತ್ರಗಳು ಬೇಕಾಗಿವೆ. ದೇಶದ ಉತ್ಪತ್ತಿಯ ಹೆಚ್ಚಿನ ಭಾಗವೆಲ್ಲವೂ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳುವುದರಲ್ಲಿಯೇ ವ್ಯಯವಾಗುತ್ತಿರುವುದರಿಂದ ನಮಗೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಎಲ್ಲಿಯ ವರೆಗೆ ನಾವೇ ಉತ್ಪತ್ತಿ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ನಮಗೆ ಬೇಕಾದ ಯಂತ್ರಗಳನ್ನು ನಮಗೆ ತರಿಸಿಕೊಳ್ಳಲಾರದೆ ನಮ್ಮ ಸ್ಥಿತಿಯು ಸುಧಾರಿಸಿಕೊಳ್ಳಲಾರದಾಗಿ ಪ್ರಪಂಚದ ಜನಾಂಗಗಳಲ್ಲಿ ನಮ್ಮ ದೇಶಕ್ಕೆ ಸಲ್ಲಬೇಕಾದ ಸನ್ಮಾನ ಮಾನವು ಯಾವ ಮತ್ತು ಗೌರವು ಸಲ್ಲಲಾರದು. ಈ ಸ್ಥಿತಿಯಿಂದ ನಾವು ಒಡನೆ ತಪ್ಪಿಸಿಕೊಂಡು ನಮ್ಮ ದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆಗೆ ಯೋಗ್ಯವಾಗಿ ಸಲ್ಲಬೇಕಾದ ಗೌರವವನ್ನು ಪಡೆಯಬೇಕೆಂಬ ಕಾಂಕ್ಷೆಯು ಪ್ರತಿಯೊಬ್ಬ ಹಿಂದೀಯನಲ್ಲಿಯೂ ಇದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಬರೀ ಆಶೆಯಿಂದ ದೇಶವು ಮೇಲಕ್ಕೇರಲಾರದು. ಇದಕ್ಕಾಗಿ ಪ್ರತಿಯೊಬ್ಬನೂ ದುಡಿದು ನಮಗೆ ಬೇಕಾಗುವ ಆಹಾರ ಪದಾರ್ಥಗಳನ್ನು ನಾವೇ ಉತ್ಪತ್ತಿಮಾಡಿಕೊಳ್ಳುವ ಪ್ರಯತ್ನಮಾಡಬೇಕು.

ಇಂಡಿಯಾದೇಶದ ಆಹಾರದ ಮುಗ್ಗಟ್ಟನ್ನು ಮೂರು ವಿಧದಲ್ಲಿ ಪರಿಗಣಿಸಬೇಕು. ಮೊದಲನೆಯದಾಗಿ ಈಗಿನ ಜನಸಂಖ್ಯೆಗೆ ರೇಶನ್ನಿಂಗ್ ಪದ್ಧತಿಯ ನಿರಕು ಪ್ರಕಾರ ಬೇಕಾಗುವ ಅಂದರೆ ೪೪ ಮಿಲಿಯ ಟನ್ನುಗಳಷ್ಟು ಹೆಚ್ಚಿನ ಆಹಾರ ಪದಾರ್ಥಗಳ ಉತ್ಪತ್ತಿಯಾಗಬೇಕು. ಎರಡನೆಯದಾಗಿ ಪ್ರತಿ ವರ್ಷವೂ ಹೆಚ್ಚುತ್ತಿರುವ ನಮ್ಮ ಜನಸಂಖ್ಯೆಗೆ ಕೊಡಬೇಕಾಗುವ ಆಹಾರ ಪದಾರ್ಥಗಳನ್ನು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚಾಗಿ ಬೆಳೆಸಬೇಕು. ಕೊನೆಯದಾಗಿ ರೇಶನಿಂಗ್ ಕ್ರಮದ ಪ್ರಕಾರ ಜನರಿಗೆ ಒದಗುತ್ತಿರುವ ಆಹಾರವು ಜನರು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಬೆಳೆಯಲು ಸಾಲದಿರುವುದರಿಂದ ಎಲ್ಲರಿಗೂ ಸಾಕಷ್ಟು ಆಹಾರ ಪದಾರ್ಥಗಳನ್ನು ಕ್ರಮೇಣ ಬೆಳೆಯುವುದು ಕೂಡ ಅತ್ಯಾವಶ್ಯಕ. ಮೊದಲನೆ ಎರಡು ವಿಷಯಗಳು ನಾವು ಒಡನೆ ಸಾಧಿಸಬೇಕಾದ ವಿಷಯಗಳಾದರೂ ಮೂರನೆ ವಿಷಯವು ಕೂಡ ನಾವು ಹೆಚ್ಚಿನ ವಿಳಂಬವಿಲ್ಲದೆ ಒಗೆದರಿಸತಕ್ಕ ವಿಷಯವೇ ಆಗಿದೆ. ಸರಕಾರದ 'ಹೆಚ್ಚಿಗೆ ಬೆಳೆಯಿರಿ' ಯೋಜನೆಗಳಲ್ಲಿ ಹೆಚ್ಚಿನವುಗಳು ಒಂದು ಮತ್ತು ಎರಡನೆ ವಿಭಾಗಗಳ ಸುಧಾರಣೆಗಾಗಿಯೂ, ದೊಡ್ಡ ದೊಡ್ಡ ಹೊಳೆಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ನೀರಿನ ಸರಬರಾಯಿಗಳನ್ನು ಸರಿಪಡಿಸುವ ಯೋಜನೆಗಳು ಮೂರನೆ ವಿಚಾರವನ್ನು ಸುಧಾರಿಸಲಿಕ್ಕಾಗಿಯೂ ಮಾಡಿದ ಯೋಜನೆಗಳಾಗಿವೆ.

ದೇಶದ ಜನರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಒದಗಿಸುವುದು ಅತಿ ಪ್ರಾಮುಖ್ಯವಾದ ವಿಷಯವಾದುದರಿಂದ ಸರಕಾರದ ಈಗಿನ ಯೋಜನೆಗಳೆಲ್ಲವೂ ಧವಸಗಳ ಉತ್ಪತ್ತಿಯನ್ನು ಹೆಚ್ಚಿಸುವ ಉದ್ದಿಶ್ಯದಿಂದಲೇ ಮಾಡಿದ್ದಾಗಿದೆ. ಒಂದು ಸಾರಿ ಇದು ಸಾಧಿಸಿತೆಂದರೆ ಅನಂತರ ಆರೋಗ್ಯವನ್ನು ಮತ್ತು ಬೆಳವಣಿಗೆಯನ್ನು ಹೆಚ್ಚಿಸಲು ಬೇಕಾದ ಮೀನು, ಮಾಂಸ, ಹಣ್ಣು ಹಂಪಲು ಮತ್ತೈದೆಗಳ ಉತ್ಪತ್ತಿಯನ್ನು ಹೆಚ್ಚಿಸಲು ಕೂಡ ಸಿಗಕೊಡಲಾಗುವುದು.

ಸರಕಾರದ ಯೋಜನೆಗಳೆಲ್ಲವೂ ಫಲಪ್ರದವಾಗಬೇಕೆಂದರೆ ಎಲ್ಲಾ ರೈತರ ಬೆಳೆಯುವ ಯೋಜನೆಗಳೆಲ್ಲವೂ ಕನಸಿನ ಅರಮನೆಗಳಾಗಿ ಪರಿಣಮಿಸಬೇಕಾಗುವುದು. ದೇಶದ ಈಗಿನ ಪರಿಸ್ಥಿತಿಯನ್ನು ಇದರ ಸುಧಾರಣೆ ಬಗ್ಗೆ ಸರಕಾರದವರು ಮಾಡಿರುವ ಯೋಜನೆಗಳನ್ನೂ ಈ ಲೇಖನದಲ್ಲಿ ಸೂಕ್ಷ್ಮವಾಗಿ ಕೊಡಲಾಗಿದೆ. ಮತ್ತು ಇದರಿಂದ ದೇಶದ ಜನರೆಲ್ಲರೂ ಸರಕಾರದ ಹಾಗೂ ದೇಶದ ಸಂಕಟವನ್ನು ಸರಿಯಾಗಿ ಅರಿತುಕೊಂಡು ತಮ್ಮ ತನುಮನಧನ ಸಹಕಾರವನ್ನು ಕೊಟ್ಟು ತಮ್ಮ ದೇಶದ ಗೌರವನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡುವರಾಗಿ ಆರಿಸಲಾಗಿದೆ.

### ಬಿಕ್ಕಟ್ಟು

ಇಂಡಿಯಾ ದೇಶವು ಬಹು ಕಾಲದಿಂದಲೂ ತನಗೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಬೆಳೆಸಿಕೊಳ್ಳಲಾಗದೆ ಹೊರದೇಶಗಳಿಂದ ಅಂದರೆ ಹೆಚ್ಚಾಗಿ ಬರ್ಮಾ ದೇಶದಿಂದ ಅಕ್ಕಿಯನ್ನು ಆಮದು ಮಾಡಿಕೊಳ್ಳುತಿತ್ತು. ಕಳೆದ ಯುದ್ಧದಲ್ಲಿ ಜಪಾನಿಯರು ಬರ್ಮಾ ದೇಶವನ್ನು ವಶಪಡಿಸಿಕೊಂಡಾಗ ಅಲ್ಲಿಂದ ಬರುತಿದ್ದ ಅಕ್ಕಿ ಸರಬರಾಯಿಯು ಪೂರ್ತಿಯಾಗಿ ನಿಂತುಹೋದುದರಿಂದ ದೇಶದಲ್ಲಿ ಆಹಾರ ಪದಾರ್ಥಗಳ ಬಿಕ್ಕಟ್ಟು ಎಲ್ಲರಿಗೂ ತಿಳಿಯುವಂತಾಯಿತು. ೧೯೪೩ನೇ ಇಸವಿಯಲ್ಲಿ ಈ ಬಿಕ್ಕಟ್ಟು ಅತಿ ಕಠಿಣ ಸ್ಥಿತಿಯನ್ನು ಮುಟ್ಟಿ ಬಂಗಾಳದಲ್ಲಿ ಕ್ಷಾಮವು ತಲೆದೋರಿ ಅಲ್ಲಿನ ಜನರು ಆ ಸಮಯದಲ್ಲಿ ವರ್ಣಿಸಲಸಾಧ್ಯವಾದಷ್ಟು ಕಷ್ಟಗಳನ್ನು ಪಡಬೇಕಾಯಿತು. ಅದೇ ವರ್ಷ ಸರಕಾರದವರು 'ಹೆಚ್ಚು ಬೆಳೆ ಬೆಳೆಯಿರಿ' ಯೋಜನೆಯನ್ನು ಮಾಡಿದರು. ವ್ಯವಸಾಯ ಕ್ರಮಗಳನ್ನು ಸುಧಾರಿಸಿ ಪ್ರತಿ ಎಕರೆ ಜಮೀನಿನಲ್ಲಿಯೂ ಉತ್ಪತ್ತಿಯನ್ನು ಹೆಚ್ಚಿಸುವ ಮತ್ತು ಹತ್ತಿ ಪಗೈರೆ ಬೆಳೆಗಳನ್ನು ಕಡಿಮೆ ಮಾಡಿ ದವಸಧಾನ್ಯಗಳ ಬೆಳೆಯನ್ನು ಹೆಚ್ಚಿಸುವ ಯೋಜನೆಗಳನ್ನು ಸರಕಾರದವರು ಜನರ ಮುಂದಿಟ್ಟರು.

ಆದರೆ ಈ ಯೋಜನೆಗಳೆಲ್ಲವೂ ಹೆಚ್ಚಿನ ಅನುಭವ ಇಲ್ಲದೆ ಮಾಡಿದುದರಿಂದ ಇವುಗಳಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗಲಿಲ್ಲ. ೧೯೪೭ನೇ ಇಸವಿಯಲ್ಲಿ ಈ ಯೋಜನೆಗಳೆಲ್ಲವೂ ಪರ್ಯಾಲೋಚಿಸಲ್ಪಟ್ಟು ಪ್ರತಿಯೊಂದು ಯೋಚನೆಯಿಂದಲೂ ಎಷ್ಟೆಷ್ಟು ಹೆಚ್ಚಿಗೆ ಬೆಳೆಯನ್ನು ಬೆಳೆಯಬೇಕೆಂಬ ಗುರಿಯನ್ನು ನಿಶ್ಚಯಿಸಿಲು ಬೇಕಾದ ಯಂತ್ರೋಪಕರಣಗಳನ್ನು ತರಿಸಿಕೊಳ್ಳಲು ಹಣ ಸಾಲದೆ ಶ್ರಮ ಪಡಬೇಕಾಯಿತು. ಇದನ್ನು ಅರಿತು ನಮ್ಮ ಮಾನ್ಯ ಪ್ರಧಾನ ಮಂತ್ರಿಯವರು ನಾವು ಎಲ್ಲಾ ವಿಧದಲ್ಲಿ ಶ್ರಮಿಸಿ ೧೯೫೧ನೇ ಇಸವಿ ಅಪ್ರೆಲಿನಿಂದ ಖಂಡಿತವಾಗಿಯೂ ಆಹಾರ ಪದಾರ್ಥಗಳನ್ನು ಪರದೇಶಗಳಿಂದ ಆಮದು ಮಾಡಕೂಡದಾಗಿ ನಿರ್ಣಯ ಮಾಡಿರುತ್ತಾರೆ. ಅನಂತರ ವ್ಯವಸಾಯ ಮಂತ್ರಿಗಳು ಎಲ್ಲಾ ಪ್ರಾಂತೀಕ ಸರಕಾರಗಳೊಡನೆ ಆಲೋಚಿಸಿ 'ಹೆಚ್ಚಿಗೆ ಬೆಳೆಯಿರಿ' ಯೋಜನೆಗಳನ್ನು ಚರ್ಚಿಸಿ ಸುಧಾರಿಸಿದ ಯೋಜನೆಗಳನ್ನು ಅವರು ಈಗ ನಮಗೆ ಕೊಟ್ಟಿರುತ್ತಾರೆ. ೧೯೫೦ನೇ ಇಸವಿಯಲ್ಲಿ ನಮ್ಮ ಈಗ ಇರುವ ಹಾದಿಂದ ಜನಸಂಖ್ಯೆಗೆ ನಮ್ಮಲ್ಲಿ ಸರಾಸರಿ ಉತ್ಪತ್ತಿಯಾಗುವ ಉತ್ಪತ್ತಿಗಿಂತಲೂ ಸಾಧಾರಣ ೪೩ ಮಿಲಿಯ ಟನ್ನು ಆಹಾರ ಪದಾರ್ಥಗಳು ಹೆಚ್ಚಾಗಬೇಕಾಗಬಹುದು.

### ಪರಿಹಾರ.

ಇಂಡಿಯಾ ದೇಶದ ಆಹಾರ ಅಭಾವವು ಈ ಮೊದಲು ಹೇಳಿದ ಪ್ರಕಾರ ದೇಶದ ಒಟ್ಟು ಉತ್ಪತ್ತಿಯ ಶೇಕಡ ೧೦ರಷ್ಟು ಆಗಿದೆ. ಇದನ್ನು ಸರಿಗಟ್ಟಲು ಸರಕಾರವು ಈ ಸಮಸ್ಯೆಯನ್ನು ದೀರ್ಘಾಲೋಚನೆ ಮಾಡಿ ಈಗಿನ 'ಹೆಚ್ಚಿನ ಬೆಳೆ ಬೆಳೆಯಿರಿ' ಯೋಜನೆಗಳನ್ನು ಮಾಡಿದ್ದಾರೆ. ಇವುಗಳೆಲ್ಲವೂ ಒಡನೆ ಫಲ ಕೊಡುವ ಯೋಜನೆಗಳಾಗಿವೆ. ನಮ್ಮ ದೇಶದಲ್ಲಿ ನಾನಾ ಕಾರಣಗಳಿಂದ ಒಂದೊಂದು ಎಕ್ರೆ ಜಮೀನಿನಲ್ಲಿ ಬೆಳೆಯುವ ಸರಾಸರಿ ಬೆಳೆಯು ಚೈನಾ, ಜಪಾನ್ ಮತ್ತು ಇತರ ದೇಶಗಳಲ್ಲಿ ಆಗುವ ಉತ್ಪತ್ತಿಗಿಂತಲೂ ಪೂರಾ ಕಡಿಮೆಯಾಗಿರುವುದರಿಂದ ದೇಶದ ಉತ್ಪತ್ತಿಯನ್ನು ಹೆಚ್ಚಿಸಲು ಅತಿ ಸುಲಭ ದಾರಿಯೆಂದರೆ ನಮ್ಮ ವ್ಯವಸಾಯವನ್ನು ಇತರ ದೇಶಗಳಲ್ಲಿ ಮಾಡುವಂತೆಯೇ ಸುಧಾರಿಸಿದ ರೀತಿಯಲ್ಲಿ ಮಾಡುವುದು. ಈ ಸುಧಾರಣೆಗಳು ಎರಡು ರೀತಿಯವುಗಳಾಗಿವೆ. ಒಂದನೆಯದು ನೀರಿನ ಸರಬರಾಯಿಯನ್ನು ಸರಿಪಡಿಸುವುದು ಮತ್ತು ಭೂಮಿಯ ಫಲವತ್ತನ್ನು ಹೆಚ್ಚಿಸುವ ಇತರ ಸ್ಥಿತಿ ಗುಣಕಾರಿ ಕೆಲಸಗಳನ್ನು ಮಾಡುವುದು, ಎರಡನೆಯದಾಗಿ ಉತ್ತಮ ತರದ ಬೀಜಗಳನ್ನು ಉಪಯೋಗಿಸುವುದು. ನಮ್ಮ ಸೆಗಣಿ ಮತ್ತು ಗಂಜ

ಳಗಳನ್ನು ಸರಿಯಾಗಿ ಶೇಖರಿಸಿ ಮತ್ತು ಕಾಂಪೋಸ್ಟು ಗೊಬ್ಬರ ತುಂಬಾ ಮಾಡಿ ಕೃತಕ ಗೊಬ್ಬರಗಳನ್ನು ಹೆಚ್ಚಾಗಿ ಉಪಯೋಗಿಸಿ ನಮ್ಮ ಬೆಳೆಗಳಿಗೆ ಉತ್ತಮ ತರದ ಗೊಬ್ಬರಗಳನ್ನು ಒದಗಿಸುವುದು ಸುಧಾರಿಸಿದ ವ್ಯವಸಾಯದ ಹತ್ಯಾರುಗಳನ್ನು ಉಪಯೋಗಿಸುವುದು, ಮತ್ತು ಬೆಳೆಗಳಿಗೆ ರೋಗ ಮತ್ತು ಕ್ರಿಮಿಕೀಟಗಳ ತೊಂದರೆ ಬಾರದಂತೆ ಸಕಾಲದಲ್ಲಿ ಎಚ್ಚರಿಕೆಯಿಂದ ಔಷಧಿ ವಗೈರೆಗಳನ್ನು ಮಾಡಿ ಬೆಳೆಗಳನ್ನು ಕಾಪಾಡಿಕೊಳ್ಳುವುದು ಈ ಮೊದಲಾದ ಪ್ರತಿ ವರ್ಷವೂ ಮಾಡಬೇಕಾದ ಸುಧಾರಿಸಿದ ವ್ಯವಸಾಯ ಕ್ರಮಗಳನ್ನು ಕೈಗೊಳ್ಳುವುದು.

ಈ ವೇಲಿನ ಒಂದೊಂದು ರೀತಿಯಿಂದಲೂ ದೇಶದ ಒಂದೊಂದು ಪ್ರಾಂತ್ಯದಲ್ಲಿ ಎಷ್ಟೆಷ್ಟರ ಮಟ್ಟಿಗೆ ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯಬಹುದು ಎಂಬುದನ್ನು ಸರಿಯಾದ ರೀತಿಯಲ್ಲಿ ಅಂದಾಜು ಮಾಡಲಾಗಿದೆ. ಈ ರೀತಿಯ ಸುಧಾರಿಸಿದ ವ್ಯವಸಾಯ ಕ್ರಮಗಳನ್ನು ಕೈಗೊಳ್ಳುವುದರಿಂದ ದೇಶದ ಉತ್ಪತ್ತಿಯನ್ನು ೪೦ ಲಕ್ಷ ಟನ್ನುಗಳಷ್ಟು ಹೆಚ್ಚಿಸಬಹುದೆಂದು ಅಂದಾಜು ಮಾಡಲಾಗಿದೆ. ದೇಶದ ಉತ್ಪತ್ತಿಯನ್ನು ಹೆಚ್ಚಿಸಲು ಸುಧಾರಿಸಿದ ವ್ಯವಸಾಯ ಕ್ರಮಗಳನ್ನು ಕೈಕೊಳ್ಳುವುದು ಒಂದು ಮುಖ್ಯ ದಾರಿಯಾದರೂ ಹೊಸ ಜಮೀನುಗಳನ್ನು ರೂಪಿತಗೊಳಿಸುವುದರಿಂದಲೂ ನಮ್ಮ ಉತ್ಪತ್ತಿಯನ್ನು ಬಹುಮಟ್ಟಿಗೆ ಏರಿಸಬಹುದು. ಈಗಿನ ನಮ್ಮ ಇಂಡಿಯಾದೇಶದ ಒಟ್ಟು ವಿಸ್ತೀರ್ಣ ೭೮೧ ಮಿಲಿಯ ಎಕ್ರೆಗಳಷ್ಟಿದೆ. ಇದರಲ್ಲಿ ೧೬೫ ಮಿಲಿಯ ಎಕ್ರೆಗಳಷ್ಟು ಮನೆ ಮಾರುಗಳಿಂದಲೂ, ಬೆಟ್ಟಗುಡ್ಡಗಳಿಂದಲೂ, ನದಿ ಹೊಳೆಗಳಿಂದಲೂ ಕೂಡಿದೆ. ಉಳಿದ ೪೧೬ ಮಿಲಿಯ ಎಕ್ರೆಗಳ ಪೈಕಿ ೨೬೫ ಮಿಲಿಯ ಎಕ್ರೆಗಳು ವ್ಯವಸಾಯದಲ್ಲಿರುತ್ತವೆ. ದೇಶದಲ್ಲಿ ಇನ್ನೂ ೪೮ ಮಿಲಿಯ ಎಕ್ರೆಯಷ್ಟು ವ್ಯವಸಾಯಕ್ಕೆ ಯೋಗ್ಯವಾಗಿದ್ದು ಈಗ ಕಳೆತುಂಬಿಕೊಂಡು ಪಾಳು ಬಿದ್ದಿರುವ ಭೂಮಿಯು ಮಧ್ಯ ಇಂಡಿಯಾ ಪ್ರಾಂತಗಳಲ್ಲಿ ತುಂಬಾ ಇವೆ. ಇವುಗಳನ್ನು ಟ್ರೇಕ್ಟರುಗಳೆಂಬ ಹೊಡುವ ಯಂತ್ರಗಳ ಸಹಾಯದಿಂದ ಸುಲಭವಾಗಿ ರೂಪಿತಗೊಳಿಸಬಹುದು. ಮಧ್ಯಪ್ರಾಂತ್ಯ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಈಗಾಗಲೇ ಇಂತಹ ಯಂತ್ರಗಳ ಸಹಾಯದಿಂದ ಅನೇಕ ಸಾವಿರ ಎಕ್ರೆ ಜಮೀನುಗಳನ್ನು ವ್ಯವಸಾಯಕ್ಕೆ ತರಲಾಗಿದೆ. ಇದಕ್ಕಾಗಿ ಇಂಡಿಯಾ ಸರಕಾರವು ೫೫೫ ಟ್ರೇಕ್ಟರುಗಳನ್ನು ಅಮೇರಿಕಾ ದೇಶದಿಂದ ತರಿಸುತ್ತಾರೆ. ಈ ರೀತಿ ಹೊಸದಾಗಿ ರೂಪಿತಗೊಳಿಸಿದ ಭೂಮಿಗಳಿಂದ ೪ ಲಕ್ಷ ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ಉತ್ಪತ್ತಿ ಮಾಡಬಹುದೆಂದು ಅಂದಾಜುಮಾಡಲಾಗಿದೆ. ಅಂತೂ ೧೯೫೧ನೇ ಇಸವಿಯ ಅಂತ್ಯಕ್ಕೆ ಸಾಧಾರಣ ೧೧ ಲಕ್ಷ ಟನ್ನುಗಳಷ್ಟು ಆಹಾರ ಪದಾರ್ಥಗಳು ಮಾತ್ರ ಕಡಮೆಯಾಗಬಹುದು. ಪದ್ಯ ಕಂಪೋಸ್ಟು ಗೊಬ್ಬರ ತಯಾರಿಕೆಯ ಯೋಜನೆ ಅಥವಾ ಇತರ ಯೋಜನೆಗಳನ್ನು ಸ್ವಲ್ಪ ಹೆಚ್ಚಿನ ಶ್ರಮ ವಹಿಸಿ ಜಾರಿಗೆ ತಂದದ್ದೇ ಆದರೆ ಸುಲಭವಾಗಿ ಈ ಕಡಿಮೆ ಇರಬಹುದಾದ ಒಂದು ಲಕ್ಷ ಟನ್ನು ಆಹಾರ ಪದಾರ್ಥಗಳನ್ನು ಸುಲಭವಾಗಿ ಉತ್ಪತ್ತಿಮಾಡಿಕೊಳ್ಳಬಹುದು. ಹಾಗೂ ನಮಗೆ ಬೇಕಾದ ಆಹಾರ ಪದಾರ್ಥಗಳನ್ನು ನಾವೇ ಉತ್ಪತ್ತಿ ಮಾಡಿಕೊಳ್ಳುವುದು ಖಂಡಿತವಾಗಿ ಸಾಧ್ಯವಿದೆ ಎಂಬುದು ಇದರಿಂದ ನಾವು ತಿಳಿದುಕೊಳ್ಳಬೇಕಾದ ವಿಷಯವಾಗಿದೆ.

ಇಂಡಿಯಾ ದೇಶವನ್ನು ಇಂಡಿಯಾ ಮತ್ತು ಪಾಕಿಸ್ಥಾನ ಎಂಬದಾಗಿ ವಿಭಾಗಿಸಿದಾಗ ನೀರಿನ ಸರಬರಾಯಿ ಇದ್ದ ಪಂಜಾಬ ಮತ್ತು ಸಿಂಧೂ ಪ್ರಾಂತ್ಯಗಳ ಫಲಭರಿತವಾದ ಜಮೀನಿನ ಹೆಚ್ಚಿನ ಭಾಗವು ಪಾಕಿಸ್ಥಾನಕ್ಕೆ ಸೇರಿದುದರಿಂದ ನಮ್ಮಲ್ಲಿ ಈಗ ವ್ಯವಸಾಯದಲ್ಲಿರತಕ್ಕ ಜಮೀನುಗಳ ಪೈಕಿ ಬರೇ ಶೇಕಡ 20ರಷ್ಟು ಜಮೀನಿಗೆ ಮಾತ್ರ ನೀರಿನ ಸರಬರಾಯಿಯ ಅನುಕೂಲತೆಯು ಇದೆ. ಇಂಡಿಯಾ ಸರಕಾರವು ಈಗ ತಯಾರಿಸಿರುವ ದೊಡ್ಡ ದೊಡ್ಡ ನೀರಿನ ಸರಬರಾಯಿಯ ಯೋಜನೆಗಳು ಫಲಕಾರಿಯಾಗಲು ಇನ್ನೂ ಅನೇಕ ವರುಷಗಳು ಬೇಕಾಗಿದೆ. ಆದುದರಿಂದ ದೇಶದ ಉತ್ಪತ್ತಿಯನ್ನು ಸಧ್ಯದಲ್ಲಿ ಹೆಚ್ಚಿಸಲು ನಮ್ಮಲ್ಲಿರುವ ಕೆರೆ ಬಾವಿಗಳನ್ನು ದುರಸ್ತು ಮಾಡುವುದು ಮತ್ತು ಹೊಸ ಕೆರೆ ಬಾವಿಗಳನ್ನು ತೋಡುವುದು ಬಹು ಅವಶ್ಯ. ಅಂತೆಯೇ ಕೇಂದ್ರ ಸರಕಾರವು ಮತ್ತು ಪ್ರಾಂತೀಕ ಸರಕಾರಗಳೆಲ್ಲವೂ ಈ ವಿಷಯಕ್ಕೆ ತುಂಬಾ ನಿಗವಿಟ್ಟು ಸಾಧಾರಣ ೧೩,೧೧,೩೭೭ ಕೆರೆ ಬಾವಿಗಳನ್ನು ತೋಡಿ ಅಥವಾ ದುರಸ್ತುಮಾಡಿ ನೀರಿನ ಸರಬರಾಯಿಯನ್ನು ಹೆಚ್ಚಿಸಿದ್ದಾರೆ. ಈ ಪ್ರತಿಯೊಂದು ಕೆರೆ ಅಥವಾ ಬಾವಿಯಿಂದ ಸರಾಸರಿ ಹೆಚ್ಚು ಕಡಮೆ ೫ ಎಕ್ರೆ ಜಮೀನಿಗೆ ನೀರಿನ ಸರಬರಾಯಿಯಾಗಬಹುದೆಂದೂ ಒಂದೊಂದು ಕೆರೆ ಅಥವಾ ಬಾವಿಯಿಂದ ಸಾಧಾರಣ ವರ್ಷಕ್ಕೆ ಒಂದು ಟನ್ನು ಹೆಚ್ಚಿನ ಆಹಾರ ಪದಾರ್ಥವು ಉತ್ಪತ್ತಿಯಾಗಬಹುದೆಂದೂ ಅಂದಾಜು ಮಾಡಲಾಗಿದೆ. ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಅಲ್ಲಿಂದ ಕಾಲುವೆಗಳ ಮೂಲಕ ನೀರನ್ನು ಒದಗಿಸುವುದು ಬಹು ದೀರ್ಘ ಕಾಲದ ಮತ್ತು ಹೆಚ್ಚು ಹಣ ಖರ್ಚಾಗತಕ್ಕ ಯೋಜನೆಗಳಾಗಿವೆ. ಮತ್ತು ಇವುಗಳನ್ನು ಸಾಧಿಸಲು ಅನೇಕ ಸಾಹಿತ್ಯಗಳನ್ನು ನಾವು ಪರದೇಶಗಳಿಂದ ತರಿಸಬೇಕಾಗಿದೆ. ಆದರೆ ಕೆರೆ ಬಾವಿಗಳನ್ನು ದುರುಸ್ತು ಮಾಡುವುದಕ್ಕಾಗಲೀ ಅವುಗಳನ್ನು ಹೊಸದಾಗಿ ತೋಡುವುದಕ್ಕಾಗಲೀ ಹೆಚ್ಚಿನ ಶ್ರಮ ಮತ್ತು ಖರ್ಚು ಅಗತ್ಯವಿಲ್ಲದಿರುವುದು ಮಾತ್ರವಲ್ಲದೆ ನಮ್ಮ ಸಣ್ಣ ಸಣ್ಣ ಹಿಡುವಳಿಗಾರರಿಗೆ ಸಾಧ್ಯವಾಗುವ ಕೆಲಸವಾಗಿದೆ.

ದಕ್ಷಿಣ ಇಂಡಿಯಾದಲ್ಲಿ ಅನೇಕ ದೊಡ್ಡ ದೊಡ್ಡ ಕೆರೆಗಳು ಇವೆ. ಮಳೆಯ ನೀರನ್ನು ಇವುಗಳಲ್ಲಿ ದಾಸ್ತಾನುಮಾಡಿ ಇಟ್ಟುಕೊಂಡು ಮಳೆ ಕಡಮೆಯಾದಾಗ ಇದನ್ನು ಉಪಯೋಗಿಸಿಕೊಳ್ಳಬಹುದು. ಸರಕಾರವು ಇವುಗಳ ದುರಸ್ತು ಬಗ್ಗೆ ಕೂಡ ನಿಗವಿಟ್ಟಿರುತ್ತಾರೆ. ಮಧ್ಯ ಪ್ರಾಂತ್ಯಗಳಲ್ಲಿ ನಳಿಗೆ ಬಾವಿಗಳನ್ನು ತೋಡುವುದಕ್ಕೆ ತುಂಬಾ ಅನುಕೂಲವಿದೆ. ಈ ಒಂದೊಂದು ಬಾವಿಯಿಂದ ಸುಮಾರು ೪೦೦ ಎಕ್ರೆ ಭೂಮಿಗೆ ನೀರಿನ ಸರಬರಾಯಿಯಾಗಬಹುದು. ಸರಕಾರದವರು ಇಂಥಾ ಬಾವಿಗಳನ್ನು ಹೆಚ್ಚು ಹೆಚ್ಚಾಗಿ ತೋಡಿಸುತ್ತಿದ್ದಾರೆ. ಗಾಳಿ ಚಕ್ರಗಳ ಸಹಾಯದಿಂದಲೂ ನಾವು ನೀರನ್ನು ಒದಗಿಸಿಕೊಳ್ಳಬಹುದು. ಆದರೆ ಇವುಗಳು ಕೆಲಸಮಾಡಲು ಗಾಳಿಯು ನಮಗೆ ನೀರಿನ ಅವಶ್ಯಕತೆ ಇರುವ ಸಮಯದಲ್ಲಿ ಘಂಟೆಗೆ ೬ ಮೈಲಿಗಳಿಗಿಂತ ಹೆಚ್ಚಿನ ವೇಗದಲ್ಲಿ ಬೀಸುತ್ತಿರಬೇಕು. ಇವುಗಳನ್ನು ಸ್ಥಾಪಿಸಿ ಎಷ್ಟರ ಮಟ್ಟಿಗೆ ಪ್ರಯೋಜನ ಹೊಂದಬಹುದೆಂಬುದನ್ನು ಸರಕಾರದವರು ಪರಿಶೋಧಿಸುತ್ತಿದ್ದಾರೆ.

ನಮ್ಮ ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ನೀರಿನ ಸರಬರಾಯಿಯನ್ನು ಹೆಚ್ಚಿಸುವುದು ಒಂದು ವಿಧಾನ ಅಲ್ಲದೆ ಜೌಗು ಸ್ಥಳಗಳನ್ನು ಆರಿಸುವುದರಿಂದಲೂ ಇಳಿಜಾರು ಸ್ಥಳಗಳಲ್ಲಿ ಮಡಿಗಳನ್ನು ಮಾಡಿ ಬದಿಗಳಲ್ಲಿ ಹಾಕುವುದರಿಂದಲೂ, ಗೋಳು ಮಣ್ಣಿನ ಚೌಳುಗಳನ್ನು ಕಡಮೆ ಮಾಡುವುದರಿಂದಲೂ, ಹೆಚ್ಚು ಮಳೆ ಬೀಳುವ ಕಡೆಗಳಲ್ಲಿ ಮೇಲ್ಮಣ್ಣು ಕೊಚ್ಚಿದು ಹೋಗದಂತೆ ಕಾಪಾಡುವುದರಿಂದಲೂ ಭೂಮಿಯ ಫಲವತ್ತನ್ನು ನಾವು ಸ್ಥಿರವಾಗಿ ಹೆಚ್ಚಿಸಬಹುದು.

**ಜವುಗು ಸ್ಥಳಗಳನ್ನು ಆರಿಸುವುದು.**

ಹೆಚ್ಚು ಮಳೆ ಬೀಳುವ ಕೆಲವು ತಗ್ಗು ಸ್ಥಳಗಳಲ್ಲಿ ವ್ಯವಸಾಯ ಮಾಡಬಹುದಾದ ಕೆಲವು ಭೂಮಿಗಳು ವರ್ಷ ಇಡೀ ಅಥವ ವರ್ಷದ ಬಹು ಸಮಯದ ವರೆಗೆ ನೀರಿನಿಂದ ತುಂಬಿಕೊಂಡು ವ್ಯವಸಾಯ ಮಾಡಲಾಗದೆ ಇರುತ್ತವೆ. ಅಲ್ಲದೆ ಇಂಥಾ ಕಡೆಗಳಲ್ಲಿ ಸೊಳ್ಳೆಗಳು ಬೆಳೆದು ಮಲೇರಿಯಾ ವಗೈರೆ ಕಾಯಿಲೆಗಳು ಹರಡುವುದಕ್ಕೆ ಅನುಕೂಲವಾಗಿದೆ. ಇಂಥಾ ಜಮೀನುಗಳ ಜವುಗನ್ನು ಆರಿಸುವುದರಿಂದ ಮಲೇರಿಯಾ ವಗೈರೆ ಕಾಯಿಲೆಗಳನ್ನು ನಿವಾರಿಸಿ ಬತ್ತದ ಬೆಳೆಯನ್ನು ಕೂಡ ಬೆಳೆಯಬಹುದು. ಅಸ್ಸಾಂ, ಒರಿಸ್ಸಾ, ಮತ್ತು ದಕ್ಷಿಣ ಹಿಂದೂಸ್ಥಾನದಲ್ಲಿ ಇಂಥಾ ಜವುಗು ಸ್ಥಳಗಳು ತುಂಬಾ ಇವೆ ಇಟಲಿ ದೇಶದಲ್ಲಿ ಇದೇ ರೀತಿ ಜವುಗನ್ನು ಆರಿಸಿ ಅನೇಕ ಸ್ಥಳವನ್ನು ವ್ಯವಸಾಯ ಮಾಡಿ ದೊಡ್ಡ ದೊಡ್ಡ ಪಟ್ಟಣಗಳನ್ನು ಕೂಡ ಅವರು ಕಟ್ಟಿದ್ದಾರೆ.

**ಮಡಿಗಳನ್ನು ಮಾಡುವುದು ಮತ್ತು ಬದಿಗಳನ್ನು ಹಾಕುವುದು.**

ಇಳಿಜಾರು ಸ್ಥಳಗಳಲ್ಲಿ ವ್ಯವಸಾಯ ಮಾಡುವುದರಿಂದ ಅಂಥಾ ಸ್ಥಳದಲ್ಲಿ ಮಳೆಗಾಲದಲ್ಲಿ ಮಣ್ಣು ಕೊಚ್ಚಿದು ಹೋಗಿ ಭೂಮಿಯು ನಿಸ್ಸಾರವಾಗುತ್ತದೆ. ಈ ನಷ್ಟಗಳನ್ನು ತಡೆಗಟ್ಟಲು ಕಡಮೆ ಮಳೆ ಬೀಳುವ ಮತ್ತು ಸಾಧಾರಣ ಇಳಿಜಾರು ಸ್ಥಳಗಳಲ್ಲಿ ನೆಲದ ಏರು ತಗ್ಗುಗಳನ್ನನುಸರಿಸಿ ಬದಿಗಳನ್ನು ಹಾಕಿದಲ್ಲಿ ನೆಲದ ಮೇಲೆ ಹರಿದು ಹೋಗುವ ಮಳೆ ನೀರನ್ನು ತಡೆಗಟ್ಟುವುದರಿಂದ ಮಣ್ಣು ಕೊಚ್ಚಿದು ಹೋಗದಿರುವುದು ಮಾತ್ರವಲ್ಲದೆ ಭೂಮಿಯಲ್ಲಿ ತೇವವು ಸಾಕಷ್ಟು ಉಳಿದು ಒಳ್ಳೆಯ ಬೆಳೆಗಳನ್ನು ಬೆಳೆಸಬಹುದು. ಇಂಥಾ ಕೆಲಸಗಳನ್ನು ಬೊಂಬಾಯಿ ಸರಕಾರದವರು ದಕ್ಷಿಣ ಪ್ರಾಂತ್ಯದಲ್ಲಿ ಸಾಧಾರಣ ೪ ಲಕ್ಷ ಎಕ್ರೆಗಳಲ್ಲಿ ಮಾಡಿ ಆಗಿಂದಾಗ್ಯೆ ಬರುತ್ತಿದ್ದ ಬರಗಾಲ ಮತ್ತು ಕ್ಷಾಮಗಳನ್ನು ತಪ್ಪಿಸಿಕೊಂಡಿದ್ದಾರೆ. ಇಂಥಾ ಬದಿಗಳು ಮಳೆಗಾಲದಲ್ಲಿ ಒಡೆದುಹೋಗದಂತೆ ನಿಲ್ಲಬೇಕಾದರೆ ಅವುಗಳ ಮೇಲೆ ಹುಲ್ಲು ಅಥವಾ ಮರಗಿಡಗಳನ್ನು ಬೆಳೆಯುವುದು ಉತ್ತಮ. ಗುಡ್ಡ ಪ್ರಾಂತ್ಯಗಳಲ್ಲಿ ಹೆಚ್ಚು ಮಳೆ ಬೀಳುವ ಸ್ಥಳಗಳಲ್ಲಿ ಇಂಥಾ ಬದಿಗಳನ್ನು ಹಾಕುವುದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ಅಂಥ ಕಡೆಗಳಲ್ಲಿ ಇಳಿಜಾರಿಗೆ ತಕ್ಕಂತೆ ಬತ್ತದ ಗದ್ದೆಗಳನ್ನು ಮಾಡುವ ರೀತಿಯಲ್ಲಿ ಮಡಿಗಳನ್ನು ಮಾಡಬೇಕಾಗುತ್ತದೆ.

**ಚೌಳು ನೆಲಗಳನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡುವುದು.**

ಸಮುದ್ರ ಕರಾವಳಿಗಳಲ್ಲಿರತಕ್ಕ ಕೆಲವು ಸ್ಥಳಗಳು ಸಮುದ್ರವು ಉಕ್ಕುವಾಗ ಉಪ್ಪು ನೀರಿನಿಂದ ಆವರಿಸಲ್ಪಟ್ಟು ಮಣ್ಣು ಉಪ್ಪಾಗಿ ವ್ಯವಸಾಯಕ್ಕೆ ಅಯೋಗ್ಯವಾಗುತ್ತವೆ. ಸಮುದ್ರಕ್ಕೆ ಅಡ್ಡವಾಗಿ ಕಟ್ಟೆಗಳನ್ನು ಹಾಕಿ ಸಮುದ್ರದ ನೀರು ಬಾರದಂತೆ ಮಾಡಿ ಮಳೆಗಾಲದಲ್ಲಿ ಹೆಚ್ಚಿನ ನೀರು ಆರಿಹೋಗುವಂತೆ ಕಾಲುವೆಗಳನ್ನು ಕಟ್ಟಲು ಅಂಥಾ ನೆಲಗಳು ಪುನಃ ವ್ಯವಸಾಯಕ್ಕೆ ಯೋಗ್ಯವಾಗುತ್ತವೆ. ಬೊಂಬಾಯಿ ಸರ್ಕಾರವು ಈ ಕೆಲಸವನ್ನು ಮಾಡಿ ಅನೇಕ ಸ್ಥಳಗಳನ್ನು ರೂಪಿತಗೊಳಿಸಿದ್ದಾರೆ. ಜನರು ಕೂಡ ಒಟ್ಟುಗೂಡಿ ಯೋಗ್ಯ ಸಹಕಾರಿ ಸಂಸ್ಥೆಗಳನ್ನು ಮಾಡಿಕೊಂಡು ಹೆಚ್ಚಿನ ಖರ್ಚಿಲ್ಲದೆ ಎಷ್ಟೋ ಹೊಸ ಜಮೀನುಗಳನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಬಹುದು.

ಮಳೆ ಕಡಿಮೆ ಬೀಳುವ ಒಳದೇಶಗಳಲ್ಲಿ ಕೂಡ ಮಣ್ಣಿನಲ್ಲಿ ಲವಣಗಳು ಕ್ರಮೇಣ ಶೇಖರಿಸಲ್ಪಟ್ಟು ಮಣ್ಣು ವ್ಯವಸಾಯಕ್ಕೆ ಅಯೋಗ್ಯವಾಗುತ್ತದೆ. ಇವುಗಳನ್ನು ಕೂಡ ಯೋಗ್ಯ ವ್ಯವಸಾಯ ಕ್ರಮಗಳನ್ನು ಅನುಸರಿಸಿ ಪುನಃ ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಬಹುದು. ಈ ಕೆಲಸಗಳನ್ನು ಮಾಡಲು ದೊಡ್ಡ ದೊಡ್ಡ ಯಂತ್ರಗಳಾಗಲೀ ಹೆಚ್ಚಿನ ಹಣವ್ಯಯ ಮಾಡುವುದಾಗಲೀ ಬೇಕಾಗಿಲ್ಲ

**ಮಣ್ಣು ಕೊಚ್ಚಿದು ಹೋಗುವುದನ್ನು ನಿಲ್ಲಿಸುವಿಕೆ.**

ಮಳೆಗಾಲದಲ್ಲಿ ಹೆಚ್ಚಿನ ನೀರು ನಮ್ಮ ಹೊಲಗದ್ದೆಗಳ ಮೇಲೆ ಹರಿದು ಹೋಗುವಾಗ ಫಲವತ್ತಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ಮಣ್ಣಿನ ಸಾರವನ್ನು ಕೆಡಿಸುತ್ತಿರುವದು ನಮಗೆಲ್ಲರಿಗೂ

(೭ನೇ ಪುಟಕ್ಕೆ ಸಾಗಿದೆ)

# ನಮ್ಮ ಕೇಂದ್ರ ಮಂತ್ರಿಗಳ ಪರಿಚಯ.

ನಮ್ಮ ಕೇಂದ್ರ ಮಂತ್ರಿಮಂಡಲದ ಪುನರ್ಘಟನೆಯಾಗಿ ಹೊಸಮಂತ್ರಿಗಳು ಕೆಲವರು ಅಧಿಕಾರ ಸ್ವೀಕರಿಸಿರುವರು. ಪ್ರತಿಯೊಬ್ಬ ಮಂತ್ರಿಗೆ ಒಬ್ಬನಂತೆ ಡಿಪ್ಯುಟಿ ಮಂತ್ರಿಯನ್ನು ನೇಮಕ ಮಾಡಿಕೊಳ್ಳಬೇಕೆಂದಿದ್ದ ಸೂಚನೆಯು ಜಾರಿಯಲ್ಲಿ ಬಂದಿಲ್ಲ. ಡಾ. ಕೇಸ್ಕರ್, ದಿವಾಕರ್, ಸಂತಾನಂ, ಎ. ಪಿ. ಜೈನ್ ಮೊದಲಾದ ಹಳೆಯವರು ಮಾತ್ರ ಉಪಮಂತ್ರಿಗಳಾಗಿ ಇರುವರು. ಮಂತ್ರಿಮಂಡಳದ ಪುನರಚನೆಯಲ್ಲಿ ಕೆಲವು ಹೊಸ ಮಂತ್ರಿಗಳು ನೇಮಕ ಹೊಂದಿದ್ದಾರೆ. ಇವರ ವ್ಯಕ್ತಿವೈಶಿಷ್ಟ್ಯವನ್ನು ಚುಟುಕಾಗಿ ಇಲ್ಲಿ ಕೊಡಲಾಗಿದೆ.

### ಪಂಡಿತ ನೆಹರೂ

ಹೃದಯ ವೈಶಾಲ್ಯದ ಮಟ್ಟಿಗೆ ಭಾರತದ ಈ ಸರ್ವ ಪ್ರಧಾನ ನಾಯಕನನ್ನು ಸರಿಗಟ್ಟಬಲ್ಲವರು ಪ್ರಾಯಶಃ ಆಧುನಿಕ ಪ್ರಪಂಚದಲ್ಲೇ ಬೇರೆ ಇರಲಾರರು. ಹೃದಯ ಶುದ್ಧತೆ, ವಿಶಾಲ ಭಾವನೆ, ನೇರವಾದ ನೋಟದಂತೆಯೇ ಅವರ ಪ್ರಾಪಂಚಿಕ ಜ್ಞಾನ ಮತ್ತು ಬುದ್ಧಿ ಸೂಕ್ಷ್ಮತೆಯೂ ಅತಿ ಹೆಚ್ಚಿನದು. ತನಗೆ ಬೇಡವೆಂದು ಲೋಕದ ಯಾವ ಮೂಲೆಯವರೂ ಹೇಳಲೊಲ್ಲದಂತಿರುವ ನಾಯಕತ್ವ ಪಂಡಿತ ನೆಹರೂಗಳದು; ಅಂಥವರು ಜನಾಧಿಕಾರದಿಂದ ಭಾರತದ ನಾಯಕನಾಗಿ ಉಳಿದುಕೊಂಡಿರುವುದು ಭಾರತೀಯರ ಭಾಗ್ಯವಿಶೇಷ; ಆಧುನಿಕ ಭಾರತದ ಪಾಲಿನ ಸುದೈವಗಳ ಪೈಕಿ ಇದು ಎಲ್ಲಕ್ಕಿಂತ ಹೆಚ್ಚಿನದು. ಹೀಗಿದ್ದರೂ ಅಧಿಕಾರ ಯಂತ್ರ ಚಾಲನೆ ಮಾಡುವ ಕೌಶಲ್ಯವು ಪಂಡಿತ ನೆಹರೂಗಳಲ್ಲಿ ಪರಿಪೂರ್ಣವಿದೆ ಎನ್ನಲಾಗುವದಿಲ್ಲ. ಸಣ್ಣಪುಟ್ಟ ಕಿರುಕುಳಗಳುಳ್ಳ ರಾಜಕೀಯ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಾಗಲೆಲ್ಲಾ ಪಂಡಿತಜೀ ಜೇಡಿಪಿನೊಳಗೆ ಸಿಕ್ಕಿಕೊಂಡ ಆನೆಯಂತಾಗುತ್ತಾರೆ. ಅವರ ವ್ಯಕ್ತಿತ್ವವೆಂಬುದು ಸಣ್ಣ ವಿಷಯಗಳಿಗೆ ಹಿಡಿಸಲಾರದಷ್ಟು ದೊಡ್ಡದು.

### ಸರ್ದಾರ್ ಪಟೇಲ್

ನಿಜಕ್ಕೂ ಭಾರತದ ಆಡಳಿತ ರಥದ ಲಗಾಮು ಹಿಡಿದುಕೊಂಡಿರುವ ಕೈ ಸರ್ದಾರರದು. ಅವರ ದೃಢ ಬುದ್ಧಿ, ಸಂಘಟನಾ ಶಕ್ತಿ, ಖಂಡ ತುಂಡ ಮಾತುಕ್ರಿಗಳು 'ಭಾರತದ ಬಿಸ್ಮಾರ್ಕ್' 'ಉಕ್ಕಿನ ಮನುಷ್ಯ' ಎಂಬ ಬಿರುದುಗಳನ್ನು ಅವರಿಗೆ ಸಂಪಾದಿಸಿಕೊಟ್ಟಿವೆ. ಸರ್ದಾರರಿದ್ದಾರೆ ಆದ್ದರಿಂದ ಭಯವಿಲ್ಲ. ಪಂಡಿತ ನೆಹರೂಗಳು ಸ್ವತಂತ್ರ ಭಾರತದ ಹೃದಯವೆಂದಿದ್ದರೆ ಸರ್ದಾರ್ ಪಟೇಲರು ಅದರ ಕಣ್ಣು ಮತ್ತು ಭುಜವಾಗಿದ್ದಾರೆ.

### ರಾಜಾಜಿ

ಈಗ ತಾನೇ ರಾಜಾಜಿ ಸೇರಿಕೊಂಡದರಿಂದ, ಕೇಂದ್ರ ಮಂಡಲಿಗೆ ಹೊಸ ಜೀವ ಬಂದಂತಾಗಿದೆ. ಪ್ರಾಯಶಃ ಆಚಾರ್ಯರೊಂದು ಹೊಸ ದಾಖಲೆಯನ್ನೂ ನಿರ್ಮಿಸಿದರು. ಸ್ವತಂತ್ರ ಭಾರತದ ಸರ್ವ ಪ್ರಥಮ ಹಿಂದೀ ಗವರ್ನರ್ ಜನರಲ್ ರಾಜಾಜಿ ಆ ಪೀಠ ಬಿಟ್ಟ ವೇಳೆ ಆ ಶ್ರೇಷ್ಠ ಸ್ಥಾನಕ್ಕಿಂತ ಕಡಿಮೆಯದಾದುದನ್ನು ಸ್ವೀಕರಿಸುವುದೂ ಸಂಪ್ರದಾಯ ವಿರುದ್ಧ. ಗವರ್ನರ್ ಜನರಲ್ ಅಥವಾ ಅಧ್ಯಕ್ಷ ಹುದ್ದೆಯೆಂಬುದು ರಾಷ್ಟ್ರಾಧಿಕಾರದ ಕಳಶ; ಅಂತಹ ಶಿಖರವನ್ನು ಸಂದರ್ಭಾನುಸಾರವಾಗಿ, ಒಳ ಕಲಸಗಳಿಗೆ ಉಪಯೋಗಿಸುವುದೆಂದರೆ ಒಂದೋ ಅದರ ಮೌಲ್ಯ ತಗ್ಗಿಸಿದಂತಾಗುವದು, ಇಲ್ಲವೇ ಆ ಮೊದಲು ಅದನ್ನು ಶಿಖರೋಪಾದಿಯಾಗಿ ಇಟ್ಟುದೇ ತಪ್ಪೆಂದಾಗುವುದು. ಸಂಗತಿ ಹೀಗಿದ್ದರೂ ಈ ಕಾಲದಲ್ಲಿ ರಾಜಾಜಿಯಂತಹ ನಿಪುಣನ ಅಸಾಮಾನ್ಯ ಮೇಧಾವಿಯ ಅದಿಕೃತ ಸಹಾಯದ ಅವಶ್ಯಕತೆಯಿದೆ ಎಂಬುದರಿಂದ ಪಂಡಿತಜೀ ಒತ್ತಾಯಿಸಿದರು, ರಾಜಾಜಿ ಒಪ್ಪಿಕೊಂಡರು. ಆರೋಗ್ಯ ಪೀಡಿತರಾಗಿದ್ದರೂ ಈ ಮಾಜೀ ಗವರ್ನರ್ ಜನರಲ್ ಮಂತ್ರಿ ಕೆಲಸ ಮಾಡಲು ಒಪ್ಪಿಕೊಂಡುದು, ಜನಸೇವೆಗಾಗಿ ವ್ಯಕ್ತಿಗತ ಘನತೆಯನ್ನು ಬಿಡಬೇಕೆಂಬ ತತ್ವದ ಸಾರವಾಗಿ ರಾಜಾಜೀ ಬೆರಕೆಗೊಂಡುದರ ಸತ್ವ ಭಾವವು ಭಾರತದ ಮುಂದಿನ ರಾಜಕೀಯ ಆಗುಹೋಗುಗಳ ಮೇಲೆ ತೋರಿಬರಲಿದೆ. ನೆಹರು ಸ್ವತಂತ್ರ ಭಾರತ ಹಳತೆಯ ತಿರು... ಭಾಯಿ ಕಣ್ಣು, ಕೈ, ಆಗಿದ್ದರೆ ರಾಜಾಜಿ ಅದರ ಮೆದುಳಾಗಿದ್ದಾರೆ. ಈ ತ್ರಿಮೂರ್ತಿಗಳ ಮಿಲನದಿಂದ ಭಾರತ ಆಳಿಕೆ ತ್ರಿಕಾಲಾಬಾಧಿತವಾಯಿತು; ಭದ್ರವಾಯಿತು.

### ಮೌಲಾನಾ ಅಜಾದ್

ಪಾಕಿಸ್ತಾನ್ ಆಂದೋಲನದ ಕಾಲದಲ್ಲಾದರೂ ಮಿ. ಜಿನ್ನಾರದು ಕಾಂಗ್ರೆಸ್ ಪಾಳಯದಲ್ಲಿ ತೋರಿಬರುತಿದ್ದ ಮುಸ್ಲಿಮ್ ಘನವಂತನೆಂದರೆ ಮೌಲಾನಾ ಅಬುಲ್ ಕಲಾಮ್ ಅಜಾದರು. ಈಗ ಸುಮಾರು ನಾಲ್ಕು ಕೋಟಿಯಷ್ಟಿರುವ ಭಾರತೀಯ ಮುಸ್ಲಿಮರ ಮತ್ತು ಆ ದಿನಿಂದ ಇ ದಿನ ವರೆಗಿನ ರಾಷ್ಟ್ರೀಯ ಮುಸಲ್ಮಾನ್ ಸಂಗಡದ ಪ್ರತಿನಿಧಿಯಾಗಿ ಮೌಲಾನಾ ಅಜಾದರಿದ್ದಾರೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲೂ ಮುಖ್ಯ ರಾಷ್ಟ್ರನಾಯಕರ ಪಕ್ಕದಲ್ಲೇ ಇದ್ದವರು ಮೌಲಾನರು. ಈಗ ಆಡಳಿತ ಕಾಲದಲ್ಲಿ ಇವರನ್ನವರು ಅಗಲಿರುವದು ಅಸಾಧ್ಯ, ಜತೆಗೂಡಿಯೇ ಇದ್ದಾರೆ.

### ಸರ್ದಾರ್ ಬಲದೇವಸಿಂಗ್

ತುಲನಾತ್ಮಕವಾಗಿ ಅಲ್ಪಸಂಖ್ಯಾಕರಾಗಿದ್ದರೂ ಅತ್ಯಂತ ಪ್ರಭಾವಶಾಲಿ ಸಮಾಜವಾಗಿರುವ ಸಿಖ್ಖರಿಗನುಗುಣವಾದ ಸೇನಾ ಮಂತ್ರಿಯಾಗಿಯೇ ಇದ್ದಾರೆ. ಮಧ್ಯಾವಧಿ ಮಂತ್ರಿ ಮಂಡಲದಿಂದಾರಂಭಿಸಿ ಈ ವರೆಗೂ ರಕ್ಷಣಾ ಸಚಿವನಾಗಿದ್ದು ತನ್ನ ಅರ್ಹತೆಯನ್ನು ಪ್ರದರ್ಶಿಸಿದ್ದಾರೆ.

### ಡಾ ಅಂಬೇಡ್ಕರ್

ದಳಿತವರ್ಗದ ಮುಂದಾಳು ಇವರು. ಬುದ್ಧಿಶಕ್ತಿ, ಕಾನೂನು ಮತ್ತು ವಿಷಯಗಳ ಪರಿಜ್ಞಾನ, ನ್ಯಾಯ ನಿಷ್ಠುರತೆಯಲ್ಲಿ ಮುಂದುವರಿದ ಸಮಾಜಗಳ ಯಾವ ಮುಂದಾಳಿಗೂ ಡಾಕ್ಟರ್ ಅಂಬೇಡ್ಕರರು ಹಿಂದಿಲ್ಲ. ನಮ್ಮ ರಾಜ್ಯಾಂಗ ಶಾಸನ ಮತ್ತು ಹಿಂದೂ ಕೋಡ ಮಸೂದೆಯಂತಹ ಪ್ರಮುಖ ಮಸೂದೆಗಳ ಆಕಾರ, ನಿರ್ಮಾಣವುದರಲ್ಲಿ ಡಾ. ಅಂಬೇಡ್ಕರರು ಪ್ರದರ್ಶಿಸಿದ ಪಾಂಡಿತ್ಯವು ಅಸಾಧಾರಣವಾದುದು; ಶ್ಲಾಘನೀಯವಾದುದು. ಇವರು ಅತ್ಯಂತ ಮೇಧಾವಿ, ಹರಿಜನನೊಬ್ಬನೂ ಹಿಂದೆ ಹಾಕಬಲ್ಲನೆಂಬುದಕ್ಕೂ ಡಾ. ಅಂಬೇಡ್ಕರರ ವ್ಯಕ್ತಿತ್ವ ಮತ್ತು ಅವರು ಗಳಿಸಿರುವ ಸ್ಥಾನಮಾನಗಳೇ ನಿದರ್ಶನ.

### ಶ್ರೀ ಜಗಜಿ ವನರಾವ್

ಇವರು ಕಾಂಗ್ರೆಸ್ ಹರಿಜನ ಮಂತ್ರಿ. ಸಮರ್ಥರೂ ಯೋಗ್ಯರೂ ಇದ್ದಾರೆ. ಕಾರ್ಮಿಕರ ಮಂತ್ರಿಯಾಗಿರುವ ಇವರು ಮಜೂರರ ಕಡೆಗಿನ ಭಾರತ ಸರಕಾರದ ಧೋರಣೆಯನ್ನು ಸರಿಯಾಗಿ ಪ್ರತಿಬಿಂಬಿಸುವ ಕಾರ್ಯಗಳನ್ನು ಮಾಡಿದ್ದಾರೆ, ಘೋಷಣೆಗಳನ್ನಿತ್ತಿದ್ದಾರೆ. ಇಬ್ಬರು ಹರಿಜನ ಮಂತ್ರಿಗಳು ಇರುವುದೆಂದರೆ 'ಸವರ್ಣೀಯ ಹಿಂದುಗಳಿಂದ ಅವಮಾನಿತ ರೀತಿಯಲ್ಲಿ ದಮನಿಸಲ್ಪಡುತ್ತಿರುವವರು' ಎಂಬ ಹೆಸರಿಗೀಡಾಗಿರುವ ಭಾರತೀಯ ಹರಿಜನರಲ್ಲಿ ಯೋಗ್ಯತೆಯಿದ್ದರೆ, ಅವರಿಗೆ ಎಂತಹ ಗೌರವ ಹಾಗೂ ಸ್ಥಾನ ಇವೆ ಎಂಬುದರ ದ್ಯೋತಕವಾಗಿ...

### ಶ್ರೀ ಕಿದ್ವಾಯಿ

ಇವರು ಮತ್ತೊಬ್ಬ ಮುಸ್ಲಿಂ ಸಚಿವ. ಉತ್ತರ ಪ್ರದೇಶದವರು. ಹಿಂದೆ ತಮ್ಮ ವಿಶೇಷ ರೀತಿಯ ಸಮತಾವಾದ ಭಾವನೆ ಪ್ರದರ್ಶಿಸುತ್ತಿದ್ದವರು. ಈ ಬರಿ ಉತ್ತರ ಪ್ರದೇಶದ ಕಾಂಗ್ರೆಸ್ ಪಕ್ಷದಿಂದ ಒಡೆದು ಹೋಗಿರುವ ವಿರುದ್ಧ ಪಂಗಡಿಗರ ಗುಪ್ತ ಚಾಲಕತ್ವವು ಶ್ರೀ ಕಿದ್ವಾಯಿಯವರದು, ಎಂಬ ಅಪವಾದನೆಗಳಿವೆ. ಅದರ ದು ಪ್ರತ್ಯಕ್ಷ ತೋರಿಬರುವ ಆಕಾರದಲ್ಲಿ ರುತಿದ್ದರೆ ಕಿದ್ವಾಯಿಯವರು ಕೇಂದ್ರ ಮಂಡಲಿಯಲ್ಲಿ ಇರುವುದು ಅಸಾಧ್ಯವಾಗುತಿತ್ತು.

### ಶ್ರೀ ಗಾಡ್ಗಿಲ್

ಇವರು ಡಾ. ಅಂಬೇಡ್ಕರರಂತೆಯೇ ಬೊಂಬಾಯಿಯವರ, ಅವರಂತೆಯೇ ವಯಸ್ಸಿನ ಮಧ್ಯಗಡಿ ದಾಟಿದ ಮೇಲೆ ವಿವಾಹವಾದವರು ಮೋಘವಿಯೂ ಹೌದು. ರಾಜೀನಾಮೆ ಕೊಡುವರೆಂಬ ಸುದ್ದಿಯು ಇವರ ಕುರಿತು ಹಟ್ಟಿದ್ದರೂ ಕೊಟ್ಟಿಲ್ಲ.

### ಶ್ರೀ. ಎನ್. ಜಿ ಅಯ್ಯಂಗಾರ್

ದೇಶ ವಿಭಜನಾ ಯೋಜನೆಯು ಮೊದಲು ಬ್ರಿಟಿಷ್ ಮಂತ್ರಿ ಮಂಡಳಿಯು ಮುಂದಿಟ್ಟಿದ್ದ ಪ್ರಾಂತ್ಯ ಪಂಗಡಗಳ ಯೋಜನೆಯಲ್ಲಿ ಪ್ರಧಮತಃ ಯಾರ ಕಣ್ಣಿಗೂ ಬೀಳದಿದ್ದ ಹುಳುಕನ್ನು ಎತ್ತಿ ತೋರಿಸಿ, ಒಮ್ಮೆಗೇ ರಾಷ್ಟ್ರ ನಾಯಕರ ವಿಶೇಷ ಲಕ್ಷ್ಯಕ್ಕೆ ಪಾತ್ರರಾಗಿ, ಮಂತ್ರಿಸ್ಥಾನಕ್ಕೆ ಬಂದವರು ಶ್ರೀ. ಎನ್ ಗೋಪಾಲಸ್ವಾಮಿ ಅಯ್ಯಂಗಾರ್. ತನ್ನ ಈ ವರೆಗಿನ ಸಚಿವತನದ ಅವಧಿಯಲ್ಲಿ ಉಪಯುಕ್ತ ಹಾಗೂ ಶ್ಲಾಘನೀಯ ಕೆಲಸಗಳನ್ನು ಮಾಡಿದ್ದಾರೆ; ಪ್ರಾಂತ್ಯವಾರಾಗಿ ಹೇಳುವದಾದರೆ ಮದ್ರಾಸಿನವರು ರಾಜಾಜಿ ಮತ್ತು ಆಯ್ಯಂಗಾರರಂತಹ ಅಮೂಲ್ಯ ಮೆದುಳುಗಳನ್ನು ದಿಲ್ಲಿ ಮಂಡಲದಲ್ಲಿ ಕುಳಿಸಿದ ಕೀರ್ತಿ ಮದ್ರಾಸಿಗೆ ಸಲ್ಲುತ್ತದೆ.

### ಶ್ರೀ ಮೆಹತಾಬ್

ಇವರು ಒರಿಸ್ಸಾದ ಪ್ರಧಾನ ಮಂತ್ರಿಯಾಗಿದ್ದವರು. 'ಕ್ವಿಟ್ ಇಂಡಿಯಾ' ಚಳವಳದ ವೇಳೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯನಾಗಿದ್ದು, ಗಾಂಧಿಜೀ ಸಮೇತ ಇತರ ಅಗ್ರಗಣ್ಯ ಮುಖಂಡರೊಂದಿಗೆ ಸ್ಥಾನಬದ್ಧತೆಯಲ್ಲಿಡಲ್ಪಟ್ಟಿದ್ದ ಸ್ವಾತಂತ್ರ್ಯವೀರ, ಧೈರ್ಯ, ಸ್ಥೈರ್ಯ, ಸೇವಾ ಸ್ಫೂರ್ತಿ ಮತ್ತು ಆಡಳಿತ ಜಾಣ್ಮೆಯಿದ್ದವರು.

### ಶ್ರೀ. ಕೆ ಎಮ್ ಮುನ್ಷಿ

ಭಾರತದ ಚತುರ ಕಲೆಗಳ ಪೈಕಿ ಶ್ರೀ ಮುನ್ಷಿ ಒಬ್ಬರು; ಬೊಂಬಾಯಿ ಪ್ರಾಂತ್ಯದ ಹಿಂದಿನ ಮಂತ್ರಿ ಮಂಡಲಿಯಲ್ಲಿ ಇವರು ಗೃಹ ಸಚಿವರಾಗಿದ್ದರು. ತನ್ನ ಆಡಳಿತ ಸಾಮರ್ಥ್ಯವನ್ನು ವಿಶೇಷ ರೀತಿಯಿಂದ ಪ್ರದರ್ಶಿಸಿದ್ದರು. ಇವರು ವಕೀಲ, ಗ್ರಂಥಕರ್ತ, ಪತ್ರಿಕಾಕರ್ತ, ವಾಗ್ಮಿ, ಶಾಸನ ತಜ್ಞ, ಬಹುಮುಖ ಪ್ರತಿಭೆಯವರು. ಇನ್ನು ಹೈದರಾಬಾದ್ 'ಪೋಲೀಸ್ ಆಚರಣೆ'ಯ ವೇಳೆ ಭಾರತ ಸರಕಾರದ ಪ್ರತಿನಿಧಿಯಾಗಿ ಅಲ್ಲಿದ್ದರು. ಆ ಬಿಕ್ಕಟ್ಟಿನ ಅವಧಿಯಲ್ಲಿ ಮುನ್ಷಿಯವರ ವ್ಯಕ್ತಿ ವೈಶಿಷ್ಟ್ಯವು ತೋರಿಬರುವ ವಿಶೇಷ ಕಾರ್ಯಗಳಿದ್ದವು. ಶ್ರೀ. ಕನ್ಹಯಾಲಾಲ್ ಮಾಣಿಕ್‌ಲಾಲ ಮುನ್ಷಿಗಳ ಹೃದಯವನ್ನು ಸಜ್ಜದ ಪ್ರಗತಿಶೀಲರೆನಬಹುದು; ಆದರೆ ಅವರ ಪಾಳನ್ನು ತಪ್ಪಿಸದಿರಲಾಗವದಿಲ್ಲ. ಮುನ್ಷಿಗಳ ಸೇರ್ಪಡೆಯಿಂದ ಕೇಂದ್ರ ಮಂಡಲಿಯ ಬುದ್ಧಿಮಂತಿಕೆ ಪರಿಮಾಣವು ಹೆಚ್ಚಿತೆಂಬುದು ನಿರ್ವಿವಾದ.

### ಶ್ರೀ. ಶ್ರೀಪ್ರಕಾಶ

ಅಸ್ಸಾಮಿನ ಗವರ್ನರ್ ಸ್ಥಾನದಿಂದ ಕೇಂದ್ರದ ಮಂತ್ರಿ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿರುವ ಶ್ರೀ ಶ್ರೀಪ್ರಕಾಶರು ವಿಶಾಲ ಹೃದಯದ ಸರಳಿ, ಪಾಕಿಸ್ಥಾನದಲ್ಲಿ ಭಾರತದ ಹೈಕಮಿಶನರ್ ಆಗಿದ್ದು ಕಂಟಕಮಯ ವಾತಾವರಣದಲ್ಲಿ ಕಾರ್ಯ ಸಾಗಿಸಿದವರು. ದೀರ್ಘಾವಧಿಯಿಂದ ದೇಶಸೇವೆಯನ್ನು ಮಾಡುತ್ತ ಬಂದಿರುವ ನಿಷ್ಠಾವಂತ ಕಾಂಗ್ರೆಸಿಗ. ಸ್ವಾತಂತ್ರ್ಯ ಪೂರ್ವ ಕೇಂದ್ರ ಎಸೆಂಬ್ಲಿಯಲ್ಲಿ ಆಗಾಗ ಚುಚ್ಚುನಗೆಯನ್ನೆಬ್ಬಿಸಿ, ಅಲ್ಲಿಯ ಬಿಗಿ ವಾತಾವರಣದಲ್ಲಿಯೂ ವಿನೋದ ಪ್ರವಾಹವನ್ನು ಹರಿಸುತ್ತಿದ್ದವರು ಶ್ರೀ. ಪ್ರಕಾಶ್. ಆಡಳಿತ ಯೋಗ್ಯತೆ ಮತ್ತು ಗಂಭೀರತೆಯು ಶ್ರೀಪ್ರಕಾಶರಲ್ಲಿ ಕಡಿಮೆಯಿಲ್ಲವಾದರೂ, ಅವರು ಬುದ್ಧಿಯ ಸಾಮಾನ್ಯ ಪ್ರಮಾಣಕ್ಕೆ ಮಿಕ್ಕಿ ಅವರಲ್ಲಿರುವುದರಿಂದ ಘನತೆಯನ್ನು ಸ್ವಲ್ಪ ಕ್ಕಿಂತ ಹೆಚ್ಚಾಗಿ ಸಾಗಿಸಿದ್ದಾರೆ. ದಿಲ್ಲಿ ಸಚಿವ ಕೂಟದಲ್ಲಿ ಶ್ರೀ. ಶ್ರೀಪ್ರಕಾಶರು ಸೇರಿಕೊಂಡುದರಿಂದ ವಿನೋದ ವಿಚಾರಗಳ ಹೊಸ ಪ್ರಭಾವವು ಅಲ್ಲಿ ಸೇರಿಕೊಂಡಂತಾಯಿತು.

### ಶ್ರೀ ಚಿಂತಾಮಣಿ ದೇಶಮುಖ್

ಕೇಂದ್ರ ಸರಕಾರದ ಆರ್ಥಿಕ ಸಚಿವರಾಗಿ ಡಾಕ್ಟರ್ ಮತ್ತಾಯರ ಬದಲು ನೇಮಕವಾಗಿರುವ ಇವರು ೪೮ ವಯಸ್ಸಿನವರು. ಹಿಂದೂಸ್ಥಾನದಲ್ಲಿ ಆರ್ಥಿಕ ತಜ್ಞ

(ಮನೇ ಪುಟ ನೋಡಿ)

# ಕೊಡಗು

ತಾ. ೨-೬-೧೯೫೦ನೇ ಶುಕ್ರವಾರ

## ನಿಯಂತ್ರಣಗಳು.

ಯುದ್ಧದ ಕಾಲದಲ್ಲಿ ಸೈನ್ಯದ ಉಪಯೋಗಕ್ಕಾಗಿ ಆಹಾರ ಮತ್ತು ಇತರ ಪದಾರ್ಥಗಳ ಬೆಲೆಯು ನಿಯಂತ್ರಿಸಲ್ಪಟ್ಟಿತು. ಅದೇ ಸಮಯದಲ್ಲಿ ಸಾಕಷ್ಟು ಪದಾರ್ಥಗಳು ಹಿಂದೂದೇಶದಲ್ಲಿ ದೊರೆಯದಿದ್ದ ಕಾರಣ ಇದ್ದುದನ್ನು ಎಲ್ಲರಿಗೂ ಸಮಾನವಾಗಿ ಹಂಚುವ ದೃಷ್ಟಿಯಿಂದ ರೇಶನ್ ಪದ್ಧತಿಯು ಜಾರಿಯಲ್ಲಿ ಬಂತು. ಯುದ್ಧ ಮುಗಿದ ಕೂಡಲೇ ಈ ನಿಯಂತ್ರಣಗಳು ಹೋಗಬೇಕೆಂದು ಒಂದು ಚಳವಳ ನಡೆಯಿತು. ಇದಕ್ಕೆ ಮಹಾತ್ಮಾ ಗಾಂಧಿಯವರ ಬೆಂಬಲವೂ ಇತ್ತು. ಆದರೆ ವಾತಾವರಣವು ಇನ್ನೂ ಯೋಗ್ಯ ಸ್ಥಿತಿಗೆ ಬಾರದ್ದರಿಂದ ಇಂಡಿಯಾ ಸರಕಾರದವರು ನಿಯಂತ್ರಣಗಳನ್ನು ಮುಂದುವರಿಸಿದರು. ಹಾಗೆ ಮುಂದುವರಿಸುವ ಕಾಲಕ್ಕೆ ನಮ್ಮ ದೇಶದಲ್ಲಿ ಸಾಕಷ್ಟು ಪದಾರ್ಥಗಳನ್ನು ಬೆಳೆಸಿ ನಿಯಂತ್ರಣಗಳನ್ನು ತೆಗೆದು ಹಾಕುವದಾಗಿ ಹೇಳಿದ್ದರು. ಯುದ್ಧ ಮುಗಿದು ಐದು ವರ್ಷಗಳು ಕಳೆದವು. ಇನ್ನೂ ನಿಯಂತ್ರಣವನ್ನಿಟ್ಟುಕೊಳ್ಳುವದು ಸರಿಯಲ್ಲವೆಂದೇ ಹೇಳಬೇಕು. ಆದುದರಿಂದ ಈ ನಿಯಂತ್ರಣಗಳನ್ನು ತೆಗೆಯಬೇಕೋ ಬೇಡವೋ ಎಂಬ ಆಲೋಚನೆಯನ್ನು ಈಗ ಪುನಃ ಮಾಡಲಾಗುತ್ತಿದೆ.

ಕೊಡಗಿನ ಮಟ್ಟಿಗೆ ಹೇಳುವದಾದರೆ ಎಲ್ಲಾ ಪದಾರ್ಥಗಳ ನಿಯಂತ್ರಣವನ್ನು ಕೂಡಲೇ ತೆಗೆದುಹಾಕುವುದೇ ಉತ್ತಮವಾಗಿದೆ. ಇಲ್ಲಿಯ ಹೆಚ್ಚಿನ ಜನರು ವ್ಯವಸಾಯಗಾರರು. ಈಗ ಅವರು ಬೆಳೆದು ಮಾರುವ ಆಹಾರ ಪದಾರ್ಥಗಳಿಗೆ ಮಾತ್ರ ಬೆಲೆ ನಿಯಂತ್ರಣವಿದೆ. ಅವರ ನಿತ್ಯ ಜೀವನಕ್ಕೆ ಅವಶ್ಯವಿರುವ ಇತರ ವಸ್ತುಗಳು ಹೆಚ್ಚಾಗಿ ಹೊರಗಿನಿಂದ ಬರುವವಾಗಿದ್ದು ಅವುಗಳಿಗೆ ಬೆಲೆ ನಿಯಂತ್ರಣವೇನೂ ಇರುವುದಿಲ್ಲ. ಬಡರೈತರು ತಮ್ಮ ಬತ್ತವನ್ನು ನಿಯಮಿತ ಬೆಲೆಗೆ ಮಾರಿ ಸಿಕ್ಕುವ ಅಲ್ಪಸ್ವಲ್ಪ ಹಣದಿಂದ ತಮಗೆ ಮುಖ್ಯವಾಗಿ ಬೇಕಾದ ಹೊದೆಯುವ ವಸ್ತ್ರಗಳಿಗೂ, ಜೀವನದ ಇತರ ಅವಶ್ಯಕ ವಸ್ತುಗಳಿಗೂ ಬಹು ದೊಡ್ಡ ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಇದರಿಂದ ಅವರ ಆರ್ಥಿಕ ಪರಿಸ್ಥಿತಿಯು ಬಹು ಹೀನವಾಗಿದೆ.

ಅಲ್ಲದೆ ಈ ನಿಯಂತ್ರಣಗಳಿರುವದರಿಂದ ಕಳ್ಳಪೇಟೆ, ಲಂಚಕೋರತನ ಮೊದಲಾದ ಅಕೃತ್ಯಗಳಿಗೆ ತುಂಬಾ ಅವಕಾಶವಿದೆ. ಸರಕಾರದವರು ಎಷ್ಟೇ ಪ್ರಯತ್ನಿಸಿದರೂ [illegible] ಈ ಅನೀತಿಯ ಕಾರ್ಯಗಳನ್ನು ನಿವಾರಿಸಲು ನಿಯಂತ್ರಣದ ಅವಶ್ಯಕತೆಯು ಬಹು ಕಡಿಮೆಯಾಗಿರುವ ಈ ಕಾಲದಲ್ಲಿ ಅಂಥಾ ನಿಯಂತ್ರಣಗಳನ್ನೇ ತೆಗೆದುಹಾಕುವದು ಉತ್ತಮ ಉಪಾಯವಾಗಿದೆ. ನಿಯಂತ್ರಣವನ್ನು ತೆಗೆದ ಕೂಡಲೇ ಒಂದು ವೇಳೆ ಸ್ವಲ್ಪ ಬೆಲೆ ಏರಿ ತೋರಬಹುದು. ಆದರೆ ಸಮಯ ಕಳೆದಂತೆ ಮಾರ್ಕೆಟ್ಟಿನ ಸ್ಥಿತಿಗಳು ಸರಿಹೋಗುವವು. ಪೆಟ್ರೋಲಿನ ಬೆಲೆ ನಿಯಂತ್ರಣವನ್ನೂ ಕೂಡ ಹೆಚ್ಚಿನ ವಹಿವಾಟಿಗಾಗಿ ಪೆಟ್ರೋಲನ್ನೇ ನಂಬಿರುವ ಕೊಡಗಿನಲ್ಲಿ ಕೂಡಲೇ ತೆಗೆಸಿಹಾಕುವದು ಅಗತ್ಯವಾಗಿದೆ. ಒಟ್ಟಾರೆ ಹೇಳುವದಾದರೆ ಎಲ್ಲಾ ತರದ ನಿಯಂತ್ರಣಗಳನ್ನು ತೆಗೆದ ಹಾಕುವದರಿಂದಲೇ ಇಲ್ಲಿಯ ಜನರ ಹಿತವನ್ನು ಸಾಧಿಸಿದಂತಾಗುವದೆಂಬ ವಿಚಾರವನ್ನು ಸ್ಥಳೀಯ ಸರಕಾರದವರು ಇಂಡಿಯಾ ಸರಕಾರಕ್ಕೆ ತಿಳಿಸುವದು ಯುಕ್ತವಾಗಿದೆ.

## ವರ್ತಮಾನ.

ಮದ್ರಾಸ್ ಏರ್‍ಯದ ಕಮಾಂಡಿಂಗ್ ಆಫೀಸರಾದ ಮೇಜರ್ ಜನರಲ್ ಎ. ಎ. ರುದ್ರರವರು, ಬ್ರಿಗೇಡಿಯರ್ ಚೆಪ್ಪುಡೀರ ಪೊನ್ನಪ್ಪನವರೊಡನೆ ತಾ ೩ ರಲ್ಲಿ ಕೊಡಗಿಗೆ ಬಂದು ತಾ. ೬ ರ ವರೆಗೆ ಇಲ್ಲಿರುವರು. ಆ ಸಂದರ್ಭದಲ್ಲಿ ಅಂದರೆ ತಾ. ೪-೬-೫೦ರ ಬೆಳಗ್ಗೆ ೧೧ ಗಂಟೆಗೆ ಅವರು ಕೊಡಗಿನ ಮಾಜಿ ಸಿಪಾಯಿಯರನ್ನು ರಾಜಾಸೀಟಿನಲ್ಲಿ ಭೇಟಿಯಾಗುವರು.

ಸಾರಾಯಿಗೆ ಪರ್ಮಿಟ್ ಇರುವವರು ಅದರಂತೆ ಸಾರಾಯಿ ಹೊಂದಿಕೊಳ್ಳಲು ತಾವು ಖುದ್ದಾಗಿ ಹಾಜರಾಗದಿದ್ದಾಗ ಇತರರೊಡನೆ ಅದನ್ನು ಕಳುಹಿಸಿದರೆ ಅದರೊಂದಿಗೆ ಸಾರಾಯಿ ಕೊಡಬೇಕೆಂದು ಒಂದು ಚೀಟಿ ಕಳುಹಿಸದಿದ್ದರೆ ಮುಂದೆ ಅಂಥಾ ಪರ್ಮಿಟಗಳಿಗೆ ಸಾರಾಯಿ ಕೊಡಲ್ಪಡುವದಿಲ್ಲವೆಂದು ಪ್ರಕಟವಾಗಿದೆ.

ಈ ತಾರೀಕು ೮ ಮತ್ತು ೯ರಲ್ಲಿ ಕೊಡಗು ಪ್ರಾಂತೀಕ ರೆಡ್‌ಕ್ರಾಸ್ ಸಂಘದ ಆಶ್ರಯದಲ್ಲಿ ಕಾಲೇಜ್ ಆವರಣದಲ್ಲಿ ಶಿಶು ಪ್ರದರ್ಶನವು ನಡೆಯುವದು. ತಾ. ೮ರ ಸಾಯಂಕಾಲ ೪ ಗಂಟೆಗೆ ಈ ಸಂಸ್ಥೆಯ ಸಹಾಯಾರ್ಥ ಒಂದು ಸಂಗೀತ ಕಛೇರಿಯು ಕಾಲೇಜ್ ಹಾಲ್‌ನಲ್ಲಿ ಕೆಲವು ಮೈಸೂರಿನ ಸಂಗೀತಗಾರರಿಂದ ನಡೆಯುವದು.

ಪೂರ್ವಬಂಗಾಳದಿಂದ ಬಂದ ನಿರಾಶ್ರಿತರಿಗಾಗಿ ಮೈಸೂರು ಮತ್ತು ಕೊಡಗು ಸರಕಾರಗಳು ಫ್ರೇಜರ್‌ಪೇಟೆ ಬಳಿ ಒಂದು ವಸಾಹತನ್ನು ಏರ್ಪಡಿಸುವದಾಗಿ ಮಾತುಕತೆ ನಡೆದಿದ್ದು ಈ ಬಗ್ಗೆ ರಾಮಕೃಷ್ಣ ಮಿಶನಿನವರು ತುಂಬಾ ಆಸ್ಥೆ ವಹಿಸಿದ್ದುದು ಸರಿಯಷ್ಟೆ. ಆದರೆ ಈ ರೀತಿ ಬಂಗಾಳದ ಜನರು ಬೇರೆ ಬೇರೆ ಭಾಗಗಳಿಗೆ ವಲಸೆ ಹೋಗುವದನ್ನು ವಿರೋಧಿಸಿ ಶ್ರೀ ಶ್ಯಾಮಪ್ರಸಾದ ಮುಖರ್ಜಿ ಮೊದಲಾದವರು ಬೇರೆ ಕಾರ್ಯಕ್ರಮ ಕೈಕೊಂಡಿರುವದರಿಂದ ಈ ವಸಾಹತು ಸದ್ಯಕ್ಕೆ ತೆರೆಯಲ್ಪಡಲಾರದೆಂದು ತಿಳಿಯಬಂದಿದೆ.

ಕಾಶ್ಮೀರ ಸಮಸ್ಯೆಯ ತೀರ್ಮಾನದ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಿಸಲ್ಪಟ್ಟಿರುವ ಸರ್ ಓವೆನ್ ಡಿಕ್ಸನರವರು ಕೊಡಗಿಗೆ ಬಂದು ಚೀಫ್ ಕಮಿಷನರ ಅತಿಥಿಯಾಗಿ ಒಂದು ದಿನ ಇರುವರೆಂದು ವರ್ತಮಾನವಿದೆ.

೧೯೪೭ನೇ ನವಂಬರ್ ೨೧ರಲ್ಲಿ ಕಾಶ್ಮೀರ ಯುದ್ಧದಲ್ಲಿ ಪೂಂಚ್ ಕ್ಷೇತ್ರದಲ್ಲಿ ತೋರಿಸಿದ ಅಸಾಮಾನ್ಯ ಶೌರ್ಯ, ಮುಂದಾಳ್ತನ ಮತ್ತು ಕುಶಲತೆಗಳಿಗಾಗಿ ಸುಬೆದಾರ ನಡಿಕೇರಿಯಂಡ ನಂಜಪ್ಪ ಭೀಮಯ್ಯನವರಿಗೆ 'ವೀರಚಕ್ರ' ದ ಪ್ರಶಸ್ತಿಯನ್ನು ಕೇಂದ್ರ ಸರಕಾರವು ಕೊಟ್ಟಿದೆ.

ತಾರೀಕು ೨೫-೬-೫೦ರಲ್ಲಿ ಮಡಿಕೇರಿಯಿಂದ ಫ್ರೇಜರ್‌ಪೇಟೆ ಮಾರ್ಗವಾಗಿ ಕೊಡ್ಲಿಪೇಟೆಗೆ ಹೋಗುವ ಆದಿ ಶ್ರೀ ಕಾವೇರಿ ಸರ್ವಿಸಿನ ಬಸ್ಸೊಂದು ಆನೆಕಾಡಿನ ಹತ್ತಿರ ಮಗುಚಿ ಬಿದ್ದು ಕೆಲವರಿಗೆ ಜಖಂ ಆಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು.

ವೀರರಾಜಪೇಟೆಯಲ್ಲಿ ಇಂಡಿಯಾ ಸರ್ಕಾರದವರಿಂದ ತೆರೆಯಲ್ಪಡುವ ಕೈಗಾರಿಕಾ ತರಬೇತು ಶಾಲೆಗೆ ಮಹಿಳೆಯರಿಗೂ ಪ್ರವೇಶವಿದೆ. ಎಸ್. ಎಸ್. ಎಲ್. ಸಿ. ಪಾಸಾದವರಿಗೆ (ಶೀಘ್ರ ಲಿಪಿ) ಏಳನೇ ತರಗತಿ ಓದಿದ ಇತರರಿಗೆ ದರ್ಜಿ ಕೆಲಸದ ತರಬೇತು ಕೊಡಲಾಗುವುದು. ಹೆಚ್ಚಿನ ವಿಷಯಗಳನ್ನು ಮಡಿಕೇರಿಯಲ್ಲಿರುವ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಜೂನ್ ೭ ನೇ ತಾರೀಕಿಗೆ ಮುಂಚಿತವಾಗಿ ತಿಳಿದುಕೊಳ್ಳಬಹುದು.

ತಾರೀಕು ೨೯ರಲ್ಲಿ ವೀರಾಜಪೇಟೆ ನಾಡು ಬಾಡಗ ಗ್ರಾಮದ ಪಕ್ಕದ ಕಾಡಿನಲ್ಲಿ ಹಲವು ವರ್ಷಗಳಿಂದ ಅಲ್ಲಿಯ ಜನರಿಗೆ ತೊಂದರೆ ಕೊಡುತ್ತಿದ್ದ ಒಂದು ಪುಂಡಾನೆಯನ್ನು ಚೀಫ್ ಕಮಿಷನರು ಗುಂಡಿಕ್ಕಿ ಕೊಂದರೆಂದು ತಿಳಿಯುತ್ತೇವೆ.

ಬಾಳೆಲೆ ಆಸ್ಪತ್ರೆಯ ವಾರ್ಡ್ ಕಟ್ಟಡವನ್ನು ತೆರೆಯುವ ಸಮಾರಂಭವು ತಾ. ೪-೬-೫೦ರಲ್ಲಿ ಚೀಫ್ ಕಮಿಷನರಿಂದ ನಡೆಯುವದು.

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಮದ್ರಾಸು ವಿಶ್ವವಿದ್ಯಾಲಯದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಬಿಟ್ಟಿಯಂಡ ಎಂ. ಪೊನ್ನಪ್ಪ, ಮೇಕೇರಿರ ಎಂ. ಸಂಪತ್, ಮಾದಂಡ ಸಿ. ಕರುಂಬಯ್ಯ, ಐಚೆಟ್ಟಿರ ಎಸ್. ಚಂಗಪ್ಪ (ಇವರೆಲ್ಲರೂ ಪ್ರಥಮ ಶ್ರೇಣಿಯಲ್ಲಿ) ನಡಿಕೇರಿಯಂಡ ಎಸ್. ಚಿಣ್ಣಪ್ಪ, ಕೆ. ಕೆ. ಆನಂದ ಮತ್ತು ಬಿ. ಆರ್. ದಾಸ್, ಇವರುಗಳು ತೇರ್ಗಡೆಯಾಗಿರುವರು.

## ವಾರ್ತೆಗಳು.

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಗಳ ಫಲಿತಾಂಶ ಜೂನ್ ತಿಂಗಳ ಮೊದಲ ವಾರದೊಳಗೆ ಪ್ರಕಟವಾಗಬಹುದೆನ್ನಲಾಗಿದೆ.

ಖರ್ಚನ್ನು ಆದಷ್ಟು ಕಡಿಮೆಮಾಡಿ ಆರ್ಥಿಕ ಉಳಿತಾಯ ಸಾಧಿಸುವ ಧೋರಣೆಗನ್ವಯವಾಗಿ ಮುಂಬಾಯಿ ಸರಕಾರವು ಜೂನ್ ತಾ. ೧ರಿಂದ ಸರಕಾರಿ ಇಲಾಖೆಯಲ್ಲಿ ಕೆಲಸಕ್ಕಿರುವ ೩೦೦ ಮಂದಿ ಉದ್ಯೋಗಿಗಳನ್ನು ಕೆಲಸದಿಂದ ನಿವೃತ್ತಿಪಡಿಸಲು ನಿರ್ಣಯಿಸಿದೆ.

ಹೊಸ ಸಮಾಜ ಮತ್ತು ಹೊಸ ನಾಗರಿಕತೆಯನ್ನು ಕಟ್ಟಿಕೊಳ್ಳಲು ಬೇಕಾಗಿ ಮುಂಬಯಿ ಸಂಸ್ಥಾನದ ಸೋಶಲಿಸ್ಟ್ ಪಾರ್ಟಿಯವರು ಪೂನಾದಲ್ಲಿ ಜರಗಿದ ತಮ್ಮ ಮೊದಲ ಸಮ್ಮೇಳನದಲ್ಲಿ ೧೫ ತತ್ವಗಳಿಂದೊಡಗೂಡಿದ ಒಂದು ಸ್ವಾತಂತ್ರ್ಯದ ಚಾರ್ಟರ್ ಮಂಜೂರುಮಾಡಿದರು.

ಮೇ ತಾ. ೩೦ ನ್ನು ಸಂಯುಕ್ತ ಅಮೇರಿಕದ ಅದ್ಯಂತ ಪ್ರಾರ್ಥನಾ ದಿನವಾಗಿ ಆಚರಿಸಬೇಕೆಂದು ಅಧ್ಯಕ್ಷ ಟ್ರೂಮನ್ನರ ಅಪ್ಪಣೆಯಾಗಿದೆ. ಅಮೇರಿಕನ್ ಜನಾಂಗವು ಅಂದು ಶಾಂತಿಸ್ಥಾಪನೆಗಾಗಿ ಪ್ರಾರ್ಥಿಸುವುದು.

ಬಾಲಕರು ತಂಬಾಕು ಸೇದುವದನ್ನು ಪ್ರತಿಬಂಧಿಸುವ ಕಾಯಿದೆಯನ್ವಯ ೧೬ ವರ್ಷದ ಕೆಳಗಿನವರಿಗೆ ತಂಬಾಕು ಮಾರುವದನ್ನು ಪ್ರತಿಬಂಧಿಸಿ ರಾಜಸ್ಥಾನ ಸರಕಾರವು ಹಾಗೆ ಮಾರುವದು ಅಪರಾಧವಾಗುವದೆಂದು ಪ್ರಕಟಿಸಿದೆ

ಡಬ್ಲ್ಯು ಬಾಬಾಸುಗ್ದೋ ಎಂಬ ಸಿಲೋನಿನವನೊಬ್ಬನು ೩೫ ವರ್ಷಗಳ ಹಿಂದೆಯೇ ಕೈಗಳನ್ನು ಕಳೆದುಕೊಂಡ. ಆದರೂ ಆತನು ತನ್ನ ಕಾಲು ಬೆರಳುಗಳಿಂದಲೇ ಪ್ರತಿ ದಿವಸ ಮುಖ ಕ್ಷೌರ ಮಾಡಿಕೊಳ್ಳುವನು ಮತ್ತು ಅದೇ ಬೆರಳುಗಳಿಂದಲೇ ತಲೆಯನ್ನೂ ಬಾಚಿಕೊಳ್ಳುವನು

ಜಮ್ಮು ಪ್ರಾಂತದ ಒಂದು ನಗರದಲ್ಲಿ ಬಹಿರಂಗವಾಗಿ ಸಾರಾಯಿಯನ್ನು ಕುಡಿದ ಓರ್ವನನ್ನು ಕತ್ತೆಯ ಮೇಲೆ ಕೂಡಿಸಿ ಮೆರವಣಿಗೆ ಮಾಡಿಸಲಾಯಿತೆಂದು ಸುದ್ದಿ ಬಂದಿದೆ. ಈ ನಗರದ ಸಮಾಜದ ಸುಧಾರಕರು ಮದ್ಯಸೇವನೆ ಮಾಡಿದವರಿಗೆ ಮತ್ತು ಜೂಜಾಡುವವರಿಗೆ ಇದೇ ಬಗೆಯ ಶಿಕ್ಷೆಯನ್ನು ವಿಧಿಸುತ್ತಿರುವರು.

ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ್ ನೆಹ್ರೂರವರು ಇಂಡೋನೇಷ್ಯದ ರಾಜಧಾನಿ ಜಕರ್ತಾಕ್ಕೆ ತಲ್ಪಿದೊಡನೆಯೇ ಜೂನ್ ೭ನೇ ತಾರೀಕು ಇಂಡೋನೇಷ್ಯ ಪಾರ್ಲಿಮೆಂಟನ್ನುದ್ದೇಶಿಸಿ ಭಾಷಣ ಮಾಡುವರು.


## ಬಹುಮಾನ.

ಸಾಧಾರಣ ಕಪ್ಪು ವರ್ಣದ ಸುಮಾರು ಮೂರು ಯಾ ಮೂರುವರೆ ಅಡಿ ಎತ್ತರದ ನಡು ಪ್ರಾಯದ ಕೊಂಬ ಹಿಂಬಾಗಕ್ಕೆ ಚಾಚಿದ ಒಂದು ಎಮ್ಮೆಯು ಕಾಣೆಯಾಗಿ ಒಂದು ತಿಂಗಳಾಯಿತು. ಪತ್ತೆ ಮಾಡಿ ಈ ಕೆಳಗಿನ ವಿಳಾಸದವರಿಗೆ ತಿಳಿಸಿದಲ್ಲಿ ರೂ. ೧೦ ಬಹುಮಾನ ಕೊಡಲಾಗುವದು.

ಇಬ್ರಾಹಿಂ ಸೈಟ್,
ಬೆಣ್ಣೆ ವ್ಯಾಪಾರಿ,
2-1 ವೀರಾಜಪೇಟೆ.

## For Sale

A big bungalow situated in a decent locality in Mercara with all the necessary facilities of water, Eelectric light etc., is for sale. Interested persons can directly contact.

B. P. Poovaya,
Bellarimadu Village,
VIRAJPET.

2-1

# ಕೊಡಗಿನ ಕಾಂಗ್ರೆಸು ಪಂಚಾಯಿತ ಚುನಾವಣೆಯ ನಮೂನೆಗಳು.

(ಹಾಜರಿದ್ದವರಿಂದ)

ಕೊಡಗಿನ ಕಾಂಗ್ರೆಸು ಪಂಚಾಯಿತಗಳಿಗೆ ಈ ಮೊದಲೊಮ್ಮೆ ನಡೆದಿದ್ದ ಚುನಾವಣೆಗಳು ಕ್ರಮಬದ್ಧವಲ್ಲವೆಂದ ವಜಾ ಮಾಡಲ್ಪಟ್ಟು ಪುನಹ ಚುನಾವಣೆಗಳು ನಡೆದವು. ಈ ಬಗ್ಗೆ ನಾಮಕ ಪತ್ರಗಳನ್ನು ೧೯-೫-೫೦ರಲ್ಲಿ ಎಲೆಕ್ಷನ್ ಆಫೀಸರುಗಳಿಗೆ ಉತ್ತರ ಕೊಡಗಿನವರ ವಿರಾಜಪೇಟೆಯಲ್ಲಿಯೂ, ದಕ್ಷಿಣ ಕೊಡಗಿನವರ ಪೊನ್ನಂಪೇಟೆಯಲ್ಲಿ ಕೊಡಬೇಕೆಂದು ತಾ ೧೭-೫-೫೦ರಲ್ಲಿ ಜಿಲ್ಲಾ ಎಡ್‌ಹಾಕ್ ಕಮಿಟಿಯ ಅಧ್ಯಕ್ಷರ ಹೆಸರಿನಲ್ಲಿ ನೋಟೀಸುಗಳು ಪ್ರಕಟವಾದಂತೆ ಇವುಗಳನ್ನು ಎಲ್ಲಿಯೂ [illegible] ತಿಳಿಯದು. ತಾ ೧[illegible] 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಈ ವಾರ್ತೆಯು ಕೆಲವು ಗ್ರಾಮಸ್ಥರಿಗೆ ಮೂರು ನಾಲ್ಕು ದಿವಸಗಳ ನಂತರ ತಿಳಿಯಿತು. ತಾ [illegible]ರ ಸಾಯಂಕಾಲ ಆಕಸ್ಮಾತ್ ಒಂದು ನೋಟೀಸು ವೀರಾಜಪೇಟೆಯಲ್ಲಿ ಪ್ರತ್ಯೇಕವಾದಿ ಕಾಂಗ್ರೆಸು ಮೆಂಬರರೊಬ್ಬರಿಗೆ ಸಿಕ್ಕಿತು. ಅವರ ಈ ವಾರ್ತೆಯನ್ನು ಸುತ್ತುಮುತ್ತಲಿನವರಿಗೆ [illegible] ತಿಳಿಸಿದ್ದರಿಂದ ದಕ್ಷಿಣ ಕೊಡಗಿನ ಕೆಲವು ಪ್ರತ್ಯೇಕವಾದಿ ಮೆಂಬರುಗಳು ತಮ್ಮ ನಾಮಕ ಪತ್ರಗಳನ್ನು [illegible] ಡೇರಿಯದ್ದರಿಂದ [illegible] ಯಲ್ಲಿ ಬರಕೊಂಡು ತಾ ೧೯ರಲ್ಲಿ [illegible] ಸಾಧ್ಯವಾಯಿತು. ಹೀಗೆಯೇ ಮೂರ್ನಾಡಿನ [illegible] ಪಂಚಾಯಿತ ಸೆಂಟರುಗಳಿಗೂ ಹಾಗೂ ದಕ್ಷಿಣ ಕೊಡಗಿನ ಕಲವು ಸೆಂಟರುಗಳಿಗೂ ಈ ವರ್ತಮಾನ ಸಿಕ್ಕಲೇ ಇಲ್ಲವಾದ್ದರಿಂದ ಅಲ್ಲಿಯ ಪ್ರತ್ಯೇಕವಾದಿಗಳಿಗೆ ನಾಮಕ ಪತ್ರವನ್ನು ತಾ ೧೯ರಲ್ಲಿ ಕೊಡಲು ಸಾಧ್ಯವಾಗಲಿಲ್ಲ. ಆದರೆ ಸಂಯೋಜನಾವಾದಿಗಳು ಎಲ್ಲಾ ಸೆಂಟರುಗಳಲ್ಲಿಯೂ ಪ್ರಕಟವಾದ ಮರುದಿನವೇ ನಾಮಕ ಪತ್ರಗಳನ್ನು ಕೊಟ್ಟಿದ್ದರು. ನಾಮಕ ಪತ್ರಗಳನ್ನು ಒಪ್ಪಿಕೊಳ್ಳುವ ವಿಚಾರ ಸಂಶಯ ಸೂಚಿಸಿ ಎಲೆಕ್ಷನ್ ಆಫೀಸರು [illegible] ಗೆ ಬರದು ನಂತರ ತಿಳಿಸಲಾಗುವುದೆಂದು ಅಂದಿದ್ದರು. ಆದರೆ ಹಾಗೆಯೂ ಯಾರಿಗೂ ತಿಳಿಸಲೇ ಇಲ್ಲ. ಈ ಹೆಸರುಗಳನ್ನೆಲ್ಲಾ ಸ್ಥಳೀಯ ಪತ್ರಿಕೆಗಳಲ್ಲಿ ತಾ [illegible] ರ ವರೆಗೂ ಪ್ರಕಟಿಸಿ [illegible] ಲ್ಲಿ ಚುನಾವಣೆ ನಡೆಯಲಾಯಿತು.

ಮೂರ್ನಾಡು—ತಾ ೨[illegible]-೫-೫೦ರ ಬೆಳಿಗ್ಗೆ ೮ ಗಂಟೆಯಿಂದ ೧೦ ಗಂಟೆಯವರೆಗೆ ಇಲ್ಲಿಯ ಯೂನಿಯನ್ ಆಫೀಸಿನಲ್ಲಿ ಈ ಮೊದಲು ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆ ಪೋಲಿಂಗ್ ಆಫೀಸರೇ ಇರಲಿಲ್ಲ. ಚುನಾವಣೆ ವಿಚಾರ ಜನರಿಗೆ ಬಹಳ ಮಟ್ಟಿಗೆ ತಿಳಿಯದೇ ಇದ್ದುದರಿಂದ ಆ ದಿನ ಬಂದಿದ್ದ ಕೆಲವು ಜನರು ಅತ್ತಿತ್ತ ತಿರುಗಾಡುತ್ತಿದ್ದರು. ಆಗ್ಗೆ ಕೆಲವು ಜನರ ಕೋರಿಕೆ ಮೇರೆ ಪೋಲಿಂಗ್ ಆಫೀಸರು ೫ ಉಮೇದುವಾರರುಗಳ ಪೈಕಿ ಇಬ್ಬರು (ಶ್ರೀ ಸಿ ಎ ಮಂದಣ್ಣನವರು ಮತ್ತು ಶ್ರೀ [illegible] ರಾಮಚಂದ್ರನವರು) ತಮ್ಮ ನಾಮಕ ಪತ್ರಗಳನ್ನು ವಾಪಾಸು ತೆಗೆದಿರುವರೆಂದು ತನಗೆ ನಿನ್ನೆ ಎಲೆಕ್ಷನ ಆಫೀಸರು ತಿಳಿಸಿದರೆಂದು ಇಲ್ಲಿಯ ೩ ಸ್ಥಳಗಳಿಗೆ ಉಳಿದ ೩ ಜನರಿಗೆ ಓಟು ಕೊಡುವ ಆವಶ್ಯವಿಲ್ಲವೆಂದು ಯೂನಿಯನ್ ಆಫೀಸಿನ ಬಾಗಿಲ ಮೇಲೆ ನೋಟೀಸು ಹಚ್ಚಿದರು. ಕೂಡಲೆ ಅಲ್ಲಿಗೆ ಬಂದಿದ್ದ ಉಮೇದುವಾರರಾದ ಶ್ರೀಮತಿ ಪಿ ಸೀತಾ ಬೆಳ್ಯಪ್ಪನವರು ಮತ್ತು ಶ್ರೀ ಕೆ. ಎಂ. ಪೊನ್ನಪ್ಪನವರ ಪರ ಆಗಿರ ಎಲೆಕ್ಷನ್ ಏಜಂಟರಾಗಿ ಶ್ರೀ ಎಂ. ಸಿ. ದೇವಯ್ಯನವರು ತಮ್ಮ ನಾಮಕ ಪತ್ರಗಳನ್ನು ಒಪ್ಪಿದ ತಿಳುವಳಿಕೆ ಕೊಡದೆಯೂ, ಈ ಪಂಚಾಯಿತಿಗೆ ಯಾವ ಯಾವ ಗ್ರಾಮದವರು ಓಟು ಮಾಡಬೇಕೆಂಬುದನ್ನು ತಿಳಿಸದೆಯೂ, ಓಟರುಗಳ ಪಟ್ಟಿಯನ್ನು ತಯಾರು ಮಾಡದೆ ಓಟರುಗಳ ತಿಳುವಳಿಕೆ ಬಗ್ಗೆ ಎಲ್ಲಿಯೂ ಬಹಿರಂಗವಾಗಿ ಇಡದೆಯೂ ಈ ಭಾಗದ [illegible] ಸೂಚನೆಗೆ ವಿರುದ್ಧವಾಗಿ ಒಂದೇ ಪಕ್ಷಕ್ಕೆ (ಸಂಯೋಜನ ಪಕ್ಷಕ್ಕೆ) ಸೇರಿದ ಎಲೆಕ್ಷನ್ ಮತ್ತು ಪೋಲಿಂಗ್ ಆಫೀಸರುಗಳಿಂದ ನಡೆಯುವ ಚುನಾವಣೆಯಲ್ಲಿ ತಮಗೆ ನ್ಯಾಯ ದೊರೆಯಲಾರದ ಕಾರಣ ಈ ಚುನಾವಣೆಯಲ್ಲಿ ತಾವು ಭಾಗವಹಿಸುವುದಿಲ್ಲವೆಂದು ಬರೆದ ಹೇಳಿಕೆಯನ್ನು ಬರೆದು ಪೋಲಿಂಗ್ ಆಫೀಸರಿಗೆ ಕೊಟ್ಟರು.

ನಂತರ ಅಲ್ಲಿಗೆ ಬಂದಿದ್ದ ಓಟರುಗಳು ಯೂನಿಯನ್ ಆಫೀಸಿನಲ್ಲಿ ಶ್ರೀ ಪಾಂಡಂಡ ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಪೋಲಿಂಗ್ ಆಫೀಸರವರ ಶ್ರೀ [illegible] ಆನಂದಯ್ಯನವರು ಈ ದಿನ ಓಟು ತೆಗೆಯದ ಕಾರಣವನ್ನು ತಿಳಿಸಿ [illegible] ಉಮೇದುವಾರರಾದ ಶ್ರೀಮತಿ ಸೀತಾ ಬೆಳ್ಯಪ್ಪನವರು ತಾವು ಜನ ವರ್ಗದಲ್ಲಿ ಯಾತಕ್ಕಾಗಿ ಭಾಗವಹಿಸುವುದಿಲ್ಲವೆಂಬುದನ್ನು ವಿವರಿಸಿದರು. ಕೂಡಲೆ ಶ್ರೀ ಮಡೆಯಂಡ ದೇವಯ್ಯನವರು ಮತ್ತು ಶ್ರೀ [illegible] ಕಾರ್ಯಪ್ಪನವರ ಈ ದಿನದ ಚುನಾವಣೆಯು ಕ್ರಮಬದ್ಧವಲ್ಲವೆಂದೂ, ಇದನ್ನು ರದ್ದು ಮಾಡಬೇಕೆಂದೂ ಠರಾವು ಮಾಡಿದರು. ಶ್ರೀ [illegible] ಪೊನ್ನಪ್ಪನವರು ಇದನ್ನು ವಿರೋಧಿಸಿ ಮಾತಾಡಿದರು. ಶ್ರೀ ಯಂ. ದೇವಯ್ಯನವರ ಕೋರಿಕೆ ಮೇರೆ ಶ್ರೀ ಪಿ ಐ ಬೆಳ್ಯಪ್ಪನವರ ಕೊಡಗಿನ ಕಾಂಗ್ರೆಸ್ ಚುನಾವಣೆಯ ಅಕ್ರಮಗಳನ್ನು ಕೂಲಂಕಷವಾಗಿ ವಿವರಿಸಿ ಹೇಳಿದರು. ನಂತರ ಇಂದಿನ ಕ್ರಮಬದ್ಧವಲ್ಲದ ಚುನಾವಣೆಯನ್ನು ರದ್ದು ಮಾಡಿ [illegible] ಪ್ರಕಾರ ಹೊಸ ಚುನಾವಣೆಯನ್ನು ನಡೆಸಬೇಕೆಂಬ ಠರಾವು ಬಹುಮತದಿಂದ ಪಾಸಾಯಿತು. [illegible] ಜನರು ಪರವಾಗಿಯೂ ೧೦ ಜನರು ವಿರೋಧವಾಗಿಯೂ ಓಟು ಮಾಡಿದರು.

ಅಮ್ಮತ್ತಿ—ಇದೇ ದಿನ ಅಮ್ಮತ್ತಿಯಲ್ಲಿಯೂ ಚುನಾವಣೆ ನಡೆಯಲಿಕ್ಕಿತ್ತು. ಚುನಾವಣೆ ನಡೆಯಬೇಕಾಗಿದ್ದ ಯೂನಿಯನ್ ಆಫೀಸು ೧೦ ಗಂಟೆವರೆಗೆ ತೆರೆಯಲ್ಪಟ್ಟಿರಲಿಲ್ಲ. ಆ [illegible] ಗಂಟೆಗೆ ಪೋಲಿಂಗ್ ಆಫೀಸರಾದ ಶ್ರೀ ಬಾಚನ ಅಪ್ಪಯ್ಯನವರನ್ನು ಕೇಳಿದಾಗ ಅವರಲ್ಲಿ ಓಟರುಗಳ ಪಟ್ಟಿಯೇ ಇರಲಿಲ್ಲ. ಕೆಲವು ಸಮಯದ ನಂತರ ಯಾರೋ ಒಬ್ಬರು ಪೊನ್ನಂಪೇಟೆಯಿಂದ ಪಟ್ಟಿಯನ್ನು ತಂದು ಕೊಟ್ಟರು. ಆ ಪಟ್ಟಿಯನ್ನು ನೋಡುವಾಗ್ಗೆ ಅಮ್ಮತ್ತಿ ಕೇಂದ್ರಕ್ಕೆ ಸೇರದ ಆದರಲ್ಲಿ ಅರ್ಜಿ, ಕೊಂಡನೂರು, ಅಂಬಟ್ಟಿ, ಕಂಡಮಂಗಲ ಗ್ರಾಮಗಳ ಹೆಸರುಗಳಿದ್ದವು. ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆ ವರೆಗೆ ಪೋಲಿಂಗ್ ಆಫೀಸರು ಯೂನಿಯನ್ ಆಫೀಸಿನಲ್ಲಿ ಕುಳಿತಿದ್ದರು. ಯಾರೊಬ್ಬರೂ ಬಂದು ಓಟುಮಾಡಲಿಲ್ಲ. ಅಮ್ಮತ್ತಿಯಲ್ಲಿ ಪ್ರತ್ಯೇಕ ಪಕ್ಷದವರಾದ ಐದು ಉಮೇದುವಾರರುಗಳು (ಶ್ರೀಗಳಾದ ಪಿ ಐ ಬೆಳ್ಯಪ್ಪನವರು, ಕೆ ಯಂ ಕುಶಾಲಪ್ಪನವರು, ಪಿ ಐ ಜಂಗಪ್ಪನವರು, ಪಿ ಸಿ ಉತ್ತಯ್ಯನವರು ಮತ್ತು ಪಿ ಸುಬ್ಬಯ್ಯನವರು) ಹಚ್ಚಿಕಟ್ಟಿ ಮೂರ್ನಾಡಿನ ಉಮೇದುವಾರರು ಕೊಟ್ಟ ಮೇಲೆ ಕಾಣಿಸಿದ ಕಾರಣಗಳನ್ನೇ ಸೂಚಿಸಿ ತಮ್ಮ ಹೇಳಿಕೆಯನ್ನು ಬರವಣಿಗೆಯಲ್ಲಿ ಪೋಲಿಂಗ್ ಆಫೀಸರಿಗೆ ಕೊಟ್ಟರು. ಪ್ರಶ್ನಿಸಿದಾಗ ಪೋಲಿಂಗ್ ಆಫೀಸರು ಈ ಕಾರಣಗಳು ನಿಜವಲ್ಲವೆಂದರು. ಸುಮಾರು ೩ ಗಂಟೆಗೆ ಪೋಲಿಂಗ್ ಆಫೀಸರು ಮಡಿಕೇರಿಗೆ ಬಸ್ ಹತ್ತಿದರು.

ಪೊನ್ನಂಪೇಟೆ—ಇಲ್ಲಿಯೂ ಆ ದಿನ ಚುನಾವಣೆ ನಡೆಯಿತು. ೪ ಸ್ಥಳಗಳಿಗೆ 8 ಉಮೇದುವಾರರುಗಳಿದ್ದರು. ಸಂಯೋಜನಾ ಪಕ್ಷದ ಉಮೇದುವಾರರು ಲಾರಿಗಳಲ್ಲಿಯೂ, ಕಾರುಗಳಲ್ಲಿಯೂ ಓಟರುಗಳನ್ನು ತಂದು ಓಟು ಮಾಡಿಸುತ್ತಿದ್ದರು. [illegible] ದೋಸೆ, ತಿಂಡಿ ವಗೈರೆಗಳೂ ಇದ್ದವು. ಪ್ರತ್ಯೇಕ ಪಕ್ಷದ ಉಮೇದುವಾರರುಗಳು ಪೋಲಿಂಗ್ ಸ್ಟೇಶನಿಗೆ ಹೋಗಿ ನೋಡಿದಾಗ, ಒಂದು ಚಿಕ್ಕ ಕೋಣೆಯಲ್ಲಿ ಒಂದು ಮೇಜಿನ ಹಿಂದುಗಡೆ ಪೋಲಿಂಗ್ ಆಫೀಸರು (ಶ್ರೀ ಪಿ ಯಂ. ನಾಣಯ್ಯನವರು) ಇದ್ದರು. ಅವರ ಕಡೆ ಸಂಯೋಜನಾ ಪಕ್ಷದ ಉಮೇದುವಾರರ ಒಬ್ಬ ಏಜೆಂಟರಾದ ಶ್ರೀ ಮಂಗ್ಯಾಟಿರ [illegible]ಪ್ಪನವರು ಕೂತಿದ್ದರು. ಒಬ್ಬ ಓಟರು ಒಳ ಬಂದ ಕೂಡಲೆ ಆತನಿಗೊಂದು ಪ್ರಿಂಟೆಡ್ ಬೇಲೆಟ್ ಪೇಪರು ಕೊಟ್ಟು ಆತನ ಆ ಮೇಜಿನ ಮೇಲೆಯೇ ಅದನ್ನು ಇಟ್ಟುಕೊಂಡು ಅವರಿಬ್ಬರ ಎದುರಿನಲ್ಲಿಯೇ ಗುರುತು ಮಾಡಿದ ಮೇಲೆ ಆ ಬೇಲೆಟ್ ಪೇಪರಿಗೆ ಏಜೆಂಟರು ಮತ್ತು ಪೋಲಿಂಗ್ ಆಫೀಸರೂ ರುಜು ಹಾಕಿ, ಅದನ್ನು ಪಕ್ಕದಲ್ಲಿದ್ದ ಸೂಟ್ಕೇಸಿನ ಬಾಗಿಲು ತೆಗೆದು ಹಾಕುತ್ತಿದ್ದರು. ಇದು ಗುಟ್ಟಿನ ಓಟಿಂಗ್ ಅಲ್ಲ ಮತ್ತು ಬೀಗಹಾಕದ ಮತ್ತು ಸೀಲ್ ಮಾಡದ ಪೆಟ್ಟಿಗೆಯಲ್ಲಿ ಬೇಲೆಟ್ ಪೇಪರು ಹಾಕುವುದು ಅಕ್ರಮವೆಂದು ಪೋಲಿಂಗ್ ಆಫೀಸರಿಗೆ ಕೆಲವು ಓಟರುಗಳು ತಿಳಿಸಿ [illegible] ಲ್ಲದೆ ಹಸ್ತಪತ್ರಿಕೆಯ ಮೂಲಕ [illegible] ಗಳಿಗೂ ಎಚ್ಚರಕೊಟ್ಟರು. ಆ ಕೋಣೆಯ [illegible] ಗಿಲಲ್ಲಿಯೇ ಒಬ್ಬ ಯುವಕನು ನಿಂತುಕೊಂಡು ಓಟರು ಒಳಗೆ ಸಗ್ಗವಾಗ್ಗೆ ಸಂಯೋಜನಾ ಪಕ್ಷದ ೪ ಉಮೇದುವಾರರುಗಳ ಹೆಸರನ್ನು ಪಿಸುಮಾತಿನಿಂದ, ಅವರಿಗೇನೇ ಓಟು ಕೊಡಿರಿ ಎಂದು ಹಸ್ತಪತ್ರಿಕೆಯನ್ನು ಕೊಡುತ್ತಿದ್ದನು. ಓಟರು ಓಟು ಕೊಟ್ಟು ಹೊರಗೆ ಬರುವಾಗ್ಗೆ ಟೀ, ತಿಂಡಿಗಾಗಿ ಅವನಿಗೊಂದು ಟಿಕೇಟು ಕೊಡುತ್ತಿದ್ದರು. ಇದನ್ನೆಲ್ಲಾ ನೋಡಿದ ಪ್ರತ್ಯೇಕ ಪಕ್ಷದ ೪ ಉಮೇದುವಾರರುಗಳು (ಶ್ರೀ [illegible] ಪಿ ಕರುಂಬಯ್ಯನವರು, ಕೆ ಎ ಚಣ್ಣಪ್ಪನವರು, ಪಿ ಪಿ. ಬೋಪಯ್ಯನವರು ಮತ್ತು ಎ. ಯಸ್. ಪೊನ್ನಪ್ಪನವರು) ಮೇಲೆ ಕಾಣಿಸಿದಂತೆ ಕಾರಣಗಳನ್ನು ತೋರಿಸಿ, ಅಕ್ರಮವಾದ ಈ ಚುನಾವಣೆಯಲ್ಲಿ ತಾವು ಭಾಗವಹಿಸುವುದಿಲ್ಲವೆಂಬ ಬರವಣಿಗೆಯ ಹೇಳಿಕೆಯನ್ನು ಪೋಲಿಂಗ್ ಆಫೀಸರಿಗೆ ಕೊಟ್ಟರು. ಹೇಗೂ ಚುನಾವಣೆಯು ಸಾಯಂಕಾಲದ ವರೆಗೆ ನಡೆಯಿತು. ಇದೀಗ ಕೊಡಗಿನ ಕಾಂಗ್ರೆಸಿನ ಚುನಾವಣೆಯ ರೀತಿ ನೀತಿಗಳು!

---

(೩ನೇ ಪುಟದಿಂದ ಸಾಗಿದ್ದು)

ರಿಸಿದ ಇವರು ಬಾಲ್ಯದಿಂದಲೇ ಅಸಾಧ್ಯ ಮೇಧಾವಿಗಳೆನಿಸಿ ಶಾಲಾ ಕಾಲೇಜುಗಳ ಪ್ರತಿ ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಬಂದವರು. ಇವರ ಆರ್ಥಿಕ ಅಭಿಪ್ರಾಯಗಳ ಬಗ್ಗೆ ಇಡೀ ದೇಶದ ಎಲ್ಲಾ ಕ್ಷೇತ್ರದವರಿಗೆ ವಿಶ್ವಾಸವಿದೆ. ಇವರು ರಿಜರ್ವ್ ಬ್ಯಾಂಕಿನ ಗವರ್ನರರಾಗಿದ್ದವರು. ಅನೇಕ ವರ್ಷಗಳಿಂದಲೇ ಇವರನ್ನು ಕೇಂದ್ರ ಸರಕಾರದೊಳಗೆ ತರಲು ಪ್ರಯತ್ನ ನಡೆದಿದ್ದರೂ ಈ ವರೆಗೆ ಸಾಧ್ಯವಾಗಿರಲಿಲ್ಲ. ಅವರನ್ನು ಆರ್ಥಿಕ ಮಂತ್ರಿಗಳಾಗಿ ನೇಮಿಸಿದ್ದರಿಂದ ದೇಶದ ಎಲ್ಲೆಡೆಯಲ್ಲಿಯೂ ತೃಪ್ತಿ ಇದೆ. ದೇಶಮುಖ್‌ರವರ ಪತ್ನಿಯು ಈ ಹಿಂದೆ ನಿಧನ ಹೊಂದಿದ್ದು ಅವರು ವಿಧುರರಾಗಿದ್ದಾರೆ. ಅವರ ಒಬ್ಬಳೇ ಪುತ್ರಿಯು ಇಂಗ್ಲೆಂಡಿನಲ್ಲಿದ್ದಾಳೆ.

ಶ್ರೀಮತಿ ಅಮೃತಕೌರ್

ಕೇಂದ್ರ ಮಂಡಲಿಯ ಏಕಮಾತ್ರ ಮಹಿಳಾ ಸದಸ್ಯೆ. ಸ್ವಾತಂತ್ರ್ಯ ಹೋರಾಟ ಕಾಲದಿಂದಲೂ ನಿಷ್ಠಾವಂತ ಗಾಂಧೀ ಅನುಯಾಯಿಯಾಗಿ ಮಹಿಳೆ [illegible] ಗಾಂಧಿ ತತ್ವ ಪ್ರಭಾವಕ್ಕೊಳಗಾಗಿ ಶ್ರೀಮಂತಿಕೆಯನ್ನು ತ್ಯಾಗಮಾಡಿ ಸಾದಾ ಜೀವನವನ್ನು [illegible] ನಡೆಸಿದವರಲ್ಲ ಇವರೊಬ್ಬರು. ಈ ಬಾರಿ ಜಾಗತಿಕ ಆರೋಗ್ಯ ಸಭೆಯ ಅಧ್ಯಕ್ಷೆಯಾಗಿ ಆರಿಸಲ್ಪಟ್ಟ [illegible] ಕೀರ್ತಿ ಇವರ ಹೆಸರಿಗೆ ಸಂದಿದೆ. [illegible] ಮಾನಗಳು ದೊರೆತಿವೆಯೆಂದು [illegible] ಲೂ ಕೇಳಬರುತ್ತದೆ. ಆದರೆ ಸ್ತ್ರೀ ಸ್ವಾತಂತ್ರ್ಯಕ್ಕೆ ಸೇವೆ [illegible] ರಾಷ್ಟ್ರ [illegible] ಗಳಲ್ಲಿ [illegible] ಗೆ ದೊರೆತಿರುವ ಪ್ರಾತಿನಿಧ್ಯಗಳೂಡನೆ ಹೋಲಿಸಿದರೂ ಹಿಂದೀ ಮಹಿಳೆಯರಿಗೆ ಸಿಕ್ಕಿರುವ ಸ್ಥಾನಮಾನಗಳೇ [illegible] ಹೆಚ್ಚೆನಿಸುವದು. ಭಾರತದ ಶಾಸನ ಸಭೆಗಳಲ್ಲಿ, ವಿದೇಶೀ ರಾಯಭಾರಿ ಕಛೇರಿಗಳಲ್ಲಿ, ಮಂತ್ರಿವರ್ಗ ವಿಭಾಗಗಳಲ್ಲಿ ಹಿಂದೀ ಮಹಿಳೆಯರು ಗಣ್ಯಸ್ಥಾನಗಳಿಸಿದ್ದಾರೆ. ಶ್ರೀಮತಿ ಅಮೃತಕೌರರು ಆ ಪೈಕಿ ಮೊದಲಿಗರು.

ಅಂತೂ, ಯಾವ ವಿಧದ ಆಕ್ಷೇಪಣೆಯ ದರ್ಜೆ ಅವಕಾಶವಿಲ್ಲದಂತೆ—ಒಕ್ಕೂಟದ ಶಿಸ್ತು, ಬದ್ಧ ಮಂತ್ರಿ ಮಂಡಲ, ಲೋಕ ನಾಯಕರನ್ನು ಇದುಗಳಲ್ಲಿ ಹೊರತೆಯಿದೆ. [illegible] ಭಾರತದ ಕೇಂದ್ರ ಮಂತ್ರಿ ಮಂಡಲಿಯು ಯೋಗ್ಯರನ್ನು ಮತ್ತು ಶಿಕ್ಷಿತರನ್ನೇ ಒಳಗೊಂಡಿದೆ. ಪಕ್ಷ ಭೇದವೇನನ್ನು ನೋಡದೆ, ಯೋಗ್ಯತೆಯೊಂದನ್ನೇ ನೋಡಿ ಆರಿಸಿಕೊಂಡವರಲ್ಲಿ ಈಗ ಐವರು, ಇವರು ಕಾಂಗ್ರೆಸಿನ ಸದಸ್ಯರು ಕೂಡ ಆಗಿಲ್ಲ [illegible] ಹೊಂದಿರಲು, ಅವರ ಸ್ಥಾನಗಳಿಗೆ ಕಾಂಗ್ರೆಸಿಗರೇ ಬಂದರು. ಹೇಗಿದ್ದರೂ, ಯಾವ ಭಾಗದಲ್ಲೂ ಕೊರತೆ ಕಾಣದೆ, ಇನ್ನಷ್ಟು ದೃಢಗೊಳ್ಳುವುದಕ್ಕಾಗಿಯೇ ಈ [illegible] ನಡೆದಿದೆ. ಭಾರತಕ್ಕೆ ಅರ್ಹ ಕೇಂದ್ರ ಮಂತ್ರಿ ಮಂಡಲ ದೊರೆತಿದೆ. 'ನವಯುಗ'

---

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್,
ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಶಿಕಾರಿಗೆ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245 ರ ವರೆಗೆ
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-6-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆಯಬೇಕಾಗುತ್ತದೆ.)

ಎಂ ಎಸ್ ಸೋಮಯ್ಯ,
ಗೌರವ ಕಾರ್ಯದರ್ಶಿ

52–39



# CRESCENT

## FOR PROTECTION AND SERVICE.

It is best to represent and insure with
The CRESCENT Insurance Co , Lt d.
*H O: BOMBAY*] [*Established 1919*

*For particulars write to:*

**Sri B A. Poovaiah** or **The Branch Manager,**
*Organiser*, *22 B. Mahatma Gandhi Road*
*Pollibetta, Coorg.* *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು
## ಕ್ರೆಸೆಂಟ್
ಇನ್ಸೂರೆನ್ಸ್ ಕಂಪೆನಿಗೆ ಬರೆಯಿರಿ.



ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಸ್ಥಾಪಿತ ೧೯೨೧ (1921ರಲ್ಲಿ ಸ್ಥಾಪಿತವಾದ)

| | |
|---|---|
| ಅಧಿಕೃತ ಶೇರು ಭಂಡವಾಳ | ರೂ. 10,00,000 |
| ವಸೂಲಾದ ಶೇರು ಭಂಡವಾಳ | ರೂ. 1,79,000 |
| ಕ್ಷೇಮನಿಧಿ | ರೂ. 56,000 |
| ಇತರ ನಿಧಿಗಳು | ರೂ 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಕೆಟ್ಟಾಗಿ ಸಹಕಾರ ಸಂಘಗಳಿಗೂ ಸಾಲ ಕೊಡುತ್ತಾ ಇಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮೂಲಕ ಹಣವನ್ನು ... ಇನ್ಸೂರೆನ್ಸ್ ... ಹಣವನ್ನು ... ಹೆಚ್ಚಿನ ವಿವರಗಳನ್ನು ಬ್ಯಾಂಕಿನಿಂದ ತಿಳಿದುಕೊಳ್ಳಬಹುದು.

ಎಂ ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. | ಕೆ. ಪಿ. ಅಪ್ಪಯ್ಯ, M L C ಪ್ರೆಸಿಡೆಂಟ್ ...



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ಕಾರ್ಯದ ವರದಿಯ ಪ್ರಧಾನ ಅಂಕಗಳು.

| | |
|---|---|
| ಹೊಸ ಉದ್ಯಮ ರೂ .. ... | 6,13,00,000 ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ .. | 27,73,00,000 „ |
| ಒಟ್ಟು ನಿಧಿ ರೂ. ... ... .... | 8,30,00,000 „ |
| ... ಪ್ರಾರಂಭದಿಂದ ... ಕೊಟ್ಟಿರುವುದು | 10,96,00,000 „ |

1,28,000 ಕ್ಕೂ ಮೇಲ್ಪಟ್ಟ ... ಹಣ ಪಡೆದಿದ್ದಾರೆ.

ಶಕ್ತಿ ಸೇವೆ ಭದ್ರತೆ

## ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897
ಲೋಕೆಶನ್ ಲಾಲ್, ಜನರಲ್ ಮೇನೇಜರ್

ಪ್ರಧಾನ ಕಛೇರಿ | ಶಾಖಾ ಕಛೇರಿ
ಎಂಪೈರ್ ಹೌಸ್, ಹಾರ್ನ್ಬಿ ರೋಡ್, ಫೋರ್ಟ್, ಬೊಂಬಾಯಿ. | ಇನ್ಸ್ಯೂರೆನ್ಸ್ ಚೇಂಬರ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.



ಭದ್ರತೆ! 17 ವರ್ಷಗಳ ... ಅನುಕೂಲತೆ !!
ಅನುಭವಶೀಲತೆ!

## ದಿ ವಿಜಯ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು,
ಕದ್ರಿ ರೋಡ್, ಮಂಗಳೂರು.

ಠೇವು ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | „ | 3¼% |
| 12 | „ | 3½% |
| 24 | „ | 4 % |

... ರೂ. ೧೦೦೦೦ಕ್ಕೂ ಮೇಲ್ಪಟ್ಟ ಠೇವಣಾತಿಗೆ ... ದರಕ್ಕಿಂತ ¼% ಹೆಚ್ಚಿಗೆ

ಶಾಖೆಗಳು — ... ಮಂಗಳೂರು, ಬೈಂದೂರು, ... ಬ್ರಹ್ಮಾವರ, ಉಡುಪಿ, ... ಕಾರ್ಕಳ, ... ಮಡಿಕೇರಿ ...

ಒಟ್ಟು ಠೇವಣಾತಿ ರೂ ೪೦ ಲಕ್ಷಕ್ಕೂ ಮೀರಿದೆ
ಎಲ್ಲಾ ವಿಧ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ಅತೀ ಕಡಿಮೆ ದರದಲ್ಲಿ ... ನಡೆಸಲ್ಪಡುವವು

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜೆಂಟ್,
ಮಡಿಕೇರಿ ಶಾಖೆ, ಮಡಿಕೇರಿ.



## ದಿ ಟ್ರಾಪಿಕಲ್
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್
ಮುಖ್ಯ ಆಫೀಸು:— ಹೊಸ ದಿಲ್ಲಿ.
ಸ್ಥಾಪಿಸಿದ ಡೈರೆಕ್ಟರರು.

ಪಂಡಿತ ಮೋತೀಲಾಲ್ ನೆಹರು | ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್ ಖಾನ್. | ಡಾ|| ಎಂ ಎ. ಅನ್ಸಾರಿ

Transacts:—Life, Fire, Motor and Marine

ಯಂ ಎಂ ಅಚ್ಚಪ್ಪ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು. | ಎಂ. ಎ ಬೆಳ್ಳಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು



## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG Apply today

*Head Office:* **MANGALORE** 26-7 | **K. M Bopaiah, Esq ,** *Branch Secretary for Mysore & Coorg,* *85 Sultanpet, BANGALORE 2.*


ಕೂರ್ಗ್ ಎಸ್. ರಾಮಚಂದ್ರರಾವ್, 'ಕೊಡಗು' ಪ್ರೆಸ್ಸಿನಲ್ಲಿ, ಮಡಿಕೇರಿ ...
Printed Printed and Published by P. J. ... at 'Kodagu' Press, Mercara, for 'Kodagu' Ltd.

(೨ನೇ ಪುಟದಿಂದ ಸಾಗಿದದ್ದು)

ತಿಳಿದೇ ಇದೆ. ಈ ತರದ ನಷ್ಟವನ್ನು ತಡೆಗಟ್ಟಲು ಸ್ಥಳದ ಏರು ತಗ್ಗುಗಳಿಗನುಸರಿಸಿ ಬದಿಗಳನ್ನು ಹಾಗುವುದು ಮತ್ತು ಮಡಿಗಳನ್ನು ಮಾಡಿ ನೀರಿನ ಹರಿತದ ಭರವನ್ನು ಕಡಮೆಮಾಡಿ ಮಣ್ಣು ಕೊಚ್ಚಿಹೋಗದಂತೆ ಆದಷ್ಟು ಮಟ್ಟಿಗೆ ಕಟ್ಟುವ ವಿಧಾನಗಳನ್ನು ಮೇಲೆ ಹೇಳಿದೆ. ಇದಲ್ಲದೆ ಹೆಚ್ಚಿನ ಇಳಿಜಾರು ಸ್ಥಳಗಳಲ್ಲಿ ತುಂಬಾ ಮಂಗಿಡಗಳನ್ನೂ, ಹುಲ್ಲನ್ನೂ ಬೆಳೆಯುವುದೂ, ಕೊರಕಲುಗಳನ್ನು ಮುಚ್ಚುವುದೂ ಇನ್ನೂ ಕೆಲವು ವಿಧಾನಗಳಾಗಿವೆ. ಈ ವಿಚಾರದಲ್ಲಿ ಹೆಚ್ಚಿನ ತರಬೇತು ಹೊಂದುವುದಕ್ಕೋಸ್ಕರ ಇಂಡಿಯಾ ಸರಕಾರದವರು ಕೆಲವು ಜನ ವಿಜ್ಞಾನಿಗಳನ್ನು ಅಮೇರಿಕಾ ದೇಶದಲ್ಲಿ ತರಬೇತು ಮಾಡಿ ಸಂಯುಕ್ತಪ್ರಾಂತ್ಯ ಮತ್ತು ಮಧ್ಯಪ್ರಾಂತ್ಯಗಳಲ್ಲಿ ಈ ಕೆಲಸಗಳನ್ನು ಈಗಾಗಲೇ ಕೈಕೊಂಡಿದ್ದಾರೆ. ಇತರ ಪ್ರಾಂತ್ಯಗಳು ಕೂಡ ಒಡನೆ ಈ ಕೆಲಸವನ್ನು ಕೈಕೊಳ್ಳುವುದರಲ್ಲಿದ್ದಾರೆ

## ಉತ್ತಮ ತರದ ಬೀಜ.

ವ್ಯವಸಾಯ ಅಭಿವೃದ್ಧಿಗಾಗಿ ನಾವು ಪ್ರತಿವರ್ಷವೂ ಮಾಡಬೇಕಾದ ಕೆಲಸಗಳ ಪೈಕಿ ಉತ್ತಮ ತರದ ಬೀಜಗಳನ್ನು ಉಪಯೋಗಿಸುವುದು ಬಹು ಮುಖ್ಯ ವಿಷಯಗಳಲ್ಲಿ ಒಂದಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅವರ ಜಮೀನಿನ ಉತ್ಪತ್ತಿಯು ನಮ್ಮ ದೇಶಕ್ಕಿಂತಲೂ ಹೆಚ್ಚಾಗಿರಲು ಅವರು ಹೆಚ್ಚಾಗಿ ಉತ್ತಮತರದ ಬೀಜಗಳನ್ನೇ ಬಿತ್ತುತ್ತಿರುವುದು ಒಂದು ಕಾರಣವಾಗಿದೆ. ಉತ್ತಮ ತರದ ಬೀಜಗಳನ್ನು ಉಪಯೋಗಿಸುವುದರಿಂದ ನಮ್ಮ ಉತ್ಪತ್ತಿಯನ್ನು ಶೇಕಡ ೧೦ರಿಂದ ೨೦ರ ವರೆಗೆ ಹೆಚ್ಚಿಸಿಕೊಳ್ಳಬಹುದು. ಇಂಡಿಯಾ ದೇಶದ ಆಹಾರದ ಕೊರತೆಯು ಶೇಕಡ ೧೦ರಷ್ಟು ಮಾತ್ರ ಆಗಿರುವುದರಿಂದ ದೇಶದ ರೈತರೆಲ್ಲರೂ ಬರೇ ಉತ್ತಮತರದ ಬೀಜಗಳನ್ನು ಉಪಯೋಗಿಸಿದ್ದೇ ಆದರೆ ಈ ಆಹಾರದ ಕೊರತೆಯನ್ನು ಒಂದೇ ವರ್ಷದಲ್ಲಿ ಪರಿಹರಿಸಬಹುದು. ಇಂಡಿಯಾ ದೇಶದ ಸಸ್ಯವಿಜ್ಞಾನಿಗಳು ಈಗಾಗಲೇ ಕೆಲವು ಅತಿ ಉತ್ತಮ ತರದ ಗೋಧಿ, ಅಕ್ಕಿ ಮತ್ತು ಇನ್ನಿತರ ಧಾನ್ಯಗಳ ಬೀಜಗಳನ್ನು ಉತ್ಪತ್ತಿ ಮಾಡಿರುತ್ತಾರೆ. ರೈತರು ಕೂಡ ಉತ್ತಮತರದ ಬೀಜಗಳ ಪ್ರಯೋಜನಗಳನ್ನು ಈಗಾಗಲೇ ಮನಗಂಡಿದ್ದಾರೆ. ಉತ್ತಮ ಬೀಜಗಳನ್ನು ಸರ್ವರೂ ಉಪಯೋಗಿಸಲು ಇರುವ ತೊಂದರೆಯೆಂದರೆ ಅಂಥ ಬೀಜಗಳು ಸಾಕಷ್ಟು ಒದಗದಿರುವುದು; ಪ್ರಚಾರ ಕಾರ್ಯವು ಇನ್ನೂ ಕೆಲವು ಮಟ್ಟಿಗೆ ನಡೆಯಬೇಕಾದದ್ದು ಇನ್ನೆರಡೇ ಆಗಿದೆ. ಈಗ ಉತ್ತಮ ತರದ ಬೀಜಗಳನ್ನು ಉಪಯೋಗಿಸುವವರ ಸಂಖ್ಯೆಯು ಬೇರೆಬೇರೆ ಪ್ರಾಂತ್ಯಗಳಲ್ಲಿ ಬರೀ ಶೇಕಡ ೧ ರಿಂದ ೧೦ರ ಒಳಪಟ್ಟಿದೆ. ಮಧ್ಯಪ್ರಾಂತ್ಯ ಮತ್ತು ಮದರಾಸು ಪ್ರಾಂತ್ಯಗಳಲ್ಲಿ ಮಾತ್ರ ಶೇಕಡ ೨೦ಕ್ಕೆ ಸ್ವಲ್ಪ ಹೆಚ್ಚಾಗಿವೆ.

ಅನೇಕ ಪ್ರಾಂತೀಕ ಸರಕಾರಗಳು ಆಗಲೇ ರೈತರಿಗೆ ಉತ್ತಮ ಬೀಜಗಳನ್ನು ಸಾಕಷ್ಟು ಒದಗಿಸುವ ಯೋಜನೆಗಳನ್ನು ಕೇಂದ್ರ ಸರಕಾರದ ಸಹಾಯದಿಂದ ಕೈಕೊಂಡಿರುತ್ತವೆ. ಉಳಿದ ಪ್ರಾಂತ್ಯಗಳಲ್ಲಿ ಅಂಥ ಯೋಜನೆಗಳು ಬೇಗನೆ ಜಾರಿಗೆ ಬರಲಿಕ್ಕಿವೆ. ಇದರ ಫಲಿತಾಂಶವಾಗಿ ೧೯೫೧-೫೨ನೇ ಇಸವಿಯಲ್ಲಿ ದೇಶದ ಅರ್ಧದಷ್ಟು ರೈತರ ಉಪಯೋಗಕ್ಕೆ ಬೇಕಾಗುವಷ್ಟು ಉತ್ತಮ ತರದ ಬೀಜಗಳನ್ನು ಉತ್ಪತ್ತಿಮಾಡಬಹುದಾಗಿ ಅಂದಾಜು ಮಾಡಲಾಗಿದೆ. ಎಲ್ಲರಿಗೂ ಸರಿಯಾದ ಬೀಜಗಳು ಸರಕಾರದ ಮೂಲಕವೇ ದೊರೆಯಲು ಅನುಕೂಲವಾಗುವ ವರೆಗೆ ರೈತರೇ ಅವರವರ ಹಿಡುವಳಿಯಿಂದ ಆದಷ್ಟು ಪುಷ್ಟಿಯಾಗಿ ರೋಗರುಜಿನವಿಲ್ಲದ, ಮತ್ತು ಹೆಚ್ಚಿನ ಬೆಳೆ ಕೊಡಬಹುದಾದ ಬೀಜಗಳನ್ನು ಸ್ವಲ್ಪ ಶ್ರಮವಹಿಸಿ ಆರಿಸಿಕೊಳ್ಳಬೇಕು.

## ಕೃತಕ ಮತ್ತು ಸಾಮಾನ್ಯ ಗೊಬ್ಬರಗಳನ್ನು ಉಪಯೋಗಿಸುವುದು.

ಉತ್ತಮ ಬೆಳೆಗಳನ್ನು ಬೆಳೆಯಲು ನೀರು ಮತ್ತು ಉತ್ತಮ ಬೀಜಗಳು ಬಹಳ ಅವಶ್ಯ. ಗೊಬ್ಬರವು ಕೂಡ ಹೆಚ್ಚು ಕಡಮೆಯಾಗಿ ಅಷ್ಟೇ ಅವಶ್ಯವಾಗಿದೆ. ನಮ್ಮ ಶರೀರದ ಬೆಳವಣಿಗೆಗೆ ಅನ್ನವು ಹ್ಯಾಗೋ ಹಾಗೆಯೇ ಮರಗಿಡಗಳಿಗೆ ಗೊಬ್ಬರವೂ ಅವಶ್ಯವಾಗಿ ಸಾಕಷ್ಟು ಒದಗಲೇಬೇಕು. ನಾವು ಬೆಳೆಯುವ ಬೆಳೆಗಳಿಗೆಲ್ಲಾ ಅವಶ್ಯವಿರುವಷ್ಟು ದನದ ಗೊಬ್ಬರವು ನಮ್ಮಲ್ಲಿ ಇಲ್ಲದುದರಿಂದ ಇತರ ಸಾಮಾನ್ಯ ಗೊಬ್ಬರಗಳ ಸಹಾಯದಿಂದ ಅನೇಕ ಕಡೆಗಳಲ್ಲಿ ಶೇಕಡ ೫೦ ರಿಂದ ೧೦೦ರ ವರೆಗೂ ಹೆಚ್ಚಿನ ಉತ್ಪತ್ತಿಯು ದೊರೆಯುತ್ತಿರುತ್ತದೆ. ಇಂಡಿಯಾ ದೇಶದಲ್ಲಿ ಒಟ್ಟಾರೆಯಾಗಿ ಹೇಳುವುದಾದರೆ ಹೆಚ್ಚಿನ ಗೊಬ್ಬರವನ್ನು ಉಪಯೋಗಿಸುವುದರಿಂದ ನಮ್ಮ ಬೆಳೆಯನ್ನು ಶೇಕಡ ೨೦ರಷ್ಟು ಹೆಚ್ಚಿಸಿಕೊಳ್ಳಬಹುದು.

ಕೃತಕ ಗೊಬ್ಬರಗಳ ಪೈಕಿ ಅಮೋನಿಯಂ ಸಲ್ಫೇಟ್ ಗೊಬ್ಬರವು ಬಹು ಮುಖ್ಯವಾದದ್ದು. ನಮ್ಮ ರೈತರಿಗೆ ಸಾಧಾರಣ ವರ್ಷ ಒಂದಕ್ಕೆ ೫ ಲಕ್ಷ ಟನ್ನು ಅಮೋನಿಯಮ್ ಸಲ್ಫೇಟ್ ಗೊಬ್ಬರವು ಬೇಕಾಗಿದೆ. ಈ ಪೈಕಿ ನಮ್ಮ ದೇಶದ ಉತ್ಪತ್ತಿಯು ೬೦,೦೦೦ ಟನ್ನುಗಳು ಮಾತ್ರ ಒದಗುತ್ತಿದೆ. ಇದರಿಂದ ನಮ್ಮ ಅವಶ್ಯಕತೆಯ ಮೂರರಲ್ಲಿ ಒಂದು ಭಾಗ ಮಾತ್ರ ನಮಗೆ ಸಿಕ್ಕಿದಂತಾಯಿತು. ಇನ್ನು ಈಗ ಶುರುಮಾಡಿರುವ ಸಿಂಧ್ರಿ ಕಾರ್ಖಾನೆಯು ೧೯೫೨ನೇ ಇಸವಿಯಲ್ಲಿ ೩½ ಲಕ್ಷ ಟನ್ನುಗಳ ಉತ್ಪತ್ತಿಯನ್ನು ಮಾಡಬಹುದು.

ಈಗ ನಾವು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಾ ಬರುತ್ತಿರುವ ಮತ್ತೊಂದು ಕೃತಕ ಗೊಬ್ಬರವೆಂದರೆ ಅದು ಸುಪರ್‌ಫಾಸ್ಫೇಟ್. ಇದನ್ನು ಅಮೋನಿಯಂ ಫಾಸ್ಫೇಟ್ ಗೊಬ್ಬರದೊಂದಿಗೆ ಮಿಶ್ರಮಾಡುವುದರಿಂದ ಹೆಚ್ಚಿನ ಪ್ರಯೋಜನವಿದೆ. ಇಂಡಿಯಾ ದೇಶದಲ್ಲಿ ಇದರ ಉತ್ಪತ್ತಿಯು ಸಾಧಾರಣ 100 ಲಕ್ಷ ಟನ್ನುಗಳಷ್ಟಿದೆ. ಆದರೆ ಇದರ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುವನ್ನು ಹೊರದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಹಾಗೂ ದೇಶದ ಉತ್ಪತ್ತಿಯು ದೇಶದಲ್ಲಿ ಅವಶ್ಯಕತೆಗೆ ಸಾಕಷ್ಟು ಇದೆ.

ಮೂಳೆಗೊಬ್ಬರವು ಸೂಪರ್ ಫಾಸ್ಫೇಟನಂತೆಯೇ ರಂಜಕವನ್ನು ಕೊಡುವ ಇನ್ನೊಂದು ಗೊಬ್ಬರ. ಇದು ವರೆಗೂ ಇದರ ಉಪಯೋಗವು ಕಡಿಮೆಯಾಗಿತ್ತು. ಆದರೆ ಈಗಲೀಗ ಇದರ ಪ್ರಯೋಜನವನ್ನು ಅರಿತ ಜನರು ಇದನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ನಮ್ಮ ದೇಶದ ಉತ್ಪತ್ತಿಯು ಇಲ್ಲಿಯ ಉಪಯೋಗಕ್ಕೆ ಸಾಕಷ್ಟಿದೆಯಲ್ಲದೆ ಕೆಲವನ್ನು ಈಗಲೂ ನಾವು ಪರದೇಶಗಳಿಗೆ ರಫ್ತುಮಾಡುತ್ತಿದ್ದೇವೆ.

ಮೂಳೆ ಗೊಬ್ಬರದಂತೆಯೇ ರಕ್ತಪುಡಿಯು ಕೂಡ ಸತ್ತ ಪ್ರಾಣಿಗಳಿಂದ ಒದಗುವ ಪ್ರಯೋಜನಕಾರಿಯಾದ ಗೊಬ್ಬರ. ಇದನ್ನು ನಾವು ಧಾರಾಳವಾಗಿ ಉಪಯೋಗಿಸಬಹುದು.

ಹಸುರು ಗೊಬ್ಬರ ಕೂಡ ಮಣ್ಣಿನ ಫಲವತ್ತನ್ನು ಹೆಚ್ಚಿಸಲು ಬಹು ಪ್ರಯೋಜನಕಾರಿಯಾಗಿದೆ. ತಮ್ಮ ಸ್ವಂತ ಅನುಭವದಿಂದಲೂ ವ್ಯವಸಾಯ ಇಲಾಖೆಗಳ ಬೋಧನೆಯಿಂದಲೂ ಇದರ ಪ್ರಯೋಜನಗಳನ್ನು ಅರಿತುಕೊಂಡು ಜನರು ಇದನ್ನು ಈಗ ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಾ ಬರುತ್ತಿದ್ದಾರೆ. ಇದನ್ನು ಸಾಕಷ್ಟು ನೀರಿನ ಅನುಕೂಲತೆ ಇರುವ ಕಡೆಗಳಲ್ಲಿ ಮಾತ್ರ ಉಪಯೋಗಿಸಬಹುದು. ಸಣಬು, ದಮಂಚ ಮೊದಲಾದವುಗಳನ್ನು ಬೆಳೆಸಿ ಅವು ಹೂವಿಗೆ ಬಂದಾಗ ಅವುಗಳನ್ನು ಮಣ್ಣಿನೊಳಗೆ ಊತು ಅವು ಕೊಳೆತ ನಂತರ ನಮ್ಮ ಇತರ ಬೆಳೆಗಳನ್ನು ಬೆಳೆದರೆ ನಮ್ಮ ಬೆಳೆಯು ಹುಲುಸಾಗಿ ಬೆಳೆದು ಹೆಚ್ಚು ಫಲ ಕೊಡುತ್ತದೆ. ಸರಕಾರದವರು ಜನರಿಗೆ ಇದರ ಬೀಜಗಳನ್ನು ಮುಫತ್ತಾಗಿ ಹಂಚುತ್ತಿದ್ದಾರೆ.

## ಕಂಪೋಸ್ಟು ಗೊಬ್ಬರ.

ಪಟ್ಟಣಗಳಲ್ಲಿ ಪ್ರತಿನಿತ್ಯವೂ ತುಂಬಾ ಕಸಕಡ್ಡಿಗಳೂ ಜನರ ಮತ್ತು ಪ್ರಾಣಿಗಳ ಮಲಮೂತ್ರಗಳೂ ತುಂಬಾ ದೊರೆಯುತ್ತವೆ. ಗ್ರಾಮಗಳಲ್ಲಿ ಕೂಡ ಇವುಗಳನ್ನು ಶೇಖರಿಸಿದಲ್ಲಿ ಎಷ್ಟೋ ಲಕ್ಷ ಟನ್ನುಗಳಷ್ಟು ಕಸಕಡ್ಡಿಗಳೂ ಮಲಮೂತ್ರಗಳೂ ದೊರೆಯುತ್ತವಲ್ಲದೆ ಧಾರಾಳವಾಗಿ ಸೊಪ್ಪುಸವೆಗಳು ಕೂಡ ದೊರೆಯುತ್ತವೆ. ಇವೆಲ್ಲಾ ಕೊಳೆತ ನಂತರ ಉತ್ತಮವಾದ ಗೊಬ್ಬರವಾಗುತ್ತದೆ. ಇವುಗಳನ್ನೆಲ್ಲಾ ಸರಿಯಾಗಿ ಕೊಳೆಯಿಸಿ ತಯಾರಿಸಿದ ಗೊಬ್ಬರಕ್ಕೆ ಕಂಪೋಸ್ಟು ಗೊಬ್ಬರವೆನ್ನುತ್ತಾರೆ. ರೈತರು ಸ್ವಲ್ಪ ಶ್ರಮ ತೆಗೆದುಕೊಂಡಲ್ಲಿ ತಮಗೆ ಬೇಕಾದ ಗೊಬ್ಬರಗಳನ್ನು ಸಾಕಷ್ಟು ತಮ್ಮ ತಮ್ಮ ಹಿಡುವಳಿಗಳಲ್ಲೇ ಸುಲಭ ಖರ್ಚಿನಿಂದ ತಯಾರಿಸಿಕೊಳ್ಳಬಹುದು. ಚೈನಾ ಮತ್ತು ಜಪಾನ್ ದೇಶಗಳಲ್ಲಿ ಅವರ ಒಂದೊಂದು ಎಕ್ರೆ ಗದ್ದೆಗಳಲ್ಲಿ ಸರಾಸರಿಯಾಗಿ ೨೪೦೦ ರಿಂದ ೩೪೦೦ ಪೌಂಡುಗಳಷ್ಟು ಬತ್ತವನ್ನು ಬೆಳೆಯುತ್ತಿರುವುದಕ್ಕೆ ಅವರು ಜನರ ಮತ್ತು ಪ್ರಾಣಿಗಳ ಮಲಮೂತ್ರಗಳನ್ನು ಸ್ವಲ್ಪವೂ ಹಾಳುಮಾಡದೆ ಅವುಗಳನ್ನೆಲ್ಲಾ ಗೊಬ್ಬರವಾಗಿ ಉಪಯೋಗಿಸುತ್ತಿರುವುದೇ ಕಾರಣವಾಗಿದೆ. ಇಂಡಿಯಾ ದೇಶದಲ್ಲಿ ಜನರ ಮೂತ್ರ ಒಂದನ್ನು ಮಾತ್ರ ನಾವು ಉಳಿಕೆ ಮಾಡಿಕೊಂಡರೆ ನಮಗೆ ವರ್ಷಕ್ಕೆ 1 ಮಿಲಿಯ ಟನ್ನುಗಳಷ್ಟು ಸಾರಜನಕವು ಅಂದರೆ 5 ಮಿಲಿಯ ಟನ್ನು ಅಮೋನಿಯಮ್ ಸಲ್ಫೇಟ್ ಗೊಬ್ಬರದಿಂದ ನಮಗೆ ಸಿಕ್ಕಬಹುದಾದಷ್ಟು ಸಾರಜನಕವನ್ನು ಶೇಖರಿಸಿಕೊಳ್ಳಬಹುದೆಂದು ಅಂದಾಜು ಮಾಡಲಾಗಿದೆ. ನಾವು ಇದನ್ನು ಇನ್ನೂ ಪೂರ್ತಿಯಾಗಿ ಅರಿತುಕೊಂಡಿರುವುದಿಲ್ಲ.

ಗ್ರಾಮಾಂತರಗಳಲ್ಲಿ ಕೂಡ ರೈತರು ಸಹ ದನದ ಸಗಣಿಯನ್ನು ಬೆರಣಿ ತಟ್ಟಿ ಸೌದೆಯ ಬದಲಿಗೆ ಉಪಯೋಗಿಸುತ್ತಿದ್ದಾರೆ. ಇದರಿಂದ ಶೇಕಡ 50 ರಷ್ಟು ಅಮೂಲ್ಯವಾದ ದನದ ಗೊಬ್ಬರವು ನಷ್ಟವಾಗುತ್ತಿದೆ. ಇವರಿಗೆ ಬೇಕಾದಷ್ಟು ಕಟ್ಟಿಗೆಯು ಸುಲಭ ಕ್ರಯಕ್ಕೆ ದೊರೆಯದೆ ಇರುವುದೇ ಈ ತರದ ನಷ್ಟಕ್ಕೆ ಕಾರಣವಾಗಿದೆ. ಬೇಗನೆ ಬೆಳೆಯುವ ಮರಗಳನ್ನು ಪ್ರತಿಯೊಬ್ಬರೂ ಸಾಕಷ್ಟು ಬೆಳೆಸಿಕೊಳ್ಳುವುದೇ ಈ ತರದ ನಷ್ಟವನ್ನು ತಪ್ಪಿಸಿಕೊಳ್ಳಲು ಯೋಗ್ಯ ದಾರಿಯಾಗಿದೆ. ಇದಕ್ಕಾಗಿ ಸರಕಾರದವರು ಮರಗಳ ಸಸಿಗಳನ್ನು ತಯಾರಿಸಿ ಜನರಿಗೆ ಮುಫತ್ತಾಗಿ ಹಂಚುತ್ತಿದ್ದಾರೆ.

ಪಟ್ಟಣಗಳಲ್ಲಿ ಸಿಕ್ಕುವ ಕಸಕಡ್ಡಿಗಳನ್ನು ಶೇಖರಿಸಿ ಅದರಲ್ಲಿ ಮಿಶ್ರವಾಗಿರತಕ್ಕ ಗಾಜಿನ ಚೂರು ವಗೈರೆ ಅಪಾಯಕರ ವಸ್ತುಗಳನ್ನು ತೆಗೆದುಹಾಕಿ ಉತ್ತಮತರದ ಕಂಪೋಸ್ಟು ಗೊಬ್ಬರಗಳನ್ನು ತಯಾರಿಸಬಹುದು. ಹೀಗೆ ತಯಾರಿಸಿದ ಗೊಬ್ಬರದ ಮಾರಾಟದಿಂದ ಮುನ್ಸಿಪಾಲಿಟಿಯವರು ಕೆಲವು ಮಟ್ಟಿಗೆ ಆದಾಯವನ್ನು ಕೂಡ ಮಾಡಿಕೊಳ್ಳಬಹುದು. ಈ ಕ್ರಮಗಳನ್ನು ಜಾರಿಗೆ ತರಲು ಸರಕಾರದವರು ಇದಕ್ಕೆ ಕಾನೂನುಗಳನ್ನು ಮಾಡಿ ಯೋಗ್ಯ ಸಲಕರಣೆಗಳನ್ನು ಕೂಡ ಕೊಡುತ್ತಿದ್ದಾರೆ. ಅಲ್ಲದೆ ಪಟ್ಟಣಿಗರ ಮಲಮೂತ್ರಗಳನ್ನು ಕೂಡ ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾಡುತ್ತಿರುವಂತೆ ಗೊಬ್ಬರವಾಗಿ ಉಪಯೋಗಿಸಬಹುದು. ಈ ಬಗ್ಗೆ ಸರಕಾರದವರು ಸರಿಯಾದ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಸನ್ ೧೯೫೫-೫೬ನೇ ಇಸವಿಯ ಅಂತ್ಯಕ್ಕೆ ಪಟ್ಟಣಗಳ ಮಲಮೂತ್ರಗಳ ಅರ್ಧ ಭಾಗದಷ್ಟು ಸರಿಯಾಗಿ ಉಪಯೋಗಿಸಲ್ಪಡಬಹುದಾಗಿ ಅಂದಾಜು ಮಾಡಲಾಗಿದೆ.

ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಸಿಕ್ಕುತ್ತಿರುವ ಕಸಕಡ್ಡಿಗಳನ್ನೂ ಮಲಮೂತ್ರಗಳನ್ನೂ ಸರಿಯಾದ ರೀತಿಯಲ್ಲಿ ಉಪಯೋಗಿಸಿದ್ದೇ ಆದರೆ ಇಂಡಿಯಾ ದೇಶದಲ್ಲಿ ೨೫೦ ಲಕ್ಷ ಟನ್ನುಗಳಷ್ಟು ಹೆಚ್ಚಿನ ಕಂಪೋಸ್ಟು ಗೊಬ್ಬರವನ್ನು ತಯಾರಿಸಬಹುದು. ಆದರೆ ಈಗ ಉಪಯೋಗಿಸುತ್ತಿರುವುದು ಬರೀ ೨೭ ಲಕ್ಷ ಟನ್ನುಗಳಷ್ಟು ಮಾತ್ರ. ಅದ್ದರಿಂದ ಸರ

ಕಾರದವರು ದೇಶಕ್ಕೆ ಈ ಕೆಳಗಿನ ಗುರಿಗಳನ್ನು ಇಟ್ಟಿದ್ದಾರೆ.

೧೯೪೯-೫೦ಕ್ಕೆ 62 ಲಕ್ಷ ಟನ್ನು ಕಂಪೋಸ್ಟು ಗೊಬ್ಬರ ತಯಾರಿಸಿ ೨,೨೫ ಲಕ್ಷ ಟನ್ನು ಹೆಚ್ಚಿನ ಬೆಳೆಯನ್ನು ಬೆಳೆಯಬೇಕು.

೧೯೫೦-೫೧ಕ್ಕೆ ೧೫೦ ಲಕ್ಷ ಟನ್ನು ಕಂಪೋಸ್ಟು ಗೊಬ್ಬರ ತಯಾರಿಸಿ ೫೫೦ ಲಕ್ಷ ಟನ್ನು ಹೆಚ್ಚಿನ ಬೆಳೆಯನ್ನು ಬೆಳೆಯಬೇಕು.

೧೯೫೧-೫೨ಕ್ಕೆ ೩೧೦ ಲಕ್ಷ ಟನ್ನು ಕಂಪೋಸ್ಟು ಗೊಬ್ಬರ ತಯಾರಿಸಿ ೧೧೦೦ ಲಕ್ಷ ಟನ್ನು ಹೆಚ್ಚಿನ ಬೆಳೆ ಬೆಳೆಯಬೇಕು.

ಕೇಂದ್ರ ಸರಕಾರದವರು ಮತ್ತು ಪ್ರಾಂತೀಯ ಸರಕಾರಗಳು ಈ ಬಗ್ಗೆ ಯೋಗ್ಯ ಸಲಕರಣೆ ಮತ್ತು ಪ್ರೋತ್ಸಾಹಗಳನ್ನು ಜನರಿಗೆ ಕೊಡುತ್ತಿದ್ದಾರೆ

### ಕ್ರಿಮಿಕೀಟಗಳ ನಿವಾರಣೆ

ಒಳ್ಳೆಯ ಬೆಳೆಗಳನ್ನು ಬೆಳೆಯಲು ಕ್ರಿಮಿಕೀಟಗಳ ನಿವಾರಣೆಯು ಬಹು ಆವಶ್ಯ ಎಷ್ಟೋ ಸಂದರ್ಭಗಳಲ್ಲಿ ಉತ್ತಮವಾದ ಬೆಳೆಗಳು ಕ್ರಿಮಿಗಳಿಂದಲೂ ರೋಗಗಳಿಂದಲೂ ಪೂರ್ತಿಯಾಗಿ ನಾಶ ಮಾಡಲ್ಪಟ್ಟ ಉದಾಹರಣೆಗಳು ಇವೆ ನಮ್ಮ ದೇಶದಲ್ಲಿ ಪ್ರತಿ ವರ್ಷವೂ ಸಾಧಾರಣ ಶೇಕಡ ೨೦ ರಷ್ಟು ಬೆಳೆಯು ಈ ಕ್ರಿಮಿಕೀಟಗಳಿಂದಾಗಿ ನಷ್ಟವಾಗುತ್ತಿದೆಯೆಂದು ತಜ್ಞರು ಅಂದಾಜು ಮಾಡಿದ್ದಾರೆ ಅಂದರೆ ಈ ನಷ್ಟವನ್ನು ನಾವು ಪೂರ್ತಿಯಾಗಿ ತಪ್ಪಿಸಿದ್ದೇ ಆದರೆ ನಮ್ಮ ಈಗಿನ ಆಹಾರದ ಅಭಾವವು ಪೂರ್ತಿಯಾಗಿ ನೀಗಿ ನಮ್ಮಲ್ಲಿ ಇಷ್ಟೇ ದವಸಧಾನ್ಯಗಳು ಉಳಿತಾಯವಾಗಬಹುದು. ಇವುಗಳ ನಿವಾರಣೆಯು ಮೂರು ವಿಧವಾಗಿವೆ (1) ರೋಗಗಳ ನಿವಾರಣೆ (2) ಹುಳುಗಳ ನಿವಾರಣೆ ಮತ್ತು (3) ಕಾಡುಜಂತುಗಳಿಂದ ನಷ್ಟಬಾರದಂತೆ ನೋಡಿಕೊಳ್ಳುವುದು

ರೋಗಗಳ ನಿವಾರಣೆ ಬಗ್ಗೆ ಮುಖ್ಯವಾದ ರೋಗಗಳು ಬಾರದಂತೆ ಅಥವಾ ಒಂದು ವೇಳೆ ಬಂದರೂ ಹೆಚ್ಚಿನ ನಷ್ಟಬಾರದಿರಲಿಕ್ಕೆ ಜತ್ತ, ಗೋಧಿ ಬೆಳೆಗಳ ಸುಧಾರಿಸಿದ ಜಾತಿಯ ಬೀಜಗಳನ್ನು ಸಸ್ಯ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಅಲ್ಲದೆ ಔಷಧಿ ಪ್ರಯೋಗದಿಂದಲೂ ನಮ್ಮ ಬೆಳೆಗಳನ್ನು ರೋಗದಿಂದ ಕಾಪಾಡಿಕೊಳ್ಳಬಹುದು. ಸರ್ಕಾರದವರು ಈ ಬಗ್ಗೆ ತಕ್ಕ ಏರ್ಪಾಡುಗಳನ್ನು ಅಲ್ಲಲ್ಲಿ ಮಾಡಿದ್ದಾರೆ. ಹುಳುಗಳಿಗೂ ಕೂಡ ಔಷಧಿ ಪ್ರಯೋಗ ಮಾಡಿ ಆಯಾಯ ಬೆಳೆಗೆ ಬರತಕ್ಕ ಹುಳುಗಳನ್ನು ನಾಶ ಮಾಡುವ ಏರ್ಪಾಡುಗಳಿವೆ ಕಾಡುಮೃಗಗಳ ಹಾವಳಿಯನ್ನು ತಪ್ಪಿಸಲು ರೈತರಿಗೆ ಕೋವಿ ಮದ್ದುಗಳನ್ನು ಧಾರಾಳವಾಗಿ ಕೊಟ್ಟು ಬೇಟೆಗಾರರಿಗೆ ಪ್ರೋತ್ಸಾಹ ಕೊಡುವ ಏರ್ಪಾಡುಗಳು ಮಾಡಲಾಗುತ್ತಿವೆ.

ಬೆಳೆಸಿದ ದವಸಧಾನ್ಯಗಳು ಕೂಡ ಇಲಿ ಹೆಗ್ಗಣಗಳಿಂದಲೂ, ಹುಳಗಳಿಂದಲೂ ಸರಿಯಾದ ಕಣಜಗಳಿಲ್ಲದೆ ಶೀತದ ಬೆಸೆಯಿಂದಲೂ ಬಹುವಾಗಿ ನಷ್ಟವಾಗುತ್ತಿವೆ. ಸರಕಾರದವರು ಈಗ ಇಲಿ ಹೆಗ್ಗಣಗಳು ಸೇರಲಿಕ್ಕಾಗದ ಮತ್ತು ಶೀತ ತಗಲದ ಕಣಜಗಳನ್ನು ಅನೇಕವಾಗಿ ಕಟ್ಟಿದ್ದಾರೆ ಹುಳುಗಳು ಸೇರದಂತೆ ಔಷಧಿ ಪ್ರಯೋಗಗಳ ಏರ್ಪಾಡುಗಳನ್ನು ಮಾಡಲಾಗುತ್ತಿವೆ ಜನರು ಕೂಡ ತಮ್ಮ ತಮ್ಮ ಉಪಯೋಗಕ್ಕೆಂದು ಇಟ್ಟುಕೊಳ್ಳುವ ಆಹಾರ ಪದಾರ್ಥಗಳು ನಷ್ಟವಾಗದಂತೆ ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು

### ಹೊಸ ಜಮೀನುಗಳನ್ನು ರೂಪಿತಗೊಳಿಸುವುದು

ದೇಶದ ಉತ್ಪತ್ತಿಯನ್ನು ಈಗ ಪಾಳು ಬಿದ್ದಿರುವ ಮತ್ತು ಈ ವರೆಗೆ ವ್ಯವಸಾಯ ಮಾಡದೆ ಇದ್ದ ವ್ಯವಸಾಯ ಮಾಡಲು ಯೋಗ್ಯವಾದ ಜಮೀನುಗಳೆಲ್ಲವನ್ನೂ ವ್ಯವಸಾಯಕ್ಕೆ ತರುವುದರಿಂದ ಖಂಡಿತವಾಗಿಯೂ ಹೆಚ್ಚಿಸಬಹುದು. ಇಂಥಾ ಜಮೀನುಗಳು ದೇಶದ ಉದ್ದಗಲಕ್ಕೂ ತುಂಬಾ ಇವೆ. ಇವುಗಳನ್ನೆಲ್ಲಾ ರೂಪಿತಗೊಳಿಸುವ ಬಗ್ಗೆ ಕೇಂದ್ರ ಸರಕಾರದವರು ಮತ್ತು ಪ್ರಾಂತೀಯ ಸರಕಾರಗಳು ಒಟ್ಟುಗೂಡಿ ನಾನಾ ಯೋಜನೆಗಳನ್ನು ಮಾಡಿದ್ದಾರೆ ಇವುಗಳಲ್ಲಿ ಕೆಲವನ್ನು ಜಾರಿಗೆ ತರಲು ಬೇಕಾದ ಹಣವನ್ನು ಅಂತರಾಷ್ಟ್ರೀಯ ಬ್ಯಾಂಕಿನಿಂದಲೂ, ದೊಡ್ಡ ದೊಡ್ಡ ಯಂತ್ರಗಳನ್ನು ಪರದೇಶಗಳಿಂದಲೂ ತರುವ ಏರ್ಪಾಡನ್ನು ಮಾಡಿ, ಕೆಲಸವನ್ನು ಪ್ರಾರಂಭಿಸಿ ಕೆಲವು ಸಾವಿರ ಎಕ್ರೆ ಜಮೀನುಗಳನ್ನು ಈಗಾಗಲೇ ರೂಪಿತಗೊಳಿಸಲಾಗಿದೆ ಮಿಕ್ಕುಳಿದವುಗಳು ಶೀಘ್ರದಲ್ಲಿಯೇ ರೂಪಿತ ಮಾಡಲ್ಪಡುವವು.

ಭೂಮಿಯನ್ನು ಯಂತ್ರಗಳ ಸಹಾಯದಿಂದ ಒಂದು ಬಾರಿ ರೂಪಿತಗೊಳಿಸಿದರೆ ಸಾಲದು. ಈ ರೀತಿ ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿದ ಭೂಮಿಯಲ್ಲಿ ಯಾವಾಗಲೂ ವ್ಯವಸಾಯವಾಗುವ ಏರ್ಪಾಡುಗಳನ್ನು ಮಾಡಬೇಕು. ಇವುಗಳಲ್ಲಿ ಕೆಲವು ಕಾಡು ಪ್ರದೇಶದಲ್ಲಿರುವುದರಿಂದಲೂ, ಮಲೇರಿಯಾ ವಗೈರೆ ರೋಗಗಳಿಂದ ಕೂಡಿರುವುದರಿಂದಲೂ ಜನರ ವಾಸಕ್ಕೆ ಅಷ್ಟೇನೂ ಯೋಗ್ಯವಾಗಿರುವುದಿಲ್ಲ. ಇವುಗಳನ್ನು ಜನರ ವಾಸಕ್ಕೆ ಯೋಗ್ಯವಾಗಿ ಮಾಡುವ ಕೆಲಸವು ಕೂಡ ನಡೆಯುತ್ತಿದೆ. ೧೯೫೧ನೇ ಇಸವಿಯ ಅಂತ್ಯದೊಳಗೆ ಸಾಧಾರಣ ೯ ಲಕ್ಷ ಎಕ್ರೆ ಹೊಸ ಜಮೀನು ವ್ಯವಸಾಯಕ್ಕೂ ಜನರ ವಾಸಕ್ಕೂ ಯೋಗ್ಯವಾಗಬಹುದೆಂದೂ ಇದರಿಂದ ೩ ಲಕ್ಷ ಟನ್ನುಗಳಷ್ಟು ಹೆಚ್ಚಿನ ಪದಾರ್ಥಗಳು ಉತ್ಪತ್ತಿಯಾಗಬಹುದೆಂದೂ ಅಂದಾಜು ಮಾಡಲಾಗಿದೆ.

### ಹಣದ ಸಹಾಯ.

ಮೇಲೆ ಹೇಳಿದ ಎಲ್ಲಾ ತರದ ಯೋಜನೆಗಳೂ ಫಲಕಾರಿಯಾಗಬೇಕಾದರೆ ಸಾಕಷ್ಟು ಹಣದ ಅನುಕೂಲತೆ ಇರಬೇಕು. ಇಂಡಿಯಾ ಸರಕಾರದವರು ಪ್ರಾಂತೀಯ ಸರಕಾರಗಳಿಗೆ ಗ್ರಾಂಟುಗಳಾಗಿಯೂ, ಸಾಲಗಳಾಗಿಯೂ ಹಣದ ಸಹಾಯವನ್ನು ಕೊಡುತ್ತಿದ್ದಾರೆ. ರೈತರು ತಮಗೆ ಬೇಕಾದ ಹಣದ ಸಹಾಯವನ್ನು ಆಯಾಯ ಸರಕಾರಗಳಿಂದ ಪಡೆದುಕೊಳ್ಳಬಹುದು. ಅಲ್ಲದೆ ಭೂಮಿಯ ರೂಪಿತಕ್ಕೋಸ್ಕರ ಜನರಿಗೆ ಕೊಡುವ ಟಕಾವಿ ವಗೈರೆ ಸಾಲಗಳನ್ನು ಆಯಾಯ ಸರಕಾರದವರು ಕೆಲವು ಮಟ್ಟಿಗೆ ಹೆಚ್ಚಿನ ರಿಯಾಯಿತಿಯಿಂದ ಮತ್ತು ಹೆಚ್ಚಿನ ಶ್ರಮವಿಲ್ಲದ ಜನರಿಗೆ ಒದಗಿಸಬೇಕೆಂದು ಕೇಂದ್ರ ಸರಕಾರವು ಪ್ರಾಂತೀಕ ಸರಕಾರಗಳಿಗೆ ತಿಳಿಸಿದೆ. ಇದಲ್ಲದೆ ಇಂಡಿಯಾ ಸರಕಾರವು ಪ್ರಾಂತೀಯ ಸರಕಾರಗಳು ಸಂಗ್ರಹಿಸುವ ಪ್ರತಿ ಒಂದು ಮಣ (ಬಂಗಾಳ ಮಣ) ಆಹಾರ ಪದಾರ್ಥಗಳಿಗೆ ಎಂಟಾಣೆಯಂತೆಯೂ ಪ್ರಾಂತ್ಯದಿಂದ ಹೊರಗೆ ಕಳುಹಿಸುವ ಆಹಾರ ಪದಾರ್ಥಗಳಿಗೆ ಮಣ ಒಂದರ ಹೆಚ್ಚಿನ ಎಂಟಾಣೆಯಂತೆಯೂ ಆಯಾಯ ಸರಕಾರಕ್ಕೆ ಕೊಡುತ್ತದೆ ಈ ರೀತಿ ಕೇಂದ್ರ ಸರಕಾರದಿಂದ ಪಡೆದ ಬೋನಸ್ಸ್ ಹಣಗಳನ್ನು ಪ್ರಾಂತೀಕ ಸರಕಾರಗಳು ತಮ್ಮತಮ್ಮ ಹೆಚ್ಚಿನ ಆಹಾರ ಪದಾರ್ಥಗಳನ್ನು ಬೆಳೆಯುವ ಯೋಜನೆಗಳಿಗೆ ಖರ್ಚು ಮಾಡುತ್ತಿವೆ

### ವ್ಯವಸಾಯಾಭಿವೃದ್ಧಿಗೆ ಬೇಕಾದ ಸಾಹಿತ್ಯಗಳ ಸರಬರಾಯಿ

ವ್ಯವಸಾಯಕ್ಕೆ ಬೇಕಾದ ಹತ್ಯಾರುಗಳನ್ನು ತಯಾರಿಸಲಿಕ್ಕೂ, ಕರೆ, ಕಟ್ಟ, ನಾಲೆಗಳನ್ನು ಕಟ್ಟಲಿಕ್ಕೂ, ಯಂತ್ರಗಳನ್ನು ನಡೆಸಲಿಕ್ಕೂ, ಕಬ್ಬಿಣ ಮತ್ತು ಉಕ್ಕು, ಸಿಮೆಂಟು, ಇದ್ದಲು, ಮತ್ತು ಎಣ್ಣೆಗಳು ಅವಶ್ಯವಾಗಿ ಬೇಕಾಗುತ್ತವೆ ಮೊದಮೊದಲು ಇವುಗಳನ್ನು ಸರಿಯಾಗಿ ಒದಗಿಸಲು ಸಾಧ್ಯವಾಗದಿದ್ದರೂ ಈಗ ಇವು ಸಾಕಷ್ಟು ಒದಗುತ್ತಿವೆ ಸರಕಾರದವರು ಇವುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಹೆಚ್ಚಿನ ರಿಗಕೊಟ್ಟು ಸರಿಯಾದಲ್ಲಿ ಇವುಗಳನ್ನು ರೈತರಿಗೆ ಒದಗಿಸುವ ಏರ್ಪಾಡುಗಳನ್ನು ಮಾಡಿದ್ದಾರೆ

### ಆಡಳಿತ ವಿಚಾರ

ಹೆಚ್ಚಿನ ಬೆಳೆ ಬೆಳೆಯುವ ಯೋಜನೆಗಳೆಲ್ಲವನ್ನೂ ಇಂಡಿಯಾ ಸರಕಾರದ ಒಬ್ಬರು ಕಮಿಷನರ ಆಡಳಿತದಲ್ಲಿಟ್ಟಿದೆ. ಅಂತೆಯೇ ಪ್ರಾಂತೀಕ ಸರಕಾರಗಳಲ್ಲಿ ಒಬ್ಬೊಬ್ಬ ಡೈರೆಕ್ಟರುಗಳಿರುತ್ತಾರೆ ಸದರಿ ಡೈರೆಕ್ಟರುಗಳು ಅವರವರ ಪ್ರಾಂತ್ಯಗಳ ಯೋಜನೆಗಳನ್ನು ಸಾಂಗವಾಗಿ ನಡೆಸಲು ಜವಾಬ್ದಾರರಾಗಿದ್ದಾರೆ ಇವರು ಇಂಡಿಯಾ ಸರಕಾರದ ಕಮಿಷನರವರೊಡನೆ ಸಹಕರಿಸಿ ಅವರ ಸಲಹೆ ಮೇರೆ ಕೆಲಸ ಮಾಡುತ್ತಾರೆ ಇಂಡಿಯಾ ಸರಕಾರದ ಮಂಜೂರಾತಿಗಳು ದೊರೆಯಲು ತಡವಾಗದಂತೆ ಅದಕ್ಕೆ ಯೋಗ್ಯ ಸಿಬ್ಬಂದಿಗಳು ನೇಮಕ ಮಾಡಲ್ಪಟ್ಟಿರುತ್ತಾರೆ

ಆಹಾರ ಬೆಳೆಯುವ ಯೋಜನೆಗಳೆಲ್ಲಾ ಸಫಲದಾಯಕವಾಗಬೇಕಾದರೆ ರೈತರ ಮತ್ತು ಕೆಲಸಗಾರರ ಸಹಕಾರವು ಬಹಳ ಅವಶ್ಯ ಇದಕ್ಕಾಗಿ ಪ್ರತಿ ಎರಡು ಮೂರು ಗ್ರಾಮಗಳಿಗೆ ೫ ಅಥವಾ ೭ ಮೆಂಬರುಗಳಿಂದ ಕೂಡಿದ ಒಂದೊಂದು ಪಂಚಾಯಿತ ಮಂಡಳಿಯನ್ನು ಮಾಡಿ ಈ ಪಂಚಾಯಿತ ಮಂಡಳಿಯ ಮೂಲಕ ಈ ಎಲ್ಲಾ ಯೋಜನೆಗಳನ್ನು ನಡೆಸಿಕೊಳ್ಳುವ ಸಲಹೆಯನ್ನು ಇಂಡಿಯಾ ಸರಕಾರದವರು ಕೊಟ್ಟಿರುತ್ತಾರೆ. ಇಂಥಾ ಗ್ರಾಮ ಪಂಚಾಯಿತರಿಂದ ಆರಿಸಲ್ಪಟ್ಟ ಸದಸ್ಯರಿಂದ ಕೂಡಿದ ತಾಲೋಕು ಪಂಚಾಯಿತ ಮಂಡಳಿಯವರು ಆಗಿಂದಾಗ್ಗೆ ಸೇರಿ ಈ ಯೋಜನೆಗಳನ್ನೂ ಮೇಲಿನಿಂದ ಬಂದ ಸಲಹೆಗಳನ್ನೂ ಚರ್ಚಿಸಿ ಗ್ರಾಮಸಮಿತಿಗಳಿಗೆ ಸಲಹೆಗಳನ್ನು ಕೊಡತಕ್ಕದ್ದು. ಇದರಂತೆಯೇ ಡಿಸ್ಟ್ರಿಕ್ಟ್ ಮತ್ತು ಪ್ರಾಂತೀಕ ಸಮಿತಿಗಳನ್ನು ಮಾಡಿ ಉದ್ಯೋಗಸ್ಥರೂ ಮತ್ತು ಉದ್ಯೋಗಸ್ಥರಲ್ಲದವರೂ ಸಹಕರಿಸಿ ಕೆಲಸ ಮಾಡಿದ್ದೇ ಆದರೆ ಈ ಯೋಜನೆಗಳು ಫಲಿಸುವುದರಲ್ಲಿ ಸಂಶಯ ವಿಲ್ಲ

ಜನರಲ್ಲಿ ಹೆಚ್ಚಿಗೆ ಬೆಳೆಯುವ ಉತ್ಸಾಹ ಮತ್ತು ಸ್ಪರ್ಧೋಟಿಯುಂಟಾಗಲು ಯೋಗ್ಯರೀತಿ ಪ್ರಚಾರ ಕೆಲಸವನ್ನು ಮಾಡುವಂತೆಯೂ ಕೆಲವು ಬಹುಮಾನಗಳನ್ನು ಹಂಚುವಂತೆಯೂ ಇಂಡಿಯಾ ಸರಕಾರದ ಸಲಹೆ ಇದೆ ಪ್ರಚಾರ ಕೆಲಸಕ್ಕೆ ಬೇಕಾದ ಮಾಯಾಲಾಂದ್ರಗಳನ್ನೂ ಚಿತ್ರಗಳನ್ನೂ ಪುಸ್ತಕ ಮತ್ತು ಹಸ್ತಪತ್ರಿಕೆಗಳನ್ನೂ ಸರಕಾರದವರು ಒದಗಿಸುತ್ತಿದ್ದಾರೆ

ಒಟ್ಟಾರೆಯಾಗಿ ಸರಕಾರದವರು ಹೆಚ್ಚಿನ ಬೆಳೆಬೆಳೆಯುವ ಯೋಜನೆಗಳು ಸಫಲಕಾರಿಯಾಗುವುದಕ್ಕೆ ಯಾವಯಾವ ಸಲಕರಣೆಗಳ ರೈತರಿಗೆ ಬೇಕೋ ಅವುಗಳೆಲ್ಲವನ್ನೂ ಒದಗಿಸುತ್ತಿದ್ದಾರೆ. ಇದೇನಿದ್ದರೂ ರೈತರ ಮತ್ತು ಇತರ ಜನರ ಸಹಕಾರವಿಲ್ಲದಿದ್ದರೆ ಸರಕಾರದ ಯಾವ ಯೋಜನೆಯೂ ಕೂಡ ಸಫಲಕ್ಕೆ ಬರಲಾರದು ಆದ್ದರಿಂದ ಸರಕಾರದವರು ತಮ್ಮಿಂದಾಗುವ ಕೆಲಸಗಳನ್ನು ಮಾಡಲು ಜನರೆಲ್ಲರೂ ಒಕ್ಕೊರಲಿನಿಂದ ತಮ್ಮ ಸಹಕಾರವನ್ನು ಕೊಡ ಬೇಕಾಗಿ ನಿರೀಕ್ಷಿಸುತ್ತಿದ್ದಾರೆ

---

ನಿಮ್ಮ ಪತ್ನಿಯು...

ಮುಂದಿನ ಪರಿಸ್ಥಿತಿಯನ್ನು ಎದುರುಗೊಳ್ಳಲು ಸಿದ್ಧವಾಗುವ ಸಮಯದಲ್ಲಿ—

ದಿ ಜನರಲ್

ಅಶ್ಶೂರನ್ಸ್ ಸೊಸೈಟಿ ಲಿಮಿಟೆಡ್

ಜೀವ ಅಗ್ನಿ ಮೋಟಾರು ಮೆರಿನ್-ಅಪಘಾತ

ಹೆಡ್ ಆಫೀಸ್ ಅಜ್ಮೀರ್. ಸ್ಥಾಪನೆ 1907.

ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.

Licence No. 60.
Licenced to Post without Prepayment

Reg. No. M. 1600.
'KODAGU' MERCARA, (Coorg).

# ಕೊಡಗು

ಸಂಪಾದಕರು—ಡಿ. ಎ. ಚಿಕ್ಕಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೩೦ | ತಾರೀಕು ೮-೬-೧೯೫೦ನೇ ಶುಕ್ರವಾರ | ಸಂಚಿಕೆ ೨ |

# ಅನ್ನ ಹಾಕಬೇಕು; ಅಕ್ಕಿ ಖರ್ಚಾಗಬಾರದು!

## ಸಂಯೋಜನವಾದಿಗಳ ಮನೋವೃತ್ತಿ.

[ಬರೆದು ಬಂದುದು]

ದೀರ್ಘಕಾಲದಿಂದ ಕೊಡಗು ನ್ಯಾಯವಿಧಾಯಕ ಸಭೆಯಲ್ಲೂ ಸಾರ್ವಜನಿಕ ಸಭೆಗಳಲ್ಲೂ ಚರ್ಚಿಸಲ್ಪಟ್ಟು ಕಡೆಗೆ ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಪಾಸಾದ ವ್ಯವಸಾಯ ಆದಾಯ ತೆರಿಗೆಯ ಮಸೂದೆಗೆ ಇಂಡಿಯಾ ಸರಕಾರದ ಪ್ರೆಸಿಡೆಂಟರು ಒಪ್ಪಿಗೆಯನ್ನಿತ್ತಿರುವರೆಂದು ತಿಳಿದು ಬರುತ್ತದೆ. ಈ ಮಸೂದೆಯನ್ನು ಕುರಿತು 'ಕೊಡಗು' ಪತ್ರಿಕೆಯಲ್ಲಿ ಕಾಲಂನಲ್ಲಿ 'ಬರೆದು ಬಂದ' ಲೇಖನವೊಂದು ಪ್ರಕಟವಾಗಿತ್ತು. ಆ ಲೇಖಕರ ಹೆಸರು ತಿಳಿಸಿದ್ದರೆ ಅವರಿಗೆ ಸರಿಯಾದ ಉತ್ತರ ಬರೆಯುತ್ತಿದ್ದೆನೆಂದು ಶ್ರೀ ಎನ್. ಸೋಮಣ್ಣನವರಂಥಾ ಸಂಯೋಜನಾವಾದಿಗಳು ಅಂದು ಕೊಳ್ಳುತ್ತಿದ್ದಾರಂತೆ. ಪ್ರಜಾ ಪ್ರತಿನಿಧಿ ಸರಕಾರವಿರುವ ಯಾವದೇ ದೇಶದಲ್ಲಿ ರಾಜಕೀಯ ಪಂಗಡಗಳು ತತ್ವವನ್ನು ಅನುಸರಿಸಿ ನಡೆಸಲ್ಪಡುತ್ತಿವೆಯಲ್ಲದೆ ಆಯಾ ವ್ಯಕ್ತಿಗಳನ್ನು ಹೊಂದಿಕೊಂಡಿರುವದಿಲ್ಲ. ವ್ಯಕ್ತಿಯನ್ನು ಹೊಂದಿಕೊಂಡ ಪಕ್ಷವು ದೀರ್ಘಕಾಲ ಬಾಳಲಾರದು ಮತ್ತು ಅದರಿಂದ ದೇಶಕ್ಕೆ ಯಾವ ಹಿತವೂ ಆಗಲಾರದು. ಅದರಲ್ಲೂ ಕೊಡಗಿನಂಥಾ ಚಿಕ್ಕ ಪ್ರಾಂತದಲ್ಲಿ ಪ್ರಾಮುಖ್ಯ ವ್ಯಕ್ತಿಗಳನ್ನು ತಿಳಿದುಕೊಳ್ಳುವ ಅವಕಾಶವು ದೇಶದ ಹೆಚ್ಚಿನ ಜನರಿಗಿರುವದರಿಂದ ಇಲ್ಲಿ ವ್ಯಕ್ತಿಯ ಪಾರ್ಟಿಗೆ ಬೆಂಬಲವು ಹೆಚ್ಚು ದೊರೆಯಲಾರದು. ಬದಲು ತತ್ವವನ್ನು ಒಳಗೊಂಡ ಪಾರ್ಟಿಯು ದೇಶದ ಕಲ್ಯಾಣವನ್ನು ಸಾಧಿಸುವದಾದ್ದರೆ ಅದಕ್ಕೆ ಜನತೆಯ ಬೆಂಬಲವು ದೊರೆಯುವದಲ್ಲದೆ ಅದು ದೀರ್ಘಕಾಲ ಸಾಧಿಸಿ ತನ್ನ ಉದ್ದಿಶ್ಯವನ್ನು ಕೈಗೂಡಿಸಿಕೊಳ್ಳುವದು. ಇಂದು ಕೊಡಗಿನಲ್ಲಿರುವ ಎರಡು ಮುಖ್ಯ ರಾಜಕೀಯ ಪಕ್ಷಗಳು ತತ್ವವನ್ನು ಹೊಂದಿಕೊಂಡಿರುವವಲ್ಲದೆ ವ್ಯಕ್ತಿಗಳನ್ನಲ್ಲ. ಕೊಡಗನ್ನು ಹೀಗೆ ಪ್ರತ್ಯೇಕ ಇಟ್ಟುಕೊಂಡು ಸ್ವರಾಜ್ಯ ನಡೆಸಬೇಕೆನ್ನುವವರು ಪ್ರತ್ಯೇಕ ಪಕ್ಷದವರಾಗಿಯೂ ಈ ಪ್ರಾಂತವನ್ನು ಬೇರೊಂದು ದೊಡ್ಡ ಪ್ರಾಂತಕ್ಕೆ ಸಂಯೋಜಿಸಬೇಕೆನ್ನುವವರು ಸಂಯೋಜನಾ ಪಕ್ಷದವರಾಗಿಯೂ ಕಾರ್ಯಕಲಾಪಗಳನ್ನು ನಡೆಸುತ್ತಿರುವರು. ವ್ಯವಸಾಯ ಆದಾಯ ತೆರಿಗೆಯ ಪ್ರಶ್ನೆಯೂ ಕೂಡ ಕೊಡಗಿನ ಭವಿಷ್ಯತ್ತಿಗೆ ನಿಕಟಸಂಬಂಧವಿರುವದಾಗಿದೆ. ಆದುದರಿಂದ ಈ ಪ್ರಶ್ನೆಯನ್ನು ತರ್ಕಿಸುವ ಕಾಲದಲ್ಲಿ ಯೋಗ್ಯ ಉತ್ತರಕೊಡಲು ಲೇಖಕರ ಹೆಸರು ತಿಳಿಯಬೇಕಿತ್ತು ಎನ್ನುವದರಲ್ಲಿ ಒಂದು ಉದ್ದೇಶವಿದೆ. ವ್ಯಕ್ತಿಗಳ ದೋಷಗಳನ್ನು ಎತ್ತಿ ತೋರಿಸಿ ತತ್ವಗಳನ್ನು ಮರೆಮಾಜಿ ಪಂಗಡಗಳನ್ನು ಖಂಡಿಸುವ ವಿಧಾನವೇ ಇದಾಗಿದೆ. ಇದರ ಬದಲು ವ್ಯಕ್ತಿಗಳನ್ನು ಮರೆತು ಪಾರ್ಟಿ ತತ್ವಗಳನ್ನು ಅವುಗಳ ಗುಣದೋಷಗಳ ಮೇಲೆ ತರ್ಕಿಸಿದ್ದರೆ ದೇಶೀಯರಿಗೆ ಅವುಗಳನ್ನು ಅರಿತುಕೊಳ್ಳಲು ಅನುಕೂಲವಾಗುವದು. ಮತ್ತು ದೇಶದ ಜನರಲ್ಲಿ ಮನಸ್ಸು ಕಡಿಮೆಯಾಗಿ ಯೋಗ್ಯವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗುವದು.

ಹೀಗೆ ಇಂಡಿಯಾ ಸರಕಾರದ ಸಮ್ಮತಿ ದೊರೆತ ಮೇಲೂ ಕೂಡ ಈ ಆಕ್ಟನ್ನು ವಿರೋಧಿಸುವ ಪ್ರಯತ್ನವನ್ನು ಸಂಯೋಜನಾವಾದಿಗಳು ಇನ್ನೂ ಬಿಟ್ಟಿರುವದಿಲ್ಲ. ಅವರ ವಿರೋಧಕ್ಕೆ ಈ ಕಾರಣಗಳನ್ನು ಕೊಡುತ್ತಿದ್ದಾರೆ. (೧) ನಮ್ಮ ನೆರೆ ಪ್ರಾಂತಗಳಲ್ಲಿ ಈ ಕಂದಾಯವನ್ನು ವಿಧಿಸಿರುವದಿಲ್ಲ. (೨) ನಮಗೆ ಜವಾಬ್ದಾರಿ ಸರಕಾರವಿಲ್ಲ. ಚೀಫ್ ಕಮಿಷನರು ಜನರ ಹಿತಚಿಂತಕರಾಗಿರುವರಾದರೂ ಅವರು ಸಂಪೂರ್ಣ ಇಂಡಿಯಾ ಸರಕಾರದ ಹಿಡಿತದಲ್ಲಿರಬೇಕಾಗಿದೆ. ಅವರಿಗೆ ತಮಗೆ ಯುಕ್ತ ತೋರುವ ರೀತಿಯಲ್ಲಿ ವರ್ತಿಸಲು ಅಧಿಕಾರವಿಲ್ಲ. ವಸೂಲ್ಮಾಡಿದ ಕಂದಾಯವನ್ನು ಜನರ ಪ್ರತಿನಿಧಿಗಳಿಗೆ ಖರ್ಚುಮಾಡುವ ಅಧಿಕಾರವಿಲ್ಲ. ಆದ್ದರಿಂದ ಹೊಸ ಕಂದಾಯ ವಿಧಿಸುವದು ನ್ಯಾಯವಿರುದ್ಧ. (೩) ನಮ್ಮ ದೇಶದಲ್ಲಿ ಅಂದಾಜು ೬೫ ಲಕ್ಷ ರೂಪಾಯಿ ಉಳುವರಿ ಇದೆ. ಆದ್ದರಿಂದ ಹೊಸ ಕಂದಾಯ ವಿಧಿಸುವ ಅಗತ್ಯವಿಲ್ಲ. (೪) ಹೊಸ ರಾಜ್ಯಘಟನೆಯಂತೆ ಸದ್ಯದಲ್ಲೇ ಚುನಾವಣೆ ಬರುವದರಿಂದ ಹೊಸ ಕಂದಾಯ ವಿಧಿಸುವ ಜವಾಬ್ದಾರಿಯನ್ನು ಈಗಿನ ಕೌನ್ಸಿಲು ಮೆಂಬರುಗಳು ಹೊತ್ತುಕೊಳ್ಳುವದು ಸರಿಯುಲ್ಲ.

ನಮ್ಮ ನೆರೆಪ್ರಾಂತಗಳಾದ ಮದ್ರಾಸು, ಮೈಸೂರುಗಳಲ್ಲಿ ವ್ಯವಸಾಯ ಆದಾಯ ತೆರಿಗೆಯು ಹಾಕಲ್ಪಟ್ಟಿರುವದಿಲ್ಲವೆಂಬುದು ನಿಜವಾದರೂ ಹಿಂದೂದೇಶದ ಸುಮಾರು ೭ ದೊಡ್ಡ ಪ್ರಾಂತಗಳಲ್ಲಿ ಈ ತೆರಿಗೆಯು ಎತ್ತಲ್ಪಡುತ್ತಿದೆ. ಮದ್ರಾಸು ಮೊದಲಾದ ಪ್ರದೇಶಗಳಲ್ಲಿ ಕೊಡಗಿನಲ್ಲಿ ಇಲ್ಲದ ಮಾರಾಟ ತೆರಿಗೆ ವಗೈರೆ ವಿಧಿಸಲ್ಪಟ್ಟಿವೆ. ತೆರಿಗೆಗಳು ಆಯಾ ಪ್ರಾಂತಗಳ ಉತ್ಪಾದನೆಯನ್ನು ನೋಡಿ ಎತ್ತಲ್ಪಡುವವಾಗಿವೆ. ವ್ಯವಸಾಯಗಾರರ ದೇಶವಾದ ಕೊಡಗಿನಲ್ಲಿ ವ್ಯವಸಾಯ ಆದಾಯ ತೆರಿಗೆಯಿಂದ ಸಿಕ್ಕುವಷ್ಟು ಉತ್ಪತ್ತಿಯು ವ್ಯಾಪಾರದ ಪ್ರದೇಶವಲ್ಲದ ಇಲ್ಲಿ ಮಾರಾಟದ ತೆರಿಗೆಯಿಂದ ದೊರೆಯಲಾರದು. ಅಲ್ಲದೆ ನೆರೆ ಪ್ರಾಂತಗಳಲ್ಲೂ ಅವಶ್ಯಬಿದ್ದಾಗ್ಗೆ ಈ ತೆರಿಗೆಗಳನ್ನು ಹಾಕುವದಿಲ್ಲವೆಂದು ಯಾರಿಗೂ ಈಗ ಹೇಳಲಿಕ್ಕಾಗುವದಿಲ್ಲ.

ನಮಗೆ ಜವಾಬ್ದಾರಿ ಸರಕಾರ ಇಲ್ಲವೆಂಬುದು ನಿಜವಾದರೂ ಇಲ್ಲಿ ಒಂದು ನ್ಯಾಯವಿಧಾಯಕ ಸಭೆ ಇದೆ. ಆ ಸಭೆಯಲ್ಲಿ ಕೊಡಗಿನ ಆದಾಯವೆಚ್ಚದ ಪಟ್ಟಿಯು ಚರ್ಚಿಸಲ್ಪಡುತ್ತದೆ. ಈ ಚರ್ಚೆಗೆ ಸಹಾಯ ಮಾಡಲು ಚುನಾಯಿತ ಮೆಂಬರುಗಳ ಬಹುಮತವಿರುವ ಒಂದು ಫೈನಾನ್ಸ ಕಮಿಟಿಯನ್ನು ವರ್ಷಂಪ್ರತಿ ಏರ್ಪಡಿಸಲ್ಪಡುತ್ತಿದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತ ಮೇಲೆ ಕೇಂದ್ರದಲ್ಲಿದ್ದ ನಿರಂಕುಶ ಬ್ರಿಟಿಷ್ ಸರಕಾರದ ಬದಲು ಪ್ರಜಾಪ್ರಭುತ್ವವಾದಿಯಾದ ಕಾಂಗ್ರೆಸ್ ಸರಕಾರವು ಇದೆ. ಅದ್ದರಿಂದ ಅವರಿಂದ ನೇಮಿಸಲ್ಪಡುವ ಚೀಫ್ ಕಮಿಷನರುಗಳು ಇಲ್ಲಿಯ ಜನರ ಅಭಿಪ್ರಾಯವನ್ನು ಉಲ್ಲಂಘಿಸಲು ಸಾಧ್ಯವಿಲ್ಲ. ಈಗಿನ ಕೇಂದ್ರ ಕಾಂಗ್ರೆಸ್ ಸರಕಾರವು ದೇಶೋದ್ಧಾರದ ಕೆಲಸಗಳನ್ನು ಮಾಡಲು ಅಡ್ಡಿ ಬರಲಾರರು. ಆದುದರಿಂದ ದೇಶದಲ್ಲಿ ಜನತೆಯಿಂದ ವಸೂಲ್ಮಾಡುವ ತೆರಿಗೆಯ ಹಣವನ್ನು ದೇಶೋದ್ಧಾರದ ಕೆಲಸಗಳಿಗೆ ಉಪಯೋಗಿಸಲಾಗುತ್ತಿಲ್ಲವೆಂಬುದರಲ್ಲಿ ಅರ್ಥವಿಲ್ಲ. ವ್ಯವಸಾಯ ಆದಾಯ ತೆರಿಗೆಯಿಂದ ಬರುವ ಆದಾಯವನ್ನು ದೇಶದ ಹಿತಕ್ಕಾಗಿ ಕಾಲೇಜು ಕಟ್ಟಲಿಕ್ಕೂ, ಜಿಲ್ಲಾ ಬೋರ್ಡ್ ಉದ್ಯೋಗಿಗಳ ಸಂಬಳ ಬಡ್ತಿಗೂ, ಮತ್ತು ಗ್ರಾಮಾಂತರ ಶಾಲೆ ಮತ್ತು ರಸ್ತೆಗಳಿಗಾಗಿಯೂ ಉಪಯೋಗಿಸಲು ಸರಕಾರವು ನಿಶ್ಚಯಿಸಿರುವಾಗ್ಗೆ ನಾವು ಕೊಡುವ ಕಂದಾಯವು ನಮ್ಮ ಪ್ರಯೋಜನಕ್ಕಾಗಿ ಉಪಯೋಗಿಸಲ್ಪಡುತ್ತಿಲ್ಲವೆಂದು ಹೇಳುವದರಲ್ಲಿ ಅರ್ಥವಿಲ್ಲ. ಸಂಪೂರ್ಣ ನಿಶಾನಿಷೇಧವನ್ನು ಸಾಧಿಸಿದಲ್ಲಿ ಅದರಿಂದ ಉಂಟಾಗಬಹುದಾದ ನಷ್ಟವನ್ನು ಭರ್ತಿಮಾಡಲು ವ್ಯವಸಾಯ ಆದಾಯ ತೆರಿಗೆ ಹಾಕಲು ಒಪ್ಪಿದ ಸಂಯೋಜನಾವಾದಿಗಳು ಈಗ ಪಾರ್ಶ್ವನಿಶಾನಿಷೇಧವನ್ನು ಜಾರಿಗೆ ತಂದು ಸರಕಾರಕ್ಕುಂಟಾಗುವ ನಷ್ಟವನ್ನು ಸರಿಗಟ್ಟಲು ಈ ತೆರಿಗೆಯನ್ನು ಹಾಕಲು ಜವಾಬ್ದಾರಿ ಸರಕಾರವಿಲ್ಲದ್ದರಿಂದ ಒಪ್ಪುವದಿಲ್ಲವೆಂಬುವದು ಯಾವ ನ್ಯಾಯ?

ಉಳುವರಿ ೬೫ ಲಕ್ಷ ರೂಪಾಯಿ ಇರುವದರಿಂದ ಹೊಸತೆರಿಗೆಯು ಅಗತ್ಯವಿಲ್ಲವೆಂಬುದು ಮತ್ತೊಂದು ವಾದ. ಉಳುವರಿ ಹಣವನ್ನು ವರ್ಷಂಪ್ರತಿ ನಡೆಯುವ ಖರ್ಚುಗಳಿಗೆ ಅಂದರೆ ಜಿಲ್ಲಾ ಬೋರ್ಡ್ ಉಪಾಧ್ಯಾಯರ ಸಂಬಳ ಬಡ್ತಿ ವಗೈರೆ ವೆಚ್ಚಕ್ಕೆ ಉಪಯೋಗಿಸುವದು ಸರಿಯುಲ್ಲ. ವರ್ಷಂಪ್ರತಿ ನಡೆಯುವ ಖರ್ಚಿಗೆ ವರ್ಷಂಪ್ರತಿ ಬರುವ ಆದಾಯವೇ ಇರಬೇಕೆಂಬುದು ಬಜೆಟ್ಟಿನ ತತ್ವವಾಗಿದೆ. ಅಲ್ಲದೆ ಕೊಡಗಿನಲ್ಲಿ ಹೊಸ ಕೆಲಸಗಳನ್ನು ಬಿಟ್ಟರೂ ವಾಡಿಕೆಯ ಖರ್ಚುಗಳಿಗಾಗಿ ಈ ವರ್ಷದ ಉತ್ಪತ್ತಿಯು ಐದು ಲಕ್ಷದಷ್ಟು ಸಾಲದಾಗುತ್ತದೆ. ಇದನ್ನು ಭರ್ತಿಮಾಡಲು ಹೊಸ ತೆರಿಗೆಯ ಅವಶ್ಯಕತೆ ಇದ್ದೇ ಇದೆ. ಈ ದೊಡ್ಡ ಉಳುವರಿಯಿಂದ ಜಿಲ್ಲಾ ಬೋರ್ಡಿನ ಉಪಾಧ್ಯಾಯರಿಗೆ ಸಹಾಯ ಕೊಡಬಹುದೆಂದು ಹೇಳುವವರು ಈ ಕೆಲವು ವರ್ಷಗಳಿಂದ ಪ್ರಯತ್ನಿಸಿ ಸಫಲವಾಗದ್ದನ್ನು ಜಿಲ್ಲಾ ಬೋರ್ಡ್ ಅಧ್ಯಾಪಕರು ಮರೆತಿಲ್ಲವಾಗಿ ನಂಬುತ್ತೇನೆ. ಹೊಸ ತೆರಿಗೆ ಹಾಕದೆ ಜಿಲ್ಲಾ ಬೋರ್ಡ್ ಉಪಾಧ್ಯಾಯರಿಗೆ ಸಹಾಯ ಕೊಡಲು ಸಾಧ್ಯವಿಲ್ಲವೆಂದು ಚೀಫ್ ಕಮಿಷನರವರೇ ಖಚಿತವಾಗಿ ಹೇಳಿರುವಲ್ಲಿ ಈ ತೆರಿಗೆಯನ್ನು ವಿರೋಧಿಸುತ್ತಾ ಸರಕಾರದಲ್ಲಿರುವ ಉಳುವರಿಯಿಂದ ಉಪಾಧ್ಯಾಯರುಗಳಿಗೆ ಧನಸಹಾಯ ಕೊಡಿಸುತ್ತೇವೆಂದು ಹೇಳುವ ಸಂಯೋಜನಾವಾದಿಗಳು ಉಪಾಧ್ಯಾಯರುಗಳನ್ನು ವಂಚಿಸುತ್ತಿರುವರೋ ಅಥವ ಬೇರೆಯವರೋ ಎಂಬುದನ್ನು ಅಧ್ಯಾಪಕರು ಮನಗಾಣಬೇಕು.

ಕೌನ್ಸಿಲು ಚುನಾವಣೆಯು ಬೇಗನೆ ನಡೆಯಲಿಕ್ಕಿದೆ. ಅಲ್ಲಿಯವರೆಗಾದರೂ ಈ ಹೊಸ ತೆರಿಗೆಯನ್ನು ಹಾಕುವ ಜವಾಬ್ದಾರಿಯನ್ನು ಈ ಕೌನ್ಸಿಲು ಮೆಂಬರುಗಳು ಹೊತ್ತುಕೊಳ್ಳಬಾರದೆಂದು ಹೇಳುವದು ತೋರಿಕೆಗೆ ಸರಿಯೆಂದು ತೋರಬಹುದಾದರೂ, ಅದರ ಉದ್ದಿಶ್ಯವಾದರೂ ಬೇರೆಯೇ ಇದೆ. ಪಾರ್ಲಿಮೆಂಟಿನಲ್ಲಿ ಮಾನ್ಯ ಕೇಂದ್ರ ಸರಕಾರದ ಗೃಹ ಮಂತ್ರಿಗಳು ಮತ್ತು ಸಂಸ್ಥಾನ ವಿಭಾಗದ ಮಂತ್ರಿಗಳು ಸ್ಪಷ್ಟವಾಗಿ ಹೇಳಿರುವಂತೆ ಕೊಡಗಿನ ಭವಿಷ್ಯತ್ತನ್ನು ನಿರ್ಧರಿಸುವ ಅವಕಾಶವು ಇಲ್ಲಿಯ ಜನತೆಗೆ ಬರುವ ಚುನಾವಣೆಯಲ್ಲಿ ದೊರೆಯುವದು. ಆಗ್ಯೆ ನಮ್ಮ ಆದಾಯದಿಂದಲೇ ನಮ್ಮ ಸರಕಾರವನ್ನು ನಡೆಸಲು ಸಾಧ್ಯವಿದೆಯೆಂದು ತೋರಿಸಿದ್ದೇ ಆದರೆ ಪ್ರತ್ಯೇಕವಾದಕ್ಕೆ ಹೆಚ್ಚಿನ ಶಕ್ತಿ ಬರುವದೆಂದೂ ಅದರ ಬದಲು ಖರ್ಚಿಗೆ ಸಾಕಷ್ಟು ಹಣವಿಲ್ಲವೆಂದು ತೋರಿಸಿದರೆ ಸಂಯೋಜನಾವಾದಕ್ಕೆ ಬಲ ದೊರೆಯುವದೆಂದೂ ತಿಳಿದ ಸಂಯೋಜನಾವಾದಿಗಳು ಪಾರ್ಶ್ವನಿಶಾನಿಷೇಧದಿಂದ ಆಗುತ್ತಿರುವ ನಷ್ಟಕ್ಕೆ ಒಪ್ಪಿ ಬಜೆಟ್ಟಿನಲ್ಲಿ ಕೊರತೆಯನ್ನು ತೋರಿಸಲು ಹೊಸ ತೆರಿಗೆಯನ್ನು ಹಾಕಲು ವಿರೋಧಿಸುವದಾಗಿದೆ.

ಯಾವದೇ ಪಕ್ಷವಿರಲೀ ಜನತೆಯ ಓಟನ್ನು ಪಡೆಯುವ ಒಂದು ದೃಷ್ಟಿಯಿಂದ ತತ್ವ ನೀತಿಯನ್ನು ಮಾರ್ಪಡಿಸಿಕೊಳ್ಳುವದಾದರೆ ಅದರಿಂದ ದೇಶಹಿತವಾಗ

# ಅಡಿಗೆ ಮನೆಯಿಂದ ರಜೆ ಬೇಕು.

ಲೇಖಕಿ:—ಸುಶೀಲಾರಾಣಿ.

ನನ್ನ ಪತಿಯ ಸ್ವಭಾವವೇ ವಿಚಿತ್ರ. ಪ್ರತಿ ದಿನ ತಪ್ಪದೆ ಆಫೀಸಿಗೆ ಹೋಗುವದು ತಮ್ಮ ಧರ್ಮವೆಂದು ಅವರು ಭಾವಿಸುತ್ತಾರೆ. ಹಿಂದಿನ ವಾರ ರಜೆ ತೆಗೆದುಕೊಳ್ಳಿ, ನೆಂಟರನ್ನು ನೋಡುವದೋ ಅಥವಾ ಹಾಯಾಗಿ ಸುಂದರ ಪ್ರದೇಶಗಳಲ್ಲಿ ಅಲೆದಾಡುವದೋ ಮಾಡಿ ಎಂದು ಎಷ್ಟು ಒತ್ತಾಯ ಮಾಡಿದರೂ ಕೇಳರು. ಅಲ್ಲಿ ಇಲ್ಲಿ ಸುತ್ತಿ ರಜೆ ಹಾಳು ಮಾಡಿಕೊಳ್ಳಬಾರದು. ಖಾಯಿಲೆ ಬಂದರೆ ರಜವನ್ನು ಉಪಯೋಗಿಸಬಹುದೆಂಬುದು ಅವರ ಮತ. ಅವರ ಆಫೀಸಿನಲ್ಲಿ ಬೇರೆ ಯಾರೂ ಕೆಲಸಗಾರರು ಇಲ್ಲವೋ, ಇಡೀ ಆಫೀಸಿನ ಭಾರ ಇವರ ತಲೆಯ ಮೇಲೆಯೇ ಇದೆಯೋ ಎಂಬಂತೆ ಅವರು ವರ್ತಿಸುತ್ತಾರೆ. ಎಲ್ಲಿ ಏನು ಮಾತಾಡಿದರೂ ಆಫೀಸಿನದೇ!

ನನಗೂ ಕೂಡ ಮನೆಯಲ್ಲಿ ದುಡಿದೂ ದುಡಿದು ಬೇಸರ ಹಿಡಿದಿತ್ತು. ಪ್ರತಿ ದಿನ ಬೆಳಗೆ ಏಳುವದು, ಅಡಿಗೆ ಮಾಡುವದು. ಪ್ರತಿ ದಿನದ ಆ ಬೆಂಕಿ, ಹೊಗೆಯೊಡನೆ ಹೋರಾಟ ಇವುಗಳಿಂದಾಗಿ ಒಂದು ದಿನ ರಜೆ ತೆಗೆದುಕೊಳ್ಳಬೇಕೆಂದೆನಿಸಿತ್ತು. ಪತಿಯವರು ರಜೆ ತೆಗೆಯುವಂತಿರಲಿಲ್ಲ. ಆದ್ದರಿಂದ ನಾನು ಅದೊಂದು ದಿನ ಬೆಳಗ್ಗೆ ಎದ್ದೆನು. ಎಲ್ಲಾ ಸಿದ್ಧತೆ ಮಾಡಿಕೊಂಡೆನು. ಪತಿಯವರೂ ನಮ್ಮ ಎರಡು ಮಕ್ಕಳೂ ಇನ್ನೂ ನಿದ್ರಿಸುತ್ತಿದ್ದರು. ನಾನು ಪತಿಯವರ ಮೇಜಿನ ಮೇಲೆ ಈ ರೀತಿ ಒಂದು ಚೀಟಿ ಬರೆದಿಟ್ಟೆನು

'ಆರ್ಯರೇ, ಇಂದು ಕೆಲವು ವಿಶೇಷ ಕಾರಣಗಳಿಂದ ಮನೆಯ ಕೆಲಸ ಮಾಡಲು ಅಸಮರ್ಥಳಾಗಿದ್ದೇನೆ. ಇದೊಂದು ದಿನ ನನಗೆ ರಜೆ ಮಂಜೂರ್ ಮಾಡಬೇಕು.

ನಿಮ್ಮ ಆಜ್ಞಾಕಾರಿಣಿ,
ಸುಶೀಲ

ಈ ಚೀಟಿ ಬರೆದನಂತರ ಮೊದಲೇ ಯೋಚಿಸಿದ್ದಂತೆ ಸ್ವಲ್ಪ ಹಾಯಾಗಿ ಸುತ್ತಬೇಕೆಂದೂ, ಒಂದು ದಿನ ರಜೆಯನ್ನು ಆನಂದವಾಗಿ ಕಳೆಯಬೇಕೆಂದೂ ನೆನಸಿದೆನು. ಹಾಗೆ ಬಸ್ಸಿನಲ್ಲಿ ಕುಳಿತು ಸಾಯಂಕಾಲದ ವರೆಗೆ ವೀರಾಜಪೇಟೆ, ಪೊನ್ನಂಪೇಟೆ ಸುತ್ತಿಕೊಂಡು ಬರುವದೆಂದೆನಿಸಿತು. ನಾನು ಬಸ್ ನಿಲ್ದಾಣಕ್ಕೆ ಬರುವಷ್ಟರಲ್ಲಿ ಬಸ್ ಹೊರಡಲುದ್ಯುಕ್ತವಾಗಿತ್ತು. ನಾನು ಓಡಿ ಬಂದು ಚಲಿಸುವ ಬಸ್ಸನ್ನು ಹತ್ತಿದೆ. ಬಸ್ಸಿನಲ್ಲಿದ್ದವರೆಲ್ಲರಿಗೂ ಆಶ್ಚರ್ಯ. ಹೆಂಗಸು ಓಡುತ್ತಿರುವ ಬಸ್ಸನ್ನು ಹತ್ತುವದು ಎಲ್ಲರಿಗೂ ಆಶ್ಚರ್ಯದ ಸಂಗತಿಯಾಗಿರಬೇಕು. ಜನರ ನೆಟ್ಟ ದೃಷ್ಟಿಯಿಂದ ನನಗೇನೂ ನಾಚಿಕೆಯಾಗಲಿಲ್ಲ. ರಜೆಯನ್ನು ಮಜವಾಗಿ ಕಳೆಯಬೇಕೆಂದೇ ಹೊರಟಿದ್ದೆ. ಕಂಡಕ್ಟರನು ಎಲ್ಲಿಗೆಂದು ಕೇಳಿದನು. 'ಬಸ್ ಹೋಗುವಲ್ಲಿವರೆಗೆ' ಎಂದೆ. ಎಲ್ಲರೂ ಚಕಿತರಾಗಿ ಪುನಃ ನನ್ನೆಡೆಗೆ ನೋಡತೊಡಗಿದರು. ಕಂಡಕ್ಟರನು ವೀರಾಜಪೇಟೆಗೆ ಟಿಕೇಟು ಕೊಟ್ಟನು. ವೀರಾಜಪೇಟೆಗೆ ಹೋಗಿ ನಂತರ ಬೇರೆ ಬಸ್ ಹಿಡಿದು ಹೊರಟೆ. ಹೀಗೆ ಒಂದು ಬಸ್ಸಿನಿಂದ ಮತ್ತೊಂದು ಬಸ್ಸಿಗೆ ಹೀಗೆ ಸಾಧ್ಯವಾದೆಡೆಯೆಲ್ಲ ಸುತ್ತಿದೆ. ಅಲ್ಲಿ ಕೆಲವು ಬಟ್ಟೆ ಅಂಗಡಿಗಳನ್ನು, ಇಲ್ಲಿ ಸಂತೆಯನ್ನೂ ಸುತ್ತಿದೆ. ಮನವು ತುಂಬಾ ಹರುಷದಲ್ಲಿತ್ತು.

ಮಧ್ಯಾಹ್ನವಾಗುತ್ತಾ ಬಂದಿತ್ತು. ಹತ್ತಿರದ ಹೋಟೆಲೊಂದಕ್ಕೆ ಹೋಗಿ ಕುಳಿತೆ. ಮಾಣಿಯು ಬಂದು ಏನು ಬೇಕೆಂದು ಕೇಳಿದನು. ಕುರ್ಚಿಯಲ್ಲಿ ಹಾಯಾಗಿ ಕುಳಿತು "ನಿನಗಿಷ್ಟವಿರುವದೆಲ್ಲಾ ತಾ" ಎಂದೆ. ಪ್ರತಿ ದಿನ ಮನೆಯಲ್ಲಿ ಬೆಳಗ್ಗೆ ಎದ್ದಾಗ ಏನು ತಿಂಡಿ ಮಾಡುವದು, ಏನು ಸಾರು ಮಾಡುವದು ಎಂಬ ಯೋಚನೆ ಮನಸ್ಸಿನಲ್ಲಿರುತ್ತಿತ್ತು, ರುಚಿಕರವಾಗಿ ಅಡುಗೆ ಮಾಡಿದ್ದರೂ ಕೂಡ ಬೆಂಕಿ ಹೊಗೆಗಳೊಡನೆ ಮಾಡಿದ ಹೋರಾಟದ ಕಾರಣ ಸರಿಯಾಗಿ ಊಟ ಮಾಡಲಾಗುತ್ತಿರಲಿಲ್ಲ. ಸಂತೋಷದಲ್ಲಿ ಊಟಕ್ಕೆ ಕುಳಿತರೂ ಊಟವಾದೊಡನೆ ಬಟ್ಟಲು ಪಾತ್ರೆ ತೊಳೆಯುವ ಆಲೋಚನೆಯಿಂದಾಗಿ ಊಟ ಮಾಡಿದ್ದೂ ಶರೀರಕ್ಕೆ ಹಿಡಿಸುತ್ತಿರಲಿಲ್ಲ. ಮಾಣಿಯು ಬೇಕು ಬೇಕಾದುದನ್ನು ತರುತ್ತಿದ್ದ. ತಂದುದೆಲ್ಲವನ್ನೂ ಸಮಾಧಾನವಾಗಿ ತಿಂದು ಹಾಕಿದೆ. ಹೋಟೆಲಿನ ಅಡಿಗೆ ಅಷ್ಟೇನು ಚೆನ್ನಾಗಿಲ್ಲದಿದ್ದರೂ ನನಗೆ ರುಚಿಸಿತು.

ಹೋಟೆಲಿನ ಬಿಲ್ ಕೊಟ್ಟೆನು. ಮಾಣಿಗೆ ಒಂದು ರೂಪಾಯಿ ಇನಾಮು ಕೊಟ್ಟೆ. ಆತನು ಸಂತೋಷದಿಂದ ನನಗೆ ನಮಸ್ಕಾರ ಮಾಡಿದನು. ನಾನೇ ನನ್ನನ್ನು ಯೋಚಿಸಿಕೊಂಡೆ. ಪ್ರತಿ ದಿನ ನಾನು ಅತಿ ಶ್ರಮವಹಿಸಿ ರುಚಿ ರುಚಿಯಾದ ಆಹಾರ ತಿಂಡಿಗಳನ್ನು ಮಾಡಿ ಪತಿಗೆ ಬಡಿಸುತ್ತೇನೆ. ಪತಿಯು ನನಗೆ ಬಹುಮಾನ ಕೊಡುವದಿರಲಿ, ಪ್ರಶಂಶೆಯ ಒಂದೆರಡು ಮಾತುಗಳನ್ನು ಕೂಡ ಆಡುವದಿಲ್ಲ. ಗಂಡಸರೆಲ್ಲ ಹಾಗೆಂದು ಕಾಣುತ್ತೆ.

ರೆಸ್ಟೋರೆಂಟಿನಿಂದ ಹೊರಟು ಬಸ್ ಹತ್ತಿದೆ. ಮಡಿಕೇರಿಗೆ ಬಂದಾಗ ಮೂರುವರೆ ಗಂಟೆಯಾಗಿತ್ತು. ನಾನು ನೆಟ್ಟಗೆ ಮನೆಗೆ ಹೋಗದೆ ರಾಜಾಸೀಟಿನತ್ತ ಹೋದೆ. ಅಲ್ಲಿ ಸುಂದರ ದಿನ್ನೆಯಲ್ಲಿ ಕುಳಿತು ಕೈವಸ್ತ್ರದಲ್ಲಿ ಕಟ್ಟಿಕೊಂಡಿದ್ದ ಪೇಟೆಯ ಕೆಲವು ತಿಂಡಿಗಳನ್ನು ಮೆಲ್ಲತೊಡಗಿದೆ. ಬಿಸಿಲು ಜೋರಾಗಿತ್ತು. ಆದರೂ ನನಗೆ ಅದರ ಅರಿವಿರಲಿಲ್ಲ. ಮನೆಯ ನಾಲ್ಕು ಗೋಡೆಗಳ ಜೈಲಿನಲ್ಲಿ ದಿನ ಕಳೆದು ಬೇಸರಗೊಂಡಿದ್ದ ಮನವು ವಿಶಾಲ ಪ್ರಕೃತಿಯನ್ನು ನೋಡಿ ಹರುಷಗೊಂಡಿತ್ತು. ಕಣ್ಣುಗಳು ಹೊಸ ಚೇತನದಿಂದ ನೋಡುತ್ತಿದ್ದವು. ಶರೀರವು ಹಗುರವಾಗಿ ಗಾಳಿಯೊಡನೆ ತೇಲಿ ಬರುವಂತಿತ್ತು. ಮನೆಯ ನೆರಳಿನಲ್ಲಿ ನಾಲ್ಕು ಗೋಡೆಗಳ ಆವರಣದಲ್ಲಿ, ಪತಿದೇವನ ಆಶ್ರಯವೆಂಬ ಗೂಡಿನಡಿಯಲ್ಲಿ ನಾನು ಸುರಕ್ಷಿತಳೇನೋ ನಿಜ. ಜಗತ್ತಿನ ಕ್ರೂರ ಕೃತ್ಯಗಳಿಂದ ನಾನು ದೂರವಿರುವದೇನೋ ಸಹಜ. ಆದರೆ ಅದು ಬೆಕ್ಕಿನ ಉಪಟಳದಿಂದ ಪಂಜರದೊಳಗೆ ಸುರಕ್ಷಿತವಾಗಿರುವ ಗಿಣಿಯ ಜೀವನದಂತೆ!

ಹಸುರಾದ ಹುಲ್ಲಿನ ಮೇಲೆ, ತಂಪಾದ ನೆರಳಿನಲ್ಲಿ, ಮಲಗಿದೆ. ಕಣ್ಣಿಗೆ ನಿದ್ರೆ ಹತ್ತುವಂತಾಯಿತು. ಇನ್ನೂ ನಾಲ್ಕು ಗಂಟೆಯಾದ ಕಾರಣ ರಾಜಾಸೀಟಿಗೆ ಗಾಳಿ ಸವಾರಿಗೆ ಬರುವ ಜನರ ಪ್ರವಾಹ ಪ್ರಾರಂಭವಾಗಿರಲಿಲ್ಲ. ಈ ರೀತಿ ತೆರೆದ ಬಯಲಿನಲ್ಲಿ ಹೆಂಗಸೊಬ್ಬಳು ನಿದ್ರಿಸುವದು ಸಂಪ್ರದಾಯಕ್ಕೆ ವಿರೋಧ. ಆದರೂ ನಿದ್ರೆ ಬಿಡಲಿಲ್ಲ. ಬೇಗ ಎಚ್ಚರವಾಯಿತು. ಎಚ್ಚರವಾದಾಗ ಮನೆಗೆ ಹೋಗಬೇಕೆಂದೆನಿಸಿತು. ಮನೆಗೆ ಒಂದು ಮೈಲಿತ್ತು. ಅಷ್ಟು ನಡೆದುಕೊಂಡು ಹೋಗುವದು ಬೇಡವೆನಿಸಿತು. ರಾಜಾಸೀಟಿನಲ್ಲಿ ಒಂದೆರಡು ಕಾರುಗಳು ನಿಂತಿದ್ದವು. ಒಂದು ಪೇಟೆಗೆ ಹೊರಡಲುದ್ಯುಕ್ತವಾಗಿತ್ತು. ಗಾಳಿ ವಿಹಾರಕ್ಕಾಗಿ ಬಂದ ಶ್ರೀಮಂತರ ಕಾರಾಗಿತ್ತು. ಅದಕ್ಕೆ ಕೈತೋರಿಸಿದೆ. ಅವರು ನಿಲ್ಲಿಸಿದರು. ನನ್ನ ಮನೆಯ ಹತ್ತಿರ ಇಳಿಸಿ ಬಿಡಬೇಕೆಂದೆ. ಹೆಂಗಸು ಹೇಳಿದನ್ನು, ಅದರಲ್ಲೂ ನನ್ನಂಥಾ ಸುರೂಪಿ ಹೇಳಿದುದನ್ನು ನಿರಾಕರಿಸುವ ಎದೆಗಾರಿಕೆ ಎಷ್ಟು ಗಂಡಸರಿಗಿದೆ? ಹಾಗಿರುವಾಗ ಅಂಥಾ ಮೂರ್ಖ ಗಂಡಸರಿಂದ ಬೇಕಾದುದನ್ನು ಏಕೆ ಮಾಡಿಸಿಕೊಳ್ಳಬಾರದು? ಪುರುಷರನ್ನು ಈ ರೀತಿ ಮೂರ್ಖರಂತೆ ವರ್ತಿಸಲು ಮಾಡುವದರಲ್ಲೂ ಆನಂದವಿದೆ! ಅವರು ನನ್ನನ್ನು ಮನೆಗೆ ಬಿಟ್ಟರು.

ಮನೆಗೆ ಮುಟ್ಟುವಾಗ ಕತ್ತಲು ಪಸರಿಸುತ್ತಿತ್ತು. ಮನೆಯೊಳಗೆ ಕಾಲಿಕ್ಕುವಾಗ ಹೃದಯದಲ್ಲಿ ಆತಂಕದ ಬಡಿತವಿತ್ತು. ಪತಿಯು ರೇಗಿ ಬೀಳಬಹುದೆಂಬ ಹೆದರಿಕೆಯಿತ್ತು. ಮನೆಯಲ್ಲಿ ದೀಪ ಹಚ್ಚಲ್ಪಟ್ಟಿತ್ತು. ಮೇಜಿನ ಮೇಲಿನ ನನ್ನ ರಜೆ ಚೀಟಿ ಅಲ್ಲೇ ಇತ್ತು. ಅದರ ಅಡಿಯಲ್ಲಿ ಪತಿಯ ಹಸ್ತಾಕ್ಷರವಿತ್ತು. ಅದರಲ್ಲಿ—'ಮೊದಲೇ ಬರೆದು ರಜೆ ಮಂಜೂರು ಮಾಡಿಸಿಕೊಳ್ಳದೆ ಗೈರ್ ಹಾಜರಾಗುವದು ಕಾನೂನಿಗೆ ವಿರೋಧ. ಮುಂದೆ ಇದನ್ನು ಮನಸ್ಸಿನಲ್ಲಿಟ್ಟು ವರ್ತಿಸುವದು.' ಎಂದು ಬರೆದಿತ್ತು.

ಪತಿಯ ಟಿಪ್ಪಣಿಯಿಂದ ಇದನ್ನು ಓದಿ ಹರ್ಷವಾಯಿತು. ಮನೆಯೊಳಗೆ ಹೋದೆ. ಅವರು ಮಕ್ಕಳೊಡನೆ ಆಡುತ್ತಿದ್ದರು. ಮಕ್ಕಳು ಬೆನ್ನುಹತ್ತಿ ಕೇಕೆ ಹಾಕುತ್ತಿದ್ದವು. ಮಕ್ಕಳ ಬಟ್ಟೆ ಬದಲಾಯಿಸಿದ್ದರು. ಮನೆಯು ಶುಚಿಯಾಗಿ ಗುಡಿಸಲ್ಪಟ್ಟಿತ್ತು. ಅಡಿಗೆ ಮನೆಯಲ್ಲೂ ಸಾಮಾನುಗಳು ಓರಣವಾಗಿಡಲ್ಪಟ್ಟಿದ್ದವು. ಇಷ್ಟು ಸಂತೋಷದ ದೃಶ್ಯವನ್ನು ನೋಡಿ ಮನವು ತಣಿಯಿತು.

ನನ್ನನ್ನು ನೋಡಿ ಮಕ್ಕಳು 'ಅಮ್ಮಾ' ಎಂದು ಹಾರಿ ಬಂದವು. ಅವರು ಮುಗುಳು ನಗೆನಕ್ಕು 'ನಿನ್ನ ಬರುವಿಕೆಯನ್ನೇ ಕಾಯುತ್ತಿದ್ದೆವು. ನಡೆ. ಊಟಕ್ಕೆ ತಯಾರಾಗಿದೆ' ಎಂದರು.

ನಾನಿಲ್ಲದೆ ಮನೆಯ ಸರ್ವ ಏರ್ಪಾಡು ಅಷ್ಟು ಅಚ್ಚುಕಟ್ಟಾಗಿರುವದನ್ನು ನೋಡಿ ಆಶ್ಚರ್ಯವಾಯಿತು. ರಜೆ ತೆಗೆಯಲೊಪ್ಪದ ಅವರಿಗೆ ಸ್ವಲ್ಪ ಮನೆಕೆಲಸದ ಕಾಠಿಣ್ಯದ ಅರಿವು ಕೊಡಬೇಕೆಂದಿದ್ದೆ. ಆದರೆ ಹಸನ್ಮುಖರಾದ ಅವರನ್ನು ನೋಡಿ ನನಗೆ ನಿರಾಶೆಯಾಯಿತು. ಅವರು ನನ್ನ ಇಂಗಿತವನ್ನರಿತು ಹೇಳಿದರು.

'ಇದೆಲ್ಲ ನೆರೆಮನೆಯ ರಾಧಾಳ ಕೆಲಸ. ಮನೆಯಲ್ಲಿ ನೀನಿಲ್ಲದುದನ್ನು ತಿಳಿದು ಬೆಳಗ್ಗೆ ಬಂದು ಕಾಫಿ, ಅಡಿಗೆ ಮಾಡಿದುದಲ್ಲದೆ, ರಾತ್ರಿಗೂ ಮಾಡಿಟ್ಟು ಮನೆಯ ಕೆಲಸವನ್ನು ಪೂರೈಸಿದ್ದಾಳೆ. ಮಕ್ಕಳನ್ನೂ ಮೀಯಿಸಿದ್ದಾಳೆ.'

ಹೆಂಗಸಿನ ಶತ್ರುವೆಂದರೆ ಹೆಂಗಸರೇ! ನನಗೆ ರಾಧಾಳ ಮೇಲೆ ಮೇರೆ ಇಲ್ಲದ ಕೋಪ ಬಂತು. ಮುಂದೆ ಇಂಥಾ ರಜೆ ತೆಗೆಯುವ ಆಲೋಚನೆ ಮಾಡುವದು ಯುಕ್ತವಲ್ಲವೆನಿಸಿದೆ.

---

ದು. ಕಂದಾಯ ಹಾಕಿಯಾದರೂ ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಹೆಚ್ಚಿನ ವೇತನ ಕೊಡಬೇಕೆಂದು ವಾದಿಸುತ್ತಿದ್ದವರು ಈಗ ಸರಕಾರವು ಕಂದಾಯ ಹಾಕಲು ಮುಂದೆ ಬಂದಿರುವಾಗ ಅದನ್ನು ವಿರೋಧಿಸುತ್ತಿರುವದು ಆಶ್ಚರ್ಯವಲ್ಲವೇ? ಇದಕ್ಕೆ ಕಾರಣ ಮುಂದಿನ ಚುನಾವಣೆಯ ದೃಷ್ಟಿಯಿಂದ ಬಲಯುತರೆನಿಸಿದ ಪ್ಲಾಂಟರುಗಳನ್ನು ಒಲಿಸಿಕೊಳ್ಳಬೇಕೆಂದೇ ಅಲ್ಲವೇ? ದೇಶದ ಆಡಳಿತವು ಈ ರೀತಿಯ ಸಂಘರ್ಷ ಸಾಧನೆಯ ಮನೋವೃತ್ತಿಯಿಂದ ಸಾಗಿದರೆ ನೇರವಾಗಿ ಸರ್ವನಾಶವಾದೀತು. ಆಡಳಿತದಲ್ಲಿ ದೇಶದ ಹಿತ ಮುಖ್ಯವಾದುದಲ್ಲದೆ ಪಕ್ಷಸಾಧನೆಯಲ್ಲ. ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ತುಟ್ಟಿಭತ್ಯ ಕೊಡುವದು ಅನಿವಾರ್ಯವೆಂದು ತಿಳಿದ ಮೇಲೆ ಅದನ್ನು ಕೊಟ್ಟೇ ಕೊಡಬೇಕು. ಅದಕ್ಕಾಗಿ ಶ್ರೀಮಂತರಿಗೆ ಕಂದಾಯ ಹಾಕಬೇಕಾದರೆ ಹಾಕಿಯೇ ತೀರಬೇಕು. ಅವರಿಗೆ ನೋವಾದೀತು; ಇವರಿಗೆ ಸಿಟ್ಟು ಬಂದೀತು ಎಂಬ ವರ್ತನೆಯು ಆಡಳಿತವೆನಿಸದು.

ಕಂದಾಯ ತೆರಲು ಅದರಲ್ಲಿ ಶ್ರೀಮಂತರು ತಮ್ಮ ದೇಶದ ಹಿತಸಾಧನೆಯಾಗಬೇಕೆನ್ನಲು ಅಳುಕುವದು ತಪ್ಪು. ಯಾವ ಸರಕಾರ ಬಂದರೂ ಜನತೆಯಿಂದ ಬಂದ ಹಣವನ್ನು ಜನಹಿತಕ್ಕಾಗಿ ವ್ಯಯ ಮಾಡುವದೇ ವಿನಾ ಆಕಾಶದಿಂದ ಹಣ ತಂದು ಯಾವ ಸರಕಾರವೂ ಆಡಳಿತ ನಡೆಸದು. ಯೋಗ್ಯ ಆಡಳಿತ, ಯೋಗ್ಯ ಸವಲತ್ತುಗಳು ದೊರೆಯಬೇಕಾದರೆ ಯೋಗ್ಯ ದರದ ಕಂದಾಯವನ್ನು ಜನತೆ ಕೊಡಬೇಕು.

# ರಕ್ತದಾನ.

ಲೇ-ಶ್ರೀ ಎಂ ಎಸ್ ಪೊಣ್ಣಪ್ಪ, ಕಾನೂರು

ಆಂಗ್ಲ ರಕ್ತಾಕ್ತ ಗಾಯಾಳುಗಳನ್ನು ಕಂಡು ತನ್ನ ಮೂರು ವರ್ಷದ ... ಟಿ ಕಡೆ ನಡೆದಿತ್ತು. ಸಾವು ನೋವು ಆದ ಶವ ಗಾಯಾಳುಗಳನ್ನು ದಿನದ ಹೆಚ್ಚು ತನ್ನ ದಿನಚರಿಯಲ್ಲಿ ಬಡವ ಬಲ್ಲಿದರೆಂಬ ಭೇದಭಾವವನ್ನು ತೋರಿಸದೆ ಎಲ್ಲರಿಗೂ ಒಂದೇ ರೀತಿಯಲ್ಲಿ ತನ್ನ ಸೇವೆಯನ್ನು ಸಲ್ಲಿಸಿ ಅಸ್ವಂಗತನಾಗುತ್ತಿದ್ದನು. ಅಂತಿಮ ಕಾಲದ ಸೂರ್ಯನ ಹೊಂಬಣ್ಣದ ಕಿರಣಗಳು ಗಿಡಮರಗಳ ಮೇಲೆ ಬಿದ್ದು ಪ್ರಕೃತಿಯ ಸೊಬಗನ್ನು ಇಮ್ಮಡಿಸಿತ್ತು. ರಕ್ತಾಕರ ನಡೆಯುತ್ತಾ ಸನಿಯದಲ್ಲಿದ್ದ ಆ ಗಿಡಗಳ ಮೇಲಿನ ಹವಳದಂತಹ ಹಣ್ಣುಗಳನ್ನು ನೋಡುತ್ತಾ ದಾರಿ ನಡೆದ. ಗಾಳಿ ನೆಸಪ್ಪ ದೂರ ನಡಿಸೆನೆಂಬುವ್ವದೇ ತಿಳಿಯಲಿಲ್ಲ. ಇನ್ನೇನು ಹಿಂತಿರುಗಬೇಕೆನ್ನುವಷ್ಟರಲ್ಲಿ ಸ್ತ್ರೀಯ ಕ್ಷೀಣಸ್ವರದಲ್ಲಿ ಹಾಡುವ ನಾದ ಕೇಳಬಂದು ಆತನ ಖತಿಗಿಸಿತು. ಆತನ ಶರೀರವು ಆವನಿಗರಿವಾಗದಂತೆಯೇ ಅತ್ತ ತಿರುಗಿಕೊಂಡಿತ್ತು. ಕಾಲುಗಳು ಕದಲಲಿಲ್ಲ, ಕಿವಿಗಳು ನಾದವನ್ನಾಲಿಸತೊಡಗಿದ್ದವು. ಕಣ್ಣುಗಳು ಹುಡುಕತೊಡಗಿದ್ದವು. ಆ ಸ್ತ್ರೀಯು ಹತ್ತಿರದಲ್ಲೇ ಇದ್ದರೂ ಅವಳುಟ್ಟ ಹಸುರು ಸೀರೆಯು ಸ್ತರಗಳು ಗಿಡಗಳೊಡನೆ ಬೆರತು ಸೂರ್ಯನ ಹೊಂಬಣ್ಣದ ಕಿರಣಗಳು ಅವಳ ಮುಖದ ಮೇಲೆ ಬಿದ್ದು ಕಾವು ಹಣ್ಣುಗಳೊಡನೆ ರಂಜಿಸತೊಡಗಿದ್ದುದರಿಂದ ಬೇಗನೆ ಪತ್ತೆ ಹಚ್ಚಲಾಗಲಿಲ್ಲ. ನಾಲ್ಕು ಕಣ್ಣುಗಳು ಒಂದುಗೂಡಿದಾಗ ಇಬ್ಬರಲ್ಲೂ ನಸುನಗೆ ಹುಟ್ಟಿ ಮುಖಕೆಂಪಾಗಿಸಿತು. ಆದರೆ ಒಬ್ಬರಿಗೊಬ್ಬರಿಗೆ ಪರಿಚಯ ವಾಗಲಿಲ್ಲ. ಸಂಜೆಯ ವಿಲ್ಲದ ಸ್ತ್ರೀಯರನ್ನು ನೋಡುವುದಾಗಲೀ ಮಾತನಾಡಿಸುವುದಾಗಲೀ ಸಭ್ಯರಿಗೆ ಸಾಧ್ಯವಲ್ಲವೆಂದು ಕೇಳಲು ರದ ಕಾಲುಗಳನ್ನು ಕಿತ್ತು ರತ್ನಾಕರನು ಮನೆಗೆ ಮರಳಿದನು. ಅಂದಿನಿಂದ ಆತನ ಮನವು ಅವಳಲ್ಲಿ ಮನೆ ಮಾಡಿತ್ತು. ಅವಳ ಚಿತ್ರವು ಆತನ ಸ್ಮೃತಿಪಟಲದಲ್ಲಿ ಪ್ರತಿಬಿಂಬಿಸತೊಡಗಿತು. ಅವಳಿಗೂ ಅದೇ ರೀತಿಯಾಗಿರಬೇಕು. ಅಲ್ಲದಿದ್ದರೆ ಆತನು ಆಕೆಯನ್ನು ಪ್ರತಿ ದಿನವೂ ಅದೇ ಗಿಡದ ಬಳಿಯಲ್ಲಿ ಕಾಣಲಾಗುತ್ತಿರಲಿಲ್ಲ. ರತ್ನಾಕರನು ಮಾವನ ಮನೆಯಲ್ಲಿದ್ದಷ್ಟು ದಿನವೂ ಪ್ರೇಮದ ಸೆಳೆತವು ಪ್ರತಿ ದಿನವೂ ಆ ದಾರಿಗೆ ನಡೆಯುವಂತೆ ಮಾಡಿತ್ತು. ಸಭ್ಯತನದ ಸಂಕಟ, ಯೌವನ ಸಹಜವಾದ ನಾಚಿಕೆಯಿಂದ ಒಬ್ಬರಿಗೊಬ್ಬರಿಗೆ ಮಾತಿಗವಕಾಶವಾಗಲಿಲ್ಲ. ಅವಳು ಅಲ್ಲಿ ಕಾಫಿ ಹೆಂಗಸರನ್ನು ಕೆಲಸ ಮಾಡಿಸುತ್ತಿದ್ದಳು. ಅವಳ ಸರಳ ಸ್ವಭಾವ, ನಿರಾಡಂಬರತನ, ನಿರಾಭರಣದ ಸೌಂದರ್ಯ, ಸ್ತ್ರೀ ಸಹಜವಾದ ಕುಲೀನತ್ವವು ಆವಳ ಕಲ್ಮಷರಹಿತವಾದ ಹೃದಯವನ್ನು ತೋರಿಸುತ್ತಿತ್ತು. ಕೆಲಸ ಕಾರ್ಯದಲ್ಲಿ ಅವಳಿಗಿದ್ದ ಹುರುಪು ಅವಳ ಕಾರ್ಯದಕ್ಷತೆಯ ಪ್ರತೀಕವಾಗಿತ್ತು.

ಒಂದು ದಿನ ರತ್ನಾಕರನು ಎಂದಿನಂತೆ ಅವಳನ್ನು ನೋಡಬೇಕೆಂದು ... ಕೇಸರಾಯ ಲೇಖಕಗಳ ... ದುಃಖಿತನಾದನು. ರತ್ನಾಕರನ ಮನಸ್ಸು ಚಂಚಲವಾಗಿ ಆತನೊಡನೆ ಮಾತಾಡಲೆಂದು ರತ್ನಾಕರನ ಕಣ್ಣುಗಳು ಆ ಯುವತಿಯನ್ನು ಹುಡುಕತೊಡಗಿದ್ದವು. ಕಡೆಗೂ ನಿರಾಶೆಗೊಂಡು ಮನೆ ತವಕವನ್ನು ತಡೆಯಲಾರದೆ ಸರಿಕರ ಯುವತಿಯು ಇವರೇ ಆ ದಿನ ಅವರುಗಳ ಉತ್ಸಾಹವಾಗಿ ನೋಡಲು ಕಾರಣ ಕೇಳಿದಾಗ ಅವರ ಸ್ನೇಹಿತರು ಖಾಯಿಲೆಯಾಗಿ ಆಸ್ಪತ್ರೆಗೆ ಹೋಗಿರುವರೆಂದೂ ಆವರ ಏದಲಿಗೆ ಕೆಲವು ದಿನಗಳ ವರೆಗೆ ಅವರ ಮಗಳು ಹೊನ್ನಮ್ಮಳು ಉಸ್ತುವರಿ ನೋಡುತ್ತಿದ್ದಳೆಂದೂ ಅಂದು ಅವಳು ತನ್ನ ತಂದೆಯ ವಿಷಯ ತಿಳಿಯಲೆಂದು ಹೋಗಿರುವುದಾಗಿಯೂ ತಿಳಿಸಿದರು. ಅವಳ ತಂದೆಯು ಸಾಧುಸ್ವಭಾವದವನೂ ಪ್ರಾಮಾಣಿಕನೂ ಆಗಿದ್ದುದರಿಂದ ಸರಿಕರು ಯಾರೂ ಅವರ ಮೇಲೆ ತುಂಬಾ ಕರುಣೆಯಿಂದ ನೋಡುತ್ತಿದ್ದರು. ಹೊನ್ನಮ್ಮಳ ತಂದೆಯು ಏಕ ಮಾತ್ರ ಪುತ್ರಿಯೇ ಅವಳನ್ನು ಹಡೆದು ತನ್ನ ಹೆಂಡತಿಯೊಡನೆ ಬಡತನದ ದೆಸೆಯಿಂದ ಸ್ವಗೃಹವನ್ನು ತ್ಯಜಿಸಿ ಎಸ್ಟೇಟಿಗೆ ಒಂದು ಚಾಕರಿಗೆ ನಿಂತು ದುಡಿದರೂ ಬಡತನವು ಅವರ ಬೆಂಬಿಡದೆ ಹಿಂಬಾಲಿಸತೊಡಗಿತ್ತು. ಮಗಳನ್ನು ಯೋಗ್ಯನಾದವನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಎಷ್ಟು ಪ್ರಯತ್ನಿಸಿದರೂ ಆ ಬಡತನದ ದೆಸೆಯಿಂದ ಯಾರೂ ಅವಳನ್ನು ವಿವಾಹವಾಗಲು ಒಪ್ಪಲಿಲ್ಲ. ತಂದೆ ತಾಯಿಗಳು ಹಣ ಸಂಪಾದಿಸಿದ್ದರೂ ಮಗಳಿಗೆ ಸಾಕಷ್ಟು ವಿದ್ಯೆಯನ್ನು ಕೊಡಿಸಿದ್ದರು. ಹೊನ್ನಮ್ಮಳ ನಿರಾಭರಣ ಸುಂದರಿ, ಕಲೀನಳಾದ ಕೋಮಲೆ, ಸೌಮ್ಯಗುಣದ ಸುಶೀಲೆ ಬಡತನದ ಒಂದೇ ಅವಳ ಬೆಂಬಿಡದ ಬೇತಾಳ! ನ್ಯಾಯಮಾರ್ಗವನ್ನು ಬಿಟ್ಟು ಹೀನ ಮಾರ್ಗವನ್ನು ಹಿಡಿದರೇನೇ, ಐಶ್ವರ್ಯವು ನಿಮಗೆ ದೊರೆಯುವದು. ಸಮುದ್ರ ಸೇರಿದಂತೆ ಒಂದು ಕಡೆ ಕಂಡುಬರುವುದು ಸಾಮಾನ್ಯವಾಗಿದೆ. ಪ್ರೌಢಪ್ರಕ್ಕಳು ಗುಣವಂತೆ. ಆದರೆ ಇಂದು ಪ್ರಪಂಚದ ಪ್ರಾಮಾಣಿಕರು ಹಣಕ್ಕೆ ಬೆನ್ನಟ್ಟುತ್ತಿರುವಾಗ ಗುಣವ ಹುಡುಕುವರಾರು? ಗುಣವಂತರು ಹಣ ಇಲ್ಲದವರು ಮನ್ನಣೆ ಕೊಡುವ ಸಾಹುಕಾರರಾರು? ಹಾಗಾಗಿ ವಿಧಿಯು ಹೊನ್ನಮ್ಮಳಿಗೆ ಮದುವೆಯನ್ನು ಒದಗಿಸದೆ ತಂದೆ ತಾಯಿಗಳು ಚಿಂತಿಸುವಂತಾಯಿತು. ಎಷ್ಟು ಪ್ರಯತ್ನಿಸಿದರೂ ಧನವು ದಾತನ ಬಳಿ ಸೇರಲಿಲ್ಲ. ಇದುವೇ ಹಣದ ಮಹಿಮೆ! ಹಾಗಾದರೆ ಗಂಡು ಹೆಣ್ಣುಗಳ ಪ್ರೇಮವು ಬೆಲೆಗೆ ಮಾರಿಕೊಳ್ಳುವ ವಸ್ತುವಾಯಿತೆ? ಬಾಯಿಯಲ್ಲಿ ಸ ವಿಚಾರ ತತ್ವಗಳನ್ನು ಬೇರೆಯವರಿಗೆ ಬೋಧಿಸಿನವರಾಗಬಹುದು. ದೀನದಲಿತರ ಸೇವೆಗೆಂದು ಸಾವಿರಾರು ಜನರು ತಮ್ಮ ತನುಮನಧನವನ್ನರ್ಪಿಸಿ ಕಾರ್ಯಪ್ರವರ್ತಕರಾಗಬಹುದು. ಆದರೆ ಒಂದು ಕಡೆ ಬಣ್ಣ ನೋಡಿ ಬೆಲೆ ಕಟ್ಟುವ ಜನರಿದ್ದೇ ಇರುವರು. ಆದರಂತೆ ಬೆಲೆವೆಣ್ಣುಗಳಿಗೂ ಕಡಿಮೆಯಿರದು. ಹಾಗಾಗಿ ಪ್ರತ್ಯಕ್ಷವಾದ ನಿರಾಭರಣ ಸುಂದರಿಯರಿಗೂ ನೈಜ ಮನೋವೃತ್ತಿಯುಳ್ಳ ರೀತಿಯವರಿಗೂ ನಮ್ಮ ಸಮಾಜದಲ್ಲಿ ಸ್ಥಳವಿಲ್ಲ.

ಇತ್ತೀಚೆಗೆ ಹೊನ್ನಮ್ಮಳ ತಂದೆಯು ಕಾಯಿಲೆಗೆ ಹಿಡಿದು ಮಲಗಿದರು. ದಿನಗಳೆದಂತೆಯೇ ಕಾಯಿಲೆಯು ಗಿಡವ ಗಿದ್ದರು ಮರವಾಗಿ ಬೆಳೆಯಿತು. ಬಂಧು ಬಳಗದವರು ಒಬ್ಬರಿಲ್ಲ, ಅಣ್ಣ ತಮ್ಮಂದಿಯರು ಅಂಥ ದಾದರು. ಕಾನೂರು ದೂರದ ಪಟ್ಟಣದ ಆಸ್ಪತ್ರೆಗೆ ಕರೆದಿತ್ತು. ಹೆಂಡತಿ ಮಗಳು ಕಂಡವರ ಮನೆಯಲ್ಲಿ ಉಳಿವರು. ವಿಧಿಯು ಗಂಡಬೇರುಂಡ ಪಕ್ಷಿಗಳಂತಿದ್ದ ದಂಪತಿಗಳನ್ನು ದಿಕ್ಕುಗೆಡಿಸಿತು. ಮಗಳ ಮಂಗಳ ಕಾರ್ಯವನ್ನೆಸಗಲು ಕಂದಿಗೆ ಖಾವಿಲ್ಲದಂತಾಯಿತು. ಆಸ್ಪತ್ರೆಯಲ್ಲಿ ಬಡವ ಬಲ್ಲಿದರಿಗೆ ಭೇದಭಾವನನ್ನು ತೋರಿಸುತ್ತಿದ್ದ ವೈದ್ಯ ಇಲಾಖೆಯವರ ಹೀನ ಮನೋವೃತ್ತಿಗೆ ಮರ್ಗನ್ನೆಂದುಕೊಂಡ ಕಾನು. ಈ ವರೆಗೆ ನಡೆಸಿದ ಜೀವನ ಯಾತ್ರೆಯನ್ನು ಪುನರಾವರ್ತಿಸಿ ಚಿಂತಿಸಿ ಹೆಂಡತಿ ಮತ್ತು ಮಗಳ ಭಾವೀಜೀವನಕ್ಕಾಗಿ ಮರುಗಿದ. ಕಡೆಗಾಲದಲ್ಲಿ ಅವರ ಮುಖಾವಲೋಕನಕ್ಕಾಗಿ ಬಯಸಿದ. ಆಭಲೆಯಿಂದ ತಾಯಿ ಮಗಳು ಇದನ್ನು ತಿಳಿದುದರು. ವಿಧಿಯು ಅವರನ್ನು ವಂಚಿಸಿತು. ಒಳಿಯಲ್ಲಿ ಯಾರೂ ಇಲ್ಲದಾಗ ಹೊನ್ನಮ್ಮಳ ತಂದೆಯು ಆತ್ಮವು ಆಸ್ಪತ್ರೆಯಲ್ಲಿ ಆತನ ಪಾರ್ಥಿವ ಶರೀರವನ್ನು ಬಿಟ್ಟು ಪಾವನವಾಯಿತು. ತಾಯಿ ಮಗಳು ಅತ್ಮೀಯ ಸಂಬಂಧಿಕನನ್ನು ನೋಡಲು ಆತುರಗೊಂಡು ಹೋಗಿದ್ದಾಗ ಆತನ ಅಂತ್ಯಕರ್ಮವೂ ಮುಗಿದಿತ್ತು. ಮಗಳು ತಾಯಿಗಾಗಿ ಚಿಂತಿಸಿದಳು. ಅಂತಿಮ ಕಾಲದಲ್ಲಿ ತನ್ನ ತಂದೆಯ ಬಳಿಯಿರಲಿಕ್ಕಾಗದಕ್ಕಾಗಿ ಕಂಬನಿಗರೆದಳು. ಆಕಾಶ ಬಿದ್ದಾಗ ಅಂಗೈ ತಡೆಯಲು ಬರದೆಂದೂ ಈ ಪ್ರಪಂಚದ ಪಾಠಶಾಲೆಗಳಿಂದ ತಂದೆಯು ಪಡೆದನೆಂದೂ ಧೈರ್ಯವನ್ನು ತಂದುಕೊಂಡು ತಾಯಿಯನ್ನು ಸಂತೈಸಿದಳು.

ಹೊನ್ನಮ್ಮಳ ಸ್ಥಿತಿಯು ಹಾಯಿಹರಿದ ಹಡಗದಂತಾಯಿತು. ತಾಯಿಯು ದಿಕ್ಕು ತೋರಲಾರದ ದಿಕ್ಸೂಚಿಯಂತಾದಳು. ತಂದೆಯ ಶ್ರಾದ್ಧಕರ್ಮಗಳನ್ನು ಮುಗಿಸಿದ ನಂತರ ತಮ್ಮ ಜೀವನದ ದಾರಿಯನ್ನು ಹುಡುಕಬೇಕಾಯಿತು. ತಾಯಿ ಮಗಳು ಆಧಾರವಿಲ್ಲದ ಲತೆಗಳಂತಾದ್ದರು. ಕರೆಗೆ ಕರೆವರು. ಅವರಿಗೆ ಆಸ್ಪತ್ರೆಯವರುಗಳಿಗೆ ಏನಾದರೂ ಮಾಡಿದ ಗ್ರಾಂಟ್ ಹೊನ್ನಮ್ಮಳಿಗೆ ಸರಿಬೀಳಲಿಲ್ಲ. ತಪ್ಪು ಕೆಲಸವೆಂಬ ಕರ್ತವ್ಯಕ್ಕೆ ಹೊರಡಲಾಗಲಿಲ್ಲ. ಆ ವರ ಮುಖ ಎದುರ ಆಸ್ಪತ್ರೆಯಲ್ಲಿ ದಾದಿಕೆಲಸವನ್ನು ಸಂಪಾದಿಸಿಕೊಂಡು ಪಟ್ಟಣದಲ್ಲಿ ಬಿಡಾರಹೂಡಿ ತಾಯಿಯನ್ನು ಸಾಕಲಾರಂಭಿಸಿದಳು. ಆವರೂ ತಾಯಿ ಮಗಳು ಆ ವರಣವಿಲ್ಲದೆ ಅರಳಿದ ಹೂವುಗಳಂತಾದರು. ಸ್ತ್ರೀ ಪುರುಷರು ಏಕಾಂತದಲ್ಲಿದ್ದು ತಮ್ಮ ಮನವನ್ನು ತಡೆಹಿಡಿಯಬಹುದು. ಆದರೆ ಹೊರಗೆ ನಿಂತು ಆಡಿಕೊಳ್ಳುವ ಜನರ ನಾಲಿಗೆಯನ್ನು ತಡೆಹಿಡಿಯಲಾಗದು. ಈ ತರಹದ ಅಸಹಾಯಕ ಸ್ತ್ರೀಯರನ್ನು ಸ್ವೀಕರಿಸಿ ಸಂಸಾರಿಗಳಾಗಲು ಇಚ್ಛೆಯಿಲ್ಲದಿದ್ದರೂ ಕಾಮುಕ ದೃಷ್ಟಿಯಿಂದ ಅವರನ್ನು ನೋಡುವ ಜನರಿಗೆ ನಮ್ಮ ಸಮಾಜದಲ್ಲಿ ಕಡಮೆಯಿಲ್ಲ. ಹೊನ್ನಮ್ಮಳನ್ನು ಆ ರೀತಿ ಬಯಸಿ ವಿಫಲರಾದವರು ಅವಳನ್ನು ಬೆಲೆವೆಣ್ಣುಗಳ ಸ್ಥಾನಕ್ಕೇರಿಸಿ ತಮ್ಮ ನಾಲಿಗೆಯನ್ನು ಹೊಲಸುಮಾಡಿಕೊಂಡರು. ಇದು ತಾಯಿ ಮಗಳ ಕಿವಿಗೂ ಬಿದ್ದು ಮೊದಲೇ ನೊಂದ ಹೃದಯಗಳನ್ನು ಹೊಕ್ಕ ದುಃಖಕರಂಗಗಳನ್ನು ಒಡಿದೆಬ್ಬಿಸಿತು. ತಾಯಿ ಮಗಳು ಸಮಾಜದ ರೀತಿ ನೀತಿಗಳಿಗೆ ಮರ್ಮದಲ್ಲೇ ನೊಂದುಕೊಂಡು ಕರಗಿ ಸೊರಗಿದರು. ಚಾಕರಿಯನ್ನು ಬಿಟ್ಟು ಮನೆಯೊಳಗೆ ಅಡಗಿಕೊಂಡರೆ ಹೊಟ್ಟೆಗೆ ಹೊಟ್ಟೆ ಕೂಡ ತಂಬಲಾಗುತ್ತಿರಲಿಲ್ಲ. ಆತ್ಮಹೋದರೆ ಕರೆ, ಇತ್ತ ಹೋದರೆ ಎರೆಯೆ ಬಂತಿದ್ದ ಸಂದಿಗ್ಧ ಪರಿಸ್ಥಿತಿಯಲ್ಲಿ ತಾಯಿಯು ಆ ದುಃಖವೊಬ್ಬನ್ನೇ ಬಿಟ್ಟು ಈ ದುಷ್ಟರ ಪ್ರಪಂಚವನ್ನು ತ್ಯಜಿಸಿದಳು. ಹೊನ್ನಮ್ಮಳು ಬಿಂದ ಹತ್ತಿರದವಳು ಆದರೂ ಅದೇ ಆಸ್ಪತ್ರೆಯಲ್ಲಿ ರೋಗಿಗಳ ಶುಶ್ರೂಷೆಯನ್ನು ಮಾಡುತ್ತಿದ್ದು ಪ್ರತಿಯೊಬ್ಬ ರೋಗಿಯೂ "ಹೊನ್ನೇ" ಎಂದು ಹೊನ್ನಮ್ಮಳೆಂದು ಮಕ್ಕಳಂತೆ ಅಂದಿನಿಂದ ಹೊಗಳುವಂತಾಯಿತು. ಇಷ್ಟು ವರುಷದವರೆಗೆ ಕಾಲಕಳೆದರೂಗಳು ಒಂದಾಗಿ ತನ್ನ ವಾಹಿಪ್ಪತ್ತರ ದಿನ ಸಕ್ಕೆ ಬಂದು. ತರುವಾಯ ಕಾನು ಮೊದಲು ಬಂದ ಆತ್ಮದಲ್ಲಿ ಪ್ರೇಮಿಸಿದ ಆ ರತ್ನಾಕರನನ್ನೇ ಅಲಿಂಗಿಸುತ್ತಿದ್ದಳು. ಇದು ಆ ರತ್ನಾಕರನಿಗಾಗಲೀ ಬೇರೆಯಾರಿಗಾಗಲೀ ತಿಳಿದಿರಲಿಲ್ಲ. ಸಂಪತ್ತಿನ ಸುಗಂಧವನ್ನು ಸೂಸುವ ಸಿಂಗಾರದಂತೆ ಆತನ ಮೇಲೆ ಅಚಲ ಪ್ರೇಮ ದಿಂದಿದ್ದಳು.

ಅತ್ತ ರತ್ನಾಕರನು ಮಾವನ ಮನೆಯಿಂದ ಹೋದವನು ಬೊಂಬಾಯಿ ಪಟ್ಟಣದಲ್ಲಿ ದೊಡ್ಡದೊಂದು ನೌಕರಿ ಪಡೆದು ಅತಿ ಉತ್ಕೃಷ್ಟಮರವನ್ನು ಕಂಡು ಅದ್ದು ನಗರದ ಥಳುಕಿನಿಂದ ಆತನು ಹೊನ್ನಮ್ಮಳನ್ನು ಮರೆತು ಎಷ್ಟೋ ವರ್ಷಗಳು ಆಗಿ ಹೋಗಿದ್ದವು. ಐಶ್ವರ್ಯದ ಅಹಂಕಾರವು ಆತ್ಮವನ್ನು ಆವರಿಸಿಕೊಂಡರೆ ಬಾಲ್ಯದ ಗೆಳೆಯರಾಗಲೀ ಪ್ರೇಮಿಗಳಾಗಲೀ ಕಣ್ಣಿಗೆ ಕಾಣದಾಗುವುದೇ ಅಲ್ಲದೆ ಕಡೆಗೆ ತಂದೆ ತಾಯಿಗಳೂ ಕಾಣದಾಗುವುದು. ಆದರೆ ರತ್ನಾಕರ ಆ ಸ್ಥಿತಿಗೆ ಇಳಿದಿಲ್ಲ. ಲೋಕದಲ್ಲಿ ಹಣ ಸಂಪಾದನೆಯೇ ಸರ್ವಸ್ವವೆಂಬ ನಿಜ ಹಣ ಸಂಪಾದಿಸುತ್ತಿದ್ದನು. ಸಂಕಲ್ಪ ಹಣ ಸಂಪಾದನೆ ಆದ ಮೇಲೆ ತನ್ನ ಹುಟ್ಟೂರಿಗೆ ಬಂದು ತನ್ನ ಪ್ರೇಮ ಪ್ರತಿಮೆಯನ್ನು ಮದುವೆಯಾಗಬೇಕೆಂದು ಮನೆಗೆ ಮರಳಿದ್ದು ಮಾವನ ಮನೆಗೆ ಬಂದಾಗ ಹೊನ್ನಮ್ಮಳ ವಿಷಯದ ಪ್ರಸಂಶೆಯ ಮಾತುಗಳನ್ನು ಕೇಳಿದ.

ಕೈಮುರಿದು ರಕ್ತಸ್ರಾವವಾಗುತ್ತಿದ್ದ ರೋಗಿಯೊಬ್ಬನನ್ನು ಕಾರಿನಲ್ಲಿ ತಂದು ಆ

(ಮುಂದೆ ಪುಟಕ್ಕೆ ಸಾಗಿದೆ)

# ಕೊಡಗು

ತಾ. ೮-೬-೧೯೫೧ನೇ ಶುಕ್ರವಾರ


## ಪ್ರಶಂಸನಾರ್ಹ ಪ್ರಥಮ ಫಲಿತಾಂಶ.

ಕೊಡಗು ಸರಕಾರಿ ಕಾಲೇಜಿನ ಇಂಟರ್‌ಮೀಡಿಯೇಟ್ ಪರೀಕ್ಷೆಯ ಪ್ರಥಮ ಫಲಿತಾಂಶವು ಸ್ತುತ್ಯಾರ್ಹವಾಗಿದೆ. ಸೀನಿಯರ್ ಇಂಟರ್‌ಮೀಡಿಯೇಟ್ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಎಲ್ಲಾ ಜನರನ್ನು ಪರೀಕ್ಷೆಗೆ ಕಳುಹಿಸಲಾಗಿತ್ತು. ಈ ೭೮ರ ಪೈಕಿ ೪೪ ಜನರು ತೇರ್ಗಡೆಯಾಗಿರುವರು. ಅವರಲ್ಲಿ ೯ ಜನರು ಒಂದನೇ ತರಗತಿಯನ್ನು ಪಡೆದಿರುವರು. ಹನ್ನೆರಡು ವಿದ್ಯಾರ್ಥಿನಿಯರ ಪೈಕಿ ೯ ಮಂದಿ ಪಾಸಾಗಿರುವರಲ್ಲದೆ ಮೂವರು ಒಂದನೇ ತರಗತಿಯಲ್ಲಿ ಬಂದಿರುವರು. ಒಟ್ಟಾರೆ ಶೇಕಡ ೫೬ ರಂತೆ ತೇರ್ಗಡೆಯಾದಂತಾಯಿತು. ಯಾವ ಹೊಸ ಕಾಲೇಜಿಗೇ ಆಗಲಿ ಪ್ರಥಮ ವಿಶ್ವವಿದ್ಯಾಲಯ ಪರೀಕ್ಷೆಯಲ್ಲಿ ಇಷ್ಟೊಂದು ಉತ್ತಮವಾದ ಫಲಿತಾಂಶವು ದೊರೆಯುವದೆಂದರೆ ಹೆಮ್ಮೆಯ ಮಾತೇ ಸರಿ. ಅದರಲ್ಲೂ ಈ ಕಾಲೇಜಿಗೆ ಕೊಡಗಿನಲ್ಲಿ ಪಾಸಾದ ಎಲ್ಲಾ ಸ್ಕೂಲ್‌ಫೈನಲ್ ವಿದ್ಯಾರ್ಥಿಗಳನ್ನು ಏನೊಂದು ತಡೆ ಇಲ್ಲದೆ ಸೇರಿಸಿಕೊಳ್ಳುತ್ತಿದ್ದಾರೆ. ಹೊರಗೆ ಹೆಸರುಗೊಂಡ ಕಾಲೇಜುಗಳು ಉತ್ತಮ ತರಗತಿಯಲ್ಲಿ ಪಾಸಾದ ವಿದ್ಯಾರ್ಥಿಗಳನ್ನೇ ಹೆಕ್ಕಿ ಸೇರಿಸಿಕೊಂಡು ಉತ್ತಮ ಫಲಿತಾಂಶವನ್ನು ಪಡೆಯುತ್ತಿವೆ. ಈ ಸಾರಿಯ ಪರೀಕ್ಷೆಯ ನಂತರ ಕೆಲವು ಲೆಕ್ಚರರುಗಳು ಶೇಕಡ ೨೫ ರಷ್ಟು ತೇರ್ಗಡೆ ದೊರೆಯುವದೋ ಎಂಬ ಸಂಶಯದಲ್ಲಿದ್ದರು. ಹಾಗೂ ಸಾರ್ವಜನಿಕರಿಗೂ ಕೂಡ ಈ ಪ್ರಥಮ ಫಲಿತಾಂಶದಲ್ಲಿ ಹೆಚ್ಚಿನ ಆಶೆ ಏನೂ ಇರಲಿಲ್ಲ. ಆದರೆ ಪ್ರಿನ್ಸಿಪಾಲರ, ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಪರಸ್ಪರ ಸಹಕಾರದಿಂದ ಈ ಉತ್ತಮವಾದ ಫಲಿತಾಂಶವು ದೊರೆಯಿತು. ಪ್ರಿನ್ಸಿಪಾಲರೂ, ಸಿಬ್ಬಂದಿಯವರೂ ಪಾಠ ಹೇಳುವ ಮತ್ತು ಕಾಲೇಜಿನ ಶಿಸ್ತನ್ನು ಪರಿಪಾಲಿಸುವ ತಮ್ಮ ಕರ್ತವ್ಯವನ್ನು ದಕ್ಷತೆಯಿಂದಲೂ ವಿದ್ಯಾರ್ಥಿಗಳು ವಿದ್ಯಾರ್ಜನೆಯ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದಲೂ ಮಾಡಿರುವದರ ಪರಿಣಾಮವೇ ಈ ಉತ್ತಮ ಫಲಿತಾಂಶವಾಗಿದೆ. ಇದಕ್ಕಾಗಿ ಇವರೆಲ್ಲರನ್ನು ಮನಃಪೂರ್ತಿಯಾಗಿ ಅಭಿನಂದಿಸಬೇಕಾಗಿದೆ. ಈ ಫಲಿತಾಂಶವು ದೇಶದವರಲ್ಲಿ ತೃಪ್ತಿಯನ್ನು ಉಂಟುಮಾಡದಿರದು. ಒಮ್ಮೆ ಕೀರ್ತಿಯನ್ನು ಪಡೆಯುವದು ಸುಲಭ. ಆದರೆ ಅದನ್ನು ಪಡೆದನಂತರ ಮುಂದಕ್ಕೆ ಕಾಪಾಡಿಕೊಳ್ಳುವದು ಕಷ್ಟ. ಅದನ್ನು ಇನ್ನೂ ಹೆಚ್ಚಿಸಿಕೊಳ್ಳುವದು ಪರಮ ಕಷ್ಟ. ಆದ್ದರಿಂದ ಕಾಲೇಜು ಈಗ ಗಳಿಸಿರುವ ಕೀರ್ತಿಯನ್ನು ಉಳಿಸಿಕೊಳ್ಳುವದು ಮಾತ್ರವಲ್ಲದೆ ಅದನ್ನು ಅಭಿವೃದ್ಧಿಗೊಳಿಸುವ ತಮ್ಮ ಪರಮ ಕರ್ತವ್ಯದ ಕಡೆ ಸಂಬಂಧ ಪಟ್ಟವರೆಲ್ಲರೂ ತುಂಬಾ ನಿಗವಿಡುವರಾಗಿ ಆಶಿಸುತ್ತೇವೆ.

ಈ ವರ್ಷವೇ ಈ ಕಾಲೇಜಿನಲ್ಲಿ ಬಿ. ಎ. ತರಗತಿಯು ತೆರೆಯಲ್ಪಡುವದೆಂಬ ನಿರೀಕ್ಷಣೆಯು ದೇಶದವರಲ್ಲಿತ್ತು. ಆದರೆ ಸ್ಥಳ ಸಂಕೋಚದಿಂದಲೂ, ಮತ್ತು ಸಾಕಷ್ಟು ವಿದ್ಯಾರ್ಥಿಗಳು ದೊರೆಯುವರೋ ಎಂಬ ಸಂಶಯದಿಂದಲೂ ಬಿ. ಎ. ತರಗತಿಯನ್ನು ತೆರೆಯಲಿಲ್ಲವೆಂದು ತೋರುತ್ತದೆ. ಇದು ನಿಜವಾದರೆ ವಿದ್ಯಾರ್ಥಿಗಳು ಸಾಕಷ್ಟು ದೊರೆಯರೆಂಬ ಸಂಶಯವು ನಿವಾರಿಸಲ್ಪಟ್ಟಿದೆ. ಇನ್ನು ಉಳಿದಿರುವ ಕೊರತೆಯಾದ ಕಟ್ಟಡದ ಅವಶ್ಯಕತೆಯನ್ನು ಶೀಘ್ರದಲ್ಲಿ ಮುಗಿಸುವ ಭಾರವು ಸರಕಾರದ್ದಾಗಿದೆ. ಈಗಾಗಲೇ ಕಟ್ಟಡದ ಅಡಿಪಾಯದ ಕೆಲಸವು ಪೂರೈಸಿಗೊಳ್ಳುತ್ತಿದೆ ಕಟ್ಟಡಕ್ಕೆ ಬೇಕಾದ ಹಣವೂ ಇಡಲ್ಪಟ್ಟಿದೆ. ಅಂದಮೇಲೆ ಸಂಬಂಧಿಸಿದ ಇಲಾಖೆಯವರು ಈ ಕೆಲಸವನ್ನು ಆದಷ್ಟು ಬೇಗನೆ ಮುಗಿಸಿ ಬರುವ ವರ್ಷವಾದರೂ ಬಿ. ಎ. ತರಗತಿಯನ್ನು ತೆರೆಯುವ ಅನುಮಾಡುವರಾಗಿ ನಂಬುತ್ತೇವೆ.

ಕಾಲೇಜನ್ನು ಪ್ರಾರಂಭಿಸಿದ ಪ್ರಥಮದಲ್ಲಿ ಅದರ ಪ್ರಯೋಜನದ ಮತ್ತು ಸಫಲತೆಯ ಬಗ್ಗೆ ಕೆಲವರಲ್ಲಿ ಸಂಶಯಗಳು ತೋರಿದ್ದವು. ಆದರೂ ಆಗಿನ ಚೀಫ್‌ಕಮಿಷನರ್ ಶ್ರೀ. ಸಿ. ಟಿ. ಮೊದಲಿಯಾರ್‌ರವರು ನಿರ್ಧಾರ ಪೂರ್ವಕವಾಗಿ ಕಾಲೇಜು ಸ್ಥಾಪನೆಯ ಕೆಲಸವನ್ನು ಮುಂದರಿಸಿ ಕಾಲೇಜಿನ ಅಸ್ತಿತ್ವಕ್ಕೆ ಕಾರಣರಾದುದನ್ನು ಜನರು ಎಂದೂ ಮರೆಯಲಾರರು. ನಂತರ ಬಂದ ಈಗಿನ ಚೀಫ್‌ಕಮಿಷನರ ಪ್ರೋತ್ಸಾಹದಿಂದಲೂ, ಕಾಲೇಜಿನವರ ಪ್ರಯತ್ನದಿಂದಲೂ ದೊರೆತ ಈ ಪ್ರಥಮ ಫಲಿತಾಂಶದಿಂದ ಈ ಸಂಶಯಗಳು ನಿವಾರಣೆಯಾಗಿರುವವೆಂದು ನಂಬುತ್ತೇವೆ. ಪ್ರಥಮ ಯತ್ನದಲ್ಲಿ ೪೪ ವಿದ್ಯಾರ್ಥಿಗಳು ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವದರಿಂದ ಈ ಕಾಲೇಜಿಗಾಗಿ ವೆಚ್ಚಮಾಡುತ್ತಿರುವ ಹಣವಾದರೂ ಯುಕ್ತವಾದುದೆಂದು ಒಪ್ಪಬೇಕಾಗುತ್ತದೆ. ಕೊಡಗಿನ ಕಾಲೇಜಿನ ಈ ಮಾದರಿ ಫಲಿತಾಂಶದಿಂದ ಇಲ್ಲಿಯ ತಂದೆ ತಾಯಿಗಳಿಗೆ ಈ ಕಾಲೇಜಿನಿಂದಾಗಿ ತಮ್ಮ ಮಕ್ಕಳನ್ನು ಹೊರಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿ ವೆಚ್ಚವಾಗುತ್ತಿದ್ದ ಸಹಸ್ರಾರು ರೂಪಾಯಿಗಳು ಉಳಿತಾಯವಾಗುತ್ತಿದೆಯೆಂಬುದು ಮನವರಿಕೆಯಾಗಿರಬಹುದು. ಮುಂದಕ್ಕೂ ಎಲ್ಲರ ಸಹಕಾರ ಮತ್ತು ಪರಿಶ್ರಮದಿಂದ ಈ ಕಾಲೇಜು ಬರುವ ವರ್ಷವೇ ಪ್ರಥಮ ತರಗತಿಯ ಕಾಲೇಜಾಗಿ ಶೀಘ್ರದಲ್ಲೇ ಮದ್ರಾಸು ವಿಶ್ವವಿದ್ಯಾಲಯದ ಒಂದು ಉತ್ತಮ ಶ್ರೇಣಿಯ ಕಾಲೇಜಾಗಲೆಂದು ಆಶಿಸುತ್ತೇವೆ.

## ವರ್ತಮಾನ.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ. ಮಾಣೀರ ಮಂಜುನಾಥರವರು ಬಿ. ಎಸ್ಸಿ. (ಆನರ್ಸ್) ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ನಾಪೋಕ್ಲು ಹೈಸ್ಕೂಲಿನ ಹೊಸ ಕಟ್ಟಡ ಕೆಲಸವು ಮುಗಿಯುತ್ತಾ ಬಂದಿದೆ. ಜೂನ್ ತಾ. ೧೪ರಿಂದ ಹೊಸ ಕಟ್ಟಡದಲ್ಲಿ ತರಗತಿಗಳನ್ನು ತೆರೆಯುವರೆಂದೂ, ವಿದ್ಯಾರ್ಥಿ ನಿವಾಸ ಗೃಹದ ಮತ್ತು ಇತರ ಚಿಲ್ಲರೆ ಕೆಲಸ ತೀರಿದನಂತರ ಬರುವ ಡಿಸೆಂಬರ್‌ನಲ್ಲಿ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ನಡೆಸುವರಾಗಿಯೂ ತಿಳಿಯಬಂದಿದೆ.

ಕೊಡಗು ಸರಕಾರಿ ಕಾಲೇಜು ತಾ. ೩೦-೬-೫೧ರಿಂದ ತೆರೆಯುವದು. ಕಾಲೇಜಿಗೆ ಸೇರಲಿರುವ ಹೊಸ ವಿದ್ಯಾರ್ಥಿಗಳು ಕಾಲೇಜು ಆಫೀಸಿನಿಂದ ದೊರೆಯುವ ಅರ್ಜಿಫಾರಂಗಳನ್ನು ತುಂಬಿ, ರಿಜಿಸ್ಟ್ರೇಶನ್ ಬಗ್ಗೆ ಮೂರು ರೂಪಾಯಿಗಳನ್ನು ಹತ್ತಿರದ ಖಜಾನೆಗೆ ಕಟ್ಟಿ ಚಲನಿನೊಂದಿಗೆ ಅರ್ಜಿ ಕಳುಹಿಸಬೇಕು. ಅರ್ಜಿಫಾರಂಗಳಿಗೆ ಬರೆಯುವಾಗ ಪಾಸಾದ ವರ್ಷ, ತಮ್ಮ ನಂಬರು, ಕೇಂದ್ರಗಳನ್ನು ಸೂಚಿಸಿ ಬರೆಯಬೇಕು.

ತಾ. ೧೬-೬-೫೧ರಿಂದ ಫ್ರೇಜರ್‌ಪೇಟೆಯಲ್ಲಿ ಮೂರು ತಿಂಗಳುಗಳ ವರೆಗೆ ತೆರೆಯಲ್ಪಡುವ ಸರ್ವೆ ತರಬೇತಿ ಶಾಲೆಗೆ ಸೇರಲಿಚ್ಛಿಸುವವರು ತಾ. ೧೦-೬-೫೧ರೊಳಗೆ ಅ. ಕಮಿಷನರಿಗೆ ಅರ್ಜಿ ಬರೆದುಕೊಳ್ಳಬಹುದೆಂದೂ ಕಡಿಮೆ ವಿದ್ಯಾಯೋಗ್ಯತೆ ಲೋವರ್ ಸೆಕೆಂಡರಿಯೆಂದೂ ತಿಳಿಸುತ್ತಾರೆ.

ಬಟ್ಟೆ ನೆಯಿಗೆ ಕೆಲಸದಲ್ಲಿ ತರಬೇತಿಗೆ ಯುವಕರು ಬೇಕಾಗಿದ್ದಾರೆ. ಕುತೂಹಲವುಳ್ಳವರು ಜೂನ್ ತಾ. ೧೨ರೊಳಗಾಗಿ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಕೊಳ್ಳತಕ್ಕದ್ದು. ತರಬೇತಿನ ಸಮಯ, ತರಬೇತಿನ ಸಮಯದಲ್ಲಿ ಕೊಡಬಹುದಾದ ವೇತನ ಇತ್ಯಾದಿ ಹೆಚ್ಚಿನ ವಿಷಯಗಳನ್ನೂ ಸದ್ರಿ ಆಫೀಸಿನಿಂದ ತಿಳಿದುಕೊಳ್ಳಬಹುದು.

ಕೊಡಗು ವ್ಯವಸಾಯ ಇಲಾಖೆಯು ಪೊಳ್ಳಿಬೆಟ್ಟ ಮತ್ತು ಒಡ್ಡರ ಮೊಟ್ಟೆ ಕಿತ್ತಳೆ ಫಾರಂಗಳಲ್ಲಿ ಆರಿಸಿದ ಬೀಜಗಳಿಂದ ತಯಾರಿಸಿದ ಒಂದು ವರ್ಷದಿಂದ ಮೂರು ವರ್ಷ ವಯಸ್ಸಿನ ಉತ್ತಮ ತರದ ಕಿತ್ತಳೆ ಸಸಿಗಳು ನೂರಕ್ಕೆ ರೂ. ೩೦|-ರ ದರದಲ್ಲಿಯೂ, ಕಸಿ ಗಿಡಗಳು ಒಂದಕ್ಕೆ ರೂ ೧|-ರಂತೆಯೂ ಮಾರಾಟಕ್ಕಿವೆ. ಬೇಕಾದವರು ಒಡನೆ ವ್ಯವಸಾಯ ಇಲಾಖೆ ಆಫೀಸರಿಗೆ ಬರೆದುಕೊಳ್ಳುವದು.

ಕೊಡಗು ವಿದ್ಯಾಧಿಕಾರಿಯ ಚಾರ್ಜಿನಲ್ಲಿದ್ದ ಶ್ರೀ. ಜಿ. ಗಣೇಶರಾಯರನ್ನು ವಿದ್ಯಾಧಿಕಾರಿಯಾಗಿ ನೇಮಿಸಿ, ಮುಖ್ಯೋಪಾಧ್ಯಾಯರುಗಳಾಗಿದ್ದ ಶ್ರೀ. ಸಿ. ಎಂ. ಉತ್ತಪ್ಪನವರನ್ನು ನಾಪೋಕ್ಲಿನಿಂದ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿಗೂ, ಶ್ರೀ. ಮೂಚಿಮಾಡ ಚಂಗಪ್ಪನವರನ್ನು ವೀರಾಜಪೇಟೆಯಿಂದ ನಾಪೋಕ್ಲು ಹೈಸ್ಕೂಲಿಗೂ ವರ್ಗಾಯಿಸಿರುವದಲ್ಲದೆ, ವೀರಾಜಪೇಟೆ ಹೈಸ್ಕೂಲಿನಲ್ಲಿ ಅ. ಮಾಸ್ಟರಾಗಿದ್ದ ಶ್ರೀ. ಬಿ. ಎಸ್. ಕೆ. ವಿಟಲರಾಯರನ್ನು ಅಲ್ಲಿಯ ಹೆಡ್‌ಮಾಸ್ಟರಾಗಿಯೂ, ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಅ. ಮಾಸ್ಟರಾಗಿದ್ದ ಶ್ರೀ. ಪಟ್ಟಮಾಡ ಪೂವಯ್ಯನವರನ್ನು ಪೊನ್ನಂಪೇಟೆ ಹೈಸ್ಕೂಲಿನ ಹೆ. ಮಾಸ್ಟರಾಗಿಯೂ ನೇಮಿಸಿರುವರು.

ಕಂಡಂಗಾಲ ಗ್ರಾಮದ ಶ್ರೀ. ಪಾಲೇಕಂಡ ಪೂವಯ್ಯನವರು ೨-೬-೫೧ರಲ್ಲೂ, ಮಡಿಕೇರಿಯಲ್ಲಿದ್ದ ಶ್ರೀ ಕೋವಾಂಡ ತಿಮ್ಮಯ್ಯನವರ ಪತ್ನಿ ಬೋಂದವ್ವನವರು ತಾರೀಕು ೩-೬-೫೧ರಲ್ಲೂ ಮತ್ತು ನಿವೃತ್ತ ಪಾರುಪತ್ತೆಗಾರರಾಗಿದ್ದ ಯವಕಪಾಡಿ ಗ್ರಾಮದ ಶ್ರೀ. ಉದಿಯಂಡ ಮಾಚಯ್ಯನವರು ತಮ್ಮ ೮೬ನೇ ವಯಸ್ಸಿನಲ್ಲಿ ತಾರೀಕು ೫-೬-೫೧ರಲ್ಲೂ ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

೧೯೫೧-೫೨ರಿಂದ ಅಂದರೆ ಈ ವರ್ಷ ಏಪ್ರಿಲ್‌ನಿಂದ ವ್ಯವಸಾಯ ಆದಾಯ ತೆರಿಗೆಯನ್ನು ಜಾರಿಗೆ ತರುವ ಬಗ್ಗೆ ಒಂದು ತಿದ್ದುಪಡಿಯ ಬಿಲ್ಲನ್ನು ಸರಕಾರದವರು ಕೌನ್ಸಿಲಿನ ಮುಂದಿಡುವರಾಗಿ ತಿಳಿಯಬಂದಿದೆ.

ತಾರೀಕು ೪ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಚರ್ಚಿಸಲ್ಪಡಬೇಕಿದ್ದ ಚೀಫ್ ಕಮಿಷನರ್ ಪ್ರಾಂತಗಳ ಸುಧಾರಣಾ ಮಸೂದೆಯ ಪರ್ಯಾಲೋಚನೆಯನ್ನು ತತ್ಕಾಲ ಮುಂದರಿಸಿರುವರು.


## LOST!

An Hold-all containing costly Mathematical Books, Encyclopoedia Volume, my cloths, my toilette set and a pair of my sandals was probably exchanged while travelling from Mysore to Mercara by Ganesh Motor Service on 28-5-'51 morning. Anyone who has it, please, return it to or inform their address to Messers. COORG STORES, MERCARA and take their bedding in turn from them. The books are valuable and are badly needed by the owner! Prompt reply would be gratefully appreciated and honoured !!

## ಟೆಂಡರು ನೋಟಿಸ್

TENDERS INVITED FOR CARDAMOM MALAI.

ಕಡಿಯತ್ತನಾಡಿನ ಚೆಲಾವರ ಗ್ರಾಮದಲ್ಲಿರುವ ಬಿದ್ದಂಡ ಕುಟುಂಬಕ್ಕೆ ಸೇರಿದ ೨೫೦ ಎಕರೆ ವಿಸ್ತೀರ್ಣವಿರುವ ಕಟ್ಟೆ ಏಲಕ್ಕಿ ಮಲೆಯನ್ನು ೨೧ ವರ್ಷಗಳ ಗೇಣಿಗೆ ಕೊಡಲಾಗುವದು. ಏಲಕ್ಕಿ ವ್ಯವಸಾಯಕ್ಕೆ ಅತ್ಯುತ್ತಮವಾಗಿದ್ದು ಈಗ ವರ್ಷಕ್ಕೆ ಒಂದು ಖಂಡಿ ಏಲಕ್ಕಿ ಬರುತ್ತಿದೆ. ಖಾಯಿಶ್‌ದಾರರು ತಮ್ಮ ಟೆಂಡರುಗಳನ್ನು ಈ ಕೆಳಗಿನ ಅಡ್ರೆಸಿಗೆ ತಾ ೧೫-೭-೫೧ರೊಳಗೆ ಬರೆದುಕೊಳ್ಳುವದು.

ಬಿ. ಎಂ. ಕಾರ್ಯಪ್ಪ, B. A., L. T.,
ಪ್ರೆಸಿಡೆಂಟ್
ಬಿದ್ದಂಡ ಫ್ಯಾಮಿಲಿ ಟ್ರಸ್ಟ್ ಫಂಡ್,
"ಚಿತ್ರಾ"
4-1 ಮಡಿಕೇರಿ.

# ಓದುಗರ ಓಲೆಗಳು

## ಕೌನ್ಸಿಲು ಮೆಂಬರುಗಳಲ್ಲಿ—

ನಿಮ್ಮನ್ನು ನಮ್ಮ ಪ್ರತಿನಿಧಿಗಳಾಗಿ ಆರಿಸಿ ಆರೇಳು ವರ್ಷಗಳಾದವು. ಈ ದೀರ್ಘ ಅವಧಿಯಲ್ಲಿ ನಿಮ್ಮಲ್ಲಿ ಕೆಲವರು ದೇಶದ ಹಿತಕ್ಕೆ ವಿರೋಧ ವರ್ತಿಸಿದಾಗ ಅವರ ಮೇಲೆ 'ಅವಿಶ್ವಾಸ' ಠರಾವನ್ನು ಸೂಚಿಸಿ ಅವರು ಸರಿಯಾದ ಪ್ರತಿನಿಧಿಗಳಲ್ಲವೆಂದೂ, ಶೀಘ್ರ ರಾಜಿನಾಮೆ ಕೊಡಬೇಕೆಂದೂ ನಾವು ಕೇಳಿದೆವು. ಆದರೆ ಒಮ್ಮೆ ಕುರ್ಚಿ ದೊರೆತ ನೀವು ಅಲ್ಲಾಡದೆ ಕುರ್ಚಿಗೆ ಅಂಟಿಕೊಂಡಿರಿ. ಈಗ ಪುನಃ ಹೊಸ ಚುನಾವಣೆ ಸನ್ನಿಹಿತವಾಗುತ್ತಿದೆ. ನೀವು ಈ ದೀರ್ಘ ಅವಧಿಯಲ್ಲಿ ನಿಮ್ಮನ್ನು ಮತಕೊಟ್ಟು ಆರಿಸಿದ ಮತದಾರರಿಗೆ ಮಾಡಿದುದೇನೆಂದು ಬಹಿರಂಗವಾಗಿ ಹೇಳಬೇಕು. ಓಟಿನ ಸಮಯದಲ್ಲಿ ಇಲ್ಲದ ಭರವಸೆ ಹೇಳಿ ನಂತರ ಓಟರರನ್ನು ಕುರಿತು ತಟಸ್ಥರಾದ ನಿಮ್ಮ ವರ್ತನೆಗೆ ಕಾರಣ ಕೊಡಬೇಕು. ಈ ಕೌನ್ಸಿಲಿನಲ್ಲಿ ಅಧಿಕಾರವಿಲ್ಲ, ಅಲ್ಲಿಗೆ ಯಾರೂ ಒಂದರೂ ಏನೂ ಮಾಡಲಾಗುವದಿಲ್ಲವೆಂದು ನೀವು ಹೇಳುವದಾದರೆ ಅದನ್ನು ಮೊದಲೇ ನಮಗೆ ಮನದಟ್ಟು ಮಾಡಿಕೊಟ್ಟು ಈ ಕೌನ್ಸಿಲ್‌ಸಭೆಯನ್ನು ನಿಷೇಧಿಸಿ ನೀವು ರಾಜಿನಾಮೆ ಕೊಡಬೇಕಿತ್ತು. ಆದರೆ ಶಾಲಾ ಮಕ್ಕಳ ಚರ್ಚಾಕೂಟದಂತೆ ನೀವು ವರ್ಷ ವರ್ಷ ಠರಾವು ಮಾಡಿದಿರಿ. ಬಡ ರೈತನ ಹಣವು ಸೋರಿಹೋಗುವಂತೆ ಖರ್ಚಿಸಿದಿರಿ. ಈ ಏಳು ವರ್ಷಗಳಲ್ಲಿ ಕೌನ್ಸಿಲಿನಲ್ಲಿ ನಿಮ್ಮ ರಾಜಕೀಯ ವಿಷ ಬೀಜದ ಪ್ರದರ್ಶನವಾಗಿದೆಯೇ ವಿನಾ ದೇಶ ಹಿತ ಸಾಧನೆಯ ಕೆಲಸವಾಗಿಲ್ಲ. ಕೌನ್ಸಿಲ್ ನಿಮ್ಮ ಪಕ್ಷಪಾತದ ರಣಾಂಕಣವಾಗಿ ಪರಿಣಮಿಸಿತು. ಮತದಾರರಾದ ನಮಗೆ ನಿಮ್ಮ ವರ್ತನೆಯಿಂದ ಜಿಗುಪ್ಸೆ ಹಿಡಿದಿದೆ. ನಿಮ್ಮ ರಾಜಕೀಯ ಅನಾಚಾರದಿಂದ ಅನ್ಯಾಯವಾಗಿದೆ. ನೀವು ಕೌನ್ಸಿಲ್ ಮೆಂಬರರೆಂದು ಸರಕಾರದಿಂದ ಮಾಸಾಶನ ಪಡೆದಿರೇ ವಿನಹ ಜನತೆಯ ದೃಷ್ಟಿಯಲ್ಲಿ ಕೆಳಗಿಳಿದಿರುವಿರಿ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ನಿಮ್ಮ ವ್ಯಾಖ್ಯಾನಗಳಿಗೂ, ಹಿತೋಪದೇಶಗಳಿಗೂ ನಾವು ಮರುಳಾಗೆವು. ನಿಜವಾಗಿಯೂ ನೀವೇನಾದರೂ ಮಾಡಿದ್ದರೆ ನಿಮ್ಮ ನಿಮ್ಮ ರಾಜಕೀಯ ಪುಸ್ತಕಗಳನ್ನು ತೆರೆದು ಜನತೆಯ ಮುಂದಿಡಿರಿ. ನಿಮ್ಮ ಯೋಗ್ಯತೆಯನ್ನು ಅಳೆದು ನಾವು ವರ್ತಿಸುವೆವು.

'ನಾಡಿನವ'

---

## ಓದುಗರ ಓಲೆ ಪುಟದ ಲೇಖಕರ ಸಮಿತಿ

ಈ ಪುಟದ ಲೇಖಕರ ಸಮಿತಿಯೊಂದನ್ನು ಏರ್ಪಡಿಸಬೇಕೆಂಬ ಬಗ್ಗೆ ಶ್ರೀ. ವಿ. ರಾಜರು ತಮ್ಮ ೧೫-೧೨-೫೪ರ ಲೇಖನದಲ್ಲಿ ಹೇಳಿದ್ದರು. 'ಕೊಡಗು' ಪತ್ರಿಕೆಯ ಸಂಪಾದಕರೂ ಅದಕ್ಕೆ ಹೃತ್ಪೂರ್ವಕವಾಗಿ ಉತ್ತೇಜನವಿತ್ತರು. ಆದರೂ ಸಮಿತಿ ಇದುವರೆಗೆ ಏರ್ಪಡಲಿಲ್ಲ.

ಕೂರ್ಗಗಳ ದುರಸ್ತಿ, ಮನೆ ಬಾಡಿಗೆ ನಿಯಂತ್ರಣ, ಮರ ವ್ಯಾಪಾರ ಮುಂತಾದುವುಗಳ ಕುರಿತಾಗಿ ಸಾಕಷ್ಟು ಲೇಖನಗಳು ಬಂದರೂ ನಮ್ಮ ಸರಕಾರ ಕಣ್ಣು ಬಿಟ್ಟು ಕುಳಿತಿದೆ. ಅಂಥ ಸರಕಾರವನ್ನು ಎಚ್ಚರಿಸಿ ನಮ್ಮ ನಾಡಿನ ಜನತೆಯ ಕಲ್ಯಾಣದತ್ತ ದೃಷ್ಟಿ ಹಾಯಿಸುವಂತೆ ಮಾಡಬೇಕಾದರೆ ಈ ಸಮಿತಿಯು ಮುಖ್ಯೋದ್ದೇಶವಾಗಿದೆ.

ಸಮಿತಿಯು ಸದಸ್ಯರ ಗುಪ್ತನಾಮವನ್ನಿಟ್ಟುಕೊಂಡರೂ ಚಿಂತೆ ಇಲ್ಲ, ದೇಶ ಸೇವೆಗೈಯಬೇಕು. ಒಮ್ಮೊಮ್ಮೆ ನಮ್ಮ ಅಂಕಿತದಲ್ಲಿರುವ ಪ್ರದೇಶದ ಕುಂದು ಕೊರತೆಗಳೂ, ಲೋಪದೋಷಗಳೂ ಸರಕಾರದ ಕಣ್ಣಿಗೆ ಬೀಳದೇ ಹೋಗುವದಿದೆ. ಏಕೆಂದರೆ ಸರಕಾರಿ ನೌಕರ ವರ್ಗವೆಲ್ಲವೂ ಮಹಮ್ಮಾರೀ ಆಗಿರುವುದರಿಂದ ಅಂಥದುದನ್ನು ಸರಕಾರದೆದುರಿಡುವುದರಲ್ಲಿ ಒಂದಿಷ್ಟು ತಪ್ಪಿಲ್ಲ, ನಮ್ಮದು ಜನತೆಯ ಸರಕಾರ.

ಓದುಗರ ಓಲೆ ವಿಭಾಗ ಒಂದು ಕ್ರಾಂತಿಕಾರಕ-ಸತ್ಯಾನ್ವೇಷಣೆಗೆ ಹೊರಟ-ಪಂಗಡವಾಗಲಿ. ಈ ಭಾಗದ ಒಂದು ಸಂಘಟಿತ ಸಮಿತಿಯನ್ನು ಸ್ಥಾಪಿಸಬೇಕೆಂದು ಸೂಚಿಸಿದ ವಿರಾಜರು, ಮುಂದುವರಿದು ಬಂದು 'ಕೊಡಗು' ಪತ್ರಿಕೆಯ ಸಂಪಾದಕರೊಡನೆ ಸಮಾಲೋಚನೆ ನಡೆಸಿ, ಅಂಥಾದೊಂದು ಸಮಿತಿಯನ್ನು ಶೀಘ್ರವಾಗಿ ಏರ್ಪಡಿಸಬೇಕೆಂದು ನಾನವರೊಡನೆ ಕೇಳಿಕೊಳ್ಳುತ್ತೇನೆ. ಅದಕ್ಕೆ 'ಕೊಡಗಿ'ನ ಸಂಪಾದಕರ ಬೆಂಬಲವನ್ನೂ ನಾನು ಅತಿ ವಿನಯದಿಂದ ಕೋರುತ್ತೇನೆ.

ಯಂ. ಯ ಲ್. ಯಸ್.

---

## ನ್ಯಾಯ ಬೇಡವೇ?

ನವೀನ ಕಾಲದ ಜನರ ಬಯಕೆಯಂತೆ ನನಗೂ ಉದ್ಯೋಗ ಮಾಡಬೇಕೆಂದು ಆ ಉದ್ಯೋಗಗಳಲ್ಲಿ ಅಧ್ಯಾಪಕವೃತ್ತಿಯೇ ನನಗೆ ಹಿಡಿಸಿದುದೆಂದು ಅದನ್ನು ಸ್ವೀಕರಿಸಿದೆ. ಆದರೆ ಈ ಇಲಾಖೆಯಲ್ಲೂ ನ್ಯಾಯವಿರುವಂತೆ ತೋರುವದಿಲ್ಲ. ಕೆಲವೆಡೆ ಹೈಯರ್ ಎಲಿಮೆಂಟರಿ ಗ್ರೇಡಿನವರನ್ನು ಅಧ್ಯಾಪಕರಾಗಿ ನೇಮಿಸಿದ್ದಾರೆ. ಕೆಲವೆಡೆ ಸೆಕೆಂಡರಿ ಗ್ರೇಡಿನವರನ್ನು ತಿರಸ್ಕರಿಸಿದ್ದಾರೆ. ತರಬೇತಿಗೆ ಆರಿಸುವಲ್ಲೂ ವರ್ಷಗಟ್ಟಲೆ ಸರ್ವಿಸು ಮಾಡಿದವರು ಹಾಗೆಯೇ ಇದ್ದಾರೆ. ಮೊನ್ನೆಯಾಗಿ ಸೇರಿದವರು ಆರಿಸಲ್ಪಟ್ಟಿದ್ದಾರೆ. ನಾಲ್ಕೈದು ವರ್ಷ ಸರ್ವಿಸು ಮಾಡಿದವರನ್ನು 'ರಿಟ್ರೆಂಚ್‌ಮೆಂಟ್' ಎಂದು ಮನೆಗೆ ಕಳುಹಿಸಿದ್ದಾರೆ. ಆದರೆ ಹೊಸಬರನ್ನು ಪುನಃ ನೇಮಿಸುತ್ತಿದ್ದಾರೆ. ಈ ರೀತಿ ಈ ಇಲಾಖೆಯ ಮೇಲೆ ದೂರು ಇದೆ. ಇದು ನಿಜವಾದರೆ ಇಲಾಖೆಯ ವರ್ತನೆ ನ್ಯಾಯಸಮ್ಮತವಾಗಿಲ್ಲವೆನ್ನಬಹುದು. ಸಂಬಂಧಿಸಿದ ಅಧಿಕಾರಿಗಳು ಇದರ ಸತ್ಯಾಂಶವನ್ನು ಪರಿಶೀಲಿಸುವರೇ?

ಮಿಸ್ ಸುಮ

---

## ಅನ್ಯಾಯ

ದಿನ ಕಳೆದಂತೆ ಕೊಡಗಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಸರಕಾರಿ ತರಬೇತಾದರೆ ಉದ್ಯೋಗ ದೊರೆಯುವದೆಂಬ ಹಲಜನರ ಬೋಧನೆ ಮೇರೆ ನಾನೂ ಸರಕಾರಿ ತರಬೇತನ್ನು ಹೊಂದಿ ಪರೀಕ್ಷೆಯಲ್ಲಿ ಪಾಸಾಗಿ ಒಂದು ವರ್ಷದ ಬಳಿಕವೂ ಕೆಲಸ ದೊರೆತಿಲ್ಲ. ಪರೀಕ್ಷೆಯಲ್ಲಿ ಪಾಸಾದವರ ಪಟ್ಟಿ ಇಟ್ಟುಕೊಂಡು ಅವರ ಯೋಗ್ಯತೆ ಪ್ರಕಾರ ಖಾಲಿ ಬಿದ್ದಾಗ ಕೆಲಸ ಕೊಟ್ಟರೆ ಯಾರೂ ದೂರು ಹೇಳುತ್ತಿಲ್ಲ. ಆದರೆ ಹಾಗೆ ಆಗುತ್ತಿಲ್ಲ. ಈ ತರಬೇತಿಗೆ ಬಂದವರಿಗೆಲ್ಲ ಹೇಗಾದರೂ ಸಹಕಾರಿ ಇಲಾಖೆಯಲ್ಲಿ ಕೆಲಸ ಒದಗಿಸಿಕೊಡುವದಾಗಿಯೂ ಅಧಿಕಾರಿಗಳ ಭರವಸೆ ಕೊಟ್ಟಿದ್ದರು. ನಾನು ಬಡವನು. ಈ ಭರವಸೆಗಳನ್ನು ನಂಬಿ ತಂದೆ ತಾಯಿಗಳನ್ನು ಪೀಡಿಸಿ ಅವರಿಂದ ಹಣ ಪಡೆದು ತರಬೇತು ಮುಗಿಸಿದೆ. ಆದರೆ ಈಗ ಉದ್ಯೋಗವೂ ಇಲ್ಲ. ಮನೆಯ ಸ್ಥಿತಿಯೂ ಚೆನ್ನಾಗಿಲ್ಲ ಎನ್ನುವಂತಾಗಿದೆ. ಆದ್ದರಿಂದ ನನ್ನಂಥಾ ಯುವಕರು ಇನ್ನಾದರೂ ಮೋಸಹೋಗಬಾರದು. ಮನೆಯನ್ನು ಕಡೆಗಣಿಸಬಾರದು. ಮನೆಯಲ್ಲಿ ನಾವು ಚೆನ್ನಾಗಿದ್ದರೆ ಮಾತ್ರ ನಮಗೆ ಬೇರೆಡೆ ಪುರಸ್ಕಾರ ವಿನಾ ಬಡವರಿಗೆ ಎಲ್ಲಿಯೂ ಗತಿ ಇರಲಾರದು.

ನಾಣಯ್ಯ

---

## ವಯಸ್ಕರ ಶಿಕ್ಷಣ

ದೇಶದ ಇಂದಿನ ಸ್ಥಿತಿಯಲ್ಲಿ ಅತಿ ಪ್ರಾಮುಖ್ಯವಾದ ವಯಸ್ಕರ ಶಿಕ್ಷಣದ ಯೋಜನೆಯೊಂದನ್ನು ಮಾಡಿ ಕೇಂದ್ರ ಸರಕಾರಕ್ಕೆ ಸ್ಥಳೀಯ ಸರಕಾರವು ಕಳುಹಿಸಿರುವದೆಂದು ತಿಳಿಯಬಂತು. ಇದನ್ನು ಕಳುಹಿಸಿ ತಿಂಗಳುಗಳು ಹಲವಾದರೂ ಈ ಬಗ್ಗೆ ಏನೂ ಕಾಣುವದಿಲ್ಲ. ಈ ವಿಚಾರದಲ್ಲಿ ತರಬೇತಿಗೆ ಮೈಸೂರಿಗೆ ಇಬ್ಬರು ಅಧ್ಯಾಪಕರನ್ನು ಕಳುಹಿಸಿದ್ದು ಅವರು ತರಬೇತಾಗಿ ಬಂದು ಹಿಂದಿನ ಅಧ್ಯಾಪಕ ವೃತ್ತಿಯನ್ನೇ ಮಾಡುತ್ತಿರುವರಂತೆ! ಇದು ನಿಜವಾದರೆ ಈ ರೀತಿಯ ಏರ್ಪಾಡಿಗೆ ಕಾರಣವೇನು? ದೇಶದ ಅತೀ ಪ್ರಾಮುಖ್ಯವಾದ ಸ್ಥಗಳಲ್ಲಿ ಒಂದಾದ ಇದರ ಬಗ್ಗೆ ಸರಕಾರವು ಇನ್ನಾದರೂ ಸ್ವಲ್ಪ ಚುರುಕಿನಿಂದ ವರ್ತಿಸಬೇಡವೇ?

ವಿದ್ಯಾಭಿಮಾನಿ

---

## ಸಾರಾಯಿ ರೇಷನ್

ಸಾರಾಯಿಗೆ ಕೂಪನ್ ಆದನಂತರ ಬಡಬಗ್ಗರ ಸುಳಿವು ಸಾರಾಯಿ ಡಿಪೋದಲ್ಲಿ ಕಾಣಲಾರೆವು. ಆದರೆ ಮಧ್ಯಮ ವರ್ಗದವರು ಮೊದಲಿಗಿಂತಲೂ ಈಗ ಕುಡಿತವನ್ನು ಜಾಸ್ತಿ ಮಾಡಿಕೊಂಡಿದ್ದಾರೆ.

ಸಾರಾಯಿಗೆ ಕೂಪನ್ ಆದ ಮೇಲೆ ಇದರ ಗೌರವ ಸಮಾಜದಲ್ಲಿ ಬಹು ಹೆಚ್ಚಿದೆ. ನೆಂಟರು ಯಾ ಸ್ನೇಹಿತರುಗಳ ಮನೆಗೆ ಬಂದಾಗ ಮೊದಲು ಮೂರು ಬೆರಳು ಸಾರಾಯಿಯ ಸ್ವಾಗತಿಸ ಪಡೆ. ಇಂಥಾ ಮನೆಗೆ ಇಂದು ಸಮಾಜದಲ್ಲಿ ಗೌರವ ಸಲ್ಲುವದು! ಈ ವರ್ಷ ಸಾರಾಯಿಯ ಹಾವಳಿಯು ಮದುವೆಗಳಲ್ಲಿ ಹದ್ದು ಮೀರಿ ನಡೆದಿದೆ. ಸಾರಾಯಿ ಇಲ್ಲದ ಮದುವೆ ಮನೆಗೆ ಗೌರವವೇ ಇಲ್ಲ ಎಂಬಂತಾಗಿದೆ. ಮದುವೆಗಳಲ್ಲಿ ಎಲ್ಲರಿಗೂ ಸಾರಾಯಿ ಕೊಡಲು ಅಷ್ಟು ಸಾರಾಯಿಯನ್ನು ಶೇಖರಿಸಲು ಸಾಧ್ಯವಿಲ್ಲ. ಆದ್ದರಿಂದ ಹತ್ತು ಹನ್ನೆರಡು ಕುಪ್ಪಿಗಳನ್ನು ಶೇಖರಿಸಿ ದೊಡ್ಡ ದೊಡ್ಡವರಿಗೆ ನಕ್ಷತ್ರ ಸುರಾದೇವಿಯು ನೈಕ ಲಂಚವಳು. ಒಬ್ಬ ಮನುಷ್ಯನ ಯೋಗ್ಯತೆಯನ್ನು ಅಳೆಯಲು ಇಂದು ಮೂರು ಬೆರಳ ಸಾರಾಯಿಯು ಅಳತೆ ಕೋಲಾಗಿದೆ. ಇದರಿಂದ ಸಮಾಜದಲ್ಲಿ ಬಡವ ಬಲ್ಲಿದನೆಂಬ ವಿಷ ಬೀಜವು ಬೆಳೆಯಲು ಅನುವಾಗಿದಂತಾಗಿದೆ]

ಸಾರಾಯಿಯನ್ನು ಕುಡಿಯುವವರ ಹೆಸರಿನಲ್ಲಿ ಮತ್ತು ಕೂಪನಿಗೆ ಅರ್ಜಿಯನ್ನು ಬರೆಯುವವರ ಹೆಸರಿನಲ್ಲಿ ಅರ್ಜಿ ಬರೆದು ಕಳ್ಳ ದಸ್ಕತ್ ಹಾಕಿ ಬಹುಜನರು ಕಳ್ಳರೀತಿಯಲ್ಲಿ ಕೂಪನ್‌ಗಳನ್ನು ಹೊಂದಿಕೊಂಡಿದ್ದಾರೆ. ಇನ್ನು ಕೆಲವರು ತಮ್ಮ ಆಳುಗಳ ಹೆಸರಿನಲ್ಲೂ ಮತ್ತು ಹೆಸರಿನಲ್ಲೂ ಕೂಪನ್ ಹೊಂದಿಕೊಂಡಿದ್ದಾರೆ. ಕೂಪನ್‌ಗಳ ಬಹು ಜನರ ಹೆಸರಿನಲ್ಲಿದ್ದರೂ ಒಬ್ಬನಲ್ಲಿಗೆ ಹೆಚ್ಚಿನ ಕುಪ್ಪಿಗಳು ಸೇರುತ್ತಿವೆ. ಕೂಪನ್‌ನಲ್ಲಿರುವ ಹೆಸರೇ ಬೇರೆ, ಕೂಪನನ್ನು ಸಾರಾಯಿಗಾಗಿ ತೋರಿಸುವವನೇ ಬೇರೆ. ಒಂದು ವೇಳೆ ಡಿಪೋ ಕೀಪರ್ ಹೆಸರು ಕೇಳಿದರೆ ಕೂಪನ್‌ನಲ್ಲಿ ಯಾವ ಹೆಸರಿದೆಯೋ ಅದೇ ಹೆಸರನ್ನು ಉತ್ತರಿಸುತ್ತಾನೆ. ಒಬ್ಬನು ಒಂದು ಕುಪ್ಪಿಗಿಂತ ಹೆಚ್ಚು ಕುಪ್ಪಿಗಳನ್ನು ಹೊಂದಿದರೆ ಅಂಥವರನ್ನು ಪತ್ತೆ ಹಚ್ಚಿ ಶಿಕ್ಷೆ ಮಾಡಬೇಕು. ಮತ್ತು ಯಾರು ಬೇರೆಯವರ ಹೆಸರಿನಲ್ಲಿರುವ ಕೂಪನ್ ತೋರಿಸಿ ಸಾರಾಯಿ ಹೊಂದಿಕೊಳ್ಳುತ್ತಾರೋ ಅಂಥವರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಮಾಡಬೇಕು. ಸರಕಾರವು ಮಾಡಿದ ಕಾನೂನು ಜಾರಿಗೆ ಬರುವಂತೆ ಮಾಡಬೇಕು. ಬದಲು ಕಾನೂನು ಬರೇ ಕಾಗದದ ಮೇಲೆ ಉಳಿದರೆ ಪ್ರಜೆಗಳಿಗೆ ಹಿತವಾಗದು.

H M Chengappa

---

## ಕೊಲ್ಲಿತೋಡು ರಿಪೇರಿ

ಸರಕಾರದವರು ಕೆರೆ ಕಟ್ಟೆಗಳನ್ನು ರಿಪೇರಿ ಮಾಡಲಿಕ್ಕಾಗಿಯೂ, ಕೊಲ್ಲಿತೋಡು ರಿಪೇರಿಗಾಗಿಯೂ ಒಡನೆ ಎಂದರೆ ಈ ವರ್ಷವೇ ಖರ್ಚು ಮಾಡಲಿಕ್ಕಾಗಿ ಎರಡುವರೆ ಲಕ್ಷ ರುಪಾಯಿ ಮಂಜೂರು ಮಾಡಿದ್ದಾರೆಂದೂ ಅದರ ಕೆಲಸ ಭರದಲ್ಲಿ ನಡೆಯುತ್ತಿದೆಂದೂ ತಿಳಿಯುತ್ತದೆ.

ಇವರ ಪೈಕಿ ನಾನು ನೋಡಿದ್ದ ಕೊಲ್ಲಿತೋಡು ರಿಪೇರಿ ಕೆಲಸ ಇದಕ್ಕೆ ೭೦೦೦/- ಏಳುಸಾವಿರ ರುಪಾಯಿಯಂತೆ. ಮೇಸ್ತ್ರಿ ಕಮಿಷನ್ ಒಂದುಸಾವಿರ ಕಳೆದರೂ ಆರುಸಾವಿರ ರೂಪಾಯಿಯ ಕೆಲಸ ಆಗಿದೆಯೋ ಎಂದು ನೋಡಬೇಕು. ಅಂದಾಜು ಒಬ್ಬ ಕೆಲಸದವನಿಗೆ ೨-೦-೦ ರೂ ದಿನ ಕೂಲಿ ಇಟ್ಟರೂ, ಸುಮಾರು ಗುದ್ದಲಿ ವಗೈರೆ ಖರ್ಚು ಕಳೆದು ೩೫೦ ಜನರ ಕೆಲಸವಾದರೂ ಆಗಬೇಡವೇ? ಆದರೆ ಕೆಲಸವ ನೋಡಿದವರ ಅಂದಾಜಿನಲ್ಲಿ ಸುಮಾರು ೨೦೦೦ ರೂಪಾಯಿ ಖರ್ಚಾಗಿರಬಹುದು. ಆದುದರಿಂದ ಸರಕಾರದವರು ಮಳೆ ಬಿದ್ದು ತೋಡು ಮುಚ್ಚಿಹೋಗುವದಕ್ಕೆ ಮೊದಲೇ ಪರೀಕ್ಷೆ ಮಾಡಬೇಕು. ಆ ಇಲಾಖೆಯವರನ್ನು ಕೇಳಿದರೆ ಅವರು ಕೆಲಸ ಮಾಡಿಸಿದ್ದ ಮೇಸ್ತ್ರಿಗೆ ನಷ್ಟವಾಗಿದೆ ಎಂದು ಹೇಳುತ್ತಾರೆ. ಅದಕ್ಕೆ ಸಂಬಂಧಪಟ್ಟ ಪಾರುಪತ್ಯಗಾರರ ಮದಿಯ ಜತೆಯಲ್ಲಿ ಇದನ್ನು ಅಜಮಾಯಿಸಲಿ.

"ನಾಡಿನವ"

---

# ನಮ್ಮ ಕಾಲೇಜು—ಒಂದು ಪ್ರಶಂಸೆ.

## ಪ್ರಿನ್ಸಿಪಾಲರೇ ಮತ್ತು ಇತರ ಅಧ್ಯಾಪಕ ವರ್ಗದವರೇ,

ನೀವು ಕೊಡಗಿನ ಕಾಲೇಜಿಗೆ ಪ್ರಶಂಸಾರ್ಹವಾದ ಸೇವೆ ಸಲ್ಲಿಸಿದ್ದೀರಿ. ನಾನು ಆದಿಯಿಂದಲೂ ಕಾಲೇಜಿನ ಕಾರ್ಯಕಲಾಪಗಳನ್ನು ಪರಿಶೀಲಿಸಿರುವ ಮಟ್ಟಿಗೆ ಕಾಲೇಜಿನ ಶಿಸ್ತನ್ನು ಉತ್ತಮ ರೀತಿಯಲ್ಲಿ ನೀವು ಕಾಪಾಡಿರುವಿರಿ. ಪಾಠ ಪ್ರವಚನಗಳನ್ನು ದಕ್ಷತೆಯಿಂದ ನಡೆಸಿರುವಿರಿ. ಕಾಲೇಜನ್ನು ಸುಗಮ ಪಥದಲ್ಲಿ ಮುನ್ನಡೆಸುತ್ತಿರುವಿರಿ. ಈ ನಿಮ್ಮ ಆದರ್ಶ ಸೇವೆಯು ಕಾರಣವಾಗಿ ಆದರ್ಶನೀಯವಾದ ಫಲಿತಾಂಶ ದೊರಕಿದೆ. ಇದರಿಂದ ನಿಮಗೆಷ್ಟು ಹೆಮ್ಮೆಯಾಗಿದೆಯೋ ಅಷ್ಟೇ ಹೆಮ್ಮೆ ನನಗೂ ಅಲ್ಲ, ಕೊಡಗಿನವರೆಲ್ಲರಿಗೂ ಆಗಿದೆ. ಈ ಆದರ್ಶ ಫಲಿತಾಂಶದ ಪತಾಕೆ ಕೆಳಗಿಳಿಯದಿರಲಿ, ಅದು ಇನ್ನೂ ಮೇಲೇರಿ ದಿಗಂತದ ವರೆಗೆ ಹಾರಲಿ.

### ವಿದ್ಯಾರ್ಥಿಗಳೇ,

ಸರಕಾರಿ ಕಾಲೇಜಿನಿಂದ ಪ್ರಥಮ ಪರೀಕ್ಷೆಗೆ ಕೂತ ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಇತ್ತು. ಆ ಜವಾಬ್ದಾರಿಯನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿ ಮುಂಬರುವ ಪೀಳಿಗೆಗೆ ನೀವು ಆದರ್ಶರಾದಿರಿ. ಕೊಡಗಿನ ವಿದ್ಯಾರ್ಥಿಗಳ ವಿದ್ಯಾಮಟ್ಟ ತೀರಾ ಕೆಳಗಿನದು ಎಂದು ಘೋಷಿಸುತ್ತಿದ್ದವರ ಬಾಯಿ ಮುಚ್ಚಿಸಿದಿರಿ. ಹಾಗೆ ಪಂದ್ಯಾಟದಲ್ಲಿ ಮದ್ರಾಸು ವಿಶ್ವವಿದ್ಯಾಲಯದ ಬಹುತೇಕ ಟೀಮುಗಳನ್ನೆಲ್ಲಾ ಸೋಲಿಸಿ ಕಪ್ ಪಡೆದ ನೀವು ಕೇವಲ ಆಟೋಟಗಳಲ್ಲಿ ಮಾತ್ರವಲ್ಲ, ಪಾಠ ಪ್ರವಚನದಲ್ಲೂ ಮುಂದಿರುವುದನ್ನು ವ್ಯಕ್ತಪಡಿಸಿದಿರಿ. ನೀವು ಸ್ಥಾಪಿಸಿದ ಈ ಉತ್ತಮ ದಾಖಲೆಯು ಇನ್ನೂ ಚಿಗುರಿ ಬೆಳೆಯಲಿ.

### ಚರಿತ್ರೆಯ ಗುಂಪು.

ಚರಿತ್ರೆಯ ಶಾಖೆಯಲ್ಲಿದ್ದ ಹನ್ನೆರಡು ವಿದ್ಯಾರ್ಥಿಗಳಲ್ಲಿ ಎಂಟು ಜನರು ತೇರ್ಗಡೆಯಾದುದು ಈ ಶಾಖೆಯ ಅಧ್ಯಾಪಕರಿಗೆ ಹೆಚ್ಚಿನ ಕಳೆಯನ್ನು ಕೊಟ್ಟಿದೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದುದರಿಂದ ಹೇಳುವದು ಪರಿಣಾಮಕಾರಕವಾಗಿರಬಹುದಾದರೂ ಈ ಗ್ರೂಪಿನವರು ಸೋಲುವದು ಹೆಚ್ಚು. ಆದರಲ್ಲಿ ಪ್ರಥಮ ತರಗತಿಯಲ್ಲಿ ಪಾಸಾಗುವವರು ಅಪರೂಪ. ಇದೆಲ್ಲವನ್ನೂ ಸಾಧಿಸಿ ನೀವು ನಿಂದನಾರ್ಹರಾಗಿರುವಿರಿ.

### ಪ್ರಕೃತಿಶಾಸ್ತ್ರ ಗುಂಪು.

ನೀವೂ ಕೂಡ ಹಿರಿಯ ಗರಿಯನ್ನು ತೇರ್ಗಡೆಯಾಗಿರುವಿರಿ. ಪ್ರಕೃತಿ ವೈಭವದ ಕೊಡಗಿನಲ್ಲಿ ಪ್ರಕೃತಿಯ ವಿಶೇಷ ವೈಚಿತ್ರ್ಯಗಳನ್ನು ಅಭ್ಯಸಿಸಿ ಐದು ಪ್ರಥಮ ಶ್ರೇಣಿಗಳನ್ನು ಪಡೆದಿರಿ. ಕಾಲೇಜಿನಲ್ಲಿ ನಿಮಗೆ ಯೋಗ್ಯವಾದ ಸವಲತ್ತುಗಳು ಇಲ್ಲದಿದ್ದರೂ ನೀವು ದಕ್ಷತೆಯಿಂದ ದುಡಿದು ಕೃತಕೃತ್ಯರಾದಿರಿ. ನಿಮ್ಮ ಈ ಗುಂಪು ಮುಂದೆಯೂ ಮುನ್ನಡೆದು ಅಪೂರ್ವ ದಾಖಲೆಯನ್ನು ಈ ಕಾಲೇಜಿನಲ್ಲಿ ಸ್ಥಾಪಿಸಲಿ.

### ಲೆಕ್ಕ ಗುಂಪು

ನೀವೇನೂ ಕಡಿಮೆಯಲ್ಲ. ಸಿಟಿಯಲ್ಲಿ ೧೭ ತೇರ್ಗಡೆಯಾಗಿರುವಿರಿ. ಬಹುಶಃ ನಿಮ್ಮ ಗ್ರೂಪಿನವರೇ ಕಾಲೇಜಿನ ತೇರ್ಗಡೆಯಾದ ವಿದ್ಯಾರ್ಥಿಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನವನ್ನು ಪಡೆಯಬಹುದು! ನಿಮ್ಮ ಗ್ರೂಪಿನಲ್ಲಿ ಅಪೂರ್ವ ದಾಖಲೆ ಸ್ಥಾಪನೆ ಮಾಡುವ ಸಾಧ್ಯತೆ ಇದೆ. ಲೆಕ್ಕದಲ್ಲಿ ನೂರಕ್ಕೆ ನೂರರಷ್ಟು ಗುಣಗಳನ್ನು ಪಡೆಯಬಹುದು. ಬಹುಶಃ ನಿಮ್ಮ ಗ್ರೂಪಿನಲ್ಲಿ ಒಂದೆರಡು ಜನ ಹಾಗೆ ಪಡೆದಿರಲೂಬಹುದು. ಈ ನಿಮ್ಮ ಸಂತೋಷದ ಸುಗ್ಗಿಯ ಕಾಲದಲ್ಲಿ ನಿಮ್ಮ ಅಧ್ಯಾಪಕರು ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟುದು ನಿಮಗೆ ಸ್ವಲ್ಪ ಚಿಂತೆಗೆ ಕಾರಣವಾಗಿರಬಹುದು. ಆದರೂ ನಿಮ್ಮ ಈ ಉತ್ತಮ ಕೃತಿಗಾಗಿ ನಿಮ್ಮ ಬೆನ್ನು ತಟ್ಟದಿರಲಾಗುವದಿಲ್ಲ.

### ಸೋದರಿಯರಿಗೆ.

ವಿದ್ಯಾರ್ಥಿಗಳೆಂದಾಗ ನೀವೂ ಅದರೊಳಗೆ ಸೇರುವಿರಾದರೂ ನಿಮ್ಮ ಬಗ್ಗೆ ಪ್ರತ್ಯೇಕ ಒಂದೆರಡು ಮಾತು ಹೇಳದಿರಲಾಗುವದಿಲ್ಲ. ಪರೀಕ್ಷೆಗೆ ಕೂತ ೧೦ ಜನರಲ್ಲಿ ೯ ಜನರು ತೇರ್ಗಡೆಯಾಗಿ, ಅದರಲ್ಲೂ ೩ ಜನರು ಪ್ರಥಮ ಶ್ರೇಣಿಯನ್ನು ಪಡೆದು ಕಾಲೇಜಿಗೂ, ನಿಮ್ಮ ಅಧ್ಯಾಪಕರಿಗೂ, ಮಹಿಳಾ ವೃಂದಕ್ಕೂ ಕೀರ್ತಿ ತಂದಿರುವಿರಿ. ಯಾರು ಏನೇ ಹೇಳಿಕೊಂಡರೂ ಪಾಠ ಪ್ರವಚನಗಳಲ್ಲಿ ಹುಡುಗರಿಗಿಂಥಾ ಹುಡುಗಿಯರು ಮೇಲೆಂಬ ಮಾತನ್ನು ನಿಜವೆನ್ನಿಸಿದಿರಿ. ನಿಮ್ಮ ನಂತರ ಬರುವ ಸೋದರಿಯರಿಗೆ ಅತ್ಯುತ್ತಮ ಆದರ್ಶವನ್ನು ಹಾಕಿ ಕೊಟ್ಟಿರುವಿರಿ.

### ಇನ್ನೂ ಬೆಳಗಲಿ.

ಒಟ್ಟಾರೆ ನೀವೆಲ್ಲರೂ ನಿಮ್ಮ ನಿಮ್ಮ ಕರ್ತವ್ಯವನ್ನು ಯೋಗ್ಯರೀತಿಯಾಗಿ ಮಾಡಿ ಕಾಲೇಜಿಗೆ ಕೀರ್ತಿ ತಂದಿರಿ. ಆರಂಭದ ಅಂಧಕಾರದಲ್ಲಿ ಬೆಳಕು ಚೆಲ್ಲಿದಿರಿ ಮಡಿಕೇರಿಯಲ್ಲಿ ಬೆಳಗಿದ ಈ ಬೆಳಕಿನ ಕಿರಣ ಕೊಡಗಿನ ನಾಲ್ಕೆಡೆಗಳನ್ನು ಮುಟ್ಟಿದರೆ ಸಾಲದು. ಮದ್ರಾಸು ವಿಶ್ವವಿದ್ಯಾಲಯದ ವ್ಯವಹಾರಕ್ಷೇತ್ರವನ್ನೆಲ್ಲಾ ಮುಟ್ಟಬೇಕು. ಹಾಗೆ ಮುಟ್ಟಬೇಕಾದರೆ ಇಂದು ಈ ಜಯದಿಂದ ನೀವು ಹಚ್ಚಿದ ಬೆಳಕು ಇನ್ನೂ ತೇಜಸ್ಸಿನಿಂದ ಬೆಳಗುವಂತಾಗಬೇಕು. ಅದಕ್ಕಾಗಿ ಇನ್ನೂ ಹೆಚ್ಚಿನ ಶ್ರದ್ಧೆಯಿಂದ ಅಧ್ಯಾಪಕರೂ ಹೆಚ್ಚಿನ ಆಸ್ಥೆಯಿಂದ ಮುಂಬರುವ ವಿದ್ಯಾರ್ಥಿಗಳೂ ದುಡಿಯಬೇಕು. ಇಂದು ಹಾರಿಸಿದ ವಿಜಯಪತಾಕೆ ಎಂದೂ ಕೆಳಗಿಳಿಯದಿರಲಿ. ಇದೇ ನನ್ನ ಬಯಕೆ. ಇದೇ ನಾಡಿನವರೆಲ್ಲರ ಬಯಕೆ.

"ನಾಡಿನವರಲ್ಲೊಬ್ಬ"

---

## ಗೌರವ್ಮ ಸ್ಮಾರಕ ಸಮಿತಿ, ಮಡಿಕೇರಿ.

### ಕಥಾ ಸ್ಪರ್ಧೆಯ ಫಲಿತಾಂಶ.

ಮೇಲಿನ ಸಮಿತಿಯವರು ಏರ್ಪಡಿಸಿದ್ದ ಕಥಾ ಸ್ಪರ್ಧೆಗೆ ಒಟ್ಟು ೫೪ ಕಥೆಗಳು ಬಂದಿದ್ದು ಉತ್ತಮ ತರಗತಿಯ ಒಂದು ಕಥೆಯೂ ಬರದಿದ್ದುದು ವಿಷಾದಕರ. ಈ ಕಥೆಗಳಲ್ಲಿ ೧೪ ಉತ್ತರ ಕರ್ನಾಟಕದವುಗಳೂ, ೩೧ ದಕ್ಷಿಣ ಕನ್ನಡ ಜಿಲ್ಲೆಯವುಗಳೂ ೨ ಮೈಸೂರು ಪ್ರಾಂತದವುಗಳೂ ಉಳಿದವು ಕೊಡಗು ಪ್ರಾಂತದವುಗಳೂ ಆಗಿದ್ದುವು. ಶ್ರೀ. ಎಸ್. ಆರ್. ನಾರಾಯಣ ರಾಯರು (ಭಾರತೀಸುತ) ಶ್ರೀ. ಎಂ. ಎಸ್. ಅನಂತ ಪದ್ಮನಾಭರಾಯರು, (ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಸಮಿತಿಯ ಸದಸ್ಯರು) ಮತ್ತು ಶ್ರೀ. ಜಿ. ಟಿ. ನಾರಾಯಣರಾಯರು (ಮಂಗಳೂರು ಸೈಂಟ್ ಎಲೋಶಿಯಸ್ ಕಾಲೇಜಿನ ಲೆಕ್ಚರರ) ಇವರು ನಿರ್ಣಯಕರಾಗಿ ಸಹಾಯ ಮಾಡಿದ್ದಾರೆ. ಕಥೆಗಳ ಮಟ್ಟವನ್ನು ಅಳೆದಿದ್ದಾರೆ. ಇವರೆಲ್ಲರಿಗೂ ನಮ್ಮ ಧನ್ಯವಾದಗಳು.

ಈ ಸ್ಪರ್ಧೆಯಲ್ಲಿ ಕುಮಟಾದ ಕುಮಾರಿ ಚಂದ್ರಕಲಾ ಜನಾರ್ದನ ಕೊಪ್ಪಿಕರ ಇವರು ಬರೆದ 'ನಂದನ ನಂದಾದೀಪ' ಎಂಬ ಕಥೆಗೆ ಮೊದಲನೆಯ ಬಹುಮಾನವೂ, ಮಡಿಕೇರಿಯ ಸೌ ಪಿ ಕಮಲಾಕ್ಷಿ ಇವರು ಬರೆದ 'ವಿಧಿಯ ವೈಚಿತ್ರ್ಯ' ಎಂಬ ಕಥೆಗೆ ಎರಡನೆಯ ಬಹುಮಾನವೂ, ದಕ್ಷಿಣ ಕನ್ನಡ ಜಿಲ್ಲೆಯ ಶಿರೋಮಣಿ ಪಿ. ಕೃಷ್ಣಭಟ್ಟ ಇವರು ಬರೆದ 'ನಂದಾದೀಪ' ಎಂಬ ಕಥೆಗೆ ಮೂರನೆಯ ಬಹುಮಾನವೂ ದೊರಕಿರುವುವು. ಇವರಿಗೆ ನಮ್ಮ ಪ್ರಶಂಸಾಪೂರ್ವಕ ಅಭಿನಂದನೆಗಳು. ಸ್ಪರ್ಧೆಯಲ್ಲಿ ಭಾಗಿಗಳಾದ ಇತರರಿಗೂ ಅಭಿನಂದನೆಗಳು.

ಮುಂದಿನ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಕಥೆಗಾರರು ಈ ಸ್ಪರ್ಧೆಯಲ್ಲಿ ಭಾಗವಹಿಸುವರು ಎಂದು ಹಾರೈಸಲಾಗಿದೆ.

ಸಂಚಾಲಕರು.

---

## ಕೊಡಕೇರಿ ದವಸ ಭಂಡಾರ

ಕುತ್ತುನಾಡಿನ ಕೊಡಕೇರಿ ದವಸ ಭಂಡಾರದ ಹೊಸ ಕಟ್ಟಡ ಪ್ರವೇಶ ಉತ್ಸವವು ಕಳೆದ ತಾ. ೨೯-೫-೫೧ರಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಚೇರಂಡ ಮಂದಣ್ಣನವರ ಪ್ರೋತ್ಸಾಹದಿಂದಲೂ ಈ ಕೇರಿಯ ಜನರ ಒಗ್ಗಟ್ಟಿನಿಂದಲೂ ಸುಮಾರು ೨೦೦೦|— ರೂಪಾಯಿ ಖರ್ಚಿನಿಂದ ಈ ಕಟ್ಟಡವು ಕಟ್ಟಲ್ಪಟ್ಟಿದೆ. ಇದಕ್ಕೆ ಸರಕಾರದವರು ರೂ. ೭೫೦|— ಸಹಾಯ ಕೊಡಲು ಒಪ್ಪಿರುವರು. ಕಟ್ಟಡವನ್ನು ತೆರೆದನಂತರ ಶ್ರೀ. ಪಿ. ಐ. ಬೆಳ್ಯಪ್ಪನವರು ಮತ್ತು ತೀತಿಮಾಡ ಮೇದಪ್ಪನವರು ಊರ ಒಗ್ಗಟ್ಟು ಮತ್ತು ಸಹಕಾರ ತತ್ವವನ್ನು ಕುರಿತು ಮಾತಾಡಿದ ನಂತರ ಅಧ್ಯಕ್ಷರ ಭಾಷಣದಿಂದ ಸಭೆಯು ಮುಕ್ತಾಯಗೊಂಡಿತು.

---

## ಕುತ್ತುನಾಡು ಸಹಕಾರಿ ಪರಿಷತ್ತು.

ಕುತ್ತುನಾಡಿಗೆ ಸಂಬಂಧಿಸಿದ ಸಹಕಾರಿ ಸಂಘಗಳ ಮೆಂಬರುಗಳ ಪರಿಷತ್ತೊಂದು ಅಲ್ಲಿಯ ಭಗವತಿ ದೇವಸ್ಥಾನದಲ್ಲಿ ಕಳೆದ ತಾ. ೨೯ರಲ್ಲಿ ನಡೆಯಿತು. ಶ್ರೀ. ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ದೀರ್ಘಕಾಲಿಕ ಸಾಲದ ವಿಲೇವಾರಿಯನ್ನು ಆಗುವಷ್ಟು ಶೀಘ್ರವಾಗಿ ಮಾಡಬೇಕೆಂದೂ, ರುಪ್ರಿಗುಪ್ತ ಸೇತುವೆಗೆ ಈ ಪ್ರದೇಶದ ಸಂಘಗಳು ಕೊಟ್ಟ ಧನ ಸಹಾಯಕ್ಕೆ ರಿಜಿಸ್ಟ್ರಾರವರು ಮಂಜೂರಾತಿ ಕೊಡಬೇಕೆಂದೂ ಈ ಪ್ರದೇಶಕ್ಕೆ ಒಂದು ವಾರದ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದೂ, ಪ್ರತಿ ಸಂಘಗಳ ವಾಚನಾಲಯಕ್ಕೆ ಸರಕಾರವು ಸ್ವಲ್ಪ ಮಟ್ಟಿಗೆ ಧನ ಸಹಾಯ ಕೊಡಬೇಕೆಂದೂ, ಇಂಡಿಯಾ ಸರಕಾರವು ಇತ್ತೀಚೆಗೆ ಏರಿಸಿದ ಬತ್ತದ ಕ್ರಯ ಗಾಡಿ ಒಂದರ ೬|—ನ್ನು ಇದೇ ವರ್ಷ ಬತ್ತ ಮಾರಿದವರಿಗೆ ಕೊಡಬೇಕೆಂದೂ ಠರಾವುಗಳು ಮಂಜೂರಾದವು. ಸಹಕಾರಿ ತತ್ವಗಳ ಪರಿಪಾಲನೆಯ ವಿಚಾರವಾಗಿ ರಿಜಿಸ್ಟ್ರಾರವರ ಭಾಷಣದನಂತರ ಅಧ್ಯಕ್ಷರ ಮುಕ್ತಾಯದ ಭಾಷಣದಿಂದ ಸಭೆಯು ಅಂತ್ಯಗೊಂಡಿತು.

---


## ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS.
Commission Agent,
Gonicoppal
26-18 S. Coorg.


---

(೩ನೇ ಪುಟದಿಂದ ಬಂದದ್ದು)

ಸ್ಪತ್ರೆಯಲ್ಲಿ ಮಲಗಿಸಿದ್ದರು. ಆತನು ಮರಣೋನ್ಮುಖನಾಗಿ ಅರೆತೆರೆದ ಕಣ್ಣುಗಳುಳ್ಳ ರಕ್ತಹೀನನಾಗಿ ಮಂದ ಕೊರಡಿನಂತೆ ಚೇತನ ಹೀನನಾಗಿ ಮಲಗಿದ್ದನು. ಶಾಂತ ಹೊನ್ನಮ್ಮಳು ಜ್ವರ ಮಾಪಕವನ್ನು ಆತನ ಬಾಯೊಳಗಿಟ್ಟು ಕೈಯನಾಡಿಯನ್ನು ಹಿಡಿದು ಪರೀಕ್ಷಿಸಿದಳು. ಅವಳ ಮುಖವು ವಿವರ್ಣವಾಯಿತು. ಒಡನೆ ಓಡಿ ಹೋಗಿ ವೈದ್ಯರನ್ನು ಕರೆ ತಂದಳು. ರೋಗಿಯು ರಕ್ತಸ್ರಾವವಾಗಿ ಮರಣ ಹೊಂದುವ ಸ್ಥಿತಿಯಲ್ಲಿದ್ದನು. ಆತನಿಗೆ ರಕ್ತವು ಬೇಕಿತ್ತು. ಆದರೆ ರಕ್ತವನ್ನು ಅವನಿಗಾಗಿ ಕೊಡುವವರಾರು? ಅಲ್ಲಿದ್ದವರು ಒಬ್ಬರ ಮುಖವನ್ನೊಬ್ಬರು ನೋಡುತ್ತಿದ್ದರು. ಯಾರೂ ಆತನಿಗೆ ರಕ್ತದಾನ ಮಾಡಿ ಆತನ ಪ್ರಾಣ ಉಳಿಸಲು ಮುಂದೆ ಬರಲಿಲ್ಲ. ಹೊನ್ನಮ್ಮಳು ಇಂದಿಗೆ ತನ್ನ ಪರೋಪಕಾರ ಮುಗಿಯಿತೆಂದೂ ತನ್ನ ಆತ್ಮದ ಆರಾಧಕನಿಗೆ ತನ್ನ ಸೇವೆ ಸಲ್ಲಬೇಕೆಂದೂ ಯೋಚಿಸಿ ತನ್ನ ರಕ್ತವನ್ನು ಕೊಟ್ಟಳು. ಮಾರಣೆಯ ದಿನ ಆ ರೋಗಿಯ ಬಳಿಗೆ ಹೊನ್ನಮ್ಮಳು ಬಂದಾಗ ಆತನು ಮಾತನಾಡುವಷ್ಟು ಚೇತನಗೊಂಡಿದ್ದನು. ಆತನನ್ನು ಕೈಕೊಟ್ಟು ಎಬ್ಬಿಸಿ ಕುಡಿಯಲು ಕೊಟ್ಟು ತನ್ನ ಆತ್ಮೀಯತೆಯನ್ನು ಹೊರಸೂಸುವ ದೃಷ್ಟಿಯನ್ನು ಬೀರಿ ಮುಗುಳು ನಗೆಯಿಂದ "ಸುಖವಾಯಿತೆ?" ಎಂದು ಕೇಳಿದಳು. ರೋಗಿಯು ಕಣ್ತೆತ್ತಿ ನೋಡಿದನು. ಆಲೋಚಿಸಿದನು, ಮುಖದಲ್ಲಿ ನವಚೇತನವು ಹೊರಹೊಮ್ಮಿತು. "ನೀವು ಇಲ್ಲಿರುವಿರಾ?" ಎಂದೆಂದ ರೋಗಿಯ ಮಾತಿಗೆ ಹೌದೆಂದು ನುಡಿದು ಹೊನ್ನಮ್ಮಳು ಮುಂದಿನ ಹಾಸಿಗೆಯಲ್ಲಿಯ ರೋಗಿಯ ಕಡೆಗೆ ನಡೆದಳು. ಪ್ರತಿ ದಿನವೂ ಅವಳು ಆ ರೋಗಿಯ ಬಳಿಗೆ ಬಂದಾಗ ಅಬ್ಬರದಲ್ಲಿಯೂ ಸಲಿಗೆಯ ಮಾತು ಬೆಳೆಯತೊಡಗಿತು. ಆತನು ಅತ್ಯೈಶ್ವರ್ಯವಂತನಾದ ರತ್ನಾಕರನೆಂದು ಅಲ್ಲಿಯವರಿಗೆಲ್ಲಾ ತಿಳಿಯಿತು. ರಕ್ತದಾನವನ್ನು ಮಾಡಿ ತನ್ನ ಪ್ರಾಣ ಉಳಿಸಿದವಳು ಆ ಬಡ ದೈವಿಕ ಮಗಳು ಹೊನ್ನಮ್ಮಳೆಂಬುವುದು ರತ್ನಾಕರನಿಗೂ ತಿಳಿಯಿತು. ಆತನು ಮೊದಲ ಬಾರಿ ಹೊನ್ನಮ್ಮಳನ್ನು ಕಂಡಾಗ ಆತನ ಆತ್ಮದಲ್ಲಿ ಉಂಟಾದ ಪ್ರೇಮವು ಮತ್ತೊಮ್ಮೆ ಸ್ಫೂರ್ತಿಗೊಂಡಿತು. ಅವಳ ಸದ್ಗುಣಗಳಿಗೆ ಆತನ ಮನಸ್ಸು ಮಾರುಹೋಗಿ ಅವಳನ್ನು ತನ್ನವಳಾಗಿ ಮಾಡಿಕೊಳ್ಳಬೇಕೆಂದು ಒಳಬಯಕೆಯುಂಟಾಯಿತು. ರತ್ನಾಕರನು ಗುಣಹೊಂದಿ ಮನೆಗೆ ಬರುವಾಗ ಹೊನ್ನಮ್ಮಳೊಂದಿಗೆ ಪ್ರೇಮ ಭಿಕ್ಷೆಯನ್ನು ಬೇಡಿ ಅವಳನ್ನು ತನ್ನವಳಾಗಿ ಮಾಡಿಕೊಂಡು ಅನಾಥಳಿಗೆ ಆಶ್ರಯ ದಾತನಾದನು. ಅಂದಿನಿಂದ ರತ್ನಾಕರನ ಐಶ್ವರ್ಯದ ಅಹಂಕಾರವು ಅಳಿದು ಸುಜ್ಞಾನವು ವಿಕಾಸಗೊಂಡು ಹಣದಿಂದ ಗುಣವನ್ನು ಪಡೆಯಲಾಗದೆಂಬುದನ್ನು ಮನಗಂಡು ತನ್ನ ಸಕಲ ಸಂಪತ್ತನ್ನೂ ದೀನ ದಲಿತರ ಸೇವೆಗಾಗಿ ವ್ಯಯ ಮಾಡುತ್ತಿದ್ದಾನೆ. ಹೊನ್ನಮ್ಮಳು ತನ್ನ ದಾದಿ ಕೆಲಸದಲ್ಲಿಯೇ ಇದ್ದುಕೊಂಡು ಪರೋಪಕಾರಿಯಾಗಿದ್ದಾಳೆ. ಅವಳ ಜೀವನವು ಚಿನ್ನಕ್ಕೆ ಸುಗಂಧ ದೊರೆತಂತಾಗಿದೆ.

'ಪರೋಪಕಾರಾರ್ಥಂ ಇದಂ ಶರೀರಂ'

ಅಂತರಾಷ್ಟ್ರೀಯ ರಾಜಕಾರಣ

# ಕೊರಿಯಾ ಯುದ್ಧದಲ್ಲಿ ಕಮ್ಯುನಿಸ್ಟರ ಹಿನ್ನಡೆಯ ರಹಸ್ಯ.

ಕಳೆದ ವಾರದಲ್ಲಿ ಕೊರಿಯಾ ಯುದ್ಧದಲ್ಲಿ ಕಮ್ಯೂನಿಸ್ಟರು ಪ್ರಾರಂಭಿಸಿದ ವಸಂತದಾಳಿಯು ಅಯಶಸ್ವಿಯಾಯಿತು. ಸಂ. ರಾ. ಸಂಘದ ಸೈನ್ಯವ್ಯೂಹವನ್ನು ಭೇದಿಸಲು ಸಮರ್ಥರಾದ ಕಮ್ಯೂನಿಸ್ಟರು ಅವರ ಉಪಯೋಗ ಮಾಡಿಕೊಂಡು ಮುನ್ನುಗ್ಗಲು ಅಸಮರ್ಥರಾದರು. ಅವರ ಅಮೇರಿಕೆಯ ಅನೇಕ ಸೈನ್ಯದ ಜೊತೆತದಿಂದ ನಾನಾಗಿ ಹಿಂದೆ ಸರಿಯಬೇಕಾಗಿ ಬಂದಿತು. ಈಗ ಅವರು ಇನ್ನೂ ಹಿಂದೆ ಸರಿಯುತ್ತಲೇ ಇರುವರೆಂದು ರಣಾಂಗಣದಿಂದ ಬಂದ ವರದಿಗಳಿಂದ ತಿಳಿಯುತ್ತದೆ.

### ಕಮ್ಯುನಿಸ್ಟರ ಹಿನ್ನಡೆಯ ರಹಸ್ಯ

ಕೊರಿಯಾ ಯುದ್ಧದಲ್ಲಿ ಕಮ್ಯುನಿಸ್ಟರು ಹಿಂದೆ ಸರಿಯತೊಡಗಿದ್ದು ಇದು ಮೊದಲನೆ ಸಲವಲ್ಲ. ಈ ಮೊದಲ ಹೀಗೆ ಅನೇಕ ಸಲ ಕಮ್ಯುನಿಸ್ಟರು ಧಾಳಿ ಪ್ರಾರಂಭಿಸಿ ಒಮ್ಮೆಲೆ ಹಿಂದೆ ಸರಿದು ಕೂಡಲೇ ಆಕ್ರಮಣದ ಚಿಹ್ನೆ ಎರೆಗೆ ಹಿಂದೆ ಸರಿದದ್ದುಂಟು. ಈ ಹಿನ್ನಡೆ ಕಮ್ಯುನಿಸ್ಟರ ಯುದ್ಧತಂತ್ರವೇ ಆಗಿರುವಂತೆ ತೋರುವದು. ಈಗ ಅವರು ಕೂಡಲೇ ಆಕ್ರಮಿಸಿದ ಜಾಗದ ವರೆಗೆ ಹಿಂದೆ ಸರಿಯುವರು. ಹಿಂದೆ ಸರಿಯುತ್ತಿರುವ ಕಮ್ಯುನಿಸ್ಟರನ್ನು ಬೆನ್ನಟ್ಟಿ ಸಾಗಲು ಸಂ. ರಾ. ಸಂಘದ ಸೈನ್ಯವ್ಯೂಹವು ಅಸ್ತವ್ಯಸ್ತವಾಗುವದು ಸ್ವಾಭಾವಿಕ. ಇದರ ಲಾಭ ಪಡೆದ ಒಮ್ಮೆಲೆ ಕಮ್ಯುನಿಸ್ಟರು ಬೆನ್ನಟ್ಟಿ ಬರುವ ಸಂ. ರಾ. ಪಡೆಗಳ ಮೇಲೆ ಪ್ರತಿದಾಳಿ ಮಾಡುವದುಂಟು. ಮಾಡುವದು ಕಮ್ಯುನಿಸ್ಟರ ಯುದ್ಧತಂತ್ರವಾಗಿರುವಂತೆ ಅವರು ಈ ವರೆಗೆ ಕೊರಿಯಾದಲ್ಲಿ ನಡೆಸಿದ ಯುದ್ಧದಿಂದ ಕಂಡು ಬರುವದು. ಆದುದರಿಂದ ಕೊರಿಯಾದಲ್ಲಿ ಕಮ್ಯುನಿಸ್ಟರ ಹಿನ್ನಡೆ ಮತ್ತು ಮುನ್ನಡೆ ಇವುಗಳಿಂದ ಕಮ್ಯುನಿಸ್ಟರ ಸೋಲು ಗೆಲುವುಗಳನ್ನು ತಿಳಿದುಕೊಳ್ಳುವದು ಶಕ್ಯವಾಗದು. ಈಗ ಕಮ್ಯುನಿಸ್ಟ ಪಡೆಗಳು ಕೂಡಲೇ ಆಕ್ರಮಿಸಿ ಹಿಂದಾಳಿಗೆ ಹಿಂದೆ ಸರಿದಿರುವವಾದರೂ ಅವು ಮುಂದಿನ ಆಕ್ರಮಣಕ್ಕೆ ಸಿದ್ಧವಾಗುತ್ತಿರಬಹುದು.

ಅಮೇರಿಕೆಯ ವಿಮಾನ ದಳದ ಕಮ್ಯುನಿಸ್ಟರ ಸಾಗಣೆ ಸಂಪರ್ಕಗಳ ಮೇಲೆ ಭೀಕರ ದಾಳಿ ಒಂದೇ ಸವನೆ ನಡೆಸಿರುವದರಿಂದ ತಮ್ಮ ವಿಮಾನ ಬಲ ಹೆಚ್ಚಿಸಿಕೊಳ್ಳದೇ ಮುನ್ನುಗ್ಗುವದು ಶಕ್ಯವಿಲ್ಲ ಎಂದು ಅವರು ಮಂಚೂರಿಯಾದಿಂದ ದೂರ ಇರುವ ದಕ್ಷಿಣ ಕೊರಿಯಾದಲ್ಲಿ ನಡೆದ ಕಾಳಗದಿಂದ ತಿಳಿಯದೇ ಯುದ್ಧ ಮಾಡಲು ನಿರ್ಧರಿಸಿದಂತೆ ತೋರುವದು.

### ಶಾಂತಿ ಸಂಧಾನದ ಸುದ್ದಿ

ಕೊರಿಯಾ ಯುದ್ಧದಲ್ಲಿ ಸಂ. ರಾ. ಸಂಘದವರು ಕೂಡಲೇ ಅಕ್ಷಾಂಶ ರೇಷೆಯ ಉತ್ತರಕ್ಕೆ ಕಮ್ಯುನಿಸ್ಟರನ್ನು ಹೊರದೂಡಿದ ಬಳಿಕ ಅಲ್ಲಿ ಯುದ್ಧ ನಿಲ್ಲಿಸಿ ಯುದ್ಧ ಪ್ರಾರಂಭದ ಮೊದಲಿದ್ದ ಸ್ಥಿತಿಯನ್ನು ಸಂ. ರಾ. ಸಂಘವು ಒಪ್ಪಿಕೊಂಡು ಕೊರಿಯಾದ ಭವಿತವ್ಯವನ್ನು ನಿರ್ಧರಿಸಲು ಕೊರಿಯಾದ ಜನತೆಗೇ ಬಿಟ್ಟುಕೊಡಲು ಒಪ್ಪುವುದಾದರೆ ಕೊರಿಯಾ ಯುದ್ಧವನ್ನು ನಿಲ್ಲಿಸಲು ಅನುಕೂಲವಾಗುವದೆಂದು ಶಾಂತಿ ಸಂಧಾನದ ಸೂಚನೆಗಳು ರಶಿಯಾದ ಮುಖಾಂತರ ಬಂದಿರುವದಾಗಿ ಸುದ್ದಿ ಹರಡಿದೆ. ಅಧಿಕೃತವಾಗಿ ರಶಿಯಾದ ರಾಯಭಾರಿ ಕಛೇರಿಯಿಂದ ಇದಕ್ಕೆ ಸ್ಪಷ್ಟೀಕರಿಸುವ ಇಲ್ಲವೆ ನಿರಾಕರಿಸುವ ಪ್ರಕಟಣೆ ಹೊರಟಿಲ್ಲ. ಆದರೂ ಇದೊಂದು ಶಾಂತಿ ಸಂಧಾನದ ಬಗ್ಗೆ ಸಂ. ರಾ. ಸಂಘದ ಪ್ರಬಲ ರಾಷ್ಟ್ರಗಳ ಅಭಿಪ್ರಾಯ ತಿಳಿದುಕೊಳ್ಳುವ ತಂತ್ರವಾಗಿರಲು ಸಾಕು. ಕೆರಿಬಿಯರೆಯಲ್ಲಿ ಶಾಂತಿ ಸಂಧಾನದ ಮಾತುಕತೆಗಳು ನಡೆದಿರುವದಕ್ಕೆ ಜನರಲ್ ಬ್ರಾಡ್ಲೀಯವರು ಕೊರಿಯಾ ಯುದ್ಧ ಸಂಧಾನದ ಬಗೆ ಹರಿಯುವ ಆಶೆ ತಮಗಿರುವದಾಗಿ ಹೇಳಿರುವದು ಮಹತ್ವದ ಪುಷ್ಟಿ ಕೊಡುತ್ತದೆ. ಈ ಸಂಧಾನದ ಮಾತುಕತೆಗಳು ಯಶಸ್ವಿಯಾಗಲು ಅನುಕೂಲ ವಾತಾವರಣ ನಿರ್ಮಿಸಲು ಕಮ್ಯುನಿಸ್ಟರು ಕೂಡಲೇ ಅಕ್ಷಾಂಶದಾಚೆಗೆ ಹಿಂದೆ ಸರಿದು ಹೋಗಿರುವ ಸಂಭವವೂ ಇದೆ. ಆದರೆ ಅಮೇರಿಕನ್ ಪಡೆಯ ಸೇನಾಪತಿ ಜ. ಫ್ಲೀಟ್‌ರ್ ಸಂ. ರಾ. ಸೈನಿಕರು ಕೂಡಲೇ ಅಕ್ಷಾಂಶ ರೇಷೆ ದಾಟಿ ಉತ್ತರ ಕೊರಿಯದಲ್ಲಿ ಮುನ್ನುಗ್ಗುವರು ಎಂದು ಹೇಳಿರುವದರಿಂದ ಕೊರಿಯಾದಲ್ಲಿ ನಡೆಯುವ ಶಾಂತಿ ಸಂಧಾನದ ಮಾತುಕತೆಗಳು ಮುರಿದು ಹೋಗಬಹುದೆ? ಎಂಬ ಸಂಶಯಕ್ಕೆ ಎಡೆಯುಂಟಾಗುವದು.

## ಇರಾಣದಲ್ಲಿ ಮತ್ತೊಂದು ಕೊರಿಯಾ ಆಗಬಹುದೇ?

["ಜೈ ಹಿಂದ್" ಪತ್ರಿಕೆಯಿಂದ]

### ಇರಾಣದ ಸಮಸ್ಯೆಯ ಪ್ರತಿಕ್ರಿಯೆ

ಇರಾಣ ಸರಕಾರವು ಎಣ್ಣೆ ಉದ್ದಿಮೆ ರಾಷ್ಟ್ರೀಕರಣ ಕಾಯದೆ ಪಾಸ ಮಾಡಿಕೊಂಡ ಅದನ್ನು ಜಾರಿಯಲ್ಲಿ ತರಲು ಧಡಪಡಿಸುತ್ತಿರುವದರಿಂದ ಆಂಗ್ಲೋ ಅಮೇರಿಕನ್ನರಿಗೆ ಇರಾಣ ಮಧ್ಯಪ್ರಾಚ್ಯದ ತ್ರಿಕೂಟ ಸಮಸ್ಯೆ ಎದುರಾಗಿದೆ. ಇದರಿಂದ ಕೊರಿಯಾದ ಯುದ್ಧವನ್ನು ಮುಗಿಸಿಬಿಡಲು ಆಂಗ್ಲೋ- ಅಮೇರಿಕನ್ನರು ಶಾಂತಿ ಸಂಧಾನಕ್ಕೆ ಒಪ್ಪಿಕೊಳ್ಳುವ ಸಂಭವವೇ ಮೊದಲಿಗಿಂತ ಹೆಚ್ಚಿದೆ. ಸಂ. ರಾ. ಸಂಘದ ಸಮಾನ್ಯ ಸಭೆಯಲ್ಲಿ ಚೀನಾದ ಮೇಲೆ ಆರ್ಥಿಕ ದಿಗ್ಬಂಧನ ಹಾಕುವ ಸೂಚನೆ ಚರ್ಚೆಗೆ ಬಂದಾಗ ಭಾರತದ ಪ್ರತಿನಿಧಿ ಶ್ರೀ. ಬಿ. ಎನ್. ರಾವರು ಕೊರಿಯಾದಲ್ಲಿ ಆಕ್ರಮಣಗಾರರನ್ನು ೩೮ ನೇ ಅಕ್ಷಾಂಶದ ಆಚೆಗೆ ಹೊಡೆದಟ್ಟಿದ ಬಳಿಕ ಸಂ. ರಾ. ಸಂಘವು ಸಾಮೂಹಿಕ ಆಕ್ರಮಣಗಾರರನ್ನು ಶಿಕ್ಷಿಸಿದಂತಾಗಿದೆ. ಅಲ್ಲಿ ಯುದ್ಧ ನಿಲ್ಲಿಸಿ ಕೊರಿಯಾ ಭವಿತವ್ಯದ ಬಗ್ಗೆ ಮಾತುಕತೆ ನಡೆಸುವದು ಯೋಗ್ಯವಾಗುವದು ಎಂದು ಹೇಳಿದ್ದನ್ನು ಇಲ್ಲಿಗಳ ದ ಅಮೇರಿಕೆಯು ಈಗ ಅಂಥಾ ಸೂಚನೆಯ ಮೇಲೆಯೇ ಶಾಂತಿ ಸಂಧಾನದ ಮಾತುಕತೆ ನಡೆಸಿದ್ದು ನೋಡಿದರೆ ಅಮೇರಿಕೆಗೆ ಮಧ್ಯಪೂರ್ವದಲ್ಲಿ ಉಂಟಾದ ಸ್ಫೋಟಕ ಪರಿಸ್ಥಿತಿಯಲ್ಲಿ ಕೊರಿಯಾ ಯುದ್ಧ ಮುಂದುವರಿಸುವದು ಯೋಗ್ಯವಾಗದೆಂಬ ವಿವೇಕೋದಯ ಉಂಟಾದಂತೆ ತೋರುವದು.

### ಇರಾಣದ ಸಮಸ್ಯೆ.

ಇರಾಣದ ಸಮಸ್ಯೆ ಆಂಗ್ಲೋ-ಅಮೇರಿಕನ್ನರ ಸಂಪೂರ್ಣ ಲಕ್ಷ್ಯವನ್ನು ಸೆಳೆಯುವಷ್ಟು ಮಹತ್ವದ್ದಾಗಿರುವದೆ? ಎಂಬ ಪ್ರಶ್ನೆ ಇಲ್ಲಿ ಏಳುವದು. ಜಾಗತಿಕ ಶಾಂತಿಯು ಇರಾಣದ ಪ್ರಶ್ನೆಯನ್ನೇ ಅವಲಂಬಿಸಿದೆ.

ಇರಾಣ ಸರಕಾರವು ೧೯೩೩ ರಲ್ಲಿ ಆಂಗ್ಲೋ-ಇರಾಣೀ ಆಯಿಲ್ ಕಂಪೆನಿಯೊಡನೆ ಒಪ್ಪಂದಮಾಡಿಕೊಂಡು ಇರಾಣದಲ್ಲಿಯ ಎಲ್ಲ ಎಣ್ಣೆ ಖಣಿಗಳನ್ನು ಕೆಲವೊಂದು ಪ್ರತಿಫಲ ಕೊಡುವ ಕರಾರಿನಿಂದ ೬೦ ವರ್ಷಗಳ ವರೆಗೆ ಒಪ್ಪಿಸಿತು. ಈ ಆಂಗ್ಲೋ-ಇರಾಣಿ ಎಣ್ಣೆ ಕಂಪೆನಿಯಲ್ಲಿ ಬ್ರಿಟಿಷ್ ಸರಕಾರದ ಪಾಲುಗಳು ಅರ್ಧಕ್ಕಿಂತ ಹೆಚ್ಚಿಗಿವೆ. ಇದು ೫೦ ಐದ ಎಣ್ಣೆಯನ್ನು ತೆಗೆಯುವ, ಶುದ್ಧಮಾಡಿ ಮಾರಾಟಮಾಡುವ ಗುತ್ತಿಗೆಯನ್ನು ಹಿಡಿದ ಕಂಪೆನಿಯಾಗಿರುವದರಿಂದ ಬ್ರಿಟನ್ನಿಗೆ ಅಗ್ಗದರದಿಂದ ಎಣ್ಣೆ ಪೂರೈಸುತ್ತಿದೆ. ಇರಾಣದ ಎಣ್ಣೆ ಖಣಿಗಳು ಬಹಳ ಸಮೃದ್ಧವಾದವುಗಳಾಗಿರುವದರಿಂದ ಬ್ರಿಟನು ಎಣ್ಣೆ ಪೂರೈಕೆಗಾಗಿ ಇರಾಣವನ್ನೇ ಅವಲಂಬಿಸಿದೆ. ಈ ಎಣ್ಣೆ ಖಣಿಗಳನ್ನು ಇರಾಣ ಸರಕಾರವು ರಾಷ್ಟ್ರೀಕರಣ ಮಾಡುವದರಿಂದ ಬ್ರಿಟನ್ನಿಗೆ ಎಣ್ಣೆ ಪೂರೈಕೆಯು ಮೊದಲಿನಂತೆ ಅಗ್ಗದರದಿಂದ ಆಗಲಾರದು. ಇದಲ್ಲದೆ ವರ್ಷಕ್ಕೆ ೬೦ ಲಕ್ಷ ಪೌಂಡು ಆದಾಯ ಈ ಕಂಪೆನಿಯಿಂದ ಕೈಬಿಡುವದು. ಸಾಮ್ರಾಜ್ಯದಲ್ಲಿ ಬ್ರಿಟನರ ವರ್ಚಸ್ಸು ಕುಗ್ಗುವದು. ಯುರೋಪ ಸಂರಕ್ಷಣ ಯೋಜನೆಗೆ ಇರಾಣದ ಎಣ್ಣೆ ದೊರೆಯದೆ ದೊಡ್ಡ ಹೊಡೆತ ಬೀಳುವ ಸಂಭವವೂ ಇದೆ. ಈ ಎಲ್ಲ ಕಾರಣಗಳಿಂದ ಬ್ರಿಟಿಷ್ ಸರಕಾರವು ಇರಾಣದ ಎಣ್ಣೆ ಖಣಿಗಳನ್ನು ಹೇಗಾದರೂ ಮಾಡಿ ತನ್ನ ವಶದಲ್ಲಿ ಉಳಿಸಿಕೊಳ್ಳಲು ನಿರ್ಧರಿಸಿದರೆ ಆಶ್ಚರ್ಯವಲ್ಲ. ಇದಕ್ಕೆ ಅಮೇರಿಕೆಯ ಸಂಪೂರ್ಣ ಬೆಂಬಲವೂ ದೊರೆತಿದೆ.

ಎಣ್ಣೆ ಖಣಿಯು ಇರಾಣ ರಾಷ್ಟ್ರದ ಸಂಪತ್ತು. ಇದರ ಲಾಭ ಇರಾಣದ ಜನತೆಯ ಆರ್ಥಿಕ ಸ್ಥಿತಿ ಸುಧಾರಿಸಲು ಆಗುವಂತೆ ರಾಷ್ಟ್ರೀಕರಣ ಮಾಡ ಹಚ್ಚು ಇರಾಣ ಸರಕಾರಕ್ಕೆ ಸೇರಿದ ವಿಷಯ. ಒತ್ತಾಯ ಬಲುಮೆಗಳಿಂದ ೧೯೩೩ರಲ್ಲಿ ಇರಾಣ ಸರಕಾರವು ಆಂಗ್ಲೋ-ಇರಾಣಿ ಕಂಪೆನಿಯೊಡನೆ ಮಾಡಿಕೊಂಡ ಕರಾರು ಅಕ್ರಮವಾದುದು. ಇರಾಣ ಸರಕಾರದ ಸಾರ್ವಭೌಮಾಧಿಕಾರವನ್ನು ಪ್ರತಿಬಂಧಿಸುವ ಯಾವದೇ ಒಪ್ಪಂದವನ್ನೂ ಇರಾಣದ ಜನತೆ ಮನ್ನಿಸದು ಹೀಗೆ ಇರಾಣದ ಜನತೆ ನಿರ್ಧರಿಸಿ ಎಣ್ಣೆ ಉದ್ದಿಮೆಯ ರಾಷ್ಟ್ರೀಕರಣದ ಆಂದೋಲನ ಹೂಡಿದೆ ಮತ್ತು ಆ ಅರ್ಥದ ಕಾಯಿದೆಯನ್ನೂ ಮಾಡಿದೆ. ಈ ಕಾಯಿದೆ ಜಾರಿಯಲ್ಲಿ ಬರುವದಿಷ್ಟೇ ಉಳಿದಿದೆ. ಇರಾಣ ಸರಕಾರವು ಆಂಗ್ಲೋ-ಇರಾಣಿ ಕಂಪೆನಿಗೆ ಎಣ್ಣೆ ಖಣಿ ಪ್ರದೇಶ ಮತ್ತು ಎಣ್ಣೆ ಶುದ್ಧಗೊಳಿಸುವ ಕಾರಖಾನೆಗಳನ್ನು ಒಪ್ಪಿಸಲು ತಿಳಿಸಿದೆ. ಆಂಗ್ಲೋ-ಇರಾಣಿ ಕಂಪೆನಿಯು ತನ್ನ ಗುತ್ತಿಗೆಯು ೧೯೯೩ ರ ವರೆಗೆ ಇರುವದರಿಂದ ಇರಾಣ ಸರಕಾರವು ಅಲ್ಲಿಯ ವರೆಗೆ ಎಣ್ಣೆ ಉದ್ದಿಮೆ ರಾಷ್ಟ್ರೀಕರಣ ಮಾಡಲು ಬರಲಾರದು ಎಂದು ಅಂತರ್ ರಾಷ್ಟ್ರೀಯ ನ್ಯಾಯಾಲಯಕ್ಕೆ ಅರ್ಜಿ ಮಾಡಿಕೊಂಡಿದೆ. ಇರಾಣ ಸರಕಾರವು ಅಂತರ್‌ರಾಷ್ಟ್ರೀಯ ನ್ಯಾಯಾಲಯದ ನಿರ್ಣಯವು ತನಗೆ ಬಂಧನಕಾರಕವಲ್ಲ ಎಂದು ಸಾರಿ ಎಣ್ಣೆ ಕಂಪೆನಿಯ ವಶದಲ್ಲಿದ್ದ ಖಣಿ ಮತ್ತು ಕಾರಖಾನೆಗಳನ್ನು ವಶಪಡಿಸಿಕೊಳ್ಳಲು ಸೈನ್ಯ ಕಳಿಸುವ ಸಿದ್ಧತೆಯಲ್ಲಿದೆ. ಇರಾಣ ಸರಕಾರದ ಸೈನ್ಯವನ್ನು ಎದುರಿಸಿ ಎಣ್ಣೆ ಖಣಿ ಪ್ರದೇಶ ಉಳಿಸಿಕೊಳ್ಳಲು ಬ್ರಿಟಿಷ್ ಸರಕಾರವು ನಿರ್ಧರಿಸಿ ನೌಕಾಪಡೆ ಮತ್ತು ಕೊಡೆ ವೈಮಾನಿಕರ ಸೈನ್ಯವನ್ನು ಇಟ್ಟು ಇರಾಣದ ಅಬಾದನದಲ್ಲಿ ಎಂಥ ಪರಿಸ್ಥಿತಿ ಬಂದರೂ ಎದುರಿಸಲು ಅಪ್ಪಣೆ ವಿಧಿಸಿರುವದಾಗಿ ತಿಳಿಯುತ್ತದೆ.

ಇರಾಣದಲ್ಲಿ ಬ್ರಿಟಿಷ್ ಸೈನ್ಯ ಕಾಲಿಡ ಬಹುದು. ರಶಿಯಾವು ತನ್ನ ಸೈನ್ಯವನ್ನು ಇರಾಣದಲ್ಲಿ ನುಗ್ಗಿಸಲು ಸನ್ನದ್ಧವಾಗಿ ನಿಂತಿದೆ. ಇರಾಣ-ರಶಿಯಾ ಒಪ್ಪಂದದಂತೆ ಇರಾಣದಲ್ಲಿ ವಿದೇಶಿಯ ಸೈನ್ಯ ಕಾಲಿಟ್ಟರೆ ರಶಿಯಕ್ಕೆ ಇರಾಣದಲ್ಲಿ ಸೈನ್ಯ ಕಳಿಸಲು ಅಧಿಕಾರವಿದೆ ಎಂದು ಹೇಳಲಾಗಿದ್ದು ಈ ಒಪ್ಪಂದದ ಲಾಭ ಪಡೆದು ರಶಿಯವು ಇರಾಣದ ಎಣ್ಣೆ ಖಣಿ ಪ್ರದೇಶವನ್ನು ವಶಪಡಿಸಿಕೊಳ್ಳುವ ಹವಣಿಕೆಯಲ್ಲಿದೆ.

### ಇರಾಣ ಸರಕಾರದ ಧೋರಣ

ಇರಾಣ ಸರಕಾರವು ಕಳೆದ ೦ ಸ್ಪಷ್ಟ ಧೋರಣದಿಂದ ಇರಾಣವು ರಶಿಯಾ ಆಂಗ್ಲೋ-ಅಮೇರಿಕನ್ನರ ಶಕ್ತಿ ಪ್ರದರ್ಶನದ ರಣಾಂಗಣವಾಗಿ ಪರಿಣಮಿಸುವ ಭೀತಿಯುಂಟಾಗಿದೆ. ಇಂಥ ಪರಿಸ್ಥಿತಿಗೆ ಅವಕಾಶ ಕೊಡದೆ ಆಂಗ್ಲೋ-ಇರಾಣಿ ಎಣ್ಣೆ ಕಂಪೆನಿಯು ತನ್ನ ಹಟ ಬಿಡದು ರಾಷ್ಟ್ರೀಕರಣ ಧೋರಣವನ್ನು ಬಿಟ್ಟುಕೊಡಬೇಕೆಂದು ಬ್ರಿಟಿಷ ಸರಕಾರವು ಇರಾಣ ಸರಕಾರಕ್ಕೆ ಮಾಡಿದ ಸೂಚನೆಗೆ ಇರಾಣ ಸರಕಾರವು ಒಪ್ಪುವ ಸ್ಥಿತಿಯಲ್ಲಿಲ್ಲ. ಎಂಥ ಪರಿಸ್ಥಿತಿ ಬಂದರೂ ತನ್ನ

## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,99,400. |
| ಕ್ಷೇಮನಿಧಿ | ರೂ. | 59,000. |
| ಇತರ ನಿಧಿಗಳು | ರೂ. | 36,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು ಬ್ಳದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, — ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜಂಟ್.



## ದಿ ಟ್ರಾಪಿಕಲ್

### ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:–ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಹೊಸ ಡಿಲ್ಲಿ.

52–7 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು, ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ ಅನ್ಸಾರಿ,

Transacts:–Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು. — ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.



## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಕೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು (Spraying Pumps)
7. $\frac{1}{8}$" $\frac{1}{4}$" $\frac{1}{2}$" $\frac{3}{8}$" $\frac{3}{4}$" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಿರಬೇಕಾಗಿ ಹೊರತು ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52–38


# ಇಂಟರ್‌ಮೀಡಿಯೇಟ್ ಪರೀಕ್ಷಾ ಫಲಿತಾಂಶ.

## ಗವರ್ನ್‌ಮೆಂಟ್ ಕಾಲೇಜು, ಮಡಿಕೇರಿ.

ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಮದ್ರಾಸ್ ವಿಶ್ವವಿದ್ಯಾಲಯದ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಕೊಡಗು ಸರಕಾರಿ ಕಾಲೇಜಿನಿಂದ ಕುಳಿತ ವಿದ್ಯಾರ್ಥಿಗಳಲ್ಲಿ ಈ ಕೆಳಗಿನವರು ತೇರ್ಗಡೆಯಾಗಿರುವರು.

### ಪ್ರಥಮ ತರಗತಿಯಲ್ಲಿ.

ಶ್ರೀಗಳಾದ ಟಿ. ಕೆ. ಕೃಷ್ಣಸ್ವಾಮಿ, ಟಿ. ಆರ್. ರಂಗನಾಥ, ಎಚ್. ಪಿ. ರಂಗರಾಜ, ಪುಲಿಯಂಡ ಗಣಪತಿ, ಪಿ. ಶಿವರಾಮಯ್ಯ, ಕೆ. ಎಸ್. ಸುಂದರ, ಶ್ರೀಮತಿಯರಾದ ಕುಂಜಿರ ಪೊನ್ನಮ್ಮ, ಬಿದ್ದಂಡ ಮುತ್ತಮ್ಮ ಮತ್ತು ಮಾಚಿಮಂಡ ಜಯ ಇವರುಗಳು.

### ದ್ವಿತೀಯ ತರಗತಿಯಲ್ಲಿ

ಶ್ರೀಗಳಾದ ಬಿ. ಎ ದೇವಪ್ಪ ರೈ, ಎ. ಗಣೇಶಭಟ್, ಎ. ಡಬ್ಲ್ಯು ಜಾರ್ಜ್, ಜೇಮ್ಸ್ ಕೊಡರಿಂಗ್ಸ್, ಚೆರಿಯಪಂಡ ಮುತ್ತಣ್ಣ, ಕಾಡ್ಯಮಾಡ ಮುತ್ತಣ್ಣ, ಅಲೆಮಾಡ ನಾಚಯ್ಯ, ಮಾಳೇಟಿರ ಸಂಜಪ್ಪ, ಮಾದೇಟಿರ ಪೂಣಚ್ಚ, ಎ. ಎ. ಪೂವಯ್ಯ, ಪಟ್ಟಡ ಸಿ ಸೋಮಯ್ಯ, ಕೆ. ಸಿ. ಸುಬ್ಬಯ್ಯ, ಎ. ಸಿ. ಜಾನ್, ಸಿ. ಆರ್. ನಾರಾಯಣ, ಕೆ. ಎಂ. ಬೋಜಪ್ಪ, ಬಿಟ್ಟಿಯಂಡ ಗಣಪತಿ, ಕೆ. ಕುಶಾಲಪ್ಪಗೌಡ, ಕೆ. ಎಂ ಪ್ರಕಾಶ್, ಬಿಜ್ಜಿರಂಡ ಐಯ್ಯಣ್ಣ, ಸಿ. ಆರ್. ಗೋಪಾಲಕೃಷ್ಣ, ಪಿ. ಎಲ್. ಕೃಷ್ಣಶಾಸ್ತ್ರಿ, ಎನ್. ಬಿ. ನಾರಾಯಣ, ಮಲ್ಲಂಗಡ ಗಣಪತಿ, ಪೊನ್ನಚಂಡ ನಾಣಯ್ಯ, ಟಿ. ಎ ನಾಣಯ್ಯ, ಕಲಿಯಂಡ ಪೊನ್ನಪ್ಪ, ಮುಕ್ಕಾಟಿರ ಸುಬ್ಬಯ್ಯ, ಕೆ. ವೆಂಕಟರಾಯಗೌಡ, ಮತ್ತು ಬಿ. ಎಂ. ಕುಶಾಲಪ್ಪ ಮತ್ತು ಶ್ರೀಮತಿಯರಾದ ಚನ್ನಿರ ಬೋಜಮ್ಮ, ಕೆ. ಎಸ್. ಇಂದಿರ, ಬೊಳ್ಳಚೆಟ್ಟಿರ ಮುತ್ತಮ್ಮ, ಕಂಡ್ರತಂಡ ಪೊನ್ನಮ್ಮ ಮತ್ತು ಪಾಲೇಕಂಡ ಸುಬ್ಬಮ್ಮ ಇವರುಗಳು. ಪ್ರೈವೇಟ್ ಆಗಿ ಕೂತ ಶ್ರೀ ಚೌರಿರ ಜಿ. ತಿಮ್ಮಯ್ಯನವರು ತೇರ್ಗಡೆಯಾಗಿದ್ದಾರೆ.

### ಭಾಗಗಳಲ್ಲಿ

ಶ್ರೀಗಳಾದ ಪಾಂಡಂಡ ದೇವಯ್ಯ, ಉಮೇಶಶೆಟ್ಟಿ, ಕೆ. ಎಸ್. ಉತ್ತಯ್ಯ, ಬಲ್ಲಚಂಡ ಮಂದಪ್ಪ, ಪಾಂಡಂಡ ಪೊನ್ನಮ್ಮ, ಇಟ್ಟಿರ ಕಾಶಿ, ಎಂ. ಎಸ್. ವಿಠಲ್‌ರಾವ್ ಮತ್ತು ಶ್ರೀಮತಿ ಅಪ್ಪನೆರವಂಡ ಕಮಲಾ ಪ್ರಭು ಇವರು ಒಂದನೇ ಮತ್ತು ಎರಡನೇ ಭಾಗಗಳಲ್ಲೂ, ಶ್ರೀಗಳಾದ ಕೇಕಪಂಡ ದೇವಯ್ಯ, ಕೆ. ಎಸ್. ಶಿವರಾಮು, ಎಂ. ಟಿ ಮುತ್ತಪ್ಪ, ಕೆ. ಎ. ರಘುನಾಥರಾವ್, ಇವರು ಎರಡನೇ ಮತ್ತು ಮೂರನೇ ಭಾಗಗಳಲ್ಲೂ ಶ್ರೀಗಳಾದ ವಿ ಕಲ್ಯಾಣಸುಂದರ, ಕೇಟೋಳಿರ ಸುಬ್ಬಯ್ಯ, ಇವರುಗಳು ಒಂದನೇ ಭಾಗದಲ್ಲೂ, ಶ್ರೀಗಳಾದ ಬಿ. ಸಿ. ಐಯ್ಯಣ್ಣ, ಕೆ. ಎಸ್ ಚಿಣ್ಣಪ್ಪ, ಪಿ. ಎ. ದೇವಯ್ಯ ಕೆ. ಸಿ. ಕರುಂಬಯ್ಯ, ಎನ್. ಪಿ ಮಾದಯ್ಯ, ಕೆ. ಎ ಮುತ್ತಪ್ಪ, ಪಿ. ಎಂ. ಪೂಣಚ್ಚ, ಎಂ. ಜಿ. ಪೊನ್ನಪ್ಪ, ಬಿ. ಬಿ. ಸುಬ್ಬರಾಯ, ಎಂ. ಎಂ. ಉತ್ತಯ್ಯ, ಸಿ ಎಸ್. ಅಪ್ಪಯ್ಯ, ಎಂ. ಬಿ. ಚಂಗಪ್ಪ, ಐ. ಕೆ. ಚಿಣ್ಣಪ್ಪ, ಜಿ. ಕೆ. ಗಣಪತಿ, ಜಿ. ಎ. ಮಂದಣ್ಣ, ಪಿ. ಬಿ. ಸರೋಜಿನಿ, ಡಿ. ಕೆ. ಶ್ರೀನಿವಾಸ, ಪಿ. ಪಿ. ಅಪ್ಪಯ್ಯ, ಮತ್ತು ಕೆ. ಎಸ್. ವೆಂಕಟೇಶ ಇವರುಗಳು ಎರಡನೇ ಭಾಗದಲ್ಲೂ ತೇರ್ಗಡೆಯಾಗಿರುವರು. ಪರೀಕ್ಷೆಗೆ ಕೂತ ೭೪ ವಿದ್ಯಾರ್ಥಿಗಳಲ್ಲಿ ೪೩ ಜನರು ತೇರ್ಗಡೆಯಾಗಿರುವದರಿಂದ ಶೇಕಡ ೫೮ ರಂತೆ ತೇರ್ಗಡೆಯಾದಂತಾಯಿತು.

---

(ಹಿಂದಿನ ಪುಟದಿಂದ ಸಾಗಿದ್ದು)

ದೇಶದ ಸಂಪತ್ತಿನ ಉಪಯೋಗವನ್ನು ದೇಶದ ಜನತೆಯ ಹಿತದ ದೃಷ್ಟಿಯಿಂದ ಉಪಯೋಗಿಸುವ ಸಾರ್ವಭೌಮ ಅಧಿಕಾರವನ್ನು ಹಣಕ್ಕಾಗಿ ಮಾರಿಕೊಳ್ಳುವಂತ ರಾಷ್ಟ್ರೀಕರಣ ಮಾದಿಗೆ ಧರಿಣರಾದ ಡಾ. ಮುಸಾದೀಕರಿಗೆ ಶಕ್ಯವಿಲ್ಲ.

ಆಂಗ್ಲೋ–ಇರಾಣಿ ಕಂಪೆನಿಯವರು ಇರಾಣದಲ್ಲಿ ಅಂತಃಕಲಹವನ್ನು ಹುಟ್ಟಿಸಿ ಡಾ. ಮುಸಾದೀಕರನ್ನು ಓಡಿಸುವ ಹಾಗೂ ಆಂಗ್ಲೋ–ಇರಾಣಿ ಕಂಪನಿಗೆ ಅನುಕೂಲವಿದ್ದವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡುವ ಕಾರಸ್ಥಾನ ನಡೆಸಿದರೂ ಯಶದೊರೆಯುವಂಥ ಪರಿಸ್ಥಿತಿ ಉಳಿದಿಲ್ಲ. ಇದರಿಂದ ಇರಾಣವು ಅಂತರ್ ರಾಷ್ಟ್ರೀಯ ಶಾಂತಿಗೆ ಗಂಡಾಂತರದ ಪ್ರಶ್ನೆಯಾಗಿ ಪರಿಣಮಿಸಿದೆ.

### ಪ್ಯಾರಿಸ ಪರಿಷತ್ತು

ಅಮೇರಿಕಾ, ಬ್ರಿಟನ್ ಫ್ರಾನ್ಸ, ಮತ್ತು ರಶಿಯಾಗಳ ಉಪ ವಿದೇಶ ಮಂತ್ರಿಗಳ ಸಭೆಯು ಅವ್ಯಾಹತವಾಗಿ ಎರಡು ತಿಂಗಳಿಂದ ನಡೆದರೂ ಇನ್ನೂ ವಿದೇಶ ಮಂತ್ರಿಗಳ ಪರಿಷತ್ತಿನ ವಿಷಯ ಪಟ್ಟಿ ಸಿದ್ಧ ಮಾಡಲು ಸಮರ್ಥವಾಗಿಲ್ಲ. ಈ ಪರಿಷತ್ತನ್ನು ಮಾರಿಡು ವಿಷಯ ಪಟ್ಟಿ ಸಿದ್ಧಪಡಿಸಲು ಅಸಮರ್ಥರಾದೆವೆಂದು ಒಪ್ಪಿಕೊಳ್ಳುವ ಮನಸ್ಸು ಈ ನಾಲ್ಕು ರಾಷ್ಟ್ರಗಳಲ್ಲಿ ಯಾರಿಗೂ ಇಲ್ಲ. ಪರಿಷತ್ತು ಅಯಶಸ್ವಿಯಾದ ದೋಷ ಎರಡನೆಯವರ ಮೇಲೆ ಹೊರಿಸಬೇಕೆಂಬ ವಿಷಯ ಪಟ್ಟಿಯು ರಚನೆಯ ತಂತ್ರದಲ್ಲಿ ಬುದ್ಧಿ ಮತ್ತೆಯನ್ನು ಉಪಯೋಗಿಸುವ ಒಂದು ಕಸರತ್ತು ಪ್ಯಾರಿಸ ಪರಿಷತ್ತಿನಲ್ಲಿ ನಡೆದಂತೆ ತೋರುವದು. ಈ ಪರಿಷತ್ತಿನ ಭವಿತವ್ಯ ಇರಾಣ, ಕೊರಿಯಾ ಸಮಸ್ಯೆಗಳನ್ನು ಬಿಡಿಸುವದನ್ನೇ ಅವಲಂಬಿಸಿದೆ. ಇರಾಣದಲ್ಲಿ ಬ್ರಿಟಿಶ ಸೈನಿಕರು ಇಳಿದರೆ ರಶಿಯಾದ ಸೈನಿಕರೂ ಅಲ್ಲಿ ನುಗ್ಗುವರು. ಆಗ ವಿದೇಶ ಮಂತ್ರಿಗಳ ಪರಿಷತ್ತು ಅನವಶ್ಯವಾಗುವಂಥ ಪರಿಸ್ಥಿತಿಯು ಉಂಟಾಗದಿರದು. ಈ ಎಲ್ಲ ಘಟನಾವಳಿಗಳ ಮೇಲಿಂದ ಬರುವ ಒಂದೆರಡು ವಾರಗಳಲ್ಲಿ ಜಾಗತಿಕ ಶಾಂತಿಯೋ ಸಮರವೋ ಇದರ ನಿರ್ಧಾರವಾಗುವಂಥ ಮಹತ್ವದ ಘಟನೆಗಳು ನಡೆಯಲಿರುವವೆಂದು ನಿರೀಕ್ಷಿಸಬಹುದಾಗಿದೆ.

---

Edited, Printed and Published by P. I. Belliappa at 'Kodagu' Press, Mercara. for 'Kodagu' Ltd.

Reg. No. M 1550.
'KODAGU" MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೨೮ | ತಾರೀಖು ೧೬-೬-೧೯೫೦ನೇ ಶುಕ್ರವಾರ | ಸಂಚಿಕೆ ೩ |
|---|---|---|

## ವಾರ್ತೆಗಳು.

“ಲಾಭ ಪಡೆಯುವವರು ಸಮಾಜಕ್ಕೊಂದು ಸಾಂಕ್ರಾಮಿಕ ರೋಗವಿದ್ದಂತೆ; ಬಡವರನ್ನೂ ಇಲ್ಲದವರನ್ನೂ ಇವರು ಸುಲಿದು ತಿನ್ನುವರು. ಸಮಾಜ ಕ್ಷೇಮಕ್ಕಾಗಿ ಇಂತವರನ್ನು ‘ವ್ಯಾಪಾರ’ ಬಲಿಯನ್ನು ಪೆಟ್ಟಿ ದಂತೆ ಪೆಟ್ಟು ಬಿಡುವುದೇ ಯೋಗ್ಯವೆಂಬುದರಲ್ಲಿ ಸಂಶಯವಿಲ್ಲ” ಎಂದು ಸಚ್ಚಿಂದ್ರಿಯಾ ಕಟನ್ ಮಿಲ್ಲಿನ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಶ ಭಕ್ತನ ಘೋಷಾರಾಮ ಸಕ್ಸೇನಾರವರು ಕಂಟ್ರೋಲ್ ಆರ್ಡರನ್ನು ಮೀರಿದುದಕ್ಕಾಗಿ, ನ್ಯಾಯಾಧೀಶರು ಅವರಿಗೆ ನಾಲ್ಕು ತಿಂಗಳು ಸಶ್ರಮ ಶಿಕ್ಷೆ, ಎಂಟು ಲಕ್ಷ ರೂಪಾಯಿ ದಂಡ ವಿಧಿಸುತ್ತಾ ತಮ್ಮ ತೀರ್ಪಿನಲ್ಲಿ ಉದ್ಗಾರ ತೆಗೆದಿದ್ದಾರೆ.

ಜಪಾನಿನ ವಿದ್ಯಾರ್ಥಿಗಳಿಗಾಗಿ ಪಂಡಿತ ನೆಹರೂರವರು ಆನೆಮರಿಯನ್ನು ಕಾಣಿಕೆ ಎಂದು ಕಳುಹಿಸಿದ್ದಾರಷ್ಟೇ! ಈಗ ಜಪಾನವು ಭಾರತ ಬಾಲಪ್ರಪಂಚಕ್ಕೆ ಕಾಣಿಕೆ ಎಂದು ಎರಡು ದೊಡ್ಡ ಒತಿಗಳು ಮತ್ತು ಎರಡು ಕಂಡಿ ಮರಿಗಳನ್ನು ಕಳುಹಿಸಿದ್ದು ಅವು ಬೇಗನೆ ಆಲಿಪೂರ ಪ್ರಾಣಿ ಸಂಗ್ರಹಾಲಯಕ್ಕೆ ಬರಲಿವೆಯಂತೆ.

ಮಂಗಳ ಎಸ್. ಓ ದ ಪ್ರಿಟಂ ಜನರಲ್ ರಾಜಾ ಶ್ರೀ ಓಗ್ಸ್ವಲಿಂ ಅವರ ಅಧಿಕಾರ ಸಮಾಪ್ತಿಯು ಸಮೀಪವಿದ್ದು ಆ ಸ್ಥಳಕ್ಕೆ, ರಶಿಯಾದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ನಿಯಮಿಸಬೇಕೆಂಬ ವಿಷಯದಲ್ಲಿ ರಶಿಯಾ ಹಾಗೂ ಬ್ರಿಟನ್ ರಾಷ್ಟ್ರಗಳಲ್ಲಿ ಒಮ್ಮತವಾಗಿರುವುದಾಗಿ ಲಂಡನ್ ರಾಜಕೀಯ ವರ್ಗಗಳಿಂದ ತಿಳಿದು ಬರುತ್ತದೆ.

ಅನೇಕ ವರ್ಷಗಳ ಅನಂತರ ಪ್ರಧಾನ ಮಂತ್ರಿ ನೆಹರೂರವರಿಗೆ ಸ್ವಲ್ಪ ವಿಶ್ರಾಂತಿಯು ದಿಲ್ಲಿ ಹಡಗಿನ ಮೇಲೆ ದೊರಕಿದೆ ಎಂದು. ಇಂಡೋನೇಶಿಯಕ್ಕೆ ದಿಲ್ಲಿ ಹಡಗಿನಲ್ಲಿ ಹೊರಟ ಪ್ರಧಾನ ಮಂತ್ರಿ ಪಂಡಿತ ನೆಹರೂರವರ ಜೊತೆಗಿರುವ ಪಿ. ಟಿ. ಐ ವಿಶೇಷ ಸಂವಾದದಾರನು ರೇಡಿಯೋ ಸುದ್ದಿ ಕಳುಹಿಸಿದ್ದಾನೆ.

ಜುಲೈ ತಿಂಗಳ ಮೊದಲನೆಯ ವಾರವನ್ನು ವೃಕ್ಷಾರೋಪಣದ ವಾರ್ಷಿಕ ರಾಷ್ಟ್ರೀಯ ಉತ್ಸವವನ್ನಾಗಿ ಎಲ್ಲ ಪ್ರಾಂತಗಳು ಆಚರಿಸಬೇಕೆಂದು ಕೇಂದ್ರ ಸರಕಾರದ ಒಕ್ಕಲುತನದ ಶಾಖೆಯು ಪ್ರಕಟಿಸಿ ಹೊರಟಿದೆ.

ಭಾರತ ಸಂಸತಿನ ಸದಸ್ಯರಾದ ಶ್ರೀ ಎಚ್. ವಿ. ಕಾಮತರು ಮಂಗಳೂರಿನಲ್ಲಿ ತಮಗೆ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತ ಲಿಯಾಕತರು ಅಮೇರಿಕದಲ್ಲಿ ಪ್ರಕಟಿಸಿದ ಅಕ್ಬನ ಸಂಘದ ಸಿಂಹಳ ಭೀತಿಯನ್ನು ವ್ಯಕ್ತಪಡಿಸಿದರು. ಒಗ್ಗಿ ಗಂಭೀರ ಆಲೋಚನೆ ಮಾಡಬೇಕಾಗಿದೆ ಎಂದರು.

ಧ್ಯಕ್ಷ ಶ್ರೀ ಜೆ. ಶಿವಷಣ್ಮುಖಂ ಪಿಳ್ಳೆಯವರು ಹೇಳಿದರು. ಅಸ್ಪೃಶ್ಯತೆಯ ನಿವಾರಣೆಗೆ ಧರ್ಮಾಂತರ ಹೊಂದುವುದು ಯೋಗ್ಯವಲ್ಲವೆಂದೂ ಅವರು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಅಧ್ಯಕ್ಷಪದದ ಚುನಾವಣೆಗೆ ತಾವು ಪುನಃ ಸ್ಪರ್ಧಿಸಲಿಚ್ಛಿಸುವುದಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯನವರು ಪಿ. ಟಿ. ಐ ಪ್ರತಿನಿಧಿಗೆ ಹೇಳಿದರು. ಜುಲೈಯಲ್ಲಿ ಸೇರಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅಧ್ಯಕ್ಷ ಚುನಾವಣೆಯ ದಿನಾಂಕಗಳನ್ನು ತಾತ್ಕಾಲಿಕವಾಗಿ ನಿರ್ಧರಿಸಲಾಗುವುದೆಂದು ಕಾಂಗ್ರೆಸ್ ಕಾರ್ಯದರ್ಶಿ ಕಳ ವೆಂಕಟರಾಯರು ತಿಳಿಸಿದರು.

ಭಾರತ ಸರಕಾರದ ವ್ಯವಸಾಯ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರ ಕೋರಿಕೆ ಮೇರೆಗೆ ಹೊಸ ಡೆಲ್ಲಿಯಲ್ಲಿರುವ ವಿದೇಶ ರಾಯಭಾರಿ ಕಚೇರಿಗಳವರು ಜುಲೈ ಮೊದಲನೆಯ ವಾರದಲ್ಲಿ ಸಸಿಗಳನ್ನು ನೆಡುವ ಸಮಾರಂಭದಲ್ಲಿ ಭಾಗವಹಿಸುವುದಾಗಿ ಒಪ್ಪಿದ್ದಾರೆ. ರಾಜಘಾಟಿನಲ್ಲಿ ಮಹಾತ್ಮಾ ಗಾಂಧಿಯವರ ಸಮಾಧಿ ಬಳಿ

# HINDUSTHAN

## CO-OPERATIVE INSURANCE SOCIETY LIMITED.

Head Office: CALCUTTA Est: 1907.

## "SPEAKS IN CRORES"

Extract from the Balance Sheet for the Year 1949

| | |
|---|---|
| Total Business on the books as on 31-12-1949 | Rs 69,73,23,218 |
| NEW BUSINESS COMPLETED DURING THE YEAR 1949 alone | Rs. 13,36,06,243 |
| Total Assets of the Society as on 31st December, 1949 | Rs 15,88,07,289 |
| Total Life Assurance Fund as on 31-12-1949 | Rs 15,49,39,281 |

*To represent or insure please contact*

K. S. RAMIAH,
Branch Manager,
Kempegowda Road — BANGALORE 2

ದೇಶದಲ್ಲಿಯ ಹರಿಜನರ ಹಿತ ಭಿವೃದ್ಧಿ ಸಾಧನೆಗಾಗಿ ರಾಜ್ಯಘಟನೆಯಲ್ಲಿ ಕೊಟ್ಟಿರುವ ಕೆಲವು ವಿಶೇಷ ಧಿಕಾರಗಳನ್ನು ತೆಗೆದುಹಾಕಬೇಕೆಂದು ಸಾಗರಪ್ರಾಂತದಲ್ಲಿ ನಡೆದ ಆ ಭಾ. ಹಿಂದುಳಿದ ವರ್ಗದ ಶಾಸನ ಸಭಾ ಸದಸ್ಯರ, ಧುರೀಣರ ಮತ್ತು ಕಾರ್ಯಕರ್ತರ ಸಂಪಕ್ತಿನ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತ ಮದ್ರಾಸು ಶಾಸನ ಸಭಾ

ದಲ್ಲಿ ನಡೆಯುವ ಸಸಿಗಳನ್ನು ನೆಡುವ ಸಮಾರಂಭ ಕಾರ್ಯದಲ್ಲಿ ಭಾರತದ ಅಧ್ಯಕ್ಷ ರಾಜೇಂದ್ರ ಪ್ರಸಾದರು ಮಹಾತ್ಮ ಗಾಂಧಿಯವರ ಸಮಾಧಿ ಬಳಿ ಎಲ್ಲರಿಗಿಂತ ಮೊದಲು ಸಸಿಯನ್ನು ನೆಡುವರು.

ಬರುವ ಆಗೋಸ್ಟು ತಿಂಗಳಲ್ಲಿ ನಾಸಿಕದಲ್ಲಿ ಜರುಗಲಿರುವ ೫೬ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸ್ಥಳಕ್ಕೆ

ಗಾಂಧಿನಗರವೆಂದು ನಾಮಕರಣ ಮಾಡಲು ಶ್ರೀ ಬಿ. ಎಸ್. ಹೀರೆಯವರ ಅಧ್ಯಕ್ಷತೆಯಲ್ಲಿ ಸೇರಿದ ತಾತ್ಪೂರ್ವಿಕ ಸ್ವಾಗತ ಸಮಿತಿಯು ಒಂದು ನಿರ್ಣಯವನ್ನು ಕೈಗೊಂಡಿದೆ. ಈ ಗಾಂಧೀನಗರದ ಮಹಾದ್ವಾರದ ಮೇಲೆ ರಾಯಗಡದ ಮಾದರಿಯಂತಿರುವುದು. ೨ ಲಕ್ಷ ಜನ ಪ್ರೇಕ್ಷಕರಲ್ಲಿ ಪ್ರತಿನಿಧಿಗಳಿಗಾಗಿ ಮಂಟಪವನ್ನು ನಿರ್ಮಿಸಲಾಗುವುದು.

ತಮ್ಮ ಇಲಾಖೆಯ ೧೬೩ ಮಂದಿ ಕಾರಕೂನರನ್ನು ರಿಟ್ರೆಂಚ್ ಮಾಡಿದ ಬಗ್ಗೆ ನಿಷೇಧ ವ್ಯಕ್ತಪಡಿಸಲು ಕೈಗಾರಿಕೆ ಮತ್ತು ಸ್ಟ್ರೈಕ ಮಂತ್ರಿಮಂಡಲದ ಸುಮಾರು ಸಾವಿರಕ್ಕೆ ಮೇಲ್ಪಟ್ಟ ಉದ್ಯೋಗಿಗಳು ಪೆನ್ ಕೆಳಗಿಟ್ಟು ಮುಷ್ಕರ ಹೂಡಿದರು; ಎಂಟು ಮಂದಿ ಉಪವಾಸ ಹಿಡಿದರು; ಉದ್ಯೋಗಿಗಳ ಪರವಾಗಿ ಶಿಷ್ಟಮಂಡಲ ಪ್ರಾಕ್ಟರ ಕಚೇರಿ ಸಚಿವರನ್ನು ಕಂಡಿತು.

ಅಖಿಲ ಭಾರತ ಟಿಸ್ಟ ಕ್ಲಬ್ಬಿನ ಗಾರರು ಬಾರಿಯ (ಇವರಿಗೆ ಪ್ರಾಯ ೩೦) ರವರು ಬ್ರಿಟಿಷ್ ಚಾನಲ್ (೩೧ ಮೈಲು) ಈಜಿ ದಾಟುವ ಸಾಹಸ ಕೈಕೊಳ್ಳುವ ನಿರ್ಧಾರಕ್ಕೆ ಬಂದಿರುವರು. ಇವರ ಹೆಸರು ಕ್ವೆಲನ್

ಮಹಿಸೂರು ಕಳೆದ ಮೂರು ವರ್ಷಗಳಲ್ಲಿ ನಿರಾಶ್ರಿತರ ಪುನರ್ವಸತಿ ಬಗ್ಗೆ ಭಾರತ ಸರಕಾರವು ಚಾಲ್ತಿ ವರ್ಷಕ್ಕೆ (೧೯೫೦-೫೧) ೨೫ ಕೋಟಿ ರೂಪಾಯಿ ಮಂಜೂರು ಮಾಡಿರುವುದು.

# ಆಶೆ.

ಲೇ:—ಶ್ರೀ ಕೆ. ಸಿ. ಭೀಮಯ್ಯ, ಪೊನ್ನಂಪೇಟೆ.

ಪ್ರಪಂಚದ ದೈಹಿಕ ಜೀವನದಲ್ಲಿ ಸತಿ ಪತಿಗಳಿಗೆ ಎಷ್ಟು ಸಂಬಂಧವಿದೆಯೋ ಅಷ್ಟೇ ಸಂಬಂಧವು ಮಾನವನ ಜೀವನಕ್ಕೂ, ಅವನ ಜೀವನದಾದ್ಯಂತ್ಯದ ವರೆಗೆ ಎಡೆಬಿಡದೆ ಹಿಂಬಾಲಿಸುವ ಆ ಆಶೆಯೆಂಬೊಂದು ಅಗೋಚರ ವಸ್ತುವಿಗೂ ಇದೆಯೆನ್ನಬಹುದು. ಜೀವನವೆಂಬ ಮಹಾವೃಕ್ಷವು ಬೆಳೆಯುತ್ತಾ ಹೋಗುವಂತೆಲ್ಲಾ ಅದರಲ್ಲಿ ಆಶೆಗಳೆಂಬ ಕೊಂಬೆಗಳು ಸೂರ್ವರ್ಷಿಯಾಗಿ ಚಿವಲೊಡೆದು, ಸಾವಿರ ಮಡಿ ಹೂಬಿಟ್ಟು ತನ್ನ ಜೀವನದ ಸಾರ್ಥಕ್ಯಕ್ಕಾಗಿ ಎಡೆಬಿಡದೆ ದುಡಿಯುತ್ತವೆ. ಆದರೆ ಆ ಹೂಗಳೆಲ್ಲಾ ಆ ದಿನನಂತರ, ಅವುಗಳನ್ನು ಚೆನ್ನಾಗಿ ಪರಿಶೀಲಿಸಿನೋಡಿದರೆ, ಅವುಗಳಲ್ಲೆಷ್ಟೋ ಹುಸಿಹೂಗಳೆಂಬುದು ನಮ್ಮ ಗೋಚರಕ್ಕೆ ಬಂದು, ನಮ್ಮನ್ನು ಆಶ್ಚರ್ಯಧಾನಗ್ರಸ್ತರನ್ನಾಗಿ ಮಾಡುತ್ತವೆ. ಆ ಮೇಲೆ ಉಳಿದ ಹೂಗಳು ಕಾಯಾಗಿ, ಅಂತ್ಯದಲ್ಲಿ ಫಲವನ್ನು ಕೊಡುವ ಸಮಯದಲ್ಲಿ ನೋಡಿದರೆ, ಅದರಲ್ಲಿ ಒಂದು ಇಲ್ಲೊಂದು ಕಾಣ್ಬೇ ನಮಗೆ ಕಾಣಸಿಗವುದು. ಇದು ಜೀವನವೃಕ್ಷದ ಬೆಳವಣಿಗೆಯು ಒಂದು ಸೂಕ್ಷ್ಮ ನೋಟ.

ಮಾನವನು ತಾನು ಜೀವನವನ್ನೆತ್ತುವಾಗಲೇ, ಅವನೊಡನೆ ಆಶೆಯೆಂಬೊಂದು ಅಗೋಚರ, ಅವರ್ಣನೀಯ ಚೈತನ್ಯವೊಂದು ಅವನ ಚಿತ್ತ ಹೃದಯಗಳಲ್ಲಿ ಸೇರಿ ಅವನೊಡನೆಯೇ ತಾನೂ ಬೆಳೆಯುತ್ತಾ ಬರುತ್ತದೋ ಎಂಬಂತೆ ತೋರುತ್ತದೆ. ಆಗತಾನೇ ಮಾತೆಯ ಉದರದಿಂದ ಹೊರಬಿದ್ದ ಶಿಶುವಿನಿಂದ ಹಿಡಿದು, ಅಂತ್ಯದಲ್ಲಿ ಮುಪ್ಪನ್ನು ಪಡೆದನಂತರ, ಪ್ರಾಣವಾಯುವು ಶರೀರದಿಂದ ಮರೆಯಾಗುವವರೆಗೂ, ಒಂದಲ್ಲ ಒಂದು ವಿಧದಲ್ಲಿ ಈ ಆಶೆಯು ಅವನನ್ನು ಕಾಡುತ್ತಲೇ ಇರುವುದು ನಮಗೆ ಗೋಚರವಾಗುತ್ತದೆ. ಆದರೆ ನಾವು ಪ್ರಕೃತಿಯ ವೈಶಿಷ್ಟ್ಯತೆಗೆ ಅನ್ಯೋನ್ಯದು ಗವ ನವಿಟ್ಟು ಸೂಕ್ಷ್ಮ ಪರಿಶೀಲನೆಗೆ ಹೋಗದ ಕಾರಣ, ಅವೆಲ್ಲವೂ ನಮ್ಮ ಕಣ್ಣಿನ ಅಂಚಿನಿಂದ ಹರಿದು, ನಮ್ಮ ದೃಷ್ಟಿಗೆ ಸಿಲುಕದಂತೆ ಮಾಯವಾಗಿ ಹೋಗುವುವು.

ಆಶೆಯೆಂಬುವುದು ಮಾನವನು ತಾನಾಗಿ ನಿರ್ಮಿಸಿಕೊಂಡ ವಸ್ತುವಲ್ಲ. ಪ್ರಕೃತಿದೇವಿಯೇ, ತಾನು ಸೂತ್ರಧಾರಿಯಾಗಿ, ತನ್ನ ಮಕ್ಕಳನ್ನು ವಿಶ್ವರಂಗ ಭೂಮಿಯಲ್ಲಿ ನಾಟಕವಾಡಿಸಲು ಹೂಡಿದ ಒಂದು ಉಪಾಯವದು. ಈ ಆಶೆಯು ಅವರಿಗೆ ಅವಳ ಕೊಡದಿದ್ದರೆ ಮಾನವರ ಜೀವನದಲ್ಲಿ ವಿವಿಧತೆ, ಭಿನ್ನತೆ, ವಿಶಿಷ್ಟತೆಗಳಿಗೆ ಅಸ್ಪದವೇ ಇರುತ್ತಿರಲಿಲ್ಲ. ಸಕಲರ ಜೀವನ ರೀತಿಯೂ ಒಂದೇ ತೆರನಾಗಿರುತ್ತಿತ್ತು.

ಮಾತೆಯ ಮಡಿಲಲ್ಲಿ ಬಿದ್ದು ಒದ್ದಾಡುತ್ತಿರುವ ಹಸುಳೆಗೆ ತನ್ನ ತಾಯಿ ಎದೆಹಾಲನ್ನುಣಿಸಿ ಸಾಕಬೇಕೆಂಬ ಆಶೆ. ತೊತ್ತಳ ಸ್ನೇಹಿತರುಗಳನ್ನು ಹಿಡಿದು, ದಾರಿಯುದ್ದಕ್ಕೂ ಆಟವಾಡುತ್ತಾ ಶಾಲೆಗೆ ಹೋಗುವ ಪುಟ್ಟ ಮಕ್ಕಳಿಗೆ, ಪಾಠ ಬಿಟ್ಟು, ಒನ್ನೆ ಆಟವಾಡತೊಡಗುವ ಸಮಯ ಬಂದರೆ ಸಾಕೆಂಬ ಆಶೆ. ಬಾಲ್ಯವು ಕಳೆದು ಯೌವನವು ಪ್ರಾಪ್ತವಾಗತೊಡಗಿದಾಗ, ವೇಷಭೂಷಣಗಳ ಒಯ್ಯಾರದಲ್ಲಿ ವೈಭವ.ರಿಯುವ ಆಶೆ—ಯೌವನವು ಬೆಳೆದು ಫಲವನ್ನೀಯುವ ಸಮಯ ಬಂದಾಗ ಪ್ರೇಯಸಿಯೊಬ್ಬಳ ಚಿಂತನೆಯು ತೊಡಗುವುದು. ಯಾವಳಾದರೊಬ್ಬ ಯುವತಿಯು ಕಡೆನೋಟದ ಸೌಂದರ್ಯಕ್ಕೆ ಮರುಳಾಗಿ ಹೃದಯ ಚಿತ್ತಗಳು ನೆರೆಯಲ್ಲಿ ಸಿಕ್ಕಿದಂತಾಗಿ ಅವಳ ಸಾನ್ನಿಧ್ಯವನ್ನು ಸೇರುವ ಆಶೆಯು ಅವನನ್ನು ಕೊರಗಿಸತೊಡಗುವುದು. ಅನಂತರ ಆ ಆಶೆಯು ಈಡೇರಲು ಜೀವನದ ಸವಿಯನ್ನುಂಡು, ಸ್ವರ್ಗಸುಖ ಸೋಪಾನ (ಹೆಬ್ಬಯಕೆ!) ವನ್ನೇರಿ, ರಾರಾಜಿಸುವ ಆಶೆಯೊಡವ ಡ ವುದು! ಜೀವನದ ಸಂಗಾತಿಯು ಸಿಕ್ಕಿದನಂತರ ಗೃಹಕೃತ್ಯದ ಜವಾಬ್ದಾರಿಯು ಹೆಗಲಮೇಲೆ ಬಿದ್ದು, ಗತಿಯೆಂಡನೆ ಜೀವನವನ್ನು ಸುಗಮವಾಗಿ ನಡೆಸಲು ಬೇಕಾಗುವ ಸಲಕರಣೆಗಳನ್ನು ದೊರಕಿಸುವ ಅನಂತರ ಆನಂದಮಯ ಸಾಂಸಾರಿಕ ಜೀವನವನ್ನು ನಡೆಸುವ ಆಶೆಯೊಂದು ಅವನನ್ನು ಹಿಂಬಾಲಿಸುತದೆ. ಈ ರೀತಿ ಒಂದರನಂತರೊಂದರಂತೆ ಈ ಆಶಾಕಿರಣಗಳು ಮಾನವನಮೇಲೆ ತಮ್ಮ ಪ್ರಭಾವವನ್ನು ಬೀರಿ ಅವನು ತನ್ನ ಜೀವನವನ್ನೆತ್ತಿಗೊಳಿಸುವಂತೆ ಮಾಡುತವೆ. ಲೌಕಿಕ ಜೀವನವನ್ನು ನಿರರ್ಥಕವೆಂದು, ಅದನ್ನು ತ್ಯಜಿಸಿ, ಆಧ್ಯಾತ್ಮಿಕ ಜೀವನವನ್ನು ಕೊಂಡವ ಹಾತಪಸ್ವಿಗಳಿಗೂ ಒಂದು ಆಶೆಯುಂಟು ಇರುತದೆ—ಅದು ಕೈವಲ್ಯ ಮಾರ್ಗದ ಆಶೆ! ಹೀಗಿರುವಾಗ ವಿಶ್ವದಲ್ಲಿ ಜನ್ಮವನ್ನೆತ್ತಿರುವ ಪ್ರತಿಯೊಂದು ಜೀವಿಗೂ ಆಶೆಯಿಲ್ಲದೆ ಇಲ್ಲ ಎಂಬುದು ಖಚಿತವಾಗುತ್ತದೆ.

ಆಶೆಯೆಡಗೂಡಿಗ ಭಾವೀ ಹೊಂಗನಸನ್ನು ನಾವು ಪ್ರತಿಯೊಬ್ಬರೂ ಕಾಣುತ್ತಿದ್ದೇವೆ. ಆದರೆ ಮೊದಲೆಂದಂತೆ, ಅವುಗಳಲ್ಲಿ ಕೆಲವೇ ನಮಗೆ ಫಲವನ್ನೀಯುವುವಲ್ಲದೆ ಜೀವಿಯಲ್ಲಿ ಒಂದು ವೇಳೆ ಆಶೆಗಳೆಲ್ಲವೂ ಈಡೇರಿದರೂ ಸಹ, ಮಾನವನು ಅದರಿಂದ ತೃಪ್ತಿ ಹೊಂದುವಂತಿಲ್ಲ. ಅವನ ಆ ಆಶಾದ ಹವನ್ನು ನಿವಾರಿಸ ಮಂತ್ರಸ ಒಂದು ಪ ನೀಯುವು ವಿಶ್ವದಲ್ಲೇ ಇಲ್ಲವೆನ್ನಬಹುದು. ಮಾನವನ ಆಶಾ ಮಾಲೆಗೆ ಅಂತ್ಯವೇ ಇಲ್ಲ. ಆ ಮಾಲೆಯಾಗ ಕಗ್ಗ ಪೋಣಿಸಲ್ಪಟ್ಟಿರುವ ಆಶಾಮಣಿಗಳನ್ನು ಗೆಲ್ಲಲಿಕ್ಕಾಗಿ ಮಾನವನು ತನ್ನ ಜೀವನದ್ಯಾಂತ್ಯವೂ, ಪ್ರಕೃತಿಯೊಡನೆ ಹೋರಾಡುತ್ತಾನೆ. ವಿಜಯಿಯಾದರೆ ತಾತ್ಕಾಲಿಕ ಸಂತಸವನ್ನನುಭವಿಸುತ್ತಾನೆ. ಅಪಜಯವನ್ನು ಹೊಂದಿದರೆ ತಾತ್ಕಾಲಿಕ ದುಃಖವನ್ನನುಭವಿಸುತ್ತಾನೆ. ಒಟ್ಟಿನಲ್ಲಿ ಹೇಳುವುದಾದರೆ ಆಶೆಯೆಂಬ ರಮ್ಯಣಿಯೋವರಳನ್ನು ಗೆದ್ದು ವಶಪಡಿಸಿಕೊಳ್ಳಬೇಕೆಂಬ ಹಂಬಲದಿಂದ ಮಾನವನು ಪ್ರಕೃತಿಯೊಡನೆ ಹೋರಾಡಿ, ಹೋರಾಡಿ ಅವನ ಹೋರಾಟವು ಅಂತ್ಯವಾಗುವುದಕ್ಕೆ ಮೊದಲೇ ಅವನ ಆಶೆಗಳೀಡೇರುವುದಕ್ಕೆ ಮುಂಚಿತವಾಗಿಯೇ, ಯಮನ ಕರೆಗೆ "ಓ" ಗೊಡಬೇಕಾಗಿ ಬರುತ್ತದೆ.

ಪ್ರಪಂಚದಲ್ಲಿ 'ಆಶೆ'ಯೆಂಬೊಂದು ಅದ್ಭುತ ಚೇತನವೊಂದಿಲ್ಲದಿದ್ದಿದ್ದರೆ, ಸಕಲ ಮಾನವರ ಜೀವನದಲ್ಲೂ, ಸಾಮ್ಯತೆ ನೆಲೆಗೊಂಡು, ವೈವಿಧ್ಯತೆ, ವೈಶಿಷ್ಟ್ಯತೆಗಳು ಮಾಯವಾಗಿ, ಇಂದು ವಿಶ್ವದಲ್ಲಿ ಕಾಣುತ್ತಿರುವ ಯುದ್ಧ, ಅನ್ಯಾಯ, ಮೋಸ, ಕೊಲ್ಲು, ಕೊಲೆ, ಗಲಿಬಿಲಿ, ಅತ್ಯಾಚಾರ ಮಾನವನ ಜೀವನಕ್ಕೆ ಅಹಿತವನ್ನುಂಟುಮಾಡುವಂತಹ ಕಾರ್ಯಗಳು ಕಾಣಿಸಿಯದೆ, ಮಾನವರೆಲ್ಲರೂ ಸಹೋದರ ಭ್ರಾತೃಪ್ರೇಮದಿಂದ ಬಂಧಿಸಲ್ಪಟ್ಟು, ಏಕಮಾತಾ ಪಿತೃಗಳ ಮಕ್ಕಳಂತೆ, ಸತ್ಯ, ಸಹೋದರತೆ, ಸಮಾನತೆಗಳಿಂದ, ಒಟ್ಟಾಗಿ ಜೀವನವನ್ನು ನಡೆಸುತ್ತಿದ್ದರೋ ಏನೋ! ಆದರೆ ಇದು ಬರಿಯ ಹಗಲು ಕನಸು! ಎಲ್ಲಿಯ ವರೆಗೆ ಪ್ರಪಂಚದ ಜೀವಿಗಳ ಹೃದಯ ಚಿತ್ತಗಳು ಆಶೆಯ ಜೊತೆಗೂಡಿರುವುವೋ, ಅಲ್ಲಿಯವರೆಗೆ ಈ ಅಹಿತಕಾರ್ಯಗಳಿಗಂತ್ಯವಿಲ್ಲ. ಈ ಅಹಿತಕಾರ್ಯಗಳಿಗಂತ್ಯವಿಲ್ಲದಿರುವ ವರೆಗೂ ಪ್ರಪಂಚದಲ್ಲಿ ಶಾಂತಿ ನೆಲಸುವಂತಿಲ್ಲ. ಆದುದರಿಂದ ಪ್ರಪಂಚದ ಮಾನವರ ಜೀವನದ ಪ್ರತಿಯೊಂದು ಕಾರ್ಯಗಳೂ, ಚಲನವಲನಗಳೂ, ಕದನ ಹವನಗಳೂ, ಅವರನ್ನು ಬಂಧಿಸಿರುವ ಆ 'ಆಶೆ' ಯೆಂಬ ಸ್ತ್ರೀಯ ಪ್ರೇರಣೆಯಂತೆ, ಅವಳ ಆಜ್ಞೆಯಂತೆ, ಅವಳ ಇಷ್ಟದಂತೆ, ಕೆಲವೊಮ್ಮೆ ದುಃಖದಿಂದ ಕೆಲವೊಮ್ಮೆ ಸುಖದಿಂದ, ಒಂದು ವಿಧದಲ್ಲಿ ಸಾಗುತ್ತಿವೆ.

---

ನಿವೃತ್ತರಾದ ಸೊಸೈಟಿಗಳ ಅ ರಿಸ್ಟ್ರಾರ್ ಆಗಿ ಮಡಿಕೇರಿ ಜಿಲ್ಲಾ ಕೇಂದ್ರದ ಸವೆ್ಯಕ ನನ್ನು ಜನವರಿ ತಾರೀಖಿನಿಂದ ಕರ್ತಹಿಸುತ್ತಿದ್ದ ಡೆಯು ವುದು ಸಮ್ಮೇಳನಕ್ಕೆ ಹಾಜರಾಗಿದ್ದ ಶಿಷ್ಯವಂದಲಕ್ಕೆ ಶ್ರೀ ಎಸ್ ಗೋಪಾಲಸ್ವಾಮಿ ಅಯ್ಯಂಗಾರರು ಮುಂದಾಳಾಗಿ ವಹಿಸಬಹುದೆಂದಾ ಅವರ ಜೊತೆಯಲ್ಲಿ ಪುನರ್ವಸತೀ ಸಹಾಯಕ ಮಂತ್ರಿ ಶ್ರೀ ಎ ಪಿ ಜೈನ್ ಪತ್ರ ಪುನರ್ವಸತಿ ಮಂತ್ರಿ ಮಂಡಲದ ಇತರ ಕೆಲವು ಸ್ವ ಅಧಿಕಾರಿಗಳು ಜೊತೆಗಿರಬಹುದೆಂದು ನಿರೀಕ್ಷಿಸಲಾಗಿದೆ.

---

SUGARCANE VINEGAR!

ಸಿರ್ಕವನ್ನೇ ಉಪಯೋಗಿಸಿರಿ!

ಸರಕಾರದ ನಿಯಂತ್ರಣದಲ್ಲಿ, ವೈಜ್ಞಾನಿಕ ರೀತಿಯಲ್ಲಿ ಮಂಗಳೂರು ಫೆಲಿಕ್ಸ್ ಪೈ ಬ್ರಿವರಿಯಲ್ಲಿ ತಯಾರಿಸಲ್ಪಟ್ಟದ್ದು.

ದಯವಿಟ್ಟು ಒಂದು ಸಲ ಪರೀಕ್ಷಿಸಿ ಗುಣ ವಿಶೇಷವನ್ನು ತಿಳಿದುಕೊಳ್ಳಿ.

ಎಲ್ಲೆಲ್ಲೂ ಏಜೆಂಟರು ಬೇಕಾಗಿದ್ದಾರೆ ಫ ರಾಂ ಕಮಿಶನ್ ಸಿಗುವುದು

ಹೆಚ್ಚಿನ ಮಾಹಿತಿಗೆ ಬರೆಯಿರಿ:—

ಅಲೆಕ್ಸ್ ಪೈ ಬ್ರಿವರಿ, ಫೆಲಿಸ್‌ವಾಡಾ, ಮಂಗಳೂರು.

Alex pai Brewery, Feliswada, MANGALORE.

ENTERTAINING FAMILY & FRIENDS

EASY NOW!!!

NOODLE OR NOOPUTU (ಸೇವಿಗೆ)



making with this all BRASS easy handling Machine in a Variety of Sizes and Shapes is a boon to House wives.

Rs. 23/8 (Postage extra.)

GOBIND & CHENGPA,

22 CANNING STREET, CALCUTTA.

# ಕಾಂಗ್ರೆಸ್ ಪ್ರೆಸಿಡೆಂಟರ ಆಯ್ಕೆ

ಲೇ:—ಶ್ರೀ ಬಿ. ಡಿ. ಗಣಪತಿ, ಮಡಿಕೇರಿ.

ಮುಂಬರುವ ಕೆಲವು ವಾರಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯಾಗುವದು. ಹಾಗೆ ಚುನಾಯಿತರಾಗುವವರು ಕಾಂಗ್ರೆಸ್ಸಿನ ಅಧಿಕಾರ ಸೂತ್ರವನ್ನು ಮುಂದಿನ ಮೂರು ವರ್ಷಗಳ ವರೆಗೆ ಹಿಡಿಯುವರು. ಆದರೆ ಕಾಂಗ್ರೆಸ್ ಅಧ್ಯಕ್ಷಪದ ಹಿಂದಿನಂತಲ್ಲ. ೧೯೪೬ನೇ ಸೆಪ್ಟೆಂಬರ್ ಎರಡರಿಂದ ಕಾಂಗ್ರೆಸು ಕೇಂದ್ರದಲ್ಲಿ ತಾತ್ಕಾಲಿಕ ಸರಕಾರ ಸ್ಥಾಪಿಸಿ ಅಧಿಕಾರ ಸ್ವೀಕರಿಸಿದಂದಿನಿಂದ ಕಾಂಗ್ರೆಸ್ ಅಧ್ಯಕ್ಷಪದವಿಗಿದ್ದ ಘನತೆಯು ಕಡಿಮೆಯಾಗುತ್ತಾ ಬಂದಿದೆ. ಕಾಂಗ್ರೆಸು ಸಂಸ್ಥೆಯು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದಾಗ ಅದರಲ್ಲಿ ಪವಿತ್ರತೆ ಇತ್ತು. ಅದರ ಅಧ್ಯಕ್ಷಸ್ಥಾನಕ್ಕೇರಿದವರು ಹಿರಿಯ ಜನಸೇವಕರೆಂದು ಪರಿಗಣಿಸಲ್ಪಡುತ್ತಿದ್ದರು. ಕಾಂಗ್ರೆಸಿನ ಕೈಗೆ ಅಧಿಕಾರ ಬಂದು ಅಧಿಕಾರ ಗದ್ದುಗೆಗೇರಲು ಕಾಂಗ್ರೆಸಿನವನೆಂಬುದೊಂದು ರಹದಾರಿಯಾಯಿತಾಗಲು ಸಿಕ್ಕಿಸಿಕ್ಕಿದವರೆಲ್ಲ 'ನ್ಯೂ ಕಾಂಗ್ರೆಸ್' ಎಂದು ಆ ಸಂಸ್ಥೆಗೆ ಸೇರಿದರು, ಅಧಿಕಾರದ ಆಸೆಯಿಂದ ಅನೇಕ ಕಾಂಗ್ರೆಸಿಗರು ತಮ್ಮ ತತ್ವಸಿದ್ಧಾಂತಗಳನ್ನು ಬಿಟ್ಟು ಸ್ವಪ್ರೋಟಗಿಳಿದರು. [illegible] ಕಾಂಗ್ರೆಸ್ಸಿನ ಅಂತಸ್ಥ ಕೆಳಗಿಳಿದುದಲ್ಲದೆ ಕಾಂಗ್ರೆಸ್ ಅಧ್ಯಕ್ಷಪದದ ಗೌರವವು ಕೇಂದ್ರದ ಒಬ್ಬ ಮಂತ್ರಿಯಷ್ಟು ಆಕರ್ಷಣೀಯವಾಗಿಲ್ಲ. ಇಂದು ದೇಶದಲ್ಲಿಯೂ ಕೂಡ ಕೇಂದ್ರ ಮಂತ್ರಿಯೊಬ್ಬನಿಗೆ ದೊರೆಯುವ ಸನ್ಮಾನ, ಗೌರವ ಕಾಂಗ್ರೆಸ್ ಪ್ರೆಸಿಡೆಂಟರಿಗೆ ದೊರೆಯುತ್ತಿಲ್ಲ. ಅಂದರೆ ಕಾಂಗ್ರೆಸ್ಸಿನ ಅಧ್ಯಕ್ಷನಾಗುವದು ರಾಜಕೀಯ ರಂಗದ [illegible] ಏಣಿಯ ಮೆಟ್ಟಿಲಾಗಿದ್ದರೆ ಇಂದು ಕೇಂದ್ರ ಮಂತ್ರಿ ಮಂಡಲದಲ್ಲಿ ಸ್ಥಾನಪಡೆಯುವದು ಅಂತಿಮ ಗುರಿಯಾಗಿದೆ.

ಕಾಂಗ್ರೆಸ್ಸಿನ ಪ್ರೆಸಿಡೆಂಟರಾಗಲು ಹಿಂದಿನಂತೆ ದೇಶದ ಸರ್ವ ಪ್ರಥಮ ನಾಯಕರೇ ಆಗಬೇಕೆಂದಿಲ್ಲ. ನೆಹರೂ, ಪಟೇಲ್, ಪ್ರಸಾದರಂಥವರು ಇಂದು ಕಾಂಗ್ರೆಸಿನ ಅಧ್ಯಕ್ಷರಾಗಬೇಕೆಂದಿಲ್ಲ. ಅದಕ್ಕಿಂಥಾ ಪ್ರಾಮುಖ್ಯವಾಗಿ ಕೇಂದ್ರದ ಆಡಳಿತ ರಂಗವನ್ನು ಪರಿಗಣಿಸಲ್ಪಟ್ಟಿದೆ. ಅದ್ದರಿಂದಲೇ ಒಮ್ಮೆ ಕಾಂಗ್ರೆಸಿನಲ್ಲಿದ್ದ ಮುಂದಾಳುಗಳೆಲ್ಲ ಆಡಳಿತದ ವಿವಿಧ ಅಂತಸ್ತುಗಳಲ್ಲಿ ಸೇರಿಕೊಂಡು ಕಾಂಗ್ರೆಸು ಅನಾಥ [illegible] ಆಗಿದೆ.

ಕಾಂಗ್ರೆಸಿನ ಐವತ್ತಾರನೇ ಅಧಿವೇಶನವು ನಾಸಿಕದಲ್ಲಿ ಬರುವ ಆಗಸ್ಟು ತಿಂಗಳಲ್ಲಿ ಜರಗುವದು. ಅದಕ್ಕೆ ಅಧ್ಯಕ್ಷರ ಚುನಾವಣೆ ಆಗಬೇಕಿದ್ದು ದೇಶದ ಉದ್ದಗಲಕ್ಕೂ ಕಾಂಗ್ರೆಸ್ ಪ್ರತಿನಿಧಿಗಳ ಆಯ್ಕೆ ಆಗಿದೆ. ಅಧ್ಯಕ್ಷಸ್ಥಾನಕ್ಕೆ ಯಾರ ಹೆಸರುಗಳು ಸೂಚಿಸಲ್ಪಡುವವೋ ಇನ್ನೂ ನಿರ್ದಿಷ್ಟವಾಗಿಲ್ಲ. ಹೆಸರು ಸೂಚಿಸಲ್ಪಟ್ಟರೂ ಅಧಿಕಾರ ವಹಿಸಲು ಒಪ್ಪುವವರು ಇಂದು ಕಡಿಮೆ. ಕಾಂಗ್ರೆಸ್ ಕಟ್ಟಡದ ರಚನೆ ಇಂದು ಚೆನ್ನಾಗಿಲ್ಲ. ಶಿಥಿಲಗೊಂಡು ಮುರಿದು ಬೀಳುವಂತಿರುವ ಕಾಂಗ್ರೆಸಿನ ಜವಾಬ್ದಾರಿ ಹೊರುವದು ಇಂದು ಕೆಲವರಿಗೆ ಬೇಕಿಲ್ಲ. ಈಗ ಪ್ರೆಸಿಡೆಂಟರಾಗಿರುವ ಡಾ. ಪಟ್ಟಾಭಿ ಸೀತಾರಾಮಯ್ಯನವರು ಮುಂದೆ ತಾನು ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಕಾಂಗ್ರೆಸ್ ಡೆಲಿಗೇಟರುಗಳು ಯಾರನ್ನು ಆರಿಸುವರೆಂದು ನೋಡಬೇಕಾಗಿದೆ. ನೆಹರೂ, ಪಟೇಲ್, ಮುಂತಾದವರ ಹೆಸರನ್ನು ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಬಹುಶಃ ಯಾರೂ ಸೂಚಿಸಲಾರರು. ಪಟ್ಟಾಭಿಯವರಂತವರೊಬ್ಬರ ನೇಮಕವಾಗಬಹುದು. ಆ ರೀತಿಯ ಆಯ್ಕೆಯಾದರೆ ಕಾಂಗ್ರೆಸ್ ಚೇತರಿಸಿಕೊಳ್ಳುವ ಸಾಧ್ಯತೆ ಇರದು. ಕಾಂಗ್ರೆಸನ್ನು ಉಳಿಸುವ ಜವಾಬ್ದಾರಿ ಡೆಲಿಗೇಟರುಗಳ ಮೇಲಿದೆ. ಸರ್ದಾರ್ ಪಟೇಲರಂಥ ವ್ಯಕ್ತಿ ಕಾಂಗ್ರೆಸಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರೆ ಮಾತ್ರ ಕಾಂಗ್ರೆಸ್ ಉಳಿಯುವ ಆಶೆ.

ಇಂದು ದೇಶದಲ್ಲಿ ಒಕ್ಕೂಟ ಪ್ರೆಸಿಡೆಂಟರ ಸ್ಥಾನ ಎಲ್ಲಕ್ಕಿಂತಲೂ ಹಿರಿದು. ಒಂದು ಪಕ್ಷದ ಕಾಂಗ್ರೆಸಿನ ಅಧ್ಯಕ್ಷರ ಸ್ಥಾನ ಒಕ್ಕೂಟದ ಪ್ರೆಸಿಡೆಂಟರ ಸ್ಥಾನಕ್ಕಿಂಥಾ ಕೆಳಗಿನದೇ. ಒಪ್ಪಿಕೊಳ್ಳಬಹುದು. ಪ್ರಧಾನ ಮಂತ್ರಿಯ ಸ್ಥಾನಕ್ಕಿಂಥ ಕಡಿಮೆಯೆಂದೂ ಒಪ್ಪಬಹುದು. ಕಾರಣಗಳಲ್ಲಿ ಜನತೆ ಈ ರೀತಿ ಭಾವಿಸುತ್ತಿರುವದಾದರೆ ಕಾರಣವೇನು? ಇದಕ್ಕೆ ಕಾರಣವು ಕಾಂಗ್ರೆಸ್ ಸಂಸ್ಥೆಯೊಳಗೇ ಇದೆ. ಹಿಂದೆ ಸ್ವಾತಂತ್ರ್ಯಕ್ಕಾಗಿ, ಶಿಸ್ತು, ಸಂಘಟನೆ, ತ್ಯಾಗದಿಂದಾಗಿ ಜನತೆಯ ಮೇಲೆ ತನ್ನ ಹಿಡಿತವಿಟ್ಟಿದ್ದ ಕಾಂಗ್ರೆಸು ಇಂದು ಶಿಥಿಲವಾಗಿ ಅಸಂಖ್ಯ ಭ್ರಷ್ಟಾಚಾರಗಳ ನೆಲೆಮನೆಯಾಗಿದೆ. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳಿಗೂ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೂ ಪರಸ್ಪರ ಐಕ್ಯತೆ ಇಲ್ಲ; ಸಮಿತಿಯ ಸ್ಥಳೀಯ ಸದಸ್ಯರಲ್ಲೇ ಒಗ್ಗಟ್ಟಿಲ್ಲ. [illegible] ಕಾಂಗ್ರೆಸ್ ಸಂಸ್ಥೆ ಹರಿದು ಹಂಚಲ್ಪಟ್ಟಿದೆ. ಕಾಂಗ್ರೆಸ್ಸಿನೊಳಗೇ ಇದ್ದು ಕಾಂಗ್ರೆಸನ್ನು ವಿರೋಧಿಸುವವರೂ ಕಡಿಮೆ ಇಲ್ಲ. ಕಾಂಗ್ರೆಸಿಗರೆಲ್ಲರು ವ್ಯಕ್ತಿಯೊಬ್ಬನ ಹಿಂದೆ ಹೋಗದೆ ಅಧಿಕಾರವನ್ನು ವಿಕೇಂದ್ರೀಕರಿಸಿ, ತಾನು ಸ್ಥಾಪಿಸಿದಂತೆ ಸಂಸ್ಥೆಯ ಪುನರ್ರಚನೆ ಮಾಡಲು ಶಕ್ತರಾದ ಯಾರೂ ಕಾಂಗ್ರೆಸ್ ಸಂಸ್ಥೆಯಲ್ಲಿ ಉಳಿದಿಲ್ಲ.

ಇದಕ್ಕಿದೆ ಪ್ರಾಂತಗಳಲ್ಲಿನ ಕಾಂಗ್ರೆಸ್ ಆಡಳಿತವೂ ಕಾಂಗ್ರೆಸ್ ಸಂಸ್ಥೆಗೆ ದೊಡ್ಡ ಪೆಟ್ಟು ಕೊಟ್ಟಿದೆ. ಸರಕಾರದ ಅಧಿಕಾರದಲ್ಲಿರುವ ಕಾಂಗ್ರೆಸಿನವರಿಗೂ, ಹೊರಗಿರುವವರಿಗೂ ಘರ್ಷಣೆ ನಡೆದಿದೆ. ಇದೇ ಬಿಹಾರಿನ ದುರವಸ್ಥೆ, ಮದ್ರಾಸಿನ ಪ್ರಕಾಶಂ ಪಕ್ಷ, ಉತ್ತರ ಪ್ರದೇಶದ ಕಾಂಗ್ರೆಸಿನಿಂದ ಸಿಡಿದು ನಿಂತಿರುವವರ ಪ್ರತಿಭಟನೆ ಈ ಮೊದಲಾದವು ಕಾಂಗ್ರೆಸನ್ನು ನಿರ್ಬಲಗೊಳಿಸಿ ಕಾಂಗ್ರೆಸಿಗರಲ್ಲಿ ಅನೈಕ್ಯತೆಯನ್ನು ತಂದಿವೆ. ಕಾಂಗ್ರೆಸ್ ಪ್ರೆಸಿಡೆಂಟರು ಮತ್ತು ಕಾರ್ಯದರ್ಶಿಗಳ ಸೂಚನೆಗಳನ್ನು ಕಡೆಗಣಿಸುವಷ್ಟು ಕೆಳಸಮಿತಿಗಳಲ್ಲಿ ತಾತ್ಸಾರ ತುಂಬಿದೆ.

ಕಾಂಗ್ರೆಸ್ ಸಂಸ್ಥೆಗೆ ಏನು ಹಿಡಿಯಿತು? ಯಾವ ತಮ್ಮ ಪ್ರೆಸಿಡೆಂಟರ ಆಜ್ಞೆಯಂತೆ ಕೋವಿಯ ಗುಂಡಿಗೂ ಎದೆ ಕೊಡಲು ಅಂದು ತಯಾರಾದ ಕಾಂಗ್ರೆಸಿಗರು ಇಂದು ಈ ರೀತಿಯ ತಾತ್ಸಾರ ಭಾವದಿಂದಿರಲು ಕಾರಣವೇನು? ಇಂದು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯಲ್ಲೇ ಒಮ್ಮತದ ನಿರ್ಧಾರಕ್ಕೆ ಬರುವದು ಕಠಿಣವಾಗಿರುವದೇಕೆ? ಸಂಕ್ಷೇಪವಾಗಿ ಪರಿಶೀಲಿಸಿದರೆ ಕಾಂಗ್ರೆಸಿನಲ್ಲಿ ಎರಡು ವಿಭಾಗ ತೋರಬಹುದು. ಆ ವಿಭಾಗವು ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ವರೆಗೂ ಇದೆ. ಒಂದು ಪಕ್ಷವು ಹಿಂದಿನ ಮಹಾ ಸಂಪ್ರದಾಯಗಳಿಂದಲೂ, ಸ್ವಾತಂತ್ರ್ಯರಿಂದಲೂ ಕೂಡಿದೆ. ಅದರ ಅವರ ಸಂಖ್ಯೆ ಬಹು ಕಡಿಮೆ. ಮತ್ತೊಂದು ಶಿಕ್ಷಿತರ ಸಂದರ್ಭ ಸಾಧಕರಿಂದ ಕೂಡಿದ್ದು ಅವರ ಸಂಖ್ಯೆಯು ಹೆಚ್ಚು. ಅದ್ದರಿಂದ ಹಿಂದಿನಂತೆಯೇ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯಲ್ಲಿ [illegible] ಕೆಳಗಿನ ಸಮಿತಿಗಳಲ್ಲಿ [illegible] ಅವರ ಸಂಖ್ಯೆ ಬಹು ಕಡಿಮೆಯಾಗಿರುವದರಿಂದ ನೇರವಾದ ನಿರ್ಣಯಗಳ ಸಾಧ್ಯವಿಲ್ಲ! ಅದ್ದರಿಂದ ಕಾಂಗ್ರೆಸಿನಲ್ಲಿ ಒಂದು ತೀರ್ಮಾನವಾದರೆ ವ್ಯಕ್ತಿಗತವಾಗಿ ಜೋರಾಗಿ ಮಾಡಲ್ಪಡದು. ಇದು ಹೀಗೆ—ಕಾಂಗ್ರೆಸ್ ಸರಕಾರವು ಜೀವನಾವಶ್ಯಕ ವಸ್ತುಗಳ ಮೇಲೆ ನಿಯಂತ್ರಣ ಹಾಕಿದರೆ ಕಾಂಗ್ರೆಸ್ ಪ್ರೆಸಿಡೆಂಟರು ನಿಯಂತ್ರಣ ತೆಗೆದುಹಾಕಿ ಎನ್ನುತ್ತಾರೆ! ಕಾಂಗ್ರೆಸ್ ಸರಕಾರವು ದೇಶದ ವಿವಿಧ ಭಾಗಗಳನ್ನು ಒಂದುಗೂಡಿಸಿ ಅಖಂಡ ಭಾರತದ ರಚನೆಗೆ ತೊಡಗಿದ್ದರೆ, ಅನೇಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಪ್ರೆಸಿಡೆಂಟರೂ ಭಾಷಾವಾರು ಪ್ರಾಂತ ವಿಭಜನೆಯಾಗಬೇಕೆನ್ನುತ್ತಾರೆ! ಈ ಪ್ರಾಂತ್ಯ ವಿರುದ್ಧ ವರ್ತನೆಯು ಸದಾ [illegible] ಕಾಂಗ್ರೆಸ್ ಸಮಿತಿಯವರ ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸನ್ನು ಛಿದ್ರ ಛಿದ್ರಗೊಳಿಸಿದ್ದಾರೆ.

[illegible] ಕಾಂಗ್ರೆಸ್ [illegible] ಕಾಂಗ್ರೆಸ್ ಪ್ರೆಸಿಡೆಂಟರನ್ನು ಕಡೆಗಣಿಸುತ್ತ [illegible] ಮುಂದಿನ ಹಾಗೆ ಇರುವ [illegible] ಪಟ್ಟಾಭಿ [illegible] ಕಾಂಗ್ರೆಸ್ಸಿನ [illegible] ಅದರ ನಿರ್ವಹಣೆ ಮಾಡಲಾರದೆ [illegible] ನಿರಾಕರಿಸಿ ಕಾಂಗ್ರೆಸನ್ನು ಕೈಬಿಟ್ಟಿದ್ದಾರೆ. [illegible] ಪ್ರತಿನಿಧಿಗಳ ಮುಂದೆ ಒಂದು ಸಂದರ್ಭ ನಿಂತಿದೆ. ಈ ಸಂದರ್ಭವು ಸದುಪಯೋಗಪಡಿಸಿ ಯೋಗ್ಯರನ್ನು ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಿದರೆ ಕಾಂಗ್ರೆಸಿಗೆ ಹೊಸ ಶಕ್ತಿ ದೊರೆತಂತಾಗಿ ಕಳೆದುಹೋದ ಚೇತನ ಪುನಃ ಬರುವದು. ಇಂಥಾ ಯೋಗ್ಯತೆ ಇರುವವರಾರು? (೧) ನೆಹರೂ (೨) ಪಟೇಲ್ (೩) ರಾಜೇಂದ್ರ ಪ್ರಸಾದ್ (೪) ರಾಜಗೋಪಾಲಾಚಾರಿ ಇವರಲ್ಲಿ ನೆಹರೂ ಮತ್ತು ಪಟೇಲರು ಆಡಳಿತ ಸೂತ್ರಚಾಲನೆಯ [illegible] ಬಿಟ್ಟು ಬರುವದು ಹಿತವಲ್ಲ. ಬಂದರೆ ಕಾಂಗ್ರೆಸ್ ಪಕ್ಷಕ್ಕೇನೋ ಲಾಭವಾಗಬಹುದು. ಆದರೆ ದೇಶಕ್ಕೆ ವಿಪರೀತ ಹಾನಿಯಾಗುವದು. ಮತ್ತು ಭಾರತದ ಪ್ರೆಸಿಡೆಂಟರಾಗಿರುವ ರಾಜೇಂದ್ರಪ್ರಸಾದರು ಕಾಂಗ್ರೆಸ್ ಅಧ್ಯಕ್ಷರಾಗುವ ಸಾಧ್ಯತೆ ಇಲ್ಲ. ಇನ್ನು ಉಳಿಯುವವರೆಂದರೆ ರಾಜಗೋಪಾಲಾಚಾರಿಯವರು. [illegible] ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾದಾಗ ಸರಕಾರ [illegible] ಕಾಂಗ್ರೆಸ್‌ಗಳೊಳಗೆ ಸಮರಸತೆಯನ್ನು ಸ್ಥಾಪಿಸಿ ಕಾಂಗ್ರೆಸನ್ನು ಇಂದಿನ ಅಧಃಪತನದ ಪಾತಾಳದಿಂದ ಮೇಲೆತ್ತಬಲ್ಲರು. ಅವರ ಅಭಿಪ್ರಾಯ, ಸಲಹೆಗಳನ್ನು ಸರಕಾರದಲ್ಲಿರುವ ಕಾಂಗ್ರೆಸಿಗರೂ ಗೌರವಿಸುವರು. [illegible] ಭಾರತದ ಗವರ್ನರ್ ಜನರಲರಾಗಿದ್ದವರನ್ನು ಕೇವಲ ಮಂತ್ರಿಯಾಗಿ ಮಾಡದೆ ಬೇರೆ ಯುಕ್ತ ಗೌರವ [illegible] ಸಿದಂತೆಯೂ ಆಗುವದು.

## For Sale

About Two thousand Cubic feet of Nogi (Red Cedar) and other soft wood species are available for sale on a Coffee station near the Mercara-Sidapur Road Coorg. Offers may be made to the Agronomist, Chethalli, including charges for redeeming timber, before 15th of July 50. The logs must be removed before the end of October 50, or early

*Office of the Registrar of Co-operative Societies, Coorg, Mercara, dated 12-6-50.*

The Advanced Co-operative Training Course at the Coorg Government Co-operative Institute, Mercara for the year 1950-51 will commence on 3rd July 1950. Passed S. S. L. C. candidates and others with equivalent qualifications may apply. 15 stipends of Rs. 25— each per mensem will be awarded to the selected candidates. Applications stating name, age, qualifications and address of the candidates should reach the undersigned not later than 1-7-50.

Applicants must be prepared to come for interview at Mercara at their own expense with original certificates on [illegible] 7-50 at 10 A. M.

(Sd) P. M. CHENGAPPA,
Registrar, C. S.

# ಕೊಡಗು

**ತಾ. ೧೬-೬-೧೯೫೦ನೇ ಶುಕ್ರವಾರ**

## ಔದ್ಯೋಗಿಕ ಶಿಕ್ಷಣ ಶಾಲೆ.

ಇಂಡಿಯಾ ಸರಕಾರದವರು ತನ್ನ ಖರ್ಚಿನಿಂದ ವೀರಾಜಪೇಟೆಯಲ್ಲಿ ಜುಲೈ ತಾರೀಕು ಒಂದರಲ್ಲಿ ತೆರೆಯಲಿರುವ ಔದ್ಯೋಗಿಕ ಶಿಕ್ಷಣ ಶಾಲೆಗೆ ಉಮೇದುವಾರರುಗಳನ್ನು ತಾರೀಕು ೧೧-೬-೫೦ ರಲ್ಲಿ ಒಂದು ಸಮಿತಿಯು ಆರಿಸಿತು. ಆಯ್ಕೆಯಾದವರ ಹೆಸರನ್ನು ಬೇರೆಡೆ ಕೊಡಲಾಗಿದೆ. ಇದರಂತೆ ಶೀಘ್ರಲಿಪಿ, ಜನರಲ್ ಮೆಕಾನಿಕ್ಸ್ ಮತ್ತು ದರ್ಜಿ ಕೆಲಸದ ತರಬೇತಿಗೆ ಸಾಕಷ್ಟು ಉಮೇದುವಾರರು ದೊರೆತಿರುವರು. ಆದರೆ ಮರಕೆಲಸ, ಕಬ್ಬಿಣ ಕೆಲಸ ಮತ್ತು ಚಿತ್ರ ನೆಯಿಗೆಯ ಕೆಲಸಗಳ ತರಗತಿಗಳಿಗೆ ಸಾಕಷ್ಟು ಉಮೇದುವಾರರು ಬಂದಿರುವದಿಲ್ಲ. ಈ ಪ್ರತಿಯೊಂದು ತರಗತಿಗಳಿಗೆ ಬೇಕಾದ ೧೬ ವಿದ್ಯಾರ್ಥಿಗಳ ಪೈಕಿ ಮರಕೆಲಸಕ್ಕೆ ಹನ್ನೊಂದು ಜನರೂ, ಚಿತ್ರದ ಕೆಲಸಕ್ಕೆ ಲಿಯಲ ಹತ್ತು ಜನರೂ ಮತ್ತು ಕಬ್ಬಿಣ ಕೆಲಸ ಕಲಿಯಲು ಮೂರು ಜನರೂ ಮಾತ್ರ ದೊರೆತಿರುವರು. ಇದು ವ್ಯಸನಕರ. ಕೊಡಗಿನ ಯುವಕರು ಈ ಮೂರು ವೃತ್ತಿಗಳ ಪ್ರಾಮುಖ್ಯತೆಯನ್ನೂ, ಗೌರವವನ್ನೂ ತಿಳಿದುಕೊಂಡಂತೆ ತೋರುವದಿಲ್ಲ. ಮರ ಮತ್ತು ಚಿತ್ರದಿಂದ ತುಂಬಿರುವ ಈ ಪ್ರಾಂತದಲ್ಲಿ ಇದು ಇವುಗಳಿಗೆ ಸಂಬಂಧಿಸಿದ ಕಸುಬಿನ ಕೆಲಸಗಾರರು ಕೊಡಗಿನಲ್ಲಿಲ್ಲದೆ ಬೇರೆಡೆಯಿಂದ ಕರೆಯಿಸುತ್ತಿದ್ದೇವೆ. ಮಳೆ ಹೆಚ್ಚಾಗಿರುವ ಕೊಡಗಿನಲ್ಲಿ ಭದ್ರವಾದ ಮನೆಗಳ ಆವಶ್ಯಕತೆಯು ತುಂಬಾ ಇದ್ದು ಇಲ್ಲಿ ಮರ ಕೆಲಸದವರ ಅವಶ್ಯಕತೆಯು ಬಹಳ ಇದೆ. ಅಲ್ಲದೆ ಸಾಧಾರಣವಾಗಿ ಪಟ್ಟಣಗಳಲ್ಲಿಯೂ ಮತ್ತು ಹಳ್ಳಿಗಳಲ್ಲಿಯೂ ಮನೆಗಳಲ್ಲಿ ಮರದ ಮತ್ತು ಚಿತ್ರದ ಕುರ್ಚಿ, ಮೇಜು, ಪೆಟ್ಟಿಗೆ ಮುಂತಾದ ಸಾಮಾನುಗಳ ಉಪಯೋಗವು ಎಲ್ಲೆಲ್ಲೂ ಕಂಡು ಬರುತ್ತದೆ. ಆದುದರಿಂದ ಇವೆರಡು ಕಸುಬುಗಳಲ್ಲಿ ತರಬೇತಿ ಹೊಂದಿದವರ ಅವಶ್ಯಕತೆಯು ಎಷ್ಟರ ಮಟ್ಟಿಗಿದೆಯೋ ಅಷ್ಟೇ ಈ ಕಸಬಿನವರ ಉತ್ಪನ್ನವೂ ಹೆಚ್ಚಾಗಿದೆಯೆಂಬುದರಲ್ಲಿ ಸಂಶಯವಿಲ್ಲ.

ಈಗಿನ ಯಾಂತ್ರಿಕ ಯುಗವಾಗಿದೆ. ಎಲ್ಲಿ ನೋಡಿದರೂ ಯಂತ್ರಗಳ ಉಪಯೋಗವು ಹೆಚ್ಚಾಗುತ್ತಿದೆ. ವ್ಯವಸಾಯವನ್ನು ಕೂಡ ಯಂತ್ರಗಳಿಂದ ನಡೆಸಿದರೆ ಹೆಚ್ಚಿನ ಉತ್ಪತ್ತಿ ಮಾಡಬಹುದೆಂದು ಅನುಭವದಿಂದ ಕಂಡು ಹಿಡಿದಿದ್ದಾರೆ. ಈ ಸಮಯದಲ್ಲಿ ಯಂತ್ರಗಳನ್ನು ತಯಾರಿಸಲು ಮತ್ತು ಅವುಗಳ ರಿಪೇರಿ ವಗೈರೆ ಮಾಡಲು ಕಮ್ಮಾರರ ಅವಶ್ಯಕತೆಯು ದಿನೇ ದಿನೆ ಹೆಚ್ಚುತ್ತಿದೆ. ಆದರೆ ಕೊಡಗಿನಲ್ಲಿ ಈ ಕಸಬು ಮಾಡುವರ ಸಂಖ್ಯೆಯು ಬಹಳ ವಿರಳ. ಹೊರಗಿನಿಂದ ಬರುವದೂ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸಲು ಇಲ್ಲಿಯ ಯುವಕರೇ ಈ ಕಸಬಿನಲ್ಲಿ ತರಬೇತಾಗಬೇಕಾಗಿದೆ. ಆದರೆ ದುರ್ದೈವದಿಂದ ಈ ತರಬೇತಿಗೆ ಬರೇ ಮೂರು ಜನರು ಮಾತ್ರ ದೊರೆತಿರುವರು. ಮೇಲಿನ ಈ ಮೂರು ಕಸಬುಗಳು ಸ್ವತಂತ್ರ ಜೀವನವನ್ನು ಸಾಧಿಸಲು ಉತ್ತಮ ಮಾರ್ಗಗಳಾಗಿವೆ. ಇವುಗಳು ಸರಕಾರಿ ಉದ್ಯೋಗ, ಕಾಫಿತೋಟ, ಕಂಪನಿ ಯಾ ಕಾರ್ಖಾನೆಗಳಲ್ಲಿ ಕೆಲಸ ಮಾಡುವದಕ್ಕಿಂಥಾ ಹೆಚ್ಚು ಸ್ವತಂತ್ರವಿದ್ದು ಆ ಕಾರಣ ಹೆಚ್ಚು ಗೌರವಾನ್ವಿತವಾದುವಾಗಿವೆ. ಅಲ್ಲದ ಈಗಿನ ಕಾಲದಲ್ಲಿ ಇವುಗಳಿಂದ ಉಂಟಾಗುವ ಉತ್ಪತ್ತಿಯು ಕಡಿಮೆ ಏನಲ್ಲ. ಕೊಡಗಿನಲ್ಲಿ ಬೇಕಾದಷ್ಟು ದರ್ಜಿ ಕೆಲಸದವರಿದ್ದರೂ ಕೂಡ ಈ ತರಬೇತು ಕ್ಲಾಸಿಗೆ ಹೆಚ್ಚು ಉಮೇದುವಾರರಿದ್ದರು. ಇದೇ ರೀತಿಯ ಉತ್ಸಾಹವನ್ನು ಯುವಕರು ಮೇಲಿನ ಮೂರು ಉದ್ಯಮ ತರಬೇತಿಗಾಗಿ ತೋರಿಸದಿರಲು ಕಾರಣವೇನೆಂದು ಗೊತ್ತಾಗುವದಿಲ್ಲ.

ಈ ಔದ್ಯೋಗಿಕ ಶಿಕ್ಷಣ ಶಾಲೆಯು ಕೊಡಗಿಗೆ ದೊರೆಯುವದು ಇದು ಮೊದಲನೇ ಸಾರಿ ಎಂಬುದನ್ನು ಜನತೆಯು ಮರೆಯಬಾರದು. ಇದರಲ್ಲಿ ಶೀಘ್ರಲಿಪಿ, ದರ್ಜಿ ಮತ್ತು ಚಿತ್ರದ ಕೆಲಸ ಇವುಗಳ ತರಬೇತು ಒಂದೇ ವರ್ಷದಲ್ಲಿ ಮುಗಿದು ಉಳಿದವುಗಳ ತರಬೇತು ಎರಡು ವರ್ಷಗಳ ವರೆಗೆ ನಡೆಯುವದು. ನಂತರ ಈ ಶಾಲೆಯು ಮುಂದರಿಸಲ್ಪಡಬಹುದೆಂದು ಹೇಳಲಾಗುವದಿಲ್ಲ. ಈ ತರಬೇತು ಹೊಂದುವ ಉಮೇದುವಾರರಿಗೆ ಉಳಕೊಳ್ಳಲು ಎರಡು ಮನೆಗಳನ್ನೂ ಕೂಡ ಏರ್ಪಡಿಸಿದ್ದು ಊಟದ ಏರ್ಪಾಡು ಮಾತ್ರ ಅವರೇ ಮಾಡಿಕೊಳ್ಳಬೇಕಾಗಿದೆ. ತರಬೇತು ಹೊಂದುವವರಲ್ಲಿ ಶೇಕಡ ೫೦ ರಷ್ಟು ಬಡ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೫ ರೂಪಾಯಿಗಳಂತೆ ವೇತನವನ್ನು ಇಂಡಿಯಾ ಸರಕಾರವೇ ಕೊಡಲಿರುವರು. ಮರ, ಕಬ್ಬಿಣ ಮತ್ತು ಚಿತ್ರ ಕೆಲಸದ ತರಬೇತಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಈ ಮೂರು ತರಗತಿಗಳಿಗೆ ಹತ್ತು, ಹನ್ನೆರಡು, ಹನ್ನೊಂದರಂತೆ ವಿದ್ಯಾರ್ಥಿ ವೇತನವಿಟ್ಟು, ಶೀಘ್ರಲಿಪಿ, ದರ್ಜಿ ಕೆಲಸಗಳಿಗೆ ನಾಲ್ಕರಂತೆಯೂ, ಜನರಲ್ ಮೆಕಾನಿಕ್‌ಗೆ ಆರು ವೇತನವನ್ನೂ ಮಾತ್ರ ಕೊಡಲು ಕಮಿಟಿಯವರು ನಿಶ್ಚಯಿಸಿರುವದಾಗಿ ತಿಳಿಯಬರುತ್ತದೆ. ಇದರಲ್ಲಿ ಮರಕೆಲಸಕ್ಕೆ ಒಂದು, ಚಿತ್ರ ಕೆಲಸಕ್ಕೆ ಎರಡು ಮತ್ತು ಕಬ್ಬಿಣ ಕೆಲಸಕ್ಕೆ ಹನ್ನೊಂದು ವೇತನಗಳು ಬಾಕಿ ಇವೆ. ಮರಕೆಲಸಕ್ಕೆ ಇನ್ನು ಐದು, ಚಿತ್ರ ಕೆಲಸಕ್ಕೆ ಆರು ಮತ್ತು ಕಬ್ಬಿಣ ಕೆಲಸಕ್ಕೆ ಹದಿಮೂರು ಉಮೇದುವಾರರು ಬೇಕಿದ್ದಾರೆ. ಈ ಮೂರು ತರಗತಿಗಳನ್ನು ಭರ್ತಿಮಾಡುವ ಬಗ್ಗೆ ಉಮೇದುವಾರರು ಅರ್ಜಿ ಕೊಡಲು ಇನ್ನು ಹತ್ತು ದಿನಗಳ ಅವಧಿಯನ್ನು ಕೊಡಲಾಗಿದೆ. ದೇಶದ ಯುವಕರು ಮತ್ತು ಅವರ ತಂದೆ ತಾಯಿಗಳು ಈ ಮೂರು ವೃತ್ತಿಗಳ ಪ್ರಾಮುಖ್ಯತೆ ಮತ್ತು ಗೌರವವನ್ನು ಚೆನ್ನಾಗಿ ಮನನ ಮಾಡಿಕೊಂಡು ಇವುಗಳಲ್ಲಿ ತರಬೇತು ಹೊಂದಲು ದೊರೆತಿರುವ ಈ ಉತ್ತಮ ಅವಕಾಶವನ್ನು ಕಳಕೊಳ್ಳದಂತೆ ಸಾಕಷ್ಟು ಅರ್ಜಿಗಳನ್ನು ಹಾಕುವರಾಗಿ ಆಶಿಸುತ್ತೇವೆ.

## ವರ್ತಮಾನ.

ಈ ದಿನ ಕೊಡಗು ಕೇಂದ್ರ ಆಹಾರ ಸಲಹಾ ಸಮಿತಿಯ ಮೀಟಿಂಗೊಂದು ಕೌನ್ಸಿಲು ಹಾಲ್‌ನಲ್ಲಿ ನಡೆಯುವದು.

ಕೊಡಗು ಸರಕಾರಿ ಕಾಲೇಜು ಕಟ್ಟಡಕ್ಕೆ ಸುಮಾರು 7½ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಕೇಂದ್ರ ಸರಕಾರದಿಂದ ಅನುಮತಿ ಬಂದಿದೆಯೆಂದೂ, ಕೆಲಸವನ್ನು ಶೀಘ್ರ ಪ್ರಾರಂಭಿಸಿ ಹದಿನೆಂಟು ತಿಂಗಳೊಳಗೆ ಮುಗಿಸಬೇಕೆಂದು ಸೂಚಿಸಲಾಗಿದೆಯೆಂದೂ ತಿಳಿಯಬಂದಿದೆ.

ಬೊಂಬಾಯಿಯಲ್ಲಿ ಈ ತಾ ೧೬ರಲ್ಲಿ ನಡೆಯುವ ರಿಪ್ಪಿಜರೇಷನ್ ಸಮ್ಮೇಳನಕ್ಕೆ ಕೊಡಗಿನ ಸಹಕಾರಿ ಸಂಘಗಳ ರಿಜಿಸ್ಟ್ರಾರವರು ಹೋಗಿರುವರು.

ಮುಂಬರುವ ಕಾಂಗ್ರೆಸ್ ಅಧಿವೇಶನಕ್ಕೆ ಡೆಲಿಗೇಟರುಗಳ ಚುನಾವಣೆಯ ಸಂಬಂಧ ಕೊಡಗಿನಲ್ಲಿ ಉತ್ತರ ಕೊಡಗು ಮತ್ತು ದಕ್ಷಿಣ ಕೊಡಗೆಂದು ಎರಡು ಮತದಾರ ಕ್ಷೇತ್ರವನ್ನು ನಿರ್ಮಿಸಿದ್ದು ಕೊಡಗಿನಿಂದ ಎರಡು ಜನ ಡೆಲಿಗೇಟರ ಆಯ್ಕೆಯಾಗುವದೆಂದು ಕೆ. ಪಿ. ಸಿ. ಸಿ. ಯು ತಿಳಿಸಿದೆ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶ್ರೀಗಳಾದ ಪಾರುವಂಗಡ ಸಿ. ನಂಜಪ್ಪ, ಐಯ್ಯಂಡ ಕೆ ಬೆಳ್ಯಪ್ಪ ಮತ್ತು ಐತಿಚಂಡ ಕೆ ದೇವಯ್ಯ ಇವರುಗಳು ತೇರ್ಗಡೆಯಾಗಿರುವರು.

ಮದ್ರಾಸು ವಿಶ್ವವಿದ್ಯಾಲಯದ ಬಿ ಎಸ್‌ಸಿ ಪರೀಕ್ಷೆಯಲ್ಲಿ ಶ್ರೀ ಕುಟ್ಟಂಡ ಎಂ ಮಾಚಯ್ಯ ಮತ್ತು ಮಂಡೇಪಂಡ ಅಪ್ಪಯ್ಯ ಇವರುಗಳು ತೇರ್ಗಡೆಯಾಗಿರುವರು.

ಬರುವ ಮೇ ತಿಂಗಳಲ್ಲಿ ನಡೆಯುವದೆನ್ನಲಾದ ಚುನಾವಣೆಯ ಸಂಬಂಧದ ಮತದಾನ ಕ್ಷೇತ್ರಗಳ ವಿಚಾರ ವಿವೇಚಿಸುವ, ಮತದಾರ ಪಟ್ಟಿಯನ್ನು ಸಿದ್ಧಗೊಳಿಸುವ ಬಗ್ಗೆ ಕೇಂದ್ರ ಸರಕಾರದಿಂದ ನೇಮಕವಾಗಿರುವ ಚುನಾವಣಾ ಕಮಿಷನರ್ ಡಾ ಎಸ್. ಸೇನ್, ಮತ್ತು ಸುಬ್ರಮಣ್ಯಂರವರು ಶೀಘ್ರ ಕೊಡಗಿಗೆ ಬರಲಿರುವರೆಂದು ವರ್ತಮಾನ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ವೀರಾಜಪೇಟೆ ಹೈಸ್ಕೂಲಿನ ಶ್ರೀ ಪಳೆಯಂಡ ಕೆ. ಕರುಂಬಯ್ಯನವರು ದೊರೆಯಬಹುದಾಗಿದ್ದ ೬೦೦ ಗುಣಗಳಲ್ಲಿ ೫೬೧ ಗುಣಗಳನ್ನು ಪಡೆದು ಕೊಡಗಿನಲ್ಲಿ ಪ್ರಥಮ ಸ್ಥಾನವನ್ನೂ ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಶ್ರೀಮತಿ ಎನ್. ಜಿ. ಸೈಲೂರವರು ೫೬೨ ಗುಣಗಳನ್ನು ಪಡೆದು ದ್ವಿತೀಯ ಸ್ಥಾನವನ್ನೂ ಪಡೆದಿರುವರು.

ಈ ವಾರ ಅಂದರೆ ತಾ ೯-೬-೫೦ ರಿಂದ ಇಂದಿನ ವರೆಗೆ ಮಡಿಕೇರಿಗೆ ೩ ಇಂಚು ಮಳೆಯಾಗಿದೆ.

ಕೋರಂಗಾಲ ಗ್ರಾಮದ ಪಳಂಗೋಟಿ ಅಪ್ಪಯ್ಯನೆಂಬವನು ಕಾರಣಾಂತರದಿಂದ ತಾ ೧೩ರ ರಾತ್ರೆ ತನ್ನ ಹೆಂಡತಿಯ ತವರು ಮನೆಗೆ (ಪುದಿನೆರವನ) ಹೋಗಿ, ಮನೆಯವರು ನಿದ್ರಿಸುತ್ತಿದ್ದಾಗ ಕಿಟಕಿಯೊಳಗಿಂದ ಮನೆಗೆ ನುಗ್ಗಿ ಕೈಯಲ್ಲಿದ್ದ ಕೋವಿಯಿಂದ ತನ್ನ ಹೆಂಡತಿಯನ್ನೂ, ನಂತರ ಅತ್ತೆಯನ್ನೂ ಗುಂಡಿಕ್ಕಿ ಕೊಂದು ತಾನೂ ನಂತರ ಗುಂಡುಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವನೆಂದು ತಿಳಿದುಬಂದಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

**ತಿದ್ದುಪಡಿ**

ಕಳೆದ ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ ಪಟ್ಟಿಯಲ್ಲಿ ಮಡಿಕೇರಿ ಹೈಸ್ಕೂಲಿನ ಹೆಸರುಗಳಲ್ಲಿ ಚೆಟ್ರಂಡ ಚಂಗಪ್ಪ ಎಂಬುದರ ಬದಲು ಚೆಂಗಪ್ಪ ಎಂದೂ ಬೊಳ್ಳಚಂಡ ಪೂಣಚ್ಚ ಎಂಬುದರ ಬದಲು ಬಲ್ಲಚಂಡ ಪೂಣಚ್ಚ ಎಂದೂ ಓದಿಕೊಳ್ಳಬೇಕಾಗಿದೆ. ಸಂ

## ಕೃತಜ್ಞತಾ ವಂದನೆಗಳು.

ನನ್ನ ಪ್ರಿಯ ಪತಿಯವರ ಅಕಾಲ ಮರಣದ ದುಃಖದಲ್ಲಿ ಭಾಗಿಗಳಾಗಿ ನನಗೂ ನನ್ನ ಮಕ್ಕಳಿಗೂ ತಮ್ಮ ಸಂತಾಪವನ್ನು ಹಲವು ಬಗೆಯಲ್ಲಿ ವ್ಯಕ್ತಪಡಿಸಿದ ಅನೇಕ ಬಂಧು ಮಿತ್ರರಿಗೆ ನನ್ನ ವಂದನೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬರೆದು ತಿಳಿಸಲು ಅಸಾಧ್ಯವಾದ್ದರಿಂದ ಈ ಮೂಲಕ ಸರ್ವರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಮಿಸೆಸ್ ಚೆಂಡಂಡ ತಿಮ್ಮಯ್ಯ,
ವೀರಾಜಪೇಟೆ, ಕೊಡಗು.

## ವಾರ್ತೆಗಳು.

ಜುಲೈ ತಿಂಗಳ ಪ್ರಥಮ ವಾರವನ್ನು 'ವನಮಹೋತ್ಸವ' ವಾರವೆಂದು ಆಚರಿಸಬೇಕೆಂದೂ ಆ ವಾರ ಪ್ರತಿಯೊಬ್ಬನೂ ಯಾವದೇ ಧಾನ್ಯ ಉಪಯೋಗಿಸುವ ಗೆಡ್ಡೆ ಗೆಣಸು, ಸೊಪ್ಪುಗಳಂಥದೇ ಜೀವಿಗಾವ ಮಣ ತೊಡಬೇಕೆಂದೂ ಸೂಚಿಸಿರುವರು. ಆ ವಾರದಲ್ಲಿ ಹೆಚ್ಚಾಗಿ ಮರ ನೆಡುವ ಒಂದು ಜಿಲ್ಲೆಗೆ, ಒಂದು ಸಂಸ್ಥೆಗೆ, ಒಬ್ಬ ವ್ಯಕ್ತಿಗೆ ಹೀಗೆ ಮೂರು ಬಹುಮಾನಗಳನ್ನು ಕೇಂದ್ರ ಸರಕಾರವು ಕೊಡಲಿರುವರೆಂದೂ ಪ್ರಕಟಿಸಿರುವರು.

ತನ್ನ ಆಹಾರಕ್ಕಾಗಿ ಹೆಚ್ಚು ಅಕ್ಕಿಯನ್ನು ಉಪಯೋಗಿಸುವವರಿಗೆ ಮಕ್ಕಳು ಹೆಚ್ಚಾಗುವದೆಂದು ಜಪಾನಿನ ಟೋಕಿಯೋ ವಿಶ್ವವಿದ್ಯಾಲಯದ ಡಾ ಕೆ ಕೊಡಾಮುರವರು ಪರಿಶೋಧಿಸಿ ಕಂಡು ಹಿಡಿದಿದ್ದಾರೆ.

ಜಮ್ಮು ಪ್ರಾಂತದ ಗುಲಾಬಘರ್ ಎಂಬಲ್ಲಿ ಪಾಕಿಸ್ಥಾನಿ ಸೇನೆ ಗುಂಪೊಂದು ಕಾಶ್ಮೀರಕ್ಕೆ ಸೇರಿದ ತೋಟೆ ಮರಗಳನ್ನು ಕಡಿಯಲು ಯತ್ನಿಸಿದಾಗ ಅಲ್ಲಿ ಪಹರೆಯಿಂದ ಕಾಶ್ಮೀರ ಸೈನ್ಯದ ಅಧಿಕಾರಿಯು ಅದನ್ನು ವಿರೋಧಿಸಿದ್ದರಿಂದ ಪಾಕಿಸ್ಥಾನ ಸೈನಿಕರು ಆ ಅಧಿಕಾರಿಯನ್ನೂ ಮತ್ತೊಬ್ಬ ಸೈನಿಕನನ್ನೂ ಗುಂಡಿಕ್ಕಿ ಕೊಂದರು. ಇದರಿಂದ ಇಕ್ಕಡೆಯವರಿಗೂ ಸುಮಾರು ನಾಲ್ಕು ಗಂಟೆಗಳ ವರೆಗೆ ಗುಂಡಿನ ಯುದ್ಧವಾಗಿ ಒಟ್ಟು ೬ ಜನರು ಮೃತರಾಗಿರುವರು. ಪಾಕಿಸ್ಥಾನ ಸೇನೆಯ ಅಧಿಕಾರಿಯೂ ಇತ್ತಲಾಗಿ ಈ ದುರಂತದ ಬಗ್ಗೆ ತನ್ನ ಸಂತಾಪವನ್ನು ವ್ಯಕ್ತಮಾಡಿದ್ದಾನೆ!

*The Chief Commissioner of Coorg.*

## TENDER NOTICE

***Mercara the 13th June, 1950***

**DEMONSTRATION DAIRY FARM, MERCARA**

Notice is hereby given that sealed tenders will be received at the Chief Commissioner's Office upto 11 A M, the 15th July 50, by the Chief Commissioner for the supply by contract of the following articles required for the use of the livestock at the Demonstration Dairy Farm, Mercara for 1950-51

(1) Wheat Bran 180 bags of 140 pounds

(2) Oats 180 bags of 100 pounds

(3) Ground Nut Cake 120 bags of 145 pounds

3 No tender will be received after the date above mentioned.

3 Tenders to be super scribed 'Tender for the supply of cattle food for the Demonstration Dairy Farm Mercara'.

4. No tender will be received unless accompanied by a cash deposit of Rs 50/- as earnest money Such a deposit may be waived under the special orders of the Chief Commissioner in the case of firms of established repute

5 All tenders must specify the rates at which the articles can be supplied in pound per rupee or in bags at a cost of Rs . .

6 The Chief Commissioner does not bind himself to accept the lowest or any tender and he may reject any tender without assigning any reason for so doing

7 The deposit of the successful tenders will be retained and will be forfeited if he fails to execute the contract bond.

8 No advance of cash will be made to the contractor. Payment for the articles supplied will be made by the Dairy Officer in charge of the Dairy Farm as soon as possible after the 7th of each month on producing the necessary accounts and vouchers and counterfoils with a bill in English correctly prepared which should be submitted before the 2nd of every month Persons who are unable to do this need not compete.

9 This contract should not be sublet.

10 Articles should be supplied as per specimen accepted by the Dairy Officer in charge of the Dairy Farm, and if inferior articles were supplied, they may either be returned or the cost of the articles will be reduced and fixed by the Dairy Officer and if frequently violated the contract may be cancelled and the security confiscated to the Government

11 The decision of the Chief Commissioner will be final in all cases of the failure of the contract

12 The contract will be subject to confirmation by the Chief Commissioner of Coorg who reserves to himself the right of rejecting all or any of the tenders

13 In case the contractor after taking the contract is not willing to carry out his agreement he shall give at least a month's notice and shall forfeit the security money to Government.

14 The contractor will also be bound to make good to Government any loss which may arise from his failure or by Government having to purchase the articles in the local markets at the higher rates than those contracted for

**D S BEDI,**
*Chief Commissioner.*

## ವೀರರಾಜಪೇಟೆಯ ಸರಕಾರಿ ಔದ್ಯೋಗಿಕ ಕಲಾಶಾಲೆಯಲ್ಲಿ ತರಬೇತಿಗೆ ಆರಿಸಲ್ಪಟ್ಟವರ ಹೆಸರುಗಳು.

**ದರ್ಜಿ ಕೆಲಸ.**

ಶ್ರೀಗಳಾದ ಎಂ ಕೆ ಕ ಪಣ್ಣ, ಬಿ ಪಾರ್ವತಿ, ಕೆ ಕೆ ಜಾನಕಿ, ಕೆ ಸಿ ಸೀತವ್ವ, ಹರಿಜನ ಸೋಮ, ಓ ಎಸ ಲಿಂಗಣ್ಣಯ್ಯ, ಎ, ಕೆ ದೈಪ್ಪ, ಕೆ ಎ ಕೃಷ್ಣಪ್ಪ, ಐ ಸಿ ಸಬ್ಬಯ್ಯ, ಬಿ ಎಂ ಕಾಮವ್ವ, ಸಿ ಜಿ ಪೂಣಚ್ಚ, ಓ ಪಿ. ದೇವಯ್ಯ, ಮಾಗಿ ಡಿಸಿಲ್ವ, ಕೆ ಪಿ ದೇಚವ್ವ, ಬಿ ಟಿ ದೇಚವ್ವ ಪ ಪ, ಎ ಎ ಸುಬ್ಬಯ್ಯ, ಇವರುಗಳು

**ಶೀಘ್ರ ಲಿಪಿ**

ಶ್ರೀಗಳಾದ ಎಂ ಕೆ ತಿಪ್ಪಯ್ಯ, ಕೆ ಎಂ ಗಣಪತಿ, ಎಂ ಬಿ ಉತ್ತಪ್ಪ, ಬಿ ಶ ರದ ಬ ವಿ, ಕೆ ಬಿ. ಪೂಚಕ್ಕ, ಕೆ ಸಿ ಭಿವಯ್ಯ, ಬಿ ಎ ಪೊನ್ನಣ, ಎಂ ಎಸ್ ನಂಜಪ್ಪ, ಕೆ ಬಿ ಸೋಮಯ್ಯ, ಪಿ ಆರ್ ಕೃಶನ್, ಸಿ ಎಸ್ ನರೇಂದ್ರ, ಜಾಕಬ್ ಲೋಬೋ, ಪಿ ಟಿ ನಂಜಪ್ಪ, ಎನ್ ಕೆ ಚಿಂಣಪ್ಪ, ಜಿ. ಎಸ್ ರಮಣೇಯ ಅಯ್ಯಂಗಾರ್ ಮತ್ತು ಪಿ ಎಂ ಮಂಜಣ್ಣ ಇವರುಗಳು

**ಜನರಲ್ ಮೆಕಾನಿಕ್**

ಶ್ರೀಗಳಾದ ಎಂ. ಎ ಪೂವಯ್ಯ, ಟಿ ೧. ಮಾಚಯ್ಯ, ಬಿ ಸಿ ಮಂದಣ, ಎಂ ಎಸ್ ಪೂವಯ್ಯ, ಎ ಸಿ ಪೊನ್ನಪ್ಪ, ಎ ಎಂ ಗಣಪತಿ, ಎನ್ ಸಿ. ತಿಮ್ಮಯ್ಯ, ಸಿ ಸಿ ಗಣಪತಿ, ಎಂ. ಕೆ. ಪೂವಯ್ಯ, ಎಂ ಎ ಬೆಳ್ಯಪ್ಪ, ಕೆ. ಮಂದಣ್ಣ, ಸಿ ಎ ದೇವಯ್ಯ, ಕೆ ಎ ರಾಮು, ಪಿ ಯು ತಮ್ಮಪ್ಪ, ಕೆ. ಬಿ ನಂಜಪ್ಪ ಮತ್ತು ಎಂ ಜಿ. ಪೊನ್ನಪ್ಪ ಇವರುಗಳು

**ಮರ ಕೆಲಸ.**

ಶ್ರೀಗಳಾದ ಪಿ. ಕೆ. ವಿಷ್ಣುಮೂರ್ತಿ ಪಿ ಬೋಪಯ್ಯ, ಎ ಎಂ ಮುದ್ದಪ್ಪ, ಎಸ್ ಕರುಂಬಯ್ಯ, ಎ ಕೆ ಸೋಮಣ್ಣ, ಕೆ ಪಿ ಬೋಜಪ್ಪ, ಕೆ ಡಿ ತಮ್ಮಯ್ಯ, ಕೆ ಬಿ ನಂಜಪ್ಪ, ಎ ಮಾದಪ್ಪ, ಕೆ ಎ ಪೊನ್ನಯ್ಯ ಮತ್ತು ಎಂ. ಎಸ್ ಉತ್ತಪ್ಪ ಇವರುಗಳು.

**ಚಿತ್ರ ಕೆಲಸ.**

ಶ್ರೀಗಳಾದ ಸಿ ಎಂ. ಬಿದ್ದಪ್ಪ, ಪಿ ಬೋಪಯ್ಯ, ಪಿ ಎಸ್ ಪೊಂಬಯ್ಯ, ಸಿ ಎಂ ಅಪ್ಪಚ್ಚು, ಎಂ ಜಿ ಚಿಣ್ಣಪ್ಪ, ಸಿ ಸಿ ಬೋಜಪ್ಪ, ಸಿ ಎ ಗಂಗಧರ, ಬಿ ಎ ಲ್ ಖಮ್ರುದ್ದಿನ್, ರೆಹಮಾನ್ ಪಾಷ ಪಕ್ರ ರಬೇರ್ ಇವರುಗಳು.

ಎಂ ಎ ಕೆಹಾ,
ಸುಪರಿಂಟೆಂಡೆಂಟ್.

## ಭಾರತದಲ್ಲಿ ರೈಲ್ವೆ ಎಂಜಿನ್ ತಯಾರಿಕೆ.

ಭಾರತವು ಲೋಕೊಮೋಟಿವ್ ವಿಷಯದಲ್ಲಿ ೧೯೫೫ರ ಹೊತ್ತಿಗೆ ಆತ್ಮನಿರ್ಭರವಾಗುವದು ಮತ್ತು ಪರರಿಗೆ ಸಹ ಲೋಕೊಮೋಟಿವ್‌ಗಳನ್ನು ಕೊಡುವಂತಾಗುವದು ಎಂದು ಭಾರತ ಸರಕಾರದ ರೈಲ್ವೆ ಮಿನಿಸ್ಟರ್ ಆಫ್ ಸ್ಟೇಟ್ ಶ್ರೀ ಸ ತ ನಾರಾಯಣ ಸಿಂಹ ಇವರು ತಿಳಿಸಿದರು

ಪಶ್ಚಿಮ ಬಂಗಾಳದ ಚಿತ್ತರಂಜನ್ನಲ್ಲಿ ಈಗ ವರ್ಷಕ್ಕೆ ಎರಡು ಎಂಜಿನ್‌ಗಳು ತಯಾರಾಗುತ್ತಿವೆ ಪ್ರವೇಟ ಆತ ಟಾಟಾ ಕಂಪೆನಿ ವರ್ಷದ ಹೊತ್ತಿಗೆ ೫೦ ಎಂಜಿನ್‌ಗಳಂತೆ ತಯಾರಿಸಲು ಪ್ರಾರಂಭ ಮಾಡುವರು" ಎಂದು ಸ ಆಶಯ ತಿಳಿಸಿದರು

## ಅಜ್ಞಾತ ವ್ಯಕ್ತಿಯಿಂದ ಸರಕಾರಕ್ಕೆ ಹಣಬಂದಿತು.

ಅಜ್ಞಾತ ವ್ಯಕ್ತಿಯೊಬ್ಬನಿಂದ ಭಾರತ ಆದಾಯ ಕರ ಕ್ರಿಗಳ ಹೆಸರಿಗೆ ೮೦೦೦ ರೂ ಗಳ ಹುಂಡಿಯೊಂದು ಬಂದದ್ದರಿಂದ ಆಶ್ಚರ್ಯವಾಗಿದೆ ಆದಾಯ ಕರವನ್ನು ತಪ್ಪಿಸಲು ತಪ್ಪಿದ ವಿವೇಕಿಯೊಬ್ಬರಿಗೆ ಅವರ ಅಂತರಾತ್ಮನು ತಾಡಿಸುತ್ತಿದ್ದರಿಂದ ಆ ಬ ಹಳ ವರುಷಗಳ ಹಿಂದೆ ತಪ್ಪಿಸಿದ ಕರದ ಹಣಕ್ಕೆ ಈ ಹುಂಡಿಯನ್ನು ಕಳಿಸಿರಬಹುದೆಂದು ಹೇಳಲಾಗಿದೆ ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಸರಕಾರಕ್ಕೆ ಹೀಗೆ ಅಜ್ಞಾತ ವ್ಯಕ್ತಿಗಳಿಂದ ಹಣ ಬಂದದ್ದು ಇದು ಎರಡನೇ ಸಲ

## ತನ್ನವರ ಪಾಪವಿಮೋಚನೆಗಾಗಿ ಕಣ್ಣು ಕೀಳಲು ಸಿದ್ಧ.

ಫ್ರಾನ್ಸಿನ ಮೇಲೆ ಜರ್ಮನರು ನಡೆಸಿದ ಅಮಾನುಷ ಪೈಶಾಚಿಕ ಕೃತ್ಯಗಳ ಕುರಿತು ಓರ್ವ ಜರ್ಮನ್ ತರುಣನು ತುಂಬಾ ನಾಚಿಕೆಪಟ್ಟಿರುತ್ತಾನೆ ಮಾತ್ರವಲ್ಲ ತನ್ನ ದೇಶದ ಮಂದಿ ಮಾಡಿದ ಈ ಪಾಪಗಳಿಗೆ ಪ್ರಾಯಶ್ಚಿತ್ತವಾಗಿ ತನ್ನ ಎರಡು ಕಣ್ಣುಗಳಲ್ಲಿ ಒಂದನ್ನು ಓರ್ವ ಫ್ರೆಂಚ್ ಕುರುಡನಿಗೆ ಕಿತ್ತು ಕೊಡಲು ಸಿದ್ಧನಾಗಿದ್ದಾನೆ. ಆದರೆ ಬರ್ಲಿನ್‌ದಲ್ಲಿರುವ ಫ್ರೆಂಚ್ ಹೈಕಮಿಷನರರು ಇದರ ಸ್ವೀಕಾರ ಒಲ್ಲೆನೆಂದಿರುವರು

ಅಣು ಬಾಂಬಿನ ದಾಳಿಯಿಂದ ಜನರನ್ನು ರಕ್ಷಿಸಲು ಸುಮಾರು ೭೫೦,೦೦೦ ನಾಗರಿಕರಿಗೆ ಒಮ್ಮೆ ನಿಲ್ಲಲು ಸಾಕಾಗುವಷ್ಟು ಅಣು ಬಾಂಬು ನಿರೋಧಕ ಆಶ್ರಯಗಳನ್ನು ಸ್ವೀಡನಿನ ಪರ್ವತಗಳ ಅಡಿಯಲ್ಲಿ ನಿರ್ಮಿಸಲು ಸ್ವೀಡಿಷ್ ಸರಕಾರವು ಯೋಜನೆಯನ್ನು ನಿರ್ಣಯಿಸಿದೆ ಇವು ಟ್ರಾಮಿನೊಳಗೆ ಕಟ್ಟಗಳ ಅಡಿಯಲ್ಲಿ ೧ ಸಾರು ೦೦,೦೦೦ ಜನರಿಗೆ ಸಾಕಾಗುವಷ್ಟು ಆಶ್ರಯಗಳು ರಚನೆಯಾಗಲಿವೆ.

ಕೆಚ್ಚು ಉತ್ತಮವಾದ ಆಹಾರವನ್ನು ತಿನ್ನುತ್ತಿರುವವರಿಗೆ ಶರೀರದಲ್ಲಿ ಕೊಬ್ಬು ಬೆಳೆದು ಮಕ್ಕಳಾಗುವದು ಕಡಿಮೆಯೆಂದೂ ಆದ್ದರಿಂದಲೇ ಶ್ರೀಮಂತರಿಗೆ ಮಕ್ಕಳು ಕಡಿಮೆಯಾಗಲು ಮಾತ್ರ ಬಡವರಿಗೆ ಮಕ್ಕಳು ಹೆಚ್ಚಾಗಲು ಕಾರಣವೆಂದು ವೈಜ್ಞಾನಿಕರೊಬ್ಬರು ಕಂಡು ಹಿಡಿದಿರುವರು

ಮುಂದಿನ ಪರಿಸ್ಥಿತಿಯನ್ನು ಎದುರುಗೊಳ್ಳಲು ಸಿದ್ಧವಾಗುವ ಸಮಯವಿದು—

ನಿಮ್ಮ ಆಸ್ತಿಯ ವಿಮೆಯ ಕುರಿತು ನಿಮ್ಮ ಜವಾಬ್ದಾರಿ ಮಹತ್ವದ್ದಾಗಿ ಸರಿಯಾದ ವ್ಯವಸ್ಥೆಯನ್ನು ಪೂರೈಸಿಕೊಳ್ಳಿರೆಂದು ನಾವು ಅವಸರಪಡಿಸುವೆವು.

ದಿ ಜನರಲ್
ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್
ಜೀವ-ಅಗ್ನಿ-ಮೋಟಾರು ಮರೀನ್-ಅಪಘಾತ
ಹೆಡ್ ಆಫೀಸ್ ಅಜ್ಮೀರ್. ಸ್ಥಾಪನೆ 1907.
ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.

# ಓದುಗರ ಓಲೆಗಳು.

### ಮರಿನಾಡು ಕಾಂಗ್ರೆಸ್ ಪಂಚಾಯಿತಿ ಚುನಾವಣೆ.

ಈ ನಾಡಿನ ಕಾಂಗ್ರೆಸ್ ಪಂಚಾಯಿತಿ ಚುನಾವಣೆಯನ್ನು ಕಳೆದ ಫೆಬ್ರವರಿ ೨೫ರಲ್ಲಿ ೧೩ ಜನರಿಂದ ಸೇರಿ ನಡೆಸಲಾಯಿತು. ಆ ಚುನಾವಣೆ ಅನಧಿಕೃತವಾದ್ದರಿಂದ ಒಂದು ಹೊಸ ಸಮಿತಿಯ ಚುನಾವಣೆ ಈಗ ನಡೆದಿದೆ. ಕಳೆದ ತಿಂಗಳ ೧೮ರಂದು ಕಾಂಗ್ರೆಸ್ ಅಧ್ಯಕ್ಷರು ಕೆಲವು ಅಚ್ಚು ಹಾಕಿದ ಫಾರಂಗಳನ್ನು ಸಾಯಂಕಾಲ ೪ ಗಂಟೆಗೆ ಶ್ರೀ ಮಲ್ಲೇಂಗಡ ಕೆ ಅಯ್ಯಪ್ಪನವರ ಕೈಯಲ್ಲಿ ಕೊಟ್ಟರು. ಅಯ್ಯಪ್ಪನವರು ತಾರೀಕು ೧೯ರಂದು ೨-೩ ಮನೆಗೆ ಹೋಗಿ ಒಬ್ಬರನ್ನೊಬ್ಬರು ಚನಾಯಿಸಿದಂತೆಯೂ ಇನ್ನೊಬ್ಬರನ್ನು ಅನುಮೋದಿಸಿದಂತೆಯೂ ಮಾಡಿ ಆ ದಿನವೇ ಚುನಾಯಿಸಿದ ೩ ಜನರ ಎಂದರೆ ಮಲ್ಲೇಂಗಡ ಕೆ. ಅಯ್ಯಪ್ಪನವರು ಮಲ್ಲೇಂಗಡ ಎಂ ತಮ್ಮಯ್ಯನವರು ಮತ್ತು ಅಪ್ಪಾಸ್ತೀರ ಗಂಗಾಧರಯ್ಯನವರು ಈ ಮೂಲಕ ಫಾರಂಗಳನ್ನು ಕಾಂಗ್ರೆಸ್ ಅಧ್ಯಕ್ಷರ ಕೈಗೆ ಖುದ್ದು ತಲುಪಿಸಿದರು. ಆದರೆ 'ಕೊಡಗು' ಪತ್ರಿಕೆಯಲ್ಲಿ ಕಾಂಗ್ರೆಸ್ ಪಂಚಾಯಿತರ ಹೆಸರು ಪ್ರಕಟಿಸುವಾಗ್ಯೆ ಪ್ರತ್ಯೇಕವಾದ ಶ್ರೀ ಮಲ್ಲೇಂಗಡ ಅಯ್ಯಪ್ಪನವರ ಹೆಸರೇ ಬಂದಿಲ್ಲ. ಚುನಾವಣೆಗೆ ನಿಲ್ಲದ ಶ್ರೀ. ಮಲ್ಲೇಂಗಡ ಪಿ ತಿಮ್ಮಯ್ಯನವರ ಹೆಸರಿತ್ತು. ಈ ಕುಟುಂಬದಲ್ಲಿ ಪಿ. ತಿಮ್ಮಯ್ಯ ಎಂಬವರೇ ಇಲ್ಲ. ಗೋಣಿಕೊಪ್ಪಲಲ್ಲಿ ಪಿ ತಿಮ್ಮಯ್ಯ ಎಂಬುವರಿದ್ದಾರೆ. ಒಂದು ಸಮಯ ತಪ್ಪು ಪ್ರಿಂಟಾಗಿರಬಹುದು. ಆದರೆ ಶ್ರೀ ತಿಮ್ಮಯ್ಯನವರು ೧ ತಿಂಗಳ ಮುಂದ ಈ ನಾಡಿಗೆ ಬಂದುದಲ್ಲದ ಈ ಚುನಾವಣೆಗೆ ಬರಲಿಲ್ಲ. ಈ ಚುನಾವಣೆ ಯಾರಿಗೂ ತಿಳಿಯಲಿಲ್ಲ. ತಾ ೧೯-೫-೫೦ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಪ್ರಕಟಣೆಯು ತಾ. ೨೨-೫-೫೦ರಲ್ಲಿ ತಿಳಿಯಲಾಯಿತು. ಆದರೆ ಹೊಸ ಸಮಿತಿಯ ಚುನಾವಣೆ ತಾ ೧೯ರಲ್ಲಿ ನಡೆದು ಹೋಗಿತ್ತು. ಇನ್ನು ಮುಂದಕ್ಕಾದರೂ ಈ ರೀತಿಯ ಜನರಿಗೆ ತಿಳಿಯದಂತೆ ಗೂಢ ಚಾರಿಟ ಚುನಾವಣೆಯನ್ನು ನಿಲ್ಲಿಸಬೇಕಾಗಿದೆ.

ಎಂ.

---

### ಮರಿನಾಡು ಹೊಳೆಯ ಪಾಲರಿಪೇರಿ

ಜನರ ಕಣ್ಣು ಕಟ್ಟಲು ಮಾಡಿರುವ ರಿಪೇರಿಯೆಂದು ಮೊದಲೊಮ್ಮೆ ಈ ವಿಚಾರ ಬರೆದಿದ್ದೆನು. ಆ ರೀತಿಯ ರಿಪೇರಿಯಾಗಿ ೨ ತಿಂಗಳ ಗಡ ೨ ಬದಿಗಳಿಗೆ ಭದ್ರತೆಗಾಗಿ ತಂತಿಗೂ ಪಾಲಕ್ಕೂ ಜೋಡಿಸಿ ಬಂಧಿಸಿದ್ದ ಒಂದೊಂದು ಬಾಗದ ಹದಿನೈದು ಹದಿನೈದು ಕಂಬಗಳ ಕಾಲಿನ ಮೊಳೆಗಳನ್ನು ಹಾಕಲು ಪಿ ಡಬ್ಲ್ಯು ಡಿ. ಇಲಾಖೆಯವರಿಗೆ ಇನ್ನೂ ಸಮಯ ಸಿಕ್ಕಲಿಲ್ಲವೇ? ಈ ಮಳೆಗಾಲದಲ್ಲಿ ಜನರು ದಾಟುತ್ತಿರುವ ಪಾಲವನ್ನೂ ಅಭದ್ರತೆಯಲ್ಲಿ ಸರಿಯಾದ ರಿಲಸಿಗಾರರಾದ ಈ ಇಲಾಖೆಯವರು ಇಟ್ಟಿರುವುದು ವ್ಯಸನಕರ. ಇದಕ್ಕೆ ಸಮ್ಮಂಧಿಸಿದ ಇಲಾಖೆಯವರು ನಿಗ ತೆಗೆದು ಇನ್ನಾದರೂ ಶೀಘ್ರ ರಿಪೇರಿ ಮಾಡಿಸಬೇಕಾಗಿ ವಿನಂತಿ.

ಮುತ್ತು ಎಂ.

---

### ಚೀಫ್ ಕಮಿಷನರ ಅವಗಾಹನೆಗೆ

ಈ ವರ್ಷ ಕೊಡಗಿನ ಹೈಸ್ಕೂಲುಗಳ ಪರೀಕ್ಷಾ ಫಲಿತಾಂಶ ಚೆನ್ನಾಗಿಲ್ಲವೆಂದು ಜನತೆಗೂ ಸರಕಾರಕ್ಕೂ ವೇದ್ಯವಾಗಿರುತ್ತದೆ. ಕೊಡಗಿನ ಎಲ್ಲಾ ಹೈಸ್ಕೂಲುಗಳ ಪೈಕಿ ಸೋಮವಾರಪೇಟೆ ಹೈಸ್ಕೂಲಿನಲ್ಲಿ ಎಸ್ ಎಸ್ ಎಲ್ ಸಿ ಯಲ್ಲಿ ಶೇಕಡ ೫೦ ರಷ್ಟು ಪಾಸು ಸಿಕ್ಕಿರುವುದಾದರೆ ಅದು ಇಲ್ಲಿಯ ಅಧ್ಯಾಪಕರ ಪ್ರಯತ್ನದಿಂದ. ಈ ಪೈಕಿ ಈ ಶಾಲೆಯ ಮುಖ್ಯ ಉಪಾಧ್ಯಾಯರಾದ ಶ್ರೀ ಕೆ ಎಂ. ಮುತ್ತಣ್ಣ, ಇವರನ್ನು ಇಲ್ಲೇದ ಪೊನ್ನಂಪೇಟೆ ಶಾಲೆಗೆ ವರ್ಗ ಮಾಡುವರೆಂಬುವದಾಗಿ ತಿಳಿದು ವ್ಯಸನವಾಗಿದೆ. ಈಗಾಗಲೆ ಹಾಗೆ ಮಾಡಕೂಡದೆಂದೂ ಸರ್ವಜನಿಕರಿಂದ ಕೊಡಗಿನ ಚೀಫ್ ಕಮಿಷನರ್‌ರವರಿಗೆ ತಂತಿ ಮತ್ತೀಯೂ ಹಲವಾರು ಸಹಿಯಿಂದೊಡಗೂಡಿದ ಅರ್ಜಿಯೂ ಹೋಗಿದೆಯೆಂದು ತಿಳಿಯುತ್ತೇವೆ. ಮೇಲ್ಕಂಡ ಹೆಡ್ ಮಾಸ್ಟರರು ಇಲ್ಲಿಗೆ ಬಂದು ಕೇವಲ ೨ ವರ್ಷವಾಗಿರಬಹುದು. ಇವರು ಇಲ್ಲಿಗೆ ಬಂದನಂತರ ಶಾಲಾಭಿವೃದ್ಧಿ ದಿನೇ ದಿನೆ ಬೆಳೆಯುತ್ತಿದೆ. ಇಂತಹದರಲ್ಲಿ ಇವರಿಗೆ ಈ ಸಮಯದಲ್ಲಿ ಇಲ್ಲಿಂದ ವರ್ಗವೆಂಬುದನ್ನು ಕೇಳಿ ಜನತೆಗೆ ಆಶ್ಚರ್ಯವಾಗಿದೆಯಲ್ಲದೆ ತುಂಬಾ ಅತೃಪ್ತಿವುಂಟಾಗಿದೆ. ಸರಕಾರದ ಈ ವರ್ತನೆಯಿಂದ ಸ್ಕೂಲಿಗೂ ಬಾಲಕರಿಗೂ ಮುಂದೆ ತುಂಬಾ ಪೆಟ್ಟಿದೆ. ಇದನ್ನು ಸರಕಾರವು ಉದಾಸೀನ ಸ್ವಭಾವದಿಂದ ತಿಳಿದು ತನ್ನ ಘೋಷಣೆಯನ್ನು ಮುಂದುವರಿಸಿದರೆ ಮುಂದೆ ಜನತೆಗೆ ಆಗುವ ಹಾನಿಗೆ ಮೇಲಧಿಕಾರಿಗಳೇ ಕಾರಣಕರ್ತರಾಗಬೇಕಾಗುತ್ತದೆ. ಆದ್ದರಿಂದ ಕೊಡಗು ಚೀಫ್ ಕಮಿಷನರ್ ಸಾಹೇಬರವರು ಈ ವಿಷಯವನ್ನು ಪರಿಶೀಲಿಸಿ ಈಗ ಮಾಡಿರುವ ಹುಕುಮನ್ನು ರದ್ದು ಮಾಡಿ ಈಗಲಿರುವ ಹೆಡ್ ಮಾಸ್ಟರನ್ನು ಈ ಶಾಲೆಯಲ್ಲಿ ಕೆಲವು ಸಮಯ ಇಟ್ಟು ಈ ನಾಡಿನ ಅಭಿವೃದ್ಧಿಗೆ ಸಹಾಯ ಕೊಡಬೇಕಾಗಿ ನನ್ನ ಪ್ರಾರ್ಥನೆ. ಈ ನಾಡು ವಿದ್ಯೆಯಲ್ಲಿ ಹಿಂದೆ ಬಿದ್ದದೆಯೆಂದು ಜನಜನಿತವಾಗಿ ಗೊತ್ತಿರುವ ಸಂಗತಿ. ಇದನ್ನರಿತೇ ಸರಕಾರವು ಮೊನ್ನೆ ತಾನೆ ಒಂದು ಹೈಸ್ಕೂಲು ಕೊಟ್ಟಿದೆ. ಈಗ ಇದು ಅಭಿವೃದ್ಧಿ ಹೊಂದುತ್ತಿರುವ ಸಮಯದಲ್ಲಿ ಹಿಂದೆ ಸರಿಸುವ ಅಭಿಪ್ರಾಯ ಮಾಡುವುದು ವಿಹಿತವೆಂದು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಸರಕಾರವು ಇದನ್ನು ಗಮನಿಸುವುದೊಳ್ಳೆಯದು.

ನಾಡಿನ ಹಿತಚಿಂತಕರು.

---

### ನಂಜರಾಜಪಟ್ಣ ಹೊಸ ಶಾಲಾ ಉತ್ಸವ

ಈ ಶಾಲೆಯ ಹೊಸ ಕಟ್ಟಡವನ್ನು ತಾ. ೧೦-೬-೫೦ರಲ್ಲಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಐನಂಡ ಆಚಾರ್ಯಪ್ಪನವರು ತೆರೆದರು. ಈ ಸಂಬಂಧ ನೆರೆದಿದ್ದ ಸಭೆಯಲ್ಲಿ ಶಾಲಾ ಮುಖ್ಯ ಅಧ್ಯಾಪಕರಾದ ಶ್ರೀ ಬಿ ಸಿ. ಉತ್ತಯ್ಯನವರು ಶಾಲೆಯ ಚರಿತ್ರೆಯನ್ನೊಳಗೊಂಡ ವರದಿಯನ್ನು ಓದಿದರು. ಶಾಲೆಯ ಹೆಚ್ಚಿನ ತರಗತಿಯ ಆವಶ್ಯಕತೆ, ಜನತೆಯ ಕರ್ತವ್ಯ, ಬೋರ್ಡಿನ ನೆರವು ಮೊದಲಾದುವನ್ನು ಕುರಿತು ಶ್ರೀಗಳಾದ ಐಚ್ಯಂಡ ಐಯ್ಯಪ್ಪ, ಸಿ ಎಂ. ಅನ್ನೂಜಿ, ಕೆ. ರಾಮರಾವ್, ಆರ್ ಲಕ್ಷ್ಮೀಕಾಂತ, ಎಂ ಜಮಾಲ್ ಸಾಹೇಬ್, ಕೆ. ಕಾಳೇಗೌಡ, ಸಿ ಮುದ್ದಯ್ಯ, ಎಂ ಉತ್ತಪ್ಪ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರು ಆರನೇ ತರಗತಿ ತೆರೆಯುವದನ್ನು ಒಪ್ಪಿದರು. ಬೋರ್ಡಿನಿಂದ ಒಬ್ಬ ಹೆಚ್ಚಿನ ಅಧ್ಯಾಪಕರನ್ನು ಕೊಡುವ ಭರವಸೆ ಇತ್ತರು. ಜಿಲ್ಲಾ ಬೋರ್ಡ ಉದ್ಯೋಗಿಗಳ ತುಟ್ಟಿ ಬತ್ತದ ವಿಚಾರದಲ್ಲಿ ತಮ್ಮ ಪ್ರಯತ್ನಗಳನ್ನು ವಿವರಿಸಿದರು. ನಂತರ ಕಾಂಪೋಸ್ಟ ಗೊಬ್ಬರ ಶೇಕರಿಸಿ ಬಹುಮಾನಿತರಾದವರಿಗೆ ಕತ್ತಿ, ನೇಗಿಲ ಗಳ ಬಹುಮಾನ ವಿತರಣೆ ಮಾಡಲಾಯಿತು. ಉಪಹಾರದ ಏರ್ಪಾಡಿತ್ತು ಸಭೆಯು ಸಂತಸದಿಂದ ಮುಕ್ತಾಯವಾಯಿತು.

C M A

---

### ಶ್ರೀಪತಿರಾವ್ ಜಾಸ್ಮಾರಕ ಆಸ್ಪತ್ರೆ

ತಾ ೨೨-೫-೫೦ರಲ್ಲಿ ಭಾಗಮಂಡಲದ ರಾ ಬ ಶ್ರೀಪತಿರಾವ್ ವೆಟರಿನರಿ ಆಸ್ಪತ್ರೆಯ ಹೊಸ ಕಟ್ಟಡವು ಕೊಡಗಿನ ಚೀಫ್ ಕಮಿಷನರಾದ ದಿ|| ರಾ|| ಡಿ. ಎಸ್ ಬೇಡಿಯವರಿಂದ ತೆರೆಯಲ್ಪಟ್ಟಿತು.

ಸದ್ರಿ ಕಟ್ಟಡವು ಅವರ ತಮ್ಮ ಪ್ಲಾಂಟರ್ ಎಸ್ ಶ್ರೀನಿವಾಸಯ್ಯನವರಿಂದ ಅವರ ಅಣ್ಣನ ಜ್ಞಾಪಕಾರ್ಥವಾಗಿ ಕಟ್ಟಿಸಲ್ಪಟ್ಟದ್ದಾಗಿದೆ. ಆ ದಿನ ಸಾಧಾರಣ ೫೦೦ ಮಹನಿಯರು ಮತ್ತು ಮಹಿಳೆಯರು ಅಲ್ಲದೆ ಕೊಡಗಿನ ಅ. ಕಮಿಷನರ್, ಸಿವಿಲ್ ಸರ್ಜನ್, ರಿಜಿಸ್ಟ್ರಾರ್, ಚೀಫ್ ವೆಟರ್‌ನರಿ ಆಫೀಸರ, ನಿವೃತ್ತರಾದ ಜಿಲ್ಲಾ ವಿದ್ಯಾಧಿಕಾರಿ ಸಿ ಎಂ. ರಾಮರಾಯರೂ, ಅಡ್ವೋಕೇಟ್‌ಗಳಾದ ಶ್ರೀ ಸಿ ಎನ್ ವೆಂಕಪ್ಪಯ್ಯ ಮತ್ತು ಶ್ರೀ ಸಿ ಎಸ್ ನಾರಾಯಣರಾವ್, ನಿವೃತ್ತ ವೆಟರ್‌ನರಿ ಅಧಿಕಾರಿ ಡಾ. ಕೋದಂಡ ಸೋಮಣ್ಣನವರೂ, ರಾ ಸಾ ಕೋಪಂಡ ಚಂಗಪ್ಪನವರೂ ಮತ್ತು ಇತರ ಉದ್ಯೋಗಸ್ಥರುಗಳೂ, ನಪೋಕ್ಲು ನಾಡಿನ ಗಣ್ಯ ಮಹನೀಯರುಗಳೂ ಸಹ ಹಾಜರಿದ್ದರು. ಇಡೀ ಭಾಗಮಂಡಲ ಪೇಟೆಯು ತಳಿರು ತೋರಣಗಳಿಂದ ಬಹು ರಮಣೀಯವಾಗಿ ಅಲಂಕರಿಸಲ್ಪಟ್ಟಿತ್ತು. ಚೀಫ್ ಕಮಿಷನರ್ ಸಾಹೇಬರವರನ್ನು ವಾದ್ಯಘೋಷದೊಡನೆ ಎದುರುಗೊಂಡು ಮೊದಲಾಗಿ ರಾ ಬ ಶ್ರೀಪತಿರಾವ್ ಕಟ್ಟಿಸಿದ ಆಯುರ್ವೇದ ಆಸ್ಪತ್ರೆಯಲ್ಲಿ ಅವರ ಭಾವ ಚಿತ್ರವನ್ನು ಅನಾವರಣ ಮಾಡಿದ ನಂತರ ಹೊಸ ಆಸ್ಪತ್ರೆಯ ಆವರಣದಲ್ಲಿ ಸಭೆ ಸೇರಲಾಯಿತು.

ಮೊದಲಾಗಿ ಶ್ರೀನಿವಾಸಯ್ಯನವರ ಸ್ವಾಗತ ಭಾಷಣ ನಡೆದ ನಂತರ ಚೀಫ್ ವೆಟರ್‌ನರಿ ಅಧಿಕಾರಿಗಳು ಈ ಆಸ್ಪತ್ರೆಯನ್ನು ಕಟ್ಟಿಸಿ ಉದಾರ ಸಹಾಯ ಮಾಡಿದ ಶ್ರೀ ಶ್ರೀನಿವಾಸಯ್ಯನವರ ಮತ್ತು ಅವರ ಕುಟುಂಬದ ಪರಿಚಯ ಮತ್ತು ಆಸ್ಪತ್ರೆಯ ಪ್ರಯೋಜನವನ್ನು ಕುರಿತು ಮಾತನಾಡಿದರು. ರಿಜಿಸ್ಟ್ರಾರವರಾದ ಶ್ರೀ ಪಿ ಎಂ ಚಂಗಪ್ಪನವರು ದಿವಂಗತ ರಾ|| ಬ|| ಶ್ರೀಪತಿರಾಯರ ಗುಣ ಕಥನ ಮಾಡಿದರು.

ಅಧ್ಯಕ್ಷರಾದ ಚೀಫ್ ಕಮಿಷನರವರು ದಿವಂಗತ ಶ್ರೀಪತಿರಾಯರ ಗುಣಗಳನ್ನು ಮತ್ತು ಉದಾರಭಾವದಿಂದ ಹೊಸ ಕಟ್ಟಡವನ್ನು ಕಟ್ಟಿಸಿದ ಶ್ರೀ ಶ್ರೀನಿವಾಸಯ್ಯನವರ ಗುಣಗಳನ್ನು ಪ್ರಶಂಸಿಸಿ ಇವರ ಉದಾಹರಣೆಯನ್ನು ಗೃಹಸ್ಥರಾದ ಇತರರೂ ಅನುಸರಿಸತಕ್ಕದ್ದೆಂದು ಹೇಳಿದರು. ಈ ಆಸ್ಪತ್ರೆಗೆ ಬೇಕಾದ ಒಂದು ಗೂಳಿ ಮತ್ತು ಇತರ ಸಿಬ್ಬಂದಿಗಳನ್ನು ಕೂಡಲೆ ಕೊಡುವದಾಗಿಯೂ ಮತ್ತು ಕ್ರಮೇಣ ಒಬ್ಬ ಡಾಕ್ಟರನ್ನು ಕೊಡುವದಾಗಿಯೂ ಒಪ್ಪಿದರು.

ಶ್ರೀ ಶ್ರೀನಿವಾಸಯ್ಯನವರ ಮೊಮ್ಮಗ ಶ್ರೀ ಯು ಎಲ್ ನಾರಾಯಣರಾವ್ ಇವರಿಂದ ವಂದನಾರ್ಪಣೆಯಾದನಂತರ ಬಂದ ಅತಿಥಿಗಳಿಗೆ ಚಹಪಾನದಿಂದ ಸಮಾರಂಭವು ಕೊನೆಗೊಳ್ಳಲ್ಪಟ್ಟಿತು.

ಹಾಜರಿದ್ದವ

---

## ಸಾರ್ವಜನಿಕರ ತಿಳುವಳಿಕೆಗೆ

ಈ ಮೂಲಕ ಸಕಲ ಜನರಿಗೂ ತಿಳಿಯಪಡಿಸುವುದೇನೆಂದರೆ:—ಮಡಿಕೇರಿ ದೇಚೂರಿನಲ್ಲಿ ಚಾಮರಾಜರೋಡಿನಲ್ಲಿರುವ ಮುನಿಸಿಪಲ್ ಬ್ಲಾಕ್ ನಂಬ್ರ 20 ರಲ್ಲಿರುವ ಹೌಸ್ ನಂ 1 ಮತ್ತು 2 ಇದಕ್ಕೆ ಸೇರಿರುವ ಸಣ್ಣ ಹಿತ್ತಲನ್ನು ಸಹ ನನ್ನ ತಮ್ಮನಾದ ತಿಮ್ಮಪ್ಪನೆಂಬವರು ಪಾಲಿಬಿಟ್ಟದ್ದಲ್ಲಿರುವ ನನ್ನ ಅಣ್ಣ ವಿ. ಜವರಪ್ಪ ಮತ್ತು ನನ್ನ ಅನುಮತಿ ಇಲ್ಲದೆ, ಗಿರವಿಯಾಗಲೀ, ಭೋಗ್ಯವಾಗಲೀ ಯಾ ಮಾರಾಟವಾಗಲಿ ಮಾಡಿದಲ್ಲಿ, ಈ ಆಸ್ತಿಯನ್ನು ಹಾನಿ ಪಡಿಸಿಕೊಂಡವರ, ಮುಂದೆ ಇದರಿಂದ ಉಂಟಾಗುವ ಸಕಲ ನಷ್ಟ ನಷ್ಟಗಳಿಗೂ ಜವಾಬ್ದಾರರಾಗಬೇಕಾಗಿ ಪಬ್ಲಿಕ್‌ನವರಿಗೆ ಈ ಮೂಲಕ ತಿಳಿಸಲಾಗಿದೆ

ಮಡಿಕೇರಿ, 14-6-50 — ವಿ ಎ ಕಾಳಪ್ಪ, ಅಸಿಸ್ಟೆಂಟ್ಸ್ ಆಫೀಸು

# ಕರ್ಮ ಯೋಗಿಯೇ ಸನ್ಯಾಸಿ.

[ಶ್ರೀ ಕಾವೇರಿ ಆಶ್ರಮ ಇವರಿಂದ]

ಕರ್ಮಯೋಗಿ ಮತ್ತು ಕರ್ಮ ಸನ್ಯಾಸಿ ಇವರಿಬ್ಬರೂ ಒಂದೇ. ಇವರಲ್ಲಿ ಪರಸ್ಪರ ಭೇದವಿಲ್ಲ. ಕರ್ಮಯೋಗ ಶ್ರೇಷ್ಠವೋ ಕರ್ಮ ಸನ್ಯಾಸ ಶ್ರೇಷ್ಠವೋ ಎಂದು ಕೇಳಿದರೆ ಇದಕ್ಕೆ ಉತ್ತರವಿಲ್ಲ. ಏಕೆಂದರೆ ಇವೆರಡೂ ಒಂದೇ. ಕರ್ಮಯೋಗಿಯು ಅಂತಿಮ ಗುರಿಯನ್ನು ತಲುಪಿದ್ದರಿಂದ ಅವನ ಕರ್ಮ ಸನ್ಯಾಸಿ, ಕರ್ಮ ಸನ್ಯಾಸಿಯೂ ಯೋಗಿಯು, ಯೋಗವು ಸನ್ಯಾಸಕ್ಕೆ ಮಾರ್ಗ, ಸನ್ಯಾಸವು ಯೋಗದ ಅಂತಿಮ ದೆಶೆ. ಆದುದರಿಂದ ಸನ್ಯಾಸಿಯೇ ಯೋಗಿ ಮತ್ತು ಯೋಗಿಯೇ ಸನ್ಯಾಸಿ.

ಅರ್ಜುನನು ಭಗವಂತನನ್ನು ಒಂದು ಪ್ರಶ್ನೆ ಕೇಳುತ್ತಾನೆ 'ಯೋಗ ಸನ್ಯಾಸ ಇವುಗಳಲ್ಲಿ ಯಾವುದು ಉತ್ತಮ' ಎಂದು. ಭಗವಂತನಿಗೆ ಉತ್ತರ ಹೇಳಲು ಕಷ್ಟವಾಗುತ್ತದೆ. ಆದರೂ ಒಂದು ಜವಾಬು ಕೊಡುತ್ತಾನೆ. ಸನ್ಯಾಸಕ್ಕಿಂತ ಯೋಗವು ಶ್ರೇಷ್ಠ ಎನ್ನುತ್ತಾನೆ. ಇದು ಭಗವಂತನಿಗೇ ಸಮಾಧಾನವಿಲ್ಲ, ಏಕೆಂದರೆ ಇವೆರಡರಲ್ಲೂ ಒಂದರಲ್ಲಿ ಒಂದು ಉತ್ತಮ ಏನೂ ಇಲ್ಲ. ಆದರೂ ಏನಾದರೊಂದು ಜವಾಬು ಕೊಡಬೇಕೆಂದು ಈ ರೀತಿ ಹೇಳುತ್ತಾನೆ. ಒಂದು ತಾಯಿಯನ್ನು ಅವಳ ಮಕ್ಕಳಿಬ್ಬರು ಪುಕ್ಕಳ ಪೈಕಿ ಯಾರನ್ನು ಬಿಟ್ಟುಬಿಡುತ್ತೀಯೆ? ಎಂದು ಪ್ರಶ್ನೆ ಹಾಕಿದರೆ ಅವಳು ಏನು ಉತ್ತರ ಕೊಡುತ್ತಾಳೆ. ಅವಳು ತಬ್ಬಿಬ್ಬಾಗುತ್ತಾಳೆ. ಆದರೂ ಅವಳು ಜವಾಬು ಕೊಡಲೇಬೇಕಾಗುತ್ತದೆ. ಬಿಡಲೇಬೇಕೆಂದರೆ ನಾನು ಹಿರಿಯ ಮಗನನ್ನು ಬಿಡುತ್ತೇನೆ ಎನ್ನುತ್ತಾಳೆ. ಕಿರಿಯ ಮಗು ಅವಳನ್ನು ಬಿಟ್ಟು ಇರಲಾರದು. ತಾಯಿಯನ್ನು ಒಂದು ನಿಮಿಷ ಕಾಣದಿದ್ದರೂ ಆ ಮಗುವು ಗಾಬರಿಗೊಳ್ಳುತ್ತದೆ, ಅಳುತ್ತದೆ, ಅದಕ್ಕೆ ತಾಯಿಯನ್ನು ಕಾಣದೆ ಇದು ಏನಾದರೂ ಆಗಿಂತ. ಆದರೆ ಹಿರಿಯ ಮಗನು ಸ್ವಲ್ಪ ವಯಸ್ಸಾದವನು, ತಾಯಿಯನ್ನು ಬಿಟ್ಟು ಅನೇಕ ದಿನಗಳು, ಅವಳಿಂದ ದೂರದಲ್ಲಿ ಇರಬಲ್ಲನು. ಅವನ ಬುದ್ಧಿ ಬಲಿತಿದೆ. ಸ್ವತಂತ್ರನಾಗಿ ತನ್ನ ಕೆಲಸ ತಾನು ನೋಡಿಕೊಳ್ಳಬಲ್ಲ, ಇತರರ ಸಹಾಯ ಬೇಕಾಗಿಲ್ಲ. ಇದು ತಾಯಿಗೆ ಗೊತ್ತು. ಆದುದರಿಂದ ತಾಯಿಯು ಇವನನ್ನು ದೂರ ಬಿಟ್ಟಿರಬಲ್ಲಳು. ಹೀಗಾಗಿ ಅವಳು ಈ ರೀತಿಯ ಜವಾಬು ಕೊಡುತ್ತಾಳೆ. ಆದರೆ ಅವಳಿಗೆ ಇಬ್ಬರಲ್ಲಿಯೂ ಸಮಾನವಾದ ಪ್ರೀತಿ ಇದೆ. 'ಬಿಡಲೇಬೇಕೆಂದರೆ ದೊಡ್ಡವನನ್ನು ಬಿಡುತ್ತೇನೆ' ಎನ್ನುತ್ತಾಳೆ. ಹಾಗೆಯೇ ಭಗವಂತನ ಉತ್ತರವೂ ಸಹ. ಕರ್ಮಯೋಗಿ ಎಳೆ ಮಗುವಿನಂತೆ. ಭಗವಂತನಿಗೆ ಇವನ ಕಡೆ ಹೆಚ್ಚು ದೃಷ್ಟಿ. ಭಗವಂತನ ಸಹಾಯವಿಲ್ಲದೆ ಇವನಿಗೆ ಆಗದು, ಭಗವಂತನು ಇವನ ಸಹಾಯಕ್ಕೆ ಯಾವಾಗಲೂ ಸಿದ್ಧನಾಗಿರುತ್ತಾನೆ. ಕರ್ಮ ಸನ್ಯಾಸಿಗೆ ಯಾವ ಆಧಾರವೂ ಬೇಡ, ಅವನು ಸ್ವತಂತ್ರನಾಗಿರಬಲ್ಲ. ಆದುದರಿಂದ ಭಗವಂತನು ಕರ್ಮಯೋಗವು ಶ್ರೇಷ್ಠ ಎಂದಿದ್ದಾನೆ. ಯಾರು ತನಗಾಗಿ ಹಾತೊರೆಯುತ್ತಾರೋ ಅವರ ಸಹಾಯಕ್ಕೆ ಹೋಗಲು ಇವನು ಕಾದಿದ್ದಾನೆ. ಇದಕ್ಕಾಗಿ ಭಗವಂತನು ಕರ್ಮಯೋಗಿಯು ಶ್ರೇಷ್ಠನೆಂದು ಹೇಳಿದನು. ಕರ್ಮ ಸನ್ಯಾಸಿಯು ಭಗವಂತನ ಪಾದ ರವಿಂದವನ್ನು ತಲುಪಿದ್ದರೆ ಕರ್ಮಯೋಗಿಯು ಅವನಲ್ಲಿಗೆ ಹೋಗುತ್ತಿದ್ದಾನೆ. ಇಂದಲ್ಲ ನಾಳೆ ತಲುಪಿಯೇ ತಲುಪುತ್ತಾನೆ. ಇಬ್ಬರೂ ಮೋಕ್ಷವನ್ನು ಹೊಂದುವವರೇ.

ಕರ್ಮಯೋಗ, ಸನ್ಯಾಸ ಇವುಗಳನ್ನು ಕೇಳುವಾಗ ಒಂದು ಮನಸ್ಸಿಗೆ ಇದೆಲ್ಲ ನಮಗೇಕೆ ಎಂದೆನಿಸುತ್ತದೆ. ಭಗವದ್ಗೀತೆ, ವೇದಪುರಾಣಗಳೆಲ್ಲ ಸಾಧುಗಳಿಗೆ ಬೇಕಾದವು. ವ್ಯವಹಾರ ಮಾಡುವ, ಸಂಸಾರ ಜನರಿಗೆ ಇವುಗಳ ಅವಶ್ಯಕತೆ ಏನು ಎಂದು ತಿಳಿಯುತ್ತಾರೆ. ಆದರೆ ಗೀತೆಯು ಪ್ರತಿಯೊಬ್ಬನಿಗೂ ಬೇಕಾದ ಮಹಾಗ್ರಂಥ. ವ್ಯಾಪಾರಿಗೂ, ವ್ಯವಸಾಯಗಾರನಿಗೂ, ಕೂಲಿ ಕೆಲಸದವನಿಗೂ ಪಾರಮಾರ್ಥಿಕ ಸಂಬಂಧವಿಲ್ಲವೆನ್ನುವುದು ಶುದ್ಧ ತಪ್ಪು ತಿಳುವಳಿಕೆ. ಯಾವುದೇ ಕೆಲಸದಲ್ಲಿರಲಿ ಅವನಿಗೆ ಪರಮಾರ್ಥ ಸಾಧನೆ ಇದೆ. ಅವನ ನಿತ್ಯ ವ್ಯವಹಾರವೇ ಪರಮಾರ್ಥ ಸಾಧನೆಗಾಗಿ ಇರಬೇಕು. ಇದು ಸಾಧ್ಯವೇ? ಇದೇ ಸತ್ಯ. ಎಲ್ಲಿ ವ್ಯವಹಾರವಿದೆಯೋ ಅಲ್ಲಿ ಗೀತೆ ಇದ್ದೇ ಇದೆ. ವ್ಯವಹಾರದಲ್ಲಿ ತೊಡಗಿದ ಮನುಷ್ಯನು ತನ್ನ ವ್ಯವಹಾರವನ್ನು ಎಷ್ಟು ಶುದ್ಧವಾಗಿಟ್ಟುಕೊಳ್ಳಬೇಕೆನ್ನುವುದನ್ನು ಗೀತೆಯು ಅವನಿಗೆ ಹೇಳಿಕೊಡುತ್ತದೆ. ಶುದ್ಧ ವ್ಯವಹಾರವೇ ಧರ್ಮ. ಹೀಗಿರುವಾಗ, ವ್ಯಾಪಾರದಲ್ಲಿ ಧರ್ಮವಿದೆ, ವ್ಯವಸಾಯದಲ್ಲಿ ಧರ್ಮವಿದೆ, ಎಲ್ಲಾ ಕೆಲಸದಲ್ಲಿಯೂ ಧರ್ಮವಿದೆ. ಧರ್ಮ ರೀತಿಯ ವ್ಯವಹಾರವೇ ಪರಮಾರ್ಥ ಸಾಧನೆ. ಆದುದರಿಂದ ಸಂಸಾರ ಜೀವಿಯಾದ ನಾನು ಪರಮಾರ್ಥ ಜೀವನ ನಡೆಸಲು ಸಾಧ್ಯವಿಲ್ಲವೆನ್ನುವ ತಿಳುವಳಿಕೆಯನ್ನು ಬಿಡಬೇಕು. ಪ್ರತಿ ಮನುಷ್ಯನಿಗೂ ಪ್ರತ್ಯೇಕ ಪರಮಾರ್ಥ ಧನ ಇದ್ದೇ ಇದೆ, ಮತ್ತು ಅದನ್ನು ಸಾಧಿಸಲು ಸಾಧ್ಯವಿದೆ ಮತ್ತು ಅದು ಅವನ ಕರ್ತವ್ಯ.

ಇದಕ್ಕಾಗಿ ನಾವು ಮೊದಲು ನಮ್ಮನ್ನು ಅರಿತುಕೊಳ್ಳಬೇಕು. ಈ ಸ್ಥೂಲದ ಶರೀರ ನಾನು ಎನ್ನುವುದನ್ನು ಮರೆಯಬೇಕು. ಈ ಶರೀರವೇ ಬೇರೆ, ನಾನೇ ಬೇರೆ, ಈ ಶರೀರವು ನನಗೆ ದೇವರು ಕೊಟ್ಟಿರುವ ಒಂದು ಯಂತ್ರ, ಅದರ ಸಹಾಯದಿಂದ ನಾನು ಜೀವನ ನಡೆಸುತ್ತೇನೆ. ಅದಕ್ಕಾಗಿ ಮಾತ್ರ ಈ ಶರೀರವನ್ನು ನಾನು ಉಪಯೋಗಿಸುತ್ತೇನೆ.

ನಾನು ಬೇರೆ, ಈ ಶರೀರ ಬೇರೆ. ನಾನು ಆ ಸೃಷ್ಟಿಕರ್ತನ, ಜಗನ್ನಿಯಾಮಕನ ಅಂಶ. ಅವನ ಅಂಶೀಭೂತನಾದ ನಾನು ಈ ಮಲಪೂರಿತವಾದ ಶರೀರ ಎಂದಾದರೂ ಆದೇನೇ? ಆದರೆ ಇದನ್ನು ಬಿಟ್ಟು ನಾನು ನನ್ನ ಕೆಲಸವನ್ನು ಸಾಧಿಸಲಾರೆ. ಈ ಶರೀರದಲ್ಲಿದ್ದುಕೊಂಡು ಇದರ ಸಹಾಯದಿಂದ ನಾನು ನನ್ನ ಒಡೆಯನನ್ನು ಸೇರಬೇಕು. ಈ ಶರೀರದ ಸಹಾಯವಿಲ್ಲದೆ ಮೋಕ್ಷ ಸಾಧಕನಿಗೆ ಬೇರೆ ದಾರಿಯಿಲ್ಲ. ಈ ಶರೀರವನ್ನು ಕೊಟ್ಟಿರುವ ಪರಮಾತ್ಮನು ನನ್ನಲ್ಲಿ ಇಟ್ಟಿರುವ ಒಂದು ಕರುಣೆ. ಅವನು ಕೊಟ್ಟ ಶರೀರವಾದುದರಿಂದ ಅದೂ ನನಗೆ ಪೂಜ್ಯವೇ. ಅದಕ್ಕೂ ಒಂದು ಧರ್ಮವಿದೆ. ಆ ಧರ್ಮಕ್ಕೆ ವಿರೋಧವಾಗಿ ಅದು ನಡೆಯದು. ಎಲ್ಲಿಯವರೆಗೆ ಈ ಶರೀರದ ಅವಶ್ಯಕತೆ ನನಗಿದೆಯೋ ಅಲ್ಲಿಯವರೆಗೆ ಅದರ ಧರ್ಮದ ಕಡೆಗೂ ನಾನು ಗಮನಕೊಡಬೇಕು. ಅದಕ್ಕೆ ತಿನ್ನಲು, ಕುಡಿಯಲು ಕೊಡಬೇಕು. ಈ ಶರೀರ ಮತ್ತು ಇದನ್ನು ಆಶ್ರಯಿಸಿಕೊಂಡಿರುವ ನಾನು, ಈ ಎರಡು ಧರ್ಮವೂ ಒಂದಕ್ಕೊಂದು ವಿರೋಧವಾಗಿಯೇ ಇದೆ.

ಆತ್ಮವು ಯಾವಾಗಲೂ ಈ ಶರೀರದಿಂದ ಮುಕ್ತವಾಗಲು ಮತ್ತು ತನ್ನ ಒಡೆಯನನ್ನು ಸೇರಲು ಹಾತೊರೆಯುತ್ತದೆ. ಆದರೆ ಈ ಶರೀರವು ಆತ್ಮವನ್ನೂ ತನ್ನ ಕಡೆಗೆ ಎಳೆಯುತ್ತದೆ. ಒಂದು ಕಡೆ ಪರಮಾತ್ಮ, ಮತ್ತೊಂದು ಕಡೆ ಈ ಶರೀರ. ಒಂದು ಕಡೆ ಮೋಕ್ಷ ಇನ್ನೊಂದು ಕಡೆ ಬಂಧನ. ಇವೆರಡರ ಮಧ್ಯೆ ಸಿಕ್ಕಿ ಆತ್ಮವು ತಪಿಸುತ್ತದೆ. ಒಂದು ಪರಮಾತ್ಮನ ಕಡೆಗೂ ಮತ್ತೊಂದು ಈ ಕಾಮ ಕ್ರೋಧಾದಿಗಳಿಂದ ಕೂಡಿದ ಶರೀರದ ಕಡೆಗೂ ಮನಸ್ಸನ್ನು ಯಾವ ಕಡೆಗೆ ಬಿಟ್ಟರೆ ಆ ಕಡೆಗೆ ಹೊರಳುವ ಸ್ವಭಾವ. ತನ್ನ ಕಾಮತೃಪ್ತಿ ಪಡಿಸಿಕೊಳ್ಳಲು ಆತ್ಮವನ್ನು ತನ್ನಲ್ಲಿಟ್ಟುಕೊಳ್ಳಲು ಈ ಶರೀರವು ತನ್ನ ಅನೇಕ ಮೋಹ, ಮಾಯಾಜಾಲಗಳನ್ನು ಎರಚಿ ತನ್ನದನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಅನೇಕ ಪಾಪಕರ್ಮವನ್ನು ಮಾಡಿ ನನಗುಂಗಳನ್ನು ಕೋರಿಸಿ, ಕಾಮ ಕ್ರೋಧಾದಿಗಳಲ್ಲಿ ಮುಳುಗಿಸಿಬಿಡುತ್ತದೆ. ಮನುಷ್ಯನು ಇಲ್ಲಿ ಮಂಕಾಗಿ ಬಿಡುತ್ತಾನೆ. ಅಂಧಕಾರದಲ್ಲಿ ಮುಳುಗಿ ಈ ಶರೀರವೇ ತಾನು, ಇದೇ ತನ್ನ ಸರ್ವಸ್ವವೆಂದು ತಿಳಿಯುತ್ತಾನೆ. ಈ ಶರೀರಕ್ಕಾಗಿ ಬೇಕಾದ, ಅದರ ಕಾಮತೃಪ್ತಿಗಾಗಿಯೇ ಜೀವಿಸುತ್ತಾನೆ. ಪುನಃ ಪುನಃ ಜನ್ಮಗಳನೆತ್ತುತ್ತಾನೆ. ಆದರೆ ಒಂದು ಸಮಯದಲ್ಲಿ ಇವನಿಗೆ ಬೆಳಕು ಕಾಣುತ್ತದೆ. ತನ್ನ ನಿಜಸ್ಥಿತಿ ಇದಲ್ಲವೆಂಬ ಜ್ಞಾನ ಇವನಿಗೆ ಬರುತ್ತದೆ. ಆಗ ಇವನಿಗೆ ಎಚ್ಚರವಾಗುತ್ತದೆ. ಇವನ ಮನಸ್ಸು ಆತ್ಮದ ಕಡೆಗೆ, ಮೋಕ್ಷದ ಕಡೆಗೆ ಎಳೆಯುತ್ತದೆ. ಈ ಸಂದರ್ಭದಲ್ಲಿ ಇವನ ಮನಸ್ಸು ತುಂಬಾ ದುರ್ಬಲವಾಗಿರುತ್ತದೆ. ಕಾಮ ವಾಸನೆಯಿಂದ ಬಿಡಿಸಿ ಹೋದುದರಿಂದ ಮುಕ್ತನಾಗಲು ಇವನ ಮನಸ್ಸು ಬಾರದು. ಕಾಮವು ಇವನನ್ನು ಹಿಂದಕ್ಕೆ ಎಳೆಯುತ್ತದೆ. ಈ ಕಾಮದ ಬಲೆಯಿಂದ ಬಿಡಿಸಿಕೊಳ್ಳಲು ತುಂಬಾ ಪ್ರಯತ್ನ ಬೇಕು. ಮನುಷ್ಯನು ಪ್ರಯತ್ನಬೇಕು. ಮೋಕ್ಷದ ಕಡೆಗೆ ಆತ್ಮದರ್ಶನದ ಕಡೆಗೆ ಪ್ರಯತ್ನಪೂರ್ವಕವಾಗಿ ಮನಸ್ಸನ್ನು ಎಳೆಯಬೇಕು. ಇದಕ್ಕಾಗಿ ಪುರಾಣ ಪುಣ್ಯ ಕಥೆಗಳು, ಸತ್ಪುರುಷರ ಸಹವಾಸ ಇವುಗಳ ಅವಶ್ಯಕತೆ ತುಂಬಾ ಇದೆ. ಇವುಗಳ ಸಹಾಯದಿಂದಲೂ, ತನ್ನ ಪ್ರಯತ್ನದಿಂದಲೂ ತನ್ನನ್ನು ಉದ್ಧಾರ ಮಾಡಿಕೊಳ್ಳಬೇಕು.

---

## ವಾರ್ತೆಗಳು.

ಚಿನ್ನ ಎಣ್ಣೆಯ ವಿತರಣದ ಮೇಲಿರುವ ನಿಯಂತ್ರಣವನ್ನು ತೆಗೆದು ಹಾಕಲು ಹೈದರಾಬಾದ್ ಸರಕಾರ ನಿರ್ಣಯ ಕೈಕೊಂಡಿತು.

ಜೂನ್ ತಾ ೧೦ರಲ್ಲಿ ಮಧ್ಯಾಹ್ನ ೨ ಗಂಟೆಗೆ ಕಲ್ಕತ್ತಾ ಒಳಮಳೆ ಬಿರುಗಾಳಿಯು ಘಂಟೆಗೆ ೬೮ ಮೈಲು ವೇಗದಲ್ಲಿ ಬೀಸಿತು. ಡಂ ಡಂ ವಿಮಾನಕ್ಕೆ ಬರುವ ವಿಮಾನಗಳನ್ನು ಎಚ್ಚರಿಕೆ ಕೊಟ್ಟು ಅಲಹಬಾದ್ ಮೊದಲಾದ ಕಡೆಗಳಿಗೆ ಕಳುಹಿಸಿ ಕೊಡಲಾಯಿತು. ಮಳೆ ಬಿರುಗಾಳಿಯಿಂದ ಅನೇಕ ಅನಾಹುತ ಗಳಾದುವು.

## ಸರ್ದಾರ್ ಪಟೇಲರಿಗೆ ಕಂದಾಯ ವಸೂಲು ನೋಟೀಸ್

ಭಾರತ ಸರಕಾರದ ಉಪಪ್ರಧಾನ ಸರ್ದಾರ್ ವಲ್ಲಭ ಭಾಯಿ ಪಟೇಲರಿಗೆ ಅಹಮ್ಮದಾಬಾದ ಜಿಲ್ಲೆಯ ಮಾಮಲೇದಾರರು ಒಂದು ರಿಜಿಸ್ಟ್ರು ನೋಟೀಸು ಬಿಟ್ಟಿರುವರೆಂಬ ಅಧಿಕೃತ ಸುದ್ದಿಯನ್ನು 'ಬೊಂಬೇ ಕ್ರಾನಿಕಲ್' ಪತ್ರಿಕೆಯ ಅಹ್ಮದಾಬಾದ್ ಸುದ್ದಿಗಾರನು ಪ್ರಕಟಿಸಿದ್ದಾನೆ. ಅಹಮ್ಮದಾಬಾದ್ ಜಿಲ್ಲೆಯ ವಿರಂಪುರ ಗ್ರಾಮದಲ್ಲಿ ಸರ್ದಾರ್ ಪಟೇಲರಿಗೆ ಚಿಕ್ಕ ಆಸ್ತಿಯಿದೆ. ಅದಕ್ಕೆ ಸಂಬಂಧಪಟ್ಟ ಚಾಲ್ತಿ ವರ್ಷದ ಭೂಕಂದಾಯ ಇನ್ನೂ ವಸೂಲಾಗಿಲ್ಲ. ೧೦ ದಿನಗಳೊಳಗೆ ಅದನ್ನು ಪಾವತಿಮಾಡದಿದ್ದರೆ ಕಾನೂನು ಪ್ರಕಾರ ದಂಡವಿಧಿಸಲಾಗುವುದೆಂದು ತಿಳಿಸಿ ಮಾಮಲೇದಾರರ ರಿಜಿಸ್ಟ್ರು ನೋಟೀಸು.

## ಚಂದ್ರಲೋಕಕ್ಕೆ ಟಿಕೇಟು!

ನ್ಯೂಯಾರ್ಕ್ ಮ್ಯೂಸಿಯಮ್ಸ್‌ನ್ನು ಬೇರೆ ಬೇರೆ ಗ್ರಹಗಳಿಗೆ ಪಯಣ ಬೆಳೆಸುವುದರ ಕುರಿತು ಒಂದು ಏಜನ್ಸಿ ತೆರೆದು ಈಗಾಗಲೇ ಟಿಕೇಟು ಮಾರಾಟಕ್ಕೆ ಕೊಡಗಿರುವರು. ೨೦೦ಕ್ಕೆ ಮೇಲ್ಪಟ್ಟು ಮಂದಿ ಟಿಕೇಟು ಕೊಂಡುಕೊಂಡಿದ್ದಾರೆ. 'ಗ್ರಹಗಳ ಕಡೆಗೆ ಹೋಗುವ ನಾಲ್ಕು ಮಾರ್ಚ್ ತಿಂಗಳಲ್ಲಿ ನಾಲ್ಕು ಮಾಯಾ ಹಡಗಗಳು ರವಿವಾರ ಬಿಟ್ಟು ಉಳಿದ ಎಲ್ಲಾ ದಿನಗಳಲ್ಲಿ ನ್ಯೂಯಾರ್ಕ್ ವಾಯು ಬಂದರಿನಿಂದ ಹೊರಡುವವು. ಈ ಮಾಯಾ ಬಂದರು ಸ್ಟೈಲ್ ಮಾರ್ಕೆಟ್‌ದಲ್ಲಿ ಏರ್ಪಡುವುದು. ಟಿಕೇಟಿನ ದರಗಳನ್ನು ನಂತರ ತಿಳಿಸಲಾಗುವುದು' ಎಂಬುದಾಗಿ ಏಜನ್ಸಿಯು ಜಾಹೀರುಪಡಿಸಿದೆ.

---

## ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವಿರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ

1. 32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245 ರ ವರೆಗೆ
2. 32 ರಿವಾಲ್ವರುಗಳು (Revolvers) „ 262 „ 574 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರತಕ್ಕದ್ದು ಮತ್ತು ದಯಮಾಡುವುದು)

ಎಂ ಎಸ್ ಸೋಮಯ್ಯ,
ಗೌರವ ಕಾರ್ಯದರ್ಶಿ

52–40

# CRESCENT

## FOR PROTECTION AND SERVICE.

It is best to represent and insure with

The CRESCENT Insurance Co., Ltd.,

*H. O. BOMBAY* ] [*Established 1919*

*For particulars write to:*

**Sri B. A. Poovaiah** *Organiser*, *Pollibetta, Coorg.*

or

**The Branch Manager,** *22 B. Mahatma Gandhi Road, Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

## ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಶೆಡ್ಯೂಲ್ಡ ಬ್ಯಾಂಕ್ ಎಂದು ಸ್ವೀಕರಿಸಲ್ಪಟ್ಟಿರುವ (1921ರಲ್ಲಿ ಸ್ಥಾಪಿತವಾಗಿದೆ)

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ | 1,79,000 |
| ಕ್ಷೇಮನಿಧಿ | ರೂ | 53,000. |
| ಇತರ ನಿಧಿಗಳು | ರೂ | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು

ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೈಟನ್ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೂಡಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು

ಎಂ ಎಸ್ ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಮ್ಯಾನೇಜರ್

ಶ್ರೀ ಟಿ. ಎಸ್. ಗೋವಿಂದರಾಜು, 'ಕೊಡಗು' ಪ್ರೆಸ್ಸಿನಲ್ಲಿ, ಮಡಿಕೇರಿ.

Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು

| | | |
|---|---|---|
| ಹೊಸ ಉದ್ಯಮ ರೂ | ... | 6,13,00,000 ಮೀರಿದೆ |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ | . | 27,73,00,000 „ |
| ಒಟ್ಟು ನಿಧಿ ರೂ | .. .. | 8,30,00,000 „ |
| ಸಂದಾಯವಾದ ಕ್ಲೇಮುಗಳು ಮತ್ತು ಬೋನಸುಗಳು | | 10,56,00,000 „ |

1,25,000 ಕ್ಕೂ ಮೀರಿದ ಪಾಲಿಸಿದಾರರ ಸಂಘಟನೆ

ಶಕ್ತಿ ಸೇವೆ ಭದ್ರತೆ

## ಎಂಪೈರ್ ಆಫ್ ಇಂಡಿಯಾ

### ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮ್ಯಾನೇಜರ್

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಮುಂಬಯಿ

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು

ಭದ್ರತೆ! 17 ವರ್ಷಗಳ ಅನುಭವಶೀಲತೆ!! ಸೇವಾ ಅನುಕೂಲತೆ !!

## ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಆಫೀಸು,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ.

| | | |
|---|---|---|
| 3 | ತಿಂಗಳ | 3 % |
| 6 | „ | 3¼ |
| 12 | „ | 3½ % |
| 24 | „ | 4 % |

ರೂಪಾಯಿ 10,000ಕ್ಕೆ ಮೇಲ್ಪಟ್ಟ ಠೇವಣಿಗಳಿಗೆ ಮೇಲಿನ ದರಕ್ಕಿಂತ ¼% ಹೆಚ್ಚಾಗಿ

ಶಾಖೆಗಳು – ಸಿಟಿ ಮಂಗಳೂರು, ಬ್ರಹ್ಮಾವರ, ಕುಂದಾಪುರ, ಪುತ್ತೂರು, ಉಡುಪಿ, ಶಿವಮೊಗ್ಗ, ಕಾರ್ಕಳ, ಕಾಸರಗೋಡು, ಹೈದರಾಬಾದ್, ಪುತ್ತೂರು, ಮಡಿಕೇರಿ ಮುಂತಾದ ಸ್ಥಳಗಳು

ಒಟ್ಟು ವರ್ಕಿಂಗ್ ಬಂಡವಾಳ ರೂ ೪೦ ಲಕ್ಷಕ್ಕೂ ಮೀರಿದೆ

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.

## ದಿ ಟ್ರಾಪಿಕಲ್

### ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮ್ಯಾನೇಜಿಂಗ್ ಡೈರೆಕ್ಟರ್– ಲಾಲ ಶಂಕರ್ ಲಾಲ್

ಮುಖ್ಯ ಆಫೀಸ್– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು.

| | |
|---|---|
| ಪಂಡಿತ ಮೋತಿಲಾಲ್ ನೆಹರು | ಎಸ್ ಶ್ರೀನಿವಾಸ ಅಯ್ಯಂಗಾರ್ |
| ಹಕೀಮ್ ಅಜಮಲ್‌ಖಾನ್ | ಡಾ॥ ಎಂ. ಎ. ಅನ್ಸಾರಿ |

**Transacts —Life, Fire, Motor and Marine**

ಯಂ ಯು ಅಚ್ಚಣ್ಣ, ಏಜನ್ಸಿ ಸೂಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು

## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

*Head Office:* **MANGALORE**

26–8

**K. M. Bopaiah, Esq.,**
*Branch Secretary for Mysore & Coorg,*
*85 Sultanpet, BANGALORE 2*

Reg. No. M 1000.
'KODAGU' MERCARA, (Coorg).

# ಕೊಡಗು

ಸಂಪಾದಕರು—ಸಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

| ಸಂಪುಟ ೨೯ | ತಾರೀಕು ೨೦-೬-೧೯೫೦ನೇ ಶುಕ್ರವಾರ | ಸಂಚಿಕೆ ೫ |
|---|---|---|

## ಸಿಂಹಾವಲೋಕನ.

# ಭೀತಿಯೂ ಪ್ರೀತಿ ಇಲ್ಲದೆ-

ಲೇ:– "ಗುಪ್ತ" ಮಡಿಕೇರಿ.

### ಮುಂದಿನ ಚುನಾವಣೆ

ಬರುವ ವರ್ಷ ಏಪ್ರಿಲ್ ಮೇ ತಿಂಗಳುಗಳಲ್ಲಿ ಸಾರ್ವತ್ರಿಕ ಚುನಾವಣೆಗಳಾಗುವವೆಂದು ಹೇಳಲಾಗುತ್ತಿದೆ. ಇದಕ್ಕಾಗಿಯೇ ಹಿಂದೂದೇಶದ ಚುನಾವಣಾ ಕಮಿಷನರಾಗಿ ನೇಮಿಸಲ್ಪಟ್ಟಿರುವ ಶ್ರೀ ಸುಕುಮಾರ ಸೇನರು ದಕ್ಷಿಣ ಹಿಂದೂಸ್ತಾನದ ಪ್ರವಾಸ ಕೈಕೊಂಡು ಕೊಡಗಿಗೆ ಜುಲೈ ಗಳೊಳಗೆ ಬರುವವರಿದ್ದಾರೆ. ಇವರು ಮತದಾನ ಪಟ್ಟಿಯು ಸರಿಯಾಗಿ ಏರ್ಪಡಿಸಲ್ಪಟ್ಟಿದೆಯೋ ಎಂಬುದನ್ನು ನೋಡುವದಲ್ಲದೆ ಮತದಾರ ಕ್ಷೇತ್ರ ನಿಶ್ಚಯದ ಬಗ್ಗೆಯೂ ಆಲೋಚಿಸುವರು. ಈ ಬಗ್ಗೆ ಪ್ರತಿ ಸಂಸ್ಥಾನಗಳು ತಮ್ಮ ಅಭಿಪ್ರಾಯವನ್ನು ಕೊಡತಕ್ಕದ್ದಿದೆ. ಈ ಬಗ್ಗೆ ಸೇನ್‌ರವರು ತಮ್ಮ ವರದಿಯನ್ನು ಕೇಂದ್ರಕ್ಕೆ ಕೊಡಲಿರುವರು. ಒಬ್ಬನೇ ಸದಸ್ಯನ ಪ್ರತಿನಿಧ್ಯವಿರುವ 'ಸಿಂಗಲ್‌ಮೆಂಬರ್' ಕ್ಷೇತ್ರಗಳಾಗ ಬೇಕೇ ಯಾ ಈಗ ಕೊಡಗಿನಲ್ಲಿರುವಂತೆ ಹೆಚ್ಚಿರುವ 'ಪ್ಲೂರಲ್ ಮೆಂಬರ್' ಕ್ಷೇತ್ರಗಳೇ ಎಂಬ ಬಗ್ಗೆ ನಿರ್ಣಯವಾಗಬೇಕಿದೆ. ಹಿಂದೂ ದೇಶದ ಉದ್ದಗಲಕ್ಕೂ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವು ಭಾಗಗಳು 'ಸಿಂಗಲ್' ಕ್ಷೇತ್ರಗಳನ್ನೂ ಕೆಲವು 'ಪ್ಲೂರಲ್' ಕ್ಷೇತ್ರಗಳನ್ನೂ ಇಚ್ಛಿಸಿವೆ. ನಮ್ಮ ಘಟನೆಯಂತೆ ಯಾವುದೂ ಇರಬಹುದಾಗಿದೆ. ಆದರೂ ಜನ ಜಾಗೃತಿ, ಮತ ದಾನಗಳ ದೃಷ್ಟಿಯಿಂದ 'ಸಿಂಗಲ್' ಮತದಾರ ಕ್ಷೇತ್ರಗಳೇ ಹಿತವೆಂದು ಹಲವರ ಅಭಿಮತ.

### ಜಯ ಯಾರಿಗೆ ?

ಮುಂದಿನ ಚುನಾವಣೆಯಲ್ಲಿ ಯಾರು ಅಧಿಕಾರಕ್ಕೆ ಬರಬಹುದೆಂದು ಊಹಿಸುವದು ಕಷ್ಟವಲ್ಲ. ಹಿಂದೂದೇಶದ ಇಂದಿನ ಪರಿಸ್ಥಿತಿಯಲ್ಲಿ ಈಗ ಅಧಿಕಾರದಲ್ಲಿರುವವರೇ ಮುಂದಿನ ಚುನಾವಣೆಯಲ್ಲೂ ಅಧಿಕಾರಕ್ಕೆ ಬರಬಹುದು. ಕಾಂಗ್ರೆಸ್ ಆಡಳಿತದ ಮೇಲೆ ಜನತೆಗೆ ಅತೃಪ್ತಿ ಇದ್ದರೂ ಅತೃಪ್ತ ಜನರನ್ನು ಜಾಗೃತಗೊಳಿಸಿ ಕಾಂಗ್ರೆಸ್ಸಿನ ವಿರುದ್ಧ ನಿಲ್ಲಿಸಲು ಸಮರ್ಥವಾದ ಎದುರು ಪಕ್ಷ ಇಂದು ಇಲ್ಲ. ಕಾಂಗ್ರೆಸ್ಸಿನ ಲ್ಲಿಎಷ್ಟೇ ಅವ್ಯವಸ್ಥೆ, ಶಿಥಿಲತೆ, ಅನೈತಿಕತೆ ಇದ್ದರೂ ಇಂದಿಗೂ ಕೂಡ ಅದೊಂದೇ ಹಿಂದೂದೇಶದಲ್ಲಿ ಸಂಘಟಿತವಾಗಿರುವ ಸಂಸ್ಥೆಯಾಗಿದೆ. ಕಾಂಗ್ರೆಸ್ ಭವನದ ಗೋಡೆಗಳ ಗೋಡೆಗಳಲ್ಲಿ ಬಿರುಕಿದ್ದರೂ ಮುಂದಿನ ಚುನಾವಣೆಯು ಒಂದು ಬಿರುಗಾಳಿಗೆ ಅದು ಮುಗ್ಗರಿಸುವಂತಿಲ್ಲ.

ಕಾಂಗ್ರೆಸಿಗೆ ಎದುರು ನಿಲ್ಲಬೇಕಾದ ಸಂಸ್ಥೆಗಳೆಂದರೆ ಸಮಾಜವಾದ ಮತ್ತು ಸಮತಾವಾದ ಪಕ್ಷಗಳು. ಹಿಂದೂದೇಶದ ಸಮಾಜವಾದ ಪಕ್ಷದ ತತ್ವಗಳು ಅನುಕರಣೀಯವಿದ್ದರೂ ಆ ಸಂಸ್ಥೆಯ ಮೇಲಂತಸ್ತಿನಲ್ಲಿರುವ ಹತ್ತಾರು ಜನರಲ್ಲದೆ ಹಿನ್ನೆಲೆಯಲ್ಲಿ ಸಂಸ್ಥೆ ಬಲಯುತವಾಗಿರುವಂತೆ ತೋರುವದಿಲ್ಲ. ಈ ಪಕ್ಷದವರೇ ಹೆಚ್ಚಾಗಿ ಆರಾಮ ಕುರ್ಚಿಯ ಕ್ರಾಂತಿಕಾರರಾಗಿಯೇ ಉಳಿದಿದ್ದಾರೆ. ಜನತೆಯ ಬೆಂಬಲವನ್ನು ಈ ವರೆಗೆ ಇವರು ಪಡೆಯಲು ಅಸಮರ್ಥರಾಗಿದ್ದಾರೆ. ಆದ್ದರಿಂದ ಕಾಂಗ್ರೆಸನ್ನು ಎದುರಿಸಿ ಜಯಪಡೆಯುವ ಚೇತನ ಇದಕ್ಕೆ ಇನ್ನೂ ಬಂದಿಲ್ಲ.

ಉಗ್ರಸಮತಾವಾದಿಗಳು ಕಾಂಗ್ರೆಸಿಗೆ ತೀವ್ರ ಪ್ರತಿ ಭಟನೆಯನ್ನು ಒಡ್ಡುತ್ತಿದ್ದರು. ಆದರೆ ಭಾರತದಲ್ಲಿ ಅವರು ಅನುಸರಿಸಿದ ವಿನಾಶಾತ್ಮಕ ಕಾರ್ಯಕ್ರಮದಿಂದಾಗಿ ತಮ್ಮ ಶಾಖೆಗಳನ್ನು ತಾವೇ ಕತ್ತರಿಸಿಕೊಂಡಿದ್ದಾರೆ. ಅವರು ನಡೆಸಿದ ಕೊಲೆ, ದರೋಡೆ, ಮತ್ತಿತರ ವಿನಾಶ ಕಾರ್ಯಗಳಿಂದಾಗಿ ಜನಾನುರಾಗವನ್ನು ಕಳೆಕೊಂಡಿದ್ದಾರೆ. ಹೀಗಿರುವದರಿಂದ ಮುಂದಿನ ಚುನಾವಣೆಯಲ್ಲಿ ಸಮಗ್ರವಾಗಿ ಅಲ್ಲದಿದ್ದರೂ ಕೇಂದ್ರದಲ್ಲಿ ಸರಕಾರ ರಚಿಸುವಷ್ಟಾದರೂ ಕಾಂಗ್ರೆಸ್ಸೇ ಬರಹುದು.

### ಕೊಡಗಿನ ಸ್ಥಿತಿ.

ಕೊಡಗಿನ ಪರಿಸ್ಥಿತಿ ಇನ್ನೂ ಅನಿಶ್ಚಿತವಾಗಿದೆ. ಯಾವ ರೀತಿಯಲ್ಲಿ ಕೊಡಗಿನ ಶಾಸನ-ಸಭೆಯು ಮಾರ್ಪಾಡು ಹೊಂದುವದೆಂಬುದೂ, ಯಾವ ರೀತಿಯ ಸುಧಾರಣೆಗಳು ಕೊಡಲ್ಪಡುವವೆಂಬುದೂ ಅನಿಶ್ಚಿತ. ಕೊಡಗಿನ ಮತದಾರ ಕ್ಷೇತ್ರಗಳ ವಿಭಜನೆಯಾದರೂ ಯಾವ ರೀತಿ ಎಂಬುದೂ ಕೂಡ ಇನ್ನು ನಿರ್ಣಯವಾಗಬೇಕು. ಈ ವಿಚಾರ ಪರ್ಯಾಲೋಚಿಸಲು ಶಾಸನ ಸಭಾ ಸದಸ್ಯರ ಅಭಿಪ್ರಾಯವನ್ನು ಚೀಫ್ ಕಮಿಷನರು ತೆಗೆಯುವ ಏರ್ಪಾಡು ಮಾಡಿರುವರು. ಈ ಸದಸ್ಯರು ಯಾವ ರೀತಿಯ ಅಭಿಪ್ರಾಯ ಕೊಡಲಿರುವರೋ ನೋಡಬೇಕು. ಆದರೆ ಒಂದು ಮಾತ್ರ ನಿಶ್ಚಿತ. ಕೊಡಗಿನಲ್ಲಿ ಸಾರ್ವತ್ರಿಕ ಚುನಾವಣೆಯಾಗುವದಾದರೆ ಅದು ಚಾರಿತ್ರಿಕ ಚುನಾವಣೆಯೂ ಆಗುವದು! ಕೊಡಗಿನಲ್ಲಿ ಕಾಂಗ್ರೆಸಿಗೆ ವಿರುದ್ಧ ನಿಲ್ಲಲು ಬೇರೆ ಪಕ್ಷಗಳಿಲ್ಲದಿದ್ದರೂ ಕಾಂಗ್ರೆಸಿಗರೇ ಕಾಂಗ್ರೆಸನ್ನು ವಿರೋಧಿಸುವ ಅಪೂರ್ವ ಸನ್ನಿವೇಶ ಇಲ್ಲಿ ಬರುವದೆಂಬುದು ಮಾತ್ರ ನಿಶ್ಚಿತ. ಯಾವ ಸುಧಾರಣೆ ಬಂದರೂ ಮುಂದಿನ ಚುನಾವಣೆಯು ಕೊಡಗಿನಲ್ಲಿ ಕೊಡಗಿನ ಭವಿಷ್ಯದ ತಕ್ಕಡಿ ಮೇಲೆಯೇ ನಡೆಯುವದು. ಕೊಡಗಿನ ಶೀತ ರಾಜಕೀಯದ ರಂಗದಲ್ಲೂ ಬಹುಶಃ ಆಗ ಅಸಾಧ್ಯ ಕಾವು ಏರಬಹುದು!

---

### ಕಮ್ಯೂನಿಸ್ಟ್ ಪಕ್ಷ

ಸಮತಾವಾದ ತತ್ವವು ಎಷ್ಟೇ ಉತ್ತಮವೂ ಅವಶ್ಯಕವೂ ಎನಿಸಿದರೂ ಅದನ್ನು ಕಾರ್ಯರೂಪದಲ್ಲಿಳಿಸಲು ಹೊರಟವರಕುರುಹುಡುತನದಿಂದ ಸರ್ವನಾಶವಾಗುತ್ತಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಕಾರ್ಲ್‌ಮಾರ್ಕ್ಸ್‌ನು ಹೇಳಿದ ತತ್ವ ಹಾಗೂ ಆಡಳಿತ ರೀತಿ ಮಾನವ ಕೋಟಿಯ ಕಲ್ಯಾಣದ ಮಾರ್ಗ. ಆದರೆ ಅದರ ಸಾಧನೆಗೆಂದು ಹೊರಟವರಿಂದಾಗಿ ಈ ಉದಾತ್ತ ತತ್ವವು ಇಂದು ಜಗತ್ತಿನ ಉದ್ಧಾರದ ಸಾರ್ವತ್ರಿಕ ತತ್ವವಾಗದೆ ಕೇವಲ 'ರಷ್ಯಾ ತತ್ವ'ವಾಗಿರುವದು ವಿಷಾದಕರ. ಇಂದು ರಷ್ಯಾವು ಕಮ್ಯೂನಿಸ್ಟರ ಸ್ವರ್ಗ. ಅದರ ಆಜ್ಞೆಯಂತೆ ನಡೆಯುವದೇ ಅವರ ಕರ್ತವ್ಯ! ಈ ರೀತಿ ಜಗತ್ತಿನ ವಿವಿಧ ಭಾಗದ ಕಮ್ಯೂನಿಸ್ಟರು ರಷ್ಯಾವು ಗುಂಡಿ ಒತ್ತಿದಂತೆ ಕುಣಿಯುವ ಕಾರಣ ಮಾರ್ಕ್ಸ್‌ನ ವಿಮಲತತ್ವಕ್ಕೆ ವಿಪರೀತ ಹಾನಿಯಾಗುತ್ತಿದೆ. ಇದಕ್ಕೆ ನಿದರ್ಶನವಾಗಿ ಹಿಂದೂದೇಶದ ಕಮ್ಯೂನಿಸ್ಟ್ ಪಕ್ಷದ ವರ್ತನೆಯನ್ನೇ ಎತ್ತಿ ಹೇಳಬಹುದು. ೧೯೩೯ರಲ್ಲಿ ಸ್ಟಾಲಿನ್ ಮತ್ತು ಹಿಟ್ಲರರ ಒಪ್ಪಂದವಾಗಿದ್ದಾಗ ಜಗತ್ತಿನ ಉದ್ದಗಲಕ್ಕೂ ಈ ಕಮ್ಯೂನಿಸ್ಟರು ಬ್ರಿಟಿಷರ ಮತ್ತು ಅವರ ಪಕ್ಷದ ವಿರುದ್ಧ ಪ್ರಚಾರ ಮಾಡಿದರು. ಜರ್ಮನಿಯ ವಿರುದ್ಧ ಅವರು ಹೂಡಿದ ಯುದ್ಧವನ್ನು "ಸಾಮ್ರಾಜ್ಯಶಾಹಿ ಯುದ್ಧ"ವೆಂದರು. ಅದು ೧೯೪೧ರ ಜೂನ್ ೨೨ರಲ್ಲಿ ಸ್ಟಾಲಿನ್ ಹಿಟ್ಲರ್ ಮೈತ್ರಿಯು ಮುರಿದು ರಷ್ಯಾದ ಮೇಲೆ ಹಿಟ್ಲರನ ಸೈನ್ಯ ಹರಿಯುವ ಸಾಧ್ಯತೆ ತೋರಿದಾಗ ಕಮ್ಯೂನಿಸ್ಟರು ಅದೇ "ಸಾಮ್ರಾಜ್ಯಶಾಹಿ ಯುದ್ಧ"ವನ್ನು "ಜನತಾಯುದ್ಧ"ವೆಂದು ಸಾರಿ ಬ್ರಿಟಿಷರ ಬಾಲ ಹಿಡಿದು ವರ್ತಿಸಿದರು. ಅದೇ ಸಮಯದಲ್ಲಿ ಬ್ರಿಟಿಷರ ಆಶ್ರಯ ಪಡೆದ ಇವರು ಮಹಾತ್ಮರ ವಿರುದ್ಧ ಮಾಡಿದ ಪ್ರಚಾರ, 'ಕ್ವಿಟ್ ಇಂಡಿಯಾ' ಚಳವಳದಲ್ಲಿ ಮಾಡಿದ ದ್ರೋಹ ಜಗಜ್ಜಾಹೀರವಾಗಿದೆ. ಹಿಂದೂದೇಶವು ಸ್ವತಂತ್ರವಾಗಿ, ನೆಹರೂ ಸರಕಾರವು ಅಂತರರಾಷ್ಟ್ರೀಯ ರಂಗದಲ್ಲಿ ತಿರುವತ್ತಿ ನಿಂತಾಗ ಇಂಡಿಯಾವನ್ನು ಒಪ್ಪಿಸಲು ಇಚ್ಛಿಸಿದ ರಷ್ಯಾದ ಆಶಯದಂತೆ ನೆಹರೂ ಸರಕಾರಕ್ಕೆ ಸಂಪೂರ್ಣ ಸಹಾಯ ಮಾಡುವ ನಿರ್ಧಾರವನ್ನು ಇಂಡಿಯಾದ ಕಮ್ಯೂನಿಸ್ಟರು ಮಾಡಿ "ನೆಹರೂಕೀ ಜೈ" ಎಂದರು. ಹಿಂದೂದೇಶವು ಸ್ವತಂತ್ರವಾಗಿದ್ದು 'ಕಾಮನ್‌ವೆಲ್ತ್'ನೊಳಗಿರುವದೆಂದು ನಿರ್ಣಯ ಮಾಡಿದ್ದು ರಷ್ಯಾಕ್ಕೆ ತೃಪ್ತಿ ಇಲ್ಲ. ಆದರಂತೆಯೇ ಇಲ್ಲಿಯ ಕಮ್ಯೂನಿಸ್ಟರೂ ರಣದೀವರನ್ನು ಸೆಕ್ರೆಟರಿಯಾಗಿ ಆರಿಸಿಕೊಂಡು "ನೆಹರೂ ಸರಕಾರದ ವಿರುದ್ಧ ಯುದ್ಧ" ಸಾರಿದರು. ಕೊಲೆ, ದರೋಡೆ, ರೈಲು ಬಂಡಿ ನಾಶ ಈ ರೀತಿಯ ಕಾರ್ಯಕ್ರಮ ಕೈಕೊಂಡರು. ಈ ಮಾರ್ಗದಿಂದ ತಮ್ಮ ಶಕ್ತಿ ಸುಧಾರಿಸುವ ಬದಲು ಅಹಿತವೇ ಆದುದು ಈಗ ಆ ಪಕ್ಷಕ್ಕೆ ತಿಳಿದು ಬಂದಿದೆ.

ಇದಕ್ಕೆ ಬೇರೊಂದು ಕಾರಣವೂ ಇದೆ. ಹಿಂದೂದೇಶವು ಪಾಕಿಸ್ತಾನದೊಡನೆ ತನ್ನ ಮೈತ್ರಿಯನ್ನು ಹೆಚ್ಚಿಸುತ್ತಿದೆ. ಇಂಡೋನೇಶಿಯಾ, ಬರ್ಮಾ ಈ ಪೂರ್ವ ಎಲ್ಲಾ ರಾಷ್ಟ್ರಗಳಲ್ಲಿ ಜನಾನುರಾಗಿಯಾಗಿದೆ. ದಿನ ದಿನಕ್ಕೆ ಬೆಳೆಯುತ್ತಿರುವ ಭಾರತದ ಬಗ್ಗೆ ರಷ್ಯಾದ ಹಿಂದಿನ ವಿರುದ್ಧ ಧೋರಣೆಯೂ ಬದಲಾಗುತ್ತಿದೆ. ಹಿಂದೆ ಸ್ಟಾಲಿನರನ್ನು ಕಾಣಲು ಭಾರತದ ರಾಯಭಾರಿ ವಿಜಯಲಕ್ಷ್ಮಿಗೆ ಒಮ್ಮೆಯೂ ಅನು ದೊರೆಯದಿದ್ದರೂ ಇಂದು ಡಾ. ರಾಧಾಕೃಷ್ಣನ್‌ರವರಿಗೆ ಅಂಥಾ ಅನು ಮಾಡಲಾಗುತ್ತಿದೆ. ಅಮೇರಿಕಾವು ಪಾಕಿಸ್ತಾನ ಹಾಗೂ ಭಾರತದ ಮುಖ್ಯ ಮಂತ್ರಿಗಳನ್ನು ಆಹ್ವಾನಿಸಿ ಗೌರವಿಸಿದದ್ದು ರಷ್ಯಾಕ್ಕೆ ತನ್ನ ನೀತಿಯ ಬದಲಾವಣೆಯ ಅವಶ್ಯಕತೆಯನ್ನು ತೋರಿಸಿರಬೇಕು. ಆದ್ದರಿಂದ ಮುಂದೆ ಹಿಂದೂದೇಶದ ಕಮ್ಯೂನಿಸ್ಟರು ಈ ವರೆಗಿನ ತಮ್ಮ ನೀತಿಯನ್ನು ಬದಲಾಯಿಸಿ ಮತ್ತೊಮ್ಮೆ 'ನೆಹರೂ ಸರಕಾರಕೀ ಜೈ' ಎಂದರೆ ಆಶ್ಚರ್ಯ ಪಡಬೇಕಿಲ್ಲ. ಈಗಾಗಲೇ ಕಮ್ಯೂನಿಸ್ಟ್ ಪಕ್ಷದಲ್ಲಿ ರಣದೀವ್ ಮುಂದಾಳ್ತನವನ್ನು ಬದಲಾಯಿಸಿ ಪೂನಾದ ಜೋಶಿ ಪಕ್ಷದವರನ್ನು ಸೆಕ್ರೆಟರಿಯಾಗಿ ನೇಮಿಸಬೇಕೆಂಬ ಮಾತುಗಳಿವೆ. ಈ ರೀತಿ ರಷ್ಯಾದ ತಾಳದಂತೆ ಕುಣಿವ ಇವರಿಂದಾಗಿ ಕಾರ್ಲ್‌ಮಾರ್ಕ್ಸ್‌ನ ತತ್ವದ ಕೊಲೆಯಾಗುತ್ತಿದೆ. ಆತನ ಉದಾತ್ತ ತತ್ವಗಳನ್ನು ಕೇವಲ ರಾಜಕೀಯ ಸಂದರ್ಭ ಸಾಧನೆಗಾಗಿ ಉಪಯೋಗಿಸುತ್ತಿರುವದು ವಿಷಾದಕರ.

---

### ಮಾದರಿ ಮೈಸೂರು

ಮೈಸೂರು ಕರ್ನಾಟಕ ಏಕೀಕರಣಕ್ಕೆ ಉರುಳು, ಗೋಲಿಗುಂಡು! ಹಿಂದೆ ಮೈಸೂರಿನಿಂದ ಏಕೀಕರಣವಾಗಬೇಕೆಂಬ ನೂರಾರು ಕಂಠಗಳ ಕೂಗು ಕೇಳಿ ಬರುತ್ತಿತ್ತು. ಈಗ ಆ ಕೂಗು ಹೆಚ್ಚಾಗಿ ಕೇಳುತ್ತಿಲ್ಲ. ನೆಹರೂ, ಪಟೇಲ್, ಪಟ್ಟಾಭಿ ಕಮಿಟಿಯ ನಿರ್ಣಯದ ನಂತರ ಭಾಷಾವಾರು ಪ್ರಾಂತ ರಚನೆಯು ಬೆಂಬಲಿಗರು ಸ್ವಲ್ಪ ತಣ್ಣಗಾದಂತೆ ತೋರುತ್ತಿದೆ. ಏನೇ ಇರಲಿ, ಕರ್ನಾಟಕದ ಬಗ್ಗೆ ಹೇಳುವದಾದರೆ ಮೈಸೂರಿನ ನೀತಿ ಕರ್ನಾಟಕ ಏಕೀಕರಣಕ್ಕೆ ಸಹಾಯಕವಾಗಿಲ್ಲವೆನ್ನಬೇಕು. ಮೈಸೂರು ತಾನು ಈಗ ಕ

ಕರ್ನಾಟಕದೊಡನೆ ಸೇರುವುದಿಲ್ಲವೆಂದೂ ಕರ್ನಾಟಕದ ಉಳಿದ ಭಾಗಗಳು ಒಂದಾಗಿ ಕರ್ನಾಟಕ ಪ್ರಾಂತವಾದ ನಂತರ ತಾನು ಅದರಲ್ಲಿ ಐಕ್ಯಗೊಳ್ಳುವ ಮಾತೆಂದೂ ತನ್ನ ಪ್ರಚಾರವನ್ನು ಪ್ರಾರಂಭಿಸಿತು. ಅದು ಅಲ್ಲಿಗೆ ನಿಲ್ಲದೆ ಇತ್ತಲಾಗಿ ಮೈಸೂರಿಗೆ ಪ್ರತ್ಯೇಕವಿರಬೇಕೆಂಬ ಭಾವನೆಯು ಹಲವು ರೀತಿಗಳಿಂದ ತೋರಿ ಬರುತ್ತದೆ.

ಒಂದನೆಯದಾಗಿ ಮೈಸೂರು ಕಾಂಗ್ರೆಸ್, ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನೊಳಗಿರಬಾರದೆಂದೂ ಆದ್ದರಿಂದ ಮೈಸೂರಿಗೆ ಪ್ರಾಂತೀಯ ಸ್ಥಾನ ಬೇಕೆಂದೂ ಅಖಿಲಭಾರತ ಕಾಂಗ್ರೆಸಿಗೆ ಅಪೀಲು ಮಾಡಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನ ಅಧ್ಯಕ್ಷರಾಗಿದ್ದು, ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿರುವ ಶ್ರೀ ಎಸ್. ನಿಜಲಿಂಗಪ್ಪನವರ ವಿರೋಧವಿದ್ದರೂ ಅಖಿಲಭಾರತ ಕಾಂಗ್ರೆಸ್ಸು ಮೈಸೂರು ಕಾಂಗ್ರೆಸನ್ನು ಕರ್ನಾಟಕದಿಂದ ಬೇರ್ಪಡಿಸಿ ಅದಕ್ಕೆ ಪ್ರಾಂತೀಯ ಸ್ಥಾನವನ್ನು ಕೊಟ್ಟಿದೆ. ಕರ್ನಾಟಕದ ಐಕ್ಯಕ್ಕಾಗಿ ಅಹರ್ನಿಶಿ ದುಡಿಯುವರೆಂದು ತೋರಿಸಿಕೊಳ್ಳುವ ನಿಜಲಿಂಗಪ್ಪನವರ ವಿರುದ್ಧ ಆ ಭಾ. ಕಾಂಗ್ರೆಸು ನಿರ್ಣಯ ಮಾಡಿರುವುದು ಆಶ್ಚರ್ಯ. ಮೈಸೂರಿನವರೇ ಆದ ನಿಜಲಿಂಗಪ್ಪನವರು ಬಹುಶಃ ವಿರೋಧಿಗಳಿಲ್ಲವೇನೊ! ನೀರಿಗಿಂತಾ ರಕ್ತ ಮಂದವಲ್ಲವೇ?

ಇದೀಗ ಮೈಸೂರಿನವರು ತಮ್ಮ ಪ್ರತ್ಯೇಕ ಅಸ್ತಿತ್ವದ ಸಾಧನೆಯ ಮಾರ್ಗದಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಈಗ ಮೈಸೂರು ಹಿಂದೀ ಪ್ರಚಾರ ಸಮಿತಿಯು ಕರ್ನಾಟಕ ಹಿಂದೀ ಪ್ರಚಾರ ಸಮಿತಿಯ ಅಂಗವಾಗಿದೆ. ಇದನ್ನು ಬೇರ್ಪಡಿಸಿ ಮೈಸೂರು ಹಿಂದೀ ಪ್ರಚಾರ ಸಮಿತಿಯು ನೇರವಾಗಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಮಿತಿಯ ಅಂಗವಾಗಬೇಕೆಂದು ಪ್ರಯತ್ನ ನಡೆದಿದೆ. ಭೌಗೋಳಿಕವಾಗಿ ಮೈಸೂರು ಪ್ರತ್ಯೇಕವಿದೆ. ಕ. ಪ್ರಾ. ಕಾಂಗ್ರೆಸಿನಿಂದ ಬೇರ್ಪಟ್ಟು ರಾಜಕೀಯವಾಗಿಯೂ ಪ್ರತ್ಯೇಕವಾದಂತಾಯಿತು. ಈಗ ಕರ್ನಾಟಕ ಹಿಂದೀ ಪ್ರಚಾರ ಸಭೆಯಿಂದ ಬೇರ್ಪಟ್ಟು ಸಾಂಸ್ಕೃತಿಕವಾಗಿ ಬೇರಾಗಲಿಚ್ಛಿಸಿದೆ. ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಪ್ರತ್ಯೇಕವಾಗುವದೆಂದರೆ ಆಶ್ಚರ್ಯವಲ್ಲ! ಈ ದೃಷ್ಟಿಯಿಂದ ಮೈಸೂರು ಎತ್ತ ಮುಂದರಿದಿದೆಯೆಂದು ಊಹಿಸುವದು ಪ್ರಯಾಸವಲ್ಲ.

---

## ೫೩ ದಿನಗಳ ಉಪವಾಸ.

ಫ್ರಾಂಕಫರ್ಟದಲ್ಲಿ ವಿಲ್ಲಿ ಹೆರಾಸ್ ಎಂಬವರು ೫೩ ದಿನಗಳ ಉಪವಾಸ ಮಾಡಿದರಂತೆ. ಉಪವಾಸ ಮುಗಿಸಿದಾಗ ಅವರು ನಿರ್ಬಲರಾಗಿದ್ದರೂ ಮುಗುಳು ನಗೆ ನಗುತ್ತಲಿದ್ದರಂತೆ. ಉಪವಾಸ ಕಾಲದಲ್ಲಿ ಅವರು ಒಟ್ಟು ೨೬೦೦ಕ್ಕಿಂತಲೂ ಹೆಚ್ಚು ಸಿಗರೇಟು ಸೇದಿದ್ದಲ್ಲದೆ ಸೋಡಾವಾಟರನ್ನು ಉಪಯೋಗಿಸಿದರಂತೆ. ಅವರ ತೂಕವು ೭೭ ಪೌಂಡು ಕಡಿಮೆ ಯಾಗಿದೆಯಂತೆ.

---

## ನಾಜಿ ಮುಂದಾಳುಗಳ ಸಂಪತ್ತು ಭಾರತದಲ್ಲಿ?

ಲೋಕವನ್ನೇ ಆಳಲು ಪ್ರಯತ್ನ ಮಾಡಿದ ಜರ್ಮನಿಯು ಹಿಟ್ಲರನೂ ಅವನ ಬೆಂಬಲಿಗರೂ ಸಾಯುವ ಮೊದಲು ತಮ್ಮಲ್ಲಿದ್ದ ಅಪಾರ ಸಂಪತ್ತನ್ನು ಅಲ್ಲಲ್ಲಿ ಅಡಗಿಸಿಟ್ಟಿದ್ದಾರೆಂದು, ಈ ಸುಳಿವು ಮಿತ್ರರಾಷ್ಟ್ರದವರಿಗೆ ತಿಳಿದು ಅದನ್ನು ಅದಷ್ಟು ಶೋಧ ನಡೆಸಿ ಬೆಳ್ಳಿ, ಬಂಗಾರ, ವಜ್ರ, ನೋಟು ಮೊದಲಾದುವನ್ನು ಅಲ್ಲಲ್ಲಿ ಕಂಡುಹಿಡಿದಿರುವರು. ಆದರೆ ಇನ್ನೂ ಅಪಾರ ಸಂಪತ್ತು ಬೆಳಕಿಗೆ ಬಂದಿರುವುದಿಲ್ಲವೆಂದು ಹೇಳಲಾಗಿದ್ದು ಹೆಚ್ಚಿನ ಶೋಧ ನಡೆಯುತ್ತಿದೆ. ಒಟ್ಟು ೫,೦೦೦,೦೦೦ ಪವನುಗಳಷ್ಟು ಸಂಪತ್ತು ಇನ್ನೂ ಗುಪ್ತವಾಗಿದೆ ಎಂದು ಲೆಕ್ಕಹಾಕಲಾಗಿದೆ.

ನಾಜಿಗಳ ಪೈಕಿ ಹಿಟ್ಲರನ ಸೇನಾನಿ ಗೋರಿಂಗನೊಡನೆ ಅತೀ ಹೆಚ್ಚು ಸಂಪತ್ತು ಇತ್ತೆಂದು ಹೇಳಲಾಗಿದ್ದು ಒಟ್ಟು ೪,೫೦೦,೦೦೦ ಡಾಲರುಗಳಷ್ಟು ಅವನು ಕೂಡ ಹಾಕಿದ್ದನಂತೆ. ಇನ್ನು ಹಿಟ್ಲರನ ೩,೦೦೦,೦೦೦ ಡಾಲರುಗಳ ಸಂಪತ್ತನ್ನೂ, ಗೊಬೆಲ್ಲನು ೨,೫೦೦,೦೦೦ ಡಾಲರುಗಳಷ್ಟನ್ನೂ ಕೂಡಿ ಹಾಕಿದ್ದನಂತೆ. ಹಿಟ್ಲರನೊಡನೆ ೧೦,೦೦೦,೦೦೦ ಡಾಲರು ಬೆಲೆ ಬಾಳುವ ಸಂಪತ್ತು ಇತ್ತಂತೆ. ಇವೆಲ್ಲಾ ಈ ತನಕ ಸಂಪೂರ್ಣ ಸಿಕ್ಕದೆ ಎಲ್ಲಾದರೂ ಭೂಮಿಯು ಅಡಿ ಅಗೆದು ಗುಪ್ತವಾಗಿಡಲಾಗಿದೆ ಎಂದು ನಂಬಲಾಗಿದೆ.

ರಷ್ಯದ ಆಕ್ರಮಣದಲ್ಲಿರುವ ಬರ್ಲಿನ್ ನಗರದಲ್ಲಿ ಇತ್ತೀಚೆಗೆ ಗೋರಿಂಗನು ಅವನ ಸಂಪತ್ತನ್ನು ನೆಲದಲ್ಲಿ ಹುಗಿದಿಟ್ಟಿದ್ದನು ಎಂಬ ಸುದ್ದಿ ಹಬ್ಬಿಕೊಂಡು ಒಂದೆರಡೆ ಜರ್ಮನರು ಹಾರೆ ಪಿಕಾಸುಗಳನ್ನು ಹಿಡಿದುಕೊಂಡು ಅಲ್ಲಲ್ಲಿ ಅಗೆಯಲಾರಂಭಿಸಿದರು. ಆದರೆ ಅದರಿಂದೇನೂ ದೊರಕಲಿಲ್ಲ.

ಅನೇಕ ದೊಡ್ಡ ದೊಡ್ಡ ಸರಕಾರಿ ಕಟ್ಟಡಗಳಲ್ಲೂ ಈ ರೀತಿಯ ಶೋಧಗಳು ನಡೆದಿವೆ. ಕೊನಿಗ್‌ಸೀ ಎಂಬಲ್ಲಿ ಗೋರಿಂಗನ ಅಡಗಿಸಿಟ್ಟಿದ್ದ ಅಪಾರ ಚಿನ್ನಾಭರಣಗಳು ದೊರೆತಿದ್ದು ಅವುಗಳನ್ನು ಗೋರಿಂಗನು ಯುರೋಪಿನ ದಂಡಯಾತ್ರೆಯ ಸಮಯದಲ್ಲಿ ಕದ್ದುಕೊಂಡು ತಂದಿದ್ದನೆಂದು ಹೇಳಲಾಗಿದೆ. ಹೀಗೆ ಶೋಧಗಳು ನಡೆಯುತ್ತಿರುವಾಗ ಕೆಲವರು ಅನೇಕ ಊಹಾಪೋಹಗಳಿಗೆ ಆಸ್ಪದ ಕೊಟ್ಟಿರುವರು. ಡಾ. ಫ್ರಿಟ್ಸ್‌ನೊಫೆಲ್ ಎಂಬ ಜರ್ಮನ್ ಬ್ಯಾಂಕ್ ವ್ಯವಹಾರ ತಜ್ಞರು ತಮ್ಮ ಅಭಿಪ್ರಾಯವನ್ನು ಹೊರ ಸೂಸುತ್ತಾ ನಾಜಿಗಳ ಸಂಪತ್ತಿನ ಕೆಲ ಅಂಶಗಳು ಗುಪ್ತಚರ ಮುಂಚಿತವಾಗಿಯೇ ಭಾರತಕ್ಕೆ ಹೋಗಿವೆ ಎಂದಿರುವರು!

---

## ಮನುಷ್ಯ ದೇಹದ ವೈಚಿತ್ರ್ಯ

ಮನುಷ್ಯ ದೇಹವು ಜಗತ್ತಿನ ಎಲ್ಲಾ ಯಂತ್ರಗಳಿಂದಲೂ ಹೆಚ್ಚು ವಿಚಿತ್ರಕರವಾಗಿದ್ದು, ಎಲ್ಲದಕ್ಕಿಂತಲೂ ಹೆಚ್ಚು ಕೆಲಸ ಮಾಡುತ್ತದೆ.

೨೪ ಗಂಟೆಗಳೊಳಗೆ ಮನುಷ್ಯನ ಎದೆಗುಂಡಿಗೆ ೧೦೩,೩೮೯ ಸಲ ಬಡಿಯುತ್ತದೆ. ರಕ್ತವು ನಾಳಗಳಲ್ಲಿ ೧೬೮ ಮೈಲಿಯು ಮೈಲು ಓಡಾಡುತ್ತದೆ. ಶ್ವಾಸಕೋಶವು ೩೦೪೦ ಸಲ ಉಸಿರಾಡಿ ೪೩ ಘನ ಅಡಿಗಳಷ್ಟು ಗಾಳಿಯನ್ನು ಸೇವಿಸುತ್ತದೆ. ಹೊಟ್ಟೆ ೨ ಘಾಟಲು ಆಹಾರ ಪಾನೀಯಗಳನ್ನು ತಂಬಿಸಿಕೊಳ್ಳುತದೆ. ಸ್ನಾಯುಗಳು ೪೫೦ ಟನ್ ಶಕ್ತಿ ಉತ್ಪಾದಿಸುತ್ತವೆ. ಕೂದಲು ೦೦೦೦೪೬ ಇಂಚು ಉದ್ದ ಬೆಳೆಯುತ್ತದೆ. ನಾಲಗೆ ೪,೮೦೦ ಶಬ್ದಗಳನ್ನು ಮಾತನಾಡುತ್ತದೆ.

---

## ಗಾಂಧಿ-ಜಿನ್ನಾ ಟೊಪ್ಪಿಗಳು.

ಸಿಂಧದಲ್ಲಿಯ ನವಬಶಹಾ ಎಂಬಲ್ಲಿ ಕೂಡಿದ ಸಭೆಯೊಂದರಲ್ಲಿ ಮೌಲಾನಾ ಖಾದರಿ ಹಾಗೂ ಸೈಯದ್ ಮಹಮ್ಮದ ಶಾಹ ಎಂಬ ಇಬ್ಬರು ಪ್ರತಿಷ್ಠಿತ ಗೃಹಸ್ಥರು ತಮ್ಮ ತಮ್ಮ ಗಾಂಧಿ-ಜಿನ್ನಾ ಟೊಪ್ಪಿಗೆಗಳನ್ನು ಅದಲು ಬದಲು ಹಾಕಿಕೊಂಡರಂತೆ. ತಮ್ಮ ಜಿನ್ನಾ ಟೊಪ್ಪಿಗೆಯನ್ನು ಕೊಡುತ್ತ ಖಾದರಿಯವರು ಇದೀಗ ಭಾರತದಲ್ಲಿ ಜಿನ್ನಾ ಟೊಪ್ಪಿಗೆಯ ಮರ್ಯಾದೆಯನ್ನು ಕಾಯ್ದು; ಪಾಕಿಸ್ಥಾನದಲ್ಲಿ ಗಾಂಧಿ ಟೊಪ್ಪಿಗೆಯ ಮರ್ಯಾದೆ ಕಾಯಿರಿ" ಎಂದು ಹೇಳಿದರಂತೆ.

---

## ವಾರದ ಉಪವಾಸೀ ಜನ.

"ವಾರಕ್ಕೊಂದು ದಿನ ಉಪವಾಸ ಮಾಡುವದು" ಎಂಬ ಆಂದೋಲನಕ್ಕೆ (ದೇಶದಲ್ಲಿ ಆಹಾರವನ್ನು ಉಳಿಸಬೇಕೆಂದು ಈ ಆಂದೋಲನವು ನಡೆದಿರುತ್ತದೆ) ಒಟ್ಟು ಹದಿನೇಳು ಲಕ್ಷಕ್ಕೆ ಮೀರಿ ಸದಸ್ಯರಿದ್ದಾರೆಂದು ಸಿಮ್ಲಾ ಸುದ್ದಿ ಹೇಳುತ್ತದೆ.

---

## ಮುಸ್ಲಿಂ ಲೀಗಿಗೆ ಎದುರು ಸಂಸ್ಥೆ.

ಪಾಕಿಸ್ಥಾನದಲ್ಲಿ, ಮುಸ್ಲಿಂ ಲೀಗಿಗೆ ಎದುರು ಸಂಸ್ಥೆಯೊಂದನ್ನು ಮುಸ್ಲಿಮರೇ ಕಟ್ಟಿದ್ದು, ಅದರ ಹೆಸರು "ಅವಾಮಿ ಲೀಗ" ಎಂದಿದೆ. ಅದರ ಅಧ್ಯಕ್ಷರು ಶ್ರೀ ಶಾಹೀದ ಸುಹ್ರವರ್ದಿಯವರು. ಇವರು ಮೊನ್ನೆ ಮೊನ್ನೆ ಲಾಹೋರಿನಲ್ಲಿ ಭಾಷಣ ಮಾಡುತ್ತ "ಪಾಕಿಸ್ಥಾನ ಸರಕಾರವು ಫ್ಯಾಸಿಸ್ಟ ನೀತಿಯುದಾಗಿದೆ. ಪಾಕ್ ಸರಕಾರವನ್ನು ಅಧಿಕಾರದಲ್ಲಿಟ್ಟಿರುವ ಒಂದೇ ಒಂದು ಸಂಸ್ಥೆಯೆಂದರೆ ಮುಸ್ಲಿಂ ಲೀಗು" ಎಂದು ಹೇಳಿದ್ದಲ್ಲದೆ ಅವಾಮಿ ಲೀಗು ಮುಸ್ಲಿಂ ಲೀಗಿನ ತಪ್ಪು ಪ್ರಚಾರದಿಂದ ಅಡ್ಡದಾರಿ ಹಿಡಿಯುತ್ತಿರುವ ಮುಸ್ಲಿಂ ಬಾಂಧವರಿಗೆ ಸರಿಯಾದ ದಾರಿಯನ್ನು ತೋರಿಸುವುದು ಎಂದು ಬಹಿರಂಗವಾಗಿಯೇ ಹೇಳಿದ್ದಾರೆ.

---

## ವಾರ್ತೆಗಳು.

ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾಗಿರುವ ಶ್ರೀ ಮಾವಳಂಕರರು ಬ್ರಿಟಿಶ ಪಾರ್ಲಿಮೆಂಟಿನ ಹೊಸ ಕಟ್ಟಡದ ಪ್ರಾರಂಭೋತ್ಸವಕ್ಕಾಗಿ ಬರಬೇಕೆಂದು ಆಮಂತ್ರಣ ಬಂದಿದೆ. ಬರುವ ಅಕ್ಟೋಬರ ೨೬ಕ್ಕೆ ಈ ಪ್ರಾರಂಭೋತ್ಸವ ಜರಗುವದು. ಸೆಪ್ಟೆಂಬರ್ ತಿಂಗಳ ಪ್ರಾರಂಭದಲ್ಲಿಯೇ ಶ್ರೀ ಮಾವಳಂಕರರು ಇಂಗ್ಲಂಡಿಗೆ ಹೊರಡುವರು.

ವಿಮಾನ ನಿಲ್ದಾಣವೊಂದರ ಬಳಿ ಮಿಗಿಲಾದ ೧೯ನೇ ದಿನಾಂಕ ಸುಂಕದವರ ಗುಪ್ತ ಪೋಲೀಸು ಶಾಖೆಯು ಸಿಪಾಯಿಯವರು ಉತ್ತರ ಭಾರತದ ಇಬ್ಬರು ಹಳೇ ಬೂಟುಗಳಲ್ಲಿ ಬಚ್ಚಿಟ್ಟಿದ್ದ ೮೩ ವಜ್ರಗಳನ್ನು ಪತ್ತೆ ಹಚ್ಚಿದರು. ಈ ವಜ್ರಗಳ ಬೆಲೆ ಸುಮಾರು ೫೦ ಸಾವಿರ ರೂಪಾಯಿಗಳಷ್ಟಾಗಬಹುದು. ಇವರನ್ನು ಬಂಧಿಸಲಾಗಿದ್ದು ಬಂದರಗಳಲ್ಲಿ ಮತ್ತು ಗಡಿಪ್ರದೇಶದಲ್ಲಿ ಬಿಗಿಯಾದ ಕಾವಲಿಡಲಾಗಿದೆ.

ನೈಜಾಮರ ಸಂಪತ್ತು ೫೦೦ ಕೋಟಿ ರೂಪಾಯಿ ಆಗುತ್ತದೆ. ಇದರಲ್ಲಿ ಭೂಆಸ್ತಿ ತೊಡಗಿದ ಬಂಡವಳ ಹಣ ಮೊದಲಾದವೆಲ್ಲ ಸೇರಿದವು. ನೈಜಾಮರು ಸಂಸ್ಥಾನ ಶಾಖೆಗೆ ಇವರ ಆದಾಯವನ್ನು ಒಪ್ಪಿಸಿದ್ದು ಅದರ ಪರಿಶೀಲನೆಯನ್ನು ನಡೆಸಲಾಗಿದೆ.

ಕಲ್ಲಿದ್ದಲಿ, ಕಾಗದ, ಸಿಮೆಂಟ್, ಉಪ್ಪು ಮತ್ತು ಪೆಟ್ರೋಲುಗಳಲ್ಲದೆ ಉಳಿದ ಆವಶ್ಯಕ ವಸ್ತುಗಳ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಬೇಕೆಂದು ಭಾರತ ಸರಕಾರದ ಮಂತ್ರಾಲೋಚನಾ ಸಮಿತಿಯು ನಿಶ್ಚಿತ ಅಭಿಪ್ರಾಯವಾಗಿದೆಯೆಂದು ತಿಳಿಯುತ್ತದೆ.

---

ಮುಂದಿನ ಪರಿಸ್ಥಿತಿಯನ್ನು ಎದುರುಗೊಳ್ಳಲು ಸಿದ್ಧವಾಗುವ ಸಮಯದಲ್ಲಿ—

ನೀವು ವಿಶ್ರಾಂತಿ ಪಡೆಯುವ ಪೂರ್ವದಲ್ಲೇ ನೀವು ನಿಮ್ಮ ಭವಿಷ್ಯದ ಸಲುವಾಗಿ ಸಕಲ ವ್ಯವಸ್ಥೆಯನ್ನು ಪೂರೈಸಿಕೊಂಡಿದ್ದರೆಂಬ ಅರಿವು ಅವಳಿಗಾದಲ್ಲಿ ಭವಿಷ್ಯದ ಚಿಂತೆ ಇರಲಾರದು.

ದಿ ಜನರಲ್
ಅಶ್ಯೂರನ್ಸ್ ಸೊಸೈಟಿ ಲಿಮಿಟೆಡ್
ಜೀವ-ಅಗ್ನಿ-ಮೋಟಾರು-ಮರೀನ್-ಆಕ್ಸಿಡೆಂಟ್
ಹೆಡ್ ಆಫೀಸ್ ಅಜ್ಮೀರ್. ಸ್ಥಾಪನೆ 1907.
ಶಾಖೆಗಳು—ಹಿಂದೂಸ್ಥಾನದಲ್ಲಿ ಸರ್ವತ್ರ ಮತ್ತು ಪರದೇಶಗಳಲ್ಲಿ.

# ರಾಮರಾಜ್ಯವೆಂದು?

ಲೇ:—ಶ್ರೀ ಎಂ. ಎಸ್. ಮೊಣ್ಣಪ್ಪ, ಕಾನೂರು

ಸ್ವಾತಂತ್ರ್ಯ ಪ್ರಾಪ್ತವಾದ ನಂತರ ಪ್ರಜಾಪ್ರಭುತ್ವ ... ಆಚರಣೆ ಇವುಗಳಿಗೆ ಅತ್ಯಂತ ಮಹತ್ವ ಪ್ರಾಪ್ತವಾಗಿದೆ. ಇನ್ನು ಮೇಲೆ ಅಸ್ತಿತ್ವದಲ್ಲಿ ಬರುವ ಪ್ರಜಾಪ್ರಭುತ್ವ ಸರಕಾರಕ್ಕೂ ಇಂದಿನದಕ್ಕೂ ತಾತ್ವಿಕ ವ್ಯತ್ಯಾಸವಿದೆ. ಈಗಿನ ಘಟನೆಯಂತೆ ಐಕ್ಯಯೋಗಿ ಕ್ರಮಬದ್ಧವಾಗಿ ಇನ್ನು ಮುಂದೆ ಪ್ರಜಾಪ್ರಭುತ್ವವು ಬರಲಿದೆ. ಅಂತಹ ಪ್ರಜಾ ಸರ್ಕಾರದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ತನ್ನ ಹೊಣೆಯರಿತು ಕೆಲಸ ಮಾಡುವ ಹೊಣೆಗಾರಿಕೆಯಿದೆಯೆಂಬ ಕಲ್ಪನೆ ಬರಬೇಕು. ಪಾಶ್ಚಾತ್ಯ ಪ್ರಜಾಪ್ರಭುತ್ವದ ಅನುಕರಣೆಯಿಂದ ಪ್ರತಿಯೊಬ್ಬ ಮತದಾರನೂ ಹುರಿಯಾಳಾಗಬಲ್ಲನು. ಆದರೆ ಇಂತಹ ಹುರಿಯಾಳುಗಳಲ್ಲಿ ಯಾವದೊಂದು ಸದ್ಗುಣವಿಲ್ಲದೆ ಬರೀ ವಿದ್ಯಾವಂತರೆಂದೂ ಐಶ್ವರ್ಯವಂತರೆಂದೂ ಹುರಿಯಾಳುಗಳಾಗಿ ನಿಂತ ಹಳ್ಳಿಯ ಮುಗ್ಧ ಜನರಿಂದ ಓಟು ಪಡೆದು ತಮ್ಮ ಹೊಣೆಗಾರಿಕೆಯನ್ನು ತಿಳಿಯದಿದ್ದರೆ ಪ್ರಜಾ ಸರ್ಕಾರವನ್ನು ನಡೆಸುವ ಚೈತನ್ಯ ನಮ್ಮಲ್ಲಿಲ್ಲವೆಂದು ಪಾಶ್ಚಾತ್ಯರು ಟೀಕಿಸುತ್ತಿರುವುದಕ್ಕೆ ನಾವು ಹೊಣೆಗಾರರಾಗುವುದು. ಈಗಾಗಲೇ ನಡೆದ ಕೊಡಗಿನ ಒಂದೆರಡು ಚುನಾವಣೆಗಳು ಕ್ರಮಬದ್ಧವಾಗಿಲ್ಲವೆಂದು ಜನರ ಟೀಕೆಗೆ ಆಸ್ಪದವಾಗಿದೆ. [illegible] ಮೊದಲನೇ ಕಾರಣವೆಂದರೆ ಹುರಿಯಾಳುಗಳು ಮತದಾರರನ್ನು ಸಂಗ್ರಹಿಸಿಕೊಳ್ಳಲು ಸಮಯ ದೊರೆಯಲಿಲ್ಲವೆಂಬುದೇ ಮುಖ್ಯ! ಹುರಿಯಾಳುಗಳು ಮತದಾರರನ್ನು ಸಂಗ್ರಹಿಸುವುದು ಮತ್ತು ಮತದಾರರು ಹುರಿಯಾಳುಗಳ ಐಶ್ವರ್ಯ, ಅಂತಸ್ತು ಮತ್ತು ಸಾಹುಕಾರತನಕ್ಕೆ ಬೆಲೆ ಕೊಟ್ಟರೆ ತಮ್ಮ ಅಧೋಗತಿಯನ್ನು ತಾವೇ ಮಾಡಿಕೊಂಡಂತಾಗುವುದು. ಇದು ನಾಗರಿಕರ ಕರ್ತವ್ಯವೆನಿಸದು. ಹುರಿಯಾಳುಗಳು ನಿಜವಾದ ದೇಶಸೇವಾಸಕ್ತಿಯಿಲ್ಲದೆ ಊರೂರುಗಳಲ್ಲಿ ಸುತ್ತಾಡಿ ಮತದಾರರನ್ನು ಸಂಗ್ರಹಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿದರೆ ದೇಶದ ಏಳಿಗೆಯಾಗದು. ಒಮ್ಮೆ ಓಟು ಪಡೆದ ಜಯಶಾಲಿಗಳಾದ ನಂತರ ತಾವು ಕರೆ ಬಿಚ್ಚಿದಂತೆ ಹೇಳಿದ ತತ್ವಗಳನ್ನೆಲ್ಲಾ ಬದಿಗಿಟ್ಟು ಸ್ವಾರ್ಥ ಸಾಧನೆಯಲ್ಲೇ ನಿರತರಾಗುವುದು ಆದಿಯಿಂದಲೇ ಕೊಡಗಿನ ಜನತೆಗೆ ವೇದ್ಯವಾದ ವಿಷಯ. ಆ ದಬ್ಬಾಳಿಕೆಯಿಂದ ನಿವೃತ್ತರಾಗಿ ಸ್ವಾತಂತ್ರ್ಯ ವಾತಾವರಣದಲ್ಲಿ ಕಟ್ಟುವ ಇಂದಿನ ಪ್ರಜಾ ಸರ್ಕಾರದಲ್ಲೂ ಅದನ್ನೇ ಪುನರಾವರ್ತಿಸಿದರೆ ನಮ್ಮಲ್ಲಿ ನಿಜವಾಗಿಯೂ ಸರ್ಕಾರವನ್ನು ನಡೆಸಿಕೊಂಡು ಹೋಗುವ ಸಾಮರ್ಥ್ಯವಿಲ್ಲವೆಂದೇ ಹೇಳಬೇಕು. ಹುರಿಯಾಳುಗಳು ಸ್ವಾರ್ಥವನ್ನು ನೀಗಿ ದೇಶ ಸೇವೆಯನ್ನು ಮಾಡುವರೆಂದು ತಿಳಿದರೆ ಮತದಾರನೂ ತನ್ನ ಹಕ್ಕಿನ ಮತವನ್ನು ಅಂತಹವರಿಗೇ ಕೊಡತಕ್ಕವನಲ್ಲದೆ ಅದನ್ನು ದುರುಪಯೋಗಿಸಬಾರದು.

ಮಹಾಮಹಾ ಮಹರ್ಷಿಗಳ ಪರಿಶ್ರಮದಿಂದಲೂ, ಬಾಪೂಜಿಯವರ ನೇತೃತ್ವದಲ್ಲಿ ಅನೇಕ ದೇಶಭಕ್ತರ ತ್ಯಾಗದಿಂದಲೂ ಭಾರತ ಮಾತೆಯು ಬಂಧಮುಕ್ತಳಾಗಿ ಹಿಂದೂಸ್ಥಾನವು ಪ್ರಜಾಪ್ರತಿನಿಧಿ ಸರಕಾರವೆಂದು ಸಾರಲ್ಪಟ್ಟಿತು. ಸ್ವರಾಜ್ಯ ದೊರಕಿದ ನಂತರ ರಾಮರಾಜ್ಯದ ಸ್ಥಾಪನೆಯಾಗುವುದೆಂದು ಪೂಜ್ಯ ಗಾಂಧೀಜಿಯವರು ಕನಸು ಕಾಣುತ್ತಿದ್ದರು. ಅದು ನೆರವೇರುವ ಮೊದಲೇ ಮಹಾತ್ಮರ ಹತ್ಯೆಯಾದದ್ದು ಭಾರತದ ಪ್ರಜೆಗಳ ದುರ್ಭಾಗ್ಯವೆಂದೇ ಹೇಳಬೇಕು. ಆದರೆ ಮಹಾತ್ಮರು ಕಟ್ಟಿದ ಕನಸಿನ ರಾಮರಾಜ್ಯವನ್ನು ಪ್ರಜಾಪ್ರತಿನಿಧಿ ಸರಕಾರದ ಪ್ರಜೆಗಳೇ ಸ್ಥಾಪಿಸಬಹುದಾಗಿದೆ. ಪ್ರಜಾಸರ್ಕಾರಕ್ಕೂ ಅದರ ಪ್ರಜೆಗಳಿಗೂ ನಿಕಟ ಸಂಬಂಧವಿದ್ದು ಪ್ರತಿಯೊಬ್ಬ ನಾಗರಿಕನಲ್ಲಿ ದೇಶಭಕ್ತಿಯಿದ್ದು ಪ್ರತಿ ದಿನ ತಾನು ಮಾಡುವ ಕೆಲಸ ಒಂದಲ್ಲ ಒಂದು ರೀತಿಯಲ್ಲಿ ದೇಶದ ಏಳಿಗೆಗಾಗಿ ಮಾಡುತ್ತಿರಬೇಕೆಂಬ ಭಾವನೆಯಿದ್ದರೆ ಯಾವ ಸರಕಾರವಾದರೂ ಪ್ರಜೆಗಳ ಹಿತವನ್ನು ಬಯಸಿ ಕೆಲಸ ಮಾಡಬಲ್ಲದು. ನಮ್ಮ ನಮ್ಮೊಳಗೇ ರಕ್ಷಣ ನೀತಿಯಿರದಿದ್ದಲ್ಲಿ ರಾಮರಾಜ್ಯವೆಂದು ಸಾಧ್ಯ?

ಪಾನನಿರೋಧದ ತತ್ವವು ಕೊಡಗಿನಲ್ಲಿ ಅದು ನಿಯಂತ್ರಣಕ್ಕೊಳಪಟ್ಟಿದೆ. ನಿಯಂತ್ರಣದಿಂದ ದುಡ್ಡಿನ ಸೋರಿ ತಪ್ಪಿಲ್ಲ. ಒಂದು ರೀತಿ ನೋಡಿದರೆ ಈ ನಿಯಂತ್ರಣದಿಂದ ನಿಯಂತ್ರಣ ಬೆಲೆಗೆ ಪಡೆದು ಹೋಗಬೇಕಾಗಿದೆ. ಪ್ರತಿ ಹೆಚ್ಚಿಗೂ ಒಬ್ಬರಿಂದೊಬ್ಬರಿಗೆ ವಿರುದ್ಧ ಬೆಲೆಗೆ ಕಪ್ಪು ಸಂತೆಯಲ್ಲಿ ಮಾರಾಟವಾಗುವುದು. ಈ ಕಂದಿನ(?) ಲಾಭ ಪಡೆಯಲು ಹತೋರಿಯುತ್ತಿದ್ದ(?) ತನ್ನ ಹೆಂಡತಿ ಮಕ್ಕಳ ಹೆಸರಿನಲ್ಲೇ ಕೂಪನ್ ಪಡೆಯುವುದಲ್ಲದೆ ತನ್ನ ಆಳುಗಳ ಹೆಸರಿನಲ್ಲೂ ಕೂಪನ್ ಪಡೆಯುತ್ತಿದ್ದಾರೆ. ಸಾರಾಯಿಯನ್ನು ಮುಟ್ಟಲೇ ಕೂಡದು ಎಂಬ ಶಾಸ್ತ್ರವಿಧಿಯಿರುವ ಮುಸಲ್ಮಾನರ ಹೆಸರಿನಲ್ಲೂ ಕೂಪನ್‌ಗಳ ಬರತೊಡಗಿವೆಯೆಂಬುದಾಗಿ ವರ್ತಮಾನವಿದೆ. ಈ ರೀತಿಯ ದುಷ್ಟವು ಜನತೆಯಲ್ಲಿ ಹುಟ್ಟಿದ್ದೇ ಆದರೆ ಸರಕಾರವು ಎಷ್ಟು ಪ್ರಯತ್ನಿಸಿದರೂ ಪಾನನಿರೋಧವು ದೇಶದಲ್ಲಿ ಸಾಧ್ಯವಾಗದು. ಸಂಪೂರ್ಣ ಪಾನನಿರೋಧವನ್ನು ತಂದರೂ ಕಳ್ಳಸಾರಾಯಿ ಇಳಿಸುವುದು ಗುಡಿ ಕೈಗಾರಿಕೆಯಾಗಬಹುದು. ಸರಕಾರದೊಡನೆ ಪ್ರಜೆಗಳು ಸಹಕರಿಸದಿದ್ದರೆ ಜನರ ಸ್ಥಿತಿಯು ಕುಡುಕುತನದಲ್ಲಿ ಇನ್ನೂ ವಿಷಮಾವಸ್ಥೆಗೇರುವುದರಲ್ಲಿ ಸಂದೇಹವಿಲ್ಲ.

ಸಕ್ಕರೆಯ ನಿಯಂತ್ರಣವು ನೂರರಲ್ಲಿ ಐವತ್ತರಷ್ಟು ಜಯಶಾಲಿಯಾಗಿರುವುದಿಲ್ಲ. ವ್ಯಾಪಾರಿಗಳು, ಅಂದರೆ ಸಕ್ಕರೆ ಮಾರಾಟದ ಹಕ್ಕು ಪಡೆದವರು ಕಪ್ಪು ಸಂತೆಯಲ್ಲಿ ಅದನ್ನು ಮಾರುತ್ತಿರುವುದಲ್ಲದೆ ಸಕ್ಕರೆಯ ಉಪಯೋಗವನ್ನು ಮಾಡುವ ಹಲಕೆಲವರು ಸಕ್ಕರೆಯ ಕೂಪನ್ನು ಪಡೆದು ಹೋಟಲುಗಳಿಗೆ ಮಾರುತ್ತಿರುವುದು ನ್ಯಾಯವಾಗದು. ಇದರಿಂದ ಸಕ್ಕರೆಯ ಉಪಯೋಗವಿರುವ ಹಲವಾರು ಜನರು ತೊಂದರೆಗೀಡಾಗುವರು. ಲಗ್ನದ ಆಮಂತ್ರಣ ಪತ್ರವನ್ನು ತೋರಿಸಿ ಮಣಗಟ್ಟಲೆ ಸಕ್ಕರೆ ಪಡೆದು ಅದನ್ನು ಹೋಟಲುಗಳಿಗೆ ಮಾರುವವರೂ ಇದ್ದಾರೆ. ಹೀಗೆ ಪ್ರತಿಯೊಂದು ನಿಯಂತ್ರಣದ ಸರಕುಗಳೂ ಕಪ್ಪುಸಂತೆಯಲ್ಲಿ ಮಾರಾಟವಾಗಲು ಜನರೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಜನತೆಯಲ್ಲಿರುವ ಅನೀತಿಯೇ ಕಾರಣವಾಗಿದೆ. ನಾಗರಿಕರೆನಿಸಿಕೊಂಡವರೂ ಶಿಸ್ತು ಶೀಲಗಳನ್ನು ಗಮನಿಸಿದಂತಿಲ್ಲ. ತಮ್ಮ ದೇಶದ ಏಳಿಗಾಗಿ ಪ್ರತಿಯೊಬ್ಬನೂ ಹೆಣಗಾಡದೆ ಸ್ವಾರ್ಥಸಾಧನೆಗೆ ಪ್ರಯತ್ನಿಸಿದರೆ ರಾಮರಾಜ್ಯವೆಂತು ಸಾಧ್ಯ?

ಹೆಚ್ಚು ಆಹಾರ ಬೆಳೆಯಬೇಕೆಂದು ಸರಕಾರವು ಹೊರಡಿಸುತ್ತಿರುವ ಪ್ರಕಟಣೆಯು ಭರದಿಂದ ನಡೆಯುತ್ತಿದ್ದರೂ ಹಳ್ಳಿಯ ರೈತನಲ್ಲಿ ಅದು ಅಷ್ಟು ಆಶಾದಾಯಕವಾಗಿ ನಡೆಯುತ್ತಿಲ್ಲ. ಸರಕಾರವು ಹೆಚ್ಚು ಬೆಳೆಯಿರಿ ಎಂಬುದಾಗಿ ಉಸುರುವ ಪ್ರಕಟಣೆಗಳು ಪಟ್ಟಣಗಳ ಗೋಡೆಗಳಲ್ಲಿಯೇ ಬೆಳೆಯುತ್ತಿವೆಯಲ್ಲದೆ ರೈತನ ಗದ್ದೆಯಲ್ಲಿ ಏನು ಬೆಳೆಸಲು ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ. ಬೋನಸ್ಸಿನ ಆಸೆಯಿಂದ ವ್ಯವಸಾಯ ತೊಡಗಿದ ಕೆಲವರ ಗದ್ದೆಯಲ್ಲಿ ಪಡೆದ ಬೋನಸ್ಸು ಹಣದಷ್ಟೂ ಬೆಳೆಯಾಗಿಲ್ಲ!

ಈ ಬೋನಸಿಗಾಗಿ ಕೆಲವು ಜನರು ಸದಾ ನೀರಿಗೆ ಅಭಾವವಿರುವ ಸ್ಥಳದಲ್ಲಿ ಭತ್ತದ ಗದ್ದೆಗಳನ್ನು ಮಾಡಿಸಿ ಬೋನಸ್ಸು ದೊರೆತನಂತರ ಪಾಳು ಬಿಟ್ಟಿದ್ದಾರೆ. ಒಂದೇ ಗದ್ದೆಯನ್ನು ಹಲವು ಬಾರಿ ತೋರಿಸಿ ಬೋನಸ್ಸು ಪಡೆದ ನಿಸ್ಸೀಮರೂ ಇದ್ದಾರೆ. ಈ ರೀತಿಯಿಂದ ಸರಕಾರಕ್ಕೆ ಹಣ ನಷ್ಟವಲ್ಲದೆ ಹೆಚ್ಚು ಆಹಾರ ಬೆಳೆಸಿದಂತಾಗಲಿಲ್ಲ. ಇಲ್ಲಿಯೂ ಹಣ ಲಾಭಬಡುಕರಿಗೆ ಹೋಗುತ್ತಿದೆಯಲ್ಲದೆ ನಿಜವಾಗಿಯೂ ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನಿಸುತ್ತಿರುವ ಸಣ್ಣ ವ್ಯವಸಾಯಗಾರರಿಗೆ ಯಾವುದೊಂದೂ ದೊರೆಯುತ್ತಿಲ್ಲ. ಗೊಬ್ಬರ ಗುಂಡಿಗಳಿಗೆ ಮೊದಲು ಹತ್ತು ರೂಪಾಯಿ ಇದ್ದು ಸಿಂತು(?) ಮೂರು ರೂಪಾಯಿಗಳಿಗೆ ಇಳಿಸಲಾಯಿತು. ಈ ವರ್ಷ ಈವರೆಗೆ ಸರಕಾರವು ಅದನ್ನೂ ಕೊಟ್ಟಿರುವುದಿಲ್ಲ. ಈ ಹಣದಾಸೆಯಿಂದ ಚಿಕ್ಕ ಹಿಡುವಳಿದಾರರು ನಿಜವಾಗಿಯೂ ಗೊಬ್ಬರವನ್ನು ಮಾಡಿ ಹೆಚ್ಚು ಆಹಾರವನ್ನು ಬೆಳೆಸಿದ್ದಾರೆ. ಅವರಿಗೆ ದೊರೆತ ಪ್ರೋತ್ಸಾಹವೇನು?

ಸರಕಾರವು ಪ್ರಜೆಗಳ ಹಿತಕ್ಕಾಗಿ ಸತತ ಪ್ರಯತ್ನಿಸುತ್ತಿದ್ದರೂ ಪ್ರಜೆಗಳು ಅದನ್ನು ದುರುಪಯೋಗಿಸಿಕೊಂಡರೆ 'ಮರಕ್ಕೆ ನಾಶ ಕೊಡಲಿ ಕಾವು' ಎಂಬಂತಾಗುವದು. ಪ್ರಜಾಪ್ರಭುತ್ವದಲ್ಲಿ ರೈತನಿಗೂ ಉದ್ಯೋಗಸ್ಥನಿಗೂ ತಮ್ಮ ತಮ್ಮ ಜವಾಬ್ದಾರಿಗಳಿವೆ. ಸರಕಾರಿ ನೌಕರನು ದಕ್ಷತೆಯಿಂದಲೂ ಪ್ರಾಮಾಣಿಕತೆಯಿಂದಲೂ ತಾನು ಹೊಂದುವ ವೇತನಕ್ಕೆ ಸರಿಯಾಗಿ ದುಡಿಯಬೇಕು. ಸಾರ್ವಜನಿಕರು ಜಿಲ್ಲೆಯ(?) ... ತಮ್ಮ ಸರಕಾರವನ್ನು ಬೆಳೆಸುವುದಕ್ಕಾಗಿ ಸರ್ವ ವಿಧದಿಂದಲೂ ಸಹಕರಿಸಿ ಸರಕಾರವು ಹೊರಡಿಸುವ ಪ್ರತಿಯೊಂದು ಕಾನೂನು ಕಾಯಿದೆಗಳು ತಮ್ಮ ಹಿತಕ್ಕಾಗಿಯೇ ಎಂಬ ಭಾವನೆಯಿಂದ ವರ್ತಿಸಬೇಕು. ಹೀಗಲ್ಲದೆ ಪ್ರಜೆಗಳೇ ಒಂದು ಕಡೆ ಸರಕಾರವೇ ಒಂದು ಕಡೆಯಾಗಿ ಜಗ್ಗಾಟ(?) ದೇಶದಲ್ಲಿ ಎರಡು ಪಂಗಡಗಳಾದರೆ ಸರಕಾರದ ಸ್ಥಿತಿಯು ಮರಳಿನ ಮೇಲೆ ಮನೆ ಕಟ್ಟಿದಂತೆಯೇ ಸರಿ! ಇನ್ನಾದರೂ ಜನತೆಯು ತಮ್ಮ ಸರಕಾರವನ್ನು ಗುರ್ತಿಸಿ ವರ್ತಿಸುವದೇ? ಸರಕಾರವೂ ತಾವು ಜನರ ಸೇವಕರೆಂದು ತಿಳಿಯುವದೇ? ಹಾಗೆ ಪರಸ್ಪರ ಹೊಂದಿಕೊಂಡರೆ ಮಾತ್ರ ರಾಮರಾಜ್ಯದ ಆಶೆ.

---

## ಕಮ್ಯೂನಿಷ್ಟರು ಕ್ರಾಂತಿಕಾರಕ ಮನೋವೃತ್ತಿ ತೊರೆಯುವರೇ?

ಭಾರತದ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಈಗಿನ ಕ್ರಾಂತಿಕಾರಕ ಮತ್ತು ಹಿಂಸಾಮಯ ಚಟುವಟಿಕೆಗಳನ್ನು ನಿಲ್ಲಿಸಿ ಧೋರಣೆಯಲ್ಲಿ ಶೀಘ್ರ ಬದಲಾವಣೆ ತರುವ ಲಕ್ಷಣಗಳು ಕಾಣುತ್ತಿವೆ. ಬೊಂಬಾಯಿಯ ಪ್ರಸಿದ್ಧ ರಾಜಕಾರಣಿಗಳು ಅಭಿಪ್ರಾಯಪಡುವಂತೆ ಕಮ್ಯೂನಿಸ್ಟರು ತಮ್ಮ ಈಗಿನ ಹಿಂಸಾಕೃತ್ಯ ಪರಂಪರೆಗಳ ನೀತಿಯನ್ನು ಬಿಟ್ಟು ಚೀನಾ ಕಮ್ಯೂನಿಸ್ಟ ಮುಖಂಡ ಮಾವೋ ಸೇಟುಂಗರ ಮಾದರಿಯ ವಿಶಾಲ ತಳಹದಿಯ ಸಮತಾವಾದ ನೀತಿಯನ್ನು ಆಚರಣೆಗೆ ತರುವಂತಿದೆ. ಕಮ್ಯೂನಿಸ್ಟ ಪಕ್ಷದ ಈಗಿನ ಕಾರ್ಯದರ್ಶಿ ಶ್ರೀ ಬಿ. ಟಿ. ರಣದಿವೇಯವರ ಸ್ಥಾನದಲ್ಲಿ ಆಂಧ್ರಾ ಕಮ್ಯೂನಿಸ್ಟ್ ಮುಖಂಡ ಶ್ರೀ ರಾಜೇಶ್ವರ್ ರಾಯರು ಮುಂದಾಳಾಗಿ ಬರಬಹುದೆಂದು ನಿರೀಕ್ಷಿಸಲಾಗಿದೆ. ಅಲ್ಲದೆ ಕಮ್ಯೂನಿಸ್ಟ್ ಪಾರ್ಟಿಯ ಮಾಜಿ ಕಾರ್ಯದರ್ಶಿ ಶ್ರೀ ಪಿ. ಸಿ. ಜೋಶಿಯವರು ರಾಜೇಶ್ವರರಾಯರ ನೂತನ ಉದಾತ್ತ ಯೋಜನೆಗೆ ಹಾರ್ದಿಕ ಬೆಂಬಲ ಮತ್ತು ಸಹಕಾರ ನೀಡುವ ಸಂಭವವೂ ಇದೆ.

---

## ಹಾಲು ಕೊಡುವ ಮರಗಳು

ಹಿಂದಿ ಕೃಷಿ ಸಂಶೋಧನಾ ಸಮಿತಿಯವರು ತರತರಗಳಿಂದೊದಗುವ ಹಾಲನ್ನು ಭಾರತದಲ್ಲಿ ಪ್ರಚಾರಕ್ಕೆ ತರುವುದರ ಕುರಿತು ಯೋಚಿಸುತ್ತಿರುವರು. ಕೆಲವು ಮರಗಳು ನೀರಿನಷ್ಟೇ ಸತ್ವದ ಪದಾರ್ಥವನ್ನು ಕೊಡುತ್ತವೆ. ಅಂಥಾ ಮರಗಳನ್ನು ನಮ್ಮ ದೇಶದಲ್ಲಿ ವಿಪುಲವಾಗಿ ಬೆಳೆಸಿ ಅವುಗಳಿಂದ ಹಾಲು ಸಂಗ್ರಹಿಸುವ ಯೋಚನೆಯದು. ಸರಕಾರವು ಈ ಬಗ್ಗೆ ಮೂರು ವರ್ಷಗಳ ಪ್ರಯೋಗ ಯೋಜನೆಗೆ ಅನುಮತಿ ಕೊಟ್ಟಿರುವುದು. ಈ ಮರಗಳನ್ನು ನೆಡಲು ಅತ್ಯನುಕೂಲ ಪ್ರದೇಶವೆಂದು ಬೊಂಬಾಯಿ ನಗರವು ಆರಿಸಲ್ಪಟ್ಟಿದೆ. ದನದ ಹಾಲಿನಷ್ಟೇ ಪುಷ್ಟಿಕರವಾದ ಹಾಲು ಕೊಡುವ ವಿಶಿಷ್ಟ ಜಾತಿಯ ಮರಗಳು ದಕ್ಷಿಣ ಅಮೇರಿಕದ ವೆನಿಜ್ಯುಲಾದಲ್ಲಿವೆ. ಈ ಮರದ ಕಾಂಡಗಳಿಗೆ ಗಾಯ ಮಾಡಿದರೆ ಹಾಲು ಧಾರಾಕಾರವಾಗಿ ಇಳಿಯುವುದು. ಆ ಹಾಲು ಒಳ್ಳೇ ರುಚಿಕರವೂ ಆಗಿದೆ. ಬರೇ ಆಹಾರವಾಗಿ ಮಾತ್ರವಲ್ಲ ಉಬ್ಬಸ ರೋಗದ ಉಪಶಮನಕ್ಕೂ ಈ ಹಾಲಿನಿಂದ ತುಂಬಾ ಪ್ರಯೋಜನವಿದೆ ಎಂದು ಕಂಡುಹಿಡಿದಿರುವರು.

---

# ಕೊಡಗು

ತಾ. ೩೦-೬-೧೯೫೦ನೇ ಶುಕ್ರವಾರ

## ಮುಂಬರುವ ಚುನಾವಣೆ.

ಹೊಸ ರಾಜ್ಯ ಘಟನೆಯಂತೆ ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲೂ ಶಾಸನ ಸಭೆಗಳ ಚುನಾವಣೆಯು ೧೯೫೧ನೇ ವರ್ಷದ ಏಪ್ರಿಲ್–ಮೇ ತಿಂಗಳುಗಳಲ್ಲಿ ನಡೆಯುವ ಏರ್ಪಾಡುಗಳಾಗುತ್ತಿವೆ. ಈ ಬಗ್ಗೆ ಮತದಾರರ ಪಟ್ಟಿಯನ್ನು ತಯಾರು ಮಾಡುವದರಲ್ಲೂ, ಮತದಾರ ಕ್ಷೇತ್ರಗಳನ್ನು ನಿಶ್ಚಯಿಸುವದರಲ್ಲೂ ಪ್ರಾಂತೀಕ ಸರಕಾರಗಳ ಹಾಗೂ ಜನತೆಯ ಅಭಿಪ್ರಾಯವನ್ನು ತಿಳಿಯಲು ಇಂಡಿಯಾ ಸರ್ಕಾರದ ಚುನಾವಣಾ ಕಮಿಶನರಾದ ಡಾ. ಸೇನ್‌ರವರು ದಕ್ಷಿಣ ಹಿಂದೂಸ್ಥಾನದ ಪ್ರವಾಸ ಮಾಡುತ್ತ ಕೊಡಗಿಗೆ ಜುಲೈ ಪ್ರಥಮ ವಾರದಲ್ಲಿ ಬರುವರೆಂದು ವರ್ತಮಾನವಿದೆ. ಈ ಬಗ್ಗೆ ಚೀಫ್ ಕಮಿಶನರವರು ಕೊಡಗಿನ ಕೆಲವು ಮುಖ್ಯ ಉದ್ಯೋಗಸ್ಥರ ಮತ್ತು ಕೌನ್ಸಿಲು ಸದಸ್ಯರ ಅಭಿಪ್ರಾಯ ತಿಳಿಯಲಿರುವರೆಂದು ತಿಳಿಯ ಬರುತ್ತದೆ. ನಮ್ಮ ಶಾಸನ ಸಭೆಯಲ್ಲಿ ಮುಂದೆ ಎಷ್ಟು ಸದಸ್ಯರಿರಬೇಕು, ಮತದಾರ ಕ್ಷೇತ್ರಗಳ ನಿರ್ಣಯ ಹೇಗಾಗಬೇಕು, ಏಕ ಮೆಂಬರು ಯಾ ಕೆಚಿನ ಸದಸ್ಯರ ಕ್ಷೇತ್ರಗಳಾಗಿರಬೇಕೋ ಮತ್ತು ಹಿಂದುಳಿದ ಪಂಗಡದವರಿಗೆ ಯಾವ ರೀತಿಯಲ್ಲಿ ಪ್ರಾತಿನಿಧ್ಯ ಕೊಡಬೇಕು ಎಂಬ ವಿಚಾರಗಳನ್ನು ಕುರಿತು ಅಭಿಪ್ರಾಯ ಕೊಡಬೇಕಾಗಿರುವದು. ಈಗ ಕೌನ್ಸಿಲಿನ ರಚನೆಯನ್ನು ಕುರಿತು ಯೋಗ್ಯ ಬದಲಾವಣೆಗಳನ್ನು ಸೂಚಿಸುವದರೊಡನೆ ಆ ಕೌನ್ಸಿಲು ಸಭೆಯ ಅಧಿಕಾರಗಳು ಯಾವ ರೀತಿಯದಾಗಿರಬೇಕೆಂಬುದನ್ನು ತಿಳಿದುಕೊಳ್ಳುವ ಅಗತ್ಯವಿದೆ. ಬೇರೆ ಪ್ರಾಂತಗಳಲ್ಲಿ ಕೌನ್ಸಿಲು ಸಭೆಯ ಅಧಿಕಾರ ಮತ್ತು ಮೆಂಬರುಗಳ ಸಂಖ್ಯೆಯು ಹೊಸ ಘಟನೆಯಲ್ಲಿಯೇ ನಮೂದಿಸಲ್ಪಟ್ಟಿವೆ. ಕೊಡಗಿನ ಭವಿಷ್ಯ ಸರಕಾರವು ಹೇಗಿರಬೇಕೆಂದು ಇಂಡಿಯಾ ಸರ್ಕಾರವು ಇನ್ನೂ ನಿಶ್ಚಯಿಸದಿರುವದರಿಂದ ಇಲ್ಲಿಯ ಪರಿಸ್ಥಿತಿಯು ಇನ್ನೂ ವಿಶೇಷ ತರದ್ದಾಗಿದೆ. ಆದುದರಿಂದ ಚುನಾವಣೆಯ ಏರ್ಪಾಡುಗಳನ್ನು ಮಾಡುವ ಕಾಲದಲ್ಲೇ ಕೊಡಗಿನ ಮುಂದಿನ ಆಡಳಿತ ಕ್ರಮದ ನಿರ್ಣಯವನ್ನೂ ಕೇಂದ್ರ ಇಂಡಿಯಾ ಸರಕಾರದವರು ಮಾಡಬೇಕಾದ ಅಗತ್ಯವಾಗಿದೆ. ಇಲ್ಲಿ ಈ ಸಂಬಂಧ ವಿಸ್ತಾರವಾಗಿ ಬರೆಯುವದರ ಬದಲು ರಾಜ್ಯ ಘಟನಾ ಸಭೆಯು ನೇಮಿಸಿದ್ದ ಎಚ ಶಾರ್ ಕಮಿಟಿಯು ಮಾಡಿದ ಸೂಚನೆಗಳಿಗೆ ಕೇಂದ್ರ ಸರ್ಕಾರದ ಹಾಗೂ ಜನತೆಯ ಗಮನವನ್ನು ಎಳೆಯಬಯಸುತ್ತೇವೆ.

ಅವರ ಸೂಚನೆಯಂತೆ ಕೊಡಗಿನ ಕೌನ್ಸಿಲಿಗೆ ಐದು ಸಾವಿರ ಜನಸಂಖ್ಯೆಗೊಬ್ಬರಂತೆ ಪ್ರತಿನಿಧಿಗಳನ್ನು ಚುನಾಯಿಸಿ ಆ ಸದಸ್ಯರಿಗೆ ಜವಾಬ್ದಾರಿಯಾದ ಮೂರು ಜನರ ಮಂತ್ರಿಮಂಡಳವೊಂದನ್ನು ಆರಿಸಿ ಅವರು ಆಡಳಿತ ಜವಾಬ್ದಾರಿಯನ್ನು ವಹಿಸತಕ್ಕದೆಂದಿದೆ. ಈ ತರಹದ ಶಾಸನ ಸಭೆಯನ್ನೇ ಮುಂದಿಟ್ಟುಕೊಂಡು ಚುನಾವಣೆಯ ಏರ್ಪಾಡು ಮಾಡುವದಾದರೆ ಕೊಡಗಿನಂಥಾ ಚಿಕ್ಕ ಪ್ರಾಂತದಲ್ಲಿ ಐದು ಸಾವಿರ ಜನಸಂಖ್ಯೆಗೊಬ್ಬ ಮೆಂಬರನಂತೆ ರಿಸುವದು ಯೋಗ್ಯವಾಗಿದೆ. ಅಂದರೇನೇ ಪ್ರಜಾಜವಾಬ್ದಾರಿ ಸರಕಾರದಲ್ಲಿ ತಮ್ಮ ಪಾಲಿನ ಕರ್ತವ್ಯ ಸಲ್ಲಿಸಲು ಹೆಚ್ಚು ಜನರಿಗೆ ಅನುವಾಗುವದು. ಕೌನ್ಸಿಲಿನಲ್ಲಿರುವ ಪ್ರತಿನಿಧಿಗಳಿಗೆ ತಮ್ಮ ಓಟರುಗಳ ಸಂಪರ್ಕವು ಹೆಚ್ಚಾಗಿರಲು ಮತದಾರಕ್ಷೇತ್ರವು ಚಿಕ್ಕದಾಗಿರುವದು ಸೂಕ್ತವಾದ್ದರಿಂದ ಏಕ ಮೆಂಬರ ಮತದಾರ ಕ್ಷೇತ್ರವು ಬಹು ಮೆಂಬರ ಕ್ಷೇತ್ರಕ್ಕಿಂತಾ ಉತ್ತಮವಾಗಿದೆ. ಈ ದೃಷ್ಟಿಯಿಂದ ಐದು ಸಾವಿರದಷ್ಟು ಜನಸಂಖ್ಯೆ ಇರುವ ಅಕ್ಕಪಕ್ಕದ ಗ್ರಾಮಗಳನ್ನು ಒಂದೊಂದು ಕ್ಷೇತ್ರಗಳಾಗಿ ಮಾಡಬಹುದು.

ಹೊಸ ಘಟನೆಯಂತೆ ಹಿಂದುಳಿದ ಪಂಗಡದವರಿಗೆ ಅವರ ಜನಸಂಖ್ಯೆಯ ದಾಮಾಶಾಯ ಮೇರೆ ಹತ್ತು ವರ್ಷಗಳ ವರೆಗೆ ಕೌನ್ಸಿಲಿನಲ್ಲಿ ಸ್ಥಾನಗಳು ಕಾದಿಡಲ್ಪಡಬೇಕಾಗಿದೆ. ಆದರೆ ಆ ಮೆಂಬರನು ತಮ್ಮ ಪಂಗಡದ ಓಟನ್ನು ಮಾತ್ರ ಪಡೆದು ಬರುವದರ ಬದಲು ಆ ಕ್ಷೇತ್ರದ ಎಲ್ಲಾ ಮತದಾರರ ಓಟಿನಿಂದ ಆರಿಸಲ್ಪಡಬೇಕಾಗಿದೆ. ಆ ಕಾರಣ ಕೊಡಗಿನಲ್ಲಿ ಆಗಬಹುದಾದ ಸುಮಾರು ೩೫ ಮತದಾರ ಕ್ಷೇತ್ರಗಳಲ್ಲಿ (ಹಿಂದುಳಿದವರ ಸಂಖ್ಯೆಯು ಸುಮಾರು ೨೫೦೦೦ ಇರುವದರಿಂದ) ಯಾವ ಐದು ಕ್ಷೇತ್ರಗಳಲ್ಲಿ ಜನಸಂಖ್ಯೆ ಹೆಚ್ಚಿರುವದೋ ಅಲ್ಲಿ ಅವರ ಪ್ರತಿನಿಧಿಗಳನ್ನು ಆರಿಸುವ ಏರ್ಪಾಡು ಮಾಡಬಹುದು. ಒಂದು ವೇಳೆ ಇದರಿಂದ ಒಂದೆರಡು ತಾಲೋಕುಗಳಲ್ಲಿಯೇ ಯಾ ಅಕ್ಕಪಕ್ಕದ ಕ್ಷೇತ್ರಗಳಲ್ಲಿಯೇ ಅವರ ಐದು ಜನ ಪ್ರತಿನಿಧಿಗಳು ಆರಿಸಲ್ಪಡಬಹುದಾದ ಸಂದರ್ಭವಿರಬಹುದು. ಆದರೆ ಅವರ ಪ್ರತಿನಿಧಿಗಳು ದೇಶದ ಎಲ್ಲಾ ಭಾಗಗಳಿಂದ ಬರುವದು ಉತ್ತಮವಾದುದರಿಂದ ಕೊಡಗಿನಲ್ಲಿ ಆಗಬಹುದಾದ ಮೂವತ್ತೈದು ಕ್ಷೇತ್ರಗಳನ್ನು ಐದು ಭಾಗಗಳಾಗಿ ವಿಂಗಡಿಸಿ ಬರುವ ಪ್ರತಿಯೊಂದು ಏಳು ಮತದಾರ ಕ್ಷೇತ್ರಗಳ ಗುಂಪಿನಲ್ಲಿ ಅವರ ಸಂಖ್ಯೆ ಹೆಚ್ಚಿರುವ ಒಂದೊಂದು ಕ್ಷೇತ್ರದಿಂದ ಅವರನ್ನು ಆರಿಸುವ ಏರ್ಪಾಡು ಮಾಡಬಹುದಾಗಿದೆ.

---

### ವಾಚಕರ ಅವಗಾಹನೆಗೆ,

ನಮ್ಮ ಪ್ರಿಂಟಿಂಗ್ ಯಂತ್ರದಲ್ಲಿ ಅನಿವಾರ್ಯವಾದ ಕೆಲವು ರಿಪೇರಿಯ ಕಾರಣ ಬರುವ ವಾರದ ಅಂದರೆ ತಾರೀಕು ೭-೭-೫೦ರ ಸಂಚಿಕೆಯು ಪ್ರಕಟವಾಗದ್ದಕ್ಕೆ ವಿಷಾದಿಸುತ್ತೇವೆ. ಯಥಾವಿಧಿ ತಾ. ೧೪-೭-೫೦ರಿಂದ ಪತ್ರಿಕೆ ಹೊರಡುವುದು.

ಮ್ಯಾನೇಜರ್, 'ಕೊಡಗು'

---

## ವರ್ತಮಾನ.

ಮದ್ರಾಸ್ ವಿಶ್ವವಿದ್ಯಾಲಯದ ಬಿ ಎಲ್ ಪರೀಕ್ಷೆಯಲ್ಲಿ ಶ್ರೀ ಕಾಡ್ಯಮಾಡ ಕೆ. ಪೊನ್ನಪ್ಪನವರು ತೇರ್ಗಡೆಯಾಗಿರುವರು.

ಕಳೆದ ಎಸ್ ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಖಾಸಗಿಯಾಗಿ ಕುಳಿತ ಶ್ರೀ ಎಂ. ಎಂ. ಮಂಜಣ್ಣನವರು ತೇರ್ಗಡೆಯಾಗಿದ್ದಾರೆ.

ಕೊಡಗಿನ ಚೀಫ್ ಕಮಿಶನರ ಪರ್ಸನಲ್ ಅಸಿಸ್ಟೆಂಟ್ ಎಂದು ಕರೆಯಲ್ಪಡುತ್ತಿದ್ದ ಹುದ್ದೆಯನ್ನು ಇತ್ತಲಾಗಿ ಚೀಫ್ ಕಮಿಶನರ ಸೆಕ್ರೆಟರಿ ಎಂದು ಮಾರ್ಪಡಿಸಲಾಗಿದೆ

ತಾ. ೨೩ ರಲ್ಲಿ ಶ್ರೀ ಬೊಮ್ಮಂಡ ಅಚ್ಚಯ್ಯನವರು ಮಡಿಕೇರಿ ಬಸ್ ನಿಲ್ದಾಣದಲ್ಲಿ ಬಸ್ಸಿಗೆ ಟಿಕೇಟು ತೆಗೆಯುತಿದ್ದಾಗ್ಯೆ ಅವರ ಕೋಟಿನ ಜೇಬನ್ನು ಕತ್ತರಿಸಿ ಅದರಲ್ಲಿದ್ದ ೪೯೫ ರೂ. ಗಳನ್ನು ಯಾರೋ ಅಪಹರಿಸಿರುವರು.

ಕೊಡಗು ಸರ್ಕಾರಿ ಕಾಲೇಜು ತಾರೀಕು ೩-೭-೫೦ರಿಂದ ತೆರೆಯುವದು.

ಕೊಡಗಿನ ಎಲ್ಲಾ ಸರಕಾರಿ ಖಚೇರಿಗಳು ಬೆಳಿಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ೧ ಗಂಟೆಯ ವರೆಗೆ ಮಧ್ಯಾಹ್ನ ೨ ಗಂಟೆಯಿಂದ ೫-೩೦ರ ವರೆಗೆ ಕೆಲಸ ನಡಬೇಕೆಂದೂ, ಮಡಿಕೇರಿಯಲ್ಲಿ ಶುಕ್ರವಾರ, ವೀರಾಜಪೇಟೆಯಲ್ಲಿ ಬುಧವಾರ, ಉಳಿದ ಕಡೆಗಳಲ್ಲಿ ಸೋಮವಾರ ಬರೇ ಮಧ್ಯಾಹ್ನ ೨ ಗಂಟೆಯಿಂದ ೫-೩೦ರ ವರೆಗೆ ಕೆಲಸ ನಡಬೇಕೆಂದೂ, ಶನಿವಾರಗಳಲ್ಲಿ ಪೂರ್ತಿ ಖಚೇರಿ ಇರಬೇಕೆಂದೂ ಇದು ಜುಲೈ ತಾರೀಕು ೧ರಿಂದ ಜಾರಿಯಲ್ಲಿ ಬರಬೇಕೆಂದೂ ಚೀಫ್ ಕಮಿಶನರ ಹೊಸ ಆಜ್ಞೆ ಆಗಿದೆ.

ಈ ವರ್ಷ ಮದ್ರಾಸ್ ಮೆಡಿಕಲ್ ಕಾಲೇಜಿನ ಎರಡು ಸ್ಥಳಗಳಿಗೆ ಶ್ರೀಗಳಾದ ಲಕ್ಷ್ಮೀನಾರಾಯಣ ಮತ್ತು ಮೇಕೇರಿರ ಸಂಪತ್ತು ಇವರುಗಳನ್ನೂ, ಇಂಜಿನಿಯರಿಂಗ್ ಕಾಲೇಜಿಗೆ ಶ್ರೀಗಳಾದ ಬಟ್ಟಿಯಂಡ ಪೊನ್ನಪ್ಪ ಮತ್ತು ಐಚೆಟ್ಟಿರ ಚಂಗಪ್ಪ ಇವರುಗಳನ್ನೂ, ವ್ಯವಸಾಯ ಕಾಲೇಜಿಗೆ ಶ್ರೀ ಕೊಂಗಾಂಡ ಕರುಂಬಯ್ಯ ಮತ್ತು ಹರಗದ ಚಂಗಪ್ಪ ಇವರುಗಳನ್ನೂ, ವೆಟರ್ನರಿ ಕಾಲೇಜಿಗೆ ಶ್ರೀ ಕಂಜಿತಂಡ ಟಿ ಸೋಮಯ್ಯನವರನ್ನೂ ಆರಿಸಲಾಗಿದೆ.

ಕೊಡಗಿಗೆ ಬಂದಿರುವ ರಾಮಪುರದ ರಾಣಿಯವರು ಮಡಿಕೇರಿ ಮಹಿಳಾ ಸಮಾಜದ ಆಶ್ರಯದಲ್ಲಿ ನೆರೆದಿದ್ದ ಮಹಿಳೆಯರ ಸಭೆಯಲ್ಲಿ ತಾ. ೨೮ ರಲ್ಲಿ "ಸಮಾಜದಲ್ಲಿ ಸ್ತ್ರೀಯರ ಸ್ಥಾನ" ಎಂಬ ವಿಚಾರ ಭಾಷಣ ಮಾಡಿದರು. ಮೇಡಂ ಬೇಡಿಯವರು ಅಧ್ಯಕ್ಷತೆ ವಹಿಸಿದ್ದರು.

ಆಂಧ್ರ ಬಂಗಾಳ ನಿರಾಶ್ರಿತರ ಸಹಾಯಕ್ಕಾಗಿ ಕೊಡಗಿನಲ್ಲಿ ಏರ್ಪಡಿಸಿದ ನಿಧಿಗೆ ಈ ವರೆಗೆ ೭೫೬ ರೂಪಾಯಿ ವಸೂಲಾಗಿದೆಯೆಂದೂ, ತಾ. ೩೦-೬-೫೦ರಿಂದ ಈ ಬಗ್ಗೆ ಹಣ ಸಂಗ್ರಹಿಸುವದನ್ನು ನಿಲ್ಲಿಸುವದರಿಂದ ಅದರೊಳಗೆ ಇಷ್ಟ ಇರುವವರು ತಮ್ಮ ಸಹಾಯವನ್ನು ನಾಡಿನ ಪಾರುಪತ್ತೆಗಾರರ ಮೂಲಕ ಕಳುಹಿಸಬಹುದೆಂದೂ ತಿಳಿಸುತ್ತಾರೆ

ಮಡಿಕೇರಿ ಮಹಿಳಾ ಸಹಕಾರ ಸಮಾಜದ ಹೊಸ ಕಟ್ಟಡದ ಪ್ರವೇಶೋತ್ಸವವು ನಿನ್ನೆ ದಿನ ನಡೆಯಿತು.

ತಾರೀಕು ೨೩ರಿಂದ ಇಂದಿನ ವರೆಗೆ ಮಡಿಕೇರಿಗೆ ೬ ಇಂಚು ೧೧ ಸೆಂಟು ಮಳೆಯಾಗಿದೆ.

ಶ್ರೀಮಾನ್ ಎಂ ಎಸ್. ಅನಂತಪದ್ಮನಾಭರಾಯರಿಂದ ರಚಿತವಾದ "ತುಲಸೀ ರಾಮಾಯಣ"ವೆಂಬ ಮಹಾ ಕಾವ್ಯಕ್ಕೆ ಮೈಸೂರು ಸರಕಾರದ ದೇವರಾಜ ಬಹದ್ದೂರ್ ನಿಧಿಯ ಮೊದಲನೆ ಬಹುಮಾನ ದೊರೆತಿದೆ.

ತಾ. ೨೫-೬-೫೦ರಲ್ಲಿ ಮಡಿಕೇರಿ ಕಾಳಿಕ್ಕಮನೆಯಲ್ಲಿರುವ ಶ್ರೀ ಕೆ. ಪಿ. ವೀರಪ್ಪಶೆಟ್ಟಿಯವರ ಮನೆಗೆ ರಾತ್ರಿ ಯಾರೋ ಕಳ್ಳರು ನುಗ್ಗಿ ಸುಮಾರು ೧೦ ಪವನುಗಳಷ್ಟು ನಗಗಳನ್ನು ಅಪಹರಿಸಿರುವರೆಂದೂ, ಪೊಲೀಸು ತನಿಕೆಯಾಗುತ್ತಿದೆಯೆಂದೂ ತಿಳಿಯ ಬರುತ್ತದೆ.

ತಾರೀಕು ೨೩-೬-೫೦ರ ಹಗಲು ಕಡಗದಾಳು ಗ್ರಾಮದ ಶ್ರೀ ಬೊಳ್ಳಿಯಂಡ ಕುಂಞಪ್ಪನವರು ಏನೋ ಕಾರಣಾಂತರದಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವರೆಂದು ತಿಳಿದು ಬಂದಿದೆ.

---

## ಭಗ್ನ ಮಂದಿರದಲ್ಲಿ ನಾಗರಹಾವು.

ಸಬರಿಮಲೆಯಲ್ಲಿಯ ದೇವಾಲಯದ ಅಧಿಕಾರಿಗಳು ಮತ್ತು ಕೆಲಸಗಾರರು ದೇವಾಲಯದ ಸುಟ್ಟುಹೋದ ಭಾಗವನ್ನು ಸ್ವಚ್ಛ ಮಾಡಲು ದೇವಾಲಯವನ್ನು ಪ್ರವೇಶಿಸಿದಾಗ ಹನ್ನೆರಡು ಅಡಿಯ ನಾಗರ ಹಾವು ಭಗ್ನವಾದ ಐಯ್ಯಪ್ಪನ ದೇವರ ಮೂರ್ತಿಯ ಹಿಂದಿನಿಂದ ಬುಸ್ಸೆಂದು ಹೊರಬಂದಿತು. ದೇವಾಲಯದ ಪ್ರಾಕಾರದಿಂದ ಅದನ್ನು ಹೊರಗೆ ಹಾಕಬೇಕೆಂದು ಕೆಲಸಗಾರರು ಕಲ್ಲಿನಿಂದ ಹೊಡೆಯಬೇಕೆಂದು ಹೋಗಲು ತಿರುವಾಂಕೂರು ದೇವಾಲಯದ ಅಧ್ಯಕ್ಷ ಶ್ರೀ ಉನ್ನಿತನ್ನರು ಅವರನ್ನು ತಡೆದು ಮುಂದುವರಿದು ಹೋಗಿ ನಾಗರ ಹಾವಿನ ಹೆಡೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿ ಐಯ್ಯಪ್ಪ ಹೊರಗೆ ಹೋಗೆಂದು ಗಟ್ಟಿಯಾಗಿ ಬಿನ್ನವಿಸಲು ನಾಗರಹಾವು ಅದನ್ನು ಪಾಲಿಸಿ ಹೊರಗೆ ಹೋಯಿತು.

---

## ಕೃತಜ್ಞತಾ ವಂದನೆಗಳು.

ನಮ್ಮ ಮಾತೋಶ್ರೀಯವರ ಮತ್ತು ನಮ್ಮ ಸೊಸೆ ಕಮಲಾಕ್ಷಿಯ ಅಕಾಲ ನಿಧನದಿಂದ ನಮಗೂ ಕಮಲಾಕ್ಷಿಯ ತಾಯಿಯಾದ ನನಗೂ ಉಂಟಾದ ಅಪಾರ ದುಃಖದ ಕಾಲದಲ್ಲಿ ಖುದ್ದಾಗಿ ಬಂದು ಮತ್ತು ಸಂತಾಪ ಸೂಚನಾ ಪತ್ರಗಳ ಮೂಲಕ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧುಮಿತ್ರರಿಗೂ ಸ್ನೇಹಿತರಿಗೂ ಪ್ರತ್ಯೇಕ ಬರೆದು ನಮ್ಮ ಕೃತಜ್ಞತೆಯನ್ನು ಅರ್ಪಿಸುವದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನಮ್ಮ ವಂದನೆಗಳನ್ನು ಅರ್ಪಿಸುವೆವು.

ಪುಲಿಯಂಡ ಐಯ್ಯಪ್ಪ,
,, ಕಾರ್ಯಪ್ಪ.
ಕಾಡ್ಯಮಾಡ ಬಿ. ಮುತ್ತವ್ವ

---

## ಅಹಿತ ನಿರ್ಧಾರ.

ಈ ಬರುವ ಜುಲೈ ತಾರೀಕು ಒಂದರಿಂದ ಎಲ್ಲಾ ಸರಕಾರಿ ಖಚೇರಿಗಳಲ್ಲಿ ಕೆಲಸವು ಬೆಳಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯವರೆಗೆ ನಂತರ ಮಧ್ಯಾಹ್ನ ಎರಡು ಗಂಟೆಯಿಂದ ಸಾಯಂಕಾಲ ೫-೩೦ರ ವರೆಗೆ ಹೀಗೆ ದಿನಕ್ಕೆ ೬-೩೦ ತಾಸು ಕೆಲಸ ನಡೆಯಬೇಕೆಂದೂ ವೀರಾಜಪೇಟೆ ಮತ್ತು ಮಡಿಕೇರಿಗಳಲ್ಲಿ ಸಂತೆಯ ದಿನ ಖರೇ ಮಧ್ಯಾಹ್ನ ೨ ಗಂಟೆಯಿಂದ ೫-೩೦ರ ವರೆಗೂ ಉಳಿದ ಕಡೆಗಳಲ್ಲಿ ಸೋಮವಾರ ೨ ಗಂಟೆಯಿಂದ ೫-೩೦ರ ವರೆಗೂ ಕೆಲಸವೆಂದು ನಿರ್ಧರಿಸಲಾಗಿದೆ. ಸರಕಾರವು ಈ ರೀತಿಯ ಒಂದು ನಿಯಮವನ್ನು ಜಾರಿಗೆ ತರಲು ಕಾರಣವೇನೋ ತಿಳಿಯದು. ಇಂದಿನ ಕಾಲದಲ್ಲಿ ಸರಕಾರಿ ಉದ್ಯೋಗಿಗಳಿಗೆ ಹಿಂದಿಗಿಂಥಾ ಹೆಚ್ಚು ವೇತನವಾಗುವದರಿಂದ ಅದಕ್ಕೆ ಸರಿಯಾಗಿ ಹೆಚ್ಚು ಕೆಲಸ ಪಡೆಯುವ ದೃಷ್ಟಿಯಿಂದ ಈ ಬದಲಾವಣೆ ಮಾಡಿರಬಹುದು. ಈ ಹಿಂದೆ ವಾರಕ್ಕೆ ಸರಕಾರಿ ಉದ್ಯೋಗಿಗಳು ೩೬ ಗಂಟೆ ಕೆಲಸ ಮಾಡುತ್ತಿದ್ದರು. ಕೆಲವು ದಿನಗಳಿಂದ ಇದನ್ನು ದಿನಕ್ಕೆ ಅರ್ಧ ಗಂಟೆಯಂತೆ ಹೆಚ್ಚಿಸಲಾಯಿತು. ಈಗ ಮಡಿಕೇರಿಯಲ್ಲಿ ಶುಕ್ರವಾರ, ವೀರಾಜಪೇಟೆಯಲ್ಲಿ ಬುಧವಾರ ಮತ್ತು ಇತರ ಕಡೆ ಸೋಮವಾರ ಈ ದಿನಗಳಲ್ಲಿ ಸರಕಾರಿ ಖಚೇರಿ ಕೆಲಸ ಮಧ್ಯಾಹ್ನ ೨ ಗಂಟೆಗೆ ಪ್ರಾರಂಭಿಸಿ ೫-೩೦ರ ವರೆಗೂ, ಶನಿವಾರ ಮಧ್ಯಾಹ್ನದ ಮೇಲೆ ಹಿಂದಿನಂತೆ ರಜೆ ಇರದೆ ಪೂರ್ತಿ ಕೆಲಸ ನಡೆಯುವಂತೆಯೂ ಏರ್ಪಾಡಿಗಳಾಗಿವೆ. ಇದರಿಂದ ಕೆಲಸದ ಸಮಯವು ಹಿಂದಿನಂತೆಯೇ ವಾರಕ್ಕೆ ಸುಮಾರು ೩೬ ಗಂಟೆಗಳಾದರೂ ಈ ಏರ್ಪಾಡಿನಿಂದ ಸರಕಾರಿ ಉದ್ಯೋಗಿಗಳಿಗೂ ಮೇಲಾಗಿ ಸಾರ್ವಜನಿಕರಿಗೂ ವಿಪರೀತ ತೊಂದರೆ ಆಗಲಿದೆ. ಈ ರೀತಿಯ ಒಂದು ನಿರ್ಧಾರವನ್ನು ಚೀಫ್ ಕಮಿಷನರು ಯಾವ ದೃಷ್ಟಿಯಿಂದ ಮಾಡಿದರೋ ತಿಳಿಯದು. ಈ ನಿರ್ಧಾರದಿಂದ ಅಹಿತವೇ ಹೆಚ್ಚಾಗವದೆಂಬುದರಲ್ಲಿ ಸಂಶಯವಿಲ್ಲ.

ಪ್ರಧಾನತವಾಗಿ ಉದ್ಯೋಗಿಗಳ ದೃಷ್ಟಿಯಿಂದ ಹೇಳುವದಾದರೆ ವಾರಕ್ಕೆ ಅವರು ಮಾಡಬೇಕಿರುವ ಕೆಲಸದ ಸಮಯದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲದಿದ್ದರೂ ಶನಿವಾರದ ಮಧ್ಯಾಹ್ನದ ಮೇಲೆ ಖಚೇರಿ ಇರುವಂಥಾದ್ದು ತೊಂದರೆಗೆ ಕಾರಣವಾಗಿದೆ. ಸರಕಾರಿ ಕೆಲಸಗಾರರೆಂದರೆ ಅವರಿಗೂ ಕುಟುಂಬ, ಮನೆ ಹೊಲ, ತೋಟಗಳಿದ್ದು ಅವುಗಳ ಎಚ್ಚರಿಕೆಯ ಭಾರವು ಹಲವರ ಮೇಲಿದೆ. ಅಂಥಾವರು ಶನಿವಾರ ಮಧ್ಯಾಹ್ನದ ಮೇಲೆ ತಮ್ಮ ನಾಡುಗಳಿಗೋ ತೋಟಗಳಿಗೋ ಹೋಗವ ಅನುವಿತ್ತು. ಅದನ್ನು ಇಂದಿನ ನಿಯಮವು ಇಲ್ಲದಂತೆ ಮಾಡಿದೆ. ಅವಶ್ಯವಾಗಿ ಹೋಗಲಿರುವವರು ಇನ್ನು ಕ್ಯಾಜುವಲ್ ರಜೆಯ ಉಪಯೋಗ ಮಾಡಬೇಕಾಗುವದು.

ಉದ್ಯೋಗಿಗಳಿಗೆ ತೊಂದರೆಯಾದರೂ ಚಿಂತೆ ಇಲ್ಲ; ಇವರಿಂದ ಬೇರೆ ಯಾರಿಗಾದರೂ ಹಿತವಾಗುವಂತಿದ್ದರೆ ಈ ನಿರ್ಣಯವನ್ನು ಮೆಚ್ಚಬಹುದಿತ್ತು. ಬದಲು ಇದರಿಂದ ಸಾರ್ವಜನಿಕರಿಗೆ ಇನ್ನೂ ವಿಪರೀತ ಹಾನಿಯೇ ಆಗಲಿದೆ. ಸಂತೆ ದಿನಗಳಲ್ಲಿ ಮಡಿಕೇರಿಯಲ್ಲಿ ಶುಕ್ರವಾರ ವೀರಾಜಪೇಟೆಯಲ್ಲಿ ಬುಧವಾರ ಮತ್ತಿತರ ಸ್ಥಳಗಳಲ್ಲಿ ಸೋಮವಾರ ಸರಕಾರಿ ಖಚೇರಿಗಳು ಮಧ್ಯಾಹ್ನ ೨ ಗಂಟೆಗೆ ತೆರೆಯುವದೆಂದರೆ ಜನತೆಗೆ ಪ್ರಾಮುಖ್ಯವಾಗಿ ಹಳ್ಳಿಯ ರೈತರಿಗಾಗುವ ಹಾನಿ ಅಷ್ಟಿಷ್ಟಲ್ಲ. ಅನೇಕ ರೈತರು ಸಂತೆಯ ದಿನವೇ ತಮ್ಮ ಅಲ್ಪಸ್ವಲ್ಪ ಕೋರ್ಟು ಕೆಲಸಗಳನ್ನು ಮುಗಿಸಿಕೊಳ್ಳುವರೆಂಬುದು ಅನುಭವದ ಮಾತು. ಹಳ್ಳಿಗರು ಸಂತೆಗೆ ಬಂದು ಹಿಂತಿರುಗುವ ಸಮಯಕ್ಕೆ ಅಂದರೆ ೨ ಗಂಟೆಗೆ ಖಚೇರಿ ತೆರೆದರೆ ಅವರ ಕೆಲಸ ಹೇಗೆ ಆಗಬೇಕು? ಅವರು ಒಂದು ದಿನ ಪೇಟೆಯಲ್ಲಿ ಉಳಿಯಬೇಕಾಗುವುದು ಇಲ್ಲವೇ ಬೇರೆ ದಿನ ಬರಬೇಕಾಗುವದು. ಪೊನ್ನಂಪೇಟೆ ಮತ್ತಿತರ ಕಡೆಗಳಲ್ಲಿ ಸೋಮವಾರವು ಖಚೇರಿ ದಿನ! ಅಂದು ಎಲ್ಲಾ ಪಟೇಲರುಗಳೂ, ರೈತರೂ ಬಂದು ತಮ್ಮ ಕೋರ್ಟು ಕೆಲಸ ಮುಗಿಸುವದಾಗಿದೆ. ಅಂಥಾದ್ದರಲ್ಲಿ ಖಚೇರಿಯು ಮಧ್ಯಾಹ್ನ ೨ ಗಂಟೆಗೆ ತೆರೆಯಲ್ಪಟ್ಟರೆ!

ಯಾವ ದೃಷ್ಟಿಯಿಂದಲೇ ಈ ನಿರ್ಣಯ ಆಗಿರಲಿ, ಇದರಿಂದ ಉದ್ಯೋಗಿಗಳಿಗೂ ಹಿತವಿಲ್ಲ; ಸಾರ್ವಜನಿಕರಿಗೂ ಉಪಕಾರವಿಲ್ಲ. ಉಪಕಾರದ ಬದಲು ಅಪಕಾರವೇ ಆಗಿದೆ. ಆದ್ದರಿಂದ ಈ ಬದಲಾವಣೆಯನ್ನು ಸರ್ಕಾರದವರು ಜಾರಿಗೆ ತಾರದೆ ಈ ಹಿಂದಿನಂತೆಯೇ ಖಚೇರಿ ನಡೆಯುವ ಅನು ಮಾಡಬೇಕಿದೆ. ಸರಕಾರಿ ಉದ್ಯೋಗಿಗಳಿಗೆ ಸಂತೆ ದಿನ ತಮಗೆ ಬೇಕಾದ ಸಾಮಾನು ಪಡೆಯಲಿಕ್ಕಾಗಿ ಈ ಏರ್ಪಾಡು ಮಾಡಿರುವದಾದರೆ ಎಂಥಾ ಆಡಂಬರದ ವ್ಯಾಪಾರವನ್ನೂ ೧೧ ಗಂಟೆಯೊಳಗೆ ಮುಗಿಸಬಹುದೆಂದು ಬೇರೆ ಹೇಳಬೇಕಿಲ್ಲ. ಒಂದು ವೇಳೆ ವ್ಯಾಪಾರಕ್ಕೆ ಅವಕಾಶವಿಲ್ಲವೆನ್ನುವದಾದರೂ ನಾಲ್ಕಾರು ಉದ್ಯೋಗಿಗಳ ಹಿತವನ್ನು ನೆನಸಿ ನೂರಾರು ಹಳ್ಳಿಗರಿಗೆ ಅಹಿತವನ್ನು ಸರಕಾರವು ಮಾಡಕೂಡದು. ಆದ್ದರಿಂದ ವಿಳಂಬವಿಲ್ಲದೆ ಈ ಆಜ್ಞೆಯನ್ನು ಸರಕಾರವು ಹಿಂತೆಗೆಯಬೇಕಾಗಿದೆ.

ಕುಶಾಲಪ್ಪ.

# ಓದುಗರ ಓಲೆಗಳು.

## ದರ್ಜಿಗಳ ಹಾವಳಿ.

ಕೊಡಗಿನಲ್ಲಿ ದರ್ಜಿಗಳಿಗೆ ಅಭಾವವಿಲ್ಲ. ಪ್ರತಿ ಪೇಟೆಯಲ್ಲಿಯೂ ಅವಶ್ಯಕತೆಗಿಂಥಾ ಹೆಚ್ಚಿದ್ದಾರೆ. ಆದರೆ ಇದರಿಂದ ಅವರು ಮಾಡುವ ಚಾರ್ಜಿಗೇನೂ ಕಡಿಮೆಯಿಲ್ಲ. ಅವರ ಸಂಖ್ಯೆ ಹೆಚ್ಚಿದಂತೆ ಚಾರ್ಜು ಹೆಚ್ಚುತ್ತಿದೆ. ಜನರನ್ನು ಅವರು ಒಂದು ವಿಧದಲ್ಲಿ ಸುಲಿಗೆ ಮಾಡುತ್ತಿರುವರೆಂದರೂ ಸಲ್ಲುವದು. ತಮ್ಮ ಪರಿಶ್ರಮಕ್ಕೆ ತಕ್ಕುದಾದ ಪ್ರತಿಫಲವನ್ನು ಪ್ರತಿಯೊಬ್ಬನೂ ಪಡೆಯಬೇಕು. ಆದರೆ ಇನ್ನೊಬ್ಬರ ಸುಲಿಗೆಗೆ ಇಳಿಯುವದು ತಪ್ಪಾಗುವದು. ಮೊನ್ನೆ ಒಂದು ಅಂಗಡಿಯಲ್ಲಿ ಕೂತಿದ್ದೆ. ಚಿಕ್ಕ ಹುಡುಗನೊಬ್ಬನು ೨ ಗಜ ಬಟ್ಟೆ ತಂದು ಕೊಟ್ಟು ಒಂದು ಕೋಟು ಹೊಲಿದು ಕೊಡಬೇಕೆಂದನು. ದರ್ಜಿಯು ಒಂದು ಗಂಟೆ ಕಳೆದು ಬರಲು ಹೇಳಿದನು. ಹುಡುಗನು ಮರಳಿ ಬಂದಾಗ ಕೋಟಿನ ಗುಂಡಿ ಹೊಲಿಯುವದು ಬಾಕಿ ಇತ್ತು. ಯಾವ ಕೈಕೆಲಸವನ್ನೂ ಮಾಡದೆ ಯಂತ್ರದಿಂದಲೇ ಹೊಲಿಯಲಾಗಿತ್ತು. ಗುಂಡಿಯ ತೂತಗಳೂ ಕೂಡ ಯಂತ್ರದಲ್ಲಿ ಹೊಲಿಯಲ್ಪಟ್ಟಿದ್ದವು! ಕೋಟನ್ನು ಪೂರ್ತಿಗೊಳಿಸಿ ಚಾರ್ಜು ನಾಲ್ಕು ರೂ. ಕೊಡಬೇಕೆಂದು ದರ್ಜಿಯು ಕೇಳಿದನು. ಹುಡುಗನು ಅಷ್ಟು ದುಡ್ಡು ತನ್ನಲ್ಲಿಲ್ಲವೆಂದೂ ಒಟ್ಟು ಬಟ್ಟೆಗಾಗಿ ರೂ ೩-೮ ಆಗಿರುವದೆಂದೂ ಬಟ್ಟೆಗಿಂಥಾ ಹೊಲಿಗೆ ಚಾರ್ಜಾಯಿತೆಂದೂ ತಾಯಿಯು ಕೇವಲ ೨ ರೂ ಕೊಟ್ಟಿರುವದಾಗಿಯೂ ಹೇಳಿದನು. ದರ್ಜಿಯು ಆ ಮಾತು ಕಿವಿಗೆ ಹಾಕಲಿಲ್ಲ. ಕೋಟನ್ನು ಪೆಟ್ಟಿಗೆಯಲ್ಲಿರಿಸಿ ನಾಲ್ಕು ರೂಪಾಯಿ ಕೊಟ್ಟಲ್ಲದೆ ಆಗದು ಎಂದು ತನ್ನ ಕೆಲಸದಲ್ಲಿ ನಿರತನಾದನು. ಹುಡುಗನು ಅಳುತ್ತಿದ್ದನು. ಈ ರೀತಿ ದರ್ಜಿಗಳು ವರ್ತಿಸುವದಾದರೆ ಅದು ಸುಲಿಗೆಯಲ್ಲವೆ ಬೇರಲ್ಲ. ಎಲ್ಲದಕ್ಕೂ ನಿಯಂತ್ರಣವಿರುವಾಗ ಈ ಹೊಲಿಗೆ ಚಾರ್ಜುಗಳನ್ನು ನಿಯಂತ್ರಿಸುವದು ಅವಶ್ಯವಲ್ಲವೇ? ಸರಕಾರ ಇತ್ತ ಗಮನಿಸಿ ಏನು ಪರಿಯೊಂದು ಕಾರ್ಯಕ್ರಮ ಕೈಕೊಂಡು ಇವರ ಹಾವಳಿಯನ್ನು ನಿಲ್ಲಿಸಬೇಕು.

ಪಿ. ಎಂ. ಮಾಚಪ್ಪ,

## ಹುದಿಕೇರಿ ಟಪ್ಪಾಲು ಖಚೇರಿ.

ಕಳೆದ ವಾರ ಬಾತ್ಮಿದಾರರೊಬ್ಬರು ಹುದಿಕೇರಿಯ ಟಪಾಲು ಖಚೇರಿಯ ವಿಚಾರ ಬರೆದಿದ್ದರು. ಹುದಿಕೇರಿಯು ಈಗ ಬಹು ರೀತಿಯಿಂದ ಅಭಿವೃದ್ಧಿಗೊಂಡಿದೆ. ವ್ಯಾಪಾರದ ದೃಷ್ಟಿಯಿಂದಲೂ, ಬೇರೆ ಜನ ಜಾಗೃತಿಯ ದೃಷ್ಟಿಯಿಂದಲೂ ಮುಂದರಿದಿದೆ. ಇತ್ತೀಚೆಗಾಗಿ ಒಂದು ಹೈಸ್ಕೂಲೂ ಆಗುವದರಲ್ಲಿದೆ. ಇಂಥಾ ಒಂದು ಕೇಂದ್ರದಲ್ಲಿ ಒಂದು ಬ್ರಾಂಚು ಪೋಸ್ಟಾಫೀಸು, ತಂತಿ ಇಲಾಖೆಯಂದೊಡಗೂಡಿ ಇರಬೇಕಾದುದು ಅವಶ್ಯ. ಈಗ ಅಲ್ಲಿರುವ ಪೋಸ್ಟಾಫೀಸು ನಿಜವಾಗಿ ಆ ಇಲಾಖೆಗೆ ಶೋಭಿಸುವಂತಿಲ್ಲ. ಓಬಿರಾಯನ ಕಾಲದಂತೆಯೇ ಪೋಸ್ಟಲ್ ಏಜಂಟರ ಮೂಲಕ ಅಲ್ಲಿ ಕೆಲಸ ನಡೆಯುತ್ತಿದೆ! ಇದಕ್ಕಾಗಿಯೇ ಪ್ರತ್ಯೇಕ ಒಂದು ಆಫೀಸು ಅವಶ್ಯವಿದೆ. ಇಲಾಖೆಯವರು ಈ ಕಡೆ ಗಮನವಿಟ್ಟು ಜನರ ಬೇಡಿಕೆಯನ್ನು ಸಲ್ಲಿಸುವರಾಗಿ ಆಶಿಸಲಾಗಿದೆ.

ಸಿ. ಜಿ. ಎಂ.

## ಅಕ್ಕಿಯ ವ್ಯವಸ್ಥೆ.

ಸರಕಾರಿ ರೇಶನ್ ಡಿಪೋಗಳಲ್ಲಿ ಅಕ್ಕಿ ಸರಬರಾಯಿ ಮಾಡುತ್ತಿರುವರಷ್ಟೆ! ಈ ಅಕ್ಕಿಯ ಅವಸ್ಥೆಯ ವಿಷಯ ಹತ್ತಾರು ಬಾರಿ ಪತ್ರಿಕೆಗಳಲ್ಲಿ ಲೇಖನ ಬಂದಿದ್ದರೂ ಅದರ ಪರಿಸ್ಥಿತಿ ಸುಧಾರಿಸದಿರುವದನ್ನು ನೋಡಿದರೆ ಮಿಲ್ಲು ಮಾಲೀಕರ ಪ್ರಭಾವ ಸಂಬಂಧಿಸಿದ ಅಧಿಕಾರಿಗಳ ಮೇಲೆ ಬಹು ಚೆನ್ನಾಗಿ ಬಿದ್ದಿದೆ ಎಂದು ಊಹಿಸಬೇಕಾಗುತ್ತದೆ. ಇಲ್ಲದಿದ್ದರೆ ಬಡಜನರ ಕೂಗಿಗೆ ಅಧಿಕಾರಿಗಳು ಕಿವಿಗೊಡದಿರಲು ಕಾರಣವೇನು? ನಾನು ಒಬ್ಬ ರೇಶನ್ ಕಾರ್ಡ ಇರುವವನು. ನನಗೆ ವಾರಕ್ಕೆ ೨ಳ ಸೇರು ಅಕ್ಕಿ ದೊರೆಯುತ್ತೆ. ಈ ಅಕ್ಕಿಯನ್ನು ತಂದು ಸ್ವತಹ ಕುಟ್ಟಿದರೆ ಕೇವಲ ೧ಳ ಸೇರು ಒಳ್ಳೆ ಅಕ್ಕಿ ನಾಲ್ಕು ಸೇರು ಚಿಕ್ಕ ಅಕ್ಕಿ ದೊರೆಯುತ್ತದೆ. ಉಳಿದುದೆಲ್ಲಾ ಹೊಟ್ಟು ಮತ್ತು ಕಲ್ಲು. ಈ ರೀತಿ ೨ಳ ಸೇರಿಗೆ ೬ ಸೇರು ಅಂದರೆ ಪಲ್ಲಕ್ಕೆ ೧೦ ರೂ ಅಷ್ಟು ಮಿಲ್ ಮಾಲೀಕರು ಲಾಭ ಮಾಡುವದಾದರೆ ಬಡಜನರ ಪಾಡೇನಾಗಬೇಕು? ೧ ಲಾರಿ ಅಕ್ಕಿಗೆ ಈ ರೀತಿಯಾಗಿ ೨೦೦-೩೦೦ ರೂಪಾಯಿ ಲಾಭ ಮಿಲ್ ಮಾಲೀಕರಿಗಾಗುತ್ತಿದೆ. ಆ ಕಾರಣವೇ ಬತ್ತದ ನಿಯಂತ್ರಣ ಬೆಲೆ ಗಾಡಿಗೆ ರೂ ೧೮೦ ಇದ್ದರೂ ಮಿಲ್ ಮಾಲೀಕರು ೨೦೦ಕ್ಕೂ ವಿಕ್ರಿ ತೆಗೆದುಕೊಳ್ಳುವದಾಗಿದೆ. ಸರಕಾರಿ ಡಿಪೋಗಳಲ್ಲಿ ರೂಪಾಯಿಗೆ ಮೂರು ಸೇರು ಎಂದು ಲೆಕ್ಕ ಇದ್ದರೂ ವಾಸ್ತವವಾಗಿ ತೆಗೆದುಕೊಳ್ಳುವವನಿಗೆ ದೊರೆಯುವದು ೨ ಸೇರೇ!

ಈ ಅಕ್ಕಿಯೂ ಒಂದೇ ರೀತಿಯದಲ್ಲ. ಕಡಿಮೆ ಬೆಲೆಯ ಮಳ್ಳ, ಕೆಂಬತ್ತ ಮುಂತಾದ ಬತ್ತಗಳನ್ನು ಮಿಶ್ರಮಾಡಿ ಹಲವು ರೀತಿಯಲ್ಲಿ ಅಕ್ಕಿ ಹೊರಗೆಟ್ಟಿರುತ್ತದೆ. ಡಿಪೋಗಳಲ್ಲಿ ಮಾರಲ್ಪಡುತ್ತಿರುವ ಅಕ್ಕಿಯಲ್ಲಿ ದೊರೆಯುವ ಕಲ್ಲನ್ನು ನೋಡಿದರೆ ನಿಜವಾಗಿಯೂ ಅಕ್ಕಿಗೆ ಬೇಕೆಂದು ಕಲ್ಲು ಬೆರೆಸುತ್ತಾರೆ ಎಂದು ಹೇಳಬೇಕಾಗುತ್ತದೆ. ಒಂದು ಲಾರಿ ಅಕ್ಕಿಗೆ ಒಂದು ಚೀಲ ಕಲ್ಲು ಬೆರೆಸಿದ! ಅನ್ಯಾಯವಾಗಿ ರೂ ೩೬/- ಲಾಭವಾಯಿತಲ್ಲವೇ? ಎಲ್ಲಾ ಮಿಲ್ಲಿನವರು ಈ ರೀತಿ ಮಾಡುತ್ತಿರಬಹುದೆಂದು ನಾನು ಹೇಳುವದಲ್ಲ. ಆದರೆ ಕೆಲವಾದರೂ ಈ ರೀತಿ ಮಾಡುತ್ತಿವೆಯೆಂಬುದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ ಈ ಕಲ್ಲು, ಬತ್ತಗಳ ಅರ್ಥವೇನು?

ಯಾವ ಮಿಲ್ಲಿನಲ್ಲಿ ಎಷ್ಟರ ಮಟ್ಟಿಗೆ ಯಾವ ರೀತಿಯ ಅಕ್ಕಿ ಸರಬರಾಯಿ ಆಗುತ್ತದೆ ಎಂಬುದನ್ನು ಪರೀಕ್ಷಿಸಿ ಬಡ ಜನರಿಗೆ ನಿಜವಾಗಿಯೂ ರೂಪಾಯಿಗೆ ಮೂರು ಸೇರು ಒಳ್ಳೇ ಅಕ್ಕಿ ದೊರೆಯುವಂತೆ ಮಾಡುವದು ಸರಕಾರಿ ಅಧಿಕಾರಿಗಳಿಗೆ ಅಸಾಧ್ಯವಾದರೆ ಬೇರೆ ಯಾವ ಜನಹಿತ ಕೆಲಸ ಇವರಿಂದ ನಡೆದೀತೆಂದು ನಂಬುವದು? ಈ ರೀತಿಯ ಕರ್ತವ್ಯ ನ್ಯೂನತೆಯು ಸಹಜಾತೀತವಾದುದು. ಇನ್ನಾದರೂ ಅಧಿಕಾರಿಗಳು ಮಿಲ್ಲುಗಳಿಂದ ಬರುವ ಅಕ್ಕಿಗಳನ್ನು ಆಗಾಗ ಪರಿಶೀಲಿಸಿ ಈ ರೀತಿ ಮೋಸದಿಂದ ಬಡವರ ಹೊಟ್ಟೆಗೆ ಹೊಡೆಯುವವರನ್ನು ಶಿಕ್ಷಿಸುವ ಏರ್ಪಾಡು ಮಾಡುವರೇ? 'ರೇಶನ್ ಕಾರ್ಡಿನವ'

# ಕೊಡಗಿನ ಕಾಂಗ್ರೆಸ್ ಚುನಾವಣೆಯು ಮತ್ತೊಂದು ಮಾದರಿ.

ಕೊಡಗಿನ ಕಾಂಗ್ರೆಸ್ ಪಂಚಾಯಿತ ಮೆಂಬರುಗಳ ಚುನಾವಣೆಯ ಬಗ್ಗೆ ಈ ಮೊದಲು ಒಂದೆರಡು ಬಾತ್ಮಿಗಳು ಪ್ರಕಟವಾಗಿದ್ದವು. ಇತ್ತಲಾಗಿ ನಡೆದ ಕಾಂಗ್ರೆಸಿಗೆ ಡೆಲಿಗೇಟರುಗಳ ಚುನಾವಣೆ ಯಾವ ರೀತಿ ನಡೆಸಿದರೆಂದು ನೋಡೋಣ. ಈ ಚುನಾವಣೆ ಬಗ್ಗೆ ಕೊಡಗನ್ನು ಎರಡು ಭಾಗಮಾಡಿ ನೇಮಕ ಪತ್ರವನ್ನು ಈ ತಾ. ೨೦ ರಲ್ಲು ಕೊಡಬೇಕೆಂದೂ ಚುನಾವಣೆಯು ತಾರೀಕು ೩೧-೬-೫೦ ರಲ್ಲು ನಡೆಯುವುದೆಂದೂ ಕಾರ್ಯಕ್ರಮವಾಗಿತ್ತು. ಕೊಡಗಿನಲ್ಲಿ ಕಾಂಗ್ರೆಸ್ ಚುನಾವಣೆ ಬಗ್ಗೆ ಮೈಸೂರು ಪ್ರಾಂತ್ಯದ ಶ್ರೀ. ನರಸಿಮಯ್ಯನವರೆಂಬವರನ್ನು ರಿಟರ್ನಿಂಗ್ ಆಫೀಸರವರಾಗಿ ನೇಮಿಸಿದ್ದರೂ ಅವರು ಕೊಡಗಿಗೆ ಕಾಲಿಕ್ಕಲೇ ಇಲ್ಲ. ಬದಲು ಎಡ್‌ಹಾಕ್ ಕಮಿಟಿಯೂ ಅಧ್ಯಕ್ಷರ ಹೆಸರಿನಲ್ಲಿ ಈ ತಾ. ೧೪ ರ ಜನ್ಮಭೂಮಿ ಪತ್ರಿಕೆಯಲ್ಲಿ ಪ್ರಕಟವಾದ ಒಂದು ನೋಟೀಸಿನಲ್ಲಿ ಡೆಲಿಗೇಟರುಗಳ ಚುನಾವಣೆ ಬಗ್ಗೆ ಶ್ರೀ. ಸಿ. ಎ ಮಂದಣ್ಣನವರನ್ನು ಇಲೆಕ್ಷನ್ ಆಫೀಸರವರಾಗಿ ನೇಮಿಸಲಾಗಿದೆ ಎಂದೂ, ಅವರಿಗೆ ನೇಮಕ ಪತ್ರವನ್ನು ತಾರೀಕು ೨೦ ರಲ್ಲು ಕೊಡಬೇಕೆಂಬದಾಗಿಯೂ ಪ್ರಕಟವಾಗಿತ್ತು. ನಂತರ ಪ್ರಕಟಿಸಿದ ತಾರೀಕು ಇಲ್ಲದ, ಅದೇ ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರವರ ಹೆಸರಿಲ್ಲದ್ದ ಹಸ್ತ ಪತ್ರಿಕೆಗಳಲ್ಲಿ ಮಂಗಳೂರಿನ ಒಬ್ಬ ಲಾಯರಾದ ಶ್ರೀ. ಬ ಲಕ್ಷ್ಮಣ ಶೆಟ್ಟಿಯವರು ಇಲೆಕ್ಷನ್ ಆಫೀಸರಾಗಿ ನೇಮಿಸಲ್ಪಟ್ಟಿರುವುದೆಂದೂ, ಅವರಿಗೆ ನೇಮಕಪತ್ರ ಕೊಡಬೇಕೆಂದೂ ವಮಾದಿಸಲ್ಪಟ್ಟಿತ್ತು. ಆದರಲ್ಲಿ ನೇಮಕ ಪತ್ರವನ್ನು ಎಲ್ಲಿ ಕೊಡಬೇಕೆಂಬ ಸೂಚನೆಯೇ ಇರಲಿಲ್ಲ. ಆ ಲಾಯರ ಊರಾದ ಮಂಗಳೂರಿನಲ್ಲೋ? ಯಾ ಕೊಡಗಿನ ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲಿಯೋ? ಅಥವಾ ಜಿಲ್ಲಾ ಕಾ. ಕಮಿಟಿಯ ಆಫೀಸ್ ಇರಬೇಕಾದ ಪೊನ್ನಂಪೇಟೆಯಲ್ಲಿಯೋ? ಹೀಗೆ ಒಬ್ಬರ ಹೆಸರಿನಲ್ಲಿಯೇ ಎರಡು ತರದ ನೋಟೀಸುಗಳನ್ನು ಹೊರಡಿಸಿ, ಯಾವ ಇಲೆಕ್ಷನ್ ಆಫೀಸರಿಗೆ ಮತ್ತು ಯಾವ ಸ್ಥಳದಲ್ಲಿ ನೇಮಕ ಪತ್ರಗಳನ್ನು ಕೊಡಬೇಕೆಂಬುದು ಗೊತ್ತಾಗದೆ ಪ್ರತ್ಯೇಕವಾದಿಗಳಿಗೆ ನೇಮಕ ಪತ್ರ ಕೊಡಲು ಅವಕಾಶವೇ ದೊರೆಯಲಿಲ್ಲ. ಆದರೆ ಎಡ್‌ಹಾಕ್ ಸಮಿತಿಯ ಅಧ್ಯಕ್ಷರ ಪಕ್ಷಕ್ಕೆ ಸೇರಿದ ಸಂಯೋಜನಾವಾದಿಗಳಿಗೆ ಯಾರಿಗೆ ಎಲ್ಲಿ, ನೇಮಕ ಪತ್ರಗಳನ್ನು ಕೊಡಬೇಕೆಂಬ ಗುಟ್ಟನ್ನು ತಿಳಿಸಿರಬೇಕು. ಅದರಂತೆ ಎರಡು ಡೆಲಿಗೇಟರುಗಳ ಸ್ಥಳಕ್ಕೆ ಇಬ್ಬರೂ ಸಂಯೋಜನವಾದಿಗಳು ಮಾತ್ರ ನೇಮಕ ಪತ್ರ ಕೊಡಲು ಅನುಕೂಲವಾಯಿತು. ಅದುದರಿಂದ ಕಳೆದವಾರದ ಪತ್ರಿಕೆಗಳಲ್ಲಿ ಪ್ರಕಟವಾದಂತೆ ಶ್ರೀ ಸಿ. ಎಂ. ಪೂಣಚ್ಚನವರು ಮತ್ತು, ಶ್ರೀ ಎನ್. ಸೋಮಣ್ಣನವರು ಅವಿರೋಧವಾಗಿ ನಾಸಿಕ್ ಕಾಂಗ್ರೆಸ್ ಮಹಾ ಸಭೆಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾಗಿದೆ. ಇದೆಂಥ ಅಕ್ರಮ ರೀತಿಯು ಮತ್ತು ಅನ್ಯಾಯದ ಚುನಾವಣೆ ಎಂಬುದನ್ನು ಜನತೆಗೆ ಪ್ರತ್ಯೇಕ ವಿವರಿಸಿ ಹೇಳಬೇಕಾಗಿಲ್ಲ. ಯಾವ ಸತ್ಯಸಂಧ ಮಹಾತ್ಮಾ ಗಾಂಧಿಯವರ ಮುಂದಾಳುತನದಲ್ಲಿ ಭಾರತ ಭೂಮಿಯ ಸ್ವಾತಂತ್ರ್ಯವನ್ನು ಗಳಿಸಿದ ಪವಿತ್ರ ಕಾಂಗ್ರೆಸ್ ಸಂಸ್ಥೆಯು ಆ ದಿವ್ಯ ಪುರುಷರ ಮರುದಿನದಲ್ಲಿ ಈ ರೀತಿಯ ಹೇಯವಾದ ಕಾರ್ಯಗಳಿಗೆ ಉಪಯೋಗಿಸಲ್ಪಟ್ಟದು ಯಾವ ನಿಜವಾದ ಕಾಂಗ್ರೆಸಿನವನಿಗಾದರೂ ದುಃಖವನ್ನು ಉಂಟುಮಾಡದಿರದು. ಇಂತಹ ಅನ್ಯಾಯ ಕಾರ್ಯಗಳಿಂದಲ್ಲವೇ ಕಾಂಗ್ರೆಸಿನ ಕೊಲೆಯಾಗುತ್ತಿರುವುದು!!

ಕಾಂಗ್ರೆಸಿಗ

---

# ವನಮಹೋತ್ಸವ.

ಕೊಡಗಿನಲ್ಲಿ ಯಾವ ರೀತಿಯಲ್ಲಿ ವನಮಹೋತ್ಸವವನ್ನು ನಡೆಸಬೇಕೆಂಬುದನ್ನು ನಿರ್ಣಯಿಸಲು ಚೀ. ಕಮಿಶನರ ಅಧ್ಯಕ್ಷತೆಯಲ್ಲಿ ತಾ. ೨೬ರಲ್ಲಿ ಸೇರಿದ ಕೇಂದ್ರ ವನಮಹೋತ್ಸವ ಸಮಿತಿಯ ಮೀಟಿಂಗಿನಲ್ಲಿ ಈ ಕೆಳಗಿನ ನಿರ್ಣಯಗಳಾದುವು.

ಮಡಿಕೇರಿ, ವೀರಾಜಪೇಟೆ ಮುನ್ಸಿಪಾಲಿಟಿಗಳಲ್ಲಿ, ಸೋಮವಾರಪೇಟೆ, ಫ್ರೇಜರ್‌ಪೇಟೆ, ಹೆಬ್ಬಾಲೆ ನೋಟಿಫೈಡ್ ಏರ್‍ಯಾಗಳಲ್ಲಿ, ಭಾಗಮಂಡ್ಲ, ಪೊನ್ನಂಪೇಟೆ, ಶಿರಂಗಾಲ ಮತ್ತು ಕೊರೆನೂರು ಪಂಚಾಯಿತ ಕೇಂದ್ರಗಳಲ್ಲಿ ತಾ. ೧-೭-೫೦ರಲ್ಲಿಯೂ, ಇತರ ನಾಡು ಖಚೇರಿ ಕೇಂದ್ರಗಳಲ್ಲಿ ತಾ. -೭-೫೦ ರಲ್ಲಿಯೂ ಮರನೆಡುವ ಕಾರ್ಯಕ್ರಮವನ್ನು ಪ್ರಾರಂಭಿಸಿ ಜುಲೈ ತಿಂಗಳ ಅಂತ್ಯದ ವರೆಗೆ ಮುಂದರಿಸಬೇಕು.

ತಾ. ೧-೭-೫೦ರಲ್ಲಿ ಮಡಿಕೇರಿಯ ಸಾರ್ವಜನಿಕರು ಕೌನ್ಸಿಲ್ ಹಾಲ್‌ನಲ್ಲಿ ಚೀಫ್ ಕಮಿಶನರ ಅಧ್ಯಕ್ಷತೆಯಲ್ಲಿ ಸೇರಿ ಪ್ರಾರಂಭ ಭಾಷಣ ಮತ್ತು ಕೇಂದ್ರದ ಪ್ರೆಸಿಡೆಂಟರ ಮತ್ತು ಆಹಾರ ಮಂತ್ರಿಗಳ ಪತ್ರವನ್ನು ಓದಿದನಂತರ ರಾಜಾಸೀಟಿಗೆ ಮೆರವಣಿಗೆ ಹೋಗಿ ಮಹಾತ್ಮಗಾಂಧಿಯವರು ಮಡಿಕೇರಿ ಸಾರ್ವಜನಿಕರನ್ನು ಕುರಿತು ಭಾಷಣ ಮಾಡಿದ ಸ್ಥಳದಲ್ಲಿ ಎರಡು ಚಂಪಕ ಗಿಡಗಳನ್ನು ನೆಡುವದಲ್ಲದೆ ರಾಜಾಸೀಟಿಗೆ ಹೋಗುವ ದಾರಿಯ ಪಕ್ಕದಲ್ಲಿ ಮರನೆಡುವದು. ನಂತರ ಕೋಟೆಗೆ ಬಂದು ಕೋಟೆಯ ಆವರಣದಲ್ಲಿ ಎರಡು ಚಂಪಕ ಗಿಡಗಳನ್ನು ನೆಡುವದು.

ಬೇಕಾದ ಚಂಪಕ ಗಿಡಗಳನ್ನು ಫಾರೆಸ್ಟ್ ಇಲಾಖೆಯ ಮೂಲಕ ಮೈಸೂರಿನಿಂದ ತರಿಸುವದು.

ಸಹಕಾರ ಕೂಟ, ಸಂಘಗಳ ಮೂಲಕ ಪ್ರತಿ ಗ್ರಾಮದಲ್ಲಿ ಯೋಗ್ಯ ರೀತಿ ವನಮಹೋತ್ಸವ ನಡೆಸಲು ರಿಜಿಸ್ಟ್ರಾರವರ ಮೂಲಕ ಅಪ್ಪೀಲು ಮಾಡುವದು.

ಎಲ್ಲಾ ನಾಡು ಕೇಂದ್ರಗಳಲ್ಲಿ ಮಡಿಕೇರಿ ವೀರಾಜಪೇಟೆಗಳಂತೆ ಕಾರ್ಯಕ್ರಮ ನಡೆಸಬೇಕು.

ಆಯಾ ಕೇಂದ್ರಗಳಲ್ಲಿ ಯಾವ ರೀತಿಯಲ್ಲಿ ಕಾರ್ಯ ಸಾಗಿದೆ ಎಂಬುವುದರ ವರದಿಯನ್ನು ತರಿಸುವದು.

ನೆಡಲು ಬೇಕಾದ ಸಸಿಗಳನ್ನು ಒದಗಿಸಲು ಪ್ಲಾಂಟರುಗಳನ್ನು ಕೇಳಲು ನಿರ್ಣಯವಾಯಿತು. ಬೇಕಾದ ಸಸಿಗಳನ್ನು ಸುಭೇದಾರರೂ, ಪಾರುಪತ್ಯೆಗಾರರೂ, ಕೊಡಗು ಫಾರೆಸ್ಟ್ ಇಲಾಖೆಯ ರೇಂಜರು ಮತ್ತು ಫಾರೆಸ್ಟರುಗಳಿಂದ ತರಿಸಿಕೊಳ್ಳುವದು.

---

# ಕೊರಿಯಾದಲ್ಲಿ ಯುದ್ಧ ಪ್ರಾರಂಭ.

ಕೊರಿಯಾದಲ್ಲಿ ಅಂತರ್ಯುದ್ಧ ಪ್ರಾರಂಭವಾಗಿದೆ. ಕೆಲವು ವರ್ಷಗಳಿಂದ ದಕ್ಷಿಣ ಮತ್ತು ಉತ್ತರ ಕೊರಿಯಾದಲ್ಲಿದ್ದ ರಾಜಕೀಯ ಬೇಧವು ಇಂದು ಖಾಡಾಖಾಡಿ ಯುದ್ಧದ ರೂಪುಗೊಂಡಿದೆ. ಇಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮ ರೀತಿ ವಿವೇಚಿಸಿದರೆ ಇಲ್ಲಿಯು ಚೈನಾದಲ್ಲಾದಂತೆ ಚರಿತ್ರೆಯು ಪುನರಾವರ್ತನೆಯಾಗುತ್ತಿದೆಯೆಂದು ಹೇಳಬಹುದು. ತೋರಿಕೆಗೆ ಕೊರಿಯನರಲ್ಲಿ ಅಂತರ್ಯುದ್ಧವೆಂದರೂ ಇದು ರಷ್ಯಾ ಅಮೇರಿಕಾಗಳ ಘರ್ಷಣೆ ಎನ್ನಲಡ್ಡಿಯಿಲ್ಲ. ಉತ್ತರದ ಕೊರಿಯನರನ್ನು ರಷ್ಯನರೂ, ದಕ್ಷಿಣದವರನ್ನು ಅಮೇರಿಕನರೂ ಬೆನ್ನು ತಟ್ಟುತ್ತಿದ್ದಾರೆ. ಅವರಿಗೆ ಯುದ್ಧ ಸಾಹಿತ್ಯಗಳ ಸರಬರಾಯಿಯೂ ಆಗುತ್ತಿದೆಯೆಂದು ಹೇಳಲಾಗಿದೆ. ಭೀಕರವಾಗಿ ರೂಪುಗೊಂಡಿರುವ ಯುದ್ಧದಲ್ಲಿ ವಿಮಾನಗಳು, ಟ್ಯಾಂಕುಗಳೂ ಇತರ ಆಧುನಿಕ ಉಪಕರಣಗಳು ಪಾಲ್ಗೊಂಡಿವೆ. ದಕ್ಷಿಣ ಕೊರಿಯನರು ಮುನ್ನುಗ್ಗಿ ಉತ್ತರದವರನ್ನು ಹತ್ತು ಮೈಲುಗಳ ವರೆಗೆ ಹಿಮ್ಮೆಟ್ಟಿಸಿರುವರೆಂದು ಹೇಳಲಾಗುತ್ತಿದೆ.

ಈ ರೀತಿ ಯುದ್ಧ ಸಾರಲ್ಪಟ್ಟಿರುವಾಗ ಅದನ್ನು ನಿಲ್ಲಿಸಿ ಶಾಂತಿ ಸಂಸ್ಥಾಪನೆಗೆ ಪ್ರಯತ್ನಿಸುವುದು ಸಂಯುಕ್ತ ರಾಷ್ಟ್ರಸಂಘದ ಕರ್ತವ್ಯವಾಗಿದೆ. ಆದರೆ ಅದು ನಿಸ್ಸಹಾಯಕವಾಗಿ ನೋಡುವ ಪರಿಸ್ಥಿತಿ ಬಂದಿದೆ. ಎರಡು ಕಡೆಗಳ [illegible] ಮಾಡುತ್ತಿರುವಾಗ ಬಾಯಿ ಮಾತಿನಿಂದ ಅದನ್ನು ನಿಲ್ಲಿಸುವದು ಸಾಧ್ಯವಾಗಲಾರದು. ಸಂಯುಕ್ತ ರಾಷ್ಟ್ರಸಂಘವು ಏನು ಮಾಡುವದೋ ಮುಂದೆ ನೋಡಬೇಕು.

ಈ ಯುದ್ಧವು ಜಗತ್ತಿನ ಶಾಂತಿಯನ್ನೇ ಕೆಡಿಸಲ್ಲ ಮಹಾಯುದ್ಧವಾಗಲೂ ಬಹುದೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅಮೇರಿಕಾ ವಿದೇಶಾಂಗ ಕಾರ್ಯದರ್ಶಿ ಎಚೆಸನ್ನರು ತಮ್ಮ ಅಭಿಪ್ರಾಯ ವ್ಯಕ್ತಮಾಡುತ್ತಾ ಈ ಘರ್ಷಣೆಯಲ್ಲಿ ಅಮೇರಿಕನರಿಗೆ ತುಂಬಾ ಆಸಕ್ತಿ ಇದೆಯೆಂದೂ ಇದನ್ನು ನಿಲ್ಲಿಸಿ ಜಗತ್ತಿನ ಶಾಂತಿಯನ್ನು ಕಾಯುವ ಭಾರವು ತಮಗೂ ಸೇರಿದೆಯೆಂದೂ ಹೇಳುವರು.

---

# ಭೂತಗಳ ಉಚ್ಚಾಟನೆ ಮಾಡುವ ವೈದ್ಯರು.

ಮಾನವ ಶರೀರವನ್ನು ಸೇರಿಕೊಂಡಿರುವ ಭೂತಗಳ ಉಚ್ಚಾಟನೆ ಮಾಡುವುದಕ್ಕಾಗಿ ಚಿಕಿತ್ಸಾ ಗೃಹವೊಂದನ್ನು ಜಮ್ಮುವಿನ ಮಾಂತ್ರಿಕ ವೈದ್ಯರು ಪ್ರಾರಂಭಿಸಿದ್ದಾರೆ.

ಅನೇಕ ದಿನಗಳ ವರೆಗೆ ರೋಗಿಗಳನ್ನು ಮಣ್ಣಿನ ಪಾತ್ರೆಗಳಲ್ಲಿ ಕೂಡ್ರಿಸಿ ಗರಗರ ತಿರುಗಿಸಲಾಗುವುದು. ವೈದ್ಯರು ಭೂತವು ಶರೀರದಿಂದ ತೊಲಗಿತು ಎಂದು ಸಾರಿದಾಗಲೇ ರೋಗಿಗಳು ಪಾತ್ರೆಯಿಂದ ಹೊರಬರಬಹುದು. ಈ ಉಚ್ಚಾಟದಿಂದ ಭೂತಕ್ಕೆ ಮಾತ್ರ ತೊಂದರೆಯಾಗುವುದಲ್ಲದೆ ಜನರಿಗಾಗುವುದಿಲ್ಲ ಎಂದು ಈ ವೈದ್ಯರು ಹೇಳುತ್ತಾರೆ. ಈ ರೀತಿ ದೆವ್ವವನ್ನು ಬಿಡಿಸಿಕೊಂಡ ಒಬ್ಬ ಹೆಂಗಸು ಕಳೆದ ವಾರ ಸರಕಾರಿ ದವಾಖಾನೆಗೆ ಬಂದಿದ್ದು ದೆವ್ವ ಬಿಡಿಸುವಾಗ ಮೈ ಮೇಲಾದ ೩೨ ಗಾಯಗಳಿಗೆ ಉಪಚಾರ ಮಾಡಿಕೊಳ್ಳುತ್ತಿದ್ದಾಳೆ!

---

# ವಾರ್ತೆಗಳು.

ಪಾಟ್ನಾ ಜಿಲ್ಲೆಯ ಮುದುಕಿಯೊಬ್ಬಳು ಮರಣ ಹೊಂದಿದ ಹತ್ತು ವರ್ಷದ ಹುಡುಗಿಯನ್ನು ಮತ್ತೆ ಬದುಕಿಸಿದ್ದಾಳೆ. ಡಾಕ್ಟರರು ಅಮ್ಲಜನಕ ಮೊದಲಾದವುಗಳನ್ನು ಕೊಟ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಮುದುಕಿಯು ಏನು ಮಾಡದೆ ಹುಡುಗಿಯನ್ನು ಎತ್ತಿ ತಲೆಕೆಳಗೆ ಮಾಡಿ ತೂಗಾಡಿಸಿದಳು. ಕೂಡಲೆ ಜೀವ ತಿರುಗಿ ಬಂತು. ಡಾಕ್ಟರರೆಲ್ಲ ವಿಸ್ಮಯಗೊಂಡರು. ಇದು ಸಂಭವಿಸಿ ೪೮ ಗಂಟೆ ಆಗಿದ್ದು ಆ ಹುಡುಗಿಯು ಈಗ ಆರಾಮವಿರುವಳು.

ಪಂಜಾಬದ ಡಿಷ್ಣಾಮಾಲಾ ಎಂಬ ಗ್ರಾಮದಲ್ಲಿ ಕಡ್ಡಾಯ ಪ್ರಾರ್ಥನೆಯ ಚಳವಳ ಹೂಡಲ್ಪಟ್ಟಿದೆ. ಮಸೀದಿಯಲ್ಲಿ ನಡೆಯುವ ಕಡ್ಡಾಯ ಪ್ರಾರ್ಥನೆಗೆ ಹಾಜರಾಗದವರಿಗೆ [illegible] ರೂಪಾಯಿಯ ದಂಡ ವಿಧಿಸುವ ನಿರ್ಣಯವು ಆಗಿದೆ.

ಇತ್ತೀಚೆಗೆ ಒಂಟಿಯ ಸವಾರರ ವೇಷದಲ್ಲಿ ಪಾಕಿಸ್ತಾನ ದಾಳಿಗಾರರು ಸೂರ್‌ಘರ್-ಬಿಕಾನೇರ್ ಡಿವಿಜನಿನ (ಭಾರತದ ಮೇರೆಯೊಳಗೆ ೩೦ ಮೈಲುಗಳಷ್ಟು ಒಳಗೆ) ಸುಂಗ್ಯ ಗ್ರಾಮದ ಮೇಲೆ ಧಾಳಿ ನಡೆಸಿದ ಪರಿಣಾಮವಾಗಿ ೫ ಜನರು ಹೆಂಗಸರು ಮಡಿದರು, ನಾಲ್ಕು ಮಂದಿ ಇತರರಿಗೆ ತೀವ್ರ ಗಾಯಗಳಾದುವು.

ಹೈದರಾಬಾದ್ ಸರಕಾರವು ನಿರಾಶ್ರಿತರಿಗ ಮತ್ತು ಜಮೀನು ಇಲ್ಲದ ನರಳುವ ಸುಮಾರು ೫೦೦ ಕುಟುಂಬಗಳಿಗೆ ೪೦೦೦ ಎಕ್ರೆಗೆ ಮೀರಿ ಜಮೀನನ್ನು ಉಚಿತವಾಗಿ ಹಂಚಲು ನಿರ್ಣಯಿಸಿದೆ. ಮುಖ್ಯವಾಗಿ ಹರಿಜನರಿಗ ಮತ್ತು ಮಜೂರ ವರ್ಗದ ಕುಟುಂಬಗಳಿಗೆ ಕುಟುಂಬಕ್ಕೆ ೮ ಎಕ್ರೆಯ ಪ್ರಕಾರ ಈ ಜಮೀನು ಹಂಚಲ್ಪಡುವುದು.

ಫ್ಲೋರೆನ್ಸ್‌ದಲ್ಲಿ ಜರಗಲಿರುವ ಸಂಯುಕ್ತ ಜನಾಂಗಗಳ ಶಿಕ್ಷಣ ವಿಜ್ಞಾನ ಮತ್ತು ಸಂಸ್ಕೃತಿಕ ಸಂಸ್ಥೆಯ (Unesco) ಸಭೆಗೆ ಭಾರತದ ಕಡೆಯ ಪ್ರತಿನಿಧಿಯಾಗಿ ಹೋಗುವ ಭಾರತದ ಮೊಸ್ಕೋ ರಾಯಭಾರಿ ಡಾ. ಎಸ್ ರಾಧಾಕೃಷ್ಣನ್‌ರವರಿಗೆ ಮೊಸ್ಕೊಗೆ ಹಿಂತಿರುಗುವ ಕಾಲದಲ್ಲಿ ರೋಮ್ ನಗರದಲ್ಲಿ ಪೋಪ್ ಗುರುಗಳು ಭೇಟಿ ಇತ್ತರು.

ಎಲ್ಲಾ ಹವೆಗಳಲ್ಲಿ ಅನುಕೂಲವಾಗಿ ಹಾರಾಟ ನಡೆಸಬಲ್ಲ ನೂತನ ಜೆಟ್ ಫೈಟರುಗಳನ್ನು ಅಮೇರಿಕನ್ ವಿಮಾನ ದಳದ ಬಗ್ಗೆ ತಯಾರಿಸಲು ಆರ್ಡರ್ ಮಾಡಲಾಗಿದೆ.

---

# ಸೈನಿಕನ ಕರ್ತವ್ಯ.

[ಜನರಲ್ ಕಾರ್ಯಪ್ಪನವರ ಉಪದೇಶ]

ಭಾರತದ ಸೇನಾಪತಿ ಕಾರ್ಯಪ್ಪನವರು ಡೇರಾಡೂನ್ ಸೈನಿಕ ಕಾಲೇಜಿನ ವಿದ್ಯಾರ್ಥಿಗಳನ್ನು ಕುರಿತು ಉಪದೇಶ ಮಾಡುತ್ತ ಈ ಕೆಳಗಿನ ಮಾತುಗಳನ್ನು ಹೇಳಿದ್ದಾರೆ:—

"ಮಾದಕ ದ್ರವ್ಯವನ್ನು ಕುಡಿಯುವುದು ಅಧಿಕಾರಿಯ ಲಕ್ಷಣವೆಂಬ ಮಾತನ್ನು ನಾವು ಮರೆಯಬೇಕು. ಪ್ರತಿ ತಿಂಗಳು ಅಪಾರ ಹಣವನ್ನು ತಂಬಾಕಿನ ಮೇಲೆ ವೆಚ್ಚ ಮಾಡುವುದು ಅಕ್ಷಮ್ಯ ಅಪರಾಧವಾಗಿದೆ. ದುಡ್ಡನ್ನು ಗಳಿಸುವುದು ಎಷ್ಟು ಕಠಿಣ ಕಾರ್ಯವಾಗಿದೆಯೆಂಬುದನ್ನು ನಾವು ಲಕ್ಷಿಸಬೇಕು.

"ಸೈನಿಕರು ತಮ್ಮ ಪ್ರಾರಂಭಿಕ ಶಿಕ್ಷಣವನ್ನು ಮುಗಿಸಿದ ನಂತರ, ಕಾಲೇಜ ಶಿಕ್ಷಣವನ್ನು ಮುಗಿಸಿಕೊಂಡು ನಂತರ ಕನಿಷ್ಠ ಕ್ಯಾಪ್ಟನ್ ಆದ ಮೇಲೆ ಮದುವೆಯಾಗುವುದು ಒಳ್ಳೇದು.

"ವೈಯಕ್ತಿಕ ಉಪಯೋಗಕ್ಕಾಗಿ ಸರಕಾರೀ ವಸ್ತು, ಒಡವೆಗಳನ್ನು ಉಪಯೋಗಿಸುವುದು ಅಯೋಗ್ಯ ಕೆಲಸವಾಗಿದೆ, ಮತ್ತು ಅದು ಒಂದು ಗಂಭೀರ ಸ್ವರೂಪದ ಸೈನಿಕ ವಿಭಾಗದ ಅಪರಾಧವೆಂದು ಗಣಿಸಲ್ಪಡುತ್ತದೆ.

"ಪ್ರತಿಯೊಬ್ಬ ಸೈನಿಕನು ಬಹಳ ಓದಬೇಕು. ನಿಮ್ಮ ಕಾರ್ಯದಲ್ಲಿ ನೀವು ತಜ್ಞರಾಗಿದ್ದರೆ ಮತ್ತು ಕಠಿಣ ಶಿಕ್ಷಣ ಮತ್ತು ಅವ್ಯಾಹತ ಓದುವಿಕೆ ಇವುಗಳನ್ನು ಪೂರೈಸದಿದ್ದರೆ, ನಿಮ್ಮ ಕೈಕೆಳಗಿನ ಜನರ ತಪ್ಪು ಉಪಯೋಗವನ್ನು ಮಾಡುವಿರಲ್ಲದೆ ಅವರನ್ನು ವಿನಾಕಾರಣ ತೋಫಿನ ಬಾಯಿಗೆ ಕೊಡುವಿರಿ.

"ನಿಮ್ಮ ಸಹೋದ್ಯೋಗಿಗಳ ಪರಾಮರಿಕೆಯನ್ನು ನೀವು ಮಾಡಬೇಕು. ನೀವು ಶಿಕ್ಷಣ ರಂಗದಲ್ಲಿ ಅವರೊಡನೆ ಕಠಿಣವಾಗಿ ನಡೆದುಕೊಳ್ಳುತ್ತಿದ್ದರೂ ಉಳಿದ ವೇಳೆಯಲ್ಲಿ ಅವರೊಡನೆ ಭೋಜನಯೆಯು ಸಮರಾಗಿರುವಿರೆಂಬುದನ್ನು ಸಿದ್ಧಮಾಡಿ ತೋರಿಸಿರಿ. ಅಂದರೆ ಮಾತ್ರ ಅವರು ನಿಮ್ಮಲ್ಲಿ ಆದರ ವಿಶ್ವಾಸಗಳುಳ್ಳವರಾಗಿ ನೀವು ಹೇಳಿದ ಕಾರ್ಯಗಳನ್ನು ಶಿರಸಾವಹಿಸಿ ಮಾಡುವರು.

ನಿಮ್ಮ ನಡವಳಿಕೆಯಲ್ಲಿ ನೀವು ಯಾವಾಗಲೂ ಯೋಗ್ಯತೆ ಮತ್ತು ಸಮಂಜಸತನವುಳ್ಳವರಾಗಿರಬೇಕು. ನಾಗರಿಕರೊಡನೆ ನೀವು ಸೌಜನ್ಯಯುಕ್ತರಾಗಿರಬೇಕು. ಜಾತೀಯ ಭಾವನೆ ಮತ್ತು ಪಾಕ್ಷಿಕ ರಾಜಕಾರಣಗಳಲ್ಲಿ ನೀವು ಬೀಳಕೂಡದು."

## ಅನಿಯಂತ್ರಿತ ಜೀವನ

ಸೈನ್ಯ ಮತ್ತು ಸೈನಿಕರು ಎಂದ ಕೂಡಲೆ ನಾಗರಿಕರ ಮೈ 'ಜುಂ' ಎನ್ನುವಂತಹ ಸ್ಥಿತಿಯು ಇದುವರೆಗೆ ಕಂಡು ಬಂದಿದೆ. ಅವರಿದ್ದ ಸ್ಥಳಗಳಲ್ಲಿ ನಾಗರಿಕರಿಗೆ ಅನೇಕ ಬಗೆಯ ತೊಂದರೆಗಳಾದದ್ದುಂಟು. ಯುದ್ಧವು ಸಾಗಿ ಬಂದಾಗ ಮತ್ತು ಇಲ್ಲಿನ ಸೈನಿಕ ಅದಾಲತ (ಮಾರ್ಷಲ್ ಲಾ) ಪ್ರಾರಂಭಿಸಿದ ಸ್ಥಳಗಳಲ್ಲಿ ಆದ ಅನಾಹುತಗಳು ಸರ್ವರಿಗೂ ತಿಳಿದಂಥವಾಗಿವೆ.

ಇಂತಹ ಘಟನೆಗಳಿಗೆ ಸೈನಿಕ ಅಧಿಕಾರಿಗಳು ಏನು ಅನ್ನುತ್ತಾರೆ ಎಂದು ಕೇಳಿದಾಗ "ಹೇಳಿ ಕೇಳಿ ಅವರು ಸೈನಿಕರು. ಅವರು ನಾಗರಿಕ ಜೀವನದ ಬಗ್ಗೆ ಅಜ್ಞಾನಿಗಳಿರುತ್ತಾರೆ, ಅಲ್ಲದೆ ಯಾವಾಗಲೂ ನಿರ್ಬಂಧದಲ್ಲಿ ಇರುವ ಅವರು ಸ್ವೈರಾಚಾರಕ್ಕೆ ಎಳಸುವುದು ಸ್ವಾಭಾವಿಕವಾಗಿದೆ. ಅವರಿದ್ದೆಡೆಗೆ ಹೋಗದೆ ಮತ್ತು ಅವರ ದೃಷ್ಟಿಗೆ ಬೀಳದೆ ಇದ್ದು ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುವುದು ನಾಗರಿಕರದೇ ಕರ್ತವ್ಯವಾಗಿದೆ" ಎಂದು ಸೈನ್ಯಾಧಿಕಾರಿಗಳು ಹಿಂದಕ್ಕೆ ಹೇಳಿದ್ದುಂಟು.

ಅಂದ ಮೇಲೆ ಕೇಳುವದೇನು? ಅದರಿಂದ ಸೈನಿಕರು ಸ್ವೈರಾಚಾರಿಗಳಾಗಿ ವರ್ತಿಸುವದು ಕ್ರಮಪ್ರಾಪ್ತವೇ ಆಗಿದೆಯೆಂದು ಬರೆದು ಕೊಟ್ಟಂತೆಯೇ ಆಗಿಬಿಟ್ಟಿತ್ತು. ಕುಡಿಯುವದು, ಮನಬಂದಂತೆ ಹಣ ವೆಚ್ಚ ಮಾಡುವುದು, ಮಾನವನಿಗೆ ಅವಶ್ಯವಾದ ಸೌಜನ್ಯ ನಯ ಭಯಗಳನ್ನು ತೊರೆದು ವರ್ತಿಸುವದು ಸೈನಿಕರ ಸಹಜ ಗುಣಗಳಾಗಿಬಿಟ್ಟವೆ.

ಈ ಸ್ಥಿತಿಯನ್ನು ಸುಧಾರಿಸಲು ಜನರಲ್ ಕಾರ್ಯಪ್ಪನವರು ಮೇಲಿನ ಉಪದೇಶದ ಮಾತುಗಳನ್ನು ಹೇಳಿದುದು ಬಹು ಪ್ರಶಂಸನೀಯವಾದುದಾಗಿದೆ.

## ಬರಿ ಉಪದೇಶ ಸಾಲದು

ಉಪದೇಶವನ್ನು ಮಾಡುವದು ಸುಧಾರಣೆ ಮಾಡುವ ಒಂದು ದಾರಿಯಾಗಿದೆ. ಆದರೆ ಇಷ್ಟೊಂದು ಕಠಿಣ ಜೀವಿಗಳಾದ ಸೈನಿಕರಿಗೆ ಕೇವಲ ಉಪದೇಶದಿಂದ ಬುದ್ಧಿ ಬಂದೀತೆಂದು ತಿಳಿಯಲು ಬರಲಾರದು. ಉಪದೇಶದಿಂದ ಆಗುವಷ್ಟು ಕಾರ್ಯವು ಆಗಲಿ.

ಅದರ ಜೊತೆಗೆ ಹೆದರಿಕೆಯೂ ಬೇಕು. ಮೊದಲೇ ಸ್ವೈರಾಚಾರ, ಅದಕ್ಕೆ ಉತ್ತೇಜಕವಾಗಿ ಮಾದಕ ದ್ರವ್ಯ ಸೇವನೆ ಮತ್ತು ತಂಬಾಕ ಸೇದುವದು. ಈ ಚಟಗಳಿಗೆ ಬಲವಾದ ನಿರ್ಬಂಧಗಳುಂಟಾಗಬೇಕು. ಪಾನ ಪ್ರತಿಬಂಧವು ಎಲ್ಲೆಡೆಗೆ ಕಾರ್ಯದಲ್ಲಿ ಬರುತ್ತಿರುವಾಗ ಸೈನಿಕರಿಗೆ ಆ ನಿರ್ಬಂಧವಿಲ್ಲ, ಅವರು ಕುಡಿಯಬಹುದು ಎಂಬ ಮಾತು ಇಂದಿನ ವ್ಯವಸ್ಥೆಯಲ್ಲಿ ಕಂಡು ಬರುತ್ತದೆ.

ಈ ಮಾತು ತಿದ್ದಲ್ಪಡಬೇಕು. ಸೈನಿಕರಾದ ಮಾತ್ರಕ್ಕೆ ಅವರು ಕುಡಿಯಬೇಕೆಂದು ಎಲ್ಲಿ ಹೇಳಿದೆ? ಅದಿಲ್ಲದಿದ್ದರೆ ಅವರು ಜೀವಿಸಲಾರರೆ? ಪಾಶ್ಚಾತ್ಯರು ಕೂಡ ಕುಡಿತದ ಅನವಶ್ಯಕತೆಯನ್ನು ಪ್ರತಿಪಾದಿಸುತ್ತಿರುವಾಗ್ಗೆ ನಮ್ಮವರೇ ಆದ ಸೈನಿಕರನ್ನು ಅದರಿಂದ ಪರಿವರ್ತಿಸುವದು ದೊಡ್ಡ ಮಾತೇನೂ ಅಲ್ಲ. ಕಾರ್ಯಪ್ಪನವರು ಹೇಳುವಂತೆ ಕುಡಿಯುವದು ದೊಡ್ಡ ಅಧಿಕಾರಿಯ ಲಕ್ಷಣವೆಂದು ಅನದ್ದು ಕಂಡು ಬರುತ್ತದೆ.

ಆದ್ದರಿಂದ ಕುಡಿತವನ್ನು ಕಾಯಿದೆಯಿಂದ ಪ್ರತಿಬಂಧಿಸುವದೇ ಒಳ್ಳೇದು. ಅಂದರೆ ಮಾತ್ರ ಅದು ಸಾಧ್ಯ. ಸೈನಿಕರಿಗೆ ವಿಶಿಷ್ಟ ಸೌಕರ್ಯವನ್ನು ತೋರಿಸಿ, ಇತರರಿಗೂ ಕುಡಿಯಲು ಆಸ್ಪದ ಕೊಟ್ಟಂತಾಗಿದೆ. ಇದು ಪೂರ್ಣ ನಿಲ್ಲಬೇಕು.

ಧೂಮ್ರಪಾನದ ವಿಷಯದ ಮೇಲೂ ಹಿಡಿತ ಹಾಕಬೇಕು. ಅದು ಮಿತಿ ಮೀರಿ ಬೆಳೆದು ಹೋಗಿದೆ. ಸೈನಿಕರ ಹಣವು ಇಂತಹ ವಿಷ ಆರಾಮಗಳಿಗಾಗಿ ನೀರಿನಂತೆ ವೆಚ್ಚವಾಗಿ, ಅದರ ಮೇಲೆ ಅವಲಂಬಿಸಿದವರನ್ನು ಗೋಳಿಗೆ ಹಾಕಿದ ಉದಾಹರಣೆಗಳು ಬೇಕಾದಷ್ಟಿವೆ.

ದುಡ್ಡಿನ ಮಹತ್ವವು ಸೈನಿಕರಿಗೆ ಇಲ್ಲವೇ ಇಲ್ಲ. ಈ ಮಾತಿನ ಕಡೆಗೆ ಅವರ ಲಕ್ಷ್ಯವನ್ನು ಎಳೆದು ಕಾರ್ಯಪ್ಪನವರು ನೆಟ್ಟಗೆ ಮಾಡಿದ್ದಾರೆ.

## ಮದುವೆ

ಯಾವ ಹೊತ್ತಿಗೆ ಮದುವೆಯಾಗಬೇಕು? ಎಂಬ ಬಗ್ಗೆ ಕಾರ್ಯಪ್ಪನವರು ಮಾರ್ಗದರ್ಶನ ಮಾಡಿದ್ದಾರೆ. ಆದರೆ ಈ ಸೂಚನೆಯು ಕಾರ್ಯಕಾರಿಯಾಗುವದು ಸ್ವಲ್ಪ ಕಠಿಣವಾಗಿ ತೋರುತ್ತದೆ. ಆವಶ್ಯಕ ಶಿಕ್ಷಣ ಮುಗಿಯುವ ವರೆಗೆ ಮದುವೆಯಾಗಕೂಡದೆಂಬುದು ಸರ್ವೇಜನ ಸಮಾಚಾರ. ಆದರೆ ಕ್ಯಾಪ್ಟನ್ ಆಗುವ ವರೆಗೆ ಎಂದರೆ ಎಲ್ಲರೂ ಕ್ಯಾಪ್ಟನ್ ಆಗುತ್ತಾರೆಯೇ? ಏನೇ ಇರಲಿ. ತಡವಾಗಿಯಾದರೂ, ಆದಷ್ಟು ಬೇಗನೆ ಅವನ ಮದುವೆಯನ್ನು ಮಾಡುವ ವ್ಯವಸ್ಥೆಯಾಗುವದು, ಮತ್ತು ತನ್ನ ಹೆಂಡಿರು ಮಕ್ಕಳೊಡನೆ ಇರುವದಕ್ಕೆ ಅವರಿಗೆ ಆಸ್ಪದ ಕೊಡುವದು ಅವಶ್ಯವಿದೆ. ಅದರಿಂದ ಅವರ ಸ್ವೈರಾಚಾರಕ್ಕೆ ಬಹಳ ಮಟ್ಟಿಗೆ ತಡೆ ಬೀಳಬಹುದು.

ಇನ್ನು ಸರಕಾರಿ ವಸ್ತುಗಳನ್ನು ವೈಯಕ್ತಿಕವಾಗಿ ಉಪಯೋಗಿಸಿಕೊಳ್ಳುವದು, ಪುಸ್ತಕಗಳನ್ನು ಓದಿ ತಜ್ಞಾನವನ್ನು ಪಡೆಯಬೇಕೆಂಬುದು, ಸಹೋದ್ಯೋಗಿಗಳ ಪ್ರೇಮ ವಿಶ್ವಾಸಗಳನ್ನು ಪಡೆಯಬೇಕೆಂಬುದು, ಒಳ್ಳೇ ನಡಾವಳಿಯನ್ನು ಕಟ್ಟಿಕೊಳ್ಳಬೇಕೆಂಬುದು ಮತ್ತು ಜಾತೀಯ ಭಾವನೆ, ಪಾಕ್ಷಿಕ ರಾಜಕಾರಣಗಳಿಗೆ ಎಡೆಕೊಡಬಾರದೆಂಬುದು ವೈಯಕ್ತಿಕ ಯೋಗ್ಯತೆಯ ವಿಷಯಕ್ಕೆ ಸಂಬಂಧಪಟ್ಟ ಸಂಗತಿಗಳಾಗಿವೆ.

ಇವೆಲ್ಲವುಗಳ ಬಗ್ಗೆ ಸೈನಿಕನು ದಕ್ಷತೆ ವಹಿಸುವಂಥಹ ವಾತಾವರಣವೇ ನಿರ್ಮಾಣವಾಗಬೇಕು. ಇದುವರೆಗೆ ಈ ವಿಷಯದ ಕಡೆಗೆ ಸೈನಿಕ ವಿಭಾಗವು ಲಕ್ಷ್ಯವನ್ನೇ ಕೊಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಕೇವಲ ಶಾರೀರಿಕ ಬೆಳವಣಿಗೆಗಳ ಕಡೆಗೆ ಲಕ್ಷ್ಯಗೊಟ್ಟ ಬ್ರಿಟಿಷರು ಸೈನ್ಯ ಕಟ್ಟಿದರು. ಮಾನವತೆ, ಸೌಜನ್ಯ, ಸಭ್ಯತನ ಇವುಗಳೂ ಸೈನಿಕರಲ್ಲಿ ಇರಬೇಕಾದ ಗುಣಗಳೆಂಬುದನ್ನು ಅವರು ಗುರುತಿಸಲಿಲ್ಲವೇನೋ!

ಜನರಲ್ ಕಾರ್ಯಪ್ಪನವರು ಈ ಮಾತಿನ ಕಡೆಗೆ ಲಕ್ಷ್ಯ ಹಾಕುತ್ತಿರುವದು ಸಹಜವಾಗಿಯೂ ಸಂತೋಷ ಜನಕ ಸಂಗತಿಯಾಗಿದೆ. ಈ ವಿಷಯವನ್ನು ಇಲ್ಲಿಗೇ ಬಿಡದೆ ಅವರು ಇದರ ಕಡೆಗೆ ಸಂಪೂರ್ಣ ಲಕ್ಷ್ಯಗೊಟ್ಟು ಭಾರತೀಯ ಸೈನ್ಯವೆಂದರೆ ಸೌಜನ್ಯ ಸಚ್ಚಾರಿತ್ರ್ಯಗಳಿಂದ ಕೂಡಿದುದೆಂಬ ಹೆಸರನ್ನು ಪಡೆಯುವಂತೆ ಮಾಡುವರೆಂದು ಆಶಿಸೋಣ. 'ಜೈ ಹಿಂದ್'

---

ಆರೊಂಬತ್ತು ತಿಂಗಳ ಹಿಂದೆ ಪಾಕಿಸ್ತಾನಕ್ಕೆ ಹೋಗಿದ್ದ ಸಿರ ಕ್ರಿಸ್ತರಲ್ಲಿ ೨೦೦ ಜನರು ಈಗಾಗಲೆ ತಮ್ಮ ತಮ್ಮ ಪ್ರಾಂತಗಳಿಗೆ ಮರಳಿ ಬಂದಿರುವರು. ಪಾಕಿಸ್ತಾನದಲ್ಲಿ ನಿರುದ್ಯೋಗತೆ ಹೆಚ್ಚಿದ್ದರಿಂದ ತಮಗೆ ಅಲ್ಲಿ ಕೆಲಸ ದೊರೆಯಲು ಸಾಧ್ಯವಾಗಲಿಲ್ಲ ಎಂದು ಪಾಕಿಸ್ತಾನಕ್ಕೆ ಹೋಗಿ ಹಿಂತಿರುಗಿದ ಧುರೀಣರು ಅಭಿಪ್ರಾಯ...


ENTERTAINING FAMILY & FRIENDS EASY NOW!!

NOODLE OR NOOPUTU (ಸೇವಿಗೆ)

making with this all BRASS easy handling Machine in a Variety of Sizes and Shapes is a boon to House wives.



Rs. 23/8 (Postage extra.)

GOBIND & CHENOPA, 22- CANNING STREET, CALCUTTA.

## ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವಿರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರದ ವ್ಯವಸಾಯದ ಉಪಕರಣಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 2450 ವರೆಗೆ.
2. 12ನೇ ನಂಬರಿನ ಒಂಟಿ ನಳಿಗೆಯ ಕೋವಿ ಕ್ರಯ ರೂ. 218–0–0
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott)
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದು ತರಬೇಕಾಗಿರುವುದು)

52–42

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

# CRESCENT

## FOR PROTECTION AND SERVICE.

It is best to represent and insure with

The CRESCENT Insurance Co., Ltd.,

*H: O: BOMBAY.* [*Established 1919.*

*For particulars write to:*

**Sri B. A. Poovaiah** *Organiser* *Pollibetta, Coorg.* or **The Branch Manager,** *22 B. Mahatma Gandhi Road, Bangalore 1.*

ಸುರಕ್ಷಿತ್ವದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

## ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (1921ರಲ್ಲಿ ಸ್ಥಾಪಿತವಾದದ್ದು.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 55,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಮುಖ್ಯವಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು. [illegible] ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. [illegible] ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಟಿ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ [illegible]

## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. | 27,73,00,000 | ,, |
| ಒಟ್ಟು ನಿಧಿ. ರೂ. | 8,30,00,000 | ,, |
| [illegible] | 10,96,00,000 | ,, |

1,28,000ಕ್ಕೂ ಮೀರಿದ [illegible]

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಬೊಂಬಾಯಿ.

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಭದ್ರತೆ! 17 ವರ್ಷಗಳ ಅನುಭವಶೀಲತೆ!! ಅನುಕೂಲತೆ!!

## ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಚೇರಿ, ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3¼% |
| 12 | ,, | 3½% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮೈಸೂರು.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್, ಮಡಿಕೇರಿ ಶಾಖೆ, ಮಡಿಕೇರಿ.

## ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ದಿಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್ ಹಕೀಮ್ ಅಜಮಲ್‌ಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಚ್ಚಪ್ಪ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG Apply today

*Head Office:* **BANGALORE** 26-9

**K. M. Bopaiah, Esq.,** *Branch Secretary for Mysore & Coorg,* *85 Sultanpet, BANGALORE 2*


ಶ್ರೀ ಪಿ. ಐ. [illegible] 'ಕೊಡಗು' [illegible]

Edited, Printed and Published by P. I. Belliappa at 'Kodagu Press, Mercara, for 'Kodagu Ltd.'

Reg. No. M 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಡಿ. ಐ. ಬೆಳ್ಯಪ್ಪನವರು | [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೯ | ತಾರೀಖು ೧೪-೭-೧೯೫೦ನೇ ಶುಕ್ರವಾರ | ಸಂಚಿಕೆ ೬

## ॥ ಕೊರಿಯಾ ಯುದ್ಧ ॥

ಲೇ:- "ಗುಪ್ತ" ಮಡಿಕೇರಿ

### ಹಿನ್ನೆಲೆ.

ಕೊರಿಯಾವು ೩೦ ಮಿಲಿಯ ಜನಸಂಖ್ಯೆಯಿಂದ ಕೂಡಿದ ಭೂಖಂಡ. ಸುಮಾರು ೩೫ ವರ್ಷಗಳ ವರೆಗೆ ಅಂದರೆ ೧೯೧೦ ರಿಂದ ಕೊರಿಯಾವು ಜಪಾನರ ನಿರಂಕುಶ ಹಿಡಿತದಲ್ಲಿತ್ತು. ಆ ಕಾರಣದಿಂದಾಗಿ ವಿವಿಧ ರೀತಿಯ ಶೋಷಣೆಗಳಿಗೊಳಗಾಗಿ ಅದರ ಪ್ರಗತಿಯು ಸಂತೃಪ್ತ ರೀತಿಯಲ್ಲಿ ಆಗಿಲ್ಲ. ದೇಶವು ಜಪಾನಿಯರ ಆಡಳಿತಕ್ಕೆ ಸಿಲುಕಿರುವ ಜಮೀನ್ದಾರ ಮತ್ತು ಒಂದವಳದಾರರ ಹಿಡಿತದಲ್ಲಿದ್ದು ಸಾಮಾನ್ಯ ಜನಜೀವನವು ಕಷ್ಟಮಯವಾಗಿತ್ತು. ಒಂದೂದೇಶದಲ್ಲಿ ಜಮೀನ್ದಾರರು, ಆಶ್ರಿತರಾಜರ ಮೂಲಕ ದೇಶದ ಶೋಷಣೆಯನ್ನು ಮಾಡುತ್ತಿದ್ದ ಬ್ರಿಟಿಷರಂತೆಯೇ ಜಪಾನರು ಅಲ್ಲಿ ವರ್ತಿಸುತ್ತಿದ್ದರು. ಜಪಾನರು ಕೊರಿಯಾದಲ್ಲಿ ವಿವಿಧ ಪಕ್ಷಗಳನ್ನು ಹುಟ್ಟಿಸಿ ಬ್ರಿಟಿಷರ ಒಡೆದು ಆಳುವ ತತ್ವವನ್ನೇ ಜಾರಿಗೆ ತಂದಿದ್ದರು.

### ಕಳೆದ ಯುದ್ಧ.

ಕಳೆದ ಯುದ್ಧದ ಕಾಲಕ್ಕೆ ಜಪಾನು ರಣರಂಗಕ್ಕಿಳಿದನಂತರ ಕೊರಿಯಾದ ಪ್ರಾಮುಖ್ಯತೆಯು ಬೆಳಕಿಗೆ ಬಂತು. ಪೂರ್ವ ಏಶ್ಯಾದ ಆಯಕಟ್ಟಿನ ಸ್ಥಳದಲ್ಲಿರುವ ಈ ಭೂಭಾಗವು ಸೈನಿಕ ದೃಷ್ಟಿಯಿಂದ ಪ್ರಾಮುಖ್ಯವಾದುದು. ೧೯೪೫ರಲ್ಲಿ ಯುದ್ಧವು ಮಿತ್ರರಿಗೆ ಜಯಪ್ರದವಾಗಿ ಕೊರಿಯಾದಿಂದ ಜಪಾನಿಯರು ಹೊರ ತಳ್ಳಲ್ಪಟ್ಟನಂತರ ಮಿತ್ರ ರಾಷ್ಟ್ರದವರು ಶಾಂತಸಾಗರದಲ್ಲಿರುವ ಈ ಪ್ರದೇಶಕ್ಕಾಗಿ ತಮ್ಮೊಳಗೆ ಗುದ್ದಾಡಲಾರಂಭಿಸಿದರು. ೧೯೪೫ನೇ ಆಗಸ್ಟಿನಲ್ಲಿ ರಷ್ಯಾದ ಕೆಂಪು ಸೇನೆಯು ಉತ್ತರ ಕೊರಿಯವನ್ನು ನುಗ್ಗಿತು. ಅಮೇರಿಕನರು ದಕ್ಷಿಣದಲ್ಲಿ ತಮ್ಮ ಸೇನೆಯನ್ನು ನಡೆಸಿ ದಕ್ಷಿಣಭಾಗವನ್ನು ತಮ್ಮ ವಶವಲ್ಲಿಟ್ಟುಕೊಂಡರು.

ಈ ರೀತಿ ಕೊರಿಯವನ್ನು ರಷ್ಯಾ ಮತ್ತು ಅಮೇರಿಕಾ ಸೇನೆಗಳು ಆಕ್ರಮಿಸಿದ ನಂತರ ಕೊರಿಯಾದ ಆಡಳಿತೆಯ ಬಗ್ಗೆ ಮಾತುಕತೆಗಳು ನಡೆದವು. ಪ್ರಾರಂಭದಲ್ಲಿ ಕೊರಿಯಾವು ರಷ್ಯಾ, ಅಮೇರಿಕಾ, ಬ್ರಿಟನ್ ಮತ್ತು ಚೈನಾ ಈ ನಾಲ್ಕು ಶಕ್ತಿಗಳ ಆಶ್ರಯದಲ್ಲಿರಬೇಕೆಂದೂ, ಸಾಮೂಹಿಕ ಆಡಳಿತೆ ನಡೆಯಬೇಕೆಂದೂ ಒಪ್ಪಲಾಯಿತು. ಆದರೆ ಈ ಒಪ್ಪಂದವು ಕೇವಲ ಕಾಗದದಲ್ಲಿಯೇ ಉಳಿಯಿತು. ೧೯೪೭ರಲ್ಲಿ ಅಮೇರಿಕಾ ಮತ್ತು ರಷ್ಯಾದ ಒಂದು ಸಮ್ಮಿಶ್ರ ಸಮಿತಿಯನ್ನು ನೇಮಿಸಿ ಕೊರಿಯಾಕ್ಕೆ ಒಂದು ತಾತ್ಕಾಲಿಕ ಸರಕಾರದ ಏರ್ಪಾಡು ಮಾಡುವ ಪ್ರಯತ್ನ ನಡೆಯಿತು. ಈ ಸಮಿತಿಯಲ್ಲಿ ಒಮ್ಮತವಿಲ್ಲದ್ದರಿಂದ ಈ ಪ್ರಶ್ನೆ ಬಗೆ ಹರಿಯದೆ ಕೊರಿಯಾವು ಅಧಿಕಾರ ರಾಜಕೀಯದ ಕಣವಾಗಿ ಉಳಿಯಿತು.

### ವಿಭಜನ!

ಕೊರಿಯಾದಲ್ಲಿ ತಮ್ಮ ಶಕ್ತಿ ರಾಜಕೀಯಕ್ಕೆ ತೊಡಗಿದ ಅಮೇರಿಕ ಮತ್ತು ರಷ್ಯಾಗಳೊಳಗೆ ಪರಸ್ಪರ ನಂಬಿಕೆಯು ಇಲ್ಲದ ಕಾರಣ ಉತ್ತರ ಮತ್ತು ದಕ್ಷಿಣ ಕೊರಿಯಾಗಳು ಪ್ರತ್ಯೇಕವಾಗಿ '೩೮ನೇ ಪೇರಲಲ್' ಎಂಬ ಗಡಿ ನಿರ್ಣಯವಾಯಿತು. ಈ ರೀತಿ ರಷ್ಯಾ ಅಮೇರಿಕಾಗಳೊಳಗೆ ಒಪ್ಪಂದವಾಗಿ ಕೊರಿಯಾವು ಎರಡು ಭಾಗವಾಗಿ ವಿಂಗಡಿಸಲ್ಪಟ್ಟಿತು. ಕೊರಿಯಾದ ಈ ಭಾಗಗಳಲ್ಲಿ ಅನೇಕ ರಾಜಕೀಯ ಪಕ್ಷಗಳು ತಲೆ ಎತ್ತಿದವು. ೧೯೪೭ರಲ್ಲಿ ದಕ್ಷಿಣ ಕೊರಿಯಾದಲ್ಲಿ ಅಮೇರಿಕಾವು ತಾತ್ಕಾಲಿಕ ಪ್ರಾಂತೀಯ ಸರಕಾರ ಒಂದನ್ನು ನೇಮಿಸಿ ಸಿಯೋಲನ್ನು ದಕ್ಷಿಣ ಕೊರಿಯಾದ ರಾಜಧಾನಿಯಾಗಿ ಏರ್ಪಡಿಸಿ ಸಾರ್ವತ್ರಿಕ ಚುನಾವಣೆಗೆ ಅನುಮಾಡಿತು. ಈ ಚುನಾವಣೆಯು ನಿಷ್ಪಕ್ಷ ರೀತಿಯಿಂದ ನಡೆಯಲು ಸಂಯುಕ್ತ ರಾಷ್ಟ್ರ ಸಂಘವು ಒಂದು ಪ್ರೇಕ್ಷಕ ಮಂಡಳಿಯನ್ನು ನೇಮಿಸಿತು. ತತ್ಪರಿಣಾಮವಾಗಿ ಡಾ. ಸಿಂಗ್ಮನ್ ರೀ ಅವರ ಮುಂದಾಳ್ತನದಲ್ಲಿ ದ. ಕೊರಿಯ ಸರ್ಕಾರದ ರಚನೆಯಾಯಿತು. ರಷ್ಯಾದವರು ಉ. ಕೊರಿಯಾದಲ್ಲಿ ಪ್ರತ್ಯೇಕ ನೀತಿಯನ್ನು ಅನುಸರಿಸಿದ್ದರು. ಸಂ. ರಾಷ್ಟ್ರದ ಸಮಿತಿಯನ್ನು ಅವರು ತಿರಸ್ಕರಿಸಿದ್ದಲ್ಲದೆ ಉತ್ತರ ಕೊರಿಯವನ್ನು ಪ್ರವೇಶಿಸುವ ಅನುವನ್ನು ಕೊಡಲಿಲ್ಲ. ಅದರ ಬದಲು ದಕ್ಷಿಣ ಕೊರಿಯಾದಲ್ಲಿ ಕ್ರಾಂತಿಕಾರಿ ಪಕ್ಷವೊಂದನ್ನು ಸ್ಥಾಪಿಸಿ ಪ್ರಚಾರ ಪ್ರಾರಂಭಿಸಿದರು. ಸಂಯುಕ್ತ ರಾಷ್ಟ್ರ ಸಂಘಕ್ಕೆ ದ. ಕೊರಿಯಾವು ಸದಸ್ಯನಾಗುವದನ್ನು ವಿರೋಧಿಸಿದರು. ಈ ರೀತಿ ಕೊರಿಯಾವು ಎರಡಾಗಿ ವಿಭಾಗಿಸಲ್ಪಟ್ಟು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಆಡಳಿತ ಕ್ರಮ ನಡೆಯತೊಡಗಿತು.

### ಆಡಳಿತ ಮಾದರಿ.

ಈ ಎರಡು ಭಾಗಗಳ ಆಡಳಿತ ರೀತಿಯನ್ನು ಪರಿಶೀಲಿಸುವದು ಸೂಕ್ತವಾಗಿದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಉತ್ತರ ಮತ್ತು ದಕ್ಷಿಣ ಕೊರಿಯಾದಲ್ಲಿ ಉತ್ತಮವಾವುದೆಂದು ಹೇಳಲು ಬರುವುದಿಲ್ಲ. ಆದರೆ ಉತ್ತರ ಕೊರಿಯಾದವರು ಯಾವುದೇ ರೀತಿಯ ಆಡಳಿತವನ್ನು ಅನುಸರಿಸಿದರೂ ಬಡತನದಲ್ಲಿ ತೊಂದರೆ ಪಡುತ್ತಿರುವ ಜನರ ಹಿತಕ್ಕಾಗಿ ಕಟಿಬದ್ಧರಾಗಿ ದುಡಿಯುತ್ತಿದ್ದಾರೆ. ಸಾಮಾಜಿಕ ನಿಯಮಗಳು, ವಿವಿಧ ನಿಯಂತ್ರಣಗಳು ಜನರ ಹಿತಕ್ಕನುಗುಣ ನಡೆಸಲ್ಪಡುತ್ತವೆ. ಆದರೆ ದಕ್ಷಿಣ ಕೊರಿಯಾದಲ್ಲಿ ಲಾಭಕೋರರ, ಮತ್ತು ಅಂಥ ಆಡಳಿತಗಾರರ ಕೈವಾಡದಲ್ಲಿ ಜನ ಜೀವನವು ಸಂತ್ರಸ್ತಗೊಂಡಿದೆ. ದಕ್ಷಿಣ ಕೊರಿಯಾದ ಪರಿಸ್ಥಿತಿಯನ್ನು ಒಬ್ಬ ಸುಪ್ರಖ್ಯಾತ ಲೇಖಕರು ಈ ರೀತಿ ಚಿತ್ರಿಸುತ್ತಾರೆ:

'ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕೊರಿಯಾದಲ್ಲಿ ಭಯಾನಕ ಆಡಳಿತ ನಡೆಯುತ್ತಿದೆ. ಸುಮಾರು ೪೩,೦೦೦ ಜನ ಪ್ರತಿನಿಧಿಗಳನ್ನು ರಾಜಕೀಯ ಕಾರಣಕ್ಕಾಗಿ ಜೈಲಿಗೆ ಹಾಕಲಾಗಿದೆ. ಅನೇಕರನ್ನು ಚಿತ್ರಹಿಂಸೆಯಿಂದ ಕೊಲ್ಲಲಾಗಿದೆ. ಇನ್ನುಳಿದವರಿಗೆ ಎಚ್ಚರಿಕೆಯಾಗಬೇಕೆಂದು ಸಾರ್ವಜನಿಕವಾಗಿ ಕೊಲೆ ನಡೆಯುತ್ತಿದೆ. ಪ್ರೆಸಿಡೆಂಟ್ ಸಿಂಗ್ಮನ್ ರೀಯವರಿಗೆ ಜನತೆಯ ಬೆಂಬಲವಿಲ್ಲ. ಇತ್ತಲಾಗಿ ನಡೆದ ಚುನಾವಣೆಗಳಲ್ಲಿ ರೀಯವರ ಪ್ರತಿಪಕ್ಷದವರೇ ಆರಿಸಿ ಬಂದಿದ್ದಾರೆ.'

ಈ ದೃಷ್ಟಿಯಿಂದ ದಕ್ಷಿಣ ಕೊರಿಯಾದ ಆಡಳಿತ ಕ್ರಮವು ಕೊಳೆತು ನಾರುತ್ತಿದೆ ಎನ್ನಬಹುದು.

### ಚೈನಾದ ಕಥೆಯ ಪುನಸ್ಸ್ಮರಣ

ಚೈನಾದಲ್ಲಿ ನಡೆದ ಕಥೆಯು ಪುನರಾವೃತ್ತಿ ಇಲ್ಲಿ ನಡೆಯುತ್ತಿದೆಯೆನ್ನಬಹುದು. ಉತ್ತರದಲ್ಲಿ ರಷ್ಯಾದ ಬೆಂಬಲ ಪಡೆದು ಚೈನಾ ಕಮ್ಯೂನಿಷ್ಟ್ ಮುಂದಾಳು ಮಾವೋರವರು ಶಿಸ್ತಿನ ಆಡಳಿತ ನಡೆಸಿ ಇಡೀ ಜನತೆಯನ್ನು ತನ್ನ ವಶಪಡಿಸಿಕೊಂಡ ಕಾರಣ ಯಾವ ರೀತಿ ಅಮೇರಿಕನ್ ಸಹಾಯವಿದ್ದರೂ ಅಯೋಗ್ಯ ಆಡಳಿತದ ಕಾರಣ ಜನ ಬೆಂಬಲವಿಲ್ಲದ್ದ ಚಿಯಾಂಗ್ ಕೈಶೆಕರು ಚೈನಾವನ್ನು ಬಿಟ್ಟೋಡಬೇಕಾಯಿತೋ ಅದೇ ರೀತಿ ಕೊರಿಯಾದ ಕಥೆಯೂ ಆಗುತ್ತಿದೆ. ಉತ್ತರ ಕೊರಿಯನರ ಸೈನ್ಯವು ಯಾವುದೇ ತಡೆಯಿಲ್ಲದೆ ಮುಂದುವರಿಯುತ್ತಿರುವದರ ಗುಟ್ಟು ಇಲ್ಲಿದೆ. ದಕ್ಷಿಣ ಕೊರಿಯಾದ ಜನರು ರೀಯವರ ಹದಗೆಟ್ಟ ಆಡಳಿತದ ಕಾರಣ ಉತ್ತರ ಕೊರಿಯನರ ಧಾಳಿಯನ್ನು ತಮ್ಮ ಬಿಡುಗಡೆಯ ಹೋರಾಟವೆಂದು ಸ್ವಾಗತಿಸಿರುವರು. ಆದ್ದರಿಂದ ಅಮೇರಿಕನರು ರೀಯವರ ಬೆನ್ನು ತಟ್ಟಿ ಅವರ ಪರ ನಿಂತು ಯಾವ ರೀತಿಯ ಯುದ್ಧ ಮಾಡಿದರೂ ಜನ ಬೆಂಬಲವಿಲ್ಲದ ಕಾರಣ, ಗೆಲ್ಲುವದು ಪ್ರಯಾಸದ ಮಾತಾಗಿದೆ.

### ಪ್ರಾರಂಭ.

ಸಂಯುಕ್ತ ರಾಷ್ಟ್ರ ಸಂಘವು ತನ್ನ ಐದನೇ ವರ್ಷೋತ್ಸವವನ್ನು ನಡೆಸಲು ಸಿದ್ಧವಾಗುತ್ತಿತ್ತು. ಅದೇ ಶುಭಮುಹೂರ್ತದಲ್ಲಿ ಉತ್ತರ ಕೊರಿಯಾದವರು ಜೂನ್ ತಾ. ೨೫ರ ಬೆಳಿಗ್ಗೆ ದಕ್ಷಿಣ ಕೊರಿಯಾದವರ ಮೇಲೆ ಯುದ್ಧ ಸಾರಿದರು. ಇದಕ್ಕೆ ಅವರ ಕೊಟ್ಟ ಕಾರಣವೇನೆಂದರೆ ದಕ್ಷಿಣ ಕೊರಿಯಾದವರು ಈ ಮೊದಲೇ ೩೮ ಪೇರಲಲನ್ನು ದಾಟಿ ಕೆಲವೆಡೆ ಉತ್ತರ ಕೊರಿಯನರ ಮೇಲೆ ಧಾಳಿ ನಡೆಸಿದ್ದಾರೆಂಬುದು.

ಕಳೆದ ಜನವರಿ ೧೩ರಂದು ರಷ್ಯಾದ ಪ್ರತಿನಿಧಿಯು ಸಂಯುಕ್ತ ರಾಷ್ಟ್ರ ಸಭೆಯಿಂದ ಹೊರ ನಡೆದು ಆದನಂತರ ಸುಮಾರು ೩೫ ಸಭೆಗಳಲ್ಲಿ ಅಸಹಕಾರ ಪ್ರದರ್ಶಿಸಿ ಕ್ರಮಶಃ ಅಮೇರಿಕಾ ರಷ್ಯಾಗಳ ಮಧ್ಯೆ ಅಂತರವು ದೂರವಾಗುತ್ತಾ ಬರುತ್ತಿರುವದನ್ನು ನೋಡಿ ಎಂದಾದರೊಮ್ಮೆ ಇವುಗಳೊಳಗೆ ಘರ್ಷಣೆ ತಪ್ಪದೆಂದು ಅನೇಕರು ಅಭಿಪ್ರಾಯಪಡುತ್ತಿದ್ದರು. ಈಗ ಪ್ರತ್ಯಕ್ಷರೂಪದಿಂದಲ್ಲದಿದ್ದರೂ ರಷ್ಯಾ ಪ್ರೇರಿತ ಉತ್ತರ ಕೊರಿಯನರೂ, ಅಮೇರಿಕಾ ಪ್ರೇರಿತ ದಕ್ಷಿಣ ಕೊರಿಯನರೂ ರಣರಂಗದಲ್ಲಿ ನಿಂತು ಭೀಕರ ಯುದ್ಧ ಪ್ರಾರಂಭವಾಗಿದೆ.

### ಸಂಯುಕ್ತ ರಾಷ್ಟ್ರಸಂಘ.

ಕೊರಿಯಾದಲ್ಲಿ 'ಅಂತರ್ಯುದ್ಧ' ಪ್ರಾರಂಭವಾದ ಮರುಕ್ಷಣವೇ ಎಂಬಂತೆ ಸಂಯುಕ್ತ ರಾಷ್ಟ್ರಸಂಘದ ಸಭೆಯು ಈ ವಿಚಾರವನ್ನು ವಿವೇಚಿಸಲು ಸೇರಿತು. ಆ ಸಭೆಯಲ್ಲಿ ಉತ್ತರ ಕೊರಿಯಾವು ದಕ್ಷಿಣದ ಮೇಲೆ ಧಾಳಿ ಮಾಡಿದುದನ್ನು ಸಂಯುಕ್ತ ರಾಷ್ಟ್ರ ಸಂಘದ ವಿರುದ್ಧ ವರ್ತನೆಯೆಂದು ಅದನ್ನು ಎಣಿಸಿ ಅವರನ್ನು '೩೮ ಪೇರಲಲ್'ವರೆಗೆ ಹಿಮ್ಮೆಟ್ಟಿಸುವದು ಕರ್ತವ್ಯವೆಂದೂ ನಿರ್ಣಯಮಾಡಿದ್ದು ಇದಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಸೇರಿದವರೆಲ್ಲರೂ ಸಹಾಯ ಮಾಡಬೇಕೆಂದು ಅಪೀಲು ಮಾಡಿತು. ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯವನ್ನು ಜಾರಿಯಲ್ಲಿ ತರಲು ಅಮೇರಿಕಾವು ಜನರಲ್ ಮೆಕಾರ್ಥರಿಗೆ ಸೈನ್ಯಾಧಿಪತ್ಯವಿತ್ತು ಜಪಾನಿನಿಂದ ಕೊರಿಯಾಕ್ಕೆ ಕಳುಹಿಸಿತು. ಅಮೇರಿಕಾವು ವಿಮಾನ, ಹಡಗುಗಳ ಮೂಲಕ ದಕ್ಷಿಣ ಕೊರಿಯಾಕ್ಕೆ ಯುದ್ಧ ಸಾಹಿತ್ಯಗಳನ್ನು ಒದಗಿಸುತ್ತಿದೆ. ಸಂಯುಕ್ತ ರಾಷ್ಟ್ರ ಸಂಘದ ಅಪೀಲಿನಂತೆ ಬ್ರಿಟನ್, ಫ್ರಾನ್ಸ್, ಈ ಮೊದಲಾದ ೪೯ ರಾಷ್ಟ್ರಗಳು ತಮ್ಮ ಕೈಲಾದ ಸಹಾಯ ಮಾಡಲು ಒಪ್ಪಿವೆ.

ಅಮೇರಿಕಾವು ಕಳೆದ ಕೆಲವು ವರ್ಷಗಳಿಂದಲೇ ಇಲ್ಲಿ ತನ್ನ ಸಿದ್ಧತೆಗಳನ್ನು ಮಾಡುತ್ತಿತ್ತೆಂಬುದನ್ನು ಕಾಣಬಹುದು. ಕಳೆದ ವರ್ಷ ಮಾರ್ಷಲ್ ಸಹಾಯದ ಪ್ರಕಾರ ದಕ್ಷಿಣ ಕೊರಿಯಾಕ್ಕೆ ೧೫೦,೦೦೦,೦೦೦ ಡಾಲರುಗಳನ್ನು ಅಮೇರಿಕಾವು ಕಳುಹಿಸಿತ್ತು. ಈ ವರ್ಷ ೧೦೦,೦೦೦,೦೦೦ ಡಾಲರುಗಳನ್ನು ಮಂಜೂರ್ಮಾಡಿದೆ. ದಕ್ಷಿಣ ಕೊರಿಯಾಕ್ಕೆ ೧೧,೦೦೦,೦೦೦ ಡಾಲರ್ ಮೌಲ್ಯದ ಯುದ್ಧ ಸಾಮಗ್ರಿಗಳನ್ನು ಈ ವರ್ಷ ಅಮೇರಿ

(೬ನೇ ಪುಟಕ್ಕೆ ಸಾಗಿದೆ)

# ಭಾರತ ಸಮತಾವಾದಿ ಪಕ್ಷ-

ಸ್ವತಂತ್ರ ಜನತಾರಾಜ್ಯ ಭಾರತದ ಮಹಾ ಚುನಾವಣೆಯು, ವಿಶೇಷ ಪರಿಸ್ಥಿತಿ ಯಾವುದೂ ಉದ್ಭವಿಸದಿದ್ದಲ್ಲಿ 1951 ನೇ ಏಪ್ರಿಲ್-ಮೇ ತಿಂಗಳಲ್ಲಿ ಜರಗುವುದು ಬಹುಮಟ್ಟಿಗೆ ಖಂಡಿತವೆನ್ನಬಹುದು. ಈಗಿನ ಕೊರಿಯಾ ಯುದ್ಧವು ಜಾಗತಿಕ ಯುದ್ಧವಾಗಿ ಬೆಳೆದು ಭಾರತವು ಅದರಲ್ಲಿ ಪ್ರತ್ಯಕ್ಷ ಭಾಗವಹಿಸುವಂತಾಗಿ, ತನ್ನ ಎಲ್ಲಾ ಶಕ್ತಿ ಮತ್ತು ಲಕ್ಷ್ಯವನ್ನು ಆ ಕಡೆಗೆ ಕೇಂದ್ರೀಕರಿಸುವ ಅವಶ್ಯಕತೆಯು ಆ ಕಾಲದಲ್ಲಿ ಬಿದ್ದರೆ, ಅಥವಾ ಅಂತಹ ಇತರ ರೀತಿಯ ವಿಷಮ ವಾತಾವರಣವುಂಟಾದರೆ ಮಾತ್ರ ಆ ಚುನಾವಣೆ ಹಿಂದೆ ಹೋಗಬಹುದು. ಆದರೆ ಹಾಗಾಗುವದೆಂದು ನಿರೀಕ್ಷಿಸಲಡೆಯಿಲ್ಲ. ಭಾವೀ ಮಹಾ ಚುನಾವಣೆಯು ಭಾರತದ ಎಲ್ಲಾ ಪಕ್ಷೀಯರನ್ನೂ ಆಕರ್ಷಿಸಿದಂತಿದೆ. ಕಮ್ಯೂನಿಸ್ಟರು ಅದರ ಪ್ರಯೋಜನವನ್ನು ಪಡೆಕೊಳ್ಳುವ ಆತುರದಿಂದ ತಮ್ಮ ವಿನಾಶಾತ್ಮಕ ಚಟುವಟಿಕೆಗಳನ್ನು ಬಿಟ್ಟುಕೊಟ್ಟು ವಿಧಾಯಕ ಕಾರ್ಯಕ್ರಮಗಳನ್ನು ಸ್ವೀಕರಿಸಿಕೊಳ್ಳುವರೆಂದು ವದಂತಿ ಹರಡಿದೆ; ಕಮ್ಯೂನಿಸ್ಟ್ ಕೇಂದ್ರದಲ್ಲಿ ಆ ಬದಲಾವಣಾ ಚಟುವಟಿಕೆಗಳು ಕೂಡ ಕಂಡುಬರುತ್ತಿವೆ. ಅಂತೆಯೇ ಹಿಂದೂ ಮಹಾಸಭೆಯವರು, ಕಮ್ಯೂನಿಸ್ಟರೇ ಮೊದಲಾದಿಯಾತನ್ನೂ ಬಾಕಿ ಬಿಡದೆ, ಕಾಂಗ್ರೆಸಿನ ವಿರೋಧಿಗಳೆಲ್ಲರನ್ನೂ ಕೂಡಿಕಟ್ಟಿ ಒಂದು ವಿರೋಧಿ ಪಕ್ಷ ರಚಿಸುವ ಪ್ರಯತ್ನದಲ್ಲಿರುವುದೂ ವ್ಯಕ್ತವಾಗಿದೆ. 'ಫಾರ್ವರ್ಡ್ ಬ್ಲಾಕ್' 'ರಿಪಬ್ಲಿಕ್ ಸೋಶಿಯಾಲಿಸ್ಟ್ ಪಕ್ಷ' ಮುಂತಾದ ಇತರ ಕೆಲವು ಪಕ್ಷ ಸಂಗಡಗಳೂ ಚುನಾವಣಾ ಸಂದರ್ಭೋಚಿತ ನವನವೀನ ಚಟುವಟಿಕೆಗಳನ್ನು ಪ್ರದರ್ಶಿಸಹತ್ತಿವೆ.

## ಸಮತಾವಾದಿ ಪಕ್ಷ.

ಆದರೆ ಈ ಕಾಲವಲ್ಲಿ ಕಾಂಗ್ರೆಸಿನನಂತರ ಎರಡನೆಯ ಸ್ಥಾನ ಕೊಡಬಹುದಾದ ಸಮತಾವಾದಿ ಪಕ್ಷದ ಚಟುವಟಿಕೆಗಳು ವಿಶೇಷವಾಗಿ ಗಣಿಸಲ್ಪಡಲು ಬದ್ಧವಿವೆ. ಬಹುತೇಕವಾಗಿ ಕಾಂಗ್ರೆಸಿನ ಧ್ಯೇಯ, ಧೋರಣೆ, ಕಾರ್ಯಕ್ರಮಗಳೇ ಇದ್ದು ಕಾಂಗ್ರೆಸಿನಲ್ಲಿರುವ ಮಂದ ಹೆಜ್ಜೆ, ಶ್ರೀಮಂತರ ವರ್ಚಸ್ಸು ಮತ್ತು ಪಕ್ಷಪಾತತೆ, ಅಲಸ್ಯ, ಅಶಿಸ್ತು, ದಾಕ್ಷಿಣ್ಯಗಳ ವಿರುದ್ಧವಾಗಿ ದಂಗೆಯೆದ್ದಿರುವ ಸಮತಾವಾದಿ ಪಕ್ಷದ ಹೆಜ್ಜೆಗಳ ಕಡೆಗೆ ಜನತೆಯು ನಿಸ್ಸಂಕೋಚವಾಗಿ ಲಕ್ಷ್ಯವೀಯಬೇಕಾಗಿದೆ; ಕಾಂಗ್ರೆಸಿನ ಮತ್ತು ಸಮತಾವಾದಿ ಪಕ್ಷದ ಕಾರ್ಯಕಲಾಪಗಳನ್ನು ತುಲನಾತ್ಮಕ ಬುದ್ಧಿಯಿಂದ ವಿವರಿಸಿ ನೋಡಿಯೇ ತೀರ್ಮಾನಕ್ಕೆ ಬರಬೇಕಾಗಿದೆ. ಚುನಾವಣಾ ಸಿದ್ಧತಾ ಕಾರ್ಯಕಲಾಪಗಳಲ್ಲಿರುವ ಕುಂದುಕೊರತೆಗಳನ್ನು ತೋರಿಸಿಕೊಟ್ಟು ಯೋಗ್ಯ ಸಲಹೆಗಳನ್ನು ಮುಂದಿಡುವುದಕ್ಕಾಗಿ ಸಮತಾವಾದಿ ನಾಯಕ ಜೈಪ್ರಕಾಶರ ಆಹ್ವಾನದಂತೆ ಇದೇ ತಾ. 1 ಮತ್ತು 2 ರಲ್ಲಿ ಬೊಂಬಾಯಿಯಲ್ಲಿ 'ವಿರುದ್ಧ ಪಕ್ಷ'ಗಳ ಸಮ್ಮೇಲನ ನಡೆಯಿತು. ಶುದ್ಧ ಹಾಗೂ ಪೂರ್ಣ ಜನ ಮತವನ್ನು ಧರಿಸಿಯೇ ಮುಂದಿನ ಜನತಾ ಆಡಳಿತೆಯಿರಬೇಕೆಂದು ಬಯಸುವವರಾರೂ ಅದನ್ನಾಕ್ಷೇಪಿಸುವಂತಿಲ್ಲ. ಸಮತಾವಾದಿಗಳು, ಭಾರತದ ಕಮ್ಯೂನಿಸ್ಟರಂತೆ ವಿದೇಶೀ ಗೂಟಕ್ಕೆ ಸಿಕ್ಕಿಕೊಂಡು ರಾಷ್ಟ್ರ ಸ್ವಾತಂತ್ರ್ಯ ಚಳವಳಿಕ್ಕೆ ಒದೆ ಕೊಟ್ಟ ನಿದರ್ಶನವಿಲ್ಲವೇ ಇಲ್ಲ. 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಅವರು ವಹಿಸಿದ್ದ ಭಾಗವು ಅತಿ ಹೆಚ್ಚಿನದು. ಇತ್ತೀಚಿನ ವರೆಗೂ 'ಕಾಂಗ್ರೆಸ್ ಸಮತಾವಾದಿ'ಗಳಾಗಿ ಕಾಂಗ್ರೆಸಿನೊಳಗೇ ಇದ್ದ ಇವರು 'ಕಾರ್ಯವಾಗುತ್ತಿಲ್ಲ; ಕಾಂಗ್ರೆಸಿನಿಂದದು ಆಗುವಂತೆಯೂ ಇಲ್ಲ' ಎಂಬ ನಿಂಶಯದಿಂದ ಹೊರ ಬಂದವರು. ಆ ಮೇಲೆ ಈ ವರೆಗೆ ಜನತಾ ಸಂಘಟನೆಗಾಗಿ ಸಾರ್ವಜನಿಕ ರಂಗದಲ್ಲಿ ದುಡಿಯುವ ಶ್ರಮವನ್ನು ಸಾಕಷ್ಟು ವಹಿಸದೆ, ಕಾಂಗ್ರೆಸನ್ನು ಟೀಕಿಸುವ ಕಡಗೇನೇ ಹೆಚ್ಚಿನ ಲಕ್ಷ್ಯ ಹರಿಸಿದ್ದಾರೆಂಬುದೊಂದನ್ನು ಬಿಟ್ಟರೆ ಸಮತಾವಾದಿ ಪಕ್ಷವನ್ನು ಆರೋಪಿಸಲಾಗುವ ಬೇರೆ ಕಾರಣವಿಲ್ಲ. ಈಗ ಸಮತಾವಾದಿಗಳು ತಮ್ಮ ಹೊಣೆಗಾರಿಕೆಯನ್ನರಿತು ಕಾರ್ಯ ಪ್ರವೃತ್ತರಾದಂತಿದೆ; ಅವರ ಕಾರ್ಯಕಲಾಪಗಳ ಉಚಿತಾನುಚಿತತೆಯನ್ನು ಸಹಾನುಭೂತಿಪೂರ್ವಕ ವಿಮರ್ಶಿಸಿ ನೋಡುವುದು ಜನತೆಯ ಕರ್ತವ್ಯವಿದೆ.

## ಸಮತಾವಾದಿ ಕಾರ್ಯಕ್ರಮ.

ತಮ್ಮ ಭಾವೀ ಕಾರ್ಯಕ್ರಮವೆಂದು ಸಮತಾವಾದಿ ಪಕ್ಷವು ಹದಿನೆಂಟು ವಿಧಿವಿಧಾನಗಳುಳ್ಳ ಘೋಷಣೆಯೊಂದನ್ನು ತಯಾರಿಸಿದೆ. ರಾಷ್ಟ್ರಜೀವನದಲ್ಲಿಯ ಕೊಳೆ ಕಲ್ಮಷಗಳನ್ನು ತೆಗೆದೊಗೆದು ರಾಷ್ಟ್ರೀಯ ಪುನರುಜ್ಜೀವನ ಗೊಳಿಸುವುದೇ ಈ ಘೋಷಣೆಯ ಜೀವಾಳವಾಗಿ ತೋರಿಬಂದಿದೆ. ಚೈತನ್ಯದಾಯಿ ಗಾಂಧಿಜೀ ಈಗ ಇಲ್ಲದಿರುವುದರಿಂದ, ಅವರಿಂದಲೇ ಸ್ಫೂರ್ತಿ ಪಡೆದು ಅವರ ಅಪೇಕ್ಷೆಯಾಗಿದ್ದ ಕಾರ್ಯಗಳನ್ನು ನೆರವೇರಿಸಬೇಕ—ಸಾರ್ವಜನಿಕರ ಆದರಲ್ಲೂ ವಿಶೇಷತಃ ಯುವಕರ, ಕೂಲಿಗಾರ ಸಂಘದ, ಕಿಸಾನ್ ಪಂಚಾಯಿತಗಳ, ಬುದ್ಧಿವಂತರ ಮತ್ತು ಹರಿಜನರ ಸಹಕಾರ ಗಳಿಸಬೇಕು.—ಪ್ರಾಂತೀಯತೆ, ಜಾತೀಯತೆ ಭಾಷಾವಾದ ಮೊದಲಾದ ಒಡಕುದಾಯಿ ಪ್ರಶ್ನೆಗಳನ್ನು ಪ್ರತಿಭಟಿಸಿ ನಿರ್ಮೂಲಿಸಬೇಕು. ಹಳ್ಳಿ ಹಾಗೂ ಪಟ್ಟಣಗಳಲ್ಲಿ ರಾಷ್ಟ್ರೀಯ ಪುನರುಜ್ಜೀವನ ಗಾಂಧೀ ಕೇಂದ್ರಗಳನ್ನು ತೆರೆಯಬೇಕು. 100ಕ್ಕೆ 90ರಷ್ಟು ಬಡವರಿರುವ ಈ ರಾಷ್ಟ್ರದಲ್ಲಿ ಸಂಪತ್ತಿನ ಸಮಾನ ವಿತರಣೆಯಾಗಬೇಕು. ಈಗ ತಿಂಗಳಿಗೆ 20ರೂಪಾಯಿಯಿಂದ ಲಕ್ಷಗಟ್ಟಲೆ ರೂ.ಗಳವರೆಗಿರುವ ಉತ್ಪನ್ನದ ಪ್ರಮಾಣಕ್ಕೆ ಕನಿಷ್ಠ ಹಾಗೂ ಪರಮಾವಧಿ ಮಿತಿಯನ್ನು ಹಾಕಬೇಕು. ಸಂಸ್ಥಾನಿಕರಿಗೆ ಕೊಡುತ್ತಿರುವ ಅತಿರೇಕ ವರ್ಷಾಸನಗಳನ್ನು ನಿಲ್ಲಿಸಿ ಅವರ ಭಂಡಾರಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು. ಭೂಮಿಯ ಮೇಲೆ ಸಾಗುವಳಿದಾರನ ಒಡೆತನವೇ ಸ್ಥಾಪನೆಯಾಗಬೇಕಲ್ಲದೆ ಯಾವ ರೈತನಿಗೂ 12½ ಎಕ್ರೆಗಿಂತ ಕಡಿಮೆ, ಯಾವನೊಬ್ಬನಿಗೂ 30 ಎಕ್ರೆಗಿಂತ ಹೆಚ್ಚಿಗೆ ಭೂಮಿ ಇರಕೂಡದು. ಸಣ್ಣ ಜಮೀನುದಾರರಿಗೆ ಪ್ರತಿಫಲವೇತನ ಪರಿಹಾರ ಹೊರತು, ಯಾವ ಜಮೀನ್ದಾರನಿಗೂ ಜಮೀನ್ದಾರೀ ಬಗ್ಗೆ ಪರಿಹಾರವಿಲ್ಲ. ಬ್ಯಾಂಕು, ವಿಮೆ ಮತ್ತು ಮೂಲ ಉದ್ದಿಮೆಗಳೆಲ್ಲವನ್ನು ರಾಷ್ಟ್ರೀಕರಣಗೊಳಿಸಬೇಕು. ಕೆಲವು ಮುಖ್ಯ ವ್ಯಾಪಾರಗಳನ್ನು ಸರಕಾರವೇ ನಿರ್ವಹಿಸಬೇಕಲ್ಲದೆ ಎಲ್ಲಾ ವಿದೇಶೀ ವ್ಯಾಪಾರಗಳಲ್ಲೂ ಸರಕಾರದ ನಿಯಂತ್ರಣವಿರಬೇಕು. ಕಳ್ಳ ಹಣವನ್ನೆಲ್ಲಾ ಸರಕಾರವು ವಶಪಡಿಸಿಕೊಂಡು ಉದ್ದಿಮೆಗಾರರ ವಂಚನೆಯನ್ನು ನಿರ್ಮೂಲಗೊಳಿಸಲು ಉಗ್ರ ಕಾರ್ಯ ಕೈಕೊಳ್ಳಬೇಕು. ಲಂಚಗುಳಿತನದ ನಿರ್ಮೂಲಕ್ಕಾಗಿ ಚುನಾವಣಾ ಸಮಿತಿಗಳಂತಹ ಸ್ವತಂತ್ರ ಲಂಚ ನಿರೋಧಕ ಸಮಿತಿಗಳನ್ನು ನೇಮಿಸಬೇಕು. ಬ್ರಿಟಿಷ್ ಮಾದರಿಯ ಆಡಳಿತ ಮಾರ್ಗಗಳನ್ನು ಬದಲಾಯಿಸಿ ನಿರ್ದಿಷ್ಟಾವಧಿಯಲ್ಲಿ ನಿಶ್ಚಿತ ಕೆಲಸವಾಗಲೇಬೇಕೆಂಬ ವಿಧಿಯನ್ನು ಉಚ್ಚಾಧಿಕಾರಿಗಳ ಮೇಲೆ ಹೇರಬೇಕು. ಬುದ್ಧಿಯ ಹಾಗೂ ಧರ್ಮಾರ್ಥ ಪ್ರಾಥಮಿಕ ಶಿಕ್ಷಣ್ಯ ವ್ಯವಸಾಯಿಕ ಹಾಗೂ ತಾಂತ್ರಿಕ ಮಾಧ್ಯಮಿಕ ಶಿಕ್ಷಣ; ಉಚ್ಚಾಭ್ಯಾಸ ಹಾಗೂ ಸಂಶೋಧನ ಮಾಡಲಿಚ್ಛಿಸುವವರಿಗೆ ಮಾತ್ರ ವಿಶ್ವವಿದ್ಯಾಲಯ ಶಿಕ್ಷಣ ಇರತಕ್ಕದ್ದು. ಜನಸಂಖ್ಯೆಯನ್ನು ಮಿತಗೊಳಿಸಲು ವಿವಾಹ ವಯಸ್ಸನ್ನು ಏರಿಸುವದಲ್ಲದೆ ಸಂತತಿ ಸಂಯಮನ ಕೇಂದ್ರಗಳನ್ನು ತೆರೆಯಬೇಕು. ರಾಜ್ಯ ಘಟನೆಯಲ್ಲಿ ನಮೂದಿಸಲ್ಪಟ್ಟಿರುವ ಮೂಲಭೂತ ಹಕ್ಕು ಸ್ವಾತಂತ್ರ್ಯಗಳೆಲ್ಲವನ್ನೂ ಜನತೆಯು ಅನುಭವಿಸುತ್ತಿರಬೇಕು. ಯುದ್ಧ, ಅಥವಾ ರಾಷ್ಟ್ರದ ಗಂಡಾಂತರ ಕಾಲಗಳಲ್ಲಿ ಹೊರತು ಬೇರೆಂದೂ ವಿಚಾರಣೆಯಿಲ್ಲದೆ ಯಾರನ್ನೂ ಬಂಧಿಸಬಾರದು. ಮುಂತಾದ ವಿಧಿ ನಿಯಮಗಳೇ ಸಮತಾವಾದಿ ಸಂರೂಪಣೆಯ ಸಾರ.

## ಜೈಪ್ರಕಾಶರ ವರದಿ

ಮೇಲಿನ ಭಾವೀ ಕಾರ್ಯಕ್ರಮ ನಿರೂಪಣೆ ಮತ್ತು ಸಮತಾವಾದಿ ಪಕ್ಷದ ಮುಂದಿನ ವರ್ಷದ ಧ್ಯೇಯ, ಧೋರಣೆಗಳು ಈ ವಾರ ಮದ್ರಾಸಿನಲ್ಲಿ ಸೇರಲಿರುವ ಪಕ್ಷದ ವಾರ್ಷಿಕ ಸಮ್ಮೇಳನದ ಮುಂದೆ ಬಂದು ನಿರ್ಧಾರಗೊಳ್ಳಲಿವೆ. ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀ. ಜೈಪ್ರಕಾಶ್ ನಾರಾಯಣರು ತಯಾರಿಸಿರುವ ವರದಿಯು ಸಮತಾವಾದಿ ಪಕ್ಷದ ಅಂತಃಶುದ್ಧಿ ಮತ್ತು ವರ್ತನೆಯ ದಿಗ್ದರ್ಶನವಾಗಿ ಕೊಡುತ್ತಿದೆ. ಘಟನಾತ್ಮಕವೆನ್ನುವ ಬದಲಿಗೆ ಪ್ರಜಾಸತ್ತಾತ್ಮಕ ವಿಧಾನಗಳಿಗೆ ಸಂಪೂರ್ಣವಾಗಿ ಕಟ್ಟುಬಿದ್ದು, ಮಾನವೀಯ ಅಮೂಲ್ಯತೆಗಳಲ್ಲಿ ನಂಬಿಕೆಯಿಟ್ಟು ವರ್ತಿಸಬೇಕೆಂಬುದೇ ಆ ವರದಿಯ ಸಾರ. 'ಪ್ರಜಾಸತ್ತಾ ಸಮತಾವಾದದ ಗುರಿಯನ್ನು ಒಪ್ಪಿಕೊಂಡು, ಅದರ ಮೇಲೆ ಸಜೀವ ವಿಶ್ವಾಸವನ್ನಿಟ್ಟು ವರ್ತಿಸಿದ ಧೋರಣೆಯು ಪಕ್ಷದ ಸದಸ್ಯರಲ್ಲಿ ಸರ್ವಸಾಮಾನ್ಯ ಮತ್ತು ಸರ್ವವ್ಯಾಪಿಯಾಗಿರುವಂತಿದೆ. ಇಂಥವರ ಬುದ್ಧಿಯನ್ನಷ್ಟೇ ಸಮತಾವಾದವು ಸಂತೈಸುತಿರಬಹುದಲ್ಲದೆ, ತಮ್ಮ ತತ್ವಕ್ಕಾಗಿ ಮನಸ್ಸಿನಿಂದ ಪ್ರಾಣಾರ್ಪಣೆ ಮಾಡಿಸುವಂತಹ ಆವೇಶವನ್ನು ನಿರ್ಮಿಸಲಾರದು. ತತ್ವಗಳನ್ನು ತಂಬಿಸಿಟ್ಟುಕೊಂಡು, ಅವುಗಳ ಮೌಲ್ಯವನ್ನು ಕಡೆಗಣಿಸುವ ಮನೋವೃತ್ತಿಯೇ ಇದಕ್ಕೆ ಹೇತು. ನಾಲಿಗೆತುದಿಯಲ್ಲಿ ಮಾತ್ರ ಪ್ರಜಾಸತ್ತಾ ಸಮಾಜವಾದವನ್ನು ಕಣಿಸುತ್ತಾ ತಾವು ಯಥಾರ್ಥ ಕ್ರಾಂತಿಕಾರರೆಂಬ ಭ್ರಮೆಯಿಂದಿರುವ ಭಂಡರುಗಳು ನಮ್ಮ ಪಕ್ಷ ಬಿಟ್ಟು ಹೋಗತಕ್ಕದ್ದೆಂದು ನೋಟೀಸು ಕೊಡುತ್ತೇನೆ. ಅಂತರ್ಪಕ್ಷೀಯ ಅಧಿಕಾರ ಪಂಗಡಗಳ ಕಲಹಗಳಲ್ಲಿ ಕೂಡ ಸುಳ್ಳು, ವಂಚನೆ, ಕೊಲೆ, ಅಪಹರಣ, ಗೂಂಡೆತನಗಳಂತಹ ಆಚರಣೆಗಳನ್ನಂಗೀಕರಿಸಿರುವ ಕಮ್ಯೂನಿಸ್ಟರ ಕೊಳಕ, ಕಠೋರ ವಿಧಾನಗಳನ್ನು ಉಚ್ಚಾಟಿಸುವ ದೃಢ ನಿರ್ಧಾರ ನಮ್ಮದೆಂದು ಪುನಃ ಹೇಳುತ್ತೇನೆ' ಎಂದು ಜೈಪ್ರಕಾಶರು ತಮ್ಮ ವರದಿಯಲ್ಲಿಂದಿದ್ದಾರೆ. ಘಟನಾತ್ಮಕ ಮತ್ತು ಪ್ರಜಾಸತ್ತಾತ್ಮಕ ವಿಧಾನಗಳೊಳಗಿರುವ ಸೂಕ್ಷ್ಮ ವ್ಯತ್ಯಾಸದ ಅರ್ಥ ನಿರೂಪಣೆ ಮಾಡುತ್ತಾ 'ಪ್ರಜಾಸತ್ತಾತ್ಮಕ ವಿಧಾನಗಳನ್ವಯ ಚುನಾವಣೆಗಳ ಮೂಲಕ ಪಾರ್ಲಿಮೆಂಟನ್ನು ವಶಪಡಿಸಿಕೊಂಡು ಸರಕಾರ ಸ್ಥಾಪಿಸಿಕೊಂಡು ತಡೆಯೇ, ಅಧಿಕಾರ ಪ್ರಾಪ್ತಿಯ ನಂತರ ಕೂಡ ಸಮತಾವಾದಿ ಸರಕಾರದ ಸಹಾಯ ಮತ್ತು ದಿಗ್ದರ್ಶನ ಪಡೆದು ಸ್ವತಃ ಜನತೆಯೇ ಸಾಮಾಜಿಕ ಕ್ರಾಂತಿಯೊಂದನ್ನು ನಡೆಸಬಹುದು ಎಂದು ಸಮತಾವಾದಿ ಪಕ್ಷ ನಂಬುತ್ತದೆ' ಎಂದಿದ್ದಾರೆ. ಪ್ರಜಾಸತ್ತಾ ಕ್ರಮದಲ್ಲಿ ಅಡಕವಾಗಿದ್ದೇ ತಮ್ಮ ಪಕ್ಷದ ಚಟುವಟಿಕೆಗಳು ಸಂಘಟನೆ, ಪ್ರಚಾರ, ಚಳವಳ, ಹೋರಾಟ ಮತ್ತು ವಿಧಾಯಕ ಕಾರ್ಯಗಳೆಂಬ ಪಂಚ ಶಿರಸುಗಳಿಂದಿವೆ, ಎಂದು ಜೈಪ್ರಕಾಶರೆಂದಿದ್ದಾರೆ. 'ಚುನಾವಣೆಯನ್ನು ಗೆಲ್ಲುವುದೊಂದೇ ನಮ್ಮ ಇವೆಲ್ಲಾ ಚಟುವಟಿಕೆಗಳ ಗುರಿಯಾಗಿಲ್ಲ. ಜನಸಾ ಸೇವೆ ಮಾಡಿ, ತಮ್ಮ ಹಕ್ಕು ಮತ್ತು ಹಿತ ಸಂಬಂಧಗಳಿಗಾಗಿ ಹೋರಾಡುವಂತೆ ಮತ್ತವುಗಳನ್ನು ರಕ್ಷಿಸಿಕೊಳ್ಳುವಂತೆ ಜನತೆಯನ್ನು ಸಂಘಟಿಸಗೊಳಿಸಿ, ಕ್ರಮಾನುಗತವಾಗಿ ಸಾಮೂಹಿಕ ಜನತಾ ಪ್ರಯತ್ನದಿಂದ ಒಂದು ಸಮತಾವಾದ ರಾಷ್ಟ್ರ ಮತ್ತು ಸಮತಾವಾದಿ ಸಮಾಜವನ್ನು ನಿರ್ಮಿಸಲು ಜನತೆಯು ಶಕ್ತವಾಗುವಂತೆ ಮಾಡುವದೇ ನಮ್ಮ ಉದ್ದೇಶ' ಎಂದು ಕಾಮ್ರೇಡ್ ಜೈಪ್ರಕಾಶರು ಸ್ಪಷ್ಟಪಡಿಸಿದ್ದಾರೆ. 'ಫಲಾಪೇಕ್ಷೆಯಿಲ್ಲದೆ ಕರ್ಮವಾಚಬೇಕೆಂಬ ಗೀತಾಬೋಧೆಯಂತೆ ನಿರಾಸಕ್ತ ಭಾವನೆಯಿಂದ ಎಲ್ಲರೂ ಕಾರ್ಯತಲ್ಲೀನತೆ ಹೊಂದಬೇಕೆನ್ನುತ್ತೇನೆ. ಜಯಾಪಜಯಗಳು ನಮ್ಮಲ್ಲಿ ಹೃದಯದ ಭದ್ರತೆ ಇಳಿತಗನ್ನು ನಿರ್ಮಿಸದಿರಲಿ. ಚುನಾವಣೆಗಳಲ್ಲಿ ನಮ್ಮ ಪಕ್ಷವು ಅತಿ ಗಣ್ಯತೆ ಗಳಿಸುವುದೆಂಬ ಕುರಿತು ನನಗನುಮಾನವಿಲ್ಲ. ಒಂದೊಮ್ಮೆಗೆ ಈ ಪಕ್ಷವು ಹಲಗೆಯಿಂದಲೇ ಪೂ

ಣ ಉಳಿಗಾಲಕ್ಕಾಗಿ ಕೂಡ ನನ್ನ ಮೇಲೆ [illegible] ಮಾಡಲಾಗದು. ಪಿತೃಶಕ್ತಿ ತನ್ನ ಪಾಲಿಗೆ ಅಂತಹ ಸ್ಥಾನ [illegible] ಪ್ರಬಂಧ ಧ್ಯಾನವಾಗಿದು. ಇದರ [illegible] ದೊರೆತ [illegible]. ಎಂದಲ್ಲರ [illegible] ಕೆಲಸ ಮಾಡುವುದರಿಂದಲೂ, ನನ್ನ ಕರ್ತವ್ಯ ಮಾಡಿದಿರೆಂಬ ಆತ್ಮ ತೃಪ್ತಿಯ ಧನವೊಂದನ್ನೇ ನೀವು ಪ್ರತಿಫಲವಾಗಿ ಬಯಸುವಿರೆಂದೂ ನಾನು ಅತಿ ಸುತ್ತೇನೆ' ಎಂದು ಜೈಪ್ರಕಾಶರು ತನ್ನ ಪಕ್ಷೀಯರನ್ನು ಹುರಿದುಂಬಿಸಿದ್ದಾರೆ.

## ವಿಚಾರಾರ್ಹ ಅಂಶಗಳು.

ತಾವು ಅಧಿಕಾರಕ್ಕೆ ಬಂದರೆ ಸಮತಾವಾದಿ ಪಕ್ಷೀಯರು ಜಾರಿಗೆ ತರಲಿಚ್ಛಿಸುವ ಕಾರ್ಯಕ್ರಮಗಳನ್ನು ಮತ್ತು ಸಮತಾವಾದಿ ಪಕ್ಷಕ್ಕೆ ಕಾರ್ಯಸ್ಫೂರ್ತಿ ಕೊಡುವ ಜೈಪ್ರಕಾಶ್ ನಾರಾಯಣರ ಅಭಿಪ್ರಾಯಗಳನ್ನು ಕಾಂಗ್ರೆಸಿನ ಧ್ಯೇಯ, ಧೋರಣೆ, ಕಾರ್ಯಕ್ರಮಗಳೊಡನೆ ತುಲನೆ ಮಾಡಿಯೇ ತೀರ್ಮಾನಕ್ಕೆ ಬರುವುದು ಸಾರ್ವಜನಿಕರ ಕರ್ತವ್ಯವಿದೆ.

ಕಾಂಗ್ರೆಸಿನ ಕಡೆಗೆ ಎಂತಹ ಅತೃಪ್ತಿಯಿದ್ದರೂ ಅಶಕ್ತಿದಿರಾಗಿ, ಸ್ಪಷ್ಟ ಧ್ಯೇಯ, ಕಾರ್ಯಕ್ರಮಗಳುಳ್ಳ ಸಶಕ್ತ ಪಕ್ಷವೊಂದು ಕಂಡು ಬರುತ್ತಿಲ್ಲವೆಂಬ ಪಶ್ಚಾತ್ತಾಪವು ಜನತೆಯಲ್ಲಿ ಹಬ್ಬಿರುವಾಗ ಮೇಲಿನ ಗುರಿ, ಧೋರಣೆ, ಕಾರ್ಯಕ್ರಮಗಳೊಡನೆ ಸಕಾಲದಲ್ಲಿ ಮುಂದೆ ಬಂದ ಜೈಪ್ರಕಾಶ ನಾರಾಯಣರನ್ನು ಮತ್ತವರ ಸಮತಾವಾದಿ ಪಕ್ಷವನ್ನು ಪ್ರಥಮತಃ ಅಭಿನಂದಿಸಬೇಕಾಗಿದೆ. ನಿರಂಕುಶ, ಏಕತಂತ್ರಾಧಿಕಾರವು ಪ್ರಜಾಸತ್ತೆಯು ಸಾರ್ಥಕತೆಗೆ ಕುಠಾರಪ್ರಾಯವಿರುವುದರಿಂದ ಇಂತಹ ಇದಿರುವಾಗಿಕ್ಕವಿರಬೇಕಾದುದು ಅಗತ್ಯ.

ಭಾವೀ ಆಡಳಿತ ಕಾರ್ಯಕ್ರಮಗಳೆಂಬ ಒಂದು ಗಡಿಯೊಣಿಯ ವಿಧಾನಗಳಾಗಿ ಸಮತಾವಾದಿ ಪಕ್ಷವು ಮುಂದಿಟ್ಟಿರುವ ಸೂತ್ರಗಳು ಪ್ರಗತಿಪರವಿರುವಂತೆಯೇ ಆಚರಣೆಗೆ ಸಾಧ್ಯವಿರುವವುಗಳೆಂಬುದೂ ನಿಜ. ಆದರೆ ಕಾಂಗ್ರೆಸಿನ ಧ್ಯೇಯ, ಧೋರಣೆ ಮತ್ತು ಚುನಾವಣಾ ಘೋಷಣೆಗಳನ್ನು ಇವುಗಳೊಡನೆ ತುಲನೆ ಮಾಡಿ ನೋಡಿದರೆ ಇವೆರಡರೊಳಗೆ ಕಠೋರ—ವ್ಯದು ಪದಪ್ರಯೋಗಗಳ ವ್ಯತ್ಯಾಸವಷ್ಟೇ ಹೊರತು ಅರ್ಥ ವ್ಯತ್ಯಾಸ ಕಾಣುವುದಿಲ್ಲ.

ಜಮೀನ್ದಾರಿಗಳಿಗಾಗಿ ಜಮೀನ್ದಾರರಿಗೆ ಪರಿಹಾರ ಕೊಡಬಾರದು—ಉತ್ಪನ್ನ ಭಾವಮೂಲಕವ್ಯ ಮುಂತಾದವುಗಳಲ್ಲಿ ಕನಿಷ್ಠ ಮತ್ತು ಪರಮಾವಧಿಯ ಮಿತಿ ನಿರ್ಣಯಿಸಿ ಸಮಾನ ಮಟ್ಟ ಸ್ಥಾಪಿಸಬೇಕು:—ಬ್ಯಾಂಕು, ಇನ್ಶೂರೆನ್ಸ್ ಮತ್ತಿತರ ಮೂಲೋದ್ಯಮ ವಹಿವಾಟುಗಳ ರಾಷ್ಟ್ರೀಕರಣವಾಗಬೇಕು. ಹಾಗೂ ಮುಖ್ಯ ಉತ್ಪನ್ನ ವ್ಯಾಪಾರಗಳ ಮೇಲೆ ಸರಕಾರಿ ನಿಯಂತ್ರಣ ಬೇಕಬೇಕು— ಮುಂತಾದ ಸಮತಾವಾದಿ ವಿಧಾನಗಳು ಕಾಂಗ್ರೆಸಿನ ಪ್ರಚಲಿತ ಕಾರ್ಯ ರೀತಿಗಳಿಗಿಂತ ಪ್ರಗತಿಶೀಲ ಮತ್ತು ಪ್ರತ್ಯೇಕವಾಗಿರುವುದು ನಿಜವಾದರೂ [illegible] ನಿಶ್ಚಿತ ಗುರಿ ಕೂಡ ಇದೇ [illegible] ಬ್ದವಾಗಿಯೆಂಬ ದನ್ನು ಮರೆಯಬಾರದು. ಕೆಲವ ಸಣ್ಣ ಪುಟ್ಟ ವ್ಯತ್ಯಾಸಗಳ ಕಾಂಗ್ರೆಸ್ ಸೋಶಿಯಲಿಸ್ಟ್ ಸಮಾಜರಚನೆಗಳಲ್ಲಿ ಕಾಣ ಬಂದರೂ ಅವು ಅಷ್ಟು ಗಣನೀಯವಲ್ಲ.

ಆದ್ದರಿಂದ ಕಾಂಗ್ರೆಸಿನ ಗುರಿಗಿಂತ ಜತ್ತತ್ತನ ವಾದ ಗುರಿಯು ಸಮತಾವಾದಿ ಪಕ್ಷದ್ದೆನ್ನಲು ಬರುವುದಿಲ್ಲ. ತಿರುಳು ಮತ್ತು ಅರ್ಥದಲ್ಲಿನ ಬದಲಾವಣೆಯನ್ನೂ ಮಾಡದೇನೇ ಕಾಂಗ್ರೆಸ್ ಕೂಡ ತನ್ನ ಧ್ಯೇಯ, ಧೋರಣೆ, ಕಾರ್ಯಕ್ರಮಗಳ ಸಂಬಂಧವಾಗಿ ಸಮತಾವಾದಿಗಳಷ್ಟೇ ಉಜ್ವಲವಾದ ಘೋಷಣೆಯನ್ನು ಹೊರಡಿಸಲು ಸಾಧ್ಯವಿದೆ.

ಅಂದ ಮೇಲೆ ಇಲ್ಲೀಗ ಏಳುವ ಪ್ರಶ್ನೆಗಳಷ್ಟೇ ಕಾಂಗ್ರೆಸು ತನ್ನ ಆದರ್ಶವಾಗಿ ಇಟ್ಟುಕೊಂಡುದನ್ನು ಆಚರಣೆಯಲ್ಲಿ ತರಲು ಅಶಕ್ತವಾಗಿದೆ—ಕಾಂಗ್ರೆಸಿನಲ್ಲಿ ಸ್ವಾರ್ಥಿ, ಶ್ರೀಮಂತರು ಹೆಚ್ಚಾಗಿ ಸೇರಿಕೊಂಡುದರಿಂದಲೇ ಹೀಗಾಯಿತೋ ಅಥವಾ ಪರಿಸ್ಥಿತಿಯ ಮೇಲಿಂದಲೋ? ದೊಡ್ಡ ದೊಡ್ಡ ತತ್ವಗಳನ್ನು ಘೋಷಿಸಿದ್ದ ಕಾಂಗ್ರೆಸಿಗರಿಗೆ, ಅವುಗಳ [illegible] ರಿಗೆ ತರುವ ಸಂದರ್ಭ ಒದಗಿಗ ಬಾಗೆ ಮಾಡಲು ಸಾಧ್ಯವಾಗಿಲ್ಲ, ಇದುವರೆ ಮನಸ್ಸು ಬಂದಿಲ್ಲ—ಈಗ ಮಹತ್ವವಾದ ತತ್ವ ಘೋಷಣೆ ಮಾಡುತ್ತಿರುವ ಸಮತಾವಾದಿಗಳಿಗೆ ಅಂತಹ ಸಂದರ್ಭವು ಒದಗಿದರೆ ಇವರಿಗಿದ್ದಕ್ಕೂ [illegible] ಗಳ ರದಿಂಬುದು ನಿಜವೆ?

ಈ ಪ್ರಶ್ನೆಗಳಲ್ಲಿ ಕಾಂಗ್ರೆಸ್ಸಿನವರಲ್ಲಿ ಸಮತಾವಾದಿಗಳ, ನಿಸ್ಸಂದೇಹವಾಗಿ ವಾಸಿಗರೆಂಬ ಭಾವನೆಯಿಲ್ಲ. ಕಾರಣವೆಂದರೆ ಇಗಿನ ಯೋಗ್ಯತೆ ಮೇಲಿನ ಪ್ರಶ್ನೆ. ಎಷ್ಟೇ ಹಾಳಾಗಿದ್ದರೂ ಕಾಂಗ್ರೆಸು ಗತಕಾಲದ ಜನತಾ ಸೇವೆಯಿಂದ ಗಳಿಸಿಕೊಂಡಿರುವ ಯೋಗ್ಯತೆ ಮತ್ತು ವರ್ಚಸ್ಸು ಹೆಚ್ಚಿನದು. ನೆಹರೂ, ವಲ್ಲಭಭಾಯಿಗಳಂತ ಜನತಾ ವಿಶ್ವಾಸಪಾತ್ರ ನಾಯಕರಿಂದಲೇ ದು ಕಾಂಗ್ರೆಸಿನ ಮಹಾನತೆಯುಳ್ಳತೆ. ಈ ದೃಷ್ಟಿಯಿಂದ ಕಾಂಗ್ರೆಸಿನಿದಿರು ಸಮತಾವಾದಿ ಪಕ್ಷವು ತೀರಾ ಕಿರಿದಾಗಿ ತೋರುತ್ತಿದೆ.

ಆದರೆ ಜೈಪ್ರಕಾಶ್, ಮೆಹತಾ, ನರೇಂದ್ರ ದೇವರಂತಹ ಸುಯೋಗ್ಯ ಸಮತಾವಾದಿ ನಾಯಕರು ಸಂದರ್ಭ ದೊರೆತರೆ ತಮ್ಮ ತತ್ವಾನುಗುಣವಾಗಿ ಹೊಣೆ ನಿರ್ವಹಿಸಬಲ್ಲವರೆಂಬುದು ನಿರ್ವಿವಾದ. ಜನತಾರಂಗದಲ್ಲಿ ಪ್ರತ್ಯಕ್ಷ ದುಡಿದು ಇಡೀ ರಾಷ್ಟ್ರದ ಮೂಲೆ ಮೂಲೆಗಳ ಜನರ ಹೃದಯದಲ್ಲೂ ತಮ್ಮ ಧೋರಣೆಯ ಮುದ್ರೆಯೊತ್ತಲು ಸಮತಾವಾದಿಗಳು ಶಕ್ತರಾಗಬೇಕಾದುದೇ ಈ ಮಧ್ಯಾವಧಿಯ ಮೂಲ ಅವಶ್ಯಕತೆ.

'ನವಯುಗ'

---

"ಕೊಡಗು" ಏಜಂಟರು,
ಪೊನ್ನಂಪೇಟೆ,
ಶ್ರೀ. ಪಿ. ಜಿ ಮುದ್ದಪ್ಪಯ್ಯನವರು.

# ವಾರ್ತೆಗಳು.

---

ನಾಸಿಕ ಕಾಂಗ್ರೆಸ್ ಅಧಿವೇಶನದ ಕಲ್ಪಕ ಹಿಂದೀ ಯುವಕ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನವನ್ನು ಕೂಡಿಸಬೇಕೆಂದು ನಿರ್ಧರಿಸಲಾಗಿದೆ. ಯುವಕರ ಸಂಘಟನೆಗಾಗಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದೇ ಈ ಅಧಿವೇಶನದ ಉದ್ದೇಶವಾಗಿದೆ.

ದೇಶದಲ್ಲಿರುವ ಸಕ್ಕರೆಯ ಅಭಾವವನ್ನು ನಿವಾರಿಸಲು ಭಾರತ ಸರಕಾರವು ಒಂದು ಲಕ್ಷ ಟನ್ ಸಕ್ಕರೆಯನ್ನು ವಿದೇಶಗಳಿಂದ ತರಿಸಿಕೊಳ್ಳಲು ಯೋಚಿಸುತ್ತಿದೆಯೆಂದು ತಿಳಿಯುತ್ತದೆ. ಈ ವರ್ಷವೂ ಕಳೆದ ವರ್ಷದಷ್ಟೇ ಅಂದರೆ ೧೮ ಲಕ್ಷ ಟನ್ನಿನಷ್ಟು ಸಕ್ಕರೆ ಉತ್ಪಾದನೆಯಾಗಿದ್ದರೂ ಹಿಂದಿನ ಶಿಲ್ಕು ಏನೂ ಇಲ್ಲದ್ದರಿಂದ ಹೊರಗಿನಿಂದ ತರಿಸಬೇಕಾಗುವ ಅಗತ್ಯ ಮೂಡಿತೆನ್ನಲಾಗಿದೆ.

ಪಾಕಿಸ್ತಾನದ ರಾಜ್ಯಘಟನೆಯ ಕರಡು ಇನ್ನೊಂದು ವರ್ಷದಲ್ಲಿ ಸಿದ್ಧವಾಗಬಹುದೆಂದು ಘಟನಾ ಸಮಿತಿಯ ಕಾರ್ಯದರ್ಶಿಗಳು ಹೇಳಿದ್ದಾರೆ. ಈ ಘಟನೆ ಇಸ್ಲಾಮಿ ತತ್ವಗಳ ಆಧಾರವಾಗಿದ್ದು, ಇದರ ಪ್ರಕಾರ ಇಲ್ಲಿನ ಬೇರೆ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಜ್ಯಘಟನೆಗೂ ಯಾವ ಮೂಲಭೂತ ಭೇದವಿರುವುದಿಲ್ಲೆಂದು ಅವರು ಹೇಳಿದರು.

ಚರ್ಮ ರೋಗಗಳ ಚಿಕಿತ್ಸೆಯಲ್ಲಿ ಹೆಸರುವಾಸಿಯಾದ ನ್ಯೂ ಯಾರ್ಕಿನ ಡಾ. ಎಲ್. ವಿ. ಲಿಯಸ್ ಎಂಬವರು ಜನ್ಮವಂಶ, ಅತಿ ಸ್ನಾನದಿಂದ (ದಿನಕ್ಕೆ ಹಲವು ಬಾರಿ ಚರ್ಮವನ್ನು ತೊಳೆಯುವುದರಿಂದ) ಹಚ್ಚಿನ ಚರ್ಮರೋಗಗಳು ಉಂಟಾಗಲು ಕಾರಣವಾಗುತ್ತದೆ.

ವಿವಿಧ ಬಣ್ಣದ ಲಕೋಟೆಗಳು, ಟಪ್ಪಾಲಾಫೀಸಿನಲ್ಲಿ, ಕಾಗದಗಳನ್ನು ವಿಂಗಡಿಸುವ 'ಸಾರ್ಟರ್' ಕೆಲಸದವರ ದೃಷ್ಟಿಗೆ ಹಾನಿಕರವೆಂದೂ, ಹೆಚ್ಚು ಬಣ್ಣಗಳ ಲಕೋಟೆಗಳನ್ನು ಉಪಯೋಗಿಸಬಾರದೆಂಬ ನಿರ್ಬಂಧವಿರುವುದು ಒಳ್ಳೆಯದೆಂದೂ, ಇಂಗ್ಲೆಂಡಿನ ಓರ್ವ ಪಾರ್ಲಿಮೆಂಟ್ ಸಂಬಂಧದ ಸು ಬಾಸೆಟ್ ಜನ್ನರ್ ರವರು, ಪಾರ್ಲಿಮೆಂಟಿನ ಮುಂದೆ ಸೂಚಿಸಿದರು.

'ಭಾರತದಲ್ಲಿ ಕಣ್ಣಿನ ರೋಗಗಳು, ಇತರ ನಾಗರಿಕ ದೇಶದಲ್ಲಿದ್ದುದಕ್ಕಿಂತ ನೂರು ಪಾಲು ಹೆಚ್ಚು'—ಎಂಬುದಾಗಿ ಸಂಯುಕ್ತ ಪ್ರಾಂತ್ಯದ ಅಂಧತಾ ನಿವಾರಕ ಸಂಘದ ಕಾರ್ಯದರ್ಶಿಗಳಾದ ಡಾ. ರಾಜೇಂದ್ರ ರೋಹತಗಿಯವರು ಹೇಳುವರು. ಅವರನ್ನುವಂತೆ ಇಂದು, ನಮ್ಮ ದೇಶದಲ್ಲಿ ಪೂರ್ಣವಾಗಿ ಅಂಧತ್ವ ಹೊಂದಿದವರು ಸುಮಾರು ಹತ್ತು ಲಕ್ಷ ಇರುವರು; ಅಂಶತಃ ಅಂಧತ್ವದಿರುವವರು ಮೂವತ್ತು ಲಕ್ಷಕ್ಕೆ ಕಡಿಮೆಯಿಲ್ಲ. ಸಂಯುಕ್ತ ಪ್ರಾಂತ್ಯದಲ್ಲಿ ಈ ರೋಗವು ಇತರ ಕಡೆಗಳಿಗಿಂತ ಅಧಿಕ ಪ್ರಮಾಣದಲ್ಲಿದೆ ಅಲ್ಲಿ, ಪ್ರತಿ ಒಂದು ಸಾವಿರ ಜನರಲ್ಲಿ ಒಂಭತ್ತು ಮಂದಿ ಕುರುಡರಾಗಿರುವರು.

ಶಾಂತಿನಿಕೇತನದ ಮಾದರಿಯಲ್ಲಿ ಕಲೆ ಮತ್ತು ಕೈಗಾರಿಕೆಗಳಲ್ಲಿ ಅಭಿರುಚಿಯುಳ್ಳ ಬಡ ವಿದ್ಯಾರ್ಥಿಗಳಿಗೆ ಉಚಿತ ಕಲಾಶಿಕ್ಷಣ ಒದಗಿಸುವ 'ರಾಷ್ಟ್ರೀಯ ಕಲಾ ಕೇಂದ್ರ'ವೊಂದನ್ನು ಮುಂಬಾಯಿಯಲ್ಲಿ ತೆರೆಯಬೇಕೆಂಬ ಸಲಹೆಯು ಮುಂಬಾಯಿಯಲ್ಲಿ ಪ್ರಸಿದ್ಧ ಹಿಂದೀ ಶಿಲ್ಪಿ ಶ್ರೀ ನಾಗೇಶ ಯಾವಲ್ಕರರಿಂದ ಮುಂದಿಡಲ್ಪಟ್ಟಿದೆ. ಭಾರತದಲ್ಲಿ ಇಂತಹ ಯೋಜನೆ ಇದು ಮೊದಲನೆಯದು. ಅದನ್ನು ಕಾರ್ಯರೂಪಕ್ಕೆ ತರಲು ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚ ತಗಲಬಹುದೆನ್ನಲಾಗಿದೆ.

ಸೋವಿಯೆಟ್ ರಷ್ಯವು ಸಂಯುಕ್ತ ಅಮೇರಿಕದಲ್ಲಿದ್ದ ತನ್ನ ಹಲವು ಅಧಿಕಾರಿಗಳನ್ನು ರಷ್ಯಕ್ಕೆ ಹಿಂದೆ ಕರೆಸಿದೆಯೆನ್ನಲಾಗಿದೆ. ಇವರಲ್ಲಿ ವಾಶಿಂಗ್ಟನ್ನಿನಲ್ಲಿರುವ ಸೋವಿಯೇಟ್ ರಾಯಭಾರ ಕಚೇರಿಯ ಅಧಿಕಾರಿಗಳು, ನ್ಯೂಯಾರ್ಕಿನಲ್ಲಿರುವ ಕಾನ್ಸಲೇಟ್ ಅಧಿಕಾರಿಗಳು, [illegible] ರಾಷ್ಟ್ರ ಸಂಘಕ್ಕೆ ಕಳಿಸಿದ ಶಿಷ್ಟ [illegible] ಇವರೆಲ್ಲಾ ಸೇರಿದೆಯಂತೆ. ಈ ಸದ್ಯ ನ್ಯೂಯಾರ್ಕಿನಿಂದ ಹೊರಟಿದ್ದಾಗಿದೆ.

ಮುಂದಿನ ಅಕ್ಟೋಬರ್ ತಾ ೧ರಿಂದ ಭಾರತದಲ್ಲಿ ಈಗಿನ ಪೋಸ್ಟ್ ಕಾರ್ಡಿನ ಸುಮಾರು ಮೂರು ಪಾಲಷ್ಟು ಸ್ಥಳಾವಕಾಶವಿರುವ ದೊಡ್ಡ ಕಾರ್ಡು ಒಂದೂವರೆ ಆಣೆ ದರದಲ್ಲಿ ಚಲಾವಣೆಗೆ ಬರುವುದು. ಈ ವರ್ಷದಲ್ಲಿ ಟಪ್ಪಾಲು ಮತ್ತು ತಂತಿ ವ್ಯವಹಾರದ ಕುರಿತು ತರಬೇಕಾದ ಒಂದು ತಿದ್ದುಪಡಿ ಪಾರ್ಲಿಮೆಂಟಿನಲ್ಲಿ ತೆರೆಯಲ್ಪಡುವುದು. ಭಾರತದ ವ್ಯವಹಾರ ಸಚಿವ ಮಿ. ರಫಿ ಅಹ್ಮದ್ ಕಿದ್ವಾಯ್‌ರವರೇ ಇದನ್ನು ವ್ಯಕ್ತಪಡಿಸಿದುದಾಗಿದೆ.

ತೀರಾ ಹೊಸ ರೀತಿಯ ಹಿಂದೀಯ ನಾಣ್ಯಗಳು ಭಾರತ ಸ್ವಾತಂತ್ರ್ಯದ ತೃತೀಯ ವರ್ಧಂತಿ ಆಗಸ್ಟ್ ೧೫ರಂದು ಚಲಾವಣೆಗೆ ಬರುವವು. ಬೇರೆ ಬೇರೆ ಮೌಲ್ಯದ ಹಲವು ವಿಧದ ಹೊಸ ನಾಣ್ಯಗಳು ಮುಂಬಾಯಿ ಮಿಂಟ್‌ನಲ್ಲಿ ತಯಾರಾಗುತ್ತಿವೆ.

ಭಾರತದ ಯುವಕರ ಮುಂದಾಳು ಹಾಗೂ ಭಾರತ ಸಮಾಜವಾದಿ ಪಕ್ಷದ ಮುಂದಾಳಾದ ಶ್ರೀ. ಯೂಸುಫ್ ಮೆಹೆರಾಲಿಯವರು ನಿಧನರಾದುದು ಭಾರತಕ್ಕೆಂದು ಅಪಾರ ನಷ್ಟ.

ಭಾರತದ ಕಮ್ಯೂನಿಸ್ಟರಲ್ಲಿ ಇತ್ತೀಚೆಗೆ ಎರಡು ತಂಗಡಗಳು ತಲೆ ಎತ್ತಿದ್ದು ಜೋಶಿ ಮತ್ತು ರಣದಿವೆ ಇವರಿಬ್ಬರ ತಂಗಡಗಳಲ್ಲಿ ತೀವ್ರ ಮತಭೇದ ಉದ್ಭವಿಸಿದೆಯಂತೆ. ಒಂದು ತಂಗಡದವರು ಹಿಂಸಾ ಮಾರ್ಗವನ್ನು ಅವಲಂಬಿಸಬೇಕೆಂದು ಹೇಳುತ್ತಿದ್ದು ಇನ್ನೊಂದು ಪಕ್ಷದವರು ಹಿಂಸೆಗೆ ವಿರೋಧವಿದ್ದಾರೆ.

---

# ಕೊಡಗು

**ತಾ. ೧೪-೭-೧೯೫೦ನೇ ಶುಕ್ರವಾರ**

## ದೀರ್ಘಾವಧಿಯ ಸಾಲ

ಸಹಕಾರ ಸಂಘಗಳ ಮೂಲಕ ಈಗ ಕೇವಲ ಹತ್ತು ವರ್ಷಗಳ ಅವಧಿಯ ಸಾಲಗಳು ಮಾತ್ರ ದೊರೆಯುತ್ತವೆ. ಜಮೀನಿನ ವಾರಸು, ಭಾವಿ ರೂಪಿತ ಹಾಗೂ ಬೆಳೆ ಆಸ್ತಿ ತೆಗೆಯುವ ಕಾರಣಗಳಿಗಾಗಿ ದೀರ್ಘ ಅವಧಿಯ ಸಾಲದ ಅವಶ್ಯಕತೆ ಹಲವು ವರ್ಷಗಳಿಂದಲೇ ಕಂಡುಬರುತ್ತಿದ್ದರೂ ಅಂಥಾ ಸಾಲದ ಏರ್ಪಾಡು ಮಾತ್ರ ಸಾಧ್ಯವಾಗಿರಲಿಲ್ಲ. ಈ ಬಗ್ಗೆ ಕೇಂದ್ರ ಸರಕಾರದಿಂದ ೨೫ ವರ್ಷ ಅವಧಿಯ ಕಡಿಮೆ ದರ ಬಡ್ಡಿಯ ೨೫ ಲಕ್ಷ ರೂಪಾಯಿಯ ಸಾಲ ಕೇಳಲಾಗಿತ್ತು. ಕೇಂದ್ರ ಸರಕಾರವು ಮದ್ರಾಸು ಭೂಮಿ ಅಡಮಾನ ಬ್ಯಾಂಕಿನಿಂದ ಇಂಥಾ ಸಾಲ ಸೌಲತ್ತೆಯನ್ನು ಹೊಂದಬಹುದೆಂದು ಸೂಚಿಸಿದ ಮೇರೆ ಮದ್ರಾಸು ಭೂಮಿ ಅಡಮಾನ ಬ್ಯಾಂಕಿನೊಡನೆ ವ್ಯವಹರಿಸಲಾಯಿತು. ಆ ಬ್ಯಾಂಕಿನ ಮುಂಚಿನ ಚಂದ್ರಮೌಳಿ, ರಿಜಿಸ್ಟ್ರಾರ್ ರಾಯನ್ ಮತ್ತು ಭೂಮಿ ಅಡಮಾನ ಬ್ಯಾಂಕಿನ ಪ್ರೆಸಿಡೆಂಟ್ ವೆಂಕಟಸುಬ್ಬಯ್ಯರವರು ಕೊಡಗಿಗೆ ಬಂದಿದ್ದಾಗ ಈ ವಿಚಾರ ವಿವೇಚಿಸಿದರೂ ಕೆಲವು ಕಾರಣಗಳಿಂದ ಪ್ರಯತ್ನವು ಸಫಲವಾಗಲಿಲ್ಲ. ಆದರೂ ಪುನಹ ಈ ಪ್ರಯತ್ನ ನಡೆಯುತ್ತಿದೆ.

ಈ ಮಧ್ಯೆ ಪ್ರಾಂತೀಯ ಬ್ಯಾಂಕಿನ ಕಳೆದ ಮಹಾಸಭೆಯಲ್ಲಿ ದೀರ್ಘಾವಧಿಯ ಸಾಲದ ಶಾಖೆಯನ್ನು ತೆರೆಯಬೇಕೆಂದು ನಿರ್ಣಯಿಸಿದಂತೆ ಇದಕ್ಕಾಗಿ ಈಗ ಬ್ಯಾಂಕಿನಿಂದ ದೊರೆಯುವ ೨ ಲಕ್ಷ ರೂಪಾಯಿಗಳ ಬಂಡವಾಳದಿಂದ ಈ ಶಾಖೆಯನ್ನು ತಾರೀಕು ೯-೭-೫೦ರಿಂದ ತೆರೆಯಲಾಗಿದೆ. ಇದನ್ನು ತೆರೆಯುವಾಗ ಅಧ್ಯಕ್ಷತೆ ವಹಿಸಿದ್ದ ಚೀಫ್ ಕಮಿಷನರು ಬ್ಯಾಂಕಿನ ಕೋರಿಕೆಯಂತೆ ಈ ಶಾಖೆಗೆ ಬೇಕಾದ ಕನಿಷ್ಠ ಸಿಬ್ಬಂದಿಯನ್ನು ಕೊಡಲು ಒಪ್ಪಿರುವರೆಂದು ತಿಳಿದು ಬಂದಿದೆ. ಈ ಬಗ್ಗೆ ಸಾಕಷ್ಟು ಹಣವನ್ನು ಈ ವರ್ಷದ ಸರಕಾರಿ ಬಜೆಟ್ಟಿನಲ್ಲಿ ಇಡಲಾಗಿದೆ. ಸ್ಥಳೀಯ ಸರಕಾರವು ಶೀಘ್ರವಾಗಿ ಈ ಸಿಬ್ಬಂದಿಯನ್ನು ಒದಗಿಸಿಕೊಡುವವೆಂದು ನಂಬಲಾಗಿದೆ.

ಬ್ಯಾಂಕು ಈಗಿರುವ ೨ ಲಕ್ಷ ರೂಪಾಯಿಗಳಿಂದ ತೃಪ್ತಿಸಾಗದೆ ಕೇಂದ್ರದಿಂದ ಯಾ ಮದ್ರಾಸು ಭೂಮಿ ಅಡಮಾನ ಬ್ಯಾಂಕಿನಿಂದ ಹೆಚ್ಚಿನ ಹಣ ಸಹಾಯ ಪಡೆಯಲು ಯತ್ನಿಸಬೇಕು. ಈ ವಿಷಯದಲ್ಲಿ ಸ್ಥಳೀಯ ಸರಕಾರವು ಎಲ್ಲಾ ಸಹಾಯವನ್ನು ನೀಡಿ, ಸಾರ್ವಜನಿಕರು ಸಹಕರಿಸಿ ಈ ರೀತಿ ಎಲ್ಲರಿಂದ ಸಹಾಯವನ್ನು ಪಡೆದು ದೇಶದ ಆರ್ಥಿಕ ಸ್ಥಿತಿಯು ಸುಧಾರಣಾ ಕಾರ್ಯದಲ್ಲಿ ಭಾಗಿಗಳಾಗುವರೆಂದು ಆಶಿಸಲಾಗಿದೆ.

## ಔದ್ಯೋಗಿಕ ಕಲಾ ಶಾಲೆ.

ಕೊಡಗಿನಲ್ಲಿ ಹೈಸ್ಕೂಲುಗಳು ಸಂಖ್ಯೆ ಹೆಚ್ಚಿ, ಇತ್ತಲಾಗಿ ಕಾಲೇಜೂ ಆಗಿ ಅವುಗಳಿಂದ ಹೊರ ಬರುವವರಿಗೆಲ್ಲ ಉದ್ಯೋಗವು ಸುಲಭದಲ್ಲಿ ದೊರಕುವದೆಂದು ಊಹಿಸುವದು ತಪ್ಪು. ಇಂಥಾ ಪರಿಸ್ಥಿತಿಯಲ್ಲಿ ಜೀವನ ಮಾರ್ಗಕ್ಕೆ ತುಂಬಾ ಸಹಾಯಕವಾದ ಔದ್ಯೋಗಿಕ ತರಬೇತಿ ಪರಮ ಪ್ರಯೋಜನಕರವಾದದ್ದೆಂಬುದು ... ಕೊಡಗಿನಲ್ಲಿ ಕೇಂದ್ರ ಸರಕಾರವೇ ಸ್ವಂತ ಖರ್ಚಿನಿಂದ (ಇತರ ಪ್ರಾಂತಗಳಲ್ಲಿ ಆಯಾಯ ಸರಕಾರಗಳು ಬೇಕಾದ ಎಲ್ಲಾ ಖರ್ಚನ್ನು ತಾವೇ ಹೊರಬೇಕಿದೆ) ಒಂದು ಕಲಾಶಾಲೆಯನ್ನು ತೆರೆದಿರುವಾಗ ಅದರ ಪ್ರಯೋಜನವನ್ನು ಪಡೆಯುವದು ನಮ್ಮ ಕರ್ತವ್ಯ. ಈ ಶಾಲೆಯು ಕೇವಲ ೪೦ ವಿದ್ಯಾರ್ಥಿಗಳನ್ನು ತರಬೇತು ಮಾಡುವದು. ಈ ತರಬೇತು ಮುಗಿದನಂತರ ಇವು ಮುಚ್ಚಲ್ಪಡಬಹುದು. ಹಾಗಿರುವದರಿಂದ ಈ ಅಮೂಲ್ಯ ಸಂದರ್ಭವನ್ನು ಕೊಡಗಿನವರು ಉಪಯೋಗಿಸಿಕೊಳ್ಳಬೇಕು.

ಈ ಶಾಲೆಯಲ್ಲಿ ಕಲಿಸಲ್ಪಡುವ ಬಡಗಿ, ಕಬ್ಬಿಣ, ಚಿತ್ರ, ದರ್ಜಿ ಮೊದಲಾದ ಕಲೆಗಳು ಕೊಡಗಿನಲ್ಲಿ ಎಷ್ಟು ಉಪಯುಕ್ತವಾದುವೆಂದು ಬೇರೆ ಹೇಳಬೇಕಿಲ್ಲ. ಮನೆ ಕಟ್ಟುವ, ಮರದ ಸಾಮಾನುಗಳನ್ನು ಮಾಡುವ, ಕಬ್ಬಿಣದ ಸಾಹಿತ್ಯಗಳನ್ನು ತಯಾರಿಸುವ ಉದ್ಯಮದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಯುವಕರು ಈ ತರಬೇತಿಗಳಿಗಾಗಿ ಮುನ್ನುಗ್ಗಿ ಬರಬೇಕು. ಆರ್ಥಿಕ ತೊಂದರೆಯಲ್ಲಿರುವವರಿಗೆ ಮಾಸಿಕ ರೂ. ೨೫ರ ವಿದ್ಯಾರ್ಥಿ ವೇತನವೂ ಕೊಡಲ್ಪಡುವದು. ಈ ಸುಸಂದರ್ಭವನ್ನು ಕಳೆದುಕೊಳ್ಳದೆ ಜೀವನ ಮಾರ್ಗಕ್ಕೆ ಬೇಕಾದ ಸಹಾಯಕ ಹಾಗೂ ಲಾಭದಾಯಕವಾದ ಈ ವೃತ್ತಿಗಳಲ್ಲಿ ತರಬೇತನ್ನು ಪಡೆಯಲು ಯುವಕ ಯುವತಿಯರು ಮುಂದೆ ಬರಬೇಕಾಗಿ ಆಶಿಸುತ್ತೇವೆ.

## ವರ್ತಮಾನ.

ಶ್ರೀ ಗಣೇಶ ಮೋಟಾರು ಸರ್ವಿಸಿನವರಿಗೆ ಕೊಡಲ್ಪಟ್ಟಿದ್ದ ವೀರಾಜಪೇಟೆ ಸೋಮವಾರಪೇಟೆ ಬಸ್ ಲೈಸನ್ಸು ರದ್ದಾದುದರಿಂದ ಇದಕ್ಕೂ ಸಿದ್ದಾಪುರ–ಅಮ್ಮತ್ತಿ–ಕಣ್ಣಂಗಾಲ–ಚೆಂಬೆಬೆಳ್ಳೂರ–ವೀರಾಜಪೇಟೆ ಗೋಣಿಕೊಪ್ಪ–ಪೊನ್ನಂಪೇಟೆ ರಸ್ತೆಗೆ ಒಂದು ಹೊಸ ಲೈಸೆನ್ಸಿಗೂ ಅರ್ಜಿಗಳನ್ನು ಆಹ್ವಾನಿಸುವಂತೆಯೂ, ಅಂಥಾ ಅರ್ಜಿಗಳು ತಾ. ೩೧-೭-೫೦ರೊಳಗೆ ಟ್ರಾನ್ಸ್‌ಪೋರ್ಟ್ ಕಮಿಟಿಯ ಸೆಕ್ರೆಟರಿಗೆ ತಲಪಬೇಕೆಂದೂ ತಿಳಿಸುತ್ತಾರೆ.

ಕಾಫಿ ಕಂಟ್ರೋಲ್ ಇನ್ಸ್‌ಪೆಕ್ಟರಾದ ಶ್ರೀ. ಬಿ. ಎಂ. ತಮ್ಮಯ್ಯನವರನ್ನು ಶನಿವಾರ ಸಂತೆಯಿಂದ ಸೋಮವಾರಪೇಟೆಗೂ, ಶ್ರೀ. ಕೆ. ಎಂ. ಮುತ್ತಣ್ಣನವರನ್ನು ಸೋಮವಾರಪೇಟೆಯಿಂದ ವೀರಾಜಪೇಟೆಗೂ, ಶ್ರೀ ಸಿ. ಎ. ಐಯ್ಯಣ್ಣನವರನ್ನು ವೀರಾಜಪೇಟೆಯಿಂದ ಅಮ್ಮತ್ತಿಗೂ, ಶ್ರೀ ಐ. ಸಿ. ಮೊಣ್ಣಯ್ಯನವರನ್ನು ಅಮ್ಮತ್ತಿಯಿಂದ ಸಾಪ್ಲೋಕ್ಕಿಗೂ, ಶ್ರೀ ಬಿ. ಜಿ. ಕಾರ್ಯಪ್ಪನವರನ್ನು ಸಾಪ್ಲೋಕ್ಕಿನಿಂದ ವೀರಾಜಪೇಟೆಗೂ ಶ್ರೀ. ಬಿ. ಎಸ್. ವೈದ್ಯನಾಥಯ್ಯರವರನ್ನು ಶನಿವಾರಸಂತೆಗೂ ವರ್ಗಾಯಿಸಲಾಗಿದೆ.

ಕಡಂಗ ಮರೂರು ಗ್ರಾಮದ ಶ್ರೀ. ಚೋಳಂಡ ಅಪ್ಪಚ್ಚನವರ ಕೊಟ್ಟಿಗೆಯಲ್ಲಿ ಕೆಂಡೆ ವರ್ಣದ ಒಂದು ಎತ್ತು ಕೆಲವು ದಿನಗಳಿಂದ ಸೇರಿಕೊಂಡಿದೆಯೆಂದೂ ವಾಲೀಕರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ಕೊಡಗಿನ ಚೀಫ್ ಕಮಿಷನರು ತಾ. ೧೦-೭-೫೦ರಲ್ಲಿ ಉತ್ತರ ಮಂಡಲ (ಊಟಿ)ಕ್ಕೆ ಹೋಗಿದ್ದು ಒಂದು ವಾರದಲ್ಲಿ ವಾಪಾಸು ಬರುವರೆಂದು ತಿಳಿಯುತ್ತೇವೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕಿನ ದೀರ್ಘ ಅವಧಿ ಸಾಲದ ಶಾಖೆಯನ್ನು ತಾ. ೯-೭-೫೦ರ ಬೆಳಗ್ಗೆ ೧೧ ಗಂಟೆಗೆ ಕೊಡಗಿನ ಚೀಫ್ ಕಮಿಷನರಾದ ಲೆಫ್ಟಿನೆಂಟ್ ಕರ್ನಲ್ ಡಿ. ಎಸ್. ಬೇತು, ಐ. ಪಿ. ಎಸ್. ಇವರು ತೆರೆದರು.

ತಾ. ೮-೭-೫೦ರಲ್ಲು ಬೇಂಗೂರು ಗ್ರಾಮಸ್ಥರು ಪಟ್ಟಮಾಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ, ಕೆ. ಟಿ. ಪ್ರಿನ್ಸಿಪಾಲರಾದ ... ಮೈದಿನ್ ಬ್ಯಾರಿಯವರು ೩ ತಿಂಗಳೊಳಗೆ ಮಾರಿಗುಡಿ ಹೊಳೆಗೆ ಮೂರು ೧೦,೦೦೦ ರೂಪಾಯಿಯ ಒಂದು ಸೇತುವೆಯನ್ನು ಕಟ್ಟಿ ಪೂರೈಸಿ ಬೇಂಗೂರು ಮತ್ತು ನಾಲ್ಕುನಾಡ ಜನರಿಗೆ ಅನುಕೂಲವಾಗುವಂತೆ ಮಾಡಿದ್ದಕ್ಕಾಗಿ ಅವರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿ ಅಭಿನಂದಿಸಲಾಯಿತು.

## ವನಮಹೋತ್ಸವ.

ತಾ. ೩-೭-೫೦ರಲ್ಲಿ ಕಾರ್ಗುಂದದಲ್ಲಿ 'ವನಮಹೋತ್ಸವ' ದಿನಾಚರಣೆಯನ್ನು ಶ್ರೀ. ಸಿ. ಎಂ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ಜರಗಿಸಿ ಈ ಕೆಳಗಿನ ರೀತಿ ಗಳನ್ನು ಮಂಜೂರು ಮಾಡಲಾಯಿತು.

ಇನ್ನು ಮುಂದಕ್ಕೆ ಸೌದೆಗೆ ಮರ ಕಡಿಯುವವನು ಬದಲಿ ಗಿಡ ನೆಟ್ಟು ಅನಂತರ ಸೌದೆ ಮಾಡಬೇಕು.

ಬೇಲಿಗೆ ಅದರಲ್ಲೂ ಬೆಳ್ಳಾರಿ ತೋಟಕ್ಕೆ ಕಾಡಿನಲ್ಲಿರುವ ಸಣ್ಣ ಸಣ್ಣ ಗಿಡಗಳನ್ನು ಕಡಿಯುವದನ್ನು ಬಿಟ್ಟು ಬೇಲಿಗೆ ರಾತ್ರಿ ರಾಣಿ (King of the day-Night queen) ಉಪಯೋಗಿಸಬೇಕು.

ವ್ಯವಸಾಯ ಇಲಾಖೆಯವರು ಏಪ್ರಿಲ್‌ನೊಳಗೆ ಇಂಡೆಂಟ್ ತರಿಸಿಕೊಂಡು ಮಾವಿನ ಗಿಡ, ಸಂಪಿಗೆ ಗಿಡ, ತೆಂಗಿನ ಸಸಿ ವಗೈರೆ ಗಿಡಗಳನ್ನು ಕ್ರಯಕ್ಕೆ ಹಂಚಬೇಕು.

ಫಾರೆಸ್ಟ್ ಇಲಾಖೆಯವರು ಸಹ ಇದೇ ರೀತಿ ವರ್ತಿಸಿ, ತೇಗದ ಗಿಡ ಮತ್ತು ಬೀಜ, ಹೊನ್ನೆ ಬೀಜ, ಬೀಟೆ ವಗೈರೆ ಗಿಡ ಮತ್ತು ಬೀಜಗಳನ್ನು ಮುಫತ್ತಾಗಿ ಹಂಚಬೇಕು.

ಹೀಗೆ ನೆಟ್ಟ ಗಿಡಗಳನ್ನು ಹಾಳುಮಾಡದ ರೀತಿ ಸ್ಕೂಲ್ ವಿದ್ಯಾರ್ಥಿಗಳಿಗೆ ಉಪಾಧ್ಯಾಯರ ಮೂಲಕ ಬೋಧಿಸುವದಲ್ಲದೆ ಅವರೂ ಸಹ ಸ್ವತಹ ಹೆಚ್ಚು ಮರ ನೆಟ್ಟು ಬೆಳೆಯಿಸುವಂತೆ ಬೋಧಿಸುವದು.

ವನಮಹೋತ್ಸವವನ್ನು ಪ್ರತಿ ವರ್ಷವೂ ಆಚರಿಸಿ ಸದ್ರಿ ದಿನ ಚರಣೆಯನ್ನು ಜಯಪ್ರದವಾಗಿ ಮಾಡಿಕೊಡಬೇಕಾಗಿ ಸರ್ವರಿಗೂ ಅಪೀಲು ಮಾಡಿದ ನಂತರ ಗಿಡಗಳನ್ನು ನೆಟ್ಟು ಸಭೆಯನ್ನು ಬರಕಾಸ್ತು ಮಾಡಲಾಯಿತು.

## ನಿರಾಧಾರದ ಅಪಾದನೆ.

ತಾರೀಕು ೧೮-೪-೫೦ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ತಪ್ಪು ಮಾರ್ಗ' ಎಂಬ ವಾರ್ತೆಯನ್ನು ಕುರಿತು ಚೀಫ್ ಕಮಿಷನರು ನನ್ನನ್ನು ಕರೆಸಿ ಪತ್ರಿಕೆಯನ್ನು ನಿಲ್ಲಿಸುವೆನೆಂದು ಗದರಿಸಿ ಮಾಫಿ ಕೇಳಿಸಿದರೆಂದು ಮೊದಲಾಗಿ 'ಜನ್ಮಭೂಮಿ' ಪತ್ರಿಕೆಯ ತಾ. ೨೮-೬-೫೦ರ ಸಂಚಿಕೆಯಲ್ಲಿ ಒಂದು ವಾರ್ತೆಯು ಪ್ರಕಟವಾಗಿತ್ತು. ಈ ವಾರ್ತೆಯು ಪೂರ್ಣ ನಿರಾಧಾರವಾದುದೆಂದೂ, ಅದರಲ್ಲಿ ಸತ್ಯಾಂಶವಿಲ್ಲವೆಂದೂ ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಪಿ. ಐ. ಬೆಳ್ಯಪ್ಪ.
ಸಂಪಾದಕ.

## ಮಾರಾಟಕ್ಕಿದೆ.

ನನ್ನ ಬಾಪ್ತು ಉತ್ತಮ ಸ್ಥಿತಿಯಲ್ಲಿರುವ ಹೊಲಿಯುವ ಸಿಂಗರ್ ಹ್ಯಾಂಡ್ ಮಿಶನ್ ಮಾರಾಟಕ್ಕಿದೆ. ಬೆಲೆ ರೂ ೨೫೦. ಖಾಯಸ್ ದಾರರು ಈ ಅಡ್ರೆಸಿಗೆ ಬರೆಯಬಹುದು.

ಜೇಮ್ಸ್ ಹನ್ಸ್
ಶಾಂತಗೇರಿ ತೋಟ,
ಸುಂಟಿಕೊಪ್ಪ.

**Coorg Forest Department,**
*Mercara the 30th June, 1950.*

**TENDER NOTICE**

Tenders are invited for the right to fell and remove softwood timber from the timber bearing paisaries touching the western Ghat Forests during the period of five years from 1-9 1950. Tenders should reach the undersigned by 31-7-1950.

For further particulars apply to the Chief Forest Officer, Coorg, Mercara.

N. S. Poonacha,
*For Chief Forest Officer.*

## Land For Sale.

About 200 acres good jungle land suitable for coffee, oranges, pepper and in ravine area, cardamom. Contains about 800 Para rubber trees and 8 acres of young oranges and some Robusta can be included if desired. Crossed by Government Road and with a good water supply. To be sold as a whole or in parcels.

Apply to :— "F"
C/o 'KODAGU' Mercara.

# ಓದುಗರ ಓಲೆಗಳು.

### ನಮ್ಮ ಕಾಲೇಜು.

ಕೊಡಗು ಸರಕಾರಿ ಕಾಲೇಜು ಸೀನಿಯರ್ ಇಂಟರ್ ಮೀಡಿಯೇಟ್ ತರಗತಿಯನ್ನು ತೆರೆದು ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಆದರೆ ಕಾಲೇಜಿನ ವ್ಯವಸ್ಥೆ ತೀರಾ ಅತೃಪ್ತಿಕರವಾಗಿದೆಯೆಂದು ಹೇಳಬೇಕು. ಕಾಲೇಜಿಗೆ ಬೇಕಾದ ಉಪಕರಣಗಳು ಅತೀ ಅವಶ್ಯಕ ಸಲಕರಣೆಗಳನ್ನು ಶೀಘ್ರವಾಗಿ ಸರಕಾರ ಒದಗಿಸಬೇಕು. ಕಾಲೇಜಿನ ಲೆಬರೇಟರಿಗೆ "ಗ್ಯಾಸ್ ಪ್ಲಾಂಟ್" ಬೇಕೆಂದು ಕಳೆದ ವರ್ಷದಿಂದಲೇ ಪ್ರಯತ್ನ ನಡೆದಿದ್ದರೂ ಇನ್ನೂ ಒದಗಿರುವುದಿಲ್ಲ. ಕಾಲೇಜಿಗೆ ಇಲೆಕ್ಟ್ರಿಕ್ ವ್ಯವಸ್ಥೆ ಇಲ್ಲ. ಕಾಲೇಜಿನ ವಾಚನಾಲಯದಲ್ಲಿ ಸಾಕಷ್ಟು ಪುಸ್ತಕಗಳಿಲ್ಲ. 'ಲೈಬ್ರೇರಿಯನ್' ಇಲ್ಲದ ಮೇಲೆ ಪುಸ್ತಕಗಳ ಮಾತೇಕೆ? ಲೈಬ್ರರಿ ಇಟ್ಟ ಕೋಣೆಯು ಅತ್ಯಲ್ಪವಾಗಿದ್ದು ವಾಚನಾಲಯಕ್ಕೆ ಯೋಗ್ಯವಾಗಿಲ್ಲ. ಈ ಎಲ್ಲಾ ನ್ಯೂನತೆಗಳಿಗೆ ಕಳೆದ ವರ್ಷದಂತೆ ವಿದ್ಯಾರ್ಥಿಗಳ ನಿವಾಸಗೃಹದ ವಿಚಾರವು ತೀರಾ ಅತೃಪ್ತಿಕರ. ಸ್ವಹಸ್ತದಿಂದ ಕಳೆದ ವರ್ಷ ಕಟ್ಟಿದ 'ಶೆಡ್'ನಲ್ಲಿ ಕೇವಲ ೩೦ ವಿದ್ಯಾರ್ಥಿಗಳಿಗೆ ಮಾತ್ರ ಸ್ಥಳ ಸಿಗಬಹುದು. ಅಂಥಾ ಕಷ್ಟದಲ್ಲಿ ಅವಶ್ಯವಾದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವದು ಹೇಗೆ? ತಾಂಬೂಲವಿಲ್ಲದ [illegible] ಹೇಳಾಗಿ ಈ ವರ್ಷ ಸೀನಿಯರ್ ತರಗತಿ ವಿದ್ಯಾರ್ಥಿಗಳು ಚೆನ್ನಾಗಿ ಓದುವ ಅವಕಾಶ ಇರುವಾಗ ಕಾಲೇಜಿಯ ಅವಸ್ಥೆ ಶೋಚನೀಯವಾಗುವುದು.

ಇವನ್ನು ಅಧಿಕಾರಿಗಳ ಗಮನಕ್ಕೆ ನ್ಯೂನತೆ ಎನ್ನದಿರಲಾಗುವುದಿಲ್ಲ. ಈ ವರ್ಷ ಸೀನಿಯರ್ ತರಗತಿ ತೆರೆದಿದ್ದುದು ಅಧಿಕಾರಿಗಳಿಗೆ ಗೊತ್ತಿದೆ. ಕಾಲೇಜಿಗೆ ಕುಮಾರ ನಗರದ ವಿದ್ಯಾರ್ಥಿಗಳು ಹೆಚ್ಚಾಗಿ ಬರುವರೆಂದು ಗೊತ್ತಿತ್ತು. ಇವೆಲ್ಲಾ ತಿಳಿದಿದ್ದರೂ ಯಾವುದೇ ನಿರ್ಧಾರದ ವಸತಿ ವಿದ್ಯಾರ್ಥಿಗಳಿಗೆ ಅವಕಾಶ ನೀಡದೆ ತಪ್ಪು ಮಾಡಿರುವ ಅಧಿಕಾರಿಗಳ ತಪ್ಪು ಅಕ್ಷಮ್ಯವಾದದ್ದು. ಈಗ ಕಾಲೇಜು ವಿದ್ಯಾರ್ಥಿಗಳಿಗೆ ಸ್ಥಳ ಒದಗಿಸಲಿಕ್ಕಾಗಿ ಮಹಾರಾಜಾ ಹೈಸ್ಕೂಲಿನ ರೂಮುಗಳನ್ನು ಕೊಡಲಾಗಿದೆ. ಶ್ರೀ. [illegible] ಸ್ಥಾಪಿಸಿದ ಕಾಲೇಜಿನ ಏಳಿಗೆಯಲ್ಲೂ ಮುಂದಿನ ಜನಾಂಗದ ಹಿತದೃಷ್ಟಿಯು ಈ ಪ್ರಾಂತ್ಯದ ಕೆಲಸದ ಬಗ್ಗೆ ಇಷ್ಟು ಅನಾಸಕ್ತಿಯಿಂದ ವರ್ತಿಸುವ ಸರಕಾರವು ಇನ್ನಾವ ಮಾರ್ಗದಲ್ಲಿ ಜನಹಿತ ಸಾಧಿಸೀತು? ಈ ವರೆಗೆ ಜನಭಾರತವೆಂತೆ ಕೂಡಿದ್ದು ಈಗ ಆ ಮನೆಗೆ ಬಾಡಿಗೆ ಹೆಚ್ಚು ಕೊಡುವವರಿಲ್ಲ. ಹೇಗೂ ದಬಾಯಿಸಲಿ ಎಂಬ ಮನೋಭಿಪ್ರಾಯ ಪಟ್ಟು ಸರಕಾರವು ಪ್ರವರ್ತಿಸುತ್ತಿರುವುದು ವಿಷಾದಕರ. ಇನ್ನಾದರೂ ಯೋಗ್ಯ ಮನೆಯನ್ನು ಬಾಡಿಗೆಗೋ ಇತರ ರೀತಿಯಿಂದಲೋ ಒದಗಿಸಿ ವಿದ್ಯಾರ್ಥಿಗಳ ಹಿತಸಾಧನೆ ಮಾಡಬೇಕು.

ಸರಕಾರವು ಈ ರೀತಿಯ ಉಪೇಕ್ಷೆಯ ವರ್ತನೆಯನ್ನು ತಳೆದರೆ ಕಾಲೇಜು ಕಟ್ಟದ ಸಕಾಲದಲ್ಲಿ ಆಗಲಾರದು. ಈಗಾಗಲೇ ಕಾಲೇಜು ಕಟ್ಟಡವಾಗುವುದಿಲ್ಲವೆಂದೂ, ಬಿ. ಎ. ತರಗತಿ ತೆರೆಯಲ್ಪಡುವದಿಲ್ಲವೆಂದೂ ಪ್ರಚಾರ ನಡೆಯುತ್ತಿದೆ. ಸರಕಾರಕ್ಕೆ ದಕ್ಷಿಣದ ಕಡೆ ಇಲ್ಲದಿರುವಾಗ ಕಾರ್ಯವನ್ನು ಯೋಗ್ಯ ರೀತಿ ಮಾಡಲು ಹೇಗೆ ಸಾಧ್ಯ? ಈ ರೀತಿಯ ಆಲಸ್ಯ ಉಪೇಕ್ಷೆಯಿಂದ ಜನತೆಯ ಅಸಂತೋಷವು ಸರಕಾರಕ್ಕೆ ತಪ್ಪುವದೆಂದು ಎಚ್ಚರಿಸಬೇಕಾಗಿದೆ.

"ವಿದ್ಯಾಪ್ರೇಮಿ"

### ವನಮಹೋತ್ಸವವೇ?

ಕೊಡಗಿನಲ್ಲೂ ವನಮಹೋತ್ಸವ ನಡೆಯಿತು. ಹಲವೆಡೆ ಯೋಗ್ಯ ರೀತಿಯಿಂದ ಇದು ನಡೆದಿರಬಹುದು. ಆದರೆ ನನಗೆ ತಿಳಿದುಬಂದ ಕೆಲವು ಕಡೆ ಇದು ಸರಿಯಾಗಿ ನಡೆಯಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಗ್ರಾಮ ಗ್ರಾಮಗಳಿಗೆ ನೆಡಲು ಸಸಿಗಳು ಸರಿಯಾಗಿ ಸರಬರಾಯಿಯಾಗಲಿಲ್ಲ. ವ್ಯವಸಾಯ ಇಲಾಖೆಯವರು ಕೆಲವು ಗ್ರಾಮಗಳಿಗೆ ಲಂಟಾನಕ್ಕಿಂಥಲೂ ಹಾನಿಕರವಾದ ಕೆಲವು ಕಾಡುಗಿಡಗಳನ್ನು ಸರಬರಾಯಿ ಮಾಡಿದ್ದರಂತೆ! ಅಂಥಾ ಗಿಡಗಳನ್ನು ಗ್ರಾಮಸ್ಥರು ಹಿಂದಕ್ಕೆ ಕಳುಹಿಸಿದ ನಿದರ್ಶನಗಳಿವೆಯಂತೆ. ಇದು ನಿಜವಾದರೆ ವ್ಯವಸಾಯ ಇಲಾಖೆ ದಕ್ಷತೆಯಿಂದ ವರ್ತಿಸಿದೆಯೆಂದು ಹೇಳಲು ಬರುವದಿಲ್ಲ. ಹಲವು ಕಡೆ ಕಾಡಿನಲ್ಲಿ ಬೆಳೆಯುತ್ತಿದ್ದ ಗಿಡಗಳನ್ನು ಕಿತ್ತು ರಸ್ತೆಯ ಪಕ್ಕಗಳಲ್ಲಿ, ನಾಡು ಕಚೇರಿ ಆವರಣದಲ್ಲಿ, ಇಲ್ಲವೇ ಬೇರೆ ಮೈದಾನಗಳಲ್ಲಿ ನೆಟ್ಟುದರಿಂದ ಯಾವ ಫಲ ಬಂದಂತಾಯಿತು? ಕಾಡಿನಲ್ಲಿ ಚೆನ್ನಾಗಿ ಬೆಳೆಯಬಹುದಾಗಿದ್ದ ಗಿಡಗಳನ್ನು ಸ್ಥಳಾಂತರಿಸಿ ಈ ರೀತಿಯ ವನಮಹೋತ್ಸವದಿಂದ ಅರಣ್ಯಸಂಪತ್ತು ಬೆಳೆಯುವದೆಂದು ಯಾರು ಹೇಳಬಲ್ಲರು? ಕಾಡಿಯ ಲಕ್ಷ್ಮೀ ನೀರಿಗೆ ಅಭಾವವಿರುವ ಗ್ರಾಮಗಳಲ್ಲಿ ನೆಟ್ಟ ಗಿಡಗಳು ಒಣಗದೆ ಉಳಿಯುವವೇ? ಅವುಗಳ ರಕ್ಷಣೆಗೆ ಯಾವ ಪ್ರಯತ್ನ ಮಾಡಲಾಗುವದು?

'ಜನಪ್ರೇಮಿ.'

### ಸರಕಾರವಲ್ಲಿ.

ಕೊಡಗಿನಲ್ಲಿ ಹಿಡಿತವಿಲ್ಲದೆ ನಡೆಯುತ್ತಿರುವ ಮರವ್ಯಾಪಾರ ದೇಶದ ಹಿತದೃಷ್ಟಿಯಿಂದ ಎಷ್ಟು ಅಡಗಿಗೆ ಕಡಿಮೆ ಇರುವ ಯಾವುದೇ ಮರವನ್ನು ಕತ್ತರಿಸಿ ಮಾರಬಾರದೆಂದು ಸರಕಾರವು ನಿರ್ಬಂಧ ಹಾಕಿರುವುದಾಗಿ ತಿಳಿದುಬಂದಿದೆ. ಎಲ್ಲಾ ಮರಗಳಿಗೂ ಎಂಟು ಅಡಿ ಎಂಬ ಒಂದೇ ಸೂತ್ರ ಪ್ರಯೋಗ ಸರಿಯಲ್ಲ. ಕೆಲವು ವಿಧದ ಮರಗಳು ಎಂಟು ಅಡಿಯಷ್ಟು ಬೆಳೆಯುವದೇ ಇಲ್ಲ. ಹಾಗಿರುವಾಗ ಅವುಗಳನ್ನು ನಾಟಾಮಾಡಲೂ ಕತ್ತರಿಸಲೂ ಕಾದು ಕುಳಿತಿರಬೇಕಾಗುವದೇ? ಆದ್ದರಿಂದ ವಿವಿಧ ಮರಗಳ ಬೆಳೆಯುವಿಕೆಯ ದೃಷ್ಟಿಯಿಂದ ಅಳತೆ ನಿಶ್ಚಯಿಸಬೇಕಾದುದು ಅಗತ್ಯ.

ಇದೊಂದು ಆಜ್ಞೆ ಹೊರಡಿಸಿದುದರಿಂದ ಕೊಡಗಿನ ಕಾಡುಗಳ ರಕ್ಷಣೆ ಮಾಡಿದಂತಾಯಿತೆಂದು ತೃಪ್ತಿಪಡುವದು ಹಾಸ್ಯಕರ. ಕೊಡಗಿನಲ್ಲಿ ಅರಣ್ಯ ಸಂಪತ್ತಿನ ಹಾನಿ ಮರಮಾರಾಟಕ್ಕಿಂಥಲೂ, ತೋಟದ ಬೇಲಿಗೆ ಚಪ್ಪರ ಮುಂತಾದ ಉಪಯೋಗಕ್ಕೆ ಉತ್ತಮ ಮರದ ಸಸಿಗಳನ್ನು ಕತ್ತರಿಸುವದರಿಂದ ಆಗುತ್ತಿದೆ. ಸರಕಾರವು ಇದನ್ನು ತಡೆಯಲು ವಿಧಾಯಕವಾದ ವಿಚಾರವನ್ನು ಕೈಗೊಳ್ಳಬೇಕು. ಗದ್ದೆಗಳಲ್ಲಿ ಬೆಳೆ ತೋಟದ ಸಮಯದಲ್ಲಿ ಕೊಡಗಿನಲ್ಲಿ ಸಹಸ್ರಾರು ಗಿಡಗಳು ನಾಶವಾಗುತ್ತಿವೆ. ಸರಕಾರವು ಇವುಗಳನ್ನು ರಕ್ಷಿಸಲು ಪ್ರಯತ್ನಿಸುವದೇ? ಈ ರೀತಿ ಕಾಡನ್ನು ಲೂಟಿಮಾಡುವವರನ್ನು ಸರಕಾರ ಶಿಕ್ಷಿಸಿದರೂ ಅನ್ಯಾಯವಾಗಲಾರದು.

ಕೆ ಚಂಗಪ್ಪ.

### ಮುಂಬರುವ ಚುನಾವಣೆ.

ಬರುವ ಮೇ-ಜೂನ್ ತಿಂಗಳುಗಳಲ್ಲಿ ನಡೆಯಬಹುದಾದ ಚುನಾವಣೆಗಳಿಗೆ ಸಿದ್ಧತೆ ಮಾಡಲು ಬಂದಿದ್ದ ಚುನಾವಣಾ ಕಮಿಷನರಾದ ಡಾ. ಸುಕುಮಾರ ಸೇನರು ತಾ. ೬ ರಲ್ಲಿ ಕೊಡಗಿನ ಸರಕಾರದೊಡನೆ ಹಾಗೂ ಕೆಲವು ಸಾರ್ವಜನಿಕರೊಡನೆ ಮತದಾರರ ಪಟ್ಟಿಯ ತಯಾರಿ, ಮತದಾರ ಕ್ಷೇತ್ರಗಳ ವಿಭಜನೆಗಳ ಕುರಿತು ಮಾತಾಡಿದರಂತೆ. ಈ ವಿಚಾರದಲ್ಲಿ ಕೊಡಗು ಸರಕಾರವು ಯಾವ ರೀತಿಯ ಸೂಚನೆ ಮಾಡಿದೆ ಎಂಬುದನ್ನು ಸಾರ್ವಜನಿಕರ ಅವಗಾಹನೆಗೆ ತಿಳಿಸಬೇಕು. ದೇಶದ ಮುಂದಾಳುಗಳೂ ಕೂಡ ಈ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಜನತೆಯ ಮುಂದಿಡುವರಾಗಿ ಆಶಿಸಲಾಗಿದೆ. ಅಲ್ಲದೆ ಇತರ ಪ್ರಾಂತಗಳಲ್ಲಿ ಮಾಡಿರುವಂತೆ ಕೊಡಗಿನಲ್ಲಿ ಮತದಾರ ಸಂಘಗಳ ರಚನೆಗಾಗಿ ಸಮಿತಿಯನ್ನು ನಿಯಮಿಸದಿರಲು ಕಾರಣವೇನೆಂಬುದನ್ನು ಸರಕಾರ ವಿವರಪಡಿಸಬೇಕು.

'ಮತದಾರ'

### 'ಮುಖ ನೋಡಿ ಮಣೆ'

'ಹೆಚ್ಚು ಬೆಳೆಯಿರಿ' ಪ್ರಚಾರದ ಉಪಾಂಗವಾಗಿರುವ ಕಂಪೋಸ್ಟ್ ಯೋಜನೆಯಲ್ಲಿ ಉತ್ತಮ ಕೆಲಸ ಮಾಡಿದವರಿಗೆಂದು ಬಹುಮಾನ ವಿತರಣೆ ನಡೆಯಿತು. ಕೊಡಗಿನ ಇತರ ಭಾಗಗಳಲ್ಲಿ ಹೇಗೆ ನಡೆಯಿತೋ ನನಗೆ ತಿಳಿಯದು. ಬಳಲೆ ಕೇಂದ್ರದಲ್ಲಿ ವ್ಯವಸಾಯ ಇಲಾಖೆಯು ಒಂದು ಉಪ ಕಚೇರಿ ಇದೆ. ನಾನೂ ಸರಕಾರಿ ನಿಯಮದಂತೆ ನಾಲ್ಕು ಗುಂಡಿ ಹಸನಾದ ಹಟ್ಟಿ ಗೊಬ್ಬರ ತಯಾರಿಸಿದವನಿದ್ದರಿಂದ ಇದನ್ನು ಬರೆಯುತ್ತಿರುವದಾಗಿದೆ. ನನಗಿಂಥಲೂ ಮುತುವರ್ಜಿಯಿಂದ ಕೆಲಸ ಮಾಡಿದ ಇತರರೂ ಇದ್ದರು. ಪ್ರಥಮ ಬಹುಮಾನ ದೊರೆತ ವ್ಯಕ್ತಿಗಿಂಥಾ ಉತ್ತಮ ರೀತಿಯಲ್ಲಿ ಕೆಲಸ ಮಾಡಿದ ಹಲವರಿದ್ದಾರೆ. ಆದರೆ ಬಹುಮಾನ ದೊರೆಯುದು ಅಂಥಾ ಯೋಗ್ಯರಿಗಿಲ್ಲ. ಬಹುಮಾನ ದೊರೆತವರು ಹೆಚ್ಚಿನ ದೇನನ್ನು ಮಾಡಿಲ್ಲ. ಮರದಿ ಮಾಪ ಅಧಿಕಾರಿಗೂ ಇವರಿಗೂ ಇರುವ ನೆಂಟಸ್ಥಾನವು ಅವರಿಗೆ ಪ್ರಥಮ ಬಹುಮಾನ ಕೊಡಿಸಿತೆಂದು ಜನರು ಹೇಳುತ್ತಾರೆ. ಈ ಬಹುಮಾನ ಪಡೆದವರು ತಮಗೆ ದೊರೆತ ನೇಗಿಲು, ಕತ್ತಿ ಮೊದಲಾದುವನ್ನು ಬಹುಮಾನ ಪಡೆದ ಸ್ಥಳದಲ್ಲೇ ಬೇರೆಯವರಿಗೆ ಮಾರಾಟ ಮಾಡಿದರಂತೆ! ಹಾಗಾದರೆ ಅವರಿಗೆ ವ್ಯವಸಾಯದಲ್ಲಿ ಆಸಕ್ತಿ ಎಷ್ಟಿರಬಹುದೆಂದು ಬೇರೆ ಹೇಳಬೇಕಿಲ್ಲ. ಸರಕಾರದ ಅಧಿಕಾರಿಗಳ ಈ ಅಯೋಗ್ಯ ನೀತಿಯಿಂದ ಅವರ ಪ್ರಚಾರವು ಜಯಪ್ರದವಾಗುತ್ತಿಲ್ಲವೆಂದು ವಿಷಾದದಿಂ ಹೇಳಬೇಕಾಗಿದೆ.

'ನೊಂದ ಕೃಷಿಕ'

### ಒಂದು ಸೂಚನೆ.

ಕಂಪೋಸ್ಟ್ ಯೋಜನೆಯಲ್ಲಿ ರೈತರಿಗೆ ಬಹುಮಾನ ಕೊಡುವ ವಿಚಾರದಲ್ಲಿ ಹಲವು ಭಾಗಗಳಲ್ಲಿ ಪುಕಾರು ಎದ್ದಿದೆ. ಅಧಿಕಾರಿಗಳು ಪಕ್ಷಪಾತಮಾಡುವರೆಂದೂ ದೂರು ಇದೆ. ಆದ್ದರಿಂದ ಮುಂದೆ ಇಂಥಾ ಬಹುಮಾನ ನೀಡುವ ಸಮಯ ಆಯಾಯ ಗ್ರಾಮದ ಮೂರೋ ನಾಲ್ಕೋ ಸದ್ಗೃಹಸ್ಥರ ಸಮಿತಿಯೊಂದನ್ನು ನೇಮಿಸಿ, ಅವರೊಡನೆ ಸರಕಾರಿ ಅಧಿಕಾರಿಯು ಗೊಬ್ಬರ ಗುಂಡಿಗಳನ್ನು ಪರಿಶೀಲಿಸಿ ಬಹುಮಾನ ನಿಶ್ಚಯಿಸುವರೇ?

ರೈತ.

### ಹರಿಜನರ ಹವಾಲು.

ಹರಿಜನರ ಹಿತದೃಷ್ಟಿಯಿಂದ ಕೊಡಗಿನಲ್ಲಿ ಸ್ವಲ್ಪ ಕಾರ್ಯವು ಕಳೆದ ಎರಡು ವರ್ಷಗಳಿಂದ ಪ್ರಾರಂಭವಾಯಿತು. ಹರಿಜನರ ಮಂದಿರ ಪ್ರವೇಶ, ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮೊದಲಾದ ನಿಯಮಗಳೂ ಜಾರಿಯಲ್ಲಿ ಬಂದವು. ತಿಂಗಳಿಗೊಮ್ಮೆ ಹರಿಜನ ದಿನ ಚಳುವಳಿಯನ್ನು ಏರ್ಪಾಡು ಮಾಡಲಾಯಿತು. ಹರಿಜನರಿಗೆ ಭೂಮಿ ಕೊಡಲಾಗುವದೆಂದೂ, ಇತರ ಸಹಾಯಗಳನ್ನೂ ನೀಡಲಾಗುವದೆಂದೂ, ಆಶೆ ತೋರಿಸಲಾಯಿತು. ತತ್ಪರಿಣಾಮವಾಗಿ ಅನೇಕ ಹರಿಜನರು ಅರ್ಜಿ ಬರೆದುಕೊಂಡರು! ವರ್ಷಗಳು ಕಳೆದರೂ ಆದುದೇನು? ಅರ್ಜಿಗಳು ಒಹ ಕಚೇರಿಯ ಬುಟ್ಟಿ ಸೇರಿರಬಹುದು. ಹರಿಜನ ದಿನಾಚರಣೆಯು ಸ್ಥಗಿತವಾಯಿತು. ಯಾವ ಸರಕಾರದ ಪ್ರಯತ್ನದರೂ ಹರಿಜನರು ಹಿಂದಿನಂತೆಯೇ ಅಸ್ಪೃಶ್ಯರಾಗಿ ಉಳಿದಿದ್ದಾರೆ. ಯಾವ ಭೂಮಿಯೂ, ಯಾವ ದೀರ್ಘಕಾಲಿನ ಸಾಲವೂ ಅವರಿಗೆ ದೊರೆತಿಲ್ಲ. ಇಂದೂ ಕೂಡ ಹೋಟೇಲುಗಳಲ್ಲೂ ಸಾರ್ವಜನಿಕ ಸ್ಥಳಗಳಲ್ಲೂ ಅವರಿಗೆ ಸ್ಥಳವಿಲ್ಲ. ಯಾರಾದರೂ ಹರಿಜನರು ತಮ್ಮ ಈ ಹಕ್ಕು ಬಾಧ್ಯತೆಗಳನ್ನು ಉಪಯೋಗಿಸಿ ವರ್ತಿಸಿದರೆ ಅವರನ್ನು ಜನತೆಯು ಕೆಂಗಣ್ಣಿನಿಂದ ನೋಡುತ್ತಿದೆ. ಹಲವೆಡೆ ಕೆಲವು ಹರಿಜನರು ವೈರಿಗಳಂತಾಗಿದ್ದಾರೆ. ಎಲ್ಲೆಡೆ ಕ್ಲಿಷ್ಟ ಜೀವನ ನಡೆಯುತ್ತಿದೆ. ಬೇರೆ ಅವಕಾಶವಿಲ್ಲದೆ ಇನ್ನೂ ಅತ್ಯಲ್ಪದಲ್ಲೇ ದುಡಿಯುತ್ತಿರುವ ಹರಿಜನರ ಪಾಡು ಇತ್ತ ಬಂಗಾರದ ಬೋನಿನ ಪಂಜರದಂತಿದೆ. ಪ್ರಸ್ತುತ ನಮ್ಮ ಸರಕಾರವು ಈ ವಿಚಾರದಲ್ಲಿ ತನ್ನ ದೇನೂ ಜವಾಬ್ದಾರಿ ಇಲ್ಲ ಎಂಬಂತೆ ವರ್ತಿಸುತ್ತಿದೆ. ಇನ್ನಾದರೂ ಸರಕಾರವು ಹರಿಜನರಿಂದ ನಮ್ಮ ನೆರವಿಗೆ ಬರುವದೇ? ಸಾರ್ವಜನಿಕರೂ ಸಹನೆಯಿಂದ ನೋಡುವರೇ?

'ಹರಿಜನ ತರುಣ.'

# 'ಸಮಾಜದಲ್ಲಿ ಹೆಂಗಸಿನ ಸ್ಥಾನ.'

## ರಾನ್‌ಪುರ ರಾಣಿಯವರ ಭಾಷಣದ ಸಾರಾಂಶ.

**ರಾನ್‌ಪುರ ಸಂಸ್ಥಾನದ ರಾಣಿಯವರು ಕಳೆದ ತಾ. ೨೮ ರಲ್ಲಿ ಮಹಿಳಾ ಸಮಾಜದ ಆಶ್ರಯದಲ್ಲಿ ಮಾಡಿದ ಭಾಷಣದ ಸಾರಾಂಶ.**

'ನಮ್ಮ ಸಂಸ್ಥಾನವು ಒರಿಸಾದ ಒತ್ತಿನಲ್ಲಿದೆ. ನಾವು ಕ್ಷತ್ರಿಯರಾದರೂ ಅನಾದಿಯಿಂದಲೇ ಸ್ತ್ರೀಯರಿಗೆ ಕಠಿಣ ಘೋಷಾ ಪದ್ಧತಿ ಇತ್ತು. ಹನ್ನೆರಡು ವರ್ಷವಾದ ನಂತರವೇ ಈ ಪದ್ಧತಿ ಪ್ರಾರಂಭವಾಗುತ್ತದೆ. ಎಷ್ಟು ಕಠಿಣವೆಂದರೆ ಅಣ್ಣ ತಮ್ಮಂದಿಯರನ್ನು ಕಡೆಗೆ ತಂದೆ ಯವರನ್ನೂ ಕೂಡ ಕಾಣಬಾರದು! ಈ ಪದ್ಧತಿಗೆ ಒಳಪಟ್ಟು ನನ್ನ ವಿದ್ಯಾಭ್ಯಾಸ ನಡೆದು ನಂತರ ಮದುವೆಯಾಯಿತು. ಸಮಗೊಂಡು ಗಂಡು ಮಗುವಾದ ನಂತರ ಪತಿಯವರೂ ಮಾವನವರೂ ಗತಿಸಿದ ಕಾರಣ ರಾಜ್ಯಭಾರದ ಜವಾಬ್ದಾರಿಯನ್ನು ವಹಿಸಬೇಕಾಯಿತು. ಇದು ಘೋಷಾದಲ್ಲಿಯೇ ನಡೆಯಬೇಕಿತ್ತು. ಬೇಟೆ ಕುದುರೆ ಸವಾರಿ ಮೊದಲಾದವುಗಳನ್ನೂ ಇಂಗ್ಲೀಷ್ ಭಾಷೆಯನ್ನೂ ಕಲಿತಿದ್ದ ಕಾರಣ [illegible] ನಡೆಸಲು ಸಹಾಯವಾ[illegible] ಕೊಡಗಿನ ಚೀಫ್ ಕಮಿಷನರಾಗಿ [illegible] ಆಗ ನಮ್ಮ ಸಂಸ್ಥಾನದ ರೆಸಿಡೆಂಟರಾಗಿದ್ದಾಗ ನನ್ನ ಘೋಷಾ ಪದ್ಧತಿಗೆ ನಿವೃತ್ತಿಯಾಯಿತು. ಅಂದಿನಿಂದ ಜೊತೆಗೆ ಬಂದು ಸಾರ್ವಜನಿಕ ಕೆಲಸ ಮಾಡಲು ತೊಡಗಿದೆ. [illegible] ಮಹಾಯುದ್ಧದಲ್ಲಿ ರೆಡ್ ಕ್ರಾಸ್ ಸಂಸ್ಥೆಯಲ್ಲಿ ಕೆಲಸ ಮಾಡುವ ಅನುಕೂಲತೆಯಾಯಿತು. ಆಸ್ಪತ್ರೆಗಳ ಉದ್ಧಾರ, ಶಿಶು ಸಂರಕ್ಷಣೆ ಮೊದಲಾದ ವಿಚಾರದಲ್ಲಿ ಕೆಲಸ ಮಾಡತೊಡಗಿದೆನು. ನನ್ನ ಕೆಲಸದ ಅನುಭವದಿಂದ ಪಾಶ್ಚಾತ್ಯ ಸ್ತ್ರೀಯರಿಗೂ, ಹಿಂದೂ ಸ್ತ್ರೀಯರಿಗೂ ದೊಡ್ಡ ಅಂತರ ಕಂಡು ಬಂದಿದೆ. ನಾವು ಅವರನ್ನು ಅನುಕರಿಸುವದರಿಂದ ಅನರ್ಥಗಳಾಗಿವೆ. ಅವರಂತೆ ಆಗುವ ಆವಶ್ಯಕತೆಯೂ ಇಲ್ಲ. ಅವರು ಯಾವ ರಂಗವಿರಲಿ, ರಾಜಕೀಯವಿರಲಿ ಎಲ್ಲದರಲ್ಲೂ ದುಡಿಯುತ್ತಾರೆ. ಆದರೆ ಅವರಲ್ಲಿ ಮಾತಾ ಹೃದಯವಿಲ್ಲ. ಭಾರತೀಯ ಸ್ತ್ರೀಯರಂತೆ ಮಮತೆ ಅವರಲ್ಲಿಲ್ಲ. ಮಕ್ಕಳ ಪೋಷಣೆ, ಗೃಹಕೃತ್ಯಗಳ ಜವಾಬ್ದಾರಿಯನ್ನು ಅವರು ತೋರುವದಿಲ್ಲ. ಹಿಂದೂದೇಶದ ಸ್ತ್ರೀಯರು ಎಷ್ಟೇ ವಿದ್ಯಾವಂತೆಯರಾದರೂ ತಮ್ಮ ಗಂಡ, ಮಕ್ಕಳು, ಮನೆಗಳನ್ನು ಪ್ರೀತಿಯಿಂದ ನೋಡುತ್ತಾರೆ. ಇದೇ ಕಾಲದ ಇಲ್ಲಿಯ ಸ್ತ್ರೀಯರು ತಮಗೆ ಸಾಧ್ಯವಿರುವ ರಂಗಗಳಲ್ಲಿ ದೇಶದ ಹಿತಕ್ಕಾಗಿ ದುಡಿಯಬೇಕು.

ಫ್ರಾನ್ಸಿನಲ್ಲಿ [illegible] ಮಕ್ಕಳಿಗೆ ಕೃತಕ ಅಂಗಗಳನ್ನು ಕೊಟ್ಟು ಅವರನ್ನು ಯೋಗ್ಯ ಪ್ರಜೆಗಳನ್ನಾಗಿ ಮಾಡುತ್ತಾರೆ. ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ಕೊಟ್ಟು ಸತಿಪತಿಗಳು ಯಾವ ರೀತಿ ಬಾಳಬೇಕೆಂಬುದನ್ನೂ ಕಲಿಸುತ್ತಾರೆ. ಸ್ವಿಟ್ಜರ್‌ಲೆಂಡಿನಲ್ಲಿ ಓದು ಬರಹದೊಂದಿಗೆ ಗೃಹಕೃತ್ಯವನ್ನೂ ಕಲಿಸುತ್ತಾರೆ. ಹಾಗೆಯೇ ನಮ್ಮ ದೇಶದಲ್ಲಿ ವಿದ್ಯಾಕ್ರಮವು ಮಾರ್ಪಡಬೇಕು.

ದೇಶಕ್ಕಾಗಿ ಕೆಲಸ ಮಾಡಬೇಕೆನ್ನುವಾಗ ಎಲ್ಲರೂ ಸರೋಜಿನಿ ದೇವಿಯಂತಾಗಬೇಕೆಂದಲ್ಲ. ಅವರ ಮಟ್ಟಕ್ಕೆ ಬರುವದು ನಮಗೆ ಆಗದಿದ್ದರೂ ನಮ್ಮ ಕೈಯಲ್ಲಾದ ಸೇವೆ ಮಾಡಬಹುದು. ಇದು ನಮ್ಮ ಸರಕಾರ, ಇದು ನಮ್ಮ ದೇಶವೆಂಬ ಭಾವನೆ ನಮ್ಮಲ್ಲಿ ಬರಬೇಕು.

ನಾನು ಹಿಂದೂದೇಶದ ವಿವಿಧ ಭಾಗಗಳನ್ನು ಸುತ್ತಿದ್ದೇನೆ. ಸುಂದರವಾದ ಕೊಡಗನ್ನೂ ಬಹು ಮುಂದರಿದಿರುವ ಇಲ್ಲಿಯ ಜನರನ್ನೂ ನೋಡಿ ಪರಮಸಂತೋಷವಾಯಿತು. ಇನ್ನು ಮುಂದೆ ಕೊಡಗನ್ನು ನನ್ನ ನಿವಾಸಸ್ಥಳವಾಗಿ ಮಾಡಿಕೊಳ್ಳುವ ಆಶೆ ನನಗಿದೆ. ಪಾಶ್ಚಾತ್ಯ ಮಹಿಳೆಯರು ಸಹಕಾರ ರಂಗಸ್ಥಳದಲ್ಲಿ ಮುಂದರಿದಿರುವಂತೆ ನೀವೂ ಒಗ್ಗಟ್ಟಾಗಿ ಸಾರ್ವಜನಿಕ ಹಿತಕ್ಕಾಗಿ ಒಮ್ಮತದಿಂದ ದುಡಿಯಬೇಕು. ನಿಮ್ಮ ಸರಕಾರಕ್ಕೆ ಸರ್ವಬೆಂಬಲ ಕೊಡಬೇಕು. ಹಿಂದೂ ಸ್ತ್ರೀಯರೆಂದರೆ ಮನೆಯೊಳಗಿನ ಒಂದು ಸಾಮಾನು ಎಂಬ ಭಾವನೆ ಹಲವರಲ್ಲಿದೆ! ಸ್ತ್ರೀಯರು ಬರೇ ಯಂತ್ರವಲ್ಲ [illegible] ಮಕ್ಕಳನ್ನು ಹೆರುವದು, ಗಂಡನಿಗೆ ಒಳ್ಳೆ ಸೀರೆ, ಆಭರಣಗಳಿಗಾಗಿ ತೊಂದರೆ ಕೊಡುವದೂ ಆಕೆಯ ಕೆಲಸವೆಂದು ಕೆಲವರು ಭಾವಿಸಿರುವರು. ಈ ಕಲಂಕವನ್ನು ತೆಗೆದು ಹಾಕಿ ಹೆಂಗಸೇ ನಾಡಿನ ನಿರ್ಮಾಪಕಿಯರು ಎಂಬುದನ್ನು ಕೃತಿಯಲ್ಲಿ ತೋರಿಸಬೇಕಾಗಿದೆ.'

---

## ಅಮೇರಿಕದಲ್ಲಿ 'ಆರ್ಬರ್ ಡೇ' ಉತ್ಸವ.

### ನಮ್ಮ ದೇಶದ ವನಮಹೋತ್ಸವದಂತೆ.

ಅಮೇರಿಕದಲ್ಲಿ 'ಆರ್ಬರ್ ಡೇ' ಎಂಬ ಅಭಿದಾನದಿಂದ ವೃಕ್ಷಗಳನ್ನು ನೆಡುವ ಸಮಾರಂಭವು ನಡೆಯುವುದು. ಅನೇಕರು ರಾಷ್ಟ್ರದ ಜನರ ಭವಿಷ್ಯದ ಬಗ್ಗೆ ಈಗಾಗಲೇ ಯೋಚನೆಮಾಡಿ ಕಾರ್ಯಗಳನ್ನು ಸಾಧಿಸುವುದರಿಂದಾಗುವ ತೊಂದರೆಯನ್ನು ಮನಗಂಡಿರುತ್ತಾರೆ. ಮತ್ತು ಈಗಾಗಲೇ ನೆಟ್ಟಿರುವ ಸಸಿಗಳ ಬಗ್ಗೆ ಎಚ್ಚರಿಕೆಯನ್ನು ವಹಿಸುವ ಬಗ್ಗೆಯೂ ಉಳಿದಿರುವ ಮರಗಳ ವಿಷಯದಲ್ಲಿ ವಿಶೇಷ ರೀತಿಯ ಎಚ್ಚರಿಕೆ ತೆಗೆದುಕೊಳ್ಳುವುದರಲ್ಲಿಯೂ, ತಿಳಿವಳಿಕೆಯುಳ್ಳವರಾಗಿರುತ್ತಾರೆ.

ಈ ಹಬ್ಬಕ್ಕೆ 'ಆರ್ಬರ್ ಡೇ' ಎಂಬುದಾಗಿ ಅಮೇರಿಕದಲ್ಲಿ ಕರೆಯುತ್ತಾರೆ. ಈ ಆಚರಣೆಯನ್ನು ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಮಾಡುತ್ತಾರೆ. ಮರಗಳ ವಿಷಯದಲ್ಲಿ ವಿಶೇಷ ರೀತಿಯನ್ನು ಉಪಯೋಗಿಸುತ್ತಾರೆ. ಮತ್ತು ಸಸಿಗಳನ್ನು ನೆಟ್ಟು ಇತ್ಯಾದಿ ಕಾರ್ಯಕ್ರಮಕ್ಕೆ ಅನುಕೂಲವಾಗುವುದಲ್ಲದೆ ವೃಕ್ಷ ಸಂಪತ್ತಿನ ಬೆಳೆಯ ವಿಷಯವನ್ನೂ ಅಭ್ಯಾಸ ಮಾಡುತ್ತಾರೆ.

ವೃಕ್ಷ ಸಂಪತ್ತಿನ ಬೆಳೆಯ ಪ್ರಾರಂಭದಲ್ಲಿ ಬಹಳ ಕಷ್ಟವಾಗಿ ಕಾಣಬಹುದು. [illegible] ತಾನೇ [illegible] ಸುಲಭವಾಗಿ [illegible] ವೃಕ್ಷ ಸಂಪತ್ತನ್ನು [illegible] ಸಲಹೆಗಳು ಸೂಚಿಸಲ್ಪಟ್ಟು ವರ್ಷದ ಒಂದು ಗೊತ್ತಾದ ಕಾಲದಲ್ಲಿ ನಡೆಸಬೇಕೆಂದು ಸೂಚಿಸಲಾಗಿದೆ—'ಆರ್ಬರ್ ಡೇ' ಆಚರಣೆಯು ನೆಬ್ರಾಸ್ಕದಲ್ಲಿ ೧೮೭೨ ರಲ್ಲಿ ಪ್ರಾರಂಭವಾಯಿತು. ಮರಗಳಿಗೆ ಅಭಾವವಾಗಿದ್ದ ಸಂಸ್ಥಾನಗಳಲ್ಲೆಲ್ಲ ಸಾಕಾದಷ್ಟು ಪ್ರೋತ್ಸಾಹ ದೊರೆತ ಕಾರಣವಾಗಿ ಮೊದಲನೆಯ ವರ್ಷದಲ್ಲೇ ಲಕ್ಷಾಂತರ ಮರಗಳು ನೆಡಲ್ಪಟ್ಟವು. ಉಳಿದ ಸಂಸ್ಥಾನಗಳು ಇದೇ ಮಾದರಿಯನ್ನು ಅನುಸರಿಸಿದ ಕಾರಣವಾಗಿ (ಕೆನಡಾ ಮತ್ತು ಹವಾಯಿ ಪ್ರಾಂತಗಳಲ್ಲೂ ಕೂಡ) ವೃಕ್ಷ ಸಂಪತ್ತಿನಿಂದ ಕೂಡಿದುದಾಗಿಯೂ, ಮತ್ತು ಪ್ರತಿ ವರ್ಷವೂ ನಡೆಸುತ್ತಲೂ ಇವೆ.

ಅಮೇರಿಕದ ಉತ್ಸಾಹಿ, ವಿದ್ಯಾಭ್ಯಾಸದ ಕನೆಕ್ಟಿಕಟ್ ಬೋರ್ಡಿನ ಸೆಕ್ರೆಟರಿಯೂ ಆದ ಬರ್ಡ್‌ನೆಜ ನಾರ್ತ್‌ರಪ್ ಎಂಬುವರು ಇವರು ಅಮೇರಿಕದಲ್ಲಿ ಮಾತ್ರವಲ್ಲದೆ ಯೂರೋಪ್, ಏಷ್ಯಾಗಳಲ್ಲೆಲ್ಲಾ ಪ್ರವಾಸ ನಡೆಸಿ ಮರಗಳನ್ನು ನೆಡುವುದು ಮಾತ್ರವೇ ಅಲ್ಲದೆ ಅವುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆಯೂ ಬೋಧಿಸಿಗರು.

"ಆರ್ಬರ್ ಡೆ" ಆಚರಣೆ ವಿವಿಧ ಸಂಸ್ಥೆಗಳಲ್ಲಿ ವಿವಿಧ ರೀತಿಯಲ್ಲಿ ನಡೆಯುವುದು, ಉತ್ತರ ದೇಶಗಳಲ್ಲಿ ಏಪ್ರಿಲ್ ಕೊನೆ [illegible] ಮೇ ತಿಂಗಳ ಪ್ರಾರಂಭದಲ್ಲಿಯೂ ದಕ್ಷಿಣ ಸಂಸ್ಥಾನಗಳಲ್ಲಿ ಮತ್ತು ಹವಾಯಿ ಮುಂತಾದವುಗಳಲ್ಲಿ ಡಿಸೆಂಬರ್‌ನಿಂದ ಮಾರ್ಚಿ ವರೆಗೂ ಆಚರಿಸಲ್ಪಡುವುದು.

ಎಲ್ಲ ಸಮಿತಿಗಳೂ ವೃಕ್ಷ ಸಂಪತ್ತಿನ ಬೆಳವಣಿಗೆಗೆ ಪ್ರೋತ್ಸಾಹ ಕೊಡುತ್ತವೆ. ವೃಕ್ಷ ಸಂಪತ್ತಿನಿಂದ ಮರ [illegible] ದೊರಕುವುದು ಮಾತ್ರವಲ್ಲದೆ ನೆಲವನ್ನು [illegible] ಮತ್ತು ಮಳೆಗೂ ಬಹಳ ಅನುಕೂಲವಾಗುವದು. ಪಟ್ಟಣಗಳ ಪ್ರದೇಶದಲ್ಲಿ ಮರಗಳು ಸೌಂದರ್ಯವನ್ನು ಹೆಚ್ಚಿಸುವವು. [illegible] ಮುಂತಾದ ಪ್ರದೇಶದಲ್ಲಿ ಮರಗಳ ನೆರಳು ರಾಸು ಮತ್ತು ಅವುಗಳಿಂದ ದೊರೆಯುವ ಸೊಪ್ಪು, ಹಣ್ಣುಗಳ ಮತ್ತು ಕಾಯಿಗಳಿಂದ ಹಣವನ್ನು ಸಂಪಾದನೆ ಮಾಡಲು ಅನುಕೂಲವಾಗುವುದು.

'ತಾ. ನಾ.'

---


## ವೃತ್ತಿ ಮತ್ತು ಕೈಗಾರಿಕೆಯ ಶಿಕ್ಷಣ.

ಕೊಡಗು ವೀರಾಜಪೇಟೆಯಲ್ಲಿರುವ ಇಂಡಿಯಾ ಸರಕಾರದ ಕೈಗಾರಿಕೆಯ ಶಿಕ್ಷಣ ಶಾಲೆಯಲ್ಲಿ ಈ ಕೆಳಗಿನ ಸ್ಥಾನಗಳು ಖಾಲಿ ಇವೆ.

| | | |
|---|---|---|
| ಶೀಘ್ರಲಿಪಿ | 6 | ಸ್ಥಾನಗಳು. |
| ದರ್ಜಿಯ ಕೆಲಸ | 2 | ಸ್ಥಾನಗಳು. |

(ಸ್ತ್ರೀಯರೂ ಮೇಲಿನ ಸ್ಥಾನಗಳಿಗೆ ಅರ್ಜಿ ಹಾಕಬಹುದು.)

| | | |
|---|---|---|
| ಚಿತ್ರ ಕೆಲಸ | 11 | ಸ್ಥಾನಗಳು. |
| ಕಮ್ಮಾರ ಕೆಲಸ | 16 | ,, |
| ಬಡಗಿ ಕೆಲಸ | 13 | ,, |
| ಮೆಕಾನಿಕ್ | 5 | ,, |

ಇವರ ಪೈಕಿ, 27 ಮಂದಿಗೆ ತಿಂಗಳಿಗೆ 25/- ರೂ ವರೆಗೆ ಸ್ಕಾಲರ್‌ಷಿಪ್ ಕೊಡಲಾಗುವುದು. ಅದರಲ್ಲೂ ಕಮ್ಮಾರ ಕೆಲಸ, ಬಡಗಿ ಕೆಲಸ, ಚಿತ್ರದ ಕೆಲಸ ಇವುಗಳಿಗೆ ಬರುವವರಿಗೆ ಹೆಚ್ಚಿನ ಅವಕಾಶವನ್ನು ಕೊಡಲಾಗುವದು. ಅರ್ಜಿದಾರರು ಅರ್ಜಿ ಫಾರಂಗಳನ್ನು ಸೂಪರಿಂಟೆಂಡೆಂಟ್, ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ವೀರಾಜಪೇಟೆ (ಕೊಡಗ) ಇವರಿಂದ ಪಡೆದುಕೊಂಡು, ಇವರಿಗೆ 25-7-50ರೊಳಗೆ ಅಥವಾ ಅದಕ್ಕೆ ಮುಂಚ ತಲುಪುವಂತೆ ಬರೆದು ಕಳುಹಿಸಬೇಕು. ಇನ್ನು ಹೆಚ್ಚಿನ ವಿಚಾರಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವವರು ಮೇಲಿನ ಶಾಲೆಗೆ ಬಂದಾಗಲಿ, ಸುಪರಿಂಟೆಂಡೆಂಟ್‌ನ್ನು ವಿಚಾರಿಸಿಯಾಗಲಿ ತಿಳಿದುಕೊಳ್ಳಬಹುದು.



**Coorg Forest Department**

*Mercara the 9th July, 1950.*

TENDER NOTICE.

Tenders are invited for the right to collect and remove minor forest produce and Honey and wax from the following blocks for about 3 years extending from 1st August 1950 to 30-6-1953.

Tenders will be received upto 12 noon on Monday the 24th July, 1950.

For further particulars apply to the Chief Forest Officer, Coorg.

1. Sanivarsanthe Hobli including Reserved Forests
2. Old Nalknad including that portion of the Reserved Forests lying to the north of Kabbe-Udumbe foot path.
3. Old Kadiathnad including that portion of the Reserved Forests to the South of Kabbe-Udumbe foot path.

**N. S. POONACHA,**
*for Chief Forest Officer.*

# ಕೊರಿಯಾ ಯುದ್ಧ.

( ೧ನೇ ಪುಟದಿಂದ ಸಾಗಿದ್ದು )

ಕಾವು ಕೊಟ್ಟಿದೆ. ಕಳೆದ ಯುದ್ಧಾನಂತರ ಅಮೇರಿಕಾದ ಸೇನೆಯು ಕೊರಿಯಾದಿಂದ ಹಿಂತೆರಳುವಾಗ ಅಲ್ಲಿ ಬಿಟ್ಟ ಯುದ್ಧ ಸಾಹಿತ್ಯಗಳು ಸಹ ಸಿಕ್ಕಿವೆ.

ಉತ್ತರ ಕೊರಿಯಾದ ಧಾಳಿಗಾರರ ಸಂಖ್ಯೆ ೭೦,೦೦೦ ಇರಬಹುದೆಂದೂ ಅವರ ವಶವಲ್ಲಿ ೭೦ ಟ್ಯಾಂಕುಗಳಿರಬಹುದೆಂದೂ ಅಂದಾಜು ಮಾಡಲಾಗಿದೆ.

## ಟ್ರೂಮನ್

ಯುದ್ಧ ಪ್ರಾರಂಭವಾದ ಎರಡು ದಿನಗಳಲ್ಲಿ ಅಮೇರಿಕಾದ ಅಧ್ಯಕ್ಷ ಟ್ರೂಮನರು ಪೂರ್ವ ಏಶ್ಯಾದ ಕಮ್ಯೂನಿಸ್ಟ ಅಲ್ಲದ ಭಾಗಗಳ ಹಿತರಕ್ಷಣೆಯ ಭಾರವನ್ನು ವಹಿಸಿ ಅದಕ್ಕಾಗಿ ತಕ್ಕ ಕಾರ್ಯಕ್ರಮ ಕೈಗೊಳ್ಳುವ ಆಜ್ಞೆ ಇತ್ತರು. ಅಮೇರಿಕಾದ ಸೈನ್ಯಗಳ ಮುಖ್ಯ ಸೇನಾನಿ ಅಧಿಕಾರ ಪೀಠದಿಂದ ಹೊರಟ ಇವರ ಆಜ್ಞೆಯಂತೆ ಅಮೇರಿಕಾದ ಹಡಗುಗಳು, ವಿಮಾನಗಳು ಕೊರಿಯಾದ ಸಹಾಯಕ್ಕೂ, ಪೂರ್ವ ಏಶ್ಯಾದ ಇತರ ಆಸುಪಾಸಿನ ಪ್ರದೇಶಗಳ ರಕ್ಷಣೆಗೂ ಹೊರಟವು. ಫರ್ಮೋಸಾ, ಇಂಡೋಚೈನಾ, ಫಿಲಿಪೈನ್ ಈ ಕಡೆಗಳಲ್ಲೆಲ್ಲಾ ಅಮೇರಿಕಾದ ಸಿದ್ಧತೆ ನಡೆದಿದೆ. ಟೋಕಿಯೋದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಧ್ವಜದಡಿಯಲ್ಲಿ ಜನರಲ್ ಮೆಕಾರ್ಥರರು ದಕ್ಷಿಣ ಕೊರಿಯಾದ ಯುದ್ಧದ ಜವಾಬ್ದಾರಿ ಹೊತ್ತು ಯುದ್ಧಕ್ಕೆ ತೊಡಗಿದ್ದಾರೆ.

## ಉತ್ತರ ಕೊರಿಯಾ

ಉತ್ತರ ಕೊರಿಯಾದ ಪ್ರೆಸಿಡೆಂಟರಾದ ಕಿಮ್ ಇಲ್ ಸುಂಗ್‌ರವರು ತನ್ನ ನಿಲುವಿನ ಬಗ್ಗೆ ಹೀಗೆ ಹೇಳಿದ್ದಾರೆ:

'ದಕ್ಷಿಣ ಕೊರಿಯಾದ ಸಿಗ್ಮಂಡ್‌ರೀಯವರ ಕೈಗೊಂಬೆ ಸರಕಾರದ ಸೇನೆಗಳು ೩೮ ಪೇರಲಲ್ಲನ್ನು ದಾಟಿ ಉತ್ತರ ಕೊರಿಯಾದ ಮೇಲೆ ಆಕ್ರಮಣ ಮಾಡಿವೆ. ಉತ್ತರದ ರಕ್ಷಣಾ ಸೇನೆಗಳು ಆ ಧಾಳಿಯನ್ನು ತಡೆದು ನಿಲ್ಲಿಸಿವೆ. ಕೊರಿಯಾದ ಜನತಾ ಪ್ರಜಾಪ್ರಭುತ್ವ ಸರಕಾರದ ಆಜ್ಞೆಯಂತೆ ಜನತಾ ಸೇನೆಯು ಪ್ರತಿ ಆಕ್ರಮಣವನ್ನು ಪ್ರಾರಂಭಿಸಿದೆ. ದೇಶದ ಐಕ್ಯತೆಯ ಸಮಸ್ತ ಪ್ರಯತ್ನಗಳಿಗೂ ವಿರೋಧ ಮಾಡಿ ದೇಶದಲ್ಲಿ ಅಂತರ್ಯುದ್ಧವನ್ನು ಹೂಡಲು ಸಿಗ್ಮಂಡ್ ರೀ ಪಂಗಡವು ಪ್ರಯತ್ನಿಸಿತು. ಕೊರಿಯಾ ಜನತೆಯು ಸರಕಾರವು ಇತರ ಪ್ರಜಾಪಕ್ಷ ಹಾಗೂ ಸಾರ್ವಜನಿಕ ಸಂಸ್ಥೆಗಳೊಡನೆ ಸೇರಿ ಶಾಂತಿಯುತವಾಗಿ ದೇಶವನ್ನು ಒಂದುಗೂಡಿಸುವ ಪ್ರಯತ್ನವನ್ನು ಕೈಕೊಂಡಿರುವಾಗ ಕೊರಿಯಾದ ಜನತೆಯು ಸಿಗ್ಮಂಡ್ ರೀಯವರ ಪ್ರತಿಗಾಮಿ ಸರಕಾರದಿಂದ ದಕ್ಷಿಣ ಕೊರಿಯಾವನ್ನು ಬಿಡುಗಡೆಮಾಡಿ ಕೊರಿಯಾದ ಐಕ್ಯತೆಯನ್ನು ಸ್ಥಾಪಿಸಿ ಕೊರಿಯಾಕ್ಕೆ ಒಂದು ಸ್ವತಂತ್ರ ಪ್ರಜಾಪ್ರಭುತ್ವ ಸರಕಾರವನ್ನು ರಚಿಸಲು ಕಂಕಣಬದ್ಧವಾಗಿದೆ.'

## ರಷ್ಯಾದ ಟೀಕೆ

ರಷ್ಯಾದ ವಿದೇಶಾಂಗ ಉಪಸಚಿವರಾದ ಗ್ರಾಮಿಕೋರವರು ಕೊರಿಯಾ ಪ್ರಕರಣದಲ್ಲಿ ಹೇಳಿಕೆಯನ್ನು ಕೊಡುತ್ತಾ ಅಮೇರಿಕಾದ ನೀತಿಯನ್ನು ಖಂಡಿಸಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘವು ಸಭೆ ಸೇರಿ ತನ್ನ ನಿರ್ಣಯ ಮಾಡುವ ಮೊದಲೇ ಅಮೇರಿಕನ್ ಸೇನೆಗಳು ದಕ್ಷಿಣ ಕೊರಿಯಾದ ಸಹಾಯಕ್ಕೆ ಒಂದು ಯುದ್ಧ ಪ್ರಾರಂಭಿಸಿದ್ದವೆಂದು ಅವರು ಹೇಳಿದರು. ಸಂಯುಕ್ತ ರಾಷ್ಟ್ರ ಸಂಘವು ಕೇವಲ ಅಮೇರಿಕನರ ಕೈಗೊಂಬೆಯಾಗಿದೆಯೆಂದೂ ಅವರ ಇಚ್ಛೆಯಂತೆಯೇ ಅಲ್ಲಿ ನಿರ್ಣಯಗಳಾಗುತ್ತಿರುವವೆಂದೂ ಅವರು ಹೇಳಿದಾರೆ. ಕೊರಿಯಾದ ಆಂತರಿಕ ವಿಷಯಕ್ಕೆ ಸಂಬಂಧಿಸಿದ ಈ ವಿಚಾರದಲ್ಲಿ ಅಮೇರಿಕನರು ಕೈಹಾಕಿ ಅಂತರರಾಷ್ಟ್ರೀಯ ತತ್ವಗಳಿಗೆ ವಿರುದ್ಧ ವರ್ತಿಸಿರುವರೆಂದೂ ಅವರು ಹೇಳಿದ್ದಾರೆ.

ಸಂಯುಕ್ತ ರಾಷ್ಟ್ರಸಂಘದಲ್ಲಿ ಇನ್ನೂ ಚೈನಾದ ಹೊಸ ಸರಕಾರಕ್ಕೆ ಪ್ರಾತಿನಿಧ್ಯ ಕೊಡದಿರುವದು ಇನ್ನೂ ರಷ್ಯನರ ಟೀಕೆಗೆ ಒಳಪಡುತ್ತಿದೆ. ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಿದರೆ ಸಂಯುಕ್ತ ರಾಷ್ಟ್ರ ಸಂಘ ಕೇವಲ ರಾಜಕೀಯದ ರಂಗವಾಗಿದೆ. ಈ ಹಿಂದೆ ಜನಾಂಗಗಳ ಕೂಟವು ನಾಶವಾದಂತೆ ಇದೂ ಆಗುವದೋ ಎಂಬ ಸಂಶಯ ಹುಟ್ಟಿದಲ್ಲಿದೆ.

## ಹಿಂದೂದೇಶದ ನೀತಿ

ಪರಸ್ಪರ ಹೋರಾಡಿಕೊಳ್ಳುತ್ತಿರುವ ಈ ಪ್ರಪಂಚದ ರಾಷ್ಟ್ರಗಳಲ್ಲಿ ತನ್ನ ಘನತೆಯನ್ನು ಉಳಿಸಿಕೊಂಡ ನಿರ್ಲಿಪ್ತವಾಗಿ ಇರುವ ಏಕೈಕ ರಾಷ್ಟ್ರವೆಂದರೆ ಹಿಂದೂದೇಶ. ಪಂಡಿತ ಜವಾಹರರ ನೇತೃತ್ವದಲ್ಲಿ ಭಾರತದ ವಿದೇಶ ನೀತಿಯು ಯೋಗ್ಯ ಪಥದಲ್ಲಿ ಸಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯವನ್ನು ಭಾರತವು ಒಪ್ಪಿದೆ. ಜಗತ್ತಿನ ಶಾಂತಿ ರಕ್ಷಣೆಯ ಜವಾಬ್ದಾರಿಯನ್ನು ಈ ಸಂಘವು ನಿರ್ವಹಿಸಬೇಕೆಂದು ಆಶಿಸಿದೆ. ಆದ್ದರಿಂದ ಉತ್ತರ ಕೊರಿಯಾದ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘವು ಮಾಡಿದ ಠರಾವನ್ನು ಒಪ್ಪಿದೆ. ಜಗತ್ತಿನ ಶಾಂತಿಗೆ ಭಂಗ ತರುವ ನೀತಿಯನ್ನು ಖಂಡಿಸಿದೆ. ಆದರೆ ಭಾರತವು ಹೆಚ್ಚಿನದೇನನ್ನೂ ಮಾಡಲು ತಯಾರಿಲ್ಲ. ಉತ್ತರ ಕೊರಿಯಾದ ಧಾಳಿಯನ್ನು ನಿಲ್ಲಿಸಲು ಯಾವದೇ ಸೈನ್ಯ ಯಾ ಇತರ ಸಹಾಯವನ್ನು ಅದು ಮಾಡಲಾರದು. ಏಕೆಂದರೆ ಭಾರತದ ಸೇನೆ ಶಾಂತಿಯ ಮಾರ್ಗವು ಕೇವಲ ಗುಂಡುಗಳ ಮಾರ್ಗವೆಂದು ನಂಬಿಲ್ಲ. ಆದ್ದರಿಂದಲೇ ಯಾವ ಸಹಾಯ ಕೊಡಲಾಗುವದೆಂದು ಸಂಯುಕ್ತ ರಾಷ್ಟ್ರ ಸಂಘವು ಕೇಳಿದ ದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಯಾವ ಸಹಾಯವೂ ಸಾಧ್ಯವಿಲ್ಲವೆಂದೂ ಕೊರಿಯಾದ ಧಾಳಿಯು ವೈಯಕ್ತಿಕವನ್ನು ತಪ್ಪಿದರೂ ಅಂತರರಾಷ್ಟ್ರೀಯ ರಂಗದಲ್ಲಿ ತನ್ನ ವಿದೇಶ ನೀತಿಯು ಹಿಂದಿನ ನಿಷ್ಪಕ್ಷವಾಗಿ ಸಾಗಿರುವಂತೆ ತಟಸ್ಥ ನೀತಿಯೆಂದೂ ಅದು ಸ್ಪಷ್ಟಪಡಿಸಿದೆ.

## ನೆಹರೂ ಶಾಂತಿ ದೂತ ?

ಜಗತ್ತು ಈ ರೀತಿ ಮೂರನೇ ಯುದ್ಧದ ಕಡೆ ದ್ರುತ ಗತಿಯಿಂದ ಸಾಗುತ್ತಿರುವಾಗ ಜಗತ್ತಿನ ಶಾಂತಿಗಾಗಿ ದುಡಿಯುವವರಾರು ? ಭರತಖಂಡ ಒಂದನ್ನು ಬಿಟ್ಟು ಯಾವುದೇ ರಾಷ್ಟ್ರಕ್ಕೆ ಅದರ ಸಾಧ್ಯತೆಯಿಲ್ಲ. ಅದರಿಂದಲೇ ಕೊರಿಯಾ ಯುದ್ಧ ಪ್ರಕರಣದಲ್ಲಿ ಪಂಡಿತ ನೆಹರೂರವರು ಮಧ್ಯಸ್ಥಿಕೆ ವಹಿಸಿ ಶಾಂತಿ ಸ್ಥಾಪಿಸುವ ಪ್ರಯತ್ನ ಮಾಡಬೇಕೆಂದು ಅಮೇರಿಕಾದ ಮತ್ತು ಯೂರೋಪಿನ ಅನೇಕ ಪತ್ರಿಕೆಗಳು ಕೇಳುತ್ತಿವೆ. ಕೊರಿಯಾ ಸಮಸ್ಯೆಯನ್ನು ಸಂಧಾನದ ಮೂಲಕ ತೀರ್ಮಾನಿಸಲು ಅಮೇರಿಕಾದ ಟ್ರೂಮನ್ ಮತ್ತು ರಷ್ಯಾದ ಸ್ಟಾಲಿನರ ಭೇಟಿಯನ್ನು ಏರ್ಪಡಿಸುವ ಪ್ರಯತ್ನವನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಭಾರತದ ಪ್ರಾಯಂಡಲಿಗೆ ಟೀಂಗದ ಸರ್ ಬಿ. ಎನ್. ರಾವ್‌ರವರು ಮಾಡುತ್ತಿದ್ದಾರೆ. ಈ ಭೇಟಿಯು ದಿಲ್ಲಿಯಲ್ಲೇ ನಡೆಯಬೇಕೆಂದೂ ಸೂಚಿಸಲ್ಪಟ್ಟಿದೆ. ಈ ವಿಚಾರದಲ್ಲಿ ಪಂಡಿತ ನೆಹರೂರವರು ಶಾಂತಿ ಸಂಸ್ಥಾಪನೆಯ ಕಾರಣಕ್ಕಾಗಿ ಜಗತ್ತಿನ ಯಾವ ಮೂಲೆಗೂ ಹೋಗಲು ಯಾ ಯಾರನ್ನು ಕಾಣಲು ತಯಾರಿರುವದಾಗಿಯೂ ಕೊರಿಯಾ ಸಮಸ್ಯೆಯ ಬಗ್ಗೆ ಸಂಧಾನ ಪ್ರಯತ್ನ ಮಾಡಬೇಕೆಂದು ಇಚ್ಛೆಯವರು ಕೇಳಿಕೊಂಡರೆ ಮಾತ್ರ ತಾನು ಮಧ್ಯಸ್ಥಿಕೆ ವಹಿಸುವದು ಸಾಧ್ಯವಾಗುವದೆಂದೂ ಹೇಳಿರುವರು.

## ಯುದ್ಧ ರಂಗ

ಉತ್ತರ ಕೊರಿಯದವರು ತಡೆಯಿಲ್ಲದೆ ಮುಂದರಿಯುತ್ತಿದ್ದಾರೆ. ದಕ್ಷಿಣ ಕೊರಿಯಾದ ಮುಖ್ಯ ಪಟ್ಟಣ ಸಿಯೋಲನ್ನು ವಶಪಡಿಸಿಕೊಂಡು ಮುಂದರಿದಿದ್ದಾರೆ. ಉತ್ತರ ಕೊರಿಯಾ ಸೇನೆಗಳಲ್ಲಿ ರಷ್ಯಾ ತಯಾರಿಯ ಯುದ್ಧ ಸಾಧನಗಳು ಕಂಡು ಬಂದಿವೆ. ಧಾಳಿಗಾರರು ಚೋನಾನ್ ನಗರವನ್ನು ಹಿಡಿದು ಅಮೇರಿಕನರನ್ನು ಟೇಜೂನ್ ಕಡೆಗೆ ಹಿಮ್ಮೆಟ್ಟಿಸಿರುವರು. ಅಮೇರಿಕಾದ ದಕ್ಷಿಣ ವ್ಯೂಹಗಳೆಲ್ಲಾ ಬೇಧಿಸಲ್ಪಟ್ಟಿವೆ. ಅಮೇರಿಕಾ ಸೇನೆಯಲ್ಲಿ ಈ ವರೆಗೆ ೩೦೦ ಜನರ ನಷ್ಟವಾಗಿವೆಯೆಂದೂ ೨೦೦ ಜನರು ಶತ್ರುವಿನ ವಶವಾಗಿರುವರೆಂದೂ ತಿಳಿದು ಬಂದಿದೆ. ಉತ್ತರ ಕೊರಿಯನರು ಪೂರ್ವಭಾಗಕ್ಕಾಗಿ ಧಾಳಿ ಪ್ರಾರಂಭಿಸುವ ಏರ್ಪಾಡು ಮಾಡುತ್ತಿದ್ದಾರೆ. ಕೊರಿಯಾದ ಯುದ್ಧದ ಈ ಪ್ರದಮ ಘಟ್ಟದಲ್ಲಿ ಉತ್ತರ ಕೊರಿಯನರಿಗೆ ಅಪೂರ್ವ ಜಯವಾಗಿದೆ. ಇದನ್ನು ಅಮೇರಿಕನರೂ ಕೂಡ ಒಪ್ಪಿಕೊಂಡಿದ್ದಾರೆ. ಆದರೆ ಇತ್ತಲಾಗಿ ಅಮೇರಿಕಾವು ತನ್ನ ಸೇನೆಯನ್ನು ಬಲಪಡಿಸಿ ಅಮೇರಿಕದ ವಿಮಾನಗಳು ಮಹಾ ಪ್ರಮಾಣದಲ್ಲಿ ಧಾಳಿ ಪ್ರಾರಂಭಿಸಿವೆ. ಬ್ರಿಟಿಷ್ ನೌಕಾಪಡೆಯು ನಮ್ಮ ಕರಾವಳಿಯ ಮೇಲೆ ಧಾಳಿ ಪ್ರಾರಂಭಿಸಿದೆ. ಶತ್ರುಗಳ ಆಕ್ರಮಣವನ್ನು ತಡೆದು ಹಾಕಿ ಉತ್ತರ ಕೊರಿಯನರನ್ನು ೩೮ ಪ್ಯಾರಲಲ್‌ದ ವರೆಗೆ ಹಿಮ್ಮೆಟ್ಟಿಸುವ ದೃಢ ನಿರ್ಧಾರದಿಂದ ಅಮೇರಿಕನ್ ಮತ್ತಿತರ ಸಹಾಯಕ ರಾಷ್ಟ್ರಗಳ ಪಡೆಯು ನಿರ್ಧರಿಸಿವೆ. ಅದಾಗೂ ಕೂಡ ಕೊರಿಯಾದ ಪರಿಸ್ಥಿತಿ ಯೋಚಿಸುವಷ್ಟು ಸುಲಭವಾಗಿಲ್ಲ. ಅಮೇರಿಕಾದ ಯುದ್ಧ ನಿಪುಣನೊಬ್ಬನ ಅಭಿಪ್ರಾಯ ಪಟ್ಟ ಪ್ರಕಾರ ಕೊರಿಯಾದಲ್ಲಿ ಜಯ ಪಡೆಯಲ್ಲಿ ೧೦೦,೦೦೦ ಅಮೇರಿಕನ್ ಸೈನ್ಯವು ಒಂದು ವರ್ಷದ ವರೆಗೆ ಹೋರಾಡಬೇಕಾಗಬಹುದು !

## ಮೂರನೇ ಮಹಾ ಯುದ್ಧವೇ ?

ಕೊರಿಯಾದಲ್ಲಿ ಪ್ರಾರಂಭವಾದ ಈ ಘರ್ಷಣೆಯು ಜಗತ್ತಿನ ಮೂರನೇ ಯುದ್ಧಕ್ಕೆ ಕಾರಣವಾಗುವದೋ ಎಂಬ ಹಲವರು ಪ್ರಶ್ನೆ ಕೇಳುತ್ತಾರೆ. ಇದನ್ನು ಈಗಲೇ ಸ್ಪಷ್ಟವಾಗಿ ಹೇಳಲು ಬರುವದಿಲ್ಲ. ಚರ್ಚಿಲ್ಲರು ಹೇಳಿದಂತೆ ಕೊರಿಯದಲ್ಲಿ ಕಮ್ಯೂನಿಸ್ಟರಿಗೆ ಜಯವಾದರೆ ಮೂರನೇ ಯುದ್ಧವು ಬಹುಶಃ ಆಗಬಹುದು. ಏಕೆಂದರೆ ಕೊರಿಯಾವನ್ನು ವಶಪಡಿಸಿಕೊಂಡ ಕಮ್ಯೂನಿಸ್ಟರು ನ್ಯಾಯವಾಗಿ ಚೈನಾಕ್ಕೆ ಸೇರಬೇಕಿರುವ ಫಾರ್ಮೋಸಾ ದ್ವೀಪ ಸಮೂಹದಲ್ಲಿ ಚಳವಳ ಪ್ರಾರಂಭಿಸದಿರರು. ಚಿಯಾಂಗ್ ಕೈಶೇಕರಿಗೆ ಆಸರೆಯಾಗಿರುವ ಈ ಫಾರ್ಮೋಸಾ ದ್ವೀಪವನ್ನು ತಮ್ಮ ಸೈನ್ಯ ಕೇಂದ್ರವಾಗಿ ಅಮೇರಿಕನರು ಮಾಡಿಕೊಂಡಿರುವರು. ಅದ್ದರಿಂದ ಪ್ರತ್ಯಕ್ಷ ಅಲ್ಲಿ ಘರ್ಷಣೆ ಆಗಬಹುದು. ಸದ್ಯದ ಪರಿಸ್ಥಿತಿಯಲ್ಲಿ ಕೊರಿಯಾ ಯುದ್ಧದಿಂದ ಜಗತ್ತಿನ ಯುದ್ಧ ಎಂಬವಷ್ಟು ಪರಿಸ್ಥಿತಿ ಇಲ್ಲ.

---

## " ವನಮಹೋತ್ಸವ "

ಫ್ರೇಜರ್‌ಪೇಟೆಯಲ್ಲಿರುವ ಕಾವೇರಿ ಪೇಪರ್ ಮಿಲ್ಸ್ ಮತ್ತು ಫಾರೆಸ್ಟ್ ಇಂಡಸ್ಟ್ರೀಸ್ ಲಿಮಿಟೆಡ್‌ರವರು ಇದೇ ಜುಲೈ ೯ನೇ ತಾರೀಕು ಸಾಯಂಕಾಲ ೫ ಗಂಟೆಗೆ ಕಂಪನಿಯ ನಿವೇಶನದಲ್ಲಿ ಕಟ್ಟಿರುವ ಸ್ಟಾಫ್ ಕ್ವಾರ್ಟರ್ಸ್‌ನಲ್ಲಿ ವನಮಹೋತ್ಸವವನ್ನು ಕಮ್ಮಾಯ ಚೇರ್ಮನ್ನರೂ ಪೈಗಾರರು ಶಾಸನ ಸಭೆಯ ಅಧ್ಯಕ್ಷರೂ ಆದ ಶ್ರೀ ವಿ. ವೆಂಕಟಪ್ಪನವರ ಮತ್ತು ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರ್ ಪಿ. ಯಂ. ಚಂಗಪ್ಪನವರ ನೇತೃತ್ವದಲ್ಲಿ ನೆರವೇರಿಸಿದರು. ಕಂಪನಿಯ ಡೈರೆಕ್ಟರು ರಾವ್ ಬಹದ್ದೂರ್ ಕೆ. ಜಿ. ಬೆಳ್ಳಪ್ಪನವರೂ, ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಜೆ. ವಿ. ದೊಡ್ಡವೀರಪ್ಪನವರೂ, ಫ್ರೇಜರ್‌ಪೇಟೆಯ ಸರಕಾರಿ ಅಧಿಕಾರಿಗಳೂ, ಕಂಪನಿಯ ಇತರ ಉದ್ಯೋಗಸ್ಥರೂ ಸಮಾರಂಭದಲ್ಲಿ ನೆರೆದಿದ್ದರು. ಅನೇಕ ಉಪಯುಕ್ತವಾದ ವೃಕ್ಷಗಳನ್ನು ನೆಡುವ ಕಾರ್ಯವನ್ನು ಕಂಪನಿಯವರು ಕೈಕೊಂಡಿದ್ದಾರೆ. ಇದರ ಸಂಭವವಾಗಿ ಹೂವುಗಳು, ಇಷ್ಟ-ಫಲ ವೃಕ್ಷ, ಮತ್ತು ಔಷಧಿ ಗಿಡಗಳನ್ನು ನೆಡಲಾಯಿತು. ನಂತರ ಉಪಾಹಾರವಾದ ಮೇಲೆ ರಾವ್ ಬಹದ್ದೂರ್ ಕೆ. ಜಿ. ಬೆಳ್ಳಪ್ಪನವರು ಕಂಪನಿಯ ಪರವಾಗಿ ವೆಂಕಟಪ್ಪನವರು ಮತ್ತು ಶ್ರೀ ಪಿ. ಯಂ. ಚಂಗಪ್ಪನವರು ಬಂದು ಸಮಾರಂಭವನ್ನು ನೆರವೇರಿಸಿದ್ದಕ್ಕಾಗಿ ವಂದಿಸಿದರು. ಶ್ರೀ ವೆಂಕಟಪ್ಪನವರು ಮತ್ತು ಶ್ರೀ ಪಿ. ಯಂ. ಚಂಗಪ್ಪನವರು ಸೂಕ್ತ ಉತ್ತರ ಕೊಟ್ಟು ವನಮಹೋತ್ಸವವು ಸಫಲವಾಗಲೆಂದು ಹಾರೈಸಿದರು. ತಾಂಬೂಲ ಪುಷ್ಪ ವಿನಿಯೋಗದೊಡನೆ ಸಭೆ ಮುಗಿಯಿತು.

---

## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರದ ವ್ಯವಸಾಯದ ಹತ್ಯಾರುಗಳು ದೊರಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 218-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದಾಗ ಕೊಡಲಾಗುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-43



# CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

*H: O: BOMBAY.* [*Established 1919.*

*For particulars write to:*

Sri B. A. Poovaiah or The Branch Manager
*Organiser* *22 B. Mahatma Gandhi Road.*
*Pollibetta, Coorg.* *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

## ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 55,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದು ಬ್ಲದೆ ಚಿನ್ನ, ಬೆಳ್ಳಿ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಸ್ಟೇಟ್ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.



# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ | ರೂ. .... ... | 6,13,00,000 ಕೋಟಿ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ | ರೂ. .... | 27,53,00,000 ,, |
| ಒಟ್ಟು ನಿಧಿ. | ರೂ. .... .... .... | 8,30,00,000 ,, |
| ಸ್ಥಾಪಿತವಾದಂದಿನಿಂದ ಪಾಲಿಸಿದಾರರಿಗೆ ಕೊಟ್ಟ ಹಣ | | 10,16,00,000 ,, |

1,28,000 ಕ್ಕೆ ಮೀರದ ಪಾಲಿಸಿದಾರರು ತೃಪ್ತಿ ಪಡೆದಿದ್ದಾರೆ.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ

### ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ಬೋರಿಸ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ ರೋಡ್, ಫೋರ್ಟ್, ಬೊಂಬಾಯಿ.

ಶಾಖಾ ಕಛೇರಿ: ಉಪ್ಪಿನ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.



ಭದ್ರತೆ! 17 ವರ್ಷಗಳ ಅನುಭವ ಅನುಕೂಲತೆ !!
ಅನುಭವಶೀಲತೆ!!

## ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಮುಖ್ಯ ಕಛೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ:-

| | | |
|---|---|---|
| 3 | ತಿಂಗಳು | 3% |
| 6 | ,, | 3¼% |
| 12 | ,, | 3½% |
| 24 | ,, | 4 % |

ರೂಪಾಯಿ ೧೫,೦೦೦ಕ್ಕೆ ಮೀರದ ಒಂದೇ ಡಿಪಾಜಿಟ್ಟಿಗೆ ಮೇಲಿನ ಸರ್ವೋತ್ತಮ ಬಡ್ಡಿ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞ್ಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮಾಲ್ಪೆ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.



## ದಿ ಟ್ರಾಪಿಕಲ್

### ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಛೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲ್‌ಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಎಮ್. ಅಪ್ಪಣ್ಣ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಚೆಕ್ಕಪ್ಪ, ಬ್ರಾಂಚ್ ಸೆಕ್ರೆಟರಿ, ಹಡ್ಸನ್‌ಸ್ಕ್ವೇರ್, ಬೆಂಗಳೂರು.



## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

*Head Office :*
MANGALORE
26-10

K. M Bopaiah, Esq.,
*Branch Secretary for*
*Mysore & Coorg,*
*85 Sultanpet, BANGALORE 2.*



ಶ್ರೀ ಪಿ. ಐ. ಬೆಳ್ಯಪ್ಪನವರು, 'ಕೊಡಗು' ಪತ್ರಿಕೆ, ಮಡಿಕೇರಿ.

Edited, Printed and Published by P. I. Belliappa at 'Kodagu Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಟಿ. ಬಿ. ಬೆಳ್ಳಪ್ಪನವರು] [ವಾರ್ಷಿಕ ಚಂದಾ ರೂ 5-0-0

ಸಂಪುಟ ೨೯ | ತಾರೀಕು ೨೧-೭-೧೯೫೦ನೇ ಶುಕ್ರವಾರ | ಸಂಚಿಕೆ ೭

ಬೀಹಾರದ ಪೂರ್ನಿಯಾ ಎಂಬ ಜಿಲ್ಲೆಯಲ್ಲಿ ವಿಪರೀತ ಆಹಾರ ಕ್ಷಾಮವು ತಲೆದೋರಿ ಉಪವಾಸದಿಂದ ಇಷ್ಟರಲ್ಲೇ ಸುಮಾರು ಐವತ್ತೈದಕ್ಕೆ ಮೇಲ್ಪಟ್ಟ ಮರಣಗಳು ಸಂಭವಿಸಿವೆ. ಮಳಲು ಧಾರೆಯಿಂದ ವರೆಗೆ ಸುರಿದ ಕಾರಣವಾಗಿ ಅಕ್ಕಿ ದುವತ್ತು ಸಮಬೀಸ ಪೈರು ಸಂಪೂರ್ಣ ನಶನವಾಗಿ ಈ ಕ್ಷಾಮ ತಲೆದೋರಿರುವುದಾಗಿದೆ. ಅಕ್ಕಿಯ ಬೆಲೆ ಮುಗಿಲುಮುಟ್ಟಿದೆ. ಕೆಲವು ಕಡೆಗಳಲ್ಲಿ ಮಣಕ್ಕೆ ೪೦ ರೂಪಾಯಿ ಪ್ರಕಾರ ಅಕ್ಕಿ ಮಾರಾಟವಾಗುತ್ತದೆ. ಇನ್ನೂ ಧಾರಣೆ ಏರುವ ಲಕ್ಷಣಗಳು ಕಂಡುಬಂದಿವೆ.

ಕಲ್ಕತ್ತದ ಈಗಿನ ಜನಸಂಖ್ಯೆ ಸುಮಾರು ಒಂಭತ್ತು ಲಕ್ಷದಿಪ್ಪತ್ತೆರಡುಹುದೆಂದು ಇತ್ತೀಚೆಗೆ ತೆಗೆದ ಪಟ್ಟಿಗಳ 'ಎಸೆಸ್‌ಮೆಂಟ್' ಅಂಕೆಸಂಖ್ಯೆಗಳಿಂದ ತಿಳಿದುಬಂದಿದೆ.

ಭಾರತದಲ್ಲಿ ದೇಶದ ಅನ್ಯಂತ ೭ರಡಿ ಕೊಂಡಿರುವ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಸಂಸ್ಥೆಗಳು ಕಳೆದ ಮೇ ತಿಂಗಳಲ್ಲಿ ಒಟ್ಟು ೨೯,೬೩೪ ಮಂದಿಗೆ ಉದ್ಯೋಗ ದೊರಕಿಸಿಕೊಟ್ಟಿವೆ. ಈ ಸಂಖ್ಯೆ ಹಿಂದಿನ ತಿಂಗಳ ಸಂಖ್ಯೆಗಿಂತ ಸುಮಾರು ಶೇಕಡ ೨೫ರಷ್ಟು ಹೆಚ್ಚು ಎಂದು ತಿಳಿಸಲ್ಪಟ್ಟಿದೆ.


# ೩೦ ವರ್ಷಗಳ ಸೇವೆ

ಪ್ರಗತಿಯ ಹೆಗ್ಗುರುತುಗಳು

- ೧೯೪೯ರಲ್ಲಿ ಕಂಪೆನಿಯು ಹೊಸ ವ್ಯಾಪಾರವು ೬ ಕೋಟಿ ರೂಪಾಯಿಗಳನ್ನು ಮೀರಿರುವುದು
- ಒಂದು ವರ್ಷದ ಹಿಂದೆ ಅದರ ವಸೂಲು ಬಂಡವಾಳವು ರೂ ೨,೫೦,೦೦೦ ಆಗಿತ್ತು. ಈಗ ಅದು ರೂ ೫,೦೦,೦೦೦ಕ್ಕೆ ಏರಿದೆ. ಅಂದರೆ ಶೇಕಡಾ ೧೦೦ರಷ್ಟು ವೃದ್ಧಿ.
- ಕಂಪೆನಿಯು ಭಾರತದ ಎಲ್ಲಾ ದೊಡ್ಡ ನಗರಗಳಲ್ಲಿಯೂ ಹರಡಿದೆ.

ಕಂಪೆನಿಯು ತೀವ್ರವಾಗಿ ವಿಸ್ತರಿಸುತ್ತಿದೆ. ಪ್ರತಿಷ್ಠಿತ ಜನಾಂಗದಲ್ಲಿ ಸಂಬಂಧವಿಟ್ಟುಕೊಂಡವರು ನಮ್ಮನ್ನು ಸೇರಬೇಕೆಂದರೆ ಅವರಿಗೆ ಜಯ ಸಿಕ್ಕಿದೆ.


CRESCENT INSUR... BUILDING MADRAS


CRESCENT INSURANCE BUILDING GAMDEVI BOMBAY


HEAD OFFICE — CRESCENT CHAMBERS BOMBAY

The
CRESCENT INSURANCE CO. LTD.
Head Office CRESCENT CHAMBERS, Tamarind Lane, Fort, Bombay.

## ದಿ ಕ್ರಿಸೆಂಟ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.,

(ಸ್ಥಾಪನೆ: ೧೯೧೯.)

ಪ್ರಧಾನ ಕಚೇರಿ
"ಕ್ರೆಸೆಂಟ್ ಚೇಂಬರ್ಸ್"
ಬೊಂಬಾಯಿ.

ಚೇರ್ ಮೆನ್
ಶ್ರೀ ಪ್ರಭಾಶಂಕರ ರಾಮಚಂದ್ರ ಭಟ್,
ಜೆ. ಪಿ.

ಮ್ಯಾನೇಜಿಂಗ್ ಡೈರೆಕ್ಟರು
ಶ್ರೀ ಎಂ ಸುಂದರರಾಂ ಶೆಟ್ಟಿ

ಜನರಲ್ ಮ್ಯಾನೇಜರ್
ಶ್ರೀ ಎಂ ರಾಮರಾವ್, ಬಿ ಎ,
ಬಿ ಎಲ್, ಜೆ ಪಿ

ಎಲ್ಲಾ ತರಹೆಯ ಜೀವ ವಿಮಾ ನಡೆಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಬಿ. ಎ. ಪೂವಯ್ಯ,
ಆರ್ಗನೈಸರ್
ಪೊನ್ನಂಪೇಟೆ, ಕೊಡಗು.

ಶಾಖಾ ಕಚೇರಿ: (ಮೈಸೂರು ಸಂಸ್ಥಾನ, ಕೊಡಗು ಮತ್ತು ರಾಯಲ ಸೀಮೆಗಾಗಿ)
ನಂ. ೨೨ ಬಿ. ಮಹಾತ್ಮಾ ಗಾಂಧಿ ರೋಡ್,
ಬೆಂಗಳೂರು ೧.
Telegram "LifeInsure" BANGALORE.
Telephone No. 424


ಸ್ವತಂತ್ರ ಸ್ಥಾನವುಳ್ಳ ಮತ್ತು ಸ್ವಯಂನಿರ್ಣಯಾಧಿಕಾರವುಳ್ಳ ಶೀಖ ಜಾಬೀ ರಾಷ್ಟ್ರವನ್ನು ಸ್ಥಾಪಿಸಬೇಕೆಂಬ ತಮ್ಮ ಬೇಡಿಕೆಯನ್ನು ಮಾಸ್ಟರ್ ತಾರಾ ಸಿಂಗರು ದಿಲ್ಲಿಯಲ್ಲಿ ೧೬ನೇ ದಿನಾಂಕ ಕೂಡಿದ ಒಂದು ಬಹಿರಂಗ ಸಭೆಯಲ್ಲಿ ಹೇಳಿದರು.

# ಅದೃಷ್ಟಹೀನ ಕೊರಿಯಾ.

ಶ್ರೀ. ಕಿ. ಘ. ಮಶ್ರೂವಾಲಾ ಅವರಿಂದ.

ಪ್ರಬಲ ರಾಷ್ಟ್ರಗಳ ರಾಜ್ಯತೃಷ್ಣೆ ಕಳೆದ ಅರ್ಧ ಶತಮಾನದಿಂದಲೂ ಕೊರಿಯಾವನ್ನು ದುಃಖಕ್ಕೊಳಗು ಮಾಡಿದೆ. ಮೊದಲು ಮಂಚೂರಿಯದ ಕಾಟದಿಂದ ಅದಕ್ಕೆ ಶಾಂತಿಯಿರಲಿಲ್ಲ. ಆ ಮೇಲೆ ಜಪಾನು ಅದನ್ನು ಜಯಿಸಿ ಅದರ ಪ್ರಜೆಗಳನ್ನು ಹಿಂಸಿಸಿ ಅದರ ಪ್ರಕೃತಿ ಸಂಪತ್ತನ್ನು ತನ್ನ ಲಾಭಕ್ಕೆ ವಿನಿಯೋಗಿಸಿಕೊಂಡಿತು. ಜಪಾನು ಸೋತಾಗ ಕೊರಿಯನ್ನರದೇನೂ ತಪ್ಪಿಲ್ಲದಿದ್ದರೂ ಅವರು ವಿಜಯಿ ರಾಷ್ಟ್ರಗಳ ದಾಸ್ಯಕ್ಕೊಳಗಾಗಬೇಕಾಯಿತು. ಈ ರಾಷ್ಟ್ರಗಳು ತಮ್ಮ ಸ್ವಾರ್ಥಕ್ಕಾಗಿ ಕೊರಿಯಾವನ್ನು ಇಬ್ಭಾಗ ಮಾಡಿ ಎಂದಿಗೂ ಹೊಂದಿಕೊಳ್ಳಲಾರದ ವಿಪರೀತ ಪದ್ಧತಿಗಳ ಸರಕಾರವನ್ನು ಸ್ಥಾಪಿಸಿದವು. ಇದೆಲ್ಲವನ್ನೂ ಕೊರಿಯನ್ನರ ಒಪ್ಪಿಗೆಯಿಲ್ಲದೆಯೇ ಮಾಡಲಾಯಿತು. ಈ ವಿಜಯ ಕಳೆದ ಶತಕದಲ್ಲಿ ನಡೆದುದಾಗಿದ್ದರೆ ಆಗ ಅಮೇರಿಕದ ಸಂಯುಕ್ತ ಸಂಸ್ಥಾನವು ಫಿಲಿಪೈನ್ಸ್ ದ್ವೀಪಗಳನ್ನು ಮಾಡಿದಂತೆ, ಜಪಾನು ಮತ್ತು ದಕ್ಷಿಣ ಕೊರಿಯವನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡು ಬಿಡುತ್ತಿತ್ತು. ಇದೇ ಪ್ರಕಾರ ಉತ್ತರ ಕೊರಿಯ ಸೋವಿಯೇಟ ರಷ್ಯಾದಲ್ಲಿ ಸೇರಿ ಹೋಗುತ್ತಿತ್ತು. ಆದರೆ ಈ ಶತಮಾನದಲ್ಲಿ ಹೊಸ ನೈತಿಕ ವಿಚಾರಗಳು ಬೆಳೆದು ಬಂದಿವೆ. ಅವು ರಾಜ್ಯ ವಿಸ್ತರಣ ನೀತಿಗೆ ಪ್ರತಿಕೂಲವಾಗಿವೆ. ಅವು ಸಾಮ್ರಾಜ್ಯವಾದಿಗಳಿಗೆ ಕಾಲ್ತೊಡಕಾಗುವಷ್ಟು ಜನಪ್ರಿಯವಾಗಿದೆ.

### ಹಾವು ಮುಂಗಸಿಗಳ ಸಂಧಿ.

ಮುಸೊಲಿನಿ ಮತ್ತು ಹಿಟ್ಲರರಂತೆ ಪ್ರಜಾತಾಂತ್ರಿಕ ಸಾಮ್ರಾಜ್ಯವಾದಿಗಳು ಈ ಹೊಸ ವಿಚಾರಗಳನ್ನು ಕಣ್ಣಿಗೆ ಬೊಟ್ಟು ಚುಚ್ಚಿದಂತೆ ನಿರ್ದಾಕ್ಷಿಣ್ಯವಾಗಿ ನಿರಾಕರಿಸಲಾರರು. ಆದುದರಿಂದ ಅವರು ಕುಟಿಲ ಮಾರ್ಗವನ್ನನುಸರಿಸಬೇಕಾಗಿದೆ. ನೇರವಾಗಿ ಜರ್ಮನಿ, ಜಪಾನು ಮತ್ತು ಕೊರಿಯಾಗಳ ಅಂಶಗಳನ್ನು ತಂತಮ್ಮ ರಾಜ್ಯಗಳಿಗೆ ಸೇರಿಸಿಕೊಂಡು ಬಿಡುವ ಬದಲು ಅವುಗಳನ್ನು ಬೇರೆ ಬೇರೆ ದೇಶಗಳ ಅಧೀನದಲ್ಲಿ, ಪುನಃ ಆಯಾ ಪ್ರಜೆಗಳ ವಶಕ್ಕೆ ಬಿಟ್ಟುಕೊಡಲು ಅನುಕೂಲ ಸಮಯ ಬಂದಿದೆಯೆಂದು (ವಿಜಯಿಗಳಿಗೆ) ತೋರುವವರೆಗೆ, ಇರಿಸಲಾಯಿತು.

ಜರ್ಮನಿಯನ್ನೂ ಕೊರಿಯಾವನ್ನೂ ತುಂಡು ತುಂಡು ಮಾಡಿದಾಗ ಈ ದೇಶಗಳ ಜನರಿಗೆ ಈ ಬಗೆಯಲ್ಲಿ ತಮ್ಮ ನಾಡುಗಳು ಚೂರು-ಚೂರಾಗುವುದು ಖಂಡಿತವಾಗಿಯು ಸೇರಿಕೆಯಾಗಲಾರದೆಂಬುದು ಸ್ಪಷ್ಟವಾಗಿರಬೇಕು. ಅವುಗಳಲ್ಲಿ ಪ್ರತಿಯೊಂದು ದೇಶವೂ ಅಖಂಡವಾಗಿತ್ತು. ಒಂದೇ ಭಾಷೆ, ಒಂದೇ ಧರ್ಮ, ಒಂದೇ ವಿಚಾರಧಾರೆ ಅಲ್ಲಿಯ ಪ್ರಜೆಗಳನ್ನು ಒಂದುಗೂಡಿಸಿದ್ದವು. ಪರಾಧೀನವಾಗುವ ಮೊದಲು ಅವು ಒಂದೇ ಆಗಿದ್ದವು ಮತ್ತು ಅನಂತರವೂ ಒಂದೇ ಆಗಿ ಉಳಿಯಲು ಬಯಸುತ್ತಿದ್ದವು. ಕೊರಿಯನ್ನರ ಮಟ್ಟಿಗೆ ಹೇಳಬೇಕಾದರೆ, ಅವರಿಂದೂ ಸ್ವೇಚ್ಛೆಯಿಂದ ಯುದ್ಧದಲ್ಲಿ ಭಾಗಿಗಳಾಗಿರಲಿಲ್ಲ. ಅವರ ಅರಸರಾದ ಜಪಾನೀಯರ ಕಾರಣದಿಂದಲೇ ಕೊರಿಯನ್ನರು ಯುದ್ಧದಲ್ಲಿ ಸಿಲುಕಿಕೊಂಡರು. ಈ ಜಗತ್ತಿನಲ್ಲಿ ಮಾನವಹಿತವನ್ನು ಹೇಗೆ ಸಾಧಿಸಬಹುದೆಂಬ ಬಗ್ಗೆ ರಶಿಯಕ್ಕೂ ಪ್ರಜಾತಂತ್ರಗಳೆನಿಸಿಕೊಳ್ಳುವ ಇನ್ನೊಂದು ಪಕ್ಷಕ್ಕೂ ಸರ್ವಥಾ ಭಿನ್ನವಾದ ಅಭಿಪ್ರಾಯಗಳುಂಟೆಂಬುದೂ ಗೊತ್ತೇ ಇತ್ತು. ರಶಿಯವೂ ಪ್ರಜಾತಂತ್ರ ದೇಶಗಳೂ ಜರ್ಮನಿ, ಇಟಲಿ ಮತ್ತು ಜಪಾನುಗಳನ್ನು ಸೋಲಿಸಲು ಹೇಗೋ ಒಟ್ಟುಗೂಡಿದ್ದರೂ ಅವುಗಳೊಳಗಿನ ಪರಸ್ಪರ ವೈಮನಸ್ಯವು ಅವುಗಳಿಗೂ ಪರಾಜಿತ ಶತ್ರುಗಳಿಗೂ ಇದ್ದುದಕ್ಕಿಂತ ಕಡಿಮೆಯಾಗಿದ್ದಿಲ್ಲ. ವಸ್ತುತಃ ಮಂಗನನ್ನು ಸೋಲಿಸಲು ಹಾವಿಗೂ ಮುಂಗಸಿಗೂ ಆದ ಒಪ್ಪಂದದಂತಿತ್ತು ಅವರ ಐಕ್ಯ. ಮಂಗ ಸೋತ ಮೇಲೆ ಹಾವೂ ಮುಂಗಸಿಯೂ ತಮ್ಮ ಹಳೆಯ ಹಗೆತನವನ್ನು ಸಾಧಿಸಲು ಸ್ವತಂತ್ರವಾಗಿವೆ ಈಗ.

### ಪ್ರಜಾತಂತ್ರಗಳ ಭೀತಿ.

ಅಮೇರಿಕದ ನೇತೃತ್ವದಲ್ಲಿರುವ ಪ್ರಜಾತಂತ್ರಗಳಿಗೂ ರಶಿಯದ ಅಧೀನದಲ್ಲಿರುವ ಕಮ್ಯೂನಿಸ್ಟ ದೇಶಗಳಿಗೂ ಇದ್ದ ದ್ವೇಷವು ಪ್ರಕಟರೂಪದಲ್ಲಿ ಬೆಳೆಯಲು ಎಷ್ಟೋ ಕಾಲವಾಗಿಬಿಟ್ಟಿದೆ. ಸೋವಿಯೇಟ್ ರಶಿಯವು ತನಗೆ ಈ ಜಗತ್ತಿನಲ್ಲೊಂದು ಅವತಾರಕಾರ್ಯವುಂಟೆಂದು ಭಾವಿಸುತ್ತದೆ. ಪ್ರಾಚೀನ ಕ್ರಿಶ್ಚನ್ ಮಿಶನರಿಗಳಂತೆ ಮತ್ತು ಪ್ರಾಚೀನ ಮುಸ್ಲಿಮರಂತೆ ಕಮ್ಯೂನಿಸ್ಟರೂ ಮಾನವ ಕುಲದ ಉದ್ಧಾರವಾಗಬೇಕಾದರೆ ತಮ್ಮ ಮತದ ಜೀವನಪದ್ಧತಿಯನ್ನನುಸರಿಸುವುದೊಂದೇ ಉಪಾಯವೆಂದು ಬಗೆಯುತ್ತಾರೆ. ಹಾಗೆಯೇ, ಎಲ್ಲ ಧರ್ಮಾಂಧ ಮತಪ್ರಸಾರಕರಂತೆ ಇವರೂ ಸಾಧನಶುದ್ಧಿಯಲ್ಲಿ ವಿಶ್ವಾಸವಿಡದೆ, ಧ್ಯೇಯಸಾಧನೆಗಾಗಿ ಬೇಕಾದ ಯುಕ್ತಿಗಳನ್ನು ಕೂಡ ಹೂಡಲು ಸಿದ್ಧರಾಗಿದ್ದಾರೆ. ಅತ್ತ ಪ್ರಜಾತಂತ್ರಗಳೋ, ಕಮ್ಯೂನಿಜಮಿನ ಪ್ರಸಾರದಿಂದ ತಮ್ಮ ಸುಖಕ್ಕೆ ಆತಂಕಬರುವುದೆಂದು ನಂಬಿವೆ. ಪ್ರಜಾತಂತ್ರಗಳಲ್ಲಿ ಬಹಳ ಪ್ರಗತಿ ಹೊಂದಿದ ಶ್ರೀಮಂತವಾದ ರಾಜ್ಯಗಳು ತಮ್ಮಲ್ಲಿನ ಜೀವನದ ಮಟ್ಟವನ್ನು ಎಷ್ಟು ಮಟ್ಟಿಗೆ ಏರಿಸಿಕೊಂಡಿವೆಯೆಂದರೆ, ಸ್ವತಃ ತಮ್ಮ ದೇಶದ ಬಡವರೊಡನೆ ಕೂಡ ಸಂಪತ್ತನ್ನು ಸಮಾನವಾಗಿ ಹಂಚುವುದಂತೂ ದೂರ ಉಳಿಯಿತು,—ಸಮಂಜಸವಾಗಿ ಹಂಚಿದರೂ ಕೂಡ, ಆ ಮೇಲ್ಮಟ್ಟದ ಜೀವನ ಸೌಕರ್ಯಗಳನ್ನು ಉಳಿಸಿಕೊಳ್ಳುವುದು ಅಸಾಧ್ಯವೆಂದು ಕಂಡುಕೊಂಡಿವೆ. ತಮ್ಮ ಸಂಪತ್ತನ್ನು ಜಗತ್ತನ್ನು ಜಗತ್ತಿನ ಬೇರೆ ಬಡ ದೇಶಗಳೊಡನೆ ಹಂಚಿಕೊಳ್ಳುವುದಂತೂ ಕಲ್ಪನಾತೀತ. ಮತ್ತು ಕಮ್ಯೂನಿಸ್ಟ ವಿಚಾರಗಳು ಹಬ್ಬಿದವೆಂದರೆ ಇವೆರಡೂ ಬಂದಂತೆಯೇ ಸೈ. ಹೊಸ ಆಚಾರ್ಯನೊಬ್ಬನ ಧರ್ಮಕ್ಕೆ ಜನರು ಸೇರಿಕೊಂಡರೆ ಹಳೆ ಸಂಪ್ರದಾಯದ ಪುರೋಹಿತರೂ ಪೂಜಾರಿಗಳೂ ತಮ್ಮ ವೃತ್ತಿ ಕಳೆದು ಹೋಗುವುದೆಂದು ಅಂಜುವ ಹಾಗೆ ಇವರೂ ಅಂಜುತ್ತಾರೆ. ತಮ್ಮ ಪ್ರಸ್ತುತ ಸ್ಥಿತಿ ನೈತಿಕ ದೃಷ್ಟಿಯಿಂದ ಎಳ್ಳಷ್ಟೂ ನ್ಯಾಯವಲ್ಲೆಂದು ಅವರಿಗೆ ಗೊತ್ತಿದೆ. ಆದರೆ ಆ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕೆಂದು ಅವರ ಆಸೆ. ‘ಅದಕ್ಕಾಗಿ ಹೊಸ ವಿಚಾರಧಾರೆಯನ್ನು ಸಕಾಲದಲ್ಲೇ ಮುರಿದು ಹಾಕಲು ತಾವೆಲ್ಲರೂ ಒಮ್ಮತದಿಂದ ಹೆಣಗಬೇಕಾಗಿದೆಯೆಂದು ಅವರಿಗನಿಸುತ್ತದೆ. ಇವರಿಗಾದರೂ ಸಾಧನಶುದ್ಧಿಯಲ್ಲಿ ನಂಬಿಕೆಯಿಲ್ಲ. ರಶಿಯಕ್ಕಿಂತ ಅವರು ಶ್ರೀಮಂತರೂ ಸುಸಂಘಟಿತರೂ ಆಗಿರುವುದಲ್ಲದೆ ತಮ್ಮಲ್ಲಿ ಹೆಚ್ಚು ಭಯಾನಕವಾದ ಯುದ್ಧ ಸಾಮಗ್ರಿಗಳಿವೆಯೆಂದು ಭಾವಿಸಿಯೂ ಆಗಿದೆ. ಆದುದರಿಂದ ಕಮ್ಯೂನಿಸ್ಟರು ತೀರ ಬಲಿಷ್ಠರಾಗುವ ಮೊದಲೇ ಅವರೊಡನೆ ಏನಾದರೊಂದು ನೆವದಿಂದ ಜಗಳ ತೆಗೆಯಲು ಇವರು ಆತುರರು. ಹೀಗೆ ಎರಡೂ ಪಕ್ಷಗಳಿಗೂ ಒಮ್ಮೆ ಶಕ್ತಿ ಪರೀಕ್ಷೆ ಮಾಡಿಬಿಡುವ ಇಚ್ಛೆಯುಂಟೆಂದು ತೋರುತ್ತದೆ. ಕೊರಿಯ ಮತ್ತು ಜರ್ಮನಿ ಇವೆರಡೂ ಅಂಥ ನೆವವನ್ನು ಕೊಡಲು ಸಮರ್ಥವಾಗಿದ್ದವು. ಈಗಾಗಲೆ ಕೊರಿಯವು ಅದನ್ನೊದಗಿಸಿದೆ. ಜರ್ಮನಿಯಲ್ಲಿಯೂ ಒಂದು ನಿಮಿತ್ತ ದೊರಿಯಲು ಬಹಳ ವಿಲಂಬವಾಗದು. ಅಥವಾ ದಕ್ಷಿಣ ಕೊರಿಯ ಮತ್ತು ಜಪಾನುಗಳ ರಕ್ಷಣೆಗಾಗಿ ಸೋವಿಯಟ್ ನಿಯಂತ್ರಿತ ಜರ್ಮನಿಯ ಮೇಲೆ ಆಕ್ರಮಣ ಹೂಡುವುದು ಯುದ್ಧ ನೀತಿಯಲ್ಲಿ ಅವಶ್ಯಕವೆನಿಸಬಹುದು

### ಕುಸಂಧಿಗಳು.

ಎರಡನೇ ಮಹಾಯುದ್ಧಕ್ಕಿಂತ ಮುಂಚೆ ಪ್ರಜಾತಂತ್ರ ರಾಷ್ಟ್ರಗಳು ರಶಿಯದ ವಿರುದ್ಧ ನಾಜಿಗಳೊಡನೆಯೂ ಫ್ಯಾಸಿಸ್ಟರೊಡನೆಯೂ ಕುಸಂಧಿಯನ್ನು ಮಾಡಿಕೊಂಡಿದ್ದವು. ಯುದ್ಧಾರಂಭಕಾಲದಲ್ಲಿ ಫ್ಯಾಸಿಸ್ಟರೂ ನಾಜಿಗಳೂ ರಶಿಯದೊಡನೆ ಕುಸಂಧಿಯನ್ನು ಮಾಡಿಕೊಂಡು ಪ್ರಜಾತಂತ್ರಗಳನ್ನು ಹಣಿಯಲು ಹವಣಿಸಿದರು. ಯುದ್ಧ ಮಧ್ಯದಲ್ಲಿ ಈ ಕುಸಂಧಿ ಮುರಿದು ಹೋಗಿ ಪ್ರಜಾತಂತ್ರಗಳೂ ರಶಿಯವೂ ಅಚ್ಚಿನ ರಾಷ್ಟ್ರಗಳನ್ನು ಸದೆಬಡಿಯಲು ಹೊಸತೊಂದು ಕುಸಂಧಿಯನ್ನು ರಚಿಸಿಕೊಂಡವು. ಯುದ್ಧದಲ್ಲಿ ಅಚ್ಚಿನ ರಾಷ್ಟ್ರಗಳು ಉರುಳಿ ಬಿದ್ದಾಗ ಪ್ರಜಾತಂತ್ರಗಳಿಗೂ ರಶಿಯಕ್ಕೂ ತಮ್ಮ ದ್ವೇಷವನ್ನು ಪುನಃ ಸಾಧಿಸಲು ಅನುಕೂಲವಾಯಿತು. ಈ ಮೂರೂ ಗುಂಪುಗಳು ಮಾನವ ಕುಲದ ಮೇಲೆ ಒಂದರ ಹಿಂದೊಂದು ಅನ್ಯಾಯವನ್ನು ಮಾಡುತ್ತಾ ಬಂದಿವೆ; ಆದರೂ ಒಂದಕ್ಕೂ ಇನ್ನೂ ಪಶ್ಚಾತ್ತಾಪವಾಗಿಲ್ಲ. ಒಂದೊಂದೂ ಅದೇ ಪಾಪವನ್ನು ಪುನಃ ಮಾಡಲು ಸಿದ್ಧವಾಗಿದೆ.

### ಏಶಿಯಾದ ದೀರ್ಘ ನಿದ್ರೆ.

ಏಶಿಯಾದ ರಾಷ್ಟ್ರಗಳಿಗೆ—ಭಾರತವನ್ನೊಳಗೊಂಡು—ಈ ಚಿತ್ರದಲ್ಲಿ ಯಾವ ಸ್ಥಾನ? ನಾವು ಅತಿ ಜನದಟ್ಟಣೆಯಿಂದ, ಅತಿ ಬಡತನದಿಂದ ಅತಿ ನಿರಕ್ಷರತೆಯಿಂದ, ಅತಿ ಒಳಜಗಳಗಳಿಂದ ನಡೆಯುತ್ತಿದ್ದೇವೆ. ನಾವು ನಿದ್ದೆ ಮಾಡುತ್ತಿರಾ ಹೆಚ್ಚಾಯಿತ. ನಮ್ಮ ನಿದ್ರೆಯ ಕಾಲದಲ್ಲಿ ನಮ್ಮನ್ನು ಸಿಕ್ಕಬಟ್ಟೆ ಆಳಿ ಸೂರೆ ಮಾಡಲಾಯಿತು. ನಾವು ಇದೀಗ ಎಚ್ಚರುತ್ತಿದ್ದೇವೆ. ಇನ್ನೂ ಪೂರ್ತಿ ಎಚ್ಚತ್ತಿಲ್ಲ. ನಮ್ಮನ್ನು ಯಾವುದು ರಕ್ಷಿಸುತ್ತದೋ ನಮಗೆ ಸರಿಯಾಗಿ ಗೊತ್ತಾಗದೆ ಗೊಂದಲದಲ್ಲಿ ಬಿದ್ದಿದ್ದೇವೆ. ಕೆಲವರು ಸಹಾಯಕ್ಕಾಗಿ ಪ್ರಜಾತಂತ್ರಗಳತ್ತ ಆಶಾದೃಷ್ಟಿಯನ್ನು ಬೀರಿದರೆ ಮತ್ತೆ ಕೆಲವರು ರಶಿಯದತ್ತ ಹೊರಳುತ್ತಾರೆ. ಕೆಲವರು ಎರಡೂ ಪಕ್ಷಗಳನ್ನು ನಂಬಲಾರದವರಾಗಿದ್ದಾರೆ. ಆದರೆ ತಮಗೆ ತಮ್ಮ ಮನದ ನಿಜ ಬಯಕೆ ಗೊತ್ತಿಲ್ಲ. ಮತ್ತು ಸ್ವತಂತ್ರ ಮಾರ್ಗವೂ ಕಾಣುವುದಿಲ್ಲ. ಭಾರತದಲ್ಲಿ, ಗಾಂಧೀಜಿ ಅವರೊಂದು ನಿಶ್ಚಿತ ಮಾರ್ಗವನ್ನು ತೋರಿಸಿದರು. ಆದರೆ ಅವರನ್ನೂ ಚಂಚಲಚಿತ್ತರಾಗಿಯೇ ಇದ್ದಾರೆ.

### ಬಂಡವಾಳಶಾಹಿ ಹೋಗಬೇಕು.

ಗಾಂಧೀ ಮಾರ್ಗವನ್ನು ಒತ್ತಟ್ಟಿಗಿಟ್ಟರೂ ಒಂದು ಸಂಗತಿಯಂತೂ ಖಂಡಿತ. ಸದ್ಯದ ಬಂಡವಾಳಶಾಹಿ ಪದ್ಧತಿಯೂ ಜನತೆಯ ಸ್ಥಿತಿಮಟ್ಟವನ್ನು ಬೇಕುಬೇಕಾದಂತೆ ವಿಕಾಸನ ಸ್ವಾತಂತ್ರ್ಯ ಮತ್ತು ಸೌಕರ್ಯವೂ ತಾನೆ ಪ್ರಜಾತಂತ್ರವೆಂದಾದರೆ ಏಶಿಯಾದ ಜನರು ಅದನ್ನು ಬಹಳ ದಿನ ಸೈರಿಸಲಾರರು. ಬಂಡವಾಳಶಾಹಿ ಪದ್ಧತಿ ಶಾಂತಿಪ್ರಿಯವೂ ಪ್ರಗತಿಪರವೂ ಆದ ಕ್ರಮದಿಂದ ಅಳಿಯದಿದ್ದರೆ, ಬಲಿಷ್ಠ ಮತ್ತು ಫ್ಯಾಸಿಸ್ಟ ಮನೋವೃತ್ತಿಯ ರಾಷ್ಟ್ರವೂ ಏಶಿಯಾದಲ್ಲಿ ಕಮ್ಯೂನಿಜಂ ಪ್ರಸಾರವನ್ನು ತಡೆಯಲಾರದು. ಇಡೀ ಸೈಬೀರಿಯಾವೂ, ಇಡೀ ಚೀನವೂ, ನಾಲಬದ್ದಕ್ಕೆ ಉತ್ತರ ಕೊರಿಯವೂ ಪೂರ್ತಿ ಕಮ್ಯೂನಿಸ್ಟರ ವಶವಾಗಿರುವಾಗ ಮತ್ತು ಭಾರತದಲ್ಲಿಯೂ ಆಗ್ನೇಯ ಏಶಿಯಾದಲ್ಲಿಯೂ ಕಮ್ಯೂನಿಸ್ಟ್ ಪ್ರಭಾವ ಅಸ್ತಿತ್ವದಲ್ಲಿರುವಾಗ ಮತ್ತು ಬಹುಶಃ ಹೆಚ್ಚಾಗುತ್ತಿರುವಾಗ, ದಕ್ಷಿಣ ಕೊರಿಯನ್ನರು ಅಮೇರಿಕೆಯ ಪ್ರಜಾತಂತ್ರದ ಕೆಳಗೆ ಜನಶೋಷಣೆಯ ಪದ್ಧತಿ ತಲೆ ಎತ್ತಿದರೆ ಹೇಗೆ ಸಹಿಸಬಲ್ಲರು? ಏಶಿಯಾದಲ್ಲಿ ಕಮ್ಯೂನಿಜಂ ಹರಡಲು ಕೇವಲ ರಷ್ಯಾದ ಕುತಂತ್ರವೇ ಕಾರಣವೆಂದಾಗಲೀ ದೊಡ್ಡ ದೊಡ್ಡ ಸಾಲಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಒದಗಿಸಿದಾಕ್ಷಣ ಕಮ್ಯೂನಿಜಮನ್ನು ತಡೆಯುವುದೆಂದಾಗಲಿ ಭಾವಿಸಿದರೆ ಪ್ರಜಾತಂತ್ರಗಳು ಬಲು ದೊಡ್ಡ ಭ್ರಾಮಕ ಕಲ್ಪನೆಯಲ್ಲಿವೆಯೆಂದು ಹೇಳಬೇಕು. ಅದು ಹಬ್ಬುತ್ತಿರುವುದೇಕೆಂದರೆ, ಏಶಿಯಾ ದರಿದ್ರವಾಗಿದೆ, ಉಪವಾಸ ಬಿದ್ದಿದೆ. ಅಲ್ಲಿ ದಟ್ಟವಾದ ಜನಸಂಖ್ಯೆ ಇದೆ. ಮತ್ತು ಈ ದುರವಸ್ಥೆಯ ಪ್ರತೀತಿ ಅದಕ್ಕೆ ಉಂಟಾಗಿ-

(೭ನೇ ಪುಟಕ್ಕೆ ಸಾಗಿದೆ)

## ರಷ್ಯಾವು

# ಧಾಳಿ ಮಾಡಿದರೆ.....?

ದ್ವಿತೀಯ ಮಹಾ ಯುದ್ಧ ಕೊನೆಯಾಗಿ ಸಂಯುಕ್ತ ರಾಷ್ಟ್ರಗಳು ಜಯಶಾಲಿಗಳಾದುವು. ಜರ್ಮನಿಯ ನಿಃಶಸ್ತ್ರತೆಯಾಯಿತು. ಇದರ ಫಲವಾಗಿ ಪೂರ್ವ ಯೂರೋಪವೂ ಪಶ್ಚಿಮ ಯೂರೋಪವೂ ಶಾಂತತೆಯಿಂದ ಕಾಲಹರಣ ಮಾಡಬಹುದೆಂದು ಶಾಂತತಾ ಪ್ರೇಮಿಗಳು ಅಪೇಕ್ಷಿಸಿದ್ದರು. ಆದರೆ ಮೊದಲನೆಯ ಮಹಾಯುದ್ಧದಲ್ಲಿ ಮಿತ್ರ ರಾಷ್ಟ್ರಗಳು ಜಯ ಪಡೆದು ವ್ಹರ್ಸೇಲಿ ಒಪ್ಪಂದದ ಮೂಲಕ ಜರ್ಮನಿಯನ್ನು ಯೂರೋಪದ ತೊತ್ತನ್ನಾಗಿ ಮಾಡಿದಾಗಲೇ ದ್ವಿತೀಯ ಮಹಾಯುದ್ಧದ ಬೀಜಾರೋಪಣ ಮಾಡಿದಂತಾಯಿತೆಂದು ಅನೇಕ ಪಾಶ್ಚಾತ್ಯ ಮುತ್ಸದ್ದಿಗಳು ಆಗ ಎಚ್ಚರಿಕೆ ಕೊಟ್ಟಿದ್ದರು. ಆದರೆ ವಿಜಯೋನ್ಮಾದದಲ್ಲಿದ್ದ ರಾಷ್ಟ್ರಗಳಿಗೆ ಆವಾಗ ಎಚ್ಚರ ಬರಲಿಲ್ಲ.

ಕೇವಲ ೨೦ ವರ್ಷಗಳಲ್ಲಿ ಅಂದಿನ ಭವಿಷ್ಯವು ನಿಜವಾಗಿ ದ್ವಿತೀಯ ಮಹಾಯುದ್ಧವು ಮತ್ತೊಮ್ಮೆ ಇಡೀ ಪ್ರಪಂಚವನ್ನು ಆವರಿಸಿತು. ಅದರಲ್ಲಿ ಮಿತ್ರರಾಷ್ಟ್ರಗಳು ಯಶಸ್ವಿಯಾದವು. ಆದರೆ ಎರಡನೇ ಮಹಾಯುದ್ಧವು ಮುಗಿದು ಇನ್ನೂ ೫ ವರ್ಷಗಳಾಗುವಷ್ಟರಲ್ಲಿ ಮತ್ತೆ ಅದೇ ಪಾಶ್ಚಾತ್ಯ ರಾಷ್ಟ್ರಗಳ ರಾಜಕೀಯ ಚದುರಂಗದಾಟದ ಮೂಲಕ ಇನ್ನೊಂದು ಮಹಾ ಯುದ್ಧವು ತಲೆಯೆತ್ತುವ ಹಾಗೆ ಕಾಣುತ್ತಿದೆ. ಮೊದಲಿನ ಎರಡು ಮಹಾ ಯುದ್ಧಗಳಲ್ಲಿ ಇಂಗ್ಲೆಂಡ್-ಜರ್ಮನಿಗಳ ಮುಖ್ಯ ಭೂಮಿಕೆ ಇದ್ದರೆ ಈಗಿನ ಕಾಂಡದಲ್ಲಿ ಅಮೇರಿಕೆ-ರಷ್ಯಾಗಳ ಪ್ರಮುಖ ಪಾತ್ರವು ಎದ್ದು ಕಾಣುತ್ತಿದೆ.

ಈ ಯುದ್ಧಗಳಿಗೆ ಕಾರಣವು ಏನೇ ಇದ್ದರೂ ಅದರ ಹೊಣೆಗಾರಿಕೆ ಮಾತ್ರ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳ ಮೇಲೆಯೂ ಇದೆ. ಅಂತೆಯೇ ಅವು ಒಂದು ಮಹಾ ಯುದ್ಧವು ಮುಗಿದ ಕೂಡಲೆ ಇನ್ನೊಂದು ಮಹಾಯುದ್ಧದ ಪೂರ್ವ ಸಿದ್ಧತೆಯನ್ನೋ ಅಥವಾ ಸಂರಕ್ಷಣೆಯ ಸಿದ್ಧತೆಯನ್ನೋ ಮಾಡಿಕೊಳ್ಳುವದರಲ್ಲಿಯೇ ತಲ್ಲೀನವಾಗುತ್ತಿವೆ. ಮತ್ತು ಯುದ್ಧ ಭೀತಿಯಿಂದ ಗ್ರಸ್ತವಾದ ದೊಡ್ಡ ರಾಷ್ಟ್ರವು ಇತರ ಎಲ್ಲ ರಾಷ್ಟ್ರಗಳನ್ನು ಸಂಶಯಾತ್ಮ ದೃಷ್ಟಿಯಿಂದಲೇ ನೋಡುತ್ತ ಆ ರಾಷ್ಟ್ರಗಳ ಕೃತಿಗಳು ಏನೇ ಇದ್ದರೂ ತನ್ನನ್ನು [illegible] ಬಗೆದು ಅವುಗಳನ್ನು ತಾನೂ ಏನಾದರೂ ಮಾಡಬೇಕೆಂದು ಕೆಲವೊಂದು ಉಪಾಯಗಳನ್ನು ಯೋಚಿಸುತ್ತಿದೆ.' ಇನ್ನೊಂದು ರಾಷ್ಟ್ರವು, ಈ ರಾಷ್ಟ್ರವು ಕೈಕೊಂಡ ಯೋಜನೆಯನ್ನೂ ಸಂಶಯ ದೃಷ್ಟಿಯಿಂದಲೇ ನೋಡುತ್ತಾ ಹೋಗುವದರಿಂದ ಮೊದ ಮೊದಲು ಉಂಟಾದ ತಪ್ಪು ತಿಳುವಳಿಕೆಯು ಬೆಳೆಯುತ್ತ ಸಾಗಿ ಕೊನೆಗೆ ಅದು ವೈರಭಾವಕ್ಕೆಳೆಯುತ್ತಿದೆ. ಇಂದು ರಷ್ಯಾದ ವಿಷಯಕ್ಕೆ ಪಶ್ಚಿಮ ಯೂರೋಪದ ರಾಷ್ಟ್ರಗಳು ತಾಳಿದ ಭೀತಿಯ ಹಿನ್ನೆಲೆಯೇ ಇದಾಗಿದೆ.

ರಷ್ಯವು ಯಾವ ಕ್ಷಣದಲ್ಲಿ [illegible] ಮೇಲೆ [illegible] [illegible] ಗಿ ಬೀರಲಿದೆ. ಆ ಸಮಯ ಒದಗಿ ಬಂದಲ್ಲಿ ತಾವು ಏನು ಮಾಡಬೇಕು? ತಮ್ಮ ಸಂರಕ್ಷಣೆಯ ಬಗೆ ಹೇಗೆ? ಸೈನಿಕ ಶಕ್ತಿಯ ದೃಷ್ಟಿಯಿಂದ ನೋಡಿದರೆ ಇವರೆಲ್ಲರಗಿಂತ ಕೂಡ, ರಷ್ಯಾವು ಬಹಳ [illegible]. [illegible] ಒಪ್ಪಂದಕ್ಕೆ ಅಂಕಿತ ಹಾಕಿದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ರಾಷ್ಟ್ರಗಳು ೫ ಲಕ್ಷ ಸೈನಿಕ ಬಲವನ್ನು ಸಿದ್ಧಗೊಳಿಸಬೇಕೆಂದು ನಿರ್ಧರಿಸಿದ್ದರೂ ಆ ಸೈನಿಕ ಬಲವನ್ನು ೩ ಲಕ್ಷಕ್ಕಿಂತ ಹೆಚ್ಚಾಗಿ ಬೆಳೆಸಲು ಸಾಧ್ಯವಾಗಿಲ್ಲ. ಮೇಲಾಗಿ ಹಣದ ಕೊರತೆಯಂತೂ ಇದ್ದೇ ಇದೆ.

ಈ ಪರಿಸ್ಥಿತಿಯಲ್ಲಿ ರಷ್ಯಾವು ಏರಿ ಬಂದುದೇ ಆದರೆ ಅದನ್ನು ಎದುರಿಸುವ ಬಗೆ ಹೇಗೆ? ಆವಾಗ ಪಶ್ಚಿಮ ಯೂರೋಪದ ರಾಷ್ಟ್ರಗಳ ಗತಿಯೇನು? ಇವೇ ಮೊದಲಾದ ಪ್ರಶ್ನೆಗಳ ಬಗೆ ವಿಚಾರ ಮಾಡಿ [illegible] ದಕ್ಕಾಗಿ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ರಾಜಕಾರಣಿಗಳ ಒಂದು ಸಹಕಾರೀ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯಲ್ಲಿ ಫ್ರಾನ್ಸದ ಪರಿಯಿಂದ, ದ್ವಿತೀಯ ಮಹಾ ಯುದ್ಧದಲ್ಲಿ ಫ್ರಾನ್ಸದ ಪತನದ ಕಾಲದಲ್ಲಿ [illegible] ಗಿದ್ದ ಪಾಲ್ ರೇನೋ [illegible] ಮಂತ್ರಿಯಾಗಿದ್ದ [illegible] ಮೊದಲಾದವರು ಮತ್ತು ಇಂಗ್ಲೆಂಡದ ಪರಿಯಿಂದ ವೈಮಾನಿಕ ತಜ್ಞರಾದ ಲಾರ್ಡ್ ಬ್ಯಾಟೆಲ್ಶೀನ್, ಲಾರ್ಡ್ ವ್ಯಾನ್ಸಿಟರ್ಟ್ ಮೊದಲಾದವರಿದ್ದರು. ರಷ್ಯ ಧಾಳಿ ಮಾಡಿದರೆ ಆ ಧಾಳಿಯನ್ನು ಹೇಗೆ ಎದುರಿಸಬೇಕೆಂಬುದನ್ನೂ ಮತ್ತು ಧಾಳಿಯು ಆರಂಭವೇ ಆದಲ್ಲಿ ತಾವು ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನೂ ಸೂಚಿಸುವ ಒಂದು ವರದಿಯನ್ನು ಪಶ್ಚಿಮ ಯುರೋಪಿಯನ್ ರಾಷ್ಟ್ರಗಳ ಸಮಿತಿಯ ಪರವಾಗಿ ಅದರ ಡೈರೆಕ್ಟರ್ ಜನರಲ್ಲರಾದ ಮಿ. ರಾಬರ್ಟ್ ಬೋಲೀಬ್‌ರವರ ಅಂಕಿತದಲ್ಲಿ ಪ್ರಕಟಿಸಿದ್ದಾರೆ. ಆ ವರದಿಯ ಮುಖ್ಯ ಅಂಶಗಳು ಹೀಗಿವೆ:—

"ರಷ್ಯಾವು ಒಮ್ಮಿಂದೊಮ್ಮೆ ಪಶ್ಚಿಮ ಯೂರೋಪದ ಮೇಲೆ ಆಕಸ್ಮಿಕವಾಗಿ ಮಿಂಚಿನ ವೇಗದ ಧಾಳಿಯನ್ನಾರಂಭಿಸಿದರೆ ಸೈನಿಕ ಶಕ್ತಿಯಿಂದ ಅದನ್ನೆದುರಿಸುವುದು ಅಸಾಧ್ಯ. ಯಾಕೆಂದರೆ ರಷ್ಯಾದ ೨೫ ಲಕ್ಷ ಸುಸಜ್ಜಿತ ಸೈನ್ಯದೆದುರು ತನ್ನ ೩ ಲಕ್ಷ ಸೈನ್ಯವು ಯಾವ ಗಿಡದ ತೊಪ್ಪಲು? ಆದ್ದರಿಂದ ರಷ್ಯಾವು ಧಾಳಿಯನ್ನಾರಂಭಿಸಿದ ನಂತರ ಮೊದ ಮೊದಲು ತಮಗೆ ಅತೀವ ಹಾನಿಯಾದರೂ "ಯುದ್ಧವನ್ನು ಯುದ್ಧವೇ ಕೊಲ್ಲುವುದು" ಎಂಬ ಫ್ರೆಂಚ್ ಸೈನ್ಯ ಶಾಸ್ತ್ರಜ್ಞ ಲುಯಿ ಫ್ಯಾಕ್ಟರನ ತತ್ವದಂತೆ ನಡೆಯಬೇಕಾಗುವುದು. (ಲುಯಿ ಫ್ಯಾಕ್ಟರನು ಮುಂದಾಗಬಹುದಾದ ಯುದ್ಧಗಳ ಮತ್ತು ಆ ಯುದ್ಧಗಳಲ್ಲಿ ಉಪಯೋಗಿಸಲಾಗುವ ಶಸ್ತ್ರಾಸ್ತ್ರಗಳ ವಿವರವಾಗಿ ಹೇಳುತ್ತ ಮುಂದಾಗುವ ಯುದ್ಧಗಳಲ್ಲಿ ಜಯಶಾಲಿ ಪಕ್ಷ ಮತ್ತು ಸೋತ ಪಕ್ಷ ಹೀಗೆ ಉಳಿಯುವುದೇ ಇಲ್ಲ. ಯಾಕೆಂದರೆ ಮುಂದಿನ ಯುದ್ಧಗಳಲ್ಲಿ ಅತ್ಯಂತ ಘಾತುಕವಾದ ಕ್ರಿಮಿ ಯುದ್ಧಗಳಾಗುವದರಿಂದ ಯುದ್ಧದ ಪಕ್ಷಗಳೆಲ್ಲವೂ ವಿನಾಶವಾಗಿ ಹೋಗುವುದರಿಂದ ಗೆಲುವನ್ನಾಗಲೀ ಸೋಲನ್ನಾಗಲೀ ಪಡೆಯುವ ಪಕ್ಷಗಳೇ ಉಳಿಯುವುದಿಲ್ಲ. ಆದುದರಿಂದ ಇಂಥ ಪ್ರಳಯಕಾರಕ ಶಸ್ತ್ರಗಳಿಗಂಜಿ ಮುಂದೆ ಪ್ರಪಂಚದಲ್ಲಿ ಯುದ್ಧವೂ ಆಗುವುದಿಲ್ಲ ಎಂದು ಪ್ರತಿಪಾದಿಸಿದ್ದಾನೆ.)

ಒಮ್ಮಿಂದೊಮ್ಮೆ ಯುದ್ಧವೇ ಆದರೆ, ಅಂಥ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಅಣುಬಾಂಬುಗಳನ್ನು ಬಹಿಷ್ಕರಿಸಬೇಕೆಂಬ ಸೂಚನೆಗಳನ್ನು ಮನ್ನಿಸಲಾಗದು. ಮತ್ತು ಪ್ರತಿಯೊಂದು ರಾಷ್ಟ್ರದ ವಶದಲ್ಲಿ ಸಾವಿರಾರು ಅಣುಬಾಂಬು, ನೂರಾರು ಹೈಡ್ರೋಜನ್ ಬಾಂಬು, ಅನೇಕ ವಿಧದ ಕ್ರಿಮಿ ಯುದ್ಧಾಸ್ತ್ರಗಳು ಇದ್ದರೆ ರಷ್ಯಾವು ಪಶ್ಚಿಮ ಯೂರೋಪದ ಮೇಲೆ ಧಾಳಿ ಮಾಡಿದ್ದೇ ತಡ, ಮುಂದೆ ಕೆಲವೇ ಗಂಟೆಗಳಲ್ಲಿ ರಷ್ಯಾದ ಮಾಸ್ಕೋ, ಪೆಟ್ರೋಗ್ರಾಡ್, ಕೀವ್, ಒಡೆಸ್ಸಾ, [illegible] ಮತ್ತು ಸ್ಟಾಲಿನ್‌ಗ್ರಾಡ್, ಮ್ಯಾಗ್ನಿಟೋಗೋರ್ಸ್ಕ ಮೊದಲಾದ ಪ್ರಮುಖ ಔದ್ಯೋಗಿಕ ಕೇಂದ್ರಗಳು ಹೇಳ ಹೆಸರಿಲ್ಲದಂತಾಗುವವು. ಮತ್ತು ಯುಕ್ರೇನ ಸೈಬೀರಿಯಾಗಳ ಮತ್ತು [illegible] ಲಿನ ಸಾವಿರಾರು [illegible] ಪ್ರದೇಶಗಳಲ್ಲಿಯ ಫಲ [illegible] ಬೆಳೆಯು [illegible].

ಈ ಉಪಾಯವು [illegible] ವಿರದೆ ಆಕ್ರಮಣದ ಪ್ರತೀಕಾರವಿದ್ದು ಆಕ್ರಮಣದ ಪ್ರತೀಕಾರವು ಸಹಿತ ಯುದ್ಧನೀತಿಗನುಸರಿಸಿ ಸಂರಕ್ಷಣೆಯ ಯೋಜನೆಯ ಒಂದು ಅಂಗವಾಗಿದೆ. ಅದಕ್ಕಾಗಿ ಪಶ್ಚಿಮ ಯೂರೋಪಿಯನ್ ರಾಷ್ಟ್ರಗಳು ಈಗ ಅನುಸರಿಸುತ್ತ ಬಂದ ನಿಷ್ಕ್ರಿಯ ಧೋರಣೆಯನ್ನು ಬಿಟ್ಟುಕೊಟ್ಟು ಇವೆಲ್ಲ ಒಂದುಗೂಡಬೇಕು. ಮತ್ತು ಅವುಗಳ ಪದಾತಿ ದಳದ ಸಹಾಯಕ್ಕೆಂದು ಪ್ರಥಮ ಶ್ರೇಣಿಯ ೪,೫೦೦೦ ಬಾಂಬರ ವಿಮಾನಗಳನ್ನು ಬೇರೆ ಬೇರೆ ೪೦-೫೦ ವಿಮಾನ ನಿಲ್ದಾಣಗಳಲ್ಲಿ ಪೂರ್ಣ ಸಿದ್ಧತೆಯಲ್ಲಿಡಬೇಕು. ಮತ್ತು ಅವು ಅಣುಬಾಂಬುಗಳನ್ನು ಹೇರಿಕೊಂಡು ಸಿದ್ಧವಾಗಿರಬೇಕು.

ಇದು ಯುದ್ಧದ ಪ್ರತ್ಯಕ್ಷ ಸಿದ್ಧತೆಯಾಯಿತು. ಇಷ್ಟಕ್ಕೇ ಈ ಕಾರ್ಯವು ಮುಗಿಯಲಿಲ್ಲ. ಪಶ್ಚಿಮ ಯೂರೋಪದ [illegible] ಎಲ್ಲ ರಾಷ್ಟ್ರಗಳಲ್ಲಿ ಲಕ್ಷಾವಧಿ ಜನ ಕಮ್ಯೂನಿಸ್ಟ್ ಪಂಥವನ್ನು [illegible] ತುಂಬಿಕೊಂಡಿದ್ದಾರೆ. ಅವರು ರಷ್ಯಾದ ಧಾಳಿಯು ಪ್ರಾರಂಭವಾಗುತ್ತಲೇ ಇತ್ತ ಈ ಪಂಚಮ ದಳಗಳ ಚಟುವಟಿಕೆಗಳೂ ಒಳಗಿನಿಂದ ಶುರುವ [illegible] ಲ್ಲಿ ಸಂದೇಹವಿಲ್ಲ. ಇವರ ಚಟುವಟಿಕೆಗಳನ್ನು ಸದೆಬಡಿಯಲಿಕ್ಕೂ ಮತ್ತು ವೈರಿಯು ಆಕ್ರಮಿಸಿದ ಪ್ರದೇಶದಲ್ಲಿ ವೈರಿಯ ಆಡಳಿತವು ಸುಸೂತ್ರವಾಗಿ ಸಾಗದಂತೆ ನೋಡಿಕೊಳ್ಳುವುದಕ್ಕೂ ಪ್ರತಿಯೊಂದು ರಾಷ್ಟ್ರದಲ್ಲಿ ಕೂಟ ಯೋದ್ಧರ ಪಡೆಗಳ ನಿರ್ಮಾಣವಾಗಬೇಕು. ವೈರಿ ಹಸ್ತಗತವಾದ ಪ್ರದೇಶದಲ್ಲಿ ಒಳಗಿನಿಂದ ಕೂಟಯೋದ್ಧರೂ ಎದುರಿನಿಂದ ನಮ್ಮ ಸೈನಿಕರೂ ಪ್ರತಿಧಾಳಿಯನ್ನಾರಂಭಿಸಿದರೆ ವೈರಿ ಬಲವ ನಿರ್ಬಲವು ಕ್ಷಣಿಕವಾಗುವದರಲ್ಲಿ ಸಂಶಯವಿಲ್ಲ".

ಮೇಲಿನ ವರದಿಯನ್ನು ನೋಡಿದರೆ ಯುದ್ಧದಲ್ಲಿ ಜಯಶಾಲಿಗಳಾಗಿದ್ದರೂ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಪಶ್ಚಿಮ ಯೂರೋಪದ ರಾಷ್ಟ್ರಗಳು ಇಂದು ಎಂತಹ ಭೀತಿಯ ವಾತಾವರಣದಲ್ಲಿ ಕಾಲ ಕಳೆಯುತ್ತಿವೆಯೆಂಬುದು ಗೊತ್ತಾಗದಿರದು.

"ಜೈಹಿಂದ"

---

## ತೂತು-ಬಾವಿ ಯೋಜನೆಗೆ ನಾಲ್ಕುಕೋಟಿ ರೂಪಾಯಿ.

ಮದ್ರಾಸು ಮತ್ತು ಒರಿಸ್ಸಾ ಪ್ರಾಂತ್ಯಗಳಲ್ಲಿ [illegible] ಕರಾವಳಿಯಲ್ಲಿರುವ ವಿಸ್ತಾರ ಕ್ಷೇತ್ರಗಳನ್ನು ಕೃಷಿಗೆ ಅನುಕೂಲಗೊಳಿಸುವ ಬಗ್ಗೆ ನಾಲ್ಕುಕೋಟಿ ರೂಪಾಯಿಯ ಅಂತರ್-ಸಂಸ್ಥಾನ ತೂತು ಬಾವಿ ಯೋಜನೆಯೊಂದನ್ನು [illegible] ಸರಕಾರದ ಪರ್ಯಾಲೋಚನೆಗೆ ಬಗ್ಗೆ ಭಾರತದ ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಸೂಚಿಸಿರುವರು. ಮದ್ರಾಸು ಸೆಕ್ರೆಟೇರಿಯಟ್ಟಲ್ಲಿ ನಡೆದ ಆಹಾರ ಕುರಿತಾದ ಮಂತ್ರಿಗಳ ಒಂದು ಪ್ರಮುಖ ಸಮ್ಮೇಳನದಲ್ಲಿ ಶ್ರೀ ಮುನ್ಷಿಯವರು ಈ ಯೋಜನೆಯ ವಿಚಾರ ಎತ್ತಿದರಾಗಿದೆ. ಒರಿಸ್ಸಾ ಮತ್ತು ಮದ್ರಾಸು ಸಂಸ್ಥಾನಗಳಲ್ಲಿ ಅಪಾರ ಸಂಖ್ಯೆಯಲ್ಲಿ ತೂತು ಬಾವಿಗಳನ್ನು ಕೊರೆದು ಆ ಮೂಲಕ ಕೃಷಿಗೆ ಅವಶ್ಯವಿರುವ ನೀರನ್ನು ಒದಗಿಸಿಕೊಡುವುದು ಯೋಜನೆಯ ಮುಖ್ಯ ತತ್ವವಾಗಿದೆ. ಪ್ರತಿಯೊಂದು ತೂತು ಬಾವಿಗೆ ಸುಮಾರು ೪೦,೦೦೦ ರೂಪಾಯಿ ಖರ್ಚು ತಗಲಬಹುದು. ಅಂತಹ ಬಾವಿಗಳಿಂದ ಕೃಷಿಗೆ ವಿಪುಲ ನೀರಿನ ಸರಬರಾಯಿ ಸಿಗುವುದರಲ್ಲಿ ಸಂದೇಹವಿಲ್ಲ. ಆಹಾರದ ಕುರಿತು ಸ್ವಾವಲಂಬಿಯಾಗುವ ಮದ್ರಾಸಿನ ಉತ್ಸಾಹಗಳಿಗೆ ಈ ಯೋಜನೆ ತುಂಬ ಸಹಕಾರಿಯಾಗದಿರದು. ಸುಮಾರು ೪½ ಕೋಟಿ ರೂಪಾಯಿ ವೆಚ್ಚದ ಅಂತಹುದೇ ಒಂದು ಯೋಜನೆ ಸಂಯುಕ್ತ ಪ್ರಾಂತ-ಪಂಜಾಬಗಳ ಬಗ್ಗೆ ಯೋಚಿಸಲಾಗಿದೆಯೆಂದೂ ಆಹಾರ ಮಂತ್ರಿಗಳು ಸೂಚಿಸಿದರು. ಮದ್ರಾಸು-ಒರಿಸ್ಸಾ ಯೋಜನೆಗೆ ಬೇಕಾದ ೪ ಕೋಟಿ ರೂಪಾಯಿಯನ್ನು ಅವಶ್ಯವಿದ್ದರೆ ಕೇಂದ್ರ ಸರಕಾರದ ಕಡೆಯಿಂದ ಸಾಲದ ರೂಪದಲ್ಲಿ ಕೊಡಿಸಬಹುದೆಂದೂ ಶ್ರೀ. ಮುನ್ಷಿಯವರು ಮದ್ರಾಸು ಸರಕಾರಕ್ಕೆ ಸೂಚಿಸಿರುವರು. ನೀರಿನ ಸರಬರಾಯಿ ಎಲ್ಲಿ ವಿಪುಲವಾಗಿ ದೊರೆವುದೆಂಬುದನ್ನು ಸುಲಭವಾಗಿ ಕಂಡು ಹಿಡಿಯಬಲ್ಲ ಯೋಗಿಯೊಬ್ಬನು ರಾಜಸ್ಥಾನದಲ್ಲಿರುವನೆಂದೂ ಅವನ ಸಹಾಯವನ್ನು ಈ ವಿಚಾರದಲ್ಲಿ ಪಡೆಯಬಹುದೆಂದೂ ಆಹಾರ ಮಂತ್ರಿಗಳು ತಿಳಿಸಿದ್ದಾರೆ. ಯಾವುದೇ ಒಂದು ಯಂತ್ರ ಇಲ್ಲವೆ ಸಲಕರಣದ ಸಹಾಯವಿಲ್ಲದೆ ರಾಜಸ್ಥಾನದ ಯೋಗಿಯು ನೀರು ಎಲ್ಲಿದೆ [illegible] ಎಂಬುದನ್ನು ಕಂಡುಹಿಡಿಯಬಲ್ಲನಂತೆ!

---

# ಓದುಗರ ಓಲೆಗಳು.

### ಸ್ಕೂಲ ಫೈನಲ್ ಸಪ್ಲಿಮೆಂಟರಿ ಪರೀಕ್ಷೆ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾಗದ ವಿದ್ಯಾರ್ಥಿಗಳ ಸಂಖ್ಯೆ ಈ ಸಲ ಜಾಸ್ತಿ. ಅಕ್ಟೋಬರ್ ಪ್ರಥಮ ವಾರದಲ್ಲಿ ನಡೆಯಲಿರುವ ಸಪ್ಲಿಮೆಂಟರಿ ಪರೀಕ್ಷೆಗೆ ಕೂರಬೇಕಾಗಿದೆ. ಸಪ್ಲಿಮೆಂಟರಿ ಪರೀಕ್ಷೆಗೆ ಕಳೆದ ಪರೀಕ್ಷೆಗಿಟ್ಟ ಪಾಠ ವಿಷಯಗಳನ್ನೆ ಇಡುವದು ಸರಿ. ಆದರೆ ಈ ಸರಿ ಕೆಲವು ಹೊಸ ಪಾಠಗಳನ್ನು ಸೇರಿಸಿದರು. ಇದು ನಿಜವಾಗಿಯೂ ವಿದ್ಯಾರ್ಥಿಗಳಿಗೆ ತೊಡಕಾಗುವದು. ಕಳೆದ ಪರೀಕ್ಷೆಗೆ ಮದ್ರಾಸ್ ಪ್ರಾಂತದಲ್ಲಿ ಕುಳಿತ ಸುಮಾರು ೬೭೦೦೦ ವಿದ್ಯಾರ್ಥಿಗಳಲ್ಲಿ ೪೦,೦೦೦ ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಸೋತು ಹೋಗಿದ್ದಾರೆ. ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತುಕೊಳ್ಳುವ ಯೋಗ್ಯತೆ ಲಭಿಸಿದ್ದರೆ ಕಷ್ಟವಾಗುತ್ತಿರಲಿಲ್ಲ. ಪುನಹ ಹೊಸ ಪಾಠಗಳಿಂದರೆ ಅನ್ಯಾಯ. ಅದ್ದರಿಂದ ಪರೀಕ್ಷಾ ಬೋರ್ಡಿನವರು ಹೊಸ ಪಠ್ಯಭಾಗಗಳನ್ನು ರದ್ದುಮಾಡಬೇಕು.

ಕೊಡಗಿನಲ್ಲಿ ಪರೀಕ್ಷೆಗೆ ಕೂತ ವಿದ್ಯಾರ್ಥಿಗಳಲ್ಲಿ ಸುಮಾರು ೩೦೦ ಕ್ಕೂ ಮಿಕ್ಕಿ ಸೋತಿದ್ದಾರೆ. ಇವರಿಗೆ ಸಪ್ಲಿಮೆಂಟರಿ ಪರೀಕ್ಷೆಗೆ ಕೂರುವರೆ ಯೋಗ್ಯ ರೀತಿ ತರಬೇತಿನ ಅನುಕೂಲವಿಲ್ಲ. ವೀರರಾಜಪೇಟೆಯಲ್ಲಿ ಖಾಸಗಿ ತರಗತಿಯನ್ನು ಕೆಲವರು ತೆರೆದರಂತೆ. ಅದೇ ರೀತಿ ಮಡಿಕೇರಿಯಲ್ಲಿಯೂ ತೆರೆದಿಟ್ಟರೆ ಅನೇಕ ವಿದ್ಯಾರ್ಥಿಗಳಿಗೆ ಸಹಾಯವಾಗುವದು. ಇನ್ನು ಪರೀಕ್ಷೆಗೆ ಕೇವಲ ಎರಡೂವರೆ ತಿಂಗಳಿರುವ ಕಾರಣ ಶೀಘ್ರ ಈ ಏರ್ಪಾಡು ಮಾಡಿದಷ್ಟು ಒಳಿತು.

ಹಿತಚಿಂತಕ

---

### ಆರಾಮ ಕುರ್ಚಿ ಅಡಳಿತ?

ಕೊಡಗಿನ ಆಡಳಿತವು ಆರಾಮ ಕುರ್ಚಿ ಆಡಳಿತವಾಗ ತೊಡಗಿದೆಯೆಂದು ನಾನು ಕಳೆದ ವಾರ ಬರೆದಿದ್ದೆನು. ಅದಕ್ಕೆ ಹಲವು ಕಾರಣಗಳನ್ನು ತೋರ್ಪಡಿಸಿದ್ದೆನು. ಈ ಪತ್ರದಲ್ಲಿ ಅದಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.

ನಮ್ಮ ಕಾಲೇಜಿನಲ್ಲಿ ಹುಟ್ಟಿಸ ತರಗತಿ ತೆರೆಯಲ್ಪಟ್ಟಿರುವವರಿಂದ ಲೆಕ್ಚರರುಗಳ ಜವಾಬ್ದಾರಿ ಇರುವುದನ್ನು ಗಮನಿಸಿ ಸರಕಾರವು ಈ ವರೆಗೆ ಯಾವ ಏರ್ಪಾಡೂ ಮಾಡಲಿಲ್ಲ. ಬರಲ ಕಾಲೇಜು ತೆರೆದ ನಂತರ ಅಂದರೆ ತರೀಕು ೩–೭–೫೦ ರಲ್ಲಿ 'ಸ್ಟಾಫ್ ಸಿಲೆಕ್ಷನ್' ಬೋರ್ಡ ಮೀಟಿಂಗು ನಡಿಸಿ ಉಮೇದುವಾರರನ್ನು ಪರಿಶೀಲಿಸಿದರು. ಈ ಪರಿಶೀಲನೆ ನಡೆಸಿ ಇಂದಿಗೆ ೧೫ ದಿನಗಳಾದರೂ ಯಾರ ನೇಮಕವೂ ಆಗಿಲ್ಲವೆಂದರೆ ಈ ಚಾರಿತ್ರಿಕ ನಿಧಾನಕ್ಕೆ ಏನ ಹೇಳಬೇಕ? ಏನು ಈ ನೇಮಕಕ್ಕೆ ಡೆಲ್ಲಿಯಿಂದ ಆಜ್ಞೆ ಬರಬೇಕೆ? ೧೫ ದಿನಗಳೊಳಗೆ ಡೆಲ್ಲಿಯಿಂದಲಾದರೂ ಆಜ್ಞೆ ಬರಬಹುದಿತ್ತು. ಆದರೆ ಚೀಫ್ ಕಮಿಷನರ ಮಾಗಿನ ಕೆಳಗೆ ಎಂಬುದಿರುವ ಕಲೇಜಿಗೆ ಆಜ್ಞೆ ಬಂದಿಲ್ಲವೆಂದರೆ ಇದಕ್ಕೆ ಕೊಡಗಿನವರ ದುರಾದೃಷ್ಟವೇ ಕಾರಣ? ಕಾಲೇಜಿನಲ್ಲಿ ಅಧ್ಯಾಪಕರಿಲ್ಲದ ಜೂನಿಯರ್ ತರಗತಿಯ ವಿದ್ಯಾರ್ಥಿಗಳು ಕಾಲಹರಣ ಮಾಡಬೇಕಾಗಿ ಬಂದಿದೆ. ಇನ್ನಾದರೂ ಶೀಘ್ರ ವರ್ತಿಸಬಾರದ?

'ವಿದ್ಯಾಭಿಮಾನಿ'

---

### 'ಬರೇಗುಲ್ಲ ನಿದ್ದೆಗೇಡು'

ಕೇಂದ್ರದಿಂದ ಏರ್ಪಡಿಸಲ್ಪಟ್ಟ ಸೆಂಟ್ರಲ್ ವಾಟರ್, ಇರಿಗೇಶನ್ ಮತ್ತು ನೇವಿಗೇಶನ್ ಇಲಾಖೆಯು ಬೇರೆ ಕಡೆಗಳಲ್ಲಿ ನವರೀತಿ ರೀತಿಗಳನ್ನು ಜಾರಿಗೆ ತಂದಿತ್ತಲಾಗಿ ಅವರ ಕೆಲಸ ಕಾರ್ಯಗಳು ಸಂತುಷ್ಟಿಗೊಳಿಸಲ್ಪಟ್ಟವೋ. ಅದೇ ರೀತಿ ಕೊಡಗಿನಲ್ಲಿಯೂ ಅವರ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯಲಿಲ್ಲ. ಲಕ್ಷ್ಮಣತೀರ್ಥ ಅಣೆಕಟ್ಟಿನ ವಿಚಾರ ಪರಿಶೀಲಿಸಿ ಯೋಜನೆ ತಯಾರಿಸಿ ಕೆಲಸ ಪ್ರಾರಂಭಿಸುವದೆಂದಾಯಿತು. ಇತ್ತಲಾಗಿ ಪುನಹ ಯಾರೋ ಬಂದು ಆ ಸ್ಥಳವನ್ನು ನೋಡಿ ಕಟ್ಟೆಯನ್ನು ಇನ್ನೂ ಸುಮಾರು ಮೈಲು ಮೇಲೆ ಬೇರೊಂದು ಸ್ಥಳದಲ್ಲಿ ನಿಲ್ಲಿಸಬೇಕೆಂದು ಹೇಳಿರುವರಂತೆ! ಈ ವರೆಗೆ ಮಾಡಿದ ಅಂದಾಜು, ಯೋಜನೆಗಳು ಪುನಹ ಮಾರ್ಪಡಿಸಬೇಕಾಗುವದು! ಇದಕ್ಕೆ ಪುನಹ ಬಡ ರೈತನ ಹಣದ ವ್ಯಯ! ಕಾವೇರಿ ನೀರಾವರಿ ಯೋಜನೆಯು ಪರಿಶೀಲನೆಯಲ್ಲಿ ನಡೆದಿದೆಯಂತೆ! ಆದು ಎಲ್ಲಿಗೆ ಮುಟ್ಟಿದೆಯೋ ದೇವರೇ ಬಲ್ಲ. ಅಧಿಕಾರಿಗಳು ಬರುತ್ತಾರೆ, ನೋಡುತ್ತಾರೆ, ವರದಿ ಮಾಡುತ್ತಾರೆ. ಇವರ ಈ ಪರಿಶೋಧನೆಗಾಗಿ ವೆಚ್ಚವಾದ ಹಣದಿಂದಲೇ ಸಾಧಾರಣದ ಅಣೆಕಟ್ಟು ಆಗಬಹುದಿತ್ತೇನೋ! ಇಷ್ಟೆಲ್ಲ ಮಾಡಿ ಏನು? ಎಲ್ಲಿಯೂ ನೀರಾವರಿ ಲಕ್ಷ್ಮಣತೀರ್ಥವೂ ಇಲ್ಲ, ಹಾರಂಗಿಯ ಯೋಜನೆ ಬಗ್ಗೆ ಯೋಜನೆ ಮಾಡಿ ಹೇಳುವವರೇ ಬೇಡ ಹಾಗಿದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಹೊರಟ ಯೋಜನೆಗಳು ಒಂದೆರಡಲ್ಲ. ಆದರೆ ರೈತನ ಹಿತದೃಷ್ಟಿಯಿಂದ ಬಂದ ಯೋಜನೆ ಈ ವರೆಗೆ ಜಾರಿಗೆ ಬಂದಿರುವದಿಲ್ಲ. ಇತ್ತಲಾಗಿ ಕೇಂದ್ರ ಸರಕಾರದ ವಿಚಾರ ಹೋಗಿದೆ. ಕಟ್ಟುಪ್ಪಾಡು ಎಲ್ಲದಕ್ಕೂ ಸ್ಪೂರ್ತಿ ನೀಡುತ್ತಿದೆ. ಪರತಂತ್ರವೋ, ಸ್ವಾತಂತ್ರ್ಯವೋ ಬಡ ರೈತನ ಸ್ಥಿತಿ ಅಂದೂ ಇಂದೂ ಎಲ್ಲ ಒಂದೆ.

C K T

---

### ಪಿ ಪಿ ಡಬ್ಲ್ಯು. ಡಿ

ಕೇಂದ್ರದ ಪಿಡಬ್ಲ್ಯುಡಿ ಸ್ತರದ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲವು ಕಾರ್ಯಗಳು ಕೊಂಚ ಅತೃಪ್ತಿಕರವೆಂದು ಹಲವು ಬಾರಿ ಟೀಕಿಸಲಾಗಿದೆ. ಕಳೆದ ಕೌನ್ಸಿಲಿನಲ್ಲಿ ಪ್ರತಿನಿಧಿಯೊಬ್ಬರೂ ಇವರ ಕೆಲಸವನ್ನು ಟೀಕಿಸಿದ್ದಾನೆ. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಈ ಇಲಾಖೆಯು ಎಲ್ಲಿ ಯಾವ ಕೆಲಸ ಮಾಡುತ್ತಿದೆಯೋ ದೇವರೇ ಬಲ್ಲ. ಮಡಿಕೇರಿ ಕೊಡಗಿನ ರಾಜಧಾನಿ. ಮಡಿಕೇರಿಯಿಂದ ಮಹದೇವಪೇಟೆಗಾಗಿ ಮಾದಾಪುರಕ್ಕೆ ಹೋಗುವ ರಸ್ತೆ ನೋಡಬೇಕು. ಕಳೆದ ಹತ್ತು ವರ್ಷಗಳಿಂದ ಯಾವ ರಿಪೇರಿಯೂ ಇಲ್ಲದೆ ಇದೆ. ವೀರರಾಜಪೇಟೆ ಕಟ್ಟೆ ರಸ್ತೆಯನ್ನು ಚೀಫ್ ಕಮಿಷನರು ನೋಡಬೇಕು. ಬಹುಶಃ ಹೊಸ ಕಾರು ಇರುವ ಅವರು ಆ ಪ್ರಯತ್ನ ಮಾಡಲಾರರು! ಈ ರೀತಿಯ ಕರ್ತವ್ಯನ್ಯೂನತೆಯನ್ನು ಜನತೆ ಸಹಿಸಿ ಕೂತಿದೆ! ಸ್ಥಳೀಯ ಸರಕಾರವು ಈ ಇಲಾಖೆಯನ್ನು ಪುನಹ ತನ್ನ ಹತೋಟಿಗೆ ತರಲು ಯತ್ನಿಸುವದಲ್ಲದೆ ಈ ಇಲಾಖೆಯು ಸ್ವಲ್ಪ ಎಚ್ಚೆತ್ತು ವರ್ತಿಸುವಂತೆ ನೋಡಬೇಕು.

'ಪ್ರಯಾಣಿಕ'

---

### ವೇತನಕ್ಕೆ ಸರಿಯಾದ ದುಡಿಮೆ?

ಕೊಡಗಿನ ಜಿಲ್ಲಾ ಬೋರ್ಡ್ ಉದ್ಯೋಗಿಗಳ ಕೂಗೊಂದು ಹಲವು ವರ್ಷಗಳಿಂದ ಕೇಳಬರುತಿದ್ದರೂ ಅವರ ಬೇಡಿಕೆಗಳು ಈ ವರೆಗೂ ಸಲ್ಲಿಸಲ್ಪಡದಿರುವ ಕಾರಣ ಅವರ ಕೂಗೂ ನಿಂತಿಲ್ಲ. ಇತ್ತಲಾಗಿ ವೇತನಕ್ಕೆ ಸರಿಯಾದ ಕೆಲಸ ಮಾಡಿ ಉಳಿದ ದಿನಗಳಲ್ಲಿ ಕೆಲಸ ಮಾಡದೆ ಮುಷ್ಕರ ಹೂಡುವ ಮಾತುಗಳೂ ಕೇಳಬರುತ್ತಿವೆ.

ಕೊಡಗು ಜಿಲ್ಲಾ ಬೋರ್ಡ್ ಉದ್ಯೋಗಿಗಳ ವೇತನವು ಈ ಮೊದಲೆಂದು ಚೀಫ್ ಕಮಿಷನರು ಒಂದು ಸಭೆಯಲ್ಲಿ ಹೇಳಿದಂತೆ ಮೈಸೂರು ಯಾ ಮದ್ರಾಸಿನ ಬೋರ್ಡ್ ಉದ್ಯೋಗಿಗಳ ವೇತನಕ್ಕಿಂತ ಹೆಚ್ಚಿರಬಹುದು. ಆದರೆ ಆಸಮಾಧಾನದ ಗಟ್ಟಿ ಅಲ್ಲಿಲ್ಲ. ಒಂದೇ ರೀತಿ ಕೆಲಸ ಮಾಡುತ್ತಿರುವ ಜಿಲ್ಲಾ ಬೋರ್ಡ್ ಮತ್ತು ಸರಕಾರಿ ಉದ್ಯೋಗಿಗಳ ವೇತನದಲ್ಲಿರುವ ಮಹಾ ಅಂತರವೇ ಈ ಅಸಮಾಧಾನಕ್ಕೆ ಅನುವಾದದೆ. ಈ ಕೇಳಿಕೆಯಲ್ಲಿ ನ್ಯಾಯವಿದೆ. ಕೆಲಸಕ್ಕೆ ತಕ್ಕ ವೇತನವಲ್ಲದೆ ಇವನು ಅಂಧನ, ಈತನೆ ಬಂಧನನೆಂದಲ್ಲ. ಆದ್ದರಿಂದ ಜಿಲ್ಲಾ ಬೋರ್ಡ್ ಉದ್ಯೋಗಿಗಳ ವೇತನವು ಸರಕಾರಿ ಉದ್ಯೋಗಿಗಳಂತೆಯೇ ಇರಬೇಕು. ಇಲ್ಲವೇ ಸರಕಾರಿ ಉದ್ಯೋಗಿಗಳ ವೇತನ ಜಿಲ್ಲಾ ಬೋರ್ಡಿನ ಉದ್ಯೋಗಿಗಳ ವೇತನದ ಮಟ್ಟಕ್ಕೆ ಇಳಿಯಬೇಕು. ಈ ರೀತಿಯಾದರೆ ಮಾತ್ರ ಈ ಪ್ರಶ್ನೆ ಬಗೆ ಹರಿಯುವದು!

ಹೀಗೆ ಅಸ್ವಸ್ಥರಾಗಿರುವ ಅಧ್ಯಾಪಕರಲ್ಲಿ ಕೊಡಗಿನ ವಿದ್ಯಾಭ್ಯಾಸವಿರುವ ಎಡರಿಂದ ವಾರ್ತಾಪತ್ರಗಳು ಇರಿಯಾಗಿ ನಡೆಯುವ ವಿದ್ಯಾ ಇವು ದಿನಪತ್ರಿಕೆಗಳಿವೆ. ಈ ಸಮಸ್ಯೆಯನ್ನು ನಿವಾರಿಸಲು ಕೌನ್ಸಿಲು ಮತ್ತು ಜಿಲ್ಲಾ ಬೋರ್ಡು ಪರಿಷ್ಕಾರ ವಿಷಯಗಳಿಂದನ್ನು ಚೀಫ್ ಕಮಿಷನರು ವಹಿಸಿದ್ದರು. ಅದರಲ್ಲಿ ಏನು ನಡೆಯಿತೋ ತಿಳಿಯದು. ಹೇಗೂ ಸಮಸ್ಯೆ ಹಿಂದಿನಂತೆಯೇ ಇದೆ. ಇದು ಪ್ರತಿಯೊಬ್ಬ ಮುಟ್ಟಿಗಂತೆ ಸರಕಾರವೂ, ಸಾರ್ವಜನಿಕ ಮುಂದಾಳುಗಳೂ ಸಹಕರಿಸಿ ಯೋಗ್ಯ ದಾರಿಯನ್ನು ಕಂಡು ಹಿಡಿಯುವರೇ?

'ಜೀವಯ್ಯ'

---

### ನಾಪೋಕ್ಲುನಾಡಿನವರ ದುರದೃಷ್ಟ.

ನಾಪೋಕ್ಲುನಾಡು ಹಿಂದುಳಿದನಾಡೆಂದು ಪರನಾಡಿನವರ ಹೇಳಿಕೆ. ಕೆಲವು ಪುಣ್ಯಾತ್ಮರ ಅಚಲಶ್ರದ್ಧೆ, ಉತ್ಸಾಹ ಮತ್ತು ನಿಸ್ವಾರ್ಥಸೇವೆಯ ಫಲದಿಂದಾಗಿ ಒಂದು ಹೈಸ್ಕೂಲು ಸ್ಥಾಪನೆಯಾಯಿತು. ಮುಂದಿನ ಮಕ್ಕಳಿಗೆ ಅನುಕೂಲವಾಗಿ ಭವ್ಯವಾದ ಕಟ್ಟಡಗಳೂ ತಯಾರಾಗುತ್ತಿವೆ. ಇದರ ಸನ್ನಿವೇಶ ಮತ್ತು ಕ್ರಮಗಳನ್ನು ನೋಡಿ ಇತರರು ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯಪಡುವಂತಾಗಿದೆ. ಕೊಟ್ಟಮುಡಿ ಸೇತುವೆಯೊಂದು ಸರಕಾರದ ಘೋಷಣೆಯಿಂದ ಇನ್ನೂ ಗಣಪತಿ ಮದುವೆಯಾಗಿಯೇ ಉಳಿದಿದೆ. ಈ ನಾಡಿಗೆ ಸಾರ್ವಜನಿಕರ ಪ್ರಯೋಜನಾರ್ಥವಾಗಿ ಸರಕಾರದಿಂದ ದೊರಕಿದ ಯಾಯಿಗಳೇ ಕಡಮೆ. ಈಗ ಕುರುವಿನ ಮೇಲೆ ಬೊಕ್ಕೆ ಎಂಬಂತೆ ಮಡಿಕೇರಿಗೆ ಒಂದು ಮೊದಲಿನ ದಿನದ ಟಪ್ಪಾಲು ಮಾರನೆ ದಿನ ಸಾಯಂಕಾಲದ ಬಸ್ಸಿನಲ್ಲಿ ನಾಪೋಕ್ಲಿಗೆ ತಲುಪುವಂತೆ ಏರ್ಪಾಡು ನಡೆದಿದೆ. ಇಷ್ಟರ ವರೆಗೆ ಮಡಿಕೇರಿಯಿಂದ ಭಾಗಮಂಡಲದ ಬಸ್ಸಿನಲ್ಲಿ ಬೆಟ್ಟಗೇರಿಗೆ ಟಪ್ಪಾಲು ಬಂದು ಅಲ್ಲಿಂದ ರನ್ನರ್ ಮೂಲಕ ೧೧–೩೦ ಗಂಟೆಗೆ ಟಪ್ಪಾಲು ಬಟವಾಡೆಯಾಗುತಿತ್ತು. ಆದರೆ ಈಗಿನ ಏರ್ಪಾಡಿನಿಂದ ಬಹಳ ತೊಂದರೆಯಾಗಿದೆ. ಕಾಲಚಕ್ರ ಅತ್ಯುಗ್ರವಾಗಿ ತಿರುಗುತ್ತಿದೆ. ಜನರೆಲ್ಲರೂ ತಮ್ಮ ಖಾಸಗಿ ಪತ್ರವ್ಯವಹಾರಗಳಿಗೂ, ವಾರ್ತಾಪತ್ರಗಳಿಗೂ ಕಾದಿರುವದಲ್ಲದೆ ಎಷ್ಟು ಬೇಗನೆ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳಬೇಕೆಂದು ಸಂಶೋಧನೆ ನಡೆಸುತ್ತಲೇ ಇರುವಲ್ಲಿ ಹೊರದೇಶದ ಟಪ್ಪಾಲು ಮಡಿಕೇರಿ ವೀರರಾಜಪೇಟೆಗೆ ತಲುಪಿ ಇಪ್ಪತ್ತನಾಲ್ಕು ಘಂಟೆಗಳ ನಂತರ ಬರೇ ಮೂರು ನಾಲ್ಕು ಘಂಟೆಗಳ ನಡಿಗೆಯ ದೂರದಲ್ಲಿರುವ ನಾಪೋಕ್ಲಿನವರಿಗೆ ದೊರೆಯುತ್ತಿದೆ. ಈಗಿನ ಏರ್ಪಾಡಿನಂತೆ ವೀರರಾಜಪೇಟೆಯಿಂದ ೩–೩೦ಕ್ಕೆ ಹೊರಡುವ ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲಿ (ಇವರ ಖಾಸಗಿ ಪ್ರೈವೇಟ್ ಬಸ್ಸು) ಟಪ್ಪಾಲು ಸಾಯಂಕಾಲ ೫–೩೦ಕ್ಕೆ ತಲುಪುವಂತೆ ಏರ್ಪಾಡಾಗಿದೆ. ಇದರಿಂದಾಗಿ ಬಸ್ಸಿನ ಮಾಲೀಕರನ್ನು ಪ್ರೋತ್ಸಾಹಿಸುವ ಹಾಗೂ ಕಾಸಗಿ ಬಸ್ಸುಗಳ ನೆಮ್ಮದಿಗೆ ಬಂಗ ತರುವ ಉದ್ದೇಶ ಒಂದು ಕಾರಣವೇ ಹೊರತು ಜನಸಾಮಾನ್ಯರ ಪ್ರಯೋಜನವನ್ನು ಲಕ್ಷಿಸಿದಂತೆ ಒಂದಿಷ್ಟೂ ತೋರುವದಿಲ್ಲ. ಒಂದು ಕ್ರಮಗಿಂದ ಬಸ್ಸಿನಿಂದ ಕ್ರಮ ತಪ್ಪುವದರಿಂದ ಉಪಕಾರವಾಗಬೇಕು. ಈಗ ನಡೆದಿರುವ ಟಪ್ಪಾಲು ಇಲಾಖೆಯ ವರ ನಿರ್ಣಯದಿಂದ ಯಾರ ಸ್ವಾರ್ಥಸಾಧನೆಗಿದೆಂತಾಯಿತ ಎಂಬುದು ತಿಳಿಯದು. ಆದ್ದರಿಂದ ಮಡಿಕೇರಿ ವೀರರಾಜಪೇಟೆಯಿಂದ ಬೇಗನೆ ಹೊರಟು ನಾಪೋಕ್ಲಿಗೆ ಹತ್ತು ಗಂಟೆಯೊಳಗೆ ತಲುಪುವಂತೆ ಒಪ್ಪಿರುವ ಯಾವ ಬಸ್ಸಿಗಾದರೂ ಟಪ್ಪಾಲನ್ನು ವಹಿಸಿದರೆ ತಿರುಗುಟಿನ ಸಾರ್ವಜನಿಕರಿಗಾಗುವ ಅನುಕೂಲ ...

(ಮುಂದಿನ ಫುಟ ೬ನೇ ಕಲಂ ನೋಡಿ)

# ಭೀತಿ ಯಾ ಪ್ರೀತಿ ಇಲ್ಲದೆ-

ಲೇ:– "ಗುಪ್ತ" ಮಡಿಕೇರಿ

### ಭಾರತದ ವಿದೇಶ ನೀತಿ

ಹಿಂದೂದೇಶವು ತನ್ನ ವಿದೇಶ ನೀತಿಯ ಬಗ್ಗೆ ಅತ್ಯಂತ ಕಠಿಣ ತಾಟಸ್ಥ್ಯವನ್ನು ವಹಿಸುವದೆಂದು ಸ್ಪಷ್ಟಪಡಿಸಿದೆ. ಅಂತರಾಷ್ಟ್ರೀಯ ರಂಗದಲ್ಲಿ ಯಾವದೇ ಶಕ್ತಿಶಾಲೀ ಪಕ್ಷದ ಪರ ನಿಲ್ಲದೆ ಸರಿ ತೋರಿದಂತೆ ಮಾಡುವ ನಿರ್ಧಾರ ಕೈಕೊಂಡಿದೆ. ಇಂಥಾ ಒಂದು ನೀತಿಗೆ ಹೆಚ್ಚಾಗಿ ಪಂಡಿತ ಜವಾಹರರು ಕಾರಣರು. ಅಮೇರಿಕವಿರಲಿ ಯಾ ರಷ್ಯವಿರಲಿ, ಹಿಂದೂದೇಶವು ಯಾವದಾದರೂ ಒಂದು ಕಡೆ ನಿಂತುದೇ ಆದರೆ ಅದು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ಯಾವದಾದರೊಂದು ಶಕ್ತಿ ಶಿಬಿರದಲ್ಲಿ ಸೇರಿಹೋಗಿ ಜಗತ್ತಿನ ಶಾಂತಿಗೆ ತನ್ನ ಕೈಯಲ್ಲಾಗುವ ಸೇವೆಯನ್ನು ಸಲ್ಲಿಸಲು ಸಾಧ್ಯವಾಗದು. ಆದ್ದರಿಂದ ಹಿಂದೂದೇಶವೂ ಪ್ರತಿಯೊಂದು ಘಟನೆಯನ್ನೂ ಮತಿಯ ಒರೆಗಲ್ಲಿಗೆ ಹಚ್ಚಿ ಅದರಂತೆ ನಡೆಯುತ್ತಿದೆ.

ಕೊರಿಯಾದಲ್ಲಿ ನಡೆದ ಯುದ್ಧ ಪ್ರಕರಣದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯವನ್ನು ಸಮರ್ಥಿಸಿತು. ದಕ್ಷಿಣ ಕೊರಿಯಾದ ಮೇಲೆ ಯುದ್ಧ ಸಾರಿದ್ದು ಜಗತ್ತಿನ ಶಾಂತಿಗೆ ಭಂಗ ತಂದಂತೆ, ಸಂಯುಕ್ತ ರಾಷ್ಟ್ರ ಸಂಘದ ಗುರಿಯನ್ನು ಅಲ್ಲಗಳೆದಂತೆ ಎಂದಿತು. ಆದ್ದರಿಂದ ಉತ್ತರ ಕೊರಿಯಾದ ಕಮ್ಯೂನಿಸ್ಟ ದಳವನ್ನು ಧಾಳಿಗಾರರೆಂದು ವಿರೋಧಿಸಿತು. ಇದರಿಂದ ಹಲವರು ಹಿಂದೂದೇಶವು ಅಮೇರಿಕನರ ಪಕ್ಷ ಸೇರಿದೆ ಎಂದು ಶಂಕಿಸುತ್ತಾರೆ.

ಇನ್ನೊಂದು ಉದಾಹರಣೆಯನ್ನು ಹೇಳಬೇಕಾದರೆ ಕಮ್ಯೂನಿಷ್ಟ ಚೀನಾದ ಪ್ರತಿನಿಧಿಗಳಿಗೆ ಈ ವರೆಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಳ ಕೊಡದೆ ನಾಮಮಾತ್ರ ಶೇಷವಾಗಿರುವ ಚಿಯಾಂಗ್ ಆಡಳಿತದ ಬೆನ್ನನ್ನೇ ಅಮೇರಿಕಾವು ತಟ್ಟುತ್ತಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತಲೂ ದೊಡ್ಡದಾಗಿರುವ ಚೀನಾದ ಸುಮಾರು ೪೦ ಕೋಟಿ ಜನರಿಗೆ ಪ್ರಾತಿನಿಧ್ಯವಿಲ್ಲದ ಸಂಯುಕ್ತ ರಾಷ್ಟ್ರ ಸಭೆಯು ಹಾಸ್ಯಾಸ್ಪದವಾದುದು. ಈ ಪ್ರಶ್ನೆಯ ಮೇಲೆ [illegible] ರಷ್ಯಾವು ಸಂಯುಕ್ತ ರಾಷ್ಟ್ರ ಸಂಘ[illegible] ದೂರ ನಿಂತಿದೆ. ಈ ಪ್ರಶ್ನೆಯಲ್ಲಿ ಹಿಂದೂದೇಶವು ಚೈನಾದ ಪರ ವಾದಿಸುತ್ತಿದೆ. ಚೈನಾಕ್ಕೆ ಸ್ಥಳ ಕೊಡಬೇಕೆಂದು ಪ್ರಯತ್ನಿಸುತ್ತಿದೆ. ಇದರಿಂದ ಕೆಲವರು ಹಿಂದೂದೇಶವು ರಷ್ಯಾದ ಪರ ವಾದಿಸುತ್ತಿದೆಯೆಂದೂ ಹೇಳುತ್ತಿದ್ದಾರೆ. ಆನೆ ಮುಟ್ಟಿದ ಕುರುಡರು ಆನೆಯನ್ನು ಕಂಬದಂತಿದೆ, ಮೊರದಂತಿದೆಯೆಂದು ಹೇಳಿದಂತೆ ಸರಿದಾರಿಯಿಂದ ಸಾಗುತ್ತಿರುವ ಭಾರತ ವಿದೇಶ ನೀತಿಯನ್ನು ಪಕ್ಷ ದೃಷ್ಟಿಯ ಹಲವರು ಹಲವು ವಿಧದಿಂದ ಶಂಕಿಸುತ್ತಿದ್ದಾರೆ.

### ಭಾರತದ ಚಿಕ್ಕೆ ಏರುತ್ತಿದೆ

ಕೊರಿಯಾ ಸಮಸ್ಯೆಯನ್ನು ಪ್ರಪಂಚದ ರಂಗಕ್ಕೆ ಹಬ್ಬದಂತೆ ಅದನ್ನು ತೀರ್ಮಾನಿಸುವ ದೃಷ್ಟಿಯಿಂದ ಪಂಡಿತ ನೆಹರೂರವರು ಕೈಕೊಂಡ ಸಂಧಾನ ಮಾರ್ಗವು ಸಕಲರಿಂದ ಪ್ರಶಂಸಿಸಲ್ಪಡುತ್ತಿದೆ. ಪಂಡಿತ ಜವಾಹರರು ರಷ್ಯಾದ ಸ್ಟಾಲಿನರಿಗೂ, ಬ್ರಿಟನ್ನಿನ ಅಟ್ಲೀಯವರಿಗೂ, ಅಮೇರಿಕದ ಟ್ರೂಮನರಿಗೂ, ತನ್ನ ಸ್ವಂತ ಜವಾಬ್ದಾರಿಯಿಂದ ಪತ್ರ ಬರೆದು ಕೊರಿಯಾ ಸಮಸ್ಯೆಯು ಬಗೆಹರಿಸಲ್ಪಡಬೇಕಾದ ಆವಶ್ಯಕತೆಯನ್ನು ಮುಂದಿಟ್ಟಿರುವರು. ಈ ಪತ್ರಗಳಲ್ಲಿ ಏನು ಬರೆದಿರುವರೆಂಬುದು ಪ್ರಕಟವಾಗಿದೆ. ರಷ್ಯಾದಲ್ಲಿರುವ ಭಾರತ ರಾಯಭಾರಿ ರಾಧಾಕೃಷ್ಣನ್‌ರವರು ರಷ್ಯಾದ ವಿದೇಶ ಉಪಸಚಿವ ಗ್ರೋಮಿಕೋರವರ ಮೂಲಕ ಸ್ಟಾಲಿನರಿಗೆ ಪತ್ರವನ್ನು ಮುಟ್ಟಿಸಿದ್ದು ಸ್ಟಾಲಿನರ ಉತ್ತರವು ನೆಹರೂರವರಿಗೆ ಬಂದಿದೆ. ಸ್ಟಾಲಿನರು ನೆಹರೂರವರ ಪ್ರಯತ್ನವನ್ನು ಸ್ವಾಗತಿಸಿರುವರು. ಅಮೇರಿಕಾದಲ್ಲಿರುವ ಭಾರತ ರಾಯಭಾರಿ ವಿಜಯಲಕ್ಷ್ಮಿಯವರು ಅಲ್ಲಿಯ ವಿದೇಶ ಸಚಿವ ಎಚೆಸನ್ನರ ಮೂಲಕ ನೆಹರೂರವರ ಪತ್ರವನ್ನು ಕಳುಹಿಸಿದ್ದಾರೆ. ರಷ್ಯಾ ಅಮೇರಿಕಾಗಳೆಂಬ ಮಹಾ ರಾಷ್ಟ್ರಗಳನ್ನು ಸೇರಿಸಿ ಒಂದು ಸಂಧಾನ ಮಾಡಿ ಜಗತ್ತಿನ ಶಾಂತಿಗಾಗಿ ಪ್ರಯತ್ನಿಸುವ ಜವಾಬ್ದಾರಿ ಭಾರತಕ್ಕೆ ಬಿದ್ದಿದೆ. ಭಾರತದ ಕಣ್ಮಣಿ ಜವಾಹರರ ನೇತೃತ್ವದಲ್ಲಿ ಭರತಖಂಡದ ಘನತೆ ಇನ್ನೂ ಮೇಲೇರಲಿ.

ಕೊರಿಯಾ ಯುದ್ಧವು ಜಗತ್ತಿನ ಯುದ್ಧವಾಗಿ ಪರಿಣಮಿಸುವ ಸಾಧ್ಯತೆ ತೋರಿಬರುತ್ತಿದ್ದರೂ ಇದರಿಂದ ಜಗತ್ತಿನ ಶಾಂತಿಗೆ ಭಂಗ ಬರಲಾರದೆಂದು ಸ್ಪಷ್ಟ ಹೇಳಬರುವಂತಿಲ್ಲ. ಕೊರಿಯಾ ಯುದ್ಧವು ಪ್ರಪಂಚದ ಯುದ್ಧವಾದೀತೇ ಎಂಬುದಕ್ಕೆ ಉತ್ತರವಾಗಿ ಪಂಡಿತ ಜವಾಹರರು ಹಾಗಾಗುವ ಸಾಧ್ಯತೆ ನೂರಕ್ಕೆ ಐದರಂತೆ ಇದೆಯೆಂದಿದ್ದಾರೆ! ಈ ಯುದ್ಧವು ಜಗತ್ತಿನ ಯುದ್ಧವಾದೀತು ಎಂಬ ಶಂಕೆ ಇದರಿಂದಲೇ. ಜಗತ್ತಿನ ಹಿತದೃಷ್ಟಿಯಿಂದ ನೆಹರೂರವರು ಸಂಧಾನದ ಪ್ರಯತ್ನ ನಡೆಸುತ್ತಿರುವರು [illegible]

### ಮಾಜಿ ಮಂತ್ರಿಗೆ ಸ್ನೇಹಿತರಿಲ್ಲ ?!

ಅಧಿಕಾರದಲ್ಲಿದ್ದಾಗ ಸುತ್ತುಮುತ್ತು ಸ್ನೇಹಿತರ ಗುಂಪು ಓಲೈಸುತ್ತಿರುತ್ತದೆ. ಅಧಿಕಾರದಿಂದ ಇಳಿದೊಡನೇ ಅವರನ್ನು [illegible] ಈ ಮಾತು ಮಂತ್ರಿಗಳಿಗೆ ಹೇಗೆ [illegible] ಹಾಗೆಯೇ ಸರಕಾರಿ ಇತರ ಅಧಿಕಾರಿಗಳಿಗೂ ಅನ್ವಯಿಸುತ್ತದೆ. ಆದರೆ ಅಧಿಕಾರದಿಂದ ಇಳಿಯುವ ಮೊದಲೇ ಈ ದುಸ್ಥಿತಿ ಯಾರಿಗೂ ಬರಬಾರದು! ಮೊನ್ನೆಯಾಗಿ ವನಮಹೋತ್ಸವ ಘಡಿಯಿತಲ್ಲವೇ? ಅದೇ ಸುದಿನ ಕಾಂಗ್ರೆಸ್ ಪ್ರೆಸಿಡೆಂಟ್ ಡಾ. ಪಟ್ಟಾಭಿಯವರು ಡೆಲ್ಲಿಗೆ ಹೋದರು. ಡೆಲ್ಲಿಯಲ್ಲಿ ಮಂತ್ರಿಗಳಿಂದ ಹಿಡಿದು ಹಲವರು ಗಿಡಗಳನ್ನು ವಿಜೃಂಭಣೆಯಿಂದ ನೆಟ್ಟರು. ಆದರೆ ಕಾಂಗ್ರೆಸ್ ಪ್ರೆಸಿಡೆಂಟರು ಒಂದು ಗಿಡ ನೆಡುವ ಅನುವನ್ನು ಯಾರೂ ಮಾಡಲಿಲ್ಲ. ಅವರು ಗಿಡ ನೆಡಲೂ ಇಲ್ಲ. ಕೊರಿಯಾ ಯುದ್ಧದ ಬಗ್ಗೆ ಅವರ ಅಭಿಪ್ರಾಯವನ್ನಾದರೂ ಯಾರೂ ಕೇಳಲಿಲ್ಲ. ಪ್ರೆಸಿಡೆಂಟರ ಗದ್ದುಗೆಯಿಂದ ಇಳಿಯುವ ಮೊದಲೇ ಅವರನ್ನು ಈ ರೀತಿ ಕಡೆಗಣಿಸಲೇಕೆ? ಈ ಹಿಂದೆ 'ಪಟ್ಟಾಭಿಯವರಿಗೆ ಕಾಂಗ್ರೆಸ್ ಅಧ್ಯಕ್ಷತನ ಎಷ್ಟು ಬೇಡವಾಗಿದೆಯೋ ಅಷ್ಟೇ ಅವರು ಅಧ್ಯಕ್ಷರಾಗಿರುವದು ಜನತೆಗೆ ಬೇಡವಾಗಿದೆ' ಎಂದು ಒಮ್ಮೆ ನಾನು ಬರೆದಿದ್ದೆ. ಮೇಲಿನ ವಿಚಾರ ಅದನ್ನು ಸಮರ್ಥಿಸುತ್ತದೆ.

### ಕಾಂಗ್ರೆಸ್ಸು ಕೋರ್ಟಿಗೆ!

ಹಿಂದೊಮ್ಮೆ ಕೋರ್ಟು ಕಚೇರಿಗಳಿಗೆ ಬಹಿಷ್ಕಾರ ಹಾಕಿ ಕೋರ್ಟಿನ ಯಾವ ಮೊಕದ್ದಮೆಯಲ್ಲೂ ಭಾಗವಹಿಸದ ಕಾಂಗ್ರೆಸಿಗರು ತಮ್ಮ ಜಗಳ ತೀರಿಸಿಕೊಳ್ಳಲು ಕೋರ್ಟಿನ ಶರಣಾಗಿದ್ದಾರೆ ಎಂದರೆ ಕಾಂಗ್ರೆಸ್ಸಿನವರಲ್ಲದ ಅನ್ಯರಿಗೆ ಬೇರೆ ಕಾರಣ ಕೊಡಬೇಕಿಲ್ಲ. ಕಾಂಗ್ರೆಸ್ಸಿನಲ್ಲಿ ಶಿಸ್ತಿಲ್ಲದೆ ಇಂದು ಕಾಂಗ್ರೆಸು ಅಧಿಕಾರಲೋಲರುಗಳ ಕಾಳಗದ ಕಣವಾಗಿದೆ! ಕಳೆದ ಪಂಚಾಯ್ತಿ ಹಾಗೂ ಪ್ರತಿನಿಧಿಗಳ ಚುನಾವಣೆಯಲ್ಲಿ ನಡೆದ ಅವ್ಯವಸ್ಥೆಗಳು ಪ್ರತಿ ಪ್ರಾಂತದಲ್ಲೂ ಗಮನಕ್ಕೆ ಬಂದಿವೆ. ಆದ್ದರಿಂದ ಆಂಧ್ರ ಪಶ್ಚಿಮ ಬಂಗಾಳ ಮೊದಲಾದೆಡೆ ಪುನಃ ಚುನಾವಣೆ ನಡೆಯಲಿದೆ. ಚುನಾವಣೆಯಲ್ಲಾದ ಅನಾಹುತಗಳ ಪರಿಣಾಮವಾಗಿ ಅನೇಕರು ಕೋರ್ಟಿನಲ್ಲಿ ಕೇಸು ಹೂಡಿರುವರು. ತಾರೀಖು ೧೫ ರಲ್ಲಿ ಡೆಲ್ಲಿಯಲ್ಲಿ ಕೂಡಿದ್ದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಇದನ್ನು ಪರಿಶೀಲಿಸಿ ಯಾವ ಕಾಂಗ್ರೆಸಿಗನೂ ತನಗಾದ ಹಾನಿಯ ನಿವಾರಣೆಗಾಗಿ ಕೋರ್ಟಿನ ಮರೆಹೋಗಬಾರದೆಂದೂ ಹಾಗೆ ಮಾಡಿದರೆ ಕಾಂಗ್ರೆಸ್ಸಿನಿಂದ ತೆಗೆದುಹಾಕಲಾಗುವದೆಂದೂ ಠರಾವು ಮಾಡಿದೆ. ನಮ್ಮ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಕಾರ್ಯಕಲಾಪಗಳನ್ನು ವಿಚಾರಿಸುವಂತೆ ಕೇಳಿಕೊಂಡಿದ್ದರೆ ಕರ್ನಾಟಕದಲ್ಲೂ ಮರುಚುನಾವಣೆ ಆಗಬೇಕಿತ್ತು. ಕೆ. ಪಿ. ಸಿ. ಸಿ. ಯು, ಕೊಡಗಿನಲ್ಲಿ ನಡೆಸಿದ ಅನೀತಿಯ ಚುನಾವಣೆ, ಹೊಸ ದುರ್ಗದಲ್ಲಿ ಪಂಡೇಶಿ ಉಡುಪ ಉಮೇದವಾರರನ್ನು ನಿಲ್ಲಿಸಿ ಹೊಟೇಲಿನಲ್ಲಿ ಅವರಿಗೆ ಖದ್ದರ್ 'ಮೇಕ್‌ಅಪ್' ಮಾಡಿ ಚುನಾವಣೆ ನಡೆಸಿದುದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಚುನಾವಣೆಗೆ ಸ್ಥಳೀಕರ ಉಮೇದುವಾರರು ಇದ್ದರೂ ಹೊರಗಿನಿಂದ ಉಮೇದುವಾರರನ್ನು ತಂದು ಅವರಿಗೆ ಸೂಚಕರಿಲ್ಲದಿದ್ದರೂ ನಿಯಮಕ್ಕೆ ವಿರುದ್ಧ ಅವರನ್ನು ಆರಿಸಿದ್ದು ಇದೆಲ್ಲಾ ಹೊರಗೆಡಹಲ್ಪಡಬೇಕಿತ್ತು. ಈ ಆಂತರಿಕ ಹುಳಿಗಳಿಂದ ಯಾವ ಹಾನಿಯಾದರೂ ಕನ್ನಡನಾಡಿನ ಮೂಕ ಪರಿತಪ್ತ ಜನರಿಗೂ ಎಂದಾದರೂ ಕೇಂದ್ರಕ್ಕೆ ಕೇಳಿಸಿದೆಯೋ?

### ಓದುಗರ ಓಲೆಗಳು

(ಹಿಂದಿನ ವಾರದಿಂದ ಸಾಗಿದ್ದು)

ಟಪ್ಪಾಲಿನ ಆತುರದಲ್ಲಿರುವ ಸರಕಾರಿ ಹಾಗೂ ಸಾರ್ವಜನಿಕರಿಗೂ ಉಪಕಾರ ಮಾಡಿದಂತಾಗುವುದು. ಇದಕ್ಕೆ ಸಂಬಂಧಪಟ್ಟ ಪೋಲೀಸು ಮತ್ತು ಟಪ್ಪಾಲು ಇಲಾಖಾಧಿಕಾರಿಗಳು ಒಡನೆ ಆಶೋತ್ತರಗಳನ್ನು ನಡಿಸಿಕೊಡಲು ಮನಸ್ಸು ಮಾಡುವರೆಂದು ನಂಬೋಣವೇ?

'ವಾರ್ತಾ ಸಂಗ್ರಹಿ'

### ನಾಡುಗಳಲ್ಲಿ ಸರ್ವೆ.

ನಾನೊಬ್ಬ ರೈತ. ಹಳ್ಳಿಯ ಬೋರೇಗೌಡರು ಬಡಪಾಯಿಗಳ ಜಾಗವನ್ನು ಸ್ವಲ್ಪ ಸ್ವಲ್ಪ ತಮ್ಮ ಆಸ್ತಿಗೆ ಸೇರಿಸಿ ಬೇಲಿ ಹಾಕಿಕೊಳ್ಳುವುದು ಸಾಮಾನ್ಯವಾಗಿದೆ. ಈ ತಕರಾರಿಗೆ ಕೊನೆ ಮೊದಲಿಲ್ಲ. ಕಳೆದ ಒಂದೆರಡು ವರ್ಷಗಳಿಂದಲೂ ನನ್ನ ಜಾಗದಲ್ಲಿ ಇಂಥಾ ಪ್ರಸಂಗ ನಡೆದುದರಿಂದ ನಾಡು [illegible] ಸರ್ವೇಯರಿಗೂ [illegible] ಬರುವಂತೆ ಕೇಳಿಕೊಂಡರೂ [illegible] ಇಂದಿಗೂ ಯಾವ ಪ್ರಯೋಜನವೂ ಆಗಲಿಲ್ಲ. ಆನಂತರ ಆ ಇಲಾಖೆಯ ಮೇಲಧಿಕಾರಿ [illegible] ದೇಶದಲ್ಲಿ ಯಾರು ಇದ್ದಾರೋ ಅವರಿಗೆ ಒಂದು ಅರ್ಜಿಯನ್ನು ಕೊಟ್ಟು ಆ ವಿಷಯವನ್ನು ಮನವಿ ಮಾಡಿದೆನು. ಅವರು ಗ್ರಾಮದ ಸರ್ವೆಯವನಿಗೆ ಒಡನೆ ಹೋಗಲು ಹುಕುಂ ಮಾಡಿದರಂತೆ. ಮಳೆ ಹಿಡಿಯುವುದರೊಳಗೆ ಸರ್ವೆ ಮಾಡಿಸಿಕೊಡುವಂತೆ ಕೇಳಿಕೊಂಡಿದ್ದೆನು. ಆದರೆ ತಿಂಗಳು ಎರಡಾದರೂ ಸಾಹೇಬರ ಹುಕುಂ ನೆರವೇರುವುದಾಗಲೀ ನನ್ನ ಅರ್ಜಿಗೆ ಏನಾದರೊಂದು ಜವಾಬು ಆಗಲೀ ಬರಲಿಲ್ಲ. ಸರ್ವೆಯವನಿಗೆ ಎಷ್ಟು ಅವಸರದ ಕೆಲಸವಿದ್ದರೂ ಅಧಿಕಾರಿಗಳ ಹುಕುಮಿಗೆ ಇಷ್ಟು ದಿವಸಗಳ ವರೆಗೂ ಬೆಲೆ ಸಲ್ಲದ ಈ ಬೇಜವಾಬ್ದಾರಿಕೆಯು ಸಂಕಾರವು ಸರಕಾರವೇ? ನಮ್ಮ ಹೊಸ ಚೀಫ್ ಕಮಿಷನರರು (ಈಗ ಹಳೆಯವರಾಗಿದ್ದಾರೆ) ಅಲ್ಲಲ್ಲಿ ಗ್ರಾಮಕ್ಕೆ—ಅಲ್ಲ; ಊಟಕ್ಕೋ?—ಹೋಗಿದ್ದರೆಂದು ಕೇಳಿದೆನು. ಅವರಿಗೆ ಊಟವನ್ನು ಕೊಟ್ಟವರೊಬ್ಬರ ಜಾಗದ ಒದಿಯಲ್ಲಿ ಸಿಕ್ಕಿಕೊಂಡ ಒಬ್ಬ ರೈತನಿಗೂ ಅವರಿಂದ ಇಂಥಾ [illegible] ತಿಳಿದೆನು. ಬಡ ರೈತರ ಚಿಂತೆ ಅಂದಿನಂತೆ ಇಂದೂ ಆದರೆ, ಕೊಟ್ಟ ಅರ್ಜಿಗೆ ಯಾವುದೊಂದು ರೀತಿಯಲ್ಲಿ ಪ್ರತಿಫಲವಿಲ್ಲದಿದ್ದರೆ, ನಮ್ಮ ಆಫೀಸರುಗಳು ಅರ್ಜಿಗಳನ್ನು ಅತ್ತಿತ್ತ ಓಡಿಸಿಕೊಂಡು ಪೋಸ್ಟಾಫೀಸು ಕೆಲಸಗಳನ್ನು ಇಂದೂ ಮಾಡುತ್ತಿದ್ದರೆ ಅಂಥಾ ಸರಕಾರಕ್ಕೆ ಧಿಕ್ಕಾರವಿರಲಿ!

'ರೈತ'

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

# ವಾರ್ತೆಗಳು.

ಬರುವ ಮಹಾ ಚುನಾವಣೆಗಳಲ್ಲಿ ಹಿಂದೂ ಮಹಾಸಭೆಯು ಇತರ ಪಕ್ಷಗಳೊಡನೆ ಸಹಕರಿಸಿ ರಾಷ್ಟ್ರದ ಹಿತಕ್ಕಾಗಿ ಸ್ಪರ್ಧಿಸುವುದು ಎಂಬುದಾಗಿ ಅಖಿಲ ಭಾರತ ಹಿಂದೂ ಮಹಾಸಭೆಯ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ವಿ. ಜಿ. ದೇಶಪಾಂಡೆಯವರು ತಿಳಿಸಿದರು. ಹಿಂದೂ ಮಹಾಸಭೆಯು ರಾಜಕೀಯ ಪಕ್ಷವಾಗಿ ವರ್ತಿಸುವುದು. ಕಾಂಗ್ರೆಸ್ಸಿಗೆ ಪ್ರತಿಯಾಗಿ ಸ್ಪರ್ಧಿಸಲು ಸಂಯುಕ್ತ ಪ್ರತಿಪಕ್ಷ ರಚಿಸುವುದು ಎಂದರು.

ಕಾಶ್ಮೀರದ ಸಮಸ್ಯೆ ಬಗ್ಗೆ ಮಾತುಕತೆ ನಡೆಸಲು ಜುಲೈ ೨೦ರಲ್ಲಿ ಡೆಲ್ಲಿಯಲ್ಲಿ ನೆಹರು-ಲಿಯಾಖತ್ ಆಲಿಖಾನ್ ಮತ್ತು ಪ್ರಪಂಚ ಸಂಸ್ಥೆ ಮಧ್ಯಸ್ಥಗಾರರಾದ ಸರ್ ಓವನ್ ಡಿಕ್ಸನ್ ಇವರುಗಳ ಸಮ್ಮೇಳನ ನಡೆಯಬೇಕೆಂದು ಸೂಚಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷಪದವಿಗೆ ಶ್ರೀ. ಶಂಕರರಾವ್ ದೇವ್ರವರು ಅಧ್ಯಕ್ಷರಾಗಿ ಆರಿಸಿಬರುವ ಸಂಭವವಿದೆ. ನಾಸಿಕದಲ್ಲಿ ಜರಗಲಿರುವ ಮುಂದಿನ ಎ. ಐ. ಸಿ. ಸಿ. ಅಧಿವೇಶನ ಸೆಪ್ಟಂಬರ್ ಒಂದನೇ ವಾರದ ವರೆಗೆ ಮುಂದುವರಿಯಬಹುದೆನ್ನಲಾಗಿದೆ.

ಭಾರತದ ರಾಜಧಾನಿ ದಿಹಲಿಯಲ್ಲಿ ನೂತನ ಪಾರ್ಲಿಮೆಂಟ್ ಭವನವೊಂದು ರಚನೆಯಾಗುತ್ತಿದೆಯಷ್ಟೆ. ಈ ಮಂದಿರಕ್ಕೆ ಅತ್ಯಾಧುನಿಕ ವಿದ್ಯುತ್ ಸೌಕರ್ಯ ಮತ್ತು ಹೆಚ್ಚಿಗೆ ಸೌಕರ್ಯಗಳನ್ನು ಒದಗಿಸುವ ಏರ್ಪಾಡು ನಡೆದಿದೆ-ಅಲ್ಲದೆ ಪ್ರೇಕ್ಷಕರ ಸದಸ್ಯರಿಗೆ ಸೀಟುಗಳ ವ್ಯವಸ್ಥೆಯೂ ಮಾಡಲಾಗುವುದು. ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದ ನಂತರ ಪ್ರಜೆಗಳ ಸಭೆಯು ಈ ಮಂದಿರದಲ್ಲಿ ಕೂಡಬೇಕು.

ಜಾವಾ ಮತ್ತು ಸುಮಾತ್ರಾಗಳ ನಡುವೆ ಇರುವ ರಾಕ್ಷಸಾಕಾರದ ಜ್ವಾಲಾಮುಖಿ ಕ್ರಕಟೋವ ಇತ್ತೀಚೆಗೆ ಲಾವಾರಸ ಹಲವು ಮೈಲುಗಳನ್ನು ದೂರದ ಕಲ್ಲು ಮಣ್ಣುಗಳನ್ನು ಹಾರಿಸಿದೆ. ೧೮೮೩ರಲ್ಲಿ-ಜ್ವಾಲಾಮುಖಿಯು ಸ್ಫೋಟನದಿಂದ ಕ್ರಕಟೋವ ದ್ವೀಪವು ಮೂರು ಭಾಗವಾಗಿತ್ತು. ಆಗ ಈ ಮೊದಲು ಎಂದೂ ಕೇಳದ ಮಹಾ ಭಯಂಕರ ಶಬ್ದ ಉಂಟಾಗಿತ್ತಂತೆ. ಬರೀ ಎರಡು ವಾರಗಳ ಹಿಂದೆ ಇಂಡೋನೇಷ್ಯದ ಅಧ್ಯಕ್ಷ ಡಾ. ಸೂಕರ್ನೊರವರು ಈ ಜ್ವಾಲಾಮುಖಿ ಪ್ರದೇಶಕ್ಕೆ ವಿಮಾನದಲ್ಲಿ ಸಂದರ್ಶನವಿತ್ತರು. ಆಗ ಅದು ಶಾಂತವಾಗಿತ್ತು.

ಬೆಂಗಳೂರಿನಲ್ಲಿಯ ಸರಕಾರೀ ವಿದ್ಯುತ್ ಕಂಪೆನಿಯ ೧೮೦೦ ಕೆಲಸಗಾರರು ೧೮ನೇ ದಿನಾಂಕ ಮುಂಜಾನೆಯಿಂದ ಸಂಪು ಹೂಡಿರುವರು. ಈ ಮೊದಲು ಮಾಡಿಕೊಂಡ ಒಡಂಬಡಿಕೆಯನ್ನು ಜಾರಿಯಲ್ಲಿ ತಂದಿಲ್ಲ. ಒಂದು ತಿಂಗಳ ಸಂಬಳವನ್ನು ಬೋನಸ್ಸು ಎಂದು ಕೊಡಬೇಕೆಂದು ಮಾಡಿಕೊಂಡ ಕರಾರಿನಂತೆ ನಡೆದಿಲ್ಲ ಎಂಬುದೇ ಸಂಪಿಗೆ ಕಾರಣವಂತೆ.

ಜುಲೈ ತಾ. ೧೫ರಿಂದ ಹೊಸ ಒಂದು ಆ ಅಂಚೆಚೀಟುಗಳು ಭಾರತ ಸರಕಾರದ ಕಡೆಯಿಂದ ಚಲಾವಣೆಗಿಳಿಸಲ್ಪಟ್ಟಿವೆ. ಈ ಚೀಟುಗಳಲ್ಲಿ ಈ ಮೊದಲಿನ 'ಬೋಧಿಸತ್ವದ' ಆಕೃತಿಯೇ ಇದ್ದು ಅದನ್ನು ಸರಿಯಾದ ಆ ಸನದಲ್ಲಿ ಅಚ್ಚುಹಾಕಲಾಗಿದೆ. ಈ ಮೊದಲಿನ ಅಂಚೆಚೀಟುಗಳಲ್ಲಿದ್ದ ಆಸನ ಸರಿಯಿಲ್ಲ. ಈ ಮೊದಲು ಅಚ್ಚುಹಾಕಲ್ಪಟ್ಟ ಒಂದಾಣೆ ಅಂಚೆಚೀಟುಗಳು, ಪೂರ್ಣ ಸ್ಟಾಕ್ ಮುಗಿಯುವ ವರೆಗೆ ಚಲಾವಣೆಯಲ್ಲಿರುವವು.

ಸಂಯುಕ್ತ ಅಮೇರಿಕವು ಯಾವುದೇ ಮಿಲಿಟರಿ ಅಭ್ಯಂತರಗಳನ್ನು ತಂದೊಡ್ಡಲಿ. ತಾವು ಟೈವಾನ್ (ಫೊರ್ಮೋಸಾ) ಬಂಧನ ಮುಕ್ತಗೊಳಿಸುವುದು ನಿಶ್ಚಯ ಎಂಬುದಾಗಿ ಚೀನಿ ಕಮ್ಯೂನಿಸ್ಟರು ಸಂಯುಕ್ತ ಜನಾಂಗಗಳನ್ನು ಎಚ್ಚರಿಸಿವೆ.

ಮೈಸೂರಲ್ಲಿಯ ವೃಂದಾವನ ತೋಟದಲ್ಲಿ ೧೫ನೇ ದಿನಾಂಕದಿಂದ ಅಂತರರಾಷ್ಟ್ರೀಯ ವಿಶ್ವ ವಿದ್ಯಾಲಯ ಪರಿಷತ್ತು ಪ್ರಾರಂಭವಾಗಿದೆ. ಇದಕ್ಕಾಗಿ ಹಾವರ್ಡ್, ವಾಷಿಂಗ್‌ಟನ್, ಮಿಸ್ಸೂರಿ ಮೊದಲಾದ ವಿಶ್ವವಿದ್ಯಾಲಯಗಳಿಂದ ಈ ವರೆಗೆ ಒಟ್ಟು ೨೭ ಪ್ರತಿನಿಧಿಗಳು ಬಂದಿರುವರು.

ಬೆಂಗಳೂರು 'ತರುಣ' ಪತ್ರಿಕೆಯ ತಾ. ೨೬-೨-೫೦ರಂದು ಸೇಲಂ ಜೈಲಿನೊಳಗಿನ ಗೋಳಿಬಾರಿನ ಕುರಿತು ಬರೆದ ಲೇಖನಕ್ಕಾಗಿ ಸಂಪಾದಕ ಮತ್ತು ಪ್ರಕಾಶಕರಾದ ಶ್ರೀ ಟಿ. ಎಸ್. ಭಟ್ಟರಿಂದ ೧ ಸಾವಿರ ಮತ್ತು ಮುದ್ರಕರಾದ ಜಯಭಾರತ ಪ್ರೆಸ್ಸಿನವರಿಂದ ೧ ಸಾವಿರ ರೂಪಾಯಿಗಳ ಜಾಮೀನನ್ನು ಮದ್ರಾಸು ಸರಕಾರವು ಕೇಳುವುದು.

ಭಾರತ ಸರಕಾರವವರು ಮಂಗಳೂರಿನಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಿಸಲು ಯೋಚಿಸಿ ನಾಗರಿಕ ವಿಮಾನ ಶಾಖೆಯ ಉಚ್ಛ ಅಧಿಕಾರಿಗಳಿಗೆ ವಿಮಾನ ನಿಲ್ದಾಣಕ್ಕೆ ಯೋಗ್ಯ ಸ್ಥಳ ಆರಿಸಲು ಕೇಳಿದ್ದಾರೆಂದು ತಿಳಿಯುತ್ತದೆ. ಈ ಅಧಿಕಾರಿಗಳು ಈಗಾಗಲೇ ಮಂಗಳೂರಿಗೆ ಹೋಗಿ ಸ್ಥಳ ನೋಡಿ ಹಿಂತಿರುಗಿರುವರು.

ಪಾಕಿಸ್ತಾನದ ಮುಖ್ಯ ಮಂತ್ರಿಗಳಾಗಿರುವ ಜನಾಬ್ ಲಿಯಾಖತ್ ಆಲಿಖಾನರು ಪತ್ನಿ ಪರಿವಾರ ಸಹಿತವಾಗಿ ಕರಾಚಿಗೆ ಮರಳಿ ಬಂದಿರುವರು.

ಬರುವ ಜುಲೈ ೩೧ರಿಂದ ೧೦ ದಿನಗಳ ವರೆಗೆ ಭಾರತ ಪಾರ್ಲಿಮೆಂಟಿನ ವಿಶೇಷ ಅಧಿವೇಶನವನ್ನು ಕೂಡಿಸಲಾಗುವುದೆಂದು ಅಧಿಕೃತವಾಗಿ ತಿಳಿಯುತ್ತದೆ. ಕೊರಿಯಾ ಯುದ್ಧದ ಬಗ್ಗೆ ಭಾರತ ಸರಕಾರದ ನಿಲುಮೆಯನ್ನು ವಿಚಾರಿಸುವುದು ಅಧಿವೇಶನದ ಮುಖ್ಯ ಉದ್ದೇಶವಾಗಿದೆ. ಈ ಅಧಿವೇಶನದ ಪ್ರಾರಂಭಕ್ಕೆ ರಾಷ್ಟ್ರಪತಿಗಳು ಭಾಷಣ ಮಾಡುವರು. ಆ ಭಾಷಣದಲ್ಲಿಯ ಘೋಷಣೆಯ ಬಗ್ಗೆಯೇ ಬಹುಶಃ ಚರ್ಚೆ ನಡೆಯುವುದು. ಪ್ರಶ್ನೋತ್ತರಗಳ ಬಗ್ಗೆಯೂ ಕೆಲ ದಿನಗಳ ಸಮಯವೂ ಕೊಡಲಾಗುವುದು.

ಮುಂಬಯಿ ಲೇಸ್‌ಕೋರ್ಸಿನ ಹತ್ತಿರ ಮಹಾಲಕ್ಷ್ಮೀ ದೇವಸ್ಥಾನದ ಪೂಜಾರಿಯ ಮೇಲೆ ಯಾರೋ ಇಬ್ಬರು ಪಿಸ್ತೂಲಿನಿಂದ ಧಾಳಿ ಮಾಡಿ ೫೦೦೦ ರೂಪಾಯಿಗಳ ಆಭರಣಗಳನ್ನು ದೋಚಿಕೊಂಡು ಹೋಗಿರುವರು. ಪೂಜಾರಿಗೆ ಗಾಯ ಸಂಭವಿಸಿದ್ದು ಅವನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಈ ಸಂಬಂಧದಲ್ಲಿ ನಾಲ್ವರನ್ನು ಸೆರೆ ಹಿಡಿಯಲಾಗಿದೆ.

(೨ನೇ ಪುಟದಿಂದ ಸಾಗಿದ್ದು)

ದೆ. ಸಂಗಡವೇ ಭೀಷಣ ಬಡತನದ ಮಧ್ಯದಲ್ಲಿ ತಮ್ಮ ದೇಶದಲ್ಲಿ ಕೆಲಜನರು ಹಣದ ರಾಶಿಯ ಮೇಲೆ ದೊರೆಗಳಾಡುತ್ತ ನಿರ್ದಯ ಸ್ವಾರ್ಥದಿಂದ ಸರಕಾರಗಳನ್ನು ತಮ್ಮ ಕೈಯೊಳಗಿಟ್ಟುಕೊಂಡಿರುವುದೂ ಅದಕ್ಕೆ ಕಾರಣವಿತ್ತಿದೆ.

ಯುರೋಪೀಯ ಅಮೇರಿಕಗಳ ಪ್ರಜಾತಂತ್ರ ರಾಷ್ಟ್ರಗಳಿಗೆ ರಷಿಯವನ್ನು ಸದೆಬಡೆಯುವುದು ಅಸಾಧ್ಯವಾಗದಿರಬಹುದು. ಆದರೆ ಅಲ್ಲಿಗೆ ಕಾಟ ತೀರುತ್ತೆಂದಾಗದು. ಕಮ್ಯೂನಿಜಮಿನಲ್ಲಿರುವ ಸತ್ಯಾಂಶದ ಬಲದಿಂದ ಅದು ಅವರ ದೇಶಗಳಲ್ಲಿಯೇ ತಲೆ ಎತ್ತುವುದು. ಕಮ್ಯೂನಿಜಮಿಗೆ ಒಂದೇ ಒಂದು ಪರಿಣಾಮಕರ ಪರಿಹಾರವೆಂದರೆ ಸ್ವೇಚ್ಛೆಯಿಂದ ಬಂಡವಾಳಶಾಹಿ ಅರ್ಥ ಪದ್ಧತಿಯನ್ನು ಕಿತ್ತು ಹಾಕುವುದು ಮತ್ತು ಜೀವನ ಮಟ್ಟವನ್ನು ಇಳಿಸಿ ದಟ್ಟವಾದ ಜನಸಂಖ್ಯೆಯಿರುವ ದೇಶಗಳ ಜನರನ್ನು ಭೂಮಿಯ ನಿರ್ಜನ ಪ್ರದೇಶಗಳಲ್ಲಿ ಹಬ್ಬಲು ಆಮಂತ್ರಿಸುವುದು.

ಯುದ್ಧ ಕಾಟಿಸ್ಟಿ ಇರಲಿ

ಅದಂತಿರಲಿ, ಆದರೆ ಅಮೇರಿಕವಾಗಲಿ ರಷಿಯಾವಾಗಲಿ ಒಂದಲ್ಲ ಒಂದು ಗುಂಪಿಗೆ ಧನಸಹಾಯವನ್ನಾಗಲಿ, ಆಯುಧ ಸಹಾಯವನ್ನಾಗಲಿ ತಾಂತ್ರಿಕ ಜನಸಹಾಯವನ್ನಾಗಲಿ ಏಕೆ ನೀಡಬೇಕು? ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡುವುದೇ ಅವರ ಉದ್ದೇಶವಾಗಿದ್ದರೆ ಅವರು ಮೊಟ್ಟಮೊದಲು ಘಾತಕ ಆಯುಧಗಳಲ್ಲಿ ವ್ಯಾಪಾರ ಮಾಡಲು ನಿರಾಕರಿಸಬೇಕು ಮತ್ತು ತಮ್ಮ ತಾಂತ್ರಿಕ ತಜ್ಞರನ್ನು ಹೊರದೇಶಗಳಿಗೆ ಎರವು ಕೊಡಬಾರದು. ರಷಿಯಾ-ಅಮೇರಿಕ ಇವರಡೂ ಜಪಾನು ಮತ್ತು ಕೊರಿಯಗಳಿಂದ ತಮ್ಮ ಆಯುಧಗಳನ್ನೂ ತಂತ್ರಜ್ಞರನ್ನೂ ಹೋರಾಡುವವರನ್ನೂ ಕೂಡಿಕೊಂಡು ಹೊರಟು ಹೋಗಲಿ. ಕೊರಿಯನ್ನರು ಹೊರಗಿನವರ ಹಸ್ತಕ್ಷೇಪವಿಲ್ಲದೆಯೇ ತಮ್ಮ ಜಗಳವನ್ನು ತೀರ್ಮಾನಿಸಿಕೊಳ್ಳಲಿ. ಉಭಯ ಕೊರಿಯಗಳು ತಂತಮ್ಮ ಅಸ್ವಾಭಾವಿಕ ಗಡಿಗಳೊಳಗೇ ಉಳಿಯುವಂತೆ ಮಾಡಿದರೆ ಸಾರ್ಥಕವಾಗಲಿಲ್ಲ. ಆ ಗಡಿಯನ್ನು ಪೂರಾ ತೆಗೆದು ಬಿಟ್ಟು ದೇಶವನ್ನು ಒಂದುಗೂಡಿಸುವುದೀಗ ಬೇಕಾಗಿದೆ. ಪ್ರಬಲ ರಾಷ್ಟ್ರಗಳಿಗೆ ವಿಷಿಷ್ಟದ (ಭಾರತವನ್ನೊಳಗೊಂಡು) ಮೇಲೆ ಸ್ತ್ರೀತಿ ಇದ್ದುದು ನಿಜವಾದರೆ, ಸ್ವಾಭಾವಿಕ ಪ್ರದೇಶಗಳನ್ನು ದ್ವಿಭಾಗಿಸುವ ತ್ರಿಭಾಗಿಸುವ ಈ ವ್ಯಾಪಾರ ಕೂಡಲೇ ನಿಲ್ಲಬೇಕು. ಪಾಕಿಸ್ಥಾನಿಗಳು, ಪಂಜಾಬಿಗಳು, ಬಂಗಾಳಿಗಳು ಕಾಶ್ಮೀರಿಗಳು, ಭಾರತೀಯರು, ಇಂಡೋನೇಶ್ಯನ್ನರು, ಕೊರಿಯನ್ನರು-ಇವರೆಲ್ಲರೂ ವಿಭಜನೆಯ ಸುಖವನ್ನು ಸಾಕಷ್ಟು ಅನುಭವಿಸಿದ್ದಾರೆ. ಈ ದೇಶಗಳ ಜನರಲ್ಲಿ ಸೌಹಾರ್ದವನ್ನು ಬೆಳೆಸುವುದು ಪ್ರಬಲ ರಾಷ್ಟ್ರಗಳ ಗುರಿಯಾಗಿದ್ದರೆ ಅವರು ಕನಿಷ್ಟ ಆಯಾ ಪ್ರದೇಶದ ಜನರನ್ನು ಅವರವರ ಪಾಡಿಗೆ, ಅವರವರ ಸಾಮರ್ಥ್ಯಕ್ಕೆ ಬಿಟ್ಟು ಬಿಡಲಿ. ಅವರಿಗೆ ಬಂಧು ಪತ್ರೆ ಹೊರತು ಬೇರೇನೂ ಬಾರದಿದ್ದರೆ ಅದನ್ನೇ ಮಾಡಿಕೊಳ್ಳಲಿ. ಸಂ. ರಾ. ಸಂಘವು ಪ್ರವೇಶಿಸಬೇಕಾದ್ದು ಕೊರಿಕೆಯ ಶಾಂತಿಯನ್ನು ಸ್ಥಾಪಿಸುವ ಕೆಲಸಕ್ಕಲ್ಲ. ಈ ನೈಸರ್ಗಿಕ ಪ್ರದೇಶಗಳ ಜನರಲ್ಲಿ ಸೌಹಾರ್ದವನ್ನು ಬೆಳೆಸಲಿಕ್ಕಾಗಿ. ಅದು ಸಾಧ್ಯವಿಲ್ಲದಿದ್ದರೆ ಆಯಾ ನೈಸರ್ಗಿಕ ಪ್ರದೇಶಕ್ಕೇ ಕಲಹವನ್ನು ಮಿತಗೊಳಿಸುವುದು ಎರಡನೆ ಅತ್ಯುತ್ತಮ ಉಪಾಯ. ಇದು ಸಾಧ್ಯವಾಗಬೇಕಾದರೆ ಪ್ರಬಲ ರಾಷ್ಟ್ರಗಳು ಹತಿಯದಿಂದ ಹೊರಬೀಳಬೇಕು ಮತ್ತು ತಮ್ಮ ಶಸ್ತ್ರಾಸ್ತ್ರಗಳನ್ನೂ ಕರ್ಮ ಚಾತುರ್ಯವನ್ನೂ ಜಗಳಾಡುವ ದೇಶಗಳಿಗೆ ಮಾರಲು ನಿರಾಕರಿಸಬೇಕು.

"ಹರಿಜನ"

---

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕು ಲಿಮಿಟೆಡ್ ಮಡಿಕೇರಿ. ತಾ. 12—7—50.

## ಪ್ರಕಟಣೆ.

ಈ ಮೊದಲೇ ಮಹಾಸಭೆಯಲ್ಲಿ ನಿರ್ಧಯಿಸಿದ ಮೇರೆ, ತಾ. 9-7-50ರಲ್ಲಿ ಈ ಬ್ಯಾಂಕಿನ ಆಶ್ರಯದಲ್ಲಿ ದೀರ್ಘಮುದ್ದತಿಯ ಶಾಖೆಯೊಂದನ್ನು ಕೊಡಗಿನ ಚೀಫ್ ಕಮಿಷನರವರಿಂದ ತೆರೆಯಲಾಗಿದೆ. ಹೆಚ್ಚಿನ ಬೆಳೆ ಬೆಳೆಸುವದು, ಭೂಮಿ ರೂಪಿಸ, ಸಾಲ ನಿವಾರಣೆ ಇತ್ಯಾದಿ ಉಪಯುಕ್ತವಾದ ಉದ್ದೇಶಗಳಿಗೆ 20 ವರ್ಷಗಳ ಮರುಪಾವತಿಯ ಕಂತಿನಲ್ಲಿ ಜಮೀನು ಅಡಮಾನದ ಆಧಾರದ ಮೇಲೆ ದೀರ್ಘ ಮುದ್ದತಿಯ ಶಾಖೆಯಿಂದ ಸಾಲ ಕೊಡುವ ಏರ್ಪಾಡು ಮಾಡಲಾಗಿದೆ. ಇಂಥಾ ಸಾಲ ಪಡೆಯಬೇಕೆಂಬಿಚ್ಛಿಸುವವರು ಮೊದಲಾಗಿ ಗ್ರಾಮ ಸಹಕಾರ ಸಂಘಗಳಲ್ಲಿ ಮೆಂಬರುಗಳಾಗಿದ್ದರೆ ಅವುಗಳ ಮೂಲಕ ಅರ್ಜಿ ಬರಕೊಳ್ಳಬಹುದು. ಎಲ್ಲಾ ಸಹಕಾರ ಸಂಘಗಳ ಪ್ರೆಸಿಡೆಂಟರು ಇಂಥ ಅರ್ಜಿಗಳು ಬಂದರೆ ಒಡನೆ ಕಾರ್ಯಕಾರಿ ಮಂಡಳಿಯವರ ಸಲಹೆಯೊಡನೆ ಶಿಫಾರಸಿನ ಈ ಬ್ಯಾಂಕಿಗೆ ಕಳೆ ಹಿಸಬೇಕಾಗಿ ವಿನಂತಿ.

ಸಾಲದ ಅರ್ಜಿ ಫಾರಂಗಳು ಮತ್ತು ಸಾಲ ಪಡೆಯುವ ನಿಯಮ ಕೊಡಬೇಕಾದ ಇತರ ಖಾತರಿಗಳ ವಿಷಯ ಕುರಿತು ಹೆಚ್ಚಿನ ವಿವರಗಳನ್ನು ಬ್ಯಾಂಕು ಆಫೀಸಿನಿಂದ ಪಡಕೊಳ್ಳಬಹುದು. ಈ ಸಾಲಕ್ಕೆ ಬರತಕ್ಕ ಎಲ್ಲಾ ಅರ್ಜಿಗಳ ಪೈಕಿ ಅಡಮಾನ ಮಾಡಲಿರುವ ಜಮೀನುಗಳ ಬೆಲೆ ಮತ್ತು ಸಾಲಕ್ಕೆ ಉದ್ದೇಶ್ಯಗಳನ್ನು ನೋಡಿ ಅರ್ಹತೆ ಇರುವ ಸಾಲದ ಅರ್ಜಿಗಳನ್ನು ಕಾಲಾನುಕ್ರಮವಾಗಿ ಅಡಮಾನು ಸಿಕೆ ನಡೆಸಿದ ನಂತರ, ಈ ಬಗ್ಗೆ ಏರ್ಪಡಿಸಿರುವ ಫೈಲುಗಳ ಸಂಪು ಮೂಲಕ ಸಾಲ ಕೊಡಲಾಗುವುದು.

ಕೆ. ಪಿ. ಅಪ್ಪಯ್ಯ, ಎಂ. ಎಲ್. ಸಿ.
ಪ್ರೆಸಿಡೆಂಟ್.

## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು; ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 218-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ತರಬೇಕಾಗಿ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-44



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 55,000. |
| ಇತರ ನಿಧಿಗಳು | ರೂ. | 28,000. |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿಕಿ ಮತ್ತು ವಾರ್ಡನ್ ಇನ್ಸೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.



# ENTERTAINING FAMILY & FRIENDS EASY NOW!!

NOODLE OR NOOPUTU (ಸೇವಿಗೆ)



making with this all BRASS easy handling Machine in a Variety of Sizes and Shapes is a boon to House wives.

62-5 *Rs. 23 8 (Postage extra.)*

GOBIND & CHENCPA,
22, CANNING STREET, CALCUTTA.


Edited, Printed and Published by P. I. Belliappa at 'Kodagu Press, Mercara, for 'Kodagu' Ltd.


# ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. .... .... | 6,13,00,000 | ಕೋಟಿ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... | 27,73,00,000 | „ |
| ಒಟ್ಟು ನಿಧಿ. ರೂ. .... .... .... | 8,30,00,000 | „ |
| ಸಾ ಪಿತವಾದಂದಿನಿಂದ ಪಾಲಿಸಿದಾರರಿಗೆ ಕೊಟ್ಟ ಹಣ | 10,16,00,000 | „ |

1,28.000 ಕ್ಕೂ ಮೀರಿದ ವ್ಯಕ್ತಿಗಳ ವಿಮೆ ಮಾಡಿಸಿರುವರು.

ಶಕ್ತಿ. ಸೇವೆ ಭದ್ರತೆ.

## ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ದೋಶಿಸ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.



ಭದ್ರತೆ! 17 ವರ್ಷಗಳ ... ಅನುಕೂಲತೆ !! ಅನುಭವಶೀಲತೆ!!

## ದಿ ವಿಜಯ ಬೇಂಕ್ ಲಿಮಿಟೆಡ್
ಮುಖ್ಯ ಕಚೇರಿ, ಕದ್ರಿ ರೋಡ್, ಮಂಗಳೂರು.

ಠೇವಣಿ ಠೇವಣಾತಿ ಬಡ್ಡಿ ದರ.

| | | |
|---|---|---|
| 3 | ತಿಂಗಳು | 3 % |
| 6 | „ | 3¼% |
| 12 | „ | 3½% |
| 24 | „ | 4 % |

ರೂ. ... ಮೇಲ್ಪಟ್ಟ ಠೇವಣಾತಿಗಳಿಗೆ ನಿಯಮಿತ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:— ... , ... , ... , ... , ... , ... , ... , ... , ... , ಮಡಿಕೇರಿ ... .

ಒಟ್ಟು ವಸೂಲಾದ ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:— ಏಜಂಟ್, ಮಡಿಕೇರಿ ಶಾಖೆ, ಮಡಿಕೇರಿ.



## ದಿ ಟ್ರಾಪಿಕಲ್
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ದಿಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯಂ ಅಪ್ಪಣ್ಣ, ಏಜನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.



## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

*Head Office:* MANGALORE

K. M. Bopaiah, Esq.,
*Branch Secretary for Mysore & Coorg,*
*85 Sultanpet, BANGALORE 2.*

26-11

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು | ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೯ | ತಾರೀಕು ೨೮-೭-೧೯೫೦ನೇ ಶುಕ್ರವಾರ | ಸಂಚಿಕೆ ೮

## ಕಾಶ್ಮೀರದ ಭೂಸುಧಾರಣೆ.

ಲೇ:—ಶ್ರೀ. 'ಗಣೇಶ' ಮಡಿಕೇರಿ.

---

ಕಾಶ್ಮೀರ ರಾಷ್ಟ್ರೀಯ ಪರಿಷತ್ತು ಹತ್ತು ವರ್ಷಗಳಿಗೆ ಹಿಂದೆ ಭವ್ಯವಾದ ಭವಿಷ್ಯದ ನವ ಕಾಶ್ಮೀರದ ರೂಪರೇಷೆಯನ್ನು ಸ್ಪಷ್ಟಪಡಿಸಿತ್ತು. ಆ ನಿರೂಪಣೆಯಲ್ಲಿ ಪ್ರಮುಖವಾದ ಎರಡು ವಿಚಾರಗಳೆಂದರೆ (೧) ಜಮೀನ್ದಾರ ಪದ್ಧತಿಯ ರದ್ದಿಯಾತಿ. ಇದರ ಅವಶ್ಯಕತೆಯನ್ನು ವಿವರಿಸುತ್ತಾ ಪರಿಷತ್ತು ಹೀಗೆ ಹೇಳಿತ್ತು. "ಜಮೀನ್ದಾರ ಪದ್ಧತಿಯ ನಿರ್ಮೂಲನವು ಪ್ರಗತಿಯ ಮೂಲ. ಆ ದಿನ ವರೆಗೆ ತಾವು ಭೂಮಿಯ ಒಡೆಯರೆಂಬ ಕಾರಣದಿಂದ ಯಾವುದೇ ಕೆಲಸ ಮಾಡದೆ ಬೇರೆಯವರ ಶ್ರಮದ ಫಲವನ್ನು ಭೋಗಿಸುವ ವರ್ಗವಿರುವದೋ ಅಂದಿನ ವರೆಗೆ ಭೂ ಉತ್ಪನ್ನದ ಸಮಾನ ವಿತರಣೆಯು ಸಾಧ್ಯವಾಗದು". (೨) ಉಳುವವನಿಗೆ ಭೂಮಿ ಇದನ್ನು ವಿವರಿಸುತ್ತಾ ಪರಿಷತ್ತು "ಭೂ ಮಾಲಿಕ ವರ್ಗವನ್ನು ತೆಗೆದು ಹಾಕಿದ ನಂತರ, ಭೂಮಿ ಇಲ್ಲದವರಿಗೆ ಭೂಮಿಯ ಬೇಡಿಕೆಯನ್ನು ಸಲ್ಲಿಸಿ ಆ ಮೂಲಕ ಪಕ್ಷ ರೀತಿಯಲ್ಲಿ ಭೂ ವ್ಯವಸಾಯ ನಡೆಯುವಂತೆ ಮಾಡಲು ಸಾಧ್ಯವಾಗುವುದು" ಎಂದಿತ್ತು.

ಕಾಶ್ಮೀರದ ಜನತೆಯ ಹಿತದೃಷ್ಟಿಯಿಂದ ಕಾಶ್ಮೀರ ರಾಷ್ಟ್ರೀಯ ಪರಿಷತ್ತು ಕೈಕೊಂಡ ಈ ಪ್ರತಿಜ್ಞೆಗಳನ್ನು ಜಾರಿಯಲ್ಲಿ ತರಲು ಶೇಕ್ ಅಬ್ದುಲ್ಲರು ಪ್ರಯತ್ನಿಸುತಿದ್ದು ಈಗ ಅದು ಕೈಗೂಡುವಂತಿದೆ. ಕಾಶ್ಮೀರದಲ್ಲಿ ಯುದ್ಧ ಪ್ರಾರಂಭವಾಗಿ ಅಲ್ಲಿಯ ಸರಕಾರವು ಬೇರೆ ವಿಧಾಯಕ ಕಾರ್ಯಗಳನ್ನು ಮಾಡುವುದು ದುಸ್ತರವಾಗಿದ್ದಾಗ ಜನಹಿತ ಕಾರ್ಯದ ಕಳಕಳಿಯಲ್ಲೇ ತನ್ನ ಅಸ್ತಿತ್ವವೆಂಬುದನ್ನು ತಿಳಿದ ಶೇಕ್ ಅಬ್ದುಲ್ಲರವರು ಈ ಕಾರಣಕ್ಕಾಗಿ ತಿಂದಿನಿಂದಲೇ ದುಡಿಯುತ್ತಿದ್ದರು.

ಕಾಶ್ಮೀರದಲ್ಲಿ ಜಮೀನ್ದಾರರ ಜಮೀನ್ದಾರರೋ ಎಂಬಂತೆ ವಿಶಾಲ ಭೂಪ್ರದೇಶಗಳ ಸ್ವಾಮಿತ್ವವನ್ನು ಪಡೆದ ಜಾಗೀರ್ದಾರರೆಂಬ ಸಂಗಡವು ಸ್ವಚ್ಛಂದವಾಗಿ ಜೀವಿಸುತಿತ್ತು. ಸಾವಿರಾರು ಎಕರೆಗಳ ಭೂಮಿಯನ್ನು ಪಡೆದು ತಮ್ಮ ಕೈಕೆಳಗೆ ದುಡಿಯುವವರ ದುಡಿಮೆಯ ಫಲದ ಮೂಲಕಲಿ ಅವರ ಜೀವದ ಮೇಲೆ ಪೂರ್ಣ ಹಿಡಿತವಿಟ್ಟುಕೊಂಡಿದ್ದ ಈ ಜಾಗೀರುದಾರರ ಉಪಟಳದಿಂದ ಜನತೆಯು ಸಂತ್ರಸ್ತಗೊಂಡಿತ್ತು. ಶೇಕ್ ಅಬ್ದುಲ್ಲರವರು ತನಗೆ ಅಧಿಕಾರ ದೊರೆತ ಮರುಕ್ಷಣವೇ ಮಾಡಿದ ಕಾರ್ಯಗಳಲ್ಲಿ ಈ ಜಹಗೀರ್ ಪದ್ಧತಿಯ ನಿರ್ಮೂಲನವು ಪ್ರಥಮವಾದುದು. ಜಹಗೀರ್ ಪದ್ಧತಿಯು ನಿರ್ಮೂಲಗೊಂಡರೂ ಜಮೀನ್ದಾರ ಪದ್ಧತಿಯು ಜಾರಿಯಲ್ಲಿತ್ತು. ಭೂಮಿಯಲ್ಲಿ ಬೆಳೆದ ಉತ್ಪನ್ನದ ಬಹುಪಾಲನ್ನು ಭೂ ಮಾಲಿಕರು ತೆಗೆದುಕೊಳ್ಳುವದರಿಂದ ಪಡೆಯುತಿದ್ದರು. ಹೀಗಾಗಿ ದುಡಿಯುವವರಸ್ಥಿತಿ ಅಧೋಗತಿಗಿಳಿದಿತ್ತು. ಶೇಕ್ ಅಬ್ದುಲ್ಲಾರವರ ಭೂಸುಧಾರಣೆಯ ಎರಡನೇ ಹೆಜ್ಜೆಯಾಗಿ ಈ ಪದ್ಧತಿಯನ್ನು ನಿಲ್ಲಿಸಿ ಉಳುವವನಿಗೆ ತೇಕಡ ..ರಷ್ಟು ಮಾತ್ರ ..ದಿ.ಬೇಕೆಂದೂ ..ಯ ಮಾಲಿಕನಿಗೆ ತೇಕಡ ..ರಷ್ಟು ಬೇಕೆಂದೂ ಆಜ್ಞಾಪಿಸಿದರು. ಬಡತನದ ಆಳವಾದ ಕಂದರದಲ್ಲಿ ದಿಕ್ಕು ಕಾಣದೆ ತೊಳಲಿ ಕಂಗಾಲಾಗಿದ್ದ ಜನರಿಗೆ ಈ ಸುಧಾರಣೆಯಿಂದಾದ ಆನಂದವನ್ನು ವರ್ಣಿಸುವ ಆವಶ್ಯವಿಲ್ಲ. ಕಾಶ್ಮೀರದ ಭೂವ್ಯವಸಾಯಗಾರರೆಂದರೆ ಹಿಂದೂದೇಶದಲ್ಲೇ ಏಕೆ? ಇಡೀ ಜಗತ್ತಿನಲ್ಲೇ ಅತೀ ಬಡವರೆನಿಸಿದವರು. ಕಾಶ್ಮೀರದ ಚರಿತ್ರೆಯಲ್ಲಿ ಅವರ ಹಿತಕ್ಕಾಗಿ ದುಡಿಯುವ ಸರಕಾರವನ್ನು ಅವರು ಸ್ವಾಗತಿಸಿ ಅದರ ಮುಂದಾಳು ಶೇಕ್ ಅಬ್ದುಲ್ಲಾರವರನ್ನು "ಶೇರ್-ಎ-ಕಾಶ್ಮೀರ್" (ಕಾಶ್ಮೀರದ ಸಿಂಹ) ವೆಂದು ಗೌರವಿಸಿದರೆ ಅದು ಹೆಚ್ಚಲ್ಲ.

ಈ ನಿಯಮಗಳಿಂದ ಬಹು ಜನರಿಗೇನೋ ತೃಪ್ತಿಯಾಯಿತು. ಆದರೆ ಆ ವರೆಗೆ ಸಂಪಿಡಿವಿದ್ದ ಜಹಗೀರು, ಜಮೀನ್ದಾರರ ಅತೃಪ್ತಿಗೆ ಎಣೆ ಇರಲಿಲ್ಲ. ಸರಕಾರಕ್ಕೆ ಅವರ ನಿಯೋಗ ಗೋಷ್ಠಿಗಳು ಮೇಲಿಂದ ಮೇಲೆ ಹೋದವು. ಹಿಂದೂದೇಶದ ಅನೇಕ ಪ್ರಾಂತೀಯ ಸರಕಾರಗಳು ಈ ಸುಧಾರಣೆಯ ಬಗ್ಗೆ ಕೈಕೊಂಡ ಮಾರ್ಗಗಳನ್ನು ಸೂಚಿಸಿದರು. ಆದರೆ ಶೇಕ್ ಅಬ್ದುಲ್ಲಾ ಮಂತ್ರಿಮಂಡಲವು ಅಲುಗಾಡಲಿಲ್ಲ. ಬಡಜನರ ಹಿತಕ್ಕಾಗಿ ತಾವು ಕೈಕೊಂಡ ಪ್ರತಿಜ್ಞೆಯನ್ನು ಬಿಡಲಿಲ್ಲ. ಸರಕಾರವು ತಮ್ಮ ಪಕ್ಷದಲ್ಲಿದೆಯೆಂದು ತಿಳಿದ ಸಾಮಾನ್ಯ ಜನರು ಚೇತರಿಸಿಕೊಳ್ಳತೊಡಗಿದರು. ಯಾವದೇ ಕೆಲಸ ಮಾಡದ ಭೂಮಾಲಿಕನಿಗೆ ಶೇಕಡ ..ರಷ್ಟು ಕೊಡುವದೂ ನ್ಯಾಯವಲ್ಲವೆಂಬ ಅಭಿಪ್ರಾಯ ವೇಗಳಿತ ದಿನೇ ದಿನೇ ಬೆಳೆಯತೊಡಗಿ ಅದು ಸಾರ್ವತ್ರಿಕ ಜನಾನುರಾಗವನ್ನು ಪಡೆಯಿತು. ಕೆಲ ಮ್ಯಾನಿಸ್ಟ್ ಪ್ರನಾದಲ್ಲಾದಂತೆ ಜನಹಿತ ಸರಕಾರದ ಬೆಂಬಲದಿಂದ ಜನರ ಚೇತರಿಸಿಕೊಂಡು ತಮ್ಮ ಮೂಲಭೂತ ಹಕ್ಕುಗಳನ್ನು ಮುಂದಿಡ ತೊಡಗಿದರು. ಕೆಲವೆಡೆಗಳಲ್ಲಿ ಜಾಗೃತಗೊಂಡ ಜನರು ಜಮೀನ್ದಾರರಿಗೆ ತಾವು ಕೊಡಬೇಕಾಗಿದ್ದುದನ್ನು ಕೊಡದೆ ಚಳವಳಿ ಪ್ರಾರಂಭಿಸತೊಡಗಿದರು. ಈ ಜನ ಜಾಗೃತಿಯ ಸದವಕಾಶವನ್ನು ಪಡೆದು ಅಬ್ದುಲ್ಲಾ ಸರಕಾರವು ಹೊಸ ಭೂ ಸುಧಾರಣಾ ನಿಯಮಗಳನ್ನು ಸಾರಿದೆ. ಇದರಿಂದಾಗಿ ಜಮೀನ್ದಾರರ ಭೂಮಿಯ ಒಡೆತನವು ಪೂರ್ಣವಾಗಿ ಅದು ಭೂಮಿಯನ್ನು ಉಳುವವರ ಕೈಸೇರುವುದು. ಜಮೀನ್ದಾರರಿಗೆ ಯಾವದೇ ಪರಿಹಾರ ದ್ರವ್ಯ ಕೊಡದೆ ಈ ಏರ್ಪಾಡು ಮಾಡಲ್ಪಡಲಿದೆ.

ಈ ನಿಯಮದಂತೆ ೨೨¾ ಎಕ್ರೆ ಮತ್ತು ಅದಕ್ಕಿಂತ ವಿಸ್ತಾರವುಳ್ಳ ತೋಟ ಭೂಮಿ ಇರುವ ಮಾಲೀಕರು ತಮ್ಮ ಖಾಸಗಿ ವ್ಯವಸಾಯಕ್ಕೆ ೨೦ ಎಕ್ರೆಗಳನ್ನು ಮಾತ್ರ ಇಟ್ಟುಕೊಂಡು ಉಳಿದವುಗಳ ಹಿಡಿತವನ್ನು ಯಾವುದೇ ಪರಿಹಾರವಿಲ್ಲದೆ ಬಿಟ್ಟು ಕೊಡಬೇಕಾಗಿದೆ. ತನಗೆಂದು ಇಟ್ಟುಕೊಳ್ಳುವ ಭೂಮಿಯ ವ್ಯವಸಾಯವು ಭೂಮಾಲಿಕರಿಂದಲೇ ನಡೆಯಬೇಕು. ಅರ್ಥಾತ್ ಯಾವದೇ ಭೂ ಮಾಲಿಕನು ಇನ್ನೊಬ್ಬರದ ದುಡಿಮೆಯಿಂದ ಜೀವಿಸುವ ಸಂಧರ್ಭ ಇಲ್ಲದಂತಾಗಿ "ಉಳುವವನಿಗೇ ಭೂಮಿ." ಎಂಬ ಧ್ಯೇಯ ಅಲ್ಲಿ ಸಾರ್ಥಕವಾಗಿದೆ. ಈ ಶಾಸನದಿಂದ ಎಷ್ಟು ಜನರಿಗೆ ಲಾಭ ..ಎಂಬ ಬಗ್ಗೆ ಒಂದು ನಿದರ್ಶನ ..ವದು. ಅಲ್ಲಿ ಪ್ರಾಂಚ್ ಎಂಬ ಜಹಗೀರು ಇತ್ತು. ಅದರ ವಿಸ್ತೀರ್ಣ ೧೬೨೫೭ ಚದರ ಮೈಲು. ಅರ್ಥಾತ್ ಕೊಡಗಿಗಿಂತ ಸ್ವಲ್ಪ ದೊಡ್ಡದು. ಅದರಲ್ಲಿ ನಾಲ್ಕು ಲಕ್ಷ ಜನರು ಕೇವಲ ಈ ಜಹಗೀರಿನ ರಾಜನ [illegible] ರರಂತೆ ಜೀವಿಸುತಿದ್ದರು. ಈಗ [illegible] ಈ ಕಾರಾಗಾರದ ಪಾಲಾಯಿತು. ಜಮ್ಮು ಪ್ರಾಂತ್ಯದಲ್ಲಿ ಕಾಶ್ಮೀರದ ಜಹಗೀರ್ದಾರರ ಮತ್ತು ಜಮೀನ್ದಾರರ ಬೇಟೆಗೆ ಅನುಕೂಲವಾಗಿರಲೆಂದು ೮೦೦ ಎಕ್ರೆ ಜಾಗವನ್ನು ಪ್ರತ್ಯೇಕಿಸಿಡಲಾಗಿತ್ತು. ಇದನ್ನು ಭೂಮಿ ಇಲ್ಲದ ಜನರಿಗೆ ಹಂಚಲಾಗಿದೆ. ಈ ರೀತಿ ಕಾಶ್ಮೀರದಲ್ಲಿ ಕ್ರಮಶಃ ಹಿಂದಿನ ವ್ಯಕ್ತಿ ಒಡೆತನದ ಜೀವನ ಪದ್ಧತಿ ನಾಮಶೇಷವಾಗಿ ಜನಹಿತ ಕಾರ್ಯಗಳು ಸಾಗುತ್ತಿವೆ.

ಶೇಕ್ ಅಬ್ದುಲ್ಲಾರವರು ಕೇವಲ ದಕ್ಷ ಆಡಳಿತಗಾರರು ಮಾತ್ರವಲ್ಲ; ದೂರದರ್ಶಿಗಳೂ ಹೌದು. ಅವರು ಈ ಸುಧಾರಣೆಗಳನ್ನು ಘೋಷಿಸಿದ ದಿನವೂ ಗಮನಾರ್ಹವಾದುದು. ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಪರಿಷತ್ತಿನ ಚಳವಳದಲ್ಲಿ ಪ್ರಾಣತೆತ್ತ ಹುತಾತ್ಮರ ದಿನಾಚರಣೆಯಂದು ಅವರು ಈ ಕ್ರಾಂತಿಕಾರಕ ಸುಧಾರಣೆಗಳನ್ನು ಘೋಷಿಸಿದರು. ಅಲ್ಲದೆ ಅವರು ಮಾಡಿದ ದೂರದರ್ಶಿತ್ವದ ಮತ್ತೊಂದು ಕೃತಿಯೆಂದರೆ ಪಾಕಿಸ್ಥಾನದ ವಶವಿರುವ ಕಾಶ್ಮೀರದ ಭಾಗದ ಸಾಮಾನ್ಯ ಜನರಿಗೆ ಅಪೀಲು. ಈ ಅಪೀಲಿನಲ್ಲಿ ಅವರು ತಾವು ಮಾಡಿರುವ ಸುಧಾರಣೆಗಳನ್ನೂ, ಸಾಮಾನ್ಯ ಜನತೆಯ ಹಕ್ಕು ಬಾಧ್ಯತೆಗಳನ್ನೂ ವಿವರಿಸಿ ಪಾಕಿಸ್ಥಾನ ಸರಕಾರದ ಮತ್ತು ಬಂಡವಳದಾರರ ಹಿಡಿತದಲ್ಲಿರುವ ಅವರು ದಂಗೆ ಏಳಬೇಕೆಂದೂ ತಮ್ಮ ಹಕ್ಕಾದ ಭೂಮಿಗಳನ್ನು ಪಡೆಯಬೇಕೆಂದೂ ಆಹ್ವಾನಿಸಿರುವರು. ತಮ್ಮ ಆಡಳಿತದಲ್ಲಿರುವ ಹೊಸ ಕಾಶ್ಮೀರದ ಸಾಮಾನ್ಯ ಜನರು ಪಡೆಯುತ್ತಿರುವ ಅನುಕೂಲತೆಗಳಿಗಾಗಿ ಅವರೂ ಯುಕ್ತಿಸಿ ಅವುಗಳನ್ನು ಪಡೆಯಬೇಕೆಂದು ಹೇಳಿರುವರು. ಪಾಕಿಸ್ಥಾನದ ಹಿಡಿತದಲ್ಲಿರುವ ಕಾಶ್ಮೀರ ಭಾಗಗಳಲ್ಲಿರುವ ಸಾಮಾನ್ಯ ಜನರನ್ನು ತಮ್ಮ ಪಕ್ಷಕ್ಕೆ ಗೆಲ್ಲಲು ಅಬ್ದುಲ್ಲಾರವರು ಹಾಕಿದ ಈ ಹೆಜ್ಜೆಯು ಪ್ರಶಂಸನಾರ್ಹವಾದುದು.

ಕಾಶ್ಮೀರದ ಈ ಕ್ರಾಂತಿಕಾರಕ ಸುಧಾರಣೆಗಳಿಂದ ಜಮೀನ್ದಾರರೂ, ಜಹಗೀರ್ದಾರರೂ ರೇಗಿ ಅಬ್ದುಲ್ಲರ ವಿರೋಧ ನಿಲ್ಲಬಹುದು. ಆದರೆ ಇಂಥ ಜಹಗೀರ್ದಾರರ ಸಂಖ್ಯೆ ಕೇವಲ ೪೦೦. ಆದರೆ ಇದರಿಂದ ಲಾಭ ಪಡೆದ ಸಾಮಾನ್ಯ ಜನರ ಸಂಖ್ಯೆ ೪೦ ಲಕ್ಷ. ಆದ್ದರಿಂದ ಶೇಕ್ ಅಬ್ದುಲ್ಲಾರವರು ಈ ಬಂಡವಳದಾರರ ಬೆದರಿಕೆಗೆ ಹೆದರಬೇಕಾಗಿಲ್ಲ.

ಕಾಶ್ಮೀರದ ಈ ಕ್ರಾಂತಿಕಾರಕ ಮುನ್ನಡೆಯಿಂದ ಭಾರತವೂ ಒಂದು ಪಾಠ ಕಲಿಯಬೇಕಾಗಿದೆ. ಹಿಂದೂದೇಶದಲ್ಲಿ ಅಖಿಲ ಭಾರತ ಕಾಂಗ್ರೆಸು ತಾನು ಅಧಿಕಾರಕ್ಕೆ ಬರುವ ಮೊದಲು ಜಮೀನ್ದಾರ ಪದ್ಧತಿಯನ್ನು ರದ್ದುಮಾಡುವ ಬಗ್ಗೆ ವಚನವಿತ್ತಿತ್ತು. ಕಾಂಗ್ರೆಸು ಅಧಿಕಾರಕ್ಕೆ ಬಂದ ನಂತರ ಈ ವಚನ ರಕ್ಷಣೆಯ ಮಾರ್ಗದಲ್ಲಿ ಇದು ಕುಂಟುತ್ತಾ ನಡೆದಿದೆ. ಹಿಂದೂದೇಶದ ಏಳು ಪ್ರಾಂತಗಳು ಅಂದರೆ ಮದ್ರಾಸು, ಉತ್ತರ ಪ್ರದೇಶ, ಬೀಹಾರ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಒರಿಸಾ ಮತ್ತು ಅಸಾಮ್ ಇವುಗಳು ಜಮೀನ್ದಾರ ಪದ್ಧತಿಯನ್ನು ನಿರ್ಮೂಲಗೊಳಿಸುವ ಮಸೂದೆಗಳನ್ನು ಮುಂದಿಟ್ಟುಕೊಂಡು ಆಕಾಶ ನೋಡುತ್ತಿವೆ. ಜಮೀನ್ದಾರರಿಗೆ ಅವರ ವಶವಿರುವ ಈ ಭೂಮಿಗಳಿಗೆ ಪರಿಹಾರ ದ್ರವ್ಯಕೊಟ್ಟು ಈ ಸುಧಾರಣೆಯನ್ನು ಜಾರಿಯಲ್ಲಿ ತರಬೇಕೆಂದು ಅಭಿಪ್ರಾಯ ಪಡುತ್ತಿವೆ. ಹೀಗೆ ಪರಿಹಾರ ಕೊಡಲು ಒಟ್ಟು ೪೫೦ ಕೋಟಿ ರೂಪಾಯಿಗಳಾಗುವವೆಂದು ಅಂದಾಜು ಮಾಡಲಾಗಿದೆ. ಅರ್ಥಾತ್ ಹಿಂದೂದೇಶದ ೩೦ ಮಿಲಿಯ ಜನತೆಯಲ್ಲಿ ಪ್ರತಿಯೊಬ್ಬನೂ ತಲಾ ರೂ. ೧೪ರಷ್ಟು ಈ ಹೊಟ್ಟೆ ತುಂಬಿದ ಕೆಲವು ಸಾವಿರ ಜಮೀನ್ದಾರರಿಗೆ ತೆರಬೇಕಾಗುವದು! ಈ ಪರಿಹಾರ ಕೊಡುವ ಏರ್ಪಾಡು ಅನ್ಯಾಯಕರ, ಏಕೆಂದರೆ ಪರಿಹಾರ ಕೊಡಬೇಕಾದವರ ಸ್ಥಿತಿ ಅದನ್ನು ಹೊಂದಿಕೊಳ್ಳಲಿರುವವರ ಸ್ಥಿತಿಗಿಂಥ ಸಾವಿರ ಪಾಲು ಹೀನಾಯವಾಗಿರುವಾಗ ಪರಿಹಾರ ಕೊಡಬೇಕೆಂಬುದು ನ್ಯಾಯದ ಮಾರ್ಗವಾಗದು. ಭೂಮಿಯ ಒಡೆತನವನ್ನು ಇಟ್ಟುಕೊಂಡು ಇಷ್ಟು ದಿನ ದುಡಿಯದ ಚಕ್ಕಂದದಿಂದ ಬದುಕಿದುದೇ ಅವರಿಗೆ ಹೆಚ್ಚಾಯಿತು. ಅಂಥಾವರಿಗೆ ಪರಿಹಾರದ್ರವ್ಯ ಕೊಡುವದು ಸಲ್ಲದು ಎಂದು ಹೇಳುವ ಸಮಾಜವಾದಿಗಳ ವಾದದಲ್ಲಿ ಸ್ವಲ್ಪ ತಿಳ್ಳವಿದೆ. ಭಾರತವು ಕಾಶ್ಮೀರದ ಪ್ರಗತಿಪರ ಸುಧಾರಣೆಯಿಂದ ಒಂದು ಪಾಠ ಕಲಿಯಬೇಕಾದುದು ಅಗತ್ಯ.

---

# ನೆಹರು--ಸ್ಟೇಲಿನ್--ಎಚೆಸನ್ ಪತ್ರವ್ಯವಹಾರ.

ಕೊರಿಯಾ ಯುದ್ಧವನ್ನು ಅದಷ್ಟು ಬೇಗ ಶಾಂತಿಯುತವಾದ ಒಡಂಬಡಿಕೆಯಿಂದ ಕೊನೆಗೊಳಿಸಬೇಕೆಂಬ ಆಶೆಯನ್ನು ವ್ಯಕ್ತಪಡಿಸಿ ಭಾರತದ ಪ್ರಧಾನ ಪಂಡಿತ ನೆಹರೂರವರು ರಷ್ಯದ ಪ್ರಧಾನ ಮಂತ್ರಿ ಜೋಸೆಫ್ ಸ್ಟೇಲಿನರಿಗೆ ಮತ್ತು ಅಮೇರಿಕದ ರಾಜ್ಯಾಂಗ ಕಾರ್ಯದರ್ಶಿ ಡೀನ್ ಏಚಿಸನರಿಗೆ ವೈಯಕ್ತಿಕ ಸಂದೇಶಗಳನ್ನು ಆಯಾಯಾ ರಾಷ್ಟ್ರದ ಭಾರತ ರಾಯಭಾರಿಗಳ ಮೂಲಕ ಕಳಿಸಿಕೊಟ್ಟದ್ದರಷ್ಟೆ. ಅವರಿಬ್ಬರಿಂದ ಪಂಡಿತ ನೆಹರೂರವರಿಗೆ ಉತ್ತರ ಬಂದಿರುವುದು. ಚೀನದ ಪ್ರಜಾ ಸರಕಾರದ ಪ್ರತಿನಿಧಿಗಳಿಗೂ ಭದ್ರತಾ ಸಮಿತಿಯಲ್ಲಿ ಸ್ಥಾನಕೊಟ್ಟು ಪಂಚಮಹಾ ರಾಷ್ಟ್ರಗಳ ಪ್ರತಿನಿಧಿಗಳು ಕೂಡಿ ತೀರ್ಮಾನಿಸುವುದಾದರೆ ಕೊರಿಯದ ಸಮಸ್ಯೆಯನ್ನು ಪರಿಹರಿಸಲು ತನ್ನ ಪೂರ್ಣ ಸಮ್ಮತಿಯಿದೆಯೆಂದು ಮಿ| ಸ್ಟೇಲಿನರು ತಮ್ಮ ಉತ್ತರದಲ್ಲಿ ವ್ಯಕ್ತಪಡಿಸಿರುವರು. ಪಂಡಿತ ನೆಹರೂರವರು ಈ ಉತ್ತರ ವಾರ್ತೆಯ ಬಗ್ಗೆ ಕೃತಜ್ಞತೆ ಸೂಚಿಸಿ ಸ್ಟೇಲಿನರಿಗೆ ಪುನಃ ಉತ್ತರ ಬರೆದಿರುವರು. ಸ್ಟೇಲಿನ್-ನೆಹರೂಗಳೊಳಗೆ ನಡೆದ ಈ ಮಹತ್ವಪೂರ್ಣ ಪತ್ರವ್ಯವಹಾರದ ವಿವರಗಳನ್ನು ರಷ್ಯದ ಅಧಿಕೃತ ವಾರ್ತಾಸಂಸ್ಥೆ 'ಟಾಸ್' ಏಜನ್ಸಿಯು ಪ್ರಕಟಿಸಿರುವುದು. ಈ ಪತ್ರವ್ಯವಹಾರವು ರಷ್ಯದ ಪ್ರಮುಖ ಪತ್ರಿಕೆಯಾದ 'ಪ್ರಾವ್ದಾ' ಮತ್ತು ಇತರ ಮುಖ್ಯ ಪತ್ರಿಕೆಗಳಲ್ಲಿ ಹೊರಗಿನ ಪುಟದಲ್ಲಿ ದಪ್ಪ ಅಕ್ಷರದ ಶಿರೋನಾಮೆ ಕೊಟ್ಟು ಪ್ರಕಟವಾಗಿದೆ

### ನೆಹರೂಗಳ ಮೊದಲನೆ ಪತ್ರ.

ಜುಲೈ ತಾ. ೧೩ ರಲ್ಲಿ ಪಂಡಿತ ನೆಹರೂರವರು ಮಾರ್ಶಲ್ ಸ್ಟೇಲಿನರಿಗೆ ಬರೆದ ಪತ್ರದ ವಿವರಗಳು ಈ ರೀತಿಯಾಗಿವೆ

'ಮಾಸ್ಕೋದಲ್ಲಿರುವ ವಿದೇಶಾಂಗ ಚಟುವಟಿಕೆಗಳ ಮಂತ್ರಿಮಂಡಲದೊಡನೆ ನಮ್ಮ ರಾಯಭಾರಿಗಳು ನಡೆಸಿದ ಮಾತುಕತೆಗಳಲ್ಲಿ ಕೊರಿಯಾ ಯುದ್ಧದ ಕಡೆಗೆ ಭಾರತದ ಧೋರಣೆ ಏನೆಂಬುದನ್ನು ಸ್ಪಷ್ಟ ತಿಳಿಸಲಾಗಿದೆ.

'ಭಾರತದ ಮುಖ್ಯ ಉದ್ದೇಶವೇನೆಂದರೆ ಕೊರಿಯಾ ಯುದ್ಧವು ಈಗ ಇರುವ ಚಿಕ್ಕ ಕ್ಷೇತ್ರದಲ್ಲಿಯೇ ಆದಷ್ಟು ಬೇಗ ಕೊನೆಗೊಂಡು, ಭದ್ರತಾಸಮಿತಿಯ ಮುಂದೆ ಬಂದಿರುವ ಈಗಿನ ಗಹನ ಸಮಸ್ಯೆ ಶಾಂತಿಯುತವಾದ ಒಡಂಬಡಿಕೆಯಲ್ಲಿ ತೀರ್ಮಾನವಾಗಬೇಕೆಂಬುದು. ಚೀನದ ಪ್ರಜಾ ಸರಕಾರದ ಪ್ರತಿನಿಧಿಗೆ ಭದ್ರತಾ ಸಮಿತಿಯಲ್ಲಿ ಸ್ಥಾನಕೊಡಿಸಿ, ಸೋವಿಯಟ್ ಯೂನಿಯನು ತಿರುಗಿ ಭದ್ರತಾಸಮಿತಿಯಲ್ಲಿ ಸ್ಥಾನ ಅಲಂಕರಿಸುವಂತೆ ಅವಕಾಶ ಮಾಡಿಕೊಟ್ಟು ಆ ಮೇಲೆ ಸೋವಿಯಟ್ ಯೂನಿಯನು ಸಂಯುಕ್ತ ಅಮೇರಿಕ ಮತ್ತು ಚೀನಗಳು ಇತರ ಸಂಸ್ಥಾನಗಳ ಸಹಕಾರ ಪಡೆದು ಯುದ್ಧ ಕೊನೆಗೊಳಿಸುವ ಯಾವುದೇ ಶಾಂತಿಯುತವಾದ ತೀರ್ಮಾನಕ್ಕೆ ಬರಬೇಕು ಮತ್ತು ಕೊರಿಯಾ ಸಮಸ್ಯೆಗೆ ಕೊನೆಯ ಪರಿಹಾರವು ಕಂಡ ಹಿಡಿಯಲ್ಪಡಬೇಕು ಎಂಬುದು ಭಾರತದ ಆಶಯವಾಗಿದೆ

'ಶಾಂತಿಸ್ಥಾಪನೆಗಾಗಿ ಹೋರಾಡುವ ನೀವು ಎಲ್ಲಾ ರಾಷ್ಟ್ರಗಳ ಸಾಮಾನ್ಯ ಹಿತದ ಮತ್ತು ಸಮಗ್ರ ಮಾನವತೆಯ ಹಿತಪರವಾದ ಈ ಉದ್ದೇಶವನ್ನು ಪೂರ್ತಿಗೊಳಿಸಲು ಖಂಡಿತವಾಗಿಯೂ ನೆರವಾಗುವಿರೆಂಬ ಭರವಸೆಯನ್ನಿಟ್ಟುಕೊಂಡು ಈ ನನ್ನ ವೈಯಕ್ತಿಕ ಮನವಿಯನ್ನು ನಿವೇದಿಸುವ ಸಂಕಲ್ಪ ಮಾಡಿರುತ್ತೇನೆ

'ನನ್ನ ಸಂಪೂರ್ಣ ಗೌರವದ ಭರವಸೆಯನ್ನು ಸ್ವೀಕರಿಸಿ'

### ಸ್ಟೇಲಿನರ ಸಮ್ಮತಿ

ಜುಲೈ ತಾ ೧೩ರ ನೆಹರೂಗಳ ಪತ್ರಕ್ಕೆ ಮಾರ್ಶಲ್ ಸ್ಟೇಲಿನರು ಕಳಿಸಿದ ಉತ್ತರ ಈ ರೀತಿಯಾಗಿದೆ.

'ನಿಮ್ಮ ಶಾಂತಿಯ ಯತ್ನದ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ. ಭದ್ರತಾ ಸಮಿತಿಯ ಮೂಲಕ ಕೊರಿಯಾ ಪ್ರಶ್ನೆಯು ಶಾಂತಿಯುತವಾಗಿ ಶೀಘ್ರ ಪರ್ಯವಸಾನಗೊಳ್ಳಬೇಕೆಂಬ ನಿಮ್ಮ ಸೂಕ್ಷ್ಮ ಸಲಹೆಯನ್ನು ನಾನು ಸಂಪೂರ್ಣ ಅನುಮೋದಿಸುತ್ತೇನೆ. ಚೀನದ ಪ್ರಜಾ ಸರಕಾರದ ಪ್ರತಿನಿಧಿಯೂ ಸೇರಿ ಪಂಚ ಮಹಾರಾಷ್ಟ್ರಗಳ ಪ್ರತಿನಿಧಿಗಳು ಕೂಡಿ ಈ ಸಮಸ್ಯೆಯ ಪರಿಹಾರ ಕಂಡುಹಿಡಿಯಬೇಕೆಂಬ ಸೂಚನೆ ಅತ್ಯಂತ ಸಮರ್ಪಕವಾದುದು

'ಕೊರಿಯಾ ಪ್ರಶ್ನೆಯ ಶೀಘ್ರ ತೀರ್ಮಾನಕ್ಕೆ ಭದ್ರತಾ ಸಮಿತಿಯಲ್ಲಿ ಕೊರಿಯಾ ಪ್ರಜೆಗಳ ಕಡೆಯ ಪ್ರತಿನಿಧಿಗಳ ಹೇಳಿಕೆಯನ್ನು ಕೇಳುವುದೂ ಅವಶ್ಯವಿದೆ.

ಗೌರವದ ಪ್ರಣಾಮಗಳು,

ಜೆ ವಿ ಸ್ಟೇಲಿನ್,

ಸೋವಿಯಟ್ ಯೂನಿಯನಿನ ಪ್ರಧಾನ ಮಂತ್ರಿ

### ನೆಹರೂಗಳ ಮರು ಓಲೆ

ಸ್ಟೇಲಿನರ ಉತ್ತರವನ್ನು ಸ್ವೀಕರಿಸಿ ಪಂಡಿತ ನೆಹರೂರವರು, 'ನೀವು ತಕ್ಕ ಕಾಲದಲ್ಲಿ ಆಶಾಪೂರ್ಣ ಉತ್ತರ ಬರೆದ ಬಗ್ಗೆ ತುಂಬಾ ಆಭಾರಿಯಾಗಿದ್ದೇನೆ. ಕೂಡಲೇ ಸಂಬಂಧಪಟ್ಟ ಇತರ ಸರಕಾರಗಳೊಡನೆ ಸಂಪರ್ಕ ಬೆಳೆಸಿ, ನಿಮಗೆ ಸದ್ಯದಲ್ಲೇ ಪುನಃ ಪತ್ರ ಲಿಖಿಸಲು ಅವಕಾಶವಾಗಬಹುದೆಂದು ಹಾರೈಸಿಕೊಂಡಿದ್ದೇನೆ' ಎಂದು ಬರೆದಿರುವರು.

### ಅಮೇರಿಕಾದ ಉತ್ತರ

ಪಂಡಿತ ಜವಾಹರ್‌ಲಾಲ್ ನೆಹರೂರವರು ಬರೆದ ಪತ್ರಕ್ಕೆ ಉತ್ತರವಾಗಿ ಅಮೇರಿಕಾದ ವಿದೇಶಾಂಗ ಸಚಿವ ಡೀನ್ ಏಚಿಸನ್‌ರವರು ಹೀಗೆ ಬರೆದಿದ್ದಾರೆ

'ತಾ. ೧೩-೭-೫೦ ರಲ್ಲಿ ಉಚ್ಚ ಧ್ಯೇಯದಿಂದ ನೀವು ಬರೆದ ಪತ್ರವನ್ನು ಮೆಚ್ಚುತ್ತೇನೆ. ಅಲ್ಲದೆ ನೀವು ಕಳುಹಿಸಿಕೊಟ್ಟ ಸ್ಟಾಲಿನರ ಉತ್ತರಕ್ಕೂ ವಂದಿಸುತ್ತೇನೆ. ನಾನು ಮತ್ತು ಅಮೇರಿಕಾದ ಪ್ರೆಸಿಡೆಂಟರು ಈ ಪತ್ರಗಳನ್ನು ಆಸ್ಥೆಯಿಂದ ಪರಿಶೀಲಿಸಿದೆವು. ಸಂಯುಕ್ತ ಅಮೇರಿಕಾದ ವಿದೇಶ ನೀತಿಯ ಪ್ರಾಮುಖ್ಯ ಗುರಿಯೆಂದರೆ ಜಗತ್ತಿನ ಶಾಂತಿ ಸಂರಕ್ಷಣೆ. ಸಂಯುಕ್ತ ರಾಷ್ಟ್ರ ಸಂಘವೇ ಇದನ್ನು ಸಾಧಿಸಬಲ್ಲ ಸಂಸ್ಥೆ ಎಂಬ ನಂಬಿಕೆ ಅವಕ್ಕಿದೆ. ಆದ್ದರಿಂದ ಸಂಯುಕ್ತ ರಾಷ್ಟ್ರಸಂಘವನ್ನು ಬಲಪಡಿಸುವ ಯಾವುದೇ ಪ್ರಯತ್ನಕ್ಕೆ ಅಮೇರಿಕೆಯ ಪೂರ್ಣ ಸಹಾಯವಿದೆ. ಕೊರಿಯಾದ ಬಗ್ಗೆ ಅಮೇರಿಕಾ ಸರಕಾರದ ಮತ್ತು ಜನತೆಯ ದೃಢನಿಶ್ಚಯವೆಂದರೆ ನಮ್ಮಲ್ಲಿರುವ ಸರ್ವ ಸಾಹಿತ್ಯಗಳಿಂದ ಸಂಯುಕ್ತ ರಾಷ್ಟ್ರ ಸಂಘದ ನಿರ್ಧಾರವನ್ನು ಜಾರಿಗೆ ತಂದು ಕೊರಿಯಾದ ಧಾಳಿಯನ್ನು ಹಿಮ್ಮೆಟ್ಟಿಸಿ ಅಲ್ಲಿ ಶಾಂತಿ ಸ್ಥಾಪನೆ ಮಾಡುವುದು. ಭದ್ರತಾ ಮಂಡಳಿಯ ನಿರ್ಣಯದಂತೆ ಕೊರಿಯಾ ಯುದ್ಧವು ಬೇರೆಡೆ ಹಬ್ಬದ ಅಲ್ಲೇ ಮುಗಿಯಬೇಕೆಂಬುದೇ ನಮ್ಮ ಇಚ್ಛೆ.

ಜಗತ್ತಿನ ನ್ಯಾಯಾನುವರ್ತಿ ಪ್ರತಿ ಸರಕಾರ ಮತ್ತು ಜನತೆಗೆ ಈಗ ಉಪಸ್ಥಿತವಾಗಿರುವ ಘರ್ಷಣೆ ಮತ್ತು ಸಂಯುಕ್ತ ರಾಷ್ಟ್ರಸಂಘದ ವಿಜಯದ ಬಗ್ಗೆ ಜವಾಬ್ದಾರಿ ಇದೆ. ಸಂಯುಕ್ತ ರಾಷ್ಟ್ರಸಂಘಕ್ಕೆ ಸೇರಿದ ಒಂದು ಅಲ್ಪ ಪಕ್ಷವು ಅಲ್ಲಿನ ಎಡರುಗಳನ್ನು ತಂದೊಡ್ಡದಿದ್ದ ಪಕ್ಷ ಈಗಾಗಲೇ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವದು ರಾಷ್ಟ್ರ ಸಂಘಕ್ಕೆ ಸಾಧ್ಯವಾಗುತ್ತಿತ್ತು. ಇಂದಾದರೂ ಸಂಯುಕ್ತ ರಾಷ್ಟ್ರಸಂಘದ ತತ್ವಾವಳಿಯನ್ನು ಅವರು ಲೆಕ್ಕಿಸಿ ವರ್ತಿಸುವದಾದರೆ ನಾಳೆಯೇ ಜಗತ್ತಿನ ಶಾಂತಿ ಸ್ಥಾಪನೆಯಾಗುವದು. ಶಾಂತಿಗೆ ಭಂಗ ಮಾಡುವದು, ಸಂಯುಕ್ತ ರಾಷ್ಟ್ರ ಸಂಘದ ನೀತಿಗೆ ವಿರುದ್ಧ ವರ್ತಿಸುವದು ಸಂಯುಕ್ತ ರಾಷ್ಟ್ರ ಸಂಘದ ಎದುರು ನಿಲ್ಲುವ ಮಹಾ ಪ್ರಶ್ನೆ. ಉತ್ತರ ಕೊರಿಯಾವು ಪ್ರಾರಂಭಿಸಿರುವ ಯುದ್ಧಕ್ಕೂ ಬೇರೆ ಸಮಸ್ಯೆಗಳಿಗೂ ಸಂಬಂಧವಿರುವದಿಲ್ಲ

ರಷ್ಯವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ತನ್ನ ಇಚ್ಛೆಯಂತೆ ಭಾಗವಹಿಸಲು ಇದೆಯೇ ವಿನಹ ಬೇರೆ ಯಾವುದೇ ನಿಬಂಧನ ಅದಕ್ಕಿಲ್ಲ. ನಮ್ಮ ಅಭಿಪ್ರಾಯದಂತೆ ಕಮ್ಯೂನಿಸ್ಟ್ ಚೈನಾಕ್ಕೆ ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಸ್ಥಾನ ಕೊಡುವ ವಿಚಾರವು ಸಂಯುಕ್ತ ರಾಷ್ಟ್ರಸಂಘದ ಸದಸ್ಯರಿಂದ ನಿರ್ಣಯವಾಗಬೇಕು. ಈ ವಿಚಾರದಲ್ಲಿ ಈಗ ಭಿನ್ನಾಭಿಪ್ರಾಯಗಳಿವೆ. ಆದರೆ ಇಂಥಾ ನಿರ್ಣಯವನ್ನು ಧಾಳಿಯ ಮೂಲಕ ಪಡೆಯುವದು ಅಪ್ರಾಸಂಗಿಕವೆಂಬುದನ್ನು ನೀವೂ ಒಪ್ಪಬಹುದು. ಕೊರಿಯಾ ಸಮಸ್ಯೆ ಬಗೆಹರಿದು ಶೀಘ್ರ ಶಾಂತಿ ಪ್ರಸ್ಥಾಪಿಸಲ್ಪಡಲೀ ಎಂಬ ಉತ್ಕಟೇಚ್ಛೆ ನಿಮಗಿದೆಯೆಂದು ನಮಗೆ ಗೊತ್ತು. ನಮ್ಮ ಮತ್ತು ನಿಮ್ಮ ವಿಶಾಲದೇಶದ ಆಶಯ ದುಡಿದು ಶಾಂತಿಗಾಗಿ ಸಂಯುಕ್ತ ರಾಷ್ಟ್ರಸಂಘದ ಮೂಲಕ ದುಡಿಯಲು ನಾವು ಸದಾ ಸಿದ್ಧರಿರುವೆವು.

### ನೆಹರೂರವರ ಮರು ಪತ್ರ

"ಚೀನೀ ಕಮ್ಯೂನಿಸ್ಟರನ್ನು ಯಾವ ಷರತ್ತೂ ಇಲ್ಲದೆ ಪ್ರಪಂಚ ಸಂಸ್ಥೆಗೆ ಸೇರಿಸಿಕೊಳ್ಳುವಂತೆ ಅಮೇರಿಕಾವು ಪ್ರಯತ್ನಿಸಬೇಕಾದುದು ಧರ್ಮ" ಎಂಬುದಾಗಿ ಪ್ರಧಾನ ಮಂತ್ರಿ ಪಂಡಿತ ಜವಾಹರ್‌ಲಾಲ್ ನೆಹರೂರವರು ಅಮೇರಿಕದ ಸೆಕ್ರೆಟರಿ ಆಫ್ ಸ್ಟೇಟ್ ಮಿ|| ಡೀನ್ ಏಚಿಸನ್‌ರವರಿಗೆ ಹೊಸದಾಗಿ ಪತ್ರವೊಂದನ್ನು ಬರೆದಿದ್ದಾರೆ.

"ಸ್ಟೇಟ್ ಇಲಾಖೆಯೂ, ಡೀನ್ ಏಚಿಸನ್‌ರವರೂ ಇಂತಹ ಪತ್ರವೇನೂ ಬಂದಿಲ್ಲವೆಂದು ಹೇಳಿರುವರಾದರೂ, ಪಂ| ನೆಹರೂರವರಿಂದ ಪತ್ರ ಹೋಗಿರುವುದು ಖಚಿತ, ಅಷ್ಟೇ ಅಲ್ಲ, ನೆಹರೂರವರ ಹಿಂದಿನ ಎರಡು ಕಾಗದಗಳಿಗಿಂತಲೂ ಈಗಿನದು ಬಹಳ ಖಡಾಖಂಡಿತವಾಗಿಯೂ, ಸ್ಪಷ್ಟವಾಗಿಯೂ ಇದೆ" ಎಂದವರು ತಿಳಿಸಿದ್ದಾರೆ.

"ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಕಮ್ಯೂನಿಸ್ಟ್ ಚೀನಾದ ಪ್ರತಿನಿಧಿಗಳನ್ನು ಕರೆಯಲು ಯಾವ ಷರತ್ತುಗಳನ್ನು ಏಚಿಸನರು ಹಾಕದಿದ್ದರೆ ಕೊರಿಯಾದಲ್ಲಿನ ಯುದ್ಧವನ್ನು ಕೊನೆಗಾಣಿಸಲು ಸಂಧಾನಕ್ಕೆ ಬರಲು ಸಹಾಯಕವಾಗುವುದು. ಉತ್ತರ ಕೊರಿಯನ್ನರು ೩೮ನೇ ಅಕ್ಷಾಂಶಕ್ಕೆ ಹಿಂದಿರುಗಬೇಕೆಂಬ ಷರತ್ತನ್ನು ಹಾಕುವುದು ಸರಿಯಲ್ಲ. ಹೀಗೆ ಮಾಡಿದರೆ ರಷ್ಯವೂ ನಾನಾ ಷರತ್ತುಗಳನ್ನು ಹಾಕುವದು. ಇದರಿಂದ ಶಾಂತಿ ಸಂಧಾನದ ಸಂಭವವು ಕಮ್ಮಿಯಾಗುತ್ತಾ ಹೋಗುವುದು" ಎಂದು ನೆಹರೂ ತಿಳಿಸಿರುವುದಾಗಿ ತಿಳಿದು ಬಂದಿದೆ

"ಅಮೇರಿಕವು ವಿಶ್ವಸ್ತವಾಗಿ ಈ ಕಾರ್ಯ ಮಾಡಿದಲ್ಲಿ ಮತ್ತು ಆಗಲೂ ಕಮ್ಯೂನಿಸ್ಟರು ಶಾಂತಿ ಸ್ಥಾಪನೆಗೆ ಪ್ರಾಮಾಣಿಕ ಪ್ರಯತ್ನ ಮಾಡದಿದ್ದಲ್ಲಿ ಆಗ ಜಗತ್ತಿಗೆಲ್ಲಾ ಕಮ್ಯೂನಿಸ್ಟರ ನೀತಿ ಗೊತ್ತಾಗುವುದು" ಎಂದೂ ನೆಹರೂ ತಿಳಿಸಿರುವುದಾಗಿ ವರದಿ ಮಾಡಲಾಗಿದೆ

"ರಷ್ಯಕ್ಕೆ ಕೊರಿಯಾದಲ್ಲಿ ಶಾಂತಿ ಸ್ಥಾಪಿಸಬೇಕೆಂಬ ಬಯಕೆ ಇದೆ ಎಂಬುದಾಗಿ ನೆಹರೂ ನಂಬಿದ್ದಾರೆ. ಅಷ್ಟೇ ಅಲ್ಲದೆ ಸೆಕ್ಯೂರಿಟಿ ಕೌನ್ಸಿಲಿಗೆ ಚೀನೀ ಕಮ್ಯೂನಿಸ್ಟರನ್ನು ತರುವ ಪ್ರಯತ್ನದಲ್ಲಿ ಭಾರತ ಮತ್ತು ಇತರ ರಾಷ್ಟ್ರಗಳೊಡನೆ ಫ್ರಾನ್ಸ್, ಕ್ಯೂಬಾ, ಈಕ್ವೆಡಾರ್ ಮತ್ತು ಈಜಿಪ್ಟ್‌ಗಳೂ ಸೇರಬೇಕೆಂದು ಅವರ ಮನವೊಲಿಸಲು ನೆಹರೂ ಪ್ರಯತ್ನಿಸುತ್ತಿದ್ದಾರೆ. ಅದೇ ಸಮಯದಲ್ಲಿ ಅವರು ರಷ್ಯ ಮತ್ತು ಕಮ್ಯೂನಿಸ್ಟ್ ಚೀನಾಗಳನ್ನು ಯುದ್ಧ ಸಂಬಂಧದಿಂದ ದೂರ ಇರಬೇಕೆಂದೂ ಒತ್ತಾಯ ಮಾಡುತ್ತಿದ್ದಾರೆ" ಎಂದೂ ಈ ವರದಿಯಲ್ಲಿ ಹೇಳಲಾಗಿದೆ

# || ಜೋಸೆಫ್ ಸ್ಟಾಲಿನ್ ||

ರಷ್ಯದ ಮಾರ್ಶಲ್ ಜೋಸೆಫ್ ಸ್ಟಾಲಿನ್ ಇಂದು ಜಗತ್ತಿನಲ್ಲಿ ಒಂದು ಮಹಾ ವ್ಯಕ್ತಿ ಅಥವಾ ಒಂದು ಶಕ್ತಿ ಎಂದು ಹೇಳಬಹುದು. ಅವರ ಮಾತುಗಳು [illegible] ಅವರಿಗೆ ಮಾನವನು. ೧೯೦೦ [illegible] ಚದರ ಮೈಲು ವಿಸ್ತಾರ ಭೂಮಿ ಅವರ ಒಡೆತನದಲ್ಲಿದೆ. ಪಶ್ಚಿಮದಲ್ಲಿ ಜರ್ಮನಿಯಿಂದ ಒಡೆದು ಅತೀ ಪೂರ್ವದ ಕೊರಿಯದ ವರೆಗಿನ ಜನಸಂಖ್ಯೆಯು ಅವರ ಅಧೀನವಿದ್ದು, ತಮ್ಮ ಒಡೆಯನಿಗಾಗಿ ಕತ್ತರು ಹಲ್ಲು ಸಿದ್ಧವಿದೆ. ಇಷ್ಟಲ್ಲದೆ ಜಾವಾ, ದ. ಆಫ್ರಿಕಾ, ನ್ಯೂಯಾರ್ಕ್, ಇಂಗ್ಲೆಂಡ್, ಮೊದಲಾದೆಡೆಯಿರುವ ಕಮ್ಯೂನಿಸ್ಟರು ಸ್ಟಾಲಿನರ ಮಾತನ್ನು ವೇದವಾಕ್ಯವೆಂದು ಪರಿಗಣಿಸುತ್ತಿರುವರು. ಜಗತ್ತಿನಾದ್ಯಂತ ಕಮ್ಯೂನಿಸ್ಟರು ಸ್ಟಾಲಿನರಿಗಾಗಿ ತಮ್ಮ ದೇಶದ ವಿರುದ್ಧ ಅಂದೋಲನ ನಡೆಸಲು ಸಿದ್ಧರು. ಮುಷ್ಕರ ಹೂಡಲು ಸಿದ್ಧರು ಮಾತ್ರವಲ್ಲ ಪ್ರಾಣಾರ್ಪಣೆ ಕೂಡಾ ಮಾಡಿರುವರು. ಈ ಮಹಾನ್ ವ್ಯಕ್ತಿ ಏನು ಮಾಡುತ್ತಿದೆ ಎಂದು ಅಖಿಲ ಜಗತ್ತು ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿದೆ.

ಇಷ್ಟು ದೊಡ್ಡ ವ್ಯಕ್ತಿಯು ನಿಜಗುಣಗಳೇನು?

ಸ್ಟಾಲಿನ್ ಗಿಡ್ಡನ ಮನುಷ್ಯ. ಐದು ಅಡಿ ಐದು ಅಂಗುಲ ಎತ್ತರವುಳ್ಳ ಮನುಷ್ಯ. ಗಿಡ್ಡದಾದ ಕತ್ತಿಗೆಯಿಂದ ಎರಡೂ ಭುಜಗಳು ಕೆಳವು ಬಾಗಿ ಇಳಿದಿವೆ.

ಎಡತೋಳು ಬಲತೋಳಿಗಿಂತ ಗಿಡ್ಡವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ವಯಸ್ಸಿನ ಭಾರದಿಂದ ಅವನ ಚಲನೆ ನಿಧಾನವಾದರೂ ಚುರುಕಾದ ಜೀವವದು. ದೊಡ್ಡದಾದ ಮತ್ತು ಚೂಪಾದ ಮೂಗು ಅವರ ತೀಕ್ಷ್ಣ ಸ್ವಭಾವವನ್ನು ತೋರಿಸುತ್ತದೆ. ಮಸುನಗೆಯು ಮುತ್ಸದ್ದಿಯ ಲಕ್ಷಣಗಳನ್ನು ಒಡೆದು ತೋರಿಸುತ್ತಿದೆ. ಕಣ್ಣುಗಳು ಸಪೂರವಿದ್ದು ಭಾರವಾದ ರೆಪ್ಪೆಗಳಿಂದ ಅವು ಎದುರಿದ್ದವರನ್ನು ತೀಕ್ಷ್ಣವಾಗಿ ಪರೀಕ್ಷಿಸುತ್ತವೆ. ಮೀಸೆ ಗಡ್ಡಗಳು ನರೆತು ಮುಂದ ಪ್ರಾಯವನ್ನು ಸೂಚಿಸುತ್ತವೆ.

ಇಷ್ಟೆಲ್ಲ ಜೋಸೆಫ್ ಸ್ಟಾಲಿನನ ಲಕ್ಷಣಗಳು. ಅವನು ಒಂದು ಆಕರ್ಷಕ ವ್ಯಕ್ತಿಯಲ್ಲ. ಮನಸೋಲಿಸುವ ನಿಜಗುಣಗಳು ಅವನಲ್ಲಿಲ್ಲವೆಂದು ಒಡೆದು ಕಾಣುತ್ತದೆ. ಯಾವನೇ ಮನುಷ್ಯನನ್ನು ತನ್ನ ವ್ಯಕ್ತಿತ್ವದಿಂದ ಸೆಳೆಯುವ ಶಕ್ತಿ ಅವನಲ್ಲಿಲ್ಲವೆಂದು ಗೋಚರಿಸುತ್ತದೆ. ಆದರೆ ಅವನ ಮಾತಿನಲ್ಲಿ ಜಾಣ್ಮೆ ಇದೆ. ಮಾತಿನ ಜಾಲದಲ್ಲೇ ಬಿದ್ದ ಯಾವ ವ್ಯಕ್ತಿಯೂ ಪಾರಾಗಿ ಹೋಗುವಷ್ಟು ಅವನು ಚತುರ. ಒಂದಲ್ಲ, ಹಲವು ಗಂಟೆಗಳ ತನಕ ಯಾವನೇ ವಿಚಕ್ಷಣ ಮುತ್ಸದ್ದಿಯೂ ಅವನೊಡನೆ ಮಾತನಾಡಿ ತನ್ನ ಬಲೆಯಲ್ಲಿ ಸಿಲುಕಿಸುವ ಪ್ರಯತ್ನ ಮಾಡಿದರೆ ಅವನು ಯಶಸ್ವಿಯಾಗುವಂತಿಲ್ಲ. ಗಂಟೆಗಟ್ಟಲೆ ಸಂಭಾಷಣೆ ನಡೆಸಿದರೂ ಅವನು ತನ್ನ ಧೋರಣೆಯನ್ನು ಬದಲಿಸದೆ ಮಾತ್ತು ತಿರುಗದಂತೆ ಸಂಭಾಷಣೆಗೆ ಬಂದ ವ್ಯಕ್ತಿಯನ್ನೇ ಮಣಿಸಲು ಶಕ್ತನಿರುವನು. ಇವರಿಂದ ಸ್ಟಾಲಿನ್ ಯಾವ ರೀತಿಯಲ್ಲಿ ತನ್ನ ಇಂದಿನ ಶಕ್ತಿಯನ್ನು ಪಡೆದಿರುವನೆಂಬುದು ವ್ಯಕ್ತವಾಗುತ್ತದೆ.

ಸಂದರ್ಶಕರೊಡನೆ ಸುದೀರ್ಘವಾಗಿ ಮಾತುಕತೆ ನಡೆಸುವುದು ಅವನ ಹವ್ಯಾಸ. ಸುಪ್ರಸಿದ್ಧ ಲೇಖಕ ಲೂಯಿ ಫಿಶ್ಚರ್‌ರೊಡನೆ ಅವನು ಆರೂವರೆ ಗಂಟೆ ಮಾತನಾಡಿದ್ದನು. ಅಮೇರಿಕದ ಇಲಿಯಟ್ ರೂಜವೆಲ್ಟರೊಡನೆ ಎಂಟು ಗಂಟೆಗಳ ಸಂಭಾಷಣೆ ನಡೆಸಿದ್ದನು. ಅಮೇರಿಕದ ವಾಣಿಜ್ಯ ಸಂಘದ ಅಧ್ಯಕ್ಷ ಎರಿಕ್ ಎ. ಜೋನಸ್ಟನ್‌ಗೆ ಮೂರು ಗಂಟೆಗಳ ಕಾಲ ಸಂದರ್ಶನ ಕೊಟ್ಟಿದ್ದನು. ಹೆನ್ರಿ ಹಾಪ್ಕಿನ್ಸ್ ಎಂಬವರೊಡನೆ ೬ ಗಂಟೆಗಳ ಕಾಲ ಪಂಚಾಯಿತಿಗೆ ನಡೆಯಿಸಿದ್ದನು. ಇಷ್ಟುದ್ದ ಸಂಭಾಷಣೆ ಕಾಲದಲ್ಲೂ ಅವನು ಪ್ರಶಾಂತ ಭಾವದಿಂದಿದ್ದು ಉಕ್ಕಿನ ಮನುಷ್ಯನೆಂದರೆ ಏನೆಂಬುದನ್ನು ತೋರಿಸಿದ್ದನು.

ಸ್ಟಾಲಿನ್ ದೊಡ್ಡ ಜ್ಞಾನಿಯಲ್ಲ. ಹೆಚ್ಚಿಗೆ ಓದಿದ ಮನುಷ್ಯನೂ ಅಲ್ಲ; ಆದರೆ ಮನುಷ್ಯನ ಗುಣಗಳನ್ನು ಅವನು ಕೂಡಲೇ ಕಂಡು ಹಿಡಿಯ ಬಲ್ಲನು. ಪರಿಸ್ಥಿತಿಗೆ ತಕ್ಕಂತೆ ಪರಿಗಣಿಸುವ ನಿರ್ಧಾರವನ್ನು ಅವನು ಕ್ಷಣಾರ್ಧದಲ್ಲೇ ಮಾಡಬಹುದು. ಸರ್ವಾಧಿಕಾರಿಗಳ ಒಂದು ಮುಖ್ಯ ಲಕ್ಷಣವಿದು.

ಇಷ್ಟು ದೊಡ್ಡ ಕಮ್ಯೂನಿಸ್ಟ ಸಾಮ್ರಾಜ್ಯವನ್ನು ಜೋಸೆಫ್ ಸ್ಟಾಲಿನ್ ಯಾವ ರೀತಿಯಿಂದ ನಡೆಸಿಕೊಂಡು ಬರುತ್ತಿರುವನು ಎಂಬ ವಿಷಯವು ಎಲ್ಲರಲ್ಲೂ ಆಶ್ಚರ್ಯವನ್ನುಂಟು ಮಾಡಿದೆ. ಆದರೆ ಸ್ಟಾಲಿನ್ ಯಾವ ಸಂಶಯಗಳಿಗೂ ಎಡೆಕೊಡದೆ ಇಂದು ಪ್ರಬಲ ಸರ್ವಾಧಿಕಾರಿಯಾಗಿರುವದು ಮಾತ್ರವಲ್ಲ, ಅಖಿಲ ಜಗತ್ತಿಗೆ ಭೀತಿಯನ್ನುಂಟುಮಾಡ ಬಲ್ಲ ಸಂಘಟಿತ ಶಕ್ತಿಯುಳ್ಳವನು. ಎಷ್ಟೇ ದೊಡ್ಡ ವ್ಯಕ್ತಿಯಿರಲಿ ಸ್ಟಾಲಿನನೆದುರು ಅವನು ತೃಣ ಸಮಾನ. ಇಷ್ಟು ದೊಡ್ಡ ಕಮ್ಯೂನಿಸ್ಟ ಸರಕಾರದ ಮುಂದಾಳುಗಳಲ್ಲಿ ಜಂಜಾಟಗಳಿಲ್ಲವೇ? ಅವನ್ನು ಸ್ಟಾಲಿನನು ಯಾವ ರೀತಿಯಲ್ಲಿ ಶಮನಗೊಳಿಸುವನು? ಎಂಬೀ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಸ್ಟಾಲಿನ್ ಒಳ್ಳೇ ವಿವೇಕಿ ಜಾಣನು. ಪರಸ್ಪರ ಕಚ್ಚಾಟಗಳನ್ನು ಅವನು ಕೂಡಲೇ ನಂದಿಸಿ ಬಿಡುವುದಿಲ್ಲ. ದೊಡ್ಡ ದೊಡ್ಡ ಅಧಿಕಾರಿಗಳ ಜಗಳವಾಡುವುದರಿಂದಲೇ ತನ್ನ ಶಕ್ತಿ ಬೆಳೆಯುತ್ತದೆ ಎಂಬ ರಹಸ್ಯವನ್ನು ಸ್ಟಾಲಿನ್ ಚೆನ್ನಾಗಿ ತಿಳಿದವನು. ಇತರರ ನಿರ್ಬಲತೆಯಿಂದ ತನ್ನ ಶಕ್ತಿ ಹೆಚ್ಚುತ್ತದೆಂದು ಅವನು ತಿಳಿದಿರುವನು. ಅವನು ರಷ್ಯದ ಮುಖ್ಯ ಮಂತ್ರಿಯಾಗಿದ್ದರೂ ಇತರ ಪ್ರಮುಖ ರಾಷ್ಟ್ರಗಳಂತೆ ರಾಷ್ಟ್ರವನ್ನು ನಡೆಸುವವನಾಗದೆ ರಾಷ್ಟ್ರವನ್ನು ತನ್ನ ಇಚ್ಛೆಯಂತೆ ಕುಣಿಸುವವನಾಗಿರುವನು.

೧೮೭೯ನೇ ಇಸವಿಯ ಡಿಸೆಂಬರ್ ತಿಂಗಳ ತಾ. ೨೧ರಲ್ಲಿ ಜೋಸೆಫ್ ಸ್ಟಾಲಿನನು ಜಾರ್ಜಿಯಾ ಪರ್ವತಗಳಲ್ಲಿನ ಗೋರಿ ಎಂಬ ಪಟ್ಟಣದಲ್ಲಿ ಜನಿಸಿದನು. ಅವನ ನಿಜ ಹೆಸರು ಜೋಸಿಫ್ ವಿಸ್ಸಾರಿಯೊನೊವಿಚ್ ಎಂದಿತ್ತು. ಅವನ ತಂದೆ ಬಟ್ಟೆ ಮೋಚಿ. ಮಗನಿಗೆ ತನಕ ಕುಡಿದು ಸ್ವಸ್ಥವಾಗಿರುವುದೇ ಅವನ ಗುಣ. ತಾಯಿ, ದೇವರ ಮೇಲೆ ಅಚಲಶ್ರದ್ಧೆಯುಳ್ಳ ಗೃಹಿಣಿ. ಮಗನು ಕ್ರೈಸ್ತ ಪಾದರಿಯಾಗಬೇಕೆಂದೇ ಅವಳು ಆಶಿಸಿದ್ದಳು. ಮೊದಲಾಗಿ ತನ್ನ ಮಗನನ್ನು ಕ್ರೈಸ್ತ ಶಾಲೆಗೆ ಕಳುಹಿಸಿದಳು. ಆದರೆ ಮಗನು ಶಾಲೆ, ಧರ್ಮಗಳಿಗೆ ತಿಲಾಂಜಲಿ ಇತ್ತು, ಕ್ರಾಂತಿಕಾರರೊಡನೆ ಸೇರಿಕೊಂಡನು. ದೇವರು ಮತ್ತು ಕ್ರೈಸ್ತನನ್ನು ತೊರೆದು ಸ್ಟಾಲಿನ್, ಮಾರ್ಕ್ಸ್ ಮತ್ತು ಲೆನಿನನ ಅನುಯಾಯಿಯಾದ. ಮಜೂರರಲ್ಲಿ ರಾಜಕೀಯ ಪಕ್ಷಗಳನ್ನು ರಚಿಸುವುದರಲ್ಲೇ ಸ್ಟಾಲಿನ್ ನಿರತನಾಗಿ ಝಾರ್ ಚಕ್ರವರ್ತಿಯ ವಿರುದ್ಧವಾಗಿ ಮುಷ್ಕರ ನಡೆಸುವುದರಲ್ಲೇ ಸಮಯ ಕಳೆದನು. ಶೀಘ್ರದಲ್ಲೇ ಪೋಲೀಸರು ಈ ತರುಣ ಕ್ರಾಂತಿಕಾರನನ್ನು ಹಿಡಿದು ಸೈಬೇರಿಯಕ್ಕೆ ಕಳುಹಿಸಿದರು. ಆದರೆ ಸ್ಟಾಲಿನ್ ತಪ್ಪಿಸಿಕೊಂಡು ಕಾಕಸಸ್‌ಗೆ ಹಿಂದಿರುಗಿ ಹಣವಿಲ್ಲದೆ ಒಂದು ಬ್ಯಾಂಕಿಗೆ ನುಗ್ಗಿ ಹಣದೋಚಿದ! ೩೦ನೇ ವರ್ಷ ಪ್ರಾಯದಲ್ಲೇ ಸ್ಟಾಲಿನ್ ತನ್ನ ಪ್ರತಿಭೆ ತೋರಿಸಿ ಕಾಕಸಸ್‌ನಲ್ಲಿ ಬೋಲ್ಶೆವಿಕ್ ಪಕ್ಷದ ಧುರೀಣನಾದ. ಝಾರ್ ಚಕ್ರವರ್ತಿಯ ಸರಕಾರವನ್ನು ಉರುಳಿಸುವ ದೊಡ್ಡ ಸೈನ್ಯ ಕಟ್ಟುವುದೇ ಅವನ ಕಾರ್ಯಕ್ರಮ. ಇದನ್ನು ತಿಳಿದ ಝಾರನ ಗುಪ್ತ ಏಜಂಟರು ಅವನನ್ನು ಬೆಂಬತ್ತಲು ಪ್ರಾರಂಭಿಸಿದರು. ಇದರ ಫಲವಾಗಿ ಸ್ಟಾಲಿನ್ ೧೯೧೩ರಿಂದ ೧೯೧೭ರ ವರೆಗೆ ಸೈಬೀರಿಯದಲ್ಲಿ ದಿನ ಕಳೆಯಬೇಕಾಯಿತು.

೧೯೧೭ರಲ್ಲಿ ಎರಡನೇ ಬೋಲ್ಶೆವಿಕ್ ಕ್ರಾಂತಿಯಾದ ಕೂಡಲೇ ಸ್ಟಾಲಿನ್ ಸೈಬೀರಿಯದಿಂದ ಹಿಂತಿರುಗಿದ. ಅದೇ ಕಾಲದಲ್ಲಿ ಟ್ರಾಟ್ಸ್ಕಿ ಮತ್ತು ಲೆನಿನನ್ನು ಸೇರಿಕೊಂಡ. ಟ್ರಾಟ್ಸ್ಕಿಯು ಅಮೇರಿಕೆಯಿಂದ ರಷ್ಯಕ್ಕೆ ಮರಳಿದ. ಲೆನಿನ್ ದೊಡ್ಡ ಜ್ಞಾನಿಯಾದರೆ ಟ್ರಾಟ್ಸ್ಕಿ ದೊಡ್ಡ ಭಾಷಣಗಾರ. ಸ್ಟಾಲಿನ್ ಅವರ ಒಳಗೈ. ಕೊನೆಗೆ ರಷ್ಯದ ಕ್ರಾಂತಿಯು ೧೯೧೭ನೇ ನವಂಬರ ೭ರಲ್ಲಿ ಫಲ ಕೊಟ್ಟಿತು.

ಸೋವಿಯಟ್ ಸರಕಾರವು ಸ್ಥಾಪನೆಯಾದ ಕೂಡಲೇ ಟ್ರಾಟ್ಸ್ಕಿ ಮತ್ತು ಸ್ಟಾಲಿನ್ ಇವರ ನಡುವೆ ಘರ್ಷಣೆ ಆರಂಭವಾಯಿತು. ಟ್ರಾಟ್ಸ್ಕಿಯು ಕೆಂಪು ಸೈನ್ಯದ ನಾಯಕನಾದರೆ, ರಷ್ಯದ ಶಕ್ತಿಯುತ ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿಯಾಗಿ ರಾಜಕೀಯ ಚಕ್ರವು ರಾಷ್ಟ್ರದಾದ್ಯಂತ ಉರುಳುವಂತೆ ಮಾಡುವುದೇ ಸ್ಟಾಲಿನನ ಕರ್ತವ್ಯವಾಗಿತ್ತು. ಇವರಿಬ್ಬರ ನಡುವೆ ಬಲಾಬಲಗಳ ಸ್ಪರ್ಧೆ ನಡೆಯುವುದೆಂದು ಲೆನಿನ್ ತಿಳಿದ.

೧೯೨೪ನೇ ಜನವರಿ ತಿಂಗಳಲ್ಲಿ ಲೆನಿನ ಇಹಲೋಕ ತ್ಯಜಿಸಿದ ಕೂಡಲೇ ಸ್ಟಾಲಿನ್ ಅಧಿಕಾರಕ್ಕೆ ಬಂದನು. ಸ್ಟಾಲಿನ್ ಅಧಿಕಾರಕ್ಕೆ ಬರಬಾರದೆಂದೇ ಲೆನಿನ್ ಇಚ್ಛಿಸಿದ್ದ. ಸ್ಟಾಲಿನ್‌ನಿಂದ ಗಂಡಾಂತರವಿದೆಯೆಂದು ಲೆನಿನ್ ತಿಳಿದಿದ್ದ. ಸರ್ವಾಧಿಕಾರಿಯಾಗಲು ಸ್ಟಾಲಿನಿಗೆ ಇದ್ದ ಒಂದೇ ಆತಂಕವೆಂದರೆ ಟ್ರಾಟ್ಸ್ಕಿ. ೧೯೨೯ರಲ್ಲಿ ಟ್ರಾಟ್ಸ್ಕಿಯು ಸ್ಟಾಲಿನನ ಆಜ್ಞೆಯ ಮೇರೆಗೆ ಬಂಧಿಸಲ್ಪಟ್ಟು ದೂರದ ತುರ್ಕಿಸ್ತಾನಕ್ಕೆ ಕೊಂಡೊಯ್ಯಲ್ಪಟ್ಟನು. ಮುಂದೆ ಜೀವರಕ್ಷಣೆಗಾಗಿ ಟ್ರಾಟ್ಸ್ಕಿಯು ಟರ್ಕಿ, ಫ್ರಾನ್ಸ್, ನಾರ್ವೆ ಮೊದಲಾದ ಕಡೆಗಳಲ್ಲಿ ಅಲೆದಾಡಿಕೊಂಡಿರಬೇಕಾಯಿತು. ಆದರೆ ಅಲ್ಲಿಯೂ ಸ್ಟಾಲಿನನ ಬೇಹುಗಾರರು ಟ್ರಾಟ್ಸ್ಕಿಯ ಬೆನ್ನು ಬಿಡದೆ ಅವನ ಜೀವನವನ್ನೇ ದುಸ್ಸಹ ಮಾಡಿಬಿಟ್ಟರು. ಟ್ರಾಟ್ಸ್ಕಿಯು ಮುಂದೆಯೂ ದ್ರೋಹವನ್ನು ಬಿಟ್ಟು ಮೆಕ್ಸಿಕೋದಲ್ಲಿ ನೆಲೆ ನಿಂತ. ೧೯೪೦ನೇ ಆಗಸ್ಟ್ ತಿಂಗಳಲ್ಲಿ ಅವನನ್ನು ಅಲ್ಲಿ ಕೊಲೆಗೈಯಲಾಯಿತು!

ಆ ನಂತರ ಸ್ಟಾಲಿನ್ ಸರ್ವಾಧಿಕಾರಿ. ವಿರೋಧಿಗಳೆಂಬ ಕಂಟಕಗಳೆಲ್ಲಾ ನಾಶವಾದವು. ರಷ್ಯದ ಬೆನ್ನು ಮೂಳೆಯಂತಿದ್ದ ಕಮ್ಯೂನಿಸ್ಟ್ ಪಕ್ಷವೂ ಕೂಡ ಸ್ಟಾಲಿನನ ಗಧಾಪ್ರಹಾರಕ್ಕೆ ಮಣಿಯಬೇಕಾಯಿತು. ಅಧಿಕಾರಕ್ಕೆ ಬಂದ ನಂತರ ಕಮ್ಯೂನಿಸ್ಟ ಪಕ್ಷದ ಪರಿಷತ್ತು ವರ್ಷಕ್ಕೊಮ್ಮೆಯಾದರೂ ಸೇರುವುದಿತ್ತು. ಆದರೆ ಸ್ಟಾಲಿನ್ ಅಧಿಕಾರಕ್ಕೆ ಬಂದ ನಂತರ ೧೯೨೫, ೧೯೨೭, ೧೯೩೦, ೧೯೩೪, ಮತ್ತು ೧೯೩೯ರಲ್ಲಿ ಮಾತ್ರ ಪಕ್ಷದ ಪರಿಷತ್ತು ಕೂಡಿತು. ಹಿಂದೆ ಅಧಿಕಾರದಲ್ಲಿದ್ದ ಮಜೂರ ಸಂಘಗಳೂ ಸ್ಟಾಲಿನನ ಅಧಿಕಾರ ಪ್ರಾರಂಭವಾದ ಮೇಲೆ ಪರಿಷತ್ತು ಜರಗಿಸಿದ್ದಿಲ್ಲ. ರಷ್ಯದ ಪರರಾಷ್ಟ್ರ ನೀತಿಯೆಲ್ಲಾ ಸ್ಟಾಲಿನ್ ಹೇಳಿದಂತೆ. ಕಲೆ, ಚಲಚ್ಚಿತ್ರ, ಸಾಂಸ್ಕೃತಿಕ ಚಟುವಟಿಕೆಗಳ ಮೇಲೂ ಸ್ಟಾಲಿನ್ ಕಣ್ಣಿಟ್ಟಿದ್ದು ತನ್ನ ತಾಳಕ್ಕೆ ಗಸ್ತು ಕುಣಿಯುವ ಅವಸ್ಥೆ ಬಂದಿವೆ ಅವು.

ಸ್ಟಾಲಿನ್ ಈ ವಿಷಯಗಳಲ್ಲಿ ಸರ್ವಾಧಿಕಾರತ್ವ ತೋರಿಸಿದರೂ ಅವನ ಆಡಳಿತೆಯಲ್ಲಿ ರಷ್ಯವು ತುಂಬಾ ಮುಂದುವರಿಯಿತು. ಅನೇಕ ದೊಡ್ಡ ನಗರಗಳು ಕಟ್ಟಲ್ಪಟ್ಟವು. ರಷ್ಯವು ಕೈಗಾರಿಕೆಯಲ್ಲಿ ಮುನ್ನಡೆಯಿತು. ಶಾಲೆಗಳು ತೆರೆಯಲ್ಪಟ್ಟವು. ಸಂಪತ್ತು ಹೆಚ್ಚಿತು; ಸಂಖ್ಯೆಯೂ ಬಲವೂ ಹೆಚ್ಚಿತು; ಕೊನೆಗೆ ರಷ್ಯವು ಜರ್ಮನಿಯನ್ನು ಸೋಲಿಸಿತು. ಅಂದಿನಿಂದ ಸ್ಟಾಲಿನ್ ತನ್ನ ಬಲವನ್ನು ಅರಿತುಕೊಂಡು ಸಾಮ್ರಾಜ್ಯ ಲಾಲಸೆಯಲ್ಲಿ ತೊಡಗಿದ! ಏಕೆಂದರೆ ಜಗತ್ತಿನ ಸ್ವಾಮಿತ್ವವಿಲ್ಲದಿದ್ದರೆ ತಮ್ಮ ತತ್ವಕ್ಕೆ ಎಂದೆಂದಿಗೂ ಗಂಡಾಂತರ ಇದ್ದೇ ಇದೆಯೆಂದು ಆತನ ಮತ.

ಹಿಟ್ಲರನ ಚಿತ್ರಗಳು ಯಾವ ರೀತಿಯಲ್ಲಿ ಯುರೋಪು ತುಂಬ ರಾರಾಜಿಸುತ್ತಿದ್ದವೋ ಅದೇ ರಷ್ಯದ ಆಕ್ರಮಣಕ್ಕೊಳಗಾದ ರಾಷ್ಟ್ರಗಳಲ್ಲಿ ಸ್ಟಾಲಿನನ ಚಿತ್ರಗಳು ರಾರಾಜಿಸುತ್ತಿವೆ. ರಷ್ಯದಲ್ಲಿ ಅದರಷ್ಟು ಪವಿತ್ರವಾದ ವಸ್ತು ಇನ್ನೊಂದಿಲ್ಲ. ಕಾರ್ಖಾನೆ ಕಛೇರಿಗಳಲ್ಲಿ; ಶಾಲಾ ಕಾಲೇಜುಗಳಲ್ಲಿ, ಸಂಘಸಂಸ್ಥೆಗಳಲ್ಲಿ ಎಲ್ಲಿ ಕಾಣುವ ಚಿತ್ರವೆಂದರೆ ಸ್ಟಾಲಿನನದ್ದು. ಸ್ಟಾಲಿನ್ ಹೇಳುವ ಮಾತು ರಷ್ಯದ ಪತ್ರಿಕೆಗಳಿಗೆ ದೇವವಾಕ್ಯ.

ದಿನ ಹೋದಂತೆ ಸ್ಟಾಲಿನ್ ತನ್ನ ಬಲವನ್ನು ಬೆಳೆಸುತ್ತಿದ್ದಾನೆ. ಚೀನವು ಇಂದು ಸ್ಟಾಲಿನನ ಆಜ್ಞೆ ಪಾಲಿಸುವ ರಾಷ್ಟ್ರ. ಏಷ್ಯದ ಇತರ ರಾಷ್ಟ್ರಗಳಲ್ಲಿ ಅನೇಕರು ತಮ್ಮ ಸರಕಾರಗಳಿಗೆ ತಮ್ಮ ಮುಂದಾಳುಗಳಿಗೆ ದ್ರೋಹ ಬಗೆದು ಕಮ್ಯೂನಿಸ್ಟ ಸಾಮ್ರಾಜ್ಯ ಕಟ್ಟುವ ಕನಸನ್ನು ಕಾಣುತ್ತಾರೆ. ರಷ್ಯವು ಅಂಥವರಿಗೆ ಈಗ ಸಹಾನುಭೂತಿ ಮಾತ್ರ ತೋರಿಸುತ್ತಿದ್ದರೂ ಮುಂದೆ ಸಕಲ ಸಹಾಯ ಕೊಡಬಹುದೆಂದು ಸ್ಟಾಲಿನರ ಭಕ್ತರಿಗೆ ತಿಳಿದಿದೆ!

———

'ನವಭಾರತ.'

# ಕೊಡಗು

ತಾ. ೨೮-೭-೧೯೫೦ನೇ ಶುಕ್ರವಾರ

## ಕ್ಷಯ ರೋಗ.

ಕ್ಷಯರೋಗವು ಜಗತ್ತಿನ ಭಯಾನಕ ರೋಗಗಳಲ್ಲೊಂದಾಗಿದೆ. ಹಿಂದೂ ದೇಶದಲ್ಲಿ ಪ್ರತಿ ವರ್ಷ ಈ ರೋಗದಿಂದ ಸರಾಸರಿ ಐದು ಲಕ್ಷ ಜನರು ಸಾಯುವರೆಂದೂ, ೨೫ ಲಕ್ಷ ಜನರು ರೋಗದಿಂದ ನರಳುವರೆಂದೂ ಅಂದಾಜು ಮಾಡಲಾಗಿದೆ. ಈ ರೋಗವು ನಗರಗಳಲ್ಲಿ ಹೆಚ್ಚಾಗಿ ಹಬ್ಬುತ್ತಿದೆ. ನಗರಗಳ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ೨೦೦ ರಿಂದ ೩೦೦ ರ ವರೆಗೆ ಈ ರೋಗ ತಗಲಿದವರಿರುವರೆಂದೂ ಇತ್ತಿತ್ತಲಾಗಿ ಈ ರೋಗವು ಹಳ್ಳಿಗಳಲ್ಲೂ ಹರಡುತ್ತಿರುವದೆಂದೂ ಕಂಡುಬಂದಿದೆ. ಮಕ್ಕಳು, ವಯಸ್ಸಿನವರೆಂಬ ಭೇದವಿಲ್ಲದೆ ಎಲ್ಲರಿಗೂ ತಗಲಬಹುದಾದ ಈ ರೋಗವು ಪ್ರಾಮುಖ್ಯವಾಗಿ ಯುವಕ ವೃಂದದಲ್ಲಿ ಹೆಚ್ಚುತ್ತಿರುವದು ತೋರಿಬಂದಿದೆ.

ಇಡೀ ಜಗತ್ತಿನಲ್ಲಿ ತನ್ನ ಕೈವಾಡ ನಡೆಸುತ್ತಿರುವ ಈ ರೋಗದ ನಿವಾರಣೆಯ ಬಗ್ಗೆ ಜಗತ್ತಿನ ಆರೋಗ್ಯ ಸಂಸ್ಥೆಯವರು ತುಂಬಾ ಆಸಕ್ತಿವಹಿಸಿ ತಮ್ಮ ಪ್ರಥಮ ಧ್ಯಾನವನ್ನು ಅತ್ತ ಹರಿಸಿದ್ದಾರೆ. ಹಿಂದೂದೇಶದಲ್ಲಿ ೧೯೩೯ ರಲ್ಲಿ ಸ್ಥಾಪಿತವಾಗಿರುವ ಕ್ಷಯರೋಗ ನಿವಾರಣಾ ಸಂಸ್ಥೆಯು ಅತೀ ಉಪಯುಕ್ತವಾದ ಕೆಲಸ ಮಾಡುತ್ತಿದ್ದರೂ ಈ ಬೃಹತ್ಸಮಸ್ಯೆಯನ್ನು ಬಗೆಹರಿಸುವದು ಸಾಧ್ಯವಾಗಿರುವದಿಲ್ಲ. ಹಿಂದೂ ದೇಶದಲ್ಲಿ ವಿಸ್ತಾರವಾಗಿ ಹಬ್ಬಿ ಇನ್ನೂ ಬಲಗೊಳ್ಳುತ್ತಿರುವ ಈ ರೋಗವನ್ನು ಹತೋಟಿಯಲ್ಲಿಡಲು ಕಡಿಮೆ ೩,೦೦೦ ದಿಂದ ೪೦೦೦ ದ ವರೆಗೆ ಕ್ಷಯರೋಗ ಚಿಕಿತ್ಸಾಲಯಗಳು ಬೇಕೆಂದೂ ಕಡಿಮೆ ಐದು ಲಕ್ಷ ಹಾಸಿಗೆಗಳು ಬೇಕೆಂದೂ ಅಂದಾಜು ಮಾಡಲಾಗಿದೆ. ಪ್ರತಿ ಆಸ್ಪತ್ರೆಗೆ ಒಂದು ಲಕ್ಷದಂತೆ ಆಸ್ಪತ್ರೆ ಕಟ್ಟಲು ೪೦ ಕೋಟಿ ರೂಪಾಯಿಗಳೂ, ಪ್ರತಿ ಹಾಸಿಗೆಗೆ ರೂ ೮,೦೦೦ ದಂತೆ ಐದುಲಕ್ಷ ಹಾಸಿಗೆಗಳಿಗೆ ೪೦೦ ಕೋಟಿ ರೂಪಾಯಿಗಳು ಬೇಕು. ಇದನ್ನು ಸಾಧಿಸಲು ೧೫ ವರ್ಷಗಳ ಒಂದು ಯೋಜನೆ ತಯಾರಿಸಿದರೆ ವರ್ಷಕ್ಕೆ ೩೦ ಕೋಟಿ ರೂಪಾಯಿ ಬೇಕಾಗುವದು. ಇದಲ್ಲದೆ ಈ ಆಸ್ಪತ್ರೆಗಳ ದೈನಿಕ ಖರ್ಚು, ಸಿಬ್ಬಂದಿಗಳಿಗಾಗಿ ವರ್ಷಕ್ಕೆ ಪ್ರತ್ಯೇಕ ೭೦ ಕೋಟಿ ರೂಪಾಯಿ ಬೇಕಾಗುವದು. ಈ ಯೋಜನೆ ಪ್ರಕಾರ ೧೫,೦೦೦ ಡಾಕ್ಟರುಗಳೂ, ೫೦,೦೦೦ ನರ್ಸುಗಳೂ, ೧೭,೦೦೦ ಆರೋಗ್ಯ ಸಂದರ್ಶಕರೂ ಬೇಕಾಗುವರು. ಇಂಥಾ ವಿಶಾಲವಾದ ಮತ್ತು ಸಮರ್ಪಕವಾದ ಯೋಜನೆಯನ್ನು ಜಾರಿಯಲ್ಲಿ ತರಲು ಹಿಂದೂಸ್ಥಾನದ ಸರಕಾರಕ್ಕೆ ಸದ್ಯಕ್ಕೆ ಸಾಧ್ಯವಿಲ್ಲ. ಹಿಂದೂದೇಶದ ಪ್ರಕೃತ ಪರಿಸ್ಥಿತಿಯಲ್ಲಿ ಈಗ ಕೆಲಸಮಾಡುತ್ತಿರುವ ೧೧೯ ಆಸ್ಪತ್ರೆಗಳೂ ೧೨,೫೦೦ ಹಾಸಿಗೆಗಳೂ ಇವೆ. ಇವುಗಳಲ್ಲಿ ೩೦೦ ಡಾಕ್ಟರುಗಳೂ ೪೦೦ ನರ್ಸುಗಳೂ ಇದ್ದಾರೆ. ಕ್ಷಯರೋಗ ನಿವಾರಣೆಗಾಗಿ ಹಿಂದೂದೇಶದಲ್ಲಿ ತಲಾ ೦-೦-೮ ಪೈಯಂತೆ ಖರ್ಚಾಗುತ್ತಿದೆ!

ಕ್ಷಯರೋಗ ನಿವಾರಣಾ ಸಂಸ್ಥೆಯು ಇದಕ್ಕಾಗಿ ಹೊಸ ಏರ್ಪಾಡುಗಳನ್ನು ಕೈಕೊಂಡು ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಲಿದೆ. ಕಳೆದ ಏಳು ವರ್ಷಗಳಿಂದಾಗಿ ಹಿಂದೂದೇಶದಲ್ಲಿ ಕೇವಲ ೨೫೦೦ ಹಾಸಿಗೆಗಳು ಮಾತ್ರ ಹೆಚ್ಚಿವೆ. ಅಂದರೆ ವರ್ಷಕ್ಕೆ ೩೫೦ ಎಂದಾಯಿತು. ಇದು ಎಷ್ಟೂ ಸಾಲದು. ಆದ್ದರಿಂದ ವರ್ಷಕ್ಕೆ ಕಡಿಮೆ ೨೦೦೦ ಹಾಸಿಗೆಗಳನ್ನಾದರೂ ಹೆಚ್ಚಿಸಬೇಕೆಂದು ಐದು ವರ್ಷದ ಯೋಜನೆಯೊಂದನ್ನು ಏರ್ಪಡಿಸಿದೆ. ಹಿಂದೂದೇಶದ ಅವಶ್ಯಕತೆ ೫ ಲಕ್ಷ ಹಾಸಿಗೆಗಳೆಂದಾಗ ಇದೂ ಕೂಡ ಅತ್ಯಲ್ಪವೆನ್ನಬಹುದು. ಆದರೆ ಈ ಕಾರ್ಯವೂ ಕೂಡ ಸಾರ್ವಜನಿಕರ ಬೆಂಬಲದಿಂದ ಸಾಗಬೇಕಿದೆ.

ಕ್ಷಯರೋಗದ ನಿವಾರಣೆ, ನಿಯಂತ್ರಣ ಮೊದಲಾದುವನ್ನು ಪ್ರಚಾರ ಮಾಡಲು ಕೆಲವು ಆದರ್ಶ ಆಸ್ಪತ್ರೆಗಳನ್ನು ಹಿಂದೂದೇಶದಲ್ಲಿ ಕಟ್ಟುವ ಏರ್ಪಾಡಾಗಿದೆ. ಜಗತ್ತಿನ ಆರೋಗ್ಯ ಸಂಸ್ಥೆಯ ಮತ್ತು ಸಂಯುಕ್ತ ರಾಷ್ಟ್ರಸಂಘದ ಅಂತರರಾಷ್ಟ್ರೀಯ ಮಕ್ಕಳ ನಿಧಿಯ ಸಹಾಯಗಳಿಂದ ಡೆಲ್ಲಿ, ಪಾಟ್ನಾ ಮತ್ತು ತಿರುವೆಂಕರಂಗಳಲ್ಲಿ ಇಂಥಾ ಮೂರು ಆಸ್ಪತ್ರೆಗಳ ಸ್ಥಾಪನಾ ಕಾರ್ಯ ಪ್ರಾರಂಭವಾಗಿರುವದಲ್ಲದೆ ಹೆಚ್ಚಿನ ಏಳು ಆಸ್ಪತ್ರೆಗಳ ಸ್ಥಾಪನೆಯ ಆಲೋಚನೆಯೂ ನಡೆದಿದೆ.

ಹಿಂದೂದೇಶದ ಕ್ಷಯರೋಗ ನಿವಾರಣಾ ದೃಷ್ಟಿ ಮಹಾ ಪ್ರಮಾಣದ್ದು. ಇದನ್ನು ಕ್ರಮೇಣ ಬಗೆಹರಿಸಬೇಕೇ ವಿನಹ ಒಂದೇ ನಿರ್ಣಯದಿಂದಾಗಲೀ, ಕೇವಲ ಸರಕಾರ ಮಾತ್ರದಿಂದಾಗಲೀ ಆಗುವ ಕಾರ್ಯವಲ್ಲ. ಈ ಮಹಾ ಸಮಸ್ಯೆಯನ್ನು ಬಗೆಹರಿಸಲು ಭಾರತೀಯರೆಲ್ಲರ ಸಹಕಾರಬೇಕು. ದೇಶದ ಮಾನವ ಶಕ್ತಿಯನ್ನು ಮಹಾ ಪ್ರಮಾಣದಲ್ಲಿ ಸೂರೆಗೊಳ್ಳುತ್ತಿರುವ ಈ ರೋಗನಿವಾರಣೆಯ ಬಗ್ಗೆ ಪ್ರತಿಯೊಬ್ಬನಿಗೂ ಜವಾಬ್ದಾರಿ ಇದೆ. ಪ್ರತಿಯೊಬ್ಬನೂ ಈ ರೋಗದ ಕಾರಣ, ಅದನ್ನು ತಡೆಗಟ್ಟುವ ವಿಧಾನಗಳನ್ನು ತಿಳಿದುಕೊಂಡು ಅದರಂತೆ ವರ್ತಿಸಬೇಕು. ಇದೇ ಅಲ್ಲದೆ ತಮ್ಮ ಕೈಯಲ್ಲಾದ ಧನ ಸಹಾಯವನ್ನೂ ಮಾಡಬೇಕು.

ಅಖಿಲಭಾರತ ಕ್ಷಯರೋಗ ಸಂಸ್ಥೆಯವರು ಈ ರೋಗದ ಬಗ್ಗೆ ಜನಜಾಗೃತಿಯ ದೃಷ್ಟಿಯಿಂದ ಮತ್ತು ಅದರ ನಿವಾರಣೆಗೆ ಧನ ಸಂಗ್ರಹಿಸುವ ಧ್ಯೇಯದಿಂದ ಬರುವ ಅಕ್ಟೋಬರ್ ತಿಂಗಳಿಂದ ಪ್ರತಿ ವರ್ಷ ಕ್ಷಯರೋಗ ಸೀಲ್ ಮಾರಾಟದ ಏರ್ಪಾಡು ಮಾಡಲಿರುವರು (ಇದರ ವಿಚಾರ ವಿವರವಾಗಿ ಸಕಾಲದಲ್ಲಿ ಒರೆಯಲಾಗುವದು) ಅಖಿಲ ಭಾರತ ಕ್ಷಯರೋಗ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಕೊಡಗಿನ ಪುತ್ರರೊಬ್ಬರೇ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಕೊಡಗಿನಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಲು ಮುಂದಿನ ತಿಂಗಳಲ್ಲಿ ಅವರು ಇಲ್ಲಿಗೆ ಬರಲಿರುವರು.

ವಿಶಾಲ ಹಿಂದೂದೇಶ ಹೇಗೋ ಹಾಗೆಯೇ ಕೊಡಗೂ ಕೂಡ ಕ್ಷಯರೋಗಕ್ಕೆ ಬಲಿಯಾಗಿದೆ. ಮಲೇರಿಯಾವನ್ನು ಕಳೆದು ಕೊಡಗಿನಲ್ಲಿ ಎರಡನೇ ಭಯಾನಕ ಕಾಯಿಲೆ ಎಂದರೆ ಇದೇ. ಇತ್ತಿತ್ತಲಾಗಿ ಕ್ಷಯರೋಗ ಹೆಚ್ಚುತ್ತಿದೆಯೆಂದು ಕೊಡಗಿನ ಆಸ್ಪತ್ರೆಗಳ ಡಾಕ್ಟರುಗಳ ಅಭಿಪ್ರಾಯದಿಂದ ತಿಳಿದುಬಂದಿದೆ. ಆದ್ದರಿಂದ ಈ ಬಗ್ಗೆ ಕೊಡಗಿನವರು ತುಂಬಾ ಶ್ರದ್ಧೆ ವಹಿಸಬೇಕಿದೆ. ಕೊಡಗಿಗೆ ಕ್ಷಯರೋಗ ಆಸ್ಪತ್ರೆಯ ಅವಶ್ಯಕತೆಯು ಈ ಮೊದಲೇ ಮನವರಿಕೆಯಾಗಿ ಅದರ ಬಗ್ಗೆ ಪರಿಶೀಲನೆ ನಡೆದು ಅದಕ್ಕಾಗಿ ಹಣವೂ ಏರ್ಪಡಾಗಿದೆ. ಫ್ರೇಜರ್‌ಪೇಟೆಯೋ ಯಾ ಮಡಿಕೇರಿಯೋ ಎಂಬ ಸ್ಥಳ ನಿರ್ಣಯದ ಬಗ್ಗೆ ತರ್ಕವಿತರ್ಕ ನಡೆದು ಕೆಲಸವು ಹಾಗೆಯೇ ಉಳಿದಿದೆ. ಅಖಿಲ ಭಾರತ ಕ್ಷಯರೋಗ ನಿವಾರಣಾ ಸಂಘದ ಕಾರ್ಯದರ್ಶಿಯವರು ಕೊಡಗಿಗೆ ಬಂದಾಗ ಈ ವಿಚಾರ ಅವರೊಡನೆ ಪ್ರಸ್ತಾಪಿಸಿ ಕೇಂದ್ರ ಸಂಸ್ಥೆಯಿಂದ ಬೇಕಾದ ಸಹಾಯ ಪಡೆದು ಉತ್ತಮ ದರ್ಜೆಯ ಒಂದು ಆಸ್ಪತ್ರೆಯು ಶೀಘ್ರ ಸ್ಥಾಪಿಸಲ್ಪಡುವ ಬಗ್ಗೆ ಕೊಡಗು ಸರಕಾರವೂ, ಸಾರ್ವಜನಿಕ ಮುಂದಾಳುಗಳೂ ಯತ್ನಿಸಬೇಕು.

## ವರ್ತಮಾನ.

ಎರಡು ತಿಂಗಳುಗಳ ಹಿಂದೆ ಆರಮೇರಿ ಗ್ರಾಮದಲ್ಲಿ ಎತ್ತುಗಳನ್ನು ಕೊಂದು ಅದರ ಚರ್ಮ ಸುಲಿದು ಮಾರಾಟ ಮಾಡಿದ್ದಾರೆ ಎಂಬರ್ಥದಲ್ಲಿ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ಓದುಗರ ಓಲೆ'ಯ ಒಂದು ಪತ್ರದ ವಿಚಾರದಲ್ಲಿ ತಫಿಷೆ ನಡೆದು ಹರಿಜನರ ತಿಮ್ಮ ಎಂಬವನಿಗೆ ಎರಡು ವರ್ಷ ಕಠಿಣ ಸಜೆ ವಿಧಿಸಲ್ಪಟ್ಟಿದೆಯೆಂದು ತಿಳಿಯ ಬರುತ್ತದೆ.

ಮಿಲಿಟರಿ ಎಕ್ಸ್ ಸರ್ವಿಸಿನವರ ಪೆನ್ಷನ್ ಮತ್ತು ಇತರ ಹಣ ಸಂಬಂಧ ಕೇಸುಗಳು ಯೂನಿಟ್‌ನಲ್ಲಿ ಅಥವಾ ಇತರ ಅಧಿಕಾರಿಗಳಲ್ಲಿ ತೀರ್ಮಾನವಾಗದೆ ಇರುವದಾದರೆ ರಿಜಿಮೆಂಟಲ್ ನಂಬರು, ಯೂನಿಟಿನ ಪೂರ್ತಿ ವಿವರಣೆಯನ್ನೂ, ಸಂಬಂಧಪಟ್ಟ ಪತ್ರವ್ಯವಹಾರ ಇದ್ದರೆ ಅವುಗಳನ್ನು ಡಿಸ್ಟ್ರಿಕ್ಟ್ ಸೋಲ್ಜರ್ಸ್ ಸೈಲರ್ಸ್ ಮತ್ತು ಏರ್‌ಮೆನ್ಸ್ ಬೋರ್ಡಿನ ಸೆಕ್ರೆಟರಿಯವರಿಗೆ ಕಳುಹಿಸಿ ಕೊಡಬೇಕೆಂದು ಸೆಕ್ರೆಟರಿಯವರು ತಿಳಿಸುತ್ತಾರೆ.

ತಾ. ೧-೮-೫೦ರಿಂದ ಮೂರು ವರ್ಷಗಳ ವರೆಗೆ ಶ್ರೀಗಳಾದ ಕೆ. ಎಂ. ಎಸ್. ಗೌಸ್, ಬಿ. ಎಸ್. ಸಿದ್ದಲಿಂಗಪ್ಪ ಡಿ. ಎಚ್. ಸಂಣಪ್ಪ, ಎಚ್. ಎಸ್. ಮಲ್ಲಪ್ಪ, ಎಚ್. ಎಂ. ಮೂಲಿಂಗಪ್ಪ ಮತ್ತು ಮಾವಿನಹಳ್ಳಿ ಸಿದ್ದಬಸಪ್ಪ ಇವರುಗಳು ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಸಮಿತಿಯಾಗಿ ಆರಿಸಲ್ಪಟ್ಟಿದ್ದಾರೆ.

ನಿವೃತ್ತ ಚೀಫ್ ವೆಟರ್ನರಿ ಆಫೀಸರಾಗಿದ್ದ ಶ್ರೀ ಅಜ್ಜಾಮಾಡ ಬೋಪಯ್ಯನವರು ತಾ. ೨೩-೭-೫೦ರಲ್ಲಿ ಶಿವಾಧೀನರಾದರು.

ಮಡಿಕೇರಿಯಲ್ಲಿ ತಾ. ೨೧ರಿಂದ ೨೭ ರ ವರೆಗೆ ೨೩ ಇಂಚು ೧೦ ಸೆಂಟು ಮಳೆಯಾಗಿದೆ. ಈ ವರೆಗೆ ಒಟ್ಟಾಗಿ ೭೦ ಇಂಚು ೭ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೬೩ ಇಂಚು ೭೭ ಸೆಂಟು ಮಳೆಯಾಗಿತ್ತು.

ತಿಲಕ್ ಮಹಾರಾಷ್ಟ್ರ ವಿದ್ಯಾಲಯದಲ್ಲಿ ವೈದ್ಯಕೀಯ ಶಾಖೆಯಲ್ಲಿ ಓದುತ್ತಿದ್ದ ಶ್ರೀ ಕಿರುಮಕ್ಕಿ ಶಿವರಾಮರವರು ಆ ಶಾಖೆಯ ಕಡೇ ಪರೀಕ್ಷೆ (ಎ ವಿ ಪಿ.) ಯಲ್ಲಿ ತೇರ್ಗಡೆಯಾಗಿರುವರು

ನಿವೃತ್ತ ಪಾರುಪತ್ತೇಗಾರರಾಗಿದ್ದ ಶ್ರೀ ಬಲ್ಲಚಂಡ ಅಪ್ಪಚ್ಚನವರು ತಾ ೨೦ ರಲ್ಲಿ ಶಿವಾಧೀನರಾದರು.

ಕೊಡಗಿನಲ್ಲಿ ವನಮಹೋತ್ಸವ ವಾರದಲ್ಲಿ ಉತ್ತಮ ತರದ ಹೆಚ್ಚಿನ ಮರಗಳನ್ನು ನೆಟ್ಟು ಯೋಗ್ಯ ರೀತಿ ಅವುಗಳನ್ನು ಸಾಕಿದ ವ್ಯಕ್ತಿಗೆ ರೂ. ೫೦ ಬೆಲೆಯ ಒಂದು ಮೆಡಲನ್ನು, ಹಾಗೆಯೇ ಮಾಡಿದ ಒಂದು ಸಂಸ್ಥೆಗೆ ರೂ. ೫೦ ಬೆಲೆಯ ಒಂದು ಮೆಡಲನ್ನೂ ಮತ್ತು ಪ್ರತಿಯೊಂದು ನಾಡಿನಲ್ಲಿ ಪ್ರಥಮ ಬಂದ ವ್ಯಕ್ತಿಗೆ ರೂ. ೨೦ ಇನಾಮನ್ನು ಬರುವ ವರ್ಷ ವನಮಹೋತ್ಸವ ಸಮಯದಲ್ಲಿ ಕೊಡುವಂತೆ ತಾ. ೨೧ ರಲ್ಲಿ ನಡೆದ ಕೇಂದ್ರ ಸಮಿತಿಯ ಮೀಟಿಂಗಿನಲ್ಲಿ ಈ ರೀತಿ ಸರಕಾರಕ್ಕೆ ಶಿಫಾರಸು ಮಾಡಿರುವರು. ಈ ಇನಾಮುಗಳು ಕೇಂದ್ರ ಸರಕಾರವು ಏರ್ಪಡಿಸಿದ ಇನಾಮುಗಳಲ್ಲದೆ ಅಲಾಯಿದ ಕೊಡಲ್ಪಡುವವಾಗಿವೆ

ಬರುವ ಆಗಸ್ಟ್ ೧೫ ರಂದು ನಡೆಯಲಿರುವ ಸ್ವಾತಂತ್ರ್ಯೋತ್ಸವದ ಸಂಬಂಧ ಮಡಿಕೇರಿಯಲ್ಲಿ ಬೆಳಗ್ಗೆ ೯ ಗಂಟೆಗೆ ಕೋಟೆಯಲ್ಲಿ ಧ್ವಜಾರೋಹಣ, 'ಜನಗಣಮನ' ಪ್ರಾರ್ಥನೆ ಮತ್ತು ಪೋಲೀಸ್ ಪರೇಡು ನಡೆಯುವುದು. ವೀರರಾಜಪೇಟೆಯ ತಾಲ್ಲೂಕು ಆಫೀಸು ಬಳಿ ಧ್ವಜಾರೋಹಣ, 'ಜನಗಣಮನ' ಮತ್ತು ಪೋಲೀಸ್ ಪರೇಡು ನಡೆಯುವುದು.

ಮಂದ್ರಾಸು ಶ್ರೀರಾಮಕೃಷ್ಣ ಆಟೋಮೊಬೈಲ್ ಇಂಜನಿಯರಿಂಗ್ ತರಬೇತು ಶಾಲೆಯಲ್ಲಿ ಓದುತ್ತಿದ್ದ ಶ್ರೀ ಬಲ್ಲೇರ ಪಿ. ಮುತ್ತಪ್ಪನವರು ತಮ್ಮ ಕಡೇ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು

## ಪ್ರಬಂಧ ಸ್ಪರ್ಧೆ.

೧೯೫೦ ಆಗಸ್ಟ್ ೧೫ ರಂದು ಜರುಗಲಿರುವ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ವೀರರಾಜಪೇಟೆ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿರುವರು. ಅಖಿಲ ಕೊಡಗಿನ ಎಲ್ಲಾ ಹೈಸ್ಕೂಲ್ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. "ಸ್ವತಂತ್ರ ಹಿಂದೂಸ್ಥಾನದ ವಿದ್ಯಾರ್ಥಿಗಳ ಕರ್ತವ್ಯಗಳು" ಎಂಬುದು ಸ್ಪರ್ಧೆಗೆ ಆರಿಸಿದ ವಿಷಯವಾಗಿದೆ. ಆದುದರಿಂದ ಸ್ಪರ್ಧಿಸುವ ವಿದ್ಯಾರ್ಥಿಗಳು ಆಗಸ್ಟ್ ೧೦ರೊಳಗೆ ತಲುಪುವಂತೆ ತಾವು ಬರೆದ ಪ್ರಬಂಧಗಳನ್ನು ಈ ಪತ್ತೆಗೆ ಕಳುಹಿಸಿಕೊಡಬೇಕೆಂದು ಬಿನ್ನಹ.

ಟಿ. ಟಿ. ಬಾಲಕೃಷ್ಣ,
ಕಾರ್ಯದರ್ಶಿ,
ವಿದ್ಯಾರ್ಥಿ ಕಾಂಗ್ರೆಸ್, ವೀರರಾಜಪೇಟೆ.

# ಭೀತಿ ಯೊ ಪ್ರೀತಿ ಇಲ್ಲದೆ-

ಲೇ:- "ಗುಪ್ತ" ಮಡಿಕೇರಿ.

### ಕೊರಿಯಾ

ನಾವು ವಿಚಿತ್ರ ಪ್ರಪಂಚದಲ್ಲಿ ಜೀವಿಸುತ್ತಿರುವೆವೆನ್ನಬೇಕು. ನಮ್ಮ ಈ ಪ್ರಪಂಚದಲ್ಲಿ ಶಾಂತಿ ಸ್ಥಾಪಿಸಲೆಂದು ಸಂಯುಕ್ತ ರಾಷ್ಟ್ರಸಂಘವಿದೆಯಷ್ಟೆ. ಅದು ಜೀವನ್ಮೃತಾವಸ್ಥೆಯಲ್ಲಿದೆ. ಅದರ ಹೆಸರಿನಲ್ಲಿ ಜಗತ್ತಿನಲ್ಲಿ ನಾನಾ ಅಕೃತ್ಯಗಳಾಗುತ್ತಿವೆ. ಈ ಜೀವನ್ಮೃತಾವಸ್ಥೆಯಲ್ಲಿರುವ ಸಂಯುಕ್ತ ರಾಷ್ಟ್ರಸಂಘದ ಅಂತರ್ಯವನ್ನು ಮೊದಲೇ ತಿಳಿದವರಂತೆ ಅಮೇರಿಕಾವು ಕೊರಿಯಾದಲ್ಲಿ ತನ್ನ ಕೈಚಾಚಿ ಈಗ ಮರಣಶಯ್ಯೆಯಲ್ಲಿರುವ ಸಂಯುಕ್ತ ರಾಷ್ಟ್ರಸಂಘವನ್ನು ಕೂರಿಸಿ ಅದರ ಬಾಯಿಂದ ನಾಲ್ಕು ಮಾತು ಹೊರಡಿಸಿತು! ಆ ಸಂಯುಕ್ತ ರಾಷ್ಟ್ರ ಸಂಘದ ಠರಾವನ್ನು ಜಾರಿಯಲ್ಲಿ ತರುವದು ಅಮೇರಿಕಾದ ಈಗಿನ ಚರಮಧ್ಯೇಯ! ಅದಕ್ಕಾಗಿ ಕೊರಿಯಾದಲ್ಲಿ ಭೀಕರ ಕದನ ಸಾಗಿದೆ.

ಎಲ್ಲರೂ ಒಮ್ಮೊಮ್ಮೆ ತಪ್ಪು ಮಾಡುತ್ತಾರೆ. ಅವರ ಮಾಡಿದ ತಪ್ಪಿನಿಂದ ಮುಂದಕ್ಕೆ ಪಾಠ ಕಲಿತುಕೊಳ್ಳಬೇಕಾದುದು ಜಾಣರಾದವರ ಕರ್ತವ್ಯ. ಜನತಾ ಅಭಿಪ್ರಾಯಕ್ಕೆ ವಿರುದ್ಧವಾಗಿ ಚಿಯಾಂಗ್ ಸರಕಾರವನ್ನು ಎತ್ತಿಕಟ್ಟಿ ಚೈನಾದಲ್ಲಿ ಮಹಾ ಪ್ರಯತ್ನ ನಡೆಸಿದ ಅಮೇರಿಕಾದ ಉಬ್ಬಿದ ಕೆನ್ನೆಗೆ ಚೈನಾದಲ್ಲಿ ಬಲವಾದ ಪೆಟ್ಟುಬಿತ್ತು. ಅವರಿಂದ ಪೋಷಿಸಲ್ಪಡುತ್ತಿದ್ದ ಚಿಯಾಂಗರು ತಮ್ಮ ಪರಿವಾರ ಸಮೇತ ಚೈನಾದಿಂದ ಓಡಬೇಕಾಯಿತು. ಈ ದುರಂತದಿಂದ ಪಾಠ ಕಲಿಯುವ ಈಗ ಅಮೇರಿಕಾವು ಕೊರಿಯಾ ಒಂದರಲ್ಲಿ ಮಾತ್ರವಲ್ಲ; ಫಾರ್ಮೋಸಾ ಮತ್ತು ಇಂಡೋ ಚೀನಾದಲ್ಲೂ ಕೈಹಾಕಿದೆ. ಅಮೇರಿಕಾವು ಎಷ್ಟೇ ಸೈನ್ಯಸಹಾಯ ಕೊಡಲಿ, ಯಾವುದೇ ರೀತಿಯಿಂದ ಹೋರಾಡಲಿ, ಕೊಳೆತು ನಾರುತ್ತಿರುವ ದಕ್ಷಿಣ ಕೊರಿಯಾದ ಸಿಂಗ್‌ಮನ್ ರೀಯು ಯಾ ಇಂಡೋ ಚೀನಾದ ಬೋ ದಾಯಿಯು ಆಡಳಿತಗಳ ಕಾರಣ ಅವರಿಗೆ ಜಯವದಗಿಸುವದು ಅಸಾಧ್ಯದಮಾತು. 'ಯುಕ್ತ ಪಥದಲ್ಲಿ ಜಾಗೃತಿಗೊಂಡ ಜನತೆಯನ್ನು ಜಗತ್ತಿನ ಯಾವ ಶಕ್ತಿಯೂ ಹತ್ತಿಕ್ಕಲಾರದು' ಎಂಬ ಜಾಲ ಲಜಪತರಾಯರ ಮಾತಿನಂತೆ ಜನಬೆಂಬಲವಿಲ್ಲದ ಸರಕಾರಗಳನ್ನು ಜಗತ್ತಿನ ಅದ್ವಿತೀಯ ರಾಷ್ಟ್ರವಾದ ಅಮೇರಿಕಾವೇ ಏಕೆ? ಭಗವಂತನೇ ರಕ್ಷಿಸಲು ಯತ್ನಿಸಿದರೂ ಅವು ಬದುಕಲಾರವು. ಜನತೆಗೆ ಬೇಡವಾದ ರಾಜ್ಯದಲ್ಲಿ ಅವರು ಎಷ್ಟು ಅಸಹಾಯಕರು ಎಂಬುದು ಕೊರಿಯಾದಲ್ಲಿ ಸಿಂಗ್‌ಮನ್ ರೀಯು ಕಡೆಯ ಸೇನೆಗಳು ಹೊಂದುತ್ತಿರುವ ಅಪಜಯದಿಂದ ತಿಳಿದು ಬರುತ್ತದೆ. ಒಂದು ವೇಳೆ ಅಮೇರಿಕಾವು ತನ್ನ ಅಸಾಧ್ಯ ಯುದ್ಧ ಸಾಹಿತ್ಯಗಳ, ಪಶ್ಚಿಮ ರಾಷ್ಟ್ರಗಳ ಸಹಾಯದಿಂದ ಕೊರಿಯಾ ಯುದ್ಧದಲ್ಲಿ ಜಯ ಪಡೆದರೂ ಕೊರಿಯಾದಲ್ಲಿ ಶಾಂತಿ ಸ್ಥಾಪಿಸಲಾಗುವದಿಲ್ಲ. ಏಕೆಂದರೆ ಕೊರಿಯಾದ ಜನರ ಸ್ವಾತಂತ್ರ್ಯ ನಾಗಿ ಪರ್ಯವಸಾನದಲ್ಲಿ ಯಾವ ಶಕ್ತಿಗೂ ಸಾಧ್ಯವಾಗದು.

### ಇಂಡೋ ಚೀನಾ.

ಯುದ್ಧ ನಡೆಯುತ್ತಿರುವದು ಕೇವಲ ಕೊರಿಯಾದಲ್ಲಿ ಮಾತ್ರವಲ್ಲ; ಸೂಕ್ಷ್ಮವಾಗಿ ಪರಿಶೀಲಿಸಿದರೆ ಸಮತಾವಾದಕ್ಕೂ, ಬಂಡವಾಳವಾದಕ್ಕೂ ಪೂರ್ವ ಏಷ್ಯಾದಲ್ಲಿ ಯುದ್ಧ ಪ್ರಾರಂಭವಾಗಿದೆಯೆಂದು ಸ್ಪಷ್ಟವಾಗಿ ಹೇಳಬಹುದು. ಚೈನಾಯುದ್ಧದಲ್ಲಿ ಬಂಡವಾಳವಾದದ ಸೋಲಾಯಿತು.—ಕೊರಿಯಾದ ಸ್ಥಿತಿಯೂ ಹಾಗಾಗುವಂತಿದೆ. ಮತ್ತೆ ಬರ್ಮಾದಲ್ಲಿಯೂ ಯುದ್ಧ ನಡೆದಿದೆ. ಮಲಯಾದಲ್ಲಿ ಪ್ರಖರವಾದ ಗೊರಿಲ್ಲಾ ಕದನ ಸಾಗಿದೆ. ಇಂಡೋ ಚೀನಾದಲ್ಲಿ ಕಳೆದ ಮೂರುವರೆ ವರ್ಷಗಳಿಂದ ಕದನ ನಡೆಯುತ್ತಿದೆ. ವಾಚಕರಿಗಾಗಿ ಇಂಡೋ ಚೀನಾದ ಕದನದ ಸೂಕ್ಷ್ಮ ಪರಿಚಯ ಮಾಡಲಾಗುವದು.

ಇಂಡೋಚೀನಾವು ಟೋಂಕಿನ್, ಕಂಬೋಡಿಯಾ, ಲಾವೋಸ್, ಅನ್ನಾಮ್ ಮತ್ತು ಕೊಚ್ಚಿನ್ ಚೀನಾ ಎಂಬ ಐದು ಪ್ರಾಂತಗಳಿಂದ ಕೂಡಿದ್ದು. ಈ ಭಾಗವು ಸುಮಾರು ೪೦೦೦ ವರ್ಷಗಳಿಗೆ ಹಿಂದೆಯೇ ಎಂದರೆ ಇಂದು ಅದನ್ನು ತನ್ನ ಹಿಡಿತದಲ್ಲಿಡಲು ಯತ್ನಿಸುತ್ತಿರುವ ಫ್ರಾನ್ಸು ಹುಟ್ಟುವ ಮೊದಲೇ ಸಂಸ್ಕೃತಿ ನಾಗರೀಕತೆಗಳಿಗೆ ಹೆಸರಾದದ್ದಾಗಿತ್ತು. ಇಂಡೋ ಚೀನಾವು ಕಳೆದ ೧೫೦ ವರ್ಷಗಳಿಂದ ಫ್ರೆಂಚರ ಹಿಡಿತದಲ್ಲಿತ್ತು! ಅತೀ ಫಲವತ್ತಾದ ಈ ಪ್ರದೇಶದ ೨೩,೦೦೦,೦೦೦ ಜನರು ಕಳೆದ ಯುದ್ಧದ ವರೆಗೂ ಫ್ರೆಂಚರ ಆಶ್ರಯದಲ್ಲಿ ಸುಖವಾಗಿ ಇದ್ದರು. ಆದರೆ ಕಳೆದ ಯುದ್ಧದಲ್ಲಿ ಇದು ಜಪಾನರ ವಶವಾಯಿತು. ಆಗ ಇದರ ಅರಸನಾಗಿದ್ದ ಬೋ ದಾಯಿಯವರು ಓಡಿಹೋಗಿ ಹಾಂಕಾಂಗಿನಲ್ಲಿ ಆಶ್ರಯ ಪಡೆದಿದ್ದರು. ಜಪಾನರಿಂದ ಇಂಡೋ ಚೀನಾದ ಬಿಡುಗಡೆಯಾದಾಗ ಹೊ ಚಿನ್ ಮಿನ್ ಎಂಬ ಮಾಸ್ಕೋ ತರಬೇತು ಪಡೆದ ಕಮ್ಯೂನಿಸ್ಟರ ಆಶ್ರಯದಲ್ಲಿ ಇಂಡೋಚೀನಾದ ಸ್ವಾತಂತ್ರ್ಯಕ್ಕಾಗಿ ಯುದ್ಧ ಪ್ರಾರಂಭವಾಯಿತು. ಜಪಾನರ ಮುಂದೆ ನಿಲ್ಲಲಾಗದೆ ಇಂಡೋಚೀನಾವನ್ನು ಅವರ ಪಾಲಿಗೆ ಬಿಟ್ಟು ಓಡಿಹೋಗಿದ್ದ ಫ್ರೆಂಚರು ಜಪಾನರು ಇಂಡೋಚೀನಾದಿಂದ ಹಿಂತೆಗೆದಾಗ ಪುನಹ ತಮ್ಮ ಅಧಿಕಾರ ಸ್ಥಾಪಿಸಲು ಯತ್ನಿಸಿದರು. ಕಳೆದ ಯುದ್ಧದಲ್ಲಿ ೧,೧೦೦,೦೦೦,೦೦೦ ಡಾಲರುಗಳನ್ನು ನಷ್ಟಹೊಂದಿ ೩೦,೦೦೦ ಯೋಧರನ್ನು ಕಳಕೊಂಡ ಫ್ರಾನ್ಸು ಇಂಡೋಚೀನಾದಲ್ಲಿ ಮತ್ತೆ ಯುದ್ಧವನ್ನು ಕಳೆದ ಮೂರು ವರ್ಷಗಳಿಂದ ಸಾಗಿಸಿದೆ. ನಷ್ಟ ಕ್ಕೊಳಗಾದ ಫ್ರೆಂಚರು ಹಾಗೆ ಮಾಡಲು ಹುಚ್ಚರಲ್ಲ. ಇಂಡೋಚೀನಾ ತಮ್ಮ ವಶವಿದ್ದರೆ ಮನೆಯಲ್ಲಿ ಕರೆಯಲು ಉತ್ತಮ ಹಸು ಇದ್ದಂತೆ ಎಂದು ಅವರಿಗೆ ಗೊತ್ತು. ... ಹಾಂಕಾಂಗಿಗೆ ಓಡಿಹೋಗಿದ್ದ ಬೋದಾಯಿಯವರನ್ನು ಕರೆಸಿ ಅವರನ್ನು ಅರಸನೆಂದು ಸಾರಿ ಫ್ರೆಂಚರು ಆತನ ಸರಕಾರಕ್ಕೆ ವೀಟ್‌ನಾಮ್ ಸರಕಾರವೆಂದು ಹೆಸರು ಹಾಕಿ ಆ ಭಾಗದ ಜನರಿಗೆ ತಕ್ಕ ಸುಧಾರಣೆಗಳನ್ನು ಕೊಟ್ಟಿರುವರು!

ಅರಸನಾದ ಬೋದಾಯಿಯು ನುಗುಯೆನ್ ಅರಸು ಮನೆತನದ ೧೩ನೇ ಅರಸು. ಫ್ರಾನ್ಸ್‌ನಲ್ಲಿ ವಿದ್ಯೆ ಪಡೆದ ಈತನು ಫ್ರೆಂಚರ ಕೈಗೊಂಬೆಯಂತೆ. ಈತನು ಬರೀ ತೇಗದ ಮರದಿಂದ ಕಟ್ಟಿದ "ಅಚಲ ಶಾಂತಿ ಗೃಹ"ವೆಂಬ ಅರಮನೆಯಲ್ಲಿ "ದಕ್ಷಿಣದ ಪರಿಮಳ"ವೆಂಬ ಖ್ಯಾತಿಯ ಅತೀ ಸುಂದರಿಯಾದ ಹೆಂಡತಿಯೊಡನೆ ಜೀವಿಸುತ್ತಿರುವನು. ಈತನ ಆಡಳಿತವು ಚೈನಾದ ಚಿಯಾಂಗರ, ಕೊರಿಯಾದ ರೀಯು ಆಡಳಿತದಂತೆ ಸ್ವಚ್ಛಂದವಾದುದು. ಈ ಕಾರಣವಾಗಿ ಇಂಡೋ ಚೀನಾದ ಬಿಡುಗಡೆಗೆ ಹೋರಾಡುತ್ತಿರುವ ಹೊ ಚಿನ್ ಮಿನ್ (ಅರ್ಥಾತ್ ಜ್ಞಾನಪೂರಿತ ಸಹನೆ)ರ ಪಕ್ಷಕ್ಕೆ ಜಯ ದೊರೆಯುತ್ತಿದೆ. ಹೊಚಿನ್‌ಮಿನ್ ತನ್ನ ಹೆಸರಿಗೆ ತಕ್ಕಂತೆ ಬಹುದೂರದರ್ಶಿ. ಈತನ ಕೈಕೆಳಗೆ ೮೦,೦೦೦ ಗೊರಿಲ್ಲಾ ಪಡೆ ಇದೆ. ಇವರ ಗೊರಿಲ್ಲಾ ಯುದ್ಧವನ್ನು ಯಾವ ಬಾಂಬು ಆಧುನಿಕ ಶಸ್ತ್ರಗಳೂ ಅಡಗಿಸಲಾರವು. ಅವರು ದೇಶದ ಉದ್ದಗಲಕ್ಕೂ ಹರಡಿರುವುದರಿಂದ ಅವರನ್ನು ಪರಾಭವಗೊಳಿಸುವುದು ಕಠಿಣ. ಇಂಡೊ ಚೀನಾದಲ್ಲಿ ಫ್ರೆಂಚರ ಸೈನಿಕ ಬಲವು ೧,೫೦,೦೦೦ ಇದ್ದರೂ ಇಂಡೋ ಚೀನಾದ ಮೂರರಲ್ಲಿ ಎರಡು ಭಾಗ ಹೊ ಚಿನ್ ಮಿನ್ನರ ವಶವಾಗಿದೆ. ಮುಂದೆ ಏನಾಗುವದೋ ನೋಡಬೇಕು.

ಅಮೇರಿಕಾವು ಈಗ ಬೋ ದಾಯಿ ಸರಕಾರಕ್ಕೆ ತನ್ನ ಸಹಾಯ ಕೊಡಲು ನಿರ್ಧರಿಸಿದೆ. ಅಮೇರಿಕನ್ ಟ್ಯಾಂಕು, ತೋಪು, ವಿಮಾನಗಳು ಆ ಕಡೆ ಧಾವಿಸುತ್ತಿವೆ. ಇದರಂತೆ ಚೈನಾದ ಕಮ್ಯೂನಿಸ್ಟರು ಹೊಚಿನ್‌ಮಿನ್ನ್‌ಗೆ ಸಹಾಯ ನೀಡಲು ಮುಂದೆ ಬಂದಿದ್ದರೆ!

### ಮನುಷ್ಯ ಯಾ ಮಹಾತ್ಮಾ?

ಗಾಂಧೀಜಿಯವರಿಗೆ ದೇಶದ ಉದ್ದಗಲಕ್ಕೂ, ಸ್ಮಾರಕಗಳೂ, ಪ್ರತಿಮೆಗಳೂ ರಚಿಸಲ್ಪಟ್ಟಿವೆ; ರಚಿಸಲ್ಪಡುತ್ತಿವೆ. ದೇಶದ ಉದ್ದಗಲಕ್ಕೂ, ರಸ್ತೆಗಳಿಗೂ ಮೈದಾನಗಳಿಗೂ, ಅವರ ಹೆಸರನ್ನು ಹಚ್ಚಲಾಗಿದೆ. ಅವರ ಹೆಸರು ಹಾಕಿಯೇ ಹೋಟೇಲುಗಳೂ, ಕಡೆಗೆ ಆಯುರ್ವೇದ ಶಾಲೆಗಳೂ ಪ್ರಾರಂಭವಾಗಿವೆ. ಇದರೆಲ್ಲದರ ಜೊತೆಗೆ ಇತ್ತಲಾಗಿ ಕಾಶಿಯಲ್ಲಿ ಅವರಿಗಾಗಿ ಒಂದು ದೇವಸ್ಥಾನ ಕಟ್ಟಿಸಿ ಗಾಂಧೀಜಿ ಮತ್ತು ಕಸ್ತೂರಬಾರವರ ಶ್ವೇತ ಶಿಲಾ ಪ್ರತಿಮೆಗಳ ಅನುಷ್ಠಾನ ಮಾಡಿ ಪೂಜೆ ನಡೆಯುತ್ತಿದೆ. ಮಹಾತ್ಮಾ ಗಾಂಧಿಯವರಿಗೆ ಇಷ್ಟವಿಲ್ಲದ ಕೆಲಸವಿದು ಎಂದು ಬೇರೆ ಹೇಳಬೇಕಿಲ್ಲ. ಮುಂದೆ ತನ್ನ ಬಗ್ಗೆ ವಿಪರೀತವಾದ ಕಥೆ ಕಟ್ಟುವರೆಂಬ ಕಾರಣದಿಂದಲೋ ಎಂಬಂತೆ ಮಹಾತ್ಮರು ತಮ್ಮ ಆತ್ಮ ಕಥೆಯನ್ನು ಬರೆದಿದ್ದಾರೆ. ಆದಿದ್ದೂ ಅವರ ಜೀವನದ ಬಗ್ಗೆ ಹುಟ್ಟಿಕೊಂಡಿರುವ, ಇನ್ನೂ ಹುಟ್ಟುತ್ತಿರುವ ದಂತ ಕಥೆಗಳು ಒಂದೆರಡಲ್ಲ. ಮಹಾತ್ಮರನ್ನು ಕಲಿಯುಗದ ಕೃಷ್ಣನ ಸಾಲಿಗೆ ಏರಿಸುವ ಪ್ರಯತ್ನ ನಡೆದಿದೆ. ಹಿಂದೆ ಗೌತಮ ಬುದ್ಧನ ನಂತರ ಇದೇ ರೀತಿಯ ಕಥೆ ಕಟ್ಟಿಯೇ ಬುದ್ಧನು ದೇವರೆಂಬ ಪ್ರತೀತಿ ಬಂದಿದೆ. ಯಾವಾಗ ಈ ರೀತಿ ಆದರ್ಶ ಪುರುಷರು ದೇವರ ಪಟ್ಟಕ್ಕೇರಿಸಲ್ಪಡುತ್ತಾರೋ ಆ ನಂತರ ಅವರ ಜೀವನದಿಂದ ಸಾಮಾನ್ಯ ಜನರಿಗೆ ಪ್ರಯೋಜನ ಕಡಿಮೆ. ಏಕೆಂದರೆ "ಅವರು ದೇವರ ಪುರುಷರು. ಅವರು ಮಾಡಿದರೆಂದು ನಮ್ಮಿಂದ ಆಗುವದೇ?" ಎಂಬ ಮಾತು ಸರ್ವರಲ್ಲಿ ಮನೆ ಮಾಡಿ ಆದರ್ಶ ಪುರುಷರ ಅನುಕರಣೆಯು ನಿಲ್ಲುವುದು ಈಗಲೇ "ಎಲ್ಲರೂ ಗಾಂಧಿಗಳಲ್ಲ;" "ಗಾಂಧಿಯವರು ಮಾಡಿದರೆಂದರೆ ಎಲ್ಲರಿಂದ ಸಾಧ್ಯವೇ"? "ಒಬ್ಬನೇ ಗಾಂಧಿ ಇದ್ದುದು" ಎಂಬ ಮಾತುಗಳು ಕೇಳಿ ಬರುತ್ತವೆ. ಇದು ತಪ್ಪು ಮಾರ್ಗ. ಗಾಂಧೀಜಿ ನಮ್ಮಂತೆಯೇ ಮನುಷ್ಯ. ನಮ್ಮಂತೆಯೇ ತೊಂದರೆ ತೊಡರುಗಳಿಗೊಳಗಾದವರು. ಸಾಧನೆಯಿಂದ ಘನತೆಗೇರಿದವರು. ಪ್ರತಿಯೊಬ್ಬರೂ ಸಾಧಿಸಿದರೆ ಗಾಂಧಿಯಂತೆಯೇ ಆದರ್ಶರಾಗಬಹುದೆಂಬುವನ್ನು ಮಾಡಿ ತೋರಿಸಿದವರು. ಅವರು ಮಾಡಿದುದೆಲ್ಲವನ್ನೂ ನಾವು ಕಣ್ಣಾರೆ ಕಂಡಿದ್ದೇವೆ. ಹೀಗಿದ್ದೂ "ಅವರು ಅವತಾರ ಪುರುಷ," "ಅವರು ದೇವಪುರುಷ"ನೆನ್ನುವದು ಅವರಿಗೆ ಅಪಕಾರ ಮಾಡಿದಂತೆ ಮಾತ್ರವಲ್ಲ; ನಮಗೆ ನಾವೇ ಹಾನಿ ತಂದುಕೊಂಡಂತೆ. ಇದಕ್ಕಾಗಿಯೇ ಗಾಂಧೀಯವರು ತಾನು "ಮಹಾತ್ಮ"ನೆಂದು ಕರೆಸಿಕೊಳ್ಳುವದಕ್ಕೂ ಇಷ್ಟಪಡುತ್ತಿರಲಿಲ್ಲ. ಆದರೆ ಕ್ರಿಯಾಶೂನ್ಯರಾಗಿ ಸರ್ವರಕ್ಕೂ "ದೇವರ ಇಚ್ಛೆ ಇದ್ದಂತಾಗಲಿ" ಎನ್ನುವ ನಾವು ಅವರನ್ನು ದೇವರ ಗದ್ದುಗೆಗೇರಿಸಿ ಕೊಲೆಯಾದಲ್ಲಿ ಮತ್ತೊಮ್ಮೆ ಅವರ ತತ್ವಗಳ ಕೊಲೆಯನ್ನು ಮಾಡುತ್ತಿರುವೆವು

---

## PUBLIC NOTICE

'Mr M. S. Aiyappa's services with the Western India Match Co. Ltd., have been dispensed with since 1-7-1950.

**Wimco, Dharmadam,**
**Via Tellichery.**

---

**Coorg Forest Department,**
***Mercara the 24th July, 1950.***

**TIMBER SALE NOTICE.**

About 1,15,500 cft of Teak, Rosewood, Honne (Vengai), Nandi (Venteak), Mathi (Karimaradu) and other jungle wood timbers stocked at Coorg Timber Depot, Hunsur, will be sold by public auction at the said Depot on Tuesday the 22nd August, 1950, commencing at 10-30 A. M. Timbers will be sold in small lots to suit the convenience of private consumers. For further particulars apply to the Chief Forest Officer, Coorg, Mercara.

**C. M. KUSHALAPPA,**
***Chief Forest Officer, Coorg.***

# ಓದುಗರ ಓಲೆಗಳು.

### "ವಿಷಾದಿಸುತ್ತೇನೆ"

ತಾರೀಕು ೩೦-೩-೫೦ರ ಮತ್ತು ೭-೪-೫೦ರ 'ಕೊಡಗು' ಪತ್ರಿಕೆಯಲ್ಲಿ ನಾನು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ವಿದ್ಯಾರ್ಥಿಯೊಬ್ಬನು ನಕಲು ಹೊಡೆದುದನ್ನು ಪರೀಕ್ಷಕರು ಕಂಡು ಹಿಡಿದರೂ ಅದನ್ನು ಹಾಗೆಯೇ ಬಿಡಲಾಯಿತೆಂಬ ಅರ್ಥದ ಲೇಖನಗಳನ್ನು ಬರೆದಿದ್ದೆನಷ್ಟೆ. ಅವುಗಳ ಆಧಾರದ ಮೇಲೆ ಶಾಲಾ ವಿದ್ಯಾಧಿಕಾರಿಗಳು ಖುದ್ದಾಗಿ ಪರಿಶೀಲನೆ ನಡೆಸಿದ್ದಲ್ಲಿ ಅವು ನಿರಾಧಾರವಾದುವೆಂದು ತಿಳಿದು ಬಂದಿದೆಯಂತೆ. ಪರೀಕ್ಷಾ ಹಾಲ್‌ಗಳಲ್ಲಿ ನಡೆಯುವ ವಿಚಾರಗಳ ಬಗ್ಗೆ ಸಾರ್ವಜನಿಕರಾದ ನಮ್ಮಂಥಾವರು, ಶಾಲೆಗೆ ಸಂಬಂಧಿಸಿದವರು ಹೇಳಿದ ಮಾತುಗಳ ಮೇಲೆಯೇ ವಿಶ್ವಾಸವಿಡಬೇಕಲ್ಲದೆ ಸ್ವತಃ ಪರಿಶೀಲನೆ, ರುಜುವಾತುಗಳಿಂದ ತಪ್ಪನ್ನು ಗುರ್ತು ಹಚ್ಚಿ ಸಾಬೀತು ಪಡಿಸುವ ಅನುವಿಲ್ಲದ ಕಾರಣ ನಮ್ಮ ಮತ ತಪ್ಪು ಅಭಿಪ್ರಾಯಗಳೂ ಸತ್ಯವೆಂದು ಭಾವಿಸಲ್ಪಡುತ್ತವೆ. ಅದರಂತೆ ಮೇಲಿನ ನನ್ನ ಲೇಖನಗಳು ನಿರಾಧಾರವಾದುವೆಂದು ವಿದ್ಯಾ ಇಲಾಖಾ ಅಧಿಕಾರಿಗಳು ವಿಚಾರಿಸಿ ತಿಳಿಸುವುದರಿಂದ ನನ್ನ ಲೇಖನಗಳಲ್ಲಿ ಪ್ರಕಟವಾದ ವಿಚಾರಕ್ಕೆ ವಿಷಾದಿಸುತ್ತೇನೆ. —ವಿರಾಜ.

---

### ಮುಂಬಯಿ ಕೊಡಗು ಸಂಘ.

ಮುಂಬಯಿ ಕೊಡಗು ಸಂಘದ ಒಂದು ಕೂಟವು ತಾ. ೧೬-೭-೫೦ರಲ್ಲಿ ಶ್ರೀ ಚಂದ್ರಶೇಖರ ಚೆಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಪಾಂಡಂಡ ಅಕ್ಕವ್ವ ಬೆಳ್ಯಪ್ಪನವರು ಕ್ಷಯರೋಗದ ವಿಶೇಷ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋಗುವದರ ಸಲುವಾಗಿ ಅವರನ್ನು ಪತ್ತು, ಈ ವರ್ಷ ಮುದುವೆಯಾದ ಬೆಂಬ ಯಿಯ ಕೊಡವ ದಂಪತಿಗಳನ್ನು ಸತ್ಕರಿಸಲು ಈ ಕೂಟವನ್ನು ಜರುಗಿಸಲಾಗಿತ್ತು. ಈ ಕೂಟಕ್ಕೆ ಸಂಘದ ಕೆಲವು ಹಳೆಯ ಸದಸ್ಯರುಗಳು ಕಾರಣಾಂತರಗಳಿಂದ ಗೈರುಹಾಜರಾಗಿದ್ದರು. ನಂತರ ತಿಳಿದಂತೆ ಈ ಗೈರುಹಾಜರಿಗೆ ಕೊಡಗಿನ ಕೆಲವು ತರುಣರು ಅಂತರ್ಜಾತಿಯ ವಿವಾಹಕ್ಕೆ ಪ್ರೋತ್ಸಾಹ ಕೊಟ್ಟು ಇತರ ಜಾತಿಯವರೊಡನೆ ವಿವಾಹವಾದವರ ಪಂಟಿಯವರನ್ನು ನಮ್ಮ ಈ ಸಂಘದ ಸದಸ್ಯರುಗಳನ್ನಾಗಿ ತೆಗೆದುಕೊಳ್ಳ... ದೆಂಬುದೂ ಕಾರಣವೆಂದು ತಿಳಿಯಬಂತು. ಇದು ನಿಜವಾದರೆ ವಿಷಾದಪಡಬೇಕು.

ಪೂಜ್ಯ ಮಹಾತ್ಮಾಜಿಯವರೂ ಸಹ ಈ ಅಂತರ್ಜಾತೀಯ ವಿವಾಹಕ್ಕೆ ವಿರೋಧವಾಗಿರಲಿಲ್ಲವೆಂಬುದು ಎಲ್ಲರಿಗೂ ಗೊತ್ತೇ ಇದೆ. ಅಲ್ಲದೆ ಇಂತಹ ಮಹಾ ಪುರುಷರೂ ಕೂಡ ಹರಿಜನೋದ್ಧಾರಕ್ಕಾಗಿಯೂ ಮತ್ತು ಅಂತರ್ಜಾತೀಯ ವಿವಾಹಕ್ಕಾಗಿಯೂ ವಿಶೇಷ ಪ್ರೋತ್ಸಾಹ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲದೆ ನಮ್ಮ ಪ್ರಜಾಪ್ರಭುತ್ವ ಸರಕಾರವೂ ಕೂಡ ಇಂತಹ ಅಭಿಪ್ರಾಯಕ್ಕೆ ಸಹಾಯವನ್ನು ಮತ್ತು ಸಮ್ಮತಿಯನ್ನು ಕೊಡುವಲ್ಲಿ, ಹಿನ್ನಡೆಯಲಿಲ್ಲ. ಹಾಗಿರುವಲ್ಲಿ ಈ ಪುಟ್ಟ ಸಂಘದ ಕೆಲವೇ ಸದಸ್ಯರುಗಳು ಈ ವಿಷಯಕ್ಕಾಗಿ, ಸಂಘದ ಕೂಟಗಳಿಗೆ ಹಾಜರಾಗದೆ ಸಂಘದ ಇನ್ನಿತರ ಸದಸ್ಯರುಗಳಿಗೆ ಪ್ರೋತ್ಸಾಹ ಕೊಡದಿರುವುದು ಶೋಚನೀಯಕರವಾದ ವಿಷಯ. ಇಂಥಾ ಚಿಕ್ಕ ದೃಷ್ಟಿಯ ಅಭಿಪ್ರಾಯದಿಂದ ಯಾವ ಸಂಘವೂ ಬೆಳೆಯದೆಂಬುದನ್ನು ತಿಳಿದು ಇನ್ನಾದರೂ ಎಲ್ಲರೂ ಸಹಕರಿಸಬೇಕು.

'ಸಂಘದ ಹಿತಚಿಂತಕ'

---

### ಪ್ರೈಮರಿ ಶಾಲೆ.

ಈ ಶಾಲೆಯು ೧೮೮೫ ರಲ್ಲಿ ಐಚೆಟ್ಟಿರ ಕುಟುಂಬಸ್ಥರಿಂದ ಕಟ್ಟಿಸಲ್ಪಟ್ಟಿತು. ಆಗ್ಯೆ ಒಬ್ಬ ಉಪಾಧ್ಯಾಯರೂ ೨೦-೨೫ ವಿದ್ಯಾರ್ಥಿಗಳೂ ಇದ್ದರು. ಸದರಿ ಶಾಲೆಯು ೧೯೦೦ ರಲ್ಲಿ ಹೇಗೋ ಅಗ್ನಿ ದೇವನಿಗೆ ಆಹುತಿಯಾಯಿತು.. ನಂತರ ಈಗಿರುವ ಶಾಲೆಯು ಗ್ರಾಮಸ್ಥರ ಒಗಟ್ಟಿನಿಂದ ಕಟ್ಟಿಸಲ್ಪಟ್ಟಿತು.

ಆ ಬಳಿಕ ಈ ಸ್ಕೂಲಿನ ಅಭಿವೃದ್ಧಿಯು ಕುಂಟುತ್ತಾ ನಡೆಯುತ್ತಿರುವದನ್ನು ಮನಗಂಡು ಗ್ರಾಮಸ್ಥರು ಸೇರಿ ಒಂದು ಶಾಲಾ ಅಭಿವೃದ್ಧಿ ಸಂಘವನ್ನು ತೆರೆದು ಪ್ರಚಾರ ನಡೆಸಿ ಮಕ್ಕಳ ಸಂಖ್ಯೆ ಹೆಚ್ಚಾಗಲು ಗ್ರಾಮಸ್ಥರಿಂದ ಚಂದಾ ಎತ್ತಿ ಒಬ್ಬ ಹೆಚ್ಚಿನ ಉಪಾಧ್ಯಾಯರನ್ನು ನೇಮಿಸಿ ೬ ತಿಂಗಳವರೆಗೆ ವೇತನ ಕೊಟ್ಟು ನಡಿಸುತಿದ್ದದ್ದನ್ನು ಈಗಿನ ಮೇಲಧಿಕಾರಿಗಳು ಕಂಡು ಮೆಚ್ಚಿ ಅವರಿಗೆ ಸಂಬಳ ಮಂಜೂರ್ ಮಾಡಿದ್ದಲ್ಲದೆ, ಶಾಲಾ ಕಟ್ಟಡದ ರಿಪೇರಿಗೂ ಸಹಾಯ ಮಾಡಿದರು.

ಮಕ್ಕಳ ಸಂಖ್ಯೆ ಜಾಸ್ತಿಯಾಗಿ ತಕ್ಕ ಸ್ಥಳದ ಅಭಾವವನ್ನು ಕಂಡು ಶ್ರೀ. ಐಚೆಟ್ಟಿರ ದಿವಂಗತ ಕರುಂಬಯ್ಯನವರ ಮಕ್ಕಳಾದ, ಶ್ರೀ. ಪೊನ್ನಪ್ಪ ಮತ್ತು ಸೋದರರು (ಮಿಸೆಸ್ ಪಾಂಡಂಡ ಚಂಗಪ್ಪ ಮತ್ತು ಪಳೆಯಂಡ ಕುಶಾಲಪ್ಪ) ತಮ್ಮ ಉದಾರ ಬುದ್ಧಿಯನ್ನು ತೋರ್ಪಡಿಸಿ ಹಳೆ ಶಾಲೆಗೆ ಜೋಡಿಸಿ ಈಗಿನ ರೀತಿಯ ಎರಡು ಕೋಣೆಗಳನ್ನು ನೆಲಕ್ಕೆ ಸಿಮೆಂಟು ಹಾಕಿಸಿ ಎರಡು ಸಾವಿರ ರೂಪಾಯಿಗಳ ಖರ್ಚಿನಿಂದ ಕಟ್ಟಿಸಿ ಕೊಟ್ಟರು. ಸದರಿ ಕಟ್ಟಡದ ಪ್ರವೇಶೋತ್ಸವವು ತಾರೀಕು ೧೩-೪-೫೦ರಲ್ಲಿ ಆ. ಕ. ಶ್ರೀ ಪೂನ್, ಎಸ್ ... ನವರಿಂದ ನೆರವೇರಿಸಲ್ಪಟ್ಟಿತು. ಇ ... ಉದಾರ ಭಾವದ ... ವ್ಯಕ್ತಿಯಿಂದಲೂ ದೇಶದ ಭವಿಷ್ಯದ ಆದರ್ಶದಂತೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮ ಉದಾರತೆಯನ್ನು ತೋರಿಸಿ ದೇಶ . ಉದ್ಧಾರಕ್ಕೆ ಕಾರಣರಾಗಬೇಕೆಂದು ... ಈ ಪತ್ರ ಬರೆದಿರುವೆನು. A. P.

---

### ವಿಚಾರಣೆ ಬೇಕು.

ಮೂರ್ನಾಡಿನ ಪೇಟೆ ಮಧ್ಯದಲ್ಲಿ, ಪಿ. ಡಬ್ಲ್ಯು. ಡಿ. ಇಲಾಖೆಯವರ ಕಟ್ಟಡದ ಸುತ್ತಲಿರುವ ಪೈಸಾರಿ ಜಾಗವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕಾದಿಡಬೇಕೆಂದು ಮತ್ತು ಖಾಸಗಿ ಜನರಿಗೆ ಕೊಡಕೂಡದೆಂದು ಸಾರ್ವಜನಿಕರಲ್ಲಿ ಬಹುಮತದವರು ಅವರ ಅಭಿಪ್ರಾಯವನ್ನು ಸೂಚಿಸಿದ್ದರೂ, ರೆವಿನ್ಯೂ ಇಲಾಖೆಯ ಮುಖ್ಯ ಅಧಿಕಾರಿಯಾದ ಅಸಿಸ್ಟೆಂಟು ಕಮಿಷನರ್ ಸಾಹೇಬರವರು ಸಹ ಖಾಸಗಿ ಜನರಿಗೆ ಜಾಗವನ್ನು ಕೊಡಕೂಡದೆಂದು ಅಭಿಪ್ರಾಯಪಟ್ಟಿದ್ದರೂ ಕೆಲವು ಚಿಕ್ಕ ಅಧಿಕಾರಿಗಳ ಮತ್ತು ಕೆಲ ಜನ ಪುಢಾರರ ಕೈವಾಡದಿಂದ ಹೊಸ ಹುಲ್ಲಿನ ಗುಡಿಸಲುಗಳು, ಬಾಳೆತೋಟಗಳು ಈ ಜಾಗದಲ್ಲಿ ಎದ್ದು ಬರುತ್ತಿವೆ. ಹೊಸ ಜನರಿಗೆ ಇನ್ನೂ ಜಾಗವನ್ನು ಕೊಡುವ ಭರವಸೆಗಳೂ ನಡೆಯುತ್ತಿವೆ. ಈ ವಿಷಯವನ್ನು ಮುಖ್ಯ ಅಧಿಕಾರಿಗಳು ವಿಚಾರಿಸುವರೇ?

ಮೂರ್ನಾಡಿನವ.

---

## ಆರೋಗ್ಯದ ಮೇಲೆ ಬಣ್ಣಗಳ ಪರಿಣಾಮ.

ಸೃಷ್ಟಿಯಲ್ಲಿನ ಬಣ್ಣಗಳು ಕೇವಲ ಕಣ್ಣಿಗೆ ಹಿತಕರವಾಗಿ ಇಲ್ಲ; ಆರೋಗ್ಯದ ಮೇಲೆ ಅವುಗಳ ಪ್ರಭಾವವಿದೆ. ಸ್ವಾಮಿ ಶಿವಾನಂದರವರು "ಆರೋಗ್ಯ ಮತ್ತು ಆನಂದ" ಎಂಬ ತಮ್ಮ ಗ್ರಂಥದಲ್ಲಿ, ಮಾನವನ ಆರೋಗ್ಯದ ಮೇಲೆ ಬಣ್ಣಗಳು ವಿಶೇಷ ಪರಿಣಾಮವನ್ನುಂಟುಮಾಡಬಲ್ಲವು ಎಂಬುದನ್ನು ವಿವರಿಸಿರುವರು,

### ಬಿಳಿ.

ಬಿಳಿ ಬಣ್ಣವು ಮನೋತ್ಸವವನ್ನು, ಸಂತೋಷವನ್ನು ಸೂಚಿಸುತ್ತದೆ. ಶುಭ್ರವಾದ ಯಾವ ವಸ್ತುವನ್ನು ನೋಡಿದರೂ ನಾವು ಆನಂದ ಪಡುವೆವು. ಶುಭ್ರ ಬೆಳಕಂತೂ ಮನಸ್ಸಿನ ಮೇಲೂ ನಮ್ಮ ಆರೋಗ್ಯದ ಮೇಲೂ ಎಷ್ಟು ಒಳ್ಳೇ ಪರಿಣಾಮವನ್ನುಂಟು ಮಾಡುವುದೆಂಬುದನ್ನು ಪ್ರತಿಯೊಬ್ಬನೂ ಬಲ್ಲನು.

### ಕಪ್ಪು.

ಕಪ್ಪು ಬಣ್ಣವು ಕೆಟ್ಟುದನ್ನೇ ಸೂಚಿಸುತ್ತದೆ. ಕಪ್ಪು ವಸ್ತ್ರವು ದುಃಖಸೂಚಕವಾಗಿರುತ್ತದೆ. ಕಪ್ಪು ಬಟ್ಟೆಗಳು ರೋಗಾಣುಗಳನ್ನೂ ಉಷ್ಣವನ್ನೂ ಆಕರ್ಷಿಸುವುವು ಎಂದು ವಿಜ್ಞಾನಿಗಳು ಹೇಳುವರು. ಕಪ್ಪಗಿನ ರಾತ್ರಿಯು ದುಷ್ಟ ಜಂತುಗಳ ಹೊರತಾಗಿ ಮತ್ತಾರಿಗೂ ಸಂತೋಷವನ್ನುಂಟುಮಾಡುವುದಿಲ್ಲ.

### ಹಸುರು.

ಹಸುರು ಬಣ್ಣವು ಬಣ್ಣಗಳ ಅರಸ ಎನಿಸುತ್ತದೆ. ಅದು ಕಣ್ಣಿಗೆ ಹಿತಕರ. ತಂಪಾಗಿ ಕಾಣುವುದು; ನೋವನ್ನು ಕಡಿಮೆ ಮಾಡುವುದು. ದೃಷ್ಟಿಯನ್ನು ರಕ್ಷಿಸುವುದರಲ್ಲಿಯೂ ಹೆಚ್ಚಿಸುವುದರಲ್ಲಿಯೂ ಈ ಬಣ್ಣಕ್ಕೇ ಪ್ರಾಧಾನ್ಯ. ಸೃಷ್ಟಿಯಲ್ಲಿ ಗಿಡ ಮರಗಳು—ಹಸುರಾಗಿರುವುದರಿಂದಲೇ ಮಾನವನ ದೃಷ್ಟಿಯು ಸುರಕ್ಷಿತವಾಗಿದೆ. ರೋಗಿಗಳನ್ನು ಚಿಕಿತ್ಸಿಸುವಲ್ಲಿಯೂ ಹಸುರು ಬಣ್ಣದ ಪರದೆಗಳು ಸಹಾಯಕವಾಗಿವೆ. ಅದು, ಮೆದುಳಿಗೆ ತಂಪನ್ನೀಯುತ್ತದೆ. ಹಸುರು ಬಣ್ಣದ ಬೆಳಕನ್ನು ಚೆಲ್ಲುವ ವಿಧಾನದಿಂದಲೂ ಅನೇಕ ರೋಗಗಳಿಗೆ ಚಿಕಿತ್ಸೆಯಾಗುತ್ತಿದೆ.

### ನೀಲ.

ಹಸುರಿನಂತೆ ನೀಲ ಬಣ್ಣಕ್ಕೂ ಆಸಾಮಾನ್ಯ ಸ್ಥಾನವಿದೆ. ಈ ಬಣ್ಣವು ಕೂಡ ನೋವನ್ನು ಶಮನಿಸುವುದು. ನೀಲ ಬೆಳಕು ಎಲ್ಲಾ ಜ್ವರಗಳಲ್ಲೂ, ಅತಿಯಾದ ಋತುಸ್ರಾವದಲ್ಲಿಯೂ, ಹಳೇ ವ್ರಣಗಳಲ್ಲೂ, ಚರ್ಮರೋಗಗಳಲ್ಲೂ—ಚಿಕಿತ್ಸೆ ಮಾಡುವಾಗ ಸಹಾಯಕವಾಗಿದೆ.

### ಕೆಂಪು.

ಕೆಂಬಣ್ಣವು ಕಾವು ಕೊಡುವ ಬಣ್ಣವಾಗಿದೆ. ಇದು ಕೂಡ ನರಗಳನ್ನು ಉತ್ತೇಜಿಸುವುದು. ಈ ಬಣ್ಣವು ವಾತ, ಖಾಸ, ನಪುಂಸಕತ್ವ, ಕ್ಷಯ ಮೊದಲಾದವುಗಳ ಚಿಕಿತ್ಸೆಯಲ್ಲಿ ಸಹಾಯಕಾರಿಯಾಗಿದೆ.

ಕೊಠಡಿಗಳಲ್ಲಿನ ಗೋಡೆಗಳ ಬಣ್ಣವು ಬಿಳಿಯಾಗಿದ್ದರೆ, ಇತರ ಬಣ್ಣಗಳು ಪ್ರತಿಬಿಂಬಿಸಲ್ಪಡುತ್ತವೆ. ಕಪ್ಪು ಗೋಡೆಗಳು ಬೆಳಕನ್ನು ಹೀರಿಬಿಡುತ್ತವೆ. ಆದುದರಿಂದ ಯಾವಾಗಲೂ, ಮನೆಯೊಳಗಿನ ಗೋಡೆಗಳು ಬಿಳಿಯಾಗಿದ್ದರೆ ಉತ್ತಮ.

(ಸುವಾಸಿನಿ)

---

## ತಿಳುವಳಿಕೆ ನೋಟೀಸು

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ ನಿಲುವಾಗಿಲು ದಾಖ್ಲೆ ಚಿಕ್ಕಬಂಡಾರ ಗ್ರಾಮದಲ್ಲಿರುವ ಒಕ್ಕಲಿಗರ ರಂಗೇಗೌಡರ ಹೆಂಡತಿ ಚನ್ನಮ್ಮನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ. ಮೇಲ್ಕಂಡ ನನ್ನ ಗಂಡ ರಂಗೇಗೌಡರಿಗೆ ಸಿ. ಡಿ. ಕಾಳಪ್ಪರೆಂಬ ಕಾಸ ಅಣ್ಣ ಇದ್ದಾರೆ. ಸದರಿ ಚಿಕ್ಕ ಬಂಡಾರ ಗ್ರಾಮದಲ್ಲಿ ತರಿ ಮತ್ತು ಕುಷ್ಕಿ ಜಮೀನು ಮತ್ತು ವಾಸದ ಮನೆ ಹಿತ್ಲು ಸಹ ಇದೆ. ಈ ಸೊತ್ತುಗಳು ಮೇಲ್ಕಂಡ ಸಿ. ಡಿ. ಕಾಳಪ್ಪನವರ ಹೆಸರಿನಲ್ಲಿ ಜಮಾಬಂದಿ ನಡೆದು ಬಂದು ನನ್ನ ಗಂಡ ರಂಗೇಗೌಡರು ಆರಭೇ ಕಲಮಿನಲ್ಲಿ ಹಕ್ಕುದಾರರಾಗಿದ್ದಾರೆ. ಈ ಸೊತ್ತುಗಳು ಇಬ್ಬರಿಗೂ ಪಿತ್ರಾರ್ಜಿತ ಸೊತ್ತುಗಳಾಗಿವೆ ಸ್ವಯಾರ್ಜಿತ ಒಂದೂ ಇಲ್ಲ. ನನ್ನ ಗಂಡ ರಂಗೇಗೌಡರು ಬಹಳ ದಿವಸಗಳಿಂದಲೂ ದುರ್ವರ್ತನೆಗಳಿಗೆ ಕೈಹಾಕಿ ನಡತೆ ಹೀನರಾಗಿದ್ದಾರೆ ನನಗೆ ನಾಲ್ಕು ತಿಂಗಳ ಒಂದು ಗಂಡು ಮಗು ಇದೆ. ಸದ್ರಿ ರಂಗೇಗೌಡರು ನನಗೂ ಮತ್ತು ನನ್ನ ಮಗುವಿಗೂ ಮೋಸಪಡಿಸಬೇಕೆಂಬ ಉದ್ದೇಶದಿಂದ ಅವರ ಹಿಸ್ಸೆಗೆ ಬರಬೇಕಾದ ಸ್ಥಿರ ಮತ್ತು ಚರ ಸೊತ್ತುಗಳನ್ನು ಪರಬಾರೆ ಮಾಡುವ ಏರ್ಪಾಡಿನಲ್ಲಿರುವುದಾಗಿ ಗೊತ್ತು ತಿಳಿಯುತ್ತೇನೆ. ಸದ್ರಿ ಸ್ಥಿರ ಮತ್ತು ಚರ ಸೊತ್ತುಗಳಲ್ಲಿ ನನಗೂ ಮತ್ತು ನನ್ನ ಮಗುವಿಗೂ ಸಮಾನವಾದ ಹಕ್ಕಿದೆ. ಸದ್ರಿ ಸೊತ್ತುಗಳನ್ನು ಯಾರಾದರೂ ಕ್ರಯ, ಭೋಗ್ಯ, ಗಿರ್ವಿ ವಗೈರೆ ವಿಧಾನಗಳಲ್ಲಿ ನನ್ನ ಗಂಡನಿಂದ ಪಡಕೊಂಡಲ್ಲಿ ಅವುಗಳು ಅವರಿಗೆ ಸಿಂಧುವಾಗಲಾರವು. ಅಲ್ಲದೆ ಆ ಬಗ್ಗೆ ಅವರಿಗಾಗುವ ಕಷ್ಟ ನಷ್ಟಗಳಿಗೆ ಆ ರೀತಿ ಪಡಕೊಂಡವರು ಜವಾಬ್ದಾರರಾಗಬೇಕೆಂಬ ಸಂಗತಿಯನ್ನು ಈ ಮೂಲಕ ತಿಳಿಸಿದ್ದೇನೆ.

ಚನ್ನಮ್ಮ
ಚಿಕ್ಕ ಬಂಡಾರ.

# ತೃತೀಯ ಮಹಾಯುದ್ಧದ ಹೆಸರಿನಲ್ಲಿ.

ಕೆಲವೊಂದು ಅವಶ್ಯಕ ವಸ್ತುಗಳು ವಿದೇಶೀ ವಸ್ತುಗಳ, ಇತ್ತೀಚೆಗೆ ಪೇಟೆಗಳಲ್ಲಿ ದುರ್ಲಭವಾಗುತ್ತಿವೆ. ಅದಕ್ಕೆ ಸಾಮಗ್ರಿಗಳ ಸಾಗಾಟದಿಂದ ಉಂಟಾದ ಅಡಚಣೆಗಳ ಜತೆಗೆ ದೊರೆಯದ ಕಾರಣ ವಿಳಂಬ ಬರುತ್ತದೆ. ಅದಲ್ಲದೆ, ಅದಕ್ಕಿಂತ ಹೆಚ್ಚಾಗಿ, ಕೊರಿಯಾ ಯುದ್ಧವೇ ಮುಖ್ಯ ಕಾರಣವಾಗಿ ಎಣಿಸಲ್ಪಡುತ್ತಿದೆ.

ಕೊರಿಯಾ ಯುದ್ಧವು, ಮುಂದಿನ ಜಾಗತಿಕ ಯುದ್ಧದ ಮೂಲ ಎಂದು ಜನತೆ ತರ್ಕಿಸುತ್ತಿದೆ. "ಈಗಾಗಲೇ ತೃತೀಯ ಮಹಾ ಯುದ್ಧವನ್ನು ರಷ್ಯವು ಆರಂಭಿಸಲಾಗಿದ್ದರೂ ಕೊರಿಯಾ ಯುದ್ಧವು ಆ ಮಹಾಯುದ್ಧಕ್ಕೆ ಸೇರಿದೆ; ಎಲ್ಲಾ ರಾಷ್ಟ್ರಗಳ ಎಚ್ಚರಿಕೆಯಿಂದಿರಬೇಕು" ಎಂಬರ್ಥದಲ್ಲಿ ರಾಷ್ಟ್ರವು ಮುಂದಿರಿಸುತ್ತಿದೆ. ಪ್ರಕಟಣೆಗಳಲ್ಲಿ, ವಿಕಟ ಪ್ರಭಾವ ಅತಿ ತೀವ್ರಗಳನ್ನು ಹೊಸ ಕವಚ ಶಾಸನಗಳ ಹಾಗೂ ದೇಶಗಳಿಂದ ಕಂಡುಬರುತ್ತಿದೆ. ಯುದ್ಧ ಸಾಮಗ್ರಿಗಳನ್ನು ಮಹಾ ರಾಷ್ಟ್ರಗಳು ಶೇಖರಿಸಲು ಆಲೋಚಿಸಿದುದೂ ಇದಕ್ಕೊಂದು ಕಾರಣವಾಗಿದೆ.

ಅದಲ್ಲದೆ, ತೃತೀಯ ಮಹಾ ಯುದ್ಧವು ಆಕಸ್ಮಿಕವಾಗಿ ಆರಂಭವಾಗಿ, ದ್ವಿತೀಯ ಮಹಾ ಯುದ್ಧಕಾಲದಲ್ಲಿ ಲಾಭ ದೊರಕಿದಂತೆಯೇ ಈಗಲೂ ಸಾಧ್ಯವಿದೆ—ಅದಕ್ಕೆ ಸಿದ್ಧರಾಗಿರೋಣ ಎಂದು ಯಾರಾದರೂ ವ್ಯಾಪಾರಿಗಳು ಸಂಗ್ರಹಕ್ಕೆ ತೊಡಗಿದರೆ, ಸಹಜವಾಗಿ ದುಃಖದಾಯಕಗಳಾಗದಿರದು.

ಕೆಲವೊಂದು ಸರಕುಗಳಿಗೆ ಕೂಡ ಹಾಗೆ, ಅವುಗಳ ಧಾರಣೆಗಳೇರುವಂತೆ ಕಾರಣರಾಗುವ ವ್ಯಾಪಾರಿಗಳು, ಕೆಲ ಕಾಲದ ನಂತರ ಜನರಿಗೆ ಬೇಕಾದಷ್ಟು ಕೊಂಡರೆ ಕೊಟ್ಟಂತಾಗಿ, ಕೊನೆಗೆ, ತಾವು ಕೂಡ ಹಾಕಿದ ಸರಕುಗಳ ಧಾರಣೆಗಳು ಇಳಿವುದನ್ನು ಬೇಗನೆ ಕಾಣದಿರಲಾರರು.

ಮೊನ್ನೆ ತಾನೆ ಭಾರತ ಸರಕಾರದ ಕೈಗಾರಿಕೆ ಹಾಗು ಸರಬರಾಜು ಇಲಾಖಾ ಮಂತ್ರಿ ಶ್ರೀ ಹರೆಕೃಷ್ಣ ಮೆಹತಾಬರವರು ಧಾರಣೆಗಳ ಈ ಉಬ್ಬರದ ಕುರಿತು ವ್ಯಾಪಾರಸ್ಥರಿಗೆ ಎಚ್ಚರಿಕೆ ಕೊಟ್ಟಿರುವರು.

ಧಾರಣೆಗಳ ಉಬ್ಬರದಿಂದಲೂ ಅವಶ್ಯಕ ಸರಕುಗಳು ಅಡಗಿ ಹೋಗುವುದರಿಂದಲೂ ಜನತೆಯಲ್ಲಿ ಅತೃಪ್ತಿ—ಅಶಾಂತಿಗಳು ಹೆಚ್ಚುತ್ತ ಹೋಗುವುವು. ಎಲ್ಲದಕ್ಕೂ ನಾವು ಸರಕಾರವನ್ನೆ ಹೊಣೆಯಾಗಿ—ಬೆರಳಿಟ್ಟು ತೋರಿಸಲಾಗುವುದಿಲ್ಲ.

ಅತಿ ಲಾಭದ ಆಸೆಯು ಯಾವಾಗಲೂ ದುಃಖವನ್ನು ತರುವುದು. ಲಾಭಕ್ಕಾಗಿ ಯುದ್ಧವಾಗಬೇಕೆಂಬ ಇಚ್ಛೆಯುಳ್ಳವನು, ಪ್ರತಿಯೊಂದು ಘಟನೆಯಲ್ಲಿ ಯುದ್ಧವನ್ನು ನೋಡುವನು. ನೈಜ ಸ್ಥಿತಿಗಿಂತ ಹೆಚ್ಚಾಗಿ, ಅವನ ಆಸೆಯೇ ಅವನಿಗೆ ಯುದ್ಧವನ್ನು ತೋರುತ್ತದೆ.

ಜಾಗತಿಕ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ಪ್ರತಿಯೊಬ್ಬನೂ ತನ್ನ ಸಹಜೀವಿಗೆ ಸಲಿಸಬೇಕಾದ ತನ್ನ ಕರ್ತವ್ಯವನ್ನು ಅರಿತುಕೊಂಡು ಹಾಗೆ ನಡೆಯಬೇಕು. ಇಲ್ಲದಿದ್ದರೆ ಸಾರ್ವತ್ರಿಕ ಅಶಾಂತಿ—ಕ್ಷೋಭೆಗಳು ಹರಡಿ, ಪರಿಸ್ಥಿತಿಯು ಹದಗೆಟ್ಟು ಮೀರುವುದು.

ಪ್ರಭಾತ.

## ವಾರ್ತೆಗಳು.

ಕಲ್ಕತ್ತೆಯ ಜಾದವಪುರದಲ್ಲಿರುವ ವಿಲ್ಸನ್ ಉದ್ಯಾನವನಕ್ಕೆ ಪಶ್ಚಿಮ ಬಂಗಾಳದ ಗವರ್ನರ್ ಡಾ. ಕೈಲಾಸನಾಥ ಖಟ್ಜುರವರ ಸ್ಮರಣಾರ್ಥ 'ಕೈಲಾಸ ಬಾಗ್' ಎಂದು ಇತ್ತೀಚೆಗೆ ನಡೆದ ಒಂದು ಸಸಿ ನೆಡುವ ಕಾರ್ಯಕ್ರಮದಲ್ಲಿ ನಾಮಕರಣ ಮಾಡಲಾಯಿತು.

ಮೂಕ ಪಶುಗಳ ಸಂರಕ್ಷಣೆಯ ಕುರಿತು ಪ್ರಚಾರ ನಡೆಸುವ ಸಲುವಾಗಿ ಇಂಡಿಯಾ ಸೊಸೈಟಿಯವರು "ಲವ್", ಎಂಬ ಮಾಸಿಕ ಪತ್ರಿಕೆಯೊಂದನ್ನು ಹೊರಡಿಸುವ ನಿರ್ಧಾರಕ್ಕೆ ಬಂದಿರುವರು.

ಗತಜೂನ್ ತಿಂಗಳ ಅಂತ್ಯದ ವರೆಗೆ ಮದ್ರಾಸು ಸರಕಾರವು ಒಟ್ಟು ೬,೧೦೩ ಮಂದಿ ರಾಜಕೀಯ ಸಂತ್ರಸ್ತರಿಗೆ ಭೂದಾನ ಹಂಚಿರುವುದು. ಈ ವರೆಗೆ ಒಟ್ಟು ೨೧,೧೧೫ ಮಂದಿ ರಾಜಕೀಯ ಸಂತ್ರಸ್ತರು ಜಮೀನು ದಾನಕ್ಕಾಗಿ ಅರ್ಜಿ ಮಾಡಿ ಆ ಪೈಕಿ ೯,೫೪೧ ಅರ್ಜಿಗಳು ಪರಾಮರಿಸಲ್ಪಟ್ಟಿವೆ. ೩,೧೩೬ ಅರ್ಜಿಗಳು ನಿರಾಕರಿಸಲ್ಪಟ್ಟಿವೆ.

"ಕೊರಿಯಾದಲ್ಲಿ ಅಣುಬಾಂಬು ಪ್ರಯೋಗ ನಡೆದರೆ ಅದರಿಂದ ತೃತೀಯ ಜಾಗತಿಕ ಮಹಾ ಯುದ್ಧವನ್ನು ತಪ್ಪಿಸಿದಂತಾಗದು, ಬದಲು ಆಮಂತ್ರಿಸಿದಂತಾಗುವುದು" ಎಂಬ ಅಭಿಪ್ರಾಯವನ್ನು ಅಣುಬಾಂಬು ಪ್ರಯೋಗದ ವಿನಾಶವನ್ನು ಪ್ರತ್ಯಕ್ಷ ಅನುಭವಿಸಿದ ಹಿರೋಷಿಮಾ, ನಾಗಸಾಕಿಗಳ ಮೇಯರುಗಳು ವ್ಯಕ್ತಪಡಿಸಿದರು.

ಎಟಂಬಾಂಬ್ ಯಾನೆ ಅಣುಬಾಂಬನ್ನು ಪೂರ್ಣ ಬಹಿಷ್ಕರಿಸಬೇಕೆಂಬ ಸ್ಟಾಕ್ ಹೋಂ ವಿನಂತಿ ಪತ್ರಕ್ಕೆ ಒಂದು ಮಿಲಿಯಕ್ಕೂ ಮೇಲ್ಪಟ್ಟು ಅಮೇರಿಕನರು ಸಹಿ ಮಾಡಿರುವರು. ಈ ಪೈಕಿ ಸುಮಾರು ೪೦೩,೦೦೦ ಸಹಿಗಳು ಕೊರಿಯಾ ಯುದ್ಧ ಆರಂಭವಾದ ನಂತರ ಸಂಗ್ರಹಿಸಲ್ಪಟ್ಟವುಗಳಾಗಿವೆ.

ಲಂಡನಿನಲ್ಲಿ ಭಾರತದ ನೂತನ ಚಿತ್ರಗಳನ್ನು ಬಳಸುವ ಬಗ್ಗೆ ಲಂಡನಿನ ಗಯುಟಿ ಥಿಯೇಟರನ್ನು ಭಾರತ ಸರಕಾರವು ಕೊಂಡುಕೊಂಡಿತು. ಈ ಕಟ್ಟಡಕ್ಕೆ ೧೫೦,೦೦೦ ಪವನು (ರೂಪಾಯಿ ೩೩,೬೫,೦೦೦) ಕೊಡಲಾಗಿದೆ ಎಂದು ತಿಳಿದು ಬಂದಿದೆ.

ಸಾಪ್ತಾಹಿಕ ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಇತ್ತೀಚೆಗೆ ಕೊರಿಯಾ ಸಂಗ್ರಾಮದ ಕುರಿತು ವಿಮರ್ಶಿಸುತ್ತ, ಅಧ್ಯಕ್ಷ ಟ್ರೂಮನರು, "ಸಂಯುಕ್ತ ಸಂಸ್ಥಾನವು ಈ ವರೆಗೆ ಎಲ್ಲಿಯೂ ಸೋಲು ಅನುಭವಿಸಿದುದಿಲ್ಲ. ಕೊರಿಯಾದಲ್ಲಿಯೂ ಅದು ಸೋಲದೆಂಬುದು ನಿಸ್ಸಂಶಯ. ದಕ್ಷಿಣ ಮತ್ತು ಉತ್ತರ ಕೊರಿಯಾಗಳ ಮೇರೆಯಾದ ೩೮ನೇ ಸಮಾನಾಂತರ ರೇಖೆಯ ಬಳಿ ಪುನಃ ತಳವೂರುವ ತನಕ ಅಮೇರಿಕನ್ ಸೈನ್ಯವು ಹೋರಾಟ ನಡೆಸುವುದು" ಎಂದರು.

ಬೆಳಗಾಂ ಜೈಲಿನಲ್ಲಿ ಸ್ಥಾನಬದ್ಧತೆಯಲ್ಲಿದ್ದ ಹಿಂದೂ ಮಹಾಸಭಾ ಮುಖಂಡ ಶ್ರೀ ವಿನಾಯಕ ದಾಮೋದರ ಸಾವರ್ಕರರನ್ನು ಬಿಡುಗಡೆ ಮಾಡಿರುವರು. ಬಿಡುಗಡೆ ಹೊಂದಿದ ಸಾವರ್ಕರರು ಮುಂಬಾಯಿಗೆ ಆಗಮಿಸಿದಾಗ ವಿಶೇಷ ಸ್ವಾಗತ ಕೊಟ್ಟು ಅವರನ್ನು ಉಪಚರಿಸಲಾಯಿತು.


### ನಿಮ್ಮ ಸೌಭಾಗ್ಯಾಭಿವೃದ್ಧಿಗೆ



ಗ್ರಹಣಾದಿ ಪುಣ್ಯಕಾಲಗಳಲ್ಲಿ ಶಾಂತಿನಿಯಮಾದಿಗಳಿಂದ ತಯಾರಿಸಿದ

**ನವಗ್ರಹ ವಿಜಯ ಮಹಾ ಯಂತ್ರವನ್ನೂ ಲಕ್ಷ್ಮೀ ವಶೀಕರಣ**

**ಎಂಬ ಮಹಾ ಅಂಜನವನ್ನೂ ನಿತ್ಯ ಧರಿಸಿರಿ.**

ತಮ್ಮ ಮನೋಭೀಷ್ಟಾದಿ ಸಕಲ ಕಾರ್ಯಾನುಕೂಲತೆಗೂ ಸೌಭಾಗ್ಯಾದಿ ಸಂಪತ್ತುಗಳ ಅಭಿವೃದ್ಧಿಗೂ, ನವಗ್ರಹ ವಿಜಯ ಮಹಾ ಯಂತ್ರವನ್ನು ದೇಹದಲ್ಲಿ ಧರಿಸಿ ಲಕ್ಷ್ಮೀ ವಶೀಕರಣವೆಂಬ ಮಹಾ ಅಂಜನವನ್ನು ಹುಬ್ಬುಗಳ ನಡುವೆ ಹಚ್ಚುತ್ತ ಯಂತ್ರ ... ಧರಿಸುವುದರಿಂದಲೇ ಸೌಭಾಗ್ಯಾಭಿವೃದ್ಧಿಯುಂಟಾಗುವದು.

| | |
|---|---|
| ಲಕ್ಷ್ಮೀ ವಶೀಕರಣ ಮಹಾ ಅಂಜನ 1 ತೊಲ | 15—0—0 |
| ಅರ್ಧ ತೊಲ | 8 0 0 |
| ನವಗ್ರಹ ವಿಜಯ ಮಹಾ ಯಂತ್ರ, ಬಂಗಾರದ ತಾಯಿತ | 120 0 0 |
| ಬೆಳ್ಳಿಯ ತಾಯಿತ „ „ | 15 0 0 |
| [illegible] ಯಂತ್ರ ಬೆಳ್ಳಿ ತಾಯಿತ | 5 0 0 |
| [illegible] ಮಹಾಕಾಳೀ ಯಂತ್ರ | 8 0 0 |
| [illegible] ಯಂತ್ರ | 15 0 0 |
| [illegible] ಯಂತ್ರ | 5 0 0 |
| [illegible] ಮಹಾ ಯಂತ್ರ | 5 0 0 |
| [illegible] | 5 0 0 |
| [illegible] | 4 0 0 |
| [illegible] | 4 0 0 |
| [illegible] ಯಂತ್ರ ತಾಮ್ರದ ತಾಯಿತ | 16 0 0 |

ಇದರಲ್ಲಿ ತಮಗೆ ಬೇಕಾದುದನ್ನು ತಿಳಿಸಿ ಇದರ ಬೆಲೆಯೊಂದಿಗೆ ಪೋಸ್ಟೇಜ್ 12 ಆಣೆಯನ್ನು ಸೇರಿಸಿ ಮನಿಯಾರ್ಡರ್ ಮಾಡಿರಿ. ನಿಮ್ಮ ಜನ್ಮನಕ್ಷತ್ರದ ರಾಶಿಗೆ ಈ ವರ್ಷದಿಂದ 12 ವರ್ಷಗಳವರೆಗಿನ ಶುಭಾಶುಭಾದಿಗಳನ್ನು ತಿಳಿಸುವ ಭವಿಷ್ಯ ಪುಸ್ತಕ ತಯಾರಾಗಿದೆ. ಬೆಲೆ ರೂ. 4 ನಮ್ಮ ... ಮುಹೂರ್ತ ಪ್ರಶ್ನಾದಿಗಳ ಫಲವನ್ನು ಸವಿಸ್ತಾರವಾಗಿ ತಿಳಿಯಬಹುದು 9—4

**ಎನ್. ವೆಂಕಟಸುಬ್ಬಪುತ್ರಾವ್**

**ಶ್ರೀದೇವಿಪ್ರಸಾದ್ ಜ್ಯೋತಿಷ್ಯಾಲಯ, ಬಳ್ಳಾರಿ**



### ಮಾರಾಟಕ್ಕಿದೆ.

ಮಡಿಕೇರಿಯ ವ್ಯಾಪಾರ ಕೇಂದ್ರವಾದ ಚೌಕಿಯಲ್ಲಿ ಹೋಟೆಲು ಯಾ ಅಂಗಡಿ ಇಡಲು ಮತ್ತು ವಾಸಕ್ಕೂ ಯೋಗ್ಯವಾಗಿರುವ ಮನೆಯೊಂದು ಮಾರಾಟಕ್ಕಿದೆ. ಖಾಯಿಷ್‌ದಾರರು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಬಹುದು.

"A."

C/o 'KODAGU' Mercara.

3-2

### ಮಾರಾಟಕ್ಕಿದೆ.

ಒಂದುವರೆಯಿಂದ ಮೂರು ವರ್ಷ ಪ್ರಾಯದೊಳಗಿನ ಉತ್ತಮ ತರದ ಜಾಜಾ ಸಿಂಧಿ ಗಂಡು ಕರುಗಳು 5, ಹೆಣ್ಣು ಕರು 1, ಶಾಹಿವಾಲ ಗಬ್ಬದ ದನ 1 ಮಾರಾಟಕ್ಕೆ ಇವೆ.

ಬೇಕಾದವರು ಕೂಡಲೇ ಬಂದು ನೋಡಬಹುದು.

ಟಿ. ಯಂ. ಮಂಜುನಾಥಯ್ಯ,

ಕಾಫಿ ಪ್ಲಾಂಟರ್,

ಶುಂಠಿಕೊಪ್ಪ, ಕೊಡಗು.

## ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಪಿಸ್ತೂಲ್, ಕೋವಿಗಳು, ತೋಟಾಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 218-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0.
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದು ಕೊಂಡು ಬರ ಬೇಕು)

52-45

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.



## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಶೆಡ್ಯೂಲ್ಡ್ ಬ್ಯಾಂಕ್ ಆಫ್ ರಿಸರ್ವ್ ಬ್ಯಾಂಕ್ (1921ರಲ್ಲಿ ಸ್ಥಾಪಿತವಾಗಿದೆ.)

| | | |
|---|---|---|
| ಅಧಿಕೃತ ಶೇರು ಭಂಡವಾಳ | ರೂ. | 10,00,000. |
| ವಸೂಲಾದ ಶೇರು ಮೊಬಲಗು | ರೂ. | 1,79,000. |
| ಕ್ಷೇಮನಿಧಿ | ರೂ. | 55,000. |
| ಇತರ ನಿಧಿಗಳು | ರೂ. | 28,000 |

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು. ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುತ್ತಿದ್ದರೂ, ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಬ್ರಿಟಿಷ್ ಮತ್ತು ವಾರ್ಡನ್ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.



# ENTERTAINING FAMILY & FRIENDS
## EASY NOW!!

NOODLE OR NOOPUTU (ಸೇವಿಗೆ)



making with this all BRASS easy handling Machine in a Variety of Sizes and Shapes is a boon to House wives.

52-6

*Rs. 23/8 (Postage extra.)*

GOBIND & CHENGPA,
22. CANNING STREET, CALCUTTA.



## ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಮುಖಾಂಶಗಳು.

| | | |
|---|---|---|
| ಹೊಸ ಉದ್ಯಮ ರೂ. | 6,13,00,000 | ಮೀರಿದೆ. |
| ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. | 27.73,00,000 | " |
| ಒಟ್ಟು ನಿಧಿ. ರೂ. | 8.30,00,000 | " |
| ಸಂಸ್ಥೆ ಪ್ರಾರಂಭದಿಂದ ಪಾವತಿಯಾದ ಕ್ಲೈಮುಗಳು | 10,56,00,000 | " |

1,28,000 ಕ್ಕೂ ಮೀರಿದ ವ್ಯಕ್ತಿಗಳು ವಿಮೆ ಮಾಡಿಸಿದ್ದಾರೆ.

ಶಕ್ತಿ. ಸೇವೆ ಭದ್ರತೆ.

### ಎಂಪೈರ್ ಆಫ್ ಇಂಡಿಯಾ
### ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ಕೋಲ್‌ಕರ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಶಾಖಾ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.



ಭದ್ರತೆ! 17 ವರ್ಷಗಳ ಅನುಭವ ಅನುಕೂಲತೆ !!
ಅನುಭವಶೀಲತೆ!!

## ದಿ ವಿಜಯ ಬ್ಯಾಂಕ್ ಲಿಮಿಟೆಡ್
ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ

| | | |
|---|---|---|
| 3 | ತಿಂಗಳು | 3% |
| 6 | " | 3¼% |
| 12 | " | 3½% |
| 24 | " | 4 % |

ರೂ. 25,000ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ.

ಶಾಖೆಗಳು:— ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ. ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.



## ದಿ ಟ್ರಾಪಿಕಲ್
### ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:— ಹೊಸ ದಿಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಚೇಪನಕಟ್ಟೆ, ಮಂಗಳೂರು.



## The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today

*Head Office:*
MANGALORE
26-12

K. M. Bopaiah, Esq.,
*Branch Secretary for Mysore & Coorg,*
*85 Sultanpet, BANGALORE 2.*


Edited, Printed and Published by P. I. Bellioppa at 'Kodagu Press', Mercara, for 'Kodagu' Ltd.